ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಕೇಳಿದೆ. 30 ಸೇರು ದವಸವನ್ನು ಸಂಸ್ಥಾನದೊಳಗೆ ಮಾತ್ರ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಾಗಿಸಲು ಅವಕಾಶವನ್ನು ಕೊಡುವ ವಿಚಾರದಲ್ಲಿ ಕೇಂದ್ರ ಸರ್ಕಾರದೊಡನೆ ಪತ್ರವ್ಯವಹಾರ ನಡೆಸಿ ಆ ಅನುಕೂಲವನ್ನು ಕಲ್ಪಿಸುವುದಕ್ಕೆ ಏರ್ಪಾಡು ಮಾಡಿದ್ದೇವೆ.

ಶ್ರೀ ಎಸ್. ಕರಿಯಪ್ಪನವರು.—ಪೂರ್ತಿಯಾಗಿ ಹತೋಟಿಯನ್ನು ತೆಗೆಯುವ ವಿಚಾರದಲ್ಲಿ ಇಂಡಿಯಾ ಸರ್ಕಾರದೊಡನೆ ಏನಾದರೂ ಪ್ರಸ್ತಾಪ ಮಾಡಿದ್ದೀರಾ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅನೇಕ ಸಲ ಕಾನ್ಫರೆನ್ಸುಗಳಲ್ಲಿ ಈ ವಿಷಯ ಚರ್ಚೆಯಾಗಿವೆ. ದೆಹಲಿಯಲ್ಲಿ ನಡೆದ ಆಹಾರ ಇಲಾಖೆ ಮಂತ್ರಿಗಳ ಸಮ್ಮೇಳನದಲ್ಲೂ ಇದು ಚರ್ಚೆಯಾಗಿದೆ, ರಾಜಕೀಯ ಪಕ್ಷಗಳಲ್ಲೂ ಚರ್ಚೆಯಾಗಿದೆ, ಹತೋಟಿಯನ್ನು ತಪ್ಪಿಸುವ ವಿಚಾರದಲ್ಲಿ ಅಭಿಪ್ರಾಯಗಳು ಅನೇಕ ಸಲ ಬಂದಿವೆ. ಆದರೆ ಹಾಗೆ ಹತೋಟಿ ತೆಗೆಯುವುದಕ್ಕೆ ಮುಂಚೆ ಕೆಲವು ಷರತ್ತುಗಳನ್ನು ಗಮನಿಸಿ ಅವು ನೇರವೇರಿದರೆ ಹಾಗೆ ಮಾಡಬಹುದು. ಯಾವುದೋ ಒಂದು ಆಧಾರ ಅಥವ ತತ್ವದ ಮೇಲೆ ಹತೋಟಿ ತೆಗೆಯುವುದಕ್ಕಾಗುವುದಿಲ್ಲ ಎಂಬ ಅಭಿಪ್ರಾಯವಿದೆ. ಹಾಗೆ ಮಾಡಬೇಕಾದರೆ ದಾಸ್ತಾನು ಸ್ವಲ್ಪ ಇರಬೇಕು, ಬೆಳೆ ಚೆನ್ನಾಗಿರಬೇಕು. ಅಂಥ ಸಂದರ್ಭದಲ್ಲಿ ಮಾಡಿದರೆ ಪ್ರಯೋಜನ ಹೆಚ್ಚು, ಇಲ್ಲದಿದ್ದರೆ ತೊಂದರೆ ಎಂದು ಭಾರತ ಸರ್ಕಾರದವರು ಅಭಿಪ್ರಾಯ ಪಡುತ್ತಾರೆ. ನಮ್ಮ ಅಭಿಪ್ರಾಯವನ್ನು ಭಾರತ ಸರ್ಕಾರಕ್ಕೆ ಖಚಿತವಾಗಿ ತಿಳಿಸಿದೆ. ಯಾವ ಸಂಸ್ಥಾನವೇ ಆಗಲಿ ತನ್ನದೇ ಆದ ಒಂದು ನೀತಿಯನ್ನು ಮುಂದುವರಿಸುವುದಕ್ಕೆ ಕಾನೂನು ಪ್ರಕಾರ ಕಷ್ಟವಾಗಿದೆಯೆಂದು ನಾನು ಉತ್ತರದಲ್ಲಿ ಸಂಕ್ಷೇಪವಾಗಿ ತಿಳಿಸಿದ್ದೇನೆ.

ಶ್ರೀ ಎಸ್. ಕರಿಯಪ್ಪನವರು.—ಈ ಬಗೆಯ ರಿಯಾಯಿತಿಯು ಮತ್ಯಾವ ಸಂಸ್ಥಾನಕ್ಕೂ ಬಂದಿಲ್ಲವೇ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಇಲ್ಲ.

ಶ್ರೀ ಎಸ್. ಕರಿಯಪ್ಪನವರು.—ಆಹಾರ ಧಾನ್ಯಗಳ ಮೇಲಿನ ಹತೋಟಿಯು, ಸೌಕರ್ಯ ಕಲ್ಪನೆಗೆ ಅತ್ಯಾವಶ್ಯಕವಾಗಿ ಬೇಕಾಗುವ ಸರಬರಾಯಿಗಳಿಗೆ ಸಂಬಂಧಪಟ್ಟ 1946ನೆಯ ಇಸವಿಯ ಆಕ್ಟಿನ ಅಂಗವಾಗಿರುತ್ತದೆ ಎಂದು ಹೇಳಿದ್ದೀರಿ...............

Mr. SPEAKER.—That is the heading of the Act.

ಶ್ರೀ ಎಸ್. ಕರಿಯಪ್ಪನವರು.—ಈಗ ಅಂಥ ಸೌಕರ್ಯಗಳು ಇರುವುದರ ಜೊತೆಗೆ ಕೆಲವು ಅನಾನುಕೂಲಗಳೂ ಇವೆ ಎಂಬುದು ಗೊತ್ತೇ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅನಾನುಕೂಲ ಇದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆ.

ಶ್ರೀ ಎಸ್. ಕರಿಯಪ್ಪನವರು.—ಅವು ಯಾವುವು ಎಂಬುದನ್ನು ಸಂಕ್ಷಿಪ್ತವಾಗಿ ಹೇಳುತ್ತೀರಾ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಮುಖ್ಯವಾಗಿ ಅನಾನುಕೂಲಗಳು ಎಂದರೆ, ಸಾಕಾದಷ್ಟು ಸರಬರಾಯಿ ಆಗುತ್ತಿಲ್ಲ ಎಂಬುದನ್ನು ಮಾನ್ಯ ಸದಸ್ಯರು ಈಗ ತಾನೆ ಹೇಳಿದ್ದಾರೆ. ಆಡಳಿತ ನಡೆಸತಕ್ಕ ಸಂದರ್ಭದಲ್ಲಿ ಕಿರುಕುಳ ಇದೆ ಎಂಬ ಇನ್ನೊಂದು ಆಕ್ಷೇಪಣೆ ಇದ್ದೇ ಇದೆ. ಬ್ಲಾಕ್ ಮಾರ್ಕೆಟ್ ಆಗುತ್ತಾ ಇದೆ ಎಂಬುದು ಮತ್ತೊಂದು ಆಕ್ಷೇಪಣೆ. ಹೀಗೆ ನಾನಾ ಅನಾನುಕೂಲಗಳಿವೆಯೆಂದು ಸರ್ಕಾರದವರ ಗಮನಕ್ಕೆ ಬಂದಿದೆ; ಬಾರದೇ ಇಲ್ಲ. ಹತೋಟಿ ತೆಗೆದು ಹಾಕಿದರೆ ಏನು ಅನಾನುಕೂಲವಾಗಬಹುದು ಎಂಬುದನ್ನು ಗಮನಿಸಿ ಯಾವ ನೀತಿ ಅನುಸರಿಸಿದರೆ ಒಟ್ಟಿನಲ್ಲಿ ಜನಗಳಿಗೆ ಅನುಕೂಲವಾಗುತ್ತದೆಯೆಂಬುದನ್ನು ನೋಡಿಕೊಂಡು ಮಾಡಬೇಕಾಗುತ್ತದೆ.

ಶ್ರೀ ಎಸ್. ಕರಿಯಪ್ಪನವರು.—ಈ ಹತೋಟಿ ಕಾನೂನುಗಳನ್ನು ಜಾರಿಗೆ ತರುವುದರಲ್ಲಿ ಅಧಿಕಾರಿಗಳಿಂದ ನಡೆಯುತಕ್ಕ ಕೆಲವು ಅನಾನುಕೂಲಗಳನ್ನು ತಪ್ಪಿಸುವ ಬಗ್ಗೆ ತಾವು ಮಾಡಿರತಕ್ಕ ವ್ಯವಸ್ಥೆಯೇನು?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅಂಥ ಸಂದರ್ಭಗಳು ನಮ್ಮ ಗಮನಕ್ಕೆ ಬಂದಾಗಲೆಲ್ಲಾ ಸರಿಪಡಿಸುವ ವ್ಯವಸ್ಥೆಮಾಡುತ್ತಾ ಇದ್ದೇವೆ. ಕೆಲವು ಕಡೆ ಸರಿಪಡಿಸಿದ್ದೇವೆ. ಇನ್ನೂ ಸರಿಪಡಿಸಬೇಕಾದ್ದು ಇವೆ. ಸರ್ಕಾರದವರು ಶ್ರದ್ಧೆಯಿಂದ ಎಲ್ಲವನ್ನೂ ಮಾಡಿಕೊಂಡು ಬರುತ್ತಾ ಇದ್ದಾರೆ.

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—ಉತ್ತರದಲ್ಲಿ—

"There is no indication as to what the Central Government intends doing in regard to decontrol."

ಎಂದು ಹೇಳಿದ್ದೀರಿ. ಈ ವಿಚಾರ ಆಹಾರ ಸಮ್ಮೇಳನದಲ್ಲಿ ತಿಳಿಸಿದ್ದಿರಿ. ಹಾಗೆ ತಿಳಿಸಿದ ಮೇಲೆ ಕೇಂದ್ರ ಸರ್ಕಾರದ ಅಭಿಪ್ರಾಯವೇನು ಎಂಬುದನ್ನು ಹೇಳುವುದಕ್ಕಾಗುವುದಿಲ್ಲವೇ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—If there are sufficient buffer stocks ಕ್ರಮೇಣ ಹತೋಟಿಯನ್ನು ತೆಗೆದು ಹಾಕುವುದಕ್ಕೆ ಯಾರೂ ವಿರೋಧವಾಗಿಲ್ಲ ಎಂದು ಹೇಳಿದರು. ಅಂಥ ಪರಿಸ್ಥಿತಿಯನ್ನುಂಟುಮಾಡಿ ಆ ಮೇಲೆ ಹತೋಟಿ ವಜಾ ಮಾಡಬೇಕೆಂಬುದು ಅವರ ನೀತಿ.

For the present there is no indication that Government want to decontrol altogether with regard to foodstuffs. That is the present policy. I am not referring in the answer to the long range policy of the Government of India but only to their present policy.

ಶ್ರೀ ಡಿ. ಎಂ. ಸಿದ್ದಯ್ಯನವರು.—ನಮ್ಮ ಸಂಸ್ಥಾನದ ಪರವಾಗಿ ಹತೋಟಿಯನ್ನು ಕ್ರಮೇಣ ತೆಗೆಯುವುದು ಒಳ್ಳೆಯದು ಎಂದು ತಿಳಿಸಿದ್ದೀರಾ ಅಥವಾ ತಕ್ಷಣ ತೆಗೆಯಬೇಕೆಂದು ತಿಳಿಸಿದ್ದೀರಾ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಇತ್ತೀಚೆಗೆ ಎಂದರೆ ಮೂರು ತಿಂಗಳಿನಿಂದ ಯಾವ ಒಂದು ಸಮ್ಮೇಳನವೂ ಆಗಿಲ್ಲ. ಅದಕ್ಕಿಂತ ಮುಂಚೆ ಮೈಸೂರು ಸರ್ಕಾರದವರೇ ಅಲ್ಲ, ಇತರ ಸರ್ಕಾರಗಳವರೂ ಕೇಂದ್ರ ಸರ್ಕಾರದವರಿಗೆ ತಿಳಿಸಿದ್ದಾರೆ. ಕೆಲವರು ಹತೋಟಿ ಇರಬೇಕೆಂಬ ಅಭಿಪ್ರಾಯ ಕೊಟ್ಟಿದ್ದಾರೆ. ಭಾರತ ಸರ್ಕಾರದವರ ಈಗಿನ ನೀತಿಯನ್ನು ನೋಡಿ, ನಾನಾ ಸರ್ಕಾರಗಳವರು ಹತೋಟಿಯಿಂದ ಇರುವ ತೊಂದರೆಗಳು ಮತ್ತು ಅದರಿಂದ ಉದ್ಭವಿಸುವ ನಾನಾ ಸಮಸ್ಯೆಗಳನ್ನು ಹೇಳಿದ್ದಾರೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಹತೋಟಿ ಇರುವುದನ್ನು ತೆಗೆದರೆ ಅದರಿಂದ ತೊಂದರೆ ಇರುವುದಿಲ್ಲವೆಂದು ಕೇಂದ್ರ ಸರ್ಕಾರದವರಿಗೆ ತಿಳಿಸಿಲ್ಲವೇ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಆ ರೀತಿ ನಿರ್ದಿಷ್ಟವಾಗಿ ತಿಳಿಸಿಲ್ಲ.

Janab MOHAMED HANIEF (Bangalore—Muslim).—Are the State Government so helpless that they have no voice in the matter of determining whether there should be control or decontrol?

The Hon'ble Sri K. CHENGALARAYA REDDY.—The Central Government might ask our opinions. As the Hon'ble Member is aware, this is governed by an Act of the Parliament. In April 1950 the Parliament empowered the Government of India to assume full responsibility in the distribution of foodstuffs all over India. As a result of that the Essential Supplies (Temporary Powers) Act, to which a reference is made in the answer, was modified. According to the modified Act dated 1st April 1950, the whole distribution is under the control of the Government of India. So far as the State Governments are concerned, consultations do take place with the Government of India and opinions of the State Governments are invited before deciding any particular policy.

Janab MOHAMED HANIEF.—Are the Government aware that there is a concensus of opinion in the State that these controls must go forthwith?

The Hon'ble Sri K. CHENGALARAYA REDDY.—Yes, there is a large body of opinion in that way.

Janab MOHAMED HANIEF.—Has that point been pressed by the local Government before the Central Government?

The Hon'ble Sri K. CHENGALARAYA REDDY.—Yes, the local Government have brought to the notice of the Central Government that there is a large volume of opinion in favour of decontrol. But I do not think that people in the cities have expressed themselves in favour of decontrol, even in Mysore State.

Janab MOHAMED HANIEF.—Is it so? To my knowledge there is a large section of people in Bangalore City itself in favour of decontrol.

The Hon'ble Sri K. CHENGALARAYA REDDY.—I am not aware of it. They will be the first to protest against decontrol; that is Government's information. If, on the other hand, people in the cities of Mysore are in favour of decontrol it would be very easy for the Government to decontrol

after bringing it to the notice of the Government of India.

Sri L. SIDDAPPA (Shimoga District—General).—Very recently, in Mysore City a resolution to that effect was passed.

ಶ್ರೀ ಬಿ ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—ಯಾವ ಸರ್ಕಾರದವರೂ ಹತೋಟಿಯನ್ನು ವಜಾಮಾಡಿಲ್ಲ ಎಂದು ಹೇಳಿದಿರಿ. ಕೇಂದ್ರ ಸರ್ಕಾರದವರು ಹತೋಟಿಯನ್ನು ವಜಾಮಾಡಿರುವುದು ಗೊತ್ತೇ ?

ಮಾನ್ಯ ಶ್ರೀ ಕೆ. ಚಂಗಲರಾಯರೆಡ್ಡಿಯವರು.—ಅಲ್ಲಿಯೂ ಪ್ರೊಕ್ಯೂರ್‌ಮೆಂಟ್ ಇದೆ. ಬೇಕಾದಷ್ಟು ಹತೋಟಿ ಇದೆ.

ಶ್ರೀ ಬಿ. ಚನ್ನಬೈರೇಗೌಡರು.—ಮದರಾಸ್ ಪ್ರಾಂತ್ಯದ ಹೊರಪ್ರದೇಶಗಳಲ್ಲಿ ಎಲ್ಲೂ ಹತೋಟಿ ಇಲ್ಲ ಎಂಬುದು ಗೊತ್ತೇ ?

ಮಾನ್ಯ ಶ್ರೀ ಕೆ. ಚಂಗಲರಾಯರೆಡ್ಡಿಯವರು.—ಆ ಪ್ರಾಂತ್ಯದ ಹೊರಪ್ರದೇಶಗಳಲ್ಲಿ ರೂಪಾಯಿಗೆ ಒಂದುಸೇರು ಅಕ್ಕಿಯೂ ಸಿಕ್ಕದೇ ಅಲೆಯುತ್ತಾ ಇರುವುದು ಮತ್ತು ಅಲ್ಲಿಂದ ಬೇರೆ ಸಂಸ್ಥಾನಗಳಿಗೆ ಜನಗಳು ಬರುತ್ತಾ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆ.

ಶ್ರೀ ಬಿ. ಚನ್ನಬೈರೇಗೌಡರು.—ಆ ಪ್ರಾಂತ್ಯದ ಹೊರಪ್ರದೇಶಗಳಲ್ಲಿ ಹತೋಟಿಯನ್ನು ವಜಾಮಾಡಿ ಎಷ್ಟು ದಿನ ಆಗಿರಬಹುದು ?

ಮಾನ್ಯ ಶ್ರೀ ಕೆ. ಚಂಗಲರಾಯರೆಡ್ಡಿಯವರು.—ಸುಮಾರು ಒಂದುವರ್ಷ ಆಗಿರಬಹುದು.

ಶ್ರೀ ಬಿ. ಚನ್ನಬೈರೇಗೌಡರು.—ಅಲ್ಲಿ ಆಗುತ್ತಾ ಇರತಕ್ಕ ಕಷ್ಟ ಇಂಡಿಯಾ ಸರ್ಕಾರದವರ ಗಮನಕ್ಕೆ ಬಂದಿದೆಯಲ್ಲವೇ ?

ಮಾನ್ಯ ಶ್ರೀ ಕೆ. ಚಂಗಲರಾಯರೆಡ್ಡಿಯವರು.—ಬಂದಿದೆ. ಆಹಾರದ ಹತೋಟಿ ವಿಚಾರದಲ್ಲಿ ಪ್ರೊಕ್ಯೂರ್‌ಮೆಂಟ್ ಪ್ರೈಸ್ ಎಷ್ಟಿರಬೇಕು ; ಇಷ್ಯೂ ಪ್ರೈಸ್ ಎಷ್ಟಿರಬೇಕು ; ಯಾವ್ಯಾವ ರೀತಿಯಲ್ಲಿ ಹತೋಟಿ ವಜಾಮಾಡಬಹುದು ; ಯಾವ್ಯಾವ ರೀತಿಯಲ್ಲಿ ರಿಯಾಯಿತಿ ತೋರಿಸಬಹುದು, ಬದಲಾವಣೆ ಮಾಡಬಹುದು ಎಂಬುದು ಮೈಸೂರು ಸರ್ಕಾರ ಒಂದಕ್ಕೇ ಅಲ್ಲ, ಎಲ್ಲಾ ಸರ್ಕಾರಗಳಿಗೂ ಅನ್ವಯಿಸುತ್ತದೆ. ಕೇಂದ್ರ ಸರ್ಕಾರದ ಅನುಮತಿ ಇಲ್ಲದೆ ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ. ಚನ್ನಬೈರೇಗೌಡರು.—ಹಾಗಾದರೆ ದಾವಣಗೆರೆಯಲ್ಲಿ ನಡೆದ ಪಾರ್ಟಿ ಕಾನ್‌ಫರೆನ್ಸ್‌ನಲ್ಲಿ ಹತೋಟಿಯನ್ನು ವಜಾಮಾಡಬೇಕೆಂದು ಠರಾವು ಆಗಿದೆಯಲ್ಲವೇ ?

ಮಾನ್ಯ ಶ್ರೀ ಕೆ. ಚಂಗಲರಾಯರೆಡ್ಡಿಯವರು.—ಹೌದು, ಆಗಿತ್ತು. ಅದು ಪಾರ್ಟಿಗೆ ಸಂಬಂಧಪಟ್ಟ ವಿಷಯ.

ಶ್ರೀ ಬಿ. ಚನ್ನಬೈರೇಗೌಡರು.—ಆ ದಿನ ನಿಮ್ಮ ಪಾರ್ಟಿ ಅಧ್ಯಕ್ಷರು ಹತೋಟಿ ವಜಾ ಮಾಡಬೇಕೆಂದು ಹೇಳಿದರಲ್ಲವೇ ?

The Hon'ble Sri K. CHENGALARAYA REDDY.—That does not arise.

ಶ್ರೀ ಬಿ ಚನ್ನಬೈರೇಗೌಡರು.—ಹಾಗಾದರೆ ಹತೋಟಿ ವಜಾಮಾಡಬೇಕೆಂದು ಹೇಳಿರುವುದು ನಿಜವೇ ?

ಮಾನ್ಯ ಶ್ರೀ ಕೆ. ಚಂಗಲರಾಯರೆಡ್ಡಿಯವರು.—ಹಾಗೆ ಮಾಡಬೇಕೆಂದು ಹೇಳಿದ್ದಾರೆ.

ಶ್ರೀ ಬಿ. ಚನ್ನಬೈರೇಗೌಡರು.—ಕೇಂದ್ರ ಸರ್ಕಾರದವರು ಅಪ್ಪಣೆ ಕೊಡುವವರೆಗೂ ಹತೋಟಿ ವಜಾ ಮಾಡುವ ವಿಷಯ ಎತ್ತುವುದಕ್ಕಾಗುವುದಿಲ್ಲ ಎಂದು ಖಂಡಿತವಾಗಿ ಹೇಳುವುದಕ್ಕಾಗುವುದಿಲ್ಲವೇ ?

The Hon'ble Sri K. CHENGALARAYA REDDY.—That is already answered.

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ).—ಆಹಾರ ಹತೋಟಿಯನ್ನು ಕ್ರಮೇಣ ತೆಗೆದುಹಾಕುವ ಸಂಬಂಧದಲ್ಲಿ, ಆ ನೀತಿಗನುಸಾರವಾಗಿ ಏನಾದರೂ ಇದುವರೆಗೆ ಕಾರ್ಯಕ್ರಮ ಕೈಕೊಂಡಿದ್ದೀರಾ ?

ಮಾನ್ಯ ಶ್ರೀ ಕೆ. ಚಂಗಲರಾಯರೆಡ್ಡಿಯವರು.—ಒಂದು ಮುಖ್ಯವಾದ ವಿಷಯ ಎಂದರೆ 30 ಸೇರು ಧಾನ್ಯವನ್ನು ಸ್ಟ್ಯಾಟ್ಯುಟರಿ ರೇಷನ್ ಪ್ರದೇಶ ಬಿಟ್ಟು ಬೇರೆ ಯಾವ ಪ್ರದೇಶದಿಂದ ಯಾವ ಪ್ರದೇಶಕ್ಕೆ ಬೇಕಾದರೂ ತೆಗೆದುಕೊಂಡು ಹೋಗಬಹುದು ಎಂದು ಮಾಡಿದ್ದೇವೆ. ಅದರಿಂದ ಅನುಕೂಲವಾಗಿದೆ ಎಂದು ಹೇಳುತ್ತಾ ಇದ್ದಾರೆ.

Fixed procurement system instead of the present system.

Q.—82. **Sri H. SIDDAVEERAPPA** (Chitaldrug District—General).—

Will the Government be pleased to state :—

whether they are contemplating to introduce any system of fixed procurement in the State abolishing the present system of procurement ?

A.—**The Hon'ble Sri K. CHENGALARAYA REDDY** (Chief Minister).—The collection of necessary statistics is under progress and the scheme was being examined. But in the meanwhile failure of rains and adverse seasonal conditions have rendered difficult the fixation of a definite quantity to be surrendered by holders.

ಶ್ರೀ ಎಚ್. ಸಿದ್ಧವೀರಪ್ಪನವರು.—ಆಹಾರ ಧಾನ್ಯಗಳನ್ನು ಸಂಗ್ರಹಿಸುವ ವಿಚಾರದಲ್ಲಿ ಅಂಕಿ ಅಂಶಗಳನ್ನು ಶೇಖರಿಸುವ ಕೆಲಸ ನಡೆಯುತ್ತಿದೆಯೆಂದು ಹೇಳಿದಿರಿ; ಯಾವ ಆಧಾರದ ಮೇಲೆ ಅಂಕಿಅಂಶಗಳನ್ನು ಶೇಖರಿಸುತ್ತೀರಿ ?

ಮಾನ್ಯ ಶ್ರೀ ಕೆ. ಚಂಗಲರಾಯರೆಡ್ಡಿಯವರು.—ಕಂಟ್ರೋಲ್ ಬಂದಾಗಿನಿಂದ ಇದುವರೆಗೆ ಎಷ್ಟೆಷ್ಟು ಸರ್ಪ್ಲಸ್ ನಾವು ವಿಧಾಯಕವಾಡುತ್ತಿದ್ದೇವೆ ; ಯಾರ್ಯಾರಿಂದ ಎಷ್ಟು ಸರ್ಪ್ಲಸ್ ತೆಗೆದುಕೊಂಡಿದ್ದೇವೆ ಎಂಬುದನ್ನೆಲ್ಲಾ ನೋಡಿಕೊಂಡು ಒಂದು ಸರಾಸರಿ ಲೆಕ್ಕ ಹಾಕುತ್ತೇವೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಯಾವ ಸಾಲಿನಿಂದ ಲೆಕ್ಕ ತೆಗೆದುಕೊಳ್ಳಬೇಕೆಂದಿದ್ದೀರಿ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಕಳೆದ ಮೂರು ವರ್ಷಗಳ ಆಧಾರದ ಮೇಲೆ ಲೆಕ್ಕ ಹಾಕುತ್ತಿದ್ದೇವೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಈ ಕೆಲಸ ಇನ್ನೆಷ್ಟು ದಿವಸದಲ್ಲಿ ಪೂರೈಸುತ್ತದೆ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಆಗಲೇ ಅದು ಪೂರೈಸಿದೆ; ಅಂಕಿಅಂಶಗಳು ಬಂದಿವೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಆದರೂ, ಈ ವರ್ಷ ಮಳೆಯ ಅಭಾವದ ಅನಾನುಕೂಲದ ದೆಸೆಯಿಂದ ಈ ಪದ್ಧತಿಯನ್ನು ಜಾರಿಗೆ ತರುವುದು ಕಷ್ಟವೆಂದು ಸೂಚಿಸಿದಿರಿ. ಅಂದರೆ ಈವರ್ಷ ಇದನ್ನು ಜಾರಿಗೆ ತರಬೇಕೆಂದು ಸರ್ಕಾರದವರ ಉದ್ದೇಶವಿದೆಯೇ ಅಥವಾ ಜಾರಿಗೆ ತರಬೇಕೇ ಬೇಡವೇ ಎಂಬ ಅಂಶವನ್ನು ಇನ್ನೂ ಪರಿಶೀಲಿಸುತ್ತಿದ್ದೀರಾ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ತರಬೇಕೇ ಅಥವಾ ಬೇಡವೇ ಎಂಬ ಅಂಶವನ್ನೇ ಪರಿಶೀಲಿಸುತ್ತಿದ್ದೇವೆ. ಈ ಮೂರು ವರ್ಷದ ಯಾವ ಸರ್ಪ್ಲಸ್ ಆಧಾರದಮೇಲೆ ದವಸ ಕೊಡಬೇಕೆಂದು ನಿಗದಿ ಮಾಡಿದ್ದೇವೆಯೋ ಅಷ್ಟನ್ನು ಕೊಡಬೇಕಾದರೂ ಸರಿಯಾಗಿ ಬೆಳೆಯಾಗದೇ ಹೋದರೆ ಹೆಚ್ಚಿಗೆ ತೊಂದರೆಯಾಗುತ್ತದೆಂದು ಸರ್ಕಾರದವರ ಗಮನಕ್ಕೆ ಬಂದಿದೆ. ಉದಾಹರಣೆಗೆ, ಮೂರು ವರ್ಷದ ಅಂದಾಜಿನ ಪ್ರಕಾರ ಒಬ್ಬನು ಹತ್ತುಪಲ್ಲ ಕೊಡಬೇಕೆಂದರೆ, ಅವನಿಗೆ ಹತ್ತು ಪಲ್ಲಕ್ಕೂ ಕಡಿಮೆ ಅಂದರೆ ಮೂರೇ ಪಲ್ಲ ಆಗಿದ್ದರೆ ಹೇಗೆ ಕೊಡುವುದಕ್ಕಾಗುತ್ತದೆ? ಆದ್ದರಿಂದ ಈಗಿನ ಹೊಸ set up ನೋಡಿಕೊಂಡು ಇದನ್ನು ಯೋಚನೆ ಮಾಡಬೇಕಾಗಿದೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಹಾಗಾದರೆ fixed levy system ಜಾರಿಗೆ ತರಬೇಕಾದರೆ ಒಳ್ಳೆಯ seasonal conditions ಇರುವ ಅವಕಾಶ ನೋಡಿಕೊಂಡು ಮಾಡಬೇಕೆಂದಿದೆಯೇ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಎಲ್ಲಿ ಮಳೆಯಾಗದೆ ಹೋಗಿದೆಯೋ ಅಲ್ಲಿ ಬಿಟ್ಟು ಬೇರೆ ಕಡೆ ಈ fixed levy system ಜಾರಿಮಾಡಬೇಕೆಂದು ಸಲಹೆ ಬಂತು. ಅದನ್ನೂ ಯೋಚನೆ ಮಾಡುತ್ತಿದ್ದೇವೆ. ಪ್ರಾಯಶಃ ಬೆಳೆ ಚೆನ್ನಾಗಿದ್ದಿದ್ದರೆ ಅದನ್ನು ಮಾಡಬಹುದಾಗಿತ್ತು. ಆದರೆ ಈ ವರ್ಷ ಮುಖ್ಯವಾಗಿ ಮಲೆನಾಡಿನ ಪ್ರದೇಶದಲ್ಲಿ ಬತ್ತದ ಬೆಳೆ ಚೆನ್ನಾಗಿಲ್ಲ. ಇನ್ನು ಕೆಲವು ಕಡೆಗಳಲ್ಲಿ ಖುಷ್ಕಿ ಬೆಳೆ ಚೆನ್ನಾಗಿ ಆಗಿಲ್ಲ. ಆದ್ದರಿಂದ ಇಂಥ ಸಂದರ್ಭದಲ್ಲಿ fixed levy system ನಿಂದ ಹೆಚ್ಚಿಗೆ ತೊಂದರೆಯಾಗಬಹುದು. ಒಟ್ಟಿನಲ್ಲಿ ಇದನ್ನೆಲ್ಲಾ ನಾವು ಯೋಚನೆಮಾಡಿ ಮಾಡಬೇಕಾಗಿದೆ.

ಶ್ರೀ ಎ. ಜಿ. ಬಂದೀಗೌಡರು (ಮಂಡ್ಯ ಜಿಲ್ಲೆ).—ಈ ಸಾರಿ ಮಳೆಯಾಗಿಲ್ಲದ ಕಾರಣ ಈ ಪದ್ಧತಿಯನ್ನು ಜಾರಿಗೆ ತರಲು ಸ್ವಲ್ಪ ಯೋಚನೆಯಾಗಿದೆಯೆಂದು ಹೇಳಿದಿರಿ; ಮಳೆ ಎಲ್ಲಾ ಕಡೆಯಲ್ಲೂ ಆಗಿಲ್ಲವೆಂದು ತಮ್ಮ ಅಭಿಪ್ರಾಯವೇ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಕೆಲವು ಕಡೆಗಳಲ್ಲಿ ಮಳೆಯಾಗಿದೆ. ಸಾಮಾನ್ಯವಾಗಿ ನಾರಾ ಪ್ರದೇಶಗಳಲ್ಲಿ—ಮಂಡ್ಯ, ಮೈಸೂರು ಡಿಸ್ಟ್ರಿಕ್ಟ್ ಪ್ರದೇಶಗಳಲ್ಲಿ ಮಳೆಯಾಗಿದೆ; ಕನ್ನಂಬಾಡಿಗೂ ನೀರು ಬಂದಿರುವುದು ಗೊತ್ತಿದೆ. ಆದ್ದರಿಂದ ಅಲ್ಲೇನೋ ಒಂದು ಸಮಯ ಈ ಪದ್ಧತಿಯನ್ನು ಜಾರಿಗೆ ತರಬಹುದೇ ಬೇಡವೇ ಎಂಬುದನ್ನು ಯೋಚನೆ ಮಾಡಬಹುದು. ಆದರೆ ಬೆಳೆಗಳು ಕೆಟ್ಟು ಹೋಗಿರುವ ಪ್ರದೇಶದಲ್ಲಿ ಯಾವರೀತಿ ಮಾಡಬೇಕೆಂಬುದನ್ನು ಯೋಚನೆಮಾಡಬೇಕು. ಉದಾಹರಣೆಗೆ ಮಲೆನಾಡಿನಲ್ಲಿ ಬತ್ತದ ಬೆಳೆಯಾಗಿಲ್ಲವೆಂದು ಹೇಳಿದೆ; ಚಿತ್ರದುರ್ಗ, ಕೋಲಾರ, ತುಮಕೂರು ಡಿಸ್ಟ್ರಿಕ್ಟ್‌ಗಳಲ್ಲಿ ಖುಷ್ಕಿ ಬೆಳೆ ಏನೇನೂ ಆಗಿಲ್ಲವೆಂದು ಸರ್ಕಾರದವರಿಗೆ ವರದಿಯಾಗಿದೆ. ಹೀಗಿರುವಲ್ಲಿ ಬರುವ ವರ್ಷಕ್ಕೆ ಯಾವ ರೀತಿ ಆಹಾರದ ಶೇಖರಣೆ ನಡೆಸಬೇಕೆಂಬುದನ್ನೂ ಯೋಚನೆ ಮಾಡಬೇಕಾಗಿದೆ. ಇದನ್ನೆಲ್ಲಾ ಯೋಚನೆ ಮಾಡುವುದಕ್ಕಾಗಿಯೇ ಮುಂದಿನ ವಾರದಲ್ಲಿ ಒಂದು ಮೀಟಿಂಗ್ ಇಟ್ಟುಕೊಂಡಿದ್ದೇವೆ. ಅಲ್ಲಿ ಡೆಪ್ಯುಟಿ ಕಮಿಷನರುಗಳಿಂದಲೂ, ಅದಕ್ಕೆ ಸಂಬಂಧಪಟ್ಟ ಇತರರಿಂದಲೂ ವರದಿಗಳನ್ನು ತೆಗೆದುಕೊಂಡು, seasonal conditions ನೋಡಿಕೊಂಡು ಸರ್ಕಾರದವರು ಎಲ್ಲವನ್ನೂ ತೀರ್ಮಾನ ಮಾಡುವವರಾಗಿದ್ದಾರೆ.

ಶ್ರೀ ಎ. ಜಿ. ಬಂದೀಗೌಡರು.—ಮಳೆ ಎಲ್ಲೆಲ್ಲಿ ಸರಿಯಾಗಿ ಆಗಿ, ಬೆಳೆ ಚೆನ್ನಾಗಿದೆಯೋ ಅಲ್ಲಾದರೂ ಇದನ್ನು ಜಾರಿಗೆ ತರುವುದಕ್ಕೆ ಸಾಧ್ಯವೇ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅದನ್ನೇ ಪರ್ಯಾಲೋಚನೆ ಮಾಡಬೇಕೆಂದಿದ್ದೇವೆ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಈಗ ತಾವು ಅಂಕಿಅಂಶಗಳನ್ನು ಶೇಖರಿಸುತ್ತಿದ್ದೇವೆಂದು ಹೇಳಿದಿರಿ; ಹಾಗೆ ಶೇಖರಿಸುವುದರಲ್ಲಿ ಯಾವುದಾದರೂ ಒಂದು ನಿರ್ದಿಷ್ಟವಾದ ರೀತಿಯಲ್ಲಿ ಶೇಖರಿಸಬೇಕೆಂದು ಆಜ್ಞೆಯಿತ್ತಿದ್ದೀರಾ ? ಅಥವಾ ಡೆಪ್ಯುಟಿ ಕಮಿಷನರುಗಳೇ ತಮತಮಗೆ ತೋರಿದ ರೀತಿಯಲ್ಲಿ ಶೇಖರಿಸಲೆಂದು ಹೇಳಿದ್ದೀರಾ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ತಮ್ಮ ಪ್ರಶ್ನೆ ಅರ್ಥವಾಗಲಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ತಾವು ನಿಖರವಾಗಿ ಅವರು ಈ ರೀತಿ ಅಂಕಿ ಅಂಶಗಳನ್ನು ಶೇಖರಣೆಮಾಡಬೇಕೆಂದು ಹೇಳಿದ್ದೀರಾ ? ಯಾವ ರೀತಿ ಶೇಖರಣೆಮಾಡಬೇಕೆಂದು ತಾವು ಹೇಳಿದ್ದೀರಿ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಹಿಂದಿನ ಮೂರು ವರ್ಷಗಳಲ್ಲಿ ಯಾವ ರೀತಿ ಸರ್ಪ್ಲಸ್ ನಿಗದಿಯಾಗಿದೆ, ಎಷ್ಟೆಷ್ಟು ವಸೂಲಾಗಿದೆಯೆಂಬುದನ್ನು ಡೆಪ್ಯುಟಿ ಕಮಿಷನರುಗಳು ಕಳುಹಿಸತಕ್ಕ assessment figures ಮತ್ತು procurement figuresನೋಡಿಕೊಂಡು ಸರ್ಕಾರದವರು ಹೇಳುತ್ತಾರೆ.

ಶ್ರೀ ಎಸ್. ರಂಗರಾಮಯ್ಯನವರು.—ಅವರು ಕೊಡತಕ್ಕ ಅಂಕಿ ಅಂಶಗಳು ಸರಿಯಾಗಿವೆಯೇ, ಇಲ್ಲವೇ ಎಂಬುದನ್ನು ನಿರ್ಧರವಮಾಡುವುದಕ್ಕೆ ಗ್ರಾಮಾಂತರಗಳ ಒಂದು ಸಮಿತಿಯನ್ನು ಏರ್ಪಾಡುಮಾಡಿ ಆ ಮುಖಾಂತರ ಸರಿಯಾದ ಅಂಕಿಅಂಶಗಳನ್ನು ಶೇಖರಣೆ ಮಾಡುವುದಕ್ಕೆ ಏರ್ಪಾಡು ಮಾಡಿದ್ದೀರಾ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಈ ಕೆಲಸಕ್ಕೆ ಕಮಿಟಿಯ ಅವಶ್ಯಕತೆಯೇನಿದೆಯೆಂಬುದು ನನಗೆ ಗೊತ್ತಾಗುವುದಿಲ್ಲ. Actual surplus assessed according to Government records and the actual quantity of grains collected by the Government are what is wanted. ಇದಕ್ಕೆ ಕಮಿಟಿ ಏಕೆ ?

ಶ್ರೀ ಎಸ್. ರಂಗರಾಮಯ್ಯನವರು-ಒಂದು ಕಮಿಟಿ ಮಾಡಿದರೆ ಅವರು ಗ್ರಾಮಾಂತರಗಳ ಕಡೆ ಕೊಟ್ಟಿರುವ ಅಂಕಿ ಅಂಶಗಳು ಸರಿಯಾಗಿವೆಯೇ ಇಲ್ಲವೇ ಎಂದು ತಿಳಿದುಕೊಳ್ಳಬಹುದು.

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಅದು ಈ ಪ್ರಶ್ನೆಯಿಂದ ಉದ್ಭವಿಸುವುದಿಲ್ಲ. ಹಿಂದಿನ ಮೂರು ವರ್ಷಗಳಲ್ಲಿ ಎಷ್ಟು ಆಹಾರ ಶೇಖರಣೆಯಾಗಿದೆ ಯೆಂಬುದು ಸರ್ಕಾರದವರ ರಿಕಾರ್ಡ್‌ಗಳಿಂದ ಗೊತ್ತಾಗುತ್ತದೆ, ಅದನ್ನೇನೂ manipulate ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಹಾಗಾದರೆ ಈಗ ಎಚ್. ಎಸ್. ಲೆಕ್ಕಗಳನ್ನು ಸರಿಯಾಗಿ ಬರೆಯುತ್ತಿಲ್ಲವೆಂದು ದೂರುಗಳೇನೂ ಬಂದಿಲ್ಲವೇ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ತಾವು ಕೇಳತಕ್ಕ ಉಪ ಪ್ರಶ್ನೆ ಈ ಪ್ರಶ್ನೆಗೆ ಸಂಬಂಧಪಟ್ಟಿಲ್ಲ.

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—ಮಳೆಯಿಲ್ಲದೆ ಬೆಳೆ ಹೋಗಿದ್ದರೂ fixed basis ಮೇಲೆ ವಸೂಲು ಮಾಡುವುದರ ಮೇಲೆ ಹೇಳುತ್ತೇನೆ. ಈಗ ಸರ್ಕಾರದವರು ಮಳೆಯಾಗದಿರುವ ಪ್ರದೇಶದಿಂದ ಧಾನ್ಯವನ್ನು ವಸೂಲು ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಇನ್ನೂ ಸಂಗ್ರಹಣೆ ಕಾರ್ಯವನ್ನೇ ಪ್ರಾರಂಭಿಸಿಲ್ಲ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಮೈಸೂರು ಡಿಸ್ಟ್ರಿಕ್ಟಿನಲ್ಲಿ ಕೆಲವುಕಡೆಗಳಲ್ಲಿ ಮಳೆಯಾಗದೆ ಜೋಳದ ಬೆಳೆ ಕೇವಲ ಎರಡು ಮೂರು ತಿಂಗಳಿಗಾಗುವಷ್ಟು ಮಾತ್ರ ಆಗಿದೆ. ಹೀಗಿದ್ದರೂ ಅಂಥವರಿಂದಲೂ ಈಗ ಜೋಳ ವಸೂಲು ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ಉದಾಹರಣೆಗೆ ಮೈಸೂರು ಜಿಲ್ಲೆ ನಂಜನಗೂಡು ಸಬ್‌ಡಿವಿಜನ್‌ನಲ್ಲಿ ಈಗಾಗಲೇ ವಸೂಲು ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಸರ್ಪ್ಲಸ್ ಆಗಿದ್ದಿದ್ದರೆ ವಸೂಲುಮಾಡುತ್ತಾರೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಮಳೆಯಿಲ್ಲದೆ ನಿಜವಾಗಿಯೂ ಕೇವಲ ನಾಲ್ಕಾಣೆಯಷ್ಟು ಅಲ್ಲಿ ಬೆಳೆಯಾಗಿರಬಹುದು. ಹೀಗಿದ್ದರೂ ಅಂಥವರಿಂದ ಜೋಳವನ್ನು ವಸೂಲು ಮಾಡಿರುವುದಕ್ಕೆ ಎಷ್ಟೋ ನಿದರ್ಶನಗಳನ್ನು ನಾನು ಕೊಡಬಲ್ಲೆ. ಈ ರೀತಿ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ನಿದರ್ಶನಗಳನ್ನು ಕೊಟ್ಟರೆ ವಿಚಾರಿಸುತ್ತೇವೆ. ಇಲ್ಲದಿದ್ದರೂ, ನಾವೇ ವಿಚಾರಿಸಿ ಏನಾದರೂ ಹಾಗೆ ಮಾಡಿದ್ದರೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

Audit of Accounts of Kolar Gold Mining Companies.

Q.—36.—**Sri M. V. KRISHNAPPA** (Kolar District—General).—

Will the Government be pleased to state :—

(*a*) whether it is a fact that they have agreed to share the pr fits of the Kolar Gold Mining Companies after the repealing of the Gold Duty (Amendment) Act ;

(*b*) if so, whether they audit the accounts of the Mining Companies before sharing the profits ?

A.—**The Hon'ble Sri H. C. DASAPPA** (Minister for Finance and Industries.)—

(*a*) Yes.

(*b*) The accounts of the Mining Companies are, at present, being audited by Chartered Accountants. In accordance with the Agreement entered into by Government with the Companies arrangements are being made to get the accounts audited by the Controller, State Accounts Department, also on the Government side.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಇಲ್ಲಿ ಹೇಳಿರುವ profit sharing ಒಪ್ಪಂದವಾದ ಮೇಲೆ ಸರ್ಕಾರದವರೇನಾದರೂ ಈವರೆಗೆ ಲಾಭ ಹಂಚಿಕೊಂಡಿದ್ದಾರೆಯೇ?

ಮಾನ್ಯ ಎಸ್. ಸಿ. ದಾಸಪ್ಪನವರು.—ಹಂಚಿಕೊಂಡಿದ್ದಾರೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಲಾಭದ ಹಂಚಿಕೆ ಮಾಡಿಕೊಳ್ಳುವುದು ಲೆಕ್ಕಗಳೆಲ್ಲಾ ಆಡಿಟ್ ಮಾಡಿದ ಮೇಲೆ ಮಾಡುವುದೇ ಅಥವಾ ಮುಂಚೆಯೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಆಡಿಟ್ ಆದ ಮೇಲೆ ಮಾಡುತ್ತಾರೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಹಾಗಾದರೆ ಇನ್ನೂ ಆಡಿಟ್ ಆಗಿಲ್ಲವಲ್ಲಾ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಆಡಿಟ್ ಆಗಿದೆ, ಸರ್ಕಾರದವರು ಮಾಡಿಲ್ಲ ಅಷ್ಟೆ. ಕಂಪೆನಿಯ ಚಾರ್ಟರ್ಡ್ ಅಕೌಂಟೆಂಟ್‌ರು ಮಾಡಿದ್ದಾರೆ. ಸರ್ಕಾರದವರಿಗೆ ಕಂಪೆನಿಯ ಚಾರ್ಟರ್ಡ್ ಅಕೌಂಟೆಂಟ್‌ರು ಕೊಡತಕ್ಕ ಲೆಕ್ಕಗಳೇನೋ ಸರ್ವೆಸಾಧಾರಣವಾಗಿ ಸಮರ್ಪಕವಾಗಿಯೇ ಇರುತ್ತದೆ. ಆದರೂ ಒಪ್ಪಂದದ ಷರತ್ತುಗಳ ಪ್ರಕಾರ ನಾವೂ ಒಂದು ಆಡಿಟ್ ಇಟ್ಟುಕೊಳ್ಳಬೇಕು. ಅದರ ಖರ್ಚನ್ನು ಕಂಪೆನಿಯವರೇ ವಹಿಸಿಕೊಳ್ಳಬೇಕೆಂದಿದೆ. ಅದರಂತೆ ಇನ್ನೂ ನಾವು ಆಡಿಟ್ ಮಾಡಿಲ್ಲ, ಅಷ್ಟೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಈ ಚಾರ್ಟರ್ಡ್ ಅಕೌಂಟೆಂಟ್‌ರು ಯಾರು?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದಕ್ಕೆ ನೋಟೀಸ್ ಬೇಕು.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಈ ಮೈನಿಂಗ್ ಕಂಪೆನಿಗಳವರು ಈ ಒಪ್ಪಂದವಾದ ಮೇಲೆ ಅನಾವಶ್ಯಕವಾಗಿ ಕೆಲವು ಖರ್ಚುಗಳನ್ನು ಮಾಡುತ್ತಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೆ?

Mr. SPEAKER.—That question does not arise.

Sri M. V. KRISHNAPPA.—Is not profit calculated after deducting the expenditure ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಒಪ್ಪಂದದ ಪತ್ರದಲ್ಲಿ ಇದೆಲ್ಲಾ ಬಹಳ ವಿಶದವಾಗಿ ನಮೂದಾಗಿದೆ.

Sri. M. V. KRISHNAPPA.—Has it come to the notice of the Government that the Mining Companies are spending money for unnecessary expenditure?

The Hon'ble Sri H. C. DASAPPA.—No, it has not come to our notice.

Sri M. V. KRISHNAPPA—Is there any body to sanction the items of expenditure, either a Board of Management or Directors!

The Hon'ble Sri H. C. DASAPPA.—The Directors are there.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಮೈನಿಂಗ್ ಕಂಪೆನಿಯಲ್ಲಿ ಮೈಸೂರು ಸರ್ಕಾರದವರ ಪರವಾಗಿ ಡೈರೆಕ್ಟರು ಯಾರಾದರೂ ಇದ್ದಾರೆಯೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇದ್ದಾರೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಯಾರು?

ಮಾನ್ಯಶ್ರೀ ಎಚ್. ಸಿ. ದಾಸಪ್ಪನವರು.—ಕೈಗಾರಿಕಾ ಮತ್ತು ವಾಣಿಜ್ಯ ಇಲಾಖಾ ಡೈರೆಕ್ಟರವರು.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಈ ಮೈನಿಂಗ್ ಕಂಪೆನಿಯವರ ವಹಿವಾಟುಗಳು ಹೆಚ್ಚು ಕಡಿಮೆ ನಮ್ಮ ಸರ್ಕಾರದವರ ವಹಿವಾಟುಗಳಷ್ಟಿದೆಯೆಂಬುದು ಗೊತ್ತಿದೆಯೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನೋಟೀಸ್.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಅದಕ್ಕಾಗಿ ತಕ್ಕಷ್ಟು ಮಟ್ಟಿನ ಆಡಿಟ್ ವ್ಯವಸ್ಥೆಯನ್ನಿಡಬೇಕೆಂಬುದನ್ನು ಸರ್ಕಾರದವರು ಯೋಚನೆ ಮಾಡಿದ್ದಾರೆಯೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಆ ನೀತಿಯನ್ನನುಸರಿಸಿಯೇ ನಾವು ಇದಕ್ಕಾಗಿ ಒಂದು ಪ್ರತ್ಯೇಕ ಆಡಿಟ್ ಸೆಕ್ಷನ್ ಏರ್ಪಡಿಸಬೇಕೆಂದು ಮಾಡಿದ್ದೇವೆ. ಈಗ ಇಲ್ಲಿ ಹೇಳಿರುವ ಹಾಗೆ ಈ ಬಗ್ಗೆ ನಮ್ಮ ಸರ್ಕಾರದ ಕಂಟ್ರೋಲರವರೇ ಇಲಾಖೆಯ ಮುಖ್ಯಸ್ಥರಾಗಿದ್ದುಕೊಂಡು ಕೆಲಸಮಾಡಬೇಕೆಂದು ತೀರ್ಮಾನಮಾಡಿದ್ದೇವೆ. ಈ ಸದ್ಯಕ್ಕೆ ಈ ಇಲಾಖೆಯನ್ನು ವ್ಯವಸ್ಥೆ ಮಾಡುವುದಕ್ಕೆ ಸ್ವಲ್ಪ ಕಾಲ ತೆಗೆದುಕೊಂಡಿದೆ; ಅಷ್ಟೆ.

ಶ್ರೀ ಜಿ. ಎ. ಆಚಾರ್ಯರು (ಬೆಂಗಳೂರು ಜಿಲ್ಲೆ).—ನಮ್ಮ ಸರ್ಕಾರದ ಕಂಟ್ರೋಲರ್‌ರವರಿಗೆ ಆ ಕಂಪೆನಿಯವರ 'ಕಾಸ್ಟಿಂಗ್ ಷೀಟ್' ನೋಡುವುದಕ್ಕೆ ಅಧಿಕಾರವಿದೆಯೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಚಾರ್ಟರ್ಡ್ ಅಕೌಂಟೆಂಟರಿಗೆ ಏನು ಅಧಿಕಾರವಿದೆಯೋ ಆ ಅಧಿಕಾರವೆಲ್ಲವೂ ನಮ್ಮ ಆಡಿಟರುಗಳಿಗೂ ಇರುತ್ತದೆ.

ಮುಷಿರ್-ಉಲ್-ಮುಲ್ಕ್ ಜೆ. ಮಹಮದ್ ಇಮಾಂರವರು (ಚಿತ್ರದುರ್ಗ ಮತ್ತು ತುಮಕೂರು-ಮುಸ್ಲಿಂ).—ಸರ್ಕಾರಕ್ಕೂ ಚಿನ್ನದ ಗಣಿ ಕಂಪೆನಿಯವರಿಗೂ ಹೊಸ ಒಪ್ಪಂದವಾಗಿ ಎಷ್ಟು ದಿವಸವಾಯಿತು?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.-1949ನೆಯ ಇಸವಿ ಫೆಬ್ರುವರಿಯಲ್ಲಿ ಈ ಒಪ್ಪಂದವಾಯಿತು.

ಜನಾಬ್ ಜೆ. ಮಹಮ್ಮದ್ ಇಮಾಂರವರು.—ಅಲ್ಲಿಂದ ಇದುವರೆಗೆ ನಮ್ಮ ಸರ್ಕಾರಿ ಆಡಿಟರು ಹೋಗಿ ಅಲ್ಲಿನ ಲೆಕ್ಕಗಳನ್ನು ತನಿಖೆ ಮಾಡಿದ್ದಾರೆಯೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇಲ್ಲವೆಂದು ಆಗಲೇ ಉತ್ತರ ಹೇಳಿದ್ದೇನೆ.

ಜನಾಬ್ ಜೆ. ಮಹಮ್ಮದ್ ಇಮಾಂರವರು.—ಅಲ್ಲಿ ಖಾಯಮ್ಮಾಗಿ ನಮ್ಮ ಅಕೌಂಟೆಂಟ್‌ರು ಇರುವುದು ಒಪ್ಪಂದದ ಪ್ರಕಾರ obligatory ಅಲ್ಲವೆ? ಇದು ಕಾನೂನಿನಲ್ಲಿಲ್ಲವೆ!

The Hon'ble Sri H. C. DASAPPA.—It is necessary. In fact the clause in the agreement itself is to the effect that the Government must have its own audit at the cost of the Company. I have answered that point.

ಜನಾಬ್ ಜೆ. ಮಹಮದ್ ಇಮಾಂರವರು.—ಆ ರೀತಿ ಒಂದು ಕ್ಲಾಜು ಇದ್ದ ಮೇಲೆ ಸರ್ಕಾರದವರು ಒಬ್ಬರು ಆಡಿಟರನ್ನು ನೇಮಕ ಮಾಡಲಿಲ್ಲವೆ?

The Hon'ble Sri H. C. DASAPPA.—ಅದಕ್ಕೆ ಆಗಲೇ ಉತ್ತರ ಕೊಟ್ಟಿದ್ದೇನೆ. It took some time to organise the State Accounts Department because the entire Audit Department of the Mysore State was taken over to the Centre and there were lots of difficulties in the matter of distributing the hands in this composite department of Audit and Accounts. I know that after the distribution the hands that came over to the State were not enough to cope with the internal and special audits of this nature and so we had to organise a department.

Janab J. MOHAMED IMAM.—Could not the Government have appointed a Special Officer for this work?

The Hon'ble Sri H. C. DASAPPA.—It is not a question of merely posting a single officer like that. We had to organise a whole department and this has taken some time.

ಜನಾಬ್ ಜೆ. ಮಹಮದ್ ಇಮಾಂರವರು.—ಹಾಗಾದರೆ ಸರ್ಕಾರಕ್ಕೆ ಬರಬೇಕಾದ ವರಮಾನ ಸರಿಯಾಗಿ ಬರುತ್ತದೆಯೆ ಅಥವಾ ಇಲ್ಲವೆ ಎಂಬುದನ್ನು ಹೇಗೆ ತಿಳಿದುಕೊಳ್ಳುತ್ತೀರಿ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದಕ್ಕೆ ಆಗಲೇ ಉತ್ತರ ಕೊಟ್ಟಿದ್ದೇನೆ. The Chartered Accountants have been submitting the balance sheet and trading accounts to us and we have satisfied ourselves that these accounts are quite *bona fide* and we are acting upon that provisionally. What ultimately will happen after our Audit Department goes into the job, I cannot say now.

ಜನಾಬ್ ಜೆ. ಮಹಮದ್ ಇಮಾಂರವರು.—ಈ ಹೊಸ ಒಪ್ಪಂದವಾದ ಮೇಲೆ ಸರ್ಕಾರಕ್ಕೆ ಬರತಕ್ಕ ವರಮಾನ ಹೆಚ್ಚಾಗಿದೆಯೋ ಅಥವ ಕಡಿಮೆಯಾಗಿದೆಯೊ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನಮ್ಮ ನಿರೀಕ್ಷಣೆ ಎಷ್ಟಿತ್ತೊ ಅದಕ್ಕಿಂತ ಹೆಚ್ಚಾಗಿದೆ.

ಜನಾಬ್ ಜೆ. ಮಹಮದ್ ಇಮಾಂರವರು.—ಮೊದಲಿಗಿಂತ ಎಂದರೆ, ಗೋಲ್ಡ್ ಡ್ಯೂಟಿ ಇದ್ದಾಗಿನ

ಕಾಲಕ್ಕಿಂತ ಈಗ ವರಮಾನ ಹೆಚ್ಚಾಗಿದೆಯೋ ಅಥವ ಕಡಿಮೆಯಾಗಿದೆಯೊ ?

The Hon'ble Sri H. C. DASAPPA.—The question of gold duty was wholly different. It was one of sharing in a certain proportion the monies realised from the sale of gold. That structure is altogether different from the one relating to the sharing of profits. We cannot therefore compare one with the other. Possibly we have derived the same advantage as we were deriving before the repeal of gold duty.

Janab J. MOHAMED IMAM.—I agree to it. But my question is simple. ಹೊಸ ಒಪ್ಪಂದವಾದಮೇಲೆ ಬರತಕ್ಕ ವರಮಾನ ಮೊದಲ ವರಮಾನಕ್ಕಿಂತ ಹೆಚ್ಚಾಗಿದೆಯೋ ಅಥವ ಕಡಿಮೆಯಾಗಿದೆಯೋ ಎಂಬುದು ನನ್ನ ಪ್ರಶ್ನೆ.

The Hon'ble Sri H. C. DASAPPA.—That has got to be seen. As I have already answered, possibly it is not less than what we were realising before inclusive of income-tax and all other items.

Sri V. M. MASCERENHAS (Bangalore Retroceded Area–General).—Has this agreement the approval of the Legislature?

The Hon'ble Sri H. C. DASAPPA.—The subject was discussed before the Legislature.

Sri L. SIDDAPPA (Shimoga District–General).—Not the agreement but the Gold Duty Repealing Bill.

The Hon'ble Sri H. C. DASAPPA.—Yes.

Sri V. M. MASCERENHAS.—I am referring to the Agreement. I want to know whether that was discussed in the Legislature.

The Hon'ble Sri H. C. DASAPPA.—That was part and parcel of the discussion on the Repealing Bill.

ಶ್ರೀ ಎ. ಜಿ. ಬಂದೀಗೌಡರು (ಮಂಡ್ಯ ಜಿಲ್ಲೆ).—ಕಂಪೆನಿಗೂ ಸರ್ಕಾರಕ್ಕೂ ಹೊಸ ಒಪ್ಪಂದವಾದದ್ದು 1949ನೆಯ ಫೆಬ್ರವರಿ ತಿಂಗಳಲ್ಲಿ ಎಂದು ಹೇಳಲಾಯಿತು. 1950ನೆಯ ಏಪ್ರಿಲ್ ಒಂದನೆಯ ತಾರೀಖು ಆಡಿಟ್ ಇಲಾಖೆ ಇಂಡಿಯಾ ಸರ್ಕಾರಕ್ಕೆ ಸೇರಿದ್ದು. ಈ ಮಧ್ಯೆ ಏಕೆ ಆ ಲೆಕ್ಕಗಳನ್ನು ತನಿಖೆ ಮಾಡಲಿಲ್ಲ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಈ ಒಪ್ಪಂದದಲ್ಲಿ ಅನೇಕ ಅಂಶಗಳಿವೆ. ಆ ಕಂಪೆನಿಯನ್ನು ಇಂಗ್ಲೆಂಡಿನಿಂದ ಇಲ್ಲಿಗೆ ವರ್ಗ ಮಾಡಬೇಕಾಗಿತ್ತು. ಇಂಗ್ಲೆಂಡಿನಲ್ಲಿದ್ದ ಅದರ ಕಚೇರಿಯನ್ನು ಇಲ್ಲಿಗೆ ವರ್ಗ ಮಾಡಬೇಕಾಗಿತ್ತು, ಸ್ಟರ್ಲಿಂಗನ್ನು ರೂಪಾಯಿಗೆ ಪರಿವರ್ತನೆ ಮಾಡಬೇಕಾಗಿತ್ತು. Therefore, all that took a lot of time after February 1949.

ಶ್ರೀ ಎ. ಜಿ. ಬಂದೀಗೌಡರು.—ಹಾಗಾದರೆ 1949ನೆಯ ಫೆಬ್ರವರಿಯಿಂದ 1950ನೆಯ ಏಪ್ರಿಲ್ ವರೆಗೆ ನಮ್ಮ ಸರ್ಕಾರದವರು ಲೆಕ್ಕಗಳನ್ನು ಆಡಿಟ್ ಮಾಡಲು ಸಾಧ್ಯವಾಗಲಿಲ್ಲವೆಂದರ್ಥವೆ?

The Hon'ble Sri H. C. DASAPPA.—I have already answered that. The mere fact that there was an agreement in February 1949 did not mean that all the clauses of the Agreement would come into effect on that date. As I said, the Companies had to change their headquarters from London to Mysore and then convert sterling into rupee companies. All this took some time. It is only after that process, the question of audit by our staff would arise.

ಶ್ರೀ ಎ. ಜಿ. ಬಂದೀಗೌಡರು.—1950ನೆಯ ಏಪ್ರಿಲ್ ಒಂದನೆಯ ತಾರೀಖು ನಮ್ಮ ಆಡಿಟ್ ಇಲಾಖೆ ಕೇಂದ್ರ ಸರ್ಕಾರಕ್ಕೆ ಹೋದ ಮೇಲೆ ನಮ್ಮ ಆಡಿಟರನ್ನು ಅಲ್ಲಿಗೆ ನೇಮಿಸಲು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಲಿಲ್ಲವೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದಕ್ಕೇ ಸ್ಟೇಟ್ ಅಕೌಂಟ್ಸ್ ಆಫೀಸರೆಂಬ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿದ್ದು.

ಶ್ರೀ ಎಂ. ಗೋವಿಂದರೆಡ್ಡಿಯವರು (ಚಿತ್ರದುರ್ಗ ಜಿಲ್ಲೆ).—ಸರ್ಕಾರದವರು ಅಥವ ಸರ್ಕಾರದ ಪರವಾಗಿ ಅಲ್ಲಿರುವ ಡೈರೆಕ್ಟರು ಯಾರಾದರೂ ಗಣಿ ಕಂಪೆನಿಯವರಿಗೆ ಸೂಕ್ತ ಸಲಹೆಯನ್ನು ಕೊಟ್ಟಿದ್ದಾರೆಯೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನಮ್ಮ ಡೈರೆಕ್ಟರು ಅಲ್ಲಿರುವಾಗ ನಮ್ಮ ಸಂಸ್ಥಾನದ ಹಿತವನ್ನು ರಕ್ಷಿಸಲು ಮಾಡಬೇಕಾದುದನ್ನು ಮಾಡಿಯೇ ಮಾಡುತ್ತಾರೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಲಾಭ ಹೆಚ್ಚು ಮಾಡಿಕೊಳ್ಳುವ ವಿಚಾರದಲ್ಲಿಯೂ ಇತರ ವ್ಯವಹಾರದಲ್ಲಿಯೂ ಸೂಕ್ತ ಕಾರ್ಯ ಕ್ರಮ ತೆಗೆದುಕೊಳ್ಳುವಂತೆ ಏನಾದರೂ ಸಲಹೆಯನ್ನು ಕೊಟ್ಟಿದ್ದಾರೆಯೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಸಂದರ್ಭಾನುಸಾರ ಅವರು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಂದು ನಮ್ಮ ಭಾವನೆ. Everything that is necessary to safeguard the interests of the State will be done.

Sri M. GOVINDA REDDY.—May I know whether the representatives of the Mysore Government on the Board have given any suggestions regarding the reduction of expenditure or earning of more profits?

The Hon'ble Sri H. C. DASAPPA.—Notice.

Janab SYED ABDUR RAHMAN (Chikmagalur *cum* Shimoga--Muslim). – Is it not on the basis of the agreement reached between the Government of Mysore and the Gold Mining Companies that the profits are shared?

The Hon'ble Sri H. C. DASAPPA.— Yes, obviously.

Janab SYED ABDUR RAHMAN.— If it is so, may I know in what proportion the profits are shared?

The Hon'ble Sri H. C. DASAPPA.—In theproporti on provided for in the Agreement. After meeting all the costs and after 6 per cent dividend is found, there is what is known as the net adjusted surplus. If that surplus exceeds 6 per cent return on their capital, then we share that net surplus in the ratio of 25 per cent for the Companies and 75 per cent for the Government. If the net adjusted profit does not exceed 6 per cent over the fixed capital, then we share it in the ratio of 50 : 50.

Janab SYED ABDUR RAHMAN.— What are the means for the Government to satisfy themselves that the accounts furnished by the Gold Mining Companies are correct if they are not audited.

Mr. SPEAKER.—That question has been answered.

Janab SYED ABDUR RAHMAN.— When the accounts are not audited by the State representatives how are we to be sure that the accounts submitted by the Gold Mining Companies are quite correct?

The Hon'ble Sri H. C. DASAPPA.— That point has been answered. I have stated that we have no reason to think that the balance sheet prepared by the Chartered Accountants are not quite correct. Even so, what we have done is provisional and when it is possible for our auditors to go into the whole accounts–there are certain differences to be reconciled–then certainly it will be done.

Janab SYED ABDUR RAHMAN.— The abolition of gold duty depleted the general revenues by about Rs. 30 lakhs. Have we realised more than Rs. 30 lakhs in this year?

Mr. SPEAKER.–That question has also been answered.

ಶ್ರೀ ಎಂ. ಸಿ. ಶಿವಾನಂದಶರ್ಮರವರು (ಬೆಂಗಳೂರು ಜಿಲ್ಲೆ).—ಈ ಚಿನ್ನದಗಣಿ ಕಂಪೆನಿಯವರ ಲೆಕ್ಕಪತ್ರಗಳ ವಿವರಗಳನ್ನು ಈ ಸಭೆಯ ಸದಸ್ಯರಿಗೆ ಒದಗಿಸಲು ತಾವು ಏರ್ಪಾಡು ಮಾಡುತ್ತೀರಾ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.— ಹಿಂದೆಯೇ ಚಿನ್ನದ ಮೇಲಿನ ಸುಂಕಕ್ಕೆ ಸಂಬಂಧಪಟ್ಟ (ತಿದ್ದುಪಡಿ) ಆಕ್ಟು ರದ್ದಾದ ತರುವಾಯದ ಸಂಬಂಧದಲ್ಲೇ ಆ ಅಂಕಿಅಂಶಗಳನ್ನೊಳಗೊಂಡ ಪಟ್ಟಿಯನ್ನು ಹಂಚಿಸಿರುವಂತೆ ನನಗೆ ಜ್ಞಾಪಕವಿದೆ. ಹಾಗೆ ಅದನ್ನು ಹಂಚದೆ ಇದ್ದರೆ, ಹಂಚಿಸಲು ಎಲ್ಲ ಏರ್ಪಾಡುಗಳನ್ನು ಮಾಡಲಾಗುತ್ತೆ.

Sri L. SIDDAPPA (Shimoga District–General).—What is the Government share of the profits for the year 1949-50 and 1950-51?

The Hon'ble Sri H. C DASAPPA.—I cannot say for 1949-50 because 49-50 was split up into two periods, one period during which gold duty was subsisting and another period for which the surplus had to be shared; but for 1950-51, as I have already said, the profit received has exceeded our anticipations. I think that we budgeted for a receipt of Rs. 20 lakhs but received actually, as share of our profits, Rs. 23 laks.

Sri L. SIDDAPPA.—That you said is inclusive of income-tax and all that.

The Hon'ble Sri H. C. DASAPPA.— No, no, absolutely exclusive. Income-tax comes within the net gap under the federal financial agreement and it comes as part of Rs. 345 lakhs which we are getting every year.

Starting a Sugar Factory at Goribidnur.

Q.—37. **Sri M. V. KRISHNAPPA** (Kolar District–General).—

Will the Government be pleased to state:—

(*a*) whether there were a number of representations in the Assembly to start a Sugar Factory at Goribidnur;

(*b*) the action taken?

A.—**The Hon'ble Sri H. C. DASAPPA** (Minister for Finance and Industries).—

(*a*) Yes.

(*b*) Government are not in a position to start the Factory. If private enterprise is forthcoming, Government will consider what best it could do in the matter.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಗೌರಿಬಿದನೂರಿನಲ್ಲಿ ಸ್ಥಾಪಿಸಬೇಕೆಂದಿದ್ದ ಸಕ್ಕರೆ ಕಾರ್ಖಾನೆಯನ್ನು ತಪ್ಪಿಸಿ, ಅದನ್ನು ಶಿವಮೊಗ್ಗ ಜಿಲ್ಲೆಯಲ್ಲಿ ಸ್ಥಾಪಿಸುವಂತೆ ಏರ್ಪಾಡುಗಳಾಗುತ್ತಿವೆಯೆಂದು ಹರಡಿರುವ ಸುದ್ದಿಯ ಬಗ್ಗೆ ಏನಾದರೂ ಸತ್ಯಾಂಶವಿದೆಯೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಆ ಸುದ್ದಿಯಲ್ಲಿ ಯಾವ ಅನುಮಾನವೂ ಇಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಇಂಡಿಯಾ ಸರ್ಕಾರದವರು ಈಗ ಸಾಮಾನ್ಯವಾಗಿ ಸಕ್ಕರೆ ಕಾರ್ಖಾನೆಗಳನ್ನೆಲ್ಲಾ ದಕ್ಷಿಣ ಇಂಡಿಯಾಕ್ಕೆ ಬದಲಾಯಿಸಬೇಕೆಂದು ಮಾಡಿರುವ ಅಂಶ ನಮ್ಮ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇಲ್ಲ. ಇಂಡಿಯಾ ಸರ್ಕಾರದವರು ನೇಮಕ ಮಾಡಿರುವ ಪ್ಲಾನಿಂಗ್ ಸಮಿತಿಯವರ ಮುಂದೆ ಈ ದಕ್ಷಿಣ ಭಾರತಕ್ಕೆ ಕೆಲವು ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸುವ ವಿಚಾರ ಬಂದಿದ್ದಾಗ್ಗೆ 2–3 ಕಂಪೆನಿಗಳ ಪೈಕಿ ಒಂದನ್ನು ಶಿವಮೊಗ್ಗ ಜಿಲ್ಲೆಯಲ್ಲೇ ಸ್ಥಾಪಿಸಬೇಕೆಂದು ನಿರ್ಧರಿಸಲಾಗಿದೆ. ಅದಕ್ಕೆ ಒಪ್ಪಿಗೆ ಮುದ್ರೆ ಬೀಳುವ ಸಮಯಕ್ಕೆ ಕೆಲವರು ಬೇರೆ ಜನಗಳು ಹೋಗಿ, ಗೌರಿಬಿದನೂರಿನಲ್ಲಿ ಒಂದು ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಅವಕಾಶ ಕೊಡಬೇಕೆಂದು ಕೇಳಿಕೊಂಡಿದ್ದಾರೆ. ಆದರೆ ಈಗಸದ್ಯಕ್ಕೆ ಶಿವಮೊಗ್ಗಾಕ್ಕೆ ಒಂದು ಮಂಜೂರಾದದ್ದೇ ಸಾಕಾಗಿದೆ. ಅದು ಒಂದು ಚೆನ್ನಾಗಿ ಅಭಿವೃದ್ಧಿಗೆ ಬಂದರೆ ಸಾಕು. ಯಾರಾದರೂ ಅಂಥಾ ಖಾಸಗೀ ಜನರು ಮುಂದೆ ಬರುವುದಾದರೆ, ಗೌರಿಬಿದನೂರಿಗೂ ಸಹ ಒಂದು ಸಕ್ಕರೆ ಕಂಪೆನಿ ಕೊಡಲು ಸರ್ಕಾರದವರು ಸದಾ ಸಿದ್ಧರಾಗಿದ್ದಾರೆ.

ಶ್ರೀ ಜಿ. ಎ. ಆಚಾರ್ಯರವರು (ಬೆಂಗಳೂರು ಜಿಲ್ಲೆ)–ಗೌರಿಬಿದನೂರಿನಲ್ಲಿ ಸಕ್ಕರೆ ಕಂಪೆನಿ ಸ್ಥಾಪಿಸುವುದು ತಮಗೆ ಒಪ್ಪಿಗೆ ಇದೆಯೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನನ್ನ ಅಭಿಪ್ರಾಯ ಆಗಲೇ ತಿಳಿಸಿದ್ದೇನೆ.

Janab SYED ABDUR RAHMAN (Chikmagalur *cum* Shimoga-Muslim).—Is it not a fact that the decision to start a sugar factory in Shimoga was taken much earlier than in regard to the one at Goribidnur?

Mr. SPEAKER.—That question does not arise.

Talks with the Madras Government in connection with Mekedatu Project.

Q.—8. **Sri H. C. LINGA REDDY** (Kolar District—General.)—

Will the Government be pleased to state:—

(*a*) whether they had talks with the Madras Government in connection with the Mekedatu Project subsequent to the last Session of the Assembly;

(*b*) whether they have arrived at any final conclusions in the matter?

A.—**The Hon'ble Sri K. T. BHASHYAM** (Minister for Law and Labour).—

(*a*) Yes.

(*b*) A final revised draft agreement is awaited from the Madras Government on the basis of the discussions held between the representatives of both the Governments.

Sri H. C. LINGA REDDY.—For how long the negotiations are going on between the Mysore Government and the Madras Government with regard to the starting of the Mekedatu Project?

The Hon'ble Sri K. T. BHASHYAM.—I could not tell the Hon'ble Member for how long. It is a long number of years during which the negotiations have been going on. Anyhow since we came to office in 1947 we have been carrying on these negotiations.

Sri H. C. LINGA REDDY.—It is stated that the draft agreement is awaited. What are the terms of the agreement?

The Hon'ble Sri K. T. BHASHYAM.—A number of points have been discussed and the Madras Government have agreed to put up a draft for our approval. As soon as the draft comes, we will be able to know how far we are in agreement with the draft.

Sri H. C. LINGA REDDY.—What exactly is the estimate of the Project?

The Hon'ble Sri K. T. BHASHYAM.—An estimate of the project has not yet been made at all. It is somewhere in the neighbourhood of Rs. 5 crores.

Sri H. C. LINGA REDDY.—Do the Government expect any help from the Centre to complete the project?

The Hon'ble Sri K. T. BHASHYAM.—That is in the supplementry plan and if they give help, it will be very good of them.

Sri Kadidal MANJAPPA (Shimoga District—General).—Are the Madras Government going to share a portion of the cost of the project?

The Hon'ble Sri K. T. BHASHYAM.—No.

Dates of Election to the State Assembly, Council and Indian Parliament.

Q.—39. **Sri M. V. KRISHNAPPA** (Kolar District—General).—

Will the Government be pleased to state :—

(*a*) whether the Election Commissioner of India has intimated the dates of election to the State Assembly, Council and Indian Parliament ;

(*b*) the respective dates of the election in Mysore State ?

A.—**The Hon'ble Sri K. T. BHASHYAM** (Minister for Law and Labour).—

(*a*) No.

(*b*) The elections will be held in January 1952. The precise dates are under active consideration and will be fixed early.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಇಂಡಿಯಾ ಸರ್ಕಾರದವರು ಚುನಾವಣೆಗಳನ್ನು ಬರಲಿರುವ ಜನವರಿ ತಿಂಗಳಿನಲ್ಲಿ ನಡೆಸಬೇಕೆಂಗಿದ್ದಾರೆಂದೂ, ಅದರ ಪ್ರಕಾರ ಚುನಾವಣೆಗಳು ಇಲ್ಲಿಯೂ ಸಹ ನಡೆಸಬೇಕೆಂದು ಕೇಳಿರುವುದಕ್ಕೆ ತಾವು ಒಪ್ಪಿಕೊಂಡಿದ್ದೀರಾ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅವರೇನೂ ನಮ್ಮನ್ನು ಕೇಳಿಲ್ಲ. ಅವರು ಕಾಲವನ್ನು ಮಾತ್ರ ಸೂಚಿಸಿದ್ದಾರೆ. ಅದಕ್ಕನುಸಾರವಾಗಿ ಮುಂದಿನ ಜನವರಿಯಲ್ಲೇ ನಾವೂ ಸಹ ಚುನಾವಣೆ ಮಾಡುವುದಾಗಿ ತಿಳಿಸಿದ್ದೇವೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಆ ಬಗ್ಯೆ ತಾವು ಎಲ್ಲ ಸಿದ್ಧತೆಗಳನ್ನೂ ಮಾಡಿಕೊಂಡಿದ್ದೀರಾ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಮಾಡಿಕೊಂಡಿದ್ದೇವೆ.

Janab SYED ABDUR RAHMAN (Chikmagalur *cum* Shimoga Muslim).—Are the electoral rolls prepared in respect of all the districts of the State ?

The Hon'ble Sri K. T. BHASHYAM.—Yes.

Janab SYED ABDUR RAHMAN.—Has the Hon'ble Minister got the figures and the dates ? May I request him to enlighten us in regard to that ?

The Hon'ble Sri K. T. BHASHYAM.—I have got all the dates of the election in respect of all the districts of the State.

Janab SYED ABDUR RAHMAN.—Have they been notified in the Gazette?

The Hon'ble Sri K. T. BHASHYAM.—It is being notified.

Steps to ensure fair Election to State Legislatures and the Indian Parliament.

Q.—98. *Mushir-ul-Mulk* **J. MOHAMED IMAM** (Chitaldrug *cum* Tumkur—Muslim).—

Will the Government be pleased to state :—

the steps taken by them,

(i) to ensure free and fair election during the next elections to the State Legislatures and to the Parliament ;

(ii) to prevent the officers of Government and other public servants from taking part and using their influence in course of elections ;

(iii) to prevent the use of Government property for purpose of party propaganda ?

A.—**The Hon'ble Sri K. T. BHASHYAM** (Minister for Law and Labour).—

(i) The elaborate provisions of the two Representations of the People Acts of 1950 and 1951 and the Rules framed thereunder are all enacted only to ensure free and fair elections all over the country. The officers conducting the elections are well conversant with these provisions.

(ii) It is a well-understood rule that Government servants should not take part in politics (Rule 318 of the Manual of General Circulars and Standing Orders) and any infringement of this Rule will be severely noticed. This point is also emphasised in a broadcast talk by the Chief Election Commissioner, India, copies of which have been widely distributed.

(iii) Government property can be used only for Governmental work and any other use can only be under the special orders of Government. It is not proposed to permit the use of any Government property for purposes of party propaganda.

Janab J. MOHAMED IMAM.—Apart from the Representations of the People Acts and the Rules framed thereunder, have the Government taken any other steps to see that Government officers and public servants do not interfere in the elections ?

The Hon'ble Sri K. T. BHASHYAM.—We have taken every precaution to see that Government servants do not take sides with any party in the elections and are perfectly fair and impartial.

Janab J. MOHAMED IMAM.—May I know what are the precautions taken?

The Hon'ble Sri K. T. BHASHYAM—There are the Government Rules in the first place, which prohibit any Government servants from taking sides and broadcast has been made in this respect by the Chief Election Commissioner in India. We have circularised all Government servants in respect of that broadcast talk. We have also issued a separate circular giving full details, as to how they should act, so that not even an impression is created that they are taking sides with anybody and much less should they take sides with any party.

Janab J. MOHAMED IMAM.—What action have the Government taken to see that the Ministers who hold Government offices do not take side or use influence during the elections?

The Hon'ble Sri K. T. BHASHYAM.—It has been repeatedly brought to the notice not merely of the Ministers but of every Government servant, that they should not misuse the powers of the office they hold.

Janab J. MOHAMED IMAM.—Is it not a fact that the Ministers and others are misusing the powers and using their influence...............

The Hon'ble Sri K. T. BHASHYAM.—I do not agree that anybody has misused the powers.

The Hon'ble Sri H. C. DASAPPA (Minister for Finance and Industries).—We expect a better question from my Hon'ble friend afrer having returned from London.

Janab J. MOHAMED IMAM.—I am seeing the contrast and that is why I am putting the question.

The Hon'ble Sri K. CHENGALARAYA REDDY (Chief Minister).—Perhaps the question is based on the experience gained by him when he was a Minister.

Janab J. MOHAMED IMAM.—Is it not a fact that the Ministers are using Government property and Government cars for party propaganda?

The Hon'ble Sri K. T. BHASHYAM.—They are not using it for party propaganda. They use it for Government purpose.

Janab J. MOHAMED IMAM.—Is it not a fact that all the Ministers went in Government cars to attend the A. M. C. C. meeting at Davangere?

The Hon'ble Sri K. T. BHASHYAM.—They might have been in Davangere at that particular moment but they went on Government business.

Janab J. MOHAMED IMAM.—Is it not a fact that all the Ministers were at Davangere at that time?

The Hon'ble Sri K. T. BHASHYAM.—It may be so, but every Minister went to Davangere and other places as part of Government work and it so happened that they were in Davangere at that time.

Janab J. MOHAMED IMAM.—May I know what was the work done by the Hon'ble Ministers on that particular date at Davangere except attending the meeting of the A. M. C. C.?

The Hon'ble Sri K. T. BHASHYAM—I can gather information required from all the Ministers and tell the Hon'ble Members, So far as I am concerned, I inspected the lock-up and the power station which are in my jurisdiction and every Minister has done something like that.

Janab J. MOHAMED IMAM.—Is it not a fact that for election and other purposes Government cars are being used?

The Hon'ble Sri K. T. BHASHYAM.—They are not being used for these purposes. I am repeatedly saying it.

Sri A. BHEEMAPPA NAIK (Chitaldrug District—General).—Had the Hon'ble Chief Minister brought his car that day?

The Hon'ble Sri K. T. BHASHYAM.—No.

Sri G. A. ACHARYA (Bangalore District—General).—Did the Hon'ble Sri Dasappa bring his car?

The Hon'ble Sri K. T. BHASHYAM.—No.

ಶ್ರೀ ಟಿ. ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—ಎಲ್ಲಾ ಮಂತ್ರಿಗಳೂ ಒಂದೇ ಕಾಲದಲ್ಲಿ, ಒಂದೇ ಕಾರಿನಲ್ಲಿ ಎಲ್ಲಾ ಜಿಲ್ಲೆಗಳಲ್ಲೂ ಸಂಚಾರಮಾಡಬಹುದೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಒಂದೇ ಕಾರಿನಲ್ಲಿ ಟೂರ್‌ಮಾಡಿದರೆ ಸರ್ಕಾರಕ್ಕೆ ಫಾಯಿದೆಯಾಯಿತು.

ಶ್ರೀ ಟಿ. ಚನ್ನಬೈರೆಗೌಡರು.—ಏಕಕಾಲದಲ್ಲಿ, ಒಂದೆರಡು ದಿವಸಗಳಲ್ಲಿ ಅಥವಾ ಒಂದೆರಡು ತಿಂಗಳಲ್ಲಿ ಒಂದೇ ಜಿಲ್ಲೆಯಲ್ಲಿ ಕೆಲವು ಮಂತ್ರಿಗಳು ಒಟ್ಟಾಗಿ ಸಂಚಾರಮಾಡಬಹುದೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಮಾಡಬಾರದೆಂದು ಎಲ್ಲೂ ಹೇಳಿಲ್ಲ.

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು (ಮುಖ್ಯ ಮಂತ್ರಿಗಳು).—May I just state one or two words ? ಪಾರ್ಟಿ ಸರ್ಕಾರ ನಡೆಸುತ್ತಿರುವಾಗ ಪಾರ್ಟಿ ಕೆಲಸಗಳಿಗೆ ಸರ್ಕಾರಿ ಮಂತ್ರಿಗಳು ಹೋಗಬಹುದು. ಆದರೆ ಅದು ಟೂರ್‌ಮಾಡುವುದಲ್ಲ. ಸರ್ಕಾರಿ ಕೆಲಸವಿದ್ದರೆ ಆಗ ಮಾತ್ರ ಸರ್ಕಾರಿ ಕಾರಿನಲ್ಲಿ ಹೋಗಬಹುದೇ ಹೊರತು ಬೇರೆ ಕೆಲಸಗಳಿಗೆ ಹೋಗಬಾರದು. ಬೇರೆ ಕೆಲಸವಿದ್ದಾಗ ಬೇರೆ ಕಾರಿನಲ್ಲಿ ಹೋಗಬಹುದು. ಪಾರ್ಟಿ ಕೆಲಸಗಳಿಗೆ ಸರ್ಕಾರಿ ಕಾರನ್ನು ಉಪಯೋಗಿಸಬೇಕೆಂಬ ಉದ್ದೇಶವಿಲ್ಲ. ಈಗಾಗಲೇ ಈ ವಿಚಾರದಲ್ಲಿ ಕೇಂದ್ರಸರ್ಕಾರದಿಂದ ಸಲಹೆಬಂದಿದೆ, ಮುಖ್ಯಮಂತ್ರಿಗಳು ಒಂದು ಸರ್ಕ್ಯುಲರನ್ನು ಸಹ ಕಳುಹಿಸಿದ್ದಾರೆ. ಅದರ ಪ್ರಕಾರ ಮುಂದೆ ಡಿಸೆಂಬರ್ ಮತ್ತು ಜನವರಿಯಲ್ಲಿ ಚುನಾವಣೆಯಾಗುವಾಗ ಪಾರ್ಟಿ ಮೀಟಿಂಗುಗಳಿಗೆ ಮತ್ತು ಚುನಾವಣಾ ಪ್ರಚಾರಕ್ಕೆ ಸರ್ಕಾರಿ ಕಾರನ್ನು ಉಪಯೋಗಿಸಕೂಡದೆಂದು ಸೂಚಿಸಿದ್ದಾರೆ. ಆ ರೀತಿ ನಡೆಯಬೇಕೆಂದು ಮಾಡಿದೆ. ಮುಂದೆ ಹಾಗೆ ಅನುಸರಿಸುತ್ತೇವೆ. ಹಾಗೆ ಅನುಸರಿಸುವ ನೀತಿಯು ಮುಂದೆ ಸ್ಪಷ್ಟವಾಗಿ ಎಲ್ಲರಿಗೂ ಗೊತ್ತಾಗುತ್ತದೆ.

ಜನಾಬ್ ಜೆ. ಮಹಮದ್ ಇಮಾಂರವರು.—ಈ ಸಂಬಂಧದಲ್ಲಿ ಸರ್ಕಾರಕ್ಕೆ ಒಂದು ಸಲಹೆಮಾಡುತ್ತೇನೆ.

The Hon'ble Sri T. MARIAPPA (Home Minister).—This is question hour.

Janab SYED ABDUR RAHMAN (Chikmagalur *cum* Shimoga–Muslim).—When was that circular ensuring free and fair election issued by the Government ?

The Hon'ble Sri K. T. BHASHYAM.—It was issued only about last week.

Janab SYED ABDUR RAHMAN.—Was that circular made public ?

The Hon'ble Sri K. T. BHASHYAM.—Yes.

Rehabilitation Measures to find Employment to retrenched Mysore Military personnel.

Q.—216. **Sri W. H. HANUMANTHAPPA** (Bangalore District-General).—Will the Government be pleased to state:—

(*a*) whether a committee was not appointed to recommend rehabilitation measures to find employment to officers and men of the Mysore Army who were retrenched owing to integration of the army services ;

(*b*) whether this committee's recommendation has been received ;

(*c*) the number of such officers and men that have been provided with employment ;

(*d*) whether any of them have been provided with lands ; if so, the particulars relating to their number and extent be furnished ?

A.—**The Hon'ble Sri K. T. BHASHYAM** (Minister for Law and Labour).—

(*a*) Yes.

(*b*) Yes.

(*c*) Officers three ;

Men 464 : Junior Commissioned Officers (JCO'S) 2 ; and other ranks (OR's) 462 :

(*d*) Not yet.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಸಮಿತಿಯ ಶಿಫಾರ್ಸು ಯಾವ ತಾರೀಖಿನಲ್ಲಿ ಬಂದಿದೆ ?

The Hon'ble Sri K. T. BHASHYAM.—It was in May 1951 that their recommendations were finalised.

Sri W. H. HANUMANTHAPPA.—When were the Committee's recommendations received ?

The Hon'ble Sri K. T. BHASHYAM.—The Committee's recommendations were received as soon as they were finalised.

Sri W. H. HANUMANTHAPPA.—When?

The Hon'ble Sri K. T. BHASHYAM.—In May 1951.

Sri W. H. HANUMANTHAPPA.—Were all the recommendations of the Committee given effect to ?

The Hon'ble Sri K. T BHASHYAM.—No, not all of them. We could not give effect to several of the recommendations because we did not have funds.

Sri W. H. HANUMANTHAPPA.—How many of the officers were provided with employment?

The Hon'ble Sri K. T. BHASHYAM.—We have said: three officers.

Sri W. H. HANUMANTHAPPA.—What were the Committee's recommendations?

The Hon'ble Sri K. T. BHASHYAM.—The recommendation of the Committee was for the appointment of so many others also. But so far only three officers have been appointed.

Sri W. H. HANUMANTHAPPA.—When will the rest of the officers be appointed?

The Hon'ble Sri K. T. BHASHYAM.—We will employ them as soon as we are able to find places.

Sri W. H. HANUMANTHAPPA.—The answer to the clause (d) is given as "not yet". Why is it so?

The Hon'ble Sri K. T. BHASHYAM.—That is because the land colonisation would require funds. We have drawn up a scheme, as I stated, involving Rs. 41 lakhs out of which we require several lakhs for land colonisation alone. We have written to the Government of India for money and as soon as we get money from the Government of India, we shall go ahead. The lands are ready, the officers are ready and the machinery also is ready. But only money is wanted and that is to come from the Central Government.

Sri W. H. HANUMANTHAPPA.—Shall I take it that the total cost for giving lands and other things connected with the scheme would come to Rs. 41 lakhs?

The Hon'ble Sri K. T. BHASHYAM.—Not only for that, but for all the schemes put together, the cost will be Rs. 41 lakhs.

Sri W. H. HANUMANTHAPPA.—Can you not take up the work piecemeal? Should we wait till the whole scheme is ready to be taken up?

The Hon'ble Sri K. T. BHASHYAM.—Even for that we want money. Supposing we want to take up 4 out of 11 schemes. We would require Rs. 10 lakhs, and even for that funds are not forthcoming.

Sri H. K. VEERANNA GOWDH (Mandya District-General)—The question is whether the Committee was not appointed. The answer given is "yes". That is not clear. I want to know if the Committee was appointed.

The Hon'ble Sri K. T. BHASHYAM.—The Committee was appointed. It means that.

ಶ್ರೀ ಬಿ. ಎಂ. ಶಾಮಣ್ಣಗೌಡರು (ಬೆಂಗಳೂರು ರಿಟ್ರಾಸೀಡೆಡ್ ಪ್ರದೇಶ).—ರಿಟ್ರೆಂಚ್‌ಮಾಡಿಗುವ ಆಫೀಸರುಗಳ ಪೈಕಿ ಯಾರನ್ನಾದರೂ ಪುನಃ ಸೈನ್ಯಕ್ಕೆ ಇತ್ತೀಚೆಗೆ ತೆಗೆದುಕೊಂಡಿದ್ದಾರೆಯೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಕೆಲವರನ್ನು ತೆಗೆದುಕೊಂಡಿದೆ.

ಶ್ರೀ ಬಿ. ಎಂ. ಶಾಮಣ್ಣಗೌಡರು.—ಎಷ್ಟು ಜನರನ್ನು ತೆಗೆದುಕೊಂಡಿದೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಆಫೀಸರುಗಳನ್ನು ತೆಗೆದುಕೊಂಡಿಲ್ಲ. From the other ranks 131 have been taken.

ಶ್ರೀ ಬಿ. ಎಂ. ಶಾಮಣ್ಣಗೌಡರು.—ಸೈನ್ಯಕ್ಕೆ ಮಾತ್ರ ಎಷ್ಟು ಮಂದಿಯನ್ನು ತೆಗೆದುಕೊಳ್ಳಲಾಗಿದೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಸೈನ್ಯಕ್ಕೆ ತೆಗೆದ ಕೊಂಡಿಲ್ಲ, ರಿಸರ್ವ್ ಪೋಲೀಸಿಗೆ ತೆಗೆದುಕೊಂಡಿದೆ.

ಶ್ರೀ ಬಿ. ಎಂ. ಶಾಮಣ್ಣಗೌಡರು.—ತೆಗೆದುಕೊಂಡವರು ತಾವೇ ಅಥವಾ ಕೇಂದ್ರಸರ್ಕಾರದವರೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ನಾವೇ ರಿಜರ್ವ್ ಪೋಲೀಸಿಗೆ ತೆಗೆದುಕೊಂಡಿದ್ದೇವೆ.

ಶ್ರೀ ಬಿ. ಎಂ. ಶಾಮಣ್ಣಗೌಡರು.—ಹಾಗಾದರೆ ಕೇಂದ್ರಸರ್ಕಾರದವರು ತೆಗೆದುಕೊಂಡಿಲ್ಲವೆಂದು ಹೇಳುತ್ತೀರಾ!

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅವರು ಸ್ವಾಗತಿಸಿದ್ದಾರೆ. ಆದರೆ ಅಲ್ಲಿಗೆ ಹೋಗಲು ಇವರಿಗೆ ಇಷ್ಟವಿಲ್ಲ. ಅವರ ಷರತ್ತುಗಳನ್ನು ಒಪ್ಪಿಕೊಂಡು ಸೈನ್ಯಕ್ಕೆ ಹೋಗಿ ಸೇರಿಕೊಳ್ಳಲು ಇವರು ಇಷ್ಟಪಡುವುದಿಲ್ಲ.

Mr. SPEAKER.—Question hour is over. The remaining questions in the list will all lapse. They will not be taken up on the 11th. The questions and answers will however be printed in to-day's proceedings.

Sri A. BHEEMAPPA NAIK (Chitaldrug District-General).—Will those members whose questions in this list have thus lapsed be given preference to take up their questions in the second list the next day? Those Members who have already put their questions to-day may take up their questions afterwards.

Mr. SPEAKER.—As and when answers are received from the Government the list of questions and answers for the day is compiled and brought before the House.

Sri A. BHEEMAPPA NAIK.— In that case, prehaps inconvenient questions may all be pushed to the last. I therefore request the Hon'ble Speaker to permit such of those members who have not put their questions to-day, to take up their questions first, the next day.

Mr. SPEAKER.—That is not left to the Chair. The members have to take their chance. They should try to reach their questions within the time.

QUESTIONS FOR ANSWER ON 8TH OCTOBER 1951.

(Not taken up).*

Action on Committee Report re Fire in All-India Fine Arts Exhibition.

Q.—5. Sri H. C. LINGA REDDY (Kolar District—General).—Will the Government be pleased to state:—

(*a*) When they appointed the committee to enquire into the tragic fire accident that befell the All-India Fine Arts and Swadeshi Exhibition arranged in the Cubbon Park, Bangalore;

(*b*) whether the committee have submitted any report to them so far;

(*c*) result of the enquiry;

(*d*) whether the committee have suggested any relief to the sufferers so far;

(*e*) the action taken so far by them on the report?

A.—The Hon'ble Sri T. MARIAPPA (Home Minister)—(*a*) On 12th May 1951. (Copy of Government Order constituting the Committee of Enquiry is appended below).

(*b*) Yes.

(*c*) The Committee has *inter alia* expressed the view that the fire was not due to sabotage but must have been due to accident, that the extent of damage is from seven to eight lakhs of rupees and that some precautionary measure was taken against the fire, but that was not adequate enough to quench the fire that occurred.

(*d*) No.

(*e*) The report of the Committee is under the consideration of Government

PROCEEDINGS OF THE GOVERNMENT OF MYSORE.

ORDER No. H. A. 1373-85—POL. 59-51-3, DATED BANGALORE, THE 12TH MAY 1951.

The fire that occurred on the afternoon of 29th April 1951, in the premises of the All-India Industrial and Fine Arts Exhibition, Bangalore, destroyed the Exhibition and caused considerable damage. It has been a matter of great concern to the Government and the public alike. Government consider that it is necessary to find out the causes of the fire. The value of holding such exhibitions as an education and cultural factor having proved itself beyond doubt. Government consider it also desirable to examine the precautionary measures that have to be taken and the requirements that have to be laid down with regard to the holding of such exhibitions in future.

Government consider that this question might be examined by a Committee consisting of the following gentlemen with the terms of reference noted below :

Chairman:

Rajadharmaprasakta Sri T. Singaravelu Mudaliar, B.A., B.L., Retired Judge of the High Court of Mysore, Basavangudi, Bangalore.

Members:

1. The Mayor, Corporation of Bangalore City.
2. Rajasevasakta Sri P. Subbarama Chetty, Ex-Minister, Government of Mysore, Gandhinagar, Bangalore.
3. The Inspector-General of Police in Mysore, Bangalore.
4. The Additional Director of Industries and Commerce in Mysore, Bangalore.
5. The President, Mysore Chamber of Commerce, Bangalore.
6. Sri B. C. Nanjundiah, M.L.A., Land holder, Tumkur.
7. Sri K. Puttaswamy, B.A., (Hons.), LL.B., M.L.A., Advocate, Sayyaji Rao Road, Mysore,
8. Sri K. R. Madhava Rao, B.A., LL B., M L.A., Chairman, Bangalore Transport Co., Ltd., 7, Bheemanna Gardens, Andrew Road, Civil Station, Bangalore 1.

Secretary:

9. The District Superintendent of Police, Bangalore (North).

The Committee may examine and report on :

1. The causes for the breaking out and rapid spread of fire which occurred on 29th April 1951, and the extent of the damage caused ;
2. Whether precautionary measures had been taken against such eventualities;
3. The manner in which such exhibitions have to be organised in future with particular reference to :
   (a) the area to be allowed for such purposes in Bangalore City,
   (b) the designs to be adopted in the construction of the stalls, and the materials to be used,
   (c) the precautionary measures that have to be insisted upon,
   (d) the possibilities of insuring such exhibitions against the risk of fire.

---

*Answers printed under Rule 30 of the Rules of Procedure.

The Committee may also examine whether it would be necessary to undertake any specified legislation for ensuring that exhibitions are conducted in future in a safe manner, both in the interest of the Exhibitors and the Public who attend such exhibitions.

The Committee is requested to meet immediately and report within a month, if possible, so that Government may proceed to take prompt action, on the recommendations of the Committee. The Inspector-General of Police will be requested to make the results of the departmental inquiry regarding the fire, available to the Committee.

By Order of His Highness the Maharaja,

E. V. GANAPATI IYER,

Chief Secretary to Government.

To—The Members of the Committee with a covering letter.
The Inspector-General of Police in Mysore, Bangalore.
The District Magistrate, Bangalore District, Bangalore.
ಪಡಬೇಕೆಂಬುದನ್ನು ಮನಗಂಡೇ ಈ ಬಿಲ್ಲನ್ನು ತಂದಿದ್ದಾರೆ. ಈಗ ಸರ್ಕಾರದವರು ಯಾವ ಯೋಜನೆಯನ್ನೇ ತೆಗೆದುಕೊಳ್ಳಲಿ, ವೆಚ್ಚ ಮಾಡುವುದು ವಾಪಸು ಬರುವುದಕ್ಕೆ ಎಷ್ಟು ಬೇಕೋ ಅಷ್ಟು ಬರಲು ಪ್ರಯತ್ನಪಡುತ್ತಾರೆಯೇ ಹೊರತು ಅದರಿಂದ ಹೇರಳವಾದ ನಫೆ ಬರಬೇಕೆಂಬ ಉದ್ದೇಶವನ್ನಿಟ್ಟುಕೊಂಡಿರುವಂತೆ ನನಗೆ ಕಾಣುವುದಿಲ್ಲ. ಲೇ ಔಟ್ ಮಾಡಿದ ಮೇಲೆ ಅದಕ್ಕೆ ತಕ್ಕಂತೆ ಒಳಚರಂಡಿ ವ್ಯವಸ್ಥೆ, ನೀರಿನ ಅನುಕೂಲತೆ, ವಿದ್ಯುಚ್ಛಕ್ತಿ ಮತ್ತು ರಸ್ತೆ ಸೌಕರ್ಯ ಮುಂತಾದುವುಗಳಿಗೆ ತಗಲುವ ಖರ್ಚನ್ನು ಲೆಕ್ಕಹಾಕಿ ಅದರ ಮೇಲೆ ಎಷ್ಟು ಉತ್ಪತ್ತಿ ಬರಬಹುದೆಂಬುದನ್ನು ತಿಳಿದು ಅದಕ್ಕೆ ಸರಿಯಾಗಿ ಅನೇಕ ಸೈಟುಗಳನ್ನು ಅಪ್ಸೆಟ್ ಬೆಲೆಗೆ ಕೊಡುತ್ತಿದ್ದಾರೆ. ಈ ರೀತಿಯಾಗಿ ಉದ್ದೇಶ ಪೂರ್ವಕವಾಗಿ ಒಂದು ಒಳ್ಳೆಯ ಕೆಲಸ ಮಾಡುವುದಕ್ಕೆ ಸರ್ಕಾರದವರು ಒಂದು ಟ್ರಸ್ಟ್‌ಬೋರ್ಡನ್ನು ಏರ್ಪಡಿಸಿ ಒಂದು ಯೋಜನೆಯನ್ನು ತಯಾರು ಮಾಡಿರುತ್ತಾರೆ. ಈ ವಿಚಾರದಲ್ಲಿ ಯಾವ ಆಕ್ಷೇಪಣೆ ಮಾಡುವುದಕ್ಕೂ ಅವಕಾಶವಿರುವಂತೆ ನನಗೆ ಕಾಣಲಿಲ್ಲ. ಆ ಮೇಲೆ ಮುನಿಸಿಪಲ್ ಕೌನ್ಸಿಲ್ ಈ ಕೆಲಸವನ್ನು ಏಕೆ ಮಾಡಕೂಡದು, ಟ್ರಸ್ಟ್ ಬೋರ್ಡ್ ಏಕೆ ಮಾಡಬೇಕು ಎಂಬ ಪ್ರಶ್ನೆ ಬರಬಹುದು. ಆದರೆ ಮುನಿಸಿಪಲ್ ಕೌನ್ಸಿಲ್‌ನವರು ನಮ್ಮ ಸೆಲೆಕ್ಟ್ ಸಮಿತಿಗೆ ಬಂದು ನಾವು ಹಣ ಕೊಡುತ್ತೇವೆ, ನಮಗೆ ಬೇಕಾದ ಅನುಕೂಲ ಮಾಡಿಕೊಡಿ ಎಂದು ಸಲಹೆ ಕೂಡ ಮಾಡಿದಾರೆ ಮತ್ತು ಬೆಟರ್‌ಮೆಂಟ್ ಟ್ಯಾಕ್ಸ್ ಹಾಕುವ ವಿಷಯದಲ್ಲಿ ಶ್ರೀ ಸಿದ್ದಪ್ಪನವರು ಹೇಳಿದ ಹಾಗೆ ಅವರು ಯಾವ ಆಕ್ಷೇಪಣೆಯನ್ನೂ ಮಾಡಿಲ್ಲ. ಬೆಟರ್‌ಮೆಂಟ್ ಫೀ ವಸೂಲು ಮಾಡತಕ್ಕ ವಿಧಾನದಲ್ಲಿ ಜನಗಳಿಗೆ ಕಠಿಣವಾಗುವಂತಹುದು ಯಾವುದೂ ಮಾಡಿಲ್ಲ. ಮದರಾಸು ಮತ್ತು ಕಲ್ಕತ್ತ ಪಟ್ಟಣಗಳಲ್ಲಿ ಬೆಟರ್‌ಮೆಂಟ್ ಫೀಗೆ ಸಂಬಂಧಪಟ್ಟಂತೆ ಯಾವ ರೀತಿ ಒಂದು ಬಿಲ್ಲನ್ನು ತಂದಿದ್ದಾರೋ ಅದರಂತೆಯೇ ಇಲ್ಲಿಯೂ ತಂದು ಅದನ್ನು ಸಡಿಲಮಾಡಿ ಜನಗಳಿಗೆ ಇನ್ನೂ ಹೆಚ್ಚು ಉಪಕಾರವಾಗುವಂತೆ ಮಾಡಲು ಅದರಲ್ಲಿದ್ದಂತಹ ಬೆಟರ್‌ಮೆಂಟ್ ಟ್ಯಾಕ್ಸ್ ½ ಭಾಗವನ್ನು 1/3 ಭಾಗಕ್ಕೆ ಇಳಿಸಲಾಗಿದೆ. ಬೆಟರ್‌ಮೆಂಟ್ ಟ್ಯಾಕ್ಸ್ ವಸೂಲು ಮಾಡತಕ್ಕ ವಿಧಾನವೂ ಸಹ ಕಠಿಣವಾಗಿಲ್ಲ. ಒಬ್ಬ ಪಂಚಾಯಿತಿದಾರರನ್ನು ಗೊತ್ತುಮಾಡಿ ಟ್ರಸ್ಟ್ ಬೋರ್ಡಿನವರು ಎಷ್ಟುಮಟ್ಟಿಗೆ ಬೆಟರ್‌ಮೆಂಟ್ ಟ್ಯಾಕ್ಸ್ ಹಾಕಿದ್ದಾರೋ ಅದರ ಮೇಲೆ ಎಷ್ಟು ಮೊಬಲಗನ್ನು ಠರಾಯಿಸಬಹುದೋ ಅಷ್ಟನ್ನು ಠರಾಯಿಸಲು ಅವಕಾಶ ಮಾಡಿಕೊಟ್ಟಿದ್ದಾರೆ. ಒಂದು ವೇಳೆ ಅಲ್ಲಿರತಕ್ಕವರಿಗೆ ತೊಂದರೆಗಳುಂಟಾಗಿ, ತಕರಾರು ವಿಷಯಗಳನ್ನು ವಿಮರ್ಶೆ ಮಾಡಿ ಆ ವಿಮರ್ಶೆ ಪಂಚಾಯಿತಿಯಿಂದ ಸರಿಯಾಗಿ ತೀರ್ಮಾನವಾಗದಿದ್ದರೆ ಕೋರ್ಟಿನಲ್ಲಿ ವ್ಯವಹಾರ ನಡೆಸಿ ಅಲ್ಲಿ ತೀರ್ಮಾನವಾದನಂತರ ಸುಲಭವಾದ ಕಂತಿನಲ್ಲಿ ವಸೂಲು ಮಾಡುವುದಕ್ಕೆ ಒಪ್ಪಬಹುದು. ಮೊಬಲಗನ್ನು ಒಟ್ಟಾಗಿ ಕೊಡುವುದಕ್ಕೆ ಸಾಧ್ಯವಿಲ್ಲದಿದ್ದರಾಗಲೀ ಅಥವಾ ಕಂತಿನ ರೂಪದಲ್ಲೂ ಕೊಡಲು ಸಾಧ್ಯವಿಲ್ಲದಿದ್ದರಾಗಲೀ, ಶೇಕಡ 4ರ ಬಡ್ಡಿಯ ಮೇಲೆ ಎಷ್ಟು ಕಾಲದವರೆಗಾದರೂ ಬಡ್ಡಿ ಕಟ್ಟಿಕೊಂಡು ಹೋಗುವುದಕ್ಕೂ ಕೂಡ ಈ ಮಸೂದೆಯಲ್ಲಿ ಠರಾವು ಮಾಡಿದ್ದಾರೆ. ಈ ರೀತಿ ಒಟ್ಟಿನಲ್ಲಿ ನೋಡುವುದಾದರೆ ಒಂದು ಪಟ್ಟಣದ ಆರೋಗ್ಯ ಭಾಗ್ಯವು ಬಹಳ ಮುಖ್ಯವಾದುದು. ಈ ಆರೋಗ್ಯ ಭಾಗ್ಯವನ್ನು ಕಾಪಾಡ ಬೇಕಾಗಿದ್ದರೆ ಸ್ಲಮ್ ಪ್ರದೇಶ ಹೋಗಬೇಕಾದ್ದು ಅಗತ್ಯ. ಅದು ಅಗತ್ಯವಾಗಿ ಹೋಗಬೇಕಾಗಿದ್ದರೆ ಈ ರೀತಿ ಒಂದು ಮಾಸ್ಟರ್ ಸ್ಕೀಂ ಬೇಕೇ ಬೇಕು. ಆದ್ದರಿಂದ ಇದು ಯಾವ ವಿಧದಲ್ಲಿಯೇ ಆಗಲೀ ಜನಗಳಿಗೆ ತೊಂದರೆಯನ್ನುಂಟುಮಾಡುತ್ತದೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಒಂದುವೇಳೆ ಸರ್ಕಾರದವರು ಒಂದು ರಸ್ತೆ ಹಾಕಿದ ಪಕ್ಷದಲ್ಲಿ ಅದಕ್ಕೆ ಅಜುಬಾಜು ಇರತಕ್ಕ ಮನೆಗಳ ಬೆಲೆ ತನ್ನಷ್ಟಕ್ಕೆ ತಾನೆ ಹೆಚ್ಚಾಗುತ್ತದೆ. ಬೆಲೆ ಹೆಚ್ಚಿದ ಕೂಡಲೇ ಅವರಿಗೆ ಒಂದು ಅನುಕೂಲ ದೊರೆತಂತಾಯಿತು. ಅಂಥ ಅನುಕೂಲ ಪ್ರಜೆಗಳಿಗೂ ಕಲ್ಪಿಸಿ, ಸರ್ಕಾರದವರು ಹಾಕಿದ ದುಡ್ಡಿಗೂ ಕೂಡ ಯಾವ ತೊಂದರೆಯೂ ಇಲ್ಲದಂತೆ ಮಾಡಿ, ಟ್ರಸ್ಟ್‌ಬೋರ್ಡಿನವರು ಒಂದು ಯೋಜನೆಯನ್ನು ನಡೆಸಿಕೊಂಡು ಹೋಗುವುದಕ್ಕೆ ಈ ಬಿಲ್ಲಿನ ಮೂಲಕ ಅನುಕೂಲವಾಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ಇದನ್ನು ಒಪ್ಪಿಕೊಳ್ಳುತ್ತಾರೆಂದು ನಾನು ನಂಬಿದ್ದೇನೆ.

Janab MOHAMED HANIEF (Bangalore—Muslim).—Mr. Speaker, Sir, I take no exception to the observations made by the Hon'ble Minister when he extolled the possibilities of making Bangalore one of the biggest cities of India. If he has got that ambition no one can take exception to that. Why not Bangalore be the first city in India? One cannot take exception to that but the snag is in the money-making side of it. Ever since the Trust Board came into existence, experience tells us that it is a profitable concern. The land acquisition agency is set in motion and areas in the city are acquired. The compensation awarded is inadequate; the same lands are divided into sites and they are sold at exhorbitant prices. The implication of such an acquisition is that the owner is put to a very great disadvantage. He loses a good bit of money to which he is otherwise entitled. How are we going to reconcile that position? When the Government acquire portions of land with a view to remove congestion or to form roads and where they make some money, will it be justified for them to once again ask for the betterment levy? (An Hon'ble MEMBER: Private lay-outs are allowed to come into existence) I am talking of those lay-outs which are undertaken by the Corporation or by the Government. In those cases if they make more money than they are otherwise entitled to and if the owner of the land is put to disadvantage, will they compensate him? If you ask for a betterment levy you must at the same time be prepared

(JANAB MOHAMED HANIEF).

to give some amount to the person who has lost something as a result of the interference of the Government or the Corporation. That is one point that calls for our consideration.

The second is this. Government say that slum areas are an eyes ore. Most people that live in slum areas are very poor. Some own houses and some live in rented buildings. The landlord of those buildings which are rented can probably well afford to lose them. But the poor man cannot. If a slum area is acquired and buildings therein are demolished, and if the land so acquired is converted into sites and the sites are sold, where is the poor man to go? Is he going to be allotted some of the plots and is he going to be financed for the construction of building on those plots? If not, the poor man will have to go to the walls under the scheme. Clearance of slum areas is no doubt very desirable but we should also take into consideration the interest of those people who will otherwise be deprived of a house or shelter. You have to seriously consider that, while passing this Bill. It is all very well to make the city beautiful; it is all very well to say that we should have big roads; it is all very well to say that we should give amenities of this type or that type. But when it hits the people who live there, their interests should not be overlooked in any circumstance whatsoever. Sir, I can talk only of the Civil Station of Bangalore with whose municipality I was associated for a long time. To remove congestion and to make the clearance of the congested and ugly spots possible, the Civil Station authorities launched upon a scheme of building small houses. They brought into existence what are known as the Austin Town, William Town and Murphy Town and so forth with the intention of diverting the people from the cherries. That was the object with which these tenements came into existence. But the result was not what they had in view. Influential people and people who could cajole were brought into these tenements and the cherry people were not given the chance to move from the congested spots into those houses. So, the object with which the small house building scheme was started was frustrated. What guarantee therefore is there that with the entire scheme that you are having before you you are not going to neglect the interests of the poor? After all it is his interest that must be paramount. Of course I am not talking in any airy manner. It is very well from platforms, from Legislative Councils, for the Treasury Bench to say "we will make Bangalore the City beautiful by removing these black spots."

The Hon'ble Sri K. T. BHASHYAM.—It is not doing it airily when we say so. But the point is.......

Janab MOHAMED HANIEF.—I am not at all attributing airily any motives to Government.

The Hon'ble Sri K. T. BHASHYAM.—I submit that the point referred to by the Hon'ble Member now is irrelevant. We are now talking of the betterment tax where improvements are effected. What we have got to do for those who are thrown out of slums by this is a different matter.

Janab MOHAMED HANIEF.—These two things are in juxtaposition. You say that because you construct a road those houses that abut the road rise in value according to you and that they must, because of the rise in value, pay a little money into the pockets of the Trust Board.

Sri G. A. ACHARYA.—Not according to Government?

Janab MOHAMED HANIEF.—May be according to arbitration or court. Anyhow we have got to pay something out of our pocket. If you acquire a piece of land, you divide it into plots and sell them. The acquisition price of the whole land is less than the price you realise by selling these plots.

The Hon'ble Sri H. C. DASAPPA.—Betterment fee does not apply at all for this.

Janab MOHAMED HANIEF.—I am saying about the money you are making in that direction. You cannot have both the things. You cannot sell the land and make money and impose the betterment levy also. I am putting

this question before the House seriously for its consideration. If the House does not accept it, it may leave it; it is a different matter. Nobody can take exception to the betterment levy. You improve some area and you ask the persons that live in the area to pay for the improvement. You are the judge to decide the amount.

Then it is observed that where people are not able to give any money as a result of betterment, Government will wait and during the period it waits, those persons who are unable to pay will be required to pay interest. This is a most preposterous proposition according to me; if such persons are unable to pay the betterment fee it must be written off. For the period it remains un-paid, if interest is to be charged, it is no relief. It is an additional imposition.

Sri G. A. ACHARYA.—You are not conscious of the value at all.

Janab MOHAMED HANIEF.—We do not know what the values are. What is the use of thinking of value when I am not going to sell the property at all. It may be valuable in the eyes of my neighbours. But I will have no consideration for the value because I am not going to sell it. If I am able to pay the fee, it is a different matter. If I am unable to pay? I am not going to reconcile to these propositions. I oppose them.

*ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ಅಧ್ಯಕ್ಷರೇ, ಈಗ ನಮ್ಮ ಮುಂದಿರತಕ್ಕ ಮಸೂದೆ ಮತ್ತು ಈ ಮಸೂದೆಯ ಮೇಲೆ ಬಂದಿರತಕ್ಕ ಸೆಲೆಕ್ಟ್ ಕಮಿಟಿಯ ವರದಿ—ಇವೆರಡನ್ನೂ ಸ್ವಾಗತಿಸುತ್ತಾ ಈ ಸೆಲೆಕ್ಟ್ ಸಮಿತಿಯವರು ಈ ಮಸೂದೆಯಲ್ಲಿ ಏನು ಕಿಂಚಿತ್ ಲೋಪದೋಷಗಳಿದ್ದುವೋ ಅವನ್ನೆಲ್ಲಾ ಬಹಳ ಕೂಲಂಕಷವಾಗಿ ವಿಮರ್ಶೆಮಾಡಿ ಸರಿಪಡಿಸಿರುವುದಕ್ಕಾಗಿ ಅಭಿನಂದನೆಗಳನ್ನು ಸಲ್ಲಿಸಬೇಕಾದ್ದು ನಮ್ಮ ಕರ್ತವ್ಯ. ನಿಜವಾಗಿಯೂ ಈ ಸಮಿತಿಯವರು ಬಹಳ ಶ್ರಮವಹಿಸಿ ಕೆಲಸಮಾಡಿದ್ದಾರೆಂದು ಹೇಳಬೇಕಾಗಿದೆ. ಸಾಮಾನ್ಯವಾಗಿ ಟ್ರಸ್ಟ್ ಬೋರ್ಡಿಗೂ ಮತ್ತು ಕಾರ್ಪೊರೇಷನ್ನಿನವರಿಗೂ ಏನೇನು ವ್ಯತ್ಯಾಸಗಳು, ವಿರೋಧಗಳು ಬರಬಹುದೋ ಅವನ್ನೆಲ್ಲಾ ದೀರ್ಘವಾಗಿ ಯೋಚನೆಮಾಡಿ ಒಂದಕ್ಕೊಂದಕ್ಕೆ ತಿಕ್ಕಾಟ ಬರದಂತೆ, ಪರಸ್ಪರ ಹೊಂದಿಕೊಂಡು ಹೋಗುವಂತೆ ಸೂಕ್ತ ಸಲಹೆಗಳನ್ನು ಮಾಡಿದ್ದಾರೆ. ಈಗ ನಾವು ತಿಳಿದಿರುವ ಹಾಗೆ ಅನೇಕ ಸಂದರ್ಭಗಳಲ್ಲಿ ಟ್ರಸ್ಟ್ ಬೋರ್ಡಿಗೂ ಮತ್ತು ಕಾರ್ಪೊರೇಷನ್ನಿಗೂ ವ್ಯತ್ಯಾಸಗಳೂ ಮನಸ್ತಾಪಗಳೂ ಉಂಟಾಗಿ, 'ಎತ್ತು ಏರಿಗೆಳೆದರೆ ಎಮ್ಮೆ ನೀರಿಗೆಳೆಯಿತು' ಎಂಬಂತೆ ಪಟ್ಟಣಗಳಲ್ಲಿನ ಕೆಲಸಗಳಿಗೆಲ್ಲಾ ಅಡಚಣೆಗಳನ್ನು ತಂದೊಡ್ಡುತ್ತಿರುವ ಪ್ರಸಂಗಗಳನ್ನು ಗಮನಕ್ಕೆ ತಂದುಕೊಂಡು ಆ ರೀತಿಯಾಗಿ ಯಾವ ಲೋಪದೋಷಗಳೂ ಬಾರದಂತೆ ಮಾಡಿದ್ದಾರೆ. ಆದರೆ ಒಂದು ವಿಷಯ. ಈ ದೊಡ್ಡ ಪಟ್ಟಣಗಳನ್ನು ಅಭಿವೃದ್ಧಿಮಾಡುವ ಒಂದು ಕೆಲಸಕ್ಕೆ ತಗಲತಕ್ಕ ವೆಚ್ಚವೆಲ್ಲಾ ಪಟ್ಟಣಗಳಮೇಲೆ ಬೀಳಬೇಕು ಎಂದು ಅನೇಕ ಸಲ ಈ ಮಾನ್ಯ ಸಭೆಯಲ್ಲಿ ವಾದ ಮಾಡಿದ್ದೇವೆ, ಇದೇನೂ ಹೊಸದಲ್ಲ. ಒಂದು ಪಟ್ಟಣದ ಮೇಲೆ ಬೀಳತಕ್ಕ ಖರ್ಚು ಆ ಪಟ್ಟಣದಲ್ಲಿರತಕ್ಕ ಜನರು ಅಲ್ಲಿನ ಐಶ್ವರ್ಯವಂತರು ಮತ್ತು ಹೊಟ್ಟೆತುಂಬ ಉಂಡು ಮೈತುಂಬ ಉಡುವ ಜನರು ತಮ್ಮ ಅನುಕೂಲತೆಗಳಿಗಾಗಿ ಏನೇನು ಸೌಕರ್ಯಗಳನ್ನು ಮಾಡಿಕೊಳ್ಳುತ್ತಾರೋ ಅವರು ಸಾಧಾರಣವಾಗಿ ಅದಕ್ಕೆ ಬೀಳತಕ್ಕ ಹೊರೆಯನ್ನು ಹೊತ್ತುಕೊಳ್ಳುವ ಸ್ಥಿತಿಯಲ್ಲಿರಬೇಕು. ಅದುಬಿಟ್ಟು ಹಳ್ಳಿಗಳಿಂದ ವರಮಾನ ತೆಗೆದುಕೊಂಡು ಅವರ ದುಡ್ಡಿನಿಂದ ಪಟ್ಟಣಗಳನ್ನು ಸಿಂಗರಿಸುವುದಕ್ಕೆ ಖರ್ಚು ಮಾಡುವ ನೀತಿ ಸರಿಯಲ್ಲವೆಂದು ಹಿಂದಿದ್ದ ಸರ್ಕಾರದವರ ಮುಂದೆ ವಾದಮಾಡುತ್ತಿದ್ದುದು ನನಗೆ ಜ್ಞಾಪಕದಲ್ಲಿದೆ. ನಾವೆಷ್ಟು ಹೇಳಿದರೂ ಹಾಗೆ ಅವರು ಮಾಡುತ್ತಿರಲಿಲ್ಲ. ಬೆಂಗಳೂರು ಮೈಸೂರಿಗೆ ಒಂದು ಗ್ರಾಂಟ್ ಕೊಡುವುದೆಂದರೆ ಅದಕ್ಕೊಂದು ಸರಿಯಾದ ರೀತಿ ನೀತಿಯಿತ್ತೆಂದು ಹೇಳುವುದಕ್ಕೆ ಸಾಧ್ಯವಿಲ್ಲವೆನ್ನುವಷ್ಟು ಬಗೆಯಾಗಿತ್ತು. ಆದೇ ಗ್ರಾಮಾಂತರಗಳಿಗೆ ಗ್ರಾಂಟ್ ಕೊಡಬೇಕಾದರೆ ಕೊಟ್ಟರೆ ಕೊಟ್ಟರು, ಇಲ್ಲದಿದ್ದರೆ ಇಲ್ಲ. ಆದರೂ ಪಟ್ಟಣಗಳು ನಮ್ಮ ಮೈಸೂರುದೇಶದ ಆಸ್ತಿ. ಹಳ್ಳಿಗಾಡಿನ ಪ್ರದೇಶಗಳು ಇಂದು ಹೀಗಿದ್ದರೂ ನಾಳೆ ಪಟ್ಟಣಗಳವರನ್ನು ನೋಡಿಕೊಂಡು ತಾವೂ ಉತ್ತಮಸ್ಥಿತಿಗೆ ಬರಬಹುದೆಂದು ನಾವೂ ಸಹಿಸಿಕೊಂಡು ಬಂದೆವು. ಅದೇ ಪ್ರಕಾರ ಪಟ್ಟಣಗಳೂ ಬೆಳೆಯುತ್ತಾ ಬಂದಿವೆ. ಅವುಗಳನ್ನು ಚೆನ್ನಾಗಿ ನೋಡಿ ನಾವೆಲ್ಲಾ ಆನಂದಪಡುತ್ತಿದ್ದೇವೆ. ಮೈಸೂರು ಪಟ್ಟಣದಲ್ಲಿ ದಸರಾ ನೋಡಲು ಎಷ್ಟು ಆನಂದವಾಗುತ್ತದೆ!! ಇಲ್ಲಿನ ರಸ್ತೆಗಳು, ಉಪವನಗಳು, ಭವ್ಯವಾದ ಮಂದಿರಗಳು—ಇವೆಲ್ಲಾ ಎಷ್ಟು ಹರ್ಷದಾಯಕವಾಗಿವೆ!! ಆದ್ದರಿಂದ ಪಟ್ಟಣಗಳು ಈ ರೀತಿ ಅಭಿವೃದ್ಧಿಗೆ ಬರುವುದು ಸರಿಯೇ. ಆದರೆ ಈ ಪಟ್ಟಣಗಳಿಗೆ ಯಾವ ಯಾವ ಹಣಕಾಸಿನ ಖರ್ಚಿದೆಯೋ ಅವುಗಳನ್ನೆಲ್ಲಾ ತಮ್ಮ ಆದಾಯದಿಂದ ಹೊಂದಿಸಿಕೊಂಡು ಮಾಡಬೇಕು, ಅಷ್ಟೆ.

ಅಧ್ಯಕ್ಷರು.—ಆದ್ದರಿಂದ ಬೆಟರ್‌ಮೆಂಟ್ ತೆರಿಗೆ ಹಾಕಿರುವುದು ಸರಿ ಎಂದು ತಮ್ಮ ಅಭಿಪ್ರಾಯವೇ?

ಶ್ರೀ ಟಿ. ಮಾದಯ್ಯಗೌಡರು.—ಹೌದು. ಈಗ ನಾನು ಹೇಳಿದ ಹಾಗೆ ಮೈಸೂರು, ಬೆಂಗಳೂರು ಪಟ್ಟಣಗಳು ಇನ್ನೂ ಅಭಿವೃದ್ಧಿಗೆ ಬರಬೇಕು, ಅದಕ್ಕಾಗಿ ಈಗ ಅನೇಕ ತರದೂದುಗಳನ್ನು ಮಾಡುತ್ತಿದ್ದಾರೆ; ಯೋಜನೆಗಳನ್ನು ಹಾಕುತ್ತಿದ್ದಾರೆ; ಪ್ಲಾನ್‌ಗಳನ್ನು ತಯಾರಿಸುತ್ತಿದ್ದಾರೆ. ಇದೆಲ್ಲವೂ ಮಾನ್ಯವವಾಗಿ ಮಾಡತಕ್ಕದ್ದೇ. ಮೈಸೂರು ಬೆಂಗಳೂರು ಪಟ್ಟಣಗಳಲ್ಲಿ ಕೇವಲ ದೊಡ್ಡ ದೊಡ್ಡ ರಸ್ತೆಗಳನ್ನು, ಅಂಗಡಿಗಳನ್ನು ನೋಡಿ ಬಂದರೇ ಆಗಲಿಲ್ಲ. ಊರಿನಲ್ಲಿ ಯಾವ ಸ್ಲಮ್ ಪ್ರದೇಶದಲ್ಲೇ ಆಗಲೀ ಅದಕ್ಕೂ ಬೇರೆ ಕಡೆಗೂ ವ್ಯತ್ಯಾಸವಿದೆಯೆಂಬ ಭಾವನೆ ಬರಬಾರದಂತಿರಬೇಕು. ಆ ಕಡೆಗೂ ದೃಷ್ಟಿಕೊಟ್ಟು ಉತ್ತಮಪಡಿಸಬೇಕು. ಹೊರಗಡೆಯಿಂದ ಬಂದು ಅನೇಕ ಜನ ನಮ್ಮ ಪಟ್ಟಣಗಳನ್ನು ನೋಡಿ ಈಗ ಹೊಗಳುತ್ತಿದ್ದಾರೆ. ಟ್ರಸ್ಟ್ ಬೋರ್ಡು ಏರ್ಪಾಡಾಗಿ ಇದಕ್ಕೆ ಸಂಬಂಧಪಟ್ಟ ಒಂದು ಕಾನೂನಾಗಿ ಈ ಕಾನೂನನ್ನನುಸರಿಸಿ ಸರ್ಕಾರದವರು

(ಶ್ರೀ ಟಿ. ಮಾದಯ್ಯಗೌಡರು).

ಬೇಕಾದಷ್ಟು ಹಣವನ್ನು ಖರ್ಚುಮಾಡಿ ಇದುವರೆಗೆ ಸ್ತುತ್ಯ ಕಾರ್ಯವನ್ನು ಮಾಡಿದ್ದಾರೆ. ಬಹುಶಃ ಇಂಡಿಯಾ ದೇಶದಲ್ಲಿ ಇನ್ನಾವ ಭಾಗದಲ್ಲೂ ಇಷ್ಟು ಸ್ತುತ್ಯಕಾರ್ಯ ನಡೆದಿಲ್ಲವೆಂದರೆ ತಪ್ಪಾಗಲಾರದು. ಇಲ್ಲಿ ಏನೇನು ಕಾರ್ಯ ನಡೆದಿದೆ ಎಂಬುದನ್ನು ಸೂಕ್ಷ್ಮವಾಗಿ ನಾಲ್ಕು ಮಾತುಗಳಲ್ಲಿ ಹೇಳುವುದಾದರೆ, ಅನೇಕ ಬಡಬಗ್ಗರಿಗೆ ವಸತಿ ಕಲ್ಪಿಸಬೇಕೆಂದು ಒಂದು ಯೋಜನೆಯನ್ನು ತಯಾರುಮಾಡಿ ನೂರಾರು ಕಟ್ಟಡಗಳನ್ನು ಕಟ್ಟಿಸಿದ್ದಾರೆ. ಇದನ್ನು ನೋಡಿದರೆ ಯಾರಿಗಾದರೂ ಆನಂದವುಂಟಾಗುತ್ತದೆ. ಇದನ್ನೆಲ್ಲಾ ವಿವರಿಸಿ ಒಂದು ಸಣ್ಣ ವರದಿಯನ್ನು ಪ್ರಕಟಿಸಿದ್ದಾರೆ. ಇದು ಬಹಳ ಚೆನ್ನಾಗಿದೆ. ಇದನ್ನು ತಾವು ನೋಡಬೇಕು.

Sri L. SIDDAPPA.—What is that reference book, please?

Sri T. MADIAH GOWDA.—'Plans for the improvement and expansion of Bangalore city.'

ಜನಾಬ್ ಜೆ. ಮಹಮ್ಮದ್ ಇಮಾಂರವರು.—ಮಂತ್ರಿಗಳು ಅದನ್ನು ನಿಮಗೆ ಕೊಡುತ್ತಾರೆ, ನಮಗೆ ಕೊಡುವುದಿಲ್ಲ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಹಾಗೇನೂ ಇಲ್ಲ, ನಿಮಗೂ ಕೊಡುತ್ತೇನೆ.

ಶ್ರೀ ಟಿ. ಮಾದಯ್ಯಗೌಡರು.—ಕೈಗಾರಿಕೆ ಕ್ಷೇತ್ರಗಳ ಏರ್ಪಾಡನ್ನು ಮತ್ತೆಲ್ಲಿಯೂ ಮಾಡದೇ ಇರುವ ರೀತಿಯಲ್ಲಿ ಹೆಚ್ಚು ಹೆಚ್ಚಾಗಿ ಇಲ್ಲಿ ಮಾಡುತ್ತಿದ್ದಾರೆಂದು ಹೇಳಬಹುದು. ಒಳ ಚರಂಡಿಯ ಕೆಲಸಕ್ಕೆ ಬಹಳ ಸೊಗಸಾದ ಯೋಜನೆಯನ್ನು ಹಾಕಿಕೊಂಡು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಮಧ್ಯಮ ತರಗತಿಯ ಜನರಿಗೆ ಬಹಳ ಸುಲಭದಲ್ಲಿ ಮನೆಗಳು ಸಿಕ್ಕತಕ್ಕ ಏರ್ಪಾಡುಮಾಡಿದ್ದಾರೆ. ಈ ಏರ್ಪಾಡುಗಳನ್ನೆಲ್ಲಾ ಮಾಡಿರುವುದನ್ನು ನೋಡಿ ಮಾನ್ಯ ಶ್ರೀ ಸಿ. ರಾಜಗೋಪಾಲಾಚಾರಿಯವರು ಒಂದು ಸಂದೇಶವನ್ನು ಕೊಡುತ್ತಾ ಈ ರೀತಿ ಹೇಳಿದ್ದಾರೆ:

> "It has given me great pleasure to see the admirable plans for the city extensions that are being executed with commendable expedition. Bangalore will always remain the most beautiful City of India. Nature has helped. But no small credit goes to the traditions established in this respect by the previous administrators which are being well maintained by their present successors."

ಹೀಗೆ ಹಿಂದೆ ನಡೆಸಿಕೊಂಡು ಬಂದಿದ್ದ ಒಂದು ಒಳ್ಳೆಯ ಸಂಪ್ರದಾಯವನ್ನು ಮುಂದುವರಿಸಲು ತಕ್ಕ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ.

Sri L. SIDDAPPA.—Has he also recommended the levy of betterment fee?

ಶ್ರೀ ಟಿ. ಮಾದಯ್ಯಗೌಡರು.—ಇಲ್ಲ, ಅದರ ವಿಷಯ ಹೇಳುತ್ತೇನೆ.

ಈ ವಿಷಯದಲ್ಲಿ ಹಿಂದಿನ ಸರ್ಕಾರದವರು ಯಾವ ಒಂದು ಉದ್ಯಮವನ್ನು ಕೈಗೊಂಡು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದರೋ ಅದನ್ನು ಇಂದಿನ ಸರ್ಕಾರದವರು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಇನ್ನು ಮುಂದೆಯೂ ಇದು ಸರಿಯಾಗಿ ನಡೆದುಕೊಂಡು ಬರಬೇಕಾದರೆ, ಇದಕ್ಕೆ ಬೇಕಾದಷ್ಟು ಹಣ ಬೇಕಾಗುತ್ತದೆ. ಇದಕ್ಕೆ ಹಳ್ಳಿಗಾಡಿನವರಿಂದ ಉತ್ಪತ್ತಿಯಾದ ಹಣವನ್ನು ಖರ್ಚುಮಾಡಿದರೆ ಅವರಿಗೆ ತೊಂದರೆಯಾಗುತ್ತದೆ. ಆದಕಾರಣ, ಈಗಲೇ ಇಂತಹ ಒಂದು ಕಂದಾಯವನ್ನು ಹಾಕುವ ಯೋಜನೆ ಮಾಡದೇ ಹೋದರೆ ಇಂತಹ ಒಳ್ಳೆಯ ಕಾರ್ಯಕ್ಕೆ ಚ್ಯುತಿ ಬರಬಹುದು. ಇದುವರೆಗೆ ಮಾಡಿದ ಕೆಲಸ ಹೊಳೆಯಲ್ಲಿ ಹುಣಿಸೆಹಣ್ಣು ಹಾಕಿದ ಹಾಗಾಗಬಹುದು. ಆದುದರಿಂದ ಈ 'ಬೆಟರ್‌ಮೆಂಟ್ ಫೀ' ಹಾಕುವ ಯೋಜನೆಯನ್ನು ಅಲ್ಲಗಳೆಯಬಾರದು.

ಸಾಧಾರಣವಾಗಿ ಒಂದು ರಸ್ತೆಯನ್ನು ಮಾಡಿದ ಮಾತ್ರಕ್ಕೇ ಅದರ ಅಕ್ಕಪಕ್ಕದಲ್ಲಿರುವವರು ಬೆಟರ್‌ಮೆಂಟ್ ಫೀ ಕೊಡಬೇಕೇ ಎಂದು ಕೇಳಿದರು. ಅಂತಹ ಒಂದು ರಸ್ತೆಯ ಪಕ್ಕದಲ್ಲಿ ನನ್ನ ಮನೆಯಿದ್ದರೆ ನನಗೆ ಆ ರಸ್ತೆಯಿಂದ ಅನುಕೂಲವಾಗುತ್ತದೆ, ನನ್ನ ಆಸ್ತಿಯ ಬೆಲೆ ಹೆಚ್ಚುತ್ತದೆ. ನಗರಾಭಿವೃದ್ಧಿಯಾಗುವುದಲ್ಲದೆ, ನಗರದ ಆರೋಗ್ಯ ಉತ್ತಮಗೊಳ್ಳುವುದಲ್ಲದೆ ಅಲ್ಲಿರುವ ಆಸ್ತಿ, ಎಂದರೆ ಮನೆಗಳ ಬೆಲೆಗಳೂ ಹೆಚ್ಚುತ್ತವೆ. ಹೀಗಿರುವಾಗ ಏಕೆ ಈ ಬೆಟರ್‌ಮೆಂಟ್ ಫೀ ಕೊಡಬೇಕೆಂದು ಕೇಳಿದರೆ ನನಗೆ ಅರ್ಥವಾಗುವುದಿಲ್ಲ. ಒಂದುವೇಳೆ ನನಗೆ ಒಂದು ಮನೆ ಇದ್ದು ಅದರ ಬೆಲೆ ಟ್ರಸ್ಟ್‌ಬೋರ್ಡಿನವರು ಮಾಡಿದ ಅಭಿವೃದ್ಧಿ ಕಾರ್ಯದಿಂದ ಹೆಚ್ಚಾದರೆ ನಾನು ಅವಕ್ಕಾಗಿ ಸ್ವಲ್ಪ ಹಣ ಕೊಡಬೇಕಾದುದು ನ್ಯಾಯ. ಅಲ್ಲದೆ ಈ ಕಾನೂನಿನ ಪ್ರಕಾರ ಈ ಹಣವನ್ನು ತಕ್ಷಣವೇ ಅವರು ಕೇಳುವುದಿಲ್ಲ. ಕಂತುಗಳ ಮೇಲೆ ಕೊಡಬಹುದು. ಹೀಗಿರುವಾಗ ಇದರಿಂದ ತೊಂದರೆಯಾಗುತ್ತದೆಂದು ಒಂದು ದೊಡ್ಡ ವಾದವನ್ನು ಮುಂದಿಡುವುದು ನನಗೆ ಅಷ್ಟು ಚೆನ್ನಾಗಿ ಕಾಣುವುದಿಲ್ಲ. ಒಂದುವೇಳೆ ಆ ಮನೆಗಳು ಬಡವರದೇ ಆಗಿದ್ದರೂ ಅವುಗಳ ಬೆಲೆ ಜಾಸ್ತಿಯಾಗಿ ಅವರು ತಮ್ಮ ಮನೆಗಳನ್ನು ಜಾಸ್ತಿ ಬಾಡಿಗೆಗೆ ಕೊಡಬಹುದು, ಅವನ್ನು ಮಾರಬೇಕಾದರೆ ಅವಕ್ಕೆ ಒಂದಕ್ಕೆ ಹತ್ತರಷ್ಟು ಹೆಚ್ಚು ಬೆಲೆ ಬರುವ ಸಂದರ್ಭವಿವೆ. ಹೀಗಿರುವಾಗ ಇದಕ್ಕೆ ಕಾರಣವಾದ ಸಂಸ್ಥೆಗೆ ಬೆಟರ್‌ಮೆಂಟ್ ಟ್ಯಾಕ್ಸ್ ರೂಪದಲ್ಲಿ ಸ್ವಲ್ಪ ಹಣ ಕೊಡುವುದರಲ್ಲಿ ದೊಡ್ಡ ಪ್ರಮಾದವಾಗುತ್ತದೆ, ತೊಂದರೆಯಾಗುತ್ತದೆ ಎಂದು ವಾದ ಮಾಡುವುದು ಸರಿಯಲ್ಲ. ಈ ಸಮಯದಲ್ಲಿ ನಾನು ಒಂದು ವಿಚಾರವನ್ನು ಸರ್ಕಾರದವರ ಗಮನಕ್ಕೆ ತಂದರೆ ತಪ್ಪಾಗಲಾರದು. ಬೆಂಗಳೂರು ನಗರವನ್ನು ಅಭಿವೃದ್ಧಿಮಾಡುವ ಮತ್ತು ಅದರ ಸೌಂದರ್ಯವನ್ನು ಹೆಚ್ಚಿಸುವ ಕೆಲಸದಲ್ಲಿ ಕಾರ್ಪೊರೇಷನ್ನಿನವರಾಗಲೀ ಟ್ರಸ್ಟ್‌ಬೋರ್ಡಿನವರಾಗಲೀ ಆ ಪಟ್ಟಣದಲ್ಲಿ ಹಿಂದಿನಿಂದಲೂ ಇರತಕ್ಕ ಕಲವು ಚರಿತ್ರಾರ್ಹವಾದ ಸ್ಥಳಗಳನ್ನೂ, ಕೆರೆಕಟ್ಟೆಗಳನ್ನೂ, ಗುಡಿಗೋಪುರಗಳನ್ನೂ ನಾಶಮಾಡದಂತೆ ಸರ್ಕಾರದವರು ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ನಾಲ್ಕೈದು ದಿನಗಳ ಹಿಂದೆ ವೃತ್ತಪತ್ರಿಕೆಗಳಲ್ಲಿ ಒಂದು ಸಮಾಚಾರವನ್ನು ನೋಡಿದೆ. ಬೆಂಗಳೂರು ನಗರದ ಸ್ಥಾಪಕನಾದ ಕೆಂಪೇಗೌಡನು ಅಲ್ಲಿ ಒಂದು ಸುಂದರವಾದ ಕೆರೆಯನ್ನು ಕಟ್ಟಿಸಿದ್ದಾನೆ. ಅದರಿಂದ ಆ ನಗರಕ್ಕೆ ಒಂದು ಹೆಚ್ಚಿನ ಮಾನ್ಯತೆ ಲಭ್ಯವಾಗಿದೆ. ಅಂತಹ ಕೆರೆಯನ್ನು ಒಡೆದುಹಾಕುತ್ತಾರೆಂದು ವರ್ತಮಾನ ಪ್ರಕಟಣೆಯಾಗಿತ್ತು. ಹೀಗೆ ಮಾಡಬಾರದು.

The Hon'ble Sri H. C. DASAPPA.—No, no.

ಶ್ರೀ ಟಿ. ಮಾದಯ್ಯಗೌಡರು.—ಇಂತಹ ವಿಷಯಗಳು ಬಂದರೆ, ಇವುಗಳಿಂದ ನಗರದ ಅಭಿವೃದ್ಧಿಯಾಗುತ್ತದೆಯೋ ಅಥವ ಕಳಂಕ ಉಂಟಾಗುತ್ತದೆಯೋ ಎಂಬುದನ್ನು

ಯೋಚನೆಮಾಡಬೇಕು. ಆ ಕೆರೆಯಿಂದ ಪಟ್ಟಣಕ್ಕೆ ತೊಂದರೆಯೆಂದು ಅದನ್ನು ಮುಚ್ಚಿ ಅದಕ್ಕೆ ತಗಲುವ ಖರ್ಚನ್ನು ಪಡೆಯಲು ಜನರು ಹೆಚ್ಚು ಕಂದಾಯ ಕೊಡಬೇಕೆಂದು ಹೇಳಬಹುದೆಂದು ನನಗೆ ಸಂಶಯ ಬಂತು. ಅದಕ್ಕಾಗಿ ಹೇಳಿದೆ. ಸುಮಾರು ಐನೂರು ವರ್ಷಗಳಿಗೆ ಮೇಲ್ಪಟ್ಟ ಕಾಲದಿಂದ ಬೆಂಗಳೂರು ನಗರ ಒಳ್ಳೆಯ ಮಾನ್ಯರಿಂದ ಸ್ಥಾಪಿಸಲ್ಪಟ್ಟು ದಿನೇದಿನೇ ಅಭಿವೃದ್ಧಿ ಹೊಂದುತ್ತಿದೆ. ಇದೇ ರೀತಿ ಅಭಿವೃದ್ಧಿಪಡಿಸಿಕೊಂಡು ಹೋಗುವ ಕಾರ್ಯವನ್ನು ಈ ಮಸೂದೆಯ ಸಹಾಯದಿಂದ ಮುಂದುವರಿಸಲು ಸಾಧ್ಯವಾಗುತ್ತದೆ. ಹೀಗಿರುವಾಗ ಈ ಮಸೂದೆ ಬೇಡ, ಈ ಸೆಲೆಕ್ಟ್ ಸಮಿತಿಯವರು ಸೂಚಿಸಿರುವುದು ಬೇಡ ಎಂದು ಹೇಳಿದರೆ, ಈಗ ಅಭಿವೃದ್ಧಿ ಮಾಡಬೇಕೆಂದಿರುವುದು ತಪ್ಪಿಹೋಗಿ ಪಟ್ಟಣಕ್ಕೆ ತೊಂದರೆಯಾಗಬಹುದು. ಇದು ನಿಜವಾಗಿಯೂ ಬಹಳ ಒಳ್ಳೆಯ ಮಸೂದೆ; ಸೆಲೆಕ್ಟ್ ಸಮಿತಿಯವರು ಬಹಳ ಚೆನ್ನಾಗಿ ಯೋಚನೆಮಾಡಿ ಇದನ್ನು ತಂದಿದ್ದಾರೆ. ಆದುದರಿಂದ ಸಭೆ ಇದನ್ನು ಒಪ್ಪಬೇಕಾದುದು ನ್ಯಾಯ ಮತ್ತು ಧರ್ಮ. ಅಲ್ಲದೆ, ಈ ಒಂದು ನಗರದ ಅಭಿವೃದ್ಧಿ ಕಾರ್ಯಕ್ಕಾಗಿ ಸರ್ಕಾರದವರು ಸಂಸ್ಥಾನದ ಹಣವನ್ನು ಖರ್ಚುಮಾಡುವುದು ಸರಿಯಲ್ಲ. ಈ ನಗರದಲ್ಲಿ ಮನೆಗಳಿಗೆ ಬೆಲೆ ಹೆಚ್ಚಾಗಿದೆ. ಹೀಗಿರುವಾಗ ಇಂತಹ ಕಂದಾಯವನ್ನು ಅವರು ಕೊಡಲು ಹಿಂದುಮುಂದು ನೋಡುವುದು ಸರಿಯಲ್ಲ. ಈಗತಾನೇ ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಪಟ್ಟಣದವರು ಈ ಮಸೂದೆಯನ್ನು ವಿಶ್ವಾಸದಿಂದ ಸ್ವಾಗತಿಸಿದ್ದಾರೆ. ಆದುದರಿಂದ ಸಭೆಯವರು ಈ ವರದಿಯನ್ನೂ ಮಸೂದೆಯನ್ನೂ ಒಪ್ಪಿಕೊಂಡು ಆದಷ್ಟು ಬೇಗ ಇದನ್ನು ಜಾರಿಗೆ ತರುವುದು ಸೂಕ್ತವೆಂದು ಹೇಳುತ್ತೇನೆ.

ಶ್ರೀ ಎಚ್. ಎಂ. ಚನ ಬಸಪ್ಪನವರು (ಮೈಸೂರು ಜಿಲ್ಲೆ).—ಈ ತಿದ್ದುಪಡಿ ಮಸೂದೆ ಬಹಳ ಉತ್ತಮವಾದುದು. ಇದರ ಉದ್ದೇಶ ಬಹಳ ಉದಾತ್ತವಾಗಿದೆ. ಬೆಂಗಳೂರು ಮೈಸೂರು ಪಟ್ಟಣಗಳಲ್ಲಿರುವವರನ್ನು ಸ್ವಾವಲಂಬಿಗಳಾಗಿ ಮಾಡಬೇಕೆಂಬ ಉದಾತ್ತಧ್ಯೇಯವನ್ನೊಳಗೊಂಡಿದೆ. ಇದುವರೆಗೆ ಪಟ್ಟಣಗಳು ಬೆಳೆದಿರುವುದು ಕೇವಲ ಪಟ್ಟಣಿಗರು ಕೊಟ್ಟ ಹಣದಿಂದ ಎಂದು ಯಾರಾದರೂ ಭಾವಿಸುವುದಾದರೆ ಅದು ತಪ್ಪು. ಪಟ್ಟಣಗಳು ಬಹುಮಟ್ಟಿಗೆ ಬೆಳೆದಿವೆ. ನಮ್ಮೆಲ್ಲರಿಗೂ ಗೌರವ ತರುವ ರೀತಿ ಸುಂದರವಾಗಿ ಬೆಳೆದು ನಮ್ಮ ದೇಶಕ್ಕೆ ಭೂಷಣಪ್ರಾಯವಾಗಿವೆ. ಇದೊಂದು ಹೆಮ್ಮೆ. ಆದರೆ ಇನ್ನು ಮುಂದೆಯೂ ಕೂಡ ಹೀಗೆಯೇ ಬೆಳೆಯಿಸಲು ನೀವು ನಿಮ್ಮ ದೇಹ ದಂಡಿಸಿ ಹಣಕೊಡಿ, ಎಂದು ಇತರರನ್ನು ಕೇಳುವುದು ಎಷ್ಟರಮಟ್ಟಿಗೆ ನ್ಯಾಯ ಎಂಬುದನ್ನು ಜನರೇ ಹೇಳಲಿ.

ಈ ಕಾನೂನಿನಲ್ಲಿ ಮುಖ್ಯವಾದ ಅಂಶಗಳು ಒಂದೆರಡು ಮಾತ್ರ, ಇದರಲ್ಲಿ ಚೇರ್ಮನ್ನರ ವ್ಯಾಪ್ತಿ ಅಧಿಕಾರ, ವಿಧಾಯಕವಾಗಿದೆ. ಇದರಲ್ಲಿ ಏನೂ ಭಿನ್ನಾಭಿಪ್ರಾಯವಿರುವಂತೆ ಕಾಣಲಿಲ್ಲ. ಇದನ್ನು ವಿರೋಧಿಸುವ ಮನೋಭಾವ ಈ ಸಭೆಯಲ್ಲಿ ಯಾರಿಗೂ ಇರುವಂತೆ ಕಾಣಿಸಲಿಲ್ಲ. ಇದ್ದರೂ ಕೂಡ ಅದಕ್ಕೆ ಸಕಾರಣವಿರುವುದಿಲ್ಲ, ಏನೋ ವಿರೋಧ ಮಾಡಬೇಕೆಂದು ಮಾಡಬಹುದೇ ವಿನಾ ಅದಕ್ಕೆ ಸರಿಯಾದ ಕಾರಣವಿಲ್ಲವೆಂದು ಹೇಳಬಹುದು.

Sri L. SIDDAPPA.—I take strong exception to this statement.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಹೀಗೆ ಪಟ್ಟಣಗಳು ಅಭಿವೃದ್ಧಿಯಾದಂತೆಲ್ಲಾ ದೇಶವೂ ಅಭಿವೃದ್ಧಿಯಾಗುತ್ತದೆ. ಅದು ಬೆಳೆದುಕೊಂಡು ಹೋಗಬೇಕಾಗಿದ್ದರೆ ಒಂದು master plan ಬೇಕೆಂಬುದಾಗಿ ಮಾನ್ಯ ಮಂತ್ರಿಗಳು ಅಪ್ಪಣೆಕೊಡಿಸಿದರು. ಆದರೆ ಅವರು ಹಾಗೆ ಹೇಳಿದ್ದು ನನ್ನ ಮನಸ್ಸಿಗೆ ಅಷ್ಟು ತೃಪ್ತಿಯಾಗಲಿಲ್ಲ. ಎಲ್ಲೋ ಒಂದು ಕಡೆ, ಇಂಥಾ ಬದಲಾವಣೆ ಮಾಡಿದ್ದ ಮಾತ್ರಕ್ಕೇ ಇದರಿಂದ ಇಡೀ ದೇಶಕ್ಕೆ ಕ್ಷೇಮ ಉಂಟಾದಂತಾಗುತ್ತದೆಂದು ಸರ್ಕಾರದವರೇನಾದರೂ ಭಾವಿಸಿದ್ದರೆ ಅಂಥಾ ಭಾವನೆಯನ್ನು ಅವರು ಜಾಗ್ರತೆ ಬಿಟ್ಟುಬಿಡುವುದು ಒಳ್ಳೆಯದೆಂದು ನಾನು ತಿಳಿಸಬೇಕಾಗಿದೆ. ಅದರಲ್ಲಿಯೂ ಮಾನ್ಯ ದಾಸಪ್ಪನವರು ಈ ವಿಚಾರ ತಿಳಿಸಿರತಕ್ಕದ್ದು ನನಗೆ ಬಹಳ ಆಶ್ಚರ್ಯವಾಗಿದೆ! ಅವರು ಕೇವಲ ಪಾಶ್ಚಿಮಾತ್ಯ ರಾಷ್ಟ್ರಗಳ ಉದಾಹರಣೆಯನ್ನು ತಮ್ಮ ಗಮನದಲ್ಲಿಟ್ಟುಕೊಂಡು ಹಾಗೆ ಹೇಳಿದ್ದಾರೆ. ಪಾಶ್ಚಿಮಾತ್ಯ ರಾಷ್ಟ್ರಗಳನ್ನೇ ಅನುಸರಿಸಿ ಕೆಲಸಮಾಡತಕ್ಕದ್ದು ಇಲ್ಲಿಗೇ ಸಾಕು. ಕೇವಲ ದೊಡ್ಡದೊಡ್ಡ ಪಟ್ಟಣಗಳ ಶೃಂಗಾರದಿಂದಲೇ ದೇಶಾಭಿವೃದ್ಧಿಯಾಗುತ್ತದೆಂಬ ಭಾವನೆಯನ್ನು ದಯೆಯಿಟ್ಟು ಮಾನ್ಯ ಮಂತ್ರಿಗಳು ಬದಲಾಯಿಸಿಕೊಳ್ಳುವುದು ಒಳ್ಳೆಯದು. ದೇಶದಲ್ಲಿರತಕ್ಕ ಹಳ್ಳಿಗರಿಗೆ ಮಾತನಾಡಲು ಶಕ್ತಿಯಿಲ್ಲದೆ ಇರುವುದರಿಂದ ಇವೆಲ್ಲವೂ ನಡೆದುಕೊಂಡು ಹೋಗುತ್ತವೆ.

ಬೆಟರ್‌ಮೆಂಟ್ ಫೀಜ್ ಎಂಬುದು ದೇಶದಲ್ಲಿ ಸಾರ್ವತ್ರಿಕವಾಗಿ ಎಲ್ಲರಮೇಲೂ ಬೀಳುವಂಥ ತೆರಿಗೆಯೇನೂ ಅಲ್ಲ. ಹೀಗೆ ವಸೂಲಾದ ತೆರಿಗೆ ಕೂಡ ಸರ್ಕಾರದ ಖಜಾನೆಗೆ ಹೋಗುವುದಿಲ್ಲ. ಇದು ಸರ್ಕಾರದವರು ಏರ್ಪಾಡುಮಾಡಿರುವ ಬೋರ್ಡಿನವರ ಸುಪರ್ದಿಗೆ ಹೋಗತಕ್ಕ ತೆರಿಗೆ. ಈ ಅಂಶಗಳನ್ನೆಲ್ಲಾ ಜನಾಬ್ ಹನೀಫ್‌ರವರು ಮನಗಾಣಬೇಕಾಗಿದೆ. ಈ ತೆರಿಗೆ ಹಣವೆಲ್ಲಾ ಹೋಗತಕ್ಕ ಆ ಟ್ರಸ್ಟ್‌ಬೋರ್ಡ್ ಯಾರದು? ಅದು ನಿಮ್ಮದು. ಬೆಟರ್‌ಮೆಂಟ್ ಫೀಯಿಂದ ವಸೂಲಾದ ಹಣವಾದರೂ ಏತಕ್ಕಾಗಿ ಉಪಯೋಗವಾಗುತ್ತದೆ? ಕೇವಲ ಸಂಬಂಧಪಟ್ಟ ಪಟ್ಟಣಗಳಿಗೆ ಮಾತ್ರ ಉಪಯೋಗಿಸಲಾಗುತ್ತದೆಯೇ ಶಿವಾಯಿ ಬೇರೆ ಕಡೆಯ ಕೆಲಸಗಳಿಗಾಗಲೀ ಅಥವಾ ಬೇರೆಯವರ ಹಿತಕ್ಕಾಗಲೀ ಉಪಯೋಗ ಮಾಡಲಾಗುವುದಿಲ್ಲ. ಎಷ್ಟು ಖರ್ಚಾಗಬೇಕೋ ಅಷ್ಟು ಖರ್ಚು ಮಾಡಿದ ತರುವಾಯ ಬಾಕಿಯ ಮೊಬಲಗು ನಿಮ್ಮ ಆ ಬೋರ್ಡಿನಲ್ಲಿಯೇ ಉಳಿದಿರುತ್ತದೆ. ಆದ್ದರಿಂದ ಇದು ಸಾರ್ವಜನಿಕರೆಲ್ಲರ ಉಪಯೋಗಕ್ಕೂ ಬಳಸುವಂಥ ಹಣವಲ್ಲ. ಈ ಯೋಜನೆ ಲಾಭದಾಯಕವಾಗಿರಲಿ, ಇಲ್ಲದೇ ಇರಲಿ, ಅದು ಬೇರೆ ವಿಷಯ: ಅಂತೂ ಎಲ್ಲೆಲ್ಲಿ ಅಭಿವೃದ್ಧಿ ಮಾಡಬೇಕೋ ಅಲ್ಲಿ ಜಮೀನುಗಳನ್ನು ಅಕ್ವಯರ್ ಮಾಡಿಕೊಳ್ಳುತ್ತಾರೆ. ಆ ಸ್ಥಳಗಳಲ್ಲಿ ಎಷ್ಟು ಅಗತ್ಯವಾಗಿ ಬೇಕೋ ಅಷ್ಟನ್ನೇ ಮಾಡಿಕೊಳ್ಳುತ್ತಾರೆ. ಇದರಿಂದ ಸಹ ಬಡಬಗ್ಗರಿಗೆ ಅವಕಾಶವೇ ಇಲ್ಲದಂತೆ ಜಮೀನನ್ನೆಲ್ಲಾ ಸ್ವಾಧೀನಪಡಿಸಿಕೊಳ್ಳುತ್ತಾರೆಂಬ ಅರ್ಥ ಬರುವಂತೆ ಜನಾಬ್ ಹನೀಫರು ಮಾತನಾಡಿರುವುದು ಸರಿಯಲ್ಲ. ಆಸ್ತಿ ಬಿಟ್ಟುಕೊಡಬೇಕಾದವರು ಕೇವಲ ಒಬ್ಬಿಬ್ಬರು ಮಾತ್ರ. ಇಡೀ ದೇಶದ ಜನಕ್ಕೆ ಅನುಕೂಲವಾಗುವಾಗ ಕೇವಲ ಒಬ್ಬಿಬ್ಬರಿಗೆ ಅನಾನುಕೂಲವಾದರೂ ಚಿಂತೆಯಿಲ್ಲ. ಅಂಥಾದ್ದನ್ನು ಮಾಡಲು ಯಾರೂ ಹಿಂಜರಿಯಬೇಕಾಗಿಲ್ಲ. ಇದರಲ್ಲಿ ಅಡಕವಾಗಿರುವ ಮುಖ್ಯಾಂಶವೇನೆಂಬುದನ್ನು ಜನಾಬ್ ಹನೀಫರು ತಿಳಿದುಕೊಳ್ಳಬೇಕು. ಈ ಮಸೂದೆಯ ಉದ್ದೇಶವು ಜನರಿಗೆ ಅನುಕೂಲಮಾಡಬೇಕೆಂಬುದು. ಒಂದು ವೇಳೆ ಅನ್ಯಾಯಗಳು ನಡೆದ ಪಕ್ಷದಲ್ಲಿ ಜನಾಬರಂತಹ ಲಾಯರುಗಳಿದ್ದೇ ಇದ್ದಾರೆ,

(ಶ್ರೀ ಎಚ್. ಎಂ. ಚನ್ನಬಸಪ್ಪನವರು).

ಡಿಸ್ಟ್ರಿಕ್ಟ್ ಕೋರ್ಟಿಗೆ ಕೇಸನ್ನು ದಾಖಲ್‌ಮಾಡಿ ನ್ಯಾಯ ದೊರಕಿಸಿಕೊಳ್ಳಬಹುದು. ಕೊನೆಗೆ ಹೈಕೋರ್ಟಿನ ತನಕವೂ ಅಪೀಲ್ ಹೋಗಬಹುದು. ತೊಂದರೆಗೊಳಗಾದವರಿಗೆ ತಕ್ಕ ಪರಿಹಾರ ದೊರೆಯುವಂತೆ ಮಾಡಲು ತಮಗೆ ಅವಕಾಶವಿದ್ದೇ ಇದೆ, ಜನಾಬ್ ಹನೀಫ್‌ರವರು, ಟ್ರಸ್ಟ್ ಬೋರ್ಡಿನವರು ಇದರಿಂದ ಲಾಭ ಪಡೆಯುತ್ತಾರೆಂದು ಹೇಳಿದರು. ಒಂದು ಜಮೀನನ್ನು ಅಕ್ವೈರ್ ಮಾಡಿಕೊಂಡಾಗ ಏನೋ ಒಂದು ಬೆಲೆ ಕೊಟ್ಟಿರುತ್ತಾರೆ, ಒಂದು ವೇಳೆ ಒಂದುನೂರು ರೂಪಾಯಿಗಳನ್ನು ಕೊಟ್ಟಿದ್ದು, ಅದನ್ನು ಲೇಔಟ್ ಮಾಡಿದ ತರುವಾಯ ಮಾರಾಟ ಮಾಡಿದಾಗ ಎರಡು ನೂರು ರೂಪಾಯಿಗಳಿಗೆ ಮಾರಿಬಿಟ್ಟರೆ, ಆಗ ಎಷ್ಟು ಹಣ ಬರುತ್ತದೆಂಬ ಒಂದೇ ದೃಷ್ಟಿಯಿಂದ ಅವರು ಮಾತನಾಡಿರುವಂತೆ ತೋರುತ್ತದೆ. ಆದರೆ ಹಾಗೆ ಲೇಔಟ್ ಮಾಡಲು ಎಷ್ಟು ಹಣ ಖರ್ಚಾಗಿರುತ್ತದೆ? ಹಳ್ಳ ಕೊಳ್ಳಗಳನ್ನು ಮುಚ್ಚಿ, ರಸ್ತೆ ವಗೈರೆಗಳನ್ನು ಮಾಡಿಸಲು ಎಷ್ಟು ಹಣಬೇಕು? ಇಷ್ಟೆಲ್ಲಾ ಖರ್ಚುಗಳನ್ನು ಮಾಡಿದರೆ ತಾನೆ ಜನಾಬ್ ಹನೀಫರಂಥವರು ಅಲ್ಲಿಗೆಹೋಗಿ ಆ ಸ್ಥಳಗಳನ್ನು ಕೊಳ್ಳಲು ಬಿಡ್ ಮಾಡುವುದು? ಅಷ್ಟೆಲ್ಲಾ ಖರ್ಚು ಮಾಡಲು ಅದಕ್ಕೆ ದುಡ್ಡು ಎಲ್ಲಿಂದ ಬರಬೇಕು?

Janab MOHAMED HANIEF.—The porson who bids pays for it, The cost of the site will go much higher than the cost of acquisition, because the cost of acquisition plus the cost of lay-out will be the cost of the site for disposal. What guarantee is there that you will not neglect the poor?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಅವರು ಹೀಗೆ ಹೇಳುವುದು ಬಹಳ ಆಶ್ಚರ್ಯ! ಇದರಿಂದ ಬಡವರಿಗೆಲ್ಲಾ ಪೂರಾ ತೊಂದರೆಯನ್ನುಂಟುಮಾಡಲು ಇದನ್ನು ತಂದಿರುತ್ತಾರೆಂಬ ಅರ್ಥ ಬರುವ ರೀತಿಯಲ್ಲಿ ಜನಾಬರು ಮಾತನಾಡಿದ್ದಾರೆ. ಉತ್ತಮಪಡಿಸಲು ಮಾಡಿರತಕ್ಕ ಕೆಲಸಕಾರ್ಯಗಳ ದೆಶೆಯಿಂದ ಸ್ಥಳಕ್ಕೆ ಬೆಲೆ ಹೆಚ್ಚಾಗಿ ಬಂದರೆ, ಅದರಲ್ಲಿ ಮೂರನೆಯ ಒಂದು ಭಾಗವನ್ನು ಹಾಗೆ ಖರ್ಚು ಮಾಡಿರತಕ್ಕ ವೆಚ್ಚವನ್ನು ಸರಿತೂಗಿಸಲು ಕೊಡಬೇಕೆಂದು ಹೇಳುವುದರಲ್ಲಿ ತಪ್ಪೇನಿದೆ? ತಮಗೆ ಬೇಕಾಗುವ ಅನುಕೂಲಗಳನ್ನು ಮಾಡುವಾಗ ಅದಕ್ಕೆ ಆಗತಕ್ಕ ಖರ್ಚುಗಳ ಬಗ್ಯೆ ದುಡ್ಡನ್ನು ತಾವು ಕೊಡಲೇಬೇಕು. ಹೀಗೆ ಯಾವ ವಿಧವಾದ ಫೀಜುಗಳನ್ನೂ ಕೇಳದೆ ಆ ಅಭಿವೃದ್ಧಿ ಕೆಲಸಗಳನ್ನು ಮಾಡಿಸಲು ದುಡ್ಡೆಲ್ಲಿಂದ ಬರುತ್ತೆಂಬ ಒಂದು ಪ್ರಶ್ನೆಯನ್ನು ನಾನು ಅವರಿಗೆ ಹಾಕಬೇಕಾಗಿದೆ.

Janab MOHAMED HANIEF.—What about the people who are unable to pay?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಹೀಗೆ ಮಾಡುವಾಗ ಕೆಲವರಿಗೆ ತೊಂದರೆಯಾಗೇ ಆಗುತ್ತದೆ, ಅನುಕೂಲಗಳನ್ನೂ ಕಲ್ಪಿಸಿಕೊಟ್ಟ ಮೇಲೆ ಸಾವಿರ ರೂಪಾಯಿ ಬೆಲೆ ಬಾಳುತ್ತಿದ್ದಂಥ ಸ್ವತ್ತುಗಳು ಸಾವಿರದ ಐನೂರು ರೂಪಾಯಿ ಆಗಬಹುದು. ಹಾಗೆ ಹೆಚ್ಚಾಗಿ ಬರುವ ಬೆಲೆಯಲ್ಲಿ ಮೂರನೆಯ ಒಂದು ಭಾಗದಷ್ಟನ್ನು ಕೊಡಬೇಕೆಂದು ವಿಧಾಯಕವಾಗಿದೆ. ಇದನ್ನು ಕೊಡುವವರು ಬಡವರಾಗಿದ್ದರೆ, ಅವರಿಗೆ ಬೇರೆ ಅನುಕೂಲವಾದ ವ್ಯವಸ್ಥೆಮಾಡಿದೆ. ಅದನ್ನು ಒಂದೇ ಸಾರ್ತಿಗೆ ಏಕ್‌ದಂ, ಕೊಡಬೇಕಾದ್ದೇನೂ ಇಲ್ಲ. ನಿಧಾನವಾಗಿ ಕೊಡಬಹುದು.

Janab MOHAMED HANIEF.—But pay we must.

Sri H. M. CHANNABASAPPA.—When you want to have convenience, benefits and when the value of your property has increased, you must pay more. Hereafterwards the Government should render 'service at cost' as the basis for all improvement activities. Nobody should have increased benefits without payment.

(*Interruption by Janab Mohamed Hanief*)

I am so glad to hear this. He too opposed this. I am surprised now.

ಈ ಕಾರಣಗಳಿಂದ ಸ್ಲಂ ಏರಿಯಾದಲ್ಲಿರುವ ಬಡವರಿಗೆಲ್ಲಾ ತೊಂದರೆಯಾಗುತ್ತದೆಂಬ ವಾದ ಸರಿಯಾದ್ದಲ್ಲ. ಇದು ಎಲ್ಲರಮೇಲೂ ಬೀಳುವಂಥ ಫೀಜು ಸಹ ಅಲ್ಲ. ಎಲ್ಲೆಲ್ಲಿ ಅಂಥಾ ಬದಲಾವಣೆಗಳನ್ನು ಮಾಡಿ ಜನರಿಗೆ ಅನುಕೂಲಗಳನ್ನು ಒದಗಿಸಿ ಕೊಡುತ್ತಾರೋ, ಅಂಥಾ ಸ್ಥಳಗಳಲ್ಲಿರತಕ್ಕ ಜನಗಳಿಗೆ ಮಾತ್ರ ಇದು ಅನ್ವಯಿಸತಕ್ಕದ್ದಾಗಿದೆ. ಎಲ್ಲೆಲ್ಲಿ ಸ್ಲಂಏರಿಯಾಗಳಿದ್ದು ಅಲ್ಲೆಲ್ಲಾ ಬಡವರುಗಳು ವಾಸಿಸುತ್ತಿದ್ದು, ಎಲ್ಲಿ ಅಂಥ ಸ್ಥಳಗಳಿಗೆ ಸರಿಯಾದ ಬೆಲೆ ಇಲ್ಲವೋ, ಅಂಥಾ ಕಡೆಗಳಲ್ಲಿ, ಅವರಿಗೆ ಹೆಚ್ಚು ಹಣ ಬರುವಂತೆಮಾಡಿ, ಅವರಿಗೆ ಆರೋಗ್ಯವಾಗಿರಲು ಇತರ ಎಲ್ಲಾ ಸೌಕರ್ಯಗಳನ್ನೂ ಕೊಡಲು ಒಂದು ಫೀ ಹಾಕಬೇಕೆಂಬುದೇ ಈ ಮಸೂದೆಯ ಮುಖ್ಯ ಉದ್ದೇಶವಾಗಿದೆ. ಸ್ಥಳೀಯ ಸಂಸ್ಥೆಗಳು ಜನರ ಆರೋಗ್ಯದ ಕಡೆಗೆ ಹೆಚ್ಚಿನ ನಿಗಾ ಕೊಡಲು, ಮತ್ತು ಹೆಚ್ಚಿನ ಅನುಕೂಲಗಳನ್ನು ಒದಗಿಸಿಕೊಡಲು ಸಾಕಷ್ಟು ಹಣದ ಉತ್ಪತ್ತಿ ಬರುವಂತೆ ಒಂದು ವ್ಯವಸ್ಥೆಯನ್ನು ಮಾಡಿ, ಪಟ್ಟಣಿಗರು ಸ್ವಾವಲಂಬಿಗಳಾಗಿರುವಂತೆ ಮಾಡಲು ಇದು ತುಂಬಾ ಸಹಾಯಕವಾಗಿದೆಯೆಂದು ಹೇಳಿ ನಾನು ಇದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

Sri K. SAMPANGI RAMIAH (Kolar District—General).—Sir, there seems to be some confusion and misunderstanding regarding the scope of the Bill. The main object of the Bill is to regulate the levy and collection of the betterment tax. The Hon'ble Member in charge of the Bill has already stated that when we referred this Bill to the Select Committee we accepted the principles contained in it. The main principle contained in the Bill being the imposition of the betterment tax, to which we have agreed, it is now too late in the day to go back on that position and oppose the levy of the betterment tax itself.

Now as regards the exact scope of the levy of the betterment tax, I submit this. No improvement which does not

increase the value of the land will attract the provisions of the Bill and the question of betterment tax does not come in in such a case as that. It is only in cases where the value of the land has increased on account of any improvement that the provisions of the Act will be attracted and betterment tax will be levied. In cases where the Municipality or the Trust Board spend a lot of money but even then the value of the land does not increase, there is no taxation at all. That being the case, I do not know where hardship comes if such a tax as this is levied. This increase in the value of the land is something like an un-earned income. The State and the agency which is responsible for increasing the value and for putting some more money into the pockets of the person who has not earned the same, have got a moral right to expect some share from the person who gets the un-earned income. That being the case, when the scope of the Act is so limited only to cases where the land has increased in value due to improvements, if that person gets an advantage by the act of the Trust Board or the Government, then there is a moral right which vests in the agency which makes the land more valuable to expect a contribution. Even in the Bill itself there is a provision for regulating the levy of the tax. First of all, the Trust Board assesses and gives notice to the person who is affected by the assessment. If that person is not satisfied with the assessment, he can ask for the appointment of an Arbitrator and that Arbitrator can go into the question and find out if the assessment is correct or not. Even then if the person is not satisfied, he can go to the District Judge. He can get proper assessment made there. When there are so many safeguards made in the Act itself, and the increase which has resulted on account of the improvement made by the Trust Board can be assessed legally, I do not think that there can be any hardship. The machinery suggested in the Bill for the assessment on the increase in the value in such circumstances as this, is so complete that it is not right to say that there is no proper agency to make any assessment. No doubt in some cases there might be some difficulty. If the value of the land has increased due to reasons other than the improvement made by the Trust Board or by the actual spending of the money by the Trust Board or due to the cumulative result of the steps taken by the Trust Board for improvement and other natural causes, or due to other causes such as the coming into existence of an Industrial Suburb or something like that, then in such cases where more factors than one come into play to increase the value of the land, there will be some difficulty. In such cases we have to trust the discretion of the Arbitrator and the judgment of the District Judge to separate the increase in values due to various influences and to only assess that portion of the increase in value due to improvements made by the Trust Board. In these circumstances when an experienced Judge like the District Judge cannot be trusted to separate the various influences and to allocate the total effect to the several factors, then we cannot trust anybody else. In these circumstances the Bill should be welcomed and the principle that persons who enjoy the benefit should pay, should be borne in mind as also the fact that the person who enjoys the unearned income should also be made to pay. In these circumstances the levy proposed is proper and based on moral principles and the procedure prescribed also is satisfactory. I heartily welcome the measure and commend it for the acceptance of the House.

Point of order *re*: New Member sitting without taking the Oath.

SRI H. K. VEERANNA GOWDH (Mandya District—General)—Before the discussion proceeds further, I would like to draw the attention of the House to the provisions in the Constitution and request the Chair for a ruling in the matter. Article 193 of the Constitution requires that

"if a person sits or votes as a member of the Legislative Assembly or of the Legislative

(SRI H. K. VEERANNA GOWDH)

Council of a State before he has complied with the requirements of Article 188 or when he knows that he is not qualified or that he is disqualified for membership thereof, or that he is prohibited from so doing by the provisions of any law made by Parliament or the Legislature of the State, he shall be liable in respect of each day on which he so sits or votes to a penalty of five hundred rupees to be recovered as a debt due to the State."

And then, Article 188 of the Constitution states—

"that every member of the Legislative Assembly or the Legislative Council of a State shall, before taking his seat, make and subscribe before the Governor, or some person appointed in that behalf by him, an oath or affirmation according to the form set out for the purpose in the Third Schedule."

The rules which we have framed in that connection have laid down that

"at the beginning of each meeting, the Speaker shall call upon new members desirous of taking their seates to do so.

The Secretary shall then call the name of any new member desirous of taking his seat and such member, after taking the oath or making the affirmation in the manner prescribed in the Constitution, shall take his appointed seat."

Now I want a ruling from the Chair to whether a member who has not taken the oath could be allowed to sit in the House.

Janab J. MOHAMED IMAM.—Unless he sits in the House, he cannot take the oath.

Sri H. K. VEERANNA GOWDH.—He does not sit in the House as a member thereof. We took our oath before the commencement of the proceedings. The proceedings of the House have gone on for the past 3 hours and the new member is sitting in the House here without taking the oath as required by the rules.

Janab J. MOHAMED IMAM.—He is awaiting his chance to take the oath.

Sri T. MADIAH GOWDA (Bangalore District—General).—Rule 10 of the Rules of Procedure requires the Speaker to call upon the new member desirous of taking his seat to do so. The Secretary shall then call the name of any new member desirous of taking his seat and such member, after taking the oath or making the affirmation in the manner prescribed in the Constitution, shall take his appointed seat.

Janab MAHMOOD SHERIFF.—Cannot that be regularised now by the new member being called upon to take his oath?

Mr. SPEAKER.—I will consider that point and give a ruling. We shall now adjourn for lunch.

The House adjourned for lunch at Three of the Clock and reassembled at Thirty Minutes past Three of the Clock. Mr. Speaker (the Hon'ble Sri V. Venkatappa) in the chair.

New Member Sworn.

Mr. SPEAKER (The Hon'ble Sri V. Venkatappa).—Sri K. R. Sreekanteswar will now take the Oath of Allegiance.

THE SECRETARY.—Sri K. R. Sreekanteswar.

Sri K. R. SREEKANTESWAR (Bangalore City—General) took the Oath of Allegiance.

The City of Bangalore Improvement (Amendment Bill).

Mr. SPEAKER (The Hon'ble Sri V. Venkatappa).—Discussion on the motion to consider the City of Bangalore Improvement (Amendment) Bill, 1951, will be continued.

*Janab J. MOHAMED IMAM (Chitaldrug *cum* Tumkur—Muslim) — Mr. Speaker, Sir, I do not propose to take much time over this Bill. I want to express some doubts that have been created in my mind. I am sorry I was not present when this Bill was taken up for consideration during the last session and whatever I am expressing now is on the basis of the study of the report of the Select Committee.

This Bill is not as simple as is made out to be nor is it as harmless as we think. It has got a far-reaching effect and it introduces a new principle of levying new tax, a tax which was never contemplated by the previous administrations, which was never contemplated till now and which is proposed to be

levied for the first time in the history of Mysore. What amuses me most is that the very people who were once very much against the levy of any fresh taxation, who opposed tooth and nail the levy of even a small cess, are now most vehement in applauding and welcoming such taxation measures. I agree with the Hon'ble Minister Sri Dasappa that the Cities of Bangalore and Mysore are the finest in India and it is also said that the City of Bangalore is one of the finest cities in the world. That is the impression that Bangalore has created. It is true that these two cities are the cities of magnificent buildings, beautiful parks, beautiful lay-outs, and during the last twenty-five years both these cities have progressed remarkably well so much so that we must give an undoubted compliment to all those architects who built these two cities. I think you will all agree with me in paying a tribute to all those previous administrators who built these cities. We must also thank those administrators that they undertook all these improvements and laid out these magnificent parks and buildings and made these two cities what they are now without any fresh taxation. There was no betterment tax. There was no taxation of the kind that we find now. In spite of that they have built these two cities. The present Gandhinagar in the City of Bangalore was once a very dirty locality. It was cleared and it is now one of the most business localities. It is a locality where the cost of sites is very high and no betterment tax was claimed. The present Bamboo Bazaar also was one of the filthiest localities in Bangalore and it was cleared and beautiful parks were laid and wide road was formed. That locality can compete with any other similar locality in any city of India. What I submit is this. All these improvements were made and all these amenities were provided by the previous Governments including the one in which I served without taxing the people, without any strain on the people of Bangalore and Mysore.

An Hon'ble MEMBER.—Times have changed.

Janab J. MOHAMED IMAM.—I agree that times have changed, that the financial position also has changed. But what is more, the then Government had ample resources. They were very wise in spending their money; they knew how to spend money, when to spend money and where to spend money. Unfortunately the present Government is not following it.

Sri G. A. ACHARYA (Bangalore District—General).—He is blind to realities.

Janab J. MOHAMED IMAM.—My friend was in England. I know the taxation there is very high. But the corresponding benefit they get there in return is appreciable. If the Government can give us all those amenities, if they can give all those benefits in return, I shall agree to all these taxes. But, whatever taxes we pay, will be lost somewhere and they do not bring us in return corrresponding benefits. They all go towards some unnecessary expenditure which will not be beneficial to the people.

Sir, a similar tax was levied which was called the Health Tax. Government took legislative power to levy a tax on every rupee, called the Health Cess. I believe they have been collecting it.

The Hon'ble Sri K. CHENGALARAYA REDDY (Chief Minister).—Not yet.

Janab J. MOHAMED IMAM.—If that amount is collected, what are they going to do with that amount? Is it going to be spent for the betterment of the health or is it going to be merged with the General Exchequer, I want to know? The Government are very anxious to levy new taxes. But my feeling is people do not get the corresponding return.

Sri G. A. ACHARYA.—How do you say so?

Janab J. MOHAMED IMAM.—I will tell you. After the Congress Government came into power I can say that not one tax, but a series of taxes, enhancement of taxes, have been levied. People have been asked to pay more taxes and more cesses. But, with all these, have they improved the condition

(JANAB J. MOHAMED IMAM).

of the people? Have they provided any extra amenities to the people?

The Hon'ble Sri K. CHENGALARAYA REDDY.—Oh! Yes.

Janab J. MOHAMED IMAM.—Tell me what they are. In England we find they have eradicated all diseases; there is no malaria, no cholera.........

Mr. SPEAKER.—Is the Hon'ble Member making a budget speech on the present occasion? (laughter).

The Hon'ble Sri K. CHENGALARAYA REDDY.—He is making an election speech.

Janab J. MOHAMED IMAM.—I am sorry the Hon'ble Chief Minister is saying like that. I am not here to simply accept the levy of any tax.

Mr. SPEAKER.—The tax proposed does not go to Government.

Janab J. MOHAMED IMAM—Whatever it is, if not to Government, it goes to the City Improvement Trust Board. My point is, in the past, all such improvements were done without any additional tax. Then, what is the need to levy betterment tax now?

The Hon'ble Sri H. C. DASAPPA.—May I rise to a point of order, Sir? It is rather surprising that an experienced parliamentarian like Janab Mohamed Imam, having reached this stage of considering the report of the Select Committee, should be discussing the very fundamental principle which has already been accepted by this House. I can very well understand his launching criticism on a particular amendment which has been sought to be incorporated in the Bill. But, I cannot understand for my life his trying to oppose the whole levy of the betterment fee which he calls tax. My Hon'ble friend does not even understand the difference between a tax and a fee and goes on talking on taxation, which is ununderstandable.

Janab J. MOHAMED IMAM.—All right, I will call it betterment fee. Any extra imposition on the people is called a tax. This is an extra imposition and therefore I called it a tax; tax or fee, it is all the same. I share all the sentiments expressed by my Hon'ble friend Janab Mohamed Hanief. He knows where the shoe pinches. He was a corporator and he knows the hardships and difficulties of the poor rater payers. In the first place, the measure looks so inconsistent. They want to apply this fee for all the new improvements. Are they going to take power and do they want to levy this betterment fee for all the old improvements also? For example, this Bamboo Bazaar.........

The Hon'ble Sri H. C. DASAPPA.—It has no retrospective effect.

Janab J. MOHAMED IMAM.—...... this place has considerably increased in value. Why should you make an exception to new sites? If you improve a slum area, why should you ask the people who live in there to pay for the improvement which you are legitimately bound to improve? Sir, it looks, as if that those people living in that locality are not paying any taxes. But, they are paying taxes in various other forms. They are paying taxes on their houses, on their shops, on their profession and on various other avocations. What are those taxes for? Is it not the duty of Government to utilise these taxes for the betterment of these slums? Simply because you are going to lay out a drainage tomorrow, you may say, 'we have improved this locality and therefore you pay betterment tax'. And who is the sole judge here? It is the Corporation or the Municipality. I must submit that apart from this betterment fee, those people living in a particular area are already paying various other taxes, in return to which you are bound to effect these improvements.

Janab Mohamed Hanief also expressed that by such improvements the Trust Board are making enormous money on sites which they acquire and which they sell. They make much profit by carrying on a regular business.

Sri G. A. ACHARYA.—Sir, has the Bangalore Improvement Trust Board made any profit at all? Will he be pleased to give an instance where the Trust Board is making profit? As a matter of fact, the Government are advancing money for this Trust Board even without interest. I want the

Hon'ble Member to clarify here whether the Bangalore City Improvement Trust Board is making profit? Has he seen the balance-sheet so that we may be educated by him?

Janab J. MOHAMED IMAM.—I know the extensions like Seshadripuram and Kumara Park and I presume by what we have heard that the Trust Board have really made some profit. Of course, I am not in possession of relative documents and the Hon'ble Finance Minister who is in charge of the port-folio may correct me. That is the common belief. Another reason why I speak on this is this is only the thin end of the wedge. If we once accept this principle then I know the same principle will be appplied to improve Town and Minor Municipalities. I know there is also a proposal in the neighbouring State to levy betterment tax on lands for any improvements effected therein. So this betterment fee, instead of being a local fee or local cess as is sought to be made out, will become a State-wide levy in course of time because all the town and minor municipalities and even panchayets may claim to levy similar taxes. That is how it becomes a State-wide levy.

The Hon'ble Sri K. CHENGALARAYA REDDY.—We have had it here since last two decades. For example it is a very well-accepted policy that so far as irrigation works are concerned, we have been collecting contributions whenever money has to be found either for improvement of the existing irrigation works or to construct new ones. This is just a difference in name and a new name is being given to that kind of levy. The remarks that are being made are therefore very wide of the mark. The name may be different, but nevertheless the fee is being collected in the Mysore State from a long time.

Sri L. SIDDAPPA.—Is a similar contribution being collected in the Madras State?

The Hon'ble Sri K. CHENGALARAYA REDDY.—I do not know. They may not have had it. That is why probably they are having it now.

Janab J. MOHAMED IMAM—I am opposed at present for the levy of any additional burden and therefore, it is my duty to oppose this measure because it is going to be a State-wide levy.

Sri K. R. SREEKANTESWAR (Bangalore City—General).—Mr. Speaker, I must express my deep sense of gratitude to you for making it possible for me to express my views on this important measure before the House.

In discussing the Bill as reported by the Select Committee, we are practically discussing the activities of the Bangalore City Improvement Trust Board itself. You are aware that there is a body known as the Bangalore Corporation existing and that that body came into existence on the 1st January 1951, *i.e.*, a full-fledged Corporation came into existence from 1st January 1951. There are good many reasons as to why the Trust Board was started in Bangalore City. I should particularly say that there are good many political reasons also in this context. In the year 1940-41 when 99 per cent of the municipal councillors belonged to a particular party, the then Government thought it better to have another agency within its control to improve the City of Bangalore. It is for that reason that this Trust Board was created by the then Government. Now this Trust Board by itself is a board representing Government and not any Members of the Corporation or the people who live in the Corporation area. I know that for certain and I was also a party for that discussion when in the Congress circles there was a strong opposition and also resolutions were moved by some of my Hon'ble friends in the Municipal Council that this Trust Board should be abolished.

Mr. SPEAKER.—What has that to do with the measure under consideration?

Sri K. R. SREEKANTESWAR.—I am just tracing as to how this Trust Board came into existence because we are discussing not only the levy of betterment tax but some other points also. The difficulty is that you have altered some of the other sections of the Bill also. For example, clause 13 and various other clauses have been

(SRI K. R. SREEKANTESWAR).

altered. We are discussing not only clause 18B which deals with the betterment fee, but the entire Bill wherein certain amendments have been made. For example the Chairman's powers have been curtailed in some respects and more and more powers have been given. Why I am saying this is to show that once upon a time you were opposed to this Trust Board itself because we cannot have two or three agencies working with the same object and towards the same ends. What should happen to the Corporation? For example, the Hon'ble Minister while moving to consider the Report of the Select Committee referred to the slum clearance in connection with the betterment fee. As a matter of fact I know for certain that the Corporation has got nearly 2 lakhs of rupees reserved for slum clearance and has also powers to form lay-outs we are told, within corporation limits. Who has defined the Corporation limits? Have the Government defined the Corporation limits? Have they ever specified the limits of the Corporation? Where exactly we can do it? For example, the Trust Board has formed so many lay-outs; Vaiyalikaval, Rajaji Nagar and several other lay-outs. The Corporation also has invested a lot of funds for slum-clearance besides forming several lay-outs.

Sri B. M. SHAMANNA GOWDA (Bangalore Retroceded Area–General).–But it is all in Corporation lands not in revenue lands. The Trust Board are taking up only revenue lands and forming lay-outs there.

Sri K. R. SREEKANTESWAR.—My Hon'ble friend's memory seems to be a bit old. He has retired from the Corporation. I am still in the Corporation. The Corporation has taken up revenue land also and is forming lay-outs and selling it to the people. It is not merely in corporation lands. But it is done within the Corporation limits. My point is, where is the necessity for this overlapping of functions in one and the same place where the Corporation is functioning. What is to happen to the Corporation? We are being told, let the Corporation form lay-outs within the Corporation area and let the Trust Board carry on its work outside the limits of the Corporation. The Corporation has no powers at all to do anything. In the next stage, when the further stages of the Bill come up before this House, we may have to criticise the Act itself. My point is this: you cannot consider merely the forming of lay-outs in hundreds by the Trust Board as a very great improvement which will maintain the City. There is no necessity as a matter of fact for this Trust Board to exist and I am strongly opposed not merely to the Select Committee Report but for the entire Bill and I plead for the abolition of the Trust Board.

Coming to details, I know there are some clauses in the Bill which have been amended by the Select Committee. But regarding this betterment fee, it was stated that they will take up the clearance of slum areas in the heart of the City and if they spend a lakh of rupees on that, the poor people who live in that part of the City are asked to pay because their area has become more costly. That is supposed to be an improvement by the Trust Board. My point is this, Mr. Speaker. Bangalore City is a place where 90 per cent of the population happen to be middle-class and poor people. There are rich people here and there. These people are already subjected to various taxes, direct and indirect. Even if we buy a cocoanut, we have to pay octroi; we have to pay sales tax, we have to pay entertainment tax and so on. In addition to all this, you are going to ask these people to pay betterment tax. So long as you impose a levy on the people, it does not matter whether you call it betterment tax or betterment fee; it is all the same for me. I am a poor man and I cannot afford to pay more. I get only 50 or 60 rupees as salary. Where is the necessity for you to ask me to pay more? I know this Trust Board is constituted by people who always carry out the instructions of the Government and safeguard the interests of the Govern-

ment. When there is a more responsible body, *viz.*, the Corporation functioning in the same area, why not hand over the duties of the Trust Board to the Corporation as well? Why should you seek to curtail the powers of the Corporation? Ask them to take up lands wherever they are available and form lay-outs. There are so many places. I know we have not got a map to show the limits of the Corporation. The Corporation can also carry out the same work in the same manner. Further Sir, I have to submit that Bangalore City is already a big City now. We have to emphasise that the present water supply to the City is not sufficient to meet the requirements of the Corporation limits. We have not got funds to improve the water supply because it requires crores of rupees to improve the water supply to the Bangalore City. We have not got enough money to improve the lighting arrangement. It is within my experience that on many days parts of the City go without electric lights and there are many streets where electric lights are still not provided. That is the state of affairs obtaining in the premier City of Bangalore. The powers of the Corporation are being taken away. What is this Corporation self-governing republic! It is not a republic at all!! It is not a self-governing republic; it is not a republic as a matter of fact; it does not represent anybody except that we have been elected. We have no powers and all the powers of the Corporation are taken away by the Act on the one side, and you want to give more powers to the Trust Board. Thus there has been overlapping of the functions between Corporation and the Trust Board. Except beautiful sights we are not seeing anything else.

Mr. SPEAKER.—The question of the abolition of the Trust Board does not come in here while considering this Bill.

Sri K. R. SREEKANTESWAR.—I realise it but why I am telling is this. Apart from the view that you want to levy what is known as betterment fee, you are simply taking away the life and blood of the individuals who are unfortunately the owners of the houses in slum areas. My point is that the Trust Board itself is not functioning properly. If it were simply a question of the levy of betterment fee, I would have accepted it: but there are so many other clauses provided in the Bill. There is no necessity to bring in these clauses. Further it is better that our responsible Ministers think twice before bringing in this measure. They may have a few more acquisition officers to acquire this area or that area and see that the Corporation lays out sites and beautiful houses are built up in these lay-outs. Who are the people that are given sites? Is it the poor Secretariat officials? Certainly not. Is it the labourers? Certainly not. If only our Hon'ble Finance Minister had allotted 10 or 15 acres to mill areas and if they were asked to convert this into an industrial suburb...

Sri K. PUTTASWAMY (Mandya District—General).—I fail to realise the relevancy of the speech that my friend is making with respect to this Bill.

Mr. SPEAKER.—I have made an observation to that effect already.

Sri K. R. SREEKANTESWAR.—My point is this Industrial suburbs and lay-outs can be formed by particular agencies. The Corporation can do better business. I want that the Government realise this and give more powers to the Corporation. We know what the irresponsible Government was doing; but we do not want our present Government to do the same mistake and commit more mistakes. For Heaven's sake do not have this overlapping of functions of two or three agencies.

Further there is no necessity to further improve the Bangalore City for the reason that we do not want more people to come to Bangalore. Do not have more lay-outs. You are thereby making the City more dirty. You cannot go on giving rations to more and more people. You say you have no money and you want to levy the fee on the people. For everything you want to levy a tax. If I want

(SRI K. R. SREEKANTESWAR).

water to drink, I must pay for it. I am the poor owner of a house. If you put in little more lights here and there, you expect me to pay money. Where is the money for all this? How can a clerk getting a pay of Rs. 50 to 60 in the Secretariat pay for it? You take away the judicial powers from Courts and say that the Trust Board can levy the money. What happens to the Courts? This sort of taking away judicial powers and conferring them on the Trust Board is nothing short of protecting the white elephant. I pray that the Government will reconsider the matter and not only abolish the Trust Board but see that more powers are given to the existing Corporation and see that there is no overlapping of functions.

*ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ).—ಅಧ್ಯಕ್ಷರೇ, ಈ ಬೆಂಗಳೂರು ಸಿಟಿ ಇಂಪ್ರೂವ್‌ಮೆಂಟ್ ಮಸೂದೆಯನ್ನು ಸ್ವಾಗತಿಸಿ ಮಾತನಾಡ ಬೇಕೆಂಬ ಆಸೆ ನನಗೆ, ಶ್ರೀ ಕಂಠೇಶ್ವರ್‌ರವರು ಮಾತನಾಡಿದ ಮೇಲೆ ಉಂಟಾಗಿದೆ. ಅವರು ಈ ಮಸೂದೆಯ ಮೇಲೆ ಮಾತನಾಡುವಾಗ, ಇದರ ತತ್ವಗಳನ್ನು ಗಮನದಲ್ಲಿಟ್ಟುಕೊಂಡು ಮಾತನಾಡದೆ, ಅದನ್ನು ಬಿಟ್ಟು ಬಿಟ್ಟು, ಅದಕ್ಕೆ ಒಂದು ರಾಜಕೀಯ ಕಲೆಯನ್ನು ಬೆರಸಿ, ಬೆಟರ್‌ಮೆಂಟ್ ಫೀಜ್ ಹಾಕುವುದನ್ನು ವಿರೋಧಿಸಿದ್ದಾರೆ. ಅವರೂ ಕೂಡ ಅವರು ಒಬ್ಬ ಸಮಾಜವಾದಿಗಳು; ಸೋಷಿಯಲಿಸ್ಟ್ ಪಾರ್ಟಿಯ ಸದಸ್ಯರು. ಆದರೆ ಅವರು ಕೇವಲ ಬಡವರು ಎಂಬ ಒಂದು ಪದವನ್ನು ಮುಂದಿಟ್ಟುಕೊಂಡು ಅಭಿವೃದ್ಧಿ ಕೆಲಸಗಳಿಗೆ ಬೇಕಾದ ದುಡ್ಡಿನ ವರಮಾನವೆಲ್ಲಿಂದ ಬರಬಹುದೆಂಬುದನ್ನು ತಿಳಿಸದೆ, ವಿರೋಧಿಸಿರತಕ್ಕದ್ದು ಸರಿಯಾದುದಲ್ಲ. ಅನೇಕ ಬಡ ಜನಗಳಿಗೆ ಮನೆಯಿಲ್ಲವೆಂದು ಅವರು ತಿಳಿಸಿದ್ದಾರೆ. ನಿಜ; ಅನೇಕರಿಗೆ ಮನೆಯೇ ಇರುವುದಿಲ್ಲ. ಮಧ್ಯಮವರ್ಗದಂಥ ಜನಗಳಿಗೆ ವಾಸದ ಮನೆ ಸೌಕರ್ಯ, ಬೆಂಗಳೂರಂಥ ಪಟ್ಟಣದಲ್ಲಿ ದೊರೆಯುವುದು ದುರ್ಲಭ. ಆದಕಾರಣ ಇಂಥಾ ಒಂದು ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಬೇಕಾಗುವಂಥ ನಿಧಿಯನ್ನು ಈ ಮಾರ್ಗದಲ್ಲಿ ವಸೂಲು ಮಾಡದೆ, ಮತ್ತೆ ಯಾವ ಮಾರ್ಗದಲ್ಲಿ ಅದನ್ನು ಹಾಕಬಹುದೆಂಬುದೇ ಗೊತ್ತಿಲ್ಲದೆ ಅವರು ಸುಮ್ಮನೆ ಮಾತನಾಡಿದ್ದಾರೆ.

Sri K. R. SREEKANTESWAR.—Mr. Speaker, you must excuse me for slight interruption. The Hon'ble Member has stated "ಅವರಿಗೆ ಮತ್ತೆ ಯಾವ ಮಾರ್ಗದಲ್ಲಿ ಅದನ್ನು ಹಾಕಬೇಕೆಂಬುದೇ ಗೊತ್ತಿಲ್ಲದೆ ಮಾತನಾಡಿದ್ದಾರೆ". Is he questioning my privileges and fundamentals?

ಶ್ರೀ ಎಂ. ವಿ. ಕೃಷ್ಣಪ್ಪನವರು.—ಬೆಂಗಳೂರಿನಲ್ಲಿ ಮಧ್ಯಮ ವರ್ಗದವರು ಮನೆಗಳನ್ನು ಸಂಪಾದಿಸುವುದು ಬಹಳ ಕಷ್ಟ. ಅಲ್ಲಿ ಕೇವಲ ಶ್ರೀಮಂತರಿಗೆ ಮಾತ್ರ ಅವಕಾಶವಿದೆ. ಒಂದೊಂದು ಮನೆಯ ನಿವೇಶನಕ್ಕೆ 15 ಸಾವಿರದ ಮೊದಲುಗೊಂಡು 30 ಸಾವಿರದ ವರೆಗೂ ಬೆಲೆ ಯಾಗುವ ಸಂಭವಗಳಿವೆ. ಈ ಕಾರಣದಿಂದ ಎಲ್ಲೋ ಅಲ್ಲಲ್ಲೆ ಕೆಲವು ಸ್ಲಂ ಏರಿಯಾಗಳಲ್ಲಿ ಒಬ್ಬಿಬ್ಬರು ಬಡವರಿರಬಹುದು. ಅಂಥ ಬಡವರಿಗೂ ಸಹ ಇದರಿಂದ ಹೆಚ್ಚಿನ ಹಣ ಬರುವ ಸಂಭವ ಉಂಟಾಗುತ್ತದೆ. ಅಷ್ಟೇ ಅಲ್ಲದೆ ಅವರು ವಾಸ ಮಾಡುವ ಸ್ಥಳವು, ಆರೋಗ್ಯಕರವಾಗಿದ್ದು ನೋಡುವುದಕ್ಕೆ ಅಂದವಾಗಿರುವಂತೆ ಆಗುತ್ತದೆ. ಹೀಗೆ ಎಲ್ಲೆಲ್ಲಿ ಹೆಚ್ಚು ಹೆಚ್ಚಾಗಿ ಶ್ರೀಮಂತರುಗಳಿದ್ದು, ಅಂಥವರಿಗೆ ಹೆಚ್ಚು ಹಣ ಬರುವಂತೆ ಹೆಚ್ಚು ಸೌಕರ್ಯಗಳನ್ನು ಕಲ್ಪಿಸಿಕೊಡತಕ್ಕ ಸಂದರ್ಭಗಳಲ್ಲಿ, ಅಂಥವರಿಂದ ಈ ಬೆಟರ್‌ಮೆಂಟ್ ಫೀಜನ್ನು ವಸೂಲು ಮಾಡುವುದನ್ನು ಕೇವಲ ಬಡವರುಗಳಿಗೆ ಮನೆಯಿಲ್ಲವೆಂಬ ಒಂದು ವಾದದ ಮೇಲೆ ವಸೂಲು ಮಾಡುವುದೇ ಬೇಡ, ಈ ಕಾನೂನು ಬೇಡವೆಂದು ಹೇಳಿದ ವಾದದಲ್ಲಿ ಯಾವ ತಿರುಳೂ ಇಲ್ಲ ಮತ್ತು ಅದರಲ್ಲಿ ಯಾವ ಅರ್ಥವೂ ಇಲ್ಲ. ಉದಾಹರಣೆಗೆ ಹೇಳುವುದಾದರೆ ಕನ್ನಂಬಾಡಿಕೆರೆಕಟ್ಟುವುದಕ್ಕೆ ಮೊದಲು, ಅಲ್ಲಿದ್ದ ಜಮೀನುಗಳಿಗೆಲ್ಲ ಕೇವಲ ಎಕರೆಯೊಂದಕ್ಕೆ ಕಂದಾಯದ ದರ ಒಂದೂವರೆ ರೂಪಾಯಿ ಕಂದಾಯವಿತ್ತು. ಈಗ ಅದೇ ಜಮೀನುಗಳಿಗೆ, ಕೆರೆ ಕಟ್ಟಿದ ನಂತರ ಎಕರೆಯೊಂದಕ್ಕೆ 12 ರೂಪಾಯಿ ಮೊದಲುಗೊಂಡು 20 ರೂಪಾಯಿಗಳವರೆಗೂ ಕಂದಾಯ ಹಾಕಿ ಅದರ ಜೊತೆಗೆ ನೀರು ಸರದಿ ಎಂದು ಎಕರೆಗೆ 200–300 ರೂಪಾಯಿಗಳಿನ್ನು ಬೇರೆ ಹಾಕಿರುತ್ತಾರೆ. ಇನ್ನೂ ಒಂದು ವಿಚಾರ ಹೇಳುವುದಾದರೆ—ಕೆಲವರು ತಮ್ಮ ಸ್ವಂತ ಖುಷ್ಕಿ ಜಮೀನುಗಳಲ್ಲಿ ತಮ್ಮ ಸ್ವಂತ ಖರ್ಚಿನಿಂದ ಬಾವಿ ತೆಗೆಸಿ, ಜಮೀನು ಆಬಾದು ಮಾಡಿಕೊಂಡಿದ್ದರೆ, ಅಂಥವರಿಗೂ ಸಹ ತರಿ ಕಂದಾಯವನ್ನು ಹಾಕಿರುತ್ತಾರೆ. ಇಂಥಾದ್ದನ್ನೆಲ್ಲಾ ಈ ಕಾಂಗ್ರೆಸ್ ಸರ್ಕಾರ ಬಂದ ಮೇಲೇನೂ ಮಾಡಿದ್ದಲ್ಲ. ಇವೆಲ್ಲವೂ ಮೊದಲಿಂದಲೂ ಚಲಾವಣೆಯಲ್ಲಿ ಇದ್ದೇ ಇವೆ. ಇದನ್ನೆಲ್ಲಾ ಜನಾಬ್ ಇಮಾಂ ಸಾಹೇಬರಿದ್ದಾಗಿನಿಂದಲೂ ಸರ್ಕಾರ ಜಾರಿಗೆ ತಂದಿರತಕ್ಕದ್ದೇ ಹೊರತು ಹೊಸದಾಗಿ ಯಾವುದನ್ನೂ ಮಾಡಿಲ್ಲ. ಹೀಗಿದ್ದರೂ ಸಹ ಈಗ ಬಂದಿರುವ ಮಸೂದೆಯಲ್ಲಿ ಅಂಥ ಯಾವ ನ್ಯೂನತೆಗಳೂ ಇಲ್ಲದೆ ಕೇವಲ ಶ್ರೀಮಂತರುಗಳು ಎಲ್ಲೆಲ್ಲಿ ಹೆಚ್ಚಾಗಿ ವಾಸಮಾಡುತ್ತಿದ್ದಾರೋ ಅಂಥಾ ಕಡೆಗಳಲ್ಲಿ ಮಾತ್ರ ಈ ಒಂದು ತೆರನಾದ ಸುಂಕ ಹಾಕತಕ್ಕದ್ದರಿಂದ ಮಾನ್ಯ ಸದಸ್ಯರ ಮನಸ್ಸಿಗೆ, ಅದರಲ್ಲೂ ಸೋಷಿಯಲಿಸ್ಟ್ ಪಾರ್ಟಿ ಸದಸ್ಯರ ಮನಸ್ಸಿಗೆ, ಎಷ್ಟು ನೋವಾಗಿದೆಯೋ ನನಗೆ ತಿಳಿಯದಾಗಿದೆ. ಆದರೆ ಈ ದಿವಸ ನಾನು ಒಂದು ವಿಚಾರ ತಿಳಿಸಬೇಕೆಂದರೆ, ಬೆಂಗಳೂರು–ಮೈಸೂರು ನಗರಗಳನ್ನು ಇಷ್ಟೊಂದು ಶೃಂಗಾರವಾಗಿಟ್ಟಿರತಕ್ಕ ಗೌರವವೆಲ್ಲಾ with all my respects, ಸರ್ ಮಿರ್ಜಾರವರಿಗೆ ಸೇರತಕ್ಕದ್ದಾಗಿದೆ. ಅವರು ಬಹಳ ಕಷ್ಟಪಟ್ಟು, ಶ್ರದ್ಧೆಯಿಂದ ಇವುಗಳನ್ನು ಅಭಿವೃದ್ಧಿ ಮಾಡಿಸಿದ್ದಾರೆ. ಆದರೆ ಅವರೇನೂ ಒಂದು ಯಕ್ಷಿಣಿ, ಮಾಯ ಮಂತ್ರಗಳಿಂದ ಇಷ್ಟೊಂದು ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಮಾಡಿಸಿಲ್ಲ. ಕೇವಲ ಹಣವನ್ನು ಖರ್ಚು ಮಾಡೇ ಮಾಡಿಸಿರುವುದು. ಹೀಗೆ ಆಗಿರತಕ್ಕ ಖರ್ಚಿನ ಬಗ್ಗೆ ಅವರು 1902 ರಿಂದ ಕೊಟ್ಟಿರತಕ್ಕದ್ದಾದರೂ ಕೇವಲ ಒಂದೂವರೆ ಕೋಟಿ ರೂಪಾಯಿಗಳಷ್ಟು ಮಾತ್ರ. ಹೀಗೆ ಅವರು ಸರ್ಕಾರದಿಂದ ಈ ಮೈಸೂರು ಸಿಟಿ ಒಂದಕ್ಕೆ ಗ್ರಾಂಟ್ ಕೊಟ್ಟಿರುವುದು ಅಂದರೆ—1902 ರಿಂದ ಇಲ್ಲಿಯವರೆಗೂ ಕೇವಲ ಒಂದೂವರೆ ಕೋಟಿ ರೂಪಾಯಿಗಳು ಮಾತ್ರ. ಇದರಲ್ಲಿ

ನೀರು ಸರಬರಾಯಿ, ಬೆಳಕು, ರಸ್ತೆ ಇತ್ಯಾದಿಗಳೆಲ್ಲಾ ಆಗಬೇಕು. ಜನಾಬ್ ಇಮಾಂರವರು ಹೇಳಿದರು,

'does it mean that the town people are not paying other taxes like profession tax, this tax and that tax' ಎಂದು. All capitalists are now becoming socialists. All capitalists' sons have become socialists; ' their daughters-in-law have become socialists. They talk always of the poor people. In the name of poor people they do not want to tax the rich people.

ಅವರು ಎಷ್ಟೋ ಸುಖವನ್ನು ಅನುಭವಿಸಿದ್ದಾರೆ. ಇಂಜನಿಯರಿಂಗ್ ಕಾಲೇಜು, ಮೆಡಿಕಲ್ ಕಾಲೇಜು ಮುಂತಾದ ಎಲ್ಲಾ ಕಾಲೇಜುಗಳೂ ಅಲ್ಲೇ ಇವೆ. ಎಲ್ಲಾ ಆಸ್ಪತ್ರೆಗಳೂ ಅಲ್ಲಿವೆ. ಅನುಕೂಲತೆಗಳನ್ನು ನೋಡಿದರೆ ಎಲ್ಲಾ ಅಲ್ಲೇ ಹೆಚ್ಚಾಗಿವೆ, ಹಳ್ಳಿಯವರು ಕೆಲವರು ಬಂದು ಅಲ್ಲೇ ಇರಬಹುದು. ಪೇಟೆ ಸ್ಥಳಗಳಲ್ಲಿ ಬೇಕಾದಷ್ಟು ಸುಖ ದೊರಕುತ್ತಿದೆ, ಅದು ನಿಜ. ಆದರೆ ಬೆಟರ್‌ಮೆಂಟ್ ಟ್ಯಾಕ್ಸ್ ಹಾಕುವುದು ಸೂಕ್ತವೇ ಅಥವಾ ಅಲ್ಲವೇ ಎಂಬ ವಿಚಾರದ ಮೇಲೆ ಮಾತನಾಡದೆ ಕಾಂಗ್ರೆಸ್ ಸರ್ಕಾರ ಆಡಳಿತಸೂತ್ರವನ್ನು ವಹಿಸಿದ್ದರೂ ಬಡವರಿಗೆ ಸರಿಯಾದ ಅನುಕೂಲತೆಗಳನ್ನು ಕಲ್ಪಿಸಲಿಲ್ಲ ಎಂದು ಹೇಳುವುದು ಸರಿಯಲ್ಲ. ಎಲ್ಲಕ್ಕೂ ತಕ್ಕಷ್ಟು ಹಣಬೇಕು. ಸೋಷಿಯಲಿಸ್ಟ್ ಪಕ್ಷವೇ ಆಗಲಿ ಅಥವಾ ಮತ್ಯಾವ ಪಕ್ಷವೇ ಆಗಲಿ ಅಧಿಕಾರಕ್ಕೆ ಬಂದರೂ ಹಣವಿಲ್ಲದೆ ಏನುಮಾಡಲೂ ಸಾಧ್ಯವಿಲ್ಲ. ಹಣ ಎಲ್ಲಿಂದ ತರಲು ಸಾಧ್ಯ ಎಂಬುದನ್ನು ಯೋಚನೆ ಮಾಡಬೇಕು. ಬೆಟರ್‌ಮೆಂಟ್ ಟ್ಯಾಕ್ಸ್ ಹಾಕಿ ಹಳ್ಳಿಯ ರಸ್ತೆಗಾಗಿ ವಿನಿಯೋಗಿಸುವುದಿಲ್ಲ.

ಟ್ರಸ್ಟ್ ಬೋರ್ಡಿನ ವಿಚಾರ ಹೇಳಿದರು. The entire city of Bombay is going to be the property of the Trust Board. It is going to be nationalised within the course of 10 or 20 years. ಇಂಥ 'ದೊಡ್ಡ ಯೋಜನೆ ತಯಾರಿಸಿ ಕೋಟ್ಯಾಂತರ ರೂಪಾಯಿಗಳನ್ನು ವೆಚ್ಚಮಾಡಿ ಬಹಳ ಜವಾಬ್ದಾರಿಯನ್ನು ವಹಿಸಿ ಖಾಯಂ ಆಗಿ ಟ್ರಸ್ಟ್ ಬೋರ್ಡನ್ನು ಮಾಡುತ್ತಿದ್ದಾರೆ. ಆದ್ದರಿಂದ ಇದು ಮುಖ್ಯವಲ್ಲ, ಇದರಿಂದ ನಮಗೆ ಅನುಕೂಲವಿಲ್ಲ ಎಂದು ಯಾರೂ ತಿಳಿದುಕೊಳ್ಳಬಾರದು. ಇದೆಲ್ಲವೂ ನಮ್ಮ ಅಭಿವೃದ್ಧಿಗಾಗಿಯೇ ಏರ್ಪಾಡಾಗುತ್ತಿದೆ. ಆದ್ದರಿಂದ ಟ್ರಸ್ಟ್‌ಬೋರ್ಡ್ ಸ್ವಲ್ಪ ಹೆಚ್ಚು ಕಡಿಮೆ ರಾಜಕೀಯಕ್ಕೆ ಒಳಗಾಗಿದೆಯೆಂದು ಯಾರೂ ಹೇಳಬಾರದು. ತೆರಿಗೆ ಹಾಕಲೇಬೇಕು. ಇವನ್ನು ಚೆನ್ನಾಗಿ ಯೋಚನೆ ಮಾಡೇ ಹಾಕಲಾಗಿದೆ. ಆದ್ದರಿಂದ ನಾನು ಇದನ್ನು ಸ್ವಾಗತಿಸುತ್ತೇನೆ.

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—ಈ ತೆರಿಗೆ ಇರಬೇಕು ಎಂದು ಹೇಳುವವರಲ್ಲಿ ಮತ್ತು ವಾದಮಾಡುವವರಲ್ಲಿ ನಾನೂ ಒಬ್ಬ. ಈ ವಿಚಾರದಲ್ಲಿ ಇಷ್ಟು ವಾದ ಬೇಕಾಗಿರಲಿಲ್ಲವೆಂದು ನಾನು ತಿಳಿದುಕೊಂಡಿದ್ದೆ. ಆದರೆ ಶ್ರೀ ಶ್ರೀಕಂಠೇಶ್ವರ್‌ರವರ ಭಾಷಣ ಕೇಳಿ ಆಶ್ಚರ್ಯವಾಯಿತು! ಅವರು ಬಹಳ ಅನುಭವಿಗಳು, ಅವರ ತತ್ವ ಉದಾತ್ತವಾಗಿದೆ, ಆದ್ದರಿಂದ ಅವರ ಭಾಷಣವನ್ನು ಬಹಳ ಆಸಕ್ತಿಯಿಂದ ಕೇಳಬೇಕೆಂದಿದ್ದೆ. ಆದರೆ ಅದನ್ನು ಕೇಳಿದ ಮೇಲೆ ನಮ್ಮ ಆಶೆಯೆಲ್ಲಾ ನಿರಾಶೆಯಾಯಿತು. ಈ ತೆರಿಗೆಯನ್ನು ಹಾಕಬೇಕೆಂದಿರುವ ಉದ್ದೇಶವೇ ಬೇರೆ. ಸ್ಲಮ್ಸ್ ಪ್ರದೇಶವು ಲೇಔಟ್ ಆದ ಮೇಲೆ ಉತ್ತಮ ಸ್ಥಿತಿಗೆ ಬಂದು ಬೆಲೆ ಹೆಚ್ಚಿದಾಗ ಆ ಹೆಚ್ಚಾದ ಬೆಲೆ ಮತ್ತು ಮೂಲ ಬೆಲೆಯ ವ್ಯತ್ಯಾಸದಲ್ಲಿ ಸೇಕಡ 50 ಭಾಗವನ್ನು ತೆಗೆದುಕೊಳ್ಳಬೇಕೆಂದು ಮನಸ್ಸು ಮಾಡಿದ್ದನ್ನು ಬದಲಾಯಿಸಿ ಮೂರನೆಯ ಒಂದು ಭಾಗ ಮಾತ್ರ ತೆಗೆದುಕೊಂಡು ಅದನ್ನು ಸಾರ್ವಜನಿಕರ ಅನುಕೂಲತೆಗಾಗಿಯೇ ಉಪಯೋಗಿಸಬೇಕೆಂದು ಮನಸ್ಸು ಮಾಡಿರುವಾಗ, ಬಡಜನರಿಗೆ ಕಿರುಕುಳ ಕೊಡಲು ಇದನ್ನು ಹಾಕಿದ್ದಾರೆಂದು ಹೇಳಿ ಉದ್ರೇಕಪೂರಿತವಾಗಿ ಅವರು ಭಾಷಣ ಮಾಡಿರುವುದರಲ್ಲಿ ತತ್ವವೇನೂ ಇರಲಿಲ್ಲ. ಪ್ರಜಾಪ್ರಭುತ್ವದಲ್ಲಿ, ಜನಾಂಗಕ್ಕೆ ಸ್ವಾತಂತ್ರ್ಯ ಬಂದಿರುವಾಗ ಯಾವ ಕೆಲಸವಾಗಬೇಕಾದ್ದು ಮುಖ್ಯ, ಯಾವುದರಿಂದ ಬಹು ಜನರಿಗೆ ಸಹಾಯವಾಗುತ್ತದೆ ಎಂಬುದನ್ನರಿತು ಅದಕ್ಕೆ ತಕ್ಕ ವ್ಯವಸ್ಥೆ ಮಾಡುವುದು ಅತ್ಯಾವಶ್ಯಕ. ಆ ರೀತಿ ಮಾಡುವುದಕ್ಕೆ ಹಣಬೇಕು. ಶ್ರೀ ಕೃಷ್ಣಪ್ಪನವರು ಹೇಳಿದಹಾಗೆ ಹತ್ತಾರು ವರ್ಷಗಳಿಂದ ಪಟ್ಟಣಗಳು ಹೇಗೆ ಬೆಳೆದಿವೆಯೆಂದರೆ ಒಂದು ದೃಷ್ಟಿಯಿಂದ ದೇಶದ ಉತ್ಪತ್ತಿಯಲ್ಲಿ ಬಹು ಭಾಗ ಹಳ್ಳಿಯ ಜನರ ಹಣವನ್ನು ಅಲ್ಲಿನ ಕೆಲಸ ಕಾರ್ಯಗಳಿಗೆ ಉಪಯೋಗಿಸಿದರು. ಆದರೆ ಹಳ್ಳಿಯ ಜನರ ವಿಶ್ವಾಸವನ್ನು ಪಡೆದು ಬಂದು ಸರ್ಕಾರವನ್ನು ನಡೆಸತಕ್ಕವರು ಯಾರು ಇರಲಿಲ್ಲ. ಆದ್ದರಿಂದ ಆಗ ಹೆಚ್ಚು ಟೀಕೆ ಬರುತ್ತಿರಲಿಲ್ಲ. ಈಗ ಹಳ್ಳಿಗಳು ಉದ್ಧಾರವಾಗಬೇಕೆಂಬುದು ಎಲ್ಲರ ಆಕಾಂಕ್ಷೆಯಾಗಿದೆ. ಪಟ್ಟಣಗಳಿಗಾಗಿ ಮಾತ್ರ ಟ್ರಸ್ಟ್ ಬೋರ್ಡನ್ನು ಏರ್ಪಡಿಸಿ ಹಳ್ಳಿಗಳನ್ನು ಅಲಕ್ಷ್ಯ ಮಾಡಬೇಕೆಂದಿಲ್ಲ. ಮುಂದೆ ಹಳ್ಳಿಗಳಲ್ಲೂ ಲೇಔಟ್ ಮಾಡುವುದಕ್ಕೆ ಯೋಜನೆಯಿದೆ. ಅದನ್ನು ಬಹಳ ಜಾಗ್ರತೆ ಮಾಡಿ ಹಳ್ಳಿಗಳಲ್ಲಿ ಈ ಯೋಜನೆಯನ್ನು ಜಾರಿಗೆ ತರುತ್ತಾರೆಂಬ ನಂಬಿಕೆಯಿದೆ. ಈ ರೀತಿಯಾಗಿ ಪ್ರಜಾಪ್ರಭುತ್ವದಲ್ಲಿ ಅನೇಕ ರಚನಾತ್ಮಕವಾದ ಕೆಲಸಗಳನ್ನು ಪಟ್ಟಣಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಏರ್ಪಾಡು ಮಾಡುವಾಗ ಪಟ್ಟಣದ ಜನರ ಮೇಲೆ ಈ ಫೀಜನ್ನು ಹಾಕಲು ಇಷ್ಟು ವಿರೋಧ ಬಂದರೆ ಹೇಗೆ? ಪಟ್ಟಣಗಳಿಗಾಗಿ ಎಷ್ಟು ಹಣ ವಿನಿಯೋಗಿಸಿದೆ ಎಂಬುದನ್ನು ಯೋಚನೆ ಮಾಡಬೇಕು. ಹಳ್ಳಿಗಳೂ ಕೂಡ ಅಭಿವೃದ್ಧಿ ಸ್ಥಿತಿಗೆ ಬರಬೇಕು. ಆದ್ದರಿಂದ ಹೆಚ್ಚಾಗಿ ವಿರೋಧಮಾಡದೆ ದೇಶದ ಸರ್ವತೋಮುಖವಾದ ಉನ್ನತಿಯನ್ನು ಬಯಸಬೇಕಾದದ್ದು ನಮ್ಮ ಮುಖ್ಯ ಕರ್ತವ್ಯ.

ಎರಡನೆಯದಾಗಿ, ಒಂದು ಕಾರ್ಪೊರೇಷನ್ ಇರುವಾಗ ಬೇರೊಂದು ಸಂಸ್ಥೆಗೆ ಏಕೆ ಇಷ್ಟು ಹೆಚ್ಚಿನ ಅಧಿಕಾರ ಕೊಡಬೇಕೆಂದು ಮಾನ್ಯ ಮಿತ್ರರು ಕೇಳಿದರು. ಹಿಂದೆ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರವಿರಲಿಲ್ಲ, ಹೆಚ್ಚಿನ ಕೆಲಸಕೂಡ ಇರಲಿಲ್ಲ. ಪ್ರಜಾಪ್ರಭುತ್ವ ಬಂದಮೇಲೆ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ಮತ್ತು ಹಣ ಒದಗಿಸುವುದು ಮತ್ತು ಕೆಲಸಕಾರ್ಯ ಹೆಚ್ಚಿತು. ಅಧಿಕಾರವನ್ನು ವಿಕೇಂದ್ರೀಕೃತಮಾಡಿ ಅನೇಕ ಸಂಸ್ಥೆಗಳಿಗೆ ತಕ್ಕಷ್ಟು ಹಣ ಕೊಟ್ಟು ಅವಕ್ಕೆ ಹೆಚ್ಚುಹೆಚ್ಚಾಗಿ ಕೆಲಸಗಳನ್ನು ಕೊಡುವುದು ಪ್ರಜಾಪ್ರಭುತ್ವದ ಮೂಲ ತತ್ವವಾಗಿದೆ. ಆದ್ದರಿಂದ ಹೀಗೆ ಕಾರ್ಪೊರೇಷನ್ ಮಾಡುವ ಕೆಲಸದಲ್ಲಿ ಒಂದು ಭಾಗವನ್ನು ಟ್ರಸ್ಟ್ ಬೋರ್ಡಿಗೆ ವಹಿಸಿರುವುದು ತಪ್ಪಿಲ್ಲ. ಕಾರ್ಪೊರೇಷನ್ ಒಂದು ರಾಜಕೀಯ ಪಕ್ಷ, ಅದರ ಅಧಿಕಾರವನ್ನು ಕಿತ್ತುಕೊಂಡು ಟ್ರಸ್ಟ್ ಬೋರ್ಡಿಗೆ ಕೊಟ್ಟರು ಎಂದು ಭಾವಿಸುವುದು ಸೂಕ್ತವಲ್ಲ. ಈ ದಿವಸ ಕಾರ್ಪೊರೇಷನ್‌ಗಿರುವ

(ಶ್ರೀ ಡಿ. ಎಂ. ಸಿದ್ದಯ್ಯನವರು).

ಅಧಿಕಾರ ವ್ಯಾಪ್ತಿ ಮತ್ತು ಬೆಂಗಳೂರು ನಗರದಲ್ಲಿ ಅದು ಮಾಡುತ್ತಿರುವ ಕೆಲಸವೇನು ಎಂಬ ದನ್ನು ಮಾನ್ಯ ಮಿತ್ರರು ನೋಡಬೇಕು. ಕಾರ್ಪೊರೇಷನಿನ ಅಧಿಕಾರ ಕಿತ್ತುಕೊಳ್ಳಬೇಕೆಂಬ ಉದ್ದೇಶ ಯಾರಿಗೂ ಇಲ್ಲ. ಅದಕ್ಕೆ ನಿರ್ದಿಷ್ಟವಾದ ಕೆಲಸವಿದೆ. ಟ್ರಸ್ಟ್ ಬೋರ್ಡಿಗೂ ನಿರ್ದಿಷ್ಟವಾದ ಕೆಲಸವಿದೆ. ಇವೆರಡೂ ಒಂದಕ್ಕೊಂದು ಹೊಂದಿಕೊಂಡು ಕೆಲಸ ಮಾಡಿಕೊಂಡು ಹೋಗಬೇಕೆಂಬುದೇ ಮುಖ್ಯ ಉದ್ದೇಶ. ಆ ಒಂದು ದೃಷ್ಟಿಯಿಂದಲೇ ಕಾನೂನನ್ನು ಮಾಡಿರುವುದರಿಂದ ಕಾರ್ಪೊರೇಷನ್ ಅಧಿಕಾರಕ್ಕೆ ಧಕ್ಕೆ ಬರುತ್ತದೆಂದು ಸಂಶಯಪಡಲು ಅವಕಾಶವಿಲ್ಲ.

ಮೂರನೆಯದಾಗಿ, ಯಾವಾಗ ಜನಸಂಖ್ಯೆ ಹೆಚ್ಚಿ ಅವರ ಅನುಕೂಲತೆಗಳು ಹೆಚ್ಚಬೇಕಾಗುತ್ತದೆಯೋ ಆಗ ಅದಕ್ಕೆ ತಕ್ಕ ಯೋಜನೆಗಳಿಗಾಗಿ ಹಣ ಒದಗಿಸಲು ಜನರು ಕೊಡಬೇಕಾದ ಕಂದಾಯವನ್ನು ಹೆಚ್ಚಿಸಬಹುದು. ಮುಂದೆ ಸೋಷಿಯಲಿಸ್ಟ್ ಅಥವಾ ಕಮ್ಯೂನಿಸ್ಟ್ ಪಕ್ಷವು ಅಧಿಕಾರಕ್ಕೆ ಬಂದರೂ ಯೋಜನೆಗೆ ಸಾಕಷ್ಟು ಹಣ ಒದಗಿಸಲೇಬೇಕು. ವಿವಿಧ ಯೋಜನೆಗಳನ್ನು ತಯಾರಿಸಿ ಶ್ರೀಮಂತರಿಗೆ ಹೆಚ್ಚಿಗೆ ಕಂದಾಯ ಹಾಕಿ ಅದರಿಂದ ಬಡವರ ಮತ್ತು ಶ್ರೀಮಂತರ ಉದ್ಧಾರಕ್ಕಾಗಿ ಕೆಲಸಮಾಡುವುದು ಮೂಲತತ್ವ. ಈ ಯೋಜನೆಗಳನ್ನು ನ್ಯಾಷನಲ್ ಪ್ಲಾನಿಂಗ್ ಸಮಿತಿಯು ರಚನೆಮಾಡಿದೆ. ಮಹಾ ಚುನಾವಣೆಗಳಾದ ಮೇಲೆ ಅವಕ್ಕೆ ಬೇಕಾದ ಹಣವನ್ನು ಒಂದಲ್ಲ ಒಂದು ರೂಪವಾಗಿ ಒದಗಿಸಿ ಜನರಿಗೆ ಸೌಕರ್ಯವನ್ನುಂಟುಮಾಡುವುದು ಪ್ರತಿಯೊಂದು ರಾಜಕೀಯ ಪಕ್ಷದ ಕೆಲಸ. ಅದನ್ನು ಅವರು ಒಪ್ಪಲೇಬೇಕು ಮತ್ತು ಜವಾಬ್ದಾರಿಯಿಂದ ಪ್ರತಿಯೊಂದು ಕೆಲಸವನ್ನೂ ಮಾಡಲೇಬೇಕು. ಆದ್ದರಿಂದ ಈ ಫೀಜಿನ ವಿಚಾರದಲ್ಲಿ ಹೆಚ್ಚು ವಾದ ಮಾಡದೆ, ಇದು ನಿಜವಾಗಿಯೂ ನಗರಾಭಿವೃದ್ಧಿಗೆ ಅತ್ಯವಶ್ಯಕವೆಂಬುದನ್ನು ಮನಗಂಡು ವಿರೋಧವಿಲ್ಲದೆ ಸರ್ವಾನುಮತದಿಂದ ಎಲ್ಲರೂ ಇದನ್ನು ಒಪ್ಪಬೇಕೆಂದು ಸೂಚಿಸಿ ಇದನ್ನು ಸಮರ್ಥನೆ ಮಾಡುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).—ಅಧ್ಯಕ್ಷರೇ, ಹೊಸದಾಗಿ ಬೆಟರ್‌ಮೆಂಟ್ ಫೀ ಬೆಂಗಳೂರು ಮತ್ತು ಮೈಸೂರು ಸಿಟಿಗಳಲ್ಲಿ ಹಾಕಬೇಕೆಂದಿರುವ ಒಂದು ತತ್ವವು ದೇಶಕ್ಕೇನೂ ಹೊಸದಲ್ಲ. ಈ ವಿಷಯ ಮಾನ್ಯಸಭಾ ನಾಯಕರಾದ ಮುಖ್ಯ ಮಂತ್ರಿಯವರು ಈಗತಾನೇ ಹೇಳಿದ್ದಾರೆ. ಹಳ್ಳಿಗಾಡಿನಲ್ಲಿರುವ ಖುಷ್ಕಿ ಜಮೀನು ತರಿ ಅಥವಾ ಬಾಗಾಯ್ತು ಜಮೀನಾದರೆ ಅದಕ್ಕೆ ಹೆಚ್ಚು ತೆರಿಗೆ ಹಾಕುತ್ತಿರುವುದು ಅನೇಕ ವರ್ಷಗಳಿಂದ ನಮ್ಮ ದೇಶದಲ್ಲಿ ರೂಢಿಯಲ್ಲಿದೆ. ಆದರೆ ಅದು ಆಗ ಜನಗಳಿಗೆ ಎದ್ದುಕಾಣುತ್ತಿರಲಿಲ್ಲ. ಕಾರಣ ಆಗ ಹಳ್ಳಿಗಾಡಿನವರಿಗೆ ಬಾಯಿ ಇರಲಿಲ್ಲ. ಅವರ ವಿಚಾರ ಹೇಳುವವರೂ, ಕೇಳುವವರೂ ಇರಲಿಲ್ಲ. ಕಾಂಗ್ರೆಸ್ ಸರ್ಕಾರ ಬಂದಮೇಲೆ ಮಾತ್ರ ಸಿಟಿಗಳು ಅಭಿವೃದ್ಧಿಯಾಗಲಿಲ್ಲ, ಅನೇಕ ವರ್ಷಗಳ ಹಿಂದಿನಿಂದಲೂ ಈ ಕೆಲಸ ನಡೆಯುತ್ತ ಬಂದಿದೆ ಎಂದು ಜನಾಬ್ ಇಮಾಂರವರು ಹೇಳಿದರು. ಬೆಟರ್‌ಮೆಂಟ್ ಫೀ ಹಾಕದೆ ಸಿಟಿಗಳಲ್ಲಿ ಎಷ್ಟೋ ಅಭಿವೃದ್ಧಿ ಮಾಡಿದ್ದೇವೆಂದು ಹೇಳಿದರು, ನಿಜ. ಆದರೆ ಹಿಂದಿನ ಸರ್ಕಾರಗಳವರು ಮಂತ್ರಶಕ್ತಿಯಿಂದ ಆ ಕಾರ್ಯಗಳನ್ನು ಮಾಡುತ್ತಿರಲಿಲ್ಲ. "ಹಾವು ಹೊಡೆದು ಹದ್ದಿಗೆ ಹಾಕಿದರು" ಎಂಬಂತೆ ಹಳ್ಳಿಗಾಡಿನಲ್ಲಾದ ಉತ್ಪತ್ತಿಯನ್ನು ಪಟ್ಟಣಗಳಅಭಿವೃದ್ಧಿಗೆ ವೆಚ್ಚಮಾಡುತ್ತಿದ್ದರು. ಖುಷ್ಕಿ ಜಮೀನುಗಳಿಗೆ ಸರ್ಕಾರಿ ವೆಚ್ಚದಿಂದ ಅಥವಾ ರೈತರ ವೆಚ್ಚದಿಂದ ನೀರು ಸರಬರಾಯಿ ಆಗಿ ಅದು ತರಿ ಅಥವಾ ಬಾಗಾಯ್ತಿಗೆ ಲಾಯಕ್ಕಾದ ಮೇಲೆ ಅಂಥ ಜಮೀನಿನ ಬೆಲೆ ಹೆಚ್ಚಿತು ಎಂಬ ಕಾರಣದಿಂದ ಎಕರೆ ಗಿಷ್ಟೆಂದು ಕಾಂಟ್ರಿಬ್ಯೂಷನ್ ಹಾಕುತ್ತಿದ್ದರು ಅಥವಾ ಕಂದಾಯವನ್ನು ಹೆಚ್ಚು ಮಾಡುತ್ತಿದ್ದರು. ಮತ್ತು ಆ ರೀತಿ ಬಂದ ಹಣವನ್ನು ಪಟ್ಟಣಗಳ ಅಭಿವೃದ್ಧಿ, ಅಲಂಕಾರ, ಸೌಕರ್ಯಗಳಿಗಾಗಿ ವೆಚ್ಚಮಾಡುತ್ತಿದ್ದರು. ಆದ್ದರಿಂದ, ಬೆಟರ್‌ಮೆಂಟ್ ಫೀ ಹಾಕದೆ ಪಟ್ಟಣಗಳ ಅಭಿವೃದ್ಧಿ ಮಾಡಿದ್ದೇವೆಂದು ಅವರು ಹೇಳುವುದು ಅರ್ಥವಿಲ್ಲದ ವಾದ.

ಎರಡನೆಯದಾಗಿ, ಹಿಂದಿನ ಸರ್ಕಾರಗಳು ಅನೇಕ ಜನೋಪಯುಕ್ತ ಕಾರ್ಯಗಳನ್ನು ಮಾಡಿದ್ದರೂ ಜನರಮೇಲೆ ಹೆಚ್ಚಿಗೆ ತೆರಿಗೆ ಹಾಕಿರಲಿಲ್ಲವೆಂದೂ, ಈಗಿನ ಸರ್ಕಾರ ಏನುತಾನೆ ಸಾಧಿಸಿದೆಯೆಂದೂ, ಅವರು ಚುನಾವಣಾ ಪ್ರಚಾರ ಭಾಷಣ ಮಾಡುವಂತೆ ಮಾತಾಡಿದರು. ಅವರು ಹಿಂದೆ ಮಾನ್ಯ ಮಂತ್ರಿಗಳಾಗಿದ್ದರು. ಅವರು ಸರ್ಕಾರದಲ್ಲಿದ್ದಾಗ ಏನೇನು ಮಾಡಿದರು ಎಂದು ನಾನು ಕೇಳುತ್ತೇನೆ. ಆ ದಿವಸ ಎಷ್ಟು ಹೈಸ್ಕೂಲ್‌ಗಳು, ಮಿಡ್ಲ್ ಸ್ಕೂಲ್‌ಗಳು, ಪ್ರೈಮರಿ ಸ್ಕೂಲ್‌ಗಳು, ಕಾಲೇಜುಗಳು ಇದ್ದುವು, ಆರೋಗ್ಯ ಕೇಂದ್ರಗಳು ಇದ್ದವು, ಈಗ ಎಷ್ಟಿವೆ ಎಂಬುದನ್ನು ನೋಡಲಿ. ಆಗ ಎಷ್ಟು ಪ್ರದೇಶದಲ್ಲಿ ಡಿ.ಡಿ.ಟಿ. ಸ್ಪ್ರೇ ಮಾಡಲು ಅವರು ಪ್ರಯತ್ನಪಟ್ಟರು ಎಂಬುದನ್ನು ಹೇಳಲಿ. ಸರ್ಕಾರದವರು ಇತ್ತೀಚೆಗೆ ಪ್ರಕಟಿಸಿರುವ "ಮೈಸೂರು ಸ್ಟೇಟ್ 1951" ಎಂಬ ಸಚಿತ್ರ ಪುಸ್ತಕವನ್ನು ಜನಾಬ್ ಇಮಾಂರವರು ನೋಡುವುದಾದರೆ ಈ ಅಂಶಗಳು ಅವರಿಗೆ ಮನದಟ್ಟಾಗುವುವು. ಹಿಂದಿನ ಸರ್ಕಾರಗಳು ಮಾಡುತ್ತಿದ್ದುದಾದರೂ ಏನು ? ಎಲ್ಲಿಂದಲೋ ಹಣ ತಂದು, ಯಾರ ಅನುಕೂಲಕ್ಕೋ ಉಪಯೋಗಿಸಿ, ಕೆಲವರಿಂದ ಚಪ್ಪಾಳೆ ಹೊಡೆಸಿಕೊಳ್ಳುತ್ತಾ ಇದ್ದರು. ಈಗ ಯಾವ ಯಾವ ಪ್ರಾಂತ್ಯದಲ್ಲಿ ಎಷ್ಟೆಷ್ಟು ಹಣ ವಸೂಲಾಗುತ್ತಾ ಇದೆಯೋ ಅದನ್ನು ದಾಮಾಷಾ ಪ್ರಕಾರ ಆಯಾ ಪ್ರಾಂತ್ಯದ ಸೌಕರ್ಯದಲ್ಲಿ ಖರ್ಚು ಮಾಡಬೇಕೆಂಬ ಉದ್ದೇಶದಿಂದ ಕೆಲಸಕಾರ್ಯಗಳನ್ನು ಮಾಡಲಾಗುತ್ತಿದೆ. ಪಟ್ಟಣಗಳು ಇನ್ನೂ ಅಭಿವೃದ್ಧಿಯಾಗಬೇಕಾದರೆ ಅದಕ್ಕಾಗಿ ಪಟ್ಟಣದವರೇ ಹಣ ಕೊಡಬೇಕೆಂಬ ದೃಷ್ಟಿಯಿಂದ ಈ ಬೆಟರ್‌ಮೆಂಟ್ ಫೀ ಹಾಕಬೇಕಾಗಿದೆಯೇ ಹೊರತು ಇದೇನೂ ಹೊಸತತ್ವವಲ್ಲ. ಸ್ಲಮ್ ಪ್ರದೇಶದಲ್ಲಿ ಬಡವರು ಇದ್ದಾರೆ, ಅದನ್ನು ಉತ್ತಮಪಡಿಸುವುದಕ್ಕೆ ಫೀ ಹಾಕುವುದು ಸರಿಯೇ ಎಂದು ಪ್ರಶ್ನಿಸಿದ್ದಾರೆ. ಬರೀ ಸ್ಲಮ್ ಪ್ರದೇಶವನ್ನು ಉತ್ತಮಪಡಿಸುವುದಕ್ಕೆ ಮಾತ್ರವಲ್ಲ, ಸಂಚಾರ ಸೌಕರ್ಯ ಮತ್ತು ಇತರ ಸೌಕರ್ಯಗಳನ್ನೂ ಒದಗಿಸಲು ಆರೀತಿ ಮಾಡಲೇಬೇಕು. ಉದಾಹರಣೆಗೆ ಮೈಸೂರು ಸಿಟಿಯಲ್ಲಿ ಹೊಸದಾಗಿ ಸ್ಟ್ಯಾಚ್ಯು ಸ್ಕ್ವೇರ್ ಮಾಡುತ್ತಾ ಇದ್ದಾರೆ. ಅಲ್ಲಿಂದ ಪಶ್ಚಿಮಕಡೆಗೆ ಇಲವಾಲ ರಸ್ತೆಗೆ ಪ್ಯಾರಲಲ್ ಆಗಿ ಇನ್ನೊಂದು ರಸ್ತೆ ಮಾಡಬೇಕೆಂದಿದ್ದಾರೆ. ಪಟ್ಟಣದ ಅಭಿವೃದ್ಧಿಯಾಗಬೇಕಾದರೆ ರಸ್ತೆಗಳನ್ನು ಮಾಡಬೇಕಾಗುತ್ತದೆ. ಹೀಗೆಯೇ ಬೆಂಗಳೂರಿನಲ್ಲಿ ಕೆಂಪೇಗೌಡ ರಸ್ತೆಯಿಂದ ಅರ್ಕಾಟ್ ಶ್ರೀನಿವಾಸಾಚಾರ್ ರಸ್ತೆಗೆ ಸೇರುವಂತೆ ಒಂದು ರಸ್ತೆ ಹಾಕಬೇಕೆಂದಿದೆ. ಸ್ಲಮ್ ಪ್ರದೇಶ ಎಂದು ಹೇಳತಕ್ಕವರು ಬೆಂಗಳೂರಿನಲ್ಲಿ ಓಡಾಡುವಾಗ ಆ ಗಲ್ಲಿಗಳಲ್ಲೇ ತಿರುಗಾಡಿದ್ದಾರೆ ಎಂದು ಹೇಳಬಲ್ಲೆ. ಯಾವ ಗಲ್ಲಿಯಲ್ಲಿ ಹೋದರೂ ಮೂರು

ನಾಲ್ಕು ಅಂತಸ್ತಿನ ಮನೆಗಳು ಇವೆ. ಆದ್ದರಿಂದ ಅಲ್ಲಿ ಬಡವರು ಮಾತ್ರವೇ ಅಲ್ಲ, ಶ್ರೀಮಂತರೂ ಮತ್ತು ಬ್ಲಾಕ್ ಮಾರ್ಕೆಟ್ ವ್ಯಾಪಾರಿಗಳೂ ಆ ಗಲ್ಲಿಯಲ್ಲೇ ಇದ್ದಾರೆ. ಜನಾಬ್ ಇಮಾಂ ಸಾಹೇಬರಿಗೆ ಅದು ಗೊತ್ತಿಲ್ಲದೇ ಇಲ್ಲ. ಆದ್ದರಿಂದ ರಸ್ತೆಗಳನ್ನು ಅಗಲಮಾಡಿದರೆ, ದೀಪ ಹಾಕಿದರೆ, ಚೊಕ್ಕಮಾಡಿದರೆ, ಅದಕ್ಕೆ ತಗಲತಕ್ಕ ಖರ್ಚು ಬಡವರ ಮೇಲೆ ಬೀಳುತ್ತದೆ ಎಂಬುದು ಸರಿಯಲ್ಲ. ಬೆಂಗಳೂರಿನಲ್ಲಿ ಸಿಟಿ ಮಾರ್ಕೆಟ್‌ನಿಂದ ಟೌನ್‌ಹಾಲ್‌ಗೆ ಹೋಗುವಕಡೆ ಸಿಲ್ವರ್ ಜ್ಯೂಬಿಲಿ ಪಾರ್ಕ್ ರಸ್ತೆ ಇದೆ. ಮೊದಲು ಅಲ್ಲಿ 1,200 ರೂಪಾಯಿಗೆ ಸೈಟು ಹರಾಜಿನಲ್ಲಿ ತೆಗೆದುಕೊಂಡು ಈಗ 27,000 ರೂಪಾಯಿಗಳವರೆಗೂ ಮಾರಿದವರು ಇದ್ದಾರೆ. ಕಾರಣವೇನೆಂದರೆ, ಮೊದಲು ಈ ರಸ್ತೆ ಆಗುವುದಕ್ಕೆ ಮುಂಚೆ ದೊಡ್ಡ ಚರಂಡಿ ಇದ್ದು ಅದನ್ನು ಯಾರೂ ಕೇಳುವವರೇ ಇರಲಿಲ್ಲ. ಸರ್ ಮಿರ್ಜಾ ಸಾಹೇಬರ ಕಾಲದಲ್ಲಿ ಕೆಲವರು 8-10-12 ಸೈಟುಗಳನ್ನು ತೆಗೆದುಕೊಂಡರು. ಈಗ ಅದನ್ನೇ 27-28 ಸಾವಿರ ರೂಪಾಯಿಗಳಿಗೆ ಮಾರಿರುವಂಥ ಮಹನೀಯರು ಈ ಸಭೆಯಲ್ಲೂ ಇದ್ದಾರೆ. ಹೀಗೆ ಏನಾದರೂ ಅಭಿವೃದ್ಧಿ ಕಾರ್ಯ ನಡೆಸಿದರೆ ಅದರ ಅಕ್ಕಪಕ್ಕದ ಸ್ಥಳಗಳಿಗೆ ಬೆಲೆ ತಾನಾಗಿತಾನೇ ಹೆಚ್ಚುತ್ತದೆ. ಬೆಲೆ ಹೆಚ್ಚಾದಾಗ, ಹೆಚ್ಚಾಯಿತು ಎಂದು ಗೊತ್ತಾದಾಗ, 10ರಷ್ಟು 20ರಷ್ಟು ಹೆಚ್ಚಾದರೆ ಅದರಲ್ಲಿ ಮೂರನೆಯ ಒಂದು ಭಾಗ ಕೊಡತಕ್ಕ ಶಕ್ತಿ ಇರುವವರು ಕೊಡಿ ಎನ್ನುವುದೇ ಈ ಮಸೂದೆಯ ಆಶಯ. ಈಗ ಒಂದು ಮನೆಗೆ 20 ರೂಪಾಯಿ ಮನೆಬಾಡಿಗೆ ಇದ್ದರೆ, ಎಲ್ಲಾ ಸೌಕರ್ಯಗಳನ್ನೂ ಒದಗಿಸಿದ ಪಕ್ಷದಲ್ಲಿ ಅದೇಮನೆಗೆ 70-80 ರೂಪಾಯಿ ಆಗುತ್ತದೆ. ಅಲ್ಲದೆ ಬೆಂಗಳೂರಿನಲ್ಲಿ ಆಯಾ ಸ್ಥಳದಮೇಲೂ ಸಹ ಈ ಬೆಲೆ ಅನುಸರಿಸಿರುತ್ತದೆ. ಹೀಗೆ ಒಂದು ಪ್ರದೇಶದ ಆಸ್ತಿ ಬೆಲೆ ಹೆಚ್ಚಿದಾಗ ಒಟ್ಟಿಗೆ ಕೊಡಲಾಗದಿದ್ದರೆ ಕಂತು ಪ್ರಕಾರ ಕೊಡಿ, ಅದೂ ಇಲ್ಲದಿದ್ದರೆ ಆ ಮೊಬಲಗಿನ ಮೇಲೆ ಶೇಕಡ 4ರಂತೆ ಬಡ್ಡಿಯನ್ನಾದರೂ ಕೊಡಿ ಎಂದು ಹೇಳುತ್ತಾರೆ. ಹೆಚ್ಚಿಗೆ ಕೊಡತಕ್ಕ ಶಕ್ತಿ ಬಂದ ಮೇಲೆ, ಆರೀತಿ ಕೊಡಬೇಕೆಂದು ನಿರ್ಧಾರವಾದ ಮೇಲೆ ತಕರಾರು ಏನಾದರೂ ಇದ್ದರೆ, ಅದು ಕೋರ್ಟಿನಲ್ಲಿ ವ್ಯವಹಾರ ನಡೆದು, ಕೊಡತಕ್ಕ ಶಕ್ತಿ ಇದೆ, ಆದಾಯ ಬರುತ್ತದೆ ಎಂದು ತೀರ್ಮಾನವಾಗಿ ಫೈಸಲಾದ ಮೇಲೆ ಕೊಡಬಹುದು. ನಿಮ್ಮ ಊರಿನ ಪಂಚಾಯಿತಿ, ಮುನಿಸಿಪಾಲಟಿ ಅಥವಾ ಟ್ರಸ್ಟ್ ಬೋರ್ಡಿನವರು ಹಣ ಖರ್ಚು ಮಾಡಿ ಸ್ಲಮ್ ಪ್ರದೇಶವನ್ನು ಬಡಾವಣೆ ಮಾಡಿದರೆ, ಅದನ್ನು ಹಣ ಇಲ್ಲದೆ ಬುಡುಬುಡಿಕೆ ಆಡಿಸಿ, ಮ್ಯಾಜಿಕ್ ವಾಂಡ್‌ನಿಂದ ಅಭಿವೃದ್ಧಿ ಮಾಡಿದೆವು ಎಂದು ಅವರು ಹೇಳಿದರೆ ಅದು ಅಸಂಬದ್ಧವಾಗಿ ಕಾಣುತ್ತದೆ. ಅದೇರೀತಿ ಈ ಮಸೂದೆಯ ಮೇಲೆ ಬೆಂಗಳೂರು ಟ್ರಸ್ಟ್ ಬೋರ್ಡನ್ನು ವಜಾ ಮಾಡಿ ಎಂದು ಶ್ರೀ ಶ್ರೀಕಂಠೇಶ್ವರ್‌ರವರು ವಾದಿಸುವುದು "ಕನ್ನಂಬಾಡಿಯಲ್ಲ ಕಂಬಳಿ ಕಿತ್ತುಕೊಂಡರೆ ಬಲ್ಲಮುರಿ ಹತ್ತಿರ ಹಲ್ಲು ಮುಡಿಕಚ್ಚಿದ" ಎಂಬಂತೆ ಅಸಂಬದ್ಧವಾಗಿದೆ. ಕಾರ್ಪೊರೇಷನ್ನಿಗೂ ಟ್ರಸ್ಟ್ ಬೋರ್ಡಿಗೂ ಭಿನ್ನಾಭಿಪ್ರಾಯವಿದ್ದ ಮಾತ್ರಕ್ಕೆ ಟ್ರಸ್ಟ್ ಬೋರ್ಡ್ ವಜಾಮಾಡಿ ಎನ್ನುವುದು ಅಸಂಬದ್ಧ ವಾದ. ನಾನು ಬಹಳವಾಗಿ ಇದನ್ನು ಏಕೆ ಹೇಳುತ್ತೇನೆ ಎಂದರೆ, 2-3 ತಿಂಗಳಿನಲ್ಲಿ ಚುನಾವಣೆ ನಡೆಯುತ್ತದೆ. ಕಾಂಗ್ರೆಸ್ ಸರ್ಕಾರ ಯಾವುದನ್ನೂ ಮಾಡದೇ ಸುಮ್ಮನೆ ಇಲ್ಲ. ಇತ್ತೀಚೆಗೆ ಸರ್ಕಾರದವರು ಪ್ರಕಟಿಸಿರುವ Mysore State 1951 ಎಂಬ ಚಿತ್ರಪಠಗಳನ್ನೊಳಗೊಂಡ ಒಂದು ಪುಸ್ತಕ ಇದೆ. ಅದನ್ನು ಓದಿದರೆ ಈಗಿನ ಸರ್ಕಾರ ಏನೇನು ಸಾಧಿಸಿದೆ, ಎಷ್ಟು ಹೆಚ್ಚಿನಮಟ್ಟದಲ್ಲಿ ಜನೋಪಯುಕ್ತ ಕಾರ್ಯ ಮಾಡಿದೆ ಎಂಬುದು ಮನದಟ್ಟಾಗುತ್ತದೆ. ಆದರೆ ಯಾರಾದರೂ ವಾದಮಾಡಿ ಒಪ್ಪಿಕೊಳ್ಳುವುದಕ್ಕೆ ಸಿದ್ಧವಾಗಿದ್ದರೆ ಅಂಥವರನ್ನು ಒಪ್ಪಿಸಲು ಸಾಧ್ಯ. ಏನೇ ಹೇಳಲಿ ಒಪ್ಪಿಕೊಳ್ಳುವುದಿಲ್ಲ ಎಂದು ಹೇಳುವವರಿಗೆ ಎಷ್ಟು ಚಿತ್ರಪಠಗಳಾಗಲೀ, ವಾದ ಆಗಲೀ, ಭಾಷಣ ಆಗಲೀ ಪ್ರಯೋಜನವಿಲ್ಲ ಎಂದು ಅನುಭವದಿಂದ ನನಗೆ ಅನ್ನಿಸುತ್ತದೆ. ಇದು "ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು" ಎಂದು ಹೇಳುವಂತೆ ಆಗುತ್ತದೆ. ತತ್ವಶಃ ನೋಡಿದರೆ ಎಲ್ಲ ಅಂಶಗಳೂ ತೀರ್ಮಾನವಾದ ಮೇಲೆ ಶಕ್ತಿವಂತರು ಮೂರನೆಯ ಒಂದು ಭಾಗ ಕೊಡಿ ಎಂದರೆ ಇಷ್ಟು ವಿರೋಧ ವ್ಯಕ್ತಪಡಿಸಿರುವುದು ಆಶ್ಚರ್ಯವಾಗಿದೆ! ಇದರವಾದವನ್ನು ಸರ್ವಥಾ ಒಪ್ಪುವುದಕ್ಕಾಗುವುದಿಲ್ಲ. ಆದ್ದರಿಂದ ಈ ಮಸೂದೆಯನ್ನು ಎಲ್ಲರೂ ಅಂಗೀಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

*ಶ್ರೀ ಎಲ್ ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—ಅಧ್ಯಕ್ಷರೇ, ಮೊದಲನೆಯದಾಗಿ ಈ ಸಭೆಗೆ ಹೊಸದಾಗಿ ಚುನಾಯಿಸಲ್ಪಟ್ಟು ಈ ದಿವಸ ಈ ಸಭೆಯಲ್ಲಿ ಒಂದು ಸ್ಥಾನವನ್ನು ಅಲಂಕರಿಸಿರತಕ್ಕ ನನ್ನ ಸ್ನೇಹಿತರು ಮತ್ತು ಮಾನ್ಯ ಸದಸ್ಯರು ಆದ ಶ್ರೀ ಶ್ರೀಕಂಠೇಶ್ವರ್‌ರವರನ್ನು ಅಭಿನಂದಿಸುವುದು ಮತ್ತು ಸಭೆಗೆ ಸ್ವಾಗತಿಸುವುದು ನನ್ನ ಕರ್ತವ್ಯ ಎಂದು ಹೇಳಿ ನಾನು ಅವರನ್ನು ಸ್ವಾಗತಿಸುತ್ತೇನೆ. ಈ ಸಭೆಯ ಮುಂದೆ ಬರತಕ್ಕ ವಿಷಯಗಳ ಮೇಲೆ ಅವರು ತಮ್ಮ ಅಮೂಲ್ಯವಾದ ಸಲಹೆಗಳನ್ನು ಕೊಡುತ್ತಾರೆಂದು ನಾನು ನಂಬಿದ್ದೇನೆ.

ಇನ್ನು ಈ ಸಭೆಯ ಮುಂದೆ ಇರತಕ್ಕ ಈ ಮಸೂದಾ ಕಾನೂನಿನ ಮೇಲೆ ಒಂದು ವಿಷಯ ಹೇಳಬೇಕಾಗಿದೆ. ಬೆಟರ್‌ಮೆಂಟ್ ಫೀ ಎಂಬ ಯಾವ ಒಂದು ತೆರಿಗೆಯನ್ನು ವಿಧಿಸಬೇಕೆಂಬ ಅವಕಾಶ ಇದೆಯೋ ಅದರ ವಿಚಾರದಲ್ಲಿ ಒಂದು ಅಂಶ ಹೇಳಬೇಕಾಗಿದೆ. ಒಂದು ದೃಷ್ಟಿಯಿಂದ ನೋಡಿದರೆ ಇದು ಬಹಳ ಅನ್ಯಾಯ. ಇಂಥಾದ್ದು ಒಂದು ಸಮಸ್ಯೆ. ನಮ್ಮ ಶಿವಮೊಗ್ಗಾ ಡಿಸ್ಟ್ರಿಕ್ಟ್‌ನಲ್ಲಿ ಸುಮಾರು 4-6 ವರ್ಷಗಳ ಹಿಂದೆ ಬಂದಿತ್ತು. ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಹೊಳೇಹೊನ್ನೂರಿನ ಹತ್ತಿರ ಹರಿಯತಕ್ಕ ಭದ್ರಾನದಿಗೆ ಸೇತುವೆ ಕಟ್ಟಿಸುವ ಸಂದರ್ಭದಲ್ಲಿ ಆಗ ಡಿಸ್ಟ್ರಿಕ್ಟ್ ಬೋರ್ಡಿನ ಸದಸ್ಯರು ಕೆಲವರು ಭದ್ರಾ ಸೇತುವೆಗೆ ಖರ್ಚಾಗತಕ್ಕ ಮೊಬಲಗು ಆ ಪ್ರಾಂತ್ಯದಲ್ಲಿ ವಾಸಮಾಡತಕ್ಕವರಿಂದ ವಸೂಲಾಗಬೇಕೆಂದು ಅಭಿಪ್ರಾಯಪಟ್ಟರು. ಹೊಳೇಹೊನ್ನೂರು ಹೋಬಳಿ ಗ್ರಾಮಗಳಿಗೆ ಸೌಕರ್ಯ ಒದಗಿಸಿ ಕೊಡುವುದಕ್ಕಾಗಿ ಅವರ ಮೇಲೆ ಒಂದು ಸ್ಪೆಷಲ್ ಸೆಸ್ ಹಾಕಿ ಆ ಕಾರ್ಯ ನಿರ್ವಹಿಸಬೇಕೆಂದು ಇತ್ತು. ಹಾಗೆ ಸ್ಪೆಷಲ್ ಸೆಸ್ ಕೊಡಬೇಕಾದರೆ ಅದನ್ನು ಡಿಸ್ಟ್ರಿಕ್ಟ್‌ನಲ್ಲಿರತಕ್ಕ ಎಲ್ಲಾ ರೈತರ ಮೇಲೂ ಹಾಕುವುದು ಸರಿಯಲ್ಲವೆಂದು ಹೇಳಿ ಆ ಎರಡು ಹೋಬಳಿಗಳವರ ಮೇಲೆ ಮಾತ್ರ ಹಾಕಬೇಕೆಂಬ ವಿಷಯ ಚರ್ಚೆಗೆ ಬಂದಾಗ ಅದು ಬಹಳ ಅನ್ಯಾಯವೆಂದು ಡಿಸ್ಟ್ರಿಕ್ಟ್ ಬೋರ್ಡಿನವರು ಆಖೈರು ತೀರ್ಮಾನಮಾಡಿದರು. ಮತ್ತು ಒಂದು ಸ್ಟೇಜ್‌ನಲ್ಲಿ ಆ ವಿಷಯ ಸರ್ಕಾರದವರ ಅವಗಾಹನೆಗೆ ಬಂದಾಗಲೂ ಕೂಡ ಆ ರೀತಿ ಮಾಡುವುದು ಅನ್ಯಾಯವೆಂದು ತೀರ್ಮಾನಿಸಿದರು. ಯಾವದೃಷ್ಟಿಯಿಂದ ಅಂಥ ತೀರ್ಮಾನವಾಯಿತು ಎಂದರೆ ಅಂಥಾ ಸೇತುವೆಗಳು, ಸಂಚಾರ ಸೌಕರ್ಯಗಳು, ಇವುಗಳ

Karnataka Legislature Library
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
Accession No. (U) 4710
Date

(ಶ್ರೀ ಎಲ್. ಸಿದ್ದಪ್ಪನವರು).

ನ್ನೆಲ್ಲಾ ಒದಗಿಸಿ ಕೊಡುವುದು ಡಿಸ್ಟ್ರಿಕ್ಟ್ ಬೋರ್ಡಿನವರ ಕರ್ತವ್ಯ. ಆದ್ದರಿಂದ ಶಿವಮೊಗ್ಗಾದಲ್ಲಿ ತುಂಗಾ ನದಿಗೂ ಹೊಳೇಹೊನ್ನೂರಿನಲ್ಲಿ ಭದ್ರಾನದಿಗೂ, ತೀರ್ಥಹಳ್ಳಿಯಲ್ಲಿ ತುಂಗಾನದಿಗೂ ಸೇತುವೆ ಕಟ್ಟಿಸಿ ಕೊಟ್ಟಿದ್ದಾರೆ. ಹೀಗೆ ಕಟ್ಟಿಸಿಕೊಟ್ಟು ಅದರ ಎಲ್ಲಾ ಖರ್ಚನ್ನೂ ಕೂಡ ಆಗಿನ ಡಿಸ್ಟ್ರಿಕ್ಟ್ ಬೋರ್ಡಿನ ಉತ್ಪತ್ತಿಯಿಂದ ಸ್ಪೆಷಲ್ ಸೆಸ್ ಹಾಕಿದರೂ ಎಲ್ಲರ ಮೇಲೂ ಹಾಕಿ ಅನುಕೂಲ ಮಾಡಿಕೊಟ್ಟರು. ಈಗ ಲಾದರೋ ಮಾನ್ಯ ಸಚಿವರು ಈ ಸೆಲೆಕ್ಟ್ ಸಮಿತಿಯ ವರದಿಯನ್ನು ಈ ಸಭೆಯ ಮುಂದೆ ಇಟ್ಟಾಗ ಮತ್ತು ಸೆಲೆಕ್ಟ್ ಸಮಿತಿ ವರದಿ ಮೇಲೆ ಚರ್ಚೆ ನಡೆಸಿದ ಅನೇಕ ಸದಸ್ಯರು ಹೇಳಿದಂತೆ ಇದರಲ್ಲಿ ಬಹಳ ಮುಖ್ಯವಾದ ಅಂಶ ಒಳಗೊಂಡಿದೆ. ಬೆಂಗಳೂರು, ಮೈಸೂರು ಪಟ್ಟಣಗಳು ಎಷ್ಟೋ ಅಭಿವೃದ್ಧಿ ಸ್ಥಿತಿಗೆ ಬಂದವೆ, ಈ ರೀತಿ ಅಭಿವೃದ್ಧಿ ಸ್ಥಿತಿಗೆ ಬರಲು ಹಿಂದಿನ ಆಡಳಿತಗಾರರು ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದ್ದಾರೆ ಎಂದು ಈಗಾಗಲೇ ಅನೇಕರು ತಿಳಿಸಿದ್ದಾರೆ.

ಈ ಹಿಂದೆ ಮಾತನಾಡಿದ ಮಾನ್ಯ ಸದಸ್ಯರೊಬ್ಬರು ಹೇಳಿದರು, ಸಿಲ್ವರ್‌ಜ್ಯೂಬಲಿ ಪಾರ್ಕ್‌ರಸ್ತೆಯಲ್ಲಿ ಸೈಟ್‌ಗಳನ್ನು ಒಂದುಸಾವಿರ ಎರಡುಸಾವಿರ ರೂಪಾಯಿಗಳಿಗೆ ತೆಗೆದುಕೊಂಡಿದ್ದವರು ಸರ್ಕಾರದವರು ಅಥವಾ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನವರು ಅಥವಾ ಕಾರ್ಪೊರೇಷನ್ನಿನವರು ಅಥವಾ ಹಿಂದಿನ ಮುನಿಸಿಪಾಲಿಟಿಗಳವರು ಈ ಪ್ರದೇಶವನ್ನು ಉತ್ತಮ ಪಡಿಸಿದುದರ ಫಲವಾಗಿ 22-23 ಸಾವಿರ ರೂಪಾಯಿಗಳಿಗೆ ಸೈಟುಗಳನ್ನುಮಾರಿ ಲಾಭಹೊಂದಿದ್ದಾರೆ ಎಂದು. ಈಗ ನಾವು ನೋಡುವುದಾದರೆ, ಚಾಮರಾಜಪೇಟೆ, ಮಲ್ಲೇಶ್ವರ, ಬಸವನಗುಡಿ, ಗಾಂಧಿನಗರ—ಯಾವುದನ್ನು ತೆಗೆದುಕೊಳ್ಳಲಿ ಅವುಗಳ ಅಭಿವೃದ್ಧಿಗಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದೆ. ಇಷ್ಟಾದರೂ ಇಲ್ಲಿನ ನಿವಾಸಿಗಳಾರೂ ಬೆಟರ್‌ಮೆಂಟ್ ಫೀ ಕೊಟ್ಟಿಲ್ಲ. ಹೀಗಿರುವಾಗ ಇನ್ನು ಉಳಿದಿರುವ ಕೆಲವು ಸ್ಲಮ್ ಪ್ರದೇಶಗಳನ್ನು ಉತ್ತಮಪಡಿಸುವುದಕ್ಕೋಸ್ಕರವೆಂದು ಬೆಟರ್‌ಮೆಂಟ್ ಫೀ ಕೇಳುತ್ತಿದ್ದೀರಿ! ಅದರಲ್ಲೂ ಅಲ್ಲಿ ಹೆಚ್ಚಾಗಿ ಬಡವರೇ ವಾಸ ಮಾಡುತ್ತಿದ್ದಾರೆ. ಒಳ್ಳೆಯ ದೊಡ್ಡ ದೊಡ್ಡ ಮನುಷ್ಯರು ವಾಸ ಮಾಡುತ್ತಿರುವ ಪ್ರದೇಶಗಳನ್ನೆಲ್ಲಾ ಸರ್ಕಾರದವರೇ, ತಮ್ಮ ಖರ್ಚಿನಲ್ಲಿ ಸರಿಪಡಿಸಿಕೊಟ್ಟಿದ್ದಾರೆ. ಲಕ್ಷಾಧೀಶರು ಕೋಟ್ಯಾಧೀಶರು ಇರುವಂಥ ಪ್ರದೇಶಗಳಿಗೆ ಏನೂ ತೆಗೆದುಕೊಳ್ಳದೆ ಬಡವರು ವಾಸ ಮಾಡುತ್ತಿರುವ ಸ್ಲಮ್ ಪ್ರದೇಶಗಳನ್ನು ಉತ್ತಮ ಪಡಿಸುವುದಕ್ಕೆಂದು ಈಗ ತೆರಿಗೆ ಕೇಳುತ್ತಿದ್ದೀರಿ !!

AN HON'BLE MEMBER.—It is on the property; not on the persons.

Sri L. SIDDAPPA.—If there are rich men, there is a way to tax them. I would suggest it and if it is acceptable to you, you may adopt it.

The Hon'ble Sri H. C. DASAPPA.—You are a bit late. Wisdom must have dawned a bit earlier when the Bill was taken into consideration last time.

Sri L. SIDDAPPA.—For various reasons I need not have stated all this when the Bill was taken into consideration before referring it to Select Committee. I am perfectly in order even now to speak on it. Many provisions went for scrutiny before the Select Committee and the Select Committee submitted their report and when that report has come up now for consideration, there is absolutely nothing wrong to speak on the provisions.

Mr. SPEAKER.—What the Hon'ble Minister meant was that there is no amendment by you.

Sri L. SIDDAPPA.—This is a stage at which we are considering the Select Committee report and there must be a sort of general discussion. At a later stage it is likely that I may oppose the entire Bill for which purpose I need not send in any amendment.

ಆದ್ದರಿಂದ ನಾನು ಹೇಳುತ್ತಿರುವುದೇನೆಂದರೆ, ಈಗ ತಾವು ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ಬೆಂಗಳೂರಿನಲ್ಲಿರತಕ್ಕ ಪ್ರದೇಶಗಳಲ್ಲಿ ಎಲ್ಲಿ ಅರಮನೆಗಳಂಥ ಸೌಧಗಳಿವೆಯೋ ಅವುಗಳನ್ನು ಬೆಟರ್‌ಮೆಂಟ್ ಫೀ ಏನೂ ಕೇಳದೆ ಮಾಡಿ ಕೊಟ್ಟಿದ್ದೀರಿ. ಇನ್ನುಳಿದಿರುವುದು ಬಡವರುಗಳಿರತಕ್ಕ ಪ್ರದೇಶಗಳು. ಅವುಗಳಿಂದೀಗ ಫೀ ಕೇಳುವುದೆಂದರೆ ಬಹಳ ಅನ್ಯಾಯ!!

ಇನ್ನೊಂದು ವಿಷಯ ನಾವು ಗಮನಕ್ಕೆ ತೆಗೆದುಕೊಳ್ಳಬೇಕು. ಕಾರ್ಪೊರೇಷನ್ನಿಗೇ ಆಗಲಿ, ಅಥವಾ ಇದರ ಹಿಂದೆ ಇದ್ದ ಮುನಿಸಿಪಾಲಿಟಿಗೇ ಆಗಲಿ, ಕೆಲವು obligatory duties ಗಳಿವೆಯೆಂದು ವಿಧಾಯಕವಾಗಿದೆ. ಏನೆಂದರೆ ತಮ್ಮ ಅಧೀನದಲ್ಲಿರುವ ಪ್ರದೇಶಗಳನ್ನು ಚೊಕ್ಕಟ ಮಾಡುವುದು, ಬೇಕಾದ ಅನುಕೂಲತೆಗಳನ್ನು ಕಲ್ಪಿಸಿಕೊಡುವುದು—ಮುಂತಾದುವು ಅದರ ಕರ್ತವ್ಯ. ಹೀಗಿರುವಾಗ ಕಾರ್ಪೊರೇಷನ್ನಿನ ದುಡ್ಡಿನಿಂದ ಇವುಗಳನ್ನು ಮಾಡಬೇಕೇ ಹೊರತು ಅದು ಬಿಟ್ಟು ಇಂದು ಒಂದು ಗಲ್ಲಿ ಅಭಿವೃದ್ಧಿ ಮಾಡುತ್ತೇವೆಂದು ಅಲ್ಲಿನವರ ಮೇಲೆ ಒಂದು ಬೆಟರ್‌ಮೆಂಟ್ ಫೀ ಹಾಕುವುದು, ನಾಳೆ ಮತ್ತೊಂದು ಅಭಿವೃದ್ಧಿ ಕಾರ್ಯಕ್ಕೆಂದು ಇನ್ನೊಂದು ತೆರಿಗೆ ಕೇಳುವುದು ಸರಿಯಲ್ಲ. ಈ ಸಂಬಂಧದಲ್ಲಿ ಚರ್ಚೆ ನಡೆಯುತ್ತಿರುವಾಗ ಒಂದು ವಿಷಯ ಹೆಚ್ಚಾಗಿ ಪ್ರಾಮುಖ್ಯತೆಗೆ ಬಂತು. ಹಳ್ಳಿಗಳ ಕಡೆ ಯಾವುದಾದರೂ ನೀರಾವರಿ ಸೌಕರ್ಯ ಮಾಡಿ ಕೊಟ್ಟರೆ ಅದಕ್ಕೂ ಒಂದು ರೀತಿಯಲ್ಲಿ ಬೆಟರ್‌ಮೆಂಟ್ ಫೀ—ನೀವದನ್ನು ಇರಿಗೇಷನ್ ಆಕ್ಟ್‌ನಲ್ಲಿ ಕಂಟ್ರಿಬ್ಯೂಷನ್ ಎಂದು ಕರೆದಿದ್ದೀರಿ—ಹಾಕಿದ್ದೀರಿ; ಅದರಂತೆ ಇದಕ್ಕೂ ಹಾಕಿದೆಯೆಂದು ಒಂದು ಉದಾಹರಣೆ ಕೊಟ್ಟರು. ಆದರೆ ಆ analogy ಇದಕ್ಕೆ ಸರಿಯಾಗುವುದಿಲ್ಲ. ಡಿಸ್ಟ್ರಿಕ್ಟ್ ಬೋರ್ಡ್, ಕಾರ್ಪೊರೇಷನ್, ಮುನಿಸಿಪಾಲಿಟಿಗಳು—ಇವೆಲ್ಲಾ statutory body ಗಳು. ಅವಕ್ಕೆ optional duties ಮತ್ತು obligatory duties ಎಂದಿದೆ. ಆ ಬಗ್ಗೆ ಅವೇ ದುಡ್ಡು ಒದಗಿಸಿಕೊಳ್ಳಬೇಕು. ಇದಕ್ಕೆ ಮಾನ್ಯ ಸದಸ್ಯರೊಬ್ಬರು, ದುಡ್ಡು ಎಲ್ಲಿಂದ ಬರುತ್ತದೆ, ಅದಕ್ಕಾಗಿಯೇ ಅಲ್ಲಿನ ಕಟ್ಟಡಗಳ ಮೇಲೆ ತೆರಿಗೆ ಹಾಕಬೇಕು ಎಂದು ವಾದ ಮಾಡಿದರು. ಅದಕ್ಕೆ ಬೇರೆ ರೀತಿಯಿದೆ. ಕಾರ್ಪೊರೇಷನ್ನಿನವರು

ತಾವು ಹಾಕಿರುವ ತೆರಿಗೆಗಳನ್ನು ಹೆಚ್ಚು ಕಡಿಮೆ ಮಾಡುವುದಕ್ಕೆ ಅವಕಾಶವಿದ್ದೇ ಇದೆ. ಆ ಪ್ರಕಾರ ಯಾವ ಪ್ರದೇಶವು ಕಾರ್ಪೊರೇಷನ್ನಿನ ಸೌಕರ್ಯಗಳನ್ನುಪಯೋಗಿಸಿಕೊಂಡು ಹೆಚ್ಚಿಗೆ ಬೆಲೆಬಾಳುವ ಸ್ಥಿತಿಗೆ ಬಂದಿರುತ್ತವೆಯೋ ಎಲ್ಲಿ ಒಂದು ನೂರು ರೂಪಾಯಿನ ಬೆಲೆಯಿದ್ದ ಕಟ್ಟಡಗಳು 500 ರೂಪಾಯಿ ಬೆಲೆ ಬಾಳುವಂತಾಗಿವೆಯೋ ಅಂಥಾ ಕಡೆ ನೂರು ರೂಪಾಯಿ ತೆರಿಗೆ ಹಾಕಿದ್ದರೆ ಅದನ್ನು 500 ರೂಪಾಯಿಗೆ ಹೆಚ್ಚಿಸಬಹುದು. ಈ ರೀತಿ ತಮ್ಮ ಹಣ ಕಾಸಿನ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಬಹುದು. ಇಲ್ಲದಿದ್ದರೆ, ಬಡಜನರ ಮೇಲೆ ಕಮ್ಮಿ ತೆರಿಗೆ ಬೀಳುವಂತೆ ಮತ್ತು ಐಶ್ವರ್ಯವಂತರ ಮೇಲೆ ಹೆಚ್ಚಿಗೆ ತೆರಿಗೆ ಬೀಳುವಂತೆ ಒಂದು graduated scaleನಲ್ಲಿ ತೆರಿಗೆ ಹಾಕಲಿ. ಇವೆಲ್ಲಾ ಬಿಟ್ಟು ಇದು ವರೆಗೂ ಊಟ ಮಾಡಿಕೊಂಡವರು ಊಟ ಮಾಡಿಕೊಂಡು ಹೋದರು, ಇನ್ನು ಈಗ ಕೈಗೆ ಸಿಕ್ಕಿರುವ ಬಡವರ ಮೇಲೆಯೇ ಹಾಕುತ್ತೇವೆ ಎಂದು ಹೇಳುವ ತತ್ವ ಒಪ್ಪತಕ್ಕದ್ದಲ್ಲ. ಈ ದೃಷ್ಟಿಯಿಂದ ನಾನು ಈ ಮಸೂದೆಯನ್ನು ವಿರೋಧಿಸುತ್ತೇನೆ.

The Hon'ble Sri H. C. DASAPPA.—Mr. Speaker, Sir, I must frankly confess that when I placed this motion before this House for consideration, I never expected that there would be so much of a very interesting discussion. I thought that it would have a smooth, easy and quick sailing; not that I do not welcome discussion. It has enabled the House to focus its attention on one of the most important activities of the State. The whole question is, are we going to allow our towns and cities just to grow up in an indiscriminate manner or are we going to have any kind of planning? If you are earnest and serious about that planning, do you think your resources are quite ample and equal to the task? Whatever the Hon'ble friends now in the Opposition might have been saying in the days gone by when power had not been passed on to the people, I must say, that they must take a more responsible view of things to-day when the power is in the hands of the people and it should not be a case of trying to oppose a measure for the sake of mere opposition.

Sri L. SIDDAPPA.—Certainly not. If these valuable and reasonable arguments are not convincing to you, you may go on in your own way.

The Hon'ble Sri H. C. DASAPPA.—When I hear friends like Janab Imam making statements, basing them on what are known as presumptions—to use his own expression—I must say with all humility, I want to point out, that it is not a very valuable contribution to the debate in this House. And therefore, I would beg of the Members to acquaint themselves with the facts. One of the observations made by my good old friend Janab Hanief; which was reinforced by the Leader of the Opposition Janab Imam, was that the Trust Board was making a lot of money, by these schemes, by practically taking the lands for a song and selling then at exorbitant prices. There is nothing more fantastic than this kind of idea about the work of the Trust Board. Just now, my friends have placed before the House how crores of rupees have been spent to beautify the two Cities, more particularly the City where we have met to-day. I am not going to say whether that was justified or not. Not by any means. Having been here for over a quarter of a century, in this City myself, I would be the last person to simply decry the attempts of the people to beautify the two cities. That is far from my mind; and therefore I must say that there is no such idea at the back of this Government of trying to exploit the situation by having recourse to these methods. If anything, the Government have had to pour forth from their coffers so much of money to give these amenties. I do not go into details, because this is hardly the time and opportunity, as the observations on the opposite side were in the nature of vague allegations.

Janab Imam paid a handsome tribute to the Corporation as he was a Municipal Councillor. In equal humility I must say I was also a member all along of the City Municipal Council, Mysore, for a pretty long time, perhaps longer than he was. So I have some experience of the Municipal Council, not without it. Despite all this experience, I have always held the view that it is always a sounder proposition and a more healthy and equitable one for the Cities as far as possible to find funds for their own development and improvement. I do not think that any responsible citizen of either Bangalore City or Mysore City will expect the poor raiyats to find funds for

(THE HON'BLE SRI H. C. DASAPPA).

the beautification of the City. It is not fair. There was a time when the Governments of the day could have recourse to that kind of job. But let me warn my friends that such a thing can no longer go on. It is impossible.

Sri L. SIDDAPPA.—It is not our point either that the taxes collected from the rural folk should be expended here for the improvement of the Cities.

Sri K. R. SREEKANTESWAR.—We would never encourage it.

The Hon'ble Sri H. C. DASAPPA.—I am not going to yield. The sooner we all realise that sovereign fact, the better it is. Now having accepted that point—and I am glad there has been an assurance from the opposite side that there is no such idea of trying to divert funds which we rase among the rural people to these urban areas,—if that is accepted as a policy, then how are you going to find funds for the development of these Cities? Is it possible for the Municipal Council alone or for the Corporation alone to do all the job that we want them to do? Now let me at once disabuse the minds of Hon'ble Members by saying that there is no idea at the back of the Government to trespass into the domain of either the Corporation of Bangalore or the City Municipal Council, Mysore. Nothing of the sort. If you have understood the tempo of the corporators of Bangalore, it is just the reverse of what the Hon'ble new Member Sri K. R. Sreekanteswar has to day placed before the House. As I have already told you, the Mayor and two chosen representatives of the Corporation of Bangalore were with us when we considered the provisions of this Bill and they have unanimously accepted these very proposals. Now, I ask you whether you want to go by the isolated views raised by our socialist member or the unanimous opinion of these representatives of the Corporation. Do you seriously suggest to the Government that we must accept the views expressed by Sri Sreekanteswar and not respect the unanimous opinion of the chosen representatives of the Corporation? I do not think there can be two answers.

Sri L. SIDDAPPA.—Are they the views of the Corporation or of two or three Corporators who came there and had discussion? These things must have been specifically brought before the Corporation.

The Hon'ble Sri H. C. DASAPPA.—They are the views expressed by the Mayor and two Members chosen by the Corporation to represent the Corporation before the represented the Select Committee.

Sri L. SIDDAPPA.—So the Corporation have not passed any resolution!

The Hon'ble Sri H. C. DASAPPA.—No resolution, except possibly to send the Mayor and two representatives to represent the Corporation before the Select Committee to offer their considered views to the Select Committee.

Sri K. R. SREEKANTESWAR.—Definitly no resolution was expressed by the Corporation.

Janab J. MOHAMED IMAM.—Then it cannot be taken as the opinion of the Corporation.

Sri B. HUTCHE GOWDA (Tumkur District—General).—The Corporation was not given a chance to elect its representatives.

Sri L. SIDDAPPA.—The opinion of the Corporation can only be expressed by means of a resolution.

The Hon'ble Sri H. C. DASAPPA.—Interruptions are not going to improve my friend, Sri Siddappa's position (laughter).

Sri L. SIDDAPPA.—By such remarks you want to improve your position?

Janab J. MOHAMED IMAM.—I know you have got a brute majority.

The Hon'ble Sri H. C. DASAPPA.—I do not think I need answer these interruptions because my Hon'ble friend Sri H. K. Veeranna Gowdh has very effectively answered them. Janab Imam wanted to convert this into a kind of Budget discussion possibly because the various clauses were not studied by him. Possibly he did not have time to study the various clauses. So he thought the best thing was to talk in general terms on the principles

of taxation and so on (laughter in Congress benches); it is part of the game indulged in by members when they have not properly equipped themselves with the necessary knowledge. (laughter). I do not wish to go into the question as to what has been done during these four years. It is extremely unfair for the Hon'ble Leader of the Opposition to launch out any criticism as though we have done nothing during these four years. Sri H. K. Veeranna Gowdh has quoted and I can quote heaps as well. But I would simply refer Hon'ble Members in the Opposition to the latest brochure that has been brought out on behalf of the Government in the name of the Hon'ble Chief Minister. A casual study of that brochure will convince you how far off the mark Janab Imam's remarks have been.

Janab J. MOHAMED IMAM.—The Hon'ble Chief Minister promised to get us copies of that book two or three years ago.

The Hon'ble Sri H. C. DASAPPA.—Now let me answer two or three more points. There was a criticism that this proposed betterment fee is going to hit the poor very hard. This again is a fallacy which I am afraid is trotted out for the occasion because I really cannot see any basis for a presumption like that.

Sri K. R. SREEKANTESWAR.—Your own speech.

The Hon'ble Sri H. C. DASAPPA.—There is no such thing as trying to levy a kind of general tax which will hit the poor man at all. There is no such idea at all. It is merely trying to get something which he is morally bound to give. If you want to let these persons enjoy all the benefits derived for themselves, then you must show us a way of getting money for the various development works. My Hon'ble friend Sri Siddappa suggested a graduated scale of fee to suit the paying capacity of the persons concerned. Therefore it is a question of a fee. There is a certain fee prescribed for a certain purpose. It does not matter whether a poor man owns a car or even a man of moderate means owns a car. If there is a fee that he has got to pay for licensing, he has got to pay the fee. Here the whole thing is a comprehensive, composite scheme. The cost is estimated; then the likelihood of betterment fee estimated; then you have got to earn money sunk into it. I am surprised that Sri Siddappa should suggest a graduated fee. It is absolutely impossible and not feasible.

Sri L. SIDDAPPA.—It is no good misinterpreting the statement that I made. It is not a graduated fee. I have suggested that while revising the tax you so revise the tax that a man who is capable of paying a heavier tax is made to pay a heavier tax and a man who is not capable of paying a heavier tax, pays less tax.

The Hon'ble Sri H. C. DASAPPA.—You know how it will happen. We have tried sometimes to give sites for poor people at a very low cost. Narasimharaja Colony is a standing illustration of what has happened in Bangalore. You gave sites to poor people. But what happened? The next day, within a couple of hours or a little more all those sites were sold out to rich people. Therefore you cannot say merely without any kind of qualification. If you have got to do it, what happens is, it is just an occasion when the rich people try to exploit the poor by taking over the properties in the name of the poor people and getting the value trebled. There are endless ways of trying to take advantage of the position with the result that neither the Trust Board gets the money that is due nor the poor man will be helped. So I do not think that that kind of a proposition can ever be feasible.

Then there are some general remarks made that the poor men are not getting corresponding benefit by these so-called measures of taxation. In this case I must say that there has been an utter confusion on the part of some of the Hon'ble Members, not excluding the Leader of the Opposition, in not exactly understanding the difference between a tax and a fee. It was to me at any rate an utter confusion because the criticisms

(THE HON'BLE SRI H. C. DASAPPA).

that were levelled were on the basis that we are levying a kind of tax applicable to the whole people. It is never that. It is unfair, when you are trying to provide for improvement to a specific locality, to tax people outside the locality who derive no advantage or benefit. In fact that was the criticism levelled in reference to certain tax. What is the fun of having a general taxation; it will not help certain people at all altogether, while it helps only a few select people. Therefore to suggest trying to take either from the general revenues or from the revenues of the Corporation funds for improvement which is going to better the condition of people of only a certain specific locality, is wrong method of application of funds. It is a misuse of funds I should think. Therefore this measure seeks to set right that particular defect. I think I must not speak very much more. This betterment fee on which there has been so much discussion is conceived just from that angle which Sri Sreekanteswar tries to uphold. It is essentially socialistic in character. I do not think my socialistic friends have really understood what socialism is. (Laughter). One of the things which I believe they very strongly uphold and recommend is that unearned incomes should be taxed. (Sri K. R. Sreekanteswar. — But not indirect taxation). This is nothing more or nothing less than the fact that we are trying to tax this unearned income. A man does not take the slightest trouble or spend a penny and yet he derives certain advantage. I see no reason why the Trust Board which is there to improve things must not take a portion of it.

Another important question was whether we are not trespassing into the domain, as I said, of the Corporation. I may say here that it is just to supplement the work of the Corporation or of the City Municipal Council that the Trust Board undertakes this responsibility. It is not that the Trust Board is too anxious to do this; as I have said, it it just to help them and if you see the structure of the Bill you will find that the whole thing goes on in perfect harmony between the Corporation on the one hand and the Trust Board on the other. There is mutual consultation on every point and it has also provided for concurrence. It is only when the Corporation feels it difficult that the Trust Board steps in. I was just touring in North Karnataka. There are certain municipalities where the leaders working in that local body want the Government to supersede the municipality for what purpose, for the purpose of raising the rates of assessment. Because it is not possible for the representatives of the people to readily do it lest they may incur the displeasnre of the rate-payers. They do not mean the Government superseding the municipal council with a view to raise the rates. That is the position there. Here where the Corporation is unable because of its various commitments, its various fields of operation, to effect improvement and wants the Trust Board, a well-knit body with experts to do this job for them, it is then that the Trust Board generally steps in.

And I may say as regards the slums and so on, there was an idea, I think it is Sri Siddappa who said that,—where he got that information, I for my part do not understand certain—nice places like Malleswaram or Shakarapuram or Visveswarapuram have already escaped this betterment fee-Good Heavens! We have not taken up a scheme of this sort in Malleswaram, Visveswarapuram, etc. They are all new extensions.

Sri L. SIDDAPPA.—You yourself said when you moved for the consideration of the report that old Bamboo Bazaar has been improved.

The Hon'ble Sri H. C. DASAPPA.—I was referring to the work that is awaiting us now to take them up afresh; because, we had not sufficient funds to take up those jobs then, we have got to take them up now.

Sri L. SIDDAPPA.—There may be some more work taken up.

The Hon'ble Sri H. C. DASAPPA.—My Hon'ble friend has wholly missed

the mark. You quoted Malleswaram. There is no such thing as taking up an improvement scheme in Malleswaram.

Sri L. SIDDAPPA.—It does not mean that the City Improvement Trust Board had not taken up and effected any improvement works at all. I referred to places where the Trust Board has taken up improvement works.

The Hon'ble Sri H. C. DASAPPA.—I am afraid it is too late for you to make comments. I cannot clarify the position any more. I have noted down the points. . The Hon'ble Member was referring to certain extensions. Now there is no question of betterment fee in a new lay-out or new extension ; but where you have got an old area which needs an improvement and because of the improvement the properties in the neighbourhood go up in value, it is only to those places I was referring and I am afraid the instances that my Hon'ble friend referred to are quite beside the point.

Sri K.R. SREEKANTESWAR.—What about the overlapping of functions ?

The Hon'ble Sri H. C. DASAPPA.—I have already answered that there could be no overlapping of functions where the whole object is to improve the area. If the Corporation can undertake the job in their own respective spheres, good Heavens, the Trust Board will be to glad to be rid of that bother. but where the Corporation wants the Trust Board to take up any job, it will be taken up by the Trust Board. There is enough of job for the Trust Board to do and they would be glad if the Corporation does the job. But the whole trouble is, the Corporation will not have sufficient funds to initially invest on this purpose and await for a return later on. Therefore I think there is not very much point in what is stated by the Hon'ble Members who opposed certain clauses. I must say that none of them has sent any amendments. I really do not know why they did not do so. If they had really applied their minds to specific clauses of the Bill, they were capable of improvement. Since they have not sent in any amendments, it is now a question of general criticism and general opposition to the Bill as a whole and to the clauses as have emanated from the Select Committee. I am very grateful to all the friends who have supported the report and the motion for consideration. I commend the Bill for the unanimous acceptance of the House.

Mr. SPEAKER.—The question is :

"That the City of Bangalore Improvement (Amendment) Bills, 1951, as reported by the Select Committee, be taken into consideration."

The motion was adopted.

Mr. SPEAKER.—The Bill will be submitted to the House clause by clause on Thursday the 11th October 1951.

The House adjourned at Two Minutes past Five of the Clock to meet again at Twelve of the Clock on Thursday the 11th October 1951.

V-31(N51)
N52-5-
(B)4710

WD 1046—GPB—500—12-11-51

LEGISLATIVE ASSEMBLY.

SECOND DAY.

Thursday, 11th October 1951.

The Assembly met in the Crawford Hall, Mysore, at Twelve of the Clock on Thursday, 11th October 1951.

Mr. Speaker (The Hon'ble Sri V. Venkatappa) in the Chair.

QUESTIONS AND ANSWERS.

Mr. SPEAKER (The Hon'ble Sri V. Venkatappa).—Questions.

Five-year Scheme for the Development of Mysore.

Q.—32. Sri M. V. KRISHNAPPA (Kolar District—General).—

Will the Government be pleased to state :—

(*a*) whether they have drawn up a five-year scheme for the development of Mysore ;

(*b*) the estimated cost of the scheme ;

(*c*) the portion of cost that has been promised by the Central Government ?

A.—The Hon'ble Sri K. CHENGALARAYA REDDY (Chief Minister).—

(*a*) Yes.

(*b*) Rs. 36·60 crores.

(*c*) The plan assumes Central assistance of the order of Rs. 8 crores.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಈ ಯೋಜನೆ ಪೂರೈಸಿದೆಯೇ ?

ಅಧ್ಯಕ್ಷರು.—ಈ ವಿಷಯದಲ್ಲಿ ಒಂದು ದಿವಸ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ.

Therefore, the Hon'ble Members need not put any supplementary questions. We may go on to other questions.

Case against Sri D. Basavaraj Urs.

Q.—45. Sri B. N. BORANNA GOWDA (Hassan District—General).—

Will the Government be pleased to state :—

(*a*) whether it is a fact that a complaint has been filed in the Court of the Special First Class Magistrate, Saklespur, Hassan District, against Sri D. Basavaraj Urs for misbehaviour ;

(*b*) when the case was filed ;

(*c*) the number of hearings ?

A.—The Hon'ble Sri K. CHENGALARAYA REDDY (Chief Minister).—

(*a*) Yes.

(*b*) On 5th September 1950.

(*c*) 14.

ಶ್ರೀ ಬಿ. ಎನ್. ಬೋರಣ್ಣಗೌಡರು.—5ನೇ ಸೆಪ್ಟೆಂಬರ್ 1950 ರಲ್ಲಿ ಕೇಸು ಹಾಕಲಾಗಿದೆ ಎಂದು ಉತ್ತರದಲ್ಲಿ ಕೊಡಲಾಗಿದೆ. ಅಲ್ಲಿಂದ ಇಲ್ಲಿಯವರೆಗೆ 14 ಹಿಯರಿಂಗ್ ಆಗಿದೆ. ಅವರು ಒಂದು ಹಿಯರಿಂಗ್‌ಗಾದರೂ ಬಂದಿದ್ದರೆ?

*ಮಾನ್ಯ ಶ್ರೀ ಕೆ. ಚೆಂಗಲರಾಯ ರೆಡ್ಡಿಯವರು.—ನೋಟೀಸ್ ಬೇಕು.

ಶ್ರೀ ಬಿ. ಎನ್. ಬೋರಣ್ಣಗೌಡರು.—ಒಬ್ಬರಮೇಲೆ ಕ್ರಿಮಿನಲ್ ಕೇಸು ಹಾಕಿದರೆ ಮೊದಲನೆ ಹಿಯರಿಂಗ್‌ಗೆ ಬರಬೇಕೆಂಬ ನಿಯಾಮಕ ಇದೆಯೆ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅದು ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರ ನಿಯಾಮಕವಾದರೂ ಹಾಗೆ ಬರದೇ ಇರುವುದಕ್ಕೂ ಸಹ ಅವಕಾಶವಿದೆ.

* Asterisks indicate that the Speeches or other remarks have not been returned approved by the Member concerned.

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ).--- ಇವರು, ಬಸವರಾಜ್ ಅರಸ್ ಎಂಬುವರು ಯಾರು ಸ್ವಾಮಿ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಯಾರು ಎಂದರೆ ಶ್ರೀ ಬಸವರಾಜ ಅರಸ್‌ರವರು. ಮಾನ್ಯ ಸದಸ್ಯರಿಗೆ ಸಮಾಚಾರ ಏನು ಬೇಕು ಎಂಬುದನ್ನು ಖಚಿತವಾಗಿ ತಿಳಿಸಿದರೆ ಉತ್ತರ ಕೊಡಬಹುದು.

ಶ್ರೀ ಕಡಿದಾಳ್ ಮಂಜಪ್ಪನವರು.—ಅವರು ಯಾರು ಎಂಬುದನ್ನು ತಿಳಿಸಿಲ್ಲ. ಆದ್ದರಿಂದ ಅಷ್ಟೊಂದು ಮುಖ್ಯವಾದಂಥ ವ್ಯಕ್ತಿಯಾರು ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಕೇಳಿದೆ ಅಷ್ಟೆ.

The Hon'ble Sri K. CHENGALARAYA REDDY.—He is one of our officers of Government. He was Sub-Division Officer at Saklespur at that time.

Sri H. K. VEERANNA GOWDH (Mandya District—General).—What is the nature of the offence for which he is proceeded against? Why is he prosecuted?

The Hon'ble Sri K. CHENGALARAYA REDDY.—Some complaint by a private person—insult or misbehaviour; I cannot give all the details at this stage.

ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—ಇವರು ಸರ್ಕಾರಿ ಅಧಿಕಾರಿಗಳು. ಕೇಸು ಹಾಕಬಹುದು ಎಂದು ಸರ್ಕಾರದವರು ಅಪ್ಪಣೆ ಕೊಟ್ಟಿದ್ದಾರೆಯೆ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಈ ಕೇಸ್‌ನಲ್ಲಿ ಅಪ್ಪಣೆ ಕೊಡಬೇಕಾದ್ದು ಅನಾವಶ್ಯಕ ಎಂದು ಕಂಡುಬಂದು ಅಪ್ಪಣೆ ಕೊಡಲಿಲ್ಲ.

ಶ್ರೀ ಬಿ. ಚನ್ನಬೈರೇಗೌಡರು.—ಹಾಗಾದರೆ ಸರ್ಕಾರಿ ಆಫೀಸರುಗಳಮೇಲೆ ಖಾಸಗಿ ಜನರು ಕೇಸು ಹಾಕಬೇಕಾದರೆ ಅಪ್ಪಣೆ ಇಲ್ಲದೆ ಹಾಕಬಹುದೆ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅದು ಆಯಾಯಾ ಸಂದರ್ಭಗಳಮೇಲೆ ಅನುಸರಿಸಿಹೋಗುತ್ತದೆ.

Sri H. SIDDAVEERAPPA (Chitaldrug District—General).—Is this a private complaint?

The Hon'ble Sri K. CHENGALARAYA REDDY.—Yes.

Famine-stricken Areas in Kolar District.

Q.—92. Sri G. NARAYANA GOWDA (Kolar District—General).—

Will the Government be pleased to state :—

(*a*) the areas that were declared famine-stricken in Kolar District last year;

(*b*) the approximate population of the above famine-stricken areas;

(*c*) the quantity of foodgrains that are being supplied to those areas?

A.—The Hon'ble Sri K. CHENGALARAYA REDDY (Chief Minister).—

(*a*) No part of Kolar District was declared as famine-stricken in 1950-51.

(*b*) and (*c*) Do not arise in view of reply to Clause (*a*).

ಶ್ರೀ ಜಿ. ನಾರಾಯಣಗೌಡರು.—ಕೋಲಾರ ಜಿಲ್ಲೆಯಲ್ಲಿ ಹೋದವರ್ಷ ಪರಿಹಾರಕಾರ್ಯಕ್ರಮ ಕೈಗೊಂಡಿರಲಿಲ್ಲವೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಕೆಲವು ಕೈಗೊಳ್ಳಲಾಗಿದೆ.

ಶ್ರೀ ಜಿ. ನಾರಾಯಣಗೌಡರು.—ಕಾರಣ ವೇನು ಸ್ವಾಮಿ ?

ಮಾನ್ಯ ಶ್ರೀ ಕೆ. ಚಂಗಲರಾಯರೆಡ್ಡಿಯವರು.—ಅಲ್ಲಿ ಮಳೆ ಅಭಾವದಿಂದ ಬೆಳೆಗಳಿಗೆ ಬಹಳ ನಷ್ಟವಾಗಿ ತೊಂದರೆ ಆದದ್ದರಿಂದ ಕೆಲವು ಕಡೆ ಪರಿಹಾರಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಆರ್ಡರ್ ಮಾಡಿದರು. Famine-stricken area ಎಂದು ಡಿಕ್ಲೇರ್ ಮಾಡಿದ್ದಾರೆಯೇ ಎಂದು ಪ್ರಶ್ನೆ ಕೇಳಲಾಗಿದೆ. ಅದಕ್ಕೆ technical ಆಗಿ no ಎಂದು ಉತ್ತರ ಕೊಡಲಾಗಿದೆಯೇ ಹೊರತು ಬೇಕಾದಷ್ಟು ಪರಿಹಾರ ಕಾರ್ಯಕ್ರಮ ಮಂಜೂರಾಯಿತು ಮತ್ತು ಆಹಾರ ಧಾನ್ಯಗಳನ್ನು ಕೂಡ ಆಡೀಷನಲ್

ಕೋಟಾ ಸರಬರಾಯಿ ಮಾಡಲಾಯಿತು. ಇದು ಇರತಕ್ಕ ಪರಿಸ್ಥಿತಿ.

Insufficiency of Cloth quota for Hawkers in Villages.

Q.—96. SRI G. NARAYANA GOWDA (Kolar District—General).—

Will the Government be pleased to state :—

(*a*) the quantity of cloth that is being given to the ready-made dress shop owners in Bangalore City and Mysore City ;

(*b*) the quantity of cloth that is allotted to the hawkers in rural parts of the State (particulars to be furnished district-wise) ?

A.—The Hon'ble SRI K. CHENGALARAYA REDDY (Chief Minister).—

(*a*) A basic quota of 64 bales per month has been fixed for the ready-made dressers in Bangalore City, but this is limited to the quantity of fents and seconds supplied by the Bangalore Woollen, Cotton and Silk Mills, Ltd., Bangalore, from time to time.

No quota is fixed for ready-made dressers in Mysore City, but *ad-hoc* quotas are released for their use as and when supplies are made from mills.

(*b*) No cloth is allotted to hawkers during the present control period.

ಶ್ರೀ ಜಿ. ನಾರಾಯಣಗೌಡರು.—ಬೆಂಗಳೂರು ಸಿಟಿಯಲ್ಲಿ ಬೇಸಿಕ್ ಕೋಟಾ ಕೊಡುತ್ತೇವೆ ಎಂದು ಹೇಳಿದ್ದೀರಿ. ಸ್ಪೆಷಲ್‌ಕೋಟಾ ಕೊಟ್ಟಿದ್ದೀರಾ?

*ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನೋಟೀಸ್ ಬೇಕು.

ಶ್ರೀ ಜಿ. ನಾರಾಯಣಗೌಡರು.—ಗ್ರಾಮಾಂತರ ಪ್ರದೇಶದಲ್ಲಿ ಹಾಕರ್ಸ್‌ಗೆ ಕೊಡುತ್ತಿಲ್ಲ ಎಂದು ಹೇಳಿದ್ದೀರಿ. ಗ್ರಾಮಾಂತರ ಪ್ರದೇಶದಲ್ಲೂ ಹಾಕರ್ಸ್ ಇದ್ದಾರೆ ಎಂಬುದು ಗೊತ್ತೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಇದ್ದಾರೆ.

ಶ್ರೀ ಜಿ. ನಾರಾಯಣಗೌಡರು.—ಅವರ ಕೋಟಾ ಏಕೆ ಕೊಡಲಿಲ್ಲ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಎಲ್ಲಾ ಅಂಶಗಳನ್ನೂ ಗಮನದಲ್ಲಿಟ್ಟುಕೊಂಡೇ ಆ ಉತ್ತರ ಕೊಡಲಾಗಿರುತ್ತೆ. ನಮಗೆ ಒಟ್ಟಿನಲ್ಲಿ ಬೇಕಾಗಿರತಕ್ಕ ಡಾಕ್ಟರುಗಳ ಸಂಖ್ಯೆ 600 ಜನ. ಆ ಪೈಕಿ ಎಷ್ಟು ಜನಗಳು ಕಮ್ಮಿ ಇರುತ್ತಾರೋ ಅದನ್ನು ನೋಡಿಕೊಂಡು ಹೆಚ್ಚಿಗೆ ಬೇಕಾಗುವವರನ್ನು ಗಮನದಲ್ಲಿಟ್ಟುಕೊಂಡೇ ಉತ್ತರ ಕೊಡಲಾಗಿದೆ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು (ಬೆಂಗಳೂರು ಜಿಲ್ಲೆ).—ಈ ಆಸ್ಪತ್ರೆಗಳಲ್ಲಿಯೂ ದಂತ ವೈದ್ಯರುಗಳಿರುತ್ತಾರೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇರತಕ್ಕ ಡಾಕ್ಟರುಗಳೇ ಎಲ್ಲ ಚಿಕಿತ್ಸೆಗಳನ್ನೂ ಮಾಡುತ್ತಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—6 ತಿಂಗಳ ಅವಧಿಯಿಂದ ಒಂದು ವರ್ಷದ ಅವಧಿಯಿಂದ ಮತ್ತು ಎರಡು ವರ್ಷಗಳ ಅವಧಿಯಿಂದಲೂ ಡಾಕ್ಟರುಗಳೇ ಇಲ್ಲದಿರತಕ್ಕ ಆಸ್ಪತ್ರೆಗಳೆಷ್ಟಿರುತ್ತವೆಂಬುದನ್ನು ದಯವಿಟ್ಟು ತಿಳಿಸಲಾಗುವುದೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸ್ವಲ್ಪ ಕಾಲಾವಕಾಶವನ್ನು ಕೊಟ್ಟರೆ ತಿಳಿಸಬಲ್ಲೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಹೋಗಲಿ. ಒಂದು ವರ್ಷದ ಲಾಗಾಯಿತಿನಿಂದ ಡಾಕ್ಟರಿಲ್ಲದಿರುವ ಆಸ್ಪತ್ರೆಗಳೆಷ್ಟೆಂಬುದನ್ನು ತಿಳಿಸುವಿರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸುಮಾರು 5-6 ಇರಬಹುದು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಈ ದಿವಸದ ಆವಶ್ಯಕತೆಗೆ ಸಾಕಾಗುವಷ್ಟು ಜನರು ಎಂದರೆ ಎಂ. ಐ. ಡಿಸ್ಪೆನ್ಸರಿ, ಎಲ್. ಎಫ್. ಡಿಸ್ಪೆನ್ಸರಿ, ಮತ್ತು ರೂರಲ್ ಡಿಸ್ಪೆನ್ಸರಿಗಳನ್ನೆಲ್ಲಾ ಸೇರಿಸಿಕೊಂಡರೆ ಎಷ್ಟು ಜನ ಡಾಕ್ಟರುಗಳು ಬೇಕಾಗಿದ್ದಾರೆಂದು ತಾವು ಅಂದಾಜು ಮಾಡಿದ್ದೀರಿ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—45 ಜನಗಳಾದರೆ ಸಾಕು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಈ 45 ಜನರ ಆವಶ್ಯಕತೆ ತಮಗೆ ಎಷ್ಟು ವರ್ಷಗಳಿಂದ ಇದೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹೋದ ವರ್ಷ ಮತ್ತು ಈ ವರ್ಷಕ್ಕೆ ಅಷ್ಟು ಬೇಕೆಂದು ಗೊತ್ತಾಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಅಂದಮೇಲೆ ಪ್ರತಿವರ್ಷವೂ ಎಷ್ಟು ಜನ ವಿದ್ಯಾರ್ಥಿಗಳು ಮೆಡಿಕಲ್ ಕಾಲೇಜು ಮತ್ತು ಸ್ಕೂಲುಗಳಿಂದ ಉತ್ತೀರ್ಣರಾಗಿ ಹೋಗುತ್ತಿದ್ದಾರೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆ ಪ್ರಶ್ನೆ ಇದರಿಂದ ಉದ್ಭವಿಸುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ತಾವು ವರ್ಷೇ ವರ್ಷೇ ಎಷ್ಟು ಜನ ಡಾಕ್ಟರುಗಳನ್ನು ತಯಾರು ಮಾಡುತ್ತಿದ್ದೀರಿ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಡೀ ಇಂಡಿಯಾ ದೇಶದಲ್ಲೆಲ್ಲಿಯೂ ಇಲ್ಲದೆ ಇರುವಂಥ ಸ್ಕೂಲನ್ನು ಇಲ್ಲಿ ಸ್ಥಾಪಿಸಿ, ನಾವು ಇಲ್ಲಿ ವಿದ್ಯಾರ್ಥಿಗಳನ್ನು ತರಪೇತು ಮಾಡುತ್ತಿದ್ದೇವೆ. ಇದಕ್ಕೆ ನಾನಾ ಕಡೆಯಿಂದ ವಿದ್ಯಾರ್ಥಿಗಳು ಬಂದು ಸೇರುತ್ತಿದ್ದಾರೆ.

Sri H. M. CHANNABASAPPA.—I want to know the number of students that pass out of the Medical College and the Medical School.

The Hon'ble Sri H. SIDDAIYA.—From the Medical College, about 16—20. How many from the Medical School I do not exactly remember. If the Hon'ble Member gives me notice, I will furnish the answer.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಈಗ ಒಂದು ವರ್ಷದಲ್ಲಿ ಮೆಡಿಕಲ್ ಸ್ಕೂಲು ಮತ್ತು ಕಾಲೇಜುಗಳಿಂದ ಎಷ್ಟು ಜನರು ಉತ್ತೀರ್ಣರಾಗುತ್ತಾರೋ ಅಷ್ಟು ಜನರನ್ನೂ ತಾವು ಕೆಲಸಕ್ಕೆ ತೆಗೆದುಕೊಂಡರೆ ಈ ಅಭಾವವನ್ನು ನೀಗಲು ಸಾಧ್ಯವಾಗುತ್ತದೆಂಬ ಅಂಶ ಸರ್ಕಾರದವರಿಗೆ ಗೊತ್ತಿದೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅವರೆಲ್ಲರೂ ಕೆಲಸಕ್ಕೆ ಬಂದರೆ ಸಾಧ್ಯವಾಗುತ್ತದೆಂಬುದು ಗೊತ್ತಿದೆ. ಹೋದವರ್ಷ ಕೆಲವರು ಅರ್ಜಿ ಹಾಕಿಕೊಂಡಿದ್ದರು. ಹೀಗೆ ಅರ್ಜಿ ಹಾಕಿಕೊಳ್ಳುವವರ ವಿಚಾರದಲ್ಲಿ ರೆಕ್ರೂಟ್‌ಮೆಂಟ್ ರೂಲ್ಸುಗಳ ನಿರ್ಬಂಧವನ್ನು ಸಹ ಸಡಿಲ ಮಾಡಲಾಗಿದೆ. ಅವುಗಳನ್ನು ಹಾಗೆ ಈಚೆಗೆ ರಿವೈಸ್ ಮಾಡಲಾಗಿದೆ. ಆದಾಗ್ಯೂ ಅನೇಕರು ಕೆಲಸಕ್ಕೇ ಬರುತ್ತಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಇದು essential service ಎಂಬುದಾಗಿ ಭಾವಿಸಿರುವುದಿಲ್ಲವೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಭಾವಿಸಲಾಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಹೀಗೆ ಕಾಲೇಜು ಮತ್ತು ಸ್ಕೂಲಿನಿಂದ ಉತ್ತೀರ್ಣರಾಗತಕ್ಕವರನ್ನು ಕಡ್ಡಾಯವಾಗಿ ಸೇವೆ ಸಲ್ಲಿಸಬೇಕೆಂಬುದಾಗಿ ಅವರ serviceನ್ನು ಕಮ್ಯಾಂಡಿಯರ್ ಮಾಡಿಕೊಳ್ಳಲು ಸರ್ಕಾರದವರು ಏನಾದರೂ ಏರ್ಪಾಡು ಮಾಡಿದ್ದೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಈಚೆಗೆ ಹೊಸದಾಗಿ ಒಂದು ಷರತ್ತು ಹಾಕಿ,

ಅವರು ಕೊನೆಯ ಪಕ್ಷ ಮೂರು ವರ್ಷಗಳಾದರೂ ಕೆಲಸಮಾಡಲೇ ಬೇಕೆಂಬ ಒಂದು ನಿರ್ಬಂಧವನ್ನು ಹಾಕಲಾಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಆ ನಿರ್ಬಂಧವನ್ನು ಎಷ್ಟು ವರ್ಷಗಳಿಂದ ಹಾಕಲಾಗಿದೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಈ ವರ್ಷದಿಂದ ಹಾಕಲಾಗಿದೆ.

Lands given for cultivation under Grow More Food Scheme in 1950-51.

Q.—38. Sri M. V. KRISHNAPPA (Kolar District—General).—

Will the Government be pleased to state :—

(*a*) the number of acres of land given for cultivation under "Grow More Food" scheme in 1950-51 ;

(*b*) whether they contemplate to sanction the land brought under cultivation according to this scheme permanently to the holders wherever the five years' period has been over ?

A.—The Hon'ble Sri H. SIDDAIYA (Minister for Revenue and Excise).—

(*a*)	*A.*	*Gts.*	*A.*	*Gts.*
	15,190	29		
	Wet	...	1,688	38
	Dry	...	13,501	31

(*b*) Yes ; if the lessee has abided by the conditions of grant, and if there are no other objections.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಹೆಚ್ಚು ಆಹಾರ ಬೆಳೆಸಬೇಕೆಂಬ ಯೋಜನೆಯ ಪ್ರಕಾರ ಭೂಮಿಯನ್ನು ಸಾಗುವಳಿಮಾಡಲು ಇಂಥವರಿಗೇ ಕೊಡಬೇಕೆಂಬ ಕಟ್ಟುನಿಟ್ಟುಗಳೇನಾದರೂ ಇವೆಯೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇವೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಅವುಗಳನ್ನು ಆಯಾ ಹಿಡುವಳಿದಾರರಿಗೇ ಖಾಯಂಆಗಿ ಕೊಡತಕ್ಕ ವಿಚಾರದಲ್ಲಿ "ತಕರಾರುಗಳಿಲ್ಲದಿದ್ದರೆ" ಅವರಿಗೇ ಕೊಡಲಾಗುತ್ತದೆಂದು ತಾವು ಉತ್ತರದಲ್ಲಿ ತಿಳಿಸಿದ್ದೀರಿ. ಅಂಥಾ ತಕರಾರುಗಳು ಯಾರು ಮಾಡುವುದು?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಭೂಮಿ ಇರತಕ್ಕದ್ದು ಕಮ್ಮಿಯಾಗಿದ್ದು, ಕೇಳತಕ್ಕ ಜನರು ಜಾಸ್ತಿಇದ್ದಾಗ ಮತ್ತು ಇತರ ಅನೇಕ ಸಂದರ್ಭಗಳಲ್ಲಿ ನಾನಾ ರೀತಿಯ ತಕರಾರುಗಳು ಉಂಟಾಗಲಿಕ್ಕೆ ಅವಕಾಶವಿದೆ. ಅವುಗಳನ್ನು ಖಚಿತವಾಗಿ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಜಮೀನಿಲ್ಲದ ಜನರಿಗೆ ಮೊದಲು ಜಮೀನು ದೊರೆಯಬೇಕೆಂಬುದು ಸರ್ಕಾರದವರ ಅಭಿಪ್ರಾಯದಲ್ಲಿಲ್ಲವೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇದೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಅಂಥಾ ಜಮೀನ್ದಾರರಲ್ಲದವರಿಗೆ ಜಮೀನನ್ನು ಖಾಯಂ ಮಾಡುವಕಾಲಕ್ಕೆ, ಜಮೀನ್ದಾರರಾಗಿರತಕ್ಕ ಖದೀಮರುಗಳು ಒಂದಲ್ಲಾ ಒಂದು ತಕರಾರನ್ನು ತಂದೇತರುತ್ತಾರೆ. ಆದಕಾರಣ ಅಂಥಾ ತಕರಾರುಗಳಿಗೆ ಅಷ್ಟು ಹೆಚ್ಚಿನ ಗಮನಕೊಡದೆ ಯಾರ್ಯಾರು ಐದು ವರ್ಷಗಳಕಾಲ ಕಷ್ಟಪಟ್ಟು ಜಮೀನನ್ನು ಆಬಾದಿಗೆ ತಂದಿರುತ್ತಾರೋ ಅಂಥವರಿಗೇ ತಾವು ಒಂದು upset price ಗೆ ಆ ಜಮೀನು ದೊರೆಯುವಂತೆ ಮಾಡುವಿರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅನೇಕ ಸಂದರ್ಭಗಳಲ್ಲಿ ಮಾಡುತ್ತಿರುವುದೇ ಹಾಗೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಹಾಗೆ ಐದು ವರ್ಷಗಳು ಕಳೆದ ತರುವಾಯ ಅವರಿಗೇ ಖಾಯಂ ಮಾಡದೆ ಇರುವ ನಿದರ್ಶನಗಳೇನಾದರೂ ಇವೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅಂಥಾವುಗಳಿರುವುದು ತೀರಾ ವಿರಳ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಆ ರೀತಿ ಒಂದು upset priceಗೆ ಸಾಗುವಳೀದಾರನಿಗೆ ಜಮೀನು ದೊರೆಯುವಂತೆ ಮಾಡಲು ಒಂದು ಕಾನೂನು ಮಾಡಲಾಗುತ್ತದೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇದೆಲ್ಲಾ ಆಯಾ ಸಂದರ್ಭದ ಮೇಲೆ ಹೋಗ

(ಮಾನ್ಯ ಶ್ರೀ ಹೆಚ್. ಸಿದ್ದಯ್ಯನವರು.) ತಕ್ಕದ್ದಾಗಿದೆ. ಇದಕ್ಕಾಗಿಯೇ ಒಂದು hard and fast rule ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಕೆಲವುಕಡೆ ಪಟೇಲ್ ಶ್ಯಾನುಭೋಗರುಗಳು ಸರ್ಕಾರದ ಗಮನಕ್ಕೇ ತಾರದೆ ತಾವು ರೈತರ ಕಡೆಯಿಂದ ದುಡ್ಡನ್ನು ತೆಗೆದುಕೊಂಡು ಜಮೀನು ಸಾಗುವಳಿಗೆ ಕೊಟ್ಟಿರತಕ್ಕ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಲ್ಲ. ಹಾಗೇನಾದರೂ ಮಾಡಿದಲ್ಲಿ ಅದು ತಕ್ಸೀರಾಗುತ್ತದೆ.

ಶ್ರೀ ಜಿ. ಎ. ಆಚಾರ್ಯರು (ಬೆಂಗಳೂರು ಜಿಲ್ಲೆ).—ಜಮೀನಿನಲ್ಲಿ ಯಾರು ಬೆಳೆ ಮಾಡುತ್ತಾರೋ ಅಂಥವರಿಗೆ ತಾನೆ ತಾವು ಆ ಜಮೀನನ್ನು ಖಾಯಂ ಮಾಡಬೇಕಾದುದ್ದು?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹೌದು. ಯಾವ ತಕರಾರೂ ಬಾರದಿದ್ದಲ್ಲಿ ಮಾತ್ರ.

ಶ್ರೀ ಜಿ. ಎ. ಆಚಾರ್ಯರು.—ಬಡವರಿಗೇ ಮಾಡಬೇಕೆಂಬ ನಿಯಮ ಹೇಗೆ ಸರಿಹೋಗುತ್ತೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆ ನಿಯಮಗಳನ್ನೆಲ್ಲಾ ಆಗಲೇ ತಿಳಿಸಲಾಗಿದೆ. ಆದರೆ ಖಚಿತವಾಗಿ ಏನನ್ನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಇಲ್ಲಿ ತಾವು ಉತ್ತರದಲ್ಲಿ ತಿಳಿಸಲಾಗಿರತಕ್ಕ ಒಟ್ಟು ತರಿ 1688 ಎಕರೆ 38 ಗುಂಟೆ ಮತ್ತು ಖುಷ್ಕಿ 13,501 ಎಕರೆ 31 ಗುಂಟೆ ಜಮೀನನ್ನು ಎಷ್ಟು ಜನರಿಗೆ ಕೊಡಲಾಗಿದೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಟೀಸ್.

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—ಅದನ್ನು ತೆಗೆದುಕೊಂಡ ಜನರು ಅಲ್ಲಿ ಎಷ್ಟು ಆಹಾರ ಬೆಳೆದಿದ್ದಾರೆ?

ಮಾನ್ಯ ಶ್ರಿ ಎಚ್. ಸಿದ್ದಯ್ಯನವರು.—ಸಾಮಾನ್ಯವಾಗಿ ಒಂದು ಎಕರೆಗೆ ಇಷ್ಟು ಎಂದು ದಾಮಾಷಾ ಪ್ರಕಾರ ಬೆಳೆದಿದ್ದಾರೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಎಷ್ಟು ಬೆಳೆದಿದ್ದಾರೆಂಬುದು ಖಚಿತವಾಗಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹೋದವರ್ಷ ಕೊಟ್ಟಿರುವುದು ಮೊದಲನೆಯ ಸಲದ್ದು. ಅದಕ್ಕೆ ಕೆಲವು ಷರತ್ತುಗಳಿವೆ. The very first year they must bring the land under cultivation.

ಶ್ರೀ ಡಿ. ಎಂ. ಸಿದ್ದಯ್ಯನವರು.—ಹಾಗೆ ತೆಗೆದುಕೊಂಡ ಜನರು ಆ ಜಮೀನುಗಳಲ್ಲಿ ತಾವು ಬೆಳೆಮಾಡದೆ ಅವನ್ನು ಬೇರೆಯವರಿಗೆ ವಹಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅಂಥ ಸಂದರ್ಭಗಳು ಕೆಲವು ಇರಬಹುದು. ಚೆನ್ನಾಗಿ ಕಷ್ಟಪಟ್ಟು ಕೆಲಸಮಾಡುವವರಿಂದ ಕೆಲಸ ಮಾಡಿಸಿರಬಹುದು.

ಶ್ರೀ ಡಿ. ಎಂ. ಸಿದ್ದಯ್ಯನವರು.—ಹೆಚ್ಚು ಆಹಾರ ಬೆಳೆಯುವ ಯೋಜನೆ ಮೇರೆಗೆ ಜಮೀನನ್ನು ತೆಗೆದುಕೊಂಡು ಪರಭಾರೆ ಮಾಡಿರುವುದು ಸರ್ಕಾರದ ಅವಗಾಹನೆಗೆ ಬಂದಿದೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅಂಥ ಸಂದರ್ಭಗಳಿದ್ದರೆ ಆ ಜಮೀನುಗಳನ್ನು ತೆಗೆದುಕೊಂಡವರಿಗೆ ಖಾಯಂ ಮಾಡುವುದಿಲ್ಲ.

ಶ್ರೀ ಕೆ. ಎಚ್. ಮುದಿಯಪ್ಪನವರು (ಚಿಕ್ಕಮಗಳೂರು ಜಿಲ್ಲೆ).—ಈ ಯೋಜನೆಮೇರೆಗೆ ಮಲೆನಾಡು ಜಿಲ್ಲೆಗಳಲ್ಲೂ ಜಮೀನನ್ನು ಸಾಗುವಳಿಗೆ ಕೊಟ್ಟಿದೆಯೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೊಟ್ಟಿದೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಮಲೆನಾಡಿನಲ್ಲಿ ಒಂದು ಎಕರೆ ಜಮೀನು ಸಾಗಿಗೆ ಲಾಯಕ್ಕಾಗಬೇಕಾದರೆ ಖರ್ಚು ಹೆಚ್ಚು ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆ ಉಪಪ್ರಶ್ನೆ ಇದಕ್ಕೆ ಸಂಬಂಧಿಸಿಲ್ಲ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಮಲೆನಾಡು ಜಿಲ್ಲೆಗಳಲ್ಲಿ ಗಿಡ ಹೆಚ್ಚು. ಅಂಥ ಜಾಗ

ದಲ್ಲಿ ಒಂದು ಎಕರೆ ಜಮೀನು ಸಾಗು ಮಾಡುವುದಕ್ಕೆ ಸಾಮಾನ್ಯವಾಗಿ ಎಷ್ಟು ಖರ್ಚಾಗುತ್ತದೆ ಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಮರ ಕಡಿಯುವುದರಿಂದ ಅದಕ್ಕೆ ಬೆಲೆ ಬರುತ್ತದೆ. ಕಷ್ಟಪಟ್ಟು ವ್ಯವಸಾಯ ಮಾಡಿ ಹೆಚ್ಚು ಆಹಾರ ಬೆಳೆಯುವ ಯೋಜನೆ ಮೇರೆಗೆ ಸರಿಯಾಗಿ ಬೆಳೆ ತೆಗೆದರೆ ಐದು ವರ್ಷಗಳಾದಮೇಲೆ ಅದನ್ನು ಖರೀದಿಗೆ ಕೊಡುತ್ತಾರೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಹಾಗೆ ಮಾಡಿರುವ ಸಂದರ್ಭಗಳಲ್ಲಿ ತಕರಾರುಗಳು ಬಂದಿಲ್ಲವೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲವು ಸಂದರ್ಭಗಳಲ್ಲಿ ಬಂದಿವೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಹಾಗೆ ತಕರಾರು ಬಂದಮೇಲೆ ಸಂಬಂಧಪಟ್ಟ ಅಧಿಕಾರಿಗಳು ಆ ಜಮೀನುಗಳನ್ನು ಬಹಿರಂಗವಾಗಿ ಹರಾಜು ಮಾಡುತ್ತಾರೆಯೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲವು ಸಂದರ್ಭಗಳಲ್ಲಿ ಆ ರೀತಿಯಾಗಿವೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಹಾಗಾದರೆ ರೈತರು ಮಾಡುವ ಕಸಬಿಗೆ ಉತ್ತೇಜನ ಕೊಟ್ಟದ್ದು ಸಾರ್ಥಕವಾಯಿತೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸಾಮಾನ್ಯವಾಗಿ ಕೊಟ್ಟಿದ್ದನ್ನು ವಜಾ ಮಾಡುವುದಿಲ್ಲ. ವಿಶೇಷ ಸಂದರ್ಭಗಳಲ್ಲಿ ಅಂದರೆ ಸಾಧಾರಣವಾಗಿ ಫಾರೆಸ್ಟ್ ಇರುವ ಕಡೆ ಅಥವಾ ಪಾಳು ಬಿದ್ದಿರುವ ಜಮೀನಿರುವ ಕಡೆ ವಜಾ ಮಾಡಲೇ ಬೇಕು.

ಶ್ರೀ ಕೆ. ಎಚ್. ಮುದಿಯಪ್ಪನವರು.—ಲಿಟಿಗೇಷನ್ ವಿಚಾರ ಹೇಳುತ್ತಿಲ್ಲ. ಅಮಲ್ದಾರರಿಂದ ಸಾಗುವಳಿ ಚೀಟಿ ಬಂದು ಐದು ವರ್ಷಗಳವರೆಗೆ ಸಾಗು ಮಾಡಲು ಸುಪರ್ದಿಗೆ ಕೊಟ್ಟು ಆ ಅವಧಿಯು ಮುಗಿಯುವುದಕ್ಕೆ ಮುಂಚೆಯೇ ಕೆಲವು ಅನುಕೂಲಸ್ಥರು ಮತ್ತು ಇತರ ಮಹನೀಯರು ತಕರಾರು ಮಾಡಿದ್ದಕ್ಕಾಗಿ ಸರ್ಕಾರಿ ನೌಕರರು ಆ ಜಮೀನನ್ನು ಹರಾಜುಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅಂಥಹುದು ಯಾವುದಾದರೂ ಇದ್ದರೆ ತಿಳಿಸಿದರೆ ವಿಚಾರಮಾಡುತ್ತೇವೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಹಾಗಾದರೆ ಕಡೂರು ತಾಲ್ಲೂಕು ಕಸಬಾ ಹೋಬಳಿ ತಂಗ್ಲಿ ಗ್ರಾಮದಲ್ಲಿ ಆ ರೀತಿ ಆಗಿದೆ, ಅದನ್ನು ಸರಿಪಡಿಸುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದನ್ನು ಬರೆದು ವಿಚಾರವನ್ನು ವಿಶದವಾಗಿ ತಿಳಿಸಿದರೆ ಪರಿಶೀಲಿಸುತ್ತೇವೆ?

ಶ್ರೀ ಕೆ. ಎಚ್. ಮುದಿಯಪ್ಪನವರು.—ಸಮಾಚಾರವನ್ನು ತಾವೇ ತರಿಸಿಕೊಂಡು ಪರಿಶೀಲಿಸಬಹುದಲ್ಲವೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆಗಬಹುದು.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಈ ಜಮೀನು ಮಂಜೂರು ಮಾಡಬೇಕಾದರೆ ತಕರಾರು ಏನಾದರೂ ಇದೆಯೇ ಎಂಬುದನ್ನು ನೋಡಿ ಸರಿಯಾಗಿ ದರಖಾಸ್ತು ರಿಕಾರ್ಡು ಮಾಡಿತಾನೆ ಮಾಡಿರುವುದು?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸಾಮಾನ್ಯವಾಗಿ ಹಾಗೆ ನೋಡಿಯೇ ಕೊಡುತ್ತಾರೆ. ಆ ಮೇಲೆ ಖಾಯಂ ಆಗುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ಕಿಮ್ಮತ್ತು ಕೊಡುವುದಕ್ಕೆ ಮುಂಚೆ ಅದನ್ನು ನಿಗದಿಮಾಡಿ, ಎಲ್ಲವನ್ನೂ ನೋಡಿತಾನೆ ಕೊಡುವುದು?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹೌದು.

ಶ್ರೀ ಬಿ. ಹುಚ್ಚೇಗೌಡರು.—ಹಾಗಿದ್ದ ಮೇಲೆ ಯಾವ ತಕರಾರು ಬರುತ್ತದೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲವು ಕಡೆ ಗೋಮಾಳವು ದನಗಳ ಸಂಖ್ಯೆಗನುಗುಣವಾಗಿ ಸಾಕಷ್ಟಿಲ್ಲದಿದ್ದರೆ ಅಂಥ ಸಂದರ್ಭಗಳಲ್ಲಿ ಆ ಜಮೀನನ್ನು ಖಾಯಂ ಮಾಡುವುದಕ್ಕೆ ಮುಂಚೆ ರಿಕಾರ್ಡು ತರಿಸಿ ನೋಡಿ ಆ ಮೇಲೆ ಮುಂದಿನ ಕ್ರಮ ಜರುಗಿಸುತ್ತೇವೆ.

ಶ್ರೀ ಬಿ. ಹುಚ್ಚೇಗೌಡರು.—ಕೊಡಬೇಕಾದ ಕಿಮ್ಮತ್ತನ್ನು ಹೆಚ್ಚುಮಾಡಿರುವ ಸಂದರ್ಭಗಳುಂಟೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಫಲ ಹೆಚ್ಚಾಗಿದ್ದರೆ ಅಂಥ ಸಂದರ್ಭಗಳಲ್ಲಿ ಅದನ್ನು ಸಂತೋಷದಿಂದ ಕೊಡಲು ರೈತರು ಮುಂದೆ ಬರುತ್ತಾರೆ. ಆಗ ಹೆಚ್ಚು ಭಾರ ಹಾಕುತ್ತೇವೆ.

ಶ್ರೀ ಬಿ. ಹುಚ್ಚೇಗೌಡರು.—ಸಂತೋಷದಿಂದ ಕೊಡುತ್ತಾರೆಂಬುದನ್ನು ಯಾರೂ ನಂಬುವುದಿಲ್ಲ. ಅದು ಸರಿಯಲ್ಲ. ಯಾರೂ ಗೊತ್ತುಮಾಡಿರುವ ಬೆಲೆಗಿಂತ ಜಾಸ್ತಿ ಕೊಡುವುದಿಲ್ಲ. ಜಮೀನಿಗೆ ಗೊತ್ತುಮಾಡಿರುವ ಬೆಲೆ ಕೊಡುವಂತೆ ತಿಳಿಸಿ, ಅದನ್ನು ಐದು ವರ್ಷಗಳ ನಂತರ ಕೊಡಬಹುದೆಂದು ಹೇಳಿ ನಂತರ ಅದರ ಬೆಲೆ ಹೆಚ್ಚಿಸುವುದು ಸರಿಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಈಗಾಗಲೇ ಹೇಳಿರುವಂತೆ ವಿಶೇಷ ಸಂದರ್ಭಗಳಲ್ಲಿ ಖಾಯಂ ಮಾಡುವುದು ಸೂಕ್ತವಲ್ಲದಿದ್ದರೆ, ನೀತಿಗೆ ವಿರೋಧವಾಗಿ ಕಂಡುಬಂದರೆ ಆಗ ಖಾಯಂ ಮಾಡುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಕೃತ್ರಿಮವೇನಾದರೂ ಇದ್ದರೆ ಐದು ವರ್ಷಕಾಲದಲ್ಲಿ ನೋಡಬಹುದಲ್ಲವೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆ ರೀತಿ ಯೇನಾದರೂ ಕೃತ್ರಿಮವಿದ್ದರೆ ಅದಕ್ಕೆ ಅಪೀಲ್ ಬರುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ಐದು ವರ್ಷಗಳಲ್ಲಿ ಅದನ್ನು ತಿಳಿಯುವುದಕ್ಕೆ ಸಾಧ್ಯವಿಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅಪೀಲು ಅಮಲ್ದಾರರು, ಸಬ್‌ಡಿವಿಜನ್ ಆಫೀಸರು, ಜಿಲ್ಲಾಧಿಕಾರಿಗಳು, ರೆವೆನ್ಯೂ ಕಮೀಷನರು ಮುಂತಾದ ಅಧಿಕಾರಿಗಳಿಗೂ, ಆ ಮೇಲೆ ರೆವೆನ್ಯೂ ಮಂತ್ರಿಗಳಿಗೂ, ಅನಂತರ ಸರ್ಕಾರಕ್ಕೂ ಬರುತ್ತದೆ, ಅನಂತರ ಅದು ವಿಲೆ ಆಗುತ್ತದೆ. ಐದು ವರ್ಷಗಳಾದ ಮೇಲೂ ಅಪೀಲು ಬರುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ಐದುವರ್ಷಗಳೊಳಗಿದ್ದರೆ ಮಾತ್ರ ಪರ್ಯಾಲೋಚನೆ ಮಾಡುತ್ತೀರಾ ? ಬಾಕಿಯಾದ್ದನ್ನು ಯೋಚನೆಮಾಡುವುದಿಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅಪೀಲು ಬಂದಿರುವ ಸಂದರ್ಭ ನೋಡಬೇಕು. ಅನೇಕ ಸಂದರ್ಭಗಳಲ್ಲಿ ತಕರಾರು ಕ್ರಮಬದ್ಧವಾಗಿರುತ್ತದೆ. ಕೆಲವು ಜಮೀನು ಫಾರೆಸ್ಟಿಗೆ ಸೇರಿರುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ಷರತ್ತುಗಳಿಗೆ ವಿರೋಧವಾಗಿರುವುದನ್ನು ನಾನು ಕೇಳುತ್ತಿಲ್ಲ.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಷರತ್ತುಗಳಿಗೆ ವಿರೋಧವಾಗಿಲ್ಲದಿದ್ದುದನ್ನು ಸಾಮಾನ್ಯವಾಗಿ ಖಾಯಂ ಮಾಡುತ್ತಾರೆ.

ಶ್ರೀ ಬಿ. ಹುಚ್ಚೇಗೌಡರು.—ಖಾಯಂ ಆಗದಿರುವ ಸಂದರ್ಭಗಳು ಸಾವಿರಾರು ಇರುವುದು ಸರ್ಕಾರದ ಅವಗಾಹನೆಗೆ ಬಂದಿದೆಯೆ ?

Mr. SPEAKER.—The Hon'ble Member cannot go on putting supplementaries on this one question alone.

ಶ್ರೀ ಬಿ. ಹುಚ್ಚೇಗೌಡರು.—ಗೋಮಾಳ ಸಾಲದಿದ್ದರೆ ಜಮೀನು ಖಾಯಂ ಮಾಡಲು ಸಾಧ್ಯವಾಗುವುದಿಲ್ಲವೆಂದು ಹೇಳಿದಿರಿ. ಸಾಗುವಳಿ ಚೀಟಿ ಕೊಟ್ಟಮೇಲೂ ಸಹ ಜಮೀನು ಗೋಮಾಳದಲ್ಲಿ ಕಡಮೆಯಾಗಿದೆಯೆಂದು ಸರ್ಕಾರಕ್ಕೆ ಅವನ ಜಮೀನನ್ನು ಸೇರಿಸಿಕೊಳ್ಳುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲವು ಸಂದರ್ಭಗಳಲ್ಲಿ ಆ ರೀತಿಯಾಗಿದೆ. ಅದಕ್ಕೆ ಸಕಾರಣಗಳಿವೆ.

ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ಜಿಲ್ಲೆ—ನಿಮ್ನಪಂಗಡ).—ಈ 15 ಸಾವಿರ ಚಿಲ್ಲರೆ ಎಕರೆ ಜಮೀನಿನಲ್ಲಿ ಹೆಚ್ಚುಭಾಗವನ್ನು ಜಮೀನಿಲ್ಲದಿರುವವರಿಗೇ ಕೊಟ್ಟಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ವಿಚಾರ ಮಾಡಬೇಕು.

ಶ್ರೀ ಟಿ. ಹನುಮಯ್ಯನವರು.—ಇದರಲ್ಲಿ ನಿಮ್ನಪಂಗಡದವರಿಗೆ ಎಷ್ಟು ಕೊಟ್ಟಿದೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬಹುಶಃ ಅವರಿಗೇ ಹೆಚ್ಚಾಗಿ ಕೊಟ್ಟಿದೆ.

ಶ್ರೀ ಟಿ. ಹನುಮಯ್ಯನವರು.—ಈ 15 ಸಾವಿರ ಚಿಲ್ಲರೆ ಎಕರೆಯಲ್ಲಿ ಜಮೀನೆಲ್ಲಾ ಸಾಗಾಗಿದೆಯೇ ಇಲ್ಲವೇ ಎಂಬುದನ್ನು ಸರ್ಕಾರದವರು ಪರಿಶೀಲಿಸಿದ್ದಾರೆಯೆ ?

The Hon'ble Sri H. SIDDAIYA.—The very first condition of grant is that they must bring the land under cultivation in the very first year. These lands were granted in 1950-51.

Gomal Lands for Cultivation.

Q.—44. Sri B. N. BORANNA GOWDA (Hassan District—General).—

Will the Government be pleased to state :—

(*a*) whether it is a fact that gomal lands in rural parts are being given for cultivation ;

(*b*) under what circumstances these lands are being given for cultivation ;

(*c*) whether 'Gomals' are allotted after taking into consideration the number of cattle in each village ;

(*d*) if so, the number of cattle estimated to be grazed in an acre of land ;

(*e*) whether even the limited extent of gomal land in places where there is no sufficient gomal has been given for cultivation ?

A.—The Hon'ble Sri H. SIDDAIYA (Minister for Revenue and Excise).—

(*a*) Yes.

(*b*) Generally when the gomal is in excess of the requirements of the cattle.

(*c*) Yes.

(*d*) Thirty acres of good pasturage land for 100 heads of cattle.

(*e*) Usually not ; but only in special cases when there is supplemental pasturage in hullabanni kharab and other lands.

ಶ್ರೀ ಬಿ. ಎನ್. ಬೋರಣ್ಣಗೌಡರು.—ನೂರು ರಾಸುಗಳಿಗೆ 30 ಎಕರೆ ಜಮೀನಿದ್ದರೆ ಸಾಕು ಎಂದು ಉತ್ತರ ಕೊಡಲಾಗಿದೆ. ಅದರಲ್ಲಿ ಕಲ್ಲು, ಗುಡ್ಡ ಇರುವುದು ಎಷ್ಟು ಎಕರೆ ಆಗಬಹುದು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸಾಧಾರಣವಾಗಿ ಉತ್ತಮವಾದ ಜಮೀನು 60 ಎಕರೆ ಅಥವಾ ಕೀಳಾದ್ದು 100 ಎಕರೆ ಆದರೆ ಸಾಕಾಗುತ್ತದೆ.

ಶ್ರೀ ಬಿ. ಎನ್. ಬೋರಣ್ಣಗೌಡರು.—ನೂರ ಎಂಬತ್ತು ಎಕರೆಗಳಿರುವ ಕಡೆ ಎಷ್ಟು ರಾಸುಗಳು ಮೇಯುವುದಕ್ಕೆ ಅವಕಾಶವಿದೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ತಾವೇ ಲೆಕ್ಕ ಹಾಕಿಕೊಳ್ಳಿ.

ಶ್ರೀ ಬಿ. ಎನ್. ಬೋರಣ್ಣಗೌಡರು.—ಸಾಕಾದಷ್ಟು ಗೋಮಾಳವಿಲ್ಲ ಎಂದು ಊರಿನವರು ದೂರು ಕೊಟ್ಟಾಗ, ಇಲ್ಲದಿರುವಾಗ ತಾವು ಬೇಕಾದಷ್ಟು ಜಮೀನನ್ನು ಕೊಟ್ಟಿದ್ದೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಯಾವ ಸಂದರ್ಭದಲ್ಲಿ ಎಂಬುದನ್ನು ಹೇಳಿದರೆ ಉತ್ತರ ಹೇಳಬಹುದು. ಇಂಥಾದ್ದು ಎಂಬುದು ಜ್ಞಾಪಕವಿಲ್ಲ.

ಶ್ರೀ ಬಿ. ಎನ್. ಬೋರಣ್ಣಗೌಡರು.—ಊರಿನವರು ಸಾಕಷ್ಟಿಲ್ಲ, ಕೊಡಕೂಡದು ಎಂದು ಹೇಳಿದಾಗ ಏನು ಮಾಡಿದ್ದೀರಿ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅಂಥ ಸಂದರ್ಭದಲ್ಲಿ ಸಾಮಾನ್ಯವಾಗಿ ಕೊಡುವುದಿಲ್ಲ.

ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—ಮಹಜರು ಮಾಡಿಸಿ ಊರಿನವರ ರುಜುಗಳನ್ನು ಮಹಜರಿಗೆ ಹಾಕಿಸಿ ಕೊಡಬಹುದೆಂದು ಸಾಮಾನ್ಯವಾಗಿ ಸ್ವಲ್ಪ ಗೋಮಾಳ ಉಳಿದಿರುವಾಗ ಕೊಡುವುದು ತಪ್ಪಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಮಹಜರಿಗೆ ರುಜು ಹಾಕಿರುವವರು ಕೊಡಬಹುದೆಂದು ಕೆಲವು ಕಡೆ ಹೇಳಿರಬಹುದು.

ಶ್ರೀ ಎ. ಭೀಮಪ್ಪನಾಯಕರು.—ಏನೇ ಆಗಲಿ ಕನಿಷ್ಟ ಪರಿಮಿತಿ ಗೋಮಾಳವಿದ್ದೇ ಇರಬೇಕು ಎಂದು ನಿಬಂಧನೆ ಮಾಡಿದರೆ ಗೋಮಾಳ ಕಡಮೆ ಯಾಗುವುದಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹಾಗೆ hard and fast rule ಮಾಡಿಲ್ಲವೆಂದು ಮೊದಲೇ ಹೇಳಿದೆ. ಗೋಮಾಳ ಸಾಲದಿದ್ದರೆ ಸಾಮಾನ್ಯವಾಗಿ ಅದರಲ್ಲಿ ಜಮೀನನ್ನು ಸಾಗಿಗೆ ಕೊಡುವುದಿಲ್ಲ.

ಶ್ರೀ ಎ. ಭೀಮಪ್ಪನಾಯಕರು.—ಸಾಮಾನ್ಯವಾಗಿ ಎಂದು ಹೇಳಿದರೆ, ಕೆಲವು ಸಂದರ್ಭಗಳಲ್ಲಿ ಹಾಗೆ ಮಾಡಬಹುದೆಂದು ಅರ್ಥವಾಗುತ್ತದೆ. ಗೋ ಸಂಪತ್ತಿನ ಹಿತರಕ್ಷಣೆಗಾಗಿ ಈ ವಿಚಾರದಲ್ಲಿ ನಿರ್ದಿಷ್ಟವಾದ ಕಾನೂನು ಮಾಡಿದ ಹೊರತು ಅನುಕೂಲವಿಲ್ಲ. ಹೆಚ್ಚು ಬೆಳೆ ಬರುತ್ತದೆಂದು ಗೋಮಾಳವನ್ನು ವಿಲೇ ಮಾಡುವುದು ಸರಿಯಲ್ಲ ಎಂಬುದನ್ನು ಒಪ್ಪುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಎರಡೂ ಆಗಬೇಕು ಎಂಬುದನ್ನು ಒಪ್ಪುತ್ತೇವೆ.

ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ).—ಮೂವತ್ತು ಎಕರೆ ಬಂಜರು ಜಮೀನಿನಲ್ಲಿ ಸಾಮಾನ್ಯವಾಗಿ ಬೆಳೆಯುವ ಹುಲ್ಲಿಗಿಂತಲೂ ಅಲ್ಲಿ ಸಾಗುವಳಿ ಮಾಡಿದರೆ ಅದಕ್ಕಿಂತ ನಾಲ್ಕರಷ್ಟು ಹುಲ್ಲು ಬೆಳೆಯುತ್ತದೆಯಲ್ಲವೇ ?

The Hon'ble Sri H. SIDDAIYA.—That is a matter of opinion.

ಶ್ರೀ ಎಂ. ವಿ. ಕೃಷ್ಣಪ್ಪನವರು.—ರಾಗಿ ಬೆಳೆ ಬಿತ್ತರೆ ಅಲ್ಲಿ ರಾಗಿಯೂ ಬೆಳೆದು ಅದಕ್ಕೆ ನಾಲ್ಕರಷ್ಟು ಹುಲ್ಲೂ ಬೆಳೆಯುತ್ತದೆಯಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ಮೇಲಿನ ಉತ್ತರದಿಂದಲೇ ಅರ್ಥವಾಗುತ್ತದೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಸಾಮಾನ್ಯವಾಗಿ ರಾಸುಗಳು ಶ್ರೀಮಂತರದು. ಅವರ ರಾಸುಗಳಿಗೆ ಜಮೀನು ಕೊಟ್ಟು ಮತ್ತೆ ಇತರ ಬಡ ರೈತರಿಗೆ ಕೊಡದೇ ಇರುವ ಸಂದರ್ಭ ಇದೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬಡವರಿಗೆ ಕೊಟ್ಟಿರುವ ಸಂದರ್ಭವೂ ಇದೆ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು (ಬೆಂಗಳೂರು ಜಿಲ್ಲೆ).—ಗೋಮಾಳ ಹಂಚಿಕೆ ಮಾಡಿದ್ದು ಯಾವಾಗ?

Mr. SPEAKER.—That supplementary does not arise.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಇಷ್ಟು ಎಕರೆ ಗೋಮಾಳ ಇರಬೇಕೆಂಬುದಾಗಿ ಸರ್ಕಾರದವರು ನಿರ್ದಿಷ್ಟವಾಗಿ ತೀರ್ಮಾನ ಮಾಡಿದ್ದಾರೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಮಾಡಿದೆ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಈಗ ಮಳೆ ಹೆಚ್ಚಾಗಿ ಬಾರದೇ ಇರುವುದರಿಂದ ಹುಲ್ಲಿಗೆ ಅಭಾವವಿದೆ ಎಂಬುದು ಸರ್ಕಾರದವರಿಗೆ ಗೊತ್ತಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲವು ಕಡೆ ಹಾಗಾಗುತ್ತಿದೆ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಹಾಗಾದರೆ ಈಗ ನಮಗೆ ಹಾಲು, ತುಪ್ಪ ದೊರೆಯುವುದು ದುರ್ಲಭವಾಗಿರುವುದರಿಂದ ಗೋಮಾಳ ಹೆಚ್ಚು ಮಾಡಬೇಕೆಂಬುದಾಗಿ ಸರ್ಕಾರದವರನ್ನು ಕೇಳಿದರೆ ಅದಕ್ಕೆ ಅವರು ಒಪ್ಪಿಕೊಳ್ಳುತ್ತಾರೆಯೇ ?

(ಉತ್ತರ ಇಲ್ಲ).

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು (ಚಿಕ್ಕಮಗಳೂರು ಜಿಲ್ಲೆ—ನಿಮ್ನ ಪಂಗಡ).—ಗೋಮಾಳ ಇರುವುದು ಹುಲ್ಲು ಮೇಯಿಸುವುದಕ್ಕಲ್ಲವೇ ?

ಅಧ್ಯಕ್ಷರು.—ಅದು ಎಲ್ಲರಿಗೂ ಗೊತ್ತಿರುವ ವಿಷಯ. ಅಂಥ ಪ್ರಶ್ನೆಗಳನ್ನು ಕೇಳದೇ ಇರುವುದು ಒಳ್ಳೆಯದು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಫಾರೆಸ್ಟ್ ಪ್ರದೇಶದಲ್ಲಿ ಗೋಮಾಳದ ಅವಶ್ಯಕತೆ ಇದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲವು ಕಡೆ ಇನ್ನೂ ಇದೆ.

ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ನೂರು ರಾಸುಗಳಿಗೆ 30, 60 ಅಥವಾ 100 ಎಕರೆ ಜಮೀನು ಇರುವುದನ್ನು ಇದು ಉತ್ತಮವಾದ ಜಮೀನು, ಮಧ್ಯಸ್ಥವಾದ ಜಮೀನು, ಅಥವಾ ನಿಕೃಷ್ಟವಾದ ಜಮೀನು ಎಂಬುದನ್ನು ತೀರ್ಮಾನ ಮಾಡುವವರು ಯಾರು ?

The Hon'ble Sri H. SIDDAIYA.—Local Revenue Officer with the assistance of the villagers.

ಶ್ರೀ ಟಿ. ಮಾದಯ್ಯಗೌಡರು.—ತಮಗೇ ಈ ತರಹ ಕೇಸು ಬಂದಾಗ ಇದು ಉತ್ತಮವಾದ ಜಮೀನು, ಅಥವಾ ಮಧ್ಯಸ್ಥವಾದ ಜಮೀನು ಅಥವಾ ನಿಕೃಷ್ಟವಾದ ಜಮೀನು ಎಂಬುದನ್ನು ತಮ್ಮ ಗಮನಕ್ಕೆ ತರುತ್ತಾರೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು —ಕೆಲವು ಸಂದರ್ಭಗಳಲ್ಲಿ ತರುತ್ತಾರೆ.

ಶ್ರೀ ಟಿ. ಮಾದಯ್ಯ ಗೌಡರು.—ಪ್ರತಿಯೊಂದು ಊರಿನಲ್ಲೂ ಗೋಮಾಳ ಇರುವುದು ಎಷ್ಟು, ಎಷ್ಟು ರಾಸುಗಳಿಗೆ ಗೋಮಾಳ ಬೇಕು, ಗೋಮಾಳ ಹೆಚ್ಚಾಗಿದೆಯೇ, ಕಮ್ಮಿಯಾಗಿದೆಯೇ ಎಂಬುದನ್ನು ಮೊದಲೇ ನಿರ್ಧರಿಸಿ, ಒಂದುವೇಳೆ ಹೆಚ್ಚಾಗಿಲ್ಲದಿದ್ದರೆ ಅದಕ್ಕೆ ದರಖಾಸ್ತು ಕೊಡಕೂದದು ಎಂಬುದಾಗಿ ತೀರ್ಮಾನ ಮಾಡುವುದು ಒಳ್ಳೆಯದಲ್ಲವೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದನ್ನೇ ಆಧಾರವಾಗಿಟ್ಟುಕೊಂಡು ವಿಲೇವಾರಿ ಮಾಡುವುದು.

ಶ್ರೀ ಟಿ. ಮಾದಯ್ಯ ಗೌಡರು.—ಯಾವ್ಯಾವ ಗ್ರಾಮದಲ್ಲಿ ಸರ್ಕಾರಿ ಗೋಮಾಳ ಇದೆಯೋ ಅದಕ್ಕನುಸಾರವಾಗಿ ತಾನೆ ಆಯಾಯ ಗ್ರಾಮಸ್ಥರಿಗೆ ಕಂದಾಯ ವಿಧಿಸಿರುವುದು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ಒಂದೇ ಆಧಾರವಲ್ಲ; ಇನ್ನೂ ಕೆಲವು ಅಂಶಗಳಿವೆ.

ಶ್ರೀ ಟಿ. ಮಾದಯ್ಯ ಗೌಡರು.—ಯಾವ ಗ್ರಾಮದಲ್ಲಿ ಗೋಮಾಳ ವಿಲೇ ಮಾಡಿದ್ದೀರೋ ಆ ಗ್ರಾಮದಲ್ಲಿ ಕಂದಾಯ ಕಡಿಮೆ ಮಾಡುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದಕ್ಕೂ ಈ ಪ್ರಶ್ನೆಗೂ ಸಂಬಂಧವಿಲ್ಲ

ಲೋಕಸೇವಾನಿರತ ಎಂ. ಹನುಮಂತಯ್ಯನವರು (ಬೆಂಗಳೂರು ಜಿಲ್ಲೆ—ನಿಮ್ನವಂಗಡ).—ಸಾಕಷ್ಟು ಗೋಮಾಳ ಇಲ್ಲದೆ ಇರುವ ಕಡೆ ಲಾಂಟಾನ ಬೆಳೆದಿರುವುದು ಗೊತ್ತೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹೆಚ್ಚು ಗೋಮಾಳ ಬೇಕಾಗಿರುವ ಕಡೆ ಕೊಡುತ್ತೇವೆ. ಅನೇಕ ಕಡೆ ಲಾಂಟಾನಾ ಬೆಳೆದಿರುತ್ತೆ.

ಶ್ರೀ ಎಂ. ಹನುಮಂತಯ್ಯನವರು.—ಅನೇಕ ಗೋಮಾಳಗಳಲ್ಲಿ ಹುಲ್ಲು ಬೆಳೆಯದೇ ಇರುವುದು ಗೊತ್ತೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ಎಲ್ಲರಿಗೂ ತಿಳಿದಿರತಕ್ಕ ವಿಚಾರ.

Proposal for starting a Tuberculosis Sanatorium in Kolar Gold Fields.

Q.—113. **Sri MUNISWAMY** (Kolar District—Depressed Class).—

Will the Government be pleased to state :—

(*a*) what happened to the amount that was collected for starting a T. B. Sanatorium ;

(*b*) whether they would consider the proposal of starting a T. B. Sanatorium in Kolar Gold Fields with the amount collected for that purpose from the public ?

A. **The Hon'ble Sri H. SIDDAIYA** (Minister for Revenue and Excise).—

(*a*) No amount was collected by the Medical Department for starting a T. B. Sanatorium at Kolar Gold Fields.

(b) Proposals are now under consideration for starting a Block of 30 beds for T. B. patients, attached to the Civil Hospital, K. G. F.

Sri M. MUNISWAMY.—With reference to the answer to (*b*), may I know whether it is not necessary to have a Separate T. B. Sanatorium in a big industrial City like Kolar Gold Fields ?

***The Hon'ble Sri H. SIDDAIYA.**—It is necessary but there is the question of funds.

Sri M. MUNISWAMY.—Is there any other difficulty in starting a Sanatorium in Kolar Gold Fields ?

The Hon'ble Sri H. SIDDAIYA.—I said " funds ".

Sri M. MUNISWAMY.—What happened to the amount of Rs. 18,300 collected from the public of Kolar Gold

(SRI M. MUNISWAMY.)

Fields in 1938 for starting a separate Sanatorium in the name of late King George ?

The Hon'ble Sri H. SIDDAIYA.—I understand that the collection made is in the name of Captain G. B. Willius and in that connection a cheque for Rs. 10,000 was given by the Kolar Mining Companies in that year.

Sri M. MUNISWAMY.—Could the Government allot all the amount collected for the purpose of the Sanatorium ?

The Hon'ble Sri H. SIDDAIYA.—I may say in this connection that the members of the Kolar Gold Fields Sanitary Board had made a representation to the Hon'ble Chief Minister in the month of July for starting a T. B. hospital. Attempts are being made; proposals are being made; and it is under the active consideration of the Government.

Sri G. A. ACHARYA (Bangalore District—General).—Have the Government added interest to that amount?

The Hon'ble Sri H. SIDDAIYA.—It is not with us.

Sri G. A. ACHARYA.—I understand that the principal should have been doubled by now.

The Hon'ble Sri H. SIDDAIYA.—That amount is not handed over to the Government.

Sri M. GOVINDA REDDY (Chitaldrug District—General).—Have the Mining Companies come forward with donation ?

The Hon'ble Sri H. SIDDAIYA.—We are consulting them now.

Mr. SPEAKER.—Question time is over.

SHORT NOTICE QUESTIONS AND ANSWERS.

Deaths due to snapping of electric wires on the ground in the Brigade Road, Bangalore.

Q.—5. Sri H. C. LINGA REDDY (Kolar District—General).—

Will the Government be pleased to state :—

(a) whether they are aware of the tragic incident resulting in the death of three people in the Brigade Road, Bangalore, on 7-10-1951 at 8 P.M. ;

(b) whether the deaths were due to high voltage electric wires coming into contact with the persons ;

(c) why had the electric wires fallen on the ground ;

(d) is it because they were old and worn out ;

(e) whether it is true that there are many such old and worn out high voltage insulators ?

A.—The Hon'ble Sri K. T. BHASHYAM (Minister for Law and Labour).—

(a) Yes.

(b) Yes.

(c) An insulator snapped owing to lightning stroke and the wire also snapped as a result.

(d) No.

(e) No.

Sri H. C. LINGA REDDY.—Had these insulators been examined prior to the rainy season ?

The Hon'ble Sri K.T. BHASHYAM.—They are being examined periodically from time to time ; not merely before the rains but all through the year.

Sri H. C. LINGA REDDY.—With reference to the answer to (c) may I know whether immediately after the lightning stroke the matter was ascertained by the Electrical Department and whether they rushed to the spot ?

The Hon'ble Sri K.T. BHASHYAM.—The accident took place almost at the same time as the snapping of the wire. As Major Koshi was getting down from his car the wire snapped and fell and as soon as the matter came to the notice of the Department the authorities rushed to the spot and effected repairs.

Sri H. C. LINGA REDDY.—How long after the information reached the department the authorities came to the spot ?

The Hon'ble Sri K.T.BHASHYAM.—Immediately after they came to know of the accident the current was switched off and the repairs made.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಈ ರೀತಿಯಾಗಿ ತಂತಿ

ಗಳು ಕೆಳಗೆ ಬಿದ್ದು ಇನ್ನೂ ಅನೇಕ ಕಡೆಗಳಲ್ಲಿ ಜನಗಳಿಗೆ ಅಪಾಯವಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಕೆಲವು ಆಗಿಂದಾಗ್ಯೆ ಆಗಿರುವುದು ನಮ್ಮ ಗಮನಕ್ಕೆ ಬಂದಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಈ ಲೈನುಗಳನ್ನು ತನಿಖೆ ಮಾಡುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ?

The Hon'ble Sri K.T. BHASHYAM.—We have got a regular inspection staff who go about inspecting these places.

ಶ್ರೀ ಎಸ್. ರಂಗರಾಮಯ್ಯನವರು.—ಅದಕ್ಕೆ ಏನಾದರೂ ಒಂದು ಸಿಬ್ಬಂದಿ ಇದೆಯೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇನ್ಸ್‌ಪೆಕ್ಷನ್ ಸ್ಟ್ಯಾಫ್ ಇದೆ.

ಶ್ರೀ ಎಸ್. ರಂಗರಾಮಯ್ಯನವರು.—ಎಷ್ಟು ದಿನಕ್ಕೆ ಒಂದಾವರ್ತಿ ಇನ್ಸ್‌ಪೆಕ್ಷನ್ ಮಾಡುತ್ತಾರೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—All through the year ಇನ್‌ಸ್ಪೆಕ್ಟ್ ಮಾಡುತ್ತಲೇ ಇರುತ್ತಾರೆ. ಏನಾದರೂ ವಿಶೇಷ ಫಿರ್ಯಾದು ಬಂದರೆ ಕೂಡಲೇ ಹೋಗಿ ನೋಡುತ್ತಾರೆ.

ಶ್ರೀ ಎಸ್. ರಂಗರಾಮಯ್ಯನವರು.—ತಂತಿ ಕೆಳಗೆ ಬೀಳುವುದಕ್ಕೆ ಕಾರಣ ಇನ್ಸುಲೇಟರ್ ಒಡೆದದ್ದೇ ಅಥವಾ ಸರಿಯಾಗಿ ತಂತಿ ಬಿಗಿಯದೇ ಇದ್ದದ್ದೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇನ್ಸುಲೇಟರ್ ಒಡೆದುಹೋಗಿದೆಯೆಂದು ವರದಿ ಬಂದಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಹೀಗೆ ಅಕಸ್ಮಾತ್ತಾಗಿ ಅಪಾಯಕ್ಕೊಳಗಾಗಿರುವವರಿಗೆ ಪರಿಹಾರ ಕಟ್ಟಿಕೊಡುತ್ತೀರಾ ?

The Hon'ble Sri K.T. BHASHYAM.—That does not arise out of this question.

Sri K. SAMPANGI RAMIAH (Kolar District—General).—Is not lightning an act of God ?

The Hon'ble Sri K.T. BHASHYAM.—Undoubtedly it is.

Deaths in Brigade Road due to electrocution.

Q.—6. Sri V. M. MASCARENHAS (Retroceded Area—General).—

Will the Government be pleased to state :—

(*a*) whether they are aware of the gruesome tragedy that took place on Sunday the 7th instant on Brigade Road by electrocution ;

(*b*) the steps they will take to see that such tragedies do not occur in future ?

A.—The Hon'ble Sri K. T. BHASHYAM (Minister for Law and Labour).—

(*a*) Yes.

(*b*) Every precaution is being taken to avoid such accidents.

Sri V. M. MASCARENHAS.—Do the Government emphatically say that this incident was beyond the control of the department ?

The Hon'ble Sri K.T. BHASHYAM.—I am afraid I have to say "yes".

Sri V. M. MASCARENHAS.—Is it wise to carry wires of 4,000 and 11,000 volts right in the heart of the City where there is such heavy traffic ?

The Hon'ble Sri K.T. BHASHYAM.—Undoubtedly it is not desirable but we cannot have all our own way because instead of overhead wires we have to have underground cables. It would mean quite a lot of money. Even so, we are trying as far as possible to replace overhead wires by underground cables.

Sri V. M. MASCARENHAS.—Four years ago a scheme was submitted to the Government that all overhead wires should be replaced by underground cables ; is it not so ?

The Hon'ble Sri K.T. BHASHYAM.—I am glad the question has been put by the Hon'ble Member. We have such a scheme ; we have estimated it at ninety lakhs and the Finance Department was good enough to sanction thirty lakhs for it and we are going ahead with it.

Sri V. M. MASCARENHAS.—At least now will the Government put some kind of screening underneath these high tension wires to see that accidents can be minimised ?

The Hon'ble Sri K. T. BHASHYAM.—We will have to screen all the distance and still if we leave about 200 yards and if this snapping happens, an accident might occur.

Desirability of holding Mock Elections before General Elections.

Q.—1. **Sri H. C. LINGA REDDY** (Kolar District—General).—

Will the Government be pleased to state :—

(*a*) whether they held a mock election on 29-9-1951 at Thippagondanahalli ;

(*b*) the arrangements made by them for holding mock elections in the whole State before the General Elections ;

(*c*) the view of the Government of the mock election held (as regards its success or otherwise) on 29-9-1951 ?

A.—**The Hon'ble Sri K. T. BHASHYAM** (Minister for Law and Labour).—

(*a*) Yes.

(*b*) Mock elections are arranged to be held at the rate of one in each district well before the General Elections commence. The mock election for the Mysore District was held on 10-11-1951 and the elections in the other districts will follow in quick succession, the dates being settled in a few days.

(*c*) The mock election at Thippagondanahalli was a success in that it had an educative value to the large number of rural voters that voted, the officers who were to be made responsible for the conduct of elections and the public including prominent members of the several political parties who had gathered there.

Sri H. C. LINGA REDDY.—You said that the mock election at Thippagondanahalli was a success. How many voters participated in it ?

The Hon'ble Sri K.T. BHASHYAM.—I think about 300 had come.

Sri H. C. LINGA REDDY.—What is the total number of voters in that constituency ?

The Hon'ble Sri K.T. BHASHYAM.—About 1,000 or 1,100.

Sri H. C. LINGA REDDY.—Thereby you will be giving opportunity only to the voters of that taluk. What about the voters of other taluks ?

The Hon'ble Sri K.T. BHASHYAM.—We have asked the Deputy Commissioners to hold mock elections in one or two more places in a district. But they cannot hold mock elections in all other places.

Sri H. C. LINGA REDDY.—What would be the cost to Government for each mock election ?

The Hon'ble Sri K.T. BHASHYAM.—It may not exceed about Rs. 200.

Sri H. C. LINGA REDDY.—Then, what about the experiment in other taluks ? If a mock election is held in one taluk, it is only for the people of that taluk to have the opportunity to see.

The Hon'ble Sri K.T. BHASHYAM.—It is not possible to have mock election in every polling station because we have 3,200 polling stations. The object of holding this mock election is to enable the officers to find out what arrangements should be made so that the elections may be held in a perfectly good order and incidentally the people who come to vote will also learn how to vote. But let me say that in Mysore almost all the people know how to vote and the system of voting will be explained also to them.

Sri H. C. LINGA REDDY.—In the mock election at Thippagondanahalli, how many of the votes were invalid out of the 300 ?

The Hon'ble Sri K.T. BHASHYAM.—Quite a few.

Sri G. A. ACHARYA (Bangalore District—General).—Is it true that you have filmed the Thippagondanahalli mock election ?

The Hon'ble Sri K.T. BHASHYAM.—I do not know, but there were some photographers.

Sri G. A. ACHARYA.—Is it not necessary to release them in other parts of the State to educate the public ?

The Hon'ble Sri K. T. BHASHYAM.—It is now contemplated by the Government to have some of these films and have them publicized.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ನಂಜನಗೂಡಿನಲ್ಲಿ ಆದಂಥ ಚುನಾವಣೆಯ ವಿಚಾರದಲ್ಲಿ ಲೋಪದೋಷಗಳೇನಾದರೂ ತಮಗೆ ವರದಿಯಾಗಿದೆಯೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಲೋಪದೋಷಗಳೇನೂ ಹೆಚ್ಚಿಗೆ ಇರಲಿಲ್ಲ. ಯಾರೋ ಒಬ್ಬರು ಒಂದು ಪ್ರಶ್ನೆ ಹಾಕಿದರು; "ಪ್ಲೂರಲ್ ಮೆಂಬರ್ ಚುನಾವಣಾ ಕ್ಷೇತ್ರದಲ್ಲಿ ಎರಡು ಬ್ಯಾಲೆಟ್ ಪೇಪರ್‌ಗಳನ್ನು ಕೊಡುತ್ತೀರಿ,—ಒಂದು ಜನರಲ್ ಸ್ಥಾನಕ್ಕೆ, ಇನ್ನೊಂದು ಷೆಡ್ಯೂಲ್ಡ್ ಸ್ಥಾನಕ್ಕೆ—ಎಂದು. ಅವೆರಡನ್ನೂ ಜನರಲ್ ಸ್ಥಾನದ ಪೆಟ್ಟಿಗೆಗಳಿಗೇ ಹಾಕಿಬಿಟ್ಟರೆ ಏನು ಮಾಡುತ್ತೀರಿ" ಎಂದು. ಈ ಬಗ್ಗೆ ನಿಯಮವಿರುವುದು ಇಷ್ಟೆ: You cannot force a man to vote one for the general seat and the other for the schedule seat. We give two ballot papers and it is open to him to put one in the general seat box and the other in the schedule seat box or both in the general seat boxes, one in each box. ಇದರ ಪ್ರಕಾರ ಅವರಿಗೆ ತಿಳಿಸಲಾಯಿತು.

ಶ್ರೀ ಎಸ್. ರಂಗರಾಮಯ್ಯನವರು.—ರಿಸರ್ವ್ಡ್ ಸ್ಥಾನಕ್ಕೆ ಕೊಡುವ ಓಟಿನ ಕಾಗದಕ್ಕೇನಾದರೂ ಬೇರೆ ಗುರ್ತು ಮಾಡಿದ್ದೀರಾ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಬೇರೆಯಾದ ಗುರುತೇನೂ ಇಲ್ಲ. ಈಗ ನಾವು ಮಾಡಿರುವುದರಲ್ಲಿ ಬ್ಯಾಲೆಟ್ ಪೇಪರುಗಳಲ್ಲಿ 'A' ಮತ್ತು 'A₁', ಎಂದು ಸ್ವಲ್ಪ ವ್ಯತ್ಯಾಸ ಮಾಡಿದ್ದೇವೆ. ಅದಕ್ಕೆ ಬೇರೆ ಗುರುತನ್ನು ಹಾಕುವುದಕ್ಕೆ ಅವಕಾಶವಿಲ್ಲ. ಏಕೆಂದರೆ, It is not meant to force the voter to put it in the Schedule seat box alone. There is no such distinction.

ಶ್ರೀ ಎಸ್. ರಂಗರಾಮಯ್ಯನವರು.—ಹಾಗೆ ಮಾಡದೆ ಇದ್ದರೆ, ಎರಡು ಓಟಿನ ಕಾಗದಗಳನ್ನೂ ಜನರಲ್ ಸೀಟ್ ಪೆಟ್ಟಿಗೆಗೇ ಕೊಟ್ಟುಬಿಟ್ಟರೆ ಜನರಲ್ ಸೀಟ್ ಪೆಟ್ಟಿಗೆಯಲ್ಲಿ ಓಟಿಂಗ್ ಜಾಸ್ತಿಯಾಗುತ್ತದೆ, ರಿಸರ್ವ್ಡ್ ಸೀಟ್ ಪೆಟ್ಟಿಗೆಯಲ್ಲಿ ಕಡಿಮೆಯಾಗುತ್ತದೆಂದು ಯಾರೂ ಹೇಳಲಿಲ್ಲವೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹೇಳಿದರು. ಆದರೆ It is immaterial. Even if one member in the Schedule seat gets only two votes and the other man gets only one, the man who gets two votes will succeed. It is a reserved seat.

ಶ್ರೀ ಎಸ್. ರಂಗರಾಮಯ್ಯನವರು.—ರಿಜರ್ವ್ಡ್ ಸೀಟಿನ ಪೆಟ್ಟಿಗೆಯನ್ನು ಬೇರೆ ಕಡೆಯಾದರೂ ಇಡಬೇಕೆಂದು ಯಾರೂ ಹೇಳಲಿಲ್ಲವೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದನ್ನು ಮಾಡಿಯೇ ಮಾಡಿದ್ದೇವೆ. ಪ್ಲೂರಲ್ ಮೆಂಬರ್ ಚುನಾವಣಾ ಕ್ಷೇತ್ರದಲ್ಲಿ, ಜನರಲ್ ಸ್ಥಾನದ ಪೆಟ್ಟಿಗೆಯನ್ನೇ ಬೇರೆ ಇಡುತ್ತೇವೆ, ಷೆಡ್ಯೂಲ್ಡ್ ಸ್ಥಾನದ ಪೆಟ್ಟಿಗೆಯನ್ನೇ ಬೇರೆ ಕಡೆ ಇಡುತ್ತೇವೆ. ಆದರೆ ಮಾತ್ರ ಎರಡೂ ಒಂದೇ ಸ್ಕ್ರೀನಿನಲ್ಲೇ ಇರುತ್ತದೆ, ಅಷ್ಟೆ.

ಶ್ರೀ ಎಸ್. ರಂಗರಾಮಯ್ಯನವರು.—ನಂಜನಗೂಡಿನಲ್ಲಿ ನಡೆದ ಚುನಾವಣೆಯಲ್ಲಿ ಎರಡೂ ಒಂದೇ ಕಡೆಯಲ್ಲಿತ್ತೆಂದು ಹೇಳಿ ಕೆಲವರಿಗೆ ಸರಿಯಾಗಿ ಓಟುಮಾಡಲು ಗೊತ್ತಾಗಲಿಲ್ಲವೆಂದು ತಿಳಿಸಲಿಲ್ಲವೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಬೇರೆ ಕಡೆಯೇ ಇತ್ತು. ಆದರೂ ನಾನಾಗಲೇ ಹೇಳಿದಂತೆ ಒಂದೇ ಸ್ಕ್ರೀನಿನಲ್ಲಿತ್ತು.

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ—ನಿಮ್ನ ಪಂಗಡ).—ಈ ಚುನಾವಣೆಯಲ್ಲಿ ಓಟಿಂಗ್ ಕೋಣೆಗಳು ಬೇರೆಯಾಗಿ ಸಾರ್ವಜನಿಕ ಕ್ಷೇತ್ರಕ್ಕೇ ಒಂದು ಕಡೆ, ಷೆಡ್ಯೂಲ್ಡ್ ಕ್ಷೇತ್ರಕ್ಕೇ ಒಂದು ಕಡೆ ಮಾಡಿಲ್ಲವೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ನಾನಾಗಲೇ ಹೇಳಿದಂತೆ ಸಾರ್ವಜನಿಕ ಸ್ಥಾನಕ್ಕೆ ಸೇರಿದ ಪೆಟ್ಟಿಗೆಯೇ ಬೇರೆ ಕಡೆ ಇರುತ್ತೆ; ಷೆಡ್ಯೂಲ್ಡ್ ಸ್ಥಾನಕ್ಕೆ ಸೇರಿದ್ದೇ ಬೇರೆ ಕಡೆ ಇರುತ್ತೆ. But both within the same screen.

ಶ್ರೀ ಎಂ. ಮಾದಯ್ಯನವರು.—ಒಂದೇ ಸ್ಕ್ರೀನ್ ಬೇಡವೆಂತಲೇ ನಾವೀಗ ಹೇಳುತ್ತಿರುವುದು. ಪ್ರತ್ಯೇಕ ಸ್ಕ್ರೀನ್‌ಗಳನ್ನು ಮಾಡುವುದೇ ಒಳ್ಳೆಯದಲ್ಲವೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಈಗ ಹಾಗಿಲ್ಲ.

ಶ್ರೀ ಎಂ. ಮಾದಯ್ಯನವರು.—ಆ ರೀತಿಯಾಗಿಲ್ಲದಿದ್ದರೆ ಎಲ್ಲರೂ ಓಟ್ ಮಾಡಲಿಕ್ಕೆ ಒಂದೇ ಕಡೆ ಹೋಗಿ confuse ಮಾಡಿಕೊಳ್ಳುವುದಿಲ್ಲವೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—Confuse ಆಗುವುದಿಲ್ಲ. ಏಕೆಂದರೆ ಪ್ರತಿಯೊಬ್ಬರಿಗೂ ಬೇರೆ ಬೇರೆ ಎರಡು ಬ್ಯಾಲೆಟ್ ಕಾಗದಗಳನ್ನು ಕೊಟ್ಟು ಒಂದನ್ನು ಒಂದು ಪೆಟ್ಟಿಗೆಯಲ್ಲಿಯೂ ಇನ್ನೊಂದನ್ನು ಇನ್ನೊಂದು ಪೆಟ್ಟಿಗೆಯಲ್ಲಿಯೂ ಹಾಕಬೇಕೆಂದು ಹೇಳಿರುತ್ತೇವೆ. ಎರಡನ್ನೂ ಒಂದೇ ಕಡೆ ಹಾಕಕೂಡದು. ಅಷ್ಟೆ.

ಶ್ರೀ ಎಂ. ಮಾದಯ್ಯನವರು.—ಓಟು ಮಾಡುವವರಲ್ಲಿ ಅನೇಕರು ಅನಕ್ಷರಸ್ಥರಾಗಿರುವುದರಿಂದ ಈ ರೀತಿಯಾಗಿ ತಾರತಮ್ಯ ಮಾಡುವುದು ಅವರಿಗೆ ಕಷ್ಟವಾಗಿರುವುದರಿಂದ ಹೀಗೆ ಒಂದೇ ಕಡೆ ಇಡುವುದನ್ನು ತಪ್ಪಿಸುವುದಕ್ಕಾಗುವುದಿಲ್ಲವೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹಾಗೇನೂ ಕಷ್ಟವಾಗುವುದಿಲ್ಲವೆಂದು ನಮ್ಮ ಭಾವನೆ. ಒಂದು ವೇಳೆ ಹಾಗೇನಾದರೂ ಆಗುತ್ತದೆಂದು ಕಂಡು ಬಂದರೆ ತಕ್ಕ ಏರ್ಪಾಡು ಮಾಡುತ್ತೇವೆ.

ಶ್ರೀ ಎಂ. ಮಾದಯ್ಯನವರು.—ಹಾಗಿಲ್ಲದಿದ್ದರೆ, ಜನರಲ್ ಸ್ಥಾನಕ್ಕೆ ಓಟ್ ಮಾಡುವುದಕ್ಕೇ ಒಂದು ಸಲ ಕಳುಹಿಸಿ, ಅಲ್ಲಿಂದ ಬಂದ ಮೇಲೆ ಷೆಡ್ಯೂಲ್ಡ್ ಸ್ಥಾನಕ್ಕೆ ಓಟ್‌ಮಾಡುವುದಕ್ಕೆ ಇನ್ನೊಂದು ಸಾರಿ ಕಳುಹಿಸಿದರೆ ಒಳ್ಳೆಯದಲ್ಲವೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹಾಗೆ ಮಾಡಬೇಕಾದ ಅವಶ್ಯಕತೆ ಕಂಡು ಬಂದಿಲ್ಲ.

ಶ್ರೀ ಎಂ. ಮಾದಯ್ಯನವರು.—ಈ ಬ್ಯಾಲೆಟ್ ಕಾಗದಗಳಿಗೆ ಬೇರೆ ಬೇರೆ ಬಣ್ಣವಿರುವಂತೇನಾದರೂ ಮಾಡಿದ್ದೀರಾ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಪೆಟ್ಟಿಗೆಗಳಿಗೆ ಬೇರೆ ಬಣ್ಣವಿದೆ ಅಷ್ಟೆ. ಅಲ್ಲದೆ, ಅಸೆಂಬ್ಲಿ ಚುನಾವಣೆಗೆ ಸಂಬಂಧಪಟ್ಟ ಬ್ಯಾಲೆಟ್ ಕಾಗದಗಳೇ ಬೇರೆ ಇವೆ, ಕೇಂದ್ರ ಪಾರ್ಲಿಮೆಂಟಿನ ಚುನಾವಣಾ ಸ್ಥಾನಗಳ ಚುನಾವಣಾ ಬ್ಯಾಲೆಟ್ ಕಾಗದಗಳೇ ಬೇರೆ ಇವೆ.

ಶ್ರೀ ಎಂ. ಮಾದಯ್ಯನವರು.—ಒಂದು ಪಾರ್ಟಿಗೆ ಒಂದು ಚಿಹ್ನೆ ಕೊಟ್ಟು ಇನ್ನೊಂದು ಪಾರ್ಟಿಗೂ ಅದೇ ಚಿಹ್ನೆ ಕೊಟ್ಟಿದ್ದರೆ ಜನರಿಗೆ ಸರಿಯಾಗಿ ಓಟು ಮಾಡುವುದಕ್ಕೆ ಕಷ್ಟವಾಗುವುದಿಲ್ಲವೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಯಾವ ಎರಡು ಪಾರ್ಟಿಗಳಿಗೂ ಒಂದೇ ಚಿಹ್ನೆ ಯಾವುದನ್ನೂ ಕೊಟ್ಟಿಲ್ಲ. ಈಗ 14 ಅಖಿಲ ಭಾರತ ಪಾರ್ಟಿ ಚಿಹ್ನೆಗಳನ್ನು ಕೊಟ್ಟಿದೆ. ಈಗ ಹೊಸದಾಗಿ ಜನತಾಪಾರ್ಟಿಗೆ 'ತಕ್ಕಡಿ' ಚಿಹ್ನೆಯನ್ನು ಕೊಟ್ಟರೂ ಇನ್ನೂ 11 ಚಿಹ್ನೆಗಳು ಉಳಿದಿವೆ. ಒಂದೇ ಚಿಹ್ನೆಯನ್ನು ಎಲ್ಲೂ ಎರಡು ಪಾರ್ಟಿಗಳಿಗೆ ಕೊಟ್ಟಿಲ್ಲ.

ಶ್ರೀ ಜಿ. ನಾರಾಯಣಗೌಡರು (ಕೋಲಾರ ಜಿಲ್ಲೆ).—ಈಗ ತಾವು ಅಭ್ಯಾಸ ಚುನಾವಣೆಗಳನ್ನು ನಡೆಸಿದರಲ್ಲಾ, ಅಲ್ಲಿ ಮೊದಲು ಮತದಾರರಿಗೆಲ್ಲಾ ತಕ್ಕಮಟ್ಟಿಗೆ ತಿಳಿವಳಿಕೆ ಕೊಟ್ಟಿದ್ದೀರಾ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಮೊದಲೇ 'ಟಾಂ,ಟಾಂ' ಮಾಡಿ ಹೀಗೆ ಚುನಾವಣೆ ನಡೆಯುತ್ತಿದೆ. ಬೇಕಾದವರೆಲ್ಲರೂ ಬಂದು ಮತದಾರರ ಪಟ್ಟಿಯಲ್ಲಿ ಸೇರಿಕೊಳ್ಳಬಹುದೆಂದು ಹೇಳಿದ್ದೆವು. ಈ ವಿಚಾರವನ್ನು ಈಗಲ್ಲದೆ ಒಂದು ವರ್ಷದಿಂದಲೂ ತಿಳಿಸಿದ್ದೆವು. ಓಟಿಂಗ್ ಹೀಗೇ ಮಾಡಬೇಕೆಂದು ಹೇಳಿದ್ದೇವೆ.

ಶ್ರೀ ಜಿ. ನಾರಾಯಣಗೌಡರು.—ಈ ಅಭ್ಯಾಸ ಚುನಾವಣೆಗಳೆಂಬುದು ಸಂಬಂಧಪಟ್ಟ

ಅಧಿಕಾರಿಗಳಿಗೆ ಸರಿಯಾಗಿ ತಿಳಿವಳಿಕೆ ಕೊಡುವುದಕ್ಕಲ್ಲವೇ ಮಾಡಿದ್ದು ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.— ಅದನ್ನು ಮೊದಲೇ ಹೇಳಿದ್ದೇನೆ. ಮುಖ್ಯವಾದ ಉದ್ದೇಶ ನಮ್ಮ ಅಧಿಕಾರಿಗಳಿಗೆ ಈ ವಿಚಾರದಲ್ಲಿ ಸರಿಯಾದ ತಿಳಿವಳಿಕೆ ಕೊಡುವುದು ಮತ್ತು ಯಾವ ಯಾವ ಸಿಬ್ಬಂದಿ ಏರ್ಪಾಡು ಮಾಡಿಕೊಳ್ಳಬೇಕೆಂಬುದನ್ನು ತಿಳಿಯುವುದಕ್ಕೆ ಮತ್ತು ಚುನಾವಣೆಯಲ್ಲಿ ಏನೇನು ಲೋಪದೋಷಗಳು ಬರುತ್ತವೆಂಬುದನ್ನು ತಿಳಿದುಕೊಳ್ಳುವುದಕ್ಕೆ ಎಂದು. Incidentally ಜನರಿಗೂ ಸ್ವಲ್ಪ ಮಟ್ಟಿಗೆ ತಿಳಿವಳಿಕೆ ಕೊಟ್ಟಹಾಗಾಗುತ್ತದೆ. People also begin to know about this system of voting.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).—ಡಬ್ಬಲ್ ಮೆಂಬರ್ ಚುನಾವಣಾ ಕ್ಷೇತ್ರದಲ್ಲಿ ಎರಡಕ್ಕೂ ಒಂದೇ ಪಾರ್ಟಿ ಟಿಕೆಟ್ ಮೇಲೆ ನಿಲ್ಲುವಾಗ ಅವರಿಗೆ ಬೇರೆಬೇರೆ ಬಣ್ಣ ಕೊಟ್ಟಿರುತ್ತೀರಾ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.— ಅಸೆಂಬ್ಲಿ ಚುನಾವಣೆಗೆ ಚಾಕೊಲೇಟ್ ಬಣ್ಣದ ಪೆಟ್ಟಿಗೆಯನ್ನೂ ಕೇಂದ್ರ ಪಾರ್ಲಿಮೆಂಟಿನ ಚುನಾವಣೆಗೆ ಆಲಿವ್ ಹಸರುಬಣ್ಣದ ಪೆಟ್ಟಿಗೆಯನ್ನೂ ಕೊಟ್ಟಿದೆ.

ಶ್ರೀ ಎಚ್. ಕೆ. ವೀರಣ್ಣಗೌಡರು.— ಒಂದೊಂದು ಪಾರ್ಟಿಯವರಿಗೂ ಬೇರೆ ಬೇರೆ ಬಣ್ಣವನ್ನೇಕೆ ಕೊಡಕೂಡದು ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.— ಈಗ ಆ ರೀತಿ ಮಾಡಿಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಹಾಗೆ ಕೊಡುವುದು ಸೂಕ್ತವಲ್ಲವೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.— ಯೋಚನೆ ಮಾಡುತ್ತೇವೆ. ಬೇರೆಯಾಗಿ ಕೊಡಬೇಕೆಂದು ಹೇಳಿದರೆ, ಹಾಗೆ ಯಾರನ್ನೇ ಆಗಲಿ ಮೊದಲು ಜನರಲ್ ಸ್ಥಾನಕ್ಕೆ ಓಟ್ ಮಾಡಿ ಎಂದು ಹೇಳಿ ಆ ಮೇಲೆ ಷೆಡ್ಯೂಲ್ಡ್ ಸ್ಥಾನಕ್ಕೆ ಓಟ್ ಮಾಡಿ ಎಂದು ಬಲಾತ್ಕಾರಮಾಡುವುದಕ್ಕೆ ನಮಗೆ ಅಧಿಕಾರವಿಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡರು.— ಡಬ್ಬಲ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿಯಲ್ಲಿ A ಮತ್ತು A_1 ಎಂದು ಎರಡು ಕಾಗದಗಳನ್ನು ಕೊಡುವುದನ್ನು, ಎರಡನ್ನೂ ಒಂದಕ್ಕೇ ಹಾಕಿದರೆ ಏನು ಮಾಡುತ್ತೀರಿ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.— A_1 ಕಾಗದವನ್ನು ತೆಗೆದುಹಾಕಿ ಬೇರೆಯದನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಳ್ಳುತ್ತಾರೆ.

Sri H. SIDDAVEERAPPA (Chitaldrug District—General).—Can you not avoid the system of issuing ballot papers simultaneously ? Can you not issue one first and the other later ?

The Hon'ble Sri K.T. BHASHYAM.— Now, we issue a ballot paper for the Assembly. Single Member constituency ಯಲ್ಲಿ ತೊಂದರೆ ಇರುವುದಿಲ್ಲ. ಒಂದೇ ಬ್ಯಾಲೆಟ್ ಪೇಪರ್ ಕೊಡುತ್ತೇವೆ. ಅದನ್ನು ಓಟ್ ಮಾಡಿದ ಮೇಲೆ ಇನ್ನೊಂದು ಕೊಡುತ್ತೇವೆ. ಪ್ಲೂರಲ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿಯಲ್ಲಿ ಎರಡು ಬ್ಯಾಲೆಟ್ ಕಾಗದ ಕೊಡುತ್ತೇವೆ. ಓಟು ಮಾಡುವ ಕಾಲದಲ್ಲಿ, we cannot force a voter to vote for a Schedule Caste candidate or for any general candidate. It is open to the voter to give one vote for a general constituency and one for the Schedule constituency. It is also open to him to give both the votes to two members in the general seat or to two members in the Schedule Constituency. He who gets the largest number of votes in the Schedule seat, will be declared as elected for the reserved seat.

Sri H. SIDDAVEERAPPA.- It is open to the voters to vote or not to vote. But in the matter of issuing the ballot paper, he may refuse to receive. What is the harm in bringing this practice of issuing ballot papers separately, rather than simultaneously, for the general seat and Schedule seat ?

The Hon'ble Sri K.T. BHASHYAM.— It is forcing a man. Supposing a man votes for a general seat and then if you give a ballot paper to vote for the Schedule seat, you will be forcing him to vote.

Sri H. SIDDAVEERAPPA.—He may refuse to receive the ballot paper. Supposing he refuses ? The suggestion to give the ballot papers separately is only with a view to avoid confusion. In view of the fact that most of our voters are not literate, would it not be better to consider this aspect ?

The Hon'ble Sri K.T. BHASHYAM.—There are certain aspects which will have to be considered in this connection. In the first place, it is necessary to see whether it is desirable to issue ballot papers separately. If we have to issue ballot papers differently in double member constituencies for the Parliamentary voters and for the Assembly, you will have to issue ballot papers four times and so the staff will have to be increased correspondingly. We will consider it anyway. I have already answered the question of Sri M. Madiah in this behalf.

Mushir-ul-Mulk J. MOHAMED IMAM (Chitaldrug *cum* Tumkur—Muslim).—Apart from holding mock election, is it not desirable to prepare pamphlets .... ?

The Hon'ble Sri K.T. BHASHYAM.—It is matter of opinion. But I refer to this matter in the statement that I am going to make now.

Janab J. MOHAMED IMAM.—I am satisfied.

Sri L. SIDDAPPA (Shimoga District—General).—I find there are only 77 constituencies in the State. Is it not possible to arrange to hold mock election in each constituency ?

The Hon'ble Sri K.T. BHASHYAM.—We will have to consider it. I have already stated that we have asked the Deputy Commissioner to hold one or more mock elections. Wherever it is possible, we will hold mock elections.

ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—ಓಟುದಾರರು ಪೋಲಿಂಗ್ ಬೂತ್‌ಗೆ ಹೋದಾಗ ಪ್ರಿಸೈಡಿಂಗ್ ಆಫೀಸರುಗಳು ಅವರಿಗೇನಾದರೂ ತಿಳಿವಳಿಕೆ ಕೊಡುತ್ತಾರೆಯೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಆಯಾ ಸಂದರ್ಭಾನುಸಾರ ಹೋಗುತ್ತದೆ.

ಶ್ರೀ ಬಿ. ಚನ್ನಬೈರೇಗೌಡರು.—ಯಾರ ಯಾರ ಪೆಟ್ಟಿಗೆ, ಯಾರ ಯಾರ ಚಿಹ್ನೆಗಳು ಎಂಬದನ್ನು ಹೇಳುತ್ತಾರೆಯೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದನ್ನೆಲ್ಲಾ ಹೇಳುವುದಕ್ಕಾಗುವುದಿಲ್ಲ, Secrecy of ballot ಇರುವುದರಿಂದ ಅದಾಗುವುದಿಲ್ಲ. ಒಂದೊಂದು ಓಟಿನ ಚೀಟಿಯನ್ನು ಒಂದೊಂದು ಪೆಟ್ಟಿಗೆಗೆ ಹಾಕಬೇಕೆಂದು ಮಾತ್ರ ಹೇಳುತ್ತಾರೆ.

ಶ್ರೀ ಬಿ. ಚನ್ನಬೈರೇಗೌಡರು.—ಓಟುದಾರರು ಇಂತಹವರ ಪೆಟ್ಟಿಗೆ ಯಾವುದೆಂದು ಕೇಳಿದರೆ ಹೇಳುವುದಕ್ಕಾಗುವುದಿಲ್ಲವೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ. ಚನ್ನಬೈರೇಗೌಡರು.—ತಿಪ್ಪಗೊಂಡನಹಳ್ಳಿಯಲ್ಲಿ ಮಾಕ್ ಎಲೆಕ್ಷನ್ ನಡೆದಾಗ ಸುಮಾರು ಎಷ್ಟು ಓಟುಗಳು ಪೋಲ್ ಆದವು ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಸುಮಾರು 300.

ಶ್ರೀ ಬಿ. ಚನ್ನಬೈರೇಗೌಡರು.—ಎಷ್ಟು ಓಟರುಗಳಿಗೆ ಒಂದು ಬೂತ್‌ನಂತೆ ಏರ್ಪಾಡಾಗಿದೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಒಂದೊಂದು ಸಾವಿರ ಓಟರಿಗೆ ಒಂದೊಂದು ಪೋಲಿಂಗ್ ಸ್ಟೇಷನ್ ಎಂದು ಉತ್ತರ ಕೊಟ್ಟಿದೆ.

ಶ್ರೀ ಬಿ. ಚನ್ನಬೈರೇಗೌಡರು.—ಹಾಗಾದರೆ ತಿಪ್ಪಗೊಂಡನಹಳ್ಳಿಯಲ್ಲಿ 300 ಓಟರುಗಳಿಗೆ ಒಂದು ಬೂತ್ ಆಯಿತು. ಸಾವಿರ ಓಟರುಗಳಿಗೆ ಒಂದು ಬೂತ್ ಸಾಕಾಗುತ್ತದೆಯೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಸಾಧಾರಣವಾಗಿ ಸಾವಿರದಲ್ಲಿ 500 ಜನರು ಓಟು ಮಾಡಲು ಬಂದರೆ ಎಷ್ಟೋ ಆಯಿತು.

ಶ್ರೀ ಬಿ. ಚನ್ನಬೈರೇಗೌಡರು.—ತಿಪ್ಪಗೊಂಡನಹಳ್ಳಿಯಲ್ಲಿ ಮುನ್ನೂರೇ ಓಟು ತಾನೆ ಪೋಲ್ ಆಗಿರುವುದು ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಮಾರ್ಕ್ ಎಲೆಕ್ಷನ್‌ನಲ್ಲಿ 300 ಆಯಿತು, ನಿಜವಾದ ಎಲೆಕ್ಷನ್‌ನಲ್ಲಿ ಇನ್ನೂ ಹೆಚ್ಚಾಗಿ ಆಗಬಹುದು.

Arrangements for General Elections in Mysore State.

Q.—2. **Sri H. C. LINGA REDDY** (Kolar District—General).—

Will the Government be pleased to state :—

(*a*) whether the Election Commissioner, Mysore, has stated in his Press Conference that the elections in Mysore would be held in the last week of December and first week of January ;

(*b*) whether the dates have been fixed for the elections since then ;

(*c*) the arrangements made in the State for elections ?

A.—**The Hon'ble Sri K. T. BHASHYAM** (Minister for Law and Labour).—

(*a*) Yes. But it was in September 1951, the Chief Electoral Officer at a Press Conference stated so, as such a proposal was then under contemplation.

(*b*) Yes.

(*c*) The lists of polling stations have been prepared and are being printed and published for eliciting public opinion, before being finalised. Returning Officers for all the constituencies have been appointed. Other administrative arrangements for manning the polling stations and for the actual conduct of the elections are well under way and will be completed in good time before the date of the elections.

Sri H. C. LINGA REDDY.—What is the meaning of the expression 'marching day'?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಒಂದು ಕಾನ್ಸ್ಟಿಟ್ಯುಯೆನ್ಸಿಯಲ್ಲಿ ಚುನಾವಣೆ ಮುಗಿದರೆ ಮತ್ತೊಂದಕ್ಕೆ ಅಧಿಕಾರಿಗಳು ಹೋಗಿ. ಅದಕ್ಕೆ ಏರ್ಪಾಡು ಮಾಡಬೇಕಾಗುತ್ತದೆ. ಇಲ್ಲಿಂದ ಅಲ್ಲಿಗೆ ಹೋಗುವುದಕ್ಕೆ ಮಧ್ಯೆ ಅವಕಾಶಮಾಡಿದ್ದೇವೆ. ಅದಕ್ಕೆ ಈ ಹೆಸರು.

Sri H. C. LINGA REDDY.—Will there be a set of permanent officers in each taluk with regard to holding these elections and will they be able to complete the elections in the whole district if they begin from one taluk ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು :—ಖಾಯಂ ಆಫೀಸರುಗಳೆಂದಲ್ಲ. ಚುನಾವಣೆಗಾಗಿ ಒಂದು ಆಡ್-ಹಾಕ್ ಬಾಡಿ ಇರುತ್ತದೆ, ಅವರು ಸುತ್ತುತ್ತಿರುತ್ತಾರೆ.

Sri H. C. LINGA REDDY.—Will they be Officers of that District, or will they be of any other district ?

The Hon'ble Sri K. T. BHASHYAM.—It all depends on circumstances. Some are being sent from Bangalore and some from Mysore and some more are taken from local area also.

Sri H. C. LINGA REDDY.—Will there be enough staff in the taluk to conduct the whole elections ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು :—ಈ ಸಂಬಂಧವಾಗಿ ಒಂದು ಸ್ಟೇಟ್‌ಮೆಂಟ್ ಮಾಡುತ್ತೇನೆ. ಅದರಲ್ಲಿ ಎಲ್ಲವನ್ನೂ ಹೇಳುತ್ತೇನೆ.

Mr. SPEAKER.—Next Short Notice Question. The answer has not been printed as it was received late. Sri H. C. Linga Reddy may read his question and the Hon'ble Minister will read out the answer.

Relief works in Famine affected areas in the State.

Q.—3. **Sri H. C. LINGA REDDY** (Kolar District—General).—

Will the Government be pleased to state :—

(*a*) whether the Chief Minister has been pleased to announce to the Press Correspondents of Kolar that a grant of ten lakhs of rupees would be sanctioned for relief works in famine affected areas of the State ;

(*b*) whether the Government passed orders after receiving reports from the Deputy Commissioners of all the Districts about the seasonal conditions ;

(SRI H. C. LINGA REDDY).

(c) the total amount required to meet the demands of famine affected areas for relief works ;

(d) the various steps undertaken by the State Government to tide over the crisis ?

A.—The Hon'ble Sri K. CHENGALARAYA REDDY (Chief Minister).—

(*a*) Yes. I did make an announcement to the Press Correspondents of Kolar that a grant of ten lakhs of rupees would be sanctioned for relief works in the State. For the present ten lakhs is deemed to be sufficient for starting these relief works.

(*b*) Orders were passed after receiving a report from the Revenue Commissioner who consulted all the Deputy Commissioners about the seasonal conditions at a meeting held by him in the month of September ;

(*c*) About ten lakhs in the present conditions.

(*d*) (i) A programme of relief works has been drawn up in all Districts and the Deputy Commissioners have been asked to start the works considered necessary in the affected areas ;

(ii) Wherever these relief works will be started, the Food Department has been asked to open special Ration Depots and make arrangements for issue of food grains. Additional allotments of food grains are also ordered to be issued to the affected areas ;

(iii) The Public Works Department have been asked to start all sanctioned works in the affected areas to afford employment to people in need of work ;

(iv) In Chikballapur Sub-Division of Kolar District, where the fodder position is stated to be somewhat acute, arrangements have been made to supply 150 tons of hay from the Ajjampur Cattle Breeding Station.

(v) In addition another 150 tons of hay are arranged to be pressed, baled and kept ready by February 1952 to meet the later demands. The Forest Department also have been asked to keep 200 tons Karda grass pressed and baled to meet emergencies. Available extents in tank beds are ordered to be disposed of for Eksal cultivation to raise Ibbani Jola crop which will help both the fodder and food position to some extent.

Sri H. C. LINGA REDDY.—What are the parts that are declared to be famine affected areas according to the reports of the Deputy Commissioners ?

*The Hon'ble Sri K. CHENGALARAYA REDDY.—No. The report is that in certain parts of the State owing to poor rains crops have been affected. So far as we know at present,—I am only giving a rough idea in Kolar District,—in Chikballapur sub-division most of the taluks are affected, and also parts of Bangarpet and Kolar Taluk. In Tumkur District, Sira, Pavagada and Madhugiri taluks are reported to have been affected and also Chiknayakanhally and Koratagere. In Chitaldrug, Molakalmuru, Challakere and parts of Hiriyur have been reported to be affected. In Mysore District, Hunsur, Periyapatna and Heggadadevanakote taluks are reported to have been affected. In Hassan District, parts of Channarayapatna, Arasikere, Holenarasipur are reported to have been affected. In Mandya District, Nagamangala, Krishnarajanagar and Malavalli taluks are affected. These are the reports that were received before the recent rains. After the recent rains have started, we have once again to assess which of them are badly affected and which are the areas affected slightly.

Sri L. H. THIMMA BOI (Chikmagalur District—Depressed Class).—No mention was made about Shimoga and Chikmagalur Districts ?

The Hon'ble Sri K. CHENGALARAYA REDDY.—Dry crops in Shimoga and Chikmagalur Districts are bad. That is the report.

Sri L. SIDDAPPA (Shimoga District—General).—Has no report been received from Shimoga District ?

The Hon'ble Sri K. CHENGALARAYA REDDY.—Shimoga District : Owing to failure of rains the wet crops have been entirely affected. We cannot say by what percentage they have been affected ; anywhere from 30-40 per cent, even 50 per cent. We have yet to know the final figures.

Sri L. SIDDAPPA.—How about dry crops ? Has any report been received regarding dry crops in Shimoga District ?

The Hon'ble Sri K. CHENGALARAYA REDDY.—I will read the note :

"Crops in the area, north and west of Shiralakoppa and in Honnali Taluk area bordering Shikaripur are affected. The yield from rainfed paddy in Bhadravati and Shimoga Taluk areas is expected to be about eight annas. Paddy under channel-fed areas continues to be good. Ragi in Channagiri Taluk area is also found to be in good condition."

Sri K. H. MUDIYAPPA (Chikmagalur District—General).—What about Chikmagalur ?

The Hon'ble Sri K. CHENGALARAYA REDDY.—About Chikmagalur :

"Dry crops like Jola and coriander are good in Ajjampur area. Makki lands require heavy rains, but the crops are fairly good now. Dry crops on black soil lands are fair while on red soil in Kadur Taluk they are rather bad. In some parts of Kadur Taluk these red soil lands are sown again horsegram. On the whole the condition of crops in this District has improved."

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಚಾಮರಾಜನಗರ ತಾಲ್ಲೂಕಿನಲ್ಲಿ ಬೆಳೆಗಳು ಕೆಟ್ಟು ಹೋಗಿರತಕ್ಕ ವಿಚಾರ ತಮ್ಮ ಗಮನಕ್ಕೆ ಬಂದಿಲ್ಲವೇ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನಮಗೆ ಎಲ್ಲೆಲ್ಲಿಂದ ವರದಿಗಳು ಬಂದಿವೆಯೋ ಅವುಗಳ ವಿಷಯವನ್ನೆಲ್ಲಾ ಈಗ ತಿಳಿಸಿದ್ದೇನೆ.

ಶ್ರೀ ಎಸ್. ಕರಿಯಪ್ಪನವರು (ಬೆಂಗಳೂರು ಜಿಲ್ಲೆ).—ಬೆಂಗಳೂರು ಜಿಲ್ಲೆಯಲ್ಲಿ ಬೆಳೆಗಳು ಕೆಟ್ಟುಹೋಗಿರತಕ್ಕ ಬಗ್ಗೆ ತಮಗೇನೂ ಗೊತ್ತಿಲ್ಲವೆ?

The Hon'ble Sri K. CHENGALARAYA REDDY.—As regards Bangalore District, the crops are reported to be fairly good. I think Bangalore stands fortunately in a better condition than other parts of the State.

"Except parts of Doddaballapur, Devanahalli and a few patches in Kankanhalli, wet and dry crops are fairly good. Tanks have received water."

ಶ್ರೀ ಎಸ್. ರಂಗರಾಮಯ್ಯನವರು.—ಫಸಲುಗಳು ಇಂಥಾ ಕಡೆ ಕೆಟ್ಟುಹೋಗಿರುತ್ತವೆಂಬುದನ್ನು ತಾವು ಪರಿಗಣಿಸಬೇಕಾಗಿದ್ದರೆ ನಾಲ್ಕು ಆಣೆ ಬೆಳೆ, ಅಥವಾ ಆರು ಆಣೆ ಬೆಳೆ ಅಥವಾ ಎಂಟು ಆಣೆ ಬೆಳೆಗಿಂತ ಕಮ್ಮಿಯಾಗಿದ್ದಾಗಲೇ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನಾಲ್ಕಾಣೆ ಬೆಳೆಗಿಂತಲೂ ಕಮ್ಮಿ ಬೆಳೆಯಾಗಿದ್ದರೆ ಅಂಥಾ ಕಡೆ ಫಸಲು ಕೆಟ್ಟಿರುತ್ತದೆಂದು ಪರಿಗಣಿಸಲಾಗುತ್ತದೆ.

ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ).—ಹೋದ ವರ್ಷದಲ್ಲಿ ಕ್ಷಾಮನಿವಾರಣಾನಿಧಿಯ ಬಗ್ಗೆ ಮೀಸಲಾಗಿಡಲಾಗಿದ್ದ ಮೊಬಲಗಿನಲ್ಲಿ ಕೆಲಸವೇ ನಡೆಯದೆ ಕೊಂಚ ಮಾತ್ರ ಖರ್ಚಾಗಿ ಬಾಕಿಯ ಮೊಬಲಗೆಲ್ಲಾ ಉಳಿಯಲು ಕಾರಣವೇನು?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಕೆಲಸಕ್ಕೆ ಕೆಲವು ಜನರು ಬರಲಿಲ್ಲ. ಆ ಹಣವೆಲ್ಲಾ ಖರ್ಚಾಗಿಹೋಗಿದ್ದರೆ ಅದನ್ನು ಜಾಸ್ತಿ ಮಾಡುವುದಕ್ಕೆ ಪ್ರಯತ್ನಪಡಬಹುದಾಗಿತ್ತು. ಆದ್ದರಿಂದ ಹಣ ಉಳಿತಾಯವಾಗಿರಬಹುದು.

ಶ್ರೀ ಎಂ. ವಿ. ಕೃಷ್ಣಪ್ಪನವರು.—ತಾವು ಕೂಲಿ ಜನಗಳಿಗೆ ಕೊಡತಕ್ಕ ದರ ಬಹಳ ಕಮ್ಮಿಯೆಂಬ ಭಾವನೆಯಿಂದ ಜನರು ಕೆಲಸಕ್ಕೆ ಬಾರದೆ ನಿಂತಿದ್ದಾರೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ರಿಲೀಫ್ ಕಾಮಗಾರಿಗಳಿಗೆಯಾವ ದರದಲ್ಲಿ ಕೂಲಿ ಕೊಡಬೇಕೆಂಬ ನಿಬಂಧನೆಗಳಿವೆಯೋ ಆದರ ಪ್ರಕಾರ ಕೊಡಲಾಗುತ್ತಿದೆ. ಆದರೆ ಇತ್ತೀಚೆಗೆ ಅದು ಸಾಲದೆಂಬುದು ಗೊತ್ತಾಯಿತು.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಹೀಗೆ ಈ ರಿಲೀಫ್ ಕಾಮಗಾರಿಗಳ ಸಂಬಂಧವಾಗಿ ನಡೆಸುವುದನ್ನೆಲ್ಲಾ ಕೇವಲ ಅಮಾನಿ ರೀತಿಯಲ್ಲೇ ಮಾಡುತ್ತಿದ್ದು, ಕಾಂಟ್ರ್ಯಾಕ್ಟ್ ರೀತ್ಯ ಕೆಲಸ ನಡೆಸದೆ ಇರಲು ಕಾರಣವೇನು?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಆ ರೀತಿಯಾಗಿ ಮಾಡತಕ್ಕ ಪದ್ಧತಿಯೇ ಬಹಳ ಕಾಲದಿಂದಲೂ ನಡೆದುಕೊಂಡು ಬಂದಿದೆ. ಆ ರೀತಿ ಮಾಡುವುದರಿಂದ ಕೆಲಸ

(ಮಾನ್ಯ ಶ್ರೀ ಕೆ. ಚೆಂಗಲರಾಯ ರೆಡ್ಡಿಯವರು).
ಗಳು ಸುಲಭವಾಗಿ ನಡೆಯಲು ಅವಕಾಶವಿದೆ. ಕಾಂಟ್ರಾಕ್ಟ್ ಮೂಲಕ ನಡೆಸಬೇಕೆಂದರೆ ಟೆಂಡರ್ ಕರೆಯಬೇಕು; ಅದಕ್ಕೆಲ್ಲಾ ಅಂದಾಜುಗಳಾಗಬೇಕು, ಇದಕ್ಕೆಲ್ಲಾ ಹೆಚ್ಚಿನ ಕಾಲ ಹಿಡಿಯುತ್ತದೆ. ಆದರೆ ಈ ಕೆಲಸಗಳೆಲ್ಲಾ ಬಹಳ ಜರೂರಾಗಿ ಆಗಬೇಕಾದ ಕೆಲಸಗಳಾದ್ದರಿಂದ ಇವುಗಳನ್ನೆಲ್ಲಾ ಅಮಾನಿ ಪದ್ಧತಿಯ ಮೇಲೆ ಮಾಡಿಸಲಾಗುತ್ತಿದೆ.

ಶ್ರೀ ಎಂ.ವಿ. ಕೃಷ್ಣಪ್ಪನವರು.—ಈಗ ತಾವು ಕೊಡುತ್ತಿರುವುದು ಒಂದು ಕ್ಯೂಬಿಕ್ ಗಜಕ್ಕೆ 5-6 ಆಣೆಗಳು. ಇದು ಸಾಕಾಗುವುದಿಲ್ಲ. ಈ ದರ ಅವರಿಗೆ ಗಿಟ್ಟದೆ ಇರುವ ಕಾರಣ ಇದನ್ನು ಬದಲಾವಣೆಮಾಡಲು ಪ್ರಯತ್ನಮಾಡುವಿರಾ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅದನ್ನು ಪರಿಶೀಲನೆ ಮಾಡಿನೋಡಬೇಕು.

ಶ್ರೀ ಎಂ. ವಿ. ಕೃಷ್ಣಪ್ಪನವರು— ಕ್ಯೂಬಿಕ್ ಗಜಕ್ಕೆ ಆರು ಆಣೆಗಳಂತೆ ವಿಧಾಯಕ ಮಾಡಿದ್ದು ಯಾವ ಸಂವತ್ಸರದಲ್ಲಿ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಬಹಳ ಹಿಂದೆಯೇ ಅದನ್ನು ಮಾಡಿರುವುದು. ಆದರೂ ಸ್ವಲ್ಪಮಟ್ಟಿಗೆ ಅದನ್ನು ಜಾಸ್ತಿ ಮಾಡುವುದಕ್ಕೆ ಮರಾಮತ್ ಇಲಾಖೆಯ ಎಗ್ಜಿಕ್ಯುಟೀವ್ ಇಂಜನಿಯರ್ ಅವರಿಗೆ ಅವಕಾಶ ಕಲ್ಪಿಸಿಕೊಡಲಾಗಿದೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಕ್ಯೂಬಿಕ್ ಗಜಕ್ಕೆ ಆರು ಆಣೆಗಳಂತೆ ಗೊತ್ತುಮಾಡಿ ಇಲ್ಲಿಗೆ 25 ವರ್ಷಗಳ ಮೇಲಾಯಿತು. ಆ ದರದ ಪ್ರಕಾರ ಈಗಲೂ ಕೊಡುತ್ತಾ ಹೋದರೆ ಅವರಿಗೆ ದೊರೆಯಬೇಕಾದ ಮೊಬಲಗಿನಲ್ಲಿ ನಾಲ್ಕನೇ ಒಂದು ಭಾಗಕ್ಕೆ ಇದು ಸಮನಾಗಿರುವ ಕಾರಣ ಈಗಲಾದರೂ ಈ ದರವನ್ನು ಬೇಗ ಬದಲಾವಣೆ ಮಾಡುತ್ತೀರಾ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅದು ತಕ್ಷಣಕ್ಕೆ ಸಾಧ್ಯವಿಲ್ಲ.

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—ಯಳಂದೂರು ತಾಲ್ಲೂಕಿನಲ್ಲಿ ಬೆಳೆಗಳು ಕೆಟ್ಟುಹೋಗಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಈಗತಾನೆ ಎಲ್ಲಾ ವಿವರಗಳನ್ನೂ ಯಾವ ಯಾವ ಜಿಲ್ಲೆಯಲ್ಲಿ, ಎಲ್ಲೆಲ್ಲಿ, ಎಷ್ಟೆಷ್ಟರ ಮಟ್ಟಿಗೆ ಅನುಕೂಲ ಅಥವಾ ಪ್ರತಿಕೂಲಗಳಾಗಿವೆ ಎಂಬುದನ್ನೆಲ್ಲಾ ತಿಳಿಸಿದ್ದೇನೆ. ಆದರೆ ನಮಗೆ ಈ ಸಂಬಂಧವಾಗಿ ಇನ್ನೂ ಕೆಲವು ಜಿಲ್ಲೆಗಳಿಂದ ವರದಿ ಬಂದಿಲ್ಲ. ಯಾವ ಯಾವ ಜಿಲ್ಲೆಗಳಿಂದ ವರದಿಗಳು ಬಂದಿದ್ದವೋ ಅಂಥಾ ಜಿಲ್ಲೆಗಳ ವಿಚಾರವನ್ನೆಲ್ಲಾ ತಿಳಿಸಲಾಗಿದೆ. ಇಷ್ಟೆ ಅಲ್ಲದೆ, ಮೊನ್ನೆತಾನೆ ಈ ಸಂಬಂಧವಾಗಿ ಜಿಲ್ಲಾಧಿಕಾರಿಗಳನ್ನೊಳಗೊಂಡ ಒಂದು ಕಾನ್ಫರೆನ್ಸನ್ನೂ ಸಹಾ ಕರೆಯಲಾಗಿತ್ತು. ಆದರೆ ಪುನಃ ಇತ್ತೀಚೆಗೆ ಬೇರೆ ಮಳೆ ಬಿದ್ದಿದೆ. ಈ ಮಳೆ ಬಿದ್ದ ನಂತರ ಕೆಲವು ಕಡೆ ಬೆಳೆಗಳಿಗೆ ಅನುಕೂಲವಾಗಿದೆ. ಆದಕಾರಣ ಈ ಸಂಬಂಧವಾಗಿ ಪುನಃ ಮತ್ತೊಂದು ವರದಿಯನ್ನು ಕಳುಹಿಸಬೇಕೆಂದು ಎಲ್ಲಾ ಅಧಿಕಾರಿಗಳಿಗೂ ತಿಳಿಸಲಾಗಿದೆ. ಆದಕಾರಣ ಯಾವುದನ್ನೂ ಈಗಲೇ ಖಚಿತವಾಗಿ ಹೇಳುವುದಕ್ಕಾಗುವುದಿಲ್ಲ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಇತ್ತೀಚೆಗೆ ಬಿದ್ದಿರತಕ್ಕ ಮಳೆಯ ಸಂಬಂಧದಲ್ಲಿ ಅನೇಕ ಪ್ರದೇಶಗಳ ಜನರಿಗೆ ಇದರಿಂದ ಯಾವ ರೀತಿಯಲ್ಲೂ ಅವರ ಬೆಳೆಗಳು ಉತ್ತಮಗೊಳ್ಳಲು ಸಾಧ್ಯವಿಲ್ಲವೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಅನೇಕ ಕಡೆಗಳಿಂದ ಈಚೆಗೆ ಬಿದ್ದ ಮಳೆಯಿಂದ ಬಹಳ ಪ್ರಯೋಜನವಾಗಿರುತ್ತೆಂಬುದಾಗಿ ಸರ್ಕಾರದವರಿಗೆ ತಿಳಿದುಬಂದಿದೆ.

ಶ್ರೀ ಡಿ.ಎಂ. ಸಿದ್ದಯ್ಯನವರು.—ಈಗ ತಾವು ಒದಗಿಸಿರುವ 10 ಲಕ್ಷ ರೂಪಾಯಿಗಳು ಈ ಕ್ಷಾಮನಿವಾರಣಾಕಾರ್ಯಗಳಿಗೆ ಸಾಕಾಗುತ್ತವೆಯೇ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಸಾಕಾಗುತ್ತವೆಂಬುದಾಗಿ ಜಿಲ್ಲಾಧಿಕಾರಿಗಳಿಂದಲೂ ಮತ್ತು ಇಲಾಖಾ ಮೊಖ್ತೇಸರರು

ಗಳಿಂದಲೂ ತೀರ್ಮಾನವಾದ್ದರಿಂದ ಅಷ್ಟನ್ನು ಒದಗಿಸಲಾಗಿದೆ. ಈಗ ಮುಂಜೂರಾಗಿರತಕ್ಕ ಇರಿಗೇಷನ್ ಕಾಮಗಾರಿಗೆ 10 ಲಕ್ಷ ಸಾಕೆಂಬುದಾಗಿ ತೀರ್ಮಾನಮಾಡಿದ್ದಾರೆ. ಆದರೆ ಆ ಎಲ್ಲಾ ಕೆಲಸಗಳೂ ಸಂಪೂರ್ಣವಾಗಿ ಆಖೈರು ಮಟ್ಟಕ್ಕೆ ಬಂದರೆ ಆ ಬಗ್ಗೆ 11 ಲಕ್ಷರೂಪಾಯಿಗಳು ಬೇಕಾಗಬಹುದೆಂಬ ಅಭಿಪ್ರಾಯ ಕೊಟ್ಟಿದ್ದಾರೆ. ಆ ಪಟ್ಟಿಯ ಪ್ರಕಾರವೇ ಈಗ 10 ಲಕ್ಷವನ್ನು ಒದಗಿಸಲಾಗಿದೆ. ಆ ಮೊಬಲಗೆಲ್ಲಾ ಖರ್ಚಾದರೆ ಆ ಬಗ್ಗೆ ಇನ್ನೂ ಹೆಚ್ಚು ಮೊಬಲಗನ್ನು ಕೊಡಲು ಸರ್ಕಾರದವರು ಎಂದೂ ಹಿಂದು ಮುಂದು ನೋಡುವುದಿಲ್ಲವೆಂಬ ಭರವಸೆ ಕೂಡ ನಾನು ತಮಗೆ ಕೊಡಬಲ್ಲೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಬೆಳೆಗಳು ಸರಿಯಾಗಿ ಆಗದೆ ಕೆಟ್ಟುಹೋಗಿರತಕ್ಕ ಕಡೆಗಳಲ್ಲಿ ಕಂದಾಯ ರಿಮಿಷನ್ ಕೊಟ್ಟು ಅವರಿಗೆ ಸಹಾಯಮಾಡಲು ಆಲೋಚನೆ ಮಾಡ್ತೀರಾ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಮಾಡಲಾಗುತ್ತೆ.

ಶ್ರೀ ಜಿ. ನಾರಾಯಣಗೌಡರು (ಕೋಲಾರ ಜಿಲ್ಲೆ).—ಮಳೆ ಬಾರದೆ ದನಗಳಿಗೆ ಸಾಕಷ್ಟು ಮೇವಿಲ್ಲದೆ ಕೋಲಾರ ಜಿಲ್ಲೆಯ ಮುಳುಬಾಗಿಲು ಮತ್ತು ಬಂಗಾರಪೇಟೆ ತಾಲ್ಲೂಕುಗಳಲ್ಲಿ ಬಹಳ ತೊಂದರೆಯಾಗಿರುವ ಪ್ರಯುಕ್ತ ತಾವು ತರಿಸಲಾಗುತ್ತಿರುವ 150 ಟನ್ ಹೊರೆ ಹುಲ್ಲು ಸಾಕಾಗುವುದಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಚಿಕ್ಕಬಳ್ಳಾಪುರದ ಸಬ್ ಡಿವಿಜನ್ ಮತ್ತು ಇತರ ಕೆಲವು ಪ್ರದೇಶಗಳಿಗೆ 150 ಟನ್ ಹೊರೆಗಳಷ್ಟು ಹುಲ್ಲನ್ನು ದನಗಳ ಮೇವಿಗಾಗಿ ತರಿಸಲಾಗಿದೆ. ಮತ್ತು ಅಲ್ಲಿ ಆಗಿಂದಾಗ್ಯೆ ಬರತಕ್ಕ ಡಿಮ್ಯಾಂಡುಗಳಿಗೆ ತಕ್ಷಣ ಒದಗಿಸಲು 200 ಟನ್ನಿನಷ್ಟು ಹುಲ್ಲನ್ನು ದಾಸ್ತಾನುಮಾಡಲಾಗಿದೆ. ಹೋದ ವರ್ಷ ಮತ್ತು ಈ ವರ್ಷ ಯಾವ ಯಾವ ಪ್ರದೇಶಗಳಲ್ಲಿ ಈ ತೊಂದರೆಯುಂಟಾಗಿರುತ್ತದೆಯೋ ಅಲ್ಲಿಗೆಲ್ಲ ಹೆಚ್ಚು ಹೆಚ್ಚಾಗಿ ಹುಲ್ಲನ್ನು ರವಾನೆಮಾಡಲಾಗುತ್ತದೆ.

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—ಬೆಳೆಗಳು ನಷ್ಟವಾಗಿ ಹೋಗಿರುವ ಪ್ರದೇಶಗಳಿಗೆ ರಿಮಿಷನ್ ಕೊಡತಕ್ಕ ಸಲಹೆಮಾಡಲಾಗಿದೆಯೆಂದು ತಾವೀಗ ತಿಳಿಸೋಣವಾಯಿತು. ಆದರೆ ಖುಷ್ಕಿ ಬೆಳೆಗಳಿಗೆ ಲುಕ್ಸಾನಾದರೆ ಹೇಗೆ ಮಾಡುತ್ತೀರಿ?

Are the remission proposals in accordance with the existing rules or have instructions been issued to the District authorities that remission proposals should be sent up not in accordance with the present rules but in special cases wherever there is hardship as it was done in 1946?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಕಳೆದ ವರ್ಷ ಸ್ವಲ್ಪ ಹೀಗೆ ಮಾಡಲಾಯಿತು. ತರೀ ಬೆಳೆಗಳಿಗೆ ಕೊಡತಕ್ಕ ರಿಮಿಷನ್ನಿನ ವಿಚಾರದಲ್ಲಿ ಏನೂ ಬದಲಾವಣೆಗಳನ್ನು ಮಾಡಬೇಕಾಗಿಲ್ಲ. ಆದರೆ ಖುಷ್ಕಿ ಬೆಳೆಗಳ ವಿಚಾರದಲ್ಲಿ ಕೆಲವು ಬದಲಾವಣೆಗಳನ್ನು ಮಾಡತಕ್ಕದ್ದು ಆವಶ್ಯಕವಾಗಿದೆ. ಹೋದ ವರ್ಷ ಮತ್ತು ಈ ವರ್ಷ ಬೆಳೆಗಳು ಕೆಟ್ಟುಹೋಗಿರತಕ್ಕ ಸ್ಥಳಗಳಲ್ಲಿ ಜನರಿಗೆ ಹೆಚ್ಚಿನ ರೀತಿಯಲ್ಲಿ ರಿಮಿಷನ್ ಸೌಲಭ್ಯಗಳನ್ನು ಕೊಡಲಾಯಿತು. ಅಂಥಾ ಸ್ಥಳಗಳಿಗೆಲ್ಲಾ ವಿಶೇಷ ರೀತಿಯ ರಿಮಿಷನ್ ಕೊಡುವಂತೆ ಶಿಫಾರಸು ಸಹ ಮಾಡಿದ್ದೇವೆ. ಈ ವಿಚಾರದಲ್ಲಿ ಮಾನ್ಯ ರೆವಿನ್ಯೂ ಮಂತ್ರಿಗಳು ಹೆಚ್ಚಿನ ಸಹಾನುಭೂತಿ ತೋರಿಸುತ್ತಾರೆಂಬುದರಲ್ಲಿ ಯಾರೂ ಸಂದೇಹಪಡಬೇಕಾಗಿಲ್ಲ.

ಶ್ರೀ ಕೆ. ಎಚ್. ಮುದಿಯಪ್ಪನವರು (ಚಿಕ್ಕಮಗಳೂರು ಜಿಲ್ಲೆ).—ತರೀಕೆರೆ, ಚಿಕ್ಕಮಗಳೂರು ಪ್ರಾಂತ್ಯದಲ್ಲಿ ಈಚೆಗೆ ಮಳೆ ಬಿದ್ದುದರ ಪರಿಣಾಮವಾಗಿ ಬೆಳೆಗಳು ಉತ್ತಮವಾಗಿರುತ್ತವೆಂದು ತಾವು ತಿಳಿಸೋಣವಾಯಿತು. ಹಾಗೆ ಬೆಳೆಗಳು ಎಷ್ಟರಮಟ್ಟಿಗೆ ಉತ್ತಮವಾಗಿವೆಯೆಂಬ ಬಗ್ಗೆ ತಾವೇನಾದರೂ ಇತ್ತೀಚೆಗೆ ಸರ್ವೆ ಮಾಡಿಸಿದ್ದೀರಾ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯ ವರು.—ಈಗಲೇ ಯಾವುದನ್ನೂ ಅಷ್ಟು ಖಚಿತ ವಾಗಿ ತಿಳಿಸುವುದಕ್ಕಾಗುವುದಿಲ್ಲ. ಈಗಾಗಲೇ ನಾನು ತಿಳಿಸಿರುವಂತೆ ಮೊನ್ನೆ ತಾನೆ ಇನ್ನೂ ಜಿಲ್ಲಾಧಿಕಾರಿಗಳ ಸಮ್ಮೇಳನ ನಡೆದಿದೆ. ಆ ಸಮ್ಮೇಳನದಲ್ಲಿ ನಾವು ಹಿಂದಿನ ಸಾಲಿನಲ್ಲಿ ಯಾವ ಯಾವ ಪ್ರದೇಶದಲ್ಲಿ ಎಷ್ಟೆಷ್ಟು ದವಸ ವನ್ನು ವಸೂಲುಮಾಡಿದ್ದೆವು, ಮುಂದಿನ ಸಾಲಿಗೆ ನಾವೆಷ್ಟು ವಸೂಲುಮಾಡಬೇಕಾಗಿದೆ, ಎಂಬ ಅನೇಕ ವಿಷಯಗಳನ್ನು ತಿಳಿಸಿದ್ದೇನೆ. ಈಗಲೇ ಒಂದು ಖಚಿತವಾದ ಉತ್ತರ ಕೊಡಲು ಸಾಧ್ಯ ವಿಲ್ಲ. ಎಲ್ಲ ಕಡೆಗಳಿಂದಲೂ ಆಫೀಸರು ವರದಿಗಳು ಬಂದ ನಂತರ ಬೇಕಾದರೆ ನಾನು ತಮಗೆ ನಿರ್ದಿ ಷ್ಟವಾಗಿ ಅಂಕಿ ಅಂಶಗಳನ್ನು ಕೊಡಬಲ್ಲೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ವರದಿ ತರಿಸಿದ ಮೇಲೆ ಮಳೆಯಿಲ್ಲದೆ ಅನಾನು ಕೂಲವಾಗಿರುವ ಜಾಗದಲ್ಲಿ ಮುಂದಿನ ವರ್ಷ ಕಂದಾಯದಲ್ಲಿ ರಿಯಾಯಿತಿ ತೋರಿಸುತ್ತೀರಾ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯ ವರು.—ಅದಕ್ಕೆ ಆಗಲೇ ಉತ್ತರ ಹೇಳಿದೆ.

ಶ್ರೀ ಟಿ. ಸಿ. ಹೊನ್ನಪ್ಪನವರು (ಮೈಸೂರು ಜಿಲ್ಲೆ).—ಮೈಸೂರು ತಾಲ್ಲೂಕಿನಲ್ಲಿ ಜೋಳದ ಫಸಲು ಹೋದುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯ ವರು.—ಬಂದಿದೆ. ಅದು ಎರಡು ಮೂರು ತಿಂಗಳ ಹಿಂದಿನ ಮಾತು.

ಶ್ರೀ ಟಿ. ಸಿ. ಹೊನ್ನಪ್ಪನವರು.—ಅದಕ್ಕೆ ಪರಿಹಾರ ಕೊಡುವ ವಿಚಾರದಲ್ಲಿ ಏನು ಯೋಚನೆ ಮಾಡಿದ್ದೀರಿ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯ ವರು.—ಮಾನ್ಯ ಸದಸ್ಯರು ಏನು ತೀರ್ಮಾನ ಮಾಡುತ್ತಾರೋ ಗೊತ್ತಿಲ್ಲ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಏನಾದರೂ ಪರಿಹಾರ ಕೊಡುವುದಕ್ಕೆ ಅವಕಾಶವಿದೆಯೆ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯ ವರು.—ನಮ್ಮ ಸಂಸ್ಥಾನದಲ್ಲಿ ಪರಿಹಾರ ಕೊಡುವ ಪದ್ಧತಿಯಿಲ್ಲ. ಇನ್ಷೂರೆನ್ಸ್ ಮಾಡಿದ್ದು ಬೆಳೆ ಹೋದರೆ ಪರಿಹಾರ ಕೊಡು ವುದು ಬೇರೆ ಪ್ರಶ್ನೆಯಾಯಿತು. ಫಸಲು ಹೋಗಿರುವ ಕಡೆ ಡಿಪೋ ಮೂಲಕ ಆಹಾರ ಮತ್ತು ಹುಲ್ಲನ್ನು ಒದಗಿಸುವುದು, ಕೂಲಿ ಕೆಲಸವು ಸಿಕ್ಕಲು ಅವಕಾಶಮಾಡುವುದು—ಈ ಕಾರ್ಯಕ್ರಮವನ್ನು ಕೈಕೊಳ್ಳುತ್ತಿದ್ದೇವೆ. ಇದ ಕ್ಕಿಂತ ಹೆಚ್ಚಾಗಿ ಪರಿಹಾರಕೊಡುವ ಪ್ರಶ್ನೆಯಿಲ್ಲ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಹಾಗೆ ಪರಿ ಹಾರ ಕೊಡದಿದ್ದರೆ ಕಂದಾಯ ರಿಮಿಷನ್ ಮಾಡುವ ಯೋಚನೆಯಾದರೂ ಇದೆಯೆ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯ ವರು.—ಅದಕ್ಕೆ ಉತ್ತರ ಆಗಲೇ ಹೇಳಿದೆ, ಜಿಲ್ಲಾಧಿಕಾರಿಗಳು ಮತ್ತು ರೆವೆನ್ಯೂ ಕಮಿಷನರುಗಳಿಂದ ಆ ವಿಚಾರದಲ್ಲಿ ಏನಾದರೂ ವರದಿ ಬಂದು ಅವರು ಶಿಫಾರಸುಮಾಡಿದ್ದರೆ ಸರ್ಕಾರ ದವರು ಅದನ್ನು ಪರ್ಯಾಲೋಚನೆ ಮಾಡಿ ಆರ್ಡರು ಮಾಡಬೇಕಾಗುತ್ತದೆ. ಆ ಬಗ್ಗೆ ಜಾಗ್ರತೆ ಶಿಫಾರಸುಮಾಡತಕ್ಕದ್ದಿದ್ದರೆ ನೋಡಿ ಕಳುಹಿಸಬೇಕೆಂದು ಮೊನ್ನೆ ನಡೆದ ಸಮ್ಮೇಳನ ದಲ್ಲಿ ಆಫೀಸರುಗಳಿಗೆ ತಿಳಿಸಲಾಗಿದೆ.

QUESTIONS FOR ANSWERS FOR THE DAY

(Not taken up).

Starting an Intermediate College and a Technological Institute at Kolar Gold Fields.

Q.—35. Sri M. V. KRISHNAPPA (Kolar District—General).—

Will the Government be pleased to state :—

(*a*) whether a number of representations have been sent to Government on various occasions to start an Intermediate College and a Technological Institute at Kolar Gold Fields ;

(*b*) the action taken by them to start these institutions ?

A.—The Hon'ble Sri R. CHENNIGARAMIAH (Minister for Local Self-Government).—

(*a*) Yes.

(*b*) Since there is an Intermediate College at Kolar which is very near to K.G.F., it is not practicable to open another College in the same area at least till the present institution is well established with respect to accommoda-tion and equipment.

Regarding starting of a Techno-logical Institute at K. G. F., in view of the fact that there is already an Occupational Institute at Chintamani which is close to K.G.F., it is consi-dered that there is no need to open a similar Institute at K.G.F.

Defalcation in certain Multipurpose Co-operative Societies in Hassan District.

Q.—43. Sri B.N. BORANNA GOWDA (Hassan District—General).—

Will the Government be pleased to state :—

(*a*) the number of multipurpose co-operative societies established in Hassan District;

(*b*) the number of such co-opera-tive societies, the accounts of which are audited and balance sheets pre-sented;

(*c*) whether it is a fact that there is defalcation in Thagare Circle Co-operative Society of Belur Taluk;

(*d*) the amount so defalcated;

(*e*) whether it is a fact that there has been defalcation to the extent of six thousand rupees in the Multi-purpose Co-operative Society of Hole-Narasipur;

(*f*) whether they will investigate this matter and punish the offenders severely?

A.—The Hon'ble Sri T. MARIAPPA (Home Minister).—

(*a*) Taluk Multi-purpose Co-opera-rative Societies 8 working and Circle Multi-purpose Co-operative Societies 77 working.

(*b*) The accounts of 8 Taluk Multi-purpose Co-operative Societies and 70 Circle Multi-purpose Co-operative So-cieties have been audited up to 30-6-1950 and balance sheets presented.

(*c*) and (*d*) Two cases of tempo-rary misappropriation of Rs. 766-8-0 and Rs. 400 were discovered and the amounts were made good.

(*e*) There are no cases of mis-appropriation. But heavy amounts of Rs. 1923-3-1 were retained by the *ex-officio* Secretary of the Kunche Circle Multi-purpose Co-operative Society for two months and nine days. The Secretary was placed under sus-pension and the amounts made good by the Secretary since then.

(*f*) Steps have been taken to investigate the temporary misappropri-ation of funds referred to.

The Deputy Commissioner, Hassan, has been addressed to deal with the delinquents.

R. D. C. Buildings at Dodballapur and proposal to hand them over to Gandhi Smaraka Nidhi Trust.

Q.—50. Sri S. KARIAPPA (Banga-lore District—General).—

Will the Government be pleased to state :—

whether there is any proposal to hand over the R.D.C. buildings at Doddaballapur to Gandhi Smaraka Nidhi Trust?

A.—The Hon'ble Sri T. MARI-APPA (Home Minister).—A request has been received from the authorities of the Trust for the buildings and the same is under consideration.

Working of Tractors and sale of some of them.

Q.—72. Sri A. BHEEMAPPA NAIK (Chitaldrug District—General).—

Will the Government be pleased to state :—

(*a*) the number of tractors pur-chased by the present Government;

(*b*) the amount invested on it;

(*c*) the number that are in work-ing order:

(*d*) the working expenses incurred including establishment charges, oil charges, repairs, etc., for these tractors ever since they were purchased:

(SRI A. BHEEMAPPA NAIK).

(e) the income derived by the department in the form of hire charges;

(f) whether they tried to sell some of them on instalment basis;

(g) the number of them they have sold so far?

A.—The Hon'ble Sri T. MARIAPPA (Home Minister).

(a) One hundred and twenty-seven Tractors; 16 Bulldozers.

(b) Rs. 21,21,700.

(c) Sixty-four Tractors and 13 Bulldozers in working order.

(d) Rs. 16,22,570.

(e) Rs. 4,30,646-3-0.

(f) Yes.

(g) Twenty-two Tractors.

Full-time Telugu Lecturer for the Kolar Intermediate College.

Q.—89. Sri G. NARAYANA GOWDA (Kolar District—General).—

Will the Government be pleased to state:—

(a) whether they are aware that a full-time Telugu Lecturer is to be posted to the Kolar Intermediate College;

(b) if so, the steps taken in this behalf?

A.—The Hon'ble Sri R. CHENNIGA-RAMIAH (Minister for Local Self-Government).—

(a) Yes.

(b) A recommendation has recently been received from the University in this regard and the same is under consideration.

Procedure for recruiting candidates to several important and gazetted posts in Mysore.

Q.—110. Sri M. MUNISWAMY (Kolar District—Depressed Class).—

Will the Government be pleased to state:—

(a) the procedure that is adopted by the Government to recruit candidates to several important and gazetted posts in Mysore;

(b) whether there is any system of recruiting for such posts by examinations conducted by the Mysore Public Service Commission;

(c) if not, the reasons for not conducting regular examinations by the Commission to select candidates for the said posts?

A.—The Hon'ble Sri R. CHENNIGA-RAMIAH (Minister for Local Self-Government).—

(a) By promotion of suitable persons already in service and in the case of new appointments, generally by advertisement and interview.

(b) This matter is under the consideration of the Public Service Commission.

(c) Does not arise in view of answer to (b).

Promotions to Depressed Class graduate lecturers in the Mysore University.

Q.—115. Sri M. MUNISWAMY (Kolar District—Depressed Class).—

Will the Government be pleased state:—

(a) the number of Depressed Class community Graduates who are Lecturers in the Mysore University;

(b) whether the Government would propose to promote some of them as Assistant Professors with a view to encourage and give representation to the people of that community?

A.—The Hon'ble Sri R. CHENNIGA-RAMIAH (Minister for Local Self-Government).—

(a) Five.

(b) Appointments to the cadre of Assistant Professors is by selection and not by promotion. The cases of these Lecturers will be considered when there are vacancies of Assistant Professors to be filled up in the departments to which these Lecturers belong.

Conference of Technical Officers of the State and their recommendations.

Q.—184. Sri D. H. CHANDRASEKHARAIYA (Chitaldrug District—General).—

Will the Government be pleased to state :—

(*a*) whether it is not a fact that a Conference of Technical Officers of the State was held under the presidency of Dr. Sir A. Ramaswamy Mudaliar when he was the Dewan ;

(*b*) what are the recommendations of that Conference to develop Technical Education in the State;

(*c*) the steps that have been taken to implement them ?

A.—The Hon'ble Sri R. CHENNIGARAMIAH (Minister for Local Self-Government).—

(*a*) Yes.

(*b*) The main recommendations of the Conference are detailed below :—

Recommendations of the Conference

(i) Appointment of a Director of Technical Education ;

(ii) Appointment of Gazetted and non-Gazetted staff for the office ;

(iii) Reorganisation of the existing Technical Institutions and the opening of additional Institutions ;

(iv) Constitution of a Council for Technical Education in the State ;

(v) The Council of Technical Education should be invested with powers of supervision, control and management over the entire field of Technical Education in the State.

(*c*) The recommendations are under the consideration of Government.

Higher grade of salary to the Primary School Teachers trained in the Teachers' Training Camp at Vidyanagar.

Q.—188. Sri D. H. CHANDRASEKHARAIYA (Chitaldrug District—General).—

Will the Government be pleased to state :—

whether the primary school teachers that have received training in the Teachers' Training Camp at Vidyanagar (Huttanahalli) have been given the higher grades of salary to which trained primary school teachers are entitled ; if so, from which year ; if not given, the reasons therefor ?

A.—The Hon'ble Sri R. CHENNIGARAMIAH (Minister for Local Self-Government).—

Yes ; from 1948-49.

Non-availability of Central Acts that apply to Mysore in the Government Book Depot.

Q.—190. Sri Kadidal MANJAPPA (Shimoga District—General).—

Will the Government be pleased to state :—

(*a*) whether it has come to their notice that almost all the Central Acts that have been applied to Mysore State are not available either in the Government Book Depot or elsewhere ;

(*b*) the steps taken by Government to supply these enactments to the public ?

A.—The Hon'ble Sri K. T. BHASHYAM (Minister for Law and Labour).—

(*a*) and (*b*) Government are aware that Central Acts are not available in the Government Central Book Depot at Bangalore. Central Acts are printed and sold by the Government of India through the Manager of Publications, New Delhi.

The Under Secretary to the Government of India in the Ministry of States has intimated that arrangements have been made for the sale of the Acts by the Manager of Publications, Delhi.

Failure of areca and paddy crops in Malnad areas and relief therefor.

Q.—194. Sri Kadidal MANJAPPA (Shimoga District—General).—

Will the Government be pleased to state :—

(*a*) whether it has come to their notice that both areca and paddy crops in Malnad areas in the State have failed to the extent of 50 per cent during the current year ;

(*b*) whether they have thought of giving any relief to the land-owners and the tenants in the said areas ?

A.—The Hon'ble Sri H. SIDDAIYA (Minister for Revenue and Excise).—

(*a*) It has been reported that crops have been somewhat affected by scanty and delayed rains, but it is too early to assess the actual extent to which they have suffered.

(*b*) The question of giving relief where necessary will be considered after assessing the extent of damage caused.

Introduction of permit system for journeys to and from Pakistan.

Q.—208. Janab SYED ABDUR RAHMAN (Chikmagalur *cum* Shimoga —Muslim).—

Will the Government be pleased to state :—

when the permit system for going to Pakistan or returning from Pakistan to India was introduced ?

A.—The Hon'ble Sri T. MARIAPPA (Home Minister).—

19th July 1948.

Failure of crops in Mysore District and relief to the sufferers.

Q.—248. Sri D. M. SIDDIAH (Mysore District—General).—

Will the Government be pleased to state :—

(*a*) whether they are aware of the failure of crops in the Mysore District ;

(*b*) what is the remedy that the Government are prepared to give to meet the situation ;

(*c*) whether they deem it very necessary to write off the land assessment in order to lessen the miseries of the people ;

(*d*) whether they are ready to start some famine relief works in the district ?

A.—The Hon'ble Sri H. SIDDAIYA (Minister for Revenue and Excise).—

(*a*) Yes ; to some extent in Hunsur, Periyapatna and Chamarajnagar Taluks.

(*b*) and (*c*) The question of affording relief to raiyats in the affected areas in the State is under active consideration.

(*d*) A sum of Rs. 10 lakhs is sanctioned for relief works in the State.

Rural Indebtedness of the State.

Q.—255. Sri D. M. SIDDIAH (Mysore District—General).—

Will the Government be pleased to state :—

(*a*) the figure of the rural indebtedness of our people in the State ;

(*b*) the methods that they have adopted to lessen this burden ?

A.—The Hon'ble Sri H. SIDDAIYA (Minister for Revenue and Excise).—

(*a*) About Rs. 23·55 crores.

(*b*) Provision of credit facilities through the Land Mortgage Bank and Rural Credit Societies.

Mr. SPEAKER.—The House will now adjourn for lunch for half an hour and then the Hon'ble Law Minister will make a statement on the General Elections in Mysore.

Request to change Procedure *re* : taking up Questions.

Sri L. SIDDAPPA (Shimoga District—General).—Sir, before the House adjourns, I would like to say a few words regarding the procedure of taking up questions. ಕಳೆದ ಮೂರು ದಿನಗಳ ಅನುಭವದ ಪ್ರಕಾರ ಪ್ರಶ್ನೋತ್ತರಗಳನ್ನು ಮುದ್ರಣಮಾಡಿ ಹಂಚಿರುವುದರಲ್ಲಿ ಮಾನ್ಯ

ಮುಖ್ಯ ಮಂತ್ರಿಗಳ ಪ್ರಶ್ನೆಗಳು ಮೊದಲಿನಲ್ಲಿವೆ. ಅನಂತರ ಬಾಕಿ ಮಂತ್ರಿಗಳ ಪ್ರಶ್ನೆಗಳು ಮುದ್ರಿತ ವಾಗಿವೆ. ಈ ಮೂರು ದಿವಸಗಳಲ್ಲಿ ಮೂರು ನಾಲ್ಕು ಮಂತ್ರಿಗಳಿಗೆ ಸಂಬಂಧಪಟ್ಟ ಪ್ರಶ್ನೆಗಳು ಮಾತ್ರ ತೆಗೆದುಕೊಳ್ಳಲ್ಪಟ್ಟು ಗೃಹಸಚಿವರು ಮತ್ತು ಸ್ಥಳೀಯ ಸಂಸ್ಥೆಗಳ ಸಚಿವರು ಇವರು ಗಳಿಗೆ ಸಂಬಂಧಪಟ್ಟ ಪ್ರಶ್ನೆಗಳು ಹಾಗೆಯೇ ಉಳಿದಿವೆ. ಹಾಗೆ ಉಳಿದಿರುವುದರಲ್ಲಿ ಕೆಲವು ಮುಖ್ಯವಾದ ಇಲಾಖೆಗಳಿಗೆ ಸಂಬಂಧಪಟ್ಟವೆ. ಪಬ್ಲಿಕ್‌ವರ್ಕ್ಸ್ ಇಲಾಖೆಗೆ ಸಂಬಂಧಪಟ್ಟ ಪ್ರಶ್ನೆಗೆ ಜವಾಬು ಕೊಡುವುದಕ್ಕೆ ಅವಕಾಶ ವಾಗಿಲ್ಲ. ಆದ್ದರಿಂದ ಒಂದು ದಿವಸ ಪ್ರಾರಂಭ ದಿಂದ, ಇನ್ನೊಂದು ದಿವಸ ಕೊನೆಯಿಂದ ಪ್ರಾರಂಭ ಮಾಡುವುದು ಒಳ್ಳೆಯದು ಎಂದು ಸಲಹೆ ಮಾಡುತ್ತೇನೆ. ಹಾಗೆ ಮಾಡಿದರೆ ಸರಿಯಾಗಿ ಹಂಚಿಕೆಯಾಗುತ್ತದೆ.

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ-ನಿಮ್ನ ಪಂಗಡ).—ಕಾನೂನು ಪ್ರಕಾರ ಸಕ್ಸೆಸಿವ್ ಆಗಿ ಹೆಸರುಗಳನ್ನು ಕರೆಯ ಬೇಕೆಂ ದಿರುವುದಕ್ಕೆ ಹೀಗೆ ಮಾಡುವುದರಿಂದ ಧಕ್ಕೆ ಬರುವುದಿಲ್ಲವೆ ?

ಅಧ್ಯಕ್ಷರು (ಮಾನ್ಯ ಶ್ರೀ ವಿ. ವೆಂಕಟಪ್ಪ ನವರು).—ಆ ತೊಂದರೆಗಳಿವೆ. ಈಗ ಒಂದು ಕ್ರಮವನ್ನು ಅನುಸರಿಸುತ್ತಿದ್ದೇವೆ. ಕೇಂದ್ರದಲ್ಲೂ ಕೂಡ ಯಾವ ಪ್ರಶ್ನೆಗಳು ಮೊದಲು ಬರುತ್ತವೆಯೋ ಅವನ್ನು ಮೊದಲು ತೆಗೆದುಕೊಳ್ಳುತ್ತಾರೆ. ಆದರಲ್ಲೂ ಕಷ್ಟವಿದೆ. ಆದ್ದರಿಂದ ಆ ವಿಚಾರವನ್ನು ಯೋಚನೆ ಮಾಡೋಣ.

ಜನಾಬ್ ಜಿ. ಮಹಮುದ್ ಇಮಾಂರವರು (ಚಿತ್ರದುರ್ಗ ಕಂ ತುಮಕೂರು—ಮುಸ್ಲಿಂ).—Alternate ಆಗಿ ಈ ದಿವಸ ಒಂದು ಇಲಾಖೆ, ಇನ್ನೊಂದು ದಿವಸ ಮತ್ತೊಂದು ಇಲಾಖೆ ಹೀಗೆ ತೆಗೆದುಕೊಳ್ಳೋಣ.

The House then adjourned for lunch at Fifteen Minutes past Ten of the Clock and re-assembled at Fifty-five Minutes past Ten of the Clock, Mr. Speaker (The Hon'ble Sri V. Venkatappa) in the Chair.

Statement *re*: Arrangements made for holding General Elections in Mysore State.

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು (ಲಾ ಮತ್ತು ಲೇಬರ್ ಸಚಿವರು).—ಚುನಾ ವಣೆಗಳ ವಿಷಯದಲ್ಲಿ ಕೆಲವು ವಿಚಾರಗಳನ್ನು ಮಾನ್ಯ ಸದಸ್ಯರ ಅವಗಾಹನೆಗೆ ತರಬೇಕೆಂದು ಇಚ್ಛಿಸುತ್ತೇನೆ. ಮೈಸೂರು ಸಂಸ್ಥಾನದಲ್ಲಿ ಓಟರುಗಳ ಸಂಖ್ಯೆ ಸುಮಾರು 40 ಲಕ್ಷಕ್ಕೆ ಮೇಲ್ಪಟ್ಟು ಇದೆ. ಈ 40 ಲಕ್ಷ ಓಟರುಗಳು ನಮ್ಮ ಸಂಸ್ಥಾನದ ಲೆಜಿಸ್ಲೇಟಿವ್ ಅಸೆಂಬ್ಲಿಗೆ 99 ಜನರನ್ನು ಚುನಾಯಿಸಬಹುದು ಮತ್ತು ಹೌಸ್ ಆಫ್ ದಿ ಪೀಪಲ್‌ಗೆ 11 ಜನರನ್ನು ಚುನಾಯಿಸಬಹುದು. ಆ ಕ್ಷೇತ್ರಗಳನ್ನು ವಿಂಗ ಡನೆ ಮಾಡುವುದರಲ್ಲಿ ಲೆಜಿಸ್ಲೇಟಿವ್ ಅಸೆಂಬ್ಲಿಗೆ 61 ಸಿಂಗಲ್ ಮೆಂಬರ್ ಕಾನ್‌ಸ್ಟಿಟ್ಯೂಯನ್ಸಿ ಮತ್ತು 19 ಡಬ್ಬಲ್ ಮೆಂಬರ್ ಕಾನ್‌ಸ್ಟಿಟ್ಯೂ ಯನ್ಸಿ ಆಗಿ ವಿಂಗಡವಾಗಿದೆ. ಅಲ್ಲಿಗೆ 61 ಮತ್ತು 38 (19 × 2) ಸೇರಿದರೆ 99 ಆಗುತ್ತದೆ. ಹೌಸ್ ಆಫ್ ದಿ ಪೀಪಲ್‌ಗೆ 11 ಸ್ಥಾನಗಳ ಪೈಕಿ 7 ಸಿಂಗಲ್ ಮೆಂಬರ್ ಕಾನ್‌ಸ್ಟಿಟ್ಯೂಯನ್ಸಿ ಅಂತ ಲೂ, 2 ಡಬ್ಬಲ್ ಮೆಂಬರ್ ಕಾನ್‌ಸ್ಟಿಟ್ಯೂಯನ್ಸಿ ಅಂತಲೂ ವಿಂಗಡನೆ ಮಾಡಿದೆ. ಅಲ್ಲಿಗೆ 7 ಮತ್ತು 4 (2 × 2) ಸೇರಿದರೆ 11 ಆಗುತ್ತದೆ. ಈ 99 ಅಸೆಂಬ್ಲಿ ಸ್ಥಾನಗಳು, 11 ಪಾರ್ಲಿ ಮೆಂಟ್ ಸ್ಥಾನಗಳಿಗೆ ವಿಂಗಡವಾಗುತ್ತದೆಯಾದ್ದ ರಿಂದ ಒಂದೊಂದು ಸಿಂಗಲ್ ಮೆಂಬರ್ ಪಾರ್ಲಿ ಮೆಂಟ್ ಕಾನ್‌ಸ್ಟಿಟ್ಯೂಯನ್ಸಿಗೆ 9 ಅಸೆಂಬ್ಲಿ ಕಾನ್‌ಸ್ಟಿಟ್ಯೂಯನ್ಸಿ ಸೇರುತ್ತದೆ. ಹೀಗೆ ವಿಂಗಡಿಸಿ ಪಾರ್ಲಿಮೆಂಟ್ ಡೀಲಿಮಿಟೇಷನ್ ಮಾಡಿದೆ. ಅಸೆಂಬ್ಲಿ ಕಾನ್‌ಸ್ಟಿಟ್ಯೂಯನ್ಸಿ ಮತ್ತು ಪಾರ್ಲಿಮೆಂಟ್ ಕಾನ್‌ಸ್ಟಿಟ್ಯೂಯನ್ಸಿ ಯಾವ ರೀತಿ ವಿಂಗಡಿಸಲಾಗಿದೆ ಎಂಬುದನ್ನು ತೋರಿಸುವ ತಖ್ತೆಯನ್ನು ಸದಸ್ಯರಿಗೆ ಹಂಚಿ ದ್ದೇವೆ. ಇದು ಎಲ್ಲಾ ಸದಸ್ಯರಿಗೂ ತಲುಪಿದೆ. ಇದರ ಎರಡನೇ ಪೇಜಿನಲ್ಲಿ ಪಾರ್ಲಿಮೆಂಟ್

(ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.)
ಕಾನ್ಸ್ಟಿಟ್ಯೂಯೆನ್ಸಿ ಎಂದು ಸೂಚನೆ ಕೊಟ್ಟಿದೆ. ಟೇಬಲ್ 'ಬಿ'ನಲ್ಲಿ 3ನೇ ಪೇಜಿನಿಂದ ಆಖೈರು ವರೆಗೂ ಅಸೆಂಬ್ಲಿ ಕಾನ್ಸ್ಟಿಟ್ಯೂಯೆನ್ಸಿ ಎಂದು ಮಾಡಿದೆ.

ಓಟರುಗಳ ಪಟ್ಟಿ ಪ್ರಕಟಣೆ ಮಾಡುವುದಕ್ಕೆ ಎಲೆಕ್ಟೋರಲ್ ರೋಲ್ಸ್ ಪ್ರಿಂಟ್ ಮಾಡಿದ್ದೇವೆ. ಮೊದಲು ಪ್ರಿಲಿಮಿನೆರಿ ರೋಲ್ ಅಂತ ಪ್ರಿಂಟ್ ಮಾಡಿದ್ದೆವು, ಆಮೇಲೆ ಟಾಂಟಾಂ ಮಾಡಿ, ಹೆಸರು ಬಿಟ್ಟಿದ್ದರೆ ಸೇರಿಸಿಕೊಳ್ಳ ಬಹುದು, ತಪ್ಪುಗಳಿದ್ದರೆ ತಿದ್ದಬಹುದು ಎಂದು ಹೇಳಿದೆವು, ಸೂಚನೆ ಕೊಟ್ಟೆವು. ಅದನ್ನು ಪೂರ್ತಿಮಾಡಿ ಆಖೈರು ಪಟ್ಟಿ ಬಹುಮಟ್ಟಿಗೆ ಸೆಪ್ಟೆಂಬರ್ ಆಖೈರಿಗೆ ಪ್ರಿಂಟ್ ಆಗಬೇಕೆಂದು ಸೂಚನೆ ಕೊಟ್ಟಿದ್ದೆವು, ಅದರಂತೆ ಪ್ರಕಟಿಸಿದ್ದೆವು. ಓಟರುಗಳ ಆಖೈರು ಪಟ್ಟಿ ಎಲ್ಲಾ ಕಡೆಯಲ್ಲೂ ಸಿಕ್ಕುತ್ತದೆ. ಅದರಲ್ಲಿ ಹೆಸರು ಬಿಟ್ಟುಹೋಗಿದ್ದರೆ ಅಂಥವರ ಸ್ಥಿತಿ ಏನು ಎಂಬುದಾಗಿ ಕೇಳಿದರೆ ಅದಕ್ಕೆ ಒಂದು ಪ್ರಾವಿಷನ್ ಇದೆ. ಆಖೈರು ಪಟ್ಟಿಯಲ್ಲಿ ಹೆಸರು ಇಲ್ಲದೆ ಓಟರು ಆಗಿದ್ದು ಪಾರ್ಲಿಮೆಂಟ್ ಕಾನ್ಸ್ಟಿಟ್ಯೂಯೆನ್ಸಿಗೆ ಅವರ ಹೆಸರು ಬರಬೇಕಾಗಿದ್ದರೆ 50 ರೂಪಾಯಿ ಕೊಟ್ಟು ಚೀಫ್ ಎಲೆಕ್ಷನ್ ಕಮಿಷನರ್‌ರವರಿಗೆ ಅರ್ಜಿ ಸಲ್ಲಿಸಿದರೆ ಅವರು ಹೆಸರನ್ನು ತನಿಖೆಮಾಡಿ ಸೇರಿಸಿಕೊಳ್ಳಬಹುದು. ಇದನ್ನು ಚುನಾವಣೆ ನಡೆಯುವುದಕ್ಕೆ ಮುಂಚೆ ಯಾವಾಗ ಬೇಕಾದರೂ ಮಾಡಬಹುದು. ಹೀಗೆಯೇ ಅಸೆಂಬ್ಲಿ ಕಾನ್ಸ್ಟಿಟ್ಯೂಯೆನ್ಸಿಗೂ ಸಹ ಆಯಾ ಕಾನ್ಸ್ಟಿಟ್ಯೂಯೆನ್ಸಿ ರಿಟರ್ನಿಂಗ್ ಆಫೀಸರಿಗೆ ತಿಳಿಸಿ ಅವರ ಹೆಸರನ್ನು ಸೇರಿಸಬಹುದು. ಪಾರ್ಲಿಮೆಂಟ್ ಕಾನ್ಸ್ಟಿಟ್ಯೂಯೆನ್ಸಿಗೆ ಆಯಾ ಡೆಪ್ಯೂಟಿ ಕಮಿಷನರು, ಅಸೆಂಬ್ಲಿ ಕಾನ್ಸ್ಟಿಟ್ಯೂಯೆನ್ಸಿಗೆ ಆಯಾ ಸಬ್ ಡಿವಿಜನ್ ಆಫೀಸರು ಮತ್ತು ಬೆಂಗಳೂರು ಮತ್ತು ಮೈಸೂರು ಸಿಟಿಗಳಿಗೆ ಆಯಾ ಮುನಿಸಿಪಲ್ ಕಮಿಷನರು ರಿಟರ್ನಿಂಗ್ ಆಫೀಸರುಗಳೆಂದು ಗೊತ್ತುಮಾಡಿದ್ದೇವೆ. ಓಟರುಗಳ ಪಟ್ಟಿಯಲ್ಲಿ ಏನಾದರೂ verbal alterations, corrections ಮಾಡಬೇಕಾದರೆ ಆಯಾ ಕಾನ್ಸ್ಟಿಟ್ಯೂಯೆನ್ಸಿ ರಿಟರ್ನಿಂಗ್ ಆಫೀಸರಿಗೆ ತಿಳಿಸಿ, ದುಡ್ಡು ಕಟ್ಟದೆ ತಿದ್ದಿಕೊಳ್ಳಬಹುದು. ಓಟರುಗಳ ಪಟ್ಟಿಯಲ್ಲಿ ಹೊಸದಾಗಿ ಹೆಸರು ಸೇರಿಸಿಕೊಳ್ಳಬೇಕಾದರೆ ಅದಕ್ಕೆ ತೆರಬೇಕಾದ ಮೊಬಲಗನ್ನು ಕೊಟ್ಟ ಪಕ್ಷದಲ್ಲಿ ಸೇರಿಸಿಕೊಳ್ಳಬಹುದು. ಇಷ್ಟು ಎಲೆಕ್ಟೋರಲ್ ರೋಲ್ಸ್ ವಿಚಾರವಾಯಿತು.

ಜನಾಬ್ ಜೆ. ಮಹಮದ್ ಇಮಾಂರವರು (ಚಿತ್ರದುರ್ಗ ಮತ್ತು ತುಮಕೂರು--ಮುಸ್ಲಿಂ). —ಇದಕ್ಕೇನಾದರೂ ಕಾಲಪರಿಮಿತಿಯಿದೆಯೇ ?

ಶ್ರೀ ಕೆ. ಟಿ. ಭಾಷ್ಯಂರವರು.—ಏನೂ ಇಲ್ಲ, ಚುನಾವಣೆಗೆ ಮುಂಚಿತವಾಗಿ ಯಾವಾಗ ಬೇಕಾದರೂ ಸೇರಿಸಿಕೊಳ್ಳಬಹುದು. ಆದ್ದರಿಂದ ಈ ಚುನಾವಣಾ ಮತದಾರರ ಪಟ್ಟಿಯು ಎಲ್ಲರಿಗೂ ಸಿಕ್ಕುವ ಹಾಗೆ ಮಾಡುತ್ತೇವೆ. ಒಂದೊಂದು ಕ್ಷೇತ್ರಕ್ಕೂ 1,000 ಪ್ರತಿಗಳನ್ನು ಮುದ್ರಣಮಾಡಿಸಿದ್ದೇವೆ. ದರದಲ್ಲೂ ಕೂಡ ಒಂದು ಪುಟಕ್ಕೆ 3 ಕಾಸಿನಂತೆ ಲೆಕ್ಕ ಹಾಕಿ ಕಾನ್ಸ್ಟಿಟ್ಯೂಯೆನ್ಸಿವಾರ್ ಆಗಿ ಪುಸ್ತಕಮಾಡಿ, ಮಾರುತ್ತೇವೆ. ಸಾಧಾರಣವಾಗಿ, ಸಿಂಗಲ್ ಮೆಂಬರ್ ಅಸೆಂಬ್ಲಿ ಕಾನ್ಸ್ಟಿಟ್ಯೂಯೆನ್ಸಿ ತೆಗೆದುಕೊಂಡರೆ 400 ಪುಟದ ಪುಸ್ತಕವಾಗುತ್ತದೆ. ಅದರ ಬೆಲೆ ಸುಮಾರು 6 ರೂಪಾಯಿಯಾಗಬಹುದು. ಪಾರ್ಲಿಮೆಂಟ್ ಎಲೆಕ್ಟೋರಲ್ ರೋಲ್ಸ್‌ಗೆ ಆದರೆ 54 ರೂಪಾಯಿಗಳಾಗಬಹುದು. ವಾಸ್ತವವಾಗಿ ಬರೀ ಮುದ್ರಣಕ್ಕೇ ಬೀಳುವ ಖರ್ಚು ಇಷ್ಟಾಗುತ್ತದೆಂದು ಹೇಳಬಹುದು. It is even costlier than that, but we want to keep the rate low so that we may enable every candidate and every voter, if he wants to have it, to purchase a copy at as cheap a rate as possible.

ಆಮೇಲೆ ಪ್ರತಿ ಚುನಾವಣಾ ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೂ ಭೂಪಟಗಳನ್ನು (charts) ತಯಾರಿಸುತ್ತೇವೆ. ಇದರಿಂದ ಒಂದೊಂದು ಚುನಾವಣಾ ಪ್ರದೇಶಕ್ಕೆ

ಒಂದೊಂದು ಪೋಲಿಂಗ್ ಸ್ಟೇಷನ್ನಿಗೆ ಎಷ್ಟು ಓಟರುಗಳಿದ್ದಾರೆ ಎಂಬುದು ಗೊತ್ತಾಗುತ್ತದೆ. ಇದನ್ನು ಖರೀದಿಗೆ ಕೊಡುತ್ತೇವೆ. ಇದಕ್ಕೆ ಒಂದೆರಡು ರೂಪಾಯಿಗಳಾಗಬಹುದು. ಪೋಲಿಂಗ್ ಸ್ಟೇಷನ್‌ಗಳು ಎಲ್ಲೆಲ್ಲಿವೆ, ಎಷ್ಟೆಷ್ಟು ಓಟರುಗಳಿರುತ್ತಾರೆಂಬುದು ಇದರಲ್ಲಿ ಸ್ಪಷ್ಟವಾಗಿರುತ್ತದೆ.

ಜನಾಬ್ ಜೆ. ಮಹಮದ್ ಇಮಾಂರವರು.—ಇದನ್ನೂ ಒಂದು booklet ಆಗಿ ಮುದ್ರಣ ಮಾಡಬೇಕು.

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಒಟ್ಟಿಗೆ ಸೇರಿಸಿ ಹಾಗೆ booklet ಮಾಡುವುದು ಪ್ರಯೋಜನವಿಲ್ಲ. ಏಕೆಂದರೆ ಪ್ರತಿಯೊಂದು ಕ್ಷೇತ್ರದವರಿಗೂ ತಮ್ಮ ತಮ್ಮ ಕ್ಷೇತ್ರಕ್ಕೆ ಸೇರಿದ್ದಿದ್ದರೆ ಸಾಕು. ನಾಲ್ಕಾರು ಕ್ಷೇತ್ರಗಳು ಸೇರಿದ್ದಿದ್ದರೆ ಅದು ವೃಥಾ ಖರ್ಚು. ಅವರಿಗೆ ಬೇಕಾಗಿರುವುದಿಲ್ಲ. ಉದಾಹರಣೆಗೆ ಹೊಸಕೋಟೆ ತಾಲ್ಲೂಕಿನಿಂದ ಆನೇಕಲ್ಲಿಗೆ ಚುನಾವಣೆಗೆ ನಿಲ್ಲಬಹುದು. ಅವರಿಗೆ ದೇವನಹಳ್ಳಿಯ ಮ್ಯಾಪ್ ಬೇಕಾಗಿರುವುದಿಲ್ಲ. ಆದ್ದರಿಂದಲೇ ಇದಕ್ಕೆ ಬೇರೆಬೇರೆ ಮ್ಯಾಪ್‌ಗಳಿರುವುದೇ ಒಳ್ಳೆಯದು.

ಜನಾಬ್ ಜೆ. ಮಹಮದ್ ಇಮಾಂರವರು.—ಈಗ ತಾವು ಕಾನ್ಸ್ಟಿಟ್ಯೂಯನ್ಸಿ ಮ್ಯಾಪ್‌ಗಳನ್ನು ಮಾಡುತ್ತೇವೆಂದು ಹೇಳಿದಿರಿ. ಪೋಲಿಂಗ್ ಸ್ಟೇಷನ್‌ಗಳು ಯಾವುವೆಂದು ಪ್ರಕಟಣೆ ಮಾಡಿದ ಮೇಲೆ ಜನಾಭಿಪ್ರಾಯವನ್ನು ನೋಡಿದ್ದರಲ್ಲಿ ಏನಾದರೂ ಹೆಚ್ಚು ಕಡಿಮೆಯಾಗಬೇಕಾಗಿದ್ದರೆ ಏನು ಮಾಡುತ್ತೀರಿ? ತಮ್ಮ ಮ್ಯಾಪ್‌ಗಳನ್ನು ಈರೀತಿ ಸಾರ್ವಜನಿಕರ ತಿಳಿವಳಿಕೆಗಾಗಿ ಮುಂಚೆಯೇ ಪ್ರಕಟಿಸಿಬಿಡುತ್ತೀರಾ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇಲ್ಲ, ಪೋಲಿಂಗ್ ಸ್ಟೇಷನ್‌ಗಳನ್ನು ಮಾಡಿದ ಮೇಲೆ ಮ್ಯಾಪಿನಲ್ಲಿ ಆ ಸ್ಟೇಷನ್‌ಗಳನ್ನು ಗುರುತು ಮಾಡುತ್ತೇವೆ.

ಜನಾಬ್ ಜೆ. ಮಹಮದ್ ಇಮಾಂರವರು.—ಅಂದರೆ ಪೋಲಿಂಗ್ ಸ್ಟೇಷನ್‌ಗಳು ಇಂತಿಂಥವುಗಳೆಂದು ಗೊತ್ತಾದ ಮೇಲೆ ಈರೀತಿ ಮಾಡುತ್ತೀರಾ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹೌದು, ಮೊದಲು ಪೋಲಿಂಗ್ ಸ್ಟೇಷನ್‌ಗಳು ಯಾವ್ಯಾವುವೆಂಬುದನ್ನು ನಿರ್ಧಾರ ಮಾಡಿ ಜನರ ಅಭಿಪ್ರಾಯಗಳೇನೆಂಬುದನ್ನು ತಿಳಿದುಕೊಂಡು ಅದಕ್ಕನುಗುಣವಾಗಿ ಈ ಮ್ಯಾಪ್‌ಗಳನ್ನು ಮಾಡುತ್ತೇವೆ. ಒಂದೊಂದು ಚುನಾವಣಾ ಕ್ಷೇತ್ರದಲ್ಲೂ ಹೆಚ್ಚು ಕಡಿಮೆ 43 ಪೋಲಿಂಗ್ ಸ್ಟೇಷನ್‌ಗಳಿರುತ್ತವೆ. ಎಲ್ಲೆಲ್ಲಿ ಇಡಬೇಕೆಂಬುದನ್ನು ಈಗಾಗಲೇ ನಿರ್ಧಾರ ಮಾಡಿದ್ದೇವೆ. ಅದನ್ನು ಸಧ್ಯದಲ್ಲೇ ಪ್ರಕಟಿಸುತ್ತೇವೆ. ಪಾರ್ಟಿ ಮುಖಂಡರುಗಳಿಗೂ ಒಂದೊಂದು ಪ್ರತಿಯನ್ನು ಕೊಡುತ್ತೇವೆ. ಈರೀತಿ ಸಾರ್ವಜನಿಕ ಅಭಿಪ್ರಾಯವನ್ನು ಶೇಖರಿಸಿ ಕೊನೆಯಲ್ಲಿ ಒಂದು ಹೇಳಿಕೆ ಹೊರಪಡಿಸುತ್ತೇವೆ. ಆಖೈರು ಬದಲಾವಣೆಗಳನ್ನೆಲ್ಲಾ ಮ್ಯಾಪಿನಲ್ಲಿ ಗುರುತು ಮಾಡಿ ಒಂದೊಂದು ಪೋಲಿಂಗ್ ಸ್ಟೇಷನ್ನಿಗೂ ಎಷ್ಟು ಓಟರುಗಳೆಂಬುದನ್ನು ಸೂಚನೆ ಮಾಡುತ್ತೇವೆ.

ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—ಈ ಪೋಲಿಂಗ್ ಸ್ಟೇಷನ್‌ಗಳಿಗೂ ಹತ್ತಿರದಲ್ಲಿರತಕ್ಕ ಹಳ್ಳಿಗಳಿಗೂ ಇರತಕ್ಕ ದೂರವನ್ನೇನಾದರೂ ಇದರಲ್ಲಿ ಸೂಚಿಸುತ್ತೀರಾ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಆರೀತಿ ಸೂಚಿಸುವುದಿಲ್ಲ. ಆದರೆ, ಈ ಮ್ಯಾಪುಗಳ ಮೇಲೆ ಸ್ಕೇಲ್‌ಗಳನ್ನು ಕೊಟ್ಟಿರುತ್ತೇವೆ. ಸ್ಕೇಲ್‌ಗೆ ಅನುಸಾರವಾಗಿ ಹಳ್ಳಿಗಳೆಲ್ಲಾ ಗುರುತು ಮಾಡಲ್ಪಟ್ಟಿರುತ್ತವೆ. ಅದರಿಂದ ಒಂದೊಂದಕ್ಕಿರತಕ್ಕ ದೂರವನ್ನು ಕಂಡುಹಿಡಿಯಬಹುದು. ಸರ್ವೇಸಾಧಾರಣವಾಗಿ ಒಂದೊಂದು ಪೋಲಿಂಗ್ ಸ್ಟೇಷನ್ ಎರಡು ಮೈಲಿಯೊಳಗೇ ಇರುತ್ತದೆ. ಮಲೆನಾಡು ಪ್ರದೇಶದಲ್ಲಿ ಮಾತ್ರ ಸ್ವಲ್ಪ ಹೆಚ್ಚಿಗೆ ದೂರದಲ್ಲಿರಬಹುದು. The voters there are scattered and they are few and far between. Therefore in Malnad areas the polling station may be a little more distant than two miles.

(ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.)

But, ordinarily there is a polling station within a radius of two miles from a village.

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ).—ಹಾಗಾದರೆ ಮಲೆನಾಡು ಪ್ರದೇಶದಲ್ಲಿ ಪೋಲಿಂಗ್ ಸ್ಟೇಷನ್‌ಗಳು 5 ಮೈಲಿಯಷ್ಟು ದೂರದಲ್ಲಿರುತ್ತವೆಯೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಕೆಲವಿರಬಹುದು. ಮಲೆನಾಡಿನಲ್ಲಿ ಒಂದು ಮನೆ ಇಲ್ಲಿದ್ದರೆ ಇನ್ನೊಂದು ಬಹುದೂರದಲ್ಲಿ ಇರುತ್ತದೆ. ಆದ್ದರಿಂದ ಪೋಲಿಂಗ್ ಸ್ಟೇಷನ್‌ಗಳನ್ನು ಎಷ್ಟು ಹೆಚ್ಚುಮಾಡಿದರೂ ಈ ದೂರವನ್ನು ಕಡಿಮೆಮಾಡುವುದು ಕಷ್ಟ. ಮಲೆನಾಡಿನಲ್ಲಿ ಮಾತ್ರ ಈ ತೊಂದರೆಯಿರುತ್ತದೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಪರಮಾವಧಿ ಫಾಸಲೆ ಮೂರು ಮೈಲಿ ಇರುವಂತೆ ಮಾಡುವುದಕ್ಕಾಗುವುದಿಲ್ಲವೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಆಗುವುದಿಲ್ಲ; ಮೂರು ಮೈಲಿಯೊಳಗೊಂದು ಮಾಡಿದರೆ ಒಂದೊಂದು ಪೋಲಿಂಗ್ ಸ್ಟೇಷನ್ನಿಗೆ 200-300 ವೋಟರುಗಳು ಮಾತ್ರ ಸಿಕ್ಕುತ್ತಾರೆ. ಈಗ ನಾವು ಮಾಡಿಕೊಂಡಿರುವುದು ಸುಮಾರು ಒಂದು ಸಾವಿರ ವೋಟರುಗಳಿಗೊಂದು ಪೋಲಿಂಗ್ ಸ್ಟೇಷನ್ ಇರಬೇಕು ಎಂದು. ಅಂದರೆ 900 ರಿಂದ 1100 ರಷ್ಟಿರಬಹುದು. Ordinarily there should be a thousand voters for each polling station ಎಂದು ಗೊತ್ತುಮಾಡಿದ್ದೇವೆ. ಇಷ್ಟು ಜನರಲ್ಲಿ 500 ಅಥವಾ ಜಾಸ್ತಿ ಎಂದರೆ 600 ಜನ ವೋಟುಮಾಡಲು ಬರಬಹುದೆಂಬ ನಿರೀಕ್ಷೆಯಿದೆ. ಏಕೆಂದರೆ ಸಾಮಾನ್ಯವಾಗಿ, ಆ ಜಾಗದಲ್ಲಿರುವ ಗಂಡಸರ ಪೈಕಿ ಶೇಕಡ 60 ರಷ್ಟು ಜನ ವೋಟ್ ಮಾಡಲಿಕ್ಕೆ ಬರುತ್ತಾರೆ. ಹೆಂಗಸರ ಪೈಕಿ ಶೇಕಡಾ 30-40ಕ್ಕಿಂತ ಹೆಚ್ಚಿಗೆ ಬರುವುದಿಲ್ಲ. ಹೀಗೆ ಸರಾಸರಿ ಶೇಕಡಾ 50ರಷ್ಟು ಆಗಬಹುದು. ಎಷ್ಟೇ enlightened ಕ್ಷೇತ್ರವಾಗಿದ್ದರೂ ಶೇಕಡಾ 60ರ ಮೇಲೆ ಇರಲಾರದು.

ಶ್ರೀ ಎಲ್. ಸಿದ್ದಪ್ಪನವರು.—ಹಿಂದಿನ ಚುನಾವಣೆಗಳನ್ನು ನೋಡಿದರೆ, ಕೆಲವುಕಡೆ ಶೇಕಡಾ 82 ರಷ್ಟು ಬಂದಿರುವುದೂ ಇದೆ.

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಕೆಲವು ಕಡೆ ಇರಬಹುದು. ಸಿಟಿಗಳಲ್ಲಿ ಶೇಕಡಾ 90ರಷ್ಟು ನಿರೀಕ್ಷಣೆ ಮಾಡಬಹುದು.

Sri H. SIDDAVEERAPPA (Chitaldrug District).—I suggest that interruptions and suggestions may be reserved and the Hon'ble Minister may be allowed to make the statement freely. Questions may be put later.

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಶ್ರೀ ಸಿದ್ದವೀರಪ್ಪನವರು ಹೇಳಿದ್ದು ಸರಿಯೇ. ಆದರೆ, ಕೊನೆಯಲ್ಲಿ ಕೇಳಬೇಕೆಂದರೆ ಎಷ್ಟೋ ಮರೆತುಹೋಗುತ್ತದೆ. ಮಧ್ಯೆಮಧ್ಯೆ ಕೇಳಿದರೆ ಆಗಲೇ ಸಮಾಧಾನ ಮಾಡಬಹುದು. ಅಂತೂ ಎಲ್ಲವನ್ನೂ ಹೇಳುವುದಕ್ಕೆ ನಾನು ಸಿದ್ಧನಾಗಿದ್ದೇನೆ.

ಶ್ರೀ ಬಿ. ಚೆನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—ಪ್ರಭಾವಶಾಲಿಗಳಾದ ವೋಟರುಗಳಿರುವ ಸ್ಥಳಗಳಲ್ಲಿ 1,000 ವೋಟರುಗಳಿದ್ದರೆ ಸಾವಿರವೂ ವೋಟಾಗಿರುವ ಸಂದರ್ಭಗಳಿವೆ. ಅಂಥಾ ಸ್ಥಳಗಳಲ್ಲಿ ಒಂದೇ ಪೋಲಿಂಗ್ ಬೂತ್ ಇದ್ದರೆ ಆಗುತ್ತದೆಯೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಸಾವಿರ ವೋಟರುಗಳಿದ್ದು ಸಾವಿರ ಜನರೂ ವೋಟುಮಾಡಿರುವುದು ಇಂಗ್ಲೆಂಡಿನಲ್ಲೂ ಇಲ್ಲ! ಅಮೆರಿಕಾದಲ್ಲೂ ಇಲ್ಲ! ಮತ್ತೆಲ್ಲೂ ಇಲ್ಲ! Much less in India! ಆದರೆ ಅದಕ್ಕೂ ನಾವು ಏರ್ಪಾಡು ಮಾಡುತ್ತೇವೆ.

ಶ್ರೀ ಬಿ. ಚೆನ್ನಬೈರೇಗೌಡರು.—ಹೊಸಕೋಟೆಯಲ್ಲಿ 323 ಜನ ವೋಟರುಗಳಿದ್ದಾರೆ. 323 ಜನರೂ ಓಟು ಮಾಡಿರುವುದುಂಟು.

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹೆಚ್ಚಿಗೆ ಗಂಡಸರಿರುವ ಕಡೆ ಹೆಚ್ಚಿಗೆ ವೋಟು ಮಾಡುವುದಕ್ಕೆ ಬರುತ್ತಾರೆ. ಹೆಚ್ಚಿಗೆ ಹೆಂಗಸರಿರುವ ಕಡೆ ಅಷ್ಟು ನಿರೀಕ್ಷಣೆ ಮಾಡುವುದಕ್ಕಾಗುವುದಿಲ್ಲ. ಈಗ 1950-51ರಲ್ಲಂತೂ ಇಲ್ಲವೆಂದೇ ಹೇಳಬಹುದು. 1960-61

ರಲ್ಲಿ ಬಹುಶಃ ಹೆಚ್ಚಿಗೆ ಆಗಬಹುದು. So, we expect from our experience about 60 per cent of the men voters and about 30 to 40 per cent of the women voters and so, on an average about 50 per cent of the voters. In some places there may be 60 to 70 per cent. Even so, we have made arrangements for securing the votes of all the voters that come.

ಬೆಳಿಗ್ಗೆ 8 ಘಂಟೆಯಿಂದ ಸಾಯಂಕಾಲ 5 ಘಂಟೆಯವರೆಗೂ ವೋಟಿಂಗ್ ನಡೆಸಿ, 5 ಘಂಟೆ ಹೊತ್ತಿಗೆ ಆ ಪೋಲಿಂಗ್ ಸ್ಟೇಷನ್ ಬಳಿಗೆ ಬಂದ ಮಿಕ್ಕ ಎಲ್ಲಾ ವೋಟರುಗಳನ್ನೂ cordon ಮಾಡಿ ವೋಟಿಂಗ್ ತೆಗೆದುಕೊಳ್ಳುತ್ತೇವೆ. ಇಲ್ಲಿಯವರೆಗಿನ ನಮ್ಮ ಅನುಭವದ ಪ್ರಕಾರ ಐಡೆಂಟಿಫಿಕೇಷನ್ ಸ್ಲಿಪ್ ಕೊಟ್ಟು, ಹೆಬ್ಬೆಟ್ಟಿನ ರುಜು ತೆಗೆದುಕೊಂಡು, ಅವನ ಹೆಸರನ್ನು ಟಿಕ್ ಮಾಡಿಕೊಂಡು, ಕಾಗದ ಮಡಿಸಿ ಹಾಕುವುದರಲ್ಲಿ ಒಂದು ದಿನಕ್ಕೆ 350 ವೋಟರುಗಳು ವೋಟ್ ಮಾಡಬಹುದೆಂದು ಗೊತ್ತಾಗಿದೆ. ಈಗ ಹಾಗಲ್ಲ. ಶ್ಯಾನುಭೋಗರು ಮೊದಲೇ ಮನೆಗಳಿಗೆ ಬಂದು ಚೀಟಿ ಕೊಟ್ಟು ಹೋಗಿರುತ್ತಾರೆ. ಅದನ್ನು ತಂದು ಪ್ರಿಸೈಡಿಂಗ್ ಆಫೀಸರಿಗೆ ಕೊಟ್ಟರೆ ಅವರು ರುಜುಮಾಡಿ ಕಳುಹಿಸುತ್ತಾರೆ. ಒಬ್ಬರು ಪೋಲಿಂಗ್ ಆಫೀಸರೂ, ಒಬ್ಬರು ಗುಮಾಸ್ತರೂ ಅಲ್ಲಿರುತ್ತಾರೆ. ವರು ಐಡೆಂಟಿಫಿಕೇಷನ್ ಚೀಟಿಯನ್ನು ತೆಗೆದುಕೊಂಡು ವೋಟರ ನಂಬರನ್ನು circle ಮಾಡಿ ಹೆಬ್ಬೆಟ್ಟಿಗೆ indelible ink ನಿಂದ ಮಸಿ ಹಚ್ಚಿ ವೋಟ್ ಮಾಡುವುದಕ್ಕೆ ಕಾಗದ ಕೊಡುತ್ತಾರೆ. ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿಯಲ್ಲಿ ಅಸೆಂಬ್ಲಿಗೆ ಒಂದು ಕಾಗದ ಕೊಡುತ್ತಾರೆ. ಅದನ್ನು ಓಟು ಮಾಡಿ, ಆಕಡೆ ಹೋದರೆ ಅಲ್ಲಿ ಇನ್ನೊಬ್ಬರು ಪೋಲಿಂಗ್ ಆಫೀಸರಿರುವವರು House of People ಗೆ ಇನ್ನೊಂದು ವೋಟಿಂಗ್ ಕಾಗದ ಕೊಡುತ್ತಾರೆ. ಅವರದನ್ನು ವೋಟ್ ಮಾಡಿ ಹೊರಟುಹೋಗಬೇಕು. ಆಮೇಲೆ ಡಬ್ಬಲ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿಯಲ್ಲಿ ಎರಡು ಬ್ಯಾಲಟ್ ಪೇಪರ್‌ಗಳನ್ನು ಕೊಟ್ಟು ಒಂದೊಂದು ಪೆಟ್ಟಿಗೆಯಲ್ಲಿ ಒಂದೊಂದನ್ನು ಹಾಕಿ ಎಂದು ಹೇಳುತ್ತಾರೆ. ಬ್ಯಾಲಟ್ ಪೇಪರುಗಳನ್ನು ಯಾವ ಪೆಟ್ಟಿಗೆಯಲ್ಲಿ ಬೇಕಾದರೂ ಹಾಕಬಹುದು. ಎರಡನ್ನೂ ಒಂದೇ ಪೆಟ್ಟಿಗೆಯಲ್ಲಿ ಹಾಕಿದರೆ ಒಂದು ಲೆಕ್ಕಕ್ಕೆ ಬರುತ್ತದೆ, ಇನ್ನೊಂದು ವಜಾ ಆಗುತ್ತದೆ. ಹೀಗೆ ಎರಡು - ಕಡೆಯೂ ಮೈಸೂರು ಅಸೆಂಬ್ಲಿಗೂ, ಪಾರ್ಲಿಮೆಂಟಿಗೂ ಬೇರೆಬೇರೆ ಜಾಗವಿರುತ್ತದೆ. In every polling station, there will be shanbhogs and patels who will identify the party when he brings the identification slip; or if he comes without identification slip, we will give him one. ಅಲ್ಲಿ ಒಬ್ಬೊಬ್ಬರು ಅಧಿಕಾರಿಗಳಿರುತ್ತಾರೆ, ಅವರು identify ಮಾಡಿ ಟಿಕ್ ಮಾಡಿ ಬ್ಯಾಲಟ್ ಚೀಟಿ ಕೊಡುತ್ತಾರೆ. ಅಲ್ಲದೆ ಯಾರು ಯಾವ ಪೆಟ್ಟಿಗೆಗೆ ಹಾಕಬೇಕೆಂದಿರುತ್ತಾರೆಯೋ ಅವರವರಿಗೆ ಆಯಾ ಪೆಟ್ಟಿಗೆಗಳು ಸರಿಯಾಗಿ ಕಾಣುವಂತೆ ಬೆಳಕು ಇರುವಂತೆ ಏರ್ಪಾಡು ಮಾಡಿರುತ್ತಾರೆ. The boxes will be kept high enough to find out the symbols on every box. ಮೊನ್ನೆ ತಿಪ್ಪಗೊಂಡನಹಳ್ಳಿಯಲ್ಲಿ ನಡೆದ ಮಾಕ್ ಎಲೆಕ್ಷನ್‌ನಲ್ಲಿ ಪೆಟ್ಟಿಗೆಗಳನ್ನು ಸ್ವಲ್ಪ ಕೆಳಗಿಡಲಾಗಿತ್ತು, ಚಿಹ್ನೆಗಳನ್ನು ಬಗ್ಗಿ ನೋಡಬೇಕಾಗಿತ್ತು ಎಂದು ಕಂಡುಬಂದಿತು. ಸುಲಭವಾಗಿ ಚಿಹ್ನೆ ಕಾಣುವಂತೆ ಇಡುತ್ತೇವೆ.

ಒಬ್ಬ ಸದಸ್ಯರು.—ಕುಳ್ಳರಾದರೂ ಇದ್ದರೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅಷ್ಟು ಎತ್ತರವಾಗಿಯೂ ಇರುವುದಿಲ್ಲ, ಅಷ್ಟು ತಗ್ಗಾಗಿಯೂ ಇರುವುದಿಲ್ಲ.

But it cannot be too high. Just high enough so that you may be able to drop the voting slip into the box. So we put the box at a certain height where a member will be able to see the symbols on the box without any effort and nevertheless be able to put the ballot paper into the box.

ಶ್ರೀ ಕಡಿದಾಳ್ ಮಂಜಪ್ಪನವರು.—ತಿಪ್ಪಗೊಂಡನಹಳ್ಳಿ ಮಾಕ್ ಎಲೆಕ್ಷನ್ನಲ್ಲಿ ಪೆಟ್ಟಿಗೆಯ ಮೇಲಿನ ಚಿಹ್ನೆ ಸರಿಯಾಗಿ ಕಾಣಿಸುತ್ತಿರಲಿಲ್ಲ ಎಂದು ಹೇಳಿದಿರಿ. ಹಾಗಾಗದಂತೆ ಇರಲು ಏನುಮಾಡುತ್ತೀರಿ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅಲ್ಲಿ ಓಟರುಗಳು ಹೋದಕೂಡಲೇ ಕಾಣುವ ಹಾಗೆ ಇರಬೇಕಾಗಿತ್ತು. ಸ್ವಲ್ಪ ಕೆಳಗಿತ್ತು, ಆದಕಾರಣ ಅಲ್ಲಿ ಹಾಗಾಗಿತ್ತು. ಇನ್ನೂ ಸ್ವಲ್ಪ ಮೇಲಿಟ್ಟರೆ ಸರಿಯಾಗಿ ಕಾಣುತ್ತದೆ. The box itself is big enough and the symbol will be about 6″×6″.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು (ಬೆಂಗಳೂರು ನಗರ).—ಚಿಹ್ನೆ ಪೆಟ್ಟಿಗೆಯ ಮೇಲಿರುತ್ತದೆಯೋ, ಒಳಗಿರುತ್ತದೆಯೊ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಪೆಟ್ಟಿಗೆಯ ಮೇಲೂ ಇರುತ್ತದೆ, ಒಳಗೂ ಇರುತ್ತದೆ, so that we may not be put to any kind of confusion.

ಜನಾಬ್ ಜೆ. ಮಹಮ್ಮದ್ ಇಮಾಂರವರು.—ಪೆಟ್ಟಿಗೆಯ ಮೇಲೆ ಚಿಹ್ನೆಗಳನ್ನು ಪೇಯಿಂಟ್ ಮಾಡಿಸುತ್ತೀರೋ ಅಥವಾ ಅಂಟಿಸುತ್ತೀರೊ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅಂಟಿಸುತ್ತೇವೆ.

ಶ್ರೀ ಟಿ. ಸಿ. ಹೊನ್ನಪ್ಪನವರು (ಮೈಸೂರು ಜಿಲ್ಲೆ).—ಜನರಲ್ ಸೀಟಿಗೆ ಕೊಡಬೇಕಾದ ಓಟನ್ನು ರಿಜರ್ವ್ಡ್ ಓಟಿನ ಪೆಟ್ಟಿಗೆಗೆ ಹಾಕಿದರೆ ಅಥವಾ ರಿಜರ್ವ್ಡ್ ಸೀಟಿನ ಓಟನ್ನು ಜನರಲ್ ಸೀಟಿನ ಪೆಟ್ಟಿಗೆಗೆ ಹಾಕಿದರೆ invalid ಆಗಿ, ಎರಡೂ ಕೂಡ ವ್ಯರ್ಥವಾಗುತ್ತದಲ್ಲವೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದು ತಪ್ಪುಭಾವನೆ. ಬ್ಯಾಲೆಟ್ ಪೇಪರ್ಸ್ ಒಂದೇರೀತಿ ಇರುತ್ತವೆ. ಎರಡನ್ನೂ ಒಂದಕ್ಕೇ ಹಾಕಿದರೆ ಒಂದು ಸರಿಯಾಗುತ್ತದೆ, ಇನ್ನೊಂದು invalid ಆಗುತ್ತದೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಒಂದೊಂದು ಬ್ಯಾಲೆಟ್ ಪೇಪರ್ ಕೊಡುತ್ತಾರೆಯೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇದರಲ್ಲಿ ಎರಡು ಕಷ್ಟಗಳಿವೆ. ಒಂದೊಂದು ಬ್ಯಾಲೆಟ್ ಪೇಪರ್ ಕೊಟ್ಟರೆ ಒಂದು ಸ್ಥಾನಕ್ಕೇ ಓಟು ಮಾಡುವಂತೆ ಒತ್ತಾಯಮಾಡಿದಂತಾಗುತ್ತದೆ. If you do that, you will be forcing the man to vote for the scheduled class candidate or for the general seat. ಎರಡು ಸ್ಥಾನಗಳಿಗೆ ಎರಡು ಓಟುಗಳಿರುವುದು. ಒಬ್ಬ ಓಟರು ತನ್ನ ಎರಡು ಓಟುಗಳನ್ನೂ ಜನರಲ್ ಸ್ಥಾನಕ್ಕೇ ಕೊಡಬಹುದು ಅಥವಾ ರಿಜರ್ವ್ಡ್ ಸ್ಥಾನಕ್ಕೇ ಕೊಡಬಹುದು. ಆದರೆ ಎರಡನ್ನೂ ಒಂದೇ ಕ್ಯಾಂಡಿಡೇಟಿಗೆ ಕೊಡಬಾರದು ಅಷ್ಟೆ.

ಶ್ರೀ ಬಿ. ಹುಚ್ಚೇಗೌಡರು.—ಪಾರ್ಲಿಮೆಂಟ್ ಚುನಾವಣೆಗೆ ಬೇರೆ ಏರ್ಪಾಡಿರುತ್ತದೆಯೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಎರಡಕ್ಕೂ ಬೇರೆಬೇರೆ ಇಟ್ಟಿದ್ದೇವೆ. ಓಟರಿಗೆ ಎರಡು ಕಾಗದ ಕೊಡುತ್ತೇವೆ, ನಾಲ್ಕು ಕೊಡುವುದಿಲ್ಲ. ಒಂದೊಂದು ಪೆಟ್ಟಿಗೆಗೆ ಒಂದೊಂದನ್ನು ಹಾಕಬೇಕೆಂದು ಹೇಳುತ್ತೇವೆ. The maximum number of ballot papers in a voter's hand will be two at a time.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ರಿಜರ್ವ್ಡ್ ಕಾನ್ಸ್ಟಿಟ್ಯೂಯೆನ್ಸಿಯ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ತಿಳಿದಿದ್ದರಿಂದಲೂ ಮೊನ್ನೆ ಎಲೆಕ್ಷನ್ ಕಮಿಷನರ್‌ರವರ ಅಭಿಪ್ರಾಯವನ್ನು ಕೇಳಿದ್ದರಲ್ಲಿಯೂ ಓಟಿಂಗ್ ಸ್ಲಿಪ್ಪನ್ನು ಯಾವ ಪೆಟ್ಟಿಗೆಗೆ ಹಾಕಿದರೂ ತೊಂದರೆಯಿಲ್ಲವೆಂದು ತಿಳಿದು ಬಂತು. ಇದರಿಂದ ಮೂಲಭೂತ ಹಕ್ಕಿಗೇ ಧಕ್ಕೆ ಬಂದ ಹಾಗೆ ಕಾಣುತ್ತದೆ. ಹೇಗೆಂದರೆ, ಒಬ್ಬ ಮನುಷ್ಯನು ಎರಡು ಓಟುಗಳನ್ನು, ಒಂದು ಜನರಲ್ ಸ್ಥಾನಕ್ಕೆ, ಇನ್ನೊಂದು ರಿಜರ್ವ್ಡ್ ಸ್ಥಾನಕ್ಕೆ ಕೊಡುವುದನ್ನು, ಎರಡನ್ನೂ ಜನರಲ್‌ಗೇ ಕೊಟ್ಟರೆ ಆ ಕಾನ್ಸ್ಟಿಟ್ಯೂಯೆನ್ಸಿಯಲ್ಲಿ ಜನರಲ್ ಸೀಟಿಗೇ ಕೊಟ್ಟಹಾಗಾಗುತ್ತದೆ.

ಅಲ್ಲಿರುವುದು ಒಂದು ಜನರಲ್, ಒಂದು ರಿಜರ್ವ್ ಸ್ಥಾನ. ಹೀಗಿರುವಾಗ ಯಾರಾದರೂ ಜನರಲ್ ಸೀಟಿಗೆ ಒಬ್ಬರಿಗೇ ಕೊಟ್ಟರೆ, ಒಂದು ವ್ಯಾಲಿಡ್ ಆಗಬೇಕು, ಇನ್ನೊಂದು ಇನ್‌ವ್ಯಾಲಿಡ್ ಆಗಬೇಕು. ತಾವು ಹೇಳುವುದರಲ್ಲಿ ಎರಡನ್ನೂ ಒಂದೇ ಸ್ಥಾನಕ್ಕೆ ಕೊಟ್ಟರೆ ಎರಡನ್ನೂ ಲೆಕ್ಕಕ್ಕೆ ತೆಗೆದುಕೊಳ್ಳಬಹುದೆಂದು ಅರ್ಥವಾಗುತ್ತದೆ. ಇದನ್ನು ಸ್ಪಷ್ಟಪಡಿಸಬೇಕು.

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇದು ತತ್ವಕ್ಕೆ ವಿರೋಧವೇನೂ ಅಲ್ಲ. ಎರಡು ಸೀಟುಗಳಿರುವುದು. ಒಂದೊಂದಕ್ಕೆ ಒಂದೊಂದು ಓಟು ಕೊಡಬೇಕು. ಷೆಡ್ಯೂಲ್ಡ್ ಕ್ಯಾಸ್ಟ್ ಮೆಂಬರೊಬ್ಬರು ಬರಬೇಕು. ಇವರ ಪೈಕಿ ಹೆಚ್ಚು ಓಟು ಬಂದವರನ್ನು ಚುನಾವಣೆ ಮಾಡುತ್ತೇವೆ. ಒಂದನ್ನು ಇಲ್ಲೇ ಹಾಕಬೇಕು ಇನ್ನೊಂದನ್ನು ಅಲ್ಲೇ ಹಾಕಬೇಕೆಂದು ಹೇಳಿ ಒತ್ತಾಯ ಮಾಡುವುದು ತತ್ವಕ್ಕೆ ವಿರೋಧವಾಗುತ್ತದೆ. ಓಟುದಾರರು ಎರಡನ್ನೂ ಒಂದಕ್ಕೇ ಕೊಡಬಹುದು ಅಥವಾ ಒಂದೊಂದನ್ನು ಒಂದೊಂದಕ್ಕೆ ಕೊಡಬಹುದು. ಇದು ಒಂದು ವೇಳೆ ತತ್ವಕ್ಕೆ ವಿರುದ್ಧವಾಗಿರುವಂತೆ ಕಂಡುಬಂದರೂ ಕೂಡ ಎಲೆಕ್ಷನ್ ಕಮಿಷನರು ಆರೀತಿ ತಾಕೀತು ಮಾಡಿದ್ದಾರೆ. The only thing that can be done is to ask the voter to put not more than one ballot paper into a box. You cannot compel a man to vote one for this side and one for that side. ನಾವು ಎಲೆಕ್ಷನ್ ಕಮಿಷನರವರ ಆಜ್ಞೆಯಂತೆ ನಡೆಯಬೇಕಾಗುತ್ತದೆ. ಅಂತೂ ಶ್ರೀ ರಂಗರಾಮಯ್ಯನವರ ಸೂಚನೆಯನ್ನು ಅವರಿಗೆ ತಿಳಿಸುತ್ತೇವೆ, ಅವರು ಅದಕ್ಕೊಪ್ಪಿದರೆ ಆಗಬಹುದು.

Sri A. BHEEMAPPA NAIK.—Will it not frustrate the very object with which the seats are reserved?

The Hon'ble Sri K. T. BHASHYAM.—It does not defeat the object, let me tell my Hon'ble Friend. It does not defeat the object because supposing in a general seat a member gets 2,000 votes and a schedule caste member gets the highest number of 10. Then even so, the schedule caste, candidate will be declared elected and the general seat candidate also will be declared elected.

Janab MOHAMED HANIEF (Bangalore—Muslim).—If you keep two boxes, one for the general seat and one for the reserved seat, how do you ensure that the voting slip goes into the reserved box?

The Hon'ble Sri K. T. BHASHYAM.—There will be two ballot papers A and A1, and we will be able to count the number of votes polled in favour of the reserved seat, in whichever box the voting slip is put in.

Janab MOHAMED HANIEF.—Supposing both the A and A1 ballot papers are put into the same box?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—A, A1 ಎರಡು ಕಾಗದಗಳನ್ನು ಕೊಡುತ್ತೇವೆ. ಈ ಎರಡನ್ನೂ ಒಂದೇ ಪೆಟ್ಟಿಗೆಗೆ ಹಾಕಿದರೆ ಇದರಲ್ಲಿ ಒಂದು invalid ಆಗಿಹೋಗುತ್ತದೆ. ಬೇರೆಬೇರೆ ಪೆಟ್ಟಿಗೆಗೆ ಹಾಕಿದರೆ ಸರಿಯಾಗುತ್ತದೆ. Both will be valid.

Janab MOHAMED HANIEF.—But how is the reserved seat really reserved?

The Hon'ble Sri K. T. BHASHYAM.—It is reserved in this sense, that the schedule caste candidate who secures largest number of votes among the scheduled caste candidates will be considered elected.

Janab MOHAMED HANIEF.—The votes instead of being distributed between the general and reserved candidates, supposing by mistake the voter puts in both slips in the general box, will it not affect the reserved seat candidate?

The Hon'ble Sri K. T. BHASHYAM.—He may do so: It will not affect since however few the voters polled, he who gets the largest number of votes will be declared elected.

ಶ್ರೀ ಎಸ್. ರಂಗರಾಯರು (ಚಿತ್ರದುರ್ಗ ಜಿಲ್ಲೆ).—ಒಂದು ಡಬ್ಬಲ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿಯಲ್ಲಿ ಸುಮಾರು 80 ಸಾವಿರ

(ಶ್ರೀ ಎಸ್. ರಂಗರಾಯರು).

ಓಟರುಗಳಿರುತ್ತಾರೆ. A ಮತ್ತು A1 ಎಂದು ಎರಡು ಓಟಿಂಗ್ ಚೀಟಿಗಳನ್ನು ಪ್ರತಿಯೊಬ್ಬರಿಗೂ ಕೊಟ್ಟಾಗ ಅವುಗಳನ್ನು ಪ್ರತಿಯೊಬ್ಬರೂ ಎರಡನ್ನೂ ಒಂದೇ ಪೆಟ್ಟಿಗೆಗೆ ಹಾಕಿದರೆ ಒಂದು invalid ಆಗುತ್ತದೆಂದು ಹೇಳಿದಿರಿ. ಎಂಬತ್ತು ಸಾವಿರ ಓಟರುಗಳು ಎರಡು ಚೀಟಿಗಳನ್ನೂ ಒಂದಕ್ಕೇ ಹಾಕಿದ್ದಾರೆಯೆ ಅಥವ ಒಂದೊಂದನ್ನು ಒಂದೊಂದಕ್ಕೆ ಹಾಕಿದ್ದಾರೆಯೆ ಎಂಬುದನ್ನು ಕಂಡುಹಿಡಿಯುವುದು ಕಷ್ಟವಲ್ಲವೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಒಂದೊಂದು ಸಾವಿರ ಓಟರುಗಳಿಗೆ ಒಂದೊಂದು ಪೋಲಿಂಗ್ ಸ್ಟೇಷನ್ ಇರುತ್ತದೆ. ಅವರಲ್ಲಿ ಓಟು ಮಾಡುವುದಕ್ಕೆ ಐನೂರು ಅಥವ ಆರು ನೂರು ಜನ ಬರಬಹುದು. ಒಂದೊಂದು ಸ್ಟೇಷನ್ನಿನಲ್ಲಿ ಹತ್ತು ಪೆಟ್ಟಿಗಳಿರುತ್ತವೆ. ಒಂದೊಂದು ಪೆಟ್ಟಿಗೆಗೆ 60 ಅಥವ 80 ಅಥವ 100 ಬರಬಹುದು. ಆದಕಾರಣ ಎರಡು ನಂಬರಿನ ಒಂದೇ ಬ್ಯಾಲೆಟ್ ಪೇಪರ್ ಇದ್ದರೆ ಅದನ್ನು ಸುಲಭವಾಗಿ ಕಂಡುಹಿಡಿಯಬಹುದು.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).—ಬೇರೆ ಬೇರೆ ಪೆಟ್ಟಿಗೆಗಳನ್ನು ಉಪಯೋಗಿಸುತ್ತೀರೋ ಅಥವ ಎಲ್ಲವನ್ನೂ ಒಂದೇ ಪೆಟ್ಟಿಗೆಗೆ ಹಾಕುವಂತಿರುತ್ತದೆಯೊ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಒಬ್ಬೊಬ್ಬ ಉಮೇದುವಾರರಿಗೆ ಒಂದೊಂದು ಪೆಟ್ಟಿಗೆ ಅಲ್ಲಿರುತ್ತದೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಉಮೇದುವಾರರ ಹೆಸರನ್ನು ಪೆಟ್ಟಿಗೆಯ ಮೇಲೆ ಬರೆಯುತ್ತಾರೆಯೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹೌದು, ಅವರವರ ಚಿಹ್ನೆಗಳನ್ನು ಹಾಕಿರುತ್ತಾರೆ. ಹೆಸರನ್ನೂ ಹಾಕುತ್ತೇವೆ.

Janab MOHAMED VALIULLA (Kolar—Muslim).—Supposing among the 1,000 voters no vote goes to reserved class. Your idea is to have one reserved seat. If that idea is frustrated, you are doing things against the rule.

Mr. SPEAKER.—It cannot happen throughout the taluk.

Janab MOHAMED VALIULLA.—In the 1935 election, some candidate was not returned for want of one vote.

The Hon'ble Sri K. T. BHASHYAM.—We do not know which constituency he is referring to. We do not know. ಹಿಂದೆ ಕೆಲವು ಜಮೀನ್ದಾರಿ ಕಾನ್‌ಸ್ಟಿಟ್ಯೂಯನ್‌ಸಿಸ್‌ಗಳೆಂದಿದ್ದವು. ಅಂಥಾ ಕಾನ್‌ಸ್ಟಿಟ್ಯೂಯನ್‌ಸೀಗಳಿಗೆ ಕೇವಲ 20 ಜನರಿದ್ದರು. ಆಗೇನಾದರೂ ಆರೀತಿ ಆಗುತ್ತಿದ್ದಿತೋ ಏನೋ ಗೊತ್ತಿಲ್ಲ. ಈಗ ಇರುವ ಪ್ರಕಾರ ಪ್ರತಿಯೊಂದು ಚುನಾವಣಾ ಕ್ಷೇತ್ರದಲ್ಲಿಯೂ ಸುಮಾರು 40-45 ಸಾವಿರ ಮತದಾರರಿರಬಹುದೆಂದು ಭಾವಿಸಲಾಗಿದೆ. ಹಾಗೆ ಭಾವಿಸಿದ ನಂತರ ಪ್ರತಿಯೊಂದು ಸಾವಿರ ಮತದಾರರಿರತಕ್ಕ ಪ್ರದೇಶಕ್ಕೆ ಒಂದೊಂದು ಪೋಲಿಂಗ್ ಬೂತನ್ನು ಏರ್ಪಡಿಸಲಾಗುತ್ತದೆ. ಚುನಾವಣೆಗೆ ನಿಲ್ಲತಕ್ಕವರಿಗೆಲ್ಲಾ ಒಂದೊಂದು ಪೋಲಿಂಗ್ ಭೂತಿನಲ್ಲಿಯೂ ಒಂದೊಂದು ಪೆಟ್ಟಿಗೆಯನ್ನಿಡಲಾಗುತ್ತದೆ. ಅಂದರೆ ಪ್ರತಿಯೊಬ್ಬರಿಗೂ ಸುಮಾರು 45 ಪೆಟ್ಟಿಗೆಗಳಿರುತ್ತವೆ. ಈ ರೀತಿಯಾಗಿ ಈಗ ಒಂದು ಕ್ರಮವನ್ನು ಮಾಡಿರುತ್ತೆ. ಇದನ್ನು ಬದಲಾಯಿಸಲು ಈಗ ನಮಗೆ ಸಾಧ್ಯವಿಲ್ಲ. ಇದರ ಬಗ್ಗೆ ನಾವೇನೂ ಮಾಡುವುದಕ್ಕಾಗುವುದಿಲ್ಲ. ಇಷ್ಟೊಂದು ಜನ ಮತದಾರರಿರುವಾಗ ಒಬ್ಬರೂ ಓಟುಮಾಡುವುದಿಲ್ಲವೆಂಬುದನ್ನು ನಾವು ನಂಬುವುದಕ್ಕಾಗುವುದಿಲ್ಲ.

Sri A. BHEEMAPPA NAIK.—By seeing that the Scheduled Caste man votes for his own community, thereby are you not creating a separatist mentality? There is a possibility of a scheduled Caste voter voting only for his caste candidate and a general constituency voter voting only for a general candidate. We have to see that a separatist mentality does not come about. You say that if two scheduled caste candidates have stood, the voter may vote for both of them. The Scheduled Caste man thinks of his own men. We think of our own men. That means, the very object with which the reservation is effected, is frustrated,

because while they want that each of us co-operates with the other, they must be assured of the seat. That is the object. The Scheduled Caste people will vote for two scheduled caste candidates. That means, they will vote for themselves. We will vote for our people. Thus the very object with which it is introduced is frustrated.

The Hon'ble Sri K. T. BHASHYAM.—There are two answers to what the Hon'ble Member has said. One is, reservation of seat itself creates this mentality. We have got it in this country. We have got to face it. So for a period of ten years we have decided to recognise that mentality that scheduled castes shall have reserved seats, but that is different from saying that a voter must vote for a scheduled caste candidate. By process of education through Hon'ble Members like Sri A. Bheemappa Naik, people will get over that mentality and we hope that all people will vote without being influenced by any such factor. That is Number one.

The other answer is almost conclusive; and that is the rule which the Election Commissioner has sent on to us and we have got to follow it. The rule is that you cannot force any voter to caste his vote for any one candidate on the general seat or on the schedule seat. It is for him to choose whichever candidate he will vote for.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಇದರಲ್ಲಿ ಕೆಲವು ವಿಷಯಗಳು ಬಹಳ cumbersome ಆಗಿರುವುದಲ್ಲದೆ commonsense ಗೆ ಬಹಳ ವಿರೋಧವಾಗಿವೆ. ಇಂಥವು ಗಳನ್ನೆಲ್ಲಾ ತಾವು ಸರಿಪಡಿಸಬೇಕಾಗಿದೆ.

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ ನಿಮ್ನ ಸಂಗಡ).—ಈಗ ಡಬ್ಬಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿಗೆ ಎರಡು ಸ್ಥಾನಗಳಿದ್ದು ಒಂದು ಸಾರ್ವತ್ರಿಕ ಚುನಾವಣಾ ಸ್ಥಾನವೂ ಮತ್ತೊಂದು ರಿಸರ್ವ್ಡ್ ಸ್ಥಾನವೂ ಆಗಿರುತ್ತವೆ. ಆಗ ಜನರಲ್ ಸೀಟಿಗೆ ಇಬ್ಬರು ಮತ್ತು ರಿಸರ್ವ್ಡ್ ಸೀಟಿಗೆ ಒಬ್ಬರು ಹೀಗೆ ಮೂರು ಜನರು ಚುನಾವಣೆಗೆ ನಿಲ್ಲುತ್ತಾರೆ. ಆ ಮೂರು ಜನಗಳ ಪೈಕಿ, ಷೆಡ್ಯೂಲ್ಡ್ ಕ್ಯಾಸ್ಟಿನ ಇಬ್ಬರು ಉಮೇದುವಾರರು, ಒಬ್ಬರು ರಿಜರ್ವ್ಡ್ ಸೀಟಿಗೂ ಮತ್ತೊಬ್ಬರು ಜನರಲ್ ಸೀಟಿಗೂ ನಿಂತುಕೊಂಡಾಗ, ಷೆಡ್ಯೂಲ್ ಕ್ಯಾಸ್ಟಿನ ಮತ ದಾರರು ಷೆಡ್ಯೂಲ್ ಕ್ಯಾಸ್ಟ್ ಕಾನ್ಸ್ಟಿಟ್ಯೂಯೆನ್ಸಿಗೇ ಓಟು ಮಾಡಿದ್ದಾರೆಂಬುದನ್ನು ಹೇಗೆ ನಿರ್ಧರಿಸುತ್ತೀರಿ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ತಾವು ಹೇಳುತ್ತಿರುವುದೇ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎಂ. ಮಾದಯ್ಯನವರು.—ಈ ಮೂರು ಜನ ಉಮೇದುವಾರರ ಪೈಕಿ, ಇಬ್ಬರು ಷೆಡ್ಯೂಲ್ ಕ್ಯಾಸ್ಟಿನವರಿದ್ದು, ಒಬ್ಬರು ರಿಜರ್ವ್ಡ್ ಸೀಟಿಗೂ, ಮತ್ತೊಬ್ಬರು ಜನರಲ್ ಸೀಟಿಗೂ ಚುನಾವಣೆಗೆ ನಿಂತುಕೊಂಡಾಗ, ಇಂಥವರೇ ರಿಜರ್ವ್ಡ್ ಸೀಟಿಗೇ ನಿಂತಿರುತ್ತಾರೆಂಬುದನ್ನು ಹೇಗೆ ನಿರ್ಧರಿಸುತ್ತೀರಿ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಉಮೇದುವಾರರು ಹಾಕತಕ್ಕ ಅಪ್ಲಿಕೇಷನ್ ಫಾರಂನಲ್ಲಿ ಅದನ್ನೆಲ್ಲಾ ವಿಶದವಾಗಿ ತಿಳಿಸುವಂತೆ ಮಾಡಲಾಗಿದೆ. ಅದನ್ನು ಸುಲಭವಾಗಿ ಗೊತ್ತು ಮಾಡಬಹುದು. ಯಾವ ತೊಂದರೆಯೂ ಇಲ್ಲ.

ಶ್ರೀ ಎಂ. ಮಾದಯ್ಯನವರು.—ಈ ಪೆಟ್ಟಿಗೆಗಳನ್ನೆಲ್ಲಾ ಎಣಿಕೆ ಮಾಡುವಾಗ A ಮತ್ತು A1 ಸ್ಲಿಪ್ಪುಗಳನ್ನೆಲ್ಲಾ ಬೆರಸಿ ಎಣಿಕೆ ಮಾಡುತ್ತೀರೋ ಅಥವಾ ಬೇರೆ ಬೇರೆ ಅವುಗಳನ್ನು ಎಣಿಕೆ ಮಾಡುತ್ತೀರೋ? ಹಾಗೆ A ಮತ್ತು A1 ಎರಡು ಸ್ಲಿಪ್ಪುಗಳೂ ಒಂದೇ ಪೆಟ್ಟಿಗೆಯಲ್ಲಿ ರಲಿಲ್ಲ ಎಂಬುದನ್ನು ಹೇಗೆ ನಿರ್ಧರ ಮಾಡುತ್ತೀರಿ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—A ಮತ್ತು A1 ಎರಡು ಸ್ಲಿಪ್ಪುಗಳೂ, ಒಂದೇ ನಂಬರಿನವುಗಳಾಗಿದ್ದು ಅವುಗಳೆರಡೂ ಒಂದೇ ಪೆಟ್ಟಿಗೆಯಲ್ಲಿ ಬಿದ್ದಿದ್ದರೆ, ಆ ಪೈಕಿ ಒಂದು ಓಟು ಇನ್‌ವ್ಯಾಲಿಡ್ ಆಗುತ್ತದೆ. ಇದರಿಂದ ಷೆಡ್ಯೂಲ್ಡ್ ಕ್ಯಾಸ್ಟಿನವರಿಗೆ ಯಾವ ತೊಂದರೆಯೂ ಆಗುವುದಿಲ್ಲ.

ಶ್ರೀ ಎಂ. ಮಾದಯ್ಯನವರು.—ಹಾಗೆ ಮಾಡುವುದರಿಂದ ಷೆಡ್ಯೂಲ್ಡ್ ಕ್ಯಾಸ್ಟಿನವರಿಗೂ ತೊಂದರೆಯಾಗುತ್ತದೆಯಲ್ಲವೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹಾಗೇನೂ ತೊಂದರೆಯಾಗುವುದಿಲ್ಲ, ಯಾರು ಯಾರಿಗೆ ಬೇಕಾದರೂ ಓಟು ಮಾಡಬಹುದು. ಒಂದೊಂದು ಪೆಟ್ಟಿಗೆಯಲ್ಲಿ ಒಂದೊಂದೇ ಓಟ್ ಹಾಕಬೇಕೆಂದು ತಿಳಿಸಲಾಗಿವೆ. ಯಾರು highest number of votes ಗಳನ್ನು ಗಳಿಸುತ್ತಾರೋ ಅಂಥವರನ್ನು ಚುನಾಯಿತರಾದಂತೆ ಪರಿಗಣಿಸಲಾಗುತ್ತದೆ.

ಶ್ರೀ ಎಚ್ ಕೆ. ವೀರಣ್ಣಗೌಡರು.—ಪ್ರತಿಯೊಂದು ಕಾನ್‌ಸ್ಟಿಟ್ಯೂಯೆನ್ಸಿಯಲ್ಲೂ 40 ಪೆಟ್ಟಿಗೆಗಳನ್ನಿಡಲಾಗುತ್ತದೆಂದು ತಾವು ತಿಳಿಸಿದಿರಿ. ಈ 40 ಪೆಟ್ಟಿಗೆಗಳನ್ನೂ ಒಟ್ಟಿಗೆ ಮಿಲಾಕತ್ತು ಮಾಡಿ ಎಣಿಕೆ ಮಾಡುತ್ತೀರೋ ಅಥವಾ ಒಂದೊಂದನ್ನೇ ಬೇರೆಬೇರೆಯಾಗಿ ಎಣಿಕೆ ಮಾಡುತ್ತೀರೋ ?

The Hon'ble Sri K.T. BHASHYAM.—It is a very pertinent question. I have not thought over it. Probably we will count it separately.

ಶ್ರೀ ಎಚ್. ಕೆ. ವೀರಣ್ಣಗೌಡರು.—ಒಬ್ಬೊಬ್ಬ ಮೆಂಬರಿಗೂ ಒಂದೊಂದು ಕಾನ್‌ಸ್ಟಿಟ್ಯೂಯೆನ್ಸಿಯಲ್ಲಿ 40 ಪೆಟ್ಟಿಗೆಗಳಿದ್ದರೆ, ಆ ಪೆಟ್ಟಿಗೆಗಳನ್ನೆಲ್ಲಾ ಒಂದು ಕಡೆ ಸೇರಿಸಿದಾಗ ಅವುಗಳಲ್ಲಿರತಕ್ಕ ಓಟುಗಳನ್ನೆಲ್ಲಾ ಬೆರಸಿ ನಂತರ A, A1 ಗಳೆಂದು ಎಣಿಕೆ ಮಾಡುತ್ತೀರೋ ಅಥವಾ ಒಂದೊಂದು ಪೆಟ್ಟಿಗೆಯನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ಎಣಿಕೆ ಮಾಡುತ್ತೀರೋ ?

The Hon'ble Sri K.T. BHASHYAM.—We may possibly combine both or as what you say, scrutinise ballot papers in every box as we open it and ultimately bring all the votes from all the boxes containing the same symbol and count the votes.

ಶ್ರೀ ಎಲ್. ಸಿದ್ದಪ್ಪನವರು.—ಈಗಾಗಲೇ ಬಹಿರಂಗಪಡಿಸರತಕ್ಕ ಎಲೆಕ್ಷನ್ ರೂಲ್ಸ್‌ನಲ್ಲಿ ಪ್ರತಿಯೊಂದು ಪೆಟ್ಟಿಗೆಯನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ಎಣಿಕೆಮಾಡಿ ಆಯಾಯ ಪೆಟ್ಟಿಗೆಯಲ್ಲಿದ್ದ ಓಟುಗಳನ್ನು ಒಂದು ಫಾರಂನಲ್ಲಿ ನಮೂದಿಸುತ್ತಾ ಎಣಿಕೆಮಾಡಲಾಗುತ್ತದೆಂದು ತಿಳಿಸಲಾಗಿದೆ.

ಶ್ರೀ ಬಿ. ಚನ್ನಬೈರೇಗೌಡರು.—ಪ್ರತ್ಯೇಕತೆಯನ್ನು ಸೂಚಿಸುವುದಕ್ಕೆ ಒಂದು ಸಿಂಬಲ್ ಇಟ್ಟು ಬಣ್ಣ ಹಾಕಿರುತ್ತಾರೆ. ಅದರ ಜೊತೆಗೆ ಪಕ್ಷದ ಹೆಸರನ್ನೂ ಬರೆಯಬೇಕು. ಮಾಕ್ ಚುನಾವಣೆಯಲ್ಲಿಟ್ಟಿದ್ದ ಪೆಟ್ಟಿಗೆಗಳಲ್ಲಿ ಓಟಿನ ಚೀಟಿ ಹಾಕುವುದಕ್ಕೆಮಾಡಿದ್ದ ರಂಧ್ರ ಚಿಕ್ಕದು. ಓಟಿನ ಕಾಗದ ದೊಡ್ಡದಾದ್ದರಿಂದ ಆ ಚಿಕ್ಕ ರಂಧ್ರದಲ್ಲಿ ಹಿಡಿಯುತ್ತಿರಲಿಲ್ಲ. ಆದ್ದರಿಂದ ಆ ರಂಧ್ರವನ್ನು ದೊಡ್ಡದು ಮಾಡಬೇಕು ಮತ್ತು ಅಲ್ಲಿ ಮೇಲ್ವಿಚಾರಣೆ ನೋಡಿಕೊಳ್ಳುವ ಆಫೀಸರಿದ್ದು ತಕ್ಕ ಅನುಕೂಲತೆಯನ್ನು ಕಲ್ಪಿಸಿಕೊಡಬೇಕು.

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಓಟಿನ ಚೀಟಿಗಳನ್ನು ಹಾಕುವುದಕ್ಕೆ ಅನುಕೂಲ ಮಾಡಿದೆ.

ಶ್ರೀ ಎಸ್. ರಂಗರಾಯರು.—ಬ್ಯಾಲೆಟ್ ಪೇಪರು ಹೊರಗೆ ತಂದು ಯಾರಿಗಾದರೂ ಕೊಡುವುದಕ್ಕೆ ಅವಕಾಶವಿದೆಯೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಬ್ಯಾಲೆಟ್ ಪೇಪರ್ ಪೆಟ್ಟಿಗೆಯಲ್ಲಿ ಹಾಕಿ ಹೋಗಬೇಕೆಂದು ಸೂಚನೆ ಕೊಡುತ್ತೇವೆ. ಕಾನೂನು ಪ್ರಕಾರ ಹಾಗೆ ಪೆಟ್ಟಿಗೆಯಲ್ಲಿ ಹಾಕದೆ ಅದನ್ನು ಜೇಬಿನಲ್ಲಿಟ್ಟುಕೊಂಡು ಹೊರಗೆ ಹೋಗಿ ಬೇರೆಯವರಿಗೆ ಅವಕಾಶ ಮಾಡಿಕೊಟ್ಟರೆ ಅಂಥವರಿಗೆ ಶಿಕ್ಷೆಯಾಗುತ್ತದೆ. ಒಂದು ವರ್ಷದವರೆಗೆ ತಪ್ಪಿತಸ್ಥರಿಗೆ ಕಠಿಣ ಸಜ ವಿಧಿಸಲಾಗುತ್ತದೆಂದು ಸೂಚಿಸಿ ಪೋಲಿಂಗ್ ಸ್ಟೇಷನ್ ಮುಂದೆ ಬೋರ್ಡಿಟ್ಟು ಓಟುದಾರರಿಗೆ ಹೇಳುತ್ತೇವೆ. ಬ್ಯಾಲೆಟ್ ಪೇಪರನ್ನು ಪೆಟ್ಟಿಗೆಯಲ್ಲಿ ಹಾಕಬೇಕು, ಅದನ್ನು ಜೊತೆಯಲ್ಲಿ ತೆಗೆದುಕೊಂಡು ಹೋಗಕೂಡದು ಎಂದು ಸೂಚಿಸುತ್ತೇವೆ.

ಶ್ರೀ ಎಂ. ಮಾದಯ್ಯನವರು.—ಮೂರು ಜನ ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಚುನಾವಣೆಗೆ ನಿಂತಾಗ ಹೆಚ್ಚಾಗಿ ಯಾರಿಗೆ ಓಟು ಬರುತ್ತ

ದೆಯೋ ಅವರು ಚುನಾಯಿತರಾಗುತ್ತಾರೆಯೋ? Will he be declared elcoted to the general seat also? That is the point.

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಷೆಡ್ಯೂಲ್ಡ್ ಕ್ಯಾಸ್ಟಿನವರು ರಿಸರ್ವ್ ಸ್ಥಾನಕ್ಕೂ ಅಪ್ಲೈ ಮಾಡಬಹುದು. They may apply for general seats also. If the schedule caste member who has applied for a general seat has secured the largest number of votes he is entitled to be declared as elected, not as a scheduled caste member, but as a general seat candidate.

ಶ್ರೀ ಎಸ್. ರಂಗರಾಯರು.—ಹೊರಗಡೆ ತೆಗೆದುಕೊಂಡು ಹೋದರೆ ಶಿಕ್ಷೆ ಮಾಡುತ್ತೇವೆಂದು ಹೇಳಿದಿರಿ. ಆದರೆ ಹೊರಗಡೆಗೆ ತರುತ್ತಾನೆಯೆ, ಇಲ್ಲವೆ ಎಂಬುದನ್ನು ತನಿಖೆ ಮಾಡುವುದಕ್ಕೆ ಏರ್ಪಾಡು ಮಾಡಿದೆಯೇ? ಈಗ ಇಂಡಿಯನ್ ಪೀನಲ್ ಕೋಡಿನಂತೆ ಎಷ್ಟೋ ತಪ್ಪುಗಳಿಗೆ ಶಿಕ್ಷೆಯಾಗುತ್ತಿದೆ. ಆದರೆ ಅನೇಕ ತಪ್ಪುಗಳು ಗೊತ್ತಾಗುವುದಿಲ್ಲ.

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದನ್ನು ಪತ್ತೆ ಹಚ್ಚುವ ಸಿಬ್ಬಂದಿ ಸಾಮಾನ್ಯವಾಗಿ ನೋಡುತ್ತಾರೆ.

ಶ್ರೀ ಎಸ್. ರಂಗರಾಯರು.—ಓಟುದಾರನ ಮೇಲೆ ನಿಗಾ ಇಟ್ಟು ಅವನು ಚೀಟಿಯನ್ನು ಪೆಟ್ಟಿಗೆಯಲ್ಲಿ ಹಾಕಿದನೇ ಅಥವಾ ಹಾಗೆಯೇ ತೆಗೆದುಕೊಂಡು ಹೋದನೇ ಎಂಬುದನ್ನು ನೋಡುವುದಕ್ಕೆ ಅವಕಾಶವಿದೆಯೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದಕ್ಕೆ ಅವಕಾಶವಿಲ್ಲ; ಅವಕಾಶ ಕೊಡುವುದಕ್ಕೂ ಆಗುವುದಿಲ್ಲ. ಹಾಗೆ ಮಾಡಿದರೆ ಚುನಾವಣೆಯ ಕ್ರಮವನ್ನು ಗುಟ್ಟಾಗಿಡಬೇಕೆಂಬ ಅಭಿಪ್ರಾಯಕ್ಕೆ ಧಕ್ಕೆ ಬರುತ್ತದೆ. ಅನುಮಾನ ಬಂದರೆ ತಲಾಷ್ ಮಾಡುವುದಕ್ಕೆ ಸಿಬ್ಬಂದಿಯಿದೆ. We have got a right to immediately search the man. If he has got the ballot paper, he will be immediately handed over to the police.

ಶ್ರೀ ಎಸ್. ರಂಗರಾಯರು.—ಪೆಟ್ಟಿಗೆ ಇಟ್ಟಿರುವುದು ಹೊರಕ್ಕೆ ಕಾಣುವಹಾಗೆ ಏರ್ಪಾಡು ಮಾಡುವುದಕ್ಕೆ ಸಾಧ್ಯವೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹಾಗೆ ಮಾಡಿದರೂ ಜೇಬಿನಲ್ಲಿಟ್ಟುಕೊಳ್ಳಬಹುದು.

ಶ್ರೀ ಎಂ. ಮಾದಯ್ಯನವರು.—ಮಾಕ್ ಎಲೆಕ್ಷನ್ ಮಾಡಿರುವುದನ್ನು ಸರಿಯಾಗಿ ವಿವರಿಸಬೇಕು. ಎ, ಬಿ, ಸಿ, ಡಿ ಎಂದು ನಾಲ್ಕು ಜನರು ಚುನಾವಣೆಗೆ ನಿಂತುಕೊಂಡರೆ ಹೇಗೆ ಮಾಡಬೇಕು?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಜನರಲ್ ಸೀಟಿಗೆ ನಾಲ್ಕು ಜನರು ಮತ್ತು ರಿಸರ್ವ್ ಸೀಟಿಗೆ ನಾಲ್ಕು ಜನರು ನಿಂತಿರಬಹುದು. ಒಂದೊಂದು ಪೆಟ್ಟಿಗೆಯಲ್ಲೂ ಇರುವ ಓಟಿಂಗ್ ಚೀಟಿಗಳನ್ನು ಎಣಿಸುತ್ತೇವೆ. ಜನರಲ್ ಸೀಟಿಗೆ ನಿಂತಿರುವ ನಾಲ್ಕು ಜನರಲ್ಲಿ ಹೆಚ್ಚು ಓಟುಗಳು ಯಾರಿಗೆ ಬಂದಿದೆಯೋ ಅವರನ್ನು ಚುನಾಯಿಸುತ್ತೇವೆ. ರಿಸರ್ವ್ ಸೀಟಿನಲ್ಲೂ ಕೂಡ ಹೆಚ್ಚು ಓಟು ಪಡೆದಿರುವವರು ಚುನಾಯಿಸಲ್ಪಡುತ್ತಾರೆ. ಇದು ಬಹು ಸುಲಭ.

ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ಜಿಲ್ಲೆ—ನಿಮ್ನ ವರ್ಗಗಳು).—ಡಬ್ಬಲ್ ಮೆಂಬರ್ ಕಾನ್‌ಸ್ಟಿಟ್ಯೂಯನ್ಸಿ ಇದ್ದು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಇತರ ಕ್ಯಾಸ್ಟ್ ಹಿಂದುಗಳು ನಿಂತರೆ ಷೆಡ್ಯೂಲ್ ಕ್ಯಾಸ್ಟ್‌ನವರಿಗೂ ಓಟು ಕೊಡುತ್ತಾರೆ, ಮತ್ತು ಇತರ ಕ್ಯಾಸ್ಟ್ ಹಿಂದುಗಳಿಗೂ ಜನರಲ್ ಸೀಟಿಗೆ ಓಟು ಕೊಡುತ್ತಾರೆ. ಅಂದಮೇಲೆ ಅದು ಜಾಯಿಂಟ್ ಎಲೆಕ್ಟೋರೇಟ್ ಎಂದು ಹೇಳುವುದಕ್ಕಾಗುವುದಿಲ್ಲ. ಆದರಲ್ಲಿ ಇತರ ಕ್ಯಾಸ್ಟ್ ಹಿಂದುಗಳಪೈಕಿ ಒಬ್ಬರು, ಷೆಡ್ಯೂಲ್ಡ್ ಕ್ಯಾಸ್ಟಿನಲ್ಲಿ ಒಬ್ಬರು ಇರುತ್ತಾರೆ. ಅದೇ ರೀತಿ ಇತರ ಕ್ಯಾಸ್ಟ್ ಹಿಂದುಗಳಲ್ಲಿ ಕಾಂಗ್ರೆಸ್ಸಿನವರು ಮತ್ತು ಇತರರು ಎಂದು ಇರುತ್ತದೆ. ಹಾಗಿದ್ದ ಮೇಲೆ ಜಾಯಿಂಟ್ ಎಲೆಕ್ಟೋರೇಟ್ ಎಂದು ಹೇಗೆ ಹೇಳುವುದು?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಸಪರೇಟ್ ಎಲೆಕ್ಟೋರೇಟ್ ಆದರೆ ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಜನರಲ್ ಕ್ಯಾಂಡಿಡೇಟ್‌ಗೆ ಓಟು ಕೊಡುವುದಕ್ಕೆ ಅವಕಾಶವಿಲ್ಲ. ಈಗ

(ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು).
ಅವಕಾಶವಿದೆ; ಷೆಡ್ಯೂಲ್ಡ್ ಕ್ಯಾಸ್ಟ್ ಕ್ಯಾಂಡಿಡೇಟ್ಸ್ ಉದಾರ ಭಾವನೆಯಿಂದ ಓಟು ಮಾಡಬಹುದು. ಅಲ್ಲೊಂದು, ಇಲ್ಲೊಂದು ಚೀಟಿ ಹಾಕಬಹುದು. ಒಂದು ವೇಳೆ ಎರಡನ್ನೂ ಜನರಲ್ ಸೀಟಿಗೆ ಹಾಕಬಹುದು. Nothing prevents them. It is a general electorate.

ಶ್ರೀ ಟಿ. ಹನುಮಯ್ಯನವರು.—ಹೀಗೆ ಬೇರೆ ಬೇರೆ ಮಾಡಿರುವುದನ್ನು ಜಾಯಿಂಟ್ ಎಲೆಕ್ಟೊರೇಟ್ ಎಂದು ಹೇಳುವುದಕ್ಕಾಗುವುದಿಲ್ಲ. ಎರಡನೆಯದಾಗಿ, ಈಗ A ಮತ್ತು A1 ಎಂದಿದೆ. ಒಬ್ಬ ಮನುಷ್ಯ ಷೆಡ್ಯೂಲ್ಡ್ ಕ್ಯಾಸ್ಟಿಗಾಗಿ 'A' ಗೆ ಒಂದು ಚೀಟಿಯನ್ನೂ, ಇನ್ನೊಂದನ್ನು A1 ಗೂ ಹಾಕಬಹುದು. ಇನ್ನೊಬ್ಬ ಓಟುದಾರ A ಗೆ ಬದಲು ಎರಡನ್ನೂ A1 ಗೆ ಹಾಕಿದರೆ ಆಗ ಅದು ಲೆಕ್ಕಕ್ಕೆ ಬರುವುದಿಲ್ಲವೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಲೆಕ್ಕಕ್ಕೆ ಬರುತ್ತದೆ. A ಮತ್ತು A1 ಗೆ ಎಂದು ಎರಡು ಚೀಟಿಗಳಿರುವುದನ್ನು ಒಂದೇ ಪೆಟ್ಟಿಗೆಯಲ್ಲಿ ಹಾಕಿದ್ದರೆ ಒಂದು invalid ಎಂದು ಎಣಿಕೆಯಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ಪ್ಲಸ್ ಮತ್ತು ಮೈನಸ್ ಎರಡೂ ಒಂದೇ ಆಯಿತು. ಎರಡು ಚೀಟಿಗಳನ್ನೂ ಜನರಲ್ ಸೀಟಿಗೆ ಹಾಕಿದರೂ ಒಬ್ಬರನ್ನುತಾನೇ ಚುನಾವಣೆ ಮಾಡುವುದು?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದು ಸರಿ. ಯಾರಿಗೆ ಹೆಚ್ಚು ಓಟು ಬರುತ್ತದೆಯೋ ಅವರು ಚುನಾಯಿತರಾಗುತ್ತಾರೆ.

ಶ್ರೀ ಎಸ್. ರಂಗರಾಮಯ್ಯನವರು.—ರಿಸರ್ವ್ಡ್ ಕಾನ್‌ಸ್ಟಿಟ್ಯೂಯೆನ್ಸಿಯಿದ್ದರೆ ಚುನಾವಣೆ ಮಾಡುವ ಹಕ್ಕು ಜನರಲ್ ಕ್ಯಾಂಡಿಡೇಟ್ಸ್‌ಗಿದೆಯೆ ಅಥವಾ ರಿಸರ್ವ್ಡ್ ಕ್ಯಾಂಡಿಡೇಟ್ಸ್‌ಗಿದೆಯೆ ಎಂಬುದನ್ನು ಹೇಳಿದರೆ ಚೆನ್ನಾಗಿ ಅರ್ಥವಾಗುತ್ತದೆ.

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇದನ್ನು ಎಷ್ಟೋ ಸಲ ವಿವರಿಸಿದೆ. ಓಟಿಂಗ್ ಪದ್ಧತಿ ಹೀಗಿದೆ. ಎರಡು ಬ್ಯಾಲೆಟ್ ಕಾಗದ ಕೊಡುತ್ತೇವೆ. ಒಂದೊಂದು ಪೆಟ್ಟಿಗೆಯಲ್ಲಿ ಒಂದೊಂದು ಕಾಗದ ಹಾಕಿದರೆ ಸಾಕು. ಆದರೆ ಇಂಥ ಕಡೆಯೇ ಹಾಕಬೇಕೆಂಬ ನಿರ್ಬಂಧವಿಲ್ಲ. ಹೆಚ್ಚಿಗೆ ಓಟು ಯಾರಿಗೆ ಬರುತ್ತದೆಯೋ ಅವರು ಚುನಾಯಿತರಾಗುತ್ತಾರೆ.

ಶ್ರೀ ಎ. ಭೀಮಪ್ಪನಾಯಕರು.—ಒಬ್ಬರೇ ಒಬ್ಬರು ಜನರಲ್ ಕ್ಯಾಂಡಿಡೇಟನ್ನು ಚುನಾವಣೆ ಮಾಡುವುದಕ್ಕೆ ಅವಕಾಶ ಕೊಟ್ಟು ಎರಡು ಚೀಟಿಗಳನ್ನು ಕೊಟ್ಟಿದ್ದೇ ಆದರೆ ಜನರಲ್ ಕ್ಯಾಂಡಿಡೇಟಿಗೆ ಎರಡು ಓಟುಕೊಡಿ ಎಂದು ಹೇಳಿದ ಹಾಗಾಗುತ್ತದೆ. ಅದು ತಪ್ಪಲ್ಲವೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಯಾರೂ ಹಾಗೆ ಹೇಳುವುದಿಲ್ಲ. ಬೇಕಾದವರು ಮಾತ್ರ ಹಾಗೆ ಮಾಡಬಹುದು.

ಶ್ರೀ ಎ. ಭೀಮಪ್ಪನಾಯಕರು.—ಹಾಗೆ ಮಾಡುವುದಕ್ಕೆ ಅವಕಾಶವಿದೆ. ಆದ್ದರಿಂದ ಈ ವಿಚಾರವನ್ನು ಕೇಂದ್ರ ಸರ್ಕಾರಕ್ಕೆ ಬರೆದು ಹೀಗೆ ಅನುಮಾನವಿದೆ, ಇದು ಜನರಲ್ ಎಲೆಕ್ಟೊರೇಟ್ ತತ್ವಕ್ಕೆ ವಿರೋಧವಾಗುತ್ತದೆ, ಇದನ್ನು ಸ್ಪಷ್ಟಪಡಿಸಬೇಕೆಂದು ಕೇಳಬಹುದಲ್ಲವೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಆ ರೀತಿಯಾಗಿ ಬರೆಯುತ್ತೇವೆಂದು ಆಗಲೇ ಹೇಳಿದೆ. ಕಾನೂನು ಹೀಗಿದೆ, ಮಾರ್ಪಾಡಾಗಬೇಕೆಂದು ಮಾನ್ಯ ಸದಸ್ಯರು ಸೂಚಿಸಿದ್ದಾರೆ ಎಂದು ತಿಳಿಸುತ್ತೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಈಗಿರುವ ಪೆಟ್ಟಿಗೆಗಳು ಮೋಟಾರಿನಲ್ಲಿರುವ ಪೆಟ್ಟಿಗೆಗಳ ಹಾಗೆ ಬಹಳ ಚಿಕ್ಕವು. ಅದರ ಬಾಯಿ (slit) ಅನೇಕ ಜನರಿಗೆ ಗೊತ್ತಾಗುವುದಿಲ್ಲ. ಅಲ್ಲಿಂದ ಬಂದಿರುವುದರಿಂದ ಈಗ ನಾವೇನೂ ಮಾಡುವುದಕ್ಕಾಗುವುದಿಲ್ಲ. ಬಾಯಿ ಇಂಥಾ ಕಡೆಯಿದೆ ಎಂದು ಗೊತ್ತಾಗುವಂತಾದರೂ ಏರ್ಪಾಡು ಮಾಡಬೇಕು.

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಮಾಕ್ ಎಲೆಕ್ಷನ್ ನೋಡಿದ್ದರೆ ಅದು ಚೆನ್ನಾಗಿ ಗೊತ್ತಾಗುತ್ತದೆ. ಬಾಯಿ ಚೆನ್ನಾಗಿ ಕಾಣುವಂತೆ ಏರ್ಪಡಿಸಿತ್ತು. ಅದಕ್ಕೆ ಬಿಳಿ ಬಣ್ಣ ಹಾಕಿ ಇಟ್ಟಿರುತ್ತೆ.

ಶ್ರೀ ಎಸ್. ರಂಗರಾಮಯ್ಯನವರು.—ಶ್ರೀ ಕಡಿದಾಳ್ ಮಂಜಪ್ಪನವರು ಹೇಳಿದಂತೆ ಪೆಟ್ಟಿಗೆಗೆ ಕೆಲವು ಗುರುತುಗಳಿವೆ. ದೀಪದಕಡ್ಡಿ ಪೆಟ್ಟಿಗೆ ಗುರುತು ಒಂದು ಕಡೆ ಇತ್ತು. ಇನ್ನೊಂದಕ್ಕೆ ಬಳ್ಳಿ ಗುರುತಿದ್ದು ಪೆಟ್ಟಿಗೆಮೇಲೆ ಬಳ್ಳಿಯಿತ್ತು. ಅದು ಮರ ಎಂದು ತಿಳಿದು ಕೆಲವರಿಗೆ ಗೊತ್ತಾಗಲಿಲ್ಲ. ಎರಡನೆಯದು 21ನೆಯ ರೂಲಿನ ಪ್ರಕಾರ ಪೆಟ್ಟಿಗೆಗಳು ಒಂದು ಲೈನಿನಲ್ಲಿ ರಬೇಕು, ಎಲೆಕ್ಟರ್ ಹೋದ ತಕ್ಷಣ ಕಣ್ಣಿಗೆ ಕಾಣಿಸುವ ಹಾಗೆ ಇಡಬೇಕು ಎಂದಿದೆ. ಪೆಟ್ಟಿಗೆಗಳಲ್ಲಿ ರಿಸರ್ವ್ ಮಾಡಿರುವುದನ್ನೂ ಮತ್ತು ಇನ್ನೊಂದನ್ನೂ ಬೇರೆ ಬೇರೆಯಾಗಿಡಬೇಕು. ಆಮೇಲೆ ಪೆಟ್ಟಿಗೆಗಳಮೇಲಿಡುವ ಬಳ್ಳಿ ಮೊದಲಾದ ಗುರುತುಗಳನ್ನು ಪೆಟ್ಟಿಗೆ ಹಿಂದೆ ಇಡುವುದರಿಂದ ತೊಂದರೆಯೇನಾದರೂ ಇದೆಯೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಏನೂ ಇಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಮೂರನೆಯದಾಗಿ ಯಾವ್ಯಾವ ಪೋಲಿಂಗ್ ಆಫೀಸರನ್ನು ಬೇರೆ ಬೇರೆ ಸ್ಥಳಗಳಿಗೆ ಹಾಕುತ್ತೀರೋ ಅವರಿಗೆ ಪೋಸ್ಟ್ ಮೂಲಕ ಓಟು ಮಾಡುವ ಅಧಿಕಾರ ಕೊಟ್ಟಿದ್ದೀರಾ? ಇದಕ್ಕೆ 7 ದಿನಗಳ ಮುಂಚಿತವಾಗಿ ಬರೆದುಕೊಳ್ಳಬೇಕು, ಅಂಥವರಿಗೆ ಇಂತಿಂಥ ಪೋಲಿಂಗ್ ಆಫೀಸರೇ ಬ್ಯಾಲೆಟ್ ಪೇಪರ್ ಕಳುಹಿಸಬೇಕೆಂದಿದೆ. ಇಂತಿಂಥವರನ್ನೇ ಒಂದೊಂದು ಕಡೆಗೆ ಪೋಲಿಂಗ್ ಆಫೀಸರಾಗಿ ಹಾಕುತ್ತೀರಿ ಎಂದು ಆಯಾ ಸ್ಥಳದವರಿಗೆ ತಿಳಿಯುವುದು ಹೇಗೆ? ಆದ್ದರಿಂದ ಯಾರ್ಯಾರು, ಎಲ್ಲೆಲ್ಲಿಗೆ ಹೋಗಬೇಕೆಂದು ಗೊತ್ತು ಮಾಡಿರುತ್ತೀರೋ ಅಂಥವರ ಒಂದು ಪಟ್ಟಿಯನ್ನು 15 ದಿನಕ್ಕೆ ಮುಂಚಿತವಾಗಿ ರಿಟರ್ನಿಂಗ್ ಆಫೀಸರಿಗಾದರೂ ಕೊಡಬೇಕು, ಇಲ್ಲದಿದ್ದರೆ ಪ್ರಿಸೈಡಿಂಗ್ ಆಫೀಸರಿಗಾದರೂ ತಿಳಿಸಬೇಕು. ಹೀಗೆಮಾಡಿ ಅವರಿಗೆ ಓಟಿಂಗ್ ಪೇಪರು ತಲುಪುವ ಹಾಗೆ ಏರ್ಪಾಡುಮಾಡಬೇಕು.

ಶ್ರೀ ಎಂ. ಮಾದಯ್ಯನವರು.—ರೂಲ್ಸಿನಲ್ಲಿ ಏನು ಇದೆ? ಉಮೇದುವಾರರ ಅಕ್ಷರು ಪಟ್ಟಿ ಪ್ರಿಂಟ್ ಮಾಡುವಾಗ ಆಲ್‌ಫೆಬೆಟಿಕಲ್ ಆರ್ಡರ್ ಪ್ರಕಾರ ಪ್ರಿಂಟ್ ಮಾಡಬೇಕೆಂದಿದೆ. ಈಗ ನಾಲ್ಕು ಪಾರ್ಟಿಗಳಿರುತ್ತವೆ. ಒಂದು ಪಾರ್ಟಿಯವರು ಗಣಪತಿ ಇಟ್ಟುಕೊಳ್ಳುತ್ತಾರೆ. ಮತ್ತೊಂದು ಪಾರ್ಟಿಯವರು ಬೆಂಕಿಪೆಟ್ಟಿಗೆ ಇಟ್ಟುಕೊಳ್ಳುತ್ತಾರೆ. ಆಗಲೂ ಕೂಡ ಆಲ್‌ಫೆಬೆಟಿಕಲ್ ಆರ್ಡರ್ ಪ್ರಕಾರವೇ ಹಾಕಬೇಕು. ಅದರಿಂದ ತೊಂದರೆಯಾಗುವುದಿಲ್ಲ. ಓಟು ಮಾಡುವವರಿಗೂ ಸಹ ಅನುಕೂಲವಾಗುತ್ತದೆ. ಇದಕ್ಕೆ ರೂಲ್ಸಿನಲ್ಲಿ ಅವಕಾಶವಿಲ್ಲದಿದ್ದರೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಚನ್ನಬೈರೇಗೌಡರು.—ಶ್ರೀ ರಂಗರಾಮಯ್ಯನವರು ಹೇಳಿದಂತೆ ಪೋಲಿಂಗ್ ಆಫೀಸರು ಯಾರ್ಯಾರು ಎಂಬುದು ಮುಂಚಿತವಾಗಿ ಪ್ರಿಸೈಡಿಂಗ್ ಆಫೀಸರಿಗೆ ಗೊತ್ತಾಗಬಾರದು. ಎಲೆಕ್ಷನ್ ದಿನ ಗೊತ್ತಾಗಬೇಕೇ ಹೊರತು ಅದಕ್ಕೆ ಮುಂಚೆ ಗೊತ್ತಾಗಕೂಡದು. ಅದು ಬಹಳ ಗುಟ್ಟಾಗಿ ಇರಬೇಕು. ಇಲ್ಲದಿದ್ದರೆ ಅವರಮೇಲೆ ಪ್ರಭಾವ ಬೀರಿ, ಅವರವರನ್ನಾಗಿ ಮಾಡಿಕೊಂಡು ಕ್ಯಾನ್‌ವಾಸ್ ಮಾಡಲು ಅವಕಾಶವಾಗುತ್ತದೆ. ಆದ್ದರಿಂದ ಮುಂಚಿತವಾಗಿ ಅವರು ಯಾರು ಎಂಬುದನ್ನು ತಿಳಿಸಕೂಡದು.

(Sri H. M. Channabasappa rose).

Janab J. MOHAMED IMAM.—Let the Hon'ble Law Minister complete his speech.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಡಬ್ಬಲ್ ಮೆಂಬರ್ ಕಾನ್‌ಸ್ಟಿಟ್ಯೂಯನ್ಸಿ ಒಳಗೆ ಎರಡು ಬ್ಯಾಲೆಟ್ ಪೇಪರು ಕೊಡುತ್ತೀರಿ. ಅದರ ಪೈಕಿ ಒಂದು ಷೆಡ್ಯೂಲ್ ಕ್ಯಾಸ್ಟ್, ಇನ್ನೊಂದು ಜನರಲ್ ಸೀಟ್ ಎಂಬುದಾಗಿ ಗುರುತು ಹಾಕಿರುವುದಿಲ್ಲ. ಹೀಗಿರುವಾಗ ಈ ಎರಡನ್ನೂ ತೆಗೆದುಕೊಂಡು ಹೋಗಿ ಜನರಲ್ ಸೀಟಿನ ಬೇರೆಬೇರೆ ಉಮೇದುವಾರರಿಗೇ ಓಟು ಮಾಡಿದರೆ ಯಾವ ಉದ್ದೇಶದಿಂದ ನೀವು ಬ್ಯಾಲೆಟ್ ಪೇಪರ್ ಕೊಡುತ್ತೀರೋ ಅದು ಸಫಲವಾಗದೇ ಷೆಡ್ಯೂಲ್ ಕ್ಯಾಸ್ಟಿನವರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಆದ್ದರಿಂದ ಅದನ್ನು ತಡೆಗಟ್ಟುವುದಕ್ಕೆ ಏನು ಉಪಾಯ ಮಾಡಿದ್ದೀರಿ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ನಾನು ಆಗಲೇ ಅದಕ್ಕೆ ಉತ್ತರ ಕೊಟ್ಟೆ. ತಾವು ಕೇಳಿದ್ದು ರಾತ್ರಿಯೆಲ್ಲಾ ರಾಮಾಯಣ ಕೇಳಿ ಬೆಳಗಾದಕೂಡಲೇ ರಾಮನಿಗೆ ಸೀತೆ ಏನಾಗ ಬೇಕು ಎಂದು ಕೇಳಿದ ಹಾಗಾಯಿತು. ರೂಲ್ ಇರುವುದು ಹಾಗೆ. ಅದನ್ನು ಅನುಸರಿಸಬೇಕು. ಇದರಲ್ಲಿ ಸ್ವಲ್ಪ ಅಸಮರ್ಪಕತೆ ಇದೆ ಎಂದು ಸದಸ್ಯರು ತಿಳಿದಿದ್ದಾರೆ ಎಂಬುದನ್ನು ಚೀಫ್ ಎಲೆಕ್ಷನ್ ಕಮಿಷನರಿಗೆ ತಿಳಿಸುತ್ತೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಇದು ಒಂದು, ಆಮೇಲೆ ಎರಡು ಬ್ಯಾಲೆಟ್ ಪೇಪರ್ ತೆಗೆದುಕೊಂಡು ಹೋಗಿ ಎರಡನ್ನೂ ಒಂದಕ್ಕೇ ಹಾಕಿದರೆ ಒಂದು ಕೌಂಟ್ ಆಗುತ್ತದೆ ಇನ್ನೊಂದು ಕೌಂಟ್ ಆಗುವುದಿಲ್ಲ. ಒಂದು ವೇಳೆ ಒಂದನ್ನು ಹಾಕಿ ಇನ್ನೊಂದನ್ನು ಜೇಬಿನಲ್ಲಿಟ್ಟುಕೊಂಡು ಹೋದರೆ ಏನು ಮಾಡುತ್ತೀರಿ? ಒಬ್ಬನಿಗೆ ಒಂದು ಓಟು ಹೆಚ್ಚಾಯಿತು ಇನ್ನೊಬ್ಬನಿಗೆ ಕಡಿಮೆ ಆಯಿತು.

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಈ ವಿಚಾರದಲ್ಲಿ ಆಗಲೇ ಶ್ರೀ ರಂಗರಾಮಯ್ಯನವರು ಹಾಕಿದ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ.

ಈಗ ಒಂದೊಂದು ಕಾನ್‌ಸ್ಟಿಟ್ಯೂಯೆನ್ಸಿ ಒಳಗೆ 43 ಪೋಲಿಂಗ್ ಸ್ಟೇಷನ್‌ಗಳಿವೆ ಎಂಬುದಾಗಿ ತಿಳಿಸಿದೆ. ಒಂದೊಂದು ಸ್ಟೇಷನ್‌ಗೆ ಒಬ್ಬ ಪ್ರಿಸೈಡಿಂಗ್ ಆಫೀಸರು ಒಬ್ಬ ಪೋಲಿಂಗ್ ಆಫೀಸರು (one for the Assembly, one for the Parliament) ಇರುತ್ತಾರೆ. ಇದರ ಜೊತೆಗೆ ಒಬ್ಬ ಅಸಿಸ್ಟೆಂಟ್ ಆಫೀಸರು ಮತ್ತು ಒಬ್ಬ ಲೇಡಿ ಅಸಿಸ್ಟೆಂಟ್, ಇಷ್ಟು ಜನ ಸಿಬ್ಬಂದಿ ಇದೆ. In addition to this, we shall have shanbhogs and patels of the villages included in the polling stations. ಸಾಧಾರಣವಾಗಿ ಒಂದೊಂದು ಪೋಲಿಂಗ್ ಸ್ಟೇಷನ್‌ಗೆ ಒಂದು, ಎರಡು ಅಥವಾ ಮೂರು ಹಳ್ಳಿಗಳಿರುತ್ತವೆ. ಮತ್ತು 1,000 ಓಟರುಗಳಿರುತ್ತಾರೆ ಎಂದು ಹೇಳಿದ್ದಾರೆ. ಕೆಲವು ಕಡೆ ಒಂದು ಹಳ್ಳಿಯಲ್ಲೇ ಅಷ್ಟು ಜನ ಇರುತ್ತಾರೆ ಮತ್ತು ಕೆಲವು ಕಡೆ 2-3 ಹಳ್ಳಿಗಳನ್ನು ಸೇರಿಸಿದರೆ 1,000 ಓಟರುಗಳಾಗುತ್ತಾರೆ. ಅಷ್ಟು ಹಳ್ಳಿಗಳ ಪಟೇಲ್, ಶ್ಯಾನುಭೋಗರೂ ಪೋಲಿಂಗ್ ಸ್ಟೇಷನ್ ಹತ್ತಿರ ಬಂದಿರುತ್ತಾರೆ. ಅವರು ಮೊದಲೇ ಐಡೆಂಟಿಫಿಕೇಷನ್ ಸ್ಲಿಪ್ ಕೊಟ್ಟಿರುತ್ತಾರೆ. ಅದನ್ನು ಓಟರು ತಂದರೆ ಸುಲಭವಾಗಿರುತ್ತದೆ. ಇಲ್ಲದೇ ಇದ್ದರೆ ಪಟೇಲ್ ಶ್ಯಾನುಭೋಗರು ಐಡೆಂಟಿಫೈ ಮಾಡಿದ ಕೂಡಲೇ ಓಟಿಂಗ್ ಪೇಪರ್ ಕೊಡುತ್ತಾರೆ. ಈ ರೀತಿ ಓಟಿಂಗ್ ಏರ್ಪಾಡು ಮಾಡುತ್ತೇವೆ. ಪೋಲೀಸ್ ಸಿಬ್ಬಂದಿ ಇದೆ. ಒಂದು ಸ್ಟೇಷನ್‌ಗೆ ಒಬ್ಬ ದಫೇದಾರ್ 4 ಜನ ಪೋಲೀಸ್ ಕಾನ್‌ಸ್ಟೇಬಲ್‌ಗಳು ಇರುತ್ತಾರೆ. ಪೋಲಿಂಗ್ ಸ್ಟೇಷನ್ನಿಗೆ ಅಜು ಬಾಜು ಎಲ್ಲಾ ಕಡೆಯೂ to maintain law and order ಪೋಲೀಸ್ ಸಿಬ್ಬಂದಿ ಇರುತ್ತದೆ. ಈಗ ಬ್ಯಾಲೆಟ್ ಬಾಕ್ಸ್ ಕೂಡ ತರಿಸಿದೆ. ಇನ್ನು ಕೆಲವು ಬರುತ್ತಾ ಇವೆ. ಲೆಕ್ಕಾಚಾರ ಹಾಕಿ 58,000 ಬ್ಯಾಲೆಟ್ ಬಾಕ್ಸ್ ತರಿಸಿದ್ದೇವೆ. ಯಾವ ರೀತಿ ಲೆಕ್ಕಾಚಾರ ಹಾಕಿದ್ದು ಎಂದರೆ ಒಂದೊಂದು ಕಾನ್‌ಸ್ಟಿಟ್ಯೂಯನ್ಸಿಗೆ ಐದು ಜನ ಕ್ಯಾಂಡಿಡೇಟ್ಸ್ ನಿಲ್ಲುತ್ತಾರೆ ಎಂಬ ಭಾವನೆ ಮೇಲೆ ಒಂದೊಂದು ಪೋಲಿಂಗ್ ಸ್ಟೇಷನಿಗೆ ಸಿಂಗಲ್ ಮೆಂಬರ್ ಕಾನ್‌ಸ್ಟಿಟ್ಯೂಯನ್ಸಿ ಆದರೆ 10 ಪೆಟ್ಟಿಗೆಗಳು—5 ಅಸೆಂಬ್ಲಿಗೆ, 5 ಪಾರ್ಲಿಮೆಂಟಿಗೆ—ಡಬ್ಬಲ್ ಮೆಂಬರ್ ಕಾನ್‌ಸ್ಟಿಟ್ಯೂಯನ್ಸಿ ಆದರೆ 14 ಪೆಟ್ಟಿಗೆಗಳು—4 ಜನರಲ್, 3 ಷೆಡ್ಯೂಲ್ಡ್ ಕ್ಯಾಸ್ಟ್. ಈ ರೀತಿ ಒಟ್ಟು ಎಷ್ಟು ಪೆಟ್ಟಿಗೆಗಳು ಬೇಕಾಗುತ್ತವೆ ಎಂಬುದನ್ನು ಲೆಕ್ಕಾಚಾರ ಹಾಕಿ 58,000 ಪೆಟ್ಟಿಗೆಗಳಿಗೆ ಆರ್ಡರ್ ಮಾಡಿದ್ದೇವೆ. ಬ್ಯಾಲೆಟ್ ಪೇಪರ್ಸ್ ಬಂದಿವೆ. ಒಂದು ಕೋಟಿ ಮುವ್ವತ್ತು ಲಕ್ಷ ಬ್ಯಾಲೆಟ್ ಪೇಪರುಗಳಿಗೆ ಆರ್ಡರ್ ಕೊಟ್ಟಿದ್ದೆವು. ಆಗಲೇ ಬಂದಿವೆ. ಆಯಾಯಾ ಕ್ಷೇತ್ರಗಳಿಗೆ ಈಗಾಗಲೇ ಕಳುಹಿಸುತ್ತಾ ಇದ್ದಾರೆ; ಬಂದೋಬಸ್ತು ಸರಿಯಾಗಿ ಇಟ್ಟುಕೊಂಡಿದ್ದೇವೆ.

ಪೆಟ್ಟಿಗೆಗಳಲ್ಲಿ ಅಸೆಂಬ್ಲಿ ಸೀಟಿಗೆ ಇರತಕ್ಕ ಪೆಟ್ಟಿಗೆಗೆ ಚಾಕೊಲೇಟ್ ಬಣ್ಣ ಇರುತ್ತದೆ, ಪಾರ್ಲಿಮೆಂಟ್ ಸೀಟಿಗೆ ಇರತಕ್ಕ ಪೆಟ್ಟಿಗೆಗೆ ಆಲೀವ್ ಗ್ರೀನ್ ಬಣ್ಣ ಇರುತ್ತದೆ. ಜನರಲ್ ಸೀಟು, ಷೆಡ್ಯೂಲ್ಡ್ ಸೀಟು ಎರಡಕ್ಕೂ ಒಂದೆ

ಬಣ್ಣ ಇದ್ದು, ಅದನ್ನು ಗೊತ್ತು ಮಾಡುವುದು ಹೇಗೆ ಎಂದರೆ ಅವುಗಳ ಮೇಲೆ ಒಂದೊಂದು ಚಿಹ್ನೆ ಇರುತ್ತದೆ. For extra caution we have circled the symbol with a black circle to show that it is for 'scheduled castes' candidates. ಅದು ಇಲ್ಲದೇ ಇದ್ದರೂ ಚಿಹ್ನೆಯಿಂದಲೇ ಗೊತ್ತಾಗುತ್ತದೆ. ಕೇಂದ್ರ ಸರ್ಕಾರದವರು 25 ಚಿಹ್ನೆಗಳನ್ನು ಗೊತ್ತು ಮಾಡಿದ್ದಾರೆ. ಅವುಗಳಲ್ಲಿ 14ನ್ನು All-India ಪಾರ್ಟಿಗಳಿಗೆ ಕೊಡಲಾಗಿದೆ. ಅವು ಈಗಾಗಲೇ ಪತ್ರಿಕೆಗಳಲ್ಲಿ ಬಂದಿವೆ. ಅವು ಯಾವ್ಯಾವುವು ಎಂಬುದನ್ನು ಹೇಳಬಲ್ಲೆ, ನನ್ನಲ್ಲಿವೆ.

ಇನ್ನೂ ಹನ್ನೊಂದು ಗುರುತುಗಳು ಉಳಿದಿವೆ. ಅವುಗಳ ಪೈಕಿ 'ಸ್ಕೇಲ್ಸ್' ಗುರುತನ್ನು ಜನತಾ ಪಾರ್ಟಿಯವರಿಗೆ ಕೊಟ್ಟಿದೆ. ಇನ್ನೂ ಹತ್ತು ಇವೆ. ಸ್ವತಂತ್ರ ಉಮೇದುವಾರರು ಅವುಗಳಲ್ಲಿ ಯಾವುದನ್ನು ಬೇಕಾದರೂ ಇಟ್ಟುಕೊಳ್ಳ ಬಹುದು.

ಆಮೇಲೆ ಜನಗಳಿಗೆಲ್ಲಾ ಈ ವಿಚಾರದಲ್ಲಿ ತಿಳಿವಳಿಕೆಯನ್ನುಂಟುಮಾಡಲು ಅನೇಕ ಏರ್ಪಾಡುಗಳನ್ನು ಮಾಡಿದ್ದೇವೆ, ಮಾಡುತ್ತಲೂ ಇದ್ದೇವೆ. ಮೊದಲನೆಯದಾಗಿ ಛೀಫ್ ಎಲೆಕ್ಟೊರಲ್ ಆಫೀಸರು ಹೋದ ಕಡೆಯಲ್ಲೆಲ್ಲಾ ಜನರನ್ನು ಸೇರಿಸಿ ಅವರಿಗೆ ವಿವರಗಳನ್ನು ತಿಳಿಸುತ್ತಿದ್ದಾರೆ. ಎರಡನೆಯದಾಗಿ ರೇಡಿಯೋ ಮೂಲಕ ಭಾಷಣಗಳನ್ನೇರ್ಪಡಿಸಿದೆ. 'How to vote' ಮುಂತಾದ ಪುಸ್ತಕಗಳನ್ನು ಮಾಡಿ ಎಲ್ಲರಿಗೂ ಹಂಚುತ್ತೇವೆ. ಮ್ಯಾಪ್‌ಗಳ ಮೂಲಕ ಮತ್ತು ಪೋಲಿಂಗ್ ಸ್ಟೇಷನ್‌ಗಳ ಪಟ್ಟಿಗಳ ಮೂಲಕ ಎಲ್ಲೆಲ್ಲಿ ಹೋಗಿ ವೋಟ್ ಮಾಡಬೇಕೆಂಬುದನ್ನು ತಿಳಿಯಪಡಿಸುತ್ತಿದ್ದೇವೆ. ಚುನಾವಣಾ ತಾರೀಖು ಎಲ್ಲರಿಗೂ ತಿಳಿಯುವ ಹಾಗೆ ಮಾಡುತ್ತೇವೆ. ಇಷ್ಟೇ ಅಲ್ಲದೆ ಪ್ರತಿ ಪೋಲಿಂಗ್ ಸ್ಟೇಷನ್ನಿನಲ್ಲೂ ಚುನಾವಣಾದಾರರ ಗುರುತುಗಳ ಪಟ್ಟಿಯನ್ನು ಹಾಕುತ್ತೇವೆ. ಅದರಮೇಲೆ ಹೆಸರುಗಳನ್ನೂ ಹಾಕುತ್ತೇವೆ. ಗುರುತುಗಳನ್ನು ಹಾಕಿ, ಪಾರ್ಟಿ ಹೆಸರು, ಉಮೇದುವಾರರ ಹೆಸರು ಇವುಗಳನ್ನೆಲ್ಲಾ ಹಾಕಬಹುದಾದರೆ ಅದನ್ನೂ ಮಾಡುತ್ತೇವೆ. ಇನ್ನೊಂದು ಕಡೆ ಇದಕ್ಕೆ ಸಂಬಂಧಪಟ್ಟ ರೂಲ್ಸ್ ಅಂದರೆ ಬ್ಯಾಲೆಟ್ ಪೇಪರನ್ನು ಓಟು ಮಾಡದೆ ಇತರರಿಗೆ ಕೊಟ್ಟರೆ ತಕ್ಸೀರಾಗುತ್ತದೆ ಎಂದು ಮುಂತಾಗಿ ಎಲ್ಲಾ ವಿಷಯಗಳನ್ನೂ ತಿಳಿಯಪಡಿಸುತ್ತೇವೆ. ಒಂದೊಂದು ಬ್ಯಾಲೆಟ್ ಕಾಗದವನ್ನು ಒಂದೊಂದು ಪೆಟ್ಟಿಗೆಯಲ್ಲಿ ಹಾಕಬೇಕೆಂದು ಹೇಳಿ ತಿಳಿವಳಿಕೆ ಕೊಡುತ್ತೇವೆ. ಅಲ್ಲದೆ, ಪ್ರಿಸೈಡಿಂಗ್ ಆಫೀಸರವರು ಕೂಡ ತಿಳಿವಳಿಕೆಯಿಲ್ಲದ ಉಮೇದುವಾರರು ಯಾರಾದರೂ ಬಂದರೆ ಅವರಿಗೆ ಹೇಳಿಕೊಡಬಹುದು. ಅವರಿಗೆ ಕೊಡುವ ಎರಡು ಬ್ಯಾಲೆಟ್ ಕಾಗದಗಳಲ್ಲಿ ಎರಡನ್ನೂ ಒಂದೇ ಕಡೆ ಹಾಕಿದರೆ ಒಂದು ನಷ್ಟವಾಗಿಬಿಡುತ್ತದೆಂಬುದನ್ನು ತಿಳಿಸುತ್ತಾರೆ. ಚಿಹ್ನೆಗಳಲ್ಲಿ ಯಾವುದು ಯಾವ ಪಾರ್ಟಿಯದೆಂದು ಕೇಳಿದರೆ ಹೇಳುತ್ತಾರೆಯೇ ಎಂದು ಶ್ರೀ ಚೆನ್ನಬೈರೇಗೌಡರು ಕೇಳಿದರು. ಅದನ್ನೂ ಹೇಳಬಹುದು. ಅದರಲ್ಲೇನೂ ತೊಂದರೆಯಿಲ್ಲ. ಆದ್ದರಿಂದ ಈ ರೀತಿ ಎಷ್ಟು ತಿಳಿವಳಿಕೆ ಕೊಡಬಹುದೋ ಅಷ್ಟೂ ಕೊಡುತ್ತಾರೆ. ಆದರೆ ಆದಷ್ಟುಮಟ್ಟಿಗೆ ಅವರೂ ವೋಟಿಂಗಿನ ಗೋಪ್ಯತೆಯನ್ನು ಕಾಪಾಡಿಕೊಳ್ಳಬೇಕು. Mock election ವಿಚಾರ ಬಂತು. ಇದಕ್ಕೇನೋ ಏರ್ಪಾಡು ಮಾಡಿದೆ. ಆದರೆ ಮಾನ್ಯ ಸದಸ್ಯರು ಕೆಲವರು ಸೂಚಿಸಿದಂತೆ ಒಂದೊಂದು ತಾಲ್ಲೂಕಿಗೂ ಒಂದು mock election ಇಡುವುದು ಕಷ್ಟ. ಏಕೆಂದರೆ ಇಂಥ ಒಂದು ಚುನಾವಣೆ ನಡೆಸುವುದಕ್ಕೆ ಸುಮಾರು 200 ರೂಪಾಯಿ ಖರ್ಚಾಗುತ್ತದೆಂದರೂ ಇದಕ್ಕೆ ಹೆಚ್ಚು ಹಣ ಖರ್ಚಾಗುತ್ತದೆ ಮತ್ತು ಕಾಲವೂ ಸಾಲದು.

ಆಮೇಲೆ ಚುನಾವಣೆಗಳ ನಿಷ್ಪಕ್ಷಪಾತ ರೀತಿಯ ವಿಚಾರವಾಗಿ ಜನಾಬ್ ಇಮಾಂರವರು ಬಹಳ ನಿಷ್ಪಕ್ಷಪಾತವಾಗಿರಬೇಕೆಂದು ಹೇಳಿದರು. ಸರ್ಕಾರದವರೂ ಕೂಡ ಈ ಚುನಾವಣೆ perfectly impartial and perfectly fair and just ಆಗಿರಬೇಕೆಂಬ ಉದ್ದೇಶವುಳ್ಳವರಾಗಿದ್ದಾರೆ. ಅದೇ ರೀತಿ ಸರ್ಕಾರದವರು ಎಲ್ಲಾ ಪಟೇಲ್ ಶ್ಯಾನುಭೋಗರಿಗೂ ಅಧಿ

(ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು).
ಕಾರಿಗಳಿಗೂ ತಿಳಿವಳಿಕೆಕೊಟ್ಟು ನಿಷ್ಪಕ್ಷಪಾತ ರೀತಿಯಲ್ಲಿ ವರ್ತಿಸಬೇಕೆಂದು ಹೇಳಿದ್ದಾರೆ. ಸರ್ಕಾರಿ ಅಧಿಕಾರಿಗಳು, ಸರ್ಕಾರಿ ಆಸ್ತಿಪಾಸ್ತಿಗಳು—ಯಾವುವೂ ಕೂಡ ಯಾವ ಒಂದು ಕಡೆಯನ್ನೂ ವಹಿಸದ ಹಾಗಿರಬೇಕೆಂದು ಸೂಚನೆ ಕೊಟ್ಟಿದ್ದೇವೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಸರ್ಕಾರಿ ಅಧಿಕಾರಿಗಳು ಯಾರಿಗೆ ಬೇಕಾದರೂ ಓಟು ಮಾಡಬಹುದಲ್ಲವೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಮಾಡಬಹುದು. They can vote, of course, but they should not tell anybody and they should not canvass for anybody. ನಮ್ಮ ಸಂಸ್ಥಾನದಲ್ಲಿ ಒಟ್ಟು 61 ಸಿಂಗಲ್ ಮೆಂಬರ್ ಕ್ಷೇತ್ರಗಳು ಮತ್ತು 19 ಡಬ್ಬಲ್ ಮೆಂಬರ್ ಕ್ಷೇತ್ರಗಳು ಇವೆಯೆಂದು ಆಗಲೇ ಹೇಳಿದ್ದೇನೆ. ಒಂದೊಂದು ಪೋಲಿಂಗ್ ಸ್ಟೇಷನ್ನಲ್ಲಿಯೂ ಒಬ್ಬ ಪ್ರಿಸೈಡಿಂಗ್ ಆಫೀಸರು, ಇಬ್ಬರು ಅಸಿಸ್ಟೆಂಟ್‌ಗಳು, ಒಬ್ಬ ಮಹಿಳಾ ಅಸಿಸ್ಟೆಂಟು, ಒಬ್ಬ ದಫೇದಾರ, ನಾಲ್ಕು ಕಾನ್‌ಸ್ಟೇಬಲ್‌ಗಳಿರುತ್ತಾರೆ. ಇವರೆಲ್ಲಾ ಸೇರಿ ಒಂದೊಂದು ಕಾನ್‌ಸ್ಟಿಟ್ಯೂಯನ್ಸಿಯಲ್ಲಿ ಒಂದೊಂದು ದಿನ ಚುನಾವಣೆ ನಡೆಸಬೇಕೆಂದರೆ, ಆ ಕಾನ್ಸಿಟ್ಯುಯನ್ಸಿಯಲ್ಲಿರುವ 43 ಪೋಲಿಂಗ್ ಸ್ಟೇಷನ್‌ಗಳಿಗೆ ಒಟ್ಟು 43 ಪ್ರಿಸೈಡಿಂಗ್ ಆಫೀಸರುಗಳೂ ಅದಕ್ಕೆರಡರಷ್ಟು ಪೋಲಿಂಗ್ ಆಫೀಸರುಗಳೂ, ಎರಡರಷ್ಟು ಅಸಿಸ್ಟೆಂಟರುಗಳೂ, ಅಷ್ಟೇ ದಫೇದಾರರುಗಳೂ ಮತ್ತು ನಾಲ್ಕರಷ್ಟು ಪೋಲೀಸ್ ಕಾನ್‌ಸ್ಟೇಬಲ್‌ಗಳೂ ಬೇಕಾಗುತ್ತದೆ. ಇವರುಗಳು ಆ ಕಾನ್‌ಸ್ಟಿಟ್ಯುಯನ್ಸಿಯಲ್ಲಿ ಎಷ್ಟು ಪೋಲಿಂಗ್ ಸ್ಟೇಷನ್‌ಗಳಿವೆಯೋ ಅಷ್ಟರದೂ ಪೂರ್ತಿಮಾಡಿ ಮಧ್ಯೆ ಒಂದು ದಿನ marching time ಕೊಟ್ಟು ಮುಂದಿನ ಕಾನ್‌ಸ್ಟಿಟ್ಯೂಯನ್ಸಿಯಲ್ಲಿ ಚುನಾವಣೆ ನಡೆಸುತ್ತಾರೆ.

ಶ್ರೀ ಎಸ್. ರಂಗರಾಯರು.—ಮಹಿಳಾ ವೋಟರುಗಳು ಸಮ ಅರ್ಧದಷ್ಟಿರುವುದರಿಂದ ಅವರಿಗೆ ಹೆಚ್ಚಿಗೆ ಅನುಕೂಲ ಮಾಡಿ ನೂಕುನುಗ್ಗಲು ಇಲ್ಲದಹಾಗೇನಾದರೂ ಮಾಡುತ್ತೀರಾ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದಕ್ಕಾಗಿಯೇ ಲೇಡಿ ಅಸಿಸ್ಟೆಂಟ್‌ಗಳನ್ನು ನೇಮಿಸಿದ್ದೇವೆ. ಅವರು ಬೇಕಾದ ಸಹಾಯ ಮಾಡಿಕೊಡುತ್ತಾರೆ. ಅಲ್ಲಿನ ಇತರ ಗುಮಾಸ್ತರುಗಳೂ ಸಹಾಯಮಾಡಬೇಕೆಂದಿದೆ. ಲೇಡಿ ಅಸಿಸ್ಟೆಂಟ್‌ಗಳು ಸ್ಪೆಷಲ್ ಆಗಿ ಬೇಕಾದ ಸಹಾಯ ಮಾಡುತ್ತಾರೆ.

ಶ್ರೀ ಎಸ್. ರಂಗರಾಯರು.—ಎಲ್ಲಾ ಕಡೆಯೂ ಲೇಡಿ ಅಸಿಸ್ಟೆಂಟ್‌ಗಳನ್ನು ಇಟ್ಟಿದ್ದೀರಾ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಒಂದೊಂದು ಬೂತ್‌ಗೆ ಒಬ್ಬರನ್ನಿಟ್ಟಿದ್ದೇವೆ.

ಇನ್ನು ಎಲೆಕ್ಷನ್ ಪ್ರೋಗ್ರಾಂ ವಿಷಯ. ಕೋಲಾರ, ಮೈಸೂರು ಮುಂತಾದ ಕಡೆಗಳಲ್ಲಿ ಸಿಂಗಲ್ ಮೆಂಬರ್, ಡಬ್ಬಲ್ ಮೆಂಬರ್ ಮತ್ತು ಪಾರ್ಲಿಮೆಂಟ್ ಕಾನ್‌ಸ್ಟಿಟ್ಯೂಯನ್ಸಿಗಳು ಇವೆ. ಇಲ್ಲಿ ಒಂದೊಂದು ದಿನ ಎರಡೆರಡು ಕಾನ್‌ಸ್ಟಿಟ್ಯುಯನ್ಸಿಗಳಲ್ಲಿ ಚುನಾವಣೆ ನಡೆಯುತ್ತದೆ. ಬಾಕಿ ಕಡೆಗಳಲ್ಲಿ ಒಂದೊಂದು ಕಾನ್‌ಸ್ಟಿಟ್ಯುಯನ್ಸಿಯಲ್ಲಿ ಒಂದೊಂದು ದಿನ ಚುನಾವಣೆ ನಡೆಯುತ್ತದೆ. ಇದಕ್ಕಾಗಿ ಎಷ್ಟು ಆಫೀಸರುಗಳು ಸಿಕ್ಕುತ್ತಾರೋ ಅಷ್ಟು ಜನರನ್ನೂ ತೆಗೆದುಕೊಂಡು ಒಂದೊಂದು ಕಾನ್‌ಸ್ಟಿಟ್ಯುಯನ್ಸಿಯಲ್ಲಿ ಒಂದೊಂದು ದಿನ ಚುನಾವಣೆ ನಡೆಸುತ್ತಾರೆ. ಉದಾಹರಣೆಗೆ 4ನೆಯ ತಾರೀಖು ತುಮಕೂರಿನಲ್ಲಿ ಮಾಡಬಹುದು. 5ನೆಯ ತಾರೀಖು ಕುಣಿಗಲ್‌ಗೆ ಪ್ರಯಾಣ ಮಾಡುವ ದಿನ, 6ನೆಯ ತಾರೀಖು ಕುಣಿಗಲ್‌ನಲ್ಲಿ ಚನಾವಣೆ ನಡೆಯುತ್ತದೆ. 7ನೆಯ ತಾರೀಖು ಪ್ರಯಾಣದ ದಿನ. 8ನೆಯ ತಾರೀಖು ಹುಲಿಯೂರುದುರ್ಗದಲ್ಲಿ ಚುನಾವಣೆ. ಈ ರೀತಿಯಾಗಿ ಒಂದೊಂದು ಕಾನ್‌ಸ್ಟಿಟ್ಯುಯನ್ಸಿ ಪೂರ್ತಾ ಚುನಾವಣೆ ನಡೆಸುವುದಕ್ಕೆ ಏರ್ಪಾಡು ಮಾಡುತ್ತೇವೆ. ಆಮೇಲೆ ಡಬ್ಬಲ್ ಮೆಂಬರ್ ಕಾನ್‌ಸ್ಟಿಟ್ಯೂಯನ್ಸಿಯಲ್ಲಿ ಚುನಾವಣೆ ನಡೆಸುವಾಗ ಎರಡೆರಡು ಕ್ಷೇತ್ರಗಳನ್ನು ಒಂದು ಮಾಡುತ್ತೇವೆ. ಇದರಿಂದ ನಮಗೆ

ಎರಡರಷ್ಟು ಜನ ಆಫೀಸರುಗಳು, ಸಿಬ್ಬಂದಿ ಯವರು ಸಿಕ್ಕುತ್ತಾರೆ. ಉದಾಹರಣೆಗೆ ಕೋಲಾರದಲ್ಲಿ ಒಂದು ದಿನ ಚುನಾವಣೆ ನಡೆಸಿ ಆಮೇಲೆ ಪ್ರಯಾಣಕ್ಕೆ ಒಂದು ದಿನ ಅವಕಾಶ ಕೊಟ್ಟು ಇನ್ನೊಂದು ದಿನ ಮುಳುಬಾಗಲು, ಶ್ರೀನಿವಾಸಪುರಗಳಲ್ಲಿ ನಡೆಸುತ್ತಾರೆ. ಹೀಗೆಯೇ ಎಲ್ಲಾ ಕಡೆಯೂ ನಡೆಯುತ್ತೆ. ಆದರೆ, ಬೆಂಗಳೂರು ಉತ್ತರ ತಾಲ್ಲೂಕು ಒಂದು exception. ಅಲ್ಲಿ ಬೆಂಗಳೂರು ಸಿಟಿಯ ಚುನಾವಣೆಯೂ ಸೇರುತ್ತದೆ. ಒಟ್ಟಿಗೆ 7 ಸ್ಥಾನಗಳನ್ನು ಚುನಾಯಿಸಬೇಕಾಗಿರುತ್ತದೆ.

In Bangalore City we have 7 constituencies and of the 7 places we will hold election on one day and afterwards we will go to Bangalore North and Devanahalli Taluk because they together form one constituency.

ಶ್ರೀ ಬಿ. ಚನ್ನಬೈರೇಗೌಡರು.—ಬೆಂಗಳೂರು ನಾರ್ತ್ ತಾಲ್ಲೂಕು ಮತ್ತು ದೇವನಹಳ್ಳಿ ಸೇರಿ ಒಂದು ಪಾರ್ಲಿಮೆಂಟ್ ಕಾನ್‌ಸ್ಟಿಟ್ಯೂಯನ್ಸಿ ಆಗಿದೆ. ಅದಕ್ಕೆ ಹೇಗೆ ಮಾಡುತ್ತೀರಿ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಬೆಂಗಳೂರು ಸಿಟಿಯಲ್ಲಿ 2ನೆಯ ತಾರೀಖು ನಡೆಸುತ್ತೇವೆ. ಆಮೇಲೆ ಅಲ್ಲಿನ ಸಿಬ್ಬಂದಿಯೆಲ್ಲಾ ನಮಗೆ ಸಿಕ್ಕುತ್ತದೆ. ಅವರ ಸಹಾಯ ತೆಗೆದುಕೊಂಡು ಬೆಂಗಳೂರು ಉತ್ತರ ತಾಲ್ಲೂಕು ಮತ್ತು ದೇವನಹಳ್ಳಿ (ಡಬ್ಬಲ್ ಮೆಂಬರ್ ಕಾನ್‌ಸ್ಟಿಟ್ಯೂಯನ್ಸಿ) ಪ್ರದೇಶಕ್ಕೆ ಹೋಗಿ ಒಂದು ಭಾಗದಲ್ಲಿ ನಾಲ್ಕನೆಯ ತಾರೀಖು, ಇನ್ನೊಂದು ಭಾಗದಲ್ಲಿ 6 ನೆಯ ತಾರೀಖು ನಡೆಸುತ್ತೇವೆ.

ಶ್ರೀ ಬಿ. ಚನ್ನಬೈರೇಗೌಡರು.—ಪಾರ್ಲಿಮೆಂಟ್ ಚುನಾವಣಾ ಸ್ಥಾನಕ್ಕೆ ಯಾವಾಗ ಏರ್ಪಾಟು ಮಾಡುತ್ತೀರಿ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದಕ್ಕೂ ಆಗಲೇ ಮಾಡುತ್ತೇವೆ.

ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ).—ಇಬ್ಬರು ಕುರುಡರು ಬಂದು ವೋಟು ಮಾಡಬೇಕೆಂದು ಹೇಳಿದರೆ ಅವರಿಗೇನು ಮಾಡುತ್ತೀರಿ? ವೋಟು ಗೋಪ್ಯವಾಗಿರಬೇಕೆಂದು ಹೇಳಿದರೆ ಹೇಗೆ?

The Hon'ble Sri K.T. BHASHYAM.—We have no direction in that matter. Now that the Hon'ble Member has brought it to our notice, we will immediately find out and certainly make necessary arrangements even for the blind people to vote.

ಶ್ರೀ ಎಲ್. ಸಿದ್ದಪ್ಪನವರು.—ಪೋಲಿಂಗ್ ಆಫೀಸರು ಅಂಥವರಿಗೆ ಸಹಾಯಮಾಡಬಹುದೆಂದು ಹೇಳಿದೆ.

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಆದರೆ ಹೇಗೆ ಸಹಾಯ ಮಾಡಬೇಕೆಂದು ಹೇಳಿಲ್ಲ.

ಶ್ರೀ ಎಲ್. ಸಿದ್ದಪ್ಪನವರು.—ಬೆಂಗಳೂರು ಉತ್ತರ ತಾಲ್ಲೂಕು ಮತ್ತು ದೇವನಹಳ್ಳಿ ಸೇರಿ ಒಂದು ಡಬ್ಬಲ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿಯಲ್ಲಿ ಒಂದೊಂದು ದಿನ ಚುನಾವಣೆ ನಡೆಯುತ್ತದೆಯೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹೌದು ; ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಒಂದು ದಿನ, ದೇವನಹಳ್ಳಿಯಲ್ಲಿ ಒಂದು ದಿನ ನಡೆಯುತ್ತೆ.

ಶ್ರೀ ಎಲ್. ಸಿದ್ದಪ್ಪನವರು.—ಮೂರನೆಯ ಪುಟದಲ್ಲಿ ತಿಳಿಸಿರುವಂತೆ, ಮೈಸೂರಿನಲ್ಲಿ ಡಬ್ಬಲ್ ಮೆಂಬರ್ ಕಾನ್ಸ್ಟಿಟ್ಯುಯನ್ಸಿಗೆ ಒಂದೇ ದಿವಸ ಚುನಾವಣೆ ಇಟ್ಟಿದೆ, ಎರಡು ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯುಯೆನ್ಸಿಗೆ ಒಂದೇ ದಿನ ಇಟ್ಟಿದೆ. ಬಾಕಿ ಏಳು ಸಿಂಗಲ್ ಮೆಂಬರ್ ಕಾನ್‌ಸ್ಟಿಟ್ಯುಯೆನ್ಸಿಗಳಿಗೆ ಬೇರೆ ದಿವಸ ಇಟ್ಟಿದೆ. ಇದಕ್ಕೆ ಕಾರಣ ಗೊತ್ತಾಗಲಿಲ್ಲ.

*ಜನಾಬ್ ಜೆ. ಮಹಮ್ಮದ್ ಇಮಾಂರವರು.—ಮೊದಲನೆಯದಾಗಿ, ಎಲೆಕ್ಟೊರಲ್ ರೋಲ್ ಮುದ್ರಣ ಮಾಡಿಸಿದ್ದೀರಿ, ಎಲ್ಲವನ್ನೂ ಒಳ್ಳೆಯ ಮುದ್ರಣಾಲಯಗಳಲ್ಲಿ ಮಾಡಿಸಿಲ್ಲ. ಇದರಲ್ಲಿ ಕೆಲವು technical ತಪ್ಪುಗಳಿವೆ. ಅನೇಕ ಕಡೆ ಇನಿಷಿಯಲ್ಸ್—'ಜೆ' ಬದಲು 'ಟಿ' ಬಿದ್ದಿದೆ, 'ಕೆ' ಬದಲು 'ಜೆ' ಬಿದ್ದಿದೆ. ಇಂತಹ ತಪ್ಪುಗಳು ಬಂದಾಗ ಆ

(ಜನಾಬ್ ಜೆ. ಮಹಮ್ಮದ್ ಇಮಾಂರವರು). ಹೆಸರುಗಳನ್ನು ರಿಜೆಕ್ಟ್ ಮಾಡದೆ ಸರಿಪಡಿಸಿ ಸೇರಿಸಬೇಕೆಂದು ಸಲಹೆ ಮಾಡುತ್ತೇನೆ.

ಇನ್ನೊಂದು, ಓಟುದಾರರ ಪಟ್ಟಿ ಯಾರಿಗಾದರೂ ಬೇಕಾದರೆ ಒಟ್ಟು ಪೂರ್ತಿ ಪಟ್ಟಿಯನ್ನೇ ಕೊಂಡುಕೊಳ್ಳಬೇಕೆಂದು ಮಾಡಿದ್ದಾರೆ. ಇದು ಕಷ್ಟವಾಗುತ್ತದೆ.

You must either purchase the entire list or not at all. If it is possible, we may permit them to sell electoral rolls in parts. Supposing a candidate wants to purchase electoral rolls of a hobli or a few villages, instead of insisting on him to purchase the electoral roll of the entire constituency, permission may be given to them to sell that bit of the electoral rolls that is needed by a person. This facility is absolutely necessary.

Secondly, the Hon'ble Minister was pleased to say that provision has been made for 1,000 voters in each polling station and his estimation was that hardly 500 voters may turn up for voting at each polling station. But our experience is that in concentrated areas like cities, it is possible that 80 per cent will come for voting. It is necessary therefore that arrangements should exist for voting by all voters.

Another suggestion is, supposing the voting goes on over-night, it is not in every place that there is lighting. It is absolutely necessary to provide adequate lighting at every polling station, specially in villages where there is no electric lighting. Adequate arrangements have to be made to provide lights in such places, so that voters will be in a position to identify the symbol and the boxes.

The Hon'ble Sri K.T. BHASHYAM.—We will make it, Sir; that needs no telling.

Janab J. MOHAMED IMAM.—Regarding secrecy of polling, I was told that during mock elections, secrecy was not maintained because it was possible to see the voter's feet and the voter's head from beyond the screen. This will make it easy for one standing outside the screen to understand in front of which box the voter was standing. It is therefore absolutely necessary that the boxes are kept in a room or screened off in such a manner that the voter's movement inside the screen may not be seen by persons watching from outside. I was told of this omission during the mock elections. It is necessary that in the interests of maintaining strict secrecy, an outsider should not be able to see which way the voter moves.

Regarding the ballot papers, there is another point to be said. I do not know what kind of boxes you have got prepared. I hope it is proof enough against any tampering.

The Hon'ble Sri K.T. BHASHYAM.—It is a perfectly fool-proof and fraud-proof box.

Janab J. MOHAMED IMAM.—Because the interval between the date of voting and the date of counting will be long. During that period, it is absolutely necessary that the boxes should not be tampered with.

The Hon'ble Minister was pleased to say that the symbol will be on paper and it may be pasted on the boxes. I am suggesting to the Hon'ble Minister to examine the possibility of obtaining the signature of as many candidates as possible to these papers before they are pasted to the boxes to ensure that they are not tampered with during the interval. It is absolutely necessary that this precaution is taken to see that symbols are not damaged or replaced.

About the ballot papers, I am suggesting one point. Supposing in a particular polling station, you entrust the polling officer with say 1,000 ballot papers and he issues only 500 and the other 500 will be left with him. How are you going to preserve the remaining ballot papers?

The Hon'ble Sri K.T. BHASHYAM.—There are rules regarding that.

Janab J. MOHAMED IMAM.—Because it is possible that after some time somebody may get hold of these ballot papers and put them into that ballot box.

The Hon'ble Sri K.T. BHASHYAM.—We have got definite rules in that regard.

Janab J. MOHAMED IMAM.—It is necessary to maintain a record of the number of voting papers issued and voting papers that are remaining over and I suggest it may be published also.

Regarding the arrangement made for voting, the convenience of ladies has got to be considered. Our Indian ladies will feel it inconvenient to enter the polling booth if there is a big rush of men. I think there must be a lady assistant and there must be a separate passage for them and you cannot expect them to mix with men and walk in the same passage. Some facilities must be given for ladies to approach the ballot box. There is some difficulty so far as gosha ladies are concerned, because gosha ladies are also voters.

The Hon'ble Sri H. C. DASAPPA.—They are, of course.

Janab J. MOHAMED IMAM.—You will have to provide them with necessary facilities to enable them to exercise their vote and if you want gosha ladies to come in the same entrance by which men go, I am afraid they will not be in a position to enter the polling booth.

The Hon'ble Sri K.T. BHASHYAM.—We shall make the necessary arrangements.

Janab J. MOHAMED IMAM.—Some arrangement will have to be made for them in these polling booths.

Regarding the symbols, the Hon'ble Minister did not explain as to who prepared these symbols.

The Hon'ble Sri K.T. BHASHYAM.—These symbols were prepared by the Election Commission of India.

Janab J. MOHAMED IMAM.—Will the symbols which you affix to the ballot boxes be prepared by you?

The Hon'ble Sri K.T. BHASHYAM.—It will be prepared by us.

Janab J. MOHAMED IMAM.—And before it is printed, I think it is necessary that you show it to the candidate and take his opinion also.

The Hon'ble Sri K.T. BHASHYAM.—No, the party gives us the symbol and the die and according to that we get from the Election Commission of India and we print it.

Janab J. MOHAMED IMAM.—Because you have allotted 'SCALES' to the Janatha Party. 'Scale' ಅಂದರೆ, ಒಂದು ಸಣ್ಣ ಚಿಂತಾಲು ಆಗಬಹುದು ಅಥವಾ ಒಂದು ದೊಡ್ಡ ತಕ್ಕಡಿಯಾಗಬಹುದು. Regarding this indelible ink, I do not know how long it will stand.

The Hon'ble Sri K.T. BHASHYAM.—It is expected to stand for one week.

Janab J. MOHAMED IMAM.—I am glad that the Hon'ble Minister has assured the impartiality of officers and that they will be just and fair during these elections. It is also quite necessary to create proper facilities for the officers to be impartial, just and fair. I know, Sir, that if the local officers are left to themselves, they will be quite fair. Only they should not be given an impression that they have to act in a particular way or some such thing.

The Hon'ble Sri K.T. BHASHYAM.—There is no room for such apprehension.

Janab J. MOHAMED IMAM.—What happens is this. Supposing hereafter the Ministers concerned go out on tour, the local officers and others are bound to meet the Ministers and they might give them certain directions.

The Hon'ble Sri R. CHENNIGARAMIAH (Minister for Local Self-Government).—Did you do it in your time?

Janab J. MOHAMED IMAM.—But the public may misunderstand and it will create a wrong impression on the minds of the public. In the interests of fair election and to leave the public and also the officers free from any bias, I suggest that thereafter the Ministers should not undertake any tour.

The Hon'ble Sri H. C. DASAPPA (Minister for Finance and Industries).—Is it a discovery that he made in England?

The Hon'ble Sri K. T. BHASHYAM.—The Hon'ble Member may be sure that the Ministers will have to tour in the interests of the administration, but every Minister takes every care possible to see that no impression is created on the public mind that that tour has anything to do with party

(HON'BLE SRI K. T. BHASHYAM.)

elections. The Government business will be carried on and if party meetings have got to be addressed, that will be addressed separately and no officer will be called upon to participate in it.

Janab J. MOHAMED IMAM.—I think the Ministers have toured enough.

The Hon'ble Sri K.T. BHASHYAM.—Tour is as necessary as living. Every day something arises in some part of the State and a Minister will have to go to that part of the State. Tour is of every day occurrence, every day necessity.

Janab J. MOHAMED IMAM.—Six Ministers toured on the same day for the same purpose.

The Hon'ble Sri K.T. BHASHYAM.—How many tours did the Hon'ble Member undertake when he was Minister ?

Janab J. MOHAMED IMAM.—If you want to be fair, it is necessary that you avoid tour because that will create a bad impression both on the officers and on the electorate.

Sri K. PUTTASWAMY (Mandya District—General).—In the interests of free and fair election, Ministers will have to tour. Conducting free and fair election is part of the business of the Government.

Janab J. MOHAMED IMAM.—It is not the business of the Government. If they go out on their own record, let them tour in private cars; but going there on duty will certainly mislead people. My Hon'ble friend said: "Is it a discovery I made in England?" There Ministers never tour. It is also left to civil servants. I have got two or three more suggestions to make.

Regarding the facilities to the public, for example, vans and loud speakers are used in public places. I was told by a responsible man that during the last elections at Bangalore some parties were forbidden to use loud speakers and some were allowed by the Police. You must follow one definite principle. I was told that some parties were banned from using loud speakers in the course of their propaganda.

The Hon'ble Sri K.T. BHASHYAM.—It is wrong information.

Janab J. MOHAMED IMAM.—Anyhow, the suggestion is, let it be same to all the parties. If one party is allowed to use loud speakers, others also must be allowed. Let there be no discrimination regarding the use of loud speaker or any public place. Let not the police come and say that they are banning the meeting of this or that party. So the Government should take care to see that all parties get equal facilities and no party is discriminated against in the matter of having any of these facilities.

The Hon'ble Sri K.T. BHASHYAM.—So long as they keep themselves within the limits of law and order.

Janab J. MOHAMED IMAM.—Everybody is engaged in election. The Socialist Party has to say something against the Congress Party—omissions and commissions. That may be taken by a subordinate officer as committing wrong. The Socialist Party may therefore be prevented from holding any meeting.

Sri H. M. CHANNABASAPPA.—Many of the matters which the Hon'ble Member is saying are very elementary ones.

Janab J. MOHAMED IMAM.—Regarding the mock election, I am glad the Minister has promised to give wide publicity. I was told that one mock election will cost a couple of hundred rupees. I think it is better to take precaution and I would submit to the Hon'ble Minister to have mock elections in every constituency, giving wide publicity to it. I think it is quite desirable, especially because we are trying an experiment and in an experiment we need not shirk to spend money and if it is successful it will pay us in the long run.

Sri K. PUTTASWAMY.—Very very heavy responsibility on the Opposition also.

Janab J. MOHAMED IMAM.—Absolutely.

ಶ್ರೀ ಎಸ್. ರಂಗರಾಮಯ್ಯನವರು.—ಚುನಾವಣಾ ಕಾಲದಲ್ಲಿ ಮತದಾರರು

ಕುಳಿತುಕೊಳ್ಳುವ ಸ್ಥಳದಲ್ಲಿ ಅವರಿಗೆ ಬಿಸಿಲು, ಗಾಳಿ ಇತ್ಯಾದಿಗಳ ತೊಂದರೆಯಿಲ್ಲದಂತೆ ತಕ್ಕ ವ್ಯವಸ್ಥೆಗಳನ್ನೇನಾದರೂ ಮಾಡುವಂತೆ ಮಾಡಿದ್ದೀರಾ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದನ್ನೆಲ್ಲ ಮಾಮೂಲಿನಂತೆ ಮಾಡೇ ಮಾಡಲಾಗುತ್ತೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಮಾನ್ಯಸಚಿವರು ತಿಳಿಸಿದ ಅಂಶಗಳ ಪೈಕಿ,ಕೆಲವು ಲೋಪದೋಷಗಳಿರತಕ್ಕದ್ದನ್ನು ನಾನೀಗ ಅವರ ಗಮನಕ್ಕೆ ತರುತ್ತ. ಈ ಸಂಬಂಧವಾಗಿ ಕೆಲವು ಸಲಹೆಗಳನ್ನು ನೀಡಬೇಕೆಂದಿದ್ದೇನೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನರ ತಿಳಿವಳಿಕೆಯ ಬಗ್ಗೆ ದೊಡ್ಡ ದೊಡ್ಡ ಚಿತ್ರಪಟಗಳನ್ನು ಬೇರೆ ಬೇರೆ ಬಣ್ಣದ ಮಸಿಗಳಿಂದ ಗುರುತು ಮಾಡಿಸಿ ಅವುಗಳನ್ನು ಪ್ರದರ್ಶಿಸಲಾಗುತ್ತದೆಂದು ತಿಳಿಸಿದರು. ಆದರೆ ಓಟಿಂಗ್ ಪೆಟ್ಟಿಗೆಗಳ ಭದ್ರತೆಯ ಬಗ್ಗೆ ಅವರೇನೂ ತಿಳಿಸಲಿಲ್ಲ.

ಮಾನ್ಯ ಶ್ರೀ ಕೆ.ಟಿ. ಭಾಷ್ಯಂರವರು.—ನಾನು ಹೇಳಿದ್ದೇನೋ ಆಯಿತು. ಆದರೆ ತಾವು ಕೇಳಲಿಲ್ಲ. ಅದಕ್ಕೆ ನಾನೇನು ಮಾಡಲಿ. ಆ ಪೆಟ್ಟಿಗೆಗಳ ಭದ್ರತೆಯ ಬಗ್ಗೆ ಒಬ್ಬ ಪೋಲೀಸ್ ದಫೇದಾರ ಮತ್ತು ನಾಲ್ಕು ಪೋಲೀಸ್ ಕಾನ್‌ಸ್ಟೇಬಲ್‌ಗಳು ಇದ್ದೇ ಇರುತ್ತಾರೆ. ಹಾಗೆ ಓಟಿಂಗ್ ಪೂರೈಸಿದ ನಂತರ ಆ ಪೆಟ್ಟಿಗೆಗಳನ್ನು ಖಜಾನೆಯಿರತಕ್ಕ ಕೊಠಡಿಯಲ್ಲಿಟ್ಟು ಭದ್ರವಾಗಿ ಸೀಲ್‌ಮಾಡಿ ಇಡಲಾಗುತ್ತೆ. ಬಹಳ ಎಚ್ಚರಿಕೆಯಿಂದ ಕಾವಲು ಸಹ ಇಡಲಾಗುತ್ತೆ.

ಶ್ರೀ ಬಿ. ಚನ್ನಬೈರೇಗೌಡರು.—ಆ ಪೋಲೀಸಿನವರಿರುವುದೆಲ್ಲಾ ಮಂತ್ರಿಗಳ ಕೈಕೆಳಗೆ ತಾನೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಮಂತ್ರಿಗಳ ಕೈ ಕೆಳಗಿದ್ದರೂ ಅವರು ಮಾಡುವುದು ಸರ್ಕಾರದ ಕೆಲಸ. ಈಗ ಹೊಸ ಕೋಟೆಯಲ್ಲಿ ಯಾರಾದರೂ ಒಂದು ತಪ್ಪು ಮಾಡಿದರೆ ಆಗ ಅವರ ವಿಚಾರದಲ್ಲಿ ಪೋಲೀಸಿನವರು ಚನ್ನಬೈರೇಗೌಡರು ಹೇಳಿದಂತೆ ಕೇಳುವುದಕ್ಕಾಗುವುದಿಲ್ಲ. ಸರ್ಕಾರದವರು ಹೇಳಿದಂತೆಯೇ ಅವರು ಕೇಳಬೇಕಾಗಿದೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಚುನಾವಣಾ ಪ್ರಚಾರದ ಬಗ್ಗೆ ಲೌಡ್‌ಸ್ಪೀಕರುಗಳನ್ನು ಮತ್ತು ಮೈಕುಗಳನ್ನು ಉಪಯೋಗಿಸತಕ್ಕ ಸಂಬಂಧವಾಗಿ ಸರ್ಕಾರದವರು ಏನು ಧೋರಣೆ ತೋರಿಸುತ್ತಾರೆಂಬುದರ ಬಗ್ಗೆ ಏನನ್ನೂ ತಿಳಿಸಲಿಲ್ಲವಲ್ಲಾ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಎಲ್ಲರನ್ನೂ ಒಂದೇಸಮನಾದ ಭಾವನೆಯಿಂದ ಕಾಣಬೇಕೆಂದು ಸರ್ಕಾರಿ ನೌಕರರು ಮತ್ತು ಅಧಿಕಾರಿಗಳಿಗೆ ತಿಳಿಸಲಾಗಿದೆ. ಇನ್ನು ಲೌಡ್ ಸ್ಪೀಕರುಗಳ ವಿಷಯವಾಗಿ, ಒಂದು ಪಾರ್ಟಿಗೆ ಅವಕಾಶಕೊಟ್ಟರೆ, ಎಲ್ಲಾ ಪಾರ್ಟಿಗಳಿಗೂ ಆ ಅವಕಾಶ ಕೊಟ್ಟೇ ಕೊಡಲಾಗುತ್ತೆ. ಒಂದು ಪಾರ್ಟಿಗೆ ಅದನ್ನು ತಡೆಗಟ್ಟಿದರೆ ಪ್ರತಿಯೊಂದು ಪಾರ್ಟಿಗೂ ಅದೇ ರೀತಿ ತಡೆಗಟ್ಟಲಾಗುತ್ತೆ. ಅಂಥಾ ಭೇದಭಾವನೆಗಳಿರಲು ಅವಕಾಶವಿಲ್ಲ so long as everybody keeps himself within the limits of law and order.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಗೌರ್ನಮೆಂಟ್ ಇನ್ಷೂರೆನ್ಸ್ ಏಜಂಟರುಗಳು ಕೆಲವರಿಗೆ ಆ ಇಲಾಖಾ ಸೆಕ್ರೆಟರಿಗಳವರು ಬರೆದು ಈ ಚುನಾವಣೆ ಸಂಬಂಧದಲ್ಲಿ ತಿಳಿವಳಿಕೆ ಕೊಟ್ಟಿರತಕ್ಕ ವಿಧಾನ ಬಹಳ ತಪ್ಪುಅಭಿಪ್ರಾಯ ಬರುವಂತೆ ಇದೆ. ಆ ರೀತಿ ಮಾಡಿರತಕ್ಕದ್ದು ಸರಿಯಾದುದಲ್ಲ. ಆ ಬಗ್ಗೆ ತಮಗೆ ನಾನು ಹೇಳುತ್ತಿರುವುದು ಸರಿಯೋ ಹೇಗೆ ಎಂಬುದನ್ನು ತಿಳಿದುಕೊಳ್ಳಬೇಕಾಗಿದ್ದರೆ ಈಗಲೇ ನನ್ನ ಬಳಿ ಹಾಗೆ ತಪ್ಪು ಅಭಿಪ್ರಾಯ ಬರುವಂತೆ ಬರೆದಿರತಕ್ಕ ತಿಳಿವಳಿಕೆ ಕಾಗದಪತ್ರಗಳು ಹಾಜರಿರುತ್ತವೆ. ಬೇಕೆಂದರೆ ಈಗಲೇ ನಾನು ಅವುಗಳನ್ನು ತಮಗೆ ಕೊಡಬಲ್ಲೆ. ಹೀಗೆ ಅವರು ತಪ್ಪು ಭಾವನೆಗಳನ್ನು ಹುಟ್ಟಿಸತಕ್ಕ ರೀತಿಯಲ್ಲಿ ಕಾಗದಗಳನ್ನು ಬರೆಯಬಾರದು. ಇಂಥಾದ್ದನ್ನೆಲ್ಲಾ ತಾವು ತಪ್ಪಿಸಬೇಕೆಂದು ಸಲಹೆ ಮಾಡುತ್ತೇನೆ.

The Hon'ble Sri K.T. BHASHYAM.—It is not necessary, but there are certain times when it is difficult to say whether a certain person has got some influence or not. ತಾವೇನೋ ಈಗ ಸರ್ಕಾರಿ ಇನ್ಷೂರೆನ್ಸ್ ಏಜೆಂಟರ ವಿಚಾರ ತಿಳಿಸಿದಿರಿ. ಆದರೆ ಅವರು ಸರ್ಕಾರಿ ನೌಕರರು ಹೌದೇ ಅಥವಾ ಅಲ್ಲವೇ ಎಂಬುದನ್ನು ಹೇಳುವುದೇ ಬಹಳ ಕಷ್ಟವಾಗಿದೆ. ಹಾಗಿರುವಾಗ ಅವರಮೇಲೆ ಸದಾ ಸರ್ಕಾರದ ಪ್ರಭಾವ ಇದ್ದೇ ಇರುತ್ತದೆಂದು ಹೇಳುವುದಕ್ಕಾಗುವುದಿಲ್ಲ.

I expect Hon'ble Members also to see that, where there are such thin dividing lines, the individual does not canvass.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಫೇರ್ ಎಲೆಕ್ಷನ್ ಎಂಬುದನ್ನು ಒಪ್ಪುತ್ತೇನೆ. ಆದರೆ ಕೆಲವು ಸಲ ಮುಖ್ಯಾಧಿಕಾರಿಗಳು ಕೆಲವರು ಮತ್ತು ಅವರ ಕೈಕೆಳಗಿನವರು ಸರಿಯಾದ ತಿಳಿವಳಿಕೆ ಕೊಡುವುದಿಲ್ಲ. ಅವರಲ್ಲಿರ ತಕ್ಕ ಆ ಭಾವನೆಯನ್ನು ತಡೆಗಟ್ಟಬೇಕು.

Laying on the table the decision of the Hon'ble Appellate Labour Tribunal of India.

Mr. SPEAKER (The Hon'ble Sri V. VENKATAPPA).—The Hon'ble the Law Minister will lay on the Table of the House the decision of the Hon'ble Appellate Labour Tribunal of India.

The Hon'ble Sri K. T. BHASHYAM (Minister for Law and Labour).—Sir, I lay on the Table the decision of the Hon'ble Appellate Labour Tribunal of India in Appeal (Bombay) No. 124 of 1951 together with the reasons of the Mysore Government in modifying the same as required by sub-section (2) of section 15 of the Industrial Disputes (Appellate Tribunal) Act, 1950 of the Parliament.

Section 15 of the Industrial Disputes (Appellate Tribunal) Act, 1950 of the Parliament requires that when a decision of the Labour Appellate Tribunal is modified by the Government, a copy of the decision and the reasons of Government for modifying the decision should be laid before the Legislative Assembly of the State. I have laid the decision and the Government Order in this case as required by this provision. Copies will also be distributed among the Hon'ble members.

I wish to say a word in this connection.

ಬೆಂಗಳೂರಿನಲ್ಲಿ ವೆಜಿಟಬಲ್ ಆಯಿಲ್ ಪ್ರಾಡಕ್ಟ್ಸ್‌ನ ಒಂದು ಫ್ಯಾಕ್ಟರಿಯಿದೆ. ಅದರ ಕೆಲಸಗಾರರು ತಮಗೆ 32½ ರೂಪಾಯಿಗಳ ತುಟ್ಟಿ ಭತ್ಯವನ್ನು ಕೊಡಬೇಕೆಂದು ಕೇಳಿದರು. ಮ್ಯಾನೇಜ್‌ಮೆಂಟಿನವರು ಕೊಡಲಿಲ್ಲ. ಅದರಿಂದ ಒಂದು ಡಿಸ್ಪ್ಯೂಟ್ ಉದ್ಭವವಾಯಿತು. ಅದನ್ನು ಇಂಡಸ್ಟ್ರಿಯಲ್ ಟ್ರಿಬ್ಯೂನಲ್ಲಿಗೆ ರೆಫರ್ ಮಾಡಲಾಯ್ತು. ಅಲ್ಲಿ ಎಲ್ಲರಿಗೂ 30 ರೂಪಾಯಿಗಳಂತೆ ಅಲೋಯನ್ಸ್ ಕೊಡಬೇಕೆಂದು ಮತ್ತು ಅದು 1-8-1949 ರಿಂದ ಜಾರಿಗೆ ಬರಬೇಕೆಂದು ತೀರ್ಮಾನವಾಯಿತು. ಮ್ಯಾನೇಜ್‌ಮೆಂಟಿನವರು ಅದರ ಮೇಲೆ ಅಪಲೇಟ್ ಟ್ರಿಬ್ಯೂನಲ್‌ಗೆ ಅಪೀಲ್ ಮಾಡಿದರು. ಅವರು ಸ್ಟೇ ಆರ್ಡರ್ ಕೇಳಿದರು; ಅದನ್ನು ಮೇಲಿನವರು ಕೊಡಲಿಲ್ಲ. ಆದ್ದರಿಂದ ಕೆಲಸಗಾರರು ಇಂಡಸ್ಟ್ರಿಯಲ್ ಟ್ರಿಬ್ಯೂನಲ್ ತೀರ್ಮಾನದಂತೆ ತಮಗೆ ತುಟ್ಟಿ ಭತ್ಯವನ್ನು ಕೊಡಬೇಕೆಂದು ಒತ್ತಾಯಮಾಡಿದರು. ಆಗ 1-8-1949 ರಿಂದ 1-9-1951 ರ ವರೆಗೆ 30 ರೂಪಾಯಿಗಳಂತೆ ತುಟ್ಟಿ ಭತ್ಯವನ್ನು ಕೊಡಲಾಯಿತು. ಆಮೇಲೆ 6-9-1951 ರಲ್ಲಿ ಅಪಲೇಟ್ ಟ್ರಿಬ್ಯೂನಲ್‌ನವರು ಒಂದು ತೀರ್ಮಾನ ಕೊಟ್ಟರು. ಅದರಲ್ಲಿ 30 ರೂಪಾಯಿಗಳಂತೆ ಪಾವತಿ ಮಾಡುವುದು ಸರಿಯಲ್ಲ, 25 ರೂಪಾಯಿಗಳವರೆಗೆ ಸಂಬಳ ಬರುವವರಿಗೆ 27-8-0, 25ಕ್ಕೆ ಮೇಲ್ಪಟ್ಟು 50 ರೂಪಾಯಿಗಳವರೆಗೆ ಸಂಬಳ ಬರುವವರಿಗೆ 30 ರೂಪಾಯಿಗಳು ಮತ್ತು 50 ಕ್ಕೆ ಮೇಲ್ಪಟ್ಟು ಬರುವವರಿಗೆ ರೂ. 32-8-0 ಕೊಡಬೇಕೆಂದೂ ಮತ್ತು ಅದನ್ನು 1-4-1951 ರಿಂದ ಜಾರಿಗೆ ಕೊಡಬೇ

ಕೆಂದೂ ಆರ್ಡರು ಮಾಡಿದರು. ಅದನ್ನು ಈಗ ಜಾರಿಗೆ ಕೊಡಬೇಕಾದರೆ ಅಪೆಲೇಟ್ ಟ್ರಿಬ್ಯೂನಲ್ ಏನು ಮಂಜೂರು ಮಾಡಿದ್ದಾರೋ ಅದನ್ನು ಕೊಡುವವರೆಗೆ ಹೆಚ್ಚಿಗೆ ಪಾವತಿಯಾಗಿರುವುದನ್ನು ಕೂಲಿಗಾರರಿಂದ ಮ್ಯಾನೇಜ್‌ಮೆಂಟಿನವರು ವಾಪಸು ತೆಗೆದುಕೊಳ್ಳಬೇಕು: ಹಾಗೆ ತೆಗೆದುಕೊಳ್ಳುವಾಗ ಕೂಲಿಗಾರರಲ್ಲಿ ಅಸಮಾಧಾನವುಂಟಾಗುತ್ತದೆ, ಅದನ್ನು ತಪ್ಪಿಸಬೇಕು ಎಂದು ಕೂಲಿಗಾರರು ಕೇಳಿದರು. ನಾವು ಮ್ಯಾನೇಜ್‌ಮೆಂಟಿನವರನ್ನೂ, ಕೂಲಿಗಾರರನ್ನೂ ಕರೆದು ಒಂದು ತೀರ್ಮಾನ ಮಾಡೋಣ ಎಂದು ಹೇಳಿದೆವು. ಆಗ ಒಂದು ಸಲಹೆ ಮಾಡಿದ್ದಾಯಿತು. 1-9-1951 ರ ವರೆಗೆ 30 ರೂಪಾಯಿಗಳಂತೆ ಕೊಟ್ಟು ಅಲ್ಲಿಂದ ಮುಂದೆ ಅಪೆಲೇಟ್ ಟ್ರಿಬ್ಯೂನಲ್ ತೀರ್ಮಾನದಂತೆ ಕೊಡಬಹುದೆಂದು ಹೇಳಿದೆವು. ಕೂಲಿಗಾರರು ಅದಕ್ಕೆ ಒಪ್ಪಿದರು. ಮ್ಯಾನೇಜ್‌ಮೆಂಟಿನವರು ತಮ್ಮ ಡೈರೆಕ್ಟರುಗಳನ್ನು ಕೇಳಬೇಕೆಂದು ಹೇಳಿದರು. ಅವರು ಅಕ್ಟೋಬರ್ 3 ನೆಯ ತಾರೀಖು ಸಲಹೆ ನೀಡಿದರು. 15 ನೆಯ ಸೆಕ್ಷನ್ ಪ್ರಕಾರ ಅಪೆಲೇಟ್ ಟ್ರಿಬ್ಯೂನಲ್ ಆರ್ಡರ್ ಮಾಡಿದ ಮೂವತ್ತು ದಿವಸಗಳೊಳಗಾಗಿ ಸರ್ಕಾರದವರು ಬೇಕಾದರೆ ಅದನ್ನು ಬದಲಾವಣೆ ಮಾಡಬಹುದು. ಅದರಲ್ಲಿ ಈ ರೀತಿ ಹೇಳಿದೆ:—

"Where the appropriate Government rejects or modifies any decision under the proviso to sub-section (1), it shall, on the first available opportunity, lay that decision together with its reasons for rejecting or modifying the same before the Legislative Assembly of the State, or where the appropriate Government is the Central Government, before Parliament.

The decision of the Appellate Tribunal shall be enforceable on the expiry of thirty days from the date of pronouncement:

Provided that where the appropriate Government is of opinion that it would be inexpedient on public grounds to give effect to the whole or any part of the decision, the appropriate Government may, before the expiry of the said period of thirty days, by order in the Official Gazette, either reject the decision or modify it."

ಸರ್ಕಾರಕ್ಕೆ ಹೀಗೆ ತೋಚಿತು: ಕೂಲಿಗಾರರಿಗೆ ಕೊಟ್ಟಿರುವುದನ್ನು ವಾಪಸು ತೆಗೆದುಕೊಳ್ಳುವುದರಿಂದ ಬಂಡವಾಳಗಾರರಿಗೂ ಮತ್ತು ಕೂಲಿಗಾರರಿಗೂ ಮನಸ್ತಾಪವುಂಟಾಗುತ್ತದೆ. ಮೊದಲೇ ಕೊಡದೆ ಇದಿದ್ದರೆ ಅದು ಬೇರೆ. ಈಗ 1-9-1951 ರ ವರೆಗೆ 30 ರೂಪಾಯಿಗಳಂತೆ ಕೊಟ್ಟಿದ್ದಾರೆ. ಅಲ್ಲಿಂದ ಮುಂದಕ್ಕೆ ಅಪೆಲೇಟ್ ಟ್ರಿಬ್ಯೂನಲ್ ಆರ್ಡರಿನಂತೆ ಕೊಡುವುದರಿಂದ ಯಾರಿಗೂ ತೊಂದರೆಯೇ ಇಲ್ಲ ಎಂದು ಕಂಡುಬಂತು. On public grounds we had to modify it thus and we had to issue it on the 6th. Therefore Government have taken the decision and they have said that the Industrial Tribunal Order will come into effect upto 1st September 1951 and the Appellate Tribunal order thereafter. ಅದನ್ನು ಈಗ ಈ ಸಭೆಯ ಮುಂದೆ ಇಟ್ಟಿದೆ.

Sri L. SIDDAPPA (Shimoga District—General).—Is it merely for the information of the House? Can there be no discussion over it?

The Hon'ble Sri K. T. BHASHYAM.—It simply says that a copy of the decision and the reasons for modifying the decision shall be laid before the Legislative Assembly of the State. There is no discussion.

LEGISLATIVE BUSINESS.

The Mysore Forest (Amendment) Bill, 1951.

Motion to consider.

Mr. SPEAKER (The Hon'ble Sri V. VENKATAPPA).—The motion to consider the Mysore Forest (Amendment) Bill, 1951 was under discussion day before yesterday. It will be resumed now.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು (ಸ್ಥಳೀಯ ಸಂಸ್ಥೆಗಳ ಸಚಿವರು).—ಅಧ್ಯಕ್ಷರೇ, ಮೊನ್ನೆ ದಿವಸ ಫಾರೆಸ್ಟುಗಳಿಗೆ ಸಂಬಂಧಪಟ್ಟ ತಿದ್ದುಪಡಿ ಮಸೂದಾ ಕಾನೂನಿನಮೇಲೆ ಮಾತನಾಡುತ್ತಾ ಕೆಲವು ಸದಸ್ಯರು ತಮ್ಮ ಅನುಭವದಿಂದ ಕೆಲವು ಅಭಿಪ್ರಾಯಗಳನ್ನು ಕೊಟ್ಟರು. ಅಂಥವರಲ್ಲಿ ಶ್ರೀಗಳಾದ ಮಾದಯ್ಯಗೌಡರು, ಮುದಿಯಪ್ಪನವರು ಮತ್ತು ತಿಮ್ಮಾಬೋಯಿಯವರು ಮುಖ್ಯವಾದ ಸಲಹೆಗಳನ್ನು

(ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು). ನೀಡಿದ್ದಾರೆ. ಈ ವಿಚಾರದಲ್ಲಿ ಭಾಷಣ ಮಾಡಿದವರು ತಂದಿರುವ ತಿದ್ದುಪಡಿಗೆ ಸಂಪೂರ್ಣ ಬೆಂಬಲ ಕೊಟ್ಟರು. ಹಾಗೆ ಕೊಡುವ ಸಂದರ್ಭದಲ್ಲಿ ಕೆಲವು ಮಿತ್ರರು ಇರುವ ನ್ಯೂನತೆಗಳನ್ನು ತಿಳಿಸಿದರು. ಫಾರೆಸ್ಟ್ ಇಲಾಖೆಯಲ್ಲಿರುವ ಬಹಳ ಅಧಿಕಾರಿಗಳು ಅನೇಕ ಕಡೆಗಳಲ್ಲಿ ಸ್ಮಗ್ಲಿಂಗ್ ಆಗುವುದಕ್ಕೆ ಉತ್ತೇಜನ ಕೊಡುತ್ತಿದ್ದಾರೆ. ಅದರಿಂದ ಅನೇಕ ರೀತಿಯಲ್ಲಿ ಫಾರೆಸ್ಟಿನಲ್ಲಿರುವ ಟಿಂಬರ್ ಸಾಗಿಸುವುದಕ್ಕೆ ಅನುಕೂಲವಾಗುತ್ತಿದೆ ಇದಕ್ಕೆ ಬಹಳಮಟ್ಟಿಗೆ ಅನೇಕ ಕಡೆಗಳಲ್ಲಿ ಸಹಾಯವಾಗಿದೆ ಎಂದು ತಿಳಿಸಿದರು. ಶ್ರೀ ಮುದಿಯಪ್ಪನವರು ಟಿಂಬರಿಗೆ ಸಾಟಿಂಬರ್ ಎಂದು ಅರ್ಥವಾಡಿ ಸೌದೆಗಾಗಿ ಏನಾದರೂ ಕಡಿದಿದ್ದರೆ ಅದೂ ಬರುತ್ತದೆ, ಅದನ್ನು ತಡೆಯುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳಿದರು. ಶ್ರೀ ತಿಮ್ಮಾಬೋಯಿಯವರು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಸ್ವಂತವಾಗಿ ತರಬೇಕಾದರೆ ಇಂಥ ತೊಂದರೆಯಾಗುತ್ತದೆ ಮತ್ತು saw pits ಮನೆ ಕಟ್ಟಿಕೊಳ್ಳಲು ಮಾಡಿದರೆ ಲೈಸೆನ್ಸ್ ತೆಗೆದುಕೊಳ್ಳಬೇಕು ಎಂದು ಕೆಲವು ಅಂಶಗಳನ್ನು ಹೇಳಿದರು. ಶ್ರೀ ಮಾದಯ್ಯಗೌಡರು ತಿಳಿಸಿದ್ದು ಕೆಲವು ಕಡೆಗಳಲ್ಲಿ ಹಿಂದೆ ಫಾರೆಸ್ಟ್ ಇಲಾಖೆಯಲ್ಲಿ ಈ ತರಹ ಸ್ಮಗ್ಲಿಂಗಿಗೆ ಸಹಾಯವಾಗಿತ್ತು. ಅದಕ್ಕಾಗಿ ಹೊಸದಾಗಿ ಕೆಲವು ಕಾನೂನುಗಳನ್ನು ಮಾಡಿದ್ದರಿಂದ ಚೆಕಿಂಗ್ ಸ್ಟೇಷನ್ಸ್ ಮತ್ತು ಟಿಂಬರ್ ಟ್ರಾನ್ಸಿಟ್ ರೂಲನ್ನು ಜಾರಿಗೆ ತಂದಿರುವುದರಿಂದ ಬಹಳ ಮಟ್ಟಿಗೆ ಕಡಿಮೆಯಾಗಿದೆ. ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಫಾರೆಸ್ಟು ಹೆಚ್ಚಾಗಿರುವುದರಿಂದ ಅಲ್ಲಿ ಸಹಾಯವಾಗುತ್ತದೆ.

ಮತ್ತು ಫಾರೆಸ್ಟ್ ಸ್ಮಗ್ಲಿಂಗ್ ಕೇಸುಗಳು ಹಿಂದೆ ಆಗುತ್ತಾ ಇದ್ದುದನ್ನು ನೋಡಿದರೆ ಈಚೆಗೆ ಬಹುಮಟ್ಟಿಗೆ ಇದು ಕಡಿಮೆಯಾಗಿದೆ ಎಂದು ಹೇಳಬಹುದು. ಆದರೆ ಸಂಪೂರ್ಣವಾಗಿ ನಿಂತೇಹೋಗಿದೆ ಎಂದು ಹೇಳತಕ್ಕ ಧೈರ್ಯ ನಮಗಾದರೂ ಇಲ್ಲ. ಆ ರೀತಿ ಆಗುತ್ತಿರುವುದಕ್ಕೆ ಕೆಲವು ಫಾರೆಸ್ಟ್ ಆಫೀಸರುಗಳು ಕಾರಣರೆಂದು ಹೇಳಿದರು. ಬರೀ ಫಾರೆಸ್ಟ್ ಆಫೀಸರೇ ಕಾರಣರಾಗಿಬಿಟ್ಟರೆ, ಆ ಕೆಲಸ ಆಗುವುದಿಲ್ಲ. ಉಭಯತ್ರರೂ ಭಾಗಿಗಳಾಗಿರಬೇಕು. ಮಾಡತಕ್ಕವರು ಮತ್ತು ಅವರಿಗೆ ಉತ್ತೇಜನ ಕೊಡತಕ್ಕವರು ಇಬ್ಬರೂ ಭಾಗಿಗಳಾಗಿರಬೇಕು. ಆಗ ಕೆಲವು ಸಂದರ್ಭಗಳಲ್ಲಿ ಆಗುತ್ತದೆ. ಸರ್ಕಾರದ ಗಮನಕ್ಕೆ ಯಾವಯಾವ ವಿಧಾನದಲ್ಲಿ ಈ ರೀತಿ ಸ್ಮಗ್ಲಿಂಗ್ ಆಗುತ್ತದೆ ಎಂಬುದಾಗಿ ಕಂಡುಬರುತ್ತದೆಯೋ ಅವೆಲ್ಲಕ್ಕೂ ಪರಿಣಾಮಕಾರಿಯಾಗಿ ಪರಿಹಾರಮಾಡಲು ಕಾನೂನು ಜಾರಿ ಮಾಡಿದ್ದೇವೆ. ಆದರೂ ಸಹ ಅದು ಏನಾಗಿದೆಯೆಂದರೆ ನಾವು ಚಾಪೆಯೊಳಗೆ ತೂರುವುದಕ್ಕೆ ಹೋದರೆ ಅವರು ರಂಗೋಲೆಯೊಳಗೆ ತೂರುತ್ತಾರೆ ಎನ್ನುವಂತೆ ಆಗಿದೆ. ಹೀಗೆ ನಾನಾರೀತಿಯಲ್ಲಿ ಸ್ಮಗ್ಲಿಂಗ್ ಮಾಡುತ್ತಾರೆ. ಇದೆಲ್ಲವನ್ನೂ ಸಂಪೂರ್ಣವಾಗಿ ನಿಲ್ಲಿಸತಕ್ಕ ಸನ್ನಿವೇಶದಲ್ಲಿದ್ದೇವೆ ಅಂತ ಅಷ್ಟು ಧೈರ್ಯವಾಗಿ ಹೇಳುವುದಕ್ಕೆ ಸಾಧ್ಯವಿಲ್ಲ. ಆದರೂ ಫಾರೆಸ್ಟ್ ಆಫೀಸರುಗಳು ಅಂಥಾದ್ದಕ್ಕೆ ಭಾಗಿಗಳಾಗಿದ್ದರೆ ಅದು ನಮ್ಮ ಗಮನಕ್ಕೆ ಬಂದರೆ ಅದನ್ನು ತಡೆಗಟ್ಟಲು ಸರ್ವವಿಧದಲ್ಲೂ ಪ್ರಯತ್ನಪಡುತ್ತೇವೆ. ಮತ್ತು ಈಗಲೂ ಪ್ರಯತ್ನಪಡುತ್ತಲೇ ಇದ್ದೇವೆ. ಅನೇಕರನ್ನು ಶಿಕ್ಷೆ ಮಾಡಿದ್ದೇವೆ ಎಂದು ತಿಳಿಸಬೇಕಾಗಿದೆ. ಒಂದೊಂದು ಸಂದರ್ಭದಲ್ಲಿ ಏನಾಗುತ್ತದೆ ಎಂದರೆ ಯಾರಿಂದಲಾದರೂ ಅನಾನಿಮಸ್ ಪಿಟಿಷನ್ಸ್ ಬಂದರೆ ಅದನ್ನು ಸುಮ್ಮನೆ ಇಡುವುದಿಲ್ಲ. ಕಾನ್ಫಿಡೆನ್ಷಿಯಲ್ ಇನ್ಕ್ವೈರಿಗಾಗಿ ಒಬ್ಬ ಗೆಜೆಟೆಡ್ ಆಫೀಸರನ್ನು ಕಳುಹಿಸಿ ಪತ್ತೆಹಚ್ಚುತ್ತೇವೆ. ಆಗ ಆತ ತಪ್ಪಿತಸ್ಥ ಎಂದು ಕಂಡುಬಂದಲ್ಲಿ ಕೆಲವುಜನ ಖಾಸಗೀ ಮನುಷ್ಯರೇ ಮುಂದೆಬಂದು ಆತ ತಪ್ಪಿತಸ್ಥನಲ್ಲ, ಅವನ ಮೇಲೆ ದ್ವೇಷಕ್ಕೆ ಆರೀತಿ ಹೇಳಿದ್ದಾರೆ, ಆತ ಬಹಳ ಸತ್ಯವಂತ, ಸತ್ಯ ಹರಿಶ್ಚಂದ್ರ ಅಂತ ಹೇಳಿ ಯಾವ ಶಿಕ್ಷೆ ಮಾಡುವುದಕ್ಕೂ ಅವಕಾಶ ಕೊಡುವುದಿಲ್ಲ.

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—ಅವುಗಳನ್ನೆಲ್ಲಾ ನೀವು ಕೇಳಬಾರದು.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಖಾಸಗೀ ಮನುಷ್ಯರು ಆರೀತಿ ಪ್ರವೇಶ ಮಾಡಿ ಯಾವ ಶಿಕ್ಷೆ ಕೊಡುವುದಕ್ಕೂ ಅವಕಾಶ ಕೊಡುವುದಿಲ್ಲ ಎಂಬುದಕ್ಕೆ ಹೇಳಿದೆ ಅಷ್ಟೆ. ಫಾರೆಸ್ಟ್ ಗಾರ್ಡ್ಸ್, ರೇಂಜ್ ಆಫೀಸರುಗಳು ಇವರೆಲ್ಲಾ ಇರುತ್ತಾರೆ. ಆರೀತಿ ಆಗುವುದಕ್ಕೆ ಖಾಸಗಿ ಮನುಷ್ಯರು ಅವಕಾಶ ಕೊಡದೆ ಸ್ಮಗ್ಲಿಂಗ್ ಆಗುವುದಕ್ಕೆ ಆ ನೌಕರರು ಸಹಾಯ ಕರಾಗಿದ್ದ ಪಕ್ಷದಲ್ಲಿ ಅಂಥಾದ್ದನ್ನು ಸರ್ಕಾರದವರ ಗಮನಕ್ಕೆ ತರಬೇಕು. ಅವರಿಗೆ ಶಿಕ್ಷೆಕೊಟ್ಟರೆ ಯಾರೂ ಅಡ್ಡಿ ಬರಬಾರದು ಎಂದು ನನ್ನ ವಿನಂತಿ. ಈರೀತಿ ಬಹುಮಟ್ಟಿಗೆ ಸ್ಮಗ್ಲಿಂಗ್ ಕಡಿಮೆ ಮಾಡುವುದಕ್ಕೆ ಕಾನೂನು ತಂದಿದೆ. ಇದುವರೆಗೂ ಸ್ಮಗ್ಲಿಂಗ್ ಆಗತಕ್ಕ ಪದಾರ್ಥದಲ್ಲಿ 'ಟಿಂಬರ್' ಅಂತ ಮಾತ್ರ ಇತ್ತು. ಅದರಲ್ಲಿ ಕೊಯ್ದ ಟಿಂಬರ್ ಬರುತ್ತಾ ಇರಲಿಲ್ಲ. ಕೊಯ್ದ ಮರಕ್ಕೆ ಅನ್ವಯಿಸುವುದಿಲ್ಲ, ಅದನ್ನು ಸಾಗಿಸಿದರೆ ಅಪರಾಧವಾಗುವುದಿಲ್ಲ ಎಂದು ಹೇಳಲು ಅವಕಾಶವಿತ್ತು. ಅದು ನಮ್ಮ ಗಮನಕ್ಕೆ ಬಂದು ಈ ತಿದ್ದುಪಡಿಯನ್ನು ತರಲಿಕ್ಕೆ ಅವಕಾಶವಾಯಿತು. ಮತ್ತು saw pits ಮಾಡಬೇಕಾಗಿದ್ದರೂ ಲೈಸೆನ್ಸ್ ತೆಗೆದುಕೊಳ್ಳಬೇಕೆಂದು ಈಗಿರತಕ್ಕ ಕಾನೂನಿನಲ್ಲಿ ಇದೆ. ಮತ್ತು saw pitsನಲ್ಲಿ ಜೋಡಿಸತಕ್ಕ ಮೆಷಿನರಿ ಇವೆಲ್ಲಕ್ಕೂ ಲೈಸೆನ್ಸ್ ತೆಗೆದುಕೊಳ್ಳಬೇಕು. ಜುಲ್ಮಾನೆ ಇದುವರೆಗೂ 100 ರೂಪಾಯಿ ಇದ್ದದ್ದನ್ನು 500 ರೂಪಾಯಿಗಳವರೆಗೂ ಹೆಚ್ಚಿಸಿದ್ದೇವೆ. ಸಂಬಂಧಪಟ್ಟ ಗೆಜೆಟೆಡ್ ಆಫೀಸರು ಆಯಾಯಾ ಕೇಸಿನ ದರ್ಜೆಯಮೇಲೆ ಹೆಚ್ಚು ಜುಲ್ಮಾನೆ ಹಾಕುವುದಕ್ಕೆ ಇದುವರೆಗೆ ಅವಕಾಶ ವಿರಲಿಲ್ಲ. ಈರೀತಿ ಹೆಚ್ಚುಮಾಡುವುದರಿಂದ ಸ್ವಲ್ಪ ಭಯ ಜಾಸ್ತಿಯಾಗುತ್ತದೆ ಎಂಬ ದೃಷ್ಟಿಯಿಂದ ಮಾಡಿದ್ದೇವೆ.

ಈ ರೂಲ್ಸ್ ಸೌದೆಗೆ ಅನ್ವಯಿಸುತ್ತದೆ ಮತ್ತು ಮನೆ ಕಟ್ಟುವವರಿಗೆ ಅನ್ವಯವಾಗುತ್ತದೆ, ಆದ್ದರಿಂದ ತೊಂದರೆಯಾಗಬಹುದೆಂದು ಕೆಲವರು ಹೇಳಿದರು. ಸೌದೆಗಾಗಿ ತೆಗೆದುಕೊಂಡುಹೋಗುವುದನ್ನು sawn timber ಎಂದು ಹೇಳುವುದಕ್ಕಾಗುವುದಿಲ್ಲ. ಮತ್ತು ಮನೆ ಕಟ್ಟುವುದಕ್ಕೆ ನೂರಾರು ಮೈಲಿ ಒಂದು ಊರಿನಿಂದ ಒಂದು ಊರಿಗೆ ಯಾರೂ ಸಾಗಿಸುವುದಿಲ್ಲ. ಒಂದು ವೇಳೆ personal grudge ಇದ್ದು ಹಿಡಿದರೆ ಅದು ತಕ್ಸೀರು ಆಗುವುದಿಲ್ಲ, ಕೋರ್ಟಿನಲ್ಲಿ ನಿಲ್ಲುವುದಿಲ್ಲ. ಅಲ್ಲದೆ ಸೌದೆಗಾಗಿ ತಂದದ್ದು ಮಾರುವುದಕ್ಕಲ್ಲ ಎಂಬುದು ಫಾರೆಸ್ಟ್ ಆಫೀಸರಿಗೆ ಗೊತ್ತಾದರೆ ಅಂಥ ಕೇಸು ಹಿಡಿಯುವುದೇ ಇಲ್ಲ. ಬಿಟ್ಟುಬಿಡುತ್ತಾರೆ. ಆ ಕಾರಣದಿಂದ ನೂರರಲ್ಲಿ ಒಂದು ಅಂಥ ಕೇಸನ್ನು ತಂದು ಕಾನೂನು ಭದ್ರತೆಯನ್ನು ಕಡಿಮೆ ಮಾಡಿದರೆ ಬಹಳ ಅನಾಹುತವಾಗುತ್ತದೆಂದು ಮಾನ್ಯ ಸದಸ್ಯರಲ್ಲಿ ತಿಳಿಸಬೇಕಾಗಿದೆ. ಬೋನಾಫೈಡ್ ಕೇಸು ಆದರೆಮಾತ್ರ ಕೇಸು ಹಾಕಬೇಕು, ಇಲ್ಲದಿದ್ದರೆ ಹಾಕಕೂಡದು ಎಂಬುದಾಗಿ ಡಿಪಾರ್ಟ್‌ಮೆಂಟಲ್ ಆಗಿ ಯಾವ ತೊಂದರೆಯೂ ಆಗದ ಹಾಗೆ ನೋಡಿಕೊಳ್ಳಬೇಕೆಂದು ತಿಳಿವಳಿಕೆ ಕೊಡುತ್ತೇವೆ. ಸ್ವಂತ ಮನೆ ಕಟ್ಟಿಕೊಳ್ಳುವುದಕ್ಕೂ ಲೈಸೆನ್ಸ್ ತೆಗೆದುಕೊಳ್ಳಬೇಕಾಗುತ್ತದೆ ಎಂದು ಶ್ರೀ ತಿಮ್ಮಾಬೋಯಿಯವರು ಹೇಳಿದರು. Saw pitಗೆ ಲೈಸೆನ್ಸ್ ತೆಗೆದುಕೊಳ್ಳಬೇಕೆಂದು ಕಾನೂನಿನಲ್ಲಿ ಇದ್ದರೆ ವ್ಯಾಪಾರ ದೃಷ್ಟಿಯಿಂದಾಗಲೀ, ಮನೆ ಕಟ್ಟಿಕೊಳ್ಳುವುದಕ್ಕಾಗಲೀ ಯಾವುದಕ್ಕಾದರೂ ಲೈಸೆನ್ಸ್ ತೆಗೆದುಕೊಳ್ಳಲೇಬೇಕಾಗುತ್ತದೆ. ಮನೆ ಕಟ್ಟಿಕೊಳ್ಳಬಹುದು. ಅನಂತರ ಮರಗಳನ್ನು ಮಾರಬಹುದು. ಅದರಿಂದ ತೊಂದರೆಯಾಗುವುದಿಲ್ಲ. ಅಂತೂ ಮಾನ್ಯ ಸದಸ್ಯರು ತಮ್ಮ ಬೆಂಬಲ ಕೊಟ್ಟಿದ್ದಕ್ಕಾಗಿ ವಂದಿಸಿ ಈ ಸಭೆಯವರು ಇದಕ್ಕೆ ಅನುಮತಿ ಕೊಡಬೇಕೆಂದು ಮತ್ತೊಮ್ಮೆ ಕೋರುತ್ತೇನೆ.

Mr. SPEAKER.—The question is :

"That the Mysore Forest (Amendment) Bill, 1951, be taken into consideration."

The motion was adopted.

Mr. SPEAKER.—Clauses 2 to 5, both inclusive. The question is :

"That Clauses 2 to 5, both inclusive, stand part of the Bill."

The motion was adopted.

Clauses 2 to 5, both inclusive, were added to the Bill.

Mr. SPEAKER.—Clause 1. The question is :

"That Clause 1 stand part of the Bill"

The motion was adopted.

Clause 1 was added to the Bill.

Mr. SPEAKER.—Title and Preamble. The question is :

"That the Title and the Preamble stand part of the Bill."

The motion was adopted.

The Title and the Preamble were added to the Bill.

Motion to pass.

The Hon'ble Sri R. CHENNIGARAMIAH.—Sir, I move :

"That the Mysore Forest (Amendment) Bill, 1951, be passed."

Mr. SPEAKER.—The question is :

"That the Mysore Forest (Amendment) Bill, 1951, be passed."

The motion was adopted.

The Hon'ble Sri R. CHENNIGARAMIAH.—Sir, I am not moving the Kolar Gold Fields Municipal Law.

The Mysore Race-Courses Licensing Bill, 1951.

Motion to consider.

*The Hon'ble Sri T. MARIAPPA (Home Minister).—Sir, I move :

"That the Mysore Race-Courses Licensing Bill, 1951, be taken into consideration."

Sir, this is a very simple measure. The law that governs at present the race courses and the common gaming house is in the Police Act of 1908 and the Race Course Betting Tax Act. But it is considered very necessary that statutory provision should be made for licensing race-courses for the proper control of not only racing but also to know how exactly accounts are maintained and how the several people that visit the race-course are treated.

This Bill contains only thirteen clauses. Clauses 3 and 4 are the main clauses. Clause 3 :

"No horse-race shall be held save on a race-course for which a license for horse-racing granted in accordance with the provisions of this Act is in force."

Clause 4 :

"(1) The owner, lessee or occupier of any race, course shall apply to the Government for a licence for horse-racing on such race-course."

Government have also taken power to withhold such licence under certain circumstances which are mentioned in sub-clause (3) of clause 4. It prescribes the following conditions :

"(a) the payment of a license fee ;

(b) the maintenance of such accounts and furnishing of such returns as are required by the Betting Tax Act, 1932;

(c) the amount of stakes which may be allotted for different kinds of horses ;

(d) the measures to be taken for the training of persons to become Jockeys ;

(e) the measures to be taken to encourage Indian bred horses and Indian Jockeys ;

(f) the inclusion or association of such persons as the Government may nominate as Stewards or members in the conduct and management of horse-racing ;

(g) the utilisation of the amount collected by the licensee in the conduct and management of horse-racing."

These are the main provisions of this Bill. I think that the House will accord its approval to them. This is a measure which is solely conceived in the interest of not only horse breeding but of training Indian Jockeys and it must be done under controlled conditions. Therefore, I think that this measure may not be a controversial one and the House will accord its approval.

Mr. SPEAKER.—Motion moved :

"That the Mysore Race-Courses Licensing Bill, 1951, be taken into consideration."

Sri L. SIDDAPPA (Shimoga District-General).—Have the Government obtained the necessary permission from His Highness the Maharaja for introducing this Bill ?

The Hon'ble Sri T. MARIAPPA.—Yes, all the preliminaries have been gone through.

Mr. SPEAKER.—The question is :

"That the Mysore Race-Courses Licensing Bill, 1951, be taken into consideration."

The motion was adopted.

Motion to refer.

Sri T. MADIAH GOWDA (Bangalore District—General).—I move:

"That the Mysore Race-Courses Licensing Bill, 1951, be referred to a Select Committee consisting of—

Janab J. Mohamed Imam,
Sri H. Siddananjappa,
Sri W. H. Hanumanthappa, and
The Mover,

with instructions to report during the course of the session and the Hon'ble Minister in charge of the Bill will be the Chairman of the Committee."

Mr. SPEAKER.—Amendment moved:—

"That the Mysore Race-Courses Licensing Bill, 1951, be referred to a Select Committee consisting of—

Janab J. Mohamed Imam,
Sri H. Siddananjappa.
Sri W. H. Hanumanthappa, and
The Mover,

with instructions to report during the course of the Session."

The Hon'ble Member has included the name of the Hon'ble Sri T. Mariappa in the amendment motion. That need not be included because under the Rules of Procedure the Hon'ble Law Minister and the Member in charge of the Bill automatically become Members of the Select Committee.

Sri A. BHEEMAPPA NAIK (Chitaldrug District—General).—Provided it does not involve any extra expenditure it may be referred to the Select Committee. It is a simple measure and it could have been passed now alone. Since it is proposed to refer it to Select Committee it need not involve any extra cost.

The Hon'ble Sri T. MARIAPPA.—I think that can be done. We may meet on the 23rd or 24th instant and finish the work.

Mr. SPEAKER.—The question is:

"That the Bill be referred to a Select Committee consisting of—

Janab J. Mohamed Imam,
Sri H. Siddananjappa,
Sri W. H. Hanumanthappa, and
Sri T. Madiah Gowda.

with instructions to report during the Course of the Session."

As I said the Hon'ble Sri T. Mariappa and the Hon'ble Law Minister will be members. And under Rule 57 (1) I nominate the Hon'ble Law Minister as the Chairman of the Committee.

The motion was adopted.

The Mysore Village Panchayets and District Boards Bill, 1951.

Mr. SPEAKER.—Shall we take up the further consideration of clause 55 of the Village Panchayets and District Boards Bill, 1951?

Sri M. MADIAH (Mysore District-Depressed Class).—I submit that this clause may be taken into consideration at Bangalore on the 24th. It is a very controversial clause and it requires some more time for us to consider it.

Sri H. M. CHANNABASAPPA (Mysore District—General).—We can commence the discussion on the clause and if we cannot finish it to-day, we shall resume discussion on it at Bangalore.

The Hon'ble Sri H. C. DASAPPA (Minister for Finance and Industries)—This is how I feel. If the House is inclined to sit and finish with the job, then it is well-worth spending some time on it now. On the other hand, I see that there are some Hon'ble Members who feel inclined to participate in the discussion and not simply pass the amendment. So, I wonder whether there would be any purpose served in taking up the Bill now. It all depends on the Hon'ble Members who are inclined to speak on the particular amendment that we have now sent. If it is acceptable to all of them, then of course, there is no purpose served in postponing.

Sri H. M. CHANNABASAPPA.—Is it binding that the discussion should close before One of the Clock when once it is taken up? It cannot be so binding. It is a very important Bill.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಇದು ಬಹಳ controversial ಆಗಿರುವುದರಿಂದ 24ನೆಯ ತಾರೀಖು ಇದನ್ನು ತೆಗೆದುಕೊಳ್ಳುವುದು ಒಳ್ಳೆಯದು.

Mushir-ul-Mulk J. MOHAMED IMAM (Chitaldrug *cum* Tumkur—Muslim).—I submit that I read the proceedings

(*Mushir-ul-Mulk* J. MOHAMED IMAM).

regarding this Bill in London (laughter). We got the *Deccan Herald* and *The Hindu* and I read that the discussion on the clause of the Bill was abruptly stopped. Because it is a controversial Bill concerning people who are in the Panchayet and outside the Panchayet . . . .

The Hon'ble Sri R. CHENNIGARAMIAH (Minister for Local Self-Government).—It is not so controversial as is thought out to be. However, you cannot discuss all that now.

The Hon'ble Sri H. C. DASAPPA.—Even if a few members are inclined to participate in the discussion, then I think we have got to take it up on some other day, probably on the 24th.

Mr. SPEAKER.—The House stands adjourned till the 24th of October when it will meet at Bangalore. Necessary notification in regard to this matter will issue in due course.

The House adjourned at Fifty Minutes past Twelve of the Clock to meet again on the 24th October 1951 at Bangalore.

WD 1046—GPB—500—30-11-1951

LEGISLATIVE ASSEMBLY.

FOURTH DAY

Wednesday, 24th October 1951.

The Legislative Assembly met in the Assembly Hall, Old Public Offices, Bangalore, on Wednesday, 24th October 1951, at Twelve of the Clock.

Mr. Speaker (The Hon'ble Sri V. Venkatappa) in the Chair.

QUESTIONS AND ANSWERS.

MR. SPEAKER (The Hon'ble Sri V. Venkatappa).—Questions.

Decentralisation of powers in the various Departments of the State.

Q.—6. SRI H. C. LINGA REDDY (Kolar District—General).—

Will the Government be pleased to state :—

(*a*) whether they have embarked on a policy of decentralisation of powers in the various departments of the State ;

(*b*) if so, the steps so far taken in this direction ?

A.—The Hon'ble SRI K. CHENGALARAYA REDDY (Chief Minister).—

(*a*) Yes.

(*b*) As a measure of administrative convenience to expedite despatch of business, Government have sanctioned the delegation of certain enhanced powers to the Deputy Commissioners and Heads of Departments as detailed in Government Order No. C.S. 18629-18728—C.B. 29-50-3, dated 28th March 1951.

SRI H. C. LINGA REDDY.—What are those powers that are delegated to Heads of Departments and subordinate officers ?

*The Hon'ble SRI K. CHENGALARAYA REDDY.—It is a long list. I am afraid I cannot answer in detail the supplementary question orally now. I would only invite the attention of the Hon'ble Member to the Government Order dated 28th March 1951 which contains this list.

SRI H. C. LINGA REDDY.—Have the Government issued a communique in the matter ?

The Hon'ble SRI K. CHENGALARAYA REDDY.—Yes, it has been published.

SRI H. C. LINGA REDDY.—Is it not a fact that there is still a certain amount of overlapping of powers even after the issue of this Government Order and that they are repeated in respect of the Amildars, Heads of Departments and Ministers ?

The Hon'ble SRI K. CHENGALARAYA REDDY.—Not that I am aware of.

SRI M. GOVINDA REDDY (Chitaldrug District--General).—Has the order been given effect to ?

The Hon'ble SRI K. CHENGALARAYA REDDY.—Yes.

SRI M. GOVINDA REDDY.—Since when ?

The Hon'ble SRI K. CHENGALARAYA REDDY.—I have said already that the order is dated 28th March 1951. So it is in operation since the last few months.

SRI M. GOVINDA REDDY.—Have the Government been in a position to say how it is progressing, whether satisfactorily or not ?

* Asterisks indicate that speeches and other remarks made by Hon'ble Members have not been returned approved.

The Hon'ble Sri K. CHENGALARAYA REDDY.—Fairly satisfactorily. It takes some time to adjust to a new set of circumstances. Any way I think it is making satisfactory progress.

Hotels in the statutory rationed areas and their quota of foodgrains.

Q.—95. Sri G. NARAYANA GOWDA (Kolar District—General).—

Will the Government be pleased to state :—

(*a*) the number of hotels in the statutory rationed areas in the State ;

(*b*) the quota of foodgrains that is being given to these hotels in each of the statutory rationed areas ?

A.—The Hon'ble Sri K. CHENGALARAYA REDDY (Chief Minister).—

(*a*) Nine hundred and seventy-five (including Restaurants).

(*b*)

	Name of area		*Cereal monthly quota: Rice and Wheat* Pallas	Seers
1	Bangalore	...	348	6
2	Mysore	...	180	82
3	K.G.F.	...	13	40
4	Davangere	...	48	47

ಶ್ರೀ ಜಿ. ನಾರಾಯಣಗೌಡರು.—ಸ್ಟ್ಯಾಟ್ಯುಟರಿ ರೇಷನಿಂಗ್ ಜಾರಿಯಲ್ಲಿರುವ ಪ್ರದೇಶಗಳಲ್ಲಿರುವ ಹೋಟಲುಗಳಿಗೆ ಆಹಾರ ಧಾನ್ಯವನ್ನು ಯಾವ ಆಧಾರದ ಮೇಲೆ ಹಂಚಿಕೆ ಮಾಡುತ್ತಿದ್ದೀರಿ?

*ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಆಯಾ ಹೋಟಲುಗಳಲ್ಲಿ ಎಷ್ಟೆಷ್ಟು ಜನರು ಊಟ ಮಾಡುತ್ತಾರೆಂಬುದನ್ನು ನೋಡುತ್ತಾರೆ, ಅವರು ಇಡುವ ಲೆಕ್ಕಗಳನ್ನು ಪರಿಶೀಲಿಸುತ್ತಾರೆ, ಅಲ್ಲದೆ ಹಠಾತ್ತಾಗಿ ತನಿಖೆ ಮಾಡುತ್ತಾರೆ ; ಇದರ ಆಧಾರದ ಮೇಲೆ ರೇಷನ್ ಕೊಡುತ್ತಾರೆ.

ಶ್ರೀ ಜಿ. ನಾರಾಯಣಗೌಡರು.—ಹೋಟಲುಗಳಲ್ಲಿ ಊಟವನ್ನು ರುಚಿಯಾಗಿಯೂ ಶುಚಿಯಾಗಿಯೂ ಮಾಡುತ್ತಾರೆಯೆ ಇಲ್ಲವೆ ಎಂಬ ಬಗ್ಗೆ ಮೇಲ್ವಿಚಾರಣೆ ಯಾರು ಮಾಡುತ್ತಾರೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅದು ಬೇರೆ ವಿಷಯವಾಯಿತು, ಈ ಪ್ರಶ್ನೆಗೆ ಸಂಬಂಧಿಸಿದ್ದಲ್ಲ.

ಶ್ರೀ ಜಿ. ನಾರಾಯಣಗೌಡರು.—ಕೋಲಾರ ಚಿನ್ನದ ಗಣಿ ಪ್ರದೇಶಕ್ಕೆ ಕೊಟ್ಟಿರುವ ಆಹಾರ ಧಾನ್ಯ ಬಹಳ ಕಡಿಮೆಯಲ್ಲವೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅಲ್ಲಿ ಎಷ್ಟು ಹೋಟಲುಗಳಿವೆಯೋ ಅದರ ಆಧಾರದ ಮೇಲೆ ಕೊಟ್ಟಿದ್ದಾರೆ.

ಶ್ರೀ ಜಿ. ನಾರಾಯಣಗೌಡರು.—ಅಲ್ಲಿಯ ಒಟ್ಟು ಪ್ರಜಾ ಸಂಖ್ಯೆ ಎಷ್ಟು ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಸುಮಾರು ಒಂದೂವರೆಲಕ್ಷ.

ಶ್ರೀ ಜಿ. ನಾರಾಯಣಗೌಡರು.—ಇದಕ್ಕನುಸಾರವಾಗಿ ತಾನೆ ಹೋಟಲುಗಳಿಗೆ ಆಹಾರ ಧಾನ್ಯ ಕೊಡುವುದು ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅಲ್ಲ.

ಶ್ರೀ ಜಿ. ನಾರಾಯಣಗೌಡರು.—ಆ ಅಧಾರದ ಮೇಲೆ ಹಂಚಿಕೆ ಮಾಡಬೇಕಾದ್ದು ಸರಿಯಾದ ಮಾರ್ಗವಲ್ಲವೇ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅದು ತಮ್ಮ ಅಭಿಪ್ರಾಯವಿರಬಹುದು.

ಶ್ರೀ ಜಿ. ನಾರಾಯಣಗೌಡರು.—ಮದ್ರಾಸು ಮುಂತಾದ ಕೆಲವು ಕಡೆ ಸ್ಟ್ಯಾಂಡರ್ಡ್ ಮೀಲ್ ಏರ್ಪಾಡು ಮಾಡಿರುವಂತೆ ನಮ್ಮ ಪಟ್ಟಣಗಳಲ್ಲಿಯೂ ಮಾಡಲು ಕಡ್ಡಾಯ ಮಾಡುತ್ತೀರಾ ?

The Hon'ble Sri K. CHENGALARAYA REDDY.—I do not know how that arises out of this question.

ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ಸ್ಟ್ಯಾಟ್ಯುಟರಿ ರೇಷನಿಂಗ್ ಜಾರಿಯಲ್ಲಿರುವ ಪ್ರದೇಶದಲ್ಲಿ ನಾಲ್ಕು ಪಟ್ಟಣಗಳನ್ನು ಕೊಡಲಾಗಿದೆ. ಈ ನಾಲ್ಕು ಪಟ್ಟಣಗಳಲ್ಲಿ ಸುಮಾರು ಒಂದು ಸಾವಿರ ಹೋಟಲುಗಳಿವೆ. ಇಷ್ಟು ಹೋಟಲುಗಳು ಅಗತ್ಯವೆ ಅಲ್ಲವೆ ಎಂಬ

ವಿಚಾರವನ್ನು ಸರ್ಕಾರದವರು ವಿಮರ್ಶೆ ಮಾಡೋಣವಾಗಿದೆಯೇ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅಗತ್ಯವೆಂದು ತಿಳಿದು, ಅವಕಾಶ ಕೊಟ್ಟಿದೆ. ಇನ್ನೂ ಅನೇಕ ಹೋಟಲುಗಳಿಗೆ ಲೈಸೆನ್ಸ್ ಬೇಕೆಂದು ಸರ್ಕಾರಕ್ಕೆ ಅರ್ಜಿಗಳು ಬರುತ್ತಲಿವೆ.

ಶ್ರೀ ಟಿ. ಮಾದಯ್ಯಗೌಡರು.—ಮೈಸೂರು ಬೆಂಗಳೂರು ಪಟ್ಟಣಗಳಿಗೆ ಇಷ್ಟು ಹೋಟಲುಗಳು ಅಗತ್ಯವೆ ಅಥವ ಇನ್ನೂ ಕಡಿಮೆ ಮಾಡಿದರೆ ಸಾಕೆ ಎಂಬ ವಿಚಾರವನ್ನು ಸರ್ಕಾರದವರು ವಿಮರ್ಶೆಮಾಡಿದ್ದಾರೆಯೇ ?

Mr. SPEAKER.—I think that would be an entirely different question to answer for which a separate notice will have to be given.

ಶ್ರೀ ಟಿ. ಮಾದಯ್ಯಗೌಡರು.— ಹೋಟಲುಗಳನ್ನು ಕಡಿಮೆ ಮಾಡಿದರೆ ಅವುಗಳಿಗೆ ಕೊಡುತ್ತಿರುವ ಆಹಾರಧಾನ್ಯ ಕಡಿಮೆಯಾಗಿ ಉಳಿತಾಯವಾಗುತ್ತದೆ.

Mr. SPEAKER.—That supplementary does not arise. ಈಗಿರುವ ಹೋಟಲುಗಳಿಗೆ ಎಷ್ಟೆಷ್ಟು ಧಾನ್ಯ ಕೊಡುತ್ತಿರುವುದೆಂಬುದು ಮಾತ್ರ ಈ ಪ್ರಶ್ನೆಯಲ್ಲಿರುವುದು.

ಶ್ರೀ ಟಿ. ಮಾದಯ್ಯಗೌಡರು.—ತಾವು ಹೋಟಲುಗಳಿಗೆ ರೇಷನ್ ಕೊಡುತ್ತಿರುವುದು ಪರಸ್ಥಳಗಳಿಂದ ಈ ಪಟ್ಟಣಗಳಿಗೆ ಬರತಕ್ಕವರ ಸೌಕರ್ಯಕ್ಕಾಗಿ ತಾನೆ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಹೌದು.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).—ಅಧ್ಯಕ್ಷರೇ, ಪಾಕಿಸ್ಥಾನದ ಪ್ರಧಾನ ಮಂತ್ರಿಗಳಾಗಿದ್ದ ಜನಾಬ್ ಲಿಯಾಕತ್‌ಆಲಿ ಖಾನ್‌ರವರ ಮರಣದಿಂದ ಇಡೀ ಭಾರತದೇಶವೇ ದುಃಖದಲ್ಲಿ ಮುಳುಗಿದೆಯೆಂದರೆ ಅದು ಅತಿಶಯೋಕ್ತಿಯಲ್ಲ. ಮಾನ್ಯ ಸಭಾನಾಯಕರು ಹೇಳಿದಹಾಗೆ ಕೆಲವು ಕಾರಣಾಂತರಗಳಿಂದ ಇತ್ತೀಚೆಗೆ ಭಾರತವು ಇಂಡಿಯಾ ಮತ್ತು ಪಾಕಿಸ್ಥಾನವೆಂದು ಎರಡು ಭಾಗವಾಗಿದ್ದರೂ ಸಹ ಸಾಮಾನ್ಯವಾಗಿ ಇಲ್ಲಿ ಯಾರೂ ಸಹ ಪಾಕಿಸ್ಥಾನದವರೇ ಬೇರೆ ದೇಶದವರು, ನಮಗೂ ಅವರಿಗೂ ಸಂಬಂಧವಿಲ್ಲವೆಂಬ ಭಾವನೆಯನ್ನು ಹೊಂದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಅಣ್ಣತಮ್ಮಂದಿರು ಭಾಗವಾಗಿದ್ದು, ಅವರಲ್ಲಿ ಯಾರೊಬ್ಬರ ಸಂಸಾರದಲ್ಲಿ ಯಾರಾದರೂ ಮೃತಪಟ್ಟರೆ, ನಮಗೂ ಅವರಿಗೂ ಸಂಬಂಧವಿಲ್ಲವೆಂದು ಯಾರೂ ಹೇಳುವುದಿಲ್ಲ. ಅದೇ ರೀತಿಯಲ್ಲಿ ಪಾಕಿಸ್ಥಾನವು ಇಂಡಿಯಾ ದೇಶದಿಂದ ಪ್ರತ್ಯೇಕವಾದ ಮಾತ್ರದಿಂದಲೇ, ಅಲ್ಲಿನ ಪ್ರಧಾನ ಮಂತ್ರಿಗಳ ಮರಣದಿಂದ ನಾವು ದುಃಖ ಸೂಚಿಸುತ್ತಿರುವುದು ಕೇವಲ ಲೋಕೋಪಚಾರಕ್ಕಾಗಿ ಅಲ್ಲವೆಂಬುದನ್ನು ನಾನು ತಿಳಿಸಬೇಕಾಗಿದೆ. ಆ ದುಃಖ ನಮ್ಮ ಹೃದಯಾಂತರಾಳದಲ್ಲಿ ಉಂಟಾದ್ದೆಂದು ಹೇಳುವುದರಲ್ಲಿ ಅತಿಶಯೋಕ್ತಿಯಿಲ್ಲ.

ಜನಾಬ್ ಲಿಯಾಕತ್‌ಆಲಿಖಾನರು ಬಹಳ ಮೇಧಾವಿಗಳು. ಭಾರತ ಸ್ವತಂತ್ರವಾದ ಮೇಲೆ ರಚಿತವಾದ ತಾತ್ಕಾಲಿಕ ಸರ್ಕಾರದಲ್ಲಿ ಹಣಕಾಸಿನ ಮಂತ್ರಿಗಳಾಗಿ ಅವರು ಈ ದೇಶಕ್ಕೆ ಅಪಾರ ಸೇವೆ ಸಲ್ಲಿಸಿದ್ದಾರೆ. ಆ ಮೇಲೆ, ಪಾಕಿಸ್ಥಾನ ಇಂಡಿಯಾದಿಂದ ಬೇರ್ಪಟ್ಟಮೇಲೆ ಅವರು ಅಲ್ಲಿನ ಪ್ರಧಾನಿಗಳಾಗಿ ಆ ದೇಶವನ್ನು ಜಗತ್ತಿನ ಇತರೇ ರಾಷ್ಟ್ರಗಳಿಗೆ ಸರಿಸಮನಾಗಿ ನಿಲ್ಲುವಂತೆ ಮಾಡುವುದಕ್ಕೆ ಮಹತ್‌ಪ್ರಯತ್ನಗಳನ್ನು ಮಾಡುತ್ತಿದ್ದರೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ನಮ್ಮ ಭಾರತದ ಪ್ರಧಾನಿ ಜವಾಹಿರಲಾಲ್‌ನೆಹ್ರೂರವರೇ ಹೇಳಿರುವ ಹಾಗೆ ಪಾಕಿಸ್ಥಾನದಲ್ಲಿ ಕೆಲವು ವಿಷಯಗಳಲ್ಲಿ ಜನರು ಆತುರ ಬೀಳುತ್ತಿದ್ದ ಅನೇಕ ಸಂದರ್ಭಗಳಲ್ಲಿ ಅವರನ್ನು ತಡೆಗಟ್ಟಿ ಸಮಾಧಾನವನ್ನುಂಟು ಮಾಡುವುದರಲ್ಲಿ ಬಹಳ ಪ್ರಾಮುಖ್ಯವಾದ ಪಾತ್ರವನ್ನು ಜನಾಬ್ ಲಿಯಾಖತ್‌ಆಲೀಖಾನರು ವಹಿಸುತ್ತಿದ್ದರೆಂಬದು ನಿಜ. ಅಣ್ಣತಮ್ಮಂದಿರು ಭಾಗವಾದ ಮೇಲೆ ಕೆಲವು ವೇಳೆ ಸಣ್ಣಪುಟ್ಟ ಕಿರುಕುಳಗಳನ್ನು ಒಬ್ಬರಿಗೊಬ್ಬರು ತಂದೊಡ್ಡುವುದು ಸ್ವಾಭಾವಿಕ. ಅದೇ ಪ್ರಕಾರ ಪಾಕಿಸ್ಥಾನದ ಕೆಲವರು ಇಂಡಿಯಾ ದೇಶದವರಿಗೆ ಕಿರುಕುಳಗಳನ್ನು ಕೊಡುತ್ತಿದ್ದರೆಂಬುದೇನೂ ಆಶ್ಚರ್ಯವಲ್ಲ. ಆದರೆ, ಅಂಥ ಪ್ರಯತ್ನಗಳನ್ನು ಜನಾಬ್ ಲಿಯಾಖತ್‌ಆಲಿಖಾನರು ತಡೆಗಟ್ಟುವಂಥ ಒಂದು ಅದ್ಭುತ ಶಕ್ತಿಯಾಗಿದ್ದರೆಂದು ಮಾನ್ಯ ಜವಹಿರಲಾಲ್‌ರವರೇ

ಹೇಳಿದ್ದಾರೆ. ಲಿಯಾಕತ್‌ಆಲಿಖಾನರವರು ಪಾಕಿಸ್ಥಾನದಲ್ಲಿ ಮಾತ್ರ ಹೆಸರಾದವರಲ್ಲ, ಇಡೀ ಪ್ರಪಂಚದಲ್ಲಿ ಅತ್ಯಂತ ನಿಪುಣ ರಾಜಕಾರಣಿಗಳಲ್ಲಿ ಒಬ್ಬರೆಂದು ಹೆಸರು ಪಡೆದಿದ್ದರೆಂಬುದು ಈಚಿಗೆ ಪತ್ರಿಕೆಗಳಲ್ಲಿ ಬರುತ್ತಿರುವ ಲೇಖನಗಳಿಂದ ಗೊತ್ತಾಗುತ್ತದೆ. ಇಂಥವರು ದುರ್ಮರಣಕ್ಕೆ ಈಡಾದುದು ದೇಶದ ದುರಾದೃಷ್ಟವೇ ಸರಿ. ಹೀಗೆ ರಾಜಕೀಯದಲ್ಲಿ ತಮ್ಮ ಭಾವನೆಗಳಿಗೆ ಒಪ್ಪದೇ ಇರುವ ಎದುರಾಳಿಗಳನ್ನು ಕೊಲೆಮಾಡುತ್ತಿರುವುದು ಪ್ರಪಂಚದಲ್ಲಿ ಈಗ ಎಲ್ಲೆಲ್ಲೂ ಎದ್ದು ಕಾಣುತ್ತಿದೆ ಎಂಬುದನ್ನು ಈಗಾಗಲೇ ಸಭಾನಾಯಕರು ಹೇಳಿದ್ದಾರೆ. ನಾನದನ್ನು ಪುನಃ ಹೇಳಬೇಕಾಗಿಲ್ಲ. ಅಂತೂ ಕೆಲವು ಜನರಲ್ಲಿ ಇಂತಹ ಕೆಟ್ಟಭಾವನೆ ಮೂಡುತ್ತಿರುವುದು ಪ್ರಪಂಚಕ್ಕೆ ಒಳ್ಳೆಯದಲ್ಲ. ಇಂತಹ ದುರ್ಮಾರ್ಗ ಮತ್ತು ದುರ್ಭಾವನೆಗಳನ್ನು ಖಂಡಿಸುವುದು ಎಲ್ಲರ ಧರ್ಮವಾಗಿದೆ. ಹಾಗೂ ಸ್ವಧರ್ಮಿಗಳೇ ಈ ರೀತಿ ಕೊಲೆಪಾತಕಿಯುರಾಗಿರುವುದೂ ಹತ್ಯಾಕಾರ್ಯಗಳಲ್ಲಿ ತೊಡಗಿರುವುದೂ ಬಹಳ ಶೋಚನೀಯವಾದ ವಿಷಯ. ಕೆಲವು ದಿನಗಳ ಹಿಂದೆ ಹಿಂದೂವಾದವನೇ ಲೋಕಮಾನ್ಯರಾದ ಮಹಾತ್ಮ ಗಾಂಧಿಯವರನ್ನು ಕೊಲೆಮಾಡಿದ; ಈಗ ಲೋಕವಿಖ್ಯಾತರಾದ ಲಿಯಾಕತ್‌ಆಲಿಖಾನರವರನ್ನು ಒಬ್ಬ ಮುಸ್ಲಿಮನೇ ಕೊಲೆ ಮಾಡಿದ್ದಾನೆ. ಹೀಗೆ ಕೊಲೆ ಮಾಡುವುದರ ಮೂಲಕ ತಮ್ಮ ಭಾವನೆಗಳನ್ನು ಲೋಕದಲ್ಲಿ ಹರಡಬಹುದು, ತಮ್ಮ ಉದ್ದೇಶಸಾಧನೆಯಾಗುತ್ತದೆ ಎಂದು ತಿಳಿದುಕೊಳ್ಳುವುದು ಮೂರ್ಖತನ. ಜನಾಬ್ ಲಿಯಾಕತ್‌ಆಲಿಖಾನರವರು ಸತ್ತುಹೋಗಿದ್ದಾರೆ. ಆದರೆ ಮಹಾತ್ಮರಾದವರು ಬದುಕಿದ್ದರೂ ಅಥವ ಸತ್ತರೂ ದೇಶಕ್ಕೆ ಒಳ್ಳೆಯದೆಂದು ಹಿರಿಯರು ಹೇಳುತ್ತಾರೆ. ಈದಿನ ದೇಶದಲ್ಲಿ ಹೊರಬೀಳುತ್ತಿರುವ ಅಭಿಪ್ರಾಯಗಳನ್ನು ನೋಡಿದರೆ, ಅವರ ಮರಣವೂ ಕೂಡ ಒಂದು ಒಳ್ಳೆಯದಕ್ಕೇ ಆಗಿದೆಯೋ ಎಂಬಂತೆ ಭಾಸವಾಗುತ್ತದೆ. ಮುಂದಾದರೂ ಇಂಡಿಯಾ ಮತ್ತು ಪಾಕಿಸ್ಥಾನಗಳಿಗಿರುವ ಭಿನ್ನಾಭಿಪ್ರಾಯಗಳು ದೂರವಾಗಿ ಅವೆರಡು ದೇಶಗಳೂ ಪರಸ್ಪರ ಸ್ನೇಹ ಸೌಹಾರ್ದಗಳಿಂದ ಇರಬಹುದೆಂದು ತೋರುತ್ತದೆ. ಇಷ್ಟುಹೇಳಿ ಈ ಸಂತಾಪ ಸೂಚಕ ನಿರ್ಣಯವನ್ನು ನಾನು ಅನುಮೋದಿಸುತ್ತೇನೆ.

MR. SPEAKER.—I wish to associate myself with the feelings of sorrow expressed by the Hon'ble Leader of the House and the other Members who have spoken on the resolution.

The Hon'ble Liaqat Ali Khan took a leading part in the politics of this country and was a Member of the United Provinces Legislative Council of which he was also Deputy President and later of the Central Legislative Assembly for a number of years. When the Muslim League decided to participate in the Interim Government set up after the War, he joined as the Leader of that block and as Finance Minister was the very first Indian to present a budget to the Central Assembly. When Pakistan was established in August 1947, he became its First Prime Minister. As the Leader, after the death of Mr. Jinnah, his influence on the policies of the new Dominion and in bringing about a better understanding between India and Pakistan has been great.

His death is a great tragedy. One cannot also but condemn in too strong terms the drastic crime which resulted in his untimely death. It is well to remember that such political assassinations never serve any good purpose and that violence under no circumstances can be a substitute for argument or persuasion.

I request all the Hon'ble Members to pass the resolution standing in silence for two minutes. The question is:—

"This Assembly expresses its sense of deep sorrow at the tragic assassination of the Hon'ble Liaqat Ali Khan, Prime Minister of Pakistan and conveys to the Members of his family and to the people of Pakistan its sincere condolences."

The Resolution was adopted, all the Hon'ble Members standing in silence for two minutes.

Mr. SPEAKER.—I shall convey the feelings of this House to the Members of his family through the appropriate channels.

NON-OFFICIAL BUSINESS—RESOLUTIONS.

Mr. SPEAKER (The Hon'ble Sri V. VENKATAPPA).—Non-official Resolutions will now be taken up.

Resolution No. 1 *re:* Abolition of Compulsory procurement of food-grains under Harvest Order.

ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—ಸ್ವಾಮಿ, ನಾನು ಮಂಡಿಸುವ ನಿರ್ಣಯ ಈ ರೀತಿ ಇದೆ:—

"ಸಂಸ್ಥಾನದಲ್ಲಿ ರೈತರಿಂದ ಆಹಾರ ಪದಾರ್ಥಗಳನ್ನು ನಿರ್ಬಂಧವಾಗಿ ವಸೂಲು ಮಾಡುತ್ತಿರುವ ಹತೋಟಿ ಪದ್ಧತಿಯನ್ನು ಈ ಕೂಡಲೆ ರದ್ದುಗೊಳಿಸಬೇಕೆಂದು ಈ ಸಭೆಯವರು ಅಭಿಪ್ರಾಯ ಪಡುತ್ತಾರೆ."

ಸ್ವಾಮಿ, ನಮ್ಮ ಸಂಸ್ಥಾನದಲ್ಲಿ ಈ ಕಂಟ್ರೋಲ್ ಪದ್ಧತಿ ಜಾರಿಗೆ ಬಂದು ಸುಮಾರು ಒಂಬತ್ತು, ಹತ್ತು ವರ್ಷವಾಯಿತು. ಸಂಸ್ಥಾನದಲ್ಲಿ ರೈತರಿಂದ ಧಾನ್ಯವನ್ನು ವಸೂಲು ಮಾಡುತ್ತಿದ್ದಾರೆ. ಹೀಗೆ ಮಾಡುವುದರಲ್ಲಿ ಸರ್ಕಾರದವರು ಅನುಸರಿಸುತ್ತಿರುವ ರೀತಿನೀತಿಗಳಿಂದ ಬಹಳ ತೊಂದರೆಗಳೂ, ಅನಾಹುತಗಳೂ, ಅಪಾಯಗಳೂ ಹೇಗೆ ಆಗುತ್ತಿವೆ ಎಂಬುದನ್ನು ಒಂದೆರಡು ಮಾತುಗಳಿಂದ ತಿಳಿಸುತ್ತೇನೆ.

ರೈತರು ಬೆಳೆಯುವ ದವಸದಲ್ಲಿ ಒಂದು ಪ್ರಮಾಣದಲ್ಲಿ ಅವರಿಗೆ ಬಿಟ್ಟು ಮಿಕ್ಕದ್ದನ್ನು ಸರ್ಕಾರಕ್ಕೆ ವಶಪಡಿಸಿಕೊಳ್ಳಬೇಕೆಂದು ಸರ್ಕಾರದವರು ಆಜ್ಞೆ ಮಾಡುತ್ತಾರೆ. ರೈತ ಇಷ್ಟೇ ಬೆಳೆಯುತ್ತಾನೆ, ಇಷ್ಟೇ ಅವನು ಸರ್ಕಾರಕ್ಕೆ ಕೊಡಬೇಕು ಎಂದು ನಿರ್ದಿಷ್ಟವಾಗಿ ಹೇಳುವುದಕ್ಕೆ ಸರ್ಕಾರದಲ್ಲಿ ಯಾವ ಸರಿಯಾದ ಅಂಕಿ ಅಂಶಗಳೂ ಇರುವುದಿಲ್ಲ. ಯಾವ ಯಂತ್ರವೂ ಇಲ್ಲ. ಎಲ್ಲವೂ ಕೈ ತೂಕ ಬಾಯಿ ಬಣ್ಣ. ಅಂತೂ ರೈತನು ಹತ್ತು ಪಲ್ಲ ಕೊಡಬೇಕು, ಇಪ್ಪತ್ತು ಪಲ್ಲ ಕೊಡಬೇಕು ಎಂದು ನಿಗದಿ ಮಾಡುತ್ತಾರೆ. ಇದು ಸರಿಯೇ, ಅಲ್ಲವೇ, ಎಂದು ಅಳೆದು ನಿರ್ಧರಿಸುವ ಯಂತ್ರ ಯಾವುದೂ ಇಲ್ಲ. ಇಷ್ಟಿಷ್ಟು ಸರ್ಕಾರಕ್ಕೆ ಕೊಡಬೇಕೆಂದು ಗ್ರಾಮಾಧಿಕಾರಿಗಳು ಕೊಡುವ ಎಚ್. ಎಸ್. ಫಾರಂನ ಆಧಾರದ ಮೇಲೆ ನಿರ್ಧರ ಮಾಡುತ್ತಾರೆ. ಅವರು ಈ ಎಚ್. ಎಸ್. ಲೆಕ್ಕವನ್ನು ವರ್ಷದಲ್ಲಿ ಮೂರು ಸಾರಿ ಬರೆಯುತ್ತಾರೆ. ಬೆಳೆ ಇಡುವಾಗ, ಕಟಾವಿಗೆ ಮುನ್ನ, ನವೆಂಬರ್ ಆಖೈರಿಗೆ ಈ ಲೆಕ್ಕವನ್ನು ಬರೆದು ಪೂರೈಸುತ್ತಾರೆ. ಅಲ್ಲಿಂದ ಮುಂದೆ ಎರಡು ಮೂರು ಮಳೆ ಬಿದ್ದರೆ ಮಾತ್ರ ಪೂರ್ತಿ ಬೆಳೆ ಬರುವುದು. ಅನೇಕ ಸಂದರ್ಭಗಳಲ್ಲಿ ಹಾಗೆ ಮಳೆ ಬಾರದೇ ಇರುವುದೂ ಉಂಟು. ಹೀಗಾದಾಗ 10–14 ಆಣೆ ಬೆಳೆ ಬರುತ್ತದೆಂದು ಸರ್ಕಾರದವರು ಹೇಳುತ್ತಾರೆ. ಆದರೆ ಎಂಟಾಣೆ ಬೆಳೆ ಕೂಡ ಬಂದಿರುವುದಿಲ್ಲ. ಹೀಗಿರುವಾಗ ರೈತನು ಎಷ್ಟು ಸರ್ಕಾರಕ್ಕೆ ಕೊಡಬೇಕೆಂದು ನಿರ್ಧರವಾಗಿರುತ್ತದೆಯೋ ಅಷ್ಟನ್ನೂ ಕೊಟ್ಟೇ ಕೊಡಬೇಕು. ಅನೇಕ ಸಂದರ್ಭಗಳಲ್ಲಿ ಸರ್ಕಾರದವರು ನಿಗದಿ ಮಾಡಿರುವಷ್ಟು ಬೆಳೆ ಕೂಡ ಅವನ ಕೈಗೆ ಬಂದಿರುವುದಿಲ್ಲ. ಹೀಗಿದ್ದರೂ ಅನೇಕ ಸಂದರ್ಭಗಳಲ್ಲಿ ರೈತನಿಗೆ ಕಿರುಕುಳ ಕೊಟ್ಟು ಸರ್ಕಾರದವರು ಅವನಿಂದ ದವಸ ವಸೂಲು ಮಾಡುತ್ತಾರೆ. ಗೊತ್ತುಮಾಡಿರುವಷ್ಟು ಕೊಡಲು ಸಾಲದೇ ಬಂದರೆ ಅವನ ಮೇಲೆ ಕೋರ್ಟಿನಲ್ಲಿ ಕೇಸ್ ಹಾಕಿ ಅವನಿಗೆ ಜುಲ್ಮಾನೆ ಹಾಕಿಸುತ್ತಾರೆ ಮತ್ತು ಶಿಕ್ಷೆ ಮಾಡಿಸುತ್ತಾರೆ. ಈಗ್ಗೆ ಮೊನ್ನೇ ತಾನೇ ಒಬ್ಬ ರೈತನಿಗೆ ಒಂದು ತಿಂಗಳ ಕಠಿಣ ಶಿಕ್ಷೆಯಾಗಿದೆ. ಅವನು 2 ಪಲ್ಲ 25 ಸೇರು ದವಸವನ್ನು ಸರ್ಕಾರಕ್ಕೆ ಪಾವತಿ ಮಾಡಲಿಲ್ಲವೆಂದು ಸರ್ಕಾರದವರು ಅವನ ಮೇಲೆ ಮೊಕದ್ದಮೆ ಹೂಡಿ ಒಂದು ತಿಂಗಳು ಕಠಿಣ ಸಜಾ ಆಗಿ, ಆ ಶಿಕ್ಷೆಯನ್ನು ಆತನು ಅನುಭವಿಸುತ್ತಿದ್ದಾನೆ. ಇಂತಹ ಅನೇಕ ಸಂದರ್ಭಗಳು ದೇಶಾದ್ಯಂತ ನಡೆಯುತ್ತಿರುವುದರಿಂದಲೂ

ಮತ್ತು ಸರ್ಕಾರದವರು ಅನುಸರಿಸುತ್ತಿರುವ ನೀತಿಯಿಂದಲೂ ನಮ್ಮ ದೇಶದಲ್ಲಿ ರೈತರು ಹೆಚ್ಚು ಬೆಳೆ ಬೆಳೆಯುವುದಕ್ಕೆ ಬದಲು ನಿರುತ್ಸಾಹಿಗಳಾಗಿ ಕಡಿಮೆ ಬೆಳೆಯಲು ಪ್ರಾರಂಭಿಸಿದ್ದಾರೆ. Grow more ಬದಲು grow less ಆಗಿದೆ. ಆದುದರಿಂದ ಕೂಡಲೇ ಈ ಪದ್ಧತಿಯನ್ನು ರದ್ದು ಮಾಡಿ ರೈತರು ಉತ್ಸಾಹಶಾಲಿಗಳಾಗಿ ಹೆಚ್ಚು ಬೆಳೆದು ದೇಶಕ್ಕೆ ಕೊಡುವಂತೆ ಅವಕಾಶ ಮಾಡಿಕೊಡಬೇಕೆಂದು ಹೇಳಿ, ಮಾನ್ಯ ಸದಸ್ಯರು ಈ ಅಂಶಕ್ಕೆ ಗಮನಕೊಟ್ಟು ಈ ನಿರ್ಣಯವನ್ನು ಅಂಗೀಕಾರ ಮಾಡಬೇಕೆಂದು ಒತ್ತಾಯದಿಂದ ಕೋರುತ್ತೇನೆ.

Mr. SPEAKER.—Resolution moved :—

"This Assembly is of the opinion that the system of control under which food articles are being compulsorily acquired from the raiyats in the State be immediately abolished."

Sri K. SAMPANGI RAMAIAH (Kolar District—General).—

The amendment I wish to move is to the following effect :—

"Add the words 'and a system of equitable levy be introduced' after the word 'abolished'."

ಸ್ವಾಮಿ, ಈ ತಿದ್ದುಪಡಿ ವಿಚಾರದಲ್ಲಿ ನಾನು ಕೆಲವು ವಿಷಯಗಳನ್ನು ಸರ್ಕಾರದವರ ಗಮನಕ್ಕೆ ತರಬೇಕಾಗಿದೆ. ಈಗ ದೇಶಾದ್ಯಂತವೂ ಆಹಾರದ ಅಭಾವವು ಹೆಚ್ಚಾಗಿರುವುದರಿಂದ, ಎಲ್ಲೆಲ್ಲಿ ಆಹಾರ ಧಾನ್ಯಗಳ ಬೆಳೆ ಸಂವೃದ್ಧಿಯಾಗಿ ಆಗುತ್ತಿವೆಯೋ ಅಂಥಾ ಕಡೆಗಳಿಂದ ಆಹಾರ ಧಾನ್ಯಗಳನ್ನು ಸಂಗ್ರಹಣ ಮಾಡಿ ತಂದು ಅದನ್ನು ಎಲ್ಲಿ ಆಹಾರ ಧಾನ್ಯಗಳು ಬೆಳೆಯುವುದಿಲ್ಲವೋ ಅಂಥಾ ಪ್ರದೇಶಗಳಲ್ಲಿರತಕ್ಕ ಜನರಿಗೆ ಹಂಚಿಕೆ ಮಾಡತಕ್ಕದ್ದು ಸರ್ಕಾರದವರ ಕರ್ತವ್ಯಗಳಲ್ಲೊಂದಾಗಿರುತ್ತೆ. ಹೀಗೆ ಕೆಲವರಿಂದ ಆಹಾರ ಧಾನ್ಯಗಳನ್ನು ಸಂಗ್ರಹಣ ಮಾಡಿ, ಅದನ್ನು ಮತ್ತೆ ಕೆಲವರಿಗೆ ಹಂಚಿಕೆ ಮಾಡುತ್ತಿರುವ ಕಾರ್ಯಕ್ರಮದಲ್ಲಿ ಈಗ ಅನೇಕ ತೊಂದರೆಗಳಿವೆ. ಈ ಬಗ್ಗೆ ಇಲ್ಲಿಯ ತನಕ ಯಾರು ಯಾರು ಏನೇನು ಹೇಳಿದ್ದರೂ, ತೊಂದರೆಗಳಂತೂ ಇದ್ದೇ ಇವೆ. ಧಾನ್ಯ ವಸೂಲಿಯ ಬಗ್ಗೆ ಅನುಸರಿಸಲಾಗುತ್ತಿರುವ ಆಡಳಿತ ಕ್ರಮದಲ್ಲಿ ಲಂಚ ರುಷವತ್ತುಗಳಿಗೆ ಅವಕಾಶ ವಿಶೇಷವಾಗಿದೆಯೆಂಬುದು ಎಲ್ಲರಿಗೂ ತಿಳಿದುಬಂದಿರುವ ವಿಷಯವಾಗಿದೆ. ಹೀಗೆಲ್ಲಾ ಇರುವಾಗ ಇದನ್ನು ನಾವು ಏಕ್‌ದಂ ತೆಗೆದರೂ ತೊಂದರೆಯಿದೆ; ಅಥವಾ ಇಟ್ಟುಕೊಂಡಿರಬೇಕೆಂದರೂ ಅನೇಕ ಕಷ್ಟನಷ್ಟಗಳು ಇದ್ದೇ ಇವೆ. ಇಂಥಾ ಕಷ್ಟನಷ್ಟಗಳಿಂದ ಜನರನ್ನು ಪಾರುಮಾಡಿ, ಅವರು ಯಾವುದೊಂದು ಅನೀತಿಯುತವಾದ ಮಾರ್ಗಕ್ಕೂ ಹೋಗದಂತೆ ದೂರವಾಗಿಡಲು ಈಗ ಒಂದು ಉಪಾಯವನ್ನು ಹುಡುಕಬೇಕಾಗಿದೆ. ಅಂಥಾ ಉಪಾಯವನ್ನು ಹುಡುಕಬೇಕೆಂಬುದೇ ಈ ನನ್ನ ತಿದ್ದುಪಡಿಯ ಮುಖ್ಯೋದ್ದೇಶ. ಎಂದಿದ್ದರೂ ಧಾನ್ಯ ಸಂಗ್ರಹಣ ಕಾರ್ಯವನ್ನು ಮಾಡಲೇಬೇಕಾಗಿದೆ. ಆದರೆ ಹಾಗೆ ಸಂಗ್ರಹಣ ಮಾಡತಕ್ಕ ಬಗ್ಗೆ ಈಗ ಅನುಸರಿಸುತ್ತಿರುವ ಮಾರ್ಗಗಳನ್ನು ಬದಲಾಯಿಸಿ ಬೇರೊಂದು ಮಾರ್ಗದಲ್ಲಿ ಆ ಕೆಲಸವು ಸುಲಭವಾಗಿ ನಡೆಯುವಂತೆ ಮಾಡಬೇಕೆಂಬ ಉದ್ದೇಶದಿಂದ ನಾನೀಗ ಈ ತಿದ್ದುಪಡಿಯನ್ನು ಸಭೆಯ ಮುಂದಿಟ್ಟಿದ್ದೇನೆ. ಈಗಿರತಕ್ಕ ವಸೂಲಿ ಮಾರ್ಗಗಳನ್ನು ಬಿಟ್ಟು ಬಿಟ್ಟು ಬೇರೆ ಯಾವ ರೀತಿ ಅದನ್ನು ಮುಂದುವರಿಸಬೇಕೆಂಬ ಬಗ್ಗೆ 'ಫಿಕ್ಸೆಡ್ ಲೆವಿ' ಸಿಸ್ಟಂ ಎಂಬ ಒಂದು ಹೊಸ ಪದ್ಧತಿಯನ್ನು ಜಾರಿಗೆ ತಂದರೆ ಈಗ ಜನರಿಗೆ ಉಂಟಾಗುತ್ತಿರುವ ತೊಂದರೆಗಳನ್ನು ಬಹುಮಟ್ಟಿಗೆ ತಪ್ಪಿಸಲು ಸಾಧ್ಯವಿದೆ. ಆದರೆ ಈ ವಿಚಾರ ಸರ್ಕಾರದವರಿಗೆ ಹೊಸದಾಗಿ ಏನೂ ಈಗ ಹೇಳಬೇಕಾಗಿಲ್ಲ. 8–9 ವರ್ಷಗಳ ಲಾಗಾಯ್ತು ಸರ್ಕಾರಕ್ಕೆ ಯಾವ ಯಾವ ರೈತನಿಂದ ಎಷ್ಟೆಷ್ಟು ಧಾನ್ಯ ಸಂಗ್ರಹಣವಾಗಿದೆ, ಯಾರು ಯಾರಿಗೆ ನೀವು ಇಷ್ಟಿಷ್ಟೇ ಕೊಡಬೇಕೆಂದರೆ, ಅಷ್ಟನ್ನೂ ಕೊಡತಕ್ಕ ಚೈತನ್ಯ ಎಷ್ಟು ಜನಗಳಿಗಿರುತ್ತೆ ಎಂಬುದನ್ನು ಮೊದಲು ನಿಗದಿ ಮಾಡಿ, ಆ ಪಟ್ಟಿಯ ಪ್ರಕಾರ ಅಂಥಂಥವರು ಅಷ್ಟು ಧಾನ್ಯವನ್ನು ಕೊಟ್ಟರೆ ಸಾಕೆಂಬುದಾಗಿ ತಾವು ಒಂದು ವಿಧಾಯಕ ಮಾಡಿದ್ದೇ ಆದರೆ ಎಷ್ಟೋ ತೊಂದರೆಗಳನ್ನು ತಾವು ಕಮ್ಮಿ

(ಶ್ರೀ ಕೆ. ಸಂಪಂಗಿರಾಮಯ್ಯನವರು.)
ಮಾಡಿದಂತಾಗುತ್ತದೆ. ತಾವು ಹೀಗೆ ಒಂದು ನಿಗದಿಯನ್ನು ಮಾಡಿದ್ದೇ ಆದರೆ, ಜನರು ಹುಮ್ಮಸ್ಸಿನಿಂದ ಹೆಚ್ಚಾಗಿ ಆಹಾರ ಧಾನ್ಯಗಳನ್ನು ಬೆಳೆದು, ಸರ್ಕಾರಕ್ಕೆ ಕೊಡತಕ್ಕದ್ದನ್ನು ಕೊಟ್ಟು, ಹಾಗೆ ಕೊಟ್ಟನಂತರ ಉಳಿಯುವ ಆಹಾರ ಧಾನ್ಯಗಳನ್ನು ಬೇರೆ ಕಡೆ ಅವರು ಯಾವ ಬೆಲೆಗಾದರೂ ಮಾರಾಟ ಮಾಡಿಕೊಳ್ಳಬಹುದೆಂಬ ಭರವಸೆಯಿಂದ ಅವರು ಹೆಚ್ಚು ಹೆಚ್ಚಾಗಿ ಬೆಳೆಯಲು ಒಂದು ಅನುಕೂಲವಾಗುತ್ತದೆ. ಇದರ ಜೊತೆಗೆ ಕಾಳಸಂತೆ ವ್ಯಾಪಾರವನ್ನೂ ಸಹ ಕಮ್ಮಿ ಮಾಡಿದಂತಾಗುತ್ತದೆ. ಜನಗಳಿಗೆ ಲಾಭ ಹೆಚ್ಚುಹೆಚ್ಚಾಗಿ ಬರುತ್ತದೆಂದು ಕಂಡುಬಂದಾಗ ತಾವು ಏನೇ ಮಾಡಿದರೂ, ಅವರು ಆ ಮಾರ್ಗವನ್ನು ಕೈಬಿಡುವುದಕ್ಕೆ ಖಂಡಿತ ಅವರಿಗೆ ಸಾಧ್ಯವಿಲ್ಲ. ಇಂಥಾ ಅನೀತಿಯುತವಾದ ಅಧಿಕ ಲಾಭ ಸಂಪಾದನೆಯನ್ನು ತಡೆಗಟ್ಟಲು ತಾವೇನಾದರೂ ಕಾನೂನಿನ ಬಲಪ್ರಯೋಗ ಮಾಡಿದರೆ, ಆಗ ಅವರು ಮತ್ತೊಂದು ರೀತಿಯಲ್ಲಿ ತಾವು ಚಾಪೆ ಕೆಳಗೆ ನುಗ್ಗುವುದಕ್ಕೆ ಪ್ರಾರಂಭಿಸಿದರೆ, ಅವರು ರಂಗೋಲೆ ಕೆಳಗೆ ನುಗ್ಗಲು ತಮ್ಮ ಬುದ್ಧಿ ಚಮತ್ಕಾರಗಳನ್ನು ಉಪಯೋಗಿಸುತ್ತ ಅನೀತಿಯುತವಾದ ಲಂಚಕೋರತನ, ಕಾಳಸಂತೆ ವ್ಯಾಪಾರ ಇತ್ಯಾದಿಗಳಿಗೆಲ್ಲಾ ಅವಕಾಶ ಕಲ್ಪಿಸಿಕೊಳ್ಳುತ್ತಾರೆ. ಲಂಚದ ಪ್ರಭಾವವೆಂತಹುದೆಂಬುದರ ಬಗ್ಗೆ ಈ ಹಿಂದೆ ನಾನಾಗಲೇ ಎಷ್ಟೋ ವಿಷಯಗಳನ್ನು ತಿಳಿಸಿರುವ ಕಾರಣ ಈಗ ಅದರ ಬಗ್ಗೆ ನಾನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಪ್ರವೇಶಿಸುವುದಿಲ್ಲ.

ಕೆಲವು ಪ್ರದೇಶಗಳಲ್ಲಿ ಈ ಸಂಗ್ರಹಣ ಕಾರ್ಯ ಹೇಗೆ ನಡೆಯುತ್ತಿದೆಯೆಂದರೆ—ಕೆಲ ಕೆಲವು ಗ್ರಾಮಗಳಲ್ಲಿರತಕ್ಕ ದೊಡ್ಡ ದೊಡ್ಡ ರೈತರು ಆ ಸರಹದ್ದಿನಲ್ಲಿ ಧಾನ್ಯಸಂಗ್ರಹಣೆಗಾಗಿ ಹೋಗುವಂಥ ರೆವೆನ್ಯೂ ಇನ್‌ಸ್ಪೆಕ್ಟರ್ ಇತ್ಯಾದಿ ನೌಕರರನ್ನು ಸರಿಮಾಡಿಕೊಂಡು, ನಮ್ಮ ಗ್ರಾಮದಿಂದ ಸರ್ಕಾರಕ್ಕೆ ಒಟ್ಟಾಗಿ ಇಷ್ಟು ಆಹಾರ ಧಾನ್ಯವನ್ನು ಶೇಖರಣೆ ಮಾಡಿ ಒಪ್ಪಿಸಿಬಿಡುತ್ತೇವೆಂದು ಒಂದು ಒಪ್ಪಂದ ಮಾಡಿಕೊಂಡುಬಿಡುತ್ತಾರೆ. ಹಾಗೆ ಒಪ್ಪಂದ ಮಾಡಿಕೊಂಡನಂತರ ಅವರು ತಮ್ಮ ಪರವಾಗಿ ಒಂದು ಕಾಳನ್ನೂ ಹಾಕದೆ, ಕೇವಲ ಬಡವರಾಗಿರುವವರು, ಏನೂ ತಿಳಿಯದೆ ಇರತಕ್ಕಂಥ ಜನಗಳಿಂದಲೇ ಧನ, ಧಾನ್ಯಗಳೆರಡನ್ನೂ ವಸೂಲಿಮಾಡಿ ಧಾನ್ಯ ಒಂದನ್ನು ಮಾತ್ರ ಸರ್ಕಾರಕ್ಕೆ ಒಪ್ಪಿಸಿ, ಧನವನ್ನು ಬೇರೆ ರೀತಿ ವಿನಿಯೋಗ ಮಾಡುತ್ತಾರೆ. ಹೀಗೆ ಮಾಡತಕ್ಕದ್ದು "ಕಂಡವರ ಮಕ್ಕಳನ್ನು ಬಾವಿಗೆ ತಳ್ಳಿ, ಆಳ ನೋಡಿದಂತೆ" ಇರುತ್ತೆ. ಇಂಥಾ ಅನ್ಯಾಯಗಳನ್ನೆಲ್ಲಾ ಸರ್ಕಾರ ತಡೆಗಟ್ಟಲೇಬೇಕು.

ಅಧ್ಯಕ್ಷರು.—ತಾವು ಹೇಳುತ್ತಿರುವ ರೀತಿ ಮಾಡಿದರೆ ಆ ತೊಂದರೆಗಳೆಲ್ಲಾ ತಪ್ಪುವುವೆಂದು ಹೇಗೆ ಹೇಳುತ್ತೀರಿ?

ಶ್ರೀ ಕೆ. ಸಂಪಂಗಿರಾಮಯ್ಯನವರು.—ಅದು ಹೇಗೆ ಸಾಧ್ಯವಿದೆಯೆಂದರೆ ಈಗ ಅನುಸರಿಸುತ್ತಿರುವ ಪದ್ಧತಿಯನ್ನು ತೆಗೆದು ಹಾಕಿ, ಈ 'ಫಿಕ್ಸೆಡ್ ಲೆವಿ' ಪದ್ಧತಿಯನ್ನು ಜಾರಿಗೆ ತಂದು, ಈಗಾಗಲೇ ಜಾರಿಯಲ್ಲಿದ್ದ ವಸೂಲಿ ಅನುಭವದ ಮೇಲೆ ಪ್ರತಿಯೊಂದು ಗ್ರಾಮದಲ್ಲಿರುವ ಪ್ರತಿಯೊಬ್ಬ ರೈತನೂ ಸರ್ಕಾರಕ್ಕೆ ಎಷ್ಟೆಷ್ಟು ದವಸ ಕೊಡುತ್ತಿದ್ದಾನೆ, ಆತನಿಗೆ ಎಷ್ಟನ್ನು ಕೊಡಲು ಶಕ್ತಿಯಿದೆ ಎಂಬ ಬಗ್ಗೆ ಒಂದು ನಿದಾಕ್ಷಿಣ್ಯವಾದ ಲೆಕ್ಕವನ್ನು ಕೊಟ್ಟು ಬಿಡುವಂತೆ ಮಾಡಿದರೆ, ಮತ್ತು ಹಾಗೆ ರೈತನಾದವನು ಸರ್ಕಾರಕ್ಕೆ ಕೊಡಬೇಕೆಂದು ವಿಧಾಯಕ ಮಾಡಿದ ಪ್ರಮಾಣದಲ್ಲಿ ಅವನು ಧಾನ್ಯ ಕೊಟ್ಟ ಬಳಿಕ, ಆತನಲ್ಲಿ ಉಳಿಯುವುದನ್ನು ಆತ ಎಲ್ಲಿಯಾದರೂ ನಿರಾತಂಕವಾಗಿ ಮಾರಾಟ ಮಾಡಿಕೊಳ್ಳಬಹುದು, ಅದಕ್ಕೇನೂ ಅಭ್ಯಂತರವಿಲ್ಲವೆಂದು ತಾವು ನಿಗದಿ ಮಾಡಿದರೆ, ಅನೇಕ ತೊಂದರೆಗಳು ಕಮ್ಮಿಯಾಗುತ್ತವೆ. ಒಬ್ಬ ರೈತ ಸರ್ಕಾರಕ್ಕೆ ಹತ್ತು ಖಂಡುಗ ದವಸ ಕೊಡಬೇಕೆಂದು ವಿಧಾಯಕವಾಗಿದ್ದರೆ, ಆತ ಅಷ್ಟನ್ನು ಸರ್ಕಾರಕ್ಕೆ ಒಪ್ಪಿಸಿದ ನಂತರ ಉಳಿದಿದ್ದನ್ನು ರಾಜಾರೋಷಾಗಿ ಮಾರಾಟ ಮಾಡಲು ಆತನಿಗೆ ಅವಕಾಶವಿರುವುದರಿಂದ ಆತ ಕಾಳಸಂತೆ ವ್ಯಾಪಾರಕ್ಕೆ ಹೋಗಲು ಅವಕಾಶವೇ ಇರುವುದಿಲ್ಲ.

ಅಧ್ಯಕ್ಷರು.—'ರಾಜಾರೋಷಾಗಿ' ಎಂದರೆ, ಅವರು ಯಾವ ಬೆಲೆಗಾದರೂ ಮಾರಾಟ ಮಾಡ ಬಹುದೆಂದೋ ?.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಮೊನ್ನೆ ದಾವಣಗೆರೆಯಲ್ಲಿ ನಡೆದ ಸಮ್ಮೇಳನ ದಲ್ಲಿ ಈ ಆಹಾರ ಧಾನ್ಯಗಳ ಸಂಗ್ರಹಣೆಯ ವಿಚಾರದಲ್ಲಿ, Seven point programme ಎಂಬುದರಲ್ಲಿ ಇದೇ ರೀತಿಯ ಅರ್ಥ ಬರುವಂತೆ ಒಂದು ಅಂಶ ಸಹ ಅಡಕವಾಗಿತ್ತು. ಅದರ ಪ್ರಕಾರ ನೋಡಿದಾಗ್ಯೂ ನಿರ್ದಿಷ್ಟವಾಗಿ ಮತ್ತು ನಿರ್ದಾಕ್ಷಿಣ್ಯವಾಗಿ ಒಬ್ಬ ರೈತನು ಇಷ್ಟು ಕಾಳನ್ನು ಕೊಡಲಿಕ್ಕೆ ಶಕ್ತಿ ಇದೆಯೆಂದು ತಿಳಿದ ಬಳಿಕ, ಆತನಿಂದ ಅಷ್ಟು ಪ್ರಮಾಣ ಕೊಡ ಬೇಕೆಂದು ವಿಧಾಯಕ ಮಾಡಿದನಂತರ, ಹಾಗೆ ಆತನು ಸರ್ಕಾರಕ್ಕೆ ಕೊಡತಕ್ಕದ್ದನ್ನು ಕೊಟ್ಟ ಬಳಿಕ, ಉಳಿದದ್ದನ್ನು ಆತನು ಎಲ್ಲಿ ಬೇಕಾದರೂ ವಿಲೇವಾರಿ ಮಾಡಿಕೊಳ್ಳಬಹುದೆಂದು ತಿಳಿಸ ಲಾಗಿತ್ತು. ಅಂದ ಮೇಲೆ ಆ ಪದ್ಧತಿ ಮತ್ತು ನಾನೀಗ ತಿಳಿಸತಕ್ಕ 'ಫಿಕ್ಸೆಡ್ ಲೆವಿ ಸಿಸ್ಟಂ' ಎರಡೂ ಒಂದೇ ಆಗಿರುತ್ತದೆ. ಈಗ ಉದಾ ಹರಣೆಗೆ ಹೇಳುವುದಾದರೆ ಸಕ್ಕರೆ ಕಂಪನಿಗೆ ಇಷ್ಟನ್ನು ಕೊಟ್ಟು ಉಳಿದಿದ್ದನ್ನು ಬೇಕಾದಂತೆ ವಿಲೇವಾರಿ ಮಾಡಿಕೊಳ್ಳಬಹುದೆಂದು ಒಂದು ರಿಯಾಯಿತಿಯನ್ನು ಹೇಗೆ ಕೊಟ್ಟಿದ್ದಾರೋ, ಅದೇ ಮಾದರಿಯಲ್ಲಿ ಈ ಧಾನ್ಯ ಸಂಗ್ರಹಣೆಯ ವಿಚಾರದಲ್ಲೂ ಒಂದು ನೀತಿಯನ್ನು ಅನುಸರಿ ಸಲು ಅವಕಾಶವಿದೆ. ಸಕ್ಕರೆ ಕಂಪೆನಿಯ ವಿಚಾ ರದಲ್ಲಿ ಹಾಗೆ ಒಂದು ಬದಲಾವಣೆ ಮಾಡಿದ್ದರಿಂದ ಹಿಂದೆ ಕೆಲವು ಸಂದರ್ಭಗಳಲ್ಲಿ ಸಾಕಷ್ಟು ಸಕ್ಕರೆ ಒದಗದೆ ಅದು ಕಾಳಸಂತೆಯಲ್ಲಿ ಮಣ ಒಂದಕ್ಕೆ 22-23 ರೂಪಾಯಿಗಳಂತೆ ಮಾರಾಟವಾಗು ತ್ತಿದ್ದುದು, ಈಗ ಏಕ್‌ದಂ 16-17 ರೂಪಾ ಯಿಗೆ ಇಳಿದುಹೋಗಿದೆ. ಅದೇ ರೀತಿ ಧಾನ್ಯ ಕ್ಕೂ ಸಹ ಒಂದು ಎಕರೆ ಸಾಗುವಳಿ ಮಾಡಿದ್ದರೆ ಇಷ್ಟೇ ದವಸವನ್ನು ಕೊಡಬೇಕೆಂದು ವಿಧಾಯಕ ಮಾಡಿದರೆ ಈಗ ಜಾರಿಯಲ್ಲಿರತಕ್ಕ ಹತೋಟಿ ಆಜ್ಞೆ ಮತ್ತು ಸಂಗ್ರಹಣ ಕಾರ್ಯದಲ್ಲಿರತಕ್ಕಂಥ ಅನೇಕ ಲೋಪದೋಷಗಳು ತಪ್ಪಿಹೋಗುವು ದಲ್ಲದೆ, ಜನರಿಗಾಗುತ್ತಿರುವ ತೊಂದರೆ ತಪ್ಪು ತ್ತದೆ. ಅದಕ್ಕಾಗಿ ಇಂಥಾ ಒಂದು ಮಧ್ಯಮ ರೀತಿಯ ನೀತಿಯನ್ನು ಜಾರಿಗೆ ತರಬೇಕಾದ್ದು ಅವಶ್ಯಕವಾಗಿದೆ. ಈಗ ಹಾಲೀ, ಅನೇಕ ಜನ ದೊಡ್ಡ ದೊಡ್ಡ ರೈತರುಗಳು, ಒಂದು ಕಾಳೂ ಬತ್ತವನ್ನೂ ಸರ್ಕಾರಕ್ಕೆ ಕೊಡದೇ ಎಲ್ಲ ವನ್ನೂ ಕಾಳಸಂತೆಯಲ್ಲೇ ತಮ್ಮ ಪ್ರಭಾವ ದಿಂದ ಮಾರಾಟ ಮಾಡಿಕೊಳ್ಳುತ್ತಿದ್ದಾರೆ. ಇದನ್ನು ಯಾರಿಂದಲೂ ತಪ್ಪಿಸುವುದಕ್ಕೆ ಸಾಧ್ಯ ವಾಗಿಲ್ಲ. ಇಲ್ಲಿಯತನಕ ಕೆಲಕೆಲವು ಪ್ರದೇಶ ಗಳಲ್ಲಿ ಜನರಿಗೆ ಎಲ್ಲಿ ತಮ್ಮ ನಿತ್ಯ ಜೀವನಕ್ಕೆ ದವಸ ಧಾನ್ಯಗಳು ಸಾಕಾಗುತ್ತಿಲ್ಲವೋ ಮತ್ತು ಸರ್ಕಾರದವರು ಒದಗಿಸಲು ಸಾಧ್ಯವಾಗಿಲ್ಲವೋ ಅಂಥಾ ಪ್ರದೇಶಗಳಲ್ಲಿರತಕ್ಕ ಜನರು ತಲೆ ಹೊರೆಯ ಮೇಲೆ 5–10–20–30 ಸೇರಿನಷ್ಟು ದವಸ ಧಾನ್ಯಗಳನ್ನು ಹೊತ್ತುಕೊಂಡು ಹೋಗು ತ್ತಿದ್ದಂಥಾ ಅನೇಕ ಜನ ಹೆಂಗಸರು ಮಕ್ಕಳನ್ನು ಹಿಡಿದು ಕೋರ್ಟಿಗೆ ಅವರನ್ನು ಗುರಿ ಮಾಡಿ ಅನೇಕ ಕಷ್ಟನಷ್ಟಗಳಿಗೆ ಈಡುಮಾಡಿರತಕ್ಕ ಕಠೋರ ಪ್ರಸಂಗಗಳೂ ಸಹ ಎಷ್ಟೋ ನಡೆದಿವೆ. ಅವುಗಳನ್ನು ನಾವೆಲ್ಲರೂ ನೋಡಿದ್ದೇವೆ. ಇಂಥಾ ಕಠಿಣ ಪ್ರಸಂಗಗಳಲ್ಲಿ ಜನರಿಗೆ ಬಹಿರಂಗವಾಗಿ ತಮಗೆ ಅಗತ್ಯವಿದ್ದಷ್ಟು ದವಸಗಳನ್ನು ಕೊಂಡು ಕೊಳ್ಳುವುದಕ್ಕೆ ಒಂದು ಅವಕಾಶವಿಲ್ಲದೇ ಇರುವ ಕಾರಣದಿಂದ ಜನರು ಹಸಿವನ್ನು ತಾಳಲಾರದೆ ಕಾನೂನಿಗೆ ವಿರೋಧವಾಗಿ ವರ್ತಿಸಲು ಕಾರಣ ವಾಗಿರುತ್ತೆ. ತಾವು ಒಬ್ಬ ಮನುಷ್ಯನಿಗೆ ಒಂದು ದಿವಸಕ್ಕೆ $2\frac{1}{2}$ ಔನ್ಸು ಪ್ರಕಾರ ಕೊಡುತ್ತಿರುವ ಆಹಾರ ಸಾಮಗ್ರಿಗಳನ್ನು ಅಂದರೆ ಗೋಧಿ ಇತ್ಯಾದಿ ಎಲ್ಲವೂ ಸೇರಿ 5 ಔನ್ಸು ಆಹಾರ ವನ್ನೇ ತಿಂದು ಜೀವಿಸಲು ಎಂದಿಗೂ ಯಾರಿಗೂ ಸಾಧ್ಯವಿಲ್ಲ. ಆದುದರಿಂದಲೇ ಈ ಕಾಳಸಂತೆ ವ್ಯಾಪಾರಕ್ಕೆ ಹೋಗಬೇಕಾಗುತ್ತೆ. ಇಂದು ಜನರು ಇಂಥಾ ಅನೀತಿಯ ಮಾರ್ಗದಲ್ಲಿ ತಮ್ಮ ಹೊಟ್ಟೆಯನ್ನು ಹೊರೆಯಬೇಕಾಗಿದೆ. ದೇವರ ಮುಂದೆ ನಿಂತು ಹೇಳುವಂತೆ ಹೇಳಬೇಕೆಂದರೆ ಖಂಡಿತ ಇಷ್ಟು ಅಲ್ಪ ಆಹಾರದಿಂದ ಯಾವ ಮನುಷ್ಯನೂ ಜೀವನ ಮಾಡುವುದಕ್ಕಾಗುವುದಿಲ್ಲ

(ಶ್ರೀ ಕೆ. ಸಂಪಂಗಿರಾಮಯ್ಯನವರು.)
ಈ ಎಲ್ಲ ಕಾರಣಗಳಿಂದ ತಾವು ಈಗಿರ ತಕ್ಕ ಕಂಟ್ರೋಲ್ ಆಜ್ಞೆಗಳನ್ನು ಸಡಿಲಿಸಿ, ಒಂದು ರೀತಿಯಲ್ಲಿ ರೈತನಿಗೆ ಅನುಕೂಲ ಮಾಡಿ ಕೊಟ್ಟರೆ, ಆತನಿಗೆ ಹೆಚ್ಚು ಆಹಾರ ಬೆಳೆಯುವಂಥ ಒಂದು ಬೆಂಬಲಕೊಟ್ಟಂತಾಗುವುದರ ಜೊತೆಗೆ, ಜನರು ಕಾನೂನು ಪಾಲನೆಯಲ್ಲಿ ಬಹಳ ನಿಷ್ಟರೆಂಬ ಒಂದು ಹೆಮ್ಮೆ ಪಡುವಂಥ ಅವಕಾಶ ಸಹ ಇದರಿಂದ ಉಂಟಾಗುತ್ತದೆ; ಮತ್ತು ಮನುಷ್ಯನು ಮನುಷ್ಯನಾಗಿ ಬಾಳಲು ಒಂದು ಸದವಕಾಶವನ್ನು ತಾವು ನೀಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯವನ್ನು ಹೇಳುವುದಾದರೆ ಬಲವಂತದಿಂದ ಹಳ್ಳಿಗಳಲ್ಲಿ ಮನೆಗಳಿಗೆ ನುಗ್ಗಿ ಜೀವನಾಧಾರಕ್ಕಾಗಿ ಇಟ್ಟುಕೊಂಡಿದ್ದ ಆಹಾರ ಧಾನ್ಯಗಳನ್ನು ಸರ್ಕಾರದವರು ತೆಗೆದುಕೊಳ್ಳುವುದರಿಂದ ಅನೇಕ ಜನ ಬಡ ರೈತರಿಗೆ ಉತ್ಸಾಹ ತಪ್ಪಿ ಹೆಚ್ಚು ಬೆಳೆಯುವುದನ್ನು ಬಿಟ್ಟು ತಮ್ಮ ಮನೆಗೆ ಬೇಕಾದಷ್ಟನ್ನು ಮಾತ್ರ ಬೆಳೆದುಕೊಂಡರೆ ಸಾಕು ಎಂಬ ಅಭಿಪ್ರಾಯ ಬರುತ್ತದೆ. ಈ ರೀತಿ ಮಾಡಿ ಹೆಚ್ಚು ಉತ್ಪತ್ತಿಯಾಗುವಂತೆ ಮಾಡದಿದ್ದರೆ ಜನಗಳಲ್ಲಿ ಹೆಚ್ಚು ಆಹಾರ ಬೆಳೆಯಲು ಉತ್ಸಾಹವಿರುತ್ತದೆಯೇ ಎಂಬುದನ್ನು ಯೋಚನೆ ಮಾಡಬೇಕು. ಮೊನ್ನೆ ಮೈಸೂರಿನಲ್ಲಿ ಸಭೆ ನಡೆದಾಗ ಮಾನ್ಯ ಸಭಾನಾಯಕರು ಈ ವರ್ಷ ಮಳೆ ಬೆಳೆಯ ಸ್ಥಿತಿ ಚೆನ್ನಾಗಿಲ್ಲ, fixed levy system ಜಾರಿಗೆ ತರಲು ತೊಂದರೆ ಇದೆ ಎಂದು ಸೂಚಿಸಿದ್ದರು. ಆದರೆ ಯಾವ್ಯಾವ ಜಿಲ್ಲೆಗಳಲ್ಲಿ ಮಳೆ ಆಧಾರದ ಮೇಲೆ ರಾಗಿ ಮತ್ತು ಇತರ ಖುಷ್ಕಿ ಫಸಲು ಆಗುತ್ತದೆಯೋ ಅಲ್ಲಿ ಮಳೆಯಿಲ್ಲದಿದ್ದರೆ ಫಸಲು ಹೋಗಬಹುದು. ಕೋಲಾರ, ಚಿತ್ರದುರ್ಗ, ಬೆಂಗಳೂರು ಜಿಲ್ಲೆಯ ಕೆಲವು ಪ್ರಾಂತ್ಯಗಳಲ್ಲಿ ಮಳೆ ಅಭಾವವಿದೆ. ಅಲ್ಲಿ fixed levy system ನಿಂದ ಕಷ್ಟವಾಗುತ್ತದೆ. ಸರ್ಕಾರದವರು ಅಂಥ ಜಾಗಗಳನ್ನು ನೋಡಿ ಅವಕ್ಕೆ ರಿಯಾಯಿತಿ ಕೊಡಬೇಕು. ಸಾಮಾನ್ಯವಾಗಿ ನಾಲೆ ಕೆಳಗಿರುವ ಪ್ರದೇಶಗಳಲ್ಲಿ, ಕೃಷ್ಣರಾಜಸಾಗರ ಮುಂತಾದ ನೀರಾವರಿ ಪ್ರದೇಶವಿರುವ ಕಡೆ ಬೆಳೆ ಚೆನ್ನಾಗಿ ಆಗುತ್ತದೆ. ಅಂಥ ಕಡೆ ಹೆಚ್ಚು ಹೆಚ್ಚಾಗಿ ಬೆಳೆಯುವುದರಿಂದ ಅಲ್ಲಿ ಹೆಚ್ಚಾಗಿ ವಸೂಲು ಮಾಡಿ, ಹೆಚ್ಚಾಗಿ ಅಲ್ಲಿನವರು ಸಂಸ್ಥಾನದ ಎಲ್ಲಾ ಕಡೆಯಲ್ಲೂ ಮಾರಾಟ ಮಾಡುವುದಕ್ಕೆ ಅವಕಾಶ ಕೊಟ್ಟರೆ ಹೆಚ್ಚುವರಿ ಧಾನ್ಯವು ಬೇರೆ ಪ್ರಾಂತ್ಯಗಳಿಗೆ ಬಂದು ಅಲ್ಲಿನ ಕಷ್ಟವು ನೀಗುತ್ತದೆ. ಈಗಲೂ ದವಸವನ್ನು 30 ಸೇರಿನವರೆಗೂ ಸಾಗಿಸಲು ಅವಕಾಶವಿದೆ. ಅನ್ನವೇ ಬ್ರಹ್ಮಸ್ವರೂಪವಾಗಿರುವಾಗ ಅನ್ನವಿಲ್ಲದೆ ಯಾರೂ ಇರಲಾರರು. ಒಂದೆರಡು ವರ್ಷವಾದರೆ ಸಾಕಷ್ಟು ಹೊಟ್ಟೆಗಿಲ್ಲದೆ ಇದ್ದರೂ ಇರಬಹುದು. ಆದರೆ ಹತ್ತಾರು ವರ್ಷಗಳ ಕಾಲ ಪ್ರತಿಯೊಬ್ಬ ಮನುಷ್ಯನೂ ಅರೆ ಹೊಟ್ಟೆಗಾಗುವಷ್ಟು ತಿಂದು ಎಷ್ಟು ತಾನೆ ಉಪವಾಸ ಮಾಡಲು ಸಾಧ್ಯವಾದೀತು? ಹೊಟ್ಟೆ ತುಂಬುವಷ್ಟು ಆಹಾರ ದೊರೆಯದಿದ್ದರೆ ಜನರಿಗೆ ಶಕ್ತಿ ಎಲ್ಲಿಂದ ಬರಬೇಕು? ಕಷ್ಟಪಟ್ಟು ದುಡಿಯುವುದು ಹೇಗೆ? ದೇಶದ ಸಂಪತ್ತು ಅಭಿವೃದ್ಧಿಯಾದೀತೇ? ಈಗ ದೇಶದಲ್ಲಿ ಯಾರೂ ಪೂರ್ಣವಾಗಿ ಉಪವಾಸ ಮಾಡುತ್ತಿಲ್ಲ. ಕೆಲವು ಕಡೆ ಸಮಾರಾಧನೆಗಳು ನಡೆಯುತ್ತಿವೆ. ಭೋಜನ ಕೂಟಗಳು ಜರುಗುತ್ತಿವೆ. ಕಾನೂನು ಪ್ರಕಾರ ತಡೆಯಿದ್ದರೂ, ಮದುವೆ, ಮುಂಜಿ, ಭೋಜನ ಕೂಟ ಮುಂತಾದುವುಗಳಿಗೆ ನಿಗದಿಯಾಗಿರುವುದಕ್ಕಿಂತ ಹೆಚ್ಚಾಗಿ ಖರ್ಚು ಮಾಡಕೂಡದೆಂದು ಕಾನೂನಿದ್ದರೂ ಎಷ್ಟೋ ಅದಕ್ಕೆ ವಿರುದ್ಧವಾಗಿ ನಡೆಯುತ್ತಿದೆ. ಕಾಳಸಂತೆ ಇದೆಯೆಂಬುದು ಇದರಿಂದ ವ್ಯಕ್ತವಾಗುತ್ತದೆ. ಅದಕ್ಕೆ ಕಾರಣ ವೇನು? ಮನುಷ್ಯನಿಗಿರುವ ಆಸೆಯೇ ಕಾರಣ. ಅದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಮಹಾತ್ಮ ಗಾಂಧಿಯವರ ಮಟ್ಟಕ್ಕೆ ನಾವು ಬಂದಿಲ್ಲ. ಇರುವ ಸಂಪತ್ತನ್ನು ಬಿಟ್ಟು ಹೋಗುವುದಕ್ಕೆ ಯಾರೂ ಇಷ್ಟಪಡುವುದಿಲ್ಲ. ಯಾವ ದೇಶದಲ್ಲಿ ನೋಡಿದರೂ ಜನರು ಹಣವನ್ನು ಯಾವ ರೀತಿ ಸಂಪಾದಿಸಬೇಕೆಂಬುದು, ಅದರಿಂದ ಯಾವ ರೀತಿ ಸುಖಪಡಬಹುದು ಎಂಬುದನ್ನೇ ನೋಡುತ್ತಿದ್ದಾರೆ. ಒಳ್ಳೆಯ ಮಾತು ಹೇಳಿದರೆ ಜನರು

ಕೇಳುವುದಿಲ್ಲ. ಪಕ್ಕದ್ದ ಮನೆಯವರಿಗೆ ಅನ್ನವಿಲ್ಲದಿದ್ದರೆ ಹೆಚ್ಚು ಹಣ ಕೊಟ್ಟು ತಮ್ಮಲ್ಲಿರುವ ಆಹಾರವನ್ನು ತೆಗೆದುಕೊಳ್ಳುತ್ತಾರೆ, ಅದರಿಂದ ಲಾಭ ಪಡೆಯಬಹುದು ಎಂದು ಯೋಚನೆ ಮಾಡುತ್ತಿದ್ದಾರೆ. ಹೀಗೆ ನಡೆಯುತ್ತಿರುವಾಗ ಅಭಾವವಿರುವ ಪ್ರದೇಶಗಳಿಗೆ ಮತ್ತು ಬೆಳೆ ಬೆಳೆಯದಿರುವ ಕಡೆಗೆ ಆಹಾರ ಧಾನ್ಯಗಳನ್ನು ಒದಗಿಸುವ ಸಲುವಾಗಿ ಸರ್ಕಾರದವರು ಒಂದು ನಿರ್ದಿಷ್ಟವಾದ ರೀತಿಯಲ್ಲಿ ಹೆಚ್ಚು ಬೆಳೆದವರಿಂದ ತೆಗೆದುಕೊಂಡು ಹಂಚುವುದಕ್ಕೆ ಏರ್ಪಾಡು ಮಾಡಬೇಕು. ಅದಕ್ಕೆ ಒಂದು ತಿದ್ದುಪಡಿಯನ್ನು ತಂದಿದ್ದೇನೆ. ಇದಕ್ಕೆ ಸರ್ವರೂ ಬೆಂಬಲ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—Amendment moved.—

"Add the words, 'and a system of equitable levy be introduced' after the word 'abolished'."

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).—ಸ್ವಾಮಿ, ಆಹಾರ ಪದಾರ್ಥಗಳನ್ನು ನಿರ್ಬಂಧವಾಗಿ ವಸೂಲುಮಾಡುತ್ತಿರುವ ಪದ್ಧತಿಯನ್ನು ಕೂಡಲೇ ರದ್ದುಮಾಡಬೇಕೆಂದು ಶ್ರೀ ಚನ್ನಬೈರೇಗೌಡರು ತಂದಿರುವ ನಿರ್ಣಯದಿಂದ ಜನರ ಮೆಚ್ಚಿಕೆ ದೊರೆತರೂ ದೊರೆಯಬಹುದು. ಆದರೆ ಈ ನಿರ್ಣಯವನ್ನು ಸರ್ಕಾರದವರು ಅಂಗೀಕರಿಸಿ ಇದರಲ್ಲಿ ಸೂಚಿಸಿರುವ ಅಂಶವನ್ನು ಆಚರಣೆಗೆ ತರುವುದಾದರೆ ದೇಶಾದ್ಯಂತ ಜನಸಾಮಾನ್ಯರಿಗೆ ಇದರಿಂದ ಏನಾದರೂ ಹೆಚ್ಚು ಉಪಕಾರವಾಗುತ್ತದೆಯೇ ಎಂದು ನೋಡಿದರೆ ಖಂಡಿತ ಆಗಲಾರದು. ಈ ದೃಷ್ಟಿಯಿಂದ ಈ ನಿರ್ಣಯವನ್ನು ನಾನು ವಿರೋಧಿಸಬೇಕಾಗಿದೆ. ಆದಮಾತ್ರಕ್ಕೆ ಇಂಥ ಹತೋಟಿ ಆಜ್ಞೆಗಳು ಸರ್ವಥಾ ಇರಬೇಕು, ಯಾವಾಗಲೂ ಹೀಗೆಯೇ ನಡೆದುಕೊಂಡು ಹೋಗಬೇಕು ಎಂಬುದು ನನ್ನ ಅಭಿಪ್ರಾಯವಲ್ಲ, ಅಥವಾ ಈ ಬಗೆಯ ಹತೋಟಿ ಆಜ್ಞೆಗಳಿಂದ ಜನಗಳಿಗೆ ಕಿರುಕುಳ್ಳ ಸಹ ಇಲ್ಲ ಎಂಬುದು ನನ್ನ ಅಭಿಪ್ರಾಯವಲ್ಲ. ಈ ವಿಚಾರದಲ್ಲಿ ಇದೇ ಸಭೆಯಲ್ಲಿ ಹಿಂದಿನ ಅಧಿವೇಶನಗಳಲ್ಲಿ,ಬಹುಶಃ ಪ್ರತಿಯೊಂದು ಅಧಿವೇಶನದಲ್ಲೂ ಚರ್ಚೆ ನಡೆದಿದೆ. ಈ ಹತೋಟಿ ಆಜ್ಞೆಗಳಿಂದ ಜನಗಳಿಗೆ ಎಷ್ಟು ಮಟ್ಟಿಗೆ ತೊಂದರೆಯಾಗುತ್ತಿದೆ, ಕೆಲವು ಅಧಿಕಾರಿಗಳಲ್ಲಿ ಲಂಚಕೋರತನ ಎಷ್ಟುಮಟ್ಟಿಗೆ ಹೆಚ್ಚುತ್ತಿದೆ ಎಂಬ ಅಭಿಪ್ರಾಯಗಳನ್ನೆಲ್ಲಾ ಮಾನ್ಯ ಸದಸ್ಯರು ಚೆನ್ನಾಗಿ ಈ ಸಭೆಯಲ್ಲಿ ಸೂಚಿಸಿದ್ದಾರೆ ಮತ್ತು ಅದನ್ನು ತಪ್ಪಿಸುವುದಕ್ಕೆ ಏನೇನು ಕಾರ್ಯಕ್ರಮ ಕೈಕೊಳ್ಳಬೇಕೆಂಬ ಬಗ್ಗೆ ಅನೇಕ ಸಲಹೆಗಳನ್ನು ಸರ್ಕಾರಕ್ಕೆ ತಿಳಿಸಿದ್ದಾರೆ. ಸರ್ಕಾರದವರು ತಮ್ಮ ಉತ್ತರಗಳಲ್ಲಿ ಭರವಸೆ ಕೊಡುತ್ತಾ, ಸದಸ್ಯರು ಸೂಚಿಸಿದ ಕೆಲವು ಸಲಹೆಗಳನ್ನು ಜಾರಿಗೆ ತರುವುದಕ್ಕೆ ಒಪ್ಪಿದ್ದಾರೆ ಮತ್ತು ಹತೋಟಿ ಆಜ್ಞೆಗಳನ್ನು ತಪ್ಪಿಸುವುದಕ್ಕಾಗದಿದ್ದರೂ ಕಾಲಕ್ರಮದಲ್ಲಿ ಸಡಿಲ ಮಾಡಲು ಸತತ ಪ್ರಯತ್ನ ಮಾಡುವುದಾಗಿ ಭರವಸೆ ಕೊಟ್ಟಿದ್ದಾರೆ ಮತ್ತು ಮಾಡುತ್ತಲೂ ಇದ್ದಾರೆ. ಉದಾಹರಣೆಗೆ 30 ಸೇರು ದವಸವನ್ನು ಆಯಾಯ ಜಿಲ್ಲೆಯೊಳಗೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಬಹುದೆಂದಿದ್ದುದನ್ನು ಈಗ ಸಂಸ್ಥಾನದೊಳಗೆ ಯಾವೆಡೆಗಾದರೂ ತೆಗೆದುಕೊಂಡು ಹೋಗಬಹುದೆಂದು ಮಾಡಿದ್ದಾರೆ. ಹೀಗೆ ಸಡಿಲಮಾಡಿದ್ದರಿಂದ ಜನರಿಗೆ ತುಂಬಾ ಅನುಕೂಲವಾಗಿದೆಯೆಂದು ಹೊಸದಾಗಿ ಹೇಳಬೇಕಾಗಿಲ್ಲ. ಈ ಆಜ್ಞೆ ಹೊರಬಿದ್ದ ಮೇಲೆ ದವಸಗಳ ಬೆಲೆ ಇಳಿಯುವುದಕ್ಕೆ ಪ್ರಾರಂಭವಾಯಿತು. ಪುನಃ ಈಗ ದವಸ ಧಾನ್ಯಗಳ ಬೆಲೆ ಏರುತ್ತಿರುವುದು ನಿಜ. ಅದಕ್ಕೆ ಕಾರಣ ಸಕಾಲದಲ್ಲಿ ಮಳೆ ಬಾರದೆ, ಎರಡು ತಿಂಗಳು ತಡವಾಗಿ ಬಂದುದೇ. ಈ ಸಭೆಯ ಮಾನ್ಯ ಸದಸ್ಯರಾದ ಶ್ರೀ ಡಿ. ಯಂ. ಸಿದ್ದಯ್ಯನವರು ಕೇಳಿರುವ ಒಂದು ಪ್ರಶ್ನೆಗೆ ಮಾನ್ಯ ಸಚಿವರು, "ಆಹಾರ ಧಾನ್ಯಗಳ ಮೇಲಿನ ಹತೋಟಿಯು, ಸೌಕರ್ಯ ಕಲ್ಪನೆಗೆ ಅತ್ಯಾವಶ್ಯಕವಾಗಿ ಬೇಕಾಗುವ ಸರಬರಾಯಿಗಳಿಗೆ ಸಂಬಂಧಪಟ್ಟ (ಹಂಗಾಮಿ ಅಧಿಕಾರಗಳ) 1946ನೆಯ ಇಸವಿಯ ಆಕ್ಟಿನ ಒಂದು ಅಂಗವಾಗಿರುತ್ತದೆ; ಈ ಹತೋಟಿಯು ಕೇಂದ್ರ ಸರ್ಕಾರದವರಿಗೆ ಸೇರಿದ ವಿಷಯವಾಗಿರುತ್ತದೆ. ಆಹಾರ ಧಾನ್ಯಗಳ ಮೇಲಿನ ಹತೋಟಿಯನ್ನು ತೆಗೆದುಹಾಕುವ

(ಶ್ರೀ ಎಚ್. ಕೆ. ವೀರಣ್ಣ ಗೌಡರು.)

ಸಂಬಂಧದಲ್ಲಿ ಕೇಂದ್ರ ಸರ್ಕಾರದವರು ಏನು ಮಾಡಬೇಕೆಂದು ಉದ್ದೇಶಪಟ್ಟಿರುವರೆಂಬುದಕ್ಕೆ ಯಾವ ಸೂಚನೆಯೂ ಕಂಡುಬಂದಿಲ್ಲ. ಆದ್ದರಿಂದ ಇವುಗಳ ವಿಷಯದಲ್ಲಿ ಈ ಸಂಸ್ಥಾನದವರು ಯಾವ ಕಾರ್ಯಕ್ರಮವನ್ನು ಕೈಕೊಳ್ಳುವುದಕ್ಕೆ ಸಾಧ್ಯವಿಲ್ಲ" ಎಂಬುದಾಗಿ ಉತ್ತರ ಕೊಟ್ಟಿದ್ದಾರೆ. ಈ ಬಗೆಯ ಉತ್ತರವನ್ನೇ ಹಿಂದಿನ ಅಧಿವೇಶನದಲ್ಲೂ ಸರ್ಕಾರದ ಪರವಾಗಿ ತಿಳಿಸಿದ್ದಾರೆ. ಏಕೆಂದರೆ ನಮ್ಮ ಸಂಸ್ಥಾನದವರು ನಮಗೆ ಬೇಕಾದ ಕಾನೂನು, ನಿಯಮ, ನಿಬಂಧನೆಗಳನ್ನು ಮಾಡಿಕೊಂಡು ಸ್ವತಂತ್ರವಾಗಿ ಆಡಳಿತ ನಡೆಸತಕ್ಕ ಕಾಲ ಅಲ್ಲ ಇದು. ಅನೇಕ ಕಾರ್ಯಕ್ರಮಗಳ ಸಂಬಂಧದಲ್ಲಿ ಇಂಡಿಯಾ ಸರ್ಕಾರದವರ ಅಧೀನಕ್ಕೆ ನಾವು ಒಳಪಟ್ಟಿದೇವೆ. ಅವರ ನಿಯಮ, ನಿಬಂಧನೆಗಳಿಗನುಸಾರವಾಗಿ ನಾವು ನಡೆಯಬೇಕಾಗಿದೆ. ಹತೋಟಿ ಆಜ್ಞೆಗಳು ಈಗ ಕೇಂದ್ರ ಸರ್ಕಾರದವರ ಆಡಳಿತಕ್ಕೊಳಪಟ್ಟು ಅವರ ನೀತಿಯನ್ನುನುಸರಿಸಿ ನಾವು ಕಾರ್ಯಕ್ರಮ ಕೈಕೊಳ್ಳಬೇಕಾಗಿದೆ. ಇದು ಒಂದನೆಯದು.

ಎರಡನೆಯದಾಗಿ ಶ್ರೀ ಚನ್ನಬೈರೇಗೌಡರು ಹೇಳಿದಹಾಗೆ ಈ ಪದ್ಧತಿಯನ್ನು ಈಗ ಕೂಡಲೇ ತಪ್ಪಿಸುವುದರಿಂದ ಜನಗಳಿಗೆ ಅನುಕೂಲವಾಗುತ್ತದೆಯೇ ಎಂದರೆ ಎರಡು, ಮೂರು ತಿಂಗಳ ಹಿಂದೆ ಆ ಬಗೆಯ ಆಶೋತ್ತರ ಇದ್ದರೂ ಇರಬಹುದಾಗಿತ್ತು. ಈಚೆಗೆ ಮಳೆ ಸರಿಯಾಗಿ ಆಗದೆ ಅನೇಕ ಕಡೆಗಳಲ್ಲಿ ರಾಗಿ ಬೆಳೆ ಪೂರ್ಣ ಹೋಗಿದೆ ಮತ್ತು ಬತ್ತಕ್ಕೂ ಸಹ ಮಳೆ ಕಾಲಾತೀತವಾದ್ದರಿಂದ ಇಳುವರಿ ಸ್ವಲ್ಪಮಟ್ಟಿಗಾದರೂ ಕಡಿಮೆ ಆದೀತು ಎಂದು ಅನುಭವಸ್ಥ ರೈತರ ಅಭಿಪ್ರಾಯವಾಗಿದೆ. ಈ ಅಂಶಗಳನ್ನು ಯೋಚನೆ ಮಾಡಿದರೆ ಈಗ ಹೆಚ್ಚಾಗಿ ಬೆಳೆಯತಕ್ಕವರಿಂದ ವಸೂಲು ಮಾಡಿ ಬೆಳೆಯದೇ ಇರತಕ್ಕವರು ಎಂದರೆ ವ್ಯವಸಾಯದ ಕಸಬಿನಲ್ಲಿ ತೊಡಗಿದ್ದು ಕೆಲಸಮಾಡತಕ್ಕ ಕೂಲಿಗಾರರು ಮತ್ತು ಪಟ್ಟಣಗಳಲ್ಲಿ ಹಳ್ಳಿಗಾಡಿನವರ ಉಪಯೋಗಕ್ಕೆ ಕೆಲಸಮಾಡತಕ್ಕವರಿಗೆ ಒದಗಿಸಬೇಕಾಗಿದೆ. ಬಟ್ಟೆ, ಕಬ್ಬಿಣ, ಇತ್ಯಾದಿ ಅನೇಕ ಸಾಮಾನುಗಳನ್ನು ತಯಾರುಮಾಡುವವರು ಪಟ್ಟಣಗಳಲ್ಲಿದ್ದಾರೆ. ಆ ಸಾಮಾನುಗಳು ಹಳ್ಳಿಗಾಡಿನವರ ಉಪಯೋಗಕ್ಕೆ ಬೇಕಾಗುತ್ತದೆ. ಆದ್ದರಿಂದ ಹಳ್ಳಿಗಾಡಿನವರಿಗೆ ಪಟ್ಟಣಗಳಲ್ಲಿದ್ದುಕೊಂಡು ಒಂದಲ್ಲ ಒಂದು ವಿಧದಲ್ಲಿ ಸೇವೆ ಸಲ್ಲಿಸತಕ್ಕ ಕಾರ್ಮಿಕರು—ಅಂಥವರಿಗೆ ಸಾಧ್ಯವಾದಮಟ್ಟಿಗೂ ಅವರನ್ನು ಹಸಿವಿನಿಂದ ಸಾಯದಂತೆ ಉಳಿಸಬೇಕಾದರೆ ದವಸಧಾನ್ಯಗಳನ್ನು ಕೊಡಬೇಕಾಗುತ್ತದೆ. ಹೆಚ್ಚು ಬೆಳೆಯುವವರಿಂದ ದವಸ ವಸೂಲು ಮಾಡತಕ್ಕ ಕಾರ್ಯಕ್ರಮವನ್ನು ರದ್ದುಪಡಿಸುವುದರಿಂದ ದೇಶದಲ್ಲಿ ಅನಾಹುತವಾಗುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಶ್ರೀ ಚನ್ನಬೈರೇಗೌಡರ ನಿರ್ಣಯವನ್ನು ನಾನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳಬೇಕೆಂದಿರುವುದೇನೆಂದರೆ, ದವಸ ವಸೂಲಿ ಕ್ರಮದಿಂದ ಕೆಲವರಿಗೆ ಕಿರುಕುಳವಾಗುತ್ತಿದೆ. ಲಂಚ ರುಷುವತ್ತು ಹೆಚ್ಚಾಗಿದೆ ಎಂಬುದು ನಿಜವಾದರೂ ಆ ಕಾರ್ಯ ನಿಲ್ಲಿಸಬಾರದು. ಹತೋಟಿ ಪದ್ಧತಿಯನ್ನು ವಜಾ ಮಾಡುವುದರಿಂದ ಎಲ್ಲರಿಗೂ ಸೌಖ್ಯವಾಗುತ್ತದೆ ಎಂಬ ಮಾತು ಜನಗಳ ಕಿವಿಗೆ ಪ್ರಿಯವಾಗಿ ಕಂಡರೂ ಅದರ ಪರಿಣಾಮ ಕೆಟ್ಟದ್ದಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಶ್ರೀ ಸಂಪಂಗಿರಾಮಯ್ಯನವರು ಹೇಳಿದಂತೆ ಆಯಾಯ ಗ್ರಾಮಗಳಲ್ಲಿ ಮಾತುಬಾರಿ ಮನುಷ್ಯರಿಗೆ ಈ ರೀತಿ ಹತೋಟಿ ಆಜ್ಞೆಗಳನ್ನು ರದ್ದುಗೊಳಿಸಿದರೆ ಸ್ವಲ್ಪ ಅನುಕೂಲವಾಗುತ್ತದೆ. ಏಕೆಂದರೆ ಸಾಮಾನ್ಯವಾಗಿ ಪ್ರತಿಯೊಂದು ಹಳ್ಳಿಯಲ್ಲೂ ಎಲ್ಲರೂ ಅಧಿಕ ಬೆಳೆ ಬೆಳೆಯತಕ್ಕವರೇ ಇಲ್ಲ. ದವಸ ಧಾನ್ಯಗಳನ್ನು ಕೂಲಿ ರೂಪದಲ್ಲಿ, ವಾರದ ರೂಪದಲ್ಲಿ ಅಂಗಡಿಯಲ್ಲಿ ಕೊಂಡುಕೊಂಡು ಜೀವನ ಮಾಡತಕ್ಕವರೂ ಇದ್ದಾರೆ. ಆದ್ದರಿಂದ ಹತೋಟಿ ವಜಾ ಮಾಡುವುದರಿಂದ ಹೆಚ್ಚು ಬೆಳೆಯತಕ್ಕ ಧಡೂತಿ ರೈತರಿಗೆ ಅನುಕೂಲವಾಗಬಹುದು, ಸಂತೋಷವಾಗಬಹುದು. ಆ ಕಾರಣದಿಂದಲೇ ಅನೇಕರು ಸಭೆಗಳಲ್ಲಿ, ಪ್ರತಿಕೆಗಳಲ್ಲಿ ಸರ್ಕಾರದವರು ಈ ಹತೋಟಿ ಆಜ್ಞೆಗಳನ್ನು ವಜಾ ಮಾಡಬೇಕೆಂದು ಹೇಳುತ್ತಾ

ಇದ್ದಾರೆ ; ಮತ್ತು ಅಂಥವರೇ ಮಾನ್ಯ ಸಂಪಂಗಿ ರಾಮಯ್ಯನವರು ಹೇಳಿದ ಹಾಗೆ ರೂಪಾಯಿಗೆ ಒಂದು ಸೇರು ಮಾರುತ್ತಾರೆ. ಅಂಥವರ ಮೇಲೆ ಮೊಕದ್ದಮೆಗಳು ನಡೆಯುತ್ತಾ ಇವೆ ಎಂದು ಕೇಳಿದ್ದೇನೆ. ಹೀಗೆ ಕೆಲವರು, ಹೆಚ್ಚು ಬೆಳೆಯುತಕ್ಕ ಮುಖಂಡ ರೈತರ ಪ್ರೀತಿ, ಮೆಚ್ಚುಗೆ ಸಂಪಾದಿಸುವುದಕ್ಕೆ ಈ ನಿರ್ಣಯವನ್ನು ಅಂಗೀಕಾರ ಮಾಡಿ, ಕಾರ್ಯರೂಪಕ್ಕೆ ತರುವುದಾದರೆ ಹಳ್ಳಿಗಾಡಿನ ಅನೇಕ ರೈತರಿಗೂ ಮತ್ತು ಪಟ್ಟಣಗಳಲ್ಲಿರತಕ್ಕ ಕಾರ್ಮಿಕರಿಗೂ ತೊಂದರೆಯಾಗುತ್ತದೆ. ಈ ಎಲ್ಲಾ ದೃಷ್ಟಿಯಿಂದ ಈ ನಿರ್ಣಯವನ್ನು ಈಗಿರುವ ರೂಪದಲ್ಲಿ ಒಪ್ಪುವುದಕ್ಕಾಗುವುದಿಲ್ಲ. ಮೊದಲೇ ಹೇಳಿದ ಹಾಗೆ ಹತೋಟಿ ಆಜ್ಞೆಯಿಂದ ತೊಂದರೆ ಇದೆ. ಆ ತೊಂದರೆಯನ್ನು ಸರಿಪಡಿಸುವುದಕ್ಕೆ ನಾನಾ ಮಾರ್ಗಗಳಿವೆ. ಸರ್ಕಾರದವರು ಅದನ್ನು ಆಲೋಚನೆ ಮಾಡಿ ಲಂಚಕೋರತನ ಇತ್ಯಾದಿಗಳನ್ನು ತಪ್ಪಿಸುವುದಕ್ಕೆ ಪ್ರಯತ್ನಮಾಡುವುದು ಅಗತ್ಯ. ಹಾಗಿಲ್ಲದಿದ್ದರೆ ಹಳ್ಳಿಗಾಡಿನವರ ಹಿಂಸೆ ಕಣ್ಣಾರ ಕಂಡವರಿಗೆ ವ್ಯಥೆಯಾಗುತ್ತದೆ. ಅವರು ಬಹಳ ತೊಂದರೆಪಡುತ್ತಿದ್ದಾರೆ. ಶ್ರೀ ಸಂಪಂಗಿರಾಮಯ್ಯನವರು ಒಂದು ತಿದ್ದುಪಡಿಯನ್ನು ಸೂಚಿಸಿದ್ದಾರೆ. ಅದರಲ್ಲಿ ಅವರು ಯಾರ್ಯಾರು ಹೆಚ್ಚು ಬೆಳೆಯುತ್ತಾರೆ ಎಂಬ ಹಿಂದಿನ ಆರೇಳು ವರ್ಷಗಳ ಲೆಕ್ಕದ ಸರಾಸರಿ ಮೇಲೆ ಅಂಥವರು ಇಷ್ಟಿಷ್ಟು ಕೊಡಿ ಎಂದು ನಿಗದಿಯಾಗಿ ಹೇಳಿ ಉಳಿದದ್ದನ್ನು ಸಂಸ್ಥಾನದಲ್ಲಿ ಎಲ್ಲಿ ಬೇಕಾದರೂ ಮಾರಿಕೊಳ್ಳಲು ಅವಕಾಶ ಕೊಡಿ ಎಂದು ಸೂಚಿಸಿದ್ದಾರೆ. ಆಗ ಸರ್ಕಾರದ ಕೆಳಗಿನ ಅಧಿಕಾರಿಗಳು ಲಂಚಕೋರತನಕ್ಕೆ ಆಶೆ ಪಡುವುದಕ್ಕೆ ಅವಕಾಶವಿಲ್ಲದೆ ಹೋಗಬಹುದು ಎಂದು ಅವರು ಅಭಿಪ್ರಾಯಪಡುತ್ತಾರೆ. ಅದನ್ನು ಪ್ರಯತ್ನ ಮಾಡಬಹುದು. ಏಕೆಂದರೆ ಆ ರೀತಿ ಮಾಡುತ್ತೇವೆ ಎಂದು ಸರ್ಕಾರದವರು ಈ ಹಿಂದೆಯೇ ಒಪ್ಪಿಕೊಂಡಿದ್ದಾರೆ. ಈಚೆಗೆ ದುರಾದೃಷ್ಟದಿಂದ ಏನಾಗಿದೆಯೆಂದರೆ ಮಳೆ ಅಭಾವದಿಂದ ಎಲ್ಲಾ ಕಡೆಯೂ ಬೆಳೆ ಸಲೀಸಾಗಿ ಆಗುತ್ತದೆ ಎಂಬ ಭರವಸೆ ಇಲ್ಲ. 6-7 ವರ್ಷದಿಂದ ರೈತರು ಚೆನ್ನಾಗಿ ಬತ್ತ ಬೆಳೆದಿದ್ದರೂ ಈ ವರ್ಷ ಅದೇ ರೈತರಿಗೆ ಅಷ್ಟೇ ಬೆಳೆ ಆಗುತ್ತದೆ ಎಂಬ ಭರವಸೆ ಇಲ್ಲ. ಬತ್ತದ ಬೆಳೆ, ಇಳುವರಿ ಕಡಿಮೆಯಾಗಬಹುದು ಎಂಬ ಶಂಕೆ ಇದ್ದೇ ಇದೆ. ಆ ದೃಷ್ಟಿಯಿಂದಲೂ ಕೂಡ ಎಲ್ಲಾ ಕಡೆಯೂ ನಾವು ಹಿಂದಿನ ಸರಾಸರಿ ಲೆಕ್ಕದ ಪ್ರಕಾರ ದವಸದ ಪ್ರಮಾಣವನ್ನು ನಿಗದಿಮಾಡುವುದಾದರೆ ಕೆಲವು ರೈತರಿಗೆ ತೊಂದರೆಯಾಗಬಹುದು. ಇನ್ನೊಂದು ವಿಷಯ ಏನೆಂದರೆ ನಮ್ಮ ದೇಶದಲ್ಲಿ ಇಂತಿಂಥಾದ್ದೇ ಬೆಳೆ ಮಾಡಬೇಕೆಂಬ ಕಾನೂನಿನ ಕಡ್ಡಾಯವಿಲ್ಲ. ಉದಾಹರಣೆಗೆ ನಮ್ಮ ಪ್ರಾಂತ್ಯದಲ್ಲಿ ವಿಶ್ವೇಶ್ವರಯ್ಯ ನಾಲಾ ಕೆಳಗೆ ಬತ್ತ ಕಬ್ಬು ಎರಡನ್ನೂ ಬೆಳೆಯುತ್ತೇವೆ. ಹಿಂದಿನ ವರ್ಷ ಬತ್ತ ಬೆಳೆಯುತ್ತಿದ್ದ ಕಡೆ ಈ ವರ್ಷ ಬತ್ತದ ಬೆಳೆ ಕಡಿಮೆಯಾಗಿ ಕಬ್ಬಿನ ಬೆಳೆ ಹೆಚ್ಚಾಗಿದ್ದರೆ 6-7 ವರ್ಷದ ಸರಾಸರಿಯಂತೆ ಬತ್ತ ಕೊಡಬೇಕೆಂದು ನಿರ್ಬಂಧ ಮಾಡುವುದಾದರೆ ಕೆಲವರಿಗೆ ತೊಂದರೆ ಆಗಬಹುದು. ಆದರೆ ಈ ಮಾತು ಎಲ್ಲರಿಗೂ ಅನ್ವಯಿಸುವುದಿಲ್ಲ. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಹೀಗೇ ಮಾಡಿ, ಹಾಗೇ ಮಾಡಿ ಎಂಬುದಾಗಿ ಸೂಚಿಸತಕ್ಕ ಒಂದು ನಿರ್ಣಯವನ್ನು ಸರ್ಕಾರದವರಿಂದ ಅಂಗೀಕಾರ ಮಾಡಿಸಿ ಸರ್ಕಾರದವರ ಕೈಯನ್ನು ಕಟ್ಟುವುದಕ್ಕೆ ಬದಲಾಗಿ ಇರತಕ್ಕ ತೊಂದರೆ ಏನೋ—ಅದು ಅವರಿಗೆ ಹೊಸದಲ್ಲ, ತಿಳಿಯದೇ ಇಲ್ಲ—ಅದನ್ನು ತಪ್ಪಿಸುವುದಕ್ಕೆ ಅವರ ಕೈಲಾದ ಪ್ರಯತ್ನ ಮಾಡುತ್ತಾರೆ. ಅದಕ್ಕೆ ನಮ್ಮ ಸಲಹೆಗಳನ್ನು ಅವರ ಮುಂದಿಟ್ಟು ಅವುಗಳನ್ನು ಪರಿಹರಿಸಬೇಕು ಮತ್ತು ಎಲ್ಲೆಲ್ಲಿ ಆ ರೀತಿ ಕಡ್ಡಾಯವಾಗಿ ನಿಗದಿಯಾದ ರೀತಿಯಲ್ಲಿ ವಸೂಲು ಮಾಡಬೇಕು, ಎಲ್ಲೆಲ್ಲಿ ರಿಯಾಯಿತಿ ತೋರಿಸಬೇಕು, ಬೆಳೆದಿದ್ದರಲ್ಲಿ ಮನೆಗೆ ಬೇಕಾಗುವುದನ್ನು ಬಿಟ್ಟು ಉಳಿದದ್ದನ್ನು ಈಗ ಜಾರಿಯಲ್ಲಿರತಕ್ಕ ಪದ್ಧತಿಯಂತೆ ಯಾವ ಪ್ರಾಂತ್ಯದಲ್ಲಿ ಅನುಸರಿಸಬಹುದು ಎಂಬ ವಿಚಾರಗಳಲ್ಲಿ ಸರ್ಕಾರದವರ ಕೈಯನ್ನು ಕಟ್ಟುವುದಕ್ಕೆ ಬದಲಾಗಿ ಸ್ಥಳ ವಿದ್ಯಮಾನಗಳಿಗನುಸಾರವಾಗಿ ಈ ಕಾರ್ಯಕ್ರಮಗಳನ್ನೂ ನಡೆಸು

(ಶ್ರೀ ಎಚ್. ಕೆ. ವೀರಣ್ಣಗೌಡರು.)

ವುದಕ್ಕೆ ಅವರಿಗೆ ಅವಕಾಶ ಕೊಡಬೇಕು. ಕೇಂದ್ರ ಸರ್ಕಾರದವರಾದರೂ ಅನಾವಶ್ಯಕವಾಗಿ ಈ ಆಜ್ಞೆಗಳನ್ನು ಇಡಬೇಕೆಂದು ಅಪೇಕ್ಷೆ ಪಡುವುದಿಲ್ಲ. ಆದ್ದರಿಂದ ನಾನು ಸೂಚಿಸುವುದೇನೆಂದರೆ ಸರ್ಕಾರದವರು ಈಗ ಮಾನ್ಯ ಸದಸ್ಯರು ಎಲ್ಲೆಲ್ಲಿ ತೊಂದರೆ ಇದೆಯೆಂದು ಹೇಳಿದರೋ ಅದನ್ನು ಗಮನಿಸಿ ಅದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುವುದರ ಜೊತೆಗೆ ಸಾಧ್ಯವಾದ ಕೆಲವು ಕಡೆಗಳಲ್ಲಿ ಮಾತ್ರ ಶ್ರೀ ಸಂಪಂಗಿ ರಾಮಯ್ಯನವರು ಹೇಳಿದಂತೆ ಒಂದು ನಿಗದಿಯಾದ ಪ್ರಮಾಣದಲ್ಲಿ ದವಸ ವಸೂಲುಮಾಡುವುದಕ್ಕೂ ಮತ್ತು ಈಗಿನ ಪದ್ಧತಿಯನ್ನು ಇನ್ನೂ ಕೆಲವು ಕಡೆಗಳಲ್ಲಿ ಜಾರಿಯಲ್ಲಿಟ್ಟುಕೊಂಡು ಒಟ್ಟಿನಲ್ಲಿ ದವಸ ಮಾತ್ರ ಹೆಚ್ಚು ಬೆಳೆಯತಕ್ಕವರಿಂದ ಸರ್ಕಾರಕ್ಕೆ ಬಂದೇ ಬರಬೇಕು ಎಂಬ ನೀತಿಯನ್ನು ಮುಂದುವರಿಸಿಕೊಂಡು ಹೋಗಬೇಕು. ಹತೋಟಿ ಆಜ್ಞೆಗಳು ಪೂರ್ಣವಾಗಿ ಹೋಗಬೇಕಾದರೆ ದೇವರ ಅನುಗ್ರಹ ಬೇಕು. ಅಂಥ ಸುಭಿಕ್ಷ ಬಂದಲ್ಲಿ ಎಲ್ಲ ಬಗೆಯ ಹತೋಟಿ ಆಜ್ಞೆಯೂ ಹೋಗುತ್ತದೆಯೆಂದು ಹೇಳಿ ಶ್ರೀ ಚನ್ನಬೈರೇಗೌಡರ ನಿರ್ಣಯವನ್ನು ವಿರೋಧಿಸುತ್ತೇನೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು (ಬೆಂಗಳೂರು ನಗರ).—ಸ್ವಾಮಿ, ಆಹಾರ ನಿಯಂತ್ರಣ ಕಾನೂನಿನಲ್ಲಿ ಒಂದು ಭಾಗವನ್ನು ಅಂದರೆ ಆಹಾರ ಶೇಖರಣೆಗೆ ಸಂಬಂಧಪಟ್ಟ ನಿರ್ಬಂಧವನ್ನು ರದ್ದುಗೊಳಿಸಬೇಕೆಂದು ಹೇಳಿ ನಮ್ಮ ಮಾನ್ಯ ಮಿತ್ರರು ನಿರ್ಣಯವನ್ನು ತಂದಿದ್ದಾರೆ. ಅದಕ್ಕೊಂದು ತಿದ್ದುಪಡಿಯೂ ಬಂದಿದೆ. ಆದರೆ ಈ ನಿರ್ಣಯವನ್ನು ನಾನು ಬಹಳ ತೀವ್ರವಾಗಿ ವಿರೋಧಿಸಬೇಕಾಗಿದೆ. ಆ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕೆಂದು ಇಷ್ಟಪಡುತ್ತೇನೆ.

ಈಗ ನಮ್ಮ ಮುಂದಿರುವ ಈ ಒಂದು ದೊಡ್ಡ ಸಮಸ್ಯೆ ಒಂದು ದೊಡ್ಡ ರಾಷ್ಟ್ರೀಯ ಸಮಸ್ಯೆಯಾಗಿ ಇಡೀ ಭಾರತ ದೇಶಕ್ಕೆ ಅನ್ವಯಿಸಿದೆಯೆಂದು ಹೇಳಿದರೆ ಅದು ತಪ್ಪಾಗಲಾರದು. ಇಂಥ ಒಂದು ರಾಷ್ಟ್ರ ಸಮಸ್ಯೆಯನ್ನು ಇದರಲ್ಲಿರತಕ್ಕ ಮುಖ್ಯಾಂಶಗಳಾದ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಯಾವ ರೀತಿ ಬಗೆಹರಿಸಬೇಕೆಂಬುದನ್ನು ನಾವು ಬಹಳ ದೀರ್ಘವಾಗಿ ಯೋಚನೆಮಾಡಿ ಮಾಡಬೇಕಾಗಿದೆ. ನಮ್ಮಲ್ಲಿನ ಈ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಸರಿಮಾಡಿಕೊಳ್ಳಬೇಕಾದರೆ ಮುಖ್ಯವಾಗಿ ಸರ್ಕಾರದವರು ಒಂದು ಸರಿಯಾದ ಆಹಾರ ನೀತಿ ಅನುಸರಿಸಬೇಕಾಗಿದೆ.

ಈ ಆಹಾರ ನೀತಿಯಲ್ಲಿ ಮುಖ್ಯವಾಗಿ ಈ ನಾಲ್ಕು ಅಂಶಗಳಿರಬೇಕು. ಮೊದಲನೆಯದಾಗಿ ಉತ್ಪನ್ನ ಆದಷ್ಟು ಹೆಚ್ಚಿಗೆ ಬೆಳಸಲಿಕ್ಕೆ ಅನುಕೂಲವಾದ ಯೋಜನೆಯಿರಬೇಕು. ಎರಡನೆಯದು ಪ್ರೊಕ್ಯೂರ್‌ಮೆಂಟ್ ವಿಷಯ; ಆಹಾರ ಧಾನ್ಯ ಬೆಳೆಯುವ ಜನರಿಂದ ಎಷ್ಟು ಮಾತ್ರ ತೆಗೆದುಕೊಳ್ಳಬೇಕು ಎಂಬುದು. ಮೂರನೆಯದು ರೇಷನಿಂಗ್ ಯಾವ ರೀತಿ ಹಂಚಿಕೆ ಮಾಡಬೇಕು ಎಂಬುದು. ನಾಲ್ಕನೆಯದು ಎಷ್ಟು ಬೆಲೆಯನ್ನು ಗೊತ್ತುಮಾಡಬೇಕು; ನಿಗದಿ ಮಾಡಿದ ಬೆಲೆ ಕೊಡುವವನ ಶಕ್ತಿಗನುಸಾರವಾಗಿದೆಯೋ ಎಂಬುದು. ಈಗ ನಮ್ಮ ಮುಂದಿರುವ ನಿರ್ಣಯ, ಬರೀ ಪ್ರೊಕ್ಯೂರ್‌ಮೆಂಟಿಗೆ ಮಾತ್ರ ಸಂಬಂಧಿಸಿರುವುದರಿಂದ ನಾನು ಹೇಳತಕ್ಕದ್ದು ಅದಕ್ಕೆ ಮಾತ್ರ ಅನ್ವಯಿಸುವುದಾಗಿದೆ.

ಉತ್ಪನ್ನವನ್ನು ಹೆಚ್ಚಿಸುವ ವಿಷಯದಲ್ಲಿ 1943ನೆಯ ಇಸವಿಯಲ್ಲಿ ಒಂದು ಸಮಿತಿ ಮಾಡಿದರು. 1947ರಲ್ಲಿ ಮತ್ತೊಂದು ಕಮಿಟಿ ಮಾಡಿದರು. ಅದಕ್ಕಾಗಿ ಬೇಕಾದಷ್ಟು ಯೋಜನೆಗಳನ್ನು ತಯಾರಿಸಿದರು. ಅದರಲ್ಲಿ ಲೋಪದೋಷಗಳೇನಿದೆಯೆಂಬುದನ್ನು ನಾನೀಗ ಹೇಳುವುದಿಲ್ಲ. ಆದಾಗ್ಯೂ ಎರಡನೆಯ ಅಂಶವಾದ ಪ್ರೊಕ್ಯೂರ್‌ಮೆಂಟ್ ಅಂದರೆ ರೈತರಿಂದ ಬೆಳೆಯತಕ್ಕ ಅಹಾರ ಧಾನ್ಯಗಳನ್ನು ಸಂಗ್ರಹಿಸುವುದು ಬಹುಮಟ್ಟಿಗೆ ಅವರ ಉತ್ಪನ್ನಶಕ್ತಿಯನ್ನವಲಂಬಿಸಿದೆ. ಉತ್ಪತ್ತಿ ಜಾಸ್ತಿಯಾದರೆ ಆಹಾರ ಸಂಗ್ರಹಣೆಯೂ ಜಾಸ್ತಿಯಾಗುತ್ತದೆ. ಆದರೆ ನಮ್ಮ ಮುಂದೆ ಈಗ ಹೆಚ್ಚಾಗಿ ಕಾಣುವುದೇ

ನೆಂದರೆ, "Food for all" ಆಗುವಂತೆ ಆಹಾರ ಸಂಗ್ರಹಣ ಕಾರ್ಯ ಸರಿಯಾಗಿ ನಡೆಯುತ್ತಿದೆಯೇ ಎಂಬುದು. ಈ ಸಂಬಂಧದಲ್ಲಿ ಇಡೀ ಭಾರತಕ್ಕೆ ಅನ್ವಯಿಸುವಂತೆ ವಿಶಾಲವಾದ ಯೋಜನೆಯೇನಾದರೂ ಇದ್ದರೆ ಅದು ಸರಿಯಾಗಿ ಎಲ್ಲಾ ಕಡೆಯಲ್ಲೂ ನಡೆದುಕೊಂಡು ಬರುತ್ತಿದೆಯೇ, ಅದು ಇಡೀ ಭಾರತಕ್ಕೆ ಅನ್ವಯಿಸುವಂಥಾದಾಗಿದ್ದರೆ, ಅದು ನಮ್ಮಲ್ಲಿ ಯಾವ ರೀತಿ ನಡೆಯುತ್ತಿದೆ—ಅದಕ್ಕೆ ಸಮನ್ವಯವಾಗಿ ನಡೆಯುತ್ತಿದೆಯೇ, ಇಲ್ಲವೇ ಎಂಬುದನ್ನು ನೋಡಬೇಕು. ಏಕೆಂದರೆ, ಈಗ ನಾವು ನೋಡುವುದಾದರೆ ನಮ್ಮ ಇಂಡಿಯಾ ದೇಶದಲ್ಲಿ ಒಂದೊಂದು ಕಡೆ ಒಂದೊಂದು ರೀತಿಯಲ್ಲಿ ನಡೆಯುತ್ತಿದೆ. ಮದ್ರಾಸಿನಲ್ಲಿ 7 ಔನ್ಸು ಅಕ್ಕಿ ಕೊಡುತ್ತಿದೆ. ಇಲ್ಲಿಯಾದರೋ 5 ಔನ್ಸು ಅಕ್ಕಿ ಕೊಡುತ್ತಿದ್ದೀರಿ.

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಇಲ್ಲ, ಅಲ್ಲಿ 6 ಔನ್ಸು ಮಾತ್ರ ಕೊಡುತ್ತಿದೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಗ ಅದನ್ನು 5 ಔನ್ಸ್‌ಗೆ ಇಳಿಸಿದ್ದಾರೆ!

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಅಂತೂ ಇಡೀ ಭಾರತದಲ್ಲಿ ಒಂದೇ ರೀತಿಯಾದ ನೀತಿಯಿಲ್ಲ. ಏನೋ, ಪ್ರೊಕ್ಯೂರ್‌ಮೆಂಟ್ ವಿಷಯದಲ್ಲಿ ಈ ರೀತಿ ಒಂದು ನಿರ್ಣಯ ಮಾಡಿಬಿಟ್ಟರೆ ರಾಜಕೀಯದಲ್ಲಿ ತಮ್ಮ ಪಕ್ಷಕ್ಕೆ ಹೆಚ್ಚಿಗೆ ಬೆಂಬಲ ಬರುತ್ತದೆಂದು ಹೇಳಬಹುದು. ಆ ದೃಷ್ಟಿಯಿಂದ ಈ ಸಂಗ್ರಹಣದ ಕಾನೂನನ್ನು ಸಡಿಲಿಸಿ ಎಂದು ವಾದ ಮಾಡಬಹುದು. ಆದರೆ ಇದರಿಂದ ನಮ್ಮ ದೇಶದಲ್ಲಿ ಏನು ಪರಿಣಾಮವಾಗುತ್ತದೆಂಬುದನ್ನು ನಾವುಗಳು ಸ್ವಲ್ಪ ನೋಡಬೇಕಾಗಿದೆ. ಇದಕ್ಕೆ ಸಂಬಂಧಪಟ್ಟ ಹಾಗೆ ಆಹಾರ ಹೆಚ್ಚಿಸುವ ಯೋಜನೆಯ ಮೇಲೆ ಚರ್ಚೆ ಮಾಡಿದಾಗ ಮಾನ್ಯ ಸದಸ್ಯರು ಕೆಲವು ವಿಚಾರಗಳನ್ನು ತಿಳಿಸಿದ್ದಾರೆ. ಅದರಿಂದಲೇ ಇದರಲ್ಲಿ ಏನು ಲೋಪದೋಷಗಳಿವೆಯೆಂಬುದು ಗೊತ್ತಾಗುತ್ತದೆ. ಶ್ರೀ ಸಂಪಂಗಿರಾಮಯ್ಯನವರು ಮಾಡಿದ ಭಾಷಣದಿಂದ ರೈತರಿಂದ ರಾತ್ರಿ ಹೊತ್ತು ಹೊಡೆದು ಬಡಿದು ಧಾನ್ಯಗಳನ್ನು ವಸೂಲು ಮಾಡಿಕೊಂಡು ಬಂದಿರುವ ವಿಷಯ ಗೊತ್ತಾಗುತ್ತದೆ. ಆದರೆ, ಈಗ ತಾವು ಕೊಟ್ಟಿರುವ ಪಂಚವಾರ್ಷಿಕ ಯೋಜನೆಯನ್ನು ನೋಡುವುದಾದರೆ (ಅದರಲ್ಲಿ 65ನೆಯ ಪುಟದಲ್ಲಿ ಹೇಳಿರುವ ಹಾಗೆ) ಇಡೀ ದೇಶದಲ್ಲಿ ಶೇಕಡ 10ರಷ್ಟು ಮಾತ್ರ ಪ್ರೊಕ್ಯೂರ್‌ಮೆಂಟ್ ನಡೆಯುತ್ತಿದೆ; ಮಿಕ್ಕ 90% ಧಾನ್ಯದಲ್ಲಿ ಎಷ್ಟೋ ಭಾಗ ಕಾಳಸಂತೆಯಲ್ಲಿ ಮಾರಾಟವಾಗುತ್ತಿದೆಯೆಂಬುದು ಇದರಿಂದ ವೇದ್ಯವಾಗುತ್ತದೆ. ಆದ್ದರಿಂದಲೇ ಅವರು 'monopoly procurement' ಇರಬೇಕೆಂದು ಹೇಳಿದ್ದಾರೆ. ಈಗ ನೀವು ಮಾಡುತ್ತಿರತಕ್ಕ ಪ್ರೊಕ್ಯೂರ್‌ಮೆಂಟ್ ರೀತಿ ನೋಡಿದರೆ ಮಲೆನಾಡಿನಲ್ಲಿ ಒಬ್ಬೊಬ್ಬರಿಗೆ 300 ಸೇರಿನಂತೆ ಮಾತ್ರ ಬಿಟ್ಟು ಎಲ್ಲವನ್ನೂ ತರುತ್ತಿದ್ದಾರೆ. ಇದನ್ನು ಇನ್ನೂ ಸ್ವಲ್ಪ ಜಾಸ್ತಿ ಮಾಡಬೇಕಾಗಿದೆ. ಇನ್ನು ಕೆಲವು ಕಡೆ ನೋಡಿದರೆ ಅಲ್ಲಿ ಪ್ರೊಕ್ಯೂರ್‌ಮೆಂಟ್ ಸರಿಯಾಗಿ ನಡೆಯುತ್ತಿಲ್ಲವೆಂದು ಗೊತ್ತಾಗುತ್ತದೆ. ಏನಾದರೂ ದೊಡ್ಡ ರೈತರುಗಳು, ಪ್ರಭಾವಶಾಲಿಗಳು ಬಂದರೆ ಅವರ ವಿಷಯದಲ್ಲಿ ರಿಯಾಯಿತಿ ತೋರಿಸಿಬಿಡುತ್ತೀರಿ. ಅದೇ ಬಡಬಗ್ಗರಾದರೆ, ಅವರನ್ನು ಕೇಳುವವರೇ ಯಾರೂ ಇಲ್ಲದೆ ಬಲೋದ್ಬಂಧದಿಂದ ಧಾನ್ಯಗಳನ್ನು ತರುವ ಪ್ರಸಂಗವಿರಬಹುದು. ಆದರೆ, ಎಲ್ಲ ಕಡೆಯಲ್ಲೂ ಈ ಹತೋಟಿ ಆಜ್ಞೆಯನ್ನು ಸಡಿಲಿಸಿಬಿಟ್ಟರೆ ಏನು ಕ್ರಾಂತಿಯುಂಟಾಗುತ್ತದೆಂಬುದನ್ನು ಹೇಳಬೇಕಾಗಿಲ್ಲ. ಆ ರೀತಿ ಮಾಡುವುದಾದರೆ, ಇಡೀ ಜನತೆಯ ಹಿತದೃಷ್ಟಿಯಿಂದ ನೀವು ಮಾಡುತ್ತಿಲ್ಲವೆಂದು ಹೇಳಬೇಕಾಗಿದೆ. ಸ್ವಾತಂತ್ರ್ಯ ಬಂದ ಮೇಲೆ, ಎಲ್ಲೆಲ್ಲಿ ನೋಡಿದರೂ ಆಹಾರಕ್ಕೆ ಕೊರತೆ, ಕೊರತೆ ಎಂದು ಹೇಳುತ್ತಿರುವುದನ್ನು ನೋಡಿದ್ದೇವೆ. ಹೀಗಿರುವಾಗ ನಗರ ಪ್ರದೇಶದಲ್ಲಿ ನೀವು ಆಹಾರವನ್ನು ಸರಿಯಾಗಿ ಕೊಡದೆ ಹೋದರೆ ಏನು ತೊಂದರೆ ಬರುತ್ತದೆಂಬುದನ್ನು ಯೋಚನೆ ಮಾಡಬೇಕು. ಆ ದೃಷ್ಟಿಯಿಂದ, ನಾವಿಂದು ಇಂಥ ಒಂದು ನಿರ್ಣಯವನ್ನು ಮಾಡಿದರೆ ಬಹಳ ಕಷ್ಟಕ್ಕೆ ಬರುತ್ತದೆ.

(ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು).

ತಾತ್ಕಾಲಿಕವಾಗಿ ಹಳ್ಳಿಗಾಡಿನ ಕಡೆ ರೈತರೇನೋ ಸಂತೋಷಪಡಬಹುದು. ಆದರೆ ಅದಕ್ಕಿಂತ ಹೆಚ್ಚಾಗಿ ಇತರ ಕಡೆಗಳಲ್ಲಿ ಆಗತಕ್ಕ ಪರಿಣಾಮ ಗಳನ್ನು ನಮಗೆ ಊಹಿಸಲು ಸಾಧ್ಯವಿದೆಯೇ? ಆದ್ದರಿಂದ ಈ ಪ್ರೊಕ್ಯೂರ್‌ಮೆಂಟ್ ವಿಷಯದಲ್ಲಿ ಸರಿಯಾದ ಒಂದು ಯೋಜನೆಯನ್ನು ತಯಾರು ಮಾಡಬೇಕು ಮತ್ತು ಸಮಾನಾನ್ವಯ ಸಂಗ್ರ ಹಣ ನೀತಿಯನ್ನು ಅನುಸರಿಸುವುದೊಂದು; ಎರಡನೆಯದು ಈ ಸಂಗ್ರಹಣದ ವಿಷಯದಲ್ಲಿ ಅತ್ಯುತ್ಸಾಹಶಾಲಿಗಳಾದ ಕೆಲವು ಅಧಿಕಾರಿಗಳು (ಕೆಲವು ಕಡೆಗಳಲ್ಲಿ) ಸರ್ಕಾರಿ ಹುಕುಮನ್ನು ಕಡ್ಡಾಯವಾಗಿ ಜಾರಿಗೆ ತರಬೇಕೆಂದು ಹೇಳಿ ರೈತರಿಗೆ ತೊಂದರೆಯಾಗುವುದನ್ನೂ ಮನಗಾ ಣದೆ ಧಾನ್ಯಸಂಗ್ರಹಣೆಗೆ ಪ್ರಯತ್ನ ಪಡುವವ ರಿಗೆ ತಕ್ಕ ಶಿಕ್ಷೆ ಕೊಡುವುದು—ಇವೆರಡಕ್ಕೂ ತಾವು ಮುಖ್ಯವಾಗಿ ಗಮನಕೊಡಬೇಕು.

ಈ ಸಂದರ್ಭದಲ್ಲಿ ಇನ್ನೊಂದು ಅಂಶವನ್ನೂ ಗಮನಿಸಬೇಕು. ಈಗ ಕಾಳಸಂತೆಯುಂಟಾ ಗಿರುವುದೆಲ್ಲಾ ಸರಿಯಾಗಿ ಆಹಾರ ಸಂಗ್ರಹಣ ಕಾರ್ಯ ನಡೆಯದಿರುವುದರಿಂದ. ಆದ್ದರಿಂದ ಕಾಳಸಂತೆಯನ್ನೂ ತಡೆಗಟ್ಟಬೇಕಾದರೆ, ಸರಿ ಯಾಗಿ ಆಹಾರ ಸಂಗ್ರಹಣೆ ನಡೆಸಲೇಬೇಕು. ಇದರಿಂದ ಒಂದು ಕಡೆ ಕಾಳಸಂತೆಯೂ ನಿಲ್ಲು ತ್ತದೆ; ಇನ್ನೊಂದು ಕಡೆ ನಮಗೂ ಹೆಚ್ಚಿಗೆ ಆಹಾರ ದವಸವನ್ನು ಕೊಡುವುದಕ್ಕೆ ಸಾಧ್ಯ ವಾಗುತ್ತದೆ. ಆದ್ದರಿಂದ ಆಹಾರ ಹೆಚ್ಚಿಸುವುದ ಕ್ಕಾಗಿ ಎಷ್ಟೋ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಒಂದು ಯೋಜನೆಯನ್ನು ತಯಾರಿಸಿರು ವಂತೆಯೇ ಇದಕ್ಕೂ ಒಂದು ಯೋಜನೆಯನ್ನು ಮಾಡಿದರೆ ತಾವು ಜನರಿಗೆ ಇನ್ನೂ ಹೆಚ್ಚಿಗೆ ಆಹಾರ ಧಾನ್ಯಗಳನ್ನು ಕೊಡುವುದಕ್ಕೆ ಸಾಧ್ಯ ವಾಗುತ್ತದೆ. ಈಗ ನಾವು ನೋಡಿರುವ ಹಾಗೆ ಅನೇಕ ಕಡೆ ಸಂಪೂರ್ಣವಾಗಿ ಪ್ರೊಕ್ಯೂರ್ ಮೆಂಟ್ ನಡೆದಿಲ್ಲ. ಎಷ್ಟೋ ರೈತರು ಧಾನ್ಯ ಗಳನ್ನು ಬಚ್ಚಿಟ್ಟುಕೊಂಡಿದ್ದಾರೆ. ಇದರಿಂದಲೇ ಈಗ ಜನರಿಗೆ ತೊಂದರೆ, ಆದ್ದರಿಂದ ಪ್ರೊಕ್ಯೂರ್ ಮೆಂಟ್‌ನಿಂದಲೇ ಬಹಳ ರೈತರಿಗೆ ತೊಂದರೆ ಯಾಗುತ್ತಿದೆಯೆಂಬುದನ್ನು ನಾನು ಒಪ್ಪಲಾರೆ. ಈಗಲೂ ಕೂಡ ನಾವು ಹಳ್ಳಿಗಳ ಕಡೆ ಕಾರ್ ಹಾಕಿಕೊಂಡು ಹೋಗಲಿ ನಮಗೆ ಬೇಕಾದಷ್ಟು ಧಾನ್ಯ ಸಿಕ್ಕುತ್ತದೆ. ಧನವಂತರೇನೋ ಈ ರೀತಿ ಏನಾದರೂ ಮಾಡಿಕೊಳ್ಳಬಹುದು. ಹೋಟೆಲ್ ಮಾಲೀಕರುಗಳು ಬೇಕಾದರೆ ತಂದುಕೊಳ್ಳಬಹುದು. ಆದರೆ ಸೆಕ್ರೆಟೇರಿಯ ಟ್ಟಿನ ಬಡಗುಮಾಸ್ತರು ಹಾಗೆ ಮಾಡುವುದಕ್ಕಾ ಗುತ್ತದೆಯೇ? ಆದ್ದರಿಂದ ಈ ಆಹಾರ ಸಂಗ್ರ ಹಣದ ವಿಚಾರದಲ್ಲಿ ತಾವು ಸರಿಯಾದ ಒಂದು ಯೋಜನೆ ಮಾಡಿ ಆಹಾರ ಸಂಗ್ರಹಣವನ್ನು ತೃಪ್ತಿಕರವಾಗಿ ನಡೆಸಿದರೆ ಎಲ್ಲರಿಗೂ ಒಳ್ಳೆಯ ದಾಗುತ್ತದೆ. ಈ ದೃಷ್ಟಿಯಿಂದ ಒಂದು ಯೋ ಜನೆಯನ್ನು ನಮ್ಮ ಮುಂದಿಟ್ಟು ನಮ್ಮ ಅನು ಮೋದನೆಯನ್ನು ಪಡೆದು ಕಾರ್ಯರೂಪಕ್ಕೆ ತರ ಬೇಕೆಂದು ಹೇಳುತ್ತೇನೆ. ಹೀಗಿಲ್ಲದೆ, ಈ ದೊಡ್ಡ ರಾಷ್ಟ್ರೀಯ ಸಮಸ್ಯೆಯನ್ನು ಈ ನಿರ್ಣ ಯದಲ್ಲಿ ಹೇಳಿರುವ ರೀತ್ಯಾ ಮಾಡಿಬಿಟ್ಟರೆ ನಮ್ಮ ದೇಶಕ್ಕೆ ಹಾನಿಯಾಗುತ್ತದೆಯೇ ಹೊರತು ಒಳ್ಳೆಯದಾಗುವುದಿಲ್ಲ. ಈ ವಿಷಯದಲ್ಲಿ ಭಾರತ ಸರ್ಕಾರದವರ ಸೂಚನೆಯೇನೆಂಬು ದನ್ನು ತಿಳಿಸಿ, ಅದಕ್ಕೆ ನಮ್ಮ ಅಹವಾಲುಗಳೇ ನೆಂಬುದನ್ನು ತಿಳಿಸಿ ನಮಗೆಲ್ಲಾ ಇನ್ನೂ ಹೆಚ್ಚಿಗೆ ಆಹಾರವನ್ನು ಕೊಡುವುದಕ್ಕೆ ಪ್ರಯತ್ನಮಾಡ ಬೇಕೆಂದು ತಿಳಿಸುತ್ತೇನೆ.

ಈ ಆಹಾರ ಸರಬರಾಯಿಯ ವಿಷಯದಲ್ಲಿ ಇನ್ನೊಂದು ಅಂಶವಿದೆ. ಮೊದಲನೆಯದಾಗಿ internal procurement, ಮತ್ತು ಎರಡ ನೆಯದಾಗಿ ಕೇಂದ್ರದಿಂದ ಬರುವ ಸಹಾಯ ಇವೆರಡನ್ನೂ ಅವಲಂಬಿಸಿದೆ.

ಅಧ್ಯಕ್ಷರು.—ಅದೆಲ್ಲಾ ಇಲ್ಲಿ ಬರುವುದಿಲ್ಲ. ಪ್ರೊಕ್ಯೂರ್‌ಮೆಂಟಿಗೆ ಸಂಬಂಧಪಟ್ಟ ಕಾನೂ ನನ್ನು ತೆಗೆದುಹಾಕಬೇಕೆಂದು ಮಾತ್ರ ಇಲ್ಲಿ ಹೇಳಿದೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—Internal procurement ಸರಿಯಾಗಿ ನಡೆಯದೆ ಇದ್ದರೆ ಹೊರಗಿನಿಂದಲಾದರೂ ಹೆಚ್ಚಿಗೆ ತರಿಸಿಕೊಳ್ಳಬೇಕು. ಆದ್ದರಿಂದ ಇಲ್ಲಿನ

ಸಂಗ್ರಹಣೆಯ ವಿಚಾರ ಹೇಗಿದೆಯೆಂಬುದನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು.—ಪ್ರೊಕ್ಯೂರ್‌ಮೆಂಟ್ ಸರಿಯಾಗಿ ನಡೆಯುತ್ತಿದೆಯೇ ಇಲ್ಲವೇ ಎನ್ನುವುದನ್ನೀಗ ನಾವು ಚರ್ಚೆ ಮಾಡುತ್ತಿಲ್ಲ. ಪ್ರೊಕ್ಯೂರ್‌ಮೆಂಟ್ ಮೇಲೆ ಇರತಕ್ಕ ಹತೋಟಿಯನ್ನು ತೆಗೆದುಹಾಕಬೇಕೇ ಬೇಡವೇ ಎಂಬುದನ್ನು ಮಾತ್ರ ಹೇಳಬೇಕಾಗಿದೆ.

ಶ್ರೀ ಶ್ರೀಕಂಠೇಶ್ವರ್‌ರವರು.—ಈ ಸಭೆಯವರು ತಮ್ಮ ಅಭಿಪ್ರಾಯನ್ನು ಸರಿಯಾಗಿ ಸೂಚಿಸಬೇಕಾದರೆ internal procurementನ್ನು ತೆಗೆದರೆ ಏನು ಹಾನಿಯಾಗುತ್ತದೆಂಬುದನ್ನು ಹೇಳಲೇಬೇಕಾಗಿದೆ. ಅಥವಾ ತಾವು ಕೇಂದ್ರದಿಂದಲೇ ಹೆಚ್ಚಿಗೆ ತರಿಸುವುದಕ್ಕೆ ಸಾಧ್ಯವಿದ್ದು, ಹೆಚ್ಚಿಗೆ ತರಿಸಿಕೊಡುತ್ತೇವೆಂದು ಭರವಸೆ ಕೊಡುವುದಾದರೆ ಆಗ ಇದನ್ನೂ ಒಪ್ಪಬಹುದು.

ಅಧ್ಯಕ್ಷರು.—ಆ ವಿಷಯವನ್ನು ಅವರು (ಮಂತ್ರಿಗಳು) ಹೇಳುತ್ತಾರೆ!

ಶ್ರೀ ಶ್ರೀಕಂಠೇಶ್ವರ್‌ರವರು.—ಈಗ internal procurement ಸರಿಯಾಗಿ ನಡೆಯುತ್ತಿಲ್ಲವಾದ್ದರಿಂದ ಮತ್ತು ಕೇಂದ್ರದಿಂದ ಹೆಚ್ಚಿಗೆ ಆಹಾರ ಧಾನ್ಯಗಳು ಬರುವ ಸಂಭವವಿಲ್ಲದಿರುವುದರಿಂದಲೂ ನಾನಿದನ್ನು ಹೇಳುತ್ತಿದ್ದೇನೆ. ಆದ್ದರಿಂದ Internal procurementನ್ನು ಸರಿಯಾಗಿ ಮಾಡುವ ಸಲುವಾಗಿ ಒಂದು ಯೋಜನೆಯನ್ನು ತಯಾರು ಮಾಡಬೇಕು. ಬೆಂಗಳೂರು ನಗರದಿಂದ ಚುನಾವಣೆಯಾದ ಪ್ರಜೆಯಾಗಿ ನಗರದ ಪ್ರಜೆಗಳ ಪರವಾಗಿ ನಾನು ಈ ನಿರ್ಣಯವನ್ನು ತೀವ್ರವಾಗಿ ವಿರೋಧಿಸಬೇಕಾಗಿದೆಯೆಂದು ಹೇಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಈ ನಿರ್ಣಯದಲ್ಲಿ ಹೇಳಿರತಕ್ಕ ಅಂಶವೇನೆಂದರೆ, ಆಹಾರ ಪದಾರ್ಥಗಳನ್ನು ರೈತರಿಂದ ಸರ್ಕಾರದವರು ವಶಪಡಿಸಿಕೊಳ್ಳುವ ಬಗ್ಗೆ ಏನು ಕಾನೂನು ಮಾಡಿದ್ದಾರೋ ಅದನ್ನು ರದ್ದು ಮಾಡಬೇಕೆಂಬುದು, ಇಷ್ಟೇ. ಅಲ್ಲಿಗೆ ಹಾರ್ವೆಸ್ಟ್ ಆರ್ಡರನ್ನು ರದ್ದು ಮಾಡಿಬಿಟ್ಟರೆ ಆಹಾರ ಹತೋಟಿಯೆಲ್ಲವೂ ರದ್ದಾದ ಹಾಗೆಯೇ ಆಗುತ್ತದೆ, ಆಗ ಫ್ರೀ ಮಾರ್ಕೆಟ್ಟಿನಲ್ಲಿ ಎಲ್ಲರೂ ಮಾರಬಹುದು. ಎಷ್ಟೆಷ್ಟು ಬೇಕಾದರೂ ಜನರು ಕೊಳ್ಳಬಹುದು. ಈ ಉದ್ದೇಶದಿಂದ ನಿರ್ಣಯವನ್ನು ತಂದಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಈ ವಿಷಯದಲ್ಲಿ ಶ್ರೀಮಾನ್ ಶ್ರೀಕಂಠೇಶ್ವರ್‌ರವರು ಹೇಳಿದುದು ನನಗೆ ಅರ್ಥವಾಗಲಿಲ್ಲ. ರೇಷನಿಂಗ್ ವಜಾಮಾಡಿ ಎಂದು ನಾನು ಹೇಳಲಿಲ್ಲ. ಸರ್ಕಾರದವರು ಪಟ್ಟಣಗಳಲ್ಲಿರತಕ್ಕವರಿಗೆಲ್ಲಾ ಆಹಾರ ಒದಗಿಸಲು ನಿಗದಿಯಾದ ಖರೀದಿಗೆ, ಕೊಂಡು ನಿಗದಿಯಾದ ಪ್ರಮಾಣದಲ್ಲಿ ಹಂಚಬೇಕೆಂದು ಮನಸ್ಸು ಮಾಡಿದಲ್ಲಿ ಅದಕ್ಕೆ ಬೇಡವೆಂದು ಹೇಳುವುದಿಲ್ಲ. ಹೀಗೆ ಹೇಳಿದುದನ್ನು ಅವರು ಮರೆಯಬಾರದು. ಆದುದರಿಂದ ಅವರು ಹೇಳಿದ್ದು ಸರಿಯಲ್ಲ. ಸರ್ಕಾರದವರು ಶ್ರೀಮಾನ್ ಶ್ರೀಕಂಠೇಶ್ವರ್‌ರಂಥವರಿಗೆ ಅನುಕೂಲಮಾಡಿಕೊಡಬೇಕೆಂದರೆ ನಾವು ಅಡ್ಡಿ ಮಾಡುವುದಿಲ್ಲ. ಸರ್ಕಾರದವರು ಫ್ರೀ ಮಾರ್ಕೆಟ್ಟಿನಲ್ಲಿ ದವಸವನ್ನು ಕೊಂಡು ಯಾರಿಗೆ ಎಷ್ಟು ಒದಗಿಸಿದರೂ ನಮ್ಮ ಅಭ್ಯಂತರವಿಲ್ಲ, ಆದರೆ ಸರ್ಕಾರದ ಹಣದಿಂದ ಸಬ್‌ಸಿಡೈಸ್ ಮಾಡಿಕೊಡಬೇಕೆಂದು ಹೇಳಿದರೆ ಅದರಲ್ಲಿ ಅರ್ಥವಿಲ್ಲ. ಸೋಷಿಯಲಿಸ್ಟ್ ಪಾರ್ಟಿಯ ಸದಸ್ಯರಾದ ಶ್ರೀಮಾನ್ ಶ್ರೀಕಂಠೇಶ್ವರ್‌ರವರು ಆಹಾರ ಹತೋಟಿ ಜಾರಿಯಲ್ಲಿರಬೇಕೆಂದು ಹೇಳುವುದನ್ನು ಕೇಳಿ ನನಗೆ ಆಶ್ಚರ್ಯವಾಗುತ್ತದೆ. ಈಗಿರತಕ್ಕ ರೀತಿಯಲ್ಲಿ ಪರಿಸ್ಥಿತಿ ಹೇಗಿದೆ, ಬಡವನಿಗೆ ಎಷ್ಟು ಕಷ್ಟವಿದೆ, ಭಾಗ್ಯವಂತನಿಗೆ ಎಷ್ಟು ಅನುಕೂಲವಿದೆ ಎನ್ನುವುದರ ಅರಿವು ಅವರಿಗಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ನಾನು ಮೈಸೂರಿನಿಂದ ಬರುವಾಗ ಒಬ್ಬರು ಫೋರ್ಡ್ ಕಾರಿನಲ್ಲಿ ಆರು ಪಲ್ಲ ಅಕ್ಕಿಯನ್ನು ಪಲ್ಲಕ್ಕೆ 75 ರೂಪಾಯಿನಂತೆ ಶ್ರೀರಂಗಪಟ್ಟಣದಲ್ಲಿ ಕೊಂಡು ಅದನ್ನು ಬೆಂಗಳೂರು ಹೋಟೇಲುಗಳಲ್ಲಿ 120 ರೂಪಾಯಿನಂತೆ ಮಾರುವುದಕ್ಕಾಗಿ ರಾತ್ರಿ 12 ಘಂಟೆಯಲ್ಲಿ ಸಾಗಿಸಿಕೊಂಡು ಬರುತ್ತಿದ್ದರು. ಆಗ ಪೋಲೀಸ್ ಇನ್ಸ್‌ಪೆಕ್ಟರು ಹಿಡಿದರು. ಹೀಗೆ

(ಶ್ರೀ ಎಚ್. ಎಂ. ಚನ್ನಬಸಪ್ಪನವರು)

ಅನೇಕರು ಬ್ಲ್ಯಾಕ್ ಮಾರ್ಕೆಟ್ ಮಾಡಿ ದಿನ ದಿನಕ್ಕೂ ಬೊಜ್ಜು ಬೆಳೆಸುತ್ತಿದ್ದಾರೆ. ಇಂಥವರಿಗೆ ಅವಕಾಶವನ್ನು ತಪ್ಪಿಸಬೇಕೆಂಬುದನ್ನು ಏಕೆ ಅವರು ವಿರೋಧಿಸುತ್ತಾರೋ ಗೊತ್ತಿಲ್ಲ. ಪಟ್ಟಣಗಳಿಗೆ ಬರತಕ್ಕ ದವಸ ಧಾನ್ಯಗಳು ಬಡವರಿಗೆ ಮಾತ್ರ ಆಗಿದ್ದರೆ ಚಿಂತೆಯಿಲ್ಲ. ಪಟ್ಟಣಗಳಲ್ಲಿ ಲಕ್ಷಾಧೀಶ್ವರರೂ ಕೋಟ್ಯಾಧೀಶ್ವರರೂ ಮೈ ಬೆವರು ಸುರಿಸದೆ ಸರ್ಕಾರದವರಿಂದ ಅಗ್ಗವಾಗಿ ದವಸವನ್ನು ಪಡೆಯುತ್ತಾರೆ. ಆದಕಾರಣ ಬಡವರಿಗೆ ಕಷ್ಟ ತಪ್ಪಿಸಬೇಕೆಂಬುದು ನಿರ್ಣಯದ ಉದ್ದೇಶ. ಇದರಿಂದ ತೊಂದರೆ ಹೆಚ್ಚಾಗುತ್ತದೆ ಎಂದು ಅವರು ತೋರಿಸಿದರೆ ನಾನು ತಿಳಿದುಕೊಳ್ಳಲು ಸಿದ್ಧನಾಗಿದ್ದೇನೆ. ಇಂತಹ ಮಹತ್ವದ ವಿಷಯದಲ್ಲಿ ಅವರು ಅಭಿಪ್ರಾಯವನ್ನು ಹೇಳುವುದಕ್ಕೆ ಮುಂಚೆ, ಅವರು ಒಂದು ಕಾರಿನಲ್ಲಿ ಕುಳಿತು ಹಳ್ಳಿಗಳ ಕಡೆ ಹೋಗಿ ನೋಡಿಕೊಂಡು ಬಂದು ಮಾತನಾಡಿದರೆ ಆಗ ಅವರು ತಮ್ಮ ಈ ಅಭಿಪ್ರಾಯವನ್ನು ಬದಲಾಯಿಸುತ್ತಾರೆಂದು ನನಗೆ ಸಂಪೂರ್ಣ ನಂಬಿಕೆ ಇದೆ.

ಹಲವು ಮಾನ್ಯ ಸದಸ್ಯರು ನನ್ನ 12ನೆಯ ನಿರ್ಣಯದ ಕಡೆ ನನ್ನ ಗಮನವನ್ನು ಸೆಳೆದರು. ಕಂಟ್ರೋಲ್ ಆಜ್ಞೆ ಇರಬೇಕೆಂದು ಆ ನಿರ್ಣಯದಲ್ಲೇನೂ ಹೇಳಿಲ್ಲ. ಅವರಿಗೆ ಉತ್ತರವಾಗಿ ನಾನು ಇಷ್ಟು ಹೇಳಬಹುದು. ಮೈಸೂರು ಜಿಲ್ಲೆಯಲ್ಲಿಯೂ ಇತರ ಕೆಲವು ಕಡೆಗಳಲ್ಲಿಯೂ ಮಳೆಯಿಲ್ಲದೆ ಬೆಳೆ ಕಡಿಮೆಯಾಗಿರುವುದರಿಂದ ಅವರಿಗೆ ಈ ಕಂಟ್ರೋಲ್ ಆಜ್ಞೆಯಿಂದ ಉಂಟಾಗುವ ತೊಂದರೆಗಳನ್ನು ತಪ್ಪಿಸಿ ಎಂದು ಹೇಳಿದ್ದೇನೆಯೇ ಹೊರತು ಕಂಟ್ರೋಲ ಆಜ್ಞೆಗಳು ಇರಬೇಕೆಂದು ನಾನು ಹೇಳಿಲ್ಲ. ಈ ಆಜ್ಞೆಗಳು ಜಾರಿಯಲ್ಲಿರುವವರೆಗೂ ಇವುಗಳನ್ನು ಜನ ಮಾನ್ಯ ಮಾಡಲೇಬೇಕು. ಇರುವುದನ್ನು ಉತ್ತಮಮಾಡಿ ಎಂದು ಹೇಳುವುದರಲ್ಲಿ ತಪ್ಪೇನೂ ಇಲ್ಲ.

ಈಗ ಬಂದ ಮುಖ್ಯ ಅಂಶವೇನೆಂದರೆ, ಕಂಟ್ರೋಲ್ ಆಜ್ಞೆ ಯಾವ ಕಾರಣಕ್ಕಾಗಿಯಾದರೂ ಬಂದಿರಲಿ. ಅಂತೂ ಅದು ಜಾರಿಯಲ್ಲಿದೆ. ಈಗ ಇದು ಎಲ್ಲಿಯವರೆಗೆ ಇರಬೇಕೆಂಬುದೇ ಮುಖ್ಯವಾದ ಪ್ರಶ್ನೆ. ಆಹಾರ ನೀತಿ ಇದೇ ರೀತಿ ಇರಬೇಕೇ ಅಥವ ಸೂಕ್ತ ಬದಲಾವಣೆ ಮಾಡಬೇಕೇ ಎಂಬುದು ನಮ್ಮ ಮುಂದಿರುವ ಪ್ರಶ್ನೆ.

ಅಧ್ಯಕ್ಷರು.—ಅದಲ್ಲ, ಪ್ರೊಕ್ಯೂರ್‌ಮೆಂಟ್ ಪದ್ಧತಿ ಇರಬೇಕೆ ಅಥವ ಇಲ್ಲವೆ ಎಂಬುದು.

Sri H. M. CHANNABASAPPA.—To be within that technical limit. I shall say about the procurement order.

Janab MOHAMED HANIEF (Bangalore-Muslim).—On a point of information Sir; is it procurement that is opposed or the method of procurement ?

Mr. SPEAKER.—Method of procurement.

Janab MOHAMED HANIEF.—So, nobody is opposed to the system of procurement ?

Sri H. M. CHANNABASAPPA.—The method of procurement as prescribed in the Harvest Order is opposed. The resolution of Sri Chennabyra Gowda says that compulsory procurement of foodgrains under the Harvest Order may be abolished so that foodgrains may be procured in the free market. ಇದು ಅವರ ಅಭಿಪ್ರಾಯವೆಂದು ನಾನು ತಿಳಿದುಕೊಂಡಿದ್ದೇನೆ. ಇದರಲ್ಲಿ ತಪ್ಪಿದ್ದರೆ ಅವರು ತಿಳಿಸಬಹುದು. ಪ್ರೊಕ್ಯೂರ್‌ಮೆಂಟ್ ಆರ್ಡರ್ ಹೋಗಬೇಕೆಂಬುದರ ಅರ್ಥ ಕಂಟ್ರೋಲ್ ಆರ್ಡರ್ ಹೋಗಬೇಕೆಂದೇ ಸ್ವಲ್ಪ ಹೆಚ್ಚು ಕಡಿಮೆ ಅರ್ಥವಾಗುತ್ತದೆ, ಆದಕಾರಣ ಈ ವಿಷಯವನ್ನು ನಾನು ಪ್ರಸ್ತಾಪಿಸಿದೆ. ಪ್ರೊಕ್ಯೂರ್‌ಮೆಂಟ್ ಮಾಡುವ ಉದ್ದೇಶವೇನು ? ಸುಮಾರು ಹತ್ತು ಲಕ್ಷ ಪ್ರಜೆಗಳು ದವಸ ಬೆಳೆಯದೇಯಿರತಕ್ಕವರಿದ್ದಾರೆ, ಅವರಿಗೆ ಅನ್ನಾಹಾರಗಳನ್ನೊದಗಿಸಬೇಕೆಂಬುದು, ಯಾರಿಗೆ ಸುಲಭವಾಗಿ ಆಹಾರ ದೊರೆಯುವುದಿಲ್ಲವೋ ಅವರಿಗೆ ಆಹಾರ ಒದಗಿಸುವುದು ಸರ್ಕಾರದ ಕರ್ತವ್ಯ, ನಿಜ. ಆದರೆ ನಾನೊಂದು ಪ್ರಶ್ನೆ ಕೇಳುತ್ತೇನೆ. ಆಹಾರ ಹತೋಟಿ ಬರುವುದಕ್ಕೆ ಮುಂಚೆ ಯಾರು ಅವರಿಗೆ ಆಹಾರ ಧಾನ್ಯ ಒದಗಿಸುತ್ತಿ

ದ್ದರು ? ಪಟ್ಟಣಗಳಲ್ಲಿರುವವರಿಗೂ ಬಡವರಿಗೂ ಲಕ್ಷಾಂತರ ಜನರಿಗೂ ಆಹಾರ ಹೇಗೆ ಒದಗುತ್ತಿತ್ತು ? ಎಲ್ಲಿ ಆಹಾರದ ದವಸವಿಲ್ಲವೋ ಅಲ್ಲಿಗೆ ತಲೆಯ ಮೇಲಾದರೂ ಹೊತ್ತುಕೊಂಡು ಹೋಗಿ ಜನರೇ ಒದಗಿಸುತ್ತಿದ್ದರು. ಈ ಹತೋಟಿ ಆಜ್ಞೆಯನ್ನು ತೆಗೆದರೆ ಏನು ಪರಿಣಾಮವಾಗುತ್ತದೆಂಬುದನ್ನು ನಾವು ಯೋಚನೆ ಮಾಡೋಣ. ಕಂಟ್ರೋಲನ್ನು ತೆಗೆದುಹಾಕಿದರೆ ಮರುದಿವಸವೇ ಸಿಕ್ಕುವುದಿಲ್ಲವೆಂದು ಕೆಲವರು ಹೇಳುತ್ತಾರೆ. ದೊಡ್ಡದೊಡ್ಡವರು ದಾಸ್ತಾನು ಮಾಡುತ್ತಾರೆ, ಬೆಲೆ ವಿಪರೀತ ಹೆಚ್ಚಿ ಬಡವರು ಅನ್ನವಿಲ್ಲದೆ ಸಾಯಬೇಕಾಗುತ್ತದೆಂದು ಕೆಲವರು ಹೇಳಿದರು. ಈ ಪರಿಸ್ಥಿತಿ ಯಾವೊತ್ತು ಈ ಪದ್ಧತಿಯನ್ನು ತೆಗೆದರೂ ಬಂದೇ ಬರುತ್ತದೆ. ಆದುದರಿಂದ ಕೇವಲ ಈ ಕಾರಣದಿಂದ ಕಂಟ್ರೋಲು ತೆಗೆಯಬಾರದೆಂದು ಹೇಳಿದರೆ ಈ ವಾದಕ್ಕೆ ತಿರುಳಿಲ್ಲ. ಯಾವೊತ್ತಾದರೂ ಈ ಪರಿಸ್ಥಿತಿಯನ್ನು ಎದುರಿಸಲೇಬೇಕು. ಸ್ವಾಭಾವಿಕವಾಗಿ ಇದನ್ನು ಎದುರಿಸುವುದಕ್ಕೆ ಪ್ರಯತ್ನ ಮಾಡಬೇಕೆಂಬುದು ಎಲ್ಲ ಮಾನ್ಯ ಸದಸ್ಯರ ಉದ್ದೇಶ ಮತ್ತು ಸರ್ಕಾರದ ಉದ್ದೇಶವೆಂದು ನಾನು ತಿಳಿದಿದ್ದೇನೆ. ಸರ್ಕಾರದವರು. ಹಿಂದೆ ಮಹಾತ್ಮಾ ಗಾಂಧಿಯವರ ಸಲಹೆಯಮೇಲೆ ಹತೋಟಿಯನ್ನು ತೆಗೆದರು. ಆದರಿಂದ ವಿಪರೀತ ಬೆಲೆ ಹೆಚ್ಚಿ ಜನರಿಗೆ ಕಷ್ಟವಾಯಿತು, ಆದಕಾರಣ ಮತ್ತೆ ಹಾಕಬೇಕಾಯಿತು. ಪರಿಸ್ಥಿತಿಯನ್ನು ಎದುರಿಸಲಿಕ್ಕೆ ಕಾರ್ಯಕ್ರಮ ತಕ್ಕ ತೆಗೆದುಕೊಳ್ಳಬೇಕು. ಸುಮ್ಮನೆ ಮನೆಯಲ್ಲಿದ್ದರೆ ಸಾಲದು. ಸಮಾಜ ಘಾತಕ ವ್ಯಕ್ತಿಗಳು ಏನೇನು ಕೆಲಸ ಮಾಡಬಹುದು, ದೇಶಕ್ಕೆ ಏನೇನು ಅಡ್ಡಿ ಅಂತಕಗಳನ್ನು ತರಬಹುದೆಂಬುದನ್ನು ಊಹಿಸಿ ಅದಕ್ಕೆ ತಕ್ಕ ಕಾರ್ಯಕ್ರಮಗಳನ್ನು ಸರ್ಕಾರದವರು ತೆಗೆದುಕೊಳ್ಳಬೇಕು. ಹಾಗೆ ಮಾಡದೆ ಸರ್ಕಾರದವರೇ ಕಂಟ್ರೋಲನ್ನು ತೆಗೆದಮಾತ್ರಕ್ಕೇ ದುಷ್ಪರಿಣಾಮವಾಗುತ್ತದೆಂದು ಹೇಳಿದರೆ ನಾನು ಒಪ್ಪುವುದಿಲ್ಲ.

ಅಧ್ಯಕ್ಷರು.—ಪ್ರೊಕ್ಯೂರ್‌ಮೆಂಟ್ ತೆಗೆದ ಮಾತ್ರಕ್ಕೆ ಕಂಟ್ರೋಲ್ ಹೋಗುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಪ್ರೊಕ್ಯೂರ್‌ಮೆಂಟ್ ಆರ್ಡರ್ ತೆಗೆದರೆ ಫ್ರೀ ಮಾರ್ಕೆಟ್ ತನ್ನಷ್ಟಕ್ಕೆ ತಾನೇ ಬರುತ್ತದೆ.

"System of control under which food articles are being compulsorily acquired........."

ಹಾಗೆ ಅವರಿಂದ ಅಕ್ವೈರ್ ಮಾಡಿಕೊಳ್ಳದಂತೆ ಅವರಿಗೇ ಬಿಟ್ಟು ಫ್ರೀ ಮಾರ್ಕೆಟ್ಟಿನಲ್ಲಿ ಇತರರು ಕೊಂಡುಕೊಳ್ಳಲೀ ಎಂದು ತಾನೇ ಅದರ ಅರ್ಥ. I should interpret in that way. If Hon'ble Members should interpret in the other way; I should stand corrected.

ಅಧ್ಯಕ್ಷರು.—ಮಾನ್ಯ ಚನ್ನಬಸಪ್ಪನವರು ಹಾಗೆ ಈ ಹತೋಟಿ ಆಜ್ಞೆಗಳ ಬಗ್ಗೆ ಅಂದರೆ ಅವುಗಳ ಪಾಲಿಸಿ ಇತ್ಯಾದಿಗಳ ಬಗ್ಗೆ ಚರ್ಚೆ ಮಾಡುವ ಉದ್ದೇಶ್ಯವಿದ್ದರೆ ಆಗ ಈ ನಿರ್ಣಯವನ್ನೇ ತಳ್ಳಿಹಾಕಬೇಕಾದ ಪ್ರಸಂಗ ಒದಗುತ್ತದೆ. ಏತಕ್ಕೆಂದರೆ ಕಳೆದ ಅಧಿವೇಶನದಲ್ಲಿ ಈ ಹತೋಟಿ ಆಜ್ಞೆಗಳ ಮೇಲೆ ಚರ್ಚೆ ಆಗಿ ಪೂರೈಸಿದೆ. ಈಗ ಪುನಃ ಅದೇ ಚರ್ಚೆಯನ್ನು ನಡೆಸಲಿಕ್ಕೆ ಕಾನೂನು ರೀತ್ಯ ಅವಕಾಶವಿಲ್ಲ. ಅದಕ್ಕನುಗುಣವಾಗಿ ನಿರ್ಣಯದ ಸೂಚಕರು ಮಾತನಾಡಿರುವ ಪ್ರಯುಕ್ತ ಇದಕ್ಕೆ ಅವಕಾಶ ಕೊಡಲಾಗಿದೆ. ಆದಕಾರಣ ಎಲ್ಲ ವಿಷಯಗಳನ್ನೂ ಚರ್ಚೆ ಮಾಡಲು ಅವಕಾಶವಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಈ ಆಹಾರ ಹತೋಟಿ ಆಜ್ಞೆಗಳೆಲ್ಲ ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟವುಗಳಾದುದರಿಂದ, ಆ ನೀತಿಗಳ ಬಗ್ಗೆ.........

ಅಧ್ಯಕ್ಷರು.—ಆ ರೀತಿಯೇನೂ ಅಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಆ ರೀತಿ ಕೇಂದ್ರಕ್ಕೆ ಒಳಗಾಗಿರತಕ್ಕ ವಿಚಾರವಾದರೂ ಕೂಡ, ಪ್ರತಿಯೊಂದು ಪ್ರಾಂತೀಯ ಸರ್ಕಾರಕ್ಕೂ ಇದರ ವಿಷಯದಲ್ಲಿ ಜವಾಬ್ದಾರಿ ಉಂಟೆಂದು ನಾನು ತಿಳಿದುಕೊಂಡಿದ್ದೇನೆ. ಆದುದರಿಂದ....

ಅಧ್ಯಕ್ಷರು.—ಈ ವಿಷಯ ಈಗಾಗಲೇ ಹಿಂದೆ ನಡೆದ ಅಧಿವೇಶನದಲ್ಲಿ ಸಾಕಷ್ಟು ಚರ್ಚೆಯಾಗಿರುವುದರಿಂದ, ಈಗ ಪುನಃ ಅದೇ ವಿಷಯವನ್ನು ಒಂದು ವರ್ಷದ ಅವಧಿ ಪೂರೈಸದ ಮುಂಚೆ

(ಅಧ್ಯಕ್ಷರು).

ಮಾಡಲು ಅವಕಾಶವಿಲ್ಲ. ಆದರೆ ಅಂಥಾ ವಿಚಾರಗಳನ್ನೆಲ್ಲಾ ಕೈಬಿಟ್ಟು ಹಿಂದೆ ಚರ್ಚೆ ನಡೆಯದೇ ಇರುವಂಥ ಅಂಶಗಳನ್ನು ಮಾತ ಮಾತನಾಡಲು ಅವಕಾಶವಿದೆ. ಆ ದೃಷ್ಟಿ ಯಿಂದ ಇದಕ್ಕೆ ಅವಕಾಶ ಕೊಡಲಾಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಆಗಲಿ. ನಾನೂ ಕೂಡ ಆ ಎಲ್ಲೆಕಟ್ಟಿನಲ್ಲೇ ಈ ವಿಚಾರವನ್ನು ಸ್ಪಷ್ಟ ಪಡಿಸಲಿಚ್ಛಿಸುತ್ತೇನೆ. ಈ ನಿರ್ಣಯದ ಧಾಟಿಯನ್ನು ನೋಡಿದರೆ ಧಾನ್ಯ ಸಂಗ್ರಹಣಿಯ ಹತೋಟಿಯನ್ನು ನಿಲ್ಲ ಸಬೇಕೆಂದು ತಿಳಿಸುವಂತಿದೆ.

ಅಧ್ಯಕ್ಷರು.—ಹಾಗಲ್ಲ. ಪ್ರೊಕ್ಯೂರ್‌ಮೆಂಟನ್ನು ಮಾತ್ರ ನಿಲ್ಲಿಸಬೇಕು ಎಂಬುದಾಗಿ

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಹಾಗಾದರೆ ಇಂಗ್ಲೀಷು ಪ್ರತಿಯಲ್ಲಿ ತರ್ಜುಮೆ ಮಾಡುವುದು ತಪ್ಪಾಗಿರಬೇಕು.

ಅಧ್ಯಕ್ಷರು.—ತಮ್ಮ ಅವಗಾಹನೆಯ ಬಗ್ಗೆ ಮತ್ತೊಮ್ಮೆ ಬೇಕಾದರೆ ನಾನು ಆ ನಿರ್ಣಯ ವನ್ನೇ ಓದುತ್ತೇನೆ. ಆ ನಿರ್ಣಯವು ಈ ರೀತಿ ಯಾಗಿದೆ. "ಸಂಸ್ಥಾನದಲ್ಲಿ ರೈತರಿಂದ ಆಹಾರ ಪದಾರ್ಥಗಳನ್ನು ನಿರ್ಬಂಧವಾಗಿ ವಸೂಲು ಮಾಡುತ್ತಿರುವ ಹತೋಟಿ ಪದ್ಧತಿಯನ್ನು ಈ ಕೂಡಲೇ ರದ್ದುಗೊಳಿಸಬೇಕೆಂದು ಈ ಸಭೆಯ ವರು ಅಭಿಪ್ರಾಯಪಡುತ್ತಾರೆ."

ಶ್ರೀ ಎಚ್. ಎಂ. ಚನ್ನಬಸಪ್ಪನವರು.—The system of control under which food articles are being compulsorily acquired ಎಂಬುದಾಗಿ ಹೇಳಿರುತ್ತೆ. ಅಂದರೆ compulsory procurement ನ್ನು ಬಿಟ್ಟುಬಿಟ್ಟರೆ ಅವರಿಗೆ free ಯಾಗಿ ಮಾಡಿಕೊಳ್ಳಲು ಅವಕಾಶ ಕೊಡಿ ಎಂದು ಹೇಳಿದ ಹಾಗಾಯಿತಲ್ಲವೇ?

ಅಧ್ಯಕ್ಷರು.—ಅದು ಹೇಗೆ ಆಗುತ್ತದೆ?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಇದರ ಉದ್ದೇಶವಾದರೂ ಇಷ್ಟೆ. ಯಾರು ಯಾರಲ್ಲಿ ದವಸ ಧಾನ್ಯಗಳಿಲ್ಲವೋ ಅಂಥವರಿಗೆ ದವಸ ಧಾನ್ಯಗಳನ್ನು ಒದಗಿಸಬೇಕಾಗಿರುವುದ ರಿಂದ ಈ ಪ್ರೊಕ್ಯೂರ್‌ಮೆಂಟ್ ಪದ್ಧತಿಯನ್ನು ರದ್ದುಗೊಳಿಸುವುದಕ್ಕಾಗುವುದಿಲ್ಲವೆಂದು ಸರ್ಕಾರದವರವಾದ. ಅದನ್ನು ವಾದಕ್ಕಾಗಿ ಒಪ್ಪಿಕೊಳ್ಳೋಣ. ಅವರು ಯಾವ ಒಂದು ಉದ್ದೇಶ ಸಾಧನೆಗಾಗಿ ಧಾನ್ಯವನ್ನು ತೆಗೆದುಕೊಳ್ಳು ತ್ತಾರೋ ಆದಕ್ಕಾಗಿಯೇ ಧಾನ್ಯವನ್ನೆಲ್ಲಾ ಸರ್ವರಿಗೂ ಧರ್ಮ ನೀತಿಗನುಸಾರವಾಗಿ ಸರ್ವ ಸಮ ದೃಷ್ಟಿಯಿಂದ ಹಂಚಿಕೆ ಮಾಡುತ್ತೇವೆಂದು ಅವರು ಒಪ್ಪಿಕೊಳ್ಳುವುದಾದರೆ ಆಗ ನಾವು ಇದಕ್ಕೆ ಒಪ್ಪಿಗೆ ಕೊಟ್ಟರೂ ಕೊಡಬಹುದು. ಅಂಥಾ ಒಂದು ಸರ್ವಸಮ ನೀತಿಯನ್ನು ತಾವು ಅನುಸರಿಸುವುದಾಗಿ ಭರವಸೆ ಕೊಟ್ಟರೆ ಸಾಕು. ನಗರಗಳಲ್ಲಿರುವ 10 ಲಕ್ಷ ಕಾರ್ಡು ಹೋಲ್ಡರುಗಳಿಗೂ ಮತ್ತು ಗ್ರಾಮಾಂತರ ವಾಸಿಗಳಿಗೂ ತಾವು ಸಂಗ್ರಹ ಮಾಡಿರುವ ಧಾನ್ಯವನ್ನು ಸಮ ನಾಗಿ ಹಂಚುತ್ತೇವೆಂಬ ಭರವಸೆ ಕೊಟ್ಟರೆ ಆಗ ಬಹುದು. ಅನೇಕ ವೇಳೆ ಸರ್ಕಾರದವರೇ ನಗರವಾಸಿಗಳಿಗೆ ಅಂದರೆ ಸ್ಟ್ಯಾಚೂಟರಿರೇಷನಿಂಗ್ ಪ್ರದೇಶಗಳಲ್ಲಿರತಕ್ಕ ಜನರಿಗೆ ಆಹಾರ ಧಾನ್ಯವನ್ನು ಸರಬರಾಯಿ ಮಾಡಿದಂತೆ ಗ್ರಾಮಾಂತರ ವಾಸಿಗಳಿಗೆ ಸರಬರಾಯಿ ಮಾಡುತ್ತಿಲ್ಲವೆಂಬುದನ್ನು ಒಪ್ಪಿಕೊಂಡಿದ್ದಾರೆ. ಇದೇ ಅಂಶ ಮೊನ್ನೆ ತಾನೆ ಈ ಅಧಿವೇಶನ ಪ್ರಾರಂಭ ವಾದ ದಿವಸ ಅಂದು ಆಹಾರ ಸಮಸ್ಯೆ ವಿಚಾರ ಚರ್ಚೆ ನಡೆಯುತ್ತಿದ್ದಾಗ ಹೊರಬಿದ್ದಿದೆ. ತಾವು ಈ ರೀತಿ ಯಾವ ಭಿನ್ನಭಾವವೂ ಇಲ್ಲದಂತೆ ಬಡವರಾದಿಯಾಗಿ ಪ್ರತಿಯೊಬ್ಬರಿಗೂ ಶೇಖರಣೆ ಮಾಡಿದ್ದನ್ನು ಹಂಚಿಕೆ ಮಾಡುವುದಾಗಿಯೂ, ಎಲ್ಲರಲ್ಲಿಯೂ ಸಮಾಧಾನ ಮತ್ತು ನಂಬಿಕೆ ಹುಟ್ಟುವಂತೆ ಮಾಡಿದರೆ ರೈತರಿಗೆ ಈ ಶೇಖರಣೆ ಯಿಂದ ಒಂದು ಸಮಾಧಾನ ಉಂಟಾಗುತ್ತದೆ. ಈಗ ಅಂಥಾ ಒಂದು ಸಮಾದಾನ ಬೆಳೆಯತಕ್ಕವರಲ್ಲಿ ಇಲ್ಲದೆ ಇರುವುದರಿಂದ ಅವರು ಈ ಪ್ರೊಕ್ಯೂರ್‌ಮೆಂಟೇ ಬೇಕಾಗಿಲ್ಲ, ತೆಗೆದುಹಾಕಿ ಬಿಡಿ ಯೆಂಬುದಾಗಿ ಕೇಳುತ್ತಿದ್ದಾರೆ. ಪ್ರೊಕ್ಯೂರ್‌ಮೆಂಟನ್ನು ಈಗ ಇಟ್ಟುಕೊಂಡಿರುವುದರಿಂದ ಜನರಿಗೆ ಚಿತ್ರ ವಿಚಿತ್ರ ಹಿಂಸೆಗಳಾಗುತ್ತಿವೆ. ಅಂಥಾದ್ದನ್ನೆಲ್ಲಾ ತಪ್ಪಿಸಬೇಕೆಂತಲೂ ಮತ್ತು ತನ್ಮೂಲಕ ರೈತರು ಹೆಚ್ಚು ಬೆಳೆ ಬೆಳೆಯು

ವಂತೆ ಮಾಡಬೇಕೆಂಬ ಉದ್ದೇಶದಿಂದಲೂ ಈ ನಿರ್ಣಯವನ್ನು ತಂದಿದ್ದಾರೆ. ಈ ಅಭಿಪ್ರಾಯದಲ್ಲಿ ಕೊಂಚ ಸತ್ಯಾಂಶವಿದೆ. ಆಹಾರ ಧಾನ್ಯಗಳ ವಸೂಲಿಯಲ್ಲಿ ಸ್ಥಳದ ಅಧಿಕಾರಿಗಳು ಅವರ ಟಾರ್ಗೆಟ್ಟನ್ನು ಮುಟ್ಟುವ ದೃಷ್ಟಿಯಿಂದ ಎಷ್ಟೆಷ್ಟು ಅನ್ಯಾಯಗಳನ್ನು ನಡೆಸುತ್ತಾರೆಂಬ ಬಗ್ಗೆ ನಾನೇ ಅನೇಕ ನಿದರ್ಶನಗಳನ್ನು ಸರ್ಕಾರದವರ ಗಮನಕ್ಕೆ ತಂದಿದ್ದೇನೆ. ಈ ಅಂಶ ಸರ್ವರಿಗೂ ಗೊತ್ತಿದೆ. ಕೃಷ್ಣರಾಜನಗರ ತಾಲ್ಲೂಕಿನಲ್ಲಿ ಈ ಪ್ರೊಕ್ಯೂರ್‌ಮೆಂಟಿನ ಸಂಬಂಧವಾಗಿ ಅನೇಕ ಕೇಸುಗಳನ್ನು ಹಾಕಿ ಅನೇಕರಿಗೆ ಕಷ್ಟನಷ್ಟಗಳಾಗಿರುವುದು ತಮಗೆ ಗೊತ್ತಿದೆ. ರೈತರು ತಾವು ಬೆಳದದ್ದನ್ನು ಇವರಿಗೆ ಕೊಟ್ಟು, ಇವರ ಹೊಟ್ಟೆತುಂಬಿದುದೇ ಅವರದೊಂದು ಅಪರಾಧವಾಗಿದೆ. ಅವರನ್ನು ಕೋರ್ಟಿಗೆಳೆದೊಯ್ದು ಅವರಿಗೆ ಕೊಟ್ಟಿರತಕ್ಕ ವಿಚಿತ್ರ ಹಿಂಸೆಗಳನ್ನು ಈ ಹಿಂದೆಯೇ ನಾನು ಈ ಸಭೆಯಲ್ಲಿ ತಿಳಿಸಿರುವ ಪ್ರಯುಕ್ತ, ನಾನೀಗ ಅವುಗಳ ವಿಚಾರ ಎತ್ತಬೇಕಾಗಿಲ್ಲ.

ಅಧ್ಯಕ್ಷರು.—ಎಲ್ಲ ಮಾನ್ಯ ಸದಸ್ಯರಿಗೂ ಈ ವಿಷಯದಮೇಲೆ ಚರ್ಚೆ ಮಾಡಲು 15 ನಿಮಿಷಗಳ ಕಾಲಾವಕಾಶವನ್ನು ಕೊಡಲಾಗಿದೆ. ಹಾಗಿದ್ದಾಗ್ಯೂ ತಾವು ಈಗಾಗಲೇ 20 ನಿಮಿಷಗಳ ಕಾಲವನ್ನು ತೆಗೆದುಕೊಂಡಿರುವ ಪ್ರಯುಕ್ತ ತಾವು ಬೇಗ ತಮ್ಮ ಭಾಷಣವನ್ನು ಪೂರೈಸಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಈ ನಿರ್ಣಯದ ಸೂಚಕರ ಅಭಿಪ್ರಾಯ ಈ ಪ್ರೊಕ್ಯೂರ್‌ಮೆಂಟನ್ನೇ ತಪ್ಪಿಸಬೇಕೆಂದು ಇದನ್ನು ಅವರು ತಂದಿರುವಂತೆ ಕಾಣುತ್ತದೆ. ಆದರೆ ಸರ್ಕಾರದವರು ಇದನ್ನು ಸರಿಪಡಿಸುತ್ತೇವೆಂದು ಹೇಳಿ ಭರವಸೆ ಕೊಟ್ಟರೆ ಸಾಲದು. ಅವರು ಈಗಾಗಲೇ ಅನೇಕ ಮಾನ್ಯ ಸದಸ್ಯರು ತಿಳಿಸಿರುವಂಥ ತೊಂದರೆಗಳನ್ನೂ ಮತ್ತು ಲೋಪದೋಷಗಳನ್ನೂ ಸರಿಪಡಿಸಿ ಅವು ಪುನಃ ನಡೆಯದಂತೆ ತಾವು ಕಾರ್ಯಕ್ರಮ ಕೈಗೊಳ್ಳುತ್ತೇವೆಂದು ಭರವಸೆ ಕೊಟ್ಟರೆ ಕೆಲಕಾಲ ಇದು ಇದ್ದರೂ ಇರಲಿ ಎಂಬ ಒಂದು ಮನೋಭಾವ ಬರುತ್ತೆ. ಆ ರೀತಿ ತಾವು ಭರವಸೆ ನೀಡುವುದರ ಜೊತೆಗೆ, ಅದರಂತೆ ಕಡ್ಡಾಯವಾಗಿ ನಡೆದುಕೊಳ್ಳುತ್ತೀರೆಂಬ ಬಗ್ಗೆ ನನಗೆ ಸಂಪೂರ್ಣ ಭರವಸೆ ಇದೆ. ಸರ್ಕಾರದವರು ಇದರ ಸತ್ಯಾಂಶವನ್ನು ಮನಗಂಡು, ಇದರ ಮಹತ್ವವೇನಿರುತ್ತದೆಂಬುದನ್ನು ತಿಳಿದುಕೊಂಡು, ಈ ಪ್ರೊಕ್ಯೂರ್‌ಮೆಂಟಿನಲ್ಲಿರತಕ್ಕ ತೊಂದರೆಗಳನ್ನು ತಪ್ಪಿಸಬೇಕು. ಇದನ್ನು ಸಂಪೂರ್ಣವಾಗಿ ತೆಗೆದುಹಾಕಲು ಸ್ವಲ್ಪ ಕಾಲ ಅವಕಾಶ ಬೇಕೆಂಬುದನ್ನು ನಾನು ಒಪ್ಪುತ್ತೇನೆ. ಶ್ರೀಮಾನ್ ಎಚ್. ಕೆ. ವೀರಣ್ಣಗೌಡರು ಹೇಳಿದಂತೆ ಇದನ್ನು ಏಕ್‌ದಂ ತೆಗೆದುಬಿಡುವುದಕ್ಕಾಗುವುದಿಲ್ಲ. ಕಾಲ, ದೇಶ, ವರ್ತಮಾನಗಳನ್ನು ನೋಡಿಕೊಂಡು ಕಾರ್ಯಸಾಧನೆ ಮಾಡತಕ್ಕದ್ದು ಉತ್ತಮವಾಗಿರುತ್ತೆ. ಒಂದೇ ಬಾರಿ ಇದನ್ನು ಸರಿಪಡಿಸಬೇಕೆಂದರೆ ಅದು ಸಾಧ್ಯವಾಗದ ಮಾತು. ಈ ಎಲ್ಲ ಕಾರಣಗಳಿಂದಲೂ ನಿರ್ಣಯಕ್ಕೆ ನನ್ನ ಅಂಗೀಕಾರ ನೀಡಲು ಇದು ಯೋಗ್ಯವಾಗಿಲ್ಲವೆಂದು ತಿಳಿಸಿ ನಾನು ಕುಳಿತುಕೊಳ್ಳುತ್ತೇನೆ.

Sri M GOVINDA REDDY (Chitaldrug District—General).—While opposing this resolution, I wish to say a few words. I would like to invite the attention of the House to the consequences that would ensue if this resolution is accepted. If the compulsory procurement of foodgrains from the ryots is stopped, it means that if the Government want to supply foodgrains to the people, they will have to procure foodgrains in the open market. That means to say, they will be subject to the operation of the laws of demand and supply and then be able to purchase from the market at the ruling prices and supply. Evidently the implications of that step go too far and I believe the Hon'ble mover of this resolution is not far from realising those implications. It means financial commitment to an extent which by any conceivable stretch of imagination is beyond the capacity of not only this Government but of any other Government in the world. To purchase foodgrains at the ruling prices in the market and then

(SRI M. GOVINDA REDDY.)

supply, particularly when there is shortage of foodgrains, is I believe against the spirit of the resolution. The second thing is, if the Government want to supply foodgrains to the people then the Government must make arrangements to buy foodgrains from outside. Let us realise the consequences of this step. It is already now within our sad experience that we have been purchasing foodgrains from foreign countries by giving our very blood. This is a thing which nobody in the country would support and the Hon'ble mover also does not support. So, if this resolution is accepted and if the people have to get enough foodgrains to maintain their body and soul together, one fact must be given for granted, and that is sufficient foodgrains must be available in the country. They must be within the reach of every purchaser of every class and of every society. If this is granted, then we have no objection and if the Hon'ble mover proves that, we have no objection, in accepting this resolution. But as matters are, I believe I am enlightening the Hon'ble mover that not only in India but in the whole world foodgrains are in shortage. According to the statement which was recently published and which is, given by the food expert of the United Nations, Mr. Santa Claus, he says that while the population has registered an increase of 13 per cent in most countries and over 17 per cent in some other countries, the food production has registered an increase of only one per cent. If this is so all over the world, there is shortage of foodgrains, how can we have abundant supply of foodgrains within India and within Mysore? Well then compulsory procurement is necessary at least for this reason to compel the raiyats to grow foodgrains. It is within the experience of the Hon'ble mover that raiyats who can grow foodgrains are not growing foodgrains at all. Many of them are growing commercial crops. These people must have a sense of decency and a sense of responsibility that when they have enough rich and fertile lands on which foodgrains can be grown and have also the means to grow they should go with their bowls to the Government Depots and beg for food grains. This is a thing which every raiyat should be ashamed of and the Hon'ble mover I am sure will agree with me that when every such raiyat makes up his mind to grow foodgrains, there would no need to bring in this resolution at all. That is not the circumstance that is prevailing in the country to-day. So at least in order to enforce this responsibility on every citizen, this compulsory procurement until such time as we could find foodgrains in abudance, is necessary, and we will not be called sane men if we accept this resolution. Therefore I appeal to the Hon'ble member to withdraw this resolution.

ಶ್ರೀ ಎಂ. ಎಲ್. ನಂಜರಾಜ ಅರಸ್‌ರವರು (ಮೈಸೂರು ಜಿಲ್ಲೆ).—ಅಧ್ಯಕ್ಷರೇ ಈ ಠರಾವು ಮತ್ತು ಇದರ ಜೊತೆಗೆ ಶ್ರೀ ಸಂಪಂಗಿರಾಮಯ್ಯನವರು ಕಳುಹಿಸಿರುವ ತಿದ್ದುಪಡಿ ಇವೆರಡನ್ನೂ ನೋಡಿದರೆ ಈಗ ದೇಶದಲ್ಲಿರುವ ಹತೋಟಿಯಿಂದ ಹಾಹಾಕಾರವೆದ್ದಿದೆ, ಅದನ್ನು ಸ್ವಲ್ಪ ಮಟ್ಟಿಗೆ ಸುಧಾರಿಸಬೇಕಾದ್ದು ಅಗತ್ಯ ಎಂದು ಕಂಡುಬರುತ್ತದೆ. ನಾವು ಎಷ್ಟೇ ದೊಡ್ಡ ದೊಡ್ಡ ಭಾಷಣಗಳನ್ನು ಮಾಡಿದರೂ ರೈತರು ಅವರ ಕರ್ತವ್ಯಗಳನ್ನು ಮಾಡುತ್ತಿಲ್ಲ ಎಂದು ಹೇಳಲು ಯಾರಿಗೂ ಧೈರ್ಯ ಬರುವ ಹಾಗಿಲ್ಲ. ಸಾಮಾನ್ಯವಾಗಿ ರೈತರು ಎಷ್ಟು ಕಷ್ಟಪಡಬೇಕೋ ಅಷ್ಟು ಕಷ್ಟಪಡುತ್ತಿದ್ದಾರೆ. ಆದರೆ ದೇಶದ ಈಗಿನ ಸ್ಥಿತಿ ನೋಡಿದರೆ ಹಾವನ್ನು ಹೊಡೆದು ಹದ್ದಿಗೆ ಹಾಕಿದರು ಎಂಬ ಗಾದೆಗೆ ಅನುಸಾರವಾಗಿದೆ. ಈ ದಿವಸ ಕಷ್ಟಪಟ್ಟು ಆಹಾರ ಪದಾರ್ಥಗಳನ್ನು ಬೆಳೆಯುತ್ತಿರುವ ರೈತನನ್ನು ಅಲ್ಲಗಳೆದರೆ ನಮಗೆ ಮಾತ್ರವಲ್ಲದೆ ಇಡೀ ದೇಶಕ್ಕೆ ದ್ರೋಹಮಾಡಿದ ಹಾಗಾಗುತ್ತದೆ ಯೆಂದು ಘಂಟಾಘೋಷವಾಗಿ ಹೇಳುತ್ತೇನೆ. ಅವನಿಗೆ ತೊಂದರೆಯಾಗದ ಹಾಗೆ ಮಾಡಿ, ಉತ್ತೇಜನ ಕೊಟ್ಟು, ಕಿರುಕುಳ ತಪ್ಪಿಸಿ ರಾಜ್ಯಭಾರವನ್ನು ನಡೆಸುವುದು ಸರ್ಕಾರದವರ ಕರ್ತವ್ಯ ಮತ್ತು ಸರ್ಕಾರಕ್ಕೆ ಬೆಂಬಲ ಕೊಡುವ ಪ್ರತಿನಿಧಿಗಳ ಕರ್ತವ್ಯ. ಆದ್ದರಿಂದ ಶ್ರೀ ಚನ್ನ

ಬೈರೇಗೌಡರು ತಂದಿರುವ ನಿರ್ಣಯವು ಈ ದಿವಸ ಬಹಳವಾಗಿ ಚರ್ಚೆಯಾಗುತ್ತಿದೆ. ಈಗಿನ ರಾಜ್ಯಾಂಗದ ಚೌಕಟ್ಟಿನಲ್ಲಿ ಈ ದೇಶ ಬೇರೆ ಅಲ್ಲ; ಇದು ಇಡೀ ಇಂಡಿಯಾ ದೇಶದ ಒಂದು ಭಾಗವಾಗಿರುವುದರಿಂದ ಇಂಡಿಯಾ ಸರ್ಕಾರದ ನೀತಿ ಮತ್ತು ತತ್ವವೇನಿದೆಯೋ ಅದರೊಳಗೆ ನಮಗೇನು ಕಿರುಕುಳವಿದೆಯೆಂಬುದನ್ನು ತಿಳಿದು ಅದನ್ನು ತಪ್ಪಿಸಿ ದೇಶದಲ್ಲಿ ಒಂದು ಒಳ್ಳೆಯ ವಾತಾವರಣವನ್ನುಂಟುಮಾಡಲು ನಮಗೆ ಅವಕಾಶವಿದೆ. ಅದನ್ನು ಶ್ರೀ ಸಂಪಂಗಿರಾಮಯ್ಯನವರು ತಮ್ಮ ತಿದ್ದುಪಡಿಯಲ್ಲಿ ಸೂಚಿಸಿದ್ದಾರೆ. ಲೆವಿ ಸಿಸ್ಟಂ ಜಾರಿಗೆ ತರುವುದರಿಂದ ಅಷ್ಟೊಂದು ತೊಂದರೆ ದೇಶದಲ್ಲಿರುವುದಿಲ್ಲ. 1943 ರ ರಿಂದ ಜನರು ಎಷ್ಟೋ ಅಭಿಪ್ರಾಯಗಳನ್ನು ಸೂಚಿಸಿದರೂ ಆಹಾರವನ್ನು ಒಂದು ರೀತಿಯಲ್ಲಿ ಶೇಖರಣೆ ಮಾಡುತ್ತಿದೆ. ಅದರಿಂದ ಬಂದಿರುವ ಅನುಭವವೇನೆಂದರೆ ಶೇಖರಣೆಯು ಜಯಪ್ರದವಾಗುತ್ತಿಲ್ಲ. ಮಾನ್ಯ ಸದಸ್ಯರು ಈಗ ಹೇಳಿದಹಾಗೆ ಅನೇಕರು ಕಮರ್ಷಿಯಲ್ ಕ್ರಾಪ್ಸ್ ಬೆಳೆಯುತ್ತಿದ್ದಾರೆ. ಶ್ರೀರಂಗಪಟ್ಟಣದಿಂದ 75 ರೂಪಾಯಿಗಳಿಗೆ ಒಂದು ಪಲ್ಲದಂತೆ ಅಕ್ಕಿಯನ್ನು ತಂದು ಬೆಂಗಳೂರಿನಲ್ಲಿ 125 ರೂಪಾಯಿನಂತೆ ಮಾರುತ್ತಿದ್ದಾರೆ. ಆ ರೀತಿ ಆರು ಪಲ್ಲ ಅಕ್ಕಿಯನ್ನು ಕಾರಿನಲ್ಲಿ ತರುತ್ತಿದ್ದುದನ್ನು ಚೆನ್ನಪಟ್ಟಣದ ಪೋಲೀಸಿನವರು ತಡೆದರು ಎಂದು ಮಾನ್ಯ ಸದಸ್ಯರು ಹೇಳಿದರು. 365 ದಿವಸಗಳು ಕಷ್ಟಪಟ್ಟು ಬೆಳೆದಿರುವ ರೈತನಿಗೆ ಜನರು ಸ್ವೇಚ್ಛೆಯಾಗಿ ಆಕ್ಷೇಪ ಮಾಡುವುದರಿಂದ ಎಷ್ಟೋ ಹೊಟ್ಟೆಯುರಿಯುತ್ತದೆ. ಈ ದಿವಸ ರೈತನ ಸ್ಥಿತಿಯನ್ನು ನೋಡಿದರೆ ಆತನಿಗೆ ತೃಪ್ತಿಯಿಲ್ಲ. ಈದಿನ ಪ್ರತಿನಿಧಿಗಳಾದ ನಾವು ಮಾತನಾಡುತ್ತಿರುವ ಧೋರಣೆಯಿಂದ ದೇಶದಲ್ಲಿ ಖಂಡಿತ ಕ್ಷೋಭೆಯುಂಟಾಗುತ್ತದೆ. ನಾವು ಒಂದು ಸಮತ್ವವನ್ನು ಮನಸ್ಸಿನಲ್ಲಿಟ್ಟು ಶೇಖರಣೆ ಮಾಡಬೇಕೆಂದು ಸುಗ್ಗಿ ಆಜ್ಞೆಯನ್ನು ಹೊರಡಿಸಿರುವುದರಿಂದ ದೇಶಕ್ಕೆ ಕ್ಷೇಮವೂ ಇಲ್ಲ, ಶಾಂತಿಯೂ ಇಲ್ಲ. ಇದನ್ನು ಈ ದಿವಸ ನಾನು ಚುನಾವಣಾ ದೃಷ್ಟಿಯಿಂದ ಹೇಳುತ್ತಿಲ್ಲ. ಆಹಾರದ ನೀತಿಯನ್ನು ರಾಜಕೀಯ ಪಕ್ಷ ಪಂಗಡಗಳ ಪ್ರಶ್ನೆಯಾಗಿ ಕಾಣುತ್ತಿದ್ದೇವೆ. ಆದರೆ ರೈತರಿಗೆ ಈ ದಿವಸ ಕಿರುಕುಳ ಹೆಚ್ಚಿದೆ. ಮುಖ್ಯವಾಗಿ ದೊಡ್ಡ ಮನುಷ್ಯರು, ಪ್ರಭಾವಶಾಲಿಗಳು, ವಿದ್ಯಾವಂತರು, ಅನುಕೂಲಸ್ಥರು ಯಾರಿದ್ದಾರೋ ಅವರಿಗೆ ಅಷ್ಟು ಕಿರುಕುಳವಾಗುವುದಿಲ್ಲ. ಸಾಮಾನ್ಯವಾಗಿ ಗುತ್ತಿಗೆ ಗದ್ದೆಮಾಡಿ ಕಷ್ಟಪಟ್ಟು ನಾಲ್ಕು ಪಲ್ಲ ಬೆಳೆಯುವವರಿಗೆ ಯಾವ ರೀತಿಯಾದರೂ ಆಹಾರ ತಂದು ಸರ್ಕಾರಕ್ಕೆ ಒಪ್ಪಿಸಬೇಕೆಂದು ಕಾನೂನು ಪ್ರಕಾರ ಸರ್ಕಾರದವರು ನಿರ್ಬಂಧಪಡಿಸಿದಮೇಲೆ ಈ ದಿವಸ ಸ್ವಲ್ಪ ತೊಂದರೆ ಬಂದಿರುತ್ತದೆ. ತತ್ವ ಬೇಕಾದಷ್ಟು ಹೇಳಬಹುದು. ಶೇಖರಣೆಯಾಗಬೇಕೆಂದು ಹೇಳುವುದನ್ನು ಒಪ್ಪುತ್ತೇನೆ. ಆದರೆ ದೇಶದ ಪರಿಸ್ಥಿತಿ ಈ ದಿವಸ ಹೇಗಿದೆಯೆಂಬುದನ್ನು ನೋಡಬೇಕು. ಬೆಂಗಳೂರು ಮುಂತಾದ ಪಟ್ಟಣಗಳಲ್ಲಿರುವವರಿಗೆ ಆಹಾರ ಒದಗಿಸಿದರೆ ಸಾಕೆಂದು ಹೇಳಬಹುದು. ಆದರೆ ಹಳ್ಳಿಯಲ್ಲಿ ಕಷ್ಟಪಡುತ್ತಿರುವವರು ಎಷ್ಟು ಮಂದಿ ಇದ್ದಾರೆಂಬುದು ಅವರಿಗೆ ಗೊತ್ತೆ? ಪಟ್ಟಣಗಳಲ್ಲಿ ಸಲೀಸಾಗಿ ಸರಬರಾಯಾದರೆ ಅಲ್ಲಿಗೇ ಹೋಗಬೇಕೆಂದು ಅಭಿಲಾಷೆಪಡುವವರು ಹಳ್ಳಿಯಲ್ಲಿ ಅನೇಕರಿದ್ದಾರೆ. ಅಂದಮೇಲೆ ಹಳ್ಳಿಯ ಪರಿಸ್ಥಿತಿ ಆಶಾದಾಯಕವಾಗಿಲ್ಲವೆಂದು ವ್ಯಕ್ತವಾಗುತ್ತದೆ. ಈ ದಿವಸ ಹಣ ಬೇಕಾದಷ್ಟು ಕೆಲವರಿಗೆ ಬರಬಹುದು. ಅದನ್ನು ನೋಡಿ ಅವರನ್ನು ಹತೋಟಿಗೆ ಒಳಪಡಿಸಿದರೆ ದೇಶದ ಪರಿಸ್ಥಿತಿ ಸರಿಹೋಗುತ್ತದೆ. ಅದು ಬಿಟ್ಟು ಬಡವರನ್ನು ಹಿಂಸೆ ಮಾಡುವುದು ಸರಿಯಲ್ಲ; ಲೆವಿ ಸಿಸ್ಟಂ ದೇಶಾದ್ಯಂತ ಹಾಕುವುದು ಬಹಳ ಕಷ್ಟಕರ. ಈ ಸಾರಿ ಮಳೆ ಸರಿಯಾಗಿ ಆಗಲಿಲ್ಲ. 1943ನೆಯ ಇಸವಿಯಿಂದ ಹಾಕಿರುವ ಹತೋಟಿಯನ್ನು ತಕ್ಷಣ ತೆಗೆಯುವುದಕ್ಕಾಗುವುದಿಲ್ಲ. ಇವತ್ತು ಪಟ್ಟಣಗಳಲ್ಲಿ ಕಂಟ್ರೋಲ್ ಧಾರಣೆಯಲ್ಲಿ ಕೊಡುತ್ತಾರೆ. ಆ ರೀತಿ ಕೊಡದಿದ್ದರೆ ಸರ್ಕಾರದವರು ಅವರ ತರ್ಕವ್ಯ ನಡೆಸಿದಹಾಗೆ ಆಗುವುದಿಲ್ಲ. ಆದ್ದರಿಂದ ಅವರು ಧಾನ್ಯ ಅವರಿಗೆ

(ಶ್ರೀ ಎಂ. ಎಲ್. ನಂಜರಾಜ ಅರಸ್‌ರವರು.)
ಒದಗಿಸಬೇಕು. ಲೆವಿ ಸಿಸ್ಟಂ ನಿಜವಾಗಿಯೂ ರೈತರ ಹಿತಕ್ಕೆ ವ್ಯತಿರಿಕ್ತವಾಗಿಲ್ಲ ಎಂದು ನೀವು ತೋರಿಸಬೇಕಾದರೆ ಎಲ್ಲಿ ಆಹಾರ ಧಾನ್ಯ ಸರಿಯಾಗಿ ಬೆಳೆಯುತ್ತದೆಯೋ, ಅಷ್ಯೂರ್ಡ್ ವಾಟರ್ ಸಪ್ಲೈ ಇದೆಯೋ, ನೀರಾವರಿ ಯೋಜನೆಗಳು ಇವೆಯೋ ಅಂಥಕಡೆ ಲೆವಿ ಸಿಸ್ಟಂ ಜಾರಿ ಮಾಡಬೇಕು. ಆ ರೀತಿ ಮಾಡಿದರೆ ನಿಜವಾಗಿಯೂ ಈ ಸರ್ಕಾರದವರು ರೈತರ ಹಿತವನ್ನು ಸಾಧಿಸಿದ್ದಾರೆ, ರೈತರ ಚಿಂತನೆ ಸದಾ ಅವರಲ್ಲಿದೆ ಎಂಬ ಭಾವನೆ ಜನರಿಗೆ ಬರುತ್ತದೆ. ಅದಕ್ಕೆ ಈಗ ಯಾವ ಒಂದು ತಿದ್ದುಪಡಿ ಇದೆಯೋ ಅದನ್ನು ಒಪ್ಪಿಕೊಂಡರೆ ಒಳ್ಳೆಯದು. ಅದು ಸಾಧುವಾಗಿದೆ. ಸಮತಾವಾದಿ ಪಕ್ಷದ ಸ್ನೇಹಿತರು ಪ್ರೊಕ್ಯೂರ್‌ಮೆಂಟ್‌ನಲ್ಲಿ ಕಿರುಕುಳ ಇಲ್ಲ ಅಂತ ಹೇಳಿದರು. ಒಂದೇ ಒಂದು ವಿಷಯ ಹೇಳುತ್ತೇನೆ. ಈ ಹತೋಟಿಯಿಂದ ಏನು ತೊಂದರೆ ಆಗಿತ್ತು ಅಂದರೆ ಒಬ್ಬ ರೈತ 2-3 ಪಲ್ಲ ದವಸ ತೆಗೆದುಕೊಂಡು ಬರಬೇಕಾದರೂ ಪರ್ಮಿಟ್ ತೆಗೆದುಕೊಳ್ಳಬೇಕು. ಒಬ್ಬ ರೈತನಿಗೆ 1949ನೇ ಇಸವಿ ಡಿಸೆಂಬರ್ 27ನೇ ತಾರೀಖು ಪರ್ಮಿಟ್ ಕೊಟ್ಟರು. ಮಾರನೇ ದಿನ 28ನೇ ತಾರೀಖು ಅವನು ದವಸ ಸಾಗಿಸುತ್ತಿದ್ದಾಗ ಅವನನ್ನು ಹಿಡಿದರು. ಆ ಸಂದರ್ಭದಲ್ಲಿ ನಾನು ಹೋಗಿ ಅದು ಸರಿಯಲ್ಲ ಎಂದು ಎದುರಿಸಿದಾಗ ನನ್ನ ಮೇಲೂ ಕೂಡ ಕೇಸು ಹಾಕಿದರು. ಆಗ ದೇಶದಲ್ಲಿ ಹಾಹಾಕಾರ ಎದ್ದಿತ್ತು. ಸಾವಿರಾರು ಪಲ್ಲ ಬತ್ತ ಹೊರಗೆ ಹೋಗಿದೆ ಹಾಗೆ ಹೀಗೆ ಅಂತ ಅಧಿಕಾರಿಗಳು ಬೇಕಾದಷ್ಟು ಕಥೆಗಳನ್ನು ಕಟ್ಟಿದರು. ಹೀಗೆ ಎಷ್ಟು ಜನರು ಇವುಗಳನ್ನೆಲ್ಲಾ ಎದುರಿಸಿ ನಿಂತು ಬಡರೈತರ ಕಷ್ಟವನ್ನು ಹೋಗಲಾಡಿಸುವುದಕ್ಕೆ ತಯಾರಾಗಿದ್ದಾರೆ? ಅಂದಮೇಲೆ ನಾವೂ ಎಷ್ಟೋ ಸಾರಿ ಅಧಿಕಾರಿಗಳ ಜೊತೆಗೆ ಸೇರಿಕೊಂಡು ಅಂಥ ಒಂದು ಕೀಳ್ಮಟ್ಟದ ಕೆಲಸಗಳಿಗೆ ತಯಾರಾಗಿ ಹೋಗಿದ್ದೇವೆ. ಆದ್ದರಿಂದ ಪ್ರೊಕ್ಯೂರ್‌ಮೆಂಟ್‌ನಿಂದ ಬೇಕಾದಷ್ಟು ತೊಂದರೆ ಇದೆ. ಕಂಪಲ್‌ಸರಿ ಪ್ರೊಕ್ಯೂರ್‌ಮೆಂಟ್‌ನಿಂದ ಎಚ್. ಎಸ್. ಬರೆಯುವುದರಿಂದ ಷುರುಮಾಡಿ ಕೊನೆಯವರಿಗೂ ಕಿರುಕುಳ ತಪ್ಪುವುದಿಲ್ಲ. ರೂಲ್ಸ್ ಪ್ರಕಾರ ಮಾಡುವುದಾದರೂ ನಮ್ಮ ರೈತರು ವಿದ್ಯಾವಂತರಲ್ಲ, ಮುಕ್ಕಾಲುವಾಸಿ ಜನ ಬರೆಯುವುದಕ್ಕೂ ಬರದೇ ಇರುವವರು. ರೂಲ್ಸ್ ಪ್ರಕಾರ ಟಾಂ ಟಾಂ ಮಾಡಬೇಕು; ಮಹಜರ್ ಮಾಡಬೇಕು; ಇದೊಂದೂ ನಡೆಯುವುದಿಲ್ಲ. ಏನೋ ಶ್ಯಾನುಭೋಗರು ಬರೆಯುತ್ತಾರೆ, ಹೋಗುತ್ತಾರೆ. ಪರಿಸ್ಥಿತಿ ಹೀಗಿರುವುದರಿಂದ ಲೆವಿ ಸಿಸ್ಟಂ ತಂದರೆ ಅದರಿಂದ ತೊಂದರೆ ಆಗುವುದಿಲ್ಲ. ಈಗ ಅದು ಇಲ್ಲದೇ ಇರುವುದರಿಂದ ಬೇಕಾದಷ್ಟು ತೊಂದರೆ ಇದೆ. ಮೈಸೂರು ಜಿಲ್ಲೆಯಲ್ಲಿ ಶ್ರೀಮಾನ್ ಚನ್ನಬಸಪ್ಪನವರು ಹೇಳಿದರು ಇತ್ಯರ್ಥವಾಗದೇ 60-70 ಕೇಸುಗಳು ಇನ್ನೂ ಹಾಗೆಯೇ ಇವೆ. ಕಷ್ಟಪಟ್ಟು ಬೆಳೆದು ಸಂಪಾದಿಸಿದ ನೂರಾರು ರೂಪಾಯಿಗಳನ್ನು ಲಾಯರುಗಳಿಗೆ ತೆರುತ್ತಾ ಇದ್ದಾರೆ. ಅವು ಇನ್ನೂ withdraw ಆಗಿಲ್ಲ ಅಂದಮೇಲೆ ರೈತರಿಗೆ ಬೆಳೆಯುವುದಕ್ಕೆ ಏನು ಉತ್ತೇಜನ ಉಂಟಾಗಬಹುದು? ಆದ್ದರಿಂದ ಈರೀತಿ ಕಿರುಕುಳ ನಾಲ್ಕಾರು ಜನ ರೈತರಿಗಿದ್ದರೂ ಕೂಡ ಅವರಿಗೆ ಏನು ಅನ್ನಿಸುತ್ತದೆ? ನಾವು ಕಷ್ಟಪಟ್ಟು ಬೆಳೆದುಕೊಡುವುದೂ ಅಲ್ಲದೆ ಕಿರುಕುಳ ಬೇರೆ ಅನುಭವಿಸಬೇಕು ಎಂದುಕೊಂಡು ಅವರು ಬಹಳ ನಿರುತ್ಸಾಹಿಗಳಾಗುತ್ತಾರೆ. ದೇಶದಲ್ಲಿ ಇವತ್ತು ಎಲ್ಲಿ ನೋಡಲಿ ಬ್ಲಾಕ್‌ಮಾರ್ಕೆಟ್ಟು, ಲಂಚಕೋರತನ ತಾಂಡವವಾಡುತ್ತಿದೆ. ಅಂದಮೇಲೆ ನಾವು ಯಾವ ಬಡರೈತನ ಕಷ್ಟದ ಪ್ರತಿಫಲವಾಗಿ ಬಂದುದನ್ನು ತಿನ್ನುತ್ತಾ ಇದ್ದು ಮತ್ತೆ ಅವನನ್ನೇ ದೂಷಿಸುತ್ತಾ ಇದ್ದೇವೆ ಅಂದರೆ ಅದಕ್ಕಿಂತ ದ್ರೋಹ ಬೇರೆ ಇಲ್ಲ. ಶ್ರೀಮಾನ್ ಸಂಪಂಗಿರಾಮಯ್ಯನವರು ಸೂಚಿಸಿರುವ ಲೆವಿ ಸಿಸ್ಟಂ ಅನ್ನು ಶ್ರೀಮಾನ್ ಚನ್ನಬೈರೇಗೌಡರು ಒಪ್ಪಿಕೊಳ್ಳುತ್ತಾರೆ ಎಂದು ನಂಬಿದ್ದೇನೆ. ಈಗ ಮೈಸೂರು, ಮಂಡ್ಯ ಡಿಸ್ಟ್ರಿಕ್ಟ್‌ಗಳಲ್ಲಿ ಬತ್ತ ಬೆಳೆಯುವಕಡೆ ಬಹಳ ಸುಲಭವಾಗಿ ಈ ಸಿಸ್ಟಂ ಜಾರಿ ಮಾಡಬಹುದು. ಹಾಗೆ ಮಾಡಿದರೆ ರೈತ ಹೆಚ್ಚಾಗಿ ಬೆಳೆಯಬಹುದು, ಕಿರುಕುಳವಿಲ್ಲವೆಂದು ಭಾಸವಾಗುತ್ತದೆ. ಇನ್ನು

ಮುಂದಾದರೂ ರೈತರು ವ್ಯವಸಾಯದಿಂದಲೇ ಬಾಳಬೇಕು. ಈ ಕಸಬಿನಿಂದ ಸ್ವಲ್ಪ ಹೆಚ್ಚು ಲಾಭ ದೊರೆಯುತ್ತದೆ ಎಂಬ ಭಾವನೆ ಅವರಿಗೆ ಬಂದಲ್ಲಿ ಅವರು ಬೇಕಾದಷ್ಟು ಆಹಾರ ಬೆಳೆಯುತ್ತಾರೆ. ಆದ್ದರಿಂದ ಈ ತಿದ್ದುಪಡಿಯನ್ನು ಸರ್ಕಾರದವರು ಒಪ್ಪಿಕೊಂಡು ಇದನ್ನು ಜಾರಿ ಮಾಡಿದರೆ ಬಹಳ ಚೆನ್ನಾಗಿರುತ್ತದೆಂದು ಹೇಳುತ್ತೇನೆ.

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ):—ಅಧ್ಯಕ್ಷರೇ, ರೈತರಿಗೆ ಎಚ್. ಎಸ್. ಲೆಕ್ಕದಿಂದ ಎಷ್ಟು ತೊಂದರೆ ಇದೆ ಎಂದರೆ ಸಾಧಾರಣವಾಗಿ ಹೆಚ್ಚು ಬೆಳೆಯತಕ್ಕ ರೈತರಿಗೆ ಕಮ್ಮಿ ಬರೆಯುವುದು ಕಮ್ಮಿ ಬೆಳೆಯತಕ್ಕ ಬಡ ರೈತರಿಗೆ ಹೆಚ್ಚು ಬರೆಯುವುದು ಈ ರೀತಿ ಒಂದು ತರಹ ಲೆಕ್ಕಗಳನ್ನು ಸೃಷ್ಟಿಮಾಡುವುದು ಈ ಹತೋಟಿಯ ಫಲವಾಗಿ ನಮ್ಮ ದೇಶದಲ್ಲಿ ಬಂದಿದೆ. ಇದು ಈಗ ವಿಷವೃಕ್ಷವಾಗಿ ಬೆಳೆದು, ಒತ್ತಾಯದಿಂದ ಆಹಾರ ಸಂಗ್ರಹಿಸುವುದು ಹೆಚ್ಚಾಗಿ ಬಡ ಜನಗಳಿಂದ ಎಂದು ಅನ್ನುವುದನ್ನು ಬಹಳ ಜವಾಬ್ದಾರಿಯಿಂದ ಈ ಸಭೆಯಲ್ಲಿ ಹೇಳುತ್ತೇನೆ. ಮೈಸೂರಿನಲ್ಲಿ ಸಭೆ ನಡೆದಾಗ ಒಂದು ಪ್ರಶ್ನೆಗೆ ಉತ್ತರವಾಗಿ ಮುಖ್ಯ ಮಂತ್ರಿಗಳು ಮೈಸೂರು ಡಿಸ್ಟ್ರಿಕ್ಟಿನ ಕೆಲವು ಭಾಗಗಳಲ್ಲಿ ಹೆಚ್ಚು ಧಾನ್ಯ ವಸೂಲುಮಾಡಿಲ್ಲವೆಂದು ಹೇಳಿದರು. ಪ್ರತ್ಯಕ್ಷವಾಗಿ ಒಂದು ಹೋಬಳಿ ಅಂಕಿ ಅಂಶ ಸಂಗ್ರಹಮಾಡಿದ್ದರಲ್ಲಿ 400 ಪಲ್ಲ ದವಸವನ್ನು ವಸೂಲು ಮಾಡಿದ್ದರು. ಒಂದು ಹಳ್ಳಿಯಲ್ಲಿ 2-3 ಪಲ್ಲ ಬೆಳೆದಿರುವವರಿಂದಲೂ ವಸೂಲುಮಾಡಿದ್ದಾರೆ. ಒಂದು ಊರಿನಲ್ಲಿ 5-10 ಸೇರು ಬೆಳೆದದ್ದನ್ನು ಕಿತ್ತುಕೊಂಡು ಬಂದಿದ್ದಾರೆ. ಈ ಹತೋಟಿಯಿಂದ ಮತ್ತೊಂದು ಪಾಪಕರವಾದ ಅಂಶವೇನೆಂದರೆ ಯಾರು ನಿಜವಾಗಿ ಹೆಚ್ಚು ಬೆಳೆಯುತ್ತಾರೋ ಅವರು, ಅವರಿಗೆ ಬೇಕಾದಷ್ಟನ್ನು ಇಟ್ಟುಕೊಂಡು ಉಳಿದ ಹೆಚ್ಚುವರಿಯನ್ನು ಧಾರಾಳವಾಗಿ ಸರ್ಕಾರದವರಿಗೆ ಕೊಡದಿರುವುದು. ಅದನ್ನು ಅವರು ಸರ್ಕಾರಕ್ಕೆ ಕೊಡಬೇಕು. ಸರ್ಕಾರದವರು ಅದನ್ನು ಡಿಪೋಗಳಲ್ಲಿ ಇಟ್ಟು ಯಾರು ಧಾನ್ಯ ಬೆಳೆಯುವುದಿಲ್ಲವೋ ಅವರಿಗೆ ಕೊಡುವುದು ನ್ಯಾಯವಾಗಿದೆ. ವಸ್ತುತಃ ಪ್ರಚಾರದಲ್ಲಿರುವುದು ಏನಾಗಿದೆಯೆಂದರೆ ಇದರಿಂದ ರೈತರಿಗೆ ಕಿರುಕುಳ ಆಗಿರುವಷ್ಟು ಇನ್ನಾವುದರಲ್ಲೂ ಆಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದು. ಈ ದೃಷ್ಟಿಯನ್ನು ಮುಖ್ಯವಾಗಿಟ್ಟುಕೊಂಡು ಶ್ರೀಮಾನ್ ಚನ್ನಬೈರೇಗೌಡರು ಈ ನಿರ್ಣಯವನ್ನು ತಂದಿದ್ದಾರೆ ಎಂದು ನಾನು ಭಾವಿಸುತ್ತೇನೆ. ಹತೋಟಿ ಇರಬೇಕು, ಎಲ್ಲಾ ಜನಗಳಿಗೂ ಆಹಾರಸಾಮಗ್ರಿ ಒದಗಬೇಕು ಎಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಯಾವ ಬಡರೈತರು ಮೂರು ತಿಂಗಳಿಗೆ, ಆರು ತಿಂಗಳಿಗೆ ಒಂದು ವರ್ಷಕ್ಕೆ ಸಾಕಾಗುವಷ್ಟು ಧಾನ್ಯ ಬೆಳಿದಿದ್ದಾರೋ ಅವರನ್ನು ಶೋಷಣೆಮಾಡಿ, ಕಾಡಿಸಿ ಅವರಿಂದ ಧಾನ್ಯ ಕಿತ್ತುಕೊಂಡು ಬೇರೆ ಜನಗಳಿಗೆ ಕೊಡಬೇಕೆಂಬುದು ಯಾವ ಧರ್ಮ? ಅದರಲ್ಲೂ ಸಾಮಾನ್ಯವಾಗಿ ಪಟ್ಟಣಗಳಲ್ಲಿರತಕ್ಕ ಜನರಿಗೆ ರೈತರು ಪಡತಕ್ಕ ಕಷ್ಟ, ಆಹಾರಧಾನ್ಯ ಬೆಳೆಯತಕ್ಕ ಒಂದು ರೀತಿ ಏನು ಎಂಬುದರ ಅನುಭವ ಇಲ್ಲ. ಮಾನ್ಯ ಸದಸ್ಯರು 'every raiyat must be ashamed of his attitude' ಎಂದು ಹೇಳಿದರು. ನಾನು ಹೇಳುತ್ತೇನೆ 'ಯಾರ ಶ್ರಮದಿಂದ ತಾನು ಬದುಕಿ ಅವನನ್ನೇ ದೂಷಣೆಮಾಡಿ, ಬರೀ ಮಾತುಗಳಲ್ಲಿ ಯಾವನು ಕಾಲಕಳೆಯುತ್ತಾನೋ ಅವನು ನಾಚಿಕೊಳ್ಳಬೇಕು (hear ! hear !). ರೈತ ನಾಚಿಕೊಳ್ಳಬೇಕಾಗಿಲ್ಲ. ಅವನು ಸತ್ಯವಾಗಿ ಬೆಳೆದು ಕೊಡದೇ ಇದ್ದಿದ್ದ ಪಕ್ಷದಲ್ಲಿ ಮೈಸೂರು ದೇಶ ಇಂದಿನ ಸ್ಥಿತಿಯಲ್ಲಿ ಇರುತ್ತಾ ಇರಲಿಲ್ಲ ಎಂದು ಹೇಳಬಹುದು. ಯಾವ ರೈತ ಹೊಟ್ಟೆಬಟ್ಟೆ ಕಟ್ಟಿಕೊಂಡು, ಕಷ್ಟಪಟ್ಟು ಬೆಳೆದು ಆಹಾರಧಾನ್ಯ ಕೊಡುತ್ತಾನೋ ಅವನ ಹೊಟ್ಟೆಗೇ ಒಂದು ವರ್ಷಕ್ಕಾಗುವಷ್ಟಾದರೂ ಬಿಡದಿದ್ದರೆ ಏನು? ಒಂದು ಧರ್ಮದೃಷ್ಟಿಯಿಂದ ಸರ್ಕಾರದವರು ದೇಶದ ಎಲ್ಲ ಜನರಿಗೂ ಆಹಾರ ಹಂಚಬೇಕೆಂಬ ಈ ಒಂದು ವ್ಯವಸ್ಥೆ ಮಾಡಿದ್ದಾರೋ ಅದು ಅಸಾಧ್ಯವಾಗಿ ಉಂಡಮನೆಗೆ ದ್ರೋಹ ಬಗೆದಂತಾಗಲಿಲ್ಲವೇ? ರೈತನನ್ನು ಟೀಕಿಸುವುದು,

(ಶ್ರೀ ಡಿ. ಎಂ. ಸಿದ್ದಯ್ಯನವರು.)

ಅವನನ್ನು ಒಂದು ಅವಹೇಳನ ಮಾಡತಕ್ಕ ರೀತಿಯಲ್ಲಿ ಕಾಣುವುದು ನಮಗೆ ಗೌರವ ತರತಕ್ಕುದಲ್ಲವೆಂದು ಹೇಳುತ್ತೇನೆ. ಮಾರುಗೆಬೆಳೆ (commercial crops)ಯನ್ನು ಬೆಳೆಯಕೂಡದೆಂದು ಒಬ್ಬರು ಹೇಳಿದರು. ನೂರಕ್ಕೆ ತೊಂಬತ್ತೊಂಭತ್ತು ಜನ ರೈತರು ಸತ್ಯವಾಗಿದ್ದಾರೆಂದು ಹೇಳುತ್ತೇನೆ. ಕೆಲವರು ಇರಬಹುದು. 2,000, 3,000 ಪಲ್ಲ ಧಾನ್ಯ ಬೆಳೆದ ಅದನ್ನು ಬಚ್ಚಿಟ್ಟುಕೊಂಡು ಬ್ಲಾಕ್ ಮಾರ್ಕೆಟ್ ಮಾಡುವುದು ನೂರಕ್ಕೆ ಒಂದು; ಅಂಥ ಸನ್ನಿವೇಶ ಇರಬಹುದು. ಅದು ಸ್ವಾಭಾವಿಕ. ಕಮರ್ಷಿಯಲ್ ಕ್ರಾಪ್ಸ್ ಬೆಳೆಯಕೂಡದು ಎಂದು ಹೇಳುತ್ತೀರಿ. ಅವನಿಗೆ ಬೇರೆ ಕಡೆಯಿಂದ ಉತ್ಪತ್ತಿ ಯಾವುದೂ ಬರುವುದಿಲ್ಲ. ಆದ್ದರಿಂದ ಅವನು ಹಣದ ಆಶೆಗೆ ಬಲಿಬಿದ್ದು, ಹಣವನ್ನು ಶೇಖರಿಸುವ ದೃಷ್ಟಿಯಿಂದ ಆರೀತಿ ಬ್ಲಾಕ್ ಮಾರ್ಕೆಟ್ ಮಾಡುತ್ತಾನೆ. ಪಲ್ಲಾಕ್ಕೆ 170-180 ರೂಪಾಯಿ ಕೊಟ್ಟರೆ ಯಾವ ಮನುಷ್ಯನಿಗೆತಾನೇ ಮಾರಬೇಕೆಂದು ಮನಸ್ಸುಂಟಾಗುವುದಿಲ್ಲ? ಆರೀತಿ ಮಾಡುವವರು ನಮ್ಮ ದೇಶದಲ್ಲಿ ಬಹಳ ಕಡಿಮೆ ಇದ್ದಾರೆ. ವಸ್ತುತಃ ಈರೀತಿ ಕಡ್ಡಾಯವಾಗಿ ವಸೂಲು ಮಾಡುವುದರಿಂದ ಖಂಡಿತವಾಗಿಯೂ ತೊಂದರೆ ಯಾಗುವುದು ಯಾರಿಗೆಂದರೆ ನಮ್ಮ ದೇಶದಲ್ಲಿರತಕ್ಕ ನೂರಕ್ಕೆ ತೊಂಬತ್ತೊಂಭತ್ತುಜನ ರೈತರಿಗೆ. ಅವರಿಗೆ ಅಪಾರವಾದ ಕಷ್ಟನಷ್ಟ ಉಂಟಾಗುತ್ತದೆ. ಸುವ್ಯವಸ್ಥಿತವಾದ ರಾಜ್ಯಾಡಳಿತ ನಡೆಸುವುದು ಕಷ್ಟವಾದಾಗ್ಯೂ ಸರ್ಕಾರದಮೇಲೆ ಬಂದಿರತಕ್ಕ ಆಕ್ಷೇಪಣೆ, ಟೀಕೆ-ಟಿಪ್ಪಣಿಗಳೆಲ್ಲಾ 100ಕ್ಕೆ 70ರಷ್ಟು ಭಾಗ ಕಂಟ್ರೋಲ್ ಆಜ್ಞೆಯಿಂದ. ಅದರಲ್ಲೂ ಒತ್ತಾಯವಾಗಿ ಧಾನ್ಯ ವಸೂಲುಮಾಡತಕ್ಕ ರೀತಿಯಲ್ಲಿ, ಅದು ಎಷ್ಟು ಅವ್ಯವಸ್ಥೆಯಿಂದ ನಡೆಯುತ್ತಾ ಇದೆ ಎಂದರೆ ಅದನ್ನು ಬಹು ದುಃಖದಿಂದ ಹೇಳಬೇಕಾಗಿದೆ. ಜನಗಳು ನಿಜವಾಗಿಯೂ ನಮ್ಮನ್ನು ಜವಾಬ್ದಾರಿಯುತರಾದ ಸದಸ್ಯರನ್ನು ಶಪಿಸುತ್ತಿದ್ದಾರೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಕಡ್ಡಾಯವಾಗಿ ಧಾನ್ಯ ವಸೂಲು ಮಾಡುವುದನ್ನು ಸರ್ಕಾರದವರು ಬದಲಾಯಿಸಿ ನಿಜವಾಗಿಯೂ ಯಾರು ಹೆಚ್ಚಾಗಿ ಬೆಳೆಯುತ್ತಾರೆಯೋ ಅವರಿಂದ ವಸೂಲುಮಾಡಿ ಅದನ್ನು ಇಲ್ಲದೇ ಇರತಕ್ಕ ಕಡೆಗಳಿಗೆ ಹಂಚಬೇಕು. ಹಾಗೆ ಹಂಚಬೇಕೆಂಬುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಆದ್ದರಿಂದ ಸರ್ಕಾರದವರು ಶ್ರೀಮಾನ್ ಚನ್ನಬೈರೇಗೌಡರ ನಿರ್ಣಯದಲ್ಲಿರತಕ್ಕ ತಿರುಳನ್ನು ಒಪ್ಪಿಕೊಂಡು ಈಗಿರುವುದನ್ನು ಸರಿಪಡಿಸುತ್ತೇವೆಂಬ ಭರವಸೆ ಕೊಟ್ಟ ಪಕ್ಷದಲ್ಲಿ ಅವರು ಈ ನಿರ್ಣಯವನ್ನು ವಾಪಸು ತೆಗೆದುಕೊಳ್ಳುವುದಕ್ಕೆ ಸಿದ್ಧರಾಗಿದ್ದಾರೆಂದು ಭಾವಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ)—ಸ್ವಾಮಿ, ಈ ನಿರ್ಣಯವನ್ನು ಸಮರ್ಥಿಸುತ್ತೇನೆ. ಮುಖ್ಯವಾಗಿ ಇಷ್ಟುಮಾತ್ರ ನಾವು ಧಾರಾಳವಾಗಿ ಹೇಳಬಹುದು. ಯಾರು ನಿಜವಾಗಿಯೂ ರೈತರ ಕಷ್ಟಸುಖಗಳನ್ನು ನೋಡಿದ್ದಾರೋ ಅವರಂತೂ ಇದನ್ನು ಖಂಡಿತವಾಗಿಯೂ ವಿರೋಧಿಸಲಾರರೆಂದು ಹೇಳಬಲ್ಲೆ.

ಶ್ರೀ ಜಿ. ಎ. ಆಚಾರ್ಯರವರು (ಬೆಂಗಳೂರು ಜಿಲ್ಲೆ).—ಸರ್ಕಾರದವರು ನೋಡಿಲ್ಲವೆಂದು ಹೇಳುತ್ತೀರಾ !!

ಶ್ರೀ ಬಿ. ಹುಚ್ಚೇಗೌಡರು.—ಖಂಡಿತವಾಗಿ ನೋಡಿಲ್ಲವೆಂದು ಹೇಳಬಲ್ಲೆ. ಏಕೆಂದರೆ, ಈಗಿನ ಪ್ರೊಕ್ಯೂರ್‌ಮೆಂಟ್ ಕ್ರಮದಿಂದ ಎಷ್ಟು ಮಟ್ಟಿಗೆ ರೈತಾಪಿ ಜನಗಳಿಗೆ ತೊಂದರೆಯಾಗಿದೆಯೆಂಬುದನ್ನು ನಾನು ಹೇಳಬೇಕಾಗಿಲ್ಲ.

ಕೆಲವರು ಹೇಳಿದರು, ಈ ಆರ್ಡರನ್ನು ತೆಗೆದುಬಿಟ್ಟರೆ ಬಹಳ ಅನಾಹುತವಾಗುತ್ತದೆ ಎಂದು. ಹೇಗೆ ಅನಾಹುತವಾಗುತ್ತದೆ? ಯಾವುದರಿಂದ ಅನಾಹುತವಾಗುತ್ತದೆ? ವಾಸ್ತವವಾಗಿ ನೋಡಿದರೆ, ದೇಶದಲ್ಲಿ ರೈತರಿಗೆ ರೈತರಾಗಿ ಹುಟ್ಟಿದ್ದೇ ತಪ್ಪು ಎಂದೆನಿಸಿದೆ. ಆತನೇನೂ ಕಳ್ಳತನ ಮಾಡಿಲ್ಲ; ದರೋಡೆ ಮಾಡಿಲ್ಲ. ಕೇವಲ ಒಂದು ಪಲ್ಲ ಹೆಚ್ಚಿಗೆ ಬೆಳೆದದ್ದರಿಂದ ಜೈಲುವಾಸ ಮಾಡಬೇಕಾಗಿ ಬಂದಿದೆ.

ಶ್ರೀ ಜಿ. ಎ. ಆಚಾರ್ಯರವರು.—ಬೆಳೆದವರು ಮಾತ್ರದಿಂದ ಶಿಕ್ಷೆ ಅನುಭವಿಸಬೇಕೆಂದು ಎಲ್ಲಿ ಹೇಳಿದೆ?

ಶ್ರೀ ಬಿ. ಹುಚ್ಚೇಗೌಡರು.—ಶ್ರೀಮಾನ್ ಗೋವಿಂದರೆಡ್ಡಿಯವರು ಹೇಳಿದರು, ರೈತರು ಬೆಳೆಯದೆ ಸೋಮಾರಿಗಳಾಗಿ ಜಮೀನುಗಳನ್ನು ಪಾಳುಬಿಟ್ಟಿದ್ದಕ್ಕಾಗಿ ಅವರಿಗೆ......

ಶ್ರೀ ಎಂ. ಗೋವಿಂದರೆಡ್ಡಿಯವರು.—ಅವರು ಹೇಳಿದ್ದನ್ನು ಸರಿಪಡಿಸಲಿಚ್ಛಿಸುತ್ತೇನೆ, ಬೇಕಾದಷ್ಟು ಜಮೀನಿಟ್ಟುಕೊಂಡು ಬೆಳೆಯುವುದಕ್ಕೆ ಶಕ್ತಿಯಿದ್ದರೂ, ಸಾಧನಗಳಿದ್ದರೂ ತಮಗೆ ಬೇಕಾದಷ್ಟನ್ನು ಬೆಳೆದುಕೊಳ್ಳದೇ ಇದ್ದರೆ, ಅದು ರೈತನಿಗೆ ಗೌರವವಲ್ಲವೆಂದು ನಾನು ಹೇಳಿದ್ದು.

ಶ್ರೀ ಬಿ. ಹುಚ್ಚೇಗೌಡರು.—ಜಮೀನಿಟ್ಟುಕೊಂಡು ವ್ಯವಸಾಯ ಮಾಡುವುದೂ ಒಂದು ಕಸಬು. ಯಾವುದನ್ನು ಬೆಳೆದರೆ ತನಗೆ ಲಾಭದಾಯಕ ಎಂಬುದನ್ನು ಯೋಚಿಸಿ ಯಾವುದನ್ನು ಬೆಳೆಯಬೇಕೆಂಬುದನ್ನು ನಿರ್ಧರಿಸಿಕೊಳ್ಳುವುದಕ್ಕೆ ಅವನಿಗೇ ಅವಕಾಶವಿರಬೇಕು. ಹಾಗಿಲ್ಲದೆ ಸರ್ಕಾರದವರು ತಾವು ಹೇಳಿದಂತೆ ಪಟ್ಟಣಗಳಲ್ಲಿರುವ ಜನಗಳಿಗಾಗಿ ಅಲ್ಲಿನ ಸೋಮಾರಿಗಳಿಗೆ ಇಷ್ಟು ಬೆಳೆದುಕೊಡಲೇಬೇಕು ಎಂದು ಹೇಳುವುದು ಯಾವರೀತಿ ನ್ಯಾಯ? ಡಾ|| ಶ್ರೀಕಂಠೇಶ್ವರ್‌ರವರು ಹೇಳಿದರು, ಈಗಿನ ಪ್ರಕ್ಯೂರ್‌ಮೆಂಟ್‌ನಲ್ಲಿ ರೈತರಿಗೆ ಖಂಡಿತವಾಗಿ ತೊಂದರೆಯಿಲ್ಲ, ಈ ಸುಗ್ಗಿ ಆರ್ಡರನ್ನು ತೆಗೆದುಬಿಟ್ಟರೆ ಬಹಳ ಅನಾಹುತವಾಗಿಬಿಡುತ್ತದೆ ಎಂದು.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ದಯವಿಟ್ಟು......ತಿಳಿದುಕೊಳ್ಳಿ ನಾನು ಹಾಗೆ ಹೇಳಲಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಹಾಗೆ ತೊಂದರೆಯಾಗುವುದಾಗಿದ್ದರೆ ಇದಕ್ಕೆ ಅವರು ಬೆಂಬಲ ಕೊಡುತ್ತಿದ್ದರಲ್ಲವೆ?

ಶ್ರೀ ಜಿ. ಎ. ಆಚಾರ್ಯರವರು.—ರೈತರಿಗೆ ತೊಂದರೆ ಕೊಡಬೇಕೆಂದು ಸರ್ಕಾರದವರು ಇದನ್ನೆಲ್ಲಾ ಮಾಡಿದ್ದಾರೆಂದು ನಿಮ್ಮ ಭಾವನೆಯೆ?

ಶ್ರೀ ಬಿ. ಹುಚ್ಚೇಗೌಡರು.—ಈಗ ತಾವು ನೋಡುವುದಾದರೆ, ರೈತರಲ್ಲಿ ಶೇಕಡ 99 ಪಾಲು ಜನರು ಈ ಕಷ್ಟ ಅನುಭವಿಸುತ್ತಿದ್ದಾರೆಂಬುದು ಗೊತ್ತಾಗುತ್ತದೆ. ಎಲ್ಲೋ ಶೇಕಡ 10 ಜನರಿಗೆ ತೊಂದರೆಯಿಲ್ಲದಿರಬಹುದು. ಯಾವುದೋ ಕಾರಣಕ್ಕಾಗಿ ಕೆಲವರು ಈ ನಿರ್ಬಂಧಗಳು ಇದೇರೀತಿ ನಡೆದುಕೊಂಡು ಹೋಗಬೇಕೆಂದು ಹೇಳುತ್ತಿದ್ದಾರೆ. ಇವರುಗಳಿಗೇನೂ ಈ ಕಾನೂನು ಅನ್ವಯಿಸುವುದಿಲ್ಲ. ಹೀಗಾಗಿ ಕೇವಲ ಆಹಾರಧಾನ್ಯಗಳನ್ನು ಬೆಳೆದವರಿಗೆಮಾತ್ರ ಈ ಕಷ್ಟ ಬಂದಿದೆ ಅಷ್ಟೆ.

ಅದರಲ್ಲೂ ಎಷ್ಟು ಕಷ್ಟವಿದೆ ನೋಡಿ! ಯಾವುದೋ ಶ್ಯಾನುಭೋಗರು ಪಹಣಿಲೆಖ್ಖ ಬರೆಯುತ್ತಾರೆ. ನಾಲ್ಕಾಣೆ ಪೈರು, ಎಂಟಾಣೆ ಪೈರು, ಹತ್ತಾಣೆ ಪೈರು ಎಂದು ಅವರು ಯಾವರೀತಿ ನಿಷ್ಕರ್ಷಿಸಿ ಬರೆಯುತ್ತಾರೋ ಕಾಣೆ. ಯಾವ ಕಾಲದಿಂದ ಇದನ್ನು ಕಲಿತು ಪ್ರವೀಣರಾಗಿದ್ದಾರೋ ಗೊತ್ತಿಲ್ಲ. ಹೀಗೆ ನಿಗದಿಮಾಡಿದ್ದನ್ನು ಅಮಲ್ದಾರರು ತರಿಸಿಕೊಂಡು ತಮ್ಮ ನಿರೀಕ್ಷೆಗೆ ಕಮ್ಮಿ ಬಿತ್ತೆಂದು ಹೇಳಿ ಶೇಕಡ 10ರಷ್ಟು ಜಾಸ್ತಿ ಮಾಡಿ ಎಂದು ಹೇಳುತ್ತಾರೆ. ಅದರಮೇಲೆ ಸಬ್‌ಡಿವಿಜನ್ ಆಫೀಸರು ನಮ್ಮ ತಾಲ್ಲೂಕಿಗೆ 18,000 ಪಲ್ಲ ಗೊತ್ತುಮಾಡಿಬಿಟ್ಟಿದ್ದಾರೆ, ಅದಕ್ಕೆ ತಕ್ಕಂತೆ ಈ ಅಂಕಿಗಳನ್ನು ಬದಲಾವಣೆ ಮಾಡಬೇಕೆಂದು ಹೇಳುತ್ತಾರೆ. ಹೀಗೆ ಲೆಕ್ಕಗಳನ್ನು ತರಿಸಿಕೊಂಡು ಹೊಡೆದು ಹೊಡೆದು ಹಾಕುವುದಾಗುತ್ತದೆ. ಇವುಗಳನ್ನೆಲ್ಲಾ ನೋಡಿ ನಾನೊಂದು ಪ್ರಶ್ನೆ ಹಾಕುತ್ತೇನೆ. ಜಮೀನಿನಲ್ಲಿ ನಿಂತಿರತಕ್ಕ ಫಸಲನ್ನು ನೋಡಿ ಅವರು ಹೇಗೆತಾನೆ ಸರಿಯಾಗಿ ಅಂದಾಜು ಹಾಕುತ್ತಾರೆ? ಅದೂಬೇಡ, ಒಂದೆಡೆ ದವಸವನ್ನು ರಾಸಿಹಾಕಿ ಅದನ್ನು ನೋಡಿದಾಕ್ಷಣ ಎಷ್ಟು ಪಲ್ಲ ಇದೆಯೆಂದು ಹೇಳಲಿಕ್ಕಾದರೂ ಆತನಿಗೆ ಶಕ್ತಿಯಿದೆಯೇ? ಹೀಗಿರುವಲ್ಲಿ ನಿಂತಿರುವ ಫಸಲಿನಲ್ಲಿ ಜಳ್ಳಿದೆಯೋ ಪೊಳ್ಳಿದೆಯೋ; ನಿಂತಿದೆಯೋ, ಬಿದ್ದಿದೆಯೋ ಏನೂ ಗೊತ್ತಿಲ್ಲದೆ ಅಂದಾಜು ಕಟ್ಟುವುದು ಹೇಗೆ ಸಾಧ್ಯ? ಸುಮ್ಮನೆ ಏಕಾಏಕಿ ಬಂದು

(ಶ್ರೀ ಬಿ. ಹುಚ್ಚೇಗೌಡರು.)

'ನಿಮಗೆ ಇಷ್ಟು ಬೆಳೆಯಾಗಿದೆ, ಇಷ್ಟು ಕೊಟ್ಟೇ ಕೊಡಬೇಕು' ಎಂದರೆ ಯಾರು ಎಲ್ಲಿಂದ ಸಾಲ ತಂದುಕೊಡುವುದು? ಅಲ್ಲದೆ, ಇಷ್ಟು ತೆಗೆದು ಕೊಂಡಿದ್ದೇವೆ, ಇಷ್ಟು ಬಿಟ್ಟಿದ್ದೇವೆ ಎಂದು ಎಲ್ಲೂ ಹೇಳುವುದಿಲ್ಲ.

ಒಬ್ಬ ಸದಸ್ಯರು.—ಅವೆಲ್ಲಾ ಮಾಮೂಲು ಬಂದುಬಿಟ್ಟಿದೆ.

ಶ್ರೀ ಬಿ. ಹುಚ್ಚೇಗೌಡರು.—ಮಾಮೂಲು ಎಂದರೆ ಹಿಂದೆಲ್ಲಾ ಇತ್ತೆ? ಈಗ 8-10 ವರ್ಷ ಗಳಿಂದ ಈ ಆರ್ಡರ್ ಬಂದು ದಿವಸ ದಿವಸಕ್ಕೂ ರೈತರು ಎಷ್ಟು ಕಷ್ಟ ಪಡಬೇಕಾಗಿ ಬಂದಿದೆ ಯೆಂಬುದನ್ನು ಹೇಳಬೇಕಾಗಿಲ್ಲ. ಹೊಲದಿಂದ ಮನೆಗೆ ತಂದಿಟ್ಟುಕೊಂಡರೆ ಸಾಕು ಕಿತ್ತು ಕೊಂಡು ಹೋಗುತ್ತಾರೆ. ಅನೇಕವೇಳೆ ಬೀಜಕ್ಕೆ ತೆಗೆದುಕೊಂಡುಹೋಗುತ್ತಿದ್ದುದನ್ನೂ ಕಿತ್ತುಕೊಂಡು ಹೋಗಿದ್ದಾರೆ. ಹೇಗೆ ಸಾಗಿಸ ಬೇಕಾದರೂ ಪರ್ಮಿಟ್ ಬೇಕಂತೆ! ಆ ಅನಕ್ಷ ರಸ್ಥರೈತ ಎಲ್ಲಿಂದ ಎಲ್ಲಿಗೋ ಹೋಗಿ ಯಾರಿಂದ ಪರ್ಮಿಟ್ ತರುವುದು? ಅಲ್ಲದೆ ಮನೆಯಿಂದ ದವಸ ತೆಗೆದುಕೊಂಡುಹೋದರೆ, ಅದಕ್ಕೂ ಕೂಡಲೆ ದುಡ್ಡುಕೊಡುವುದಿಲ್ಲ. ಮುಂದೆ ಹಣ ಬರುವುದು ಯಾವಕಾಲಕ್ಕೋ! ಜೊತೆಗೆ ಅಳತೆ ಮಾಡಿ ಸರ್ಕಾರಕ್ಕೆ ಕೊಡುವುದರಲ್ಲೂ ಪಲ್ಲಾಕ್ಕೆ ಹತ್ತು ಸೇರು ಹೆಚ್ಚಿಗೆ ಕೊಡಬೇಕಾಗಿದೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಲ್ಲಿ ಕೊಡುತ್ತಾರೆ!

ಶ್ರೀ ಬಿ. ಹುಚ್ಚೇಗೌಡರು.—ಬೇಕಾದರೆ ನಿರ್ದಿಷ್ಟವಾಗಿ ಹೇಳುತ್ತೇನೆ. ಹಾಸನ ಡಿಸ್ಟ್ರಿಕ್ಟಿನಲ್ಲಿ ಒಂದುಕಡೆ ಹೀಗಾಗಿರುವುದು ನನಗೆ ಗೊತ್ತು.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಶೇಕಡ 90 ಜನರು ತಾವೇತಾವಾಗಿ ಮುಂದೆ ಬಂದು ಕೊಡುತ್ತಿದ್ದಾರೆ. ಅಂಥಾದ್ದರಲ್ಲಿ ನೀವು ಹೇಳಿದಂತೆ 110 ಸೇರು ತೆಗೆದುಕೊಳ್ಳುತ್ತಿದ್ದಾರೆಯೆ?

ಶ್ರೀ ಬಿ. ಹುಚ್ಚೇಗೌಡರು.—110 ಸೇರು ಕೊಟ್ಟಿರುವುದನ್ನು ನಾನೇ ನೋಡಿದ್ದೇನೆ. ತಾವು ವಿಚಾರಣೆ ಮಾಡುವುದಾದರೆ ಎಲ್ಲಿ ಎಂಬುದನ್ನೂ ಹೇಳುತ್ತೇನೆ. ಡೆಪ್ಯುಟೀ ಕಮಿಷನರಿಗೆ ತಿಳಿಸಿದ್ದಕ್ಕೆ ಹಸಿಭತ್ತ ಎಂದು ತೆಗೆದುಕೊಳ್ಳಿ ಎಂದು ನಾನೇ ಹೇಳಿದ್ದೇನೆಂದು ಅವರು ಹೇಳಿದರು.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಲ್ಲಿ, ಎಲ್ಲಿ?

ಶ್ರೀ ಬಿ. ಹುಚ್ಚೇಗೌಡರು.—ಹಾಸನ ಡಿಸ್ಟ್ರಿಕ್ಟ್, ಅರಸೀಕೆರೆ ತಾಲ್ಲೂಕು ಕಣಕಟ್ಟೆ ಹೋಬಳಿಯಲ್ಲಿ ಇದು ನಡೆಯಿತೆಂದು ನಿರ್ದಿಷ್ಟವಾಗಿ ಹೇಳುತ್ತೇನೆ. ತಾವು ವಿಚಾರಿಸಬಹುದು. ಇದೆಲ್ಲಾ ಮಾಮೂಲಾಗಿ ಕೊಡಬೇಕಾಗಿದೆ.

ಈ ಎಲ್ಲಾ ಕಾರಣಗಳಿಂದ ಈ ನಿರ್ಬಂಧಗಳನ್ನು ತೆಗೆದುಹಾಕಿದಹೊರತು ರೈತರಿಗೆ ತೊಂದರೆ ತಪ್ಪುವುದಿಲ್ಲ. ಈಗ ಇದಕ್ಕೊಂದು ತಿದ್ದುಪಡಿಯನ್ನು ಸೂಚಿಸಿದ್ದಾರೆ. ಅದನ್ನೂಕೂಡ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಏಕೆಂದರೆ ಅಲ್ಲಿ ಹೇಳಿರುವುದು 'ಲೆವಿ ಸಿಸ್ಟಂ' ಎಂದು. ಇದರ ಅರ್ಥ ಅಷ್ಟಾಗಿ ನನಗೆ ಗೊತ್ತಾಗುವುದಿಲ್ಲ. ಅವರದಕ್ಕೆ ವಿವರಣೆಯನ್ನೂ ಕೊಟ್ಟಿಲ್ಲ. ವಿವರಣೆ ಬಂದಮೇಲೆ ಏನಾದರೂ ಹೇಳಬಹುದು.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಸ್ವಾಮಿ, ನಾನು ಅದಕ್ಕೆ ವಿವರಣೆಯನ್ನು ಕೊಟ್ಟಾಗ ಮಾನ್ಯ ಸದಸ್ಯರು ಇರಲಿಲ್ಲ. ಆದ್ದರಿಂದ ಅದು ಅವರಿಗೆ ಗೊತ್ತಾಗದಿದ್ದರೆ ಅದು ನನ್ನ ತಪ್ಪಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಇರಬಹುದು. ಅಂತೂ ನನಗೆ ಅದರ ವಿಷಯ ಗೊತ್ತಿಲ್ಲ. ಸಧ್ಯಕ್ಕೆ ಈ ನಿರ್ಣಯದಲ್ಲಿ ಇರುವುದನ್ನು ಮಾತ್ರ ನಾನು ಹೇಳುತ್ತೇನೆ.

ಆಮೇಲೆ ನಮ್ಮ ಸೋಷಿಯಲಿಸ್ಟ್ ಪಾರ್ಟಿ ನಾಯಕರು ಹೇಳಿದರು ಈ ಪದ್ಧತಿಯನ್ನು ತೆಗೆದುಹಾಕಿಬಿಟ್ಟರೆ ಖಂಡಿತವಾಗಿ ಅನೇಕರಿಗೆ ತೊಂದರೆಯಾಗುತ್ತದೆ ಎಂದು. ಇನ್ನೊಂದು ಸಂದರ್ಭದಲ್ಲಿ ಅವರೇ ವಾದ ಮಾಡಿದ್ದಾರೆ ಎಲ್ಲಾ ನೌಕರರಿಗೂ 100 ರೂಪಾಯಿ ಸಂಬಳ ಕೊಡಬೇಕು ಎಂದು. ಅಂಥವರು ಧಾರಣೆವಾಸಿಗಳ ಮಟ್ಟಿಗೆ ಮಾತ್ರ ರೈತರಿಗೆ ಪಲ್ಲಾಕ್ಕೆ

20 ರೂಪಾಯಿಗಳಮೇಲೆ ಕೊಡಕೂಡದೆಂದು ವಾದಿಸುತ್ತಾರೆ. ಇದು ಯಾವ ನ್ಯಾಯ? ಅವರೇನಾದರೂ ಒಂದು ಪಲ್ಲ ಭತ್ತ ಬೆಳೆಯಲಿಕ್ಕೆ ಎಷ್ಟು ಖರ್ಚಾಗುತ್ತದೆಂದು ಲೆಕ್ಕ ಹಾಕಿದ್ದಾರೆಯೆ? ಅವರು ಹೇಳುವಂತೆ ಒಬ್ಬ ಕೂಲಿಗಾರನಿಗೆ 100 ರೂಪಾಯಿ ಕೊಡಬೇಕೆಂದರೆ ರೈತ ತನ್ನ ಹೆಂಡತಿಮಕ್ಕಳು ಎಲ್ಲರನ್ನೂ ಕಟ್ಟಿಕೊಂಡು ಮಡಿಯುತ್ತಾನಲ್ಲಾ- ಅವರಿಗೂ ನೂರು ರೂಪಾಯಿಯನ್ನು ಕೊಡುವುದಕ್ಕೇನಾದರೂ ಏರ್ಪಾಡು ಮಾಡುತ್ತಾರೆಯೇ?

ಆದ್ದರಿಂದ ಸರ್ಕಾರದವರು ರೈತನಿಂದ ದವಸಗಳನ್ನು ತೆಗೆದುಕೊಳ್ಳುವ ವಿಷಯದಲ್ಲಿ ಈ ಒಂದು ಅಂಶವನ್ನು ಗಮನದಲ್ಲಿಡಬೇಕು. ಹಸುವಿನ ಕೆಚ್ಚಲಿನಿಂದ ಹಾಲನ್ನುಮಾತ್ರ ಕರೆದುಕೊಳ್ಳಬೇಕು. ಅದುಬಿಟ್ಟು ನಮಗೆ ಹೆಚ್ಚಿಗೆ ಹಾಲು ಬೇಕೆಂದು ಹೇಳಿ, ಅದರ ಕೆಚ್ಚಲಿನಿಂದ ಹಾಲು ಬರಲಿ, ರಕ್ತ ಬರಲಿ, ಇಲ್ಲವೇ ಮಾಂಸ ಬರಲಿ ಸುಮ್ಮನೆ ಕರೆಯಿರಿ ಎಂದು ಹೇಳಿದರೆ ಹೇಗೆ? ರೈತನೂ ಒಂದು ಕಾಮಧೇನು. ಏನು ಬೇಕಾದರೂ ಕೊಡುತ್ತಾನೆ. ಆದರೆ ಆತನ ವಿಷಯದಲ್ಲಿ ನಾನು ಹೇಳುವುದಿಷ್ಟೆ. ನೀವೇನೋ ದವಸವನ್ನು ತಂದು ಈ 12 ಲಕ್ಷ ಜನರಿಗೆ ಪಡಿತರರೀತ್ಯಾ ಕೊಡುತ್ತಿದ್ದೀರಿ. ಆದರೆ ಹೀಗೆ ತಂದು ಹಂಚಿಕೆ ಮಾಡುವಾಗ, ಆ ರೈತರುಗಳು ಹೇಗೆ ಬೆಳೆ ಮಾಡುತ್ತಾರೆ; ಈ ಆರ್ಡರಿನಿಂದ ಅವರಿಗೆಷ್ಟು ತೊಂದರೆಗಳಾಗುತ್ತಿವೆಯೆಂಬುದನ್ನು ಯಾರಿಗೆ ಹೇಳಿದರೂ ಏನೂ ಪರಿಹಾರ ಸಿಕ್ಕುತ್ತಿಲ್ಲ. ಈ ಹತೋಟಿ ಆಜ್ಞೆಯಲ್ಲಿ ಎಲ್ಲವೂ ಇದೆ. ಅದರಂತೆ ಎಲ್ಲರಿಗೂ ಹಳ್ಳಿಗಳಲ್ಲಿ ತಿಳಿಯುವಂತೆ ನೋಟೀಸ್ ಹಾಕುತ್ತೇವೆಂದು ಹೇಳುತ್ತಾರೆ. ರೈತರು ಅನಕ್ಷರಸ್ಥರು. ಒಂದು ಅರ್ಜಿಯನ್ನು ಬರೆದುಕೊಂಡು ಬರುವುದಕ್ಕೂ ಅವರಿಗೆ ಗೊತ್ತಿಲ್ಲ. ಅನೇಕ ಸಂದರ್ಭಗಳಲ್ಲಿ ತಮಗೆ ಬರಬೇಕಾದ ಹಣಕ್ಕಾಗಿ ತಾಲ್ಲೂಕು ಕಛೇರಿಗಳ ಮುಂದೆ ತಿಂಗಳುಗಟ್ಟಲೆ ಕಾಯಬೇಕಾಗುತ್ತದೆ. ಸರ್ಕಾರದವರು ದವಸವನ್ನೇನೋ ಅಳೆಸಿಕೊಂಡುಬಿಡುತ್ತಾರೆ. ಒಂದೆರಡು ಸಂದರ್ಭದಲ್ಲಿ ಹಣ ಬೇಗ ಕೊಡುತ್ತಾರೆ. ಮಿಕ್ಕ ಸಂದರ್ಭಗಳಲ್ಲಿ ಆರು ತಿಂಗಳಾದರೂ ರೈತರಿಗೆ ಹಣ ಬರುವುದಿಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡರು.—ತಾವು ಹೇಳುತ್ತಿರುವುದು ಯಾವ ದೇಶದ ಮಾತು?

ಶ್ರೀ ಬಿ. ಹುಚ್ಚೇಗೌಡರು.—ಇಲ್ಲಿ, ನಮ್ಮ ದೇಶದ ಮಾತು. ಆರು ತಿಂಗಳಗಟ್ಟಲೆ ಹಣ ಕೊಡುವುದಿಲ್ಲ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಾವೇ ಹೇಳಿ, ತಮಗೆ ಹಣ ಕೊಡಲು ಆರು ತಿಂಗಳುಗಟ್ಟಲೆ ತಡಮಾಡಿದರೆ?

ಶ್ರೀ ಬಿ. ಹುಚ್ಚೇಗೌಡರು.—ನನ್ನ ವಿಚಾರ ನಾನು ಹೇಳುವುದಿಲ್ಲ. ಸಾಮಾನ್ಯವಾಗಿ ರೈತರ ವಿಚಾರದಲ್ಲಿ ಆಗುವುದನ್ನು ಹೇಳುತ್ತೇನೆ. ಈ ಸಂಬಂಧವಾಗಿ ಡೆಪ್ಯುಟೀಕಮಿಷನರಿಗೆ ನಾನು ಒಂದು ಕಾಗದವನ್ನೂ ಕೂಡ ಬರೆದಿದ್ದೇನೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಯಾವುದೋ ಒಂದು ವಿಚಾರದಲ್ಲಿ ಆದುದ್ದನ್ನು ತೆಗೆದುಕೊಂಡು ಜನರಲೈಸ್ ಮಾಡಬಾರದು.

ಶ್ರೀ ಬಿ. ಹುಚ್ಚೇಗೌಡರು—ಅನೇಕ ವಿಷಯಗಳಲ್ಲಿ ಕಂಟ್ರೋಲ್ ತೆಗೆದರು. ಅದರಿಂದ ಅನಾಹುತವೇನೂ ಆಗಿಲ್ಲ. ಶ್ರೀಮಾನ್ ಚನ್ನಬಸಪ್ಪನವರು ಹೇಳಿದಂತೆ ಎಂದಾದರೂ ಈ ಪರಿಸ್ಥಿತಿಯನ್ನು ಎದುರಿಸಲೇಬೇಕು. ಯಾವಾಗ ತೆಗೆದರೂ ಎದುರಿಸಬೇಕು. ಕಂಟ್ರೋಲ್ ಇರುವುದರಿಂದ ಆಹಾರಧಾನ್ಯವನ್ನು ಬೆಳೆಯುವುದಿಲ್ಲ. ಈ ಕಷ್ಟನಷ್ಟಗಳನ್ನು ತಾವು ಅನುಭವಿಸಬೇಕೆಂದು, ಜೈಲಿಗೂಕೂಡ ಹೋಗಬೇಕಾಗಬಹುದೆಂದು ಹೆದರಿಕೊಂಡು ರೈತರು ಬೆಳೆಯುವುದೇ ಇಲ್ಲ. ರೈತರೇನೂ ಕಳ್ಳತನ ಮಾಡುವುದಿಲ್ಲ. ಮತ್ತೊಬ್ಬರ ಮನೆಯನ್ನು ನುಗ್ಗಿ ದೋಚಿಕೊಂಡು ಬರುವುದಿಲ್ಲ. ಹೀಗಿದ್ದರೂ ಸರ್ಕಾರದವರು ಕೇಳಿದಷ್ಟು ದವಸವನ್ನು ಕೊಡಲಿಲ್ಲವೆಂದು ಅವರಿಗೆ ಶಿಕ್ಷೆ ಮಾಡುವುದೆ? ಅವರು ಗೊತ್ತುಮಾಡಿದಷ್ಟು ರೈತ ಕೊಡಬೇಕು, ಬೆಳೆದಷ್ಟಲ್ಲ. ಹಾಗೆ ಕೊಡದಿದ್ದರೆ ಜೈಲಿಗೆ ಹೋಗಬೇಕು! ಇಂತಹ ಕಾನೂನು ಯಾವ ದೇಶದಲ್ಲಿದೆಯೋ ನನಗೆ ಗೊತ್ತಿಲ್ಲ. ಇನ್ನಾವ ಸರ್ಕಾರ ಇಷ್ಟು ಕ್ರೂರವಾದ ಶಿಕ್ಷೆ ವಿಧಿಸಲು

(ಶ್ರೀ ಬಿ. ಹುಚ್ಚೇಗೌಡರು.)

ಕಾನೂನು ಮಾಡಿದೆಯೋ ಗೊತ್ತಿಲ್ಲ. ಶ್ರೀಗಳಾದ ನಂಜರಾಜ ಅರಸಿನವರೂ, ಡಿ. ಎಂ. ಸಿದ್ದಯನ್ನವರೂ ಹೇಳಿದುದನ್ನು ನಾನು ಅನುಮೋದಿಸುತ್ತೇನೆ. ಆದರೆ ಶ್ರೀಮಾನ್ ಗೋವಿಂದರೆಡ್ಡಿಯವರು ರೈತಸಂಘದ ಅಧ್ಯಕ್ಷರಾಗಿದ್ದುಕೊಂಡು ಈ ರೀತಿ ಹೇಳಿದುದನ್ನು ಕೇಳಿ ನನಗೆ ವಿಷಾದವಾಗುತ್ತದೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಅವರು ಕೊಡುವ ಧಾನ್ಯಕ್ಕೆ ಹೆಚ್ಚಾಗಿ ಬೆಲೆ ಕೊಟ್ಟರೆ ರೈತರು ಏಕೆ ಮಾರುವುದಿಲ್ಲ? ತಾವೇ ಮುಂದೆ ಬಂದು ಮಾರುತ್ತಾರೆ.

ಶ್ರೀ ಬಿ. ಹುಚ್ಚೇಗೌಡರು.—ಶಿಕ್ಷೆಗಳಿಗೊಳಗಾಗಲು ಅವರು ಏಕೆ ಬೆಳೆಯಬೇಕು? ಬೆಳೆದರೆ ಸರ್ಕಾರದವರು ತೆಗೆದುಕೊಂಡುಹೋದರೆ ಹೋಗುತ್ತಾರೆ, ಇಲ್ಲದಿದ್ದರೆ ಅವರು ಹೇಳುವ ತನಕ ದವಸವನ್ನು ಇಟ್ಟಿರಬೇಕು. ಇದಕ್ಕೆ ತಪ್ಪಿದರೆ ಜೈಲಿಗೆ ಹೋಗಬೇಕು. ರೈತರಿಗೆ ಹೀಗೆ ಮಾಡಿದರೆ ಅವರ ಮಕ್ಕಳು ಮರಿಗಳ ಗತಿಯೇನು? ಹೀಗೆ ಅವರನ್ನು ಶೋಷಣೆ ಮಾಡತಕ್ಕವರಿಗೆ ನಾಚಿಕೆ ಬೇಡವೆ? ಮುಂದೆಯೂ ಹಾಗೆಯೇ ಮಾಡುತ್ತಾಹೋದಲ್ಲಿ ದೇಶದಲ್ಲಿ ಅಸಮಾಧಾನ ಹೆಚ್ಚಿ ಜನ ದಂಗೆಯೇಳುತ್ತಾರೆಂದು ಎಚ್ಚರಿಕೆ ಕೊಟ್ಟು ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. SPEAKER.—The House will now adjourn for lunch for half an hour.

The Assembly adjourned for lunch at Thirty-five Minutes past Two of the Clock and re-assembled at Twenty Minutes past Three of the Clock, Mr. Speaker (The Hon'ble Sri V. Venkatappa) in the Chair.

---

*ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—ಅಧ್ಯಕ್ಷರೇ, ಒಂದನೆಯ ಶರಾವನ್ನು ಮೈಸೂರು ಸಂಸ್ಥಾನದಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಜನತಾಪಕ್ಷದ ಕಾರ್ಯದರ್ಶಿಗಳಾದ ಶ್ರೀ ಬಿ. ಚನ್ನಬೈರೇಗೌಡರು ಈ ಸಭೆಯ ಮುಂದಿಟ್ಟಿದ್ದಾರೆ. ಮುಂದೆ ರಾಜ್ಯದ ಆಡಳಿತದಲ್ಲಿ ವಿಶೇಷ ಜವಾಬ್ದಾರಿ ವಹಿಸಿಕೊಂಡು ಕೆಲಸ ಮಾಡುವುದಕ್ಕೆ ಅವರು ಒಂದು ಹಾದಿಯನ್ನು ನಿರ್ಮಾಣ ಮಾಡಿದ್ದಾರೆ. ಅವರು ಏನು ಮಾತನಾಡುತ್ತಾರೆ, ಈ ವಿಚಾರದಲ್ಲಿ ಅವರ ಅಭಿಪ್ರಾಯವೇನಿದೆ, ಮುಂದೆ ದೇಶಕ್ಕೆ ಎಷ್ಟರಮಟ್ಟಿಗೆ ಆಹಾರ ಒದಗಿಸುವುದಕ್ಕೆ ಒಂದು ಯೋಜನೆ ತಯಾರಿಸಿದ್ದಾರೆ ಎಂಬುದನ್ನು ತಿಳಿದುಕೊಳ್ಳಬೇಕೆಂದು ನಾನು ಬಹಳ ಕುತೂಹಲವುಳ್ಳವನಾಗಿದ್ದೇನೆ. ಇದೇ ಸಂದರ್ಭದಲ್ಲಿ ಅಧ್ಯಕ್ಷರೂ ಮತ್ತು ಕಾರ್ಯದರ್ಶಿಗಳೂ ಕೂಡ ಮಾತನಾಡಿದರು. ಅವರ ಭಾಷಣ ಕೇಳಿದಮೇಲೆ ಮೈಸೂರು ದೇಶದ ಜನತೆಗೆ ಜನತಾಪಕ್ಷ ಎಷ್ಟುಮಟ್ಟಿಗೆ ಉಪಕಾರ ಮಾಡುತ್ತದೆ ಎಂಬುದನ್ನು, ಏನು ಪರಿಣಾಮವನ್ನುಂಟುಮಾಡುತ್ತದೆ, ಹೇಗೆ ಎಂಬುದನ್ನು ಈ ದಿವಸ ನಾನು ಯೋಚನೆ ಮಾಡಿದ್ದರಲ್ಲಿ ಅದರಲ್ಲಿ ಒಂದಾದರೂ ಸಹಾಯಕವಾದ ಸಲಹೆ ಕಾಣಲಿಲ್ಲ. ಆಹಾರಧಾನ್ಯವನ್ನು ನಾವು ರೈತರಿಂದ ತೆಗೆದುಕೊಳ್ಳದೆ ಬಿಟ್ಟುಬಿಡಬೇಕೆಂದು ಹೇಳಿದರು. ಹಾಗಾದರೆ, ಬೆಳೆದ ಆಹಾರಧಾನ್ಯವು ಏನಾಗಬೇಕು? ಈಗಿರುವ ಕಂಟ್ರೋಲ್ ರೀತ್ಯ ಆಹಾರಧಾನ್ಯವನ್ನು ಒಬ್ಬರು ಇನ್ನೊಬ್ಬರಿಗೆ ಮಾರುವಹಾಗಿಲ್ಲ. ಎಲ್ಲಿಯವರೆಗೆ ಕಂಟ್ರೋಲಿದೆ, ಎಲ್ಲಿಯವರೆಗೆ ರೇಷನ್ ಇದೆ, ಎಲ್ಲಿಯವರೆಗೆ ಸರ್ಕಾರ ಅದನ್ನು ನಡೆಸಿಕೊಂಡು ಬರುತ್ತದೆ ಅಲ್ಲಿಯವರೆಗೆ ಬೆಳೆದ ಆಹಾರಧಾನ್ಯವನ್ನು ಒಬ್ಬರು ಇನ್ನೊಬ್ಬರಿಗೆ ಬೇಕಾದಂತೆ ಮಾರುವಹಾಗಿಲ್ಲ. ಅವರು ಹೇಳುವಪ್ರಕಾರ ಕಂಟ್ರೋಲ್ ತೆಗೆದುಹಾಕಬೇಕು, ಶೇಖರಣೆ ಮಾಡುವುದನ್ನು ನಿಲ್ಲಿಸಬೇಕು. ಆದರೆ, ಶೇಖರಿಸುವುದನ್ನು ನಿಲ್ಲಿಸಿದಾಗ ಬೆಳೆದ ರೈತ ಆಹಾರಧಾನ್ಯವನ್ನು ತನ್ನಲ್ಲಿಟ್ಟುಕೊಂಡು ಏನು ಮಾಡಬೇಕೆಂಬುದನ್ನು ತಿಳಿಸಲಿಲ್ಲ. ಮೈಸೂರು ದೇಶದಲ್ಲಿ ಬೆಳೆಯುವ ರೈತರು ಎಷ್ಟು, ಬೆಳೆಯದಿರುವ ರೈತರೆಷ್ಟು, ಈ ದೇಶಕ್ಕೆ ಒಟ್ಟು ಎಷ್ಟು ಆಹಾರಧಾನ್ಯ ಅಗತ್ಯ, ಎಷ್ಟು ಹೊರದೇಶದಿಂದ ಬರು

ತ್ತದೆ, ಈಗ ಶೇಖರಿಸುತ್ತಿರುವ ಆಹಾರಧಾನ್ಯವನ್ನು ಶೇಖರಿಸದೆ ಬಿಟ್ಟರೆ ಹೇಗೆ ಅದನ್ನು ಭರ್ತಿ ಮಾಡಬೇಕು ಎಂದು ಸೂಚಿಸದೆ ಶೇಖರಣೆಯನ್ನು ವಜಾಮಾಡಿ ಎಂದು ಹೇಳಿದರೆ ಹೇಗೆ? ಅದಕ್ಕೆ ಪ್ರತಿಯಾಗಿ ಬೇರೊಂದು ಮಾರ್ಗವನ್ನು ಹೇಳಿದ್ದರೆ ಒಪ್ಪಬಹುದಾಗಿತ್ತು. ಟಿಕೆಟ್ ಚೆಕ್ ಮಾಡಿದಾಗ ಟಿಕೆಟ್ ಇಲ್ಲದಿದ್ದರೆ ದಾರಿಯಲ್ಲಿ ಕೆಳಗೆ ಇಳಿಯುವಹಾಗಿಲ್ಲ, ಟಿಕೆಟ್ ಇಲ್ಲದೆ ಮುಂದೆ ಬಿಡುವಹಾಗಿಲ್ಲ, ಆಗ ಟಿಕೆಟ್ ಪಡೆಯದಿರುವವರನ್ನು ಆಕಾಶದಿಂದ ಕೆಳಕ್ಕೆ ತಳ್ಳುವಂತೆ ತಳ್ಳಲು ಸಾಧ್ಯವೇ? ಹಾಗೆ ಈ ಶೇಖರಣೆಯನ್ನು ಬಿಟ್ಟುಬಿಡಿ ಎಂದು ಹೇಳಿ, ಮುಂದೆ ಯಾವರೀತಿ ಮಾಡಬೇಕೆಂದು ಹೇಳದಿದ್ದರೆ ಜನತೆಯನ್ನು ಆಕಾಶದಿಂದ ಭೂಮಿಗೆ ತಳ್ಳಿದಂತಾಗುತ್ತದೆ. ಜನತಾಪಕ್ಷದ ಒಂದು ಧೋರಣೆ ಈ ರೀತಿ ಇರುವಂತೆ ನನಗೆ ಕಾಣುತ್ತಿದೆ. ಶ್ರೀ ಸಿದ್ದಯ್ಯನವರೂ ಇದನ್ನು ಒಪ್ಪಿದ್ದರು. ಅವರು ಇದೇರೀತಿ 15ನೆಯ ನಿರ್ಣಯವನ್ನು ಕಳುಹಿಸಿದ್ದಾರೆ. ಅದು ಈ ರೀತಿ ಇದೆ:

"This Assembly is of the opinion that all controls on cloth and other necessaries of life other than food stuffs may be removed,"

Sri D. M. SIDDIAH.—It is a wrong version. It is wrongly worded.

Mr. SPEAKER.—It is not wrong. It is corrected.

Sri D. M. SIDDIAH.—I do not move it.

Mr. SPEAKER.—The Hon'ble Member need not move it. But that is a different matter.

ಶ್ರೀ ಎ. ಭೀಮಪ್ಪನಾಯಕರು.—ನಮ್ಮ ಮಿತ್ರರು ಅದನ್ನು ಮಂಡಿಸುವುದಿಲ್ಲವೆಂದು ಹೇಳಿದರೂ ಈ ದಿವಸ ಇರುವ ಭಾವನೆ ಆಹಾರದ ಕಂಟ್ರೋಲ್ ಹೋಗಬೇಕೆಂಬುದು ಎಂದು ಅರ್ಥವಾಗಿದೆ. ಆಹಾರದ ಕಂಟ್ರೋಲ್ ತೆಗೆಯುವುದಕ್ಕೆ ಅಧಿಕಾರವಿದೆಯೋ, ಇಲ್ಲವೇ ಎಂಬುದನ್ನು 252ನೆಯ ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ಸರ್ಕಾರದವರು ತಿಳಿಸಿದ್ದಾರೆ. ಅದು ಈ ರೀತಿ ಇದೆ:—

"With the enactment by the Indian Parliament of the Essential Supplies (Temporary Powers) Act, the general direction and policy in regard to foodgrains has been assumed by the Central Government who have made it clear that in the present context of scarcity and rising prices, control over essential foodgrains has necessarily to continue. This and controls over cloth, iron and steel, etc., being All-India questions, no independent action by this State isolation from the rest of the country is possible."

ಅಂದರೆ ಇದು ಇಡೀ ಭಾರತಕ್ಕೆ ಅನ್ವಯಿಸಿದ ಸಮಸ್ಯೆ. ಭಾರತದಲ್ಲಾದರೂ ಸಾಕಷ್ಟು ಧಾನ್ಯವಿದೆಯೋ ಇಲ್ಲವೋ ಗೊತ್ತಿಲ್ಲ. ಈ ದಿವಸ ಭಾರತವು ಅಮೇರಿಕ, ರಷ್ಯಾ ಮುಂತಾದ ದೇಶಗಳ ಸಹಾಯವನ್ನು ಕೇಳಿದೆ. ಇದನ್ನು ನೋಡಿದರೆ ಕೊರತೆಯಿದೆ, ಸಾಕಷ್ಟು ಬೆಳೆಯಾಗುವುದಿಲ್ಲ ಎಂದು ಗೊತ್ತಾಗುತ್ತದೆ. ಈ ವಿಚಾರದಲ್ಲಿ ಇನ್ನೊಂದು ನಿರ್ಣಯ ಬೇರೆ ಇದೆ. ಅದರಲ್ಲಿ ಸಾಕಷ್ಟು ಮಳೆ ಬೆಳೆಯಿಲ್ಲದೆ ಇರುವುದರಿಂದ ಕಂದಾಯ ವಜಾಮಾಡಿ ಕಂಟ್ರೋಲ್ ಪದ್ಧತಿಯನ್ನು ಸಧ್ಯಕ್ಕೆ ಅಂಥ ಕಡೆಗಳಿಗೆ ಅನ್ವಯಿಸದಿರುವುದಕ್ಕೆ ಪ್ರಯತ್ನಮಾಡಿ ಎಂದು ಹೇಳಿದೆ. ಶ್ರೀ ಚನ್ನಬಸಪ್ಪನವರು ತಂದಿರುವ 12ನೆಯ ಠರಾವಿನಲ್ಲಿ ಆಹಾರಧಾನ್ಯಗಳ ಶೇಖರಣೆಯನ್ನು ಜಾಗರೂಕತೆಯಿಂದ ಮಾಡಬೇಕು, ಬೆಳೆಯಿಲ್ಲದಿರುವಕಡೆ ಕಡಿಮೆ ಪ್ರಮಾಣದಲ್ಲಿ ಸಂಗ್ರಹಿಸಬೇಕು ಎಂಬ ಅರ್ಥವು ಹೊರಪಡುತ್ತದೆ. ಕಂಟ್ರೋಲನ್ನು ಕಡ್ಡಾಯವಾಗಿ ಈ ದಿವಸ ತೆಗೆದರೆ, ಎಷ್ಟು ಆಹಾರ ಶೇಖರಣೆಯಾಗುತ್ತಿತ್ತೋ ಅದನ್ನು ನಿಲ್ಲಿಸಿದರೆ ಜನರು ತಾವಾಗಿಯೇ ಮುಂದೆಬಂದು ದವಸವನ್ನು ಕೊಡಬೇಕೆಂದು ಅರ್ಥವಾಗುತ್ತದೆ. ಈ ನಿರ್ಣಯ ತಂದಿರುವವರಾಗಲಿ ಅಥವಾ ಅದಕ್ಕೆ ಬೆಂಬಲ ಕೊಟ್ಟವರಾಗಲೀ ತಾವಾಗಿಯೇ ಮುಂದೆಬಂದು ಕೊಡುವುದಕ್ಕೆ ಉದಾಹರಣೆ ಹೇಳಿದ್ದರೆ ಚೆನ್ನಾಗಿತ್ತು. ದೇಶದಲ್ಲಿ ತಾನಾಗಿಯೇ ದವಸ ಬರುವಾಗ ನಾವೇಕೆ ಕಷ್ಟಪಡಬೇಕು ಎಂದು ಹೇಳಬಹುದು. 500-600 ಎಕರೆ ಜಮೀನಿರುವವರು ಈ ದಿವಸ ತಮ್ಮ ಅವಶ್ಯಕತೆಗಿಂತ ಹೆಚ್ಚಾಗಿ ಬೆಳೆದಿಲ್ಲವೆ? ಅಂಥವರು ಎಷ್ಟನ್ನು ತಾವಾಗಿಯೇ ತಂದುಕೊಟ್ಟಿದ್ದಾರೆ ಎಂದು ಪ್ರಶ್ನೆ ಮಾಡಬೇಕಾಗಿದೆ. ಬಲಾತ್ಕಾರದಿಂದ ಮಾತ್ರ ತಂದುಕೊಟ್ಟಿದ್ದಾರೆ. ದೇಶದಲ್ಲಿ ಈರೀತಿ ಬಲಾತ್ಕಾರಮಾಡಿ ಕೆಲಸ ಮಾಡ

(ಶ್ರೀ ಎ. ಭೀಮಪ್ಪನಾಯಕರು.)

ಬೇಕು ಎಂದರೆ ಹೇಗೆ? ರೈತರು ನನ್ನುದ್ದು, ನಾವು ತಿಂದುಕೊಳ್ಳುತ್ತೇವೆ ಎಂದು ಅವರು ಬೆಳೆದದ್ದನ್ನು ಕೊಡದಿದ್ದರೆ ಈ ಜಗತ್ತಿನಲ್ಲಿ ಪ್ರತ್ಯೇಕವಾಗಿ ಪ್ರತಿಯೊಬ್ಬನೂ ತನ್ನಷ್ಟಕ್ಕೆ ತಾನೇ ಯಾರ ಸಂಪರ್ಕವೂ ಇಲ್ಲದೇ ಬಾಳುವ ಕಾಲ ಬಂದಿಲ್ಲ. ರೈತರು ಬಾಕಿ ಬೆಳೆಯದವರಿಗೆ ತಾವು ಬೆಳೆದದ್ದನ್ನು ಕೊಟ್ಟರೆ ಇನ್ನೊಂದು ಸಂದರ್ಭದಲ್ಲಿ ಅವರಿಗೂ ಬೇರೆ ವಿಧದಲ್ಲಿ ಸಹಾಯವಾಗುತ್ತದೆ. ಇದು ಪರಸ್ಪರ ಸಹಾಯ ಸಹಕಾರಗಳಿಂದ ಬದುಕುವ ಜಗತ್ತು. ರೈತರಿಗೆ ಅನಾನುಕೂಲವಾಗುತ್ತದೆಂದು ಮಾತುಮಾತಿಗೂ ಹೇಳುತ್ತಿದ್ದರೂ ಇನ್ಯಾರೂ ತೊಂದರೆ ಪಡುತ್ತಿರುವವರಿಲ್ಲವೇ? ಮಾತೆತ್ತಿದರೆ ಬಡ ಬೋರೇಗೌಡನ ಹೆಸರನ್ನು ಹೇಳಿ ವಾದ ಮಾಡುವವರು ಐಶ್ವರ್ಯವಂತರು ಎಷ್ಟು ಕೊಟ್ಟಿದ್ದಾರೆಂದು ನೋಡಲಿ. The method of procurement must be changed or liberalised ಎಂದು ಹೇಳಿರುವವರು ಇಷ್ಟು ಎಕರೆಗೆ ಕೆಳಗಿದ್ದರೆ ಅವರಿಂದ ತೆಗೆದು ಕೊಳ್ಳಕೂಡದು ಎಂದು ಹೇಳಿದ್ದಾರೆಯೆ? ಬೆಳೆದವರಿಂದ ತೆಗೆದುಕೊಳ್ಳದಿದ್ದರೆ ಬೆಳೆಯದಿರುವವರಿಂದ ಏನು ತೆಗೆದುಕೊಳ್ಳುವುದು? ಆಡಳಿತದ ನೀತಿಗನುಸಾರವಾಗಿ ಕಾನೂನಿದ್ದರೆ ಸಂತೋಷ. ತೊಂದರೆ ಬೇಕಾದಷ್ಟಿದೆ. ಕೃಷ್ಣರಾಜ ನಗರದಲ್ಲಿ ಬಹಳ ಕಿರುಕುಳವಿದೆಯೆಂದು ನಮ್ಮ ಮಿತ್ರರು ಹೇಳಿದರು. ಅನ್ಯಾಯವಾಗಿ ಕ್ರಿಮಿನಲ್ ಪ್ರಾಸಿಕ್ಯೂಷನ್ ಮಾಡಿದ್ದಾರೆ, ಒತ್ತಾಯವಾಗಿ ದವಸ ತೆಗೆದುಕೊಂಡಿದ್ದಾರೆ, ಇದು ಸರಿಯಲ್ಲ, ಸರ್ಕಾರದವರು ಅದನ್ನು ಸರಿಪಡಿಸಬೇಕು ಎಂದು ಹೇಳಿದರು. ಈಗ ಶ್ರೀ ಸಂಪಂಗಿರಾಮಯ್ಯನವರು ಒಂದು ತಿದ್ದುಪಡಿ ತಂದಿದ್ದಾರೆ. ಈ ತಿದ್ದುಪಡಿ ಚೆನ್ನಾಗಿದೆ, ತತ್ವ ಒಪ್ಪುತ್ತೇನೆ. ಆದರೆ ಈ ತಿದ್ದುಪಡಿಯನ್ನು ಠರಾವಿನ ಜೊತೆಯಲ್ಲಿ ಓದಿದರೆ ಇದು ವಿರೋಧಾಭಾಸವಾಗುತ್ತದೆ. ಪರಸ್ಪರ ಒಂದಕ್ಕೊಂದಕ್ಕೆ ಹೊಂದಿಕೆಯಾಗುವುದಿಲ್ಲ. ಏಕೆಂದರೆ, ಕಡ್ಡಾಯವಾಗಿ ವಸೂಲುಮಾಡುವ ಪದ್ಧತಿ ವಜಾಮಾಡಬೇಕೆಂದು ಹೇಳಿದ ಮೇಲೆ ಈ ರೀತಿ ಒಂದು ಲೆವಿ ಸಿಸ್ಟಂ ಹಾಕಬೇಕೆಂದರೆ ಅದರಲ್ಲಿ ಅರ್ಥವಿಲ್ಲ. ನಿಜವಾಗಿಯೂ ಯೋಚನೆಮಾಡತಕ್ಕ ವಿಷಯ ಇದು. ಹೋದಸಾರಿ ಶ್ರೀಮರ್ಾ ಮರಿಯಪ್ಪನವರು ಆಹಾರದ ಮಂತ್ರಿಗಳಾಗಿದ್ದಾಗ ಒಂದು ವಿಷಯ ಹೇಳಿದ್ದರು. ಲೆವಿ ಸಿಸ್ಟಂನಂತೆ ಮಿನಿಮಂ ಲೆವಿ ಹಾಕಿ ಅದು ಹೇಗೆ ಕೆಲಸ ಮಾಡುತ್ತದೆ; ಅನುಕೂಲತೆಗಳೇನು ಎಂಬುದನ್ನು ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದರು. ಆದರೆ ಅದರಲ್ಲೂ ಕೆಲವು ತೊಂದರೆಗಳಿವೆಯೆಂದು ಆಗಲೂ ಹೇಳಿದ್ದಾರೆ. ಏನೆಂದರೆ ಬೆಳೆಯಿಲ್ಲದ ಕಾಲದಲ್ಲಿ—ಈಗ ಚಿತ್ರದುರ್ಗ, ಕೋಲಾರ ಜಿಲ್ಲೆಗಳಲ್ಲಿ ಮಳೆಯಿಲ್ಲದೆ ಹೋಗಿದೆ, ಅಲ್ಲಿ ಮಿನಿಮಂ ಲೆವಿ ಹಾಕಿ ಎಕರೆಗೆ ಒಂದು ಪಲ್ಲ ಅಂತ ಹೇಳಿದರೆ 100 ಎಕರೆ ಇರತಕ್ಕ ಮನುಷ್ಯ 100 ಪಲ್ಲ ಕೊಡಬೇಕಾಗುತ್ತದೆ—ಎಕರೆಗೆ ಒಂದು ಪಲ್ಲ ಸಹ ಬೆಳೆಯದೇ ಇರುವಾಗ ಕೇವಲ ಮಿನಿಮಂ ಲೆವಿ ಹಾಕಿದರೂ ಕೂಡ 100 ಪಲ್ಲ ಕೊಡಬೇಕಾಗುತ್ತದೆ ಎಂದರೆ ಅವನು ಎಲ್ಲಿಂದ ಕೊಡುತ್ತಾನೆ? ಆದ್ದರಿಂದ ಎಲ್ಲಿ ಅಷ್ಯೂರ್ಡ್ ವಾಟರ್ ಸಪ್ಲೈ ಇರುತ್ತದೆಯೋ, ಇರಿಗೇಷನ್ ಚಾನಲ್ ಇರುತ್ತದೆಯೋ ಅಂಥಕಡೆ ಲೆವಿಸಿಸ್ಟಂ ಪ್ರಯೋಗಮಾಡಿ ಚೆನ್ನಾಗಿ ಕೆಲಸ ಮಾಡುತ್ತದೆ ಎಂಬುದಾಗಿ ಗೊತ್ತಾದರೆ ಅದನ್ನು ಮುಂದೆ ಆಚರಣೆಗೆ ತರುವುದು ಬಹಳ ಒಳ್ಳೆಯದು, ಜನತೆಗೆ ಅನುಕೂಲವಾದೀತು ಎಂದು ನನ್ನ ಅಭಿಪ್ರಾಯ. ಆದರೆ ಯಾವುದೇ ಆಗಲಿ, ಏಕಾಏಕಿ ದುಡುಕಿ ಮಾಡತಕ್ಕದ್ದಲ್ಲ. ಜವಾಬ್ದಾರಿಯುತರಾದವರು ಸಾಮಾನ್ಯವಾಗಿ "must be abolished immediately" ಅನ್ನತಕ್ಕ ಶಬ್ದಕ್ಕೆ ಅರ್ಥ ತಿಳಿದುಕೊಳ್ಳಬೇಕು ಮತ್ತು ಯಾವುದು ಕೇಂದ್ರಸರ್ಕಾರಕ್ಕೆ ವಿರುದ್ಧವೋ ಯಾವುದು ಭಾರತದ ಆಗುಹೋಗುಗಳಿಗೆ ಅನ್ವಯಿಸುತ್ತದೆಯೋ ಅದನ್ನು ನಾವು ಕೇಂದ್ರ ಸರ್ಕಾರದವರಿಗೆ ಶಿಫಾರಸು ಮಾಡೋಣ ಎಂದರೆ ಚೆನ್ನಾಗಿರುವುದಿಲ್ಲ. ಪ್ರೊಕ್ಯೂರ್‌ಮೆಂಟ್ ಸಿಸ್ಟಂ ಸಂಪೂರ್ಣವಾಗಿ ತೆಗೆದುಹಾಕಿರಿ

ಎಂದಾಗ ಇನ್ನಾವ ಸಿಸ್ಟಂ ತರಬೇಕು ಎಂಬ ಬಗ್ಗೆ ಸಲಹೆ ಕೊಟ್ಟಿದ್ದರೆ ಚೆನ್ನಾಗಿತ್ತು. ಅದು ಎರಡೂ ಇಲ್ಲದೆ ಸಂಪೂರ್ಣವಾಗಿ ಪ್ರೊಕ್ಯೂರ್‌ಮೆಂಟ್ ಸಿಸ್ಟಂ ತೆಗೆದುಹಾಕಿ ಅಂತ ಹೇಳಿದ ಜನತಾ ಪಾರ್ಟಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಒಂದು ಯೋಜನೆಯನ್ನು ಸಭೆಯ ಮುಂದಿಟ್ಟಿದ್ದರೆ ಚೆನ್ನಾಗಿತ್ತು. ಅವರಿಗೆ ಇನ್ನೂ ಯೋಜನೆ ಹಾಕತಕ್ಕಂಥ ಅನುಕೂಲತೆಗಳು ದೊರೆತಿಲ್ಲ ಅಂತ ಕಾಣುತ್ತದೆ. ಇನ್ನೊಂದು ಸಾರಿ ಆದರೂ ಮುಂದಿನ ಅಸೆಂಬ್ಲಿ ಸೇರುವುದರೊಳಗೆ ಜನರೆಲ್ಲರೂ ಒಪ್ಪತಕ್ಕ ಯೋಜನೆ ಒಂದೇ ಒಂದನ್ನು ಈ ವಿಚಾರದಲ್ಲಿ ತಂದರೆ ಆಗ ಅವರು ಆಹಾರದ ಸಮಸ್ಯೆಯನ್ನು ಸಮರ್ಪಕವಾಗಿ ನಡೆಸಿಕೊಂಡು ಬರುತ್ತಾರೆ ಎಂಬುದು ನಮಗೆ ಕಂಡುಬರುತ್ತದೆ. ಇನ್ನೊಂದು ವಿಷಯ ಹೇಳಿದರು. ಶೇಕಡ 75ರಷ್ಟು ದೂಷಣೆ ಈಗಿರತಕ್ಕ ಸರ್ಕಾರಕ್ಕೆ ಬಂದಿರುವುದು ಈ ಒಂದು ಆಹಾರದ ದೆಶೆಯಿಂದ ಎಂಬುದಾಗಿ ಶ್ರೀಮಾನ್ ಸಿದ್ಧಯ್ಯನವರು ಹೇಳಿದರು. ಹಾಗಾದರೆ ಸರ್ಕಾರದವರು ಶೇಕಡ 75ರಷ್ಟು ದೂಷಣೆ ಹೊತ್ತುಕೊಂಡೂಕೂಡ ಇದನ್ನು ನಡೆಸಿಕೊಂಡು ಹೋಗಬೇಕೆಂದು ಯಾವ ಸರ್ಕಾರಕ್ಕೆ ತಾನೇ ಇರುತ್ತದೆ? ಅದರಿಂದ ಅರ್ಥವೇನಾಗುತ್ತದೆ ಎಂದರೆ, ಸರ್ಕಾರ ಇರುವುದು ದೂಷಣೆ ಹೊರುವುದಕ್ಕಲ್ಲ, ದೂಷಣೆ ಬಂದರೂಕೂಡ ಜನರನ್ನು ಕಾಪಾಡಬೇಕೆಂಬ ಸದ್ಭಾವನೆಯಿಂದ ಇದನ್ನು ನಡೆಸಿಕೊಂಡು ಹೋಗುತ್ತಿದೆ. ದೂಷಣೆ ಹೊರದೆ ಯಾವ ಸರ್ಕಾರವೂ ರಾಜ್ಯಾಡಳಿತ ನಡೆಸುವುದಕ್ಕೆ ಸಾಧ್ಯವಿಲ್ಲ. ದೂಷಣೆ ಬರಲಿ. ಆದರೆ ಅನೇಕವೇಳೆ ದೂಷಣೆ ಬಂದಾಗ್ಯೂ ಜನತೆಗೆ ಆಹಾರ ಒದಗಿಸಿದ್ದಾರೆ ಎಂದಾಗ ಯಾವ ದೂಷಣೆಗೂ ಅಂಜದೆ, ಅಳುಕದೆ ಕಾಂಗ್ರೆಸ್ ಸರ್ಕಾರದವರು ಈ ತತ್ವ ನಡೆಸಿಕೊಂಡುಬಂದು ಜನರನ್ನು ಬದುಕಿಸಬೇಕಾಯಿತು. ಹಾಗಿಲ್ಲದೇ ಇದ್ದಿದ್ದರೆ ಬಂಗಾಳದಲ್ಲಿ ಹೊಟ್ಟೆಗಿಲ್ಲದೆ ಮನುಷ್ಯರು ಸತ್ತು, ಅದಕ್ಕಾಗಿ ನಾಯಿಗಳು ಹೇಗೆ ಓಡಾಡುತ್ತಿದ್ದವೋ ಆರೀತಿ ಓಡಾಡಬೇಕಾಗುತ್ತಿತ್ತು. ಆದ್ದರಿಂದ ಹತ್ತೋಟೆ ಪದ್ಧತಿಯನ್ನು ತೆಗೆಯುವುದು ಅದರಲ್ಲೂ ತಕ್ಷಣ ತೆಗೆಯುವುದರಿಂದ ದೇಶದಲ್ಲಿ ಆಗಬಾರದ ಅನಾಹುತ ಆಗುತ್ತದೆ. ಅದನ್ನು ಬಲಾಯಿಸಲು ಅವರು ಸರಿಯಾದ ಸಲಹೆ ಕೊಡುವುದಾದರೆ ಆಮೇಲೆ ಯೋಚನೆ ಮಾಡೋಣ.

ಶ್ರೀ ಜಿ. ಎ. ಆಚಾರ್ಯರು (ಬೆಂಗಳೂರು ಜಿಲ್ಲೆ).—ಶ್ರೀಮಾನ್ ಚನ್ನಬೈರೇಗೌಡರು ತಂದಿರತಕ್ಕ ಈ ನಿರ್ಣಯವನ್ನು ನಾನು ವಿರೋಧಿಸುತ್ತೇನೆ. ನನ್ನ ಮಿತ್ರರನೇಕರು ಈ ವಿಷಯವಾಗಿ ಮಾತನಾಡಿರುತ್ತಾರೆ. ಇದುವರೆಗೂ ಕೂಡ ಧಾನ್ಯದ ಪರಿಸ್ಥಿತಿ ನಮ್ಮ ದೇಶದಲ್ಲಿ ಏನಾಗಿದೆ, ಅದಕ್ಕೆ ಏನು ಯೋಚನೆ ಮಾಡಿದ್ದಾರೆ, ಯಾವರೀತಿ ಮಾಡಬೇಕು ಎಂಬುದನ್ನು ತಿಳಿಯದೆ ಅನೇಕ ನಮ್ಮ ಮಾನ್ಯ ಮಿತ್ರರು ಇಲ್ಲಿ ಆರೋಪಣೆಗಳನ್ನು ಮಾಡಿರುತ್ತಾರೆ. ಒಂದು ಏನೆಂದರೆ, ಸರ್ಕಾರದವರು ಇದಕ್ಕೆ ಭಾಗಿಯಾಗಿ ರೈತರಿಗೆ ತೊಂದರೆ ಕೊಡುತ್ತಿದ್ದಾರೆಯೇ ಎಂಬುದಾಗಿ ಶ್ರೀ ಚನ್ನಬೈರೇಗೌಡರಿಗೆ ಒಂದು ಪ್ರಶ್ನೆ ಹಾಕಿದೆ; ಇದೇನು ಇಷ್ಟು ಉಗ್ರವಾಗಿ ಟೀಕೆ ಮಾಡುತ್ತಿದ್ದಾರಲ್ಲಾ ರೈತರಿಗೆ ಸರ್ಕಾರದವರು ತೊಂದರೆ ಕೊಡಬೇಕೆಂಬುದಾಗಿ ಈ ಕಾಯಿದೆಗಳನ್ನು ಮಾಡಿದ್ದಾರೆಯೇ ಎಂದು ಕೇಳಿದ್ದಕ್ಕೆ 'ಹೌದು' ಎಂಬುದಾಗಿ ಸಾಕ್ಷ್ಯದುಸಲ ಒತ್ತಿ ಹೇಳಿದರು. ಇದು ತಪ್ಪು ತಿಳವಳಿಕೆ ಎಂದು ನನಗೆ ತೋರುತ್ತದೆ. ಯಾವಾಗಲಾದರೂ ಕೂಡ ಆಹಾರದ ವಿಚಾರದಲ್ಲಿ ಮಾತನಾಡುವಾಗ ಮಾತ್ರ ನಾವು ಸರ್ಕಾರದವರನ್ನು ಎಷ್ಟೇ ದೂಷಿಸಿದರೂ ಕೆಲವು ಸಲ್ಲದ ಆರೋಪಣೆಗಳನ್ನು ಮಾತ್ರ ಮಾಡಬಾರದು ಎಂದು ನನ್ನ ತಿಳಿವಳಿಕೆ. ಮತ್ತೊಬ್ಬ ಸದಸ್ಯರು, ಅಂಕಿ ಅಂಶಗಳು ಸಹ ಸರ್ಕಾರಕ್ಕೆ ತಿಳಿಯದೆ ಕೆಲವು ಕಾನೂನುಗಳನ್ನು ಮಾಡಿರುತ್ತಾರೆ ಎಂಬುದಾಗಿಯೂ ಆರೋಪಣೆ ಮಾಡಿದರು. ಅಲ್ಲದೆ, ಯಾವ್ಯಾವುದನ್ನು ಎಷ್ಟೆಷ್ಟು ಹೇಗೆ ಎಂಬುದನ್ನು ತಿಳಿದು ಅಳತೆ ಮಾಡತಕ್ಕ ಜನರು ಸಹ ಸರ್ಕಾರದಲ್ಲಿಲ್ಲ ಎಂದು ಹೇಳಿದರು.

ಅಧ್ಯಕ್ಷರು.—ರಾಶಿ ಹಾಕಿದರೆ ಇಷ್ಟೇ ಆಗುತ್ತದೆ ಎಂದು ಹೇಳತಕ್ಕವರು ಇಲ್ಲ ಎಂದು ಹೇಳಿದ್ದಾರೆ.

Sri G. A. ACHARYA.—There are not sufficient technical personnel in the Government to determine even the estimates.

SOME HON'BLE MEMBERS.—Crops.

Sri G. A. ACHARYA.—That is my view.

ಮತ್ತೆ ಕೆಲವರು ದೇಶದಲ್ಲಿ ಧರ್ಮಬುದ್ಧಿ ಇಲ್ಲ. ಈಚೆಗೆ ಪೈಶಾಚಿಕ ವೃತ್ತಿ ಬಹಳವಾಗಿದೆ ಎಂಬುದಾಗಿಯೂ ಹೇಳಿದರು. ಯಾರೂ ಕೂಡ ಈಗಿರತಕ್ಕ ಈ ಕಡ್ಡಾಯ ವಸೂಲಿ ಪದ್ಧತಿಯನ್ನು ಬಿಟ್ಟು ಈ ತರಹ ಮಾಡಿದರೆ ನಮ್ಮ ಮೈಸೂರು ಸಂಸ್ಥಾನಕ್ಕೆ ಎಷ್ಟು ಧಾನ್ಯ ಬೇಕೋ ಅಷ್ಟು ಸಿಕ್ಕುತ್ತದೆ ಎಂಬುದನ್ನು ಹೇಳಲಿಲ್ಲ ಎಂದು ಕಾಣುತ್ತದೆ. ನಾನು ಬೆಳೆಯುವವನಲ್ಲ, ಒಪ್ಪಿಕೊಳ್ಳುತ್ತೇನೆ. ಮುಖ್ಯವಾಗಿ ಇಂಥಾ ಆಹಾರ ಧಾನ್ಯಗಳ ವಿಚಾರದಲ್ಲಿ ನಾವು ಎಷ್ಟೋ ಉಗ್ರವಾಗಿ ಟೀಕೆ ಮಾಡಿದರೂ ಕೂಡ practical ಆಗಿ ಏನುಮಾಡಿದರೆ ನಮಗೆ ಬೇಕಾದಷ್ಟು ಧಾನ್ಯ ಸಿಕ್ಕುತ್ತದೆ ಎಂಬುದನ್ನು ನಿರ್ಧರವಾಗಿ ಯಾವ ಸದಸ್ಯರೇ ಆದರೂ ಸಲಹೆ ಕೊಟ್ಟಿದ್ದ ಪಕ್ಷದಲ್ಲಿ ಯೋಚನೆ ಮಾಡಬಹುದಾಗಿತ್ತು. ನಿಶ್ಚಯ ; ದೇಶದಲ್ಲಿ ಬೆಳೆಯುವವರು ಎಷ್ಟೇ ಹೆಚ್ಚು ಬೆಳೆದರೂ ಕೂಡ ಜನಸಂಖ್ಯೆ ಹೆಚ್ಚು ಹೆಚ್ಚು ಆಗುತ್ತಾ ಇದೆ; ನಮಗೆ ಬೇಕಾಗುವಷ್ಟು ಆಹಾರ ಧಾನ್ಯ ದೇಶದಲ್ಲಿ ಸಿಕ್ಕುವುದಿಲ್ಲ. ಶ್ರೀಮಾನ್ ಭೀಮಪ್ಪನಾಯಕರು ಹೇಳಿದಹಾಗೆ ನಮ್ಮ ರೈತರು ನಮಗೆ ಬೇಕಾದಷ್ಟು ಬೆಳೆಯುವುದಕ್ಕೆ ಸಾಧ್ಯವಾಗದೆ ನಮ್ಮ ದುಡ್ಡನ್ನು ಕೊಟ್ಟು ಬೇರೆ ದೇಶಗಳಿಂದ ತರಿಸುತ್ತಾ ಇದ್ದಾರೆ. ಇಂಥಾ ಕಷ್ಟಪರಿಸ್ಥಿತಿಯಲ್ಲಿ ಸರ್ಕಾರದವರು ಈಗ ಅನುಸರಿಸುತ್ತಿರತಕ್ಕ ಕಾರ್ಯಕ್ರಮ, ರೀತಿ, ನೀತಿ ಖಂಡಿತವಾಗಿಯೂ ತಪ್ಪು, ಇದನ್ನು ಒಂದೇಸಾರಿ ತೊಡೆದು ಹಾಕಬೇಕು ಎಂಬ ತತ್ವವನ್ನು ಪ್ರತಿಪಾದಿಸುವವರು ಬಹುಶಃ ಚೆನ್ನಾಗಿ ಯೋಚನೆ ಮಾಡಿಲ್ಲವೆಂದು ಹೇಳಬೇಕಾಗುತ್ತದೆ. ಶ್ರೀಮಾನ್ ಹುಚ್ಚೇಗೌಡರು ಮತ್ತು ಅವರ ಮಿತ್ರರು ಬೇರೆ ಯಾವುದಾದರೂ ಪರಿಣಾಮಕಾರಿಯಾದ ಸಲಹೆ ಕೊಟ್ಟಿದ್ದ ಪಕ್ಷದಲ್ಲಿ ಈ ನಿರ್ಣಯದಲ್ಲಿ ಏನೋ ಇದೆ, ಸದಸ್ಯರು ಬಹಳ ಯೋಚನೆ ಮಾಡಿ ಇದನ್ನು ಪ್ರಜಾಸೇವೆಗೂ ಮತ್ತು ಈಗಿರತಕ್ಕ ಕಷ್ಟವನ್ನು ತಪ್ಪಿಸುವುದಕ್ಕೂ ತಂದಿದ್ದಾರೆ ಎಂಬುದಾಗಿ ಯೋಚನೆಮಾಡಬಹುದಾಗಿತ್ತು. ಅವರು ಏನು ಹೇಳುತ್ತಾರೆ? ತಕ್ಷಣ ಈ ಕಾಯಿದೆಗಳನ್ನೆಲ್ಲಾ ತೆಗೆದುಹಾಕಿಬಿಡಿ ಎಂದರೆ ಅದಕ್ಕೆ ಬದಲಾಗಿ ಇನ್ನೇನೂ ಇಲ್ಲದೆ ಏನುಮಾಡಬೇಕು? ನಿಶ್ಚಯ, ಅವರಿಗೂ ಇದು ಗೊತ್ತಿದೆ. ನಮ್ಮ ಸಂಸ್ಥಾನದಲ್ಲಿ ಬೆಳೆಯುವಷ್ಟು ಬೆಳೆದು, ಇಂಡಿಯಾ ಸರ್ಕಾರದವರು ಇನ್ನೂ ಕೊಟ್ಟರೂ ಕೂಡ ನಮಗೆ ಸಾಕಾಗುವುದಿಲ್ಲ; ಹೊರದೇಶಗಳಿಂದ ಬರುತ್ತಲೇ ಇದೆ. ಅದಕ್ಕೆ ಉತ್ತರ ಹೇಳಲಿ. ಈ ತರಹ ಮಾಡಿದರೆ ನಮಗೆ ಬೇಕಾಗುವಷ್ಟು ಸಾವಿರಾರು ಟನ್ ಧಾನ್ಯ ಬರುತ್ತದೆ ಎಂಬುದಾಗಿ, ಯಾವ ಸದಸ್ಯರೇ ಆಗಲೀ ಇಷ್ಟರವರೆಗೆ ಭಾಷಣ ಮಾಡಿದವರಲ್ಲಿ ಹೇಳಿದ್ದಿದ್ದರೆ ಈ ನಿರ್ಣಯವನ್ನು ಒಪ್ಪಿಕೊಳ್ಳಬಹುದಾಗಿತ್ತು. ಸುಲಭವಾಗಿ ಮಾತನಾಡಬಹುದು, ನಿಶ್ಚಯ.

ಒಬ್ಬ ಸದಸ್ಯರು.— ತಾವು ಹೇಳಿ.

ಶ್ರೀ ಜಿ. ಎ. ಆಚಾರ್ಯರವರು.— ನಾನು ಹೇಳಬಹುದಾಗಿದ್ದರೆ ಮೊದಲೇ ಹೇಳುತ್ತಿದ್ದೆ. ಆದ್ದರಿಂದ ಯಾವುದಾದರೂ ಟೀಕೆಗಳು ಬಂದರೆ, ಅದು ಎಷ್ಟರ ಮಟ್ಟಿಗೆ ಸಾಧ್ಯ, ಅಸಾಧ್ಯ ಎಂಬುದನ್ನೆಲ್ಲಾ ಯೋಚನೆ ಮಾಡಿ ಮಾಡಬೇಕೇ ಹೊರತು ಸುಮ್ಮನೆ ಅವರು ಹೇಳಿದಂತೆ ಮಾಡುವುದಕ್ಕಾಗುವುದಿಲ್ಲ. ಕಂಟ್ರೋಲನ್ನು ಇವತ್ತೇ ತೆಗೆದುಬಿಡಿ ಎಂದು ಸುಲಭವಾಗಿ ಹೇಳಿಬಿಡಬಹುದು. ಅದರಿಂದ ಜನರು ದಂಗೆ ಎದ್ದರೆ ಏನು ಮಾಡುವುದು? ಆದ್ದರಿಂದ ನಾವೇನಿದ್ದರೂ ಈಗಿರತಕ್ಕ ಸ್ಥಿತಿಗತಿಗಳಿಗನುಗುಣವಾಗಿ ಸಾಧ್ಯವಾದಮಟ್ಟಿಗೆ ಬದಲಾವಣೆ ಮಾಡಿ ಎಂದು ಒಂದು ವಿಧವಾಗಿ ವಿಜ್ಞಾಪನಾ ರೂಪವಾಗಿಯೋ ಅಥವಾ ನಮ್ಮ ಸ್ವಂತ ಕಷ್ಟಗಳನ್ನು ಅವರ ಕಣ್ಣೆದುರಿಗಿಟ್ಟು ಈ ವಿಧಾನದಿಂದ ಈ ಕಷ್ಟ ಬಂದಿದೆ, ಇದನ್ನು ತಕ್ಕಮಟ್ಟಿಗೆ ಬದಲಾವಣೆ ಮಾಡಿ ಎಂದು ಹೇಳಬಹುದೇ ಹೊರತು ಒಂದೇಸಾರಿ ತೆಗೆದುಹಾಕಿಬಿಡಿ ಎಂದು ಸರ್ಕಾ

ದಕ್ಕೆ ಹೇಳಿ; ಸರ್ಕಾರ ಆ ರೀತಿ ಮಾಡಿದರೆ, ನಾಳೆ ಸರ್ಕಾರವೆಲ್ಲಿರುತ್ತದೆ? ಒಂದು ಕಡೆ, ಎಲ್ಲರಿಗೂ ಒಂದೇಸಮನಾಗಿ ರೇಷನ್ ಕೊಡಬೇಕೆಂದು ಒಂದು ಪಕ್ಷದವರು ಹೇಳುತ್ತಿದ್ದಾರೆ. ಈಗ ನಮ್ಮಲ್ಲಿರುವುದು ಹೇಗಿದೆ? ಒಂದು ರಿಸರ್ವಾಯಿರ್‌ನಲ್ಲಿ ಎಷ್ಟೋ ಗ್ಯಾಲನ್ ನೀರಿರುತ್ತದೆ; ನೀರಿನ ಇಲಾಖೆಯವರು ಅದಕ್ಕೆ 200-300 ಪೈಪ್‌ಗಳನ್ನು ಕೊಟ್ಟಿರುತ್ತಾರೆ; ಆದರಿಂದ ಕೆಲವರಿಗಾದರೂ ನೀರು ಸಿಕ್ಕುತ್ತಿರುತ್ತದೆ. ಎಲ್ಲರಿಗೂ ನೀರು ಸಿಕ್ಕಲೆಂದು ಹೇಳಿ ಎಲ್ಲಾ ಪೈಪ್‌ಗಳನ್ನೂ ಕಿತ್ತುಹಾಕಿಬಿಟ್ಟರೆ ಯಾರಿಗೂ ನೀರು ಸಿಕ್ಕದಹಾಗಾಗುತ್ತದೆ. ಆದ್ದರಿಂದ, ಈ ಕಂಟ್ರೋಲನ್ನು ತೆಗೆಯುವುದರಲ್ಲೂ ಬಹಳ ಸಾವಧಾನವಾಗಿ ಯೋಚನೆ ಮಾಡಬೇಕು. ಸಿಟಿಯಲ್ಲಿರುವವರಾರೂ ಬೆಳೆಯುವವರಲ್ಲ. ರೈತರು ಬೆಳೆಯಬೇಕು, ಅವರು ಬೆಳೆದದ್ದನ್ನು ತಂದು ಪಟ್ಟಣದವರಿಗೆ ಕೊಟ್ಟು ದುಡ್ಡು ತೆಗೆದುಕೊಂಡು ಅದರಿಂದ ತಮಗೆ ಬೇಕಾದ ಇತರ ಪದಾರ್ಥಗಳನ್ನು ತೆಗೆದುಕೊಳ್ಳಬೇಕು. ರೈತನು ಹೆಚ್ಚಿಗೆ ಬೆಳೆದದ್ದನ್ನು ಮಾರಿಯೇ ಮಾರುತ್ತಾನೆ. ಇದು ಸ್ವಾಭಾವಿಕ. ಆದ್ದರಿಂದ ರೈತನು ತಾನು ಬೆಳೆದು ಪಟ್ಟಣದವರಿಗೇಕೆ ಕೊಡಬೇಕೆಂಬುದರಲ್ಲಿ ಅರ್ಥವಿಲ್ಲ. ಆದ ಕಾರಣ, ನಮಗೆ ತಿಳಿದಂತೆ, ಅವರು ಹೇಳಿದ ಪ್ರಕಾರ ಏನಾದರೂ ದೋಷಗಳು ಕಂಡುಬಂದರೆ ಅದನ್ನು ಮಂತ್ರಿಗಳು ಸತ್ಯವೇ, ಅಸತ್ಯವೇ ಎಂಬುದನ್ನು ಪರೀಕ್ಷೆಮಾಡಿ ಅಲ್ಪಸ್ವಲ್ಪ ಬದಲಾವಣೆ ಮಾಡುವುದಕ್ಕೆ ಸಾಧ್ಯವಿದ್ದರೆ ಖಂಡಿತವಾಗಿ ಮಾಡಬೇಕೆಂದು ಹೇಳಿ ನಾನು ಅವರು ಹೇಳಿದ ನಿರ್ಣಯವನ್ನು ವಿರೋಧಿಸುತ್ತೇನೆ.

*Janab MOHAMED HANIEF (Bangalore—Muslim).—Mr. Speaker, Sir, I wholeheartedly support the resolution. My reasons are these. The resolution as it stands, if I understand it aright, is this. So far as procurement is concerned, there does not appear to be difference of opinion between those who oppose it and those who are for it. But with regard to the method of procurement, this resolution appears to take an exception. It wants that in the system of procurement a fair method of taking away the produce from the raiyats should be kept in mind; the obvious is there, namely, a raiyat is to give away the surplus. The question is, what is the surplus, who is to determine that surplus and how that surplus is to be determined. There is no indication in any one of the orders issued by the Government to give any guidance in this regard to the procuring officers.

The Hon'ble Sri K. CHENGALARAYA REDDY.—I do not know if the Hon'ble Member has read the Harvest Order. The utmost detail as to how the surplus has got to be calculated is given there.

Janab MOHAMED HANIEF.—It is precisely from that point of view that I have been attempting to support this resolution. According to the general order to the District Officers, so far as I am aware, of, subject to correction, some procurement quota is prescribed and the officers are told that within a certain period of time they should reach that target. It is well known that if that is not reached, the position of the officer who is entrusted with this task becomes rather unhappy. So, the endeavour on the part of those officers is to procure as much as they can within the prescribed time. If a definite proportion is fixed and the officers are called upon to procure only that much and nothing more, then there may be an understanding between the officers and the raiyats and no injustice would be done. But as matters stand, the persons who go to the walls are not those raiyats who have plenty but those who have little or nothing. Sir, you and I are aware that in Mysore or in India as a whole, means of communication are very difficult. We are told that due to scarcity of rainfall and several other reasons, in some parts, production of foodgrains is a problem. When there is hardly any prospect of a good harvest, it is but natural that the raiyat should think of preserving some quantity for tomorrow. That is a point that will also have to be kept in view by the procuring officers. If procurment is done neglecting that, to that extent certain hardship is felt by the raiyat. I have

(*Janab* MOHAMED HANIEF).

seen along with my friends that in the whole system of production, procurement, rationing and distribution there has not been that amount of care which ought to have been there to be exercised. Western ideas are brought to bear upon the problem. But conditions here are different from the West. They are not suitable for the application of western methods. The raiyats are holders of small bits of land where bulldozers cannot be made use of; they depend upon the irrigation system. The irrigation system is no doubt improved and production is attempted to be increased. But it is said that production is not enough to cater to the needs of the increasing population in the country. Sir, I question the assumption that population is very large and the food is not sufficient. If that was so, black-marketting would have been nowhere. Because the things that we need, the things that we cannot get in the open market, we get in plenty in black-market if we pay for it. That question is beside the point and I do not want to go into it at all. Now, the question is one of procurement. The work of procurement under the present system is one which is not conducive to the good of either the raiyat or the Government.

Mr. SPEAKER.—Is the Hon'ble Member suggesting any modification ?

Janab MOHAMED HANIEF.—Sir, I am only suggesting that this element of indefiniteness must be removed from the Harvest Order. There must be a definite proportion declared with regard to the surplus.

Mr. SPEAKER.—But that is not the resolution.

Janab MOHAMED HANIEF.—The resolution is that the method of procurement under the system of control obtaining now must be modified.

Mr. SPEAKER.—Must be abolished.

Janab MOHAMED HANIEF.—The mover said that the procuring officer is given the fullest discretion in the matter of determining which raiyat has got surplus and to what extent he has the surplus.

Sri H. K. VEERANNA GOWDH.—No discretion.

Janab MOHAMED HANIEF.—The Harvest Order does not contain any facts and figures relating to this. That means procurement is entirely at the discretion of the officer on the spot; it depends upon his experience, his information and his influence brought to bear upon the raiyat.................

(Interruption by Sri G.A. Acharya). I do not want to be interrupted. There is no definite proportion with regard to surplus mentioned in the Harvest Order. There is that indefiniteness, that vagueness which must be definitely removed.

Sri H. K. VEERANNA GOWDH.—Have you read this order ? Is it vague?

Janab MOHAMED HANIEF.—Yes.

Sri H. K. VEERANNA GOWDH.—It is quite definite.

Janab MOHAMED HANIEF.—It is indefinite in the sense that discretion is given to the procuring officer to collect food grains.

Sri H. K. VEERANNA GOWDH.—No discretion.

Sri G. A. ACHARYA.—No absolute discretion.

Janab MOHAMED HANIEF.—It is based on the information that that officer can get the correctness of which has got to be verified. That element of indefiniteness, if there is any indefiniteness, must be removed in order to give the raiyat the satisfaction and a feeling that he will have enough for himself and that only the surplus will be taken away. That is what I am emphasising. Let the actual surplus be first determined and then taken away from the raiyat, whether he be a rich raiyat or a poor raiyat. Let there be uniformity about it.

Sri H. K. VEERANNA GOWDH.—What is it that is being done now ?

Janab MOHAMED HANIEF.—If that is done, black-market will disappear. If that had been done, black-market would have disappeared. But it has not been done. That is my view and I am speaking of course, subject to correction. You may convince me otherwise.

The Hon'ble Sri T. MARIAPPA (Home Minister).—Is it your idea that

all the surplus is not being procured ?

Janab MOHAMED HANIEF.—I say that more than the surplus is procured.

The Hon'ble Sri T. MARIAPPA.—If so, how can there be black-market ?

Janab MOHAMED HANIEF.—Because there is grain left with the rich raiyat. From the poor raiyat, everything is taken away. That is why black-market is thriving. Of course, there are diverse reasons.

A VOICE.—Do you mean to say that Government are themselves encouraging black-market ?

Janab MOHAMED HANIEF.—Government are encouraging. There are various forces acting and reacting on the Government and they are helpless.

Sri G. A. ACHARYA.—'Helpless'.

Janab MOHAMED HANIEF.—I am saying 'helpless'. I do not say they are not honest. I am not attributing motives. I am not so mean. I am only emphasising that both the rich and poor raiyats may be treated alike and the poor raiyat may also be given what he is entitled to and then the rest may be taken away from him. So long as the control system is there, it is inevitable that grain has to be acquired. But let the surplus be declared in a fair manner after proper assessment and then you acquire the grains from the raiyat. It must be on an equitable and just basis. That is all I want to say.

Sri M. L. NANJARAJ URS (Mysore District—General).—Do you accept Sri K. Sampangiramiah's amendment ?

Janab MOHAMED HANIEF.—I accept no amendment.

*ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಸ್ವಾಮಿ, ಮಾನ್ಯ ಸದಸ್ಯರು ಸೂಚಿಸಿರತಕ್ಕ ಈ ಠರಾವನ್ನು ನಾನು ವಿರೋಧಿಸುತ್ತೇನೆ. ಕಂಟ್ರೋಲುಗಳು ಹೋಗಬೇಕೆಂದು ಹೇಳುವವರಲ್ಲಿ ನಾನೂ ಒಬ್ಬ, ಆದರೆ ಯಾವಾಗ ಹೋಗಬೇಕೆಂಬ ವಿಷಯದಲ್ಲಿ ಮಾತ್ರ ನನಗೂ ಮಾನ್ಯ ಸೂಚಕರಿಗೂ ಶ್ರೀಮಾನ್ ಚನ್ನಬಸಪ್ಪನವರಿಗೂ ಭಿನ್ನಾಭಿಪ್ರಾಯವಿದೆ. ಈಗ ನಿರ್ಬಂಧದಿಂದ ರೈತರಿಂದ ದವಸ ವಸೂಲು ಮಾಡುತ್ತಿದ್ದಾರೆ; ಆದುದರಿಂದ ಈ ಕಂಟ್ರೋಲ್ ಕೂಡಲೇ ರದ್ದುಮಾಡಬೇಕೆಂದು ಈ ನಿರ್ಣಯದಲ್ಲಿ ಹೇಳುವುದರಿಂದ ಇದು ನನಗೆ ಅರ್ಥವಾಗುವುದಿಲ್ಲ. ಇದರಲ್ಲಿ "ಸಂಸ್ಥಾನದಲ್ಲಿ ರೈತರಿಂದ ಆಹಾರ ಪದಾರ್ಥಗಳನ್ನು ನಿರ್ಬಂಧವಾಗಿ ವಸೂಲು ಮಾಡುತ್ತಿರುವ ಹತೋಟಿ ಪದ್ಧತಿಯನ್ನು ಈ ಕೂಡಲೇ ರದ್ದುಗೊಳಿಸಬೇಕೆಂದು" ಇದೆ. ಕಂಟ್ರೋಲ್ ಹೋಗಬೇಕು, ಏಕೆಂದರೆ ನಿರ್ಬಂಧವಾಗಿ ದವಸ ವಸೂಲುಮಾಡುತ್ತಿದ್ದಾರೆ.........

ಅಧ್ಯಕ್ಷರು.—ಇದರಲ್ಲಿ ಸೂಚಿಸಿರುವುದು ಪ್ರೊಕ್ಯೂರ್‌ಮೆಂಟ್ ಹೋಗಬೇಕೆಂದು.

ಶ್ರೀ ಎಸ್. ರಂಗರಾಮಯ್ಯನವರು.—ಪ್ರೊಕ್ಯೂರ್‌ಮೆಂಟ್ ಮೇಲಣ ಕಂಟ್ರೋಲ್ ಹೋದರೆ ಇನ್ನಾವರೀತಿಯಲ್ಲಿ ಆಹಾರ ಪದಾರ್ಥಗಳನ್ನು ಶೇಖರಣೆ ಮಾಡಬೇಕು ? ಪ್ರೊಕ್ಯೂರ್‌ಮೆಂಟ್ ತೆಗೆಯಬೇಕೆಂಬುದರ ಅರ್ಥ ಕಂಟ್ರೋಲ್ ಹೋಗಬೇಕೆಂಬುದು. ಈಗ ಪ್ರೊಕ್ಯೂರ್‌ಮೆಂಟ್ ವಿಚಾರ ತೆಗೆದುಕೊಳ್ಳೋಣ; ಇದರಿಂದ ಅನೀತಿ ಜಾಸ್ತಿಯಾಗಿದೆ, ಧಾನ್ಯವನ್ನು ಕೊಳ್ಳುವವರಲ್ಲಿಯೂ ಮಾರುವವರಲ್ಲಿಯೂ ಬೆಳೆಯುವವರಲ್ಲಿಯೂ ಅನೀತಿ ಜಾಸ್ತಿಯಾಗಿದೆ, ಆದಕಾರಣ ಇದು ಹೋಗಬೇಕೆಂದು ಈ ನಿರ್ಣಯದಲ್ಲಿದ್ದರೆ ಈ ಸಭೆ ಅದನ್ನು ಬಹಳ ಆಳವಾಗಿ ಪರಿಶೀಲಿಸಬಹುದಾಗಿತ್ತು. ಆದರೆ ಇದರಲ್ಲಿರುವುದು ಪ್ರೊಕ್ಯೂರ್‌ಮೆಂಟ್ ಹೋಗಬೇಕೆಂಬುದು, ಕಂಟ್ರೋಲ್ ಹೋಗಬೇಕೆಂಬ ಅರ್ಥದಿಂದ ಎಂದು ನಾನು ತಿಳಿದುಕೊಂಡಿದ್ದೇನೆ. ಈಗ ಎಚ್. ಎಸ್. ಖಾತೆಯನ್ನು ಶ್ಯಾನುಭೋಗರು ಪಟೇಲರು ಬರೆಯುತ್ತಾರೆ. ಇದರಲ್ಲಿ ಅನ್ಯಾಯವಾಗುತ್ತಿದೆ ಎಂದು ಹೇಳುತ್ತಾರೆ. 'ಸಂಪೂರ್ಣವಾಗಿ ನ್ಯಾಯವಾಗುತ್ತಿದೆಯೆಂದು ನಾನೂ ಹೇಳುವುದಿಲ್ಲ. ಕೆಲವರಿಗೆ ಇದರಲ್ಲಿ ತೊಂದರೆಯಾಗುತ್ತದೆ, ನಿಜ. ಎರಡು ಮೂರು ವರ್ಷಗಳಿಂದ ನೋಡುತ್ತಿದ್ದೇನೆ. ಈಗ್ಗೆ ಮೂರುವರ್ಷದಲ್ಲಿ ಡೆಪ್ಯುಟಿ ಕಮೀಷನರೊಡನೆ ಕೃಷ್ಣರಾಜನಗರ ತಾಲ್ಲೂಕಿಗೆ ಹೋಗಿದ್ದೆ. ಒಂದು ಸಂದರ್ಭದಲ್ಲಿ ಎಚ್. ಎಸ್. ನಲ್ಲಿ 12 ಪಲ್ಲ ಬರೆದಿದ್ದರು, ಶ್ಯಾನುಭೋಗರು ಪಟೇ

(ಶ್ರೀ ಎಸ್. ರಂಗರಾಮಯ್ಯನವರು)

ಲ್ಲರು. ಆ ಜಮೀನು ರೈಲ್ವೆ ಸ್ಟೇಷನ್‌ಗೆ ಹತ್ತಿರವೇ ಇದೆ. ಅದನ್ನು ನೋಡಿದಾಗ ನನಗೂ ಆಶ್ಚರ್ಯವಾಯಿತು, ಜಮೀನಿನಲ್ಲಿ ಸೇಲಂಸಣ್ಣ ಬೆಳೆಯಿತ್ತು. ಇದನ್ನು ನೋಡಿ ಆ ಜಿಲ್ಲಾಧಿಕಾರಿಗಳು ಒಂದು ಗುಂಟೆ ಪ್ರದೇಶ ಬೆಳೆಯನ್ನು ಬಡಿಸಿದರು. ಒಂದು ಗುಂಟೆ ಎಂದರೆ 121 ಚದರಗಜ; ಬಂದ ಭತ್ತವನ್ನು ಲೆಕ್ಕಹಾಕಿ ನೋಡಿದ್ದರಲ್ಲಿ, ಆ ಹಸಿಬತ್ತ ಎಕರೆಗೆ 15 ಪಲ್ಲದಷ್ಟಾಯಿತು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—I question his statement.

ಶ್ರೀ ಎಸ್. ರಂಗರಾಮಯ್ಯನವರು.—ಎಕರೆಗೆ 15 ಪಲ್ಲದಂತೆ ಒಂದು ಗುಂಟೆಗೆ ಎಷ್ಟಾಗಬೇಕೋ ಅಷ್ಟಾಯಿತು. ನಮ್ಮ ಎದುರಿನಲ್ಲೇ ನಡೆದದ್ದು. ಆ ಮೇಲೆ ಎಚ್. ಎಸ್. ನ ಪ್ರಕಾರ ಕೊಡಬೇಕಾದ್ದನ್ನು ಹತ್ತು ಪಲ್ಲಾಕ್ಕೆ ಇಳಿಸಿದರು. ಇನ್ನೊಂದು ಕಡೆ ಬಡಿದು ಪರೀಕ್ಷೆ ಮಾಡುವುದರಲ್ಲಿ ಎಕರೆಗೆ ಎಂಟು ಪಲ್ಲದಂತೆ ಆಯಿತು. Crop experiment ನಲ್ಲಿ ಹೋದಸಾರಿ 18 ಪಲ್ಲದಂತೆ ಹಾಕಿದ್ದರು. ಕೊನೆಗೆ ಮೂರು ನಾಲ್ಕು ವರ್ಷದ average ಕೊಟ್ಟರು. ಬ್ಲಾಕ್ ಮಾರ್ಕೆಟ್‌ಗೆ ಬರುತ್ತದೆಯೆಂದು ಕೆಲವರು ಹೇಳಿದರು. ಸರಿಯಾಗಿ ಸರ್‌ಪ್ಲಸ್ ಎಲ್ಲವನ್ನೂ ತೆಗೆದುಕೊಳ್ಳುತ್ತಿದ್ದರೆ ಹೇಗೆ ಬರುತ್ತಿತ್ತು? ಆದರೆ ಸರ್‌ಪ್ಲಸ್ ನಿರ್ಧಾರ ಮಾಡುವುದರಲ್ಲಿ, ನಾನು ಖಂಡಿತ ಹೇಳುತ್ತೇನೆ, ಶೇಕಡ 15 ರಷ್ಟು ಜನಕ್ಕೆ ಬಹುಶಃ ಅನ್ಯಾಯವಾಗುತ್ತದೆ; ಇನ್ನು ಶೇಕಡ 85 ರಷ್ಟು ಜನರಿಗೆ ಅನ್ಯಾಯವಾಗುವುದಿಲ್ಲ. ಅಂದಾಜು ಹಾಕುವುದರಲ್ಲಿ ಕಡಿಮೆ ಮಾಡಿದ್ದುದು ಕಾಳಸಂತೆಗೆ ಬರುತ್ತದೆ.

ನಮಗೆ ಸರಿಯಾದ ಬೆಲೆ ಕೊಡುತ್ತಿಲ್ಲ, ವಸೂಲಿಯಲ್ಲಿ ಬಲವಂತ ಮಾಡುತ್ತಿದ್ದಾರೆಂದು ಹಳ್ಳಿಗಳಲ್ಲಿ ಕೂಗಿದೆ. ಒಂದು ದಿನ ನಾನು ಒಬ್ಬರು ಹಳ್ಳಿಯವರೊಡನೆ ಮಾತನಾಡುತ್ತಾ ಪಟ್ಟಣವಾಸದವರಿಗೆ ನಾವು ಬೆಳೆದು ಸಹಾಯ ಮಾಡಬೇಕೆಂದು ಹೇಳಿದೆ. ಅದಕ್ಕೆ ಅವರು ಸರಿಯಾದ ಉತ್ತರ ಹೇಳಿದರು: ಒಂದು ಬಟ್ಟೆಯನ್ನು ತೆಗೆದುಕೊಂಡರೆ ಅದರ ಮೇಲೆ ಅದರ ಬೆಲೆ, ಸೆಸ್, ಲಾಭ ಮುಂತಾದ ಅಂಕೆ ಅಂಶಗಳನ್ನು ಬರೆದಿರುತ್ತಾರೆ. ಒಬ್ಬ ರೈತ ಬೆಳೆಯುವ ಬೆಳೆಗೆ, ಉತ್ತಮ, ಮಧ್ಯಮ, ಕನಿಷ್ಠ ಎಂಧಿದ್ದರೆ, ಆ ಬೆಳೆ ಬೆಳೆಯಲು ಏನಾಗುತ್ತದೆ ಖರ್ಚು ಎಂಬುದನ್ನು ಗೊತ್ತುಮಾಡಿದ್ದೀರಾ? ನೀವು ಆರೀತಿ ಗೊತ್ತುಮಾಡಿ ರೈತರಿಗೆ ಆಗಿರುವ ಖರ್ಚಿನಮೇಲೆ ಅವನಿಗೆ ಶೇಕಡ 15 ರಷ್ಟು ಲಾಭಕೊಡಿ.

ನೀವೆ ಒಂದು ನಿಖರಮಾಡಿ ಶೇಕಡ 15 ಲಾಭ ಕೊಡಿ; ಆಗ ನಾವು ಬೇರೆಯಾರಿಗೂ ಕೊಡುವುದಿಲ್ಲ. ಹಾಗೆ ಒಂದುವೇಳೆ ನಾವೇನಾದರೂ ಬೇರೆಯವರಿಗೆ ಕೊಟ್ಟದ್ದನ್ನು ತಾವು ಕಂಡುಹಿಡಿದರೆ ಆಗ ತಾವು ನಮ್ಮನ್ನು ಬೇಕಾದರೆ ಗುಂಡಿನ ಬಾಯಿಗೆ ಕೊಡಿ, ಸಿದ್ಧರಾಗಿರುತ್ತೇವೆ. ಹಾಗಿಲ್ಲದೆ ಬೆಳೆಯುವವರನ್ನು ಮೂಗರಂತೆ ಮಾಡಿ ಕೇವಲ 18-20 ರೂಪಾಯಿಗೆ ನಮ್ಮ ಧಾನ್ಯವನ್ನು ಕೊಂಡು ಬೇರೆಕಡೆ ಧಾನ್ಯಕ್ಕೆ ಹೆಚ್ಚು ಬೆಲೆ ಕೊಡುವುದಕ್ಕೆ ಹೋಗುತ್ತಿದ್ದಾರಲ್ಲಾ ಇದು ಯಾವ ನ್ಯಾಯ? ನೀವು ಎಲ್ಲಿಯತನಕ ಬೆಲೆಯನ್ನು ಒಂದು ಸಮರ್ಪಕವಾದ ಮಟ್ಟಕ್ಕೆ ತರುವುದಿಲ್ಲವೋ ಅಲ್ಲಿಯತನಕ ನಾವು ಹೆಚ್ಚು ಬೆಲೆಯನ್ನು ಬೆಳೆಯುವುದಕ್ಕೂ ಆಗುವುದಿಲ್ಲ ಮತ್ತು ಬೆಳೆದದ್ದನ್ನು ನಿರ್ವಂಚನೆಯಾಗಿ ಕೊಡುವುದಕ್ಕೂ ಆಗುವುದಿಲ್ಲವೆಂದು ಹೇಳುತ್ತಿದ್ದಾರೆ. ನಮ್ಮ ರೈತರು ತಾವು ಬೆಳೆದಿದ್ದುದರಲ್ಲಿ ತಮಗೆ ಆಗುವಷ್ಟನ್ನಿಟ್ಟುಕೊಂಡು ಉಳಿದಿದ್ದನ್ನು ಕೊಡುವುದಕ್ಕೆ ಆತನು ಎಂದಿಗೂ ಹಿಂಜರಿಯುವುದಿಲ್ಲ. ಆದರೆ ಭಾರತ ಸರ್ಕಾರ ಕೊಡುತ್ತಿರುವ ಬೆಲೆ ನ್ಯಾಯವಾಗಿದೆ.

ಅಧ್ಯಕ್ಷರು.—ಈಗ ಬಂದಿರತಕ್ಕ ಪ್ರಶ್ನೆ ಅದಲ್ಲ. ಈ ಸಭೆಯ ಮುಂದಿರುವುದು ಪ್ರೊಕ್ಯೂರ್‌ಮೆಂಟ್ ಹೋಗಬೇಕು ಎಂದು. ಅದರಮೇಲೆ ಮಾತನಾಡಿ.

ಶ್ರೀ ಎಸ್. ರಂಗರಾಮಯ್ಯನವರು.—ಈ ಬೆಲೆಯೆಂಬುದೇ ಬಹಳ ಮುಖ್ಯವಾದದ್ದು. ಇಲ್ಲಿ

ಯತನಕ ನಾನು ಸಪ್ಲೈಸ್ ಎಂದು ಹೇಳಿದ್ದೆ ಗದ್ದೆಯ ವಿಚಾರವಾಯಿತು.

Sri H. M. CHANNABASAPPA.—He is making out a very good case in support of the resolution.

ಶ್ರೀ ಎಸ್. ರಂಗರಾಮಯ್ಯನವರು.—ಈಗ ರೈತರುಗಳೆಲ್ಲಾ ಬೆಲೆ ಸರಿಯಾಗಿ ಕೊಡುತ್ತಿಲ್ಲ ವೆಂದು ತವಕ ಪಡುತ್ತಿದ್ದಾರೆ. ಆ ವಿಚಾರವನ್ನು ನಾನೀಗ ತಿಳಿಸುತ್ತಿದ್ದೇನೆ. ಇನ್ನು ಈ ಧಾನ್ಯ ಸಂಗ್ರಹಣ ಮಾಡುವುದನ್ನು ತಕ್ಷಣಕ್ಕೆ ನಿಲ್ಲಿಸಲು ಸಾಧ್ಯವಿಲ್ಲವೆಂಬುದರ ಬಗ್ಗೆ ಈಗ ಅನೇಕಜನ ಮಾನ್ಯ ಸದಸ್ಯರು ಅನೇಕ ವಿಚಾರ ಗಳನ್ನು ತಿಳಿಸಿರುತ್ತಾರೆ. ಹಾಗೆ ಇದನ್ನು ತಕ್ಷಣ ನಿಲ್ಲಿಸಿಬಿಟ್ಟರೆ ಕೊಂಡುತಿನ್ನುವವರಿಗೆ ಬಹಳ ತೊಂದರೆಯುಂಟಾಗುತ್ತದೆ; ಆದುದರಿಂದ ಶ್ರೀಮಾನ್ ಚನ್ನಬೈರೇಗೌಡರು ಹೇಳಿದಂತೆ ಮಾಡಿದ್ದೇ ಆದರೆ ದೇಶಾದ್ಯಾಂತವೂ ತುಂಬಾ ಹಾಹಾಕಾರ ಉಂಟಾಗುತ್ತದೆ. ಹಿಂದೆ ಬೆಲ್ಲಕ್ಕೂ ಸಹ ಈಗ ಕೇಳುತ್ತಿರುವಂತೆ ಕಂಟ್ರೋಲನ್ನು ತೆಗೆದುಬಿಟ್ಟರು. ಆಗ ಜನಗಳ ಗತಿ ಏನಾಗಿತ್ತೆಂಬುದು ಸರ್ವರಿಗೂ ಗೊತ್ತಿರತಕ್ಕ ಅಂಶವೇ ಆಗಿದೆ. ಅದೇ ರೀತಿ ಈಗ ಈ ಆಹಾರಕ್ಕೂ ಉಂಟಾಗುತ್ತದೆ. ಈಗಲೇ ಜನರಿಗೆ ಹೊತ್ತು ಹೊತ್ತಿಗೆ ಸರಿಯಾಗಿ ಆಹಾರ ದೊರೆಯುತ್ತಿಲ್ಲ. ಹೀಗೆ 36 ಗಂಟೆಗಳಕಾಲ ಆಹಾರವಿಲ್ಲದೆ ತಳಮಳಗೊಳ್ಳುತ್ತಿರುವಾಗ 48 ಗಂಟೆಗಳ ಕಾಲ ಆಹಾರ ಸಿಕ್ಕದಂತಾದರೆ ಆಗ ಜನರ ಮತ್ತು ಮಕ್ಕಳಮರಿಗಳ ಗತಿಯೇನಾಗಬೇಕು? ಆ ರೀತಿ ಆಗದವಿನಾ ಇದರ ಬಿಸಿ ಶ್ರೀಮಾನ್ ಹುಚ್ಚೇಗೌಡರಿಗಾಗಲೀ, ಅಥವಾ ಶ್ರೀಮಾನ್ ಚನ್ನಬೈರೇಗೌಡರಿಗಾಗಲೀ ಅಥವಾ ಶ್ರೀಮಾನ್ ಚನ್ನಬಸಪ್ಪನವರಿಗಾಗಲೀ ಗೊತ್ತಾಗುವುದಿಲ್ಲ. ಈ ಸಂದರ್ಭದಲ್ಲಿ ಕೆಲವರು ಹೆಚ್ಚು ಆಹಾರ ಬೆಳೆಯಬೇಕೆಂಬ ಯೋಜನೆಯಿಂದ ಏನೂ ಪ್ರಯೋಜನವಾಗಿಲ್ಲವೆಂದು ತಿಳಿಸಿದರು. ಆದರೆ ಹಾಗೆ ತಿಳಿಸಿರುವುದು ಸರಿಯಲ್ಲ. ಈ ಯೋಜನೆಯ ಬಗ್ಗೆ ಸರ್ಕಾರದವರು ಕೈಗೊಂಡಿರತಕ್ಕ ಅನೇಕ ಕೆಲಸಗಳು ಅದರಲ್ಲೂ ನಮ್ಮ ಮೈಸೂರು ಜಿಲ್ಲೆಯಲ್ಲಿ ಚಾಮರಾಜನಗರ, ಯಳಂದೂರು ತಾಲ್ಲೂಕುಗಳಲ್ಲಿ ನಡೆಸಿರುವ ನಾನಾ ಕಾಂಗಾರಿಗಳ ದೆಸೆಯಿಂದ ಜನರಿಗೆ ಈ ವರ್ಷ ಬೆಳೆಗೆ ಏನೂ ಲೋಪವಿಲ್ಲವೆಂದು ಗೊತ್ತಾಗಿದೆ. ಆ ತಾಲ್ಲೂಕುಗಳಲ್ಲಿ ಸುಮಾರು ಈಗಾಗಲೇ ಒಂದುಕಾಲು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಎಲ್ಲಾ ನಾಲೆ, ಕೆರೆ, ಕಟ್ಟೆಗಳನ್ನು ದುರಸ್ತಿ ಮಾಡಿಸಿದ್ದರ ಫಲವಾಗಿ, ಅವುಗಳೆಲ್ಲಾ ನೀರು ತುಂಬಿಕೊಂಡು ಜನರಿಗೆ ಬಹಳ ಸಂತೋಷ ಉಂಟಾಗಿದೆ. ಹೀಗೆ ಈ ಯೋಜನೆಯ ಫಲವಾಗಿ ಜನರಿಗೆ ಬಹಳ ಉಪಕಾರವಾಗಿರುತ್ತೆ. ಅಷ್ಟೇ ಅಲ್ಲದೆ ರೈತನಿಗಿದ್ದ ಅನೇಕ ಕೊರತೆಗಳು ಕಮ್ಮಿ ಮಾಡಲ್ಪಟ್ಟವೆ. ಆದರೆ ಪ್ರೊಕ್ಯೂರ್‌ಮೆಂಟಿನ ಮೇಲಿರತಕ್ಕ ನಿರ್ಬಂಧವನ್ನು ತೆಗೆದು ಹಾಕಬೇಕೆಂದು ಹೇಳುವುದನ್ನು ಒಪ್ಪುವುದಕ್ಕಾಗುವುದಿಲ್ಲ ಮತ್ತು ಶ್ರೀ ಕೆ. ಸಂಪಂಗಿರಾಮಯ್ಯನವರ ತಿದ್ದುಪಡಿಯಲ್ಲಿ ಸೂಚಿಸಲಾದ 'ಲೆವಿ' ಪದ್ಧತಿಯನ್ನು ಈ ನಿರ್ಣಯಕ್ಕೆ ಸೇರಿಸುವುದಕ್ಕೂ ಆಗುವುದಿಲ್ಲ. ಅದನ್ನು ಮಾಡಿದರೆ ಕರಿಕಾಗೆ ಬಿಳಿಕಾಗೆ ಸೇರಿಕೊಂಡಂತಾಗುತ್ತದೆ. ಈ ಆಹಾರ ಸಂಗ್ರಹಣ ಮಾಡುವುದರಲ್ಲಿ ಮತ್ತು ಹೆಚ್ಚು ಆಹಾರ ಬೆಳೆಯಬೇಕೆಂದು ಹೇಳುವುದರ ಪರವಾಗಿ ಇದೇ ಸಭೆಯಲ್ಲಿ ಮಾನ್ಯ ಗೃಹ ಮಂತ್ರಿಗಳು ಅನೇಕ ವಿಚಾರಗಳನ್ನು ತಿಳಿಸಿದ್ದಾರೆ. ಹಾಗೆ ಅವರು ಎಷ್ಟೇ ಅನುಕೂಲತೆಗಳನ್ನು ಮಾಡಿದ್ದರೂ ಕೊಗತಕ್ಕದ್ದೇನೋ ಈಗ್ಯೂ ಇದ್ದೇಇದೆ. ಆದರೆ ರೈತ ವಿದ್ಯಾವಂತರಾದ ಜನರು ಮತ್ತು ಈ ಸಭೆಯ ಮಾನ್ಯ ಸದಸ್ಯರುಗಳು ಮತ್ತು ಪಟ್ಟಣವಾಸಿಗಳು ಎಲ್ಲರೂ ಒಂದು ಸೌಹಾರ್ದ ಭಾವದಿಂದ ನಡೆದುಕೊಂಡರೆ ಆಗ ಸರ್ವರಿಗೂ ಕ್ಷೇಮವಿದೆ. ಇಷ್ಟು ಹೇಳಿ ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಟಿ. ಸಿ. ಹೊನ್ನಪ್ಪನವರು (ಮೈಸೂರು ಜಿಲ್ಲೆ).—ಸ್ವಾಮಿ, ಶ್ರೀಮಾನ್ ಚನ್ನಬೈರೇಗೌಡರು ಮಂಡಿಸಿರತಕ್ಕ ನಿರ್ಣಯವನ್ನು ನಾನು ಅನುಮೋದಿಸುತ್ತ ಕೆಲವು ವಿಷಯಗಳನ್ನು ಸರ್ಕಾರದವರ ಗಮನಕ್ಕೆ ತರಲಿಚ್ಛಿಸುತ್ತೇನೆ. ಆಹಾರ ವಸ್ತುಗಳನ್ನು ಸಂಗ್ರಹಣ ಮಾಡುವ ಕಾರ್ಯವನ್ನು ಅಥವಾ ಈ ಪದ್ಧತಿ

(ಶ್ರೀ ಎಸ್. ರಂಗರಾಮಯ್ಯನವರು.)

ಯನ್ನು ಏತಕ್ಕೆ ತಪ್ಪಿಸಬೇಕಾಗಿದೆಯೆಂಬುದಕ್ಕೆ ಅದರಲ್ಲಿರತಕ್ಕ ಲೋಪದೋಷಗಳು ಮತ್ತು ಕುಂದುಕೊರತೆಗಳೇ ಮುಖ್ಯ ಕಾರಣಗಳಾಗಿವೆ. ಆದುದರಿಂದ ಆ ಲೋಪದೋಷಗಳ್ಯಾವುವು ಮತ್ತು ಕುಂದುಕೊರತೆಗಳೇನೆಂಬುದನ್ನು ನಾನೀಗ ಪ್ರಸ್ತಾಪಿಸಲಿಚ್ಛಿಸುತ್ತೇನೆ.

ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—ಈಗ ಮಾತನಾಡುತ್ತಿರುವ ಮಾನ್ಯ ಸದಸ್ಯರೂ ಸಹ ಈ ಸಂಬಂಧವಾಗಿ ಒಂದು ನಿರ್ಣಯವನ್ನು ಕಳುಹಿಸಿದ್ದಾರೆ. ಆಗಬೇಕಾದರೆ ಅವರು ಮಾತನಾಡಬಹುದಿತ್ತು........

ಅಧ್ಯಕ್ಷರು.—ಈಗ ಅದನ್ನು ಬದಲಾವಣೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಈಗಿರತಕ್ಕ ಆಹಾರ ಸಂಗ್ರಹಣ ಕಾನೂನನ್ನು ವಿಮರ್ಶೆ ಮಾಡಿ ನೋಡಿದರೆ ನಮ್ಮ ಸರ್ಕಾರದವರು ಗ್ರಾಮದ ಜನರನ್ನು ತಮ್ಮ ಗ್ರಾಮಗಳನ್ನು ಬಿಟ್ಟು ನಗರ ಪ್ರದೇಶಗಳಿಗೆ ಆಕರ್ಷಣೆಮಾಡಿ ಅವರನ್ನು ಸ್ವಾಗತಿಸಲು ಮಾಡಿರುವಂತಹ ಕಾನೂನುಗಳಾಗಿದ್ದಂತೆ ಗೊತ್ತಾಗುತ್ತದೆ. ಎಲ್ಲಿ ರೈತ ಕಷ್ಟಪಟ್ಟು ಬೆಳೆಯುತ್ತಾನೋ ಅಂಥಾವನಿಗೆ ಆಹಾರ ದೊರೆಯದೆ ಹೋಗಿ ಎಲ್ಲಿ ಜನರು ಆಹಾರ ಸಾಮಗ್ರಿಗಳನ್ನೇ ಬೆಳೆ ಮಾಡುತ್ತಿಲ್ಲವೋ ಅಂಥಾ ಪ್ರದೇಶದಲ್ಲಿರತಕ್ಕ ಜನರಿಗೆ ಆಹಾರವನ್ನೇ ಕಡ್ಡಾಯವಾಗಿ ಒದಗಿಸುವಂತೆ ಕಾನೂನು ಮಾಡಿರುತ್ತಾರೆ. ಕೃಷಿಯೇ ಜನರ ಜೀವನಕ್ಕೆ ಮುಖ್ಯಾಧಾರ. ಅಂಥಾ ಕಷ್ಟಪಟ್ಟು ಬೆಳೆಯುವ ರೈತನಿಗೆ ಸಾಕಷ್ಟು ಕೊಡದೆ ಆತನು ಬೆಳೆದಿದ್ದರಲ್ಲಿ ಸೇಕಡ 75-80 ರಷ್ಟು ದವಸ ಧಾನ್ಯಗಳನ್ನು ತಾವು ತೆಗೆದುಕೊಂಡಿದ್ದಾಗ್ಯೂ ಹಳ್ಳಿಗಳಲ್ಲಿ ಬೆಳೆಯದೇ ಇರತಕ್ಕ ಜನರಿಗೆ ಈಗ ಸಿಟಿಗಳಲ್ಲಿ ಒದಗಿಸುತ್ತಿರುವ ಪ್ರಮಾಣದಲ್ಲಿ ಸಹ ಅವರಿಗೆ ಒದಗಿಸುತ್ತಿಲ್ಲವೆಂಬ ಅಂಶವನ್ನು ಇದೇ ಅಧಿವೇಶನದಲ್ಲಿ 13 ನೆಯ ತಾರೀಖು ನಡೆದುದ್ದರಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಿದ್ದಾರೆ. ಹೀಗೆ ಏನನ್ನೂ ಬೆಳೆಯದಿರತಕ್ಕ ಜನರಿಗೆ ತೋರಿಸುತ್ತಿರುವ ಔದಾರ್ಯವನ್ನು ಕಷ್ಟಪಟ್ಟು ಕೃಷಿಮಾಡತಕ್ಕವನಿಗೆ ತೋರಿಸದಿದ್ದಲ್ಲಿ ಆತನು ಯಾವ ಹುಮ್ಮಸ್ಸಿನಿಂದ ಬೆಳೆ ಬೆಳೆಯಲು ಮುಂದೆ ಬಂದಾನು? ಈ ಅಂಶ ರೈತನ ಪ್ರತಿನಿಧಿಗಳೆಂದು ಹೇಳಿಕೊಳ್ಳುತ್ತಿರುವ ನಾವುಗಳೆಲ್ಲರೂ ಕುಳಿತು ಆಲೋಚನೆ ಮಾಡತಕ್ಕ ವಿಚಾರವಾಗಿದೆ. ಇದನ್ನು ನಾವು ಸರಿಪಡಿಸದೆ ಹಾಗೆಯೇ ಬಿಟ್ಟುಬಿಡುವುದಾದರೆ ನಮ್ಮ ದೇಶ ಸದ್ಯದಲ್ಲೇ ತುಂಬಾ ಹೀನಸ್ಥಿತಿಗೆ ಬರುವುದರಲ್ಲಿ ಯಾವ ಸಂಶಯವೂ ಇಲ್ಲ. ಹಿಂದೆಲ್ಲಾ ಪ್ರತಿಯೊಬ್ಬ ರೈತನಲ್ಲೂ ಐದು ವರ್ಷಕ್ಕಾಗುವಷ್ಟು ಆಹಾರ ದಾಸ್ತಾನಿರುತ್ತಿತ್ತು. ಅದೆಲ್ಲಾ ಹೊರಟುಹೋಗಿ ಈಗ ಕೊನೆಗೆ ಒಂದು ವರ್ಷಕ್ಕೂ ಇಲ್ಲ, ಒಂದು ತಿಂಗಳಿಗೂ ಇಲ್ಲ. ಇಂದು ಒಂದು ಹೊತ್ತಿನ ದಾಸ್ತಾನೂ ಸಹ ಇಡಲಾರದಂಥ ಕಾಲಸ್ಥಿತಿ ಬಂದುಹೋಯಿತು! ಹೀಗೆ ಎಂದಿನವರೆಗೆ ತಾವು ಈ ಆಹಾರ ಸಮಸ್ಯೆಯನ್ನು ಒಂದು ಯೋಜನೆಯ ಮುಖಾಂತರ ಅಥವಾ ಭಾಷಣ ಮಾಡುವುದರ ಮೂಲಕ ಉತ್ತಮಗೊಳಿಸುತ್ತೇವೆಂದು ಭಾವಿಸುತ್ತೀರೋ ಅಂದಿನ ತನಕವೂ ದೇಶ ಉದ್ಧಾರವಾಗುವುದಿಲ್ಲ ಮತ್ತು ಈ ಆಹಾರದ ಹಾಹಾಕಾರ ತಪ್ಪುವುದಿಲ್ಲವೆಂಬುದು ಖಂಡಿತವಾದ ಮಾತು. ಇದರ ನಿವಾರಣೆಯ ಬಗ್ಗೆ ತಾವು ಮುಖ್ಯವಾಗಿ ಕೈಕೊಳ್ಳಬೇಕಾಗಿರತಕ್ಕ ವಿಚಾರಗಳ ಪೈಕಿ ಮೊದಲನೆಯದಾಗಿ ತಾವು ಮಾಡಬೇಕಾಗಿರುವುದೇನೆಂದರೆ—ಬೆಳೆಯತಕ್ಕ ರೈತನು ಯಾವ ಜಾಗದಲ್ಲಿದ್ದರೆ ಬೆಳೆಯಲು ಸಾಧ್ಯವೋ, ಆ ಜಾಗದಲ್ಲೇ ಆತನು ನಿಲ್ಲಲು ಅನುಕೂಲಗಳನ್ನು ಕಲ್ಪಿಸಿಕೊಡಬೇಕು. ಅವರನ್ನು ಪಟ್ಟಣಗಳ ಕಡೆಗೆ ತಿರುಗದಂತೆ ತಡೆಗಟ್ಟಬೇಕು.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಹೇಗೆ ಸಾಧ್ಯ? ತಿಳಿಸಿ.

ಶ್ರೀ ಟಿ. ಸಿ. ಹೊನ್ನಪ್ಪನವರು.—ನನಗೆ ಸ್ವಲ್ಪ ಅವಕಾಶ ಕೊಡಿ ತಿಳಿಸುತ್ತೇನೆ. ಅದೇ ವಿಚಾರಕ್ಕೇ ನಾನೀಗ ಬರುತ್ತಿದ್ದೇನೆ. ಒಂದು ಎಕರೆಯಲ್ಲಿ ಎಲ್ಲೋ ಒಂದು ಕಡೆ ಒಂದು ಗುಂಟೆ ಪ್ರದೇಶವನ್ನು ಅಜಮಾಯಿಷಿ ಮಾಡಿ ನೋಡಿ

ಫಸಲು ಚೆನ್ನಾಗಿದೆ; ಆ ದಾಮಾಷಾ ಪ್ರಕಾರ ಎಕರೆಗೆ ಇಷ್ಟು ಕೊಡಬೇಕೆಂದು ಹೇಳುತ್ತಾರೆ; ಅದರಂತೆ ಕೊಡದಿದ್ದರೆ ಕೇಸು ಹಾಕುತ್ತಾರೆ; ಇದರಿಂದ ಎಷ್ಟೋ ರೈತರಿಗೆ ಸಾಕಷ್ಟು ಆಹಾರ ವಿಲ್ಲದಂತಾಗಿದೆ; ಅದಕ್ಕೆ ತಕರಾರು ಅರ್ಜಿ ಕೊಟ್ಟರೆ ಅಮಲ್ದಾರರು, ರೆವೆನ್ಯೂ ಇನ್‌ಸ್ಪೆಕ್ಟರು ಮುಂತಾದ ಆಫೀಸರುಗಳು ಹೋಗಿ 500 ಎಕರೆಯಿರುವ ಜಾಗದಲ್ಲಿ ಬದಿಇಲ್ಲದೆ ಉತ್ಕೃಷ್ಟವಾಗಿ ಬೆಳೆಯಿರುವ ಸ್ಥಳದಲ್ಲಿ ಹೋಗಿ ಅದನ್ನು ನೋಡಿ ಅದರ ಪ್ರಕಾರ ಪಹಣಿ ಬರೆ ಯುವಂತೆ ಹೇಳುತ್ತಾರೆ. ಒಂದು ಎಕರೆ ಜಮೀ ನಿನಲ್ಲೇ ಎಷ್ಟುಭಾಗದಲ್ಲಿ ಬೆಳೆ ಚೆನ್ನಾಗಿದೆ, ಎಷ್ಟು ಕಡೆ ಸರಿಯಾಗಿಲ್ಲ ಎಂಬುದನ್ನು ನೋಡ ಬೇಕು. ಹಾಗಿಲ್ಲದೆ ಎಲ್ಲೋನೋಡಿ ಲೆಕ್ಕಾ ಚಾರಹಾಕಿ ಅದರಂತೆ ಧಾನ್ಯ ವಸೂಲುಮಾಡು ವುದು ಸರಿಯಲ್ಲ. ಬತ್ತದ ಮರ ಹೇಗಿದೆ ಎಂದು ಕೇಳುವ ಆಫೀಸರುಗಳು ಅನೇಕರಿದ್ದಾರೆ. ಅವರು ಸರಿಯಾಗಿ ಅಜಮಾಯಿಷಿ ಮಾಡುವುದಿಲ್ಲ. ಶ್ಯಾನುಭೋಗರು ಹತ್ತುಪಲ್ಲ ಎಂದು ಬರೆದಿ ರುವ ಕಡೆ, 15 ಪಲ್ಲ ಬರೆಯಬೇಕೆಂದು ಆಜ್ಞೆ ಮಾಡುತ್ತಾರೆ. ಹಾಗೆ ಮಾಡದಿದ್ದರೆ ಜುಲ್ಮಾನೆ ಹಾಕುತ್ತಾರೆ. ಶ್ಯಾನುಭೋಗರು ಹೆಚ್ಚಾಗಿ ಬರೆದಿದ್ದರೆ ಬಾಧಕವಿಲ್ಲ; ಹಾಗಿಲ್ಲದೆ ಕಡಮೆ ಬರೆದಿದ್ದರೆ ಅವರಿಗೆ ಜುಲ್ಮಾನೆ ವಿಧಿಸು ವುದು ಸರ್ಕಾರದ ನೀತಿಯಾಗಿದೆ. ಒಂದು ಊರಿನಲ್ಲಿ ಒಂದೆರಡು ಕಡೆ ಅಜಮಾಯಿಷಿ ಮಾಡಿ ನೋಡಿದರೆ! ಕೆಲವು ಭಾಗದಲ್ಲಿ ಉತ್ಕೃಷ್ಟ ವಾಗಿರಬಹುದು, ಕೆಲವು ಕಡೆ ಸಾಧಾರಣವಾಗಿ ರಬಹುದು; ಅದರಮೇಲೆ ಎಲ್ಲಾ ಕಡೆಯೂ ಹೀಗೆ ಯೇ ಇದೆಯೆಂದು ಹೇಳಿದರೆ ಹೇಗೆ?

ಶ್ರೀ ಎಸ್. ರಂಗರಾಮಯ್ಯನವರು.—ಎರಡು ಮೂರು ಕಡೆ ಬೇರೆಬೇರೆ ಕಾಲದಲ್ಲಿ ಅಜಮಾ ಯಿಷಿ ಮಾಡುತ್ತಾರೆ.

ಶ್ರೀ ಟಿ. ಸಿ. ಹೊನ್ನಪ್ಪನವರು.—ವ್ಯವ ಸಾಯ ಮಾಡುವವರು ಹಾಗೆ ಹೇಳುವುದಿಲ್ಲ. ಮಾನ್ಯ ಮಿತ್ರರು ಸರ್ಕಾರಿ ಸಹಾಯ ಪಡೆದು ಬೆಳೆಮಾಡಿದ್ದಾರೆ, ಈ ದಿವಸ ಸರ್ಕಾರಕ್ಕೆ ಅವರೇನು ಕೊಟ್ಟಿಗು ಎಂಬುದಕ್ಕೆ ಲೆಕ್ಕ ಕೊಡಲಿ. ಹತ್ತುಪಲ್ಲದಷ್ಟಾದರೂ ಸಹಾಯ ಮಾಡಿಲ್ಲ. ಉದಾಹರಣೆ ಹೇಳುವುದಾದರೆ ನಂಜನಗೂಡು ತಾಲ್ಲೂಕು ಕಬಾನೂರು ಗ್ರಾಮ ದಲ್ಲಿ ಒಬ್ಬರೈತ 300 ಪಲ್ಲ ದವಸವನ್ನು ಕೊಟ್ಟನು. ಇನ್ನೂ 45 ಪಲ್ಲ ಕೊಡಬೇಕೆಂದು ಹೇಳಿದರು. ಆದರೆ ಅದಕ್ಕೆ ಸಕಾಲದಲ್ಲಿ ಅರ್ಜಿ ಕೊಟ್ಟು ಪಹಣಿ ಬರೆದಿರುವುದು ಸರಿಯಲ್ಲವೆಂದು ಹೇಳಿ ಇತ್ಯರ್ಥ ಮಾಡಬೇಕೆಂದು ಕೇಳಿಕೊಂ ಡರೂ ಅದನ್ನು ಗಮನಿಸಲಿಲ್ಲ. ಅದರ ಮೇಲೆ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಕೇಸು ಹೂಡಿ ದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಆ ರಿಕಾ ರ್ಡುಗಳನ್ನು ತರಿಸಿ ನೋಡಬಹುದು. ಮುನ್ನೂರು ಪಲ್ಲಕೊಟ್ಟು 45 ಪಲ್ಲ ಕೊಡದೇ ಹೋದ್ದಕ್ಕೆ ಆತನನ್ನು ಜೈಲಿನಲ್ಲಿಡುವುದು ಸರಿಯೆ? ಕಂಟ್ರೋಲ್ ಮಾಡುವಾಗ, ಕಾನೂನು ಮಾಡು ವಾಗ ಯಾವುದೋ ಒಂದು ಧ್ಯೇಯವಿರುತ್ತದೆ. ಆದರೆ ಆಡಳಿತ ನಡೆಸುವ ಅಧಿಕಾರಿಗಳು ಅದನ್ನು ಕಾರ್ಯರೂಪಕ್ಕೆ ತರುವಾಗ ಸರಿಯಾಗಿ ವರ್ತಿ ಸುವುದಿಲ್ಲ. ಆಯುಧ ತಮ್ಮ ಕೈಲಿರುತ್ತದೆ ಯೆಂದು ಸ್ವೇಚ್ಛೆಯಾಗಿ ಉಪಯೋಗಿಸುತ್ತಾರೆ. ನಮ್ಮ ಕೈಲಿರುವ ಆಯುಧ ನಮ್ಮ ಮೇಲೆ ಪ್ರಯೋಗಿಸಲ್ಪಟ್ಟರೆ ಹೇಗೆ? ಇಂಥ ಕಾನೂನು ಮಾಡುವುದರಿಂದ ಪ್ರಯೋಜನವೇನು? ದೇಶದ ಹಿತದೃಷ್ಟಿಯಿಂದ ಮಾಡುವ ಕಾನೂನು ಪರಿ ಣಾಮದಲ್ಲಿ ಜನರಿಗೆ ಸುಖವನ್ನು ದೊರಕಿಸಿ ಕೊಡದಿದ್ದರೆ ಅದರಿಂದ ಪ್ರಯೋಜನವೇನು? ಈ ಕಾನೂನಿನಿಂದ ಎಷ್ಟು ಜನರಿಗೆ ತೊಂದರೆ ಯಾಗುತ್ತಿದೆ ಯೆಂಬುದನ್ನು ನೋಡಬೇಕು. ಈ ದಿವಸ ಸಿಟಿ ಪ್ರದೇಶದಲ್ಲಿ, ರೇಷನ್ ಇರುವ ಜಾಗ ದಲ್ಲಿ ಪರಿಸ್ಥಿತಿ ಹೇಗಿದೆ ಎಂಬುದನ್ನು ನೋಡ ಬೇಕಾಗಿದೆ. ಅಲ್ಲಿ ಹೇಗೋ ಬೇಕಾದ ಆಹಾರ ವನ್ನು ಒದಗಿಸಿ ಗ್ರಾಮಾಂತರ ಪ್ರದೇಶಗಳಲ್ಲಿ ಸೇಕಡ 80 ರಷ್ಟು ಮಾತ್ರ ಕೊಟ್ಟರೆ ಇನ್ನು ಳಿದ 20 ಭಾಗ ಹೇಗೆ ಪಡೆಯಬೇಕು ಎಂಬುದಕ್ಕೆ ಕಾನೂನಿನಲ್ಲಿ ಸರಿಯಾದ ಅವಕಾಶ ಮಾಡಿಲ್ಲ. ಆದ್ದರಿಂದ ಅನೇಕರು ಸಿಟಿಗಳಿಗೆ ಬಂದು ಸೇರು ತ್ತಿದ್ದಾರೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಮೂವತ್ತು ಸೇರನ್ನು ತೆಗೆದುಕೊಂಡು ಹೋಗ ಬಹುದೆಂದು ಮಾಡಿದೆ. ಎಷ್ಟೋ ಜನರು ಅದ ರಂತೆ ತರುತ್ತಿದ್ದಾರೆ. ದಾವಣಗೆರೆಯಲ್ಲಿ ಐದು ಸೇರಿನಂತೆ ಜೋಳ ಮಾರಾಟವಾಗುತ್ತಿದೆ!

ಶ್ರೀ ಟಿ. ಸಿ. ಹೊನ್ನಪ್ಪನವರು.— ಈ ರೀತಿ ಇದ್ದರೆ ಕಂಟ್ರೋಲ್ ಇಟ್ಟಿರುವುದರಿಂದ ಪ್ರಯೋಜನವೇನು? ಅದರ ಉದ್ದೇಶ ಸಫಲವಾಗುತ್ತದೆಯೆ? ಆಯುಧ ಕೈಲಿರುವಾಗ ಅದನ್ನು ಏತಕ್ಕಾಗಿ ಉಪಯೋಗಿಸಬೇಕೋ ಅದಕ್ಕೆ ಉಪಯೋಗಿಸದಿದ್ದ ಮೇಲೆ ಅಂಥ ಆಯುಧವನ್ನು ಬಿಸಾಟುಬಿಡೋಣ. ಅದನ್ನು ಚಲಾಯಿಸುವ ವ್ಯಕ್ತಿಗಳಲ್ಲಿ ತಪ್ಪಿದೆಯೋ ಅಥವಾ ಆಯುಧದಲ್ಲಿ ತಪ್ಪಿದೆಯೋ ಎಂದು ಯೋಚನೆ ಮಾಡಬೇಕು. ಈ ದಿನ ಪ್ರಪಂಚ ಅಲ್ಲೋಲ ಕಲ್ಲೋಲವಾಗುವ ಪರಿಸ್ಥಿತಿ ಇದೆ. ಕಂಟ್ರೋಲ್ ಹೋಗುವುದರಿಂದ ಯಾವ ಬಾಧಕವೂ ಇಲ್ಲ. ಅದಾದ ಹೊರತು ಕಾಳಸಂತೆ ಹೋಗುವುದಿಲ್ಲ. ಕಾನೂನು ನಾವು ಮಾಡಿರುವುದನ್ನು ನಾವೇ ತೆಗೆಯೋಣ, ಬೇಕಾದ ದೊಡ್ಡದೊಡ್ಡ ಪಟ್ಟಣಗಳಲ್ಲಿ ಹತೋಟಿಯಿರಲಿ ಇದಕ್ಕೆ ಹೇಗೆ ಶೇಖರಣೆ ಮಾಡಿ ಸರಬರಾಯಿ ಮಾಡಬೇಕು ಎಂಬುದಕ್ಕೆ ಸಲಹೆ ಕೇಳಬಹುದು, ಈ ದಿವಸ ಆಹಾರ ಇಲಾಖೆಗಾಗಿ ಬಹಳ ಹಣ ವೆಚ್ಚವಾಗುತ್ತಿರುವುದನ್ನು ತಪ್ಪಿಸಿ ಆ ಕೆಲಸವನ್ನು ರೆವೆನ್ಯೂ ಇಲಾಖೆಗೆ ವಹಿಸಬಹುದು. ಇವರು ಸಿಟಿಗಳಿಗೆ ಸರಬರಾಯಿ ಮಾಡುವ ಕೆಲಸವನ್ನು ನೋಡಿಕೊಳ್ಳಬಹುದು. ಹಾಗೆ ಮಾಡಿದರೆ ಆಹಾರದ ಇಲಾಖೆಗಾಗಿ ಖರ್ಚುಮಾಡುತ್ತಿದ್ದ 30-40 ಲಕ್ಷ ರೂಪಾಯಿಗಳು ಉಳಿತಾಯವಾಗುತ್ತದೆ. ಕಂಟ್ರೋಲಿನಿಂದ ರೈತರಿಗೆ ಬೇಜಾರಾಗಿ ಯಾವ ತರದ ಉತ್ತೇಜನವೂ ಸಿಕ್ಕದೇ ಹೋಗಿದೆ. ದೇಶಕ್ಕೆ ತೃಪ್ತಿಯಿಲ್ಲ. ರೈತರಿಗೆ ಉತ್ತೇಜನ ಕೊಡಬೇಕಾದರೆ ಕಂಟ್ರೋಲ್ ತೆಗೆಯಬೇಕು. ಹಾಗೆ ಮಾಡಿದರೆ ಅವನು ಚೆನ್ನಾಗಿ ಬೆಳೆಯುತ್ತಾನೆ. ಈಗ ಅವರ ಮೇಲೆ ಕ್ರಮ ಜರುಗಿಸುತ್ತಿರುವುದರಿಂದ ಹೆಚ್ಚು ಬೆಳೆಯುವುದಕ್ಕೆ ಅವಕಾಶವಿಲ್ಲದೆ ತುಂಬಾ ಅನರ್ಥವಾಗುತ್ತಿದೆ. ಆದ್ದರಿಂದ ಈ ನಿರ್ಣಯವನ್ನು ಅನುಮೋದಿಸುತ್ತಾ ಮಾನ್ಯ ಸದಸ್ಯರೆಲ್ಲರೂ ಈ ವಿಚಾರದಲ್ಲಿ ತಮ್ಮ ಸಮ್ಮತಿಯನ್ನಿತ್ತು ಈ ನಿರ್ಣಯವನ್ನು ಅನುಮೋದಿಸಬೇಕೆಂದೂ ತನ್ಮೂಲಕ ಸರ್ಕಾರ ಶೇಖರಣೆ ಕಂಟ್ರೋಲ್ ವಜಾಮಾಡಲು ಸರ್ಕಾರಕ್ಕೆ ಸಹಾಯ ನೀಡಲೆಂದೂ ಸೂಚಿಸಿ ನನ್ನ ಭಾಷಣವನ್ನು ಮುಕ್ತಾಯ ಗೊಳಿಸುತ್ತೇನೆ.

(Sri B. Channabyre Gowda rose.)

The Hon'ble Sri T. MARIAPPA (Home Minister).—I would like to intervene in the debate for a few minutes.

Mr. SPEAKER.—The Hon'ble Home Minister may reply afterwards.

The Hon'ble Sri K. CHENGALARAYA REDDY (Chief Minister).—No, no; I am replying.

Mr. SPEAKER.—Then, the Hon'ble Home Minister may speak now.

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ನಾನೂ ಕೂಡ ಈ ಚರ್ಚೆಯಲ್ಲಿ ಭಾಗವಹಿಸಬೇಕೆಂದಿದ್ದೇನೆ. ಭಾಷಣಗಳಾಗುವಾಗ ಕೆಲವು ಮಾನ್ಯ ಸದಸ್ಯರು ನನ್ನ ಹೆಸರನ್ನು ಉಪಯೋಗಿಸಿಕೊಂಡಿದ್ದಾರೆ; ತಪ್ಪೇನೂ ಇಲ್ಲ. ಅದಕ್ಕೆ ನಾನು ನಾಲ್ಕಾರು ಮಾತುಗಳನ್ನು ಹೇಳಬೇಕೆಂದು ಇಚ್ಛಿಸುತ್ತೇನೆ. ಡಾಕ್ಟರ್ ಶ್ರೀಕಂಠೇಶ್ವರ್ ರವರು, ಸೋಷಿಯಲಿಸ್ಟ್ ಪಾರ್ಟಿ ಸದಸ್ಯರು. ಕಂಟ್ರೋಲ್ಡ್ ಎಕಾನಮಿ ಅವರ ತತ್ವ ಆಗಿದೆ. ಆದ್ದರಿಂದ ಸ್ವಾಭಾವಿಕವಾಗಿ ಅದನ್ನು ಪ್ರತಿಪಾದಿಸುತ್ತಾ ವಿಷಯಗಳನ್ನು ಪೂರ್ಣವಾಗಿ ಗ್ರಹಿಸಿಕೊಂಡು ಹೇಳಲಿಲ್ಲವಲ್ಲಾ ಎಂದು ನನಗೆ ವ್ಯಥೆ. ನಮ್ಮಲ್ಲಿರತಕ್ಕ ಪ್ರೊಕ್ಯೂರ್‌ಮೆಂಟ್ ಸಿಸ್ಟಂ ಅನ್ನು ಬಹಳ ಯೋಚನೆಮಾಡಿ ಮಾಡಿದ್ದೇವೆ. ಪ್ರವೀಣರಾದ ಶ್ರೀಮಾನ್ ತಿರುಮಲರಾವ್ ಅವರು ಬಂದು ಮೈಸೂರಿನಲ್ಲಿ ಜಾರಿಯಲ್ಲಿರುವುದು ಸೈನ್‌ಟಿಫಿಕ್ ಆಗಿ ಜಾರಿಯಲ್ಲಿದೆ, ಇದರಿಂದ ಸ್ವಲ್ಪ ತೊಂದರೆ ಆಗಬಹುದು, ಆದರೂ ಸಿಸ್ಟಂನಲ್ಲಿ ಏನೂ ನ್ಯೂನತೆಯಿಲ್ಲ, ಅದರಲ್ಲೂ ಮೈಸೂರಿನಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡುತ್ತಾ ಇದೆ ಅಂತ ಒಂದು ಪ್ಯಾರಾ

ಗ್ರಾಫ್‌ನಲ್ಲಿ ಬರೆದಿದ್ದಾರೆ. ನಮ್ಮಲ್ಲಿ ಮಿನಿಮಂ ಪ್ರೊಕ್ಯೂರ್‌ಮೆಂಟ್ ಆಗುತ್ತಾಇದೆ. ಮತ್ತು ಡಿಸ್ಟ್ರಿಬ್ಯೂಷನ್ ಬಹಳ ಸೈಂಟಿಫಿಕ್ ಆಗಿ ಆಗುತ್ತಾ ಇದೆ. ಸಿಸ್ಟಂನಲ್ಲಿ ತೊಂದರೆಯಿಲ್ಲ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಇದನ್ನು ಅವರ ಗಮನಕ್ಕೆ ತರಬೇಕೆಂದು ಇಚ್ಛಿಸುತ್ತೇನೆ. ಎರಡನೆಯದಾಗಿ ಶ್ರೀಮಾನ್ ಹುಚ್ಚೇಗೌಡರು ಮತ್ತು ಇತರರು ಎಲ್ಲರೂ ಶೇಕಡ 90 ರಷ್ಟು ರೈತರಿಗೆ ತೊಂದರೆಯಾಗಿದೆಯೆಂದು ಹೇಳಿದರು. ನಾನು ಅವರಿಗೆಲ್ಲಾ ಪ್ರಾರ್ಥನೆ ಮಾಡುತ್ತೇನೆ. ಜವಾಬ್ದಾರಿ ಸರ್ಕಾರ ಜಾರಿಗೆ ಬಂದ ಮೇಲೆ ಅಂಕಿ ಅಂಶಗಳನ್ನು ಸಂಗ್ರಹಿಸಿ ವಿಷಯಗಳನ್ನು ಹೇಳಿದರೆ ಬಹಳ ಉತ್ತಮ. ಜನಾಬ್ ಹನೀಫ್ ರವರು ಪುಣ್ಯವಂತರನ್ನು ಬಿಡುತ್ತಾರೆ, ಬಡವ ರನ್ನು ಶೋಷಣೆಮಾಡಿ ವಸೂಲು ಮಾಡುತ್ತಾರೆ ಎಂದು ಹೇಳಿದರು. ಹೀಗೆ ಮಾತನಾಡಿದವರ ಪೈಕಿ ಸರ್‌ಪ್ಲಸ್ ಹೋಲ್ಡರ್ಸ್ ಎಂದರೆ ಚನ್ನ ಬೈರೇಗೌಡರು, ಹುಚ್ಚೇಗೌಡರು ಮತ್ತು ರಂಗರಾಮಯ್ಯನವರು, ಇವರಲ್ಲಿ ಯಾರಾದರೂ ನಮಗೆಲ್ಲಾ ಬಿಟ್ಟು ಬಿಟ್ಟರುಸ್ವಾಮಿ, ವಸೂಲು ಮಾಡಲೇ ಇಲ್ಲ ಎಂದು ಹೇಳಿದರೇ ಎಂದರೆ ಯಾರೊಬ್ಬರೂ ಹೇಳಲಿಲ್ಲ. ಅವರಿಗೆ ಅನ್ಯಾಯ ವಾಯಿತು ಅಂತಲೂ ಹೇಳಲಿಲ್ಲ. ಇದಕ್ಕೆ ಅವರೇ ಸಾಕ್ಷಿ ಎಂದು ಹೇಳುತ್ತೇನೆ. ಪ್ರೊಕ್ಯೂರ್ ಮೆಂಟ್ ಮಾಡುವಾಗ ಕೆಲವು ಲೋಪದೋಷ ಗಳು ಕಂಡು ಬರುತ್ತವೆ. ಎಂಥಾ ಚೆನ್ನಾಗಿರುವ ಕಾನೂನು ಮಾಡಿದರೂ ಅದನ್ನು ಜಾರಿಗೆ ಕೊಡುವಾಗ ಸಣ್ಣ ಪುಟ್ಟ ಅಧಿಕಾರಿಗಳು ತಪ್ಪು ಮಾಡುತ್ತಾರೆ. ಅದನ್ನು ಬಿಟ್ಟು ಬಿಡೋಣ. ಆದರೆ ಸರ್ವ ಸಾಮಾನ್ಯವಾಗಿ ಶೇಕಡ 90 ಭಾಗ ತಪ್ಪಾಗಿದೆ ಎಂದರೆ ಒಪ್ಪಿಕೊಳ್ಳುವುದಿಲ್ಲ. ಏಕೆಂದರೆ ನಮ್ಮ ದೇಶದಲ್ಲಿ ಎಷ್ಟು ಜನ ವ್ಯವಸಾಯಗಾರರಿದ್ದಾರೆ ಎಂಬ ಲೆಕ್ಕ ತೆಗೆದು ಕೊಳ್ಳೋಣ; ಸರ್‌ಪ್ಲಸ್ ಹೋಲ್ಡರ್ಸ್ ಎಷ್ಟು ಜನ ಇದ್ದಾರೆ ಎಂಬ ಲೆಕ್ಕ ನೋಡೋಣ: 1943ರಿಂದ ಇವತ್ತಿನವರೆಗೆ ಸರಾಸರಿ ನೋಡಿ ದರೆ 2,54,163 ಜನ ಸರ್‌ಪ್ಲಸ್ ಹೋಲ್ಡರ್ಸ್ ಇದ್ದಾರೆ; ಬಹಳ ಹೆಚ್ಚಾಗಿಲ್ಲ; ಸೀಸನಲ್ ಕಂಡೀಷನ್‌ಗೆ ಒಳಪಟ್ಟು ಇಷ್ಟು ಜನ ಇದ್ದಾರೆ. ಇಷ್ಟು ಜನರಲ್ಲಿ ಎಷ್ಟು ಭಾಗಕ್ಕೆ ತೊಂದರೆ ಆಗಿರ ಬಹುದು? 2,54,163 ಜನಕ್ಕೂ ತೊಂದರೆ ಆಗಿದ್ದರೆ ದೇಶದಲ್ಲಿ ಎಷ್ಟು ಹಾಹಾಕಾರ ಆಗುತ್ತಿತ್ತು; ಎಷ್ಟು ಗಲಾಟೆ ಆಗುತ್ತಿತ್ತು ಎಂಬುದನ್ನು ಯೋಚನೆ ಮಾಡಬೇಕು. ಜನತಾ ಪಾರ್ಟಿ—ಅವರು ವಿರೋಧಪಕ್ಷ ಇರಬೇಕೆಂದು ಹೇಳುವವರು ಮುಂದೆ ಸರ್ಕಾರವನ್ನು ತಮ್ಮ ಕೈಗೆ ತೆಗೆದುಕೊಳ್ಳುವವರಾಗಿರುವವರು—ಈ ಸಭೆಯಲ್ಲಿ ಮಾಡಿದ ಭಾಷಣಗಳನ್ನು 'ಕೋಟ್' ಮಾಡಬೇಕಾಗಬಹುದು. ಆದ್ದರಿಂದ 90% ಅಂತ ಹೇಳಬಾರದು. ಕೆಲವರಿಗೆ ತೊಂದರೆ ಆಗಿದೆ ಎಂದರೆ ಇರಬಹುದು. ಟಾರ್ಜೆಟ್ ಫಿಕ್ಸ್‌ಮಾಡಿ ವಸೂಲು ಮಾಡುತ್ತೀರಿ ಎಂದು ಜನಾಬ್ ಹನೀಫ್‌ರವರು ಹೇಳಿದರು. ಅವರು ಲಾಯರು, ಹಾರ್ವೆಸ್ಟ್ ಆರ್ಡರ್‌ನಲ್ಲಿ ಅದು ಪ್ರೊವೈಡ್ ಆಗಿದೆ. ಅದರಲ್ಲಿ ಒಬ್ಬ ಖಾತೆದಾರನಿಗೆ ಎಷ್ಟು ಎಕರೆ ಖುಷ್ಕಿ, ಎಷ್ಟು ಎಕರೆ ತರಿ ಜಮೀನು ಇದೆ. ಎಷ್ಟು ಬೆಳೆ ಆಗಬಹುದು ಎಂಬುದೆಲ್ಲಾ ಇದೆ. ಇಷ್ಟೆಲ್ಲಾ ಇದ್ದರೂ ತಪ್ಪು ಆಗುತ್ತದೆ. ಅಲೋ ಯೇಷನ್ ನಿಗದಿ ಯಾಗಿದೆ. ಬೀಜುವರಿ ಗೊತ್ತು ಮಾಡಿದೆ, ವ್ಯವಸಾಯದ ಕೂಲಿಗಾರರ ಸಂಖ್ಯೆ ನಿಗಧಿಯಾಗಿದೆ; ಪ್ರತಿಯೊಂದಕ್ಕೂ ಇಷ್ಟಿಷ್ಟು ಸೇರು ಬಿಡಬೇಕೆಂದು ಗೊತ್ತುಮಾಡಿದೆ. ಎಲ್ಲಿ ತೊಂದರೆ ಬರುತ್ತದೆ ಎಂದರೆ ಸ್ಟ್ಯಾಂಡಿಂಗ್ ಕ್ರಾಪ್ ಅಂದಾಜು ಮಾಡುವಾಗ ಸ್ವಲ್ಪ ಹೆಚ್ಚು ಕಮ್ಮಿ ಆಗುತ್ತದೆ. ಕುಯ್ದು, ರೇಖೆಮಾಡಿ, ಅಳತೆ ಮಾಡಬೇಕೆಂದು ಶ್ರೀಮಾನ್ ಹುಚ್ಚೇ ಗೌಡರು ಹೇಳಿದರು. ಕಾರ್ಯತಹ ಅದು ಅಷ್ಟು ಸುಲಭವಲ್ಲ. ಎಲ್ಲರೂ ಬಡಿದು ಧಾನ್ಯವನ್ನು ಕಣದಲ್ಲಿ ಇಡುವುದಿಲ್ಲ. ಆದ್ದರಿಂದ ಸಾಮಾನ್ಯ ವಾಗಿ ನಾವೇನು ಮಾಡುತ್ತೇವೆ ಎಂದರೆ ಕ್ರಾಪ್ ಎಸ್ಟಿಮೇಟು, ಒಂದಲ್ಲ 2-3 ಸಾರಿ ಮಾಡುತ್ತೇವೆ. ಅಲ್ಲಲ್ಲಿ random sample survey ಅಂತ ಮಾಡುತ್ತೇವೆ. ಒಂದು ಸಾರಿ ಶ್ರೀಮಾನ್ ನಂಜರಾಜ ಅರಸ್‌ರವರನ್ನು ನನ್ನ ಜೊತೆಯಲ್ಲಿ ಕರೆದುಕೊಂಡು ಹೋಗಿದ್ದೆ, ಎಚ್. ಎಸ್. ಫಾರಂ ಇಟ್ಟುಕೊಂಡು. ಅವರೂ ಇಲ್ಲಿ ಸಾಕ್ಷಿ

(ಮಾನ್ಯ ಶ್ರೀ ಟಿ. ಮರಿಯಪ್ಪನವರು).

ಇದ್ದಾರೆ. ಅಂದಾಜು ಎಷ್ಟು ಅಂತ ಕೇಳಿದ್ದಕ್ಕೆ ಶೇಕಡ 90 ಕೇಸುಗಳಲ್ಲಿ ಅಂಡರ್ ಎಸ್ಟಿಮೇಟು ಆಗಿತ್ತು. ಒಂದು ವೇಳೆ ದುಡ್ಡು ತೆಗೆದುಕೊಂಡು ಅಂಡರ್ ಎಸ್ಟಿಮೇಟ್ ಮಾಡಿರಬಹುದು ಎಂದು ಹೇಳಬಹುದು. ಇನ್ನೂ ಕೆಲವು ಕಡೆ ಕ್ರಾಪ್ ಎಸ್ಟಿಮೇಟ್ ಮಾಡುವುದಕ್ಕೆ ತೊಂದರೆ ಆಗಿ ಆ ರೀತಿ ಅಂಡರ್ ಎಸ್ಟಿಮೇಟ್ ಮಾಡಿರಬಹುದು. ಎಲ್ಲಾದರೂ ಕೆಲವು ಕಡೆ ಅತಿಕ್ರಮ ದುಡ್ಡಿನ ಆಶೆಗೋ ಅಥವಾ ದುರಭಿಪ್ರಾಯದಿಂದಲೋ ಅಂಡರ್ ಎಸ್ಟಿಮೇಟ್ ಮಾಡಿದ್ದರೂ ಇರಬಹುದು. ಆದರೆ ಕೆಲವು ಉದಾಹರಣೆಗಳನ್ನು ತೆಗೆದು ಕೊಂಡು ಈ ಸಭೆಯ ಮುಂದೆ 'ಜನರಲೈಸ್' ಮಾಡಬಾರದು. ಈಗ ಜವಾಬ್ದಾರಿ ಸರ್ಕಾರ ನಡೆಯುತ್ತಾ ಇದೆ. ಈ ಸಭೆಗಿರುವ ಒಂದು ಜವಾಬ್ದಾರಿ ಇದೆಯೆಂದರೆ ದೇಶದಲ್ಲಿರತಕ್ಕ ಆಹಾರದ ಅಭಾವವನ್ನು ಎದುರಿಸಬೇಕಾಗಿದೆ. ನಮ್ಮ ದೇಶದಲ್ಲಿ ಉತ್ಪತ್ತಿ ಆಗತಕ್ಕ ಆಹಾರವನ್ನು ಎಷ್ಟು ಸಾಧ್ಯವೋ ಅಷ್ಟನ್ನೂ ವಸೂಲುಮಾಡಲೇಬೇಕು. ಏಕೆಂದರೆ ಹೊರಗಡೆಯಿಂದ ಕೊಡತಕ್ಕವರು ಅಖಿಲ ಭಾರತದ ಒಂದು ನೀತಿಯನ್ನನುಸರಿಸಿ ಕೆಲಸ ಮಾಡುತ್ತಾ ಇದ್ದಾರೆ. ನಮಗೆ 1 ಲಕ್ಷದ 68 ಸಾವಿರ ಟನ್ ಡಿಫಿಸಿಟ್ ಇದೆ ಎಂದು ತಿಳಿಸಿದರೆ ಅವರು 75 ಸಾವಿರ ಟನ್ ಕೊಡುತ್ತಿದ್ದಾರೆ. You must make better efforts to maximise procurement, ಯಾವಾಗಲೂ ಅಂಡರ್ ಎಸ್ಟಿಮೇಟ್ ಮಾಡಿ ಹೆಚ್ಚು ಕೇಳುತ್ತೀರಿ ಅಂತ ಪದೇ ಪದೇ ಕೇಂದ್ರ ಸರ್ಕಾರದವರು ಕಾಗದ ಬರೆದಿದ್ದಾರೆ. ಸಾಮಾನ್ಯವಾಗಿ ನಮ್ಮ ದೇಶದಲ್ಲಿ ನೋಡಿದರೆ.

Janab MOHAMED HANIEF.—On a point of information, Sir. May I most respectfully ask the Hon'ble Minister whether the collection is made on estimates or on the actuals?

The Hon'ble Sri K. CHENGALARAYA REDDY.—Estimate at the time of harvest.

The Hon'ble Sri T. MARIAPPA.—There is no other alternative plan. I would very humbly suggest to my Hon'ble friend Janab Mohamed Hanief to give me an alternative plan. We will also have it examined. In fact I am coming to the alternative plan.

ಆದ್ದರಿಂದ 2,54,000 ಜನ ಮಾತ್ರ ನಮ್ಮ ಕಣ್ಣೆದುರಿಗೆ ಇರಬೇಕು. ಬಾಕಿಯವರ ತಂಟೆಗೆ ಹೋಗುವುದಿಲ್ಲ. ಯಾರ್‍ಯಾರು ಸರ್‌ಪ್ಲಸ್ ಹೋಲ್ಡರ್ಸ್ ಅಂತ ಗೊತ್ತಿದೆ. ಅವರ ಅಂಕಿ ಅಂಶ ತರಿಸಿದ್ದೇವೆ. Self-sufficient producers ಮತ್ತು Insufficient producers—ಇವರ ತಂಟೆಗೆ ಹೋಗುವುದಿಲ್ಲ. ಒಂದೊಂದು ಸಾರಿ ಕಮ್ಮಿ ಇದ್ದವರಿಂದ ಒಂದೆರಡು ಪಲ್ಲ ವಸೂಲು ಮಾಡಿರುವುದು ಇದ್ದರೆ ಅಂಥ ಸಂದರ್ಭದಲ್ಲಿ—ಶ್ರೀಮಾನ್ ನಂಜರಾಜ ಅರಸ್‌ರವರು ಸಾಕ್ಷಿ ಇದ್ದಾರೆ—ಪರೀಕ್ಷೆ ಮಾಡಿ ಭತ್ತ ಹಿಂದಕ್ಕೆ ವಾಪಸ್ಸು ಕೊಡಿಸಿದ್ದಾರೆ. ಆ ರೀತಿ ಹಾಸನ ಡಿಸ್ಟ್ರಿಕ್ಟ್‌ನಲ್ಲಿ ಕೊಟ್ಟಿದ್ದಾರೆ. ಶ್ರೀಮಾನ್ ಬೋರಣ್ಣಗೌಡರು ಅಂಥಾ ಸಂದರ್ಭವನ್ನೂ ಗಮನಕ್ಕೆ ತಂದು ಸ್ವಲ್ಪ ಕೊಟ್ಟಿದ್ದು ಬಾಕಿ ಕೊಡುವುದಕ್ಕೆ ಶಕ್ತಿ ಇಲ್ಲ ಎಂದಾಗ 28-30 ಕೇಸುಗಳನ್ನು ವಾಪಸು ತೆಗೆದುಕೊಂಡಿದ್ದಾರೆ. ಕೋಲಾರ ಡಿಸ್ಟ್ರಿಕ್ಟಿನಲ್ಲಿ 70-75 ಕೇಸುಗಳನ್ನು ವಾಪಸು ತೆಗೆದು ಕೊಂಡಿದ್ದೇವೆ. ಅದಕ್ಕೆ ಇದೇ ಸಭೆಯವರು ಅನುಮತಿ ಕೊಟ್ಟು ಕಾನೂನು ಮಾಡಿದ್ದಾರೆ. ಆದರೆ ಈಗ ನಾವು ಅಖಿಲ ಭಾರತದ ಚೌಕಟ್ಟಿನಲ್ಲಿ ಕೆಲಸ ಮಾಡಬೇಕಾಗಿದೆ. ಕೇಂದ್ರ ಸರ್ಕಾರದ ಕಾನೂನಿನ ಪ್ರಕಾರ ನಡೆದುಕೊಳ್ಳಬೇಕು. ಎಲ್ಲರಿಗೂ ಹತೋಟಿ ಇರುವುದು ಅಪ್ರಿಯ. ಆದರಲ್ಲಿ ಅನುಮಾನವಿಲ್ಲ. ಯಾವ ದೇಶದಲ್ಲಿ High standard of discipline ಇಲ್ಲವೋ ಆ ದೇಶದಲ್ಲಿ ಇದು ಸ್ವಭಾವಿಕ. ಆದೇ ಇಂಗ್ಲೆಂಡಿನಲ್ಲಿ ಇಂಥಾ ಹತೋಟಿಗಳನ್ನು ನಗುನಗುತ್ತಾ ಜಾರಿಗೆ ಕೊಡುತ್ತಾರೆ. ಆದರೆ ನಮ್ಮ ದೇಶದಲ್ಲಿ ಅದಕ್ಕೆ ಇನ್ನೂ ಹೊಂದಿಕೊಂಡಿಲ್ಲ. ಹತೋಟಿ ಏರ್ಪಾಡಿನಿಂದ ಅದನ್ನು ಜಾರಿಮಾಡುವಾಗ ಕೆಲವರಿಗೆ ತೊಂದರೆ ಆಗುವುದು ಸ್ವಾಭಾವಿಕ. ಜಿಗುಪ್ಸೆ ಬರುತ್ತದೆ, ಅನುಮಾನವಿಲ್ಲ.

ಆದರೆ ನಾವು ಕಂಟ್ರೋಲು ಅಪ್ರಿಯವಾದ್ದೆಂದು ಹೇಳಿ ನಮ್ಮ ಜವಾಬ್ದಾರಿಯನ್ನು ಕಿತ್ತುಹಾಕುವ ಕಾರ್ಯಕ್ಕೆ ಹೋಗುವುದಕ್ಕಾಗುವುದಿಲ್ಲ. ಅಲ್ಲದೆ ಒಂದಂಶ ಇಲ್ಲಿ ತಮ್ಮ ಗಮನಕ್ಕೆ ತರುತ್ತೇನೆ. ನಮ್ಮ ಕೈಗೆ ಈ ಸರ್ಕಾರ ಬಂದದ್ದು 1947-48 ರಲ್ಲಿ. ಆದರೆ ಈ ಕಂಟ್ರೋಲ್ ಪದ್ಧತಿ ಅದಕ್ಕೆ ಹಿಂದೆ 1943 ರಿಂದಲೇ ಜಾರಿಯಲ್ಲಿತ್ತು. ಆ ಸರ್ಕಾರವಿದ್ದಾಗ ಇದೇ ಜನರು ಇದರ ವಿಚಾರದಲ್ಲಿ ಭುಜ ತಟ್ಟಿದ್ದೂ ತಟ್ಟಿದ್ದೇ! ನಾವಾದರೂ ಎಷ್ಟೋ ಮಟ್ಟಿಗೆ ತೊಂದರೆಯಿಲ್ಲದ ಹಾಗೆ ವಸೂಲು ಮಾಡುತ್ತಿದ್ದೇವೆ. ಅಂಕಿ ಅಂಶಗಳನ್ನು ತಾವು ದಯವಿಟ್ಟು ನೋಡುವುದಾದರೆ, 1944-45 ರಲ್ಲಿ 20 ಲಕ್ಷ ಪಲ್ಲದಷ್ಟು ಭತ್ತ ವಸೂಲ್ಮಾಡಿದ್ದಾರೆ! ಅದಕ್ಕೆ ಈ ಸಭೆಯವರು did not rise a single voice of protest!

ಶ್ರೀ ಬಿ. ಹುಚ್ಚೇಗೌಡರು.—Question! question. ತಾವು ದಯವಿಟ್ಟು ಹಿಂದಿನ ಸಭೆಯ ವರದಿಗಳನ್ನು ನೋಡಿ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇವತ್ತೋ, ಸಂಗ್ರಹಣ ಕ್ರಮ ಬಹಳ ಮಟ್ಟಿಗೆ ಧಾರಾಳವಾಗಿದೆಯೆಂದು ಹೇಳಬೇಕು. ಜನರಿಗೆ ತೊಂದರೆ ಕೊಟ್ಟು ತೆಗೆದುಕೊಂಡು ಹೋಗಕೂಡದೆಂಬದು ನಮ್ಮ ತತ್ವ. ಅದೇ ರೀತಿ ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ. ಇದಕ್ಕಾಗಿ ಕೆಲವು ಜನರು ನಮ್ಮ ಮೇಲೆ ಆಕ್ಷೇಪಣೆ ಕೂಡ ಮಾಡಿದ್ದಾರೆ. ಪೂರ್ತಿಯಾಗಿ ಸಂಗ್ರಹಣ ನಡೆಸದೆ ಇದ್ದುದರಿಂದ ಬ್ಲಾಕ್ ಮಾರ್ಕೆಟ್ ಬಂತು ಎಂದು ಒಬ್ಬರು ಹೇಳುತ್ತಾರೆ; ಇನ್ನೊಬ್ಬರು ಜನರಲ್ಲಿ ಧಾನ್ಯದ ಕಾಳೂ ಬಿಡದೆ ಹಿಂಸೆ ಮಾಡಿ ತೆಗೆದುಕೊಂಡು ಹೋಗುತ್ತಿದ್ದಾರೆಂದು ಹೇಳುತ್ತಾರೆ! ಇದರಲ್ಲಿ ಯಾವುದು ಸರಿ? ನಾನಾದರೂ ಹೇಳುತ್ತೇನೆ: ನಾವೀಗ ವಸೂಲು ಮಾಡುತ್ತಿರುವ ರೀತಿ ನೋಡಿದ್ದರಲ್ಲಿ ಸೇಕಡ 80-90 ಜನರು ನಿರಾಯಾಸವಾಗಿ ತಾವೇ ದವಸವನ್ನು ತಂದು ಕೊಡುತ್ತಿದ್ದಾರೆ. ನಿಜವಾಗಿಯೂ ದೇಶದವರೆಲ್ಲಾ ಅವರಿಗೆ ವಂದಿಸಬೇಕು. ಅನ್ನದಾತರವರು! ಅಲ್ಲದೆ ಇನ್ನೊಂದೇನೆಂದರೆ, ಭತ್ತದ ಮಟ್ಟಿಗೆ procurement ನಲ್ಲಿ ತೊಂದರೆಯೇ ಇಲ್ಲ. ಹಿಂದಾದರೋ ತೂರಿ, ಕೇರಿ, ಕೊಡುವ ಕಾಲ ಇತ್ತು. ಈಗ ನಾವು ಭತ್ತ ಕೇಳುವುದಾದರೂ ಸದ್ಯಕ್ಕೆ ಭತ್ತ ಕೊಟ್ಟರೆ ಸಾಕಪ್ಪ ಎನ್ನುವ ಕಾಲದಲ್ಲಿ! ನಮಗಾಗ ತಾಪತ್ರಯ ಅಷ್ಟಿರುತ್ತದೆ. ಆ ಕಾಲದಲ್ಲಿ lowest stock ನಮ್ಮಲ್ಲಿರುತ್ತದೆ. ಏನಾದರೂ ಮಾಡಿ ಜನರಿಗೆ ಅಕ್ಕಿ ತಂದು ಒದಗಿಸಬೇಕಾಗಿರುತ್ತದೆ. ಆದ್ದರಿಂದ ಹಸಿ ಭತ್ತವನ್ನೇ ಹಾಗೆ ತಂದು 'ಮಿಲ್' ಮಾಡಿಸಿ ಕೊಡುತ್ತಿರುತ್ತೇವೆ. ಶ್ರೀಮಾನ್ ಹೊನ್ನಪ್ಪನವರು ಹೇಳಿದ ಮಾತಿನಲ್ಲಿ ಒಂದು ಅರ್ಥವಾಗುತ್ತದೆ: ಸ್ಟ್ಯಾಚುಟರಿ ರೇಷನಿಂಗ್ ಇರುವ ಕಡೆ ಪೂರ್ತಿ ಸಪ್ಲೈ ಮಾಡುತ್ತಿರುವಂತೆ ಇತರೇ ಕಡೆಯಲ್ಲಿರುವವರಿಗೂ ಕೊಡಿಯೆಂದು, ಅವರು ಹೇಳಿದರು. ಅದೇನಾದವನ್ನು ಇನ್ನೂ ಮುಂದುವರಿಸಿದ್ದರೆ ಚೆನ್ನಾಗಿತ್ತು. ಅವರೇಕೋ ಮುಂದೆ ಹೇಳಲಿಲ್ಲ. ಚೆನ್ನಾಗಿ ಎಲ್ಲವನ್ನೂ procure ಮಾಡಿಕೊಂಡು ಹಳ್ಳಿಯವರಿಗೂ ಪಟ್ಟಣದವರಿಗೆ ಕೊಡುವಂತೆ ಕೊಡಿ ಎಂದು ಹೇಳುತ್ತಾರೆಂದು ಭಾವಿಸಿದ್ದೆ. ಮೈಸೂರು ದೇಶದಲ್ಲಿ ಎಲ್ಲರಿಗೂ Statutory Rationing ಪ್ರದೇಶದಲ್ಲಿ ಕೊಡುವಂತೆ ಕೊಡುತ್ತೇನೆಂದು ಜವಾಬ್ದಾರಿ ಹೊತ್ತು ಕೊಳ್ಳುವುದು ಯಾರಿಗಾದರೂ ಅಸಾಧ್ಯವಾದ ಮಾತು. ನಮಗಂತೂ ಅಸಾಧ್ಯ! ಅಂಥಾದ್ದರಲ್ಲೂ ನಾವೀಗ 80% ರಷ್ಟು ಕೊಡುತ್ತಿದ್ದೇವೆಂದು ಅವರೇ ಸೌಜನ್ಯತೆಯಿಂದ ಒಪ್ಪಿದ್ದಾರೆ. ಮಿಕ್ಕ 20% ನಷ್ಟನ್ನು ಅವರು ಸ್ಥಳದಲ್ಲೇ ಹೊಂದಿಸಿಕೊಳ್ಳಬೇಕು. ಕೂಲಿಗಾರರಿಗೆ ಕೊಡುವುದಕ್ಕೆಂದೇ ಹಳ್ಳಿಗಳಲ್ಲಿ ದವಸವನ್ನು ಬಿಟ್ಟು ಬಂದಿರುತ್ತೇವೆ. ಶ್ರೀಮಾನ್ ಚೆನ್ನಭೈರೆಗೌಡರು, ಶ್ರೀ ಹುಚ್ಚೇಗೌಡರು—ಇವರುಗಳೆಲ್ಲಾ ಕೂಲಿಯವರಿಗೆ ಕೊಡುತ್ತಿರುವುದು ನಮಗೆ ಗೊತ್ತು. ಹೀಗೆಯೇ ಎಲ್ಲರೂ ಕೊಡುತ್ತಾರೆಂದು ನಮ್ಮ ಭಾವನೆ. ಈ ದಿನ ಲೆಕ್ಕದ ಪ್ರಕಾರ ನಮ್ಮ ಸಂಸ್ಥಾನದಲ್ಲಿ ತಮಗೆ ಸಾಕಾದಷ್ಟು ಬೆಳೆದುಕೊಳ್ಳುವವರು 3,49,228 ಜನರಿದ್ದಾರೆ. ತಮಗೆ ಸಾಕಾ

(ಮಾನ್ಯ ಶ್ರೀ ಟಿ. ಮರಿಯಪ್ಪನವರು.)
ದಷ್ಟನ್ನು ಬೆಳೆದು ಕೊಳ್ಳದವರು 7,89,468 ಜನರಿದ್ದಾರೆ; ಇವರುಗಳಲ್ಲಿ ಕೆಲವರಿಗೆ 3-4 ತಿಂಗಳಿಗಾಗುವಷ್ಟಿರುತ್ತದೆ; ಕೆಲವರಿಗೆ 5-6 ತಿಂಗಳಾಗುತ್ತದೆ. ಆದ್ದರಿಂದ ಒಂದೊಂದು stageನಲ್ಲಿ ಒಬ್ಬೊಬ್ಬರು ಡಿಪೋವಿಗೆ ಬರಲು ಪ್ರಾರಂಭಿಸುತ್ತಾರೆ. ಇವರುಗಳಿಗಾಗಿ gradual ಆಗಿ ನಾವು ಹೆಚ್ಚು ಹೆಚ್ಚು ಕೊಡಬೇಕಾಗುತ್ತದೆ. ಇನ್ನು ಉಳಿದ ಜಮೀನಿಲ್ಲದ ಕೂಲಿಗಾರರಿಗೂ ನಾವು ಕೊಡಬೇಕಾಗಿದೆ. ಇವರಿಗನುಕೂಲ ವಾಗಲೆಂದೇ ಇನ್ನೊಂದು ಏರ್ಪಾಡು ಮಾಡಿದ್ದೇವೆ. Procurement ಆದ ಮೇಲೆ ಯಾರು ಬೇಕಾದರೂ 30 ಸೇರು ದವಸವನ್ನು ಎಲ್ಲಿಗೆ ಬೇಕಾದರೂ ತೆಗೆದುಕೊಂಡು ಹೋಗ ಬಹುದೆಂದು ಅವಕಾಶ ಮಾಡಿದ್ದೇವೆ. ಬಲೀ ವಾಗ್ವಾದಕ್ಕೆಂದು ನಾನಿದನ್ನು ಹೇಳುತ್ತಿಲ್ಲ. ನಿಜವಾಗಿಯೂ ಈ 30 ಸೇರು ಸಾಗಿಸುವುದಕ್ಕೆ ಅವಕಾಶ ಸಿಕ್ಕಿದ ಮೇಲೆ ಎಷ್ಟೋ ಜನರು ಊರಿಂದ ಊರಿಗೆ ತೆಗೆದುಕೊಂಡು ಹೋಗುವುದಕ್ಕೆ ಅನುಕೂಲವಾಗಿದೆ.

ಒಬ್ಬ ಸದಸ್ಯರು.—ಮಾರಿಕೊಳ್ಳುವುದಕ್ಕೆ ಅನುಕೂಲವಾಯಿತು.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಯಾರೂ ಹಾಗೆ ಮಾಡಲಾರರು. ಎಲ್ಲೋ ದುರಾತ್ಮರು, ದುರಾಶೆಯುವರು ಮಾರಬಹುದು ಅಷ್ಟೆ. ಹೋದ ವರುಷ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಇದೇರೀತಿ 40 ಸೇರು ದವಸವನ್ನು ಸಾಗಿಸುವುದಕ್ಕೆ ಅವಕಾಶ ಕೊಟ್ಟಿದ್ದರಿಂದ ಎಷ್ಟೋ ಜನರಿಗೆ ಅನುಕೂಲವಾಗಿದೆಯೆಂಬುದು ಆ ಡಿಸ್ಟ್ರಿಕ್ಟಿನ ಪ್ರತಿನಿಧಿಗಳೇ ಹೇಳುತ್ತಾರೆ. ಹಾಗೆಯೇ ಈಗ 30 ಸೇರು ಸಾಗಿಸಬಹುದೆಂದು ಹೇಳಿದಮೇಲೆ ಅಲ್ಪಸ್ವಲ್ಪ ಧಾನ್ಯಗಳು ಅಲ್ಲಿ ಇಲ್ಲಿ ಉಳಿದುಕೊಂಡದ್ದು ಇತರೇ ಕಡೆಗಳಿಗೆ ಸಾಗಿ gradual ಆಗಿ adjust ಆಗಿದೆ. ದಾವಣಗೆರೆ ಕಡೆಗೆ ನಾನು ಹೋದಾಗ, ಹೀಗೆ 30 ಸೇರು ಧಾರಾಳವಾಗಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುತ್ತಿರುವುದನ್ನು ನಾನೇ ನೋಡಿದ್ದೇನೆ. ಏನಿದ್ದರೂ ಬೆಳೆಯುದ ಮನುಷ್ಯರಿಗೆ ಮಾತ್ರ ಕೊಡಬೇಕೆಂದು ಹೇಳಿದ್ದೇವೆ, ಅಷ್ಟೆ. ಈ ಆರ್ಡರಿನ ದೆಶೆಯಿಂದ ಸಂಸ್ಥಾನದ ಹೊರಗಡೆ ಸೇಲಂ, ಚಿತ್ತೂರು ಮುಂತಾದ ಕಡೆಗಳಲ್ಲಿ ಆಗದಿರುವುದು ಇಲ್ಲಾಗಿದೆ. ಚಿತ್ತೂರನ್ನು ನೋಡಿ. 24 ಕಡೆಗಳಲ್ಲಿ ಜನರಿಗೆ ಗಂಜಿ ಮಾಡಿ ಹಾಕಬೇಕಾದ ಸ್ಥಿತಿ ಬಂತು! ಶ್ರೀ ವೀರಣ್ಣಗೌಡರೇ ಮುಂತಾದವರು ಅಲ್ಲಿನ ಸ್ಥಿತಿಯನ್ನು ಖುದ್ದು ನೋಡಿ ಬಂದಿದ್ದಾರೆ. ಶ್ರೀ ಚನ್ನಬಸಪ್ಪನವರೂ ಕೂಡ ಡಿಕಂಟ್ರೋಲ್ ಮಾಡಿ ಎಂದು ಅಷ್ಟು ಹೇಳುತ್ತಿದ್ದವರು, ಅಲ್ಲಿನ ಸ್ಥಿತಿಗತಿಗಳನ್ನು ನೋಡಿಕೊಂಡು ಬಂದಮೇಲೆ, ರೇಷನಿಂಗ್ ತೆಗೆದುಹಾಕುವುದಾದರೆ ಪೂರ್ತ ತೆಗೆದುಹಾಕಿ, ಹೀಗೆ ಅರ್ಧಂಬರ್ಧ ಮಾಡಬೇಡಿ ಎಂದು ಹೇಳಿದರು. ಆದರೆ ದೇಶದ ಒಟ್ಟು ಆಹಾರದ ಆಡಳಿತದ ಜವಾಬ್ದಾರಿ ವಹಿಸಿದ ಮೇಲೆ ನಾವೇನನ್ನೂ ಆತುರದಿಂದ ಮಾಡುವುದಕ್ಕಾಗುವುದಿಲ್ಲ. ಈಗ ಏಕ್‌ದಂ ರೇಷನ್ ಪದ್ಧತಿಯನ್ನು ವಜಾಮಾಡಿದರೆ ಧಾನ್ಯವೆಲ್ಲವೂ ಕಣ್ಣಿಗೆ ಕಾಣದಹಾಗೆ ಹೋಗಬಹುದು ಅಥವಾ ಧನವುಳ್ಳ ಮರಾಸಿಗರು ದವಸವನ್ನೆಲ್ಲಾ ಕೊಂಡು ದಾಸ್ತಾನು ಮಾಡಿಬಿಡಬಹುದು. ನೀವೇನೋ Prevention of Hoarding and Profiteering Actನ್ನು ಪ್ರಯೋಗಿಸಿ ಎಂದು ಹೇಳಬಹುದು. ಹೇಳುವುದು ಸುಲಭ. ಕಾರ್ಯತಃ ಬಹಳ ಕಷ್ಟವಿದೆ. ನಾನೇ ನೋಡಿರುವಂತೆ ಎಷ್ಟೋ ಜನ, ಅಂಗೈ ಅಗಲ ಜಮೀನಿಲ್ಲದಿರುವವರು 30-40 ಪಲ್ಲ ತಂದು ಹಾಕಿಕೊಂಡಿರುತ್ತಾರೆ! ಸುಮ್ಮನೆ ಹೇಳಬಹುದು, ನಿಮಗೆ ಅನುಭವವಿಲ್ಲ, ಹಾಗೆ ಮಾಡಿ, ಹೀಗೆ ಮಾಡಿ ಎಂದು. ಅದರಿಂದೇನೂ ಪ್ರಯೋಜನವಿಲ್ಲ. ಆದರೆ ರಚನಾತ್ಮಕವಾಗಿ ಏನು ಸಲಹೆ ಕೊಟ್ಟಾರೂ, ಏನು ತೊಂದರೆಯಿದೆಯೆಂದು ಹೇಳಿದರೆ ಶ್ರಮವಹಿಸಿ ಕೆಲಸಮಾಡುತ್ತೇವೆಂದು ಹೇಳುತ್ತೇನೆ. ಜನಾಬ್ ಹನೀಫ್‌ರವರಿಗೆ ಹೇಳುತ್ತೇನೆ: ರೈತನ ಫಸಲಿನ ಅಂದಾಜನ್ನು ಗೊತ್ತು ಮಾಡುವುದರಲ್ಲಿ ಅವರು ಹೇಳಿದಂತೆ ಯಾವ ಒಂದು ವಿಧಿ ನಿಯಮವಿಲ್ಲದೆ ಕೆಲಸಮಾಡುತ್ತಿಲ್ಲ. ಮೂರು ಜನ ಪಂಚಾಯಿತದಾರರ ಎದುರಿನಲ್ಲಿ ಶ್ಯಾನು

ಭೋಗರು ಪಟೇಲರು ಸೇರಿಕೊಂಡು ಈ ಅಂದಾಜನ್ನು ಬರೆಯಬೇಕೆಂದು ತಿಳಿಸಿದ್ದೇವೆ. ಕೆಲವು ಕಡೆ ಆ ರೀತಿ ಕರೆದುಕೊಂಡು ಹೋಗಬಹುದು. ಆದ್ದರಿಂದ Harvest Order ಏನೋ ಸರಿಯಾಗಿದೆ; ಪಕ್ಕಾ ಆಗಿದೆ. ನಿಪುಣರು ಬಂದು ಪರೀಕ್ಷಿಸಿ ಸರಿಯಾಗಿದೆಯೆಂದು ಅಭಿಪ್ರಾಯ ಕೊಟ್ಟಿದ್ದಾರೆ. ಆದರೆ, ಜಾರಿಗೆ ಕೊಡುವಾಗ ಕೆಲವರು ಮರದ ಕೆಳಗೆ ಕೂತು ಬರೆದು ಬಿಡಬಹುದು; ಚಾವಡಿಯಲ್ಲೇ ಬರೆಯಬಹುದು. ಆದರೂ, ಸಾಧಾರಣವಾಗಿ ನಮ್ಮ ಗಮನಕ್ಕೆ ಬಂದಾಗಲೆಲ್ಲಾ ಸಾಧ್ಯವಾದ ಮಟ್ಟಿಗೂ ತೊಂದರೆ ತಪ್ಪಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಅಲ್ಲದೆ ಇನ್ನೊಂದು ಅಂಶವನ್ನೂ ತಾವು ನೋಡಬೇಕು. ಸುಮ್ಮನೆ ರೈತರಿಗೆಲ್ಲಾ ತೊಂದರೆಯಾಗಿಬಿಟ್ಟಿದೆಯೆಂದು ಹೇಳಕೂಡದು. ನಾವು ಧಾನ್ಯವನ್ನು ವಸೂಲು ಮಾಡುತ್ತಿರತಕ್ಕ 2 ಲಕ್ಷ 70 ಸಾವಿರ ಜನರ ಪೈಕಿ ಎಷ್ಟು ಜನರಿಗೆ (ಶೇಕಡ), ತೊಂದರೆಯಾಗಿದೆಯೆಂದು ಹೇಳಲಿ.

ಶ್ರೀ ಬಿ. ಚೆನ್ನಬೈರೇಗೌಡರು.—ಶೇಕಡ 90 ಜನರಿಗೆ!!

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಪದ್ಧಕ್ಕೆ ಅಪ್ಪಣೆಯೇ ಎಂದರೆ ಬಾಯಿಗೆ ಬಂದದ್ದೇ ಉತ್ತರವೇ!! ತಾವೂ ಹಣವಂತರು. ತಮ್ಮಲ್ಲಿ ಭತ್ತ ಬಿಟ್ಟು ಬಿಟ್ಟರೆಂದು ಹೇಳಿದಿರಾ? ತಾವು ಕೇಳಿದಷ್ಟು ಕೊಟ್ಟಿಲ್ಲವೇ, ಶ್ರೀ ಹುಚ್ಚೇಗೌಡರು ಕೊಟ್ಟಿಲ್ಲವೇ? ಇಲ್ಲವೆಂದು ಯಾರೂ ಹೇಳಲಿಲ್ಲ. ಸುಮ್ಮನೆ ಯಾರೋ ಒಬ್ಬ imaginary ಬಡರೈತನ ಪರವಾಗಿ ವಾದಿಸುತ್ತೇವೆಂದು ಹೇಳಿದರೆ!! ಎಲ್ಲರೂ ಬಡರೈತನ ಪರವಾಗಿಯೇ ಹೇಳುವವರು!! ನ್ಯಾಯವಾಗಿ ಅಂಕಿ ಅಂಶಗಳನ್ನು ಕೊಟ್ಟು ಮಾತನಾಡಿದರೆ ಸರಿಯಾಗಿರುತ್ತದೆ.

ಶ್ರೀ ಜಿ. ಎ. ಆಚಾರ್ಯರವರು.—ಮಾನ್ಯ ಮಂತ್ರಿಗಳು ಹೇಳಿದರು, ಶ್ರೀ ಚೆನ್ನಬೈರೇಗೌಡರು ಕೇಳಿದಷ್ಟು ಕೊಟ್ಟಿದ್ದಾರೆ ಎಂದು. ಕೇಳಿದಷ್ಟು ಕೊಟ್ಟಿರಬಹುದು. ಆದರೆ ಅವರು ಕೊಡಬೇಕಾದಷ್ಟು ಕೊಟ್ಟಿದ್ದಾರೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—'Advisory' ಯಾಗಿ ನಾನು ಕೇಳಿದಷ್ಟು ಎಂದು ಹೇಳಿದ್ದೇನೆ ಅಷ್ಟೆ.

ಆ ಮೇಲೆ ಈಗ ನಮ್ಮ commitment ಎಷ್ಟಿದೆಯೆಂದು ಹೇಳುತ್ತೇನೆ. ಸಭೆಯವರೇನೋ ಪಟ್ಟಣಗಳಿಗೂ ಹಳ್ಳಿಗಾಡಿನವರಿಗೂ ಬೇಧಭಾವ ಮಾಡಕೂಡದೆಂದೇನೋ ಹೇಳಬಹುದು. ಆದರೆ, ಈಗಿನ ನಮ್ಮ ಜವಾಬ್ದಾರಿ ಯೇನಿದೆ ಎಂಬುದನ್ನು ಸ್ವಲ್ಪ ನೋಡಿ:

ಸ್ಟ್ಯಾಟ್ಯುಟರಿ ರೇಷನಿಂಗ್ ಪ್ರದೇಶದಲ್ಲಿ—

Heavy manual labour (on Dec. 1950).	...	23,662
Adult population	...	10,36,277
Children	...	2,15,300

ಇನ್‌ಫಾರ್ಮಲ್ ರೇಷನಿಂಗ್ ಪ್ರದೇಶದಲ್ಲಿ—

Heavy manual labour	...	72,652
Adult population	...	36,41,669
Children	...	9,58,228

ಈ ಇನ್‌ಫಾರ್ಮಲ್ ರೇಷನಿಂಗ್ ಪ್ರದೇಶದಲ್ಲಿ ಮುನಿಸಿಪಲ್ ಟೌನ್‌ಗಳು ದೊಡ್ಡ ದೊಡ್ಡ ಹಳ್ಳಿಗಳು, ನೆಯ್ಗೆಯವರೇ ಮುಂತಾದ ಕಸಬುದಾರರು, ಬೆಳೆಯದ ಕೂಲಿಗಾರರೂ ಸೇರಿರುತ್ತಾರೆ.

ಗ್ರಾಮಾಂತರ ಪ್ರದೇಶಗಳಲ್ಲಿಯೂ ರೇಷನ್ ತೆಗೆದುಕೊಳ್ಳುವವರಿದ್ದಾರೆ. ಬೆಳೆಯದೇ ಯಿರುವವರೂ, ಸಾಕಾದಷ್ಟು ಬೆಳೆಯದೇ ಯಿರುವವರೂ ಇದ್ದಾರೆ. ಇವರಿಗೆಲ್ಲ ಆಹಾರ ಕೊಡಬೇಕಾದ ಜವಾಬ್ದಾರಿ ಸರ್ಕಾರದವರಿಗಿದೆ. ಇಡೀ ದೇಶದಲ್ಲಿ ಅನೇಕ ಪ್ರದೇಶಗಳಲ್ಲಿ ಉತ್ಪತ್ತಿ ಮಾಡದೇಯಿರುವ ಅನೇಕ ಜನರಿದ್ದಾರೆ. ಸುಮಾರು 40 ಲಕ್ಷ ಚಿಲ್ಲರೆ ಜನರು ಇಂಥಾವರು ಸಂಸ್ಥಾನದಲ್ಲಿದ್ದಾರೆ. ಆದರೆ ಇವರೆಲ್ಲರೂ ಒಂದೇಸಾರಿ ಡಿಪೋಗಳಿಗೆ ರೇಷನ್‌ಗಾಗಿ ಬರುವುದಿಲ್ಲ. ಮಾರ್ಚಿಯಿಂದ ಕೆಲವರು, ಮೇ ತಿಂಗಳಿಂದ ಕೆಲವರು, ಜೂನ್ ನಿಂದ ಕೆಲವರು ಹೀಗೆ ಬರುತ್ತಾ ಸೆಪ್ಟೆಂಬರ್ ಅಕ್ಟೋಬರ್ ಮುಂದೆ ಎಲ್ಲರೂ ಬರುತ್ತಾರೆ. ಆದುದರಿಂದ ಇನ್‌ಫಾರ್ಮಲ್ ರೇಷನಿಂಗ್ ಪ್ರದೇಶಗಳಲ್ಲಿ ಜನರೇ ಇಲ್ಲ, ನೀವು ಕಂಟ್ರೋಲ್ ತೆಗೆದರೆ ಎಲ್ಲರೂ ಉಳಿಯುತ್ತಾರೆ ಎಂದು ಹೇಳಿದರೆ ನಾನು

(ಮಾನ್ಯ ಶ್ರೀ ಟಿ. ಮರಿಯಪ್ಪನವರು.)
ಒಪ್ಪುವುದಿಲ್ಲ. ಚಿತ್ತೂರು ಪ್ರದೇಶದಲ್ಲಿ ಈಗ ಒಂದು ಕಾಳು ಧಾನ್ಯಕೂಡ ಸಿಕ್ಕುತ್ತಿಲ್ಲ. ಅಷ್ಟೇಅಲ್ಲದೆ ಬೆಲೆ ಶೇಕಡ 200 ರಿಂದ 250 ರಷ್ಟು ಹೆಚ್ಚಾಗಿದೆ. ಇಲ್ಲಿ ಮಾನ್ಯ ಸದಸ್ಯರ ಸಲಹೆಯಂತೆ ರೇಷನಿಂಗ್ ಇಲ್ಲದೇಯಿರುವಕಡೆ 30 ಸೇರು ತೆಗೆದುಕೊಂಡು ಹೋಗಬಹುದೆಂದು ಅವಕಾಶ ಕೊಟ್ಟದೆ. ಅವರ ಠರಾವಿನಲ್ಲಿ compulsory acquisition ಬಿಟ್ಟು ಬಿಡಬೇಕೆಂದು ಸೂಚಿಸಿದ್ದಾರೆ. ಇದು ನನಗೆ ಅರ್ಥವಾಗುವುದಿಲ್ಲ. ಜವಾಬ್ದಾರಿಯನ್ನು ಹೊತ್ತಿರುವ ಈ ಸಭೆಯಲ್ಲಿ ಹೀಗೆ ಸೂಚನೆ ಮಾಡುವುದು ಸರಿಯಲ್ಲ. ಕಂಟ್ರೋಲ್ ಇಟ್ಟುಕೊಳ್ಳಬೇಕೆಂದು ಸರ್ಕಾರಕ್ಕೇನು ಇಷ್ಟವಿಲ್ಲ. ಇಷ್ಟು ಆಕ್ಷೇಪಣೆಗಳಿದ್ದರೂ ಇದನ್ನು ಮುಂದುವರಿಸಬೇಕೆಂದು ಇಷ್ಟವಿಲ್ಲ........

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಮೂವತ್ತು ಸೇರನ್ನು ತೆಗೆದುಕೊಂಡು ಹೋಗಲು ಅವಕಾಶ ಕೊಟ್ಟಿದೆಯೆಂದು ಹೇಳಿದಿರಿ, ಈ ಆರ್ಡರ್ ಯಾವಾಗಿನಿಂದ ಆಗಿದೆ, ಹೇಗೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ತಿಂಗಳ ಪ್ರಾರಂಭದಿಂದ ರೇಷನಿಂಗ್ ಜಾರಿಯಲ್ಲಿಲ್ಲದ ಯಾವ ಡಿಸ್ಟ್ರಿಕ್ಟಿನಿಂದ ಯಾವ ಡಿಸ್ಟ್ರಿಕ್ಟಿಗೆ ಬೇಕಾದರೂ ಇಷ್ಟು ಪ್ರಮಾಣದಲ್ಲಿ ದವಸವನ್ನು ತೆಗೆದುಕೊಂಡು ಹೋಗಬಹುದು.

ನಮಗೆ off-takes 1945-46 ರಲ್ಲಿ 2,52,100 ಪಲ್ಲ, 1946-47 ರಲ್ಲಿ 28,25,000 ಪಲ್ಲ. ಸಾಮಾನ್ಯವಾಗಿ ನಾವು ಪ್ರೊಕ್ಯೂರ್ ಮಾಡುವುದು ಇದರಲ್ಲಿ ಒಂದು ಭಾಗ, ಇದನ್ನು ಮಾಡದಿದ್ದರೆ ಇಂಡಿಯಾ ಸರ್ಕಾರದವರು ನಮಗೆ ಕೊಡುವುದೇ ಇಲ್ಲ. ಆದಕಾರಣ ನಾವು ಸಾಧ್ಯವಾದಷ್ಟನ್ನು ಸಂಗ್ರಹಿಸಬೇಕು, ಮತ್ತು ಜನರಿಗೆ ತೊಂದರೆಯನ್ನು ತಪ್ಪಿಸಬೇಕು. ಆದುದರಿಂದ progressive decontrol ಮಾಡಬೇಕೆಂಬ ನೀತಿಯನ್ನನುಸರಿಸುತ್ತಿದ್ದೇವೆ. ನಮಗೆ ಖಂಡಿತವಾಗಿಯೂ ಕಂಟ್ರೋಲ್ ಇಷ್ಟವಿಲ್ಲ, ಆದರೆ ಕರ್ತವ್ಯ ನಿರ್ವಹಿಸುವಾಗ ನಿಷ್ಠುರ ಬಂದರೂ ಕೂಡ ನಿರ್ವಹಿಸಬೇಕು. ಮೈಸೂರು ದೇಶದಲ್ಲಿ ಜನರು ಅರೆ ಹೊಟ್ಟೆಯಿಂದಲಾದರೂ ಇರಬಹುದೇ ವಿನಾ ಹೊಟ್ಟೆಗಿಲ್ಲದೆ ಸಾಯುವುದಕ್ಕೆ ನಾವು ಅವಕಾಶ ಕೊಡುವುದಿಲ್ಲ. ಮೈಸೂರು ದೇಶದಲ್ಲಿ ಎಲ್ಲಾ ಪ್ರದೇಶಗಳವರಿಗೂ ಹೊಟ್ಟೆ ತುಂಬ ಕೊಡದೇಯಿರಬಹುದು. ಆದರೂ ಸೇಕಡ 80 ರಷ್ಟಾದರೂ ನಾವು ಕೊಟ್ಟಿದ್ದೇವೆಂಬುದನ್ನು ದೇಶದ ಜನರೇ ಒಪ್ಪುತ್ತಾರೆ. ಈ ಆಜ್ಞೆಗಳನ್ನು ಜಾರಿಮಾಡುವಾಗ ಕೆಲವು ಸಂದರ್ಭಗಳಲ್ಲಿ ಕೆಲವರಿಗೆ ತೊಂದರೆಯಾಗಿದ್ದರೆ ಅದು ಮನುಷ್ಯ ಸ್ವಭಾವಕ್ಕೆ ಸಂಬಂಧಪಟ್ಟದ್ದೇ ಹೊರತು ಸರ್ಕಾರದ ನೀತಿಯಿಂದಾದದ್ದಲ್ಲವೆಂದು ಹೇಳುತ್ತೇನೆ. ನಿಜ, ಯಾವ ಕಾನೂನನ್ನು ಮಾಡಿದರೂ ಎರಡು ತರಹೆ ಜನರಿದ್ದಾರೆ, ಒಬ್ಬರು elevate ಆದರೆ ಇನ್ನೊಬ್ಬರೂ ಆಗುತ್ತಾರೆ. ನಾನು ಯಾರನ್ನೂ ಟೀಕೆ ಮಾಡುತ್ತಿಲ್ಲ. ನಾವು ಸುಮ್ಮನೆ ಟೀಕೆ ಮಾಡಿದರೆ ಉಪಯೋಗವಿಲ್ಲ. We represent the cross-section of our people. We must try to reform them, make them better men and serve our people much better. ಕೆಲವರು ಸ್ವಭಾವ ದೃಷ್ಟಿಯಿಂದ ಹಿಂದಿದ್ದಾರೆ. ನಾನು ಏನೂ ಹೇಳಲಾರೆ. ಆದರೆ ಕರ್ತವ್ಯ ದೃಷ್ಟಿಯಿಂದ ಹಿಂದಿದ್ದರೆ ಅದು ಉಚಿತವಲ್ಲ. ಒಟ್ಟನಲ್ಲಿ ಹೇಳುವುದಾದರೆ, ಬೆಲೆ ಮತ್ತು movement ಮೇಲೆ ಮಾತ್ರ ಹತೋಟಿ ಇಟ್ಟುಕೊಂಡು procurement ಮಾತ್ರ ಬಿಟ್ಟುಬಿಡಿ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಶ್ರೀ ಸಂಪಂಗಿರಾಮಯ್ಯನವರು ಸೂಚಿಸಿರುವ 'ಲೆವಿ' ಪದ್ಧತಿಯನ್ನು ನಾವು ಪರಿಶೀಲನೆ ಮಾಡುತ್ತಿದ್ದೇವೆ. ಇನ್ನೂ ಅನೇಕರು ಇದನ್ನು ಹೇಳಿದರು. ಆದರೆ ಇದನ್ನು ಜಾರಿಗೆ ತರಲು ಇದು ಸಕಾಲವಲ್ಲ, ಈಗ ಕೆಲವು ಕಡೆ ರಾಗಿ ಹಾಕಿದ್ದಾರೆ, ಆ ಜಮೀನುಗಳಲ್ಲಿ ಅವರು ಹಾಕಿರುವ ಬೀಜದಷ್ಟುಕೂಡ ಬೆಳೆ ಬರುವುದಿಲ್ಲ. ಅಲ್ಲಿ ಏನು ಮಾಡುವುದು. ಈಗಿನ ವಿಶೇಷ ಪರಿಸ್ಥಿತಿಯಲ್ಲಿ ಲೆವಿ ಪದ್ಧ

ತಿಯ ಪ್ರಶ್ನೆಯನ್ನು ಜಾರಿಗೆ ತರುವುದು ಸೂಕ್ತವಲ್ಲವೆಂದು ಎಲ್ಲಾ ಜಿಲ್ಲಾಧಿಕಾರಿಗಳೂ ಹೇಳಿದರು.

ಕಂಟ್ರೋಲ್‌ನಲ್ಲಿ ಏನೂ ತಪ್ಪಿಲ್ಲವೆಂದು ನಾನು ಹೇಳುವುದಿಲ್ಲ. ಎಲ್ಲೋ ಅಲ್ಲಲ್ಲಿ ಕೆಲವು ತಪ್ಪುಗಳಿದ್ದ ಮಾತ್ರಕ್ಕೇ ಕಾನೂನಿರುವುದೇ ತಪ್ಪು, ಸರ್ಕಾರದ್ದೇ ತಪ್ಪು ಎಂದು ಹೇಳಬಾರದು. ಹಿಂದೆ ಬೇಜವಾಬ್ದಾರಿ ಸರ್ಕಾರವಿದ್ದಾಗ ಹೀಗೆ ಎಷ್ಟು ಹೇಳಿದ್ದರೂ, ಎಷ್ಟು generalise ಮಾಡಿದ್ದರೂ ಸರಿಯಾಗುತ್ತಿತ್ತು, ಈಗ ಸರಿಯಲ್ಲ, ಕೆಲವರು ವಾದಕ್ಕಾಗಿ ಸುಮ್ಮನೆ ಹೇಳಬಹುದು,ಅವರೇನೂ ನಮಗೆ ಹೊಸಬರಲ್ಲ. 25 ವರ್ಷಗಳಿಂದ ಅವರನ್ನು ನಾನು ನೋಡುತ್ತಿದ್ದೇನೆ, ಜನತಾ ಪಕ್ಷದವರಾಗಲಿ, ಸೋಷಿಯಲಿಸ್ಟ್ ಪಕ್ಷದವರಾಗಲಿ ಕಳೆದ 25 ವರ್ಷಗಳಿಂದ ಅವರನ್ನು ಒಳಗೂ ಹೊರಗೂ ನೋಡುತ್ತಿದ್ದೇನೆ. ನಾವು ಅಧಿಕಾರಕ್ಕೆ ಬಂದರೆ ಹಾಗೆಮಾಡುತ್ತೇವೆ, ಹೀಗೆ ಮಾಡುತ್ತೇವೆ ಎಂದು ಹೇಳುತ್ತಾರೆ. ಅವರು ಬಂದಿದ್ದರೆ ಇದಕ್ಕಿಂತ ಪರಿಸ್ಥಿತಿ ತೀರಾ ಕೆಟ್ಟು ಹೋಗುತ್ತಿತ್ತೋ ಏನೋ! ಈ ಪ್ರೊಕ್ಯೂರ್‌ಮೆಂಟ್ ಪದ್ಧತಿಯ ವಿಚಾರದಲ್ಲಿ ಏನಾದರೂ ಸಲಹೆ ಕೊಡಬೇಕು, ಇದನ್ನು ಸ್ವಲ್ಪ ಬದಲಾವಣೆ ಮಾಡಬೇಕು ಎಂದು ಹೇಳಿದ್ದಿದ್ದರೆ ಅದನ್ನು ಅಂಗೀಕರಿಸಲು ಯೋಚನೆ ಮಾಡುತ್ತಿದ್ದೆವು. ಆದರೆ ಏಕ್‌ದಮ್ ಇದನ್ನು ತೆಗೆದು ಬಿಡಿ ಎಂದು ಹೇಳಿದರೆ, ಅದರಿಂದೇನು ಪ್ರಯೋಜನ? ಅಥವಾ ಹೀಗೆ ತೆಗೆದು ಹಾಕಲು ಕೇಂದ್ರ ಸರ್ಕಾರದವರು ಒಪ್ಪುತ್ತಾರೆಯೇ? ಇನ್ನು ಕೆಲವರು ಸರಿಯಾದ ಬೆಲೆ ಕೊಟ್ಟರೆ ರೈತರು ದವಸವನ್ನು ತಾವೇ ಕೊಡುತ್ತಾರೆಂದು ಹೇಳಿದರು, ಮತ್ತೊಬ್ಬರು ಕಳ್ಳತನದಿಂದ ಸಾಗಿಸುತ್ತಿದ್ದವರನ್ನು ಹಿಡಿದರು ಎಂದು ಹೇಳಿದರು. ಬಹಳ ಸಂತೋಷ. ಆದರೆ ಕೆಲವರು ಅಂಥವರ ಮೇಲೆ ಕೇಸ್ ಹಾಕಿದರೂ ಆಕ್ಷೇಪಣೆಮಾಡುತ್ತಾರೆ, ಕೇಸನ್ನು ವಾಪಸ್ ತೆಗೆದುಕೊಂಡರೂ ಆಕ್ಷೇಪಣೆ ಮಾಡುತ್ತಾರೆ, ಇದಕ್ಕೇನು ಮಾಡುವುದು? ಒಂದನ್ನು ಮಾತ್ರ ಖಚಿತವಾಗಿ ಹೇಳುತ್ತೇನೆ. This Government is not prepared to give any quarter to black-marketeers. ರೈಸ್ ಮಿಲ್ಲುಗಳಲ್ಲಿ, ನೂಲಿನ ವ್ಯಾಪಾರದಲ್ಲಿ ಎಷ್ಟೋ ಕಾಳಸಂತೆಕೋರರನ್ನು ನಾವು ಪತ್ತೆ ಮಾಡಿ ಹಿಡಿದಿದ್ದೇವೆ. ಅಲ್ಲದೆ ಆಹಾರಕ್ಕೆ ಸಂಬಂಧಪಟ್ಟ ತಕ್ಸೀರುಗಳಲ್ಲಿ ರೈತರು ವಿನಾ ಬಾಕಿಯವರು ಕಳ್ಳತನದಿಂದ ಸಾಗಿಸುತ್ತಿದ್ದಾರೆ, ಅವರು ಸಿಕ್ಕಿದರೆ ಅಂತಹ ಕೇಸುಗಳನ್ನು ವಾಪಸು ತೆಗೆದುಕೊಳ್ಳಬಾರದು, ಸಕಾರಣವಾಗಿ ಹಾಗೆ ವಾಪಸು ತೆಗೆದುಕೊಳ್ಳಬೇಕಾಗಿದ್ದರೂ ಮಂತ್ರಿ ಮಂಡಲದ ಪರಿಶೀಲನೆಗೊಳಗು ಮಾಡಿ ಮಾಡಬೇಕೆಂದು ಮಾಡಿದ್ದೇವೆ. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಕೂಡ ತಮಗಿರುವ ಈ ಅಧಿಕಾರವನ್ನು ಚಲಾಯಿಸಲು ಅವಕಾಶವಿಲ್ಲದಂತೆ ಮಾಡಿದ್ದೇವೆ. ಸರ್ಕಾರದ ಗಮನಕ್ಕೆ ತರದೆ ಇಂತಹ ಕೇಸುಗಳನ್ನು ವಾಪಸು ತೆಗೆದುಕೊಳ್ಳಬಾರದೆಂದು ಅವರಿಗೆ ತಿಳಿಸಿದ್ದೇವೆ. ರೈಸ್ ಮಿಲ್‌ಗಳ ಮಾಲೀಕರೇ ಮೊದಲಾದ ಕೆಲವು ದೊಡ್ಡ ದೊಡ್ಡವರನ್ನು ಕೂಡ ಡಿಟೇನ್ ಮಾಡಿದ್ದೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಇಷ್ಟೇ ಶಿಕ್ಷೆ ಸಾಕೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಂತಹ ಮನುಷ್ಯರಿಗೆ ಅಷ್ಟೇ ಸಾಕು, ಆಮೇಲೆ ಅವರು ತಲೆ ಎತ್ತಿ ನೋಡುವ ಹಾಗಿರುವುದಿಲ್ಲ, ಬೆಲೆಯ ವಿಷಯದಲ್ಲಿ ಕೂಡ ಕಾಳಸಂತೆ ವ್ಯಾಪಾರ ಮಾಡಿದವರನ್ನು ಶಿಕ್ಷೆ ಮಾಡಿದ್ದೇವೆ, ಯಾವ ದಾಕ್ಷಿಣ್ಯವನ್ನೂ ತೋರಿಸಿಲ್ಲ.

ಒಟ್ಟಿನಲ್ಲಿ ಈ ನಿರ್ಣಯದಲ್ಲಿ ಹೇಳಿರುವುದನ್ನು ಕಾರ್ಯತಃ ಮಾಡಲು ಸಾಧ್ಯವಿಲ್ಲ. ಲೆವಿ ಪದ್ಧತಿಯನ್ನು ಕೂಡ ಈಗ ಜಾರಿ ಮಾಡುವುದಕ್ಕೆ ಸಾಧ್ಯವಿಲ್ಲ. ಮುಂದಿನ ವರ್ಷ ಪ್ರಯತ್ನ ಮಾಡಿ ನೋಡಬಹುದು. ಒಬ್ಬ ಮನುಷ್ಯನಿಗೆ ಎಷ್ಟು ಎಕರೆ ಜಮೀನಿದೆ, ಎಷ್ಟು ಬೆಳೆ ಸರಾಸರಿ ಬೆಳೆಯುತ್ತಾನೆಂಬುದನ್ನು ಲೆಕ್ಕಹಾಕಿ ನೋಡಬಹುದು. ಇದನ್ನು ಕೂಲಂಕಷವಾಗಿ ಯೋಚನೆ ಮಾಡುತ್ತಿದ್ದೇವೆ. ಇದನ್ನು ಜಾರಿಗೆ ತಂದರೆ ಏನೇನು ಪರಿಣಾಮವಾಗಬಹುದು

(ಮಾನ್ಯ ಶ್ರೀ ಟಿ. ಮರಿಯಪ್ಪನವರು.)

ಎಂಬುದನ್ನೆಲ್ಲಾ ಪರಿಶೀಲಿಸುತ್ತಿದ್ದೇವೆ. ಒಂದು ಟಾರ್ಜೆಟ್ ಗೊತ್ತು ಮಾಡಿದ ಮಾತ್ರಕ್ಕೇ ಅದರಂತೆಯೇ ಕೊಡಬೇಕೆಂದು ಜನರನ್ನು ಒತ್ತಾಯ ಮಾಡುವುದಿಲ್ಲ. ನಮ್ಮ ಅಂದಾಜಿಗಿಂತ ಕಡಿಮೆ ವಸೂಲಾಗಿದೆ. ಜನರಿಗೆ ಸುಲಭವಾಗಿ ದವಸ ಸಿಕ್ಕಲಿ ಎಂದು free movement ಗೆ ಅವಕಾಶ ಮಾಡಿದ್ದೇವೆ. Human nature being what it is ಸಂಪೂರ್ಣವಾಗಿ ಒಂದು ಕಾಳೂ ಬಿಡದೆ ಹೆಚ್ಚಿಗೆ ಇರುವುದನ್ನು ಪ್ರೊಕ್ಯೂರ್ ಮಾಡುವುದು ಕಷ್ಟ, ಆದಕಾರಣ ಈ ಪದ್ಧತಿಯ ವಿಚಾರದಲ್ಲಿ ಯಾರೂ ಶಂಕಿಸಬೇಕಾಗಿಲ್ಲ. ಜನರಿಗೆ ತೊಂದರೆಯಾಗದೇಯಿರುವ ಹಾಗೆ ಇದನ್ನು ನಡೆಸುವುದು ನಮ್ಮ ಉದ್ದೇಶ. ಇಷ್ಟು ಹೇಳಿದ ಮೇಲೆ ಈ ನಿರ್ಣಯವನ್ನು ಸೂಚಕರು ವಾಪಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

ಶ್ರೀ ಬಿ. ಚೆನ್ನಬೈರೇಗೌಡರು.—ನನ್ನ ನಿರ್ಣಯದ ಉದ್ದೇಶವಾದರೂ ಇಷ್ಟೆ. ಹೋದ ಅಧಿವೇಶನದಲ್ಲಿ ಇದೇ ಮಾನ್ಯ ಸಭೆಯಲ್ಲಿ ಸದಸ್ಯರಾಗಿರುವ ಶ್ರೀ ಕಡಿದಾಳ್ ಮಂಜಪ್ಪನವರು ಒಂದು ನಿರ್ಣಯವನ್ನು ತಂದು ಈ ಕಂಟ್ರೋಲ್ ಆಜ್ಞೆಗಳನ್ನೆಲ್ಲಾ ತೆಗೆದುಬಿಡಬೇಕೆಂದೂ, ಅದರ ಬಗ್ಗೆ ಅವರು ಮಾಡಿದ ಚರ್ಚೆಯಲ್ಲಿ ಈ ಕಂಟ್ರೋಲ್ ಆಜ್ಞೆಗಳಿರುವುದರಿಂದಲೇ ಜನರು ಅನೀತಿಯುತರಾಗಿ, ಅವರ ನೈತಿಕ ಮಟ್ಟ ಕೀಳಾಗಲು ಕಾರಣವಾಗಿರುತ್ತೆ. ಆದ ಪ್ರಯುಕ್ತ ಈ ಕಂಟ್ರೋಲ್ ಆಜ್ಞೆಗಳೆಲ್ಲವೂ ಒಟ್ಟಿಗೆ ಹೋಗಬೇಕೆಂದು ತಿಳಿಸಿದ್ದರು. ಆ ಅಭಿಪ್ರಾಯವನ್ನೇ ಎಲ್ಲಾ ಮಾನ್ಯ ಸದಸ್ಯರುಗಳೂ ಒಮ್ಮತದಿಂದ ಎತ್ತಿಹಿಡಿದು ಅದಕ್ಕೆ ಬೆಂಬಲ ನೀಡಿದರು. ಆದರೆ ಆ ವಿಷಯವೇನೇ ಇರಲಿ, ಆ ದಿವಸ ಆ ನಿರ್ಣಯದ ಮಾನ್ಯ ಸೂಚಕರು ಅಷ್ಟು ಒತ್ತಾಯ ಪೂರ್ವಕವಾಗಿ ಮಾತನಾಡಿದ್ದಾಗ್ಯೂ ಕೊನೆಗೆ ಅವರು ತಮ್ಮ ನಿರ್ಣಯವನ್ನು ವಾಪಸ್ಸು ತೆಗೆದುಕೊಂಡರು. ಆ ಒಂದು ಕಾರಣದಿಂದ ಈಗ ಈ ಅಧಿವೇಶನದಲ್ಲಿ ಪುನಃ ಅದೇ ರೀತಿಯ ಒಂದು ನಿರ್ಣಯವನ್ನು ತರುವುದಕ್ಕೆ ಅವಕಾಶವಿಲ್ಲ. ಆ ಉದ್ದೇಶದಿಂದ ಈಗ ನಾನು ಈ ನನ್ನ ನಿರ್ಣಯದಲ್ಲಿ ಒತ್ತಾಯ ಪೂರ್ವಕವಾಗಿ ಧಾನ್ಯ ಸಂಗ್ರಹಣಮಾಡತಕ್ಕದ್ದನ್ನು ಮಾತ್ರ ತಪ್ಪಿಸಿದರೂ, ಈ ಕಂಟ್ರೋಲ್ ಆಜ್ಞೆಗಳನ್ನು ಒಂದು ರೀತಿಯಲ್ಲಿ ಸಡಿಲಿಸಿದಂತಾಗಿ ಜನರಿಗೆ ಕೊಂಚ ಉಪಯುಕ್ತವಾದರೂ ಆದೀತೆಂಬ ಭಾವನೆಯಿಂದ ಈ ನಿರ್ಣಯವನ್ನು ಇಂದು ಸಭೆಯ ಮುಂದೆ ಮಂಡಿಸಿದ್ದೇನೆ. ಆದರೆ ಈ ನಿರ್ಣಯದ ಸಂಬಂಧವಾಗಿ ಮಾತನಾಡುತ್ತ ಶ್ರೀ ಭೀಮಪ್ಪ ನಾಯಕರು ಜನತಾ ಪಾರ್ಟಿಯವರು ಅಧಿಕಾರಕ್ಕೆ ಬಂದಾಗ ಬೇಕಾದರೆ ಆ ರೀತಿ ಮಾಡಬಹುದೆಂದು ಒಂದು ಮಾತನ್ನು ಹೇಳಿದರು. ಹಾಗೂ ಆಗಲಿ. ವಿರೋಧಪಕ್ಷದವರು ಒಂದಲ್ಲಾ ಒಂದು ದಿವಸ ಅಧಿಕಾರಕ್ಕೆ ಬಂದೇ ಬರುತ್ತಾರೆ. ಆಗ ಅವರು ಜನರಿಗೆ ಏನೇನು ಅನುಕೂಲತೆಗಳನ್ನು ಮಾಡಬೇಕೋ ಅವುಗಳನ್ನೆಲ್ಲಾ ಮಾಡೇ ಮಾಡುತ್ತಾರೆ. ಆದರೆ ಈಗ ಆ ವಿಚಾರವನ್ನು ನಮ್ಮ ಎದುರು ಪಕ್ಷದಲ್ಲಿರತಕ್ಕ ಸದಸ್ಯರು ನಮಗೆ ಹೇಳಿಕೊಡತಕ್ಕ ಅವಶ್ಯಕತೆಯಿಲ್ಲ. ಇನ್ನು ಶ್ರೀ ರಂಗರಾಮಯ್ಯನವರು ಮಾತನಾಡುತ್ತ ಈ ನಿರ್ಣಯದಲ್ಲಿ ಅಡಕವಾಗಿರತಕ್ಕ ಎಲ್ಲ ಅಂಶಗಳನ್ನೂ ಅನುಮೋದಿಸುತ್ತಾ ಕಡೆಯಲ್ಲಿ ಮಾತ್ರ ನಾನು ಇದನ್ನು ಒಪ್ಪುವುದಕ್ಕಾಗುವುದಿಲ್ಲವೆಂದು ಹೇಳಿ ವಿರೋಧಿಸಿ ಅವರು ಮಾಡಿರತಕ್ಕ ಭಾಷಣವು ಬಹಳ ವಿಚಿತ್ರವಾದುದ್ದಾಗಿದೆ. ಆದರೆ ಏನೋ ಅವರು ಅವರ ಒಂದು ಪಾರ್ಟಿ ಶಿಸ್ತಿಗಾಗಿಯೇ ವಿರೋಧಿಸಬೇಕೆಂದು ಹಾಗೆ ಮುಕ್ತಾಯ ಮಾಡಿದ್ದರೂ ಮಾಡಿರಬಹುದು. ಆದರೆ ಅವರು ಕಾಂಗ್ರೆಸ್ಸಿನಲ್ಲಿದ್ದುಕೊಂಡು, ಈಗ ತಾನೆ ಭಾಷಣಮಾಡುತ್ತಿದ್ದಾಗ, ಅವರೇ 'ಈ ಬಿಳಿಯ ಟೋಪಿಯವರು' ಬಂದು ಹೀಗೆಲ್ಲಾ ಮಾಡುತ್ತಿದ್ದಾರೆಂದು ಜನರಿಂದ ತಿಳಿದು ಬಂದಿತೆಂದು ಹೇಳಿದರು ಹೀಗೆ ಆ ಪಾರ್ಟಿಯಲ್ಲಿರತಕ್ಕವರೇ ಹೇಳಬೇಕಾಗಿದ್ದರೆ ಇನ್ನು ಜನ ಸಾಮಾನ್ಯರಲ್ಲಿ ಈ ಬಿಳಿ ಟೋಪಿಯವರಮೇಲೆ ಎಷ್ಟರಮಟ್ಟಿನ ಆಸೆ ಯಿರುತ್ತದೆಂಬುದನ್ನು ಈ ಮಾನ್ಯ ಸಭೆಯವರೆಲ್ಲರೂ ಆಲೋಚಿಸಬೇಕಾದ ಅಂಶ.

ಶ್ರೀ ಎ. ಭೀಮಪ್ಪನಾಯಕರೂ ಮತ್ತು ಮಾನ್ಯ ಗೃಹಮಂತ್ರಿಗಳೂ "ಈ ಧಾನ್ಯ ಸಂಗ್ರಹಣ ಆಜ್ಞೆಗಳನ್ನು ವಾಪಸ್ಸು ತೆಗೆದು ಕೊಳ್ಳಿ" ಎಂದು ಕೇಳಿರತಕ್ಕದ್ದು "ಏರೋ ಪ್ಲೇನಿನಲ್ಲಿ ಹೋಗುತ್ತಿರುವ ಪ್ರಯಾಣಿಕರನ್ನು, ಚೆಕ್‌ಮಾಡಿ ನಿಮ್ಮಲ್ಲಿ ಟಿಕೆಟ್ಟಿಲ್ಲಾ, ನೀವು ಈ ಕೂಡಲೆ ಇಳಿದು ಬಿಡಿ" ಎಂದು ಹೇಳಿದ ಹಾಗೆ ಇರುತ್ತೆ. ಇರಬಹುದು. ಎರಡೂ ಒಂದೇ ಅರ್ಥ. ಹಿಂದೆ ರಾಜ್ಯಾಂಗ ಸಭೆಗೆ ಚುನಾವಣೆ ನಡೆಸಬೇಕಾಗಿದ್ದ ಪ್ರಯುಕ್ತ ತಾವು ಆಗ ಆಹಾರ ಸಂಬಂಧವಾದ ಆಜ್ಞೆಗಳನ್ನೆಲ್ಲಾ ಇದ್ದಕ್ಕಿದ್ದಹಾಗೆ ತೆಗೆದುಹಾಕಿಬಿಟ್ಟರಿ. ಆ ಕಾಲ ದಲ್ಲಿ ಏನಾಯಿತೆಂಬುದನ್ನು ನೀವೆ ನೋಡಿಕೊಳ್ಳಿ. ಆಗ ನೀವು ಅದನ್ನು ನಿಮ್ಮ ಗಾಂಧೀಜಿಯವರು ತೆಗೆಯಬೇಕೆಂದು ತಿಳಿಸಿದ್ದ ಕಾರಣ ತೆಗೆಯ ಬೇಕಾಯಿತೆಂದು ತಿಳಿಸಿದ್ದಿರಿ. ಆದರೆ ಅಂದು ನಡೆಯಬೇಕಾಗಿದ್ದ ಚುನಾವಣೆಗಳೆಲ್ಲವೂ ಪೂರೈಸಿದ ಕೂಡಲೇ ಪುನಃ ಆ ಕಂಟ್ರೋಲ್ ಆಜ್ಞೆಗಳನ್ನೆಲ್ಲಾ ಜಾರಿಗೆ ತಂದುಬಿಟ್ಟರಿ. ಅಂದ ಮೇಲೆ ನಿಮ್ಮ ಆ ಗಾಂಧಿ ತತ್ವ ಏನಾಯಿತು? ಆಗ ಹಾಗೆ ತೆಗೆದು ಹಾಕಿದ್ದರಿಂದ ಏನು ಅನಾಹುತಗಳಾಯಿತು? ಏನೂ ಇಲ್ಲ. ಇಂದೂ ಕೂಡ ಇವುಗಳನ್ನು ತೆಗೆದುಹಾಕಿದರೆ ಏನೂ ಅನರ್ಥಗಳಾಗುವುದಿಲ್ಲ. ಈಗ ಮದ್ರಾಸ್ ಸರ್ಕಾರದವರೂ ಕೂಡ ಕಳೆದ ಜನವರಿ ತಿಂಗಳಲ್ಲಿ ಧಾನ್ಯ ಸಂಗ್ರಹಣಕಾರ್ಯವನ್ನೇನೂ ಮಾಡದೆ ಇದ್ದಕ್ಕಿದ್ದ ಹಾಗೆಯೇ ಆಹಾರ ನಿಯಂತ್ರಣ ಆಜ್ಞೆಗಳನ್ನು ತೆಗೆದುಹಾಕಿದ್ದಾರೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಲ್ಲಿ ಡೀಕಂಟ್ರೋಲ್ ಮಾಡಿಲ್ಲ. ಡೀರೇಷನಿಂಗ್ ಮಾಡಿದ್ದಾರೆ.

ಶ್ರೀ ಬಿ. ಚನ್ನಬೈರೇಗೌಡರು:—ಈಗ ಅಲ್ಲಿ ಹತ್ತು ತಿಂಗಳಿಂದಲೂ ನಡೆದು ಬಂದಿಲ್ಲವೇನು? ನನಗೆ ತಿಳಿದಮಟ್ಟಿಗೂ ಇತ್ತೀಚೆಗೆ ಸುಮಾರು 30 ಸೇರು ದವಸವನ್ನು ಸಂಸ್ಥಾನದಲ್ಲಿ ಎಲ್ಲಿಂದೆಲ್ಲಿಗೆ ಬೇಕಾದರೂ ಸಾಗಿಸಿಕೊಂಡು ಹೋಗ ಬಹುದೆಂದು ಒಂದು ಹುಕ್ಕುಂ ಮಾಡಿದ್ದರು. ಅದರ ಪ್ರಕಾರ ಮೊನ್ನೆ ಶೇಲಂ ಜಿಲ್ಲೆಯ ಹೊಸೂರಿನ ಗ್ರಾಮದ ಕಡೆಯಿಂದ ಇಬ್ಬರು ಸೈಕಲ್ ಮೇಲೆ 40-40 ಸೇರಿನಂತೆ 80 ಸೇರು ಧಾನ್ಯವನ್ನು ತರುತ್ತಿದ್ದಾಗ ನಮ್ಮ ದೇಶದವರು ಅವರನ್ನು ಹಿಡಿದುಕೊಂಡು, ಡಿಪೋವಿಗೆ ಎಳೆದುಕೊಂಡು ಹೋಗಿ ಅಳತೆ ಮಾಡಿಸಿ ಜಾಸ್ತಿಯಿದ್ದ 10-10 ಸೇರು ಎಂದರೆ 20 ಸೇರು ಧಾನ್ಯವನ್ನು ಸ್ಥಳೀಯ ಡಿಪೋವಿಗೆ ತೆಗೆದು ಕೊಂಡು ಕಂಟ್ರೋಲ್ ದರದಂತೆ ಅವರಿಗೆ ಹಣ ಕೊಟ್ಟ ಪ್ರಸಂಗವನ್ನು ಕಣ್ಣಾರೆ ಕಂಡದ್ದಾಗಿರುತ್ತೆ. ನಮ್ಮ ಸ್ಥಳೀಯ ರೈತರಿಗೆ ಅಂಥಾ ಕಷ್ಟಕಾಲದಲ್ಲಿ ಏನೋ ದವಸ ಸಿಕ್ಕಿತಲ್ಲಾ ಎಂಬುದನ್ನು ಆಲೋಚಿಸಿ, ಅವರಲ್ಲಿ ಹತ್ತತ್ತು ಸೇರು ದವಸ ಜಾಸ್ತಿ ತಂದಿದ್ದೇ ಒಂದು ದೊಡ್ಡದನ್ನಾಗಿಮಾಡಿ, ಅದನ್ನು ಸಹಿಸದೆ ಹೋದರಲ್ಲಾ ಎಂಬೀ ವಿಚಾರವನ್ನು ನಾನು ಬಹಳ ವ್ಯಸನದಿಂದ ಹೇಳ ಬೇಕಾಗಿದೆ. ಹಾಗೆ ಸೈಕಲ್‌ಮೇಲೆ ದವಸ ತಂದಿದ್ದವರನ್ನು ನಾನು ಕೇಳಿದ್ದಕ್ಕೆ ಒಂದು ರೂಪಾಯಿಗೆ 3 ಸೇರಿನಂತೆ ಅವರು ಕೊಂಡು ತರುತ್ತಿದ್ದರೆಂದು ನನಗೆ ತಿಳಿಯಬಂತು.

ಇದೇ ರೀತಿ ಈಗ ದಾವಣಗೆರೆಯಲ್ಲಿ ಜೋಳ ಯಥೇಷ್ಟವಾಗಿ ಎಲ್ಲಿಬೇಕಾದರೂ, ಎಷ್ಟು ಬೇಕಾದರೂ ರೂಪಾಯಿಗೆ 5 ಸೇರಿನ ಪ್ರಕಾರ ದೊರೆಯುತ್ತದೆಂದು ಮಾನ್ಯ ಗೃಹಸಚಿವರೇ ತಿಳಿಸಿದರು. ಹಾಗೆ ಅಲ್ಲಿ 5 ಸೇರಿನ ಪ್ರಕಾರ ಯಾವ ತೊಂದರೆಯೂ ಇಲ್ಲದೆ ಸಿಕ್ಕುತ್ತಿರುವಾಗ ಇನ್ನು ಅಲ್ಲಿ ಕಂಟ್ರೋಲ್ ಏತಕ್ಕಿರಬೇಕು? ಜನರನ್ನು ಸುಮ್ಮನೆ ಏತಕ್ಕೆ ಹಿಂಸಿಸಬೇಕು? ಕಂಟ್ರೋಲ್ ದರ $4\frac{1}{2}$ ಸೇರಿದೆ. ಆದಕಾರಣ ತಾವೇಕೆ ಹಾಗೆ 5 ಸೇರಿನ ಪ್ರಕಾರ ಜನರಿಗೆ ಧಾನ್ಯ ದೊರೆಯುವಂತಿದ್ದರೆ ಡೀಕಂಟ್ರೋಲ್ ಮಾಡಬಾರದು? ಗೃಹಸಚಿವರು ಈಗತಾನೆ ತಿಳಿಸಿದರು, ಭಾರತದ ಆಹಾರ ಶಾಖಾ ಸಚಿವರು ಈಚೆಗೆ ನಮ್ಮ ದೇಶದಲ್ಲಿ ಅನೇಕ ಕಡೆ ಪ್ರವಾಸ ಮಾಡಿ ನೋಡಿ ನಮ್ಮಲ್ಲಿರುವ ಪಡಿತರ ಹಂಚಿಕೆ ಪದ್ಧತಿ ಮತ್ತು ಹೆಚ್ಚುವರಿ ಬೆಳೆ ಇತರ ಎಲ್ಲ ಸಂಸ್ಥಾನಗಳಿಗಿಂತಲೂ, ಮೈಸೂರು ಸಂಸ್ಥಾನ ದಲ್ಲಿ ಬಹಳ ಸುವ್ಯವಸ್ಥಿತವಾಗಿರುತ್ತೆಂದು ತಿಳಿಸಿದ್ದೂ ಅಲ್ಲದೆ, ಒಳ್ಳೆಯ ರಿಪೋರ್ಟನ್ನೂ

(ಶ್ರೀ ಬಿ. ಚನ್ನಬೈರೇಗೌಡರು.)

ಸಹ ಬರೆದಿರುತ್ತಾರೆಂದು. ಇದೇ ರೀತಿ ಯಲ್ಲಿ 1944ರಲ್ಲಿ ಅಮೇರಿಕಾ ದೇಶದಿಂದ ಒಂದು ಭಾರಿ ಡೆಲಿಗೇಟರುಗಳ ಸಮ್ಮೇಳನ ಬಂದಿದ್ದಾಗ, ಇದೇ ರೀತಿಯಾಗಿ ಆ ಗುಂಪಿನ ವರೂ ನಮ್ಮ ಸಂಸ್ಥಾನದಲ್ಲೆಲ್ಲಾ ಸಂಚಾರ ಮಾಡಿ, ಅವರೂ ಸಹ ಆ ಕಾಲಕ್ಕೆ ಬಹು ಮುಂದುವರಿದ ಪರದೇಶಗಳಲ್ಲೂ ಸಹ ಇಷ್ಟು ಸುವ್ಯವಸ್ಥಿತವಾದ ರೀತಿಯಲ್ಲಿ ಎಂಥ ವರದಿ ಬರೆದಿದ್ದರು! ಅಂಥಾ ಸಂದರ್ಭಗಳಲ್ಲೂ ಸಹ ಈಗ ನಮ್ಮ ಆಹಾರ ಬಾಬಿನ ಪೋರ್ಟ್ ಪೋಲಿಯೋವನ್ನು ಹೊಂದಿರುವ ಮಾನ್ಯ ಮುಖ್ಯ ಮಂತ್ರಿಗಳು ಅಂದು ಎಂದರೆ 1944ರಲ್ಲಿ ಇದೇ ಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿ ದ್ದಾಗ ಈ ಆಹಾರ ಸಮಸ್ಯೆಯ ಬಗ್ಗೆ ಭಾಷಣ ಮಾಡುತ್ತಾ ಈ ರೀತಿಯಾಗಿ ಹೇಳಿದ್ದಾರೆ:—

"ಇನ್ನೊಂದು ವಿಚಾರವನ್ನು ನಾನು ತಮಗೆ ಬಹಳ ವ್ಯಸನದಿಂದ ಹೇಳ ಬೇಕಾಗಿದೆ. ಹೆಚ್ಚು ಆಹಾರ ಬೆಳೆಯ ಬೇಕೆಂಬ ಯೋಚನೆ ಮತ್ತು ಈ ಆಹಾರ ಪದಾರ್ಥಗಳ ಶೇಖರಣೆಯೆಂಬುದು ನಮ್ಮ ದೇಶದಲ್ಲಿ ಯಾವರೀತಿಯಿದೆ ನಮ್ಮ ದೇಶದ ಆರ್ಥಿಕ ಸ್ಥಿತಿ ಹೇಗಿದೆಯೆಂಬು ದನ್ನು ಯೋಚನೆಮಾಡಿ ಅನುಭವದಿಂದ ಮಾಡಿರತಕ್ಕ ಯೋಜನೆಯಲ್ಲವೆಂಬುದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ನಮ್ಮ ದೇಶದಲ್ಲಿ ವಿದ್ಯಾವಂತರ ಸಂಖ್ಯೆಯೇ ಬಹಳ ಕಡಿಮೆ. ಆಹಾರ ಧಾನ್ಯಗಳು ಎಷ್ಟೆಷ್ಟಿದೆಯೆಂಬುದನ್ನು ಗೊತ್ತು ಮಾಡಲು ಎಚ್. ಎಸ್. ಫಾರಂಗಳು 1, 2, 3, 4, 5, 6 ಮತ್ತು 7 ಹೀಗೆ ಹಲವಾರು ರೀತಿಯ ಫಾರಂಗಳನ್ನು ನಮೂದುಮಾಡಿರುತ್ತೀರಿ. ಈ ರೀತಿ ಬಲಾತ್ಕಾರದಿಂದ ಹೆಚ್ಚು ಬೆಳೆಯನ್ನು ಬೆಳೆಸಲು ಪ್ರಯತ್ನ ಮಾಡುತ್ತಿರುವುದೂ, ಕೆಲವು ಕಡೆ ಆ ಫಾರಂಗಳಿಗೆ ರುಜು ಸಹ ಮಾಡಲು ಬಾರದವರಿಂದ ಹೆಬ್ಬೆಟ್ಟಿನ ಗುರುತು ಹಾಕಿಸಿಕೊಳ್ಳುವುದು, ಕೆಲವರು ಹಾಕಿರತಕ್ಕ ಹೆಬ್ಬೆಟ್ಟಿನ ಗುರ್ತು ಸರಿ ಯಾಗಿಲ್ಲವೆಂದು ಅವರನ್ನು ಬೆದರಿಸಿ ಅವರಿಂದ ಲಂಚ ರುಷುವತ್ತುಗಳನ್ನು ತೆಗೆದುಕೊಳ್ಳುವುದು, ಈ ರೀತಿಯ ಆಚರಣೆಗಳು ಕೆಲ ಕೆಲವು ಕಡೆ ತಾಂಡವ ವಾಡುತ್ತಿವೆ. ಮೊದಲಿನಿಂದ ಕೊನೆಯ ವರೆಗೂ ಕಾಂಚಾಣವು ಬಿದ್ದರೆ ರೈತನಿಗೆ ಅನುಕೂಲ ದೊರೆಯುತ್ತದೆ. ಇಷ್ಟೇ ಅಲ್ಲದೆ ಇದರ ಮೇಲೆ ಮೊದಲಿಂದ ಕೊನೆಯವರೆಗೂ ಆರ್ಡಿನೇಸು ಜಾರಿ ಯಲ್ಲಿದೆ. ಇಷ್ಟು ನಿರ್ಬಂಧಕ್ಕೊಳಗಾದ ಆಹಾರ ಸಮಸ್ಯೆಯು ಯಾವರೀತಿ ಸಲೀ ಸಾಗಿ ಮುಂದುವರಿಯಲು ಸಾಧ್ಯ?"

ಎಂಬುದಾಗಿ ಇವರೇ ಅಂದು ಆ ರೀತಿ ಭಾಷಣ ಮಾಡಿದ್ದಾರೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ಬಗ್ಗೆ ಬೇಕಾದಷ್ಟು ಬದಲಾವಣೆಗಳನ್ನು ಮಾಡ ಲಾಗಿದೆ.

ಶ್ರೀ ಬಿ. ಚನ್ನಬೈರೇಗೌಡರು.—ಹೌದು ಮಾಡಿದ್ದೀರಿ ಆದರೆ ಆಗ 8 ವಿಧವಾದ ಎಚ್. ಎಸ್. ಫಾರಂನಲ್ಲಿರುತ್ತಿದ್ದದ್ದನ್ನೆಲ್ಲಾ ಈಗ ಒಂದರಲ್ಲೇ ಅಡಕಮಾಡುವಂತೆ ಮಾಡಿ ದ್ದೀರಿ ಅಷ್ಟೆ. ಹಿಂದೆಯಾದರೂ ಕೊಂಚಮಟ್ಟಿಗೆ ಸತ್ಯ ಧರ್ಮಗಳಿಗೆ ಎಡೆಯಿತ್ತು. ಈ ದಿವಸ ಅದೂ ಸಹ ಇಲ್ಲ. ಹೀಗೆ ತಾವು ಬರಿ ಬಾಯಿ ಮಾತಿನ ಭಾಷಣಗಳಿಂದ ಇದನ್ನು ಸುಧಾರಣೆಗೆ ತರುತ್ತೇವೆಂದರೆ ಅದು ಖಂಡಿತ ಸಾಧ್ಯವಾಗದ ಮಾತು.

ಈ ದಿವಸ ಇಲ್ಲಿಗೆ ಒಬ್ಬ ಪಾರ್ಟಿ ಬಂದಿದ್ದಾನೆ. ಕೆಳಗಡೆ ಇಲ್ಲಿಯೇ ಇದ್ದಾನೆ. ಅವನು ಈಗ ತಾನೆ ಜೈಲು ಮುಗಿಸಿಕೊಂಡು ಬಂದಿದ್ದಾನೆ. ಆತನಿಗಿರತಕ್ಕ ಒಟ್ಟು ಜಮೀನೆಲ್ಲ ಕೇವಲ 3 ಎಕರೆ 28 ಗುಂಟೆ ಮಾತ್ರ. ಆತ ಒಕ್ಕಲಿಗ ರೈತನಲ್ಲ. ವ್ಯವಸಾಯಕ್ಕೆ ಅಪರಿಚಯಸ್ಥನಾದ ನೆಯ್ಗೆಯವನು. ಏತಕ್ಕೆಂದರೆ ಒಕ್ಕಲಿಗನ ವ್ಯವಸಾಯ 12 ಆಣೆಗಳಾದರೆ ನೆಯ್ಗೆಯ ವನ ವ್ಯವಸಾಯವೆಲ್ಲ 0-8-0 ಬೆಳೆಗೆ ಮುಕ್ತಾಯ. ಆತನ ಸಂಸಾರದಲ್ಲಿ 5 ಜನ

ಗಳಿದ್ದಾರೆ. ಆತನಿಗೆ 225 ಸೇರು ದವಸವನ್ನು ಕೊಡಬೇಕೆಂಬ ನಿರ್ಬಂಧಹಾಕಿ ಸ್ಥಳೀಯ ಅಧಿಕಾರಿಗಳು ಆತನಿಗೆ ಒಂದು ನೋಟೀಸನ್ನು ಕೊಟ್ಟಿದ್ದರು. ಆದರೆ ಆತನು ಅಷ್ಟನ್ನೂ ತಂದೊಪ್ಪಿಸಲು ಸಾಧ್ಯವಾಗದೆ ಇದ್ದ ಪ್ರಯುಕ್ತ ಆತನ ಮೇಲೆ ಕೇಸು ದಾಖಲ್ಮಾಡಿದರು. ವಿಚಾರಣೆ ನಡೆದು ಇಂದು ನಮ್ಮ ಮುಂದಿರುವ ಧಾನ್ಯ ವಸೂಲಿ ಕಾನೂನಿನ ರೀತ್ಯ ಆತನಿಗೆ ಒಂದು ತಿಂಗಳು ಕಠಿಣ ಶಿಕ್ಷೆಯಾಗಿ ಈಗತಾನೆ ಬಿಡುಗಡೆ ಹೊಂದಿ ಬಂದು ಹಾಲಿ ಇಲ್ಲಿರುತ್ತಾನೆ. ಇದೇ ಸಂಬಂಧವಾಗಿ ಒಂದು ಅಲ್ಪಕಾಲಾವಧಿ ಪ್ರಶ್ನೆಯನ್ನೂ ಸಹ ನಾನು ತಮಗೆ ಕಳುಹಿಸಿದ್ದೆ. ಆದರೆ ಅದು ಡಿಸ್‌ಅಲೋ ಆಗಿದೆ. ಆದರೂ ನಾಳೆ ದಿನ ಈ ಬಗ್ಗೆ ಒಂದು ಅವಸರದ ಠರಾವನ್ನೇ ತರುತ್ತೇನೆ. ಆಗ್ಯೆ ತಮಗೆಲ್ಲಾ ಗೊತ್ತಾಗುತ್ತದೆ.

ಇದೇ ರೀತಿ ನಾನು ಇನ್ನೊಂದು ದಿನ ಮಾನ್ಯ ಗೃಹಸಚಿವರ ಬಳಿಯಿದ್ದಾಗ ಕೋಲಾರ ತಾಲ್ಲೂಕಿನ ಒಬ್ಬ ರೈತರು ಬಂದು 12 ಪಲ್ಲ ರಾಗಿ ಕೊಡಬೇಕೆಂದು ನನಗೆ ಡಿಮ್ಯಾಂಡು ಹಾಕಿದ್ದರು ; ಸದರಿ ರಾಗಿಯನ್ನು ಡಿಪೋವಿಗೆ ಸಾಗಿಸಿದೆ ; ಆದರೆ ಅಲ್ಲಿ ಅಳತೆಯಾಗುವಾಗ್ಯೆ 9 ಸೇರು ರಾಗಿ ಕಡಿಮೆ ಬಂದಿತು; ಅದಕ್ಕಾಗಿಯೇ ನನ್ನ ಮೇಲೆ ಒಂದು ಕೇಸು ನಡೆಯುತ್ತಿದೆ; ದಯಮಾಡಿ ಅದನ್ನು ವಜಾ ಮಾಡಿಸಿ ಕೊಡ ಬೇಕೆಂದು ಕೇಳಿಕೊಳ್ಳುತ್ತಿದ್ದರು, ಆಗ........

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಹಾಗಲ್ಲ. ಆ ವಿಚಾರವೇ ಬೇರೆ. ಅವರ ಹೆಸರು ನನಗೆ ಜ್ಞಾಪಕವಿರುವಂತೆ ಬಹುಶಃ ತೋಟೀ ಬೈರೇಗೌಡರೆಂದಿರಬಹುದು. ಅವರು 1948-49 ರಲ್ಲಿ ಸರ್ಕಾರಕ್ಕೆ ಒಂದು ಕಾಳೂ ದವಸವನ್ನು ಕೊಡಲಿಲ್ಲ. ಇತ್ತೀಚೆಗೆ ಅವರಿಗೆ 19 ಪಲ್ಲ ಕಾಳನ್ನು ಮಾತ್ರ ಕೊಡಬೇಕೆಂದು ತಿಳಿಸ ಲಾಗಿತ್ತು. ಅಷ್ಟನ್ನೂ ಕೂಡ ಅವರು ಕೊಡುವು ದಕ್ಕಾಗುವುದಿಲ್ಲವೆಂದು ತಿಳಿಸಿದ್ದಕ್ಕಾಗಿ ಆಗ ಪುನಃ ಅವರಿಗೆ ಕೆಲವು ರಿಯಾಯ್ತಿಗಳನ್ನು ಕೊಡಲಾಯಿತು. ಅಷ್ಟೆಲ್ಲಾ ಮಾಡಿದ್ದಾಗ್ಯೂ ಅವರು ಕೊಡಬೇಕಾದ್ದನ್ನು ಕೊಡದೆ ಹೋದುದ ರಿಂದ ಹಾಗೆ ಮಾಡಿದ್ದಾರೆ. ವಿಚಾರಗಳನ್ನು ಸರಿಯಾಗಿ ತಿಳಿದು ಕೊಳ್ಳದೆ, ಅಂಕೀ ಅಂಶ ಗಳನ್ನೂ ಸಹ ಖಚಿತವಾಗಿ ತಿಳಿದುಕೊಳ್ಳದೆ ಹೀಗೆಲ್ಲಾ ಅಪದ್ಧ ಹೇಳಬಾರದು. ಕೇವಲ 9 ಸೇರುಗಳೆಂದು ಹೇಳಿರತಕ್ಕದ್ದು ಸರಿಯಾದ್ದಲ್ಲ. ವಿಚಾರ ಪೂರ್ತಿಯಾಗಿ ತಿಳಿದುಕೊಳ್ಳದೆ ಸುಮ್ಮನೆ 'ಕೆಳಗಿದ್ದಾನೆ, ಕೆಳಗಡೆಯಿದ್ದಾನೆ, ಇಲ್ಲಿಗೇ ಬಂದಿದ್ದಾನೆಂದು' ಹೇಳಿದರೆ ಏನು ಪ್ರಯೋಜನ? ನನ್ನ ಬಳಿ ಈಗ ಆ ಸಂಬಂಧ ಪಟ್ಟ ಫೈಲು ಇಲ್ಲಿಯೇ ಇದೆ. ಬೇಕಾದರೆ ತೋರಿಸಬಲ್ಲೆ. (Interruption).

1948-49ರಲ್ಲಿ ಕೊಟ್ಟಿರಲಿಲ್ಲ. ಆಮೇಲೆ ಪರಿಹಾರ ನೀಡಿದ್ದೇವೆ, ಭಾಗವಾಗಿ ದ್ದೇವೆ, ನನ್ನ ಸೇರಿಗೆ ಕಡಿಮೆ ಬಂದಿದೆಯೆಂದು ಹೇಳಿದ ಮೇಲೆ ಪರಿಹಾರ ನೀಡಿ ಆತನ ಮೇಲೆ ಹಾಕಿದ್ದ ಕೇಸನ್ನು ವಾಪಸು ತೆಗೆದು ಕೊಂಡಿದೆ. ದಯವಿಟ್ಟು ಸರಿಯಾದ ಸಂಗತಿ ಯನ್ನು ವಿಚಾರಮಾಡಿ ತಿಳಿದುಕೊಳ್ಳಿ. ಅವರು ಸಂತೋಷದಿಂದ ಹೋದರು. ರಿಜಿಸ್ಟರ್ಡ್ ಪಾರ್ಟಿಷನ್ ಡೀಡ್ ತಂದುಕೊಟ್ಟು ಮೊದ ಲಿಂದಲೂ ಬಿಡುತ್ತಾರೆಂದು ಹೇಳಿದಮೇಲೆ ಇತ್ಯರ್ಥಮಾಡಿದೆ. ಅವರ ಸಂಬಂಧಿಗಳು ಸರ್ಕಾರದಲ್ಲಿ ಉನ್ನತ ಸ್ಥಾನಗಳಲ್ಲಿದ್ದರೂ ಸರಿಯಾದ ರುಜುವಾತಿಲ್ಲದೆ ನಾವು ಯಾರನ್ನೂ ಬಿಡುವುದಿಲ್ಲ.

ಶ್ರೀ ಬಿ. ಚನ್ನಬೈರೇಗೌಡರು.—ಹೀಗೆ ಇಂಥ ಅನ್ಯಾಯಗಳು ನಡೆಯುತ್ತಿವೆ. ಸುಗ್ಗಿ ಆಜ್ಞೆಯ ಮೇಲೆ ರೈತರು ಅಪೀಲು ಹಾಕ ಬಹುದು. ಅದನ್ನು ಅಮಲ್ದಾರರು, ಸಬ್ ಡಿವಿಜನ್ ಆಫೀಸರು, ಜಿಲ್ಲಾಧಿಕಾರಿಗಳು ಮುಂ ತಾದ ಅಧಿಕಾರಿಗಳು ಇತ್ಯರ್ಥ ಮಾಡುತ್ತಾ ರೆಂದು ಹೇಳುತ್ತಾರೆ. ಆದರೆ ಹಾಗೆ ಮಾಡಿ ಪರಿಹಾರ ಪಡೆಯುವುದು ಕಷ್ಟ. ಈ ವಿಚಾರ ದಲ್ಲಿ ಮದ್ರಾಸ್ ಹೈಕೋರ್ಟಿನಲ್ಲಿ ಒಂದು ತೀರ್ಮಾನವಾಗಿದೆ. ಅದು 'ವಿಶ್ವಕರ್ಣಾಟಕ' ಪತ್ರಿಕೆಯಲ್ಲಿ 23-10-1951 ರಲ್ಲಿ ಪ್ರಕಟ ವಾಗಿದೆ.

Sri A. BHEEMAPPA NAIK.—Let not the Hon'ble Member quote instances. It may go to undesirable lengths. I would therefore request him not to quote. Supposing I turn back and quote some of the cases which will be personal and may be very undesirable from his standpoint. I therefore request him not to go further. Or else, I too may have to quote some instances. I may just inform that the Hon'ble Member himself has been proposed for prosecution for holding double cards. Since he is living elsewhere, he should not comment on others.

ಶ್ರೀ ಬಿ. ಚನ್ನಬೈರೇಗೌಡರು.—ಹೈಕೋರ್ಟು ಆರ್ಡರಿನಿಂದ ಸದರಿ ರೈತನಿಗೆ ನ್ಯಾಯ ದೊರಕಿ, ಸ್ಥಳೀಯ ಅಧಿಕಾರಿಗಳು ಮಾಡಿದ್ದ ಹುಕುಮು ಸರಿಯಲ್ಲ ಎಂದು ಅವರು ಮಾಡಿದ್ದ ಆರ್ಡರನ್ನು ರದ್ದುಪಡಿಸಿದ್ದಾರೆ. ಹೀಗೆ ಪ್ರತಿ ಸಂದರ್ಭದಲ್ಲಿಯೂ ರೈತರಿಗೆ ನಡೆಯುತ್ತಿರುವ ಅನ್ಯಾಯಗಳನ್ನೂ ಕಿರುಕುಳಗಳನ್ನೂ ತಪ್ಪಿಸಿಕೊಳ್ಳುವುದಕ್ಕಾಗಿ ಎಲ್ಲಾ ರೈತರುಗಳೂ ಹೈಕೋರ್ಟಿಗೆ ಹೋಗಿ, ನ್ಯಾಯ ದೊರಕಿಸಿಕೊಳ್ಳಲು ಸಾಧ್ಯವೇ ಎಂಬುದನ್ನು ನಾವು ಮುಖ್ಯವಾಗಿ ಯೋಚಿಸಬೇಕು. ಸುಗ್ಗಿ ಆಜ್ಞೆಯಲ್ಲಿ ಅದು ಸೇರಿಲ್ಲವೆಂದು ಹೈಕೋರ್ಟ್ ಆರ್ಡರಾಗಿದೆ. ಮಾನ್ಯ ಗೃಹಸಚಿವರು ಹೇಳಿದಂತೆ ಎರಡು ಲಕ್ಷ ಚಿಲ್ಲರೆ ಪ್ರಜೆಗಳಿಗೆ ಅನ್ಯಾಯವಾಗುವಾಗ ಎಷ್ಟು ಜನ ಹೈಕೋರ್ಟಿಗೆ ಹೋಗಿ ನ್ಯಾಯ ದೊರಕಿಸಿಕೊಳ್ಳಲು ಸಾಧ್ಯ ಎಂಬುದನ್ನು ನಾವು ಗಮನಿಸಬೇಕಾದ ಅಂಶವಾಗಿದೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಮ್ಮಲ್ಲಿ ಸರ್ಪ್ಲಸ್ ಇರುವವರು ಶೇಕಡ 90 ಜನ ಎಂದು ಶ್ರೀ ಹುಚ್ಚೇಗೌಡರು ಹೇಳಿದರು. ವಾಸ್ತವವಾಗಿ ಸರ್ಪ್ಲಸ್ ಹೋಲ್ಡರುಗಳಿರುವುದು ಎರಡು ಲಕ್ಷ ಚಿಲ್ಲರೆ. ಅವರು ಒಟ್ಟು ವ್ಯವಸಾಯಗಾರರ ಪೈಕಿ ಶೇಕಡ ಎಷ್ಟು ಎಂಬುದನ್ನು ತಾವೇ ಹೇಳಬೇಕು. ಶೇಕಡ ಒಂದು ಭಾಗ ಕೂಡ ಇಲ್ಲ. ಅಲ್ಪಸ್ವಲ್ಪ ಲೋಪ ದೋಷಗಳಿದ್ದರೆ ಅದನ್ನೇ ದೊಡ್ಡದು ಮಾಡುವುದು ಮನುಷ್ಯ ಸ್ವಭಾವ! ತೊಂದರೆಯಾಗಿರುವ ಕಡೆ ಪರಿಹಾರ ಮಾಡಿದ್ದೇವೆಂದು ಆಗಲೇ ಹೇಳಿದೆ.

ಶ್ರೀ ಬಿ. ಚನ್ನಬೈರೇಗೌಡರು.—ಈಗ 13 ಲಕ್ಷ ಪಲ್ಲಗಳನ್ನು ಇಂಡಿಯಾ ದೇಶದವರು ಕೊಡುತ್ತಿದ್ದಾರೆ. ಮಾನ್ಯ ಮಂತ್ರಿಗಳು ಹೇಳಿರುವ ಹಾಗೆ ರೇಷನ್ ಪ್ರದೇಶದಲ್ಲಿರುವ ಜನರಿಗೆ 11 ಲಕ್ಷ ಚಿಲ್ಲರೆ ಪಲ್ಲಗಳು ಬೇಕಾಗಿದೆ. ಅದೇ ಹಳ್ಳಿಗಳಲ್ಲಿರುವ 41 ಲಕ್ಷ ಜನರಿಗೆ 14 ಲಕ್ಷ ಚಿಲ್ಲರೆ ಪಲ್ಲಗಳು ರೇಷನ್ ಕೊಡುತ್ತಿದ್ದಾರೆ. ಆ 41 ಲಕ್ಷ ಜನರಿಗೆ ರೇಷನ್ ಕೊಟ್ಟಿರುವುದು ಯಾವಾಗ? ರೇಷನ್ ಅವರ ಬಳಿ ಮುಗಿದು ಹೋದಾಗ ಮತ್ತು ಅವರಲ್ಲಿ ಬೆಳೆದಿರುವುದು ಮುಗಿದುಹೋದಮೇಲೆ ಸ್ಥಳೀಯ ಅಧಿಕಾರಿ ಖಚಿತಮಾಡಿಕೊಂಡು ಆಗ ಅವನಿಗೆ ಕಾರ್ಡು ಕೊಡುತ್ತಾರೆ. ಹಾಗೆ ಕಾರ್ಡು ಕೊಡುವುದಕ್ಕೆ ಒದಗಿಸಿರುವುದು 14 ಲಕ್ಷ ಪಲ್ಲ ಮಾತ್ರ. ಇದು ತಲೆಗೆ ಒಂದಾಣೆ ಭಾಗ ಕೂಡ ಬರುವುದಿಲ್ಲ. ಆದ್ದರಿಂದ ಸಿಟಿಗಳಿಗೆ ಮಾತ್ರ ಒದಗಿಸಿ ಗ್ರಾಮಾಂತರಗಳಲ್ಲಿ ರೇಷನ್ ತೆಗೆದರೆ ತೊಂದರೆಯೇನೂ ಇಲ್ಲ. ಜನರಿಗೂ ಉಪಕಾರವಾಗುತ್ತದೆ.

ಶ್ರೀ ಎ. ಭೀಮಪ್ಪನಾಯಕರು.—ರೇಷನ್ ತೆಗೆಯಲು ಅವರು ಜನರನ್ನು ಒಪ್ಪಿಸುತ್ತಾರೆಯೆ? ಮದ್ರಾಸಿನ ಪರಿಸ್ಥಿತಿ ಅವರಿಗೆ ಗೊತ್ತೆ?

ಶ್ರೀ ಬಿ. ಚನ್ನಬೈರೇಗೌಡರು.—ಮದರಾಸಿನ ಸ್ಥಿತಿಗಳು ನನಗೆ ಬಹಳ ಚೆನ್ನಾಗಿ ಗೊತ್ತು. ಕಂಟ್ರೋಲಿಟ್ಟು ಆಹಾರ ಧಾನ್ಯವನ್ನು ವಸೂಲು ಮಾಡುತ್ತಿರುವ ಪದ್ಧತಿಯಿಂದ ದೇಶದಲ್ಲಿ ಜನರ ನೀತಿ ಪತನವಾಗುತ್ತಿದೆ; ಮತ್ತು ಹೆಚ್ಚಾಗಿ ಬೆಳೆಯುವುದಕ್ಕೆ ಅಡಚಣೆಯಾಗಿದೆ. ಜನರು ನಿರುತ್ಸಾಹಕರಾಗಿದ್ದಾರೆ. ಆದ್ದರಿಂದ ವಸೂಲಿ ಪದ್ಧತಿಯನ್ನು ರದ್ದುಗೊಳಿಸಬೇಕೆಂದು ಹೇಳುತ್ತೇನೆ. ಈ ನಿರ್ಣಯದ ತಿದ್ದುಪಡಿಯ ರೂಪ, ಬಣ್ಣ ಗೊತ್ತಿಲ್ಲದ್ದರಿಂದ ಅದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಮಾನ್ಯ ಸದಸ್ಯರೆಲ್ಲಾ ದೇಶದ ಹಿತದೃಷ್ಟಿಯಿಂದಲೂ ರೈತರಿಗೆ ಕಿಂಚಿತ್ತಾದರೂ ಉಪಕಾರವಾಗಿ ಹೆಚ್ಚು ಬೆಳೆ ಬೆಳೆಯಲು ಅವಕಾಶವಾಗಿ ದೇಶಕ್ಕೆ ಉಪಕಾರ ಮಾಡುತ್ತೀರೆಂದು ನಂಬಿ ಈ ನಿರ್ಣಯವನ್ನು ಒಮ್ಮತದಿಂದ ಅಂಗೀಕರಿಸಬೇಕಾಗಿ ಪ್ರಾರ್ಥನೆ.

*ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿ ಯವರು.—ಸ್ವಾಮಿ, ಈ ಆಹಾರದ ಹತೋಟಿ ಸಮಸ್ಯೆ ನಮ್ಮ ಸಂಸ್ಥಾನದಲ್ಲಿ ಏನೂ ಹೊಸದಲ್ಲ. ಸುಮಾರು ಎಂಟು ವರ್ಷಗಳಿಂದ ಈ ಸಮಸ್ಯೆ ಸರ್ಕಾರವನ್ನೂ ಹಾಗೂ ಪ್ರಜೆಗಳನ್ನೂ ಬಾಧಿಸುತ್ತಿದೆ. ನಾನು ಈ ದಿವಸ ಹೇಳುವ ಕೆಲವು ಮಾತುಗಳನ್ನು ಕೆಲವು ಪಕ್ಷ ಪ್ರತಿಪಕ್ಷಗಳ ಜಯಾಪಜಯಗಳ ದೃಷ್ಟಿಯಿಂದ ಹೇಳುತ್ತಿಲ್ಲ. ದೇಶದ ಮತ್ತು ಜನತೆಯ ಸುಖಸಂತೋಷ ಮತ್ತು ಆವಶ್ಯಕತೆಯ ದೃಷ್ಟಿಯಿಂದ ಹೇಳಲು ಅಪೇಕ್ಷಿಸುತ್ತೇನೆ. ಯಾರೇ ಆಗಲಿ ಕೆಲವು ಮುಖ್ಯ ವಿಷಯಗಳನ್ನು ಮನಸ್ಸಿನಲ್ಲಿಟ್ಟು ಆಮೇಲೆ ತಮ್ಮ ಸಲಹೆಗಳನ್ನು ನೀಡಬೇಕೆಂಬುದು ಸರಿಯೆಂದು ಎಲ್ಲರಿಗೂ ಅರ್ಥವಾಗುತ್ತದೆ. 1943 ನೆಯ ಇಸವಿಗೆ ಮುಂಚೆ ಈ ಹತೋಟಿಯ ಪ್ರಶ್ನೆ ನಮ್ಮ ದೇಶದಲ್ಲಿ ಅಷ್ಟಾಗಿ ಇರಲಿಲ್ಲ. 1942-43ನೆಯ ಸಾಲಿನಿಂದ ಎರಡನೆಯ ಮಹಾಯುದ್ಧವು ಪ್ರಾರಂಭವಾದನಂತರ ಅದು ನಡೆಯುತ್ತಿದ್ದಾಗ ಈ ಸಮಸ್ಯೆಯು ನಮ್ಮಲ್ಲಿ ಪ್ರಾರಂಭವಾಯಿತು. ಕಾರಣ ಇಷ್ಟೆ. ಪ್ರತಿಯೊಂದು ದೇಶದಲ್ಲೂ ಪ್ರತಿಯೊಂದು ರಾಷ್ಟ್ರದಲ್ಲೂ ಈ ಹತೋಟಿಯನ್ನು ಒಂದಲ್ಲ ಒಂದು ರೀತಿಯಲ್ಲಿ ಆಚರಣೆಗೆ ತರುವ ಒಂದು ಏರ್ಪಾಡು ಜಾರಿಗೆ ಬಂತು. ಇಂಡಿಯಾದಿಂದ ಅಮೆರಿಕಾ ಮುಂತಾದ ಇತರ ದೇಶಗಳವರೆಗೂ ಇದು ಹಬ್ಬಿತು. ಅದರಂತೆ ಭಾರತ ದೇಶದಲ್ಲೂ ಈ ಹತೋಟಿ ಬರಬೇಕಾದ ಸಮಸ್ಯೆ ಬಂತು. ಇದಕ್ಕೆ ಹಿಂದೆ ಏನಾಗಿತ್ತೆಂದರೆ, ಆಹಾರ ವಿಶೇಷವಾಗಿ ಭಾರತಕ್ಕೆ ಹೊರ ದೇಶಗಳಿಂದ ಬರುತ್ತಿತ್ತು. ಮುಖ್ಯವಾಗಿ ಬರ್ಮಾ ದೇಶದಿಂದ ನಮಗೆ ಬೇಕಾದಷ್ಟು ಅಕ್ಕಿ ಬರುತ್ತಿತ್ತು. ಹಾಗೆ ಸರಾಗವಾಗಿ ಬರುತ್ತಿದ್ದಾಗ ನಮಗೆ ಕಷ್ಟವೇನೂ ಕಂಡುಬರುತ್ತಿರಲಿಲ್ಲ. ಯಾವಾಗ ಒಂದೊಂದು ದೇಶದವರೂ ತಮ್ಮ ತಮ್ಮ ಬಂದೋಬಸ್ತನ್ನು ಮಾಡಿಕೊಳ್ಳಬೇಕಾದ ಪರಿಸ್ಥಿತಿ ಬಂತೋ ಆಗ ಅದರ ಬಿಸಿ ನಮಗೂ ತಟ್ಟಿತು. ಮುಖ್ಯವಾಗಿ ಇದನ್ನು ಗಮನದಲ್ಲಿಡಬೇಕು. ಪ್ರಪಂಚದ ಎಲ್ಲಾ ದೇಶಗಳವರೂ ಒಂದು ರೀತಿಯಲ್ಲಿರುವಾಗ ನಾವೇ ಒಂದು ಪ್ರತ್ಯೇಕ ರೀತಿಯಿರಬೇಕೆಂದರೆ ಅದು ಎಷ್ಟು ಮಟ್ಟಿಗೆ ಸಾಧ್ಯ ಎಂದು ತಾವೇ ಯೋಚನೆ ಮಾಡಬೇಕಾಗಿದೆ. ಇದು ಈ ದಿವಸ ನಾನು ಹೇಳುವ ಮಾತಲ್ಲ. ಇದು ಪೂರ್ಣವಾಗಿ ವಿಮರ್ಶೆ ಮಾಡಿದ ಒಂದು ಸಮಿತಿಯು ಹೇಳಿದ ವಿಷಯ. ಬಂಗಾಳಾದಲ್ಲಿ ಬರಗಾಲ ಬಂದು ಲಕ್ಷಾಂತರ ಜನರು ಸಾಯುವ ಪರಿಸ್ಥಿತಿ ಏಕೆ ಬಂತು ಅಂದರೆ ಆಗ ಕಂಟ್ರೋಲ್ ಒಂದುರೀತಿ ಅಲ್ಲ ಒಂದು ರೀತಿಯಲ್ಲಿ ಇಲ್ಲದಿದ್ದುದೇ ಮುಖ್ಯ ಕಾರಣ ಎಂದು ಎಲ್ಲಾ ಅಂಶಗಳನ್ನೂ ಕೂಲಂಕಷವಾಗಿ ವಿಮರ್ಶೆ ಮಾಡಿ ಖಚಿತವಾಗಿ ತೀರ್ಮಾನ ಮಾಡಿದ್ದಾರೆ. ಈಗ ಕಂಟ್ರೋಲಿನಲ್ಲಿ ಲೋಪದೋಷಗಳು ಎಷ್ಟೋ ಇವೆ, ಎಷ್ಟೋ ತೊಂದರೆಯಿದೆ, ಕೆಲವು ಸರ್ಕಾರಗಳಿಗೂ ಬೇಕಾದಷ್ಟು ತಲೆನೋವಿದೆ ಎಂದು ಹೇಳುವುದರಲ್ಲಿ ಯಾವ ಅನುಮಾನವೂ ಇಲ್ಲ. ಇಂಥ ಪದ್ಧತಿ ಆಗ ಇದ್ದಿದ್ದರೂ, ಇಷ್ಟು ತೊಂದರೆಗೆ ಮತ್ತು ತಲೆನೋವಿಗೆ ಕಾರಣವಾದ ಒಂದು ಪದ್ಧತಿ ಇದ್ದಿದ್ದರೂ, ಬಂಗಾಳಾದಲ್ಲಿ ಅಂದು ಲಕ್ಷಾಂತರ ಜನರು ಖಂಡಿತ ಸಾಯುತ್ತಿರಲಿಲ್ಲ ಎಂದು ಪ್ರವೀಣರು ಅಭಿಪ್ರಾಯಪಟ್ಟರು. ಬಂಗಾಳದಲ್ಲಿ ಕ್ಷಾಮ ಬಂದಮೇಲೆ ದೇಶಕ್ಕೆ ಅನುಕೂಲವಾಗುವ ರೀತಿಯಲ್ಲಿ ಕಂಟ್ರೋಲ್ ಭಾರತ ದೇಶದ ಎಲ್ಲಾ ಕಡೆಯೂ ಜಾರಿಗೆ ಬಂತು ಎಂಬ ಹಿನ್ನೆಲೆಯನ್ನು ಸರ್ವರೂ ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಈಗ ಮೈಸೂರು ದೇಶದಲ್ಲೂ ಕಂಟ್ರೋಲನ್ನು ಇಟ್ಟುಕೊಳ್ಳಬೇಕಾಗಿ ಬಂದಿದೆ. ಕಂಟ್ರೋಲ್ ಪದ್ಧತಿಯಿಲ್ಲದೆ ಹಾಗೇ ಸರಿತೂಗಿಸಲು ಸಾಧ್ಯವೆಂದು ಕೆಲವರು ಹೇಳುತ್ತಾರೆ. ಈಗ ಶ್ರೀ ಚನ್ನಬೈರೇಗೌಡರು ಮಾತನಾಡುವಾಗ ಹಿಂದೆ ನಾನು ಈ ಸ್ಥಾನಕ್ಕೆ ಬರುವುದಕ್ಕೆ ಮುಂಚೆ ಮಾಡಿದ್ದ ಭಾಷಣದ ಕೆಲವು ಭಾಗವನ್ನು ಉಲ್ಲೇಖಿಸಿ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಉತ್ತರವನ್ನು ಕೃತ್ರಿಮವಿಲ್ಲದೆ ಧೈರ್ಯವಾಗಿ ಈ ದಿವಸ ಹೇಳುತ್ತೇನೆ. ಸರ್ಕಾರದ ಆಡಳಿತವನ್ನು ವಹಿಸುವುದಕ್ಕೆ ಮುಂಚೆ ಹೇಳಿದ ಮಾತು ಅದು. ಜವಾಬ್ದಾರಿಯನ್ನು ವಹಿಸಿ,

(ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.)

ಅದರ ನಿಜಸ್ವರೂಪ ಮತ್ತು ಕಷ್ಟಸುಖವನ್ನು ತಿಳಿದಿದ್ದರೆ ಆಗ ಆರೀತಿ ಮಾತನಾಡುತ್ತಿರಲಿಲ್ಲ ಎಂದು ಘಂಟಾಘೋಷವಾಗಿ ಹೇಳುವುದಕ್ಕೆ ಸಿದ್ಧವಾಗಿದ್ದೇನೆ, ಹಾಗೆ ಹೇಳಲು ಅವಮಾನ ವಿಲ್ಲ. ಕರ್ತವ್ಯ ಜವಾಬ್ದಾರಿ ರಹಿತವಾಗಿ ಮಾತ ನಾಡುತ್ತಿಲ್ಲ; ಧೈರ್ಯದಿಂದ ಜವಾಬ್ದಾರಿಯುತ ವಾಗಿ ಹೇಳುತ್ತಿದ್ದೇನೆ. ನಾನು ವಿರೋಧಪಕ್ಷ ದಲ್ಲಿದ್ದಾಗ ಮಾತನಾಡುತ್ತಿದ್ದ ರೀತಿಯಲ್ಲಿ ಈಗ ಮಾತನಾಡಲು ಮನಸ್ಸು ಮಾಡುವುದಿಲ್ಲ. ಮನ ಸ್ಸಾಕ್ಷಿಯಾಗಿ ವಿರೋಧವಾಗಿ ಮಾತನಾಡುವುದ ಕ್ಕಾಗುವುದಿಲ್ಲವೆಂದು ಈ ದಿವಸ ಧೈರ್ಯವಾಗಿ ಹೇಳುತ್ತೇನೆ. ಇವತ್ತು ಮೈಸೂರು ದೇಶದಲ್ಲಿರ ತಕ್ಕ ಸಮಸ್ಯೆಯೇನೆಂಬುದನ್ನು ನೋಡೋಣ. ಈಗ ಹತೋಟಿ ತೆಗೆದುಹಾಕಿದರೆ ಹಾಗೇ ನಡೆದು ಕೊಂಡು ಹೋಗುತ್ತದೆ ಎಂದು ಹೇಳಿದರು. ಬ್ಲಾಕ್ ಮಾರ್ಕೆಟ್‌ನಲ್ಲಿ ಹೇಗೋ ಸಪ್ಲೈ ಆಗು ತ್ತದೆ. ಈಗಲೂ ಸಪ್ಲೈ ಆಗುತ್ತಿದೆ ಎಂದು ಹೇಳು ತ್ತಾರೆ. ಆ ವಾದ ಇದ್ದೇ ಇದೆ. ಅದು ಹೇಗೆ ಸರಿಹೋಗುತ್ತದೆ ಎಂಬುದಾಗಿ ಒಂದು ಪ್ರಶ್ನೆ ಕೇಳಿಬಿಟ್ಟು, ಒಂದು ವಿಚಾರವನ್ನು ತಮ್ಮ ಮುಂದೆ ಇಡುತ್ತೇನೆ. ಈಗ ಸರ್ಕಾರದವರು ಸರ್‌ಪ್ಲಸ್ ವಸೂಲು ಮಾಡುತ್ತ ಇರತಕ್ಕ ದ್ದೂ ಒಂದು ಗೊತ್ತಾದ ಪ್ರಮಾಣದ ಧಾನ್ಯ. ಅದನ್ನು ಪ್ರತಿ ವರ್ಷ ಸಂಗ್ರಹಿಸುತ್ತಾ ಇದ್ದಾರೆ. ಬ್ಲಾಕ್‌ಮಾರ್ಕೆಟ್‌ಗೆ ಅಷ್ಟು ಹೋಗು ತ್ತಲೇ ಇರುತ್ತದೆ. ಈಗ ಜಾರಿಯಲ್ಲಿರುವುದು ಬಹಳ ಸೈಂಟಿಫಿಕ್ ಸಿಸ್ಟಂ ಎಂಬುದಾಗಿ ಅಭಿ ಪ್ರಾಯ ಪಟ್ಟಿದ್ದಾರೆ. ಆದರೂ ತೊಂದರೆಗಳು ಬಂದೇ ಬರುತ್ತವೆ. ಈಗಿರುವುದನ್ನು ಒಂದು ಲಾಜಿಕ್ ದೃಷ್ಟಿಯಿಂದ ಅಥವಾ ರ್‍ಯಾಷನಲ್ ದೃಷ್ಟಿಯಿಂದ ನೋಡಿದರೆ ಉತ್ತಮಪಡಿ ಸುವುದಕ್ಕೆ ಆಗಿಲ್ಲ ಎಂದು ಹೇಳುತ್ತೇನೆ. ಶ್ರೀಮಾನ್ ಮರಿಯಪ್ಪನವರು ಹೇಳಿದ ಹಾಗೆ ಎಷ್ಟು ಜಮೀನು ಇದೆ, ಎಷ್ಟು ಸಾಗುವಳಿ ಆಗ ಬಹುದು, ಅವರ ಮನೆಯಲ್ಲಿ ಎಷ್ಟು ಜನ ಇದ್ದಾರೆ, ಅವರಿಗೆ ವರ್ಷಕ್ಕೆ 16 ಔನ್ಸ್ ಪ್ರಕಾರ ಎಷ್ಟು ಕೊಡಬೇಕಾಗುತ್ತದೆ, ಕೂಲಿ ಜನರಿಗೆ ಎಷ್ಟು ಕೊಡಬೇಕಾಗುತ್ತದೆ, ಹಬ್ಬ ಹುಣ್ಣಿಮೆ ಗಳಿಗೆ ಎಷ್ಟು ಬೇಕಾಗುತ್ತದೆ, ಇತರ ಹೆಚ್ಚಿನ ಕಾರ್ಯಗಳಿಗೆ ಎಷ್ಟು ಬೇಕಾಗುತ್ತದೆ, ಇದೆಲ್ಲ ವನ್ನೂ ಲೆಕ್ಕಹಾಕಿ ಜಾತಾ, ಉಳಿದದ್ದನ್ನು ಸರ್ ಪ್ಲಸ್ ಅಂತ ವಸೂಲುಮಾಡುತ್ತಾ ಇದ್ದಾರೆ. ಇದು ಒಂದು ಸೈಂಟಿಫಿಕ್ ಸಿಸ್ಟಂ. ಹೀಗೆ ವಸೂಲು ಮಾಡಿದ್ದನ್ನು ಒಂದು ಕಡೆ ಶೇಖರಿಸು ತ್ತಾರೆ. ಬ್ಲಾಕ್‌ಮಾರ್ಕೆಟ್ ಆಗುವುದು, ಸರ್‌ಪ್ಲಸ್ ವಸೂಲುಮಾಡುವುದು ಇವೆರಡೂ ಸೇರಿಕೊಂಡು ಈಗ 10 ವರ್ಷದಿಂದ ಏನಾಗಿದೆ ಎಂಬುದನ್ನು ನೋಡೋಣ. ಒಂದು ಪ್ರಮಾಣ ದಲ್ಲಿ ಅಲ್ಲ ಒಂದು ಪ್ರಮಾಣದಲ್ಲಿ ಇಂಡಿಯಾ ಸರ್ಕಾರದಿಂದ ನಾವು ಅಲಾಟ್‌ಮೆಂಟ್ ತರಿಸಿ ಕೊಳ್ಳುತ್ತಾ ಇದ್ದೇವೆ. ಅದು ಪೋಲು ಆಗುತ್ತಾ ಇಲ್ಲ. ಇಷ್ಟುಮಾತ್ರ ಹೇಳಬಲ್ಲೆ: ನಮ್ಮ ಸಂಸ್ಥಾನದಲ್ಲಿ ಯಾವ ಹಳ್ಳಿಯನ್ನೇ ತೆಗೆದುಕೊಳ್ಳಿ, ಎಲ್ಲೂ ಯಥೇಚ್ಛವಾಗಿ ಸಾಕಾ ಗಿದೆ ಎಂದು ಯಾರೂ ಹೇಳುವುದಿಲ್ಲ. ಹೇಳಿದರೂ ಒಪ್ಪುವುದಿಲ್ಲ. ಪ್ರೊಕ್ಯೂರ್‌ಮೆಂಟ್ ಮಾಡು ವುದು, ಬ್ಲಾಕ್‌ಮಾರ್ಕೆಟ್ ಸಪ್ಲೈಆಗುವುದು ಎರಡು ಸಾಲದೆ ಡಿಫಿಸಿಟ್ ಆಗಿ ಹೊರಗಡೆ ಯಿಂದ ತರಿಸಿಕೊಳ್ಳುತ್ತಾ ಇದ್ದೇವೆ. ಇದು ಮುಖ್ಯವಾಗಿ ಗಮನಿಸಬೇಕಾದ ವಿಚಾರ. ಇನ್ನೊಂದು ವಿಚಾರವೇನೆಂದರೆ ಎಲ್ಲಿಯವರೆಗೆ ಭಾರತ ಸರ್ಕಾರದಿಂದ ನಮಗೆ ಇಷ್ಟು ದವಸ ಬೇಕೆಂದು ಅಪೇಕ್ಷಿಸಿ ಒಂದು ಪ್ರಮಾಣದಲ್ಲಿ ತರಿಸಿಕೊಳ್ಳುತ್ತೇವೆಯೋ ಅಲ್ಲಿಯವರೆಗೂ ಭಾರತ ಸರ್ಕಾರ ಅಖಿಲ ಭಾರತ ನೀತಿಯಂತೆ ಏನು ಒಂದು ತೀರ್ಮಾನಮಾಡುತ್ತಾರೋ ಅದಕ್ಕೆ ಒಳಪಟ್ಟು ಕೆಲಸಮಾಡಬೇಕು. ಹಾಗಿಲ್ಲದೆ ಅದು ಹೇಗಾದರೂ ಇರಲಿ ನಮ್ಮ ಇಷ್ಟಬಂದಂತೆ ಮಾಡುತ್ತೇವೆ ಎಂದರೆ ಹಾಗೆ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಆಲೋಚನೆ ಮಾಡಬೇಕು. ಭಾರತ ಸರ್ಕಾರ ದವರ ನೀತಿಗೆ ಒಳಪಟ್ಟು ಅವರು ಅಲಾಟ್ ಮೆಂಟ್ ಮಾಡಬೇಕಾದರೆ ದೇಶದಲ್ಲಿ ಎಷ್ಟು ಬೆಳೆಯಾಗುತ್ತದೆ, ಬೆಳೆಯತಕ್ಕವರಿಗೆ ಎಷ್ಟು ಬಿಡಬೇಕು; ಸರ್‌ಪ್ಲಸ್ ಎಷ್ಟು ಉಳಿಯುತ್ತದೆ,

ಎಂಬುದನ್ನು ನೋಡಿಕೊಂಡು ಅದನ್ನು ವಸೂಲು ಮಾಡಿ, ಇಷ್ಟು ವಸೂಲಾಗಿದೆ ಎಂದು ತೋರಿಸಿ, ಇಷ್ಟು ಕಮ್ಮಿ ಬಿದ್ದಿದೆ, ಇಷ್ಟು ಬೇಕು ಅಂತ ಹೇಳಿದರೆ ಅದನ್ನು ಸರಬರಾಯಿ ಮಾಡುವುದಕ್ಕೆ ಪ್ರಯತ್ನಮಾಡುತ್ತೇವೆ ಎಂದು ಅವರು ಹೇಳುತ್ತಾರೆ. ಹಾಗೆ ಹೇಳುವಾಗ ನಾವು ವಸೂಲು ಮಾಡುವುದನ್ನು ಬಿಟ್ಟುಬಿಡುತ್ತೇವೆ ನೀವು ಕೊಡುವುದನ್ನು ಕೊಡಿ ಎಂದರೆ, ಆಗ ಅವರು ನಿಮಗೆ ಎಷ್ಟು ಬೇಕಾಗುತ್ತದೆ ಎಂಬುದನ್ನು ತಿಳಿಸಿ ಎಂದರೆ ಅಂಕಿ ಅಂಶ ಕೊಡುವುದಕ್ಕೆ ಕಷ್ಟವಾಗುತ್ತದೆ ಎಂಬುದನ್ನು ಗಮನಿಸಬೇಕು. ಆದ್ದರಿಂದ ಎಲ್ಲಿಯವರೆಗೆ ಇಡೀ ಭಾರತ ಡಿಫಿಸಿಟ್ ರಾಷ್ಟ್ರವಾಗಿರುತ್ತದೆಯೋ, ಎದುವರೆಗೆ ಭಾರತ ಸರ್ಕಾರ ಇತರ ಸರ್ಕಾರಗಳವರಿಂದ ಅಲಾಟ್‌ಮೆಂಟ್ ತರಿಸಿಕೊಳ್ಳುತ್ತದೆಯೋ ಅಲ್ಲಿಯವರೆಗೂ ಅವರ ನೀತಿಗನುಗುಣವಾಗಿ ಹೋಗಬೇಕಾಗುತ್ತದೆ. ನಮ್ಮ ಮೈಸೂರು ಸಂಸ್ಥಾನ 50 ವರ್ಷದಿಂದ ಡಿಫಿಸಿಟ್ ಸಂಸ್ಥಾನ ಆಗಿದೆ. ಮೊದಲು ಹೊರಗಡೆಯಿಂದ ಬೇಕಾದಷ್ಟು ಬರುತ್ತಾ ಇತ್ತು. ಆದ್ದರಿಂದ ಅದು ವಿಶೇಷವಾಗಿ ಗೊತ್ತಾಗುತ್ತಾ ಇರಲಿಲ್ಲ. ಈಗ ಪ್ರಜಾ ಸಂಖ್ಯೆಯೂ ಕೂಡ ಹೆಚ್ಚಾಗಿದೆ. ಇಂಥಾ ಸನ್ನಿವೇಶದಲ್ಲಿರುವಾಗ ನಾವು ಭಾರತದ ಇತರ ಕಡೆಗಳಿಂದ ಆಹಾರ ಧಾನ್ಯ ತರಿಸಿಕೊಳ್ಳುತ್ತಿರುವಾಗ ಫ್ರೀ ಎಕಾನಮಿ ಮಾಡುತ್ತೇವೆ ಎಂದರೆ ಆಗ ನನಗಂತೂ ಖಂಡಿತ ಅರ್ಥವಾಗುವುದಿಲ್ಲ. ಅದು ಬ್ರೇಕ್‌ಡೌನ್ ಆಗುತ್ತದೆ ಎಂದು ನನಗೆ ಅನ್ನಿಸುತ್ತದೆ. ಈಗ ಕೆಲವು ಕಡೆ ಡೀರೇರ್ಷ ಮಾಡಿದ್ದಾರೆ ಎಂದು ನಮ್ಮ ಮಿತ್ರರು ಹೇಳಿದರು, ಅಲ್ಲಿ ಈಗ ಏನಾಗಿದೆ ಎಂದರೆ—ಮತ್ತೊಂದು ಸರ್ಕಾರವನ್ನು ಟೀಕೆ ಮಾಡುವುದಕ್ಕೆ ನನಗೆ ಇಷ್ಟವಿಲ್ಲ— ನಮ್ಮ ಸಂಸ್ಥಾನಕ್ಕೆ ಬಂದಿರುವ ಸಮಾಚಾರ ಪ್ರಕಾರ ಎಲ್ಲೆಲ್ಲಿ ಆರೀತಿ ಡೀರೇರ್ಷ ಮಾಡಿದ್ದಾರೋ ಅಲ್ಲೆಲ್ಲಾ ವಿಪರೀತ ಬೆಲೆ ಜಾಸ್ತಿಯಾಗಿ ಎಲ್ಲೂ ಧಾನ್ಯ ಸಿಕ್ಕದಹಾಗಾಗಿ ಅಲ್ಲಿಂದ ಎಲ್ಲರೂ ಇಲ್ಲಿಗೆ ಬರುತ್ತಾ ಇದ್ದಾರೆ. ಮೈಸೂರು ಸಂಸ್ಥಾನಕ್ಕೆ inflow ಆಗುತ್ತಾ ಇದೆ. ನಮ್ಮ ಅನುಭವಕ್ಕೆ ಬಂದಿರುವಂತೆ ಚಿತ್ತೂರು, ಅನಂತಪುರ, ಬಳ್ಳಾರಿ ಜಿಲ್ಲೆಗಳಿಂದ inflow ಜಾಸ್ತಿ ಆಗುತ್ತಾ ಇದೆ. ಹೀಗಿರುವಾಗ ಅಲ್ಲಿ ಮಾಡಿರತಕ್ಕ ಪದ್ಧತಿಯನ್ನೇ ನೀವು ಜಾರಿಗೆ ತಂದುಬಿಡಿ ಎಂದು ಹೇಳಿದರೆ ಅದು ನನಗಾದರೂ ಆಶ್ಚರ್ಯವೆನಿಸುತ್ತದೆ.

ಪಟ್ಟಣವಾಸಿಗಳು, ಹಳ್ಳಿಯವರು ಎಂಬುದಾಗಿ ಎರಡುಭಾಗ ಮಾಡಿ, ಪ್ರೊಕ್ಯೂರ್‌ಮೆಂಟ್ ಮಾಡುವುದೆಲ್ಲಾ ಪಟ್ಟಣಗಳವರಿಗೆ ಸಪ್ಲೈಮಾಡುವುದಕ್ಕೆ ಎಂದು ಹೇಳುತ್ತಾ ಇರುವುದು ಸಂಪೂರ್ಣವಾಗಿ ಸರಿಯಾದ ವಿಷಯವಲ್ಲ. ಈಗ ಸ್ವಲ್ಪ ಹೆಚ್ಚು ಕಮ್ಮಿ ಅರ್ಧಕ್ಕಿಂತ ಕಮ್ಮಿ ದವಸ ಪಟ್ಟಣದಲ್ಲಿರತಕ್ಕ ಜನರಿಗೆ ಒದಗಿಸುತ್ತಾ ಇದ್ದೇವೆ. ಕಾರಣ ಇಷ್ಟೆ. ಅವರ ಪೈಕಿ ಜಮೀನು ಇರುವವರು ಇಲ್ಲ. ಎಂದರೆ ಬೆಳೆಯದೇ ಇರತಕ್ಕವರಿಗೆ ಯಾವರೀತಿಯಲ್ಲಾದರೂ ದವಸಧಾನ್ಯ ಒದಗಿಸಬೇಕು. ಇನ್ನು ಅರ್ಧಭಾಗ ಹಳ್ಳಿಗಳಲ್ಲಿರತಕ್ಕ ಪಾರ್ಷಿಯಲ್ ಪ್ರೊಡ್ಯೂಸರ್ಸ್‌ಗೆ, ವ್ಯವಸಾಯದ ಕೂಲಿಗಾರರಿಗೆ ಕೊಡುತ್ತಿದ್ದೇವೆ. ಇದು ಸರ್ಕಾರದವರು ಅತ್ಯಗತ್ಯವಾಗಿ ಪಾಲಿಸಬೇಕಾದ ಕರ್ತವ್ಯ ನೆರವೇರಿಸಲೇಬೇಕು. ಅಲಾಟ್‌ಮೆಂಟ್ ಬರುವುದು ಪಟ್ಟಣಗಳವರಿಗೆ ಕೊಟ್ಟುಬಿಡಿ, ನಮ್ಮ ತಂಟೆಗೆ ಬರಬೇಡಿ ಎಂದರೆ ಅಲಾಟ್‌ಮೆಂಟ್ ಕೊಡುವುದು ಬಿಡುವುದು ಕೇಂದ್ರದವರಿಗೆ ಸೇರಿದ್ದು. ಅದು ಹೇಗಾದರೂ ಇರಲಿ ಅವರು ಹೇಳತಕ್ಕ ವಾದ, 'ಸೆಲ್ಯೂರ್ಷ' ಬಹಳ ಅಪಾಯಕರವಾದ 'ಸೆಲ್ಯೂರ್ಷ' ಎಂದು ಹೇಳುತ್ತೇನೆ. ಪಟ್ಟಣಗಳಲ್ಲಿ ಕೊಡುತ್ತಾ ಇರತಕ್ಕ ರೀತಿಯಲ್ಲೇ ಹಳ್ಳಿಗಳಲ್ಲೂ ಕೊಡಿ ಎಂದು ಇನ್ನು ಕೆಲವು ಮಿತ್ರರು ಹೇಳಿದರು, ಆ ರೀತಿ ಕೊಡುವುದಕ್ಕೆ ಬಹಳ ಕಷ್ಟವಿದೆ. ಪಟ್ಟಣಗಳಲ್ಲಿರುವವರು ಎಲ್ಲರೂ ಬೆಳೆಯದೇ ಇರತಕ್ಕವರು. ವರ್ಷದ ಮೊದಲಿನಿಂದ ಕೊನೆಯವರೆಗೂ ಅವರಿಗೆ ಆಹಾರ ಒದಗಿಸಬೇಕು. ಹಳ್ಳಿಗಳ ಸ್ಥಿತಿ ಹಾಗಲ್ಲ. ಶ್ರೀಮಾನ್ ಮರಿಯಪ್ಪನವರು ಹೇಳಿದಂತೆ ಕೆಲವರು 4 ತಿಂಗಳಿಗೆ, ಕೆಲವರು 6 ತಿಂಗಳಿಗೆ, ಕೆಲವರು 8 ತಿಂಗಳಿಗೆ ಸಾಕಾಗುವಷ್ಟು ಬೆಳೆದುಕೊಳ್ಳುತ್ತಾರೆ. ಆಯಾಯಾ ಕಾಲಗಳಲ್ಲಿ ಮಾತ್ರ ಕೊಡಬೇಕಾಗುತ್ತದೆ. ಅದನ್ನು

(ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.)

ನೋಡಿಕೊಂಡು ಕೊಡುತ್ತೇವೆ. ಅಲ್ಲಿ ಪೂರ್ತಿಯಾಗಿ ಸ್ಟ್ಯಾಟ್ಯುಟರಿ ರೇಷನ್ ಪ್ರದೇಶದಲ್ಲಿ ರೇಷನ್ ಕೊಡುವಂತೆ ಕೊಡಬೇಕಾದ ಆವಶ್ಯಕತೆ ಇಲ್ಲ. ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

Sri H. M. CHANNABASAPPA.—What about non-producers ?

The Hon'ble Sri K. CHENGALARAYA REDDY.—I will come to that. ವ್ಯವಸಾಯದ ಕೂಲಿಗಾರರಿಗೆ ಕೆಲವು ಕಾಲ ಧಾನ್ಯ ಸಿಕ್ಕುತ್ತದೆ. ಕೆಲವುಕಾಲ ಸರ್ಕಾರಿ ಡಿಪೋಗಳ ಮೂಲಕ ಕೊಡಬೇಕಾಗುತ್ತದೆ. ಇನ್ನು ಕೆಲವರು ವ್ಯವಸಾಯದ ಕೂಲಿಗಾರರಲ್ಲದೇ ಇರುವವರು ಇರುತ್ತಾರೆ. ಅವರಿಗೂಸಹ ಸಾಧ್ಯವಾದಷ್ಟುಮಟ್ಟಿಗೂ ಮಿನಿಮಂ ಸಪ್ಲೈ ಮಾಡಬೇಕು, ಅದನ್ನು ಒಪ್ಪಿಕೊಳ್ಳುತ್ತೇನೆ. ಶ್ರೀವರ್ನ್ ಚನ್ನಬೈರೇಗೌಡರು ಹೇಳಿದಂಥ ವಾದ ಹೇಗೆ ಸಾಧುವಲ್ಲ ಎಂಬುದಕ್ಕೆ ಹೇಳುತ್ತೇನೆ. ಇಂಡಿಯಾ ಸರ್ಕಾರದವರು ಕೊಡುವುದನ್ನು ಪಟ್ಟಣಗಳಿಗೆ ಕೊಟ್ಟುಬಿಡಿ, ಹಳ್ಳಿಗಳಲ್ಲಿ ಪ್ರೊಕ್ಯೂರ್‌ಮೆಂಟ್ ವಜಾ ಮಾಡಿ ಎಂದರೆ ಎಷ್ಟು ಪ್ರಮಾದ ಆಗಬಹುದು ಎಂಬುದನ್ನು ಸ್ವಲ್ಪ ಊಹಿಸಿ ಕೊಳ್ಳಬೇಕು. ಬಡಬಗ್ಗರು ಮತ್ತು ಸಂಪೂರ್ಣವಾಗಿ ಬೆಳೆದೂ ಸಹ ವರ್ಷಕ್ಕಾಗುವಷ್ಟು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಿಲ್ಲದೇ ಇರತಕ್ಕವರ ಪಾಡು ಬಹಳ ಕೆಟ್ಟುಹೋಗುತ್ತದೆ. ಅವರಿಗೆ ಬಹಳ ತೊಂದರೆಯಾಗುತ್ತದೆ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಈರೀತಿ ಪ್ರಯೋಗಮಾಡಿರುವ ಕಡೆ ಯಾವ ಪರಿಸ್ಥಿತಿಯುಂಟಾಗಿದೆ ಎಂಬುದು ನಮ್ಮ ಅನುಭವದಲ್ಲಿದೆ. ಆದ್ದರಿಂದ ಅದನ್ನು ಮಾಡುವುದಕ್ಕಾಗುವುದಿಲ್ಲ. ಆದರೆ ಇದನ್ನು ಮಾತ್ರ ಒಪ್ಪಿಕೊಳ್ಳುತ್ತೇನೆ. ಇನ್ನೂ ಹಳ್ಳಿಗಳಲ್ಲಿ ಉದಾರವಾಗಿ ರೇಷನ್ ಕೊಡಿ, ರೇಷನ್ ಇನ್ನೂ ಜಾಸ್ತಿಮಾಡಿ, ಅಲ್ಲಿ ಕೊಡುತ್ತಾ ಇರುವುದು ಸಾಲದು, ಪಟ್ಟಣಗಳಲ್ಲಿ ಸಂಪೂರ್ಣವಾಗಿ ಹೇಗೆ ಕೊಡುತ್ತೀರೋ ಅದೇರೀತಿ ಸಾಧ್ಯವಾದಷ್ಟೂ ಕೊಡಬೇಕು ಎಂಬುದನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಇದರಲ್ಲಿರತಕ್ಕ ಸಮಸ್ಯೆ ಇಷ್ಟೆ. ಎಷ್ಟು ಧಾನ್ಯ ನಮ್ಮಲ್ಲಿ ಇದೆ, ಪ್ರೊಕ್ಯೂರ್‌ಮೆಂಟ್ ಎಷ್ಟುಮಾಡುತ್ತಾರೆ, ಎಷ್ಟು ಅಲಾಟ್‌ಮೆಂಟ್ ತರಿಸಬೇಕು, ಎಂಬುದನ್ನು ನೋಡಿಕೊಂಡು ಇರುವುದನ್ನು ಕೊಡುವುದಕ್ಕೆ ಸಾಧ್ಯವೇ ಹೊರತು ಇಲ್ಲದೇ ಇರುವುದು ಕೊಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ ಎಂಬ ಪ್ರಶ್ನೆಯನ್ನು ತಮ್ಮಲ್ಲಿ ಕೇಳಬೇಕಾಗಿದೆ. ಇಷ್ಟುಮಾತ್ರ ಮಾಡಬಹುದು, ಏನೆಂದರೆ ಸ್ಟ್ಯಾಟ್ಯುಟರಿ ರೇಷನ್ ಪ್ರದೇಶದಲ್ಲಿ 12 ಔನ್ಸ್ ಕೊಡುವುದನ್ನು 10 ಔನ್ಸ್ ಮಾಡಿ ಉಳಿದ 2 ಔನ್ಸನ್ನು ಇನ್ನೂ ಸ್ವಲ್ಪ ಧಾರಾಳವಾಗಿ ಹಳ್ಳಿಗಾಡು ಪ್ರದೇಶಗಳಿಗೆ ಕೊಡುವುದಕ್ಕೆ ಸಾಧ್ಯವೇ ಎಂಬುದನ್ನು ಯೋಚನೆಮಾಡಬಹುದೇ ಹೊರತು ಅಲ್ಲೂ ಸಂಪೂರ್ಣವಾಗಿ ಕೊಡಬೇಕು, ಇಲ್ಲೂ ಸಂಪೂರ್ಣವಾಗಿ ಕೊಡಬೇಕು, ಅಲಾಟ್‌ಮೆಂಟ್ ಬಂದರೆ ಬರಲಿ, ಹೋದರೆ ಹೋಗಲಿ ಎಂಬುದಾಗಿ ಮಾಟ, ಮಂತ್ರ ಮಾಡುವುದಕ್ಕೆ ಯಾವ ಸರ್ಕಾರದಿಂದಲೂ ಸಾಧ್ಯವಾಗುವುದಿಲ್ಲ.

Sri H. M. CHANNABASAPPA.—To people living in rural areas who have absolutely no other means except depending on Government depots, do Government agree to give them the same protection as they give to the people living in the ration areas? If such an assurance is given, it will help us to appreciate the Government point of view.

The Hon'ble Sri K. CHENGALARAYA REDDY.—There may be some places where full quantity is not being given, but the attempt is there to give the maximum quantity.

Sri H. M. CHANNABASAPPA.—Do Government stand committed to that ? It is not a question of giving where it is possible and not where it is not possible, because that will result in discrimination which is against the Constitution.

The Hon'ble Sri K. CHENGALARAYA REDDY.—Any way, all this will show that a certain amount of control is necessary at present. ಆದ್ದರಿಂದ ಯಾವ ದೃಷ್ಟಿಯಿಂದ ನೋಡಿದರೂ ಈಗಿನ ಸನ್ನಿವೇಶಗಳಲ್ಲಿ ಕಂಟ್ರೋಲನ್ನು ತೆಗೆದರೆ

ಅಥವಾ ಪ್ರೊಕ್ಯೂರ್‌ಮೆಂಟನ್ನು ನಿಲ್ಲಿಸಿದರೆ ಆದರಿಂದ ಅನೇಕವಾದ ತೊಂದರೆಗಳಾಗುತ್ತ ವೆಂಬದರಲ್ಲಿ ಯಾವ ಅನುಮಾನವೂ ಇಲ್ಲ. ಏಕೆಂದರೆ, ಒಂದು ವಿಷಯ ತಮ್ಮ ಜ್ಞಾಪಕಕ್ಕೆ ತರುತ್ತೇನೆ. 1947-48ನೆಯ ಇಸವಿಯಲ್ಲಿ ಒಮ್ಮೆ ಕಂಟ್ರೋಲನ್ನು ತೆಗೆದು ಹಾಕಿದರು. ಆ ಕಾಲದಲ್ಲಿ ಸರ್ಕಾರಕ್ಕೂ ಮತ್ತು ನನಗೂ ಉಂಟಾದ ಸಂತೋಷ ಮತ್ತಾವ ಕಾಲದಲ್ಲಿಯೂ ಇರಲಿಲ್ಲ. ನನ್ನ ಎಷ್ಟೋ ತಲೆನೋವು ನಿಂತು ಹೋಯಿತು. ಹೀಗಿರುವಾಗ, ಸ್ವಲ್ಪವೂ ಕಿರು ಕುಳವಿಲ್ಲದೆ, ತಲೆಯ ಭಾರವಿಲ್ಲದೆ ಸಂತೋಷ ವಾಗಿರತಕ್ಕ ಸನ್ನಿವೇಶವನ್ನು ಬಿಟ್ಟು ಸರ್ಕಾರ ದವರು ಕಂಟ್ರೋಲನ್ನೇಕೆ ಮತ್ತೆ ಹಾಕಬೇಕಾಗಿ ಬಂತು ಎಂಬದನ್ನು ಯೋಚನೆಮಾಡಿ. ಅದು ಮನಸ್ವಿಯಾಗಿ ಮಾಡಿದ್ದಲ್ಲ; ಮೂರ್ಖತನವಲ್ಲ; ಮೌಢ್ಯವಲ್ಲ; ಹಠಮಾರಿತನದಿಂದಲ್ಲ; ಕಂಟ್ರೋಲನ್ನು ನಡೆಸಿಕೊಂಡು ಹೋಗಬೇಕೆಂಬ ಆಸೆ ಯಿಂದಲ್ಲವೆಂದು ನಾನು ಹೇಳುತ್ತೇನೆ. ಕಂಟ್ರೋಲ್ ತೆಗೆದುಹಾಕಿದ ಮೂರು ನಾಲು. ತಿಂಗಳ ಕಾಲದಲ್ಲಿ ಎಂಥ ಭಯೋತ್ಪಾದಕ ಸೂಚನೆಗಳು ಕಂಡುಬಂದವೆಂಬದನ್ನು ನಾನು ಹೇಳಬೇಕಾಗಿಲ್ಲ. ನಿದರ್ಶನವಾಗಿ ಒಂದು ಹೇಳುತ್ತೇನೆ: ಒಮ್ಮೆ ದಾರಿಯಲ್ಲಿ ಹೋಗುತ್ತಿದ್ದಾಗ ಒಬ್ಬ ಹಣ್ಣಣ್ಣು ಮುದುಕಿ 70-80 ವರ್ಷದವಳು ಮಾತನಾಡಲಿಕ್ಕೂ ಶಕ್ತಿಯಿಲ್ಲದೆ, ಕೈಸನ್ನೆಮಾಡಿ ಡಿ-ಕಂಟ್ರೋಲ್ ಆದಮೇಲೆ ರೂಪಾಯಿಗೆ ಎರಡು ಸೇರೂ ಸಿಕ್ಕದಿರುವುದನ್ನು ತಿಳಿಸಿದ್ದು ಎಷ್ಟು ವ್ಯಸನಕರವಾಗಿತ್ತೆಂಬದನ್ನು ನಾನು ವಿವರಿಸಲಾರೆ. ರೈತರಿಗೇನೋ ತಾತ್ಕಾಲಿಕವಾಗಿ ಅನುಕೂಲವಾಗಿರಬಹುದು. ಶ್ರೀ ಚನ್ನಬೈರೇಗೌಡರೇನೋ ರೈತರ ಪರವಾಗಿ ಬಹಳ ಮಾತನಾಡಿದರು. ಆದರೆ, ಚನ್ನಬೈರೇಗೌಡರೆಷ್ಟು ರೈತವಂಶಸ್ಥರೋ, ಅಥವಾ ಶ್ರೀ ಹುಚ್ಚೇಗೌಡರಿಗೆಷ್ಟು ರೈತರ ಅನುಭವವಿದೆಯೋ ಅಷ್ಟೇ ಮಟ್ಟಿಗೆ ನಾನೂ ರೈತವಂಶಸ್ಥನಾಗಿ, ರೈತರ ಅನುಭವವುಳ್ಳವನಾಗಿದ್ದೇನೆಂದು ಹೇಳಬಲ್ಲೆ. ರೈತನಾಗಿ ಹುಟ್ಟಿದ್ದೇನೆ, ರೈತನಾಗಿ ಬೆಳೆದಿದ್ದೇನೆ. ನಾನು ಬಿ.ಎಲ್. ಪಾಸುಮಾಡಿದ ಮೇಲೆ 5-6 ವರ್ಷ ರೈತನಾಗಿಯೇ ಹಳ್ಳಿಯಲ್ಲಿದ್ದವನು. ಅಲ್ಲದೆ ಕಂಟ್ರೋಲ್ ತೆಗೆದುಹಾಕಿದರೆ ಹೆಚ್ಚಿಗೆ ವರಮಾನ ಬರುತ್ತದೆಂದು ನಿರೀಕ್ಷಣೆಯಿಟ್ಟುಕೊಳ್ಳಬೇಕಾಗಿರುವವನೂ ನಾನು. ಆದರೆ ನಾವು ಸರ್ಕಾರದಲ್ಲಿರತಕ್ಕವರಾಗಿ ರೈತರ ಹಿತದೃಷ್ಟಿಯನ್ನೂ ನೋಡಬೇಕು, ಇತರೇ ಜನರ ಹಿತದೃಷ್ಟಿಯನ್ನೂ ನೋಡಬೇಕು. ಎರಡನ್ನೂ ಸಮದೃಷ್ಟಿಯಿಂದ ನೋಡಿಕೊಂಡು ಇಬ್ಬರಿಗೂ ಸಾಧುವಾದ ಮಾರ್ಗವನ್ನು ಅನುಸರಿಸಿಕೊಂಡು ಹೋಗುವ ನೀತಿ ನಮ್ಮದಾಗಿರಬೇಕು. ಅಂದಮಾತ್ರಕ್ಕೆ ಈಗ ಸರ್ಕಾರದವರು ನಡೆಸತಕ್ಕ ರೀತಿ ನೀತಿ ಸರ್ವೋತ್ಕೃಷ್ಟವಾದ್ದು, ಅದರಲ್ಲಿ ಲೋಪದೋಷಗಳೇನೂ ಇಲ್ಲವೆಂದು ಯಾರೂ ಹೇಳುವುದಿಲ್ಲ. ನಾವು ಹಾಕಿರತಕ್ಕ ನೀತಿಯನ್ನು ಕಾರ್ಯತಃ ಜಾರಿಗೆ ತರುವವರು ಕೇವಲ ಮನುಷ್ಯರೇ ಎಂಬದನ್ನು ನಾವು ಗಮನಿಸಬೇಕು. ಮನುಷ್ಯರಲ್ಲಿ ಎಷ್ಟುಮಟ್ಟಿಗೆ ಲೋಪದೋಷಗಳಿರುತ್ತವೆಯೋ ಅಷ್ಟೇಮಟ್ಟಿಗೆ ಅವರ ಕೆಲಸಕಾರ್ಯಗಳಲ್ಲೂ ಲೋಪದೋಷಗಳಿರುತ್ತವೆ. ಅಂದಮಾತ್ರಕ್ಕೇ ನಮ್ಮ ಪದ್ಧತಿಯನ್ನೇ ಸರಿಯಾಗಿಲ್ಲವೆಂದು ಹೇಳಿ ಬಿಟ್ಟುಬಿಡಬೇಕೆಂದು ಹೇಳುವುದು ಸರಿಯಲ್ಲ.

Sri K. R. SREEKANTESWAR (Bangalore City—General).—Why this oscillating policy between control and de-control? Why not the party come forward and say that they have got a definite policy of control?

The Hon'ble Sri K. CHENGALARAYA REDDY.—The definite policy of this Government and the Congress Party which is behind this Government is one of gradual de-control. It is neither wedded to controls for all time nor wedded to de-control immediately as is now proposed by the mover of the resolution. As and when circumstances permit, when the time is ripe, when the Government are assured that there will be no serious dislocation or serious harm to any section of the people, then, it would be time enough to de-control; we want to bring about that de-control as speedily as possible.

(HON'BLE SRI K. CHENGALARAYA REDDY.)

ಆದ್ದರಿಂದ ಹತೋಟಿಯೆಂಬುದು ಯಾರಿಗೂ ಪ್ರಿಯವಾದ್ದಲ್ಲ. ಕಬ್ಬಿಣ, ಸಿವೆಂಟ್ ಯಾವುದನ್ನು ತೆಗೆದುಕೊಂಡರೂ ಅವನ್ನು ತಯಾರಿಸುವವರು ಹತೋಟಿಗಳನ್ನು ಒಪ್ಪುವುದೇ ಇಲ್ಲ. ಆದರೆ, ರೈತರು ತಮ್ಮ ದವಸ ಧಾನ್ಯಗಳಿಗೆ ಹತೋಟಿ ಬೇಡವೆಂದರೂ, ಬೇರೆ ಕಬ್ಬಿಣ ಮುಂತಾದ ಮುಟ್ಟುಗಳಿಗೆ ಹತೋಟಿಯಿರಬೇಕೆನ್ನುತ್ತಾರೆ. ಹಾಗೆಯೇ ಕಡ್ಲೆಕಾಯಿ ಹಿಂಡಿ ರೈತರಿಗೆ ಇದರ ಹತೋಟಿ ಬೇಕು, ಗಾಣದವರಿಗೆ ಹತೋಟಿ ಬೇಡ. ಹೀಗೆ ನಮಗೆ ಬೇಕಾದ ವಸ್ತುಗಳಿಗೆ ಹತೋಟಿ ಬೇಕು, ನಾವು ಮಾರಬೇಕಾದ ವಸ್ತುಗಳಿಗೆ ಹತೋಟಿ ಬೇಡ ಎನ್ನುವುದು ಸ್ವಾಭಾವಿಕ.

ಶ್ರೀ ಬಿ. ಹುಚ್ಚೇಗೌಡರು.—ಹತೋಟಿ ಬೇಕೆಂದು ಯಾರು ಹೇಳಿದರು, ಯಾವುದಕ್ಕೆ ಹೇಳಿದರು, ಎಲ್ಲಿ ಹೇಳಿದರು ಎಂಬದನ್ನು ದಯವಿಟ್ಟು ತಿಳಿಸುತ್ತೀರಾ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಸರ್ವಸಾಮಾನ್ಯವಾಗಿ ತಮಗೆಲ್ಲಾ ಗೊತ್ತಿರುವಂತೆ, ಬಟ್ಟೆ ತಯಾರುಮಾಡುವವರೂ, ಮಿಲ್ಲಿನವರೂ ಬಟ್ಟೆಗೆ ಹತೋಟಿ ಬೇಡವೆಂದು ಹೇಳುತ್ತಾರೆ; ಸಿಮೆಂಟ್ ತಯಾರುಮಾಡುವವರು ಸಿಮೆಂಟಿಗೆ ಹತೋಟಿ ಇರಕೂಡದೆಂದು ಹೇಳುತ್ತಾರೆ. ಹೀಗೆ ಅವರವರ ಕ್ಷೇತ್ರಕ್ಕೆ ಸಂಬಂಧಪಟ್ಟ ವಸ್ತುಗಳ ಮೇಲೆ ಹತೋಟಿಯಿಲ್ಲದೆ, ಮಿಕ್ಕದರ ಮೇಲೆ ಹತೋಟಿಯಿದ್ದು ಪ್ರತಿಫಲ ಹೊಂದಬೇಕೆಂದು ಎಲ್ಲರಿಗೂ ಆಸೆಯಿದೆ.

ಶ್ರೀ ಬಿ. ಚನ್ನಭೈರೇಗೌಡರು.—ಎಲ್ಲಿ, ಯಾವ ಸರ್ಕಾರದ ಮುಂದೆ ಬಂದು ಕಂಟ್ರೋಲ್ ಬೇಕೆಂದು ಹೇಳಿದರೆಂಬದನ್ನು ತಿಳಿಸಿ.

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಯಾವ ಪದಾರ್ಥವೇ ಆಗಲಿ, ಪ್ರಮಾಣದಲ್ಲಿ ಸಾಕಾದಷ್ಟಿಲ್ಲದೆ ಇದ್ದರೆ ವಿಪರೀತ ಬೆಲೆಯಾಗದ ರೀತಿಯಲ್ಲಿ ಎಲ್ಲರಿಗೂ ಹಂಚತಕ್ಕ ಏರ್ಪಾಡು ಮಾಡುವುದು ಸರ್ಕಾರದವರ ಕರ್ತವ್ಯ. ಆಹಾರ ಪದಾರ್ಥವೇ ಆಗಲಿ, ಕೈಗಾರಿಕಾ ಪದಾರ್ಥವೇ ಆಗಲಿ, ಇಂಥ ಸಂದರ್ಭಗಳಲ್ಲಿ ಧಾರಣೆಯ ಹತೋಟಿ ಮಾಡಿಯೇ ತೀರಬೇಕೆಂಬ ತತ್ವವನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಆದ್ದರಿಂದ ದೇಶದಲ್ಲಿ ಉತ್ಪತ್ತಿಯ ಪ್ರಮಾಣ ನಮ್ಮ ಪ್ರಜಾ ಸಂಖ್ಯೆಗೆ ಅನುಗುಣವಾಗಿ ಎಲ್ಲಿಯವರೆಗೆ ಜಾಸ್ತಿಯಾಗುವುದಿಲ್ಲವೋ ಅಲ್ಲಿಯವರೆಗೆ ಧಾರಣೆಗಳು ವಿಪರೀತ ಏರದಂತೆ inflation ನ್ನನ್ನು ತಡೆಗಟ್ಟಲೇಬೇಕು. ಇದಕ್ಕಾಗಿ ಒಂದಲ್ಲೊಂದು ರೀತಿಯಲ್ಲಿ ಹತೋಟಿಯನ್ನಿಟ್ಟುಕೊಳ್ಳಲೇಬೇಕು. ಕಂಟ್ರೋಲ್ ತೆಗೆದುಬಿಟ್ಟರೆ ಹೇಗೋ ನಡೆಯುತ್ತದೆಂದು ಹೇಳುವ ಹಾಗಿಲ್ಲ. ಎಲ್ಲವೂ confusion ಆಗುತ್ತದೆಂದು ಹೇಳಬೇಕಾಗಿಲ್ಲ. ನಾನಿದನ್ನು ಜವಾಬ್ದಾರಿಯಿಂದ ಹೇಳುತ್ತೇನೆ. ಈ 5-6 ವರ್ಷಗಳಿಂದ ಈ ವಿಧವಾದ ಕಂಟ್ರೋಲ್ ಇಲ್ಲದೆ ಹೋಗಿದ್ದರೆ ಇಷ್ಟುಹೊತ್ತಿಗೆ ಕ್ರಾಂತಿಕಾರಕವಾದ ಸನ್ನಿವೇಶಗಳು ಉಂಟಾಗುತ್ತಿದ್ದುವೆಂದು ನಾನು ಹೇಳಬಲ್ಲೆ.

ಶ್ರೀ ಬಿ. ಹುಚ್ಚೇಗೌಡರು.—ಬಟ್ಟೆಗೆ ಯಾವ ರೀತಿಯಲ್ಲಿ ಕಂಟ್ರೋಲ್ ಹಾಕಿದೆಯೋ ಅದಕ್ಕೆ ಯಾವ ವಿಧಾನವನ್ನನುಸರಿಸಿದ್ದೀರೋ ಅದೇ ವಿಧಾನವನ್ನು ಆಹಾರ ಧಾನ್ಯಗಳಿಗೂ ಏಕೆ ಅನ್ವಯಿಸಕೂಡದು? ಬಟ್ಟೆಯ ದರವನ್ನು ಗೊತ್ತುಮಾಡುವ ರೀತಿಯಲ್ಲೇ ಧಾನ್ಯಗಳಿಗೂ ಗೊತ್ತುಮಾಡಿದ್ದೀರಾ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ದರದ ವಿಚಾರ ಇಲ್ಲಿ ಬರುವುದಿಲ್ಲ. ಬೇಕಾದರೆ ಅದನ್ನು ಆಮೇಲೆ ಹೇಳುತ್ತೇನೆ. ಪ್ರೊಕ್ಯೂರ್‌ಮೆಂಟಿನ ಹತೋಟಿ ತೆಗೆದುಹಾಕುವ ಪ್ರಶ್ನೆ ಈಗಿರುವುದು. ಒಟ್ಟು ಕಂಟ್ರೋಲಿನ ವಿಚಾರದಲ್ಲಿ ಹೇಳುತ್ತೇನೆ: ಬೆಲೆಯ ಹತೋಟಿ, ಸಾಗಾಣಿಕೆಯ ಹತೋಟಿ—ಇವೆಲ್ಲಾ ಇರಬೇಕೆಂದು ಹೇಳಿದಮೇಲೆ, ಪ್ರೊಕ್ಯೂರ್‌ಮೆಂಟ್ ಒಂದು ಮಾತ್ರ ಬೇಡವೆಂದರೆ ಹೇಗಾಗುತ್ತದೆ? ಮುಖ್ಯವಾಗಿ ಪ್ರೊಕ್ಯೂರ್‌ಮೆಂಟ್ ಸ್ಟೇಜಿನಿಂದ ಹಿಡಿದು ಕೊನೆಯಲ್ಲಿ ಹಂಚಿಕೆಮಾಡುವ ಸ್ಟೇಜಿನವರೆಗೂ ಮಧ್ಯೆ ಏನೇನು ಹತೋಟಿಗಳನ್ನಿಟ್ಟುಕೊಂಡು ಕೆಲಸಮಾಡಬೇಕೋ ಅಷ್ಟನ್ನೂ ಇಟ್ಟುಕೊಂಡು ಕೆಲಸಮಾಡಿದರೆ ಸರಿಯಾಗು

ತ್ತದೆಯೇ ಹೊರತು, ಒಂದನ್ನು ಇಟ್ಟುಕೊಳ್ಳಿ ಇನ್ನೊಂದನ್ನು ಬೇಡಿ ಎಂದರೆ, ಯಾವುದೂ ಸರಿಯಾಗುವುದಿಲ್ಲ. ಪ್ರೊಕ್ಯೂರ್‌ಮೆಂಟೇ ಇಲ್ಲ ದಿದ್ದರೆ ರೇಷನಿಂಗ್ ಹೇಗೆ ಮಾಡುತ್ತೀರಿ? ಹಂಚಿಗೆ ಹೇಗೆ ಮಾಡುತ್ತೀರಿ?

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ, ಪೂರ್ತಿಯಾಗಿ ಎಲ್ಲವನ್ನೂ ಕಂಟ್ರೋಲ್ ಮಾಡಿ ತೆಗೆದುಕೊಂಡು ಎಲ್ಲರಿಗೂ ಸರಿಯಾಗಿ ಹಂಚಿಗೆ ಮಾಡುವುದಕ್ಕೆ ಸಾಧ್ಯವೇ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯ ವರು.—ಅವರು ಹೇಳುವುದು, ಒಟ್ಟು ಸಂಸ್ಥಾನ ದಲ್ಲಿ, ಹಾಗೂ ಭಾರತದಲ್ಲಿ ಎಷ್ಟು ಬೆಳೆಯಾಗುತ್ತ ದೆಯೋ ಅಷ್ಟನ್ನೂ ಪ್ರೊಕ್ಯೂರ್‌ಮಾಡಿಕೊಂಡು ತಂದು ಸರ್ಕಾರಿ ಗೋಡೌನ್‌ಗಳಲ್ಲಿ ಹಾಕಿ ಕೊಂಡು ಬೆಳೆದವರು, ಬೆಳೆಯದವರು ಎಲ್ಲರಿಗೂ ರೇಷನ್ ಕಾರ್ಡುಗಳನ್ನು ಹಂಚಿ, ಅದರ ಪ್ರಕಾರ ಜನರಿಗೆ ಒಂದೇಸಮನಾಗಿ ಆಹಾರವನ್ನು ಹಂಚಿಕೆಮಾಡಬೇಕು ಎಂದು. ತಮ್ಮ ಸರ್ಕಾರ ಬಂದಾಗ ಬಹುಶಃ ಅದನ್ನು ಪ್ರಯತ್ನಮಾಡಿ ನೋಡಬಹುದು; ಈ ಸರ್ಕಾರಕ್ಕೆ ಅದು ಬಹಳ ಕಷ್ಟ. ಅಷ್ಟುಭಾರಿ ಪ್ರಮಾಣದಲ್ಲಿ ಪ್ರೊಕ್ಯೂರ್ ಮಾಡಿಕೊಂಡು ಇಡೀ 30 ಕೋಟಿ ಜನರಿಗೆ ಹಂಚುವುದೆಂದರೆ, ಈಗಿರುವ ಕಷ್ಟಕ್ಕೆ ಇನ್ನೂ ಹತ್ತರಷ್ಟಾಗುತ್ತದೆಂದು ನಾನು ಹೇಳಬಲ್ಲೆ.

ಪ್ರೊಕ್ಯೂರ್‌ಮೆಂಟ್, ಪಾರ್ಷಿಯಲ್ ಪ್ರೊಕ್ಯೂರ್‌ಮೆಂಟ್ ವಿಷಯವನ್ನು ಬಿಟ್ಟರೆ ಇನ್ನೂ ಅನೇಕ ಅಂಶಗಳನ್ನು ಅವರುಹೇಳಿದ್ದಾರೆ. ಒಟ್ಟಿನಲ್ಲಿ ನಾನು ಇಷ್ಟುಮಾತ್ರ ಹೇಳುತ್ತೇನೆ. ಸರ್ಕಾರದವರು ಈಗ ಅನುಸರಿಸುತ್ತಿರುವ ನೀತಿ ಯಲ್ಲಿ ರೈತರ ಹೊಟ್ಟೆಯಮೇಲೆ ಹೊಡೆದು, ರೈತರಿಗೆ ದ್ರೋಹವೆಣಿಸಿ ಅವರಿಗೆ ಇಲ್ಲದ ಸಲ್ಲದ ತೊಂದರೆಗಳನ್ನು ಕೊಟ್ಟು ಬೇರೆಯವರಿಗೆ ಉಪ ಕಾರಮಾಡಿ ಅವರಿಂದ ಶಹಭಾಸ್ ಗಿರಿಯನ್ನು ಪಡೆದುಕೊಳ್ಳಬೇಕೆಂಬ ಉದ್ದೇಶ ಖಂಡಿತವಾಗಿ ಯೂ ಇಲ್ಲ. ಎಷ್ಟು ಸಾಧ್ಯವೋ ಅಷ್ಟು ಮಟ್ಟಿಗೂ ರೈತರಿಗೂ ಹಳ್ಳಿಯವರಿಗೂ ಅನು ಕೂಲಮಾಡಿದ್ದೇವೆ. ಅದೆಲ್ಲವನ್ನೂ ಈಗ ಹೇಳು ವುದಕ್ಕೆ ಸಾಧ್ಯವಿಲ್ಲ. ರೈತರ ಹಿತರಕ್ಷಣೆಯೇ ಸರ್ಕಾರಕ್ಕೆ ಅತಿ ಮುಖ್ಯವೆಂದಿಟ್ಟುಕೊಂಡಿ ದ್ದೇವೆ. ಈಗ ಭಾರತದ ಮತ್ತು ಒಟ್ಟು ಪ್ರಪಂಚದ ಪರಿಸ್ಥಿತಿಯಿಂದ ಎಲ್ಲರಿಗೂ ಆಹಾ ರವೇ ಮುಖ್ಯ ಪ್ರಶ್ನೆಯಾಗಿರುವುದರಿಂದ ವಿಧಿ ಯಿಲ್ಲದೆ ಕಂಟ್ರೋಲ್ ಇಡಬೇಕಾಗಿರುವುದರಿಂದ ಇಟ್ಟದ್ದೇವೆಯೇ ಹೊರತು ಬೇರಾವ ಉದ್ದೇಶ ದಿಂದಲೂ ಅಲ್ಲ.

ಬೆಲೆಯ ವಿಷಯವನ್ನು ಹೇಳುವುದಾದರೆ, ಹಿಂದೆ ಪಲ್ಲಕ್ಕೆ 12-13 ರೂಪಾಯಿ ಇತ್ತು. ನಮ್ಮ ಸರ್ಕಾರ ಬಂದಾಗ ಅದನ್ನು 23 ರೂಪಾ ಯಿವರೆಗೂ ಹೆಚ್ಚುಮಾಡಿದ್ದೇವೆ. ಹಿಂದಿದ್ದ ಸರ್ಕಾರದವರು ಈ ವಿಷಯಕ್ಕೆ ಕೈಹಾಕುವು ದಕ್ಕೂ ಹೆದರುತ್ತಿದ್ದರು. ಆದರೂ ಈ ಬೆಲೆಯೂ ಸಾಲದೆಂಬದನ್ನು ಒಪ್ಪುತ್ತೇನೆ. ಆಹಾರ ಬೆಳೆಯಲು ರೈತರಿಗೆ ಎಷ್ಟು ಖರ್ಚಾಗುತ್ತದೆ, ಅವರು ಎಷ್ಟು ಕೂಲಿ ಕೊಡಬೇಕು ಎಂಬುದ ನ್ನೆಲ್ಲಾ ನೋಡಿದರೆ ಜಾಸ್ತಿಮಾಡುವುದಕ್ಕೆ ಸಕಾರಣವಿದೆಯೆಂದು ನಾನೂ ಒಪ್ಪುತ್ತೇನೆ. ಆದರೆ ನಾವು ಈ ಪ್ರಶ್ನೆಯನ್ನು ಅನೇಕ ದೃಷ್ಟಿ ಗಳಿಂದ ನೋಡಬೇಕಾಗಿದೆ. ಬೆಲೆಗಳನ್ನು rationalise ಮಾಡಬೇಕಾದರೆ, ಕೈಗಾರಿಕೆ ಯ ಕೂಲಿಗಳಿಗೆ ಎಷ್ಟು ಕೊಡಬೇಕು, ಉತ್ಪ ತ್ತಿಯ ಖರ್ಚೆಷ್ಟಾಗುತ್ತದೆ ಎಂಬುದನ್ನೆಲ್ಲಾ ದೀರ್ಘವಾಗಿ ಆಲೋಚನೆ ಮಾಡಬೇಕಾಗು ತ್ತದೆ. ಯಾವ ಸರ್ಕಾರವಾಗಲಿ ಮುಂದೆ ಇದನ್ನೆಲ್ಲಾ ಗಮನಿಸಬೇಕಾದುದು ಅಗತ್ಯ ವೆಂದು ನಾನು ಒಪ್ಪುತ್ತೇನೆ.

ಇನ್ನು ರೈತರಿಗೆ ಇರುವ ಕಿರುಕುಳದ ವಿಷಯ. ನಾನು ಹಿಂದೆ ಪ್ರತಿಪಕ್ಷದಲ್ಲಿದ್ದಾಗ ಅನೇಕ ಸಲ ಈ ವಿಷಯವಾಗಿ ಹೇಳಿದ್ದೇನೆ. ಪಾಶ್ಚಾತ್ಯ ದೇಶಗಳಲ್ಲಿ ಇಂತಹ ಕೆಲಸಗಳಲ್ಲಿ ಭಾಗವಹಿಸುವ ಜನರಿಗಿರುವಂತೆ ನಮ್ಮ ಜನತೆಯಲ್ಲಿ ಸುಗುಣ ಗಳು, ಶಿಸ್ತು, regimentation ಮುಂತಾದವು ಇಲ್ಲ. ಈ ಕೆಲಸಗಳನ್ನು ಜಾರಿಗೆ ಕೊಡಬೇಕಾದ agency ಯಲ್ಲೂ ಈ ಸದ್ಗುಣಗಳು ಪೂರ್ಣ ವಾಗಿಲ್ಲವೆಂಬುದು ಒಪ್ಪತಕ್ಕ ವಿಷಯ. ಎಲ್ಲೆಲ್ಲಿ ಲೋಪದೋಷಗಳು ಕಾಣುತ್ತವೆ ಅವನ್ನು ಸರಿ ಪಡಿಸಿ ಜನರಿಗೆ ಅನುಕೂಲವಾಗುವಂತೆ

(ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.) ಮಾರ್ಪಾಡುಮಾಡುವುದು ನಮ್ಮ ಕರ್ತವ್ಯ. ಆದರೆ ಎಲ್ಲವನ್ನೂ ವಜಾ ಮಾಡಬೇಕೆಂದು ಹೇಳುವುದು ಸರಿಯಲ್ಲ; ಹಾಗೆ ಮಾಡುವುದು remedy is worse than the disease ಎನ್ನುವ ಹಾಗಾಗುತ್ತದೆ. ರೈತರಿಗೆ ಕಿರುಕುಳ ವಾಗುತ್ತಿರುವ ಅನೇಕ ಉದಾಹರಣೆಗಳನ್ನು ಕೊಟ್ಟರು. ಆದರೆ ಇಂತಹ ಸಂದರ್ಭಗಳು ಸೇಕಡ 5 ಅಥವಾ 10ರಷ್ಟಿರಬಹುದು. ಅದೂ ಕೆಲವು ಕಡೆ ಇರಬಹುದು. ಕೆಲವುಕಡೆ ಏನೂ ಕಿರುಕುಳವಿಲ್ಲದೇಯಿರಬಹುದು. Perfect ಆಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಇರುವ ಲೋಪದೋಷಗಳನ್ನೂ ಸರಿಪಡಿಸುವುದಕ್ಕೆ ಜನತೆಯು ಸಹಕಾರ ಮತ್ತು ಅಧಿಕಾರಿಗಳ ಕಾರ್ಯದಕ್ಷತೆ, ದೇಶಪ್ರೇಮ ಇವು ಮುಖ್ಯವಾಗಿ ಆವಶ್ಯಕ. ಎಲ್ಲರಲ್ಲೂ ಕರ್ತವ್ಯನಿಷ್ಠೆಯಿಂದಲೂ ದೇಶಪ್ರೇಮದಿಂದಲೂ ನಡೆಯುವ ಮನೋಧರ್ಮ ಉಂಟಾಗಬೇಕು. ಇದು ಒಂದು ದಿವಸದಲ್ಲಲ್ಲ, ಒಂದು ವರ್ಷದಲ್ಲಲ್ಲ, ಕ್ರಮೇಣ ಉಂಟಾಗಬೇಕು. ಶಿಸ್ತು, ಒಳ್ಳೆಯ ನಡತೆ, ಸಂಪ್ರದಾಯ ಇವೆಲ್ಲವೂ ಕ್ರಮೇಣ ಬರಬೇಕು. ಲೋಪವಿದೆಯೆಂದು ಎಲ್ಲವನ್ನೂ ಬಿಟ್ಟುಬಿಡುವುದಕ್ಕಾಗುವುದಿಲ್ಲ. ಈ ಕಂಟ್ರೋಲುಗಳಿಗೆ ನಾವು ಎಂದೆಂದಿಗೂ ಬದ್ಧರೆಂದು ನಾನು ಹೇಳುವುದಿಲ್ಲ. ಆದಷ್ಟುಬೇಗ ಇದನ್ನು ತೆಗೆದು ಹಾಕಬೇಕೆಂಬುದು ಕೇಂದ್ರ ಸರ್ಕಾರದ ಮತ್ತು ನಮ್ಮ ಸರ್ಕಾರದ ಉದ್ದೇಶ. ಆದರೆ ಕೂಡಲೇ ತೆಗೆದುಹಾಕಿದರೆ ಜನರಿಗೆ ಬಹಳ ಕಷ್ಟವಾಗುತ್ತದೆ. ಆದಕಾರಣ ಈ ನಿರ್ಣಯವನ್ನು ಒಪ್ಪಿಕೊಳ್ಳುವುದು ಕಷ್ಟವಾಗಿದೆ. ಈಗಿರುವ ಪದ್ಧತಿಯನ್ನು ಬದಲಾವಣೆ ಮಾಡಬೇಕೆಂದು ಕೆಲವರು ಹೇಳುತ್ತಾರೆ. ಇದು ಹೊಸದೇನೂ ಅಲ್ಲ. ಕೆಲವುಕಡೆ levy system ಜಾರಿಗೆ ತಂದಿದ್ದಾರೆ. ಆದರೆ ನನಗೆ ತಿಳಿದಮಟ್ಟಿಗೆ, ಅಲ್ಲೀ ಅನೇಕರು ಇದು ಬೇಡ ವಜಾಮಾಡಿ ಎಂದು ಹೇಳಿದ್ದಾರೆ. ಹಿಂದೆ ಐದಾರು ವರ್ಷಗಳ ಬೆಳೆಯ ಸರಾಸರಿ ಆಧಾರದ ಮೇಲೆ ಗೊತ್ತುಮಾಡಿ ಎಂದು ಹೇಳುತ್ತಾರೆ. ಹಾಗೆ ಮಾಡಿದರೂ ಈ assessment basis ಸರಿಯಿಲ್ಲ, ಅನ್ಯಾಯ ನಡೆದಿದೆ ಎಂದು ಹೇಳಲು ಅವಕಾಶವಿದೆ. ಅಂಕಿಗಳ ಮೇಲೆ ಸರಾಸರಿ ತೆಗೆದುಕೊಂಡರೂ ತೊಂದರೆ. ಬೆಳೆ ಎಷ್ಟೇ ಆಗಲಿ, ಎರಡಾಣೆ, ಎಂಟಾಣೆ ಅಥವಾ ಹನ್ನೆರಡಾಣೆ ಆಗಲಿ ಒಂದೇ ರೀತಿ ಎಲ್ಲಕ್ಕೂ ಹಾಕಿ ಸರಾಸರಿ ತೆಗೆದುಕೊಂಡರೆ, ಅದರಿಂದಲೂ ಅನ್ಯಾಯವಾಗುತ್ತದೆ. ಅದರಲ್ಲಿ ಇನ್ನೊಂದು ನ್ಯೂನತೆಯಿದೆ. ಈಗಿರುವ ಪದ್ಧತಿಯ ಪ್ರಕಾರ ಒಂದು ಸಂಸಾರದಲ್ಲಿ ನಾಲ್ಕು ಜನರಿದ್ದರೆ ಒಂದುರೀತಿ ಮಾಡುತ್ತೇವೆ, ಹತ್ತುಜನರಿದ್ದರೆ ಅದಕ್ಕೆ ತಕ್ಕಂತೆ ಮಾಡುತ್ತೇವೆ, ಇಪ್ಪತ್ತೈದು ಜನರಿದ್ದರೆ ಅದಕ್ಕೆ ತಕ್ಕಂತೆ ಮಾಡುತ್ತೇವೆ. ಆದರೆ levy ಪದ್ಧತಿಯಲ್ಲಿ ಎಷ್ಟೇ ಜನರಿರಲಿ ಒಂದು ಎಕರೆಗೆ ಇಷ್ಟು ಎಂದು ಗೊತ್ತುಮಾಡುತ್ತೇವೆ. ಇದು irrational ಆಗುತ್ತದೆ. ಹಾಗೆ ಒಂದೊಂದು ದೃಷ್ಟಿಯಿಂದ ಮಾತ್ರ ಒಂದೊಂದು ವಿಷಯವನ್ನು ನೋಡಬಾರದು. ಎಲ್ಲ ಅಂಕಿ ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು ಕೂಲಂಕಷವಾಗಿ ಪರಿಶೀಲಿಸಿ ಎಲ್ಲರ ಆವಶ್ಯಕತೆಗಳನ್ನೂ ಒದಗಿಸುವುದಕ್ಕೆ ಪ್ರಯತ್ನಪಟ್ಟರೆ ಇದು ಎಷ್ಟು ಜಟಿಲವಾದ ಪ್ರಶ್ನೆ, ಎಷ್ಟು ಕಷ್ಟವಿದೆ, ಎಷ್ಟು ತೊಡಕಾಗಿದೆ ಎಂಬುದು ಗೊತ್ತಾಗುತ್ತದೆ. ಆಚರಣೆಗೆ ತರತಕ್ಕ ಕಾಲದಲ್ಲಿ ಇದರ ಕಷ್ಟ ಗೊತ್ತಾಗುತ್ತದೆ, ಸುಮ್ಮನೆ theory ಯಿಂದ ಗೊತ್ತಾಗುವುದಿಲ್ಲ. ಆದುದರಿಂದ ನನ್ನ ಕಡೆಯ ಮಾತಿಷ್ಟೆ: ನಿರ್ವಾಹವಿಲ್ಲದೆ ಸನ್ನಿವೇಶಗಳು ಹೀಗಾಗಿವೆಯೆಂಬ ದೃಷ್ಟಿಯಿಂದ ನಾವು ಇಷ್ಟವಿಲ್ಲದೆ ಮನಸ್ಸಿಲ್ಲದೇಯಿದ್ದರೂ ಸಹ ಇದು ಅಗತ್ಯವೆಂದು ಭಾವಿಸಿ ಇದನ್ನು ಮುಂದುವರಿಸಿಕೊಂಡು ಬರುತ್ತಿದ್ದೇವೆಯೇ ಹೊರತು ಬೇರೆ ಉದ್ದೇಶದಿಂದಲ್ಲ. ಇದನ್ನು ತಕ್ಷಣ ತೆಗೆದು ಹಾಕಿದರೆ ಪ್ರಮಾದವಾಗಬಹುದು. ಎರಡನೆಯದಾಗಿ, ಸಾಧ್ಯವಾದಮಟ್ಟಿಗೂ ತೆಗೆದುಹಾಕಬೇಕೆಂದು ನಮ್ಮ ಉತ್ಪತ್ತಿಯನ್ನು ಜಾಸ್ತಿ ಮಾಡುವುದಕ್ಕೆ ಪ್ರಯತ್ನಿಸುತ್ತಿದ್ದೇವೆ; ಸನ್ನಿವೇಶ ನೋಡಿಕೊಂಡು ಕಂಟ್ರೋಲ್ ತೆಗೆದು ಹಾಕುವುದೊಂದು, ಮೂರನೆಯದಾಗಿ ಈ ಹತೋಟಿ

ಆರು ತಿಂಗಳಿರಲಿ, ಒಂದು ವರ್ಷವಿರಲಿ ಅಥವಾ ಎರಡು ವರ್ಷವಿರಲಿ, ಇದು ಇರತಕ್ಕ ಕಾಲಾವಧಿಯಲ್ಲಿ ರೈತರಿಗೆ ಯಾವ ರೀತಿಯಲ್ಲಿ ಇನ್ನೂ ಹೆಚ್ಚಿನ ಪರಿಹಾರ ಕೊಡುವುದು ಸಾಧ್ಯ, ಹಣ ಪಾವತಿಯ ವಿಚಾರದಲ್ಲಿ, ಬೆಲೆಯ ವಿಚಾರದಲ್ಲಿ, ಸಣ್ಣ ಅಧಿಕಾರಿಗಳಿಂದ ಅವರಿಗಾಗಬಹುದಾದ ಕಿರುಕುಳವನ್ನು ತಪ್ಪಿಸುವ ವಿಚಾರದಲ್ಲಿ ಆದಷ್ಟು ತೊಂದರೆಗಳನ್ನು ಕಡಮೆಮಾಡಲು ಸರ್ಕಾರದವರು ಆತ್ಮಸಾಕ್ಷಿಯಾಗಿ ಆಸಕ್ತಿ ವಹಿಸಿ ಪ್ರಯತ್ನಮಾಡುತ್ತಾರೆಂದು ಭರವಸೆ ಕೊಡುತ್ತೇನೆ. ದೇಶದಲ್ಲಿ ಆಹಾರ ಸಮೃದ್ಧಿಯಾಗಿ ದೊರೆಯುವಂತೆ ಮಾಡುವುದು ಎಲ್ಲ ಪ್ರಜೆಗಳ ಪವಿತ್ರ ಕರ್ತವ್ಯ. ಇದರಲ್ಲಿ ನಾವು ಎಷ್ಟುಬೇಗ ಜಯಶೀಲರಾಗುತ್ತೇವೆಯೋ ಅಷ್ಟುಬೇಗ ಈ ಕಂಟ್ರೋಲ್ ಹೋಗುತ್ತದೆ. ಒಟ್ಟನಲ್ಲಿ ಈಗಿರುವ ರೀತಿಯಲ್ಲಿ ಈ ನಿರ್ಣಯವನ್ನು ನಾವು ಒಪ್ಪುವುದು ಕಷ್ಟವಾಗಿದೆ ಎಂದು ಹೇಳಬಯಸುತ್ತೇನೆ. Levy ಪದ್ಧತಿ ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಜಾರಿಗೆ ತರಲು ಪ್ರಯತ್ನಿಸಿ, ಎಲ್ಲಿ ಸರ್ವೇಸಾಮಾನ್ಯ ಬೆಳೆಯಾಗಿದೆಯೋ, ಎಲ್ಲಿ ಇದನ್ನು ಜಾರಿಗೆ ತಂದರೆ ತೊಂದರೆಯಾಗುವುದಿಲ್ಲವೆಂದು ಸರ್ಕಾರಕ್ಕೆ ಭರವಸೆ ಇದೆಯೋ ಅಂತಹ ಕಡೆಗಳಲ್ಲಿ ಪರೀಕ್ಷೆಮಾಡಲು ಆಲೋಚನೆ ಇದೆ. ಇದನ್ನು ಕೆಲವು ದಿನಗಳಲ್ಲಿ ತೀರ್ಮಾನಮಾಡಲು ಪ್ರಯತ್ನಮಾಡುತ್ತೇವೆಂದು ಭರವಸೆ ಕೊಟ್ಟು ಈಗಿರುವ ಈ ನಿರ್ಣಯವನ್ನು ಒಪ್ಪುವುದಕ್ಕಾಗುವುದಿಲ್ಲವಾದುದರಿಂದ ಇದನ್ನು ವಾಪಸು ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ.

Sri K. SAMPANGI RAMAIAH.—In view of the assurance given by the Hon'ble Chief Minister, I seek the leave of the House to withdraw my amendment.

The amendment was, by leave, withdrawn.

Sri B. CHANNABYRE GOWDA.—But, I press the resolution, Sir.

Mr. SPEAKER.—The question is :

"This Assembly is of the opinion that the system of control under which food articles are being compulsorily acquired from the raiyats in the State be immediately abolished."

The motion was negatived.

Sri B. HUTCHE GOWDA (Tumkur District—General).—I demand a poll, Sir.

Sri M. MADIAH (Mysore District-Depressed Class).—I rise to a point of order.

ಈ ನಿರ್ಣಯದ ಪರವಾಗಿ ಸಭೆಯವರ ಒಪ್ಪಿಗೆ ಯಾವರೀತಿಯಾಗಿರುತ್ತೆಂಬುದನ್ನು ಅಧ್ಯಕ್ಷರು ತಿಳಿಸಿದನಂತರ, ಅವರು ಪುನಃ ಇದರ ಬಗ್ಗೆ ಚರ್ಚೆಗಾರಂಭಿಸುವುದು ಸರಿಯಾಗಿಲ್ಲ.

So he is not in order.

Mr. SPEAKER.—The question is :

"This Assembly is of the opinion that the system of control under which food articles are being compulsorily acquired from the raiyats in the State be immediately abolished."

The motion was negatived.

(Four were 'for', one was neutral and forty-three were 'against').

Mr. SPEAKER.—The House will now adjourn to meet again tomorrow at.........

SOME HONOURABLE MEMBERS.—We may meet at 1 P.M., instead of at 12 NOON.

The Hon'ble Sri K. CHENGALARAYA REDDY.—If the House is agreeable, we may meet at 1 P.M. I leave it to the Chair.

(**VOICES**.—One o'clock.)

Mr. SPEAKER.—The House will now adjourn and meet again at One of the Clock tomorrow.

The Assembly adjourned at Forty-five Minutes past Five of the Clock to meet again at One of the Clock on Thursday, 25th October 1951.

WD 1046—GPB—500—24-12-1951

LEGISLATIVE ASSEMBLY.

FIFTH DAY.

Thursday the 25th October 1951.

The Legislative Assembly met in the Assembly Hall, Old Public Offices, Bangalore, at One of the Clock.

Mr. Speaker (The Hon'ble Sri V. Venkatappa) in the Chair.

QUESTIONS AND ANSWERS.

ಅಧ್ಯಕ್ಷರು (ಮಾನ್ಯ ಶ್ರೀ ವಿ. ವೆಂಕಟಪ್ಪನವರು).—ಪ್ರಶ್ನೆಗಳನ್ನು ಚರ್ಚೆಗೆ ತೆಗೆದುಕೊಳ್ಳುವುದರಲ್ಲಿ ಕೆಲವು ಮಾನ್ಯ ಮಂತ್ರಿಗಳ ಪೋರ್ಟ್‌ಫೋಲಿಯೋಗೆ ಸಂಬಂಧಪಟ್ಟ ಪ್ರಶ್ನೆಗಳು ಚರ್ಚೆಗೆ ಬರುವುದಿಲ್ಲವಾದ್ದರಿಂದ ಈ ಹೊಸ ಕ್ರಮವನ್ನು ಬದಲಾವಣೆ ಮಾಡಬೇಕೆಂಬ ಸೂಚನೆ ಕೆಲವು ಸದಸ್ಯರಿಂದ ಬಂದಿತು. ಆದಕ್ಕಾಗಿ ಇವತ್ತಿನ ದಿವಸ ಒಬ್ಬೊಬ್ಬ ಮಾನ್ಯ ಮಂತ್ರಿಗಳಿಗೆ ಸಂಬಂಧಪಟ್ಟ ಎರಡೆರಡು ಪ್ರಶ್ನೆಗಳನ್ನು ಮೊದಲು ತೆಗೆದುಕೊಂಡು, ಇನ್ನೂ ಕಾಲಾವಕಾಶವಿದ್ದರೆ ಉಳಿದ ಪ್ರಶ್ನೆಗಳನ್ನು ಆಮೇಲೆ ತೆಗೆದುಕೊಳ್ಳೋಣ.

Planning Commission Report with respect to Mysore.

Q.—2. SRI H. C. LINGA REDDY (Kolar District—General).—Will the Government be pleased to state :—

(*a*) whether the Planning Commission of India have submitted their report so far in respect of the State of Mysore ;

(*b*) if so, the various schemes and plans adumbrated in the said report ;

(*c*) the total cost of the plans and schemes ;

(*d*) the method and manner in which the Government propose to meet the cost of the same ?

A.—THE HON'BLE SRI K. CHENGALARAYA REDDY (Chief Minister).—

(*a*) and (*b*) The question is not clear. The Planning Commission have published a Draft Outline of their First Five-year Plan in which the outlines of the Mysore State Plan for the Five-year period from 1951-52 to 1955-56 are also included. It is proposed to supply copies of the published report to Honourable Members of the House.

(*c*) Rs. 36·60 crores.

(*d*) 1. Savings in the present development—expenditure ;
2. Loans from the open market ;
3. Incomings from deposits, etc.;
4. Economies in expenditure ;
5. Withdrawals from Reserves and Funds ;
6. Additional Taxation ;
7. Financial Assistance from the Central Government.

SRI H. C. LINGA REDDY.—Before the Mysore plan was received, were the Government of Mysore or the representatives of the Mysore State consulted in the matter ?

*THE HON'BLE SRI K. CHENGALARAYA REDDY.—I think a similar question was sufficiently answered on the first or second day of the session at Mysore. The Mysore Government were certainly consulted and the Mysore Government forwarded their draft plan for consideration by the Planning Commission. There were discussions on more than one occasion and it was only after such discussion that the draft plan has now been prepared.

SRI H. C. LINGA REDDY.—Was this plan discussed in this House ?

THE HON'BLE SRI K. CHENGALARAYA REDDY. — Evidently the Hon'ble Member has not been

THE HON'BLE SRI K. CHENGALARAYA REDDY.

following the proceedings of the House. The question came up before the House at Mysore and it was then said that a day has been fixed for discussing the draft plan in this Assembly. 3rd November has been fixed for this purpose.

Sri H. C. LINGA REDDY.—In that case will the proposals to be made by this House be sent to the Planning Commission and the plan modified ?

The Hon'ble Sri K. CHENGALARAYA REDDY.—Regarding that I cannot answer. The Government of India have published this draft plan including the Mysore State Plan and the plans of the other States. They have invited criticisms, suggestions, and views of the various public bodies and in the light of these views the Government of India may ultimately finalise this plan.

Sri H. C. LINGA REDDY.—The Hon'ble Chief Minister said that the Government of Mysore were consulted in the matter. May I know if the proposals of the State were accepted in its entirety ?

The Hon'ble Sri K. CHENGALARAYA REDDY.—All that will be taken up when we discuss the plan itself on the 3rd of November.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು (ಚಿಕ್ಕಮಗಳೂರು ಜಿಲ್ಲೆ—ನಿಮ್ನ ವರ್ಗಗಳು).—ಅದರಲ್ಲಿ ಮೈಸೂರು ದೇಶದಲ್ಲಿರುವ ಎಲ್ಲಾ ಪ್ರಾಜೆಕ್ಟುಗಳೂ ಸೇರಿವೆಯೆ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಮೆಮೋರ್ಯಾಂಡಂ ಸರ್ಕ್ಯುಲೇಟ್ ಮಾಡಿದ್ದೇವೆ. ಅದನ್ನು ಓದಿದರೆ ಎಲ್ಲಾ ವಿಷಯಗಳೂ ಗೊತ್ತಾಗುತ್ತವೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—(*d*) ಪ್ರಶ್ನೆಗೆ ಉತ್ತರವಾಗಿ ಏಳು ವಿಧಾನದಲ್ಲಿ ಹಣ ಒದಗಿಸಬೇಕೆಂಬ ಉದ್ದೇಶವಿದೆಯೆಂದು ಹೇಳಿದೆ. ಉಳಿತಾಯ ಯಾವ ಯಾವ ಬಾಬಿನಲ್ಲಿ ಎಷ್ಟೆಷ್ಟು ಮಾಡುವುದಕ್ಕೆ ಸಾಧ್ಯ ಎಂಬುದನ್ನು ಹೇಳುವುದಕ್ಕೆ ಸಾಧ್ಯವೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಆ ವಿಚಾರದಲ್ಲಿ ಚರ್ಚೆಯಾಗುವಾಗ ಎಲ್ಲಾ ವಿಷಯಗಳನ್ನೂ ಸಭೆಯಮುಂದೆ ಇಡಲಾಗುತ್ತದೆ.

Sri M. GOVINDA REDDY (Chitaldrug District—General).—What will be the extent of the contribution by the State towards this scheme on account of these items ?

Mr. SPEAKER.—It is all found in the Memorandum, copies of which were supplied to the Hon'ble Members at Mysore.

The Hon'ble Sri K. CHENGALARAYA REDDY.—All that is in the programme.

Sri M. GOVINDA REDDY.—By what time do the Government hope to make provision so that moneys may be available for the execution of the plan ?

The Hon'ble Sri K. CHENGALARAYA REDDY.—During the five-year period.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ನಮ್ಮ ಮುಂದಿರುವ ಈ ಮೈಸೂರು ಸ್ಟೇಟ್ ಪ್ಲಾನ್ ವಿಚಾರವಾಗಿ ಈ ಸಭೆಯ ಸದಸ್ಯರು ಅಭಿಪ್ರಾಯ ಕೊಡುವುದಕ್ಕೆ ಅವಕಾಶ ಕೊಡಲಾಗುತ್ತದೆಯೆ ?

ಅಧ್ಯಕ್ಷರು.—ಅದಕ್ಕೆ ಮೂರನೆಯ ತಾರೀಖನ್ನು ಗೊತ್ತುಮಾಡಿದೆಯೆಂದು ಹೇಳಿದೆಯಲ್ಲಾ ?

Loans and Grants received from the Central Government and their purposes.

Q.—19. Sri M. GOVINDA REDDY (Chitaldrug District—General).—

Will the Government be pleased to state:—

(*a*) loans and grants received by the State Government from the Centre in the year 1950 and purposes for which they were so received;

(*b*) loans and grants received from the Centre up to September in the current year?

A.—The Hon'ble Sri H. C. DASAPPA (Minister for Finance and Industries):—

(*a*) *Loans.*—Capital works relating to Tunga, Bhadra and Nugu Projects and Electricity Schemes ... 150 lakhs

Power supply to Irrigation Pumps ... 50 ,,

Grow More Food Schemes (Intensive cultivation) ... 69·50 ,, (includes loan of 29·50 lakhs for 1949-50).

Details as under:—

		1949-50	1950-51
Subsidy for construction of wells ...	...	5·00	7·50
Compost scheme ...	...	...	1·50
Lift irrigation in river valleys ...	...	10·00	8·00
Purchase of Electrical pumps and Persian wheels	...	6·50	10·00
Construction of big tanks ...	...	5·00	10·00
Restoration of minor tanks ...	...	3·00	3·00
Total	...	29·50	40·00

Grants:—Grow More Food Schemes ... 33·55 lakhs } To be met from
Food Bonus Schemes ... 5·24 ,, } Food Bonus.

Details as per statement printed below:—

Statement showing the Government of India Grants sanctioned for the year 1950-51 and Food Bonus Schemes for 1950-51.

	Name of the Scheme	*Grant for 1950-51.*
GENERAL SCHEMES.—		Rs.
1	Distribution of improved varieties of paddy seeds ...	1·74 lakhs
2	Multiplication and distribution of green manure seeds ...	0·73 ,,
3	Scheme for the manufacture and distribution of Urban and Rural Compost through Town Municipalities and Village Panchayets	1·87 ,,
4	Establishment required by the Deputy Director of Agriculture at Head Quarters for G.M.F. Works ...	0·30 ,,
5	Establishment of the Statistician for G.M.F. Works ...	0·51 ,,
6	Protective measures against pests and diseases ...	1·00 ,,
7	Subsidy for the construction of wells...	3·75 ,,
8	Construction of big tanks	5·00 ,,
9	Improvement of River Channels	12·50 ,,
10	Restoration of Minor tanks	6·25 ,,
	Total ...	33·55 ,,
FOOD BONUS SCHEMES.—		
1	Expansion Service Schemes	2·25 lakhs
2	Grant-in-aid for Co-operative Farming	2·99 ,,
	Total ...	5·24 ,,

(THE HON'BLE SRI H. C. DASAPPA.)

(*b*) Sanctions for the following grants and loans have been accorded by the Ministry of Food and Agriculture to meet the cost of Grow More Food Schemes for 1951-52 :—

Loan	*Grant*	*Sanctioned on*
12·00 lakhs	14·86 lakhs	12th June 1951
23·50 ,,	25·25 ,,	29th August 1951

Details are as under :—

	Loan	*Grant*
Construction of big tanks	12·00	6·00 lakh
Multiplication and distribution of paddy seeds ...	...	1·92 ,,
Do do green manure seeds ...	...	·50 ,,
Do do urban compost ...	...	2·66 ,,
Transport and incidental charges on manure for ryots ...	...	3·78 ,,
Total ...	12·00	14·86 ,,
Irrigation wells	7·50	3·75 ,,
Lift Irrigation	10·00	10·00 ,,
Restoration of minor tanks	6·00	5·50 ,,
Land Improvement Schemes	...	6·00 ,,
Total ...	23·50	25·25 ,,

Sri M. GOVINDA REDDY.— Does the amount of Rs. 150 lakhs obtained as loan from the Government of India represent the amount asked for as loan or is it the amount sanctioned out of the amount asked for ?

The Hon'ble Sri H. C. DASAPPA.— We had asked the Government of India and as Hon'ble Members know, the Rajpramukh in his own Address has said that the Government of India have assured us a loan of Rs. 150 lakhs for 1950-51.

Sri M. GOVINDA REDDY.— How much had the Government asked for from the Centre as loan ? Was it Rs. 150 lakhs or more ?

The Hon'ble Sri H. C. DASAPPA.— We had asked for more and they were good enough to give us this much.

Sri M. GOVINDA REDDY.—Does this loan bear any interest ?

The Hon'ble Sri H. C. DASAPPA.— It is not yet known as to what interest it should bear.

Sri M. GOVINDA REDDY.—Did the Central Government sanction all the grants asked for ?

The Hon'ble Sri H. C. DASAPPA.— I take it that in most of these cases we asked for more and we got what they thought it reasonable and what in our opinion also, I must say, was reasonable.

Sri M. GOVINDA REDDY.—When the grants were sanctioned, were they sanctioned for these specific purposes or did our Government select these items of work ?

The Hon'be Sri H. C. DASAPPA.— It is after discussion that these grants and loans are given to us. It is by mutual agreement of course. For instance under (*a*) loan for Rs. 150 lakhs, they specify that this must be earmarked for those particular projects. Likewise, for these and other things, by discussion they agreed to give these loans and grants for particular and specific purposes.

Sri M. GOVINDA REDDY.—Have the Central Government agreed to contribute any percentage on capital works ? Or do they give any lumpsum grant ?

The Hon'ble Sri H. C. DASAPPA.— It all depends upon what the capital works are, such as industrial or major irrigation works, or electrical works, etc.

Sri M. GOVINDA REDDY.—Are we to take it that much of this loan is given for capital works like irrigation works ?

The Hon'ble Sri H. C. DASAPPA.— The first item is for capital works, like Tunga, Bhadra, Nugu, etc.

Sri M. GOVINDA REDDY.—My purpose is to find out whether the Central Government have contributed any substantial sum towards the cost of construction of these capital works or whether they have given only a token grant.

The Hon'ble Sri H. C. DASAPPA.—There is no question of finality in this. It is not as if they took the total estimate of these works and then chose to give a certain percentage of the cost. They have given us these grants and loans and for the current year also they are going to give us Rs. 150 lakhs. So it has no reference to any proportion to the total cost of these works.

Sri M. GOVINDA REDDY.—What percentage does this work out to the estimated cost of these capital works?

The Hon'ble Sri H. C. DASAPPA.—Good Heavens! Tunga is 2 crores and odd; Nugu another 2 crores; Bhadra, as the Hon'ble Member knows, is 20 and odd crores; electricity schemes—I do not know what exactly they are—it may be several more crores. There can be no percentage.

Sri M. GOVINDA REDDY.—Has it come to the notice of the Government that the Central Government have contributed more than two-thirds of the estimated cost of capital works in Orissa?

The Hon'ble Sri H. C. DASAPPA.—No. It may be that the whole of the Hirekud Project is being financed centrally.

Sri M. GOVINDA REDDY.—On what terms has this loan been granted when is the loan to be returned?

The Hon'ble Sri H. C. DASAPPA.—All this has got to be settled.

Sri M. GOVINDA REDDY.—With regard to grants for 1950-51......

The Hon'ble Sri H. C. DASAPPA.—This question relates to 1950.

Sri M. GOVINDA REDDY.—I have asked up to September in the current year. Have this Government received any sums in cash from the Central Government towards these grants?

The Hon'ble Sri H. C. DASAPPA.—The Hon'ble Member finds it in answer to (*b*).

Sri M. GOVINDA REDDY.—The answer given is with regard to allocation. My point is whether any sums have been given actually in pursuance of these allocations?

The Hon'ble Sri H. C. DASAPPA.—What exactly has been received is yet to be verified. But we expect to receive all these grants and loans during the year.

Sri M. GOVINDA REDDY.—Have any sums been received during the current year towards these grants?

The Hon'ble Sri H. C. DASAPPA.—I would require notice. I have not got the figures as to exactly how much has been received up to September during the year.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು (ಚಿಕ್ಕಮಗಳೂರು ಜಿಲ್ಲೆ—ನಿಮ್ನ ಪಂಗಡ).—1950ನೇ ಇಸವಿಯಲ್ಲಿ 150 ಲಕ್ಷ ರೂಪಾಯಿ ಕ್ಯಾಪಿಟಲ್ ವರ್ಕ್ಸ್‌ಗೆ ಕೊಟ್ಟಿದ್ದಾರೆ. ಅದರಲ್ಲಿ ಲಕ್ಕವಳ್ಳಿಗೆ ಎಷ್ಟು, ನುಗುಗೆ ಎಷ್ಟು, ತುಂಗಾಕ್ಕೆ ಎಷ್ಟು ಹಂಚಿಕೆ ಮಾಡಿದ್ದಾರೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅವರು ಅಷ್ಟು ಕೊಟ್ಟಿದ್ದಾರೆ. ನಾವು ಹಂಚಿಕೊಂಡಿದ್ದೇವೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಎಷ್ಟೆಷ್ಟು ಹಂಚಿದ್ದೀರಿ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನೋಟೀಸ್ ಬೇಕು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಲಕ್ಕವಳ್ಳಿಗೆ ಎಷ್ಟು ಕೊಟ್ಟಿದ್ದೀರಿ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಲಕ್ಕವಳ್ಳಿಗೂ ಕೊಟ್ಟಿದ್ದೇವೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಎಷ್ಟು ಅಂತ ಹೇಳುವುದಕ್ಕಾಗುವುದಿಲ್ಲವೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನೋಟೀಸ್ ಬೇಕು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಹೋಗಲಿ; ಆ ಭಾಗಕ್ಕೆ ಖರ್ಚು ಮಾಡಿರುವುದಾದರೂ ಹೇಳುತ್ತೀರಾ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಖರ್ಚು ಮಾಡಿದೆ ಎಂದು ಹೇಳಿದೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಎಷ್ಟು ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನೋಟೀಸ್.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಕೊಟ್ಟಿರುವ ಹಣದ ಪೈಕಿ ಎಷ್ಟು ಖರ್ಚು ಮಾಡಿದ್ದಾರೆ ಎಂಬುದನ್ನು ಹೇಳುತ್ತೀರಾ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಎಷ್ಟು ಹಣ ಕೊಟ್ಟಿದ್ದಾರೋ ಅದೆಲ್ಲಾ ಖರ್ಚಾಗಿರಬೇಕು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಈ ವರ್ಷ ಏನಾದರೂ ಕೊಟ್ಟಿದ್ದೀರಾ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದು ಎಷ್ಟು ಎಂಬುದನ್ನು ಹೇಳುವುದಕ್ಕೆ ನೋಟೀಸ್ ಬೇಕು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಹೋದ ವರ್ಷ ಗ್ರಾಂಟು ಕೊಟ್ಟು ಈ ವರ್ಷ ಕೊಡದಿದ್ದರೆ ಮಾಡಿರುವ ಕೆಲಸ ಹಾಳಾಗುವುದಿಲ್ಲವೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಲಕ್ಕವಳ್ಳಿಗೂ ಬಡ್ಜೆಟ್‌ನಲ್ಲಿ ಹಣ ಒದಗಿಸಲಾಗಿದೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಗ್ರಾಂಟ್ ಇಲ್ಲದೆ ಕೆಲಸ ನಿಂತು ಹೋಗಿರುವುದು ಗೊತ್ತೇ ?

The Hon'ble Sri H. C. DASAPPA.—I do not know. The Hon'ble Minister Sri T. Mariappa will answer it.

ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಸಚಿವರು).—ಸೂಪರಿಂಟೆಂಡಿಂಗ್ ಇಂಜನಿಯರಿಂದ ಬಡ್ಜೆಟ್ ಗ್ರ್ಯಾಂಟ್ ಸಾಲದು ಎಂಬುದಾಗಿ ವರದಿ ಬಂದಿದೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಆದ್ದರಿಂದ ಗ್ರಾಂಟ್‌ಗೆ ಒತ್ತಾಯ ಮಾಡುವುದು ಸೂಕ್ತವಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಆ ರೀತಿ ಮಾಡಬೇಕಾಗುತ್ತದೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಬಹಳ ಕಡಿಮೆ ಹಣಕೊಟ್ಟರೆ ಕೆಲಸ ನಿಂತುಹೋಗುತ್ತದೆ ಎಂಬುದನ್ನು ಒಪ್ಪುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಲಸ ನಿಲ್ಲಿಸುವುದಿಲ್ಲ. ಇಂಡಿಯಾ ಸರ್ಕಾರದಿಂದ ಹಣ ಬಂದರೆ ಅದಕ್ಕೆ ಒದಗಿಸಬೇಕೆಂಬುದೇ ಉದ್ದೇಶ. ನಿಧಾನವಾಗಿ ಕೆಲಸ ಮಾಡಿಕೊಂಡು ಹೋಗಿ ಕೊನೆಯವರೆಗೂ ಮಾಡಬೇಕೆಂದಿದೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಕೆಲವು ಕಾಲ ಕೆಲಸ ನಿಂತು ಹೋಗಿರುವುದು ಗೊತ್ತೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮಳೆ, ಗಾಳಿಯ ದೆಸೆಯಿಂದ ನಿಲ್ಲಿಸಬೇಕಾಗಿ ಬಂತು.

The Hon'ble Sri H. C. DASAPPA.—I think he is going too much into the details.

Sri A. BHEEMAPPA NAIK (Chitaldrug District—General).—Can Government tell us how much they have actually received during 1950-51 ?

The Hon'ble Sri H. C. DASAPPA.—The whole of it. What is shown here has been received.

Sri A. BHEEMAPPA NAIK.—Was the whole of it spent ?

The Hon'ble Sri H. C. DASAPPA.—Practically the whole of it has been spent.

Sri A. BHEEMAPPA NAIK.—Out of the amount received, *viz.*, 50 lakhs, how much has been spent in Chitaldrug District ?

The Hon'ble Sri H. C. DASAPPA.—This question is not meant to answer how the funds have been utilised; it is meant to ascertain what amount of central assistance has been given to the State. That is the main purpose of the question. Out of Rs. 50 lakhs a fairly good amount has been spent for Chitaldrug District alone for electricity.

Sri A. BHEEMAPPA NAIK.—Are electrical goods needed for transmission lines, transformers and materials of that sort available now for extending this line ?

Mr. SPEAKER.—That does not arise.

The Hon'ble Sri H. C. DASAPPA.—The Hon'ble Member is going to some other subject.

Sri A. BHEEMAPPA NAIK.—Is there any scheme in Mysore which is centrally financed, just as in Orissa ?

The Hon'ble Sri H. C. DASAPPA.—Not yet.

Sri A. BHEEMAPPA NAIK.—Not even one ?

The Hon'ble Sri H. C. DASAPPA.—I have said " Not yet."

Sri A. BHEEMAPPA NAIK.—Is there any scheme in Mysore now which is centrally financed ?

The Hon'ble Sri H. C. DASAPPA.—None, I say.

Sri A. BHEEMAPPA NAIK.—Government have not asked the Central Government to take up any scheme in Mysore ?

The Hon'ble Sri H. C. DASAPPA.—We are considering about that matter.

Sri H. M. CHANNABASAPPA (Mysore District—General).—Is the grant by the Centre based on any plan or is it purely discretionary ?

The Hon'ble Sri H. C. DASAPPA.—There is some plan according to which the Centre give assistance to various Part A and Part B States. They come and discuss with the local Governments as to what exactly are their schemes for various purposes and afterwards they give these loans and grants.

Sri H. M. CHANNABASAPPA.—Shall I take it that the grants to be allotted amongst several States depends upon the needs of a particular State and the plans they have ?

The Hon'ble Sri H. C. DASAPPA.—Possibly, subject to the overriding consideration of finance.

Sri H. M. CHANNABASAPPA.—For how many years the Government of Mysore expect these grants to continue ?

The Hon'ble Sri H. C. DASAPPA.—That will be definitely clear when we take up the Planning Commission Report for consideration.

Sri V. M. MASCARENHAS (Bangalore Retroceded Area—General).—Will the Government tell us how much out of Rs. 50 lakhs has been spent for irrigation pumps ?

The Hon'ble Sri K. T. BHASHYAM (Minister for Law and Labour).—Out of Rs. 50 lakhs given to us by the Centre a sum of Rs. 38 lakhs has been spent between the 1st of April and 30th of June this year.

Sri V. M. MASCARENHAS.—As a result of this, can the Government tell us how many extra pumping sets have been introduced in the State ?

Mr. SPEAKER.—That does not arise.

ಶ್ರೀ ಜಿ. ನಾರಾಯಣಗೌಡರು (ಕೋಲಾರ ಜಿಲ್ಲೆ).—ಮೂವತ್ತು ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ ಎಂದು ಹೇಳಿದಿರಿ. ಯಾವ್ಯಾವ ಜಿಲ್ಲೆಗೆ ಎಷ್ಟೆಷ್ಟು ಖರ್ಚು ಮಾಡಿದ್ದೀರಿ ?

The Hon'ble Sri K.T. BHASHYAM.—I want notice. But I remember well that we have spent more than Rs. 13 lakhs in Chitaldrug District and several lakhs in Kolar District also.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಐವತ್ತು ಲಕ್ಷ ರೂಪಾಯಿನಲ್ಲಿ 30 ಲಕ್ಷ ರೂಪಾಯಿ ಖರ್ಚಾಗಿದೆ. ಬಾಕಿ 20 ಲಕ್ಷ ರೂಪಾಯಿ ಲ್ಯಾಪ್ಸ್ ಆಗುತ್ತದೆಯೋ ?

The Hon'ble Sri K.T. BHASHYAM.—No lapse ; it remains with us. As soon as we get more materials we will continue the work.

Gold Duty Income from Kolar Gold Mining Companies.

Q.—122. **Sri B. M. SHAMANNA GOWDA** (Retroceded Area—General).—Will the Government be pleased to state :—

(*a*) the duty on Gold that the Government were getting before from the Kolar Gold Fields ;

(*b*) the percentage of profit that they are now getting ;

(SRI B. M. SHAMANNA GOWDA.)

(c) whether the previous duty on Gold was more profitable than the percentage of profit that we are now getting ?

A.—The Hon'ble Sri H.C. DASAPPA (Minister for Finance and Industries).—

(a), (b) and (c) The income from Gold Duty cannot be compared to percentage of profit. If the Hon'ble Member's intention is to know the revenue before and after repeal of Gold Duty the information is furnished in the statement printed below :—

Statement of Gold Duty, etc., realised by Government from the Gold Mining Companies.

(*In lakhs of Rupees.*)

......	1946-47	1947-48	1948-49	1949-50	1950-51
1 Gold Duty	133·58	99·56	87·04	4·23	...
2 Royalty including additional Royalty.	13·37	13·41	13·99	21·09	32·03
3 Income-tax including Super Tax less refunds.	14·20	17·02	23·74	40·01	*
4 Net surplus ...	....	...	...	14 04	24·93
Total ...	161·15	129 99	124·77	79·37	122·23†

Nationalisation of Gold Mining Industry of Kolar Gold Fields.

Q.—116. Sri M. MUNISWAMY (Kolar District—Depressed Class).—

Will the Government be pleased to state :—

(a) the date on which the contract to extract gold in the mines of Kolar Gold Field between the Government and the John Taylor & Sons Gold Mining Company terminates ;

(b) whether the Government propose to nationalise the industry after the due date of termination or before that date ?

A.—The Hon'ble Sri H. C. DASAPPA (Minister for Finance and Industries).—

(a) On 22nd March 1970.

(b) The new scheme under the recent agreement has been in existence only for a short period and it is too premature to think of nationalisation now. It is not possible now to say what Government may do in 1970.

Sri M. MUNISWAMY.—When was the contract renewed last between the Government and the John Taylor & Sons Gold Mining Company ?

The Hon'ble Sri H. C. DASAPPA.—Possibly about 1936 or 1937.

Sri M. MUNISWAMY.—Are there any technical difficulties in nationalizing the Gold Mining Industry ?

The Hon'ble Sri H. C. DASAPPA.—That may not arise under this question. It is purely a question of policy.

Sri M. GOVINDA REDDY (Chitaldrug District—General).—Till what period it is reasonable to have extended the contract ?

The Hon'ble Sri H. C. DASAPPA.—Sir, this has happened much earlier than we came to power and so there is no point in directing that question to us.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).—ಈ ಒಪ್ಪಂದ 1970ನೆಯ ಇಸವಿಗೆ ಮುಗಿಯುತ್ತದೆಂದು ಹೇಳಿದ್ದೀರಿ; ಆದರೊಳಗೆ ಯಾವುದಾದರೂ ಪಾರ್ಟಿಯವರು ಈ ಒಪ್ಪಂದವನ್ನು ರದ್ದುಮಾಡಿ ತಾವೇ ನಡೆಸಲು ಇಷ್ಟ

* This became a Central subject from 1st April 1950. In view of the Federal Financial Agreement with the Central Government, a sum of Rs. 65·27 lakhs was included in the Revenue gap of Rs. 345 lakhs on the basis of average as income and super tax due from the Mining Companies in the absence of Gold Duty.

Electrical revenue and water tax have not been included.

† Including income-tax in the Revenue gap.

ಪಟ್ಟರೆ ಆ ರೀತಿ ಮಾಡುವುದಕ್ಕೆ ಈ ಒಪ್ಪಂದ ದಲ್ಲಿ ಅವಕಾಶವಿದೆಯೇ ?

The Hon'ble Sri H. C. DASAPPA.—I want notice about that.

Power Supply to Sakrepatna and surrounding Villages in Kadur Taluk.

Q.—61. Sri K. H. MUDIYAPPA (Chikmagalur District—General).—Will the Government be pleased to state :—

(*a*) whether the villagers of Sakrepatna and its surrounding villages of Kadur Taluk have requested for the supply of electric power to their villages ;

(*b*) when they have decided to give electric power to Sakrepatna and its surrounding villages ;

(*c*) whether they will arrange to give electric power to those places this year ?

A.—The Hon'ble Sri K. T. BHASHYAM (Minister for Law and Labour).—

(*a*) Yes.

(*b*) An estimate amounting to Rs. 2,60,000 for Electrification of Sakrepatna, Hiregavaja, Chickavaja and Lakya villages of Kadur Taluk has been prepared, but the scheme has been deferred for the present.

(*c*) Yes, as early as possible.

ಶ್ರೀ ಕೆ. ಎಚ್. ಮುದಿಯಪ್ಪನವರು.—(*b*) ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ಈ ಯೋಜನೆಯನ್ನು ಮುಂದಕ್ಕೆ ಹಾಕಲಾಗಿದೆ ಯೆಂದು ಹೇಳಿದ್ದೀರಿ. ಏಕೆ ಹಾಗೆ ಮುಂದಕ್ಕೆ ಹಾಕಲಾಗಿದೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಈ ಸ್ಕೀಮಿಗೆ 2,60,000 ರೂಪಾಯಿಗಳಾ ಗುತ್ತವೆ. ಮೊಬಲಗು ಸ್ವಲ್ಪ ಜಾಸ್ತಿಯಾದುದ ರಿಂದ ಕೂಡಲೆ ಅಷ್ಟು ಹಣವನ್ನು ಒದಗಿಸುವು ದಕ್ಕಾಗುವುದಿಲ್ಲವೆಂಬುದು ಒಂದು. ಎರಡನೆಯ ದಾಗಿ, ಸಾಮಾನುಗಳು ಸಲೀಸಾಗಿ ಸಿಕ್ಕುತ್ತಿಲ್ಲ. ಮುಖ್ಯವಾಗಿ ತಾಮ್ರದ ತಂತಿ ಸಿಕ್ಕುವುದು ಕಷ್ಟ. ಆದ್ದರಿಂದ ಸದ್ಯಕ್ಕೆ ಮುಂದಕ್ಕೆ ಹಾಕಿ ದ್ದೇವೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಈ ಕೆಲಸಗಳನ್ನು ತೆಗೆದುಕೊಳ್ಳಬೇಕಾದರೆ ಪ್ರೈಯಾರಿಟಿ ಕೊಡುವುದೇ ಮುಂತಾಗಿ ಏನಾದರೂ ಏರ್ಪಾಡಿಟ್ಟುಕೊಂಡಿದ್ದೀರಾ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇಟ್ಟುಕೊಂಡಿದ್ದೇವೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಹಾಗಾದರೆ ನಿಮಗೆ ಬಂದಿರತಕ್ಕ ಅರ್ಜಿಗಳಲ್ಲಿ ಇದಕ್ಕೆ ಎಷ್ಟನೆಯ ಪ್ರೈಯಾರಿಟಿ ಕೊಟ್ಟಿದೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇಷ್ಟನೆಯದೆಂದು ಹೇಳುವುದಕ್ಕಾಗುವುದಿಲ್ಲ. ತಕ್ಕಮಟ್ಟಿಗೆ ಹೆಚ್ಚಿಗೆ ಪ್ರೈಯಾರಿಟಿಯನ್ನೇ ಕೊಟ್ಟಿದೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಎಷ್ಟು ವರ್ಷದಲ್ಲಿ ಇದನ್ನು ಕೈಕೊಳ್ಳುತ್ತೀ ರೆಂಬುದನ್ನು ಹೇಳುತ್ತೀರಾ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇಷ್ಟು ವರ್ಷದಲ್ಲಿ ಎಂದು ಹೇಳುವುದಕ್ಕಾಗುವು ದಿಲ್ಲ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಇದರಿಂದ ಬರತಕ್ಕ ರೆವೆನ್ಯೂ ಎಷ್ಟಿದೆ ಯೆಂಬುದನ್ನೇನಾದರೂ ಲೆಕ್ಕ ಹಾಕಿದ್ದೀರಾ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹಾಕಿದ್ದೇವೆ. ಸುಮಾರು 2·59% ಬರುತ್ತದೆಂದು ಗೊತ್ತಾಗಿದೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಇದು ಲಾಭದಾಯಕವಾಗಿರುವುದರಿಂದ ಬೇಗ ತೆಗೆದುಕೊಂಡು ಕೆಲಸ ಪೂರೈಸುವುದು ಒಳ್ಳೆಯ ದಲ್ಲವೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಲಾಭದಾಯಕವೇ ಅಲ್ಲವೇ ಅನ್ನುವ ಪ್ರಶ್ನೆಯಿಲ್ಲ. ಎಷ್ಟೋ ಕಡೆಗಳಲ್ಲಿ ಕಡಿಮೆ ಉತ್ಪತ್ತಿಯಿದ್ದರೂ ಜನರ ಅನುಕೂಲಕ್ಕಾಗಿ ವಿದ್ಯುಚ್ಛಕ್ತಿಯನ್ನು ಕೊಡುತ್ತಿದ್ದೇವೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಜನರ ಅನುಕೂಲತೆಯ ದೃಷ್ಟಿಯಿಂದ ಮಾಡಿ ಸುತ್ತೀರಾ ಅಥವಾ ಲಾಭದ ದೃಷ್ಟಿಯಿಂದ ಮಾಡಿಸುತ್ತೀರಾ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.— ಎರಡನ್ನೂ ನೋಡಿ ತೆಗೆದುಕೊಳ್ಳುತ್ತೇವೆ. ಮುಖ್ಯವಾಗಿ ಜನರಿಗೆ ಉಪಯೋಗಕ್ಕೆ ಬರಬೇಕು; ದುಡ್ಡೂ ಒದಗಬೇಕು; ಜೊತೆಗೆ ಸಾಮಾನುಗಳೂ ಸಿಕ್ಕಬೇಕು.

ಶ್ರೀ ಕೆ. ಎಚ್. ಮುದಿಯಪ್ಪನವರು.— ಇದು ಲಾಭದಾಯಕವಾಗಿದ್ದು ಜನರಿಗೆ ಬಹಳ ಅವಶ್ಯಕವಾಗಿರುವುದರಿಂದ ಆದಷ್ಟು ಜಾಗ್ರತೆ ತೆಗೆದುಕೊಳ್ಳುತ್ತೀರಾ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.— ಆದಷ್ಟು ಜಾಗ್ರತೆ ಕೈಕೊಳ್ಳುತ್ತೇವೆ.

Power Supply to Kolar District.

Q.—91. Sri G. NARAYANA GOWDA (Kolar District—General).—

Will the Government be pleased to state :—

(*a*) whether it is a fact that there was a resolution tabled for May-June Sessions of 1949 of the Representative Assembly to the effect that electricity should be immediately supplied to Kolar District for irrigation and lighting purposes;

(*b*) whether it is a fact that they gave an assurance to that effect;

(*c*) the result of that assurance?

A.—The Hon'ble Sri K. T. BHASHYAM (Minister for Law and Labour).—

(*a*) A question (Q. No. 124) was tabled by Sri S. Avala Reddy (Sidlaghatta—Rural) for the Budget Session May 1949.

(*b*) It was informed that due to the limitation of the capacity of Transformers installed at Kolar Gold Fields and feeding Bangarpet, Kolar and Chintamani, additional load demand could not be met in full and that additional power supply would be made available as soon as the Transformer Bank capacity at K.G.F. is increased.

(*c*) Transformers ordered from Japan have since been received and the installation work is in progress. As soon as the same is switched on, arrangements will be made to service additional installations as and when the other essential materials like Copper Wire, Transformers, etc., become available.

The following are the number of additional installations serviced in the district during the period May 1949 to July 1951 :—

1.	Lighting	... 787
2.	Heating	... 25
3.	I.P. Sets	... 362
4.	Power	... 33

ಶ್ರೀ ಜಿ. ನಾರಾಯಣಗೌಡರು.— ನಿರ್ದಿಷ್ಟವಾಗಿ 1949ನೆಯ ಇಸವಿ ಜೂನ್ ಅಧಿವೇಶನದಲ್ಲಿ ಈ ರೀತಿಯ ಒಂದು ನಿರ್ಣಯ ಬಂದಿತ್ತೇ ಎಂದು ಕೇಳಿದ್ದಕ್ಕೆ ಈ ಸಂಬಂಧವಾಗಿ ಒಂದು ಪ್ರಶ್ನೆ ಬಂದಿತ್ತೆಂದು ಉತ್ತರ ಹೇಳಿದ್ದೀರಿ; ಏಕೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.— ತಮ್ಮ ಅಭಿಪ್ರಾಯ ಚೆನ್ನಾಗಿ ಮನದಟ್ಟಾಗಲಿಲ್ಲ. ಆ ಸಲ ನಿರ್ಣಯ ಬಂದಿತ್ತೊ ಪ್ರಶ್ನೆ ಬಂದಿತ್ತೋ ಸರಿಯಾಗಿ ಗೊತ್ತಿಲ್ಲ. ಅಂತು ಆ ವಿಷಯವೇನೋ ಬಂದಿತ್ತೆಂದು ಹೇಳಬಲ್ಲೆ.

Sri G. NARAYANA GOWDA.—He is evading Mr. Speaker.

The Hon'ble Sri K. T. BHASHYAM.— I am sorry, the Hon'ble Member has not understood me. I said I am not sure whether it was a resolution or a question. In the answer it is said that a question was put.

Sri G. NARAYANA GOWDA.—Was there not a resolution?

The Hon'ble Sri K. T. BHASHYAM.— I am not aware of it; I will find out.

ಶ್ರೀ ಜಿ. ನಾರಾಯಣಗೌಡರು.— ಆ ಅಧಿವೇಶನಕ್ಕೆ ಕಳುಹಿಸಿದ್ದ 6ನೆಯ ನಂಬರಿನ ನಿರ್ಣಯ ಯಾವುದೆಂಬುದನ್ನು ಹೇಳುತ್ತೀರಾ?

The Hon'ble Sri K. T. BHASHYAM.— May be I do not know. I may tell you I do not know what exactly was the resolution; I will find out.

ಶ್ರೀ ಜಿ. ನಾರಾಯಣಗೌಡರು.— ಈಗ ತಾವು (*b*) ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ತಿಳಿಸಿರುವಂತೆ ಹೆಚ್ಚಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಂಡಕೂಡಲೇ ಚಿಂತಾಮಣಿ, ಕೋಲಾರದ ಚಿನ್ನದಗಣಿ ಮುಂತಾದ ಪ್ರದೇಶಗಳಿಗೆ ಸರಬರಾಯಿಮಾಡಲು ಏರ್ಪಾಡು ಮಾಡುತ್ತೇವೆಂದು ಹೇಳಿದ್ದಿರಿ. ಆ ರೀತಿ ಮಾಡಿದೀರಾ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಮಾಡುತ್ತಿದ್ದೇವೆ. ಅದೇ ವಿಚಾರವನ್ನೇ ಇಲ್ಲಿ ಉತ್ತರದಲ್ಲಿ ಹೇಳಿದ್ದೇವೆ.

Transformers were ordered from Japan and they have come and we are proceeding with the work and it is almost reaching completion. As soon as it is over, we will switch on.

ಶ್ರೀ ಜಿ. ನಾರಾಯಣಗೌಡರು.—362 ಐ. ಪಿ. ಸೆಟ್ಟುಗಳನ್ನು ಕೊಟ್ಟಿದೆಯೆಂದು ಹೇಳಿದ್ದೀರಿ. ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಕೊಟ್ಟಿದ್ದೀರಿ ಎಂಬುದನ್ನು ತಿಳಿಸುತ್ತೀರಾ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ನೋಟೀಸ್ ಬೇಕು.

Subsidy, Grant and other kinds of loans given to raiyats under Grow More Food Scheme.

Q.—301. Sri B. HUTCHE GOWDA (Tumkur District—General).

Will the Government be pleased to state :—

(*a*) the amount given to the raiyats in the State every year from the year 1945-46 under the 'Grow More Food' Scheme in the form of subsidy, grant and other kinds of loans; the purposes for which they have been given ;

(*b*) the amount provided for each of these items in the year 1951-52 ?

A.—The Hon'ble Sri T. MARIAPPA (Home Minister).—

(*a*) Amounts given in the form of subsidy to raiyats during the following years are detailed below :—

Year.		*Amount.*
		Rs.
1945-46	...	6,45,860
1946-47	...	6,41,793
1947-48	...	9,44,147
1948-49	...	18,00,000 (approximately)

(*i*) Subsidy for irrigation works—

		Rs.
1949-50	...	6,17,839
1950-51	...	4,94,701

(*ii*) Loans for Diesel and Electric Pumps Sets—

		Rs.
1949-50	...	27,293
1950-51	...	1,85,493

(*iii*) Manure Loan granted during—

		Rs.
1950-51	...	7,62,677

(*iv*) Takavi Loan—

1949-50	...	1,83,900
1950-51	...	2,44,001

(*v*) Land Improvement Loan—

		Rs.
1949-50	...	1,13,057
1950-51	...	1,32,287

		Rs.
(*b*) 1. Subsidy for Irrigation Wells	...	7,50,000
2. Loans for Diesel & Electric Pumping Sets	...	25,00,000
3. Advances for giving short term credit to agriculturists	...	5,00,000
4. Takavi Loan	...	5,00,000
5. Land Improvement Loan	...	3,00,000

ಶ್ರೀ ಬಿ. ಹುಚ್ಚೇಗೌಡರು.—1948-49ರಲ್ಲಿ 18 ಲಕ್ಷ ರೂಪಾಯಿಗಳನ್ನು ಕೊಡಲಾಗಿದೆಯೆಂದು ಹೇಳಿದ್ದೀರಿ. ಇದು ಹಿಂದಿನ ಸಾಲಿಗಿಂತ ಎರಡರಷ್ಟು ಜಾಸ್ತಿಯಾಗಿದೆ. ಹಾಗಾದರೆ ಯಾವ ಯಾವ ಬಾಬಿಗೆ ಎಷ್ಟೆಷ್ಟು ಕೊಟ್ಟಿದೆಯೆಂಬುದನ್ನು ತಿಳಿಸುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಬೇಕು.

ಶ್ರೀ ಬಿ. ಹುಚ್ಚೇಗೌಡರು.—ಯಾವ ಯಾವ ಉದ್ದೇಶಗಳಿಗಾಗಿ ಕೊಡಲಾಗಿದೆಯೆಂದು ಇಲ್ಲಿಯೇ ಕೇಳಿದೆಯಲ್ಲಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—General ಆಗಿ ಹೇಳಿದ್ದೇನೆ. ಪ್ರತಿಯೊಂದನ್ನೂ ಹೇಳುವುದಕ್ಕೆ ನೋಟೀಸ್ ಬೇಕು. ಏಕೆಂದರೆ ಅದರಲ್ಲಿ ಸಬ್ಸಿಡಿ ಎಂದು ಒಟ್ಟಾಗಿ ಹೇಳಿರುವುದರಿಂದ ಗೊಬ್ಬರಕ್ಕೆ ಕೊಡುವ ಸಬ್ಸಿಡಿ, ಕಾರ್ರಾಗಿ ಬೆಳಸಲಿಕ್ಕೆ ಕೊಡುವ ಸಬ್ಸಿಡಿ—ಇವೆಲ್ಲಾ

(ಮಾನ್ಯ ಶ್ರೀ ಟಿ. ಮರಿಯಪ್ಪನವರು.)
ಸೇರುತ್ತವೆ. ಆದ್ದರಿಂದ ಒಟ್ಟಿಗೆ ಸೇರಿಸಿ 1948-49ರಲ್ಲಿ 18 ಲಕ್ಷ ರೂಪಾಯಿಗಳನ್ನು ಕೊಟ್ಟಿದೆಯೆಂದು ಹೇಳಿದೆ.

ಶ್ರೀ ಬಿ. ಹುಚ್ಚೇಗೌಡರು.--ತಪಶೀಲಾಗಿ ಬಾಬುಗಳನ್ನು ಹೇಳಿಲ್ಲವಲ್ಲಾ. My question is quite clear.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲಿ ಕೊಟ್ಟಿರುವುದು ಗೊಬ್ಬರದ ಸಬ್ಸಿಡಿ, ಬೀಜದ ಸಬ್ಸಿಡಿ ಮತ್ತು ಕಾರ್ ರಾಗಿಗೆ ಕೊಡುವ ಸಬ್ಸಿಡಿ—ಎಲ್ಲಾ ಒಟ್ಟು ಸೇರಿ ಈ ವರ್ಷ 18 ಲಕ್ಷ ರೂಪಾಯಿ ಖರ್ಚಾಗಿದೆ ಎಂದು. ಬೇರೆ ಬೇರೆಯಾಗಿ ಸಬ್ಸಿಡಿ ಎಷ್ಟೆಂಬುದನ್ನು ಹೇಳಬೇಕಾದರೆ ನೋಟೀಸ್ ಬೇಕು.

ಶ್ರೀ ಬಿ. ಹುಚ್ಚೇಗೌಡರು.—ತಕ್ಕಾವಿ ಸಾಲ ಕೊಟ್ಟಿರುವುದು 2,44,000 ರೂಪಾಯಿಗಳು ಮಾತ್ರ. ಇದು ಬಡ್ಜೆಟ್ ಗ್ರಾಂಟ್‌ನಲ್ಲಿ ಕೊಟ್ಟಿರುವುದೇ ಅಥವಾ ಬೇರೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಡ್ಜೆಟ್ ಗ್ರಾಂಟ್ ಇರುವುದರಲ್ಲೇ ಈ 2,44,000 ರೂಪಾಯಿಗಳನ್ನು ಕೊಟ್ಟಿದೆ.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ಉಳಿದಿರುವುದು ಲ್ಯಾಪ್ಸ್ ಆಯಿತೇ?

ಮಾನ್ಯ ಶ್ರೀ ಟಿ. ಮರಿಯಪ್ಪನರು.—ಅದನ್ನು ನೋಡಿ ಹೇಳಬೇಕು. ಪ್ರಾಯಶಃ ಲ್ಯಾಪ್ಸ್ ಆಗಿರಲಾರದು. ಅಂತೂ ಸಾಧ್ಯವಿರುವಷ್ಟು ಸಹಾಯ ಮಾಡಬೇಕೆಂದು ಹೇಳಿ ಎಲ್ಲೆಲ್ಲಿ ಇದಕ್ಕಿರತಕ್ಕ ಷರತ್ತುಗಳು ಸರಿಬಂದಿವೆಯೋ ಮತ್ತು ಕೊಟ್ಟ ದುಡ್ಡು ಸರಿಯಾಗಿ ವಾಪಸು ಬರುತ್ತದೆಂಬ ಭರವಸೆಯಿದೆಯೋ ಅಲ್ಲೆಲ್ಲಾ ಕೊಟ್ಟಿದೆ.

ಶ್ರೀ ಬಿ. ಹುಚ್ಚೇಗೌಡರು.—ಜಮೀನು ಆಬಾದಿನ ಸಾಲವೆಂದು ಹಣ ಕೇವಲ 1,32,000 ರೂಪಾಯಿಗಳನ್ನು ಕೊಟ್ಟಿದ್ದೀರಿ. ಇದು ಸಾಕೆ? ಇಷ್ಟು ಹಣದಿಂದ ಹೆಚ್ಚಿಗೆ ಅಭಿವೃದ್ಧಿಯಾಗುತ್ತದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸ್ವಂತವಾಗಿ ತಾವೇ ಅಭಿವೃದ್ಧಿ ಮಾಡಿಸುವ ಜನರೇ ಅನೇಕರಿದ್ದಾರೆ. ಎಲ್ಲೋ ಕೆಲವರು ಮಾತ್ರ ಅಭಿವೃದ್ಧಿಗೆ ಸಾಲ ತೆಗೆದುಕೊಂಡಿದ್ದಾರೆ, ಅಷ್ಟೆ. ಅರ್ಜಿಗಳು ಬಂದಿರುವುದೇ ಕಮ್ಮಿ. ಏಕೆಂದರೆ ಈ ಹಣಕೊಡಬೇಕಾದರೆ ಹಣ ವಾಪಸು ಬರುವ ಗ್ಯಾರಂಟಿ ಇದೆಯೇ ಇಲ್ಲವೇ ಮುಂತಾದುವನ್ನೆಲ್ಲಾ ನೋಡಿಕೊಂಡು ಕೊಡಬೇಕು. ಆದ್ದರಿಂದಲೇ ಇದರಲ್ಲಿ ಇನ್ನೂ ಹಣ ಉಳಿದಿದೆ. ಈ ಕಾರಣದಿಂದ ಈ ಬಾಬಿನಲ್ಲಿ ಕೊಟ್ಟಿರುವ ಹಣ ಕಮ್ಮಿಯಾಗಿದೆ. 'Whether the money will be repaid' ಎಂಬುದು ಇಲ್ಲಿ ನೋಡಬೇಕಾದ್ದು.

Sri M. GOVINDA REDDY (Chitaldrug District—General).—Does the amount under subsidies and grants include the cost of services also?

The Hon'ble Sri T. MARIAPPA.—No.

ಶ್ರೀ ಜಿ. ಎ. ಆಚಾರ್ಯರವರು (ಬೆಂಗಳೂರು ಸಿಟಿ).—1950-51ರಲ್ಲಿ ಡೀಸಲ್ ಮತ್ತು ವಿದ್ಯುಚ್ಛಕ್ತಿ ಪಂಪುಗಳಿಗಾಗಿ 1,85,000 ರೂಪಾಯಿಗಳನ್ನು ಕೊಟ್ಟಿದ್ದೀರಿ. ಇವುಗಳನ್ನು ಕೊಡುವಾಗ ಯಾವ ಪಂಪನ್ನು ಕೊಂಡುಕೊಂಡಿದ್ದಾರೆಂಬುದನ್ನು ವಿಚಾರಿಸಿಕೊಂಡು ಹಣ ಕೊಟ್ಟಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಾಮಾನ್ಯವಾಗಿ ಎಲ್ಲರೂ ಒಳ್ಳೆಯ ಪಂಪುಗಳನ್ನೇ ತೆಗೆದುಕೊಳ್ಳುತ್ತಾರೆ. ಏಕೆಂದರೆ ಅವೆಲ್ಲಾ ಸ್ವಂತ ಉಪಯೋಗಕ್ಕಾಗಿ. ನಮ್ಮಲ್ಲಿ list of approved firms ಇರುತ್ತೆ. ಅವರು ಅಲ್ಲಿಂದ ತಂದಿದ್ದೇವೆಂದು ರಸೀದಿ ತಂದು ಡೆಪ್ಯುಟಿ ಕಮಿಷನರಿಂದ Solvency certificate ಕೊಟ್ಟರೆ ಹಣ ಕೊಡುತ್ತೇವೆ.

ಶ್ರೀ ಜಿ. ಎ. ಆಚಾರ್ಯರವರು.—ಹಿಂದೆ ಹಣ ಕೊಟ್ಟದ್ದನ್ನೆಲ್ಲಾ ಸರಿಯಾಗಿ ವಸೂಲು ಮಾಡುತ್ತಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕಂತುಗಳು ಬಂದಹಾಗೆ ವಸೂಲು ಮಾಡುತ್ತಿದ್ದೇವೆ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ವ್ಯವಸಾಯಗಾರರಿಗೆ

ಅಲ್ಪಾವಧಿಯ ಸಾಲವನ್ನು ಕೊಡುವುದಕ್ಕಾಗಿ ಕೊಟ್ಟ ಮುಂಗಡಗಳು ಎಂದು 5,00,000 ರೂಪಾಯಿಗಳನ್ನು ಇಲ್ಲಿ ತೋರಿಸಿದ್ದೀರಿ. ಅಲ್ಪಾವಧಿಯ ಸಾಲವೆಂದರೆ ನಗದು ಕೊಟ್ಟಿರುವುದೇ ಅಥವಾ ಗೊಬ್ಬರದ ರೀತ್ಯಾ ಕೊಟ್ಟಿರುವುದೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಗೊಬ್ಬರದ ಸಾಲವನ್ನು ಕೊಡುತ್ತೇವೆ. ಅಲ್ಲದೆ ಸ್ವಲ್ಪಮಟ್ಟಿಗೆ ನಗದು ಸಾಲವನ್ನೂ ಕೊಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಸದ್ಯಕ್ಕೆನೋ ನಗದಾಗಿ ಕೊಟ್ಟಿಲ್ಲ. ಗೊಬ್ಬರದ ರೀತ್ಯಾ ಕೊಟ್ಟ ಸಾಲವನ್ನು ಬತ್ತದ ರೂಪದಲ್ಲಿ ತೀರಿಸಬೇಕೆಂದು ಹೇಳಿದ್ದೇವೆ.

ಶ್ರೀ ಎಸ್. ರಂಗರಾಮಯ್ಯನವರು.—ನಗದಾಗಿ ಎಷ್ಟು ಕೊಟ್ಟಿದೆ, ಪದಾರ್ಥಗಳರೂಪದಲ್ಲಿ ಎಷ್ಟೆಷ್ಟು ಕೊಟ್ಟಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಬೇಕು.

ಶ್ರೀ ಎಸ್. ರಂಗರಾಮಯ್ಯನವರು.—ರೈತರಿಗೆ ಕೊಟ್ಟಿರುವ ಸಾಲವೆಲ್ಲವನ್ನೂ ಅವರು ನಗದಾಗಿ ಕೊಡಬೇಕೋ ಅಥವ ಧಾನ್ಯರೂಪದಲ್ಲಿ ಕೊಡಬೇಕೋ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಗ ಜಾರಿಯಲ್ಲಿರುವ ನಿಬಂಧನೆಗಳ ಪ್ರಕಾರ ನಮಗೆ ಧಾನ್ಯದ ರೂಪದಲ್ಲಿ ವಾಪಸು ಕೊಡಬೇಕೆಂದಿದೆ. ಅದರಂತೆ ಪ್ರೊಕ್ಯೂರ್‌ಮೆಂಟ್ ಕಾಲದಲ್ಲಿ ವಸೂಲು ಮಾಡುತ್ತಿದ್ದೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಒಂದು ವೇಳೆ ಅವರು ಬೆಳೆಯದೇ ಹೋಗಿದ್ದರೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಾವು ಸಾಲ ಕೊಡಬೇಕಾದರೆ ನೋಡಿಕೊಂಡು ಜಮೀನಿನಲ್ಲಿ ನಾಟಿ ಹಾಕಿದ್ದರೇ ಕೊಡುವುದು.

ಶ್ರೀ ಎಸ್. ರಂಗರಾಮಯ್ಯನವರು.—ನಾಟಿ ಹಾಕಿದ್ದರೂ ಧಾನ್ಯ ಬೆಳೆಯದೇ ಹೋದರೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಊಹಾ ಪ್ರಶ್ನೆಯಾಯಿತು. ಯಾರಿಗಾದರೂ ತೊಂದರೆಯಾಗಿದೆಯೆಂದು ಕಂಡುಬಂದರೆ ಆಗ ಪರಿಶೀಲನೆ ಮಾಡಿನೋಡುತ್ತೇವೆ.

ಶ್ರೀ ಎಸ್. ರಂಗರಾಮಯ್ಯನವರು.—ತಕ್ಕಾವಿ ಸಾಲಕ್ಕೆ 5 ಲಕ್ಷ, ಜಮೀನು ಆಬಾದು ಸಾಲಕ್ಕೆ 3 ಲಕ್ಷ ರೂಪಾಯಿ ಒದಗಿಸಿದೆ. ಈ ಸಾಲಗಳನ್ನು ಯಾವ ನಿಬಂಧನೆಯ ಪ್ರಕಾರ ಕೊಡುವುದು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಿಂದೆ ಯಾವಾಗಲೂ ಇಷ್ಟು ಹಣ ಇದಕ್ಕೆ ಒದಗಿಸಿರಲಿಲ್ಲ; ಈ ವರ್ಷ ಇಷ್ಟು ಒದಗಿಸಿದ್ದೇವೆ. ಇದಕ್ಕೆ ಕೆಲವು ನಿಬಂಧನೆಗಳಿವೆ. ಅವನ್ನು ಓದಿದರೆ ಗೊತ್ತಾಗುತ್ತದೆ. ಆ ನಿಬಂಧನೆಗಳ ಮೇಲೆ ಕೊಡುತ್ತೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಈ ವರ್ಷ ಎಷ್ಟು ಹಣವನ್ನು ಈಗಾಗಲೇ ಕೊಟ್ಟಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ವರ್ಷ ಎಷ್ಟು ಕೊಟ್ಟಿದೆ ಎಂದು ಹೇಳಲು ನೋಟೀಸ್ ಬೇಕು. ಎಲ್ಲಾ ತಾಲ್ಲೂಕುಗಳಿಂದಲೂ ಇನ್ನೂ ರಿಟರ್ನ್ಸ್ ಬಂದಿಲ್ಲಾ.

ಶ್ರೀ ಎಂ. ಎಲ್. ನಂಜರಾಜ ಅರಸಿನವರು (ಮೈಸೂರು ಜಿಲ್ಲೆ).—ಈಗ ಕೊಟ್ಟಿರುವ ಸಾಲಗಳಲ್ಲಿ ರೈಟ್‌ಆಫ್ ಮಾಡಿರುವುದೇನಾದರೂ ಇದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ವಸೂಲಾಗದೇಯಿದ್ದಲ್ಲಿ ಹಾಗೆ ಮಾಡಬೇಕಾದ ಸಂದರ್ಭಗಳಿರುತ್ತವೆ.

ಶ್ರೀ ಎ. ಸುಬ್ಬರಾಯಶೆಟ್ಟರು (ಕೋಲಾರ ಜಿಲ್ಲೆ).—ಇದರಲ್ಲಿ ಜಿಲ್ಲಾವಾರು ಅಲಾಟ್‌ಮೆಂಟ್ ಮಾಡುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು.

ಶ್ರೀ ಎ. ಸುಬ್ಬರಾಯಶೆಟ್ಟರು.—ಅಲಾಟ್ ಮಾಡಿದ ಹಣದಲ್ಲಿ ಲ್ಯಾಪ್ಸ್ ಆಗಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಲವು ಜಿಲ್ಲೆಗಳಲ್ಲಿ ಸ್ವಲ್ಪ ಆಗಿರಬಹುದು.

ಶ್ರೀ ಎ. ಸುಬ್ಬರಾಯಶೆಟ್ಟರು.—ಕೋಲಾರ ಜಿಲ್ಲೆಯಲ್ಲಿ ವ್ಯವಸಾಯದ ಭಾವಿಗಳಿಗೆ ಒದಗಿಸಿದ ಹಣದಲ್ಲಿ ಮಂಜೂರು ಮಾಡದೆ ಲ್ಯಾಪ್ಸ್ ಆಗಿಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಭಾವಿಗಳಿಗಾಗಿ ಹಣವನ್ನು ಕೊಡುತ್ತಿದ್ದೇವೆ. ಕೊಟ್ಟಿದ್ದೇವೆ. ಎಷ್ಟೋ ಭಾವಿಗಳನ್ನು ತೋಡಿದ್ದಾರೆ.

ಶ್ರೀ ಎ. ಸುಬ್ಬರಾಯಶೆಟ್ಟರು.—ಅನೇಕರಿಗೆ ಇನ್ನೂ ಮಂಜೂರಾಗಿಲ್ಲವೆಂಬುದು ಗೊತ್ತೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಂಥಾ ಸಂದರ್ಭಗಳು ನಮ್ಮ ಗಮನಕ್ಕೆ ಬಂದರೆ ತಕ್ಕ ಏರ್ಪಾಡು ಮಾಡುತ್ತೇವೆ.

ಶ್ರೀ ಎ. ಸುಬ್ಬರಾಯಶೆಟ್ಟರು.—ಅಲಾಟ್‌ಮೆಂಟ್ ಕಡಿಮೆಯಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಏಳೂವರೆ ಲಕ್ಷ ರೂಪಾಯಿ ಒದಗಿಸಿದ್ದೇವೆ.

ಶ್ರೀ ಎ. ಸುಬ್ಬರಾಯಶೆಟ್ಟರು.—ಅನೇಕರಿಗೆ ಇನ್ನೂ ಸಬ್‌ಸಿಡಿ ಕೊಟ್ಟಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದಕ್ಕೆ ಆಗಲೇ ಉತ್ತರ ಹೇಳಿದ್ದೇನೆ.

Rules of Admission to Technical Educational Institutions.

Q.—157. Sri T. RAMACHAR (Kolar District—General).—

Will the Government be pleased to state :—

the rules which have been framed regarding admission of students to the technical educational institutions such as Engineering Colleges, Medical College, Medical School, etc. ?

A.—The Hon'ble Sri R. CHENNIGARAMIAH (Minister for Local Self-Government).—

Admission to the Technical Educational Institutions such as Engineering College, Medical College, Medical School, etc., are governed by Government Order No. E. 2925-34—Uni. 97-51-1, dated 28th June 1951. A copy of Government Order is printed below :—

GOVERNMENT OF MYSORE.

GENERAL AND REVENUE DEPARTMENT.

G.O. No. E. 2925-34—Uni. 97-51-1, dated 28th June 1951.

Reservation of Seats in Technical Institutions.

Issues instructions regarding the —— for Students of Scheduled Castes and Tribes and Backward Classes.

READ—

Government Order No. E. 4316—Uni. 42-11, dated 6th April 1943, regulating admissions to (i) Medical College, (ii) Engineering College and Medical School.

(2) Government Order No. E. 7729—Uni. 81-44, dated 14th June 1946.

ORDER NO. E. 2925-34—UNI. 97-51-1, DATED BANGALORE, THE 28TH JUNE 1951.

The question of regulating admissions to the Technical Colleges and Schools has been engaging the attention of Government for some time past.

After giving very careful consideration to the matter, it is directed that in supersession of the existing Government orders relating to the matter of admissions to Technical Colleges, the following rules may govern the admission of students to the various institutions :—

(1) The following number of seats will be reserved for Government in each of the institutions noted below to be filled up in their discretion among Mysorean students whose parents have rendered conspicuous service to the Country of Government and among non-Mysorean students :—

- 6 Seats in the Government Medical College.
- 10 Seats in the Government Medical School.
- 20 Seats in the Government Engineering College.
- 10 Seats in the Government Engineering School.
- 3 Seats in the Sri Krishnarajendra Silver Jubilee Technological Institute, Bangalore.
- 5 Seats in the Occupational Institute at Bangalore.

(2) Fifteen per cent of the seats in each institution after deducting the number mentioned in (1) will be reserved for Scheduled Castes and Tribes.

(3) Forty-five per cent of the seats in each institution after deducting the number mentioned in (1) will be reserved for Backward Classes.

(4) The list of backward classes shall be the list as accepted by the Education Department of the Government of India last year and as has been modified this year for the purpose of giving Government of India Scholarships. (A copy of this list is appended to this order).

(5) If in any institution there are not enough number of qualified applicants in the Scheduled Castes and Tribes to fill up the fifteen per cent reserved for them, the lapses will be added to the Blackward Classes pool.

(6) The remaining number of seats in each institution will form the general pool.

(7) In making admissions, regard shall be had within the respective categories to the performance of the candidate in the examination, extra-curricular activities, general aptitude for the technical courses, etc.

(8) The rules (2) to (7) will apply to the Aided Engineering Colleges and Schools also.

No. E. 2925-34—Uni. 97-51-1, dated 28th June 1951.

(9) The committees for selection will be the existing committees in the University Colleges. In the case of Government Institutions, the committees will be the existing committees or the committees to be constituted by Government from time to time. In the case of the Aided Engineering Colleges and Schools, the Committees will be constituted from time to time by the University with the approval of the Government.

(10) The matter may be reviewed before the next academical year commences.

A. C. NIRVANI GOWDA,
Secretary to Government,
Education Department.

To—The Registrar, Mysore University.
The Superintendent, Sri Jayachamarajendra Occupational Institute.
The Director of Public Instruction in Mysore, Bangalore.
The Principal, Sri Krishnarajendra Silver Jubilee Technological Institute, Bangalore.
The Principal, Medical School, Bangalore.
The Principal, Engineering College, Bangalore.
The Principal, Engineering School, Bangalore.
The Principal, Medical College, Mysore.
The Principal, B.M.S. College of Engineering, Bangalore.
The Principal, National Institute of Engineering, Mysore.

PRESS TABLE.

APPENDIX.

List of Backward Classes in Mysore recognised for Government of India Scholarships, 1950-51 :—

1	Agasa	32	Mahratta
2	Bairagi	33	Malayali
3	Banajiga	34	Maleru
4	Baniya	35	Maravan
5	Bavaji	36	Marvadi
6	Beda	37	Meda
7	Bhatraju	38	Multani
8	Budubudike	39	Nagartha
9	Darzi	40	Natuva
10	Doga	41	Nayar
11	Dombara	42	Nayinda
12	Gangakula	43	Neygi
13	Ganiga	44	Pandaran
14	Garadiga	45	Paria
14a	Gondaliga	46	Rachavar
15	Goniga	47	Rawat
16	Gosayi	48	Sadar
17	Gaur	49	Saniyar
18	Gujar	50	Satani
18a	Gujarathi	51	Sanyasi
19	Idiga	52	Sikh
20	Indian Christian	53	Sillekyatha
21	Jain	53a	Soligaru
21a	Jetty	54	Sudugadusidda
22	Jogi	55	Thigala
23	Jat	56	Uppara
23a	Kaniyar	57	Vaisya
24	Kayastha	58	Viswakarma
25	Kahar	59	Vokkaliga
26	Kshatriya	60	Yadava
27	Kumbara	61	Animists
28	Kunchitiga	62	Dasari
29	Kuruba	63	Gurkha
30	Ladar	64	Muslims
31	Lingayet		

ಶ್ರೀ ಟಿ. ರಾಮಾಚಾರ್ಯರು.—ಈ ಶಾಲೆಗಳಲ್ಲಿ ಒಂದೊಂದರಲ್ಲೂ ಇಷ್ಟಿಷ್ಟೇ ಸ್ಥಾನಗಳಿರಬೇಕೆಂದು ನಿಗದಿಯಾಗಿದೆಯೇ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆಗಿದೆ; ಪ್ರತಿಯೊಂದು ಸ್ಕೂಲಿನ strength ನಿಗದಿಯಾಗಿದೆ.

ಶ್ರೀ ಟಿ. ರಾಮಾಚಾರ್ಯರು.—ಇದನ್ನು ಯಾವ ವರ್ಷದಲ್ಲಿ ನಿಗದಿ ಮಾಡಿದ್ದು ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ನೋಟೀಸ್.

ಶ್ರೀ ಟಿ. ರಾಮಾಚಾರ್ಯರು.—ಹೀಗೆ ಸಂಖ್ಯೆಯನ್ನು ಯಾರು ನಿಗದಿ ಮಾಡುವವರು ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆಯಾ ಸ್ಕೂಲಿನ ಅಧಿಕಾರಿಗಳ ಶಿಫಾರಸಿನ ಮೇಲೆ ಸರ್ಕಾರದವರು ಒಪ್ಪಿಗೆ ಕೊಟ್ಟಿದ್ದಾರೆ.

ಶ್ರೀ ಟಿ. ರಾಮಾಚಾರ್ಯರು.—ಆಗಾಗ ಪುನರ್ವಿಮರ್ಶೆಮಾಡಿ, ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚುಮಾಡುತ್ತಿದ್ದೀರಾ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆಯಾ ಸ್ಕೂಲಿನಲ್ಲಿರುವ ಸ್ಥಳಾವಕಾಶ, ಅವಶ್ಯಕತೆಗಳು ಮುಂತಾದ್ದನ್ನು ನೋಡಿಕೊಂಡು ಮಾಡುತ್ತೇವೆ.

ಶ್ರೀ ಟಿ. ರಾಮಾಚಾರ್ಯರು.—ಈಚೆಗೆ ಹೆಚ್ಚು ಮಾಡಿಲ್ಲವೇ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಈಚೆಗೆ ಹೆಚ್ಚು ಮಾಡಿಲ್ಲ.

ಶ್ರೀ ಟಿ. ರಾಮಾಚಾರ್ಯರು.—ಈ ಸಲ ಈ ವಿದ್ಯಾ ಸಂಸ್ಥೆಗಳಿಗೆ ಸೀಟುಗಳಿಗಾಗಿ ಎಷ್ಟು ಅರ್ಜಿಗಳು ಬಂದಿದ್ದವು ?

Mr. SPEAKER.—That does not arise. The Hon'ble Member can put questions only in regard to the rules for admission. Questions about the number of applications received by each institution would not be admissible.

ಶ್ರೀ ಟಿ. ರಾಮಾಚಾರ್ಯರು.—ಸೀಟು ಕೊಡುವ ಬಗ್ಗೆ ಅರ್ಹತೆಗೆ ಹೆಚ್ಚು ಪ್ರಾಧಾನ್ಯ ಕೊಡಬೇಕೆಂದು ನಿಬಂಧನೆಗಳಲ್ಲಿದೆಯೇ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಕೆಲವು ಕಂಡೀಷನ್ಸ್ ಇವೆ, ಅವುಗಳಲ್ಲಿ ಇದೂ ಒಂದು.

ಶ್ರೀ ಟಿ. ರಾಮಾಚಾರ್ಯರು.—ಈ ನಿಬಂಧನೆಗಳ ಪ್ರಕಾರ ಷೆಡ್ಯೂಲ್ಡ್ ಕ್ಲಾಸಸ್ ಮತ್ತು ಬ್ಯಾಕ್‌ವರ್ಡ್ ಕ್ಲಾಸ್‌ಗಳಿಗೆ ಇಷ್ಟಿಷ್ಟು ಸ್ಥಾನಗಳನ್ನು ಕೊಡಬೇಕೆಂದಿದೆ. ಇದರಲ್ಲಿಯೂ ಅರ್ಹತೆಗೆ ಮೊದಲ ಸ್ಥಾನ ಕೊಡುತ್ತೀರಾ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು —ಅದೂ ಒಂದು ಆಧಾರವಾಗಿ ತೆಗೆದುಕೊಳ್ಳುತ್ತಾರೆ. ಇದಲ್ಲದೆ ಅವರು ಹಿಂದುಳಿದ ಪ್ರದೇಶದವರೇ ಅಲ್ಲವೇ, ಅವರ personality —ಮುಂತಾಗಿ ನಾನಾ ವಿಷಯಗಳ ಮೇಲೆ ತೀರ್ಮಾನಿಸಿರುತ್ತಾರೆ.

ಶ್ರೀ ಟಿ. ರಾಮಾಚಾರ್ಯರು.—ಜನರಲ್ ಪೂಲ್ ಎಂದಿದೆ; ಇದರಲ್ಲಿಯೂ ಕೋಮುವಾರು ದಾಮಾಷಾ ಇದೆಯೇ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಇಲ್ಲ.

Sri M. GOVINDA REDDY (Chitaldrug District—General).—Do the Government consider that these Rules are not disadvantageous to the backward communities ?

The Hon'ble Sri R. CHENNIGARAMIAH.—That is the opinion of the Government. The rules are not disadvantageous to the backward communities.

Sri M. GOVINDA REDDY.—Will the Government consider revising these rules so as to give to the backward communities the same position as was existing before these rules were framed ?

The Hon'ble Sri R. CHENNIGARAMIAH.—After considering all aspects of the question, Government have decided like this.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಮೆಡಿಕಲ್ ಕಾಲೇಜಿಗೆ ವಿದ್ಯಾರ್ಥಿಗಳನ್ನು ಸೇರಿಸುವಾಗ ಯಾವ ದಾಮಾಷಾ ಮೇಲೆ ಸೇರಿಸಿದರು ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಈ ಸರ್ಕಾರಿ ಆಜ್ಞೆಯ ಮೇರೆಗೆ ಸ್ಥಾನಗಳನ್ನು ಹಂಚಿದ್ದಾರೆ.

ಅಧ್ಯಕ್ಷರು.—ಇಲ್ಲಿ ಕೊಟ್ಟಿರುವ ಸರ್ಕಾರಿ ಆಜ್ಞೆಯಲ್ಲಿ ಇದರ ವಿವರವೆಲ್ಲವೂ ಇದೆ.

Selection of Professor of Urdu in the Mysore University.

Q.—209. Janab SYED ABDUR RAHMAN (Chikmagalur *cum* Shimoga—Muslim).—

With regard to cattle, the suffering was much more. Every year, the cattle in this area have to migrate to either the malnad on the western side or the Sandoor forest on the eastern side. This migration, driving cattle to far off places entails a lot of suffering to the villagers. After all in a villager's household, there might be one or two able-bodied persons and one of them has to go along with the herds of cattle for two to three months till there is rainfall; and immediately after the rainfall, we will have no grass and we will have to wait for one or two months thereafter and until grass is grown they will have to remain with the cattle. On the other hand, as soon as there is rainfall, they will have to take to ploughing and sowing and if these operations were to be postponed by one or two weeks, the raiyat will lose the opportunity for that year. At the same time, when the person who is accompanying the cattle is away some 60, 80 or even 100 miles, he cannot return home in one or two days to attend to his agricultural work and by the time he returns, the season will have passed. Like this so many people have lost opportunities for several years. When these are the sufferings of the people in normal conditions, you can imagine the plight of the people in that area when the south-west monsoon completely failed. I am bringing these facts to the notice of the Government to urge upon them the necessity to provide not only immediate relief but for making permanent arrangements for the supply of fodder to cattle in that area. This point we have been representing from time to time and in fact in the previous sessions of the Assembly I have put questions in the matter of death of cattle. Government do not have sufficient statistics of the deaths of cattle and the figures they gave me were very few. I know that the figure should have been much more. I have also sent in a question with regard to supply of fodder and there also the Government say that they have made arrangements. But practically no arrangement has been made, though arrangements for the supply of fodder could be made. In fact, if the Hon'ble Ministers tour the eastern portion of the District, they see anywhere and everywhere the trees standing as though human beings are standing with heads beheaded and arms cut off. The branches and leaves have all been cut off not only for fuel purposes but also for fodder for the cattle. There are wide Kamra forests. The branches of all the trees are cut off because they have no other go but to feed the cattle with the leaves of these trees. Now milk is sold at one seer per rupee even in villages and even at that rate we can hardly get milk. That is the situation. If we look at the people, they are very much emaciated; they look like scare-crows. Though the word 'famine' here cannot be applied under the Famine Relief Code, they should not view it technically but really the famine conditions do exist and therefore they should give liberal relief to this area. They have allotted Rs. 3 lakhs now as relief even before this resolution was tabled, but that is very insufficient. They should allot at least Rs. 7-8 lakhs and take immediate measures to give relief. With these words, I once again extend my hearty support to this resolution.

ಶ್ರೀ ಬಿ. ಎನ್. ಬೋರಣ್ಣಗೌಡರು (ಹಾಸನ ಜಿಲ್ಲೆ).—ಸ್ವಾಮಿ, ಈಗ ನಮ್ಮ ಮಾನ್ಯ ಮಿತ್ರರು ಮಂಡಿಸಿರತಕ್ಕ ನಿರ್ಣಯದ ಬಗ್ಗೆ ಅನೇಕರು ಅನೇಕ ವಿಷಯಗಳನ್ನಾಗಲಿ ತಿಳಿಸಿ ರುವುದರಿಂದ ನಾನಿನ್ನು ಹೆಚ್ಚಾಗಿ ಹೇಳಬೇಕಾ ದುದೇನೂ ಇಲ್ಲ. ಆದಾಗ್ಯೂ ಹೊಸದಾದ ಕೆಲವು ವಿಚಾರಗಳನ್ನು ಮಾತ್ರ ಸರ್ಕಾರದವರ ಗಮನಕ್ಕೆ ತರಲಿಚ್ಛಿಸುತ್ತೇನೆ. ಇಲ್ಲಿಗೆ ಕೆಲವು ದಿನಗಳ ಹಿಂದೆ ಮಳೆ ಬಿದ್ದಾಗ ಈ ವರ್ಷದ ಬೆಳೆಗಳೆಲ್ಲಾ ಚೆನ್ನಾಗಿ ಆಗಬಹುದೆಂದು ಜನ ಗಳೆಲ್ಲರೂ ಒಂದು ಸಂತೋಷಕರವಾದ ಭಾವ ನೆಯಲ್ಲಿದ್ದರು. ಆದರೆ ಈಗ ಆ ರೀತಿಯಾಗಿಲ್ಲದೆ ಅನೇಕ ಕಡೆ ಮಳೆ ಸಾಲದೆ ಮತ್ತು ಕೆಲವು ಕಡೆ ಮಳೆಯೇ ಬಾರದೆ ಪೈರುಗಳೆಲ್ಲಾ ಹಾಳಾಗಿ ಹೋಗಿವೆ.

ಅಧ್ಯಕ್ಷರು.—ತಾವು ಇದನ್ನು ಜನರಲ್ ಆಗಿ ಚರ್ಚೆ ಮಾಡುವ ಹಾಗೆ ತೋರುತ್ತಿದೆ. ಆ ರೀತಿ ಇದರ ಮೇಲೆ ಜನರಲ್ ಆಗಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಬಿ. ಎನ್. ಬೋರಣ್ಣಗೌಡರು.—ಹೀಗೆ ನಾನಾ ಕಡೆಗಳಲ್ಲಿ ಅದರಲ್ಲೂ ಚಿತ್ರದುರ್ಗ ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಅತಿವೃಷ್ಟಿ—ಅನಾವೃಷ್ಟಿ ಉಂಟಾಗಿ.... ....

ಅಧ್ಯಕ್ಷರು.—ಆ ಜಿಲ್ಲೆಯಲ್ಲಿ ಅತಿವೃಷ್ಟಿ ಇಲ್ಲವೇ ಇಲ್ಲ. ಅಲ್ಲೆಲ್ಲಿ ಅತಿವೃಷ್ಟಿ ಬಂತು?

ಶ್ರೀ ಬಿ. ಎನ್. ಬೋರಣ್ಣಗೌಡರು.—ಇಲ್ಲ, ದಾವಣಗೆರೆಯ ಕೆಲವು ಪ್ರದೇಶದಲ್ಲಿ ಒಂದು ದಿವಸ ಮಳೆ ಹೆಚ್ಚಾಗಿ ಬಿದ್ದು ಅಲ್ಲಿ ಬೆಳೆ ಗಳೆಲ್ಲಾ ಕೆಟ್ಟುಹೋದವು. ಹೀಗೆ ಮಳೆ ಕೆಲವು ಕಡೆ ಹೆಚ್ಚಾಗಿ ಬಿದ್ದುದರಿಂದಲೂ, ಮತ್ತೆ ಕೆಲವು ಕಡೆ ಬೀಳದೆ ಇದ್ದುದರಿಂದಲೂ ಜನರಿಗೆ ಪೈರು ನಷ್ಟವಾಗಿ, ಅವರು ತೊಂದರೆಗೆ ಈಡಾಗಿದ್ದಾರೆ. ಯಾವ ಜಿಲ್ಲೆಯಲ್ಲಿ ಜೋಳ ಹೆಚ್ಚಾಗಿ ಬೆಳೆಯಾಗುತ್ತಿತ್ತೋ ಅಂಥಾ ಕಡೆ ಈ ವರ್ಷ ಜೋಳದ ಬೆಳೆಯೆಲ್ಲಾ ಹಾಳಾಗಿ ಹೋಗಿದೆ. ಹೀಗೆ ಮಳೆಯ ಅಭಾವದಿಂದ ತೊಂದರೆಯು ಜನರಿಗೆ ಮಾತ್ರವೇ ಉಂಟಾಗಿಲ್ಲ, ಜಾನುವಾರುಗಳಿಗೂ ಬಹಳ ತೊಂದರೆಯಾಗಿದೆ. ಆ ವಿಷಯಗಳನ್ನೆಲ್ಲಾ ಈಗಾಗಲೇ ನಮ್ಮ ಮಾನ್ಯ ಮಿತ್ರರು ಚೆನ್ನಾಗಿ ವರ್ಣನೆ ಮಾಡಿ ದ್ದಾರೆ. ನಾನು ಚಿತ್ರದುರ್ಗ ಮತ್ತು ಶಿವ ಮೊಗ್ಗ ಜಿಲ್ಲೆಗಳಿಂದ ಬರುತ್ತಿರುವ ಅನೇಕ ಜನ ರನ್ನು ಸಂಧಿಸಿ, ಅವರಿಂದ ಅನೇಕ ವಿಚಾರಗ ಳನ್ನು ಈ ಸಂಬಂಧವಾಗಿ ತಿಳಿದಿದ್ದೇನೆ. ಅವರು ಯಾವ ಕೆಲಸಕ್ಕಾಗಲೀ ಜಾನುವಾರುಗಳನ್ನು ಕೊಳ್ಳಬೇಕಾಗಿದ್ದರೆ ಮೈದಾನ ಸೀಮೆಗೇ ಬರ ಬೇಕು. ಅದರಲ್ಲೂ ಅವರು ಕೊಳ್ಳುವುದು ಬಹಳ ಬೆಲೆಯಾದ ಹಳ್ಳಿಕಾರ ಜಾತಿ ದನಗಳು. ಅವುಗಳನ್ನು ಹೆಚ್ಚಾಗಿ ಹಣ ಕೊಟ್ಟು ಇಲ್ಲಿಂದ ಕೊಂಡು ಅವರ ಪ್ರದೇಶಕ್ಕೆ ತೆಗೆದುಕೊಂಡು ಹೋದರೆ ಅಲ್ಲಿ ಅವುಗಳಿಗೆ ರೋಗ ರುಜಿನಾದಿ ಗಳು ಬಂದು ಬೇಗ ಸತ್ತುಹೋಗಿ ಅಲ್ಲಿನ ರೈತ ರಿಗೆ ತುಂಬಾ ತೊಂದರೆಗಳಾಗುತ್ತಿದೆ.

ಇನ್ನು ಈ ಎಲ್ಲ ತೊಂದರೆಗಳ ಜೊತೆಗೆ ಅವ ರಿಗೆ ಕೂಲಿಗಾರರ ಅಭಾವ ಬೇರೆ ಇದೆ. ಕೂಲಿ ಮಾಡತಕ್ಕ ಜನರು ಯಾವಾಗ್ಯೂ ಎಲ್ಲಿ ಅವರಿಗೆ ಹೆಚ್ಚಾಗಿ ಕೂಲಿ ದೊರೆಯುತ್ತದೆಯೋ ಅಂಥಾ ಸ್ಥಳಗಳಿಗೇ ವಲಸೆ ಹೋಗತಕ್ಕದ್ದು ಸ್ವಾಭಾ ವಿಕವಾಗಿಯೇ ಇರುತ್ತೆ. ಅಂಥಾ ಕೂಲಿಗಾರ ರಿಗೆ ಅಲ್ಲೇ ಹೆಚ್ಚಾಗಿ, ಚೆನ್ನಾಗಿ ಕೆಲಸಮಾಡಿ, ಹೆಚ್ಚಾಗಿ ಕೂಲಿ ಕೊಡುತ್ತೇವೆಂದರೂ ಆಳು ಗಳೇ ದೊರೆಯುತ್ತಿಲ್ಲ. ಈ ಕೂಲಿಗಾರರ ಹಾಹಾಕಾರವನ್ನು ತಪ್ಪಿಸಬೇಕೆಂದು ಮೊನ್ನೆ ತಾನೆ ನಡೆದ ಜಿಲ್ಲಾಧಿಕಾರಿಗಳ ಸಮ್ಮೇಳನದಲ್ಲಿ ಈ ವಿಷಯ ಚರ್ಚೆಯಾಗಿ, ಅಂಥಾ ಅನಾನು ಕೂಲವಿರತಕ್ಕ ಪ್ರದೇಶಗಳಿಗೆ ಅಲ್ಲಿ ಕೆಲಸ ಕಾರ್ಯ ಸುಲಭವಾಗಿ ನಡೆಯುವಂತೆ ಮಾಡಲು, ಸ್ವಲ್ಪ ಕೂಲಿ ದರವನ್ನು ಹೆಚ್ಚಿಸ ಬೇಕೆಂದು ತೀರ್ಮಾನ ಮಾಡಿದ್ದಾರೆ. ಹೀಗೆ ಮಾಡಿ 'ಕೆಲಸಗಳನ್ನು ಜಾಗ್ರತೆ' ಮುಗಿಸಬೇ ಕೆಂದು ತಿಳಿಸಿದ್ದಾರೆ. ಅಂದರೆ ಈ ರೀತಿಯಾಗಿ ಮಾಡಿರತಕ್ಕದ್ದೆಲ್ಲಾ ಸರ್ಕಾರದವರು ಕ್ಷಾಮ ನಿವಾರಣಾರ್ಥವಾಗಿ ಕೈಗೊಂಡಿರತಕ್ಕ ಕೆಲಸ ಕಾರ್ಯಗಳಿಗೆ ಸಂಬಂಧಪಟ್ಟಿರತಕ್ಕದ್ದಾಗಿದೆ. ಈಗ ಕೆಲವು ಕಡೆ ಕೂಲಿಗಾರನು ಒಬ್ಬ ರೈತನ ಕೆಲಸಕ್ಕೆ ಹೋದರೆ ಆತನಿಗೆ ಊಟ ಹಾಕಿ,

(ಶ್ರೀ ಬಿ. ಎನ್. ಬೋರಣ್ಣಗೌಡರು.)
ದಿನಕ್ಕೆ 8 ಆಣೆ ಮೊದಲುಗೊಂಡು 12 ಆಣೆ ಮತ್ತು ಆಖೈರು 1 ರೂಪಾಯಿನವರೆಗೂ ಕೂಲಿ ಕೊಡುತ್ತಿದ್ದಾರೆ. ಅದೇ ಕೂಲಿಯವನು ಹಾಗೆ ರೈತನ ಬದುಕಿಗೆ ಹೋಗದೆ ಪಟ್ಟಣಕ್ಕೆ ಬಂದು ಕೂಲಿ ಮಾಡಿದರೆ ಆತನಿಗೆ ದಿನಕ್ಕೆ 2 ರೂಪಾಯಿಗಳಮೇಲೆ ಸಂಪಾದನೆ ಆಗುತ್ತದೆ. ಆದ್ದರಿಂದ ಸರ್ಕಾರದವರು ಕೈಗೊಳ್ಳುವ ಕಾಂಗಾರಿಗಳ ಬಗ್ಗೆ ಎಂದರೆ ಬಾವಿ ಇತ್ಯಾದಿಗಳನ್ನು ತೋಡಿಸತಕ್ಕ ಬಗ್ಗೆ ಅನ್ನ ಹಾಕದೆ ಕೇವಲ ದಿನ ಒಂದಕ್ಕೆ 8 ಆಣೆ ಕೂಲಿ ಮಾತ್ರ ಕೊಡುತ್ತೇವೆಂದು ಮಾಡಿರತಕ್ಕದ್ದು ಬಹಳ ನಿಷ್ಕಾರಣವಾಗಿದೆ. ಇದರಿಂದ ಜನರಿಗೆ ತುಂಬಾ ಅನಾನುಕೂಲವಾಗಿದೆ. ಕೂಲಿಗಾರರಾದರೋ ಹೆಚ್ಚು ಹೆಚ್ಚು ಕೂಲಿ ದೊರೆಯುವ ಸ್ಥಳಗಳಿಗೆ ವಲಸೆ ಹೋಗುತ್ತಿದ್ದಾರೆ. ಈಗ ತಾವು ಎಲ್ಲೆಲ್ಲಿ ಕ್ಷಾಮ ನಿವಾರಣಾ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದಿದ್ದೀರೋ ಅಲ್ಲಿ ಕೂಲಿಗಾರರಿಗೆ ಕನಿಷ್ಟ ಪಕ್ಷ ದಿನ ಒಂದಕ್ಕೆ ಒಂದು ರೂಪಾಯಿ ಕೂಲಿಯಾದರೂ ದೊರೆಯುವಂತೆ ಮಾಡದಿದ್ದರೆ . . .

ಅಧ್ಯಕ್ಷರು.—ದಿನ ಒಂದಕ್ಕೆ ಒಂದು ರೂಪಾಯಿ ಕೂಲಿಯನ್ನೂ ಸಹ ಇಂದು ಕೊಡದಿರುವಂಥ ಸ್ಥಳಗಳೂ ಇವೆಯೇ? ತಾವು ತಿಳಿಸುತ್ತಿರುವ 8 ಆಣೆಯ ಕೂಲಿ ಒಂದು ಹೊತ್ತಿಗೋ ಅಥವಾ ಒಂದು ದಿನಕ್ಕೋ?

ಶ್ರೀ ಬಿ. ಎನ್. ಬೋರಣ್ಣಗೌಡರು.—ಅಂಥಾ ಸ್ಥಳಗಳೂ ಉಂಟು. ಅನ್ನ ಹಾಕದೆ ದಿನಕ್ಕೆ 12 ಆಣೆ ಕೂಲಿ ಕೊಡುವಂಥ ಸ್ಥಳಗಳೂ ಇವೆ.

ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—ಸರ್ಕಾರದವರು ಮೊದಲು ಕೊಡುತ್ತಿದ್ದ 0-10-6 ಕೂಲಿಯ ದರವನ್ನು 0-12-6 ಏರಿಸುವುದಕ್ಕೆ ಎಷ್ಟೋ ಕುರಿಕೋಣಗಳು ಬಿದ್ದು ಹೋದವು. ಸರ್ಕಾರದವರು ಅಮಾನಿಯಾಗಿ ಕೆಲಸ ಮಾಡಿಸುವಂತೆ ಈ ರೇಟುಗಳಿವೆ.

ಶ್ರೀ ಬಿ. ಎನ್. ಬೋರಣ್ಣಗೌಡರು.—ಕೆರೆ ಇತ್ಯಾದಿಗಳನ್ನು ಕಂಟ್ರಾಕ್ಟ್ ಮಾಡಿಕೊಂಡಿರತಕ್ಕವರು ಹೆಚ್ಚಿನ ದರದಲ್ಲೇ ಕೂಲಿ ಕೊಡಬೇಕು. ಇಲ್ಲವಾದರೆ ವಾಯಿದೆಯೊಳಗೆ ಕೆಲಸ ನಡೆಯುವುದಿಲ್ಲ. ಹೀಗೆ ಆ ಕಂಟ್ರಾಕ್ಟರುಗಳು ಹೆಚ್ಚಿನ ದರದಲ್ಲಿ ಕೂಲಿ ಕೊಡುತ್ತಿರುವುದರಿಂದ ಕೂಲಿಯವರು ರೈತನ ಹೊಲದಲ್ಲಿ ಕೆಲಸ ಮಾಡಲು ಕಮ್ಮಿ ಕೂಲಿಗೆ ಬರುತ್ತಿಲ್ಲ. ಹೀಗಾಗಿ 8 ಆಣೆ ಕೂಲಿಗೆ ಯಾವ ಕೂಲಿ ಆಳುಗಳೂ ಸಿಕ್ಕದೆ, ಯಾವ ಕೆಲಸವೂ ನಡೆಯುತ್ತಿಲ್ಲ. ಸ್ಥಳೀಯ ಅಧಿಕಾರಿಗಳಿಗೆ ಹೇಗೆ ಕೂಲಿಗಾರರು ಎಲ್ಲೆಲ್ಲಿ ಕೂಲಿ ಹೆಚ್ಚಾಗಿ ದೊರೆಯುತ್ತಿದೆಯೋ ಅಂಥಾ ಸ್ಥಳಗಳಿಗೆ ವಲಸೆ ಹೋಗುತ್ತಿದ್ದಾರೆ, ಅದನ್ನು ತಡೆಗಟ್ಟುವುದಕ್ಕಾದರೂ ಕೊಂಚ ಕೂಲಿ ದರಗಳನ್ನು ಹೆಚ್ಚಿಸಬೇಕೆಂದು ಕೇಳಿಕೊಂಡರೆ ಅವರು ಪಿ. ಡಬ್ಲ್ಯು ಇಲಾಖೆಯವರು ಕೊಡುತ್ತಿರುವ ಕೂಲಿಗಿಂತ ಹೆಚ್ಚು ಕೊಡಲು ಸಾಧ್ಯವಿಲ್ಲವೆಂದು ತಿಳಿಸುತ್ತಿದ್ದಾರೆ. ಆದ್ದರಿಂದ ಪಿ. ಡಬ್ಲ್ಯು. ಇಲಾಖೆಯಲ್ಲೇ ಹೆಚ್ಚಿನ ಪರಿಮಿತಿ ದರವೇನಿರುತ್ತದೋ ಅದನ್ನಾದರೂ ಕೊಡುವಂತೆ ಮಾಡಿದರೆ ಕೊಂಚ ಅನುಕೂಲವಾಗುತ್ತೆ. ಹಾಗೆ ಎಲ್ಲೆಲ್ಲಿ ಕೂಲಿ ಮಾಡಲು ಜನರು ತಮ್ಮ ಸಂಸಾರ ಸಮೇತ ಬರಲು ತಯಾರಿದ್ದಾರೋ ಅಂಥವರಿಗೆ ಜೀವನಕ್ಕೆ ಮುಖ್ಯವಾದ ಆಹಾರ ಪದಾರ್ಥಗಳನ್ನೂ ಸಹ ಸರಬರಾಯಿ ಮಾಡತಕ್ಕದ್ದು ಅತ್ಯಾವಶ್ಯಕವಾಗಿದೆ. ಈ ಎಲ್ಲ ಕಾರಣಗಳಿಂದಲೂ ಸರ್ಕಾರದವರು ಕೂಲಿಗಳಿಗೆ ಕೊಡುತ್ತಿರುವ ರೇಟನ್ನು ಸ್ವಲ್ಪ ಹೆಚ್ಚಿಸಬೇಕೆಂದು ತಿಳಿಸುತ್ತೇನೆ.

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—ಸ್ವಾಮಿ ಶ್ರೀಮಾನ್ ಭೀಮಪ್ಪನಾಯಕರು ಮಂಡಿಸಿರತಕ್ಕ ನಿರ್ಣಯವನ್ನು ಸ್ವಾಗತಿಸುತ್ತ ನಾನು ಕೆಲವು ವಿಚಾರಗಳನ್ನು ಸರ್ಕಾರದವರ ಅವಗಾಹನೆಗೆ ತರಲಿಚ್ಛಿಸುತ್ತೇನೆ. ಮೈಸೂರು ಸಂಸ್ಥಾನದಲ್ಲಿ ಮಳೆಯಿಲ್ಲದೆ ಅನೇಕ ಜಿಲ್ಲೆಗಳಲ್ಲಿ ಬೆಳೆ ಲುಕ್ಸಾನಾಗಿ ಜನರಿಗೆ ತುಂಬಾ ನಷ್ಟವಾಗಿರುತ್ತೆ. ಮತ್ತು ತೊಂದರೆಯೂ ಸಂಭವಿಸಿದೆ.

ಅಧ್ಯಕ್ಷರು.—ಹಾಗೆ ಜನರಲ್ ಆಗಿ ಇದನ್ನು ಎಲ್ಲಾ ಪ್ರದೇಶಕ್ಕೂ ಅನ್ವಯಿಸಿ ಮಾತನಾಡಲಿಕ್ಕಾಗುವುದಿಲ್ಲವೆಂದು ಆಗಲೇ ತಿಳಿಸಿದ್ದೇನೆ.

ನಿರ್ಣಯದ ವ್ಯಾಪ್ತಿಯನ್ನು ಹೀಗೆ ದೊಡ್ಡದು ಮಾಡಿ ಮಾತನಾಡಲು ಅವಕಾಶವಿಲ್ಲ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಇದು ಬಹಳ ಮುಖ್ಯ ವಿಷಯ. ಚಿತ್ರದುರ್ಗ ಜಿಲ್ಲೆಗೆ ಏನೇನು ಅನ್ವಯಿಸುತ್ತದೆಯೋ ಅದೆಲ್ಲವೂ ಬಾಕಿ ಕೆಲವು ಜಿಲ್ಲೆಗಳಿಗೂ ಅನ್ವಯಿಸುತ್ತದೆ ಎಂದು ಸರ್ಕಾರದವರು ಭಾವಿಸಿಕೊಳ್ಳಬೇಕು.

ಅಧ್ಯಕ್ಷರು.—ಆ ರೀತಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಚಿತ್ರದುರ್ಗ ಜಿಲ್ಲೆಯಲ್ಲಿ ಮಳೆ ಯಿಲ್ಲದೆ ಜನರಿಗೆ ತೊಂದರೆಯಾಗಿ ಅಭಾವವುಂಟಾಗಿದೆಯೆಂದು ಮಾನ್ಯ ಸದಸ್ಯರು ಹೇಳಿದಹಾಗೆ ಸಭೆಯ ಗಮನಕ್ಕೆ ಬಂದಿದೆ. ಅಲ್ಲಿನ ಜನರಿಗೆ ಯಾವರೀತಿಯಾಗಿ ಅನುಕೂಲಗಳನ್ನು ಕಲ್ಪಿಸಿಕೊಡಬೇಕೆಂಬುದಾಗಿ ಸರ್ಕಾರ ಯಾವರೀತಿ ಆಲೋಚಿಸಿದೆಯೋ ತಿಳಿಯದು. ಸರ್ಕಾರದ ಪರವಾಗಿ ಉತ್ತರ ಕೊಡುವಾಗ ಏನೇನು ಅನುಕೂಲಗಳನ್ನು ಮಾಡುವುದಕ್ಕೆ ಸಿದ್ಧತೆ ಮಾಡಿಕೊಂಡಿದ್ದಾರೆಂಬುದು ತಿಳಿಯಬಹುದೆಂದು ನಿರೀಕ್ಷಿಸುತ್ತಿದ್ದೇವೆ. ನಾವಾದರೂ ಸಲಹೆಮಾಡುವುದು ಎಲ್ಲೆಲ್ಲಿ ಬೆಳೆಯಿಲ್ಲದೆ ಜನರಿಗೆ ತೊಂದರೆಯಾಗಿದೆಯೋ ಅಲ್ಲಿ ಆಹಾರ ಧಾನ್ಯ ವಸೂಲುಮಾಡುವುದನ್ನು ಸರ್ಕಾರ ಈ ಸಾರಿ ಮಾಫಿ ಮಾಡಬೇಕು ಎಂದು. ಸಾಧಾರಣವಾಗಿ ಸ್ವಲ್ಪ ಬೆಳೆ ಆಗಿರುವಕಡೆ ದವಸ ವಸೂಲು ಮಾಡಿರುವುದನ್ನು ಸರ್ಕಾರದ ಗಮನಕ್ಕೆ ತಂದಿದ್ದೇವೆ. ಈ ರೀತಿ ಬೆಳೆಯಿಲ್ಲದೆ ತೊಂದರೆಯಿರುವಾಗ ಮುಖ್ಯವಾಗಿ ಮಾಡಬೇಕಾದ ಕೆಲಸ ಕ್ಷಾಮನಿವಾರಣೆಗಾಗಿ ಮಾಡಬೇಕಾದ ಕಾಂಗಾರಿ ಕೆಲಸ, ಕೆರೆ ದುರಸ್ತಿ, ರಸ್ತೆಮಾಡುವುದು ಮುಂತಾದ್ದನ್ನು ಏರ್ಪಡಿಸಿ ಅದರಿಂದ ಜನರಿಗೆ ನಾಲ್ಕಾರು ಕಾಸು ಸಿಕ್ಕುವಂತೆ ಮಾಡಿದರೆ ಅವರು ಧಾನ್ಯವನ್ನು ಎಲ್ಲಿಯಾದರೂ ಬೆಲೆಗೆ ತೆಗೆದುಕೊಂಡು ಜೀವ ಉಳಿಸಿಕೊಳ್ಳಬಹುದು.

ಎರಡನೆಯದಾಗಿ, ಕಂದಾಯ ವರ್ಷೇ ವರ್ಷೆ ಏನು ಕೊಡಬೇಕೋ ಅದನ್ನು ಬೆಳೆದ ಧಾನ್ಯದಿಂದ ತಮ್ಮ ಜೀವನಕ್ಕೆ ಬೇಕಾದಷ್ಟನ್ನು ಉಳಿಸಿಕೊಂಡು ಉಳಿದಿರುವುದನ್ನು ಮಾರಿ ತನ್ಮೂಲಕ ಬಂದ ಹಣದಲ್ಲಿ ಕಂದಾಯ ಕೊಡುವುದು ಅನೂಚಾನವಾಗಿ ನಡೆದುಕೊಂಡು ಬಂದಿದೆ. ಬೆಳೆಯೇ ಇಲ್ಲದಿರುವಾಗ ಕಂದಾಯ ಯಾವರೀತಿ ಕೊಡಬೇಕೆಂಬುದು ತೊಡಕು ಸಮಸ್ಯೆ. ಈ ವಿಷಯವು ಸಂಕಟಕರ. ಆದ್ದರಿಂದ ಸರ್ಕಾರ ಮುಂದೆಬಂದು ಜನರ ಹಿತದೃಷ್ಟಿಯಿಂದ ಕಂದಾಯ ಕಡಮೆಮಾಡುವುದು ಬಹಳ ಜರೂರಾಗಿದೆ. ಇದು ಬಹಳ ಮುಖ್ಯ.

ಆಮೇಲೆ ದನಗಳಿಗೆ ಮೇವಿಲ್ಲದೆ ಬಹಳ ತೊಂದರೆಯಾಗಿರುವುದನ್ನೂ ವಿವರಿಸಿದ್ದಾರೆ. ಜನರಿಗೆ ಅನ್ನವಿಲ್ಲದಿದ್ದರೆ ಅವರು ಒಬ್ಬರಿಗೊಬ್ಬರು ಮಾತನಾಡಿಕೊಂಡು ಎಲ್ಲಿಂದಲೋ ತಂದು ಬದುಕಬಹುದು. ಅದೇ ದನಗಳಿಗೆ ಹುಲ್ಲಿಲ್ಲದಿದ್ದರೆ ಅವಕ್ಕೆ ಅದನ್ನು ತಿಳಿಸುವುದಕ್ಕೆ ಬಾಯಿಲ್ಲ, ಅವುಗಳ ಕಷ್ಟ, ನೋವು ನಮಗೆ ಅನುಭವಸಿದ್ಧವಾಗಿದೆ; ಎಷ್ಟೋ ಸಂಕಟವಾಗುತ್ತದೆ, ಎಷ್ಟೋದೂರ ಹೋಗಿ ಹತ್ತು ರೂಪಾಯಿ ಬೆಲೆಯಾಗುವ ಹುಲ್ಲಿಗೆ ನೂರು ರೂಪಾಯಿವರೆಗೂ ಕೊಟ್ಟುಕೊಂಡಿರುವ ಸನ್ನಿವೇಶ ಬೇಕಾದಷ್ಟಿವೆ. ಒಟ್ಟಿನಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಕ್ಷಾಮ ಎಷ್ಟು ಮಟ್ಟಿಗಿದೆಯೆಂಬುದನ್ನು ಮಾನ್ಯ ಸದಸ್ಯರು ಸೂಚಿಸಿದ್ದಾರೆ. ಅದನ್ನು ಸರ್ಕಾರದವರು ಗಮನದಲ್ಲಿಡಬೇಕು. ಜನ ಬಹಳ ಕಷ್ಟದಲ್ಲಿ ಸಿಕ್ಕಿದ್ದಾರೆ. ಇಂಥ ಒಂದು ಪರಿಸ್ಥಿತಿಯನ್ನು ಪರಿಹರಿಸುವಾಗ ಮೊನ್ನೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು—ಹತ್ತು ಲಕ್ಷ ರೂಪಾಯಿಗಳು ಈ ಒಂದು ಕಾರ್ಯದ ಸಹಾಯಕ್ಕಾಗಿ ತೆಗೆದಿಟ್ಟಿದೆ ಎಂದು. ಅದು ಒಂದು ಜಿಲ್ಲೆಗೆ ಸಾಕಾಗಬಹುದು. ಆದರೆ ಅದರ ಹಾಗೆ ಅಂಥ ಪರಿಸ್ಥಿತಿಯಲ್ಲೇ ಇರುವುದಕ್ಕೆ ಹಣ ಸಾಕಾಗದೆ ಹೋದರೆ ಸರ್ಕಾರ ಮುಂದೆ ಬಂದು ಆ ಜನರಿಗೆ ಸೌಕರ್ಯವನ್ನೊದಗಿಸುವುದಕ್ಕೆ ಹೆಚ್ಚು ಹಣ ಒದಗಿಸಿ ಜನರ ಕಷ್ಟವನ್ನು ನಿವಾರಣೆಮಾಡುತ್ತದೆಯೆಂಬ ನಿರೀಕ್ಷೆ ಇದೆ. ಆದರೆ ಮೊದಲೇ ಹೇಳಿದಹಾಗೆ ಉಳಿದಕಡೆಯ ವಿಷಯ ತಿಳಿಸುವುದಕ್ಕೆ ಅವಕಾಶವಿಲ್ಲದಿದ್ದರೂ ಚಿತ್ರದುರ್ಗ ಜಿಲ್ಲೆ ಉದಾಹರಣೆಯನ್ನು ಮನಸ್ಸಿನಲ್ಲಿಟ್ಟು ಅದಕ್ಕಿಂತ ಕಠಿಣ ಪರಿ

(ಶ್ರೀ ಡಿ. ಎಂ. ಸಿದ್ದಯ್ಯನವರು.)
ಸ್ಥಿತಿ ಅನೇಕಕಡೆ ಇರುವುದರಿಂದ ಸಂಸ್ಥಾನಾಮಳೆ ಏನು ಕಷ್ಟವಿದೆಯೆಂದು ತಿಳಿದು ಬೆಳೆ ಹೋದ್ದರಿಂದ ಉಂಟಾಗಿರುವ ತೊಂದರೆಯನ್ನು ನಿವಾರಿಸಿ ಜನರಿಗಿರುವ ಆಹಾರದ ಅಭಾವ ಮತ್ತು ದನಗಳಿಗಿರುವ ಹುಲ್ಲಿನ ಅಭಾವ ಪರಿಹಾರ ಮಾಡುವುದಕ್ಕೆ ಸರ್ಕಾರ ಜರೂರಾಗಿ ಏನು ಕಾರ್ಯಕ್ರಮ ಕೈಕೊಳ್ಳಬೇಕೋ ಅದನ್ನು ಕೈಕೊಂಡು ಜನರ ಕಷ್ಟ ನಿವಾರಣೆಮಾಡಬೇಕು. ಹಾಗೆ ಮಾಡುತ್ತಾರೆಂಬ ನಿರೀಕ್ಷೆಯಿಂದ ಈ ನಿರ್ಣಯವನ್ನು ಸಂಪೂರ್ಣವಾಗಿ ಪುಷ್ಟೀಕರಿಸುತ್ತೇನೆ.

ಅಧ್ಯಕ್ಷರು.—ಯಾರೂ ಇದನ್ನು ವಿರೋಧಿಸಿಲ್ಲ. ಆದ್ದರಿಂದ ಉತ್ತರ ಕೊಡುವುದು ಅನವಶ್ಯಕ ವೆಂದು ತೋರುತ್ತದೆ.

ಶ್ರೀ ಎ. ಭೀಮಪ್ಪನಾಯಕರು.—I do not think that there is any need for a reply by me. ಎಲ್ಲರೂ ಬಹಳ ಸಹಾನುಭೂತಿಯಿಂದ ಅನುಮೋದಿಸಿದ್ದಾರೆ. ಸರ್ಕಾರದವರಿಗೂ ಅಷ್ಟೇ ಸಹಾನುಭೂತಿಯಿರಬೇಕು. ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವಾಗ ಬಹಳ ಸಹಾನುಭೂತಿಯಿಂದ ಪರಿಶೀಲಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

*ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಸ್ವಾಮಿ, ಮಾನ್ಯ ಭೀಮಪ್ಪನಾಯಕರು ಚಿತ್ರದುರ್ಗ ಜಿಲ್ಲೆಯಲ್ಲಿ ಮಳೆ ಸಾಕಾದಷ್ಟು ಆಗದಿರುವುದರಿಂದ ಅನೇಕ ತೊಂದರೆಗಳಿಗೆ ಅದು ಈಡಾಗಿದೆ, ಅದನ್ನು ಕ್ಷಾಮ ಪ್ರದೇಶವೆಂದು ಸರ್ಕಾರದವರು ಪರಿಗಣಿಸಿ ಅಲ್ಲಿನ ದನಕರುಗಳಿಗೂ, ಜನರಿಗೂ ಉಂಟಾಗಿರುವ ಕಷ್ಟ ಪರಿಹಾರಮಾಡಲು ಸರ್ಕಾರದವರು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಒಂದು ನಿರ್ಣಯವನ್ನು ತಂದು ಈ ಸಭೆಯ ಮುಂದಿಟ್ಟಿದ್ದಾರೆ. ಅವರು ತಿಳಿಸಿದಂತೆ ಈ ನಿರ್ಣಯ ಅವರು ಕಳುಹಿಸಿದಾಗ ಅಲ್ಲಿ ಏನು ಪರಿಸ್ಥಿತಿಯಿತ್ತು ಮತ್ತು ಈಗ ಏನು ಪರಿಸ್ಥಿತಿಯಿದೆ ಎಂಬುದನ್ನು ಹೋಲಿಸಿದರೆ ಸ್ವಲ್ಪ ತೃಪ್ತಿಕರವಾಗಿದೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಮಳೆ ಬಂದಿವೆ. ಆದರೆ ಬೆಳೆ ಇಲ್ಲ.

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅಲ್ಲಿ ಏನು ಭೀಕರ ಕ್ಷಾಮ ತಲೆದೋರಬಹುದು, ಇನ್ನು ಮುಂದೆ ಬಂದಾಗ ಏನುಮಾಡಬೇಕು ಎಂದು ಸೂಚಿಸಿ ಈ ದಿವಸ ಆ ಪರಿಸ್ಥಿತಿ ಇಲ್ಲ ಎಂದು ಭಾಷಣಮಾಡುವಾಗ ಮಾನ್ಯ ಸದಸ್ಯರೇ ಒಪ್ಪಿದ್ದಾರೆ. ಆದ್ದರಿಂದ ಚಿತ್ರದುರ್ಗ ಜಿಲ್ಲೆಯಲ್ಲಿ ಕ್ಷಾಮ ಬಂದಿದೆಯೆಂದು ಸರ್ಕಾರದವರು ಸಾರಿದರೆ ಅವರು ಪ್ರಸ್ತಾಪಮಾಡಿರುವ ವಿಷಯವನ್ನು ವಿರೋಧಿಸಿದ ಹಾಗಾಗುತ್ತದೆ. ಆದ್ದರಿಂದ ಅಲ್ಲಿ ಕ್ಷಾಮ ಎಂದು ಸಾರುವುದಕ್ಕೆ ಕಾರಣವಿಲ್ಲ. ಮತ್ತು ಫ್ಯಾಮಿನ್ ಬೋರ್ಡಿನ ನೀತಿಗನುಸಾರವಾಗಿ ಕ್ಷಾಮ ಪ್ರದೇಶವೆಂದು ಸಾರಬೇಕಾದ ಪ್ರಶ್ನೆಯೊದಗಿಲ್ಲ. ಆದ್ದರಿಂದ ಈ ನಿರ್ಣಯ ಈಗ ಇರುವಹಾಗೆ ಒಪ್ಪುವುದು ಕಷ್ಟ, ಇದು ಸರಿಯಾಗಿಲ್ಲ ಎಂದು ಅವರಿಗೆ ತಿಳಿಸಿದ್ದೇನೆ, ಆ ವಿಷಯ ನಾನು ಹೆಚ್ಚಾಗಿ ಹೇಳಬೇಕಾಗಿಲ್ಲ.

ಈ ಸಂದರ್ಭದಲ್ಲಿ ಇನ್ನೊಂದು ವಿಷಯ ಪ್ರಸ್ತಾಪಮಾಡಬೇಕಾಗಿದೆ. ಅಲ್ಲಿ ಮಳೆ ಎಷ್ಟಾಗುತ್ತಿದೆಯೆಂಬ ಅಂಶವನ್ನು ಶ್ರೀ ಭೀಮಪ್ಪನಾಯಕರು ಮತ್ತು ನಿರ್ಣಯವನ್ನು ಅನುಮೋದಿಸಿದ ಮಾನ್ಯ ಗೋವಿಂದರೆಡ್ಡಿಯವರು ಹೇಳಿದರು. ಶ್ರೀ ಭೀಮಪ್ಪನಾಯಕರು ಸುಮಾರು 18 ಅಂಗುಲ ಎಂದೂ; ಶ್ರೀ ಗೋವಿಂದರೆಡ್ಡಿಯವರು ಅದು ಓವರ್ ಎಸ್ಟಿಮೇಟ್, 12 ಅಂಗುಲ ಆಗಬಹುದು ಎಂದು ಹೇಳಿದರು. ಆದರೆ ವಾಸ್ತವಾಂಶ ಹಾಗಿಲ್ಲ ಎಂದೂ ಹೇಳಲೇಬೇಕಾಗಿದೆ. ಇತ್ತೀಚೆಗೆ ಬಂದಿರುವ ವರದಿಪ್ರಕಾರ ನಾನು ಅದನ್ನು ಹೇಳುತ್ತಿದ್ದೇನೆ. 13-10-1951ರ ಆಖೈರು ವರೆಗೆ ಮತ್ತು 20-10-1951ರ ಆಖೈರುವರೆಗೆ ಸೀಜನಲ್ ಕಂಡಿಷನ್ ಹೇಗಿದೆ, ಮಳೆ ಎಷ್ಟಾಗಿದೆ ಎಂಬ ಅಂಕಿ ಅಂಶಗಳು ಬಂದಿದೆ. ಅದರ ಪ್ರಕಾರ ಚಿತ್ರದುರ್ಗ ಜಿಲ್ಲೆಯಲ್ಲಿ 35 ವರ್ಷಗಳ ಸರಾಸರಿ 18.46 ಅಂಗುಲ.

* Asteristks indicate that the remarks have not been returned approved by the Hon'ble Member.

ಶ್ರೀ ಎ. ಭೀಮಪ್ಪನಾಯಕರು.—ಮೊಳಕಾಲ್ಮುರು ಕಡೆ ಸರಾಸರಿ 35 ವರ್ಷಗಳಲ್ಲಿ ಯಾವ ಒಂದು ವರ್ಷವಾದರೂ ಅಷ್ಟಿದ್ದರೆ ಅಥವಾ ಮಳೆ ಹೆಚ್ಚಾಗಿದ್ದರೆ ನನ್ನ ಠರಾವನ್ನು ವಾಪಸು ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದೇನೆ.

Sri M. GOVINDA REDDY.—There is one factor, Sir. The Western half being in the fringe of the Malnad receives good rains. For instance Holalkere, Davangere and Harihar Taluks receive fairly good rains. We do not contend that the rainfall is low there. But in the eastern half it is not so.

The Hon'ble Sri K. CHENGALARAYA REDDY.—I am coming to that. I have got the figures. It is not 12″ or 14″ average as Sri Govinda Reddy thinks, nor is it 15″. I am quoting the figures not from memory, but from the latest figures supplied to me. If these figures are wrong, I am prepared to have them verified. But we need not spend more time on this. I only wanted to give this information to the Hon'ble Members of this House.

Sri A. BHEEMAPPA NAIK.—We said that in the eastern half of the District............

The Hon'ble Sri K. CHENGALARAYA REDDY.—I am just giving the figures for the information of the House.

ಈ ವರ್ಷ ಆಗಿರುವುದು ಅಷ್ಟು. ಸರಾಸರಿ ಆಗಿರುವ ಮಳೆ ಹೆಚ್ಚು ಕಡಮೆ ಇದೆ, ಆದರೆ ಸರಾಸರಿಯು ಹಂಚಿಕೆಯಾಗಿಲ್ಲ. ಮಧ್ಯೆ ಆರೆಂಟುವಾರ ಮಳೆಹೋಗಿ ಹೀಗಾಗಿದೆ.

I am coming to it now. Let us state the position correctly. I am giving you the figures :—

Chitaldrug—average—19·61.
total this year—20·09.
Chellakere—average—14·34.
total this year—13·75.
Hiriyur—average—27·29.
total this year—15·64.
Holalkere—average—20 and odd.
total this year—18.
Davangere—average—21.
total this year—24.
Molakalmuru—average—19.
total this year—18 and odd.
Jagalur—average 18.
total this year—20.

* * * *

These are the actual figures.

ಶ್ರೀ ಎ. ಭೀಮಪ್ಪನಾಯಕರು.—ಹಿಂಗಾರು ಮಳೆ ಬಂದಿದೆ ಅದನ್ನು ಬಿಟ್ಟುಬಿಡಿ. ಅದಕ್ಕೆ ಹಿಂದಿನ ಅಶ್ವಿನಿಮಳೆಯಿಂದ ಯಾವ್ಯಾವಮಳೆ ಎಷ್ಟೆಷ್ಟು ಇಂಚು ಆಗಿದೆ ಎಂಬುದನ್ನು ಹೇಳಿ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಏನು ಹೇಳಬೇಕೆಂದು ಅಭಿಪ್ರಾಯಪಟ್ಟಿದ್ದೇನೆಂದರೆ ಆಯಾ ತಿಂಗಳಿನಲ್ಲಿ ಸರಾಸರಿ ಏನು ಮಳೆ ಆಗುತ್ತಾ ಇತ್ತೋ ಅದೇ ಪ್ರಮಾಣದಲ್ಲಿ ಒಟ್ಟಿನಲ್ಲಿ ಆಗಿದೆ.

ಶ್ರೀ ಎ. ಭೀಮಪ್ಪನಾಯಕರು.—ಒಟ್ಟಿನಲ್ಲಿ ಅಲ್ಲ. ಎಲ್ಲೆಲ್ಲಿ ಎಷ್ಟೆಷ್ಟು ಆಗಿದೆ ಎಂಬುದನ್ನು ತಿಳಿಸಿ.

The Hon'ble Sri K. CHENGALARAYA REDDY.—If the Hon'ble Member wants more information I am perfectly prepared to give it. He need not be in a hurry. I just wanted to say that the figures given by the Hon'ble Member with regard to rainfall are not completely correct and I wanted to state the correct position. That is all what I had in view.

ಆದ್ದರಿಂದ ಮೊದಲೇ ತಿಳಿಸಿದಂತೆ ಈ ಸಲ ಚಿತ್ರದುರ್ಗ ಜಿಲ್ಲೆಯಲ್ಲಿ ಮಾತ್ರ ಅಲ್ಲ ಸಂಸ್ಥಾನದ ಇತರ ಅನೇಕ ಕಡೆಗಳಲ್ಲೂ . . . .

Sri A BHEEMAPPA NAIK.—The Hon'ble Chief Minister goes beyond the scope of the resolution.

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಈ ರೀತಿಯಿಂದ ತೊಂದರೆ ಆಗಿದೆ. ಈಗ ಚಿತ್ರದುರ್ಗ ಜಿಲ್ಲೆ ಕ್ಷಾಮ ಪ್ರದೇಶವೆಂದು ಸಾರಬೇಕೆಂದು ಹೇಳುತ್ತಿದ್ದಾರೆ. ಆದರೆ ಇದು ಚಿತ್ರದುರ್ಗ ಜಿಲ್ಲೆಗೆ ಮಾತ್ರ ಅನ್ವಯಿಸದೆ ಸಂಸ್ಥಾನದ ಇತರ ಕಡೆಗಳಿಗೂ ಅನ್ವಯಿಸುವ ಸ್ಥಿತಿ ಇದೆ ಎಂಬ ಅಂಶವನ್ನು ಸದಸ್ಯರ ಗಮನಕ್ಕೆ ತರಬೇಕಾಗಿದೆಯೆಂದು ಪ್ರಸ್ತಾಪಿಸಿದ್ದೇನೆ. ಈ ವರ್ಷ ಒದಗಿರತಕ್ಕ ದುರವಸ್ಥೆ ಎಂದರೆ ಮಧ್ಯೆ

(ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.) 6 ವಾರ ಮಳೆ ಸಾಕಾದಷ್ಟು ಆಗದೆ ಅನೇಕ ಕಡೆ ಬೆಳೆಗಳಿಗೆ ಧಕ್ಕೆ ಒದಗಿದೆ. ಜನರಿಗೆ, ದನಕರುಗಳಿಗೆ ಬೇಕಾದಷ್ಟು ತೊಂದರೆ ಉಂಟಾಗಿದೆ. ಸುಮಾರು ಜುಲೈ ಮಧ್ಯ ಭಾಗದಿಂದ ಆಗಸ್ಟ್, ಸೆಪ್ಟೆಂಬರ್ ಮಧ್ಯ ಭಾಗದವರೆಗೂ ಸ್ವಲ್ಪ ಹೆಚ್ಚು ಕಮ್ಮಿ ಎರಡುತಿಂಗಳು according to our report here there has been no proper rainfall. ಯಾವಾಗ ಪೈರಿಗೆ ಅತ್ಯಗತ್ಯವಾಗಿ ಮಳೆ ಬೇಕಾಗಿತ್ತೋ ಅಂಥ ಕಾಲದಲ್ಲಿ ಬಾರದೇ ಇದ್ದದ್ದರಿಂದ ಸಂಸ್ಥಾನದ ಕೆಲವು ಪ್ರದೇಶಗಳಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲೂ ತೊಂದರೆ ಉಂಟಾಗಿದೆ. ಇದನ್ನೂ ಮೊದಲೇ ಹೇಳಿದ್ದರೆ ಪ್ರಾಯಶಃ ಸದಸ್ಯರಿಗೆ ಇಷ್ಟೊಂದು ಅನುಮಾನ ಉಂಟಾಗುತ್ತಿರಲಿಲ್ಲ. ಈ ವಿಷಯ ಸರ್ಕಾರದವರು ಸಂಪೂರ್ಣವಾಗಿ ಗಮನಕ್ಕೆ ತೆಗೆದುಕೊಂಡಿಲ್ಲ. ಎಷ್ಟು ತೊಂದರೆ ಇದೆ ಎಂಬುದು ಅವರಿಗೆ ಮನವರಿಕೆಯಾಗಿಲ್ಲ ಎಂದು ಕೆಲವರು ಶಂಕೆ ವ್ಯಕ್ತಪಡಿಸಿದರು. ಆ ರೀತಿ ಇಲ್ಲ ಎಂದು ನಾನು ಹೇಳಬೇಕಾಗಿದೆ. ಈ ಇಂದು ಪರಿಸ್ಥಿತಿ ಒದಗಿದ ಪ್ರಾರಂಭದಲ್ಲೇ ಸರ್ಕಾರದವರು ಎಲ್ಲಾ ಕಡೆಯಿಂದಲೂ ಚಿತ್ರದುರ್ಗ ಜಿಲ್ಲೆಯಲ್ಲೂ ಏನು ತೊಂದರೆ ಇದೆ ಎಂಬುದನ್ನು ತರಿಸಿಕೊಳ್ಳಲು ಎಲ್ಲಾ ಪ್ರಯತ್ನವನ್ನೂ ಮಾಡಿದ್ದಾರೆ. ರೆವಿನ್ಯೂ ಕಮಿಷನರು ಅನೇಕ ಕಡೆ ಸಂಚಾರಮಾಡಿ, ಖುದ್ದು ವಿಷಯಗಳನ್ನು ಪರೀಕ್ಷೆ ಮಾಡಿ, ಡೆಪ್ಯೂಟಿ ಕಮಿಷನರುಗಳ ಮೀಟಿಂಗ್ ಮಾಡಿ ಯಾವ್ಯಾವ ಏರ್ಪಾಡು ಮಾಡಬೇಕೆಂಬುದನ್ನು ಚರ್ಚೆ ಮಾಡಿದ್ದಾರೆ. ಮತ್ತು ಮೈಸೂರಿನಲ್ಲಿ ನಾವು ದಸರಾಕ್ಕೆ ಸೇರಿದ್ದಾಗ ಅಲ್ಲೂ ಡೆಪ್ಯೂಟಿ ಕಮೀಷನರ ಮೀಟಿಂಗ್ ಮಾಡಿ, ಸಂಸ್ಥಾನದಲ್ಲಿ ಎಲ್ಲೆಲ್ಲಿ ಯಾವ್ಯಾವ ತಾಲ್ಲೂಕಿನಲ್ಲಿ ಏನೇನು ಪರಿಸ್ಥಿತಿ ಇದೆ ಎಂಬುದನ್ನು ಕೂಲಂಕಷವಾಗಿ ಚರ್ಚಿಸಿ. ಏನೇನು ಕೆಲಸಕಾರ್ಯ ಮಾಡಬೇಕೋ, ಏರ್ಪಾಡು ಮಾಡಬೇಕೋ ಅದಕ್ಕೆ ಸರ್ಕಾರದವರು ಸಂಪೂರ್ಣ ಗಮನಕೊಟ್ಟು ಆ ಕಾರ್ಯ ಕೈಕೊಂಡಿದ್ದಾರೆ ಎಂಬ ಅಂಶವನ್ನು ಸಭೆಯವರ ಗಮನಕ್ಕೆ ತರಬೇಕಾಗಿದೆ. ಈಗಲೂ ಸಹ ಮೊನ್ನೆ ಮೊನ್ನೆ ಈ ಮಳೆಗಳು ಆದನಂತರ ಪರಿಸ್ಥಿತಿ ಯಾವ ರೀತಿ ಇದೆ ಎಂಬ ಬಗ್ಗೆ ರೆವಿನ್ಯೂ ಕಮೀಷನರು ಪರಿಶೀಲಿಸುತ್ತಿದ್ದಾರೆ. ಅವರಿಂದ latest reports ನ್ನು ಸರ್ಕಾರದವರು ನಿರೀಕ್ಷಿಸುತ್ತಿದ್ದಾರೆ. ಕಷ್ಟ ಇದೆ ಎಂಬುದು ಸರ್ಕಾರದವರ ಗಮನಕ್ಕೆ ಸಂಪೂರ್ಣವಾಗಿ ಬಂದಿದೆ ಎಂದು ನಾನು ತಿಳಿಸಬೇಕಾಗಿದೆ. ಈ ನಿರ್ಣಯ ಚಿತ್ರದುರ್ಗ ಜಿಲ್ಲೆಗೆ ಮಾತ್ರ ಸಂಬಂಧಪಟ್ಟದ್ದಾಗಿದೆ. ಆದರೆ ಇದೇ ಪರಿಸ್ಥಿತಿ ಅಲ್ಲೂ ಎಲ್ಲಾ ಕಡೆಯಲ್ಲೂ ಇಲ್ಲ ಎಂಬುದನ್ನು ಅವರೂ ಒಪ್ಪಿಕೊಳ್ಳುತ್ತಾರೆ. ದಾವಣಗೆರೆ, ಹರಿಹರ ಅಂಥ ಕಡೆ ಅಷ್ಟು ಕಷ್ಟ ಇಲ್ಲ. ಸ್ವಲ್ಪ ಹೆಚ್ಚು ಕಮ್ಮಿ ಸಾಮಾನ್ಯ ಪರಿಸ್ಥಿತಿ ಇದೆ. ಚಿತ್ರದುರ್ಗದಿಂದ ಇತ್ತೀಚೆಗೆ ಬಂದಿರುವ ವರದಿ ಪ್ರಕಾರ ಮೊಳಕಾಲ್ಮುರು, ಚಳ್ಳಕೆರೆ, ಹಿರಿಯೂರಿನ ಕೆಲವು ಭಾಗ, ಚಿತ್ರದುರ್ಗ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಪರಿಸ್ಥಿತಿ ಕಠಿಣವಾಗಿದೆಯೇ ಹೊರತು ಚಿತ್ರದುರ್ಗ ಜಿಲ್ಲೆಯಲ್ಲಿ ಎಲ್ಲಾ ಕಡೆಯೂ ಪರಿಸ್ಥಿತಿ ಕೆಟ್ಟಿದೆ ಎಂದರೆ ಅದನ್ನು ಒಪ್ಪಿಕೊಳ್ಳುವುದಕ್ಕೆ ಕಷ್ಟವಾಗುತ್ತದೆ.

The Hon'ble Member has sent in a resolution that the Chitaldrug District as a whole should be treated as a unit and that some steps should be taken. That will not be correct.

ಈಗ ನಮಗೆ ಬಂದಿರತಕ್ಕ ಇತ್ತೀಚಿನ ವರದಿಯನ್ನೂ ಮಾನ್ಯ ಸದಸ್ಯರ ಅವಗಾಹನೆಗೆ ತರಲಿಚ್ಛಿಸುತ್ತೇನೆ. ಡೆಪ್ಯೂಟಿ ಕಮೀಷನರಿಂದ ಬಂದಿರತಕ್ಕ ವರದಿ ಇದು—

"Wide spread rainfall during the last three weeks has eased the situation to an appreciable extent in the taluks of Davangere, Harihar, Molakalmuru and in........."

"The recent rains have eased the fodder scarcity to a considerable extent in the taluks of Challakere, Molakalmuru and parts of Hosadurga. There is no difficulty for drinking water in this district."

This is the latest report.

ಇದು ವಾಸ್ತವವಾದ ಸ್ಥಿತಿ. ಎಲ್ಲಾ ಜಿಲ್ಲೆಗಳಿಂದಲೂ ಸಹ ವರದಿಗಳನ್ನು ತರಿಸಿಕೊಳ್ಳುತ್ತೇವೆ. ಆದ್ದರಿಂದ ಚಿತ್ರದುರ್ಗ ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಈ ತೊಂದರೆ ಉಂಟಾ

ಗಿದೆಯೇ ಹೊರತು ಎಲ್ಲಾ ಪ್ರದೇಶದಲ್ಲೂ ಉಂಟಾಗಿಲ್ಲ. ಈ ವರ್ಷದ ವೈಶಿಷ್ಟ್ಯ ಎಂದರೆ ಚಿತ್ರದುರ್ಗ ಒಂದೇ ಕಡೆ ಅಲ್ಲ ಸಂಸ್ಥಾನದ ಕೆಲವು ಪ್ರಾಂತ್ಯಗಳಲ್ಲಿ ಬೆಳೆ ಚೆನ್ನಾಗಿದೆ ಕೆಲವು ತಾಲ್ಲೂಕುಗಳಲ್ಲಿ ಚೆನ್ನಾಗಿಲ್ಲ. ಕೋಲಾರ ಜಿಲ್ಲೆಯ 5-6 ತಾಲ್ಲೂಕುಗಳಲ್ಲಿ ತೀರಾ ಕೆಟ್ಟಿದೆ. ಇನ್ನೂ ಕೆಲವು ತಾಲ್ಲೂಕುಗಳಲ್ಲಿ ಸರಿಯಾಗಿದೆ. ತುಮಕೂರು ಜಿಲ್ಲೆಯಲ್ಲೂ ಸಹ ಪಾವುಗಡ, ಕೊರಟಗೆರೆ ಅಲ್ಲೆಲ್ಲಾ ಬಹಳ ಹೀನಸ್ಥಿತಿಯಲ್ಲಿದೆ. ಬೆಂಗಳೂರು ಜಿಲ್ಲೆಯ ಒಂದೆರಡು ತಾಲ್ಲೂಕಿನಲ್ಲೂ ಹಾಗೆಯೇ ಇದೆ. ಕಾನಕಾನಹಳ್ಳಿಯ ಕೆಲವು ಕಡೆ ಹಾಗಿದೆ ಎಂದು ಹೇಳುತ್ತಾರೆ. ಚಿಕ್ಕಮಗಳೂರು ಜಿಲ್ಲೆಯಲ್ಲೂ ಹಾಗೆಯೇ ಇದೆ. ಶಿವಮೊಗ್ಗ ಜಿಲ್ಲೆಯಲ್ಲೂ ಮಳೆ ಕಡಿಮೆ ಬಿದ್ದು ಬೆಳೆಗೆ ಧಕ್ಕೆ ಆಗಿದೆ. ಮೈಸೂರು ಜಿಲ್ಲೆಯಲ್ಲೂ ಒಂದೆರಡು ಕಡೆ ಹೀಗಾಗಿದೆ. ಹೀಗೆಲ್ಲಾ ಇದೆ. ಆದ್ದರಿಂದ ಈ ವರ್ಷ ಈ ಸಮಸ್ಯೆ ಎದುರಿಸಬೇಕಾದರೆ-ಯೂನಿಫಾರಂ ಆಗಿ ಒಂದು ಪ್ರದೇಶವಾಗಲೀ, ಒಂದು ಜಿಲ್ಲೆಯಾಗಲೀ ತೆಗೆದುಕೊಂಡು ಕಾರ್ಯಕ್ರಮ ತೆಗೆದುಕೊಳ್ಳುವುದು ಕಷ್ಟವಾಗುತ್ತದೆ. ಅದು ಸರಿಯಾಗುವುದಿಲ್ಲ. ಸರ್ಕಾರದವರು ನಾನು ಈಗಾಗಲೇ ತಿಳಿಸಿದಂತೆ ಸಂಸ್ಥಾನಾಮಳೆ ಎಲ್ಲೇ ಆದರೂ ಸಹ ಎಲ್ಲೆಲ್ಲಿ ನಿಜವಾಗಿಯೂ ತೊಂದರೆ ಇದೆ ಎಂಬುದನ್ನು ವಾರವಾರಕ್ಕೆ ವರದಿ ತರಿಸಿಕೊಂಡು ಕಾರ್ಯಕ್ರಮ ತೆಗೆದು ಕೊಳ್ಳುವುದಕ್ಕೆ ಸಿದ್ಧವಾಗಿದ್ದಾರೆ. ಆಗಸ್ಟ್, ಸೆಪ್ಟೆಂಬರ್ ಅಕ್ಟೈರಿನಲ್ಲಿ ನೀರಿನ ಅಭಾವ ಜಾಸ್ತಿಯಾಗಿ ಕುಡಿಯುವುದಕ್ಕೂ ಸಹ ತೊಂದರೆಯಾಗುತ್ತದೆ ಎಂಬ ಭೀತಿ ತಲೆದೋರಿತ್ತು. ಚಿತ್ರದುರ್ಗದ ಕೆಲವು ಕಡೆಗಳಲ್ಲಿ ಆ ರೀತಿ ಆಗಿತ್ತು. ಆ ಒಂದು ತೊಂದರೆ ಈಗ ಇಲ್ಲ ಎಂದು ಧಾರಾಳವಾಗಿ ಹೇಳಬಹುದು. ಇತ್ತೀಚೆಗೆ ಆಗಿರತಕ್ಕ ಮಳೆಯ ದೆಶೆಯಿಂದ ಕೆರೆ ಕಟ್ಟೆಗಳಿಗೆ ನೀರು ಬಂದು ದನಕರುಗಳಿಗೆ, ಜನರಿಗೆ ನೀರಿನ ಅಭಾವವೇನೂ ಈಗಿನ ಪರಿಸ್ಥಿತಿಯಲ್ಲಿ ಇಲ್ಲ. ದನಕರುಗಳ ಮೇವು ಇದೂಸಹ ಸೆಪ್ಟೆಂಬರ್ ಅಕ್ಟೈರಿನಲ್ಲಿ ಬಹಳ ಕಳವಳಕ್ಕೆ ಈಡಾಗಿತ್ತು. ಅದಕ್ಕಾಗಿ ಮಲೆನಾಡು ಪ್ರದೇಶವಾದ ಕಡೂರಿನಿಂದ 150 ಟನ್ ಮೇವನ್ನು ತಕ್ಷಣ ರವಾನೆ ಮಾಡಬೇಕೆಂದೂ ಇನ್ನು 150 ಟನ್ ಪ್ರೆಸ್ ಮಾಡಿ ಸಿದ್ಧವಾಗಿಟ್ಟುಕೊಂಡು ಎಲ್ಲಿ ಅಭಾವವಿದೆಯೋ ಅಲ್ಲಿಗೆ ಕಳುಹಿಸುವುದಕ್ಕೆ ಏರ್ಪಾಡು ಮಾಡಿಕೊಳ್ಳುತ್ತಾ ಇದ್ದೆವು. ಇತ್ತೀಚೆಗೆ ಬಂದಿರತಕ್ಕ ವರದಿಯಲ್ಲಿ ಈ ತೊಂದರೆ ಅಷ್ಟಾಗಿ ಕಂಡುಬರುತ್ತಿಲ್ಲ ಎಂಬುದಾಗಿ ಹೇಳಿದ್ದಾರೆ. ಸದಸ್ಯರೂ ಸಹ ಹೇಳಿದರು. ಆದ್ದರಿಂದ ಎಲ್ಲಿ ತೊಂದರೆ ಇದೆ ಎಂಬುದನ್ನು ತಿಳಿದುಕೊಂಡು ಅಲ್ಲಿ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಅದನ್ನು ತೆಗೆದುಕೊಳ್ಳುವುದಕ್ಕೆ ಸರ್ವ ಪ್ರಯತ್ನವನ್ನು ಮಾಡುತ್ತೇವೆ. ಕಾಡು ಪ್ರದೇಶದಲ್ಲಿ ಹುಲ್ಲು ಮೇಯಿಸುವುದಕ್ಕೆ ಇದ್ದ ಪ್ರತಿಬಂಧಕವನ್ನು ತೆಗೆದುಬಿಟ್ಟಿದ್ದೇವೆ.

ಮೂರನೆಯದಾಗಿ ಮಳೆಯ ಅಭಾವದ ವಿಷಯ. ನಾನಾಗಲೇ ಹೇಳಿದಂತೆ ಮಳೆ ಸರಾಸರಿ ಸ್ವಲ್ಪ ಹೆಚ್ಚು ಕಡಿಮೆ ಸಾಕಾದಷ್ಟಾಗಿದೆಯೆಂದು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಆದರೆ ಕೆಲವು ಪ್ರದೇಶಗಳಲ್ಲಿ ಸುಮಾರು ಎರಡು ತಿಂಗಳವರೆಗೂ ಮಳೆ ಹೋದದ್ದರಿಂದ ಬೆಳೆಗಳು ತೀರ ಕೆಟ್ಟುಹೋಗಿ, ಬೆಳೆ ಇದ್ದಹಾಗೆ ಒಂದು ವೇಳೆ ಕಂಡರೂ, ಹತ್ತಿರಹೋಗಿ ಖುದ್ದಾಗಿ ನೋಡಿದರೆ ಒಂದಾಣೆಯದಲ್ಲ, ಒಂದು ಕಾಸಿನಷ್ಟೂ ಬೆಳೆಯಾಗುವುದಿಲ್ಲವೆಂದು ನಾನೇ ಕಣ್ಣಾರೆ ನೋಡಿ ತಿಳಿದಿದ್ದೇನೆ. ಸರ್ಕಾರದವರಿಗೂ ಸಹ ಅದೇರೀತಿ ವರದಿಯಾಗಿದೆ. ಅಂಥ ಕಡೆಗಳಲ್ಲಿ ನಾವು ತಕ್ಕ ಕಾರ್ಯಕ್ರಮಗಳನ್ನು ಜಾಗ್ರತೆ ತೆಗೆದುಕೊಳ್ಳಲೇಬೇಕು. ಅಲ್ಲಿರತಕ್ಕ ಆಹಾರದ ಡಿಪೋಗಳಿಗೆ ಹೆಚ್ಚಾಗಿ ಆಹಾರ ಧಾನ್ಯಗಳನ್ನು ಒದಗಿಸಿಕೊಡಬೇಕು. ಅಲ್ಲದೆ, ಈಗ ಕೆಲವರಿಗೆ ಅಲ್ಲಿ ರೇಷನ್ ಕಾರ್ಡುಗಳನ್ನು ಕೊಟ್ಟಿದ್ದರೂ ಇನ್ನೂ ಅನೇಕರಿಗೆ ಕೊಡಬೇಕಾಗಿದೆ. ಅದರಂತೆ ಈಗಾಗಲೇ ಸೂಚನೆಗಳನ್ನೂ ಕೂಡ ಕೊಟ್ಟಿದ್ದೇವೆ. ಆಹಾರಾಭಾವ ತಲೆದೋರಿರುವ ಮತ್ತು ಬೆಳೆಯಾಗುವ ಸಂಭವವಿಲ್ಲದಿರುವ ಪ್ರದೇಶಗಳಲ್ಲಿ ಡಿಪೋಗಳನ್ನು ಜಾಸ್ತಿ ಮಾಡಬೇಕೆಂದು ತಿಳಿಸಿದ್ದೇವೆ ಮತ್ತು ಆಹಾರವನ್ನು ಅಲ್ಲಿಗೆ ಕಳುಹಿಸಿಕೊಡುವ ವಿಷಯದಲ್ಲಿ ಸ್ವಲ್ಪ ಜಾಸ್ತಿ

(ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.)
preference ಕೊಟ್ಟು ಕಳುಹಿಸಿಕೊಡ ಬೇಕೆಂದೂ ತಿಳಿಸಿದ್ದೇವೆ. ಆದ್ದರಿಂದ ಎಲ್ಲೆಲ್ಲಿಗೆ ಇನ್ನೂ ಸಾಕಾದಷ್ಟು ಪ್ರಮಾಣದಲ್ಲಿ ದವಸ ಹೋಗಿಲ್ಲವೋ ಅಂಥ ಸಂದರ್ಭಗಳನ್ನು ಮಾನ್ಯ ಸದಸ್ಯರು ನಮ್ಮ ಗಮನಕ್ಕೆ ತಂದರೆ, ಅಧಿಕಾರಿ ಗಳಿಗೆ ತಿಳಿವಳಿಕೆ ಕೊಡುವುದರ ಮೂಲಕವಾಗಿ ಯೂ ಮತ್ತಿತರ ರೀತಿಯಲ್ಲೂ ಸಾಧ್ಯವಾದಷ್ಟು ಮಟ್ಟಿಗೆ ಸರಬರಾಯಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ನಾನು ಹೇಳುತ್ತೇನೆ.

ಮಾನ್ಯ ಸದಸ್ಯರು ಪ್ರೊಕ್ಯೂರ್‌ಮೆಂಟ್ ವಿಷಯವನ್ನು ಈ ಸಂದರ್ಭದಲ್ಲಿ ಹೇಳಿದರು. ಬೆಳೆಯಾಗದೆ ಹೋದರೆ ಪ್ರೊಕ್ಯೂರ್ ಮಾಡುವು ದಕ್ಕೆ ಸಾಧ್ಯವೇ ಇಲ್ಲವೆಂಬುದನ್ನು ಹೇಳ ಬೇಕಾಗಿಯೇ ಇಲ್ಲ. ಮಾಡುವುದಕ್ಕೆ ಹೊರಟರೂ ಏನೂ ಸಿಕ್ಕುವುದಿಲ್ಲ. ಅದಕ್ಕೇ ನಿನ್ನೆ ದಿವಸ levy system ನ್ನು ಜಾರಿಗೆ ತಂದರೆ ತೊಂದರೆ ಇದೆಯೆಂದು ಹೇಳಿದ್ದೇವೆ. ಈಗಿನ ಸ್ಥಿತಿಯಲ್ಲಿ ಸಂಗ್ರಹಣ ಮಾಡುವುದಿರಲಿ-ಅವರಿಗೇ ಒದಗಿಸಿ ಕೊಡಬೇಕಾದ ಪರಿಸ್ಥಿತಿ ಬಂದಿದೆ. ಅವರಿಂದ ಏನೂ ತೆಗೆದುಕೊಳ್ಳುವುದಕ್ಕೇ ಆಗುವುದಿಲ್ಲ. ಏನೋ ಅಲ್ಪಸ್ವಲ್ಪ ಬೆಳೆಯಾಗಿರುವ ಕಡೆಗಳಲ್ಲಿ ಸರ್ಪ್ಲಸ್ ಇಲ್ಲದಿರುವ ಸಂದರ್ಭಗಳಲ್ಲಿಯೂ ಅಧಿ ಕಾರಿಗಳು ಕಾರ್ಯೋತ್ಸಾಹದಿಂದ ಅವರಿಂದಲೂ ವಸೂಲು ಮಾಡಲಿಕ್ಕೆ ಪ್ರಯತ್ನ ಮಾಡಿರುತ್ತಾ ರೆಂದು ಅವರು ಸೂಚಿಸಿದರು. ನಿಜವಾಗಿಯೂ ಹಾಗಾಗುತ್ತಿದ್ದರೆ ಸರ್ಕಾರದವರು ಅವುಗಳನ್ನು ವಿಚಾರಿಸಿ ತಕ್ಕ ಕಾರ್ಯಕ್ರಮ ಕೈಕೊಳ್ಳುತ್ತೇ ವೆಂದು ಭರವಸೆ ಕೊಡಬಲ್ಲೆ. ಹೋದದಸಲ ಇದೇ ಸಭೆಯ ಮುಂದೆ ಶ್ರೀಮಾನ್ ಡಿ. ಎಂ. ಸಿದ್ದಯ್ಯ ನವರು ಇಂಥ ಒಂದು ಸಂದರ್ಭವನ್ನು ನಮ್ಮ ಗಮನಕ್ಕೆ ತಂದಿದ್ದರು. ಡೆಪ್ಯೂಟಿ ಕಮಿಷನ ರನ್ನು ವಿಚಾರಿಸಿದ್ದರಲ್ಲಿ ಹಾಗೇನೂ ಆಗಿಲ್ಲವೆಂದು ತಿಳಿಯಬಂತು. ಒಂದುವೇಳೆ ಏನಾದರೂ ಹಾಗಾಗಿದ್ದರೆ ಅದನ್ನು ಸರಿಮಾಡುವುದಕ್ಕೆ ಏರ್ಪಾಡು ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಮುಂದಾ ದರೂ ಆ ರೀತಿ ಆಗದಂತೆ ಮಾಡಿ; ಈಗ ಹಾಗೆ ಕಮ್ಮಿ ಬೆಳೆಯಾಗಿದ್ದರೂ ಹೆಚ್ಚಿಗೆ ವಸೂಲು ಮಾಡಿರುವುದನ್ನು ವಾಪಸು ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

The Hon'ble Sri K. CHENGALARAYA REDDY.—Wherever collection has been done improperly and without fairness, certainly the Government will do everything in their power to rectify it.

ಶ್ರೀ ಡಿ. ಎಂ. ಸಿದ್ದಯ್ಯನವರು.—ನಂಜನ ಗೂಡು ತಾಲ್ಲೂಕಿನಲ್ಲಿ ನಮ್ಮ ಹೋಬಳಿಗೆ ಸೇರಿದ ಗೌರಿಪುರದಲ್ಲಿ ಹೀಗೆ ವಸೂಲು ಮಾಡಿದ್ದಾರೆ. ಅದನ್ನು ವಾಪಸು ಕೊಡಿ ಸುತ್ತೀರಾ ?

The Hon'ble Sri K. CHENGALARAYA REDDY.—I request the Hon'ble Member to send on the information and we shall certainly look into the matter.

ಶ್ರೀ ಎ. ಭೀಮಪ್ಪನಾಯಕರು.—ತಮ್ಮ ಅಧಿಕಾರಿಗಳೇ affected areas ಎಂದು ಒಪ್ಪಿರತಕ್ಕ ಮತ್ತು ಅದೇ ರೀತಿ ಅಭಿಪ್ರಾಯ ಪಟ್ಟಿರತಕ್ಕ ತಾಲ್ಲೂಕುಗಳಲ್ಲಾದರೂ ಪ್ರೊಕ್ಯೂರ್‌ಮೆಂಟ್ ಮಾಡಕೂಡದೆಂದು ಒಂದು ಆರ್ಡರ್ ಹೊರಡಿಸುವುದು ಒಳ್ಳೆಯದು. ಅದಾ ದರೂ ಮಾಡುವುದಕ್ಕೆ ಸಾಧ್ಯವೇ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯ ವರು.—ಅದರಲ್ಲೊಂದು ವಿಚಾರವಿದೆ. ಒಂದು ಕಡೆ 15 ಗ್ರಾಮಗಳಿದ್ದರೆ ಅದರಲ್ಲಿ ಯಾವುದೋ ಒಂದು ಹೋಬಳಿಯಲ್ಲಿ ಮಳೆಯಿಲ್ಲದೆ affected area ಆಗಿರಬಹುದು. ಆದ್ದರಿಂದ ಒಂದು general order ಕೊಟ್ಟುಬಿಟ್ಟು ಅಲ್ಲಿ ಯಾವ ಪ್ರದೇಶದಲ್ಲೂ ಪ್ರೊಕ್ಯೂರ್‌ಮೆಂಟ್ ಮಾಡ ಕೂಡದೆಂದು ಹೇಳಿದರೆ ಏನು ತೊಂದರೆಗಳಾಗ ಬಹುದೆಂಬುದನ್ನು ತಿಳಿಸಬೇಕಾಗಿಲ್ಲ. ಎಲ್ಲೆಲ್ಲಿ ಬೆಳೆಯಾಗಿಲ್ಲವೆಂದು ಹೇಳಿದೆಯೋ ಅಲ್ಲಿ ಪ್ರೊಕ್ಯೂರ್ ಮಾಡುವ ಯೋಚನೆ ಮಾಡಕೂಡ ದೆಂದು ಹೇಳಿದ್ದೇವೆ. ಅಂಥಕಡೆಗೆ ಹೆಚ್ಚಿಗೆ ಆಹಾರ ಧಾನ್ಯಗಳನ್ನು ಕಳುಹಿಸಬೇಕೆಂದೂ ಕೂಡ ತಿಳಿಸಿದ್ದೇವೆ.

ಶ್ರೀ ಎ. ಭೀಮಪ್ಪನಾಯಕರು.—That is all what we want.

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು—ಅಲ್ಲದೆ, ಮಾನ್ಯ ಸದಸ್ಯರೊಬ್ಬರು ಆಗಲೇ ಹೇಳಿದ್ದಾರೆ. 30 ಸೇರು ಧಾನ್ಯವನ್ನು ಪರ್ಮಿಟ್ ಇಲ್ಲದೆ ಸಾಗಿಸಬಹುದೆಂದು ಹೇಳಿದ ಮೇಲೆ open ಮಾರ್ಕೆಟ್ಟಿನಲ್ಲಿ 10-15 ಸೇರು ಧಾರಾಳವಾಗಿ ಸಿಕ್ಕುತ್ತಿದೆಯೆಂದು ಹೇಳಿದ್ದಾರೆ. ಅಲ್ಲದೆ, ಈ ರೀತಿ general ಆರ್ಡರ್ ಕೊಟ್ಟು ನಿಜವಾಗಿ ಬೆಳೆದಿರುವಕಡೆಯಲ್ಲೂ ವಸೂಲಿಯನ್ನು ಬಿಟ್ಟುಬಿಟ್ಟರೆ ಬೇರೇ ಕಡೆ ನಿಜವಾಗಿ ಅವಶ್ಯಕವಾಗಿರುವಕಡೆ ಕೊಡುವುದು ಹೇಗೆ? ಆಮೇಲೆ ಬೆಳೆದಿರುವವರೂ ತಮಗೆ ಕಷ್ಟವಿದ್ದೀ ಕಷ್ಟವಿದೆ ಎಂದು ಹೇಳುವುದಕ್ಕೆ ಹೊರಟರೆ ಎಲ್ಲಿ ನಿಜವಾಗಿಯೂ ಕೊಡಬೇಕಾಗಿದೆಯೋ ಅಲ್ಲಿಗೆ ಕೊಡುವುದಕ್ಕೇ ಕಷ್ಟವಾಗುತ್ತದೆ. ಆ ದೃಷ್ಟಿಯಿಂದ ಮಾನ್ಯ ಸದಸ್ಯರು ಹೇಳಿದಂತೆ general order ಮಾಡುವುದಕ್ಕಾಗದಿದ್ದರೂ, ಆಯಾ ಸಂದರ್ಭಗಳನ್ನು ನೋಡಿಕೊಂಡು ಸೂಕ್ತರೀತಿಯ ಕಾರ್ಯಕ್ರಮ ಕೈಗೊಳ್ಳುತ್ತೇವೆಂದು ಹೇಳುತ್ತೇನೆ.

ಇನ್ನು ರಿಲೀಫ್ ಕಾಮುಗಾರಿಗಳ ವಿಷಯ. ನಮಗೆ ರೆವಿನ್ಯೂ ಕಮಿಷನರಿಂದ ಸೆಪ್ಟಂಬರ್ ಆಖೈರಿನಲ್ಲಿಯೇ ಈ ಬಗ್ಗೆ ಒಂದು ರಿಪೋರ್ಟ್ ಬಂತು. ರಿಲೀಫ್ ಕಾಮುಗಾರಿಗಳಿಗಾಗಿ 20 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಬೇಕೆಂದು ಕೇಳಿದ್ದರು. ಅದು ಸರ್ಕಾರಕ್ಕೆ ಬಂದ ಮಾರನೆಯ ದಿವಸವೇ ಸರ್ಕಾರದವರು 10 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಅದು ಖರ್ಚಾದ ತಕ್ಷಣ ಇನ್ನೂ ಹೆಚ್ಚಿಗೆ ಕೊಡುವುದಕ್ಕೂ ಸಿದ್ಧರಾಗಿದ್ದೇವೆಂಬುದನ್ನೂ ಅವರಿಗೆ ಸೂಚಿಸಿದ್ದೇವೆ. ಆದ್ದರಿಂದ ಇದರ ವಿಷಯದಲ್ಲಿ ಆ ಹಣದ ಅಭಾವದ ಪ್ರಶ್ನೆಯೇನೂ ಇಲ್ಲ. ಹಣದ ಅಭಾವದ ದೆಸೆಯಿಂದ ಈ ರೀತಿ ಕೇವಲ 10 ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದೆಯೆಂದು ಭಾವಿಸಕೂಡದು. ಆ ಹಣದ ಖರ್ಚಿನಿಂದ ಹೊಸದಾಗಿ ಕಾಮುಗಾರಿಗಳನ್ನು ಕೈಗೊಳ್ಳುವುದಲ್ಲದೆ, ಪಿ. ಡಬ್ಲ್ಯು.ಡಿ. ಇಲಾಖೆಯವರೂ, ಗ್ರೋ ಮೋರ್ ಫುಡ್ ಇಲಾಖೆಯವರೂ ಇನ್ನೂ ಏನೇನು ಕೆಲಸಗಳನ್ನು ನಡೆಸಬೇಕೆಂದಿಟ್ಟುಕೊಂಡಿದ್ದಾರೋ ಅವುಗಳೂ ನಡೆಯುತ್ತವೆ. ಪಿಕ್-ಅಪ್‌ಗಳು, ಛಾನಲ್‌ಗಳು, ಕೆರೆಗಳನ್ನು ರಿಪೇರಿ ಮಾಡುವುದು; ಇತರೇ ನೀರಾವರಿ ಕಾಮುಗಾರಿಗಳಿಗೆ ಹಿಂದೆ ಎಂದೂ ಇಲ್ಲದಷ್ಟು ಹೆಚ್ಚಿಗೆ allotmentನ್ನು ನಾವೀಗ ಮಾಡಿದ್ದೇವೆ. ಅದರ ಜೊತೆಗೆ ಈ ರಿಲೀಫ್ ಕಾಮುಗಾರಿಗಳು ಬೇರೆ ಇವೆ. ಆದರಲ್ಲೂ ಹೀಗೆ ತೊಂದರೆಗೆ ಈಡಾಗಿರತಕ್ಕ ಪ್ರದೇಶಗಳಲ್ಲಿ ಹೆಚ್ಚಿಗೆ ಕೆಲಸಗಳನ್ನು ತೆಗೆದುಕೊಂಡು ನಡೆಸಬೇಕೆಂದು ಎಗ್ಜಿಕ್ಯೂಟಿವ್ ಎಂಜನಿಯರಿಗೆ ಹೇಳಿದ್ದೇವೆ. ಅದರಂತೆ ಅವರು ಪ್ರೋಗ್ರಾಂಗಳನ್ನು ಹಾಕಿಕೊಂಡಿದ್ದಾರೆಂದು ಗೊತ್ತಾಗಿದೆ. ಇದಲ್ಲದೆ, ಚಿತ್ರದುರ್ಗದ ಹತ್ತಿರವೇ ಒಂದು excavation ಕಾಮುಗಾರಿಯನ್ನು ಕೈಗೊಳ್ಳಲಾಗಿದೆ.

ಶ್ರೀ ಎ. ಭೀಮಪ್ಪನಾಯಕರು.—ಕನ್ನ ಕಾಮಂಚೂರು ಹತ್ತಿರ.

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು—ಇದಕ್ಕೆ extra ರೂಪವಾಗಿ ಹೆಚ್ಚಿಗೆ ಹಣ ಕೊಟ್ಟಿದ್ದೇವೆ. ಆದರೆ ಇಷ್ಟೆಲ್ಲಾ ಮಾಡಿದ್ದರೂ ಈಗ ಡೆಪ್ಯುಟೀ ಕಮಿಷನರುಗಳು ತಮ್ಮ ಅನುಭವದಮೇಲೆ ವರದಿ ಮಾಡಿರುವುದನ್ನು ನೋಡಿದರೆ ಅನೇಕ ಕಡೆಗಳಲ್ಲಿ ಕೆಲಸಗಳನ್ನು ಷುರು ಮಾಡಿದ್ದರೂ ಸಾಕಾದಷ್ಟು ಜನರೇ ಬರುತ್ತಿಲ್ಲವೆಂದು ಗೊತ್ತಾಗಿದೆ. ಹೀಗಾಗಿ ಹೋದವರ್ಷ ರಿಲೀಫ್ ವರ್ಕ್ಸ್‌ಗಾಗಿ ಕೊಟ್ಟಿದ್ದ ಹಣವೂ ನಿಂತುಹೋಯಿತು. ಈ ವರ್ಷವೂ ಅನೇಕ ಕಡೆಗಳಲ್ಲಿ ನಮ್ಮ ಜನರು ಹೆಚ್ಚಿಗೆ ಬರುತ್ತಿಲ್ಲ. ಅದಕ್ಕೆ ಬದಲಾಗಿ ನಮ್ಮ ಸಂಸ್ಥಾನದ ಸುತ್ತಮುತ್ತಣ ಜಿಲ್ಲೆಗಳಿಂದ ವಿಶೇಷವಾಗಿ ಜನ ಅಲ್ಲಿ ಕೆಲಸಕ್ಕೆ ಬರುತ್ತಿದ್ದಾರೆ. ಆ ಜಿಲ್ಲೆಗಳಲ್ಲಿ ಏನು ವಿಶೇಷ ಪರಿಸ್ಥಿತಿಯಿದೆಯೋ ಗೊತ್ತಿಲ್ಲ. ಅಲ್ಲಿ ಸ್ಥಿತಿಗತಿಗಳು ಇನ್ನೂ ತೀವ್ರವಾಗಿದೆಯೆಂದು ತಿಳಿದುಬಂದಿದೆ. ಅಲ್ಲಿನ ಆಹಾರದ ಸರಬರಾಯಿ ಪದ್ಧತಿ ಬೇರೆ ರೀತಿಯಲ್ಲಿರುವುದರಿಂದ ಬಹುಶಃ ಆ ತೊಂದರೆಗಳನ್ನು ಸಹಿಸಲಾರದೆ ನಮ್ಮ ಕಡೆಗೆ ವಿಶೇಷವಾಗಿ ಜನರು ಬರುತ್ತಿರುವುದು ಕಂಡು

(ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು).
ಬಂದಿದೆ. ಇದರಿಂದ ನಮ್ಮ ಜನರಿಗೆ ಎಲ್ಲಿ ಕೆಲಸ ಸಿಕ್ಕದೆಹೋಗುತ್ತದೆಯೋ ಎಂಬ ಯೋಚನೆಯಿಂದ ಅಲ್ಲಿ ಜನರನ್ನು ಕೂಲಿಗೆ ತೆಗೆದುಕೊಳ್ಳುವ ರೀತಿಯಲ್ಲಿ ಸ್ವಲ್ಪ ವ್ಯತ್ಯಾಸ ಮಾಡಬೇಕಾಗಿ ಬಂತು. ಮೊಟ್ಟಮೊದಲು ನಮ್ಮ ಸಂಸ್ಥಾನದ ಪ್ರಜೆಗಳಿಗೆ ಅವಕಾಶಕೊಟ್ಟು ಆಮೇಲೆ ಹೊರಗಡೆಯವರಿಗೆ ಕೊಡಬೇಕೆಂದು ಮಾಡಿದ್ದೇವೆ. ಈಗಾಗಲೇ ರಿಲೀಫ್ ಕಾಮಗಾರಿಗಳನ್ನು ಕೈಗೊಂಡಿದ್ದಾರೆ. ಡೆಪ್ಯುಟೀ ಕಮಿಷನರ್‌ಗಳು ಮಾಡಿಕೊಂಡಿರುವ ಪ್ರೋಗ್ರಾಂ ಪ್ರಕಾರ ಕೆಲಸ ನಡೆಯುತ್ತಿದೆ. ಆದ್ದರಿಂದ ಅದರ ವಿಚಾರದಲ್ಲೇನೂ ತೊಂದರೆಯಿಲ್ಲ.

ಶ್ರೀ ಎ. ಸುಬ್ಬರಾಯಶೆಟ್ಟರು.—ರಿಲೀಫ್ ಕಾಮಗಾರಿಗಳನ್ನು ಮಾಡಬೇಕೆಂದಿದ್ದರೂ ಕೆಲಸ ಶುರು ಮಾಡುವ ಸಂದರ್ಭದಲ್ಲಿ ಪಂಚಾಯ್ತಿಯವರೂ ಒಂದು ಭಾಗ ವಹಿಸಿಕೊಳ್ಳುವುದಾದರೆ ಮಾಡುತ್ತೇವೆ, ಇಲ್ಲದಿದ್ದರೆ ಇಲ್ಲವೆಂದು ಹೇಳುತ್ತಿದ್ದಾರಲ್ಲಾ!

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಪಂಚಾಯ್ತಿಯಿಂದ ಹಣ meet ಮಾಡಬೇಕೆನ್ನುವ ಸಂದರ್ಭವೇ ಇಲ್ಲ. ಆದರೂ ರಿಲೀಫ್ ವರ್ಕ್ಸ್ ಎಂದು ಹೇಳಿ ಆತುರದಲ್ಲಿ ಜಾಗ್ರತೆ ಜಾಗ್ರತೆ ಮಾಡುವ ಸನ್ನಿವೇಶದಲ್ಲಿ ಹಣ ಪೋಲಾಗದಂತೆ ವಿಚಕ್ಷಣೆಯಿಂದ ಸರಿಯಾದ ರೀತಿನೀತಿಗಳಿಗನುಸಾರವಾಗಿ ಖರ್ಚು ಮಾಡುವಂತೆ ಮಾಡುವುದು ಅಗತ್ಯವಾಗಿದೆ. ಆ ದೃಷ್ಟಿಯಿಂದ ಕಟ್ಟುನಿಟ್ಟಾಗಿ ಕೆಲಸಗಳನ್ನು ಜಾರಿಗೆ ಕೊಡುವುದರಲ್ಲಿ ಒಂದು ವಾರ ಅಥವಾ 15 ದಿವಸ ತಡವಾಗಬಹುದು. ಅದು ಬಿಟ್ಟು ಸುಮ್ಮನೆ ಪಂಚಾಯ್ತಿಗಳವರ ಕೈಯಲ್ಲಿ ಕೊಡಿ ಎಂದು ಹೇಳಿದರೆ, ಹಣವೇನೋ ಖರ್ಚಾದಂತಾಗುತ್ತದೆ. ತಕ್ಕ ಪ್ರತಿಫಲವೇನೂ ಇರುವುದಿಲ್ಲ. ಆದ್ದರಿಂದ ಇದಕ್ಕೆ ಅವಕಾಶವಿಲ್ಲದಂತೆ ಜಾಗರೂಕತೆಯಿಂದ ಹೋಗಬೇಕಾಗಿ ಬಂದಿದೆ. ಅಷ್ಟೇಹೊರತು ಪಂಚಾಯ್ತಿಯವರೂ ಮಾಡುವ ಕೆಲಸಕ್ಕೂ ಇದಕ್ಕೂ ಸಂಬಂಧವಿಲ್ಲ. ಅವೇ ಬೇರೆ ಕೆಲಸಗಳು.

ಶ್ರೀ ಎ. ಸುಬ್ಬರಾಯಶೆಟ್ಟರು.—ಹಾಗಾದರೆ ನಮ್ಮಕಡೆಯಲ್ಲಿ ಕೂಲಿಗಾರರು ಬೇಕಾದಷ್ಟು ಜನರಿದ್ದೂ ಇನ್ನೂ ಕೆಲಸ ಶುರು ಮಾಡಿಯೇ ಇಲ್ಲವಲ್ಲ!

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅವರು ಹೇಳುವುದು ಯಾವುದೋ ನನಗೆ ಗೊತ್ತಿಲ್ಲ. ಕಾನೂನುಬದ್ಧವಾಗಿ ಇದಕ್ಕೆ ಬೇಕಾಗುವ ಖರ್ಚನ್ನು ಸಭೆಯಮುಂದೆ ತಂದು ಸಭೆಯವರ ಒಪ್ಪಿಗೆ ಪಡೆಯಬೇಕಾಗಿದೆ. ಅಂಥಾದ್ದನ್ನೂ ನೋಡದೆ ಅವರು ಕೆಲಸವನ್ನು ಕೈಗೊಳ್ಳಬಹುದೆಂದು ನಾವು ಹುಕ್ಕುಂ ಮಾಡಿದ್ದೇವೆ. ಸಧ್ಯದಲ್ಲೇ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ. ಒಟ್ಟಿನಲ್ಲಿ ನಾನಾಗಲೇ ಹೇಳಿದಂತೆ ಚಿತ್ರದುರ್ಗ ಜಿಲ್ಲೆಯಲ್ಲಿ ಕೆಲವುಕಡೆ ಈ ಕಷ್ಟಪರಿಸ್ಥಿತಿ ಇದೆ. ಇದನ್ನು ಕ್ಷಾಮಪೀಡಿತ ಪರಿಸ್ಥಿತಿಯಿರುವ ಪ್ರದೇಶವೆಂದು ಹೇಳುವುದು ಅನಾವಶ್ಯಕವೆಂದು ಈ ನಿರ್ಣಯದ ಸೂಚಕರೇ ಒಪ್ಪಿದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ಅನಾನುಕೂಲ, ತೊಂದರೆಗಳು ಇರತಕ್ಕ ಕಡೆಗಳಲ್ಲಿ ದನಗಳ ಮೇವು, ಆಹಾರದ ಪದಾರ್ಥಗಳು ಮತ್ತು ರಿಲೀಫ್ ವರ್ಕ್ಸ್ ಇವುಗಳನ್ನೊದಗಿಸುವ ವಿಷಯಕ್ಕೆ ಸರ್ಕಾರದವರು ಗಮನ ಕೊಟ್ಟಿದ್ದಾರೆ. ಮುಂದೆಯೂ ಕೊಡುತ್ತಾರೆ. ಸಾಧ್ಯವಾದಷ್ಟೂ ಜನರಿಗೆ ಅನುಕೂಲವನ್ನೊದಗಿಸಲು ಸರ್ವದಾ ಸಿದ್ಧವಾಗಿದ್ದಾರೆಂಬ ಭರವಸೆಯನ್ನು ಕೊಡುತ್ತೇನೆ.

ಶ್ರೀ ಎ. ಭೀಮಪ್ಪನಾಯಕರು.—ಸರ್ಕಾರದವರು ಕೊಟ್ಟ ಭರವಸೆಯಿಂದ ಈ ಠರಾವಿನ ಉದ್ದೇಶ ಸಾಧನೆಯಾಗುತ್ತದೆನ್ನಿಸುತ್ತಿದೆ. ಈ ಭರವಸೆಗಾಗಿ ಸರ್ಕಾರದವರಿಗೆ ವಂದನೆಗಳನ್ನರ್ಪಿಸಿ, ಈ ಕಾರ್ಯ ಬೇಗ ಆಗುವಂತೆ ಮಾಡಬೇಕೆಂದು ಪ್ರಾರ್ಥಿಸಿ ಈ ನಿರ್ಣಯವನ್ನು ವಾಪಸು ತೆಗೆದುಕೊಳ್ಳಲು ಸಭೆಯ ಅಪ್ಪಣೆ ಬೇಡುತ್ತೇನೆ.

The resolution was, by leave, withdrawn.

Mr. SPEAKER.—The House will now adjourn for lunch for half an hour.

———

The House adjourned for Lunch at Twelve Minutes past Three of the Clock and re-assembled at Fifty Minutes past Three of the Clock, Mr. Speaker (The Hon'ble Sri V. Venkatappa) in the Chair.

Resolution No. 3.

Sanction of additional allotment for grant of scholarships to scheduled caste students in the University.

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ—ನಿಮ್ನ ಪಂಗಡ).—ಸ್ವಾಮಿ, ನನ್ನ ನಿರ್ಣಯವು ಈ ರೀತಿಯಾಗಿದೆ:—

"This Assembly is of the opinion that additional allotment required for awarding scholarships to all the deserving scheduled castes students studying in the various university institutions in the State be sanctioned very early for the current year, *i.e.*, 1951-52."

ಸರ್ಕಾರದವರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡತಕ್ಕ ನಿಮ್ನ ತರಗತಿ ವಿದ್ಯಾರ್ಥಿಗಳ ಅಭಿವೃದ್ಧಿ ಬಗ್ಗೆ ಈವರ್ಷ ಒಂದು ಮೊತ್ತವನ್ನು ವಿದ್ಯಾರ್ಥಿ ವೇತನಕ್ಕಾಗಿ ಬಡ್ಜೆಟ್ಟಿನಲ್ಲಿ ಒದಗಿಸಿದ್ದಾರೆ. ಇಷ್ಟೇ ಮೊಬಲಗನ್ನು ಕಳೆದ ಸಾಲಿನಲ್ಲಿಯೂ ಒದಗಿಸಲಾಗಿತ್ತು. ಆದರೆ ಈ ಸಾಲಿನಲ್ಲಿ ಹಾಗೆ ಒದಗಿಸಲಾಗಿರುವ ಮೊಬಲಗು ಸಾಲದು, ಇದನ್ನು ಹೆಚ್ಚಿಸಿ, ಈಗ ವಿಶ್ವವಿದ್ಯಾನಿಲಯದಲ್ಲಿ ಎಷ್ಟು ಜನರು ವ್ಯಾಸಂಗ ಮಾಡುತ್ತಿದ್ದಾರೋ ಮತ್ತು ಅಂಥವರ ಪೈಕಿ ಎಷ್ಟು ವಿದ್ಯಾರ್ಥಿಗಳು ವಿದ್ಯಾರ್ಥಿವೇತನ ಪಡೆಯಲಿಕ್ಕೆ ಅರ್ಹರಾಗಿದ್ದಾರೋ ಅವರಿಗೆಲ್ಲಾ ದೊರೆಯುವಂತೆ ಈ ಮೊಬಲಗನ್ನು ಹೆಚ್ಚಿಸಬೇಕೆಂದು ನಾನೀಗ ಈ ನಿರ್ಣಯವನ್ನು ಸಭೆಯ ಮುಂದೆ ತಂದಿದ್ದೇನೆ. ಆದರೆ ನಾನು ಅರ್ಹತೆಯುಳ್ಳವರಿಗೆಲ್ಲಾ ಎಂಬ ಪದವನ್ನು ನಿರ್ಣಯದಲ್ಲಿ ಉಪಯೋಗಿಸಿರುವುದರಿಂದ ಇದರ ಬಗ್ಗೆ ಸ್ವಲ್ಪ ಅರ್ಥವಿವರಣೆ ಕೊಡುವುದು ಅತ್ಯಾವಶ್ಯಕವಾಗಿದೆ. ಈ ವಿದ್ಯಾರ್ಥಿವೇತನವನ್ನು ಕೊಡತಕ್ಕದ್ದರ ಬಗ್ಗೆ ಕೆಲವು ನಿಯಮಾವಳಿಗಳಿವೆ. ಇವುಗಳಲ್ಲಿ ಮೊಟ್ಟಮೊದಲನೆಯದು ಬಡತನ. ಅದರ ಜೊತೆಗೆ ವಿದ್ಯಾರ್ಥಿಗಳ ಮೇಧಾಶಕ್ತಿ ಮತ್ತು ಜಾಣತನ. ಈ ಎರಡು ಅರ್ಹತೆಗಳ ಜೊತೆಗೆ ಪ್ರತಿವರ್ಷವೂ ಹಿಂದುಳಿಯದೆ ಕ್ರಮ ಕ್ರಮವಾಗಿ ಉತ್ತೀರ್ಣನಾಗುವುದು. ನಂತರ ಒಂದು ವರ್ಷ ಮಾತ್ರ ಉತ್ತೀರ್ಣನಾಗದೆ ಇದ್ದವನ್ನು, ನಂತರ ಎರಡು ವರ್ಷಗಳ ಕಾಲ ಉತ್ತೀರ್ಣರಾಗದೆ ಇರುವವರು ಎಂಬ ಈ ಕ್ರಮಗಳೆಲ್ಲಾ ಅನುಸರಿಸಲಾಗುತ್ತಿದೆ, ಇದರ ಜೊತೆಗೆ ಇನ್ನೂ ಕೆಲವು ನಿಯಮಗಳನ್ನು ಅನುಸರಿಸಲಾಗುತ್ತಿದೆ. ಅವುಗಳೇನೆಂದರೆ satisfactory conduct and character ಅಂದರೆ ಯೋಗ್ಯತೆ ಮತ್ತು ಒಳ್ಳೆ ನಡತೆ—ಯಾರು ಯೋಗ್ಯ ರೀತಿಯಲ್ಲಿ ವರ್ತಿಸುತ್ತಾರೋ ಅಂಥವರುಗಳೆಲ್ಲರಿಗೂ ಈ ನನ್ನ ನಿರ್ಣಯದ ಉಪಯೋಗ ದೊರಕಬೇಕೆಂಬುದೇ ನನ್ನ ಅರ್ಥ ಮತ್ತು ಉದ್ದೇಶ. ಹಿಂದೆ ತಾವು ಹರಿಜನರ ಮಕ್ಕಳಿಗೆಂದು ಹೇಳುತ್ತಿದ್ದದರ ಜೊತೆಗೆ ಈಗ ಷೆಡ್ಯೂಲ್ಡ್ ತರಗತಿಯ ವಿದ್ಯಾರ್ಥಿಗಳಿಗೆಲ್ಲಾ ಇದು ಅನ್ವಯಿಸಿ ಅವರುಗಳಿಗೆ ಅನುಕೂಲ ದೊರೆಯುವಂತೆ ಮಾಡಬೇಕೆಂಬುದೇ ಈ ನನ್ನ 'ಅರ್ಹರಾದಂಥ' ಎಂಬ ಪದದ ಅರ್ಥ. ವಿದ್ಯಾರ್ಥಿವೇತನವನ್ನು ಕೊಡುವ ನೀತಿಯ ವಿಚಾರದಲ್ಲಿ ಸರ್ಕಾರದವರು ಕೆಲವು ವರ್ಷಗಳಿಂದ ಒಂದು ಕ್ರಮವನ್ನು ಅನುಸರಿಸುತ್ತಿದ್ದಾರೆ. ಅದೇನೆಂದರೆ ಪ್ರತಿವರ್ಷವೂ ಬಡ್ಜೆಟ್‌ನಲ್ಲಿ ಒಂದು ಗೊತ್ತಾದ ಮೊಬಲಗನ್ನು ಮೀಸಲಾಗಿಡುವುದು. ಮೀಸಲಾಗಿ ಪ್ರಾರಂಭದಲ್ಲಿಟ್ಟು ಅದನ್ನು ವರ್ಷದ ಮಧ್ಯದಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ನೋಡಿಕೊಂಡು ಹೆಚ್ಚಿಸುತ್ತಾರೆ. ಇರುವುದನ್ನು ಕೊಟ್ಟು ಉಳಿದವರಿಗಾಗಿ ಅಡೀಷನಲ್ ಗ್ರಾಂಟನ್ನು ಕೊಡುತ್ತಾರೆ. ಈ ರೀತಿಯಾಗಿ ಒಂದು ಪಾಲಿಸಿ ಅನುಸರಿಸಿಕೊಂಡು ಬಂದಿದ್ದಾರೆ. ಕಳೆದ ಸಾಲಿನಲ್ಲೂ ಬಡ್ಜೆಟ್ಟಿನಲ್ಲಿ ಒದಗಿಸಿರುವುದು ಸಾಕಾಗುವುದಿಲ್ಲ, ರೇಟ್ ಸಾಲದು ಎಂದು ಮಾನ್ಯ ಸದಸ್ಯರು ಒತ್ತಾಯ ಮಾಡಿದ ಮೇಲೆ ಸರ್ಕಾರದವರು ತಮ್ಮ ಉದಾರ ನೀತಿಗನುಗುಣವಾಗಿ ವಿದ್ಯಾರ್ಥಿ ವೇತನಗಳ ಹಣವನ್ನು ಹೆಚ್ಚಿಸಿದುದಲ್ಲದೆ

(ಶ್ರೀ ಎಂ. ಮಾದಯ್ಯನವರು).

ಅಡೀಷನಲ್ ಗ್ರಾಂಟ್ ಸಹ ಮಂಜೂರು ಮಾಡಿದರು. ಅದೇ ರೀತಿ ಈ ವರ್ಷದ ಬಡ್ಜೆಟ್ಟನ್ನು ತಯಾರುಮಾಡುವಾಗ ಸ್ವಲ್ಪ ಹೆಚ್ಚು ಗ್ರಾಂಟನ್ನು ಒದಗಿಸಿದ್ದರೆ ಪ್ರಾಯಶಃ ಇಂಥ ಒಂದು ಒತ್ತಾಯವೂ ಮತ್ತು ನಿರ್ಣಯವೂ ಬರುವ ಅಗತ್ಯವಿರಲಿಲ್ಲ. 1951-52 ನೆಯ ಸಾಲಿನಲ್ಲಿ ಬಡ್ಜೆಟ್ ತಯಾರಿಸುವಾಗ ಕಳೆದ ಸಾಲಿನಲ್ಲಿ ಕೊಟ್ಟದ್ದ ಅಡೀಷನಲ್ ಗ್ರಾಂಟನ್ನೂ ಸೇರಿಸಿ ಹಣ ಒದಗಿಸಿದ್ದರೆ ಚೆನ್ನಾಗಿತ್ತು. ಹಾಗೆ ಮಾಡದೆ ಬಿಟ್ಟಿದ್ದರಿಂದ ಬಹಳ ಮಂದಿ ಓದುವ ಮಕ್ಕಳಿಗೆ ಅನಾನುಕೂಲವಾಗಿದೆ. ಹಣದ ಅಭಾವದಿಂದ ಸಕಾಲದಲ್ಲಿ ವಿದ್ಯಾರ್ಥಿ ವೇತನ ಪಾವತಿಯಾಗದೇ ನಿಂತುದರಿಂದ ಹಾಸ್ಟೆಲಿಗೆ ಹಣ ಪಾವತಿ ಮಾಡಲು ಅವಕಾಶವಿಲ್ಲದೆ ಹೋಗಿದೆ. ಆದ್ದರಿಂದ ಹಾಸ್ಟಲು ನಡೆಸುವವರು ಅದನ್ನು ಹೇಗೆ ಮುಂದುವರಿಸಬೇಕೆಂದು ಬಹಳವಾಗಿ ಆಲೋಚನೆ ಮಾಡುತ್ತಿದ್ದಾರೆ. ಕಳೆದ ಸಾಲಿನಲ್ಲೂ ಈ ವಿಚಾರ ಒತ್ತಾಯ ಮಾಡಿದೆ. ಹಿಂದೆ ಸರ್ಕಾರದವರು ಉದಾರ ನೀತಿಯನ್ನು ಅನುಸರಿಸಿ ಸ್ವಲ್ಪ ಮಾರ್ಪಾಡು ಮಾಡಿ ಹೆಚ್ಚಿನ ಅನುಕೂಲವನ್ನು ಮಾಡಿಕೊಟ್ಟಿದ್ದರು. ಪದೇ ಪದೇ ಇಂಥ ನಿರ್ಣಯದ ಒತ್ತಾಯ ಇಂಥ ಸಭೆಯ ಮುಂದೆ ಅಥವಾ ಸರ್ಕಾರದ ಮುಂದೆ ಬಾರದಿರುವಂತೆ ಏರ್ಪಾಡು ಮಾಡಬೇಕೆಂದು ಅರಿಕೆ ಮಾಡುತ್ತೇನೆ. ಬಡ್ಜೆಟ್ ತಯಾರಿಸುವಾಗ ಹಿಂದಿನ ಸಾಲಿನ ಅಂಕಿ ಅಂಶಗಳನ್ನು ನೋಡಿ ಅದಕ್ಕಿಂತ ಸ್ವಲ್ಪ ಹೆಚ್ಚಾಗಿ ಹಣ ಒದಗಿಸಿದರೆ ಅನುಕೂಲ. ಆ ರೀತಿ ಮಾಡದಿರುವುದರಿಂದ ವಿದ್ಯಾರ್ಥಿ ವೇತನ ಸಿಕ್ಕುತ್ತದೆಯೋ ಇಲ್ಲವೋ ಎಂಬ ಯೋಚನೆ ವಿದ್ಯಾರ್ಥಿಗಳಿಗೆ ಬಂದು ತಾಪತ್ರಯಪಡಬೇಕಾಗುತ್ತದೆ. ಅವರ ತಂದೆ ತಾಯಿಗಳಿಗೆ ಖರ್ಚಿಟ್ಟು ಓದಿಸಲು ಶಕ್ತಿಯಿರುವುದಿಲ್ಲ, ಸಾಲ ಮಾಡಿಕೊಡುವುದಕ್ಕೆ ವಿದ್ಯಾರ್ಥಿ ವೇತನ ದೊರೆಯುತ್ತದೆಯೋ ಇಲ್ಲವೋ ಎಂಬ ಅನುಮಾನ, ಹೀಗಾಗಿ ಅನೇಕ ತೊಂದರೆಗೆ ಕಾರಣವಾಗುತ್ತದೆ. ಆದ್ದರಿಂದ ಸರ್ಕಾರ ಅನುಸರಿಸುತ್ತಿರುವ ನೀತಿಯನ್ನು ಬದಲಾಯಿಸಿ ಸ್ವಲ್ಪ ಹಣ ಉಳಿದರೂ ಚಿಂತೆಯಿಲ್ಲ, ಬಡ್ಜೆಟ್ಟಿನಲ್ಲಿ ತೋರಿಸಿರುವ ಹಣ ಎಷ್ಟೋ ಬಾಬುಗಳಲ್ಲಿ ಉಳಿಯುತ್ತಿದೆ; ಹಣ ಉಳಿದರೆ ನಷ್ಟವಿಲ್ಲ, ಸರ್ಕಾರದಲ್ಲೇ ಇರುತ್ತದೆ—ಎಂಬುದನ್ನು ಮನಗಂಡು ಸ್ವಲ್ಪ ಹೆಚ್ಚು ವೊಬಲಗನ್ನು ಈ ಬಾಬಿಗಾಗಿ ಒದಗಿಸಬೇಕು.

ಅದರ ಅಗತ್ಯದ ವಿಚಾರ ತಮಗೆ ಗೊತ್ತೇ ಇದೆ. ಗ್ರಾಮಾಂತರಗಳಿಂದ ಸಮಾಜದಲ್ಲಿ ಹಿಂದುಳಿದಿರುವ ಮಕ್ಕಳು ಬಂದು ಪಟ್ಟಣಗಳಲ್ಲಿ ವ್ಯಾಸಂಗ ಮಾಡುವುದಕ್ಕೆ ಎಷ್ಟು ಕಷ್ಟವಿದೆಯೆಂಬುದು ಗೊತ್ತೇ ಇದೆ. ವಿಶ್ವವಿದ್ಯಾನಿಲಯದ ಕಮಿಷರ್ನವರು ರೂರಲ್ ಯೂನಿವರ್ಸಿಟಿ ಮಾಡಬೇಕೆಂದು ಸೂಚನೆ ಕೊಟ್ಟಿದ್ದಾರೆ. ಪ್ರಾಯಶಃ ಹಳ್ಳಿಗಳಲ್ಲಿ ರೂರಲ್ ಯೂನಿವರ್ಸಿಟಿಗಳನ್ನು ಏರ್ಪಾಡು ಮಾಡಿದರೆ ಪಟ್ಟಣಗಳಲ್ಲಿ ಬಂದು ವ್ಯಾಸಂಗ ಮಾಡುವುದು ತಪ್ಪಿ ಹಣದ ಕೊರತೆ ಕಡಮೆಯಾಗಬಹುದೆಂದು ಕಾಣುತ್ತದೆ. ಪ್ಲಾನಿಂಗ್ ಕಮಿಷನವರು ತಮ್ಮ ಪ್ಲಾನ್‌ನಲ್ಲಿ ಇದನ್ನು ಪ್ರಸ್ತಾಪ ಮಾಡಿದ್ದಾರೆ. ಪ್ರಾಯಶಃ 5 ವರ್ಷಗಳ ಅವಧಿಯಲ್ಲಿ ಕೆಲವು ಕಡೆ ರೂರಲ್ ಯೂನಿವರ್ಸಿಟಿ ಸ್ಥಾಪನೆ ಮಾಡಬಹುದೆಂದು ಹೇಳಿದ್ದಾರೆ. ಬೇಗ ಬಡ ಮಕ್ಕಳ ವಿದ್ಯಾಭ್ಯಾಸ ಮುಂದುವರಿಯುವುದಕ್ಕೆ ಅನುಕೂಲವಾಗಬೇಕು. ನಿತ್ಯ ಜೀವನದ ವೆಚ್ಚ ಹೆಚ್ಚಿದೆ, ಪಟ್ಟಣಗಳಿಗೆ ಬರದೆ ಹಳ್ಳಿಗಳಲ್ಲೇ ವ್ಯಾಸಂಗ ಮಾಡಲು ಸುಲಭವಾಗುತ್ತದೆ ಎಂಬುದನ್ನು ಮನಗಾಣಬೇಕು. ಪಟ್ಟಣಗಳಲ್ಲಿ ನಿಮ್ನ ವರ್ಗದವರಿಗೆ ಹಾಸ್ಟೆಲುಗಳಿವೆ. ಆದರೆ ಎಷ್ಟೇ ಕಡಮೆ ಖರ್ಚು ಮಾಡಿದರೂ ಸರಾಸರಿ ತಿಂಗಳಿಗೆ 25 ರಿಂದ 30 ರೂಪಾಯಿಗಳವರೆಗೆ ಖರ್ಚಾಗುತ್ತದೆ. ಮೈಸೂರು ಮಹಾರಾಜ ಕಾಲೇಜು ಮತ್ತು ಬೆಂಗಳೂರು ಸೆಂಟ್ರಲ್ ಕಾಲೇಜು ಹಾಸ್ಟೆಲುಗಳಲ್ಲಿ ಸಾಧಾರಣವಾಗಿ ತಿಂಗಳಿಗೆ 50 ರೂಪಾಯಿಗಳಿಗೆ ಮೇಲ್ಪಟ್ಟು ಖರ್ಚಾಗುತ್ತದೆ. ಅದು ಅನುಕೂಲಸ್ಥರಿಗೆ ಸಂಬಂಧಪಟ್ಟದ್ದು. ಶಾಖಾಹಾರಿಗಳಿಗೆ ಖರ್ಚ

ಗುವುದಕ್ಕಿಂತ ಮಾಂಸಾಹಾರಿಗಳಿಗೆ ಹೆಚ್ಚು ಖರ್ಚಾಗುತ್ತದೆ. ರೇಷನ್ ಕಡಿಮೆಯಾಗಿ ಮಕ್ಕಳು ಇತರ ಪದಾರ್ಥಗಳನ್ನು ಕೊಂಡು ಜೀವನ ಮಾಡಬೇಕಾಗಿರುವ ಕಾಲ ಬಂದಿರುವುದರಿಂದ ಕಳೆದ ಸಾಲಿನಲ್ಲಿ ಮಾಹೆಯಾನ 28 ರೂಪಾಯಿಗಳ ಖರ್ಚಿದ್ದುದು ಈಗ ಸರಾಸರಿ ತಿಂಗಳಿಗೆ 35ಕ್ಕೆ ಏರಿದೆ. ತಿಂಗಳಿಗೆ 30 ರೂಪಾಯಿ ಎಂದರೂ ಹತ್ತು ತಿಂಗಳಿಗೆ 300 ರೂಪಾಯಿ ಆಗುತ್ತದೆ. ಇದರ ಜೊತೆಗೆ ಪುಸ್ತಕಗಳು, ಬಟ್ಟೆ, ವಗೈರೆ ಖರ್ಚಿಗೆ ಹಣ ಬೇಕು. ಅದಕ್ಕೆ ಸಾಲಿಯಾನಾ ಸುಮಾರು 150 ರೂಪಾಯಿ ಖರ್ಚಾಗುತ್ತದೆ. ಒಟ್ಟಿನಲ್ಲಿ 450 ರೂಪಾಯಿಗಳವರೆಗೆ ಖರ್ಚಿದೆಯೆಂದ ಮೇಲೆ ಬಡವರು ಇಷ್ಟು ಹೊರೆ ಹೊರಲು ಹೇಗೆ ಸಾಧ್ಯ? ಅನುಕೂಲಸ್ಥರಿಗೆ ಪಟ್ಟಣಗಳಲ್ಲಿ ಸುಮಾರು 800 ರೂಪಾಯಿಗಳವರೆಗೆ ಖರ್ಚಾಗುತ್ತದೆ. ಹೀಗಿರುವಾಗ ಹಿಂದಿನ ಸಾಲಿನಲ್ಲಿ ಪಟ್ಟಣಗಳಲ್ಲಿ ವ್ಯಾಸಂಗ ಮಾಡುವ ನಿಮ್ಮ ವರ್ಗದ ವಿದ್ಯಾರ್ಥಿಗಳಿಗೆ ಕೊಡುತ್ತಿರುವ ವಿದ್ಯಾರ್ಥಿವೇತನವನ್ನು ಅಂದರೆ ಇಂಟರ್ ಮೀಡಿಯೆಟ್ ಕಾಲೇಜಿನಲ್ಲಿರುವವರಿಗೆ ಸಾಲಿಯಾನಾ ವಿದ್ಯಾರ್ಥಿಗೆ 100 ರೂಪಾಯಿಗಳು ಮತ್ತು ಡಿಗ್ರಿ ಕ್ಲಾಸಿನಲ್ಲಿ ವ್ಯಾಸಂಗ ಮಾಡುವವರಿಗೆ 150 ರೂಪಾಯಿಗಳು ಇದ್ದುದು ರೇಟ್ ಹೆಚ್ಚಿಸಿದ ಮೇಲೆ ಡಿಗ್ರಿ ಕ್ಲಾಸಿಗೆ 200 ರೂಪಾಯಿಗಳು, ಇಂಟರ್ ಮೀಡಿಯೆಟ್ ಕ್ಲಾಸಿಗೆ 150 ರೂಪಾಯಿಗಳು ದೊರೆಯುತ್ತಿದೆ. ಬಡ ಮಕ್ಕಳ ಮೇಲೆ ಜೀವನದ ವೆಚ್ಚ ಹೆಚ್ಚಿರುವುದರಿಂದ ಹೆಚ್ಚಿನ ಹೊರೆ ಬೀಳುತ್ತಿದೆ. ನಾನು ಜವಾಬ್ದಾರಿಯುಳ್ಳ ಶಾಸನಸಭಾ ಸದಸ್ಯನಾಗಿರುವುದರಿಂದ ಜನರ ಕಷ್ಟ ಸುಖಗಳನ್ನು ಅರಿಕೆ ಮಾಡಬೇಕಾದ್ದು ನನ್ನ ಕರ್ತವ್ಯ. ವಿಶ್ವವಿದ್ಯಾನಿಲಯದಲ್ಲಿ ವಿದ್ಯಾಭ್ಯಾಸಕ್ಕಾಗಿ ಬರುತ್ತಿರುವ ಇತರ ಪಂಗಡಗಳ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿ ಲಕ್ಷಗಟ್ಟಲೆ ಖರ್ಚು ಏರುತ್ತಿದೆ. ಸುಮಾರು ಮೂರು ಕೋಟಿ ರೂಪಾಯಿಗಳವರೆಗೂ ಎಲ್ಲಾ ಗ್ರೇಡಿನ ವಿದ್ಯಾಭ್ಯಾಸಕ್ಕಾಗಿ ಸಾಲಿಯಾನ ಖರ್ಚಾಗುತ್ತಿದೆ. ಆದರೆ ಇಷ್ಟೆಲ್ಲಾ ಖರ್ಚು ಮಾಡುತ್ತಿರುವುದು ಪ್ರಜೆಗಳಿಗಾಗಿ. ಅನುಕೂಲಸ್ಥರೇನೋ ಎಷ್ಟೇ ಖರ್ಚಾದರೂ ವಿದ್ಯಾಭ್ಯಾಸವನ್ನು ಮುಂದುವರೆಸಲು ಸಾಧ್ಯ. ಜೀವನ ವೆಚ್ಚ ಹೆಚ್ಚಿರುವಾಗ ಬಡವ ಹಾಗೆ ಮಾಡಲು ಸಾಧ್ಯವಿಲ್ಲ. ಅಂಥವನು ಓದಲು ಇರುವ ಅನುಕೂಲ ಸಾಲದು. ಅದಕ್ಕೆ ತಕ್ಕ ಪ್ರೋತ್ಸಾಹ ನೀಡಬೇಕಾದ್ದು ಅತ್ಯಗತ್ಯವಾದುದು.

ಬಡವರು ವಿದ್ಯೆಯಲ್ಲಿ ಮುಂದುವರಿಯುವ ಈ ವಿಚಾರದಲ್ಲಿ ನಾನು ಪ್ಲಾನಿಂಗ್ ಕಮಿಷನರು ತಯಾರಿಸಿರತಕ್ಕ ಐದು ವರ್ಷದ ಯೋಜನೆಯಲ್ಲಿ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ ಹೇಳಿರುವ ಕೆಲವು ಅಂಶಗಳನ್ನು ಓದಿದರೆ ಸಭೆಯವರಿಗೆ ವೇದ್ಯವಾಗುತ್ತದೆ.

"The cost of education that falls on the average family is another matter which calls for serious consideration. It is becoming almost prohibitive for the middle classes, especially at the university stage, and it tends to keep many promising boys and girls out of higher institutions because they have not the means to pay for their education."

ಈಗ ಉದಾಹರಣೆಗೆ ನಿಮ್ಮ ತರಗತಿಯವರು ಅವರ ಮಕ್ಕಳಿಗೆ ಪ್ರೈಮರಿ ಸ್ಕೂಲಿನಲ್ಲಿ 4 ವರ್ಷ, ಮಿಡಲ್ ಸ್ಕೂಲಿನಲ್ಲಿ 4 ವರ್ಷ, ಸೆಕೆಂಡರಿ ಸ್ಕೂಲಿನಲ್ಲಿ 3 ವರ್ಷ ವಿದ್ಯಾಭ್ಯಾಸ ಮಾಡಿಸುತ್ತಾರೆ. ಇದಕ್ಕೆ ಸರ್ಕಾರದವರ ಸಹಾಯ ಇದೆ. ಅದೇ ರೀತಿ ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಸಂಗ ಮಾಡುವುದಕ್ಕೆ ಸರ್ಕಾರದವರು ಹಣ ಕೊಡಬೇಕು. ಇಲ್ಲದಿದ್ದರೆ ಹಿಂದೆ ಮಾಡಿದುದೆಲ್ಲ ಹದಗೆಟ್ಟು ಅನ್ಯಾಯವಾಗಿ ವ್ಯರ್ಥವಾಗಿ ಹೋಗುತ್ತದೆ. ನಿಮ್ಮ ತರಗತಿಯವರು ಇತರರ ಮಟ್ಟಕ್ಕೆ ಬರುವವರೆಗೂ ಸಹಾಯ ಮಾಡದೆ ನಡುನೀರಿನಲ್ಲಿ ಕೈಬಿಟ್ಟರೆ ಹೇಗೆ? ಆದ್ದರಿಂದ ನಾನು ಹೇಳಿರುವುದು ಹರಿಜನರಿಗೆ ಮಾತ್ರ ಅಲ್ಲ, ಡಿಪ್ರೆಸ್ಡ್ ಕ್ಲಾಸ್ ಮತ್ತು ಬ್ಯಾಕ್‌ವರ್ಡ್ ಕ್ಲಾಸ್ ಇವರೆಲ್ಲರಿಗೂ ಅನ್ವಯಿಸುತ್ತದೆ. ಹೀಗಿರುವುದರಿಂದ ಇದನ್ನು ತಾವು ಅತ್ಯವಶ್ಯಕವಾಗಿ ಗಮನಿಸಬೇಕಾದ ವಿಚಾರವಾಗಿದೆ. ಪ್ಲಾನಿಂಗ್ ಕಮಿಷನರ ವರದಿಯಲ್ಲಿ ಇನ್ನೊಂದು ವಿಚಾರ ಹೇಳುತ್ತಾರೆ. ಅದೇನೆಂದರೆ—

"The advancement of the backward classes is a task which stands in a category of its own

(ಶ್ರೀ ಎಂ. ಮಾದಯ್ಯನವರು).

because of the special disabilities from which they suffer and provisions in the Constitution designed to raise them speedily to the level of other sections in the community. The backward classes consist of scheduled castes, scheduled tribes and the other backward sections."

they are twenty per cent in the State. Further they have indicated :

" ...... it is necessary that in the execution of the various programmes the administrations concerned assign a *high priority* to the needs of the backward sections."

ಈರೀತಿ ಯಾವ ಒಂದು ನ್ಯಾಯವಾದ ಬೇಡಿಕೆ ಇದೆಯೋ ಅದನ್ನು ಯಾವ ಸರ್ಕಾರವೇ ಆಗಲಿ ಧರ್ಮ ದೃಷ್ಟಿಯಿಂದ ಮಾಡಬೇಕಾ ಗುತ್ತದೆ. ಅನೇಕ ವಿಚಾರಗಳಲ್ಲಿ ಅವರು ಇನ್ನೂ ಹಿಂದುಳಿದಿರುವುದರಿಂದ ಅವರಿಗೆ ಖಂಡಿತ ವಾಗಿಯೂ ಸಹ ಸಹಾಯಮಾಡಬೇಕಾದ್ದು ಅಗತ್ಯ. ಅಂದ ಮಾತ್ರಕ್ಕೆ ಈಗ ಸರ್ಕಾರ ದವರು ಸಹಾಯಮಾಡುತ್ತಿಲ್ಲವೆಂದಲ್ಲ. ಉದಾರ ವಾದ ನೀತಿಯನ್ನು ಅನುಸರಿಸುತ್ತಾ ಇದ್ದಾರೆ. ಈಗಿನ ಸರ್ಕಾರದವರು, ಹಿಂದಿನ ಸರ್ಕಾರ ದವರು ಉದಾರವಾದ ನೀತಿಯನ್ನು ಅನುಸರಿ ಸಿದ್ದಾರೆ. ಆದರೆ ಅದು ಸಾಲದು ಎಂದು ಒತ್ತಾಯ ಮಾಡುತ್ತೇನೆಯೇ ಹೊರತು ಮತ್ತೆ ಬೇರೆ ಅಲ್ಲ. ಈ ಎಲ್ಲಾ ದೃಷ್ಟಿಯಿಂದಲೂ ನಾನು ಒತ್ತಾಯಪೂರ್ವಕವಾಗಿ ಸಭೆಯಲ್ಲಿ ಹೇಳುವುದೇನೆಂದರೆ, ಮಕ್ಕಳಿಗೆ ನಾನು ಕೇಳಿ ರುವ ಈ ಮೊಬಲಗನ್ನು ಈ ವರ್ಷಕ್ಕೆ ಮಾತ್ರ ಮಂಜೂರುಮಾಡದೆ ಇದನ್ನು ರೆಕರಿಂಗ್ ಎಕ್ಸ್ ಪೆಂಡಿಚರ್ ಆಗಿ ಮಾಡಬೇಕೆಂದು ಹೇಳು ತ್ತೇನೆ. ಇಲ್ಲದಿದ್ದರೆ ಪ್ರತಿವರ್ಷವೂ ಕೇಳ ಬೇಕಾಗುತ್ತದೆ. ಈ ನಿರ್ಣಯ ಬಹಳ ಸುಲಭ ವಾಗಿದೆ, ನ್ಯಾಯವಾಗಿದೆ, ಧರ್ಮದೃಷ್ಟಿಯಿಂದ ಲೂ, ಎಲ್ಲಾ ದೃಷ್ಟಿಯಿಂದಲೂ ಸರಿಯಾಗಿದೆ ಯಾದ್ದರಿಂದ ದಯವಿಟ್ಟು ಇದನ್ನು ಸರ್ಕಾರ ದವರು ದೊಡ್ಡ ಮನಸ್ಸು ಮಾಡಿ ಒಪ್ಪಿಕೊಂಡು ಕಾರ್ಯಗತ ಮಾಡುತ್ತೀರಿ ಎಂದು ನಂಬಿದ್ದೇನೆ. ಇದಕ್ಕಾಗಿ ಸಂಸ್ಥಾನದಲ್ಲಿ ಅನೇಕ ಕಾಲೇಜು ಗಳಲ್ಲಿ ಓದುತ್ತಾ ಇರತಕ್ಕ ವಿದ್ಯಾರ್ಥಿಗಳು ಸರ್ಕಾರದಿಂದ ಮಂಜೂರಾಗುವುದನ್ನೇ ಎದುರು ನೋಡುತ್ತಾ ಇದ್ದಾರೆ.

This is a plan adopted by the Parliament today and this programme has to be implemented by the various Governments. Then they say :

"The problem has to be attacked on all fronts, but there are a few aspects which merit special consideration."

What are those ?

"Hostels and *ashrams* to accommodate students and the provision of stipends on an increased scale will effectively aid the spread of education among backward classes."

ಆದ್ದರಿಂದ ಇಂಥಾ ಮಕ್ಕಳಿಗೆ ಸಹಾಯ ಮಾಡುವುದಕ್ಕಾಗಿ ದಯವಿಟ್ಟು ಇದನ್ನು ಒಪ್ಪಿ ಕೊಂಡು ಆಗಮಾಡಿಸುತ್ತೀರಿ ಎಂದು ನಂಬಿ ಈ ನಿರ್ಣಯವನ್ನು ಸಭೆಯ ಮುಂದೆ ಇಡುತ್ತೇನೆ.

MR. SPEAKER.—Resolution moved :

"This Assembly is of the opinion that additional allotment required for awarding scholarships to all the deserving scheduled castes students studying in the various university institutions in the State be sanctioned very early for the current year, *i.e.*, 1951-52."

ಶ್ರೀ ಬಿ. ಎ�', ಬೋರಣ್ಣಗೌಡರು (ಹಾಸನ ಜಿಲ್ಲೆ).—ಸ್ವಾಮಿ, ಸಾಧಾರಣವಾಗಿ ವಿಶ್ವ ವಿದ್ಯಾನಿಲಯದಲ್ಲಿ ಓದತಕ್ಕ ನಿಮ್ನವರ್ಗದವರ ಬಾಲಕರಿಗೆ ಕೊಟ್ಟಿರತಕ್ಕ ವಿದ್ಯಾರ್ಥಿ ವೇತನ ಸಾಲದು, ಕಾಲೇಜಿನಲ್ಲಿ ಓದುವುದಕ್ಕೆ ತೊಂದರೆ ಯಾಗಿದೆ, ಯಾವ ಸಹಾಯವೂ ಸಿಕ್ಕುವುದಿಲ್ಲ ಎಂಬುದಾಗಿ ಅನೇಕರು ಕಾಲೇಜು ಬಿಟ್ಟು ಹಿಂದಕ್ಕೆ ಹೋಗಿರತಕ್ಕ ಸನ್ನಿವೇಶಗಳು ಇವೆ. ಹೀಗೆ ನಿಮ್ನವರ್ಗದವರು ಕಾಲೇಜು ಕ್ಲಾಸ್‌ನ ವರೆಗೂ ಬಂದು ಅಲ್ಲಿ ಓದಿ ಡಿಗ್ರಿ ತೆಗೆದುಕೊಳ್ಳದೆ ಹಿಂದಿರುಗಿ ಹೋಗಬೇಕಾದ ಸನ್ನಿವೇಶ ಈಗ ಉಂಟಾಗಿದೆ ಎಂಬುದಾಗಿ ಈ ನಿರ್ಣಯದಿಂದ ಕಂಡುಬರುತ್ತದೆ. ಎಂದಮೇಲೆ ನಮ್ಮ ಕರ್ತವ್ಯ ವೇನೆಂದರೆ ನಿಮ್ನವರ್ಗದವರಿಗೆ ಈಗ ಕೊಡು ತ್ತಾ ಇರತಕ್ಕ ಸೌಲಭ್ಯ ಬೇಕಾದಷ್ಟು ಇದೆ. ಆದರೂ ಇನ್ನೂ ಹೆಚ್ಚು ವಿದ್ಯಾರ್ಥಿವೇತನವನ್ನು ಕೊಡತಕ್ಕ ವಿಚಾರದಲ್ಲಿ ಅಷ್ಟಾಗಿ ಹಿಂದು ಮುಂದು ನೋಡುವುದು ಚೆನ್ನಾಗಿಲ್ಲ. ಅವರಿಗೆ ಇರತಕ್ಕದ್ದು ಇನ್ನು ಒಂಭತ್ತು ವರ್ಷ. ಅಷ್ಟರಲ್ಲಿ ಬೇಕಾದಷ್ಟು ಸಹಾಯ ಮಾಡಬೇಕಾಗುತ್ತದೆ. ಅವರಿಗೆ ಇಲ್ಲಿನವರೆಗೂ ಏನೇನು ತೊಂದರೆ ಇತ್ತೋ ಅದೆಲ್ಲಾ ಒಂದೊಂದೇ ಹೋಗಿದೆ.

ಇವತ್ತು, ಅವರು ಮುಂದೆ ಬಂದು ದೇಶದಲ್ಲಿ ಯಾವ ಒಂದು ಪರಿಸ್ಥಿತಿ ಇದೆ ಎಂಬ ವಿಚಾರ ವನ್ನು ತಿಳಿದುಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕಾಗಿರತಕ್ಕ ಕಾಲದಲ್ಲಿ ನಾವು ಅವರಿಗೆ ಕೊಡತಕ್ಕ ಸೌಲಭ್ಯ ಕೊಡು ವುದರಲ್ಲಿ ಹಿಂದು ಮುಂದು ನೋಡುವುದರಲ್ಲಿ ಅರ್ಥವಿಲ್ಲ. ಒಂದು ವಿಚಾರ ಹೇಳಿದರೆ ಅದು ಅಸಿಂಧುವಾಗಿ ಕಾಣಬಹುದು. ಈಗ ಅವರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಅಥವಾ ಜಮೀನು ವಗೈರೆ ಕೊಡುವುದಕ್ಕೆ ಅನೇಕ ತರಹ ಸೌಲಭ್ಯ ಮಾಡಿಕೊಟ್ಟಿದ್ದೆ, ಒಳ್ಳೆಯದು. ಆದರೆ ಅದು ಸೂಕ್ತವಾಗಿ ವಿನಿಯೋಗವಾಗುತ್ತಾ ಇಲ್ಲ ಎಂಬ ಅಭಿಪ್ರಾಯವಿದೆ. ಅಲ್ಲದೆ ಅವರು ವಿದ್ಯಾಭ್ಯಾ ಸಕ್ಕೆ ಹಾತೊರೆತು ಮುಂದೆಬಂದು ಮೆಡಿಕಲ್ ಕಾಲೇಜು, ಇಂಜನಿಯರಿಂಗ್ ಕಾಲೇಜು, ಬಿ.ಎಸ್‌ಸಿ., ಬಿ.ಎ. ಡಿಗ್ರಿಗಳಿಗೆ ವ್ಯಾಸಂಗ ಮಾಡತಕ್ಕ ಕಾಲದಲ್ಲಿ ವಿದ್ಯಾರ್ಥಿವೇತನ ಸಿಕ್ಕ ಲಿಲ್ಲ ಅಥವಾ ಹಣ ಇಲ್ಲದೆ ತೊಂದರೆ ಆಯಿತು, ಹಾಸ್ಟಲ್‌ನಲ್ಲಿರುವುದಕ್ಕೆ ಖರ್ಚು ಹೆಚ್ಚಾಗು ತ್ತದೆ, ಅಷ್ಟು ಕೊಡುವುದಕ್ಕೆ ತಂದೆ ತಾಯಿ ಗಳಿಗೆ ಸಾಧ್ಯವಿಲ್ಲ ಎಂಬುದಾಗಿ ಹೇಳಿ ಅನೇ ಕರು ಗುಮಾಸ್ತರಾಗಿ ಆಗಲೀ ಬೇರೆ ಕಡೆ ಕೆಲಸ ಮಾಡುವುದಕ್ಕಾಗಲೀ ಹೋಗಿರುವ ಸನ್ನಿವೇಶ ಗಳು ಬೇಕಾದಷ್ಟು ನನ್ನ ಗಮನಕ್ಕೆ ಬಂದಿವೆ. ಹೀಗಿರುವಾಗ ಅವರಿಗೆ ಒದಗಿಸಬೇಕಾದಷ್ಟು ವಿದ್ಯಾರ್ಥಿವೇತನ ಇಷ್ಟೇ ಎಂಬುದಾಗಿ ನಿಗದಿ ಮಾಡಿರುವುದರಿಂದ ತೊಂದರೆಯಾಗಿದೆ. ಆದ್ದ ರಿಂದ ಅಂಥವರಿಗೆ ವಿದ್ಯಾರ್ಥಿವೇತನ ಸಾಕಾ ದಷ್ಟು ಕೊಟ್ಟು ವ್ಯಾಸಂಗ ಪೂರ್ತಿಮಾಡುವುದಕ್ಕೆ ಅವಕಾಶ ಮಾಡಿಕೊಡುವುದು ನಮ್ಮ ಕರ್ತವ್ಯ, ಸರ್ಕಾರದ ಕರ್ತವ್ಯ ಎಂದು ಭಾವಿಸುತ್ತೇನೆ ಮತ್ತು ಶ್ರೀಮಾನ್ ಮಾದಯ್ಯನವರು ಮುಂಡಿಸಿರ ತಕ್ಕ ಈ ಠರಾವನ್ನು ನಾವೆಲ್ಲರೂ ಒಪ್ಪಿಕೊಂಡು ಅದಕ್ಕೆ ಅವಕಾಶಮಾಡಿಕೊಡಬೇಕೆಂದು ಬಿನ್ನೈ ಸುತ್ತೇನೆ.

ಶ್ರೀ ಡಿ. ಗೋವಿಂದದಾಸ್‌ರವರು (ಹಾಸನ ಜಿಲ್ಲೆ—ನಿಮ್ನ ಪ್ರಂಗಡ). — ಅಧ್ಯಕ್ಷರೇ, ಶ್ರೀಮಾನ್ ಮಾದಯ್ಯನವರು ಈ ನಿರ್ಣಯ ವನ್ನು ಸಕಾಲದಲ್ಲಿ ತಂದರಲ್ಲಾ ಎಂದು ಬಹಳ ಸಂತೋಷಪಡುತ್ತೇನೆ. ಈ ನಿರ್ಣಯದ ವಿಚಾರದಲ್ಲಿ ಸರ್ಕಾರದವರ, ಮಾನ್ಯ ಸದಸ್ಯರ ಪ್ರತಿಯೊಬ್ಬರ ಸಹಾನುಭೂತಿ ಇದೆ ಎಂದು ಭಾವಿಸಿ ಹೆಚ್ಚಾಗಿ ಮಾತನಾಡದೆ ಕೆಲವು ವಿಚಾರಗಳನ್ನು ಹೇಳುತ್ತೇನೆ. ಹಿಂದೆ ಮಾತ ನಾಡಿದ ಶ್ರೀಮಾನ್ ಬೋರಣ್ಣಗೌಡರು ನಿಮ್ನ ವರ್ಗದವರಿಗೆ ಹೆಚ್ಚಿನ ರಿಯಾಯಿತಿ ತೋರಿಸಲು ಇರುವುದು ಇನ್ನು ಒಂಭತ್ತು ವರ್ಷ ಅಂತ ಹೇಳಿದರು. ಆದರೆ ಅದು ಇರುವುದು ಇನ್ನು ಕೆಲವು ವರ್ಷ ಮಾತ್ರ. ನನ್ನ ಅಭಿಪ್ರಾಯ ದಲ್ಲಿ ಎಂಟು ವರ್ಷ ಎಂದು ಹೇಳುತ್ತೇನೆ. ಅಷ್ಟ ರೊಳಗೆ ಅವರು ಸಾಧ್ಯವಾದಷ್ಟು ಮುಂದುವರಿ ಯಬೇಕು, ಆ ನಂತರ ಕಷ್ಟವಾಗುತ್ತದೆ ಎಂದು ವ್ಯಕ್ತಪಡಿಸುತ್ತೇನೆ. ಅಷ್ಟೇ ಅಲ್ಲ; ನಿಮ್ನವರ್ಗ ದವರಲ್ಲಿ ವಿದ್ಯಾವಂತರ ಸಂಖ್ಯೆ ನನ್ನ ಅಭಿಪ್ರಾ ಯದಲ್ಲಿ ಶೇಕಡ ಎರಡು ಎಂಬುದಾಗಿ ತಿಳಿದು ಕೊಂಡಿದ್ದೇನೆ. ಎರಡೂ ಅಲ್ಲ, ಅದಕ್ಕಿಂತ ಕಡಿಮೆ ಇದೆ ಎಂದು ನನ್ನ ಸ್ನೇಹಿತರು ಹೇಳುತ್ತಾ ಇದ್ದಾರೆ. ಕೆಲವು ವರ್ಷಗಳ ಹಿಂದೆ ಸಂಸ್ಥಾನ ದಲ್ಲಿ ವಿದ್ಯಾವಂತರ ಸಂಖ್ಯೆ ಶೇಕಡ 13 ಆಗಿತ್ತು. ಈಗ ಶೇಕಡ 20 ಆಗಿದೆ ಎಂಬುದಾಗಿ ತಿಳಿದು ಬಂದಿದೆ. ಆದ್ದರಿಂದ ನಿಮ್ನತರಗತಿಯವರಲ್ಲಿ ವಿದ್ಯಾವಂತರ ಸಂಖ್ಯೆ ಶೇಕಡ 5 ಅಥವಾ 6ರಷ್ಟು ಹೆಚ್ಚದೇ ಇದ್ದರೆ ಅದು ನಮಗೆ ಹಿತವಾಗುವು ದಿಲ್ಲವೆಂಬ ಅಂಶವನ್ನು ವ್ಯಕ್ತಪಡಿಸುತ್ತೇನೆ. ಕಳೆದ ವರ್ಷ ಅಡೀಷನಲ್ ಗ್ರಾಂಟ್ ಮಂಜೂ ರಾದಮೇಲೆ ಅನೇಕ ವಿದ್ಯಾರ್ಥಿಗಳಿಗೆ ವಿದ್ಯಾ ರ್ಥಿವೇತನ ದೊರಕಿತು. ಅದಕ್ಕೆ ಮುಂಚೆ ಇಂ ಟರ್‌ಮೀಡಿಯಟ್ ಕಾಲೇಜು ಮತ್ತು ಇತರ ಕಾಲೇಜುಗಳಲ್ಲಿ ವ್ಯಾಸಂಗಮಾಡುತ್ತಿದ್ದ ವಿದ್ಯಾ ರ್ಥಿಗಳಿಗೆ ವಿದ್ಯಾರ್ಥಿವೇತನ ದೊರೆಯದೆ ಅನೇಕ ಮಂದಿ ಬಹಳ ವ್ಯಥೆಯಿಂದ, ದುಃಖದಿಂದ ಹಿಂತಿ ರುಗುವವರಾಗಿದ್ದರು. ಅಷ್ಟು ಹೊತ್ತಿಗೆ ಸರ್ಕಾರ ದವರು ಅಡೀಷನಲ್ ಗ್ರಾಂಟ್ ಕೊಟ್ಟಿದ್ದರಿಂದ ಪುನಃ ಓದುವುದನ್ನು ಮುಂದುವರಿಸಿದರು.

ಇಷ್ಟೇ ಅಲ್ಲದೆ ಇನ್ನೊಂದು ವಿಚಾರವನ್ನು ನಾನು ಸಭೆಯವರ ಗಮನಕ್ಕೆ ತರುತ್ತೇನೆ.

(ಶ್ರೀ ಡಿ. ಗೋವಿಂದದಾಸ್‌ರವರು).

ಸರ್ಕಾರದ ಸಹಾಯ ಸಾಕಾದಷ್ಟಿಲ್ಲದೆ ಇದ್ದರೆ ನಮ್ಮವರು ವಿಶ್ವವಿದ್ಯಾನಿಲಯದಲ್ಲಿ ತಮ್ಮ ಮಕ್ಕಳನ್ನು ಓದಿಸುವುದಕ್ಕೆ 100ಕ್ಕೆ ಒಬ್ಬರಿಗೂ ಸಹಾ ಸಾಧ್ಯವಿಲ್ಲವೆಂದು ಹೇಳಬಲ್ಲೆ. ಹಾಗೆ ನಮ್ಮ ಕಾಲಮೇಲೆ ನಾವು ನಿಲ್ಲಬೇಕಾದರೆ ನಮಗೆ ಸಂಪೂರ್ಣ ಬಲಬಂದು ಎಲ್ಲದರಲ್ಲೂ ಇತರರಿಗೆ ಸರಿಸಮಾನರೆನಿಸಿಕೊಳ್ಳಬೇಕಾದರೆ ಬಹುಶಃ ಇನ್ನರ್ಧ ಶತಮಾನವೇ ಬೇಕಾಗುತ್ತದೆಂದು ಕಾಣುತ್ತದೆ. ಹೋದವರ್ಷ ನನಗೂ ಮತ್ತು ಈ ಸಭೆಯಲ್ಲಿರುವ ಇತರೇ ನಿಮ್ನ ವರ್ಗದ ಸದಸ್ಯರಿಗೂ ಇದೇ ಸ್ಕಾಲರ್‌ಷಿಪ್‌ಗಳ ವಿಚಾರದಲ್ಲಿ ಸರಿಯಾಗಿ ಇಲ್ಲಿ ಇತ್ಯರ್ಥವಾಗದ ದೆಶೆಯಿಂದ ಎಂಥ ತೊಂದರೆ ಬಂದಿತ್ತೆಂಬುದನ್ನು ಹೇಳಲಾರೆ. ನಾವು ತುಮಕೂರಿಗೆ ಹೋದಾಗ ಅಲ್ಲಿಗೆ ಅಡೀಷನಲ್ ಗ್ರ್ಯಾಂಟ್ಸ್ ಕೊಟ್ಟಿಲ್ಲವೆಂದು ಗೊತ್ತಾದೊಡನೆಯೇ ನಾವು ಆ ವಿದ್ಯಾರ್ಥಿಗಳಿಂದ ತಲೆತಪ್ಪಿಸಿಕೊಂಡು ಬರುವುದೇ ಕಷ್ಟವಾಗಿ ಹೋಯಿತು. ಆದ್ದರಿಂದ ನಮ್ಮ ಪಂಗಡದ ಜನರಿಗೆ ತಾವು ನಿಜವಾಗಿಯೂ ಸಹಾಯ ಮಾಡದೆ ಹೋದರೆ ಅವರು ವಿದ್ಯಾಭ್ಯಾಸವನ್ನು ಮುಂದುವರಿಸುವುದಕ್ಕೆ ಖಂಡಿತ ಸಾಧ್ಯವಾಗುವುದಿಲ್ಲವೆಂದು ಹೇಳಬಯಸುತ್ತೇನೆ. ನಮ್ಮ ಹರಿಜನರಿಗೆ ತಾವು ಸಹಾಯಮಾಡುವುದು ಎಂದಿಗೂ ನಷ್ಟವಲ್ಲ. ಅದರಿಂದ ದೇಶಕ್ಕೆ ಮುಂದೆ ಎಷ್ಟೋ ಪ್ರಯೋಜನವಾದೀತೆಂಬುದಕ್ಕೆ ಒಬ್ಬರ ನಿದರ್ಶನವನ್ನು ನಾನಿಲ್ಲಿ ಕೊಟ್ಟರೆ ಸಾಕು. ಆ ಮಹನೀಯರ ಹೆಸರನ್ನು ನಾನು ಹೇಳಬಯಸುವುದಿಲ್ಲ. ಆ ದೊಡ್ಡ ವ್ಯಕ್ತಿಗಳಿಂದ, ಆ ಪ್ರಭಾವಶಾಲಿಗಳಾದ ಮಹನೀಯರಿಂದ ಸರ್ಕಾರಕ್ಕೆ ಮತ್ತು ದೇಶಕ್ಕೆ ಎಷ್ಟು ಸಹಾಯವಾಯಿತೆಂಬುದನ್ನು ಮಾತ್ರ ಸಭೆಯವರು ಗಮನಿಸಬೇಕು. ಚಿಕ್ಕಂದಿನಲ್ಲಿ ಅವರು ಸ್ಕೂಲಿಗೆ ಹೋದಾಗ ಯಾರೂ ಅವರಿಗೆ ಸರಿಯಾದ ಜಾಗವನ್ನು ಕೊಡದೆ ಒಂದು ಮೂಲೆಗೆ ಹೋಗಿ ಕುಳಿತುಕೊಂಡಾಗ ಬರೋಡಾ ಮಹಾರಾಜರು ಅವರನ್ನು ನೋಡಿದವರಾಗಿ ಅವರಮೇಲೆ ಕರುಣೆಯಿಟ್ಟು, ಏಕಪ್ಪಾ ಅಲ್ಲಿ ಕುಳಿತುಕೊಂಡಿದ್ದೀಯೆ ಎಂದು ಹೇಳಿ ಆತನ ಕಷ್ಟಸುಖಗಳನ್ನು ವಿಚಾರಿಸಿಕೊಂಡು ಬೇಕಾದ ಸಹಾಯವನ್ನು ಮಾಡಿ ದೊಡ್ಡ ವಿದ್ಯಾವಂತರನ್ನಾಗಿ ಮಾಡಿದ್ದರಿಂದ ಇಂದು ಅವರು ಇಡೀ ಭರತಖಂಡದಲ್ಲೇ ಪ್ರಖ್ಯಾತಿಗೆ ಬಂದಿದ್ದಾರೆ.

ಮಾನ್ಯ ಸದಸ್ಯರು.—ಅವರು ಯಾರು ?

ಶ್ರೀ ಡಿ. ಗೋವಿಂದದಾಸರು.—ಅವರೇ ಡಾ| ಅಂಬೇಡ್ಕರ್‌ರವರು! ಹಾಗೆ ಹಿಂದೆ ಆ ಬರೋಡಾ ಮಹಾರಾಜರು ಅವರಿಗೆ ಬೇಕಾದ ಸಹಾಯ ಕೊಟ್ಟು ವಿದ್ಯೆಯಲ್ಲಿ ಪ್ರೋತ್ಸಾಹಿಸಿದ್ದರಿಂದಲೇ ಇಂದು ಡಾ| ಅಂಬೇಡ್ಕರ್‌ರವರು ಇಷ್ಟು ಅಭಿವೃದ್ಧಿಗೆ ಬಂದು ಇಡೀ ಭಾರತದೇಶದ ಕೀರ್ತಿಯನ್ನು ಎತ್ತಿಹಿಡಿಯುವ ಶಕ್ತಿಯುಳ್ಳವರಾದರೆಂಬುದನ್ನು ಮಾನ್ಯ ಸದಸ್ಯರು ಮನಸ್ಸಿಗೆ ತಂದುಕೊಳ್ಳಬೇಕು. ಇಂದು ಅವರ ಹೆಸರನ್ನು ಹೇಳುವುದಕ್ಕೆ ನಮ್ಮ ಜನಕ್ಕೆ ಹೆಮ್ಮೆಯಾಗುತ್ತದೆ. ಮೈಸೂರಿನಿಂದ ಬೆಂಗಳೂರಿಗೆ ರಸ್ತೆ ಮಾಡುವುದು ಒಂದು ಅಗಾಧವಾದ ಕೆಲಸವೇನೋ ಹೌದು. ನೂರಾರು ಜನ ಬೇಕಾಗುತ್ತದೆ. ಆದರೆ ರಸ್ತೆಮಾಡಿಸಿದ ಮೇಲೆ ಲಕ್ಷಾಂತರ ಜನ ಆಮೂಲಕ ಹೋಗಲನುಕೂಲವಾಗುವುದಿಲ್ಲವೇ ? ಅಂತೆಯೇ ಸದ್ಯಕ್ಕೆ ಸರ್ಕಾರದವರಿಗೆ ನಮ್ಮ ಜನರಿಗೆ ಹಣವನ್ನು ಹೆಚ್ಚಿಗೆ ಕೊಡುವುದು ಸ್ವಲ್ಪ ಕಷ್ಟವಾದರೂ, ಇದನ್ನು ಹೇಗೋ ಕಷ್ಟವಾದರೂ ಚಿಂತೆಪಡದೆ ಒದಗಿಸಿದರೆ ಮುಂದೆ ತಾನೇತಾನಾಗಿ ಅನೇಕ ಜನರು ಅಭಿವೃದ್ಧಿಗೆ ಬರಲು ಸಹಾಯವಾಗುತ್ತದೆ. ನಮ್ಮಲ್ಲೂ ಸಮಾಜಸೇವಕರು ಉದಾರ ಮಹಾಶಯರು ಹುಟ್ಟಿಕೊಳ್ಳುತ್ತಾರೆ. ನಮ್ಮ ಜನರೇ ಹೆಚ್ಚುಹೆಚ್ಚಿಗೆ ವಿದ್ಯಾವಂತರಾದಂತೆಲ್ಲಾ ತಮ್ಮ ಜನಾಂಗದ ಇತರೆಯವರನ್ನೂ ತಮ್ಮ ಜೊತೆಗೆ ಎಳೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಮುಖ್ಯವಾಗಿ ವಿದ್ಯೆಯೆಂಬುದು ನಮ್ಮ ಹರಿಜನರ ಉದ್ಧಾರಕ್ಕೆ ಎಷ್ಟರಮಟ್ಟಿಗೆ ಆವಶ್ಯಕವೆಂಬುದಕ್ಕೆ ನಾನು ಬರೆದಿರುವ ಈ ಒಂದು ಶ್ಲೋಕದಿಂದ ಬಹುಶಃ ಚೆನ್ನಾಗಿ ಅರ್ಥವಾಗುತ್ತದೆಂದು ಕಾಣುತ್ತೆ:

ವಿದ್ಯೆಯೇ ಹರಿಜನಂಗಳ |
ನುದ್ಧಾರಗೈದು ಬೇಗ ಮನುಜರೆಂದೆನಿಪು
ದಲ್ಲದೆ ||
ಮಿದ್ಧ ಕಾರ್ಯಂಗಳಿಂದ ಲಿವ |
ರುದ್ಧಾರಕೆಳೆವುದು ಮತ್ತೊಂದಿಲ್ಲ
ಜಗದೊಳ್ ||

ಎಂದು ನಾನು ಬಹುದಿವಸಗಳ ಹಿಂದೆ ಬಹಳ ಆಲೋಚನೆಮಾಡಿ ಬರೆದದ್ದು. ಅದರಲ್ಲಿ ಹೇಳಿರುವುದು ನಿಜವಾಗಿಯೂ ವಾಸ್ತವ. ವಿದ್ಯೆಯೊಂದನ್ನು ನಮ್ಮ ಜನರಿಗೆ ಸರಿಯಾಗಿ ಕೊಟ್ಟರೆ ನಮ್ಮ ಕಾಲಮೇಲೆ ನಾವು ನಿಲ್ಲುವುದಕ್ಕಾಗುತ್ತದೆ. ಜಮೀನನ್ನು ನಾವೇ ಸಂಪಾದನೆ ಮಾಡಿಕೊಳ್ಳುತ್ತೇವೆ. ಹಿಂದುಳಿದಿರತಕ್ಕ ನಮ್ಮ ಜನಾಂಗದವರಿಗೆ ಸರಿಯಾದ ರೀತಿನೀತಿಗಳನ್ನು ತೋರಿ ಅವರನ್ನು ಉದ್ಧಾರಮಾಡುವುದಕ್ಕೆ ವಿದ್ಯೆಯೊಂದೇ ಮಾರ್ಗವೆಂದು ನಾನು ಹೇಳಬಯಸುತ್ತೇನೆ. ಹರಿಜನರ ಏಳಿಗೆಯ ವಿಚಾರದಲ್ಲಿ ಮತ್ತು ಷೆಡ್ಯೂಲ್ಡ್ ಪಂಗಡದವರ ಅಭಿವೃದ್ಧಿಯ ವಿಚಾರದಲ್ಲಿ...........

ಅಧ್ಯಕ್ಷರು.—ಹರಿಜನರ ಏಳಿಗೆಯ ವಿಚಾರ ಇಲ್ಲಿ ಬರುವುದಿಲ್ಲ.

ಶ್ರೀ ಡಿ. ಗೋವಿಂದದಾಸರು.—ಒಟ್ಟಿನಲ್ಲಿ ಸರ್ಕಾರದವರು ಇನ್ನಾವ ವಿಚಾರದಲ್ಲಿ ಸ್ವಲ್ಪ ಕೈಹಿಡಿತ ಮಾಡಿದರೂ ವಿದ್ಯಾಭ್ಯಾಸದಲ್ಲಿ ಮಾತ್ರ ಸ್ವಲ್ಪ ಕೈ ಉದ್ದವಾಗಿಯೇ ಇರಲೆಂದು ನನ್ನ ಪ್ರಾರ್ಥನೆ ಅಷ್ಟೆ.

ಹೈಸ್ಕೂಲು ವಿದ್ಯಾಭ್ಯಾಸದ ವಿಚಾರದಲ್ಲಿ ನಮ್ಮ ಮಿತ್ರರಾದ ಮಾದಯ್ಯನವರೂ ಮತ್ತು ಬೋರಣ್ಣಗೌಡರೂ ಚೆನ್ನಾಗಿ ಹೇಳಿದ್ದಾರೆ. ಶ್ರವಣಬೆಳಗೊಳಕ್ಕೆ ಹೋಗಿ ಮೇಲೆ ದೇವರ ದರ್ಶನ ಮಾಡಿಸುತ್ತೇವೆಂದು ಕರೆದುಕೊಂಡು ಹೋಗಿ ಇನ್ನೇನು ದೇವರ ದರ್ಶನ ಮಾಡುವ ಸಮಯದಲ್ಲಿ ದರ್ಶನ ಮಾಡುವುದಕ್ಕಾಗುವುದಿಲ್ಲ ಹಿಂದಕ್ಕೆ ಹೋಗಿ ಎಂದರೆ ಮನಸ್ಸಿಗೆ ಹೇಗಾಗುತ್ತದೆಂಬುದನ್ನು ಯೋಚಿಸಿ ನೋಡಿ. ತಿಂಗಳಿಗೆ 30 ರೂಪಾಯಿನಂತೆ ನಮ್ಮವರಿಗೂ ಸ್ಕಾಲರ್ ಷಿಪ್ಪುಗಳನ್ನು ಕೊಟ್ಟರೆ ಒಟ್ಟು ಎಷ್ಟು ಖರ್ಚಾಗುತ್ತದೆಂಬುದನ್ನು ಶ್ರೀಮಾನ್ ಮಾದಯ್ಯನವರೂ, ಮತ್ತು ಬೋರಣ್ಣಗೌಡರೂ ಆಗಲೇ ತಿಳಿಸಿದ್ದಾರೆ. ಅದರಂತೆ ಈಗಿರುವ ನಮ್ಮವರೆಲ್ಲರಿಗೂ ಸ್ಕಾಲರ್‌ಷಿಪ್‌ಕೊಟ್ಟು ಅವರ ವಿದ್ಯಾಭ್ಯಾಸ ಸಾರೋದ್ಧಾರವಾಗಿ ನಡೆದುಕೊಂಡು ಬರುವಂತೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಸ್ವಾಮಿ, ಈ ನಿರ್ಣಯವನ್ನು ನಾನು ಪುಷ್ಟೀಕರಿಸುತ್ತೇನೆ. ನಮ್ಮ ಇಂಡಿಯಾ ದೇಶದ ರಾಜ್ಯಾಂಗದ ಪ್ರಕಾರ ನಮ್ಮ ದೇಶ ಒಂದು ಸೆಕ್ಯೂಲಾರ್ ಸ್ಟೇಟ್ ಆಗಿದೆ. ಆದಾಗ್ಯೂ ಸಹ ಷೆಡ್ಯೂಲ್ಡ್ ಕ್ಯಾಸ್ಟ್‌ನವರ ವಿಷಯದಲ್ಲಿ ಒಂದು ವಿನಾಯಿತಿ ಕೊಟ್ಟಿದ್ದಾರೆ. ಏನೆಂದರೆ 10 ವರ್ಷಗಳವರೆಗೂ ಅವರು ಇತರೇ ಜನಾಂಗದವರ ಮಟ್ಟಕ್ಕೆ ಬರಬೇಕೆಂಬ ಆಕಾಂಕ್ಷೆಯಿಂದ ಅವರಿಗೆ ಕಡ್ಡಾಯವಾಗಿ ಪ್ರೋತ್ಸಾಹ ಕೊಡಬೇಕೆಂದು ಮಾಡಿದ್ದಾರೆ. ಅವರು ತುಂಬಾ ಕೆಳದರ್ಜೆಯಲ್ಲಿದ್ದಾರೆ. ಆದ್ದರಿಂದಲೇ ಈರೀತಿಯಾಗಿ ರಿಯಾಯಿತಿ ತೋರಿಸಬೇಕಾಗಿ ಬಂತು. ನಮ್ಮ ದೇಶದಲ್ಲಿ ಇತರೇಯವರು ಎಷ್ಟರಮಟ್ಟಿಗೆ ಮುಂದುವರಿದಿದ್ದಾರೋ ಅದರಂತೆ ಇವರೂ ಕೂಡ ಮುಂದುವರಿಯುವುದಕ್ಕೆ ಏನೇನು ಸಹಾಯ ಬೇಕೋ, ಯಾವ ಯಾವ ವಿಧದಲ್ಲಿ ಸಹಾಯ ಮಾಡಿದರೆ ಇನ್ನು 10 ವರ್ಷಗಳೊಳಗಾಗಿ ಅವರು ಇತರೆಯವರಿಗೆ ಸರಿಸಮಾನರಾಗಿ ವಿದ್ಯಾವಂತರಾಗುತ್ತಾರೋ ಅದನ್ನೆಲ್ಲಾ ಮಾಡಿ ಅವರನ್ನು ಮುಂದಕ್ಕೆ ತರುವುದು ಸರ್ಕಾರದವರ ಪ್ರಥಮ ಕರ್ತವ್ಯ. ಈ ಹತ್ತು ವರ್ಷಗಳ ಅವಧಿಯಲ್ಲಿ ಈಗಾಗಲೇ $1\frac{1}{2}$ ವರ್ಷಗಳು ಕಳೆದು ಹೋದವು. ಆದರೂ ನಾನು ಕಂಡಹಾಗೆ ಅವರಿಗೆ ಯಾವ ಒಂದು ವಿಶೇಷ ರಿಯಾಯಿತಿಯನ್ನೂ ಯಾವ ಒಂದು ಹೆಚ್ಚಿನ ಸಹಾಯವನ್ನೂ ಮಾಡಿರುವಂತೆ ಕಾಣಲಿಲ್ಲ. ಖಂಡಿತವಾಗಿಯೂ ಏನೂ ಮಾಡಿಲ್ಲವೆಂದೇ ಹೇಳಬೇಕು.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ವಿಶೇಷ ರಿಯಾಯಿತಿಯೆಂದು ಅವರು ಹೇಳುತ್ತಿದ್ದಾರೆ!

ಶ್ರೀ ಬಿ. ಹುಚ್ಚೇಗೌಡರು.—ಹೌದು. ಹತ್ತು ವರ್ಷಗಳೊಳಗಾಗಿ ಏನೊಂದು ಕಾರ್ಯಕ್ರಮ

(ಶ್ರೀ ಬಿ. ಹುಚ್ಚೇಗೌಡರು.)

ಹಾಕಿಕೊಂಡು ಮುಗಿಸಬೇಕಾದರೆ ಏನೇನು ಮಾಡಬೇಕೋ ಅದರಂತೆ ಏನೂ ಮಾಡಿಲ್ಲ; ಹಿಂದೆ ಅಲ್ಪ ಸ್ವಲ್ಪ ರಿಯಾಯಿತಿಗಳೇ ನಿದ್ದವೋ ಅವೂ ಕೂಡ ಈಗ ನಡೆದುಕೊಂಡು ಬರುವುದು ಕಷ್ಟವಾಗಿದೆ. ಇದೇರೀತಿ ಕೆಲಸ ಮಾಡಿಕೊಂಡು ಹೋಗುತ್ತಿದ್ದರೆ ಇನ್ನು ಹತ್ತು ವರ್ಷವಲ್ಲ, ಒಂದು ಶತಮಾನವಾದರೂ ನಿಮ್ಮ ನಿರೀಕ್ಷೆಯನ್ನು ಮುಟ್ಟಲು ಸಾಧ್ಯವಿಲ್ಲ. ನಮ್ಮ ದೇಶದ ಈಗಿನ ಏರ್ಪಾಡಿಗನುಸಾರವಾಗಿ ಪ್ರತಿಯೊಬ್ಬರಿಗೂ ಸರಿಸಮಾನವಾದ ಅವಕಾಶವನ್ನು ಕಲ್ಪಿಸಿಕೊಡುವುದು ಸರ್ಕಾರದವರ ಮತ್ತು ಪ್ರತಿಯೊಬ್ಬರ ಕರ್ತವ್ಯ. ಅದರಲ್ಲೂ ಆಡಳಿತದಲ್ಲಿರುವವರು ಈಬಗ್ಗೆ ವಿಶೇಷ ಕಾರ್ಯಕ್ರಮವನ್ನು ಕೈಕೊಳ್ಳಬೇಕು. ಅಂಥಾದ್ದರಲ್ಲಿ ಈ ವರೆಗೂ ಯಾವ ಕಾರ್ಯಕ್ರಮವೂ ನಡೆದಿಲ್ಲವೆಂಬದನ್ನು ನೋಡಿದರೆ ಬಹಳ ವಿಷಾದವಾಗುತ್ತದೆ.

ಅಧ್ಯಕ್ಷರು.—ನಿರ್ಣಯವಿರುವುದು ಸ್ಕಾಲರ್‌ಷಿಪ್‌ಗಳನ್ನು ಹೆಚ್ಚುಮಾಡಬೇಕು ಎಂದು. ಈ ಸಂದರ್ಭದಲ್ಲಿ ಎಲ್ಲವನ್ನೂ ಹೇಳುತ್ತಿದ್ದೀರಿ!

ಶ್ರೀ ಬಿ. ಹುಚ್ಚೇಗೌಡರು.—ವಿಷಯ ಇರುವುದು ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಡಬೇಕು ಎಂದು.

ಅಧ್ಯಕ್ಷರು.—ಅದರಮೇಲೆ ಎಲ್ಲವನ್ನೂ ಸೇರಿಸೋಣವೆಂದೇ ನಿಮ್ಮ ಉದ್ದೇಶ!!

ಶ್ರೀ ಬಿ. ಹುಚ್ಚೇಗೌಡರು.—ಹಿಂದೆ ಹರಿಜನರಿಗಾಗಿ ಎಷ್ಟೋ ರಿಯಾಯಿತಿಗಳಿದ್ದುವು. ಈಗ ಹೆಚ್ಚಿಗೆ ಏನನ್ನೂ ಮಾಡಿಲ್ಲ. ಇತರೇ ಜನಾಂಗದವರ ಮಟ್ಟಕ್ಕೆ ಬರಬೇಕಾದರೆ ಇತರೇ ಜನಾಂಗದವರಿಗೆಷ್ಟು ಕೊಟ್ಟಿದ್ದರೋ ಅಷ್ಟಾದರೂ ಇವರಿಗೆ ಕೊಡಬೇಕು.

ಅಧ್ಯಕ್ಷರು.—ಅದಕ್ಕಿಂತ ಹೆಚ್ಚಿಗೆ ಕೊಡಬೇಕೆಂದು ಅವರು ಕೇಳುತ್ತಿರುವುದು!

ಶ್ರೀ ಬಿ. ಹುಚ್ಚೇಗೌಡರು.—ಹೌದು. ಅದಕ್ಕಿಂತ ಹೆಚ್ಚಿಗೆ ಕೊಟ್ಟರೇ ಅವರು ಮುಂದುವರಿಯುವುದು. ಏಕೆಂದರೆ ಅವರು ಇತರೆಯವರಿಗಿಂತ ಬಹಳ ಹಿಂದುಳಿದಿದ್ದಾರೆ. ಇದುವರೆಗೂ ಅವರಲ್ಲಿ ಅಲ್ಪಸ್ವಲ್ಪ ಮಂದಿ ಮುಂದೆ ಬಂದಿದ್ದಾರೆಂದರೆ, ಅದಕ್ಕೆ ಕಾರಣ ಹಿಂದಿನ ಸರ್ಕಾರದವರು ಅವರುಗಳಿಗೆ ದುಡ್ಡು ಕೊಟ್ಟು ಓದಿಸಿದ್ದಲ್ಲದೆ, ಅವರ ತಂದೆತಾಯಿಗಳಿಗೂ ದುಡ್ಡು ಕೊಟ್ಟು ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಕಳುಹಿಸಲು ಪ್ರೋತ್ಸಾಹಿಸುತ್ತಿದ್ದುದು. ಹೀಗಾಗಿ ಈಗ ಅವರು ಸ್ವಲ್ಪಸ್ವಲ್ಪವಾಗಿ ಮುಂದಕ್ಕೆ ಬರುತ್ತಿದ್ದಾರೆ. ಹೀಗಿರುವಲ್ಲಿ ಅವರಲ್ಲಿ ವಿದ್ಯಾಭ್ಯಾಸ ಮಾಡುವುದಕ್ಕೆ ಎಷ್ಟು ಜನರು ಮುಂದಕ್ಕೆ ಬರುತ್ತಿದ್ದಾರೋ ಅವರಿಗೆ ಪ್ರೋತ್ಸಾಹ ಕೊಡುವ ರೀತಿಯಲ್ಲಿ ಸ್ಕಾಲರ್‌ಷಿಪ್ಪುಗಳನ್ನೂ ಕೂಡ ಕೊಡದೆ ಹೋದರೆ ಅವರು ಹೇಗೆ ಮುಂದಕ್ಕೆಬರುತ್ತಾರೆ? ಮೊದಲೇ ಆ ಜನರು ಅವರ ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಕಳುಹಿಸುವುದೇ ಕಷ್ಟ. ಅದರ ಮೇಲೆ ಮಕ್ಕಳಿಗೆ ದುಡ್ಡುಕೊಡುವುದೆಂದರೆ ಮತ್ತೂ ಕಷ್ಟ. ನಮ್ಮ ಡಿಸ್ಟ್ರಿಕ್ಟ್‌ನಲ್ಲಿ ಕೆಲವುಕಡೆ ಅವರಿಗೆ ಬೋರ್ಡಿಂಗ್ ಹೋಮ್‌ಗಳು ಕೂಡ ಇಲ್ಲ. ಬೋರ್ಡಿಂಗ್ ಹೋಮ್‌ಗಳನ್ನು ಕಟ್ಟಿಸಿಕೊಡಿಯೆಂದು ಎಷ್ಟು ಕೇಳಿದರೂ ಕಟ್ಟಿಸಿಕೊಟ್ಟಿಲ್ಲ. ಆದ್ದರಿಂದ ನ್ಯಾಯವಾಗಿ ದಾಮಾಷಾ ಪ್ರಕಾರ ಯಾವರೀತಿ ಖರ್ಚಾಗುತ್ತಿದೆಯೋ ಅದಕ್ಕೆ ಎರಡರಷ್ಟು ಹಣ ಕೊಟ್ಟ ಹೊರತು ಅವರನ್ನು ಇತರೆಯವರ ಸರಿಸಮಾನಕ್ಕೆ ತರುವುದಕ್ಕಾಗುವುದಿಲ್ಲ. ಆದ್ದರಿಂದ ನಾನು ಸರ್ಕಾರದವರಿಗೆ ಒತ್ತಾಯವಾಗಿ ಹೇಳುವುದೇನೆಂದರೆ—ಅವರ ವಿದ್ಯಾಭ್ಯಾಸ ಮತ್ತು ಇತರೇ ಅಭಿವೃದ್ಧಿಯ ವಿಷಯದಲ್ಲಿ ಯಾವ ದಯಾದಾಕ್ಷಿಣ್ಯವೂ ಇಲ್ಲದೆ ಆದಷ್ಟು ಹೆಚ್ಚಿನ ಪ್ರೋತ್ಸಾಹ ಕೊಟ್ಟು ಎಷ್ಟು ಜನರು ಓದಲು ಬರುತ್ತಾರೋ ಅಷ್ಟು ಜನರಿಗೂ ಸ್ಕಾಲರ್‌ಷಿಪ್ ಕೊಡಲೇಬೇಕು. ಏಕೆಂದರೆ ಅವರಲ್ಲಿ ನೂರಕ್ಕೊಬ್ಬರು ಅನುಕೂಲಸ್ಥರೂ ಇಲ್ಲವೆಂದು ಎಲ್ಲ ಸದಸ್ಯರಿಗೂ ಗೊತ್ತು; ನೂರಕ್ಕೊಬ್ಬರಿಗೂ ದುಡ್ಡುಕೊಟ್ಟು ಓದಿಸುವ ಶಕ್ತಿಯಿಲ್ಲ. ಶೇಕಡ 99 ಜನರಿಗೆ ಬಟ್ಟೆಬರೆಗಳಿಗೆ ಕೊಡುವುದಕ್ಕೂ ಸಾಧ್ಯವಿಲ್ಲ. ಅಂಥಾದ್ದರಲ್ಲಿ ಸ್ಕೂಲುಫೀಜು ಮುಂತಾದ ಖರ್ಚುಗಳನ್ನೂ ಕೊಟ್ಟು ಓದಿಸುವುದು

ಸಾಧ್ಯವೇ ಇಲ್ಲ. ಆದ್ದರಿಂದ ಪ್ರತಿಯೊಬ್ಬರಿಗೂ ವಿದ್ಯಾಭ್ಯಾಸಕ್ಕೆ ಎಲ್ಲಾ ಸಹಾಯವನ್ನೂ ಕೊಟ್ಟು ಎಷ್ಟರಮಟ್ಟಿಗೆ ಅವರಲ್ಲಿ ವಿದ್ಯಾಪ್ರಗತಿಯಾಗುತ್ತದೆಂಬದನ್ನು ಆಗಾಗ್ಗೆ ನೋಡಿಕೊಂಡು ಎಲ್ಲರೂ ವಿದ್ಯಾವಂತರಾಗಲು ಇನ್ನೂ ಹೆಚ್ಚಿಗೆ ಸಹಾಯ ಕೊಡಬೇಕೆಂದು ಗೊತ್ತಾದರೆ ಅದನ್ನೂ ಒದಗಿಸಿ ಸಹಾಯ ಮಾಡಬೇಕೆಂದು ಹೇಳುತ್ತೇನೆ.

*ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).— ಅಧ್ಯಕ್ಷರೇ, ಶ್ರೀಮಾನ್ ಮಾದಯ್ಯನವರು ತಂದಿರತಕ್ಕ ಈ ಠರಾವನ್ನು ಸಂಪೂರ್ಣವಾಗಿ ಅನುಮೋದಿಸುತ್ತಾ ಅವರು ಬರೀ ನಿಮ್ನತರಗತಿಯುವರ ವಿಷಯವಲ್ಲದೆ ಎಲ್ಲಾ ಷೆಡ್ಯೂಲ್ಡ್ ಪಂಗಡದವರ ವಿಷಯವನ್ನೂ ಸೇರಿಸಿ ಅವರ ಅಭಿವೃದ್ಧಿಗಾಗಿ ವಿದ್ಯಾರ್ಥಿವೇತನವನ್ನು ಹೆಚ್ಚಿಸಬೇಕೆಂದು ಒಂದು ವಿಶಾಲ ಮನೋಭಾವನೆಯನ್ನು ತೋರ್ಪಡಿಸಿರುವುದಕ್ಕಾಗಿ ಅವರಿಗೆ ನನ್ನ ಅಭಿನಂದನೆಗಳು. ಆದರೆ ಇದನ್ನು ಸಮರ್ಥನೆಮಾಡಿದ ಶ್ರೀಮಾನ್ ಹುಚ್ಚೇಗೌಡರ ವಾದಸರಣಿ ನನಗೇಕೋ ಸರಿಯಾಗಿ ಕಾಣಲಿಲ್ಲ. ಅವರು ಯಾವ ವಿಷಯ ಬರಲಿ ಸರ್ಕಾರದವರು ಏನೂ ಮಾಡಿಲ್ಲ, ಏನೂ ಮಾಡಿಲ್ಲ ಎನ್ನುವುದೇ ಅವರ ಒಂದು ಪಲ್ಲವಿಯಾಗಿಬಿಟ್ಟಿದೆ. 1949-50ನೆಯ ಇಸವಿಯ ಅಡ್ಮಿನಿಸ್ಟ್ರೇಷನ್ ರಿಪೋರ್ಟನ್ನು ಅವರು ಸ್ವಲ್ಪ ಓದಿದ್ದರೆ ಸರ್ಕಾರದವರು ನಿಮ್ನ ತರಗತಿಯವರಿಗಾಗಿ ಏನೇನು ಮಾಡಿದ್ದಾರೆಂಬುದು ಗೊತ್ತಾಗುತ್ತಿತ್ತು. ಅವರದನ್ನೆಲ್ಲಾ ಓದುವುದಿಲ್ಲ; ಅಪದ್ಧ ನುಡಿದುಬಿಡುತ್ತಾರೆ; ನಮಗೆ ಅದನ್ನು ಸರಿಪಡಿಸುವುದಕ್ಕೆ ಕಷ್ಟಕ್ಕೆ ಬರುತ್ತೆ.

ಶ್ರೀ ಬಿ. ಹುಚ್ಚೇಗೌಡರು. — ಸ್ವಾಮಿ, ಅವರು ಹಾಗೆ ಹೇಳಕೂಡದು. 'ಅಪದ್ಧ' ಎನ್ನುವುದು ಸರಿಯಾದ ಪದವಲ್ಲ. 'ಸುಳ್ಳು' ಎನ್ನುವುದು unparliamentary.

ಶ್ರೀ ಎಸ್. ರಂಗರಾಮಯ್ಯನವರು.— ವಾಸ್ತವವಾಗಿ ಇರುವುದನ್ನು ಹೇಳದೆಹೋದರೆ ಅಪದ್ಧವಾಗುತ್ತದೆ ಅಷ್ಟೆ. ಇದಕ್ಕೆ ಲಾಯರುಗಳ ಭಾಷೆಯಲ್ಲಿ 'far from truth' ಎಂದು ಹೇಳುತ್ತಾರೆ.

ಇನ್ನು ಹೇಳಬೇಕಾಗಿರುವ ವಿಷಯವನ್ನು ಹೇಳಿಬಿಡುತ್ತೇನೆ. ಡಿಪ್ರೆಸ್ಡ್ ಕ್ಲಾಸ್ ಮತ್ತು ಬ್ಯಾಕ್‌ವರ್ಡ್ ಕ್ಲಾಸ್‌ನವರ ವಿದ್ಯಾರ್ಥಿವೇತನಕ್ಕೆ 75,750 ರೂಪಾಯಿ ಒದಗಿಸಿದ್ದಾರೆ. ಹೀಗೆ ಹೆಚ್ಚು ಸಹಾಯ ಮಾಡುತ್ತಿದ್ದಾರೆ, ಇನ್ನೂ ಹೆಚ್ಚುಮಾಡಲು ತಯಾರಾಗಿದ್ದಾರೆ. 1949-50ನೆಯ ಸಾಲಿನೊಡನೆ ಹೋಲಿಸಿ ನೋಡಿದರೆ 1950-51ರಲ್ಲಿ ಇದಕ್ಕೆ ಕೊಟ್ಟಿರುವ ಹಣ ಹೆಚ್ಚಾಗಿದೆ. ಸರ್ಕಾರದವರು ಉದಾರವಾಗಿ ಸಹಾಯ ಮಾಡಿದ್ದಾರೆಂದು ಶ್ರೀಮಾನ್ ಮಾದಯ್ಯನವರೇ ಹೇಳಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ಏನೂ ಸಹಾಯ ಮಾಡಿಲ್ಲವೆಂದು ನಾನು ಹೇಳಲಿಲ್ಲ. ಮೂರು ವರ್ಷಗಳ ಹಿಂದೆ ನಿಮ್ನ ತರಗತಿಯ ಎಲ್ಲ ವಿದ್ಯಾರ್ಥಿಗಳಿಗೂ ಕೊಟ್ಟಿದ್ದರು. ಆದರೆ ಈಗ ಕೆಲವರಿಗೆ ಕೊಟ್ಟಿಲ್ಲವೆಂದು ಹೇಳಿದೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್ ಅವರು (ಬೆಂಗಳೂರು ನಗರ).—ಸ್ವಾಮಿ, ಸಭೆಯ ಮುಂದಿರುವ ಈ ನಿರ್ಣಯವನ್ನನುಮೋದಿಸುತ್ತಾ ನಾನು ಕೆಲವು ವಿಷಯಗಳನ್ನು ಹೇಳುತ್ತೇನೆ. ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡತಕ್ಕ ಷೆಡ್ಯೂಲ್ಡ್ ಕ್ಯಾಸ್ಟ್ ವಿದ್ಯಾರ್ಥಿಗಳಿಗೆಲ್ಲ ವೇತನಗಳನ್ನು ಕೊಡಬೇಕೆಂದೂ ಇದಕ್ಕಾಗಿ ಬೇಕಾಗುವ ಹೆಚ್ಚಿನ ಹಣವನ್ನು ಒದಗಿಸಿಕೊಡಬೇಕೆಂದೂ ಈ ನಿರ್ಣಯದಲ್ಲಿ ಕೇಳಿರುತ್ತಾರೆ. ನನಗೆ ತೋರುವಹಾಗೆ ಸಮಾಜದ ಸ್ಥಿತಿಗತಿಗಳು ಕಳೆದ ನಾಲ್ಕು ವರ್ಷಗಳಿಂದ ಬಹಳ ಹೀನಸ್ಥಿತಿಯಲ್ಲಿವೆ. ಆದರಲ್ಲಿಯೂ ಷೆಡ್ಯೂಲ್ಡ್ ಜನಾಂಗದ ಸ್ಥಿತಿಗತಿಗಳು ಏನೂ ಉತ್ತಮಗೊಂಡಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ನಾವು ಇವರ ಸ್ಥಿತಿ ಎಷ್ಟುಮಟ್ಟಿಗೆ ಉತ್ತಮವಾಗಬಹುದೆಂದು ಅಂದುಕೊಂಡಿದ್ದೆವೋ ಅಷ್ಟುಮಟ್ಟಿಗಂತೂ ಉತ್ತಮವಾಗಿಲ್ಲ. ಇದಕ್ಕೆ ಅನೇಕ ಕಾರಣಗಳನ್ನು ಹೇಳಬಹುದು. ಎಲ್ಲವನ್ನೂ ವಿವರಿಸಿ ಇಷ್ಟು ಸ್ವಲ್ಪಕಾಲದಲ್ಲಿ ಈ ಸಂದರ್ಭದಲ್ಲಿ ಹೇಳುವುದಕ್ಕಾಗುವುದಿಲ್ಲ. ಈಗ

(ಶ್ರೀ ಕೆ. ಆರ್. ಶ್ರೀಕಂಠೇಶ್ವರ್.)

ನಮ್ಮ ಎದುರಿಗಿರುವ ಸಮಾಜದಲ್ಲಿ ಆರ್ಥಿಕ ಸ್ಥಿತಿಯನ್ನು ನೋಡಿದರೆ ಕೆಲವರಲ್ಲಿ ವಿಶೇಷವಾಗಿ ಐಶ್ವರ್ಯವಿದೆ, ಮಿಕ್ಕವರಲ್ಲಿ ಹಣಕಾಸಿಲ್ಲ. ಇದನ್ನು ನಾವು ಪ್ರತ್ಯಕ್ಷವಾಗಿ ನೋಡುತ್ತಿದ್ದೇವೆ. ಇದೇ ಪರಿಸ್ಥಿತಿ ವಿದ್ಯಾಭ್ಯಾಸದ ವಿಷಯದಲ್ಲಿ ಒಂದು ಕಾಲದಲ್ಲಿತ್ತು. ಒಂದೇ ಜನಾಂಗ ವಿದ್ಯಾಭ್ಯಾಸವನ್ನು ಮನಾಪಲಿ ಮಾಡಿಕೊಂಡಿತ್ತು. ಇದನ್ನು ತಪ್ಪಿಸಲು ಎಲ್ಲ ಜನಾಂಗದವರೂ ವಿದ್ಯಾವಂತರಾಗಬೇಕು, ಎಲ್ಲ ಜನಾಂಗದವರೂ ವಿಶ್ವವಿದ್ಯಾನಿಲಯಗಳಲ್ಲಿ ಓದುವಂತಾಗಬೇಕು ಎಂದು ಯಾವರೀತಿ ಜನ ಹೊಡೆದಾಡುತ್ತಿದ್ದಾರೆಯೋ ಹಾಗೆಯೇ ಆರ್ಥಿಕ ಅಸಮಾನತೆ ಹೋಗಬೇಕೆಂಬುದೂ ಸಹ ನಮ್ಮ ಧ್ಯೇಯ. ಈಗ ಬಹಳ ಹಿಂದೆಬಿದ್ದಿರುವ ಜನಾಂಗದವರು ನಾವು ನೋಡುತ್ತಿರುವಹಾಗೆ ಬಹಳ ಹೀನಸ್ಥಿತಿಯಲ್ಲಿದ್ದಾರೆ. ಅವರಲ್ಲನೇಕರು ನಮ್ಮ ಮಿತ್ರರಾದ ಶ್ರೀಮಾನ್ ಮಾದಯ್ಯನವರು ಹಾಕಿಕೊಂಡಿರುವಂತಹ ಉಡುಪನ್ನು ಹಾಕಿಕೊಳ್ಳಲಾರರು, ಹಾಕಿಕೊಂಡಿಲ್ಲ.' ಆ ಜನಾಂಗದಲ್ಲಿ ಇಂತಹ ಪರಿಸ್ಥಿತಿಯನ್ನು ನಾವಿಂದು ನೋಡುತ್ತಿದ್ದೇವೆ. ಹೀಗಿರುವಾಗ ಅವರ ಜನಾಂಗದ ಪ್ರತಿಯೊಬ್ಬ ವಿದ್ಯಾರ್ಥಿಗೂ ವೇತನ ಕೊಡುವುದು ಮಾತ್ರವಲ್ಲ, ಮಿಕ್ಕ ಅನುಕೂಲಗಳನ್ನೂ ಮಾಡಿಕೊಡಲು ಇದಕ್ಕೆ ಒಂದು ಯೋಜನೆಯನ್ನು ಹಾಕಿಕೊಂಡು ಕೆಲಸ ಮಾಡಬೇಕಾದುದು ಸಮಾಜದ ಮತ್ತು ಪ್ರಜಾಸರ್ಕಾರದ ಕರ್ತವ್ಯ. ನಮಗೂ ನಮ್ಮ ಪಕ್ಷಕ್ಕೂ ತಿಳಿದಿರುವಮಟ್ಟಿಗೆ ಈ ಷೆಡ್ಯೂಲ್ಡ್ ಪಂಗಡದವರಿಗೆ ಹೆಚ್ಚು ಅನುಕೂಲವೇನೂ ಮಾಡಿಲ್ಲ. ಅವರಿಗೆ ಎಷ್ಟು ಸೌಕರ್ಯ ಮಾಡಬಹುದೋ ಅಷ್ಟನ್ನೂ ಇನ್ನೂ ಮಾಡಿಲ್ಲ. ನಿಮ್ನ ತರಗತಿಯ ವಿದ್ಯಾರ್ಥಿಗಳಲ್ಲಿ ಎಷ್ಟು ಜನರು ಪಾಸಾಗಿದ್ದಾರೆ, ಎಷ್ಟು ಜನರಿಗೆ ಕೆಲಸಗಳನ್ನು ಕೊಟ್ಟಿದ್ದಾರೆ ಎಂಬ ಬಗ್ಗೆ ಅಂಕಿ ಅಂಶಗಳನ್ನು ಸೂಚಕರು ಕೊಟ್ಟದ್ದಿದ್ದರೆ ಚೆನ್ನಾಗಿತ್ತು.

ಅಧ್ಯಕ್ಷರು.—ಇದಕ್ಕೆ ಬೇರೆ ಅವಕಾಶವಿದೆ. ಈಗ ವೇತನಗಳ ವಿಷಯ ಮಾತ್ರ ಹೇಳಿ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್ ಅವರು.—ಸಮಾಜದಲ್ಲಿ ಪ್ರತಿಯೊಬ್ಬರೂ ಸರಿಸಮಾನರೆಂದು ರಾಜ್ಯಾಂಗದಲ್ಲೇ ಸೇರಿಸಿರುವಾಗ ಕೂಡಲೇ ಎಲ್ಲ ಸೌಕರ್ಯಗಳನ್ನೂ ಈ ಹಿಂದುಳಿದಿರುವ ಪಂಗಡದವರಿಗೆ ಕೊಡುವುದು ಸರ್ಕಾರದ ಆದ್ಯ ಕರ್ತವ್ಯ. ವಿಶ್ವವಿದ್ಯಾನಿಲಯದಲ್ಲಿ ಓದತಕ್ಕ ನಿಮ್ನತರಗತಿಯ ವಿದ್ಯಾರ್ಥಿಗಳಿಗೆ ಹೆಚ್ಚು ಹೆಚ್ಚಾಗಿ ವೇತನಗಳನ್ನು ಕೊಟ್ಟು ಅನುಕೂಲ ಮಾಡದೆಹೋದರೆ ಅವರಲ್ಲಿ ವಿದ್ಯಾವಂತರಾಗದೆ ಹೀಗೆಯೇ ಹಿಂದುಳಿದಿರಬಹುದು. ಆರ್ಥಿಕವಾಗಿಯೂ ಹಿಂದುಳಿದು, ಒಳ್ಳೆಯ ಬಟ್ಟೆಬರೆಗಳನ್ನು ಕೂಡ ಹಾಕಿಕೊಳ್ಳಲಾರದೇ ಇರಬಹುದು. ಇದರಿಂದ ಅವರನ್ನು ನಮ್ಮೊಡನೆ ಸೇರಿಸಿಕೊಳ್ಳಲು ಸಾಧ್ಯವಾಗದೇ ಇರಬಹುದು. ಆದಕಾರಣ ಹೀಗೆ ಅವರಿಗೆ ಸೌಕರ್ಯಗಳನ್ನು ಕೊಡದೇಯಿರುವುದರಿಂದ ಈ ಅಂತರವನ್ನು ಹೆಚ್ಚು ಮಾಡಿದಹಾಗಾಗುತ್ತದೆ. ಆದುದರಿಂದ ಸರ್ಕಾರದಲ್ಲಿ ಹಣವಿರಲಿ, ಇಲ್ಲದಿರಲಿ ಇದನ್ನು ಮಾಡಬೇಕು. ಹಣವಿಲ್ಲವೆಂದು ಹೇಳುವುದು ಒಂದು ಸಾಮಾನ್ಯವಾದ ದೊಡ್ಡ ವಾದ. ಅರ್ಥ ಸಚಿವರು ಯಾವಾಗಲೂ ಇದನ್ನು ಹೇಳುತ್ತಿರುತ್ತಾರೆ. ಅದನ್ನು ಕೇಳಿ ಬೇಸರವಾಗಿದೆ. ಈ ವರ್ಷ ನಿಮ್ನಪಂಗಡದ ವಿದ್ಯಾರ್ಥಿಗಳು ಎಷ್ಟು ಜನ ವಿಶ್ವವಿದ್ಯಾನಿಲಯದಲ್ಲಿ ಓದುತ್ತಿದ್ದಾರೋ ಅವರೆಲ್ಲರಿಗೂ ಸರ್ಕಾರದವರು ವೇತನಕೊಡಲು ಹಣವನ್ನೊದಗಿಸಬೇಕು. ಇದಕ್ಕೆ ಬೇಕಾಗಬಹುದಾದ ಹಣದ ಡಿಮ್ಯಾಂಡನ್ನು ನಮ್ಮ ಮುಂದಿಡಲಿ. ಅದನ್ನು ಈ ಸಭೆ ಮಂಜೂರು ಮಾಡುವ ಭರವಸೆ ಕೊಡುತ್ತೇವೆ. ಇಷ್ಟು ಹೇಳಿ ಈ ನಿರ್ಣಯಕ್ಕೆ ನನ್ನ ಹೃತ್ಪೂರ್ವಕವಾದ ಬೆಂಬಲವನ್ನು ಕೊಡುತ್ತೇನೆ.

ಶ್ರೀ ಎಂ. ಸಿ. ವೆಂಕಟೇಶರವರು (ಮಂಡ್ಯ ಜಿಲೆ—ನಿಮ್ನಪಂಗಡ).—ಸ್ವಾಮಿ, ಈ ನಿರ್ಣಯವನ್ನು ನಾನು ಅನುಮೋದಿಸುತ್ತ ಒಂದೆರಡು ವಿಷಯಗಳನ್ನುಮಾತ್ರ ಹೇಳಬೇಕೆಂದಿದ್ದೇನೆ. ನಮ್ಮ ಪ್ರಜಾಸಂಖ್ಯೆ ಇರತಕ್ಕದ್ದು $17\frac{1}{2}$ ಲಕ್ಷ, ಆಪೈಕಿ ವಿದ್ಯಾವಂತರಿರತಕ್ಕದ್ದು ಕೇವಲ ಶೇಕಡ 2 ರಷ್ಟು. ಇದು ಬಹಳ ಶೋಚನೀಯವಾದ

ವಿಚಾರ. ಹರಿಜನರಿಗೆ ವಿದ್ಯಾಭ್ಯಾಸ ಜಾರಿಗೆ ಬಂದು ಇಲ್ಲಿಗಾಗಲೇ 30 ವರ್ಷಗಳಾಯಿತು. ಅಷ್ಟಾದಾಗ್ಯೂ ಈ ವಿದ್ಯಾವಂತರ ಸಂಖ್ಯೆ ತೀರಾ ಕಮ್ಮಿ. ಅದರಲ್ಲೂ ಹರಿಜನರು ಕೇವಲ ಶೇಕಡ ಎರಡರಷ್ಟೆಂದರೆ ತುಂಬಾ ಶೋಚನೀಯವಾದ ವಿಷಯ. ಆದರೆ ಇತರೆ ಎಲ್ಲಾ ಕೋಮಿನವರ ವಿದ್ಯಾವಂತರ ಸಂಖ್ಯೆ ಶೇಕಡ 20 ರಷ್ಟಿರುವಾಗ ಈ ಒಂದು ತರಗತಿಯವರನ್ನೂ ಅವರ ಮಟ್ಟಕ್ಕೇರಿಸುವುದು ಸರ್ವ ಜನಗಳ ಮತ್ತು ಸರ್ಕಾರದವರ ಕರ್ತವ್ಯವಾಗಿದೆ. ಈ ಕಾರಣದಿಂದ ಸರ್ಕಾರದವರು ಇತರೇ ಕೋಮಿನವರು ಹೇಗೆ ಬೇಗಬೇಗ ಪದವೀಧರರುಗಳಾಗಿ ಹೊರಗೆ ಬರುತ್ತಿದ್ದಾರೋ ಅದೇ ದರದಲ್ಲಿ ಈ ನಿಮ್ನ ತರಗತಿಯವರೂ ವಿದ್ಯಾವಂತರಾಗಿ ಬರುವಂತೆ ಎಲ್ಲ ಸೌಕರ್ಯಗಳನ್ನೂ ಕಲ್ಪಿಸುವುದು ಅತ್ಯಾವಶ್ಯಕ. ಆದರೆ ಆ ರೀತಿ ಒಂದು ಉದಾರ ಭಾವನೆಯಿಂದ ನೋಡದೆ ಹಿಂದಿನವರ್ಷ ಎಷ್ಟು ಮೊಬಲಗನ್ನು ಒದಗಿಸಲಾಗಿತ್ತೋ ಈಗಲೂ ಅಷ್ಟೇ ಮೊಬಲಗನ್ನು ಒದಗಿಸಿದರೆ ಸಾಕೆಂದು ಬಡ್ಜೆಟ್ಟಿನಲ್ಲಿ ಅಷ್ಟನ್ನೇ ಒದಗಿಸುತ್ತಾಹೋದರೆ ಇವರ ವಿದ್ಯಾಭಿವೃದ್ಧಿ ಖಂಡಿತ ಆಗಲಾರದು. ಆ ಕಾರಣದಿಂದಲೇ ಈ ಜನರ ವಿದ್ಯಾಭ್ಯಾಸ ಅಧೋಗತಿಯಲ್ಲಿರಲು ಅವಕಾಶವಾಗಿದೆ. ಇಂಥಾ ಅಧೋಗತಿಯಲ್ಲಿರುವ ಇವರ ವಿದ್ಯಾಭ್ಯಾಸವನ್ನು ಮೇಲಕ್ಕೇರಿಸಲು ಎಷ್ಟು ಧನಸಹಾಯ ಅಗತ್ಯವೋ ಅಷ್ಟನ್ನೂ ಬಡ್ಜೆಟ್ಟಿನಲ್ಲಿ ಒದಗಿಸಬೇಕಾಗಿದೆ. ಪ್ರತಿವರ್ಷ ಎಷ್ಟು ಪ್ರಮಾಣದಲ್ಲಿ ವಿದ್ಯಾವಂತರ ಸಂಖ್ಯೆ ಹೆಚ್ಚುತ್ತಾಯಿದೆಯೋ ಅಷ್ಟು ಪ್ರಮಾಣದಲ್ಲಿ ಅಂದಾಜುಮಾಡಿ ಹಣ ಮಂಜೂರುಮಾಡಬೇಕಾಗಿ ಪ್ರಾರ್ಥನೆ.

ಶ್ರೀ ಜಿ. ಎ. ಆಚಾರ್ಯರವರು (ಬೆಂಗಳೂರು ಜಿಲ್ಲೆ).—ಮಾನ್ಯ ಸದಸ್ಯರು ' ಅಧೋಗತಿಯಲ್ಲಿರುವ ವಿದ್ಯಾಭ್ಯಾಸ ' ಎಂದು ಹೇಳುತ್ತಿದ್ದಾರೆ. ಹಾಗೆ ಹೇಳುವುದು ಸರಿಯೇ ?

ಶ್ರೀ ಎಂ. ಸಿ. ವೆಂಕಟೇಶ್ವರವರು.—ನಾನು ನಮ್ಮ ಜನಗಳ ವಿದ್ಯಾಭ್ಯಾಸ ಅಷ್ಟು ಹೀನಾವಸ್ಥೆಯಲ್ಲಿರುತ್ತೆಂಬುದಕ್ಕೆ ಹಾಗೆ ತಿಳಿಸಿದ್ದೇನೆ. ಇಡೀ ಸಂಸ್ಥಾನದಲ್ಲೇ ನಮ್ಮ ಜನಾಂಗದವರ ವಿದ್ಯಾವಂತರ ಸಂಖ್ಯೆ ಶೇಕಡ 2 ಮಾತ್ರ. ಅದರಲ್ಲೂ ಹೀಗೆ ವಿದ್ಯಾವಂತರಾಗಿರತಕ್ಕವರೆಲ್ಲರೂ ಕೇವಲ ಪ್ರೈಮರಿ ಶಾಲಾ ಉಪಾಧ್ಯಾಯರುಗಳ ಹೊರತು ಮತ್ತೊಂದು ನೌಕರಿಯಲ್ಲಿಲ್ಲ. ಇದಕ್ಕೆ ಕಾರಣ ಇವರಲ್ಲಿ ಹೈಸ್ಕೂಲು ಮತ್ತು ಕಾಲೇಜುಗಳಿಗೆ ಹೋಗಿ ವಿದ್ಯಾಭ್ಯಾಸ ಮಾಡುವಷ್ಟು ಹಣದ ಸಹಾಯ ಅಥವಾ ಸ್ಕಾಲರ್‌ಷಿಪ್ ಇವರಿಗಿರುವುದಿಲ್ಲ. ಹೀಗೆ ಇವರಿಗೆ ಹಣದ ತೊಂದರೆಯಿರುವುದರಿಂದ ಈಗ ಹಾಲಿ ಸಂಸ್ಥಾನದಲ್ಲಿರತಕ್ಕ ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳ ಪೈಕಿ ನಮ್ಮವರೇ ಶೇಕಡ 50 ರಷ್ಟಿರುತ್ತಾರೆ. ಈ ಎಲ್ಲಾ ಕಾರಣಗಳನ್ನೂ ಪರಿಶೀಲಿಸಿದರೆ ಸರ್ಕಾರದವರು ಈಗ ಈ ವರ್ಗದ ವಿದ್ಯಾರ್ಥಿಗಳು ಎಷ್ಟು ಜನ ವಿದ್ಯಾಭ್ಯಾಸಮಾಡಲು ಮುಂದೆ ಬರುತ್ತಿದ್ದಾರೋ ಅಷ್ಟು ಜನರಿಗೆ ಸಾಕಾಗುವಷ್ಟು ಸ್ಕಾಲರ್‌ಷಿಪ್ ದೊರಕಿಸದಿರುವುದೇ ಒಂದು ದೊಡ್ಡ ಕಾರಣ. ಆದರೆ ಇತರೇ ಕಾರಣಗಳೂ ಕೆಲವು ಇರಬಹುದು. ಅಂತೂ ಇವರಿಗೆ ಹೆಚ್ಚುಹೆಚ್ಚು ವಿದ್ಯಾಭ್ಯಾಸಮಾಡಲು ಮುಂದೆ ಹೋಗಲಿಕ್ಕೆ ಧನಸಹಾಯವಿಲ್ಲದಕಾರಣ ಅವರು ಬೇರೆ ಎಲ್ಲಿಯಾದರೂ ಉದ್ಯೋಗಗಳಿಗೆ ಹೋಗಿ ಸೇರಿಕೊಳ್ಳಲು ಅವಕಾಶವಾಗಿರುತ್ತೆ. ಇಂಥಾ $17\frac{1}{2}$ ಲಕ್ಷ ಪ್ರಜಾಸಂಖ್ಯೆ ಇರತಕ್ಕ ಜನಾಂಗದಲ್ಲಿ ಕೇವಲ ಒಂದುನೂರು ಜನ ಪಧವೀಧರರುಗಳಿದ್ದಾರೆಂದರೆ ಎಷ್ಟು ಸಂತಾಪಕರವಾದ ವಿಷಯ! ಮೊನ್ನೆತಾನೇ ಮಂಡ್ಯ ಜಿಲ್ಲೆಯಲ್ಲಿ ಸ್ಕಾಲರ್‌ಷಿಪ್‌ಗಳನ್ನು ಹಂಚತಕ್ಕ ಕಾಲದಲ್ಲಿ ಬಂದಿದ್ದ ಹರಿಜನರ ಮತ್ತು ಷೆಡ್ಯೂಲ್ಡ್ ತರಗತಿಯ ಬಾಲಕರ 550 ಅರ್ಜಿಗಳ ಪೈಕಿ ಕೇವಲ 75 ಅರ್ಜಿದಾರರಿಗೆ ಆಗುವಷ್ಟು ಹಣದ ಸೌಕರ್ಯವಿದ್ದ ಪ್ರಯುಕ್ತ ಅಷ್ಟು ಜನರಿಗೆ ಮಾತ್ರ ಕೊಟ್ಟು ಬಾಕಿ 475 ಜನರ ಅರ್ಜಿಗಳನ್ನು ತಿರಸ್ಕಾರ ಮಾಡಬೇಕಾದ ಸಂದರ್ಭ ಬಂತು. ಆದರೆ ಈಗಾಗಲೇ ಅನೇಕ ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ತಿಳಿಸಿರುವ ಪ್ರಯುಕ್ತ ನಾನು ಹೆಚ್ಚು ಲಂಬಿಸಿ ಹೇಳುವುದಕ್ಕೆ ಹೋಗುವುದಿಲ್ಲ. ಒಟ್ಟಿನಲ್ಲಿ ನಾನು ತಿಳಿಸಬೇಕಾಗಿರುವುದು ಈ ನಿಮ್ನ ಪಂಗಡಗಳವರ

(ಶ್ರೀ ಎಂ. ಸಿ. ವೆಂಕಟೇಶ್ವರವರು.)
ಅಭಿವೃದ್ಧಿಗೆ ಮತ್ತು ವಿದ್ಯಾಭ್ಯಾಸದ ಮಟ್ಟ ಇತರೇ ಕೋಮಿನವರ ಮಟ್ಟಕ್ಕೆ ಬರುವಂತೆ ಮಾಡಲು ಎಷ್ಟು ಧನಸಹಾಯಕ್ಕೆ ಈಗ ಕೊರತೆ ಬಿದ್ದಿದೆಯೋ ಅಷ್ಟನ್ನೂ ಭರ್ತಿಮಾಡಿ ಇವರೂಕೂಡ ವಿದ್ಯಾವಂತರಾಗಿ, ಸತ್ಪ್ರಜೆಗಳಾಗಿ ದೇಶಸೇವೆಗೆ ನೆರವಾಗುವಂತೆ ಅವಕಾಶ ಕಲ್ಪಿಸಿಕೊಡುತ್ತಾರೆಂದು ನಂಬಿ ನಾನು ನನ್ನ ಭಾಷಣವನ್ನು ಪೂರೈಸುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಸ್ವಾಮಿ, ನನಗೆ ಈ ನಿರ್ಣಯದ ಸಂಬಂಧವಾಗಿ ಮೊದಲು ಮಾತನಾಡಬೇಕೆಂಬ ಇಚ್ಛೆಯೇ ಇರಲಿಲ್ಲ. ಆದರೆ ಈಗಾಗಲೇ ಮಾತನಾಡಿರತಕ್ಕ ಮಾನ್ಯ ಸದಸ್ಯರುಗಳಪೈಕಿ ಒಬ್ಬಿಬ್ಬರು ಕೆಲವು ತಪ್ಪು ಅಭಿಪ್ರಾಯಗಳನ್ನು ಹೊರಗೆಡವಿದಪ್ರಯುಕ್ತ ಅವುಗಳಿಗೆ ಸದುತ್ತರವನ್ನು ಕೊಡಬೇಕೆಂಬ ಉದ್ದೇಶದಿಂದೀಗ ನಾನು ಎದ್ದುನಿಂತಿದ್ದೇನೆ. ಹಾಗೆ ಹೊರಗೆಡವಿದ ತಪ್ಪು ಅಭಿಪ್ರಾಯಗಳ ಪೈಕಿ ಒಂದನೆಯದು ಈಗಿರತಕ್ಕ ಸರ್ಕಾರ ಏನೂ ಮಾಡಿಲ್ಲವೆಂದು ಅವರು ಭಾಷಣಮಾಡುತ್ತ ತಿಳಿಸಿದರು. ಮತ್ತೆ ಕೆಲವರು ಇವರು ಯಾವ ಪ್ರಮಾಣದಲ್ಲಿ ಕೆಲಸ ಮಾಡಬೇಕಾಗಿತ್ತೋ ಅಷ್ಟನ್ನೂ ಮಾಡಿಲ್ಲವೆಂದು ತಿಳಿಸಿದರು. ಮತ್ತೆ ಕೆಲವರು ಹೇಳಿದ್ದಾರೆ—ಹರಿಜನರಿಗೆ ಸಾಕಷ್ಟು ಸೌಲಭ್ಯಗಳನ್ನು ಕಲ್ಪಿಸಿಲ್ಲವಾದ್ದರಿಂದ ಅವರು ಹೆಚ್ಚುಮಂದಿ ಪದವೀಧರರಾಗಲು ಅವಕಾಶವಿಲ್ಲದೇಹೋಗಿದೆಯೆಂದು ಇತ್ಯಾದಿ ವಿಷಯಗಳನ್ನು ತಿಳಿಸಿದರು.

ಆದರೆ ಈ ದಿವಸ ಒಂದು ಅಂಶವನ್ನು ನಾನು ಈ ಸಭೆಯಲ್ಲಿ ತಿಳಿಸುವುದೇನೆಂದರೆ—ಈ ಸಭೆಯಲ್ಲಿ ಈ ಹರಿಜನರಿಗೆ ಮೀಸಲಾಗಿರುವ 19 ಸ್ಥಾನಗಳಿಗೂ ಮತ್ತು ಕೇಂದ್ರ ಶಾಸನಸಭೆಗೆ ಮೀಸಲಾಗಿರುವ ಸ್ಥಾನಗಳಿಗೂ ಎಲ್ಲಕ್ಕೂ ಒಟ್ಟಾಗಿ ಒಬ್ಬರಿಗೊಬ್ಬರು ಪಧವೀಧರರಾಗಿರತಕ್ಕವರೇ ಸ್ಪರ್ಧಿಸಲು ನಿಂತಿರುವಾಗ, ಇಷ್ಟೊಂದು ಪೈಪೋಟಿ ಬರಲಿಕ್ಕೆ ಕಾರಣ ಏನೆಂದರೆ ಅವರು ಹಾಗೆ ಪಧವೀಧರರಾದದ್ದೇ ಆಗಿರುತ್ತೆ. ಹೀಗೆ ಇಂದು ಅವರಲ್ಲೇ ಇಷ್ಟು ಪೈಪೋಟಿಗೆ ಬರಲು ಅದು ಯಾವುದರ ಪರಿಣಾಮವೆಂಬುದನ್ನು ಅವರೇ ಪ್ರಶ್ನೆಹಾಕಿಕೊಂಡರೆ ಆಗ ಅವರಿಗೇ ಇದು ಗೋಚರವಾಗಿ ಇದರ ಸತ್ಯಾಂಶಕ್ಕೆ ದೂರವಾಗಿರತಕ್ಕ ರೀತಿಯಾಗಿ ಮಾತನಾಡಿದ್ದೇವೆಂಬುದು ಅವರಿಗೇ ಗೋಚರವಾಗುತ್ತದೆ. ಈ ಸರ್ಕಾರ ಬಂದ ತರುವಾಯ ಅಂದರೆ ಕಳೆದ ಮೂರು ವರ್ಷಗಳಲ್ಲಿ ವಿದ್ಯಾಭ್ಯಾಸದಬಗ್ಗೆ ಎಷ್ಟು ಪುರೋಭಿವೃದ್ಧಿ ಕೆಲಸಕಾರ್ಯಗಳನ್ನು ಮಾಡಿರುತ್ತಾರೆಂಬುದಕ್ಕೆ ಸಾಕಷ್ಟು ಅಂಕಿ ಅಂಶಗಳ ಆಧಾರವಿದೆ. ಹಿಂದೆ ಕೇವಲ 10 ಸಾವಿರದವರೆಗಿದ್ದ ವಿದ್ಯಾಪೀಠಗಳನ್ನು ಈ ಸರ್ಕಾರ ಬಂದ ತರುವಾಯ 15 ಸಾವಿರಕ್ಕೆ ಏರಿಸಲಾಗಿದೆ. 1946-48 ರಲ್ಲಿದ್ದ ವಿದ್ಯಾಪೀಠಗಳ ಸಂಖ್ಯೆ 10,449. ಕಳೆದ ಮೂರು ವರ್ಷಗಳಿಂದೀಚೆಗೆ ಅದು 15,378ಕ್ಕೆ ಹೆಚ್ಚಿದೆ. ಅಂದರೆ ಕೇವಲ 3 ವರ್ಷಗಳಲ್ಲಿ 5,000 ವಿದ್ಯಾಸಂಸ್ಥೆಗಳನ್ನು ಹೆಚ್ಚಿಸಿದ್ದಾರೆ. ಆಗ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದುದು ಕೇವಲ 2,628 ಮಂದಿ ಮಾತ್ರ. ಈಗ ಅವರಲ್ಲಿ ಪಾಠ ಪ್ರವಚನ ಮಾಡುತ್ತಿರುವವರ ಸಂಖ್ಯೆ 10 ಸಾವಿರಕ್ಕೆ ಮುಟ್ಟಿರುತ್ತೆ. ಹೀಗೆ ಹೆಚ್ಚುಹೆಚ್ಚು ಜನ ವಿದ್ಯಾವಂತರಾಗುತ್ತಿರುವವರಲ್ಲಿ ಈ ಹರಿಜನರೂ ಸೇರಿಕೊಂಡಿದ್ದಾರೆ. ಇತರೇ ಜನಾಂಗದವರು ಹೇಗೆ ಈ ವಿದ್ಯಾಭ್ಯಾಸದಲ್ಲಿ ಹೆಚ್ಚುಹೆಚ್ಚಾಗಿ ಮುಂದುವರೆಯುತ್ತಿದ್ದಾರೆಯೋ ಅದೇ ದಾಮಾಷಾದಲ್ಲಿ ಈ ಹರಿಜನರೂ ಮುಂದುವರೆಯುತ್ತಿದ್ದಾರೆ. ಸಾರ್ವಜನಿಕರಿಂದ ವಸೂಲಾದ ಹಣದಲ್ಲಿ 1947-48ರಲ್ಲಿ ಹರಿಜನರ ವಿದ್ಯಾಭ್ಯಾಸಕ್ಕೆಂದು ಎಷ್ಟು ಹಣವನ್ನು ಮೀಸಲಾಗಿಡುತ್ತಿದ್ದರೋ ಅದಕ್ಕಿಂತಲೂ ಮಿಗಿಲಾಗಿ ಈಗ ಒದಗಿಸಿರುತ್ತಾರೆಂಬ ಅಂಶವನ್ನು ಇತ್ತೀಚಿನ ಬಡ್ಜೆಟ್ ಪ್ರತಿಗಳನ್ನು ತೆಗೆದು ನೋಡಿದರೆ ಅದು ಸರ್ವರಿಗೂ ವೇದ್ಯವಾಗುತ್ತದೆ. ಆದರೂ ಅವರು ಅಷ್ಟಕ್ಕೂ ತೃಪ್ತರಾಗಿಲ್ಲ. ಅಂದರೆ ನಾನು ಹೇಳತಕ್ಕದ್ದು ಅವರಿಗೆ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ನೀಡಬಾರದೆಂದೇನೂ ಅಲ್ಲ. ಸಾಧ್ಯವಾದಷ್ಟನ್ನೂ ಮಾಡೋಣ. ಆದರೆ ಈ ನಿರ್ಣಯ

ವನ್ನು ತಂದಿರತಕ್ಕ ಮಾನ್ಯ ಸದಸ್ಯರಾದ ಶ್ರೀಮಾನ್ ಮಾದಯ್ಯನವರು ಇದರಲ್ಲಿ ಬಹಳ ಚಾಕಚಕ್ಯತೆಯಿಂದ ಪದಗಳನ್ನುಪಯೋಗಿಸಿದ್ದಾರೆ. ಅವರು ನಿಜವಾಗಿಯೂ ಬಹಳ ಜಾಣರಿದ್ದಾರೆ. ಅವರ ನಿರ್ಣಯದಲ್ಲಿ ಅಡಕವಾಗಿರತಕ್ಕ ಮುಖ್ಯಾಂಶ ಈಗ ಅವರಿಗೆ ಕೊಡುತ್ತಿರುವುದು ಸಾಲದು ಮತ್ತು ಈಗ ಹಾಲಿ ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ವ್ಯಾಸಂಗಮಾಡುತ್ತಿರುವ ಹರಿಜನಗಳು ಎಷ್ಟು ವಿದ್ಯಾರ್ಥಿಗಳಿದ್ದಾರೋ ಅವರೆಲ್ಲರಿಗೂ ಮತ್ತು ಅವರ ಜೊತೆಗೆ ಷೆಡ್ಯೂಲ್ಡ್ ಕ್ಯಾಸ್ಟಿನವರಿಗೂ ಸಹ ಅದೇ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ಕೇಳಿಕೊಂಡಿದ್ದಾರೆ. ಇದು ವಾಸ್ತವವಾಗಿಯೂ ಅಭಿನಂದನೀಯವಾದುದು. ಆದರೆ ಹಣದ ಅನುಕೂಲತೆ ಎಷ್ಟರಮಟ್ಟಿಗೆ ಒದಗುತ್ತದೋ ಮತ್ತು ಹಾಗೆ ಹೆಚ್ಚಿನ ಅನುಕೂಲಗಳನ್ನು ಯಾವರೀತಿ ಕಲ್ಪಿಸಲು ಸಾಧ್ಯವಾದೀತೆಂಬ ಅಂಶವನ್ನು ತಮ್ಮ ದೃಷ್ಟಿಯಲ್ಲಿಟ್ಟುಕೊಂಡು ಸಾಧ್ಯವಾದಮಟ್ಟಿಗೂ ಅವರಿಗೆ ಧನಸಹಾಯ ನೀಡುವುದು ಸರ್ಕಾರದವರ ಕರ್ತವ್ಯವಾಗಿದೆ. ಇಷ್ಟನ್ನು ಅವರು ಮಾಡಬಹುದೇ ಶಿವಾಯಿ ಶ್ರೀಮಾನ್ ಹುಚ್ಚೇಗೌಡರು ತಿಳಿಸಿದಹಾಗೆ ಈಗ ಕೊಡುತ್ತಿರುವುದಕ್ಕೆ ಎರಡರಷ್ಟನ್ನು ಕೊಡಬೇಕೆಂದು ಹೇಳಿದರೆ ಅದು ಸಾಧ್ಯವಾಗದಮಾತು. ಹಾಗೆ ತಿಳಿಸುವುದೇ ಒಂದು ದೊಡ್ಡ ಪ್ರಾಮುಖ್ಯವಲ್ಲ. ಆದರೆ ಹಾಗೆ ಹೇಳಿದವರಕೈಗೇ ಈ ರಾಜ್ಯಾಡಳಿತವನ್ನು ಕೊಟ್ಟು, ಇರತಕ್ಕ ಇಷ್ಟು ಉತ್ಪತ್ತಿಯಲ್ಲಿ ಖರ್ಚುಗಳಿಗೆಲ್ಲಾ ನೀವು ಹಣವನ್ನೊದಗಿಸಬೇಕೆಂದು ಹೇಳಿದ್ದರೆ, ಆಗ ಅವರು ಏನು ಹೇಳುತ್ತಿದ್ದರೆಂಬುದು ಗೊತ್ತಾಗುತ್ತಿತ್ತು. ಎಷ್ಟು ಹಣದ ಉತ್ಪತ್ತಿಯಿದೆ; ಖರ್ಚು ಬಾಬುಗಳು ಎಷ್ಟೆಷ್ಟಿರುತ್ತವೆ; ಆ ಪೈಕಿ ಇರತಕ್ಕ ವೆಚ್ಚದ ಬಾಬುಗಳಪೈಕಿ ಯಾವುದಕ್ಕೆ ಮೊದಲು ಪ್ರಯಾರಿಟಿ ಕೊಟ್ಟು ಹಣವನ್ನೊದಗಿಸಬೇಕು; ತದನಂತರ ಯಾವ ಬಾಬಿಗೆ ಪ್ರಯಾರಿಟಿ ಕೊಡಬೇಕು; ಹೀಗೇ ಕ್ರಮಕ್ರಮವಾಗಿ ಒಂದೊಂದಕ್ಕೂ ರಚನಾತ್ಮಕ ಕಾರ್ಯಗಳಪೈಕಿ ಯಾವುಯಾವುದಕ್ಕೆ ಪ್ರಯಾರಿಟಿ ಕೊಡಬೇಕು ಎಂಬುದನ್ನು ಮುಖ್ಯವಾಗಿ ನೋಡದೆ ಕೆಲಸ ಮಾಡಲಿಕ್ಕಾಗುವುದಿಲ್ಲ. ದೇಶದಲ್ಲಿ ಇಂದು ಯಾರುಯಾರು ಎಷ್ಟೆಷ್ಟುಮಟ್ಟಿಗೆ ಪ್ರಗತಿಹೊಂದಿದ್ದಾರೋ ಅಷ್ಟು ಪ್ರಗತಿದಾಯಕ ಮಟ್ಟಕ್ಕೆ ಇವರನ್ನೂ ತರಲು ಈಗ ಎಷ್ಟು ಧನಸಹಾಯ ಮಾಡಬೇಕೋ ಅಷ್ಟನ್ನೂ ಸರ್ಕಾರ ಮಾಡಲೇಬೇಕೆಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ ಮತ್ತು ಸರ್ಕಾರದವರೂ ಸಹ ಇದನ್ನು ಒಪ್ಪಿಕೊಳ್ಳುತ್ತಾರೆಂಬ ಭರವಸೆ ಕೂಡ ನನಗಿದೆ. ಈ ಕಾರಣಗಳಿಂದ ಈಗ ಶ್ರೀಮಾನ್ ಮಾದಯ್ಯನವರು ಸಭೆಯಮುಂದೆ ಮಂಡಿಸಿರುವ ನಿರ್ಣಯವನ್ನು ಸರ್ಕಾರದವರು ಒಪ್ಪಿಕೊಂಡು ಇದನ್ನು ಆದಷ್ಟು ಬೇಗ ಜಾರಿಗೆ ತರತಕ್ಕ ಏರ್ಪಾಡುಗಳನ್ನು ಮಾಡಬೇಕೆಂದು ಅವರನ್ನು ಒತ್ತಾಯಪಡಿಸಲು ಸರ್ವರೂ ಈ ಠರಾವಿಗೆ ಬೆಂಬಲ ನೀಡಬೇಕೆಂದು ತಿಳಿಸಿ ನಾನು ಇದಕ್ಕೆ ನನ್ನ ಬೆಂಬಲವನ್ನು ನೀಡುತ್ತೇನೆ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು (ಸ್ಥಳೀಯ ಸಂಸ್ಥೆಗಳ ಸಚಿವರು).—ಅಧ್ಯಕ್ಷರೇ, ಶ್ರೀಮಾನ್ ಮಾದಯ್ಯನವರು ತಂದಿರುವ ಠರಾವಿನ ವಿಚಾರದಲ್ಲಿ ಅವರು ತಿಳಿಸಿರತಕ್ಕಂತ ಅಂಕಿ ಅಂಶಗಳನ್ನು ಚೆನ್ನಾಗಿ ಕೇಳಿದ್ದೇನೆ. ಈ ಠರಾವನ್ನು ಅನುಮೋದಿಸುತ್ತಾ ಅನೇಕ ಸದಸ್ಯರು ಮಾಡಿದ ಭಾಷಣವನ್ನೂ ಚೆನ್ನಾಗಿ ಕೇಳಿ ತಿಳಿದುಕೊಂಡಿದ್ದೇನೆ. ಅದರಲ್ಲಿ ಒಟ್ಟಿನಲ್ಲಿ ಹಿಂದುಳಿದವರಿಗೆ ವಿದ್ಯಾಭ್ಯಾಸದ ವಿಚಾರದಲ್ಲಿ ಸರ್ಕಾರದವರು ಹೆಚ್ಚಿನ ಸಹಾನುಭೂತಿಯನ್ನು ತೋರಿಸಿ ಸಹಾಯಮಾಡಬೇಕು ಎಂಬ ಒಂದು ಸದುದ್ದೇಶದಿಂದ ಶ್ರೀಯುತರುಗಳಾದ ಹುಚ್ಚೇಗೌಡರು, ಶ್ರೀಕಂಠೇಶ್ವರ್‌ರವರು ಬೋರಣ್ಣಗೌಡರು ಮತ್ತು ಇತರ ಮಹನೀಯರು ಕೆಲವರು ಭಾಷಣ ಮಾಡಿದರು. ಅವರು ಇದರ ಮೇಲಿರತಕ್ಕಂಥ ಪ್ರೀತಿ ವಿಶ್ವಾಸದಿಂದ ಆದರದ ಭಾಷಣ ಮಾಡುವ ಉದ್ರೇಕದಲ್ಲಿ ಸರ್ಕಾರದವರು ಏನೂ ಮಾಡುತ್ತಿಲ್ಲ, ಹಿಂದೆ ಸರ್ಕಾರದವರು ಎಷ್ಟು ಖರ್ಚು ಮಾಡುತ್ತಿದ್ದರೋ ಅಷ್ಟನ್ನು ಮಾತ್ರ ಉಳಿಸಿಕೊಂಡು ಬಂದಿದ್ದಾರೆ, ಹೆಚ್ಚಾಗಿ ಏನೂ ಮಾಡಿಲ್ಲ ಎಂದು

(ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು).
ಇದಕ್ಕೆ ಹಿಂದಿನ ವರ್ಷ ಯಾವರೀತಿ ಕಡಮೆ ಬಿದ್ದ ಮೊಬಲಗನ್ನು ಕೊಟ್ಟರೋ ಅದೇರೀತಿ ಈ ವರ್ಷವೂ ಉದಾರ ನೀತಿಯನ್ನು ಅನುಸರಿಸುತ್ತಾರೆ, ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುತ್ತಾರೆ ಎಂದು ಹೇಳುತ್ತೇನೆ. ಎಷ್ಟು ಸಾಧ್ಯವೋ ಅಷ್ಟನ್ನು ಉದಾರವಾಗಿ ಕೊಡುತ್ತಾರೆ ಎಂದು ಭರವಸೆ ಕೊಡಬಲ್ಲೆ. ನಮ್ಮ ಉದ್ದೇಶವಾದರೂ ಇಷ್ಟೇ ಇತ್ತು. ವಿದ್ಯಾರ್ಥಿಗಳ ಸಂಖ್ಯೆ ಇಷ್ಟು ಎಂದು ಇದುವರೆಗೆ ಆಖೈರು ಅಂಕಿ ಅಂಶಗಳು ಬಂದಿರಲಿಲ್ಲ. ಬಂದಕೂಡಲೇ ಎಲ್ಲಾ ಅಂಶಗಳನ್ನೂ ಪರಿಶೀಲಿಸಿ ಸಹಾನುಭೂತಿಯಿಂದ ವಿದ್ಯಾಭ್ಯಾಸಕ್ಕೆ ಉತ್ತೇಜನ ಕೊಡಲು ಸರ್ಕಾರದವರು ಪ್ರಯತ್ನ ಪಡುತ್ತಾರೆ. ಅದರಲ್ಲೂ ಮೈಸೂರು ಸರ್ಕಾರದಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರದಲ್ಲಿರುವಾಗ ಎಲ್ಲಾ ವಿಧದಲ್ಲೂ ಹಿಂದುಳಿದವರಿಗಾಗಿ ದುಡಿಯಬೇಕು, ಸಹಾಯ ಮಾಡಬೇಕು ಎಂಬ ಅಭಿಲಾಷೆಯಿದೆ. ಇಂಥ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಯಾವ ವಿಧದಲ್ಲೂ ಕುಂದುಕೊರತೆ ಬರುವುದಿಲ್ಲ, ಸಹಾಯ ಮಾಡುತ್ತಾರೆ ಎಂಬ ಭರವಸೆಯನ್ನು ಶ್ರೀ ಮಾದಯ್ಯನವರು ಇಟ್ಟುಕೊಳ್ಳಬಹುದು. ಈ ದೃಷ್ಟಿಯಿಂದ ಅವರು ತಮ್ಮ ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

ಶ್ರೀ ಎಂ. ಮಾದಯ್ಯನವರು.—ಮಾನ್ಯ ಮಂತ್ರಿಗಳು ಭರವಸೆ ಕೊಟ್ಟಿರುವುದರಿಂದ ನಿರ್ಣಯವನ್ನು ವಾಪಸು ತೆಗೆದುಕೊಳ್ಳುವುದಕ್ಕೆ ಸಭೆಯವರು ಅನುಮತಿ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

The Resolution was, by leave, withdrawn.

Resolution No. 4.

Opening of Primary and Middle Schools in villages in Mysore District.

*ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ನಾನು ಈ ಸಭೆಯ ಮುಂದೆ ತಂದಿರತಕ್ಕ ನಿರ್ಣಯ ಈ ರೀತಿ ಇದೆ:—

"ಮೈಸೂರು ಡಿಸ್ಟ್ರಿಕ್ಟಿನಲ್ಲಿ ಅಕ್ಷರಸ್ಥರ ಸೇಕಡಾವಾರು ಸಂಖ್ಯೆಯು ಬಹಳ ಕಡಿಮೆಯಾಗಿದೆ. ಆದುದರಿಂದ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಪ್ರೈಮರಿ ಸ್ಕೂಲುಗಳಿಲ್ಲದೆ ಇರತಕ್ಕಂಥ ಎಲ್ಲ ಗ್ರಾಮಗಳಲ್ಲೂ ಪ್ರೈಮರಿ ಸ್ಕೂಲುಗಳನ್ನೂ ಮತ್ತು ಮೈಸೂರು ಡಿಸ್ಟ್ರಿಕ್ಟಿನಲ್ಲಿ 3,000 ಅಥವಾ ಇನ್ನೂ ಹೆಚ್ಚು ಜನಸಂಖ್ಯೆಯಿರುವಂಥ ಎಲ್ಲ ಗ್ರಾಮಗಳಲ್ಲೂ ಮಿಡ್ಲ್ ಸ್ಕೂಲುಗಳನ್ನೂ 3 ವರ್ಷಗಳಅವಧಿಯೊಳಗಾಗಿ ಏರ್ಪಡಿಸಬೇಕೆಂದು ಈ ಸಭೆಯವರು ಅಭಿಪ್ರಾಯ ಪಡುತ್ತಾರೆ".

ಸ್ವಾಮಿ, ಈ ಠರಾವಿನಲ್ಲಿ ಅಡಗಿರತಕ್ಕ ಅಂಶ ಇಷ್ಟೆ. ಸಂಸ್ಥಾನದಲ್ಲಿರತಕ್ಕ ಎಲ್ಲಾ ಜಿಲ್ಲೆಗಳಿಗಿಂತ ಮೈಸೂರು ಜಿಲ್ಲೆಯಲ್ಲಿ ಅಕ್ಷರಸ್ಥರ ಸಂಖ್ಯೆ ಬಹಳ ಕಮ್ಮಿಯಾಗಿದೆ. ಈಗಿನ ಸೆನಸಸ್ ಪ್ರಕಾರ ಈಗ ಒಟ್ಟು ಶೇಕಡ 20ರಷ್ಟು ಅಕ್ಷರಸ್ಥರ ಸಂಖ್ಯೆ ಹೆಚ್ಚಿದೆ. ಆದರೆ ಮೈಸೂರು ಜಿಲ್ಲೆಯಲ್ಲಿ ಅಕ್ಷರಸ್ಥರ ಸಂಖ್ಯೆ ಬಹಳ ಕಮ್ಮಿ ಎಂಬುದು ಅಂಕಿ ಅಂಶಗಳಿಂದ ವಿದಿತವಾಗುತ್ತದೆ. ಈ ಕಾರಣದ ದಶೆಯಿಂದ ಎಲ್ಲಾ ಜಿಲ್ಲೆಗಳಿಗಿಂತ ಮೈಸೂರು ಜಿಲ್ಲೆಯ ಕಡೆಗೆ ಸರ್ಕಾರದವರು ವಿದ್ಯಾಭ್ಯಾಸವನ್ನು ಮುಂದುವರಿಸುವುದಕ್ಕೆ ಗಮನ ಕೊಡುವುದು ಅತ್ಯವಶ್ಯಕವಾಗಿದೆ. ನಾನು ಈ ಸಭೆಗೆ ಒಂದು ಪ್ರಶ್ನೆ ಕಳುಹಿಸಿದ್ದೆ, ಅದಕ್ಕೆ ಜವಾಬಾಗಿ ಉತ್ತರ ಬಂದಿದೆ. ಮೈಸೂರು ಜಿಲ್ಲೆಯಲ್ಲಿ ಪ್ರೈಮರಿ ಸ್ಕೂಲುಗಳು ಎಷ್ಟು, ಮಿಡ್ಲ್ ಸ್ಕೂಲುಗಳು ಎಷ್ಟು ಎಂದು ಕೇಳಿದ್ದಕ್ಕೆ ಪ್ರೈಮರಿ ಸ್ಕೂಲುಗಳು 1,270 ಅಂತಲೂ, ಮಿಡ್ಲ್ ಸ್ಕೂಲುಗಳು 144, ಅದರಲ್ಲಿ ಸಾಮಾನ್ಯ ಮಿಡ್ಲ್ ಸ್ಕೂಲು 99, ನ್ಯೂಟ್ರೈಸ್ ಮಿಡ್ಲ್ ಸ್ಕೂಲು 45 ಎಂತಲೂ ಉತ್ತರ ಕೊಟ್ಟಿದ್ದಾರೆ. ಅಲ್ಲದೆ ಈ ಜಿಲ್ಲೆಯಲ್ಲಿ ಎಲ್ಲಾ ಜಿಲ್ಲೆಗಳಿಗಿಂತಲೂ ಅಕ್ಷರಸ್ಥರ ಸಂಖ್ಯೆ ಕಮ್ಮಿಯಾಗಿದೆ ಎಂಬ ಅಂಶವನ್ನೂ ಕೂಡ ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಈಗ ನಮ್ಮ ಮುಂದಿರತಕ್ಕದ್ದು ಈ ರೀತಿ ಎಲ್ಲಾ ಡಿಸ್ಟ್ರಿಕ್ಟ್‌ಗಳಿಗಿಂತಲೂ ಈ ಡಿಸ್ಟ್ರಿಕ್ಟ್‌ನಲ್ಲಿ ಕಡಿಮೆ ದರ್ಜೆಯಲ್ಲಿ ವಿದ್ಯಾ

ಭ್ಯಾಸ ನಡೆಯುತ್ತಾ ಇರುವುದಕ್ಕೆ ಕಾರಣ
ವನ್ನು ಸರ್ಕಾರದವರು ಕೂಲಂಕಷವಾಗಿ
ಪರಿಶೀಲಿಸಿ—ಈಗ ಮಾಡಿಲ್ಲವೆಂದು ಅರ್ಥವಲ್ಲ,
ಇನ್ನೂ ಗಾಢವಾಗಿ ಪರಿಶೀಲಿಸಿ—ತಕ್ಷಣ ಈ
ಜಿಲ್ಲೆ ಬಾಕಿ ಜಿಲ್ಲೆಗಳ ಜೊತೆಗೆ ಬರುವುದಕ್ಕೆ
ಪ್ರಯತ್ನಪಡುವುದು ಅತ್ಯಗತ್ಯವಾಗಿದೆ.
ಮೈಸೂರು ಸಂಸ್ಥಾನಕ್ಕೆ ರಾಜಧಾನಿ ಮೈಸೂರು.
ಅಂಥ ರಾಜಧಾನಿಯಾದ ಮೈಸೂರು ಜಿಲ್ಲೆ
ಯಲ್ಲೇ ಈ ರೀತಿ ವಿದ್ಯಾಭ್ಯಾಸ ಕಮ್ಮಿ ದರ್ಜೆ
ಯಲ್ಲಿ ನಡೆಯುತ್ತಾ ಇದೆಯೆಂದರೆ ಅದು
ಶೋಚನೀಯವಾದ ವಿಚಾರ. ಇದನ್ನೂ
ಸರ್ಕಾರದವರು ಯೋಚನೆ ಮಾಡಬೇಕು.
ಮೈಸೂರು ಜಿಲ್ಲೆಯಲ್ಲಿ ಬೇಚರಾಕು ಗ್ರಾಮ
ಸೇರಿಸಿಕೊಂಡರೆ 2,100 ಗ್ರಾಮ ಆಗಬಹುದು.
ಸುಮಾರು 600-700 ಚರಾಕು ಗ್ರಾಮ ಇದೆ.
ಆ ಪೈಕಿ ಈಗ ಸ್ಕೂಲು ಇರುವುದು 1,279
ಅಂತ ಹೇಳಿದ್ದೀರಿ. ಎಂದರೆ ಅನೇಕ ಗ್ರಾಮಗಳಿಗೆ
ಸ್ಕೂಲುಗಳೇ ಇಲ್ಲ. ಮೈಸೂರು ಜಿಲ್ಲೆಯ ಜನ
ಸಂಖ್ಯೆ ಮೈಸೂರು ಸಿಟಿಯನ್ನೂ ಸೇರಿಕೊಂಡು
15 ಲಕ್ಷ ಆಗುತ್ತದೆ. ಅದನ್ನು ಬಿಟ್ಟರೆ
12 ಲಕ್ಷದವರೆಗೂ ಬರುತ್ತದೆ ಎಂಬ ಅಂಶ
ಸೆನ್ಸಸ್‌ನಿಂದ ಗೊತ್ತಾಗುತ್ತದೆ. ಯಾವ ದೃಷ್ಟಿ
ಯಿಂದ ನೋಡಿದರೂಕೂಡ ಮೈಸೂರು ಜಿಲ್ಲೆ
ಯಲ್ಲಿ ಪ್ರೈಮರಿ ಸ್ಕೂಲುಗಳು ಅನೇಕ ಗ್ರಾಮ
ಗಳಲ್ಲಿ ಇಲ್ಲ. ಈ ಸಂದರ್ಭದಲ್ಲಿ ನಾನು ಇದನ್ನು
ಹೆಚ್ಚಿಗೆ ಹೇಳುತ್ತಾ ಇದ್ದೇನೆ. ಏಕೆಂದರೆ
ಇನ್ನೊಂದು ಠರಾವು ಶ್ರೀಮಾನ್ ಹೊನ್ನಪ್ಪನವರು
ಕಳುಹಿಸಿದ್ದಾರೆ, ಅದು ಮೈಸೂರು ತಾಲ್ಲೂಕಿಗೆ
ಸಂಬಂಧಪಟ್ಟಿದ್ದು. ಆದ್ದರಿಂದ ಬಾಕಿ ಕಡೆಗೂ
ಅನ್ವಯಿಸುವಂತೆ ನಾನು ಹೇಳಬೇಕಾದರೆ
ಅನೇಕ ಗ್ರಾಮಗಳಲ್ಲಿ ಸ್ಕೂಲು ಕಟ್ಟಡ ಇಲ್ಲ.
ಸ್ಕೂಲು ಕೊಡುತ್ತೇವೆ, ಸ್ಕೂಲು ಕಟ್ಟಡ
ಕೊಡಿ ಎಂಬುದಾಗಿ ಗ್ರಾಮಸ್ಥರನ್ನು ಒತ್ತಾಯ
ಮಾಡಿ, ಶ್ರೀಮಾನ್ ಚನ್ನಬಸಪ್ಪನವರ ಪ್ರಯತ್ನ
ದಿಂದ ಗ್ರಾಮಸ್ಥರು ದುಡ್ಡು ಕೊಡುವುದಕ್ಕೆ
ತಯಾರಾಗಿದ್ದಾರೆ. ಆದರೆ ಅವರಿಗೆ ಸಾಕಾದಷ್ಟು
ಸರ್ಕಾರಿ ಗ್ರಾಂಟ್ ಕೊಡುವುದಕ್ಕೆ ಪ್ರಯತ್ನ
ನಡೆದಿಲ್ಲ. ಆದ್ದರಿಂದ ಅನೇಕ ಕಡೆ ಕಟ್ಟಡ ಇಲ್ಲ
ದಂತಾಗಿದೆ. ಕಟ್ಟಡ ಕೊಟ್ಟರೆ ಉಪಾಧ್ಯಾಯ
ರಿಗೆ ವಾಸಕ್ಕೆ ಮನೆ ಇಲ್ಲ ಈ ಕಾರಣದಿಂದ
ವಿದ್ಯಾಭ್ಯಾಸ ಹಿಂದೆ ಬಿದ್ದಿದೆ ಎಂದು ಹೇಳಬ
ಹುದು. ಈಗ ಓದುವುದಕ್ಕೆ ಜನಗಳಿಂದ ಯಾವ
ಆತಂಕವೂ ಇಲ್ಲ. ಓದಿಸುವುದಕ್ಕೆ ಸಿದ್ಧವಾಗಿ
ದ್ದಾರೆ, ತಂದೆ ತಾಯಿಗಳು ಅವರ ಮಕ್ಕಳನ್ನು
ಸ್ಕೂಲಿಗೆ ಕಳುಹಿಸುವುದಕ್ಕೆ ಸಿದ್ಧವಾಗಿದ್ದಾರೆ.
ಬಾಕಿಯವರಂತೆ ಮುಂದುವರಿಯಬೇಕೆಂದು ಅಭಿ
ಲಾಷೆಯುಳ್ಳವರಾಗಿದ್ದಾರೆ. ಹೀಗಿರುವಾಗ ಸರ್ಕಾ
ರದವರ ಸಹಾಯ ಇಂಥಾ ಸಂಭರ್ಭದಲ್ಲಿ ಬಹಳ
ಅತ್ಯಗತ್ಯ. ಓದುವುದಕ್ಕೆ ತಯಾರಾಗಿದ್ದರೂ
ಸ್ಕೂಲು ಇಲ್ಲದೆ ಅನೇಕ ಕಡೆ ವಿದ್ಯಾರ್ಥಿಗಳು
ಹೆಚ್ಚು ಹೆಚ್ಚಾಗಿ ಬರುವುದಕ್ಕೆ ತೊಂದರೆ
ಯಾಗಿದೆ. ಇಂಥಾ ಸಂದರ್ಭದಲ್ಲಿ ಮೊಟ್ಟ
ಮೊದಲು ಎಲ್ಲಾ ಹಳ್ಳಿಗಳಿಗೂ 3 ವರ್ಷದಲ್ಲಿ
ಪ್ರೈಮರಿ ಸ್ಕೂಲು ಕೊಡಬೇಕೆಂದು ಕಡ್ಡಾಯ
ಮಾಡಬೇಕು. ಈಗಾಗಲೇ ಶ್ರೀಮಾನ್ ಚನ್ನ
ಬಸಪ್ಪನವರು ಅಂಕಿ ಅಂಶಗಳನ್ನು ತಿಳಿಸಿದ್ದಾರೆ.
1949-50ನೇ ಅಡ್ಮಿನಿಸ್ಟ್ರೇಷನ್ ರಿಪೋರ್ಟ್‌ನಲ್ಲಿ
ಕೊಟ್ಟಿದೆ. ಮೈಸೂರು ಜಿಲ್ಲೆಯ ಮೇಲೆ ಇತರ
ಎಲ್ಲಾ ಜಿಲ್ಲೆಗಳಿಗಿಂತ ಒಂದು ನಿಗಾ ಜಾಸ್ತಿ
ಯಾಗಿ ಇಡಬೇಕೆಂದು ಹೇಳುತ್ತೇನೆ. ಏಕೆಂದರೆ
ವಿದ್ಯಾಭ್ಯಾಸ ಹೆಚ್ಚುವುದರಿಂದ ನಾಳೆದಿನ ನಮ್ಮ
ದೇಶಕ್ಕೇ ಕ್ಷೇಮ. ಅನೇಕ ಪಾರ್ಟಿ ವ್ಯಾಜ್ಯಗಳು
ರಾಗದ್ವೇಷಗಳು ಕಡಿಮೆ ಆಗುತ್ತವೆ. ಸತ್
ಪ್ರಜೆಗಳಾಗುವುದಕ್ಕೆ ಅವಕಾಶವಾಗುತ್ತದೆ.
ಆದ್ದರಿಂದ ಈ ಠರಾವನ್ನು ಎಲ್ಲರೂ ಅನುಮೋ
ದಿಸುತ್ತೀರೆಂದು ನಂಬಿದ್ದೇನೆ. ಮಿಡ್ಲ್ ಸ್ಕೂಲು
ವಿಚಾರದಲ್ಲಿ 3,000 ಪ್ರಜಾಸಂಖ್ಯೆಗೆ
ಮೇಲ್ಪಟ್ಟರತಕ್ಕ ಹಳ್ಳಿಗಳಿಗೆ ಮಿಡ್ಲ್ ಸ್ಕೂಲು
ಕೊಟ್ಟು ವಿದ್ಯಾಭ್ಯಾಸವಾಗುವುದಕ್ಕೆ ಸರ್ಕಾರ
ದವರು ಪ್ರಯತ್ನಪಟ್ಟು ಏರ್ಪಾಡು ಮಾಡಬೇಕು.
ಅಂಥ ಅನೇಕ ಹಳ್ಳಿಗಳು ಇವೆ. ನಾನು ಕಂಡಂತೆ
ಮೈಸೂರಿನ ಹತ್ತಿರ ಉದ್ದೂರು ಎಂಬ ಒಂದು
ಹಳ್ಳಿ ಇದೆ. ಅಲ್ಲಿ 4,000ಕ್ಕೆ ಮೇಲ್ಪಟ್ಟ ಪ್ರಜಾ
ಸಂಖ್ಯೆ ಇದೆ. ಅಂಥ ಊರಿಗೆ ಒಂದು ಪ್ರೈಮರಿ
ಸ್ಕೂಲು ಇದೆ. ಅದು ಸಾಲದು ಒಂದು ಮಿಡ್ಲ್
ಸ್ಕೂಲು ಸಹ ಇಲ್ಲ. ಈ ರೀತಿ ಇನ್ನೂ ಕೆಲವು

(ಶ್ರೀ ಎಂ. ಮಾದಯ್ಯನವರು).

ತ್ತಾರೆ. ಜನತೆಯಲ್ಲಿ ದುಡ್ಡಿಲ್ಲವೆಂದು ಯಾವುದಾದರೂ ಸ್ಕೂಲು ಕಟ್ಟಿಸುವುದಕ್ಕಾಗುವುದಿಲ್ಲವೆಂದಿದ್ದರೆ, ಚನ್ನಬಸಪ್ಪನವರು ಹೋದ ತಕ್ಷಣ ಹೇಗೋ ಹೊಂದಿಸಿಕೊಡುತ್ತಾರೆ. ಜನರು ಅವರಲ್ಲಿರುವ ವಿಶ್ವಾಸ ಅಷ್ಟರಮಟ್ಟಿಗಿದೆ! ನಾನು ಅನೇಕಸಲ ಶ್ರೀಚನ್ನಬಸಪ್ಪನವರ ಸಂಗಡ ಕೆಲವು ಹಳ್ಳಿಗಳಿಗೆ ಹೋಗಿದ್ದೆನು. ಅಲ್ಲಿಯ ಜನರು ಪ್ರೈಮರಿ ಸ್ಕೂಲಿಗಾಗಿ ಎರಡು ಸಾವಿರ ಕೊಡುತ್ತೇವೆ, ಮೂರು ಸಾವಿರ ಕೊಡುತ್ತೇವೆಂದು ಮುಂದೆ ಬಂದರು. ಇಂತಹ ಕಡೆಗಳಿಗೆ ಸ್ಕೂಲುಗಳನ್ನು ಕೊಟ್ಟು ಪ್ರೋತ್ಸಾಹಕೊಟ್ಟರೆ ಅಲ್ಲಿನ ಜನರು ವಿದ್ಯೆಯಲ್ಲಿ ಮುಂದುವರಿಯುತ್ತಾರೆ. ಕಳೆದ ಸೆನ್ಸಸ್‌ಗಿಂತ ಈಗಿನ ಸೆನ್ಸಸ್‌ನಲ್ಲಿ ಅಲ್ಲಿ ವಿದ್ಯಾಭಿವೃದ್ಧಿ ಹೆಚ್ಚಾಗಿದ್ದರೆ ಅದಕ್ಕೆ ಆ ಡಿಸ್ಟ್ರಿಕ್ಟ್ ಬೋರ್ಡಿನ ಹೆಚ್ಚಿನ ಸೇವೆ, ಇದರ ಜೊತೆಗೆ ಸರ್ಕಾರದ ಸಹಾಯ ಕಾರಣ. ಸರ್ಕಾರದವರು ಪಕ್ಷಪಾತ ಮನೋಭಾವದಿಂದ ಮಾಡುತ್ತಾರೆಂದು ನಾನು ಹೇಳುವುದಿಲ್ಲ. ಅವರ ಉದ್ದೇಶವೇನೋ ಒಳ್ಳೆಯದಾಗಿರುತ್ತದೆ. ಆದರೆ ನಾನು ಮೊದಲೇ ಹೇಳಿದಹಾಗೆ ಅವರ ಉದ್ದೇಶ ಸಫಲವಾಗುವಂತೆ, ಎಲ್ಲರಿಗೂ ಅನುಕೂಲವಾಗುವಂತೆ ತಕ್ಕ ಏರ್ಪಾಡುಮಾಡಬೇಕು. ಬಲವಂತ ವಿದ್ಯಾಭ್ಯಾಸವನ್ನಾದರೂ ಅಥವಾ ಪಾರ್ಶಿಯಲ್ ಕಂಪಲ್‌ಸರಿ ಎಜ್ಯುಕೇಷನ್ ಯೋಜನೆಯನ್ನಾದರೂ ಮೈಸೂರು ಜಿಲ್ಲೆಯಲ್ಲಿ ಜಾರಿಗೆತಂದು ಅದನ್ನು ಒಂದು ಮಾದರಿಯ ಕ್ಷೇತ್ರವಾಗಿ ಚುನಾಯಿಸಿದರೂ ಸರಿಯೆ. ಈ ಜಿಲ್ಲೆಯಲ್ಲಿ ವಿದ್ಯೆಯಲ್ಲಿ ಹೆಚ್ಚು ಹಿಂದುಳಿದಿರುವವರು ಆದಿಕರ್ಣಾಟಕರು, ಉಪ್ಪಾರರು, ಪರಿವಾರದವರು ಮತ್ತು ಇತರ ಹಿಂದುಳಿದ ನಿಮ್ನ ತರಗತಿಯವರು. ಇವರಿಗೆ ಸರ್ಕಾರದವರು ಮಾಡಿಕೊಡುವ ಅನುಕೂಲ ತಲಪುತ್ತಿಲ್ಲ ಇದು ಅವರಿಗೆ ತಲಪುವಂತೆಮಾಡಬೇಕು. ಹೀಗೆ ಮಾಡದಿದ್ದರೆ ನಿಜವಾಗಿಯೂ ಈ ಜಿಲ್ಲೆಯ ಪ್ರಗತಿಯಾಗುವುದಿಲ್ಲ; ಇದರಿಂದ ದೇಶದ ಪ್ರಗತಿಯೂ ಆಗುವುದಿಲ್ಲ. ಈ ವಿಚಾರದಲ್ಲಿ ಈ ಜಿಲ್ಲೆಯನ್ನು ಇತರ ಜಿಲ್ಲೆಗಳೊಡನೆ ಹೋಲಿಸಿದರೆ ಆಶ್ಚರ್ಯವಾಗುತ್ತದೆ. ಯಾರು ಮುಂದೆ ಬರಬೇಕೋ ಅವರು ಬಂದಿಲ್ಲ. ಹಿಂದೆ ಅಂದರೆ 1947 ರಲ್ಲಿ ಮೈಸೂರು ಸಂಸ್ಥಾನದಲ್ಲಿ ವಿದ್ಯಾವಂತರ ಸಂಖ್ಯೆ ಸೇಕಡ 13 ಇತ್ತು; ಈಗ 20ಕ್ಕೆ ಬಂದಿದೆ. ಈ ಸೇಕಡ ಇಪ್ಪತ್ತರಲ್ಲಿ ಹರಿಜನರಲ್ಲಿ ಎಷ್ಟಿದ್ದಾರೆಂದು ನೋಡಿದರೆ ಕೇವಲ ಕಡಿಮೆ, ಹರಿಜನರ ಸಂಖ್ಯೆಯನ್ನು ಬಿಟ್ಟು ಲೆಕ್ಕ ಹಾಕಿ ನೋಡಿದರೆ ಇತರರ ವಿದ್ಯಾಭ್ಯಾಸದ ಅಭಿವೃದ್ಧಿ ಸುಮಾರು ಸೇಕಡ 30 ರಿಂದ 40 ರಷ್ಟಾಗುತ್ತದೆ. ಹೀಗೆ ನಿಮ್ನ ತರಗತಿಯವರನ್ನು ಸೇರಿಸಿದರೆ ವಿದ್ಯಾವಂತರ ಸೇಕಡಾವಾರು ಸಂಖ್ಯೆ ಕಡಮೆಯಾಗುತ್ತದೆ. ಆದುದರಿಂದ ದೇಶದಲ್ಲಿ ಎಲ್ಲ ಜನಾಂಗದವರಿಗೂ ಸಮಾನಾವಕಾಶ ಕೊಡದೇಯಿದ್ದರೆ ದೇಶವೇ ಹಿಂದುಳಿಯುತ್ತದೆ ಎಂಬುದಕ್ಕೆ ಮೈಸೂರು ದೇಶವೇ ಉದಾಹರಣೆಯಾಗಿದೆ. ತಿರುವಾಂಕೂರು ಕೊಚಿನ್ ಸಂಸ್ಥಾನದಲ್ಲಿ ವಿದ್ಯಾವಂತರ ಸಂಖ್ಯೆ ಶೇಕಡ 40-50 ರಷ್ಟಿದೆ. ಹೈದರಾಬಾದಿನಲ್ಲಿಯೂ ಇಲ್ಲಿಗಿಂತ ಹೆಚ್ಚಿದೆ. ನಮ್ಮ ಸಂಸ್ಥಾನದ ಬಡ್ಜೆಟ್ಟಿನಲ್ಲಿ ನಾಲ್ಕಾರು ವರ್ಷಗಳಿಂದಲೂ ವಿದ್ಯಾಭ್ಯಾಸದ ಬಾಬಿಗೆ ಹೆಚ್ಚು ಹಣವನ್ನೊದಗಿಸಿ ಖರ್ಚುಮಾಡುತ್ತಿದ್ದರೂ ಇತರ ಸಂಸ್ಥಾನಗಳಿಗೆ ಹೋಲಿಸಿದರೆ ವಿದ್ಯಾವಂತರ ಸಂಖ್ಯೆ ಕಡಿಮೆ ಮಟ್ಟದಲ್ಲಿರಲು ಕಾರಣ ಹಿಂದುಳಿದಿರುವ ಪಂಗಡದವರನ್ನು ವಿದ್ಯಾಭ್ಯಾಸ ಮತ್ತು ಆರ್ಥಿಕಸ್ಥಿತಿಯಲ್ಲಿ ಬೇಗ ಮುಂದಕ್ಕೆ ತರಲು ಸರಿಯಾದ ಏರ್ಪಾಡಿಲ್ಲದಿರುವುದೇ ಆಗಿದೆ. ನಮ್ಮ ದೇಶದಲ್ಲಿ ಇದೊಂದು ನ್ಯೂನತೆ ಇದೆ, ಇಲ್ಲಿ ಮಕ್ಕಳಿಗೆ ಹೆಚ್ಚು ಪ್ರಮಾಣದಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸಕ್ಕೆ ಅನುಕೂಲ ಬೇಕಾಗಿದೆ. ಒಂದೊಂದು ಊರಿನಲ್ಲಿ ಮೂರು ನಾಲ್ಕು ಸಾವಿರ ಪ್ರಜಾಸಂಖ್ಯೆ ಇದ್ದರೂ ಅಲ್ಲಿ ಸರಿಯಾದ ಸ್ಕೂಲುಗಳಿರುವುದಿಲ್ಲ. ಮೈಸೂರು ಬೆಂಗಳೂರು ನಗರಗಳಲ್ಲಿ ಅನೇಕ ಪ್ರೈಮರಿ ಮತ್ತು ಮಿಡ್ಲ್ ಸ್ಕೂಲುಗಳಿವೆ. ಹಾಗೆಯೇ ಗ್ರಾಮಗಳಲ್ಲಿಯೂ ಹೆಚ್ಚು ಜನಸಂಖ್ಯೆ ಇದ್ದರೆ ಅಂಥಾ ಗ್ರಾಮಗಳಿಗೆ ಎರಡು ಮೂರು ಸ್ಕೂಲು

ವನ್ನು ತಂದಿರತಕ್ಕ ಮಾನ್ಯ ಸದಸ್ಯರಾದ ಶ್ರೀಮರ್ಾ ಮಾದಯ್ಯನವರು ಇದರಲ್ಲಿ ಬಹಳ ಚಾಕಚಕ್ಯತೆಯಿಂದ ಪದಗಳನ್ನುಪಯೋಗಿಸಿದ್ದಾರೆ. ಅವರು ನಿಜವಾಗಿಯೂ ಬಹಳ ಜಾಣರಿದ್ದಾರೆ. ಅವರ ನಿರ್ಣಯದಲ್ಲಿ ಅಡಕವಾಗಿರತಕ್ಕ ಮುಖ್ಯಾಂಶ ಈಗ ಅವರಿಗೆ ಕೊಡುತ್ತಿರುವುದು ಸಾಲದು ಮತ್ತು ಈಗ ಹಾಲಿ ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ವ್ಯಾಸಂಗಮಾಡುತ್ತಿರುವ ಹರಿಜನಗಳು ಎಷ್ಟು ವಿದ್ಯಾರ್ಥಿಗಳಿದ್ದಾರೋ ಅವರೆಲ್ಲರಿಗೂ ಮತ್ತು ಅವರ ಜೊತೆಗೆ ಷೆಡ್ಯೂಲ್ಡ್ ಕ್ಯಾಸ್ಟಿನವರಿಗೂ ಸಹ ಅದೇ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ಕೇಳಿಕೊಂಡಿದ್ದಾರೆ. ಇದು ವಾಸ್ತವವಾಗಿಯೂ ಅಭಿನಂದನೀಯವಾದುದು. ಆದರೆ ಹಣದ ಅನುಕೂಲತೆ ಎಷ್ಟರಮಟ್ಟಿಗೆ ಒದಗುತ್ತದೋ ಮತ್ತು ಹಾಗೆ ಹೆಚ್ಚಿನ ಅನುಕೂಲಗಳನ್ನು ಯಾವರೀತಿ ಕಲ್ಪಿಸಲು ಸಾಧ್ಯವಾದೀತೆಂಬ ಅಂಶವನ್ನು ತಮ್ಮ ದೃಷ್ಟಿಯಲ್ಲಿಟ್ಟುಕೊಂಡು ಸಾಧ್ಯವಾದಮಟ್ಟಿಗೂ ಅವರಿಗೆ ಧನಸಹಾಯ ನೀಡುವುದು ಸರ್ಕಾರದವರ ಕರ್ತವ್ಯವಾಗಿದೆ. ಇಷ್ಟನ್ನು ಅವರು ಮಾಡಬಹುದೇ ಶಿವಾಯಿ ಶ್ರೀಮರ್ಾ ಹುಚ್ಚೇಗೌಡರು ತಿಳಿಸಿದಹಾಗೆ ಈಗ ಕೊಡುತ್ತಿರುವುದಕ್ಕೆ ಎರಡರಷ್ಟನ್ನು ಕೊಡಬೇಕೆಂದು ಹೇಳಿದರೆ ಅದು ಸಾಧ್ಯವಾಗದಮಾತು. ಹಾಗೆ ತಿಳಿಸುವುದೇ ಒಂದು ದೊಡ್ಡ ಪ್ರಾಮುಖ್ಯವಲ್ಲ. ಆದರೆ ಹಾಗೆ ಹೇಳಿದವರಕೈಗೇ ಈ ರಾಜ್ಯಾಡಳಿತವನ್ನು ಕೊಟ್ಟು, ಇರತಕ್ಕ ಇಷ್ಟು ಉತ್ಪತ್ತಿಯಲ್ಲಿ ಖರ್ಚುಗಳಿಗೆಲ್ಲಾ ನೀವು ಹಣವನ್ನೊದಗಿಸಬೇಕೆಂದು ಹೇಳಿದ್ದರೆ ಆಗ ಅವರು ಏನು ಹೇಳುತ್ತಿದ್ದರೆಂಬುದು ಗೊತ್ತಾಗುತ್ತಿತ್ತು. ಎಷ್ಟು ಹಣದ ಉತ್ಪತ್ತಿಯಿದೆ; ಖರ್ಚು ಬಾಬುಗಳು ಎಷ್ಟೆಷ್ಟಿರುತ್ತವೆ; ಆ ಪೈಕಿ ಇರತಕ್ಕ ವೆಚ್ಚದ ಬಾಬುಗಳಪೈಕಿ ಯಾವುದಕ್ಕೆ ಮೊದಲು ಪ್ರಯಾರಿಟಿ ಕೊಟ್ಟು ಹಣವನ್ನೊದಗಿಸಬೇಕು; ತದನಂತರ ಯಾವ ಬಾಬಿಗೆ ಪ್ರಯಾರಿಟಿ ಕೊಡಬೇಕು; ಹೀಗೇ ಕ್ರಮಕ್ರಮವಾಗಿ ಒಂದೊಂದಕ್ಕೂ ರಚನಾತ್ಮಕ ಕಾರ್ಯಗಳಪೈಕಿ ಯಾವು ಯಾವುದಕ್ಕೆ ಪ್ರಯಾರಿಟಿ ಕೊಡಬೇಕು ಎಂಬುದನ್ನು ಮುಖ್ಯವಾಗಿ ನೋಡದೆ ಕೆಲಸ ಮಾಡಲಿಕ್ಕಾಗುವುದಿಲ್ಲ. ದೇಶದಲ್ಲಿ ಇಂದು ಯಾರುಯಾರು ಎಷ್ಟೆಷ್ಟುಮಟ್ಟಿಗೆ ಪ್ರಗತಿಹೊಂದಿದ್ದಾರೋ ಅಷ್ಟು ಪ್ರಗತಿದಾಯಕ ಮಟ್ಟಕ್ಕೆ ಇವರನ್ನೂ ತರಲು ಈಗ ಎಷ್ಟು ಧನಸಹಾಯ ಮಾಡಬೇಕೋ ಅಷ್ಟನ್ನೂ ಸರ್ಕಾರ ಮಾಡಲೇಬೇಕೆಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ ಮತ್ತು ಸರ್ಕಾರದವರೂ ಸಹ ಇದನ್ನು ಒಪ್ಪಿಕೊಳ್ಳುತ್ತಾರೆಂಬ ಭರವಸೆ ಕೂಡ ನನಗಿದೆ. ಈ ಕಾರಣಗಳಿಂದ ಈಗ ಶ್ರೀಮರ್ಾ ಮಾದಯ್ಯನವರು ಸಭೆಯಮುಂದೆ ಮಂಡಿಸಿರುವ ನಿರ್ಣಯವನ್ನು ಸರ್ಕಾರದವರು ಒಪ್ಪಿಕೊಂಡು ಇದನ್ನು ಆದಷ್ಟು ಬೇಗ ಜಾರಿಗೆ ತರತಕ್ಕ ಏರ್ಪಾಡುಗಳನ್ನು ಮಾಡಬೇಕೆಂದು ಅವರನ್ನು ಒತ್ತಾಯಪಡಿಸಲು ಸರ್ವರೂ ಈ ಠರಾವಿಗೆ ಬೆಂಬಲ ನೀಡಬೇಕೆಂದು ತಿಳಿಸಿ ನಾನು ಇದಕ್ಕೆ ನನ್ನ ಬೆಂಬಲವನ್ನು ನೀಡುತ್ತೇನೆ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು (ಸ್ಥಳೀಯ ಸಂಸ್ಥೆಗಳ ಸಚಿವರು).—ಅಧ್ಯಕ್ಷರೇ, ಶ್ರೀಮರ್ಾ ಮಾದಯ್ಯನವರು ತಂದಿರುವ ಠರಾವಿನ ವಿಚಾರದಲ್ಲಿ ಅವರು ತಿಳಿಸಿರತಕ್ಕಂತ ಅಂಕಿ ಅಂಶಗಳನ್ನು ಚೆನ್ನಾಗಿ ಕೇಳಿದ್ದೇನೆ. ಈ ಠರಾವನ್ನು ಅನುಮೋದಿಸುತ್ತಾ ಅನೇಕ ಸದಸ್ಯರು ಮಾಡಿದ ಭಾಷಣವನ್ನೂ ಚೆನ್ನಾಗಿ ಕೇಳಿ ತಿಳಿದುಕೊಂಡಿದ್ದೇನೆ. ಅದರಲ್ಲಿ ಒಟ್ಟಿನಲ್ಲಿ ಹಿಂದುಳಿದವರಿಗೆ ವಿದ್ಯಾಭ್ಯಾಸದ ವಿಚಾರದಲ್ಲಿ ಸರ್ಕಾರದವರು ಹೆಚ್ಚಿನ ಸಹಾನುಭೂತಿಯನ್ನು ತೋರಿಸಿ ಸಹಾಯಮಾಡಬೇಕು ಎಂಬ ಒಂದು ಸದುದ್ದೇಶದಿಂದ ಶ್ರೀಯುತರುಗಳಾದ ಹುಚ್ಚೇಗೌಡರು, ಶ್ರೀಕಂಠೇಶ್ವರ್‌ರವರು ಬೋರಣ್ಣಗೌಡರು ಮತ್ತು ಇತರ ಮಹನೀಯರು ಕೆಲವರು ಭಾಷಣ ಮಾಡಿದರು. ಅವರು ಇದರ ಮೇಲಿರತಕ್ಕಂಥ ಪ್ರೀತಿ ವಿಶ್ವಾಸದಿಂದ ಆದರದ ಭಾಷಣ ಮಾಡುವ ಉದ್ರೇಕದಲ್ಲಿ ಸರ್ಕಾರದವರು ಏನೂ ಮಾಡುತ್ತಿಲ್ಲ, ಹಿಂದೆ ಸರ್ಕಾರದವರು ಎಷ್ಟು ಖರ್ಚು ಮಾಡುತ್ತಿದ್ದರೋ ಅಷ್ಟನ್ನು ಮಾತ್ರ ಉಳಿಸಿಕೊಂಡು ಬಂದಿದ್ದಾರೆ, ಹೆಚ್ಚಾಗಿ ಏನೂ ಮಾಡಿಲ್ಲ ಎಂದು

(ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು).

ಒಂದುರೀತಿಯಲ್ಲಿಆಪಾದನೆಯನ್ನು ಮಾಡಿದರು. ಅದು ನಿಜಾಂಶಕ್ಕೆ ಸ್ವಲ್ಪಮಟ್ಟಿಗೆ ದೂರವಾದ ಅಂಶ ಎಂಬುದನ್ನು ಶ್ರೀಮಾನ್ ರಂಗರಾಮಯ್ಯನವರು ತಿಳಿಸಿರತಕ್ಕ ಅಂಕಿ ಅಂಶಗಳ ಮುಖೇನ ನಾನು ತಿಳಿಸಬೇಕಾಗಿದೆ. ಈಗ ನಿಮ್ಮ ವರ್ಗದವರ ಅಭಿವೃದ್ಧಿ ಕಾರ್ಯದ ವಿಚಾರದಲ್ಲಿ ಸರ್ಕಾರದವರು ಎಲ್ಲಾ ವಿಚಾರದಲ್ಲೂ ಏನು ಸಹಾಯ ಮಾಡುತ್ತಿದ್ದಾರೆಂಬ ಅಂಶ ಈ ಠರಾವಿನಲ್ಲಿ ಬರುವುದಿಲ್ಲ. ನಾನು ಪ್ರತಿಯೊಂದು ತಪಶೀಲನ್ನೂ ಹೇಳುವುದಕ್ಕೆ ಶುರು ಮಾಡಿದರೆ ಅಧ್ಯಕ್ಷರು ಅವಕಾಶ ಕೊಡುವುದಿಲ್ಲ. ಈ ಠರಾವಿನ ಪರಿಮಿತಿ ಸರ್ಕಾರಕ್ಕೆ ಮುಂದಟ್ಟಾಗಿದೆ. ಆ ಕಾರಣದಿಂದ ಈ ಠರಾವಿನಲ್ಲಿ ತಿಳಿಸಿರುವ ವಿಶ್ವವಿದ್ಯಾನಿಲಯದಲ್ಲಿ ನಿಮ್ಮ ವರ್ಗದವರ ವಿದ್ಯಾರ್ಥಿಗಳಿಗೆ ಕೊಡತಕ್ಕಂತ ವಿದ್ಯಾರ್ಥಿವೇತನದ ವಿಚಾರದಲ್ಲಿ ಒಂದೆರಡು ಅಂಶಗಳನ್ನು ತಿಳಿಸಬೇಕಾಗಿದೆ. ಹಾಗೆ ತಿಳಿಸುವುದಕ್ಕೆ ಮುಂಚೆ ಒಂದು ಅಂಶವನ್ನು ಅರಿಕೆ ಮಾಡಿಕೊಳ್ಳಬೇಕಾಗಿದೆ. ರಾಜ್ಯಾಂಗದಲ್ಲಿ ನಿಮ್ಮ ವರ್ಗದವರಿಗೆ ಎಲ್ಲಾ ವಿಧದಲ್ಲೂ ಸಹಾಯ ಮಾಡಬೇಕೆಂದು ತಿಳಿಸಿದ್ದಾರೆಂದು ಮಾನ್ಯ ಸದಸ್ಯರು ಹೇಳಿದರು. ಸರ್ಕಾರದವರಿಗಾದರೂ ಈ ರಾಜ್ಯಾಂಗದಲ್ಲಿ ಯಾವ್ಯಾವ ರೀತಿಯಲ್ಲಿ ಹಿಂದುಳಿದವರಿಗೆ ಸಹಾಯ ಮಾಡಬೇಕೆಂದು ತಿಳಿಸಿದ್ದಾರೋ ಅದೆಲ್ಲಾ ಮನವರಿಕೆಯಾಗಿದೆ. ಮೈಸೂರು ಸರ್ಕಾರದವರು ಈ ವಿಚಾರದಲ್ಲಿ ಇತರ ಸರ್ಕಾರಗಳಿಗಿಂತ ಯಾವ ವಿಧದಲ್ಲೂ ಹಿಂದುಳಿದಿಲ್ಲ ಎಂಬುದು ಈಗ ಭಾಷಣ ಮಾಡಿರುವ ಎಲ್ಲಾ ಮಹನೀಯರಿಗೂ ಗೊತ್ತು. ಈ ಸರ್ಕಾರವಲ್ಲದೆ ಹಿಂದಿನ ಸರ್ಕಾರವೂ ಕೂಡ ಬಹಳ ಮಟ್ಟಿಗೆ ಮೈಸೂರು ದೇಶದಲ್ಲಿ ಇತರ ಎಲ್ಲಾ ದೇಶಗಳಿಗಿಂತ ಹೆಚ್ಚಿನ ದರ್ಜೆಯಲ್ಲಿ ಈ ತರಗತಿಯವರಿಗೆ ಸಹಾಯ ಮಾಡುತ್ತಿದ್ದರು ಎಂದು ಶ್ರೀಮಾನ್ ಮಾದಯ್ಯನವರೇ ಹೇಳಿದರು. ಆದ್ದರಿಂದ ಅದನ್ನು ಮತ್ತೆ ನಾನು ಹೇಳಬೇಕಾಗಿಲ್ಲ. ಈ ವಿಚಾರದಲ್ಲಿ ಈಚೆಗೆ ಹೆಚ್ಚಾಗಿ ಮಾಡುತ್ತಿಲ್ಲ ಎಂದು ಹೇಳಿದವರಿಗೆ ನಾನು ಹೇಳತಕ್ಕ ಉತ್ತರವಾದರೂ ಇಷ್ಟು. 1948ನೆಯ ಇಸವಿಯಲ್ಲಿ— ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ವಿಷಯ ಮಾತ್ರ ಹೇಳುತ್ತಿದ್ದೇನೆ—ಅಂದರೆ 1948-49 ನೆಯ ಸಾಲಿನಲ್ಲಿ 281 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದರು. ಅವರಿಗೆ ಕೊಡುತ್ತಿದ್ದ ವಿದ್ಯಾರ್ಥಿವೇತನ ಆ ವರ್ಷ 35,900 ರೂಪಾಯಿಗಳು. 1949-50ರಲ್ಲಿ ವಿದ್ಯಾರ್ಥಿಗಳ ಸಂಖ್ಯೆ 390ಕ್ಕೆ ಏರಿತು, 42 ಸಾವಿರ ಚಿಲ್ಲರೆ ವಿದ್ಯಾರ್ಥಿವೇತನ ಕೊಡಲಾಯಿತು. 1950-51 ರಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಪುನಃ ಏರಿ 446 ಆಯಿತು, ಆಗ 50 ಸಾವಿರ ರೂಪಾಯಿ ವಿದ್ಯಾರ್ಥಿವೇತನಕ್ಕಾಗಿ ಖರ್ಚಾಯಿತು. ಈಗಲೂ ಅದೇರೀತಿ ಕೊಡುತ್ತಿದ್ದಾರೆ. ಶ್ರೀ ಮಾದಯ್ಯನವರು ಹೇಳಿದಹಾಗೆ ವಿದ್ಯಾರ್ಥಿವೇತನವನ್ನು ಡಿಗ್ರಿ ಕ್ಲಾಸಿನವರಿಗೆ 150 ರೂಪಾಯಿಗಳಿಂದ 200ಕ್ಕೂ, ಇಂಟರ್‌ಮಿಡಿಯೆಟ್ ಕ್ಲಾಸಿನವರಿಗೆ 100 ರೂಪಾಯಿಗಳಿಂದ 150ಕ್ಕೂ ಏರಿಸಿದ್ದಾರೆ. ಆ ಕಾರಣದಿಂದ ಕೆಲವು ವಿದ್ಯಾರ್ಥಿಗಳಿಗೆ ವೇತನ ಕಡಿಮೆ ಬಿದ್ದಿದೆ. ಹಾಗಾದಮೇಲೆ ಪುನಃ ಸರ್ಕಾರದಲ್ಲಿ ಮನವಿಮಾಡಿಕೊಂಡ ಮೇಲೆ 28½ ಸಾವಿರ ರೂಪಾಯಿಗಳನ್ನು ಹಿಂದಿನ ವರ್ಷ ಹೆಚ್ಚಿಸಿದೆ. ಅಂದರೆ 78,500 ರೂಪಾಯಿಗಳನ್ನು ಹಿಂದಿನ ವರ್ಷ ವಿದ್ಯಾರ್ಥಿವೇತನಕ್ಕಾಗಿ ಕೊಟ್ಟರು. ಈ ವರ್ಷ 1951-52 ರಲ್ಲಿ 480 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆಂದು ಅಂಕಿ ಅಂಶಗಳಿಂದ ಇದುವರೆಗೆ ಗೊತ್ತಾಗಿದೆ. ಆದ್ದರಿಂದ ಈಗ ಕೊಟ್ಟಿರುವ 50 ಸಾವಿರ ರೂಪಾಯಿಗಳ ಜೊತೆಗೆ ಇನ್ನೂ 34 ಸಾವಿರ ರೂಪಾಯಿಗಳ ಸಹಾಯ ಬಹಳಮಟ್ಟಿಗೆ ಬೇಕಾಗಬಹುದೆಂದು ಈಗತಾನೆ ವಿಶ್ವವಿದ್ಯಾನಿಲಯದವರು ವರದಿ ಮಾಡಿದ್ದಾರೆ. ಹಿಂದಿನ ವರ್ಷ ಕೊಟ್ಟ 28½ ಸಾವಿರ ರೂಪಾಯಿಗಳನ್ನೂ ಬಡ್ಜೆಟ್‌ನಲ್ಲೇ ಸೇರಿಸಬಹುದಾಗಿತ್ತು, ಸೇರಿಸಲಿಲ್ಲ. ಇಷ್ಟು ವಿದ್ಯಾರ್ಥಿಗಳು ಬರುತ್ತಾರೆಂದು ಊಹೆ ಮಾಡಿ ನೋಡಿ ಹಣ ಒದಗಿಸಬಹುದಾಗಿತ್ತು ಎಂದು ಶ್ರೀ ಮಾದಯ್ಯನವರು ಹೇಳಿದರು. ಆದರೆ ಬಡ್ಜೆಟ್ ತಯಾರು ಮಾಡುವ ಕಾಲ ಯಾವುದು, ವಿದ್ಯಾರ್ಥಿಗಳ

ಸಂಖ್ಯೆ ಇಷ್ಟೇ ಇರುತ್ತದೆ ಎಂದು ಗೊತ್ತಾಗುವ ಕಾಲ ಯಾವುದು ಎಂಬ ಅಂಶ ಶ್ರೀ ಮಾದಯ್ಯನವರು ಗಮನಿಸಬೇಕು. ಬಡ್ಜೆಟ್ ತಯಾರು ಮಾಡುವುದು ಜನವರಿ ತಿಂಗಳಲ್ಲಿ. ಆಮೇಲೆ ಅದು ಸರ್ಕಾರಕ್ಕೆ ಬರುತ್ತದೆ. ಸರ್ಕಾರಕ್ಕೆ ಫೆಬ್ರವರಿ ತಿಂಗಳಲ್ಲಿ ಬಡ್ಜೆಟ್ ಬರುತ್ತದೆ. ವಿದ್ಯಾರ್ಥಿಗಳ ಸಂಖ್ಯೆ ಇಷ್ಟು ಹೆಚ್ಚಿದೆಯೆಂದು ಸೆಪ್ಟಂಬರ್ ಅಂತ್ಯದಲ್ಲಿ ಅಥವಾ ಅಕ್ಟೋಬರ್ ಅಂತ್ಯದಲ್ಲಿ ಲೆಕ್ಕ ಸಿಕ್ಕುತ್ತದೆ.

ಶ್ರೀ ಎಂ. ಮಾದಯ್ಯನವರು.—ಅಂದಾಜು ತಾನೆ ತಯಾರು ಮಾಡುವುದು. ಹೆಚ್ಚು ಕಡಿಮೆ ಯಿದ್ದು ಉಳಿದರೂ ಪರವಾಗಿಲ್ಲ ಎಂದು ನಾನು ಹೇಳಿದೆ.

ಶ್ರೀ ಎಂ. ಸಿ. ವೆಂಕಟೇಶ್ವರವರು.—5 ವರ್ಷಗಳ ಸರಾಸರಿ ನೋಡಿ ನಿರ್ಧರಿಸಬಹುದಾಗಿತ್ತು.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹಾಗೆ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಮಾದಯ್ಯನವರು.—ಮದ್ರಾಸಿನಲ್ಲಿ 50 ಲಕ್ಷ ವಿದ್ಯಾರ್ಥಿವೇತನಕ್ಕಾಗಿಯೂ ಮತ್ತು 120 ಲಕ್ಷ ಮನೆಗಳ ಯೋಜನೆಗಾಗಿಯೂ ಕೊಟ್ಟಿದ್ದಾರೆ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಮದ್ರಾಸು ಅಥವಾ ಬೇರೆ ದೇಶಗಳ ಉದಾಹರಣೆ ತೆಗೆದುಕೊಳ್ಳುವುದು ಸರಿಯಲ್ಲ. ಮದ್ರಾಸ್ ಸರ್ಕಾರ ಒಂದು ಕೋಟಿ ರೂಪಾಯಿಗಳ ಅಲಾಟ್‌ಮೆಂಟ್ ಮಾಡಿ ಒಂದೆರಡು ವರ್ಷವಾಗಿದ್ದರೂ ಸಾಮಾನ್ಯವಾಗಿ ಈಗ ಕೆಲಸ ಶುರುವಾಗಿದೆ. ಈ ಉದಾಹರಣೆಯಿಂದ ತಮ್ಮ ಕೇಸು ಬೆಂಬಲ ಪಡೆಯುತ್ತದೆಂದು ಆ ರೀತಿ ಹೇಳಬಾರದು. ನಮ್ಮ ಪರಿಸ್ಥಿತಿ ಹೇಗಿದೆಯೆಂಬುದನ್ನು ಮನಗಾಣಬೇಕು. ಒಂದು ಕೋಟಿ ಒದಗಿಸಬೇಕಾದರೆ ಬಹಳ ಕಷ್ಟವಿದೆ. ಹಾಸ್ಟೆಲುಗಳಲ್ಲಿ ಬೋರ್ಡಿಂಗ್ ಛಾರ್ಜು ಹೆಚ್ಚಿ ವಿದ್ಯಾರ್ಥಿವೇತನ ಕಡಿಮೆಯಾಗಬಹುದು. ಆದ್ದರಿಂದ ಹೆಚ್ಚಿಗೆ ವೇತನ ಕೊಡಬೇಕು ಎಂದು ಹೇಳಬಹುದೇ ವಿನಾ ಬಾಕಿಯಾದ್ದನ್ನು ಹೇಳುವುದು ಉಚಿತವಲ್ಲ. ಅದರಿಂದ ಅಷ್ಟೊಂದು ಸಹಾಯವಾಗುವುದಿಲ್ಲ ಎಂದು ಹೇಳಬೇಕಾಗಿದೆ. ಹೆಚ್ಚು ಹೇಳುವುದಕ್ಕೆ ಹೋದರೆ ಪ್ರಯೋಜನಕ್ಕೆ ಬದಲು ಬೇರೆ ರೂಪದಲ್ಲಿ ಒಂದು ರೀತಿ ಭಯವಾಗಬಹುದು. ಈ ಕಾರಣಗಳಿಂದ ಆ ಉದಾಹರಣೆ ಬೇಕಾಗಿಲ್ಲ. ಸಾಮಾನ್ಯವಾಗಿ ಈ ವಿಚಾರದಲ್ಲಿ ಎಲ್ಲರಿಗೂ ಸಹಾನುಭೂತಿಯಿದೆ ಮತ್ತು ಸರ್ಕಾರದವರು ಈ ಕಾಲಕ್ಕನುಸಾರವಾಗಿ ಸಹಾಯ ಮಾಡುವುದಕ್ಕೆ ಸಿದ್ಧವಾಗಿ ಹೆಚ್ಚಾಗಿ ಅನುಕೂಲಪಡಿಸಿದ್ದಾರೆ. ವಿದ್ಯಾರ್ಥಿಗಳು ಹಾಸ್ಟಲುಗಳಲ್ಲಿ ವಾಸಮಾಡಿದರೆ ಬೋರ್ಡಿಂಗ್ ಛಾರ್ಜು ಹೆಚ್ಚು, ಸರ್ಕಾರದವರು ಕೊಡುವ 200 ರೂಪಾಯಿಗಳು ಸಾಕಾಗುವುದಿಲ್ಲ, 300 ರೂಪಾಯಿಗಳಿಗೇರಿಸಬೇಕು ಎಂದು ಶ್ರೀಮಾದಯ್ಯನವರು ಹೇಳಿದ್ದು ವಾಸ್ತವ. ಈ ಕಾಲದಲ್ಲಿ ನಿಜವಾಗಿಯೂ ಕಷ್ಟವಿದೆಯೆಂದು ತಿಳಿದು ಬೋರ್ಡಿಂಗ್ ಛಾರ್ಜು ಕೊಟ್ಟು ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನದ ಜೊತೆಗೆ ತಿಂಗಳಿಗೆ ಹತ್ತು ರೂಪಾಯಿಗಳನ್ನು ಹೆಚ್ಚಾಗಿ ಕೊಡುತ್ತಿದೆ. ಪುಸ್ತಕಗಳು, ಬಟ್ಟೆಬರೆಗಳು ಮುಂತಾದುವಕ್ಕೆ ಹೆಚ್ಚು ಬೇಕು, ಅವುಗಳ ಬೆಲೆ ಹೆಚ್ಚುತ್ತಿದೆ ಎಂಬುದನ್ನು ಒಪ್ಪೋಣ. ಆದ್ದರಿಂದಲೇ 200 ರೂಪಾಯಿಗಳ ವಿದ್ಯಾರ್ಥಿವೇತನದ ಜೊತೆಗೆ ಹೆಚ್ಚಾಗಿ 10 ರೂಪಾಯಿಗಳನ್ನು ಹಾಸ್ಟೆಲುಗಳಲ್ಲಿರುವವರಿಗೆ ಕೊಡಲೇಬೇಕು ಎಂದು ಶ್ರೀ ಮಾದಯ್ಯನವರು ಒತ್ತಾಯ ಮಾಡಿದ್ದುದನ್ನು ಅವರಿಗೆ ಜ್ಞಾಪಕಕ್ಕೆ ತರುತ್ತೇನೆ. ಈ ವರ್ಷ ಹೆಚ್ಚಾಗಿ ಹಣ ಬಡ್ಜೆಟ್ಟಿನಲ್ಲಿ ಒದಗಿಸಲು ಅನಾನುಕೂಲವಾಯಿತು ಮತ್ತು ವಿದ್ಯಾರ್ಥಿಗಳ ಸಂಖ್ಯೆ ಇಷ್ಟೇ ಎಂಬ ಅಂಶ ಈಗ ತಾನೆ ವಿಶ್ವವಿದ್ಯಾನಿಲಯವು ತಿಳಿಸಿದೆ. ಇದೆಲ್ಲವನ್ನೂ ಯೋಚನೆ ಮಾಡಿ ಸರ್ಕಾರದವರು ಸೂಕ್ತ ಕ್ರಮ ಕೈಕೊಳ್ಳುತ್ತಾರೆ. ಇದುವರೆಗೆ ಬಂದಿರುವ ವರದಿ ಪ್ರಕಾರ ವಿದ್ಯಾರ್ಥಿಗಳ ಸಂಖ್ಯೆ 480 ಇದೆ. ಅದಕ್ಕೆ 34 ಸಾವಿರ ರೂಪಾಯಿಗಳು ಹೆಚ್ಚಾಗಿ ಬೇಕಾಗಬಹುದೆಂದು ತಿಳಿಸಿದ್ದಾರೆ. ಹೀಗೆ ಒಂದು ವರದಿ ಬಂದಮೇಲೆ ಎಷ್ಟುಮಟ್ಟಿಗೆ ಸಹಾಯ ಮಾಡಬಹುದೆಂಬ ಅಂಶವನ್ನು ಪರಿಶೀಲಿಸಿ ಸಹಾನುಭೂತಿಯಿಂದ ಸರ್ಕಾರದವರು

(ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು).
ಇದಕ್ಕೆ ಹಿಂದಿನ ವರ್ಷ ಯಾವರೀತಿ ಕಡಮೆ ಬಿದ್ದ ಮೊಬಲಗನ್ನು ಕೊಟ್ಟರೋ ಅದೇರೀತಿ ಈ ವರ್ಷವೂ ಉದಾರ ನೀತಿಯನ್ನು ಅನುಸರಿಸುತ್ತಾರೆ, ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುತ್ತಾರೆ ಎಂದು ಹೇಳುತ್ತೇನೆ. ಎಷ್ಟು ಸಾಧ್ಯವೋ ಅಷ್ಟನ್ನು ಉದಾರವಾಗಿ ಕೊಡುತ್ತಾರೆ ಎಂದು ಭರವಸೆ ಕೊಡಬಲ್ಲೆ. ನಮ್ಮ ಉದ್ದೇಶವಾದರೂ ಇಷ್ಟೇ ಇತ್ತು. ವಿದ್ಯಾರ್ಥಿಗಳ ಸಂಖ್ಯೆ ಇಷ್ಟು ಎಂದು ಇದುವರೆಗೆ ಅಖೈರು ಅಂಕಿ ಅಂಶಗಳು ಬಂದಿರಲಿಲ್ಲ. ಬಂದಕೂಡಲೇ ಎಲ್ಲಾ ಅಂಶಗಳನ್ನೂ ಪರಿಶೀಲಿಸಿ ಸಹಾನುಭೂತಿಯಿಂದ ವಿದ್ಯಾಭ್ಯಾಸಕ್ಕೆ ಉತ್ತೇಜನ ಕೊಡಲು ಸರ್ಕಾರದವರು ಪ್ರಯತ್ನ ಪಡುತ್ತಾರೆ. ಅದರಲ್ಲೂ ಮೈಸೂರು ಸರ್ಕಾರದಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರದಲ್ಲಿರುವಾಗ ಎಲ್ಲಾ ವಿಧದಲ್ಲೂ ಹಿಂದುಳಿದವರಿಗಾಗಿ ದುಡಿಯಬೇಕು, ಸಹಾಯ ಮಾಡಬೇಕು ಎಂಬ ಅಭಿಲಾಷೆಯಿದೆ. ಇಂಥ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಯಾವ ವಿಧದಲ್ಲೂ ಕುಂದುಕೊರತೆ ಬರುವುದಿಲ್ಲ, ಸಹಾಯ ಮಾಡುತ್ತಾರೆ ಎಂಬ ಭರವಸೆಯನ್ನು ಶ್ರೀ ಮಾದಯ್ಯನವರು ಇಟ್ಟುಕೊಳ್ಳಬಹುದು. ಈ ದೃಷ್ಟಿಯಿಂದ ಅವರು ತಮ್ಮ ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

ಶ್ರೀ ಎಂ. ಮಾದಯ್ಯನವರು.—ಮಾನ್ಯ ಮಂತ್ರಿಗಳು ಭರವಸೆ ಕೊಟ್ಟಿರುವುದರಿಂದ ನಿರ್ಣಯವನ್ನು ವಾಪಸು ತೆಗೆದುಕೊಳ್ಳುವುದಕ್ಕೆ ಸಭೆಯವರು ಅನುಮತಿ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

The Resolution was, by leave, withdrawn.

Resolution No. 4.

Opening of Primary and Middle Schools in villages in Mysore District.

*ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ನಾನು ಈ ಸಭೆಯ ಮುಂದೆ ತಂದಿರತಕ್ಕ ನಿರ್ಣಯ ಈ ರೀತಿ ಇದೆ:—

"ಮೈಸೂರು ಡಿಸ್ಟ್ರಿಕ್ಟಿನಲ್ಲಿ ಅಕ್ಷರಸ್ಥರ ಶೇಕಡಾವಾರು ಸಂಖ್ಯೆಯು ಬಹಳ ಕಡಿಮೆಯಾಗಿದೆ. ಆದುದರಿಂದ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಪ್ರೈಮರಿ ಸ್ಕೂಲುಗಳಿಲ್ಲದೆ ಇರತಕ್ಕಂಥ ಎಲ್ಲ ಗ್ರಾಮುಗಳಲ್ಲೂ ಪ್ರೈಮರಿ ಸ್ಕೂಲುಗಳನ್ನೂ ಮತ್ತು ಮೈಸೂರು ಡಿಸ್ಟ್ರಿಕ್ಟಿನಲ್ಲಿ 3,000 ಅಥವಾ ಇನ್ನೂ ಹೆಚ್ಚು ಜನಸಂಖ್ಯೆಯಿರುವಂಥ ಎಲ್ಲ ಗ್ರಾಮುಗಳಲ್ಲೂ ಮಿಡ್ಲ್ ಸ್ಕೂಲುಗಳನ್ನೂ 3 ವರ್ಷಗಳಅವಧಿಯೊಳಗಾಗಿ ಏರ್ಪಡಿಸಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ".

ಸ್ವಾಮಿ, ಈ ಠರಾವಿನಲ್ಲಿ ಅಡಗಿರತಕ್ಕ ಅಂಶ ಇಷ್ಟೆ. ಸಂಸ್ಥಾನದಲ್ಲಿರತಕ್ಕ ಎಲ್ಲಾ ಜಿಲ್ಲೆಗಳಿಗಿಂತ ಮೈಸೂರು ಜಿಲ್ಲೆಯಲ್ಲಿ ಅಕ್ಷರಸ್ಥರ ಸಂಖ್ಯೆ ಬಹಳ ಕಮ್ಮಿಯಾಗಿದೆ. ಈಗಿನ ಸೆನ್ಸಸ್ ಪ್ರಕಾರ ಈಗ ಒಟ್ಟು ಶೇಕಡ 20ರಷ್ಟು ಅಕ್ಷರಸ್ಥರ ಸಂಖ್ಯೆ ಹೆಚ್ಚಿದೆ. ಆದರೆ ಮೈಸೂರು ಜಿಲ್ಲೆಯಲ್ಲಿ ಅಕ್ಷರಸ್ಥರ ಸಂಖ್ಯೆ ಬಹಳ ಕಮ್ಮಿ ಎಂಬುದು ಅಂಕಿ ಅಂಶಗಳಿಂದ ವಿದಿತವಾಗುತ್ತದೆ. ಈ ಕಾರಣದ ದಶೆಯಿಂದ ಎಲ್ಲಾ ಜಿಲ್ಲೆಗಳಿಗಿಂತ ಮೈಸೂರು ಜಿಲ್ಲೆಯ ಕಡೆಗೆ ಸರ್ಕಾರದವರು ವಿದ್ಯಾಭ್ಯಾಸವನ್ನು ಮುಂದುವರಿಸುವುದಕ್ಕೆ ಗಮನ ಕೊಡುವುದು ಅತ್ಯವಶ್ಯಕವಾಗಿದೆ. ನಾನು ಈ ಸಭೆಗೆ ಒಂದು ಪ್ರಶ್ನೆ ಕಳುಹಿಸಿದ್ದೆ, ಅದಕ್ಕೆ ಜವಾಬಾಗಿ ಉತ್ತರ ಬಂದಿದೆ. ಮೈಸೂರು ಜಿಲ್ಲೆಯಲ್ಲಿ ಪ್ರೈಮರಿ ಸ್ಕೂಲುಗಳು ಎಷ್ಟು, ಮಿಡ್ಲ್‌ಸ್ಕೂಲುಗಳು ಎಷ್ಟು ಎಂದು ಕೇಳಿದ್ದಕ್ಕೆ ಪ್ರೈಮರಿ ಸ್ಕೂಲುಗಳು 1,270 ಅಂತಲೂ, ಮಿಡ್ಲ್‌ಸ್ಕೂಲುಗಳು 144, ಅದರಲ್ಲಿ ಸಾಮಾನ್ಯ ಮಿಡ್ಲ್ ಸ್ಕೂಲು 99, ಪ್ರ್ಯಾಕ್ಟಿಕಲ್ ಮಿಡ್ಲ್ ಸ್ಕೂಲು 45 ಎಂತಲೂ ಉತ್ತರ ಕೊಟ್ಟಿದ್ದಾರೆ. ಅಲ್ಲದೆ ಈ ಜಿಲ್ಲೆಯಲ್ಲಿ ಎಲ್ಲಾ ಜಿಲ್ಲೆಗಳಿಗಿಂತಲೂ ಅಕ್ಷರಸ್ಥರ ಸಂಖ್ಯೆ ಕಮ್ಮಿಯಾಗಿದೆ ಎಂಬ ಅಂಶವನ್ನೂ ಕೂಡ ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಈಗ ನಮ್ಮ ಮುಂದಿರತಕ್ಕದ್ದು ಈ ರೀತಿ ಎಲ್ಲಾ ಡಿಸ್ಟ್ರಿಕ್ಟ್‌ಗಳಿಗಿಂತಲೂ ಈ ಡಿಸ್ಟ್ರಿಕ್ಟ್‌ನಲ್ಲಿ ಕಡಿಮೆ ದರ್ಜೆಯಲ್ಲಿ ವಿದ್ಯಾ

ಭ್ಯಾಸ ನಡೆಯುತ್ತಾ ಇರುವುದಕ್ಕೆ ಕಾರಣ ವನ್ನು ಸರ್ಕಾರದವರು ಕೂಲಂಕಷವಾಗಿ ಪರಿಶೀಲಿಸಿ—ಈಗ ಮಾಡಿಲ್ಲವೆಂದು ಅರ್ಥವಲ್ಲ, ಇನ್ನೂ ಗಾಢವಾಗಿ ಪರಿಶೀಲಿಸಿ—ತಕ್ಷಣ ಈ ಜಿಲ್ಲೆ ಬಾಕಿ ಜಿಲ್ಲೆಗಳ ಜೊತೆಗೆ ಬರುವುದಕ್ಕೆ ಪ್ರಯತ್ನಪಡುವುದು ಅತ್ಯಗತ್ಯವಾಗಿದೆ. ಮೈಸೂರು ಸಂಸ್ಥಾನಕ್ಕೆ ರಾಜಧಾನಿ ಮೈಸೂರು. ಅಂಥ ರಾಜಧಾನಿಯಾದ ಮೈಸೂರು ಜಿಲ್ಲೆ ಯಲ್ಲೇ ಈ ರೀತಿ ವಿದ್ಯಾಭ್ಯಾಸ ಕಮ್ಮಿ ದರ್ಜೆ ಯಲ್ಲಿ ನಡೆಯುತ್ತಾ ಇದೆಯೆಂದರೆ ಅದು ಶೋಚನೀಯವಾದ ವಿಚಾರ. ಇದನ್ನೂ ಸರ್ಕಾರದವರು ಯೋಚನೆ ಮಾಡಬೇಕು. ಮೈಸೂರು ಜಿಲ್ಲೆಯಲ್ಲಿ ಬೇಚರಾಕು ಗ್ರಾಮ ಸೇರಿಸಿಕೊಂಡರೆ 2,100 ಗ್ರಾಮ ಆಗಬಹುದು. ಸುಮಾರು 600-700 ಚರಾಕು ಗ್ರಾಮ ಇದೆ. ಆ ಪೈಕಿ ಈಗ ಸ್ಕೂಲು ಇರುವುದು 1,279 ಅಂತ ಹೇಳಿದ್ದೀರಿ. ಎಂದರೆ ಅನೇಕ ಗ್ರಾಮಗಳಿಗೆ ಸ್ಕೂಲುಗಳೇ ಇಲ್ಲ. ಮೈಸೂರು ಜಿಲ್ಲೆಯ ಜನ ಸಂಖ್ಯೆ ಮೈಸೂರು ಸಿಟಿಯನ್ನೂ ಸೇರಿಕೊಂಡು 15 ಲಕ್ಷ ಆಗುತ್ತದೆ. ಅದನ್ನು ಬಿಟ್ಟರೆ 12 ಲಕ್ಷದವರೆಗೂ ಬರುತ್ತದೆ ಎಂಬ ಅಂಶ ಸೆನ್ಸಸ್‌ನಿಂದ ಗೊತ್ತಾಗುತ್ತದೆ. ಯಾವ ದೃಷ್ಟಿ ಯಿಂದ ನೋಡಿದರೂಕೂಡ ಮೈಸೂರು ಜಿಲ್ಲೆ ಯಲ್ಲಿ ಪ್ರೈಮರಿ ಸ್ಕೂಲುಗಳು ಅನೇಕ ಗ್ರಾಮ ಗಳಲ್ಲಿ ಇಲ್ಲ. ಈ ಸಂದರ್ಭದಲ್ಲಿ ನಾನು ಇದನ್ನು ಹೆಚ್ಚಿಗೆ ಹೇಳುತ್ತಾ ಇದ್ದೇನೆ, ಏಕೆಂದರೆ ಇನ್ನೊಂದು ಠರಾವು ಶ್ರೀಮರ್ನಾ ಹೊನ್ನಪ್ಪನವರು ಕಳುಹಿಸಿದ್ದಾರೆ, ಅದು ಮೈಸೂರು ತಾಲ್ಲೂಕಿಗೆ ಸಂಬಂಧಪಟ್ಟದ್ದು. ಆದ್ದರಿಂದ ಬಾಕಿ ಕಡೆಗೂ ಅನ್ವಯಿಸುವಂತೆ ನಾನು ಹೇಳಬೇಕಾದರೆ ಅನೇಕ ಗ್ರಾಮಗಳಲ್ಲಿ ಸ್ಕೂಲು ಕಟ್ಟಡ ಇಲ್ಲ. ಸ್ಕೂಲು ಕೊಡುತ್ತೇವೆ, ಸ್ಕೂಲು ಕಟ್ಟಡ ಕೊಡಿ ಎಂಬುದಾಗಿ ಗ್ರಾಮಸ್ಥರನ್ನು ಒತ್ತಾಯ ಮಾಡಿ, ಶ್ರೀಮರ್ನಾ ಚನ್ನಬಸಪ್ಪನವರ ಪ್ರಯತ್ನ ದಿಂದ ಗ್ರಾಮಸ್ಥರು ದುಡ್ಡು ಕೊಡುವುದಕ್ಕೆ ತಯಾರಾಗಿದ್ದಾರೆ. ಆದರೆ ಅವರಿಗೆ ಸಾಕಾದಷ್ಟು ಸರ್ಕಾರಿ ಗ್ರಾಂಟ್ ಕೊಡುವುದಕ್ಕೆ ಪ್ರಯತ್ನ ನಡೆದಿಲ್ಲ. ಆದ್ದರಿಂದ ಅನೇಕ ಕಡೆ ಕಟ್ಟಡ ಇಲ್ಲ ದಂತಾಗಿದೆ. ಕಟ್ಟಡ ಕೊಟ್ಟರೆ ಉಪಾಧ್ಯಾಯ ರಿಗೆ ವಾಸಕ್ಕೆ ಮನೆ ಇಲ್ಲ ಈ ಕಾರಣದಿಂದ ವಿದ್ಯಾಭ್ಯಾಸ ಹಿಂದೆ ಬಿದ್ದಿದೆ ಎಂದು ಹೇಳಬ ಹುದು. ಈಗ ಓದುವುದಕ್ಕೆ ಜನಗಳಿಂದ ಯಾವ ಆತಂಕವೂ ಇಲ್ಲ. ಓದಿಸುವುದಕ್ಕೆ ಸಿದ್ಧವಾಗಿ ದ್ದಾರೆ, ತಂದೆ ತಾಯಿಗಳು ಅವರ ಮಕ್ಕಳನ್ನು ಸ್ಕೂಲಿಗೆ ಕಳುಹಿಸುವುದಕ್ಕೆ ಸಿದ್ಧವಾಗಿದ್ದಾರೆ. ಬಾಕಿಯವರಂತೆ ಮುಂದುವರಿಯಬೇಕೆಂದು ಅಭಿ ಲಾಷೆಯುಳ್ಳವರಾಗಿದ್ದಾರೆ. ಹೀಗಿರುವಾಗ ಸರ್ಕಾ ರದವರ ಸಹಾಯ ಇಂಥಾ ಸಂಭರ್ಧದಲ್ಲಿ ಬಹಳ ಅತ್ಯಗತ್ಯ. ಓದುವುದಕ್ಕೆ ತಯಾರಾಗಿದ್ದರೂ ಸ್ಕೂಲು ಇಲ್ಲದೆ ಅನೇಕ ಕಡೆ ವಿದ್ಯಾರ್ಥಿಗಳು ಹೆಚ್ಚು ಹೆಚ್ಚಾಗಿ ಬರುವುದಕ್ಕೆ ತೊಂದರೆ ಯಾಗಿದೆ. ಇಂಥಾ ಸಂದರ್ಭದಲ್ಲಿ ಮೊಟ್ಟ ಮೊದಲು ಎಲ್ಲಾ ಹಳ್ಳಿಗಳಿಗೂ 3 ವರ್ಷದಲ್ಲಿ ಪ್ರೈಮರಿ ಸ್ಕೂಲು ಕೊಡಬೇಕೆಂದು ಕಡ್ಡಾಯ ಮಾಡಬೇಕು. ಈಗಾಗಲೇ ಶ್ರೀಮರ್ನಾ ಚನ್ನ ಬಸಪ್ಪನವರು ಅಂಕಿ ಅಂಶಗಳನ್ನು ತಿಳಿಸಿದ್ದಾರೆ. 1949-50ನೇ ಅಡ್ಮಿನಿಸ್ಟ್ರೇಷನ್ ರಿಪೋರ್ಟ್‌ನಲ್ಲಿ ಕೊಟ್ಟಿದೆ. ಮೈಸೂರು ಜಿಲ್ಲೆಯ ಮೇಲೆ ಇತರ ಎಲ್ಲಾ ಜಿಲ್ಲೆಗಳಿಗಿಂತ ಒಂದು ನಿಗಾ ಜಾಸ್ತಿ ಯಾಗಿ ಇಡಬೇಕೆಂದು ಹೇಳುತ್ತೇನೆ. ಏಕೆಂದರೆ ವಿದ್ಯಾಭ್ಯಾಸ ಹೆಚ್ಚುವುದರಿಂದ ನಾಳೆದಿನ ನಮ್ಮ ದೇಶಕ್ಕೇ ಕ್ಷೇಮ. ಅನೇಕ ಪಾರ್ಟಿ ವ್ಯಾಜ್ಯಗಳು ರಾಗದ್ವೇಷಗಳು ಕಡಿಮೆ ಆಗುತ್ತವೆ. ಸತ್ ಪ್ರಜೆಗಳಾಗುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಈ ಠರಾವನ್ನು ಎಲ್ಲರೂ ಅನುಮೋ ದಿಸುತ್ತೀರೆಂದು ನಂಬಿದ್ದೇನೆ. ಮಿಡ್ಲ್ ಸ್ಕೂಲು ವಿಚಾರದಲ್ಲಿ 3,000 ಪ್ರಜಾಸಂಖ್ಯೆಗೆ ಮೇಲ್ಪಟ್ಟರತಕ್ಕ ಹಳ್ಳಿಗಳಿಗೆ ಮಿಡ್ಲ್ ಸ್ಕೂಲು ಕೊಟ್ಟು ವಿದ್ಯಾಭ್ಯಾಸವಾಗುವುದಕ್ಕೆ ಸರ್ಕಾರ ದವರು ಪ್ರಯತ್ನಪಟ್ಟು ಏರ್ಪಾಡು ಮಾಡಬೇಕು. ಅಂಥ ಅನೇಕ ಹಳ್ಳಿಗಳು ಇವೆ. ನಾನು ಕಂಡಂತೆ ಮೈಸೂರಿನ ಹತ್ತಿರ ಉದ್ಬೂರು ಎಂಬ ಒಂದು ಹಳ್ಳಿ ಇದೆ. ಅಲ್ಲಿ 4,000ಕ್ಕೆ ಮೇಲ್ಪಟ್ಟ ಪ್ರಜಾ ಸಂಖ್ಯೆ ಇದೆ. ಅಂಥ ಊರಿಗೆ ಒಂದು ಪ್ರೈಮರಿ ಸ್ಕೂಲು ಇದೆ. ಅದು ಸಾಲದು ಒಂದು ಮಿಡ್ಲ್ ಸ್ಕೂಲು ಸಹ ಇಲ್ಲ. ಈ ರೀತಿ ಇನ್ನೂ ಕೆಲವು

(ಶ್ರೀ ಎಸ್. ರಂಗರಾಮಯ್ಯನವರು.)

ಗ್ರಾಮಗಳಿವೆ. ಇನ್ನೊಂದು ದೂರ ಅಂತ ಇದೆ. ಅದು ಇರುವುದೂಕೂಡ ಮೈಸೂರು ತಾಲ್ಲೂಕಿಗೆ ದೂರವೇ. ಅಲ್ಲಿ ಒಂದು ಪ್ರೈಮರಿ ಸ್ಕೂಲು ಇದೆ, ಮಿಡ್ಲ್ ಸ್ಕೂಲು ಇಲ್ಲ. ಜಯಪುರ ಎಂಬ ಹೋಬಳಿ ಹೆಡ್‌ಕ್ವಾರ್ಟರ್ ಇದೆ. ಅದು ಮದ್ದೂರಿಗೆ 2 ಮೈಲಿಯಲ್ಲಿದೆ. ಹೀಗೆ 2,000, 3,000 ಜನಸಂಖ್ಯೆ ಇರತಕ್ಕ ಗ್ರಾಮಗಳು ಮೈಸೂರು ಜಿಲ್ಲೆಯಲ್ಲಿ ಅನೇಕವು ಇವೆ. ಚಾಮರಾಜನಗರದ ಜನಸಂಖ್ಯೆ ಅಂತೂ ಫಲವತ್ತಾಗಿದೆ. ಪ್ರಜಾಸಂಖ್ಯೆಯೂ ಅಭಿವೃದ್ಧಿಯಾಗುತ್ತದೆ.

ಒಬ್ಬ ಮಾನ್ಯಸದಸ್ಯರು.—(ನಗು).

ಶ್ರೀ ಎಸ್. ರಂಗರಾಮಯ್ಯನವರು.—ಇದೊಂದು ಸಂತೋಷದ ವಿಚಾರವೇ. ಏಕೆಂದರೆ ಎಲ್ಲಾ ಕಡೆಗಳಲ್ಲೂ ಮಕ್ಕಳು ಮರಿಗಳು ಹೆಚ್ಚಾಗುತ್ತಿರುವಂತೆ ಅಲ್ಲೂ ಹೆಚ್ಚಾಗುತ್ತಿದ್ದರೂ ಅವರೇನೂ 'ನೇಪಾಳಿ'ಗಳಾಗಿ ಆಸ್ಪತ್ರೆಗೆ ಲಾಯಕ್ಕಾಗಿರುವವರಲ್ಲ. ಹಾಗೆ ನೋಡುವುದಾದರೆ ನಾನೇ ಅವರಲ್ಲಿ 'medium' size ನವನೆಂದು ಹೇಳಬೇಕು. ಶಕ್ತಿ ಧೈರ್ಯ ಎಲ್ಲ ಅಲ್ಲಿನ ಜನಗಳಿಗೆ ಸಾಕಾದಷ್ಟು ದೇವರು ಕೊಟ್ಟಿದ್ದಾನೆ. ಇಂಥವರಿಗೆ ವಿದ್ಯೆಯೂ ಸ್ವಲ್ಪ ಬಂದರೆ ಅವರಿಗೆ ಒಳ್ಳೆಯ "ಮೆರಪು" ಕೊಟ್ಟ ಹಾಗಾಗುತ್ತದೆ. ಆದ್ದರಿಂದ ಸರ್ಕಾರದವರು ದಯವಿಟ್ಟು ನನ್ನ ಠರಾವನ್ನು ನಡೆಸಿಕೊಡುತ್ತಾರೆಂದು ನಂಬಿದ್ದೇನೆ. ಮೂರು ಸಾವಿರಕ್ಕೆ ಮೇಲ್ಪಟ್ಟ ಜನಸಂಖ್ಯೆಯಿರುವ ಎಲ್ಲಾ ಗ್ರಾಮಗಳಿಗೂ ತಾವೇ ಸ್ಕೂಲು ಕಟ್ಟಿಸಿ ಕೊಡಬೇಕೆಂದುಮಾಡಿ ನಮ್ಮ ಡಿಸ್ಟ್ರಿಕ್ಟನ್ನೂ ಇತರೇ ಡಿಸ್ಟ್ರಿಕ್ಟುಗಳವರ ದರ್ಜೆಗೆ ತರಬೇಕೆಂದು ಹೇಳುತ್ತೇನೆ. ಮಾನ್ಯಸದಸ್ಯರು ದಯವಿಟ್ಟು ನನ್ನ ನಿರ್ಣಯಕ್ಕೆ ಬೆಂಬಲಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—Resolution moved.—

"This Assembly is of the opinion that in view of the very low percentage of literacy prevailing in Mysore District, primary schools be granted to all the villages in Mysore District where there are no such schools and middle schools be opened in all villages of the Mysore District which contain a population of 3,000 or more within a period of three years."

ಶ್ರೀ ಎಂ. ಸಿ. ಶಿವಾನಂದಶರ್ಮರವರು (ಬೆಂಗಳೂರು ಜಿಲ್ಲೆ).—ಸ್ವಾಮಿ, ಶ್ರೀಮಾನ್ ರಂಗರಾಮಯ್ಯನವರು ತಂದಿರತಕ್ಕ ಈ ನಿರ್ಣಯವನ್ನು ಅನುಮೋದಿಸುತ್ತಾ ಒಂದೆರಡು ಮಾತುಗಳನ್ನುಮಾತ್ರ ಆಡಬಯಸುತ್ತೇನೆ. ಮೈಸೂರುದೇಶ ಇಡೀಭಾರತಕ್ಕೆ ಮಾದರಿದೇಶ. ಹಾಗೆ ಮೈಸೂರುದೇಶಕ್ಕೆ ಹೆಸರುತಂದ ಮೈಸೂರು ಜಿಲ್ಲೆ ವಿದ್ಯಾಭ್ಯಾಸದಲ್ಲಿ ಹೀಗೆ ಹಿಂದುಳಿದಿರುವುದು ನಿಜವಾಗಿಯೂ ಶೋಚನೀಯ. ಇದೇ ವಿಚಾರದಲ್ಲಿ ಮುಂದೆ ಇನ್ನೊಂದು ನಿರ್ಣಯವೂ ಬರಲಿದೆ. ಅದರಲ್ಲೂ ಮೈಸೂರಿಗೆ ಹತ್ತಿರದಲ್ಲೆ ಇರುವ ಮೈಸೂರು ತಾಲ್ಲೂಕು ವಿದ್ಯಾಭ್ಯಾಸದ ವಿಷಯದಲ್ಲಿ ಬಹಳಮಟ್ಟಿಗೆ ಹಿಂದುಳಿದಿದೆಯೆಂದು ಹೇಳಿದ್ದಾರೆ. ಇದನ್ನು ಗಮನಿಸಿದರೆ ನಿಜವಾಗಿಯೂ ಶ್ರೀಮಾನ್ ರಂಗರಾಮಯ್ಯನವರು ತಂದಿರತಕ್ಕ ನಿರ್ಣಯ ಬಹಳ ಸಾಧುವೆಂಬದರಲ್ಲಿ ಸಂದೇಹವಿಲ್ಲ. ಆದರಲ್ಲೂ ಸರ್ಕಾರದವರ ಮುಖ್ಯ ಕರ್ತವ್ಯ. ಆ ಭಾಗದಲ್ಲಿ ಆದಷ್ಟುಮಟ್ಟಿಗೆ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಏರ್ಪಾಡುಗಳನ್ನು ಮಾಡಿಕೊಡಬೇಕಾದ್ದು ಅತ್ಯಾವಶ್ಯಕ. ಹೈಸ್ಕೂಲು ಮತ್ತು ಕಾಲೇಜು ವಿದ್ಯಾಭ್ಯಾಸಕ್ಕಿಂತಲೂ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹ ಹಾಗೂ ಹೆಚ್ಚಿನ ಹಣ ಒದಗಿಸುವುದು ಅವಶ್ಯಕ. ಆದ್ದರಿಂದ ಈ ನಿರ್ಣಯದಲ್ಲಿ ತಿಳಿಸಿರುವಂತೆ 3,000 ಪ್ರಜಾಸಂಖ್ಯೆಯಿರುವ ಎಲ್ಲಾ ಗ್ರಾಮಗಳಲ್ಲೂ ಒಂದೊಂದು ಮಾಧ್ಯಮಿಕ ಶಾಲೆಯನ್ನೂ ಮತ್ತು ಎಲ್ಲಾ ಗ್ರಾಮಗಳಲ್ಲೂ ಒಂದೊಂದು ಪ್ರಾಥಮಿಕ ಶಾಲೆಯನ್ನೂ ಮೂರು ವರ್ಷದ ಅವಧಿಯಲ್ಲಲ್ಲ, ಒಂದು ವರ್ಷದೊಳಗಾಗಿಯೇ ಮಾಡಿಸಿಕೊಡಬೇಕೆಂದು ಹೇಳಿ ನಾನು ಈ ನಿರ್ಣಯವನ್ನು ಸಮರ್ಥಿಸುತ್ತೇನೆ.

ಶ್ರೀ ಎಸ್. ರಂಗರಾಮಯ್ಯನವರು.—I accept the amendment.

Mr. SPEAKER.—There is no amendment before the House.

ಶ್ರೀ ಎಂ. ಮಾದಯ್ಯನವರು (ಮೈಸೂರು—ನಿಮ್ನಪಂಗಡ).--ಅಧ್ಯಕ್ಷರೇ, ನಾನು ಈ ನಿರ್ಣಯವನ್ನು ಮನಸಾರ ಸಮರ್ಥಿಸುತ್ತೇನೆ. ಈ ಸಂದರ್ಭದಲ್ಲಿ ಕೆಲವು ಅಂಕಿ ಅಂಶಗಳನ್ನು ಸಭೆಯುವರ ಗಮನಕ್ಕೆ ತರಬಯಸುತ್ತೇನೆ. ಈ ಡಿಸ್ಟ್ರಿಕ್ಟಿನಲ್ಲಿ ವಿದ್ಯಾಭ್ಯಾಸ ಹೀಗೆ ಹಿಂದುಳಿದಿರುವುದಕ್ಕೆ ಮುಖ್ಯವಾದ ಕಾರಣ ಏನಪ್ಪಾ ಎಂದರೆ, ನಿಮ್ಮ ವಿದ್ಯಾಭ್ಯಾಸದ ಪದ್ಧತಿಯಲ್ಲಿರುವ ಒಂದು ಲೋಪವೇ ಕಾರಣ. ಈ ಲೋಪದೋಷಗಳನ್ನು ಎಷ್ಟೋಸಾರಿ ಈ ಸಭೆಯಲ್ಲಿ ತಿಳಿಸಿದ್ದೇನೆ. ಈಗಿನ ಪದ್ಧತಿಯ ಪ್ರಕಾರ ಇರತಕ್ಕ curriculum ನಲ್ಲೇನೂ ಲೋಪವಿಲ್ಲ. ಆದರೆ ಯಾವ ಉದ್ದೇಶದಿಂದ ಈ ಬಾಬಿನಲ್ಲಿ ಹೆಚ್ಚುಹೆಚ್ಚಿಗೆ ಹಣ-ಖರ್ಚುಮಾಡುತ್ತಿದ್ದಿರೋ ಅದು ಕಾರ್ಯತಃ ಸಫಲವಾಗುತ್ತಿಲ್ಲ. ಉದಾಹರಣೆಗೆ ಒಂದು ಕೆರೆಕಟ್ಟಿ, ನಾಲೆತೆಗೆಸಿ ಬಿಟ್ಟರೇ ಆಗಲಿಲ್ಲ. ಆ ಕೆರೆಯ ನೀರು ಅಚ್ಚುಕಟ್ಟಿನ ಪ್ರತಿಯೊಂದು ಎಕರೆಯ ಪ್ರದೇಶಕ್ಕೂ ಹೋಗಿ ಮುಟ್ಟುತ್ತದೆಯೇ ಎಂಬದನ್ನೂ ನೋಡಬೇಕು. ಐನೂರು ಎಕರೆಗಳಿರುವ ಅಚ್ಚುಕಟ್ಟಿನ ಪೈಕಿ 200 ಎಕರೆಗಳಿಗೆ ನೀರುಹೋಗಿ ಮಿಕ್ಕ 300 ಎಕರೆಗಳಿಗೆ ನೀರೇ ಹೋಗದಿದ್ದರೆ ನೀವು ಕೆರೆ ಕಟ್ಟಿ ನಾಲೆ ತೋಡಿಸಿದ್ದರಿಂದೇನು ಪ್ರಯೋಜನ? ಅದೇ ಪ್ರಕಾರ ಇಲ್ಲಿಯೂ ಇದಕ್ಕೆ ಕಾರಣವೇನೆಂಬುದನ್ನು ನೋಡುವುದಾದರೆ, ನೀವು ಕೊಡತಕ್ಕ ಹಣ ದೂರದಲ್ಲಿರತಕ್ಕ ನಿಮ್ನ ತರಗತಿಯವರಿಗೆ ಮುಟ್ಟಿಲ್ಲ. ಆದರಲ್ಲೂ ಈ ಡಿಸ್ಟ್ರಿಕ್ಟಿನಲ್ಲಿ ನಿಮ್ನ ತರಗತಿಯವರ ಸಂಖ್ಯೆ ಜಾಸ್ತಿಯಿದೆ. ಅದಕ್ಕೆ ಈ ಡಿಸ್ಟ್ರಿಕ್ಟಿನಲ್ಲಿ ವಿದ್ಯಾವಂತರ ಶೇಕಡವಾರು ಸಂಖ್ಯೆ ಹಿಂದುಳಿದಿದೆ. ಅಂದರೆ 1941ರಲ್ಲಿ ಶೇಕಡಾ 6 ಇದ್ದಿತು. ಆದ್ದರಿಂದ ಎಲ್ಲಾ ತರಗತಿಗಳವರಿಗಿಂತಲೂ ಹೆಚ್ಚಿಗೆ ಹಿಂದುಳಿದಿರುವ ಆ ನಿಮ್ನವರ್ಗದವರಿಗಾಗಿ ನೀವೇನು ವಿಶೇಷವಾದ ಸಹಾಯಮಾಡುತ್ತಿದ್ದಿರೋ ಅದು ಅವರಿಗೆ ಸರಿಯಾಗಿ ತಲಪಿಲ್ಲವೆಂದು ಹೇಳಬೇಕಾಗಿದೆ. ತಾವು ಗ್ರಾಮಗಳಿಗೆ ಸ್ಕೂಲುಗಳನ್ನು ಕೊಟ್ಟರೂ ಹರಿಜನರಿಗೆ ಉಪಯೋಗವಾಗುತ್ತಿಲ್ಲ. ಈ ತಪ್ಪಿನ ದೆಸೆಯಿಂದ ಆ ಡಿಸ್ಟ್ರಿಕ್ಟ್ ಮುಂದಕ್ಕೆ ಬಂದಿಲ್ಲವೇ ಹೊರತು ಬೇರೆಯೇನು ಕಾರಣವಲ್ಲ. ಆದ್ದರಿಂದ ಇನ್ನುಮೇಲಾದರೂ ಆ ಡಿಸ್ಟ್ರಿಕ್ಟಿನ ವಿದ್ಯಾಭ್ಯಾಸದ ವಿಷಯದಲ್ಲಿ ಹೆಚ್ಚಿನ ಗಮನ ಕೊಡಬೇಕಾದ್ದು ಅತ್ಯಾವಶ್ಯಕ. ಈ ಸಂದರ್ಭದಲ್ಲಿ ನಮ್ಮ ಮಿತ್ರರಾದ ಮತ್ತು ಈ ಸಭೆಯ ಮಾನ್ಯ ಸದಸ್ಯರಾದ ಶ್ರೀಮಾನ್ ಚೆನ್ನಬಸಪ್ಪನವರಿಗೆ ಅವರು ನಮ್ಮ ಡಿಸ್ಟ್ರಿಕ್ಟಿನಲ್ಲಿ ಡಿಸ್ಟ್ರಿಕ್ಟ್‌ಬೋರ್ಡ್ ಪ್ರೆಸಿಡೆಂಟರಾಗಿದ್ದುಕೊಂಡು ಮಾಡಿರುವ ಕೆಲಸಗಳಿಗಾಗಿ ನನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ. ಏಕೆಂದರೆ, ಈ ಸಭೆಯ ಮಾನ್ಯ ಸದಸ್ಯರಿಗೂ ಮತ್ತು ಸರ್ಕಾರದವರಿಗೂ ಗೊತ್ತಿರುವ ಹಾಗೆ ಅವರೇನು ಆಡಳಿತ ಜವಾಬ್ದಾರಿ ವಹಿಸಿಕೊಂಡಿದ್ದಾರೆಯೋ ಆ ಪ್ರದೇಶದಲ್ಲಿ ಅವರು ಮಾಡಿರತಕ್ಕ ಕೆಲಸಕಾರ್ಯಗಳೇನೆಂಬುದನ್ನು ನೋಡಿದರೆ ಅವರಿಗೆ ಕೊಡುವ ಅಭಿನಂದನೆಗಳೇನೂ ಉತ್ಪ್ರೇಕ್ಷೆಯಲ್ಲ. ಎಷ್ಟು ಡಿಸ್ಟ್ರಿಕ್ಟ್ ಬೋರ್ಡ್ ಹೈಸ್ಕೂಲುಗಳು, ಎಷ್ಟು ಪ್ರೈಮರಿ ಪಾಠಶಾಲೆಗಳು, ಎಷ್ಟು ಮಿಡ್ಲ್‌ಸ್ಕೂಲುಗಳು ಎಷ್ಟು ನ್ಯೂ-ಟೈಪ್ ಮಿಡ್ಲ್‌ಸ್ಕೂಲುಗಳು ಅವರ ಕಾಲದಲ್ಲಿ ಸ್ಥಾಪನೆಯಾಗಿವೆ, ಅವಕ್ಕೆ ಸರ್ಕಾರದವರು ಕೊಟ್ಟಿರುವ ಹಣವೆಷ್ಟು, ಡಿಸ್ಟ್ರಿಕ್ಟ್ ಬೋರ್ಡಿನವರು ಕೊಟ್ಟಿರುವ ಹಣವೆಷ್ಟು ಎಂಬುದನ್ನೆಲ್ಲಾ ಪರಿಗಣಿಸಿದರೆ ನಾವು ಅವರನ್ನು ಮನಸಾರ ವಂದಿಸಬೇಕಾಗಿದೆ. ಯುಲಿಸಸ್ ಎಂಬುವರ ವಿಚಾರವನ್ನು ಓದಿದ್ದೇವೆ. ವಿರಾಮವೆನ್ನುವುದೇ ಇಲ್ಲದೆ 'work' 'work' ಎಂದು ಸದಾ ಕೆಲಸಮಾಡುವ ಅಂಥ ವ್ಯಕ್ತಿಗಳು ನಿಜವಾಗಿಯೂ ಅಪರೂಪ. ಅವರು ನಮ್ಮ ಡಿಸ್ಟ್ರಿಕ್ಟಿಗೆ ಸಲ್ಲಿಸಿರತಕ್ಕ ಸೇವೆಯನ್ನು ಯಾವ ನಾಗರೀಕನೂ, ಆ ಡಿಸ್ಟ್ರಿಕ್ಟ್‌ಬೋರ್ಡಿನ ಯಾವೊಬ್ಬ ವ್ಯಕ್ತಿಯೂ ನಡೆಸಿಲ್ಲ. ಅದರಲ್ಲೂ ವಿದ್ಯಾಭ್ಯಾಸಕ್ಕಾಗಿ ಅನರ್ಘ ಪ್ರೋತ್ಸಾಹ, ಅವರುಮಾಡಿರುವ ಸಹಾಯ ಸುವರ್ಣಾಕ್ಷರಗಳಲ್ಲಿ ಬರೆದಿಡತಕ್ಕದ್ದಾಗಿದೆ. ಈ ಕಾರಣಗಳಿಂದ ಆ ಡಿಸ್ಟ್ರಿಕ್ಟಿನಲ್ಲಿ ಅವರೇನು ಬೇಡಿಕೆಯನ್ನು ಜನರಮುಂದೆ ತಂದರೂ ಜನರು ಸಂತೋಷದಿಂದ ಅದನ್ನು ಈಡೇರಿಸಿಕೊಡು

(ಶ್ರೀ ಎಂ. ಮಾದಯ್ಯನವರು).

ತ್ತಾರೆ. ಜನತೆಯಲ್ಲಿ ದುಡ್ಡಿಲ್ಲವೆಂದು ಯಾವುದಾದರೂ ಸ್ಕೂಲು ಕಟ್ಟಿಸುವುದಕ್ಕಾಗುವುದಿಲ್ಲವೆಂದಿದ್ದರೆ, ಚನ್ನಬಸಪ್ಪನವರು ಹೋದ ತಕ್ಷಣ ಹೇಗೋ ಹೊಂದಿಸಿಕೊಡುತ್ತಾರೆ. ಜನರು ಅವರಲ್ಲಿರುವ ವಿಶ್ವಾಸ ಅಷ್ಟರಮಟ್ಟಿಗಿದೆ! ನಾನು ಅನೇಕಸಲ ಶ್ರೀಚನ್ನಬಸಪ್ಪನವರ ಸಂಗಡ ಕೆಲವು ಹಳ್ಳಿಗಳಿಗೆ ಹೋಗಿದ್ದೆನು. ಅಲ್ಲಿಯ ಜನರು ಪ್ರೈಮರಿ ಸ್ಕೂಲಿಗಾಗಿ ಎರಡು ಸಾವಿರ ಕೊಡುತ್ತೇವೆ, ಮೂರು ಸಾವಿರ ಕೊಡುತ್ತೇವೆಂದು ಮುಂದೆ ಬಂದರು. ಇಂತಹ ಕಡೆಗಳಿಗೆ ಸ್ಕೂಲುಗಳನ್ನು ಕೊಟ್ಟು ಪ್ರೋತ್ಸಾಹಕೊಟ್ಟರೆ ಅಲ್ಲಿನ ಜನರು ವಿದ್ಯೆಯಲ್ಲಿ ಮುಂದುವರಿಯುತ್ತಾರೆ. ಕಳೆದ ಸೆನ್ಸಸ್‌ಗಿಂತ ಈಗಿನ ಸೆನ್ಸಸ್‌ನಲ್ಲಿ ಅಲ್ಲಿ ವಿದ್ಯಾಭಿವೃದ್ಧಿ ಹೆಚ್ಚಾಗಿದ್ದರೆ ಅದಕ್ಕೆ ಆ ಡಿಸ್ಟ್ರಿಕ್ಟ್ ಬೋರ್ಡಿನ ಹೆಚ್ಚಿನ ಸೇವೆ, ಇದರ ಜೊತೆಗೆ ಸರ್ಕಾರದ ಸಹಾಯ ಕಾರಣ. ಸರ್ಕಾರದವರು ಪಕ್ಷಪಾತ ಮನೋಭಾವದಿಂದ ಮಾಡುತ್ತಾರೆಂದು ನಾನು ಹೇಳುವುದಿಲ್ಲ. ಅವರ ಉದ್ದೇಶವೇನೋ ಒಳ್ಳೆಯದಾಗಿರುತ್ತದೆ. ಆದರೆ ನಾನು ಮೊದಲೇ ಹೇಳಿದಹಾಗೆ ಅವರ ಉದ್ದೇಶ ಸಫಲವಾಗುವಂತೆ, ಎಲ್ಲರಿಗೂ ಅನುಕೂಲವಾಗುವಂತೆ ತಕ್ಕ ಏರ್ಪಾಡುಮಾಡಬೇಕು. ಬಲವಂತ ವಿದ್ಯಾಭ್ಯಾಸವನ್ನಾದರೂ ಅಥವಾ ಪಾರ್ಷಿಯಲ್ ಕಂಪಲ್‌ಸರಿ ಎಜ್ಯುಕೇಷನ್ ಯೋಜನೆಯನ್ನಾದರೂ ಮೈಸೂರು ಜಿಲ್ಲೆಯಲ್ಲಿ ಜಾರಿಗೆತಂದು ಅದನ್ನು ಒಂದು ಮಾದರಿಯ ಕ್ಷೇತ್ರವಾಗಿ ಚುನಾಯಿಸಿದರೂ ಸರಿಯೆ. ಈ ಜಿಲ್ಲೆಯಲ್ಲಿ ವಿದ್ಯೆಯಲ್ಲಿ ಹೆಚ್ಚು ಹಿಂದುಳಿದಿರುವವರು ಆದಿ ಕರ್ಣಾಟಕರು, ಉಪ್ಪಾರರು, ಪರಿವಾರದವರು ಮತ್ತು ಇತರ ಹಿಂದುಳಿದ ನಿಮ್ನ ತರಗತಿಯವರು. ಇವರಿಗೆ ಸರ್ಕಾರದವರು ಮಾಡಿಕೊಡುವ ಅನುಕೂಲ ತಲಪುತ್ತಿಲ್ಲ ಇದು ಅವರಿಗೆ ತಲಪುವಂತೆಮಾಡಬೇಕು. ಹೀಗೆ ಮಾಡದಿದ್ದರೆ ನಿಜವಾಗಿಯೂ ಈ ಜಿಲ್ಲೆಯ ಪ್ರಗತಿಯಾಗುವುದಿಲ್ಲ ; ಇದರಿಂದ ದೇಶದ ಪ್ರಗತಿಯೂ ಆಗುವುದಿಲ್ಲ. ಈ ವಿಚಾರದಲ್ಲಿ ಈ ಜಿಲ್ಲೆಯನ್ನು ಇತರ ಜಿಲ್ಲೆಗಳೊಡನೆ ಹೋಲಿಸಿದರೆ ಆಶ್ಚರ್ಯವಾಗುತ್ತದೆ. ಯಾರು ಮುಂದೆ ಬರಬೇಕೋ ಅವರು ಬಂದಿಲ್ಲ. ಹಿಂದೆ ಅಂದರೆ 1947 ರಲ್ಲಿ ಮೈಸೂರು ಸಂಸ್ಥಾನದಲ್ಲಿ ವಿದ್ಯಾವಂತರ ಸಂಖ್ಯೆ ಸೇಕಡ 13 ಇತ್ತು; ಈಗ 20ಕ್ಕೆ ಬಂದಿದೆ. ಈ ಸೇಕಡ ಇಪ್ಪತ್ತರಲ್ಲಿ ಹರಿಜನರಲ್ಲಿ ಎಷ್ಟಿದ್ದಾರೆಂದು ನೋಡಿದರೆ ಕೇವಲ ಕಡಿಮೆ, ಹರಿಜನರ ಸಂಖ್ಯೆಯನ್ನು ಬಿಟ್ಟು ಲೆಕ್ಕ ಹಾಕಿ ನೋಡಿದರೆ ಇತರರ ವಿದ್ಯಾಭ್ಯಾಸದ ಅಭಿವೃದ್ಧಿ ಸುಮಾರು ಸೇಕಡ 30 ರಿಂದ 40 ರಷ್ಟಾಗುತ್ತದೆ. ಹೀಗೆ ನಿಮ್ನ ತರಗತಿಯವರನ್ನು ಸೇರಿಸಿದರೆ ವಿದ್ಯಾವಂತರ ಸೇಕಡಾವಾರು ಸಂಖ್ಯೆ ಕಡಮೆಯಾಗುತ್ತದೆ. ಆದುದರಿಂದ ದೇಶದಲ್ಲಿ ಎಲ್ಲ ಜನಾಂಗದವರಿಗೂ ಸಮಾನಾವಕಾಶ ಕೊಡದೇಯಿದ್ದರೆ ದೇಶವೇ ಹಿಂದುಳಿಯುತ್ತದೆ ಎಂಬುದಕ್ಕೆ ಮೈಸೂರು ದೇಶವೇ ಉದಾಹರಣೆಯಾಗಿದೆ. ತಿರುವಾಂಕೂರು ಕೊಚಿನ್ ಸಂಸ್ಥಾನದಲ್ಲಿ ವಿದ್ಯಾವಂತರ ಸಂಖ್ಯೆ ಶೇಕಡ 40-50 ರಷ್ಟಿದೆ. ಹೈದರಾಬಾದಿನಲ್ಲಿಯೂ ಇಲ್ಲಿಗಿಂತ ಹೆಚ್ಚಿದೆ. ನಮ್ಮ ಸಂಸ್ಥಾನದ ಬಡ್ಜೆಟ್ಟಿನಲ್ಲಿ ನಾಲ್ಕಾರು ವರ್ಷಗಳಿಂದಲೂ ವಿದ್ಯಾಭ್ಯಾಸದ ಬಾಬಿಗೆ ಹೆಚ್ಚು ಹಣವನ್ನೊದಗಿಸಿ ಖರ್ಚುಮಾಡುತ್ತಿದ್ದರೂ ಇತರ ಸಂಸ್ಥಾನಗಳಿಗೆ ಹೋಲಿಸಿದರೆ ವಿದ್ಯಾವಂತರ ಸಂಖ್ಯೆ ಕಡಿಮೆ ಮಟ್ಟದಲ್ಲಿರಲು ಕಾರಣ ಹಿಂದುಳಿದಿರುವ ಪಂಗಡದವರನ್ನು ವಿದ್ಯಾಭ್ಯಾಸ ಮತ್ತು ಆರ್ಥಿಕಸ್ಥಿತಿಯಲ್ಲಿ ಬೇಗ ಮುಂದಕ್ಕೆ ತರಲು ಸರಿಯಾದ ಏರ್ಪಾಡಿಲ್ಲದಿರುವುದೇ ಆಗಿದೆ. ನಮ್ಮ ದೇಶದಲ್ಲಿ ಇದೊಂದು ನ್ಯೂನತೆ ಇದೆ, ಇಲ್ಲಿ ಮಕ್ಕಳಿಗೆ ಹೆಚ್ಚು ಪ್ರಮಾಣದಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸಕ್ಕೆ ಅನುಕೂಲ ಬೇಕಾಗಿದೆ. ಒಂದೊಂದು ಊರಿನಲ್ಲಿ ಮೂರು ನಾಲ್ಕು ಸಾವಿರ ಪ್ರಜಾಸಂಖ್ಯೆ ಇದ್ದರೂ ಅಲ್ಲಿ ಸರಿಯಾದ ಸ್ಕೂಲುಗಳಿರುವುದಿಲ್ಲ. ಮೈಸೂರು ಬೆಂಗಳೂರು ನಗರಗಳಲ್ಲಿ ಅನೇಕ ಪ್ರೈಮರಿ ಮತ್ತು ಮಿಡ್ಲ್ ಸ್ಕೂಲುಗಳಿವೆ. ಹಾಗೆಯೇ ಗ್ರಾಮಗಳಲ್ಲಿಯೂ ಹೆಚ್ಚು ಜನಸಂಖ್ಯೆ ಇದ್ದರೆ ಅಂಥಾ ಗ್ರಾಮಗಳಿಗೆ ಎರಡು ಮೂರು ಸ್ಕೂಲು

ಗಳನ್ನು ಕೊಡಬೇಕು. ಉದಾಹರಣೆಗೆ ತಗಡೂರಿನಲ್ಲಿ ಇನ್ನೊಂದು ಸ್ಕೂಲನ್ನು ಕೊಡಬೇಕು. ಮೂಗೂರಿನಲ್ಲಿ ಹೆಚ್ಚು ಜನರಿದ್ದಾರೆ. ಹರಿಜನರ ಮುನ್ನೂರು ನಾನೂರು ಸಂಸಾರಗಳಿವೆ, ಅಲ್ಲಿಗೆ ಅವರಿಗೇ ಒಂದು ಸ್ಕೂಲು ಕೊಡಬೇಕು. ಪ್ರತ್ಯೇಕ ಮನೋಭಾವನೆಯಿಂದ ಕೊಡಬೇಕೆಂದು ನನ್ನ ಉದ್ದೇಶವಲ್ಲ, ಅಲ್ಲಿ ಈಗಿರುವ ಸರ್ಕಾರಿ ಸ್ಕೂಲಿಗೆ ಹೋದರೆ ಇವರಿಗೆ ಅಲ್ಲಿ ಸ್ಥಳವಿಲ್ಲವೆಂದು ಹೇಳುತ್ತಾರೆ. ಆದಕಾರಣ ಅಲ್ಲಿರುವ ಜನರು ಮುಂದೆ ಬರಲೆಂಬ ಉದ್ದೇಶದಿಂದ ಅವರಿಗೆ ಬೇರೊಂದು ಸ್ಕೂಲನ್ನು ಕೊಡಿ. ಬಾಡಿಗೆ ಕಟ್ಟಡವನ್ನಾದರೂ ಮಾಡಿಕೊಡಿ, ಹೀಗೆಯೇ ಹೊನ್ನೂರು ಗ್ರಾಮದಲ್ಲಿ 700 ಸಂಸಾರಗಳುಳ್ಳ ಆದಿಕರ್ಣಾಟಕರಿದ್ದಾರೆ. ಅದು ಚಾಮರಾಜನಗರ ತಾಲ್ಲೂಕು ಹೊಂಗೆನೂರು. ಇಂತಹಒಂದೊಂದು ಗ್ರಾಮಕ್ಕೆ ಮೂರು ನಾಲ್ಕು ಪ್ರೈಮರಿ ಸ್ಕೂಲುಗಳನ್ನು ಕೊಡಬೇಕು, ಅದಕ್ಕೆ ತಕ್ಕಂತೆ ಮಿಡ್ಲ್ ಸ್ಕೂಲನ್ನು ಕೊಡಬೇಕು. ಈ ದೃಷ್ಟಿಯಿಂದ ಒಂದು ಸಮಿತಿಯನ್ನು ಏರ್ಪಾಡುಮಾಡಿ ಅದರಲ್ಲಿ ಪರಿಶೀಲಿಸಿ ಯಾವ ಯಾವ ಕಡೆಗೆ ಹೆಚ್ಚುಗಮನ ಕೊಡಬೇಕೆಂಬುದನ್ನು ನೋಡಿ ಹೆಚ್ಚು ಹೆಚ್ಚು ಪ್ರೈಮರಿ ಮತ್ತು ಮಿಡ್ಲ್ ಸ್ಕೂಲುಗಳನ್ನು ಕೊಟ್ಟರೆ ಸಂಸ್ಥಾನ ವಿದ್ಯೆಯಲ್ಲಿ ಮುಂದಕ್ಕೆ ಬರುತ್ತದೆಯೇ ಹೊರತು ಇಲ್ಲದಿದ್ದರೆ ಬರುವುದಿಲ್ಲ. ಈ ಠರಾವನ್ನು ತಂದಿರುವುದಕ್ಕಾಗಿ ನನ್ನ ಸ್ನೇಹಿತರಾದ ಶ್ರೀಮಾನ್ ರಂಗರಾಮಯ್ಯನವರಿಗೆ ನನ್ನ ಹೃತ್ಪೂರ್ವಕ ವಂದನೆಗಳನ್ನರ್ಪಿಸಿ ಇದನ್ನು ಸಮರ್ಥಿಸುತ್ತೇನೆ.

ಶ್ರೀ ಟಿ. ಸಿ. ಹೊನ್ನಪ್ಪನವರು (ಮೈಸೂರು ಜಿಲ್ಲೆ).—ಸ್ವಾಮಿ, ಶ್ರೀಮಾನ್ ರಂಗರಾಮಯ್ಯನವರು ತಂದಿರತಕ್ಕ ಈ ನಿರ್ಣಯವನ್ನನುಮೋದಿಸುತ್ತಾ ನಮ್ಮ ಮೈಸೂರು ಜಿಲ್ಲೆಯಲ್ಲಿರುವ ಕುಂದುಕೊರತೆಗಳನ್ನು ಸಭೆಯಮುಂದಿಡುತ್ತೇನೆ. ಈ ಗಾಗಲೇ ಕೆಲವು ಮಾನ್ಯಸದಸ್ಯರು ಮೈಸೂರು ಜಿಲ್ಲೆ ಮಿಕ್ಕೆಲ್ಲ ಜಿಲ್ಲೆಗಳಿಗಿಂತಲೂ ವಿದ್ಯಾಭ್ಯಾಸದಲ್ಲಿ ಹಿಂದುಳಿದಿದೆ ಎಂಬ ಬಗ್ಗೆ ಅಂಕಿ ಅಂಶಗಳನ್ನು ಸಭೆಯಮುಂದಿಟ್ಟಿದ್ದಾರೆ. ಇನ್ನು ಕೆಲವು ಅಂಕಿ ಅಂಶಗಳನ್ನು ಆರನೆಯ ನಿರ್ಣಯ ಚರ್ಚೆಗೆಬಂದಾಗ ಹೇಳುತ್ತೇನೆ. ನಮ್ಮ ಮೈಸೂರು ತಾಲ್ಲೂಕು ಎಲ್ಲಕ್ಕಿಂತ ಹಿಂದುಳಿದಿದೆಯೆಂಬುದನ್ನು ಮಾನ್ಯಸದಸ್ಯರಿಗೆಲ್ಲ ಮುಂದಟ್ಟು ಮಾಡಿಸುತ್ತೇನೆ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಈಗಲೇ ಏನು ಹೇಳಬೇಕೋ ಅದನ್ನೆಲ್ಲಾ ಹೇಳಿ ಪೂರೈಸಬಹುದು.

ಶ್ರೀ ಟಿ. ಸಿ. ಹೊನ್ನಪ್ಪನವರು.—ಇದರಲ್ಲಿರುವ ಅಭಿಪ್ರಾಯವೇ ಬೇರೆ. ಇದರಲ್ಲಿ ಒಂದು ಗೂಢಾರ್ಥವಿದೆ. ಎಲ್ಲಿ ಸ್ಕೂಲುಬೇಕೆಂದು ಜನ ಕೇಳಿದರೂ ಕೂಡ ಸರ್ಕಾರದವರು ಸ್ಕೂಲು ಕೊಡಲು ಸಿದ್ಧವಾಗಿದ್ದೇವೆ, ಕಟ್ಟಡಕೊಡಿ ಎಂದು ಹೇಳುತ್ತಾರೆ; ಈಗಲೂ ಸರ್ಕಾರದವರು ಏನು ಉತ್ತರ ಹೇಳುತ್ತಾರೆಂದು ನನಗೆ ಗೊತ್ತಿದೆ. ಹಳ್ಳಿಯವರು ಸ್ಕೂಲು ಕೇಳಿದರೆ ಅವರನ್ನು ಕಟ್ಟಡ ಕೊಡಿರೆಂದು ಹೇಳುವುದು ವಾಡಿಕೆಯಾಗಿದೆ. ದೊಡ್ಡ ಪಟ್ಟಣಗಳಿಗೆ ಈರೀತಿಮಾಡುವುದಿಲ್ಲ. ಯೋಜನೆಮಾಡಿ ನೋಡಿದರೆ, ಪಟ್ಟಣಗಳು ತಮ್ಮಷ್ಟಿಗೆ ತಾವೇ ಬೆಳೆಯಬಲ್ಲವು. ಅಲ್ಲಿ ಎಲ್ಲೆಲ್ಲಿ ಪ್ರೈಮರಿ ಮತ್ತು ಮಿಡ್ಲ್ ಸ್ಕೂಲುಗಳು ಬೇಕೋ ಅವೆಲ್ಲವನ್ನೂ ಪಟ್ಟಣಿಗರು ಸ್ವಶಕ್ತಿಯಿಂದ ಕಟ್ಟಿಕೊಳ್ಳಬಲ್ಲರು. ಗ್ರಾಮಾಂತರ ಪ್ರದೇಶಗಳವರಿಗೆ ಈ ಶಕ್ತಿಯಿಲ್ಲ; ಅದರಿಂದ ಸರ್ಕಾರದ ಸಹಾಯವನ್ನೇ ಕೇಳುತ್ತಾರೆ. ಹೀಗಿರುವಾಗ ಅವರು ಸ್ಕೂಲು ಬೇಕೆಂದರೆ ಕಟ್ಟಡ ಕೊಡಿ ಎಂದು ಕೇಳಿದರೆ ಅವರು ಹೇಗೆ ಮುಂದಕ್ಕೆ ಬರಬೇಕು, ಹೇಗೆ ವಿದ್ಯಾವಂತರಾಗಬೇಕು? ಮೈಸೂರು ಮಾದರಿ ಸಂಸ್ಥಾನವೆಂದು ಹೆಸರು ಪಡೆದಿದೆ. ಇಂತಹ ಸಂಸ್ಥಾನದ ರಾಜಧಾನಿಯಿರುವ ಮೈಸೂರು ಜಿಲ್ಲೆ ಏಕೆ ವಿದ್ಯೆಯಲ್ಲಿ ಇಷ್ಟು ಹಿಂದುಳಿದಿದೆ ಎಂಬುದನ್ನು ಯೋಚಿಸಬೇಕು. ಇದಕ್ಕೆ ಕಾರಣವಿಷ್ಟೆ. ಮೈಸೂರು ಜಿಲ್ಲೆಯ ಗ್ರಾಮಾಂತರಗಳಲ್ಲಿರುವ ಜನರು ಮೈಸೂರು ಸಿಟಿಯ ಜನರಿಗೆ ಬೇಕಾದ ಹಾಲು, ಮೊಸರು, ಸೌದೆ ಮುಂತಾದ ಸಲಕರಣೆಗಳನ್ನೊದಗಿಸಲು ತಮ್ಮ ವಿದ್ಯಾಭ್ಯಾಸವನ್ನು ಬಿಟ್ಟು

(ಶ್ರೀ ಟಿ. ಸಿ. ಹೊನ್ನಪ್ಪನವರು).
ಮಕ್ಕಳಿಂದ ವಯೋವೃದ್ಧರವರೆಗೂ ದುಡಿದು ಆ ಪಟ್ಟಣದವರ ಸೇವೆಗೇ ತಮ್ಮ ಜೀವನವನ್ನು ಸವೆಸುತ್ತಿದ್ದಾರೆ. ಈ ವಿಚಾರಕ್ಕೆ ಸಂಬಂಧ ಪಟ್ಟ ಇನ್ನೂ ಕೆಲವು ಅಂಶಗಳನ್ನು ನನ್ನ ನಿರ್ಣಯ ಬಂದಾಗ ಹೇಳುತ್ತೇನೆ. ಆದುದ ರಿಂದ ಜಾಗ್ರತೆ ಆ ಜಿಲ್ಲೆಯಲ್ಲಿ ಎಲ್ಲೆಲ್ಲಿ ಪ್ರೈಮರಿ ಮತ್ತು ಮಿಡ್ಲ್‌ಸ್ಕೂಲು ಕಟ್ಟಡಗಳು ಅವಶ್ಯ ಕವೋ ಅಲ್ಲಿ ಸರ್ಕಾರಿ ಹಣದಿಂದಲೇ ಕಟ್ಟಿಸಿ ಅಲ್ಲಿಗೆ ಸ್ಕೂಲುಗಳನ್ನು ಕೊಟ್ಟರೆ ಅಲ್ಲಿಯ ಗ್ರಾಮಾಂತರ ಪ್ರದೇಶದ ಜನರು ಮುಂದುವರಿ ಯಲು ಅವಕಾಶವಾಗುತ್ತದೆ. ಹೀಗೆ ಮಾಡ ದಿದ್ದರೆ ಮೈಸೂರು ಜಿಲ್ಲೆ ಮೈಸೂರು ಸಂಸ್ಥಾನ ದಲ್ಲೇ ಎಲ್ಲಕ್ಕಿಂತ ಹಿಂದುಳಿದು ಆ ಜಿಲ್ಲೆಯ ಗ್ರಾಮಾಂತರ ಪ್ರದೇಶದ ಜನಗಳು ಹಿಂದೆಬಿದ್ದು ಬಹಳ ಶೋಚನೀಯ ಸ್ಥಿತಿಗೆ ಬರುತ್ತಾರೆ ಎಂದು ನನಗನ್ನಿಸುತ್ತದೆ. ಇನ್ನೊಂದು ನನಗೆ ತೋರು ತ್ತದೆ. ಡಿಸ್ಟ್ರಿಕ್ಟ್‌ಬೋರ್ಡೇ ಆಗಲಿ ಸರ್ಕಾ ರವೇ ಆಗಲಿ ಒಂದು ಡಿಸ್ಟ್ರಿಕ್ಟು ಮುಂದೆ ಬರಬೇ ಕಾದರೆ, ಆಯಾ ಡಿಸ್ಟ್ರಿಕ್ಟಿನವರು ಪ್ರೆಸಿಡೆಂಟರಾಗ ಬೇಕು, ಮಂತ್ರಿಗಳಾಗಬೇಕು. ಯಾವ ತಾಲ್ಲೂ ಕಿನವರು ಡಿಸ್ಟ್ರಿಕ್ಟ್‌ಬೋರ್ಡ್ ಪ್ರೆಸಿಡೆಂಟರಾ ದರೆ ಆ ತಾಲ್ಲೂಕು ಮುಂದುವರಿಯುತ್ತದೆ.

ಅಧ್ಯಕ್ಷರು.—ಮಾನ್ಯ ಶ್ರೀ ದಾಸಪ್ಪನವರು ನಿಮ್ಮ ಮೈಸೂರು ಡಿಸ್ಟ್ರಿಕ್ಟಿನವರಲ್ಲವೆ?

ಶ್ರೀ ಟಿ. ಸಿ. ಹೊನ್ನಪ್ಪನವರು.—ಅವರು ಮೈಸೂರು ಸಿಟಿಯವರು. ನಮ್ಮ ಡಿಸ್ಟ್ರಿಕ್ಟಿನ ಗ್ರಾಮಾಂತರ ಪ್ರದೇಶದಿಂದ ಬಂದವರು ಮಂತ್ರಿ ಗಳಾಗಿದ್ದರೆ ನಮ್ಮ ಡಿಸ್ಟ್ರಿಕ್ಟು ಈಹೊತ್ತು ಮೈಸೂರು ಸಂಸ್ಥಾನಕ್ಕೆ ವಿದ್ಯಾಭ್ಯಾಸದಲ್ಲಿ ಮೊದಲನೆಯದಾಗುತ್ತಿತ್ತು. ಹಾಗಿಲ್ಲದೇಯಿರು ವುದರಿಂದ ಹಿಂದೆ ಎರಡನೆಯದಾಗಿದ್ದುದು ಈಗ ಕೊನೆಯದಾಗಿದೆ. ನಾನು ಹೇಳುವುದು, ದಯವಿಟ್ಟು ಡಿಸ್ಟ್ರಿಕ್ಟು ಬೋರ್ಡ್ ಪ್ರೆಸಿಡೆಂ ಟರಾಗಿರುವವರು ಮಂತ್ರಿಗಳಾಗಿರುವವರು ಅಧಿ ಕಾರದಲ್ಲಿರುವಾಗ ಎಲ್ಲ ಜಿಲ್ಲೆಗಳನ್ನೂ ಸಮತಾ ದೃಷ್ಟಿಯಿಂದ ನೋಡಬೇಕು. ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ಎನ್ನುವಹಾಗೆ ಮಾಡಬಾರದು. ಹೀಗೆಮಾಡಿ ಟೀಕೆಗೊಳಗಾ ಗಬಾರದು. ಮೈಸೂರು ದೇಶದ ಪ್ರಜೆಗಳ ಹಣ ವನ್ನು ಸರಿಯಾದ ರೀತಿಯಲ್ಲಿ ವಿನಿಯೋಗಮಾಡಿ ಹಿಂದುಳಿದ ಡಿಸ್ಟ್ರಿಕ್ಟು ಮತ್ತು ಜನಾಂಗವನ್ನು ಕೈ ಹಿಡಿದೆತ್ತಿ ಮುಂದಕ್ಕೆ ತರುತ್ತಾರೆಂದು ನಂಬಿ ಈ ನಿರ್ಣಯವನ್ನು ಸಮರ್ಥಿಸುತ್ತೇನೆ.

*ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ಸ್ವಾಮಿ ಸಂಸ್ಥಾನಾನಮುಳೆ ಎಲ್ಲ ಜಿಲ್ಲೆ ಗಳ ವಿದ್ಯಾಪ್ರಗತಿಯು ಏಕಮುಖವಾಗಿ ಸಾಗು ತ್ತಿದೆಯೆಂಬುದರಲ್ಲಿ ಯಾರದೂ ಭಿನ್ನಾಭಿ ಪ್ರಾಯವಿರಲಾರದು. ಆದರೆ ಈಗ ಬಂದಿರ ತಕ್ಕ ಪ್ರಶ್ನೆ ಎಲ್ಲಾ ಜಿಲ್ಲೆಗಳಿಗಿಂತಲೂ ಮೈಸೂರು ಜಿಲ್ಲೆ ವಿದ್ಯಾಪ್ರಗತಿಯಲ್ಲಿ ಹಿಂದೆ ಬಿದ್ದಿದೆಯೆಂಬುದು ನಿಜ. ಆದರೆ ಇದು ಬಹಳ ಆಶ್ಚರ್ಯ ಮತ್ತು ವಿಷಾದಕರವಾದ ವಿಚಾರ. ಹೀಗೆ ಬಹಳ ಹಿಂದೆ ಬಿದ್ದಿರುವ ಜಿಲ್ಲೆಯ ವಿದ್ಯಾ ಪ್ರಗತಿಗಾಗಿ ಕೂಡಲೇ ಏನೇನು ಕಾರ್ಯಕ್ರಮ ಗಳನ್ನು ಕೈಗೊಳ್ಳಬೇಕೋ ಅದೆಲ್ಲವನ್ನೂ ಸರ್ಕಾರದವರು ಕೈಗೊಂಡು ಆದರ ಬಗ್ಗೆ ಏನೇನು ಹೆಚ್ಚಿನ ಸೌಲಭ್ಯ, ಸಹಾಯಗಳನ್ನು ನೀಡುತ್ತಾರೆಂದು ನಂಬಿರತಕ್ಕವರಲ್ಲಿ ನಾನೂ ಒಬ್ಬನಾಗಿದ್ದೇನೆ. ಆ ಜಿಲ್ಲೆಯಲ್ಲಿ ಅಂಥ ದೊಡ್ಡ ದೊಡ್ಡ ವಿದ್ಯಾವಂತರೂ, ಪ್ರಭೃತಿಗಳಾ ದಂಥವರಿದ್ದಾಗ್ಗೂ ಜಿಲ್ಲೆಯು ವಿದ್ಯಾ ಪ್ರಗತಿ ಯಲ್ಲಿ ಬಹಳ ಹಿಂದುಳಿದಿದೆಯೆಂದು ಅನೇಕ ಮಿತ್ರರು ಈಗಾಗಲೇ ತಿಳಿಸಿದ್ದಾರೆ. ಆ ಜಿಲ್ಲೆಯ ಬೋರ್ಡಿನ ಅಧ್ಯಕ್ಷರಾಗಿರತಕ್ಕ ಶ್ರೀಮಾನ್ ಚನ್ನ ಬಸಪ್ಪನವರು, ಅಲ್ಲಿ ಈ ವಿದ್ಯಾಪ್ರಗತಿಗಾಗಿ ಅನೇಕ ರೀತಿಯಲ್ಲಿ ಶ್ರಮಿಸಿ, ದುಡಿದಿರತಕ್ಕದ್ದು ಬಹಳ ಪ್ರಶಂಸನೀಯವಾಗಿದೆ. ಇದಕ್ಕಾಗಿ ಅಲ್ಲಲ್ಲೇ ಒಳ್ಳೊಳ್ಳೆಯ ಅನೇಕ ಶಾಲಾ ಕಟ್ಟಡ ಗಳನ್ನು ಕಟ್ಟಿಸಿದ್ದಾರೆ. ಹೀಗೆ ಜನರಿಂದ ಧನ ಸಹಾಯವನ್ನೆತ್ತಿ ಬೇರೆ ಜಿಲ್ಲೆಯಲ್ಲಿ ಯಾರೂ ಇಷ್ಟರಮಟ್ಟಿಗೆ ಕೆಲಸಮಾಡಿಲ್ಲ. ಇವರು ಆ ಜಿಲ್ಲೆಯಲ್ಲಿ ಎಲ್ಲೆಲ್ಲಿ ಸ್ಕೂಲು ಕಟ್ಟಡಗಳನ್ನು ಕಟ್ಟಿಸಬೇಕಾಗಿತ್ತೋ ಅಂಥಾ ಕಟ್ಟಡಗಳ ಬಗ್ಗೆ ಇಲಾಖೆಯವರು ಕೊಡಬೇಕಾಗಿದ್ದ ಹಣವನ್ನು ತಮ್ಮ ಕೈಗೆ ತೆಗೆದುಕೊಂಡು, ಸಾಲದೆ ಬಂದ

ಹಣಕ್ಕಾಗಿ ಸಾರ್ವಜನಿಕರಲ್ಲಿ ನಾನಾರೀತಿಯಾಗಿ ಚಂದವನ್ನೆತ್ತಿ ಪ್ರಾಥಮಿಕ ಶಾಲೆಗಳನ್ನು ಕಟ್ಟಿಸಿ ಕೊಟ್ಟಿದ್ದಾರೆ. ಇದರ ಬಗ್ಗೆ ಶ್ರೀಮಾನ್ ರಂಗ ರಾಮಯ್ಯನವರೂ ಸಹ ಬಹಳವಾಗಿ ಪ್ರಚಾರ ಕಾರ್ಯಗಳನ್ನು ನಡೆಸಿದ್ದಾರೆ. ಅದೇರೀತಿ ಶ್ರೀಮಾನ್ ಶಿವಾನಂದಶರ್ಮರೂ ಕೂಡ ಸಹಾಯ ನೀಡಿದ್ದಾರೆ. ಆದರೆ ಆ ಜಿಲ್ಲೆ ವಿದ್ಯಾ ಪ್ರಗತಿಯಲ್ಲಿ ಅಷ್ಟು ಹಿಂದೆ ಬೀಳಲು ನಾನಾ ಪ್ರಮಾದಗಳಿರುತ್ತವೆಂದು ನಮ್ಮ ಮಾನ್ಯ ಮಿತ್ರ ರನೇಕರು ತಿಳಿಸಿದರು. ಆದರೆ ಅಂಥಾ ಪ್ರಮಾದಗಳಲ್ಲೆಲ್ಲಾ ದೊಡ್ಡದಾದ ಪ್ರಮಾದ ವೆಂದರೆ ಆ ಜಿಲ್ಲೆಯ ಜನಗಳಿಗಿರತಕ್ಕ ಆರ್ಥಿಕ ಮುಗ್ಗಟ್ಟೇ ಮುಖ್ಯವಾದದ್ದು. ಆ ಜಿಲ್ಲೆಯ ಒಂದೆರಡು ತಾಲ್ಲೂಕುಗಳು ವಿನಾ, ಎಂದರೆ ಟಿ. ನರಸೀಪುರ ಮತ್ತು ಯಳಂದೂರು ಇವುಗ ಳನ್ನು ಬಿಟ್ಟರೆ ಬೇರೆ ತಾಲ್ಲೂಕುಗಳ ಸ್ಥಿತಿಗತಿ ಅಷ್ಟು ಉತ್ತಮವಾಗಿರುವಂತೆ ಕಂಡುಬರುತ್ತಿಲ್ಲ. ಈ ಒಂದು ಕಾರಣದಿಂದಲೂ ಇತರ ಜಿಲ್ಲೆಗಳ ವರು ಈ ವಿದ್ಯಾಪ್ರಗತಿಯ ಬಗ್ಗೆ ಉತ್ತೇಜನ ವಹಿಸಿದಷ್ಟುಮಟ್ಟಿಗೆ ಈ ಜಿಲ್ಲೆಯವರು ವಹಿಸ ಲಾಗಲಿಲ್ಲ. ಅನೇಕ ದೊಡ್ಡ ದೊಡ್ಡ ಗ್ರಾಮಗ ಳಲ್ಲಿ ಸಾವಿರಾರು ಜನಸಂಖ್ಯೆಯಿರತಕ್ಕಂಥ ಮತ್ತು ಟೌನ್ ಪ್ರದೇಶಕ್ಕೆ ಕೇವಲ ಸಮೀಪ ವಾಗಿರಕ್ಕಂಥ ಸ್ಥಳಗಳಲ್ಲಿ ಸಹ ಒಂದು ಪಾಠ ಶಾಲೆಗೆ ಕಟ್ಟಡವಿಲ್ಲದೆ ಇರುವಂಥಾ ನಿದರ್ಶನ ಗಳು ಇಂದಿಗೂ ಇವೆ. ಶ್ರೀಮಾನ್ ಎಚ್. ಎಂ. ಚನ್ನಬಸಪ್ಪನವರೂ, ಶ್ರೀಮಾನ್ ರಂಗರಾಮ ಯ್ಯನವರೂ ಈ ಬಾಬಿನಲ್ಲಿ ಎಷ್ಟೋ ಕೆಲಸ ಕಾರ್ಯಗಳನ್ನು ನಡೆಸಿದ್ದಾಗ್ಯೂ ಸಹ ಇಂಥಾ ದೊಡ್ಡ ಗ್ರಾಮಗಳು ಅವರ ಕಣ್ಣಿಗೆ ಬೀಳದೆ ಹೋಗಿರುತ್ತವೆ. ನಂಜನಗೂಡಿಗೆ ಕೇವಲ 10 ಮೈಲಿ ಫಾಸಲೆಯಲ್ಲಿ ಚಾಮಲಾಪುರವೆಂಬ ಒಂದು ದೊಡ್ಡ ಗ್ರಾಮವಿದೆ, ಅಲ್ಲಿ ಮೊನ್ನೆ ಮಾಕ್ ಎಲೆಕ್ಷನ್ ಕೂಡ ನಡೆಸಲಾಯಿತು. ನೂರಾರು ಜನ ದೊಡ್ಡ ಮನುಷ್ಯರು ವಾಸ ಮಾಡುತ್ತಿರುವಂಥ ಸ್ಥಳ. ಆದರೂ ಅಲ್ಲಿಗೆ ಸರಿ ಯಾದ ವಿದ್ಯಾ ಸೌಕರ್ಯಗಳಿರುವುದಿಲ್ಲ. ಅದೇ ರೀತಿಯಲ್ಲಿರತಕ್ಕ ಮತ್ತೊಂದು ದೊಡ್ಡ ಗ್ರಾಮ ದಲ್ಲಿ ಸ್ಕೂಲು ಕಟ್ಟಡಕ್ಕಾಗಿ ಎರಡು ಅಡಿಗಳವರಿಗೆ ಹಾಕಿರತಕ್ಕ ಗೋಡೆ ಮುಂದುವರಿಯದೆ ಬಹಳ ಕಾಲದಿಂದಲೂ ಹಾಗೇ ನಿಂತು ಬಂದಿದೆ. ಆ ಗ್ರಾಮಕ್ಕೆ ಹೋಗತಕ್ಕವರ ಕಣ್ಣುಗಳನ್ನು ಅದು ಚುಚ್ಚುವಂತಿದೆ. ಇಷ್ಟಕ್ಕೆಲ್ಲಾ ಮುಖ್ಯ ಕಾರಣ ವೇನೆಂಬುದನ್ನು ನಾನು ಈ ಹಿಂದೆಯೇ ತಿಳಿಸಿ ದ್ದೇನೆ. ವಿದ್ಯಾಪ್ರಗತಿಗೆ ಸೌಲಭ್ಯಗಳ ಮೊದ ಲನೆಯ ಮೆಟ್ಟಲು ಎಂದರೆ ಸ್ಕೂಲು ಕಟ್ಟಡಗಳು. ಅಂಥಾ ಕಟ್ಟಡಗಳೇ ಇಲ್ಲದಿದ್ದಾಗ ಜನರು ವಿದ್ಯಾ ವಂತರಾಗಲು ಅವರಲ್ಲಿ ಎಷ್ಟು ಉತ್ತೇಜನವಿದೆ ಯೆಂಬುದು ಎದ್ದು ಕಾಣುತ್ತಿದೆ. ಅಂದರೆ ಅಲ್ಲಿನ ಜನಗಳ ಆರ್ಥಿಕ ಮುಗ್ಗಟ್ಟೇ ಅಲ್ಲಿರತಕ್ಕ ಮಕ್ಕಳ ವಿದ್ಯಾಭ್ಯಾಸಕ್ಕೆ ಒಂದು ದೊಡ್ಡ ಅಡ ಚಣೆಯಾಗಿದೆ.

ಈಗ ಹೇಳಿದ ಕಾರಣದ ಜೊತೆಗೆ ಸ್ವಾಭಾ ವಿಕವಾದ ಇನ್ನೂ ಕೆಲವು ಅಡಚಣೆಗಳಿರುತ್ತವೆ. ಅವುಗಳ ಪೈಕಿ ಒಂದು ಯಾವುದೆಂದರೆ ಕೆಲವು ಪ್ರದೇಶಗಳು ಬಹಳ ಕಾಡುಪ್ರದೇಶದಲ್ಲಿರುತ್ತವೆ. ದಟ್ಟದಟ್ಟವಾದ ಕಾಡಿನ ಮಧ್ಯದಲ್ಲಿ ಸೇರಿ ಕ್ಕೊಂಡುಬಿಟ್ಟಿವೆ. ಹೆಗ್ಗಡದೇವನಕೋಟೆ, ಹುಣಸೂರು ಮತ್ತು ಪಿರಿಯಾಪಟ್ಟಣ ಇತ್ಯಾದಿ ಗಳೆಲ್ಲಾ ಅಂಥಾ ಜಂಗಲ್ ಪ್ರದೇಶದಲ್ಲಿರುತ್ತವೆ ಮತ್ತೆ ಕೆಲವು ತಾಲ್ಲೂಕುಗಳು ಗದ್ದೇಬೈಲಿನಲ್ಲಿ ರುತ್ತವೆ. ಹೀಗೆಲ್ಲಾ ಇರುವುದರಿಂದ ಅಲ್ಲಿನ ಬಾಲಕರು ಅವರವರ ಗ್ರಾಮದಲ್ಲೇ ಶಾಲೆ ಸೌಕರ್ಯಗಳಿಲ್ಲದೆ 2-3 ಮೈಲಿ ಫಾಸಲೆಯಲ್ಲಿರ ತಕ್ಕ ಅಕ್ಕಪಕ್ಕದ ಗ್ರಾಮಗಳಿಗೆ ಹೋಗಬೇಕಾ ಗಿದೆ. ಇದೇ ವಿಧವಾದ ಆಚರಣೆ ಜಪಾನಿನ ಲ್ಲಿಯೂ ಇರುತ್ತೆ. ಜಪಾನ್ ದೇಶದಲ್ಲಿ ಬಾಲಕರು 1-2 ಮೈಲಿ ಹೋಗಿ ವಿದ್ಯಾಭ್ಯಾಸ ಮಾಡಬೇ ಕಾಗಿದೆ. ಅದೇರೀತಿ ಇಂದು ಮೈಸೂರು ಜಿಲ್ಲೆ ಯಲ್ಲೂ ಸಹ ಅನೇಕ ಕಡೆ ಗದ್ದೆಬೈಲು ಪ್ರದೇಶ ವಾಗಿದ್ದು, ಮತ್ತೆ ಕೆಲವು ದಟ್ಟದಟ್ಟವಾದ ಕಾಡುಗಳಿಂದ ಕೂಡಿರತಕ್ಕ ಪ್ರದೇಶಗಳಾಗಿದ್ದು ನದೀ ನಾಲಾ ತೊರೆಗಳ ಅನಾನುಕೂಲದಿಂದ ತಮ್ಮ ತಮ್ಮ ಗ್ರಾಮದಲ್ಲಿ ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಪಾಠಶಾಲೆಗಳಿಲ್ಲದಿರುವುದ ರಿಂದ, ಇಲ್ಲಿಯ ಮಕ್ಕಳು ವಿದ್ಯಾಭಿವೃದ್ಧಿ

(ಶ್ರೀ ಟಿ. ಮಾದಯ್ಯಗೌಡರು).

ಹೊಂದಲು ಸಾಧ್ಯವಾಗಿರುವುದಿಲ್ಲ. ಇನ್ನು ಕೆಲವುಕಡೆ ಶಾಲಾ ಕಟ್ಟಡಗಳಿದ್ದಾಗ್ಯೂ ಅವು ಎಷ್ಟು ವಿಶಾಲವಾಗಿರಬೇಕೋ ಅಷ್ಟು ವಿಶಾಲ ವಾಗಿರಲು ಸ್ಥಳಾವಕಾಶವಿಲ್ಲದೆ ತೀರಾ ಚಿಕ್ಕವಾಗಿರುತ್ತವೆ. ಅದರಲ್ಲಿ 30 ಜನ ಮಕ್ಕಳೂಸಹ ಕುಳಿತುಕೊಳ್ಳಲು ಅವಕಾಶವಿರುವುದಿಲ್ಲ. ಒಂದು ವೇಳೆ ಹುಡುಗರು ಆ ಗ್ರಾಮದಲ್ಲಿ ಜಾಸ್ತಿ ಇದ್ದರೂ ಶಾಲೆಯಲ್ಲಿ ಕುಳಿತುಕೊಳ್ಳಲು ಸ್ಥಳಾವಕಾಶವಿಲ್ಲದೆ ಇರುವುದರಿಂದ ಹೆಚ್ಚಿನ ಹುಡುಗರನ್ನೆಲ್ಲಾ ಅಲ್ಲಿರತಕ್ಕ ಉಪಾಧ್ಯಾಯರು ಮನೆಗೆ ವಾಪಸ್ಸು ಕಳುಹಿಸಿಬಿಡುತ್ತಾರೆ. ಇದರ ಜೊತೆಗೆ ಅಷ್ಟೂ ಹುಡುಗರಿಗೆ ಪಾಠ ಹೇಳಲು ಇರತಕ್ಕ ಉದಾಧ್ಯಾಯರಾದರೋ ಅವರು ಒಬ್ಬರೆ. Particularly in Mysore District, ಉಪಾಧ್ಯಾಯರುಗಳಿಗೆ ಹಳ್ಳಿಗಳಲ್ಲಿ ಕೆಲಸ ಮಾಡುವುದಕ್ಕೆ ಅಷ್ಟಾಗಿ ಇಷ್ಟವಿದ್ದಂತೆ ಕಂಡು ಬರುತ್ತಿಲ್ಲ. ಪ್ರತಿಯೊಬ್ಬರೂ ಪಟ್ಟಣದಲ್ಲೇ ವಾಸಮಾಡಬೇಕೆಂದಿರುತ್ತಾರೆ. ಇಷ್ಟಾಗಿ ಗ್ರಾಮಸ್ಥರಿಗಂತೂ ಈ ಉಪಾಧ್ಯಾಯರೆಂಬುವವರ ಮೇಲೆ ಸಹಾನುಭೂತಿಯೂ ಇಲ್ಲ, ಇವರಿಗೆ ಬೇಕಾದ ಸೌಕರ್ಯಗಳನ್ನೂ ಒದಗಿಸುತ್ತಿಲ್ಲ. ಇರಲು ಉಪಾಧ್ಯಾಯರುಗಳಿಗೆ ವಾಸದ ಮನೆ ಸಹ ಸಿಕ್ಕುತ್ತಿಲ್ಲ. ಹೀಗೆ ಅನೇಕ ಉಪಾಧ್ಯಾಯರು ಟೌನ್‌ಗಳಲ್ಲಿದ್ದುಕೊಂಡು ಪ್ರತಿನಿತ್ಯವೂ 6-7 ಮೈಲಿ ಸೈಕಲ್‌ಮೇಲೆಹೋಗಿ ಬರುತ್ತಿದ್ದಾರೆ; ಮತ್ತೆ ಕೆಲವರು ರೈಲಿನ ಸೌಕರ್ಯವಿರತಕ್ಕ ಕಡೆ ರೈಲಿನಲ್ಲಿ ಹೋಗಿ ಪಾಠ ಹೇಳಿ ಬರುತ್ತಿದ್ದಾರೆ. ಹೀಗೆಲ್ಲಾ ಆಗಿರತಕ್ಕದ್ದನ್ನು ನಾನೇ ಸ್ವತಹ ನೋಡಿದ್ದೇನೆ.

ಮತ್ತೊಂದು ವಿಚಾರ. ಇನ್ಸ್‌ಪೆಕ್ಟರುಗಳು ಈ ಜಿಲ್ಲೆಗೊಂದಕ್ಕೇನೆ ಏನೂ ಪ್ರಯೋಜನಕ್ಕೆ ಬಾರದಿರುವಂಥ ಉಪಾಧ್ಯಾಯರುಗಳನ್ನೇ ಆರಿಸಿ ಹಾಕುತ್ತಿದ್ದಾರೇನೋ ಎಂಬ ಒಂದು ಸಂಶಯ ಸಹ ನನಗೆ ಉಂಟಾದಂತೆ ಭಾಸವಾಗುತ್ತದೆ. ಆದರೆ ನನ್ನ ಈ ಅಭಿಪ್ರಾಯ ತಪ್ಪಿದ್ದರೂ ಇರಬಹುದು. ತಪ್ಪಿದ್ದಲ್ಲಿ ತಿದ್ದಿಕೊಳ್ಳಲು ಸಿದ್ಧನಿದ್ದೇನೆ. ಆದ್ದರಿಂದ ಸಾಧ್ಯವಾದಮಟ್ಟಿಗೂ ಇಂಥಾ ಸ್ಥಳಗಳಿಗೆ ಕೇವಲ ಹೊಸಬರಾಗಿರುವ ಹುಡುಗ ಉಪಾಧ್ಯಾಯರನ್ನು ಹಾಕದೆ ನುರಿತ ಮತ್ತು ತರಬೇತಾದ ಉಪಾಧ್ಯಾಯರುಗಳನ್ನೇ ಚುನಾಯಿಸಿ ಕಳುಹಿಸಿದರೆ ಅದರ ಮೂಲಕವಾದರೂ ಅಲ್ಲಿನ ಜನರು ವಿದ್ಯೆಯಲ್ಲಿ ಮುಂದುವರಿಯಲು ಸ್ವಲ್ಪ ಅವಕಾಶ ಕಲ್ಪಿಸಿ ಕೊಟ್ಟಂತಾದೀತೆಂದು ನಾನು ಭಾವಿಸುತ್ತೇನೆ. ಮೈಸೂರು, ಮಂಡ್ಯಾ ಎಂಬುದಾಗಿ ಮೈಸೂರು ಜಿಲ್ಲೆಯನ್ನು ಇಬ್ಭಾಗ ಮಾಡಿದನಂತರ ಯಾರಾದರೂ ಮೈಸೂರು ಪಟ್ಟಣಕ್ಕೆ ಮೈಸೂರು ಜಿಲ್ಲೆಯವರು ಹೋಗಬೇಕಾದರೆ ಮಂಡ್ಯಾಕ್ಕೆ ಬಂದೇ ಹೋಗಬೇಕು; ಅದೇರೀತಿ ಮಂಡ್ಯಾಕ್ಕೆ ಬರಬೇಕಾದರೆ, ಮಂಡ್ಯಾ ಜಿಲ್ಲೆಯ ಕೆಲವು ಗ್ರಾಮಗಳವರು ಮೈಸೂರಿಗೆ ಬಂದೇ ಹೋಗಬೇಕಾಗಿದೆ. ಈ ರೀತಿಯಾಗಿ ಈ ಎರಡು ಜಿಲ್ಲೆಗಳೂ ಒಂದರಲ್ಲಿ ಒಂದು ಚಾಚಿಕೊಂಡು ಹೋಗಿವೆ. ಈ ತೊಂದರೆಗಳಿಂದ ಅನೇಕ ಜನ ಇನ್ಸ್‌ಪೆಕ್ಟರುಗಳು ಅನೇಕ ಗ್ರಾಮಗಳ ಇನ್ಸ್‌ಪೆಕ್ಷನ್ನಿಗೇ ಹೋಗದೆ ಕೈಬಿಟ್ಟೇ ಬಿಟ್ಟಿದ್ದಾರೆ. ಇಂಥಾ ಸನ್ನಿವೇಶವಿರುವ ಕಡೆಗೆ ಕೇವಲ ನಾನ್‌ಟ್ರೈನ್ಡ್ ಆಗಿರತಕ್ಕ ಅಥವಾ ಆಗತಾನೇ ಸ್ಕೂಲಿನಿಂದ ಉತ್ತೀರ್ಣರಾಗಿ ಬಂದಿರುವಂಥ ಹುಡುಗರನ್ನು ಮಕ್ಕಳಿಗೆ ಪಾಠ ಕಲಿಸಲು ಹಾಕಿದರೆ ಅವರಿಂದ ಬಾಲಕರು ಪಾಠವನ್ನು ಹೇಗೆ ಕಲಿತುಕೊಳ್ಳುತ್ತಾರೋ ಅದು ನನಗೆ ಅರ್ಥವಾಗುವುದಿಲ್ಲ. ಕೆಲಕೆಲವು ಪಾಠಶಾಲೆಗಳಲ್ಲಿ ಹುಡುಗರು ಹೆಚ್ಚಾಗಿದ್ದು, ಅಲ್ಲಿ ಅನೇಕ ಸಬ್‌ಜೆಕ್ಟುಗಳನ್ನು ಅವರಿಗೆ ಬೋಧಿಸಬೇಕಾದ ಅಗತ್ಯವಿದ್ದರೂ ಕೇವಲ ಒಬ್ಬರೇ ಒಬ್ಬರು ಉಪಾಧ್ಯಾಯರು ಇರುವುದರಿಂದ, ಅವರು ಆ ಹುಡುಗರಿಗೆಲ್ಲಾ ಸರಿಯಾಗಿ ಪಾಠ ಹೇಳುತ್ತಿದ್ದಾರೆಂಬುದು ಆಗದ, ಹೋಗದ ಮಾತು. ಆದ್ದರಿಂದ ಬಾಲಕರಿಗೆ ಸಾಕಷ್ಟು ಕಟ್ಟಡ ಮತ್ತು ಹುಡುಗರ ಸಂಖ್ಯೆಗೆ ತಕ್ಕಷ್ಟು ಉಪಾಧ್ಯಾಯರುಗಳಿದ್ದರೇ ಇದು ಸಾಧ್ಯ. ಹೀಗೆ ಇರುವಂಥ ನಾನಾ ಅಡಚಣೆಗಳನ್ನು ನಿವಾರಣೆಮಾಡಲು ಏನೇನು ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೋ ಅವನ್ನು ಕೈಕೊಳ್ಳಬೇಕು ಮತ್ತು ಸ್ಕೂಲಿನಲ್ಲಿ ಪಾಠಹೇಳುವ

ಉಪಾಧ್ಯಾಯರುಗಳು ದಕ್ಷತೆಯಿಂದ ಕೂಡಿದವರಾಗಿರತಕ್ಕಂಥವರನ್ನೇ ನೇಮಿಸುವಂತೆ ಮಾಡಿಕೊಳ್ಳುವುದಕ್ಕೂ ಮತ್ತು ತನ್ಮೂಲಕ ಶಾಲಾ ಸಂಖ್ಯೆಗಳನ್ನು ಹೆಚ್ಚುಮಾಡಲು ಈ ಜಿಲ್ಲೆಗೆ ಹೆಚ್ಚಿನ ಧನಸಹಾಯವನ್ನು ಸರ್ಕಾರದವರು ನೀಡಬೇಕೆಂದು ಒತ್ತಿ ಹೇಳಿ ನಾನು ಈ ಠರಾವನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಈ ನಿರ್ಣಯದಲ್ಲಿ ಅಡಕವಾಗಿರುವುದು ಮುಖ್ಯವಾಗಿ ಎರಡು ಅಂಶಗಳು. ಮೈಸೂರು ಜಿಲ್ಲೆಯಲ್ಲಿ ವಿದ್ಯಾಭ್ಯಾಸದ ಮಟ್ಟ ಬಹಳ ಕಮ್ಮಿ ಎಂಬುದು ಒಂದು ವಿಚಾರ. ಅದಕ್ಕಾಗಿ ಈ ಜಿಲ್ಲೆಯ ವಿದ್ಯಾಭ್ಯಾಸವು ಇತರ ಜಿಲ್ಲೆಗಳ ವಿದ್ಯಾಭ್ಯಾಸದ ಮಟ್ಟಕ್ಕೆ ಬರುವಂತೆ ಮಾಡಲು ಸಾಕಷ್ಟು ವ್ಯವಸ್ಥಾ ಕ್ರಮಗಳನ್ನು ಕೈಗೊಂಡು ಇನ್ನು ಮೂರುವರ್ಷಗಳ ಕಾಲಾವಧಿಯಲ್ಲಿ ಯಾವಯಾವ ಗ್ರಾಮಗಳಲ್ಲಿ ಈಗ ಪ್ರಾಥಮಿಕ ಶಾಲೆಗಳಿರುವುದಿಲ್ಲವೋ ಅಂಥಾ ಗ್ರಾಮಗಳಿಗೆಲ್ಲಾ ಒಂದೊಂದು ಪ್ರಾಥಮಿಕ ಶಾಲೆಯನ್ನೂ ಮತ್ತು ಯಾವಯಾವ ಗ್ರಾಮದಲ್ಲಿ 3,000 ಸಾವಿರಕ್ಕಿಂತ ಹೆಚ್ಚಿನ ಪ್ರಜಾಸಂಖ್ಯೆಯಿರುತ್ತದೆಯೋ ಅಂಥಾ ಗಾಮಗಳಿಗೆಲ್ಲಾ ಒಂದೊಂದು ಮಾಧ್ಯಮಿಕ ಶಾಲೆಯನ್ನೂ ಒದಗಿಸಿಕೊಡುವಂಥಾ ಕಾರ್ಯನೀತಿಯನ್ನು ಸರ್ಕಾರದವರು ಅನುಷ್ಠಾನಕ್ಕೆ ತರಬೇಕೆಂಬುದೇ ಈ ನಿರ್ಣಯದ ಎರಡನೆಯ ಉದ್ದೇಶ.

ಈ ಸಂದರ್ಭದಲ್ಲಿ ಇಲ್ಲಿ ಅನೇಕ ಜಿಲ್ಲೆಗಳ ಮಹನೀಯರಿದ್ದಾರೆ. ಮೈಸೂರು ಜಿಲ್ಲೆಯೊಂದಕ್ಕೆ ಮಾತ್ರ ಒಂದು ವಿಶೇಷ ಸೌಲಭ್ಯ ಕಲ್ಪಿಸಿಕೊಡಬೇಕೆಂದು ನಾನು ಹೇಳಿದರೆ ಇದು ಯಾವ ನೀತಿ ಎಂದು ಸ್ವಾಭಾವಿಕವಾಗಿ ಅವರ ಮನಸ್ಸಿಗೆ ತೋರಬಹುದು. ಬಹುಶಃ ಅವರಿಗೆ ಒಂದೆರಡು ಅಂಕಿ ಅಂಶಗಳನ್ನು ಕೊಟ್ಟರೆ ಅವರ ಮನಸ್ಸಿನಲ್ಲಿ ಏನು ಸಂದೇಹವಿದೆಯೋ ಅದು ತೊಲಗಿ ಅವರು ಸಂಪೂರ್ಣವಾಗಿ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಾರೆಂದು ನಾನು ನಿರೀಕ್ಷಿಸಿದ್ದೇನೆ. ಮೈಸೂರು ಸಂಸ್ಥಾನದಲ್ಲಿ ಅಕ್ಷರ ಪ್ರಚಾರ ಯಾವರೀತಿಯಾಗಿದೆ ಯೆಂಬುದಕ್ಕೆ ಒಂದೆರಡು ಅಂಕಿ ಅಂಶಗಳನ್ನು ಕೊಡುತ್ತೇನೆ. ಶಿವಮೊಗ್ಗಾದಲ್ಲಿ 24·8, ಚಿಕ್ಕಮಗಳೂರಿನಲ್ಲಿ 22·8, ತುಮಕೂರಿನಲ್ಲಿ 17·6, ಮೈಸೂರಿನಲ್ಲಿ 12 ಈ ರೀತಿಯಿದೆ. ಮೈಸೂರು ಜಿಲ್ಲೆಯ ಅಂಕಿಗಳೇ ಬಹಳ ಕಡಮೆ. ಬಾಕಿ ಜಿಲ್ಲೆಗಳಲ್ಲಿ ಮೈಸೂರು ಜಿಲ್ಲೆಗಿಂತ ವಿದ್ಯಾವಂತರ ಸಂಖ್ಯೆ ಹೆಚ್ಚಾಗಿಯೇ ಇದೆ. ಇತರ ಜಿಲ್ಲೆಗಳಲ್ಲಿ ವಿದ್ಯೆಗಾಗಿ ಉತ್ತೇಜನ ಕೊಟ್ಟವರಿಗೆಲ್ಲಾ ನಾನು ಅಭಿನಂದಿಸುತ್ತೇನೆ, ಅವರು ಮೊದಲು ಪ್ರೋತ್ಸಾಹ ಮಾಡಿದ್ದರಿಂದ ಸಾಧಕವಾಯಿತು; ನಾವು ಆಗ ಸರಿಯಾದ ಉತ್ತೇಜನ ಪಡೆಯಲಿಲ್ಲವಾದ್ದರಿಂದ ಈಗ ಅವರ ಸಹಾನುಭೂತಿಯನ್ನು ಕೇಳಬೇಕಾಗಿದೆ, ಈ ಸಂದರ್ಭದಲ್ಲಿ ಸರ್ಕಾರದವರು ಬೇಕಾದಷ್ಟು ಹಣವನ್ನು ಖರ್ಚುಮಾಡುತ್ತಿದ್ದಾರೆಂಬುದು ಅಂಕಿ ಅಂಶಗಳಿಂದ ಗೊತ್ತಾಗುತ್ತದೆ. ಹಾಗೆ ಮಾಡುವಾಗ ಹಿಂದುಳಿದಿರುವವರನ್ನು ಕೂಡ ಮುಂದುವರಿದವರೊಡನೆ ಕರೆದುಕೊಂಡು ಹೋಗತಕ್ಕದ್ದು ಆವಶ್ಯಕ ಮತ್ತು ನೀತಿಯುತವಾದುದು ಎಂಬುದನ್ನು ಮಾನ್ಯ ಸದಸ್ಯರೆಲ್ಲರೂ ಒಪ್ಪಿಕೊಳ್ಳಬೇಕು ಮತ್ತು ಸರ್ಕಾರದವರೂ ಕೂಡ ಆ ನೀತಿಯನ್ನು ಅನುಷ್ಠಾನಕ್ಕೆ ತರತಕ್ಕದ್ದು ಅತ್ಯಾವಶ್ಯಕ. ಮೈಸೂರು ಜಿಲ್ಲೆ ಅದರಲ್ಲೂ ಮೈಸೂರು ತಾಲ್ಲೂಕಿನಲ್ಲಿ ಶಾಲೆಗಳು ಕಡಮೆಯೂಗಿರುವುದಕ್ಕೆ ಕಾರಣವೇನೆಂಬುದನ್ನು ಸ್ವಲ್ಪ ವಿಚಾರಮಾಡಿದರೆ ಬಹುಶಃ ಅದಕ್ಕೆ ತಕ್ಕ ಒಂದು ವ್ಯವಸ್ಥೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಮೈಸೂರು ತಾಲ್ಲೂಕು ಅಭಿವೃದ್ಧಿಗೆ ಬಾರದಿರುವುದಕ್ಕೆ ಮುಖ್ಯ ಕಾರಣವೇನೆಂದರೆ ಮೈಸೂರು ಸಿಟಿ ಸುತ್ತಲೂ ಹಳ್ಳಿಗಳೇ ಇರುವುದರಿಂದ ಸ್ವಲ್ಪ ಮಟ್ಟಿಗೆ ಅಭಿವೃದ್ಧಿಗೆ ಬಂದ ಜನರೆಲ್ಲರೂ ಮೈಸೂರಿಗೇ ಬಂದು ಸೇರುತ್ತಿದ್ದಾರೆ. ಮತ್ತು ಆ ಹಳ್ಳಿಗಳಲ್ಲಿ ಪ್ರಭಾವಶಾಲಿಗಳಾದ ಜನರಿಲ್ಲದಿರುವುದರಿಂದ ಅವು ಮುಂದುವರಿಯುವುದಕ್ಕೆ ಅವಕಾಶವಾಗಿಲ್ಲ. ಬಹಳ ವಿಷಾದದಿಂದ ಈ ವಿಷಯವನ್ನು ಹೇಳಬೇಕಾಗಿದೆ. ಮೈಸೂರು ಜಿಲ್ಲೆಯಲ್ಲಿ 99 ಮಿಡ್ಲ್ ಸ್ಕೂಲುಗಳಿವೆಯೆಂದು ಹೇಳಿರುವುದು ಸತ್ಯಾಂಶ,

(ಶ್ರೀ ಎಚ್. ಎಂ. ಚನ್ನಬಸಪ್ಪನವರು).
ಅದರಲ್ಲಿ 41 ಮಿಡ್ಲ್‌ಸ್ಕೂಲುಗಳು ಮೈಸೂರು ಸಿಟಿಯಲ್ಲೇ ಇವೆಯೆಂದು ಹೇಳಿದರೆ ಎಷ್ಟು ಗ್ರಾಮಗಳು ಅಭಿವೃದ್ಧಿಗೆ ಬರುವುದಕ್ಕೆ ಸಾಧ್ಯ. ಬಾಕಿಯಾದ ಸ್ಕೂಲುಗಳು ಡಿಸ್ಟ್ರಿಕ್ಟಿನ ಇತರ ಭಾಗಗಳಲ್ಲಿವೆ. ಮೈಸೂರು ಸಿಟಿಯಲ್ಲಿರುವ 2,44,334 ಪ್ರಜಾ ಸಂಖ್ಯೆಯಲ್ಲಿ ಒಂದುಲಕ್ಷ ಮೂವತ್ತೊಂಬತ್ತು ಸಾವಿರ ಚಿಲ್ಲರೆಜನ ವಿದ್ಯಾವಂತರು. ಅಂದರೆ ಶೇಕಡ 42 ಮಂದಿ ವಿದ್ಯಾವಂತರಿದ್ದ ಹಾಗಾಯಿತು. ಇದನ್ನು ಬಿಟ್ಟು ಹಳ್ಳಿಗಳಕಡೆ ನೋಡಿದರೆ ಅಲ್ಲಿರುವ 10,40,130 ಜನರಲ್ಲಿ ಒಂದು ಲಕ್ಷ ಚಿಲ್ಲರೆ ವಿದ್ಯಾವಂತರಾಗಿದ್ದಾರೆ, ಸರ್ಕಾರದವರು ಮಾಡಿದ ಕೆಲಸಕಾರ್ಯಗಳ ಬಹುಭಾಗ ಮೈಸೂರು ಸಿಟಿಯಲ್ಲಿ ನಡೆದು ಹೋಯಿತು ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಇದರಿಂದಲೇ ಎಲ್ಲಾ ಅವ್ಯವಸ್ಥೆಯಾಯಿತೆಂದು ಹೇಳುವುದಿಲ್ಲ. ಹಳ್ಳಿಗಳ ಕಡೆ ಅಕ್ಷರಸ್ಥರು ಕಡಮೆಯಾಗಲು ಇದೊಂದು ಮುಖ್ಯ ಕಾರಣ, ಇದರಲ್ಲಿ ನಮ್ಮ ತಪ್ಪೂ ಇದೆ, ಗ್ರಾಮಾಂತರಗಳಲ್ಲಿ ಆಗಿನ ಕಾಲದಲ್ಲಿ ಜನರು ಅಷ್ಟು ವಿದ್ಯಾವಂತರಾಗಿರಲಿಲ್ಲ ಎಂದು ಹೇಳಬಹುದು, ಈ ಅಂಕಿ ಅಂಶಗಳಿಂದ ಮೈಸೂರು ಜಿಲ್ಲೆಯಲ್ಲಿ ಪೂರ್ಣವಾಗಿ ಜನರು ಬಹಳ ಹೀನಸ್ಥಿತಿಯಲ್ಲಿದ್ದಾರೆಂಬುದು ಸರ್ವರಿಗೂ ಮನವರಿಕೆಯಾಗದಿರಲಾರದು, ಅಂದಮೇಲೆ ಅವರನ್ನು ನಮ್ಮ ಮಟ್ಟಕ್ಕೆ ತರತಕ್ಕದ್ದು ನಮ್ಮೆಲ್ಲರ ಕರ್ತವ್ಯ ಮತ್ತು ಸರ್ಕಾರದ ಕರ್ತವ್ಯ. ಈ ಸಂದರ್ಭದಲ್ಲಿ ಹೈಸ್ಕೂಲುಗಳ ಸಂಖ್ಯೆ ವಿಚಾರ ಈಗ ಪ್ರಸ್ತಾಪಮಾಡಬೇಕಾಗಿಲ್ಲ. ಏಕೆಂದರೆ ಇನ್ನು 25-30 ವರ್ಷಗಳವರೆಗೆ ಹೈಸ್ಕೂಲು ಅನಗತ್ಯ. ಈಗಿರುವುದೇ ಸಾಕಾಗಿದೆ. ಈ ದಿವಸ ಹೇಳುವುದಾದರೆ ಮೈಸೂರು ಸಿಟಿ ಬಿಟ್ಟು ಬಾಕಿ ಕಡೆಗಳಲ್ಲಿ 18 ಹೈಸ್ಕೂಲುಗಳಿವೆ, ಪ್ರತಿ ಹತ್ತು ಹನ್ನೆರಡು ಮೈಲಿಗಳಿಗೊಂದು ಹೈಸ್ಕೂಲಿರುವುದರಿಂದ ಇನ್ನೂ 20 ವರ್ಷಗಳು ಅವುಗಳ ಅವಶ್ಯಕತೆಯಿಲ್ಲ, ಈಗಿರುವ ಸ್ಕೂಲುಗಳಲ್ಲೇ ವಿದ್ಯಾರ್ಥಿಗಳು ಓದುವುದಕ್ಕೆ ವ್ಯವಸ್ಥೆಯಿದೆ, ಅದಕ್ಕೆ ತಕ್ಕಹಾಗೆ ಮಿಡ್ಲ್‌ಸ್ಕೂಲುಗಳು ಸ್ಥಾಪನೆಯಾಗಬೇಕು. ಅದಕ್ಕೆ ತಕ್ಕಷ್ಟು ಪ್ರಾಥಮಿಕ ಶಾಲೆಗಳು ಸ್ಥಾಪನೆಯಾಗಬೇಕು. ಇದರ ಅಗತ್ಯ ಎಷ್ಟುಮಟ್ಟಿಗಿದೆಯೆಂಬುದು ಅಂಕಿ ಅಂಶಗಳಿಂದ ಗೊತ್ತಾಗುತ್ತದೆ. ಒಟ್ಟಿನಲ್ಲಿ ಈ ನಿರ್ಣಯಕ್ಕೆ ಸಹಾನುಭೂತಿಯನ್ನು ನೀಡಿದರೆ ಇದರಿಂದ ಬಹಳಮಟ್ಟಿಗೆ ಹಿಂದುಳಿದವರಿಗೆ, ದೇಶದ 1/10 ಭಾಗದ ಈ ಕಡೆಯ ಪ್ರಜೆಗಳಿಗೆ ತಮ್ಮ ಜೊತೆಗೆ ಬರುವುದಕ್ಕೆ ಸಾಧ್ಯವಾಗುತ್ತದೆ. ಪ್ರಾಥಮಿಕ ಶಾಲೆ ಮತ್ತು ಮಾಧ್ಯಮಿಕ ಶಾಲೆ ಕೊಡುವುದಕ್ಕೆ ಸಿದ್ಧವಾಗಿದ್ದೇವೆ. ಆದರೆ ಏನು ಮಾಡುವುದು. ಅನೇಕ ತೊಂದರೆಗಳಿವೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಾರೆಂದು ನಾನು ಊಹೆ ಮಾಡುತ್ತೇನೆ. ಉಪಾಧ್ಯಾಯರಿಗೆ ಮನೆಯಿಲ್ಲ, ಸೂಲುಗಳಿಗೆ ಕಟ್ಟಡವಿಲ್ಲ, ಆದ್ದರಿಂದ ಕೊಡುವುದಕ್ಕಾಗುವುದಿಲ್ಲವೇ ವಿನಾ ವಾಸ್ತವವಾಗಿ ಶಾಲೆಗಳನ್ನು ಕೇಳಿದ ಕಡೆ ಕೊಡುತ್ತೇವೆ ಎಂದು ಹೇಳುತ್ತಾರೆ. ಅದಕ್ಕೆ ಸಹಾನುಭೂತಿಯಿದೆ. ಸರ್ಕಾರದವರು ಬಹಳ ಉದಾರವಾಗಿ ಕಟ್ಟಡವಿರುವ ಕಡೆ ಪ್ರಾಥಮಿಕ ಶಾಲೆಗಳನ್ನು ಕೇಳಿದಾಗ ಕೊಡುವುದಕ್ಕೆ ಸಿದ್ಧವಾಗಿದ್ದಾರೆ. ಕಟ್ಟಡವಿಲ್ಲದಿರುವುದು ದೊಡ್ಡ ನ್ಯೂನತೆಯೆಂದು ಒಪ್ಪಿಕೊಳ್ಳಬೇಕು. ನಮ್ಮ ಪರಿಸ್ಥಿತಿ ಹೀಗಿರುವುದರಿಂದ ನಾವು ಸ್ವಲ್ಪಮಟ್ಟಿಗೆ ಈ ವಿಚಾರದಲ್ಲಿ ಉತ್ಸಾಹಶಾಲಿಗಳಾಗಿ ಕೆಲಸ ಮಾಡದಿದ್ದರೆ ಸರ್ಕಾರದ ಉದಾತ್ತ ಮನೋಭಾವಕ್ಕೆ ತಕ್ಕಂತೆ ಮುಂದುವರಿಯುವುದಕ್ಕಾಗುವುದಿಲ್ಲ. ಈ ಸಂದರ್ಭದಲ್ಲಿ ಒಂದು ಅಂಶ ತಿಳಿಸಬೇಕಾಗಿದೆ. ಮೈಸೂರು ಜಿಲ್ಲೆಯಲ್ಲಿ ಯಾರೂ ಕಟ್ಟಡಕ್ಕಾಗಿ ಯೋಚನೆ ಮಾಡಬೇಕಾಗಿಲ್ಲ. ಈಗ ಸುಮಾರು 19 ತಿಂಗಳಲ್ಲಿ ಸುಮಾರು 9 ಲಕ್ಷ 41 ಸಾವಿರ ಚಿಲ್ಲರೆ ಮೊಬಲಗಿನ ಕಟ್ಟಡ ಮಂಜೂರಾಗಿದೆ. ಬಹುಶಃ ಎರಡು ಮೂರು ತಿಂಗಳಲ್ಲಿ ಕೆಲಸ ಮುಗಿಯಬಹುದು. ಈ ಹಣವೆಲ್ಲಾ ಸರ್ಕಾರದವರೇ ಕೊಟ್ಟರೆಂದು ಯೋಚನೆಮಾಡಬಾರದು. ಒಂಬತ್ತು ಲಕ್ಷ 41 ಸಾವಿರ ಚಿಲ್ಲರೆಯಲ್ಲಿ ಸುಮಾರು 5 ಲಕ್ಷಕ್ಕೆ ಮೇಲ್ಪಟ್ಟು ಜನರು ಧರ್ಮಾರ್ಥವಾಗಿ ಕೊಟ್ಟಿದ್ದಾರೆ. ಹೀಗೆ ಜನರು ಮುಂದೆ ಬಂದು ಸಹಾಯ ಮಾಡಿದ್ದಾರೆ.

ಸರ್ಕಾರದವರು ಬಹುಶಃ ನಾಲ್ಕು ಚಿಲ್ಲರೆ ಲಕ್ಷ ಇದಕ್ಕೆ ಕೊಟ್ಟಿದ್ದಾರೆ. ಒಟ್ಟಿನಲ್ಲಿ ಒಂದು ಅಂಶ ನಿವೇದನೆ ಮಾಡುತ್ತೇನೆ. ಮುಖ್ಯ ಮಂತ್ರಿಗಳು ಹೇಳಿದ.ಹಾಗೆ ಕಟ್ಟಡಕ್ಕಾಗಿ ಯೋಚನೆ ಮಾಡ ಬೇಕಾಗಿಲ್ಲ. ನಾವು ಅರ್ಧ ಹಣ ಕೊಡುವು ದಕ್ಕೆ ಸಿದ್ಧರಾಗಿದ್ದೇವೆ. ಬಾಕಿ ಅರ್ಧ ಕೊಟ್ಟು ಪ್ರಾಥಮಿಕ ಶಾಲೆಗಳನ್ನು ಕೊಡಬೇಕಾಗಿದೆ. ಕಟ್ಟಡವಿಲ್ಲದಿರುವ ಕಡೆ ಅದನ್ನೂ ಕೊಡುತ್ತೇವೆ. ಶಾಲೆಗಳನ್ನು ಕೊಡುವುದಕ್ಕೆ ಒಪ್ಪಿದರೆ ಇನ್ನು ಆರು ತಿಂಗಳಲ್ಲಿ ಬೇಕಾದರೂ ನಾವು ಕಟ್ಟಡ ಮತ್ತು ನಮ್ಮ ಭಾಗದ ಹಣ ಒದಗಿಸಲು ತಯಾರಾಗಿದ್ದೇವೆ. ಸರ್ಕಾರದವರು ಮಾತ್ರ ಮುಂದುವರೆದು ಪ್ರಾಥಮಿಕ ಶಾಲೆಗಳನ್ನು ಮಾತ್ರವಲ್ಲದೆ 3,000 ಪ್ರಜಾ ಸಂಖ್ಯೆಯಿರುವ ಊರುಗಳೆಲ್ಲಕ್ಕೂ ಮಾಧ್ಯಮಿಕ ಶಾಲೆಗಳನ್ನು ಕೊಡಬೇಕು. ಎಷ್ಟು ಸ್ಕೂಲುಗಳನ್ನು ಕೊಟ್ಟರೆ ಅಷ್ಟು ಕಟ್ಟಡಗಳಿಗೆ ನೂರಕ್ಕೆ 50 ಭಾಗ ಹಣ ಒದಗಿಸುತ್ತೇವೆಂದು ಭರವಸೆ ಕೊಡಬಲ್ಲೆ. ಇದೇ ರೀತಿ ಪ್ರಾಥಮಿಕ ಶಾಲೆ ಕಟ್ಟಡಗಳಿಗೂ ಯೋಚನೆ ಮಾಡಬೇಕಾಗಿಲ್ಲ. ಜೊತೆಗೆ ಉಪಾಧ್ಯಾಯರ ಮನೆಗಳಿಗೂ ಯೋಚನೆ ಮಾಡಬೇಕಾಗಿಲ್ಲ. ಇವೆಲ್ಲಕ್ಕೂ ಬೇಕಾದ ಹಣದಲ್ಲಿ ಅರ್ಧ ಭಾಗವನ್ನು ಮಂಜೂರು ಮಾಡಿಸಿ ಸಾರ್ವಜನಿಕರಿಂದ ಕೊಡಿಸುವುದಕ್ಕೆ ಸಿದ್ಧ. ತಾವೇ ಕಟ್ಟಿಸಿ, ಆ ಮೇಲೆ ಕೊಡುತ್ತೇವೆಂದು ಹೇಳಿದರೂ ಆಗಬಹುದು. ಇಷ್ಟನ್ನು ಯೋಚನೆ ಮಾಡಿ ಸರ್ಕಾರದವರೂ, ಈ ಮಾನ್ಯ ಸಭೆಯ ಸದಸ್ಯರೆಲ್ಲರೂ ಸಹಾನುಭೂತಿಯನ್ನು ತೋರಿಸಿರುವಂತೆ ಸಹಾನುಭೂತಿಯಿಂದ ಇಷ್ಟನ್ನು ನೆರವೇರಿಸಬೇಕಾಗಿದೆ. ಸರ್ಕಾರಕ್ಕೆ ಸಹಾನುಭೂತಿಯಿಲ್ಲವೆಂದು ಹೇಳುವುದಕ್ಕೆ ಖಂಡಿತ ಅವಕಾಶವಿಲ್ಲ. ಮಾನ್ಯ ಸದಸ್ಯರು ಹೇಳಿರುವ ಅಂಕಿ ಅಂಶಗಳನ್ನು ನೋಡಿದರೆ ಸಹಾನುಭೂತಿ ಎದ್ದು ಕಾಣುತ್ತಿದೆ ಎಂಬುದನ್ನು ಮನಗಾಣಬಹುದು. ಆದ್ದರಿಂದ ಸರ್ಕಾರದವರು ಈ ನಿರ್ಣಯವನ್ನು ಬಿ: ತಕರಾರಿನಿಂದ ಒಪ್ಪಿ ಒಂದು ಸೂಕ್ತವಾದ ನೀತಿಯನ್ನು ಅನುಸರಿಸಿ ಇನ್ನು ಮೂರು ವರ್ಷಗಳಲ್ಲಿ ಮಿಡ್ಲ್ ಸ್ಕೂಲು ಮತ್ತು ಪ್ರೈಮರಿ ಸ್ಕೂಲು ಮೈಸೂರು ಜಿಲ್ಲೆಯ ಯಾವ ಊರಿನಲ್ಲೂ ಇಲ್ಲ ಎಂಬ ಪ್ರಶ್ನೆ ಬಾರದ ಹಾಗೆ ಮಾಡಬೇಕು. ಮೂರು ಸಾವಿರ ಪ್ರಜಾ ಸಂಖ್ಯೆಯಿರುವ ಯಾವ ಗ್ರಾಮದಲ್ಲೂ ಮಿಡ್ಲ್ ಸ್ಕೂಲು ಇಲ್ಲ ಎಂಬ ದೂರು ಬರಬಾರದು, ಹಾಗೆ ಮಾಡುವುದಾಗಿ ವಾಗ್ದಾನ ಮಾಡಿದರೆ ಅದಕ್ಕೆ ತಕ್ಕ ಸೌಕರ್ಯವನ್ನು ಒದಗಿಸಿಕೊಡಬಹುದು. ಇಷ್ಟು ಹೇಳಿ ಮಾನ್ಯ ಸದಸ್ಯರೂ ಮತ್ತು ಸರ್ಕಾರದವರೂ ಸಹಾನುಭೂತಿಯಿಂದ ಈ ನಿರ್ಣಯವನ್ನು ಬಿ: ತಕರಾರಿನಿಂದ ಒಪ್ಪಿಕೊಳ್ಳಬೇಕೆಂದು ಅತ್ಯಂತ ವಿನಯಪೂರ್ವಕವಾಗಿ ಸೂಚಿಸುತ್ತೇನೆ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅಧ್ಯಕ್ಷರೇ, ಶ್ರೀಮಾ್ ರಂಗರಾಮಯ್ಯನವರು ತಮ್ಮ ಠರಾವನ್ನು ಮಂಡಿಸುತ್ತಾ ಬಹಳ ಸ್ವಾರಸ್ಯವಾಗಿ ಭಾಷಣ ಮಾಡಿದ್ದಾರೆ. ಅದರ ಜೊತೆಯಲ್ಲಿ ಅದೇ ಜಿಲ್ಲೆಯವರಾದ ಶ್ರೀಮಾ್ ಹೊನ್ನಪ್ಪನವರು, ಶ್ರೀಮಾ್ ಚನ್ನಬಸಪ್ಪನವರು ಮತ್ತು ಬೆಂಗಳೂರು ಜಿಲ್ಲೆಯವರಾದ ವಯಸ್ಕರ ಶಿಕ್ಷಣ ಸಮಿತಿ ಚೇರ್ಮನ್‌ರಾದ ಶ್ರೀಮಾ್ ಮಾದಯ್ಯಗೌಡರು ಭಾಷಣ ಮಾಡಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ಬೇರೆ ಜಿಲ್ಲೆಗಳಿಗಿಂತಲೂ ಲಿಟ್ರಿಸಿ (literacy) ಕಡಿಮೆಯಾಗಿದೆಯೆಂದು ಶ್ರೀಮಾ್ ಚನ್ನಬಸಪ್ಪನವರು ಅಂಕಿ ಅಂಶಗಳ ಮುಖೇನ ಹೇಳಿದರು. ಅದು ವಾಸ್ತವವಾದ ವಿಚಾರ. ಮೈಸೂರು ಸಿಟಿಯನ್ನು ಬಿಟ್ಟು ಹಳ್ಳಿಗಾಡಿನ ಅಂಕಿಅಂಶ ತೆಗೆದುಕೊಂಡರೆ ಅದು ಬಹಳಮಟ್ಟಿಗೆ ಅನ್ವಯಿಸುತ್ತದೆ. ಮೈಸೂರು ಜಿಲ್ಲೆಯ ಹಳ್ಳಿಗಳ ಅಂಕಿ ಅಂಶ ನೋಡಿದರೆ ಲಿಟ್ರಿಸಿ ಬೇರೆ ಜಿಲ್ಲೆಗಳಿಗಿಂತಲೂ ಸ್ವಲ್ಪ ಕಡಿಮೆ ಇದೆ. ಆದ್ದರಿಂದ ಅವರು ಕೊಟ್ಟಿರ ತಕ್ಕ ಅಂಕಿಅಂಶಗಳು ನಿಜವಾಗಿವೆ. ಮೈಸೂರು ಜಿಲ್ಲೆಯಲ್ಲಿ 1,425 ಹಳ್ಳಿಗಳಿವೆ. ಅದರಲ್ಲಿ ಈಗ 300 ಪ್ರಜಾಸಂಖ್ಯೆ ಮೇಲ್ಪಟ್ಟು ಇರತಕ್ಕ 68 ಹಳ್ಳಿಗಳಲ್ಲಿ ಮಾತ್ರ ಪ್ರೈಮರಿ ಸ್ಕೂಲು ಇಲ್ಲ. ಬಾಕಿ ಎಲ್ಲಾ ಕಡೆಗಳಲ್ಲೂ ಪ್ರೈಮರಿ ಸ್ಕೂಲು ಇದೆ ಎಂಬ ಅಂಶವನ್ನು ಶ್ರೀಮಾ್ ರಂಗರಾಮಯ್ಯನವರಿಗೆ ತಿಳಿಸಬೇಕಾಗಿದೆ. ಅವರ

(ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.) ಠರಾವಿನ ಪ್ರಕಾರ 3,000 ಪ್ರಜಾ ಸಂಖ್ಯೆ ಇರ ತಕ್ಕ ಪ್ರತಿಯೊಂದು ಹಳ್ಳಿಯಲ್ಲೂ ಮಿಡ್ಲ್ ಸ್ಕೂಲು ಕೊಡಬೇಕೆಂದು ತಿಳಿಸಿದ್ದಾರೆ. ಪ್ರತಿ ವರ್ಷವೂ ಮಿಡ್ಲ್ ಸ್ಕೂಲು ಮತ್ತು ಪ್ರೈಮರಿ ಸ್ಕೂಲುಗಳನ್ನು ಇಡೀ ದೇಶದಲ್ಲಿ ಪ್ರೋಗ್ರಾಂ ಪ್ರಕಾರ ಹೆಚ್ಚು ಮಾಡುತ್ತಾ ಬಂದಿದ್ದೇವೆ. ಅದರಲ್ಲೂ ಮೈಸೂರು ಜಿಲ್ಲೆಯಲ್ಲಿ ಲಿಟ್ರಸಿ ಬಹಳ ಹಿಂದುಳಿದಿರುವುದರಿಂದ ಎಲ್ಲಾ ಜಿಲ್ಲೆ ಗಳಿಗಿಂತಲೂ ಅಲ್ಲಿಗೆ ಜಾಸ್ತಿಯಾಗಿ ಕೊಡುತ್ತಾ ಇದ್ದೇವೆ ಮತ್ತು ಎಲ್ಲಾ ಜಿಲ್ಲೆಗಳಲ್ಲೂ ಯಾವ ದಾಮಾಷಾ ಪ್ರಕಾರ ಖರ್ಚು ಮಾಡುತ್ತಾ ಇದ್ದೇವೆಯೊ ಅದಕ್ಕಿಂತ ಹೆಚ್ಚಾಗಿ ಆ ಜಿಲ್ಲೆ ಯಲ್ಲಿ ಖರ್ಚು ಮಾಡುತ್ತಾ ಬಂದಿದ್ದೇವೆ. ಆದ್ದರಿಂದ ಶ್ರೀಮಾನ್ ಹೊನ್ನಪ್ಪನವರ ಜಿಲ್ಲೆಯ ಮಂತ್ರಿಗಳಿದ್ದಿದ್ದರೆ ಜಾಸ್ತಿ ಗಮನಕೊಡು ತ್ತಿದ್ದರು; ಇಲ್ಲದೇ ಇರುವುದರಿಂದ ಕೊಟ್ಟಿಲ್ಲ ಎಂಬ ವಾದದಲ್ಲೂ ಅರ್ಥವಿಲ್ಲ. ಪ್ರತಿವರ್ಷದ ಅಂಕಿ ಅಂಶ ತೆಗೆದುಕೊಂಡರೆ ಮೈಸೂರು ಜಿಲ್ಲೆಗೆ ಜಾಸ್ತಿ ಬಂದಿದೆ. 1950-51ರಲ್ಲಿ 13 ಪ್ರೈಮರಿ ಸ್ಕೂಲು ಕೊಟ್ಟಿದ್ದೇವೆ. ಆರು ನ್ಯೂ ಟೈಪ್ ಮಿಡ್ಲ್ ಸ್ಕೂಲು ಕೊಟ್ಟಿ ದ್ದೇವೆ. ಈ ರೀತಿ ಪ್ರತಿ ವರ್ಷವೂ ಮೈಸೂರು ಜಿಲ್ಲೆಗೆ ದಾಮಾಷಾ ಪ್ರಕಾರ ಹೆಚ್ಚು ಕೊಡು ತ್ತಿದ್ದೇವೆಯೇ ಹೊರತು, ಆ ಜಿಲ್ಲೆಗೆ ಸಂಬಂಧ ಪಟ್ಟ ಮಂತ್ರಿಗಳಿಲ್ಲವೆಂದು ಕಡಿಮೆ ಕೊಡುತ್ತಿ ದ್ದೇವೆ ಎಂಬುದು ಸರಿಯಲ್ಲ. ಕಾಂಗ್ರೆಸ್ ಸರ್ಕಾರ ಅಧಿಕಾರ ವಹಿಸಿಕೊಂಡ ಮೇಲೆ ಲಿಟ್ರಸಿ ಕಡಿಮೆ ಇರುವ ಕಡೆಗೆ ಜಾಸ್ತಿ ಸ್ಕೂಲು ಗಳನ್ನು ಕೊಡಬೇಕೆಂಬ ಉದ್ದೇಶದಿಂದ ಮೈಸೂರು ಜಿಲ್ಲೆಗೂ ಜಾಸ್ತಿಯಾಗಿ ಕೊಟ್ಟಿ ದ್ದೇವೆ ಎಂಬ ಅಂಶವನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಈಗಿರುವ ಪ್ರಕಾರ percentage of literacy ಎರಡು ಮೂರು ವರ್ಷ ಕಳೆದ ನಂತರ ಗೊತ್ತಾಗುತ್ತದೆಯೇ ಹೊರತು ಈಗ ಗೊತ್ತಾಗದೆ ಇರಬಹುದು. ಅಂದಮಾತ್ರಕ್ಕೆ ಹೆಚ್ಚು ಗಮನ ಕೊಡಲಿಲ್ಲ ವೆಂದು ಅರ್ಥವಾಗುವುದಿಲ್ಲ.

ಕಟ್ಟಡದ ವಿಚಾರದಲ್ಲಿ ಶ್ರೀಮಾನ್ ಚನ್ನ ಬಸಪ್ಪನವರು ಉತ್ತರ ಕೊಟ್ಟರು. ಮೈಸೂರು ದೇಶದಲ್ಲಿ ವಿದ್ಯಾಭ್ಯಾಸಕ್ಕೆ ಪ್ರತಿ ವರ್ಷ ಎಷ್ಟು ಹಣ ಖರ್ಚಾಗುತ್ತಾ ಇದೆ, ಪ್ರತಿ ವರ್ಷವೂ ಯಾವ ರೀತಿ ಜಾಸ್ತಿಯಾಗುತ್ತಿದೆ ಎಂಬ ಅಂಶ ಎಲ್ಲರಿಗೂ ಗೊತ್ತಿದೆ. ಕಟ್ಟಡ ಸರ್ಕಾರ ದವರೇ ಕಟ್ಟಿಸಿಕೊಡಬೇಕೆಂಬ ತತ್ವ ಒಳ್ಳೆ ಯದು; ಒಪ್ಪಬಹುದು. ಆದರೆ ಮುಫತ್ತಾಗಿ ಸಂಪೂರ್ಣ ಹಣ ಕೊಟ್ಟು ಕಟ್ಟಿಸಿಕೊಡತಕ್ಕ ಚೈತನ್ಯ, ಶಕ್ತಿ ಸರ್ಕಾರದವರಿಗಿದೆಯೇ ಎಂಬ ಬಗ್ಗೆ ಬಜೆಟ್ ಕೊಟ್ಟಿದ್ದೇವೆ. ಯಾವ್ಯಾವ ಬಾಬುಗಳಿಗೆ ಎಷ್ಟೆಷ್ಟು ಹಣ ವೆಚ್ಚವಾಗುತ್ತಾ ಇದೆ ಎಂಬ ಅಂಶವನ್ನೆಲ್ಲಾ ತಿಳಿದುಕೊಂಡಿರ ತಕ್ಕ ಜವಾಬ್ದಾರಿಯುತರಾದ ಸದಸ್ಯರ ಮುಂದೆ ಹೆಚ್ಚಾಗಿ ಹೇಳಬೇಕಾಗಿಲ್ಲ. ಪ್ರತಿ ವರ್ಷವೂ ಪ್ರೈಮರಿ ಸ್ಕೂಲು, ಮಿಡ್ಲ್ ಸ್ಕೂಲು, ಹೈ ಸ್ಕೂಲುಗಳು ಜಾಸ್ತಿಮಾಡುತ್ತಾ ಇರುವಾಗ ಎಲ್ಲಾ ಕಟ್ಟಡ ಸರ್ಕಾರದವರೇ ಕಟ್ಟಿಸಿಕೊಡ ಬೇಕೆಂಬ ತತ್ವ ಚನ್ನಾಗಿದ್ದರೂ, ಅದನ್ನು ಕಾರ್ಯಗತಮಾಡಲು ಸರ್ಕಾರದವರಿಗೆ ಆಗು ತ್ತದೆಯೇ ಎಂಬುದನ್ನು ತಿಳಿದುಕೊಳ್ಳಬೇಕು. ಶ್ರೀಮಾನ್ ಚನ್ನಬಸಪ್ಪನವರು ಚೆನ್ನಾಗಿ ಉತ್ತರ ಕೊಟ್ಟಿದ್ದಾರೆ. ಇದು ಆಯಾಯಾ ಸ್ಥಳದಲ್ಲಿರ ತಕ್ಕ ಜನಗಳ ಜವಾಬ್ದಾರಿ. ಆ ರೀತಿ ಕಟ್ಟಡ ಕೊಡುತ್ತೇವೆ, ಸ್ಕೂಲ್ ಕೊಡಿ ಎಂದು ಕೇಳು ತ್ತಿದ್ದಾರೆ. ಆದರೂ ಎಲ್ಲಾ ಕಡೆಯೂ ಸ್ಕೂಲು ಕೊಡುವುದಕ್ಕೆ ಸಾಧ್ಯ ಆಗಿಲ್ಲ. ಆ ಕಾರಣ ದಿಂದ ತಾವು ಕಟ್ಟಡದ ವಿಚಾರದಲ್ಲಿ ಯೋಚನೆ ಮಾಡಬೇಕಾಗಿಲ್ಲ. ಅನೇಕರು ದಾನಿಗಳು ಉದಾರ ಮನಸ್ಸಿನಿಂದ, ವಿದ್ಯಾಭ್ಯಾಸದಲ್ಲಿ ಆಸಕ್ತಿ ಇರುವುದರಿಂದ, ತಾವೇ ತಾವಾಗಿ ಮುಂದೆ ಬಂದು ಡೊನೇಷನ್ ಕೊಡುತ್ತಾ ಇದ್ದಾರೆ. ನಿಮ್ಮ ಡಿಸ್ಟ್ರಿಕ್ಟ್‌ನಲ್ಲೇ ಶ್ರೀಮಾನ್ ಚನ್ನಬಸಪ್ಪನವರು ಮುಂದಾಳಾಗಿ ನಿಂತು ಕೊಂಡು ಎಷ್ಟೋ ಕಡೆ ಡೊನೇಷನ್ ಕೊಡಿಸಿ ಕೊಟ್ಟು ಬಹಳ ಮುತುವರ್ಜಿವಹಿಸಿ ಕಟ್ಟಡ ಗಳನ್ನು ಕಟ್ಟಿಸಿಕೊಡಲು ಕೆಲಸ ಮಾಡಿದ್ದಾರೆ. ಈ ರೀತಿ ಆದರೆ ಸ್ಕೂಲುಗಳನ್ನು ಕೊಡಲಿಕ್ಕೆ

ಸಹಾಯವಾಗಬಹುದು. ಈ ಕಾರಣಗಳಿಂದ ಕಟ್ಟಡಗಳ ವಿಚಾರದಲ್ಲಿ ಎಲ್ಲಾ ಸ್ಕೂಲುಗಳಿಗೂ ಕಟ್ಟದ ಒದಗಿಸತಕ್ಕ ಪೂರ್ಣ ಜವಾಬ್ದಾರಿಯನ್ನು ಸಕಾರದವರೇ ವಹಿಸಿಕೊಳ್ಳತಕ್ಕ ಸ್ಥಿತಿಯಲ್ಲಿಲ್ಲವಾದ್ದರಿಂದ ಈ ರೀತಿ ಠರಾವನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಈ ವರ್ಷ ಅನೇಕ ಕಡೆಗಳಲ್ಲಿ ಹೈಸ್ಕೂಲುಗಳು ಜಾಸ್ತಿಯಾಗಿವೆ. ಸಾರ್ವಜನಿಕರಿಂದ ಹಣವನ್ನು ಶೇಖರಿಸಿ ಕಟ್ಟಡ ಕಟ್ಟಿಸಿ ಕೊಟ್ಟಿದ್ದಾರೆ. ಸರ್ಕಾರದವರು ಎಷ್ಟು ಕೊಡಬಹುದೋ ಅಷ್ಟು ಕೊಟ್ಟಿದ್ದಾರೆ. ಈ ರೀತಿ ಎಲ್ಲರೂ ಮುತುವರ್ಜಿಯಿಂದ ಕೆಲಸ ಮಾಡಿದರೆ ಆಗುತ್ತದೆಯೇ ಹೊರತು ಸರ್ಕಾರದವರೇ ಸ್ಕೂಲು, ಕಟ್ಟಡ ಕೊಡಬೇಕೆಂದರೆ ಬಹಳ ಕಷ್ಟವಾಗುತ್ತದೆ. ಅದಕ್ಕೆ ಮಾನ್ಯ ಸದಸ್ಯರು ಕ್ಷಮಿಸಬೇಕು. ಶ್ರೀಮಾನ್ ರಂಗರಾಮಯ್ಯನವರು ತಂದಿರತಕ್ಕ ಠರಾವನ್ನು ಅದು ಇರತಕ್ಕ ರೀತಿಯಲ್ಲಿ ಒಪ್ಪಿಕೊಂಡರೆ ಕಾರ್ಯಗತ ಮಾಡತಕ್ಕದ್ದು ಬಹಳ ಕಷ್ಟವಾಗುತ್ತದೆ. ಏಕೆಂದರೆ ಹಣ ಇಲ್ಲ. ಅಷ್ಟೆ ಕಾರಣ.

ಆದರೂ ಅವರು ತಿಳಿಸಿರತಕ್ಕ ಎಲ್ಲ ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು ಮೈಸೂರು ಜಿಲ್ಲೆಯು ಹಿಂದುಳಿದಿರತಕ್ಕದ್ದೆಂದು ಭಾವಿಸಿ ಹೆಚ್ಚಿನ ದರ್ಜೆಯಲ್ಲಿ, ಇದುವರೆಗೆ ಯಾವ ರೀತಿ ಸ್ಕೂಲುಗಳನ್ನು ಸ್ಥಾಪನೆ ಮಾಡುತ್ತಿದ್ದಾರೋ ಮತ್ತು ಈ ವರ್ಷ ಹೇಗೆ 37 ಸ್ಕೂಲುಗಳನ್ನು ಹೊಸದಾಗಿ ಕೊಟ್ಟಿದೆಯೋ ಅದೇ ರೀತಿ ಮುಂದೆಯೂ ಒಂದು ಕಾರ್ಯಪಟ್ಟಿಯ ಪ್ರಕಾರ ಬೇರೆ ಡಿಸ್ಟ್ರಿಕ್ಟುಗಳ ದರ್ಜೆಗೆ ಬರುವವರೆಗೆ ಹೆಚ್ಚಿಗೆ ಗಮನಕೊಡುವುದಕ್ಕೆ ಮತ್ತು ಹೆಚ್ಚಿನ ಪ್ರಾಶಸ್ತ್ಯ ಕೊಡುವುದಕ್ಕೆ ಏರ್ಪಾಡು ಮಾಡುತ್ತಾರೆಂದು ಹೇಳುತ್ತೇನೆ. ಅವರು ಹೇಳಿದ ಎಲ್ಲ ಅಂಶಗಳನ್ನು ನೆನಪಿನಲ್ಲಿಟ್ಟುಕೊಂಡಿರುತ್ತೇವೆ. ಆದರೆ ಈ ಠರಾವನ್ನು ಈಗಿರತಕ್ಕ ರೀತಿಯಲ್ಲಿ ಒಪ್ಪುವುದಕ್ಕಾಗುವುದಿಲ್ಲ. ಅದು ಬಹಳ ಜವಾಬ್ದಾರಿಯಾಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ನಾನು ಕೊಟ್ಟ ಭರವಸೆಯ ಮೇಲೆ ತಮ್ಮ ನಿರ್ಣಯವನ್ನು ವಾಪಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

ಶ್ರೀ ಎಸ್. ರಂಗರಾಮಯ್ಯನವರು.—ಮಾನ್ಯ ಮಂತ್ರಿಗಳು ಕೊಟ್ಟ ಹೇಳಿಕೆಯಲ್ಲಿ ಪೂರ್ಣ ಭರವಸೆಯನ್ನಿಟ್ಟುಕೊಂಡು ನಾನು ಈ ನಿರ್ಣಯವನ್ನು ವಾಪಸು ತೆಗೆದುಕೊಳ್ಳಲು ಸಭೆಯವರ ಅಪ್ಪಣೆ ಬೇಡುತ್ತೇನೆ.

The Resolution was, by leave, withdrawn.

Mr. SPEKAER.—The House will now adjourn and meet tomorrow at One of the Clock.

The Assembly adjourned at Two Minutes past Six of the Clock to meet again at One of the Clock on Friday. 26th October 1951.

WD 1046—GPB—500—24-1-1952

LEGISLATIVE ASSEMBLY.

SIXTH DAY.

Friday, 26th October 1951.

The Legislative Assembly met in the Assembly Hall, Old Public Offices, Bangalore, on Friday, 26th October 1951.

Mr. Speaker (The Hon'ble Sri V. Venkatappa) in the Chair.

QUESTIONS AND ANSWERS.

Mr. SPEAKER (The Hon'ble Sri V. Venkatappa).—Questions.

Establishment of an important industry in Tumkur District.

Q.—300. Sri B. HUTCHE GOWDA (Tumkur District—General).—

Will the Government be pleased to state :—

(*a*) whether they have thought of establishing some important industry in Tumkur District ;

(*b*) if so, at what stage those schemes are ?

A.—The Hon'ble Sri H.C. DASAPPA (Minister for Finance and Industries).-

(*a*) No schemes are under consideration at present.

(*b*) Does not arise in view of reply to (*a*).

ಶ್ರೀ ಬಿ. ಹುಚ್ಚೇಗೌಡರು.—ಅಲ್ಲಿ ಯಾವುದಾದರೂ ಮುಖ್ಯ ಕೈಗಾರಿಕೆಯನ್ನು ಸ್ಥಾಪಿಸಲು ಹಿಂದೆ ಪರಿಶೀಲನೆ ನಡೆಸಿದ್ದಿರಾ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು —ಹಾಗೆ ನಡೆಸಿದುದರ ಫಲವಾಗಿಯೇ ಈಗ ಅಲ್ಲಿ ಒಂದು ಫರ್ನಿಚರ್ ಕಾರ್ಖಾನೆ ಪ್ರಾರಂಭವಾಗಿದೆ, ಚೆನ್ನಾಗಿ ಕೆಲಸ ನಡೆಯುತ್ತಿದೆ.

ಶ್ರೀ ಬಿ. ಹುಚ್ಚೇಗೌಡರು.—ಅಲ್ಲಿ ಸೈಕಲ್ ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕೆಂಬ ಯೋಚನೆ ಇತ್ತೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಈಗೇನೂ ಇಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಹಿಂದೆ ಪರಿಶೀಲನೆ ನಡೆದು ಅದಕ್ಕೇನಾದರೂ ಅಡ್ಡಿ ಬಂದಿದೆಯೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಬೇಕಾದಷ್ಟು ಪ್ರಯತ್ನ ನಡೆಸಿದೆವು ಯಾವುದಾದರೂ ಸ್ಥಾಪಿಸಬೇಕೆಂದು. ಆದರೆ ಕೂಡಿ ಬರಲಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ಫರ್ನಿಚರ್ ಕೈಗಾರಿಕೆಯೊಂದೇ ಸಾಕೆಂದು ನಿಮ್ಮ ಭಾವನೆಯೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇಷ್ಟೇ ಸಾಕೆಂಬ ಭಾವನೆ ಎಂದೂ ಇಲ್ಲ. ಆದರೆ ಕೈಗಾರಿಕೆಗಳನ್ನು ತಾಲ್ಲೂಕುವಾರು ಹಂಚುವುದು ಕಷ್ಟ, ಪ್ರತಿಯೊಂದನ್ನೂ ಸಾಧಕ ಬಾಧಕಗಳನ್ನೂ ನೋಡಿ ಮಾಡಬೇಕು.

ಶ್ರೀ ಬಿ. ಹುಚ್ಚೇಗೌಡರು.—ಈಗ ಆ ಕೈಗಾರಿಕೆಯಲ್ಲಿ ಹತ್ತು ಜನರಾದರೂ ಕೆಲಸ ಮಾಡುತ್ತಿದ್ದಾರೆಯೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಕೆಲಸ ಚೆನ್ನಾಗಿ ನಡೆಯುತ್ತಿದೆ. ತಾವು ನೋಡಿದರೆ ಗೊತ್ತಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ಈಗ ಅಲ್ಲಿ ಕೆಲಸ ನಡೆಯುತ್ತಿಲ್ಲ. ಬೇರೆ ಕಡೆಯಿಂದ ಮಾಡಿಸಿ ತರಿಸುವುದು ಅಲ್ಲಿ ರೂಢಿಯಲ್ಲಿದೆಯೆಂಬುದು ಗೊತ್ತಿದೆಯೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಹಾಗಲ್ಲ, ನಾನೇ ಪರಿಶೀಲನೆ ಮಾಡಿ ನೋಡಿದ್ದೇನೆ. ಅದು ಫಾರೆಸ್ಟ್ ಇಲಾಖೆಯ ಮೇಲ್ವಿಚಾರಣೆಯಲ್ಲಿದೆ. ಪೀಸ್‌ವರ್ಕ್ ಪದ್ಧತಿಯನ್ನನುಸರಿಸುತ್ತಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ಅಲ್ಲಿ ಬೆಂಚು ಗಳು, ಸ್ಟೂಲುಗಳನ್ನು ಮಾತ್ರ ಮಾಡುತ್ತಿದ್ದಾರೆ, ಅಷ್ಟು ವಿನಾ ಬೇರೆ ಇನ್ನಾವುದನ್ನೂ ಮಾಡು ತ್ತಿಲ್ಲವೆಂಬುದು ಗೊತ್ತಿದೆಯೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇದಕ್ಕೆ ಮುಖ್ಯ ಕಾರಣವೇನೆಂದರೆ, ಈಗ ವಿದ್ಯಾ ಭ್ಯಾಸದ ಇಲಾಖೆಗೆ ಬೆಂಚು ಮತ್ತು ಸ್ಟೂಲು ಗಳನ್ನು ಸರಬರಾಯಿ ಮಾಡುವುದು ಮುಖ್ಯ ಉದ್ದೇಶ.

ಶ್ರೀ ಬಿ. ಹುಚ್ಚೇಗೌಡರು.—ಇನ್ನಾವುದಾ ದರೂ ಮುಖ್ಯ ಕೈಗಾರಿಕೆಗಳನ್ನು ಸ್ಥಾಪಿಸಲು ಪರಿಶೀಲನೆ ನಡೆಸಲು ಸರ್ಕಾರದವರಿಗೆ ಸಾಧ್ಯವೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಎಷ್ಟು ಸಾಧ್ಯವೋ ಅಷ್ಟೂ ಮಾಡುತ್ತಿದ್ದಾರೆ. ಒಂದು ಕೈಗಾರಿಕೆ ಸ್ಥಾಪಿಸಬೇಕಾದರೆ ಅದಕ್ಕೆ ಬೇಕಾದ ಕಚ್ಚಾ ಮಾಲುಗಳು ಮತ್ತು ಇತರ ಅನುಕೂಲತೆಗಳಿರಬೇಕು. ಹಾಗಿದ್ದರೆ ಸಾಧ್ಯವೇ ಹೊರತು, ಇಲ್ಲದಿದ್ದರೆ ಆಗುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ತುಮಕೂರು ಜಿಲ್ಲೆ ಇತರ ಎಲ್ಲ ಜಿಲ್ಲೆಗಳಿಗಿಂತಲೂ ಹಿಂದುಳಿ ದಿದೆಯೆಂದು ಗೊತ್ತಿದೆಯೆ?

ಅಧ್ಯಕ್ಷರು.—ಆ ಉಪಪ್ರಶ್ನೆಗೂ ಈ ಪ್ರಶ್ನೆ ಗೂ ಸಂಬಂಧವಿಲ್ಲ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು (ಬೆಂಗಳೂರು ಜಿಲ್ಲೆ).—ಈ ಫರ್ನಿಚರ್ ಕಾ ರ್ಖಾನೆ ಎಲ್ಲಿದೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ತುಮಕೂರಿನಲ್ಲಿ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವ ರು.—ಇದಕ್ಕೆ ಸರ್ಕಾರದವರು ಹಾಕಿರುವ ಬಂಡವಾಳವೆಷ್ಟು?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ತೊಂಬತ್ತು ಸಾವಿರ ರೂಪಾಯಿ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವ ರು.—ಈಗ ಫಾರೆಸ್ಟ್ ಇಲಾಖೆಯ ಹತೋಟಿ ಯಲ್ಲಿದೆಯೆಂದು ಹೇಳಿದರು. ಸಾಮಾನ್ಯವಾಗಿ ಈ ಇಲಾಖೆಯಲ್ಲಿ ಫರ್ನಿಚರ್ ಕೆಲಸ ಮಾಡು ವವರಿದ್ದಾರೆಯೋ ಅಥವಾ ಮರಗಳನ್ನು ನೆಡು ವುದು, ನೋಡಿಕೊಳ್ಳುವುದು ಈ ಕೆಲಸ ಮಾಡು ವವರಿದ್ದಾರೆಯೊ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯ ನವರು (ಸ್ಥಳೀಯ ಪ್ರಜಾಧಿಕಾರ ಶಾಖೆಯ ಸಚಿವರು).—ಕೆಲಸವನ್ನು ನೋಡಿಕೊಳ್ಳಲು ಕೈಗಾರಿಕಾ ಇಲಾಖೆಯವರಿದ್ದಾರೆ, ಫಾರೆಸ್ಟ್ ಇಲಾಖೆಯವರು ಮರವನ್ನು ಸರಬರಾಯಿ ಮಾಡುತ್ತಾರೆ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವ ರು.—ಈ ಕಾರ್ಖಾನೆಯಿಂದ ಸರ್ಕಾರಿ ಇಲಾಖೆ ಗಳಿಗೆ ಅಥವ ಇತರ ಸಂಸ್ಥೆಗಳಿಗೆ ಎಷ್ಟು ಸಾಮಾ ನುಗಳನ್ನು ತಯಾರಿಸಿ ಸರಬರಾಯಿ ಮಾಡಿ ದ್ದಾರೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವ ರು.—ಸುಮಾರು ಎರಡು ಸಾವಿರ ಸ್ಟೂಲು ಮತ್ತು ಬೆಂಚುಗಳನ್ನೊದಗಿಸಿದ್ದಾರೆ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.-ಇಂತಹ ಕೈಗಾರಿಕೆಗಳನ್ನು ಇತರ ಕಡೆಯೂ ಪ್ರಾರಂಭ ಮಾಡುತ್ತೀರೋ ಅಥವ ತುಮಕೂರು ಒಂದರಲ್ಲೊ?

ಮಾನ್ಯ ಶ್ರೀ ಹೆಚ್. ಸಿ. ದಾಸಪ್ಪನವರು.—ಇದು ಒಂದು ಹೊಸ ಪ್ರಯೋಗ. ಇನ್ನೂ ವಿಸ್ತರಿಸಬೇಕೆಂಬ ಯೋಚನೆ ಇದೆ. ಒಂದು ಕಡೆ ತಯಾರುಮಾಡಿ ಆಯಾ ತಾಲ್ಲೂಕಿಗೆ ಕಳುಹಿಸಿ ಅಲ್ಲಲ್ಲಿ assemble ಮಾಡುವುದಕ್ಕೆ ಅವಕಾಶ ಕಲ್ಪಿಸಬೇಕೆಂಬ ಆಲೋಚನೆ ಇದೆ. ಇದು ಹೇಗಾಗುತ್ತದೆಂಬುದನ್ನು ಮುಂದೆ ನೋಡಬೇಕು.

Sri D. H. CHANDRASEKHARAIYA (Chitaldrug District—General).—When did that factory come into working order?

The Hon'ble Sri H. C. DASAPPA.—The Hon'ble Member was a Minister at that time.

The Hon'ble Sri R. CHENNIGARAMIAH.—About one year and a half ago.

Sri D. H. CHANDRASEKHARAIYA.—Has any scheme been prepared 'in regard to the prospects of this concern? What quantity of furniture has been

prepared by the factory, and what value has been realised? Has any report been prepared in regard to these and is it possible to furnish it to Hon'ble Members of this House?

The Hon'ble Sri H. C. DASAPPA.—Yes. It is quite possible. There is 10 per cent profit.

Sri D. H. CHANDRASEKHARAIYA.—But my enquiries go to show that the furniture manufactured here are costlier than what is manufactured by private concerns elsewhere. Is it a fact?

The Hon'ble Sri R. CHENNIGARAMIAH.—It is not correct. Tenders were called for by the Education Department and they found that these rates were lower than the market rates and so they accepted this tender.

Sri D. H. CHANDRASEKHARAIYA.—What is the object of handing it over to private management?

Mr. SPEAKER.—This supplementary question does not arise. The main question is whether Government have thought of establishing some important industry in Tumkur District.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ತುಮಕೂರು ಜಿಲ್ಲೆಯಲ್ಲಿ ಹೊಸದಾಗಿ ಯಾವುದಾದರೂ ಒಂದು ಮುಖ್ಯ ಕೈಗಾರಿಕೆಯನ್ನು ಸ್ಥಾಪಿಸಬೇಕೆಂದು ಸರ್ಕಾರದವರು ಆಲೋಚಿಸಿದ್ದಾರೆಯೇ ಎಂಬುದು ಈಗ ನಮ್ಮ ಮುಂದಿರತಕ್ಕ ಪ್ರಶ್ನೆ. ಅದಕ್ಕೆ ಅಂಥಾದ್ದು ಯಾವುದೂ ಇಲ್ಲವೆಂದು ಉತ್ತರ ತಿಳಿಸಿದೆ.

Sri D. H. CHANDRASEKHARAIYA.—My question is, why they have proposed this particular industry to be given over to private management?

The Hon'ble Sri R. CHENNIGARAMIAH.—It has not been proposed to be given over to private management. It is Government-managed.

Sri D. H. CHANDRASEKHARAIYA.—At present it is so. The question is whether they have thought of establishing some important industry in Tumkur District. If there is no idea of giving it over to private management, my question does not arise.

The Hon'ble Sri H. C. DASAPPA.—The Hon'ble Member is perhaps thinking of Question No. 166.

Supply of electric power to the Vedavathi River Valley in Hiriyur.

Q.—18. Sri M. GOVINDA REDDY (Chitaldrug District--General).—

Will the Government be pleased to state :—

(*a*) whether estimates have been made for supply of electric power to the Vedavathi River Valley in Hiriyur;

(*b*) particulars of estimates so made;

(*c*) whether funds have been allotted relating to the estimates;

(*d*) when works relating to estimates would be ready to start?

A.—The Hon'ble Sri K. T. BHASHYAM (Minister for Law and Labour).—

(*a*) Yes.

(*b*) An estimate for Rs. 2,88,000 has been prepared for power supply to 100 I.P. sets in Hiriyur Taluk and another estimate for Rs. 3,60,000 has been prepared for power supply to 79 I. P. sets at Bharmagiri, Vanivilaspura, Katrekenahalli, Kurubarahalli and Myakenahalli in Chitaldrug District.

(*c*) Not yet.

(*d*) As soon as the relative estimates are sanctioned, funds allocated and materials procured.

ಶ್ರೀ ಎಂ. ಗೋವಿಂದ ರೆಡ್ಡಿಯವರು.—ನಾನು ಕೇಳಿರತಕ್ಕ (ಎ) ಪ್ರಶ್ನೆಗೆ ಉತ್ತರವಾಗಿ ವೇದಾವತಿ ನದಿ ಬೈಲಿನ ಪ್ರದೇಶಕ್ಕೆ ವಿದ್ಯುಚ್ಛಕ್ತಿಯನ್ನೊದಗಿಸಲು 2,88,000 ರೂಪಾಯಿಗಳನ್ನು ಖರ್ಚು ಮಾಡಲು ಅಂದಾಜಾಗಿರುತ್ತೆಂದು ಉತ್ತರ ಕೊಡಲಾಗಿದೆ. ಆದರೆ ಈ ಅನುಕೂಲ ಎಷ್ಟು ಗ್ರಾಮಗಳಿಗೆ ದೊರೆಯುತ್ತದೆಂಬುದನ್ನು ತಾವು ತಿಳಿಸುವಿರಾ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಸುಮಾರು 12 ಗ್ರಾಮಗಳಿಗೆ ಇದರಿಂದ ಅನುಕೂಲ ದೊರೆಯಬಹುದೆಂದು ತೋರುತ್ತೆ.

ಶ್ರೀ ಎಂ. ಗೋವಿಂದ ರೆಡ್ಡಿಯವರು.— ಆ ಹಳ್ಳಿಗಳ್ಯಾವುವೆಂಬುದನ್ನು ದಯವಿಟ್ಟು ತಿಳಿಸುವಿರಾ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.— ಆ 12 ಗ್ರಾಮಗಳು ಯಾವುವೆಂದರೆ, ಬಬ್ಬೂರು, ಹಿರಿಯೂರು, ಕಾತ್ರಿಕೇನಹಳ್ಳಿ, ಎಳನಡು, ಮಸ್ಕಲ್ಲು, ಮ್ಯಾಕೇನಹಳ್ಳಿ, ಜಾವಗಲ್, ಹೂವಿನಕಟ್ಟೆ, ವಿಟ್ಠಲಾಪುರ, ಅತ್ರಿ ಮತ್ತು ಆದಿವಾಲ.

ಶ್ರೀ ಎಂ. ಗೋವಿಂದ ರೆಡ್ಡಿಯವರು.— ಇದರಲ್ಲಿ ಧರ್ಮಪುರ ಹೋಬಳಿ ಗ್ರಾಮಗಳೂ ಸೇರಿರುತ್ತವೆಯೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.— ಅವುಗಳಲ್ಲಿ ಯಾವ ಯಾವ ಹೋಬಳಿಗೆ ಸೇರಿರುತ್ತವೆಂಬುದು ಗೊತ್ತಾಗುವುದಿಲ್ಲ.

ಶ್ರೀ ಎಂ. ಗೋವಿಂದ ರೆಡ್ಡಿಯವರು.— ನದಿಯ ದಡದಿಂದ ಎಷ್ಟು ಮೈಲಿ ಫಾಸಲೆಯಲ್ಲಿ ರತಕ್ಕ ಜನಗಳಿಗೆ ಇದರ ಉಪಯೋಗವಾಗುತ್ತೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.— ಕೆಲವು ಕಡೆ 7 ಮೈಲಿ ಮತ್ತೆ ಕೆಲವು ಕಡೆ 13 ಮೈಲಿ ಫಾಸಲೆಯೊಳಗಿರತಕ್ಕ ಪ್ರದೇಶಕ್ಕೆಲ್ಲಾ ನೀರನ್ನೊದಗಿಸಬಹುದು.

ಶ್ರೀ ಎಂ. ಗೋವಿಂದ ರೆಡ್ಡಿಯವರು.— ಈ ಯೋಜನೆಯಲ್ಲದೆ ಸರ್ಕಾರದವರು ಮತ್ತೆ ಯಾವುದಾದರೂ ಬೇರೆ ತರದ ಯೋಜನೆಗಳನ್ನು ಆಲೋಚನೆ ಮಾಡಿದ್ದೀರಾ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.— ಹೌದು. ಮಾಡಿದ್ದೇವೆ.

ಶ್ರೀ ಎಂ. ಗೋವಿಂದ ರೆಡ್ಡಿಯವರು.— ಈ ಯೋಜನೆಯನ್ನೇ ವಿಸ್ತರಿಸಲು ಇನ್ನೂ ಕೆಲವು ಎಸ್ಟಿಮೇಟುಗಳನ್ನೇನಾದರೂ ಮಾಡಿದ್ದೀರಾ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.— ಕೆಲವು ಮಾಡಲಾಗಿದೆ.

ಶ್ರೀ ಎಂ. ಗೋವಿಂದ ರೆಡ್ಡಿಯವರು.— ಅವುಗಳ್ಯಾವುವೆಂಬುದನ್ನು ತಿಳಿಸಲಾಗುತ್ತದೆಯೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.— ಅದೆಲ್ಲವನ್ನೂ ಈ ಕೂಡಲೇ ತಿಳಿಸಬೇಕೆಂದರೆ ಸಾಧ್ಯವಿಲ್ಲ. ವೇದಾವತಿ ನದಿ ಬೈಲಿನಲ್ಲಿ ಕೆಲವು ಪ್ರದೇಶಕ್ಕೆ 79 I.P. ಪಂಪು ಸೆಟ್ಟುಗಳನ್ನೂ ಸಹ ಒದಗಿಸಬೇಕೆಂದಿದೆ.

ಶ್ರೀ ಎಂ. ಗೋವಿಂದ ರೆಡ್ಡಿಯವರು.— ಈ ಪ್ರದೇಶಗಳೆಲ್ಲವೂ ನಾಲಾ ಬೈಲಿಗೇ ಸೇರಿರುತ್ತವೆಯೋ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.— ಹೌದು.

ಶ್ರೀ ಎಂ. ಗೋವಿಂದ ರೆಡ್ಡಿಯವರು.— ಇದರ ಪೂರ್ತಿ ಎಸ್ಟಿಮೇಟು ಎಷ್ಟಾಗುತ್ತದೆಂಬುದನ್ನು ನೋಡಿದ್ದೀರಾ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.— ನೋಡಿದ್ದೇವೆ.

ಶ್ರೀ ಎಂ. ಗೋವಿಂದ ರೆಡ್ಡಿಯವರು.— ಎಸ್ಟಿಮೇಟು ಮಂಜೂರಾದ ಎಷ್ಟು ದಿನಗಳ ಮೇಲೆ ಈ ಕೆಲಸಗಳನ್ನು ಪ್ರಾರಂಭಿಸಬೇಕೆಂದಿದ್ದೀರಿ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.— ಎಷ್ಟು ಬೇಗ ಸಲಕರಣೆಗಳು ಒದಗಿದರೆ ಅಷ್ಟೂ ಬೇಗ ಕೈಗೊಳ್ಳಲಾಗುತ್ತೆ.

ಶ್ರೀ ಎಂ. ಗೋವಿಂದ ರೆಡ್ಡಿಯವರು.— ಎಸ್ಟಿಮೇಟು ಮಂಜೂರಾಗಿ ಬರಲು ಹೋಗಿರುತ್ತದೆಯೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.— ಹೋಗಿದೆ.

ಶ್ರೀ ಎಂ. ಗೋವಿಂದರೆಡ್ಡಿಯವರು.— ಈ ಅಂದಾಜುಗಳೆಲ್ಲಾ ಮಂಜೂರಾಗುತ್ತವೆಂದು ನಾವು ನಿರೀಕ್ಷಿಸಬಹುದೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.— ಆಗಬಹುದು. ತಾವು ಭಾವಿಸುವುದರಲ್ಲಿ ತಪ್ಪೇನೂ ಇಲ್ಲ.

ಶ್ರೀ ಎಂ. ಗೋವಿಂದ ರೆಡ್ಡಿಯವರು.— ಸಾಮಾನುಗಳು ಒದಗಿದ ಕೂಡಲೆ ಕಾರ್ಯವನ್ನು ಪ್ರಾರಂಭ ಮಾಡುವುದಾಗಿ ತಾವು ತಿಳಿಸಿದಿರಿ. ಆದರೆ ಎಷ್ಟು ಕಾಲ ಬೇಕಾದೀತು ಆ ಸಾಮಾನು ದೊರೆಯಲು ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.— ಅದನ್ನೆಲ್ಲಾ ನಾನು ಹೇಗೆ ಹೇಳಲು ಸಾಧ್ಯ ? ಎಷ್ಟೆಷ್ಟು ಬೇಗ ಒದಗಿದರೆ ಅಷ್ಟಷ್ಟೂ ಬೇಗ ಕೆಲಸವನ್ನು ಪ್ರಾರಂಭಿಸಲಾಗುತ್ತೆ.

ಶ್ರೀ ಎಂ. ಗೋವಿಂದ ರೆಡ್ಡಿಯವರು.—ಆ ಪ್ರದೇಶದಲ್ಲಿ ಆಹಾರದ ಅಭಾವ ತುಂಬಾ ಇರುವುದರಿಂದ ಹೆಚ್ಚು ಆಹಾರ ಬೆಳೆಯಲು ಜನರಿಗೆ ಪ್ರೋತ್ಸಾಹ ನೀಡಲು ಬೇಗ ಕೆಲಸವನ್ನು ಕೈಗೊಳ್ಳುವುದು ಉಚಿತವಲ್ಲವೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದು ನಿರ್ವಿವಾದ ವಿಚಾರ.

ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).— ಈ ವೇದಾವತಿ ನದಿ ಬೆಡ್ ಒಂದೇ ಅಲ್ಲದೆ ಮತ್ತೆ ಬೇರೆ ಎಲ್ಲಿಯಾದರೂ ಇಂಥಾ ಯೋಜನೆಗಳನ್ನು ಕೈಗೊಂಡು ಆ ಬಗ್ಗೆ ಅಂದಾಜಗಳನ್ನೇನಾದರೂ ತಯಾರಿಸಲಾಗಿದೆಯೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ತಯಾರಿಸಲಾಗಿರುತ್ತೆಂದು ಆಗಲೇ ತಿಳಿಸಿದ್ದೇನೆ. ಆದರೆ ಅವುಗಳು ಯಾವುವೆಂಬುದನ್ನು ಈಗ ತಿಳಿಸಲು ಸಾಧ್ಯವಿಲ್ಲ.

ಶ್ರೀ ಎ. ಭೀಮಪ್ಪನಾಯಕರು.—ಹಿರಿಯೂರು, ಚಳ್ಳಕೆರೆ ಮತ್ತು ಮೊಳಕಾಲ್ಮುರು ಈ ಮೂರು ವೇದಾವತಿ ನದಿ ಬೆಡ್ಡಿಗೆ ಸೇರಿದವುಗಳಲ್ಲವೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹೌದು.

ಶ್ರೀ ಎ. ಭೀಮಪ್ಪನಾಯಕರು.—ಈ ಮೂರಕ್ಕೂ ಸೇರಿ ಒಟ್ಟು ಅಂದಾಜಾಗಿರುವ ಮೊಬಲಗೆಷ್ಟು ಮತ್ತು ಈಗಾಗಲೇ ಖರ್ಚಾಗಿರುವುದೆಷ್ಟು?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಈಗಾಗಲೇ 13 ಲಕ್ಷ ಖರ್ಚಾಗಿದೆ. ಪುನಃ 20 ಲಕ್ಷಕ್ಕೆ ಅಂದಾಜು ತಯಾರಾಗಿರುತ್ತೆ.

ಶ್ರೀ ಎ. ಭೀಮಪ್ಪನಾಯಕರು.—ಈ ಅಂದಾಜುಗಳನ್ನು ಮಂಜೂರು ಮಾಡತಕ್ಕವರು ಯಾರು?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಸರ್ಕಾರದವರು.

ಶ್ರೀ ಎ. ಭೀಮಪ್ಪನಾಯಕರು.—ಹಾಗಾದರೆ ಈಗ ಈ ಅಂದಾಜುಗಳೆಲ್ಲಾ ಸರ್ಕಾರದ ಮುಂದೆ ಬಂದಿರುತ್ತವೆಯೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಬಂದಿವೆ.

ಶ್ರೀ ಎ. ಭೀಮಪ್ಪನಾಯಕರು.—ಒಟ್ಟಿನಲ್ಲಿ ಇಂಥಾ ಯೋಜನೆಗಳನ್ನು ಪರಿಶೀಲಿಸುವುದು, ತದನಂತರ ಮಂಜೂರು ಮಾಡುವುದು ಮತ್ತು ದುಡ್ಡು ಕೊಡುವುದೆಲ್ಲಾ ಮೈಸೂರು ಸರ್ಕಾರ ತಾನೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹೌದು.

ಶ್ರೀ ಎ. ಭೀಮಪ್ಪನಾಯಕರು.—ಈ ಮೂರು ಕೆಲಸಗಳನ್ನೂ ಸರ್ಕಾರವೇ ಮಾಡುತ್ತಿರುವುದರಿಂದ ಪರಿಶೀಲಿಸುವುದು ಮತ್ತು ಮಂಜೂರು ಮಾಡುವುದು ಇತ್ಯಾದಿಗಳನ್ನೆಲ್ಲಾ ತಿಳಿಸದೆ ಹಣ ದೊರೆತು, ಸಾಮಾನು ಸಿಕ್ಕಿದ ಕೂಡಲೇ ಕೆಲಸವನ್ನು ಕೈಗೊಳ್ಳುತ್ತೇವೆಂದು ತಿಳಿಸಬಾರದೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಬಿಡಿಸಿ ಹೇಳಲಾಗಿದೆ.

Electrification of Bagepalli, Gudibanda and surrounding areas.

Q.—140. Sri K. SAMPANGI RAMIAH (Kolar District—General).—Will the Government be pleased to state :—

(*a*) whether they have sanctioned the electrification of Bagepalli and Gudibanda ;

(*b*) how far the work has progressed ;

(*c*) when the work was started ;

(*d*) whether any portion of the line put up was removed ;

(*e*) when the work is going to be taken up and finished ?

A.—The Hon'ble Sri K. T. BHASHYAM (Minister for Law and Labour).—

(*a*) An estimate amounting to Rs. 6,49,500 for the electrification of Bagepalli and Gudibanda and surrounding areas in Kolar District has been sanctioned.

(*b*) Survey of the transmission line from Goribidnur to Gudibanda and Bagepalli and the interior distribution lines at both the places has been completed and poles have been erected to a distance of about half a mile only.

(THE HON'BLE SRI K. T. BHASHYAM).

(c) During March 1951.

(d) No.

(e) The work will be taken up for execution as soon as the required materials are collected.

ಶ್ರೀ ಕೆ. ಸಂಪಂಗಿರಾಮಯ್ಯನವರು.—ನನ್ನ (ಎ) ಪ್ರಶ್ನೆಗೆ ಉತ್ತರವಾಗಿ ಅಂದಾಜನ್ನು ಮಂಜೂರು ಮಾಡಲಾಗಿರುತ್ತೆಂದು ತಿಳಿಸಿದ್ದೀರಿ. ಹಾಗೆ ಮಂಜೂರಾದ್ದು ಯಾವಾಗ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—1950ರಲ್ಲಿ ಮಂಜೂರಾಯಿತು.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಹಾಗಾದರೆ ಕೆಲಸವನ್ನು ಯಾವಾಗ ಪ್ರಾರಂಭಿಸಲಾಯಿತು?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ತಕ್ಷಣವೇ ಪ್ರಾರಂಭಿಸಲಾಗಿದೆ. ಅಂದರೆ ಮಂಜೂರಾದ 1-2 ತಿಂಗಳೊಳಗಾಗಿ ಪ್ರಾರಂಭಿಸಿರಬಹುದು.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಎಷ್ಟು ಕೆಲಸ ಈಗ ನಡೆದಿದೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅರ್ಧ ಮೈಲಿವರೆಗೆ ಆಗಲೇ ಕಂಬಗಳನ್ನು ನೆಡಲಾಗಿದೆ. ಟ್ರಾನ್ಸ್ಮಿಷನ್ ಮತ್ತು ಇಂಟೀರಿಯರ್ ಡಿಸ್ಟ್ರಿಬ್ಯೂಷನ್ ಲೈನುಗಳ ಸರ್ವೆ ಕೆಲಸ ಪೂರೈಸಿದೆ.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಅಷ್ಟಕ್ಕೇ ಕೆಲಸ ನಿಲ್ಲಲು ಕಾರಣವೇನು?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇಂಡಿಯಾ ಸರ್ಕಾರದಿಂದ ನಮಗೆ ಈ ಬಾಬಿಗೆ ಖರ್ಚು ಮಾಡತಕ್ಕ ಬಗ್ಗೆ 50 ಲಕ್ಷ ರೂಪಾಯಿಗಳನ್ನು ಒದಗಿಸಿದ್ದು, ಆ ಮೊಬಲಗನ್ನು ಆ ವರ್ಷವೇ ಖರ್ಚು ಮಾಡಬೇಕೆಂದು ಅವರು ತಿಳಿಸಿದ್ದರು. ಆದರೆ ಆಗ ನಾವು ನಮಗೆ ಅತ್ಯಗತ್ಯವಾಗಿ ಪ್ರಥಮತಃ ಏನೇನು ಸಾಮಾನುಗಳ ಅತ್ಯಗತ್ಯ ಮತ್ತು ಅತ್ಯಾವಶ್ಯಕತೆಯಿತ್ತೋ ಅಂಥಾ ಸಾಮಾನುಗಳಿಗಾಗಿಯೇ ಆ ಮೊಬಲಗನ್ನು ಖರ್ಚು ಮಾಡಲಾಯಿತು. ಅಂದರೆ ಇರಿಗೇಷನ್ ಪಂಪಿಂಗ್ ಸೆಟ್ಟುಗಳನ್ನು ತರಿಸಲಾಯಿತು. ಆ ಸಾಮಾನುಗಳು ಬಂದ ಕೂಡಲೇ ಕೆಲಸವನ್ನು ಪ್ರಾರಂಭಿಸಲಾಗುತ್ತೆ.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಬೇಗ ಕಾರ್ಯವನ್ನು ಕೈಗೊಳ್ಳುವಿರಾ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಆಗಲಿ.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಈ ಲೈನನ್ನು ಸಾಗಲೀ ಕಡೆಗೆ ತಿರುಗಿಸಿದ್ದೀರಾ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—Divert ಅಂತೂ ಮಾಡಿದ್ದೇವೆ. ಆದರೆ ಅದು ಎತ್ತ ಕಡೆ ಎಂಬುದನ್ನು ಈಗ ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಈವರೆಗೂ ಗುಡಿಬಂಡೆ ತಾಲ್ಲೂಕಿನಲ್ಲಿ ಸರಿಯಾಗಿ ಮಳೆಯೇ ಬಾರದೆ ಜನ ಜಾನುವಾರುಗಳಿಗೆ ತುಂಬಾ ತೊಂದರೆಯಾಗಿರುತ್ತೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಬಂದಿದೆ.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಆದ್ದರಿಂದ ಈ ಸ್ಥಳದಲ್ಲಿ ನಡೆಯಬೇಕಾಗಿರುವ ಕೆಲಸಕ್ಕೆ top priority ಕೊಡಲಾಗುವುದಿಲ್ಲವೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹಾಗೆ top priority ಕೊಟ್ಟೇ ಕೆಲಸ ಮಾಡುತ್ತಿದ್ದೇವೆ.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಅಲ್ಲಿ ಜನರಿಗೆ ನೀರಿನ ತೊಂದರೆ ಜಾಸ್ತಿಯಾಗಿರುವುದರಿಂದ ಮೊದಲು ಅವರಿಗೆ ಈ ಅನುಕೂಲತೆಗಳನ್ನು ಕಲ್ಪಿಸಲು ಪ್ರಯತ್ನ ಮಾಡುವಿರಾ?

The Hon'ble Sri K. T. BHASHYAM.—I may assure the Hon'ble Member that Gudibanda and Bagepalli are in our view. We have already started the work and as soon as materials are available, we will take up the work.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಗುಡಿಬಂಡೆ ಮತ್ತು ಬಾಗೇಪಲ್ಲಿ ತಾಲ್ಲೂಕುಗಳು ಕೇವಲ ಮೂಲಕಟ್ಟ ಸ್ಥಳಗಳಲ್ಲಿರುವುದರಿಂದ ಅವು ಸರ್ಕಾರದವರ ಕಣ್ಣಿಗೆ ಬೀಳಲು ಸಾಧ್ಯವಿಲ್ಲವೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ?

The Hon'ble Sri K. T. BHASHYAM.—On the other hand we are giving full attention to Gudibanda and Bagepalli also.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು (ಕೋಲಾರ ಜಿಲ್ಲೆ).—ಸಾಮಾನುಗಳು ದೊರೆತ ಕೂಡಲೇ ಕೆಲಸ ಪ್ರಾರಂಭಿಸಲಾಗುತ್ತೆಂದು ತಿಳಿಸಿದಿರಿ. ಅಂದಾಜು ಎಷ್ಟು ತಿಂಗಳು ಬೇಕಾಗ ಬಹುದು?

The Hon'ble Sri K.T. BHASHYAM.—10 tons of copper wire are being made available to us every week and we are asking for more. ಆದ್ದರಿಂದ ಅದಕ್ಕೆ ಕಾಲ ವೆಷ್ಟಾಗುತ್ತೆ ಎಂಬುದನ್ನು ಈಗ ಹೇಳುವುದಕ್ಕಾಗುವುದಿಲ್ಲ.

Sri H. C. LINGA REDDY.—Approximate time.

The Hon'ble Sri K.T. BHASHYAM.—I could not say. 2-3 ತಿಂಗಳು ಹಿಡಿಯಬಹುದು.

Shimsha and Honnemaradu Electrical Projects.

Q.—222. **Sri V. M. MASCARENHAS** (Retroceded Area—General).—

Will the Government be pleased to state :—

(*a*) whether they have finally approved of the Shimsha and Honnemaradu Electrical Projects ;

(*b*) the financial outlay involved in each ;

(*c*) which of the two schemes is likely to be taken up earlier ?

A.—**The Hon'ble Sri K. T. BHASHYAM** (Minister for Law and Labour).—

(*a*) Not yet.

(*b*) Does not arise in view of answer to (*a*).

(*c*) The Shimsha New Project will be taken up earlier.

Sri V. M. MASCARENHAS.—Is want of finance the main consideration for not yet taking up the works ?

The Hon'ble Sri K.T. BHASHYAM.—In respect of Honnemaradu, want of finance is definitely one of the main considerations as to why it could not be taken up ; but in respect of Shimsha, surveys have yet to be made.

Sri T. MADIAH GOWDA (Bangalore District—General)—Is not the Shimsha project the same as the Makedatu project ?

The Hon'ble Sri K.T. BHASHYAM.—Makedatu project is different from Shimsha project ?

Sri T. MADIAH GOWDA.—What about Makedatu project ?

The Hon'ble Sri K.T. BHASHYAM.—Regarding Makedatu project, agreement is being finalised.

Sri A. BHEEMAPPA NAIK (Chitaldrug District—General).—If the difficulty is due to finance, is it not desirable that in co-operation with all the Provinces or States concerned we should take up this Honnemaradu project ?

Mr. SPEAKER.—The Hon'ble Member is making a suggestion.

Sri A. BHEEMAPPA NAIK.—I want to know whether they have asked for finances ?

The Hon'ble Sri K.T. BHASHYAM.—The more easy process is to get financial aid from the Centre and carry it on.

Sri A. BHEEMAPPA NAIK.—Have the Government at least been trying for it ?

The Hon'ble Sri K.T. BHASHYAM.—We have tried and we have included it in the supplemental plan.

Necessity for the Introduction of Crop Insurance Scheme.

Q.—10. **Sri H. C. LINGA REDDY** (Kolar District—General).—

Will the Government be pleased to state :—

(*a*) whether they are contemplating the introduction of a "scheme of crop insurance" in the State ;

(*b*) if so, the steps taken so far in this behalf ?

A.—**The Hon'ble Sri T. MARIAPPA** (Home Minister).—

(*a*) No.

(*b*) Does not arise in view of answer to (*a*).

Sri H. C. LINGA REDDY.—Will the Government state the reasons as to why the scheme of crop insurance cannot be introduced ?

The Hon'ble Sri T. MARIAPPA.—The answer is that the Government are not contemplating the introduction of the scheme. That is all. ತಾವು ಕೇಳಿರುವುದಕ್ಕೆ ಇಲ್ಲ ಎಂದು ಉತ್ತರ ಹೇಳಿದ್ದೇನೆ. ಏಕೆಂದರೆ ಈ ವಿಚಾರದಲ್ಲಿ ಸಾಕಷ್ಟು ಅನುಭವ ವಿಲ್ಲ, ಬೇಕಾದ ಲಿಟರೇಚರ್ ದೊರೆತಿಲ್ಲ. ಈ ಸಂದರ್ಭದಲ್ಲಿ ಇಂಡಿಯಾ ಸರ್ಕಾರದವರು ಏರ್ಪಡಿಸಿರುವ ಸಮಿತಿಯಲ್ಲಿ ಇದು ಇನ್ನೂ ಆಖೈರಾಗಿ ತೀರ್ಮಾನವಾಗಿಲ್ಲ. ಆ ದೃಷ್ಟಿಯಿಂದ ಇಂಟ್ರೊಡಕ್ಷನ್‌ಗೆ ಅವಕಾಶವಿಲ್ಲವೆಂದು ಹೇಳಿದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಕುಮಾರಪ್ಪನವರು ತಮ್ಮ ವರದಿಯಲ್ಲಿ ಇದರ ಆವಶ್ಯಕತೆ ಬಹಳವಾಗಿದೆಯೆಂದು ಹೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಂದಿದೆ. ಇಂಡಿಯನ್ ಕಂಡೀಷನ್‌ಗೆ ಹೇಗೆ ಅವನ್ನು ಅಡಾಪ್ಟ್ ಮಾಡಿಕೊಳ್ಳಬೇಕೆಂಬುದು ಚರ್ಚೆಯಾಗುತ್ತಿದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಸಂಸ್ಥಾನದಲ್ಲಿ ಈಗ ಸರಿಯಾಗಿ ಮಳೆಯಿಲ್ಲದ್ದರಿಂದ ರೈತರಿಗೆ ಈ ಯೋಜನೆಯಿದ್ದಿದ್ದರೆ ಬಹಳ ಸಹಾಯವಾಗುತ್ತಿರಲಿಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಂಡಿಯನ್ ಕಂಡೀಷನ್‌ನಲ್ಲಿ ಅದರಿಂದ ಬಹಳ ರಿಸ್ಕ್ ಇದೆ. ಎಷ್ಟರಮಟ್ಟಿಗೆ ರಕ್ಷಣೆ ಕೊಡಲು ಸಾಧ್ಯ, ಒಂದೇ ಬೆಳೆಗೆ ಮೊದಲು ರಕ್ಷಣೆ ನೀಡಲು ಪ್ರಯತ್ನ ಮಾಡಬೇಕು ಎಂದು ಬೊಂಬಾಯಿನಲ್ಲಿ ಈ ಸಂಬಂಧದಲ್ಲಿ ನಡೆದ ಮೀಟಿಂಗಿನಲ್ಲಿ ಚರ್ಚೆಯಾಗಿದೆ. ಮೈಸೂರು ಪ್ರತಿನಿಧಿಗಳನ್ನೂ ಅಲ್ಲಿಗೆ ಕಳುಹಿಸಿದೆ. ಅಲ್ಲಿ ಫೈನಲೈಸ್ ಆಗಬೇಕಾದ್ದು ಅಗತ್ಯ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಮೈಸೂರು ಸಂಸ್ಥಾನದಲ್ಲಿ ಈ ವಿಷಯದಲ್ಲಿ ಇನ್‌ವೆಸ್ಟಿಗೇಷನ್ ನಡೆಯುತ್ತಿದೆಯೆ? ಇದಕ್ಕೆ ಕೂಡಲೆ ಒಂದು ಯೋಜನೆ ತಯಾರು ಮಾಡುತ್ತಾರೆಂದು ನಂಬೋಣವೆ ?

The Hon'ble Sri T. MARIAPPA.—Sir, we are quite alive to the usefulness of the scheme to us. But under what conditions and under what safeguards, it has to be introduced has got to be worked out by experts.

Sri H. C. LINGA REDDY.—I am only asking you to work out the scheme and introduce it as early as possible.

The Hon'ble Sri T. MARIAPPA.—That is exactly what the Government are trying to do. We want the Government of India to take initiative in the matter to begin with.

Construction of anicut across Yagachi River.

Q.—47. **Sri B. N. BORANNA GOWDA** (Hassan District—General).—Will the Government be pleased to state :—

(*a*) whether the public have requested the Government to construct an anicut across the Yagachi river near Ranaghatta in Belur Taluk ;

(*b*) the decision arrived at in this matter ;

(*c*) the number of acres that would be brought under cultivation ;

(*d*) whether they would take early steps to get the survey done to construct the anicut ?

A.—**The Hon'ble Sri T. MARIAPPA** (Home Minister).—

(*a*) Yes.

(*b*) The project is under investigation.

(*c*) About 680 acres.

(*d*) Yes.

ಶ್ರೀ ಬಿ. ಎನ್. ಬೋರಣ್ಣಗೌಡರು.—ಈ ಪ್ರಾಜೆಕ್ಟ್ ಇನ್‌ವೆಸ್ಟಿಗೇಷನ್‌ನಲ್ಲಿದೆಯೆಂದು ಉತ್ತರ ಕೊಟ್ಟಿದೆ. ಎಷ್ಟು ವರ್ಷದಿಂದ ಇನ್‌ವೆಸ್ಟಿಗೇಷನ್ ಆಗುತ್ತಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಗ ಕೆಲವು ವರ್ಷಗಳಿಂದ ಇದೆ, ಇಷ್ಟು ಎಂದು ಖಚಿತವಾಗಿ ಹೇಳುವುದಕ್ಕೆ ನೋಟೀಸ್ ಬೇಕು. ಇದುವರೆಗೆ ಬಂದಿರುವ ಸಮಾಚಾರದ ಪ್ರಕಾರ

ಸುಮಾರು ಎರಡು ಮೂರು ವರ್ಷಗಳಿಂದ ಆಲೋಚನೆಯಲ್ಲಿದ್ದು ಈಗ ಇನ್ವೆಸ್ಟಿಗೇಷನ್ ನಡೆಯುತ್ತಿದೆ.

ಶ್ರೀ ಬಿ. ಎನ್. ಬೋರಣ್ಣಗೌಡರು.—600 ಎಕರೆ ನೀರಾವರಿಗೆ ಬರಬಹುದೆಂದು ಹೇಳಿರುವುದು ಯಾವ ಆಧಾರದ ಮೇಲೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪ್ರಿಲಿಮಿನರಿ ಎಸ್ಟಿಮೇಟ್ ಆಗಿ ಅದರ ಪ್ರಕಾರ ಇಷ್ಟಾಗಬಹುದೆಂದು ಅಂದಾಜಾಗಿದೆ.

ಶ್ರೀ ಬಿ. ಎನ್. ಬೋರಣ್ಣಗೌಡರು.—600 ಎಕರೆ ಎಲ್ಲಾ ಹೊಸದೊ ಅಥವಾ ಹಳೆ ತರಿ ಜಮೀನಿಗೆ ನೀರು ಕೊಟ್ಟಿರುವುದೂ ಸೇರಿದೆಯೋ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಳೇದು ಮತ್ತು ಹೊಸದು ಎರಡೂ ಸೇರಿದೆ. ಒಂದು ರಫ್ ಸ್ಟೋನ್ ಒಡ್ಡು ಬೇರೆ ಇದೆ. ಅದರಿಂದ ಛಾನಲ್ ತೆಗೆದು ನೀರಾವರಿ ಮಾಡಿಕೊಂಡಿರುವುದೂ ಇದರಲ್ಲಿ ಸೇರಿದೆ.

ಶ್ರೀ ಬಿ. ಎನ್. ಬೋರಣ್ಣಗೌಡರು.—ಈ ಪ್ರಾಜೆಕ್ಟಿನಿಂದ ಸಾವಿರಾರು ಕೆರೆಗಳಿಗೆ ನೀರು ಸರಬರಾಯಾಗಿ ಅದರಿಂದ ಬೇಕಾದಷ್ಟು ಬೆಳೆಯಾಗುತ್ತದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಾವಿರಾರು ಎಂದು ಗೊತ್ತಿಲ್ಲ. ಕೆಲವು ಕೆರೆಗಳಿಗೆ ನೀರನ್ನು ಬಿಟ್ಟು ಉಪಯೋಗಿಸಬಹುದೆಂದು ಪ್ರವೀಣರು ಹೇಳಿದ್ದಾರೆ.

ಶ್ರೀ ಬಿ. ಎನ್. ಬೋರಣ್ಣಗೌಡರು.—ಇದನ್ನು ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿ ಜಾಗ್ರತೆ ಮಾಡಿಸುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಜಾಗ್ರತೆ ಮಾಡುವುದಕ್ಕೆ ಇನ್ಸ್ಟ್ರಕ್ಷನ್ ಕೊಟ್ಟಿದೆ. ಆದಷ್ಟು ಬೇಗ ಇನ್ವೆಸ್ಟಿಗೇಷನ್ ಮಾಡಿ ಆಖೈರು ವರದಿ ಕಳುಹಿಸಬೇಕೆಂದು ತಿಳಿಸಿದೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಚನ್ನರಾಯಪಟ್ಟಣದಲ್ಲಿ 10-12 ವರ್ಷಗಳಿಂದ ತುಂಬದಿರುವ ಕೆರೆಗೆ ನೀರನ್ನು ಕೊಡಲು ಸಾಧ್ಯವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದು ಬೇಗೂರಿಗೆ ಸಂಬಂಧಪಟ್ಟಿದೆಯೆಂದು ಕಂಡುಬರುತ್ತದೆ. ಆದ್ದರಿಂದ ಆ ಪ್ರಶ್ನೆಗೆ ಅವಕಾಶವಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಇನ್ಯಾವುದಾದರೂ ಅಣೆಕಟ್ಟನ್ನು ಅಲ್ಲಿ ಕಟ್ಟುವುದಕ್ಕೆ ಸಾಧ್ಯವಿಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ಪ್ರಶ್ನೆ ಏಳುವುದಿಲ್ಲ. ಕೆರೆ ಪ್ರಾಜೆಕ್ಟು ಅವರು ಕೇಳಿರುವುದು.

Road connecting old Mysore-Bangalore Road at Boodiguppe and Kankanhalli-Kodihalli Road at Srinivasanahalli.

Q.—54. SRI S. KARIAPPA (Bangalore District—General).—

Will the Government be pleased to state :—

(*a*) whether there is a proposal to construct a road connecting old Mysore-Bangalore Road at Boodiguppe and Kankanhalli-Kodihalli Road at Srinivasanahalli in order to avoid the river Arkavathi ;

(*b*) the stage at which it stands at present ?

A.—THE HON'BLE SRI T. MARIAPPA (Home Minister).—

(*a*) No such proposal in Public Works Department.

(*b*) Does not arise.

ಶ್ರೀ ಎಸ್. ಕರಿಯಪ್ಪನವರು.—ಪಬ್ಲಿಕ್ ವರ್ಕ್ಸ್ ಇಲಾಖೆಯವರು ಈ ವಿಚಾರದಲ್ಲಿ ಯಾವ ಅಂದಾಜೂ ಮಾಡಿಲ್ಲವೆಂದು ಉತ್ತರ ಕೊಟ್ಟಿದೆ. ಹಾಗಾದರೆ ಡೆವಲಪ್‌ಮೆಂಟ್ ಇಲಾಖೆಗೆ ಇದು ಸಂಬಂಧಪಟ್ಟಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು, ಆ ವಿಚಾರದಲ್ಲಿ ಸಮಾಚಾರ ಬಂದಿಲ್ಲ.

ಶ್ರೀ ಎಸ್. ಕರಿಯಪ್ಪನವರು.—ಇದನ್ನು ಡೆವಲಪ್‌ಮೆಂಟ್ ಇಲಾಖೆಯಿಂದ ಪಬ್ಲಿಕ್ ವರ್ಕ್ಸ್ ಇಲಾಖೆಗೆ ವರ್ಗಾಯಿಸುವುದಕ್ಕೆ ಸಾಧ್ಯವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಡೆವಲಪ್‌ಮೆಂಟ್ ಫಂಡಿಲ್ಲದಿದ್ದು ಪಬ್ಲಿಕ್ ವರ್ಕ್ಸ್ ಇಲಾಖೆ ಫಂಡು ಕೊಟ್ಟರೆ ತೆಗೆದು ಕೊಳ್ಳಬಹುದು; ಅದು ಪರ್ಯಾಲೋಚನೆ ಯಲ್ಲಿದೆ. ಈಗ ರೆವೆನ್ಯೂ ಸೆಕ್ರೆಟರಿಯವರ ಬಳಿ ಫೈಲು ಬಂದಿದೆಯೆಂದು ವರ್ತಮಾನ ಬಂದಿದೆ; ತರಿಸಿ ನೋಡಬೇಕು.

ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ನಾವು ಕೇಳಿರುವ ಡೀವಿಯೇಷನ್ ರಸ್ತೆ ಸುಮಾರು 5 ಮೈಲಿ ಆಗಬಹುದಲ್ಲವೆ?

ಮಾನ್ಯ ಶ್ರೀ ಟಿ ಮರಿಯಪ್ಪನವರು.— ಸುಮಾರು ಅಷ್ಟಾಗಬಹುದು.

ಶ್ರೀ ಟಿ. ಮಾದಯ್ಯಗೌಡರು.—ಈ ರಸ್ತೆ ಮಾಡುವುದರಿಂದ ಕಾನಕಾನಹಳ್ಳಿ ತಾಲ್ಲೂಕಿನ ಸುಮಾರು 75 ಗ್ರಾಮಗಳ 55 ಸಾವಿರ ಪ್ರಜೆ ಗಳಿಗೆ ಅನುಕೂಲವಾಗುತ್ತದೆ, ಈ ರಸ್ತೆಯಿಲ್ಲದಿ ದ್ದರೆ ಅವರಿಗೆ ಪೂರ್ತಿ ಮಳೆಗಾಲದಲ್ಲಿ ಬೇರೆ ಕಡೆ ಹೋಗುವುದಕ್ಕೆ ಬರುವುದಕ್ಕೆ ಅವಕಾಶವಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಅದು ಗ್ರಾಮಾಂತರ ಪ್ರದೇಶಗಳಿಗೆ ಅನುಕೂಲ ವಾಗಿದೆಯೆಂದು ಹೇಳುವುದಕ್ಕೆ ಯಾವ ಅಭ್ಯಂ ತರವೂ ಇಲ್ಲ.

ಶ್ರೀ ಟಿ. ಮಾದಯ್ಯಗೌಡರು.— ಇದು ಯಾವ ಪ್ರಾಂತಕ್ಕೆ ಸೇರುತ್ತದೆಯೋ ಆ ಪ್ರಾಂತ ದಿಂದ ಮೈಸೂರು ಸರ್ಕಾರಕ್ಕೆ ಸುಮಾರು ಹತ್ತು ಸಾವಿರ ಪಲ್ಲ ರಾಗಿ ಬರುತ್ತದೆಯೆಂಬುದು ಸರ್ಕಾರದ ಗಮನದಲ್ಲಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಕಾನಕಾನಹಳ್ಳಿಯು ರಾಗಿಗೆ ಸರ್ಪ್ಲಸ್ ಏರಿಯ. This particular area is cut off and it requires intervillage communications ಎಂಬುದು ಸರ್ಕಾರಕ್ಕೆ ಗೊತ್ತಾಗಿದೆ. ಈ ವಿಷಯದಲ್ಲಿ ಕಾರ್ಯಕ್ರಮ ವಿದೆ.

ಶ್ರೀ ಟಿ. ಮಾದಯ್ಯಗೌಡರು.—ಮೇಕೆದಾಟು ಪ್ರಾಜೆಕ್ಟಿಗೆ ಕಾನಕಾನಹಳ್ಳಿಯಿಂದ ಈ ಡೀವಿ ಯೇಷನ್ ರಸ್ತೆಯಲ್ಲಿ ಹೋದರೆ 19 ಮೈಲಿ, ಬೇರೆ ಕಡೆಯಿಂದ 26 ಮೈಲಿ ಆಗುತ್ತದೆ ಎಂಬುದು ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಬಂದಿದೆ. ಆದರೆ ಅಲ್ಲಿ ತರಿ ಜಮೀನನ್ನು ಅಕ್ವೈರ್ ಮಾಡಿಕೊಳ್ಳಬೇಕಾಗಿ ಬರುವುದರಿಂದ ಬಹಳ ಬೆಲೆ ಕೊಡಬೇಕಾಗುತ್ತದೆ. ಆದ್ದರಿಂದ ಪರ್ಯಾಲೋಚನೆ ಮಾಡಿ ನೋಡಬೇಕು.

ಶ್ರೀ ಟಿ. ಮಾದಯ್ಯಗೌಡರು.—ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಸಮಿತಿಯು 87 ಸಾವಿರ ರೂಪಾಯಿಗಳ ಅಂದಾಜು ಮಾಡಿ ಈ ರಸ್ತೆಗೆ ಸ್ಪೆಷಲ್ ಗ್ರಾಂಟು ಪಡೆಯಲು ಮೇಲಕ್ಕೆ ಕಳು ಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಅವರು ತಮ್ಮ ಭಾಗದ ಹಣ ಕೊಟ್ಟಿದ್ದರೂ ಈಗ ಅದು ಸಾಲದೆಂದೂ, ಬೇರೆ ಹಣ ಸರ್ಕಾ ರದವರು ಕೊಡಬೇಕೆಂದೂ ಕೇಳಿದ್ದಾರೆ.

ಶ್ರೀ ಟಿ. ಮಾದಯ್ಯಗೌಡರು.—ಡಿಸ್ಟ್ರಿಕ್ಟಿ ಗೆಲ್ಲಾ ಅನುಕೂಲವಾಗುವಾಗ 87 ಸಾವಿರ ರೂಪಾಯಿ ಖರ್ಚು ಮಾಡಲು ಹಿಂಜರಿಯುವು ದಿಲ್ಲವೆಂದು ಅವರು ಕಳುಹಿಸಿದ್ದಾರಲ್ಲವೆ?

The Hon'ble Sri T. MARIAPPA.— Well Sir, that would be considered.

ಶ್ರೀ ಟಿ. ಮಾದಯ್ಯಗೌಡರು.—ಆದಷ್ಟು ಜಾಗ್ರತೆ ಈ ರಸ್ತೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಮಾಡುತ್ತೇವೆ.

Accidents in Tunga Tunnel Works in Shimoga.

Q.—145. Sri L. SIDDAPPA (Shimoga District—General).—

Will the Government be pleased to state :—

(*a*) the number of fatal accidents that have taken place in the Tunga Tunnel Works in Shimoga with the dates on which the said accidents took place, the number and names of persons died and the number and names of persons injured with the nature of injuries in each case ;

(*b*) the causes for the accidents in each case ;

(*c*) whether they have given any compensation to the family of the dead and the maimed in each case ?

A.—The Hon'ble Sri T. MARIAPPA (Home Minister).—

(*a*) Number of fatal accidents that have taken place—Two.

Dates—16th July 1951 and 9th September 1951.

Number and names of persons died—On 16th July 1951 two persons died—

(1) Sri Narasimhiah,
(2) Sri Kathurayan.

On 9th September 1951 three persons died—

(1) Manikyam,
(2) Velu,
(3) Gundu Wadeyar.

Names of persons injured and the nature of injuries—16th July 1951.—

(1) Sri Gopala—Slight scratches on the leg.
(2) Sri Muthan—Slight injury to the head, left thigh and right forearm.
(3) Sri Govinda—Scratches to the face and slight injury to the head.
(4) Sri Maliga—Slight injury to the knee cap of the left leg.

9th September 1951—

(1) Sri Govinda—No physical injuries (when he was removing muck one side of the earth slipped and fell over him suddenly and covered him. He was given medical treatment and has recovered completely).

(*b*) 16th July 1951—Blasting (within the tunnel).

9th September 1951—Land slip (on the surface).

(*c*) (1) Action is being taken to pay compensation as per rules.

(2) Does not arise as the injured have since recovered and are keeping fit.

Sri L. SIDDAPPA.—Sir, the next question also refers to the same subject matter. So it may also be taken up together.

In answer to my question, the cause for the accidents which took place on 16th July 1951 is given as 'blasting'. Is that all the answer ?

The Hon'ble Sri T. MARIAPPA.—Yes. Blasting must take place, because you have to blast first and then work.

ಶ್ರೀ ಎಲ್. ಸಿದ್ದಪ್ಪನವರು.—ಬ್ಲಾಸ್ಟಿಂಗ್ ಆದರೂ ಆಕ್ಸಿಡೆಂಟ್ ಆಗುವುದಕ್ಕೆ ಕಾರಣವೇನು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬ್ಲಾಸ್ಟಿಂಗ್ ಆದಾಗ ಸಿಡಿಯುವುದು ಮೇಲೆ ಬೀಳುತ್ತದೆ, ಅದೇ ಆಕ್ಸಿಡೆಂಟ್.

ಶ್ರೀ ಎಲ್. ಸಿದ್ದಪ್ಪನವರು.—ಹಾಗೆ ಆಗದಿರುವುದಕ್ಕೆ ನೀವು ಏನೂ ಕಾರ್ಯಕ್ರಮ ಕೈಕೊಳ್ಳಲಿಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮನುಷ್ಯ ಪ್ರಯತ್ನದಲ್ಲಿ ಎಷ್ಟು ಮಾಡಬಹುದೋ ಅಷ್ಟನ್ನು ಮಾಡಬಹುದು.

ಶ್ರೀ ಎಲ್. ಸಿದ್ದಪ್ಪನವರು.—ಅದು ಜನರಲ್ ಆಯಿತು. ಈ ಕೇಸ್‌ನಲ್ಲಿ ಬ್ಲಾಸ್ಟ್ ಮಾಡುವಾಗ ಆಕ್ಸಿಡೆಂಟ್ ಆಯಿತು, ಆದರಿಂದ ಕೆಲವರು ಸತ್ತರು ಎಂದು ಹೇಳುತ್ತೀರಿ. ಹಾಗೆ ಸಾಯುವುದಕ್ಕೆ ಕಾರಣವಿರಬೇಕು. ಎಚ್ಚರಿಕೆಯಿಂದ ಪ್ರಿಕಾಷನರಿ ಮೆಷರ್ಸ್ ತೆಗೆದುಕೊಂಡಿದ್ದರೂ ಹಾಗೆ ಅನಿರೀಕ್ಷಿತವಾಗಿ ಅಪಾಯ ಸಂಭವಿಸಲು ಕಾರಣವೇನು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಾವು ಎಷ್ಟೇ ಪ್ರಿಕಾಷನರಿ ಮೆಷರ್ಸ್ ತೆಗೆದುಕೊಂಡಿದ್ದರೂ ಒಂದೊಂದು ಸಾರಿ ಬ್ಲಾಸ್ಟಿಂಗ್ ಮಾಡಿದಾಗ ಪೂರ್ತಿಯಾಗಿ ಸಿಡಿಯುವುದಿಲ್ಲ. ಆ ಸಮಯದಲ್ಲಿ ಒಂದೊಂದು ಸಾರಿ ಅಕಸ್ಮಾತ್ತಾಗಿ ಆಕ್ಸಿಡೆಂಟ್ ಆಗುತ್ತದೆ.

ಶ್ರೀ ಎಲ್. ಸಿದ್ದಪ್ಪನವರು.—ಅಂದರೆ ಹಾಗೆಯೇ ಇದ್ದದ್ದು ಕೂಲಿಗಳು ಹೋದಾಗ ಬ್ಲಾಸ್ಟ್ ಆಗಿ ಜನರು ಸತ್ತರೇ ಅಥವಾ ಅದಲ್ಲದೇ ಬೇರೆ ಏನಾದರೂ ಇದೆಯೋ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬೇರೆ ಏನೂ ಇಲ್ಲ.

ಶ್ರೀ ಎಲ್. ಸಿದ್ದಪ್ಪನವರು.—ತಮಗೆ ಬಂದಿರುವ ವರದಿಯಲ್ಲಿ ಏನು ಕಾರಣ ನಮೂದಿಸಿದೆ ಯೆಂಬುದನ್ನು ಸ್ವಲ್ಪ ಹೇಳುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—Accident ಅಂತ ಆಗಲೇ ಉತ್ತರ ಕೊಟ್ಟಿದ್ದೇನೆ.

ಶ್ರೀ ಎಲ್. ಸಿದ್ದಪ್ಪನವರು.—Accident ಎನ್ನುವುದನ್ನು ನಾನೂ ಕೇಳಿದ್ದೇನೆ. ಅದಕ್ಕೆ ಕಾರಣವೇನು ಅಂತ ನನ್ನ ಪ್ರಶ್ನೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬ್ಲಾಸ್ಟ್ ಮಾಡತಕ್ಕ ಪ್ರೋಸೆಸ್‌ಗೆ ಸಂಬಂಧಪಟ್ಟಹಾಗೆ accident ಆಗಿದೆ.

ಶ್ರೀ ಎಲ್. ಸಿದ್ದಪ್ಪನವರು.—ಅದು ಬಹಳ ಜನರಲ್ ಆಯಿತು. ಜುಲೈ 16ನೇ ತಾರೀಖು ಆದ accident ಗೆ ವಿವರವೇನು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

Sri L. SIDDAPPA.—I have given due notice.

The Hon'ble Sri T. MARIAPPA.—ಬಾಕಿ ವಿವರಗಳನ್ನು ಹೇಳಬೇಕಾದರೆ ನೋಟೀಸ್ ಬೇಕು.

Sri L. SIDDAPPA.—My question is quite clear. I have asked for the causes for the accidents in each case.

Mr. SPEAKER.—The Hon'ble Minister has called for a report; he wants some more time.

The Hon'ble Sri T. MARIAPPA.—The report to me is that in the process of blasting this accident has occurred. Probably the Hon'ble Member wants further details.

Sri L. SIDDAPPA.—I do not want further details. But I want the causes for the accident.

Mr. SPEAKER.—He wants to know how it happened.

The Hon'ble Sri T. MARIAPPA.—I want notice, Sir.

Sri L. SIDDAPPA.—If the answers that are received are not satisfactory, are the Government not sending them back to the departments concerned for furnishing satisfactory answers ?

The Hon'ble Sri T. MARIAPPA.—Yes, Sir, I have called for further details.

Sri L. SIDDAPPA.—When are the further details likely to be ready ?

The Hon'ble Sri T. MARIAPPA.—As soon as they are ready I am prepared to place them before the House.

Sri L. SIDDAPPA.—These are very vague answers, Sir.

Sri L. H. THIMMA BOI (Chickmagalur District—Depressed Class).—Who sponsored the digging of this tunnel ?

Mr. SPEAKER.—That does not arise.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಟನಲ್ ಮಾಡುವ ಉದ್ದೇಶವೇನು?

ಅಧ್ಯಕ್ಷರು.—ಟನಲ್ ಮಾಡುವುದಕ್ಕೂ, accident ಆಗುವುದಕ್ಕೂ ಏನು ಸಂಬಂಧ ? ಟನಲ್ ಮಾಡುವ ಉದ್ದೇಶ ನೀರು ತೆಗೆದುಕೊಂಡು ಹೋಗುವುದಕ್ಕೆ. ಅದು ಎಲ್ಲರಿಗೂ ಗೊತ್ತೇ ಇದೆ.

Sri L. H. THIMMA BOI.—This question has been combined with the other question. There must be certain idea in digging up the tunnel.

Mr. SPEAKER.—The Hon'ble Member may please ask questions relating to the accident referred to in the main question.

Sri L. H. THIMMA BOI.—Yes, sir, I am pertinent in asking this question. ಟನಲ್ ಮಾಡುವುದರಿಂದ ಖರ್ಚು ಕಡಿಮೆ ಆಗುತ್ತದೆಯೋ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು. It is cheaper and more useful.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಆ ಪ್ರದೇಶದಲ್ಲಿ ಬೋರ್‌ಹೋಲ್ಸ್ ಹಾಕಿ ಟೆಸ್ಟ್ ಮಾಡಿದ್ದಾರೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದು accident ಗೆ ಸಂಬಂಧಪಟ್ಟ ಪ್ರಶ್ನೆ, ಆದ್ದರಿಂದ ಆ ಉಪಪ್ರಶ್ನೆ ಉದ್ಭವಿಸುವುದಿಲ್ಲ. ಆದರೂ ಅಧ್ಯಕ್ಷರು ಅಪ್ಪಣೆ ಕೊಟ್ಟರೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು.—ಆಗಬಹುದು.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಟನಲ್ ಮಾಡುವುದಕ್ಕೆ ಅವಕಾಶವಿದೆ, ಸೂಕ್ತ ಎಂಬುದಾಗಿ ಪ್ರವೀಣರು ಅಭಿಪ್ರಾಯ ಪಟ್ಟಿದ್ದಾರೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಬೋರ್‌ಹೋಲ್ಸ್ ಹಾಕಿ ಟೆಸ್ಟ್ ಮಾಡಿ ಅವಕಾಶ ಕೊಟ್ಟರೇ ಎಂದು ನನ್ನ ಪ್ರಶ್ನೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಟೆಸ್ಟ್ ಮಾಡಿದ್ದಾರೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಟನಲ್ ಹಾಕಬೇಕಾಗಿದ್ದರೆ 60 ಅಡಿ ಕೆಳಗಿದ್ದರೆ ಹಾಕಬೇಕೆಂದಿಲ್ಲವೇ?

Mr. SPEAKER.—That supplementary does not arise.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಕಲ್ಲು ಪ್ರದೇಶದಲ್ಲಿ ಟನಲ್ ಮಾಡಿದ್ದೀರಾ?

Mr. SPEAKER.—That also does not arise. This question relates to the accident.

Sri A. BHEEMAPPA NAIK (Chitaldrug District—General).—The Hon'ble Member is putting these questions because Question No. 275 is also included and that relates to the channel, the land, the way of construction, etc. That is why he is asking these questions. But the Hon'ble Speaker is asking him to confine himself to Question No. 145.

Mr. SPEAKER.—Question No. 275 has not been put and the Hon'ble Member in whose name the question stands is not here.

Sri A. BHEEMAPPA NAIK.—But the Hon'ble Member Sri L. Siddappa began by saying......

Mr. SPEAKER.—Does not the Hon'ble Member know that the member in whose name the question stands ought to have got up and put it?

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—145ನೇ ಪ್ರಶ್ನೆಯ ಜೊತೆಗೆ 275ನೇ ಪ್ರಶ್ನೆಯನ್ನು ತೆಗೆದುಕೊಳ್ಳಬಹುದೆಂದು ಹೇಳಿದ್ದೀರಾ?

Mr. SPEAKER.—The Member who has given notice of question No. 275 did not put the question. Moreover, he was not here at the time.

Sri L. H. THIMMA BOI.—So I need not put any supplementaries on Question No. 275?

Mr. SPEAKER.—No; the Hon'ble Member need not.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಸಾಮಾನ್ಯವಾಗಿ ಟನಲ್ ಮಾಡಬೇಕಾದರೆ ಏನು ಮುಂಜಾಗ್ರತೆ ಕ್ರಮ ತೆಗೆದುಕೊಳ್ಳುತ್ತೀರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಏನು ಮುಂಜಾಗರೂಕತೆ ಕ್ರಮ ತೆಗೆದುಕೊಳ್ಳಬೇಕೆಂದು ಟೆಕ್ನಿಕಲ್ ಪ್ರವೀಣರು ಹೇಳುತ್ತಾರೋ ಅದನ್ನೆಲ್ಲಾ ತೆಗೆದುಕೊಳ್ಳುತ್ತೇವೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಈ ಟನಲ್ ಮಾಡಬೇಕಾದರೆ ಬಹಳ ಸ್ವಲ್ಪ ಭಾಗ ಕಲ್ಲಿದ್ದು ಬಾಕಿ ಎಲ್ಲಾ ಮಣ್ಣು ಪ್ರದೇಶವಾಗಿತ್ತು ಎಂಬುದು ಗೊತ್ತೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ವಿಚಾರದಲ್ಲಿ ಪ್ರವೀಣರ ಅನುಭವ ತೆಗೆದುಕೊಂಡು ಪರಿಶೀಲನೆ ಮಾಡಿದ್ದೇವೆ. ಟನಲ್ ಮಾಡುವುದು ಸೂಕ್ತ ಎಂಬುದಾಗಿ ಅವರು ಅಭಿಪ್ರಾಯ ಕೊಟ್ಟಮೇಲೇ ಕೆಲಸ ಮಾಡಿದೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಬೋರ್‌ಹೋಲ್ಸ್ ಹಾಕಿ ಟೆಸ್ಟ್ ಮಾಡಿಲ್ಲ ಎಂದು ಒಪ್ಪಿಕೊಳ್ಳುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಟೆಸ್ಟ್ ಮಾಡಿಲ್ಲವೆಂದು ಒಪ್ಪಿಕೊಳ್ಳುವುದಿಲ್ಲ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಬೋರ್ ಹೋಲ್ಸ್ ಹಾಕದೇ ಇರುವುದು ನಿಜವೇ?

The Hon'ble Sri T. MARIAPPA.—Should I answer that question, Sir?

Sri L. H. THIMMA BOI.—Yes, Sir, this is a most pertinent question. ಏಕೆಂದರೆ ಮಣ್ಣು ಪ್ರದೇಶದಲ್ಲಿ ಟನಲ್ ಹಾಕಿ ಜನರನ್ನು ಸಾಯಿಸುವುದು ನ್ಯಾಯವಲ್ಲ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಅವರಿಗೇ ಗೊತ್ತಿದೆ. ಬಹಳ ದೂರ ಟನಲ್ ಮಾಡಿದ್ದರೂ ಏನೂ ಆಗಿಲ್ಲ. Particular stage ನಲ್ಲಿ accident ಆಗಿದೆ, ಸುಮ್ಮನೆ ಕೇಳುವುದರಲ್ಲಿ ಏನೂ ಅರ್ಥವಿಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು (ಚಿತ್ರದುರ್ಗ ಜಿಲ್ಲೆ).—ಬ್ಲಾಸ್ಟಿಂಗ್ ಅಂತ ಹೇಳಿದ್ದೀರಿ. ಎಕ್ಸ್‌ಪ್ಲೋಸೀವ್ಸ್ ಉಪಯೋಗಿಸುವಾಗ ಕಂಟ್ರಾಕ್ಟರುಗಳು ಉಪಯೋಗಿಸುತ್ತಾರೆಯೋ, ಪಿ. ಡಬ್ಲ್ಯು. ಡಿ. ನವರು ಉಪಯೋಗಿಸುತ್ತಾರೆಯೋ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಡಿಪಾರ್ಟ್‌ಮೆಂಟಲ್ ಆಗಿ ಬ್ಲಾಸ್ಟಿಂಗ್ ಮಾಡುತ್ತಾರೆ. ಪರಿಣತರಾದ ಡಿಪಾರ್ಟ್‌ಮೆಂಟಲ್ ಬ್ಲಾಸ್ಟರ್ಸ್ ಬ್ಲಾಸ್ಟ್ ಮಾಡುತ್ತಾರೆ.

ಶ್ರೀ ಎಂ. ಗೋವಿಂದರೆಡ್ಡಿಯವರು.— ಲ್ಯಾಂಡ್‌ಸ್ಲೈಡ್ ಅಂತ ಹೇಳಿದ್ದೀರಿ. ಆ ರೀತಿ ಆಗಾಗ್ಯೆ ಆಗುವುದು ಉಂಟೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಆಕಸ್ಮಾತ್ತಾಗಿ ಆಗುತ್ತದೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಈ accident ಆಗುವುದಕ್ಕೆ ಮುಂಚೆ ಹಿಂದೆ ಆಗಿತ್ತೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಆಗಿರಲಿಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು.— Accident ಆದ ಕೂಡಲೇ ಯಾರಾದರೂ ಇಲಾಖೆಯ ಉನ್ನತ ಅಧಿಕಾರಿಗಳು ಹೋಗಿ ತನಿಖೆ ಮಾಡಿದ್ದಾರೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ತಕ್ಷಣ ಎಕ್ಸಿಕ್ಯೂಟೀವ್ ಇಂಜನಿಯರು, ಸೂಪರಿಂಟೆಂಡಿಂಗ್ ಇಂಜನಿಯರು, ಚೀಫ್ ಇಂಜನಿಯರು ಹೋಗಿ ತನಿಖೆ ಮಾಡಿದ್ದಾರೆ.

ಶ್ರೀ ಎಂ. ಗೋವಿಂದರೆಡ್ಡಿಯವರು.— ಇದಕ್ಕೆ ಕಾರಣ ಏನು ಎಂಬುದನ್ನು ವರದಿ ಮಾಡಲಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— Purely accidental ಅಂತ ವರದಿ ಮಾಡಿದ್ದಾರೆ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು (ಬೆಂಗಳೂರು ಜಿಲ್ಲೆ).—ಬ್ಲಾಸ್ಟಿಂಗ್ ಮಾಡುವಾಗ accidents ಅನೇಕ ಕಾರಣಗಳಿಂದ ಆಗಬಹುದಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಆಗಬಹುದು.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಬ್ಲಾಸ್ಟಿಂಗ್ ಮಾಡಿದ ಪ್ರದೇಶದಿಂದ ಎಷ್ಟು ಫಾಸಲೆಯಲ್ಲಿದ್ದಾಗ accident ಆಯಿತು ಎಂಬ ವರದಿ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಇಷ್ಟು ದೂರ ಅಂತೇನೂ ಹೇಳಿಲ್ಲ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಬ್ಲಾಸ್ಟಿಂಗ್ ಮಾಡತಕ್ಕ ಬತ್ತಿಯಿಂದ ಎಷ್ಟು ದೂರ ಫಾಸಲೆಯಲ್ಲಿ ನಿಂತಿದ್ದರೆ accident ಆಗುತ್ತದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಇದು ಬತ್ತಿ ಇಟ್ಟು ಮಾಡತಕ್ಕ ಬ್ಲಾಸ್ಟಿಂಗ್ ಅಲ್ಲ. ಎಲೆಕ್ಟ್ರಿಕ್ ಡೆಟೊನೇಟರ್ಸ್‌ನಿಂದ ಮಾಡತಕ್ಕದ್ದು.

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ).—ಬ್ಲಾಸ್ಟಿಂಗ್ ಮಾಡಬೇಕಾದರೆ ಅದಕ್ಕೆ ಮುಂಚೆ ಯಾವುದಾದರೂ ಮುಂಜಾಗ್ರತೆ ಕಾರ್ಯಗಳನ್ನು ತೆಗೆದುಕೊಳ್ಳಬೇಕೆಂಬ ನಿಯಮ ಇದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಡಿಟೋನೇಟರ್ಸ್ ಹಾಕಿದಮೇಲೆ ಸಿಗ್ನಲ್ ಕೊಟ್ಟು ಎಲ್ಲರನ್ನೂ ದೂರ ಕಳುಹಿಸುತ್ತಾರೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಬ್ಲಾಸ್ಟ್ ಮಾಡುವ ಜಾಗದಿಂದ ಸುಮಾರು ಎಷ್ಟು ದೂರದಲ್ಲಿದ್ದರು?

The Hon'ble Sri T. MARIAPPA.— I want notice.

ಶ್ರೀ ಕಡಿದಾಳ್ ಮಂಜಪ್ಪನವರು.—ಹಾಗಾದರೆ ಅಲ್ಲಿ ಬ್ಲಾಸ್ಟ್ ಮಾಡಿದಾಗ ಅಷ್ಟು ದೂರದಲ್ಲಿದ್ದವರ ತಲೆಯಮೇಲೆ ಕಲ್ಲು ಬಂಡೆಗಳು ಹೇಗೆ ಬಿತ್ತು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ದೂರದಲ್ಲಿದ್ದವರು ಕಲ್ಲು ಬಿದ್ದು ಸಾಯಲಿಲ್ಲ.

ಶ್ರೀ ಕಡಿದಾಳ್ ಮಂಜಪ್ಪನವರು.—ಬ್ಲಾಸ್ಟ್ ಮಾಡಬೇಕಾದರೆ ಮೇಲುಗಡೆಯಿಂದ ಕಲ್ಲು ಬಂಡೆ ಬೀಳದಹಾಗೆ support ಇಟ್ಟುಕೊಂಡಿರುತ್ತಾರಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬ್ಲಾಸ್ಟ್ ಮಾಡಿದಮೇಲೆ debris ಬೀಳುತ್ತದೆ. ಅದನ್ನು ತೆಗೆದಮೇಲೆ support ಇಟ್ಟುಕೊಳ್ಳುತ್ತಾರೆ.

Sri Kadidal MANJAPPA.—Is it a fact that in the accident that took place on 9th September 1951 three people were buried alive under the mud ?

The Hon'ble Sri T. MARIAPPA.—The report to me is that on 9th September 1951 the accident was due to land slip.

Sri Kadidal MANJAPPA.—Are Government aware that the rumour is that they were buried alive ?

The Hon'ble Sri T. MARIAPPA.—Naturally, a man gets himself covered under the debris.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಈ ಸಂದರ್ಭದಲ್ಲಿ ಸಾಕಾದಷ್ಟು ಮುಂಜಾಗರೂಕತೆ ತೆಗೆದುಕೊಳ್ಳದಿದ್ದುದರಿಂದ ಇಷ್ಟೊಂದು ಜನ ಸಾಯುವುದಕ್ಕೆ ಕಾರಣವಾಯಿತೆಂಬ ಶಂಕೆಯಿರುವುದರಿಂದ ಮತ್ತೊಂದು ಸಾರಿ ವಿಚಾರಣೆ ನಡೆಸಿ ಅದರ ಫಲಿತಾಂಶವನ್ನು ಸಭೆಯ ಮುಂದಿಡುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಗಬಹುದು, ಪುನಃ ವಿಚಾರಣೆ ನಡೆಸುವುದಕ್ಕೆ ತಯಾರಾಗಿದ್ದೇವೆ.

ಶ್ರೀ ಬಿ. ಹುಚ್ಚೇಗೌಡರು.—ಅಲ್ಲದೆ ಮುಂದೆ ಈ ರೀತಿಯಾಗಿ ಅನ್ಯಾಯವಾಗಿ ಜನಗಳು ಸತ್ತು ಅವರ ಕುಟುಂಬದವರಿಗೆ ತೊಂದರೆ ಬರುವುದನ್ನು ತಪ್ಪಿಸುವುದಕ್ಕಾಗಿ ಹೆಚ್ಚಿಗೆ ಎಚ್ಚರಿಕೆ ಕಾರ್ಯಕ್ರಮ ಕೈಕೊಳ್ಳುತ್ತೀರಾ ಮತ್ತು ಈ ರೀತಿಯಾಗಿ ಸುರಂಗವನ್ನು ಮಾಡುವುದು ಸಾಧ್ಯವಿಲ್ಲವೆಂದು ತಿಳಿದು ಬಂದರೆ ಆ ಕೆಲಸವನ್ನು ನಿಲ್ಲಿಸಿಬಿಡುವುದಕ್ಕೆ ಅಪ್ಪಣೆ ಮಾಡುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಹಳ ಜನರು ಸತ್ತಿದ್ದಾರೆಂಬುದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಎಲ್ಲಾ ಮುಂಜಾಗರೂಕತೆ ಕಾರ್ಯಕ್ರಮವನ್ನೂ ತೆಗೆದುಕೊಳ್ಳುತ್ತೇವೆ ಮತ್ತು ತೆಗೆದುಕೊಂಡಿದ್ದೇವೆ.

ಶ್ರೀ ಎಲ್. ಸಿದ್ದಪ್ಪನವರು.—5-6 ಜನ ಸತ್ತಿದ್ದಾರೆಂದು ನೀವೇ ಹೇಳಿದ್ದೀರಲ್ಲಾ !

ಮಾನ್ಯ ಶ್ರೀ ಟಿ. ಮರಿಯಪ್ಪನವರು.—5-6 ಜನ ಎನ್ನುವುದಕ್ಕೂ ಬಹಳ ಜನ ಎನ್ನುವುದಕ್ಕೂ ವ್ಯತ್ಯಾಸವಿದೆ.

ಶ್ರೀ ಟಿ. ಸಿ. ಹೊನ್ನಪ್ಪನವರು (ಮೈಸೂರು ಜಿಲ್ಲೆ).—ಇಲ್ಲಿ explosive ಉಪಯೋಗಿಸಿದ್ದು gun powder ರೇ ಅಥವಾ ಜಿಲ್ಯಾಟಿನ್ನೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—gun powder ಅಲ್ಲವೆಂದು ಹೇಳಿದ್ದೇನೆ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಹಾಗಾದರೆ ಏನದು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಲೆಕ್ಟ್ರಿಕ್ ಡೆಟೊನೇಟರುಗಳು.

ಶ್ರೀ ಟಿ. ಸಿ. ಹೊನ್ನಪ್ಪನವರು.—ಎಲೆಕ್ಟ್ರಿಕಲ್ ಡೆಟೊನೇಟರ್ ಇರಬಹುದು. ಅದು ನನಗೂ ಗೊತ್ತು. ನನಗೆ ಅದರ ಅನುಭವವೂ ಸ್ವಲ್ಪ ಇದೆ. ನಾನೂ ಒಬ್ಬ ಲೈಸೆನ್ಸ್ ಹೋಲ್ಡರು. ಅಲ್ಲಿ ತಾವು ಉಪಯೋಗಿಸಿದ್ದು ಜಿಲಾಟಿನ್ನೇ ಅಥವಾ gun powder ರೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಜಿಲಾಟಿನ್ನು.

ಶ್ರೀ ಟಿ. ಸಿ. ಹೊನ್ನಪ್ಪನವರು.—ಅಲ್ಲಿ ಬ್ಲಾಸ್ಟ್ ಕೆಲಸ ಮಾಡುತ್ತಿದ್ದಂಥ ಮನುಷ್ಯ ಲೈಸೆನ್ಸ್‌ದಾರನೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು. ಇಲಾಖೆಯ ಬ್ಲಾಸ್ಟರೇ ಅವನು.

ಶ್ರೀ ಟಿ. ಸಿ. ಹೊನ್ನಪ್ಪನವರು.—ಇಲಾಖೆಯ ಮನುಷ್ಯನೇ ಆಗಿರಬಹುದು; ಆದರೆ ಆತನು ಲೈಸೆನ್ಸ್ ಪಡೆದಿರುವವನೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು.

ಶ್ರೀ ಟಿ. ಸಿ. ಹೊನ್ನಪ್ಪನವರು.—ಇದನ್ನು ಎಕ್ಸ್‌ಪ್ಲೋಸಿವ್ ಇನ್ಸ್‌ಪೆಕ್ಟರವರಿಂದ ವಿಚಾರಣೆ ಮಾಡಿಸಿ ಅವರ ಮಹಜರ್ ವರದಿ ತರಿಸಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಬೇಕು.

ಶ್ರೀ ಟಿ. ಸಿ. ಹೊನ್ನಪ್ಪನವರು.—ಏಕೆಂದರೆ ಇದು ಮುಖ್ಯವಾಗಿ Explosive Inspector ರವರಿಗೇ ಸಂಬಂಧಪಟ್ಟಿದ್ದು. Mining Inspector ರವರಿಗೆ ಸಂಬಂಧಿಸಿದ್ದಲ್ಲ. ಆದ್ದರಿಂದ ಅವರಿಂದ ವಿಚಾರಣೆ ನಡಿಸಿ,ವರದಿ ತರಿಸಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲಾಖೆಯವರು ಯಾವ್ಯಾವ ರೀತಿ ವಿಚಾರಣೆ ನಡೆಸಬೇಕೋ ಏನೇನು ಮಾಡಬೇಕೋ ಅದನ್ನೆಲ್ಲಾ ಮಾಡಿದ್ದಾರೆ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಹಾಗಲ್ಲ ಬೇರೆ ಯಾರೂ ವಿಚಾರಣೆ ಮಾಡಕೂಡದು. Inspector of Explosives ರವರೇ ಬಂದು ವಿಚಾರಣೆ ನಡೆಸಬೇಕು. ಅವರಿಗೇ ಇದರ ವಿಚಾರದಲ್ಲಿ ಅನುಭವ ಇರುವುದು. ಆರೀತಿ ವಿಚಾರಣೆ ನಡೆಸಿದ ವರದಿ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ರಿಪೋರ್ಟ್ ಬಂದಿಲ್ಲ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಆ ರೀತಿ ಮಾಡುವಂತೆ ತಿಳಿಸುತ್ತೀರಾ?

ಮಾನ್ಯ ಶ್ರೀ ಟಿ ಮರಿಯಪ್ಪನವರು.—ಆಲೋಚನೆ ಮಾಡಬೇಕು.

ಶ್ರೀ ಟಿ. ಸಿ. ಹೊನ್ನಪ್ಪನವರು.—ಈಗ ತರಿಸಿರತಕ್ಕ ವರದಿಯ ಪ್ರಕಾರ ಮರಣ ಸಂಬಂಧಿಸಿದ್ದು ಬ್ಲಾಸ್ಟರ್‌ನ ತಪ್ಪಿನಿಂದಲೇ ಅಥವಾ ಬೇರೆ ಯಾವುದಾದರೂ ಕಾರಣದಿಂದಲೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—Accident ಎಂದು ಆಗಲೇ ಹೇಳಿದ್ದೇನೆ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಆಕಸ್ಮಿಕವೆಂಬುದೇನೋ ಸರಿ. ಯಾರ ಅಜಾಗರೂಕತೆಯಿಂದ ಉಂಟಾಯಿತೆಂಬದನ್ನು ಹೇಳುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಕಸ್ಮಿಕವೆಂದು ಹೇಳಿದ್ದಾರೆ. ಇಂಥವರ ಅಜಾಗರೂಕತೆಯಿಂದಲೇ ಹೀಗಾಯಿತೆಂದು ಹೇಳುವುದು ಕಷ್ಟವೆಂದು ತಿಳಿಸಿದ್ದಾರೆ.

ಶ್ರೀ ಟಿ. ಸಿ. ಹೊನ್ನಪ್ಪನವರು.—Inspector of Explosives ಅವರಿಗೆ ಈ ವಿಚಾರಣೆ ಹಾಕಿದ್ದರೆ ಇವೆಲ್ಲಾ ಹೊರಪಡುತ್ತಿತ್ತು. ಅವರಿಗೆ ಇದೆಲ್ಲಾ ಅನುಭವವಿದೆ. ಅವರು ಸುಲಭವಾಗಿ ಪತ್ತೆ ಮಾಡಬಲ್ಲರು. ಆದ್ದರಿಂದ ಈಗಲೂ ಅವರನ್ನು ವಿಚಾರಣೆ ನಡಿಸುವುದಕ್ಕೆ ಕಳುಹಿಸಿಕೊಡುತ್ತೀರಾ?

ಅಧ್ಯಕ್ಷರು.—ಯೋಚನೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು (ಬೆಂಗಳೂರು ಸಿಟಿ).—ಇಲ್ಲಿ ತಾವು ಪರಿಹಾರ ಕೊಡುತ್ತೇವೆಂದು ಹೇಳಿದ್ದೀರಿ; ಯಾವ ರೀತಿ ಪರಿಹಾರ ಕೊಡುತ್ತೀರೆಂಬುದನ್ನು ತಿಳಿಸುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪರಿಹಾರ ಕೊಡುವ ವಿಷಯವನ್ನು ಇನ್ನೂ ಆಖೈರಾಗಿ ತೀರ್ಮಾನ ಮಾಡಿಲ್ಲ. ಯುಕ್ತ ರೀತಿಯಲ್ಲಿ ಪರಿಹಾರ ಕೊಡುತ್ತಾರೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—'ಯುಕ್ತ ರೀತಿ' ಎಂದರೆ ಅದಕ್ಕೇನಾದರೂ ಗ್ರೇಡು, ಸ್ಕೇಲು ನಿಗದಿಯಾಗಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದಕ್ಕೆಲ್ಲಾ ಕಾನೂನಿದೆ. ಆದ್ದರಿಂದಲೇ ಬಾಕಿ ಎಲ್ಲಾ ವಿಷಯಗಳನ್ನೂ ಹೇಳುವುದಕ್ಕೆ ಕಷ್ಟವಾಗುತ್ತದೆಂದು ಹೇಳಿ ಈ ರೀತಿ ಉತ್ತರ ಕೊಟ್ಟಿದೆ.

Bus Permit applications pending

Q.—154. Sri T. RAMACHAR (Kolar District—General).—

Will the Government be pleased to state :—

(*a*) the number of applications for grant of bus permits still pending before Government ;

(*b*) the names of persons to whom orders sanctioning bus permits are passed but not given effect to ?

A.—The Hon'ble Sri T. MARIAPPA (Home Minister).—

(*a*) Nil.
(*b*) Nil.

ಶ್ರೀ ಟಿ. ರಾಮಾಚಾರ್‌ರವರು. — ಇಂಥ ಅರ್ಜಿಗಳು ಸರ್ಕಾರದವರ ಮುಂದೆ ಯಾವುದೂ ಇಲ್ಲವೆಂದು ಹೇಳಿದ್ದೀರಿ. ಟ್ರಾಫಿಕ್ ಬೋರ್ಡಿನವರ ಮುಂದೇನಾದರೂ ಇವೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು. — ನೋಟೀಸ್ ಬೇಕು.

Cancellation of New Bus Permits.

Q.—226. Sri K. SAMPANGI RAMIAH (Kolar District—General).—Will the Government be pleased to state :—

(*a*) whether they are contemplating the extension of the Nationalisation of the Bus Services in the State ;
(*b*) the number of new permits that have been issued for fresh lines for the last two years ;
(*c*) whether any permits were cancelled for the reasons of illegal leases of the lines ;
(*d*) the number of cases in which the said cancellation orders were set aside ?

A.—The Hon'ble Sri T. MARIAPPA (Home Minister).—

(*a*) Yes.
(*b*) 430.
(*c*) Yes. Two permits were cancelled.
(*d*) One.

ಶ್ರೀ ಕೆ. ಸಂಪಂಗಿರಾಮಯ್ಯನವರು.— ಸರ್ಕಾರದವರು ರದ್ದುಮಾಡಿರುವ ಬಸ್ ಪರ್ಮಿಟ್‌ಗಳಲ್ಲದೆ ಡೆಪ್ಯುಟೀಕಮಾಷನರುಗಳು ರದ್ದುಮಾಡಿರುವುದನ್ನು ಸರ್ಕಾರದವರು ಇಲ್ಲಿ ತಿಳಿಸಿದ್ದಾರೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಅದಕ್ಕೆ ನೋಟೀಸ್ ಬೇಕು.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಇಲ್ಲಿ ಕೆಲವು ಪರ್ಮಿಟ್ಟುಗಳನ್ನು ವಾಪಸು ಕೊಡಲಾಯಿತೆಂದು ತಿಳಿಸಿದ್ದೀರಿ. ಹಾಗೆ ವಾಪಸು ಕೊಡುವುದಕ್ಕೆ ಕಾರಣವೇನು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಅವುಗಳಬಗ್ಗೆ ಪ್ರಾಯಶಃ ಹಿಯರಿಂಗ್ ಆಗಿ ಆಮೇಲೆ ವಾಪಸು ಕೊಟ್ಟರೆಂದು ಕಾಣುತ್ತದೆ. ವಿವರಗಳನ್ನು ಹೇಳಬೇಕಾದರೆ ನೋಟೀಸ್ ಬೇಕು.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಹಾಗೆ ವಾಪಸು ಕೊಟ್ಟಿರುವುದು ಯಾರಿಗೆ ಎಂಬುದನ್ನು ತಿಳಿಸುತ್ತೀರಾ ? ಅವರ ಹೆಸರೇನು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಇಂಥವರೇ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ನೋಟೀಸ್ ಬೇಕು.

ಶ್ರೀ ಕೆ. ಸಂಪಂಗಿರಾಮಯ್ಯನವರು.— ಈ ರೀತಿಯಾಗಿ ವಾಪಸು ಕೊಡುತ್ತಾಬಂದರೆ ಜನಗಳಿಗೆ ತಾವೂ ಅದೇರೀತಿ ಮಾಡಿದರೂ ತಪ್ಪಿಸಿಕೊಳ್ಳಬಹುದೆಂದು ಆ ರೀತಿ ಮಾಡಲು ಉತ್ತೇಜನ ಕೊಟ್ಟಂತಾಗಲಿಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು. — ಅದು ಅಭಿಪ್ರಾಯ. Deserving ಆಗಿರುವ ಸಂದರ್ಭಗಳಲ್ಲಿ ವಾಪಸು ಕೊಡಬೇಕಾಗುತ್ತದೆ.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಅದಕ್ಕಾಗಿಯೇ ನಾನು ಕೇಳುತ್ತಿರುವುದು. ಅಂದಾಜಾಮೇಲಾದರೂ ಯಾವ ಕಾರಣದಿಂದ ಅವರಿಗೆ ವಾಪಸು ಕೊಡಲಾಯಿತೆಂಬುದನ್ನು ತಿಳಿಸುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ನೋಟೀಸ್ ಬೇಕು.

ಶ್ರೀ ಕೆ. ಸಂಪಂಗಿರಾಮಯ್ಯನವರು.— ತಾವೇ caseನ್ನು hearಮಾಡಿ ವಾಪಸು ಕೊಟ್ಟಿರುವುದರಿಂದ ಊಹೆಯಮೇಲೆ ಹೇಳುವುದಕ್ಕಾಗುವುದಿಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು. — ಜ್ಞಾಪಕವಿಲ್ಲ.

Sri G. VEERAPPA (Chitaldrug District—General).—Have the Government worked out a scheme for extension of nationalisation of bus services over the whole State ?

The Hon'ble Sri T. MARIAPPA.—Yes.

Sri G. VEERAPPA.—Is it a fact that the Mysore Road Transport Service is running under loss now ?

The Hon'ble Sri T. MARIAPPA.—For the present we are incurring a little loss. I think we are going to make it up.

Sri G. VEERAPPA.—What is the loss that Government have incurred ?

The Hon'ble Sri T. MARIAPPA.—That question does not arise. Also I am not in a position to give the correct answer.

Sri G. VEERAPPA.—Have Government thought of any plan to see that no loss incurs ?

The Hon'ble Sri T. MARIAPPA.—Certainly. Already plans are on hand to see that the losses are minimised and even profits are made.

Cancellation of bus permits sanctioned by the Hon'ble Revenue Minister.

Q.—293. **Sri B. CHANNABYRE GOWDA** (Bangalore District—General).—

Will the Government be pleased to state :—

(*a*) (i) the number of bus lines sanctioned by the Hon'ble the Revenue Minister when the Road Transport portfolio was held by him ; (ii) of these the number of lines in respect of which stay orders were passed by the Hon'ble the Minister for Public Works ;

(*b*) out of these bus lines in respect of which stay orders had been passed, the numbers that were restored to the respective persons :

(*c*) the names of those to whom they were so restored ?

A.—**The Hon'ble Sri T. MARIAPPA** (Home Minister).—

(*a*) (i) 338.
(ii) 6.

(*b*) Nil.

(*c*) Does not arise in view of the reply to (*b*) above.

ಶ್ರೀ ಬಿ. ಚನ್ನಬೈರೇಗೌಡರು.—ಮೈಸೂರು ಸರ್ಕಾರದವರು ಬಸ್ಸುಗಳ ರಾಷ್ಟ್ರೀಕರಣದ ಯೋಜನೆಯನ್ನು ಅಂಗೀಕರಿಸಿದ್ದು ಯಾವಾಗ?

ಅಧ್ಯಕ್ಷರು.—ಬಸ್ಸುಗಳ ರಾಷ್ಟ್ರೀಕರಣದ ವಿಷಯ ಇಲ್ಲೆಲ್ಲಿದೆ ?

ಶ್ರೀ ಬಿ. ಚನ್ನಬೈರೇಗೌಡರು.—338 ಬಸ್ಸುಗಳ ಲೈನುಗಳನ್ನು ಮಂಜೂರು ಮಾಡಲಾಗಿದೆಯೆಂದು ಹೇಳಿದಮೇಲೆ ರಾಷ್ಟ್ರೀಕರಣದ ವಿಷಯ ಏನಾಯಿತೆಂದು ಪ್ರಶ್ನೆ ಬರುತ್ತದೆ. ಆದಕ್ಕಾಗಿ ಕೇಳುತ್ತಿದ್ದೇನೆ.

ಈಗ ನೀವು ಈ ರೀತಿ 338 ಬಸ್‌ಲೈನ್‌ಗಳನ್ನು ಕೊಟ್ಟಿದ್ದರಿಂದ ನಿಮ್ಮ ರಾಷ್ಟ್ರೀಕರಣದ ಯೋಜನೆಗೆ ತೊಂದರೆಯಾಗಿಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ. ಅವರಿಗೆಲ್ಲಾ ಕೊಟ್ಟಿರುವುದು ಹಂಗಾಮಿಯಾಗಿ. ಅವರ ಲೈಸೆನ್ಸ್ ಪರ್ಮಿಟ್ಟಿನಲ್ಲಿಯೇ "Subject to the conditions of Nationalisation" ಎಂದು ಕೊಟ್ಟಿದೆ. ಆದ್ದರಿಂದ ಸರ್ಕಾರದವರು ತಮ್ಮ ರಾಷ್ಟ್ರೀಕರಣದ ಯೋಜನೆಯನ್ನು ಮುಂದುವರಿಸಿಕೊಂಡು ಹೋದಂತೆಲ್ಲ ಈ ಖಾಸಗಿ ಪರ್ಮಿಟ್ ಹೋಲ್ಡರುಗಳು ಬಿಟ್ಟು ಕೊಡಬೇಕೆಂದು ತಿಳಿಸಿದೆ.

ಶ್ರೀ ಬಿ. ಚನ್ನಬೈರೇಗೌಡರು.—ಈ 338 ಬಸ್ ಲೈನ್‌ಗಳನ್ನೂ ಟ್ರಾಫಿಕ್ ಬೋರ್ಡಿನ ನಿಯಮಗಳನ್ನನುಸರಿಸಿ ಕೊಟ್ಟಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು. ಅದನ್ನನುಸರಿಸಿಯೇ ಕೊಟ್ಟಿದೆ.

ಶ್ರೀ ಬಿ. ಚನ್ನಬೈರೇಗೌಡರು.—ಟ್ರಾಫಿಕ್ ಬೋರ್ಡಿನವರು ಇದಕ್ಕೆ ಒಪ್ಪಿದರೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಟ್ರಾಫಿಕ್ ಬೋರ್ಡಿನವರೇ ಇದನ್ನು ಕೊಟ್ಟಿರುವುದು.

ಶ್ರೀ ಬಿ. ಚನ್ನಬೈರೇಗೌಡರು.—ಅದೇರೀತಿ ಡಿಸ್ಟ್ರಿಕ್ಟ್ ಅಡ್ವೈಸರಿ ಸಮಿತಿಯವರು ತೀರ್ಮಾನಿಸಿದ್ದಾರೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಬೇಕು. ಪ್ರತಿಯೊಂದು ಐಟಂನಲ್ಲಿಯೂ ಡಿಸ್ಟ್ರಿಕ್ಟ್ ಅಡ್ವೈಸರಿ ಸಮಿತಿಯವರನ್ನು ಕೇಳಿ ಮಾಡಿದ್ದಾರೆಯೇ ಎಂದು ಹೇಳಬೇಕಾದರೆ ನೋಡಿ ಹೇಳಬೇಕು.

ಶ್ರೀ ಬಿ. ಚನ್ನಬೈರೇಗೌಡರು.—ಹಂಗಾಮಿಯಾಗಿ ಹೀಗೆ ಕೊಡುವ ಸಂದರ್ಭದಲ್ಲಿ ಆ ಬಸ್ಸುಗಳಿಗೆಮಾತ್ರ stay orderನ್ನು ಕೊಡುವುದಕ್ಕೆ ಕಾರಣವೇನು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವುಗಳ ವಿಷಯದಲ್ಲಿ ತಕರಾರು ಬಂದಿತ್ತು. ಅದನ್ನು ಫೈಸಲು ಮಾಡಬೇಕೆಂದು ಹೇಳಿ stay order ಕೊಟ್ಟು ಇತ್ಯರ್ಥ ಮಾಡಬೇಕಾಯಿತು.

Education in Co-operation.

Q.—177. Sri K. R. SREEKANTESWAR (Bangalore City—General).—Will the Government be pleased to state :—

(*a*) the measures taken by them for spreading education in co-operation ;

(*b*) the expenses incurred during the last four years in respect of the above ;

(*c*) what were the recommendations of the Co-operative Seminar in respect of the above ;

(*d*) the action taken by them on these recommendations ?

A.—The Hon'ble Sri T. MARIAPPA (Home Minister).—

(*a*) The Government and the Mysore Provincial Co-operative Institute, Bangalore, conduct training classes. Action is taken to hold Co-operative Conferences at all levels ; publication of books ; pamphlets ; and periodicals.

(*b*) Government have incurred the following expenditure on account of subventions sanctioned to the Mysore Provincial Co-operative Institute during the past four years.

Year		*Amount* Rs. a. p.		*Remarks*
1947-48	...	4,260 2 0	...	Annual subvention
1948-49	...	5,000 0 0	...	Annual subvention .
1949-50	...	1,000 0 0	...	Subvention regarding All-India Co-operative Conference.
		3,000 0 0	...	Subvention for conducting training classes.
1950-51	...	3,000 0 0	...	Subvention for expenditure connected with the conduct of the Seminar.
		4,000 0 0	...	Annual subvention.
Grand Total	...	20,260 2 0		

(*c*) A copy of summary of recommendations and the action taken thereon is printed below.

(*d*) Propaganda by the Multipurpose Co-operative Institutes, Co-operation and Rural Development Departments and participation in exhibitions.

Summary of recommendations and the action taken thereon.

1. Propaganda should be the responsibility of the Institute in collaboration with the other agencies.	In the present set-up, the conduct of propaganda on Co-operation is undertaken by the Mysore Provincial Co-operative Institute in collaboration with the officers of the Co-operative Department.
2. The Co-operative Journal should be revived immediately.	The Co-operative Journal has been revived by the Mysore Co-operative Institute and is being published as a weekly journal since February 1951 and is having a wide circulation.
3. The Co-operative Institute as the promotional body is responsible for directing and co-ordinating the work of propaganda, education and training should be strengthened by being re-organised immediately.	The question of reorganising the Provincial Co-operative Institute in the light of the recommendations of the Seminar is under consideration.
4. The Institute should be given statutory recognition.	......

(THE HON'BLE SRI T. MARIAPPA.)

5. To meet the immediate need for the supply of technically trained personnel an emergency scheme of training in three months in a few centres of the State is suggested.	The holding of training classes to train candidates in the Principles and Practice of Co-operation has been a regular and annual feature of the Provincial Institute and some of its branch institutes. During the year 1950-51, Co-operative Training Classes were held at Mysore and Mandya centres and 110 students successfully underwent the training course.
6. A scheme of Co-operative Education and training on concentric system in four stages is suggested as a permanent arrangement.	This aspect is being examined by the Department.
7. The existing facilities for the study of co-operation by other agencies should continue.	The existing facilities for the study of Co-operation by other agencies, *i.e.*, the Mysore Provincial Co-operative Institute is being continued unhampered.
8. It is not necessary at present to have a separate College for Co-operation.	No remarks to offer.
9. Study tours and practical training for Co-operators are to be arranged.	The Mysore Provincial Co-operative Institute has on hand a scheme of study tours and practical training for Co-operators. This work will be undertaken as soon as adequate facilities are available.
10. Co-operative Societies should employ on their staff only persons trained in Co-operation.	It is now made incumbent upon all the Multi-purpose Co-operative Societies to employ only trained candidates to the posts of Assistant Secretaries. Other Societies are also preferring trained candidates in place of untrained ones at the time of filling up vacancies arising on their staff.
11. For appointments included under clause (A) under draft rule 50, a pass in the Diploma course in addition to general qualifications should be insisted upon.	Suitable provision has been made in the draft rules which are now before Government for consideration. As soon as the draft rules are approved steps will be taken to call upon all Co-operative Societies to employ only qualified and trained personnel in the light of the recommendations of the Seminar.
12. For appointment included under clause (B) of the same draft rules a pass in the Intermediate examination in Co-operation conducted by the Institute should be insisted upon.	.....
13. The formation of general cadre for the employees of Co-operative Societies is not supported.	No remarks to offer.
14. The outline of the reorganisation of the Co-operative Institute is indicated.	The re-constitution of the Mysore Provincial Co-operative Institute as "the Mysore Co-operative Union" on the lines outlined by the Seminar is under examination.
15. The staff of the Co-operative Union should be considerably strengthened.	This is engaging the attention of the Department.
16. An immediate beginning for an up-to-date Co-operative Library by the Institute should be made.	The Institute has made a beginning with its limited resources, in building up a Co-operative Library. It is reported that its library at present contains 235 volumes and that it has so far incurred an expenditure of Rs. 667-11-6 in this regard. It has recently decided to set apart a portion of the rent received from the Co-operators' Home, Mysore, for purchase of books. Negotiations are afoot for acquiring the site adjacent to St. Lukes Church, Chamarajpet, for the location of a Central Library. A sum of Rs 63,380 collected from the Co-operative Societies towards the Memoral Fund of His Highness the late Sri Narasimharaja Wodeyar will be utilized for this purpose.
17. In order to raise funds sufficient for meeting the extended activities of the Union, an annual levy of contributions on a sliding scale ranging from 2 per cent to 5 per cent of the net profits of the societies subject to a maximum of Rs. 500 is recommended to be provided statutorily.	Steps will be taken to implement their resolution by making a suitable provision in the draft rule (18 iv) for compulsory contributions from the Societies every year.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಸಹಕಾರ ತತ್ವದ ವಿಚಾರದಲ್ಲಿ ತಿಳಿವಳಿಕೆಯನ್ನು ಹರಡುವುದಕ್ಕೆ ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮುಗಳೇನೆಂದು ಕೇಳಿರುವ ಪ್ರಶ್ನೆಗೆ ಉತ್ತರವಾಗಿ ಸರ್ಕಾರದವರೂ, ಪ್ರಾವಿಂಷಿಯಲ್ ಕೋ-ಆಪರೇಟಿವ್ ಇನ್‌ಸ್ಟಿಟ್ಯೂಟಿನವರೂ ಸಹಕಾರ ಶಿಕ್ಷಣ ತರಗತಿಗಳನ್ನು ನಡೆಸುತ್ತಿದ್ದಾರೆ. ಹೋಬಳಿ, ತಾಲ್ಲೂಕು ಸಹಕಾರ ಸಮ್ಮೇಳನಗಳು, ಪ್ರಾಂತ ಸಹಕಾರ ಸಮ್ಮೇಳನಗಳು, ಪ್ರಕಟನೆಗಳು ಮುಂತಾದವುಗಳನ್ನು ಏರ್ಪಡಿಸಿದ್ದಾರೆಂದು ತಿಳಿಸಿದೆ. ಸಹಕಾರ ತತ್ವಗಳನ್ನು ಪ್ರಚಾರ ಮಾಡುವುದಕ್ಕೆ ಹೈಸ್ಕೂಲು ಕಾಲೇಜುಗಳಲ್ಲಿ ಶಿಕ್ಷಣಕ್ಕೆ ಏರ್ಪಾಡು ಮಾಡಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೈಸ್ಕೂಲು ಕಾಲೇಜುಗಳಲ್ಲಿ ಏರ್ಪಾಡು ಮಾಡಿಲ್ಲ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಕೋ-ಆಪರೇಟಿವ್ ಸೆಮಿನಾರ್‌ನ ಶಿಫಾರಸುಗಳನ್ನು ಪರಿಶೀಲನೆ ಮಾಡುತ್ತಿದ್ದೇವೆಂದು ತಿಳಿಸಿದೆ. ಒಂದು ವರ್ಷದಮೇಲಾದರೂ ಅದು ಇನ್ನೂ ಪರಿಶೀಲನೆಯಲ್ಲಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಷ್ಟೋ ಅಂಶಗಳನ್ನು ಪರಿಶೀಲನೆ ಮಾಡಿದ್ದೇವೆ. ಕೆಲವನ್ನೂ ಮಾಡುತ್ತಿದ್ದೇವೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಸಹಕಾರ ವಿದ್ಯಾಭ್ಯಾಸದ ಯೋಜನೆಯ ವಿಷಯದಲ್ಲಿ ಸೆಮಿನಾರ್‌ನವರು ಕೊಟ್ಟಿರುವ ಸಲಹೆ ವಿಚಾರದಲ್ಲಿ ಈ ವಿಚಾರವನ್ನು ಇಲಾಖೆಯವರು ಪರಿಶೀಲಿಸುತ್ತಿದ್ದಾರೆಂದು ತಿಳಿಸಿದೆ. ಯಾವ ಇಲಾಖೆಯವರು ಪರಿಶೀಲಿಸುತ್ತಿದ್ದಾರೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಹಕಾರ ಇಲಾಖೆಯವರು. ಇದನ್ನು ಯಾವ ರೀತಿ ಕಾರ್ಯರೂಪಕ್ಕೆ ತರಬಹುದೆಂದು ಕೋ-ಆಪರೇಟಿವ್ ಇನ್‌ಸ್ಟಿಟ್ಯೂಟಿನವರನ್ನೂ ಕೇಳಿದ್ದಾರೆ. ಇದಕ್ಕೆ ವಿದ್ಯಾ ಇಲಾಖೆಯವರೂ ಒಪ್ಪಬಹುದು. ಇದು ಪರಿಶೀಲನೆಗೆ ಯೋಗ್ಯವಾದ ವಿಚಾರವೆಂದು ಒಪ್ಪಿದ್ದೇವೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಸಹಕಾರತತ್ವದ ಪ್ರಚಾರ ಸರಿಯಾಗಿ ನಡೆಯದೆ ಕೆಲವು ವ್ಯಕ್ತಿಗಳು ಮಾತ್ರ ಈ ಕ್ಷೇತ್ರದಲ್ಲಿ ಭಾಗ ವಹಿಸಿ ಮುಂದೆಬರುತ್ತಿದ್ದಾರೆಂಬುದು ಗೊತ್ತಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಷ್ಟು ಪ್ರಚಾರವಾಗಬೇಕೋ ಅಷ್ಟು ಆಗಿಲ್ಲವೆಂದು ಒಪ್ಪುತ್ತೇನೆ. ಆದರೂ ಈ ಕಾರ್ಯ ಈಚೆಗೆ ತೀವ್ರವಾಗಿ ನಡೆಯುತ್ತಿದೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಕೆಲವು ವ್ಯಕ್ತಿಗಳು, ಸಂಸ್ಥಾನದಲ್ಲಿರುವ 90 ಲಕ್ಷ ಪ್ರಜೆಗಳಪೈಕಿ ಕೇವಲ ಎಂಟು-ಹತ್ತು ಜನರು ಮಾತ್ರ ಸಹಕಾರ ಕ್ಷೇತ್ರವನ್ನು ತಮ್ಮ ಸ್ವಂತ ಮನೆಯಹಾಗೆ ಮಾಡಿಕೊಂಡು ಸ್ವಂತಕ್ಕಾಗಿ ಉಪಯೋಗಿಸುತ್ತಿದ್ದಾರೆಂಬುದು ಗೊತ್ತಿದೆಯೇ ?

ಅಧ್ಯಕ್ಷರು.—ಇದನ್ನು ಒಪ್ಪುವುದಕ್ಕಾಗುತ್ತದೆಯೇ ?

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಸಹಕಾರ ಪ್ರಚಾರಕ್ಕಾಗಿ 20,260 ರೂಪಾಯಿ ಖರ್ಚಾಗಿದೆಯೆಂದು ತಿಳಿಸಲಾಗಿದೆ. ಇದೇ ರೀತಿ ಮೊದಲಿನಿಂದಲೂ ನಡೆದಿದೆಯೋ ಅಥವಾ ಈ ಎರಡು-ಮೂರು ವರ್ಷಗಳಿಂದ ಮಾತ್ರ ನಡೆದಿದೆಯೋ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಉತ್ತರದಲ್ಲೇ ಅಂಕಿ ಅಂಶಗಳನ್ನು ಕೊಟ್ಟಿದೆ. 1947-48ರಲ್ಲಿ ಇಷ್ಟು ಖರ್ಚಾಗಿದೆ, 1948-49 ರಲ್ಲಿ ಇಷ್ಟಾಗಿದೆ, 1949-50ರಲ್ಲಿ ಇಷ್ಟಾಗಿದೆ, 1950-51ರಲ್ಲಿ ಇಷ್ಟಾಗಿದೆ ಎಂದು ತಿಳಿಸಿದೆ.

Repairs of Public Works Roads in Hassan District.

Q.—228. Sri H. SIDDANANJAPPA (Hassan District—General).—

Will the Government be pleased to state :—

whether they have taken any steps since March 1951 for the repairing of the public roads (D.P.W. Roads) in Hassan District ; if they have done so what is the progress achieved so far ?

A.—The Hon'ble Sri T. MARIAPPA (Home Minister).—

Yes, all possible steps have been taken.

An expenditure of Rs. 99,373 has been incurred to the end of August 1951 against the total grant of Rs. 2,79,437 under repairs.

ಶ್ರೀ ಎಚ್. ಸಿದ್ದನಂಜಪ್ಪನವರು.—ಮಾರ್ಚಿ ತಿಂಗಳಿಂದೀಚೆಗೆ 2,79,437 ರೂಪಾಯಿ ಮಂಜೂರಾಗಿರುವ ಗ್ರಾಂಟಿನಲ್ಲಿ ಆಗಸ್ಟ್ ಆಖೈರುವರೆಗೆ 99,373 ರೂಪಾಯಿ ಖರ್ಚಾಗಿ ದೆಯೆಂದು ತಿಳಿಸಿದೆ. ಕೆಲಸ ಎಷ್ಟು ನಡೆದಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಗಸ್ಟ್ ಆಖೈರಿಗೆ 99,373 ರೂಪಾಯಿನಷ್ಟು ಕೆಲಸ ನಡೆದಿತ್ತು. ಅಲ್ಲಿಂದೀಚೆಗೆ ಇನ್ನೂ ಹೆಚ್ಚು ನಡೆದಿದೆ.

ಶ್ರೀ ಎಚ್. ಸಿದ್ದನಂಜಪ್ಪನವರು.—ಎಷ್ಟು ಮೈಲಿ ರಸ್ತೆ ರಿಪೇರಿಯಾಗಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಲ್ಲಿ ರುವ ಒಟ್ಟು 716¾ ಮೈಲಿ ರಸ್ತೆಯಮೇಲೆ 99,373 ರೂಪಾಯಿ ಖರ್ಚಾಗಿತ್ತು. ಇತ್ತೀಚಿಗೆ ಜಾಸ್ತಿಯಾಗಿದೆ.

ಶ್ರೀ ಎಚ್. ಸಿದ್ದನಂಜಪ್ಪನವರು.—ಇನ್ನೂ ಎಷ್ಟುಮೈಲಿ ರಸ್ತೆ ರಿಪೇರಿ ಆಗಬೇಕಾಗಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಾಮಾನ್ಯವಾಗಿ ಎಲ್ಲಕಡೆಯೂ ರಸ್ತೆಯಲ್ಲಿರುವ ಹಳ್ಳಕೊಳ್ಳಗಳನ್ನು ಮುಚ್ಚಿದ್ದಾರೆ. ಚರಂಡಿ ಗಳನ್ನು ಸರಿಮಾಡುತ್ತಿದ್ದಾರೆ. ಮಳೆ ಬಿದ್ದ ಮೇಲೆ ಕನ್ಸಾಲಿಡೇಷನ್ ಪ್ರಾರಂಭವಾಗಿದೆ.

ಶ್ರೀ ಎಚ್. ಸಿದ್ದನಂಜಪ್ಪನವರು.—ಇನ್ನೆಷ್ಟು ಮೈಲಿ ರಿಪೇರಿ ಆಗಬೇಕು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಲ್ಲ ಆಗುತ್ತಿದೆ, ಒದಗಿಸಿರುವ ಪೂರ್ತಿ ಹಣವೂ ಖರ್ಚಾಗಬೇಕೆಂದು ನಮ್ಮ ಇಷ್ಟ.

ಶ್ರೀ ಬಿ. ಎನ್. ಬೋರಣ್ಣಗೌಡರು (ಹಾಸನ ಜಿಲ್ಲೆ).—ರಸ್ತೆ ರಿಪೇರಿ ಎಂದರೆ ಏನೇನು ಮಾಡುತ್ತಾರೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮಾನ್ಯ ಸದಸ್ಯರಿಗೇ ಗೊತ್ತಿದೆ. ಮೊದಲು ಮಣ್ಣುಹಾಕುವುದು, ಜೆಲ್ಲಿ ಹಾಕುವುದು, ಬ್ಲೈಂಡೇಜ್ ಕೂಡ ಇದೆ.

ಶ್ರೀ ಬಿ. ಎನ್. ಬೋರಣ್ಣಗೌಡರು.—ಹಾಗಾದರೆ ಈಗ ಖರ್ಚಾಗಿರುವುದರಲ್ಲಿ ಜೆಲ್ಲಿ ಹಾಕುವುದು, ಹಳ್ಳಕೊಳ್ಳ ಮುಚ್ಚುವುದು ಇದೂ ಸೇರಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಲ್ಲಾ ಸೇರಿದೆ. ಬಹಳ ಕೆಟ್ಟುಹೋಗಿರುವಕಡೆ ಜೆಲ್ಲಿ ಕೂಡ ಈಗಾಗಲೇ ಹಾಕಿದೆ.

ಶ್ರೀ ಬಿ. ಎನ್. ಬೋರಣ್ಣಗೌಡರು.—ಹಾಸನ ಟೌನ್‌ನಲ್ಲಿ ಮೇನ್‌ರೋಡುಗಳಿಗೆ ಸಿಮೆಂಟ್ ಹಾಕುವುದಕ್ಕೆ ಮಂಜೂರಾಗಿ ಎಷ್ಟು ದಿವಸವಾಯಿತು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆರು ಫರ್ಲಾಂಗುಗಳಿಗೆ ಮಂಜೂರಾಗಿದೆ. ಮೊದಲು ಮುನಿಸಿಪಾಲಿಟಿಯವರು ಹಣ ಕೊಡುತ್ತೇವೆಂದು ಹೇಳಿದ್ದರು. ನಂತರ ಮುಂದಿನ ವರ್ಷದಲ್ಲಿ ಕೊಡುತ್ತೇವೆಂದು ಹೇಳಿದರು. ಈಗ್ಗೆ ನಾಲ್ಕೈದು ದಿನದಲ್ಲಿ ಅದನ್ನೂ ಮಂಜೂರುಮಾಡಿದೆ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು (ಬೆಂಗಳೂರು ಜಿಲ್ಲೆ).—2,79,437 ರೂಪಾಯಿ ಗ್ರಾಂಟಿನಲ್ಲಿ 99,373 ರೂಪಾಯಿ ಖರ್ಚಾಗಿದೆಯೆಂದು ಉತ್ತರದಲ್ಲಿದೆ. ಮಳೆಗಾಲದಲ್ಲಿ ಇದೆಲ್ಲವೂ ಖರ್ಚಾಗಿ ರಸ್ತೆರಿಪೇರಿ ಪೂರ್ತಿ ಆಗಬೇಕೆಂಬ ನಿರ್ಬಂಧವಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮಳೆ ಆಗಬೇಕು. ಮಧ್ಯೆ ಎರಡು ತಿಂಗಳು ಮಳೆ ಬರಲಿಲ್ಲ. ಈಚೆಗೆ ಮಳೆ ಬಿದ್ದಮೇಲೆ ಕೆಲಸ ನಡೆಯುತ್ತಿದೆ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಲ್ಯಾಪ್ಸ್ ಆಗಬಾರದೆಂದು ಕೆಲಸ ಜಾಗ್ರತೆ ಆಗಬೇಕೆಂದು ಪ್ರಯತ್ನಪಟ್ಟಿದ್ದರೆ ಅಷ್ಟುಕೂಡ ಲ್ಯಾಪ್ಸ್ ಆಗುತ್ತಿರಲಿಲ್ಲವಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು—ಇನ್ನೂ ಲ್ಯಾಪ್ಸ್ ಆಗಿಲ್ಲ. ಬರುವ ಮಾರ್ಚಿ ಆಖೈರುವರೆವಿಗೂ ಅವಕಾಶವಿದೆ. ಆಗಸ್ಟ್ ಸೆಪ್ಟಂಬರಿನಲ್ಲಿ ಮಳೆ ಬರಲಿಲ್ಲ. ಆದ್ದರಿಂದ

ಸ್ವಲ್ಪ ತಡವಾಯಿತು. ಈಗ ಬಂದಿದೆ; ನವೆಂಬರ್ ಡಿಸೆಂಬರ್‌ನಲ್ಲೂ ಸ್ವಲ್ಪ ಬಂದರೆ ಕೆಲಸ ಪೂರ್ತಿಯಾಗುತ್ತದೆ.

Construction of Hostels

Q.—73. Sri A. BHEEMAPPA NAIK (Chitaldrug District—General).—

Will the Government be pleased to state :—

(*a*) the amount of grant made for the construction of hostels in the State during 1951-52 ;

(*b*) the names of such hostels and the amount of grant made ?

A.—The Hon'ble Sri R. CHENNIGARAMIAH (Minister for Local Self-Government).—

(*a*) Rs. 1,53,975.

(*b*)—

	Name of the Hostel	*The Amount sanctioned*
		Rs.
1	Adikarnataka Hostel Building at Shimoga	15,000
2	Hostel Building at Adichunchanagiri Mutt, Nagamangala Taluk ...	7,116
3	Kurubara Hostel Building at Nanjangud	17,334
4	Sri Siddaramanna's Girls' Hostel, Tumkur	19,459
5	Kunchitigara Hostel, Chellakere	14,000
6	Veerasaiva Hostel, Sagar	19,976
7	Vokkaligara Hostel, Hassan	23,225
8	Maharatta Hostel, Tumkur	11,110
9	Building grant for the Veerasaiva Hostel Building to be constructed by Sri Suttoor Swamiji at Chamarajanagar	9,755
10	Building grant to Veerasaiva Hostel, Hosaduraa	8,000
11	Building grant to Sri Taralabalu Sri Jagadguru Veerasaiva Vidyarthi Nilaya, Chitaldrug	4,000
12	Building grant to the Vokkaligara Hostel, Chikkaballapur	4,000
13	Building grant to Cowsic Sankethi Association Hostel, Mysore	4,000
14	Building grant to the new Hostel constructed by Sri S. L. N. Charities, Bangalore	3,000
	Total ...	1,53,975

ಶ್ರೀ ಎ. ಭೀಮಪ್ಪನಾಯಕರು.—1,53,975 ರೂಪಾಯಿ ಮಂಜೂರಾಗಿದೆಯೆಂದು ತಿಳಿಸಿದೆ. Has all this amount been distributed ?

The Hon'ble Sri R. CHENNIGARAMIAH.—Just now it has been sanctioned. It is not completely paid.

ಶ್ರೀ ಎ. ಭೀಮಪ್ಪನಾಯಕರು.—1951-52 ರಲ್ಲಿ ಇವುಗಳಲ್ಲದೆ ಮಿಕ್ಕವರಿಂದ ಗ್ರಾಂಟಿಗಾಗಿ ಎಷ್ಟು ಅರ್ಜಿಗಳು ಬಂದಿವೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು—ನೋಟೀಸ್.

ಶ್ರೀ ಎ. ಭೀಮಪ್ಪನಾಯಕರು.—ಚಿತ್ರದುರ್ಗದಲ್ಲಿ ಬ್ರಾಹ್ಮಣರ ಹಾಸ್ಟೆಲ್ ಕಟ್ಟಲು ಗ್ರಾಂಟಿಗಾಗಿ ಅರ್ಜಿ ಬಂದಿದೆಯೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಎಲ್ಲಕ್ಕೂ ಕೊಡುವುದಕ್ಕಾಗುವುದಿಲ್ಲ; ಬಂದಿರುವುದರಪೈಕಿ ಇಷ್ಟಕ್ಕೆ ಗ್ರಾಂಟು ಮಂಜೂರಾಗಿದೆ.

ಶ್ರೀ ಎ. ಭೀಮಪ್ಪನಾಯಕರು.—ಹೊಸದುರ್ಗದಲ್ಲಿ ಕುರುಬರ ಹಾಸ್ಟೆಲು ಕಟ್ಟಡ ಮುಕ್ಕಾಲುಭಾಗ ಆಗಿ ಅವರು ಗ್ರಾಂಟು ಕೊಡಬೇಕೆಂದು ಎರಡು-ಮೂರು ಬಾರಿ ಅರಿಕೆ ಮಾಡಿಕೊಂಡಿದ್ದಾರೆಯೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅರಿಕೆ ಕಳುಹಿಸಿದ್ದರು. ಅದನ್ನು ನಾನು ನೋಡಿದ್ದೇನೆ; ಅದು ಇನ್ನೂ ಮಂಜೂರಾಗಿಲ್ಲ, ಪರಿಶೀಲನೆಯಲ್ಲಿದೆ.

ಶ್ರೀ ಎ. ಭೀಮಪ್ಪನಾಯಕರು.—ಚಳ್ಳಕೆರೆಯಲ್ಲಿ ವೀರಶೈವರ ಹಾಸ್ಟೆಲ್ ಕಟ್ಟಡ ಅರ್ಧ ಆಗಿ ಹಣವಿಲ್ಲದೆ ಅಷ್ಟಕ್ಕೇ ನಿಂತಿದೆ ಎಂಬುದು ಗೊತ್ತಿದೆಯೆ ?

The Hon'ble Sri R. CHENNIGA RAMIAH.—May be.

ಶ್ರೀ ಎ. ಭೀಮಪ್ಪನಾಯಕರು.—ಚಿತ್ರದುರ್ಗ ಜಿಲ್ಲೆಯಲ್ಲಿ ಎಂಟು-ಹತ್ತು ಹಾಸ್ಟೆಲು ಕಟ್ಟಡಗಳು ಅರ್ಧ ಮುಕ್ಕಾಲುಭಾಗ ಕೆಲಸವಾಗಿ ಅವಕ್ಕೆ ಗ್ರಾಂಟು ಕೊಡಬೇಕೆಂದು ಕೋರಿ ಅರ್ಜಿಗಳು ಬಂದಿವೆಯೆ ?

The Hon'ble Sri R. CHENNIGARAMIAH.—Not only from Chitaldrug District but from all other Districts we have received proposals. We have not been able to provide funds for all of them.

ಶ್ರೀ ಎ. ಭೀಮಪ್ಪನಾಯಕರು.—ಹಾಸ್ಟೆಲುಗಳಿಗೆ ಗ್ರಾಂಟು ಕೊಡುವ ವಿಚಾರದಲ್ಲಿ ಬಹಳ ಉದಾರವಾಗಿರತಕ್ಕದ್ದು ಸರ್ಕಾರದವರ ನೀತಿಯೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹೌದು, ಉದಾರವಾಗಿರಬೇಕೆಂದು ನಮ್ಮ ಇಷ್ಟ.

ಶ್ರೀ ಎ. ಭೀಮಪ್ಪನಾಯಕರು.—ಒಂದು ವರ್ಷ ಕೊಟ್ಟ ಗ್ರಾಂಟು ಆ ವರ್ಷವೇ ಸಂದಾಯವಾಗದಿದ್ದರೆ ಲ್ಯಾಪ್ಸ್ ಆಗುತ್ತದೆಯೋ ಅಥವ ಮುಂದಿನವರ್ಷ ಅದನ್ನು ಕೊಡುತ್ತೀರೊ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಮಾರ್ಚಿ ಕೊನೆಯೊಳಗೆ ಖರ್ಚು ಬೀಳದೆಹೋದರೆ ಲ್ಯಾಪ್ಸ್ ಅಗುತ್ತದೆ.

ಶ್ರೀ ಎ. ಭೀಮಪ್ಪನಾಯಕರು.—ಮಂಜೂರಾದಮೇಲೂ ತಕ್ಷಣ ಹಣವನ್ನು ಕಳುಹಿಸದೇ ಹೋದರೆ ಲ್ಯಾಪ್ಸ್ ಆಗುತ್ತದೆಯೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹಾಗಲ್ಲ. ಮಂಜೂರಾಗಿ ಹಾಸ್ಟೆಲುಗಳವರು ನಾನಾ ಕಾರಣಗಳಿಂದ ಬಿಲ್ಲನ್ನು ಕೊಡದೇಯಿದ್ದರೆ ಲ್ಯಾಪ್ಸ್ ಆಗುತ್ತದೆ.

ಶ್ರೀ ಎ. ಭೀಮಪ್ಪನಾಯಕರು.—ಒಂದು ವೇಳೆ ಗ್ರಾಂಟು ಮಂಜೂರಾಗಿದ್ದು ಹೀಗೆ ತಡ ಮಾಡಿದರೆ ಇದು ಖಾಸಗಿಯವರ ಕೆಲಸವಾದ್ದರಿಂದ ಇದನ್ನು ಒಂದು ಫಂಡ್‌ಮಾಡಿ ಮುಂದಿನ ವರ್ಷ ಕೊಡಲು ಸಾಧ್ಯವೆ? ಸಾಮಾನ್ಯವಾಗಿ ನಾನಾ ಕಾರಣಗಳಿಂದ ತಡವಾಗುತ್ತದೆ. ಆಗ ಲ್ಯಾಪ್ಸ್ ಮಾಡುವುದಕ್ಕೆ ಬದಲು ಫಂಡ್ ಎಂದು ಮಾಡಿ ಲ್ಯಾಪ್ಸ್ ಆಗದಂತೆ ಹಣವನ್ನಿಡುವುದು ಸೂಕ್ತವಲ್ಲವೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅದಕ್ಕೆ technical objection ಬರುತ್ತದೆ. ಅಕೌಂಟೆಂಟ್ ಜನರಲ್‌ರವರು admit ಮಾಡುವುದಿಲ್ಲ. ಆಮೇಲೆ ಅದು ಈ ಸಭೆಯಮುಂದೆ ಬರಬೇಕಾಗುತ್ತದೆ. ಲ್ಯಾಪ್ಸ್ ಆದರೂಕೂಡ ಮುಂದಿನವರ್ಷ ಅಂಥ ಕೆಲವಕ್ಕೆ ಗ್ರಾಂಟು ಕೊಟ್ಟಿದ್ದೇವೆ.

ಶ್ರೀ ಎ. ಭೀಮಪ್ಪನಾಯಕರು.—ಕಟ್ಟಡಗಳನ್ನು ಹೀಗೆ ಕಟ್ಟಿದರೆ ಅದಕ್ಕೆ ಗ್ರಾಂಟು ಮಂಜೂರಾಗಿ ಲ್ಯಾಪ್ಸ್ ಆಗಿದ್ದರೆ ಮುಂದಿನ ವರ್ಷ ಅದನ್ನು ನೋಡಿ ಎಷ್ಟುಮುಂಚೆ ಮಂಜೂರಾಗಿರುತ್ತದೆಯೋ ಅದನ್ನು ನೋಡಿ ಮಂಜೂರು ಮಾಡುತ್ತೀರಾ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಸಾಮಾನ್ಯವಾಗಿ ಈ ವರ್ಷ ಲ್ಯಾಪ್ಸ್ ಆದರೆ ಅಷ್ಟನ್ನು ಮುಂದಿನವರ್ಷ ಕೊಡುತ್ತೇವೆ.

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲಾ—ನಿಮ್ನ ಪಂಗಡ).—ಪ್ರತಿಯೊಂದು ಜಿಲ್ಲಾ ಕಸಬೆಗಳಲ್ಲಿ ಮತ್ತು ತಾಲ್ಲೂಕು ಕಸಬೆಗಳಲ್ಲಿ ಎಯಿಡೆಡ್ ಹಾಸ್ಟೆಲುಗಳನ್ನು ಕಟ್ಟಿಸಲು ಸಾರ್ವಜನಿಕರಿಂದ ಬರತಕ್ಕ ಮನವಿಗಳಬಗ್ಗೆ ಸರ್ಕಾರದವರು ಏನಾದರೂ ನಿರ್ದಿಷ್ಟವಾದ ನಿಯಮಗಳನ್ನು ಮಾಡಿದ್ದಾರೆಯೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಸಾರ್ವಜನಿಕರಿಂದ ಬರತಕ್ಕ ಅರಿಕೆಗಳನ್ನು ಪೂರೈಸಲು ಎಂದಿಗೂ ಕಷ್ಟಗಳಿದ್ದೇ ಇವೆ. ಅವನ್ನು ತಿಳಿಸಬೇಕಾದ ಪ್ರಮೇಯವೇ ಇಲ್ಲ.

ಶ್ರೀ ಎಂ. ಮಾದಯ್ಯನವರು.—ಹಾಗಾದರೆ ಅವುಗಳನ್ನು ತಿಳಿಸಬೇಕಾದ ಪ್ರಮೇಯವೇ ಇಲ್ಲವೇ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಇಲ್ಲ.

ಶ್ರೀ ಎಂ. ಮಾದಯ್ಯನವರು.—ಗ್ರಾಂಟ್ ಇನ್ ಏಯ್ಡ್ ಹಾಸ್ಟಲುಗಳಿಗೆ ಹಣ ಒದಗಿಸತಕ್ಕ ಸಂಬಂಧವಾಗಿ ಅನುಸರಿಸತಕ್ಕ ನಿಬಂಧನೆಗಳನ್ನು ಕೇಳುವ ಪ್ರಮೇಯವೇ ಇಲ್ಲವೇ ? ಆ ಸಂಬಂಧವಾದ ನಿಬಂಧನೆಗಳೇನೂ ಇಲ್ಲವೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ನಿಬಂಧನೆಗಳಿವೆ. ಅದಕ್ಕೆಲ್ಲಾ ಒಂದು ಪ್ರತ್ಯೇಕವಾದ ಸರ್ಕಾರಿ ಹುಕುಂ ಇದೆ. ಅದನ್ನು ನೋಡಿದರೆ ಎಲ್ಲಾ ವಿಚಾರಗಳೂ ಗೊತ್ತಾಗು

ತ್ತವೆ. ಕೆಲವು ಸಂದರ್ಭಗಳಲ್ಲಿ ಶೇಕಡ 50 ರಷ್ಟನ್ನೂ ಇನ್ನು ಕೆಲವುವೇಳೆ ಇನ್ನೂ ಕಮ್ಮಿಯಾಗಿ ಕೊಡಲಾಗಿದೆ.

ಶ್ರೀ ಎಂ. ಮಾದಯ್ಯನವರು.—ಅಂಥಾ ಪ್ರತಿಯೊಂದು ಹಾಸ್ಟಲಿಗೂ ಎಷ್ಟೆಷ್ಟು ಬೇಕೋ ಅಷ್ಟನ್ನೂ ಕೊಡಲಾಗುತ್ತದೆಯೋ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಈಗಿರತಕ್ಕ ನಿಬಂಧನೆಗಳ ಪ್ರಕಾರ up to the extent of 50 per cent of the total cost of the building ಕೊಡಲಾಗುತ್ತಿದೆ. ಇನ್ನು ಕೆಲವುಕಡೆ ಸಾರ್ವಜನಿಕರೇ ಮುಂದೆಬಂದು ಕಟ್ಟಡಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಇದು ಆಯಾಯಾ ಸಂದರ್ಭಾನುಸಾರ ಹೋಗುತ್ತೆ.

ಶ್ರೀ ಎಂ. ಮಾದಯ್ಯನವರು.—ಅಂಥಾ ಪ್ರತಿಯೊಂದು ಹಾಸ್ಟಲು ಕಟ್ಟಡಕ್ಕೂ ತಾವು ಶೇಕಡ 50ರಷ್ಟನ್ನು ಒದಗಿಸಿದ್ದೀರಾ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಸರ್ಕಾರದವರು ಅನುಸರಿಸಿಕೊಂಡು ಬಂದಿರತಕ್ಕ ನೀತಿಗನುಸಾರವಾಗಿ ಕಟ್ಟಡಕ್ಕೆ ತಗಲುವ ಒಟ್ಟು ವೆಚ್ಚದ ಶೇಕಡ 50ರಷ್ಟನ್ನು ಕೊಡಲು ಕಾನೂನಿನಲ್ಲಿ ಅವಕಾಶವಿದೆ.

ಶ್ರೀ ಎಂ. ಮಾದಯ್ಯನವರು. —ಹಾಗೆ ತಾವು ಕೊಡುತ್ತಿರುವ ಶೇಕಡಾ 50ರಷ್ಟು ಹಣದ ಜೊತೆಗೆ ಉಳಿದುದನ್ನು ಹಾಕಿ ಕಟ್ಟಿಸಲು ಅನುಕೂಲವಿಲ್ಲದಂಥಾ ಸನ್ನಿವೇಶ ಒದಗಿದಾಗ ಸರ್ಕಾರದವರೇ ಪೂರ್ತಿಹಾಕಿ, ಕಟ್ಟಡ ಒದಗಿಸಲು ಸಹಾಯವಾಗುವಂಥ ನಿಯಮಾವಳಿಗಳಾವೂ ಇರುವದಿಲ್ಲವೆ?

ಅಧ್ಯಕ್ಷರು.—ಆ ರೀತಿ ಸರ್ಕಾರದವರು ಯಾವ ಹಾಸ್ಟಲನ್ನು ಮಾಡಿದ್ದಾರೆ?

ಶ್ರೀ ಎಂ. ಮಾದಯ್ಯನವರು.—ಹಾಗೆ ಎಲ್ಲಿಯಾದರೂ ಕಟ್ಟಿಸಿಕೊಟ್ಟಿರತಕ್ಕ ನಿದರ್ಶನಗಳಿದ್ದರೆ ಹೇಳಬಹುದೆಂದು ನಾನು ಕೇಳಿದೆ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹಾಗೆ ಕಟ್ಟಿಸಿಕೊಡಲೇಕೂಡದೆಂದೇನೂ ಕಾನೂನು ಹೇಳಿಲ್ಲ. ಆದರೆ ಹಾಗೆ ಮಾಡಲು ಸರ್ಕಾರದವರಿಗೆ ಸಾಧ್ಯವಿಲ್ಲ. ಸಾಧ್ಯವೆಂದು ಕಂಡುಬಂದಾಗ ಕಟ್ಟಿಸಿಕೊಟ್ಟರೂ ಕೊಡಬಹುದು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು (ಚಿಕ್ಕಮಗಳೂರು ಜಿಲ್ಲೆ — ನಿಮ್ನ ಪಂಗಡ).—ನಿಮ್ನ ತರಗತಿಯವರಿಗೆ ಹಾಸ್ಟಲುಗಳನ್ನು ಕಟ್ಟಿಸಿಕೊಡದಿದ್ದಂಥಾ ಸ್ಥಳಗಳಲ್ಲಿ ಹಾಲಿ ನಡೆಯುತ್ತಿರುವ ಹಾಸ್ಟಲುಗಳ ಸಂಪೂರ್ಣ ಜವಾಬ್ದಾರಿಯನ್ನು ಸರ್ಕಾರದವರೇ ವಹಿಸುತ್ತಿದ್ದಾರೆಯೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಕೆಲವುಕಡೆ ಎಯಿಡೆಡ್ ಹಾಸ್ಟೆಲುಗಳನ್ನು ಸ್ಥಾಪಿಸಲಾಗಿರುತ್ತೆ. ಹಾಗೆ ಎಲ್ಲೆಲ್ಲಿ ಸ್ಥಾಪಿಸಲಿಲ್ಲವೋ ಅಂಥಾಕಡೆ ಈಗ ನಡೆಯುತ್ತಿರುವ ಹಾಸ್ಟಲುಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವುದರಿಂದ ಅಂಥಾ ಬಾಡಿಗೆಯನ್ನು ಸರ್ಕಾರದವರೇ ಈಗ ಕೊಡುತ್ತಿದ್ದಾರೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.-ಆದಿಕರ್ಣಾಟಕರ ಹಾಸ್ಟಲುಗಳಿಗೆ ಕಟ್ಟಡದ ಖರ್ಚಿಗೆ 30,000 ರೂಪಾಯಿಗಳು ಬೇಕೆಂದು ಅಂದಾಜು ಮಾಡಿದ್ದರೆ ಆದಕ್ಕೆ ತಾವು 15,000 ರೂಪಾಯಿಗಳ ಗ್ರಾಂಟನ್ನು ಕೊಡುತ್ತೀರೋ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಇಲ್ಲ; ಇವರ ಹಾಸ್ಟಲು ಕಟ್ಟಡಗಳನ್ನೆಲ್ಲಾ ಸರ್ಕಾರದವರೇ ಕಟ್ಟಿಸಿರುತ್ತಾರೆ. ಅವುಗಳೆಲ್ಲಾ ಸರ್ಕಾರೀ ಕಟ್ಟಡಗಳು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ನಿಮ್ನ ತರಗತಿಗಳವರಿಗೆ ಎಲ್ಲೆಲ್ಲಿ ಆ ತರಹೆ ಹಾಸ್ಟಲುಗಳನ್ನು ಕಟ್ಟಿಸಿಕೊಟ್ಟು ಅನುಕೂಲ ಮಾಡಿದ್ದೀರಿ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.-ಮೈಸೂರು, ಬೆಂಗಳೂರು, ಇತ್ಯಾದಿ ಕೆಲವು ಕಡೆಗಳಲ್ಲಿ ಅನುಕೂಲ ಮಾಡಿಕೊಡಲಾಗಿದೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಹೀಗೆ 30 ಸಾವಿರ ರೂಪಾಯಿಗಳ ತನಕ ಧನಸಹಾಯ ನೀಡಿ ಆದಿಕರ್ಣಾಟಕರಿಗೆ ಅನುಕೂಲ ಕಲ್ಪಿಸಿರುವಂತೆ ಷೆಡ್ಯೂಲ್ಡ್ ತರಗತಿಗಳವರಿಗೆ ಎಲ್ಲೆಲ್ಲಿ ಅನುಕೂಲಗಳನ್ನು ಕಲ್ಪಿಸಲಾಗಿದೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಯಾರೂ ಕೇಳಲಿಲ್ಲ. ಅದಕ್ಕಾಗಿ ಕಟ್ಟಿಸಿ ಕೊಟ್ಟಿಲ್ಲ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಈಗ ಕೇಳಿದರೆ ಅನುಕೂಲ ಮಾಡಿಕೊಡುತ್ತೀರಾ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆಗಲಿ.

ಶ್ರೀ ಬಿ. ಎಂ. ಶಾಮಣ್ಣಗೌಡರು (ಬೆಂಗಳೂರು ರಿಟ್ರಾಸೀಡೆಡ್ ಪ್ರದೇಶ).—ಜಾತ್ಯಾತೀತ ರಾಜ್ಯವನ್ನು ಕಟ್ಟಬೇಕೆಂದಿರುವಾಗ ಹೀಗೆಲ್ಲಾ ಜಾತಿಯ ಹೆಸರಿನಮೇಲೆ ಹಾಸ್ಟಲುಗಳನ್ನು ಕಟ್ಟಲು ಹಣವನ್ನು ಸಹಾಯಮಾಡುತ್ತ ಸರ್ಕಾರದವರು ಇವಕ್ಕೆ ಉತ್ತೇಜನ ಕೊಡಬಹುದೆ?

Mr. SPEAKER.—That supplementary does not arise.

ಶ್ರೀ ಡಿ. ಗೋವಿಂದದಾಸರು (ಹಾಸನಜಿಲ್ಲೆ ನಿಮ್ನಪಂಗಡ).—ಈ ಹರಿಜನರ ಎಯಿಡೆಡ್ ಹಾಸ್ಟೆಲುಗಳನ್ನು ಸ್ಥಾಪಿಸುವುದರಲ್ಲಿ ಸರ್ಕಾರದವರು ನೀಡತಕ್ಕ ಸಹಾಯವೇನು?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಶೇಕಡ 50 ರಷ್ಟು ಸಹಾಯ ನೀಡುತ್ತಾರೆಂದು ಆಗಲೇ ತಿಳಿಸಿದೆ.

ಶ್ರೀ ಡಿ. ಗೋವಿಂದದಾಸರು.—ಅದಕ್ಕಿಂತಲೂ ಹೆಚ್ಚಿನ ಸಹಾಯ ನೀಡಲು ಅವಕಾಶವಿಲ್ಲವೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಇಲ್ಲ.

ಅಧ್ಯಕ್ಷರು.—ಪ್ರಶ್ನೋತ್ತರಗಳಕಾಲ ಮುಗಿಯಿತು.

QUESTIONS FOR ANSWERS ON THE DAY.

(*Not taken up*).

Madagadagere and Ayyanakere Tank Atchkat and distribution of water.

Q.—59. Sri K. H. MUDIYAPPA (Chikmagalur District—General).—Will the Government be pleased to state:—

(*a*) the number of major tanks in Kadur Taluk;

(*b*) (i) the total number of acres of land irrigated by Madagadakere and Ayyanakere tanks and

(ii) the yield:

(*c*) the extent of repair work done in respect of these tanks under the Grow More Food Scheme;

(*d*) the existing arrangements for the distribution of water in the atchkats of the tanks mentioned above;

(*e*) whether it has come to their notice that a representation was made locally in person to the concerned Minister when he visited the place and also through petitions stating that the existing arrangements were not satisfactory?

A.—The Hon'ble Sri T. MARIAPPA (Home Minister).—

(*a*) Twenty-six.

(*b*) (i) Madagadakere Tank: 5,034 acres.

Ayyanakere Tank: 3,425 acres.

(ii) The question is not very clear.

(*c*) The expenditure incurred under Grow More Food is noted below:—

Madag system: Rs. 33,156.

Ayyanakere: Rs. 26,633.

Further works are also in progress.

(*d*) The distribution of water to the atchkats of tanks under reference is done through channels and tanks. Statement printed below.

(*e*) Yes.

Statement showing the atchkat under Ayyanakere and Madagadakere Tanks.

	Names of the tanks and channels	Length		Atchkat	
		Mls.	F.	Acs.	G.
	VEDA SERIES. (Ayyanakere Channels)				
1	Basavana Kalve	4	0	878	38
2	Malakina Kalve	1	0	226	11
3	Urukalve	3	0	779	22
4	Kadekalve	4	0	845	17
5	Bharamasamudra Channel and Tank	4	0	695	5
	Total ...	16	0	3,425	13
	AVATHI SERIES (Madag Tank Channels).				
1	Madag Rayakalve	9	4	550	10
2	Gangamatha channel...	2	1	247	23
3	Chikkanagala do	2	4	45	18
4	Kasaba do	3	0	448	32
5	Ullinagoor do	2	0	142	23
6	Thuruvanahalli do	1	2	94	38
7	Malleswara do	1	6	212	24
8	Chikkavoddu do	1	5	117	1
9	Gondi do	2	0	198	12
	Tanks				
	Bukkasagara Tank	......		192	24
	Chikkapatnagere Tank	......		424	9
	Chikkangala Tank	......		275	26
	Kadur Doddakere	......		102	36
	Burkanakere	......		598	31
	Devanakere	......		1,068	36
	Thumbehonda	......		132	11
	Macheri Tank	......		130	36
	Total ...	26	6	4,983	30

Executive Engineer, Davangere Division.

Q.—84. Sri H. SIDDAVEERAPPA (Chitaldrug District—General).—

Will the Government be pleased to state :—

(*a*) whether there is a Public Works Department Executive Engineer for Davangere Division ;

(*b*) whether his Head Office is in Chitaldrug ?

A.—The Hon'ble Sri T. MARIAPPA (Home Minister).—

(*a*) Yes.

(*b*) Yes.

Survey of Agricultural Indebtedness.

Q.—87. Sri H. SIDDAVEERAPPA (Chitaldrug District—General).—

Will the Government be pleased to state :—

(*a*) whether they are aware of the total amount of agricultural indebtedness in the State ;

(*b*) whether any steps have been taken to make a survey of this problem in the State ?

A.—The Hon'ble Sri T. MARIAPPA (Home Minister).—

(*a*) According to the re-survey of Agricultural indebtedness conducted in 1945 by Sri S. Nagappa the total amount of rural debt in the State is Rs. 23·55 crores.

(*b*) The Reserve Bank of India have appointed a committee to plan and organise a rural credit survey on an all-India basis. The survey in the State is likely to be undertaken about the middle of October 1951 and will continue up to the end of Jane 1952.

Lakkavalli Project.

Q.—88. Sri H. SIDDAVEERAPPA (Chitaldrug District—General).—

Will the Government be pleased to state :—

(*a*) whether they are aware that completion of Lakkavalli Project at the

(SRI H. SIDDAVEERAPPA.)

earliest possible time is vital for solving our food problem :

(b) whether they brought this fact before the Planning Commission of India ;

(c) whether they will strive to see that Lakkavalli Project is included in the All-India Scheme wholly or partly financed by the Central Government ?

A.—The Hon'ble Sri T. MARIAPPA (Home Minister).—

(a) Yes.

(b) Yes.

(c) Yes.

Income from Forest Produce in Kolar District.

Q.—93. Sri G. NARAYANA GOWDA (Kolar District—General).—

Will the Government be pleased to state :—

the income from the forest produce in Kolar District for the last five years (particulars to be furnished talukwise)?

A.—The Hon'ble Sri R. CHENNIGARAMIAH (Minister for Local Self-Government).—

The income for the whole District was as follows :—

		Rs.	a.	p.
1946—47	...	2,48,495	12	2
1947—48	...	1,04,883	7	0
1948—49	...	1,47,503	0	6
1949—50	...	90,512	15	0
1950—51	...	1,51,307	11	3

(Exclusive of revenue from sale of sandalwood).

It is not possible to furnish this information talukwise as two or more taluks are comprised in a Range depending on the forest produce sold.

Plants raised by Forest Department in State Forest area in Kolar District.

Q.—94. Sri G. NARAYANA GOWDA (Kolar District—General).—

Will the Government be pleased to state :—

the number of plants the Forest Department have raised in the State Forest area in Kolar District (information to be furnished talukwise) ?

A.—The Hon'ble Sri R. CHENNIGARAMIAH (Minister for Local Self-Government).—

Details for the last five years rangewise are furnished below :—

Chikballapur Range.

		Rs.
1946—47	...	2,08,200
1947—48	...	4,88,800
1948—49	...	4,89,700
1949—50	..	4,38,930
1950—51	...	3,66,000

Bagepalli Range.

		Rs.
1946—47	...	1,69,235
1947—48	...	1,76,200
1948—49	...	1,12,100
1949—50	...	64,000
1950—51	...	53,500

Sreenivaspur Range.

		Rs.
1946—47	...	3,52,380
1947—48	...	88,200
1948—49	...	3,75,500
1949—50	...	2,82,780
1950—51	...	1,75,800

Malur Range.

		Rs.
1946—47	...	2,69,680
1947—48	...	2,70,000
1948—49	...	3,47,020
1949—50	...	2,02,800
1950—51	...	1,49,000

Kolar Range (Newly formed).

		Rs.
1950—51	...	1,24,272

It is not possible to furnish information talukwise as two or more taluks are comprised in a range depending on the spread of the forest area.

Starting Key Industries.

Q.—163. Sri C. R. BASAPPA (Tumkur District—General).—

Will the Government be pleased to state :—

(a) whether they are thinking of starting any more key industries ;

(b) if so, what industries and in what places ?

A.—The Hon'ble Sri H. C. DASAPPA (Minister for Finance and Industries).—

(*a*) No.

(*b*) Does not arise in view of answer to (*a*) above.

Terms and conditions of transfer of Concerns to private agency.

Q.—166. Sri C. R. BASAPPA (Tumkur District—General).—

Will the Government be pleased to state:—

(*a*) whether any decision has been taken in regard to the number and nature of the concerns to be transferred to private agency;

(*b*) if so, the terms and conditions of such transfer?

A.—The Hon'ble Sri H. C. DASAPPA (Minister for Finance and Industries).—

(*a*) and (*b*) The matter is still under consideration. The Standing Committee for Industries and Commerce has appointed a Sub-Committee to go into this and other connected subjects. Action will be taken by Government after the recommendations of the Standing Committee are received.

Accidents in Tunga Channel Construction Work.

Q.—275. Sri K. H. MUDIYAPPA (Chikmagalur District—General).—

Will the Government be pleased to state:—

(*a*) whether they have commenced the work relating to "Tunga Channel";

(*b*) the length of the channel (in miles) to be constructed;

(*c*) whether there is necessity for boring a tunnel while constructing this channel;

(*d*) if so, the length of the tunnel that has to be bored; whether any accident has occurred while boring the tunnel;

(*e*) whether the opinion of experts has been obtained regarding the level at which this tunnel has to be bored;

(*f*) (i) whether there have been any casualties while boring this tunnel;

(ii) if so, whether they have given or intend giving compensation to the families of persons who died as a result of accidents that occurred in the course of the construction of the tunnel (the number of persons who died may kindly be intimated)?

A.—The Hon'ble Sri T. MARIAPPA (Home Minister).—

(*a*) Yes.

(*b*) Work restricted to Left Bank Channel—20 miles. Work restricted to Right Bank Channel—4 miles for the present.

(*c*) Yes.

(*d*) 1,500 feet. Yes.

(*e*) Yes.

(*f*) (i) Yes.

(ii) Action is being taken to give necessary compensation as per rules.

Two.

Request for distribution of List of Business the previous day.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಸ್ವಾಮಿ, ಈ ದಿವಸದ ಕಾರ್ಯಕಲಾಪಗಳೇನೆಂಬುದನ್ನು ಒಂದು ದಿವಸ ಮುಂಚಿತವಾಗಿಯೇ ಅಥವಾ ಕೆಲವು ಘಂಟೆಗಳ ಮುಂಚಿತವಾಗಿಯಾದರೂ ತಿಳಿಸಿದ್ದರೆ ಚೆನ್ನಾಗಿರುತ್ತಿತ್ತು. ಹಾಗೆ ಒಂದು ಅನುಕೂಲ ಮಾಡದೆ ಇರುವುದರಿಂದ ನಮಗೆ ಕಾರ್ಯಕ್ರಮದ ರೀತಿ ಗೊತ್ತಾಗದೆ ನಾವೇನಾದರೂ ಒಂದು ನಿಮಿಷ ತಡವಾಗಿ ಬಂದರೆ ಅದರಿಂದ ತುಂಬಾ ಅನಾನುಕೂಲಗಳಾಗುತ್ತಿವೆ.

ಅಧ್ಯಕ್ಷರು (ಮಾನ್ಯ ಶ್ರೀ ವಿ. ವೆಂಕಟಪ್ಪನವರು).—ನೆನ್ನೆಯ ಸಾಯಂಕಾಲವೇ ಹಂಚಲು ಕಳುಹಿಸಿತ್ತಲ್ಲಾ?

ಶ್ರೀ ಬಿ. ಹುಚ್ಚೇಗೌಡರು.—ನೆನ್ನೆ ದಿವಸ ನಮಗೆ ಯಾವುದೂ ಬರಲಿಲ್ಲ. ಈಗತಾನೆ ನಮ್ಮ ಕೈಸೇರಿದೆ.

Mr. SPEAKER.—They were given last evening.

The Hon'ble Sri K.T. BHASHYAM.—According to the rules, "one hour before the meeting for which the list is prepared".

ಅಧ್ಯಕ್ಷರು. — ನೆನ್ನೆಯ ಸಾಯಂಕಾಲವೇ ಡಿಸ್ಟ್ರಿಬ್ಯೂಷರ್‌ಗೆ ಕೊಡಲಾಗಿತ್ತು. ಅದನ್ನು ವಿಚಾರಿಸಿ ನೋಡುತ್ತೇನೆ.

I will find out why they were not made available to the Hon'ble Member.

MOTIONS FOR ELECTIONS.

Election to Standing Committees.

The Hon'ble Sri K. CHENGALARAYA REDDY (Leader of the House.)—I move :—

"That this Assembly do proceed to the election of one member each to the following four Standing Committees to fill up vacancies in accordance with para 10 of Government Order No. 2939-3028—L.A. 87-50-1, dated the 5th January 1951 :—
(1) Agriculture, Food and Civil Supplies,
(2) Public Works,
(3) Electricity,
(4) Publicity and Information."

Mr. SPEAKER.—The question is :—

"That this Assembly do proceed to the election of one member each to the following four Standing Committees to fill up vacancies in accordance with para 10 of the Government Order No. 2939-3028—L.A. 87-50-1, dated the 5th January 1951, namely ;—
(1) Agriculture, Food and Civil Supplies,
(2) Public Works,
(3) Electricity,
(4) Publicity and Information."

The motion was adopted.

Mr. SPEAKER.—The Chair desires to inform the House that for the purpose of election of one member each to the four Standing Committees, the office of the Secretary will be open to receive notice of candidature up to 3 P.M. on Thursday the 1st November 1951 and that the election for the Standing Committees, if necessary, will take place on Saturday the 3rd November 1951, in the Secretary's room between the hours of 3 P.M. and 5 P.M.

The election will be conducted as laid down in the said Government Order by means of simple majority vote.

Election to the Senate of the University of Mysore.

The Hon'ble Sri K. CHENGALARAYA REDDY (Leader of the House).—I move :—

"That this Assembly do proceed to the election of twelve members to the Senate in accordance with section 13 (1) (h) of the Mysore University Act, 1933."

Mr. SPEAKER.—The question is :—

"That this Assembly do proceed to the election of twelve members to the Senate in accordance with section 13 (1) (h) of the Mysore University Act, 1933."

The motion was adopted.

Mr. SPEAKER.—The Chair desires to inform the House that for the purpose of election of twelve members to the Senate, the office of the Secretary will be open to receive notice of candidature up to 3 P.M. on Thursday the 1st November 1951 and that the election, if necessary, will take place on Saturday the 3rd November 1951 in the Secretary's room between the hours of 3 P.M., and 5 P.M.

The election will be conducted as laid down in the said Act according to the principle of proportional representation by means of the single transferable vote.

Presentation of the Report of Committee of Privileges.

Mr. SPEAKER (The Hon'ble Sri V. Venkatappa).—As required by Rule 172 (6) of the Rules of Procedure and Conduct of Business in the Mysore Legislative Assembly, I present the Report of the Committee of Privileges.

FINANCIAL BUSINESS.

Recommendation of His Highness for laying before the House Statement of Additional Grants.

Mr. SPEAKER (The Hon'ble Sri V. Venkatappa).—I have received the following recommendation of His Highness the Maharaja of Mysore, for laying before the Assembly the Schedule of Demands for Supplementary and Additional Grants for the year 1951-52. The order reads as follows :—

"Whereas the amount authorised by the Mysore Appropriation Act, 1951 (Mysore Act of 1951) to be expended for the services indicated in the annexed statement for the current financial year is found to be insufficient for the purposes of the said year ;

Now, therefore, in pursuance of clause (1) of Article 205 of the Constitution of India, I, Sri Jaya Chamaraja Wadiyar, Rajpramukh of Mysore, do hereby direct that the statement showing the estimated amount of supplementary expenditure aggregating to the amount as indicated hereunder and detailed in the statement of estimate annexed be laid before the October-November Session 1951 of the Legislative Assembly;

Voted—	Rs.
Expenditure met from Revenue...	49,75,825
Capital	29 03,600
Advances and Loans ...	1,75,000
Total ...	80,54,425
Charged—	Rs.
Expenditure met from Revenue...	2,00,000
N—Public debt	51,00,000
Total ...	53,00,000

(Sd.) JAYA CHAMARAJA WADIYAR,
Rajpramukh of Mysore.

Schedule of Demands for Additional and Supplementary Grants for 1951-52.

Laid on the Table.

The Hon'ble Sri H. C. DASAPPA (Minister for Finance and Industries).—Sir, on the recommendation of His Highness the Maharaja, I lay before the House a statement of Additional and Supplementary Estimates for the year 1951-52 and Schedule of Demands thereof. The supplement to the Estimates and the Schedule are also placed on the Table of the House. Copies of these have been distributed to the Members.

Presentation of the Report of the Public Accounts Committee.

Mr. SPEAKER (The Hon'ble Sri V. Venkatappa).—The report of the Public Accounts Committee may be presented.

The Hon'ble Sri H. C. DASAPPA (Minister for Finance and Industries). —Sir, as required by Rule 136 of the Rules of Procedure and Conduct of Business in the Mysore Legislative Assembly, I present the Report of the Public Accounts Committee on the Audit and Appropriation Accounts for the year 1949-50. Copies of the Audit Report and Appropriation Accounts for the year 1949-50 and the Report of the Public Accounts Committee thereon have been distributed to the Members. There is a corrigenda that is being issued and will be distributed to the members in the course of the debate. It is just a small correction in para 4 on page 37 of the Report. Instead of "......and at present it had been brought down to no percent", it should be read as "......and at present it had been brought down further."

LEGISLATIVE BUSINESS.

Mr. SPEAKER (The Hon'ble Sri V. Venkatappa).—Presentation of the Select Committee Report on the Mysore Inam Villages (Abolition of Inam Tenure) Bill, 1951.

The Mysore Inam Villages (Abolition of Inam Tenure) Bill, 1951.

Presentation of Select Committee Report.

The Hon'ble Sri H. SIDDAIYA (Minister for Revenue and Excise).—Sir, I present the Report of the Select Committee on the Mysore Inam Villages (Abolition of Inam Tenure) Bill, 1951. Copies of the Report will be made available to the Members during the course of the day.

Recommendation of His Highness the Maharaja for consideration of Inam Villages (Abolition of Inam Tenure) Bill, 1951.

Mr. SPEAKER (The Hon'ble Sri V. Venkatappa).—I have received the recommendation of His Highness the Maharaja for the consideration of the Mysore Inam Villages (Abolition of Inam Tenure) Bill, 1951. The order is as follows:—

"In pursuance of clause (3) of Article 207 of the Constitution of India, I, Jaya Chamaraja Wadiyar, Maharaja of Mysore, do hereby recommend that the Mysore Inam Villages (Abolition of Inam Tenure) Bill, 1951, be taken into consideration by the Legislative Assembly."

The Mysore Village Panchayets and District Boards Bill, 1951.

Mr. SPEAKER (The Hon'ble Sri V. Venkatappa).—The Mysore Village Panchayets and District Boards Bill. ಈ ಮಸೂದೆಗೆ ಶ್ರೀ ಎಂ. ಎಲ್. ನಂಜರಾಜ ಅರಸ್‌ರವರು ಕಳುಹಿಸಿದ್ದ ತಿದ್ದುಪಡಿಮೇಲೆ ಹೋದ ಅಧಿವೇಶನದಲ್ಲೇ ಚರ್ಚೆಯಾಗುತ್ತಿತ್ತು. ಅದನ್ನು ಈಗ ಮುಂದುವರಿಸಬಹುದು.

(ಯಾರೂ ಅದರಮೇಲೆ ಮಾತನಾಡ ಬಿಚ್ಛಿಸಲಿಲ್ಲ).

Mr. SPEAKER.—Shall we then take up the amendment tabled by Sri H. M. Channabasappa? (After a pause) Sri H. M. Channabasappa may move his amendment.

*ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಸ್ವಾಮಿ, ಗ್ರಾಮ ಪಂಚಾಯಿತಿ ಶಾಸನದ 55ನೆಯ ವಿಧಿಯಲ್ಲಿ ಹೀಗಿರುತ್ತದೆ:—

"55. (1) Every person who is not less than 25 years of age and is entitled to vote at an election to a Panchayat within the District shall be qualified to be elected as a member of a District Board.

(2) Every person who is not less than 25 years of age and who pays mohatarfa in a Panchayat within the District Board shall also be qualified to be elected as a member of a District Board:

Provided that no person shall be qualified to be a member of more than one District Board."

55ನೆಯ ವಿಧಿಯ ಒಂದು ಮತ್ತು ಎರಡನೆಯ ಕ್ಲಾಜುಗಳಲ್ಲಿ ಕೆಲವು ನ್ಯೂನತೆಗಳು ಕಂಡು ಬರುವುದರಿಂದ ನಾನು ಒಂದು ತಿದ್ದುಪಡಿಯನ್ನು ತಂದು ಅದರಲ್ಲಿ ಈ ರೀತಿಯಾಗಿ ಸೂಚನೆ ಮಾಡಿದ್ದೇನೆ:—

"For Sub-clauses (1) and (2) the following sub-clause shall be substituted:

Any person who is not less than twenty-five years of age and who is a resident of a taluk inclusive of all Municipal limits therein shall be qualified to be elected as a Member of the District Board from any Taluk of the District."

I move the amendment.

ಜಿಲ್ಲಾ ಬೋರ್ಡುಗಳ ಅಧಿಕಾರ ವ್ಯಾಪ್ತಿಯು ಇದೇ ಶಾಸನದ 49ನೆಯ ವಿಧಿಯಲ್ಲಿ ನಮೂದು ಮಾಡಲ್ಪಟ್ಟಿದೆ. ಒಟ್ಟು ಜಿಲ್ಲೆಯಲ್ಲಿ ಮುನಿಸಿಪಲ್ ಆಡಳಿತಕ್ಕೆ ಮತ್ತು ಸ್ಯಾನಿಟರಿ ಬೋರ್ಡ್ ಆಡಳಿತಕ್ಕೆ ಒಳಪಟ್ಟ ಕ್ಷೇತ್ರವೇನಿದೆಯೋ ಅದನ್ನು ಬಿಟ್ಟರೆ ಉಳಿಯುವ ಕ್ಷೇತ್ರದಲ್ಲಿ ಜಿಲ್ಲಾ ಬೋರ್ಡು ಅಧಿಕಾರ ವ್ಯಾಪ್ತಿಯಿದೆ. ಆ ಕ್ಷೇತ್ರದಲ್ಲಿ ಸೇವೆ ಸಲ್ಲಿಸಲು ಜಿಲ್ಲಾ ಬೋರ್ಡು ನಿರ್ಮಾಣ ಮಾಡುತ್ತಿದ್ದಾಗ ಆ ಜಿಲ್ಲಾ ಬೋರ್ಡು ಸದಸ್ಯರಾಗಲು ಏನು ಅರ್ಹತೆಯಿರಬೇಕಾಗಿತ್ತು ಎಂಬುದನ್ನು ವಿಚಾರಮಾಡಬೇಕಾಗಿದೆ. ಹಿಂದೆ ಜಿಲ್ಲಾ ಬೋರ್ಡುಗಳಲ್ಲಿ ಸದಸ್ಯನಾಗಬೇಕಾದರೆ ಆತನಿಗೆ 21 ವರ್ಷ ವಯಸ್ಸಾಗಿರಬೇಕಾಗಿತ್ತು. 25 ರೂಪಾಯಿಗಳ ಕಂದಾಯ ಕೊಡುವ ಖದೀಂ ಟೆನೆಂಟ್ ಆಗಿ ಅಥವಾ 25 ರೂಪಾಯಿಗಳ ಕಂದಾಯ ಕೊಡುವ ಖಾತೇದಾರನಾಗಿ ಇರಬೇಕಾಗಿತ್ತು, ಅಥವಾ ಇನ್‌ಕಂಟ್ಯಾಕ್ಸ್ ಕೊಡುವ ಒಬ್ಬ ಮನುಷ್ಯನಾಗಿರಬೇಕಾಗಿತ್ತು. ಆದರೆ ಇಂದಿನ ಪರಿಸ್ಥಿತಿಗೆ ಅದನ್ನು ಹೋಲಿಸಿದರೆ ಆ ಅರ್ಹತೆಗಳಿರಬೇಕೆಂದು ವಿಧಾಯಕಮಾಡುವುದು ಸೂಕ್ತವಲ್ಲ, ಸರ್ವೇಸಾಧಾರಣವಾಗಿ ಯಾವ ಕ್ಷೇತ್ರದ ಸೇವೆಯನ್ನೂ ಕೈಕೊಳ್ಳದಿರುವ ಮನುಷ್ಯನಿಗೆ ಅವನು 25 ವರ್ಷ ವಯಸ್ಕನಾಗಿದ್ದರೆ ಆ ಕ್ಷೇತ್ರದಲ್ಲಿ ಸೇವೆಮಾಡಲು ಅರ್ಹನಾಗಬೇಕು ಎಂಬುದೇ ನನ್ನ ಸೂಚನೆ. ಅದು 55ನೆಯ ಕ್ಲಾಜಿನ ಒಂದನೆ ಸಬ್ ಕ್ಲಾಜಿನಲ್ಲಿ ಸೂಚಿಸಲ್ಪಟ್ಟಿದೆ. ಅದರ ಜೊತೆಗೆ ಆತನು ಒಂದು ಪಂಚಾಯಿತಿಯಲ್ಲಿ ಓಟರಾಗಿರಬೇಕೆಂಬುದು ಒಂದು ಅರ್ಹತೆ. ಓಟರು ಆಗಿರಬೇಕಾದರೆ ಸೂಚನೆ ಏನೆಂದರೆ, ಅವನು ಹಳ್ಳಿಗಾಡಿನಲ್ಲಿ ವಾಸಮಾಡಿಕೊಂಡಿರಬೇಕೆಂಬುದನ್ನು ಇಲ್ಲಿ ಸೂಚಿಸಿರುತ್ತೇವೆ. ಆದ್ದರಿಂದ ಈಗಿರುವ ಪ್ರಕಾರ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರ್ ಆಗಿರಬೇಕಾದರೆ 25 ವರ್ಷ ವಯಸ್ಸಾಗಿರಬೇಕು ಮತ್ತು ಆ ಕ್ಷೇತ್ರದ ಹಳ್ಳಿಯಲ್ಲಿ ವಾಸಮಾಡತಕ್ಕವನಾಗಿರಬೇಕು. ಇದರ ಜೊತೆಗೆ 2ನೇ ಕ್ಲಾಸ್‌ನಲ್ಲಿರುವಂತೆ ಅವನು ಎಲ್ಲಾದರೂ ವಾಸಮಾಡಿಕೊಂಡಿರಲಿ ಆ ಒಂದು ಹಳ್ಳಿಯಲ್ಲಿ ಒಂದು ಮನೆ ಇದ್ದು ಕಂದಾಯ ಕೊಟ್ಟರೆ ಸಾಕು ಎಂಬುದಾಗಿ

*Asterisks indicate that the speeches have not been returned approved by Hon'ble Members concerned.

ಸೂಚಿಸಿದ್ದಾರೆ. ವಿಲೇಜ್ ಪಂಚಾಯಿತಿ ಮತ್ತು ಜಿಲ್ಲಾ ಬೋರ್ಡುಗಳ ಶಾಸನರಚನೆ ಮಾಡಲು ಸೂಕ್ತ ಸಲಹೆ ಕೊಡುವುದಕ್ಕಾಗಿ ಒಂದು ಸಮಿತಿ ಏರ್ಪಾಡುಮಾಡಿದ್ದುದು ಸರಿಯಷ್ಟೆ. ಅವರು ಒಂದು ಸಲಹೆ ಮಾಡಿದರು, ಅದನ್ನು ಅನುಸರಿಸಿಯೇ 2ನೇ ಕ್ಲಾಸ್‌ನಲ್ಲಿರತಕ್ಕ ಅರ್ಹತೆ ವಿಧಿಸಲಾಗಿದೆ. ಅದೇನೆಂದರೆ, ಗ್ರಾಮಾಂತರಗಳಲ್ಲಿ ವಾಸಮಾಡತಕ್ಕವರಿಗೆ ಮಾತ್ರ ಆಯಾಯಾ ಡಿಸ್ಟ್ರಿಕ್ಟ್ ಬೋರ್ಡಿನ ಕ್ಷೇತ್ರಗಳಲ್ಲಿ ಸೇವೆ ಮಾಡುವುದಕ್ಕೆ ಅವಕಾಶ ಕೊಡುವುದರ ಜೊತೆಗೆ ಅವರು ಎಲ್ಲಾದರೂ ವಾಸಮಾಡಿಕೊಂಡಿರಲಿ ಆ ಹಳ್ಳಿಗಾಡಿನಲ್ಲಿ ಕಂದಾಯ ಕೊಡತಕ್ಕ ಮನೆ ಇದ್ದರೆ ಸಾಕು. ಇದರಿಂದ ಪ್ರಯೋಜನವೇನೆಂದರೆ ಅನೇಕ ಯುವಕರು ವಿದ್ಯಾಭ್ಯಾಸಮಾಡಿ ಕಾರಣಾಂತರಗಳಿಂದ ಹಳ್ಳಿಗಳಲ್ಲಿ ವಾಸಮಾಡಲಿಕ್ಕೆ ಸಾಧ್ಯವಾಗದೇ ಪಟ್ಟಣಗಳಲ್ಲಿ ವಾಸಮಾಡಬೇಕಾದ ಪರಿಸ್ಥಿತಿ ಬಂದರೆ ಅವರಿಗೆ ಈ ಸೇವಾಕ್ಷೇತ್ರದಲ್ಲಿ ಅವಕಾಶ ಕಲ್ಪಿಸದೇ ಇದ್ದರೆ ಅವರಿಂದ ಅಗುತ್ತಿದ್ದಂತಹ ಸೇವೆಯನ್ನು ಕಳೆದುಕೊಂಡಂತೆ ಆಗುತ್ತದೆ. ಆದ್ದರಿಂದ ಅವರಿಗೆ ಸ್ವಲ್ಪ ಅವಕಾಶ ಮಾಡಿಕೊಡಬೇಕೆಂಬ ಉದ್ದೇಶದಿಂದ ಈ ಸಲಹೆಯನ್ನು ಮಾಡಿದರು. ಈ ಸಲಹೆಯನ್ನನುಸರಿಸಿಯೇ ಈ ಎರಡನೇ ಕ್ಲಾಸ್‌ನಲ್ಲಿ ಮೊಹತರ್ಫ ಕೊಟ್ಟರೆ ಸಾಕು ಎಂದು ವಿಧಾಯಕವಾಗಿದೆ. ಇದರಲ್ಲಿ ಏನಾಗುತ್ತದೆ ಎಂಬುದನ್ನು ಯೋಚನೆ ಮಾಡೋಣ. ಈಗ ಒಬ್ಬ ಮನುಷ್ಯ ಮೈಸೂರು ಜಿಲ್ಲೆಯ ಒಂದು ಹಳ್ಳಿಯಲ್ಲಿ 4 ಆಣೆ, 8 ಆಣೆ ಕಂದಾಯ ಕೊಡತಕ್ಕ ವ್ಯವಸ್ಥೆ ಮಾಡಿಕೊಂಡು ಬೆಂಗಳೂರಿನಲ್ಲಿರಲಿ, ತುಮಕೂರಿನಲ್ಲಿರಲಿ, ಶಿವಮೊಗ್ಗದಲ್ಲಿರಲಿ, ಮೈಸೂರು ದೇಶ ಬಿಟ್ಟು ಬೇರೆ ಕಡೆ ಇದ್ದರೂ ಕೂಡ ಆತನಿಗೆ ಆ ಜಿಲ್ಲಾ ಬೋರ್ಡಿನಲ್ಲಿ ಸದಸ್ಯನಾಗಿರುವುದಕ್ಕೆ ಈ ವಿಧಿ ಪ್ರಕಾರ ಅವಕಾಶವಾಗುತ್ತದೆ. ಆದರೆ ಅದನ್ನು ಒಪ್ಪುವುದಕ್ಕೆ ಸಾಧ್ಯವಾಗುವುದಿಲ್ಲ. ಸಮಿತಿಯವರು ಶಿಫಾರಸು ಮಾಡಿದುದರ ಉದ್ದೇಶ ಎಲ್ಲಾದರೂ ನಾಲ್ಕಾಣೆ ಮೊಹತರ್ಫಾ ಕೊಟ್ಟರೆ ಸಾಕು ಎಂಬುದಾಗಿ ಇರಲಿಲ್ಲ. ನಾನೂ ಆ ಸಮಿತಿಯ ಸದಸ್ಯನಾಗಿದ್ದೆ. ನಮ್ಮ ಉದ್ದೇಶ ಏನಾಗಿತ್ತು ಎಂಬುದನ್ನು ತಮಗೆ ಅರಿಕೆ ಮಾಡುತ್ತಾ ಇದ್ದೇನೆ.

ಶ್ರೀ ಜಿ. ಎ. ಆಚಾರ್ಯರು.—ಲೋಕಸಭೆಯಲ್ಲಿಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಆ ಸಭೆಯ ಕ್ಷೇತ್ರವೇ ಬೇರೆ. ಇದು ಸ್ಥಳೀಯ ಸಂಸ್ಥೆ. ಇದರ ಸೇವಾ ಕ್ಷೇತ್ರ ನಿರ್ದಿಷ್ಟವಾಗಿದೆ, ಆದ್ದರಿಂದ ಆ ಸಭೆಗೆ ಎಲ್ಲಿದ್ದರೂ ಚಿಂತೆಯಿಲ್ಲ. ಇದಕ್ಕೆ ಮಾತ್ರ ಸ್ವಲ್ಪ ಪ್ರತಿಬಂಧಕವಿದೆ ಎಂಬುದನ್ನು ಮಾನ್ಯ ಸದಸ್ಯರು ಒಪ್ಪಿಕೊಳ್ಳಲೇಬೇಕಾಗಿದೆ. ಗ್ರಾಮಾಂತರಗಳಲ್ಲಿ ವಾಸಮಾಡತಕ್ಕ ಜನ ಸಾಮಾನ್ಯವಾಗಿ ತಿಳಿವಳಿಕೆ ಇಲ್ಲದೆ ಇರತಕ್ಕ ಜನ ಎಂಬುದು ತಮಗೆ ಗೊತ್ತಿದೆ. ತಿಳಿವಳಿಕೆ ಇಲ್ಲದೆ ಇರತಕ್ಕ ಜನಗಳಿಗೆ ಯಾವುದಾದರೂ ಒಂದು ರೀತಿಯಲ್ಲಿ ಮೋಸಮಾಡಿ ಅಥವಾ ಆಶೋತ್ತರ ನೀಡಿ ಸದಸ್ಯರಾಗುವುದಕ್ಕೆ ಅವಕಾಶವಿದೆ ಎಂಬುದನ್ನು ಚುನಾವಣೆಗಳಲ್ಲಿ ಪರಿಣತರಾದವರಿಗೆ ನಾನು ಹೇಳಬೇಕಾಗಿಲ್ಲ. ಅಂತೂ ಒಟ್ಟಿನಲ್ಲಿ ಕೊನೇಪಕ್ಷ ಆ ಮನುಷ್ಯ ಆ ಜಿಲ್ಲೆಯಲ್ಲಾದರೂ ವಾಸಮಾಡಬೇಕೆಂಬುದು ನ್ಯಾಯ, ಅದನ್ನು ಒಪ್ಪಿಕೊಳ್ಳಬೇಕು. ಅದು ಬಿಟ್ಟು ಹಳ್ಳಿಯಲ್ಲಿ ನಾಲ್ಕಾಣೆ ಕಂದಾಯ ಕೊಟ್ಟರೆ ಆಯಿತು, ಬೊಂಬಾಯಿನಲ್ಲಿದ್ದರೂ ಮೈಸೂರು ಜಿಲ್ಲಾ ಬೋರ್ಡಿನ ಮೆಂಬರಾಗುವುದಕ್ಕೆ ಅವಕಾಶ ಕೊಡತಕ್ಕ ಈ ವಿಧಿಯನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಾಗದೇ ಹೋಗಿ ಈ ಒಂದು ತಿದ್ದುಪಡಿಯನ್ನು ತರಬೇಕಾದ ಪ್ರಸಂಗ ಬಂತು.

ಈ ತಿದ್ದುಪಡಿಯಲ್ಲಿ ಮತ್ತೊಂದು ಅಂಶವೇನೆಂದರೆ ಜಿಲ್ಲೆಯಲ್ಲಿ ಅವನು ವಾಸಮಾಡಿಕೊಂಡಿದ್ದರೆ ಸಾಕು. 25 ವರ್ಷ ವಯಸ್ಸಾಗಿರಬೇಕು ಎನ್ನತಕ್ಕ ಒಂದು ಭಾವ ಬಂದಿದೆ. ಜಿಲ್ಲೆ ಎಂಬುದು ನಮ್ಮ ಈ ಶಾಸನದಲ್ಲಿ ಯಾವರೀತಿ ವಿಧಾಯಕವಾಗಿದೆಯೆಂದರೆ ರೆವಿನ್ಯೂ ಡಿಸ್ಟ್ರಿಕ್ಟ್ ಏನು ಇದೆ ಅದರಲ್ಲಿ ಮುನಿಸಿಪಾಲಿಟಿಗಳನ್ನು ತೆಗೆದರೆ ಯಾವ ಕ್ಷೇತ್ರ ಉಳಿಯುತ್ತದೆಯೋ ಅದು ಮಾತ್ರ ಡಿಸ್ಟ್ರಿಕ್ಟ್ ಅಂತ ವಿಧಾಯಕವಾ

(ಶ್ರೀ ಎಚ್. ಎಂ. ಚನ್ನಬಸಪ್ಪನವರು).

ಗಿದೆ. ಆಗ ನಮ್ಮ ಅಭಿಪ್ರಾಯ ಸಾಮಾನ್ಯವಾಗಿ ಪಟ್ಟಣಗಳಲ್ಲಿ ವಾಸಮಾಡತಕ್ಕವರಿಗೆ ಸ್ವಲ್ಪ ಸೇವಾಕ್ಷೇತ್ರದಲ್ಲಿ ಅವಕಾಶ ಕಲ್ಪಿಸಬೇಕೆಂಬ ಉದ್ದೇಶವಿದ್ದುದರಿಂದ ಅವರಿಗೆ ಒಂದು ವ್ಯವಸ್ಥೆ ಮಾಡಬೇಕಾಗಿ ಬಂತು. ಈ ಹೊಸ ಮುನಿಸಿಪಲ್ ಕಾನೂನು ಪ್ರಕಾರ ಸಾಮಾನ್ಯವಾಗಿ 3,000 ಪ್ರಜಾ ಸಂಖ್ಯೆ ಏನಿದೆ ಅದಕ್ಕೆ ಮೇಲ್ಪಟ್ಟು ಇರುವ ಗ್ರಾಮುಗಳೆಲ್ಲವನ್ನೂ ಕೂಡ ಮುನಿಸಿಪಾಲಿಟಿಯನ್ನಾಗಿ ಏರ್ಪಾಡು ಮಾಡಬೇಕೆಂದು ವಿಧಾಯಕವಾಗಿದೆ. ಈ ವಿಧಾಯಕದ ಪ್ರಕಾರ ಅನೇಕ ದೊಡ್ಡದೊಡ್ಡ ಹಳ್ಳಿಗಳು, ಗ್ರಾಮಗಳು ಮುನಿಸಿಪಾಲಿಟಿಗಳಾಗುತ್ತವೆ. ಮುನಿಸಿಪಾಲಿಟಿಗಳಾಗುವುದರಿಂದ ಅಲ್ಲಿ ವಾಸಮಾಡತಕ್ಕ ಜನಗಳಿಗೆ ಸೇವಾಕ್ಷೇತ್ರ ಒದಗಿಸದಿದ್ದರೆ ಬಹುಮಟ್ಟಿಗೆ ಪ್ರತಿಭಾಶಾಲಿಗಳಾಗಿರತಕ್ಕವರು, ವಿದ್ಯಾವಂತರು, ಶಕ್ತರು, ದಕ್ಷರು ಇತ್ಯಾದಿ ಇತ್ಯಾದಿ ಜನಗಳಿಗೆ ಆ ಕ್ಷೇತ್ರವನ್ನು ನಿರಾಕರಿಸಿದಂತಾಗುತ್ತದೆ. ಅದಕ್ಕೆ ಪ್ರತಿಯೊಂದು ಜಿಲ್ಲಾ ಕ್ಷೇತ್ರದಲ್ಲೂ ಯಾವ್ಯಾವ ಮುನಿಸಿಪಾಲಿಟಿಗಳಿವೆಯೋ ಆಯಾ ಮುನಿಸಿಪಾಲಿಟಿಗಳಲ್ಲಿ ವಾಸಮಾಡತಕ್ಕ ಜನಗಳಿಗೂ ಕೂಡ ಈ ಒಂದು ಅವಕಾಶವನ್ನು ಏರ್ಪಾಡು ಮಾಡಿಕೊಡಬೇಕೆಂಬುದೇ ಈ ತಿದ್ದುಪಡಿಯ ಮುಖ್ಯ ಉದ್ದೇಶ.

ಒಂದು ಅಂಶ. ಗಮನಾರ್ಹವಾದದ್ದು. ಸಾಮಾನ್ಯ ಮುನಿಸಿಪಾಲಿಟಿಗಳಲ್ಲಿ, ಸಿಟಿ ಮುನಿಸಿಪಾಲಿಟಿಗಳಲ್ಲಿ, ಕಾರ್ಪೊರೇಷನ್‌ಗಳಲ್ಲಿ ಸ್ವಲ್ಪ ಸಂಕುಚಿತಮನೋಭಾವ ಇದೆ ಎಂಬುದು ಎದ್ದು ಕಾಣುತ್ತದೆ. ಒಂದು ಮುನಿಸಿಪಲ್ ಕಾರ್ಪೊರೇಷನ್‌ನಲ್ಲಿ ಒಬ್ಬ ಮನುಷ್ಯ ಖಾತೆದಾರನಾಗಿದ್ದು ಅಲ್ಲಿ ವಾಸಮಾಡದೆ ಹೋದ ಕಾರಣಕ್ಕೇ ಅವನು ಸದಸ್ಯನಾಗುವುದಕ್ಕೆ ಅವಕಾಶ ಕೊಡ ಕೂಡದೆಂದಮೇಲೆ ಆ ಕ್ಷೇತ್ರದ ಹೊರಗಿರತಕ್ಕ ಪ್ರಭಾವಶಾಲಿಗಳಾಗಿರುವವರಿಗೆ, ದಕ್ಷರು, ಶಕ್ತರಾದವರಿಗೆ ಆವರ ಮುನಿಸಿಪಲ್ ಕ್ಷೇತ್ರದಲ್ಲಿ ಸದಸ್ಯರಾಗುವುದಕ್ಕೆ ಅವಕಾಶ ಕೊಡಬೇಕೆಂದರೆ ಸಾಧ್ಯವಿಲ್ಲ. ಅದೇರೀತಿ ನಾವು ಇಲ್ಲೂ ಕೂಡ ಮಾಡಬಹುದಾಗಿತ್ತು. ಏಕೆಂದರೆ ಜಿಲ್ಲಾ ಬೋರ್ಡುಗಳ ಕ್ಷೇತ್ರದಲ್ಲಿ ಸೇವೆಮಾಡತಕ್ಕ ಒಬ್ಬ ಮನುಷ್ಯ ಅದೇ ಕ್ಷೇತ್ರದಲ್ಲಿ ವಾಸಮಾಡಬೇಕೆಂಬುದು ನ್ಯಾಯವಾದದ್ದು ಮತ್ತು ಧರ್ಮವಾದದ್ದು. ಆದರೂ ವಿಶಾಲ ದೃಷ್ಟಿಯಿಂದ ಇನ್ನೂ ಸ್ವಲ್ಪ ಹೆಚ್ಚು ಅವಕಾಶ ಕಲ್ಪಿಸಬೇಕೆಂಬ ಉದ್ದೇಶದಿಂದ ಪ್ರತಿ ತಾಲ್ಲೂಕಿನಲ್ಲಿರತಕ್ಕ ಮುನಿಸಿಪಲ್ ಕ್ಷೇತ್ರಗಳಲ್ಲಿ ವಾಸಮಾಡತಕ್ಕ ಜನರಿಗೂ ಕೂಡ ಈ ಅವಕಾಶವನ್ನು ಏರ್ಪಾಡು ಮಾಡಿಕೊಡಬೇಕೆಂಬ ಸದುದ್ದೇಶದಿಂದ ಈ ತಿದ್ದುಪಡಿಯನ್ನು ಮಂಡಿಸಿದ್ದೇನೆ.

Sri K. R. SREEKANTESWAR.—Regarding the fixity of rent Government have no doubt powers under clause 6 (2) to fix a lower rate of the maximum rent. But I personally feel that the maximum fixed by the Select Committee as not more than half of the produce is too high. As a matter of fact I feel that it must have been reduced to one-third. There seems to be difference of opinion among the members of the Select Committee about this fixity of rent and they have not come to any unanimous decision. I have also sent in amendments suggesting that it may be brought down to one-quarter. That amendment is also there. The Select Committee has to examine the question of rent also and bring it before us.

Regarding the period of five years provided in the Bill, I personally feel that even within this period the raiyat will not be able to do anything. The raiyat may be simply paying the rent during this time without actually doing anything. So I suggest that the maximum period should be at least about 12 years. Regarding this point the Select Committee report says:

"As the proviso to sub-clause (2) may work as a hardship on a landlord, where a tenant after exploiting the land for two years surrenders the lease in favour of the landlord' we recommend that in the proviso after the words "Provided that", the words "with the consent of the landlord" may be inserted, so that where a tenancy has to be terminated before the prescribed period of five years, consent of both parties would be necessary".

This means a vital change and it changes the colour of the original Bill, It says that the period of five years also is not binding, but with the consent of both parties, the period of tenancy may be reduced. I feel that should not be the case. It must be almost binding on the tenant that every year he should pay so much, one-fourths or whatever it is, to the landlord and then only he will be able to force the tenant to cultivate the land. This period of five years must be enhanced to 12 years. Then the ryot will have adequate scope to improve the land and see that he not only invests money on the land but also he will be able to grow more. I want the Select Committee to reconsider this question.

The powers regarding the fixation of fair rent are given to the Amildar and an appeal against his decision lies first to the Assistant Commissioner and then to the Deputy Commissioner. I personally think that fixation of fair rent should be done by a tribunal consisting of a representative from the land-lord, a representative from the ryots and a Government representative, and such tribunals should be appointed throughout the Mysore State in all taluks before we pass this Bill or on the day we pass the Bill such tribunal must be appointed by the Government. The main idea is that not only it will be fair for the landlord but also it will be beneficial to the tenant. Till now, the rent that is taken from different ryots residing in different parts of Mysore varies; it is not the same in Mysore and Malnad. I may grow commercial crop but I give

(SRI K. R. SREEKANTESVAR).

only a limited quantity to the land-lord. So there is so much of variation in giving rent, and in matters like fixing up rent, the rent he has to pay to the land-lord and what exactly the land-lord himself expects from the ryot, it is better such powers are not handed over to the Amildar. I know that now-a-days Amildars have heavy work and will not be able to dispose of even a few cases during the year. While that is so if we pass this Bill whereby under Chapter III (Sections 32 to 34 and 35) vast powers are given to Amildars, they will not be able to exercise those powers. I think the appointment of a tribunal is very important. The Tribunal will also be fair because a representative from the land-lord, a representative from the ryots and a representative from the Government will be on it. I wish that tribunals of this kind are appointed throughout Mysore. Then only we will solve the problem.

There are several other problems also. The tenants have been put to a lot of trouble. Every day there may be so many cases of evictions. Further, these powers of fixing up rent and penalties must also be referred to the tribunal. This is section 34. series of sections in Chapter III require serious reconsideration. The appeal against the decision of the tribunal may lie to the Assistant Commissioner and the Deputy Commissioner. Even that is not sufficient. It is better that a tribunal is appointed and the fair rent settled as early as possible and also we must pass legislation to that effect. I am appealing to the Select Committee to see that eviction does not take place immediately, or that any orders of eviction or if there is any unequal settlement, should be put an end to by passing legislation to the effect that there is no question of eviction if it has taken place one year before this Bill is passed. On these important items I want the Select Committee to go once again and I request them to provide at least more amenities to tenants and also to see that the tenants are not deprived of what is existing in the original Bill. The Select Committee has taken away the vast powers existing in the original Tenancy Bill.

However, a Bill of this kind is much better than without a Bill. We expected a Bill of this kind four years back as soon as a popular Government was set up. However, it has come up now. But it is not up to the mark. The Select Committee has taken away most of the powers existing in the original Bill. So I would appeal to the Select Committee to go through the Bill in the light of what I have stated and I request them to bring forward another Bill.

The Hon'ble Sri H. SIDDAIYA.—Whose powers have been taken away?

Sri K. R. SREEKANTESWAR.—In the original Bill there are some powers and they have been taken away now. The definitions and the help that is given to tenants are very much curtailed.

The Hon'ble Sri H. SIDDAIYA.—Will the Hon'ble Member point out one or two such powers, instead of making such general remarks?

Sri K R. SREEKANTESWAR.—The tenants enjoy some benefit and it is curtailed. I am referring to clauses 5, 6 and 12 and the question of tribunal in clauses 32, 33 and 34 in Chapter III and so on. The Government are well aware of the agitation that is going on and I am definite that these clauses only pertain to the demands of the ryots. That is why I am placing them before you and I want you, to reconsider them.

Mr. SPEAKER.—Amendment moved:

"That the Bill be re-committed to the same Select Committee consisting of the same Members".

*ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ಸ್ವಾಮಿ, ಈ ಮಸೂದೆಯನ್ನು ವಿಮರ್ಶೆ ಮಾಡುವುದಕ್ಕೋಸ್ಕರವಾಗಿಯೇ ಒಂದು ಸಮಿತಿಯನ್ನು ಏರ್ಪಾಡು ಮಾಡಲಾಗಿತ್ತು. ಆ ಸಮಿತಿಯವರು ಬಹಳ ಕೂಲಂಕಷವಾಗಿ ಎಲ್ಲಾ ಅಂಶಗಳನ್ನೂ ಚರ್ಚೆ ಮಾಡಿ, ಈ ಮಸೂದೆಯನ್ನು ಒಂದು ಉತ್ತಮ

ರೂಪಕ್ಕೆ ತಂದು ಅದನ್ನು ಸರ್ವರೂ ಅನುಮೋದಿಸಲು ಅನುಕೂಲವಾಗುವಂತೆ ಮಾಡಿ ಅದನ್ನೀಗ ಸಭೆಯಮುಂದೆ ಮಂಡಿಸಲು ಯೋಗ್ಯವಾದುದನ್ನಾಗಿ ಮಾಡಿರತಕ್ಕದ್ದು ನಾವೆಲ್ಲಾ ಹೆಮ್ಮೆ ಪಡುವಂಥ ವಿಚಾರವಾಗಿರುತ್ತೆಂದು ತಿಳಿಸಲು ನನಗೆ ಬಹಳ ಸಂತೋಷವಾಗುತ್ತದೆ. ಆ ಸಮಿತಿಯ ಮಾನ್ಯ ಅಧ್ಯಕ್ಷರು ಬಹಳ ತಾಳ್ಮೆಯಿಂದ ಮತ್ತು ಶಾಂತಿಯಿಂದ ಪ್ರತಿಯೊಬ್ಬರೂ ಕೊಡತಕ್ಕ ಅಭಿಪ್ರಾಯಗಳನ್ನು ಅವು ಒಳ್ಳೆಯದಾಗಿರಲಿ, ಇಲ್ಲದಿರಲಿ, ಎಲ್ಲವನ್ನೂ ತೆಗೆದುಕೊಂಡು ನಿಧಾನವಾಗಿ ಪ್ರತಿಯೊಂದು ಅಂಶವನ್ನೂ ದೀರ್ಘವಾಗಿ ಆಲೋಚಿಸಿ ನಮ್ಮ ದೇಶಕ್ಕೆ ಹೇಗಿದ್ದರೆ ಅನುಕೂಲವಾಗುತ್ತದೋ ಅದಕ್ಕನುಗುಣವಾಗಿರುವಂತೆಯೂ ಮತ್ತು ನಿಜವಾಗಿಯೂ ನಮ್ಮ ದೇಶದ ರೈತ ಮತ್ತು ಜಮೀನ್ದಾರರಿಬ್ಬರಿಗೂ ಅನುಕೂಲವಾಗಿರುವಂತೆ ಈ ಬಿಲ್ಲನ್ನು ತಯಾರಿಸುವುದರಲ್ಲಿ ಬಹಳ ಶ್ರಮಪಟ್ಟಿದ್ದಾರೆ. ಈ ಬಿಲ್ಲಿನಲ್ಲಿ ಈ ಉಭಯಪಾರ್ಟಿಗಳ ಯೋಗಕ್ಷೇಮಕ್ಕೆ ಏನೇನು ಮಾರ್ಪಾಡುಗಳನ್ನು ಮಾಡಬೇಕಾಗಿತ್ತೋ ಅವುಗಳೆಲ್ಲವನ್ನೂ ಮಾಡಿದ್ದಾರೆ. ಮೈಸೂರು ದೇಶಕ್ಕೆ ಈ ಮಸೂದೆ ಎಷ್ಟರಮಟ್ಟಿಗೆ ಆವಶ್ಯಕವಾಗಿತ್ತೋ ಅಷ್ಟರಮಟ್ಟಿಗೆ ಇದನ್ನು......

ಅಧ್ಯಕ್ಷರು.—ತಾವು ಈಗ ಅದೆಲ್ಲವನ್ನೂ ಹೇಳಬೇಕಾಗಿಲ್ಲ.

ಶ್ರೀ ಟಿ. ಮಾದಯ್ಯಗೌಡರು.—ನಮ್ಮ ದೇಶದಲ್ಲಿ ವ್ಯವಸಾಯಗಾರರಿಗೂ ಮತ್ತು ಜಮೀನ್ದಾರರಿಗೂ ಒಂದು ಒಳ್ಳೆಯ ಸಂಪರ್ಕವೇರ್ಪಟ್ಟು ಎರಡು ಪಕ್ಷಗಳಿಗೂ ಯಾವ ಘರ್ಷಣೆಗೂ ಅವಕಾಶವಿಲ್ಲದಿರುವ ರೀತಿಯಲ್ಲಿ ಇದನ್ನು ಮಾಡಲಾಗಿದೆ. ಆದರೆ ಇದೇ ರೀತಿಯಾಗಿ ನಮ್ಮ ದೇಶದಲ್ಲಿ ಬಹಳ ಹಿಂದಿನಿಂದಲೂ ವ್ಯವಸಾಯಗಾರನೂ ಮತ್ತೂ ಜಮೀನ್ದಾರನೂ ಯಾವ ಘರ್ಷಣೆಯೂ ಇಲ್ಲದಂತೆ ಬಹಳ ಹೊಂದಾಣಿಕೆಯಿಂದ ನಡೆದುಕೊಂಡು ಬಂದಿದ್ದಾರೆ. ಆದರೆ ಒಂದೆರಡು ಕಡೆ ಇತ್ತೀಚೆಗೆ ರೈತನಿಗೂ ಮತ್ತೂ ಜಮೀನ್ದಾರನಿಗೂ ಉಂಟಾಗಿರತಕ್ಕ ಘರ್ಷಣೆ ಅವರಿಂದಲೇ ಅದು ಉದ್ಭವಿಸದೆ ಬೇರೆ ಯಾರೋ ಅದನ್ನು ತಂದು ಹಾಕಿರುವಂತೆ ನನಗೆ ಭಾಸವಾಗುತ್ತಿದೆ. ಈ ಸಂಬಂಧವಾಗಿ ಈ ಮಾನ್ಯ ಸಭೆಯಲ್ಲಿರತಕ್ಕ ನಮ್ಮ ಸಮಾಜವಾದಿಗಳೊಬ್ಬರು ಇದನ್ನೇ ಒಂದು ದೊಡ್ಡದಾಗಿ ಮಾಡಿಕೊಂಡು ಈ ಮಸೂದೆಯು ಸರಿಯಾಗಿಲ್ಲ ಇದನ್ನು ಬದಲಾಯಿಸಬೇಕು ಎಂದು ಮಾತನಾಡಿದ್ದಾರೆ. ಆದರೆ ಅವರು ಇದನ್ನೇ ಒಂದು ದೊಡ್ಡ ಕಾರಣ ಮಾಡಿಕೊಂಡು ಒಂದು ಭಾಷಣ ಮಾಡಲಿಕ್ಕೆ ಕಾರಣ ಮಾಡಿಕೊಂಡಿದ್ದಾರೆಯೇ ಶಿವಾಯಿ ಬೇರೆ ಏನೂ ಇಲ್ಲ. ಈ ಕಾನೂನಾದರೂ ಅನೇಕ ವಿಧದಲ್ಲಿ ಸೆಲೆಕ್ಟ್ ಕಮಿಟಿಯಲ್ಲಿ ಯೋಚನೆಮಾಡಿರತಕ್ಕಂಥಾದ್ದು. ಎಲ್ಲಾ ಕಡೆಯೂ ಒಂದು ಒಳ್ಳೆಯ ವಾತಾವರಣವಿರಬೇಕು, ರೈತರಿಗೂ ಮತ್ತು ಜಮೀನ್ದಾರರಿಗೂ ಒಂದು ವಿಹಿತವಾದ ನಿಕಟ ಬಾಂಧವ್ಯವಿರಬೇಕು, ಯಾವುದಾದರೂ ಒಂದು ರೂಪದಲ್ಲಿ ಲೋಪ ಬಂದೀತು, ಅದಕ್ಕೆ ಅವಕಾಶವಿರಬಾರದು, ವ್ಯವಸಾಯಗಾರರು ಮತ್ತು ಜಮೀನ್ದಾರರು ಇವರಲ್ಲಿ ಪರಸ್ಪರ ವಿಹಿತವಾಗಿರುವಿಕೆಯು ಹೆಚ್ಚುವುದಕ್ಕೆ ಸಾಧಕವಾಗಿರಬೇಕು, ಯಾವ ವಿಧದಲ್ಲೂ ಒಂದು ಕಲಾಪ ಅಥವಾ ಕಚ್ಚಾಟಕ್ಕೆ ಅವಕಾಶವಿಲ್ಲದಹಾಗೆ ಇರಬೇಕು ಎಂದು ಯೋಚನೆ ಮಾಡಿ ಅದಕ್ಕೆ ತಕ್ಕ ಕಾನೂನು ಮಾಡಲು ಸೆಲೆಕ್ಟ್ ಸಮಿತಿಯವರು ಯತ್ನಿಸಿದ್ದಾರೆ. ಆದ ಕಾರಣ ಯಾವುದೋ ಒಂದು ಕಡೆ ಉಂಟಾದ ಕೆಟ್ಟ ವಾತಾವರಣದಿಂದ ಈ ಕಾನೂನು ಸರಿಯಾಗಿಲ್ಲವೆಂದು ಹೇಳುವುದು ಉಚಿತವಲ್ಲ. ಏನು ಸೂಕ್ತ ಬದಲಾವಣೆ ಮಾಡಬೇಕಾದರೂ ಅದನ್ನು ಕೂಲಂಕಷವಾಗಿ ಆಲೋಚನೆಮಾಡಿ ಮಾಡಿದ್ದಾರೆ. ಹಾಗಿರುವಾಗ ಅದು ಸರಿಯಾಗಿಲ್ಲ, ಪುನಃ ಸೆಲೆಕ್ಟ್ ಕಮಿಟಿಗೆ ವಾಪಸು ಕಳುಹಿಸಬೇಕು ಎಂದು ಹೇಳುವುದನ್ನು ನಾನು ಒಪ್ಪಲಾರೆ. ಆ ದೃಷ್ಟಿಯಿಂದ ನೋಡಿದ್ದರೆ ಈಗ ಹೇಳಿರುವುದು ಏನೂ ತಿರುಳಿಲ್ಲದ ವಿಷಯ. ಒಂದು ವೇಳೆ ಅವರು ಸೂಚಿಸಿರುವ ನಾಲ್ಕೈದು ಪಾಯಿಂಟುಗಳಲ್ಲಿ ಬದಲಾವಣೆ ಮಾಡಬೇಕೆಂದು ಹೇಳಿದರೆ ಅವರು ಅದಕ್ಕೆ ತಕ್ಕ ತಿದ್ದು

(ಶ್ರೀ ಟಿ. ಮಾದಯ್ಯಗೌಡರು).

ಪಡಿ ಸೂಚಿಸಿ ಸಭೆಯ ಮುಂದಿಟ್ಟು ಬದಲಾವಣೆ ಮಾಡಬಹುದು. ಅದು ಸೂಕ್ತ ಕಂಡರೆ ನಾವೇ ಮಾಡೋಣ. ಸೆಲೆಕ್ಟ್ ಸಮಿತಿಯ ಮುಂದೆ ಪುನಃ ಈ ಮಸೂದೆ ಹೋಗಬೇಕಾದ ಅವಶ್ಯಕತೆಯಿಲ್ಲ.

ಆ ಮೇಲೆ ಟೆನೆನ್ಸಿ ಮಿತಿಯನ್ನು ಏನೋ ಒಂದು ರೀತಿಯಲ್ಲಿ ಬದಲಾಯಿಸಿದ್ದಾರೆಂದು ಹೇಳಿದರು. ನನಗೆ ಜ್ಞಾಪಕವಿರುವ ಮಟ್ಟಿಗೆ ಒಂದು ಅಕ್ಷರ, ಒಂದು ಕಾಮ ಅಥವಾ ಒಂದು ಪೂರ್ಣ ವಿರಾಮ ಕೂಡ ಬದಲಾಯಿಸಿಲ್ಲ ಎಂದು ಗೊತ್ತು. ಅಗ್ರಿಕಲ್ಚರ್ ಎಂಬ ಪದಕ್ಕೆ ಕೋಳಿ ಸಾಕುವುದು, ದನ ಸಾಕುವುದು ಮುಂತಾದ ವಿಷಯಗಳನ್ನೂ ಮತ್ತು ಕೈಗಾರಿಕೆಗಳಿಗೆ ಸಂಬಂಧ ಪಟ್ಟ ಕೆಲವು ವಿಷಯಗಳನ್ನೂ ಸೇರಿಸುವಂತೆ ವಿವರಿಸಿದ್ದಾರೆ. ಹುಲ್ಲು ಬೆಳೆಯುವುದು ಕೂಡ ಸೇರಿದೆ. ಒಬ್ಬ ವ್ಯವಸಾಯಗಾರ ಜಮೀನನ್ನು ಗುತ್ತಿಗೆಗೆ ತೆಗೆದುಕೊಂಡು ಆ ಜಮೀನಿನಲ್ಲಿ ಕೋಳಿ ಸಾಕುವುದಾದರೆ, ವ್ಯವಸಾಯಕ್ಕೆ ಸಂಬಂಧಪಟ್ಟ ಕಾನೂನಿನಲ್ಲಿ ಇದನ್ನು ಕಂಟ್ರೋಲ್ ಮಾಡಬೇಕೆಂದರೆ ನನಗಾದರೂ ಆಶ್ಚರ್ಯವಾಗುತ್ತದೆ. ಆದ್ದರಿಂದ ಅದು ಸೇರುವುದು ಸರಿಯಲ್ಲವೆಂದು ಬಿಟ್ಟಿದೆ; ಹಾಗಿರುವಾಗ ಅವೂ ಇದಕ್ಕೆ ಸಂಬಂಧಪಡುತ್ತವೆ, ಕೋಳಿ ಸಾಕುವ ಕೈಗಾರಿಕೆ ಅಥವಾ ಪಶುಪಾಲನಾಕ್ಷೇತ್ರ ಮುಂತಾದ್ದೂ ಸೇರುವಂತಿರಬೇಕು ಎಂದು ಹೇಳುವುದಾದರೆ ಅದಕ್ಕೆ ತಿದ್ದುಪಡಿ ತೆಗೆದುಕೊಂಡು ಬಂದು ಈ ಸಭೆಯ ಮುಂದಿಡಲಿ, ಯೋಚನೆ ಮಾಡೋಣ. ಒಬ್ಬ ವ್ಯವಸಾಯಗಾರನಿಗೂ ಮತ್ತು ಟೆನೆಂಟುಗಳಿಗೂ ಏನು ಸಂಬಂಧ ಕಲ್ಪಿಸಬೇಕೆಂದು ಸೂಚಿಸಿಲ್ಲವೆಂದು ಮಾನ್ಯ ಮಿತ್ರರು ಹೇಳಿದರು. ಅದನ್ನು ಚೆನ್ನಾಗಿ ಕೂಲಂಕಷವಾಗಿ ಸೆಲೆಕ್ಟ್ ಕಮಿಟಿಯಲ್ಲಿ ಯೋಚನೆಮಾಡಿದ್ದೇವೆ. ಅದರ ಮೇಲೆ ತಿದ್ದುಪಡಿ ಮಾಡಿದ್ದೇವೆ. ಒಂದು ವೇಳೆ ಈ ರೀತಿ ಹೇಳಬಹುದು: ಬೇರೆ ಕಡೆ ಒಂದು ಕಾನೂನಿದೆ, ಬೊಂಬಾಯಿಯಲ್ಲಿರುವ ಕಾನೂನು ಚೆನ್ನಾಗಿದೆ ಎಂದು ಹೇಳಬಹುದು. ಆದರೆ ಅಲ್ಲಿರುವ ಕಾನೂನು ಆ ದೇಶದ ಪರಿಸ್ಥಿತಿಗೆ, ಅಲ್ಲಿ ಜಮೀನ್ದಾರರಿಗೂ ಮತ್ತು ವ್ಯವಸಾಯಗಾರರಿಗೂ ಇರಬಹುದಾದ ಸಂಬಂಧಕ್ಕೆ ತಕ್ಕ ಹಾಗೆ ಇರಬಹುದು; ಅದನ್ನು ನಾವು ಮಕ್ಕೀಕಾಮಕ್ಕಿ 'ಕಾಪಿ' ಇಳಿಸಬೇಕಾದ ಅಗತ್ಯವಿಲ್ಲ. ಆದರೆ ಅದರಲ್ಲಿರುವ ಒಳ್ಳೆಯ ವಿಷಯಗಳನ್ನು ತೆಗೆದುಕೊಳ್ಳದೆ ಬಿಟ್ಟಿಲ್ಲ, ಸೇರಿಸಿದೆ. ಅದರಲ್ಲಿ ನಮ್ಮ ದೇಶದ ಸ್ಥಿತಿಗತಿಗಳಿಗೆ ಯಾವುದು ಅನುಕೂಲವಾಗಿಲ್ಲವೋ ಅದನ್ನು ಬಿಟ್ಟಿದ್ದೇವೆ. ಅಷ್ಟುಮಾತ್ರಕ್ಕೇ ಬೊಂಬಾಯಿನಲ್ಲಿ ಒಂದು ಕಾನೂನಿದೆ, ಅದು ಚೆನ್ನಾಗಿದೆ, ಆದರಂತೆ ನಾವೂ ಮಾಡಬೇಕಾಗಿತ್ತು ಎಂದು ಹೇಳುವುದು ಸರಿಯಾದ ವಾದವಲ್ಲ.

ಇನ್ನೊಂದು ಅಂಶ ಹೇಳಿದರು: ಒಂದು ಸಲ ಒಬ್ಬ ವ್ಯವಸಾಯಗಾರ ಒಂದು ಜಮೀನನ್ನು ಜಮೀನ್ದಾರನಿಂದ ಸಾಗುಮಾಡಲು ಪಡೆದರೆ ಆತನು ಐದು ವರ್ಷ ಆ ರೀತಿ ಸಾಗುಮಾಡಬಹುದೆಂದು ನಿಗದಿ ಮಾಡಬೇಕೆಂದು ಕಾನೂನಿದೆ. ಅದನ್ನು 10 ಅಥವಾ 12 ವರ್ಷಗಳವರೆಗೆ ಇರುವಂತೆ ಬದಲಾಯಿಸಬೇಕು ಎಂದು ಹೇಳುತ್ತಾರೆ. ಆದರೆ ಅದರ ಸಾಧಕ ಬಾಧಕ ಚರ್ಚೆ ಮಾಡದೇಯಿಲ್ಲ. ಸೆಲೆಕ್ಟ್ ಕಮಿಟಿಯಲ್ಲಿ ಚರ್ಚೆಮಾಡಿದ್ದೇವೆ. ನಮಗೆ ಗೊತ್ತಿರುವ ಹಾಗೆ ಹೆಚ್ಚು ಭಾಗ ಗೇಣಿದಾರರು ಶಿವಮೊಗ್ಗ ಜಿಲ್ಲೆಯಲ್ಲಿದ್ದಾರೆ. ಆ ವಿಷಯ ನನಗೆ ಹೆಚ್ಚಾಗಿ ಗೊತ್ತಿಲ್ಲ. ಸರ್ವೇಸಾಧಾರಣವಾಗಿ ಒಂದು ವರ್ಷಕ್ಕೆ ಜಮೀನ್ದಾರರು ಸಾಗಿಗೆ ಕೊಡುತ್ತಾರೆ, ಅದನ್ನು ತೆಗೆದುಕೊಂಡವರು ಚೆನ್ನಾಗಿ ವ್ಯವಸಾಯಮಾಡಿ ತಮ್ಮ ಅವಧಿಯನ್ನು ಬೆಳೆಸಿಕೊಂಡು ಹೋಗಿ ಅನೇಕ ವರ್ಷಗಳವರೆಗೆ ಸಾಗು ಮಾಡುತ್ತಾರೆ. ಅದನ್ನು ನಾನು ಬಲ್ಲೆ. ತಂದೆಯಿಂದ ಮಗನಿಗೆ ಬಂದು ಅನೇಕ ವರ್ಷಗಳವರೆಗೆ ಒಂದೇ ಕುಟುಂಬದವರು ಆ ಜಮೀನನ್ನು ಮಾಡುತ್ತಾರೆ. ಹಿಂದೆ ಹೀಗಿತ್ತು. ಈಗ 5 ಅಥವ 10 ವರ್ಷದವರೆಗೆ ಒಂದು ಜಮೀನನ್ನು ಸಾಗಿಗೆ ಕೊಟ್ಟರೆ ಪುನಃ ಅದು ವಾಪಸು ಬರುತ್ತದೆಯೋ, ಇಲ್ಲವೋ ಎಂಬ ಒಂದು ಭೀತಿ ಬಂದಿದೆ. ಜಮೀನನ್ನು ಅಪಹ

ರಿಸಬಹುದು ಎಂಬ ಭಯ ಪ್ರಾಪ್ತವಾಗಿದೆ. ಆ
ತರಹ ಇರಬಾರದು; ಮೊದಲು ಮಾಡಿದ
ಕಾನೂನು ದೇಶಕ್ಕೆಲ್ಲಾ ಕೂಡಲೇ ಜಾರಿಗೆ ಬರ
ಬೇಕೆಂದಿತ್ತು. ಸೆಲೆಕ್ಟ್ ಸಮಿತಿಯವರು
ಅದನ್ನು ಪರ್ಯಾಲೋಚನೆಮಾಡಿ ಎಲ್ಲೆಲ್ಲಿ ಅಗ
ತ್ಯವೋ, ಸಮಾಜವಾದಿಗಳು ಹೇಳಿದ ಹಾಗೆ
ಎಲ್ಲೆಲ್ಲಿ ಬೊಬ್ಬೆ ಎದ್ದಿದೆಯೋ ಅಲ್ಲಿಗೆ ಮಾತ್ರ
ಅನ್ವಯಿಸುವ ಹಾಗೆ ಸೂಕ್ತ ಬದಲಾವಣೆ
ಮಾಡಿದ್ದಾರೆ. ಎಲ್ಲಿ ಚೆನ್ನಾಗಿ ಸಹಾನುಭೂತಿ
ನೀಡುತ್ತಿದ್ದಾರೋ ಅಂಥ ಕಡೆ ಅವರ ತಂಟೆಗೇ
ಹೋಗಬಾರದು ಎಂಬುದು ಈ ಕಾನೂನಿನ
ಅಭಿಪ್ರಾಯ.

ಇನ್ನೊಂದು ಮುಖ್ಯವಾದ ವಿಷಯ| ಹೇಳಿ
ದರು. ಒಬ್ಬ ರೈತ ಹಿಡವಳಿದಾರನಿಂದ
ಜಮೀನನ್ನು ಸಾಗುಮಾಡಲು ಪಡೆದರೆ ಅವನಿಗೆ
ಕನಿಷ್ಟಪಕ್ಷ ಅರ್ಧಕ್ಕಿಂತ ಹೆಚ್ಚಾಗಿ ಬರಬೇಕು,
ಜಮೀನ್ದಾರ $\frac{1}{3}$ ಭಾಗ ಅಥವಾ $\frac{1}{4}$ ಭಾಗ ತೆಗೆ
ದುಕೊಳ್ಳಬೇಕು ಎಂದು ನಮ್ಮ ಮಾನ್ಯ
ಮಿತ್ರರು ಹೇಳಿದರು. ನಮ್ಮ ದೇಶದಲ್ಲಿ ಒಬ್ಬ
ರೈತ ಸಾಗಿಗೆ ತೆಗೆದುಕೊಂಡಿರುವ ಜಮೀನಿನ
ಬೆಲೆಯೇನು, ಜಮೀನ್ದಾರ ಕೊಡುವ
ಕಂದಾಯ ಕವಳಿಗೆ ಎಷ್ಟು ಎಂಬುದು ಅವರಿಗೆ
ಗೊತ್ತೆ? ಈ ಕಾಲದಲ್ಲಿ ಅನೇಕ ಕಡೆಗಳಲ್ಲಿ ಅದ
ರಲ್ಲೂ ಗದ್ದೆಗಳಿರುವಕಡೆ ಅರ್ಧ ಅಥವಾ
ಮುಕ್ಕಾಲು ಭಾಗ ಕೊಡುತ್ತೇವೆ ಜಮೀನು
ಕೊಡಿ ಎಂದು ಕೇಳುತ್ತಿದ್ದಾರೆ. ಜಮೀನಿನಲ್ಲಿ
ರೈತ ಪಡುವ ಕಷ್ಟ ನೋಡಿದರೆ ಮುಕ್ಕಾಲು
ಭಾಗ ಜಮೀನ್ದಾರನಿಗೇ ಕೊಟ್ಟರೆ ಲಾಭ
ಬರುತ್ತದೆಯೆ ಎಂಬ ಸ್ಥಿತಿಯಿದೆ. ಆದರೆ ಅರ್ಧ
ಭಾಗ ಕೊಟ್ಟರೂ ರೈತನಿಗೆ ಅರ್ಧಕ್ಕಿಂತ
ಹೆಚ್ಚಾಗಿ ಸಲ್ಲುತ್ತದೆ. ನಮ್ಮ ಕಡೆ ಬತ್ತದ
ಗದ್ದೆ ರೈತರಿಗೆ ಸಾಗಿಗೆ ಕೊಟ್ಟರೆ ಸರ್ವೇಸಾಧಾ
ರಣವಾಗಿ ಅರ್ಧ ಭಾಗ ರೈತನಿಗೂ ಇನ್ನರ್ಧ
ಜಮೀನ್ದಾರನಿಗೂ ಬರುತ್ತದೆ. ಅನೇಕ ಸಂದ
ರ್ಭಗಳಲ್ಲಿ ಅರ್ಧಕ್ಕಿಂತ ಹೆಚ್ಚು ರೈತನಿಗೆ
ಹೋಗುವುದು. ಇದರ ಮೇಲೆ ವಿಮರ್ಶೆ
ಮಾಡಬಹುದು. ಕಂದಾಯ ಕವಳಿಗೆ ಜಮೀನ್
ದಾರನ ಮೇಲೆ ಬೀಳುತ್ತದೆ. ಹುಲ್ಲನ್ನು
ಸಾಮಾನ್ಯವಾಗಿ ಸಾಗುವಳಿದಾರನಿಗೇ ಬಿಡು
ತ್ತೇವೆ. ಹುಲ್ಲಿನ ಬೆಲೆ, ಕಂದಾಯ ಕವಳಿಗೆ
ಮತ್ತು ಇತರ ಲಾಗೋಡಿನ ಖರ್ಚು ಲೆಕ್ಕ
ಹಾಕಿದರೆ ಅರ್ಧಭಾಗಕ್ಕಿಂತ ಹೆಚ್ಚಾಗಿ ಜಮೀನ್
ದಾರನಿಗೆ ಬರುವುದಿಲ್ಲ. ಹಾಗಿರುವಾಗ ಅರ್ಧ
ಕ್ಕಿಂತ ಹೆಚ್ಚಾಗಿ ರೈತರಿಗೆ ಬರಬೇಕೆಂದು ವಾದ
ಮಾಡುವುದರಲ್ಲಿ ಅರ್ಥವಿಲ್ಲ. ಅದನ್ನು ಸೆಲೆಕ್ಟ್
ಕಮಿಟಿಯವರು ಚೆನ್ನಾಗಿ ಆಲೋಚಿಸಿದ್ದಾರೆ.

ಇನ್ನೊಂದು ವಾದ ಹೇಳಿದರು. ಐದು
ವರ್ಷ ರೈತ ಜಮೀನು ಮಾಡಿಕೊಂಡಿರಬೇಕು.
ಈ ಮಧ್ಯೆ ರೈತ ತನಗೆ ಜಮೀನುಬೇಕಾಗಿಲ್ಲ,
ಜಮೀನು ತಾನು ಸಾಗು ಮಾಡುವುದಿಲ್ಲ, ಈಗ
ತೆಗೆದುಕೊಂಡು ಎರಡು ವರ್ಷವಾಗಿದೆ, ತನಗೆ
ಸಾಕು ಎಂದು ಹೇಳಿದರೆ ಆತನನ್ನು ಜಮೀನು
ಬಿಡದ ಹಾಗೆ ಮಾಡಬೇಕಾಗಿತ್ತು ಎಂದು ವಾದ
ಮಾಡಿದರು. ಆ ರೀತಿ ಪರಿಗಣಿಸಲು ಪುನಃ ಈ
ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸ
ಬೇಕೆಂದು ಅವರು ವಾದ ಮಾಡಿರುವುದು ಬಹಳ
ವಿಷಾದಕರ. ರೈತ ಮತ್ತು ಜಮೀನ್ದಾರ ವಿಹಿ
ತವಾಗಿದ್ದರೆ ಸಾಮಾನ್ಯವಾಗಿ 5 ವರ್ಷಗಳವರೆಗೆ
ಇಟ್ಟುಕೊಳ್ಳಬಹುದು. ಆದರೆ ಬೇರೆ ಕಡೆ
ಹೆಚ್ಚಿಗೆ ಉತ್ತೇಜನ ಸಿಕ್ಕುವಂತಿದ್ದು ಪರಸ್ಪರ
ವಿಹಿತವಾಗಿ ತೀರ್ಮಾನ ಮಾಡಿಕೊಳ್ಳುವುದಕ್ಕೆ
ನಾವೇಕೆ ಅಡ್ಡಿ ಬರಬೇಕು. ಎಲ್ಲಿ ದುಂಡಾ
ವರ್ತಿಯಿಂದ ವರ್ತಿಸುವ ಜಮೀನ್ದಾರರಿರುತ್ತಾ
ರೆಯೋ, ಎಲ್ಲಿ ಜಾಗ್ರತೆ ಜಮೀನು ಕಿತ್ತು
ಕೊಂಡು ವ್ಯವಸಾಯಗಾರನನ್ನು ತಪ್ಪಿಸಬೇಕೆಂ
ದಿರುತ್ತಾರೋ ಅಂಥ ಕಡೆ ತೊಂದರೆ ಆಗದಿರಲಿ
ಎಂಬ ಉದ್ದೇಶದಿಂದ ಕಾನೂನು ಮಾಡಿದೆಯೇ
ಹೊರತು ವಿಹಿತವಾಗಿರುವವರನ್ನು ತೊಂದ
ರೆಗೀಡು ಮಾಡಬೇಕೆಂಬ ಉದ್ದೇಶವಿಲ್ಲ.
ಅತ್ತ ಕಡೆ ರೈತನಿಗೆ ಬೇಡವಾಗಿ ಅವನೇ ಒಪ್ಪಿ
ಬಿಟ್ಟು ಬಿಟ್ಟು ಹೋಗುವುದಕ್ಕೆ ಸಿದ್ಧವಾಗಿ
ದ್ದಾನೆ. ಅಂಥಾ ಸಂದರ್ಭದಲ್ಲಿ ವಿಧಿ ವಿಧಿಸಿ 5
ಅಥವಾ 10 ವರ್ಷ ಬಿಡಲೇಕೂಡದು ಎಂಬು
ದಾಗಿ ಮಾಡಿದ್ದೀರಿ ಎಂಬದಕ್ಕೆ ಯಾವ ಬಲವ
ತ್ತರವಾದ ಕಾರಣಗಳನ್ನೂ ಮಾನ್ಯ ಮಿತ್ರರು
ತೋರಿಸಲಿಲ್ಲ. ಆದ್ದರಿಂದ ಇದನ್ನು ಯಾವ

(ಶ್ರೀ ಟಿ. ಮಾದಯ್ಯಗೌಡರು).

ಕಾರಣದಿಂದಲೂ ಪುನಃ ಸೆಲೆಕ್ಟ್ ಸಮಿತಿಗೆ ಕಳುಹಿಸಬೇಕಾದ ಕಾರಣವಿಲ್ಲ. ಅಲ್ಲದೆ ಸೆಲೆಕ್ಟ್ ಸಮಿತಿಯ ವರದಿಯಿಂದ ಏನು ಸಂಪೂರ್ಣ ಬದಲಾವಣೆ ಆಗಿದೆ ಎಂಬುದನ್ನು ತೋರಿಸಿ ಕೊಡಬೇಕು ಎಂದು ನನ್ನ ಅಭಿಪ್ರಾಯವಾಗಿದೆ. ಈ ತಿದ್ದುಪಡಿಯ ವಿಚಾರದಲ್ಲಿ ಮಾತ್ರ ಮಾತನಾಡಬೇಕಾಗಿರುವುದರಿಂದ ಇದರಲ್ಲಿ ಯಾವ್ಯಾವುದು ಉತ್ತಮವಾಗಬೇಕೆಂಬುದನ್ನು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಈ ಕಾನೂನು ಬಹಳ ಚೆನ್ನಾಗಿ ರೂಪುಗೊಂಡಿದೆ. ಮೊದಲೇ ಇದ್ದ ಹಾಗೆ ಏನಾದರೂ ಇಟ್ಟಿದ್ದರೆ, ಈಗ ಏನು ಬದಲಾವಣೆ ಮಾಡಿದ್ದೇವೆಯೋ ಅದನ್ನು ಮಾಡದೇ ಇದ್ದಿದ್ದರೆ, ಬಹುಶಃ ಈ ಕಡೆ ಸಾಗುವಳಿದಾರರಿಗೂ ಆ ಕಡೆ ಜಮೀನ್‌ದಾರರಿಗೂ ಉಭಯತ್ರರಿಗೂ ತೊಂದರೆಯಾಗುತ್ತಾ ಇತ್ತು. ಆ ತೊಂದರೆ ತಪ್ಪಿಸುವುದಕ್ಕೆ ಏನು ಬೇಕೋ ಅದನ್ನು ಮಾಡಿದ್ದೇವೆ. ಟ್ರಿಬ್ಯೂನಲ್ ಮಾಡಬೇಕು, ಅಮಲ್ದಾರರಿಗೆ ತೀರ್ಮಾನಮಾಡುವ ಅಧಿಕಾರ ಕೊಡಕೂಡದು ಎಂದು ಹೇಳಿದರು. ಬಹಳ ಆಶ್ಚರ್ಯವಾಗುತ್ತದೆ! ಒಂದು ವೇಳೆ ಟ್ರಿಬ್ಯೂನಲ್ ಮಾಡಬೇಕೆಂದರೆ ತಿದ್ದುಪಡಿ ತಂದಿದ್ದರೆ ಮಾಡಬಹುದಾಗಿತ್ತು. ಇಲ್ಲಿಯವರೆಗೂ ತರಲಿಲ್ಲ. ಟ್ರಿಬ್ಯೂನಲ್ ಇರಬೇಕೆಂಬುದು ಆಶ್ಚರ್ಯವಾಗಿದೆ. ಒಂದು ಕಡೆ ಜಮೀನ್‌ದಾರರು, ಮತ್ತೊಂದು ಕಡೆ ಸಾಗುವಳಿದಾರರು ಇವರಿಬ್ಬರ ನಡುವೆ ಮತ್ತೊಬ್ಬರು. ಅವರು ಕಡೆಗೆ ಏನು ತೀರ್ಮಾನಮಾಡುತ್ತಾರೋ ಅದು ಸರಿಹೋಗುತ್ತದೆ. ಇಲ್ಲದೇ ಇದ್ದರೆ ಒಬ್ಬರ ಮಾತೇ ನಡೆದುಹೋಗುತ್ತದೆ ಎಂದು ಹೇಳಿದರು. ಟ್ರಿಬ್ಯೂನಲ್ ಇದ್ದರೆ ತಾನೆ ಏನು? ಅಮಲ್ದಾರರಾದರೆ ಸ್ಥಳೀಯ ಅಧಿಕಾರಿಗಳು. ಅವರು ಅದನ್ನೆಲ್ಲಾ ತೃಪ್ತಿಕರವಾಗಿ ತೀರ್ಮಾನ ಮಾಡಬಲ್ಲರು. ಅಲ್ಲಿಯ ಕಷ್ಟಸುಖ ತಿಳಿದಿರುತ್ತದೆ. ಇದರಲ್ಲಿ ಸಾವಿರಾರು ಕೇಸುಗಳು ಬರುತ್ತವೆ ಆದ್ದರಿಂದ ಟ್ರಿಬ್ಯೂನಲ್ ಇರಲೇಬೇಕು ಎಂಬ ವಾದ ಏಕೆ ಅವರ ಮನಸ್ಸಿಗೆ ಹಿಡಿಯಿತೋ ನನಗೆ ಗೊತ್ತಿಲ್ಲ. ನಾನು ಅಂದುಕೊಂಡಿದ್ದೇನೆ, ಮುಂದಿನ ಭಾವೀ ಮೈಸೂರಿನಲ್ಲಿ ಹಾಗೆ ಜನರಲ್ಲಿ ವೈಷಮ್ಯ ಹೆಚ್ಚಿ ನೂರಾರು ಸಾವಿರಾರು ಕೇಸುಗಳು ಉಂಟಾಗತಕ್ಕ ಪರಿಸ್ಥಿತಿ ಬರಲಾರದು. ಹಾಗೆ ಬರದೇ ಇರುವುದಕ್ಕೆ ಸಮತಾವಾದಿಗಳೂ ಪ್ರಯತ್ನ ಮಾಡುತ್ತಾರೆಂದು ನಂಬಿದ್ದೇನೆ. ಆದ್ದರಿಂದ ಈ ಕಾನೂನಿನ ಅವಶ್ಯಕತೆ ಬರದೇ ಕೂಡ ಹೋಗಬಹುದು. ಇದಕ್ಕೆ ಅಷ್ಟೇಕೆ ಕಷ್ಟ ಅಂತ ಅರ್ಥವಾಗುವುದಿಲ್ಲ. ಆದಕಾರಣ ಅವರು ತಂದಿರುವ ಈ ತಿದ್ದುಪಡಿಯನ್ನು ತೀವ್ರವಾಗಿ ವಿರೋಧಿಸುತ್ತೇನೆ.

*ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—ಮಾನ್ಯ ಮಿತ್ರರಾದ ಶ್ರೀಮಾನ್ ಶ್ರೀಕಂಠೇಶ್ವರ್‌ರವರು ತಂದಿರುವ ಈ ತಿದ್ದುಪಡಿ ಅಗತ್ಯವಿಲ್ಲ ಎಂಬುದು ನನ್ನ ಅಭಿಪ್ರಾಯ. ಸೆಕ್ಷನ್ 71ರಲ್ಲಿ 'opinion on certain matters' ಅದಕ್ಕೆಮಾತ್ರ re-commit ಮಾಡಬಹುದು ಅಂತ ಇದೆ. ಇದರಲ್ಲಿ ಟೆನೆನ್ಸಿ ಅನ್ನುವುದನ್ನು ಏಕೆ ಬದಲಾವಣೆಮಾಡಬೇಕೆಂಬುದನ್ನು ಹೇಳಿದ್ದೇವೆ. ಆದ್ದರಿಂದ opinion ಇಲ್ಲದಿದ್ದರೆ opinion ಕೇಳಬಹುದು ಅಷ್ಟೆ. ಸೆಕ್ಷನ್ 71 ಕ್ಲಾಸ್ (2) ರಲ್ಲಿ ಈರೀತಿ ಇದೆ: —

"If the member in charge moves that the Bill be taken into consideration, any member may move as an amendment that the Bill be re-committed or be circulated or re-circulated for the purpose of obtaining opinion or further opinion thereon."

Sri K. R SREEKANTESWAR.—On a point of information, Sir. I want to know whether the Hon'ble Member is questioning the Hon'ble Speaker's permission given to me to move the amendment.

Mr. SPEAKER.—No, no.

ಶ್ರೀ ಎ ಭೀಮಪ್ಪನಾಯಕರು.—ಈ ತಮ್ಮ ತಿದ್ದುಪಡಿಯಲ್ಲಿ ಅಭಿಪ್ರಾಯ ಕೇಳುವುದಕ್ಕೆ ಎಂದು ಹೇಳಿದ್ದೀರಿ. ಅಭಿಪ್ರಾಯ ಆಗಲೇ ಕೊಟ್ಟಿರುವಾಗ ಅದಕ್ಕೆ ಅವಕಾಶವೇ ಇಲ್ಲ.

Sri L. SIDDAPPA (Shimoga District —General).—I invite my Hon'ble

friend's attention to sub-rule (*b*) of rule 70 :

"that the Bill as reported by the Select Committee be re-committed either :—

(i) without limitation, or

(ii) with respect to particular clauses or amendments only, or

(iii) with instructions to the Select Committee to make some particular or an additional provision in the Bill;"

So, it is not sub-rule (2) of rule 70 that applies, it is sub-rule (*b*) that applies now.

Sri A. BHEEMAPPA NAIK.—Sub-rule (*b*) does not apply.

Sri K. R. SREEKANTESWAR.—Rule 71 is clear :

"The debate on a motion that the Bill" as moved by the Hon'ble Minister for Revenue "shall be taken into consideration shall be confined to consideration of the report of the Select Committee and the matters referred to in that report or any alternative suggestions consistent with the principle of the Bill."

Mr. SPEAKER.—That rule does not apply to the present case.

Sri A. BHEEMAPPA NAIK.—What I am submitting is that sub-rule (*b*) which the Hon'ble Member Sri L. Siddappa said applies here, does not apply. It is only the member in charge that may move such an amendment and not any other member.

Sri K. R. SREEKANTESWAR.—I am sorry ; I meant rule 70 (2).

Sri A. BHEEMAPPA NAIK.—If the Hon'ble Member accepts that sub rule (2) of rule 70 applies, it is for further opinion that the Bill has to be re-committed. Opinions have been expressed on every point raised and if the Hon'ble Member still feels that there is necessity for any further information, he could have himself sent in an amendment and there is time for him to debate on the merits of each opinion. The opinions furnished by the Committee are there and he is at liberty to furnish his own opinion in the House and convince it and get it passed. I might tell the Hon'ble Member that this Bill was considered in detail in the Select Committee. As stated by the Hon'ble Member Sri T. Madiah Gowda, the opinion of the Land Revenue Revision Committee was that there was no necessity for such a Tenancy Bill in Mysore State except in some parts of malnad. Even though they said there does not seem to be any immediate need it was decided to bring in some such Bill so that this question might once and for all be settled. So in view of that this Bill was brought forward. The Hon'ble Member Sri Kadidal Manjappa was much more vehement in the Committee than the Hon'ble Member Sri K. R. Sreekanteswar here. It was on that consideration that this Bill was altered and more liberalised in favour of tenants rather than landlords. I may mention that also here. The Committee did not swerve by any other consideration than the interests of landlords on the one side and of tenants on the other. My Hon'ble friend said that this is belated and it is brought at the tail end of the period of this Government.

Sri K. R. SREEKANTESWAR.—Not of this Government ; I never expected this type of Tenancy Bill.

Sri A. BHEEMAPPA NAIK.—If there is nothing in this, later on when your Government comes into power you can bring in a better Bill.

Sri K. R. SREEKANTESWAR.—Definitely.

Sri A. BHEEMAPPA NAIK.—This Bill has been brought forward with fuller consideration and it has been thrashed out well in the Committee and the earlier it is introduced the better it is in the interests of tenants as well as landlords. That is the feeling of the Committee. The Hon'ble Member has not made out a case for its being re-committed. For, it has not been very much altered and the opinion given by the Committee at the end of the report is like this :

"The Bill was published in the *Mysore Gazette* Extraordinary, dated the 14th March 1951.

"In our opinion, the Bill has not been so altered as to require circulation."

That it does not require re-circulation is the opinion of the Committee. It was published in the *Mysore Gazette* and my Hon'ble friend could have sent in his opinion for the benefit of the Committee earlier, which he has not done. Even now I request the Chair to give him a chance to bring in amendment, even if he has not already brought in within time. Therefore

(SRI A. BHEEMAPPA NAIK).

what I submit is, he has not made out a case for reconsideration of this Bill by the same Select Committee. Therefore, it will have to be taken into consideration here and now.

*ಶ್ರೀ ಎಚ್. ಎಂ. ಚೆನ್ನಬಸಪ್ಪನವರು (ಮೈಸೂರು ಜಿಲ್ಲೆ).—ಅಧ್ಯಕ್ಷರೇ, ಈ ವಿಷಯದಲ್ಲಿ ಹೆಚ್ಚು ಚರ್ಚೆ ಅನಾವಶ್ಯಕ ಎಂದು ಕಾಣುತ್ತದೆ. ಈ ಮಸೂದಾ ಕಾನೂನಿನಮೇಲೆ ಸೆಲೆಕ್ಟ್ ಕಮಿಟಿಯವರು ಮಾಡಿರುವ ವರದಿಯನ್ನು ವಿಮರ್ಶೆಗೆ ತೆಗೆದುಕೊಳ್ಳಬೇಕೆಂದು ಮಾನ್ಯ ಮಂತ್ರಿಗಳು ಸಭೆಯ ಮುಂದಿಟ್ಟಾಗ ಮಾನ್ಯ ಶ್ರೀಕಂಠೇಶ್ವರ್‌ರವರು ಇದನ್ನು ಪುನಃ ಅದೇ ಕಮಿಟಿಗೆ ವಾಪಸು ಕಳುಹಿಸಬೇಕೆಂದು ಒಂದು ತಿದ್ದುಪಡಿಯನ್ನು ತಂದರು. ಅದನ್ನು ನೋಡಿ ನಾನು ಬಹಳ ಸಂತೋಷಪಟ್ಟುಕೊಂಡಿದ್ದೆ. ಏನೋ ಅವರು ಪ್ರಬಲ ಕಾರಣಗಳನ್ನು ತೋರಿಸಬಹುದು, ನಮಗೆ ಗೊತ್ತಿಲ್ಲದ ವಿಷಯಗಳನ್ನು ತಿಳಿಸಿ ಆ ದೃಷ್ಟಿಕೋಣದಿಂದ ಇದನ್ನು ಪುನರ್ವಿಮರ್ಶೆಮಾಡುವುದು ಅವಶ್ಯಕವೆಂದು ಸೂಚನೆಕೊಡುತ್ತಾರೆಂದು ನಾನು ಅವರ ಭಾಷಣವನ್ನು ಬಹಳ ವಿಮರ್ಶೆಮಾಡಿ ನೋಡಿದೆ. ಆದರೆ ಅವರು ಹೇಳಿದ್ದರಲ್ಲಿ ಹೊಸ ವಿಷಯಗಳೇನೂ ಕಾಣಬರಲಿಲ್ಲ. ಈ ಕ್ಲಾಜನ್ನು ಈ ರೀತಿಯಾಗಿ ಬದಲಾವಣೆಮಾಡಬೇಕು, ಅದನ್ನು ಈ ರೀತಿಯಾಗಿ ಬದಲಾವಣೆಮಾಡಬೇಕಾಗಿತ್ತು, 50% ಇರುವುದನ್ನು 30% ಮಾಡಬಹುದಿತ್ತು, ಬೊಂಬಾಯಿನ ಟೆನೆನ್ಸಿ ಬಿಲ್ಲಿನಲ್ಲಿ ಈರೀತಿಯಿದೆ, ಹೀಗೆ ಯಾವ್ಯಾವ ಕ್ಲಾಜಿನಲ್ಲಿ ಏನೇನಿದೆಯೆಂಬದನ್ನು ಪ್ರತಿಪಾದನೆಮಾಡಿದರೇ ವಿನಾ, ಹೊಸದೃಷ್ಟಿಕೋಣವನ್ನು ತೋರಿಸಿ ಆ ದೃಷ್ಟಿಯಿಂದ ಈ ಕಾನೂನನ್ನು ಸೆಲೆಕ್ಟ್ ಕಮಿಟಿಯವರು ಪರಿಶೀಲನೆಮಾಡಬೇಕೆಂದು ಹೇಳಿದ್ದರೆ ನಾವು ವಾಸ್ತವವಾಗಿಯೂ ಅದನ್ನು ಸ್ವಾಗತಿಸಿ ಪರಿಶೀಲನೆಮಾಡಬಹುದಾಗಿತ್ತು. ಹಾಗೇನೂ ಇಲ್ಲ. ಏನಿದ್ದರೂ ಈ ಕ್ಲಾಜಿಗೆ ಈ ರೀತಿಯಲ್ಲಿ ಅಲ್ಪಸ್ವಲ್ಪ ಬದಲಾವಣೆಯಾಗಬೇಕಿತ್ತು, ಈ ವಿಷಯಗಳಲ್ಲಿ ಅವರು ತಮ್ಮ ಅಭಿಪ್ರಾಯವನ್ನು ಬದಲಾವಣೆಮಾಡಬೇಕು ಎಂದು ಹೇಳಿದ್ದಾರೆ ಅಷ್ಟೆ. The Select Committee members must revise their opinion! I am afraid that he has no power to ask us to revise our opinion unless he gives sufficient reason by which he can win us over and say that we should change our opinion. ಹಾಗೆ ನಮ್ಮ ಅಭಿಪ್ರಾಯಗಳನ್ನು ಬದಲಾವಣೆ ಮಾಡುವುದಕ್ಕೆ ಮಹತ್ತರವಾದ ಕಾರಣಗಳನ್ನೇನೂ ಅವರು ಹೇಳಿಲ್ಲ ಒಂದು ಮಾತು ಅವರಿಗೆ ತಿಳಿಸಬೇಕೆಂದು ನಾನು ಇಷ್ಟಪಡುತ್ತೇನೆ. ಏನೆಂದರೆ, 'ಬೊಂಬಾಯಿನಲ್ಲಿ ಮಳೆ ಹುಯ್ದರೆ ನಾವು ಇಲ್ಲಿ ಛತ್ರಿ ಹಿಡಿದುಕೊಂಡು ಹೋಗುವ ಕಾರಣವಿಲ್ಲ. ಇಲ್ಲಿ ಹುಯ್ದರೆ ನಾವು ಹಿಡಿದುಕೊಳ್ಳೋಣ'. ಆರೀತಿಯೇನಾದರೂ ಇದ್ದರೆ ಗೇಣಿದಾರರ ಅಸೋಸಿಯೇಷನ್ನಿನವರು ಕಮಿಟಿಯವರ ಮುಂದೆ ಬಂದಾಗ ತಮ್ಮ ಅಭಿಪ್ರಾಯವನ್ನು ಹೇಳಬಹುದಿತ್ತು. ಅವರೇನು ಬೇಕೆಂದು ಹೇಳಿದರೆಂದರೆ, ಈ ಕಾನೂನಿನಲ್ಲಿ ಎರಡು ವಿಷಯಗಳನ್ನುಮಾತ್ರ ತಮಗೆ ಮಾಡಿಕೊಡಬೇಕೆಂದು ಹೇಳಿದರು: ಒಂದು ಪರಮಾವಧಿ Rent ನ್ನು ಗೊತ್ತುಮಾಡುವುದು; ಇನ್ನೊಂದು ಕೊಂಡುಕೊಳ್ಳುವುದಕ್ಕೆ ಅವಕಾಶ ಕೊಡುವುದು. ಇಷ್ಟುವಿನಾ ಬೊಂಬಾಯಿನ ಆಕ್ಟಿನಲ್ಲಿ ಏನಿದೆ, ಚೈನಾದಲ್ಲಿ ಏನಿದೆ, ಜಪಾನಿನಲ್ಲಿ ಏನಿದೆಯೆಂದು ಹೇಳಲಿಲ್ಲ! ಗೇಣಿದಾರರ ಅಸೋಸಿಯೇಷನ್ ಎಂದರೆ ಏನು? ಯಾರು ಈ ಕಾನೂನು ಜಾರಿಗೆ ಬರಬೇಕೆಂದು ತೀವ್ರವಾಗಿ ಹೊಡೆದಾಡುತ್ತಿದ್ದಾರೋ, ಅವರು ಅಂಕಿ ಅಂಶಗಳ ಆಧಾರದಮೇಲೆ ಎಲ್ಲಾ ವಿಷಯಗಳನ್ನೂ ತಿಳಿದುಕೊಂಡು ಈ ಎರಡು ಸುಧಾರಣೆಗಳನ್ನುಮಾಡಿಕೊಟ್ಟರೆ ಸಾಕೆಂದು ಹೇಳಿದಾಗ, ಆ ಮಾನ್ಯ ಸದಸ್ಯರು (ಶ್ರೀ ಶ್ರೀಕಂಠೇಶ್ವರ್‌ರವರು) ಆ ಗೇಣಿದಾರರ ಅಸೋಸಿಯೇಷನ್ನಿನಲ್ಲಿ ಇದ್ದರೋ ಇಲ್ಲವೋ ಗೊತ್ತಿಲ್ಲ! ಅವರು ಗೇಣಿದಾರರ ಅಸೋಸಿಯೇಷನ್ನಿನ ವಿಚಾರ ತಿಳಿ

ದಿದ್ದರೋ ಇಲ್ಲವೋ ಕಾಣೆ! ಹೀಗಿರುವಾಗ ಈ ಮುಸೂದಾಕಾನೂನನ್ನು ಪುನಃ ಸೆಲೆಕ್ಟ್ ಕಮಿಟಿಗೆ ಹೋಗಬೇಕೆಂದು, ಅದರಲ್ಲೂ ಅದೇ ಮೆಂಬರುಗಳಿರುವ ಕಮಿಟಿಗೆ ಹೋಗಬೇಕೆಂದು ಹೇಳುವುದರಲ್ಲಿ ಏನು ತಿರುಳಿದೆಯೋ ನನಗರ್ಥವಾಗುವುದಿಲ್ಲ.

Sri K. R. SREEKANTESWAR.—They must consider it with a change of mind.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಅವರು ತಮ್ಮ opinion ನ್ನು ಬದಲಾಯಿಸುವುದಕ್ಕೆ ಕಾರಣಗಳಾದರೂ ಏನು ? ಇದು ಬಹು ಮುಖ್ಯವಾದ ಕಾನೂನು. ಅನೇಕ ಸದಸ್ಯರು ಇದನ್ನು ಚರ್ಚೆಮಾಡಬೇಕೆಂದಿದ್ದಾರೆ. ಆದ್ದರಿಂದ ಈ ತಿದ್ದುಪಡಿಯಮೇಲಿನ ಚರ್ಚೆಯನ್ನು ಇಲ್ಲಿಗೇ ಮುಕ್ತಾಯಮಾಡಬೇಕೆಂದು ಹೇಳಿ ನಾನು ಈ ತಿದ್ದುಪಡಿಯನ್ನು ವಿರೋಧಿಸುತ್ತೇನೆ.

***The Hon'ble Sri H. SIDDAIYA.**—At the very outset I must thank the mover Sri K. R. Sreekanteswar for recognizing the good service in bringing forward this Bill, though late according to him. He has not, anyhow, pointed out any serious defect so as to recommit this Bill to the same Select Committee consisting of the same members. The Hon'ble Member is aware of the number of members of that Committee; the number was not small; it consisted of 14 experienced members, everyone of them owning lands. And it is not merely in one or two sittings but in five sittings they have deeply gone into this matter, discussed all the pros and cons, both in favour of and against, the tenant and the landlord, and have prepared this report which is really very satisfactory in my humble opinion. For what purpose then this Bill should be recommitted ? He has not shown to us any reasonable grounds or convincing reasons. The only point he says is that the powers vested in the original Bill are taken away in the present report. I fail to understand that. And in spite of my request to him to point out one power that was vested in the tenant in the original Bill and is now taken away in this report, he was unable to do it.

As regards the two or three other points he raised, they have already been answered by other Hon'ble Members.

As regards the amendment that there should be a Tribunal in place of an Amildar for fixing the rent, etc., he says that it must consist of representatives of the Government, the tenant and the landlord. There is a Government officer, a gazetted officer—the Amildar—and the tenant and the landlord will appear before him. The Amildar is empowered, according to this Bill, to make an exhaustive and impartial enquiry and give his verdict. If any of the parties is not safisfied with his order, it is open to such party to go to the Sub-Division Officer and again even to the Deputy Commissioner in appeal. Besides, the Hon'ble Member has also sent in an amendment. He suggests "In clause 12, for the word 'Amildar' wherever it comes the word 'Tribunal' shall be substituted." When this amendment will be moved by the Hon'ble Member, the House is at liberty to discuss it and if he can at that stage convince with any reasonable or fresh grounds, that would be a matter for the House for consideration. Simply because in place of 'Amildar' he wants a 'Tribunal' is this report itself to be recommitted ? I fail to understand that there is any necessity for recommittal. Besides, he seems to be under the impression, it is a wrong impression, that the Tribunal takes less time in the disposal of these cases. But from my little experience, I can say that an officer can dispose of such cases quicker than a Tribunal. Whatever it may be, when the party has got the right to prefer an appeal, the Hon'ble Member need not have any reasonable apprehension that no justice will be done to the party. Now, in the very clause that we have gone through, it is the Amildar who is to fix the maximum rent, it is not the landlord. In Clause 7 it is stated :

"The rent payable by a tenant shall, subject to the maximum rate fixed under section 6,

(HON'BLE SRI H. SIDDAIYA).

be the rent agreed upon between such tenant and his landlord........"

Therefore, I find no convincing reason for recommitting this Bill to the same Select Committee.

MR. SPEAKER.—Is the Hon'ble Member pressing his amendments.

SRI K. R. SREEKANTESWAR.—I want to explain............

MR. SPEAKER.—The Hon'ble Member cannot make a speech now.

SRI K. R. SREEKANTESWAR.—In view of the explanation given by the Hon'ble Minister, I do not want to press my amendment and I seek the leave of the House to withdraw it.

The amendment was, by leave, withdrawn.

MR. SPEAKER.—Now only the consideration motion is before the House.

*ಶ್ರೀ ಟಿ: ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).— ಸ್ವಾಮಿ, ಕೆಲವು ಮುಖ್ಯ ವಿಷಯಗಳನ್ನು ಗಮನಕ್ಕೆ ತೆಗೆದುಕೊಂಡು ಸೆಲೆಕ್ಟ್ ಸಮಿತಿಯವರು ಬಹಳ ಒಳ್ಳೆಯ ರೀತಿಯಲ್ಲಿ ತೀರ್ಮಾನವಮಾಡಿದ್ದಾರೆಂದು ನನಗನ್ನಿಸುತ್ತದೆ. ಮೊದಲನೆಯದಾಗಿ agricultural labourers and artisans ವಿಷಯವು ಮೊದಲಿನ ಮಸೂದೆಯಲ್ಲಿ ಸೇರಿತ್ತು. ಈ ಕಾನೂನನ್ನು ಇವರಿಗೆ ಅನ್ವಯಿಸುವುದು ಸರಿಯಲ್ಲ, ಇದಕ್ಕೆ ಒಪ್ಪುವುದಿಲ್ಲ ಎಂದು ಅವರು ಅಭಿಪ್ರಾಯ ಪಟ್ಟು ಅದನ್ನು ತೆಗೆದುಹಾಕಲು ಸೂಚಿಸಿದ್ದಾರೆ. ನನಗೆ ಜ್ಞಾಪಕವಿರುವಹಾಗೆ ಬೊಂಬಾಯಿನ ಕಾನೂನಿನಲ್ಲಿ ಇದೂ ಸೇರಿದೆ. ಆದರೆ ಇಲ್ಲಿ ಅದನ್ನು ಸೇರಿಸುವುದು ಯುಕ್ತವಲ್ಲವೆಂದು ಸಮಿತಿಯವರು ಅಭಿಪ್ರಾಯ ಪಟ್ಟಿದ್ದಾರೆ. ಪ್ರಾಯಶಃ ಇದಕ್ಕೆ ಸಭೆ ಒಪ್ಪಬಹುದೆಂದು ಕಾಣುತ್ತದೆ.

ಎರಡನೆಯದಾಗಿ, ನಾನು ಮೊದಲೇ ಹೇಳಿದಹಾಗೆ, ಈ ಕಾನೂನನ್ನು ಎಲ್ಲ ಪ್ರದೇಶಗಳಿಗೂ ಅನ್ವಯಿಸಬಾರದು, ಎಲ್ಲಿ ಅಗತ್ಯವೋ ಅಲ್ಲಿಗೆ ಅನ್ವಯಿಸಬಹುದೆಂದು ಸಮಿತಿಯವರುಮಾಡಿರುವ ಸಲಹೆ ಮೆಚ್ಚಿಗೆಗೆ ಪಾತ್ರವಾಗಿದೆ. ಮೊದಲು ಇದು ಇದ್ದಹಾಗೆ ಎಲ್ಲಾ ಭಾಗಕ್ಕೂ ಜಾರಿಗೆ ಬಂದಿದ್ದರೆ ಜಮೀನ್ದಾರರಿಗೂ ಟೆನೆಂಟುಗಳಿಗೂ ಒಳ್ಳೆಯ ಬಾಂಧವ್ಯವಿರದೆ ಜಮೀನು ಸುಲಲಿತವಾಗಿಮಾಡುವುದು ಅನೇಕಕಡೆ ತಪ್ಪಿಹೋಗುತ್ತಿತ್ತು ಎನಿಸುತ್ತದೆ. ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಒಂದೆರಡು ತಾಲ್ಲೂಕುಗಳಲ್ಲಿ ಜಮೀಂದಾರರಿಗೂ ರೈತರಿಗೂ ಭಿನ್ನಾಭಿಪ್ರಾಯ ಬಂದಿತ್ತು. ಆ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸುವುದಕ್ಕೆ ಇದು ಬಹುಮಟ್ಟಿಗೆ ಸಹಾಯಕವಾಗಬಹುದೆಂದು ಕಾಣುತ್ತದೆ. ಅಂದಮಾತ್ರಕ್ಕೇ ಎಲ್ಲಾ ಪ್ರಾಂತಗಳಿಗೂ ಇದನ್ನು ಅನ್ವಯಿಸಿದರೆ ಅನೀತಿವಂತರಿಂದ ಕೆಲವು ಜಮೀನ್ದಾರರೂ ರೈತರೂ ಇದೇ ಒಂದು ನೆಪಮಾಡಿಕೊಂಡು ಈಗಿರುವ ಸರಿಯಾದ ಬಾಂಧವ್ಯವು ತಪ್ಪಿಹೋಗಬಹುದೆಂದು ಭಾವಿಸಿ, ಯಾವ ಯಾವ ಪ್ರದೇಶಕ್ಕೆ ಇದನ್ನು ಅನ್ವಯಿಸಬಹುದೋ ಅಲ್ಲಿಗೆ ಅನ್ವಯಿಸುವ ಅಧಿಕಾರವನ್ನು ಸರ್ಕಾರಕ್ಕೆ ಕೊಟ್ಟಿದೆ. ಕಾನೂನನ್ನು ಅನ್ವಯಿಸುವ ವಿಚಾರವನ್ನು ಮೈಸೂರು ಗೆಜೆಟ್ಟಿನಲ್ಲಿ ಪ್ರಕಟಿಸುವುದರ ಮೂಲಕ ಮಾಡಬಹುದು.

ಮೂರನೆಯದಾಗಿ, ವ್ಯವಸಾಯ ಎಂಬ ಪದದ ಅರ್ಥವಿವರಣೆಯಲ್ಲಿ ಮೊದಲು ಡೈರಿ ಫಾರ್ಮಿಂಗ್, ಪೌಲ್ಟ್ರಿ ಫಾರ್ಮಿಂಗ್, ಸ್ಟಾಕ್‌ಬ್ರೀಡಿಂಗ್, ಗ್ರೇಜಿಂಗ್ ಮುಂತಾದುದೆಲ್ಲವನ್ನೂ ಸೇರಿಸಿದ್ದುದನ್ನು ತಪ್ಪಿಸಿ ವ್ಯವಸಾಯವೆಂದರೇನು ಎಂಬ ಪದದ ಅರ್ಥವನ್ನು ಈಗಿನ ನಮ್ಮ ಜಮೀನ್ದಾರರು ಮತ್ತು ವ್ಯವಸಾಯಗಾರರಿಗೆ ಸರಿಯಾಗುವ ರೀತಿಯಲ್ಲಿ ವಿವರಣೆಯನ್ನು ಬದಲಾವಣೆ ಮಾಡಿದ್ದಾರೆ. ನಮ್ಮ ಮಾನ್ಯ ಮಂತ್ರಿಗಳು ಹೇಳಿದಹಾಗೆ ಮೊದಲು ಮಸೂದೆಯಲ್ಲಿ ಏನಿತ್ತೆಂದರೆ, ಅಮಲ್ದಾರರ ತೀರ್ಪಿನಮೇಲೆ ವ್ಯವಸಾಯಗಾರರಾಗಲೀ ಜಮೀನ್ದಾರರಾಗಲಿ ಅಪೀಲು ಹೋಗಬೇಕಾದರೆ ಡೆಪ್ಯುಟಿಕಮೀಷನರ ಹತ್ತಿರ ಹೋಗಬೇಕಾಗಿತ್ತು. ಈಗ ಸೆಲೆಕ್ಟ್ ಕಮಿಟಿಯವರು ಮಾಡಿರುವ ಪ್ರಕಾರ, ಅಸಿಸ್ಟೆಂಟ್ ಕಮೀಷನರಲ್ಲಿ ಅಪೀಲುಮಾಡಿ ಅವರು ತೀರ್ಮಾನಮಾಡುವ ಅಧಿಕಾರವಿದ್ದರೆ ಜಾಗ್ರತೆ ಕೆಲಸವಾಗಲು ಅನುಕೂಲವಾಗುತ್ತದೆಂದು ಭಾವಿಸಿ ಈ ಅವಕಾಶ ಕಲ್ಪಿಸಿ ಒಳ್ಳೆಯ ಬದಲಾವಣೆಮಾಡಿದ್ದಾರೆ.

ಕೆಲವು ರೈತರು ಜಮೀನುಗಳಿಗೆ ನಾವು ಬೇಕಾದಷ್ಟು ಹಣ ಖರ್ಚುಮಾಡಿ ಆಬಾದು ಮಾಡಿದ್ದೇವೆ, ಜಮೀನುಗಳನ್ನು ಬಿಟ್ಟುಕೊಡ ಬೇಕಾದರೆ ಆ ಹಣವನ್ನು ನಮಗೆ ಕೊಡಬೇಕು ಎಂದು ಇಲ್ಲದ ಸಲ್ಲದ ವ್ಯವಹಾರಗಳನ್ನು ತರಬ ಹುದೆಂಬ ದೃಷ್ಟಿಯಿಂದ, ಮೊದಲಿದ್ದ ಒಂದು ಲೋಪವನ್ನು ತಪ್ಪಿಸಿ ಜಮೀನನ್ನು ರೈತನು ಉತ್ತಮ ಪಡಿಸಬೇಕಾದರೆ ಜಮೀನ್ದಾರನ ಅನುಮತಿಯನ್ನು ಪಡೆದು ಮಾಡಬೇಕು. ಹಾಗೆಮಾಡದೆ ತಾನೇ ಜಮೀನನ್ನು ಉತ್ತಮ ಪಡಿಸಿದ್ದೇನೆ, ಹಣ ಖರ್ಚುಮಾಡಿದ್ದೇನೆ ಎಂದು ಹೇಳಿದರೆ ಅದಕ್ಕೆ ಯಾವ ಪರಿಹಾರವೂ ದೊರೆ ಯಲಾರದು ಎಂದು ಸೆಲೆಕ್ಟ್ ಸಮಿತಿಯವರು ಮಾಡಿದ್ದಾರೆ.

ಇಷ್ಟೇ ಅಲ್ಲದೆ ರೈತರಿಗೆ ಬಹಳ ಅನುಕೂಲ ವಾಗತಕ್ಕ ರೀತಿಯಲ್ಲಿ ಮತ್ತೊಂದು ಬದಲಾವಣೆ ಯನ್ನು ಮಾಡಿದ್ದಾರೆ. ಮೊದಲಿನ ಮಸೂದೆಯಲ್ಲಿ ರೈತನಿಗೆ ಹೆಚ್ಚು ಅಧಿಕಾರವಿತ್ತೆಂದು ಶ್ರೀ ಶ್ರೀಕಂಠೇಶ್ವರ್‌ರವರು ಹೇಳಿದರು. ಅವರು ದಯೆಯಿಟ್ಟು ಮಸೂದೆಯ 13ನೆಯ ಕ್ಲಾಜನ್ನು ನೋಡಲಿ. ಅದರ ಪ್ರಕಾರ ಹಿಂದಿನ ಮಸೂದೆ ಯಲ್ಲಿ ಸಾಗುಮಾಡತಕ್ಕ ರೈತನು ಗುತ್ತಿಗೆ ಯನ್ನು ನಿಗದಿಮಾಡಿ ಜಮೀನನ್ನು ತೆಗೆದು ಕೊಂಡ ಮೇಲೆ ಆ ಜಮೀನಿನಲ್ಲಿ ಬೆಳೆಯಾಗಲಿ ಆಗದೇಯಿರಲಿ, ಅವನು ಗೊತ್ತುಮಾಡಿದ್ದ ಗುತ್ತಿಗೆಯನ್ನು ಕಡ್ಡಾಯವಾಗಿ ಜಮೀನ್ದಾರ ನಿಗೆ ಕೊಡಲೇ ಬೇಕೆಂದಿತ್ತು. ಅಕಸ್ಮಾತ್ ರೈತನ ಅನಾದರಣೆಯಿಂದಲ್ಲದೆ ಕ್ರಿಮಿಕೀಟಗಳ ಹಾವಳಿಗೆ ಸಿಕ್ಕಿ ಅವನ ಶಕ್ತಿಗೆ ಮೀರಿದ ಕಾರಣ ಗಳಿಂದ ಫಸಲು ಕೆಟ್ಟುಹೋದರೆ ಅದಕ್ಕೆ ರೈತನಿಗೆ ತಕ್ಕ ಪರಿಹಾರವನ್ನು ಕೊಡಲು ಅವಕಾಶವಿರು ವಂತೆ ಸೆಲೆಕ್ಟ್ ಕಮಿಟಿಯವರು ಬದಲಾವಣೆ ಮಾಡಿದ್ದಾರೆ. ಇದು ರೈತರ ದೃಷ್ಟಿಯಿಂದ ಅಗತ್ಯವಾದುದು ಮತ್ತು ಬಹಳ ಉಪಯುಕ್ತ ವಾದ ಬದಲಾವಣೆ ಎಂಬುದನ್ನು ಮಾನ್ಯ ಸದಸ್ಯರು ತಿಳಿದು ಕೊಳ್ಳಬೇಕಾಗಿದೆ. ಸೆಲೆಕ್ಟ್ ಸಮಿತಿಯವರಿಗೆ ಶಿವಮೊಗ್ಗ ಜಿಲ್ಲೆಯಿಂದ ಬಂದ ಒಬ್ಬ ಮಾನ್ಯ ಸದಸ್ಯರೂ ಅನೇಕ ವರ್ಷಗಳಿಂದ ಜಮೀನನು ಸಾಗುಮಾಡಿಕೊಂಡು ಬರುತ್ತಿದ್ದ ರೈತರೂ ಒಂದು ಸಲಹೆಯನ್ನು ಹೇಳಿದರು. ಅದೇನೆಂದರೆ, ಜಮೀನ್ದಾರರು ರೈತನು ಕೊಡ ಬೇಕಾದ ಗುತ್ತಿಗೆ ಕೊಡಲಿಲ್ಲ ಅಥವಾ ಜಮೀನು ಸರಿಯಾಗಿ ಆಬಾದು ಮಾಡಲಿಲ್ಲವೆಂಬ ಕಾರ ಣಕ್ಕೆ ಅವನಿಂದ ತಪ್ಪಿಸಲು ಅವಕಾಶವಿರ ಬಾರದು; ಅವನು ಹನ್ನೆರಡು ವರ್ಷ ಆ ಜಮೀನನ್ನು ಸಾಗುವಳಿ ಮಾಡಿದ್ದರೆ ಅಂಥವ ನಿಂದ ಜಮೀನನ್ನು ತಪ್ಪಿಸಬೇಕಾದರೆ ಬಲವ ತ್ತರವಾದ ಕಾರಣವಿರಬೇಕೆಂದು ಸೂಚಿಸಿದರು. ಸಮಿತಿಯವರು ಈ ಸಲಹೆಯನ್ನು ಒಪ್ಪಿದ್ದಾರೆ. ಇದರಿಂದ ರೈತರಿಗೆ ಹೆಚ್ಚು ಸಹಾಯವಾಗುತ್ತ ದೆಂಬುದು ವೇದ್ಯವಾಗುತ್ತದೆ. ಹನ್ನೆರಡು ವರ್ಷಕ್ಕೆ ಮೇಲ್ಪಟ್ಟ ಕಾಲದಿಂದ ಸಾಗುವಳಿ ಮಾಡಿರುವ ರೈತನನ್ನು ಬಿಡಿಸಬೇಕಾದರೆ ಪ್ರಬಲ ವಾದ ಕಾರಣವಿರಬೇಕು. ಜಮೀನ್ದಾರರು ತಾವೇ ಸ್ವಂತವಾಗಿ ಆ ಜಮೀನನ್ನು ಸಾಗು ಮಾಡುವುದಾಗಿಯೂ ತಮಗೆ ಅವಶ್ಯಕವೆಂತ ಲೂ ಹೇಳಿ ಒಪ್ಪಿಸಿದರೂ ಅಂತಹ ಸಂದರ್ಭದಲ್ಲಿ ಕೊಡ ಪೂರ್ತಿಯಾಗಿ ಆ ಜಮೀನನ್ನು ರೈತನಿಂದ ಬಿಡಿಸಿಕೊಡುವ ಹಾಗಿಲ್ಲ, ಅರ್ಧ ಜಮೀನನ್ನು ಬಿಡಿಸಿಕೊಳ್ಳಬಹುದು. ಒಂದು ವೇಳೆ ರೈತನಿಗೆ ಕಿರುಕುಳಕೊಡಬೇಕೆಂಬ ಉದ್ದೇಶದಿಂದ ಜಮೀ ನನ್ನು ರೈತನಿಂದ ಬಿಡಿಸಿಕೊಂಡು ಜಮೀನ್ದಾ ರನು ತಾನೇ ಸಾಗುಮಾಡದೆ ಬೇರೆಯವರಿಗೆ ಕೊಡಿಸಿದರೆ ಎರಡು ವರ್ಷದೊಳಗೆ ರೈತನು ಅಮಲ್ದಾರರಿಗೆ ಅರ್ಜಿ ಹಾಕಿಕೊಂಡು ಪುನಃ ಆ ಜಮೀನನ್ನು ಬಿಡಿಸಿಕೊಳ್ಳಲು ಇದರಲ್ಲಿ ಅವ ಕಾಶವಿದೆ. ಹಾಗೂ ಜಮೀನ್ದಾರನು ಬಿಡದೇ ಹೋದರೆ ರೈತನು ತನಗೆ ನಷ್ಟವಾಗಿದೆ, ಆದಕ್ಕೆ ಪರಿಹಾರ ಕೊಡಿಸಬೇಕೆಂದು ಕೇಳುವುದಕ್ಕೆ 16ನೆಯ ಕ್ಲಾಜಿನಲ್ಲಿ ಅವಕಾಶಮಾಡಿದೆ. ಹೀಗೆ ರೈತನಿಗೆ ಬಹುಮಟ್ಟಿಗೆ ಅನುಕೂಲವಾಗತಕ್ಕ ರೀತಿಯಲ್ಲಿ ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಯವರು ಬದಲಾವಣೆ ಮಾಡಿದ್ದಾರೆ. ಹೀಗಿದ್ದರೂ ರೈತರಿಗೆ ಅನ್ಯಾಯವಾಗಿದೆ ಎಂದು ಏಕೆ ನಮ್ಮ ಆ ಮಿತ್ರರು ಸಂಶಯಪಡುತ್ತಾರೋ ನನಗೆ ಗೊತ್ತಾಗುವುದಿಲ್ಲ. ಅಂತಹ ಬದ

(ಶ್ರೀ ಟಿ. ಮಾದಯ್ಯಗೌಡರು).

ಲಾವಣೆಯಾವುದಾದರೂ ಇದರಲ್ಲಿದ್ದಲ್ಲಿ ಅದು ನ್ಯಾಯವಾದ ಬದಲಾವಣೆಯಲ್ಲವೆಂಬುದನ್ನು ತೋರಿಸಿ ಅಗತ್ಯವಾಗಿ ಹೇಳಬಹುದು.

ಮತ್ತೊಂದು ವಿಚಾರ. ಹಿಂದಿದ್ದ ಪ್ರಕಾರ ಮಸೂದೆಯಲ್ಲಿ ಒಂದು ಕಠಿಣ ಪ್ರಸಂಗವಿತ್ತು. ರೈತನು ಐದು ವರ್ಷ ಕಾಲ ಜಮೀನನ್ನು ಮಾಡಿ ಅದರಲ್ಲಿ ಕಟ್ಟಡ ಕಟ್ಟಿದ್ದರೆ ಆ ಜಮೀನು ಕಟ್ಟಡ ಎಲ್ಲವೂ ರೈತನಿಗೇ ಸೇರುತ್ತದೆಂದ್ದು ಹಿಂದಿನ ಮಸೂದೆಯಲ್ಲಿತ್ತು. ಇದು ಸರಿಯಲ್ಲ, ಇದನ್ನು ನ್ಯಾಯವೆಂದು ಯಾರೂ ಒಪ್ಪಲಾರರು. ಅಕಸ್ಮಾತ್ ರೈತ ಕಟ್ಟಡ ಕಟ್ಟಿದ್ದರೆ ಪುನಃ ಜಮೀನ್ದಾರನು ಜಮೀನನ್ನು ವಾಪಸು ಪಡೆಯಬೇಕಾದರೆ ಅವನು ಕಟ್ಟಿದ ಮನೆ ಮತ್ತು ಆ ಜಾಗ ರೈತನದು ಎಂದರೆ ಇದು ಸರಿಯಲ್ಲ. ಇದನ್ನು ಸಮಿತಿಯವರು ಸರಿಯಾಗಿ ಯೋಚನೆ ಮಾಡಿ ರೈತ ಮನೆಯನ್ನು ಕಟ್ಟಿದ್ದರೆ ಆ ಜಮೀನನ್ನು ರೈತ ಬಿಟ್ಟುಕೊಡಬೇಕಾದರೆ ಆ ಮನೆ ಅಥವಾ ಕಟ್ಟಡದ ಸಾಮಾನುಗಳನ್ನು ತಾನು ತೆಗೆದು ಕೊಂಡು ಹೋಗಬಹುದೆಂದು ಮಾಡಿದೆ. ಜಮೀನನ್ನು ಜಮೀನ್ದಾರನಿಗೆ ಬಿಟ್ಟುಕೊಡಬೇಕು. ಅಥವಾ ಜಮೀನ್ದಾರನು ಬೆಲೆಯನ್ನು ಕೊಟ್ಟು ಆ ಕಟ್ಟಡವನ್ನು ತಾನೇ ಬಿಡಿಸಿಕೊಳ್ಳಬಹುದು.

ಹಿಂದೆ ಮಸೂದೆಯಲ್ಲಿ ಇನ್ನೊಂದು ವಿಷಯವಿತ್ತು. ರೈತ ಸಾಗುಮಾಡುವ ಜಮೀನಿನಲ್ಲಿ ಮರಗಳಿದ್ದರೆ ಅವು ರೈತನದೆಂದಿತ್ತು. ಫಸಲು ಕೂಡ ರೈತನದೆಂದಿತ್ತು. ಇದು ಬಹಳ ಅನ್ಯಾಯ. ಇದನ್ನೂ ಸೆಲೆಕ್ಟ್ ಸಮಿತಿಯವರು ಪರಿಶೀಲನೆ ಮಾಡಿ ಸೂಕ್ತ ಬದಲಾವಣೆ ಮಾಡಿದ್ದಾರೆ.

ಈಗಿನ ಪರಿಸ್ಥಿತಿಗನುಕೂಲವಾಗುವಂತೆ ಇದನ್ನು ಒಂದು ರೀತಿಯಾಗಿ ವಿಧಾಯಕ ಮಾಡಿರತಕ್ಕದ್ದು ನ್ಯಾಯವಾಗಿಯೇ ಇದೆ. ಇಲ್ಲಿಯತನಕ ಈ ರೈತನಿಗೂ ಮತ್ತು ಜಮೀನ್ದಾರನಿಗೂ ಏನೇನು ಭಿನ್ನಾಭಿಪ್ರಾಯಗಳು ತಲೆದೋರಲು ಅವಕಾಶವಿತ್ತೋ ಅಂಥಾದ್ದನ್ನೆಲ್ಲಾ ತಪ್ಪಿಸಿ, ಈ ಉಭಯ ಪಾರ್ಟಿಗಳಿಗೂ ಯಾವ ಭಿನ್ನಾಭಿಪ್ರಾಯ ಬರುವುದಕ್ಕೂ ಅವಕಾಶವಿಲ್ಲದ ರೀತಿಯಲ್ಲಿ ಬಹಳ ಕಷ್ಟಪಟ್ಟು ತೀರ್ಮಾನಮಾಡಿದ್ದಾರೆ. ಜಮೀನಿನಲ್ಲಿರತಕ್ಕ ಬಾಂದು, ಬಾಂದು ಕಲ್ಲುಗಳು ಇತ್ಯಾದಿಗಳ ಬಗ್ಗೆ ಉಪಯುಕ್ತ ಬದಲಾವಣೆಗಳನ್ನು ಮಾಡಿ ಇದರ ಬಗ್ಗೆ ಸಹ ಯಾವ ತಕರಾರೂ ಬಾರದಂತೆ ತೀರ್ಮಾನಿಸಿದ್ದಾರೆ. ಹೀಗೆ ನಾನಾ ತಿದ್ದುಪಡಿಗಳನ್ನು ಮಾಡಿ ಕೊನೆಯಲ್ಲಿ ಈ ರೈತ ಮತ್ತು ಜಮೀನ್ದಾರ ಇಬ್ಬರೂ ಈ ಕಾನೂನನ್ನು ಉಲ್ಲಂಘನೆ ಮಾಡಿದಾಗ ಯಾರ್‍ಯಾರು ಎಷ್ಟೆಷ್ಟು ಶಿಕ್ಷೆಗೆ ಗುರಿಯಾಗುತ್ತಾರೆಂಬುದನ್ನು ಸಹ ಸೂಚಿಸಿರುತ್ತಾರೆ. ಹಿಂದೆ ಇಂಥಾ ಕೆಲಕೆಲವು ತಕ್ಸೀರುಗಳನ್ನು ಯಾರಾದರೂ ಮಾಡಿ, ಕಾನೂನು ಉಲ್ಲಂಘನೆ ಮಾಡಿದ ಸಂದರ್ಭಗಳಲ್ಲಿ ಅವರಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ವಿಧಿಸಿದ್ದುದನ್ನು ಈಗ ಬದಲಾಯಿಸಲಾಗಿದೆ. ಅಷ್ಟೇ ಅಲ್ಲದೆ ಈ ಕಾನೂನನ್ನು ಎಲ್ಲರೂ ಸುಲಭವಾಗಿ ಪಾಲಿಸಿಕೊಂಡು ಬರುವಂತೆ ಒಂದು ಅನುಕೂಲವಾದ ರೀತಿಯಲ್ಲಿ ಎಲ್ಲಾ ಅವಶ್ಯಕವಾದ ಬದಲಾವಣೆಗಳನ್ನು ಮಾಡಿರುತ್ತಾರೆ.

ಆದರೆ ಈಗ ರೈತನಿಂದ ಜಮೀನ್ದಾರನು ತೆಗೆದುಕೊಳ್ಳತಕ್ಕ ಗುತ್ತಿಗೆಗಾಗಿ, ಜಮೀನ್ದಾರನು ಆ ಬಗ್ಗೆ ಒಂದು ಕ್ರಮವಾದ ರಶೀದಿಯನ್ನು ರೈತನಿಗೆ ಕೊಡಬೇಕೆಂದೂ, ಹಾಗೆ ಕೊಡದೆ ತಪ್ಪಿದಲ್ಲಿ ಜಮೀನ್ದಾರನು ಶಿಕ್ಷೆಗೆ ಅರ್ಹನಾಗುತ್ತಾನೆಂದು ಹೇಳಿದ್ದಾರೆ. ಹಾಗೆ ರಶೀದಿ ಕೊಡದೆ ತಪ್ಪಿದಲ್ಲಿ 500 ರೂಪಾಯಿಗಳ ಜುಲ್ಮಾನೆ ವಿಧಿಸಬಹುದೆಂದು ಹೇಳಲಾಗಿದೆ. ಆದರೆ ಇದು ಬಹಳ ಕ್ಲಿಷ್ಟಕರವಾದ ವಿಚಾರ. ಒಂದು ವೇಳೆ ಜಮೀನ್ದಾರನು ರೆಂಟನ್ನು ತೆಗೆದುಕೊಂಡ ಬಗ್ಗೆ ತಾನು ರೈತನಾದವನಿಗೆ ಒಂದು ರಶೀದಿಯನ್ನು ಕೊಟ್ಟಿದ್ದಾಗ್ಯೂ ಕೂಡ ರೈತನು ತನಗೆ ಅಂಥಾ ರಶೀದಿಯನ್ನೇ ಕೊಡಲಿಲ್ಲವೆಂದು ತಿಳಿಸಿದರೇನು ಮಾಡುವುದು? ಜಮೀನ್ದಾರರಾಗಿರತಕ್ಕವರಲ್ಲಿ ಅನೇಕರು ರುಜುವನ್ನೂ ಸಹ ಮಾಡಲು ಬಾರದವರಾಗಿರುತ್ತಾರೆ. ಅದೇ ರೀತಿಯ ರೈತರೂ ಇದ್ದಾರೆ. ಇಂಥಾ ಕ್ಲಿಷ್ಟ

ಕರವಾದ ಪ್ರತಿಯೊಂದು ಸಮಸ್ಯೆಯನ್ನೂ ಸಹ ಬಹಳ ಕೂಲಂಕಷವಾಗಿ ವಿಮರ್ಶೆಮಾಡಿ ಉಭಯತ್ರರಿಗೂ ಅನುಕೂಲವಾಗುವಂತೆ ಅವುಗಳನ್ನು ತೀರ್ಮಾನ ಮಾಡಿ, ಈ ಬಿಲ್ಲನ್ನು ಒಂದು ಸುವ್ಯವಸ್ಥಿತಿಗೆ ತಂದ ನಂತರ ಅದನ್ನು ಈ ಸಭೆಯ ಮುಂದೆ ಮಂಡಿಸಿದ್ದಾರೆ. ಆ ಸಮಿತಿಯಲ್ಲಿ ನಾನೂ ಸಹ ಭಾಗವಹಿಸಿದ್ದೆ. ಈ ಬಿಲ್ಲಿನಲ್ಲಿ ಏನೇನು ಸೂಕ್ತ ಮಾರ್ಪಾಡುಗಳನ್ನು ಮಾಡಬೇಕಾಗಿತ್ತೋ ಅವುಗಳನ್ನೆಲ್ಲಾ ಮಾಡಲಾಗಿದೆ. ಆ ಸಮಿತಿಯಲ್ಲಿ ಕೆಲವು ಸದಸ್ಯರು ರೈತರ ಪರವಾಗಿ ಬಹಳ ತೀವ್ರವಾಗಿ ವರ್ತಿಸಿದವರೂ ಇದ್ದರು; ಮತ್ತು ಜಮೀನ್ದಾರರ ಪರವಾಗಿಯೂ ಅಷ್ಟೇ ತೀವ್ರವಾಗಿ ವರ್ತಿಸತಕ್ಕ ಸದಸ್ಯರೂ ಇದ್ದರು. ಆದಾಗ್ಯೂ ಆ ಸಮಿತಿಯ ಮಾನ್ಯ ಅಧ್ಯಕ್ಷರು ಸರ್ವರ ಅಭಿಪ್ರಾಯಗಳನ್ನೂ ಕಡೆಯ ಘಳಿಗೆಯವರೆಗೂ ಬಹಳ ತಾಳ್ಮೆಯಿಂದ ಲಾಲಿಸಿ, ರೈತ ಮತ್ತು ಜಮೀನ್ದಾರರಿಬ್ಬರಿಗೂ ಒಂದು ಕ್ಷೇಮ ಉಂಟಾಗಲು ಯಾವ ರೀತಿ ವರ್ತಿಸಬೇಕೋ ಆ ರೀತಿ ವರ್ತಿಸಿ ಎಲ್ಲ ವಿವಾದಾಂಶಗಳನ್ನೂ ತೀರ್ಮಾನ ಮಾಡಿದ್ದಾರೆ. ಅಲ್ಲಿಗೂ ಕೂಡ ಆ ಸಮಿತಿಯ ಕೆಲಕೆಲವು ಸದಸ್ಯರು ಏನೊಂದು ಭಿನ್ನಾಭಿಪ್ರಾಯವನ್ನು ಅವರು ವ್ಯಕ್ತಪಡಿಸಿದ್ದರೋ ಅದನ್ನು ಕೂಡ ಈ ವರದಿಯಲ್ಲಿ ನಮೂದಿಸಿದ್ದಾರೆ. ಆದರೆ ಅಂಥಾ ವಿರೋಧಾಭಿಪ್ರಾಯ ಕೇವಲ ವೈಯ್ಯಕ್ತಿಕವಾದುದೇ ಹೊರತು ಸಮಿತಿಯ ಭಿನ್ನಾಭಿಪ್ರಾಯವಲ್ಲ. ಇನ್ನು ಮುಂದಕ್ಕೆ ನಮ್ಮ ದೇಶದಲ್ಲಿರತಕ್ಕ ರೈತಬಾಂಧವರಿಗೂ ಮತ್ತು ಜಮೀನ್ದಾರರಿಗೂ ಒಬ್ಬರಿಗೊಬ್ಬರಿಗೆ ತಿಕ್ಕಾಟ ಬಾರದ ರೀತಿಯಲ್ಲಿ ಅವರು ಪರಸ್ಪರ ಸೌಹಾರ್ದ ಮಾರ್ಗದಲ್ಲಿ ನಡೆದುಕೊಂಡು ದೇಶಕ್ಕೆ ಉತ್ತಮವಾಗುವಂತೆ ಕಾನೂನನ್ನು ರಚಿಸಿ ದೇಶದ ಮುಂದೆ ಇಡಲು ಪ್ರಯತ್ನಿಸಿದ್ದಾರೆ. ಇದರಿಂದ ಇಲ್ಲಿಯ ತನಕ ಇದ್ದ ಈ ಉಭಯತ್ರರ ತೊಂದರೆಗಳೂ ಪರಿಹಾರವಾಗುತ್ತವೆ. ಆದಕಾರಣ ನಾನು ಈ ಮಸೂದೆಗೆ ನನ್ನ ಸಂಪೂರ್ಣ ಬೆಂಬಲವನ್ನು ನೀಡುತ್ತಾ ಈ ವರದಿಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಸ್ವಾಮಿ, ಈ ರೀತಿಯ ಒಂದು ಗೇಣಿ ಕಾನೂನನ್ನು ಮಾಡುವಾಗ ಮತ್ತು ಅಂಥಾ ಕಾನೂನಿನ ಮೇಲೆ ಮಾತನಾಡುವಾಗ ಭೂವ್ಯವಸಾಯ ಮತ್ತು ಭೂಮಿಯ ಒಡೆಯತನ ಮತ್ತು ಭೂಸ್ವಾಮ್ಯ ಇವುಗಳ ವಿಷಯದಲ್ಲಿ ಯಾವ ಯಾವ ದೇಶದಲ್ಲಿ ಯಾವ ಯಾವ ರೀತಿ ನೀತಿಗಳನ್ನು ಅನುಸರಿಸಿಕೊಂಡು ಬಂದಿದ್ದಾರೆಂಬುದನ್ನೂ ಸಹ ನಾವು ಸ್ವಲ್ಪ ದೃಷ್ಟಿಯಲ್ಲಿಟ್ಟುಕೊಂಡು, ನಮ್ಮ ದೇಶಕ್ಕೆ ಮತ್ತು ಇಲ್ಲಿರತಕ್ಕ ಸ್ಥಿತಿಗತಿಗಳಿಗೆ ಎಷ್ಟರ ಮಟ್ಟಿಗೆ ಅವುಗಳನ್ನು ಪಾಲಿಸಿಕೊಂಡು ಬರಲು ಈ ಭೂ ಸುಧಾರಣೆಯನ್ನು ಮಾಡಬೇಕೋ ಅಷ್ಟರ ಮಟ್ಟಿಗೇ ಮಾಡತಕ್ಕದ್ದು ಉಚಿತವಾದುದು. ಈ ಭೂ ಸುಧಾರಣೆಯಾಗಬೇಕೆಂಬ ಕೂಗು ಈ ಮೈಸೂರು ಸಂಸ್ಥಾನ ಒಂದರಲ್ಲೇ ಅಲ್ಲ, ಅಥವಾ ಇಡೀ ಭರತಖಂಡದಲ್ಲೇ ಅಲ್ಲ, ಈ ಭೂಸುಧಾರಣಾ ಕೂಗು ಇಡೀ ಪ್ರಪಂಚದಲ್ಲೇ ಎದ್ದು ಇದರ ಪರವಾಗಿ ಬಹಳ ಚಟುವಟಿಕೆಗಳು ನಾನಾ ರೀತಿಯಲ್ಲಿ ನಡೆಯುತ್ತಿವೆ. ಆದರೆ ಕೆಲವು ಕಡೆ ಬಹಳ ಕ್ರಾಂತಿಕಾರಕವಾದ ಬದಲಾವಣೆಗಳೂ ಮತ್ತೆ ಕೆಲವು ಕಡೆ ಸುಧಾರಣ ರೀತಿಯಾದ ಬದಲಾವಣೆಗಳೂ ಆಗಿರುತ್ತವೆ. ಈ ಬದಲಾವಣೆಗಳ ಮೂಲ ಅಂಶವಾದರೂ ಇಷ್ಟೆ—ನಮ್ಮಲ್ಲಿ ಹಾಲಿ ಇರತಕ್ಕ ಭೂ ವ್ಯವಸಾಯಪದ್ಧತಿ, ಭೂಸ್ವಾಮ್ಯ ಮತ್ತು ಭೂಮಿಯ ಆಡಳಿತ ದೇಶದಲ್ಲಿರತಕ್ಕ ರೈತರು ಮತ್ತು ಜಮೀನ್ದಾರರು ಈ ಈರ್ವರಿಗೂ ಬಹಳ ಕಷ್ಟನಷ್ಟಗಳಿಗೆ ಗುರಿಮಾಡುವಂತಿದ್ದರೆ ಮತ್ತು ಇವುಗಳನ್ನು ದೇಶದ ಹಿತದೃಷ್ಟಿ ಬದಲಾವಣೆ ಮಾಡತಕ್ಕದ್ದು ಅಗತ್ಯವೆಂದು ಕಂಡು ಬಂದರೆ ಆಗ ಮಾತ್ರ ಕ್ರಾಂತಿಕಾರಕ ಬದಲಾವಣೆಗಳನ್ನು ಮಾಡತಕ್ಕದ್ದು ಅವಶ್ಯಕ. ಹಾಗಿಲ್ಲದೆ ಕೇವಲ ಸುಧಾರಣಾರೂಪವಾದ ಕೆಲವು ಬದಲಾವಣೆಗಳು ಅವಶ್ಯಕವೆಂದು ಜನರಿಗೆ ಕಂಡುಬಂದರೆ ಆಗ ಇದನ್ನು ಯಾವ ರೀತಿ ಬದಲಾವಣೆ ಮಾಡಬೇಕೆಂದರೆ ಇದನ್ನು ಕೇವಲ ಒಂದು ರಚನಾತ್ಮಕ ದೃಷ್ಟಿಯಿಂದ ಮಾಡಿದರೆ ಸಾಕು. ಹೀಗೆ

(ಶ್ರೀ ಎಚ್. ಎಂ. ಚನ್ನಬಸಪ್ಪನವರು).

ಒಂದು ರಚನಾತ್ಮಕ ದೃಷ್ಟಿಯಿಂದ ಕಾರ್ಯವನ್ನು ಕೈಗೊಳ್ಳುವಾಗ ಇದಕ್ಕೆ ಒಂದು ಯೋಜನೆಯನ್ನು ಹಾಕಿಕೊಂಡು, ಅದರ ಪ್ರಕಾರ ನಮ್ಮ ಗುರಿಯೇನು ಇರುತ್ತದೆಯೋ, ಅಂಥಾ ಗುರಿಯನ್ನು ಮುಟ್ಟಲು ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಅವಶ್ಯಕವೆಂದು ಕಂಡುಬರುತ್ತದೆಯೋ ಅಂಥಾ ವಿಷಯಗಳನ್ನು ನಿರ್ದಿಷ್ಟಮಾಡಿಕೊಂಡು, ಆ ಬಗ್ಗೆ ಏನೇನು ಧನಸಹಾಯ ಇರಬೇಕೋ ಅದನ್ನೂ ಒದಗಿಸಿಕೊಂಡು, ದೇಶದಲ್ಲಿರತಕ್ಕ ರೈತರಿಗೆ ಅನುಕೂಲವಾಗತಕ್ಕ ರೀತಿ ಇದನ್ನು ಬದಲಾವಣೆ ಮಾಡುತ್ತಾ ಹೋದರೆ ಆಗ ಮಾತ್ರ ಇಂಥಾ ಕಾನೂನಿನಿಂದ ಜನರಿಗೆ ಅನುಕೂಲವಾದೀತೆ ಶಿವಾಯಿ, ಇಲ್ಲದಿದ್ದರೆ ಸುಮ್ಮನೆ ಹೀಗೊಂದು ಗೇಣಿ ಕಾನೂನನ್ನು ಮಾಡಲು ಹೊರಟರೆ ಮುಂದೆ ಇದರಿಂದ ದೇಶದಲ್ಲಿ ಏನು ಪರಿಣಾಮವಾದೀತು, ಅಥವಾ ಇದರ ಅನುಕೂಲ ಪ್ರತಿಕೂಲಗಳೇನೆಂಬುದನ್ನು ಮೊದಲೇ ಸರ್ವರೂ ಕೂಲಂಕಷವಾಗಿ ಸ್ವಲ್ಪ ವಿಮರ್ಶೆ ಮಾಡತಕ್ಕದ್ದು ಆವಶ್ಯಕವಾಗಿದೆ. ಈ ಭೂವ್ಯವಸಾಯಪದ್ಧತಿ, ಗೇಣಿ ತೆರತಕ್ಕ ವಿಚಾರ ಇತ್ಯಾದಿಗಳನ್ನೆಲ್ಲಾ ಸ್ಥಳದಿಂದ ಸ್ಥಳಕ್ಕೆ ಬದಲಾವಣೆಯಾಗುತ್ತಿರುವಾಗ ದೇಶದಲ್ಲಿರತಕ್ಕ ಸ್ಥಿತಿಗಳು ಒಂದೇ ಸಮಾನವಾಗಿಲ್ಲವೆಂಬುದನ್ನು ನಾವು ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಇದನ್ನು ನಾವು ಒಪ್ಪಿಕೊಂಡ ಮೇಲೆ ಹಾಗೆ ದೇಶದ ಪರಿಸ್ಥಿತಿ ಹೆಜ್ಜೆಹೆಜ್ಜೆಗೂ ಬದಲಾವಣೆಯಾಗುತ್ತಿರುವಾಗ ನಾವು ಮಾಡಲು ಹೊರಟಿರತಕ್ಕ ಈ ಒಂದು ಕಾನೂನು ಶಾಸನವಾಗಿ, ಇದರ ಉದ್ದೇಶ ಸಫಲವಾಗತಕ್ಕ ರೀತಿಯಲ್ಲಿ ಮೇಲಿನ ಅಂಶಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಮಾಡಬೇಕಾಗಿದೆ. ಹಾಗೆ ಈ ಅಂಶಗಳನ್ನೆಲ್ಲಾ ಗಮನದಲ್ಲಿಟ್ಟುಕೊಳ್ಳದೆ ಶಾಸನ ಮಾಡಿದ್ದೇ ಆದರೆ, ಇದು ಒಂದು ಕಾದಂಬರಿ ರೂಪದಲ್ಲಿದ್ದು ಒಂದು dead letter legislation ಆಗುತ್ತದೆ.

ಉದಾಹರಣೆ ಹೇಳುವುದಾದರೆ ಮನಿ ಲೆಂಡರ್ಸ್ ಆಕ್ಟ್ ಒಂದು ಮಾಡಿದ್ದಾರೆ. ಅದು ಈ ದಿವಸ ಜಾರಿಯಲ್ಲಿದೆ. ಎಷ್ಟೋ ಜನರಿಗೆ ಅದರಿಂದ ಸುಧಾರಣೆಯಾಗಲಿ, ಅನುಕೂಲವಾಗಲಿ ಎಂದು ಅನುಭವದೃಷ್ಟಿಯಿಂದ ಮಾಡಿದರು. ಆದರೆ ನನ್ನ ಸ್ವಾನುಭವದಲ್ಲಿ ಈ ಶಾಸನದಿಂದ ಜನರಿಗೆ ಹಿತಕ್ಕೆ ಬದಲಾಗಿ ಅಹಿತವಾಗಿದ್ದೆಯೆಂದು ಹೇಳುವಾಗ ಬಹಳ ಜವಾಬ್ದಾರಿಯಿಂದ ಹೇಳುತ್ತಿದ್ದೇನೆಂದು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಈಗ ಜನರಿಗೆ ಹಣ ದೊರೆಯುವುದಿಲ್ಲ. ಏಕೆಂದರೆ ಭೋಗ್ಯ ಅಥವಾ ಆಧಾರ ಮಾಡಿದರೂ ಯಾರೂ ಹಣ ಕೊಡುವುದಕ್ಕೆ ತಯಾರಾಗಿಲ್ಲ. ಶಾಸನ ಉದ್ದೇಶವೇನೋ ಒಳ್ಳೆಯದೇ. ಆದರೂ ಪರಿಣಾಮದಲ್ಲಿ ಯಾವ ರೀತಿ ನಡೆಯುತ್ತಿದೆಯೆಂಬುದನ್ನು ದೃಷ್ಟಿಯಲ್ಲಿಟ್ಟರೆ ನಮ್ಮ ಉದ್ದೇಶಕ್ಕೆ ಭಂಗ ಬರುತ್ತಿದೆ ಎಂದು ಹೇಳಬೇಕಾಗುತ್ತದೆ. ಅದರ ಜೊತೆಗೆ ಜನರ ನೈತಿಕಮಟ್ಟ ಕೂಡ ಕಡಮೆಯಾಗಿದೆ. ಇದನ್ನೇಕೆ ಉದಾಹರಣೆ ಕೊಟ್ಟೆ ಎಂದರೆ ಅಂಥ ಶಾಸನ ಮಾಡುವಾಗ ಹಿಂದಿನ ಅನುಭವವನ್ನು ದೃಷ್ಟಿಯಲ್ಲಿಟ್ಟು ಸಂಸ್ಥಾನಾಮುಳೆ ಅದರಿಂದ ಅನುಕೂಲವಾಗಲೆಂದು ಮಾಡಿದರು. ಅದೇ ರೀತಿ ಈ ಗೇಣಿ ಶಾಸನ ಈ ದಿವಸ ಮಾಡುವಾಗ ಯಾವ ಗೇಣಿದಾರನಿಗೆ ಇದರಿಂದ ಪ್ರತಿಫಲ, ಅನುಕೂಲ ಆಗಲಿ, ಈ ದಿವಸವಿರುವ ಸ್ಥಿತಿಗಿಂತ ಉತ್ತಮ ಸ್ಥಿತಿ ಬರಬೇಕು, ಈ ದಿವಸವಿರುವ ಕಿರುಕುಳ ಹೆಚ್ಚಾಗಬಾರದು, ಅಲ್ಪಸ್ವಲ್ಪವಾದರೂ ಒಳ್ಳೆಯ ಪರಿಣಾಮವುಂಟಾಗಬೇಕು ಎಂಬ ಉದ್ದೇಶವಿಟ್ಟುಕೊಂಡು ಅದಕ್ಕೆ ಭಂಗಬಾರದಂತೆ ಈ ಒಂದು ಶಾಸನವನ್ನು ಮಾಡಬೇಕು. ಈ ಉದ್ದೇಶಕ್ಕೆ ಭಂಗ ಬರಬಾರದು ಎಂದು ತೀವ್ರವಾಗಿ ವಿಮರ್ಶೆಮಾಡಿ ಸರಿಯಾದ ಒಂದು ಕಾನೂನನ್ನು ಸದಸ್ಯರ ಮುಂದಿಡಬೇಕು ಎಂಬ ಅಭಿಪ್ರಾಯವನ್ನು ಸೂಚಿಸುತ್ತಿದ್ದೇನೆ. ಈ ಗೇಣಿ ಶಾಸನದ ಗುರಿಯೇನೆಂದರೆ ಈ ದಿವಸ ಗೇಣಿದಾರರೆಂಬುವರು ಅಕ್ಷರಸ್ಥರಲ್ಲ, ಕೇವಲ ಬಡವರು, ಅವರಿಗೆ ಇರುವ ಕಿರುಕುಳ ತಪ್ಪಿಸಬೇಕು ಎಂಬುದು ಮತ್ತೊಂದು ಉದ್ದೇಶ. ನಿಜವಾಗಿ ಗೇಣಿದಾರರಿಗೆ ಯಾವ ಆಸೆ, ವ್ಯವಸಾಯ ಮಾಡುವುದಕ್ಕೆ ಉತ್ತೇಜನ ಇರುವು

ದಿಲ್ಲ. ಈ ದಿವಸ ಕೊಟ್ಟು ನಾಳೆ ಭೂಮಿಯನ್ನು ಕಿತ್ತುಕೊಂಡರೆ ಹೇಗೆ; ನಾವು ಮಾಡಿದ್ದೆಲ್ಲಾ ನಿಷ್ಫಲವಾಗುತ್ತದೆ, ಸ್ವಲ್ಪ ಅಭಿವೃದ್ಧಿಗೆ ತಂದರೆ ಯಾವಾಗ ತಮ್ಮನ್ನು ತಪ್ಪಿಸುವರೋ ಎಂಬ ಭೀತಿಯಿದೆ. ಅದನ್ನು ತಪ್ಪಿಸಬೇಕು. ಅವನಿಗೆ ಒಂದು ನಿರ್ದಿಷ್ಟ ಕಾಲದ ವರೆಗೆ ಜಮೀನು ಸುಪರ್ದಿನಲ್ಲಿರಬೇಕು. ಹಾಗಿರುವುದರಿಂದ ಅವನಿಗೆ ಆಸೆ ಹೆಚ್ಚಿ ಚೆನ್ನಾಗಿ ವ್ಯವಸಾಯ ಮಾಡಲು ಸಾಧನೆಯಾಗುತ್ತದೆ ಎಂಬುದು ಎರಡನೆಯದು.

ಮೂರನೆಯದು ಏನೆಂದರೆ ಭೂಮಿಯನ್ನು ಸಾಗುವಳಿ ಮಾಡದೆ ಜಮೀನು ವಿಕ್ರಯವಾಗುವ ಸಂದರ್ಭದಲ್ಲಿ ಆ ಜಮೀನಿಗೆ ಅವನೇ ಒಡೆಯನಾಗುವುದಕ್ಕೆ ಸಂಪೂರ್ಣ ಅವಕಾಶವಿರಬೇಕು ಎಂಬುದು. ಈ ಮೂರು ಅಂಶಗಳನ್ನು ಸಾಧಿಸುವುದಕ್ಕೆ ನಾನಾ ತರಹ ಕಾನೂನುಗಳು ಎಲ್ಲಾ ದೇಶಗಳಲ್ಲೂ ಈಗಾಗಲೇ ಆಗಿವೆ. ಅದರಲ್ಲೂ ನಮ್ಮ ಭರತಖಂಡದಲ್ಲಿ ಮೊಟ್ಟಮೊದಲು ಈ ಶಾಸನ ಬಂದಿರುವುದು ಜಮೀನ್ದಾರಿಯಿರುವ ಪ್ರದೇಶಗಳಲ್ಲಿ. ನಮ್ಮಲ್ಲಿ ಜಮೀನ್ದಾರಿ, ರೈತವಾರಿ ಮತ್ತು ಮೂರನೆಯದಾಗಿ ಜಮೀನು ಸಾಗುವಳಿ ಮಾಡಿಸುವುದು ಈ ರೀತಿ ಮೂರು ಪದ್ಧತಿಗಳಿವೆ. ಜಮೀನ್ದಾರಿಯಿರುವ ಕಡೆ ಈ ಗೇಣಿ ಶಾಸನಕ್ಕೆ ತೀವ್ರವಾದ ಆವಶ್ಯಕತೆಯಿತ್ತು. ಕಾರಣ ಇಷ್ಟೆ. ಭೂಮಿಯನ್ನು ಉಳುವ ರೈತನಿಗೆ ಈಗಿರುವ ಕಿರುಕುಳ ಹೋಗಬೇಕು, ಜನರು ಬಡವರನ್ನು ಶೋಷಣೆಮಾಡುವುದು ಬಹಳ ಹೆಚ್ಚಿದೆ, ಅದನ್ನು ತಪ್ಪಿಸಬೇಕು, ಆದ್ದರಿಂದ ಗೇಣಿ ಶಾಸನ ಇರಬೇಕಾದ್ದು ಆವಶ್ಯಕ. ಇನ್ನು ರೈತವಾರಿ ಪದ್ಧತಿಯಲ್ಲಿ ಭೂಸ್ವಾಮ್ಯ ಪಡೆದಿರುವವನಿಗೂ ಸರ್ಕಾರಕ್ಕೂ ಮಧ್ಯವರ್ತಿಯಾದ ಜನರು ವಿಶೇಷವಾಗಿಲ್ಲ. ಅದರಲ್ಲಿರುವ ಮಧ್ಯವರ್ತಿ ಜನರು ಇನಾಂದಾರರು ಮತ್ತು ಜಹಗೀರುದಾರರು. ಇವರು ಹೋಗಬೇಕೆಂದು ಒಂದು ಉದಾತ್ತ ಧ್ಯೇಯದಿಂದ ಸರ್ಕಾರದವರು ಈಗಾಗಲೇ ಬೇರೆ ಶಾಸನ ಮಾಡಿದ್ದಾರೆ. ಆ ಶಾಸನ ಜಾರಿಗೆ ಬಂದರೆ ಮಧ್ಯವರ್ತಿ ಜನರು ಹೋಗುತ್ತಾರೆ. ಅಂದ ಮೇಲೆ ಇನ್ನು ದೇಶದಲ್ಲಿ ಸರ್ಕಾರ ಮತ್ತು ಜಮೀನ್ದಾರ ಎರಡೇ ಉಳಿದಿರುವುದು. ಮೂರನೆಯವನು ಜಮೀನು ಸಾಗುವಳಿ ಮಾಡುವವನು. ಸರ್ಕಾರ, ಜಮೀನ್ದಾರ ಮತ್ತು ಸಾಗುಮಾಡುವವನು ಈ ಮೂವರಿಗೂ ಸರಿಹೋಗುವಂಥ ಒಂದು ಸುವ್ಯವಸ್ಥಿತವಾದ, ಒಂದು ಒಳ್ಳೆಯ ಸುಭದ್ರವಾದ ಬಾಂಧವ್ಯವಿದ್ದರೆ ದೇಶಕ್ಕೆ ಏಳಿಗೆಯೇ ವಿನಾ ಇದರಲ್ಲಿ ಯಾರಿಗೆ ಯಾವ ವಿಧವಾದ ತೊಂದರೆಯಾದರೂ ದೇಶ ಏಳಿಗೆಯಾಗುವುದಿಲ್ಲ; ಭೂಮಿಯು ಸಾಗಾಗುವುದಿಲ್ಲ. ಇದರಲ್ಲಿ ಒಂದು ಅಂಶ ಮಾನ್ಯ ಸದಸ್ಯರಿಗೆ ಸೂಚಿಸಬೇಕಾಗಿದೆ. ಈಗ ನಾನು ಮಾತನಾಡುವಾಗ ಯಾರನ್ನೂ ವಹಿಸಿ, ಯಾರ ಹಿತದೃಷ್ಟಿಯಿಂದಲೂ ಏನೂ ಹೇಳುತ್ತಿಲ್ಲ. ಒಟ್ಟು ಎಲ್ಲರ ಹಿತದೃಷ್ಟಿಯಿಂದ ಮಾತನಾಡುತ್ತಿದ್ದೇನೆ. ಆದ್ದರಿಂದ ಏನೋ ಒಂದು ಆಸೆಯಿದೆ, ಜಮೀನ್ದಾರರ ಪರವಾಗಿ ಅಥವಾ ಇತರರ ಪರವಾಗಿ ಮಾತನಾಡುತ್ತಿದ್ದಾರೆ ಎಂದು ಯಾರೂ ತಪ್ಪು ಭಾವನೆ ಇಟ್ಟುಕೊಳ್ಳಬಾರದು. ನಾನೂ ಒಬ್ಬ ಸ್ವಂತ ಸಾಗುವಳಿದಾರ. ಜಮೀನ್ದಾರರು ಸಾಗುವಳಿದಾರರಾಗಿರುವುದಕ್ಕೂ ಅವಕಾಶವುಂಟು ಎಂಬುದನ್ನು ಸದಸ್ಯರು ಒಪ್ಪಿಕೊಳ್ಳಬೇಕು.

ನಮ್ಮ ದೇಶದಲ್ಲಿ ಎಷ್ಟು ಜನ ಜಮೀನ್ದಾರರಿದ್ದಾರೆ, ಎಷ್ಟು ಜನ ಗೇಣಿದಾರರಿದ್ದಾರೆ, ಎಷ್ಟು ಜನ ಆಬ್ಸೆಂಟಿ ಲ್ಯಾಂಡ್ ಲಾರ್ಡ್ಸ್ ಇದ್ದಾರೆ, ಎಷ್ಟು ಜನ ಸ್ವಂತ ಸಾಗುಮಾಡುವವರಿದ್ದಾರೆ ಎಂದು ಅಂಕಿ ಅಂಶಗಳನ್ನಿಟ್ಟುಕೊಂಡು ಇಂಥ ಕಾಲದಲ್ಲಿ ವಿಮರ್ಶೆಮಾಡುವುದು ತುಂಬಾ ಆವಶ್ಯಕ. ಏಕೆಂದರೆ ಈ ದಿವಸ ಯಾವ ಶಾಸನ ಮಾಡಬೇಕಾದರೂ ಅದರ ತೀವ್ರತೆಯೆಷ್ಟಿರಬೇಕು, ಅದರ ಆವಶ್ಯಕತೆಯೆಷ್ಟು, ಯಾವ ರೀತಿ ಜನರ ಶೋಷಣೆಯಾಗಿ ತೊಂದರೆಯಾಗುತ್ತಿದೆ ಎಂಬುದನ್ನು ದೃಷ್ಟಿಯಲ್ಲಿಡಬೇಕು. ಅದು ಅತ್ಯಾವಶ್ಯಕ. ಈ ಸಂದರ್ಭದಲ್ಲಿ ಒಂದೆರಡು ಅಂಕಿ ಅಂಶಗಳಿದ್ದರೆ ಬಹುಶಃ ಅನೇಕರು ಚಕಿತರಾಗಬಹುದು. ಮೈಸೂರು ಸಂಸ್ಥಾನದಲ್ಲಿ 12,99,225 ಜನ ಹಿಡುವಳಿದಾರರಿದ್ದಾರೆ. ಅವರ ಹತ್ತಿರ ಇರುವ

(ಶ್ರೀ ಎಚ್. ಎಂ. ಚನ್ನಬಸಪ್ಪನವರು).

ಜಮೀನು 8,14,035 ಎಕರೆ. 1944-45ರಲ್ಲಿ ಆ ರೀತಿ ಇತ್ತು. ಈ ದಿವಸ 8,83,000 ಎಕರೆ ಸುಮಾರು 13 ಲಕ್ಷ ಜನರ ಸುಪರ್ಧಿನಲ್ಲಿದೆ. ಅವರ ಪೈಕಿ ಒಂದು ಎಕರೆಗಿಂತ ಕಡಮೆ ಇಟ್ಟು ಕೊಂಡಿರುವವರು 2 ಲಕ್ಷ 35 ಸಾವಿರ ಜನ, ಒಂದರಿಂದ 5 ಎಕರೆವರೆಗೆ ಹೊಂದಿರುವವರು 7 ಲಕ್ಷ ಚಿಲ್ಲರೆ, 5 ರಿಂದ 10 ಎಕರೆವರೆಗೆ ಇರುವವರು 2 ಲಕ್ಷ 72 ಸಾವಿರ ಜನ, 10 ರಿಂದ 20 ಎಕರೆವರೆಗೆ ಒಂದು ಲಕ್ಷ 50 ಸಾವಿರ ಜನ, 50 ರಿಂದ 100 ಎಕರೆವರೆಗೆ 12 ಸಾವಿರ ಚಿಲ್ಲರೆ; 100 ರಿಂದ 500 ಎಕರೆವರೆಗೆ 3,605 ಜನ, 500 ಎಕರೆಗೆ ಮೇಲ್ಪಟ್ಟು ಇರುವವರು 104 ಜನ. ಈ ರೀತಿಯಾಗಿ ನಮ್ಮ ದೇಶದಲ್ಲಿ ಜಮೀನು ಹಂಚಿಕೆಯಾಗಿದೆ. ಇದನ್ನೇಕೆ ಹೇಳುವುದೆಂದರೆ ಭಾರಿ ಜಮೀನ್ದಾರರು ಎಂಬುವರು ನಮ್ಮ ದೇಶದಲ್ಲಿ ಎಷ್ಟು ಜನ ಇದ್ದಾರೆ, ಅವರ ಪರ್ಸೆಂಟೇಜ್ ಏನು ಎಂಬುದನ್ನು ದೃಷ್ಟಿಯಲ್ಲಿಡಬೇಕು. ಇದನ್ನು ನೋಡಿದರೆ ಭಾರಿ ಜಮೀನುಗಳನ್ನಿಟ್ಟುಕೊಂಡು ವ್ಯವಸಾಯ ಮಾಡಿ ಬೆಳೆಯುವರು ಹೆಚ್ಚಾಗಿಲ್ಲ ಎಂಬುದು ಅಂಕಿ ಅಂಶಗಳಿರಿದ ತಮಗೆ ವ್ಯಕ್ತವಾಗುತ್ತದೆ.

ಅದೇನೆಂದರೆ ನಮ್ಮ ದೇಶದಲ್ಲಿ 12 ಲಕ್ಷದ 99 ಸಾವಿರ ಜಮೀನ್‌ದಾರರ ಪೈಕಿ ಎಷ್ಟು ಜನ ಸ್ವಂತ ಸಾಗುವಳಿಮಾಡುತ್ತಾರೆ, ಎಷ್ಟು ಜನ (absentee landlords) ಊರಿನಲ್ಲಿಲ್ಲದೆ ಯಾರಿಗೋ ಜಮೀನು ಕೊಟ್ಟು ಜೀವನಮಾಡುತ್ತಾರೆ ಎಂಬ ಅಂಶವನ್ನು ಕೇಳಿದರಂತೂ ತಾವುಗಳು ಬಹಳ ಚಕಿತರಾಗುತ್ತೀರಿ. ಮೈಸೂರು ಸಂಸ್ಥಾನದಲ್ಲಿ ವ್ಯವಸಾಯ ಮಾಡತಕ್ಕ ಒಟ್ಟು 12 ಲಕ್ಷ ಚಿಲ್ಲರೆ ಜನಗಳಲ್ಲಿ ಸ್ವಂತ ಸಾಗುವಳಿ ಮಾಡತಕ್ಕಂಥ ಹಿಡುವಳಿದಾರರು ಪ್ರತಿ ಒಂದು ನೂರು ಜನಗಳಿಗೆ 91 ಜನ. ಇದನ್ನು ತಾವು ಕೇಳಿ ಆತ್ಯಾಶ್ಚರ್ಯ ಪಡುತ್ತಿದ್ದೀರಿ. ಇನ್ನು ಗೇಣಿಮಾಡಿ ಜೀವನ ಮಾಡತಕ್ಕವರು ಎಂದರೆ ಕೇವಲ 7½%. ಇನ್ನುಳಿದ ಕೇವಲ 1½% ಸಾಗುವಳಿ ಮಾಡದೆ ಜಮೀನನ್ನು ಯಾರಿಗೋ ಕೊಟ್ಟು ಜೀವನ ಮಾಡತಕ್ಕ absentee landlords. ಆದ್ದರಿಂದ ಈ ಗೇಣಿ ಸಮಸ್ಯೆ ಎಷ್ಟು ಕೇವಲ ಅಪ್ರಾಮುಖ್ಯವಾದದ್ದು ಎಂಬುದು ಇದರಿಂದ ಗೊತ್ತಾಗುತ್ತದೆ. ತಾವು ಬಾಕಿ ದೇಶದಲ್ಲಿ ಎಷ್ಟೆಷ್ಟಿದೆ ಎಂದು ಕೇಳಬಹುದು. ಬೊಂಬಾಯಿನಲ್ಲಿರತಕ್ಕ ಗೇಣಿ ಕಾನೂನು ಅತ್ಯಗತ್ಯ ಎಂದು ಹೇಳುತ್ತೀರಲ್ಲಾ ಅವರ ಅಂಕಿ ಅಂಶ ಕೊಡುತ್ತೇನೆ. ಬೊಂಬಾಯಿ ಪ್ರಾಂತ್ಯದಲ್ಲಿ 52½% ಟಿನೆಂಟ್ ಕಲ್ಟಿವೇಟರ್ಸ್ ಇದ್ದಾರೆ. ಅದೇ ಮೈಸೂರು ಸಂಸ್ಥಾನದಲ್ಲಿ 7½%, ಮದರಾಸಿನಲ್ಲಿ 21·9%, ಕೊಚ್ಚಿನಲ್ಲಿ 49% ಅಂದ ಮೇಲೆ ನಮ್ಮ ದೇಶದಲ್ಲಿ ಗೇಣಿ ಸಮಸ್ಯೆ ಅಷ್ಟು ಕಠಿಣವಾದದ್ದಲ್ಲಿ, ಗಮನಾರ್ಹವಾದದ್ದಲ್ಲ ಎಂಬುದನ್ನು ಹೇಳುವುದಕ್ಕೆ ಅಂಕಿ ಅಂಶ ಕೊಟ್ಟೆ. ಪರಿಸ್ಥಿತಿ ಹೀಗಿರುವಾಗ ಇಲ್ಲಿ ಗೇಣಿ ಕಾನೂನಿನ ಅವಶ್ಯಕತೆ ಎಷ್ಟುಮಟ್ಟಿಗಿದೆಯೆಂಬುದನ್ನು ಪರಿಶೀಲನೆ ಮಾಡಬೇಕೆಂಬುದಾಗಿ ನೇಮಕವಾಗಿದ್ದ ಭೂ ಸುಧಾರಣಾ ಸಮಿತಿಯವರು ಈ ವಿಷಯದಲ್ಲಿ ಬಹಳ ತೀವ್ರವಾದ ಆಸಕ್ತಿಯನ್ನು ಹೊಂದಿ ಚೆನ್ನಾಗಿ ಪರಿಶೀಲನೆಮಾಡಿದರು. ಆಗ್ಯೆ ಗೇಣಿದಾರರ ಪ್ರತಿನಿಧಿಗಳನ್ನು ಕರೆಸಿಕೊಂಡಿದ್ದರು, ಮಲೆನಾಡಿನಲ್ಲಿ ಗೇಣಿ ಕಾನೂನು ಅತ್ಯಾವಶ್ಯಕ ಎಂಬ ಪ್ರತಿಪಾದನೆ ಇವತ್ತು ತೀವ್ರವಾಗಿ ಆಗುತ್ತಾ ಇದೆ. ಅಲ್ಲಿನ ಗೇಣೀದಾರರು ಮತ್ತು ಜಮೀನ್‌ದಾರರನ್ನು ಕಂಟು ವಿಷಯ ವಿಮರ್ಶೆಮಾಡಿದಾಗ ಒಂದು ಮುಖ್ಯಾಂಶ ಹೊರಬಿತ್ತು. ಅದೇನೆಂದರೆ, ಅಲ್ಲಿನ ಜನರ ಪರಿಸ್ಥಿತಿ ಹೇಗಿದೆಯೆಂದರೆ ಸದ್ಯ ಗೇಣಿದಾರರು ಎಲ್ಲಿದ್ದರೂ ಕರೆದುಕೊಂಡು ಬಂದು ಅವರ ಹಿತವನ್ನು ಸಾಧನೆಮಾಡಿಕೊಂಡು ಜಮೀನ್‌ದಾರರು ತಮ್ಮ ಉಪಯೋಗಕ್ಕೆ ಇಟ್ಟುಕೊಳ್ಳಬೇಕಾದ ಪರಿಸ್ಥಿತಿ ಇದೆಯೇ ಹೊರತು ಗೇಣೀದಾರರ ಶೋಷಣೆ ಮಾಡಬೇಕೆಂಬ ಪರಿಸ್ಥಿತಿ ಇಲ್ಲ. ಕಾರಣ ಇಷ್ಟೆ. ಗೇಣೀದಾರರಿಗೆ ಅವರ ಮೇಲೆ ಸ್ವಲ್ಪ ಆಗ್ರಹ ಬಂದಿತೆಂದರೆ ಅವರ ಜಮೀನೇ ಪಾಳು ಬೀಳುತ್ತದೆ. ಆ ಪರಿಸ್ಥಿತಿ ಮಲೆನಾಡಿನಲ್ಲಿದೆ. ಈ ಅಂಶ ಅಲ್ಲಿ ಮಲೆನಾಡಿನ ಜನರನ್ನು ವಿಚಾರಮಾಡಿದಾಗ ಹೊರಬಿತ್ತು. ಇದರ ಜೊತೆಗೆ ನಾನೂ

ಕೂಡ ಮಲೆನಾಡು ಪ್ರಾಂತ್ಯದಲ್ಲಿ ಈ ವಿಚಾರ ವಿಮರ್ಶೆಮಾಡಿದಾಗ ನನಗೂ ಸಂಪೂರ್ಣ ಮನ ವರಿಕೆಯಾಗಿದೆ. ಮಲೆನಾಡಿನಲ್ಲಿರತಕ್ಕ ಜಮೀನ್‌ದಾರರಾಗಲೀ, ಗೇಣೀದಾರರಾಗಲೀ ಆತ್ಮ ವಂಚನೆಮಾಡಿಕೊಳ್ಳದಿದ್ದರೆ ಈ ಅಭಿಪ್ರಾಯಕ್ಕೆ ಮನ್ನಣೆ ಕೊಡಬೇಕು. ಅಂದಮೇಲೆ ಮಲೆ ನಾಡಿನವರು ಏಕೆ ಇಷ್ಟು ತೀವ್ರವಾದ ಆಸಕ್ತಿಯಿಂದ ಗೇಣಿ ಶಾಸನವಾಗಬೇಕೆಂದು ಕೇಳು ತ್ತಾರೆ ಎಂದರೆ ನಾನು ತಿಳಿದುಕೊಂಡಿರುವುದ ರಲ್ಲಿ ಗೇಣಿ ಜಮೀನು ಏನುಮಾಡುತ್ತಾ ಇದ್ದಾರೋ ಆ ಭೂಮಿಯ ಸ್ವಾಮ್ಯ ಅವರಿಗೆ ದೊರಕುತ್ತದೆ ಎಂಬ ಭಾವನೆ ಅವರಲ್ಲಿ ಇದೆ. ಈ ಒಂದು ತಪ್ಪು ಅಭಿಪ್ರಾಯ ಜನ ಅವರ ತಲೆಯೊಳಗೆ ತುಂಬಿದ್ದರಿಂದ ಸ್ವಲ್ಪ ತಿಳಿವಳಿಕೆ ಕಮ್ಮಿ ಆಗಿರುವ ಆ ಜನಗಳು ಹೀಗೆ ಹೇಳುವವರ ಮಾತು ಕೇಳಿಕೊಂಡು ಈ ರೀತಿ ಮಾಡಿದರೆ ಭೂಮಿಯ ಸ್ವಾಮ್ಯ ಬರಬಹುದು ಎಂಬ ಆಶೆ, ಆಕಾಂಕ್ಷೆಯಿಂದ ಹೀಗೆ ಮಾಡಬೇಕೆಂದು ಹೇಳು ತ್ತಿದ್ದಾರೆ. ಈ ಒಂದು ಅವ್ಯವಸ್ಥೆಗೆ ಕಾರಣ ವಾಗಿದೆ ಅಷ್ಟೇ ಹೊರತು ಮತ್ತೆ ಬೇರೆ ಅಲ್ಲ. ಈ ಸಭೆಯಲ್ಲಿ ನಿಷ್ಕಲ್ಮಷ ಮನಸ್ಸಿನಿಂದ ನಾನು ತಿಳಿಸಲಿಚ್ಛಿಸುತ್ತೇನೆ. The tiller of the soil should be the owner of the land. ಪ್ರತಿಯೊಬ್ಬ ಮನುಷ್ಯನೂ ಸಾಧ್ಯವಾದಷ್ಟು ಪ್ರಯತ್ನಮಾಡಿ ತನಗಿರತಕ್ಕ ಭೂಮಿಯನ್ನು ಹೆಚ್ಚು ಪ್ರಯೋಜನಕಾರಿಯಾಗಿ ದೇಶಕ್ಕೆ ಉಪಯೋಗಮಾಡಬೇಕೆಂದು ಹೇಳು ವವರಲ್ಲಿ ನಾನೂ ಒಬ್ಬ.

Sri K. R. SREEKANTESWAR.—That comes under Zamindari Abolition Bill.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ತಮಗೆ ಜಮೀನ್‌ದಾರಿ ಅಂದರೆ ಏನು ಗೊತ್ತು, ಗೇಣಿ ಅಂದರೆ ಏನು ಗೊತ್ತು, ಬೆಳೆ ಅಂದರೆ ಏನು ಗೊತ್ತು; ಎಷ್ಟುಮಟ್ಟಿಗೆ ಗೊತ್ತಿದೆ; ಗೊತ್ತಿದೆಯೇ ಇಲ್ಲವೇ ಎಂಬುದನ್ನು ಈಗ ನಾನು ಹೇಳುವುದಕ್ಕೆ ಸಿದ್ಧವಾಗಿಲ್ಲ. ತಾವು ಈ ಶಾಸನದ ಮೇಲೆ ಭಾಷಣಮಾಡಿ ಅಂಕಿ ಅಂಶಗಳಿಂದ ಆಧಾರ ಕೊಟ್ಟು ನಮ್ಮ ಮನಸ್ಸು ಒಲಿಸಿಕೊಳ್ಳುವುದಕ್ಕೆ ಪ್ರಯತ್ನಪಟ್ಟಾಗ ನಿಮ್ಮ ಅಳತೆ ಎಷ್ಟಿದೆ ಎಂಬುದನ್ನು ಅಳತೆಮಾಡುತ್ತೇನೆ. ನಾನು ಒಂದು ವಿಷಯದಲ್ಲಿ ತಮ್ಮ ಬಗ್ಗೆ ಅಭಿ ಪ್ರಾಯ ಉಳ್ಳವನಾಗಿದ್ದೇನೆ. ಅದೇನೆಂದರೆ ತಮ್ಮ ಪ್ರೊಫೆಷನ್ ಏನಿದೆ ಡೆಂಟಿಸ್ಟ್ ಅದರಲ್ಲಿ ತಾವು ಅಗ್ರಗಣ್ಯರು ಎಂಬುದನ್ನು ಒಪ್ಪಿಕೊಳ್ಳು ತ್ತೇನೆ. (ಹಲ್ಲು ಕೀಳುವುದರಲ್ಲಿ!) ಆದ್ದರಿಂದ ಇವತ್ತಿನ ದಿನ ಶಾಸನಮಾಡುವುದಕ್ಕೆ ಹೊರಟಿರುವಾಗ ನಮ್ಮಲ್ಲಿರತಕ್ಕ ಈ ಗೇಣೀ ಸಮಸೆ ಇತರ ಕಡೆಗಳಲ್ಲಿರತಕ್ಕ ಗೇಣೀ ಸಮಸ್ಯೆಯಷ್ಟು ಉಗ್ರವಾಗಿಲ್ಲವೆಂದು ಹೇಳುವುದಕ್ಕೆ ಇಷ್ಟಪಡು ತ್ತೇನೆಯೇ ಹೊರತು ಗೇಣೀ ಶಾಸನ ಕೂಡದು, ಗೇಣೀದಾರರ ಪರಿಸ್ಥಿತಿ ಉತ್ತಮ ಮಾಡ ಕೂಡದು ಅಥವಾ ಅವರನ್ನು ಜಮೀನ್‌ದಾರ ರಾಗಿ ಮಾಡಕೂಡದು ಎಂಬ ಸಂಕುಚಿತ ಮನೋಭಾವವುಳ್ಳವನಾಗಿದ್ದೇನೆ ಎಂದು ತಿಳಿದು ಕೊಂಡಿದ್ದರೆ ಅದು ತಪ್ಪು ಅದನ್ನು ಬಿಟ್ಟುಬಿಡ ಬೇಕೆಂದು ಹೇಳುತ್ತೇನೆ.

ಈಗ ಜಮೀನು ಇಲ್ಲದವರಿಗೆ ಜಮೀನಿನ ಅಗ ತ್ಯತೆ ಇದೆ ಎಂದು ಹೇಳತಕ್ಕವರಲ್ಲಿ ನಾನೂ ಒಬ್ಬ. ಆದರೆ ಅಲ್ಲಿನ ಪರಿಸ್ಥಿತಿ ಏನಾಗಿದೆ ಎಂದರೆ ಲಕ್ಷಾಂತರ ಎಕರೆ ಜಮೀನು ಪಾಳು ಬಿದ್ದಿದೆ, ಉಳುವವರೇ ಇಲ್ಲ. ಹಣಕೊಡು ತ್ತೇವೆ; ಜಮೀನು ಕೊಡುತ್ತೇವೆ, ಮನೆ ಕಟ್ಟಿ ಕೊಳ್ಳಲಿಕ್ಕೆ ದುಡ್ಡು ಕೊಡುತ್ತೇವೆ, ಏನು ಅನು ಕೂಲಬೇಕೋ ಅದನ್ನು ಕೊಡುತ್ತೇವೆ, ಬನ್ನಿ, ಮನೆಕಟ್ಟಿಕೊಂಡು, ಜಮೀನು ಸಾಗುವಳಿ ಮಾಡಿ, ಇನ್ನೊಬ್ಬರ ಹೊಲ ಉತ್ತು ಅವರ ಹೊಟ್ಟೆ ದೊಡ್ಡದು ಮಾಡುವುದಕ್ಕೆ ಬದಲಾಗಿ ನೀವೇ ಜಮೀನ್‌ದಾರರಾಗಿ ಎಂದು ಆಶ್ವಾಸನ ಕೊಟ್ಟಾಗ್ಯೂ ಅವರಿಗೆ ನೂರಾರು ವರ್ಷಗಳಿಂದ ಮಾಡುತ್ತಾ ಇರತಕ್ಕ ಇತರರ ಜಮೀನೇ ಆಗ ಬೇಕು. ಇದು ಏನು ತೋರಿಸುತ್ತದೆ ಅಂದರೆ ಜನಗಳಲ್ಲಿ ತಪ್ಪು ಭಾವನೆಗಳನ್ನು ಅಂಕುರ ಮಾಡಿರುವುದರಿಂದ ಅವರಲ್ಲಿ ಆ ಭಾವನೆ ಬಂದಿದೆ. ಅಲ್ಲಿ ಗೇಣಿಗೆ ಎಷ್ಟಿದೆ ಎಂದು ಕೇಳ ಬಹುದು. ಎಂಟರಿಂದ 12 ಪಲ್ಲ ಬೆಳೆಯತಕ್ಕ ವನಿಗೆ ಒಂದು ಅಥವಾ ಹೆಚ್ಚೆಂದರೆ ಎರಡು

(ಶ್ರೀ ಎಚ್. ಎಂ. ಚನ್ನಬಸಪ್ಪನವರು).
ಪಲ್ಲಾ. ಇದನ್ನು ಅಂಕಿ ಅಂಶಗಳಿಂದ ಸ್ಥಿರ ಪಡಿಸುವುದಕ್ಕೆ ಸಿದ್ಧವಾಗಿದ್ದೇನೆ. ಮೈಸೂರಿನಲ್ಲಿ, ಅಷ್ಟೇಕೆ ಇದೇ ಪ್ರಪಂಚದಲ್ಲಿ ಇಷ್ಟು ಕಮ್ಮಿ ಪ್ರಮಾಣದ ಗೇಣಿ ಇನ್ನೆಲ್ಲೂ ಇಲ್ಲ. ಅಂಕಿ ಅಂಶಗಳನ್ನು ತೆಗೆದು ನೋಡಿದರೆ ಇಟಲಿ, ಜರ್ಮನಿ, ಇಂಗ್ಲೆಂಡ್, ಅಮೆರಿಕಾ ಇಲ್ಲೆಲ್ಲೂ ಇಲ್ಲ.

ಅಲ್ಪ ಸ್ವಲ್ಪ ಮಂದಿ ತೊಂದರೆ ಕೊಡುವಂಥವರು, ಕಿರುಕುಳಕೊಡುತ್ತಿರುವವರು, ಶೋಷಣೆ ಮಾಡುತ್ತಿರುವವರು ಜಮೀನ್ದಾರರುಗಳಿರಬಹುದು. ಆದರೂ ಇಷ್ಟು ಹೇಳಬಹುದು: ಇವತ್ತಿಗೂ ಸತ್ಯ, ಧರ್ಮ ಎಂಬುದೇನಾದರೂ ಕೊಂಚ ಉಳಿದಿದ್ದರೆ ಅದು ಹಳ್ಳಿಗಳಲ್ಲಿರತಕ್ಕ ಗೇಣಿದಾರರಲ್ಲಿ ಮತ್ತು ಜಮೀನ್ದಾರರಲ್ಲಿ ಎಂದು ಹೇಳಬಲ್ಲೆ. ಇಲ್ಲದಿದ್ದರೆ ಇಷ್ಟುಹೊತ್ತಿಗೆ ಎಷ್ಟೊ ಹೊಡೆದಾಟಗಳಾಗುತ್ತಿದ್ದುವು.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಗೇಣಿದಾರರು ಜರ್ಮನಿಯಲ್ಲೂ ಇದ್ದಾರೋ ?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—I will come to that. Do not think that I am standing here without facts. I have got authorities to quote and give you facts and figures. I am not a man to speak with a shallow knowledge. ಜರ್ಮನಿಯಲ್ಲೇನಿದೆ, ಇಟಲಿಯಲ್ಲೇನಿದೆ, ಜೆಕೋಸ್ಲೋವೇಕಿಯಾದಲ್ಲೇನಿದೆ, ರಷ್ಯಾದಲ್ಲೇನಿದೆ, ಜಪಾನಿನಲ್ಲೇನಿದೆ, ಸ್ಕಾಂಡಿನೇವಿಯದಲ್ಲೇನಿದೆ—ಎಲ್ಲವನ್ನೂ ಬೇಕಾದರೆ ಹೇಳುತ್ತೇನೆ. ಆದರೆ ಅಧ್ಯಕ್ಷರು ಕಾಲಾವಕಾಶ ಕೊಡಬೇಕು ಅಷ್ಟೆ. ಆದ್ದರಿಂದ ರಷ್ಯಾದಲ್ಲಿ, ಚೈನಾದಲ್ಲಿ ಮಳೆ ಬೀಳುತ್ತದೆ, ಕೊಡೆ ಹಿಡಿಯಿರಿ ಎಂದು ಹೇಳಿದರೆ ಇಲ್ಲಿಯೂ ಕೊಡೆ ಹಿಡಿಯಿರಿ ಎಂದರೆ ಮೂರ್ಖ ಎನ್ನುತ್ತಾರೆ. ಯಾವ ಯಾವ ಸ್ಥಳದಲ್ಲಿ ಏನು ಪರಿಸ್ಥಿತಿಯಿದೆ ಅದಕ್ಕೆ ಸರಿಯಾಗಿ ಹೊಂದಿಕೊಳ್ಳುವ ರೀತಿಯಲ್ಲಿ, ಪ್ರಗತಿ ಮಾರ್ಗದಲ್ಲಿ ಮುನ್ನಡೆಯುವ ರೀತಿಯಲ್ಲಿ, ಶೋಷಣೆ ಕಡಿಮೆಯಾಗುವ ರೀತಿಯಲ್ಲಿ ಜನರ ನೀತಿ ಧರ್ಮಗಳನ್ನು ಪರಿಪಾಲನೆಮಾಡುವ ರೀತಿಯಲ್ಲಿ ನಾವು ಶಾಸನ ಮಾಡಬೇಕೇ ವಿನಾ ಎಲ್ಲೋ ಏನೋ ಆಗುತ್ತದೆಂದು ಹೇಳಿ ನಾವು ಅವರು ಹೇಳಿದಂತೆ, ಅವರು ಮಾಡಿದಂತೆ ಮಾಡುವುದಕ್ಕೆ ಹೊರಡುವುದು "ನವಿಲು ಜಾಗರ್‌ವಾಡುತ್ತದೆಂದು ಹೇಳಿ ಕೆಂಬೂತ ಪುಕ್ಕ ತರದುಕೊಂಡ ಹಾಗಾಗುತ್ತದೆ" ಅಷ್ಟೆ.

ಒಟ್ಟಿನಲ್ಲಿ ಹೇಳುವುದಾದರೆ, ಗೇಣಿದಾರರ ಪರಿಸ್ಥಿತಿ ನಮ್ಮ ದೇಶದಲ್ಲಿ ಅಷ್ಟು ಕನಿಷ್ಠವಾಗಿಲ್ಲವೆಂದು ಹೇಳುವುದಕ್ಕೆ ಸಾಕಾದಷ್ಟು ಆಧಾರಗಳಿವೆ. ಹಾಗೊಂದುವೇಳೆ ನಿಜವಾಗಿಯೂ ಇದ್ದ ಪಕ್ಷದಲ್ಲಿ ಇಷ್ಟು ಹೊತ್ತಿಗೆ ಬೇಕಾದಷ್ಟು ಕಡೆಗಳಿಂದ ಪ್ರತಿಭಟನೆ ಬರುತ್ತಿತ್ತು. ಈಗ ಸರ್ವಸಾಮಾನ್ಯವಾಗಿ ಎಕರೆಯೊಂದಕ್ಕೆ 8, 9, 10, 12, 15 ಪಲ್ಲಗಳವರೆಗೂ ಗೇಣಿ ಕೊಡುವ ಕರಾರುಗಳು ನಮ್ಮಲ್ಲಿ ಜಾರಿಯಲ್ಲಿವೆ. ಇದು ಅವರಿಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಏಕೆಂದರೆ, ಕೇವಲ 75 ಸೇರು—100 ಸೇರುಗಳಿಗೆ ಬಹಳ ಉಗ್ರವಾದ ಪರಿಸ್ಥಿತಿಯೆಂದು ಹೇಳಿದಮೇಲೆ ಅವರಿಗೆ ವಾಸ್ತವಿಕ ವಿದ್ಯಮಾನಗಳೇನೂ ಗೊತ್ತಿಲ್ಲವೆಂದೇ ಹೇಳಬೇಕು. ನಾನು ನೋಡಿರುವಂತೆ ಗೇಣಿ 15 ಪಲ್ಲಗಳವರೆಗೂ ಇದೆ. ಅಂದಮೇಲೆ ಇನ್ನೂ ಎಷ್ಟರಮಟ್ಟಿಗೆ ಶೋಷಣೆಯಾಗುತ್ತಿರಬಹುದೆಂದು ಯೋಚನೆ ಮಾಡಿ! ವಾಸ್ತವವಾಗಿಯೂ ಇದು ಶೋಷಣೆಯೇ ಆಗಿದ್ದರೆ ಇವತ್ತಿನ ದಿವಸ ಮೈಸೂರು ದೇಶದಲ್ಲಿ ಈಗಿನ ಶಾಂತಿ ವಾತಾವರಣವಿರುತ್ತಿರಲ್ಲಿಲ್ಲ. ಅವರು 15 ಪಲ್ಲಾ ಕೊಟ್ಟೂ ವ್ಯವಸಾಯ ಮಾಡುವುದಕ್ಕೆ ಬರುವುದನ್ನು ನೋಡಿದರೇನೇ ಆ ಪರಿಸ್ಥಿತಿಯಿಲ್ಲವೆಂದು ಹೇಳಬಹುದು. ಅಂದಾಕ್ಷಣ ಗೇಣಿದಾರರಿಗೆ ಈಗ ಸ್ವಲ್ಪವಾದರೂ ರಿಯಾಯಿತಿ ಮಾಡುವುದರ ಆವಶ್ಯಕತೆಯಿಲ್ಲವೇ. ಜಮೀನ್ದಾರರು ಜಮೀನ್ದಾರರಾಗಿಯೇ, ಗೇಣಿದಾರರು ಗೇಣೀದಾರರಾಗಿಯೇ ಇರಬೇಕೇ ಎನ್ನುವುದಕ್ಕೆ ನಾನೇನೂ ಹೌದೆನ್ನುವುದಿಲ್ಲ. ಗೇಣಿದಾರರೇ ಇರಬೇಕೆಂದು ಹೇಳುತ್ತಾರೆ. ಗೇಣಿದಾರರನ್ನು ಉತ್ತಮ ಪಡಿಸಬೇಕಾದರೆ ಈಗಿ

(*b*) The above principle is applicable to Urban areas also.

Disposal of Sewage in Bangalore Municipal Corporation.

Q.—219. Sri W. H. HANUMANTHAPPA (Bangalore District—General).—

Will the Government be pleased to state :—

(*a*) the proposals and measures undertaken for disposal of sewage in the Bangalore Municipal Corporation ;

(*b*) the number of out-falls provided in the scheme referred to above ;

(*c*) the total cost of the entire scheme ;

(*d*) whether they will consider the proposed provisions adequate to meet the growing needs of the area for the coming ten years ;

(*e*) the number of gallons of water supply *per capita* that is proposed for sewage purposes ?

A.—The Hon'ble Sri R. CHENNIGARAMIAH (Minister for Local Self-Government).—

(*a*) The problem of sewage disposal in Bangalore Corporation area was got examined by a Committee in July 1950 and the Committee has made the following proposals :—

(i) Provision for preliminary treatment of sewage at various outfalls consisting of (*a*) screening, and (*b*) Sedimentation by settlement.

(ii) Secondary treatment by land-irrigation if land necessary can be acquired at the outfalls at an economical price.

(iii) If land cannot be so acquired, secondary treatment is proposed to be given by "Aero Filters" and then the effluent let into natural valleys to be picked up by ryots for lift irrigation.

(iv) Digestion of sludge and its conversion into manure.

Recently Dr. Talati, Sewage Utilisation Officer, Ministry of Agriculture, Government of India, visited Bangalore and after studying the scheme has proposed some minor variations, mainly by suggesting that the sewage effluent after the preliminary treatment be sold to ryots for irrigation of their lands. This will save the land acquisition costs.

These reports and their financial implications are now under examination by Government.

(*b*) Two major outfalls and Five minor outfalls.

(*c*) The scheme is proposed to be carried out in three stages spread over thirty years.

(i) Approximate cost of disposal of sewage at all outfalls after preliminary treatment by land irrigation :—

First Stage.—Adequate for ten years ending 1965.—

(to be carried out immediately) Rs. 99 lakhs.

Second Stage.—Adequate for ten years ending 1975.—

(to be carried out as and when necessary) Rs. 25·25 lakhs.

Third Stage.—Adequate for ten years ending 1985—Rs. 9·25 lakhs.

Total approximate cost over thirty years Rs. 134 lakhs.

(ii) Approximate cost of disposal of sewage by preliminary treatment and filtration by "Aero Filters" at the two major outfalls and land irrigation and at other outfalls :—

First Stage.—Adequate for ten years ending 1965—

(to be carried out immediately) Rs. 94 lakhs.

Second Stage.—Adequate for ten years ending 1975—

(to be carried out as and when necessary).—Rs. 49 lakhs.

Third Stage.—Adequate for ten years ending 1985—Rs. 29 lakhs.

Total approximate cost over thirty years.—Rs. 172 lakhs.

N.B.—Costs include land acquisition and extension of outfall sewers.

(*d*) Yes.

(*e*) Water consumption of twenty-five gallons *per capita per diem* has been assumed in the above schemes. Though present consumption of water is only about fifteen gallons *per capita*, twenty-five gallons has been assumed to provide for future expansion.

Regional Officers to look after problems of Depressed Classes.

Q.—231. Sri T. HANUMIAH (Chitaldrug District—Depressed Class).—Will the Government be pleased to state :—

(*a*) the number of Regional Officers in the State ;

(*b*) what are their status, powers and duties with full particulars of their establishment ;

(*c*) whether they have prepared a special scheme after the formation of Regional Officers' Offices for improving the economic, social and educational problems of the Depressed Classes in the State ?

A.—The Hon'ble Sri R. CHENNIGARAMIAH (Minister for Local Self-Government).—

(*a*) Two.

(*b*) The Regional Officers are of the status of Assistant Commissioners. The powers and duties of the officers are defined in G.O. No. L.B. 8007-33—A.D.C. 19-48-4, dated 15th March 1949. Government Order is appended below. Their establishment consists of :—

1. One Second Division Clerk,
2. One Second Grade Typist,
3. One Daffedar, and
4. Three peons.

(*c*) Yes.

S.O.

GOVERNMENT OF HIS HIGHNESS THE MAHARAJA OF MYSORE.

GENERAL AND REVENUE DEPARTMENT.

G.O. No. L.B. 8007-33—A.D.C. 19-48-4, dated 15th March 1949.

POWERS AND DUTIES.

Approves — .

READ—

Government Order No. L.B. 3510-45—V.P. 45-48-1, dated the 29th October 1948, according sanction to a scheme for the reorganisation of the work relating to the Rural Development Work in the State.

2. Letter No. R.D.R. 4C. 837—48-49, dated the 27th November 1948, from the Commissioner for Rural Development and Depressed Classes, requesting approval to certain powers to be conferred upon, and certain duties to be entrusted to the two Regional Officers for Depressed Classes, appointed as per Government Order read above.

Order No. L.B. 8007-33—A.D.C. 19-48-4, dated Bangalore, the 15th March 1949.

Approves as per statements appended.

SYED ABDUL ALEEM,
Secretary to Government,
Revenue Department.

To—The Revenue Commissioner in Mysore.
The Comptroller to Government.
The Heads of Development Departments.
The Deputy Commissioners of Districts.

Powers of Regional Officers.

The Secretaries of the Taluk and District Development Committees shall keep the Regional Officers informed of their Budget proposals and annual programme of works so far as relates to the amelioration of Depressed Classes. In addition, a copy of the report of work done each month shall be sent to the Regional Officer by the 15th of the month following the month under reference.

2. The Regional Officers shall have powers to inspect works charged to the Depressed Class Amelioration Fund and to make suggestions and being defects to the notice of the appropriate authorities.

3. To address Deputy Commissioners and District Officers of other Departments on points arising in the course of their work.

4. To inspect the Darkhast, Land Acquisition and other Branches of the Taluk Office dealing with Depressed Class affairs and to examine the relevant registers of the Sub-Division and District Office for purposes of information.

5. The Taluk, Sub-Division and District Offices shall furnish the Regional Officer such figures and information as may be available and as are necessary for the Regional Officer in the execution of his duties and to give him also such records and pending papers as may be necessary in his view.

6. To scrutinize the dairies of the Special Officers for Depressed Classes and to forward them to the Deputy Commissioner with his remarks, if any.

Duties of Regional Officers.

It will be the chief duty of the Regional Officers to watch the progress of Depressed Class development work in the Districts in their jurisdiction; to see that the needs of the Depressed Class population are formulated and proposals for meeting them are worked up by the local officers and put up before the Taluk and District Development Committees; to watch the disposal of Depressed Class Darkhasts, Land Acquisition cases and other papers bearing on the welfare of the Depressed Classes with a view to see that there is no undue delay at any stage.

2. To act as liaison between the different officers with a view to expediting the progress of Depressed Class work.

3. To keep a watch over the work of the Special Officers for Depressed Classes in the different Districts and the Special Revenue Inspectors appointed in the Taluks.

4. To inspect Depressed Class works wherever necessary with a view to see that undue delay is avoided and the funds allotted therefor are fully utilised.

5. To keep in touch with the progress of expenditure under Depressed Class Amelioration Fund in each District with a view to see that funds are fully and equitably utilised over the whole year.

6. To keep the Commissioner for Depressed Classes fully informed of the progress of work through such returns and reports as may be prescribed by him.

It will be the special duty of the Regional Officers to study Depressed Class problems intensively and to formulate larger schemes of improvement and amelioration.

Silk Industry and safety and security to cocoon rearers.

Q.—250. Sri D. M. SIDDIAH (Mysore District—General).—

Will the Government be pleased to state :—

(*a*) the encouragement given by them for the improvement of silk industry in the State ;

(*b*) how many families in the State are engaged in this industry ;

(*c*) the nature of safety and security that the Government have given to the cocoon rearers in the State ?

A.—The Hon'ble Sri T. MARIAPPA (Home Minister).—

(*a*) Government have been rendering all possible assistance to the Sericulturists of the State to enable them to harvest successful crops and get increased return for their labour ; mulberry cuttings and seedlings are supplied to Sericulturists free of cost to the extent they can be made available ; their gardens are inspected ; special manure, such as ground-nut cake powder, is stocked in the Silk Farms and supplied to them at cost price ; examined layings are supplied through Government or Aided Grainages ; rearings are inspected and technical guidance given ; improved methods of rearing are demonstrated and steps are being taken to have sufficient rearing appliances like chandrikes, stocked in some Multipurpose Co-operative Societies for being lent on hire to the rearers who are in need of these appliances. Sericultural Takavi Loans are granted to enable Sericulturists to dig irrigation wells and improve their mulberry gardens. The Aided Graineurs, who are required to work under the control and supervision of the Department, are given bonus for the disease-free layings prepared and distributed by them among the sericulturists.

To improve charka reeling, the Department of Sericulture has been endeavouring to popularise an improved reeling unit known as the "New Cottage Reeling Unit" and demonstrations are being held at important silk reeling centres.

A Japanese Reeling Unit—"The Multi-end Basin"—has been installed by the Central Silk Board at T.-Narsipur Filature and the possibility of improvements in the reeling technique has been demonstrated. Steps are also being taken to adapt our reeling machinery to the Japanese model.

(*b*) Nearly 50,000 families are engaged in silkworm rearing in the State, while about two lakhs of families are directly or indirectly benefited by the industry.

(*c*) Certain measures are being taken for regulating Imports and stabilising prices, which when fully implemented, are calculated to ensure a certain amount of safety and security to Cocoon Rearers.

Planting Casuarina in Bangalore and Kolar Districts.

Q.—297. Sri B. CHANNABYRE GOWDA (Bangalore District-General).—

Will the Government be pleased to state :—

(*a*) the year in which the Forest Department commenced planting casuarina plants in Bangalore and Kolar Districts ;

(*b*) the number of trees cut and sold since then and the amount realised therefrom ;

(*c*) the number of trees that are being planted every year and the number of trees that are being sold every year ;

(*d*) the expenditure incurred on planting casuarina trees since the beginning, the gross and the net annual income till now ?

A.—The Hon'ble Sri R. CHENNIGARAMIAH (Minister for Local Self-Government).—

(*a*) 1936-37.

(*b*) The plantations are being sold on acreage basis after ten years rotation. As such, it is not possible to furnish figures on tree basis.

The income realised is given below:—

		Income
Bangalore	...	Rs. 60376-11-0
Kolar	...	Rs. 9,929-9-0

(*c*) Number of trees cannot be furnished as planting and disposal are done on the basis of acreage.

(*d*) Expenditure incurred till now in Bangalore and Kolar Districts is as detailed below :—

	Rs.
Bangalore District since 1945 ...	1,50,526-3-0
Kolar District since 1946-47...	70,332-13-0

See (*b*) for income realised so far. As 7,250½ acres have been planted since 1945 it will be some years before the trees on them can be sold.

LEGISLATIVE BUSINESS.

Mr. SPEAKER The Hon'ble Sri V. Venkatappa).—Now Legislative Business.

The Mysore Race Courses (Licensing) Bill, 1951.

Presentation of the Report of the Select Committee.

The Hon'ble Sri K. T. BHASHYAM (Minister for Law and Labour).—Sir, I present the Report of the Select Committee on the Mysore Race Courses (Licensing) Bill, 1951. Copies of the Report will be distributed to the Hon'ble Members before the close of the meeting to-day.

The Mysore Tenancy Bill.—(*contd*).

Motion to consider.

Sri K. R. SREEKANTESWAR.—I respectfully submit to you and through you to the House that I challenge any of the Amildars know about the method of cultivation, about the prices. The Courts have to see the documents and then give the decision. How can the Amildar decide this question of fixation of fair rent ? It is a question which cannot be decided by the Amildar and I am quite sure that no Amildar would be in a position to determine the reasonable rent under clause 12. They will never be able to deal with this quesion equitably and fairly and always it is the influential land-lord that will prevail over the Amildar and succeed, and not the poor ryot. I am quite sure about that.

Sri W. H. HANUMANTHAPPA (Bangalore District—General).—It is very unfair to say that Amildars of the whole State are not qualified to assess anything. Suppose we admit that position. What happens to the Civil Courts ? Are they qualified......

Sri K. R. SREEKANTESWAR.—I tell you that they will see the records and other documents. There is a lot of difference between what the Amildar actually does and how the Civil Courts decide. I am not prepared to accept any remarks about Civil Courts. I have got the greatest regard in the judiciary.

Sri H. M. CHANNABASAPPA.—I am glad at least you have that.

Sri K. R. SREEKANTESWAR.—The appellate authority once again is the executive authority—the Assistant Commissioner and the Deputy Commissioner. What is it that the executive authority will be in a position to do ? The most important portion is Chapter III. Simply you have to bring in Amildar and Assistant Commissioner because they know everything about the taluk. I question their knowing about the method of cultivation, the value at which the crop is to be assessed, etc. To-day one Amildar will be in this taluk and to-morrow another Amildar will take charge. It is always safe to set up a tribunal and you have any hiduvalidar, and any tenant as representatives on the tribunal and you have a representative from Government. Let there be

a tribunal at taluk level. Let them sit and settle all these questions. You have stated that there are only 7½ per cent of *genidars*. I am certain that in most of these places there is very cordial relationship between the tenant and the owner of the land. I must accept that what is existing in particular places may not exist in other places. I know what it is in the place from where I am coming. Not even a piece of letter passes between the tenant and the land-lord.

(A Voice: Which is that taluk ?).

It is Kolar taluk. But what happens is, that as soon as this Bill comes into force, it gives power under section 16(1):

> "Notwithstanding anything to the contrary contained in this Act..... the tenancy of any land held by a tenant continously for a period exceeding twelve years prior to the 1st day January 1951 shall not be terminated, except on any one or more of the grounds specified in sub-section (1) of section 15, or on the ground that the landlord requires the land for cultivating personally."

This section has brought forth several troubles in our State for the past eight or ten months. The entire agrarian policy has been precipitated by this particular section.

*ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ನಿನ್ನೆಯದಿವಸ ನಾನು ಮಾತನಾಡುತ್ತಿದ್ದಾಗ ಸಾಗುವಳಿದಾರರು ಜಮೀನ್‌ದಾರರಾಗುವುದಕ್ಕೆ ತಕ್ಕ ವಾತಾವರಣವನ್ನು ಕಲ್ಪನೆ ಮಾಡಬೇಕಾದ ಅವಶ್ಯಕತೆಯ ವಿಷಯ. ಭೂಕಂದಾಯ ಸುಧಾರಣಾ ಸಮಿತಿಯವರು ಶಿಫಾರಸು ಮಾಡಿರತಕ್ಕ ಅಂಶಗಳಲ್ಲಿ ಈ ಅಂಶವೂ ಒಂದು ಮುಖ್ಯವಾದುದು. ಸಾಗುವಳಿದಾರರೆಲ್ಲರೂ ಜಮೀನ್‌ದಾರರಾಗಬೇಕೆಂಬ ವಿಷಯದಲ್ಲಿ ಲೇಶಾಂಶವೂ ಭಿನ್ನಾಭಿಪ್ರಾಯವಿಲ್ಲ. ಅದರಲ್ಲಿಯೂ ನಾನು ಈ ವಿಷಯದಲ್ಲಿ ಅತ್ಯಂತ ಸಹಾನುಭೂತಿಯುಳ್ಳವನಾಗಿದ್ದೇನೆಂದು ತಿಳಿಸಲಿಚ್ಛಿಸುತ್ತೇನೆ. ಆದರೆ ಹೀಗೆ ಮಾಡುವಾಗ ಮತ್ತಾರಿಗೂ ಯಾವ ವಿಧದಲ್ಲಿಯೂ ಅನಾವಶ್ಯಕವಾದ ರೀತಿಯಲ್ಲಿ ತೊಂದರೆಯಾಗದ ಹಾಗೆ ಮಾಡಬೇಕೇ ವಿನಾ Rob reter and pay naul ಎನ್ನುವ ಗಾದೆಯಂತಾಗಬಾರದು. ಇತರರಿಗೆ ತೊಂದರೆ ಕೊಟ್ಟು ಮತ್ತೆ ಕೆಲವರಿಗೆ ಅನುಕೂಲ ಮಾಡಬೇಕೆಂಬ ತತ್ವ ಸಾಧುವಾದುದಲ್ಲ. ಸಾಮಾನ್ಯವಾಗಿ ಸಾಗುವಳಿ ಮಾಡತಕ್ಕ ಮನುಷ್ಯ ಆ ಜಮೀನನ್ನು ತಾನೇ ಕೊಂಡುಕೊಳ್ಳಬೇಕೆಂದು ಅಪೇಕ್ಷೆಪಟ್ಟರೆ, ಜಮೀನ್‌ದಾರನು ಅದನ್ನು ಮಾಡಬೇಕೆಂದು ಆಸೆಪಟ್ಟರೆ ಅದನ್ನು ಸಾಗುವಳಿದಾರರೆ ಕೊಂಡುಕೊಳ್ಳುವುದಕ್ಕೆ ತಕ್ಕ ಅವಕಾಶವಿರಬೇಕೆಂದು ಹೇಳುವುದು ಒಪ್ಪತಕ್ಕ ಮಾತು. ನಾನು ನೆನ್ನೆ ಹೇಳುತ್ತಿದ್ದ ಹಾಗೆ ಜಮೀನುಗಳನ್ನು ಮಾರಾಟ ಮಾಡತಕ್ಕ ಜನರಲ್ಲಿ ಸರ್ವಸಾಧಾರಣವಾಗಿ ಬಡವರೂ ಅನೇಕರಿರುತ್ತಾರೆ. ಅಂಥವರಿಗೆ ನಾವು ಪ್ರತಿಬಂಧಕಗಳನ್ನು ಈ ಕಾನೂನಿನಲ್ಲಿ ಹಾಕಿದರೆ ಆ ವ್ಯವಹಾರಗಳು ಎಷ್ಟುಮಟ್ಟಿಗೆ ನಡೆದು ಯಾವ ಉದ್ದೇಶಕ್ಕಾಗಿ ನಾವು ಪ್ರತಿಬಂಧಕ ಹಾಕುತ್ತೇವೋ ಅದು ಸಫಲವಾಗುತ್ತದೆಯೇ ಎಂಬುದನ್ನು ಯೋಚನೆ ಮಾಡಬೇಕು. ಈ ಮಸೂದೆಯಲ್ಲಿ ಮೊದಲು ಇದ್ದಂತೆ ಜಮೀನ್‌ದಾರನು ತನ್ನ ಜಮೀನನ್ನು ಮಾರಬೇಕಾದರೆ ಮೊದಲು ಸಾಗುವಳಿದಾರನಿಗೆ ಒಂದು ತಿಂಗಳ ನೋಟೀಸು ಕೊಡಬೇಕು. ಆಮೇಲೆ ಸಾಗುವಳಿದಾರನು ಅದನ್ನು ಕೊಳ್ಳಲು ಹಣವನ್ನೊದಗಿಸಿಕೊಳ್ಳಲು ಮೂರು ತಿಂಗಳ ಕಾಲಾವಕಾಶ ಕೊಡಬೇಕೆಂದಿತ್ತು. ಈ ಕಾಲಾವಕಾಶ ಕಳೆದಮೇಲೂ ಸಾಗುವಳಿದಾರನಿಗೆ ಹಣ ದೊರಕದೆ ತಾನು ಕೊಂಡುಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳಿದರೆ ಆಗ ಮಾರತಕ್ಕ ಜಮೀನ್‌ದಾರನ ಗತಿ ಏನು ಎಂಬುದನ್ನು ಯೋಚಿಸಿ. ಅದಕ್ಕೇ ಅದನ್ನು ಬದಲಾಯಿಸಿ ಒಂದು ತಿಂಗಳಿಗೆ ಕಡಿಮೆಮಾಡಿದೆ. ಸಾಮಾನ್ಯವಾಗಿ ಜಮೀನು ಮಾರತಕ್ಕ ಮನುಷ್ಯ ತನ್ನ ಜಮೀನಿಗೆ ಎಷ್ಟು ಹೆಚ್ಚಾಗಿ ಹಣ ಬಂದರೆ ಅಷ್ಟು ಒಳ್ಳೆಯದೆಂದು ಅಭಿಪ್ರಾಯವನ್ನಿಟ್ಟುಕೊಂಡಿರುವುದು ಸ್ವಾಭಾವಿಕ. ಜಮೀನಿನ ಬೆಲೆಯನ್ನು ಮೋಟಾರುಕಾರಿಗೆ ಅಡಿಸನ್ ಕಂಪೆನಿ ಮುಂತಾದ ಕಂಪೆನಿಗಳಲ್ಲಿ ಇಷ್ಟು ಬೆಲೆ ಎಂದು ಬೋರ್ಡ್ ಹಾಕಿರುವ ಹಾಗೆ ಮೊದಲೇ ಗೊತ್ತುಮಾಡಿ ಬೋರ್ಡ್ ಹಾಕಿ ವ್ಯವಹಾರ ನಡೆಸುವುದು ಯಾವ ದೇಶದಲ್ಲಿದೆಯೋ ನನಗೆ ಗೊತ್ತಿಲ್ಲ. ನಮ್ಮ ದೇಶದಲ್ಲಂತೂ ಈ ಪದ್ಧತಿ ಇಲ್ಲವೆಂಬುದು ಎಲ್ಲರ ಅನುಭವದಲ್ಲಿದೆ. ಹೀಗೆ ಜಮೀನು ಮಾರೀ ಮನುಷ್ಯ ತನ್ನ ಜಮೀನಿಗೆ ಇಷ್ಟೇ ಬೆಲೆ ಇದಕ್ಕೆ ಕಡಿಮೆಯೂ ಇಲ್ಲ ಹೆಚ್ಚು ಇಲ್ಲ ಎಂದು ಮೊದಲೇ ಗೊತ್ತುಮಾಡುವ ಪದ್ಧತಿ ನಮ್ಮ ದೇಶದಲ್ಲಿಲ್ಲ. ಜಮೀನು ಮಾರುವವನೂ ಕೊಂಡುಕೊಳ್ಳುವವನೂ ಪರಸ್ಪರ ವಿನಿಮಯದಿಂದ ಹೆಚ್ಚುಕಡಿಮೆ ವ್ಯಾಪಾರ ಮಾಡತಕ್ಕ ಪದ್ಧತಿ ನಮ್ಮಲ್ಲಿದೆ. ಬೆಲೆ ಜಮೀನು ಮಾರತಕ್ಕ ಮನುಷ್ಯನ ಆತುರದ ಮೇಲೆ ಹೋಗುತ್ತದೆ ಮತ್ತು ಅದನ್ನು ಕೊಂಡುಕೊಳ್ಳತಕ್ಕವನ ಆಕಾಂಕ್ಷೆಯ ಮೇಲೆ ಹೋಗುತ್ತದೆ. ಕೆಲವು ಸಂದರ್ಭಗಳಲ್ಲಿ ಕೊಂಡುಕೊಳ್ಳತಕ್ಕವನಲ್ಲಿ ಹಣವೆಷ್ಟಿದೆ ಎನ್ನುವುದರ ಮೇಲೂ ಹೋಗುತ್ತದೆ; ಅಲ್ಲದೆ ಒಂದು ಜಮೀನಿನ ಅಕ್ಕಪಕ್ಕದಲ್ಲಿ ಬಡವರಿದ್ದಾರೆಯೋ ಅನುಕೂಲಸ್ಥರಿದ್ದಾರೆಯೋ ಎನ್ನುವುದರ ಮೇಲೂ ಹೋಗುತ್ತದೆ. ಈ ಎಲ್ಲ ಸ್ಥಿತಿಗತಿಗಳನ್ನೂ ಮನಸ್ಸಿನಲ್ಲಿಟ್ಟುಕೊಂಡು ಬೆಲೆ ನಿಷ್ಕರ್ಷೆ ಮಾಡುವುದು ನಮ್ಮಲ್ಲಿರುವ ಪದ್ಧತಿಯೇ ಹೊರತು ರೇಬೆನೆಟ್‌ನಲ್ಲಿರುವಂತೆ ಇಂತಿಂಥಾ ಪದಾರ್ಥಕ್ಕೆ ಇಷ್ಟಿಷ್ಟು ಬೆಲೆ ಎಂದು ಗೊತ್ತುಮಾಡುವಂತೆ ಮಾಡುವುದು ನಮ್ಮ ದೇಶದಲ್ಲಿ ರೂಢಿಯಲ್ಲಿಲ್ಲ. ಒಂದು ವೇಳೆ ಹಾಗೆ ಮಾಡಿದರೂ ಕಾರ್ಯಸಾಧನೆ ಮಾಡುವುದು ಸಾಧ್ಯವಿಲ್ಲವೆಂದು ಅರಿಕೆ ಮಾಡುತ್ತೇನೆ. ಹಾಗೆ ಮಾಡಿದರೆ ನಮ್ಮ ಉದ್ದೇಶ ಸಫಲವಾಗುವುದಿಲ್ಲ. ಸಾಗುವಳಿದಾರನು ಬಡವನಾಗಿರುತ್ತಾನೆ, ಅವನಲ್ಲಿ ಜಮೀನನ್ನು ತಕ್ಷಣ ಕೊಂಡುಕೊಳ್ಳಲು ಹಣವಿರುವುದಿಲ್ಲ. ಇನ್ನೊಬ್ಬ ಸಾಹುಕಾರ ಹೆಚ್ಚು ಹಣ ಕೊಟ್ಟು ಅದನ್ನು ತೆಗೆದುಕೊಳ್ಳಲು ಸಿದ್ಧವಾಗಿರುತ್ತಾನೆ; ಇಂಥಾ ಸಂದರ್ಭದಲ್ಲಿ ಆ ಸಾಗುವಳಿದಾರನಿಗೆ ನಾಲ್ಕು ತಿಂಗಳು ಕಾಲಾವಕಾಶ ಕೊಟ್ಟು ಅವನಿಗೇ ಜಮೀನನ್ನು ಕೊಡುವ ಮನೋಭಾವವಿರುತ್ತದೆಯೆ ಅಥವ ಇಂಥಾ ಮನೋಭಾವವನ್ನು ನಾವು ನಿರೀಕ್ಷಣೆ ಮಾಡುವುದು

*Asterisks indicates that the speeches or other remarks have not been returned approved by the Members concerned.

(ಶ್ರೀ ಎಚ್. ಎಂ. ಚನ್ನಬಸಪ್ಪನವರು).

ಸಾಧ್ಯವೆ ನ್ಯಾಯವೆ ಎಂಬುದನ್ನು ಲೋಕ ವ್ಯವಹಾರ ದೃಷ್ಟಿಯಿಂದ ನೋಡಬೇಕು. ಆಗ ಸಾಗುವಳಿದಾರ ಕೊಂಡುಕೊಳ್ಳುವ ಹಾಗಿಲ್ಲದೆಯಿರುವ ವಾತಾವರಣವನ್ನು ಜಮೀನ್ದಾರನು ಕಲ್ಪನೆ ಮಾಡುತ್ತಾನೆ.

ಹಾಗೆ ಅವನು ಜಮೀನು ಮಾರಾಟ ಮಾಡಬೇಕಾಗಿ ಬರುವಂಥ ಸಂದರ್ಭಗಳಲ್ಲಿ ಸಾಗುವಳಿದಾರನು ಅದನ್ನು ಕೊಂಡುಕೊಳ್ಳುವುದಕ್ಕೆ ಆಗದಿರುವ ಸ್ಥಿತಿಯಲ್ಲೇ ಜಮೀನಿನ ಬೆಲೆಯನ್ನು ಹೆಚ್ಚುಮಾಡಿ ಬಿಡುತ್ತಾನೆ. He will quote very high. ಜಮೀನಿನ ವ್ಯಾಪಾರ ಇಂಥಾ ಸ್ಥಿತಿಯಲ್ಲಿಯೇ ನಡೆಸಿಕೊಂಡು ಬರಬೇಕೆಂದರೆ ಇದರಿಂದ ಮಾರಾಟ ಮಾಡತಕ್ಕವನಿಗಾಗಲೀ ಅಥವಾ ಕೊಂಡುಕೊಳ್ಳತಕ್ಕವನಿಗಾಗಲೀ ಅನುಕೂಲವಾಗುವುದಿಲ್ಲ. ಇಂದಿನ ಸ್ಥಿತಿಗಳಲ್ಲಾದರೂ ಜಮೀನು ಸಾಗುವಳಿದಾರನು ಜಮೀನನ್ನು ಕೊಂಡುಕೊಳ್ಳುವಂಥ ಸ್ಥಿತಿಯಲ್ಲಿರುತ್ತಾನೆಯೇ? ಅಂತೂ ಸಾಗುವಳಿದಾರ ಜಮೀನ್ದಾರನಾಗಬೇಕೆಂಬ ತತ್ವವೇನೋ ಬಹಳ ಒಳ್ಳೆಯದೇ. ಆದರೆ ಆತನ ಸ್ಥಿತಿಗಳೇನು. ಹಾಗೊಂದುವೇಳೆ ಆತನು ಜಮೀನ್ದಾರನಾಗಬೇಕಾದರೆ ಆತನಿಗೆ ಏನೇನು ಸೌಕರ್ಯಗಳಿರಬೇಕೋ ಅವುಗಳೆಲ್ಲವೂ ಇವೆಯೇ, ಹಾಗೆ ಅಂಥ ಅನುಕೂಲವಾದ ಸೌಕರ್ಯಗಳಿಲ್ಲದಿರುವಾಗ ಹೀಗೆ ಜಮೀನುಗಳನ್ನು ಒಬ್ಬರಿಂದೊಬ್ಬರಿಗೆ ಬದಲಾಯಿಸಲು ಹೊರಟರೆ ದೇಶದಲ್ಲಿ ಇಂದು ಉದ್ಭವಿಸಿರುವ ಆಹಾರ ಅಭಾವದ ಪರಿಸ್ಥಿತಿ ಇನ್ನೂ ಎಂಥಾ ಉತ್ಕಟ ಪರಿಸ್ಥಿತಿಗೇರುತ್ತೆಂಬ ಭಾವನೆಗಳಿರುವಾಗ, ಹೀಗೆ ಮಾಡತಕ್ಕದ್ದು ಸರಿಯೇ, ತಪ್ಪೇ ಎಂಬ ಗೋಜಿಗೆ ನಾನೀಗ ಹೋಗುವುದಿಲ್ಲ.

ಲಕ್ಷಾಂತರ ಟನ್ ಧಾನ್ಯಗಳನ್ನು ಬೆಳೆದು ಧರ್ಮಾರ್ಥವಾಗಿ ಹಂಚುತ್ತಿರುವ ದೇಶಗಳಲ್ಲೆಲ್ಲಾ ನೂರಕ್ಕೆ 58 ರಷ್ಟು ಟೆನೆಂಟ್ಸ್‌ಗಳಿದ್ದಾರೆ. ನಮ್ಮಲ್ಲಿ ಅದೇ ಟೆನೆನ್ಸಿ ಸಂಖ್ಯೆ 68 ಇದೆ, ಅಂದಮೇಲೆ ಟೆನೆಂಟ್ಸ್‌ಗಳಿರುವುದು ನಮ್ಮಲ್ಲಿಯೇ ಹೆಚ್ಚಾಗಿರುತ್ತೆಂದು ಕಂಡುಬರುತ್ತದೆ. ಅಂತೂ ಈ ಟೆನೆಂಟ್ಸ್‌ಗಳಿಂದ ದೇಶದಲ್ಲಿ ಉದ್ಭವಿಸಿರುವ ಉತ್ಕಟ ಆಹಾರ ಪರಿಸ್ಥಿತಿಯು ನಿವಾರಣೆಯಾದೀತೆಂಬ ವಿಚಾರದಲ್ಲಿ ಒಬ್ಬೊಬ್ಬರಿಗೂ ಭಿನ್ನಾಭಿಪ್ರಾಯಗಳಿವೆ. ಆದರೆ ಹೀಗೆ ಸಾಗುವಳಿದಾರನನ್ನು ಜಮೀನ್ದಾರನನ್ನಾಗಿ ಮಾಡಿ ಆತನು ಬೆಳೆಯುವ ಹೆಚ್ಚು ಆಹಾರವನ್ನು ಕೊಂಡುಕೊಳ್ಳತಕ್ಕ ಬಗ್ಗೆ ಇತರ ದೇಶಗಳಲ್ಲಿ ಏನೇನು ಕ್ರಮವನ್ನು ಅನುಸರಿಸುತ್ತಿದ್ದಾರೆಂಬುದನ್ನು ಸ್ವಲ್ಪ ನೋಡೋಣ. ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾದಲ್ಲಿ Bankrupt Zones Farms Act, 1937 ಎಂದು ಒಂದು ಕಾನೂನು ಮಾಡಿದ್ದಾರೆ. ಈ ಶಾಸನದ ಪ್ರಕಾರ ಸಾಗುವಳಿದಾರನಾಗಿರತಕ್ಕವನು ತಾನು ಸಾಗುವಳಿ ಮಾಡುತ್ತಿದ್ದಂಥ ಜಮೀನು ಮಾರಾಟವಾಗುವ ಸಂದರ್ಭ ಬಂದಾಗ ಆತನೇ ಆ ಜಮೀನನ್ನು ಕೊಂಡುಕೊಳ್ಳುವಂತೆ ಮಾಡಲು, ಆತನಿಗೆ ಧಾರಾಳವಾಗಿ ಹಣವನ್ನು ಸಾಲವಾಗಿ ಕೊಡುವಂಥ ಒಂದು ಅನುಕೂಲವನ್ನು ಕಲ್ಪಿಸಿಕೊಟ್ಟಿದ್ದಾರೆ. ಅಂದರೆ ಅವರು 100ಕ್ಕೆ 75ರಷ್ಟು ಸಾಲ ಕೊಡುತ್ತಿಲ್ಲ. ಜಮೀನನ್ನು ಎಷ್ಟು ಬೆಲೆಗೆ ಕೊಳ್ಳಬೇಕಾಗಿರುತ್ತೋ ಅಷ್ಟೂ ಹಣವನ್ನು ಅಂದರೆ 100ಕ್ಕೆ 100ರಷ್ಟನ್ನೂ ಸಾಲ ಕೊಟ್ಟು ಸಾಗುವಳಿದಾರನನ್ನು ಜಮೀನ್ದಾರನನ್ನಾಗಿ ಮಾಡುತ್ತಿದ್ದಾರೆ. ಹೀಗೆ ಕೊಡತಕ್ಕ ಸಾಲದ ಹಣಕ್ಕೆ ಅವರು ಹಾಕತಕ್ಕ ಬಡ್ಡಿ ನೇಕಡ 3 ಮತ್ತು ಅಂಥಾ ಸಾಲದ ಹಣವನ್ನು ತೀರಿಸಲು 40 ವರ್ಷಗಳ ವಾಯಿದೆಯನ್ನೂ ಸಹ ಕೊಡಲಾಗಿದೆ. ಇಂಥಾ ಒಂದು ಶಾಸನವನ್ನು ಅಮೇರಿಕಾ ದೇಶದಲ್ಲಿ ಮಾಡಿದ್ದಾರೆ. ಇದೇ ರೀತಿಯಾಗಿ 1945ರಲ್ಲಿ ಒಂದು ಶಾಸನವನ್ನು ಟರ್ಕಿದೇಶದಲ್ಲೂ ಸಹ ಮಾಡಿದ್ದಾರೆ. ಇದರ ಹೆಸರು "Law providing land for farmers ಎಂದು" ಇದರ ಉದ್ದೇಶವೂ ಸಹ ಸಾಗುವಳಿದಾರನಿಗೆ ಜಮೀನನ್ನು ದೊರಕಿಸಿಕೊಡತಕ್ಕದ್ದೇ ಆಗಿದೆ. ಅದೇ ರೀತಿಯಾಗಿ ನಮ್ಮಲ್ಲಿಯೂ ಸಹ ಈಗ ಒಂದು ಶಾಸನವನ್ನು ಮಾಡಬೇಕೆಂಬ ಉದ್ದೇಶದಿಂದ ಏನು ಮಾಡಿದ್ದಾರೆಂದರೆ, ಜಮೀನ್ದಾರನಾದವನು ತನ್ನ ಜಮೀನನ್ನು ಮಾರಾಟ ಮಾಡುವ ಕಾಲದಲ್ಲಿ ಸಾಗುವಳಿದಾರನಿಗೆ ಒಂದು ನೋಟೀಸನ್ನು ಕೊಡಬೇಕೆಂದು, ಹಾಗೆ ಆತನಿಗೆ ನೋಟೀಸು ಕೊಟ್ಟ ಒಂದು ತಿಂಗಳ ತರುವಾಯ ಆತನು ಜಮೀನನ್ನು ಕೊಂಡುಕೊಳ್ಳಲು ಇಷ್ಟವುಳ್ಳವನಾಗಿದ್ದಾನೆಂದು ತಿಳಿದ ಬಳಿಕ, ಪುನಃ ಆತನಿಗೆ ಹಣವನ್ನು ಜೋಡಿಸಿಕೊಳ್ಳಲು 4 ತಿಂಗಳ ವಾಯಿದೆ ಕೊಡಬೇಕೆಂದು ತಿಳಿಸಲಾಗಿದೆ. ಇದರ ಉದ್ದೇಶವೇನೋ ಒಳ್ಳೆಯದೇ ಆಗಿರಬಹುದು. ಆದರೆ ಮಾರಾಟಮಾಡತಕ್ಕವನ ಗತಿ ಏನಾಗುತ್ತದೆಂಬುದನ್ನು ಸಹ ನಾವು ನೋಡಬೇಕು. ಈಗಾಗಲೇ ನಾನು ತಿಳಿಸಿರುವಂತೆ ಅನೇಕ ಸಣ್ಣಸಣ್ಣ ಜಮೀನು ಹಿಡುವಳಿದಾರರೇ ಹೆಚ್ಚಾಗಿರುವುದರಿಂದ, ಅವರ ಆರ್ಥಿಕ ಸ್ಥಿತಿ ಅಷ್ಟು ಉತ್ತಮವಾಗಿಲ್ಲದಿರುವ ಪ್ರಯುಕ್ತ, ಅವರ ಜೀವನಕ್ಕೆ ಮಾರ್ಗವಿಲ್ಲದೆ, ಕೈಲಿ ತಾಪತ್ರಯಗಳಿಗೆ ಹಣವಿಲ್ಲದೇ ಇರುವಂಥ ಜಮೀನ್ದಾರರ ಸ್ಥಿತಿ ಹೇಗಿರುತ್ತೆ? ಇವುಗಳನ್ನೆಲ್ಲಾ ಯೋಚಿಸದೆ ಬರಿ ದೊಡ್ಡ ಜಮೀನ್ದಾರರುಗಳನ್ನೇ ಮನಸ್ಸಿನಲ್ಲಿಟ್ಟುಕೊಂಡು ಕೇವಲ ಗರೀಬರಾದವರ ವಿಷಯಕ್ಕೇ ಹೋಗದೆ ಸುಮ್ಮನೆ ಈ ವಿಚಾರಗಳನ್ನು ವಾರಗಟ್ಟಲೆ, ತಿಂಗಳಗಟ್ಟಲೆ, ಬೆಂಗಳೂರಿನಲ್ಲಿ ಕುಳಿತು ಚರ್ಚೆ ಮಾಡಿದರೇನು ಫಲ? ಬರಿ ದಾಕ್ಷಿಣ್ಯಕ್ಕೆ ಹೀಗೆ ನಾವು ಚರ್ಚೆಮಾಡಿ ಪೂರೈಸಿದ್ದರಿಂದ ಸಾಗುವಳಿದಾರನಿಗೆ ಜಮೀನ್ದಾರನಾಗಲು ಅನುಕೂಲವಾಯಿತೇ ಅಥವಾ ಆತನು ಇದನ್ನು ಸಾಧನೆ ಮಾಡಿ ಇದರ ಅನುಕೂಲ ಹೊಂದಲು ಸಾಧ್ಯವಾಗುತ್ತದೆಯೇ ಎಂಬುದನ್ನು ನಾನೀಗ ಸರ್ಕಾರದವರ ಗಮನಕ್ಕೆ ತರಲಿಚ್ಛಿಸುತ್ತೇನೆ. ಆದುದರಿಂದ ಏನು ಈ 22ನೆಯ ವಿಧಿಯಲ್ಲಿ ತಾವು ಒಂದು ಅವಕಾಶವನ್ನು ಮಾಡಿದ್ದೀರೋ, ಕೇವಲ ಅಷ್ಟರಿಂದಲೇ ನಿಮ್ಮ ಧ್ಯೇಯ ಸಾಧನೆಯಾಗುತ್ತದೆಂದು ತಾವೇನಾದರೂ ತಿಳಿದುಕೊಂಡಿದ್ದರೆ ಅದೊಂದು ಭ್ರಾಂತು. ಖಂಡಿತ ಅದು ಸಾಧ್ಯವಿಲ್ಲ. ಹೀಗೆ ತಾವು ಮಾಡುವುದರಿಂದ ಏನಾಗುತ್ತದೆಂದರೆ, ತಾವು ಉದ್ದೇಶಿಸಿರುವುದಕ್ಕಿಂತಲೂ, ಅಹಿತವೇ ಹೆಚ್ಚಾಗಿ, ಜಮೀನನ್ನು ಕೊಳ್ಳತಕ್ಕ ಮತ್ತು ಮಾರಾಟ ಮಾಡತಕ್ಕ ಬಡವರನ್ನು ನಾನಾ ತೊಂದರೆಗಳಿಗೀಡುಮಾಡತಕ್ಕ ಪರಿಸ್ಥಿತಿಯೊದಗಿ ಅವರಲ್ಲೇ ಒಬ್ಬರಿಗೊಬ್ಬರಿಗೆ ವಾದ ವಿವಾದಗಳು ತಲೆದೋರಿ ಅವರೀರ್ವರೂ ರಾಯರುಗಳ ಕೈಸೇರಿ ಕೋರ್ಟಿಗೆ ಹೆಚ್ಚುಹೆಚ್ಚು ಕೇಸುಗಳು ದಾಖಲಾಗಲು ಒಂದು ದಾರಿಯಾಗುತ್ತದೆ ಅಷ್ಟೆ. ಆತುರದಲ್ಲಿ ಹಣದ ಅಡಚಣೆಗೊಳಗಾದ ಜಮೀನ್ದಾರನು ತನಗೆ ಹಣಬೇಕೆಂದು ಹಂಬಲಿಸುತ್ತಿರುವಾಗ, ಸಾಗುವಳಿದಾರ ಇತ್ತ 4 ತಿಂಗಳ ವಾಯಿದೆ ಪೂರೈಸಿದ ಮೇಲೇನಾದರೂ, ಆತನಿಗೆ ಹಣ ಒದಗಲಿಲ್ಲ, ಜಮೀನು ಬೇಡ, ಬೇರೆಯಾರಿಗಾದರು ಮಾರಾಟ ಮಾಡಿಕೊಳ್ಳಿ, ಎಂದು ತಿಳಿಸಿಬಿಟ್ಟರೆ, ಇತ್ತ ಹಣವೂ ಸಿಕ್ಕದೆ, ಅತ್ತ ಜಮೀನು ಕೊಂಡುಕೊಳ್ಳುವ ಗಿರಾಕಿಗಳೂ ದೊರೆಯದೆ ಹೋದ ಸಂದರ್ಭಗಳಲ್ಲಿ ಆ ಬಡ ಜಮೀನ್ದಾರನ ಸ್ಥಿತಿ ಏನಾಗಿರುತ್ತೆ? ಅಂಥಾ ಕಷ್ಟಪರಿಸ್ಥಿತಿಯಲ್ಲಿ ಜಮೀನ್ದಾರನು ತಾನಾಗಿಯೇ ಬೇರೆಯವರಲ್ಲಿ ಹೋಗಿ ತನ್ನ ಆತುರವನ್ನೇ

ತಿಳಿಸಿ ಜಮೀನು ಮಾರಾಟ ಮಾಡಲು ಹೋದರೆ 4,000 ರೂಪಾಯಿಗಳ ಬೆಲೆ ಬಾಳುವ ಸ್ವತ್ತನ್ನು 3,000 ಸಾವಿರಕ್ಕೆ ಕೇಳುವಂಥ ಪರಿಸ್ಥಿತಿ ಒದಗಿ ಭೂಮಿಯ ರೇಟು ಇಳಿದು ಹೋಗತಕ್ಕ ಸಂದರ್ಭಗಳು ವಿಶೇಷವಾಗಿರುತ್ತವೆ. ಹೀಗೆ ಈ ಒಂದು ನಿರ್ಬಂಧ ಹಾಕುವುದರಿಂದ ಯಾರ್ಯಾರಿಗೆ ಎಷ್ಟೆಷ್ಟು ಕಿರುಕುಳ?

ಇಷ್ಟೇ ಅಲ್ಲದೆ ಇಂಥಾ ಒಂದು ಶಾಸನ ಮಾಡುವುದು ಮೂಲಶಾಸನವಿಧಿಗೆ ಎಷ್ಟು ವಿರೋಧವಾಗಿರುತ್ತದೆಂಬ ಅಂಶವನ್ನೂ ಸಹ ನಾನೀಗ ಮಾನ್ಯ ಸದಸ್ಯರ ಗಮನಕ್ಕೆ ತರಲಿಚ್ಛಿಸುತ್ತೇನೆ.

(Page 9 of the Indian Constitution).–

"All Citizens shall have the right to acquire, hold and dispose of property."

ಹೀಗೆ, ಮೂಲಭೂತ ಹಕ್ಕುಗಳಿಗೇ ಇದು ಧಕ್ಕೆಯನ್ನು ತರುವಂತಿದೆ. ಆದರೆ ಇಂಥಾ ಮೂಲಭೂತ ಹಕ್ಕುಗಳಿಗೂ ವಿರೋಧವಾಗಿ ಕೆಲವು ಸಂದರ್ಭಗಳಲ್ಲಿ ನಾವು ಕೆಲವು ಕಾನೂನುಗಳನ್ನು ಮಾಡಬಹುದು. ಅಂಥಾ ಸಂದರ್ಭಗಳ್ಯಾವುವೆಂಬುದಕ್ಕೆ Page 10; Clause (5) ಈ ರೀತಿ ಹೇಳಿದೆ:—

"Nothing in sub-clauses (d), (e) and (f) of the said clause shall affect the operation of any existing law in so far as it imposes, or prevents the State from making any law imposing, reasonable restrictions on the sub-clauses either in the interests of the general public or for the protection of the interests of any Scheduled Tribe."

ಅಂಥ ಸಾರ್ವಜನಿಕರ ಹಿತವನ್ನು ಕಾಪಾಡುವ ಸ್ಥಿತಿಯೊದಗಿದ್ದಾಗ ಅಥವಾ ಷೆಡ್ಯೂಲ್ಡ್ ಟ್ರೈಬಿಗೆ ಸೇರಿರತಕ್ಕವರ ಹಿತಕ್ಕೆ ಧಕ್ಕೆಯೊದಗುವ ಸಂದರ್ಭಗಳಿದ್ದಾಗ, ಇಂಥ ಕಾನೂನುಗಳನ್ನೂ ಮಾಡಿ, ಪ್ರಾಂತೀಯ ಸರ್ಕಾರಗಳು reasonable restrictions ಗಳನ್ನು ಹಾಕಬಹುದೇ ಶಿವಾಯಿ ಇತರ ಯಾವ ಸಂದರ್ಭಗಳಲ್ಲಿಯೂ ಮೂಲಭೂತ ಹಕ್ಕುಗಳಿಗೆ ಎಂದರೆ ಜನರು ಆಸ್ತಿಪಾಸ್ತಿಗಳನ್ನು ಇಟ್ಟುಕೊಳ್ಳುವುದಕ್ಕೂ, ಕೊಂಡುಕೊಳ್ಳುವುದಕ್ಕೂ ಮತ್ತು ಮಾರಾಟ ಮಾಡುವುದಕ್ಕೂ, ಧಕ್ಕೆ ತರುವಂಥ ಕಾನೂನನ್ನು ಜಾರಿಗೆ ತರಲು ಸಾಧ್ಯವಿಲ್ಲ. ಒಂದುವೇಳೆ ಈ ಮೂಲ ಶಾಸನವೂ ತಿದ್ದುಪಡಿಯಾದಂಥ ಸಂದರ್ಭದಲ್ಲಿ ತಾವೀಗ ಅನುಕೂಲ ಕಲ್ಪಸಬೇಕೆಂದು ಹೊರಟಿರತಕ್ಕ ಜನರ ಸಂಖ್ಯೆ ಇರತಕ್ಕ 90 ಲಕ್ಷ ಪ್ರಜಾ ಸಂಖ್ಯೆಯಲ್ಲಿ 75 ಸಾವಿರ ಇದ್ದಾರೆ. ಈ 75 ಸಾವಿರ ಜನ ಟೆನೆಂಟ್ಸ್‌ಗಳಲ್ಲಿಯೂ ಜಮೀನನ್ನು ಕೊಂಡುಕೊಳ್ಳುವಂಥ ಜನರು ಎಷ್ಟು ಪರ್ಸೆಂಟೇಜ್ ಇರಬಹುದೆಂಬುದನ್ನು ತಾವೇ ಲೆಕ್ಕಹಾಕಿ ನೋಡೋಣವಾಗಲಿ.

ಅದು ಬಹಳ ಕಡಮೆ ಇರುತ್ತದೆ. ಕೇವಲ 91 ಲಕ್ಷ ಪ್ರಜೆಗಳಲ್ಲಿ 75 ಸಾವಿರಕ್ಕೂ ಕಡಮೆಯಿರುವ ಒಂದು ಪಂಗಡದವರ ಹಿತವನ್ನು ಸಾಧಿಸಬೇಕೆಂಬ ಒಂದು ಉದ್ದೇಶದಿಂದ ತಂದಿರುವ ಕಾನೂನಿಗೆ ಒಂದು ಪ್ರತಿಬಂಧಕ ಹಾಕಬೇಕೆಂದು ತಾವು ಹೊರಟಿದ್ದೀರಿ. ಇದು ರಾಜ್ಯಾಂಗದ ಶಾಸನ ವಿಧಿಗನುಗುಣವಾಗಿಲ್ಲ ಎಂದು ತಮ್ಮ ಅವಗಾಹನೆಗೆ ತರುತ್ತೇನೆ. ಅಂದಮಾತ್ರಕ್ಕೆ ನಾನು ಖಂಡಿತ ಅವರಿಗೆ ಅವಕಾಶ ಕಲ್ಪಿಸಿಕೊಡಬೇಡಿ ಎಂದು ಹೇಳುತ್ತಿಲ್ಲ. ನಮ್ಮ ಮೈಸೂರು ಸಂಸ್ಥಾನವೇ ಒಂದು ಹೆಜ್ಜೆ ಮುಂದಿಟ್ಟು ಪ್ರತಿಯೊಬ್ಬರೂ ಜಮೀನ್ದಾರರಾಗಿರಬೇಕೇ ವಿನಾ ಸಾಗುವಳಿ ಮಾಡಿ ಇನ್ನೊಬ್ಬರಿಗೆ ಹೊಟ್ಟೆಗೆ ಹಾಕಬೇಕು ಎಂದು ಹೇಳುವಂತಿರಬಾರದು, ಎಲ್ಲರೂ ಅವರಿಗೆ ಬೇಕಾದ್ದನ್ನು ಬೆಳೆದುಕೊಳ್ಳುವ ಸ್ಥಿತಿಗೆ ಬರಬೇಕು ಎಂದು ಹೇಳುವವರಲ್ಲಿ ನಾನೂ ಒಬ್ಬ, ಅದಕ್ಕೆ ತಕ್ಕಂತೆ ರಚನಾತ್ಮಕ ದೃಷ್ಟಿಯಿಂದ ಯಾವ ರೀತಿ ಹೇಗೆ ಮಾಡಬೇಕೋ ಆ ರೀತಿ ಮಾಡಲು ವ್ಯವಸ್ಥೆ ಮಾಡಬೇಕು. ಸುಮ್ಮನೆ ಕಿರುಕುಳ ಕೊಟ್ಟು ಅನಾವಶ್ಯಕವಾದ ರೀತಿಯಲ್ಲಿ ಸಾಗುವಳಿದಾರನಿಗೆ ಅಥವ ಜಮೀನ್ದಾರನಿಗೆ ತೊಂದರೆಯಾಗುವಂತೆ ಮಾಡಿ ದೇಶದ ಉತ್ಪನ್ನ ಕಡಮೆಯಾಗುವಂತೆ ಶಾಸನ ಮಾಡಬಾರದು. ಹಾಗೆ ಮಾಡಬೇಕೆಂದು ಹೊರಟಿರುವುದರಿಂದ, ತೊಂದರೆಯಿರುವುದರಿಂದ ಅದನ್ನು ತೆಗೆದು ಸೂಕ್ತರೀತಿಯಲ್ಲಿ ಮಾರ್ಪಾಡು ಮಾಡಬೇಕು ಎಂದು ಹೇಳುತ್ತಿದ್ದೇನೆಯೇ ವಿನಾ ಇದು ಹೋಗಬೇಕೆಂದು ಹೇಳುತ್ತಿಲ್ಲ.

ಒಬ್ಬ ಮಾನ್ಯ ಸದಸ್ಯರು ಜರ್ಮನಿ, ಇಟಲಿ, ಸ್ವೀಡನ್ ಮುಂತಾದ ದೇಶಗಳಲ್ಲಿ ಹೇಗಿದೆಯೆಂದು ಪ್ರಸ್ತಾಪ ಮಾಡಿದರು. ಅವರಿಗೆ ಒಂದು ಮಾತಿನಲ್ಲಿ ಹೇಳುವುದು ಮೈಸೂರು ಸಂಸ್ಥಾನದಲ್ಲಿರುವ ಸುಧಾರಿತವಾದ ಭೂವ್ಯವಸಾಯ ಪದ್ಧತಿ, ಸಾಗುವಳಿ ಮತ್ತು ಜಮೀನ್ದಾರಿ ಪದ್ಧತಿ ಇಡೀ ಪ್ರಪಂಚದಲ್ಲಿ ಇನ್ನೆಲ್ಲೂ ಇಷ್ಟು ಚೆನ್ನಾಗಿಲ್ಲ ಎಂದು. ಇಲ್ಲಿ ಅಷ್ಟು ಸುಧಾರಣೆಯಾಗಿದೆ ಎಂಬುದನ್ನು ಅವರಿಗೆ ಅಂಕಿ ಅಂಶಗಳಿಂದ ತೋರಿಸುತ್ತೇನೆ. ಇವತ್ತು ಯಾವ್ಯಾವ ದೇಶದಲ್ಲಿ ಕ್ರಾಂತಿಕಾರಕವಾದ ಸಾಗುವಳಿ ನೀತಿ ಜಾರಿಗೆ ಬಂದಿದೆಯೋ ಆ ದೇಶದಲ್ಲಿರುವ ಅಂಕಿ ಅಂಶಗಳನ್ನು ನೋಡಿ. ಇಂಗ್ಲೆಂಡಿನಲ್ಲಿ ಈ ದಿವಸ ಇರುವ ಸಾಗುವಳಿ ನೀತಿಯ ಪ್ರಕಾರ ಸಾಗುವಳಿದಾರರಿಗೂ ಮತ್ತು ಜಮೀನ್ದಾರರಿಗೂ ತಿಕ್ಕಾಟವಿಲ್ಲ. ಏಕೆ ಹಾಗೆ ಹೇಳುವುದೆಂದರೆ ಸೋಷಿಯಲಿಸ್ಟ್ ಸರ್ಕಾರ, ಲೇಬರ್ ಸರ್ಕಾರ 5–6 ವರ್ಷಗಳಿಂದ ಜಾರಿಯಲ್ಲಿದ್ದರೂ ಕೂಡ ಈ ಭೂ ವ್ಯವಸಾಯ ಮತ್ತು ಭೂ ಸ್ವಾಮ್ಯ ಪದ್ಧತಿಯಲ್ಲಿ ತೀವ್ರವಾದ ಬದಲಾವಣೆ ಅಥವಾ ಅತ್ಯಲ್ಪವಾದ ಬದಲಾವಣೆ ಸಹ ಮಾಡುವುದಕ್ಕೆ ಅವರಿಗೆ ಅವಕಾಶವಾಗಲಿಲ್ಲ. ಅವರು ಆ ಯೋಚನೆ ಸಹ ಮಾಡಲಿಲ್ಲ. ಹಾಗೆ ನಾನು ಹೇಳುವುದು ತಪ್ಪಾದರೆ ಒಪ್ಪಿಕೊಳ್ಳುತ್ತೇನೆ. ನನಗೆ ಗೊತ್ತಿರುವ ಹಾಗೆ ಇವತ್ತಿನವರೆಗೆ ಭೂ ಸ್ವಾಮ್ಯದ ವಿಷಯದಲ್ಲಿ ಯಾವ ಬದಲಾವಣೆಯನ್ನೂ ಮಾಡಿಲ್ಲ. ಕಾರಣ ಇಷ್ಟೇ. ಅಲ್ಲಿ ಇರುವ ಪದ್ಧತಿಯೇ ಬೆಳೆದುಕೊಂಡು ಬಂದರೂ ಸಾಗುವಳಿದಾರ ಮತ್ತು ಜಮೀನ್ದಾರನಿಗೆ ಸುಗಮವಾಗಿರಬೇಕಾದ ಒಂದು ಸುಮಧುರ ಬಾಂಧವ್ಯ ಬೆಳೆದು ಬಂದಿದೆ. ಜರ್ಮನಿಯೊಳಗೆ ಜಮೀನ್ದಾರರಿಗೆ ಲ್ಯಾಂಡ್ ಲಾರ್ಡ್ಸ್ ಎಂದು ಹೇಳುವರು. ಅಲ್ಲಿ ಭೂಸ್ವಾಮ್ಯ ಮತ್ತು ಭೂ ವ್ಯವಸಾಯ ಪದ್ಧತಿಯಲ್ಲಿ ಕ್ರಾಂತಿಕಾರಕವಾದ ಬದಲಾವಣೆಯಾಗಿದೆ. I have got the latest available statistics in my hand. ಜರ್ಮನಿಯಲ್ಲಿ 250 ಎಕರೆಗೆ ಮೇಲ್ಪಟ್ಟು ಜಮೀನುಳ್ಳವರು 0·7%, ಇಟಲಿಯಲ್ಲಿ ·6%, ಸ್ವೀಡನ್‌ನಲ್ಲಿ ·5%........................

ಶ್ರೀ ಜಿ. ಎ. ಆಚಾರ್ಯರು.—ಯಾವಾಗಿನ ವಿಚಾರ ಅದು?

Sri H. M. CHANNABASAPPA.—You can come to my house. I will explain all these details to you.

Sri G. A. ACHARYA.—I do not want to come to your house. I want the information here. Your figures are not the latest.

Sri H. M. CHANNABASAPPA.—It is the latest. However, you may hold your own opinion. I am afraid I cannot convince those who do not want to be convinced.

ಜೆಕೋಸ್ಲೊವೇಕಿಯಾ ಮತ್ತು ಪೋಲೆಂಡಿನಲ್ಲಿ ಭೂಮಿ ಸರ್ಕಾರದ್ದಾಗಿರಬೇಕೆಂದು ಕ್ರಾಂತಿಕಾರಕವಾದ ಬದಲಾವಣೆಯಾಗಿದೆ. ಕಮ್ಯೂನಿಸಂ ಇರುವ ಅಲ್ಲಿ ಎರಡು ಕಡೆಯೂ ಒಂದೇ ಸಮಾನಾಗಿ 3% ನಂತೆ ಇದೆ. 250 ಎಕರೆ ಜಮೀನಿಗೆ ಕಡಮೆಯಿಲ್ಲದವರು ಶೇಕಡಾವಾರು ಇಷ್ಟಿದ್ದಾರೆಂದು ತಿಳಿದುಕೊಳ್ಳಬೇಕು. ರುಮೇನಿಯಾದಲ್ಲಿ 1% ಮೈಸೂರು ಸಂಸ್ಥಾನದಲ್ಲಿ ಕಂಪ್ಯಾರಿಟಿವ್ ಸ್ಟೇಟ್‌ಮೆಂಟ್ ಪ್ರಕಾರ 250 ಎಕರೆ ಜಮೀನಿರುವವರು .26% ಕ್ರಾಂತಿಕಾರಕ ಬದಲಾವಣೆಯಾಗಿರುವ ದೇಶಗಳ ಸಂಖ್ಯೆ. ಮೈಸೂರು ಸಂಸ್ಥಾನದ ಸಂಖ್ಯೆಗಿಂತ ಕೇವಲ ಕಡಮೆಯಿದೆ ಎಂದು ಹೇಳುವಾಗ ಮೈಸೂರು ಸಂಸ್ಥಾನದಲ್ಲಿ ಈ ಭೂಸ್ವಾಮ್ಯ ಮತ್ತು ಭೂ ವ್ಯವಸಾಯ ಪದ್ಧತಿಯಲ್ಲಿ ಹೆಚ್ಚು ಇತಿಹಾಸ ಪ್ರಸಿದ್ಧವಾದ ಸುಧಾರಣೆಯು ಹಿಂದಿನಿಂದಲೂ ನಡೆದುಕೊಂಡೇ ಬಂದಿದೆ ಎಂಬುದು ಇದರಿಂದ ವ್ಯಕ್ತವಾಗುತ್ತದೆ.

ಶ್ರೀ ಕೆ. ಪುಟ್ಟಸ್ವಾಮಿಯವರು.—.26%ನಲ್ಲಿ ತಾವೂ ಒಬ್ಬರೋ ?

Sri H. M. CHANNABASAPPA.—Well, I am one. You must please note that I am a cultivator and not a Zamindar.

(Interruption)

If you are not prepared to note, I am afraid I cannot convince you. You come to my farm and see whether I am a cultivator or a zamindar. Why do you talk without knowing facts?

ಇನ್ನೊಂದು ಅಂಶವೇನೆಂದರೆ 1945ನೆಯ ಇಸವಿಯಲ್ಲಿ ಜೆಕೋಸ್ಲೊವೇಕಿಯಾದಲ್ಲಿ ಒಂದು ಕಾನೂನು ಮಾಡಿದರು. ಅದರ ಪ್ರಕಾರ 90 ಎಕರೆಗೆ ಮೇಲ್ಪಟ್ಟು ಯಾರಿಗೂ ಇರಕೂಡದು. ಮೈಸೂರು ಸಂಸ್ಥಾನದಲ್ಲಿ ನೂರು ಎಕರೆಗೆ ಮೇಲ್ಪಟ್ಟಿರುವವರು 3,709 ಜನರಿದ್ದಾರೆ. 13ಲಕ್ಷ ಪ್ರಜೆಗಳಲ್ಲಿ ಬೆಟ್ಟ, ಗುಡ್ಡ, ಕಾಡು, ಮೇಡು ಎಲ್ಲಾ ಸೇರಿ ನೂರು ಎಕರೆಗೆ ಕಡಮೆಯಿಲ್ಲದಷ್ಟು ಜಮೀನು ಕಟ್ಟಿಕೊಂಡಿರುವವರು 3 709 ಜನರು. ನಾನು ಜಮೀನ್ದಾರರ ಹಿತವನ್ನು ಸಾಧಿಸಿ ಟೆನೆಂಟುಗಳಿಗೆ ತೊಂದರೆ ಮಾಡಬೇಕೆಂಬ ಉದ್ದೇಶದಿಂದ ಇದ್ದೇನೆಂದು ಯಾರಾದರೂ ತಿಳಿದುಕೊಂಡಿದ್ದರೆ ಅದನ್ನು ಮರೆಯಬೇಕು ಎಂಬುದನ್ನು ಸೂಚಿಸಲು ಇದನ್ನು ಹೇಳಿದ್ದೇನೆ. ಈ ದಿವಸ ಸಾಗುವಳಿಗೆ ಯೋಗ್ಯವಾದ ಜಮೀನು ಎಷ್ಟಿದೆ, ಅದರಲ್ಲಿ ಸರ್ಕಾರದ ವಶದಲ್ಲಿ ಮತ್ತು ಸಾರ್ವಜನಿಕರ ವಶದಲ್ಲಿ ಎಷ್ಟೆಷ್ಟಿದೆ ಎಂದು ಲೆಕ್ಕ ಹಾಕಿ ನೋಡೋಣ. ಈ ದಿವಸ ಭೂಮಿಯನ್ನು ಸಾಗುವಳಿ ಮಾಡುವುದಕ್ಕೆ ಕಾತುರರಾಗಿರುವ ಜನ ಬಹಳ ಕಡಮೆ. ಭೂಮಿಯನ್ನು ಪಡೆಯಬೇಕೆಂದಿರುವ ಜನರು ಬಹಳ ಹೆಚ್ಚು. ಸಾಗುವಳಿ ಮಾಡತಕ್ಕದ್ದಕ್ಕೂ ಭೂಮಿಯನ್ನು ಪಡೆಯಬೇಕೆಂದು ಆಶೆ ಇರುವುದಕ್ಕೂ ಬಹಳ ತಾರತಮ್ಯವಿದೆ. ಭೂವ್ಯವಸಾಯವು ಲಾಭದಾಯಕವಾಗಿಲ್ಲ. ಆದ್ದರಿಂದ ಈ ದಿವಸ ಅನೇಕ ಜಮೀನ್ದಾರರು ಸಾಗುಮಾಡದೆ ಇಟ್ಟುಕೊಂಡಿರುವ ಜಮೀನುಗಳನ್ನು ಮಾರುವುದಕ್ಕೆ ಸಿದ್ಧವಾಗಿದ್ದಾರೆ. ವ್ಯವಸಾಯವು ಕೇವಲ ಒಬ್ಬರ ಪೋಷಣೆಗಾಗಿ ಇರುವ ಕಸಬು. ಈಗಿನ ಪರಿಸ್ಥಿತಿಯಲ್ಲಿ ಈ ಒಂದು ಉದ್ಯಮದಲ್ಲಿ ಟೆನೆಂಟುಗಳಿಗೆ ಹೆಚ್ಚು ಭಾಗ ಕೊಡಿ ಎಂದು ಹೇಳಿದರೆ ಅದು ನ್ಯಾಯ ಬದ್ಧವಾದದ್ದು ಬೇಕಾದರೆ ಬರುವ ಲಾಭದಲ್ಲಿ ಸೇಕಡ 99 ಭಾಗ ಟೆನೆಂಟುಗಳಿಗೆ ಕೊಡಿ. ಅದನ್ನು ನಾನು ಒಪ್ಪುತ್ತೇನೆ, ಇನ್ನು ಉಳಿಯುವ ಸೇಕಡ ಒಂದು ಭಾಗ ಜಮೀನ್ದಾರನಿಗಿರಲಿ. ಭೂವ್ಯವಸಾಯ ಲಾಭದಾಯಕವಾಗಿಲ್ಲದಿರುವಾಗ ಭೂಮಿಯ ಉತ್ಪತ್ತಿಯಲ್ಲಿ ಬರುವ ಲಾಭದ ಹಂಚಿಕೆಯಲ್ಲಿ ಸಾಗುವಳಿ ಮಾಡುವವರಿಗೆ ಎಷ್ಟು ಭಾಗ ಕೊಡಬೇಕೆಂದು ಹೇಳಿದರೆ ಅಷ್ಟು ಭಾಗ ಕೊಡಲು ಒಪ್ಪಿಕೊಳ್ಳುವುದಕ್ಕೆ ನಾನು ಸಿದ್ಧ. ಹಾಗಿಲ್ಲದಿರುವುದರಿಂದ ಜಮೀನನ್ನು ಹೊಂದಿರುವವರು ಆ ಕಸಬನ್ನು ಬಿಟ್ಟು ಬೇರೆ ಕಸಬಿಗೆ ದುಡ್ಡು ಹಾಕುವುದಕ್ಕೆ ಕಾತುರರಾಗಿದ್ದಾರೆ ಇದನ್ನು ಇಂದು ನಾವು ಮನಗಾಣಬೇಕು.

ಆ ತರಹ ಒಂದು ವ್ಯವಸ್ಥೆಮಾಡಿ ಎಂಬುದಕ್ಕೆ ಒತ್ತಾಯವನ್ನು ನಾನೂ ತಾವೂ ಎಲ್ಲರೂ ಮಾಡಬೇಕೆಂಬುದೇ ನನ್ನ ಅಭಿಪ್ರಾಯದ ಉದ್ದೇಶ. ಈ ಶಾಸನದ ಬಗ್ಗೆ ಸೆಲೆಕ್ಟ್ ಸಮಿತಿಯಲ್ಲಿ ಸ್ವಲ್ಪ ಭಿನ್ನಾಭಿಪ್ರಾಯವುಳ್ಳವರಲ್ಲಿ ನಾನು ಒಬ್ಬ. ಆ ಭಿನ್ನಾಭಿಪ್ರಾಯ ಯಾವ್ಯಾವ ಕಾರಣಗಳಿಗುಂಟಾಯಿತು ಎಂಬುದನ್ನು ಈ ಸೆಲೆಕ್ಟ್ ಸಮಿತಿಯ ವರದಿಯಲ್ಲಿ ನಾನು ಕೊಟ್ಟಿದ್ದೇನೆ. ಅದನ್ನು ಬಹುಶಃ ತಾವೆಲ್ಲರೂ ಓದಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಇದರಲ್ಲಿ ಇನ್ನೂ ಒಂದೆರಡು ಮೂರು ಅಂಶಗಳ ವಿಷಯದಲ್ಲಿ ಮಾತ್ರ ತಮ್ಮ ಗಮನವನ್ನು ಸೆಳೆದು ನನ್ನ ಭಾಷಣವನ್ನು ಮುಗಿಸುತ್ತೇನೆ. ಹೆಚ್ಚು ತೊಂದರೆ ಕೊಡುವುದಕ್ಕೆ ಇಷ್ಟಪಡುವುದಿಲ್ಲ. ಇದರಲ್ಲಿ ವಿಷಯಗಳನ್ನು ಸರಿಯಾಗಿ ತಿಳಿದುಕೊಂಡು ಚರ್ಚೆ ಮೂಲಕ ವಿಷಯ ವಿಮರ್ಶೆಮಾಡಿ ಉತ್ತಮವಾದ ಒಂದು ತೀರ್ಮಾನಕ್ಕೆ ಬರುವುದು ಜಾಣರ ಕೆಲಸ. ವಿಷಯಗಳನ್ನು ಸರಿಯಾಗಿ ತಿಳಿದುಕೊಳ್ಳದೆ ಏನೋ ಒಂದು ಅಂತಿಮ ತೀರ್ಮಾನಕ್ಕೆ ಬರುವ ಮನೋಭಾವ ಈಚೆಗೆ ದೇಶದಲ್ಲಿ ಬೆಳೆಯುತ್ತಾ ಬರುತ್ತಿದೆ. ಅದು ಸ್ವಲ್ಪ ಕಮ್ಮಿ ಆಗಬೇಕು. ಆ ಮನೋಭಾವ ಯಾರ್ಯಾರಲ್ಲಿದೆ ಎಂಬುದನ್ನು ನಾನು ಹೇಳುವುದಿಲ್ಲ. ಅವರವರ ಆತ್ಮವನ್ನು ಅವರವರೇ ಪರೀಕ್ಷೆ ಮಾಡಿಕೊಳ್ಳಲಿ. ಒಂದು ಉದಾಹರಣೆ ಹೇಳಬೇಕೆಂದರೆ ನನ್ನ ಪರಮ ಮಿತ್ರರು ಆಗಿರತಕ್ಕ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಭಿನ್ನಾಭಿಪ್ರಾಯ ಪಟ್ಟಿರುವುದರಲ್ಲಿ ಒಂದು ಉದಾಹರಣೆ ಕೊಡುತ್ತೇನೆ.

"The problem of tenancy in Malnad is very peculiar and quite different from that in Maidan."

ಸತ್ಯಾಂಶ.

"In Maidan, where the 'Wara' or 'Koru' system is in vogue, the rent payable by a tenant entirely depends upon the actual yield from the land. In Malnad, the rent payable entirely depends upon the contract between the parties, irrespective of the actual yield."

Sri H. K. VEERANNA GOWDA (Mandya District-General).—In both cases it is not a fact.

Sri Kadidal MANJAPPA (Shimoga District-General).—It is a fact

Sri H. M. CHANNABASAPPA.—So that amounts to gross ignorance of facts ಏಕೆಂದರೆ ಈ ವಿಷಯ ಸರಿಯಾಗಿ ತಿಳಿದುಕೊಂಡು ವಾದ ಮಾಡಿಲ್ಲ. In Malanad the rent payable entirely depends upon the contract

between the parties. ಅದನ್ನು ನಾನು ಒಪ್ಪಿಕೊಳ್ಳುತ್ತಾ ಇದ್ದೇನೆ. ಮಲೆನಾಡಿನಲ್ಲಿ "ಗುತ್ತಿಗೆ" ಎಂಬುದು ಇದೆ. ವಾರ ಎಂಬುದು ಕಮ್ಮಿ ಇದ್ದರೂ ಇರಬಹುದು. ಇಲ್ಲವೇ ಇಲ್ಲ ಎಂದು ಧೈರ್ಯವಾಗಿ ಹೇಳುವಂತಾಗಿಲ್ಲ.

ಶ್ರೀ ಕಡಿದಾಳ್ ಮಂಜಪ್ಪನವರು.—ಧೈರ್ಯವಾಗಿ ಹೇಳುತ್ತೇನೆ.

Sri H. M. CHANNABASAPPA.—Excuse me, sir, Question.

ಮೈದಾನ ಪ್ರದೇಶದಲ್ಲಿ ಅದರಲ್ಲೂ ನಾಲಾ ವಗೈರೆ ಇರುವ ಜಾಗಗಳಲ್ಲಿ 100ಕ್ಕೆ 99·9 ರೆಕರಿಂಗ್ actual yield ಮೇಲೆ rent division ಆಗತಕ್ಕದ್ದು. ಆದರೆ ಅಲ್ಲಿ ಕಮ್ಮಿ ಬರಲಿ, ಹೆಚ್ಚು ಬರಲಿ ಗುತ್ತಿಗೆಯನ್ನು ನಿರ್ಧಾರ ಮಾಡಿ rent ಕೊಡುತ್ತಾರೆಯೇ ಹೊರತು actual yield ಮೇಲೆ ಕೊಡುವುದಿಲ್ಲ. ಬಿಟ್ಟಿ ಇರತಕ್ಕ ಜಾಗಗಳಲ್ಲಿ ಮತ್ತು ಟೆನೆಂಟ್ಸ್ ಕೇವಲ ಕಮ್ಮಿ ಆಗಿದ್ದು ಅವರ ಆಶ್ರಯ ಮಾಡಬೇಕಾದ ಸನ್ನಿವೇಶ ಇರತಕ್ಕ ಕಡೆಗಳಲ್ಲಿ ಮಾತ್ರ actual yield ಮೇಲೆ ಕೊಡುತ್ತಾ ಇರುವ ಪರಿಸ್ಥಿತಿ ಇದೆ ಎಂಬುದನ್ನು ಮಾನ್ಯ ಕಡಿದಾಳ್ ಮಂಜಪ್ಪನವರು ತಿಳಿದುಕೊಳ್ಳಬೇಕು.

Sri Kadidal MANJAPPA.—Where the "wara" or "Koru" system is in vogue: not in all parts of Maidan.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—"ಕೋರು" "ವಾರ" ಎಂಬುದು ಒಂದೊಂದು ಕಡೆ ಒಂದೊಂದು ಅರ್ಥದಲ್ಲಿದೆ. ಒಟ್ಟಿನಲ್ಲಿ ಸರಿಯಾದ ಅಂಕಿ ಅಂಶಗಳನ್ನು ಆಧಾರವಾಗಿಟ್ಟುಕೊಂಡು ದೇಶದಲ್ಲಿರತಕ್ಕ ಪರಿಸ್ಥಿತಿಯನ್ನು ಗಮನಿಸಿ, ಇತರ ದೇಶಗಳಲ್ಲಿ ಆಗಿರತಕ್ಕ ಪರಿಣಾಮವನ್ನು ನೋಡಿಕೊಂಡು ನಾವು ಒಂದು ನೀತಿಯನ್ನು ಸಾಧನೆ ಮಾಡಬೇಕೇ ವಿನಾ ಎಲ್ಲೋ ಮಳೆ ಬಂದರೆ ಇಲ್ಲಿ ಕೊಡೆ ಹಿಡಿಯತಕ್ಕ ನೀತಿಗೆ ಮನಸೋಲಬಾರದು, ಭಿನ್ನಾಭಿಪ್ರಾಯ ಹುಟ್ಟಿಸುವುದಕ್ಕೆ ಮುಖ್ಯವಾದ ಅಂಶಗಳು ಇನ್ನೂ ಎರಡು ಮೂರು ಹೇಳುತ್ತೇನೆಂದು ಅರಿಕೆ ಮಾಡಿಕೊಂಡಿದ್ದೆ. "Persons deemed to be tenants" ಎಂಬ ಪ್ರಶ್ನೆ ಇದೆ. 4ನೇ ವಿಧಿಯಲ್ಲಿ ಏನು ಹೇಳಿದೆಯೋ ಅದು 17ನೇ ವಿಧಿಗೆ ಸಂಬಂಧಪಟ್ಟದ್ದು ಆಗಿದೆ. ಇದರ ಅರ್ಥ ಏನೆಂದರೆ (fixity of tenure) ಒಬ್ಬನು ಸಾಗುವಳಿಮಾಡುವುದಕ್ಕೆ ನಿಗದಿಯಾದ ಕನಿಷ್ಟ ಪ್ರಮಾಣದ ಅವಧಿ 5 ವರ್ಷ ಆ ಅವಧಿಯಾದಮೇಲೆ ಅವನು ಬಿಟ್ಟರೆ ಒಳ್ಳೆಯದು. ಆದರೆ ಅದಕ್ಕೆ ಮೊದಲೇ ಬಿಟ್ಟರೆ ಯಾವ ಮಾರ್ಪಾಡು ಆಗಬೇಕು ಎಂಬ ವಿಚಾರದಲ್ಲಿ ಸ್ವಲ್ಪ ಭಿನ್ನಾಭಿಪ್ರಾಯಕ್ಕೆ ಅವಕಾಶವಿದೆ. ಕಾನೂನು ಬದ್ಧವಾಗಿ ಸಾಗುವಳಿ ಚೀಟಿ ರಿಜಿಸ್ಟರ್ ಆದ ಮೇಲೆ 5 ವರ್ಷ ಮುಗಿದ ನಂತರ ಸ್ವಾಭಾವಿಕವಾಗಿ ಆ ಟೆನೆಂಟೇ ಸಾಗುವಳಿದಾರ ಅಂತ ಜಮೀನ್ದಾರ ಒಪ್ಪಿಕೊಳ್ಳುವ ಪಕ್ಷಕ್ಕೆ ಇನ್ನೂ 5 ವರ್ಷದವರೆಗೆ ಕರಾರು ಮಾಡಿಕೊಂಡು ಸಾಗುವಳಿ ಮಾಡಬಹುದು. ಅದಕ್ಕೆ ಈ ಕಾನೂನಿನಲ್ಲಿ ಅವಕಾಶ ಇದೆ. ಆದರೆ "If a person is allowed to hold over the land by any act of his, his tenancy is deemed to have been renewed for a further period of five years." ಇದರಿಂದ ತೊಂದರೆ ಜಮೀನ್ದಾರರೊಬ್ಬರಿಗೇ ಅಲ್ಲ, ಉಭಯತ್ರರಿಗೂ ಆಗುತ್ತದೆ. 5 ವರ್ಷ ಪೂರೈಸಿದ ಕೂಡಲೇ ಪರಸ್ಪರ ವಿಶ್ವಾಸದಿಂದ ಹೊಸ ಕರಾರು ಮಾಡಿಕೊಳ್ಳಲಿಕ್ಕೆ ಯಾವ ಪ್ರತಿಬಂಧಕವೂ ಇಲ್ಲದೇ ಇರುವಾಗ ಯಾವುದಾದರೂ ಒಂದು ಕಾರಣದಿಂದ ಜಮೀನ್ದಾರನಾಗಿರುವವನ ಒಂದು ಸಮ್ಮತಿ ಸೂಚನೆ ಆಗುವ ರೀತಿಯಲ್ಲಿ ಸಾಗುವಳಿ ಮಾಡಿಬಿಟ್ಟರೆ ಸಾಕು, ಅವನು ಇನ್ನೂ 5 ವರ್ಷದವರೆಗೂ ಅದೇ ಕರಾರಿನ ಮೇಲೆ ಸಾಗುವಳಿ ಮಾಡಬಹುದು ಎಂಬುದರಲ್ಲಿ ತುಂಬಾ ತೊಂದರೆ ಇದೆ. ಅದನ್ನು ನಮ್ಮಲ್ಲಿ ತಿಳಿಸದೇ ಇದ್ದ ಪಕ್ಷದಲ್ಲಿ ಅದು ತಪ್ಪಾಗುತ್ತದೆ. ಅನೇಕ ಕಡೆ ಸಾಗುವಳಿದಾರರು ಜಮೀನ್ದಾರರನ್ನು ಎದುರಿಸತಕ್ಕ ಪರಿಸ್ಥಿತಿ ಇದೆ. ಶ್ರೀಮಾನ್ ಕಡಿದಾಳ್ ಮಂಜಪ್ಪನವರ ಕಡೆ ಪರಿಸ್ಥಿತಿ ನಮ್ಮಲ್ಲಿಲ್ಲ. ಏಕೆಂದರೆ 10-12 ಎಕರೆ ಜಮೀನು ಸಾಗುವಳಿ ಮಾಡತಕ್ಕ ದೊಡ್ಡ ಜಮೀನ್ದಾರ ತನ್ನ ಜಮೀನಿನ ಪಕ್ಕಪಕ್ಕದಲ್ಲಿ ವರ್ತುಬಿಟ್ಟು ಸಾಗುವಳಿದಾರನ ಒಂದೆರಡು ಎಕರೆ ಜಮೀನಿದ್ದರೆ ಅವನಿಗೆ ಎಷ್ಟು ಸಲ್ಲಿಸಬೇಕೋ ಅದಕ್ಕಿಂತ ಹೆಚ್ಚಾಗಿ ಕೊಡುತ್ತೇನೆ ಎಂಬುದಾಗಿ ಹೇಳಿ ಅದನ್ನು ಸೇರಿಸಿಕೊಳ್ಳುತ್ತಾನೆ. ಇದರಿಂದ ಅವನಿಗೆ ಕಾವಲು ಕಟ್ಟಣೆ, ಒಕ್ಕಣೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆಗ ಅವನು ಸಾಮಾನ್ಯವಾಗಿ ಅವನಿಗೆ ಎಷ್ಟು ಸಿಕ್ಕುತ್ತದೆಯೋ ಅದಕ್ಕಿಂತ ಹೆಚ್ಚಾಗಿ ಕೊಡಬೇಕಾದ ಪರಿಸ್ಥಿತಿ ಇದೆ.

ಅಂದಮೇಲೆ, ಒಳ್ಳೆ ಗಟ್ಟಿಮುಟ್ಟಾದವನು ಪ್ರಭಾವಶಾಲಿಯಾದವನು, ಆ ಪ್ರಾಂತದಲ್ಲೆಲ್ಲಾ ತನ್ನ ಮಾತೇ ಪ್ರಧಾನ್ಯವಾಗಿರುವವನೇನಾದರೂ ಹೀಗೊಬ್ಬ ಗರೀಬನ ಜಮೀನನ್ನು ಸಾಗುವಳಿ ಮಾಡುತ್ತಿದ್ದರೆ, ಆ ಗರೀಬನು ತನ್ನ ಜಮೀನನ್ನು ವಾಪಸು ಬಿಡಿಸಿಕೊಳ್ಳಬೇಕಾದರೆ ಹೇಗೆಂಬುದನ್ನು ಯೋಚನೆ ಮಾಡಿ. ಕುಯಿಲು ಆದಾಗ ಆಯಿತೋ ಇನ್ನೂ ಕೂಳೆ ಇರುವ ಹಾಗೆಯೇ ಆತ ಉಳಿಸಿ ಬಿಡುತ್ತಾನೆ. ಹಾಗೆ ಉತ್ತುಬಿಟ್ಟರೆ ಏನು ಪರಿಸ್ಥಿತಿ ಬರುತ್ತದೆ. ಜಮೀನಿನವನು ಸಾಮಾನ್ಯವಾಗಿ 10-20 ಮೈಲಿಯಲ್ಲಿ ವಾಸವಾಗಿರುತ್ತಾನೆ. ಅವನಿಗೆ ಜಮೀನು ಕುಯಿಲಾದುದು ತಿಳಿಯುವಿಕೆಗೆ ಬರುವ ಹೊತ್ತಿಗೇ ಮುಂದಿನ ವರ್ಷಕ್ಕೆ ಉಳುವೆಯಾಗಿ ಹೋಗಿರುತ್ತದೆ. ಹೀಗಾಗಿ, ಈ ಕಾನೂನು ಒಂದುವೇಳೆ ಜಾರಿಗೆ ಬಂದರೆ, ವರ್ಷೇ ವರ್ಷೇ Hold over, Hold over ಎಂದುಕೊಂಡು, ಅವನಿಗೆ ಎಂದೆಂದಿಗೂ ಜಮೀನು ವಾಪಸು ಬರುವಹಾಗಿಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಭದ್ರಾವತಿ ಕೂಲಿಯೇ ಅವನಿಗೆ ಗತಿ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಹೌದು. ಜಮೀನು ಬಿಟ್ಟು ಭದ್ರಾವತಿಗೇ ಹೋಗಬೇಕಾಗುತ್ತದೆ !!

ಇದು ಒಂದು ದೃಶ್ಯ. ಇನ್ನೊಂದು ಕಡೆ, ನಾಲೆಯ ಬಯಲಿನಲ್ಲಿರತಕ್ಕ ಕಡೆಗಳಲ್ಲಿ ಕೆಲವು ಜಮೀನ್ದಾರರಿರುತ್ತಾರೆ. ಅಲ್ಲಿರತಕ್ಕ 'ಕದೀಮ್' ಟೆನೆಂಟು ಯಾವನಾದರೂ ನಾಲ್ಕಾರು ಜನ ಬಂದೋಬಸ್ತಾದ ಜನರನ್ನಿಟ್ಟುಕೊಂಡು ಬಿಟ್ಟರೆ ಸಾಕು, ಅವನು ಜಮೀನು ಬಿಟ್ಟುಕೊಡುವ ಸಂದರ್ಭವೇ ಇಲ್ಲ. ಕೂಳೆ ಉತ್ತರೆ ತಪ್ಪಿಹೋಯಿತು. ಇನ್ನೆಲ್ಲಿ ಹೋದರೂ ಆತ ಕೋರ್ಟಿಗೆ ಹೋಗಬೇಕು ಅಷ್ಟೇ. ಅದರಲ್ಲೂ ರಂಗರಾವಯ್ಯನವರಂಥ ಲಾಯರಿದ್ದರೆ ಬೇರೆ ಹೇಳಬೇಕಾಗಿಲ್ಲ. ಮಾತೆತ್ತಿದರೆ ತರಿ !!

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.— No, No, ಹಾಗೆಲ್ಲಾ generalise ಮಾಡುವುದಕ್ಕಾಗುವುದಿಲ್ಲ.

Sri H. M. CHANNABASAPPA.—If the Hon'ble Member thinks that everything that I am saying is imaginary, then he is sailing in the land of fallacy.

The Hon'ble Sri H. C DASAPPA.—There is a lot of exaggeration. I do not want any section to be discriminated, to be characterised, in that manner; that is all.

Sri H. M. CHANNABASAPPA.—Very well, sir.

The Hon'ble Sri H. C. DASAPPA.—I think it is better that the Hon'ble Member modifies his observation.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಅಲ್ಲಿ ಆ ಮನೋಭಾವ ಎಷ್ಟು ಪ್ರಮಾಣದಲ್ಲಿದೆಯೆಂಬುದನ್ನು ತಮಗೆ ಮನವರಿಕೆಮಾಡಬೇಕೆಂಬ ಉದ್ದೇಶದಿಂದ ಹಾಗೆ ಹೇಳಿದೆನೇ ಹೊರತು ಅದು ನೂರಕ್ಕೆ ನೂರರಷ್ಟು ಸರಿಯೆಂದು ಭಾವಿಸಿದರೆ ಅದು ಸರಿಯಲ್ಲವೆಂದು ಹೇಳುತ್ತೇನೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್ ಅವರು.—ಹಾಗಾದರೆ, ಅಷ್ಟೊಂದು ಒತ್ತಿ ಹೇಳಬೇಕಾಗಿಲ್ಲ!

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಆದ್ದರಿಂದ ಇನ್ನು ಮುಂದೆ ಯಾವ ರೀತಿಯಿರಬೇಕೆಂದರೆ, ಸಾಗುವಳಿ ಚೀಟಿಯ ಪ್ರಕಾರ ಯಾವಾಗ ಕರಾರಿನ ಅವಧಿಯು ಆಖೈರಾಗುತ್ತದೆಯೋ, ಆಮೇಲೆ ಹೊಸ ಕರಾರನ್ನು ಮಾಡಿಕೊಂಡೇ ಪುನಃ ಆ ಜಮೀನಿಗೆ ಹೋಗಬೇಕೆಂದು ನನ್ನ ಅಭಿಪ್ರಾಯ. ಆ ಬಗ್ಗೆ ಒಂದು ತಿದ್ದುಪಡಿಯನ್ನೂ ಕೂಡ ನಾನು ಕಳುಹಿಸಿಕೊಟ್ಟಿದ್ದೇನೆ.

ಆಮೇಲೆ, 7ನೆಯ ಸೆಕ್ಷನ್ನಿನಲ್ಲಿ ಏನು ಹೇಳಿದೆಯೆಂದರೆ, ಯಾವ ಕರಾರೂ ಇಲ್ಲದಿರತಕ್ಕ ಪರಿಸ್ಥಿತಿಯಲ್ಲಿ usage ಇತ್ಯಾದಿ ಇತ್ಯಾದಿಗಳ ಮೇಲೆ reasonable rentನ್ನು ಗೊತ್ತುಮಾಡಬಹುದೆಂದು ಹೇಳಿದೆ. ಆದರೆ, ಈ ಕಾನೂನು ಜಾರಿಗೆ ಬಂದಮೇಲೆ ಯಾವುದೊಂದು ಸಾಗುವಳಿ ವ್ಯವಹಾರವೂ ಕೂಡ ಸರಿಯಾಗಿ ಕರಾರೊಪ್ಪದವಾಗಿ ತನ್ಮೂಲಕ ಕಾನೂನು ಪ್ರಕಾರ ನಡೆಯಬೇಕು......... ....

ಒಬ್ಬ ಸದಸ್ಯರು.—On a point of information, Sir. ಈ ಬಿಲ್ಲಿನ ಕೆಲವು ಸೆಕ್ಷನ್‌ಗಳ ವಿಷಯದಲ್ಲಿ ಅವರಿಗೆ ಭಿನ್ನಾಭಿಪ್ರಾಯವಿದೆ, ಬಾಕಿಯದು ಸರಿಯಾಗಿದೆಯೆಂದು ತಿಳಿಸಿದ್ದಾರೆ. ಆದ್ದರಿಂದ ಭಿನ್ನಾಭಿಪ್ರಾಯವಿರುವ ಸೆಕ್ಷನ್‌ಗಳನ್ನು ಮಾತ್ರ ಹೇಳಿದರೆ ಸಾಕು, ಮಿಕ್ಕೆಲ್ಲದರ ವಿಚಾರವನ್ನೂ ಹೇಳಬೇಕಾಗಿಲ್ಲವೆಂದು ನನ್ನ ಸೂಚನೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಸರ್ವಸಾಮಾನ್ಯವಾಗಿ ಎಲ್ಲೆಲ್ಲಿ ಭಿನ್ನಾಭಿಪ್ರಾಯಕ್ಕೆ ಅವಕಾಶವಿದೆಯೋ ಅದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬೇಕೆಂದು ಹೇಳುತ್ತಿದ್ದೇನೆ. ಯಾವುದನ್ನು ಬಿಟ್ಟಿದ್ದೇನೆಯೋ ಅದರ ಬಗ್ಗೆ ನನ್ನ ಅಭಿಪ್ರಾಯದಲ್ಲಿ ಭಿನ್ನಾಭಿಪ್ರಾಯವಿಲ್ಲವೆಂದು ನನ್ನ ಭಾವನೆ.

ಇಲ್ಲಿ "in the abesence of any such agreement the rent payable according to the usage of the locality or if there is no such agreement or usage, the reasonable rent" ಎಂದು ಹೇಳಿದೆ. ಆದರೆ ಈ ಕಾನೂನಿನ ಪ್ರಕಾರ ಪ್ರತಿಯೊಂದು ಸಾಗುವಳಿ ವ್ಯವಹಾರವೂ agreement ಮೂಲಕವಾಗಿಯೇ ನಡೆಯಬೇಕು; ಅದು ರಿಜಿಸ್ಟರ್ ಕೂಡ ಆಗಬೇಕೆಂದು ವಿಧಾಯಕವಾಗಿದೆ. ಅಂದಮೇಲೆ ಯಾವ ಜುಬಾನಿ ಮಾತುಕತೆಗಳಿಂದ ಸಾಗುವಳಿಮಾಡುವುದಕ್ಕೆ ಸಾಧ್ಯವಿಲ್ಲವೆಂದು ಅರ್ಥವಾಯಿತು. ಅಂದಮೇಲೆ ಈ ಕ್ಲಾಜಿನ ಅವಶ್ಯಕತೆಯೇನಿದೆಯೋ ಅರ್ಥವಾಗುವುದಿಲ್ಲ. ಎಲ್ಲಿ agreement ಇಲ್ಲವೋ ಅಂಥ ಸ್ಥಳಗಳಲ್ಲಿ ಅಮಲ್ದಾರರು reasonable rentನ್ನು ಗೊತ್ತುಮಾಡಬೇಕೆಂದು ಹೇಳಿದೆ. ಒಂದು ಭಾಗದಲ್ಲಿ ಇದು ನ್ಯಾಯವಾಗಿಯೇ ಕಾಣುತ್ತದೆ. ಆದರೆ ಇದರ ಅವಶ್ಯಕತೆ ಕಂಡುಬಂದಿಲ್ಲ. ಆದ್ದರಿಂದ ಈ ಮಸೂದೆಯ ಸೂಚಕರು ಇದರ ಅವಶ್ಯಕತೆಯೇನಿದೆ, ಎಂಥ ಸಂದರ್ಭಗಳಲ್ಲಿ ಬರುತ್ತದೆಂಬುದನ್ನು ಹೇಳಿ ಈಗಲಾದರೂ ಸಮಾಧಾನವಾದ ಉತ್ತರ ಕೊಟ್ಟರೆ ಒಪ್ಪಿಕೊಳ್ಳುವುದರಲ್ಲಿ ಅಭ್ಯಂತರವಿಲ್ಲ.

ಆ ಮೇಲೆ 15ನೆಯ ಸೆಕ್ಷನ್ ಪ್ರಕಾರ termination of tenancy ವಿಚಾರ. ಈ ಕಾನೂನು ಜಾರಿಗೆ ಬಂದ ಜನವರಿ ಒಂದನೆಯ ತಾರೀಖಿನಿಂದ ಹಿಂದೆ 12 ವರ್ಷದವರೆಗೂ ಯಾರು ಕಾನೂನು ಬದ್ಧವಾಗಿ ಜಮೀನು ಸಾಗುವಳಿ ಮಾಡಿಕೊಂಡು ಬಂದಿರುತ್ತಾರೋ ಅವರಿಗೇ ಆ ಜಮೀನನ್ನು ಖಾಯಮ್ಮಾಗಿ ಕೊಡಬೇಕೆಂಬುದು ಉತ್ತಮವಾದ ಒಂದು ಅಭಿಪ್ರಾಯ. ಮೂಲ ಶಾಸನದಲ್ಲಿ ಈ ರೀತಿಯಾಗಿ ಇಲ್ಲದೆ ಇದ್ದಾಗ್ಯೂ ಸೆಲೆಕ್ಟ್ ಕಮಿಟಿಯವರು ತಾವೇ ಯೋಚನೆಮಾಡಿ ಅಂಥವರಿಗೆ ತೊಂದರೆಯಾದೀತೆಂಬ ದೂರದರ್ಶಿತ್ವವನ್ನಿಟ್ಟುಕೊಂಡು 12 ವರ್ಷಗಳಿಂದ ಯಾರ್ಯಾರು ಸಾಗುವಳಿಮಾಡಿಕೊಂಡು ಬಂದಿದ್ದಾರೋ ಅಂಥವರಿಂದ ಕೆಲವು ಸಂದರ್ಭಗಳಲ್ಲಿ ವಿನಾ ಮತ್ಯಾವ ಸಂದರ್ಭಗಳಲ್ಲಿಯೂ ಅವರ ಹಕ್ಕನ್ನು ಕಿತ್ತುಕೊಳ್ಳಕೂಡದೆಂದು ಹೇಳಿದ್ದು ಸ್ತುತ್ಯಾರ್ಹವಾದ ವಿಚಾರ. ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಬಹುಶಃ ಇದಕ್ಕಾಗಿ ಬಹಳ ಸಂತೋಷಪಡುತ್ತಾರೆಂದು ಕಾಣುತ್ತದೆ. ಆದರೆ ಇದರಲ್ಲಿ ಒಂದು ವಿಚಾರ :

The tenancy shall be terminated in respect only of one half of the area of cultivable land held by the tenant under the said landlord after a period of not less than one year from the date of notice expiring with the end of the year" and

"if after the landlord has taken possession of the land after the termination of the tenancy on the ground that the requires the land for cultivating personally, he fails to cultivate it personally within a period of two years from the date on which he obtained possession of the land, the landlord shall forthwith restore possessions of the land to the tenant..........."

ಎಂದು ಹೇಳಿದೆ. ಇದರ ಪ್ರಕಾರ 12 ವರ್ಷ ಅಥವಾ ಅದಕ್ಕೆ ಮೇಲ್ಪಟ್ಟು ಸಾಗುವಳಿಮಾಡಿಕೊಂಡಿರತಕ್ಕವನಿಂದ ಜಮೀನು ಪಡೆಯಬೇಕಾದರೆ ಒಂದೇ ಒಂದು ಅವಕಾಶವಿದೆ. ಏನೆಂದರೆ, ತಾನೇ ಸ್ವಂತ ಸಾಗುವಳಿಮಾಡಬೇಕೆಂದು ಅಪೇಕ್ಷೆಪಟ್ಟರೆ ಮಾತ್ರ. ಅಂಥ ಸಂದರ್ಭದಲ್ಲೂ ಅರ್ಧ ಮಾತ್ರ ತೆಗೆದುಕೊಳ್ಳಬಹುದೆಂದು ಹೇಳಿದೆಯೇ ವಿನಾ ಇನ್ನರ್ಧ ತೆಗೆದುಕೊಳ್ಳುವ ಹಾಗಿಲ್ಲ. ಹಾಗೆ ಬಿಡಿಸಿಕೊಂಡಿದ್ದ ಜಮೀನನ್ನು ಎರಡು ವರ್ಷದೊಳಗಾಗಿ ಸಾಗುವಳಿಮಾಡದೆ ಹೋದರೆ, ಆಗ್ಗೆ ಮೊದಲಿನ ಸಾಗುವಳಿದಾರನನ್ನೇ ಹುಡುಕಿಕೊಂಡು ಹೋಗಿ ಹಿಂದಿದ್ದ ಷರತ್ತುಗಳ ಮೇಲೆಯೇ ಕೊಡಬೇಕೆಂದು ಹೇಳಿದೆ. ಉದ್ದೇಶವೇನೊ ಒಳ್ಳೆಯದೆ. ನನ್ನ ಅಭಿಪ್ರಾಯವೂ ಈ ಉದ್ದೇಶ ಸಾಧನೆಯಾಗಲೀ ಎಂದೇ. ಆದರೆ ಈಗಿರತಕ್ಕ ರೀತಿಯಲ್ಲಿ ಈ ಉದ್ದೇಶವನ್ನು ಸಾಧನೆಮಾಡುವುದು ಸಾಧ್ಯವೇ ಎನ್ನುವುದನ್ನೂ ಯೋಚನೆಮಾಡಬೇಕು. ಅಲ್ಲದೆ ಈ ಉದ್ದೇಶವನ್ನು ಸಾಧನೆಮಾಡುವಾಗ ಸಾರ್ವತ್ರಿಕವಾಗಿ ದೊಡ್ಡ ಜಮೀನ್ದಾರರೂ ಪುಟ್ಟ ಜಮೀನ್ದಾರರೂ ಎಲ್ಲರನ್ನೂ ದೃಷ್ಟಿಯಲ್ಲಿಟ್ಟುಕೊಂಡು

ಕಾನೂನು ಮಾಡಬೇಕು. ದೇಶದಲ್ಲಿ ಒಂದು ಎಕರೆ, ಅರ್ಧ ಎಕರೆ ಇಟ್ಟುಕೊಂಡಿರುವವರೂ, ಅದನ್ನು ವಾರಕ್ಕೆ ಕೊಟ್ಟಿರುವವರೂ ಎಷ್ಟೋ ಮಂದಿ ಇದ್ದಾರೆ. ಒಳ್ಳೆಯ ಸಾಗುವಳಿದಾರರು ಸಿಕ್ಕಿದರೆಂದು, ಸಲೀಸಾಗಿ ಗುತ್ತಿಗೆ ಕೊಡುವವರು ಸಿಕ್ಕಿದರೆಂದು 10—15 ವರ್ಷಗಳಿಂದಲೂ ಕಡಿಮೆ ಗುತ್ತಿಗೆಗೂ ಕೊಟ್ಟಿರುವವರಿದ್ದಾರೆ. ಶ್ರೀಮಾನ್ ವೀರಣ್ಣಗೌಡರೇ ಕೊಟ್ಟಿದ್ದಾರೆ. ಶ್ರೀ ಬಂದೀಗೌಡರು ಕೊಟ್ಟಿದ್ದಾರೆ. ಶ್ರೀ ಪುಟ್ಟಸ್ವಾಮಿಯವರು ಕೊಟ್ಟಿದ್ದಾರೆ. ಎಷ್ಟೋ ಸಣ್ಣ ಪುಟ್ಟವರು ದೂರದಲ್ಲಿರತಕ್ಕ ಜಮೀನನ್ನು ಸಾಗು ಮಾಡುವುದಕ್ಕೆ ಸಾಧ್ಯವಿಲ್ಲದೆ ಯಾರಾದರೂ ಒಳ್ಳೆಯ ರೈತನು ಸಿಕ್ಕಿದರೆ ಅವನನ್ನು ಏನಾದರೂ ಬಿಡಿಸದೆ ಅವನಿಗೇ ಕೊಟ್ಟಿರುತ್ತಾರೆ ಕಮ್ಮಿ ಗುತ್ತಿಗೆಗೆ ಕೊಟ್ಟಿರುವುದೂ ಉಂಟು ಈಗ ಒಂದು ವೇಳೆ ಅಂಥ ಜಮೀನನ್ನು ಬಿಡಿಸಿಕೊಳ್ಳಬೇಕಾದರೆ, ಅರ್ಧ ಎಕರೆ ಮಾತ್ರ ತೆಗೆದುಕೊಳ್ಳಿ ಎಂದರೆ ಎಷ್ಟರಮಟ್ಟಿಗೆ ಸಾಧ್ಯ, ಯೋಚನೆಮಾಡಿ. ಅಲ್ಲದೆ ಎಷ್ಟೋ ಜನ ಮೈನರಿರುತ್ತಾರೆ; ವಿಧವೆಯರಿರುತ್ತಾರೆ. ಮೈನರರು ಮೆಜಾರಿಟಿಗೆ ಬಂದ ಮೇಲೆ ಜಮೀನನ್ನು ಬಿಟ್ಟು ಕೊಡಿ ಎಂದು ಕೇಳಿದರೆ ಅರ್ಧಮಾತ್ರ ಕೊಡುತ್ತೇನೆಂದರೆ ಹೇಗೆ? ಆ ಅರ್ಧವನ್ನು ಅವನು ಹೇಗೆ ಸಾಗುಮಾಡುವುದು !

ಆ ಮೇಲೆ ಇನ್ನೊಂದು ಅಂಶವನ್ನೂ ಯೋಚನೆಮಾಡಬೇಕು. ಈ ಉಳಿದ ಇನ್ನರ್ಧ ಜಮೀನು ಜೀವಾವಧಿ ಸಾರೋದ್ಧಾರವಾಗಿ ಸಾಗುವಳಿದಾರನಿಂದ ಆತನ ಮಕ್ಕಳು ಮರಿಮಕ್ಕಳಿಗೂ ಹೋಗಬೇಕೆಂತಲೋ ಅಥವಾ ಏನಾದರೂ ಒಂದು ಕಾಲಾವಧಿಯನ್ನು ಏರ್ಪಾಡುಮಾಡಿದ್ದೀರೋ ಅದೂ ಹೇಳಿಲ್ಲ. ಇದು ವಾಸ್ತವವಾಗಿಯೂ ಜಾರಿಯಲ್ಲಿ ಕೊಡುವಾಗ ಬಹಳ ಕಷ್ಟ ತರುವಂಥಹದು. ಇದರಿಂದ ವಿಧವೆಯರಿಗೂ ಬಾಲಕರಿಗೂ ಎಷ್ಟು ಅನ್ಯಾಯವಾಗುತ್ತದೆಂಬದನ್ನೂ ಯೋಚನೆ ಮಾಡಿ. ಒಂದು ಎಕರೆ, ಒಂದೂವರೆ ಎಕರೆಯನ್ನು ಮಾತ್ರ ಬಿಟ್ಟುಕೊಡುತ್ತೇನೆಂದರೆ ಆತನೂ ದೊಣ್ಣೆ ತೆಗೆದುಕೊಂಡು ನಿಂತುಕೊಳ್ಳುತ್ತಾನೆ, ಈತನೂ ದೊಣ್ಣೆ ತೆಗೆದುಕೊಂಡು ನಿಂತುಕೊಳ್ಳುತ್ತಾನೆ. ನಮ್ಮ ದೇಶದಲ್ಲಿ ರೈತನಿಗೆ ಜಮೀನೆಂಬುದು ಯಾವರೀತಿಯಿದೆಯೆಂಬುದನ್ನು ನೋಡಿ. ಹೆಂಡತಿಮಕ್ಕಳೆಂಬುದು ಯಾವ ರೀತಿ ಪ್ರೇಮದ ವಸ್ತುಗಳೋ ಅದೇ ರೀತಿ ಜಮೀನು ಒಂದು ಪ್ರೇಮದ ವಸ್ತು. ಆ ವಸ್ತು ಬಿಟ್ಟುಬಿಡಬೇಕೆಂದರೆ ಹೆಂಡತಿ ಮಕ್ಕಳನ್ನು ಕಳೆದುಕೊಳ್ಳುವಾಗ ಎಷ್ಟರಮಟ್ಟಿನ ಉದ್ವೇಕ ಉಂಟಾಗುತ್ತದೋ ಅಷ್ಟೆ ಉದ್ವೇಗವುಂಟಾಗುತ್ತದೆ. ಆದ್ದರಿಂದ ಈ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳದೆ ಶಾಸನಮಾಡಿಬಿಟ್ಟರೆ ಮುಂದೆ ಇದಕ್ಕಾಗಿ ಬಹಳ ವಿಷಾದಪಡಬೇಕಾದೀತೆಂದು ನಾನು ಹೇಳುತ್ತೇನೆ.

Mr. SPEAKER.—If the Hon'ble Member is concluding his speech now, we will rise for lunch.

Sri H. M. CHANNABASAPPA.—I shall finish it soon.

Mr. SPEAKER.—Then, the House stands adjourned for lunch for half an hour.

The House adjourned for lunch at Thirty-four Minutes past Ten of the Clock and re-assembled at Thirteen Minutes past Eleven of the Clock, Mr. Speaker (The Hon'ble Sri V. Venkatappa) in the Chair,

---

ಶ್ರೀ ಎಚ್. ಎಂ. ಚನ್ನಬಸಪ್ಪನವರು.—12 ವರ್ಷಗಳಿಗೆ ಮೇಲ್ಪಟ್ಟು ಜಮೀನನ್ನು ಸಾಗುವಳಿದಾರನು ಸಾಗುವಳಿಮಾಡಿದ್ದರೆ, ಅಂಥವನಿಂದ ಜಮೀನ್ದಾರನು ತನ್ನ ಸ್ವಂತ ವ್ಯವಸಾಯಕ್ಕಾಗಿ ಜಮೀನನ್ನು ಬಿಡಿಸಿಕೊಳ್ಳಬೇಕಾಗಿ ಬಂದ ಸಂದರ್ಭದಲ್ಲಿ ಆತನಿಂದ ಅರ್ಧ ಜಮೀನನ್ನು ಮಾತ್ರ ತೆಗೆದುಕೊಳ್ಳುವಂತೆ ಮಾಡಿರತಕ್ಕದ್ದು ಸರಿಯಾಗಿಲ್ಲ, ಹಾಗೆ ಮಾಡಿರುವುದರಿಂದ ಏನೇನು ತೊಂದರೆಗಳಾಗುವುದಕ್ಕೆ ಅವಕಾಶವಿರುತ್ತದೆಂಬುದನ್ನೂ ಮತ್ತು ಪೂರ್ತಿ ಜಮೀನನ್ನೇ ಬಿಡಿಸಿಕೊಳ್ಳತಕ್ಕದ್ದರ ಅವಶ್ಯಕತೆ ಯಾವ ರೀತಿ ಬರಬಹುದೆಂಬುದನ್ನೆಲ್ಲಾ ಇಲ್ಲಿತನಕ ವಿವರಿಸಿ ತಿಳಿಸಿದ್ದಾಯಿತು.

ಇನ್ನು ಜಮೀನ್ದಾರನಾಗಿರತಕ್ಕವನು ತನ್ನ ಸ್ವಂತ ವ್ಯವಸಾಯಕ್ಕೆಂದು ಜಮೀನನ್ನು ಬಿಡಿಸಿಕೊಂಡು ತಾನು ವ್ಯವಸಾಯಮಾಡುವಷ್ಟು ಕಾಲ ಮಾಡಿದ ಮೇಲೆ ಮತ್ತೆ ಅದೇ ಜಮೀನನ್ನು ಪುನಃ ವಾರಕ್ಕೆ ಕೊಡಬೇಕಾಗಿ ಬಂದ ಸಂದರ್ಭದಲ್ಲಿ ಆ ಜಮೀನ್ದಾರನು ಅದನ್ನು ಹಿಂದೆ ಯಾರು ಸಾಗುವಳಿ ಮಾಡುತ್ತಿದ್ದನೋ ಅವನಿಗೇ ಕೊಡಬೇಕೆಂದು ಒಂದು ನಿಯಮವನ್ನುಮಾಡಿದ್ದಾರೆ. ಈಗ ಇದರ ಸಾಧಕ ಬಾಧಕಗಳೇನೆಂಬುದನ್ನು ನೋಡೋಣ. ಜಮೀನ್ದಾರನು ಹಾಗೆ ತಾನು 2 ವರ್ಷ ಅಥವಾ 3 ವರ್ಷ ಕಾಲ ಸ್ವಂತವಾಗಿ ವ್ಯವಸಾಯ ಮಾಡಿ, ನಂತರ ಅದನ್ನು ಯಾರಿಗಾದರೂ ಗುತ್ತಿಗೆಗೆ ಕೊಡಬೇಕೆಂದು ಇಷ್ಟಪಟ್ಟರೆ. ಆಗ ಮೊದಲು ಮಾಡುತ್ತಿದ್ದಂಥ ಮನುಷ್ಯನನ್ನು ಹುಡುಕಿಕೊಂಡು ಹೋಗಬೇಕು. ಇಂದು ಒಬ್ಬ ಮನುಷ್ಯ ವ್ಯವಸಾಯ ಮಾಡುತ್ತಿದ್ದರೆ ಇನ್ನು ಮುಂದಕ್ಕೂ ಆತನು ಅದೇ ಕಸುಬನ್ನು ಅವಲಂಬಿಸಿರುತ್ತಾನೆ, ಅಥವಾ ಇಂದು ಈ ಗ್ರಾಮದಲ್ಲಿದ್ದರೆ ಮುಂದೆ ಸಾರೋದ್ಧಾರವಾಗಿ ಆತನು ಅಲ್ಲೇ ನೆಲಸಿರುತ್ತಾನೆ, ಆತನಿಗೆ ಈ ದಿವಸ ಇರತಕ್ಕ ಸ್ಥಿತಿಗತಿಗಳೇ ಮುಂದಕ್ಕೂ ಇರುತ್ತವೆ ಎಂಬೀ ವಿಚಾರಗಳನ್ನೆಲ್ಲಾ ಯಾವ ಆಧಾರದ ಮೇಲೆ ನಿರ್ಧರಿಸುವುದು? ಇಂಥಾ ಆಧಾರಗಳ ಮೇಲೆ ಮಾಡಿರತಕ್ಕ ಕಾನೂನು ಎಷ್ಟರ ಮಟ್ಟಿಗೆ ಕಾರ್ಯಗತವಾಗಬಹುದೆಂಬುದು, ಅಥವಾ ಎಷ್ಟರ ಮಟ್ಟಿಗೆ ಸಾಧ್ಯವಾದೀತೆಂಬುದನ್ನೂ ತಾವೇ ಆಲೋಚನೆಮಾಡಿ. ಒಬ್ಬ ಮನುಷ್ಯ ಈ ದಿವಸ ಒಂದೂರಿನಲ್ಲಿದ್ದರೆ, ಇನ್ನು 2 ವರ್ಷಗಳು ಕಳೆದಮೇಲೂ ಆ ಮನುಷ್ಯ ಅದೇ ಗ್ರಾಮದಲ್ಲಿರುತ್ತಾನೆಯೋ ಎಂಬುದನ್ನು ನೋಡಬೇಕು. ಅಲ್ಲದೆ ಆ ಮನುಷ್ಯ ಈ ವ್ಯವಸಾಯ ಕಸಬು ಒಂದನ್ನಲ್ಲದೆ ಮತ್ತೆ ಬೇರೆ ಯಾವುದನ್ನೂ ಅಪೇಕ್ಷಿಸುವುದಿಲ್ಲವೆಂಬುದನ್ನು ಯಾರೂ ಹೇಳುವುದಕ್ಕಾಗುವುದಿಲ್ಲ. ಅಷ್ಟು ವರ್ಷಗಳು ಕಳೆದ ನಂತರ ಆತನ ಸಾಧನ ಸಂಪತ್ತುಗಳೊಂದೂ ಇರದೆ ಇದ್ದರೂ ಆತನು ಅದೇ ವ್ಯವಸಾಯ ವೃತ್ತಿಯಲ್ಲಿ ಪ್ರವೃತ್ತನಾಗುತ್ತಾನೆಂದು ಹೇಳುವುದಕ್ಕಾಗುವುದಿಲ್ಲ. ಇವೆಲ್ಲದರ ಜೊತೆಗೆ ಆ ವೇಳೆಗೆ ಆ ಜಮೀನು ಅರೂಪಾಗಿ ಹೋಗಿದ್ದರೂ ಹೋಗಿರಬಹುದು. ಹಾಗೆ ಜಮೀನು ನಿಸ್ಸಾರವಾಗಿ ಹೋಗಿದ್ದ ಸಂದರ್ಭಗಳಲ್ಲಿ ಆತನಿಗೆ ಮಾಡಲಿಕ್ಕೆ ಇಷ್ಟವಿಲ್ಲದೆ ಇದ್ದಾಗ್ಯೂ ಅತನನ್ನೇ ಸಾಗುವಳಿಮಾಡುವಂತೆ ಒತ್ತಾಯಮಾಡಲು ಸಾಧ್ಯವಿದೆಯೇ ! ಮತ್ತೊಂದು ಮುಖ್ಯವಾದ ವಿಚಾರವಿದೆ. ಒಂದು ಸ್ಥಳದಲ್ಲಿ ಒಂದು ವರ್ಷ ಮಳೆ, ಬೆಳೆಗಳಾದಂತೆಯೇ ಅದರ ಮುಂದಿನ ವರ್ಷವೂ ಆ ಸ್ಥಳದಲ್ಲಿ ಅಷ್ಟೆ ಮಳೆ ಬೆಳೆಗಳಾಗುತ್ತವೆಂಬುದನ್ನು ಯಾರು ಹೇಳುವುದಕ್ಕಾ

(ಶ್ರೀ. ಎಚ್ ಎಂ. ಚನ್ನಬಸಪ್ಪನವರು).

ಗುವುದಿಲ್ಲ. ಹೋದ ವರ್ಷ ಇದ್ದ ಮಳೆ ಬೆಳೆ ಈ ವರ್ಷ ಇಲ್ಲ. ಈ ವರ್ಷ ಇರತಕ್ಕದ್ದು ಮುಂದಿನ ವರ್ಷ ಇರುವುದಿಲ್ಲ. ಪರಿಸ್ಥಿತಿ ಹೀಗಾದ ಸಂದರ್ಭದಲ್ಲಿ ಸರ್ಕಾರದವರು ಸಹಾಯವನ್ನು ಯಾವ ರೀತಿ ಮಾಡುತ್ತಾರೆಂಬುದನ್ನು ಯಾರೂ ಹೇಳುವುದಕ್ಕಾಗುವುದಿಲ್ಲ. ಸ್ಥಿತಿಗತಿಗಳ ವಾಸ್ತವಾಂಶ ಹೀಗಿರುವಾಗ್ಗ ಮೊದಲು ಜಮೀನ್ದಾರನು ಯಾವ ಕಂಡೀಷನ್‌ಗಳನ್ನು ಹಾಕಿ ಜಮೀನನ್ನು ಸಾಗುವಳಿಗೆ ಕೊಟ್ಟಿರುತ್ತಾನೋ, ತರುವಾಯವೂ ಅದೇ ಕಂಡೀಷನ್‌ಗಳನ್ನೂ ಹಾಕಿ ಜಮೀನನ್ನು ಸಾಗುವಳಿಗೆ ಕೊಡಬೇಕೆಂದರೆ ಇದರಿಂದ ಉಭಯ ಪಾರ್ಟಿಗಳಿಗೂ ಎಷ್ಟೆಷ್ಟು ತೊಂದರೆಗಳಾಗುತ್ತವೆಂಬುದಕ್ಕೆ ಈ ವಿಷಯಗಳನ್ನೆಲ್ಲಾ ನಾನು ಈ ಮಾನ್ಯ ಸಭೆಯ ಗಮನಕ್ಕೆ ತಂದಿಟ್ಟಿಸಿದೆನು. ಈ ಸಂಬಂಧದಲ್ಲಿ ನಾನು ತಿಳಿಸಬೇಕೆಂದಿರುವುದಾದರೂ ಇಷ್ಟೆ—ಈ ರೀತಿಯಾಗಿ ಒಂದು ಶಾಸನಮಾಡುವುದರಿಂದ ಉಭಯಪಾತ್ರರಿಗೂ ತೊಂದರೆಯಾಗುತ್ತದೆ. ಈ ವಿಚಾರವನ್ನು ಕಾನೂನಿಗೊಳಪಡಿಸದೆ ಅವರವರ ಪರಸ್ಪರ ವಿಶ್ವಾಸ ಯಾವ ರೀತಿ ಇರುತ್ತದೋ ಅದರ ಮೇಲೆ ಅವರು ಕಂಡೀಷನ್‌ಮಾಡಿಕೊಂಡು, ಉಭಯತ್ರರಿಗೂ ಅನುಕೂಲವಾಗಿ ವರ್ತಿಸುವ ಒಂದು ಸದವಕಾಶವನ್ನು ಅವರಿಗೇ ಬಿಟ್ಟು ಬಿಟ್ಟರೆ ಅನುಕೂಲವಾಗಬಹುದೆಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಈ 25ನೆಯ ಕ್ಲಾಜಿನಲ್ಲಿ Relief against termination of tenancy ವಿಚಾರ ಹೇಳಿದ್ದಾರೆ. ಆದರೆ ಸಾಗುವಳಿದಾರನು ಪ್ರತಿ ವರ್ಷವೂ ತಾನು ಕೊಡತಕ್ಕ ಗುತ್ತಿಗೆಯನ್ನು ಕೊಡದಿದ್ದಾಗಲಾಗಲೀ ಅಥವಾ ಸಾಗುವಳಿಮಾಡದೆ ಜಮೀನನ್ನು ಪಾಳುಗೆಡವಿದ್ದಾಗಲಾಗಲೀ ಅಥವಾ ಅದನ್ನು ನಾದುರಸ್ತಿಗೆ ಎಂದರೆ ಜಮೀನನ್ನು ಹೀನಸ್ಥಿತಿಗೆ ತಂದಾಗಲಾಗಲೀ, ಜಮೀನ್ದಾರನು ಸಾಗುವಳಿದಾರನಿಂದ ಸದರಿ ಜಮೀನನ್ನು ಬಿಡಿಸಿಕೊಳ್ಳಲು ಒಂದು ಅವಕಾಶವನ್ನು ಈ ಕಾನೂನಿನ 15ನೆಯ ಸೆಕ್ಷನ್ನಿನಲ್ಲಿ ತಿಳಿಸಿದ್ದಾರೆ. ಹೀಗೆ 15ನೆಯ ಸೆಕ್ಷನ್ನಿನಲ್ಲಿ ಏನು ವಿಧಾಯಕಮಾಡಿದ್ದಾರೊ ಅದಕ್ಕೆ 25ನೆಯ ಸೆಕ್ಷನ್ನಿನಲ್ಲಿ ಹೇಳಿರುವುದು ವಿರೋಧವಾಗಿದೆ. ಹೇಗೆಂದರೆ ಯಾವಾಗ ಒಬ್ಬ ಸಾಗುವಳಿದಾರನು ತಾನು ಸಾಗುವಳಿಮಾಡತಕ್ಕ ಜಮೀನಿನ ಗುತ್ತಿಗೆಯನ್ನು ಕೊಡದೆ ತಪ್ಪಿತಸ್ಥನಾದಾಗ, ಜಮೀನ್ದಾರನು ಆ ಬಗ್ಗೆ ಅಮಲ್ದಾರರಿಗೆ ಅರ್ಜಿಹಾಕಿಕೊಳ್ಳಬೇಕೆಂದೂ, ಆಗ ಅಮಲ್ದಾರರು ಅದನ್ನು ವಿಚಾರಣೆ ಮಾಡಿ, ಅಂಕಿ ಅಂಶಗಳನ್ನು ಶೇಖರಿಸಿ, ತೀರ್ಮಾನ ಕೊಡಲು ಅಮಲ್ದಾರರಿಗೆ ಒಂದು ವರ್ಷ ಅವಕಾಶ ಕೊಡಲಾಗಿದೆ ಮತ್ತು ಅವರಿಗೆ ಈ ಅಧಿಕಾರವಿರುತ್ತೆಂಬುದಾಗಿ ತಿಳಿಸಲಾಗಿದೆ. ಹಾಗೆ ಒಂದು ವರ್ಷದ ಅವಧಿಯೊಳಗಾಗಿ ಸಾಗುವಳಿದಾರನು ಗುತ್ತಿಗೆಕೊಟ್ಟ ಪಕ್ಷದಲ್ಲಿ ಆ ಮನುಷ್ಯನೇ ಸಾಗುವಳಿದಾರನಾಗಿ ಮುಂದೆಯೂ ಆ ಜಮೀನನ್ನು ಆತನಿಗೆ ಸಾಗುಮಾಡುವಂತೆ ಹುಕುಂಮಾಡಲು ಅಮಲ್ದಾರರಿಗೆ ಅಧಿಕಾರವಿದೆ. ಹೀಗೆ ಒಂದು ವರ್ಷ ಮಾಯಿದೆ ಕೊಟ್ಟಿರತಕ್ಕದ್ದು ತುಂಬಾ ತೊಂದರೆಗೆ ಕಾರಣವಾಗಿರುತ್ತೆ. ಏತಕ್ಕೆಂದರೆ ಅನೇಕ ಸಣ್ಣ ಸಣ್ಣ ಜಮೀನ್ದಾರರು ಯಾವಾಗ ಜನವರಿ ತಿಂಗಳು ಬಂದಿತೋ ಯಾವಾಗ ರೈತ ಗುತ್ತಿಗೆ ಕೊಟ್ಟಾನೋ ಎಂದು ಹಾರೈಸುತ್ತಿರುತ್ತಾರೆ. ಅಂಥಾ ಪ್ರಸಂಗವಿರುವಾಗ ಒಂದು ಕಡೆ ಕೂಡಲೇ ಬಿಡಿಸಿಕೊಳ್ಳಲು ಅವಕಾಶಕೊಟ್ಟು ಮತ್ತೊಂದು ಕಡೆ ಅದಕ್ಕೆ ವಿರೋಧವಾಗಿ ಹೇಳಿರುವುದರಿಂದ ಇವೆರಡು ಸೆಕ್ಷನ್‌ಗಳೂ ಒಂದಕ್ಕೊಂದು ಪರಸ್ಪರ ವಿರೋಧವಾಗಿರುತ್ತವೆ. ಜಮೀನ್ದಾರರಾಗಿರತಕ್ಕವರಲ್ಲಿ ಅನೇಕರು ಬಡವರೂ, ವಿಧವೆಯರಾದಂಥ ಹೆಂಗಸರೂ ಬಾಲಕರೂ ಇರುತ್ತಾರಾದ ಕಾರಣ ಅವರೆಲ್ಲರೂ ಇದನ್ನೇ ನಂಬಿಕೊಂಡು ಜನವರಿ ತಿಂಗಳನ್ನೇ ಕಾದು ಕುಳಿತಿರತಕ್ಕವರಿಗೆ ಹೀಗೆ ಮಾಡಿಬಿಟ್ಟರೆ ಅವರೆಲ್ಲರ ಗತಿಯೇನಾಗಬೇಕು ? ಹೀಗೆ ಅಮಲ್ದಾರರಿಗೆ ಒಂದು ವರ್ಷ ಅವಧಿ ಕೊಟ್ಟಿರತಕ್ಕದ್ದರ ಪರಿಣಾಮವೇನಾಗುತ್ತದೆಂಬುದನ್ನು ಮಾನ್ಯ ಸದಸ್ಯರೆಲ್ಲರೂ ಆಲೋಚನೆಮಾಡಬೇಕಾದ ವಿಷಯ. ಆದ್ದರಿಂದ ಇದನ್ನು ತೆಗೆಯಿರಿ ಎಂದು ಹೇಳುವುದಿಲ್ಲ, ಹಿಂದೆ ಸಲಹೆಮಾಡಿದ್ದಂತೆ ಒಂದು ತಿಂಗಳು ಅಥವ 15 ದಿವಸಗಳು ಎಂದು ಮಾಡಿದರೆ ಸಾಕು. ಅದು ನ್ಯಾಯ ಮತ್ತು ಧರ್ಮ. ಒಂದು ವರ್ಷ ಎಂದು ನಿಗದಿಮಾಡಿರುವುದನ್ನು ತೆಗೆಯಬೇಕು.

ಇನ್ನು 26ನೆಯ ಕ್ಲಾಜಿನ ಒಂದನೆಯ ಸಬ್ ಕ್ಲಾಜು ಮತ್ತು ಎರಡನೆಯ ಸಬ್ ಕ್ಲಾಜುಗಳಲ್ಲಿ ಸಾಗುವಳಿದಾರ ಕೊಡುವ ಗುತ್ತಿಗೆಗೆ ಸರಿಯಾದ ರಸೀದಿಕೊಡಬೇಕೆಂದು ಹೇಳಿದೆ. ಅದು ನ್ಯಾಯವಾದದ್ದು. ಒಂದನೆಯ ಸಬ್ ಕ್ಲಾಜಿನಲ್ಲಿ ಸಾಗುವಳಿ ಕಾಲದಲ್ಲಿ ಯಾವುದೇ ಹಣವನ್ನು ಜಮೀನನ್ನು ಸಾಗುಮಾಡುವವನು ಪಾವತಿಮಾಡಿದರೂ ಕೂಡ ಆ ಬಗ್ಗೆ ಸಾಗುವಳಿದಾರ ಇಂಥ ಕಾರಣಕ್ಕಾಗಿ ಹಣ ಕೊಟ್ಟಿದ್ದೇನೆಂದು ವಿಧಾಯಕವಾಗಿರುವ ರೀತಿಯಲ್ಲಿ ತಿಳಿಸದೇ ಹೋದರೆ ಆಗ ಎಲ್ಲವನ್ನೂ ಸಾಗುವಳಿ ಗುತ್ತಿಗೆಗೇ ಹಾಕಿಕೊಳ್ಳಬೇಕೆಂದಿದೆ.

> "In the absence of an express intimation in writing to the contrary by a tenant every payment made by a tenant to the landlord shall be presumed to be a payment on account of rent due by such tenant for the year in which the payment is made."

ಎಂದು ಒಂದನೆಯ ಸಬ್ ಕ್ಲಾಜಿನಲ್ಲಿ ಹೇಳಿದೆ. ಜಮೀನ್ದಾರರಿಗೆ ಸಾಗುಮಾಡುವ ಸಂದರ್ಭದಲ್ಲಿ ಮಾತ್ರ ವ್ಯವಹಾರ ಸಂಬಂಧ ಇರುತ್ತದೆ ಎಂದು ಹೇಳುವುದು ಸರಿಯಲ್ಲ. ಅನೇಕ ಸಂದರ್ಭಗಳಲ್ಲಿ ಬಡ ಸಾಗುವಳಿದಾರರಿಗೆ ದಿನಚರಿ ವ್ಯವಹಾರಗಳಿಗಾಗಿ ಎಷ್ಟೋ ಸಹಾಯ ಮಾಡಿರುತ್ತಾರೆ. ನಾಟಿ ಹಾಕುವುದು, ಕೊಯ್ಲು, ಕೂಲಿ ಇತ್ಯಾದಿಗಳಿಗಾಗಿ 10—15 ರೂಪಾಯಿಗಳನ್ನು ಕೊಡುವುದು, ತೆಗೆದುಕೊಳ್ಳುವುದು ಚಾಲ್ತಿಯಲ್ಲಿದೆ. ಹಾಗೆ ಚಾಲ್ತಿಯಲ್ಲಿ ಬಂದಿರುವ ಒಂದು ಪದ್ಧತಿಯ ಪ್ರಕಾರ 5—10 ತೆಗೆದುಕೊಂಡು ಕೊಟ್ಟಿರುವುದು ಇಲ್ಲವೇ ಇಲ್ಲ ಎಂದು ಜಮೀನ್‌ದಾರರು ಹೇಳಬಹುದು ಎಂಬ ಅಪನಂಬಿಕೆಯಿಂದ ಇದರಿಂದ ಸಾಗುವಳಿದಾರರಿಗೆ ತೊಂದರೆಯಾಗುತ್ತದೆಂಬ ಒಂದು ಉದ್ದೇಶದಿಂದ ಇದನ್ನು ತಂದಿರಬಹುದು. ಆದರೆ ಇಷ್ಟು ಹೇಳಬಹುದು, ಸಾಮಾನ್ಯವಾಗಿ 100–500 ಸಾಲ ಸೋಲ ಕೊಟ್ಟರೆ ಕಾನೂನು ಪ್ರಕಾರ ಕಾಗದ ಪತ್ರವಿರುತ್ತದೆ. ಅಂಥ ಕಾಗದ ಪತ್ರಗಳಲ್ಲಿ ಹಣಕೊಟ್ಟ ಕೂಡಲೆ ಷರಾ ಬರೆಯುತ್ತಾರೆ. ನಾಟಿ, ಕೊಯ್ಲು ವಗೈರೆಗೆ 10—20 ಸಾಲ ತೆಗೆದುಕೊಡುವುದಕ್ಕೆ ಅದನ್ನು ಕೊಟ್ಟಾಗಲೂ ಒಂದು ರಸೀತಿ ಬರೆದುಕೊಡಬೇಕು, ವಾಪಸು ಕೊಟ್ಟಿರುವುದಕ್ಕೆ ದಾಖಲೆ ಇರಬೇಕು, ಇಲ್ಲದಿದ್ದರೆ ಕೊಟ್ಟ ದುಡ್ಡನ್ನೆಲ್ಲಾ ಸಾಗುವಳಿ ಗುತ್ತಿಗೆಗೇ ಹಾಕಿಕೊಂಡು ಜಮೀನು ಕಿತ್ತುಕೊಳ್ಳಲು ಅವಕಾಶವಾಗಬಹುದು ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಇದರಿಂದ ಬಹಳ ತೊಂದರೆಯಾಗುತ್ತದೆ. ಜಮೀನ್‌ದಾರರು ಮತ್ತು ಸಾಗುವಳಿದಾರರಲ್ಲಿ ಅನಕ್ಷರಸ್ಥರು ಎಷ್ಟೋ ಮಂದಿ ಇರುತ್ತಾರೆ. ಅಂಥ ಸಂದರ್ಭದಲ್ಲಿ ಪರಸ್ಪರ ಘರ್ಷ

ಣಿಗೆ ಅವಕಾಶವಾಗಿ ಸಾಗುವಳಿದಾರ ಮತ್ತು ಜಮೀನ್ದಾರರಿಗೆ ಮನಸ್ತಾಪ ಬಂದು ವ್ಯವಸಾಯ ದಿನಕ್ರಮೇಣ ಕಡಿಮೆಯಾಗಿ ವ್ಯವಸಾಯ ಅಭಿವೃದ್ಧಿಯಾಗಿ ದೇಶದ ಸಂಪದಭಿವೃದ್ಧಿಯಾಗಬೇಕೆಂದಿರುವ ಆಸೆಗೆ ಧಕ್ಕೆ ಬರುತ್ತದೆ ಎಂಬ ಅಂಶವನ್ನು ತಿಳಿಸಲು ಆಶಿಸುತ್ತೇನೆ.

ಆ ಮೇಲೆ 32ನೆಯ ಕ್ಲಾಜಿನ (e) ಐಟಂನಲ್ಲಿ ಕಾಂಪೆನ್ಸೇಷನ್ ನಿರ್ಧರಮಾಡಿ ವಸೂಲುಮಾಡುವುದಕ್ಕೆ ಅಮಲ್ದಾರರಿಗೆ ಅಧಿಕಾರ ಕೊಡಲಾಗಿದೆ. ಯಾನಾದರೂ ಜಮೀನ್ದಾರ ಸಾಗುವಳಿದಾರನಿಂದ ಹೆಚ್ಚು ಭಾಗವನ್ನು ಅಂದರೆ ತನಗೆ ನ್ಯಾಯವಾಗಿ ಸಲ್ಲಬೇಕಾದ್ದಕ್ಕಿಂತ ಹೆಚ್ಚಾಗಿ ವಸೂಲುಮಾಡಿದರೆ ಆಗ ಸಾಗುವಳಿದಾರನಿಗೆ ತೊಂದರೆಯಾಗುತ್ತದೆ, ಅದಕ್ಕೆ ಅವಕಾಶವಿದೆ. ಹಾಗೆ ಮಾಡಿದಾಗ ಅಮಲ್ದಾರರಿಗೆ ಅರ್ಜಿ ಕೊಟ್ಟರೆ ಹೆಚ್ಚಾಗಿ ತೆಗೆದುಕೊಂಡಿರುವುದನ್ನು ವಾಪಸು ಕೊಡಿಸುವ ಅಧಿಕಾರ ಅವರಿಗಿದೆ. ಮತ್ತು ಆ ರೀತಿ ಜಮೀನ್ದಾರ ಮಾಡಿದ ಅಪರಾಧಕ್ಕೆ ಅವನಿಗೆ ಜುಲ್ಮಾನೆ ಹಾಕಬಹುದೆಂದಿದೆ. "Such compensation as the Amildar may prescribe" ಎಂದು ಹೇಳಿರುವುದರಲ್ಲಿ ಅರ್ಥವಿಲ್ಲ. ಹೆಚ್ಚು ಗುತ್ತಿಗೆ ವಸೂಲುಮಾಡಿದ್ದರೆ ಅದನ್ನು ವಾಪಸುಕೊಡುವುದು ನ್ಯಾಯ. ಅದರ ಜೊತೆಗೆ ಕಾಂಪೆನ್ಸೇಷನ್ ಬೇರೆ ಕೊಡಬೇಕೆಂದು ಹೇಳುವುದು ಅರ್ಥವಾಗುವುದಿಲ್ಲ. ತಪ್ಪಿಗೆ ಶಿಕ್ಷೆಮಾಡುವುದು ನ್ಯಾಯ. ಅದು ಬಿಟ್ಟು ಪರಿಹಾರಕೊಡಬೇಕೆಂದು ಹೇಳುವುದು ಸರಿಯಲ್ಲ. ಅದಿದ್ದರೆ ಅಪಾರ್ಥವಾಗುವುದರಿಂದ ಅದು ಹೋಗಬೇಕು.

27ನೆಯ ಕ್ಲಾಜಿನಲ್ಲಿ "No sub-division or sub-letting of the land or assignment of any interest held by a tenant shall be valid" ಎಂದು ಹೇಳಿದೆ. ಇದಕ್ಕೆ ಸಾಗುವಳಿದಾರನಿಗೆ ಅಧಿಕಾರಕೊಡಕೂಡದು. ಕರಾರಿನ ಪ್ರಕಾರ ಗುತ್ತಿಗೆ ಕೊಡುವುದು ಮಾತ್ರ ಅವರ ಕೆಲಸ, ಜಮೀನು ತುಂಡುಮಾಡಿ ಬೇರೆಯವರಿಗೆ ಕೊಡುವುದಕ್ಕೆ ಅವರಿಗೆ ಅಧಿಕಾರವಿರಬಾರದು ಎಂದು ಹೇಳುವುದು ವಾಸ್ತವವಾದ ಅಂಶ. ಅದು ಸರಿಯಾಗಿದೆ. ಇದಕ್ಕೆ "Provided that nothing in this sub-section shall prejudicially affect the rights of a permanent tenant......................" ಎಂದು ಒಂದು ಪ್ರಾವಿಸೋ ಬೇರೆ ಇದೆ. ಪರ್ಮನೆಂಟ್ ಟೆನೆಂಟ್ಸ್ ಎಂದು ಹೇಳಿರುವುದು ಇನಾಂ ಗ್ರಾಮಗಳಿದ್ದರೆ ಅದಕ್ಕೆ ಅನ್ವಯಿಸುವುದು. ರೈತವಾರಿ ಪದ್ಧತಿಯಲ್ಲಿ ಪರ್ಮನೆಂಟ್ ಟೆನೆಂಟ್ಸ್‌ಗೆ ಅವಕಾಶವಿಲ್ಲ. ಜಹಗೀರಿ ಮತ್ತು ಇನಾಮುಗಳನ್ನು ವಜಾಮಾಡಬೇಕೆಂಬ ಒಂದು ಅಭಿಪ್ರಾಯವಿರುವುದರಿಂದ ಮತ್ತು ಅದಕ್ಕಾಗಿ ಒಂದು ಶಾಸನ ಶೀಘ್ರದಲ್ಲೇ ಬರಲಿರುವುದರಿಂದ ಪರ್ಮನೆಂಟ್ ಟೆನೆಂಟ್ಸ್‌ಗೆ ಇಲ್ಲಿ ಹೀಗೆ ಒಂದು ಪರಿಹಾರ ಒದಗಿಸುವುದು ಅನಾವಶ್ಯಕ.

ಮುಂದೆ ಕ್ಲಾಜು 41ರಲ್ಲಿ ಅಮಲ್ದಾರರು, ಅಸಿಸ್ಟೆಂಟ್ ಕಮೀಷನರು, ಜಿಲ್ಲಾಧಿಕಾರಿಗಳು ಮತ್ತು ಸರ್ಕಾರ ಇನ್‌ಕ್ವೈರಿಮಾಡಿ ಆರ್ಡರು ಪಾಸ್‌ಮಾಡುವುದು ಜ್ಯುಡಿಷಿಯಲ್ ಪ್ರೊಸೀಡಿಂಗ್ಸ್ ಎಂದು ಪರಿಗಣಿಸಬೇಕೆಂದಿದೆ. ಇದರಲ್ಲಿ ಒಂದು ಅಂಶ ಮರೆತಿದೆ. ಅಮಲ್ದಾರರಿಗೆ ಈ ಶಾಸನದ ಪ್ರಕಾರ ಅನೇಕ ಕೆಲಸಗಳನ್ನು ವಹಿಸಿದೆ. ಈಗಾಗಲೆ ಅವರಿಗೆ ಹೊರಲಾರದಷ್ಟು ಕೆಲಸ ಕಾರ್ಯಗಳಿವೆ ಎಂಬುದನ್ನು ನಾವು ಈ ಸಂದರ್ಭದಲ್ಲಿ ಮರೆಯುವುದಕ್ಕಾಗುವುದಿಲ್ಲ. ಇದರ ಜೊತೆಗೆ ಸಾಗುವಳಿ ಕೊಡುವುದು, ತೆಗೆದುಕೊಳ್ಳುವುದು ಈ ವ್ಯವಹಾರಗಳಲ್ಲುಂಟಾಗುವ ಪರಸ್ಪರ ಭಿನ್ನಾಭಿಪ್ರಾಯಗಳೆಷ್ಟೋ ಇರುತ್ತವೆ. ಅವನ್ನೆಲ್ಲಾ ಅಮಲ್ದಾರರು ಇತ್ಯರ್ಥಮಾಡಬೇಕಾಗಿ ಬರುತ್ತದೆ. ಅವರ ಕೆಲಸಗಳ ಒತ್ತಡದಲ್ಲಿ ತೀರ್ಮಾನ ಮಾಡುವುದು ನಿಧಾನವಾಗಬಹುದು. ಆದ್ದರಿಂದ ಅಮಲ್ದಾರರು ಇವನ್ನು ತೀರ್ಮಾನಮಾಡುವುದಕ್ಕೆ ಒಂದು ಕಾಲಮಿತಿಯನ್ನು ನಿರ್ಧಾರಮಾಡುವಂತಿದ್ದರೆ ಅನುಕೂಲ. ಈ ಸಂದರ್ಭದಲ್ಲಿ ಸಾಗುವಳಿದಾರನಿಗೆ ಉಂಟಾಗುವ ಕಷ್ಟ ಹೇಳುವುದಕ್ಕೆ ಸಾಧ್ಯವಿಲ್ಲ. ಸಾಗುವಳಿದಾರ ಅಥವಾ ಜಮೀನ್ದಾರರು ಒಂದು ರಿಲೀಫ್ ಬೇಕೆಂದು ಅರ್ಜಿಕೊಟ್ಟಾಗ್ಗೆ ತಿಂಗಳುಗಟ್ಟಲೆ ನಿಧಾನವಾಗಿ ತೀರ್ಮಾನ ದೊರಕಿದರೆ ಅವರ ಗತಿಯೇನು? ಗುತ್ತಿಗೆ ಕೊಡಲಿಲ್ಲವೆಂದು ಒಬ್ಬ ಜಮೀನ್ದಾರ ಅರ್ಜಿ ಹಾಕಿದರೆ ಅಮಲ್ದಾರರು ಅವರ ನೂರೆಂಟು ತಾಪತ್ರಯಗಳಲ್ಲಿ ತಮ್ಮ ಜವಾಬ್ದಾರಿಯನ್ನು ಜಾಗ್ರತೆ ನಿರ್ವಹಿಸಲು ಅವಕಾಶವಿಲ್ಲದೆ ಆರು ತಿಂಗಳು ಅಥವ ವರ್ಷ ಆದ ಮೇಲೆ ತೀರ್ಮಾನಮಾಡುವುದಾದರೆ ಆ ಜಮೀನು ಬಿಡುಗಡೆಯಾಗುವ ಹಾಗಿಲ್ಲ, ಹೊಟ್ಟೆಗಿಲ್ಲದೆ ಸಾಯಬೇಕು. ಇಂಥ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಈ ತೊಂದರೆ ತಪ್ಪಿಸಲು ತಕರಾರು ಫೈಸಲು ಒಂದು ನಿಗದಿಯಾದ ಕಾಲಾವಧಿಯೊಳಗೆ ಮಾಡುವಂತೆ ಕಾನೂನಿನಲ್ಲಿ ಬದಲಾವಣೆ ಮಾಡಬೇಕು.

ಆದ್ದರಿಂದ ಬೇರೆ ಒಂದು ಪ್ರೊವಿಸೋ ಹಾಕಬೇಕಾಗುತ್ತದೆ. ಇದರಲ್ಲಿ ಯಾವುದಾದರೂ ಒಂದು ನ್ಯಾಯವಾದ ಕಾಲ ಪರಿಮಿತಿಯನ್ನು ಗೊತ್ತುಮಾಡಬೇಕು. ಅರ್ಜಿ ಕೊಟ್ಟ ಲಾಗಾಯ್ತು ಇಷ್ಟು ದಿನದ ಒಳಗೆ ತೀರ್ಮಾನ ಹೇಳಿಯೇ ತೀರಬೇಕು ಎಂಬ ಒಂದು ಪ್ರತಿಬಂಧಕವನ್ನು ಅಮಲ್ದಾರರು ಡೆಪ್ಯುಟಿ ಕಮೀಷನರು, ಅಸಿಸ್ಟೆಂಟ್ ಕಮೀಷನರು ಮತ್ತು ಸರ್ಕಾರದ ಮೇಲೆ ಹಾಕದೇ ಇದ್ದ ಪಕ್ಷದಲ್ಲಿ ಯಾವ ಉದ್ದೇಶದಿಂದ ಈ ಕಾನೂನನ್ನು ತಂದಿದ್ದೇವೆಯೋ ಅದು ಸಫಲವಾಗುವುದಿಲ್ಲ. ಅದರಿಂದ ಮೊಕದ್ದಮೆಗಳ ತಂಡವೇ ಹೆಚ್ಚಾಗಿ ಜನಗಳಿಗೆ ತೊಂದರೆಯಾಗುತ್ತದೆ. ನಾನು ಬಹಳ ಕಾಲ ತೆಗೆದುಕೊಂಡಿದ್ದಕ್ಕೆ ಮಾನ್ಯ ಸದಸ್ಯರು ಕ್ಷಮಿಸಬೇಕು. ಒಟ್ಟಿನಲ್ಲಿ ಇದರ ಮೂಲ ಉದ್ದೇಶ ಇಷ್ಟೆ. ಜಮೀನ್ದಾರರಿಗೆ ಇಲ್ಲದ ಸಲ್ಲದ ಅನುಕೂಲ ಒದಗಿಸಬೇಕು ಸಾಗುವಳಿದಾರರಿಗೆ ಇರತಕ್ಕ ತೊಂದರೆ ಹೆಚ್ಚು ಮಾಡಬೇಕು ಎಂಬ ಒಂದು ಪ್ರತ್ಯಕ್ಷ, ಪರೋಕ್ಷ ಮನೋಭಾವದಿಂದ ಇದನ್ನು ಮಾಡಿದ್ದಾರೆಂದು ಯಾರೂ ತಿಳಿದುಕೊಳ್ಳಬಾರದು. ಯಾವ ಉದಾತ್ತವಾದ ಧ್ಯೇಯವನ್ನು ಸಾಧಿಸಬೇಕೆಂದಿದ್ದಾರೋ ಅದನ್ನು ಸಾಧನೆ ಮಾಡುವುದರಲ್ಲಿ ನಾನೂ ಕೂಡ ನನ್ನ ಕೈಲಾದಷ್ಟು ಸೇವೆ ಮಾಡಬೇಕೆಂಬ ಆಶೆ ಇದೆ. ಆ ಧ್ಯೇಯ ಸಾಧನೆ ಮಾಡುವಾಗ ಧ್ಯೇಯದ ಬುಡಕ್ಕೇ ಕೊಡಲಿ ಪೆಟ್ಟು ಹಾಕಿ ಯಾವ ಉದ್ದೇಶ ಸಾಧನೆ ಮಾಡುವುದಕ್ಕೆ ಹೊರಟಿದ್ದೇವೆಯೋ ಆ ಉದ್ದೇಶ ಮಾಯವಾಗುವಂತೆ ಮಾಡುವುದರಲ್ಲಿ ಒಳ್ಳೆಯದಾಗುವುದಿಲ್ಲ. ಹೋಗತಕ್ಕ ಮಾರ್ಗ ಸುಗಮವಾಗಿರಬೇಕು. ಒಂದು ಸುಗಮವಾದ ವಾತಾವರಣ ಕಲ್ಪನೆಯಾಗಬೇಕು ಎಂಬ ವಿಷಯವನ್ನು ಮರೆಯಬಾರದು. ಆಗಲೇ ನಾನು ಅಂಕಿ ಅಂಶಗಳನ್ನು ತಿಳಿಸಿದಂತೆ ಇಡೀ ಪ್ರಪಂಚದಲ್ಲಿ ಮೈಸೂರು ದೇಶದಲ್ಲಿರತಕ್ಕ ಗೇಣಿದಾರರಿಗೂ ಮತ್ತು ಜಮೀನ್ದಾರರಿಗೂ ಇರುವ ಒಂದು ಸಂಬಂಧ ಇತರ ದೇಶಗಳಿಗಿಂತ ಉತ್ತಮವಾಗಿದೆ ಎಂಬ ವಿಚಾರದಲ್ಲಿ ಯಾರೂ ಭಿನ್ನಾಭಿಪ್ರಾಯಪಡಲಾರರು. ಹೀಗಿರತಕ್ಕ ಪರಿಸ್ಥಿತಿಯಲ್ಲಿ ಇನ್ನು ಉತ್ತಮ ಏರ್ಪಾಡು ಆಗಬೇಕೆಂಬ ಆಶೆ ತಮಗೆಲ್ಲರಿಗೂ ಎಷ್ಟು ಇದೆಯೋ ಅದಕ್ಕಿಂತಲೂ ನನಗೆ ಹೆಚ್ಚಾಗಿದೆ ಎಂಬುದನ್ನು ಮತ್ತು ಆ ಉದ್ದೇಶ ಸಾಧನೆ ಮಾಡುವುದಕ್ಕೆ ತಮಗೆಲ್ಲರಿಗಿಂತಲೂ ಹೆಚ್ಚು ಶ್ರದ್ಧೆಯಿಂದ ದುಡಿ

(ಶ್ರೀ ಎಚ್. ಎಂ. ಚನ್ನಬಸಪ್ಪನವರು).

ಯಾಲು ಸಿದ್ಧವಾಗಿದ್ದೇನೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಈ ಮೂರು fixity of tenure ; fair rent ; prevention of exploitation ಒದಗಿಸಬೇಕು.

Sri G. A. ACHARYA.—Subject to change every year.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—Such a change is going to do good to the country. ಈ ಉದ್ದೇಶ ಸಾಧನೆಯಾಗಬೇಕಾದರೆ Retransfer and free of litigation " ಗೆ ಅವಕಾಶವಿರಬೇಕು. ನಾವು ಕಾನೂನುಗಳನ್ನು ಮಾಡಿ, ಕಾನೂನು ಕಡತಕ್ಕೆ ಏರಿಸುವ ಬರದಲ್ಲಿ ಆಶಾಸನದಿಂದ ಏನು ಪ್ರಮಾದವಾಗುತ್ತದೆ, ಏನು ಒಳ್ಳೆಯದಾಗುತ್ತದೆ ಎಂಬುದನ್ನು ರಚನಾತ್ಮಕ ದೃಷ್ಟಿಯಿಂದ ತೂಕ ಮಾಡಿ ಒಳ್ಳೆಯ ಉತ್ತಮವಾದ ಏರ್ಪಾಡು ಒದಗತಕ್ಕ ಶಾಸನ ಮಾಡಬೇಕು ಎಂಬುದನ್ನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. Development of ownership ಬಹಳ ಮುಖ್ಯವಾದುದು. ಈ ವಿಷಯದಲ್ಲಿ ಯಾರಿಗಾದರೂ ಭಿನ್ನಾಭಿಪ್ರಾಯವಿದ್ದರೆ ಅದು ಸರಿಯಲ್ಲ. ಪ್ರತಿಯೊಬ್ಬ ಸಾಗುವಳಿ ಮಾಡತಕ್ಕವನೂ ಜಮೀನ್‌ದಾರನಾಗಿ ಪರಿವರ್ತನೆಯಾಗಬೇಕೆಂಬುದರಲ್ಲಿ ನಾನು ತೀವ್ರವಾದ ಆಶೆಯುಳ್ಳವನು. ಯಾವ ರೀತಿ ಆಗಬೇಕೆಂಬುದರಲ್ಲಿ ಭಿನ್ನಾಭಿಪ್ರಾಯವಿರಬಹುದು. ಆಸ್ಟ್ರೇಲಿಯಾದಲ್ಲಿ, ಅಮೇರಿಕಾದಲ್ಲಿ, ಇತ್ತೀಚೆಗೆ ಚೈನಾದಲ್ಲೂ ಸಹ ಕಾನೂನು ಮಾಡಿದ್ದಾರೆ. ಸಾಗುವಳಿದಾರ ಜಮೀನುಗಳನ್ನು ಕೊಂಡುಕೊಂಡು ತಾನೇ ಸ್ವಂತ ಜಮೀನ್‌ದಾರನಾಗಲು ಏರ್ಪಾಡು ಮಾಡಿದ್ದಾರೆ. ಆ ರೀತಿ ಒಂದು ಶಾಸನ ಮಾಡಿದ ಪಕ್ಷದಲ್ಲಿ ಈ ರೀತಿ ಟೆನೆಂಟ್ಸ್ ಇರುವುದಕ್ಕೆ ಕಾರಣವೇ ಇರುವುದಿಲ್ಲ. ಪ್ರತಿಯೊಬ್ಬನೂ ಜಮೀನುದಾರನಾಗುತ್ತಾನೆ. ವ್ಯವಸಾಯ ಮಾಡತಕ್ಕ ಬಡಪಾಯಿ ರೈತ ಜಮೀನು ತೆಗೆದುಕೊಳ್ಳಬೇಕೆಂದು ಹಣ ಕೇಳುವುದಕ್ಕೆ ಹೋದರೆ ಸಾಲ ಕೇಳಿದರೆ ಅವನನ್ನು ಶೋಷಣೆ ಮಾಡತಕ್ಕ ಸಾಲ ಕೊಡುವವರು ಇದ್ದಾರೆಯೇ ಹೊರತು, ಅವನಿಗೆ ಅನುಕೂಲವಾಗಲೆಂದು ಸಾಲ ಕೊಡುವವರು ಇಲ್ಲ. ಉದಾರವಾಗಿ ಸಾಲ ಕೊಡುವವರೂ ಇದ್ದಾರೆ, ಆದರೆ ಅಪರೂಪ. ದೇಶದಲ್ಲಿ ಅಂಥ ಉತ್ತಮ ಏರ್ಪಾಡು ಆಗಬೇಕೆಂದು ಆಶೆ ಪಟ್ಟರೆ I am sure my friend will appreciate the spirit with which I am saying. ವ್ಯವಸಾಯದ ಅಭಿವೃದ್ಧಿಗೆ ಬಡಬಗ್ಗರಿಗೆ ಸುಲಭವಾಗಿ ಹಣ ದೊರಕುವ ರೀತಿಯಲ್ಲಿ ಒಂದು ಅಗ್ರಿಕಲ್ಚರಲ್ ಕಾರ್ಪೊರೇಷನ್ನನ್ನು ಸರ್ಕಾರದವರು ಮಾಡಬೇಕು. ಅದರ ಜೊತೆಗೆ Farmer's Bank ಎಂಬುದಾಗಿ ಜಮೀನು ಇಲ್ಲದವನು ಜಮೀನು ಕೊಂಡುಕೊಳ್ಳಲು ತೆಗೆದುಕೊಳ್ಳುವ ಹಣವನ್ನು 40=50 ವರ್ಷದಲ್ಲಿ ವಾಪಸು ಕೊಡುವುದಕ್ಕೆ ಅವಕಾಶ ಮಾಡಿಕೊಡಲು ಒಂದು ಬ್ಯಾಂಕ್‌ನ್ನು ಏರ್ಪಾಡು ಮಾಡಬೇಕು. ಜಮೀನು ಇಲ್ಲದವರ ಪಟ್ಟಿ ಮಾಡಿ ಅವರ ಪೈಕಿ ವ್ಯವಸಾಯದಿಂದಲೇ ಎಷ್ಟು ಜನ ಜೀವನ ಮಾಡಬೇಕೆಂದು ಇಚ್ಛೆಯುಳ್ಳವರಾಗಿದ್ದಾರೆಂಬುದಕ್ಕೆ ವಿವರ ಪಟ್ಟಿಯನ್ನು ತಯಾರಿಸಬೇಕು. ಅಲ್ಲದೆ ವ್ಯವಸಾಯಕ್ಕೆ ಮುಖ್ಯವಾದ ಜಮೀನು ಎಷ್ಟಿದೆ ಎಂಬ ಪಟ್ಟಿ ತಯಾರು ಮಾಡಿ ಕಾಲೋನಿಗಳನ್ನು ಏರ್ಪಡಿಸಿ 5, 10 ಅಥವಾ 15 ಎಕರೆ ಜಮೀನನ್ನು ಮುಫತ್ತಾಗಿ ಕೊಡಿ. ಬರೀ ಜಮೀನು ಕೊಟ್ಟರೆ ಸಾಧ್ಯವಿಲ್ಲ. ಅದಕ್ಕೆ ಬೇಕಾದ ಸಾಧನ ಸಂಪತ್ತೀಗಳನ್ನು ಸಾಲದ ರೂಪದಲ್ಲಿ ಕೊಟ್ಟು ಸುಲಭವಾದ ರೀತಿಯಲ್ಲಿ ವಾಪಸು ತೆಗೆದುಕೊಳ್ಳುವ ಏರ್ಪಾಡು ಮಾಡಿ. ಈ ರೀತಿ ರಚನಾತ್ಮಕವಾದ ರೀತಿಯಲ್ಲಿ ಕೆಲಸ ಮಾಡುವುದು ಒಳ್ಳೆಯದು. ಇದೆಲ್ಲವನ್ನು ಏಕ್‌ದಂ ಬೆಳಗಾಗುವುದರೊಳಗೆ ಮಾಡುವುದಕ್ಕಾಗುವುದಿಲ್ಲ ಎಂಬುದನ್ನು ತಿಳಿದುಕೊಳ್ಳಬೇಕು. ದಿನಕ್ರಮೇಣ long-term policy ಒಂದನ್ನು ಹಾಕಿಕೊಂಡು 10-15 ಅಥವಾ 20 ವರ್ಷಗಳಲ್ಲಿ ನಮ್ಮ ದೇಶದಲ್ಲಿ ಈ ಟೆನೆನ್ಸಿ ಇರದಂತೆ ಎಲ್ಲರೂ ಜಮೀನ್‌ದಾರರಾಗಿ ಅವರವರ ಜಮೀನು ಅವರವರೇ ಸಾಗುವಳಿ ಮಾಡುವಂತಾಗಬೇಕು. ಈಗಾಗಲೇ 100ಕ್ಕೆ 91 ಜನ ಸ್ವಂತ ಸಾಗುವಳಿದಾರರಿರುವಾಗ ಇನ್ನು 9 ರಷ್ಟು ಜನಕ್ಕೆ ಎಷ್ಟು ಜಮೀನು ಬೇಕೋ ಅಷ್ಟು ಜಮೀನನ್ನು ಅವರಿಗೆ ಕೊಟ್ಟು ಅವರೆಲ್ಲರೂ ಇನ್ನು ಇಷ್ಟು ವರ್ಷದೊಳಗೆ ಜಮೀನ್‌ದಾರರಾಗುವಂತೆ ಮಾಡಬೇಕು. ಒಂದು ವೇಳೆ ಯಾರಾದರೂ ಹೆಚ್ಚು ಜಮೀನಿಟ್ಟುಕೊಂಡು ಅದು ಅಪ್ರಯೋಜಕವಾಗಿ ದೇಶದ ಆಹಾರೋತ್ಪನ್ನಕ್ಕೆ ಭಂಗ ತರತಕ್ಕ ರೀತಿಯಲ್ಲಿದ್ದರೆ ಅದನ್ನು ಅವರಿಂದ ತೆಗೆದುಕೊಂಡು ಜಮೀನಿಲ್ಲದೆ ಇರತಕ್ಕವರಿಗೆ ಹಂಚಬೇಕು. ಇದಕ್ಕೆಲ್ಲಾ ಕಾನೂನು ಬದ್ಧವಾದ ಏರ್ಪಾಡಾಗಬೇಕು. ಇಂಥಾ ಏರ್ಪಾಡುಗಳಾಗುವುದಕ್ಕೆ ಯಾವ ಮನುಷ್ಯ ಪ್ರತಿಭಂಧಕ ಮಾಡುತ್ತಾನೋ ಅವನ ದೇಶಕ್ಕೆ ದ್ರೋಹ ಮಾಡತಕ್ಕವನೇ ಹೊರತು ದೇಶದ ಹಿತದೃಷ್ಟಿಯಿಂದ ಕೆಲಸ ಮಾಡತಕ್ಕವನು ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಅಂಥಾ ದೇಶ ದ್ರೋಹ ಕಾರ್ಯಗಳಿಗೆ ನೆರವಾಗತಕ್ಕ ಯಾವನೇ ಆಗಲೀ ಅವನಿಗೆ ಉಗ್ರ ಶಿಕ್ಷೆ ವಿಧಿಸಲು ಬೆಂಬಲ ಕೊಡತಕ್ಕವರಲ್ಲಿ ನಾನೊಬ್ಬ ಎಂಬುದನ್ನು ಮಾನ್ಯ ಸದಸ್ಯರು ಅರಿತುಕೊಳ್ಳಬೇಕು. ಒಟ್ಟಿನಲ್ಲಿ ಇತರ ದೇಶಗಳಿಗಿಂತಲೂ ಉತ್ತಮವಾದ ರೀತಿಯಲ್ಲಿ ಬೆಳೆದುಕೊಂಡು ಬಂದಿರತಕ್ಕ ಸಂಪ್ರದಾಯವಾದ ಈ ಭೂಸ್ವಾಮ್ಯ ಪದ್ಧತಿಯನ್ನು ಏಕ್‌ದಂ ಹೆಚ್ಚಿನ ಬದಲಾವಣೆ ಮಾಡುವುದು Hasty legislation ಎಂದು ಹೇಳುತ್ತೇನೆ. ಉದ್ದೇಶ ಸಾಧನೆ ಮಾಡಬೇಕೆಂಬ ಆತುರದಲ್ಲಿ ಇರತಕ್ಕ ಪರಿಸ್ಥಿತಿಯನ್ನು ಹದಗೆಡಿಸದ ರೀತಿಯಲ್ಲಿ ದಿನ ಕ್ರಮೇಣ ಉತ್ತಮವಾಗವಂಥ ಏರ್ಪಾಡು ಮಾಡಿದ ಪಕ್ಷದಲ್ಲಿ ಮಾನ್ಯ ಸದಸ್ಯರೆಲ್ಲರೂ ಬೆಂಬಲಕೊಡುತ್ತಾರೆಂದು ನಂಬಿದ್ದೇನೆ. ಒಟ್ಟಿನಲ್ಲಿ ಮಾನ್ಯ ಸದಸ್ಯರು ದೇಶದಲ್ಲಿರತಕ್ಕ ಭೂ ಸುಧಾರಣೆ, ಭೂಸ್ವಾಮ್ಯದ ರಚನೆ ಏನಿದೆ ಅದನ್ನು ಮಾರ್ಪಾಡು ಮಾಡುವಾಗ ಎಚ್ಚರಿಕೆಯಿಂದ ನಿಧಾನವಾಗಿ ಪರಿಸ್ಥಿತಿಯನ್ನು ಚೆನ್ನಾಗಿ ಅರಿತುಕೊಂಡು ಅದರಿಂದ ಯಾವ ಪರಿಣಾಮವಾಗುತ್ತದೆ, ದುಷ್ಪರಿಣಾಮ ಎಷ್ಟು, ಒಳ್ಳೆಯ ಪರಿಣಾಮ ಎಷ್ಟು ಎಂಬುದನ್ನು ವಿಮರ್ಶೆ ಮಾಡಿ, ಯಾವ ಗುರಿ ಮುಟ್ಟಬೇಕೆಂಬುದನ್ನು ಆಲೋಚನೆ ಮಾಡಬೇಕು. ಅಲ್ಲದೆ ಆ ಗುರಿಯನ್ನು ಮುಟ್ಟಲಿಕ್ಕೆ ಯಾವ ಮಾರ್ಗದಲ್ಲಿ ಹೋಗಬೇಕೆಂಬುದನ್ನು ವಿಧಾಯಕವಾಡಿ ಅವುಗಳೆಲ್ಲವನ್ನು ಅನುಸರಿಸಿ ಆದಷ್ಟು ಬೇಗ ದೇಶದಲ್ಲಿ ಶಾಂತಿಗೆಡದ ರೀತಿಯಲ್ಲಿ ದೇಶದ ಸರ್ವತೋಮುಖವಾದ ಪ್ರಗತಿಸಾಧನೆಯಾಗುವಂತೆ ಬಡಬಗ್ಗರೆಲ್ಲರೂ ಭೂಸ್ವಾಮ್ಯ ಪಡೆದು ಧನಿಕರಾಗಿ, ಸುಖ ಶಾಂತಿಯಿಂದ ಇರುವ ರೀತಿಯಲ್ಲಿ ಶಾಸನ ಮಾಡಬೇಕೆಂದು ವಿನಂತಿ ಮಾಡಿಕೊಂಡು ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

ಶ್ರೀ ಕೆ. ಆರ್ ಶ್ರೀಕಂಠೇಶ್ವರ್‌ರವರು (ಬೆಂಗಳೂರು ಸಿಟಿ).—ಸ್ವಾಮಿ, ಇಂಥ ವಿಚಾರ ಪೂರಿತವಾದ ಭಾಷಣ ಸಾಹಿತ್ಯವನ್ನು ನಾನು ನನ್ನ ಜೀವಮಾನದಲ್ಲೇ ಇದುವರೆಗೆ ಕೇಳಿರಲಿಲ್ಲ! ಮುಂದೆ ಬಹುಶಃ ಕೇಳುವ

ಸನ್ನಿವೇಶ ಬರಬಹುದೆಂದು ಕಾಣುತ್ತೆ. ಕನ್ನಡ ಸಾಹಿತ್ಯವಾಹಿನೀ ಜಾಜ್ವಲ್ಯ ಮಾನವಾಗಿ ಪ್ರವಹಿಸುತ್ತಿತ್ತು !! ಇತಿಹಾಸದಲ್ಲಿ ಬಸವ ಪುರಾಣ ಕೇಳಿದ್ದೇವೆ. ಇವರವಾದವೆಂಬುದು ಅದಕ್ಕೂ ಜಾಸ್ತಿಯಾಗುತ್ತೆಂದರೆ ಅತಿಶಯೋಕ್ತಿಯಲ್ಲ !! ಆದರೆ ಒಟ್ಟಿನಲ್ಲಿ ನಮಗೆ ಅವರ ವಾದ ಸರಣಿಯಲ್ಲಿ ತೋಚಿದ್ದೇನೆಂದರೆ ಅದೊಂದು ಮಿಶ್ರವಾದ ಅಭಿಪ್ರಾಯಗಳ ದೊಡ್ಡ ರಾಸಾಯನ ! ಅವರ ಅಭಿಪ್ರಾಯ ಒಮ್ಮೆ ಈ ಕಡೆ ವಾಲುತ್ತದೆ, ಇನ್ನೊಮ್ಮೆ ಆ ಕಡೆ ವಾಲುತ್ತದೆ ! ನನ್ನ ಮನಸ್ಸಿಗಂತೂ ದಿಗ್ಭ್ರಾಂತಿಯನ್ನೇ ಉಂಟು ಮಾಡಿದೆರೆಂದು ಹೇಳಬಹುದು. ಮೊದಲು ಹಿಡುವಳಿದಾರರ ಪರವಾಗಿ ಮಾತಿನ ಮಳೆಗರೆದರು. ಮರುನಿಮಿಷದಲ್ಲಿ ಗೇಣಿದಾರರ ಪರವಾಗಿ ವಾದಿಸಿದರು. ಒಟ್ಟಿನಲ್ಲಿ ಅವರು ಯಾರ ಪರವೋ ಗೊತ್ತಾಗಲೊಲ್ಲದು. ಇದನ್ನು ಯೋಚನೆಮಾಡಿಕೊಂಡರೆ ನನಗೆ ಮೊದಲು ಏನು ಹೇಳಬೇಕೆಂದಿತ್ತೋ ಅದಕ್ಕೇ ದಿಗ್ಭ್ರಮೆಯುಂಟಾಗಿದೆ !!

ಮಾನ್ಯ ಸದಸ್ಯರು ಜರ್ಮನಿಯಲ್ಲಿ ಹೇಗೆ ನಡೆದಿದೆ, ರಷ್ಯದಲ್ಲಿ ಹೇಗೆ ನಡೆದಿದೆ ಇತರೇ ದೇಶಗಳಲ್ಲಿ ಹೇಗೆ ನಡೆದಿದೆಯೆಂದು ಹೇಳುತ್ತಿದ್ದರೇ ವಿನಾ ನಮ್ಮ ದೇಶದಲ್ಲಿ ಏನು ನಡೆದಿದೆಯೆಂದು ಹೇಳಲಿಲ್ಲ. ಅವರು ಸ್ವಲ್ಪವಾದರೂ ನಮ್ಮ ದೇಶದ ಆರ್ಥಿಕತಜ್ಞರಲ್ಲೊಬ್ಬರಾದ ಜೆ. ಸಿ. ಕುಮಾರಪ್ಪನವರ ವರದಿಯನ್ನು ಓದಿದ್ದರೆ ಬಹುಶಃ ಅವರು ಇಷ್ಟು ದೀರ್ಘವಾಗಿ ಭಾಷಣಮಾಡುತ್ತಿರಲಿಲ್ಲವೆಂದು ಹೇಳಬಲ್ಲೆ. ಸರಿಯಾಗಿ ಓದಿಲ್ಲದಿದ್ದರೆ ಇನ್ನೊಂದು ಸಲವಾದರೂ ಓದಲಿ. ಭೂಮಿಯನ್ನು ಉಳುವ ವ್ಯವಸಾಯಗಾರನಿಗೂ ಸರ್ಕಾರಕ್ಕೂ ಮಧ್ಯೆ ಮಧ್ಯಾವರ್ತಿ ಜನಗಳಿರುವುದು ಅನಾವಶ್ಯಕವೆಂದು ಸ್ಪಷ್ಟವಾಗಿ ಅವರು ನುಡಿದಿಲ್ಲವೇ ? ಅಲ್ಲದೆ ಇನ್ನೊಂದು ವಿಷಯವೂ ಇದೆ. ನಮ್ಮ ರಾಜ್ಯಾಂಗದ 31ನೆಯ ಆರ್ಟಿಕಲ್‌ನಲ್ಲಿ ಏನು ಹೇಳಿದ್ದಾರೆಂಬುದನ್ನು ಸ್ವಲ್ಪ ಗಮನಿಸಿ ಮತ್ತು ಅದನ್ನು ಪಾರ್ಲಿಮೆಂಟಿನಲ್ಲಿ ಚರ್ಚೆ ಮಾಡುವ ಸಂದರ್ಭದಲ್ಲಿ ಪ್ರೊಫೆಸರ್ ಕೆ. ಟಿ. ಷಾರವರು ಏನು ಹೇಳಿದ್ದಾರೆಂಬುದನ್ನು ನೋಡಿ. ಹೀಗೆ 31ನೆಯ ವಿಧಿಯ ಪ್ರಕಾರ ಬಲಾತ್ಕಾರದಿಂದ ಒಬ್ಬರ ಆಸ್ತಿಯನ್ನು ಕಿತ್ತುಕೊಳ್ಳಕೂಡದೆಂದು ಹೇಳಿ ಪ್ರತಿಯೊಬ್ಬನಿಗೂ ತನ್ನ ಆಸ್ತಿಯ ಮೇಲೆ ಇರುವ ಹಕ್ಕನ್ನು ಕಾದಿಟ್ಟಿದ್ದರೂ ಈಗ ಅದಕ್ಕೂ ಲೋಪ ಬಂದಂತಾಗಿದೆ. ಅದರಲ್ಲಿ ಹೇಳಿದೆ.

> "No property, movable or immovable, including any interest in, or in any company owning, any commercial or industrial undertaking, shall be taken possession of or acquired for public purposes under any law authorising the taking of such possession, or such acquisition unless the law provides for compensation for the property taken possession of or acquired

...........ಇತ್ಯಾದಿ ಈ ಸೆಲೆಕ್ಟ್ ಕಮಿಟಿಯವರು ಮಾಡಿರುವುದರಲ್ಲಿ ಬೇಸಾಯಗಾರನಿಂದ ಆಸ್ತಿಯನ್ನು ಕಿತ್ತುಕೊಳ್ಳುವ ಪ್ರಸಂಗ ಬಂದಿದೆ.

ಅಧ್ಯಕ್ಷರು.—ಆ ಸೆಕ್ಷನ್ನಿನಲ್ಲಿ ಏನಿದೆ ? ನೀವು ಹೇಳುವುದು ಅದಕ್ಕೆ ವ್ಯತಿರಿಕ್ತವಾಗುತ್ತದೆಯಲ್ಲವೆ ?

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ಅವರು.—ಇಲ್ಲ ನ್ಯಾಯವಾಗಿ ಜಮೀನ್ದಾರಿ abolish ಆಗಬೇಕಾಗಿತ್ತು ಮುಂದೆ ಈ ವಿಷಯ ಬಂದಾಗ್ಯೆ ತಿಳಿಸುತ್ತೇನೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ನಾನು ಹೇಳಿದ್ದು ಸರ್ಕಾರದವರು ಒಂದು ಕಾನೂನು ಮಾಡುವಾಗ ಇನ್ನೊಬ್ಬರು ಜಮೀನನ್ನು ಮಾರತಕ್ಕದ್ದರಲ್ಲಿ ಪ್ರತಿಬಂಧಕವಿರುವಂತೆ ಕಾನೂನು ಮಾಡಬಾರದೆಂದು ಹೇಳಿದೆನೇ ಹೊರತು ಸರ್ಕಾರದವರಿಗಿರತಕ್ಕ ಅಧಿಕಾರವನ್ನು ನಾನು ಪ್ರಶ್ನೆಮಾಡಲಿಲ್ಲ. ಪ್ರತಿಯೊಬ್ಬರಿಗೂ ಅವರವರ ಆಸ್ತಿಯನ್ನು ಮಾರುವ ಅಧಿಕಾರವಿದ್ದೇ ಇದೆ. ಆದರೆ ಹಾಗೆ ಕಾನೂನು ಮಾಡುವಾಗ ದೇಶದ ಹಿತ ದೃಷ್ಟಿಯಿಂದ ಮಾಡುವುದಕ್ಕೆ ಮಾತ್ರ ಸಾಧ್ಯವೇ ಹೊರತು ಒಂದು ಪಂಗಡದ ದೃಷ್ಟಿಯಿಂದ ಮಾಡುವುದಕ್ಕಾಗುವುದಿಲ್ಲವೆಂದು ಮಾತ್ರ ಹೇಳಿದೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಅಮೆರಿಕಾ ದೇಶದಲ್ಲಿ ಯಾವ ರೀತಿಯಿದೆಯೆಂದು ಅವರು ಉದಹರಿಸಿದರು. ಅಲ್ಲಿಗೂ ಇಲ್ಲಿಗೂ ಬಹಳ ವ್ಯತ್ಯಾಸವಿದೆ. ಅಲ್ಲಿ ರೈತಾಪಿವರ್ಗವೆಂಬುದು ಸೇಕಡ 7 ರಷ್ಟು ಮಾತ್ರ ಇದೆ. ಅಷ್ಟು ಜನರು ಇಡೀ ದೇಶಕ್ಕೇ ಆಹಾರವನ್ನು ಬೆಳೆದುಕೊಡುವ ಸ್ಥಿತಿಯಲ್ಲಿದ್ದಾರೆ. ಆದ್ದರಿಂದ ಆ ಉದಾಹರಣೆ ನಮಗೆ ಬೇಕಿಲ್ಲ. ಇಲ್ಲಿ ಹಿಡುವಳಿದಾರರಿಗೂ ಗೇಣಿದಾರರಿಗೂ ಇರತಕ್ಕ ಬಾಂಧವ್ಯವನ್ನು ಯಾವ ರೀತಿ ಉತ್ತಮಪಡಿಸಬೇಕೆಂಬದನ್ನು ಹೇಳುತ್ತೇನೆ. ಈಗ ನಮ್ಮ ಮಗ್ಗುಲು ಪ್ರಾಂತ್ಯವಾದ ಬೊಂಬಾಯಿನ Tenancy Act ಯಾವ ರೀತಿಯಿದೆಯೆಂದು ಸ್ವಲ್ಪ ವಿಮರ್ಶಿಸಿ. ಅಲ್ಲಿ ಖುಷ್ಕಿ ಉತ್ಪತ್ತಿಯಲ್ಲಿ ಕೇವಲ $\frac{1}{4}$ ಭಾಗವನ್ನೂ ತರೀ ಉತ್ಪತ್ತಿಯಲ್ಲಿ $\frac{1}{2}$ ಭಾಗವನ್ನೂ ಮಾತ್ರ ಗೇಣಿ ಕೊಡಬೇಕೆಂದು ಹೇಳಿದ್ದಾರೆ. ಅದನ್ನೇಕೆ ಇಲ್ಲಿಯೂ ಮಾಡಲಿಲ್ಲ. ಕನಿಷ್ಠ ಪಕ್ಷ ಹತ್ತು ವರ್ಷಗಳವರೆಗೂ period of tenure ಇರಬೇಕೆಂದು ಅವರ ಕಾನೂನಿನಲ್ಲಿದೆ. ಅದನ್ನೂ ಇಲ್ಲಿ ಮಾಡಲಿಲ್ಲ. ಮಾನ್ಯ ಸದಸ್ಯರು ಇಂಥದ್ದನ್ನೆಲ್ಲಾ ಬಿಟ್ಟು ವಿಶ್ವದ ಅನೇಕ ವಿಷಯಗಳನ್ನು ಹೇಳುತ್ತಾ ಹೊರಟರೇ ಹೊರತು ನಮ್ಮ ಮೈಸೂರಿಗೇನುಬೇಕೆಂಬದನ್ನು ಹೇಳಲಿಲ್ಲ. ನಮ್ಮ ದೇಶದಲ್ಲಿ ಗೇಣಿದಾರರಿರುವುದು ಕೇವಲ $7\frac{1}{2}\%$ ಎಂದು ಹೇಳಿಬಿಟ್ಟರು. ಆದರೆ, ಅವರ ಪರಿಸ್ಥಿತಿ ಹೇಗಿದೆಯೆಂಬದನ್ನು ನೋಡುವುದಾದರೆ, ಮೊದಲಿನ ಸ್ಥಿತಿ ದಿನೇದಿನೇ ಅಧೋಗತಿಗೆ ಹೋಗುತ್ತಿದೆಯೆಂದು ವಿಷಾದದಿಂದ ಹೇಳಬೇಕಾಗಿದೆ. ರೈತನ ಸ್ಥಿತಿ, ಇಂದು, ಬಹು ಚಿಂತಾಜನಕವಾಗಿದೆ. ಇಲ್ಲಿ 'ರೈತ' ಎಂದರೆ ಯಾರು ಸ್ವತಃ ನೇಗಿಲನ್ನು ಹಿಡಿದು ಕೆಲಸ ಮಾಡುತ್ತಾನೋ ಅವನು ಮಾತ್ರ ನಿಜವಾದ ರೈತನೆಂದು ನನ್ನ ಭಾವನೆ. ಚೆನ್ನಬಸಪ್ಪನವರಾಗಲೀ, ಮುಖ್ಯಮಂತ್ರಿಗಳವರಾಗಲೀ ಜಮೀನಿದ್ದ ಮಾತ್ರಕ್ಕೇ ಅವರನ್ನು ರೈತರೆಂದು ನಾನು ಭಾವಿಸಲಾರೆ. 'Agriculturist' ಎನ್ನುವುದರ ಅರ್ಥವೇ ಅದು. ನನ್ನ ಹತ್ತಿರ ಜಮೀನಿದ್ದು ನಮ್ಮಣ್ಣನೇ ಮಾಡುತ್ತಿರಬಹುದು. ಆದರೂ ನಾನು ರೈತನಲ್ಲ.

Sri H. M. CHANNABASAPPA.—The Hon'ble Member will know that I am an agriculturist within the meaning of this section and because to-day I am the President of a District Board, I am otherwise engaged by virtue of my office. Otherwise, I am an agriculturist. If he wants to see, let him come to Manjunathapura and see.

Sri K. R. SREEKANTESWAR.—I am not very particular whether he goes and tills the land or not; he is not an agriculturist.

Sri H. M. CHANNABASAPPA.—Then, please do not speak on that.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ಅವರು.—ಒಟ್ಟಿನಲ್ಲಿ, ನಮ್ಮಲ್ಲಿ ಕಳೆದ ನಾಲ್ಕು ವರ್ಷಗಳಿಂದ ಎಷ್ಟು ಸಮಾಜ ಸಧಾರಣೆಗಳಾಗಬೇಕಿತ್ತೋ ಅಷ್ಟಾಗಿಲ್ಲವೆ ದು ವಿಷಾದಪಡಬೇಕಾಗಿದೆ. ಶೇಕಡ 7½ಯಷ್ಟು ಜನರನ್ನು ಸುಧಾರಣೆ ಮಾಡಬೇಕೇ, 93%ರಷ್ಟು ಜನರನ್ನು ಸುಧಾರಣೆ ಮಾಡಬೇಕೇ ಎನ್ನುವ ಪ್ರಶ್ನೆಯಿಲ್ಲ. ನಮ್ಮ ದೇಶದಲ್ಲಿ ರೈತರಿಗೆ (*per capita*) ವ್ಯವಸಾಯಕ್ಕೆ ರೂಢಿಯಾದ ಜಮೀನು (cultivable land) ಎಷ್ಟಿದೆ, ಬೇರೆ ಕಡೆಗಳಲ್ಲಿ ಎಷ್ಟಿದೆಯೆಂಬುದನ್ನು ನೋಡಿ. ಉಳುವ ರೈತನಿಗೆ ಜಮೀನೇ ಇಲ್ಲದಿರುವ ಕಡೆಗಳಲ್ಲಿ, 100 ರಿಂದ 500 ಎಕರೆಗಳವರೆಗೆ ಜಮೀನಿರುವವರೂ ಈಗಲೂ ಇದ್ದಾರೆ!

ಅಧ್ಯಕ್ಷರು.—*Per capita* ಜಮೀನು ಲೆಕ್ಕ ಹಾಕು ವುದರಲ್ಲಿ ಜಮೀನಿಲ್ಲದಿರುವವರು, ಜಮೀನಿರುವವರು, ವ್ಯವಸಾಯಗಾರರು, ವ್ಯಾಪಾರಸ್ಥರೂ ಎಲ್ಲರೂ ಸೇರು ತ್ತಾರೆ!

Sri K. R. SREEKANTESWAR.—What I am just referring to is he was referring to *Hiduwalidars* and said there are about 12 lakhs of *Hiduwalidars* of each holding 5 acres, 10 acres and so on. He was arguing as a big lawyer for the *Hiduwalidars*. That is not the issue. I wanted him to enlighten us as to how many *Genidars* there are, what are the reliefs that we will have to give them etc.—ಇದನ್ನೇನೂ ಅವರು ಹೇಳಲಿಲ್ಲ. ಈಗ ಹಿಡುವಳಿದಾರರ ಸ್ಥಿತಿಗತಿ ಗಳನ್ನೇನೂ ನಾವು ನೋಡಬೇಕಾದ ಆವಶ್ಯಕತೆಯಿಲ್ಲ. ಒಂದು ವೇಳೆ ಹಿಡುವಳಿದಾರರುಗಳಿಗೆ ಕಷ್ಟನಷ್ಟಗಳಾಗು ತ್ತಿದ್ದರೆ, ಅವರಿಗೆ ಅವನ್ನು ಸರಿಪಡಿಸಿಕೊಳ್ಳುವುದಕ್ಕೆ ಬೇರೆ ಅನುಕೂಲತೆಗಳಿವೆ. ಆದರೆ, ಗೇಣಿದಾರರಿಗಾ ಗಿರುವ ತೊಂದರೆಗಳಿಗೆ ಇದುವರೆಗೂ ಏನೂ ಪರಿಹಾರದ ಕಾನೂನಿಲ್ಲದೆ ಕಷ್ಟಪಡುತ್ತಿದ್ದರು. ಅಂಥವರಿಗಾಗಿ ಒಂದು ಮಸೂದೆಯನ್ನು ಈಗ ನಾಲ್ಕು ವರ್ಷಗಳ ಹಿಂದೆಯೇ ಮಾಡಬೇಕಾಗಿತ್ತು. ಇಂದಿನ ಗೇಣೀ ದಾರರ ಸ್ಥಿತಿಯನ್ನು ನೋಡೋಣ. ಅನೇಕ ತರದಲ್ಲಿ ಕಷ್ಟನಿಷ್ಠುರಗಳಿಗೆ ಅವರು ಒಳಗಾಗಿದ್ದಾರೆ. ಮೈಮೇಲೆ ಹೊದೆಯಲು ಸರಿಯಾದ ಬಟ್ಟೆಯೂ ಇರುವುದಿಲ್ಲ. ಹೊಲದಲ್ಲಿ ಬಿತ್ತನೆ ಮಾಡಿದರೂ ನೆಮ್ಮದಿಯಿಂದಿರುವ ಹಾಗಿಲ್ಲ. ಆಕಾಶ ನೋಡಿಕೊಂಡೇ ಇರಬೇಕು. ಮಳೆ ಕಾಲಕ್ಕೆ ಬಾರದೆ ಬಿಸಿಲಿನಲ್ಲಿ ಪೈರು ಒಣಗಿ ಹೋಗುತ್ತಿ ರುವಾಗ ಅವನ ಪರಿತಾಪ ಅಷ್ಟಿಷ್ಟಲ್ಲ. ಅಂಥಾವನಿಗೂ ಕೊನೆಗೆ ಗೇಣಿ ಕೊಡುವುದು ತಪ್ಪುವುದಿಲ್ಲ. ಕಡ್ಡಾಯ ವಾಗಿ ಹಿಡುವಳಿದಾರನು ವಸೂಲು ಮಾಡಿಯೇ ಮಾಡುತ್ತಾನೆ.

ಒಬ್ಬ ಸದಸ್ಯರು.—ಸಾರ್ವತ್ರಿಕವಾಗಿ ಎಲ್ಲರೂ ಹಾಗೆ ಮಾಡುತ್ತಾರೆಯೇ?

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ಅವರು.—ಹೌದು. ಸಾರ್ವತ್ರಿಕವಾಗಿ ಎಲ್ಲರೂ ಎಂದೇ ಎಂದು ಹೇಳಬಹುದು. ಯಾರೂ ಬಿಡುವುದಿಲ್ಲ. ಕಾಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲದೆ ಹೋದರೆ ಹಣದ ರೂಪದಲ್ಲಾದರೂ ತೆಗೆದುಕೊಂಡೇ ತೆಗೆದುಕೊಳ್ಳುತ್ತಾನೆ. ಕೊನೆಗೆ ಒಂದು On Demandನ್ನಾದರೂ ಬರೆಸಿಕೊಳ್ಳುತ್ತಾನೆ. ಹೀಗೆ ಮಾಡಿ 3–4 ವರ್ಷಗಳಲ್ಲಾದರೂ ಕಡ್ಡಾಯವಾಗಿ ವಸೂಲು ಮಾಡಿಕೊಳ್ಳುತ್ತಾನೆ. ಕೊನೆಗೆ ಗೇಣಿದಾರ ನನ್ನು ಇಂದು ಬಿಟ್ಟುಹೋಗು ಎಂದರೆ ಮಾತಾಡದೆ ತಲೆಯಮೇಲೆ ಗಂಟು ಮೂಟೆ ಕಟ್ಟಿಕೊಂಡು ಹೊರಡಲು ಸಿದ್ಧನಾಗಬೇಕು. ಇರುವ ಮನೆಯನ್ನೂ ಬಿಟ್ಟು ಬೇರೆ ಕಡೆ ಹೋಗಿ ಯಾವುದಾದರೂ ಗುಡಿಸಲೋ ಜೋಪಡಿ ಯನ್ನೋ ಹಾಕಿಕೊಳ್ಳಬೇಕು. ಇಂಥಾ ಸ್ಥಿತಿಯಲ್ಲಿ ದ್ದಾನೆ, ಇಲ್ಲಿನ ರೈತ!!

ಅಧ್ಯಕ್ಷರು.—ಎಲ್ಲಿದೆ ಆ ಸ್ಥಿತಿ?

ಶ್ರೀ ಶ್ರೀಕಂಠೇಶ್ವರ್‌ಅವರು.—ಮಲೆನಾಡಿನ ಕಡೆ ಬೇಕಾದಷ್ಟು ನಿದರ್ಶನಗಳಿವೆ ನಾನೇ ಖುದ್ದಾಗಿ ಹೋಗಿ ನೋಡಿದ್ದೇನೆ. As a matter of fact, there are so many Jodidars in my District—Kolar District—who are going on in that manner.

ಅಧ್ಯಕ್ಷರು.—ಜೋಡಿದಾರರ ವಿಚಾರ ಬೇರೆ!

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ಅವರು.—ಹಾಗಲ್ಲ. ಎಲ್ಲರೂ ಹಾಗೆಯೇ. Suppose I cultivate a land on condition to give 2 pallas as *geni* and I fail to give it due to failure of crop he will still not keep quiet. He will make his demand and definitely collect it from me. ಆದ್ದರಿಂದ ಇರುವ ವಿಚಾರ ಇದು. ಹೀಗಾಗಿ ಒಂದು ಎಕರೆಯಲ್ಲಿ 15 ಪಲ್ಲ ಬೆಳೆ ಯಾವ ಕಡೆ 8 ಪಲ್ಲ ಬೆಳೆಯುತ್ತಾರೆ. ಸರ್ಕಾರದವರೇ ಕೊಟ್ಟಿರುವ ಅಂಕಿಅಂಶಗಳಿಂದ ಇದು ವೇದ್ಯವಾಗು ತ್ತದೆ. ಅವರೇ ಹೇಳಿದ್ದಾರೆ, ಹಿಂದೆ 8 ಪಲ್ಲ ಸರಾಸರಿ ಎಕರೆಗೆ ಬೆಳೆಯುತ್ತಿದ್ದರು; ಈಗ 6 ಪಲ್ಲ ಮಾತ್ರ ಬರುತ್ತದೆ ಎಂದು.

The Hon'ble Sri H. SIDDAIYA.—It is the average yield in the State. It varies from 5 pallas to 20 pallas.

Sri K. R. SREEKANTESWAR.—My respectful submission to you Sir, is, if it is 15 pallas in Mysore, it cannot be even 3 pallas in my village in Kolar District.

ಅಧ್ಯಕ್ಷರು.—ಒಂದೊಂದುಕಡೆ ಈರೀತಿ ಇದೆ ಎಂದು ಅವರು ಹೇಳಿದರು.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ಅವರು.—ಸರಾಸರಿ ತೆಗೆದುಕೊಳ್ಳಬೇಕೆಂದು ಹೇಳಬಹುದೇ ಹೊರತು 15 ಪಲ್ಲ ಬತ್ತ ಎಂದು ಹೇಳಿವರೆ ಹೇಗೆ? ಅಷ್ಟು ಬರುತ್ತದೆಯೆ?

ಅಧ್ಯಕ್ಷರು.—ಅವರು 6 ಪಲ್ಲ ಬತ್ತ ಬರುವಕಡೆ ಏನನ್ನು ಅನ್ವಯಿಸುತ್ತಾರೋ ಅದನ್ನೇ ಬೇರೆಕಡೆ ಮಾಡಬಾರದೆಂದು ಹೇಳಿದರು.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ಅವರು.—ಇನ್ನೂ ಕೆಲವು ಮುಖ್ಯ ಅಂಶಗಳಿವೆ, ಅವುಗಳಿಂದ ಗೇಣಿದಾರ ರಿಗೆ ತೊಂದರೆಯೇ ಹೊರತು ಹಿಡುವಳಿದಾರರಿಗೆ ತೊಂದರೆಯಾಗುವುದಿಲ್ಲ. ಉದಾಹರಣೆಗೆ 22ನೆಯ ಕ್ಲಾಜನ್ನು ತೆಗೆದುಕೊಳ್ಳೋಣ I will read it now. One after another I will read the other sections also. After all it is a very ordinary step of progress. This is not legislation which will mark a great reform in agrarian policies. It is not very important at all. Even so, this Bill should have come before this House long long back.

ನಮ್ಮ ಮುಂದೆ ಎಂಟು ಒಂಬತ್ತು ಕ್ಲಾಜುಗಳು ನವ ಗ್ರಹಗಳ ಹಾಗಿವೆ. ಅವು 5, 6, 7, 12, 13, 16, 22, 26. ಇವುಗಳನ್ನು ಸೆಲೆಕ್ಟ್ ಸಮಿತಿಯವರು ಏನೂ ಮಾರ್ಪಾಡುಮಾಡದೆ ನಮ್ಮ ಮುಂದೆ ಬಂದಿದ್ದರೆ ಚೆನ್ನಾಗಿತ್ತು. ಸೆಲೆಕ್ಟ್ ಕಮಿಟಿಯವರು ಮಾಡಿರುವ ಬದಲಾವಣೆ ಪ್ರಗತಿದಾಯಕವಾಗಿಲ್ಲ. ಉದಾಹರಣೆಗೆ 5ನೆಯ ಕ್ಲಾಜಿನಲ್ಲಿ—

"Provided that *with the consent of the landlord* any tenancy may be terminated by a tenant before the expiry of a period of five years by surrendering his interest as a tenant in favour of the landlord"

ಎಂದಿದೆ. ಇದರಲ್ಲಿ 5 ವರ್ಷದೊಳಗೆ ಸಾಗುವಳಿದಾರನು ಬಿಡಬೇಕಾದರೆ "with the consent of the landlord" ಎಂದು ಸೇರಿಸಿದ್ದಾರೆ. ಇದರಿಂದೇನಾಯಿತೆಂದರೆ, 5 ವರ್ಷದೊಳಗೆ ಬಿಟ್ಟುಬಿಡಬೇಕಾದರೂ ಜಮೀನ್ದಾರನ ಅಪ್ಪಣೆ ತೆಗೆದುಕೊಳ್ಳಬೇಕು. The landlord may not permit him at all. ರೈತ ಕಷ್ಟಪಟ್ಟು ಜಮೀನನ್ನು ಉತ್ತು ಬಿತ್ತು ಮಾಡುವವನು; ಬಿಡಬೇಕಾದರೆ ಜಮೀನ್ದಾರನ ಅಪ್ಪಣೆಯನ್ನೇಕೆ ತೆಗೆದುಕೊಳ್ಳಬೇಕು? ಆ ಭೂಮಿ ಬರಿಯ ಕಲ್ಲುಭೂಮಿಯಾಗಿದ್ದು ಅದರಲ್ಲಿ ಏನೂ ವ್ಯವಸಾಯ ಮಾಡುವುದಕ್ಕಾಗದೇಯಿದ್ದರೆ ರೈತ ಒಂದೇವರ್ಷಕ್ಕೆ ಬಿಟ್ಟುಬಿಡುತ್ತಾನೆ. ಆಗ the landlord will not leave the tenant. He will say 'I cannot leave you'. That is the effect of saying 'with the consent of the landlord.'

Mr. SPEAKER—How can the landlord compel the raiyat to take it up?

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ಅವರು—ಜಮೀನ್ದಾರನ ಅಪ್ಪಣೆ ಪಡೆಯಬೇಕೆಂದು ಹೇಳಿದರೆ ಅರ್ಥವೇನು? ಕಾಗೋಡಿನ ಪರಿಸ್ಥಿತಿ ಇದ್ದರೆ, ರೈತ ಜಮೀನನ್ನು ಐದು ವರ್ಷದೊಳಗೆ ಬಿಟ್ಟುಬಿಡುತ್ತೇನೆಂದು ಹೇಳಿದರೆ ಜಮೀನ್ದಾರ ಬಿಡುತ್ತಾನೆಯೆ?

ಅಧ್ಯಕ್ಷರು.—ರೈತ ಬಿಟ್ಟುಬಿಡುವ ಹಾಗಿದ್ದರೆ ಜಮೀನ್ದಾರನು ಬಿಡುತ್ತಾನೆಯೆ ಎಂದರೆ ಏನರ್ಥ?

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ಅವರು.—ಐದು ವರ್ಷಕ್ಕೆ ರೈತ ತೆಗೆದುಕೊಳ್ಳುತ್ತಾನೆ. ಆ ನಡುವೆ ಬಿಟ್ಟುಬಿಡುತ್ತಾನೆ, ಆಗ ಜಮೀನ್ದಾರ ಅದಕ್ಕೆ ಒಪ್ಪುವುದಿಲ್ಲ...... ....

ಅಧ್ಯಕ್ಷರು.—ಐದು ವರ್ಷ ಆದಮೇಲೆ ಸಾಗುವಳಿದಾರ ಬಿಡುತ್ತೇನೆ ಎಂದು ಹೇಳಿದರೆ ಜಮೀನ್ದಾರ ಹೇಗೆ ಒಪ್ಪುವುದಿಲ್ಲ?

Sri Kadidal MANJAPPA—Within the period of five years, if the tenant wants to vacate the land, he can do so with the permission of the landlord ಎಂದು ಇದೆ.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅವರು ಆ ಪ್ರೊವೈಸೋವನ್ನು ಸರಿಯಾಗಿ ಓದಲಿ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ಅವರು.—ಓದಿದ್ದೇನೆ.

"Provided that with the consent of the landlord any tenancy may be terminated by a tenant before the expiry of a period of five years by surrendering his interest as a tenant in favour of the landlord". ಎಂದಿದೆ.

The Hon'ble Sri H. SIDDAIYA—The lease is five years. It cannot be for less than five years. During this period, if the tenant does not like to cultivate the land he must give it up with the permission of the landlord. With the free consent of both parties any lease can be altered before the expiry of these five years. What is wrong I cannot understand.

Sri K. R. SREEKANTESWAR—What I say is, within the period of five years, if the landlord does not permit the tenant to leave him, the raiyat must cultivate.

The Hon'ble Sri H. SIDDAIYA—He has consented for it.

Sri K. R. SREEKANTESWAR—My submission is this. Suppose I take some lands from Sri H. M. Channabasappa to cultivate and I cannot cultivate the land at all. Do you force me to cultivate the land?

Sri H. M. CHANNABASAPPA—Yes.

Sri K. R. SREEKANTESWAR—That is against the fundamental right of the tenent. May I submit Sir, that this particular clause containing the words in this proviso 'with the consent of the landlord' is not just and is really a retrograde step in the Act. I feel like that.

ಶ್ರೀ ಎಸ್. ರಂಗರಾಮಯ್ಯನವರು.—ಒಂದುವೇಳೆ ಜಮೀನ್ದಾರ ಐದು ವರ್ಷದೊಳಗೆ ಭೂಮಿಯನ್ನು ಬಿಟ್ಟುಕೊಡು ಎಂದರೆ ಸಾಗುವಳಿದಾರ ಬಿಟ್ಟುಕೊಡುತ್ತಾನೆಯೆ? ಇಲ್ಲ. ಸಾಗುವಳಿದಾರನಿಗೆ ಮಾತ್ರ ಈ ಒಂದು ರಿಯಾಯಿತಿ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಒಂದು ತೋಟ ಫಲವತ್ತಾಗಿದೆ. ಅದರಲ್ಲಿ ಹತ್ತುಸಾವಿರ ಕಾಯಿ ಸಿಕ್ಕುತ್ತದೆ. ಈ ವರ್ಷದಿಂದ 5 ವರ್ಷಕ್ಕೆ ಒಬ್ಬ ರೈತ ಗುತ್ತಿಗೆಗೆ ಮಾಡಿಕೊಳ್ಳುತ್ತಾನೆ. ಮೊದಲನೆಯ ವರ್ಷದಲ್ಲೇ ಹತ್ತುಸಾವಿರ ಕಾಯಿಗಳನ್ನೂ ತೆಗೆದುಕೊಳ್ಳುತ್ತಾನೆ. ಮೂರನೆಯ ವರ್ಷ ಜಮೀನನ್ನು ಬಿಟ್ಟುಬಿಡುತ್ತಾನೆ. ಇಂತಹ ಸಂದರ್ಭದಲ್ಲಿ ಜಮೀನ್ದಾರನ ಗತಿ ಏನು ಎಂಬುದನ್ನು ನಾವು ನೋಡಬೇಕು.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ಅವರು.—ನಾನು ಹೇಳುವುದು, ಐದುವರ್ಷ ಒಪ್ಪಂದ ಮಾಡಿಕೊಳ್ಳಬಹುದು. ಆದರೆ ಆ ಜಮೀನು ಉಳುವುದಕ್ಕೂ ಆಗದೇಇದ್ದಷ್ಟು ಕಲ್ಲುಭೂಮಿಯಾಗಿದ್ದರೆ ಅವನೇನು ಮಾಡುವುದು?

ಅಧ್ಯಕ್ಷರು.—ಸಾಗುವಳಿದಾರ ಐದುವರ್ಷ ಒಪ್ಪಂದ ಮಾಡಿಕೊಂಡಿದ್ದರೂ ಮಧ್ಯೆ ಬಿಟ್ಟುಬಿಡಬಹುದು. ಆದರೆ ಜಮೀನ್ದಾರ ಹೀಗೆ ಮಾಡಬೇಕೆಂದರೆ ಬಿಡಿಸುವುದಕ್ಕಾಗುವುದಿಲ್ಲ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ಅವರು.—ಕೆಲವುಕಡೆ 5 ವರ್ಷ ಬಹಳ ಕಡಿಮೆಯೆಂದು ಹೆಚ್ಚುಮಾಡಿದ್ದಾರೆ. ಬೊಂಬಾಯಿನಲ್ಲಿ 10 ವರ್ಷ ಇರುವಹಾಗೆ ಇಲ್ಲಿಯೂ ಮಾಡಬೇಕೆಂದು ನಾನೇ ಹೇಳಿದೆ.

ಅಧ್ಯಕ್ಷರು.—ಸಾಗುವಳಿದಾರನಿಗೆ ಮಾತ್ರ ನ್ಯಾಯ ದೊರಕಿಸಿಕೊಡುವುದಾದರೆ, ಜಮೀನ್ದಾರರಿಗೆ ಬೇಡವೆ?

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ಅವರು.—ದೇಶದಲ್ಲಿ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸುವುದು ನಮ್ಮ ಉದ್ದೇಶವಾಗಿರುವಾಗ ನಾವು ಮಾಡತಕ್ಕ ಶಾಸನ ಬಹಳ ಅಶಕ್ತರಾಗಿರುವವರಿಗೆ ರಕ್ಷಣೆಕೊಡುವಂಥದಾಗಿರಬೇಕು. ನಾನು ಐದು ವರ್ಷವಾದರೂ ಅನುಕೂಲವಾಗಿ ಬದುಕಬೇಕೆಂದು ಒಂದು ಜಮೀನನ್ನು ಮಾಡಿಕೊಳ್ಳುತ್ತೇನೆ. ಅದನ್ನು ಅಬಾದುಮಾಡುವುದಕ್ಕೆ ಸಾಧ್ಯವಾಗದೇಹೋದರೆ, ಆಗ ಅದನ್ನು ಬಿಟ್ಟುಬಿಡಬೇಕಾದರೆ ಜಮೀನ್ದಾರನ ಅನುಮತಿಯನ್ನು ತೆಗೆದುಕೊಳ್ಳಬೇಕೆಂದು ಮಾಡಿರುವುದರಿಂದ ಸಮಾಜಕ್ಕೆ ಹಾನಿಯಾಗುತ್ತದೆ.

ಶ್ರೀ ಎಸ್. ರಂಗರಾಮಯ್ಯನವರು.—12 (a) ಕ್ಲಾಜನ್ನು ನೋಡಿ. ಅವನಿಗೆ ಪರಿಹಾರಕೊಡುವುದಕ್ಕೆ ಅದರಲ್ಲಿ ಅವಕಾಶವಿದೆ

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ಅವರು.—ಇನ್ನು 6 (1)ನೆಯ ಕ್ಲಾಜಿನಲ್ಲಿ

"Notwithstanding any agreement, usage, decree or order of a court or any law, the maximum rent payable in respect of any period after the date of coming into force of this Act by a tenant for the lease of any land shall not exceed one-half of the crop of such land or its value as determined in the prescribed manner".

ಎಂದಿದೆ. ಇದರ ವಿಷಯದಲ್ಲಿ ಬಹಳ ದೀರ್ಘವಾಗಿ ಚರ್ಚೆ ನಡೆಸಬೇಕಾಗಿದೆ. ಏಕೆಂದರೆ ಶ್ರೀ ಚನ್ನಬಸಪ್ಪನವರು ಹೇಳಿದಹಾಗೆ ಬೇರೆಬೇರೆ ಕಡೆ ಬೇರೆಬೇರೆ ಪರಿಸ್ಥಿತಿ ಇದೆ. ಗೊತ್ತುಮಾಡಿದಷ್ಟು ಗೇಣಿಯನ್ನೇ ಕೊಡಬೇಕು ಎಂದರೆ ಅನೇಕ ಸಂದರ್ಭಗಳಲ್ಲಿ ಗೊಬ್ಬರ ಸಿಕ್ಕುವುದಿಲ್ಲ ಅಥವಾ ಬೇರೆ ಅನಾನುಕೂಲಗಳಿರುತ್ತವೆ. ಸರಿಯಾಗಿ ಬೆಳೆಯಾಗುವುದಿಲ್ಲ. ಆದಕಾರಣ ಅರ್ಧ ಎಂದಿರುವುದನ್ನು ಕಾಲುಭಾಗ ಅಥವ ಮೂರನೆಯ ಒಂದುಭಾಗ ಎಂದು ಮಾಡಬೇಕು.

ಅಧ್ಯಕ್ಷರು.—ರೈತ ಎಷ್ಟು ಬೆಳೆಯುತ್ತಾನೋ ಅದರಲ್ಲಿ ಅರ್ಧಕ್ಕೆ ಮೀರದಷ್ಟು ಕೊಡಬೇಕೆಂದು ಇದರಲ್ಲಿರುವುದು.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ಅವರು.—ಬೆಳೆದಿದ್ದರಲ್ಲಿ ಬಿಟ್ಟಿಟ್ಟಿದ್ದಾನೆ ಎಂಥು ಹೇಳಿ, ಅರ್ಧ ಫಸಲು ಕೊಡಬೇಕೆಂದು ಹೇಳಿದರೆ ಅವನು ಎಲ್ಲಿಂದ ಕೊಡಬೇಕು ? ನನ್ನ ಪಾಯಿಂಟ್, ಇಂಥಾ ಕಾನೂನನ್ನು ಮಾಡುವುದರಿಂದ ಬಹಳ ತೊಂದರೆಗಳಾಗುತ್ತೆ ಎಂದು. ತಾವು ಇದನ್ನು ಕಾಲುಭಾಗವೆಂತಲಾದರೂ ಮಾಡಿ ಅರ್ಧಭಾಗವೆಂತಲಾದರೂ ಮಾಡಿ, ಅಂತೂ ತೊಂದರೆಗಳಾಗದೆ ಇರಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಅರ್ಧ ಭಾಗವೆಂದು ನಿರ್ಧರಮಾಡುವುದರಲ್ಲಿ ಏನು ತೊಂದರೆಗಳಿವೆಯೋ ಅದೇ ತೊಂದರೆಗಳು, ಕಾಲುಭಾಗವೆಂದು, ನಿರ್ಧರಿಸುವುದರಲ್ಲೂ ಇವೆ. ಆದುದರಿಂದಲೇ ಅದನ್ನೆಲ್ಲಾ ಸರ್ಕಾರದವರ ವಿವೇಚನೆಗೇ ಬಿಡಲಾಗಿದೆ. Under Section (6) (2) the Government may fix a lower rate wherever circumstances demand. ಆಗ ನೀವು 25 ಎಂತಲಾದರೂ ಗೊತ್ತುಮಾಡಿ ಅಥವಾ 5 ಎಂತ ಬೇಕಾದರೂ ಗೊತ್ತುಮಾಡಿ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ಅವರು.—ಇನ್ನು ಶ್ರೀ ಚೆನ್ನಬಸಪ್ಪನವರು ಈಗಾಗಲೇ ಕೆಲವು ವಿಷಯಗಳನ್ನು ಬಹಳ ದೀರ್ಘವಾಗಿ ತಿಳಿಸಿದ್ದಾರೆ. ಆದಾಗ್ಯೂ ಈ ಎಗ್ಸಿಕ್ಯುಟೀವ್ ಅಧಿಕಾರಿಗಳಾದ ಅಮಲ್ದಾರರಿಗೆ ಈ ಕಾನೂನು ಸಂಬಂಧವಾಗಿ ಅಧಿಕಾರಗಳನ್ನು ಕೊಟ್ಟಿರುವುದು ಕೇವಲ ಅನ್ಯಾಯವಾಡಿದಂತಾಗಿರುತ್ತೆ. ನಮ್ಮಲ್ಲಿ ಸಿವಿಲ್ ಮತ್ತು ಜುಡಿಷಿಯಲ್ ಅಧಿಕಾರಿಗಳಿಲ್ಲವೇನು ? ನೇಕಡ 7½ ಯಷ್ಟು ಗೇಣೀದಾರರಿರತಕ್ಕಂಥ ಮದ್ರಾಸ್ ಮತ್ತು ಬೊಂಬಾಯಿ ಪ್ರಾಂತ್ಯಗಳಲ್ಲಿ ಸಹ ಈ ಅಧಿಕಾರಗಳನ್ನೆಲ್ಲಾ ಜುಡಿಷಿಯಲ್ ಅಧಿಕಾರಿಗಳಿಗೆ ವಹಿಸಿರುತ್ತಾರೆ. ಇವುಗಳೆಲ್ಲಾ ಸಿವಿಲ್ ಸ್ವಭಾವದ ವಿಚಾರಗಳು. ಹೀಗೆ ಇಂಥಾ ಸಿವಿಲ್ ಸ್ವಭಾವದ ವಿಷಯಗಳಲ್ಲಿ ಅಮಲ್ದಾರರಿಗೆ ಅಧಿಕಾರ ಕೊಟ್ಟಿರತಕ್ಕಂಥ ಸನ್ನಿವೇಶ ಎಲ್ಲಿಯೂ ಕಂಡುಬರುವುದಿಲ್ಲ. ಹಾಗಿದ್ದರೂ ಸಹ ಸೆಲೆಕ್ಟ್ ಸಮಿತಿಯವರು ಅದಿನ್ಯಾವರೀತಿ ಇದನ್ನು ವಿಮರ್ಶೆಮಾಡಿ ನಮ್ಮ ಮುಂದೆ ತಂದಿದ್ದಾರೆ ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ. ಇನ್ನೊಂದುವಿಚಾರ, ಅದು ಮಾನ್ಯ ರೆವಿನ್ಯೂ ಸಚಿವರಿಗೂ ಗೊತ್ತಿರಬಹುದು. ತಾಲ್ಲೂಕ ಕಛೇರಿಯಲ್ಲಿ ಕೆಲಸಗಳೊಂದೂ ಸರಿಯಾಗಿ ಆಗದೆ ಎಲ್ಲ ಹೊಲಸೆದ್ದುಹೋಗಿದೆ.

The Hon'ble Sri H. SIDDAIYA.—I cannot agree for a moment. It is not based on facts. ಆ ರೀತಿ ಮಾನ್ಯ ಸದಸ್ಯರು ಬಾಯಿಗೆ ಬಂದಹಾಗೆಲ್ಲಾ ಮಾತನಾಡಬಾರದು.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ಅವರು.—ಮಾನ್ಯ ಸಚಿವರು ಆ ಪದವನ್ನುಪಯೋಗಿಸಿದ್ದು ಸರಿಯಲ್ಲವೆಂದು ತಿಳಿಸಿದ ಪ್ರಯುಕ್ತ ಆ ಪದವನ್ನುಪಯೋಗಿಸುವುದನ್ನು ಬಿಟ್ಟೇಬಿಡುತ್ತೇನೆ. ಅಂತೂ ಈಗ ತಾಲ್ಲೂಕು ಅಮಲ್ದಾರರುಗಳಿಗೆ ಕೆಲಸ ಜಾಸ್ತಿಯಾಗಿದೆ.

ಮಾನ್ಯ ಶ್ರೀ ಎಚ್. ಸಿದ್ಧಯ್ಯನವರು.—ಆ ರೀತಿ ಇನ್ನೂ ಕೆಲಸಗಳು ಹೆಚ್ಚಾಗಿವೆಯೆಂದು ಹೇಳಿ ಒಪ್ಪಿಕೊಳ್ಳೋಣ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ಅವರು.—ಹೀಗೆ ತಾಲ್ಲೂಕು ಕಛೇರಿಗಳಲ್ಲಿ ಕೆಲಸಗಳು ವಿಪರೀತವಾಗಿ, ಅದರಲ್ಲೂ ಯುದ್ಧಾನಂತರದಿಂದೀಚೆಗೆ, ಈ ರೇಷನಿಂಗ್ ಖಾಯಿದೆಗಳೂ, ಧಾನ್ಯಸಂಗ್ರಹಣೆ ಕಾರ್ಯ ಇತ್ಯಾದಿ ಕೆಲಸಗಳು ವಿಪರೀತವಾಗಿ ಹೆಚ್ಚಿಹೋಗಿ ಕಛೇರಿಗೆ ಹಾಕಿಕೊಳ್ಳುವ ಅರ್ಜಿಗಳಿಗೆ ಒಂದಕ್ಕೂಸಹ ಸರಿಯಾದ ಜವಾಬುದಾರದೆ ಅನೇಕ ಅರ್ಜಿಗಳು ಅಲ್ಲಿಯೇ 8ವರ್ಷ, 10 ವರ್ಷಗಳಿಗೆ ಮೇಲ್ಪಟ್ಟು ಮುಲ್ಕಿ ಬಿದ್ದಿರುವ ಸ್ಥಿತಿಯೊದಗಿರುವಾಗ, ಈ ಒಂದು ಹೊಸ ಕಾನೂನು ರೀತ್ಯ ಅಮಲ್ದಾರರಿಗೆ ಈ ಅಧಿಕಾರಗಳನ್ನು ಕೊಟ್ಟುಬಿಡುವುದಾದರೆ ಅವರಿಗೆ ಇನ್ನೆಷ್ಟರಮಟ್ಟಿಗೆ ದೇಶದಲ್ಲಿರತಕ್ಕ ಬಡ ಸಾಗುವಳಿದಾರರನ್ನು ಕಾಪಾಡಲು ಸಾಧ್ಯವಾದೀತು ? ಅವರಿಗೆ ಈ ಸಂಬಂಧವಾಗಿ ಎಲ್ಲ ಅಂಕಿ ಅಂಶಗಳನ್ನೂ ಸಂಗ್ರಹಿಸಿ ಸರಿಯಾದ ನ್ಯಾಯ ದೊರಕಿಸಿಕೊಡಲು ಖಂಡಿತ ಸಾಧ್ಯವಿಲ್ಲ. ಈ ಕಾರಣದಿಂದ, ಇವರಿಗೆ ಈ ಅಧಿಕಾರಗಳನ್ನು ಕೊಟ್ಟಿರುವುದು, ಜನರಿಗೆ ತುಂಬಾ ಅನ್ಯಾಯಮಾಡಿದಂತಾಗಿದೆ. ಆದುದರಿಂದ ಇವರಿಗೆ ಈ ಅಧಿಕಾರ ಕೊಡುವುದು ಸರಿಯಾದುದಲ್ಲವೆಂದು ಹೇಳುತ್ತೇನೆ.

The Hon'ble Sri H. SIDDAIYA.—For the simple reason you please see clause 46. The Civil Court jurisdiction is taken away.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ಅವರು.—ಕೊನೆಯಲ್ಲಿ ಅಲ್ಲಿ ಹಾಗೆ ತಿಳಿಸಿದ್ದೀರಿ. ಆದರೂ ಈ fair rent fix ಮಾಡುವ ಅಧಿಕಾರವನ್ನು ಅಮಲ್ದಾರರಿಗೇ ಕೊಡಲಾಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಮೊದಲು ಇದು ಹಾಗೆ ಇತ್ತು. ಆದರೆ ಈ ಬಿಲ್ಲು ಸಮಿತಿಯ ಮುಂದೆ ಬಂದಾಗ, ಜನರು ಕೋರ್ಟುಗಳನ್ನು ಹತ್ತಿ ಹೊಲ ಉಳತಕ್ಕ ಕೆಲಸಕ್ಕೆ ತೊಂದರೆ ಬರುತ್ತದೆಂದೂ, ಹಾಗೆ ಕೋರ್ಟಿಗೆ ಹೋಗಲು ಲಾಯರ್ ರುಸುಂ ಇತ್ಯಾದಿ ಖರ್ಚುಗಳುಂಟಾಗಿ ಜನರಿಗೆ ಹೆಚ್ಚಿನ ತೊಂದರೆ ಯಾಗುತ್ತದೆಂದೂ, ಅವುಗಳನ್ನೆಲ್ಲಾ ತಪ್ಪಿಸುವ ಸಲುವಾಗಿ ಸ್ಥಳೀಯ ವಿದ್ಯಮಾನಗಳನ್ನು ಚೆನ್ನಾಗಿ ಅರಿತ ಅಮಲ್ದಾರರಲ್ಲೇ ಈ ಸ್ಥಳೀಯ ವಿಚಾರಗಳೆಲ್ಲಾ ತೀರ್ಮಾನವಾಗಲೆಂಬ ಸದುದ್ದೇಶದಿಂದ ಹೀಗೆ ಮಾಡಲಾಗಿದೆ. ಇದಕ್ಕಿಂತಲೂ, ಈ ವಿಚಾರವನ್ನು ಸುಲಭವಾಗಿ ತೀರ್ಮಾನಮಾಡತಕ್ಕ ಮತ್ತೆ ಯಾವುದಾದರೂ ಮಾರ್ಗಗಳಿದ್ದರೆ ಅದನ್ನು ತಿಳಿಸಿ.

16 ನೆಯ ಕ್ಲಾಜಿನಲ್ಲಿ 12 ವರ್ಷ ಜಮೀನು ಸಾಗು ಮಾಡಿರುವವರಿಗೆ ಪರ್ಮನೆಂಟ್ ಟೆನೆನ್ಸಿ ಕೊಡಬೇಕೆಂದಿದೆ. ಸೆಲೆಕ್ಟ್ ಕಮಿಟಿಗೆ ಟೆನೆನ್ಸಿ ಬಿಲ್ಲು ರೆಫರ್ ಆದ ಮೇಲೆ ಅನೇಕ ಜಮೀನ್ದಾರರು ಹೋಗಿ ಗೇಣಿದಾರರನ್ನು ಕರೆದುಕೊಂಡು ಬಂದು ಒಂದು ಖಾಲಿ ಕಾಗದ ಅಥವಾ ಚೀಟಿಗೆ ಹೆಬ್ಬೆಟ್ಟು ಗುರ್ತು ಹಾಕಿಸಿಕೊಂಡಿದ್ದಾರೆ. ಅಂಥ ಉದಾಹರಣೆಗಳು ಬೇಕಾದಷ್ಟಿವೆ. ಈ ಒಂದು ಕ್ಲಾಜಿನಿಂದ ಇಷ್ಟು ಪ್ರಮಾದವಾಗಿ ಇಡೀ ಸಂಸ್ಥಾನದ ವ್ಯವಸಾಯ ಸಮಸ್ಯೆ ತಲೆಕೆಳಗಾಯಿತು. ಇಂಥಾ ಪರಿಸ್ಥಿತಿ ಒದಗಿದೆ. Evictions during one year before the Act comes into force are null and void ಎಂದು ಕಾನೂನು ಮಾಡಿ ಆಮೇಲೆ ಈ ಗೇಣಿ ಮಸೂದೆ ತರಬೇಕಾಗಿತ್ತು.

Sri A. BHEEMAPPA NAIK.—It has not at all come into existence. How could you say that it did havoc already?

Sri K. R. SREEKANTESWAR.—There are tenants who are cultivating my own lands. They have been cultivating for the past 5 years hundreds of acres. They have no Saguvali Chit. My point is this..................

Mr. SPEAKER.—You are against permanent tenancy?

Sri K. R. SREEKANTESWAR.—Certainly not.

Sri A. BHEEMAPPA NAIK.—Your argument shows that.

Sri K. R. SREEKANTESWAR.—Sri Bheemappa naik has not followed me and I am sure he will not follow me because he is dwelling in some other world. I have made by position very clear. What we could have done is that there cannot be any type of eviction. "Evictions during the one year before the Act comes into force are null and void ಎಂದು ಸೇರಿಸಿ ಕಾನೂನು ಮಾಡಬೇಕಾಗಿತ್ತು.

12 ವರ್ಷಗಳವರೆಗೆ ಜಮೀನನ್ನು ಯಾವ ರೈತ ಸಾಗುವಳಿ ಮಾಡುತ್ತಾನೋ ಅಂಥವನಿಗೆ ಪರ್ಮನೆಂಟ್ ಟೆನೆನ್ಸಿ ಬರುತ್ತದೆಂದು ಹೇಳಿರುವುದರಿಂದ ತೊಂದರೆ ಯೇನಾಗಬಹುದು ಎಂಬುದನ್ನು ನಾನು ಹೇಳುತ್ತಿರುವುದು. 12 ವರ್ಷಗಳ ಕಾಲ ಕಳೆದ ಮೇಲೆ ಸಾಗು ಮಾಡುವ ರೈತನಿಂದ ಜಮೀನನ್ನು ವಾಪಸು ಪಡೆಯುವುದಕ್ಕಾಗುವುದಿಲ್ಲ. ಹಾಗೆ ಪಡೆಯಲು ಮುಂದೆ ತೊಂದರೆ ಬರುತ್ತದೆ ಎಂದು ಮುಂದಾಲೋಚನೆ ಮಾಡಿ ಪರ್ಮನೆಂಟ್ ಟೆನೆನ್ಸಿಗೆ ಅವಕಾಶವಾಗದ ಹಾಗೆ ಮಾಡುತ್ತಿದ್ದಾರೆ. ಒಂದೆರಡು ವರ್ಷಕ್ಕೆ ಸಾಗುವಳಿ ಚೀಟಿಯನ್ನು ಬರೆಸಿ ಅಥವಾ ಬರೀ ಬಾಯಿ ಮಾತಿನಲ್ಲಿ ಹೇಳಿ ಜಮೀನನ್ನು ಸಾಗಿಗೆ ಕೊಡುತ್ತಿದ್ದಾರೆ. ಮೊದಲು ಯಾವ ವಿಧವಾದ ತೊಂದರೆಯೂ ಇರಲಿಲ್ಲ. 16ನೆಯ ಕ್ಲಾಜು ಬಿಲ್ಲಿನಲ್ಲಿ ಸೇರಿದ ಮೇಲೆ ದೇಶದಲ್ಲಿರುವ ಪ್ರತಿಯೊಬ್ಬ ಹಿಡುವಳಿದಾರನೂ ಕೂಡ ಗೇಣಿದಾರರಿಂದ ಸಾಗುವಳಿ ಚೀಟಿ ಬಲಾತ್ಕಾರದಿಂದ ಬರೆಸಿ ಇಟ್ಟುಕೊಳ್ಳುವುದಕ್ಕೆ ಶುರು ಮಾಡಿದ್ದಾನೆ. ಇದರ ಉದ್ದೇಶವೇನೆಂದರೆ ಏನಾದರೂ ಮಾಡಿ ಟೆನೆಂಟ್ಸ್ ಕೈತಪ್ಪಿಸಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಬೇಕೆಂಬುದು. ಈ ಕಾನೂನು ಬರುತ್ತದೆ ಎಂದು ತಿಳಿದ ತಕ್ಷಣ ಒಂದು ವರ್ಷದಿಂದ ಜಮೀನು ಮಾಡುತ್ತಿದ್ದಾನೆಂದು ಗೇಣಿದಾರನಿಂದ ಚೀಟಿ ಬರೆಸಿಕೊಳ್ಳುತ್ತಿದ್ದಾರೆ. ಇದರ ಪರಿಣಾಮವೇನು ಎಂಬುದನ್ನು ಯೋಚನೆ ಮಾಡಬೇಕು. ಮೊದಲು ಗೇಣಿದಾರನು ತನ್ನದೇ ಜಮೀನು ಎಂಬ ಭಾವನೆಯಿಂದ ಮುತುವರ್ಜಿ ವಹಿಸಿ ಜಮೀನಿಗೆ ಚೆನ್ನಾಗಿ ಆಬಾದು ಮಾಡಿ ಸಾಗು ಮಾಡುತ್ತಿದ್ದನು. ಈಗ 5 ವರ್ಷಗಳೊಳಗಾಗಿ ತಮ್ಮಿಂದ ಜಮೀನನ್ನು ಕಿತ್ತುಕೊಳ್ಳಬಹುದೆಂಬ ಸಂಶಯ ಬಂದಿದೆ. ಅಲ್ಲದೆ ಇಷ್ಟು ವರ್ಷ ಉತ್ತಮಪಡಿಸಿ ಅಭಿವೃದ್ಧಿಗೆ ತಂದ ಜಮೀನನ್ನು ತಮ್ಮ ಕೈತಪ್ಪಿಸುತ್ತಾರೆಂದು ಚೀಟಿಗಳನ್ನು ಬರೆಸಿಕೊಳ್ಳುವುದರಿಂದ ಅನುಮಾನ ಪಟ್ಟು ಉದ್ರೇಕಗೊಳ್ಳಲು ಅವಕಾಶವಾಗಿದೆ.

Sri H. M. CHANNABASAPPA.—May I intervene in the debate for a moment? ಈ ಅವಕಾಶ ಮೊದಲು ಕಂಡುಬಂದಾಗ ಇರಲಿಲ್ಲ ಮತ್ತು ಲ್ಯಾಂಡ್ ರೆವೆನ್ಯೂ ಸಮಿತಿಯವರು ಕೂಲಂಕಷವಾಗಿ ಪರಿಶೀಲಿಸಿ ಈಗ ಮಾಡಿರುವ ಶಾಸನ ಯಾವುದಕ್ಕೂ ರೆಟ್ರಾಸ್ಪೆಕ್ಟಿವ್ ಎಫೆಕ್ಟ್ ಇರಕೂಡದು ಎಂದು ಕಡ್ಡಾಯವಾಗಿ ಶಿಫಾರ್ಸು ಮಾಡಿದ್ದಾರೆ.

"The tenancy law enacted on the above lines should apply only to leases entered into after it comes into force and should not have retrospective effect." ಎಂದು ಮೊದಲು ಹೇಳಿದ್ದರು. ಆದರೆ ಸೆಲೆಕ್ಟ್ ಸಮಿತಿಯವರು ಟೆನೆಂಟ್ಸ್‌ಗೆ ಸ್ವಲ್ಪ ಅವಕಾಶ ಕೊಡಬೇಕೆಂದು ಕಂಡುಬಂದುದರಿಂದ ಹೊಸ ಕ್ಲಾಜನ್ನು ಸೇರಿಸಿ 12 ವರ್ಷ ಸಾಗುವಳಿ ಮಾಡಿದ್ದವರಿಗೆ ಸ್ವಲ್ಪ ರಕ್ಷಣೆ ನೀಡಿದ್ದಾರೆ.

Sri K. PUTTASWAMY.—There seems to be a triangular fight!

Sri H. M. CHANNABASAPPA.—I only want to strengthen his hands for the argument he is making. ಮುಂದೆ ತಪ್ಪು ಭಾವನೆ ಬರಬಾರದು ಎಂದು ನಾನು ಇಷ್ಟು ಹೇಳಿದ್ದೇನೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ'ಅವರು.—ಎವಿಕ್ಷನ್ ಒಂದು ವರ್ಷದಲ್ಲಿ ನಡೆದಿರುವುದು ನಲ್ ಅಂಡ್ ವಾಯ್ಡ್ ಎಂದು ಮೊದಲೇ ಕಾನೂನು ಮಾಡಿ ಆಮೇಲೆ ಟೆನೆನ್ಸಿ ಬಿಲ್ಲನ್ನು ತರುವುದರಿಂದ ಈ ದಿವಸ ಇಂಥ ಪರಿಸ್ಥಿತಿ ಖಂಡಿತ ಬರುತ್ತಿರಲಿಲ್ಲ. ಯಾರೂ ಜೈಲಿಗೆ ಹೋಗಬೇಕಾದ ಪ್ರಸಂಗ ಬರುತ್ತಿರಲಿಲ್ಲ ಎಂದು ಘಂಟಾಘೋಷವಾಗಿ ಹೇಳುತ್ತೇನೆ. ಟೆನೆಂಟ್ಸ್‌ಗೆ ರಕ್ಷಣೆಯಿರುತ್ತದೆಂದು ಹೇಳುವಾಗ ಸೇಕಡ ಹತ್ತು ಮಂದಿ ಸರಿಯಾಗಿಲ್ಲದಿದ್ದರೂ ಅವರನ್ನು ಪ್ರೋಟೆಕ್ಷನ್ ಮಾಡಬೇಕಾದ್ದು ಪ್ರಜಾಪ್ರಭುತ್ವ ಸರ್ಕಾರದ ಕರ್ತವ್ಯ.

Sri H. M. CHANNABASAPPA.—I want the Hon'ble Member to tell the House in what respects discontentment etc., assumed huge proportions.

Sri K. R. SREEKANTESWAR.—I do not want to mention names. I know what has happened in my own district, Kolar District, and Shimoga District. I cannot make a guess or imagine what is happening in Mysore.

ಶ್ರೀ ಕಡಿದಾಳ್ ಮಂಜಪ್ಪನವರು.—ಶಿವಮೊಗ್ಗದಲ್ಲಿ ಬಹಳ ಜನ ಬಡಿಸುತ್ತಿದ್ದಾರೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ನಿಜವಾಗಿಯೂ ಹಿಡುವಳಿದಾರರಿಗೂ ಮತ್ತು ಗೇಣಿದಾರರಿಗೂ ಮೊದಲು ಮಧುರ ಬಾಂಧವ್ಯವಿತ್ತು. 16ನೆಯ ಕ್ಲಾಜನ್ನು ಸೇರಿಸಿದ ಮೇಲೆ ತೊಂದರೆಗೆ ಕಾರಣವಾಯಿತು. ಅದಕ್ಕೆ ಮೊದಲು ಏನೂ ಇರಲಿಲ್ಲ. ಆದ್ದರಿಂದ ಒಂದು ವರ್ಷದಿಂದ ಈಚೆಗೆ ಆಗಿರುವ ಎವಿಕ್ಷನ್ ನಲ್ ಅಂಡ್ ವಾಯ್ಡ್ ಎಂದು ಹೇಳಿದ್ದರೆ ಚೆನ್ನಾಗಿತ್ತು ಎಂದು ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು.—16ನೆಯ ಕ್ಲಾಜು ಮೊದಲು ಇರಲಿಲ್ಲ. ಸೆಲೆಕ್ಟ್ ಸಮಿತಿಗೆ ಈ ಬಿಲ್ಲು ಹೋದಮೇಲೆ ಅಲ್ಲಿ ಸೇರಿಸಿದ್ದಾರೆ.

Sri K. PUTTASWAMY.—Moreover it was in a confidential stage. The report is now being discussed. I do not known how my friend could say that it was known to all the public. I am sure he himself became a ware of the report only when it was handed over to him.

Sri K. R. SREEKANTESWAR.-Clause 22 seems to be a dangerous clause. It is so dangerous that I feel that greatest injustice is done to the tenants. For example if you go through the entire clause, it reads like this—

"If a landlord intends to sell any land leased to a tenant, such tenant shall be given in the manner provided in sub section (2), the first option of purchasing the land."

I do not want to unnecessarily take away the time of the House by reading this. But my only submission is this: ಸಾಗುವಳಿದಾರನು ಜಮೀನನ್ನು ಮಾಡುತ್ತಿದ್ದಾಗ ಅದನ್ನು ಮಾರಬೇಕೆಂದು ಜಮೀನ್ದಾರನು ಇಷ್ಟಪಟ್ಟರೆ ಆ ಬಗ್ಗೆ ಆತನು ಒಂದು ಕಾಲಾವಧಿಯೊಳಗಾಗಿ ಟೆನೆಂಟಿಗೆ ನೋಟೀಸ್ ಕೊಡಬೇಕು. ಇಷ್ಟು ಬೆಲೆಗೆ ಮಾರುತ್ತೇನೆಂದು ತಿಳಿಸಿ ಸಾಗುವಳಿದಾರ ಅದಕ್ಕೆ ಒಪ್ಪುತ್ತಾನೋ ಇಲ್ಲವೋ ಎಂಬುದನ್ನು ತಿಳಿದುಕೊಂಡು ಅದರ ಮೇಲೆ ಒಂದು ತಿಂಗಳಲ್ಲಿ ಹಣ ಕೊಡಬೇಕೆಂದು ಕೇಳುತ್ತಾನೆ. ಹಾಗೆ ಟೆನೆಂಟ್ ಕೊಡದಿದ್ದರೆ ಬೇರೆಯವರಿಗೆ ಜಮೀನನ್ನು ಮಾರಲು ಅವಕಾಶವಿದೆ. ಇದೂ ಕೂಡ ಅಮಲ್ದಾರರಿಗೆ ಸೇರಿದೆ.

ನಮ್ಮಲ್ಲಿ ಎಷ್ಟು ಜನ ಗೇಣಿದಾರರಿಗೆ ತಾವೇ ಉತ್ತು, ಬಿತ್ತು ಫಲವತ್ತು ಮಾಡಿದ ಜಮೀನನ್ನು ಕೊಂಡುಕೊಳ್ಳುವುದಕ್ಕೆ ಶಕ್ತಿ ಇದೆ ಎಂಬುದನ್ನು ಯೋಚನೆ ಮಾಡಬೇಕು. ಜಮೀನ್ದಾರ ಮೂರು ಸಾವಿರ ರೂಪಾಯಿ ಕೊಟ್ಟರೆ ಮಾರಲು ಸಿದ್ಧನಾಗಿರುತ್ತಾನೆ. ಆ ಬೆಲೆ ಅವನು ಬೇರೆಯವರಿಗೆ ಕೊಟ್ಟರೆ ಸಿಕ್ಕುತ್ತದೆ. ಅಂಥ ಸಂದರ್ಭದಲ್ಲಿ ಅವನ ಜಮೀನು ಮಾಡುತ್ತಿರುವವನಿಗೇ ಮಾರಬೇಕೆಂದರೆ 200-300 ರೂಪಾಯಿ ಸಹ ಕೊಡಲು ಶಕ್ತಿ ಇಲ್ಲದೇ ಇರತಕ್ಕ ಆ ಸಾಗುವಳಿದಾರ ಅಷ್ಟು ಹಣ ಕೊಟ್ಟು ಕೊಂಡುಕೊಳ್ಳಲು ಸಾಧ್ಯವಾಗುತ್ತದೆಯೇ ಎಂದು ಕೇಳುತ್ತೇನೆ. ಅವನಿಗೆ ಕೊಳ್ಳಲು ಶಕ್ತಿ ಇಲ್ಲದೇ ಇದ್ದಮೇಲೆ ಆ ಜಮೀನನ್ನು ಬೇರೆಯವನಿಗೆ ಮಾಡಿಕೊಳ್ಳಬಹುದು ಎಂದು ಇದೆ.

ಅಧ್ಯಕ್ಷರು.—3,000 ರೂಪಾಯಿಗಿಂತ ಕಡಿಮೆ ಮಾರುವಹಾಗಿಲ್ಲ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್ ಅವರು.—ಬೇರೆಯವರು 3,000 ರೂಪಾಯಿ ಕೊಟ್ಟು ತೆಗೆದುಕೊಳ್ಳಲು ಸಿದ್ಧರಾಗಿರುವಾಗ ಅವನಿಗೆ ಅಷ್ಟು ಕೊಟ್ಟು ಕೊಂಡುಕೊಳ್ಳಲು ಚೈತನ್ಯವಿರುವುದಿಲ್ಲ. ಆಗ ಅವನು ಏನು ಮಾಡಬೇಕು? ಜಮೀನು ಕಿತ್ತುಕೊಂಡು ಅವನನ್ನು ಓಡಿಸಿದ ಮೇಲೆ ಆಗ ಅವನ ಗತಿ ಏನು? ಅವನನ್ನು ಯಾವ ರೀತಿ ಕಾಪಾಡಬೇಕೆಂದಿದ್ದೀರಿ? ಆ ಬಗ್ಗೆ ಯಾವುದಾದರೂ ಒಂದು ಕ್ಲಾಸನ್ನು ಇದರಲ್ಲಿ ಸೇರಿಸಿದ್ದೀರಾ?

I want to know whether there are rehabilitation and compensation measures.

Sri K. SAMPANGI RAMIAH (Kolar District-General).—Tenancy rights will not go.

Sri K. R. SREEKANTESWAR.—Tenancy rights wi l not go but what is it that you have done for the tenant?

Sri S. RANGARAMIAH (Mysore District-General).—Let him cultivate somebody else's land.

Sri K. R. SREEKANTESWAR.—When he has cultivated the land from generations why should he now cultivate somebody else's land? You want to deprive him of his land and send him out without any rehabilitation? ಇಲ್ಲಿ ಇರತಕ್ಕ 48 ಕ್ಲಾಸುಗಳಲ್ಲಿ 22ನೇ ಕ್ಲಾಸು ಗೇಣಿದಾರರಿಗೆ ಸಂಬಂಧಪಟ್ಟಂತೆ ಬಹಳ ಮುಖ್ಯವಾದುದು. ಅನೇಕ ವರ್ಷಗಳಿಂದ ಜಮೀನು ಮಾಡಿಕೊಂಡು ಬಂದಿರುವವರನ್ನು ಮುಂದೆ ಜೀವನೋಪಾಯಕ್ಕೆ ಯಾವ ಒಂದು ಮಾರ್ಗವೂ ಇಲ್ಲದಂತೆ ಮಾಡಿ ಜಮೀನು ಕಿತ್ತುಕೊಂಡು ಕಳುಹಿಸುವುದು ಸರಿಯಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಒಂದು ಘಂಟೆ ವಾದ ಮಾಡುವುದಕ್ಕಿಂತಲೂ ಒಂದು ಅಂಕಿಅಂಶ ಕೊಟ್ಟು ಹೇಳಿದರೆ ಹೆಚ್ಚಿನ ಬೆಲೆ ಇರುತ್ತದೆ ಎಂದು ಹೇಳುತ್ತೇನೆ. ವಂಶಪಾರಂಪರ್ಯವಾಗಿ ಸಾಗುವಳಿ ಮಾಡಿಕೊಂಡಿರುವವರು ಎಷ್ಟು ಜನ ಇದ್ದಾರೆ ಎಂಬುದನ್ನು ಹೇಳಿದರೆ ತಮ್ಮ ವಾದಕ್ಕೆ ಪುಷ್ಟಿ ಬರುತ್ತದೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್ ಅವರು.—ಶಾಸನ ಮಾಡತಕ್ಕದ್ದು ಪ್ರತಿಯೊಬ್ಬ ಪ್ರಜೆಗೂ ಅನ್ವಯಿಸುವಂತೆ ಮಾಡಬೇಕಾಗುತ್ತದೆ. ಖೈದಿ ಸಿಕ್ಕುವವನು ಒಬ್ಬನೇ ಆದರೂ ಅವನಿಗೆ ಅನ್ವಯಿಸತಕ್ಕ ಕಾನೂನೂ ಎಲ್ಲರಿಗೂ ಅನ್ವಯವಾಗುಂತಿರಬೇಕು. ಆದ್ದರಿಂದ ಆ ರೀತಿ ಅನೇಕ ವರ್ಷಗಳಿಂದ ಜಮೀನು ಮಾಡಿಕೊಂಡು ಬರುತ್ತಿರುವಂಥ ಒಬ್ಬ ಗೇಣಿದಾರ ಇದ್ದರೂ ಸಹ ಅವನಿಗೂ ಅನ್ವಯಿಸುವಂಥ ಒಂದು ಶಾಸನ ಇದ್ದೇ ಇರಬೇಕು. ಅದಕ್ಕೆ 22ನೇ ಕ್ಲಾಸ್‌ನಲ್ಲಿ ಏನಾದರೂ ಕೆಲವು ಪರಿಹಾರಗಳನ್ನು ಸೂಚನೆ ಮಾಡಬೇಕು. ನಾನು ಆಗಲೇ ಹೇಳಿದಂತೆ Rehabilitation measures ಇಲ್ಲದಿದ್ದರೆ ಅದು ಸಮಾಜಕ್ಕೆ ಬಹಳ ಹಾನಿಯನ್ನುಂಟುಮಾಡುತ್ತದೆ ಎಂದು ಮತ್ತೊಂದು ಸಾರಿ ಅರಿಕೆ ಮಾಡಿಕೊಳ್ಳುತ್ತೇನೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಆ ಬಗ್ಗೆ ದ್ರಾಫ್ಟು ಏನಾದರೂ ಕಳುಹಿಸಿದ್ದೀರಾ?

ಶ್ರೀ ಕೆ. ಆರ್. ಶ್ರೀಕಂಠೇಶ್ವರ್ ಅವರು.—ಅದರ ಬದಲು ಪುನಃ ಸೆಲೆಕ್ಟ್ ಸಮಿತಿಗೆ ಇದನ್ನು ಪರಿಶೀಲಿಸಲು ಕಳುಹಿಸಿದ್ದರೆ ಚೆನ್ನಾಗಿತ್ತು ಎಂದು ಹೇಳಿದ್ದೇನೆ. ನಾನು ಹೇಳಿರುವ ಎರಡ ವಿಷಯಗಳನ್ನು ಇನ್ನೊಂದು ಸಲ ಪರಿಶೀಲನೆ ಮಾಡಬೇಕಾಗಿದೆ. ಒಬ್ಬನೇ ಆಗಲೀ, ಇಬ್ಬರೇ ಆಗಲೀ 10-12 ವರ್ಷ ಜಮೀನು ಸಾಗುವಳಿ ಮಾಡಿದ್ದರೂ ಅದನ್ನು ಕೊಂಡುಕೊಳ್ಳಲು ಶಕ್ತಿ ಇಲ್ಲದಿದ್ದ ಮೇಲೆ ಬೇರೆಯವರಿಗೆ ಮಾರುತ್ತೇನೆ ಎಂದಾಗ ಆ ಜಮೀನು ಬಿಟ್ಟುಕೊಡಬೇಕು. ಇಲ್ಲದಿದ್ದರೆ ಅವನು ಸ್ವಂತ ಜಮೀನು ಮಾರುತ್ತೇನೆ ಎಂದು ಹೇಳಿ ಜಮೀನು ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳುತ್ತಾನೆ. ಆಗ ಆ ಸಾಗುವಳಿದಾರನ ಗತಿ ಏನು, ಅವನು ಏನು ಮಾಡಬೇಕು ಎಂಬುದನ್ನು ಸ್ವಲ್ಪ ಪರ್ಯಾಲೋಚಿಸಬೇಕು. ಇಲ್ಲದಿದ್ದರೆ ಅವನ ಜಮೀನು 10-12 ವರ್ಷ ಮಾಡಿದ್ದರೂ ಅದನ್ನು ಬಿಟ್ಟುಬಿಟ್ಟು ಇನ್ನೊಬ್ಬರ ಜಮೀನು ಹುಡುಕಿಕೊಂಡು ಹೋಗಬೇಕಾಗುತ್ತದೆ. ಅವನ ಹಣೇಬರಹ ಅಷ್ಟೆ.

26ನೇ ಕ್ಲಾಸ್‌ನಲ್ಲಿ ರಶೀದಿ ಕೊಡುವ ವಿಚಾರ ಹೇಳಿದೆ.

"Every landlord shall on the written request of the tenant give a written notice" ..... Why should the tenant who pays money to the landlord and who does not know ABCD give a written request? What does it mean? ಇದು ಏನಿದ್ದರೂ ಜಮೀನ್‌ದಾರರಿಗೆ ಯಥೇಚ್ಛವಾಗಿ ಸಹಾಯ ಮಾಡುವುದಕ್ಕೆ ಹೊರಟಿರುವ ಮತ್ತೊಂದು ಅಂಶ ಎಂದು ಹೇಳುತ್ತೇನೆ. ಆವಶ್ಯಕತೆಯಿಲ್ಲದೇ ಇರುವಾಗ "written request" ಬರೆದು ಕೊಡಿ ಎಂದರೆ ಏನು ಅರ್ಥ?

ಅಧ್ಯಕ್ಷರು.—ಒಂದು ವೇಳೆ ಅವನು ರಶೀದಿ ಕೊಡಿ ಎಂದು ಕೇಳಿದೇ ಹೋದರೂ ಕೇಳಿದ್ದು, ಕೊಡಲಿಲ್ಲ ಎಂದರೆ ಏನು ಮಾಡುವುದು; ಅದಕ್ಕೋಸ್ಕರ ಆ ಕ್ಲಾಸನ್ನು ಸೇರಿಸಿದ್ದಾರೆ.

Sri K. R. SREEKANTESWAR.—26ನೇ ಸೆಕ್ಷನ್‌ನಲ್ಲಿ ಏನು ಹೇಳಿದ್ದಾರೆ?

"Every landlord shall on the written request of the tenant give a written receipt for the amount of rent at the time when such amount is received by him in respect of any land ...."

ಇದರಿಂದ ಏನಾಗುತ್ತದೆ ಎಂದರೆ "written request" ಕೊಡದೇ ಇದ್ದ ಪಕ್ಷದಲ್ಲಿ ಅವನಿಗೆ ರಶೀದಿ ಕೊಡುವುದೇ ಇಲ್ಲ. ಈಗಿನ ಸಮಾಜದ ಸ್ಥಿತಿಯಲ್ಲಿ ಎಲ್ಲರೂ ಪ್ರಾಮಾಣಿಕರು ಎಂದು ನಾನು ಹೇಳುವುದಕ್ಕೆ ತಯಾರಾಗಿಲ್ಲ. ಅ ಪ್ರಾಮಾಣಿಕತೆ ಜಾಸ್ತಿಯಾಗುತ್ತಾ ಇದೆ. ಆದರೂ ಅವನು ಹಣ ತೆಗೆದುಕೊಂಡ ಮೇಲೆ ಗೇಣಿದಾರ ಏಕೆ "written request" ಕೊಡಬೇಕು?

It is the duty of the landlord to give a written receipt. Why should a genidar go and make a written request? ವರ್ಷವೆಲ್ಲಾ ಜಮೀನು ಮಾಡಿ, ದವಸ ಧಾನ್ಯ ನಿಮ್ಮ ಮನೆಗೆ ತೆಗೆದುಕೊಂಡು ಹೋಗಿ ಹಾಕುತ್ತಾನೆ. ಅವನು ಕೊಟ್ಟ ಹಣಕ್ಕೆ ನೀವು ರಶೀದಿ ಬರೆದು ಕೊಡಬೇಕೇ ಹೊರತು ಅವನನ್ನೇ ಅರ್ಜಿ ಬರೆದುಕೊಂಡು ಬಾ ಎಂದರೆ ಅಂಥ ಪ್ರಸಂಗ ಏನಿತ್ತು, ಏತಕ್ಕಾಗಿ ಇಂಥಾ ಒಂದು ನಿಯಮ ಮಾಡಿದ್ದಾರೆ ಎಂದು ಸೆಲೆಕ್ಟ್ ಸಮಿತಿಯವರನ್ನು ಕೇಳಬೇಕಾಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—"written request" ಇರಲಿಲ್ಲ, ಆದ್ದರಿಂದ ರಶೀದಿ ಕೊಡಲಿಲ್ಲ ಎಂಬುದಾಗಿ ಜಮೀನ್‌ದಾರ ಕಿರುಕುಳ ಕೊಡಬಹುದು ಎಂಬ ದೃಷ್ಟಿಯಿಂದ ಆ ರೀತಿ ಮಾಡಿದೆಯೇ ಹೊರತು ಮತ್ತೇನೂ ಅಲ್ಲ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್ ಅವರು.—Chapter IIIರಲ್ಲಿ ಅಪೀಲ್ ವಿಚಾರ ಹೇಳಿದ್ದಾರೆ. ಇವುಗಳೆಲ್ಲಕ್ಕೂ ಕೂಡ ಟ್ರಿಬ್ಯೂನಲ್ ಗೊತ್ತುಮಾಡಬೇಕು. ಅವರು ಏನು ತೀರ್ಮಾನ ಮಾಡುತ್ತಾರೋ ಅದರ ಮೇಲೆ ಅಸಿಸ್ಟೆಂಟ್ ಕಮೀಷನರು, ಡೆಪ್ಯುಟಿ ಕಮೀಷನರಿಗೆ ಅಪೀಲು ಮಾಡಿಕೊಳ್ಳಬಹುದು, ಅಭ್ಯಂತರವಿಲ್ಲ.

Sri W. H. HANUMANTHAPPA (Bangalore District-General).—There the Hon'ble Member is inconsistent. He wants a tribunal and also wants the right of appeal to the Deputy Commissioner. In the first instance he argued that the Amildars are not competent.

Sri K. R. SREEKANTESWAR.—I only said that we should not give the powers of fixing fair rent to the Amildar. If that is not going to be accepted and having Amildars is persisted, then have tribunals. That does not mean all my argument is a waste. If the Hon'ble Member Sri W. H. Hanumanthappa has not understood me, I am sorry. I first argued that the entire matter should be referred to civil courts. If you are not going to accept any of those arguments, the other alternative is to accept this amendment viz, having tribunals. I am not

(SRI K. R. SREEKANTESWAR).

prepared to accept the position of Amildars and other executive authorities where the parties have togo in appeal having Powers to fix fair rent, etc.

Sri H. M. CHANNABASAPPA.—Under clause 42, if a man does not give receipt he can be fined to the extent of Rs. 100.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್ ಅವರು.—ಈಗಿನ ಕಾಲದಲ್ಲಿ ಏನಾಗಿದೆ ಎಂದರೆ ಎಷ್ಟೋ ಜನ ನೂರಾರು ಎಕರೆ ಜಮೀನು ಇರುವವರು ಬೆಂಗಳೂರು, ಮೈಸೂರಿನಂಥ ಪಟ್ಟಣಗಳಲ್ಲಿದ್ದುಕೊಂಡು ಕಾರುಗಳಲ್ಲಿ ಓಡಾಡುತ್ತಾ ಸುಖವಾಗಿದ್ದಾರೆ. ಅವರಿಗೆ ಹಳ್ಳಿಗಾಡಿನವರ ಸ್ಥಿತಿಗತಿ ಏನು ಎಂಬುದು ಗೊತ್ತಿಲ್ಲ. ಆದ್ದರಿಂದ ಮೊದಲು ಗೇಣಿದಾರರ ಹಿತ ಕಾಪಾಡುವುದನ್ನು ಕಲಿತುಕೊಳ್ಳಿ. ಈಗಾಗಲೇ ವಿದ್ಯಾಭ್ಯಾಸ ಇತ್ಯಾದಿ ವಿಷಯಗಳಲ್ಲಿ ಗಮನಕೊಡುತ್ತಿದ್ದೀರಿ............

Sri H. M. CHANNABASAPPA.—We will make all of them hiduvalidars. That is our goal.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್ ಅವರು.—ಇನ್ನೊಂದು, Permanent tenancy ವಿಷಯ. Permanent tenancy is granted according to Land Revenue Code of 1888. ಅಂಥಾದ್ದರಲ್ಲಿ ಈಗಿರುವ ಮಸೂದೆಯಲ್ಲಿ ಒಂದು ಕಡೆ 12 ವರ್ಷ ಬೇಕೆಂದು ಒಂದು ಕಡೆ ಹೇಳಿದ್ದೀರಿ, ಇನ್ನೊಂದು ಕಡೆ 20 ವರ್ಷಬೇಕೆಂದು ಹೇಳಿದ್ದೀರಿ. ಹೀಗೇಕೆ ಮಾಡಬೇಕಾಗಿತ್ತು ? ಸಂಸ್ಥಾನಾದ್ಯಂತ ಎಲ್ಲಾ ಕಡೆಯಲ್ಲೂ ಈಗ 12 ವರ್ಷಗಳಿಂದ ಯಾರ್ಯಾರು tenants ಆಗಿದ್ದಾರೋ ಅವರನ್ನೆಲ್ಲಾ Permanent tenants ಎಂದೇಕೆ ಮಾಡಕೂಡದಾಗಿತ್ತು ?

ಹೀಗೆಯೇ ಇನ್ನೂ ಅನೇಕ ವಿಷಯಗಳಿವೆ. I would like to speak on my amendments the next day.

Mr. SPEAKER.—Shall we adjourn now ?

The Hon'ble Sri H. C. DASAPPA.—Are there more speakers-more than one?

Mr. SPEAKER.—Yes. So, we shall meet on 1st November. At what time shall we meet ?

The Hon'ble Sri K. CHENGALARAYA REDDY (Leader of the House).—One O' clock, Sir.

Mr. SPEAKER.—So, the House will now stand adjourned till One O' Clock on 1st November 1951.

The Assembly adjourned at Thirty two Minutes past Twelve of the Clock to meet again at One of the Clock on Thursday, 1st November 1951.

WD 1046—GPB—500—29-2-52.

LEGISLATIVE ASSEMBLY.

EIGHTH DAY.

Thursday, 1st November 1951.

The Legislative Assembly met in the Assembly Hall, Old Public Offices, Bangalore, on Thursday, 1st November 1951 at One of the Clock.

Mr. Speaker (The Hon'ble Sri V. Venkatappa) in the Chair.

QUESTIONS AND ANSWERS.

Mr. SPEAKER (The Hon'ble Sri V. Venkatappa).—Questions.

Recovery of Acquisition charges from Companies and Local Bodies.

Q.—77. Sri A. BHEEMAPPA NAIK (Chitaldrug District—General).—

Will the Government be pleased to state :—

(*a*) whether they have passed orders sanctioning recovery of 10 per cent of the estimated cost of acquisition from the companies and local bodies for whom land is acquired ;

(*b*) whether they called for the opinion of any local body before passing such an order ;

(*c*) all the other levies to be made in acquisitions besides the actual value of the land ;

(*d*) whether such a practice obtains in any of the States in India ?

A.—The Hon'ble Sri H. SIDDAIYA (Minister for Revenue and Excise).—

(*a*) Yes.

(*b*) Orders have already been passed.

(*c*) Fifteen per cent statutory allowance and commuted assessment.

(*d*) Section 50 (1) of Acquisition Act I of the Government of India contemplates the recovery of all charges incidental to the cost of acquisition.

Sri A. BHEEMAPPA NAIK.—My question was whether the opinion of the municipality was asked for before passing such an order ; but the answer furnished is something different.

*The Hon'ble Sri H. SIDDAIYA.—Yes, the answer is not correct. Local bodies were not consulted.

Sri A. BHEEMAPPA NAIK.—Is there any basis for fixing the establishment and incidental charges at 10 per cent ?

The Hon'ble Sri H. SIDDAIYA.—Ten per cent is deemed to be a very reasonable figure because when a Special Land Acquisition Officer is appointed, his pay and establishment charges, among other expenditure, should not be a charge on the Government and so they have to be recovered.

Sri A. BHEEMAPPA NAIK.—Should not the amount to be recovered depend on the expenditure incurred rather than on the value of the land ?

The Hon'ble Sri H. SIDDAIYA.—Generally, the Hon'ble Member is correct.

Sri A. BHEEMAPPA NAIK.—May I submit that the amount to be recovered should depend on the expenditure incurred ?

The Hon'ble Sri H. SIDDAIYA.—'Expenditure incurred' among other things.

Sri A. BHEEMAPPA NAIK.—Where a special officer is not appointed and the Revenue Inspector or the Amildar is asked to evaluate, in such cases, no expenditure is incurred—is it not ?

The Hon'ble Sri H. SIDDAIYA.—With all that, there will be extra work for the Revenue Department also.

Sri A. BHEEMAPPA NAIK.—On what data would it be 10 per cent of the value of the land ?

The Hon'ble Sri H. SIDDAIYA.—That is mentioned in the Government Order dated 16th April 1951. The last para of the order is to this effect :

"Government have reserved the right to exempt by general or special order any individual acquisition proceedings or class of proceedings from the recovery of establishment charges".

Sri A. BHEEMAPPA NAIK.—Whatever it is, if it is to be taken, is the amount to be 10 per cent ?

The Hon'ble Sri H. SIDDAIYA.—Government are at liberty to reduce the figure.

Sri A. BHEEMAPPA NAIK.—Would it not be in the interest of the Municipalities and local bodies that this figure is reduced to one or two per cent at the most, though 10 per cent may apply to the public limited companies or private companies ?

The Hon'ble Sri H. SIDDAIYA.—After such a representation was made to the concerned Minister by the Hon'ble Member, the matter is under active consideration. I think that 2 or 3 per cent may be fixed.

Sri A. BHEEMAPPA NAIK.—I thank the Hon'ble Minister for that.

Grades of Pay of Executive Staff of the Police and Excise Departments.

Q.—126. Sri B. M. SHAMANNA GOWDA (Retroceded Area—General).—

Will the Government be pleased to state :—

(*a*) the several grades of pay of the executive staff of the Police and the Excise Departments at present and 15 years back ;

(*b*) how many times these scales of pay in the two departments underwent revision during the last 15 years and with what results ;

(*c*) whether it is not desirable to have similar grades of pay for the executive staff of these two departments ;

(*d*) whether transfer of officials from the ministerial to the executive cadre or *vice versa* is permitted in these departments ; and if so, what are the qualifications prescribed and the procedure adopted for such transfers ;

(*e*) whether the Public Service Commission is being consulted in such cases of transfer and their opinion given due consideration ;

(*f*) whether such transfers, if allowed, would not affect adversely the prospects of the executive subordinate officials as the scales of pay of the executive staff are fixed and those of the ministerial staff are graded ;

(*g*) whether the Government would put an end to such interchange in the future ?

A.—The Hon'ble Sri H. SIDDAIYA (Minister for Revenue and Excise).—

POLICE DEPARTMENT.

(*a*)		*1935*	*1946*	*1947*
Police Inspectors—				
III Grade	...	100	125	150
II Grade	...	125	150	175
I Grade	...	150	175	200
Sub-Inspectors—				
IV Grade	...	50	60	70
III Grade	...	60	70	80
II Grade	...	70	85	100
I Grade	...	80	100	120
Jamedars—		32 35	40	50
Daffedars—		21 23 25 27 30	25 30 35	35 40
Constables—		15 16 17 18	18-1/3-22	22-1/2-32

EXCISE DEPARTMENT.

			15 years back.	*At present.*
Excise Inspectors—				
Class	I	...	150	175
Class	II	...	125	150
Class	III	...	100	125
Class	IV	...	80	100
Class	V	...	70	85
Class	VI	...	60	70

	15 years back.	*At present.*
Excise Assistant Inspectors—		
I Grade ...	40	60
II Grade ...	35	50
III Grade ...	30	40

(*b*) *Vide* reply to (*a*) above. Three times in the case of the Police Department and only once in the case of the Excise Department.

(*c*) The grades of pay for the executive staff of these two Departments have been fixed, having regard to the nature of work entrusted to them, which is not similar in both cases.

(*d*) *Police Department.*—Except for some cases between 1942 and 1947 such transfers are not made.

Excise Department.—Such transfers are made with the sanction of Government in special circumstances.

Qualifications prescribed :—

(1) Excise.
(2) Criminal (Lower).
(3) Accounts (Lower).

Sanction of Government is necessary in each case of transfer from the ministerial to the executive and *vice versa.*

(*e*) Yes.

(*f*) May affect in some cases.

(*g*) It is not possible to state so categorically. If considered very necessary such interchanges may have to be made in special circumstances, *i.e.*, when a person becomes unfit for executive service.

ಶ್ರೀ ಬಿ. ಎಂ. ಶಾಮಣ್ಣಗೌಡರು.—ಎಕ್ಸೈಜು ಸಿಬ್ಬಂದಿಯ ಸಂಬಳದ ಸ್ಕೇಲುಗಳನ್ನು ಪುನರ್ವಿಮರ್ಶೆ ಮಾಡುವುದಕ್ಕೆ ಸರ್ಕಾರದವರು ಯೋಚನೆಮಾಡಿದ್ದಾರೆಯೆ ?

*ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇನ್ನೂ ಮೊನ್ನೆಮೊನ್ನೆ ಪುನರ್ವಿಮರ್ಶೆಮಾಡಿದ್ದಾರೆ.

ಶ್ರೀ ಬಿ. ಎಂ. ಶಾಮಣ್ಣಗೌಡರು.—ಹಾಗಿದ್ದಪಕ್ಷದಲ್ಲಿ ಪೋಲೀಸ್ ಸಿಬ್ಬಂದಿಯ ಸಂಬಳದ ಸ್ಕೇಲುಗಳಿಗೂ ಅವರ ಸಂಬಳಡ ಸ್ಕೇಲುಗಳಿಗೂ ವ್ಯತ್ಯಾಸವಿರುವುದೇಕೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ಪೋಲೀಸ್ ಇಲಾಖೆ, ಇದು ಎಕ್ಸೈಜು ಇಲಾಖೆ.

ಶ್ರೀ ಬಿ. ಎಂ. ಶಾಮಣ್ಣಗೌಡರು.—ಎರಡು ಇಲಾಖೆಯವರೂ ಡಿಟೆಕ್ಟ್ ಮಾಡುವುದಕ್ಕೆ ತಾನೇ ಇರುವುದು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲಸದಲ್ಲಿ ವ್ಯತ್ಯಾಸವಿದೆ.

ಶ್ರೀ ಬಿ. ಎಂ. ಶಾಮಣ್ಣಗೌಡರು.—ಪೋಲೀಸ್ ಇಲಾಖೆಯಲ್ಲಿರುವಂತೆ ಇಲ್ಲಿಯೂ ಕೆಳದರ್ಜೆಯಲ್ಲಿರುವ ಕೆಲಸಗಾರರನ್ನು ಮೇಲಿನ ದರ್ಜೆಗೆ ಏರಿಸುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬೇರೆ ಬೇರೆ ಗ್ರೇಡುಗಳಿವೆ, ಹೇಗೆ ಮಾಡಬೇಕೆಂಬುದನ್ನು ನಿಗದಿ ಮಾಡಿದ್ದಾರೆ.

ಶ್ರೀ ಬಿ. ಎಂ. ಶಾಮಣ್ಣಗೌಡರು.—ಅವರಿಗೆ ಕೊಡುವ ಅಲೋಯನ್ಸ್‌ಗಳನ್ನು ಇವರಿಗೆ ಕೊಡುವಿರಾ ?

The Hon'ble Sri H. SIDDAIYA.—We will consider separately.

Transactions in Foodgrains during 1950-51.

Q.—292. **Sri B. CHANNABYRE GOWDA** (Bangalore District—General).—

Will the Government be pleased to state :—

(*a*) the quantities of foodgrains procured in the State during the year 1950-51 under the Food Control Order and the prices paid to each of them ;

(*b*) the amount realised by them by the sale of these foodgrains ;

(*c*) the quantities of foodgrains imported from outside the State, the amounts paid therefor and the amounts realised by the sale of these grains ;

(*d*) the quantities of shortage or excess in the foodgrains that were imported ;

(*e*) the expenditure incurred on the establishment for distribution of foodgrains ?

A.—**The Hon'ble Sri K. CHENGALARAYA REDDY** (Chief Minister).—

(*a*)—

	In Pallas	*Value in Rs.*
(1) Paddy ...	16,95,737	3,36,94,515
(2) Rice ...	2.630	99,368
(3) Ragi ...	3,72,685	74,46,695
(4) Jola ...	33,239	6,65,085
(5) Minor Millets.	16,889	3,01,798

(*b*) The total sale proceeds of both locally procured as well as imported foodgrains during 1950-51 amounted to Rs. 9,21,12,547, separate figures for each not being available as the realisations in either case are credited to the same head of account.

(THE HON'BLE SRI K. CHENGALA-RAYA REDDY.)

(*c*) The quantities of foodgrains imported from outside the State and the amounts paid therefor are as noted below :—

	In Maunds	Amounts paid in Rs.
(1) Rice ...	4,36,284	84,87,800
(2) Wheat ...	13,06,242	1,99,52,944
(3) Wheat flour.	49,076	9,59,358
(4) Milo and Jowar.	6,48,715	70,04,259
(5) Bengalgram and products.	15,140	1,86,488

(*d*) There was no excess but a shortage of about 3,051 maunds.

(*e*) The expenditure incurred on the establishment for procurement as well as distribution of foodgrains during 1950-51 was about Rs. 23,00,000, no separate figures for expenditure for distribution only being available.

ಶ್ರೀ ಬಿ. ಚನ್ನಬೈರೇಗೌಡರು.—ತಾವು ಪರದೇಶ ದಿಂದ ತರಿಸಲಾಗುತ್ತಿರುವ ಆಹಾರ ಧಾನ್ಯಗಳ ಅಳತೆ ಯನ್ನು ಮಣದ ರೀತ್ಯ ತಿಳಿಸಿದ್ದೀರಿ. ಅಂದರೆ ಒಂದು ಪಲ್ಲಾಕ್ಕೆ ಎಷ್ಟು ಮಣಗಳಾಗುತ್ತವೆ ?

*ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಪರದೇಶಗಳಿಂದ ಬರುತ್ತಿರುವ ಆಹಾರ ಧಾನ್ಯಗಳನ್ನೆಲ್ಲಾ ಅವರು ಮಣದ ಲೆಕ್ಕದಲ್ಲೇ ಕಳುಹಿಸಿಕೊಡುತ್ತಿದ್ದಾರೆ. ಅದರಿಂದ ಅವುಗಳ ಲೆಕ್ಕವನ್ನು ಮಣದಲ್ಲೇ ಕೊಡಲಾಗಿದೆ. ಒಂದು ಪಲ್ಲಾಕ್ಕೆ ಸುಮಾರು ಎರಡೂವರೆ ಮಣಗಳಾಗಬಹುದು.

ಶ್ರೀ ಬಿ. ಚನ್ನಬೈರೆಗೌಡರು.—ಹಾಗಾದರೆ ಒಂದು ಪಲ್ಲಾ ಅಕ್ಕಿಗೆ 63 ರೂಪಾಯಿಗಳಾಗುತ್ತವೆಂದರೆ ಒಪ್ಪಿಕೊಳ್ಳುತ್ತೀರಾ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅವರು ಅಲ್ಲಿ ಧಾನ್ಯಗಳನ್ನು ಯಾವ ದರಗಳಲ್ಲಿ ಕೊಂಡುಕೊಳ್ಳುತ್ತಾರೋ ಮತ್ತು ಇಲ್ಲಿಗೆ ಯಾವ ದರದಲ್ಲಿ ರವಾನೆಮಾಡುತ್ತಾರೋ ಆ ದರದಲ್ಲಿ ಆ ಧಾನ್ಯಗಳನ್ನು ಮಾರಾಟಮಾಡಲಾಗುತ್ತಿದೆ.

ಶ್ರೀ ಬಿ. ಚೆನ್ನಬೈರೇಗೌಡರು.—ಅಲ್ಲಿಂದ ತರಿಸಲಾಗುತ್ತಿರುವ ಆಹಾರ ಧಾನ್ಯಗಳಿಗೆ ಖಚಿತವಾಗಿ ತಗುಲುವ ಖರೀದಿ ಏನು ಮತ್ತು ರವಾನೆಮಾಡಲು ತಗುಲುವ ವೆಚ್ಚ ಎಷ್ಟಾಗುತ್ತದೆ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನೋಟೀಸ್.

ಶ್ರೀ ಬಿ. ಚನ್ನಬೈರೇಗೌಡರು.—ತಾವು ಹೊರಗಡೆಯಿಂದ ತರಿಸುವ ಆಹಾರ ಧಾನ್ಯಗಳಿಗೆ ಕೊಡತಕ್ಕ ಬೆಲೆಗಿಂತಲೂ, ನಮ್ಮಲ್ಲಿ ಕೊಂಡುಕೊಳ್ಳುವ ಬೆಲೆ ತೀರಾ ಕಮ್ಮಿಯಾಗಿರುತ್ತದೆಯಲ್ಲವೆ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಎಲ್ಲ ಸಾಧಕ ಬಾಧಕಗಳನ್ನೂ ನೋಡಿಕೊಂಡೇ ಧಾರಣೆಗಳನ್ನು ನಿರ್ಧರಮಾಡಿರುವುದು.

ಶ್ರೀ ಬಿ. ಚನ್ನಬೈರೇಗೌಡರು.—ತಾವು ಇಲ್ಲಿ ಕೊಳ್ಳುವುದು ಪಲ್ಲಾಕ್ಕೆ 38 ರೂ. ಆದರೆ ಹೊರಗಡೆಯಿಂದ ತರಿಸುವ ಅದೇ ಆಹಾರಕ್ಕೆ ಪಲ್ಲಾಕ್ಕೆ 63 ರೂ. ಗಳನ್ನು ಕೊಡುತ್ತಿದ್ದೀರಲ್ಲವೆ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಆ ಧಾರಣೆಯನ್ನು ನಾವು ಕೊಡುತ್ತಿಲ್ಲ. ಇಂಡಿಯಾ ಸರ್ಕಾರದವರು ಆ ಧಾರಣೆಗಳನ್ನು ನಿಗದಿಮಾಡಿದ್ದಾರೆ. ಅದರಂತೆ ಅವರು ಅವುಗಳನ್ನು ಕೊಂಡುಕೊಂಡು ನಮಗೆ ಕಳುಹಿಸುತ್ತಿದ್ದಾರೆ. ಅವುಗಳನ್ನು ಯಾವ ಧಾರಣೆಗೆ ಮಾರಬೇಕೋ ಆ ಧಾರಣೆಗಳನ್ನೆಲ್ಲಾ ಅವರೇ ನಿಗದಿಮಾಡಿರುತ್ತಾರೆ.

ಶ್ರೀ ಬಿ. ಎಂ. ರಾಮಣ್ಣಗೌಡರು (ಬೆಂಗಳೂರು ರಿಟ್ರೋಸೀಡೆಡ್ ಏರಿಯಾ).—ಪರದೇಶಗಳಲ್ಲಿ ಆಹಾರ ಧಾನ್ಯಗಳನ್ನು ಯಾರು ಕೊಡುತ್ತಾರೋ ಅವರು ತಾನೆ ಆ ಧಾರಣೆಗಳನ್ನು ಕ್ಲುಪ್ತಮಾಡುವುದು ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನೆಗೋಸಿಯೇಷನ್ ಸಮಿತಿಯವರಿದ್ದಾರೆ. ಅವರು ಮಾಡುತ್ತಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ತಾವು 1950—51ಕ್ಕೆ ಕೊಂಡಿರತಕ್ಕದ್ದೆಲ್ಲಾ ಸುಮಾರು 4 ಕೋಟಿ ಚಿಲ್ಲರೆ ಎಂದು ತಿಳಿಸಿದ್ದೀರಿ. ಅಂದರೆ ಆ ವರ್ಷ ಪ್ರಾರಂಭವಾಗುವಾಗ ಇದ್ದ ಸ್ಟಾಕ್ ಎಷ್ಟು ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನೋಟೀಸ್.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—1950 - 51 ರಲ್ಲಿ ತಾವು ಕೊಂಡಿರತಕ್ಕದ್ದು 7 ಕೋಟಿ ಚಿಲ್ಲರೆ ಮತ್ತು ಮಾರಾಟಮಾಡಿರುವುದು 9 ಕೋಟಿ ಚಿಲ್ಲರೆ; ಆದ್ದರಿಂದ 1 ಕೋಟಿ ರೂಪಾಯಿ ಮಟ್ಟಿಗೆ ಲಾಭ ಬಂದಿದೆಯೆಂದು ತಾವು ಇಲ್ಲಿ ತಿಳಿಸಿರುವುದು ನಿಜವೇ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಮಾನ್ಯ ಸದಸ್ಯರು ಕೇಳುತ್ತಿರುವ ಪ್ರಶ್ನೆ ನನಗೆ ಸರಿಯಾಗಿ ಅರ್ಥವಾಗಲಿಲ್ಲ.

SRI H. M. CHANNABASAPPA.—The sale proceeds for 1950-51 amounts to Rs. 9,21,12,547 and the purchases made during the year come to Rs. 7,87,98,310, and this results in a net profit of Rs. 1,34,14,237. Am I correct ?

*THE HON'BLE SRI K. CHENGALA-RAYA REDDY.—The matter has to be gone into carefully and calculated before I can commit myself to any reply definitely.

SRI H. M. CHANNABASAPPA.—In answer to (b) it is clearly stated that the sale proceeds amounts to Rs. 9·21 crores and the purchase value as noted

* Indicates that the remarks or speeches have not been returned approved by the Hon'ble Member concerned.

ಇನ್ನು ಹೆಚ್ಚು ಹೇಳಲು ಬಯಸುವುದಿಲ್ಲ. ಒಟ್ಟಿನಲ್ಲಿ ಪಬ್ಲಿಕ್ ಅಕೌಂಟ್ಸ್ ಸಮಿತಿಯವರು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಒಳ್ಳೆಯ ತೀರ್ಮಾನಗಳನ್ನು ಮಾಡಿದ್ದಾರೆ. ಅವರು ಮಾಡಿರತಕ್ಕ ಪ್ರತಿಯೊಂದು ತೀರ್ಮಾನವೂ ಕೂಡ ಮುಂದಿನ ಇಂಥಾ ಸಮಿತಿಗಳಿಗೆ ಮಾರ್ಗದರ್ಶಕವಾಗಿದೆ. ಅದರಲ್ಲೂ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ಹೆಚ್ಚಿನ ವಿವೇಚನೆಯಿಂದ, ನ್ಯಾಯಪರತೆಯಿಂದ ವರ್ತಿಸಿದ್ದಾರೆ. ಅವರೆಲ್ಲರಿಗೂ ಈ ಸಭೆ ಕೃತಜ್ಞತೆಯನ್ನು ಸಮರ್ಪಿಸಬೇಕಾದ್ದು ನ್ಯಾಯವೂ ಧರ್ಮವೂ ಆಗಿದೆ. ಅದೇ ರೀತಿ ಆಡಿಟರ ಇಲಾಖೆಯವರೂ ಕೂಡ ತಮ್ಮ ವರದಿಯನ್ನು ಬಹಳ ತೃಪ್ತಿಕರವಾದ ರೀತಿಯಲ್ಲಿ ತಯಾರಿಸಿ ಸರ್ಕಾರದವರಿಗೆ ಒಪ್ಪಿಸಿದ್ದಾರೆ. ಈ ರೀತಿ ಒಂದು ಕಡೆ ಆಡಿಟ್ ಇಲಾಖೆಯವರು ಮತ್ತೊಂದು ಕಡೆ ಪಬ್ಲಿಕ್ ಅಕೌಂಟ್ ಸಮಿತಿಯವರು ದಕ್ಷತೆಯಿಂದ, ನ್ಯಾಯಪರತೆಯಿಂದ ಕೆಲಸಮಾಡಿದರೆ ದೇಶದ ಹಣಕಾಸಿನ ಪರಿಸ್ಥಿತಿ ಒಂದು ಒಳ್ಳೆಯ ರೀತಿಯಲ್ಲಿ ಜನಗಳು ಕೊಟ್ಟಂಥ ಹಣ ಸುಭದ್ರವಾಗಿದೆ ಎಂಬ ನಂಬಿಕೆ ಬರುವುದಕ್ಕೆ ಅನುಕೂಲವಾಗುತ್ತದೆ. ಒಟ್ಟಿನಲ್ಲಿ ಈ ವರದಿಯನ್ನು ಸ್ವಾಗತಿಸಿ, ಇದನ್ನು ನಮ್ಮ ಮುಂದಿಟ್ಟಿರುವ ಮಾನ್ಯ ಮಂತ್ರಿಗಳಿಗೆ ಮತ್ತೊಮ್ಮೆ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಮರ್ಪಿಸಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—ಅಧ್ಯಕ್ಷರೇ, ಮಾನ್ಯ ಸಚಿವರು, ಪಬ್ಲಿಕ್ ಅಕೌಂಟ್ಸ್ ಕಮಿಟಿಯ ಅಧ್ಯಕ್ಷರು, ಸಭೆಯ ಮುಂದೆ ಮಂಡಿಸಿರತಕ್ಕ ಈ ವರದಿಯನ್ನು ನಾವು ಪರಿಶೀಲಿಸುವದಕ್ಕೆ ಮುಂಚೆ ನನಗನ್ನಿಸುತ್ತದೆ, ಇದು ಕಾನೂನು ಪ್ರಕಾರ ಈ ಸಭೆಯು ಅಂಗೀಕರಿಸತಕ್ಕ ವರದಿಯೇ ಅಲ್ಲ ಎಂದು. ಏಕೆಂದರೆ ಈ ಪಬ್ಲಿಕ್ ಅಕೌಂಟ್ಸ್ ಕಮಿಟಿಯು ರಚನೆಯಾಗಿದ್ದು ಹಿಂದಿನ ರೂಲ್ಸ್ ಪ್ರಕಾರ. ಆ ರೂಲ್ಸುಗಳು ಈಗ ರದ್ದಾಗಿವೆ. ಹೊಸ ರೂಲ್ಸನ್ನು ಈ ಸಭೆಯು ಅಂಗೀಕರಿಸಿ, ಅವರ ಅಂಗೀಕಾರ ಮುದ್ರೆಯೊತ್ತಿ 1951ನೆಯ ಇಸವಿ ಜೂನ್ 28ನೆಯ ತಾರೀಖಿನಿಂದ ಜಾರಿಗೆ ಬಂದಿದೆ. ಅಲ್ಲದೆ ಇದರ ರಚನೆಯ ವಿಚಾರದಲ್ಲೂ ಕೂಡ ಹಳೆಯ ರೂಲ್ಸ್ ನೋಡಿದರೆ, ಅದರಲ್ಲಿ 4 ಜನ ಈ ಸಭೆಯಿಂದ ಚುನಾಯಿತರಾದ ಸದಸ್ಯರಿರಬೇಕೆಂದೂ ಇಬ್ಬರು ಸ್ಪೀಕರ್‌ರವರೋ ಅಥವಾ ಸರ್ಕಾರದವರೋ ನಾಮಿನೇಟ್‌ಮಾಡಿದ ಸದಸ್ಯರಾಗಿ, ಒಟ್ಟು 6 ಜನರಿರಬೇಕೆಂದು ಹೇಳಿದೆ. ಈಗಿನ ಬದಲಾವಣೆಯಾದ ರೂಲ್ಸ್ ಪ್ರಕಾರ, 134ನೆಯ ಸೆಕ್ಷನ್‌ನಲ್ಲಿ ಹೇಳಿರುವಂತೆ—"As soon as may be after the commencement of the first session of the Assembly, a committee on Public Accounts shall, subject to the provisions of these rules be constituted for the purpose of dealing with the appropriation accounts of the Government and the report of the Audit Officer thereon and such other matters as the Government may refer to the Committee;

(2) The Committee on Public Accounts shall consists of the Finance Minister and six members who shall be elected by the Assembly from among the members according to the principle of proportional representation by means of the single transferable vote."

ಈ ರೀತಿ ಹೊಸ ರೀತಿಯಲ್ಲಿ ಕಮಿಟಿಯಾಗಿರುವುದರಿಂದ, ಆ ಕಮಿಟಿಯ ಮುಂದೆ ಈ ವರದಿಯು ಹೋಗಿ ಅವರು ಪರಿಶೀಲಿಸಿ ವ್ಯಕ್ತಪಡಿಸಿದ ಅಭಿಪ್ರಾಯವನ್ನು ಈ ಸಭೆಯ ಮುಂದಿಡಬೇಕಾಗಿತ್ತು. ಈಗ ಆ ರೀತಿಯಾಗಿಲ್ಲ. ಹಳೆಯ ಕಮಿಟಿಯ ವರದಿಯನ್ನೇ ಇಡಲಾಗಿದೆ. ಆದ್ದರಿಂದ ಈ ವರದಿಯಲ್ಲಿ ಅವರು ಕೊಟ್ಟಿರತಕ್ಕ ಸಲಹೆಗಳು, ಅದರ ಮೇಲೆ ಈ ಸಭೆಯವರು ಕೊಡತಕ್ಕ ಅಭಿಪ್ರಾಯಗಳು ಕಾನೂನು ರೀತ್ಯಾ ಸ್ವಾಗತಾರ್ಹವಾಗಿರಲಾರವು. ಈಗಲೂ ಈ ಲೋಪವನ್ನು ಸರಿಪಡಿಸಬೇಕಾದರೆ 134ನೆಯ ನಿಯಮದ ಪ್ರಕಾರ ಒಂದು ಹೊಸ ಕಮಿಟಿಯನ್ನು ಏರ್ಪಾಡುಮಾಡಿ ಅದರ ಮುಂದೆ ಈ ವರದಿಯನ್ನಿಟ್ಟು ಅವರ ಸಲಹೆಗಳನ್ನು ತೆಗೆದುಕೊಳ್ಳಬೇಕಾದ್ದು ನ್ಯಾಯ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಆಮೇಲೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ವರದಿಯನು ವಿಮರ್ಶೆ ಮಾಡುವುದಕ್ಕಾಗಿಯೇ ಹೊಸ ಸಭೆಕರೆಯಿರಿ ಎಂತಲೋ.

ಶ್ರೀ ಎಲ್. ಸಿದ್ದಪ್ಪನವರು.—ಈ ಸಭೆ ಮುಂದೆ ಸೇರುವಾಗ ಇಡಿರಿ. ಒಂದು ವೇಳೆ ಮುಂದೆ ಸೇರದೆ ಹೋದರೆ ಮುಂದೆ ಬರುವ ಸಭೆಯಲ್ಲೇ ಇಡಿ.

ಅಧ್ಯಕ್ಷರು.—ಹಾಗಾದರೆ ಈ ಹೊಸ ರೂಲ್ಸ್ ಬರುವುದಕ್ಕೆ ಮುಂಚೆ ಆದ ಕಮಿಟಿಗಳೆಲ್ಲಾ ಹೋಗುತ್ತವೆ ಎಂತಲೇ ನಿಮ್ಮ ಅಭಿಪ್ರಾಯ ?

ಶ್ರೀ ಎಲ್. ಸಿದ್ದಪ್ಪನವರು.—ಹೌದು, ರೂಲ್ಸ್‌ನಲ್ಲಿ ಅವಕ್ಕೆ ಅವಕಾಶವೇ ಇಲ್ಲ. ಅದಕ್ಕೆ ಯಾವ permissible ಕ್ಲಾಜೂ ನಿಮ್ಮಲ್ಲಿಲ್ಲ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು. ಅದಕ್ಕೆ ಆಧಾರ ಹೇಳಿ !

ಶ್ರೀ ಎಲ್. ಸಿದ್ದಪ್ಪನವರು.—ಅದಕ್ಕೆ Permissible clause ಯಾವುದೂ ಇಲ್ಲಿಲ್ಲ.

ಆದ್ದರಿಂದ ನನ್ನ ಸಲಹೆಯೇನೆಂದರೆ, ಈ ಹೊಸ ರೂಲ್ಸ್ ಪ್ರಕಾರ ಒಂದು ಕಮಿಟಿ ಏರ್ಪಡಿಸಿ, ಅದರ ಮುಂದಿಟ್ಟು ಅವರು ಪರಿಶೀಲನೆ ಮಾಡಿದ ವರದಿಯನ್ನು ಕೊಡಬೇಕೆಂದು ಹೇಳುತ್ತೇನೆ.

ಎರಡನೆಯದಾಗಿ, ಈಗ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ರಚನೆಗಾಗಿ ಹೊಸ ನಿಬಂಧನೆಗಳನ್ನು ಮಾಡಿರುವುದರಲ್ಲೂ ಕೆಲವು ಲೋಪದೋಷಗಳಿವೆ. ಅದನ್ನು ಸರಿಪಡಿಸಬೇಕೆಂದು ಹೇಳುತ್ತೇನೆ. ಈಗ ಮಾನ್ಯ ಮಂತ್ರಿಗಳು ಈ ವರದಿಯನ್ನು ಸಭೆಯ ಮುಂದಿಡುವಾಗಲೂ ಆ ವಿಚಾರವನ್ನು ಪ್ರಸ್ತಾಪ ಮಾಡಿದರು. ಎಲ್ಲಾ ಕಡೆಯಲ್ಲಿ ಜಾರಿಯಲ್ಲಿರತಕ್ಕ ರೀತಿ ಏನಿದೆಯೆಂದರೆ, ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲೂ ಕೂಡ ಪಬ್ಲಿಕ್ ಅಕೌಂಟ್ಸ್ ಕಮಿಟಿಯೆಂಬುದು ಈ ಸಭೆಯು ರಚನೆ ಮಾಡತಕ್ಕ ಕಮಿಟಿಗಳಲ್ಲಿ ಬಹಳ ಮುಖ್ಯವಾದುದು. ಅದಕ್ಕೆ ಇರತಕ್ಕ ಜವಾಬ್ದಾರಿ ಬಹಳ ಹೆಚ್ಚಿನದು. ಅಲ್ಲದೆ ನಮ್ಮ ಸಂಸ್ಥಾನದಲ್ಲೂ ಈ ಕಮಿಟಿಯೇನೂ ಹೊಸದಲ್ಲ. ಸುಮಾರು 20–25 ವರ್ಷಗಳಿಂದಲೂ ಹಿಂದಿನ ಲೆಜಿಸ್ಲೆಟಿವ್ ಕೌನ್ಸಿಲ್ ಸೇರುವುದಕ್ಕೆ ಯಾವಾಗ ಅವಕಾಶ ದೊರಕಿತೋ ಅಗಿನಿಂದಲೂ ಇದು ಕೆಲಸ ಮಾಡುತ್ತಿದೆ. ಆದರೆ ಈಗ ಹೊಸ ಜಾಬ್ಯಾಂಗ ಜಾರಿಗೆ ಬಂದ ಮೇಲೆ ಹಿಂದಿನ ಲೆಜಿಸ್ಲೆಟಿವ್ ಕೌನ್ಸಿಲಿಗಿದ್ದ ಅಧಿಕಾರಗಳಿಗೂ ಈಗಿನ ಲೆಜಿಸ್ಲೆಟಿವ್ ಅಸೆಂಬ್ಲಿಗಿರುವ ಅಧಿಕಾರಗಳಿಗೂ ಸ್ವಲ್ಪ ವ್ಯತ್ಯಾಸವಿದೆ. ಈ ಹೊಸ ರಾಜ್ಯಾಂಗದ ಪ್ರಕಾರ ಸಂಸ್ಥಾನದ ಈ ಶಾಸನ ಸಭೆಯೇ ಹಣಕಾಸಿನ ವಿಚಾರದಲ್ಲೂ Supreme Body ಯಾಗಿದೆ. ಈ ದೃಷ್ಟಿಯಿಂದ ಈ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ಜವಾಬ್ದಾರಿ ಗುರುತರವಾದ್ದು. ಆ ಪ್ರಾಮುಖ್ಯತೆಯನ್ನು ಮತ್ತು ಜವಾಬ್ದಾರಿಯನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಬೇಕಾದರೆ ಆ ಕಮಿಟಿಯ ಅಧ್ಯಕ್ಷರು ಮಾನ್ಯ ಮಂತ್ರಿಗಳೇ ಆಗಿರುವುದಕ್ಕೆ ಬದಲಾಗಿ ಖಾಸಗಿ ಮೆಂಬರುಗಳೊಬ್ಬರಿರುವುದು ಬಹಳ ಅವಶ್ಯಕ. ಪಾರ್ಲಿಮೆಂಟಿನಲ್ಲಿ ಈ ಕಮಿಟಿ ಯಾವ ರೀತಿ ಇದೆ ಎಂಬುದನ್ನು ಐವರ್ ಜೆನಿಗ್ಸ್ ಹೀಗೆ ವಿವರಿಸಿದ್ದಾನೆ.

"It consists of fifteen members. By convention, it represents the parties of the House in proportion to their voting strength. By convention, also, member of the Opposition is always elected chairman. Usually, in fact, the Financial Secretary to the treasury in the last Government formed by the Opposition has been appointed chairman. The reason is that the Financial Secretary approves such of the estimates, upon which the Appropriation Accounts are based, as do not in his opinion require the personal consideration of the Chancellor of the Exchequer. A person with experience in that that office, therefore, already possesses a considerable knowledge of the detail of public finance.'

ಹೀಗೆ ಅವರು ಇದನ್ನು ಎಷ್ಟು meticulous ಆಗಿ, ಎಷ್ಟು ಕೂಲಂಕಷವಾಗಿ ನೋಡುತ್ತಾರೆಂಬುದನ್ನು ಗಮನಿಸುವುದಾದರೆ, ಅಲ್ಲಿ ಹೇಗೆ ಏನಾದರೂ ಸರ್ಕಾರದಲ್ಲಿ ಬದಲಾವಣೆಯಾದರೆ ಆ ಕೂಡಲೆ ಈ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ರಚನೆಯಲ್ಲೂ ಬದಲಾವಣೆಯಾಗುತ್ತದೆ, ಅದರ ಅಧ್ಯಕ್ಷರೇನಾದರೂ ಟ್ರೆಜರಿ ಬೆಂಚಿಗೆ ಹೋದರೆ ವಿರೋಧ ಪಕ್ಷದ ನಾಯಕರು ಆ ಕಮಿಟಿಯ ಅಧ್ಯಕ್ಷರಾಗಿ ನೇಮಿಸಲ್ಪಡುತ್ತಾರೆಂಬುದು ಗೊತ್ತಾಗುತ್ತದೆ. ಅದೇ ರೀತಿಯಲ್ಲಿ ನಮ್ಮ ಕೇಂದ್ರ ಪಾರ್ಲಿಮೆಂಟಿನಲ್ಲಿ ರಚನೆಯಾಗುವ ಕಮಿಟಿಯಲ್ಲೂ ಕೂಡ ಖಾಸಗೀ ಸದಸ್ಯರೊಬ್ಬರು ಅಧ್ಯಕ್ಷರಾಗಿರುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಆ ರೀತಿ ಮಾಡುವುದು ಇಲ್ಲಿಯೂ ಅವಶ್ಯಕವೆಂದು ನಾನು ಒತ್ತಿ ಹೇಳುತ್ತೇನೆ.

ಮಾನ್ಯ ಸಚಿವರೇನೋ ಇದನ್ನು ಸಭೆಯ ಮುಂದೆ ಮಂಡಿಸುವಾಗ ಹೇಳಿದರು, ನಾನು ಪಬ್ಲಿಕ್ ಅಕೌಂಟ್ಸ್ ಕಮಿಟಿಯ ಅಧ್ಯಕ್ಷನಾಗಿ ಕೆಲಸ ಮಾಡುವಾಗ ಆ ಮಟ್ಟಿಗೆ ನಾನು ಸರ್ಕಾರದ ಮಂತ್ರಿಯೆಂಬುದನ್ನು ಮರೆತು ಒಬ್ಬ ಸದಸ್ಯನು ಯಾವ ರೀತಿ ಕೆಲಸ ಮಾಡಬೇಕೋ ಆ ರೀತಿಯೇ ಮಾಡಿದ್ದೇನೆ ಎಂದು ಹೇಳಿದ್ದರು. ಅದನ್ನು ನಾನೂ ಒಪ್ಪುತ್ತೇನೆ. ಹಾಗೆ ಕೆಲಸ ಮಾಡಿದ್ದಕ್ಕೆ ಹಿಂದೆ ಇಂಥ ವರದಿ ನಮ್ಮ ಮುಂದೆ ಬಂದಾಗ್ಗೆ ನನ್ನ ಮೆಚ್ಚಿಕೆಯನ್ನು ಕೂಡ ವ್ಯಕ್ತಪಡಿಸಿದ್ದೇನೆ. ಅದರ ತತ್ವದೃಷ್ಟಿಯಿಂದ ಮತ್ತು ಇನ್ನು ಮುಂದೆ ಈಗ ಮಾನ್ಯ ಸಚಿವರು ಯಾರು ಅಧ್ಯಕ್ಷತೆ ವಹಿಸಿ ಒಂದು objective view ಇಟ್ಟು ಹೇಗೆ ಕೆಲಸಮಾಡಿದ್ದಾರೋ ಹಾಗೆಯೇ ನಿಷ್ಪಕ್ಷಪಾತವಾಗಿ ಕೆಲಸ ಮಾಡುವವರು ಸಿಕ್ಕುತ್ತಾರೆಂಬ ಭರವಸೆಯಿಲ್ಲವೆಂದು ಹೇಳಿ ನಾನು ಈ ವಿಷಯವನ್ನು ಸೂಚಿಸುತ್ತಿದ್ದೇನೆ.

ತತ್ವದ ದೃಷ್ಟಿಯಿಂದಲೂ, ಆ ರೀತಿಯ ಭರವಸೆ ಮುಂದಕ್ಕೆ ಇಲ್ಲದೇಯಿರುವುದರಿಂದಲೂ ಈ ನಿಯಮ ಸರಿಯಲ್ಲ.

Sri K. PUTTASWAMY.—You will get better men.

Sri L. SIDDAPPA.—Well, we may get better men, but we are not sure.

ತತ್ವದೃಷ್ಟಿಯಿಂದ ಈ ನಿಯಮವನ್ನು ಬದಲಾವಣೆ ಮಾಡಿ ಈ ಸಮಿತಿಯ ಅಧ್ಯಕ್ಷತೆಯನ್ನು ವಹಿಸುವುದಕ್ಕೆ ಈ ಸಭೆಯ ಒಬ್ಬ ಮಾನ್ಯ ಸದಸ್ಯರಿಗೆ ಅವಕಾಶವಿರುವಂತೆ ಮಾಡಬೇಕೆಂಬುದು ಎರಡನೆಯ ಸಲಹೆ.

ಅಧ್ಯಕ್ಷರು.—ಈ ನಿಬಂಧನೆಗಳು ಜಾರಿಗೆ ಬರುವುದಕ್ಕೆ ಮುಂಚೆಯೇ ಈ ವಿಷಯವನ್ನು ನಮ್ಮ ಕಚೇರಿಯವರು ಪರಿಶೀಲಿಸಿದ್ದಾರೆ. ಅದರ ಮೇಲೆ ನಾನು ಒಂದು ಸಲಹೆಯನ್ನು ಕೊಟ್ಟಿದ್ದೇನೆ. ಅದನ್ನು ತಿಳಿಸುತ್ತೇನೆ.

There are certain Committees already set up under the old Rules—Select Committees, Estimates Committee and the like. The new rules would apply to these committees so far as powers are concerned, but the actual Constitution of the Committees would not be affected. For, instance, under the old rules Ministers were Chairmen of the Select Committees. Now under the new Rules, the Chairman will be a member of the Committee appointed by the Speaker as Chairman,

These new Rules would apply to Committees set up in future. In respect of Committees set up already, the Minister would continue to be the Chairman.

The Hon'ble Sri H. C. DASAPPA.—Rule 168 says :

"All matters not specifically provided in these Rules and all questions relating to the detailed working of these rules shall be regulated in such a manner as the Speaker may from time to time direct."

This residuary clause enables the Hon'ble Speaker to privide for all contingencies to which you refer.

Sri K. R. SREEKANTESWAR (Bangalore City-General).—Sir, I submit that rule 134 (3) is very clear.

"The term of office of the members of the Committee shall be one year until the next committee is appointed whichever is later."

This is applicable to Public Accounts Committee also.

Sri L. SIDDAPPA.—In my humble opinion Rule 168 does not come to our aid. The proper construction of this Rule 168 is that if there is any omission in these Rules to make necessary provision for the proper conduct of the proceedings, then it gives some powers to the Speaker. But it does not say and we cannot make use of this provision to regularise an irregularity by not constituting a fresh public accounts committee. That is my submission.

ಈ ವರದಿಯನ್ನು ವಿಮರ್ಶೆಮಾಡುವಾಗ ಕೆಲವು ಬಹಳ ಮುಖ್ಯವಾದ ವಿಷಯಗಳನ್ನು ಈ ಸಭೆಯ ಗಮನಕ್ಕೆ ತರಬೇಕೆಂದಿಚ್ಛಿಸುತ್ತೇನೆ. ಮಾನ್ಯ ಸ್ನೇಹಿತರಾದ ಶ್ರೀ ಮಾದಯ್ಯಗೌಡರು ಹೇಳಿದ ಹಾಗೆ ಅದರಲ್ಲಿಯೂ ಅಭಿವೃದ್ಧಿ ಕಾರ್ಯಗಳ ಬಾಬುಗಳಲ್ಲಿ, ಹೇರಳವಾಗಿ ಗ್ರಾಮಾಂತರಗಳಲ್ಲಿ ವಾಸಮಾಡತಕ್ಕ ರೈತರ ಸ್ಥಿತಿಗತಿಗಳನ್ನು ಉತ್ತಮಪಡಿಸತಕ್ಕ ಯಾವ ಯಾವ ಬಾಬಿಗೆ ಈ ಸಭೆ ಹಣವನ್ನೊದಗಿಸಿತ್ತೋ ಆ ಹಣವನ್ನು ಬಹುಮಟ್ಟಿಗೆ ಖರ್ಚುಮಾಡಿಲ್ಲ. ಇದಕ್ಕೆ ಸರ್ಕಾರದಿಂದ ಒಂದು ಉತ್ತರ ಬರಬಹುದು, ಇದು 1949–50 ನೆಯ ಸಾಲಿಗೆ ಸೇರಿದ ಲೆಕ್ಕ. ಆ ವರ್ಷದಲ್ಲಿ ಒಂದು ವಿಶೇಷ ಸಂದರ್ಭ ಒದಗಿ ಸರ್ಕಾರದ ಕಾರ್ಯಕಲಾಪಗಳು 12 ತಿಂಗಳು ಜರುಗುವುದಕ್ಕೆ ಬದಲು 9 ತಿಂಗಳಿಗೆ ಮುಕ್ತಾಯವಾಯಿತು, ಆದುದರಿಂದ ಇಷ್ಟು ಹೇರಳವಾಗಿ ಒದಗಿಸಿದ್ದ ಗ್ರಾಂಟು ಖರ್ಚಾಗದೆ ಉಳಿದಿದೆ ಎಂದು ಹೇಳಬಹುದು. ಇದನ್ನು ಸ್ವಲ್ಪಮಟ್ಟಿಗೆ ಒಪ್ಪಬಹುದಾದರೂ ಸಂಪೂರ್ಣವಾಗಿ ಒಪ್ಪಲು ಸಾಧ್ಯವಿಲ್ಲ. ಕೆಲವು ಬಹಳ ಮುಖ್ಯವಾದ ಬಾಬುಗಳನ್ನು ಪರಿಶೀಲಿಸಿದರೆ, ಉದಾಹರಣೆಗೆ 23 (B) ಗ್ರಾಂಟಿನಲ್ಲಿ (Page 93 of the Audit Report and Appropriation accounts) ಗ್ರಾಮಾಭಿವೃದ್ಧಿ ಇಲಾಖೆಗೆ ಹಣವನ್ನೊದಗಿಸಿದ್ದರು. ಇದರಲ್ಲಿ ಎಷ್ಟು ಖರ್ಚಾಗಿದೆ ಎಂಬುದು ಅಲ್ಲಿ ನಮೂದಾಗಿದೆ. ಈ ಬಾಬಿನಲ್ಲಿ ಯಾವ ಅಧಿಕಾರಿಗಳು ಅದನ್ನು ಖರ್ಚು ಮಾಡಬೇಕಾಗಿತ್ತೋ ಅವರು ಮಾಡಿಲ್ಲ, ಕೆಲಸ ಸರಿಯಾಗಿ ನಡೆದಿಲ್ಲ ಎಂಬುದು ಚೆನ್ನಾಗಿ ಇದರಿಂದ ಕಾಣುತ್ತದೆ. 1949-50 ನೆಯ ಸಾಲಿನ ಬಡ್ಜೆಟ್ಟು ಅಂದಾಜನ್ನು ತೆಗೆದು ನೋಡಿದರೆ 148ನೆಯ ಪುಟದಲ್ಲಿ ಯಾವ ಯಾವ ಬಾಬಿಗೆ ಎಷ್ಟೆಷ್ಟು ಮೊಬಲಗನ್ನು ಒದಗಿಸಿದ್ದರೆಂಬುದು ಗೊತ್ತಾಗುತ್ತದೆ. ಗ್ರಾಮಾಂತರಗಳಲ್ಲಿ ಕುಡಿಯುವ ನೀರಿನ ಬಾವಿಗಳಿಗೆ ಏಳು ಲಕ್ಷ ರೂಪಾಯಿ ಒದಗಿಸಿದ್ದರು. ಇದರಲ್ಲಿ ಖರ್ಚಾಗಿರುವುದು 1,50,640 ರೂಪಾಯಿ ಮಾತ್ರ, ಉಳಿತಾಯವಾಗಿರುವುದು 5,49,360 ರೂಪಾಯಿ ದೇಶದ 90 ಲಕ್ಷ ಪ್ರಜೆಗಳಿಗೆ ಇಷ್ಟು ಖರ್ಚಾಗಿದೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇನ್ನೂ ಹಣ ಕೊಡಬೇಕಾದದ್ದು ಮುಂದೆ ಬರುತ್ತದೆ. ಅಲ್ಲದೆ ಆ ವರ್ಷ ಒಂಬತ್ತು ತಿಂಗಳು ಮಾತ್ರ.

ಶ್ರೀ ಎಲ್. ಸಿದ್ದಪ್ಪನವರು.—ಇದರಂತೆಯೇ ಬೇರೆ ಬಾಬುಗಳಲ್ಲಿಯೂ ಆಗಿದೆ. ಗ್ರಾಮಾಂತರ ಸಂಚಾರ ಸೌಕರ್ಯಗಳಿಗಾಗಿ ಆ ವರ್ಷ ಈ ಸಭೆ ಒದಗಿಸಿದ ಹಣ 6 ಲಕ್ಷ ರೂಪಾಯಿ, ಅದರಲ್ಲಿ ಖರ್ಚಾಗಿರುವುದು ಕೇವಲ 80,338 ರೂಪಾಯಿ. ಒದಗಿಸಿದ್ದ ಹಣದಲ್ಲಿ ಕೇವಲ 14·71% ಖರ್ಚಾಗಿದೆ. ಇನ್ನು ನಿಮ್ನ ವರ್ಗದವರ ಅಭಿವೃದ್ಧಿಕಾರ್ಯಗಳ ಬಾಬಿಗೆ 19 ಲಕ್ಷ ರೂಪಾಯಿ ಒದಗಿಸಿದ್ದರಲ್ಲಿ ಖರ್ಚಾಗಿರುವುದು 7,49,114 ರೂಪಾಯಿ. ಇನ್ನು ರೂರಲ್ ಹೆಲ್ತ್ ಮತ್ತು ಸ್ಯಾನಿಟೇಷನ್ನಿಗೆ ಸಭೆ ಒದಗಿಸಿದ್ದು 10 ಲಕ್ಷ ರೂಪಾಯಿ ಇದರಲ್ಲಿ ಖರ್ಚಾಗಿರುವುದು 2,67,418 ರೂಪಾಯಿ. ಅಂದರೆ ಒದಗಿಸಿದ್ದ ಮೊಬಲಗಿನಲ್ಲಿ ಶೇಕಡ 27ರಷ್ಟು ಮಾತ್ರ ಖರ್ಚಾಗಿದೆ. ಈ ಬಾಬಿನಲ್ಲಿ ಕೆಲಸ ನಿರ್ವಹಿಸಲು ನೇಮಕವಾಗಿದ್ದ ಅಧಿಕಾರಿಗಳ ಸಂಬಳ ಸಾರಿಗೆಗಾಗಿ ಯಾವ ರೀತಿ ಖರ್ಚಾಗಿದೆ ಎಂದರೆ, 89,500 ರೂಪಾಯಿ ಗ್ರಾಂಟು, 93,229 ರೂಪಾಯಿ ಖರ್ಚಾಗಿದೆ. ಅಂದರೆ 3,729 ರೂಪಾಯಿ ಜಾಸ್ತಿ ಖರ್ಚು ಮಾಡಿದ್ದಾರೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ದಯೆಯಿಟ್ಟು ಕಾರಣವನ್ನು ಓದಿ. Due to payment of arrears of pay under the allocation due to revision of pay.

The Hon'ble Sri T. MARIAPPA.—That was a legacy of the past.

ಶ್ರೀ ಎಲ್. ಸಿದ್ದಪ್ಪನವರು.—36 ಕೋಟಿ ರೂಪಾಯಿ ಕೊಟ್ಟಿದ್ದೆವು. ಅದೂ ಕೂಡ legacy of the past.

The Hon'ble Sri H. C. DASAPPA.—So do not say that we have been simply expanding departments. It is only a question of payment of arrears which we have had to pay under the revised scales.

Sri L. SIDDAPPA.—All right sir. that refers to items 1 and 2. We shall take up item 3—Taluk Development Committees.

ಇದಕ್ಕೆ ಒದಗಿಸಿದ್ದ ಗ್ರಾಂಟು 4,54,800 ರೂಪಾಯಿ, ಇದರಲ್ಲಿ 4,33,332 ರೂಪಾಯಿ ಖರ್ಚಾಗಿದೆ. 4ನೆಯದು publicity and propaganda

(SRI L. SIDDAPPA.)

39,900 ರೂಪಾಯಿ ಗ್ರಾಂಟು, ಖರ್ಚಾಗಿರುವುದು 44,570 ರೂಪಾಯಿ, ಅಂದರೆ 4,670 ರೂಪಾಯಿ ಹೆಚ್ಚಾಗಿ ಖರ್ಚಾಗಿದೆ. 5ನೆಯದು Works outlay ಗೆ ಒದಗಿಸಿದ್ದು 12,00,000 ರೂಪಾಯಿ ಖರ್ಚಾಗಿರುವುದು 14,40,675 ರೂಪಾಯಿ.

ಇದೇ ರೀತಿಯಾಗಿ ಟೌನ್‌ಗಳಿಗೆ ಒದಗಿಸಿರತಕ್ಕ ಗ್ರಾಂಟನ್ನು ಯಾವ ರೀತಿಯಾಗಿ ಖರ್ಚು ಮಾಡಿದ್ದಾರೆ ಎಂಬುದನ್ನು ನೋಡೋಣ. ಪುಟ 95ರಲ್ಲಿ ಈ ರೀತಿ ಹೇಳಲಾಗಿದೆ. Improvement of water supply ಬಾಬಿಗಾಗಿ ಈ ಸಭೆಯಲ್ಲೇ ಮಂಜೂರಾದದ್ದು 6 ಲಕ್ಷ ಚಿಲ್ಲರೆ ಮೊಬಲಗು. ಆ ಬಗ್ಗೆ ಸರ್ಕಾರದವರು ಖರ್ಚು ಮಾಡಿರತಕ್ಕದ್ದು 6 ಲಕ್ಷದ 99 ಸಾವಿರ ಚಿಲ್ಲರೆ. ಎಂದರೆ ಈ ಬಾಬಿನಲ್ಲಿ ಹೆಚ್ಚಾಗಿ ಒಂದು ಲಕ್ಷದವರೆಗೆ ಖರ್ಚಾಗಿರತಕ್ಕ ಮೊಬಲಗು ಬೆಂಗಳೂರು ಸಿಟಿಯ ಅಭಿವೃದ್ಧಿ ಕೆಲ ಕಾರ್ಯಗಳಿಗಾಗಿ ಡೆವಲಪ್‌ಮೆಂಟ್ ಯೋಜನೆಯ ಬಾಬಿಗೆಂದು ತೆಗೆದಿಡಲಾಗಿದ್ದ ಮೊಬಲಗಿನ ಪೈಕಿ, ಇದಕ್ಕೆ 93 ಸಾವಿರ ಚಿಲ್ಲರೆ ಖರ್ಚಾಗಿ ಬಾಕಿ ಮೊಬಲಗಿನಲ್ಲೂ ಸ್ವಲ್ಪ ಹಣ ಉಳಿತಾಯವಾಗಿದೆ. ಹೀಗೆ ಆ ಬಾಬನ್ನೂ ಸೇರಿಸಿಕೊಂಡು 6 ಲಕ್ಷ 95 ಸಾವಿರದ 114 ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಇದೇ ರೀತಿಯಾಗಿ ಟೌನ್ ಮೈನರ್ ಮುನಿಸಿಪಾಲಿಟಿಗಳ ಅಭಿವೃದ್ಧಿಗಾಗಿ ಈ ಸಭೆಯವರಿಂದ ಮಂಜೂರಾತಿಯನ್ನು ಪಡೆದದ್ದು 6 ಲಕ್ಷ ಚಿಲ್ಲರೆ ರೂಪಾಯಿಗಳು. ಆದರೆ ಇದರಲ್ಲೂ ಸ್ವಲ್ಪ ಕಡಿಮೆಯಾಗಿಯೇ ಖರ್ಚಾಗಿದೆ. ಹೀಗೆ ಈ ಬಾಬಿನಲ್ಲಿ ಖರ್ಚಾಗಿರತಕ್ಕದ್ದು. ಆ ಬಾಬಗಾಗಿ ಒದಗಿಸಲಾಗಿದ್ದ ಮೊಬಲಗಿಗೆ ಹೋಲಿಸಿ ಹೇಳುವುದಾದರೆ ಸೇಕಡ 19 ರಿಂದ 14ರ ತನಕ ಖರ್ಚಾಗಿರುತ್ತೆಂದು ಹೇಳಬಹುದು.

ಇದೇ ರೀತಿ ಶಿವಮೊಗ್ಗ ಜಿಲ್ಲೆಗೂ ಸಹ ಮೂರು ಐಟಂ ಕೆಲಸಗಳಿಗಾಗಿ 6 ಲಕ್ಷ ರೂಪಾಯಿಗಳನ್ನು ಒದಗಿಸಿದ್ದು, ಆ ಬಗ್ಗೆ 56 ಸಾವಿರ ರೂಪಾಯಿಗಳು ಮಾತ್ರವೇ ಖರ್ಚಾಗಿರುತ್ತೆ. ಬೆಂಗಳೂರು ಸಿಟಿ ಇತ್ಯಾದಿ ನಗರಗಳಿಗೆ 15 ಲಕ್ಷ ಒದಗಿಸಿದ್ದ ಕಡೆ 10 ಲಕ್ಷ ರೂಪಾಯಿಗಳವರೆಗೂ ಖರ್ಚಾಗಿರುತ್ತೆಂದು ಹೇಳುವಾಗ ಯಾವ ಒಂದು ಡೆವಲಪ್‌ಮೆಂಟ್ ಕೆಲಸಕಾರ್ಯಗಳಿಗೆಂದು ಒಂದು ಇಲಾಖೆಗೆ 9 ಕೋಟಿ ರೂಪಾಯಿಗಳ ತನಕ ಖರ್ಚು ಮಾಡತಕ್ಕಂಥ ಅವಕಾಶವಿರತಕ್ಕ ಬಾಬು ಎಂದರೆ ಈ ಗ್ರಾಮಾಭಿವೃದ್ಧಿಯ ಇಲಾಖೆ. ಈ ಇಲಾಖೆಗೆ ಒದಗಿಸಿರತಕ್ಕ ಮೊಬಲಗನ್ನು ಖರ್ಚು ಮಾಡಲು ಜಿಲ್ಲಾ ಡೆವಲಪ್‌ಮೆಂಟ್ ಸಮಿತಿಗೂ ಮತ್ತು ತಾಲ್ಲೂಕು ಡೆವಲಪ್‌ಮೆಂಟ್ ಸಮಿತಿಗೂ ಅವಕಾಶ ಇರತಕ್ಕದ್ದಾಗಿದೆ. ಹಿಂದೆ ಇದ್ದಂಥ ಮಂತ್ರಿಮಂಡಳ ಈ ಬಾಬಿನಲ್ಲಿ ಸಿಬ್ಬಂದಿಗೋಸ್ಕರವಾಗಿ ಖರ್ಚು ಮಾಡುತ್ತಿದ್ದುದು 2 ಲಕ್ಷ ರೂಪಾಯಿಗಳು ಮಾತ್ರ. ಆದರೆ ಈಗಿರತಕ್ಕ ಮಂತ್ರಿಮಂಡಳ ಅದೇ ಬಾಬಗೆ ಖರ್ಚು ಮಾಡುತ್ತಿರುವುದು 9 ಲಕ್ಷ ರೂಪಾಯಿಗಳು. ಆದರೆ ಈ ಸಿಬ್ಬಂದಿ ಖರ್ಚು ಮಾಡಬೇಕೆಂದು ಒದಗಿಸಲಾಗಿದ್ದ 44 ಲಕ್ಷ ಚಿಲ್ಲರೆಯಲ್ಲಿ ಕೇವಲ 12 ಲಕ್ಷ ಮಾತ್ರ ಖರ್ಚು ಮಾಡಿರತಕ್ಕದ್ದು ಬಹಳ ವಿಷಾದಕರ ಮತ್ತು ಶೋಚನೀಯವಾದ ವಿಚಾರ.

ಇನ್ನು ಕೆಲ ಕೆಲವು ಇಲಾಖೆಗಳಲ್ಲಿ ಕೆಲಕೆಲವು ಬಾಬುಗಳಲ್ಲಿ ಯಾವರೀತಿ ನಡೆದಿದೆಯೆಂಬ ಬಗ್ಗೆ ಕೆಲವು ಮುಖ್ಯಾಂಶಗಳನ್ನು ಮಾತ್ರ ಈಗ ಸಭೆಯ ಮುಂದೆ ಇಡಬೇಕೆಂಬುದು ನನ್ನ ಅಭಿಲಾಷೆ.

ಮೊದಲನೇಯದಾಗಿ ಇರಿಗೇಷನ್ ವರ್ಕ್ಸನ್ನು ತೆಗೆದುಕೊಳ್ಳೋಣ. ಇಲ್ಲಿ ಕೆಲವು Items of works ಗಳ ಒಂದು ಪಟ್ಟಿಯನ್ನೇ ಕೊಡಲಾಗಿದೆ. ಈ ಪಟ್ಟಿಯಲ್ಲಿ 50 ಸಾವಿರ ಮತ್ತು ಅದಕ್ಕೆ ಮೇಲ್ಪಟ್ಟು ಖರ್ಚಾಗತಕ್ಕ ಬಾಬುಗಳನ್ನೆಲ್ಲಾ ಸೇರಿಸಲಾಗಿದೆ. ಈ ಪಟ್ಟಿಯಲ್ಲಿ ಕೊಟ್ಟಿರತಕ್ಕದ್ದನ್ನು ಪರಿಶೀಲನೆಮಾಡಿ ನೋಡಿದ್ದರಲ್ಲಿ ನನಗೆ ಏನು ಕಂಡುಬರುತ್ತಿದೆಯೆಂದರೆ.—

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ದಯವಿಟ್ಟು ಪೇಜುನಂಬರನ್ನು ತಿಳಿಸಿ ?

ಎಲ್. ಸಿದ್ದಪ್ಪನವರು.—ಪೇಜು 66 ಸ್ವಾಮಿ. ಇಲ್ಲಿ ತೋರಿಸಿರುವಂಥ ಕೆಲಕೆಲವು ಐಟಂಗಳಿಗೆ ಅಂದರೆ ಕೆಲವು ಬಾಬುಗಳಿಗೆ ಗ್ರಾಂಟನ್ನೇನೋ ಒದಗಿಸಿದ್ದಾರೆ. ಈ ಪೈಕಿ ಯಾವ ಯಾವ ಕೆಲಸಗಳನ್ನು ಯಾವಾಗ ಕೈಕೊಳ್ಳಬೇಕೆಂಬ ವಿಷಯವನ್ನೂ ಸಹ ಸೂಚಿಸಿದ್ದಾರೆ. ಆದರೆ ಕೆಲವು ಬಾಬುಗಳಲ್ಲಿ ಮಾತ್ರ ಯಾವ ಖರ್ಚು ಸಹ ಆಗದೆ ಹಣ ಹಾಗೆ ಉಳಿತಾಯವಾಗಿರತಕ್ಕಂಥ ನಿದರ್ಶನಗಳೂ ಕೆಲವು ಇವೆ. ಅಂಥಾ ಐಟಂ ಕೆಲಸಗಳು ಮೂರು ಇರುವಂತೆ ಕಂಡುಬರುತ್ತಿದೆ. 1946—47ನೆಯ ಸಾಲಿನಲ್ಲಿ ಕೆಲಸ ನಡೆಯಬೇಕಾಗಿದ್ದ ಕೆಲವು ಬಾಬುಗಳಲ್ಲಿ ಕೆಲಸ ನಡೆಯದೆ ಹಾಗೆ ನಿಂತಿರುತ್ತೆ. ಇನ್ನು 46—47ನೇ ಸಾಲಿನಲ್ಲಿ ಒಟ್ಟು 33 ಕೆಲಸಗಳಾಗಿ 50 ಸಾವಿರ ಅಂದಾಜು ಮಂಜೂರಾಗಿದ್ದ ಕೆಲಸಗಳೂ ಸಹ ಪೂರ್ತಿಯಾಗಿ ಆಗದೆ 32 ಕೆಲಸಗಳು ಮಾತ್ರ ಆಗಿವೆ. ಅಂದರೆ ಇನ್ನು ಒಂದು ಕೆಲಸ ಮಾತ್ರ ಹಾಗೆ ಉಳಿದಿದೆಯೆಂದಾಯಿತು. ಈಗ ನಾವು ಯಾವ ಲೆಕ್ಕವನ್ನು ಪರಾಂಬರಿಕೆ ಮಾಡುತ್ತಿದ್ದೇವೆಯೋ ಆ ಪೈಕಿ ಲೆಕ್ಕದಲ್ಲಿ ಸೂಚಿಸಿರತಕ್ಕ 46, 47, 48 ಈ ರೀತಿಯಾಗಿ ಹೇಳಿರುವ Various items of works ನ್ನು ನಾವು ವಿಮರ್ಶೆ ಮಾಡುತ್ತಾ ಹೋದರೆ ಇನ್ನೂ ಎರಡು ಕೆಲಸಗಳು ಅದೇ ರೀತಿಯಾಗಿ ಪ್ರಾರಂಭವೇ ಆಗದಂತೆ ನಿಂತುಬಿಟ್ಟಿವೆ. ಹೀಗೆ ಒಟ್ಟಿನಲ್ಲಿ 50 ಕೆಲಸಗಳ ಪೈಕಿ 13 ಪ್ರಾರಂಭವಾಗಿ ಉಳಿದ ಕೆಲಸಗಳೆಲ್ಲಾ ಅಂದರೆ ಇತ್ತೀಚಿನ ಸಾಲಿನಲ್ಲಿ ಹಾಗೆ ನಿಂತುಬಿಟ್ಟಿವೆ. ಕೆಲಸವೇ ಪ್ರಾರಂಭವಾಗಿಲ್ಲ. ಏನೂ ಖರ್ಚಾಗದೆ ಹಾಗೆ ಉಳಿದಿರುವಂಥ ಐಟಂಗಳು ಮೂರು ಮಾತ್ರ. ಆದರೆ ಒಂದರ ಬಗ್ಗೆ ಏನೋ ಒಂದು ಕೊಂಚ ಕೆಲಸ ನಡೆಸಿರುವುದರಿಂದ ಪ್ರಾರಂಭವೇ ಆಗಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ, ಆದಾಗ್ಯು ಮೊಬಲಗಂತೂ ಏನೂ ಖರ್ಚಾಗಿಲ್ಲ. 49—50ರಲ್ಲಂತೂ ಒಂದು ಕಾಸು ಖರ್ಚಾಗಿಲ್ಲ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಂಥಾದ್ದು ಯಾವುದಿದೆಯೆಂಬುದಕ್ಕೆ ಒಂದು ಉದಾಹರಣೆ ಕೊಡಿ. ನೋಡೋಣ.

ಶ್ರೀ ಎಲ್. ಸಿದ್ದಪ್ಪನವರು.—Works not taken up ಎಂಬುದರಲ್ಲಿ ಕೆಲಕೆಲವಕ್ಕೆ ಕಾರಣಗಳನ್ನೂ ಮತ್ತು ಅವುಗಳ ಬಗ್ಗೆ ಇರತಕ್ಕ ಕೊರತೆಯನ್ನೂ ಸೂಚಿಸಿದ್ದೀರಿ. ಆದರೆ ಅಂಥವುಗಳ ಬಗ್ಗೆ ಕೆಲಸ ಪ್ರಾರಂಭವಾಗದಿದ್ದರೂ ಅದು ಕ್ಷಮಿಸಬಹುದಾದಂಥ ಸನ್ನಿವೇಶವಿರಬಹುದು. 49-50ನೆಯ ಸಾಲಿನಲ್ಲಿ ಏನೂ ಖರ್ಚು ಬೀಳದಿರುವಂಥ 3 ಐಟಂ ಕೆಲಸಗಳಿವೆಯಲ್ಲಾ ?

For instance item no. 22 in the list "Improving Hullahalli Channel from O. 43 miles at the estimated cost of Rs. 1,33,500." You have made a grant of Rs. 25,000 to be spent during the year. But not a single pie has been

spent during the year and savings of Rs. 25,000 have been shown in the next column. You will see in the last column the words "In progress" and a sum of Rs. 53,885 has already been spent on that work. Likewise, there are two more items in the list.

The Hon'ble Sri T. MARIAPPA—Is it 23 and 24 also? 22 is all right. I will give an explanation. Then?

ಶ್ರೀ ಎಲ್. ಸಿದ್ದಪ್ಪನವರು.—ಇದು ಏತಕ್ಕಾಗಿ ಹೀಗಾಗುತ್ತಿದೆ ಎಂಬುದಕ್ಕೆ ಮತ್ತೊಂದು ನಿದರ್ಶನ ಕೊಡುತ್ತೇನೆ. Particularly in 1947-48ರಲ್ಲಿ ನಮ್ಮ ಚೆನ್ನಗಿರಿ ತಾಲ್ಲೂಕಿನಲ್ಲಿ 3 ಕೆಲಸಗಳು ನಡೆಯಬೇಕೆಂಬುದಾಗಿ ಆ ಬಗ್ಯೆ ಸರ್ಕಾರದ ಮಂಜೂರಾತಿಯೇನೋ ಆಯಿತು. ಆದರೆ 47-48ನೇ ಸಾಲಿನ ಬಡ್ಜೆಟ್ಟಿನಲ್ಲಿ ಆ ಕೆಲಸಕ್ಕಾಗಿ ಎಂದರೆ ಮಾವಿನಕೆರೆ ಪ್ರಾಜೆಕ್ಟಿಗೆ, ಅಂದಾಜಾಗಿದ್ದ 4 ಲಕ್ಷ 60 ಸಾವಿರ ಚಿಲ್ಲರ ಮೊಬಲಗಿನ ಬಗ್ಯೆ ಆ ಸಾಲಿನಲ್ಲಿ 25 ಸಾವಿರ ರೂಪಾಯಿಗಳನ್ನೂ ಒದಗಿಸಲಾಗಿತ್ತು, ಆದರೆ ಕೆಲಸವನ್ನು ಮಾತ್ರ ತೆಗೆದುಕೊಳ್ಳಲೇ ಇಲ್ಲ. ಆದರೆ ಇತ್ತೀಚಿನ ಸಾಲುಗಳಲ್ಲಿಯೂ ಸಹ ತಪ್ಪದಂತೆ ಆ ಬಗ್ಯೆ ನಿಧಿಯನ್ನೇನೋ ಒದಗಿಸುತ್ತಿದ್ದಾಗ್ಯೂ ಕೆಲಸ ಮಾತ್ರ ಹಾಗೆ ನಿಂತಿದೆ. ಆದರೆ 1950-51ನೆಯ ಸಾಲಿನಲ್ಲಿ ಹಿಂದೆ ಒದಗಿಸುತ್ತಿದ್ದುದಕ್ಕಿಂತಲೂ ಹೆಚ್ಚಾಗಿ ಎಂದರೆ 50 ಸಾವಿರ ರೂಪಾಯಿಗಳನ್ನು ಒದಗಿಸಿದ್ದರು. ಆದರೆ ಕೆಲಸ ಮಾತ್ರ ಮುಂದುವರಿದಿಲ್ಲ. ಅಲ್ಲಿ ಸ್ಥಳದಲ್ಲಿ ವಿಚಾರಿಮಾಡಿದ್ದರಲ್ಲಿ ಈ ಕೆಲಸವನ್ನು ಕೈಗೊಳ್ಳತಕ್ಕ ಬಗ್ಯೆ ನಮಗೆ ಯಾವ ತಿಳುವಳಿಕೆಯೂ ಬಂದಿಲ್ಲವೆಂದು ಅಲ್ಲಿರತಕ್ಕವರಿಂದ ತಿಳಿದುಬಂತು. ಇಂಥಾ ಸಭೆಯಲ್ಲಿ ವಿಚಾರಿಸಿದಾಗ ಕೆಲಸ ಕೈಗೊಳ್ಳುತ್ತೇವೆಂದು ತಿಳಿಸಿ, ಸ್ಥಳದಲ್ಲಿರತಕ್ಕವರಿಗೆ ಈ ಬಗ್ಯೆ ಏನೊಂದನ್ನೂ ತಿಳಿಸದೆ ಇಂಥಾ ಸಭೆಗೆ ಏತಕ್ಕಾಗಿ ತಾವು ಹೀಗೆ ಮೋಸ ಮಾಡುತ್ತೀರಿ! ಜನರಿಗೆ ಏತಕ್ಕಾಗಿ ಹೀಗೆ ಮೋಸ ಮಾಡುತ್ತಿದ್ದೀರಿ? ಬಡ್ಜೆಟ್ಟಿನಲ್ಲಿ ಕೆಲಸ ಕೈಗೊಳ್ಳುತ್ತೇವೆಂದು ಹಣವನ್ನು ಮಂಜೂರುಮಾಡಿಸಿ ಬಿಟ್ಟು, ಸ್ಥಳೀಯ ಅಧಿಕಾರಿಗಳಿಗೆ ಈ ಸಂಬಂಧವಾಗಿ ಏನೊಂದೂ ತಿಳುವಳಿಕೆ ಅಥವಾ ಹುಕ್ಮಂ ಮಾಡದಿರುವುದು ಇದು ಮೋಸವಲ್ಲವೆಂದು ಹೇಳದೆ ಮತ್ತೆ ಏನೆಂದು ಹೇಳಲಿ? it is nothing but misleading the pub ic ಈ ಒಂದು ಪಟ್ಟಿ ವಿಚಾರದಲ್ಲಿ ಇಷ್ಟಾಯಿತು.

ಇನ್ನು ಸಿವಿಲ್ ಕೆಲಸಗಳೆಂಬುದಾಗಿ ಮತ್ತೊಂದು ಪಟ್ಟಿಯಿದೆ. ಅದನ್ನು ಇಲ್ಲಿ ಕೊಟ್ಟಿದ್ದಾರೆ. ಇದಕ್ಕೆ 7 ರಿಂದ 124 ತನಕಲೂ ಒಂದೇ ಬಾಗೆ ಸೇರಿರುತ್ತವೆ. ಸಿವಿಲ್ ವರ್ಕ್ಸ್‌ನಲ್ಲಿ ನೋಡಿದರೆ 69 ಕೆಲಸಗಳಲ್ಲಿ 29 ಕೆಲಸಗಳಿಗೆ ಮೊಬಲಗೇನೂ ಖರ್ಚಾಗಿಲ್ಲ. ತೆಗೆದುಕೊಂಡಿಲ್ಲದಿರುವ ಕೆಲಸಗಳು ಹನ್ನೊಂದಿವೆ. 13 ಕೆಲಸಗಳಿಗೆ ಹಿಂದಿನ ಸಾಲಿನಲ್ಲಿ ಸ್ವಲ್ಪ ಖರ್ಚಾಗಿ ಆ ಕೆಲಸಗಳು ಪೂರ್ತಿಯಾಗಿಲ್ಲದಿದ್ದರೂ ಈ ವರ್ಷ ಅದಕ್ಕೆ ಏನೂ ಖರ್ಚುಮಾಡಿಲ್ಲ ಎಂಬುದಕ್ಕೆ ಈ ವರದಿಯಿಂದ ಸಮಾಧಾನ ಸಿಕ್ಕುತ್ತಿಲ್ಲ.

ಇದೇ ರೀತಿ ಕಮ್ಯೂನಿಕೇಷನ್ಸ್ ಐಟಂ ಇದೆ. ಒಟ್ಟಿನಲ್ಲಿ ಈ ಐಟಂನಲ್ಲಿ 69 ಕೆಲಸಗಳಿವೆ. ಅದರಲ್ಲಿ 35 ಐಟಂಗೆ ಮೊಬಲಗು ಖರ್ಚಾಗಿದೆ. ಹನ್ನೊಂದು ಕೆಲಸಗಳನ್ನು ತೆಗೆದುಕೊಂಡಿಲ್ಲ. ಅದಕ್ಕೆ . ಪಿವರಣೆ ಕೊಟ್ಟಿದೆ. ಕೆಲಸ ಷುರುಮಾಡಿ ಆ ವರ್ಷ ಮೊಬಲಗು ಖರ್ಚುಮಾಡಿಲ್ಲದಿರುವುದು 24. ಇದನ್ನು ನೋಡಿದರೆ ಪಬ್ಲಿಕ್‌ವರ್ಕ್ಸ್ ಇಲಾಖೆ ಕೆಲಸ ಅಷ್ಟು ತೃಪ್ತಿಕರವಾಗಿಲ್ಲ ಎಂದು ಮೃದುಭಾಷೆಯಲ್ಲಿ ಹೇಳುತ್ತೇನೆ ಏಕೆ ಈ ರೀತಿ ಇಷ್ಟು ಹೇರಳವಾದ ಗ್ರಾಂಟನ್ನು ಕೊಟ್ಟಿದ್ದರೂ, ಬಹಳ ಒಳ್ಳೆಯ ಮನಸ್ಸಿನಿಂದ ಜನರಿಗೆ ಅನುಕೂಲವಾಗಲೆಂದು ಉದ್ದೇಶಪಟ್ಟಿದ್ದರೂ ಆ ಐಟಂಗೆ ಒಂದು ಕಾಸೂ ಖರ್ಚು ಮಾಡದಿರುವುದು! ಅದಕ್ಕೆ ಸರ್ಕಾರದವರು ಯಾವ ರೀತಿಯ ಸಮಾಧಾನ ಕೊಡುತ್ತಾರೆ ಅಥವಾ ಒಂದು ವೇಳೆ ಸಮಾಧಾನ ಕೊಡುವುದಾದರೆ ಎಷ್ಟುಮಟ್ಟಿಗೆ ಅದು ಸರಿಯಾಗಿ ತೃಪ್ತಿಕರವಾಗಿರುತ್ತದೆ ಎಂಬುದನ್ನು ಈ ಸಭೆಯು ಪರಿಶೀಲಿಸಬೇಕು.

ನಮ್ಮ ಕೈಗಾರಿಕೆಗಳನ್ನು ತೆಗೆದುಕೊಂಡರೆ ಸರ್ಕಾರದವರು ನಡೆಸಿಕೊಂಡು ಬರುತ್ತಿರುವ ಕೈಗಾರಿಕೆಗಳು 1945-46ನೆಯ ಸಾಲಿನಿಂದ ಎಷ್ಟುಮಟ್ಟಿಗೆ ಮುಂದುವರಿಯುತ್ತಿವೆಯೆಂದು ನೋಡಿದರೆ ಅವುಗಳಿಂದ ಬರುತ್ತಿರುವ ವರಮಾನ ಬಹಳ ಕಡಮೆಯಾಗುತ್ತಿದೆ. 1945-46ರಿಂದ ಒಟ್ಟು 16 ಕೈಗಾರಿಕೆಗಳನ್ನು ಪೂರ್ಣವಾಗಿ ಸರ್ಕಾರದವರೇ ನಡೆಸಿಕೊಂಡು ಬರುತ್ತಿದ್ದಾರೆ. 36ನೆಯ ಪುಟದಲ್ಲಿ ಅದರ ತಪಶೀಲುಗಳು ಕಾಣುತ್ತವೆ. 1945-46ರಲ್ಲಿ ನಾವು ಹಾಕಿರುವ ಒಟ್ಟು ಬಂಡವಾಳ 2,94,46,139 ರೂಪಾಯಿಗಳು. ಆ ಸಾಲಿನಲ್ಲಿ ಈ 16 ಕೈಗಾರಿಕೆಗಳಿಂದ ಸರ್ಕಾರಕ್ಕೆ ಬಂದಿರುವ ವರಮಾನ 75,39,630 ರೂಪಾಯಿಗಳು. ನಮಗೆ ಈಗ ದೊರಕಿರುವ 1949-50ನೆಯ ಸಾಲಿನ ಲೆಕ್ಕ ನೋಡಿದರೆ ಒಟ್ಟು ಈ 16 ಕೈಗಾರಿಕೆಗಳಿಗೆ ಹಾಕಿರುವ ಬಂಡವಾಳ 2 ಕೋಟಿ 96 ಲಕ್ಷ. ಸ್ವಲ್ಪ ಹೆಚ್ಚುಕಡಮೆ 3 ಕೋಟಿ ಆಗಿದೆ. ನಾವು ಹೀಗೆ ಹೆಚ್ಚು ಬಂಡವಾಳ ಹಾಕಿದ್ದರೂ ಕೂಡ ವರಮಾನ ಬಂದಿರುವುದು 1949-50ರಲ್ಲಿ ಕೇವಲ 45,76,874 ರೂಪಾಯಿಗಳು. ನಾವು ಹೆಚ್ಚಾಗಿ ಹಾಕಿರುವ ಬಂಡವಾಳಕ್ಕೆ ತಕ್ಕಂತೆ ಹೆಚ್ಚು ಲಾಭ ಬರುವುದಕ್ಕೆ ಬದಲಾಗಿ ಕಡಮೆಯಾಗುತ್ತಿದೆ. ಇದಕ್ಕೆ ಒಂದು ಸಮಾಧಾನ ಹೇಳಬಹುದು. ಹಿಂದೆಯೂ ಹೇಳಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ತಾವು ಕೊಟ್ಟಿರುವ ಅಂಕಿ ಅಂಶಗಳನ್ನು ಸಭೆಯ ಮುಂದಿಟ್ಟಿದ್ದೇನೆ. ಹೆಚ್ಚಾಗಿ ಬಂಡವಾಳ ಹಾಕಿರುವುದು ಎರಡು ಮೂರು ಸಾಮಾನುಗಳಿಗೆ ಮಾತ್ರ. ಅದರ ಮೇಲೆ ಲಾಭ ಇಷ್ಟು ಬೇಗ ಬರಬೇಕೆಂದು ನಿರೀಕ್ಷೆಮಾಡುವುದು ತಪ್ಪು ಎಂದು ತಾವು ಹೇಳಬಹುದು. ಅದು ನ್ಯಾಯವೆಂದು ಒಪ್ಪುತ್ತೇನೆ. ಆದರೆ ಹಿಂದೆ 2 ಕೋಟಿ 94 ಲಕ್ಷ ಚಿಲ್ಲರೆ ಬಂಡವಾಳ ಹಾಕಿರುವುದಕ್ಕೆ 75 ಲಕ್ಷ ಚಿಲ್ಲರೆ ಲಾಭ ಬರುತ್ತಿತ್ತು. ಅದೇ ಈಗ ಕೇವಲ 45 ಲಕ್ಷ ಚಿಲ್ಲರೆ ಬರುತ್ತಿದೆ. ಇದರಿಂದ ಈ ಕೈಗಾರಿಕೆಗಳು ಎಷ್ಟು ಯಶಸ್ವಿಯಾಗಿ ನಡೆಯಬೇಕೋ ಅಷ್ಟು ಯಶಸ್ವಿಯಾಗಿ ನಡೆಯುತ್ತಿಲ್ಲವೆಂಬುದು ವ್ಯಕ್ತವಾಗುತ್ತದೆ. 1945-46ರಲ್ಲಿ 16 ಕೈಗಾರಿಕೆಗಳಲ್ಲಿ ಪ್ರತಿಯೊಂದು ಕೈಗಾರಿಕೆಯಿಂದಲೂ ಲಾಭ ಬರುತ್ತಿತ್ತು. ಅದರ ಮಾರನೆಯ ವರ್ಷ 1946-47ರಲ್ಲಿ 15 ಕೈಗಾರಿಕೆಗಳಲ್ಲಿ ಲಾಭ ಬಂದು ಡೈಕ್ರೋಮೇಟ್ ಫ್ಯಾಕ್ಟರಿಯೊಂದರಲ್ಲಿ ರಿಟರ್ನ್ ಬಾರದೆ ನಷ್ಟವಾಯಿತು. 1949-50ರಲ್ಲಿ ಸುಮಾರು ನಾಲ್ಕು ಕೈಗಾರಿಕೆಗಳಿಂದ ಕಡಮೆ ಉತ್ಪತ್ತಿಯಾಗಿ ಬಾಕಿ ಕೈಗಾರಿಕೆಗಳಲ್ಲಿ ಹಿಂದೆಷ್ಟು ಬರುತ್ತಿತ್ತೋ ಅಷ್ಟು ಉತ್ಪತ್ತಿ ಬರುತ್ತಿದೆ. ಆದ್ದರಿಂದ ಇದನ್ನು ನೋಡಿದರೆ ಈ ಕೈಗಾರಿಕೆಗಳು ಇನ್ನೂ ಸ್ವಲ್ಪ ದಕ್ಷತೆಯಿಂದ ನಡೆಯುವ ಬಗ್ಯೆ ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಅಥವಾ ಇದುವರೆಗೆ ಏನೂ ತೆಗೆದುಕೊಳ್ಳದಿದ್ದರೆ ಮುಂದೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದಿದ್ದಾರೆ ಎಂಬುದನ್ನು ಅವರು ತಿಳಿಸುತ್ತಾರೆಂದು ನಂಬಿದ್ದೇನೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ತಾವು ಹೇಳುವಾಗ ಮುಖ್ಯವಾಗಿ ಮೂಲ ವಿಚಾರವನ್ನು ಮರೆತರೆ ಬಹಳ ತಪ್ಪು ಅಭಿಪ್ರಾಯ ಬರುತ್ತದೆ. ಬಂಡವಾಳ ಹೆಚ್ಚಾಯಿತು ಎಂದು ಒಂದುಕಡೆ ಹೇಳುವುದು, ವರಮಾನ ಕಡಿಮೆಯಾಯಿತೆಂದು ಇನ್ನೊಂದು ಕಡೆ ಹೇಳುವುದು, ಹೀಗೆ ಹೇಳುವುದಕ್ಕೆ 9 ತಿಂಗಳ ಲೆಕ್ಕ ತೆಗೆದುಕೊಂಡು ಹೋಲಿಕೆಮಾಡುವುದು ಸರಿಯೇ ಎಂಬುದನ್ನು ತಿಳಿಯಬೇಕು.

ಶ್ರೀ ಎಲ್. ಸಿದ್ದಪ್ಪನವರು.—1949-50ನೆಯ ಸಾಲಿನ ಲೆಕ್ಕ ತಾವು ಕೊಟ್ಟಿರುವುದು 9 ತಿಂಗಳಿಗೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಹೌದು. ಒಂದು ವರ್ಷದ ಹಿಂದಿನದನ್ನು ಅಂದರೆ 12 ತಿಂಗಳ ಲೆಕ್ಕ ತೆಗೆದುಕೊಂಡು 9 ತಿಂಗಳಿಗೆ ಹೋಲಿಸುವುದು ನ್ಯಾಯವೆ ಎಂಬುದನ್ನು ತಾವೇ ಹೇಳಿ.

ಶ್ರೀ ಎಲ್. ಸಿದ್ದಪ್ಪನವರು.—ಮೂರು ತಿಂಗಳಿಗೆ ಬರಬಹುದಾದ ಮೊಬಲಗನ್ನು ಗಣನೆಗೆ ತೆಗೆದುಕೊಳ್ಳದಿದ್ದರೂ ಎಷ್ಟು ಬರಬೇಕಾಗಿತ್ತೋ ಅಷ್ಟು ಬರುತ್ತಿಲ್ಲವೆಂದು ಹೇಳುತ್ತಿದ್ದೇನೆ. ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಮತ್ತು ಸಿಮೆಂಟ್ ಪ್ಲಾಂಟ್‌ನಿಂದ ಇತ್ತೀಚೆಗೆ ಬರುತ್ತಿರುವ ಲಾಭವನ್ನು ನೋಡಿದರೆ 1945-46ರಲ್ಲಿ 24 ಲಕ್ಷ, ಆ ಮೇಲೆ 17 ಲಕ್ಷ ಬಂದಿದೆ. 1949-50ರಲ್ಲಿ 13 ಲಕ್ಷ ಬಂತು. ಅಂದರೆ ನಾಲ್ಕು ಲಕ್ಷ ಇಳಿದುಹೋಯಿತು. ಅದು 9 ತಿಂಗಳಿಗೆ ಮಾತ್ರ ಎಂದು ಮಾನ್ಯಮಂತ್ರಿಗಳು ಹೇಳಬಹುದು. 12 ತಿಂಗಳಿನ ಲೆಕ್ಕ ತೆಗೆದುಕೊಂಡರೂ ಎಷ್ಟು ತೃಪ್ತಿಕರವಾಗಿ ಕೆಲಸಮಾಡಬೇಕಾಗಿತ್ತೋ ಅಷ್ಟು ತೃಪ್ತಿಕರವಾಗಿ ಮಾಡುತ್ತಿಲ್ಲ ಎಂದು ವ್ಯಕ್ತಪಡುತ್ತದೆ. ಗ್ರಾಂಟು ಬೇಕಾದಷ್ಟು ಕೊಟ್ಟರೂ ಖರ್ಚಾಗಿರುವುದು ಏಕೆ ಕಡಮೆಯಾಗಿದೆ ? Re-wiring ಇದ್ದುದರಿಂದ ಕಡಮೆಯಾಯಿತೆಂದು ಹೇಳುವುದು ತೃಪ್ತಿಕರವಾದ ಕಾರಣವಲ್ಲ. ಅದು 10—15 ವರ್ಷಕ್ಕೊಂದು ಸಲ ಮಾಡುವ ಕೆಲಸವಾಗಿದೆ ; ವರ್ಷೇ ವರ್ಷೇ ಅದು ಆಗುತ್ತದೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಹಾಗಲ್ಲ, quinquennial.

ಶ್ರೀ ಎಲ್. ಸಿದ್ದಪ್ಪನವರು.—ಅದಕ್ಕೆ ಕಾರಣ ಬೇರೆ ಇದೆ ; bungling ನಿಂದ ಹಾಗಾಗಿದೆ. ರೀವೈರಿಂಗ್ ಮಾಡಬೇಕಾದ ರೀತಿಯಲ್ಲಿ ಮಾಡಲಿಲ್ಲ. ಎಷ್ಟು ಹುಷಾರಾಗಿ ಆ ಕೆಲಸ ನೋಡಿಕೊಳ್ಳಬೇಕೋ ಅಷ್ಟು ಹುಷಾರಾಗಿ ಸಂಬಂಧಪಟ್ಟ ಅಧಿಕಾರಿಗಳು ನೋಡಿಕೊಳ್ಳಲಿಲ್ಲ. ಒಂದು ಸಾರಿ ರೀವೈರಿಂಗ್ ಮಾಡಿದ ಮೇಲೆ, ಫರ್ನೇಸ್‌ಗೆ ಬೆಂಕಿ ಹಚ್ಚಿದಾಗ ಮಾಡಿದ್ದೆಲ್ಲಾ ಕರಗಿ ಬಿದ್ದುದ್ದರಿಂದ ಪುನಃ ರೀವೈರಿಂಗ್ ಮಾಡಬೇಕಾಯಿತು ಎಂದು ಹೇಳಿದ್ದಾರೆ. ಕಳೆದ 10 ವರ್ಷದಲ್ಲಿ ಎಷ್ಟು ಸಾರಿ ರೀವೈರಿಂಗ್ ಆಗಿದೆ, ಉತ್ಪತ್ತಿ ಎಷ್ಟು ಬಂದಿದೆ ಎಂಬುದನ್ನು ದಯವಿಟ್ಟು ನೋಡಿ ಹೇಳಿದರೆ ತಾನೇ ವ್ಯಕ್ತಪಡುತ್ತದೆ. ಆದ್ದರಿಂದ ಈ ರೀತಿ ರೀವೈರಿಂಗ್ ಕೊಡಿಸಬೇಕಾಗಿ ಬಂತು ಎಂಬುದನ್ನು ಹೇಗೂ ಒಪ್ಪುವುದಕ್ಕಾಗುವುದಿಲ್ಲ ಎಂಬ ಅಂಶವನ್ನು ಹೇಳುತ್ತೇನೆ.

ಇನ್ನೊಂದು ವಿಚಾರ, ಸ್ವಾಮಿ. ಪಬ್ಲಿಕ್ ಅಕೌಂಟ್ಸ್ ಸಮಿತಿಯವರು ಶಿಫಾರಸುಮಾಡಿದ್ದು ಅವರು ಮಾಡಿದ್ದಲ್ಲ ಎಂಬುದನ್ನು ಹಿಂದೆ ಮಾತನಾಡಿದವರು ಹೇಳಿದಾಗಲೂ ಕೂಡ ಅವರ ಗಮನಕ್ಕೆ ತಂದರು. ಫೈನಾನ್ಷಿಯಲ್ ಸೆಕ್ರೆಟರಿಯವರು ಇದನ್ನು ಸಮಿತಿಯವರ ಮುಂದೆ ಇಟ್ಟಿದ್ದಾರೆ. ಇದನ್ನು ಸಮಿತಿಯವರು ಈ ಸಭೆಯ ಅವಗಾಹನೆಗೆ ತಂದಿದ್ದಾರೆ. ವಿದ್ಯುಚ್ಛಕ್ತಿ ವಿಚಾರದಲ್ಲಿ ಈಗ 1950ನೇ ಸಾಲಿನಲ್ಲಿ ಸರ್ಕಾರದವರು ಸಾದರಪಡಿಸಿದ ಸರ್ಕಾರಿ ಆರ್ಡರು ಏನಿದೆ, ಅದರ ಪ್ರಕಾರ ಶೇಕಡ 2 ರಷ್ಟು ಬಂದರೂ ಯಾವುದಾದರೂ ರೂರಲ್ ಎಲೆಕ್ಟ್ರಿಫಿಕೇಷನ್ ಅಥವಾ ಇರಿಗೇಷನ್ ಪಂಪಿಂಗ್‌ಸೆಟ್—ಇವುಗಳಿಗೆ ಪವರ್ ಒದಗಿಸಬೇಕು. ಆ ರೀತಿ ಒದಗಿಸಿದಾಗ ಹಿಂದೆ ಯಾವ ರೇಟ್‌ನಲ್ಲಿ ಅದಕ್ಕೆ ಲಾಭ ಬರಬೇಕಾಗಿತ್ತೋ ಆ ರೇಟ್‌ನಲ್ಲಿ ಲಾಭ ಬರದೇ ಇದ್ದರೆ ಅಂಥ ಕೆಲಸ ತೆಗೆದುಕೊಳ್ಳಬಾರದು ಎಂಬ ನೀತಿಯನ್ನು ಇಟ್ಟುಕೊಂಡಿದ್ದರು. ಅದನ್ನುಬದಲಾಯಿಸಿ ಸ್ವಲ್ಪ ಉದಾರವಾದ ನೀತಿಯನ್ನು ಅನುಸರಿಸಿದ್ದಾರೆ. ಆ ನೀತಿಯನ್ನೇ ಮುಂದುವರಿಸಿಕೊಂಡು ಬಂದರೆ ಸರ್ಕಾರದವರಿಗೆ ಹೆಚ್ಚು ಲುಕ್ಸಾನಾಗುತ್ತದೆ. ಆದ್ದರಿಂದ ಲಾಭ ಬರದೇ ಇರುವ ದೃಷ್ಟಿಯಿಂದ ಅಲ್ಲದೇ ಇದ್ದರೂ ಕೂಡ, ನಷ್ಟ ತಪ್ಪಿಸಿಕೊಳ್ಳುವ ದೃಷ್ಟಿಯಿಂದ ಕೊನೇಪಕ್ಷ ಶೇಕಡ 10—15 ಇಲ್ಲದಿದ್ದರೂ ಶೇಕಡ 8ರಷ್ಟುಆದರೂ ವರಮಾನ ಬರುವ ರೀತಿಯಲ್ಲಿ ಏಕೆ ಆ ನೀತಿಯನ್ನು ಬದಲಾಯಿಸಬಾರದು ಎಂಬ ಬಗ್ಗೆ ಸಭೆಯ ಅಭಿಪ್ರಾಯ ವ್ಯಕ್ತಪಡಿಸಬೇಕೆಂದು ಹೇಳಿದ್ದಾರೆ. ಒಂದು ವಿಷಯ ಸ್ವಾಮಿ : ಈಗಿನ ಸರ್ಕಾರ ವೆಲ್‌ಫೇರ್ ಗೌರ್ನಮೆಂಟು. ಜನಗಳಿಗೆ ಅನುಕೂಲಗಳನ್ನು ಒದಗಿಸಿಕೊಡುವುದು ಈಗಿನ ಸರ್ಕಾರದ ಕರ್ತವ್ಯ. ಈ ರೀತಿ ಅನುಕೂಲಕಲ್ಪಿಸಿ ಕೊಡಬೇಕಾದರೆ ಹಳ್ಳಿಗಾಡಿನಲ್ಲಿರತಕ್ಕವರಿಗೆ ವಿದ್ಯುಚ್ಛಕ್ತಿಯಿಂದ ಎಷ್ಟು ಅನುಕೂಲವಾಗುತ್ತಿದೆಯೋ ಆ ಅನುಕೂಲದ ಕಡೆಗೆ ದೃಷ್ಟಿ ಕೊಡದೆ ಖರ್ಚು ಜಾಸ್ತಿ ಎಂಬ ಉದ್ದೇಶದಿಂದ ಅದನ್ನು ಒದಗಿಸದೇ ಬಿಟ್ಟುಬಿಡುವ ಸಂಭವ ಇದೆ. ಜನಗಳಲ್ಲಿ ವಿದ್ಯುಚ್ಛಕ್ತಿಯನ್ನು ಬಳಸುವ ವಾಡಿಕೆಯನ್ನುಂಟುಮಾಡಿಕೊಡುವ ದೃಷ್ಟಿಯಿಂದ ಮತ್ತು ಹಳ್ಳಿಗಾಡಿನ ಜನಗಳಿಗೆ ಹೆಚ್ಚುಸೌಲಭ್ಯಗಳನ್ನು ಒದಗಿಸಿಕೊಡುವ ದೃಷ್ಟಿಯಿಂದ ಈಗ ಸರ್ಕಾರದವರು ಏನು ಒಂದು ಉದಾರವಾದ ನೀತಿಯನ್ನು ಅನುಸರಿಸಿಕೊಂಡು ಬಂದಿದ್ದಾರೋ ಅದನ್ನೇ ಮುಂದುವರಿಸಿಕೊಂಡು ಹೋಗಬೇಕೆಂದು ನನ್ನ ಅಭಿಪ್ರಾಯ. ಸಭೆಯವರು ಇದನ್ನು ಅನುಮೋದಿಸುತ್ತಾರೆಂದು ನಂಬಿದ್ದೇನೆ. ಈ ಪ್ರಶ್ನೆ 1946—47ನೇ ಸಾಲಿನಲ್ಲಿ ನಾನು ಈ ಶಾಖೆಯ ಆಡಳಿತವನ್ನು ನಿರ್ವಹಿಸುತ್ತಿದ್ದ ಸಮಯದಲ್ಲಿ ಒಂದು ಸಂದರ್ಭದಲ್ಲಿ ಬಂದಿತ್ತು. ಆಗ ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟಿನ ಮುಖ್ಯಸ್ಥರು ಎಂದರೆ ಚೀಫ್ ಎಲೆಕ್ಟ್ರಿಕಲ್ ಇಂಜಿನಿಯರು ಒಂದು ಇರಿಗೇಷನ್ ಪಂಪಿನ ವಿಚಾರದಲ್ಲಿ ಸರ್ಕಾರದವರು ಕನ್‌ಸೆಷನ್‌ಕೊಟ್ಟರೆ ಅವರು ನಿರ್ವಹಿಸುವ ಇಲಾಖೆಗೆ ಎಷ್ಟು ಮೊಬಲಗು, ಆದಾಯ ಬರಬೇಕೋ ಅಷ್ಟು ಬರದೆ, ಕಡಮೆಯಾಗುತ್ತದೆ. ದಕ್ಷತೆಯಿಂದ ಇಲಾಖೆಯ ಕೆಲಸ ಕಾರ್ಯಗಳನ್ನು ಮಾಡುತ್ತಿಲ್ಲ ಎಂಬ ಕಳಂಕ ಬರಬಹುದು ಎಂದು ಹೇಳಿದರು. ಅದಕ್ಕೆ ನಾನು ಒಂದು ಸಲಹೆ ಕೊಟ್ಟೆ. ಏನೆಂದರೆ, ನೀವು ಲೆಕ್ಕ ಪತ್ರ ಇಡುವಾಗಲೆಲ್ಲಾ ಈ ರಿಟರ್ನ್ ಯಾವುದು ಬರಬೇಕೋ ಅದನ್ನು ರಿಟರ್ನ್ ಬೇಸಿಸ್ ಮೇಲೆ ಲೆಕ್ಕ ಪತ್ರ ಇಟ್ಟುಕೊಳ್ಳಿ. ಕನ್‌ಸೆಷನ್ ಏನು ಕೊಡುತ್ತೇವೆ ಆ ಮೊಬಲಗನ್ನು ಹಳ್ಳಿಗಾಡಿನ ಜನಗಳ ಉಪಯೋಗಕ್ಕೆ ಸಬ್‌ಸಿಡಿಯಾಗಿ ಕೊಟ್ಟಿದ್ದೇವೆ ಎಂದು ತಿಳಿದುಕೊಳ್ಳಿ ಎಂದು ಹೇಳಿದೆ. ಅದರಿಂದ ಹಣಕಾಸಿನ ಬಾಬುಗಳಿಗೆ ಯಾವ ಕಡೆಯಿಂದಲೂ ವ್ಯತ್ಯಾಸವಾಗುವುದಿಲ್ಲ. ಇಲಾಖೆಯೂ ತೃಪ್ತಿಕರವಾಗಿ ದುಡಿಯುತ್ತಿದೆ, ಎಷ್ಟು ವರಮಾನ ಬರಬೇಕೋ ಅಷ್ಟು ಬರುತ್ತಿದೆ ಎಂಬ ಭಾವನೆ ಬರುತ್ತದೆ. ಹಳ್ಳಿಗಾಡಿನವರಿಗೆ ಸರ್ಕಾರದವರು ಇಷ್ಟು ಮೊಬಲಗನ್ನು ಸಬ್‌ಸಿಡಿ ರೂಪದಲ್ಲಿ ಕೊಟ್ಟಿದ್ದಾರೆಎಂದು ಹೇಳುವುದಕ್ಕೂ ಅವಕಾಶವಿದೆ. ಆದ್ದರಿಂದ ತಾವು ವರಮಾನ ಕಡಿಮೆ ಬರುತ್ತದೆ ಎಂಬ ದೃಷ್ಟಿಯಿಂದ ಅದನ್ನು ಹೆಚ್ಚು ಮಾಡಿಕೊಳ್ಳಬೇಕೆಂದು ಅಭಿ

ಪ್ರಾಯ ಪಡುವುದಾದರೆ ನಾನು ಹೇಳಿದ ಪ್ರೊಸೀಜರ್‌ನ್ನು ಅನುಸರಿಸಿ ; ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಇಷ್ಟು ಮಾತ್ರ ಹೇಳಿ ಬಹಳ ಕೂಲಂಕಷವಾಗಿ ಈ ವರದಿಯನ್ನು ಪರಿಶೀಲನೆ ಮಾಡಿ ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ ಈ ಸಮಿತಿಯ ಅಧ್ಯಕ್ಷರಿಗೂ ಮತ್ತು ಸದಸ್ಯರಿಗೂ ಈ ಸಭೆಯ ಪರವಾಗಿ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ.

(SRI H. M. CHANNABASAPPA ROSE).

The Honble Sri K. T. BHASHYAM (Minister for Law and Labour).—I wish to say a few words to remove a misconception which might arise by reason of a paragraph appearing in page 37. If the Chair permits I will continue. Otherwise, I just give notice I would like to say a few words.

Mr. SPEAKER—All right. Let Sri H. M. Channabasappa complete his speech.

Sri L. SIDDAPPA.—With your permission, Sir, I may be permitted to go.

The Hon'ble Sri T. MARIAPPA (Home Minister).—Much better that the Hon'ble Member remains here.

ಶ್ರೀ ಎಲ್. ಸಿದ್ದಪ್ಪನವರು.—ತಾವು ಹೇಳಿದ್ದನ್ನು ಓದಿ ತಿಳಿದುಕೊಳ್ಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಲೆಕ್ಕ ಪತ್ರ ವಿಮರ್ಶನಾ ಸಮಿತಿಯವರ ವರದಿ ನಮ್ಮ ಮುಂದೆ ಇದೆ. ಈ ವರದಿಯಲ್ಲಿ ಕಂಡು ಬರತಕ್ಕ ಮುಖ್ಯ ಅಂಶಗಳನ್ನು ಮಾತ್ರ ನಾವು ವಿಮರ್ಶೆ ಮಾಡಿದರೆ ಸಾಕು ಅಂತ ಕಾಣುತ್ತದೆ. ಈ ವರದಿಯ ಮೇಲೆ ಚರ್ಚೆ ನಡೆಯುವುದನ್ನು ಸುಮಾರು ಅನೇಕ ವರ್ಷಗಳಿಂದ ಕೇಳುತ್ತಾ ಇದ್ದೇನೆ. ಹೇಳಿದ್ದನ್ನೇ ಹೇಳುತ್ತಾ ಇದ್ದಾರೆ. ಯಾವ್ಯಾವ ಇಲಾಕೆಗಳ ಮೇಲೆ ಏನು ಟೀಕೆ ಟಿಪ್ಪಣಿಗಳನ್ನು ಇವತ್ತು ಮಾಡಿದ್ದಾರೆಯೋ ಇದೇ ಟೀಕೆ ಟಿಪ್ಪಣಿಗಳನ್ನು ಸುಮಾರು 20 ವರ್ಷಗಳ ಹಿಂದಿನ ವರದಿಯಲ್ಲಿ ನೋಡಬಹುದು. ಅಂಕಿ ಅಂಶಗಳು ಸ್ವಲ್ಪ ಹೆಚ್ಚು ಕಮ್ಮಿ ಇರಬಹುದೇ ಹೊರತು ವಾದಗಳು ಮಾತ್ರ ಒಂದೇ ಸರಣಿಯಲ್ಲಿವೆ. ನಾವು ನೋಡಬೇಕಾದಂಥ ಮುಖ್ಯವಾದ ಅಂಶವೇನೆಂದರೆ ಸಾರ್ವಜನಿಕರ ಉಪಯೋಗಕ್ಕೆ ಎಷ್ಟು ಹಣವನ್ನು ಒದಗಿಸಿದೆಯೋ ಅಷ್ಟು ಹಣದಲ್ಲಿ ಬಹಳ ಭಾಗ ಇಲ್ಲವೇ ಪೂರ್ತಿ ಕೆಲಸ ಮಾಡಿದ್ದಾರೆಯೇ, ಮಾಡಿರತಕ್ಕ ಕೆಲಸ ಸಮರ್ಪಕವಾಗಿದೆಯೇ ಮತ್ತು ಖರ್ಚು ಮಾಡಿದಂಥ ಹಣ ದುರುಪಯೋಗವಾಗದೆ, ಸದುಪಯೋಗವಾಗಿದೆಯೇ ಎಂಬುದು. ಇದು ನಮ್ಮ ಮುಖ್ಯವಾದ ಕರ್ತವ್ಯ. ಶ್ರೀಮಾನ್ ಸಿದ್ದಪ್ಪನವರು ಒಂದು ಅಂಶ ಹೇಳಿದರು. ಮಾರ್ಗಾನುಕೂಲಕ್ಕೆ ಇಷ್ಟು ಹಣ ಒದಗಿಸಿದ್ದೇವೆ, ಆರೋಗ್ಯಕ್ಕೆ ಇಷ್ಟು ಹಣ ಒದಗಿಸಿದ್ದೇವೆ ಮತ್ತು ಇತರ ಕೆರೆ ಕಾಂಗಾರಿಗಳಿಗೆ ಇಷ್ಟು ಹಣ ಒದಗಿಸಿದ್ದೇವೆ ಆದರೆ ಅಷ್ಟೂ ಖರ್ಚಾಗದೆ ಬಹಳ ಕಮ್ಮಿ ಖರ್ಚಾಗಿದೆ ಎಂದು ಹೇಳಿದರು. ಒಂದು ವಿಷಯ ಅವರು ತಿಳಿದುಕೊಳ್ಳಬೇಕು. ಅದೇನೆಂದರೆ ನಾವು ಯಾವ ವರ್ಷಕ್ಕೆ ಲೆಕ್ಕ ಪರಿಶೀಲನೆ ಮಾಡುತ್ತಾ ಇದ್ದೇವೆ ಎಂಬುದು. ಹಟಾತ್ತಾಗಿ ವರ್ಷದ ಆಖೈರೂ ವ್ಯತ್ಯಾಸವಾಯಿತೆಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಸಾಮಾನ್ಯವಾಗಿ ಅವರೂ ಸಹ ಮರಾಮತ್ತು ಇಲಾಕೆಯ ಮಂತ್ರಿಗಳಾಗಿದ್ದರು— ಮರಾಮತ್ತು ಕೆಲಸ ಕಾರ್ಯಗಳಲ್ಲಿ ಏಪ್ರಿಲ್, ಮೇ, ಜೂನ್ ಈ ಮೂರು ತಿಂಗಳುಗಳಲ್ಲಿ ನಡೆಯುವಷ್ಟು ವೇಗದಲ್ಲಿ ಇನ್ನಾವ ತಿಂಗಳಿನಲ್ಲೂ ನಡೆಯುವುದಿಲ್ಲ. ಜೊತೆಗೆ ಜೂನ್ ತಿಂಗಳ ಆಖೈರಾದ ಮೇಲೆ ಕೊನೆಯ 15—20 ದಿವಸಗಳಲ್ಲಿ ಬಿಲ್ಲುಗಳು ಹೆಚ್ಚಿಗೆ Payment ಗೆ ಬರುತ್ತವೆ. ಆ ವರ್ಷದ ಪ್ರಗತಿಯೇನೆಂಬುದನ್ನು ನಿಜವಾಗಿ ನೋಡಬೇಕಾದರೆ ಆಗ ನೋಡಬೇಕು. ಈ ಅಂಶವನ್ನು ನಾವು ಮುಖ್ಯವಾಗಿ ನೋಡಬೇಕಾಗಿದೆ. ಹಣವನ್ನು ಒದಗಿಸಿದ್ದುದರಲ್ಲಿ ಒಟ್ಟು ಎಷ್ಟು ಹಣ ಖರ್ಚಾಗಿದೆಯೆಂಬುದೆಲ್ಲಾ ಮುಂದಿನ ವರ್ಷದ ಮೊದಲನೆಯ ತಿಂಗಳು ಗೊತ್ತಾಗುತ್ತದೆ. ಹೀಗಾಗಿ ಆ ವರ್ಷದ ಪ್ರಗತಿಯು ಮುಂದಿನ ವರ್ಷಕ್ಕೆ ಸೇರಿಹೋಗುತ್ತದೆ. ಆದ್ದರಿಂದ ಸರಿಯಾಗಿ ಹಣ ಖರ್ಚಾಗಿದೆಯೇ ಇಲ್ಲವೇ ಎಂಬುದನ್ನೆಲ್ಲಾ ಪರಿಶೀಲಿಸಬೇಕಾದರೆ ಒಟ್ಟು 2—3 ವರ್ಷಗಳನ್ನು ತೆಗೆಸಿ over all picture ನೋಡಿದರೆ ಗೊತ್ತಾಗುತ್ತದೆಯೇ ವಿನಾ ಸುಮ್ಮನೆ ಈ 9 ತಿಂಗಳ ಕೆಲಸವನ್ನು ನೋಡಿ ಇದು ಕಮ್ಮಿಯಾಯಿತು, ಅದು ಹೆಚ್ಚಾಯಿತೆಂದು ಹೇಳುವುದು ನ್ಯಾಯವಲ್ಲ ಅಲ್ಲದೇ ಪಬ್ಲಿಕ್ ವರ್ಕ್ಸ್ ಇಲಾಖೆಯ ವಿಚಾರದಲ್ಲಿ ಇಷ್ಟೊಂದು ಟೀಕಿಸಿದ ಆ ಮಾನ್ಯ ಸದಸ್ಯರೇಕೋ ವಿದ್ಯಾಭ್ಯಾಸದ ಇಲಾಖೆಯ ಕಡೆಗಾಗಲೀ ಪಶುವೈದ್ಯದ ಇಲಾಖೆಯ ಕಡೆಗಾಗಲೀ ತಮ್ಮ ದೃಷ್ಟಿಯನ್ನು ತಿರುಗಿಸಲಿಲ್ಲ. ಚಾಲ್ತಿ ಕೆಲಸಗಳು ಸಾಮಾನ್ಯವಾಗಿ ಏಪ್ರಿಲ್, ಮೇ, ತಿಂಗಳುಗಳಲ್ಲೇ ಹೆಚ್ಚಾಗಿ ನಡೆಯುತ್ತದೆ. ಆ ಬಿಲ್ಲುಗಳು paymentಗೆ ಬರುವುದೇ ಆ ಕೊನೆಯ ತಿಂಗಳಲ್ಲಿ. ಆದ್ದರಿಂದ ಅವುಗಳೆಲ್ಲಾ ಈ ವರದಿಯಲ್ಲಿ ಕಂಡು ಬರದೇ ಇದ್ದರೂ ವಾಸ್ತವವಾಗಿ ಕೆಲಸ ನಡೆದು payment ಆಗಿರುವುದಿಲ್ಲ ಅಷ್ಟೆ. ಇದನ್ನು ಅವರು ಮುಖ್ಯವಾಗಿ ನೋಡಬೇಕಾಗಿತ್ತು.

ಹೀಗೆ ಹೇಳಿ ದಾಕ್ಷಣ ನಾನು ಕೆಲಸಕಾರ್ಯಗಳೆಲ್ಲಾ ಸಮರ್ಪಕವಾಗಿ ನಡೆಯುತ್ತಿವೆಯೆಂದು ಹೇಳುತ್ತಿದ್ದೇನೆಂದು ಭಾವಿಸುವುದು ಸರಿಯಲ್ಲ. ಹಲವು ವರ್ಷಗಳಿಂದ ಒಂದೇ ರೀತಿಯಲ್ಲಿ ಟೀಕೆಗಳು ಬರುತ್ತಲೇ ಇವೆ. ಆದ್ದರಿಂದ ಇದಕ್ಕೆಲ್ಲಾ ಮೂಲಕಾರಣವೇನೆಂಬುದನ್ನು ಪರಿಶೀಲನೆ ಮಾಡಿ ಮುಂದುವರಿಯಬೇಕಾದ್ದು ತಮ್ಮ ಕರ್ತವ್ಯ. ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಹಣ ಸರಿಯಾಗಿ ಸದುಪಯೋಗವಾಗುತ್ತಿಲ್ಲ, ಅನೇಕ ಕಡೆ ಕೆಲಸದ ಜಾಗಗಳಲ್ಲಿರತಕ್ಕ ಸಾಮಾನುಗಳ ಲೆಕ್ಕಪತ್ರಗಳು ಸರಿಯಾಗಿ ಸಿಕ್ಕುತ್ತಿಲ್ಲ, ಹಣ ದುರುಪಯೋಗವಾಗುತ್ತಿವೆಯೆಂದು ದೂರುಗಳು ಬರುತ್ತಿವೆ. ಈ ಕಷ್ಟವನ್ನು ನಿವಾರಣೆ ಮಾಡುವುದಕ್ಕೆ ಕೇವಲ ಲೆಕ್ಕಪತ್ರಗಳನ್ನು ವಿಮರ್ಶೆ ಮಾಡುವುದರಿಂದ ಸಾಧ್ಯವೇ ಎಂಬುದನ್ನಾಗಲೀ ಅಥವಾ ಬೇರೆಯೇನಾದರೂ ವಿಧಾನವಿದೆಯೇ ಎಂಬುದನ್ನಾಗಲೀ ಅವರು ತಿಳಿಸಿಲ್ಲ.

ಈಗ ಮುಖ್ಯವಾಗಿ ಅವರು ಹೇಳಿದ್ದರಲ್ಲಿ ಕಂಡು ಬರುವ ಆಪಾದನೆಗಳು ಈ ಮೂರು. ಮೊದಲನೆಯದು ಹಣ ಒದಗಿಸಿದ್ದರೂ ಪೂರ್ತಿಯಾಗಿ ಖರ್ಚಾಗಲಿಲ್ಲ ; ಖರ್ಚಾಗಿರುವುದರಲ್ಲೂ ಕೆಲವು ಭಾಗ ಸದುಪಯೋಗವಾಗಿಲ್ಲ ಮತ್ತು ಬೇಗ ಕೆಲಸ ನಡೆದಿಲ್ಲ ಎಂಬುವು. ಏಕೆ ಸಮರ್ಪಕವಾಗಿ ನಡೆಯುತ್ತಿಲ್ಲವೆಂಬುದಕ್ಕೆ ಮೂಲವನ್ನು ಕಂಡುಹಿಡಿದು ಅದಕ್ಕೆ ತಕ್ಕ ಔಷಧಿಯನ್ನು ಕೊಟ್ಟರೆ ಬಹುಶಃ ಇದೆಲ್ಲಾ ಸರಿಹೋದೀತು. ಅದಿಲ್ಲದೆ ಹೀಗೆಯೇ ಎಷ್ಟು ವರ್ಷ ಈ ಅಸೆಂಬ್ಲಿಯನ್ನು ನಡೆಸಿಕೊಂಡು ಹೋದರೂ ಇದೇ ರೀತಿಯಾಗಿ ವಾದಗಳು ಬರುತ್ತಿರುತ್ತವೆ.

(ಶ್ರೀ ಎಚ್. ಎಂ. ಚನ್ನಬಸಪ್ಪನವರು).

ಈಗ ಪಬ್ಲಿಕ್ ವರ್ಕ್ಸ್ ಇಲಾಖೆಯನ್ನು ನೋಡುವುದಾದರೆ, ಅಲ್ಲಿ 20 ವರ್ಷಗಳ ಹಿಂದೆ ಯಾವ ರೀತಿ ಕೆಲಸ ಮಾಡಿಕೊಂಡು ಹೋಗುತ್ತಿದ್ದರೋ ಈಗಲೂ ಅದೇ ರೀತಿ ಕೆಲಸ ಮಾಡುತ್ತಿದ್ದಾರೆ. ನಮ್ಮ ಪರಿಸ್ಥಿತಿ ಬದಲಾವಣೆಯಾದ ಹಾಗೆ ಅದರ ನೀತಿ ನಿಯಮಗಳೇನನ್ನೂ ಬದಲಾವಣೆ ಮಾಡಿಲ್ಲ. ಆದ್ದರಿಂದ ಈ ಟೀಕೆ ಟಿಪ್ಪಣಿಗಳು ಕಮ್ಮಿಯಾಗಬೇಕಾದರೆ, ಕೆಲಸ ಕಾರ್ಯಗಳು ಸಮರ್ಪಕವಾಗಿ ನಿರ್ದಿಷ್ಟ ಕಾಲದಲ್ಲಿ ಆಗಬೇಕಾದರೆ ಮತ್ತು ಲಂಚ ರುಷುವತ್ತು ಇತ್ಯಾದಿ, ಇತ್ಯಾದಿ ಅಪಾದನೆಗಳು ನಿಲ್ಲಬೇಕಾದರೆ, ಸ್ವಲ್ಪಮಟ್ಟಿಗೆ ಕೆಲಸ ಕಾರ್ಯಗಳನ್ನು ನಡೆಸತಕ್ಕ ವಿಧಾನಗಳನ್ನೂ ಅವುಗಳಿಗೆ ಸಂಬಂಧಪಟ್ಟ ನೀತಿಯನ್ನೂ ಬದಲಾವಣೆ ಮಾಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಸಚಿವರಲ್ಲಿ ನಾನು ಸೂಚಿಸಲಿಚ್ಛಿಸುತ್ತೇನೆ. ಇವುಗಳಲ್ಲಿ ಮುಖ್ಯವಾಗಿ ಆಗಬೇಕಾದ್ದು 2-3. ಆರು ವರ್ಷ, ಏಳುವರ್ಷ, ಹತ್ತು ವರ್ಷ ಹದಿನೈದು ವರ್ಷಗಳಿಂದ ಎಷ್ಟೋ ಕೆಲಸಗಳು ಆಗಿಯೇ ಇಲ್ಲ. ಅವೆಲ್ಲಾ ಸರ್ಕಾರದ ಪಟ್ಟಿಯಲ್ಲೇ ಉಳಿದಿವೆ. ಹಿಂದಿನ ಸರ್ಕಾರದ ಪಟ್ಟಿಯಲ್ಲೂ ಇದ್ದುವು. ಬಹುಶಃ ಆಗ ಇನ್ನೂ ಹೆಚ್ಚಿಗೆ ಇದ್ದುವೋ ಏನೋ!

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇನ್ನೂ ಹೆಚ್ಚಿತ್ತು!

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಏಕೆ? ಕಂಟ್ರಾಕ್ಟರುಗಳು ಸಿಕ್ಕುವುದಿಲ್ಲ, ಪ್ಲಾನುಗಳನ್ನು ತಯಾರುಮಾಡಬೇಕಾಗಿದೆ; ದರಗಳು ಸರಿಯಾಗಿಲ್ಲ; ಇತ್ಯಾದಿ, ಇತ್ಯಾದಿ ಕಾರಣಗಳನ್ನು ಆ ಕಾಲದಿಂದಲೂ ಕೊಡುತ್ತಲೇ ಬಂದಿದ್ದಾರೆ. ಕೇಳಿದಾಗ ಏನೋ ಒಂದು ಉತ್ತರ ಕೊಟ್ಟು ಬಿಡುತ್ತಾರೆ. ಏನೋ ಲೋಪ ದೋಷಗಳು ಬಂದಿವೆ, ಮುಂದೆ ಸರಿಪಡಿಸಿ ಎಂದು ಇವರೂ ಬರೆದು ಬಿಡುತ್ತಾರೆ ಅಷ್ಟೆ. ಹೀಗಾಗಿ ಅವೆಲ್ಲಾ ಈಗ್ಲೂ ಹಾಗೆಯೇ ಉಳಿದಿವೆ. ಆದ್ದರಿಂದ ಈಗ ಮೂಲ ಕಾರಣಗಳನ್ನು ಪತ್ತೆಮಾಡಿ ಇದಕ್ಕೆ ಸಂಬಂಧಪಟ್ಟ ನಿಬಂಧನೆಗಳನ್ನು ಬದಲಾವಣೆ ಮಾಡಬೇಕೆಂದು ನಾನು ಸೂಚಿಸಲಿಚ್ಛಿಸುತ್ತೇನೆ. ಪಿ. ಡಬ್ಲ್ಯು ಡಿ. ಇಲಾಖೆಯ ಅಕೌಂಟ್ಸ್ ಮಾನ್ಯುಯಲ್ಲನ್ನು ಅತ್ಯಾವಶ್ಯಕವಾಗಿ ಇಂದಿನ ಅವಶ್ಯಕತೆಗಳಿಗೆ ಮತ್ತು ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವಂತೆ ಮತ್ತು ಕೆಲಸ ಕಾರ್ಯಗಳು ಸುಲಭವಾಗಿ ನಡೆಯಲನುಕೂಲಿಸುವಂತೆ ಮಾರ್ಪಾಡು ಮಾಡಬೇಕು. ಎಲ್ಲಿಯವರೆಗೆ ಇದನ್ನು ಮಾಡುವುದಿಲ್ಲವೋ ಅಲ್ಲಿಯವರೆಗೆ ಎಷ್ಟು ಹಣ ಒದಗಿಸಿದರೂ ನಾವು ಸುಮ್ಮನೆ ಹೇಳುವುದೇ ಹೊರತು ಕೆಲಸ ನಡೆಯುವುದಿಲ್ಲ. ಇದಲ್ಲದೆ ಇಲ್ಲಿ ತೊಂದರೆಗಳೇನೇನಿವೆಯೆಂಬದನ್ನು ನೋಡಿಕೊಂಡು ಅಡ್ಡಿ ಆತಂಕಗಳನ್ನು ನಿವಾರಣೆ ಮಾಡುವ ರೀತಿಯಲ್ಲಿ ಈ ಸುಧಾರಣೆಯಾಗಬೇಕು. ಕಮಿಟಿಯವರೇಕೆ ಇದನ್ನೆಲ್ಲಾ ಸಲಹೆ ಮಾಡಲಿಲ್ಲವೋ ಗೊತ್ತಿಲ್ಲ. ಅವರ ಅಧಿಕಾರಕ್ಕೆ ಇದು ಮೀರಿದ್ದೂ ಅಲ್ಲ. ರೂಲ್ಸುಗಳನ್ನು ಬದಲಾವಣೆ ಮಾಡಬೇಕೆಂಬುದೂ ಈ ಕಮಿಟಿಯ ಜವಾಬ್ದಾರಿಯಾಗಿದೆ. ಇದನ್ನು ಅವರು ಮಾಡಿಲ್ಲ. ದೇಶಾದ್ಯಂತ ಆಸ್ಪತ್ರೆಗಳಿಗೂ, ಸ್ಕೂಲು ಕಟ್ಟಡಗಳಿಗೂ ಇತ್ಯಾದಿ ಸರ್ವಸಾಮಾನ್ಯವಾದ ಕೆಲಸಗಳಿಗೆಲ್ಲಾ ಒಂದೇ ನಿರ್ದಿಷ್ಟವಾದ ಪ್ಲಾನುಗಳನ್ನು ತಯಾರು ಮಾಡಿಡಬೇಡವೇ? ಹಾಗಿಲ್ಲದೆ, ಹುಣಸೂರು ಆಸ್ಪತ್ರೆಗೇ ಒಂದು ಪ್ಲಾನ್ ತಯಾರಿಸುವುದು, ಆಮೇಲೆ ಪೆರಿಯಾಪಟ್ಟಣಕ್ಕೆ ಆಸ್ಪತ್ರೆ ಬೇಕೆಂದಾಗ ಆಗೊಂದು ಬೇರೆ ಪ್ಲಾನ್ ತಯಾರಿಸಲಿಕ್ಕೆ ಹೊರಡುವುದು, ಮತ್ತೆ ಗುಂಡ್ಲುಪೇಟೆಗೆ ಬೇರೆ, ಹೀಗಾದರೆ ಕೆಲಸಗಳಲ್ಲಿ ಜಾಗ್ರತೆ ನಡೆಯುತ್ತವೆ. Standardisation of Plan ಎಂಬುದು ಇಲ್ಲದೆ ಹೋದರೆ ಹೇಗೆ? ಪ್ರತಿಯೊಂದು ಕಡೆಯಲ್ಲೂ ನಕ್ಷೆಗಳನ್ನು ತಯಾರಿಸುತ್ತಾ ಓವರ್‌ಸಿಯರುಗಳು ಕಾಲ ಕಳೆಯುವುದೇ ಆಗುತ್ತೆ. ಮೊದಲೇ ಆಸ್ಪತ್ರೆಯೆಂದುಬಿಟ್ಟರೆ ಒಂದು ಪ್ಲಾನು, ಪ್ರೈಮರಿ ಸ್ಕೂಲು ಎಂದರೆ ಒಂದು ಪ್ಲಾನು ಎಂದು ಮಾಡಿ, ದೇಶದಲ್ಲಿ ಯಾವ ಮೂಲೆಯಿಂದ ಯಾವ ಮೂಲೆಗೆ ಹೋದರೂ ಇದೇ ರೀತಿ ಇರಬೇಕೆಂದು ಮಾಡುವುದು ಅತ್ಯವಶ್ಯಕ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದಕ್ಕೆ action ತೆಗೆದುಕೊಂಡಿದ್ದೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಒಂದು ರೂಮಿನ ಸ್ಕೂಲ್ ಹೇಗಿರಬೇಕು, ಎರಡು ರೂಮಿನ ಸ್ಕೂಲು ಹೇಗಿರಬೇಕು, ಮೂರರದು ಹೇಗಿರಬೇಕು—ಎಂಬುದೆಲ್ಲಾ ಮೊದಲೇ ತಯಾರಾಗಿ ಸಿದ್ಧವಾಗಿರಬೇಕು.

ಶ್ರೀ ಕೆ. ಎಚ್. ಮುದಿಯಪ್ಪನವರು.—ದರಗಳು ವ್ಯತ್ಯಾಸವಾಗಿಬಿಟ್ಟರೆ?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಆದರೂ ಒಂದೊಂದು ಸ್ಕೂಲಿಗೂ ಒಮ್ಮೆ ತಯಾರಿಸಬೇಕಾದ ಅವಶ್ಯಕವಿಲ್ಲ. ಒಂದು ಸಲ ಮಾಡಿ Blue prints ಇಟ್ಟು ಬಿಟ್ಟರೆ ಆಯಿತು.

ಆಮೇಲೆ, standardisation of rates. ಈಗಿರುವುದು ಯಾವುದೋ ಕಾಲದಲ್ಲಿ ಗೊತ್ತುಮಾಡಿದ ದರ. ಒಂದೊಂದು ಡಿಸ್ಟ್ರಿಕ್ಟಿನಲ್ಲಿಯೂ ಒಂದೊಂದು ರೀತಿಯಾಗಿದೆ. ಇದಕ್ಕೆ ನಾನು ಅನೇಕ ಸಲಹೆಗಳನ್ನು ಕೊಡಬಲ್ಲೆ. ಆದರೆ ಅಷ್ಟು ಕಾಲಾವಕಾಶವಿಲ್ಲ. ಒಟ್ಟಿನಲ್ಲಿ ಇಷ್ಟು ಹೇಳಬಹುದು. ಒಂದೊಂದು ತಾಲ್ಲೂಕಿಗೂ ಒಂದು workable ರೇಟನ್ನು ಗೊತ್ತುಮಾಡಬೇಕು. ಈ ದರದ ಷೆಡ್ಯೂಲು ಯಾವ ರೀತಿ ಇರಬೇಕೆಂದರೆ ಒಂದು ವೇಳೆ ಯಾವ ಕಂಟ್ರಾಕ್ಟರೂ ಮಾಡದೆ ಹೋದರೆ ಡಿಪಾರ್ಟ್‌ಮೆಂಟಿನವರೇ ಅದರಂತೆ ಕೆಲಸ ಮಾಡುವುದಕ್ಕೆ ತಯಾರಿರಬೇಕು. ಆ ರೀತಿಯಾಗಿ ದರಗಳನ್ನು ಗೊತ್ತುಮಾಡಬೇಕೇ ಹೊರತು ಯಾವುದೋ ವರ್ಷದ ದರವನ್ನು ಹಾಕಿ ಅದರ ಮೇಲೆ ಒಬ್ಬನು 45% ಗೆ ಮಾಡುತ್ತೇನೆಂದು ಹೇಳುವುದು, ಇನ್ನೊಬ್ಬನು 3[illegible]% ಗೆ ಮಾಡುತ್ತೇನೆಂದು ಹೇಳುವುದು, ಕೊನೆಗೆ ಯಾವನೋ ಕಮ್ಮಿ ಹೇಳಿದವನಿಗೆ ಕೊಟ್ಟು ಅವನು ಅರ್ಧ ಮಾಡಿ ನಿಲ್ಲಿಸಿದರೆ ಮತ್ತೆ ಪುನಃ ಬದಲಾವಣೆ ಮಾಡುವುದು ಸರಿಯಲ್ಲ. ಅಲ್ಲದೆ ಕೆಲಸಗಳನ್ನು ಕೊಡುವುದರಲ್ಲಿ ಯಾವಾಗ್ಲೂ ಲೈಸೆನ್ಸ್ ಪಡೆದಿರುವ ಕಂಟ್ರಾಕ್ಟರುಗಳಿಗೇ ಕೊಡಬೇಕು. ಈಗ ಕಂಟ್ರಾಕ್ಟ್ ಯಾವ ರೀತಿ ಕೊಡುತ್ತಿದ್ದಾರೆ! ಸ್ವಲ್ಪ ಕಮ್ಮಿ ದರ ಹೇಳಿದರೆ ಸಾಕು ಯಾರೋ ಒಡ್ಡನನ್ನು ತಂದು ಕೆಲಸ ಕೊಟ್ಟುಬಿಡುತ್ತಾರೆ. ಅವನಿಗೇನೂ ತಿಳಿದಿರುವುದಿಲ್ಲ! ಹೆಚ್ಚಿಗೆ ಮಾಡಿದರೆ ಅದೂ ಸರಿ ಕಮ್ಮಿ ಮಾಡಿದರೆ ಅದೂ ಸರಿಯೇ! ಇವೆಲ್ಲಾ ತಪ್ಪಿ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಒಳ್ಳೆಯ ಧಡೂತಿ ಮನುಷ್ಯ ಅಂದರೆ ಒಂದು ವೇಳೆ ಹಣ ದುರುಪಯೋಗ ಮಾಡಿದರೂ ಅವನ ಡಿಪಾಜಿಟ್ಟಿನಿಂದ ಖೋತಾ ಮಾಡಬಹುದು ಎನ್ನುವಂಥ ಕಂಟ್ರಾಕ್ಟುದಾರನಿಗೆ ಕೊಡಬೇಕು.

ಈ ಹೊತ್ತು ಪಬ್ಲಿಕ್‌ವರ್ಕ್ಸ್ ಹೇಗೆ ನಡೆಯುತ್ತಿವೆ ಎಂಬುದನ್ನು ದೇಶಾದ್ಯಂತವೂ ನೋಡುತ್ತಿದ್ದೇವೆ. ನನ್ನ ಸಣ್ಣ ಕ್ಷೇತ್ರದಲ್ಲಿ ನನ್ನ ಅನುಭವವನ್ನು ಹೇಳುವುದಾದರೆ ಈಗ ಸರಿಯಾದ, ಲಾಯಕ್ಕಾದ ಜನರು ಕಂಟ್ರಾಕ್ಟು ಕೆಲಸ ಮಾಡುತ್ತಿಲ್ಲ. ಇದಕ್ಕೆ ಅನೇಕ ಕಾರಣಗಳಿವೆ; ಅವೆಲ್ಲವನ್ನೂ ಈಗ ಹೇಳುವುದಕ್ಕೆ ಸಾಧ್ಯ

ವಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ, ಒಂದೊಂದು ಕ್ಷೇತ್ರಕ್ಕೆ ಒಂದೊಂದು ಸ್ಟ್ಯಾಂಡರ್ಡ್ ರೇಟುಗಳನ್ನು ನಿರ್ಧರ ಮಾಡುವುದರ ಜೊತೆಗೆ ಲೈಸೆನ್ಸ್ಡ್ ಕಂಟ್ರಾಕ್ಟರುಗಳಿರಬೇಕು. ಅವರೇನಾದರೂ ತಪ್ಪುದಾರಿಯಲ್ಲಿ ಕೆಲಸ ಮಾಡಿದರೆ ಅಥವ ತಪ್ಪುದಾರಿಗೆಳೆದರೆ ಅವರಿಗೆ ಸಾವಿರಾರು ರೂಪಾಯಿ ನಷ್ಟವಾಗಿ ಹೋಗುತ್ತದೆಂಬ ಭಯ ಅವರಲ್ಲಿರಬೇಕು. ಆಗ ಜರೂರಾಗಿಯೂ ಸಮರ್ಪಕವಾಗಿಯೂ ಕೆಲಸಗಳು ನಡೆಯುತ್ತವೆ. ಅನೇಕ ಲಕ್ಷಾಂತರ ರೂಪಾಯಿನ ಕಟ್ಟಡಗಳನ್ನು ನಾಲ್ಕಾರು ತಿಂಗಳೊಳಗೆ ಮಾಡುವ ವ್ಯವಸ್ಥೆಯನ್ನು ನಾನು ಮಾಡುತ್ತಿದ್ದೇನೆ. ಕೆಲಸಗಳು ನಿಧಾನವಾಗಲು ಕಾರಣವಿಷ್ಟೆ. ದರದಲ್ಲಿ ಆರು ಕಾಸು ಹೆಚ್ಚಿಸಬೇಕಾದರೂ ಚೀಫ್ ಇಂಜಿನಿಯರಿಗೆ ಒಂದು ಕಾಗದ ಹೋಗಬೇಕಾಗುತ್ತದೆ. ಅವರ ಅನುಮತಿ ಬರಬೇಕು. ಇದು ತಪ್ಪಿ ಅಧಿಕಾರ ವಿಕೇಂದ್ರೀಕರಣವಾಗಬೇಕು. ಒಬ್ಬ ಅಸಿಸ್ಟೆಂಟ್ ಇಂಜಿನಿಯರಿಗೆ ನಾನೂರು ಐನೂರು ರೂಪಾಯಿ ಸಂಬಳ ಬರುತ್ತದೆ. ಇಂಥ ಅಧಿಕಾರಿಗೆ ಸ್ವಲ್ಪ ಹೆಚ್ಚು ಅಧಿಕಾರ ಕೊಟ್ಟರೆ ಹದಗೆಟ್ಟು ಹೋಗುತ್ತದೆಂಬ ಭಯವಿದೆ. ಅಧಿಕಾರಿಗಳನ್ನು ನೇಮಿಸಿದ ಮೇಲೆ ಅವರಿಗೆ ತಕ್ಕಷ್ಟು ಅಧಿಕಾರ ಕೊಡಬೇಕು. ಆ ಅಧಿಕಾರವನ್ನುಪಯೋಗಿಸುವುದರಲ್ಲಿ ತಪ್ಪುಮಾಡಿದರೆ ಅಂಥವರಿಗೆ ಉಗ್ರವಾದ ಶಿಕ್ಷೆಮಾಡಬೇಕು. ಈಗ ಅವರಿಗೆ ಅಧಿಕಾರ ಕೊಡವುದಿಲ್ಲ, ಅವರು ತಪ್ಪುಮಾಡಿದರೆ ಉಗ್ರವಾದ ಶಿಕ್ಷೆ ಮಾಡುವುದಕ್ಕೆ ನಮ್ಮ ಹಣೆಯಲ್ಲೇ ಬರೆದಿಲ್ಲ. ಕೆಳಗಿನ ಅಧಿಕಾರಿಗಳಿಗೆ ತಕ್ಕಷ್ಟು ಅಧಿಕಾರವನ್ನು ಕೊಡದೇ ಹೋದರೆ ಪ್ರತಿಯೊಂದನ್ನೂ ಮೇಲಿನ ಮಟ್ಟದಲ್ಲೇ ಮಾಡುವುದಕ್ಕಾಗುವುದಿಲ್ಲ. ಇದರಿಂದ ಕೆಲಸ ಬೇಗ ಆಗುವುದಿಲ್ಲ. ಒಟ್ಟಿನಲ್ಲಿ standardisation of plans and standardisation of rates ಅಗತ್ಯ. ಅಲ್ಲದೆ ಪಬ್ಲಿಕ್ ವರ್ಕ್ಸ್ ಕೋಡ್ ಇದೆ: ಆದರಲ್ಲಿ ಈ ಹೊತ್ತಿನ ಪರಿಸ್ಥಿತಿಗೂ ವಾತಾವರಣಕ್ಕೂ ಹೊಂದಿಕೊಳ್ಳುವ ರೀತಿಯಲ್ಲಿ, ಸುಲಭವಾಗಿ ಕೆಲಸ ಕಾರ್ಯಗಳು ನಡೆಯುವಂತೆ ಅಧಿಕಾರಗಳನ್ನು ವಿಕೇಂದ್ರೀಕೃತ ಮಾಡಿ ಅದನ್ನು ಬದಲಾವಣೆ ಮಾಡಬೇಕು. ಈ ಮೂರು ವಿಷಯಗಳಿಗೂ ಸರ್ಕಾರ ಗಮನಕೊಟ್ಟಿಲ್ಲ. ಅದನ್ನು ಮಾಡಿದರೆ ಮುಂದಿನ ವರ್ಷ ಈ ರೀತಿ ಟೀಕೆ ಟಿಪ್ಪಣಿಗಳಿಗೆ ಅವಕಾಶವಿರುವುದಿಲ್ಲ. ಶ್ರೀಮಾನ್ ಸಿದ್ದಪ್ಪನವರು quality of work ವಿಷಯವನ್ನು ಹೇಳಲಿಲ್ಲ. ಈಗ quality of work ಸರಿಯಾಗಿಲ್ಲವೆಂದು ಅವರು ಹೇಳಲಿಲ್ಲ. By implication he agrees to that. My experience is that there is a great deal of deterioration in quality also. ಇದನ್ನು ನಾನು ಹೇಳುತ್ತೇನೆ. ಖಂಡಿತವಾಗಿಯೂ quality ಕಡಿಮೆಯಾಗಿದೆ. ಇದನ್ನು ಸರಿಪಡಿಸಬೇಕಾದರೆ ಅಧಿಕಾರ ವಿಕೇಂದ್ರೀಕರಣ ಮಾಡಬೇಕು. ತಪ್ಪುಮಾಡಿದವರಿಗೆ ಉಗ್ರವಾದ ಶಿಕ್ಷೆಮಾಡಬೇಕು.

ಇನ್ನು ಆಹಾರ ಇಲಾಖೆಯ ವಿಷಯವನ್ನು ನೋಡಿದರೆ ಈ ವರದಿಯಲ್ಲಿ ಒಂದು ವಾಕ್ಯವನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ಈ ಇಲಾಖೆಯಲ್ಲಿ ಇಷ್ಟೊಂದು ಹಣವನ್ನು ಸಂಸ್ಥಾನದ ಹಣದಿಂದ ಖರ್ಚು ಮಾಡುವುದು ಸರಿಯಲ್ಲ, ಸಾಧ್ಯವಾದಷ್ಟು ಬೇಗ service at cost ಮಾಡಬೇಕೆಂಬ ಒಂದು ಒಳ್ಳೆಯ ಸಲಹೆಯನ್ನು ಮಾಡಿದ್ದಾರೆ. ಈಗಾಗಲೇ ಈ ವಿಷಯದಲ್ಲಿ ಕಾರ್ಯಕ್ರಮ ಕೈಕೊಂಡು 70,000 ಟನ್ ಆಹಾರ ಧಾನ್ಯವನ್ನುಳಿದು ಬಾಕಿಯದಕ್ಕೆ service at cost ಮಾಡಿದ್ದೇವೆ. ಸಿಬ್ಬಂದಿಯ ಖರ್ಚುಮಾತ್ರಕೊಡುತ್ತೇವೆಂದು ಹೇಳಿದರು. ಇದೂ ಕೂಡ ಬೇಡ. ಇದರಲ್ಲಿ ಇನ್ನೊಂದು ವಿಷಯವನ್ನು ನಾನು ತಿಳಿಸಿದರೆ ಬಹುಶಃ ಪ್ರಶಂಸೆ ಮಾಡುತ್ತಾರೆಂದು ನಂಬಿದ್ದೇನೆ. ಈ ಆಹಾರ ಧಾನ್ಯಗಳನ್ನು ಕೊಂಡು ಮಾರುವ ವ್ಯವಹಾರ ಖಂಡಿತವಾಗಿಯೂ ನಷ್ಟವಾಗುವ ವ್ಯವಹಾರವಲ್ಲ. ಉದಾಹರಣೆಗೆ 16 ಲಕ್ಷ ಪಲ್ಲ ಬತ್ತವನ್ನು ಅಕ್ಕಿಮಾಡುತ್ತಾರೆ. 8 ರಿಂದ $8\frac{1}{4}$ ರೂಪಾಯಿವರೆಗೆ ಫಾಯಿದೆ ಬರುವ ರೀತಿಯಲ್ಲಿ ಮಾಡುತ್ತಿದ್ದಾರೆ. ಬೇಕಾದರೆ ಇದನ್ನು ಅಂಕಿ ಅಂಶಗಳಿಂದ ರುಜುವಾತು ಮಾಡಬಲ್ಲೆ. 8 ಲಕ್ಷ ಪಲ್ಲ ಅಕ್ಕಿ ಆಯಿತು. $8\frac{1}{4}$ ರೂಪಾಯಿನ ಪ್ರಕಾರ 16 ಲಕ್ಷ ಪಲ್ಲ ಬತ್ತ ಅಥವ 8 ಲಕ್ಷ ಪಲ್ಲ ಅಕ್ಕಿಗೆ 68 ಲಕ್ಷ ರೂಪಾಯಿ ಫಾಯಿದೆಯಾಗುತ್ತದೆ. ಇದು ಎಲ್ಲಿ ಹೋಯಿತು ಎಂಬುದು ನನ್ನ ಪ್ರಶ್ನೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—Transportation charges, cost of gunny bags ಮುಂತಾದ್ದಕ್ಕೆಲ್ಲ ಖರ್ಚಾಗುತ್ತದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—Transportation, gunny bags, hulling, depreciation ಎಲ್ಲವನ್ನೂ ನಾನು ಲೆಕ್ಕಕ್ಕೆ ತೆಗೆದು ಕೊಂಡಿದ್ದೇನೆ. ಈ 68 ಲಕ್ಷ ರೂಪಾಯಿ ಎಲ್ಲಿ ಹೋಯಿತೆಂದು ಲೆಕ್ಕಹಾಕಿದರೆ ಅದು ಎಲ್ಲೋ ಹೋಗುತ್ತಿದೆ! ಲೆಕ್ಕಕ್ಕೇ ಸಿಕ್ಕಿಲ್ಲ! ಈ ಆಹಾರ ಇಲಾಖೆ ಇತರ business concerns ಕೆಲಸ ಮಾಡುವಂತೆ ಮಾಡಬೇಕೇ ವಿನಾ ಇಷ್ಟೊಂದು ಸಿಬ್ಬಂದಿಯನ್ನಿಟ್ಟುಕೊಂಡು 68 ಲಕ್ಷ ರೂಪಾಯಿ ಫಾಯಿದೆ ಬಂದರೂ ಕೂಡ ಕೋಟ್ಯಾಂತರ ರೂಪಾಯಿ ನಷ್ಟವೆಂದು ತೋರಿಸುತ್ತಾ ಹೋದರೆ ಕೊನೆಗೆ ದಿವಾಳಿ ಎದ್ದು ಹೋಗುತ್ತದೆ. ಒಂದು ಪ್ರಶ್ನೆಯನ್ನು ನೀವೇ ಹಾಕಿಕೊಳ್ಳಿ. ವರ್ತಕರೇ ಈ ಆಹಾರ ಇಲಾಖೆಯ ಕೆಲಸವನ್ನು ನಡೆಸುತ್ತಿದ್ದರು, ಇದೇ ಧಾರಣೆಯಲ್ಲಿ ಕೊಂಡು ಇದೇ ಧಾರಣೆಯಲ್ಲಿ ಮಾರಿ, ಕೋಲಾರದಿಂದ ತಂದು ಪಿರಿಯಾಪಟ್ಟಣಕ್ಕೆ ಒದಗಿಸುತ್ತಿದ್ದರು. ಆದರೆ 23 ಲಕ್ಷ ರೂಪಾಯಿನ ಸಿಬ್ಬಂದಿಯನ್ನಿಟ್ಟುಕೊಂಡು ಸರ್ಕಾರದವರು ನಡೆಸುತ್ತಿದ್ದರೂ ರೈತ ಆಹಾರ ಧಾನ್ಯವನ್ನು ನಿಮ್ಮ ಮನೆ ಬಾಗಿಲಿಗೆ ತಂದು ಕೊಡಬೇಕು. ಅಲ್ಲದೆ 68 ಲಕ್ಷ ರೂಪಾಯಿ ಫಾಯಿದೆ ಇದ್ದರೂ ನಷ್ಟವೆಂದು ಹೇಳಿದರೆ ಇದರಲ್ಲಿ ಏನೋ ಲೋಪದೋಷವಿಲ್ಲವೆ? ಇದನ್ನು ಸರಿಪಡಿಸಬೇಕಾದರೆ ಯಾವ ರೀತಿ ಮಾಡಬೇಕೆಂದು ಸಲಹೆ ಮಾಡಬಲ್ಲೆ; ಆದರೆ ಈಗ ಮಾಡುವುದಿಲ್ಲ. ಕಾಲಾವಕಾಶವಿರುವುದು ಬಹಳ ಕಡಿಮೆ. ಈಗ ಈ ಪಬ್ಲಿಕ್ ಅಕೌಂಟ್ಸ್ ಸಮಿತಿಯವರು ಏನು ಲೋಪ ದೋಷಗಳನ್ನು ತೋರಿಸಿದ್ದಾರೆಯೋ ಅದು ವಿನಾ ಇನ್ನೇನೂ ಲೇಶಾಂಶವೂ ಇಲ್ಲವೆಂಬ ಭಾವನೆ ತಪ್ಪು. ನನಗೆ ಗೊತ್ತಿದೆ, ಎಷ್ಟೆಷ್ಟು ಧಾನ್ಯ ಹುಳಿತು ಕೊಳೆತು ಹೋಗುತ್ತಿದೆ ಎನ್ನುವುದು. ಇದನ್ನೆಲ್ಲಾ ವಿವರಿಸುತ್ತಾ ಬಜೆಟ್ ಭಾಷಣದಂತೆ ದೀರ್ಘ ಭಾಷಣ ಮಾಡುವುದಕ್ಕೆ ನನಗೆ ಇಷ್ಟವಿಲ್ಲ. ಅನೇಕ ರೇಷನ್ ಡಿಪೋಗಳಲ್ಲಿ, ಉಗ್ರಾಣಗಳಲ್ಲಿ, ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಪದಾರ್ಥಗಳು ನಷ್ಟವಾಗುತ್ತಿವೆ.

ಇಳುವರಿ ವಿಷಯದಲ್ಲಿ ಒಂದು ಮಾತು ಹೇಳುತ್ತೇನೆ. ಅರ್ಧ ಸೇರು ಇಳುವರಿ ಮಾಡಿದರೆ ಸರ್ಕಾರಕ್ಕೆ ಎಷ್ಟು ಲಕ್ಷ ರೂಪಾಯಿ ನಷ್ಟ ಎಂಬುದನ್ನು ಯೋಚಿಸಿ. 16 ಲಕ್ಷ ಪಲ್ಲ ಬತ್ತಕ್ಕೆ 8 ಲಕ್ಷ ಪಲ್ಲ ಅಕ್ಕಿಗೆ ಕಾಲು ಸೇರಿನಂತೆ ಆದರೆ ಲಕ್ಷಾಂತರ ರೂಪಾಯಿ ನಷ್ಟವಾಗುತ್ತದೆ. ನೋಡುವುದಕ್ಕೆ ಅರ್ಧ ಸೇರು ಮಾತ್ರ. I am telling you hard facts. After all I am

(ಶ್ರೀ ಎಚ್. ಎಂ. ಚನ್ನಬಸಪ್ಪನವರು).

not here to simply criticise Government for the sake of criticism; on the other hand I want to criticise only to improve.

Sri M. L. NANJARAJ URS.—Constructive criticism.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೂರು ಸೇರು ಬತ್ತಕ್ಕೆ ಅರ್ಧ ಸೇರು ಇಳುವರಿ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಒಂದು ಪಲ್ಲಕ್ಕೆ ಅರ್ಧ ಸೇರಾದರೆ 8 ಸಾವಿರ ಪಲ್ಲ ಬತ್ತಕ್ಕೆ 4 ಸಾವಿರ ಪಲ್ಲ ಅಕ್ಕಿ ಆಯಿತು. ನೀವು ಇಳುವರಿ ಲೆಕ್ಕ ಕೊಡುವುದು ಅರ್ಧ ಸೇರು ಮಾತ್ರ, ಎಷ್ಟಾಗುತ್ತದೆ ಲೆಕ್ಕ ಹಾಕಿ ನೋಡಿ. ಹೀಗೆ ನಮ್ಮ ಹಣ ಪೋಲಾಗುತ್ತಿದ್ದೆ. ಎಂಬುದನ್ನು ಅರಿಕೆ ಮಾಡುತ್ತಿದ್ದೇನೆ. ಇನ್ನೂ ಹೀಗೆ ಎಷ್ಟೋ ವಿಷಯಗಳು ನಡೆಯುತ್ತಿವೆ. ಅದೆಲ್ಲವನ್ನೂ ಈಗ ವಿಮರ್ಶೆ ಮಾಡುವುದಕ್ಕೆ ಸಾಧ್ಯವಿಲ್ಲ. ಇಷ್ಟೇ ಸರಿ ಲೋಪ ದೋಷ, ಬೇರೆ ಇಲ್ಲ, ಬಾಕಿ ಹಣ ಸದುಪಯೋಗವಾಗುತ್ತಿದೆ ಎಂಬ ಭಾವನೆ ಸರ್ಕಾರಕ್ಕಿರಬಾರದು. 68 ಲಕ್ಷ ರೂಪಾಯಿ ಫಾಯಿದೆ ಬರುವುದೂ ಹೋಗಿ ನಷ್ಟವಾಗಬೇಕಾದರೆ ಯಾವ ಯಾವ ಹೆಗ್ಗಣ ಹೇಗೆ ಹೇಗೆ ತಿನ್ನುತ್ತಿದೆ ಎಂಬುದನ್ನು ಕಂಡು ಹಿಡಿದು ತಕ್ಕ ಬಂದೋಬಸ್ತು ಮಾಡಬೇಕು.

I may tell you that if you make it service at cost and if you prevent leakages of funds, you will gain to the tune of a crore of rupees by these food transactions and you will also get the credit, you will increaseed the revenues and I may then plead that this food department may be continued for some time more because it will be beneficial to the poor.

The Hon'ble Sri H. C. DASAPPA.—You want to introduce service at cost and earn a crore of rupees!

Sri H. M. CHANNABASAPPA.—Not only service at cost, but also you must not allow even a snigle pie to be misused.

Janab SYED ABDUR RAHMAN.—You will have a chance to do that.

Sri H. M. CHANNABASAPPA.—I may have a chance and you may have a chance also.

ಹೀಗೆ ಪ್ರತಿಯೊಂದೂ ಅನ್ಯಾಯವೇ ಆಗುತ್ತಿದೆ. ವ್ಯಾಪಾರಗಾರರು ಲಕ್ಷಾಂತರ ರೂಪಾಯಿ ಲಾಭ ಮಾಡುತ್ತಿದ್ದಾರೆ. ಅವರಿಗೆ ಸಾಧ್ಯವಾಗುವಾಗ ನಿಮಗೇಕೆ ಸಾಧ್ಯವಿಲ್ಲವೆಂದು ಕೇಳುತ್ತೇನೆ. ಏನೇ ಆಗಲಿ ಇವುಗಳನ್ನೆಲ್ಲಾ ತಾವು ಸ್ವಲ್ಪ ರಚನಾತ್ಮಕ ದೃಷ್ಟಿಯಿಂದ ನೋಡಬೇಕು.

JANAB SYED ABDUR RAHMAN.—You will have a chance.

Sri H. M. CHANNABASAPPA.—It is not as though they have not the chance, but only they have no mind to do it.

ಅಧ್ಯಕ್ಷರು.—'ಒಟ್ಟಿನಲ್ಲಿ' ಎಂತ ಹೇಳಿಬಿಟ್ಟು, ಈಗೇನೋ ಪುನಃ ಪ್ರಾರಂಭಿಸುತ್ತಿರುವಂತಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಈಗ 75 ಲಕ್ಷದವರೆಗೆ ಇನ್ನೂ ಬರತಕ್ಕ ಬಾಕಿ ವ್ಯವಸಾಯದ ಇಲಾಖಾ ಬಾಬಿನಲ್ಲಿ ಹಾಗೆ ನಿಂತುಬಿಟ್ಟಿರುತ್ತದೆಯೆಂದು ಒಂದು ಸೂಚನೆ ಕೊಡಲಾಗಿದೆ.

ಅಧ್ಯಕ್ಷರು.—75 ಲಕ್ಷವಲ್ಲ. ಅದು 70 ಲಕ್ಷ ರೂಪಾಯಿಗಳು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—I stand corrected. It may be anywhere between 68 and 75 lakhs. To the tune of Rs. 70 lakhs, advances are pending.

ಅದು ಎಷ್ಟು, ಏನು ಎಂಬುದನ್ನೆಲ್ಲಾ ಈಗ ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ಖರ್ಚಾಗಿರುವುದಾದರೋ ನಾನಾ ರೂಪದಲ್ಲಿರುತ್ತೆ. ಶಿಬ್ಬಂದಿಗಾಗಿ ಎಷ್ಟು ಖರ್ಚಾಗಿದೆ. ಕೆಲಸಕ್ಕಾಗಿ ಎಷ್ಟು ಮತ್ತು ಸಾಮಾನು ವಗೈರೆಗಳಿಗೆಷ್ಟು ಖರ್ಚಾಗಿರುತ್ತೆಂಬುದನ್ನು ಈಗ ಹೇಳುವುದಕ್ಕಾಗುವುದಿಲ್ಲ. ಹೀಗೆ ನಾನಾ ಬಾಬುಗಳಿಗೆ, ನಾನಾರೀತಿಯ ಖರ್ಚು ವೆಚ್ಚಗಳಿಗಾಗಿ ಒದಗಿಸಲಾಗಿದ್ದ ಮೊಬಲಗಿನಲ್ಲಿ ಎಷ್ಟು ಹಣ ಪೋಲಾಗಿದೆ, ಉಳಿದಿರತಕ್ಕ ಹಣವೆಷ್ಟು, ಅಷ್ಟಾನ್ನಾದರೂ ತಾವು ಸುಭದ್ರವಾಗಿಟ್ಟಿದ್ದೇವೆಂದು ಸಾರ್ವಜನಿಕರಿಗೆ ನಂಬಿಕೆ ಹುಟ್ಟತಕ್ಕ ರೀತಿಯಲ್ಲಿ ನಡೆದರೆ ಸಾಕು. ಆದರೆ ಹಾಗೆ ತಾವು ಯಾವುದನ್ನೂ ನಿರ್ದಿಷ್ಟವಾಗಿ ತಿಳಿಸದೆ ಮುಗಿಂನಲ್ಲೇ ಇಟ್ಟಿದ್ದು ಕೊನೆಗೆ ಆ ಮೊಬಲಗಿನ ಪೈಕಿ ಪೂರ್ತಿ write off ಮಾಡಬೇಕಾದ ಸಂದರ್ಭಗಳೇನಾದರೂ ಇರುತ್ತವೆಯೋ ಏನೋ ಎಂಬುದೊಂದನ್ನೂ ಹೇಳುವುದಕ್ಕೆ ಆಗುವುದಿಲ್ಲ. That is a point which causes a little anxiety to me and also to the members of this House. ನಮಗೆ ಇಂಥಾ ಸಂದರ್ಭಗಳಲ್ಲಿ ಕಡೆಗೆ ಬರತಕ್ಕ ಬಾಕಿಯ ಸೇಕಡ 68 ಅಥವಾ 78 ಇಲ್ಲವೇ ಕನಿಷ್ಠಪಕ್ಷ 50 ರಷ್ಟನ್ನಾದರೂ write off ಮಾಡಬೇಕೆಂದರೆ ನಮಗೆ ಆಗ ಪೂರಾ ಭಯವಾಗುತ್ತದೆ. If the Honourable Minister assures us that if at least 99 per cent is recovorable, we shall be happy. ಆದುದರಿಂದ ಹಾಗೆ ಹಣವನ್ನು ಮುಂಗಡವಾಗಿ ಕೊಡತಕ್ಕದ್ದನ್ನೇ ನಿಲ್ಲಿಸಬೇಕೆಂದಲ್ಲ. ಕೊಡಬೇಕಾದುದಕ್ಕೆ ಅಗತ್ಯವಾಗಿ ಕೊಡೋಣ. ಆದರೆ ಹಾಗೆ ಕೊಡಲಾದ ಸಾಲಗಳನ್ನೆಲ್ಲಾ ಸುಭದ್ರವಾದ ರೀತಿಯಲ್ಲಿರುವಂತೆ ನೋಡಿಕೊಂಡು ಅವುಗಳನ್ನು ಮಾಡಬೇಕು. ಹಾಗೆ ಕೊಡತಕ್ಕ ಸಾಲ ಖಚಿತವಾಗಿ ಹಿಂದಿರುಗುತ್ತದೆಯೇ, ಇಲ್ಲವೇ ಎಂಬುದನ್ನೂ ಸಹ ಮುಖ್ಯವಾಗಿ ಗಮನಿಸಬೇಕಾದ ಅಂಶ. ಹಾಗೆ ಕೊಟ್ಟ ಸಾಲಗಳನ್ನು ವಸೂಲುಮಾಡದೆ ವರ್ಷಾನುಗಟ್ಟಲೆ ಹೀಗೆ ಬಿಡತಕ್ಕದ್ದು ಸರಿಯಾದ್ದಲ್ಲ. ವ್ಯಾಪಾರ ದೃಷ್ಟಿಯಿಂದ ಕೆಲಸ ಮಾಡತಕ್ಕ ಈ ಸೊಸೈಟಿಗಳಿಗೆಲ್ಲಾ ಎಂದರೆ—ವ್ಯವಸಾಯದ ಮುಟ್ಟುಗಳು, ಗೊಬ್ಬರ, ಬೀಜ ಇತ್ಯಾದಿಗಳ ವ್ಯಾಪಾರ ನಡೆಸುವುವುಗಳೆಲ್ಲಾ business concernಗಳಾದವು. ಇಂಥವುಗಳಿಗೆಲ್ಲಾ ತಾವೇಕೆ ಸಾಲ ಕೊಡಬೇಕು ? ಇಂಥಾ ಟೀಕೆ ಟಿಪ್ಪಣಿಗಳಿಗೆ ಏಕೆ ಮಾರ್ಗ ಮಾಡಿಕೊಳ್ಳುತ್ತೀರಿ ! ಇಂಥಾ ವ್ಯಾಪಾರ ಸಂಸ್ಥೆಗಳಿಗೆಲ್ಲಾ ತಾವು ಅವರಿಗೆ 10 ಲಕ್ಷವಲ್ಲ, 50 ಲಕ್ಷ ಬೇಕಾಗಿರಲಿ, ಅಷ್ಟನ್ನೂ ಸಹ ಕೊಡುವಂತೆ ಯಾವುದಾದರೂ ಬ್ಯಾಂಕುಗಳಿಗೆ advise ಮಾಡಿ. ಈ ಮಲ್ಟಿಪರ್ಪಸಸ್ ಸೊಸೈಟಿ ಇತ್ಯಾದಿಗಳೆಲ್ಲಾ ಏನೊಂದು ಜನೋಪಯುಕ್ತವಾದ ಕೆಲಸಗಳನ್ನು ಮಾಡುತ್ತಿವೆಯೆಂದು ತಾವು ಏನು ಭಾವಿಸಿ

ದ್ದೀರೋ ಅವುಗಳೆಲ್ಲವೂ ಒಂದಲ್ಲ ಒಂದು ರೀತಿಯಲ್ಲಿ Commercial Concerns ಅಥವಾ ಬ್ಯಾಂಕುಗಳಿದ್ದಂತೆಯೇ ಸರಿ. ಇಂಥವುಗಳನ್ನೆಲ್ಲಾ ಅಂಥ ಯಾವ ಕಮರ್ಷಿಯಲ್ ಬ್ಯಾಂಕುಗಳಿವೆಯೋ ಅವುಗಳಿಂದಲೇ ಕೆಲಸ ನಡೆಸುವಂತೆ ಮಾಡಿದರೆ ಈಗ ಅನಾಯಾಸವಾಗಿ ಶಿಬ್ಬಂದಿಗಾಗಿ ಖರ್ಚಾಗುತ್ತಿರುವ ಹಣವೂ ಉಳಿತಾಯವಾಗಿ, ಜನರಿಂದ ವಸೂಲಾದ ಹಣವನ್ನು ಈ ಸಂಸ್ಥೆಗಳಿಗೆ ಸಾಲವಾಗಿ ಕೊಟ್ಟು, ಪುನಃ ಅದನ್ನು ವಸೂಲಿಮಾಡತಕ್ಕ ಬಗ್ಗೆ ತಾಲ್ಲೂಕು ಅಮಲ್ದಾರರುಗಳನ್ನೂ ಮತ್ತು ಶೇಕದಾರರುಗಳನ್ನೂ ನೇಮಿಸುವಂಥ ತೊಂದರೆ ಸಹ ತಪ್ಪಿಸಿಕೊಂಡಂತಾಗುತ್ತದೆ. ಕಮರ್ಷಿಯಲ್ ಬ್ಯಾಂಕುಗಳೆಂದರೆ 'ಸೆಟ್ಟಿ' ಇದ್ದ ಹಾಗೆ. ಅಂತೂ ಒಟ್ಟಿನಲ್ಲಿ ಹೇಳಬೇಕಾದ್ದಿಷ್ಟೆ— ತಾವು ಈ ರೀತಿಯ ಬ್ಯಾಂಕಿಂಗ್ ವ್ಯವಹಾರವನ್ನು ಖಂಡಿತ ಕಮ್ಮಿ ಮಾಡಬೇಕು. 10 ಕೋಟಿ ರೂಪಾಯಿಗಳ ವರಮಾನವಿರತಕ್ಕ ಕಡೆ ಅರ್ಧಕ್ಕೆ ಜಾಸ್ತಿಯಾಗಿ ಸುಮಾರು $6\frac{3}{4}$ ಕೋಟಿಗಳಷ್ಟು ಮೊಬಲಗು ಈ ಶಿಬ್ಬಂದಿಯ ವೆಚ್ಚಕ್ಕಾಗಿಯೇ ಖರ್ಚಾಗುತ್ತಿರುವಾಗ, ಇದು ಇಷ್ಟಕ್ಕೇ ನಿಲ್ಲದೆ ದಿನದಿನಕ್ಕೂ ಇನ್ನೂ ಹೆಚ್ಚಾಗುವಂಥ ಪರಿಸ್ಥಿತಿ ಬರುತ್ತಿದೆ. ಇಷ್ಟಾದಾಗ್ಯೂ ಕೂಡ ಉಳಿದ 5 ಕೋಟಿ ರೂಪಾಯಿಗಳ ಆಡಳಿತವನ್ನಾದರೂ ಒಂದು ಸುವ್ಯವಸ್ಥಿತಿಯಲ್ಲಿ ಇಡಲಿಲ್ಲವೆಂದು ಹೇಳುವಾಗ ನಿಮ್ಮಲ್ಲಿ ಏನೋ ಮೋಸವಿದೆಯೆಂಬುದಾಗಿ ಕಂಡುಬರುತ್ತಿದೆ. ಈ ಕಾರಣದಿಂದಲೇ ನೀವು ಈ ವ್ಯಾಪಾರೋದ್ಯಮಗಳನ್ನು ಮತ್ತು ಅವುಗಳಿಗೆ ಬಂಡವಾಳ ಹಾಕತಕ್ಕದ್ದನ್ನೂ ದಿನೇ ದಿನೇ ದೂರಮಾಡುತ್ತ ಬರಬೇಕೆಂದು ಹೇಳುತ್ತಿದ್ದೇನೆ. ನೀವು ಎಲ್ಲಿನವರೆಗೆ ಈ ವ್ಯಾಪಾರೋದ್ಯಮಗಳನ್ನು ಸರ್ಕಾರದ ಹಿಡಿತದಲ್ಲಿಟ್ಟುಕೊಂಡಿರಬೇಕೆಂದು ಆಶಿಸುತ್ತೀರೋ ಅಲ್ಲಿನತನಕ ತಾವು ಅವುಗಳನ್ನು ಸ್ವಚ್ಛತೆಯಿಂದ ಇಟ್ಟುಕೊಂಡಿರಲು ಖಂಡಿತ ಸಾಧ್ಯವಾಗಲಾರದು. ಆದರೆ ಈಗ ಆ ವಿಚಾರಗಳನ್ನೆಲ್ಲಾ ಚರ್ಚೆಮಾಡಲು ಅವಕಾಶವೂ ಇಲ್ಲ ಮತ್ತು ಸಾಧ್ಯವೂ ಆಗಲಾರದು. ಅಂತೂ ಅವುಗಳನ್ನೆಲ್ಲಾ ತಾವು ದೂರಮಾಡಬೇಕೆಂದು ಈಗ ತಿಳಿಸಿದರೆ ಸಾಕು. ಇನ್ನು ತಾವು ಮಾಡತಕ್ಕ ಪ್ರತಿಯೊಂದು ಕೆಲಸದ ಬಗ್ಗೆ ರಚನಾತ್ಮಕ ಕೆಲಸ ಕಾರ್ಯಗಳ್ಯಾವುವೆಂಬುದರ ಕಡೆಗೆ ಮಾತ್ರ ಗಮನಕೊಟ್ಟು ತಾವು ಖರ್ಚುಮಾಡುತ್ತಿರುವ ಪ್ರತಿಯೊಂದು ಕಾಸೂ ಸಹ ಸದ್ವಿನಿಯೋಗದಲ್ಲೇ ಖರ್ಚಾಗುವಂತೆ ಅವಕಾಶವಿರಬೇಕು.

ಈ ಸಮಿತಿಯ ಛೇರ್ಮನ್ನರಾಗಿದ್ದ ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ: ನಾನು ಸಮಿತಿಯಲ್ಲಿ ಮಂತ್ರಿಯಾಗಿರುತ್ತೇನೆಂಬ ಭಾವನೆಯಿಂದ ಕುಳಿತಿಲ್ಲ. ನಾನೂ ಒಬ್ಬ ಸದಸ್ಯನೋಪಾದಿಯಲ್ಲಿ ಕುಳಿತುಕೊಂಡಿದ್ದೆ" ಎಂದು. ಹಾಗೆ ಅವರು ಹೇಳಿರತಕ್ಕ ಮಾತು, ಅವರು ಮಾಡಿರತಕ್ಕ ಕೆಲಸದಿಂದಲೇ ಗೊತ್ತಾಗುತ್ತದೆ. ಅನೇಕ ಖರ್ಚು ವೆಚ್ಚಗಳ ಬಗ್ಗೆ ತಮ್ಮ ಖಚಿತವಾದ ಮತ್ತು ನಿರ್ದಿಷ್ಟವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿ ಖಂಡಿಸಿ ಮಾತನಾಡಿದ್ದಾರೆ. ಈ ಅಂಶವನ್ನು ಎಲ್ಲಾ ಇತರ ಮಾನ್ಯ ಮಂತ್ರಿಗಳೂ ಸಹ ಗಮನವಿಡತಕ್ಕದ್ದಾಗಿದೆಯೆಂಬುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಅನೇಕ ವಿಚಾರಗಳಲ್ಲಿ ಇವರು ಖಂಡಿಸಿ ಮಾತನಾಡಿದ್ದಾರೆ. ಈ ರೀತಿಯ ಮನೋಭಾವವನ್ನು ಇತರ ಮಾನ್ಯ ಮಂತ್ರಿಗಳೂ ಬೆಳೆಸಿಕೊಂಡು ಬಾರದಿದ್ದರೆ ರಚನಾತ್ಮಕ ದೃಷ್ಟಿಯಿಂದ ಕೆಲಸಮಾಡಲು ಸರ್ಕಾರದವರಿಗೆ ಖಂಡಿತ ಸಾಧ್ಯವಿಲ್ಲವೆಂದು ಹೇಳಬೇಕಾಗಿದೆ.

ಈ ಸಮಿತಿಯವರು ಇಷ್ಟೊಂದು ಶ್ರಮಪಟ್ಟು, ಬಹಳ ಕಷ್ಟದಿಂದ ಇಂಥಾ ಒಂದು ರಚನಾತ್ಮಕವಾದ ವರದಿಯನ್ನು ಈ ಸಭೆಯ ಮುಂದೆ ಹೊರಗೆಡವಿದ್ದಾರೆ. ಅದಕ್ಕಾಗಿ ಮೊದಲು ನಾನು ಅವರಿಗೆ ವಂದಿಸಿ, ಇದನ್ನು ಸರ್ವರೂ ಒಪ್ಪಿಕೊಳ್ಳಬೇಕೆಂದೂ ಮತ್ತು ಇದು ಸರ್ವರ ಒಪ್ಪಿಗೆಗೂ ಯೋಗ್ಯವಾದುದಾಗಿರುತ್ತೆಂದೂ ಹೇಳುತ್ತೇನೆ.

The Hon'ble Sri K. T. BHASHYAM.—I wish to remove a misconception which might arise in the minds of the Hon'ble Members and of the public by reason of the appearance of a paragraph on page 37 of this Report. The third paragraph leads on to the fourth. The third paragraph runs like this :

"The Committee observed that since the advances were made from borrowed funds, it was necessary that Government should not be put to any loss and to this end effective action must be taken."

That is what Sri H. M. Channabasappa referred to. Advances were made and they carried no interest and whether they could be realised or not was a matter of doubt at least to some extent and therefore the Committee were rather anxious about the position and stated that " since you are dealing with borrowed funds, you ought to be very careful and see that you do not invest it in a doubtful enterprise, and use it in such manner that it will lead to a good return to the Government ." The next paragraph reads thus :—

"Incidentally the Chairman cited the Electrical Department and said that they should hav discussed this point while discussing about that department ."

This creates the impression that the Electrical Department is also dealing with borrowed funds in a manner calculated to raise a similar doubt that it may lead to loss and therefore it would have been better to have discussed it then. That I take it was not in the mind of the Hon'ble Chairman, not the Hon'ble the Finance Minister, because he was good enough to say that when he was sitting as Chairman of the Public Accounts Committee he was not sitting as Minister for Finance ; therefore I shall say that the Chairman of the Public Accounts Committee had not that idea in his mind, that the Electrical Department was dealing with borrowed funds in a doubtful manner and it was rather unfortunate that it was made at that particular juncture because that leads to that kind of

(THE HON'BLE SRI K. T. BHASHYAM).

impression. The fourth paragraph further says :—

"So far as rural electrification was concerned the money was all from the borrowed capital for which Government had to pay an interest of 3 to 3½ per cent, maintenance was at least 2 to 3 per cent and the depreciation was at least 3 per cent. So, the return should be at least 9½ to 10 per cent. Unless the scheme yielded a return of 10 percent on the capital outlay, it would be a net loss to Government. Even if it gave a gross profit of 5 per cent, it was a loss."

To that extent it was unnecessary because from the figures I will be able to show that the Electrical Department is realising a gross income of more than 12 to 14 per cent and a net income anywhere in the neighbourhood of 5 to 7½ per cent.

I could give the figures. There was no reason for anyone to dilate on it at that moment. And may I submit that at that time neither the Chief Electrical Engineer nor the Secretary to Government, Electrical Department was present? It was rather unjust that such a remark should have been made in the absence of the people who could have counteracted it. You find in the report on the previous day, that is on the 27th, the Chief Electrical Engineer was there and so was the Secretary to Government, Public Works Department. On page 15 you will find it. "Witnesses, Sri Biligiri Rao and Mr. George Chandy etc.,", whereas you will find on page 32 there was neither Sri Biligiri Rao nor Mr. George Chandy. It was rather unfortunate that this remark should have been made behind their back. Then it is said :

"The Financial Secretary brought to notice that in former days it was 15 per cent, then it was reduced to 10 per cent and at present it has been brought down further and he wished members of Committee to consider this point,"

Can the Public Accounts Committee consider this point? In rule 135 of the rules framed, you will find on page 38 of the Rules of Procedure :—

"In scrutinising the Appropriation Accounts of the Government and the report of the Audit Office thereon, it shall be the duty of the Committee on Public Accounts to satisfy itself.—

(a) that the moneys shown in the accounts as having been disbursed were legally available for applicable to the service or purpose to which they have been applied or charged;

(b) that the expenditure conforms to the authority which governs it; and

(c) that every reappropriation has been made in accordance with the provisions made in this behalf in the Appropriation Act, or under rules framed by competent authority under the provisions of the said Act;

Provided that the provision made in clause (c) above shall not apply to any accounts prior to the year 1950-51, which should however be examined with reference to rules then in force.

(2) It shall also be a duty of the committee on Public Accounts—

(a) to examine such trading, manufacturing and profit and loss accounts and balance sheets as His Highness the Maharaja may have required to be prepared and the Audit Officer's report thereon; and

(b) to consider the report of the Audit Office in cases where His Highness the Maharaja may have required him to conduct an audit of any receipts or to examine the accounts of stores and stock."

These are all the functions of the Public Accounts Committee and it is not open to the Public Accounts Committee to sit in judgment over the Government Order and say that they consider that the minimum of 2 per cent adopted by the Government in expanding the rural electrification of the villages is not sound. They cannot do it. During 1949-50, the gross receipts amounted to 107 lakhs and net proceeds, 51 lakhs. Today the total capital invested on the Electrical Department is 17·82 crores, of which 1·3 crores is locked up in the Krishnasagara Dam. It leads to 16·52 effective capital and out of that, 6.91 has been spent on Jog Works which are still under completion. They have not yet begun to yield full return. The second stage is still under construction. So the effective capital on the Electrical Department from which we could claim a decent return comes to 10 crores today. Now in the year 1949-50 it must be much less. We will take it somewhere about 8 or 9 crores. Even so you will find that the gross receipts at 107 lakhs come to something like 12 to 13 per cent on the capital and the net proceeds of 51 lakhs comes to about 6 per cent and odd. During 1950-51, 157 lakhs is the gross receipts and 74 or 75 lakhs is the net receipts. If we take it at 9 crores, it leads to the same 13 per cent gross and 8 per cent and odd net. During 1951-52 we expect 168 lakhs gross and 80 lakhs net receipts with 10 crores effective capital. That leads to 16·8 per cent gross return and about 8 per

ನಾನು ಹೇಳುವುದೇನೆಂದರೆ, ಮೈಸೂರು ಡಿಸ್ಟ್ರಿಕ್ಟಿನಲ್ಲಿ ಈ ಖರ್ಚು ಬಹಳ ಅವಶ್ಯಕವಾಗಿತ್ತು. ಕೃಷ್ಣರಾಜನಗರ ತಾಲ್ಲೂಕಿನಿಂದ ಇದೇ ಅಭಿವೃದ್ಧಿ ಕಾರ್ಯಗಳ ಸಂಬಂಧದಲ್ಲಿ ಕಳೆದ 49ನೆಯ ಇಸವಿಯಲ್ಲಿ ಒಂದು ದೊಡ್ಡ ಫಿರ್ಯಾದೇ ಬಂತು. "ಆಹಾರ ಹೆಚ್ಚಿಗೆ ಬೆಳೆಯಿರಿ, ಬೆಳೆಯಿರಿ ಎಂದು ಸರ್ಕಾರದವರು ಹೇಳುತ್ತಿರುತ್ತಾರೆ; ಬೇಕಾದಷ್ಟು ಗೊಬ್ಬರ, ಬೀಜ, ಇತರೇ ಸಾಮಾನುಗಳನ್ನು ಕೊಡುತ್ತೇವೆನ್ನುತ್ತಾರೆ; ಆದರೆ, ಏನುಕೊಟ್ಟರೇನು ನೀರಿಲ್ಲದೆ ಇದ್ದರೆ" ಎಂದು ಹೇಳಿ ಕೆಲವು ನಾಲೆಗಳನ್ನು ಖುದ್ದಾಗಿ ತೋರಿಸಿ ಅಲ್ಲಿ ನಾಲಾ ದುರಸ್ತಾಗದೆ ಹೋಗಿ, ನೀರು ಮುಂದೆ ಹೋಗದೆ ಸುಮಾರು 2,000 ಎಕರೆಗಳು ಖಾಲಿ ಬಿದ್ದಿರುವುದನ್ನು ತೋರಿಸಿದರು. ಅದನ್ನು ಸರಿಪಡಿಸಿಕೊಟ್ಟರೆ 10,000 ಪಲ್ಲಗಳಷ್ಟು ಬೆಳೆಯಬಹುದೆಂದು ತಿಳಿಸಿದರು. ಮಾನ್ಯ ಮಂತ್ರಿಗಳನ್ನು ಅಲ್ಲಿಗೆ ಕರೆದು ಕೊಂಡು ಹೋಗಿ ತೋರಿಸಿದರು. ಅದೇ ಪ್ರಕಾರ ಕೃಷ್ಣರಾಜನಗರದ ನಾಲಾಗಳಿಗೆಲ್ಲಾ ಸತ್ತೆ ಕಾಮಗಾರಿ ಮಾಡಿಸುವ ಏರ್ಪಾಡು ಮಾಡಿ ಈ 2,000 ಎಕರೆಗಳಿಗೂ ಯಥೇಷ್ಟವಾಗಿ ನಿರಾತಂಕವಾಗಿ ನೀರು ಹೋಗುವಂತೆಮಾಡಿಕೊಟ್ಟರು. ಅದೇರೀತಿ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಎಣ್ಣೆ ಹೊಳೆಯೆಂದು ಒಂದು ಸಣ್ಣ ಹೊಳೆ ಹರಿಯುತ್ತಿತ್ತು. ಬಹಳ ದಿವಸಗಳಿಂದ ಅದರಿಂದೇನು ಅನುಕೂಲವಾಗುತ್ತದೆಂದು ಗೊತ್ತಿರಲಿಲ್ಲ. ಅದನ್ನೂ ಸಹ ಪರೀಕ್ಷೆಮಾಡಿಸಿ ಒಂದು ಸಣ್ಣ ಅಣೆಕಟ್ಟು ಹಾಕಿಸಿಕೊಟ್ಟಿದ್ದಕ್ಕೆ 125 ಎಕರೆಗಳು ತರಿ ಆಬಾದಿಗೆ ಬಂದವು. ಹಾಗೆಯೇ ಚಾಮರಾಜನಗರದ ಸುವರ್ಣಾವತಿ ನದಿಯ ಕೆಳಗೆ 14 ಸಣ್ಣಸಣ್ಣ ಛಾನಲ್‌ಗಳ ದುರಸ್ತಿಯಾಗಿವೆ. ಇವೆಲ್ಲಕ್ಕಿಂತ ಹೆಚ್ಚಿನದು ಮಳಂದೂರಿನದು. ಅಲ್ಲಿ ನೀರು ಯಥೇಷ್ಟವಾಗಿದೆ. ಆದರೆ ಕಾಲುವೆಗಳು ಹೂತು ಹೋಗಿ ಕಡೆ ಜಮೀನುಗಳಿಗೊಂದಕ್ಕೂ ನೀರೇ ಹತ್ತುತ್ತಿರಲಿಲ್ಲ. ಹಿಂದೆ ಪೂರ್ಣಯ್ಯನವರಿದ್ದಾಗ ಅವರು ಖುದ್ದು ನಿಗಾ ಕೊಟ್ಟು ಕಾಮಗಾರಿ ಮಾಡಿಸುತ್ತಿದ್ದರು. ಅಂಥಾದ್ದನ್ನು ಈಗ ನೋಡುವವರೇ ಇರಲಿಲ್ಲ. ಅದನ್ನು ಈಗ ಮುತುವರ್ಜಿಯಿಂದ ಕಾಮಗಾರಿ ಮಾಡಿಸಿದ್ದರಿಂದ ಒಂದು ಭಾರಿ ಮಳೆ ಬಂದು ಕೂಡಲೆ ಒಂದೇಸಲ ಕೆರೆಗಳು ತುಂಬಿದಾಗ ಅಲ್ಲಿನ ಜನರ ಸಂತೋಷ ಅಷ್ಟಿಷ್ಟಲ್ಲ.................

ಶ್ರೀ ಎಲ್. ಸಿದ್ದಪ್ಪನವರು.—ಅಧ್ಯಕ್ಷರೇ, ಒಂದು ವಿಷಯ. ಉಪಹಾರದ ನಂತರ ನಾವುಗಳಾರೂ ಇಲ್ಲಿ ಇರುವುದಕ್ಕಾಗುವುದಿಲ್ಲ. ದಯವಿಟ್ಟು ಈಗ ನಮ್ಮ ಮುಂದಿರುವ ಖೋತಾ ಸೂಚನೆಗಳನ್ನು ನಾಳೆ ತೆಗೆದು ಕೊಳ್ಳುವುದಕ್ಕೆ ಅವಕಾಶ ಮಾಡಬೇಕೆಂದು ಪ್ರಾರ್ಥನೆ.

The Hon'ble Sri K. CHENGALARAYA REDDY (Leader of the House.)—We have no objection to take them up tomorrow.

Mr. SPEAKER.—So, shall we adjourn after this cut motion is disposed of, till tomorrow? Tomorrow shall we take up Legislative Business or cut motions?

The Hon'ble Sri K. CHENGALARAYA REDDY.—Tomorrow legislative

(THE HON'BLE SRI K. CHENGALARAYA REDDY).

business may be taken up if we are adjourning to-day and the financial business can be taken up on another day which we will have to fix up.

Janab SYED ABDUR RAHMAN (Chikmagalur *cum* Shimoga—Muslim).—As it is, only one cut motion has been discussed.

The Hon'ble Sri K. CHENGALARAYA REDDY.—If the Hon'ble Speaker decides that the financial business that is left over to-day may be taken up tomorrow, we have no objection either.

Mr. SPEAKER.—I have no objection to take it up tomorrow.

ಶ್ರೀ ಎಸ್. ರಂಗರಾಮಯ್ಯನವರು.—ಹೀಗೆ ಯಳಂದೂರು ತಾಲ್ಲೂಕಿನಲ್ಲಿ ಒಂದೇ ಕಾಲದಲ್ಲಿ 70–80 ಸಾವಿರ ರೂಪಾಯಿಗಳ ಮೇಲೆ ಖರ್ಚುಮಾಡಿ ಇಷ್ಟು ಮಾಡಿಸಿಕೊಟ್ಟದ್ದರಿಂದ ಇಂದು ಆ ಜನರಿಗೆ ಬಹಳ ಉಪಯೋಗವಾಗಿದೆ. ಹಾಗಿಲ್ಲದೆ ಇಂದು ಸ್ವಲ್ಪ ಒಂದು ಕಡೆಯಲ್ಲಿ ಇನ್ನೊಂದು ಸಲ ಇನ್ನೊಂದು ಕಡೆಯಲ್ಲಿ ಸ್ವಲ್ಪ ಎಂದು ಕಾಮಗಾರಿ ಮಾಡಿದ್ದರೆ ಏನೂ ಪ್ರಯೋಜನ ಆಗುತ್ತಿರಲಿಲ್ಲ. ಈ ರೀತಿಯಾಗಿ 1,84,000 ರೂಪಾಯಿಗಳನ್ನು ಖರ್ಚುಮಾಡಿ ಅಲ್ಲಿನ ತೊಂದರೆಗಳನ್ನೆಲ್ಲಾ ತಪ್ಪಿಸಿದ್ದಾರೆ. ಇಷ್ಟೆಲ್ಲಾ ಮಾಡಿದ್ದು ಅವರಿಗೆ ಮಾಡಿದ ಒಂದು ಸ್ಪೆಷಲ್ favour ಅಲ್ಲ. ಅದನ್ನೆಲ್ಲಾ ಮಾಡದೆ ಹೋದರೆ ಆಹಾರವನ್ನು ಹೆಚ್ಚಿಗೆ ಬೆಳೆಸುವುದಕ್ಕೆ ಬಹಳ ಕಷ್ಟವಾಗುತ್ತಿತ್ತು. ನೀರಾವರಿ ಕಾಮಗಾರಿಗಳ ದುರಸ್ತಿ ಮಾಡಬೇಕಾದ ವಿಷಯದಲ್ಲಿ ಮೈಸೂರು ಡಿಸ್ಟ್ರಿಕ್ಟಿನ ಆವಶ್ಯಕತೆ ಬಹಳವಾಗಿತ್ತೆಂಬುದರಲ್ಲಿ ಅನುಮಾನವಿಲ್ಲ. ಈ ನಿರ್ಣಯದ ಸೂಚಕರೂ ಇದೇ ರೀತಿ ಬಾಕಿ ಕಡೆಯಲ್ಲೂ ನಿಗಾ ಕೊಡಿ ಎಂದು ಹೇಳಿರುವುದೂ ಸಾಧುವಾಗಿದೆ. ಅಲ್ಲದೆ ಸರ್ಕಾರದವರ ಅಭಿಪ್ರಾಯವೇನು, ಅವರೇನಾದರೂ ಒಂದು ಯೋಜನೆಯನ್ನಿಟ್ಟುಕೊಂಡಿದ್ದಾರೆಯೇ ಎಂಬದನ್ನು ತಿಳಿದುಕೊಳ್ಳುವುದು ವಾಡಿಕೆಯಾಗಿದೆ. ಸರ್ಕಾರದವರ ಅಭಿಪ್ರಾಯದಲ್ಲೂ ಬೇರೆ ಕಡೆಗೆ ನಿಗಾ ಕೊಡಕೂಡದೆಂಬುದೇನೂ ಇಲ್ಲ. ಆದ್ದರಿಂದ ಇಷ್ಟು ಹೇಳಿ ನಾನು ಈ ಖೋತಾ ಸೂಚನೆಯನ್ನು ವಿರೋಧಿಸುತ್ತೇನೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು (ಮೈಸೂರು ಜಿಲ್ಲೆ).—ಅಧ್ಯಕ್ಷರೇ, ಶ್ರೀ ಮಾದಯ್ಯಗೌಡರು ತಂದಿರತಕ್ಕ ಈ ಖೋತಾ ನಿರ್ಣಯದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಭಾರತ ಸರ್ಕಾರದಿಂದ ಬರಬಹುದಾದ ಸಹಾಯವನ್ನು ಸಂಪೂರ್ಣವಾಗಿ ಉಪಯೋಗಿಸಬೇಕಾದ್ದು ಅವಶ್ಯಕ. ಆಹಾರದ ಉತ್ಪನ್ನವನ್ನು ಹೆಚ್ಚುಮಾಡುವುದಕ್ಕಾಗಿ ದೇಶಾದ್ಯಂತವೂ ಎಲ್ಲೆಲ್ಲಿ ಅವಶ್ಯಕವೋ ಅಲ್ಲೆಲ್ಲಾ ಹೆಚ್ಚಿನ ಪ್ರಮಾಣದಲ್ಲಿ ಸೂಕ್ತ ಕೆಲಸ ಕಾರ್ಯಗಳನ್ನು ಕೈಕೊಳ್ಳಬೇಕು. ಈ ನಿರ್ಣಯದ ಉದ್ದೇಶ ಒಳ್ಳೆಯದೇ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ಸರ್ಕಾರದವರು ಆಹಾರದ ಉತ್ಪಾದನೆಯನ್ನು ಹೆಚ್ಚು ಮಾಡಬೇಕೆಂಬ ತಮ್ಮ ಉದ್ದೇಶದಲ್ಲಿ ಸಫಲ ಹೊಂದಬೇಕಾದರೆ ಮಲೆನಾಡಿನ ಪ್ರಾಂತ್ಯದಲ್ಲಿ ಹೆಚ್ಚು ಹೆಚ್ಚಿನ ನೀರಾವರಿ ಕಾಮಗಾರಿಗಳನ್ನು ಕೈಕೊಳ್ಳಬೇಕೆಂಬುದು ಎಲ್ಲರೂ ಒಪ್ಪತಕ್ಕ ವಿಚಾರ. ಪಿರಿಯಾಪಟ್ಟಣ, ಹುಣಸೂರು ಹೆಗ್ಗಡದೇವನಕೋಟೆ ಈ ಮೂರು ತಾಲ್ಲೂಕುಗಳಲ್ಲಿ ಎಷ್ಟು ಹಣ ಖರ್ಚು ಮಾಡಿದರೂ ಅಷ್ಟು ಪ್ರಯೋಜನವಿದೆಯೆಂದು ನಾನು ಒತ್ತಾಯಪೂರ್ವಕವಾಗಿ ಮಾನ್ಯ ಸಚಿವರಲ್ಲಿ ನಿವೇದನ ಮಾಡುತ್ತೇನೆ. ಈಗಾಗಲೇ ಈ ಸಂಬಂಧದಲ್ಲಿ ಎಷ್ಟೋ ಕೆಲಸ ಆಗಿದೆ. ಇನ್ನೂ ಆಗತಕ್ಕದ್ದಿದೆ. ಯಳಂದೂರ್ ತಾಲ್ಲೂಕಿನ ವಿಷಯದಲ್ಲಿ ನಿಮಗೆ ಒತ್ತಾಯ ಪದೇ ಪದೇ ಬರುತ್ತಲೇ ಇದೆ. ಅಲ್ಲಿನ ಎಷ್ಟೋ ಕೆರೆಗಳಿಗೆ ಕಾಂಗಾರಿಯ ಸೌಲಭ್ಯ ಸಿಗಬೇಕಾಗಿದೆ. ದೇಶಾದ್ಯಂತ ಈ ಬಗೆಯ ಕೆಲಸಗಳಿಗೆ ಈ ವರ್ಷ 50 ಲಕ್ಷ ರೂಪಾಯಿಗಳನ್ನು ಒದಗಿಸಿರುವುದು ನ್ಯಾಯವಾಗಿದೆ. ಈ ವರ್ಷವೇ ಈ ಕಾರ್ಯ ಕೈಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುತ್ತೇನೆ. ಇದರಿಂದ ಸಾವಿರಾರು ಎಕರೆಗಳು ಸಾಗುವಳಿಗೆ ಬರುವ ಅವಕಾಶವಿರುವುದರಿಂದ ಮಾನ್ಯ ಸಚಿವರು ಈ ಕೆಲಸವನ್ನು ಕೈಕೊಳ್ಳುವ ಭರವಸೆ ನೀಡುವರೆಂದು ನಂಬಿದ್ದೇನೆ.

ಶ್ರೀ ಎ. ಸುಬ್ಬರಾಯಶೆಟ್ಟರು (ಕೋಲಾರ ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ನೀರಾವರಿ ಕಾಮಗಾರಿಗಳ ವಿಷಯದಲ್ಲಿ ಸರ್ಕಾರದವರು ಕೆರೆ ದುರಸ್ತಿಗಳೇ ಮುಂತಾಗಿ ಹೆಚ್ಚಿನ ಕೆಲಸಗಳನ್ನು ಸಾಮಾನ್ಯವಾಗಿ ಮಾಡುತ್ತಲಿದ್ದಾರೆ. ಆದರೆ ಕೋಲಾರ ಜಿಲ್ಲೆಯ ಪರಿಸ್ಥಿತಿಯನ್ನು ನೋಡುವುದಾದರೆ ಅಲ್ಲಿ ಮಳೆಯ ಅಭಾವ ಬಹಳವಾಗಿರುವುದರಿಂದ 6 ವರ್ಷಕ್ಕೊಮ್ಮೆಯೇನಾದರೂ ಕೆರೆಗಳು ತುಂಬಿದರೆ ತುಂಬಬಹುದು. ಅಂಥಾದ್ದರಲ್ಲಿ ಕೆರೆಗಳೂ ಸರಿಯಾಗಿ ದುರಸ್ತಾಗಿಲ್ಲದಿದ್ದರೆ ಮಳೆ ಬಂದು ಅಲ್ಪ ಸ್ವಲ್ಪ ನೀರು ಬಂದರೂ ಪೂರ್ತಿ ಸಾಗುಮಾಡುವುದಕ್ಕಾಗದೆ ಪೈರುಗಳು ಒಣಗಿ ಹೋಗುತ್ತವೆ. ಒಟ್ಟಿನಲ್ಲಿ ನೀರಾವರಿ ಕೆಲಸಗಳು ತಕ್ಕಮಟ್ಟಿಗೆ ಸಂಸ್ಥಾನಾದ್ಯಂತ ಮುಂದುವರಿಯುತ್ತಿದ್ದರೂ ಕೋಲಾರ ಡಿಸ್ಟ್ರಿಕ್ಟಿನಲ್ಲಿ ಹೆಚ್ಚಿಗೆ ಕೆರೆಗಳಿರುವುದರಿಂದ ಅಲ್ಲಿಗೆ ಹೆಚ್ಚಿನ ಗಮನ ಕೊಟ್ಟು ದುರಸ್ತಿಮಾಡಿಸುವುದು ಸರ್ಕಾರದವರ ಕರ್ತವ್ಯ. ಅದಕ್ಕಾಗಿ ಜಾಗ್ರತೆ ಹೆಚ್ಚಿಗೆ allotment ಮಾಡಬೇಕೆಂದು ಹೇಳುತ್ತೇನೆ.

ಈ ಸಂದರ್ಭದಲ್ಲಿ ಬಾಗೇಪಳ್ಳಿ ತಾಲ್ಲೂಕಿನಲ್ಲಿರುವ ಚಿತ್ರಾವತಿ ನದಿಯ ವಿಷಯ ಸ್ವಲ್ಪ ಹೇಳಬಯಸುತ್ತೇನೆ. ಅದರಿಂದ ಹಿಂದೆ ಹೆಚ್ಚಿನ ಉಪಯೋಗ ಪಡೆಯುತ್ತಿದ್ದೆವು. ಅಲ್ಲಿ ತಿರುಮಣಿ ಅಣೆಕಟ್ಟೆಂಬುದು ಇದ್ದು 5–7 ಕೆರೆಗಳಿಗೆ ಸಮೃದ್ಧಿಯಾಗಿ ನೀರು ಒದಗುತ್ತಿತ್ತು. ಅಂಥಾದ್ದೀಗ ಎಲ್ಲಾ ಒಣಗಿ ಹೋಗಿದೆ. ಇದರಿಂದ ಸುಮಾರು 700—1,000 ಎಕರೆಗಳಷ್ಟು ಪ್ರದೇಶ ಸಾಗಿಗೆ ಬರುತ್ತಿದ್ದಂಥಾದ್ದು ಈಗ ಪಾಳಾಗಿದೆ. ಹಿಂದೆ ಇದರಿಂದ ಕೆಲವು ಖುಷ್ಕಿ ಜಮೀನುಗಳನ್ನೂ ಸಾಗು ಮಾಡಬಹುದೆಂದು ಹೇಳುತ್ತಿದ್ದರು. ಆದ್ದರಿಂದ ಈ ಕೆಲಸವನ್ನು ಆದಷ್ಟು ಬೇಗ ಕೈಕೊಳ್ಳಬೇಕೆಂದು ಅನೇಕ ದಿವಸಗಳಿಂದ ನಾವು ಸರ್ಕಾರದವರನ್ನು ಪ್ರಾರ್ಥಿಸುತ್ತಿದ್ದೇವೆ. ಅದರಲ್ಲೂ ಈಗಿನ ಆಹಾರಾಭಾವದ ಕಾಲದಲ್ಲಿ ಇದಕ್ಕೆ ಮುಂಚಿನ priority ಕೊಟ್ಟು ಕೆಲಸವನ್ನು ಕೈಕೊಂಡರೆ ಸುಮಾರು 1,500 ಎಕರೆಗಳ ವಿಸ್ತೀರ್ಣದ ಜಮೀನುಗಳು ಬಂದು ನಮಗಿರುವ ಆಹಾರದ ಕೊರತೆಯನ್ನು ನಿವಾರಣೆಮಾಡುವುದಕ್ಕೆ ಸಹಾಯಕವಾಗುತ್ತದೆ. ಆದ್ದರಿಂದ ಈ ಕೆಲಸವನ್ನು ಮಾಡಿಸಿ ಕೊಟ್ಟು ನಮ್ಮ ರೈತರಿಗೆ ಅನುಕೂಲ ಮಾಡಬೇಕೆಂದು ಹೇಳಿ ಈ ಖೋತಾ ಸೂಚನೆ

ಯನ್ನು ಒತ್ತಾಯಪಡಿಸಬೇಕಾಗಿಲ್ಲವೆಂದು ಸೂಚಿಸುತ್ತೇನೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸ್ವಾಮಿ, ಮಾನ್ಯ ಸದಸ್ಯರು ಕೆಲವು ಬಹಳ ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ನೀರಾವರಿ ಕಾಮಗಾರಿಗಳಿಗೆ ಹಣ ಕೊಡುವಾಗ ಎಲ್ಲಾ ಡಿಸ್ಟ್ರಿಕ್ಟುಗಳಿಗೂ ಸಮವಾಗಿ ಕೊಡುವುದು ಕಷ್ಟವೆಂಬುದನ್ನು ಶ್ರೀ ಸಿದ್ದಪ್ಪನವರೇ ಒಪ್ಪಿಕೊಂಡಿದ್ದಾರೆ. ಶ್ರೀ ಮಾದಯ್ಯಗೌಡರು ತಂದಿರತಕ್ಕ ಖೋತಾ ನಿರ್ಣಯದ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ. ಹಣವನ್ನು ಸಾಧ್ಯವಾದಷ್ಟು ಎಲ್ಲ ಡಿಸ್ಟ್ರಿಕ್ಟುಗಳಿಗೂ ಕೊಡಬೇಕೆಂಬುದನ್ನು ಒಪ್ಪುತ್ತೇವೆ. ಆದರೆ ನೀರಾವರಿ ಕಾಮಗಾರಿಗಳಲ್ಲಿ ಒಂದು ವೈಶಿಷ್ಟ್ಯವಿದೆ. ಎಲ್ಲೆಲ್ಲಿ ಸಾಧ್ಯವೆಂದು ಪರಿಣತರು ತಿಳಿಸುತ್ತಾರೋ ಅಲ್ಲಿ ಈ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಲ್ಲದೆ ಹೆಚ್ಚು ಆಹಾರ ಬೆಳೆಯುವ ಯೋಜನೆಯಲ್ಲಿ ಬರತಕ್ಕ ಕಾಮಗಾರಿಗಳನ್ನು ನಾವೇ ಸ್ವತಂತ್ರವಾಗಿ ಮಾಡುವುದಕ್ಕೆ ಸಾಧ್ಯವಿಲ್ಲ. ನಾವು ಕೇಂದ್ರ ಸರ್ಕಾರದವರಿಗೆ ಅಂಕಿ ಅಂಶಗಳನ್ನು ಕೊಟ್ಟು ಅವರು ಅದನ್ನು ಪರಿಶೀಲಿಸಿ ಒಪ್ಪಿದಲ್ಲಿ ಕೆಲವಕ್ಕೆ ಸೇಕಡ 50ರಷ್ಟು ಹಣವನ್ನೂ ಇನ್ನೂ ಕೆಲವಕ್ಕೆ ಸೇಕಡ 25 ಭಾಗ ಹಣವನ್ನೂ ಅವರು ಕೊಡುತ್ತಾರೆ. ಆದುದರಿಂದ ಅವರು ಒಪ್ಪಬೇಕಾದರೆ ಯೋಜನೆಗಳ ವಿವರಗಳನ್ನು ಕಳುಹಿಸುವಾಗ ಯಾವ ಯಾವ ಕಾಮಗಾರಿಗಳನ್ನು ಬೇಗ ಮುಗಿಸಬಹುದು ಯಾವ ಯಾವುದರಿಂದ ಬೇಗ ಫಲ ಬರುತ್ತದೆಯೋ ಅಂತಹ ಕೆಲಸಗಳನ್ನು ಸೇರಿಸಿ ಪಟ್ಟಿಯನ್ನು ಕಳುಹಿಸಿದರೆ ಒಪ್ಪುತ್ತಾರೆ. ಅಲ್ಲದೆ ಸುಲಭ ಖರ್ಚಿನಲ್ಲಿ ತರೀ ಜಮೀನು ಮಾಡುವುದಕ್ಕೆ ಸಾಧ್ಯವಾದರೆ ಅಂತಹ ಸಂದರ್ಭದಲ್ಲೂ ಕೊಡುತ್ತಾರೆ. ಈ ಚೌಕಟ್ಟಿನೊಳಗೆ ನಾವು ಕೆಲಸಮಾಡಬೇಕು. ನಾವು ಒಂದು ಪ್ರೋಗ್ರಾಂ ತಯಾರುಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ, ಅದು ಅವರ ಒಪ್ಪಿಗೆ ಪಡೆದರೆ ಅವರು ಗ್ರ್ಯಾಂಟು ಕೊಡುತ್ತೇವೆಂದು ಹೇಳಿದ್ದಾರೆ, ಆ ಕಾರ್ಯಕ್ರಮದ ವಿವರಗಳನ್ನು ಮುದ್ರಣಮಾಡಿಸಿ ಮಾನ್ಯ ಸದಸ್ಯರಿಗೆ ಹಂಚಿದ್ದೇವೆ. ಅದರಲ್ಲಿ 1949-50 ಮತ್ತು 1950-51ನೆಯ ಸಾಲುಗಳಿಗೆ ಕೇಂದ್ರ ಸರ್ಕಾರದವರು ಎಷ್ಟು ಹಣ ಕೊಟ್ಟಿದ್ದಾರೆಂಬುದನ್ನು ತಿಳಿಸಿದ್ದೇವೆ. ಆದಕಾರಣ ಈಗ 1951-52ನೆಯ ಸಾಲಿನ ನೀರಾವರಿ ಕಾಮಗಾರಿಗಳ ವಿಚಾರದಲ್ಲಿ ಮಾತ್ರ ಹೇಳುತ್ತೇನೆ. ದೊಡ್ಡ ದೊಡ್ಡ ನೀರಾವರಿ ಕಾಮಗಾರಿಗಳಿಗೆ ಸಂಬಂಧಪಟ್ಟ ಒಂದು ಕಾರ್ಯಕ್ರಮದಪಟ್ಟಿ 24 ಲಕ್ಷ ರೂಪಾಯಿ ಖರ್ಚನ್ನೊಳಗೊಂಡದ್ದನ್ನು ಕಳುಹಿಸಿದ್ದೆವು. ಇವಕ್ಕೆ ನಾವು ನಮ್ಮ ಬಡ್ಜೆಟ್ಟಿನಲ್ಲಿ 12·5 ಲಕ್ಷ ರೂಪಾಯಿ ಒದಗಿಸಿದ್ದೆವು. ಕೇಂದ್ರ ಸರ್ಕಾರದವರು ಮಿಕ್ಕದ್ದನ್ನು ಗ್ರ್ಯಾಂಟು ರೂಪದಲ್ಲಿ ಕೊಟ್ಟಿದ್ದಾರೆ.

ಮೈನರ್ ಕೆರೆಗಳನ್ನು ಜೀರ್ಣೋದ್ಧಾರ ಮಾಡುವ ಕೆಲಸ. ಇದು ಮೈಸೂರು ದೇಶದ ಎಲ್ಲ ಜಿಲ್ಲೆಗಳಲ್ಲೂ ಇದೆ. ಅದರಲ್ಲಿಯೂ ಕೋಲಾರ, ಬೆಂಗಳೂರು, ತುಮಕೂರು ಮತ್ತು ಚಿತ್ರದುರ್ಗ ಈ ಜಿಲ್ಲೆಗಳಿಗೆ ಹೆಚ್ಚು ಗಮನ ಕೊಡುತ್ತೇವೆ. Desilting of tanksಗೆ 5 ಲಕ್ಷ ರೂಪಾಯಿ ಒದಗಿಸಿದ್ದೇವೆ. Lift Irrigationಗೂ ಇಂಡಿಯಾ ಸರ್ಕಾರದವರು ಸಹಾಯ ಒದಗಿಸಲು ಒಪ್ಪಿದ್ದಾರೆ. Land Improvement Schemes ಈಗ ಚರ್ಚೆಯಲ್ಲಿಲ್ಲ. ನಾವು 12 ಲಕ್ಷ ರೂಪಾಯಿನ ಯೋಜನೆಮಾಡಿ ಕಳುಹಿಸಿದ್ದೆವು. ಅದಕ್ಕೆ ನಾವು 6 ಲಕ್ಷ ರೂಪಾಯಿ ಒದಗಿಸಿದ್ದೇವೆ. ಅವರು 6 ಲಕ್ಷ ಕೊಟ್ಟಿದ್ದಾರೆ. ಇದರಲ್ಲಿ 'ಪಿಕ್‌ಅಪ್ಸ್' ಕೆಲಸಗಳು ಕೂಡ ಇವೆ. ಈ ಪಿಕ್‌ಅಪ್ಸ್ ಮಾಡಬೇಕಾದರೆ ಸರಿಯಾದ ಜಾಗವನ್ನು ನೋಡಿ ಮಾಡಬೇಕು. ಎಲ್ಲಿ ನೀರು ಹರಿಯುತ್ತಿದೆಯೋ ಎಲ್ಲಿ ವಿಶಾಲವಾದ ಪ್ರದೇಶದ ಮೇಲೆ ಬೀಳುವ ನೀರು ಸೇರಿ ಹರಿದುಬರುವುದಕ್ಕೆ ಅವಕಾಶವಿರುತ್ತದೆಯೋ ಅಂತಹ ಸ್ಥಳಗಳನ್ನು ನೋಡಿ ಅಲ್ಲಿ ಅಣೆಗಳನ್ನು ಕಟ್ಟುವ ಕೆಲಸವನ್ನು ತೆಗೆದುಕೊಳ್ಳುತ್ತೇವೆ. ಇಂತಹ ಕೆಲಸಗಳಿಗೆ ಮೈಸೂರು ಮತ್ತು ಮಂಡ್ಯ ಡಿಸ್ಟ್ರಿಕ್ಟುಗಳಲ್ಲಿ ಹೆಚ್ಚು ಅವಕಾಶವಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ವಾಣೀವಿಲಾಸ ಸಾಗರದ ಪ್ರದೇಶದಲ್ಲಿ ಈಗಾಗಲೇ 13 ಪಿಕ್‌ಅಪ್ಸ್ ಹಾಕಿದ್ದೇವೆ, ಇನ್ನೂ ಎಂಟುಹತ್ತನ್ನು ಹಾಕಬೇಕೆಂಬ ಉದ್ದೇಶವಿದೆ. ಈ ಪ್ರಸಕ್ತ ಸಾಲಿನಲ್ಲಿ ನಮ್ಮ ಮುಂದಿರುವ ಗುರಿಯೇನೆಂದರೆ, ಕೆರೆಗಳನ್ನು ಕಟ್ಟುವುದು, ಪಿಕ್‌ಅಪ್ಸ್ ಕಟ್ಟುವುದು, ಫೀಡರ್ ಚಾನಲ್ಸ್ ಮಾಡುವುದು, ಹೊಳೆಯ ನಾಲೆಗಳನ್ನು ಸರಿಪಡಿಸುವುದು, ಅಂದರೆ ಒಡೆದುಹೋಗಿದ್ದರೆ ಅಥವ ಹೂಳು ತುಂಬಿಕೊಂಡು ಜಮೀನುಗಳಿಗೆ ತೊಂದರೆಯಾಗಿದ್ದರೆ, ಕೆರೆಯ ನಾಲೆಗಳು ಕೆಟ್ಟುಹೋಗಿದ್ದರೆ ಅವುಗಳನ್ನು ರಿಪೇರಿ ಮಾಡುವುದು, ಇಂಥವುಗಳಿಗೆ ಮೊದಲು ಗಮನಕೊಡಬೇಕು. ಏಕೆಂದರೆ ಇವುಗಳಿಂದ ಬೇಗ ಪ್ರತಿಫಲ ದೊರೆಯುತ್ತದೆ. ಶ್ರೀ ರಂಗರಾಮಯ್ಯನವರು ಚಾಮರಾಜನಗರ ಮತ್ತು ಯಳಂದೂರಿನ ವಿಷಯ ಹೇಳಿದರು. ಯಳಂದೂರು ತಾಲ್ಲೂಕಿನಲ್ಲಿ 50 ವರ್ಷದಿಂದ ಫೀಡರ್ ಚಾನಲ್‌ಗಳನ್ನು ರಿಪೇರಿ ಮಾಡಿರಲಿಲ್ಲ, ಅನೇಕ ಕೆರೆಗಳಿಗೆ ನೀರು ಬರುತ್ತಿರಲಿಲ್ಲ. ಆ ಪ್ರಾಂತದ ಜನರು ಸರ್ಕಾರದಲ್ಲಿ ಒತ್ತಾಯಮಾಡಿದ್ದಾರೆ, ಅದರ ಮೇಲೆ 1 ಲಕ್ಷ 20 ಸಾವಿರ ರೂಪಾಯಿಗಳ ಖರ್ಚಿನಲ್ಲಿ ಆರೇಳು ತಿಂಗಳೊಳಗೆ ಸುವರ್ಣಾವತಿ ಹೊಳೆಯಿಂದ ಎಲ್ಲ ಕೆರೆಗಳಿಗೂ ನೀರು ಬರುವಂತೆ ಮಾಡಿ ಆ ಕೆರೆಗಳನ್ನು ಅಭಿವೃದ್ಧಿ ಮಾಡಿದ್ದೇವೆ. ಒಂದೆರಡು ದಿನಗಳಲ್ಲೆ ಆ ಕೆರೆಗಳೆಲ್ಲ ತುಂಬುವಂತೆ ಮಾಡಿದೆವು. ಈ ವರ್ಷ ಎಲ್ಲ ಕೆರೆಗಳೂ ತುಂಬಿವೆ, ರೈತರು ಸಂತೋಷದಿಂದಿದ್ದಾರೆ, ಕೂಡಲೇ ಬತ್ತವನ್ನು ಬೆಳೆಯಬಹುದು. ಇದೇರೀತಿ ಮೈಸೂರು ಮಂಡ್ಯ ಜಿಲ್ಲೆಗಳಲ್ಲದೆ ಶಿವಮೊಗ್ಗ ಜಿಲ್ಲೆಯಲ್ಲಿಯೂ ಹೇರಳವಾಗಿ ಹಣವನ್ನು ಖರ್ಚು ಮಾಡಿದ್ದೇವೆ. ಅದಕ್ಕಾಗಿಯೇ ಶ್ರೀ ಸಿದ್ದಪ್ಪನವರು ಈ ವಿಷಯದಲ್ಲಿ ತೀವ್ರವಾಗಿ ಟೀಕೆ ಮಾಡಲಿಲ್ಲ. ಅವರು ಹಿಂದೆ ಪಬ್ಲಿಕ್ ವರ್ಕ್ಸ್ ಮಂತ್ರಿಗಳಾಗಿದ್ದವರು. ನಮಗೆ ಶಿವಮೊಗ್ಗ ಜಿಲ್ಲೆಯ ವಿಷಯದಲ್ಲಿ ಯಾವ ವಿಧವಾದ ಪಕ್ಷಪಾತವೂ ಇಲ್ಲ, ಬೇರೆ ಜಿಲ್ಲೆಗಳೆಂಬ ಪಕ್ಷಪಾತವೂ ಇಲ್ಲ. ಶಿವಮೊಗ್ಗ ಜಿಲ್ಲೆಯವರು ನಮಗೆ ಹೆಚ್ಚು ಬತ್ತವನ್ನು ಕೊಡುತ್ತಿದ್ದಾರೆ. ಸುಮಾರು ಆರೇಳು ಲಕ್ಷ ಪಲ್ಲ ಬತ್ತವನ್ನು ಕೊಡತಕ್ಕ ಮೈಸೂರು ದೇಶದ ಬತ್ತದ ಕಣಜ. ಸೊರಬ, ಶಿಕಾರಿಪುರ ಈ ಎರಡು ತಾಲ್ಲೂಕುಗಳಿಂದಲೇ ಮೂರು ಮೂರುವರೆ ಲಕ್ಷ ಬರುತ್ತದೆ. ಆದುದರಿಂದ ಅಂತಹ ಸ್ಥಳಗಳಲ್ಲಿ ನಾವು ಹಣ ಖರ್ಚುಮಾಡಿದರೆ ಬೇಗ ಪ್ರತಿಫಲ ಬರುತ್ತದೆ. ಈ ವರ್ಷ ಮಾಡಿದರೆ ಮುಂದಿನ ವರ್ಷವೇ ಫಲಬರುತ್ತದೆ. ನನಗೆ ಜ್ಞಾಪಕವಿರುವ ಹಾಗೆ ಸೀಗೆಹಳ್ಳದ ಅಣೆಯಿಂದ ಸುಮಾರು 24 ಕೆರೆಗಳಿಗೆ ನೀರು ಬಂದು ತುಂಬುತ್ತದೆ. ಒಂದು ವ್ಯಾಲಿಯನ್ನೂ ಇನ್ನೊಂದು ರಿಡ್ಜನ್ನೂ cut ಮಾಡಿದರೆ 24 ಕೆರೆಗಳಿಗೆ ನೀರುಬಂದು ತುಂಬುತ್ತದೆ. ಹೀಗೆ ಶಿವಮೊಗ್ಗ ಜಿಲ್ಲೆಯಲ್ಲಿ ಅನೇಕ ಕೆಲಸಗಳನ್ನು ಮಾಡಿದ್ದೇವೆ. ಹೋದವರ್ಷ, ಸೂಳೆ

(ಮಾನ್ಯ ಶ್ರೀ ಟಿ. ಮರಿಯಪ್ಪನವರು).

ಕೆರೆಯು ಹಿಂದೆ ಪ್ರಾಯಶಃ ನಾಯಕರ ಪಾಳೆಯಗಾರತನದ ಕಾಲದಿಂದ ರಿಪೇರಿಯಾಗಿರಲಿಲ್ಲ. ಬಚ್ಚಲಲ್ಲಿ ಮಣ್ಣುಕೂಡ ತೆಗೆದಿರಲಿಲ್ಲ. ವಿಪರೀತ ಜೊಂಡು ಬೆಳೆದಿತ್ತು. ಇದರಿಂದ 2,500 ಎಕರೆ ವ್ಯವಸಾಯವಾಗದೆ ಕೈಬಿಟ್ಟುಹೋಗಿತ್ತು. ಇದರಿಂದ ಆ ಪ್ರದೇಶ ಮಲೇರಿಯದ ತವರೂರಾಗಿತ್ತು. ಇಂತಹ ಪ್ರದೇಶವನ್ನು ಇಂಜನಿಯರುಗಳು ನೋಡಿ ಪರೀಕ್ಷೆಮಾಡಿ ಇದನ್ನು breach ಮಾಡಿದರೆ ರಿಪೇರಿ ಮಾಡುವುದಕ್ಕೆ ಸಾಧ್ಯ ಎಂದು ಹೇಳಿದ್ದರು. ಈಚೆಗೆ ನಮ್ಮ ಚೀಫ್ ಇಂಜಿನಿಯರಾಗಿದ್ದ ಶ್ರೀ ಬಿ. ಎಸ್. ನರಸಿಂಗರಾಯರು ಮತ್ತು ಶ್ರೀ ಸಂಪತ್ತೈಯ್ಯಂಗಾರ್ಯರು ಸರಿಯಾಗಿ ಪರೀಕ್ಷೆ ಮಾಡಿನೋಡಿ ಆ ಪ್ರದೇಶವನ್ನು drain ಮಾಡಿದ್ದಾರೆ. ಡೈನಮೈಟ್ ಹಾಕಿ ಎಲ್ಲವನ್ನೂ ಸರಿಮಾಡಿಸಿದ್ದಾರೆ. ಈಗ 2,500 ಎಕರೆ ಫಲವತ್ತಾದ ಜಮೀನು ವ್ಯವಸಾಯಕ್ಕೆ ಬಂದಿದೆ. ಸೂಳೆಕೆರೆಯ ಏರಿಯಮೇಲೆ ನಿಂತು ನೋಡಿದರೆ, ಹಿಂದೆ ಜೊಂಡು ಬೆಳೆದುಕೊಂಡಿದ್ದ ಆ ಪ್ರದೇಶ ಈಗ ಒಳ್ಳೆಯ ವ್ಯವಸಾಯವಾಗಿ ಸೊಗಸಾಗಿ ಕಾಣುತ್ತದೆ. ಈಗಾಗಲೇ ಅನೇಕ ರೈತರು ಅಲ್ಲಿ ಜಮೀನು ಕೊಡಬೇಕೆಂದು ಒತ್ತಾಯಮಾಡುತ್ತಿದ್ದಾರೆ. ಈ ಜಮೀನನ್ನೂ ಹೇರಳವಾದ ಬೆಳೆಗೆ ಕೊಡುವುದಕ್ಕವಕಾಶವಾಗಿದೆ. ಮೂರೂವರೆ ಲಕ್ಷದಲ್ಲಿ ಒಂದೂವರೆ ಲಕ್ಷ ರೂಪಾಯಿ ಶಿವಮೊಗ್ಗ ಜಿಲ್ಲೆಯಲ್ಲಿ ಈ ಸೂಳೆ ಕೆರೆಗೆ ಖರ್ಚಾಗಿದೆ. ಅಗರಹಳ್ಳಿ, ಭದ್ರಾ ಎಡಭಾಗದ ನಾಲೆ ಹಿಂದಿನವರ ಸರ್ಕಾರದ ಕಾಲದಲ್ಲಿ ಸರ್ವೆ ಆಗಿ ಹಾಗೆಯೇ ಬಿದ್ದಿತ್ತು. ಸುಮಾರು ಎಂಟು ತಿಂಗಳ ಕೆಳಗೆ, ಅಲ್ಲಿ ಅನೇಕ ವರ್ಷಗಳಿಂದ ಒಂದು ಅಣೆಇದ್ದು, ನಾಲೆ ಇರಲಿಲ್ಲ, ಅದನ್ನು ಮಾಡಿಸಿದ್ದೇವೆ. ರೈಟ್ ಬ್ಯಾಂಕ್ ಚಾನಲ್ ನೀರು ಹೋಗುತ್ತಿದ್ದಂತೆ ಲೆಫ್ಟ್ ಬ್ಯಾಂಕ್‌ನಲ್ಲಿಯೂ ಹೋಗುತ್ತಿದೆ. ಅದನ್ನೂ ಉಪಯೋಗ ಮಾಡಿಕೊಳ್ಳಬೇಕಾದುದು ಅವಶ್ಯಕ ಎಂದು ತಿಂಗಳ ಹಿಂದೆ ಒಂದು ನಾಲೆಯನ್ನು ತೆಗೆದು ಈ ವರ್ಷ ನೀರು ಕೂಡ ಕೊಟ್ಟಿದ್ದೇವೆ. ಆದುದರಿಂದ ಶಿವಮೊಗ್ಗ ಜಿಲ್ಲೆಗೆ ಕಡಿಮೆ ಮಾಡಿದ್ದೇವೆಂದರೆ ಒಪ್ಪುವುದಕ್ಕಾಗುವುದಿಲ್ಲ. 1951-52ಕ್ಕೆ ಕೂಡ ಹಾಗೆಯೇ ಹಣವನ್ನು ಹಂಚಿದ್ದೇವೆ. ದೊಡ್ಡ ಕೆರೆಗಳನ್ನು ಕಟ್ಟುವುದರಲ್ಲಿ, ಭಾರಿ ಕೆರೆಗಳಾದ ಸಂಗನಹಳ್ಳಿ, ಗಡಿಮಾಕುಂಟೆ, ತುಪ್ಪದಹಳ್ಳಿ ಮುಂತಾದವುಗಳಿವೆ. ಹಾಗೆಯೇ ನಲ್ಲಿಗುಡ್ಡ, ಕಣ್ವ ಇಂತಹ 15 ಕೆಲಸಗಳನ್ನು ತೆಗೆದುಕೊಂಡಿದ್ದೇವೆ. ಸುಮಾರು 6 ಲಕ್ಷ ರೂಪಾಯಿನ ಕೆಲಸ ಮುಗಿದಿದೆ. ಇನ್ನೂ ಮೂರುಲಕ್ಷ ರೂಪಾಯಿ ಒದಗಿಸಿದ್ದೇವೆ. ಶಿವಮೊಗ್ಗ ಜಿಲ್ಲೆಗೆ 6 ಲಕ್ಷ 70 ಸಾವಿರ ರೂಪಾಯಿಗಳನ್ನು ಒದಗಿಸಿದ್ದೇನೆ. ಅಲ್ಲಿಯೂ ಭಾರಿ ಕೆರೆಗಳಿವೆ. ತುಂಗಭದ್ರ ಯೋಜನೆಗೆ 1 ಲಕ್ಷ 50 ಸಾವಿರ, 75 ಸಾವಿರ ಹಾಗೆ ಕೊಟ್ಟಿದ್ದೇವೆ.

ನಲ್ಲಿಗುಡ್ಡ ಮತ್ತು ಕಣ್ವ ರಿಸರ್ವಾಯರುಗಳಿಗೆ ಒದಗಿಸಲಾಗಿದ್ದ ಮೊಬಲಗಿನಲ್ಲಿ ಎಲ್ಲಾ ಪೂರ್ತಿ ಖರ್ಚಾಗಿ ಇನ್ನು 3 ಲಕ್ಷ ಚಿಲ್ಲರೆಕೆಲಸ ಮಾತ್ರ ನಿಂತಿವೆ. ಹೀಗೆ ಲಿಫ್ಟ್ ಇರಿಗೇಷನ್, ರಿವರ್‌ವ್ಯಾಲಿ ಕೆರೆ ರಿಪೇರಿ ಇತ್ಯಾದಿಗಳಿಗೆಲ್ಲಾ ಹಣವನ್ನು ಯಥೇಷ್ಟವಾಗಿ ಒದಗಿಸುತ್ತಾ ಬಂದಿದ್ದೇವೆ. ಆದರೆ ಇನ್ನೂ ಅನೇಕ ವಿಷಯಗಳ ತಪಶೀಲನ್ನೆಲ್ಲಾ ಶೇಖರಿಸಿ ತಂದಿದ್ದೇನೆ. ಅವುಗಳು ಸದ್ಯಕ್ಕೆ ಅಪ್ರಕೃತ.

ಇನ್ನು ತುಮಕೂರು ಸರ್ಕಲ್‌ಗೆ ಈಬಗ್ಯೆ 3 ಲಕ್ಷ 35 ಸಾವಿರ ರೂಪಾಯಿಗಳನ್ನು ಒದಗಿಸಿರುತ್ತೇವೆ. ಈ ವಿಚಾರವನ್ನು ನಾನು ಮಾನ್ಯ ಸದಸ್ಯರುಗಳಾದ ಶ್ರೀ ಮಾದಯ್ಯಗೌಡರೂ ಮತ್ತು ಎಸ್. ಕರಿಯಪ್ಪನವರೂ ಎತ್ತಿದ ಆಕ್ಷೇಪಣೆಗಳ ಬಗ್ಯೆ ತಿಳಿಸಬೇಕಾಗಿ ಬಂದಿತು. ಹೀಗೆ ತುಮಕೂರು ಸರ್ಕಲ್ ಒಂದಕ್ಕೇ ಮೈನರ್ ಕೆರೆಗಳ ರೆಸ್ಟೋರೇಷನ್‌ಗಾಗಿ 6 ಲಕ್ಷ ಚಿಲ್ಲರೆ ರೂಪಾಯಿಗಳನ್ನೂ ಮತ್ತು ರಿವರ್ ಛಾನಲ್ಸ್, ಟ್ಯಾಂಕ್ ಛಾನಲ್ಸ್, ಅಣೆಕಟ್ಟುಗಳು ಮತ್ತು ಸಣ್ಣ ಸಣ್ಣ ಇತರೇ ಕಾಂಗಾರಿಗಳಿಗಾಗಿ 5 ಲಕ್ಷ 75 ಸಾವಿರ ಚಿಲ್ಲರೆ ಮೊಬಲಗನ್ನು ಒದಗಿಸಲಾಗಿದೆ.

ಇದೇರೀತಿ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಿಗೂ ಸಹ ಒಟ್ಟಾಗಿ ಒಂದು ಐಟಂಗೆ 3 ಲಕ್ಷ 55 ಸಾವಿರ ರೂಪಾಯಿಗಳನ್ನೂ ಮತ್ತೊಂದು ಐಟಂ ಕೆಲಸಕ್ಕಾಗಿ 10 ಲಕ್ಷ 92 ಸಾವಿರ ಚಿಲ್ಲರೆ ಮೊಬಲಗನ್ನೂ ಸಹ ಒದಗಿಸಲಾಗಿದೆ. ಇದರಲ್ಲಿ 50 ಸಾವಿರ ರೂಪಾಯಿಗಳ ಒಂದು ಐಟಂ ಸಹ ಸೇರಿದೆ. ಇಷ್ಟೇ ಅಲ್ಲದೆ ಇದೇರೀತಿ 3 ಲಕ್ಷ 55 ಸಾವಿರದ ಐಟಂ ಒಂದು, 1 ಲಕ್ಷ 27 ಸಾವಿರ ಚಿಲ್ಲರೆ ಐಟಂ ಒಂದು, 52 ಸಾವಿರದ ಐಟಂ ಒಂದು, 22 ಸಾವಿರದ ಐಟಂ ಒಂದು, 46 ಸಾವಿರದ ಐಟಂ ಒಂದು, ಒಂದು ಲಕ್ಷ ಚಿಲ್ಲರೆ ಮೊಬಲಗಿನ ಐಟಂ ಒಂದು, ಹೀಗೆ ಇಷ್ಟೊಂದು items of worksಗಳಿಗೆ ಇರಿಗೇಷನ್ ಬಾಬಿನಲ್ಲಿ river valleys, tank restoration ಮತ್ತು tank channels ಮತ್ತು feeder channels ಗಳಿಗೆ ಮಂಡ್ಯ ಮತ್ತು ಮದ್ದೂರು ಜಿಲ್ಲೆಗಳಲ್ಲಿ ಹಣವನ್ನು ಒದಗಿಸಿಕೊಟ್ಟಿದ್ದೇವೆ.

ತುಮಕೂರು ಸರ್ಕಲ್‌ನಲ್ಲಿ ಎಂದರೆ–ತುಮಕೂರು, ಬೆಂಗಳೂರು ಮತ್ತು ಕೋಲಾರ ಈ ಮೂರು ಜಿಲ್ಲೆಗಳೂ ಸೇರಿಕೊಂಡು ಒಂದು ಸರ್ಕಲ್ ಆಗಿದೆ. ಆದರೆ ಈ ಸರ್ಕಲ್‌ನಲ್ಲಿ river channels ಗಳು ಕಮ್ಮಿ. ಆದಕ್ಕೋಸ್ಕರವಾಗಿ ಈ ಬಾಬಿಗೆ ಕೇವಲ 13 ಸಾವಿರ ರೂಪಾಯಿಗಳನ್ನು ಮಾತ್ರ ಒದಗಿಸಲಾಗಿದೆ. ಒಂದು ಐಟಂ ಕೆಲಸಕ್ಕೆ 1 ಲಕ್ಷ 95 ಸಾವಿರ ಚಿಲ್ಲರೆ ಮೊಬಲಗನ್ನೂ, ಮತ್ತೊಂದಕ್ಕೆ 1 ಲಕ್ಷ 78 ಸಾವಿರ ಚಿಲ್ಲರೆ ನಿಧಿಯನ್ನೂ, ಇನ್ನೊಂದು ಕಾಮಗಾರಿಗೆ 2 ಲಕ್ಷಚಿಲ್ಲರೆ ಮೊಬಲಗನ್ನೂ, 10 ಸಾವಿರ ಚಿಲ್ಲರೆ ಮೊಬಲಗನ್ನು ಮತ್ತೊಂದು ಕೆಲಸಕ್ಕೂ; 1 ಲಕ್ಷ 10 ಸಾವಿರ ರೂಪಾಯಿಗಳ ಮತ್ತೊಂದು ಕಾಮಗಾರಿಯನ್ನೂ, ಈ ಮೂರು ಜಿಲ್ಲೆಗಳಲ್ಲಿ ಕೈಗೊಂಡಿದ್ದೇವೆ.

ಇದೇ ರೀತಿ ಶಿವಮೊಗ್ಗ ಜಿಲ್ಲೆಗೂ ಸಹ ಹಣವನ್ನು ಒದಗಿಸಲಾಗಿದೆ. ಒಂದು ಕಾಮಗಾರಿಗೆ 30 ಸಾವಿರ ರೂಪಾಯಿಗಳನ್ನೂ ಮತ್ತೊಂದಕ್ಕೆ 1 ಲಕ್ಷ 88 ಸಾವಿರ ರೂಪಾಯಿಗಳನ್ನೂ ಮತ್ತು ಇನ್ನೊಂದು ಪ್ರಾಜೆಕ್ಟಿಗೆ 1 ಲಕ್ಷ 79 ಸಾವಿರ ರೂಪಾಯಿಗಳನ್ನೂ ಮತ್ತು feeder channels ಗಳಿಗಾಗಿ 1 ಲಕ್ಷ 34 ಸಾವಿರ ರೂಪಾಯಿಗಳನ್ನು ಒದಗಿಸಿದ್ದೇವೆ. ಇನ್ನು ಮಿಸಲೇನಿಯಸ್ ಬಾಬಿನಲ್ಲಿ ಸಣ್ಣ ಸಣ್ಣ ಕಾಮಗಾರಿಗಳಿಗಾಗಿ 1 ಲಕ್ಷದ 80 ಸಾವಿರ ರೂಪಾಯಿಗಳನ್ನು ಒದಗಿಸಲಾಗಿದೆ.

ಹೀಗೆ ಈ ಕೆಲಸಗಳ ಅಭಿವೃದ್ಧಿಗಾಗಿ ನಾವು ಒಂದು ಯೋಜನೆಯನ್ನೇ ಸಿದ್ಧಪಡಿಸಿಕೊಂಡಿದ್ದೇವೆ. ಆ ಯೋಜನೆಗೆ ತಕ್ಕ ಹಾಗೆ ಸಂಸ್ಥಾನದ ನಾನಾ ಭಾಗಗಳಲ್ಲಿಯೂ ನಡೆಯುತ್ತಿರುವ ಕಾಂಗಾರಿಗಳು ಒಂದೇ ಮಟ್ಟದಲ್ಲಿ ಮುಂದುವರಿಯುವಂತೆ ನೋಡಿಕೊಂಡು, ಅವುಗಳ ಸರ್ವೆ ಕೆಲಸ, ಪ್ಲಾನ್ ತಯಾರಿಸತಕ್ಕದ್ದು, ಅಂದಾಜು ಮಂಜೂರಾಗತಕ್ಕದ್ದು ಇತ್ಯಾದಿಗಳನ್ನೆಲ್ಲಾ ನೋಡಿಕೊಂಡು, ಒಂದು Equitable distribution basis ಮೇಲೆ ಕೆಲಸಮಾಡುತ್ತಿ

ದ್ದೇವೆ. ಹಾಗೆ ಯಾವುದರಲ್ಲೂ ಪಕ್ಷಪಾತ ಭಾವನೆ ಮಾಡಲು ಅವಕಾಶವೇ ಇಲ್ಲ. ಆದರೆ ಎಲ್ಲೆಲ್ಲಿ river valley ಗಳಿವೆಯೋ ಅದಕ್ಕೆ ಅಲ್ಲಿಗೆ ಕೊಂಚ ಹೆಚ್ಚಿನ ಹಣವನ್ನೂ ಮತ್ತು ಎಲ್ಲೆಲ್ಲಿ tank valley ಗಳಿಗೆ ಅನುಕೂಲವಿರುತ್ತದೆಯೋ ಅಂಥಾ ಕಡೆಗಳಲ್ಲಿ ಅವುಗಳಿಗೂ ಮತ್ತು feeder channels ಗಳಿಗೆ ಎಲ್ಲೆಲ್ಲಿ ಹೆಚ್ಚಿನ ಅವಕಾಶವಿರುತ್ತೋ ಅದನ್ನು ನೋಡಿಕೊಂಡು, ಅದರ ಪ್ರಕಾರ ಅಲ್ಲಿಗೆ ಮೊಬಲಗನ್ನು ಒದಗಿಸಲಾಗಿದೆ. ಯಾವ ಒಂದು ಪ್ರದೇಶದಲ್ಲಿ river valley ಗಳ ಅನುಕೂಲತೆ ಹೆಚ್ಚಿಗೆ ಇಲ್ಲದೆ, ಒಂದೆರಡು ಇದ್ದ ಭಾಗದಲ್ಲಿ ಅಲ್ಲಿಗೆ ಒದಗಿಸುವ ಮೊಬಲಗೂ ಸಹ ಅಷ್ಟೇ ಕಡಿಮೆಯಾಗಿರುತ್ತದೆ. ಅಷ್ಟು ಶಿವಾಯಿ ಕಮ್ಮಿ ಮಾಡಲೇಬೇಕೆಂದು ಯಾರೂ ಮಾಡುವುದಿಲ್ಲ. ಈ ಅಂಶವನ್ನು ಮಾನ್ಯ ಸದಸ್ಯರು ಮುಖ್ಯವಾಗಿ ಗಮನಿಸಬೇಕು.

ಆದರೆ ಕಾನಕಾನಹಳ್ಳಿಯಲ್ಲಿ: ಬಹಳ ಹಿಂದಿನಿಂದಲೂ ಈ ನೀರಾವರಿ ವಿಚಾರದಲ್ಲಿ ಬಹಳ ಉದಾಸೀನತೆಯಿಂದ ನೋಡಲಾಗುತ್ತಿದ್ದುದನ್ನು ಗಮನಿಸಿ ಈಗ ಬಹಳಮಟ್ಟಿಗೆ ಉತ್ತಮಸ್ಥಿತಿಗೆ ತರಲಾಗಿದೆಯೆಂದರೆ ಇದೇನೂ ಒಂದು ಅತಿಶಯೋಕ್ತಿಯಾಗಲಾರದು. ಈಗ ಈ ಸ್ಥಳಕ್ಕೇ ಒಂದು ಸಬ್‌ಡಿವಿಜನ್ ವರ್ಗಮಾಡಲಾಗಿದೆ. ಇಲ್ಲಿಗೆ ಪ್ರತ್ಯೇಕವಾಗಿ ಒಬ್ಬ ಸ್ಪೆಷಲ್ ಆಫೀಸರನ್ನೂ ನೇಮಕ ಮಾಡಲಾಗಿದೆ. ಈ ತಾಲ್ಲೂಕಿಗೆ ಅಷ್ಟು ನೀರಾವರಿ ಅನುಕೂಲತೆಗಳೇ ಇಲ್ಲದೆ ಬಹಳ ಅನಾನುಕೂಲವಾಗಿ ಹೋಗಿದ್ದರೂ, ಅಲ್ಲಿ ಈಗ 2-3 ದೊಡ್ಡ ದೊಡ್ಡ ಕೆಲಸಗಳನ್ನು ಕೈಗೊಳ್ಳಲಾಗಿದೆ. ಒಂದು ಲಕ್ಷ ಚಿಲ್ಲರೆ ಮೊಬಲಗನ್ನು ಸುವರ್ಣಮುಖಿ ನದಿಗೆ ಅಣೆಕಟ್ಟು ಹಾಕಲು ಒದಗಿಸಿರುತ್ತೆ. ಇನ್ನೂ ಅನೇಕ ಸಣ್ಣ ಸಣ್ಣ ಕಾಮಗಾರಿಗಳನ್ನೂ ಇದರ ಜೊತೆಗೆ ತೆಗೆದುಕೊಳ್ಳಲಾಗಿದೆ. ಆ ಪೈಕಿ ಈಗಾಗಲೇ 3-4 ಕೆಲಸಗಳು ಸಂಪೂರ್ಣವಾಗಿ ಮುಗಿದುಹೋಗಿ, ಇನ್ನೂ 30-40 ಕಾಮಗಾರಿಗಳ ಪ್ಲಾನ್ ಮತ್ತು ಅಂದಾಜು ಮಂಜೂರಾಗಿ ಕೆಲಸ ಪ್ರಾರಂಭಿಸುವ ಮಟ್ಟಕ್ಕೆ ಬಂದಿವೆ. ಇದೆಲ್ಲಾ ಸರ್ಕಾರದವರ ಕರ್ತವ್ಯ. ಅದನ್ನು ಮಾಡೇಮಾಡಲಾಗುತ್ತದೆ. ಈ ಬಗ್ಗೆ ಯಾರೂ ಸಂಶಯಪಡಬೇಕಾದ್ದಿಲ್ಲ ಮತ್ತು ಯಾವ ತಪ್ಪು ಭಾವನೆಗಳನ್ನೂ ಯಾರೂ ಭಾವಿಸಬಾರದು. ಅಂಥಾ ಯಾವ ಪಕ್ಷಪಾತಗಳನ್ನೂ ಯಾವಾಗ್ಯೂ ಮಾಡಿರುವುದಿಲ್ಲ.

ಈ ಸಂಬಂಧದಲ್ಲೇ ಇನ್ನೂ ಕೆಲಕೆಲವು ವಿಷಯಗಳನ್ನು ತಮ್ಮೆಲ್ಲರ ಗಮನಕ್ಕೆ ತರಬೇಕೆಂದಿದ್ದೇನೆ: Construction and improvements of river channels, tank channels, and feeder channels and miscellaneous works of small magnitude connected therewith— ಈ ಸಂಬಂಧವಾಗಿ ಶ್ರೀಮಾನ್ ಚನ್ನಬಸಪ್ಪನವರು ಯಾವ ಪ್ರದೇಶದಲ್ಲಿ ಮಳೆ ಹೆಚ್ಚಾಗಿ ಬೀಳುತ್ತದೆಯೋ ಅಲ್ಲಿಗೆ ಮಾತ್ರ ಹಣವನ್ನು ಹೆಚ್ಚು ಹೆಚ್ಚಾಗಿ ಖರ್ಚುಮಾಡಿ ಎಂಬುದಾಗಿ ತಿಳಿಸಿದರು. ಅದೇ ಉದ್ದೇಶ ಸರ್ಕಾರದವರಿಗೂ ಇದೆ. ಇದನ್ನು ಅವರು ಪಕ್ಷಪಾತದ ದೃಷ್ಟಿಯಿಂದೇನೂ ಹೇಳಿಲ್ಲ. ಒಂದು ಸದುದ್ದೇಶದಿಂದಲೇ ಹೇಳಿದ್ದಾರೆ. ಹಾಗೆಯೇ ಮಲೆನಾಡಿಗೆ ಸಂಬಂಧಪಟ್ಟ ಪ್ರದೇಶಗಳಲ್ಲಿ 130 ಸಣ್ಣ ಸಣ್ಣ ಕೆರೆಗಳ ರಿಪೇರಿ ನಡೆಸಬೇಕೆಂದು ಕೈಗೊಳ್ಳಲಾಗಿದ್ದ ಕಾಮಗಾರಿಗಳ ಪೈಕಿ, ಎಲ್ಲವುಗಳ ಕೆಲಸವೂ ಪೂರೈಸಿ ಇನ್ನೂ 13 ಕೆಲಸಗಳು ಬಾಕಿ ಉಳಿದಿವೆ. ಈ 13 ಕಾಮಗಾರಿಗಳ ಕೆಲಸ ಸಹ almost complete ಆಗತಕ್ಕ state ಗೆ ಬಂದಿದೆ. ಇನ್ನು ಕೇವಲ 2,500 ಅಥವಾ 3,000 ರೂಪಾಯಿಗಳ ಕೆಲಸ ಉಳಿದಿದ್ದರೆ ಹೆಚ್ಚಾಯಿತು. ಹೀಗೆ ಕಳೆದ ನಾಲ್ಕು ವರ್ಷಗಳಲ್ಲಿ ಬೇಕಾದಷ್ಟು ಕಾಮಗಾರಿಗಳನ್ನು ಕೈಗೊಂಡು ಮುಗಿಸಲಾಗಿದೆ. ನವಿಲೂರು ಒಂದು ವಿನಾ ಬಾಕಿ ಕೆಲಸಗಳೆಲ್ಲಾ ಪೂರೈಸಿವೆ. ಹೀಗೆ ಈ ಗ್ರೋ ಮೋರ್ ಫುಡ್ ಯೋಜನೆಯಲ್ಲಿ ಎಲ್ಲೆಲ್ಲಿ ಹೆಚ್ಚಿನ ಕೆಲಸಗಳು ನಡೆಯಬೇಕೆಂದಿತ್ತೋ ಅಲ್ಲಿ ಆ ಕೆಲಸಗಳೆಲ್ಲಾ ಈಗಾಗಲೇ ಪೂರ್ಣವಾಗಿ ಪೂರೈಸಿ, ಈ ಯೋಜನೆ ಕಾರ್ಯರೂಪಕ್ಕೆ ಬಂದು ನಮಗೆ ಸಾಕಷ್ಟು ಆಹಾರಧಾನ್ಯಗಳ ಉತ್ಪತ್ತಿ ಜಾಸ್ತಿಯಾಗಿದೆ. ಆದಕಾರಣ ಈ ಹತೋಟಿ ಆಜ್ಞೆಗಳನ್ನೆಲ್ಲಾ ತಪ್ಪಿಸಿಬಿಡಿ ಎಂದು ಮಾನ್ಯ ಚನ್ನಬಸಪ್ಪನವರು ತಿಳಿಸಿದರು. ಅವರು ತಿಳಿಸಿರುವುದೂ ಒಂದು ರೀತಿಯಲ್ಲಿ ಸರಿಯಾಗಿಯೇ ಇದೆ. ಕಾರಣ ಅವರ ಪ್ರಾಂತ್ಯದಲ್ಲಿ ಅಷ್ಟು ಚೆನ್ನಾಗಿ ಈಗ ಬೆಳೆಗಳಾಗುತ್ತಿವೆ. ಪಿರಿಯಾಪಟ್ಟಣ, ಹೆಗ್ಗಡದೇವನಕೋಟೆ ಈ ತಾಲ್ಲೂಕುಗಳಲ್ಲಿ ಅನೇಕ ಕಾಮಗಾರಿಗಳನ್ನು ನಡೆಸಲಾಗಿದೆ. ಸಾವಲ, ಉದ್ದೂರು ಇವುಗಳಿಗೆಲ್ಲಾ ಒಂದು ಪ್ರತ್ಯೇಕವಾಗಿ ಛಾನಲ್ ತಂದು, ಆ ರೀತಿ ನೀರಿನ ಸರಬರಾಯಿ ಒದಗಿಸದೇ ಹೋಗಿದ್ದರೆ ಅಲ್ಲಿ ಇಷ್ಟೊಂದು ಅನುಕೂಲವಾಗಿ ಬೆಳೆಗಳಾಗುವುದಕ್ಕೆ ಅವಕಾಶವೇ ಇರುತ್ತಿರಲಿಲ್ಲ. ಇದನ್ನೆಲ್ಲಾ ಹೊಸದಾಗಿ ಮೊದಲಿಂದ ಪ್ರಾರಂಭಿಸಿ ಮಾಡತಕ್ಕ ಕೆಲಸಗಳೋಪಾದಿಯಲ್ಲಿ ಮಾಡಲಾಗಿದೆ. ಇದಕ್ಕೆ ಹಿಂದೆ ಈ ತಾಲ್ಲೂಕುಗಳಲ್ಲಿ ನೀರಿನ ಅಭಾವ ಪೂರ್ತಿಯಾಗಿದ್ದು ಜನರಿಗೆ ಬಹಳ ತೊಂದರೆಯಾಗಿತ್ತು. ಆದ್ದರಿಂದ ಈ ತೊಂದರೆಯನ್ನು ಹೋಗಲಾಡಿಸಲು ಕಾವೇರಿ ವ್ಯಾಲಿಯಿಂದ ಲಕ್ಷ್ಮಣತೀರ್ಥದ ನೀರನ್ನು ಈ ತಾಲ್ಲೂಕಿಗೆ ತಿರುಗುವಂತೆ ಮಾಡಿ ಒಂದು ಅಂದಾಜು ಮಾಡಲಾಗಿದೆ. ಆ ಅಂದಾಜು ಈಗ ಸೂಪರಿಂಟೆಂಡಿಂಗ್ ಇಂಜನಿಯರ್ ಅವರಿಗೆ ಸ್ಕ್ರೂಟಿನಿ ಬಗ್ಗೆ ಹೋಗಿರುತ್ತೆ. ಅದು ಇನ್ನೇನು ಶೀಘ್ರದಲ್ಲೇ ಮಂಜೂರಾಗಿ ಬರುವ ನಿರೀಕ್ಷಣೆ ಇದೆ. ಕಳೆದ ಅಕ್ಟೋಬರ್ 15ನೇ ತಾರೀಖು ಅವರಿಂದ ನನಗೊಂದು ವರದಿ ಬಂದಿದೆ. ಅದರಲ್ಲಿ ಅವರು ಈ ಕೆಲಸ ಸ್ಕ್ರೂಟಿನಿಯೆಲ್ಲಾ ಪೂರೈಸುತ್ತಾ ಬಂದಿದೆ. ಈ ಕೆಲಸವನ್ನು ತಕ್ಷಣ ಕೈಗೊಳ್ಳುವುದರಲ್ಲಿ ಯಾವ ಅಭ್ಯಂತರವೂ ಇಲ್ಲ ಎಂಬುದಾಗಿಯೂ ಮತ್ತೂ ತಕ್ಷಣ ಪ್ರಾರಂಭಮಾಡಬೇಕೆಂದು ಇಟ್ಟುಕೊಂಡಿರತಕ್ಕ ಕಾಮಗಾರಿಗಳ ಪಟ್ಟಿಗೆ ಇದನ್ನು ಸೇರಿಸಿಬಿಡಿ ಎಂಬುದಾಗಿಯೂ ತಿಳಿಸಿದ್ದಾರೆ.

ನಮ್ಮ ಮೈಸೂರಿನಲ್ಲೂ ವಿಖ್ಯಾತರಾದಂಥ ಇಂಜನಿಯರುಗಳಿದ್ದರು, ಈಗಲೂ ಇದ್ದಾರೆ. ಈ river valley ಗಳನ್ನು ತಿರುಗಿಸುವಂಥ ಇಂಜನಿಯರುಗಳು ಅಮೇರಿಕಾದೇಶ ಒಂದರಲ್ಲೇ ಅಲ್ಲ ನಮ್ಮ ಮೈಸೂರಿನಲ್ಲಿಯೂ ಇದ್ದಾರೆ. ಬಹಳ ಹಿಂದೆಯೇ ಸುಮಾರು 60—70 ವರ್ಷಗಳ ಹಿಂದೆಯೇ ಹುಣಸೂರು ತಾಲ್ಲೂಕಿನಲ್ಲಿ ಲಕ್ಷ್ಮಣ ತೀರ್ಥ ಹೊಳೆಯನ್ನು ಹನಗೋಡು ಕಡೆಗೆ ತಿರುಗಿಸಲು ಸಾಧ್ಯವಿರುತ್ತೆಂದು ಹೇಳಿದ್ದಾರೆ. ಅದೇ ರೀತಿ ಕಪಿನೀ ನದಿಯನ್ನು ಸಹ ತಿರುಗಿಸಲು ಸಾಧ್ಯವಿದೆಯೆಂದು ತಿಳಿಸಿದ್ದಾರೆ. ಇದರಿಂದ ಸುಮಾರು river valley ಅಲ್ಲದೆ ಒಳಪ್ರದೇಶದಲ್ಲಿ 25 ಮೈಲಿಗಳ ತನಕ ನೀರು ಹೋಗಲು ಅವಕಾಶವಿದೆ. ಈ ಲಕ್ಷ್ಮಣ ತೀರ್ಥ ವ್ಯಾಲಿಯಲ್ಲಿ ಒಂದು ದೊಡ್ಡ ಪ್ರಾಜೆಕ್ಟನ್ನು ಕಟ್ಟಿದ್ದಾರೆ. ಅದಕ್ಕೆ 900 ಯೂನಿಟ್‌ಗಳ ಕೆಪ್ಯಾಸಿಟಿ ಇದೆ. ಆದರೆ ಯಾವ ಒಂದು ವರ್ಷದಲ್ಲೂ ಸಹ ಅದಕ್ಕೆ 100 –200 ಯೂನಿಟ್ಟುಗಳಿಂತಲೂ ನೀರು ಹೆಚ್ಚಾಗಿ ಬಂದಿರುವುದಿಲ್ಲ. ಅದಕ್ಕೆ ಕಾರಣ feeder

(ಮಾನ್ಯ ಶ್ರೀ ಟಿ. ಮರಿಯಪ್ಪನವರು).

channel ಯಾವುದೂ ಇಲ್ಲದಿರತಕ್ಕದ್ದು ಒಂದು; catchment area ಕಮ್ಮಿಯಾಗಿರುವುದು ಇನ್ನೊಂದು ಈಗ ಈ ಕೆರೆಯ ಬಗ್ಗೆ ಆದಷ್ಟು ಬೇಗ ಕಾರ್ಯವನ್ನು ಕೈಗೊಂಡು ಇದನ್ನು ಅನುಕೂಲಮಾಡಿಕೊಡಲಾಗುತ್ತದೆಂಬ ಭರವಸೆಯನ್ನೂ ಸಹ ನಾನೀಗ ತಮಗೆ ನೀಡುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಈ ವರ್ಷ ಇದಕ್ಕೆ 55 ಸಾವಿರ ರೂಪಾಯಿಗಳನ್ನು ಮಾತ್ರ ಒದಗಿಸಿದ್ದೀರಿ!

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಗ ತಾವು ಅಷ್ಟು ಹಣವನ್ನು ಅದರ ಬಗ್ಗೆ ಒದಗಿಸಿದುದಕ್ಕಾಗಿ ನಾವು ತಮಗೆಲ್ಲಾ ಬಹಳ ಕೃತಜ್ಞರಾಗಿದ್ದೇವೆ. ಈಗ ಅದರ ಬಗ್ಗೆ ಇನ್ನೂ ಹೆಚ್ಚಿನ ಹಣವನ್ನು ಕೊಡುತ್ತೇವೆಂದು ನಮಗೆ ಕಾಗದದ ಮೇಲೆ ಅವರಿಂದ ಭರವಸೆ ಬಂದಿದೆ. ಇನ್ನು ಇದರ ಬಗ್ಗೆ a little more action is to be taken. ಈಗಾಗಲೇ ನಾವು ಇದಕ್ಕೆ 10 ಲಕ್ಷದವರೆಗೂ ಖರ್ಚುಮಾಡಿದ್ದೇವೆ. ಆದರೆ ಅಷ್ಟರೊಳಗೇ ಈ ಅಧಿವೇಶನ ಬೇರೆ ಬಂದಿತು. ಅದಾಗ್ಯೂ ಕೆಲಸವನ್ನು ಮಾತ್ರ ಮುಂದುವರಿಸಲೇ ಬೇಕೆಂದು ನಾವು ತಿಳುವಳಿಕೆಯನ್ನು ಕೊಟ್ಟಿದ್ದೇವೆ. ಆದ್ದರಿಂದ ದಯವಿಟ್ಟು ಈ ಬೇಡಿಕೆಯನ್ನು ಮಾನ್ಯ ಸದಸ್ಯರ ಅಂಗೀಕಾರಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ತಿರುಮಣಿ ವಿಚಾರ ತಿಳಿಸಲಿಲ್ಲ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ತಿರುಮಣಿ ಕಾಮಗಾರಿಯನ್ನೂ 5 ವರ್ಷ ಯೋಜನೆಯಲ್ಲಿ ಸೇರಿಸಿದ್ದೇವೆ.

ಶ್ರೀ ಟಿ. ಮಾದಯ್ಯಗೌಡರು.—ಬೆಂಗಳೂರು ಜಿಲ್ಲೆಯ ರಾಮನಗರ ತಾಲ್ಲೂಕಿನ ವಿಚಾರವೇನೂ ತಿಳಿಸಲಿಲ್ಲವಲ್ಲ!

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು. ರಾಮನಗರಂ ತಾಲ್ಲೂಕಿಗೆ ಇಲ್ಲಿಯವರೆಗೆ ಖರ್ಚು ಮಾಡಿರತಕ್ಕದ್ದು ಸ್ವಲ್ಪ ಕಮ್ಮಿಯಾಗೇ ಇರುತ್ತೆ. ಆದರೆ ಇತ್ತೀಚೆಗೆ ಅಲ್ಲಿಯೂ ಸಹ 2-3 ದೊಡ್ಡ ಕೆಲಸಗಳನ್ನು ಕೈಕೊಳ್ಳಲಾಗಿದೆ. ಆ ಬಗ್ಗೆ ಅಲ್ಲಿಗೆ ಒಬ್ಬ ಗ್ರಾಜುಯೇಟ್ ಸರ್ವೇಯರನ್ನು ಸ್ಪೆಷಲ್ ಆಗಿ ನೇಮಕ ಮಾಡಲಾಗಿದೆ. ಅನೇಕ ಸಣ್ಣ ಪುಟ್ಟ ಅಣೆಗಳನ್ನೂ, ಪಿಕ್ ಅಪ್‌ಗಳನ್ನು ಮಾಡಿದ್ದೇವೆ. ಅವುಗಳ ಜೊತೆಗೆ ಈಗ 3 ದೊಡ್ಡ ಪ್ರಾಜೆಕ್ಟ್‌ಗಳನ್ನೂ ಸಹ ಕೈಗೊಳ್ಳಲಾಗಿದೆ. ಆದರೆ ಇಲ್ಲಿ ಅಂಥಾ ದೊಡ್ಡ ಕಾಮಗಾರಿಗಳನ್ನು ಕೈಗೊಳ್ಳಲು ನೀರಿನ ಅನುಕೂಲತೆಯಿಲ್ಲ. ನದಿಗಳೆಲ್ಲಾ ಬಹಳ flat ಆಗಿವೆ. ಅಚ್ಚುಕಟ್ಟು ಸಹ ಅಷ್ಟು ಜಾಸ್ತಿ ಬರುವುದಿಲ್ಲ. ವಿಖ್ಯಾತ ಇಂಜನಿಯರುಗಳೆಲ್ಲಾ ಈ ಕೆಲಸಗಳು ಅಷ್ಟು ಲಾಭದಾಯಕವಾಗಿಲ್ಲವೆಂದು ತಿಳಿಸಿರುತ್ತಾರೆ. ಈ ಕಾಮಗಾರಿಗಳನ್ನು ಮಾಡಿಸಲು ವಿಶೇಷ ಖರ್ಚು ಬಂದು ಅದರಿಂದ ಬರತಕ್ಕ ಪ್ರತಿಫಲ ತೀರಾ ಕಮ್ಮಿ ಇರುವುದರಿಂದ ಇವುಗಳನ್ನು ಕೈಗೊಳ್ಳುವುದು ಸೂಕ್ತವಲ್ಲವೆಂದು ಅವರು ತಿಳಿಸಿದ್ದಾರೆ. ಹೀಗೆ ರಾಮನಗರ ತಾಲ್ಲೂಕಿನ 2 ಅಣೆಕಟ್ಟುಗಳೂ ಮತ್ತು ಹುಣಸನಹಳ್ಳಿ ಈ ಮೂರು ಲಾಭದಾಯಕವಾದ ಕಾಮಗಾರಿಗಳಲ್ಲವೆಂದು ಅವರು ತಿಳಿಸಿರುತ್ತಾರೆ. ಎಲ್ಲಿ ಒಂದು ಎಕರೆಗೆ 600 ರೂಪಾಯಿಗಳಿಗಿಂತಲೂ ಹೆಚ್ಚಿನ ಖರ್ಚನ್ನು ಹಾಕಿ ಕೆಲಸ ನಡೆಸಬೇಕಾಗುತ್ತದೋ ಅಂಥಾ ಕಡೆಗಳಲ್ಲಿ ಆ ಕೆಲಸಗಳನ್ನೇ ಕೈಬಿಡಬೇಕೆಂದು ಕೇಂದ್ರದಿಂದ ಬೇರೆ ಈ ಬಾಬಿನಲ್ಲಿ ಒಂದು ತಿಳುವಳಿಕೆಯನ್ನು ಅವರು ಕೊಟ್ಟಿರುತ್ತಾರೆ. ಆ ಕಾರಣದಿಂದ ಈ ಕೆಲಸಗಳನ್ನು ಕೈಬಿಡಬೇಕಾಗಿ ಬಂತು.

ಇನ್ನು ಕಾನಕಾನಹಳ್ಳಿ ತಾಲ್ಲೂಕಿನ ಬಗ್ಗೆ 3 ದೊಡ್ಡ ಯೋಜನೆಗಳನ್ನು ಮಾಡಲಾಗಿದೆ. ಇದರ ಜೊತೆಗೆ ಇನ್ನೂ 8-10 ಕಾಮಗಾರಿಗಳೂ ಈಗಾಗಲೇ ಮಂಜೂರಾಗಿರುತ್ತವೆ.

ಶ್ರೀ ಟಿ. ಮಾದಯ್ಯಗೌಡರು.—ಅರ್ಕಾವತಿ ಮತ್ತು ಕಣ್ವ ಈ ನದಿಗಳಿಗೆ ಅಣೆಕಟ್ಟೆ ಹಾಕುವ ವಿಚಾರವನ್ನು ಬಹಳ ದಿವಸಗಳಿಂದಲೂ ಹೇಳುತ್ತಿದ್ದುದು ಏನಾಯಿತು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವುಗಳನ್ನು ವಿಚಾರ ಮಾಡಿ examine ಮಾಡಿಸುತ್ತೇನೆ. ಆದರೆ ಸಾಗುವಳಿಗೆ ಬಹಳ ಕಡಿಮೆ ಎಕರೇಜ್ ಬರಬಹುದು. ಪುನಃ ಅದನ್ನು ಪರಿಶೀಲನೆ ಮಾಡಿಸಿನೋಡುತ್ತೇನೆ. ಈಗ ಈ ಬೇಡಿಕೆಯನ್ನು ತಾವೆಲ್ಲರೂ ದಯವಿಟ್ಟು ಅಂಗೀಕರಿಸಬೇಕೆಂದು ಹೇಳುತ್ತೇನೆ.

Sri T. MADIAH GOWDA.—Sir, I seek the leave of the House to withdraw my cut motion.

The cut motion was, by leave, withdrawn.

Construction of Gundumgere Project.

Sri S. R. GURU (Bangalore District—General).—My cut motion reads like this :

> "That the demand under the head "18. Other Revenue Expenditure financed from Ordinary Revenues" for Rs. 17,50,000 be reduced by Re. 1 (to urge upon the Government to sanction immediately and take up for construction the Gundumgere Project in Sasalu Hobli of Dodballapur Taluk.)"

ಇದರ ವಿಷಯದಲ್ಲಿ ಒಂದು ಮಾತು ಹೇಳಬೇಕಾಗಿದೆ. ಆ ಹೋಬಳಿಯಲ್ಲಿ ಸಾಮಾನ್ಯವಾಗಿ ಮೇಜರ್ ಕೆರೆ ಯಾವುದೂ ಇಲ್ಲ. ನಾಲ್ಕೈದು ಕೆರೆಗಳಿದ್ದರೂ ಅವು ಲೆಕ್ಕಕ್ಕೆ ಮಾತ್ರ ಇವೆಯೇ ಹೊರತು ಹೆಚ್ಚು ಬತ್ತ ಬೆಳೆಯುವುದಕ್ಕೆ ಅವಕಾಶವಿಲ್ಲ. ಆದ್ದರಿಂದ ಈ ವಿಷಯವನ್ನು ಹಿಂದೆ ಮಾನ್ಯ ಸಚಿವರ ಗಮನಕ್ಕೆ ತಂದಾಗ 1951ನೆಯ ಇಸವಿಯೊಳಗೆ ಷಾರ್ಟ್ ಟರ್ಮ್ ಪ್ರಾಜೆಕ್ಟುಗಳನ್ನು ಮುಗಿಸಿ ಆಮೇಲೆ ಈ ದೊಡ್ಡ ಪ್ರಾಜೆಕ್ಟನ್ನು ತೆಗೆದುಕೊಳ್ಳುತ್ತೇವೆಂದು ಅವರು ಭರವಸೆ ಕೊಟ್ಟಿದ್ದರು. ಎರಡು ಮೂರು ಸಾರಿ ಅದಾದ ಮೇಲೆ ವಿಚಾರ ಮಾಡಿದಾಗ್ಯೂ ಅದು ನಿಧಾನವಾಗುತ್ತಿದೆ. ಆದ್ದರಿಂದ ಆ ವಿಷಯವನ್ನು ಮಾನ್ಯ ಸಚಿವರ ಗಮನಕ್ಕೆ ತಂದು ಆದಷ್ಟು ಬೇಗ ಮಾಡಿಕೊಡಬೇಕೆಂದು ಕೇಳುವುದೇ ಈ ಖೋತಾ ನಿರ್ಣಯದ ಉದ್ದೇಶವಾಗಿದೆ.

Mr. SPEAKER.—Cut motion moved :

"That the demand be reduced by Re. 1"

ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಸಚಿವರು).—ಸ್ವಾಮಿ, ಮಾನ್ಯ ಮಿತ್ರರು ಈ ವಿಷಯವನ್ನು ಗಮನಕ್ಕೆ ತಂದಿದ್ದಾರೆ. ಇದನ್ನು ಪರಿಶೀಲನ

ಬೇಕಾದ್ದು ಬಹಳ ಅಗತ್ಯವೆಂದು ತಿಳಿದುಕೊಂಡಿದ್ದೇನೆ. ಚೆಕ್ಕಿಕರ್ ಅಭಿಪ್ರಾಯ ಪ್ರಕಾರ ಇದು ಕೇವಲ ಪ್ರಾಪಿಟಿಟರಲಿ costly ಆದ ಐಟಂ ಎಂದು ಕಂಡುಬಂದಿದೆ. ಪುನಃ ಪರಿಶೀಲಿಸಿ ಅನಾವಶ್ಯಕವಾದ ಐಟಂಗಳನ್ನು ಖೋತಾ ಮಾಡಿ ಇದನ್ನು ಮಾಡುವುದಕ್ಕೆ ಸಾಧ್ಯವಾದರೆ ಮಾಡುತ್ತೇವೆ. ಆದಷ್ಟು ಬೇಗ ಪರಿಶೀಲಿಸುತ್ತೇವೆಂದು ಭರವಸೆ ಕೊಡುತ್ತೇನೆ.

Sri S. R. GURU.—I seek the leave of the House to withdraw my cut motion.

The cut motion was, by leave, withdrawn.

Construction of Major Tank near Kanikenahalli in Sasalu Hobli.

Sri S. R. GURU.—The other cut motion standing against my name reads like this:

"That the demand under the head "18. Other Revenue Expenditure financed from Ordinary Revenue" for Rs. 17,50,000 be reduced by Re. 1 (to draw the attention of the Government to the urgent necessity for constructing major tank near Kanikenahalli in Sasalu Hobli of Dodballapur Taluk.)"

ಇದೇ ಹೋಬಳಿಯಲ್ಲಿ ಸುಮಾರು ಹತ್ತು ಮೈಲಿಯಾಚೆ ಕೆರೆ ಕಟ್ಟುವುದಕ್ಕೆ ಪ್ರದೇಶವಿದೆ. ಅಲ್ಲಿ ಯಾವುದೂ ಸರಿಯಾದ ಕೆರೆಯಿಲ್ಲ. ಆ ಪ್ರದೇಶದ ರೈತರು ಈ ಕೆರೆ ಕಟ್ಟಬೇಕೆಂದು ಸುಮಾರು 1902 ನೆಯ ಇಸವಿಯಿಂದಲೂ ಸರಕಾರದ ಗಮನದಲ್ಲಿದ್ದು ಅದರ ಬಗ್ಗೆ ಒಂದು ಪ್ಲಾನ್ ಕೂಡ ತಯಾರಾಗಿತ್ತು ಎಂದು ನನಗೆ ಹೇಳಿದರು. ಆದರೂ ಇದುವರೆಗೂ ಏನೂ ಮಾಡಿರುವುದಿಲ್ಲ. ಅದನ್ನು ಸರ್ಕಾರದ ಗಮನಕ್ಕೆ ತಂದು ಸದರಿ ಕೆರೆಯನ್ನು ಮಾಡಿಸಿಕೊಡಬೇಕೆಂಬ ಉದ್ದೇಶದಿಂದ ಈ ಖೋತಾ ನಿರ್ಣಯವನ್ನು ತಂದಿರುತ್ತೇನೆ.

Mr. SPEAKER.—Cut motion moved:

"That the demand be reduced by Re. 1"

ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಸಚಿವರು).—ಮೊದಲೇ ಹೇಳಿದ ಹಾಗೆ ಕೆರೆ ವಿಚಾರದಲ್ಲಿ ಯಾವಾಗಲೂ ಸರ್ಕಾರದವರು ಅಡ್ಡಿ ಮಾಡಿಲ್ಲ. ಎಷ್ಟು ಸಾಧ್ಯವೋ ಅಷ್ಟು ಈ ವಿಚಾರದಲ್ಲಿ ಸಹಾಯ ಮಾಡಬೇಕೆಂಬುದೇ ಸರ್ಕಾರದ ಉದ್ದೇಶ. ಪೂರ್ವದಲ್ಲಿ ಕಟ್ಟಿರುವುದನ್ನೂ ಜೀರ್ಣೋದ್ಧಾರ ಮಾಡಬೇಕಾದ್ದು ಅಗತ್ಯ. ತಾವು ಕೇಳಿರುವ ವಿಷಯವನ್ನು ಆದಷ್ಟು ಜಾಗ್ರತೆ ಪರಿಶೀಲಿಸುತ್ತೇವೆ.

ಶ್ರೀ ಎಂ. ಎಸ್. ಜೋಯಿಸರು (ಮೈಸೂರು ಜಿಲ್ಲೆ).—ತಮ್ಮ ಕಾಲದಲ್ಲೇ ಜೀರ್ಣೋದ್ಧಾರದ ಕೆಲಸವಾಗಬೇಕು.

Sri S. R. GURU.—I seek the leave of the House to withdraw my cut motion.

The cut motion was, by leave, withdrawn.

Mr. SPEAKER.—Sri L. Siddappa is not here. So we will take up the other cut motions tomorrow.

The House adjourned at Twenty-five Minutes past Three of the Clock to meet again at Thirty Minutes past Eight of the Clock on Saturday the 3rd November 1951.

WD 1046—GPB—500—22-3-52

LEGISLATIVE ASSEMBLY.

TENTH DAY.

Saturday, 3rd November 1951.

The Legislative Assembly met in the Assembly Hall, Oll Public Offices, Bangalore, at Forty-five Minutes past Eight of the Clock.

MR. SPEAKER (The Hon'ble Sri V. Venkatappa) in the Chair.

QUESTIONS AND ANSWERS

MR. SPEAKER (The Hon'ble Sri V. Venkatappa).—Questions:

Promotion of Secretariat Officials as Superintendents and Gazetted Officers.

Q.—206. JANAB SYED ABDUR RAHMAN (Chikmagalur *cum* Shimoga —Muslim).—

Will the Government be pleased to state:—

(*a*) how many officials of the Mysore Government Secretariat have been promoted as Superintendents and as gazetted officers from 1st April 1950 up to date (information to be kindly given separately of persons ripe for promotion to Superintendents, and to gazetted cadres);

(*b*) whether they have been guided by seniority in making these promotions;

(*c*) the names of the Superintendents who are now working in the several Secretariat Branches;

(*d*) the dates on which they were appointed as Superintendents whether in the Secretariat or in any of the Associated Offices;

(*e*) whether due consideration will be given to seniority of these officials at the time of filling up vacancies of Assistant Secretaries to Government and other gazetted ranks?

A.—THE HON'BLE SRI K. CHENGALARAYA REDDY (Chief Minister).—

(*a*) Twelve officials have been promoted as Superintendents and six officials have been promoted as Gazetted Officers.

(*b*) Yes, in the case of Superintendents and as far as possible in other cases.

(*c*) and (*d*) Statement appended below.

(*e*) Yes, as far as possible.

Serial No.	(C) Names of Superintendents who are working in the several Secretariat Branches	Branch in which working	(D) The dates on which they were appointed as Superintendents whether in the Secretariat or in any of the associated offices
	General and Revenue Secretariat		
	Sriyuts—		
1	T. V. Narasinga Rao, B.A. ...	Revenue Branch (on leave) ...	4th April 1944
2	B. Venkataramiah ...	Election Branch ...	20th April 1944
3	C. B. Rama Rao, B.A. ...	Law Branch ...	24th May 1944
4	M. E. Jayaram Chetty ...	Public Works Secretariat ...	10th March 1944
5	S. Sivadatta, B.A. ...	Electrical Secretariat ...	27th February 1945
6	B. Channabasappa, B.A. ...	Administration Branch ...	1st July 1945
7	Janab Mohamed Hyder Sheriff, B.A.	Education Branch ...	21st April 1947
8	M. A. Srikrishna B.Sc., B.L. ...	Legislative Department ...	8th January 1948
9	Janab M. Ahmed Ali, B.A., B.L. ...	Local Boards Branch ...	8th June 1949
10	S. Venkatesiah, B.A. ...	Agriculture and Forest Branch ...	Do
11	B. Lakshmana Rao, B.A. ...	Industries Branch ...	5th August 1947
12	Janab S. Khadar Mohiddin, M.Sc. ...	Special Revenue Branch ...	8th June 1949
13	S. N. Kalabhairavan, B.A. ...	Civil Secretariat ...	12th October 1948
14	K. Seshadri Iyengar, M.A. ...	Labour Secretariat ...	3rd June 1949
15	K. Seshagiri Rao, B.A., B.L. ...	Financial Branch ...	6th June 1949
16	J. Anantappa, B.A. ...	Commerce and Development Branch	8th June 1949
17	C. Narayana Rao, B.A., LL.B. ...	Home Department (A) ...	6th November 1946

Serial No.	(C) Names of Superintendents who are working in the several Secretariat Branches	Branch in which working	(D) The dates on which they were appointed as Superintendents whether in the Secretariat or in any of the associated offices.
	Sriyuts—		
18	D. Subba Rao, B.A., B.L. ...	Home Department (B) ...	9th September 1950
19	I. Kumariah, B.A. ...	Food Suppl. Branch ...	4th December 1950
20	D. Nanjundi h ...	General Record ...	13th March 1951
21	K. V. Sarma, M.A., B.Com. ...	Financial Branch (Budget) ..	1 th April 1951
22	J. N. Radhakrishnan, B.A. ..	Accounts Branch ...	14th May 1951
23	S. Thottaji Ra ...	Medical Branch ..	13th September 1951
24	Janab S. Abdul Wajid, B.A. ...	Municipal Branch ...	22nd September 1951
	Associated Offices.		
25	T. S. Ahobal Rao, B.A. ...	Manager, S.P.C. Office ...	19th March 1946
26	R. M. Vancheswara Iyer, B.A. ...	Superintendent, Traffic Board ...	1st December 1917
27	K. N. Thamuiah, B.A. ...	Manager, Office of the Secretary, S.P.C.	5th February 1947
28	J. T. Pasupaleti, B.Sc. (Hons.) ...	Manager, Office of the Director of Anti-Corruption and Efficiency Audit.	5th March 1917

Gazetted Officers belonging to Adi-Dravida Depressed Class Community.

Q.—112. Sri M. MUNISWAMY (Kolar District—Depressed Class). —

Will the Government be pleased to state :—

(*a*) the number of Gazetted Officers of the Adi-Dravida Depressed Class community in the Mysore Government service with their names and designations;

(*b*) the reasons for not having many candidates in such gazetted posts, if the number is too meagre?

A.— The Hon'ble Sri K. CHENGALARAYA REDDY (Chief Minister).—

(*a*) So far as it has been possible to ascertain, there are five officers belonging to the Adi Dravida Depressed Class community as shown below.—

Names	Designation
(1) Sri M. Subramanyam, B.Sc. (Hons.) M.S. (U.S.A.)	Assistant Inspector of Mines (since integrated with Government of India).
(2) Sri T. Manickam, M.B.B.S., M.S., D.L.O.	Assistant Surgeon, Class I.
( ) Sri V. S. Ponna Rangam, L.Ag.	Officer-in-charge of Sri Visvesvaraya Canal Farm
(4) Sri M. Ganapathy ...	Well boring Engineer.
(5) Sri K. Vijayam, L.M.E., L.E.E. ...	Superintendent, Chamarajendra Technical Institute, Mysore and *Ex officio* Secretary, Exhibition Committee.

(*b*) This is a hypothetical question and is therefore not answered.

Sri M. MUNISWAMY.—Does the Government make any distinction between Adi-Dravidas and Adi-Karnatakas in appointing them to gazetted posts?

The Hon'ble Sri K. CHENGALARAYA REDDY.—All aspects are kept in mind by the Government before they make any appointments.

Sri M. MUNISWAMY.—If there is no such distinction, may I know why the number of officers belonging to the Adi-Dravida community is low?

The Hon'ble Sri K. CHENGALARAYA REDDY.—Such of those whom Government consider qualified are taken up. Hon'ble Members are aware that these appointments are made over a series of years. They are not appointments made only during the last three or four years.

Sri M. MUNISWAMY.—In view of the low number of high officials, will Government give proper encouragement for that community in future?

The Hon'ble Sri K. CHENGALARAYA REDDY.—Government are always very considerate towards the claims of the Scheduled Castes as the Hon'ble Member is aware and this Government are much more so.

Officers above the rank of Assistant Commissioners on leave from 1st January 1951.

Q.—159. Sri T. RAMACHAR (Kolar District—General).—

Will the Government be pleased to state:—

the names of officers above the rank of Assistant Commissioners who are either on long leave or leave granted from time to time?

The Hon'ble Sri K. CHENGALARAYA REDDY (Chief Minister).—

The names of officers (above the rank of Assistant Commissioners) who are on long leave or leave granted from time to time from 1st January 1951.

Sl. No.	Name of the Officer	Designation	Period of leave
1	Sri C. M. H. Ranajodha Singh	Deputy Commissioner	From 13th February 1950 to 13th February 1951.
2	Sri F. Thumboo Chetty	Sr. Assistant Commissioner	From 1st April 1950 (continues to be on leave).
3	Janab Syed Abdul Aleem	Deputy Commissioner	14th November 1950 to 3rd May 1951.
4	Janab Syed Abdul Khader	Deputy Commissioner	1st December 1950 to 10th September 1951.
5	Sri B. M. Krishnan	Deputy Commissioner	2nd January 1951 to 3rd May 1951.
6	Janab Md. Ismail Sheriff	Labour Commissioner	From 2nd February 1951 (continues to be on leave).
7	Sri L. Muniswamy	Deputy Commissioner Director of Food Supplies	2nd February 1951 for 28 days 9th April 1951 to 9th May 1951
8	Sri N. Madhava Rao	Chief Secretary to Government.	16th April 1951 to 20th May 1951.
9	Sri K. Srinivasan		
10	Sri H. Ramaraj Urs	Sr. Assistant Commissioner	17th April 1951 to 28th June 1951.
11	Janab Abdul Azeem	Deputy Commissioner	1st May 1951 to 28th August 1951.
12	Sri A. C. Nirvani Gowda	Education Secretary	10th May 1951 for one month
13	Sri Safi Darashah	Private Secretary to His Highness.	15th May 1951 for 12 days
14	Sri K. Subba Rao	Excise Commissioner	20th May 1951 for 6 months
15	Sri S. Muninanjappa	Deputy Commissioner, O.O.D. as Director, Mysore Iron and Steel Works.	24th May 1951 for 1 month and 27 days.
16	Sri K. Thipperudriah	Deputy Commissioner	28th May 1951 for six days.
17	Sri V. Vedavyasacharya	Revenue Commissioner	21st June 1951 for six months
18	Sri A. C. Nirvani Gowda	Education Secretary	13th July 1951 to 13th October 1951.
19	Sri M. Shamanna	Financial Secretary	30th July 1951 to 31st August 1951.
20	Sri E. V. Ganapati Iyer	Chief Secretary	17th August 1951 for 15 days

ಶ್ರೀ ಟಿ. ರಾಮಾಚಾರ್‌ರವರು.—ಇಲ್ಲಿ ಕೊಟ್ಟಿರುವ ಪಟ್ಟಿಯಲ್ಲಿನ ಮೊದಲನೆಯ ಆರು ಆಫೀಸರುಗಳು ಇನ್ನೂ ಸರ್ವಿಸ್ಸಿನಲ್ಲಿದ್ದಾರೆಯೇ?

* ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಕೆಲವರಿದ್ದಾರೆ, ಕೆಲವರಿಲ್ಲ

ಶ್ರೀ ಟಿ. ರಾಮಾಚಾರ್‌ರವರು.— ಅವರಿಗೆಲ್ಲಾ ರಜಾಗಳನ್ನು ನೀವೇ ಬಲಾತ್ಕಾರವಾಗಿ ಬೇರೆ ಕಾರಣಗಳಿಗಾಗಿ ಕೊಟ್ಟಿದ್ದೀರಾ ಅಥವಾ ಅವರಾಗಿಯೇ ತೆಗೆದುಕೊಂಡಿದ್ದಾರೆಯೇ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಕೆಲವರು ತಾವೇ ತೆಗೆದುಕೊಂಡಿದ್ದಾರೆ, ಇನ್ನೂ ಕೆಲವರಿಗೆ ಸರ್ಕಾರದವರು ಅಡ್ಮಿನಿಸ್ಟ್ರೇಟಿವ್ ಕಾರಣಗಳಿಗಾಗಿ ಕೊಟ್ಟಿದ್ದಾರೆ.

Janab SYED ABDUR RAHMAN (Chikmagalur *cum* Shimoga—Muslim).—Have not some of the officers already retired on leave?

The Hon'ble Sri K. CHENGALARAYA REDDY.—Yes, some are retired, retired on leave.

Janab SYED ABDUR RAHMAN.—In certain cases, has age anything to do with their taking leave?

The Hon'ble Sri K. CHENGALARAYA REDDY.—Yes, it is also taken into consideration, but then being on leave is not solely due to that. In addition to other considerations, that was also one consideration.

Alleged illegal and excess procurement from Sri Narayana Reddy.

*Q.—225. SRI K. SAMPANGI RAMIAH (Kolar District—General).—

Will the Government be pleased to state :—

(a) whether it is a fact that one Sri Narayana Reddy of Sadlavanapalli gave a petition before the Deputy Commissioner, Kolar, in May 1950 complaining of illegal and excess procurement and loss of jewels ;

(b) whether any enquiry was made in the matter ;

(c) whether Sri Narayana Reddy filed a petition before the Government on 31st May 1950 ;

(d) whether the Hon'ble Minister passed an order that the Deputy Commissioner, Kolar District, should personally hold an enquiry in the matter ;

(e) whether such an enquiry was held ;

(f) whether any relief was accorded to the petitioner ;

(g) whether it is a fact that at the time of procurement and seizure the granary was sealed preventing the petitioner from using the foodgrains ;

(h) whether the seals have been removed and when ;

(i) whether the petitioner has applied for copies of the mahazars and statements before the Amildar, Bagepalli ;

(j) whether the copies have been granted ;

(k) whether the value of the grains seized has been given to the petitioner ;

(l) if not, why not ?

A.—The Hon'ble SRI K. CHENGALARAYA REDDY.—

(a) Yes.
(b) Yes.
(c) Yes.
(d) Yes.
(e) Yes.
(f) No relief was considered necessary.
(g) No.
(h) Does not arise.
(i) No. Applications for copies are reported to have not been received by the Amildar, Bagepalli.
(j) Does not arise.
(k) and (l) Notice has been served on the petitioner on 23rd November 1950, to receive payments of the value of foodgrains seized.

SRI K. SAMPANGI RAMIAH.—Was Sri Narayana Reddy present at the time of procurement ?

The Hon'ble SRI K. CHENGALARAYA REDDY.—I cannot say definitely whether he was or was not present.

SRI K. SAMPANGI RAMIAH.—Is it not a fact that the party was not present ?

The Hon'ble SRI K. CHENGALARAYA REDDY.—I have already answered that question.

SRI K. SAMPANGI RAMIAH.—Has not the party given a petition to the Deputy Commissioner complaining that the Amildar has not given copies of mahazars and statements ?

The Hon'ble SRI K. CHENGALARAYA REDDY.—I must ascertain about it ; I have no information now about that aspect.

Appointment of qualified Scheduled caste non-graduates in Departments.

Q.—235. SRI T. HANUMIAH (Chitaldrug District—Depressed Class).—

Will the Government be pleased to state :—

(a) the number of non-graduate gazetted officers in several departments in the State (communitywar) ;

(b) whether they would appoint scheduled castes non-graduates, if otherwise qualified with prescribed tests, to such ranks ?

A.—The Hon'ble Sri K. CHENGALARAYA REDDY (Chief Minister).—

(*a*) There are 119 non-graduate gazetted officers in the State belonging to several communities.—

Kshatriya	...	5
Maharastra	...	2
Brahmin	...	44
Muslim	...	10
Christian, Anglo-Indian, European		10
Lingayet	...	11
Adi-Dravida, Depressed Class		4
Kurubar	...	2
Vokkaligar	...	7
Kunchitigar	...	1
Other Caste Hindus	...	20
Visvakarma	...	1
Banajiga	...	2
Total	...	119

(*b*) There is no bar against the appointment of qualified scheduled castes non-graduates but Government cannot, for obvious reasons, commit themselves in the manner suggested.

ಶ್ರೀ ಟಿ. ಹನುಮಯ್ಯನವರು.—ಷೆಡ್ಯೂಲ್ಡ್ ಕ್ಯಾಸ್ಟಿಗೆ ಸೇರಿದ ನಾನ್‌ಗೆಜೆಟೆಡ್ ನೌಕರರನ್ನು ಗೆಜೆಟೆಡ್ ಹುದ್ದೆಗೆ ತೆಗೆದುಕೊಳ್ಳುವುದರಲ್ಲಿ ಇತರೆಯವರಿಗಿಂತಲೂ ಕಮ್ಮಿ ಜನರನ್ನು ತೆಗೆದುಕೊಂಡಿರುವುದಕ್ಕೆ ಕಾರಣ ವೇನು ?

* ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನಾನಾಗಲೇ ಹೇಳಿದಹಾಗೆ, ಸಾಧ್ಯವಾದಮಟ್ಟಿಗೂ ಅವರಲ್ಲಿ ಅರ್ಹತೆಯುಳ್ಳವರು ಎಷ್ಟು ಜನರಿದ್ದಾರೋ ಅಷ್ಟು ಜನರನ್ನೂ ಮುಂದಕ್ಕೆ ತರುವುದಕ್ಕೆ ಸರ್ಕಾರದವರು ಪ್ರಯತ್ನಪಡುತ್ತಾರೆ.

ಶ್ರೀ ಟಿ. ಹನುಮಯ್ಯನವರು.—ಇತರೇ ಕೋಮಿನ ನಾನ್‌ಗೆಜೆಟೆಡ್ ನೌಕರರಿಂದ ಹೆಚ್ಚಿಗೆ ಜನರನ್ನು ಗೆಜೆಟೆಡ್ ನೌಕರಿಗೆ ತೆಗೆದ ಕೊಳ್ಳುವುದಕ್ಕೂ ಷೆಡ್ಯೂಲ್ಡ್ ಕೋಮಿನವರಿಂದ ಕಮ್ಮಿ ತೆಗೆದುಕೊಂಡಿರುವುದಕ್ಕೂ ಕಾರಣವೇನು ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನಾನ್‌ಗೆಜೆಟೆಡ್ ನೌಕರರಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ನಿಂದ ಗೆಜೆಟೆಡ್ ನೌಕರಿಗೆ ತೆಗೆದುಕೊಂಡಿರುವುದು ಕಮ್ಮಿಯಾಗಿದೆಯೆಂದು ಹೇಳುತ್ತಿದ್ದೀರಿ; ಆದರೆ ಅವರನ್ನು ತೆಗೆದುಕೊಂಡುದು ಈಗಲ್ಲ. ಅನೇಕ ವರ್ಷಗಳ ಹಿಂದೆ ತೆಗೆದುಕೊಂಡಿರುವುದನ್ನು ಇಲ್ಲಿ ಹೇಳಿದೆ.

ಶ್ರೀ ಟಿ. ಹನುಮಯ್ಯನವರು.—ಅವರಲ್ಲಿ ಹೆಚ್ಚು ಸಹಾನುಭೂತಿಯನ್ನು ತೋರಿಸುತ್ತೀರಾ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಹೆಚ್ಚು ಸಹಾನುಭೂತಿಯನ್ನು ತೋರಿಸಬೇಕೆಂದು ರಾಜ್ಯಾಂಗದಲ್ಲೇ ಇದೆ. ಸರ್ಕಾರದ ನೀತಿಯೂ ಹಾಗೆಯೇ ಇದೆ ಎಂದು ಹಿಂದೆಯೇ ಖಚಿತವಾಗಿ ಹೇಳಿದ್ದೇನೆ.

Starting Co-operative Farm in Amritmahal land surrendered to Revenue Department in Hassan District.

Q.—46. Sri B. N. BORANNA GOWDA (Hassan District—General).—

Will the Government be pleased to state :—

(*a*) the extent of land surrendered to the Revenue Department in Hassan District by the Forest and Amritmahal Departments under the 'Grow More Food' Scheme ;

(*b*) the number of applications received from the raiyats for lands in the surrendered area ;

(*c*) the extent of land disposed of ;

(*d*) whether the public have come forward to start a co-operative farm in the said area ?

(*e*) The places where they have so come forward ?

A.—The Hon'ble Sri H. SIDDAIYA (Minister for Revenue and Excise).—

(*a*)

Amrit Mahal Kavals.		*Forest.*
A.	G.	Acres.
13,478	31	200

(*b*) 965 applications for kaval lands and 60 applications for forest lands.

(*c*)

A.	G.
8,094	1

(*d*) Yes.

(*e*) 1. Manjenahalli Kaval, Hassan Taluk.
2. Attigudda Kaval, Arsikere Taluk.
3. Rangapur Kaval, Arsikere Taluk.
4. Habbanaghatta Kaval, Arsikere Taluk.
5. Koratagere Kaval, Arkalgud Taluk.
6. Dodderi Kaval, Channarayapatna Taluk.

ಶ್ರೀ ಬಿ. ಎನ್ ಬೋರಣ್ಣಗೌಡರು.—13,478 ಎಕರೆ 31 ಗುಂಟೆ ಜಮೀನಿನ ಪೈಕಿ 8,094 ಎಕರೆ ಒಂದು ಗುಂಟೆಯನ್ನು ಸಾಗುವಳಿಗೆ ಕೊಡಲಾಗಿದೆಯೆಂದು ತಿಳಿಸಲಾಗಿದೆ. ಇದನ್ನು ಬೇರೆ ಬೇರೆ ಜನರಿಗೆ ಕೊಟ್ಟಿದೆಯೋ ಅಥವ ಸಾಮೂಹಿಕ ವ್ಯವಸಾಯಕ್ಕೆ ಕೊಟ್ಟಿದೆಯೋ ?

* ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಎರಡೂ ಇದೆ.

ಶ್ರೀ ಬಿ. ಎನ್. ಬೋರಣ್ಣಗೌಡರು.—ಎಷ್ಟು ಎಕರೆ ಜಮೀನನ್ನು ಸಾಮೂಹಿಕ ಸಾಗುವಳಿಗೆ ಕೊಟ್ಟಿದೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಟೀಸ್.

ಶ್ರೀ ಬಿ. ಎನ್. ಬೋರಣ್ಣಗೌಡರು.—ವಿಕ್ಕಿರುವ 5,384 ಎಕರೆ 30 ಗುಂಟೆಯನ್ನು ಸಾಗುವಳಿಗೆ ಕೊಡುವಾಗ ಸಾಮೂಹಿಕ ಸಾಗುವಳಿಗೆ ಕೊಡುವುದಕ್ಕೆ ಯೋಚನೆ ಮಾಡುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಯೋಚನೆ ಮಾಡುತ್ತಿದ್ದೇವೆ.

ಶ್ರೀ ಬಿ. ಎನ್. ಬೋರಣ್ಣಗೌಡರು.—ಹಬ್ಬನ ಘಟ್ಟ ಮತ್ತು ಕೋಟಗೆರೆ ಕಾವಲುಗಳಿಂದ ಸಾಮೂಹಿಕ ಸಾಗುವಳಿಗಾಗಿ ಜಮೀನು ಕೇಳಿ ಅರ್ಜಿಗಳು ಬಂದಿವೆಯೆಂದು ಹೇಳಿದ್ದೀರಿ ಅವರಿಗೆ ಕೊಡಲು ಯೋಚನೆ ಮಾಡುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲವರಿಗೆ ಈಗಾಗಲೇ ಕೊಟ್ಟಿದೆ, ಇನ್ನೂ ಕೆಲವರಿಗೆ ಕೊಡಬೇಕೆಂದು ಶಿಫಾರಸಾಗಿ ಬಂದಿದೆ.

ಶ್ರೀ ಬಿ. ಎನ್. ಬೋರಣ್ಣಗೌಡರು.—ಕೊಟ್ಟಿಲ್ಲವೆಂದು ತಿಳಿಸಿದೆ.

The Hon'ble Sri H. SIDDAIYA.—It is under consideration.

Work of Health Officers.

Q—68. **Sri B. N. BORANNA GOWDA** (Hassan District—General).—

Will the Government be pleased to state:—

(*a*) the number of Health Officers in the State at present (districtwar figures to be furnished);

(*b*) whether there are more than one Health Officer in any district and if so, in which district;

(*c*) whether there is sufficient work for all the Health Officers in those places where more than one have been appointed;

(*d*) whether the Assistant Health Officers of the concerned units cannot do that work in such places?

A.—**The Hon'ble Sri H. SIDDAIYA** (Minister for Revenue and Excise).—

(*a*) Two hundred and thirteen—statement appended below.

(*b*) Yes; statement appended below.

(*c*) Yes.

(*d*) They are doing the work assigned to them.

Statement showing the sanctioned strength of Health Officers in the Public Health Department and those working in the Districts.

Sanctioned strength.

(*a*) *Gazetted*—	(1) First Class Health Officers	... 7
	(2) Second Class Health Officers	... 40 (35 permanent and 5 temporary)
	(3) Health Probationers	... 5
Non-Gazetted—	Third Class Health Officers	... 161
	Total	.. 213

Name of District	Number of Health Officers working		
	First Class Health Officers	Second Class Health Officers	Third Class Health Officers
1 Bangalore including City	2	9	6
2 Hassan	2	8	13
3 Chitaldrug	...	3	2
4 Chikmagalur	...	5	21
5 Shimoga	1	7	20
6 Tumkur	...	...	1
7 Mandya	...	1	20
8 Mysore including City and Medical College ...	1	6	14
9 Kolar including K. G. F.	1	...	...

ಶ್ರೀ ಬಿ. ಎಸ್. ಬೋರಣ್ಣಗೌಡರು.—ಒಂದೊಂದು ಜಿಲ್ಲೆಯಲ್ಲಿ ಇಬ್ಬಿಬ್ಬರು ಸೀನಿಯರ್ ಹೆಲ್ತ್ ಆಫೀಸರುಗಳಿದ್ದಾರಲ್ಲವೆ?

*ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹೌದು.

ಶ್ರೀ ಬಿ. ಎಸ್. ಬೋರಣ್ಣಗೌಡರು.—ಒಂದೊಂದು ಜಿಲ್ಲೆಯಲ್ಲಿ ಇಬ್ಬರು ಸೀನಿಯರ್ ಹೆಲ್ತ್ ಆಫೀಸರುಗಳಿಗೆ ಕೆಲಸವಿದೆಯೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅವರಿಗೂ ಕೆಲಸವಿದೆ ಅವರ ಅಸಿಸ್ಟೆಂಟ್‌ಗಳಿಗೂ ಕೆಲಸವಿದೆ.

ಶ್ರೀ ಬಿ. ಎಸ್. ಬೋರಣ್ಣಗೌಡರು.—ಪ್ರತಿಯೊಂದು ತಾಲ್ಲೂಕಿಗೂ ಒಬ್ಬರು ಅಸಿಸ್ಟೆಂಟ್ ಹೆಲ್ತ್ ಆಫೀಸರಿರುವಾಗ ಅವರ ಮೇಲೆ ಇನ್ನಿಬ್ಬರಿರುವುದು ಸೂಕ್ತವೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲಸ ಬಹಳ ಹೆಚ್ಚಾಗಿದೆ, ಇಷ್ಟು ಜನ ಸಾಲದೆಂದು ಇಲಾಖೆಯವರು ಅಭಿಪ್ರಾಯ ಪಡುತ್ತಾರೆ.

ಶ್ರೀ ಬಿ. ಎಸ್. ಬೋರಣ್ಣಗೌಡರು.—ಸೀನಿಯರ್ ಹೆಲ್ತ್ ಆಫೀಸರುಗಳ ಅಸಿಸ್ಟೆಂಟ್‌ಗಳು ಮಾಡುವ ಕೆಲಸಗಳಿಗೆ ಡಿ. ಡಿ. ಟಿ. ಸರಬರಾಯಿ ಮಾಡುವುದೊಂದೇ ಕೆಲಸವಲ್ಲವೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇದೊಂದೇ ಕೆಲಸವಲ್ಲ, ಇನ್ನೂ ಬಹಳ ಕೆಲಸವಿದೆ. ಅದನ್ನೆಲ್ಲಾ ಹೇಳಬೇಕಾದರೆ ಒಂದು ದೊಡ್ಡ ಪಟ್ಟಿಯನ್ನೇ ಓದಬೇಕಾಗುತ್ತದೆ, ಅದಕ್ಕೆ ತುಂಬಾ ಕಾಲ ಬೇಕಾಗುತ್ತದೆ.

ಶ್ರೀ ಬಿ. ಎಸ್. ಬೋರಣ್ಣಗೌಡರು.—ಸೀನಿಯರ್ ಆಫೀಸರುಗಳಿರುವ ಕಡೆ ಜೂನಿಯರ್ ಆಫೀಸರುಗಳನ್ನು ನೇಮಕ ಮಾಡುವ ವಿಚಾರ ಬಂದಿದೆ, ಅದನ್ನು ಯೋಚನೆ ಮಾಡಿ ತೀರ್ಮಾನ ಮಾಡುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಯೋಚನೆ ಮಾಡುತ್ತೇವೆ.

Srimathi RATNAMMA ISAAC (Bangalore—Women).—Are there any Lady Health Officers in the State?

The Hon'ble Sri H. SIDDAIYA:—I do not exactly remember.

Srimathi RATHNAMMA ISAAC:-Are the Government aware that in Madras, as early as 1917, they appointed a Deputy Directress of Public Health who has been supervising all matters connected with maternity and child welfare?

The Hon'ble Sri H. SIDDAIYA:—The question of appointing a Lady Health Officer will be considered.

Srimathi RATNAMMA ISAAC:—Is it not a fact that the Director of Public Health has submitted a recommendation to the effect that a Maternity and Child Welfare Bureau should be opened?

The Hon'ble Sri H. SIDDAIYA:—There has been a representation like that.

Srimathi RATNAMMA ISAAC:—Will that representation be considered sympathetically?

The Hon'ble Sri H. SIDDAIYA:—Yes, it will be considered sympathetically.

Public Service Commission and Promotion of Amildars.

Q.—**70.** **Sri A. BHEEMAPPA NAIK** (Chitaldrug District General).—

Will the Government be pleased to state:—

(*a*) whether they had prepared a list of names to be promoted as Amildars;

(*b*) whether they are adhering to the order in the list in promoting them as Amildars from the list;

(*c*) whether these promotions will come under the purview and powers of the Public Service Commission hereafter?

A.—**The Hon'ble Sri H. SIDDAIYA** (Minister for Revenue and Excise).—

(*a*) Yes.

(*b*) Yes; generally.

(*c*) This question is under consideration.

Sri A. BHEEMAPPA NAIK.—Has the old list been exhausted?

The Hon'ble Sri H. SIDDAIYA:—Not yet.

Sri A. BHEEMAPPA NAIK.—Are the Government going to include in the new list the remaining names in the old list?

The Hon'ble Sri H. SIDDAIYA:—The list is already prepared and it is under the active consideration of the Government.

Sri A. BHEEMAPPA NAIK.—Has the list been finalised?

The Hon'ble Sri H. SIDDAIYA:—No yet.

Sri A. BHEEMAPPA NAIK.—Will the Government take into consideration, in finalising the list, the interests of the minority communities, depressed classes and the junior officers belonging to these communities?

The Hon'ble Sri H. SIDDAIYA:—All these aspects will be duly considered.

Sri A. BHEEMAPPA NAIK.—Are the Government going to give powers to the Public Service Commission to examine the list?

Mr. SPEAKER.—How does that supplementary arise ?

Sri A. BHEEMAPPA NAIK.—It arises, sir, because the preparation of the list is the question; how the junior officers are promoted is involved. I am asking whether in the present list the minority communities are adequately represented.

The Hon'ble Sri H. SIDDAIYA.—Their interests will also be safeguarded.

Sri A. BHEEMAPPA NAIK.—Have they not been inadequately represented so far in the services ?

The Hon'ble Sri H. SIDDAIYA.—There are some minority communities whose representation is inadequate.

Sri A. BHEEMAPPA NAIK.—Will the Government be pleased to see that these inequalities are remedied ?

The Hon'ble Sri H. SIDDAIYA.—As far as possible that would be done and that is the object with which the Public Service Commission is functioning.

ಶ್ರೀ ಜಿ. ವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಈ ಲಿಸ್ಟ್ ತಯಾರಾಗಿ ಎಷ್ಟು ದಿವಸವಾಯಿತೆ ?

The Hon'ble Sri H. SIDDAIYA.—A few months back.

ಶ್ರೀ ಜಿ. ವೀರಪ್ಪನವರು.—ಈ ಲಿಸ್ಟಿನಲ್ಲಿ ಎಷ್ಟು ಜನರಿದ್ದಾರೆ ?

The Hon'ble Sri H. SIDDAIYA.—That is confidential and I cannot reveal it at this stage

ಶ್ರೀ ಜಿ. ವೀರಪ್ಪನವರು.—ಈ ಲಿಸ್ಟ್ ತಯಾರು ಮಾಡಿದ್ದು ಯಾವ ಆಧಾರದ ಮೇಲೆ ?

The Hon'ble Sri H. SIDDAIYA.—So many aspects are taken into consideration.

Sri G. VEERAPPA.—Is it prepared on the basis of seniority or efficiency or merit or what is it ?

The Hon'ble Sri H. SIDDAIYA.—Seniority, efficiency, inadequate representation, and so many other factors.

ಶ್ರೀ ಜಿ. ವೀರಪ್ಪನವರು.—ಎಷ್ಟು ದಿವಸದಲ್ಲಿ ಆ ಲಿಸ್ಟ್ ಪೂರ್ತಿ ತೀರ್ಮಾನ ಮಾಡಿ ನೇಮಕ ಮಾಡುತ್ತೀರಿ ?

The Hon'ble Sri H. SIDDAIYA.—As early as possible

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ-ನಿಮ್ನಪಂಗಡ).—ಈ ಲಿಸ್ಟ್ ತಯಾರು ಮಾಡಿದ ತಾರೀಖು ಯಾವುದು ?

ಮಾನ್ಯ ಶ್ರೀ ಎಚ್. ಸಿದ್ಧಯ್ಯನವರು.—ನೋಟೀಸ್

ಶ್ರೀ ಎಂ. ಮಾದಯ್ಯನವರು.—ಮೊದಲನೆ ಲಿಸ್ಟನ್ನು ರಿವೈಜ್ ಮಾಡಿ ಅದರಲ್ಲಿದ್ದ ಹೆಸರುಗಳ ಸ್ಥಾನಗಳನ್ನೂ ಬದಲಾಯಿಸಿದ್ದೀರೋ ಅಥವ ಹೊಸದಾಗಿ ಸೇರಿಸಿದ್ದೀರೋ ?

The Hon'ble Sri H. SIDDAIYA.—It is a very confusing question. Whether the Hon'ble Member refers to the new list or the old list, I cannot understand.

ಶ್ರೀ ಎಂ. ಮಾದಯ್ಯನವರು.—"We had prepared" ಎಂದು ಹೇಳಿದೆ, ಆ ಲಿಸ್ಟಿನಲ್ಲಿದ್ದ ಹೆಸರುಗಳು ಮುಗಿದ ಮೇಲೆ ಈ ಹೊಸ ಲಿಸ್ಟನ್ನು ತಯಾರಿಸಿದ್ದೀರೋ ಅಥವ ಹಿಂದಿದ್ದ ಹೆಸರುಗಳಲ್ಲದೆ ಹೊಸದಾಗಿ ಹೆಸರುಗಳನ್ನು ಸೇರಿಸಿದ್ದೀರೊ ?

ಮಾನ್ಯ ಶ್ರೀ ಎಚ್. ಸಿದ್ಧಯ್ಯನವರು.—ಮೊದಲು ಕೆಲವು ಹೆಸರುಗಳಿದ್ದವು ಅದರ ಜೊತೆಗೆ ಹೊಸದಾಗಿಯೂ ಸೇರಿಸಿದೆವು. ಹಿಂದಿನ ಲಿಸ್ಟ್ ಇನ್ನೂ ಮುಗಿದಿಲ್ಲ.

ಶ್ರೀ ಎಂ. ಮಾದಯ್ಯನವರು.—ಆ ಲಿಸ್ಟನ್ನು ತಯಾರು ಮಾಡಿದ ತಾರೀಖು ಯಾವುದು ?

ಮಾನ್ಯ ಶ್ರೀ ಎಚ್. ಸಿದ್ಧಯ್ಯನವರು.—ಬಹಳ ಹಿಂದೆ.

ಶ್ರೀ ಎಂ. ಮಾದಯ್ಯನವರು.—ಆ ಲಿಸ್ಟಿನಲ್ಲಿರುವವರ ಹೆಸರುಗಳನ್ನು ಈ ಲಿಸ್ಟಿನಲ್ಲಿ ಕೆಳಗೆ ತಂದದ್ದುಂಟೆ ?

ಮಾನ್ಯ ಶ್ರೀ ಎಚ್. ಸಿದ್ಧಯ್ಯನವರು.—It is under consideration ಎಂದು ಹೇಳಿದೆ.

ಶ್ರೀ ಎಂ. ಮಾದಯ್ಯನವರು.—ಈಗ ಈಗಾಗಲೇ ಲಿಸ್ಟಿನಲ್ಲಿರುವವರನ್ನು ಕೆಳಗಿಳಿಸಿದ್ದರೆ ಅವರಿಗೆ ಸರಿಯಾದ ಸ್ಥಾನವನ್ನು ಕೊಟ್ಟು ಅವರನ್ನು ನೇಮಕ ಮಾಡುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ಧಯ್ಯನವರು.—ಅಂಥಾದ್ದಿಲ್ಲ.

ಶ್ರೀ ಎಂ. ಮಾದಯ್ಯನವರು.—ಈ ಲಿಸ್ಟ್ ತಯಾರು ಮಾಡುವಾಗ ಈ ಲಿಸ್ಟಿಗೆ ಸೇರಿಸಬೇಕೆಂದು ಅರ್ಜಿ ಹಾಕಿದವರನ್ನು ಲಿಸ್ಟಿಗೆ ಸೇರಿಸುತ್ತೀರೋ ಅಥವ ಬೇರೆ ಆಧಾರದ ಮೇಲೆ ಮಾಡುತ್ತೀರೊ ?

The Hon'ble Sri H. SIDDAIYA.—A committee of five officers had been appointed and they have given this rank.

ಶ್ರೀ ಎಂ. ಮಾದಯ್ಯನವರು.—ಸೀನಿಯಾರಿಟಿಯಲ್ಲದೆ ಸಾಕಷ್ಟು ಪ್ರಾತಿನಿಧ್ಯವಿಲ್ಲದೇ ಇರತಕ್ಕ ಕೋಮಿನವರನ್ನೂ ಗಮನದಲ್ಲಿಟ್ಟು ಮಾಡುತ್ತೀರೋ ಅಥವಾ ಎಲ್ಲ ಅರ್ಜಿಗಳನ್ನೂ ನೋಡಿ ಸಾಕಷ್ಟು ಪ್ರಾತಿನಿಧ್ಯವಿರತಕ್ಕ ಕೋಮಿನವರನ್ನೂ ಸೇರಿಸಿ ಎಲ್ಲರನ್ನೂ ಸೇರಿಸುವಂತೆ ಮಾಡುತ್ತೀರೊ ?

ಮಾನ್ಯ ಶ್ರೀ ಎಚ್. ಸಿದ್ಧಯ್ಯನವರು.—ಎಲ್ಲವನ್ನೂ ಯೋಚನೆ ಮಾಡುತ್ತೇವೆ.

ಶ್ರೀ ಎಂ. ಮಾದಯ್ಯನವರು.—ಈಗಿರತಕ್ಕ ಲಿಸ್ಟಿನಲ್ಲಿ ನಿಮ್ನ ವರ್ಗದವರಿದ್ದಾರೆಯೆ ?

ಮಾನ್ಯ ಶ್ರೀ ಎಚ್. ಸಿದ್ಧಯ್ಯನವರು.—ಕೆಲವರು; ಪ್ರಾಯಶಃ ಇಬ್ಬರಿದ್ದಾರೆಂದು ಕಾಣುತ್ತದೆ.

Sri D. H. CHANDRASEKHARAIYA (Chitaldrug District—General).—May I know which minority communities have been recognised by the Government for the purpose of representation in the services?

The Hon'ble Sri H. SIDDAIYA.—I do not think that question will arise.

Sri D. H. CHANDRASEKHARAIYA.—The Hon'ble Minister said that the question of representation of minorities will be considered and all that. May I know which communities are considered to be minority communities.

The Hon'ble Sri H. SIDDAIYA.—Certain communities whose population is not large are generally considered to be minority communities.

Sri D. H. CHANDRASEKHARAIYA.—Have the Government made any list of such minorities whose rights and privileges have got to be safeguarded when making appointments in the service?

The Hon'ble Sri H. SIDDAIYA.—It is understood that certain communities are minority communities and certain communities are majority communities.

Sri D. H. CHANDRASEKHARAIYA.—My question is whether such list has been prepared by the Government?

The Hon'ble Sri H. SIDDAIYA.—A list is prepared; not for this particular purpose.

Sri D. H. CHANDRASEKHARAIYA.—Generally speaking, how many persons would be required in one year for purposes of appointment as Amildars?

The Hon'ble Sri K. CHENGALARAYA REDDY.—Sir, the Government would like to intervene in the debate just to place certain facts before the House so that the correct position might be known. If there is no objection the Hon'ble Minister for Law will explain the position.

The Hon'ble Sri K. T. BHASHYAM (Minister for Law and Labour).—Sir, I should like to say a few words regarding the constitutional aspect involved in this matter.

Under section 527, the Provincial Government has got the power to transfer the case from its own High Court to any other High Court or to any Subordinate Court. It is a discretion vested in the Provincial Government, and the discretion may be exercised one way or the other. And if the Provincial Government here felt after consideration of all the circumstances of the case that it was not necessary to transfer the case, that is a discretion rightly exercised by them, —a discretion vested in them—and it would not in my humble opinion be proper for the Central Government to have taken objection to the exercise of that discretion.

Section 527 of the Criminal Procedure Code says that a criminal case may be transferred by the Provincial Government under two circumstances. One is when such transfer tends to promote the ends of justice, and the other is when it tends to the convenience of the parties and witnesses. In this case nobody can deny that the transfer of this case outside Mysore will, far from tending to the convenience of the parties or witnesses, cause unnecessary inconvenience to all parties. So one of the grounds of

(THE HON'BLE SRI K. T. BHASHYAM)

transfer under Section 527 cannot be found in the case. The other ground is when it "tends to promote the ends of justice". I do not see how a trial of the case here will not tend to promote the ends of justice any more than the trial being conducted in any other place. Sir, "tends to promote the ends of justice" is a phrase which has been interpreted in many of the High Courts of India and it has generally been held that such transfer could only be justified if there is such a lot of public commotion that you cannot find an impartial body of assessors or jurors to help the judge in coming to a correct conclusion. As we know, there is absolutely no commotion in this State over this case Like all other cases it has been taking its course. During the long period of enquiry nobody has had anything to say against the fair or impartial manner in which the enquiry has been held and there has been absolutely no reason for anybody to apprehend that the trial also will not be equally fair and impartial. Can it be said then that if this trial takes place in Mysore, you cannot find a body of jurors or a body of assessors who are impartial? I do not think that anybody could say that.

Sir, one of the points that has been put forward is that the Chief Justice is himself the complainant in this case. As a matter of fact he is not the complainant. Technically he is not the complainant. But granting for a moment that the man who initiated the case and reported to the Police is treated as a complainant, he is one of the witnesses in the case. It is said that no judge in this State could be trusted to hold the scales of justice even between the Chief Justice on one side and the accused on the other. As has been already remarked by the Hon'ble mover of this motion, many distinguished jurists, many distinguished judges, and many distinguished administrators and statesmen have come and seen the administration of justice in this State and they have all had the highest praise for our judiciary. And it would be an unmerited slur on the judges of our State to say that merely because the Chief Justice has reported to the police alleging that certain offences have been committed by somebody,—he never mentioned the names of the accused; nobody knew it and as a matter of fact for a long time after the complaint was recorded we could not know anything about who the accused were in the case;—the entire body of Judges in the State become suspect and cannot be trusted to give a fair and impartial decision in the case.

Can there be a reasonable apprehension in the mind of the accused? There cannot be. But granting that there is, you will find in Section 526 of the Criminal Procedure Code that a transfer from one court to another is referred to. There one of the grounds mentioned is an apprehension in the mind of the accused that he will not get a fair and impartial trial. It is definitely stated as one of the grounds on which transfer could be had under Section 526. Deliberately in Section 527, those words are omitted. So what operates in the mind of the accused does not affect the exercise of discretion under Section 527. That is the technical situation.

I therefore consider that it was quite open to the State Government either to transfer or not to transfer as they considered fit. And having decided that it was not necessary to transfer they were the best judges of the situation and their discretion ought to be accepted on all hands. The use of Article 371 is certainly uncalled for in my opinion. Article 371 was meant to give directives to certain States where there was no form of Responsible Government, no Legislature whatever, and those that began almost from scratch to have a democratic administration. It is for that purpose that Article 371 was incorporated in the Constitution. Immediately it was brought to our notice as Article 306 (B) we protested against it and we were told by Hon'ble gentlemen who had the destiny of the millions of India in their hands that that was meant for certain other States and certainly not meant against Mysore

where we have had a first class administration and a first class Legislature functioning for many years.

Sri B. HUTCHE GOWDA (Tumkur District—General)—Pious hope.

The Hon'ble Sri K. T. BHASHYAM.—It is not a pious hope. It is an established fact admitted by everybody who came to Mysore.

Sri L. SIDDAPPA (Shimoga District—General).—It is now proved to be a pious hope.

The Hon'ble Sri K. T. BHASHYAM.—It is not a pious hope. It was definitely stated on the floor of the Constituent Assembly for India when the name of Mysore was deliberately and definitely mentioned that this Article would not be used against Mysore. Technically, the Article is there and we do not say that that Article as it is cannot be used. But the circumstance under which that Article was put in the Constitution is what I am referring to. Article 371 is one which authorises the Centre to interfere only in cases, as referred to by the Hon'ble mover, of very grave circumstances involving a breakdown of the Constitution or some irreparable injury to the State or to the country or things of that kind. It was not therefore fair for the Central Government to interfere in what may be considered a purely domestic problem. Whether a case should be tried here or tried there was entirely a domestic problem. It was not fair at all for the Centre to interfere. And the constitutional position I was referring to was that Article 371 was not meant to be used against States like Mysore.

But granting for a moment that in a grave situation they can use Article 371 even against Mysore, has there been such a situation in this case? Transfer of a case from one place to another is not a matter of such grave circumstance as to justify the use of Article 371 against Mysore.

Sir, of all the States in India, Mysore has been foremost in integration, in adjusting itself to all circumstances as emanating from the Centre and we have been of all the States most friendly and most adjustable towards the Centre. What an irony of fate that this Article 371 has been used against Mysore of all the States! I consider that it is very unfortunate. The Hon'ble mover was referring to Article 224. It was the most obvious method of getting over the difficulty. I am extremely sorry that what was obvious did not appeal to the Centre. There are so many methods of getting over these conflicts without coming to a deadlock. I am very sorry that there has been such a directive. What is our position now?

Sri L. SIDDAPPA.—That we want to know.

The Hon'ble Sri K. T. BHASHYAM.—That is the third point I would like to state. Either we have got to act up to the directive or Article 356 and Article 365 of the Constitution will have to come into operation. For my part I should say that when we exercise a discretion vested in us according to the light given to us by God, I refuse to take any directive from anybody. No self-respecting Minister can take a directive in this matter. I consider therefore that we have got to take up the matter at that level and proceed on the basis which I have just now mentioned. The application of Article 371 to the circumstances of this case is, in my humble opinion, utterly uncalled for and it ought not to be imposed on us.

Janab MAHMOOD SHARIFF (Mysore *cum* Mandya *cum* Hassan—Muslim).—I want one clarification. To a question asked, if in spite of the fact that we protest they enforce it, what is going to happen, the Hon'ble Minister said that no self-respecting Minister will agree with them and he did not as a matter of fact come out exactly as to what is going to happen. It is a mandatory provision and supposing they will be placed in a really awkward position and the President says that the directive must be observed and it must be put through, what will the Ministry do, is the question. Is the Ministry going to resign? That position was not clarified.

Mr. SPEAKER.—The Hon'ble Minister referred to Articles 356 and 365.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).—ಸ್ವಾಮಿ, ಮಾನ್ಯ ಸ್ನೇಹಿತರಾದ ಶ್ರೀ ಭೀಮಪ್ಪನಾಯಕರು ತಂದಿರತಕ್ಕ ಸೂಚನೆಯನ್ನು ಅನುಮೋದಿಸುತ್ತಾ ಒಂದೆರಡು ಅಂಶಗಳನ್ನು ಈ ಸಭೆಯವರ ಗಮನಕ್ಕೆ ತರಬೇಕೆಂದಿದ್ದೇನೆ. ಮಾನ್ಯ ಸಭಾನಾಯಕರು ಕೇಂದ್ರ ಸರ್ಕಾರದಿಂದ ಬಂದಿರತಕ್ಕ ಒಂದು ಆಜ್ಞೆಯನ್ನು ಸಭೆಯಲ್ಲಿ ಓದುತ್ತಿದ್ದ ಕಾಲದಲ್ಲಿ ಇದಕ್ಕೆ ಸಂಬಂಧಪಟ್ಟ ಪೂರ್ವೋತ್ತರಗಳೆಲ್ಲಾ ಒಂದೊಂದಾಗಿ ನಮ್ಮ ಜ್ಞಾಪಕಕ್ಕೆ ಬಂದುವು. ಕೇಂದ್ರಕ್ಕೂ ಈ ಸರ್ಕಾರಕ್ಕೂ ಇರಬೇಕಾದ ಸಂಬಂಧಗಳು ಹೇಗಿರಬೇಕೆಂಬ ವಿಚಾರ ಬೇರೆ ಬೇರೆ ಸಂದರ್ಭಗಳಲ್ಲಿ ಚರ್ಚೆಗೆ ಬಂದಾಗ ಈ ಸಭೆಯ ಅನೇಕ ಮಾನ್ಯ ಸದಸ್ಯರು, ಈ ಸರ್ಕಾರ ಆಯಾ ಸಂಬಂಧದಲ್ಲಿ ಏನೊಂದು ನೀತಿಯನ್ನನುಸರಿಸಬೇಕೆಂದು ಸೂಚನೆ ಮಾಡುತ್ತಿತ್ತೋ ಅದಕ್ಕೆ ಪ್ರತಿಭಟನೆಯನ್ನು ಸೂಚಿಸಿದ್ದಾರೆ; ತಮ್ಮ ಸಂದೇಹವನ್ನು ವ್ಯಕ್ತಪಡಿಸಿದ್ದಾರೆ. ಈ ವಿಷಯ ಈ ಸಭೆಯ ಮಾನ್ಯ ಸದಸ್ಯರೆಲ್ಲರ ಜ್ಞಾಪಕದಲ್ಲಿದೆ. ಕೇಂದ್ರ ಸರ್ಕಾರದವರು ಈ ದಿವಸ ಕೊಟ್ಟಿರುವ ಆಜ್ಞೆಯನ್ನು ನೋಡಿದರೆ, ಆಗ ಯಾವ ಸಂದೇಹದಿಂದ ಮಾತನಾಡುತ್ತಿದ್ದರೋ, ಸರ್ಕಾರ ಆ ಬಗೆಯ ಮನೋಧೋರಣೆಯನ್ನು ತಾಳಬಾರದೆಂದು ಹೇಳುತ್ತಿದ್ದರೋ, ಆ ಸದಸ್ಯರು ಈಗ ಈ ಸರ್ಕಾರದ ಕಡೆ ಕೈತೋರಿಸಿ "ಮಾಡಿದ್ದುಣ್ಣೋ ಮಹರಾಯ" ಎಂದು ಹೇಳುವ ಹಾಗಾಗಿದೆ!!

ಶ್ರೀ ಎಲ್. ಸಿದ್ದಪ್ಪನವರು —ಈಗಲಾದರೂ ಒಪ್ಪಿಕೊಳ್ಳುತ್ತೀರಲ್ಲಾ !

ಶ್ರೀ ಎಚ್. ಕೆ. ವೀರಣ್ಣಗೌಡರು.—ಹೌದು, ಒಪ್ಪಿಕೊಳ್ಳುತ್ತೇನೆ.

ಮಾನ್ಯ ಭೀಮಪ್ಪನಾಯಕರು ಹೇಳಿದ ಹಾಗೆ ಈ ಸಭೆ ಮೈಸೂರು ಸಂಸ್ಥಾನಕ್ಕೆ ರಾಜ್ಯಾಂಗವನ್ನು ರಚಿಸುವ ಸಭೆಯಾಗಿದ್ದಾಗ ಈ ಅಂಶ ಅಂದರೆ, ಸಂಸ್ಥಾನಗಳ ಮೇಲೆ ಕೇಂದ್ರ ಸರ್ಕಾರದ ಹತೋಟಿ ಇರುವ ಅಂಶ, ರಾಜ್ಯಾಂಗ ಸಭೆ ಮೈಸೂರು ನಗರದಲ್ಲಿ ಸೇರಿದ್ದ ಅಧಿವೇಶನದಲ್ಲಿ ಬಹಳವಾಗಿ ಚರ್ಚೆಯಾಗಿ ಆ ಸಭೆಯವರು ಏಕಕಂಠದಿಂದ ಇಂಥಾ ಒಂದು ವಿಷಯ ನಮ್ಮ ರಾಜ್ಯಾಂಗದಲ್ಲಿರಬಾರದೆಂದು ಪ್ರತಿಭಟನೆಯನ್ನು ಸೂಚಿಸಿ ಡೆಲ್ಲಿಯ ರಾಜ್ಯಾಂಗರಚನಾ ಸಭೆಗೆ ಬರೆಯಲಾಯಿತು. ಅದಕ್ಕೆ ಅವರೇನು ಉತ್ತರ ಕೊಟ್ಟರು, ಸರ್ಕಾರದ ಪರವಾಗಿ ಯಾವ ರೀತಿ ಆಗಿನ ಮಂತ್ರಿಸ್ಥಾನದಲ್ಲಿದ್ದ ಸರ್ದಾರ್ ವಲ್ಲಭಾಯ್ ಪಟೇಲರವರು ಏನು ಭರವಸೆಯನ್ನು ಕೊಟ್ಟರೆಂಬುದು ಸರ್ವವಿದಿತವಾಗಿದೆ. ಶ್ರೀ ಸಿದ್ದಪ್ಪನವರು ಪ್ರಶ್ನಿಸಿದ್ದಾರೆ, 'ಈಗಲಾದರೂ ಒಪ್ಪಿಕೊಳ್ಳುತ್ತೀರಾ' ಎಂದು. ಹೌದು; ಒಪ್ಪಿಕೊಂಡಿದ್ದೇವೆ. ಆದರೆ ಹಿಂದೆ ಈ ಸಭೆಯ ಸದಸ್ಯರು ಮತ್ತು ಸರ್ಕಾರದವರು ಕೇಂದ್ರ ಸರ್ಕಾರದವರು ಹೇಳಿದ್ದನ್ನು ಅನುಸರಿಸಬೇಕೆಂದು ಹೇಳಿ ತಮ್ಮ ಒಪ್ಪಿಗೆ ಕೊಟ್ಟಿದ್ದಕ್ಕಾಗಿ ಈಗ ನಾವು ವ್ಯಸನಪಡಬೇಕೆಂದು ನಾನು ಹೇಳುವುದಿಲ್ಲ. ಆಗ ನಮ್ಮಲ್ಲಿ ಪ್ರತಿಯೊಬ್ಬರ ಉದ್ದೇಶವಾದರೂ ಏನಾಗಿತ್ತು? ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಿರುವಾಗ ದೇಶ ಬಲಯುತವಾಗಿರಬೇಕೆಂಬುದು ನಮ್ಮೆಲ್ಲರ ಆಶಯವಾಗಿತ್ತು. ನಾವು ಎಷ್ಟರ ಮಟ್ಟಿಗೆ ಮೈಸೂರಿನವರೋ ಅಷ್ಟರಮಟ್ಟಿಗೆ ಬಹುಶಃ ಇನ್ನೂ ಹೆಚ್ಚಿಗೆ ಭಾರತೀಯರು. ಮೈಸೂರಿನ ಒಳಾಡಳಿತ ಸ್ವಾತಂತ್ರ್ಯ ಎಷ್ಟಿರಬೇಕೆಂದು ಅಪೇಕ್ಷಿಸುತ್ತೇವೆಯೋ ಅದಕ್ಕಿಂತ ಹೆಚ್ಚಿಗೆ ಭಾರತದ ಹಿತ, ಭಾರತದ ರಕ್ಷಣೆ, ಭಾರತದ ಒಗ್ಗಟ್ಟು ಇರಬೇಕೆಂದು ಆಶಿಸುವುದು ಸ್ವಾಭಾವಿಕ ಮತ್ತು ನಮ್ಮ ಧರ್ಮ. ಆ ದೃಷ್ಟಿಯಿಂದ ನಾವೂ ಇತರ ಸಂಸ್ಥಾನಗಳವರೂ ಕೇಂದ್ರ ಸರ್ಕಾರಕ್ಕೆ ನಮ್ಮ ಒಳಾಡಳಿತ ಸ್ವಲ್ಪ ಮೊಟಕಾದರೂ ಚಿಂತೆಯಿಲ್ಲವೆಂದು, ನಮ್ಮ ಆತ್ಮ ಗೌರವಕ್ಕೆ ಸ್ವಲ್ಪ ಕುಂದಕ ಬಂದರೂ ವಿಷಾದಪಡದೆ, ನಾವು ಕೇವಲ ಮೈಸೂರಿನವರಲ್ಲ, ಭಾರತೀಯರೂ ಹೌದು, ಆ ಸರ್ಕಾರವೇ ಬೇರೆ ಎಂಬ ಭಾವನೆಯನ್ನಿಟ್ಟುಕೊಳ್ಳದೆ ಅವರಿಗೆ ಬೆಂಬಲ ಕೊಡಬೇಕು, ಅದಷ್ಟು ಮಟ್ಟಿಗೆ ನಾವು ತಗ್ಗಿ ಬಗ್ಗಿ ನಡೆಯಬೇಕು ಎಂಬ ಉದಾರ ನೀತಿಯನ್ನನುಸರಿಸಿ ಆ ಬಗೆಯ ನೀತಿಯನ್ನನುಸರಿಸಿದೆವು. ಇದಕ್ಕಾಗಿ ವ್ಯಸನಪಡಬೇಕೆ? ಭಾರತೀಯರಾಗಿ ನಮ್ಮ ಕರ್ತವ್ಯವನ್ನು ನಾವು ನೆರವೇರಿಸಿದ್ದೇವೆ. ಇದು ನಾವು ಹೆಮ್ಮೆ ಪಡೆಯತಕ್ಕ ವಿಷಯವೇ ಆದರೂ ನಮ್ಮ ಸಂಸ್ಥಾನಕ್ಕಿದ್ದ ಅನೇಕ ಒಳಾಡಳಿತ ಅಧಿಕಾರಗಳು ಕೇಂದ್ರ ಸರ್ಕಾರಕ್ಕೆ ಸೇರಿದಾಗಲೆಲ್ಲಾ ಒಂದೊಂದು ವಿಚಾರದಲ್ಲಿಯೂ ಪ್ರತಿಯೊಂದು ಹೆಜ್ಜೆಯಲ್ಲಿಯೂ ನಮ್ಮ ಸಂದೇಹವನ್ನು ವ್ಯಕ್ತಪಡಿಸಿದ್ದೇವೆ. ಮೊಟ್ಟಮೊದಲು ಸ್ವಾತಂತ್ರ್ಯ ಬಂದ ಕೂಡಲೇ ಅವರು ರಕ್ಷಣೆ, ವಿದೇಶ ವ್ಯವಹಾರ ಮತ್ತು ಸಂಚಾರ ಮಾರ್ಗಗಳು—ಈ ಮೂರನ್ನೂ ಕೇಂದ್ರದ ಅಧೀನಕ್ಕೆ ಕೊಡಬೇಕೆಂದು ಕೇಳಿದಾಗಲೂ, ನಾವು ರಕ್ಷಣೆ ಮತ್ತು ವಿದೇಶ ವ್ಯವಹಾರ—ಇವೆರಡನ್ನು ಬೇಕಾದರೆ ಇಟ್ಟುಕೊಳ್ಳಲಿ, ಸಂಚಾರ ಮಾರ್ಗವನ್ನೇಕೆ ಅವರು ತೆಗೆದುಕೊಳ್ಳಬೇಕೆಂದು ಹೇಳಿದ್ದೆವು. ಅವರು ದೇಶದಲ್ಲೆಲ್ಲಾ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುವುದಕ್ಕಾವ ಅಡ್ಡಿಗಳೂ ಇರಕೂಡದು, ನಮ್ಮ ಗಡಿ, ನಿಮ್ಮ ಗಡಿ ಎಂಬ ಜಿಜ್ಞಾಸೆಗೆ ಅವಕಾಶವಿರಬಾರದೆಂಬ ಭಾವನೆಯಿಂದ ನಾವು ಒಪ್ಪಿಕೊಂಡೆವು. ಜೊತೆಗೆ ಆಗ್ಗೆ ದೇಶ ಇಬ್ಭಾಗವಾಗಿ ಹಿಂದೂ ಮುಸ್ಲಿಂ ಗಲಾಟೆಯೆದ್ದು ದೇಶದಲ್ಲೆಲ್ಲಾ ಪರದಾಟ ಹತ್ತಿ ಅಶಾಂತಿ ವಾತಾವರಣ ಮೂಡಿತ್ತು. ಅವುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು ಸಂಚಾರ ಮಾರ್ಗಗಳು ಕೇಂದ್ರದ ಹತೋಟಿಯಲ್ಲಿರಲು ಒಪ್ಪಿಗೆಯಿತ್ತೆವು. ಹೀಗಿರುವಾಗ ಈಗಿನ ಸನ್ನಿವೇಶವನ್ನು ನೋಡೋಣ. ನಾವು ಯಾವ ಔದಾರ್ಯದಿಂದ ಕೇಂದ್ರ ಸರ್ಕಾರದವರು ಹೇಳಿದುದನ್ನೆಲ್ಲಾ ಒಪ್ಪಿಕೊಂಡೆವೋ ಅದನ್ನವರು ಸ್ವಲ್ಪವೂ ಗಮನಿಸಲಿಲ್ಲವಲ್ಲಾ ' ಎಂದು ವಿಷಾದವಾಗುತ್ತಿದೆ. ನೂರಾರು ವರ್ಷಗಳಿಂದ ನಮ್ಮಲ್ಲಿದ್ದ ರೈಲ್ವೆಯನ್ನು ಅವರಿಗೊಪ್ಪಿಸಿ ಲಕ್ಷಾಂತರ ರೂಪಾಯಿಗಳ ಬಂಡವಾಳವನ್ನೂ ಆಸ್ತಿಯನ್ನೂ ಅವರ ವಶಕ್ಕೆ ಕೊಟ್ಟೆವು. ಇವತ್ತು ಅಲ್ಲಿಗೆ ವರ್ಗಾಯಿಸಲಾದ ರೈಲ್ವೆ ಇಲಾಖೆಯವರ ಸ್ಥಿತಿಗತಿಗಳೇನಾಗಿವೆ!! ಆಗ್ಗೆ ನಮ್ಮ ಆಶಯಗಳೇನಿತ್ತು! ನಮ್ಮಲ್ಲಿ ಸಂಬಳ ಸಾಲದು, ನಮ್ಮ ನೌಕರರು ಕೇಂದ್ರಕ್ಕೆ ಹೋಗಿ ಹೆಚ್ಚಿನ ದರ್ಜೆಗೆ ಬಂದು ಉತ್ತಮ ಸ್ಥಿತಿಗೆ ಬರುತ್ತಾರೆಂದು ಭಾವಿಸಿದ್ದೆವು. ಹಾಗಿರುವಲ್ಲಿ ಈಗವರು ನಮ್ಮಲ್ಲಿದ್ದ ರೈಲ್ವೆ ನೌಕರರನ್ನು ಕುರಿತು, ನಿಮ್ಮ ಮೊದಲಿದ್ದ ಸ್ಥಿತಿಯೇ ನಿಮಗಿರಲಿ, ನಮ್ಮವರ ಪರಿಸ್ಥಿತಿಯೇ ಬೇರೆ, ನಿಮ್ಮದೇ ಬೇರೆ' ಎಂದಿದ್ದಾರೆ. ಇದು ನಿಜವಾಗಿಯೂ ಬಹಳ ವಿಷಾದಕರ! ಹಾಗೆಯೇ ನಮ್ಮಿಂದ ಸೈನ್ಯ ಸಿಬ್ಬಂದಿಯನ್ನು ತೆಗೆದುಕೊಂಡರು. ಆ ಸೈನಿಕರನ್ನು ಹಾಗೆ ವರ್ಗಮಾಡುವಾಗ ಮಾನ್ಯ ಮುಖ್ಯ ಮಂತ್ರಿಗಳು ಎಷ್ಟು ಸಂತೋಷದಿಂದ ಅವರನ್ನು ಕಳುಹಿಸಿಕೊಟ್ಟರು! ಆ ಸಂದರ್ಭದಲ್ಲಿ ಅವರು ಹೇಳಿದ ಮಾತುಗಳು ಆ ಸೈನಿಕರ ಕ್ಷೇಮೋತ್ತರಗಳ ವಿಷಯದಲ್ಲಿ ನಮಗಿದ್ದ ಅಭಿಪ್ರಾ

ಯನ್ನು ಬಹು ಚೆನ್ನಾಗಿ ಪ್ರತಿಬಿಂಬಿಸುತ್ತವೆ. ಒಬ್ಬ ಮಗಳನ್ನು ಅಕ್ಕರೆಯಿಂದ ಸಾಕಿ ಅತ್ತೆಮನೆಗೆ ಕಳುಹಿಸಿ ಕೊಡುವಾಗ ಯಾವ ಬಗೆಯ ಸಂತೋಷದಲ್ಲಿರುತ್ತೇವೆಯೋ ಹಾಗಿದ್ದೇವೆಂದು ಅವರು ಹೇಳಿದರು. ಭಾರತವೆಂಬ ದೊಡ್ಡ ಸರ್ಕಾರಕ್ಕೆ ಹೋಗುತ್ತಾರೆ, ಅವರು ಬಹಳ ಉತ್ತಮಸ್ಥಿತಿಗೆ ಬರುತ್ತಾರೆಂದು ಎಲ್ಲರೂ ಭಾವಿಸಿದ್ದೆವು. ಆದರೆ ಮುಂದಾದ ಗತಿಯನ್ನು ನೋಡುವುದಾದರೆ, ಮಾನ್ಯ ಮಂತ್ರಿಗಳ ಉಪಮಾನವನ್ನೇ ತೆಗೆದುಕೊಂಡು ನೋಡಿದರೆ, ಯಾರ ಮನೆಗೆ ಕೊಟ್ಟರೆ ಚೆನ್ನಾಗಿ ಬದುಕುತ್ತಾಳೆಂದು ಮಗಳನ್ನು ಕಳುಹಿಸಿ ಕೊಟ್ಟೆವೋ ಆ ಮನೆಯವರು ಅವಳನ್ನು ಅನ್ನಬಟ್ಟೆಗೂ ದಾರಿಯಿಲ್ಲದಂತೆ ಮಾಡಿ ಬೀದಿಗೆ ಅಟ್ಟಿದ ಹಾಗಾಗಿದೆ !! ನಮ್ಮ ಸ್ಥಿತಿಕರ ಗತಿ ಇಂದು ಚಿಂತಾಜನಕವಾಗಿದೆ! ಹೀಗೆ ಕೇಂದ್ರ ಸರ್ಕಾರದವರು ಮಾಡಿರುವ ಅನ್ಯಾಯಗಳು ಒಂದೊಂದಕ್ಕೂ ಉದಾಹರಣೆಗಳನ್ನು ಕೊಡಬಹುದು. ಇವನ್ನೆಲ್ಲಾ ಏಕೆ ಹೇಳುತ್ತಿದ್ದೇನೆಂದರೆ, ಕೇಂದ್ರ ಸರ್ಕಾರದವರಿಗೆ ನಾವು ಎಷ್ಟು ತಗ್ಗಿ ಬಗ್ಗಿ ಉದಾರದೃಷ್ಟಿಯಿಂದ ಅವರ ಕಾರ್ಯನೀತಿಯನ್ನು ಅನುಸರಿಸಿಕೊಂಡು, ನಮಗೆ ಅವಮಾನವಾದರೂ, ನಮ್ಮ ಅಧಿಕಾರ ಕುಂಠಿತವಾದರೂ ಚಿಂತೆಯಿಲ್ಲವೆಂದು ಹೊಂದಿಕೊಂಡು ನಡೆದಷ್ಟೂ ಅವರು ನಮ್ಮ ಮೇಲೆ ಸವಾರಿ ಮಾಡುವುದಕ್ಕೇ ಹೊರಟಿದ್ದಾರೆ!! ನಮ್ಮ ವಿಷಯವನ್ನು ತಪ್ಪಾಗಿ ತಿಳಿದುಕೊಂಡು ಅದನ್ನು ದುರುಪಯೋಗಪಡಿಸಿಕೊಳ್ಳಲಿಕ್ಕೆ ಪ್ರಯತ್ನಪಡುತ್ತಿದ್ದಾರೆಂದು ನಾನು ಹೇಳದೆ ಗತ್ಯಂತರವಿಲ್ಲ. ಮಾನ್ಯ ಮಂತ್ರಿಗಳು ಇದೊಂದು ನಮಗೆ ಬಂದಿರುವ 'ಡೈರೆಕ್ಟಿವ್' ಎಂದು ಹೇಳಿದ್ದಾರೆ. ಒಂದು ಕೇಸಿನಲ್ಲಿ ಆಪಾದಿತರಿಗೆ ಇಲ್ಲಿ ನ್ಯಾಯ ದೊರಕುವುದಿಲ್ಲ; ಅನ್ಯಾಯವಾಗಬಹುದೆಂದು ಆಪಾದಿತರಿಂದ ಅರ್ಜಿಗಳು ಬಂದಿದೆ, ಆದ್ದರಿಂದ ಈ ಕೇಸನ್ನು ಮದ್ರಾಸು ಅಥವಾ ಬೊಂಬಾಯಿ ಸಂಸ್ಥಾನಕ್ಕೆ ವರ್ಗಮಾಡಬೇಕೆಂದು ಭಾರತದ ಅಧ್ಯಕ್ಷರು ಈ ಸರ್ಕಾರಕ್ಕೆ ಈ ಡೈರೆಕ್ಟಿವ್ ಕೊಟ್ಟಿದ್ದಾರೆ. ಸ್ಟೇಟ್ಸ್ ಮಿನಿಸ್ಟ್ರಿಯವರ ಸಲಹೆಯಂತೆ ಭಾರತದ ಅಧ್ಯಕ್ಷರು ಈ ರೀತಿ ಆಜ್ಞೆ ಹೊರಡಿಸಿದ್ದಾರೆಂದು ನಾನು ಭಾವಿಸುತ್ತೇನೆ. ಸಾಧಾರಣವಾಗಿ ಇಂಥ ವಿಚಾರಗಳಲ್ಲಿ ಮಂತ್ರಿಗಳೇ ಅಧ್ಯಕ್ಷರಿಗೆ ಸಲಹೆ ಕೊಡತಕ್ಕವರು. ಮಂತ್ರಿಗಳು ಹೀಗೆ ನಿಜವಾಗಿಯೂ ಸಲಹೆ ಕೊಟ್ಟಿದ್ದರೆ ಅವರು ದುರ್ಮಂತ್ರಿಗಳೇ ಸರಿ! ಸ್ಟೇಟ್ ಮಿನಿಸ್ಟ್ರಿಯವರು ಅಧ್ಯಕ್ಷರನ್ನು ಹೀಗೆ ತಪ್ಪು ದಾರಿಗೆಳೆದು ನಮ್ಮ ಮೈಸೂರು ಸರ್ಕಾರಕ್ಕೆ ಅಪಮಾನ ಮಾಡಿದ್ದಾರೆ! ಮೈಸೂರು ಜನತೆಗೆ ಅವಮಾನ ಮಾಡಿದ್ದಾರೆ! ಮೈಸೂರಿನ ಜನತೆಯನ್ನು ತೃಣವಾಗಿ ಭಾವಿಸಿದ್ದಾರೆ! ಇದನ್ನು ಖಂಡಿತ ಸಹಿಸಲಾಗುವುದಿಲ್ಲ. ಅದರಲ್ಲೂ ಇಂಥ ಆಜ್ಞೆ ಯಾವ ಸಂಸ್ಥಾನಕ್ಕೆ ಖಂಡಿತವಾಗಿಯೂ ಅನ್ವಯಿಸುವುದಿಲ್ಲವೆಂದು ವಾಗ್ದಾನ ಮಾಡಿದ್ದರೋ ಆ ಸಂಸ್ಥಾನಕ್ಕೇ ಮೊಟ್ಟಮೊದಲು ಪ್ರಯೋಗಿಸಿದ್ದಾರೆ! ಇಡೀ ಭರತ ಖಂಡದಲ್ಲಿ ಎಲ್ಲಾ ಸಂಸ್ಥಾನಗಳ ಆಡಳಿತವೂ ಮೈಸೂರಿನ ಮಟ್ಟದಲ್ಲಿರುವುದಿಲ್ಲ; ಅನೇಕ ಸಂಸ್ಥಾನಗಳಲ್ಲಿ ಆಡಳಿತ ರೀತಿ ಬಹಳ ಕೀಳುಮಟ್ಟದಲ್ಲಿದೆ. ಉತ್ತರ ದೇಶದ ಕೆಲವು ಸಂಸ್ಥಾನಗಳಲ್ಲಿ ಆಡಳಿತ ನಡೆಸುವುದಕ್ಕೆ ಒಬ್ಬ ಎಸ್. ಎಸ್. ಎಲ್. ಸಿ. ಯವನನ್ನು ಹುಡುಕಿದರೂ ಸಿಕ್ಕುವುದಿಲ್ಲ. ಆದುದರಿಂದ ಈ ಹತೋಟಿ ಆಜ್ಞೆಯನ್ನು ಕೇವಲ ಕೀಳುಮಟ್ಟದಲ್ಲಿರುವ ರಾಜ್ಯಗಳ ವಿಷಯದಲ್ಲಿ ಮಾತ್ರ ಉಪಯೋಗಿಸುತ್ತೇವೆ; ನೀವು ಮುಂದುವರಿದಿರುವವರು, ನಿಮ್ಮ ಸಂಸ್ಥಾನಕ್ಕೆ ಇದು ಅನ್ವಯಿಸುವುದಿಲ್ಲ, ದೇಶದ ಇತರ ಭಾಗಗಳಲ್ಲಿ ಎಷ್ಟೋ ಅಧೋಗತಿಯಲ್ಲಿರುವ ಪ್ರದೇಶಗಳಿವೆ, ಅವುಗಳ ಮೇಲೆ ಉಪಯೋಗಿಸುತ್ತೇವೆಂದು ಹೇಳಿ ಸರ್ದಾರ್ ಪಟೇಲರು ಸಮಾಧಾನಪಡಿಸಿದ್ದು ನಮಗಿನ್ನೂ ಚೆನ್ನಾಗಿ ಜ್ಞಾಪಕವಿದೆ. ಅಲ್ಲದೆ, ಮೈಸೂರು ಎಲ್ಲ ವಿಷಯಗಳಲ್ಲೂ ಮುಂದುವರಿದಿದೆ. 1907ರಷ್ಟು ಹಿಂದೆಯೇ ಇಲ್ಲಿ ನ್ಯಾಯವಿಧಾಯಕ ಸಭೆ ಏರ್ಪಾಡಾಗಿದೆ. 1881 ರಿಂದ ಇಲ್ಲಿ ಪ್ರಜಾಪ್ರತಿನಿಧಿ ಸಭೆ ಜಾರಿಗೆ ಬಂದಿದೆ. ಅಲ್ಲಿಂದೀಚೆಗೆ ಪ್ರಜಾಪ್ರತಿನಿಧಿ ಸಭೆ, ನ್ಯಾಯವಿಧಾಯಕ ಸಭೆ, ಇತರ ಅನೇಕ ಸ್ಥಳೀಯ ಸಂಸ್ಥೆಗಳು ಮುಂತಾಗಿ ಅನೇಕ ಕಡೆಗಳಲ್ಲಿ ಕೆಲಸಮಾಡಿ ನಮ್ಮ ಸಾರ್ವಜನಿಕರು ಆಡಳಿತ ವಿಚಾರದಲ್ಲಿ ತರಪೇತು ಹೊಂದಿ ಅರಿತು ನುರಿತವರಾಗಿ ರಾಜ್ಯಾಡಳಿತವನ್ನು ದಕ್ಷತೆಯಿಂದ ನಡೆಸುತ್ತಿದ್ದಾರೆಂಬುದು ಉತ್ಪ್ರೇಕ್ಷೆಯಲ್ಲ. ನಮ್ಮ ನ್ಯಾಯಾಸ್ಥಾನಗಳಲ್ಲಿಯೂ ನ್ಯಾಯಮೂರ್ತಿಗಳು ದಕ್ಷತೆಯಿಂದ ಕಾರ್ಯನಿರ್ವಹಿಸಿ ಮೈಸೂರಿಗೆ ಕೀರ್ತಿ ತಂದಿದ್ದಾರೆ. ಹೀಗಿರುವಲ್ಲಿ ಈ ದಿನ ಕೇಂದ್ರ ಸರ್ಕಾರದವರು ಹೇಳಿರತಕ್ಕ ಕಾರಣಗಳಿಂದ ಏನರ್ಥವಾಗುತ್ತದೆಂದರೆ ನಮ್ಮ ಸಂಸ್ಥಾನದ ಕೋರ್ಟುಗಳು ನಿಷ್ಪಕ್ಷಪಾತವಾಗಿ ವರ್ತಿಸಲಾರವು ಎಂದಾಗುವುದು. ಇಲ್ಲಿನ ಮುಖ್ಯ ನ್ಯಾಯಾಧೀಶರು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಆ ಕೇಸಿಗೆ ಸಂಬಂಧಪಟ್ಟಿರುವುದರಿಂದ ಆಪಾದಿತರ ಮನಸ್ಸಿನಲ್ಲಿ ತಮಗೆ ಸರಿಯಾದ ನ್ಯಾಯ ದೊರಕುವುದಿಲ್ಲವೆಂದು ಭಯವುಂಟಾಗಿರುವುದರಿಂದ ಈ ಕೇಸನ್ನು ಬೇರೆ ಸಂಸ್ಥಾನಕ್ಕೆ ವರ್ಗಮಾಡಿ ಎಂಬ ಕಾರಣ ಸರಿಯಾದುದಲ್ಲ. ನ್ಯಾಯ ಮಂತ್ರಿಗಳಾದ ಮಾನ್ಯ ಭಾಷ್ಯಂರವರೇ ಹೇಳಿದ್ದಾರೆ, ಮುಖ್ಯ ನ್ಯಾಯಾಧೀಶರಿಗೂ ಈ ಕೇಸಿಗೂ ಏನೂ ಸಂಬಂಧವಿಲ್ಲವೆಂದು. ಮುಖ್ಯ ನ್ಯಾಯಾಧೀಶರ ಮನೆಯಲ್ಲಿ ಏನೋ ಒಂದು ಅಚಾತುರ್ಯ ನಡೆಯಿತು. ಅದನ್ನವರು ಪೋಲೀಸರಿಗೆ ತಿಳಿಸಿದರು. ಪೋಲೀಸಿನವರು ತನಿಖೆ ನಡೆಸಿ ಮೊಕದ್ದಮೆ ಹೂಡಿದ್ದಾರೆ. ಅಂದ ಮಾತ್ರಕ್ಕೆ ಮುಖ್ಯ ನ್ಯಾಯಾಧೀಶರಿಗೂ ಈ ಕೇಸಿಗೂ ಸಂಬಂಧವಿದೆಯೆಂದು ವಾದಿಸಲಾಗದು. ಪ್ರತ್ಯಕ್ಷವಾಗಲ್ಲದಿದ್ದರೂ ಪರೋಕ್ಷವಾಗಿಯಾದರೂ ಅವರಿದಕ್ಕೆ ಸಂಬಂಧಪಟ್ಟಿದ್ದಾರೆಂದು ಹೇಳುವುದಾದರೆ ಅಷ್ಟರಿಂದಲೇ ಆಪಾದಿತರಿಗೆ ಕೆಳಕೋರ್ಟುಗಳಲ್ಲಿ ನ್ಯಾಯದೊರೆಯುವುದಿಲ್ಲವೆಂದು ಹೇಳಿದರೆ ನಮ್ಮ ದೇಶದ ಎಲ್ಲ ನ್ಯಾಯಾಧೀಶರಿಗೂ ಅಪಮಾನ ಮಾಡಿದ ಹಾಗಾಗುತ್ತದೆ. ಒಂದು ವೇಳೆ ಆಪಾದಿತರು ಹೈಕೋರ್ಟಿನವರೆಗೂ ಹೋಗಿಯೂ ತೀರ್ಮಾನ ಅವರಿಗೆ ವಿರೋಧವಾಗಿದ್ದರೆ ಸುಪ್ರೀಂ ಕೋರ್ಟಿಗೆ ಹೋಗುವುದಕ್ಕೂ ಅವರಿಗೆ ಅವಕಾಶವಿದೆ. ಎರಡನೆಯದಾಗಿ, ಮುಖ್ಯ ನ್ಯಾಯಾಧೀಶರಿಗೆ ಇದು ಸಂಬಂಧಿಸಿರುವುದಾದ್ದರಿಂದ ಬಾಕಿ ನ್ಯಾಯಾಧೀಶರು ಧೈರ್ಯವಾಗಿ ವರ್ತಿಸುವುದಕ್ಕೆ ಭಯಪಡುತ್ತಾರೆಂದು ಭಾವಿಸಿದ್ದರೆ ಮುಖ್ಯ ನ್ಯಾಯಾಧೀಶರನ್ನೇ ವರ್ಗ ಮಾಡಬಹುದಾಗಿತ್ತು. ಕೇಂದ್ರ ಸರ್ಕಾರದವರು ಈ ಯಾವುದಾದರೂ ಒಂದು ರೀತಿಯನ್ನು ಅನುಸರಿಸಬಹುದಾಗಿತ್ತು. ಈಗ ಇದೊಂದನ್ನೂ ಮಾಡದೆ, ಚುಚ್ಚಿಹೇಳುವ ಹಾಗೆ ರಾಷ್ಟ್ರಾಧ್ಯಕ್ಷರ ಮೂಲಕ ಮೈಸೂರು ಸರ್ಕಾರದವರಿಗೆ ಅವಮಾನ ಮಾಡಿದ್ದಾರೆ!! ಆದ್ದರಿಂದ ಶ್ರೀ ಭೀಮಪ್ಪ ನಾಯಕರು ತಂದಿರತಕ್ಕ ವಿಶೇಷ ನಿರ್ಣಯವೇನಿದೆಯೋ ಅದು ಸಂಪೂರ್ಣವಾಗಿ ಈ ಸಭೆಯವರ ಅಂಗೀಕಾರಕ್ಕೆ ಯೋಗ್ಯವಾಗಿರುವುದು. ಅಷ್ಟು ಮಾತ್ರವೇ ಅಲ್ಲ, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಆ ನಿರ್ಣಯ ಇನ್ನೂ ನಿರ್ದಿಷ್ಟವಾಗಿರಬೇಕಾಗಿತ್ತು ಎಂದು ಹೇಳು

(ಶ್ರೀ ಎಚ್. ಕೆ. ವೀರಣ್ಣಗೌಡರು.)

ತ್ತೇನೆ. ಈ ಸಂಸ್ಥಾನದ ಘನತೆ ಗೌರವಗಳನ್ನು ಕಾಪಾಡುವುದಕ್ಕೆ ಸೂಕ್ತ ಕಾರ್ಯಕ್ರಮಗಳನ್ನು ಈ ಸರ್ಕಾರ ಕೈಕೊಳ್ಳಬೇಕೆಂಬ ಅರ್ಥಬರುವಂತೆ ನಿರ್ಣಯದಲ್ಲಿ ಅವರು ಬರೆದಿದ್ದಾರೆ. ನಮ್ಮ ಸರ್ಕಾರದ ನಡವಳಿಕೆಯ ವಿಚಾರದಲ್ಲಿ ನಮಗೆ ಭರವಸೆಯಿದೆ. ನಮ್ಮ ಸಂಸ್ಥಾನದ ಜನತೆಯ ಘನತೆ ಗೌರವಗಳನ್ನು ಕಾಪಾಡುವುದಕ್ಕೆ ಏನು ಕಾರ್ಯಕ್ರಮ ಕೈಕೊಳ್ಳಬೇಕೆಂಬುದು ನಮ್ಮ ಸರ್ಕಾರಕ್ಕೆ ತಿಳಿದಿದೆ. ಆ ಭರವಸೆಯ ಮೇಲೆ ನಾನು ಈ ನಿರ್ಣಯಕ್ಕೆ ಸಂಪೂರ್ಣ ಬೆಂಬಲ ಕೊಡುತ್ತೇನೆ.

ಈಗ ನಮ್ಮ ಸರ್ಕಾರದ ಮುಂದಿರುವ ದಾರಿಯಾವುದೆಂದು ನಿರ್ಣಯದಲ್ಲಿ ನಿರ್ದಿಷ್ಟವಾಗಿ ಹೇಳಿಲ್ಲ. ಆದರೆ ಮಾನ್ಯ ನ್ಯಾಯಾಂಗ ಮಂತ್ರಿಗಳು. ಆ ದಾರಿ ಯಾವುದೆಂಬುದನ್ನು ಸೂಚನೆ ಮಾಡಿದ್ದಾರೆ. ಹೀಗೆಯೇ ಮಾಡುತ್ತೇವೆಂದು ಅವರು ಹೇಳಲಿಲ್ಲ. ಯಾವ ರೀತಿ ಮಾಡಬಹುದೆಂಬುದನ್ನು ಸೂಚಿಸಿದ್ದಾರೆ. ಈಗ ನಮಗಿರುವುದು ಎರಡು ಮಾರ್ಗಗಳು ; ಒಂದು ಅವರು ಎಂದರೆ, ಕೇಂದ್ರ ಸರ್ಕಾರದವರು, ಹೇಳಿದ ಹಾಗೆ ನಡೆದುಕೊಳ್ಳುವುದು. ಆದರೆ ಹೀಗೆ ನಡೆದುಕೊಳ್ಳುವುದು ಸರಿಯಲ್ಲವೆಂಬುದು ಸರ್ವ ವಿದಿತವಾಗಿದೆ, ಹಾಗೆ ಮಾಡಲು ಈ ಸಭೆಯು ಒಪ್ಪಲಾರದು. ಎರಡನೆಯ ಮಾರ್ಗ ಕಂಡ ಹಾಗೆಯೇ ಇದೆ ! ಇಷ್ಟರ ಮೇಲೆ ಈ ಆಜ್ಞೆ ಸರ್ಕಾರದ ಮೇಲೆ, ಮೈಸೂರು ಜನರ ಮೇಲೆ ಹಾಕಿರತಕ್ಕ ಒಂದು ಸವಾಲ್ ಎಂದು ಹೇಳಬಹುದು. ನಾವು ಈ ಸವಾಲನ್ನು ಒಪ್ಪಿಕೊಳ್ಳುತ್ತೇವೆ. ಅದರಿಂದಾಗುವ ಪರಿಣಾಮಗಳಿಗೆ ಸಿದ್ಧರಾಗಿದ್ದೇವೆ ಆದುದರಿಂದ ಈ ನಿರ್ಣಯವನ್ನು ಅಂಗೀಕಾರ ಮಾಡಬೇಕೆಂದು ನಾನು ಹೇಳುತ್ತೇನೆ. ಕೇಂದ್ರ ಸರ್ಕಾರದವರು ಮೈಸೂರನ್ನು ಎಷ್ಟು ಮಟ್ಟಿಗೆ ನಡೆಸಿಕೊಂಡು ಹೋಗುತ್ತಾರೆಂಬುದನ್ನು ನೋಡುವುದಕ್ಕೆ ನಾನು ಸಿದ್ಧವಾಗಿದ್ದೇನೆಂದು ಹೇಳಿ ಶ್ರೀ ಭೀಮಪ್ಪನಾಯಕರು ತಂದಿರುವ ಈ ಸೂಚನೆಗೆ ನಾನು ಪೂರ್ಣ ಬೆಂಬಲ ಕೊಡುತ್ತೇನೆ.

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗಾ ಜಿಲ್ಲೆ).— ಅಧ್ಯಕ್ಷರೆ, ಸ್ವಾಮಿ, ಕೆಲವು ಅನಿವಾರ್ಯಗಳಿಂದ ಈ ಸಭೆಯ ಮುಂದೆ ನನ್ನ ಮಾನ್ಯ ಸ್ನೇಹಿತರಾದ ಶ್ರೀ ಭೀಮಪ್ಪನಾಯಕರು ಮಂಡಿಸಿರತಕ್ಕ ಸೂಚನೆಯ ಮೇಲೆ ಚರ್ಚೆ ಪ್ರಾರಂಭವಾದಾಗ ಸಭೆಯಲ್ಲಿ ನಾನು ಹಾಜರಿರಲಿಲ್ಲ. ಇದರಿಂದ ಕೆಲವು ಮಾನ್ಯ ಸದಸ್ಯರು ವ್ಯಕ್ತಪಡಿಸಿರಬಹುದಾದ ವಿಷಯಗಳನ್ನು ತಿಳಿದುಕೊಳ್ಳುವುದಕೆ. ನನಗೆ ಅವಕಾಶವಿಲ್ಲದಿದ್ದರೂ ಕೂಡ ಈ ವಿಷಯದಲ್ಲಿ ಬಹಳ ವ್ಯಥೆಯಿಂದ ಕೆಲವು ಮಾತುಗಳನ್ನು ಹೇಳಬೇಕೆಂದಿದ್ದೇನೆ. ನನ್ನ ಮಾನ್ಯ ಸ್ನೇಹಿತರು ಸಭೆಯ ಮುಂದೆ ಮಂಡಿಸಿರತಕ್ಕ ಈ ಠರಾವಿನ ಮೊದಲನೆಯ ವಾಕ್ಯದಲ್ಲಿ ಈ ರೀತಿ ಹೇಳುತ್ತಾರೆ : "That this Assemb y has heard with great surprise and regret ...." ಆದರೆ ನನಗೇನೂ surprise ಆಗಿಲ್ಲ. We have heard with regret. It has not come to me as a great surprise.

The Hon'ble Sri H. C. DASAPPA (Minister for Finance and Industries).— To us, it has been really a surprise.

Sri L. SIDDAPPA.—It has been a real surprise to you because you are not living in a realistic world, you are living some where else. That is why you have begun to feel like that.

ಸ್ವಾಮಿ, ಪ್ರಾಯಶಃ ಈ ಹಿಂದೆ ಈ ಠರಾವಿನ ಮೇಲೆ ಮಾತನಾಡಿದ ಸದಸ್ಯರು ರಾಜ್ಯಾಂಗದ ಯಾವ ಆರ್ಟಿಕಲ್‌ನ ಮೇರೆಗೆ ಈ ಸರ್ಕಾರಕ್ಕೆ ಈ ಡೈರೆಕ್ಟಿವ್ ಬಂದಿದೆಯೋ ಅದರ ಚರಿತ್ರೆಯನ್ನು ಸಂಕ್ಷೇಪವಾಗಿ ತಿಳಿಸಿದಾರೆಂದು ನನ್ನ ನಂಬಿಕೆ. ನನ್ನ ಮಾನ್ಯ ಮಿತ್ರರಾದ ಶ್ರೀ ವೀರಣ್ಣಗೌಡರು ಈ ವಿಷಯವನ್ನು ಸಂಕ್ಷೇಪವಾಗಿ ಪ್ರಸ್ತಾಪ ಮಾಡಿದರು. ಮೈಸೂರಿಗೆ ಸಂಬಂಧಪಡತಕ್ಕ ಒಂದು ರಾಜ್ಯಾಂಗವನ್ನು ತಯಾರು ಮಾಡಬೇಕೆಂಬ ದೃಷ್ಟಿಯಿಂದ ಶ್ರೀಮನ್ಮಹಾರಾಜರವರು ಒಂದು ಪ್ರೊಕ್ಲಮೇಷನ್ ಹೊರಡಿಸಿ ಅದರ ಮೇರೆಗೆ ಮಾಡಿದ ರಾಜ್ಯಾಂಗ ಸಭೆಯ ಮುಂದೆ ಎಷ್ಟೋ ವಿಷಯಗಳು ಬಂದು ಏನೇನೋ ಬದಲಾವಣೆಗಳಾಯಿತು. ನಾವೇ ರಾಜ್ಯಾಂಗವನ್ನು ತಯಾರುಮಾಡಬೇಕೆಂದಾಯಿತು. ಅದು ಆಗಲಿಲ್ಲ. ನಂತರ Instrument of Accession ಪ್ರಕಾರ ಮೂರು ಬಾಬುಗಳಲ್ಲಿ ಮಾತ್ರ ದೇಶೀಯ ಸಂಸ್ಥಾನಗಳಿಗಿರತಕ್ಕ ಹಕ್ಕುಗಳನ್ನು ಬಿಟ್ಟು ಇಡೀ ಭರತಖಂಡದ ಕ್ಷೇಮದೃಷ್ಟಿಯಿಂದ Defence, External Affairs and Communications— ಈ ಮೂರು ಬಾಬುಗಳನ್ನು ಬಿಟ್ಟು ನಮಗೆ ಮಿಕ್ಕ ಬಾಬುಗಳಲ್ಲಿ ಸರ್ವಸ್ವಾತಂತ್ರ್ಯವಿರುತ್ತದೆಂದು ನಮ್ಮ ನಾಯಕರು ಭರವಸೆ ಕೊಟ್ಟರು. ದೇಶದ ಬದಲಾವಣೆಯಾಗಿರುವ ಪರಿಸ್ಥಿತಿಯಲ್ಲಿ ನೀವು ನಿಮ್ಮ ಸಂಸ್ಥಾನಕ್ಕೇ ಬೇರೆ ರಾಜ್ಯಾಂಗವನ್ನು ರಚನೆ ಮಾಡುವ ಹಾಗಿಲ್ಲ ; ಇಡೀ ಭರತ ಖಂಡಕ್ಕೇ ಅನ್ವಯಿಸುವ ಒಂದು ರಾಜ್ಯಾಂಗದಲ್ಲಿ ಇದೂ ಕೂಡ ಅಡಕವಾಗುತ್ತದೆಂದು ಭರವಸೆಯನ್ನು ಕೊಟ್ಟರು. ಇಡೀ ಭರತ ಖಂಡದ ಕ್ಷೇಮದೃಷ್ಟಿಯಿಂದ, ಇಡೀ ದೇಶದ ಪ್ರಜೆಗಳ ಕ್ಷೇಮದೃಷ್ಟಿಯಿಂದ ಕೆಲವು ಬಾಬುಗಳನ್ನು ಬಿಟ್ಟುಕೊಡಲು ಒಪ್ಪಬಹುದಾದರೂ ಇನ್ನುಳಿದ ವಿಷಯಗಳಲ್ಲಿ ನಮಗೆ ಸರ್ವ ಸ್ವತಂತ್ರವಿರುತ್ತದೆಂದು ತಿಳಿದು, ಅದಕ್ಕೆ ನಮ್ಮ ಒಪ್ಪಿಗೆಯನ್ನು ಕೊಟ್ಟೆವು. ಆಮೇಲೆ ಈ ವಿವರಗಳನ್ನೊಳಗೊಂಡ ರಾಜ್ಯಾಂಗದ ಕರಡುಪ್ರತಿ ನಮ್ಮ ಕೈಗೆ ಬಂದಿತು. ನಂತರ ದೇಶೀಯ ಸಂಸ್ಥಾನಗಳಿಗೆ ಅನ್ವಯಿಸತಕ್ಕ ಕೆಲವು provi ions ಮತ್ತು ಆ ಸಂಬಂಧವಲ್ಲಿ ಆದ ತಿದ್ದುಪಡಿಗಳನ್ನೊಳಗೊಂಡ ಕರಡುಪ್ರತಿ ಬಂದಿತು. ಅದು ಬಂದಾಗ ಮೈಸೂರಿಗೆ ಅನ್ವಯಿಸುವ ರಾಜ್ಯಾಂಗವನ್ನು ಮಾಡಬೇಕೆಂದು ಕರೆದಿದ್ದ ಸಭೆಯ ಮುಂದೆ ಆ ರಾಜ್ಯಾಂಗದ ಕರಡು ಬಂದು ಕೂಲಂಕಷವಾಗಿ ಚರ್ಚೆ ಮಾಡಲ್ಪಟ್ಟಿತು. ಮೈಸೂರಿನಲ್ಲಿ ನಡೆದ ಅಧಿವೇಶನದಲ್ಲಿ ಆ ಭಾಗ ಚರ್ಚೆಗೆ ಬಂದು 306 ನೆಯ ಆರ್ಟಿಕಲ್ ಚರ್ಚೆಯಾಯಿತು. ಅದು ಈ 371ನೆಯ ಆರ್ಟಿಕಲ್ಲಿನ ಸ್ವರೂಪದಲ್ಲೇ ಬಂದಿತ್ತು. ಆ ಆರ್ಟಿಕಲ್ ಬಂದಾಗ ಅದು ನಿಜವಾಗಿಯೂ ರಾಜ್ಯಾಂಗದಲ್ಲಿ ಅಡಕವಾಗಿದ್ದರೆ ಪರಿಣಾಮ ಯಾವ ರೀತಿಯಾಗುತ್ತದೆ ಎನ್ನುವುದನ್ನು ಯೋಚಿಸಿದೆವು. ಮಹಾತ್ಮಾ ಗಾಂಧಿಯವರ ಒಂದು ಸಾರಿ, ಇಂಡಿಯನ್ ಪೀನಲ್ ಕೋಡಿನಲ್ಲಿ 124–A ಸೆಕ್ಷನ್ ವಿಚಾರ ಹೇಳಿದಾಗ, ಅದು Prince of section ಎಂದು ಹೇಳಿದ್ದರು. ಏಕೆಂದರೆ, ಅದರಿಂದ ದೇಶದಲ್ಲಿ ಏನೇನು ಅನಾಹುತವಾಗಬಹುದೋ ಅದೆಲ್ಲವೂ ಆಗುವಂತೆ ಅದನ್ನು ಬ್ರಿಟಿಷ್ ಸರ್ಕಾರದವರು ಮಾಡಿದ್ದರು. ನಾನು 371 ನೆಯ ಆರ್ಟಿಕಲನ್ನು ನಮ್ಮ ರಾಜ್ಯಾಂಗದಲ್ಲಿರುವ ಆರ್ಟಿಕಲ್ಸ್‌ನಲ್ಲಿ Prince of articles in

the Indian Constitution ಎಂದು ಭಾವಿಸುತ್ತೇನೆ. ಏಕೆಂದರೆ, ಇದರಿಂದ ಎಷ್ಟು ಕಡೆ ಎಷ್ಟು ಜನಾಹುತ, ಎಂತಹ humiliating positionಗೆ ದೇಶೀಯ ಸಂಸ್ಥಾನಗಳನ್ನು ತರಬಹುದೋ ಅಷ್ಟನ್ನೂ ತರುವುದಕ್ಕೆ ಇದನ್ನು ಮಾಡಿದ್ದಾರೆ. ಈ ಕರಡು ನಮ್ಮ ಮುಂದೆ ಬಂದಾಗ ಆಗಿನ ಸಭೆ ಒಮ್ಮತದಿಂದ ಇದನ್ನು ಪ್ರತಿಭಟಿಸಿ, ಇದು ರಾಜ್ಯಾಂಗದಲ್ಲಿ ಅಡಕವಾಗಬಾರದೆಂದು ಹೇಳಿದೆವು. ಆಗ ನಮ್ಮ ರಾಷ್ಟ್ರದ ನಾಯಕರು 'ನಿಮ್ಮ ಸಂಸ್ಥಾನ ಬಹಳ ಚೆನ್ನಾಗಿದೆ, ಮುಂದುವರಿದಿದೆ, ಇದನ್ನು ನಿಮ್ಮ ಸಂಸ್ಥಾನಕ್ಕೆ ಅನ್ವಯಿಸುವುದಿಲ್ಲ; ಆದರೆ ಹಿಂದುಳಿದ ಸಂಸ್ಥಾನಗಳಿವೆ, ಆ ಹಿಂದುಳಿದ ಸಂಸ್ಥಾನಗಳಿರುವುದರಿಂದ ಇಂತಹ ಒಂದು ಅವಕಾಶವನ್ನು ಮಾಡದೇ ಹೋದರೆ ಇಡೀ ಭರತಖಂಡದ ಭದ್ರತೆಗೇ ಇಡೀ ದೇಶದ ಕ್ಷೇಮಕ್ಕೇ ಧಕ್ಕೆ ಬರಹುದು, ಆ ದೃಷ್ಟಿಯಿಂದ ಇದನ್ನಿಟ್ಟುಕೊಳ್ಳಬೇಕು" ಎಂದು ಹೇಳಿದರು. ಆದುದರಿಂದ ಇದನ್ನು ಇಟ್ಟುಕೊಳ್ಳಬೇಕಾಯಿತು. ಕೂಡಲೇ ನಮ್ಮ ಸಂಸ್ಥಾನದ ನಾಯಕರು ಇಂತಹ ಒಂದು ಅವಕಾಶ, ಬೇರೆ ಸಂಸ್ಥಾನಗಳಿಗೆ ಅನ್ವಯಿಸುವಂತೆ ಒಂದು ಅವಕಾಶವಿದ್ದರೂ ಕೂಡ ನಮ್ಮ ಸಂಸ್ಥಾನಕ್ಕೆ ಅನ್ವಯಿಸದೇಯಿರುವಂತೆ ರಾಜ್ಯಾಂಗದಲ್ಲಿ ಅರ್ಥಮಾಡಿಕೊಳ್ಳುವಂತೆ ಮಾಡುತ್ತೇವೆ ಎಂದು ಭರವಸೆ ಕೊಟ್ಟರು.

ಅನಂತರ ಏನಾಯಿತೆಂಬುದನ್ನು ನೋಡೋಣ ಸ್ವಾಮಿ. ಆದರೆ ಇವರು ಹೋರಾಡಲಿಲ್ಲವೆಂದು ನಾನು ಹೇಳುವುದಿಲ್ಲ. ಇವರೂ ಸಹ ಹೋರಾಟಮಾಡಿದ್ದಾರೆಂಬುದು ನಮ್ಮ ಸಂಸ್ಥಾನದ ಪ್ರಜೆಗಳಿಗೂ ಗೊತ್ತಿದೆ. ಏತಕ್ಕಾಗಿ ಇದನ್ನು ಹೇಳುತ್ತಿದ್ದೇನೆಂದರೆ—ಈ ಸಂಬಂಧವಾದ ವಿಚಾರ ಆಗಿಂದಾಗ್ಗೆ ವರ್ತಮಾನ ಪತ್ರಿಕೆಗಳಲ್ಲೂ ಬರುತ್ತಿತ್ತು, ಮತ್ತು ಆಗಾಗ್ಗೆ ಪ್ಲಾಟ್‌ಫಾರಂಗಳಲ್ಲಿ ಚರ್ಚೆ ನಡೆಯುತ್ತಿದ್ದಾಗ ಮತ್ತೂ ಮಾನ್ಯ ಮುಖ್ಯ ಮಂತ್ರಿಗಳು ದೆಹಲಿ ಯಾತ್ರೆಯನ್ನು ಕೈಗೊಂಡು ವಾಪಸ್ಸು ಸಂಸ್ಥಾನಕ್ಕೆ ಹಿಂದಿರುಗಿ ಬಂದಾಗ ಈ ಸಂಬಂಧವಾಗಿ ಏನಾಯಿತೆಂಬುದರ ಬಗ್ಗೆ ಅವರು ಒಂದು ಘೋಷಣೆಯನ್ನು ಹೊರಗೆಡುಹುತ್ತಾರೆಂಬ ಭರವಸೆ ಅನೇಕರಿಗಿತ್ತು. ಮತ್ತು ಅಂಥಾ ಒಂದು ಭರವಸೆ ನನಗೂ ಸಹ ಇತ್ತು. ಆದರೆ ಏನೊಂದು ವಿಷಯವನ್ನು ಈ ಆರ್ಟಿಕಲ್‌ನಲ್ಲಿ ಹೇಳಲಾಗಿದೆಯೋ ಅದರ ಪ್ರಕಾರ ಎಂದರೆ—

"371 Notwithstanding anything in this Constitution during a period of ten years from the commencement thereof, or during such longer or shorter period as Parliament may by law provide in respect of any State the Government of every State specified in Part B of the First Schedule shall be under the general control of, and comply with such particular directions if any, as may from time to time be given by the President.

"Provided that the President may by order direct that the provisions of this article shall not apply to any State specified in the order."

ಹೀಗೆ ಈ ಒಂದು ಪ್ರಾವಿಸೋವನ್ನು ಈ ಆರ್ಟಿಕಲ್‌ಗೆ ಸೇರಿಸಿದ್ದರಿಂದ ಆಗ ನಮಗೆ ಏನೋ ಒಂದು ತರಹ ಭರವಸೆ ಉಳಿಯಿತು.

The Hon'ble Sri K. CHENGALARAYA REDDY.—That proviso was introduced at our instance in the Constituent Assembly.

Sri L. SIDDAPPA.—But with no effect now.

The Hon'ble Sri H. C. DASAPPA.—Wait and see.

ಶ್ರೀ ಎಲ್. ಸಿದ್ದಪ್ಪನವರು.—ಆಗ ನಾವುಗಳೆಲ್ಲರೂ ಇಂಥಾ ಒಂದು ಪ್ರಾವಿಜನ್ ರಾಜ್ಯಾಂಗದಲ್ಲಿ ಅಡಕ ಮಾಡಿದ್ದೂ ಬಹಳ ಒಳ್ಳೆಯದೇ ಆಯಿತು. ಇದಾದನಂತರ ಇವರು ಅಲ್ಲಿಗೆ ಹೋದಾಗ ಕೈಲಾದ ಪ್ರಯತ್ನಮಾಡಿ ಈ ಬಗ್ಗೆ ಇನ್ನೊಂದು ಉಳಿದಿರತಕ್ಕ ನೋಟಿಫಿಕೇಷನ್ನೂ ಸಹ ಹೊರಡಿಸುವಂತೆ ಪ್ರಯತ್ನಮಾಡುತ್ತಿದ್ದಾರೆಂದೂ ನಾವುಗಳೆಲ್ಲರೂ ನಿರೀಕ್ಷಣೆಮಾಡಿಕೊಂಡಿದ್ದೆವು. ಹಾಗೆ ನಾವು ನಿರೀಕ್ಷಣೆಮಾಡುವುದಕ್ಕೆ ಪ್ರಾರಂಭವಾಗಿ, ಈ ಹೊಸ ರಾಜ್ಯಾಂಗವು ಜಾರಿಗೆ ಬಂದು ಒಂದು ವರ್ಷ ಹತ್ತು ತಿಂಗಳಾದಾಗ್ಯೂ ಆ ನೋಟಿಫಿಕೇಷನ್ ಮಾತ್ರ ಹೊರಡಲಿಲ್ಲ. ಆದರೆ ನಾವು ನಮ್ಮ ಸಂಸ್ಥಾನದ ಮಂತ್ರಿಗಳು ಪದೇಪದೇ ದೆಹಲಿ ಯಾತ್ರೆಯನ್ನು ಕೈಗೊಳ್ಳುತ್ತಲೇ ಇದ್ದಾರೆ, ಹೀಗೆ ಆ ಯಾತ್ರೆಯನ್ನು ಕೈಗೊಂಡು ದೆಹಲಿಗೆ ಹೋದಾಗ ಸಂದರ್ಭ ನೋಡಿಕೊಂಡು ರಾಷ್ಟ್ರಾಧ್ಯಕ್ಷರಿಂದ ಈ ಸಂಬಂಧವಾಗಿ ಒಂದು ನೋಟಿಫಿಕೇಷನ್ನನ್ನು ಹೊರಡಿಸುತ್ತಾರೆಂದು ಭಾವಿಸಿದ್ದೆವು. ದೆಹಲಿಗೆ ಹೋಗಿದ್ದ ಮಾನ್ಯ ಮುಖ್ಯ ಮಂತ್ರಿಗಳು ವಾಪಸ್ಸು ಬಂದರೆಂದು ತಿಳಿದಕೂಡಲೇ, ಅವರು ಈ ಸಂಬಂಧವಾಗಿ ಏನಾದರೊಂದು ಪ್ರಕಟಣೆಯನ್ನು ಹೊರಗೆಡಹಬಹುದೆಂದು ನಾವುಗಳೆಲ್ಲರೂ ಭಾವಿಸಿಕೊಂಡಿದ್ದಂತೆ, ಆಗಾಗ್ಗೆ ಅವರೂ ಸಹ ಇದನ್ನು ಹೊರಗೆಡಹುವುದಾಗಿ ತಿಳಿಸುತ್ತಲೇ ಬಂದಿದ್ದರು. ಹೀಗೆ ಅವರು ತಿಳಿಸಿದ್ದ ಅಂಶ ನನ್ನ ಜ್ಞಾಪಕದಲ್ಲಿದೆ. ಆದರೆ ನಾವು ನಿರೀಕ್ಷಣೆಮಾಡಿದ್ದ ಹಾಗೆ ಮತ್ತು ಮಾನ್ಯ ಮಂತ್ರಿಗಳು ನಮಗೆ ಈ ಸಂಬಂಧವಾಗಿ ಒಂದು ನೋಟಿಫಿಕೇಷನ್ ಹೊರಬೀಳುತ್ತದೆಂದು ಭರವಸೆ ಕೊಟ್ಟಿದ್ದಕ್ಕನುಗುಣವಾಗಿ ಆ ನೋಟಿಫಿಕೇಷನ್ ಅನ್ನುವುದು ಇಲ್ಲಿಯತನಕ ಹೊರಡಲಿಲ್ಲ. ಯಾವಾಗ ಆ ರೀತಿಯ ಒಂದು ನೋಟಿಫಿಕೇಷನ್ ಹೊರಬೀಳಲಿಲ್ಲವೋ ಆಗ ತಾವು ಈ 371ನೆಯ ಆರ್ಟಿಕಲ್ ನಮ್ಮ ಮೈಸೂರು ದೇಶಕ್ಕೆ, ಅದು ರಾಜ್ಯಾಂಗ ವಿಧಿಯಲ್ಲಿ ಅಡಕವಾಗಿದ್ದಾಗ್ಯೂ, ಒಂದು ಡೆಡ್ ಲೆಟರ್. ಇದನ್ನು ಪ್ರಯೋಗ ಮಾಡುವಂಥ ಪ್ರಮೇಯಗಳಾಗಲೀ ಅಥವಾ ಅವಕಾಶವಾಗಲೀ ಬರುವುದಿಲ್ಲ. ಇಂಡಿಯಾದಲ್ಲಿರತಕ್ಕ ಕೆಲವು ಸಣ್ಣ ಪುಟ್ಟ ಸಂಸ್ಥಾನಗಳಿಗೆ ಮಾತ್ರ ಉಪಯೋಗಿಸಿ, ಕೇವಲ ಮುಂದುವರಿದಿರುವಂಥ ನಮ್ಮ ಮೈಸೂರಿನ ವಿಚಾರದಲ್ಲಿ ಕೈಹಾಕಲು ಅವಕಾಶವೇ ಇಲ್ಲವೆಂದು ತಾವು ಭರವಸೆ ಕೊಟ್ಟಿದ್ದೀರಿ. ಆಗ ನಾವೆಲ್ಲರೂ ಏನೊಂದು ಭರವಸೆಯನ್ನು ತಮ್ಮ ಬಗ್ಗೆ ಇಟ್ಟುಕೊಂಡಿದ್ದೆವೆಂದರೆ—ಇಂತಹ ಒಂದು ನೋಟಿಫಿಕೇಷನ್ನನ್ನು ಎಲ್ಲಿಯತನಕ ಅವರು ಹೊರಡಿಸುವುದಿಲ್ಲವೋ ಅಲ್ಲಿಯತನಕವೂ, ನಮ್ಮ ಮಂತ್ರಿಗಳೆಲ್ಲಾ ಹೋಗಿ, ಈ ವಿಷಯಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಮತ್ತು ಮಂತ್ರಿಗಳ ಮತ್ತು ರಾಷ್ಟ್ರಾಧ್ಯಕ್ಷರ ಮನೆಗಳ ಮುಂದೆ ಕುಳಿತು ಸತ್ಯಾಗ್ರಹ ಹೂಡುತ್ತಾರೆಂಬ ನಿರೀಕ್ಷಣೆ ಸಹ ಮಾಡಿದ್ದೆವು. ಆದರೆ ಅದ್ಯಾವುದೂ ಆಗಲಿಲ್ಲ. ಇಂಥಾ ಕಾನೂನಿನ ಪ್ರಯೋಗಕ್ಕೆ ಅವಕಾಶವೇ ಇಲ್ಲವೆಂದು ಹೇಳುತ್ತಿದ್ದಂತೆಯೇ, ಇನ್ನು ಈ ಹೊಸ ರಾಜ್ಯಾಂಗ ಜಾರಿಗೆ ಬಂದು ಒಂದು ವರ್ಷ ಒಂಭತ್ತು ತಿಂಗಳಾಗುವುದರೊಳಗಾಗಿಯೇ ಮತ್ತು ಈ ಹೊಸ ರಾಜ್ಯಾಂಗದ ಪ್ರಕಾರ ಹೊಸ ಚುನಾವಣೆಗಳಾಗಿ, ಹೊಸದಾಗಿ ಏರ್ಪಡತಕ್ಕ ಸರ್ಕಾರ ಆಡಳಿತ ವಹಿಸಿ

(ಶ್ರೀ ಎಲ್. ಸಿದ್ದಪ್ಪನವರು.)

ಕೊಳ್ಳುವುದಕ್ಕೆ ಮುಂಚಿತವಾಗಿಯೇ ಇಂಥಾ ಒಂದು ಬಾಣವನ್ನು ನಮ್ಮ ಮೇಲೆ ಪ್ರಯೋಗಮಾಡಿರತಕ್ಕ ವಿಚಾರದಲ್ಲಿ ನಮ್ಮ ಮಾನ್ಯ ಸ್ನೇಹಿತರುಗಳೂ ಮತ್ತು ಮಂತ್ರಿಗಳೂ ತಿಳಿಸಿದ ಪ್ರಕಾರ ನನಗೇನೂ ಇದು ಅಷ್ಟು ಆಶ್ಚರ್ಯಕರವಾಗಿ ಕಂಡುಬರುತ್ತಿಲ್ಲ. ಕಾರಣವೇನೆಂದರೆ—ಎಂದು ನಮ್ಮ ಆ ಹೊಸ ರಾಜ್ಯಾಂಗಕ್ಕೆ ಒಂದು ಪ್ರಾವಿಸೋ ಸೇರಿಸಿ, ಆ ಬಗ್ಗೆ ಇದು ಮೈಸೂರಿಗೆ ಸಂಬಂಧಪಟ್ಟಿಲ್ಲಾ ಎಂಬುದರ ಬಗ್ಗೆ ಒಂದು ನೋಟಿಫಿಕೇಷನ್ನನ್ನು ಹೊರಡಿಸುವುದಾಗಿಯೂ ಹೇಳಿ, ಆದನ್ನು ಹೊರಡಿಸದೆ ಕೈಬಿಟ್ಟರೋ ಅಂದೇ ನಮ್ಮ ದುರ್ದೈವ, ನಮ್ಮ ದೇಶದ ದುರಾದೃಷ್ಟವೆಂದು ಭಾವಿಸಲಾಗಿತ್ತು.

ಹೀಗೆ ನಮ್ಮ ಮೈಸೂರು ಸಂಸ್ಥಾನಕ್ಕೆ ಇರುವಂಥ ಸ್ವಾತಂತ್ರ್ಯದ ಬಗ್ಗೆ ಆಡಳಿತ ವಿಚಕ್ಷಣೆಯ ಬಗ್ಗೆ ಮತ್ತು ದಕ್ಷತೆಯ ಬಗ್ಗೆ ನಾನು ಹೆಚ್ಚಾಗಿ ಹೇಳಬೇಕಾದುದೇನೂ ಇಲ್ಲ. ಅಥವಾ ನಮ್ಮ ದೇಶದ ದಕ್ಷತೆಯ ವಿಚಾರವನ್ನು ನಾವೀಗ ಹೊಸದಾಗಿ ವರ್ಣನೆ ಮಾಡಬೇಕಾದ್ದೂ ಅಗತ್ಯವಿಲ್ಲ. ಇದನ್ನೆಲ್ಲಾ ಹೊರಗಿನಿಂದ ಬಂದವರು ಹೇಳತಕ್ಕ ವಿಚಾರ. ಹಾಗೆ ಯಾರು ಯಾರು ಹೊರಗಡೆಯಿಂದ ನಮ್ಮ ಸಂಸ್ಥಾನಕ್ಕೆ ಬಂದಿದ್ದರೋ, ಅಂಥಾ ಮಹನೀಯರುಗಳೆಲ್ಲರೂ ಇಲ್ಲಿನ ಆಡಳಿತ ವ್ಯವಸ್ಥೆಯ ಬಗ್ಗೆ ಅವರ ಮೆಚ್ಚಿಗೆಯನ್ನು ಬಹಳವಾಗಿ ವ್ಯಕ್ತಪಡಿಸಿದ್ದಾರೆ. ನ್ಯಾಯಾಂಗ ವಿಚಾರದಲ್ಲಿ ಸಹ ಅನೇಕ ಮೇಧಾವಿಗಳೂ, ಮಹಾಮಹಾ ವ್ಯಕ್ತಿಗಳೆಲ್ಲರೂ ಈ ಮೈಸೂರಿನ ದಕ್ಷತೆ ಮತ್ತು ನ್ಯಾಯ ವಿಮರ್ಶನಾಪಾಲನೆಯಲ್ಲಿ ಎಷ್ಟು ನಿರ್ವಂಚನೆಯಿಂದ ಕೆಲಸಮಾಡಲು ಅವಕಾಶವಿರುತ್ತೆಂಬುದನ್ನು ಎತ್ತಿ ಹೇಳಿದ್ದಾರೆ. ಹಾಗೆ ಈ ಸಂಸ್ಥಾನದಲ್ಲಿ ಬಹಳ ಮೇಲು ತರಗತಿಯ ನ್ಯಾಯಸ್ಥಾನಗಳಿಂದ ಹಿಡಿದು ಅತ್ಯಂತ ಕಡೆಯಲ್ಲಿರತಕ್ಕ ಸಣ್ಣ ಸಣ್ಣ ಕೋರ್ಟುಗಳಲ್ಲಿ ಕೆಲಸಮಾಡುತ್ತಿರುವ ಮ್ಯಾಜಿಸ್ಟ್ರೇಟರಿಗೂ ಸಹ ತನ್ನ ಕೋರ್ಟಿಗೆ ದಾಖಲಾಗುವ ವ್ಯವಹಾರದಲ್ಲಿ ನ್ಯಾಯವಿಮರ್ಶೆಮಾಡಿ ತಪ್ಪು ಸಾಬೀತಾದವನನ್ನು ಶಿಕ್ಷೆಗೆ ಗುರಿಪಡಿಸಲು ಸಂಪೂರ್ಣ ಅಧಿಕಾರ ಮತ್ತು ಸ್ವಾತಂತ್ರ್ಯವನ್ನು ಕೊಡಲಾಗಿದೆ. ಉದಾಹರಣೆಗೆ ಹೇಳುವುದಾದರೆ — ಹೆಂದಾವರ್ತಿ ಸರ್ಕಾರದವರು ಏನೋ ಮೈಮರೆತು ಕುಳಿತು ಬಿಟ್ಟದ್ದು, ಅನಂತರ ಕೋರ್ಟಿನಲ್ಲಿ ಪೆಂಡಿಂಗಿನಲ್ಲಿದ್ದಂಥಾ ಕೇಸಿನ ಕಟ್ಟನ್ನು ಸರ್ಕಾರದವರಿಗೆ ಕಳುಹಿಸಿ ಕೊಡಬೇಕೆಂದು ಕೇಳಿದ್ದಂಥ ಸಂದರ್ಭದಲ್ಲಿ ಅದರಲ್ಲೂ ತೀರ ಲೋಯರ್ ದರ್ಜೆಯ ಕೋರ್ಟಿನ ಮ್ಯಾಜಿಸ್ಟ್ರೇಟರಾಗಿದ್ದಂಥವರು ಆ ಡೈರೆಕ್ಟೀವನ್ನು ತಳ್ಳಿಹಾಕಿ ಧೈರ್ಯದಿಂದ ಹಾಗೆ ಕಟ್ಟನ್ನು ಕಳುಹಿಸುವುದಕ್ಕಾಗುವುದಿಲ್ಲವೆಂದು ತಿಳಿಸಿಬಿಟ್ಟರು. ಹಾಗೆ ಪೆಂಡಿಂಗ್ ಕೇಸುಗಳ ರಿಕಾರ್ಡುಗಳನ್ನು ಕೇಳುವ ಅಧಿಕಾರ ಸರ್ಕಾರಕ್ಕಿರುವುದಿಲ್ಲವೆಂಬ ಕಾರಣದ ಮೇಲೆ ಅವರು ಹಾಗೆ ಅದನ್ನು ತಳ್ಳಿಹಾಕಿದ್ದರು. ಆಗ ಹಾಗೆ ಅವರು ವರ್ತಿಸಿದರೆಂದು ಸರ್ಕಾರದವರು ಅವರಿಗೇನೂ ಮಾಡಲಿಲ್ಲ. ಅಂಥ ನಿದರ್ಶನಗಳೂ ಸಹ ಇರುತ್ತವೆಂಬುದನ್ನು ನಾನೀಗ ತಮ್ಮ ಗಮನಕ್ಕೆ ತಂದಿದ್ದೇನೆ. ಈ ವಿಚಾರವನ್ನು ನಾನು ಏತಕ್ಕೆ ತಿಳಿಸಿದೆನೆಂದರೆ ಇದು ನನಗೆ ಚೆನ್ನಾಗಿ ಗೊತ್ತಿತ್ತು. ಇದು ನಡೆದದ್ದೂ ನಮ್ಮ ಶಿವಮೊಗ್ಗಾ ಜಿಲ್ಲೆಯಲ್ಲೇ. ಎರಡನೆಯ ಕ್ಲಾಸ್ ಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿ ಒಂದು ಕೇಸು ನಡೆಯುತ್ತಿದ್ದಾಗ ಸರ್ಕಾರದವರು ಮೈಮರೆತು ಕುಳಿತಿದ್ದು, ಆಗ ಏನೋ ಕೆಲವು ವಿಚಾರ ತಿಳಿಯಲು, ಆ ಕೇಸಿನ ಸಂಬಂಧವಾದ ಫೈಲನ್ನು ಕಳುಹಿಸಿಕೊಡಬೇಕೆಂದು ಡೈರೆಕ್ಟೀವ್ ಕೊಟ್ಟಾಗ ಅಲ್ಲಿನ ಮ್ಯಾಜಿಸ್ಟ್ರೇಟರು, ಹಾಗೆ ಕೋರ್ಟಿನಲ್ಲಿ ಪೆಂಡಿಂಗ್ ಇರತಕ್ಕ ಕಟ್ಟನ್ನು ಕೇಳುವ ಅಧಿಕಾರ ಸರ್ಕಾರಕ್ಕಿಲ್ಲವೆಂದು, ಆ ಡೈರೆಕ್ಟೀವನ್ನು ಧೈರ್ಯದಿಂದ ತಳ್ಳಿಹಾಕಿದರು. ಅಂಥಾ ಒಂದು ನಿದರ್ಶನ ಸಹ ನಮ್ಮ ಮುಂದೆ ಇದೆ. ಹೀಗೆ ಬಹು ಕಾಲದಿಂದಲೂ ನಾವು ನಮ್ಮ ಸಂಸ್ಥಾನದ ನ್ಯಾಯಾಂಗ ಶಾಖೆಯಲ್ಲಿ ನ್ಯಾಯವಿಮರ್ಶೆಮಾಡತಕ್ಕ ನ್ಯಾಯಾಧೀಶರಿಗೆ ಪ್ರತಿಯೊಂದು ಕೇಸಿನಲ್ಲೂ ಅವರ ವಿವೇಚನೆಯನ್ನುಪಯೋಗಿಸಿ, ನ್ಯಾಯವಿಮರ್ಶೆಮಾಡಿ, ಸ್ವತಂತ್ರವಾಗಿ ತೀರ್ಪನ್ನು ಕೊಡುವಂಥ ಅವಕಾಶ ಕಲ್ಪಿಸಿಕೊಟ್ಟಿದ್ದಾಗ್ಯೂ ಇಂಥಾ ಒಂದು ಡೈರೆಕ್ಟೀವನ್ನು ಈಗ ಕೇಂದ್ರದವರು ನಮಗೆ ಕಳುಹಿಸಿರುವುದನ್ನು ನೋಡಿದರೆ ನನಗೆ ತುಂಬಾ ವ್ಯಥೆಯಾಗುತ್ತದೆ. ಯಾರು ಇಷ್ಟೊಂದು ವ್ಯಥೆಗೆಲ್ಲಾ ಕಾರಣರೆಂದು ಶ್ರೀ ವೀರಣ್ಣಗೌಡರು ತಿಳಿಸಿದರೋ, ಅವಕ್ಕೆ ಅವರು ಕಾರಣರಲ್ಲ. ಇಷ್ಟಕ್ಕೆಲ್ಲಾ ಕಾರಣರು ನಾವೇ, ಎಂದರೆ, ನಮ್ಮ ನಾಯಕರೇ ಕಾರಣ. ಬೇರೆ ಯಾರೂ ಅಲ್ಲ. ಇವರು ಪದೇ ಪದೇ ದೆಹಲಿಗೆ ಹೋಗಿ ಅಲ್ಲಿ ಅವರಿಂದ ಭುಜ ತಟ್ಟಿಸಿಕೊಳ್ಳುವ ದೃಷ್ಟಿಯಿಂದ ಅವರು ಹೇಳಿದ್ದಕ್ಕೆಲ್ಲಾ ಇವರು ಸುಮ್ಮನೆ ರುಜುಮಾಡಿ ಬಂದುದೇ ಇಷ್ಟಕ್ಕೆಲ್ಲಾ ಕಾರಣವಾಯಿತು.

Sri H. K. VEERANNA GOWDH.—With what motive?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಏನು! ಹೇಳಿದ್ದಕ್ಕೆಲ್ಲಾ ರುಜು ಹಾಕಿರುವುದು?

Sri L. SIDDAPPA.—In respect of Military personnel, Indian Administrative Service, Railway personnel etc. Still I can quote some more.

The Hon'ble H. C. DASAPPA.—May I just rise to protest against this expression "ಅವರು ಹೇಳಿದ್ದಕ್ಕೆಲ್ಲಾ ಇವರು ಸುಮ್ಮನೆ ರುಜು ಮಾಡಿ ಬಂದುದೇ ಇಷ್ಟಕ್ಕೆಲ್ಲಾ ಕಾರಣವಾಯಿತು?" These are departments which have to be integrated by virtue of the provisions in the Constitution Act. It was not a question of surrendering anything which it was possible to withhold. It was just implementing the provisions of the Constitution Act. There was no question at any time of simply signing over any dotted line. If the history of the integration, political or financial, or any other, is studied, and I welcome him to study, there are files enough in the Secretariat, it will be seen that no other Part-B. State or for the matter of that, any other State, put up such a fight as the Mysore Government have done.

ಶ್ರೀ ಎಲ್. ಸಿದ್ದಪ್ಪನವರು—ಸ್ವಾಮಿ, ಈಗೇನು ಮಾನ್ಯ ಮಂತ್ರಿಗಳು ಹೇಳಿದರೋ ಅದನ್ನು ನಾನು ಖಂಡಿತ ಒಪ್ಪುವುದಕ್ಕಾಗುವುದಿಲ್ಲ. ಮೊನ್ನೆ ತಾನೆ ಅವರ ಅಧ್ಯಕ್ಷತೆಯಲ್ಲಿ ಬಿ. ಎಂ. ಎಸ್. ಇಂಜನಿಯರಿಂಗ್

ಕಾಲೇಜಿನಲ್ಲಿ ನಡೆದ ಒಂದು ಸಮಾರಂಭದಲ್ಲಿ ಆಗಿನ ರಾಜಕೀಯ ವ್ಯವಹಾರದಲ್ಲಿ ನುರಿತ ಒಬ್ಬ ಪ್ರಮುಖ ವ್ಯಕ್ತಿಗಳು ಒಂದು ಭಾಷಣ ಮಾಡಿದರು. ಅದನ್ನು ನಾವು ಕೇಳುವುದಕ್ಕೆ ಅವಕಾಶವಿಲ್ಲದಿದ್ದರೂ ಪತ್ರಿಕೆಗಳಲ್ಲಿ ನೋಡಿದ್ದೇವೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನಾನು ಅಲ್ಲಿ ಅಧ್ಯಕ್ಷತೆ ವಹಿಸಿರಲಿಲ್ಲ.

The Hon'ble Sri K. T. BHASHYAM.—If the Hon'ble Member would allow me to interrupt for a moment—I am sorry to interrupt him—I would suggest that instead of finding fault with each other, it will be more useful to consider what to do to maintain the honour and the dignity of the State. It would be more appropriate to do that. My Hon'ble friend has had large legislative as well as administrative experience and it would not be worth while, if I may humbly suggest, to bandy words across the floor. It would be far better to find some constructive method by which we can maintain the dignity and the honour of the State. I am appealing to the Hon'ble Member to give up the line of argument which he is just now developing and turn to more useful aspects of combating the situation.

ಶ್ರೀ ಎಲ್. ಸಿದ್ದಪ್ಪನವರು.—ನಾನು ಅನಾವಶ್ಯಕವಾಗಿ ಹಿಂದಿನ ವಿಷಯಗಳನ್ನು ಪ್ರಸ್ತಾಪಿಸಿ ಟೀಕೆ ಮಾಡಬೇಕೆಂಬ ಆಸೆಯಿಂದ ಏನೂ ಹೇಳುತ್ತಿಲ್ಲ. ಆದರೆ ಪ್ರತಿಯೊಂದು ದಿವಸವೂ ಈಗುಂಟಾಗಿರುವ ಪರಿಣಾಮವನ್ನು ಅನುಭವಿಸಬೇಕಾಗಿದೆ. ಹಿಂದೆ ಈ ಸಭೆ ಸೇರಿದ್ದಾಗ ಮಿಲಿಟರಿ ಪರ್ಸನೆಲ್‌ಗೆ ಸೇರಿದ ಸುಮಾರು ನಾಲ್ಕಾರು ಸಾವಿರ ಜನರು ಕೆಲಸವಿಲ್ಲದೆ ನಿರ್ಗತಿಕರಾಗುವ ಪರಿಸ್ಥಿತಿ ಬಂದಿತ್ತು. ಈ ದಿವಸ ನಮ್ಮ ರೈಲ್ವೆಯನ್ನು ಕೇಂದ್ರಕ್ಕೆ ವಹಿಸಿದ ಮೇಲೆ ಅವರು ಇಲ್ಲಿನ ಆಫೀಸರುಗಳನ್ನು ಬಹಳ ತಾತ್ಸಾರದಿಂದ ಕಂಡಿದ್ದಾರೆ. ಅವರಿಗೆ ಯಾವ ವಿಧವಾದ ನ್ಯಾಯ ದೊರಕಬೇಕಾಗಿತ್ತೋ ಆ ನ್ಯಾಯ ಕೇಂದ್ರ ಸರ್ಕಾರದಿಂದ ದೊರೆಯುತ್ತಿಲ್ಲ. ಹೀಗೆ ಪ್ರತಿಯೊಂದು ಸಾರಿ ಇಲ್ಲಿ ಸಭೆ ಸೇರಿದಾಗಲೂ ಒಂದಲ್ಲ ಇನ್ನೊಂದು ರೀತಿಯಲ್ಲಿ ಈ ತರಹ ಅಧಿಕಾರವನ್ನು ಅವರಿಗೆ ಬಿಟ್ಟು ಕೊಟ್ಟಿರುವುದರಿಂದ ಅನೇಕ ತೊಂದರೆಗಳು ಕಡು ಬಂದಿರುವುದು. ಏಕೆ ಹಾಗೆ ನಮ್ಮ ಅಧಿಕಾರವನ್ನು ಬಿಟ್ಟು ಕೊಡಬೇಕಾಗಿತ್ತು ? ಮೊನ್ನೆ ಶ್ರೀ ವಿ. ಪಿ. ಮೆನನ್‌ರವರು ಅವರ ಭಾಷಣದಲ್ಲಿ ಪ್ರತಿಯೊಂದು ವಿಚಾರದಲ್ಲೂ ಮೈಸೂರು ಸರ್ಕಾರದವರು ಬಹಳ ಬೆಂಬಲ ಕೊಟ್ಟರು; ನಾವು ಹೇಳಿದ್ದನ್ನೆಲ್ಲಾ ಒಪ್ಪಿದರು ಎಂಬ ಅರ್ಥ ಬರುವಂತೆ ಹೇಳಿದರು.

The Hon'ble Sri H. C. DASAPPA.—Let him not misquote or misread Sri. Menon. He is not here. I can assure the Hon'ble Member that he never made a statement like that.

ಶ್ರೀ ಎಲ್. ಸಿದ್ದಪ್ಪನವರು.—ನಿಮ್ಮ ದಾಕ್ಷಿಣ್ಯಕ್ಕಾಗಿ ಹೇಳುತ್ತಿಲ್ಲ. ಸುಮ್ಮನೆ ಭುಜ ತಟ್ಟಿಸಿಕೊಂಡು ಬರುವುದು ಸರಿಯಲ್ಲ ಎಂದು ನಾವು ಎಷ್ಟೋ ಸಲ ಹೇಳಿದ್ದೇವೆ. ಈ ವಿಚಾರದಲ್ಲಿ ದೆವ್ವ ಬಡಿಸಿದವನು ಹೊಣೆ ಹೊರಬೇಕು ಎಂಬ ಗಾದೆಯಿದೆ. ಆದ್ದರಿಂದ ಏನು ಮಾಡಬೇಕೆಂದು ನಮ್ಮನ್ನು ಕೇಳಬೇಡಿ. ನೀವೇ ನಿಮಗೆ ಪ್ರಶ್ನೆ ಹಾಕಿಕೊಂಡು ನೋಡಿ. ನಿಮ್ಮ ದೇಶದ ಸ್ವಾಭಿಮಾನ ಉಳಿಯಬೇಕೆಂದು ಹೇಳುವುದಾದರೆ ಒಂದೇ ಒಂದು ಮಾರ್ಗ ಈವಾಗ ಉಳಿದಿರುವುದು. ಆ ಮಾರ್ಗವನ್ನು ನೀವು ಅನುಸರಿಸಿ ಮಾನ್ಯ ನ್ಯಾಯಾಂಗ ಸಚಿವರು ಕೂಡ ಅವರ ಭಾಷಣದ ಕೊನೆಯಲ್ಲಿ ಒಂದು ಪ್ರಶ್ನೆಯನ್ನು ಅವರೇ ಹಾಕಿಕೊಂಡಿದ್ದಾರೆ. "What is our position now" ಎಂದು. ಅವರು ಹಾಕಿಕೊಂಡಿರುವ ಪ್ರಶ್ನೆಯ ವಿಚಾರವನ್ನು ಯೋಚನೆ ಮಾಡೋಣ. ಮೈಸೂರು ಸರ್ಕಾರಕ್ಕೆ ಸ್ವಾಭಿಮಾನ ವಿದ್ದರೆ, ಮೈಸೂರು ಜನತೆಯ ಸ್ವಾಭಿಮಾನ ಉಳಿಸಬೇಕೆ ದಿದ್ದರೆ ಒಂದೇ ಒಂದು ಮಾರ್ಗ ನಿಮ್ಮ ಡೈರೆಕ್ಟಿವ್ ನಾವು ಒಪ್ಪುವುದಿಲ್ಲ ಎಂದು ಈ ದಿವಸವೇ ಒಂದು ಟೆಲಿಗ್ರಾಂ ಕಳುಹಿಸಿ. ಮುಂದೆ ಇದರಿಂದ ಆಗ ಬರುವಾದ ಪರಿಣಾಮ ಅಷ್ಟು ಸುಲಭವಾಗಿರುವುದಿಲ್ಲ. ಅದನ್ನೂ ಕೂಡ ನ್ಯಾಯಾಂಗ ಸಚಿವರು ನಮ್ಮ ಮುಂದಿಟ್ಟರು. ಒಂದು ವೇಳೆ ನಮ್ಮನ್ನು ಅಧಿಕಾರದಿಂದ ತೆಗೆದರೂ ಪರವಾಗಿಲ್ಲ. ಇಂಥ ಆಡಳಿತ ನಡೆಸುವುದಕ್ಕೆ ನಾವು ತಯಾರಾಗಿಲ್ಲ ಎಂದು ರಾಜೀನಾಮೆ ಕೊಟ್ಟು ಹೊರಟು ಹೋಗುವುದು ನ್ಯಾಯವಾದ ಮಾರ್ಗ. ಆ ಮಾರ್ಗವನ್ನು ನಿಜವಾಗಿಯೂ ನೀವು ಅನುಸರಿಸುತ್ತೀರಾ ? ಅದು ಬಿಟ್ಟು ಪುನಃ ಸಭೆಯ ಮುಂದಿಟ್ಟು ಇಡೀ ಭಾರತದ ದೃಷ್ಟಿಯಿಂದ ಮುಂದಿನ ವ್ಯವಹಾರ ನಡೆಸಲಾಯಿತು ಎಂದು ಅಥವಾ ಬೇರೆ ಯಾವುದಾದರೂ ನೆಪ ಹೇಳುವುದು, ಈ ಮಾರ್ಗವನ್ನು ಅನುಸರಿಸುತ್ತೀರಾ ?

Janab MAHMOOD SHARIFF.—That is why we asked them to state what steps they are going to take.

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಸಭೆಯ ಮುಂದೆ ಈ ನಿರ್ಣಯ ತಂದಿರುವವರು ಸರ್ಕಾರದವರಲ್ಲ. ಸರ್ಕಾರದವರು ತಮ್ಮ ಅಭಿಪ್ರಾಯ ಹೀಗಿದೆಯೆಂದು ಹೇಳಿದ್ದರೆ ತಾವು ಈ ರೀತಿ ಟೀಕೆ ಮಾಡಬಹುದಾಗಿತ್ತು. ಈಗ ಹಾಗಿಲ್ಲದ್ದರಿಂದ ಸರ್ಕಾರದ ನೀತಿಯೇನು, ಕಾರ್ಯಕ್ರಮವೇನು ಎಂಬುದನ್ನು ಸ್ವಲ್ಪ ಕಾಲಾವಕಾಶಕೊಟ್ಟು ಕೇಳಿದರೆ ತಮಗೇ ಗೊತ್ತಾಗುತ್ತದೆ.

ಶ್ರೀ ಎಲ್. ಸಿದ್ದಪ್ಪನವರು.—ಹಿಂದೆ ಕೂಡ ಎಷ್ಟೋ ಸಾರಿ ಭರವಸೆ ಕೊಟ್ಟಾಗ ಮಾಡಿರುವಂತೆ on further consideration, in the interest of the integrity of the entire nation ಅಥವಾ ನಮ್ಮ ಸರ್ಕಾರಕ್ಕೂ ಮತ್ತು ಕೇಂದ್ರ ಸರ್ಕಾರಕ್ಕೂ ಇರುವ ಒಂದು ಮಧುರ ಬಾಂಧವ್ಯದ ದೃಷ್ಟಿಯಿಂದ ಈ ತರಹ ಮಾಡಿದೆಯೆಂದು ಮುಂದೆ ಹೇಳಬಹುದು ಎಂಬ ದೃಷ್ಟಿಯಿಂದ ಈಗ ನಾನು ಹೀಗೆ ಹೇಳುತ್ತಿದ್ದೇನೆ.

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಆ ಸಂಶಯ ಬೇಡ.

ಶ್ರೀ ಎಲ್. ಸಿದ್ದಪ್ಪನವರು.—ಈ ನಾಲ್ಕು ವರ್ಷಗಳಿಂದ ನೋಡಿದಂತೆ ಸಂಶಯ ಬರುವ ಹಾಗೆ ಮಾಡಿರುವ ನಿರ್ಧಾರಗಳೆಷ್ಟೋ ಇರುವುದರಿಂದ ಈ ರೀತಿ ಹೇಳುತ್ತಿದ್ದೇನೆ. ಎಲ್ಲಾ ದೃಷ್ಟಿಯಿಂದ ನೋಡಿದರೂ ಇರುವುದು ಒಂದೇ ಮಾರ್ಗ. ರಾಜೀನಾಮೆ ಕೊಟ್ಟು, ಪ್ರತಿಭಟಿಸಿ ಇದನ್ನು ಎಫೆಕ್ಟಿಗೆ ಕೊಡುವುದಿಲ್ಲವೆಂದು ಹೇಳಿ ಅದರಿಂದ ಬರುವ ಪರಿಣಾಮವನ್ನು ಅನುಭವಿಸುವುದಕ್ಕೆ ನೀವು ತಯಾರಾಗಿರಬೇಕು. ಏಕೆಂದರೆ ಈ ದಿವಸದ ಬೆಳಗಿನ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಕೇಂದ್ರದಿಂದ ಹೊರಡಿಸಿರುವ ಆರ್ಡರ್‌ಗಳನ್ನು ನಾವು ಎಷ್ಟು ಮಟ್ಟಿಗೆ ಪಾಲಿಸುತ್ತೇವೆಂಬುದನ್ನು ನೋಡುವುದಕ್ಕಾಗಿ ಅವರು ಒಬ್ಬ ಅಡ್ವೈಸರನ್ನು 'ಬಿ' ಭಾಗದ ಸಂಸ್ಥಾನಗಳಿಗಾಗಿ ನೇಮಕ ಮಾಡುತ್ತಾರೆಂದು ಹೇಳಿದೆ.

The Hon'ble Sri K. CHENGALARAYA REDDY.—It is not correct.

ಶ್ರೀ ಎಲ್. ಸಿದ್ದಪ್ಪನವರು.—It is the thin end of the wedge. ಆರ್ಟಿಕಲ್ 371ರ ಪ್ರಕಾರ ಕಾರ್ಯಕ್ರಮ ತೆಗೆದುಕೊಂಡಿದ್ದಾರೆಂದು ಹೇಳಿದರು. ರಾಜ್ಯಾಂಗದ 371ನೆಯ ಆರ್ಟಿಕಲ್ ಪ್ರಕಾರ ಈ ದಿವಸದವರೆಗೆ ಏನೂ ಮಾಡದೆ ಇದ್ದು, ಹಾಗೆ ಮಾಡುವುದಿಲ್ಲವೆಂದು ತಿಳಿದುಕೊಂಡಿದ್ದಾಗ ಈಗ ಈರೀತಿ ಪ್ರಯೋಗ ಮಾಡಿದ್ದಾರೆ. ಆದ್ದರಿಂದ ಹೈದರಾಬಾದ್, ತಿರುವಾಂಕೂರು, ಕೊಚಿನ್ ಮುಂತಾದ ಸಂಸ್ಥಾನಗಳಿಗೆ ಬರುವುದು ನಮಗೂ ಬರುತ್ತದೆಯೆಂದು ಬೇಹುಷಾರಾಗಿರಬಾರದು. ಹಿಂದೆ ಬೇಹುಷಾರಾಗಿದ್ದಾಗ ಎಷ್ಟೋ ತೊಂದರೆಯಾಗಿವೆ. ಆದ್ದರಿಂದ ಒಂದು ವಿಷಯವನ್ನು ಹೇಳಬೇಕಾಗಿದೆ. ನಮ್ಮ ಸಂಸ್ಥಾನದಲ್ಲಿ ಒಬ್ಬ ಮ್ಯಾಜಿಸ್ಟ್ರೇಟರಿಗಿರುವ ಡಿಸ್ಕ್ರೀಷನರಿ ಪವರ್ ಉಪಯೋಗಿಸುವುದಕ್ಕೆ ಪೂರ್ಣ ಸ್ವಾತಂತ್ರ್ಯವಿರುವಾಗ ಯೂನಿಯನ್ ಸರ್ಕಾರದವರು ಒಂದು ಡೈರೆಕ್ಟಿವ್ ಕೊಟ್ಟು discretionary power vested in Government under Section 527 of the Criminal Procedure Code ಪ್ರಕಾರ ಇದರಲ್ಲಿ ಕೇಂದ್ರ ಸರ್ಕಾರ ಪ್ರವೇಶಮಾಡಿ ಹೀಗೇ ಮಾಡಬೇಕೆಂದು ಹೇಳುವುದು ಸರಿಯಲ್ಲ. ನಮಗಿರುವ ಡಿಸ್ಕ್ರೀಷನರಿ ಪವರ್ ಕಿತ್ತುಕೊಂಡು ಈ ರೀತಿಯ ಕಾರ್ಯಕ್ರಮ ಮಾಡಿ ಎಂದು ಕೇಂದ್ರ ಸರ್ಕಾರದವರು ಹೇಳುವುದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಇದು ಬಹಳ ನೋವನ್ನುಂಟುಮಾಡಿದೆ.

ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ).—ಅಂತೂ ನಮಗೂ ಆಶ್ಚರ್ಯವಾಗಿದೆ !

ಶ್ರೀ ಎಲ್. ಸಿದ್ದಪ್ಪನವರು.—ಇನ್ನೊಂದು ದೃಷ್ಟಿಯಿಂದಲೂ ಆಶ್ಚರ್ಯವಾಗುತ್ತದೆ. ಇಂಥ ಅವಿವೇಕ ನಡೆದರೂ ಆ ರೀತಿ ಮಾಡಬೇಡಿ ಎಂದು ಹೇಳುವುದಕ್ಕೆ ಬದಲಾಗಿ ಡಿಸ್ಕ್ರೀಷನರಿ ಪವರ್ ನಿಮಗೇ ಇರುವುದು ಅದನ್ನು ಈ ತರಹ ಉಪಯೋಗಿಸಿ ಎಂದು ಹೇಳುವುದು ಆಶ್ಚರ್ಯವನ್ನುಂಟುಮಾಡಿದೆ. ನೀವು ಕೊಟ್ಟ ಭರವಸೆಯೂ ಈಡೇರಲಿಲ್ಲವಲ್ಲಾ ಎಂದು ನನಗೆ ಆಶ್ಚರ್ಯ. ನಮ್ಮ ಸ್ನೇಹಿತರ ಠರಾವಿನ ಕೊನೆಯ ಭಾಗದಲ್ಲಿ ಈ ರೀತಿ ಹೇಳಿದೆ:

> "That the directive is neither just nor called for and calls upon the State Ministry to take all necessary steps to vindicate the honour and the prestige of the State of Mysore."

ಇದು ಬರೀ ಸ್ಟೇಟ್ ಮಿನಿಸ್ಟ್ರಿಗೆ ಅಲ್ಲ, ಅವಕಾಶ ಇದ್ದಿದ್ದರೆ, I would have further added that our Ministry ....

Sri A. BHEEMAPPA NAIK.—State Ministry means our Ministry.

ಶ್ರೀ ಎಲ್. ಸಿದ್ದಪ್ಪನವರು.—ಇನ್ನೊಂದು ವಿಷಯ ನಾನು ಹೇಳಬೇಕೆಂದಿದ್ದೇನೆ ಸ್ವಾಮಿ. ಅದೇನೆಂದರೆ, ಇವತ್ತು ಬಂದಿರತಕ್ಕ ಡೈರೆಕ್ಟಿವ್‌ನಲ್ಲಿ ಅಡಕವಾಗಿರುವ ಶೈಲಿ ಯಾವ ತರಹ ಇದೆ ಎಂಬುದು. ಏಕೆಂದರೆ ಬ್ರಿಟಿಷ್ ಸರ್ಕಾರ ಇದ್ದಾಗಲೂ ಕೂಡ ಸಂಸ್ಥಾನಗಳಿಗೆ ಡೈರೆಕ್ಟಿವ್ ಬರುತ್ತಾ ಇತ್ತು. ಅವರು ಬಹಳ ಬುದ್ಧಿವಂತರು. ಏನಿದ್ದರೂ 'Request' ಎಂಬುದಾಗಿ ಬಹಳ 'courteous' ಆಗಿ ಬರೆಯುತ್ತಿದ್ದರು. ನಾವು ಅದು ಡೈರೆಕ್ಷನ್ ಎಂಬುದಾಗಿ ಅರ್ಥಮಾಡಿಕೊಳ್ಳಬೇಕೇ ಹೊರತು, ಅವರು ಅವರ ಪತ್ರಗಳಲ್ಲಿ "I hereby direct you to do so and failing which apply against you this section" ಎಂದು ಹೇಳುತ್ತಿರಲಿಲ್ಲ. ಈಗ ಕೇಂದ್ರ ಸರ್ಕಾರದವರ ಯಾವ ತರಹ ಬರೆದಿದ್ದಾರೋ ಆ ತರಹ ಬರೆಯುತ್ತಾ ಇರಲಿಲ್ಲ. ಇದನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಬ್ರಿಟಿಷ್ ಸರ್ಕಾರ ಇದ್ದಾಗ ದೇಶೀಯ ಸಂಸ್ಥಾನಗಳ ಮೇಲೆ ಹತೋಟಿ ಅಧಿಕಾರ ಇಟ್ಟುಕೊಂಡಿದ್ದಾಗಲೂ ಅವರಿಂದ ಬರುತ್ತಾ ಇದ್ದ ಪತ್ರಗಳನ್ನು ನಾವು ಪರಿಶೀಲನೆ ಮಾಡಬೇಕಾದರೆ ಅವರ 'Request' ಎಂದು ಹೇಳಿದರೂ ಅದು ಡೈರೆಕ್ಷನ್ ಎಂಬುದಾಗಿ ನಾವು ಅರ್ಥ ಮಾಡಬೇಕಾಗಿತ್ತೇ ಹೊರತು, ಅವರು ಮಾತ್ರ ಡೈರೆಕ್ಷನ್ ಎಂಬುದಾಗಿ ಹೇಳುತ್ತಿರಲಿಲ್ಲ. ಕೇಂದ್ರ ಸರ್ಕಾರದವರು ದೇಶೀಯ ಸಂಸ್ಥಾನಗಳಿಗೆ ಕಳುಹಿಸತಕ್ಕ ಪತ್ರಗಳಲ್ಲಿ ಈಗ ಆ ತರಹ ಸೌಜನ್ಯ ಕೂಡ ಇಲ್ಲವೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ.

Janab MAHMOOD SHARIFF.—Mr. Speaker the motion that has been placed before the House for its consideration raises very important constitutional issues. The question raises the vexed and much debated point as to how far the Centre can interfere with the day-to-day administration of the respective States, with the decisions which have been arrived at by those States after careful deliberation and circumspection. The motion, if it is passed, will probably tantamount to a constitutional revolt against the Centre. Perhaps it would be the first State which would give a lead to other Part B States. Therefore, while this motion was placed before the House this morning for its consideration, I requested the Chair to give us some time so that we may take into consideration all aspects of the case and points bearing on this subject and give our considered opinion on it. But since it was the desire on the part of many of my colleagues that it should be discussed

threadbare to-day alone, I think we will have to express ourselves as best as possible.

This question requires examination not in its emotional aspect but in a spirit of reason. The question should not be decided in a hurry; we should not be accused tomorrow that we who have been called upon to shape the destinies of eighty lakhs of people were actuated in this matter by an emotional outlook. Every one of us carry some respectability and therefore we have to consider all aspects of the question and come to right conclusion. It seems to me that the chief reason which motivated the Centre to give the directive was this. Here is a case where one of the chief dignitories of the State, namely the Chief Justice is a party to the proceedings and every case emanating from it centres round this personality. Ceaser's wife must be above suspicion and most probably it is this that made the Centre come to this decision. So far as that aspect of the question is concerned, we have got no quarrel about that. The Criminal Procedure Code provides that if the accused comes to apprehend that the proceedings before a particular judicial authority is not going to result without prejudice to his interes , he can make an application and ask the authority to transfer his case and that judicial authority is bound to stop all the proceedings and transfer the case or give him the occasion to appeal to the proper authority. That is quite all right - Now what we have to see is whether the Centre took a proper perspective of it; whether they have taken all aspects into consideration and have given a right decision. That is one question which we have to consider. Examining all aspects of the question, it seems to me that the Centre has not properly exercised its discretion. Six months ago this question was mooted before the Parliament and the Hon'ble Chief Minister said this morning that that part of the discussion has nothing to do with Sri Raju's case.

Some Hon'ble MEMBERS.—Not this case.

Janab MAHMOOD SHARIFF.—Although he said so, but with due deference to him, it seems to me that certain persons who brought that for discussion on the floor of the House there were actuated with a desire to see that Sri Raju's case also might be dealt with and taken away from the file of a Court of Mysore State. In several papers, local and others, in the 'Hindu' for example, it was stated: "look here; this is too much for one individual case; it is not proper on the part of such a big Government to take this decision." In spite of the fact that the Hon'ble Home Minister wanted to take back that amendment, the Parliament insisted that it must be discussed threadbare and the result was that it was voted down.

Next, I would like to ask: is it just on the part of the Centre to go above the head of the Supreme Court? There was the Supreme Court which was seized of the matter. Whatever decision, righteous or unrighteous, some High Court or some court takes, the Supreme Court ought to be approached and get it corrected. (Hear, hear) What is the meaning of the Centre going above the head of the Supreme Court, a body which has been entrusted with the duty of disposal of justice? It seems to me that it is not a correct view. They have not taken these things in proper perspective. They wanted to take shelter under Article 371. It says:—

> "........The Government of every State specified in Part B of the First Schedule shall be under the general control of, and comply with such particular directions............"

It means administrative control. It seems to me that it is very evident. It does not say that a matter which comes under the day-to-day administration, will be under the direct control. If it thinks that something is going to take place, if the person in charge of the State is going to conduct in a prejudicial way, it is only then that the administration comes under the jurisdiction of this section. But, it is not for the sake of a particular individual, it is not for the sake of a group of cases.

(JANAB MAHMOOD SHARIFF).

That would be causing greatest harm so far as independent judiciary is concerned. I am afraid that an impression is going to be created so far as judges are concerned that they have no authority. These are some of the reasons which impel me to say that the Centre has not taken a proper perspective in this matter. Well Sir, I may have to say that there is a great out-cry that we have abdicated our powers. (Hear, hear). About six months ago Sir M. Visvesvaraya, a person who loves Mysore State so much, a person of his experience has issued a statement regarding the administration,—education and other aspects—and he says that we have to regret for having given away military, railways, etc. Some people say that this is a glorified District Board or Municipality. It pains me. Mysore State, as a matter of fact, is foremost in so many respects. Those persons who doubt the tradition of Mysore State, I will say, are not justified in making this remark. Mysore State was the very first State which introduced, for example, the Representative Assembly and several other progressive measures were adopted in the State. In politics also it is foremost. So far as our Judges are concerned, so far as the Magistrates are concerned, they are not going to sell themselves just because some person is acting as the Chief Justice. It is casting aspersion so far as their discretion is concerned. I feel constrained to protest against the directive which has now been given by the Centre. It is really staggering. When it was brought to our notice, it was not possible for us to understand it. Therefore we said we wanted some time to think over the matter. All the Mysoreans are having their eyes on us and the decision we are going to take will be a very important decision. We will have to keep up the prestige of the administration of the Mysore State. Therefore I would request all my colleagues without any hesitation to support the resolution.

Sri L. SIDDAPPA.—What is the advice you are giving?

Janab MAHMOOD SHARIFF.—So far as that is concerned, I know them; they were my colleagues and I am sure they will do the right thing.

The Hon'ble Sri H. C. DASAPPA.—Janab Mahmood Shariff knows us better than the Hon'ble Member Sri Siddappa.

(*Laughter.*)

Sri T. RAMACHAR (Kolar District-General).—On a point of information, Sir. May I know for how long we sit here?

Mr. SPEAKER.—As long as the House wants to sit.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಅಧ್ಯಕ್ಷರೇ, ಭಾರತ ರಾಜ್ಯಾಂಗದ 371ನೆಯ ವಿಧಿಯನ್ನು ಮೈಸೂರಿನ ಮೇಲೆ ಪ್ರಯೋಗಮಾಡಿರತಕ್ಕ ಈ ಸಂದರ್ಭದಲ್ಲಿ ನಮಗುಂಟಾಗಿರತಕ್ಕ ಪಶ್ಚಾತ್ತಾಪ ಎಷ್ಟೆಂಬುದು ಹಿಂದೆ ಮಾತನಾಡಿದ ಮಹನೀಯರ ಭಾಷಣಗಳಿಂದಲೇ ಗೊತ್ತಾಗುತ್ತದೆ. ಇಂದು ನಮ್ಮ ಸಂಸ್ಥಾನದ 90 ಲಕ್ಷ ಪ್ರಜೆಗಳ ಮನನೊಂದಿದೆಯೆಂಬುದರಲ್ಲಿ ಸಂದೇಹವಿಲ್ಲ.

ಈ ಪರಿಸ್ಥಿತಿ ಏಕೆ ಬಂತು ಎನ್ನುವ ವಿಚಾರದಲ್ಲಿ ನಾವು ಸ್ವಲ್ಪ ಆತ್ಮಶೋಧನೆ ಮಾಡಿಕೊಳ್ಳಬೇಕಾದ್ದು ಅವಶ್ಯಕ. ಇದರಿಂದ ನಾವು ಪಶ್ಚಾತ್ತಾಪಪಡಬೇಕಾದುದಷ್ಟೆ ಅಲ್ಲ. ಎಚ್ಚರಿಕೆಗೊಳ್ಳುವ ಅವಶ್ಯಕತೆಯೂ ಇದೆ. ಈ ಸಂದಿಗ್ಧ ಸಂದರ್ಭದಲ್ಲಿ ನಾವು ನಮ್ಮ ಪಾತ್ರವೇನೆಂಬುದನ್ನು ಸಂಪೂರ್ಣವಾದ ಜವಾಬ್ದಾರಿಯಿಂದ ವಿಮರ್ಶಿಸಿ ಕಾರ್ಯಕ್ರಮ ತೆಗೆದುಕೊಳ್ಳಬೇಕಾದ್ದು ಅವಶ್ಯಕ.

ರಾಜ್ಯಾಂಗದ 371ನೆಯ ವಿಧಿಯನ್ನು ಮೊಟ್ಟಮೊದಲು ಜಾರಿಗೆ ತರುವಾಗ ಯಾರೂ ಅದನ್ನು ಸ್ವಾಗತಿಸಲಿಲ್ಲ. ರಾಜ್ಯಾಂಗದಲ್ಲಿ ಇದನ್ನು ಅಡಕಮಾಡಬೇಕೆಂದಾಗ ಬಹಳ ಪ್ರತಿಭಟನೆ ಬಂದಿತು. ಕೆಲವು ಆಶೋತ್ತರಗಳನ್ನೂ, ಭರವಸೆಗಳನ್ನೂ ನೀಡಿದಮೇಲೆ ಇದನ್ನು ರಾಜ್ಯಾಂಗದಲ್ಲಿ ಅಡಕಮಾಡಬಹುದೆಂದು ಸೂಚನೆ ಕೊಟ್ಟರು. ಇವತ್ತಿನವರೆಗೂ ಆ ಭರವಸೆಗಳನ್ನು ಈಡೇರಿಸಿಕೊಳ್ಳುವುದರಲ್ಲಿ ಇನ್ನೂ ನಾವು ಯಶಸ್ವಿಯಾಗದಿರುವುದು ಒಂದು ಲೋಪವೆಂದು ಒಪ್ಪಿಕೊಳ್ಳಲೇಬೇಕು. ಈ ಸಂದರ್ಭದಲ್ಲಿ ನಮ್ಮ ಮೈಸೂರು ಸಂಸ್ಥಾನದ ಘನತೆ ಗೌರವವನ್ನು ಕಾಪಾಡುವುದಕ್ಕೆ ಯಾವ ಕಾರ್ಯಕ್ರಮವನ್ನು ಕೈಕೊಳ್ಳುವುದಕ್ಕೂ ನಾವು ಸಿದ್ಧವಾಗಿದ್ದೇವೆ. ನಾವು ಇತರ ಸಂಸ್ಥಾನಗಳಿಗೆ ಮಾದರಿಯಾಗಿದ್ದು, ಈ 371ನೆಯ ವಿಧಿಯನ್ನು ಅನ್ವಯಿಸದಂತೆ ಮಾಡುವುದಕ್ಕೆ ಪ್ರಯತ್ನಪಟ್ಟಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲವೆಂದು ಧಾರಾಳವಾಗಿ ಹೇಳುತ್ತೇನೆ. ಹಿಂದೊಮ್ಮೆ ಇದೇ ಸಭೆಯಲ್ಲಿ ಈ ವಿಷಯ ಚರ್ಚೆಗೆ ಬಂದಾಗ ಕೊಟ್ಟ ಭರವಸೆಯನ್ನು ಈಡೇರಿಸಲು ಸಾಧ್ಯವಾಗದ ಪಕ್ಷಕ್ಕೆ ಸರ್ಕಾರ ರಾಜಿನಾಮೆ ಕೊಡಬೇಕೆಂದು ನಾನು ಹೇಳಿದೆ. ಆಗಲೇ ಆ ಸೂಚನೆಯನ್ನು (clue) ನೀವು ತೆಗೆದುಕೊಂಡು ಭಾರತ ಸರ್ಕಾರದ ಮೇಲೆ ನಮ್ಮ ಅವಿಶ್ವಾಸವನ್ನೂ ಮತ್ತು ಪ್ರತಿಭಟನೆಯನ್ನೂ ತೋರಿಸಿದ್ದರೆ ನಮಗೀ ಪರಿಸ್ಥಿತಿ ಬರುತ್ತಿರಲಿಲ್ಲ. ಅತಿಕೇಂದ್ರೀಕೃತನಡೆವಳಿಕೆಯಿಂದ ಭಯಭ್ರಾಂತರಾಗುವುದು ಸಹಜ. ಮೊದಲಿನಿಂದಲೂ ನಿಮಗೆ ನಾನು ಎಚ್ಚರಿಕೆ ಕೊಡುತ್ತಲೆ

ಬಂದಿದ್ದೇನೆ. ಅಧಿಕಾರ ಕೇಂದ್ರೀಕೃತ ಮಾಡುವುದು ಸರಿಯಲ್ಲ. ಇದರಿಂದ ಮುಂದೆ ಬಹಳ ತೊಂದರೆ ಯಾಗುತ್ತದೆ ಬೇಡ ಬೇಡವೆಂದು ನಾವು ಈ ಸಭೆಯಲ್ಲಿ ಹೇಳುತ್ತಲೇ ಬಂದೆವು. ಇದನ್ನು ಈಗ ತಮ್ಮ ಅವಗಾಹನೆಗೆ ತರುತ್ತಿದ್ದೇನೆ.

ಅದೆಲ್ಲಾ ಹಿಂದಿನಮಾತು. ಅದೇನೇ ಇರಲಿ, ಇಂದು ನಾವೆಲ್ಲರೂ ಈಗ ತಮ್ಮ ಜೊತೆಯಲ್ಲಿದ್ದೇವೆಂದು ತಿಳಿಯಿರಿ. ನಾವು ಮಾತ್ರವಲ್ಲ; ಇಡೀ ಸಂಸ್ಥಾನದ 90 ಲಕ್ಷ ಪ್ರಜೆಗಳೂ ತಮ್ಮ ಹಿಂದಿದ್ದಾರೆಂಬುದನ್ನು ತಿಳಿಯಿರಿ. 90 ಲಕ್ಷ ಪ್ರಜೆಗಳೂ ನಿಮ್ಮ ಹಿಂದಿದ್ದಾರೆಂಬ ಅಭಿಮಾನದಿಂದಲೇ ತೃಪ್ತರಾಗುವುದು ಸರಿಯಲ್ಲ. ಈ ವಿಷಯ ಇಂದಿಗೇ ಕೊನೆಗಾಣುವುದಿಲ್ಲ. ಅನೇಕ ವಿಷಯಗಳು ಬರತಕ್ಕದ್ದಿವೆ; ಆ ಕಾಲದಲ್ಲಿ ಯಾವರೀತಿ ವರ್ತಿಸಬೇಕೆಂಬುದನ್ನು ದೃಷ್ಟಿಯಲ್ಲಿ ಬೇಕು. ಹಿಂದಿನ ನಡವಳಿಕೆಗಳಿಂದ ನಮ್ಮ ನೀತಿಯನ್ನು ಮುಂದೆ ಸರಿಪಡಿಸಿಕೊಳ್ಳುವುದು ಅವಶ್ಯಕ ಏಕೆಂದರೆ, ಈಗನಾವು ರಾತ್ರಿ ಕಂಡ ಬಾವಿಗೆ ಹಗಲು ಬಿದ್ದಿದ್ದೇವೆ! ವ್ಯಕ್ತಿಗಳನ್ನು ನೋಡಿಕೊಂಡು ಶಾಸನಮಾಡಕೂಡದೆಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಈ ವಿಧಿಯಿರಬೇಕೆಂದು ಪ್ರತಿಪಾದನೆ ಮಾಡಿದ ಮಹನೀಯರು, ಸರ್ದಾರ್ ವಲ್ಲಭಾಯ್ ಪಟೇಲರು. ಅವರು ಮೈಸೂರಿನ ವಿಷಯದಲ್ಲಿ ವಿನಾಯಿತಿ ಕೊಡುತ್ತೇವೆಂದು ಹೇಳಿದ್ದೂ ನಿಜ, ಆದರೆ ಚರ್ಚೆ ಮಾಡುವಾಗ ಕೊಟ್ಟ ಭರವಸೆಗಳಿಂದ ಶಾಸನದ ಬಿಗಿತಪ್ಪುವುದಿಲ್ಲವೆಂಬುದನ್ನೂ ನಾವಿಂದು ಕಲಿತುಕೊಳ್ಳಬೇಕಾಗಿದೆ. ಶಾಸನ ಮಾಡುವಾಗ ಸರ್ಕಾರವು ಬಹಳ ಸಹಾನುಭೂತಿಯಿಂದ ಜಾರಿಗೆ ಕೊಡುತ್ತೇವೆಂದು ಹೇಳುವುದು ಸ್ವಾಭಾವಿಕ. ಆದರೆ ಶಾಸನಗಳು ಶಾಸನಗಳೇ, ಭರವಸೆಗಳು ಭರವಸೆಗಳೇ, ವ್ಯಕ್ತಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಎಂದೂ ಶಾಸನ ಮಾಡತಕ್ಕದ್ದಲ್ಲವೆಂದು ಇದರಿಂದ ಅರಿಯಬೇಕು. ವ್ಯಕ್ತಿಗಳು ಇಂದು ಇರಬಹುದು. ನಾಳೆ ಹೋಗಬಹುದು. ಶಾಸನಗಳು ಶಾಸನ ಕಡತಕ್ಕೆ ಏರಿದಮೇಲೆ ಉಗ್ರಬಾಣಗಳಾಗುತ್ತವೆ. ಅವನ್ನು ಯಾರು ಯಾವ ಕಾಲದಲ್ಲಿ ಯಾರ ಮೇಲೆ ಹೇಗೆ ಪ್ರಯೋಗಮಾಡುತ್ತಾರೆಂಬುದನ್ನು ಈಗ ಹೇಳಲಾಗುವುದಿಲ್ಲ. ಈಗ ದೊಡ್ಡ ಪಾಠವನ್ನು ಇಂದು ಕಲಿತುಕೊಂಡಿದ್ದೇವೆ. ಅವರಿವರ ಭರವಸೆಯನ್ನು ನಂಬಿ ನಾವು ಶಾಸನ ಮಾಡತಕ್ಕದ್ದಲ್ಲ. ಭವಿಷ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು, ದೇಶದ ಪರಿಸ್ಥಿತಿಯನ್ನು ನೋಡಿಕೊಂಡು ಎಲ್ಲರ ಯೋಗಕ್ಷೇಮವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಶಾಸನ ಮಾಡಬೇಕೆಂದು ತಿಳಿಯುವುದಕ್ಕೆ ಒಂದು ಉದಾಹರಣೆ ಇದು.

ಈಗ 371ನೆ ವಿಧಿಯ ಪ್ರಯೋಗವನ್ನು ರಾಷ್ಟ್ರಾಧ್ಯಕ್ಷರು ಮಾಡಿರುವ ಸನ್ನಿವೇಶದ ವಿಷಯದಲ್ಲಿ ಒಂದು ಮಾತು ಹೇಳಬೇಕಾಗಿದೆ. ಮೈಸೂರು ಸಂಸ್ಥಾನದಲ್ಲಿ ನ್ಯಾಯ ದೊರಕುವುದರಲ್ಲಿ ಸ್ವಲ್ಪ ಮಟ್ಟಿಗೆ ಸಂಕುಚಿತವಾದ ಪರಿಸ್ಥಿತಿಯುದಯಂಬ ಭಾವನೆ ಭಾರತ ಸರ್ಕಾರಕ್ಕೆ ಕಂಡುಬಂದ ಪ್ರಯುಕ್ತ ಈ ಪ್ರಯೋಗವನ್ನು ನಮ್ಮ ಮೇಲೆ ಮಾಡಿದ್ದಾರೆ. ಅದರ ನ್ಯಾಯಾನ್ಯಾಯದ ವಿಚಾರದಲ್ಲಿ ವಾದ ವಿವಾದಗಳಿಗೆ ನಾನು ಹೋಗುವುದಿಲ್ಲ. ಶಾಸನ ಕಡತದಲ್ಲಿ ಅವರಿಗೆ ಅಧಿಕಾರವಿರುವುದರಿಂದ ಇಂದು ಅವರು ಈ ಪ್ರಯೋಗ ಮಾಡಿದ್ದಾರೆ ಇದನ್ನು ಪ್ರತಿಭಟನೆ ಮಾಡುವುದು ಬಿಡುವುದು ನಮಗೆ ಬಿಟ್ಟಿದ್ದು. ಅವರಿಗೆ ಈ ಅಧಿಕಾರವನ್ನು ನಾವು ಕೊಟ್ಟಿದ್ದೇವೆಂಬುದನ್ನು ನಾವು ಮರೆಯಬಾರದು. ಅಧಿಕಾರವನ್ನು ಚಲಾಯಿಸಿ ಮಾಡಿದುದು ಸರಿಯೋ ಅಥವಾ ತಪ್ಪೋ ಎಂಬುದನ್ನು ವಿಮರ್ಶೆ ಮಾಡುವುದಕ್ಕೂ ಕೂಡ ನಮಗೆ ಅಧಿಕಾರವಿಲ್ಲ.

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಏಕಿಲ್ಲ?

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಅವರಿಗೆ ಈ ಅಧಿಕಾರವನ್ನು ಚಲಾಯಿಸುವ ಅವಶ್ಯಕತೆ ಕಂಡುಬಂದುದರಿಂದ ಅಧಿಕಾರ ಪ್ರಯೋಗಮಾಡಿದ್ದಾರೆ. ನಮ್ಮ ಅಭಿಪ್ರಾಯದಲ್ಲಿ ಇದರ ಅವಶ್ಯಕತೆ ಇಲ್ಲವೆಂದು ಹೇಳುತ್ತಿದ್ದೇವೆ. ಅವರ ವಿವೇಚನೆಯನ್ನನುಸರಿಸಿ ಅಧಿಕಾರ ಚಲಾಯಿಸುವುದನ್ನು ನಾವು ಪ್ರಶ್ನೆ ಮಾಡುವಹಾಗಿಲ್ಲ. ನಾವು ಭಾರತ ರಾಜ್ಯಾಂಗ ಶಾಸನ ಜಾರಿಗೆ ಬಂದಾಗಿನಿಂದ ಅಧ್ಯಕ್ಷರ ಮೇಲ್ವಿಚಾರಣೆಯಲ್ಲಿಯೇ ಇದ್ದೇವೆ. ಅವರು ಆಗಾಗ ಕೊಡತಕ್ಕ ಆಜ್ಞೆಗಳನ್ನು ಪರಿಪಾಲನೆ ಮಾಡಬೇಕು ಸರ್ಕಾರವನ್ನು ನಡೆಯಿಸಿಕೊಂಡು ಹೋಗುವವರೆಗೆ ನಮ್ಮ ಕರ್ತವ್ಯವನ್ನು ನಾವು ಮರೆಯಬಾರದು. ಈ ಆಜ್ಞೆ ಸರಿಯೋ ಅಥವಾ ತಪ್ಪೋ ಎಂಬುದು ಅವರ ವಿವೇಚನೆಗೆ ಸೇರಿದ್ದು. ನಾನು ಮೊದಲೇ ಹೇಳಿದ ಹಾಗೆ ಈ ಆಜ್ಞೆಯ ಪ್ರಯೋಗ ಸರಿಯೋ ಅಥವಾ ತಪ್ಪೋ ಎಂಬುದನ್ನು ವಿಮರ್ಶೆಮಾಡಲು ನಾವು ಆತ್ಮಶೋಧನೆ ಮಾಡಿಕೊಳ್ಳಬೇಕು. ಮುಂದೆ ನಾವು ಎಚ್ಚರಿಕೆಯಿಂದ ಹೋಗಬೇಕೆಂಬ ಅಂಶವನ್ನು ಪುಷ್ಟೀಕರಿಸುವುದಕ್ಕಾಗಿ ನಾನು ಇಷ್ಟು ಹೇಳುತ್ತಿರುವುದು. ಇಂತಹ ಪರಿಸ್ಥಿತಿ ಉದ್ಭವವಾಗುವುದಕ್ಕೆ ಅವಕಾಶವಿತ್ತೇ ಅಥವಾ ಇಲ್ಲವೇ ಎಂಬುದನ್ನು ನಾವು ಯೋಚನೆಮಾಡಬೇಕು. ಈ ತರಹ ಪರಿಸ್ಥಿತಿಗಳು ಏಕ್‌ದಮ್ ಉದ್ಭವವಾಗುವುದಿಲ್ಲ. ಕಾಲಕ್ರಮದಲ್ಲಿ ಈ ಅಧಿಕಾರಪ್ರಯೋಗ ಮಾಡುವ ಭಾವನೆ ಅವರ ಮನಸ್ಸಿನಲ್ಲಿ ಬೆಳೆಯುವುದಕ್ಕೆ ಯಾರು ಏನೇನು ಮಾಡಿದರೋ ಗೊತ್ತಿಲ್ಲ. ಅಂತೂ ಆ ಅಭಿಪ್ರಾಯ ಅವರ ಮನಸ್ಸಿನಲ್ಲಿ ಬೆಳೆಯಿತು. ಇದನ್ನು ಅಳಿಸುವುದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದು ನಮ್ಮ ಜವಾಬ್ದಾರಿಯಾಗಿತ್ತು.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಏನು ಮಾಡಬೇಕಾಗಿತ್ತು?

* ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಸ್ವಾಮಿ, ಈ ಟೆನೆನ್ಸಿಬಿಲ್ ವಿಚಾರದಲ್ಲಿ ಈಗ ಎರಡು ಮೂರು ದಿವಸ ಚರ್ಚೆ ನಡೆದದ್ದರಲ್ಲಿ ಪ್ರತಿಯೊಬ್ಬರೂ ಹೇಳಿರುವುದನ್ನು ನೋಡಿದರೆ ಇದು ಸರ್ವ ಸಂಪೂರ್ಣವಾಗಿಲ್ಲ. ಎಲ್ಲರಿಗೂ ತೃಪ್ತಿಕರವಾಗಿರುವ ಹಾಗೆ ಈ ಕಾನೂನು ರಚಿತವಾಗಿಲ್ಲ, ಆದರೂ ಕೂಡ ಈ ಮಸೂದೆಯನ್ನು ನಾವು ಸ್ವಾಗತಿಸಬೇಕಾಗಿದೆ ಎಂಬುದಾಗಿ ಗೊತ್ತಾಗುತ್ತಿದೆ. ಕೆಲವು ಮಾನ್ಯ ಸದಸ್ಯರು ಈ ವಿಚಾರದಲ್ಲಿ ದೀರ್ಘವಾಗಿ ಭಾಷಣ ಮಾಡಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಏನೆಂದರೆ ಹಿಂದೆ ಇದ್ದುದಕ್ಕಿಂತಲೂ ಈಗ ಈ ಕಾನೂನು ಪ್ರಕಾರ ಏನು ಸೌಲಭ್ಯಗಳನ್ನು ರೈತರಿಗೆ ಅಥವಾ ಗುತ್ತಿಗೆದಾರರಿಗೆ ಒದಗಿಸಿಕೊಟ್ಟಿದ್ದಾರೆ, ಇದರ ಪರಿಣಾಮ ಜಮೀನ್‌ದಾರರಿಗೆ ಏನಾಗಿದೆ ಎಂಬುವನ್ನು ನಾವು ವಿಮರ್ಶೆ ಮಾಡಬೇಕಾಗಿದೆ. ಈ ಕಾನೂನು ಬರುವುದಕ್ಕೆ ಮುಂಚೆ ಜಮೀನ್‌ದಾರರು ಮತ್ತು ಗುತ್ತಿಗೆದಾರರು ಅಥವಾ ವಾರದಾರರು ಇವರುಗಳ ಪರಸ್ಪರ ಸಂಬಂಧ Transfer of Property Act ಪ್ರಕಾರ ನಿರ್ದಿಷ್ಟವಾಗಿತ್ತು ಮತ್ತು ಅದರ ಪ್ರಕಾರ ನಡೆಯಬೇಕಾಗಿತ್ತು. ಗುತ್ತಿಗೆ ವಿಚಾರದಲ್ಲಿ ಒಂದು ಚಾಪ್ಟರ್ ಇದೆ. ಅದರಲ್ಲಿ ಏನಿದೆ ಎಂದರೆ ಅವರವರ ಪರಸ್ಪರ ಒಪ್ಪಂದದ ಪ್ರಕಾರ ಆಗುತ್ತಿಗೆಗಳೆಲ್ಲಾ ನಡೆಯಬೇಕು. ಹಾಗೇನಾದರೂ ಪರಸ್ಪರ ಲಿಖಿತ ಮೂಲಕ ಒಪ್ಪಂದವಿಲ್ಲದಿದ್ದರೆ ವ್ಯವಸಾಯಕ್ಕೆ ಸಂಬಂಧಪಟ್ಟ ಜಮೀನುಗಳಿಗೆ ಏಕ್‌ಸಾಲ್ ಮಾತ್ರ ಇರುತ್ತದೆ. ಅದನ್ನು ತಪ್ಪಿಸಬೇಕಾದರೆ 6 ತಿಂಗಳ ಅವಧಿಯಷ್ಟು ನೋಟೀಸ್ ಕೊಟ್ಟು ತಪ್ಪಿಸಬೇಕೆಂದು ಇತ್ಯಾದಿಯಾಗಿ ಕಾನೂನು ಇತ್ತು. ಮತ್ತು ಜಮೀನ್‌ದಾರರ ಹಕ್ಕು ಬಾಧ್ಯತೆ ಏನು; ಗೇಣೀದಾರರ ಅಥವಾ ವಾರದಾರರ ಹಕ್ಕು ಬಾಧ್ಯತೆ ಏನು; ಒಂದು ವೇಳೆ ಗುತ್ತಿಗೆದಾರ ಏನಾದರೂ ಸರಿಯಾಗಿ ನಡೆದುಕೊಳ್ಳದಿದ್ದರೆ ಯಾವ ರೀತಿ ಅವನನ್ನು ಜಮೀನಿನಿಂದ ತಪ್ಪಿಸಬಹುದು ಎಂಬುದು ಸ್ಪಷ್ಟವಾಗಿತ್ತು. ಇವತ್ತು ಆ ಕಾನೂನನ್ನು ಇದರಿಂದ ತೆಗೆದು ಹಾಕಿದ್ದಾರೆ. ಆ ಕಾನೂನು ಈಗ ಅನ್ವಯಿಸುವುದಿಲ್ಲ. ಈ ಮಸೂದೆ ಒಂದು ಹೆಜ್ಜೆ ಮುಂದೆ ಹೋಗಿದೆ. ಮತ್ತು ಈಗ ವಿವಾದಗಳು ಸಮಸ್ಯೆಗಳು ಬಂದರೆ ಅವನ್ನು ಆಗ ಸಿವಿಲ್ ಕೋರ್ಟಿನಲ್ಲಿ ಪರಿಹಾರ ಮಾಡಿಕೊಳ್ಳಬಹುದಾಗಿತ್ತು. ಈ ಕಾನೂನು ಪ್ರಕಾರ ಸಿವಿಲ್ ಕೋರ್ಟು ಜ್ಯೂರಿಸ್‌ಡಿಕ್ಷನ್ ತೆಗೆದು ಹಾಕಿದ್ದಾರೆ. ತೆಗೆದು ಹಾಕಿಬಿಟ್ಟು ಇಲ್ಲ ಮಾಡಿರುವುದೇನೆಂದರೆ—ಸೆಕ್ಷನ್ ವಿಚಾರದಲ್ಲಿ ಆಗಲೇ ಹೇಳಿದ್ದಾರೆ. ಆದ್ದರಿಂದ ನಾನು ಸೆಕ್ಷನ್ ವಿಚಾರ ಹೇಳುವುದಿಲ್ಲ. ಏನೇ ಇರಲಿ—ಪ್ರತಿಯೊಬ್ಬ ಗೇಣಿದಾರನಿಗೆ ಅಥವಾ ವಾರದಾರನಿಗೆ ಇಲ್ಲಿಂದ ಮುಂದೆ ವ್ಯವಸಾಯ ಶುರು ಮಾಡಿದರೆ 5 ವರ್ಷ ಅವನೇ ಜಮೀನು ಮಾಡಬೇಕು ಎಂಬುದಾಗಿ ನಿರ್ಧಾರವಾಗಿದೆ. ಅದನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ಶ್ರೀಕಂಠೇಶ್ವರ್‌ರವರು ಮತ್ತು ಕಡಿದಾಳ್ ಮಂಜಪ್ಪನವರು 10 ವರ್ಷ ಇದ್ದಿದ್ದರೆ ಚೆನ್ನಾಗಿತ್ತು ಎಂದು ಹೇಳಿದರು. ನಾನು ನಮ್ಮ ಮೈಸೂರಿನ ಕಡೆಯ ಜನಾಭಿಪ್ರಾಯ ಹೇಳುತ್ತೇನೆ. ಇದು ಬಹಳ ಅನರ್ಥಕಾರಿಯಾದದ್ದು ಎಂಬುದಾಗಿ ಆ ಕಡೆಯ ಜನಗಳಿಗೆ ಬಹಳ ಭೀತಿ ಬಂದಿದೆ. ಈ ವಾರ ಮಾಡುವವರು ಗುತ್ತಿಗೆ ಮಾಡುವವರು ಯಾರು ಎಂಬುದನ್ನು ಶ್ರೀಮಾನ್ ಶ್ರೀಕಂಠೇಶ್ವರ್‌ರವರು ತಿಳಿದುಕೊಂಡರೆ ಅವರು ತಮ್ಮ

ವಾದವನ್ನು ಸ್ವಲ್ಪ ಮಾರ್ಪಡಿಸಿಕೊಳ್ಳುತ್ತಾರೆ ಎಂದು ತಿಳಿದುಕೊಂಡಿದ್ದೇನೆ. ಸ್ವಲ್ಪ ಮಟ್ಟಿಗೆ ಜಮೀನು ಇದ್ದು, ಇರಲಿ ಆ ಜಮೀನು ಬೇರೊಬ್ಬರ ಜಮೀನು ಮಾಡೋಣ ಎಂಬ ಉದ್ದೇಶ ಕೆಲವರಿಗೆ, ಇನ್ನೇನೂ ಜೀವನಕ್ಕೆ ಮಾರ್ಗವಿಲ್ಲದೆ ಕೂಲಿ ರೂಪದಲ್ಲಿ ಕೆಲಸ ಮಾಡುವುದಕ್ಕೆ ಬದಲು ಈ ರೀತಿ ವ್ಯವಸಾಯ ಮಾಡುವುದಕ್ಕೆ ಬರುವವರು ಕೆಲವರು. ಹೀಗೆಲ್ಲಾ ಇದೆ. ಯಾವ ಮಹಾರಾಯ ಶ್ರದ್ಧಾಸಕ್ತಿಯಿಂದ ಜಮೀನು ಮಾಡಿಕೊಂಡು, ಜಮೀನ್‌ದಾರರಿಗೆ ಕೊಡುವುದನ್ನು ಕೊಟ್ಟುಕೊಂಡು ಹೋಗುತ್ತಾನೆಯೋ ಅಂಥವನನ್ನು 10 ಅಲ್ಲ 20 ವರ್ಷ ಬದಲಾಯಿಸದೆ ಇರುವ ಸಂದರ್ಭಗಳೂ ಇವೆ. ಗುತ್ತಿಗೆದಾರ ಬಹಳ ದಿನದಿಂದ ಇದ್ದು ಈ ಕಾನೂನು ಬರುತ್ತದೆ ಎಂಬುದಾಗಿ ನಾನೇ ಒಂದು ಚೀಟಿ ಬರೆಸಿಕೊಂಡು ಬಂದೆ ಎಂಬುದಾಗಿ ಶ್ರೀಮಾನ್ ಕಡಿದಾಳ್ ಮಂಜಪ್ಪನವರೂ, ಶ್ರೀಮಾನ್ ಶ್ರೀಕಂಠೇಶ್ವರವರೂ ಹೇಳಿದರು. ಅನೇಕ ವಾರದಾರರು, ಗುತ್ತಿಗೆದಾರರು ಎಂಥವರು ಎಂದರೆ ಜಮೀನು ಅವರ ಕೈಗೆ ಸಿಕ್ಕಿ ಬಿಟ್ಟರೆ ಸಾಕು, ಅವರು ವ್ಯವಸಾಯ ಮಾಡುವುದಿಲ್ಲ; ಒಂದು ಪಾವು ಗೊಬ್ಬರ ಹಾಕುವುದಿಲ್ಲ; ಗೊಬ್ಬರ ಕೊಟ್ಟರೆ ಗೊಬ್ಬರ ಮಾರಿಕೊಳ್ಳುತ್ತಾರೆ; ಬೀಜ ಕೊಟ್ಟರೆ ಅದನ್ನು ತಿಂದುಹಾಕುತ್ತಾರೆ; ಎತ್ತುಗಳನ್ನು ಕೊಟ್ಟರೆ ರಾತ್ರೋ ರಾತ್ರಿ ಅವುಗಳನ್ನು ಮಾರಿಕೊಂಡಿರುವ ಪ್ರಸಂಗಗಳೂ ಇವೆ. ಅಂಥಾ ಗೇಣಿದಾರ ಅಥವಾ ವಾರದಾರನಿಗೆ, 5 ವರ್ಷ ನಿನಗೇ ಪಟ್ಟ ಎಂದು ಹೇಳಿದರೆ ನಮ್ಮ ಕಡೆ ಭೀತಿ ಪಡುತ್ತಾರೆ. 5 ವರ್ಷ ಇಟ್ಟಿರುವುದರಿಂದಲೇ ಎಷ್ಟೋ ತೊಂದರೆಗಳಿವೆ. ಅದನ್ನು 10 ವರ್ಷ ಮಾಡಿದರೆ ನಮ್ಮ ದೇಶದಲ್ಲಿ ಇನ್ನು ಮೇಲೆ ಶ್ಯಾನುಭೋಗರ ಲೆಕ್ಕದಿಂದ ಬಾಗಾಯ್ತು ಎಂಬುದನ್ನು ಹೊಡೆದು ಹಾಕಬೇಕಾದ ಪರಿಸ್ಥಿತಿ ಬರುತ್ತದೆ ಎಂದು ನಾನು ಘಂಟಾ ಘೋಷವಾಗಿ ಹೇಳುತ್ತೇನೆ. ಅವರಿಗೂ ಗೊತ್ತಿದೆ. 25-30 ವರ್ಷಗಳಿಂದ, ತಲೆತಲಾಂತರದಿಂದ ಬೆಳೆಸಿಕೊಂಡು ಬಂದ ಧ್ರುವ ಪೈರು, ಅಡಿಕೆ, ತೆಂಗು ಮುಂತಾದ ಫಲಗಳನ್ನು ಕೊಡತಕ್ಕ ವೃಕ್ಷಗಳನ್ನು ಒಂದು ವರ್ಷ ಅನಾದರಣೆ ಮಾಡಿದರೆ ಅದರಿಂದ ಏನು ತೊಂದರೆ, ಯಾವ ಪರಿಣಾಮವಾಗುತ್ತದೆ ಎಂಬುದನ್ನು ನೋಡಬೇಕು, ಅದರ ಅನುಭವ ನಮಗಿದೆ. ತೋಟದಲ್ಲಿ ಅವರು ಯಾವ ರೀತಿ ಕೆಲಸ ಮಾಡುತ್ತಾರೆ ಎಂಬುದನ್ನು ನಾನು ಮಾನ್ಯ ಅಧ್ಯಕ್ಷರಲ್ಲೂ ಕೂಡ ಸ್ಪೆಷಲ್ ಆಗಿ ಬಿನ್ನಹ ಮಾಡಿಕೊಂಡಿದ್ದೇನೆ. ಬೇಲಿ ಸರಿಯಾಗಿಲ್ಲದೆ ಇರುವುದನ್ನು ಸರಿಪಡಿಸುವುದಿಲ್ಲ. ದನ ಬಿಟ್ಟು ಬಿಟ್ಟು ಮೇಯಿಸುತ್ತಾನೆ. ಅಂಥವನಿಗೆ 5 ವರ್ಷ ಒಂದು ತೋಟ ಕೊಟ್ಟು ಬಿಟ್ಟರೆ ಆ ತೋಟದ ಗತಿ ಏನು? ಅನಾದರಣೆ ಮಾಡಿದ ಪಕ್ಷದಲ್ಲಿ ಬಿಡಿಸಿಕೊಳ್ಳಬಹುದು ಎಂಬುದಾಗಿ ಏನೋ ಹೇಳುತ್ತೀರಿ. ಕುರಿ ಹೋದ ಮೇಲೆ ಕಂಬಳಿ ಕಿತ್ತುಕೊಂಡರು ಅನ್ನುವ ಹಾಗೆ ಏನು ಪ್ರಯೋಜನ? 25-30 ವರ್ಷ ಬೆಳೆಸಿದ ತೆಂಗಿನ ಮರ, ಅಡಿಕೆ ಮರಗಳನ್ನು ಗೇಣಿಗೆ ಕೊಟ್ಟ ಕಾಲದಲ್ಲಿ ಒಂದು ವರ್ಷ ಅನಾದರಣೆ ಮಾಡಿ ನೀರು ಕಟ್ಟದಿದ್ದರೆ ಒಣಗಿಹೋಗುತ್ತವೆ. ಹಾಗೆ ಒಣಗಿ ಹೋದ ಮೇಲೆ ಅವನ್ನು ಇಟ್ಟುಕೊಂಡರೆ ತಾನೆ ಏನು ಬಿಟ್ಟರೆ ತಾನೆ ಏನು? ಅಂಥಾ ಸಂದರ್ಭದಲ್ಲಿ ಈ ಕಾನೂನು ಪ್ರಕಾರ ಏನು ರಕ್ಷಣೆ ಇದೆ ಎಂಬುದನ್ನು ನೋಡಬೇಕು. ಅನಾದರಣೆ ಮಾಡಿದರೆ, ನಾಶಪಡಿಸತಕ್ಕ ಸಂದರ್ಭಗಳಿದ್ದರೆ, ಜಮೀನನ್ನು ಅವನಿಂದ ಬಿಡಿಸಿಕೊಳ್ಳಬಹುದು ಎಂಬುದಾಗಿ ಏನೋ ಇದೆ. ಬಿಡಿಸಿಕೊಳ್ಳುವುದಕ್ಕೆ ಮೂರು ವರ್ಷ ಆಗುತ್ತದೆ. ಅಂಥಾ ಸಂದರ್ಭದಲ್ಲಿ ಜಮೀನ್‌ದಾರ ಅವನನ್ನು ಬಿಡಿಸುವ ಹಾಗಿಲ್ಲ, ರೈತ ಉದ್ಧಾರವಾಗುವ ಹಾಗಿಲ್ಲ. ನಾನು ಹೇಳುವುದು ಇಷ್ಟೇ. ಗೇಣಿದಾರರು ಸತ್ಯವಂತರಾಗಿ, ಶ್ರದ್ಧಾಸಕ್ತಿಯಿಂದ ಕೆಲಸಮಾಡತಕ್ಕವರಿದ್ದಾರೆ, ಅಂಥವರಿಗೆ ಈ ಕಾನೂನು ಅನ್ವಯಿಸಬೇಕಾಗಿಲ್ಲ. ಶ್ರೀಮಾನ್ ಶ್ರೀಕಂಠೇಶ್ವರರವರು ಮಾತನಾಡುತ್ತಾ ಇದೇನಿದ್ದರೂ ಜಮೀನಿಟ್ಟುಕೊಂಡಿರುವವರ ಉದ್ಧಾರಕ್ಕೆ, ಸೌಕರ್ಯಕ್ಕೆ ಮಾಡಿಕೊಂಡಿದ್ದಾರೆಯೇ ವಿನಃ ಟೆನೆಂಟ್ಸ್‌ಗೇನೂ ಉಪಯೋಗ ಇಲ್ಲ ಎಂದು ಹೇಳಿದರು. ಹಾಗಾದರೆ ಮೂಲಭೂತ ಹಕ್ಕು ಏಕೆ ಇರಬೇಕು ?

ಜಮೀನು ಎಲ್ಲಿಯವರೆಗೆ private property ಎಂದು ತಾವು ಅಂಗೀಕಾರ ಮಾಡುತ್ತೀರೋ, ಮತ್ತು ಎಲ್ಲಿಯವರೆಗೆ private property ಎಂದಿರುವುದನ್ನು ಈ ಸಭೆ ಮತ್ತು ರಾಜ್ಯಾಂಗ ಒಪ್ಪಿದೆಯೋ ಅಲ್ಲಿಯವರೆಗೆ ನನ್ನ ಮೇಲೆ ಹಿಡಿತಮಾಡುವವರು ಯಾರು !

ಒಬ್ಬ ಸದಸ್ಯರು.—ವಾರೆ ವಹವಾ !

ಶ್ರೀ ಎಸ್. ರಂಗರಾಮಯ್ಯನವರು.—ವಾರೆ ವಹವಾ!, ಎಂದು ಹೇಳಬಹುದು. ಈ ದಿವಸ ಹೀಗೆ ಸುಲಲಿತವಾಗಿ ಮಾತನಾಡುತ್ತಾ ನಾವು ರೈತರನ್ನೆಲ್ಲಾ ಉದ್ಧಾರಮಾಡುತ್ತೇವೆ, ಜಮೀನುಗಳನ್ನೆಲ್ಲಾ ಬಿಡಿಸಿಕೊಟ್ಟುಬಿಡುತ್ತೇವೆಂದು ಈ ಮಾನ್ಯ ಮಿತ್ರರುಗಳು ಎತ್ತಿರುವುದೇ ಈಗ ಇಷ್ಟೆಲ್ಲಾ ಅಲ್ಲೋಲಕಲ್ಲೋಲವಾಗಿರುವುದಕ್ಕೆ ಕಾರಣವಾಗಿರುವುದು ; ಈಗ ಕಾಗೋಡಿನಲ್ಲಿ ಒಂದು ಸಾವಿರ ಎಕರೆಯನ್ನು ಒಬ್ಬ ಮನುಷ್ಯ ಇಟ್ಟುಕೊಂಡಿದ್ದಾನೆಂದು ಹೇಳಿ, ಅದನ್ನು ಕಿತ್ತು ರೈತರಿಗೆ ಕೊಡುತ್ತೇನೆಂದು ಹೇಳಿ ಗಲಾಟೆಯೆಬ್ಬಿಸಿ, private property ಇಟ್ಟುಕೊಳ್ಳುವ ಹಕ್ಕನ್ನು ಸರ್ಕಾರ ಕೊಟ್ಟಿರುವಾಗ, ನೂರಾರು ವರ್ಷದಿಂದ ಜಮೀನ್ದಾರನ ಜಮೀನನ್ನು ರೈತರಿಗೇ ಕೊಡುತ್ತೇವೆಂದು ಹೇಳಿದ್ದೇ ಈಗ ಅಲ್ಲಕಲ್ಲೋಲವಾಗಿ ಅಖಿಲ ಭಾರತ ಪ್ರಶ್ನೆಯಾಗಿ ಕೂತಿದೆ,

ಶ್ರೀ ಎಂ. ಗೋವಿಂದರೆಡ್ಡಿಯವರು.—Private property ಇಟ್ಟುಕೊಳ್ಳಬಹುದೆಂದು ಹೇಳಿದ ಮಾತ್ರಕ್ಕೇ ಜಮೀನನ್ನು ಬೇಕಾದರೂ exploit ಮಾಡಬಹುದೆಂತಲೇ !

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಇವತ್ತೇನೋ ಹೇಳಬಹುದು. ಹತ್ತು ಹಳ್ಳಿಯವರೂ ಹೊರಟುಹೋದರೆ ಆಗ ಅವನೊಬ್ಬನೇ ಕೂತುಕೊಳ್ಳಬೇಕು.

ಶ್ರೀ ಎಸ್. ರಂಗರಾಮಯ್ಯನವರು.—ಇದರ ಮೇಲೆ ಈಗ ಇನ್ನೊಂದು ವಾದ, ಜಮೀನಿಟ್ಟುಕೊಂಡಿರುವವರಿಗೆಷ್ಟು ಕೊಡಬೇಕು, ಉಳುವವರಿಗೆಷ್ಟು ಕೊಡಬೇಕು ಎಂಬುದು. ಜಮೀನಿಟ್ಟುಕೊಂಡಿರುವವರಿಗೆ ಮೂರನೇ ಒಂದು ಭಾಗ ಕೊಡಿ, ಅರ್ಧ ಕೊಡಬೇಡಿ ಎಂದು ಅವರು ಹೇಳುತ್ತಾರೆ ಇದನ್ನೂ ಸ್ವಲ್ಪ ನೋಡೋಣ. ಈಗ ಗೇಣಿದಾರರೆಲ್ಲಾ ಸಾಮಾನ್ಯವಾಗಿ ಇನ್ನೊಬ್ಬರ ಜಮೀನನ್ನು ಗುತ್ತಿಗೆಗೆ ತೆಗೆದುಕೊಂಡಿರುವವರು ಅರ್ಧಕ್ಕೆ ಕಡಿಮೆಯಾಗಿಯೇ ಗುತ್ತಿಗೆಗೆ ತೆಗೆದುಕೊಂಡಿರುತ್ತಾರೆ. ಅರ್ಧಕ್ಕೆ ಹೆಚ್ಚಿಗೆ ಯಾರೂ ತೆಗೆದುಕೊಳ್ಳುತ್ತಿಲ್ಲ. ಎಲ್ಲಿ ಹೋದರೂ, ಜಮೀನು ಕಮ್ಮಿಯಿದ್ದು ಸಾಗುವಳಿಮಾಡುವ ರೈತರು ಜಾಸ್ತಿಯಿದ್ದು ಪೈಪೋಟಿ ಮೇಲೆ ಕೆಲವು ಕಡೆ ಹೇಗಾದರೂ ಉಳಿಯಲಿ ಎಂದು ಹೆಚ್ಚಿಗೆ ಗುತ್ತಿಗೆಗೆ ತೆಗೆದುಕೊಂಡಿರುತ್ತಾರೆಯೇ ಹೊರತು ಬೇರೆ ಕಡೆ ಎಲ್ಲೂ ಇಲ್ಲ. ಹೀಗಿರುವಲ್ಲಿ ಇವತ್ತಿನ ದಿವಸ ಅಂಥ ಸ್ಥಳಗಳಲ್ಲಿ 'ಅವನಿಗೇನೂ ಕೊಡಬಾರದು. ಜಮೀನಿಟ್ಟುಕೊಂಡಿರುವುದೇ ತಪ್ಪು ಎಂದು ಹೇಳಿ ಮೂರನೇ ಒಂದು ಭಾಗಕ್ಕಿಂತ ಕಮ್ಮಿಯಾಗಿರುವ ಕಾಲದಲ್ಲಿಯೂ ಕೊಡುವು

(ಶ್ರೀ ಎಸ್. ರಂಗರಾಮಯ್ಯನವರು)

ದನ್ನು ಕೊಡಿ' ಎಂದು ಚಳವಳಿ ಎಬ್ಬಿಸಿದರೆ ಏನುಮಾಡುವುದು ? ಈಗ ಅವರು ಹೇಳಿದರು 20 ವರ್ಷದಿಂದ ನಡೆದುಕೊಂಡು ಬಂದಿರುವುದು ಬಹಳ ಕಷ್ಟವಾಗುತ್ತಿದೆ, ಗುತ್ತಿಗೆಯೂ ಜಾಸ್ತಿಯಾಗುತ್ತಿದೆ, ಎಂದು. ಇದೇನು ಅನ್ಯಾಯ ರೈತರಿಗೂ ಜಮೀನ್ದಾರರಿಗೂ ಮಧುರ ಬಾಂಧವ್ಯವಿರಬೇಕೆಂಬುದನ್ನು ಎಲ್ಲರೂ ಒಪ್ಪೋಣ. ಆದರೆ ಈ ಮಹಾಸಭೆಯವರು ಜಮೀನ್ದಾರರ ಹಿತರಕ್ಷಣೆಯನ್ನೂ ಮಾಡಬೇಕು. ಗೇಣಿದಾರರ ಹಿತರಕ್ಷಣೆಯನ್ನೂ ಮಾಡಬೇಕು. ಹಾಗೆ ಮಾಡುವುದರಲ್ಲಿ ಇಲ್ಲದ ಇದ್ದ ದುರಾಸೆಮಾಡುವುದು ಮಾತ್ರ ಅನರ್ಥಕ್ಕೆ ಕಾರಣವಾಗುತ್ತಿದೆ. ಆದ್ದರಿಂದ 5 ವರ್ಷ ಪ್ರಾಯೋಗಿಕವಾಗಿ ಬೇಕಾದರೆ ಮಾಡೋಣ. ಮಾಡಿದರೂ ಕೂಡ ಯಾವ ಭಾಗಕ್ಕೆ ಬೇಕೋ ಅಲ್ಲಿಗೆ ಮಾತ್ರ ಎಂದು ನಿಷ್ಕರ್ಷೆಮಾಡಬೇಕು. ದಯವಿಟ್ಟು ಅವರು ಕೇಳಿಕೊಂಡಿರುವಂತೆ ಮೊದಲು ಮಲೆನಾಡಿಗೆ ಇದನ್ನು ಜಾರಿಮಾಡಿ 10 ವರ್ಷ ಪರೀಕ್ಷೆಮಾಡಿನೋಡಿ ಆ ಮೇಲೆ ಮೈದಾನಕ್ಕೆ ತರಲಿ. ಮುಂಚೆ ಅವರು ಇದರ ಸುಖವನ್ನು ಅನುಭವಿಸಲಿ, ಆ ಮೇಲೆ ಮಿಕ್ಕ ಕಡೆ ನೋಡೋಣ. ಮಲೆನಾಡಿಗೆ ಆಗಿ ಮೈದಾನಕ್ಕೆ ಕೊಡುವ ಸಂದರ್ಭದಲ್ಲಿ ಈ ಸಭೆಯ ಮುಂದೆ ತಂದು ಅದರ ಸೂಕ್ಷ್ಮಾಸೂಕ್ಷ್ಮತೆಗಳನ್ನು ಪರ್ಯಾಲೋಚನೆಮಾಡಿ ಕೊಡೋಣ. ಏತನ್ಮಧ್ಯೆ ಬೇಕಾದರೆ, ಇನ್ನೂ ಯಾರಾದರೂ ಕೇಳಿದರೆ ಅವರಿಗೆ ಕೊಡಬಹುದು. ಕೋಲಾರದ ನಮ್ಮ ಮಿತ್ರರು ಕೇಳಿದರೆ ಅವರಿಗೆ ಕೊಡಿ. ಅಷ್ಟೇ ಹೊರತು ಈಗಿನ ಕಾಲದಲ್ಲಿ, ಅದರಲ್ಲೂ ಆಹಾರಾಭಾವ ಜಾಸ್ತಿಯಾಗಿರುವಾಗ, ಆಹಾರವನ್ನು ಹೆಚ್ಚು ಬೆಳೆ ಮಾಡಬೇಕೆಂದಿರುವಾಗ ಇದನ್ನು ತಂದು ಎಲ್ಲಾ ಕಡೆಯಲ್ಲೂ ಕೀಡೆ ಇಟ್ಟಹಾಗೆ ಮಾಡುವುದು ಬೇಡ. ಈಗಾಗಲೇ ನಮ್ಮ ಕಡೆಯಲ್ಲಿ ರೈತರು ಯೋಚನೆ ಮಾಡುತ್ತಿದ್ದಾರೆ, ಮುಂದಿನ ಸಲದಿಂದ ಜಮೀನನ್ನು ಬಿಟ್ಟುಬಿಡೋಣ, ಏನೋ ಗೇಣಿಯೇ ಹೊರಟುಹೋಗುತ್ತದೆ ! ಗುತ್ತಿಗೆ ಕಮ್ಮಿಯಾಗಿಬಿಡುತ್ತದೆ ಎಂದು. ಆದ್ದರಿಂದ ಹೀಗೆಲ್ಲಾ ಮಾಡುವುದಕ್ಕೆ ಹೋಗಕೂಡದು. ಮೊದಲು ನಿರ್ದಿಷ್ಟವಾಗಿ ಮಲೆನಾಡಿಗೆ ಮಾತ್ರ ಇದನ್ನು ಅನ್ವಯಿಸುವಂತೆ ಮಾಡಿ. ಬೇರೆ ಕಡೆಗೆ ಆ ಮೇಲೆ ನೋಡೋಣ. ಅಂತೂ ತೋಟಕ್ಕೆ ಮಾಡಲೇ ಕೂಡದು.

ಇನ್ನೊಂದೇನೆಂದರೆ, ಇದರಲ್ಲಿ ಎಲ್ಲವೂ ಅಗ್ರಿಮೆಂಟ್ ಮೇಲೆಯೇ ಇರಬೇಕು, ಎಂದು ಹೇಳಿದ್ದೀರಿ. ಇದುವರೆಗೂ ಧಾರಣೆಗಳು 5—6 ವರ್ಷಗಳ ವರೆಗೆ ಹೆಚ್ಚು ಕಡಿಮೆ ಒಂದೇ ಸಮನಾಗಿದ್ದು 5—6 ವರ್ಷಗಳು ಗುತ್ತಿಗೆಗೆ ಮಾಡಿಕೊಳ್ಳುತ್ತಿದ್ದರು. ಆದರೆ ಈಚೀಚೆಗೆ ವರ್ಷ ವರ್ಷಕ್ಕೂ ಧಾರಣೆ ವ್ಯತ್ಯಾಸವಾಗುತ್ತಿರುವುದರಿಂದ ನೀವು ಹೇಳುವಂತೆ 5 ವರ್ಷಗಳಿಗೆ ಗುತ್ತಿಗೆಗೆ ತೆಗೆದುಕೊಳ್ಳುವುದಕ್ಕೆ ಯಾರೂ ಮುಂದೆ ಬರುವುದಿಲ್ಲ, ಉದಾಹರಣೆಗೆ ತೆಂಗಿನ ತೋಟ ಒಬ್ಬ ತೆಗೆದುಕೊಂಡು ಮುಂದೆ ಧಾರಣೆ ಕಮ್ಮಿಯಾದರೆ, ಗುತ್ತಿಗೆಯನ್ನು ಕಮ್ಮಿ ಮಾಡಿಕೊಳ್ಳಬಹುದೆಂದು ಎಲ್ಲಿ ಹೇಳಿದೆ ? ಹಾಗೆ ನಷ್ಟವಾಗುವಾಗ ಆ ರೈತ ಚೆನ್ನಾಗಿ ಸಾಗುವಳಿಮಾಡುವುದಕ್ಕೆ ಮನಸ್ಸಿರುತ್ತದೆಯೇ ? ಆದ್ದರಿಂದ ಮೈದಾನದ ತೋಟಗಳಿಗೆ ಇದನ್ನು ಅನ್ವಯಿಸುವಾಗ ಬಹಳ ಎಚ್ಚರಿಕೆಯಿಂದ ಮಾಡಬೇಕೆಂದು ಹೇಳುತ್ತೇನೆ.

ಎರಡನೆಯದಾಗಿ, ಇಲ್ಲಿ ಹೇಳಿರುವ 5 ವರ್ಷ ಎಂಬುದು ಬಹಳ ಅನರ್ಥಕಾರಿ ಎಂದು ಹೇಳುತ್ತೇನೆ. ಆದರೂ ಸರ್ಕಾರದವರು ಈ ಕಾನೂನು ತಂದಿದ್ದಾರೆ? ಅವರ ಉದ್ದೇಶದಂತೆ ಭೂಸುಧಾರಣೆಯಾಗಬೇಕೆಂಬುದನ್ನು ಎಲ್ಲರೂ ಒಪ್ಪುತ್ತೇವೆ. ಏಕೆಂದರೆ ಸ್ವಾತಂತ್ರ್ಯಬಂದ ಮೇಲೆ ಕಾರ್ಮಿಕರ ಪರಿಸ್ಥಿತಿಯನ್ನು ಹೇಗೆ ಉತ್ತಮಪಡಿಸಿದ್ದಾರೋ ಅದೇ ರೀತಿ agrarian ಸುಧಾರಣೆಯಾಗುವುದು ಅತ್ಯಾವಶ್ಯಕ. ಆದರೆ ಅವರು ಹೇಳುವುದು ಏಕದಂ ಬೆಟ್ಟಕ್ಕೆ ಹಾರುತ್ತೇವೆ ಎಂದು. ನಾನು ಹೇಳುವುದು ಸ್ವಲ್ಪ ಸ್ವಲ್ಪವಾಗಿ, ಹೋಗಿ ಏಕದಂ ಮೇಲಕ್ಕೆ ಹಾರಿ ಬಿದ್ದು ನೀವೂ ಪ್ರಾಣ ಕಳೆದುಕೊಂಡು ನಮ್ಮದನ್ನೂ ಕಳೆಯಬೇಡಿ ಎಂದು. Reforms ಏನೋ ಆಗಲಿ. ಆದರೆ ಕ್ರಮೇಣ ಆಗಬೇಕು. ಜಮೀನುಗಳನ್ನು ರೈತರಿಗಲ್ಲಾ ಕೊಡಬೇಕೆಂದು Fallow Lands Cultivation ಬಿಲ್ ಮಾಡಿಲ್ಲವೇ. ಶ್ರೀ ಮರಿಯಪ್ಪನವರು ತಳಿ ಅಭಿವೃದ್ಧಿಗೆಂದು Live tock Improvement Bill ತಂದಿರಲಿಲ್ಲವೇ. ಈಗ ಅವುಗಳ ಗತಿಯೇನಾಗಿದೆ ! ಎಷ್ಟರಮಟ್ಟಿಗೆ ಅವುಗಳಿಂದ ಅನುಕೂಲವಾಗಿದೆಯೆಂಬುದು ನನಗೆ ಗೊತ್ತು.

ಒಬ್ಬ ಸದಸ್ಯರು.—Castrate ಆಗಿದೆ ?

ಶ್ರೀ ಎಸ್ ರಂಗರಾಮಯ್ಯನವರು.—ಹಾಗೆಯೇ Moneylenders ಆಕ್ಟು. ಪಠಾಣರು ಬಂದು ನಮ್ಮ ಜನರಿಗೆ ಸಾಲಕೊಟ್ಟು ಹಿಂಸೆ ಮಾಡುತ್ತಾರೆ ಎಂದು ಮಾಡಿದರು. ಆದರೀಗ ಏನಾಗುತ್ತಿದೆ ! ಸಾಲಕೊಡುವವರು ದ್ವಿಗುಣ ಹಣಕ್ಕೆ ಪ್ರೋನೋಟ್ ಬರೆಯಿಸಿಕೊಳ್ಳುತ್ತಿದ್ದಾರೆ, 100 ರೂಪಾಯಿಕೊಟ್ಟು 200 ರೂಪಾಯಿಗೆ ಪತ್ರ ಬರೆಯಿಸಿಕೊಂಡು ಕಕ್ಷಿಗಳನ್ನು ಕಷ್ಟಕ್ಕೆ ಸಿಕ್ಕಿಸಿಕೊಳ್ಳುತ್ತಿದ್ದಾರೆ. ಆದ್ದರಿಂದ ನೀವು ಏನು ಮಾಡಿದರೆ ಏನು ಪ್ರಯೋಜನ? ಜನರ ಮನಸ್ಸನ್ನು ಪರಿವರ್ತನೆ ಮಾಡಿ ಅವರನ್ನು ಉತ್ತಮ ಸ್ಥಿತಿಗೆ ತರದೆ ಇದ್ದರೆ, ಜನರು, ಈ ಜಮೀನಿನಿಂದಲೇ ನಾನು ಬದುಕಬೇಕಾಗಿದೆ, ನಾನು ಕಷ್ಟಪಟ್ಟು ಕೆಲಸಮಾಡಬೇಕು ಎಂಬ ಸದುದ್ದೇಶದಿಂದ ಉಪಯೋಗಿಸಿಕೊಂಡರೆ ಉದ್ಧಾರವಾಗುತ್ತಾರೆಯೇ ಹೊರತು ಬರೀ ಚಳವಳಿ ಮಾಡಿ ಉದ್ಧಾರಮಾಡುವುದಕ್ಕೆ ಹೊರಟರೆ ಏನು ಉಪಕಾರವಾಗುವುದಿಲ್ಲ. Agrarian Reform ಮಾಡಬೇಕೆಂದು ಸರ್ಕಾರದವರೂ ಒಪ್ಪಿದ್ದಾರೆ; ಅದರಂತೆ ಇದೇ ಒಂದು ಹೆಜ್ಜೆ ಮುಂದೆ ಹಾಕಿದ್ದಾರೆ. ಇದರಿಂದೇನಾಗುತ್ತದೆಂದು ಕೆಲವು ಕಾಲ ನಿರೀಕ್ಷಣೆಮಾಡಿ ನೋಡೋಣ. ಈ ತರಹ ಮಾಡುವುದನ್ನು ನಾನೂ ಸ್ವಾಗತಿಸುತ್ತೇನೆ.

ಆ ಮೇಲೆ, ಶ್ರೀಮಾನ್ ಚೆನ್ನಬಸಪ್ಪನವರು ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಐದು ವರ್ಷವಾದ ಮೇಲೆ, 15ನೆಯ ಸೆಕ್ಷನ್ ಪ್ರಕಾರ ಏನಿದೆಯೆಂದರೆ "—

"In the case of a tenant, the duration of whose tenancy is for a period of five years or more the tenancy shall terminate at the expiration of such period unless the landlord has by the acceptance of rent or by any other act or conduct of his allowed the tenant to hold over within the meaning of section 116 of the Transfer of Property Act, 1918"

ಎಂದು ವಾಯಿದೆಯಾದ ಮೇಲೆ ವ್ಯವಸಾಯ ಮಾಡುವ ವಾರದಾರ ಅಥವ ಗುತ್ತಿಗೆದಾರ tenant hold over ಆಗುತ್ತಾನೆಂದು ಹೇಳಿದೆ. ಈಗ ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿರುವ ಹಾಗೆ, ಕೂಳೆಯ ಮೇಲೆ ಜಮೀನನ್ನು ಬಿಡಬೇಕೆಂದಿದ್ದರೂ, ಆ ರೈತ ಇತ್ತ ಗದ್ದೆ ಕುಯಿದ ಕೂಡ್ಲೆ ಮಾರನೆಯ ದಿವಸವೇ ತರಾತುರಿಯಲ್ಲಿ ಹೋಗಿ ಅದನ್ನು ಉತ್ತು ಬಿಡುತ್ತಾನೆ. ಅಲ್ಲಿಗವನು tenant hold over ಆಗಿ ಬಿಡುತ್ತಾನೆ. ಮುಂದೆ ಸಾಗುವಾಡಲಕ್ಕೆ ಬರುವ

ವನು "ಅವನು ಉತ್ತು ಬಿಟ್ಟಿದ್ದಾನೆ, ನಾನು ಬರುವುದಿಲ್ಲ" ಎಂದು ಹೇಳುತ್ತಾನೆ.

Clause 17. Where the period of tenancy of any tenant has expired and if such tenant has been allowed to hold over under the last preceding section, the tenancy of such a tenant shall be deemed to have been renewed for a further period of five-years from the date of its expiry on the same terms and conditions as before.

ಗೇಣಿದಾರನ holding over ಯಾವತ್ತು ಪ್ರಾರಂಭವಾಗುತ್ತದೆ, ಯಾವತ್ತು ಅವನು ಬಿಡುತ್ತಾನೆ ಎಂಬುದನ್ನು ನಿರ್ಧರಮಾಡದೇ ಹೋದರೆ ಹಾಗೆಯೇ ಒಂದು ಜಮೀನನ್ನು ಸಾಗುವಳಿಗೆ ಕೊಟ್ಟರೆ ಆ ಜಮೀನನ್ನು ಜಮೀನ್ದಾರ ಮತ್ತೆ ಕಾಣುವ ಹಾಗೆಯೇ ಇಲ್ಲ, ಈ ಕ್ಲಾಜು ಇದೇ ರೀತಿ ಇದ್ದರೆ, ಐದು ವರ್ಷ ಕಳೆದ ಮೇಲೆ ಸಾಗುವಳಿದಾರ ಜಮೀನಿಗೆ ಆಗಲೇ ಗೊಬ್ಬರ ಹಾಕಿದ್ದೇನೆಂದು ಹೇಳಿದರೆ ಜಮೀನ್ದಾರನಿಗೇ ಕಷ್ಟ ಬರುತ್ತದೆ. ಇದನ್ನು ತಪ್ಪಿಸುವುದಕ್ಕಾಗಿ ಶ್ರೀಮಾನ್ ಚೆನ್ನಬಸಪ್ಪನವರು ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಅದು ಬಂದಾಗ ಅದರ ವಿಚಾರ ಮಾತನಾಡುತ್ತೇನೆ.

ಇನ್ನೊಂದು ವಿಚಾರ. ಐದು ವರ್ಷದ ಅವಧಿಯ ಮಧ್ಯದಲ್ಲಿ ಯಾವಾಗ tenancy ಹೋಗುತ್ತದೆ ಎಂಬುದನ್ನು 15ನೆಯ ಕ್ಲಾಜಿನಲ್ಲಿ ಹೇಳಿದ್ದಾರೆ. ಮುಖ್ಯವಾಗಿ ಇದರಲ್ಲಿ ಹೇಳಿರುವುದು ಗೇಣಿದಾರನು ಗೊತ್ತಾಗಿರುವ ಗುತ್ತಿಗೆ ಅಥವಾ ವಾರವನ್ನು ಜಮೀನ್ದಾರನಿಗೆ ಕೊಡದೇ ಹೋದರೆ, ಇತ್ಯಾದಿ, ಇತ್ಯಾದಿ ಹೇಳಿದ್ದಾರೆ. ಹಿಂದೆ Transfer of Property Act ಪ್ರಕಾರ ಯಾವನಾದರೂ ಗೇಣಿದಾರ ಜಮೀನ್ದಾರನ ಹಕ್ಕನ್ನು repudiate ಮಾಡಿದರೆ tenancy ಹೋಗುತ್ತದೆಂದು ಇತ್ತು. ಅದನ್ನು ಇಲ್ಲಿ ಬಿಟ್ಟುಬಿಟ್ಟಿದ್ದಾರೆ. If he repudiates the title of the landlord the tenancy should be terminated ಎಂದಿತ್ತು.

Sri Kadidal MANJAPPA.—The provisions of the Transfer of Property Act apply to the agricultural undertakings.

ಶ್ರೀ ಎಸ್. ರಂಗರಾಮಯ್ಯನವರು.—ಅದೂ ಕೂಡ ಇದಕ್ಕೆ ಅನ್ವಯಿಸುತ್ತದೆಂದಾಯಿತು.

ಕೊನೆಯದಾಗಿ, 16ನೆಯ ಕ್ಲಾಜಿನಲ್ಲಿ ಗೇಣಿದಾರ 12 ವರ್ಷ ಜಮೀನನ್ನು ಮಾಡಿದ್ದರೆ ಜಮೀನುದಾರನಿಗೆ ಅರ್ಧ ಜಮೀನನ್ನು ಮಾತ್ರ ಬಿಡಿಸಿಕೊಳ್ಳುವುದಕ್ಕೆ ಹಕ್ಕಿದೆ ಎಂದಿದೆ. ಈ ವಿಷಯದಲ್ಲಿ ಎರಡು ಕಡೆಯೂ ವಾದ ಮಾಡಬಹುದು. 12 ವರ್ಷಗಳ ಮೇಲೆ ಗೇಣಿದಾರ ಜಮೀನನ್ನು ಅನುಭವಿಸಿದ್ದರೆ ಆ ಮೇಲೆ ಜಮೀನ್ದಾರ ತನಗೆ ಜಮೀನು ಬೇಕೆಂದರೆ, ತಾನೇ ಸ್ವಂತ ಉಳಿಸಿಕೊಂಡರೆ ಅರ್ಧ ಜಮೀನಿಗೆ ಹಕ್ಕಿದೆ ಎಂದಿದೆ. ಇದರಿಂದ ತೊಂದರೆ ಎಂದು ಕೆಲವರು ಹೇಳಿದರು. ಇದರಲ್ಲಿ ಸ್ವಲ್ಪ ನಿಜಾಂಶವಿದೆ. ಉದಾಹರಣೆಗೆ ಸಣ್ಣ ಸಣ್ಣ ಮಕ್ಕಳನ್ನು ಬಿಟ್ಟು ಒಬ್ಬ ಜಮೀನ್ದಾರ ಸತ್ತುಹೋಗಿರುತ್ತಾನೆ. ಹೆಂಗಸು ಮತ್ತು ಮೈನರ್ ಹುಡುಗರು ಇರುತ್ತಾರೆ, ಯಾರಿಗೋ ಜಮೀನನ್ನು ಗುತ್ತಿಗೆಗೆ ಅಥವ ಗೇಣಿಗೆ ಕೊಟ್ಟಿರುತ್ತಾರೆ. ಹುಡುಗರಿಗೆ 18, 20 ವರ್ಷವಾಗಿ ಅವರು ಪ್ರಾಪ್ತವಯಸ್ಕರಾಗಿ ಅಷ್ಟರೊಳಗೆ ಗೇಣಿದಾರ 12 ವರ್ಷ ಅನುಭವಿಸಿದ್ದರೆ ಅವರು ಜಮೀನನ್ನು ಬಿಟ್ಟುಕೊಡಬೇಕೆಂದು ಕೇಳಿದರೆ ಏನುಮಾಡಬೇಕು? ಬಿಡಿಸಬಾರದೆಂದು ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಹೇಳಿದರು. ಹಾಗೆಮಾಡಿದರೆ ಆ ಮಕ್ಕಳ ಗತಿ ಏನಾಗಬೇಕು?

ಶ್ರೀ ಕಡಿದಾಳ್ ಮಂಜಪ್ಪನವರು.—ಅರ್ಧಜಮೀನು ಬಿಡಿಸಿಕೊಳ್ಳಬಹುದೆಂದಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಇದರಲ್ಲಿ ಅರ್ಧವನ್ನು ಬಿಡಿಸಿಕೊಳ್ಳಬಹುದೆಂದೇನೋ ಇದೆ. ನಿರ್ದಿಷ್ಟ ಪ್ರಮಾಣವನ್ನು ಹಾಕಿದ್ದರೆ ಒಳ್ಳೆಯದಾಗಿತ್ತು. ಇರುವುದೇ ಎರಡು ಎಕರೆ ಜಮೀನಾದರೆ ಈ ರೀತಿ ಅರ್ಧ ಎಂದು ಮಾಡಿದರೆ ಒಂದೆಕರೆಯನ್ನು ಬಿಡಿಸಿಕೊಳ್ಳಬೇಕು, ಇನ್ನೊಂದೆಕರೆ ಗುತ್ತಿಗೆದಾರನ ಕೈಯ್ಯಲ್ಲಿರಬೇಕು. ಇದು ಅನ್ಯಾಯ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಇನ್ನರ್ಧವನ್ನು ಬಿಟ್ಟುಬಿಟ್ಟರೂ ಅದನ್ನು ವಂಶಪಾರಂಪರ್ಯವಾಗಿ ಬಿಡಬೇಕೆ ಎಂಬುದು ಗೊತ್ತಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ವಂಶಪಾರಂಪರ್ಯವಾಗಬಾರದು.

ಅದೇ ಭೂಮಿಯನ್ನು ಕೊಟ್ಟರೆ ಶ್ರದ್ಧೆಯಿಂದಮಾಡುತ್ತಾರೆ ಎಂದು ಹೇಳಿದರು. ಇಂತಹ ಗುತ್ತಿಗೆದಾರರನ್ನು ಅವರು ಕಳುಹಿಸಿಕೊಡಲಿ ಅವರಿಗೆ ಹಾರಹಾಕಿ ನಡೆಮುಡಿ ಹಾಕಿ ಕರೆದುಕೊಂಡು ಹೋಗುತ್ತೇವೆ. ಎಲ್ಲಿದ್ದಾರೆ ಅಂತಹ ಒಳ್ಳೆಯ ಗೇಣಿದಾರರು? ಎಲ್ಲೋ ಕೆಲವರಿದ್ದಾರೆ, ಜಮೀನ್ದಾರರೂ ಇದ್ದಾರೆ, ಬಹಳ ಕಡೆ ಅಶ್ರದ್ಧೆ ಗೇಣಿದಾರರಲ್ಲಿದೆಯೆಂದು ನಾನು ಹೇಳುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪನವರು.—ತಾವು ಜಮೀನ್ದಾರರು!

ಶ್ರೀ ಎಸ್. ರಂಗರಾಮಯ್ಯನವರು.—ಅದಕ್ಕೇ ಈ ಕಷ್ಟವನ್ನು ಅನುಭವಿಸಿ ಹೇಳುತ್ತಿದ್ದೇನೆ. ನಮ್ಮ ಊರಿಗೆ ಬಂದು ನೋಡಿ ನಾನು ಎಷ್ಟು ಕಂದಾಯ ಕೊಡುತ್ತೇನೆಂದು.

ಇನ್ನು 42ನೆಯ ಕ್ಲಾಜಿನಲ್ಲಿ ವಿಧಾಯಕವಾಗಿರುವ ಶಿಕ್ಷೆಗಳು ಕಡಿಮೆ ಎಂದು ಹೇಳಿದರು. ಶ್ರೀಮಾನ್ ಶ್ರೀಕಂಠೇಶ್ವರ್‌ರವರು ಅಲ್ಲಿರುವ ಪ್ರತಿಯೊಂದು ಜಮೀನ್ದಾರನಿಗೆ ಶಿಕ್ಷೆಯೇ ಹೊರತು ತಪ್ಪುಮಾಡಿದ ಗೇಣಿದಾರನಿಗೆ ಅಥವ ವಾರದಾರನಿಗೆ ಯಾವ ಶಿಕ್ಷೆಯೂ ಇಲ್ಲ. ಇದನ್ನು ನೋಡಿದರೆ ಇಂತಹ ಪಾಪಿ ಜಮೀನ್ದಾರ ಹುಟ್ಟಬಹುದೇ ಎನ್ನಿಸುತ್ತದೆ. ಐದು ವರ್ಷದೊಳಗೆ ಗೇಣಿದಾರನನ್ನು ತಪ್ಪಿಸಿದರೆ ಅದಕ್ಕೆ ಜಮೀನ್ದಾರನಿಗೆ 250 ರೂಪಾಯಿ ಜುಲ್ಮಾನೆ.........

Sri Kadidal MANJAPPA.—It applies to both. The termination of the tenancy may be by the landlord or by the tenant.

ಶ್ರೀ ಎಸ್. ರಂಗರಾಮಯ್ಯನವರು.—ಇದರಲ್ಲಿ Termination of tenancy by a landlord before the expiry of the period of five years Rs. 250 fine ಎಂದಿದೆ. ಇದು ಎಲ್ಲಾದರೂ ನ್ಯಾಯವೇ? ಜಮೀನ್ದಾರ ಕಾನೂನು ಪ್ರಕಾರ ಕೊಟ್ಟೇ ಕೊಡಬೇಕು ಇದರ ಜೊತೆಗೆ ಜುಲ್ಮಾನೆಯನ್ನೂ ಹಾಕುವುದು ಯಾವ ನ್ಯಾಯ? ಸರ್ಕಾರದವರು ಗಲಾಟೆಮಾಡುವ ಕೆಲವರನ್ನು ತೃಪ್ತಿಪಡಿಸುವುದಕ್ಕಾಗಿ ಈ ಮಸೂದೆಯನ್ನು ತಂದಿದ್ದಾರೆ. ಆದರೆ ದೇಶಕ್ಕೆ ಇದರಿಂದ ಕ್ಷೇಮವಾಗುತ್ತದೆಯೇ? ಇದರಲ್ಲಿ ಪ್ರತಿಯೊಂದೂ ಜಮೀನ್ದಾರನಿಗೇ ಶಿಕ್ಷೆ. For recovery of rent in kind or by way

(ಶ್ರೀ ಎಸ್. ರಂಗರಾಮಯ್ಯನವರು)

of crop-share contrary to section 8, receipt of rent in form of labour or service, levy of cess, rate, mamool huk, tax or service, failure to give written receipt for the amount of rent received, taking possession of land contrary to section 29, ಹೀಗೆ ಸೆಸ್ ಹೆಚ್ಚಾಗಿ ತೆಗೆದುಕೊಂಡರೆ, ರಶೀದಿ ಕೊಡದೇ ಹೋದರೆ, ಮುಂತಾಗಿ ಎಲ್ಲಕ್ಕೂ ಜಮೀನ್ದಾರನಿಗೇ ಶಿಕ್ಷೆ. ಗೇಣಿದಾರ ಜಮೀನು ಹಾಳು ಮಾಡಿದರೂ terminate ಮಾಡುವಹಾಗಿಲ್ಲ. ಅವನು ಜಮೀನಿನಲ್ಲಿರುವ ಮರಗಳನ್ನು ಕಡಿದುಕೊಂಡು ಹೋದರೂ damages claim ಮಾಡುವಹಾಗಿಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಕೊಡಬಹುದೆಂದಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಅದು ಬರಿಯ ಸಾಸ್ವತಿ ಪ್ರಸನ್ನ, ತೆಂಗಿನಕಾಯನ್ನೆಲ್ಲಾ ತೆಗೆದುಕೊಂಡು ತೆಂಗಿನ ಮರ ಇದೆ, ಗರಿ ಇದೆ ಎಂದು ಹೇಳಬಹುದು. ಗುತ್ತಿಗೆಗೆ ತೋಟವನ್ನು ತೆಗೆದುಕೊಂಡು ರೈತ ಎಳನೀರನ್ನೆಲ್ಲಾ ಮೊದಲೇ ಕುಯ್ದು ಕುಡಿದುಬಿಟ್ಟರೆ ಮರಗಳಿಗೆ ನಂಜು ಬಂದು ಸತ್ತುಹೋಗುತ್ತವೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಮಾಂಸವನ್ನು ಬಡುತ್ತಾನೆ! (ನಗು)

ಶ್ರೀ ಎಸ್. ರಂಗರಾಮಯ್ಯನವರು.—ಇಂತಹ ಗೇಣಿದಾರನಿಗೆ ಏನು ಮಾಡುವುದು? ಇದರಿಂದ ದೇಶಕ್ಕೆ ಕ್ಷೇಮವಲ್ಲ. ಆದರೂ ಕಾಲಕ್ಕೆ ತಕ್ಕಂತೆ ನಡೆಯಬೇಕೆಂದು ಸರ್ಕಾರದವರು ಸದುದ್ದೇಶದಿಂದ ಈ ಮಸೂದೆಯನ್ನು ತಂದಿದ್ದಾರೆ. ಐದು ವರ್ಷಕಾಲ ಈ ಕಾನೂನನ್ನು ಮಲೆನಾಡು ಕಡೆ ಜಾರಿಯಲ್ಲಿಟ್ಟು ನೋಡಲಿ.

Sri H. M. CHANNABASAPPA.—I can assure the Hon'ble Member that this will be a dead letter on the Statute.

Mr. SPEAKER.—The House stands adjourned for half an hour.

The Assembly adjourned for lunch at Thirty Minutes past Three of the Clock and reassembled at Four of the Clock, Mr. Speaker (The Hon'ble Sri V. Venkatappa), in the Chair.

ಶ್ರೀ ಎಂ. ಗೋವಿಂದರೆಡ್ಡಿಯವರು (ಚಿತ್ರದುರ್ಗ ಜಿಲ್ಲೆ).—ಸ್ವಾಮಿ, ನಾನು ಈ ವಿಚಾರವಾಗಿ ಮಾತನಾಡಬೇಕೆಂದಿರಲಿಲ್ಲ. ಏಕೆಂದರೆ ಈ ಮಸೂದಾ ಕಾನೂನು ಬಹಳ ದೀರ್ಘವಾಗಿ ಚರ್ಚೆಯಾಗಿದೆ. ಆದರೆ ಶ್ರೀ ರಂಗರಾಮಯ್ಯನವರು ಮತ್ತು ಇತರರು ಕೆಲವರು ಮಾತನಾಡಿದ ಮೇಲೆ ಒಂದು ತಪ್ಪಭಿಪ್ರಾಯ ಉಂಟಾಗಬಹುದೆಂದು ಕಂಡುಬಂದುದರಿಂದ ಅದನ್ನು ನಿವಾರಣೆ ಮಾಡಬೇಕೆಂಬ ಉದ್ದೇಶದಿಂದ ಮಾತನಾಡುತ್ತಿದ್ದೇನೆ. ಶ್ರೀ ರಂಗರಾಮಯ್ಯನವರು ಮಾತನಾಡುವಾಗ ರೈತರ ರಕ್ಷಣೆಗಾಗಿ ಈ ಮಸೂದಾಕಾನೂನು ಜಾರಿಗೆ ಬಂದರೆ ರಾಜ್ಯಾಂಗದ ಪ್ರಕಾರ ಎಲ್ಲರಿಗೂ ತಮ್ಮ ತಮ್ಮ ಆಸ್ತಿಗಳನ್ನಿಟ್ಟುಕೊಂಡು ಅನುಭವಿಸಿಕೊಂಡು ಹೋಗುವುದಕ್ಕೆ ಏನು ಅವಕಾಶವಿದೆಯೋ ಅದಕ್ಕೆ ತೊಂದರೆಯಾಗುತ್ತದೆ. ನಾವು ನಮ್ಮ ಆಸ್ತಿಗಳನ್ನು ಯಾವ ರೀತಿ ಬೇಕಾದರೂ ಉಪಯೋಗಿಸಲು ಸ್ವಾತಂತ್ರ್ಯವಿದೆ. ಆದರಿಂದ ಯಾವ ಸರ್ಕಾರವೇ ಆಗಲಿ ಇದನ್ನು ತಡೆಗಟ್ಟಲು ಸಾಧ್ಯವಿಲ್ಲ ಎಂಬ ವಾದಸರಣಿಯನ್ನು ತೋರಿಸಿದರು. ಅಷ್ಟೇ ಅಲ್ಲ. ಈ ಮಸೂದಾಕಾನೂನು ರೈತರಿಗೆ ಅನೇಕ ಹಕ್ಕುಗಳನ್ನು ಕೊಡುವುದಾಗಿಯೂ ಮತ್ತು ಜಮೀನ್ದಾರರಿಗೆ ಅನಾನುಕೂಲ ಮಾಡುವುದಾಗಿಯೂ ಕಂಡುಬರುತ್ತದೆ. ಆದರೆ ಈ ಕಾನೂನು ಜಾರಿಗೆ ಬಂದರೆ ಜಮೀನ್ದಾರರಿಗೂ ಹೆಚ್ಚು ಅನುಕೂಲವಾಗುವುದಿಲ್ಲ, ರೈತರಿಗೆ ಕೂಡ ಬಹಳ ತೊಂದರೆ ಮತ್ತು ಅನಾನುಕೂಲವಾಗುತ್ತದೆ ಎಂಬ ವಾದಸರಣಿಯನ್ನು ಅನುಸರಿಸಿದರು. ಅದಕ್ಕಾಗಿ ನಾನು ವ್ಯಥೆಪಡಬೇಕಾಗಿದೆ. ಈ ಮಸೂದಾಕಾನೂನಿನ ಆವಶ್ಯಕತೆಯಿದೆಯೇ ಎಂದು ಪ್ರಶ್ನೆ ಸಹ ಮಾಡಿದ್ದಾರೆ. ಬೊಂಬಾಯಿ, ಉತ್ತರ ಪ್ರಾಂತ, ಬಂಗಾಳ, ಹೈದರಾಬಾದು ಮುಂತಾದ ದೇಶಗಳಲ್ಲಿ ಈ ಕಾನೂನಿನ ಆವಶ್ಯಕತೆ ಎಷ್ಟು ಹೆಚ್ಚಾಗಿದೆಯೋ ಅಷ್ಟು ಆವಶ್ಯಕತೆ ನಮ್ಮ ಸಂಸ್ಥಾನದಲ್ಲಿಲ್ಲ ಎಂದು ಹೇಳಿದರೆ ಅದನ್ನು ಒಪ್ಪಿಕೊಳ್ಳಬಹುದು. ಏಕೆಂದರೆ ಮೈಸೂರು ಸಂಸ್ಥಾನದಲ್ಲಿ ಬಹಳ ಭಾಗ ಬೈಲು ಸೀಮೆ. ಅದೂ ಅಲ್ಲದೆ ಅಲ್ಲಿರುವ ಜಮೀನ್ದಾರಿ ಪದ್ಧತಿ ಇಲ್ಲಿಲ್ಲ. ಆ ಭೂಸ್ವಾಮ್ಯತ್ವ ಇಲ್ಲಿಲ್ಲ. ಇಲ್ಲಿ ಸಾಮಾನ್ಯವಾಗಿ ರೈತವಾರಿ ಪದ್ಧತಿಯಿರುವುದರಿಂದ ಜಮೀನುಗಳು ಒಂದು ಮಿತವಾದ ಸಂಖ್ಯೆಯಲ್ಲಿವೆ ಅಲ್ಲಿನಂತೆ ಹೆಚ್ಚಿನ ಸಂಖ್ಯೆಯಲ್ಲಿಲ್ಲ. ಅನೇಕ ಗ್ರಾಮಗಳು ಒಬ್ಬರ ವಶದಲ್ಲಿದ್ದು ಜಮೀನ್ದಾರರ ಇಷ್ಟದ ಪ್ರಕಾರ, ಹುಕುಂ ಪ್ರಕಾರ ನಡೆಯಬೇಕಾದ ಪರಿಸ್ಥಿತಿ ಇಲ್ಲಿಲ್ಲ. ಆದಕಾರಣ ಇಂತಹ ಕಾನೂನಿಗೆ ಆ ಪ್ರಾಂತದಲ್ಲಿರುವ ಆವಶ್ಯಕತೆ ಇಲ್ಲಿ ಇಲ್ಲವೆಂದು ಹೇಳುವುದನ್ನು ಒಪ್ಪಬಹುದು. ಆದರೆ ಇಲ್ಲೂ ಕೂಡ ಅದರಲ್ಲೂ ಹೆಚ್ಚಾಗಿ ಶಿವಮೊಗ್ಗದಲ್ಲಿ ಮತ್ತು ನಾಲ್ಕು ಪ್ರದೇಶಗಳಲ್ಲಿ ಈ ಒಂದು ಮಸೂದಾ ಕಾನೂನು, ರೈತರ ಹಿತರಕ್ಷಣೆ ಮಾಡುವ ಮಸೂದಾ ಕಾನೂನು, ಆವಶ್ಯಕವಾಗಿದೆಯೆಂದು ಹೇಳಿದರೆ ಅದನ್ನು ಯಾರೂ ಇಲ್ಲ, ಎನ್ನುವುದಿಲ್ಲ ಎಂಬುದು ನನ್ನ ಭಾವನೆ.

ರೈತರಿಗೆ ಅನ್ಯಾಯವಾಗುತ್ತಿರುವುದೇನು, ರೈತರ ಹಿತರಕ್ಷಣೆ ಮಾಡಬೇಕಾದ ಪ್ರಮೇಯವೇನಿದೆ ಎಂದು ಶ್ರೀ ರಂಗರಾಮಯ್ಯನವರು ಪ್ರಶ್ನೆಮಾಡಿದರು. ಎಲ್ಲಾ ಜಮೀನ್ದಾರರೂ ಕೂಡ ರೈತರಿಗೆ ಅನ್ಯಾಯ ಮಾಡುತ್ತಾರೆಂದು ಯಾರೂ ಹೇಳಲಾರರು. ಆದರಲ್ಲೂ ಜಮೀನ್ದಾರನಿಗೆ ತನ್ನ ಜಮೀನು ಸಾಗಾಗಬೇಕು, ನೆಮ್ಮದಿಯಾದ ಕುಳಗಳಿಗೆ ಸಿಕ್ಕಿ ತನ್ನ ಜಮೀನಿನ ಉತ್ಪತ್ತಿ ಹೆಚ್ಚಬೇಕು ಎಂಬ ಅಪೇಕ್ಷೆ ಇರುವುದು ಸ್ವಾಭಾವಿಕ, ಆದರೆ ಎಲ್ಲಾ ಜಮೀನ್ದಾರರೂ ಹಾಗಿರುವುದಿಲ್ಲ. ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ಎರೆಭೂಮಿ ಮತ್ತು ಹೆಚ್ಚು ಖುಷ್ಕಿ ಜಮೀನಿದ್ದು ಅಲ್ಲಿರುವ ಜಮೀನ್ದಾರರು ರೈತರು ಬಂದರೆ ಸಾಕು, ನಮಗೆ ರೈತರು ಕೊಡಬೇಕಾದ ಗುತ್ತಿಗೆ ತೆಗೆದುಕೊಳ್ಳುವುದನ್ನು ಕಡಮೆ ಮಾಡಿ ಇನ್ನೂ ಅವರಿಗೆ ಅನುಕೂಲವಾಗಿ ಮನೆ ವಗೈರೆ ಕಟ್ಟಿಸಿಕೊಟ್ಟು ಅನುಕೂಲ ಮಾಡೋಣ ಎಂದು ಹೇಳುವವರಿದ್ದಾರೆ. ಅಲ್ಲಿ ರೈತರು ಸಿಕ್ಕುವುದು ದುರ್ಲಭ. ಈಗಂತೂ ರೈತರು ಸಿಕ್ಕುವುದು ದುರ್ಲಭವಾಗಿದೆ. ಏಕೆಂದರೆ ಜಮೀನು ಮಾಡುವವನಿಗೆ ಹೊಟ್ಟೆಬಟ್ಟೆಗೆ ಸಾಕಾಗುವಷ್ಟು ಜಮೀನಿನಿಂದ ಬರುವುದಿಲ್ಲ. ಗುತ್ತಿಗೆ ಕೊಡಬೇಕಾದ್ದನ್ನು ಯಜಮಾನನಿಗೆ ಕೊಟ್ಟು ಈ ಕಾಲದಲ್ಲಿ

ಜೀವನದ ಮಟ್ಟ ಹೆಚ್ಚುತ್ತಿರುವಾಗ ತನಗೆ ಬರುವ ಆದಾಯದಲ್ಲಿ ಜೀವನ ಸಾಗಿಸುವುದು ಕಷ್ಟವಾಗಿದೆ. ಆದ್ದರಿಂದ ಪಟ್ಟಣಗಳನ್ನು ಸೇರಿದರೆ ಅನಾಯಾಸವಾಗಿ ಮಿಲ್ಲುಗಳು ಮುಂತಾದ ಕಡೆ ಕೂಲಿ ಸಿಕ್ಕುತ್ತದೆ, ರೇಷನ್‌ಕಾರ್ಡು ಸಿಕ್ಕುತ್ತದೆ. ಬಟ್ಟೆ ವಗೈರೆ ಎಲ್ಲಾ ಸಿಕ್ಕುತ್ತದೆ; ಮತ್ತು ರುಚಿ ರುಚಿಯಾದ ಕಾಫಿ ತಿಂಡಿ ತಿನ್ನಲು ಹೋಟೇಲುಗಳಿರುತ್ತವೆ, ಕಣ್ಣಿಗೆ ಬೇಕಾದ ನೋಟ ನೋಡಲು ಸಿನೀಮಾ ಮಂದಿರಗಳಿವೆ, ವಿಹಾರ ಕ್ಷೇತ್ರಗಳಿವೆ, ಅಲ್ಲಿ ಸುಖವಾಗಿ ಇರಬಹುದು ಎಂದು ಅನೇಕರು ಪಟ್ಟಣಗಳಿಗೆ ಹೋಗುತ್ತಿದ್ದಾರೆ. ಆದ್ದರಿಂದ ಕೆಲವು ಕಡೆ ರೈತರು ಸಿಕ್ಕುವುದು ದುರ್ಲಭ. ಅಂಥ ಕಡೆ ಜಮೀನ್ದಾರರು ರೈತರನ್ನು ಹಿಂಸೆಮಾಡಿ ಅವರಿಗೆ ಅನ್ಯಾಯಮಾಡುತ್ತಾರೆಂದರೆ ಯಾರೂ ಒಪ್ಪುವುದಿಲ್ಲ. ಆದರೆ ಶಿವಮೊಗ್ಗ ಮುಂತಾದ ಮಲೆನಾಡು ಪ್ರಾಂತಗಳ ಪರಿಸ್ಥಿತಿಯೇ ಬೇರೆ. ಅಲ್ಲಿ ಬರೀ ಖುಷ್ಕಿಯಲ್ಲದೆ ಹೆಚ್ಚಾಗಿ ತೋಟ ಮತ್ತು ತರಿ ಜಮೀನಿದ್ದು ರೈತರು ತಲತಲಾಂತರದಿಂದ ಅವರಿಗಿರುವ ಜಮೀನುಗಳನ್ನು ಸಾಗುಮಾಡಿಕೊಂಡು ಬರುತ್ತಿದ್ದಾರೆ; ಆ ಪದ್ಧತಿಯಿದೆ, ಅಲ್ಲಿನ ರೈತರ ಆರ್ಥಿಕ ಪರಿಸ್ಥಿತಿ ಸಾಮಾನ್ಯವಾಗಿ ಚೆನ್ನಾಗಿರುವುದಿಲ್ಲ. ಅವರು ತಮ್ಮ ಜೀವನ ಸುಖಮಯವಾಗಿರಬೇಕು, ಈ ದಿವಸ ಒಂದು ಸೀರೆಬೇಕು, ಹಬ್ಬ ಮಾಡಬೇಕು, ಖಾಯಿಲೆಗೆ ಔಷಧಿ ತೆಗೆದುಕೊಳ್ಳಬೇಕು ಎಂದು ಅಪೇಕ್ಷೆಪಟ್ಟರೆ ಜಮೀನ್ದಾರನಿಂದ ಸಾಲ ತೆಗೆದುಕೊಳ್ಳಬೇಕು ಅಥವಾ ಭಿಕ್ಷೆ ಬೇಡಿ ಜೀವನ ಮಾಡಬೇಕು. ಸಾಧಾರಣವಾಗಿ ರೈತರ ಪರಿಸ್ಥಿತಿ ಹೀಗಿರುವಾಗ ಅದನ್ನು ದುರುಪಯೋಗಪಡಿಸಿಕೊಳ್ಳುವ ಜಮೀನ್ದಾರರು ಮಲೆನಾಡಿನಲ್ಲಿದ್ದಾರೆಂದು ಭೂಕಂದಾಯ ಸುಧಾರಣೆ ಸಮಿತಿಯ ಮುಂದೆ ಗೇಣಿದಾರರ ಸಂಘದ ಪ್ರತಿನಿಧಿಗಳು ಮತ್ತು ರೈತರು ಕೊಟ್ಟ ರುಜುವಾತಿನಿಂದ ವ್ಯಕ್ತವಾಗಿದೆ. ಇಷ್ಟೇ ಅಲ್ಲದೆ ಮಲೆನಾಡಿನಲ್ಲಿ ಏನಾಗಿದೆಯೆಂದರೆ ರೈತರು ಕೊಡುವ ಗುತ್ತಿಗೆ ಏಕ ಪ್ರಕಾರವಾಗಿಲ್ಲ. ಒಂದೇ ಗ್ರಾಮದಲ್ಲೂ ಒಂದೇ ತರಹ ಇಲ್ಲ. ಈಗ ಜಮೀನ್ದಾರರು ಅನುಕೂಲ, ಅನಾನುಕೂಲ ನೋಡಿ ಹೆಚ್ಚು ಗುತ್ತಿಗೆ ಕೊಡುವ ರೈತರು ಸಿಕ್ಕುವ ಸಂದರ್ಭದಲ್ಲಿ ಗುತ್ತಿಗೆ ಹೆಚ್ಚಿಸಿ ತಮ್ಮ ಅನುಕೂಲವನ್ನು ಹೆಚ್ಚಿಸಿಕೊಳ್ಳುವ ಪರಿಸ್ಥಿತಿ ಕೂಡ ಇದೆ. ರೈತರು ಹೆಚ್ಚಾಗಿ ಸಿಗದಿರುವ ಕಡೆ ರೈತರಿಗೆ ಅನ್ಯಾಯ ಮಾಡದಂತೆ ಇದ್ದಾರೆ. ರೈತರಿಗಿರುವ ಒಂದು ತೊಂದರೆ ಅಧಿಕವಾಗಿ ಕಾಗೋಡು ಸತ್ಯಾಗ್ರಹ ಪ್ರಾರಂಭವಾಗಿ ಅಲ್ಲಿ ರೈತರಿಗೂ ಜಮೀನ್ದಾರರಿಗೂ ವಿರಸ ಬಂದು ಆ ವಿಷಯ ಈ ಸಭೆಯ ಗಮನಕ್ಕೆ ಬಂದಿದೆ. ಆದ್ದರಿಂದ ಇಂಥ ಪರಿಸ್ಥಿತಿಯಲ್ಲಿ ರೈತರ ಹಿತರಕ್ಷಣೆ ಮಾಡಬೇಕೆಂದು ಸರ್ಕಾರ ಅಪೇಕ್ಷಿಸಿದರೆ ಅದನ್ನು ಅನ್ಯಾಯವೆಂದು ಯಾರೂ ಭಾವಿಸಬಾರದು.

ಈ ಮಸೂದಾಕಾನೂನು ಪ್ರಕಾರ ಜಮೀನ್ದಾರರಿಗೆ ಅನ್ಯಾಯವಾಗಿದೆಯೆಂದು ಹೇಳಬಹುದು. ಈ ದಿವಸ ರೈತರು ಜಮೀನು ಮಾಡಿದರೂ ಜಮೀನು ತಮ್ಮದು ಎಂದು ಹೇಳುವಹಾಗಿಲ್ಲ. ಜಮೀನ್ದಾರನು ಯಾವ ವಿಧವಾದ ನಷ್ಟವನ್ನೂ ಅನುಭವಿಸುವ ರೀತಿಯಲ್ಲಿ ಈ ಕಾನೂನಿನಲ್ಲಿ ಅವಕಾಶ ಮಾಡಿಲ್ಲ. ಜಮೀನ್ದಾರರ ಹಿತ ಮತ್ತು ರೈತರ ಹಿತ ಎರಡನ್ನೂ ಮಸೂದೆಯು ರಕ್ಷಣೆಮಾಡುತ್ತದೆ. ಮುಖ್ಯವಾಗಿ ರೈತರಿಗೆ ಜಮೀನ್ದಾರ ಜಮೀನನ್ನು ಜಾಗ್ರತೆ ಬಿಡಿಸಿ ತೊಂದರೆ ಮಾಡದಂತೆ 5 ವರ್ಷಗಳಿಗೆ ಕಡಮೆ ಯಾವ ರೈತನಿಗೂ ಕೊಡಬಾರದೆಂದು ಹೇಳಿರುವುದು ಸರ್ವಸಮ್ಮತವಾಗಿದೆ. ಈ ದಿವಸ ರೈತನು ಒಂದು ಜಮೀನನ್ನು ತೆಗೆದುಕೊಂಡರೆ ಅವನು ಆ ಜಮೀನು ಅನುಕೂಲವಾಗಿದೆಯೆಂದು ಕಂಡರೆ ಅದಕ್ಕೆ ಗೊಬ್ಬರ ಗೋಡು ವಗೈರೆ ಹಾಕುವುದರಿಂದ ಹೆಚ್ಚು ಫಲ ಬರುತ್ತದೆ, ಆದರೆ ಅದರ ಫಲ ಮೊದಲಲ್ಲಿ ಕಾಣದೆ ನಾಲ್ಕೈದು ವರ್ಷಗಳಾದ ಮೇಲೆ ಬರುವುದು. ಕಷ್ಟಪಟ್ಟು ಕೆಲವುಕಾಲ ಕೆಲಸಮಾಡಿದ ಮೇಲೆ ಆ ರೈತನನ್ನು ಬಿಡಿಸಿದರೆ ಅವನಿಗೆ ಅನ್ಯಾಯವಾಗುತ್ತದೆ. ಆದ್ದರಿಂದ ರೈತ ವ್ಯವಸಾಯಮಾಡುವ ಜಮೀನು ಅವನ ಸ್ವಾಧೀನದಲ್ಲಿ ಕೆಲವು ಕಾಲವಾದರೂ ಇದ್ದರೆ ಅವನಿಗೆ ಆಸಕ್ತಿಯಿರುತ್ತದೆ. ರೈತ ಸಮಾಧಾನದಿಂದ ಚೆನ್ನಾಗಿ ವ್ಯವಸಾಯ ಮಾಡುವುದರಿಂದ ಅವನಿಗೂ ಉಪಯೋಗ, ಜಮೀನ್ದಾರನಿಗೂ ಉಪಯೋಗ, ದೇಶಕ್ಕೂ ಒಳ್ಳೆಯದು. ಈ ದಿವಸ ಅಥವಾ ನಾಳೆ ಜಮೀನು ಬಿಡಿಸುತ್ತಾರೆ ಎಂಬ ಭಯವಿರುವ ರೈತ ಕಷ್ಟಪಟ್ಟು ಕೆಲಸ ಮಾಡುವುದಿಲ್ಲ. ತಾನು ಕಷ್ಟಪಟ್ಟರೆ ತನಗೆ ಅದರ ಫಲ ಬಂದರೂ ಬರಬಹುದು, ಇಲ್ಲದಿದ್ದರೂ ಇರಬಹುದು ಎಂದು ಮುತವರ್ಜಿ ವಹಿಸದೆ ಸುಮ್ಮನೆ ಇರುತ್ತಾನೆ, ಜಮೀನ್ದಾರನ ಹಿತದೃಷ್ಟಿಯಿಂದಲೂ ರೈತನ ಹಿತದೃಷ್ಟಿಯಿಂದಲೂ ಕೆಲವು ಕಾಲ ರೈತನ ಸ್ವಾಧೀನದಲ್ಲಿರುವುದು ಒಳ್ಳೆಯದು ಮತ್ತು ಮನಸ್ತಾಪ ಬಂದಾಗ ರಕ್ಷಣೆಯಿರಬೇಕು ಎಂದು ಅವಕಾಶಮಾಡಿದೆ.

ಇನ್ನು ಮುಖ್ಯವಾದ ಮತ್ತೊಂದು ಅಂಶವೇನೆಂದರೆ ಈ ಮಸೂದಾ ಕಾನೂನಿನ ಪ್ರಕಾರ ರೈತನು ಕೊಡತಕ್ಕ ಗುತ್ತಿಗೆ ನಿರ್ದಿಷ್ಟವಾಗಿದೆ. ಅದನ್ನು ಯಾರೂ ವಿರೋಧಿಸುವುದಕ್ಕೆ ಕಾರಣವಿಲ್ಲ. ರೈತ ಕೊಡತಕ್ಕ ಗುತ್ತಿಗೆ ಜಮೀನ್‌ದಾರರ ಇಷ್ಟದ ಪ್ರಕಾರ ಇರಬೇಕು, ಮಳೆ ಬೆಳೆ ಹೇಗೇ ಆಗಲಿ ಅದನ್ನು ಅನುಸರಿಸಿರಬಾರದು ಎಂಬುದಾಗಿ ಲೆಕ್ಕಾಚಾರ ಮಾಡುತ್ತಾರೆ. ಹಾಗಿರದೆ ಒಂದು ನಿರ್ದಿಷ್ಟವಾದ ಗುತ್ತಿಗೆಯನ್ನು ಏರ್ಪಡಿಸಬೇಕು. ರೈತ ತನ್ನ ಹಿತರಕ್ಷಣೆಯನ್ನು ಮಾಡಿಕೊಳ್ಳುವ ಪರಿಸ್ಥಿತಿಯಲ್ಲಿ ಅನೇಕ ವೇಳೆ ಇರುವುದಿಲ್ಲ. ರೈತ ನಿಸ್ಸಹಾಯಕನಾಗಿರುವುದರಿಂದ, ಅಬಲನಾಗಿರುವುದರಿಂದ, ಅವನು ತನ್ನ terms enforce ಮಾಡುವ ಪರಿಸ್ಥಿತಿಯಲ್ಲಿಲ್ಲದೇಯಿರುವುದರಿಂದ ಸರ್ಕಾರ ಅವನ ಸಹಾಯಕ್ಕೆ ಬಂದು ಸಾಧ್ಯವಾದಮಟ್ಟಿಗೆ ಎಲ್ಲಾ ಕ್ಷೇತ್ರಗಳಲ್ಲೂ ಒಂದೇ ರೀತಿಯ ಗುತ್ತಿಗೆ ಇರಬೇಕೆಂಬ ಏರ್ಪಾಡು ಮಾಡುವಂತಿರಬೇಕು.—ಎಲ್ಲೆಲ್ಲಿ ಯಾವ ಯಾವ ಪದ್ಧತಿ ಇದೆಯೋ ಹೆಚ್ಚು ಕಮ್ಮಿ ಆ ಪದ್ಧತಿಯನ್ನು ಅನುಸರಿಸಿಕೊಂಡು ರೈತ ಕೊಡತಕ್ಕ ಗುತ್ತಿಗೆ ಇಷ್ಟೇ ಎಂಬುದು ನಿರ್ದಿಷ್ಟವಾಗಬೇಕೆಂಬುದು ಮತ್ತು ರೈತ ಕೊಡತಕ್ಕ ಗುತ್ತಿಗೆಗೆ ರಶೀದಿ ಕೊಡಬೇಕು ಎಂಬುದು ಈ ಕಾನೂನಿನಲ್ಲಿ ಅಡಕವಾಗಿದೆ. ಈ ಮಸೂದಾ ಕಾನೂನಿನ ಪ್ರಕಾರ ಮತ್ತೊಂದು ರಕ್ಷಣೆ ಎಂದರೆ 5 ವರ್ಷ ಜಮೀನ್ ಮಾಡತಕ್ಕ ರೈತ ಒಂದು ವೇಳೆ ಅವನು ಜಮೀನ್‌ದಾರನ ಒಪ್ಪಿಗೆಯಿಂದ ಮುಂದಿನ ವರ್ಷವೂ ಅವನೇ ಗುತ್ತಿಗೆ ಪಡೆದರಾಗಲೀ ಅಥವಾ ಜಮೀನುದಾರ ಅವನೇ ಇದ್ದುಕೊಂಡು ಹೋಗಲಿ ಅಡ್ಡಿಯಿಲ್ಲ ಎಂಬುದಾಗಿ ಅಪೇಕ್ಷೆಪಡುವುದಾಗಲೀ ಅಂಥಾ ಸಂದರ್ಭದಲ್ಲಿ ಆ ರೈತನ ಹಕ್ಕು ಇನ್ನು 5 ವರ್ಷದ ಕಾಲ ಇರತಕ್ಕದ್ದು ಎಂದು ಅನುಕೂಲಮಾಡಿಕೊಟ್ಟಿದೆ. ಇದಕ್ಕೆ ಯಾರದೂ ಆಕ್ಷೇಪಣೆ ಇರಕೂಡದು. ಕೆಲವು ಉದಾಹರಣೆಗಳನ್ನು ಮಾನ್ಯ ಸದಸ್ಯರು ಕೊಟ್ಟರು. 5 ವರ್ಷ ಮುಕ್ತಾಯವಾದ ಮೇಲೂ ಸಹ ಜಮೀನ್‌ದಾರ ತಾನೇ ಬಂದು ಅವನನ್ನು ಬಿಡಿಸುವ ಸ್ಥಿತಿಯಲ್ಲಿರುವುದಿಲ್ಲ, ಕಾಲಾವಕಾಶವಿರುವುದಿಲ್ಲ, ಅಂಥಾ ಸಮಯದಲ್ಲಿ ತೊಂದರೆಯಾಗುತ್ತದೆ ಎಂದು ಹೇಳಿದರು. ಆ ತೊಂದರೆ ರೈತನಿಗೂ ಇರುತ್ತದೆ, ಜಮೀನ್‌ದಾರನಿಗೂ ಇರುತ್ತದೆ. ಒಂದು ಕಾನೂನು ಪ್ರಕಾರ ಒಂದು ಹಕ್ಕು ಸಿದ್ಧಮಾಡಿಕೊಟ್ಟರು

(ಶ್ರೀ ಎಂ. ಗೋವಿಂದರೆಡ್ಡಿಯವರು)

ವಾಗ ಅದರ ಫಲ ರೈತ ಪಡೆಯದಿದ್ದರೆ ಅದು ಅವನ ತಪ್ಪು. ಜಮೀನ್‌ದಾರ ಪಡೆಯದಿದ್ದರೆ ಅದು ಅವನ ತಪ್ಪು. ಅಂಥಾ ಸಂದರ್ಭದಲ್ಲಿ ಯಾರಿಗೂ ಅನಾನುಕೂಲವಾಗುವುದಿಲ್ಲ. ಯಾವ ಸರ್ಕಾರವೂ ಕರಾರುವಾಕ್ಕಾಗಿ ಕಾನೂನು ಮಾಡುವುದಕ್ಕಾಗುವುದಿಲ್ಲ. ಇನ್ನೊಂದು ರೈತನಿಗೆ ಕೊಟ್ಟಿರತಕ್ಕ ಹಕ್ಕು ಎಂದರೆ ಜಮೀನ್‌ದಾರ ನಿರ್ದಿಷ್ಟ ಕಾಲಾವಧಿಯೊಳಗೆ ರೈತನನ್ನು ಬಿಡಿಸಿದರೆ ಜಮೀನ್‌ದಾರನ ಮೇಲೆ ಆ ರೈತನಿಗೆ ಹಕ್ಕಿದೆ. ಗೇಣಿ ಮುಗಿದಕೂಡಲೆ ರೈತ ಬಿಡದಿದ್ದಲ್ಲಿ ಜಮೀನುದಾರ ಅಪೀಲು ಮಾಡುತ್ತಾನೆ. ವಿಚಾರಣೆ ಆಗುತ್ತದೆ. ರೈತನನ್ನು ಬಿಡಿಸಿ ಆತನ ಹಕ್ಕು ಸಿದ್ಧಮಾಡಿಕೊಡುತ್ತಾರೆ. ರೈತನಿಂದ ಜಮೀನ್‌ದಾರರಿಗೆ ಅನ್ಯಾಯವಾಗುತ್ತದೆ, ಹಾಹಾಕಾರವಾಗುತ್ತದೆ, ಅಲ್ಲೋಲ ಕಲ್ಲೋಲವಾಗುತ್ತದೆ ಎಂದು ಹೇಳಿದರು. ರೈತ ಜಮೀನನ್ನು ಸರಿಯಾಗಿ ನೋಡಿಕೊಳ್ಳದೆ ಜಮೀನು ಕೆಡಿಸಬಹುದು ಎಂದು ಇಟ್ಟುಕೊಳ್ಳೋಣ. ಅದಕ್ಕೆ ಅವಕಾಶ ಮಸೂದಾ ಕಾನೂನಿನಲ್ಲಿ ಮಾಡಿಕೊಟ್ಟಿದೆ. ಕೆಡಿಸಿದರೆ ತಪ್ಪಿತಸ್ಥನಾಗುತ್ತಾನೆ. ತನಗಿರತಕ್ಕ ಹಕ್ಕನ್ನು ಬಿಟ್ಟು ಕೊಡುವ ಪರಿಸ್ಥಿತಿ ಬರುತ್ತದೆ. ಅಷ್ಟೇ ಅಲ್ಲ. ಈ ಮಸೂದಾ ಕಾನೂನಿನ ಪ್ರಕಾರ ಜಮೀನ್‌ದಾರ ತನಗೆ ಆಗಿರತಕ್ಕ ನಷ್ಟವನ್ನು ಆ ರೈತನಿಂದ ವಸೂಲುಮಾಡಲು ಅವಕಾಶವಿದೆ. ಒಬ್ಬ ರೈತ ತೆಗೆದುಕೊಂಡಿರತಕ್ಕ ಜಮೀನನ್ನು ಇನ್ನೊಬ್ಬ ರೈತನಿಗೆ ಕೋರಿಗೆಗೆ ಅಥವಾ ಗುತ್ತಿಗೆಗೆ ಕೊಡುವಹಾಗಿಲ್ಲ. ಅಥವಾ ಅವನು ಅದನ್ನು ಉಳದೇ ಬಿಡುವ ಹಾಗಿಲ್ಲ. ಉಳದೇಬಿಟ್ಟರಾಗಲೀ ಜೊತೆಯವನಿಗೆ ಗುತ್ತಿಗೆಗೆ ಕೊಟ್ಟರಾಗಲೀ, ಆ ರೈತ ತನ್ನ ಹಕ್ಕನ್ನು ಬಿಟ್ಟುಕೊಡುತ್ತಾನೆ ಎಂಬುದಾಗಿ ವಿಧಾಯಕವಾಗಿದೆ. ಆದ್ದರಿಂದ ಜಮೀನ್‌ದಾರನಿಗೆ ಅನ್ಯಾಯವಾಗುವುದಿಲ್ಲ. ರೈತ ತನ್ನ ಖರ್ಚಿನಿಂದ ಜಮೀನಿನಲ್ಲಿ ಮನೆ ಕಟ್ಟಿಕೊಂಡಿದ್ದರೆ, ತನ್ನ ಹಕ್ಕು ಮುಕ್ತಾಯವಾದ ಕೂಡಲೇ ಆ ಮನೆಯನ್ನು ಕೂಡ ಕೊಟ್ಟುಬಿಡಬೇಕೆಂದು ವಿಧಾಯಕವಾಗಿದೆ. ಈ ರೀತಿ ಜಮೀನ್‌ದಾರನಿಗೆ ಯಾವ ಅನ್ಯಾಯವೂ ಇಲ್ಲದೆ ರೈತನ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಒಂದು ಕಾನೂನಿನ ಅಧಿಕಾರದ ಒಳಗೆ ತಂದ ಮಾತ್ರಕ್ಕೆ ಈ ಕಾನೂನು ಜಮೀನ್‌ದಾರರಿಗೆ ನಿರುತ್ಸಾಹವನ್ನುಂಟುಮಾಡುವಂಥಾದ್ದು, ಜಮೀನ್‌ದಾರರನ್ನು ಇಕ್ಕಟ್ಟಿಗೆ ಸಿಕ್ಕಿಸುತ್ತದೆ ಎಂದು ಹೇಳಿದರೆ ಅದು ಸರ್ವಸಮ್ಮತವಾದುದಲ್ಲ, ನ್ಯಾಯಸಮ್ಮತವಾದುದಲ್ಲ, ಯಾವ ದೃಷ್ಟಿಯಿಂದ ನೋಡಿದರೂ ಜಮೀನ್‌ದಾರರಿಗೆ ಯಾವ ಅನ್ಯಾಯವೂ ಆಗಿಲ್ಲ. ಜಮೀನ್‌ದಾರರಿಗೂ, ರೈತರಿಗೂ ಯಾವ ಯಾವ ರಕ್ಷಣೆಗಳಿವೆ ಯೆಂಬುದು ಕಾನೂನಿನಲ್ಲಿ ವಿಧಾಯಕವಾಗಿದೆ. ತಕ್ಕ ರಕ್ಷಣೆ ಸಿಕ್ಕುತ್ತದೆ. ಈ ಕಾನೂನನ್ನು ತಂದಮಾತ್ರಕ್ಕೆ ಅಲ್ಲೋಲಕಲ್ಲೋಲವಾಗುತ್ತದೆಯೆಂದು ಭಯಪಡಬೇಕಾಗಿಲ್ಲ. ಶ್ರೀ ರಂಗರಾಮಯ್ಯನವರು ಸ್ವಂತ ಆಸ್ತಿ ಇಟ್ಟುಕೊಂಡಿರುವವರಿಗೆ ಯಾವ ಭರವಸೆ ಇದೆ ಎಂದು ಕೇಳಿದರು. ಈಗಲಾದರೂ ಇಷ್ಟುಮಟ್ಟಿಗೆ ಭರವಸೆ ಸಿಕ್ಕಿದೆ. ನಾಳೆ ಯಾವ ಸರ್ಕಾರ ಬರುತ್ತದೆಯೋ ಹೇಳುವುದಕ್ಕಾಗುವುದಿಲ್ಲ. ಸಮತಾವಾದ ಪಕ್ಷದ ಮುಂದಾಳುಗಳು ಭಾರತದಲ್ಲೆಲ್ಲಾ ಒಬ್ಬ ಜಮೀನ್‌ದಾರ 30 ಅಥವಾ ಅದಕ್ಕಿಂತ ಹೆಚ್ಚು ಎಕರೆ ಜಮೀನು ಇಟ್ಟುಕೊಳ್ಳುವಹಾಗಿಲ್ಲ, ಹಾಗಿದ್ದರೆ ಅದೆಲ್ಲಾ ಸರ್ಕಾರಕ್ಕೆ ಸೇರಿದ್ದು ಎಂದು ಹೇಳುತ್ತಿದ್ದಾರೆ. ಮುಂದೆ ಬರುವ ಸರ್ಕಾರದಲ್ಲಿ ನಮ್ಮ ಸ್ವಂತ ಆಸ್ತಿಗಳನ್ನು ಅನುಭವಿಸುವುದಕ್ಕೆ ನಮಗೆ ಹಕ್ಕು ಇಲ್ಲವೇ ಎಂದು ಕೇಳುವುದಕ್ಕೂ ಆಗುವುದಿಲ್ಲ. ಅದಕ್ಕಿಂತ ಮುಂದೆ ಹೋಗತಕ್ಕ ಕಮ್ಯೂನಿಸ್ಟ್ ಸರ್ಕಾರ ಬಂದರೆ ಇರುವುದನ್ನು ಕಿತ್ತುಕೊಂಡು ಜಮೀನು ಹಂಚಿಕೆಮಾಡತಕ್ಕ ವಿಚಾರ ಎಲ್ಲರಿಗೂ ತಿಳಿದ ವಿಷಯ.

Sri L. SIDDAPPA.—It is not the Socialists alone. Even those who follow Gandhian principles have advocated it. Dr. J. C. Kumarappa has advocated it.

ಶ್ರೀ ಎಂ. ಗೋವಿಂದರೆಡ್ಡಿಯವರು.—ಹೌದು. ಅದು ಸರಿ. ಆದರೆ ಆ ರೀತಿ ಜಾರಿಯಲ್ಲಿಲ್ಲ ಹೇಳುತ್ತಾ ಇದ್ದೇನೆ. ಆದ್ದರಿಂದ ಈಗ ಒಂದು ಪರಿಸ್ಥಿತಿ ಉಲ್ಬಣವಾಗಿ ರೈತರಿಗೂ ನಮಗೂ ಸಮಾಧಾನಕರವಾದ ಪರಿಸ್ಥಿತಿಯಿಲ್ಲ ಎಂಬುದಾಗಿ ಅಸಮಾಧಾನಗೊಂಡು-ಉಗ್ರವಾದಿಗಳಿಗೆ ಶರಣುಹೋಗುವುದಕ್ಕೆ ಮುಂಚೆ ಕಾಲಧರ್ಮ ಅರಿತು ಅದಕ್ಕನುಸರಿಸಿಕೊಂಡು ತಮಗೂ ಅಷ್ಟು ಬರಲಿ, ಕಷ್ಟಪಡತಕ್ಕ ರೈತನಿಗೂ ಸ್ವಲ್ಪ ಅನುಕೂಲವಾಗಲೀ ಎಂಬ ದೃಷ್ಟಿಯಿಂದ ಈ ಮಸೂದಾ ಕಾನೂನಿಗೆ ಒಪ್ಪಿಗೆ ಕೊಡುವುದು ನ್ಯಾಯವಾಗಿದೆ ಎಂದು ನನಗೆ ಅನ್ನಿಸುತ್ತದೆ.

*ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ).—ಸ್ವಾಮಿ, ಈ ಟೆನೆನ್ಸಿಬಿಲ್ ವಿಚಾರದಲ್ಲಿ ಮಾತನಾಡುತ್ತಾ ನಮ್ಮ ಸ್ನೇಹಿತರು ಇದರ ಪ್ರತಿಯೊಂದು ಅಂಶವನ್ನೂ ಸಭೆಯ ಗಮನಕ್ಕೆ ತಂದು ಮಾತನಾಡಿದ್ದಾರೆ. ಆದ್ದರಿಂದ ನಾನು ಹೆಚ್ಚಿಗೆ ವಿವರಗಳಿಗೆ ಹೋಗದೆ ಶ್ರೀಮಾನ್ ರಂಗರಾಮಯ್ಯನವರು ಮತ್ತು ಶ್ರೀಮಾನ್ ಚನ್ನಬಸಪ್ಪನವರು ವ್ಯಕ್ತಪಡಿಸಿದ ಕೆಲವು ಅಭಿಪ್ರಾಯಗಳ ವಿಚಾರದಲ್ಲಿ ಅದನ್ನು ಖಂಡಿಸಬೇಕೆಂದು ಮಾತನಾಡುತ್ತಿದ್ದೇನೆ.

ಶ್ರೀಮಾನ್ ರಂಗರಾಮಯ್ಯನವರು ಮಾತನಾಡುತ್ತಾ ಕೆಲವು ಚಳುವಳಿಗಾರರ ಒತ್ತಾಯದಿಂದ ಸರ್ಕಾರದವರು ಈ ಟೆನೆನ್ಸಿಬಿಲ್‌ನ್ನು ತಂದಿದ್ದಾರೆಯೇ ಹೊರತು ಸರ್ವಸಾಧಾರಣವಾಗಿ ರೈತರಿಗೆ ಅನುಕೂಲವಾಗಬೇಕು ಅದರಿಂದ ದೇಶದಲ್ಲಿ ಒಂದು ಒಳ್ಳೆಯ ಪರಿಣಾಮ ಉಂಟಾಗಬೇಕು ಎಂಬ ಉದ್ದೇಶದಿಂದ ಮಾಡುತ್ತಿಲ್ಲ ಎಂಬ ಮಾತನ್ನು ಹೇಳಿದರು. ಶ್ರೀಮಾನ್ ರಂಗರಾಮಯ್ಯನವರು ಬಹುಶಃ ಜಮೀನ್‌ದಾರರಾಗಿ ಅವರ ಹಿತದೃಷ್ಟಿಯಿಂದ ಮಾತನಾಡಿದ್ದರೆ ಅದು ನಮ್ಮ ತಪ್ಪಲ್ಲ. ಸರ್ಕಾರದವರು ಬಹಳ ದೂರಾಲೋಚನೆಯನ್ನಿಟ್ಟುಕೊಂಡು ರೈತರಿಗೆ ಸಾಧ್ಯವಾದಷ್ಟೂ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಇದನ್ನು ತಂದಿದ್ದಾರೆ. ಮಹಾಶಯರು ಕೆಲವರು ಚಳುವಳಿ ಹೂಡಿ ಸಾಧ್ಯವಾದಷ್ಟೂ ಬದಲಾವಣೆ ಮಾಡಿ ಇವತ್ತಿನ ದಿನ ಈ ಬಿಲ್ಲನ್ನು ರೈತರಿಗೆ ಒಳ್ಳೆಯದು ಮಾಡಬೇಕೆಂಬ ಯಾವ ಉದ್ದೇಶದಿಂದ ತಂದಿದ್ದಾರೋ ಅದಕ್ಕೆ ಕುಂದಕ ಬರುವ ರೀತಿಯಲ್ಲಿ ಈ ಮಸೂದೆಯನ್ನು ತಂದಿಟ್ಟಿದ್ದಾರೆ ಎಂದು ಹೇಳುವುದು ಇದೂ ಸಹ ಕೆಲವು ಹಿಡುವಳಿದಾರರ ಚಳುವಳಿ ಎಂದು ಹೇಳಬೇಕಾಗುತ್ತದೆ. ಇದನ್ನು ಸರ್ಕಾರದವರು ತರುತ್ತಾ ಇರಲಿಲ್ಲ. ಪ್ರಪಂಚದ ಪರಿಸ್ಥಿತಿಯನ್ನು ನೋಡಿ ಸರ್ಕಾರದವರು ಇಂಥಾ ಮಸೂದೆಗಳನ್ನು ತರಬೇಕಾಗಿದೆ. ಶ್ರೀಮಾನ್ ರಂಗರಾಮಯ್ಯನವರು ಉಳುವವನ ಪಾಲು ಎಷ್ಟಿರಬೇಕೆಂಬುದು ನಿರ್ದಿಷ್ಟವಾಗಿರಬೇಕೆಂದು ಹೇಳಿದರು. ಆದರೆ ಉಳುವವನ ಪಾಲು ಎಷ್ಟು, ಹೊಲದವನ ಪಾಲು ಎಷ್ಟು ಎಂಬ ತತ್ವ ಅಲ್ಲ, ಉಳುವವನದೇ ಹೊಲ ಆಗಿರಬೇಕೆಂಬುದು ಈಗಿನ ತತ್ವ. ಭೂಮಿಯನ್ನು ಉಳುಮೆಮಾಡಿ ಬೆವರು ಸುರಿಸಿ ಆಹಾರ ಧಾನ್ಯ ಬೆಳೆದು ತ್ಯಾಗಮಾಡಿ ದೇಶ ಕಾಪಾಡತಕ್ಕವನು

ರೈತ, ಅವನು ಯಾವ ಹೊಲ ಉಳುತ್ತಾನೋ ಅದು ಅವನದೇ ಆಗಿರಬೇಕೆಂಬ ತತ್ವ ಪ್ರಚಾರದಲ್ಲಿದೆ. ಚೈನಾ ದೇಶದಲ್ಲಿ ಆ ಏರ್ಪಾಡು ಆಗುತ್ತಾ ಇದೆ. ರಷ್ಯಾದಲ್ಲಿ ಆ ರೀತಿ ಇದೆ. ಆ ಪರಿಸ್ಥಿತಿ ನಮ್ಮ ಸುತ್ತು ಮುತ್ತಲೂ ಆವರಿಸಿಕೊಂಡು ಬರುತ್ತಾ ಇರುವ ಕಾಲದಲ್ಲಿ ಸರ್ಕಾರದವರು ಬಹಳ ದೂರದೃಷ್ಟಿಯಿಂದ ಯಾವನು ಹೊಲ ಉಳುತ್ತಾನೆಯೋ ಅವನಿಗೆ ಸಾಧ್ಯವಾದಷ್ಟೂ ಸಹಾಯಮಾಡಬೇಕಾಗಿದೆ. ಅವನ ಹಕ್ಕು ಉಳಿಸಬೇಕಾಗಿದೆ.

Sri H. M. CHANNABASAPPA.—I want the Hon'ble Member to understand that in Russia a person, whether he is a zamindar or a tiller of the soil, is only a workman.

Sri H. K. VEERANNA GOWDH.—In Russia they have changed the constitution of late.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಏನೋ ಮನೆಯ ಪದ್ಧತಿಯಲ್ಲಿ ಎರಡು ಕಡೆ ಜಮೀನಿದ್ದರೆ ತನ್ನದೇ ಸ್ವಂತ ಜಮೀನು ಎಂದು ಏನು ಬೇಕಾದರೂ ತರಕಾರಿ ಬೆಳೆದು ಕೊಳ್ಳಲಿ ಎಂದು ಅಲ್ಪ ಸ್ವಲ್ಪ ಜಮೀನು ಕೊಟ್ಟಿರಬಹುದೇ ಹೊರತು ಸರ್ವೇ ಸಾಮಾನ್ಯವಾಗಿ ಅಲ್ಲಿ ದೇಶದಲ್ಲಿನ ಎಲ್ಲಾ ಆಸ್ತಿಯೂ ಸರ್ಕಾರದ್ದೇ; ಪ್ರಜೆಗಳೆಲ್ಲಾ ಕಷ್ಟಪಡಬೇಕು. ಕಷ್ಟಪಟ್ಟು ಬೆಳೆದರೆ ಅವರವರ ಯೋಗ್ಯತಾನುಸಾರ ಹಂಚಿಕೊಳ್ಳುವ ಪದ್ಧತಿ ಅದು. ಇಲ್ಲಿಯ ಹಾಗೆ ದೊಡ್ಡ ಜಮೀನ್ದಾರನಾಗಿ ಪಟ್ಟಣದಲ್ಲಿ ಓಡಾಡುತ್ತಿದ್ದು ಹಳ್ಳಿಗಳಲ್ಲಿ ಕಷ್ಟ ಬಿದ್ದು ಹಾವು ಚೇಳು ಕಡಿಸಿಕೊಂಡು ಪೈರು ಬೆಳೆದು ನಮಗೆ ತಂದು ಕೊಡುವವನು ಎಲ್ಲೂ ಇಲ್ಲ. ಹಾಗೆಲ್ಲಾದರೂ ಇದ್ದರೆ ಆ ಪದ್ಧತಿ ಬೇಗ ನಶಿಸಿಹೋಗುತ್ತದೆಂಬುದು ನಿಜ. ಪ್ರಜಾಸಂಖ್ಯೆ ಜಾಸ್ತಿಯಿದ್ದು ಭೂಮಿ ಕಡಿಮೆಯಿದ್ದರೆ, ಆಗ ಸಾಮಾನ್ಯವಾಗಿ ಉಳುವವನಿಗೇ ಹೊಲ ಎಂಬ ತತ್ವ ಜಾರಿಗೆ ಬರುತ್ತದೆ. ಜಮೀನು ಯಥೇಚ್ಛವಾಗಿ ಇರುವಾಗ ಇಂಥಾದ್ದರ ಆವಶ್ಯಕತೆ ಏನೂ ಇಲ್ಲದಿರಬಹುದು. ಅಮೇರಿಕಾದಲ್ಲಿ ಜಮೀನು ಬೇಕಾದಷ್ಟಿದೆ; ಬೇಕಾದಷ್ಟು ಭಾಗ ಕಾಡಾಗಿದೆ; ಅಲ್ಲಿ ಆ ಪದ್ಧತಿ ಜಾರಿಯಲ್ಲಿಲ್ಲ. ಆದರೆ ಎಲ್ಲಿ ಉಳುವವನಿಗೆ ಹೊಲ ಇಲ್ಲದೆ, ಬರೀ ಶ್ರೀಮಂತರಿಗೇ ಜಮೀನಿದೆಯೋ ಅಲ್ಲಿ ಮೈಬೆವರು ಸುರಿಸಿ ಕಷ್ಟಪಡುವ ನಿಜವಾದ ರೈತನ ಕೂಗು ಗಗನಕ್ಕೆ ಮುಟ್ಟಿ ಅಲ್ಲಿ ನೆಹರೂ ಸರ್ಕಾರವಲ್ಲ, ಯಾವ ಸರ್ಕಾರವೇ ಇದ್ದರೂ ಅದು ರೈತನ ಈ ಕೂಗನ್ನು ಗಮನಿಸದೆ ಇದ್ದರೆ ಹಾಳಾಗಿ ನ್ಯಾಯವಾದ ಸರ್ಕಾರ ಜಾರಿಗೆ ಬರುತ್ತದೆ.

ಒಬ್ಬ ಸದಸ್ಯರು.—ಇಂಗ್ಲೆಂಡಿನಲ್ಲಿ ಹೇಗಿದೆ ?

ಶ್ರೀ ಎಂ. ವಿ. ಕೃಷ್ಣಪ್ಪನವರು.—ಅಲ್ಲಿ ಎಲ್ಲರೂ ಶ್ರೀಮಂತರಾಗಿ ಒಂದು ಮೇಲುಮಟ್ಟದ ಜೀವನದ ಸ್ಥಿತಿಯಲ್ಲಿ ಎಲ್ಲರೂ ಇದ್ದಾರೆ. ಒಂದು ವೇಳೆಯೇನಾದರೂ ಹೆಚ್ಚು ಕಡಿಮೆಯಾದರೆ ಸರ್ಕಾರದವರೇ ಅವರ ಜೀವನಕ್ಕೆ ಜವಾಬ್ದಾರರಾಗಿ ಎಲ್ಲ ಜನರಿಗೂ ವಾಸ ಮಾಡುವುದಕ್ಕೆ ಊಟ ಮಾಡುವುದಕ್ಕೆ, ಒಂದು ಉತ್ತಮ standard of life ನಡೆಸುವುದಕ್ಕೆ ಏರ್ಪಾಡುಮಾಡಿ ಕೊಡುತ್ತಾರೆ. ಇಲ್ಲಿ ಹಾಗೆಯೇ ? ತಾವು ಸುಖವಾಗಿರುತ್ತೀರಿ, ಕಷ್ಟಪಡುವವನು ಕಷ್ಟಪಡುತ್ತಿರುತ್ತಾನೆ !

ಒಬ್ಬ ಸದಸ್ಯರು.—ಇಂಗ್ಲೆಂಡಿನಲ್ಲೂ ಎಲ್ಲರಿಗೂ ಮನೆಯಿಲ್ಲ. ಚರ್ಚಿಲರು ಈಗ ತಾನೆ ಒಂದು ಲಕ್ಷ ಮನೆಗಳನ್ನು ಕಟ್ಟಿಸಿಕೊಡುತ್ತೇನೆಂದು ಹೇಳಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—Is the Hon'ble Member aware that there are still 20 lakhs of acres available for cultivation ?

ಶ್ರೀ ಎಂ. ವಿ. ಕೃಷ್ಣಪ್ಪನವರು.—ಈಗ ಹೇಗೆ ಬೇಕಾದರೂ ಮಾತನಾಡಬಹುದು. ರೈತ ಪ್ರತಿನಿಧಿಗಳು ಈ ಸಭೆಯಲ್ಲಿದ್ದಿದ್ದರೆ ಕಷ್ಟಪಟ್ಟು ಬೆವರು ಸುರಿಸಿ ಬೆಳೆಯುವ ರೈತನೇನು ಹೇಳುತ್ತಿದ್ದನೆಂಬುದು ಗೊತ್ತಾಗುತ್ತಿತ್ತು. ಅವರನ್ನು ಮುಖ್ಯವಾಗಿ ಕೇಳುವುದು ಅವಶ್ಯಕ. ಆ ಕಷ್ಟಪಡುವ ಬಡ ರೈತನ ಮನಸ್ಸಿನಲ್ಲಿರುವುದನ್ನು, ಅವನ ಹೃದಯದಲ್ಲಿ ಹುದುಗಿರುವ ನೋವನ್ನು ಇಲ್ಲಿ ನಾವು ಹೇಳುವುದು ಕಷ್ಟ. ಇವತ್ತು ನಮ್ಮ ಮಿತ್ರರು ಹೇಳುತ್ತಿರುವುದನ್ನು ಕೇಳಿದಾಗ ರೈತ ಪ್ರತಿನಿಧಿಗಳೆಂದು ಇಲ್ಲಿರುವುದಕ್ಕೆ ನಾವೊಬ್ಬರೂ ಅರ್ಹರೇ ಅಲ್ಲ. ಅದು ಸತ್ಯವಾದ ಮಾತು.

ಶ್ರೀ ಎಂ. ಎಚ್. ಜೋಯಿಸರು.—Whom does he represent here, Sir ? ಅವರು ಅರ್ಹರಲ್ಲವೆಂದು ಹೇಳಿಕೊಳ್ಳಬಹುದು. ಇಲ್ಲಿರುವವರಾರೂ ಅರ್ಹರಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪನವರು.—ನಮ್ಮ ಮಿತ್ರರು ಮಾತನಾಡುವುದನ್ನು ನೋಡಿದರೆ ಹಾಗೆನಿಸುತ್ತದೆ. ನಾನಂತೂ ರೈತರ ಪ್ರತಿನಿಧಿ ಅಲ್ಲವೇ ಅಲ್ಲ. ಈಗಿಲ್ಲಿ ನೋಡಿದರೆ ಯಾರೊಬ್ಬರೂ ಜಮೀನ್ದಾರರಿಗೆ ತೊಂದರೆಯಾಗುತ್ತಿದೆಯೆಂದು ಮಾತನಾಡುತ್ತಾರೆಯೋ ಹೊರತು, ಎಷ್ಟೋ ಜನ ರೈತರು ತಮ್ಮ ಭವಿಷ್ಯವೇನೆಂಬ ನಿರ್ಧಾರವೇ ಇಲ್ಲದೆ, ಈ ವರ್ಷ ಯಾರವೋ ಗುತ್ತಿಗೆಯೋ ಮಾಡುವುದು ಮಾರುವರುಷ ಬಿಟ್ಟು ಹೋಗುವುದು—ಹೀಗೆ ಕೆಲಸ ಮಾಡುತ್ತಿರುವವರ ಕಷ್ಟವನ್ನು ಹೇಳುವವರಾರು ? ದೊಡ್ಡ ಜಮೀನ್ದಾರ 100-150 ಎಕರೆ ಇಟ್ಟುಕೊಂಡು 50-60 ಜನ ರೈತರನ್ನು ಒಬ್ಬೊಬ್ಬರಿಗೂ ಎರಡು-ಮೂರು ಎಕರೆ ಕೊಟ್ಟು ಮಾಡಿಸುತ್ತಾನೆ. ರೈತ ಕಷ್ಟಪಟ್ಟು ಉತ್ತು ಉತ್ತು ಕೊನೆಗೆ ಬೆಳೆದದ್ದರಲ್ಲಿ ಅರ್ಧವನ್ನೆಲ್ಲಾ ಜಮೀನ್ದಾರನಿಗೆ ಕೊಟ್ಟುಬಿಡುವುದು—ಹೀಗಿದೆ ನಮ್ಮ ಕಡೆಯಲ್ಲಿ !!

ಒಬ್ಬ ಸದಸ್ಯರು.—ಗೊಬ್ಬರ ಕೊಡುವವರು ಯಾರು ?

ಶ್ರೀ ಎಂ. ವಿ. ಕೃಷ್ಣಪ್ಪನವರು.—ಅದನ್ನೂ ರೈತರಲ್ಲಿ ಜಮೀನಿಗೆ ಪೈಪೋಟಿ ಜಾಸ್ತಿಯಿದ್ದರೆ, ಅವರೇ ಹಾಕಿಕೊಳ್ಳಬೇಕು. ಎಲ್ಲಿ ರೈತಾಬಾದಿಲ್ಲದೆ, ಪೈಪೋಟಿಯಿಲ್ಲವೋ ಅಲ್ಲಿ ಮಾತ್ರ ಜಮೀನ್ದಾರರು ಗೊಬ್ಬರ ಕೊಡಬಹುದು ಅಷ್ಟೆ. ನಮ್ಮ ಕಡೆಯಲ್ಲಿ ಈ ವರ್ಷ ಸಾಗುವಳಿ ಮಾಡುತ್ತಿರುವವನಿಗೆ ಬರುವ ವರ್ಷವೂ ಅವನಿಗೇ ಜಮೀನಿರುತ್ತದೆಂದು ಹೇಳುವುದಕ್ಕಾಗುವುದಿಲ್ಲ. ರೈತ ಕಷ್ಟಪಟ್ಟು ಜಮೀನಿನಲ್ಲಿರುವ ಕಳೆಯನ್ನೆಲ್ಲಾ ತೆಗೆದು ಒಳ್ಳೆ ಸ್ಥಿತಿಗೆ ತಂದಿಟ್ಟಿದ್ದರೆ, ಇನ್ನೊಬ್ಬ ಹೆಚ್ಚಿಗೆ ದವಸ ಕೊಡುತ್ತಾನೆಂದು ಹೇಳಿ ಜಮೀನ್ದಾರ ಅವನಿಗೆ ಕೊಟ್ಟುಬಿಡಬಹುದು. ಈಗಿರುವ ಕಾನೂನಿನಲ್ಲಿ ಅಂಥದಕ್ಕೆ ಪ್ರತಿಬಂಧಕವೇನೂ ಇಲ್ಲ. ಇದೇ ಗತಿಯಲ್ಲಿರುವ ಆ ಸಾವಿರಾರು ಬಡ ರೈತರಿಗೆ ಏನು ಭವಿಷ್ಯ ಇದೆ !! ಅವರಿಗೇನು ಉತ್ಸಾಹವಿದೆ !! ಬರುವ ವರ್ಷ ನಮಗೆ ಬರುವ ಉತ್ಪತ್ತಿ ಕಳೆದು ಕೊಳ್ಳುವ ಪರಿಸ್ಥಿತಿ ಬಂದಾಗ ನಮ್ಮ ಮನಸ್ಸಿನಲ್ಲಿ ಯಾವ feeling ಬರುತ್ತದೆ ಯೋಚನೆಮಾಡಿ. ಅದೇ ರೀತಿ ರೈತರಿಗೂ ಭಾವನೆಯಿರುತ್ತದೆಂದು ತಿಳಿದು ನಾಲ್ಕಾರು ವರ್ಷ ಅವನಿಗೆ ಜಮೀನನ್ನು ಖಾಯಂ ಮಾಡಿಕೊಟ್ಟರೆ ಚೆನ್ನಾಗಿ ಮಾಡಬಹುದು ಎಂದು ಕೊಟ್ಟಿದ್ದರೆ, ಸಾಹುಕಾರರಿಗೆ ತೊಂದರೆ

(ಶ್ರೀ ಎಂ. ವಿ. ಕೃಷ್ಣಪ್ಪನವರು)

ಯಾಗುತ್ತದೆಂದು ವಾದಿಸುವುದೇ! ರೈತನ ಮನಸ್ಸಿನಲ್ಲಿ ತಾನು ಎಷ್ಟು ಕಷ್ಟಪಟ್ಟು ಕೆಲಸಮಾಡಿದರೂ, ತನ್ನ ಮುಂದಿನ ಭವಿಷ್ಯವೇನು, ತನ್ನ ಮಕ್ಕಳ ಮೊಮ್ಮಕ್ಕಳ ಗತಿಯೇನು ಎಂಬುದಾವುದನ್ನೂ ಕಾಣದೆ ಕಳವಳ ತುಂಬಿರುವಾಗ, ಅವನ ಕಷ್ಟವನ್ನು ಸ್ವಲ್ಪವೂ ಅರಿತುಕೊಳ್ಳದೆ ಹೋಗುವುದೇ! ಅಲ್ಲದೆ, ಜಮೀನ್ದಾರರೂ ಎಂಥವರು! ಸಾಮಾನ್ಯವಾಗಿ ಕಾನುಮಾಡಿಕೊಂಡಿರುವವರು; ಹೆಚ್ಚು ಕಡಮೆ ಸುಖವಾಗಿರುವವರೇ. ಇರುವ ಪರಿಸ್ಥಿತಿಯಲ್ಲಿ ಜಮೀನ್ದಾರರು, ರೈತರು ಎಂದು ಹೇಳಿದರೆ, ಸೋಷಿಯಲಿಸ್ಟರವಾದದಲ್ಲಿ ಜಮೀನ್ದಾರರೇ ಮೇಲಾಗಿರುವವರು. ಆದ್ದರಿಂದ ರೈತರ ಮನಸ್ಸು ನೋಯುವಂತೆ ಮಾತನಾಡಕೂಡದು. ರೈತನಿಗೆ ತಾನು ಎಷ್ಟು ಕಷ್ಟಪಟ್ಟರೂ ನಿರ್ದಿಷ್ಟವಾಗಿ ತನ್ನ ಭೂಮಿ, ತನ್ನದು ಎಂದು ಯಾವ ಗ್ಯಾರಂಟಿಯೂ ಇಲ್ಲದೆ ಇದ್ದರೆ ಅವನಿಗೆ ಮುಂದಿನ ಭವಿಷ್ಯ ಏನೂ ಗೊತ್ತಾಗುವುದಿಲ್ಲ. ಬರುವ ವರ್ಷಕ್ಕೆ ದೇವರೇ ಗತಿ, ಮಕ್ಕಳ ವಿದ್ಯಾಭ್ಯಾಸಕ್ಕೆ ದುಡ್ಡು ಕೊಡುವವರು ಯಾರು? ಹೊಟ್ಟೆ ಬಟ್ಟೆಗೆ ಏನಿದೆ ಅವನಿಗೆ ಪ್ರಪಂಚದಲ್ಲಿ!! ಇಂದು ಸಾಹುಕಾರನ ಹತ್ತಿರ ಹೋಗಿ ಎರಡು ಎಕರೆ ಗೇಣಿ ಮಾಡಿಕೊಂಡರೆ ಮುಂದಿನ ವರ್ಷ ಅದನ್ನೂ ಕಿತ್ತುಕೊಳ್ಳಬಹುದು, ಮನೆಯನ್ನೂ ಬಿಟ್ಟು ಓಡಿಸಬಹುದು. ದೇಶದಲ್ಲಿ, ಇದು ತನ್ನ ತಾಯಿನಾಡೆಂದು ಕಷ್ಟಪಡುವವನಾಗಿ ಎರಡು ಎಕರೆ ಖಾಯಮ್ಮಾಗಿ ಇಟ್ಟುಕೊಳ್ಳುವುದಕ್ಕೂ ಅವಕಾಶವಿಲ್ಲದೆ ಹೋದರೆ ಅವನು ಇದನ್ನು ಮಾತೃಭೂಮಿಯೆಂದು ಏಕೆ ತಾನೆ ಕರೆಯಬೇಕು! ಎರಡೆಕರೆ ತನ್ನದೆಂಬ ಜಮೀನಿಲ್ಲದೆ ತನ್ನ ತಂದೆ ತಾತಂದಿರು ಕಷ್ಟಪಟ್ಟದ್ದನ್ನು ತನ್ನ ಮಕ್ಕಳು ಮೊಮ್ಮಕ್ಕಳು ಅನುಭವಿಸಲಿಕ್ಕೆ ಸಾಧ್ಯವಿಲ್ಲದೆ ಹೋದರೆ ಇದು ಅವನ ಮಾತೃಭೂಮಿಯೇ!

ಒಟ್ಟಿನ ಮೇಲೆ ಹೇಳಬೇಕಾದರೆ ಈಗ ದೇಶದಲ್ಲಿ ಏನು ಪರಿಸ್ಥಿತಿಯಾಗಿದೆಯೆಂದರೆ, "ಹಲ್ಲಿದ್ದವನಿಗೆ ಕಡಲೆಯಿಲ್ಲ, ಕಡಲೆಯಿದ್ದವನಿಗೆ ಹಲ್ಲಿಲ್ಲ" ಎಂಬಂತೆ. ನಿಜವಾಗಿ ಕಷ್ಟಪಡುವವನಿಗೆ ಭೂಮಿಯಿಲ್ಲ. ಭೂಮಿಯಿರುವವನಿಗೆ ಬೇಸಾಯ ಮಾಡುವ ಶಕ್ತಿಯಿಲ್ಲ. ಆದ್ದರಿಂದ ನಾವೀಗ ಈ ಪದ್ಧತಿಯನ್ನು ಬದಲಾಯಿಸಿ ಹಲ್ಲಿದ್ದವನಿಗೇ ಕಡಲೆಯಿರುವಂತೆ ಮಾಡಬೇಕು. ಯಾವನು ಕಷ್ಟಪಡುತ್ತಾನೋ ಅವನಿಗೇ ಜಮೀನಿರಬೇಕು. ಯಾವ ಜಮೀನ್ದಾರನು ತನ್ನ ಜಮೀನನ್ನು ಬೇರೆಯವರಿಗೆ ಕೊಟ್ಟು ಮಾಡಿಸುತ್ತಿರುತ್ತಾನೋ ಅವನಿಗೆ ಅಂಥ ಜಮೀನೇ ಇರಬೇಕಾಗಿಲ್ಲವೆಂದು ಹೇಳುತ್ತೇನೆ. ಈಗ ಸರ್ಕಾರದವರು ಮಾಡುತ್ತಿರುವುದೂ ಅಷ್ಟೇ. ಇದರಲ್ಲಿರುವ ತತ್ವ ಇದೇ. ಜಮೀನ್ದಾರರು ಚಳವಳಿ ಮಾಡಿದರು, ರೈತರು ಚಳವಳಿ ಮಾಡಿದರು, ಕಡಿದಾಳ್ ಮಂಜಪ್ಪನವರ ಚಳವಳಿ ಮಾಡಿದರು ಎಂದು ಕಾನೂನು ತರುವುದಲ್ಲ. ಪ್ರಪಂಚದ ಪರಿಸ್ಥಿತಿ ಅರಿತು, ಚೈನಾ ದೇಶದಲ್ಲಿ, ರಷ್ಯಾದೇಶದಲ್ಲಿ, ಏನೇನು ಮಾಡಿದ್ದಾರೆಂಬುದನ್ನು ನೋಡಿಕೊಂಡು, ಬಡವರಿಗೆ, ಕಷ್ಟಪಡುವವರಿಗೆ ತೃಪ್ತಿಯನ್ನುಂಟುಮಾಡಿ, ಭರವಸೆ ಕೊಟ್ಟು ದೇಶದ ಸರ್ವಶಕ್ತಿಯನ್ನೂ ಉಪಯೋಗಿಸಿಕೊಳ್ಳಲಿಕ್ಕೆ ಸರ್ಕಾರ ಪ್ರಯತ್ನಿಸಬೇಕು. ನಮ್ಮ ರೈತರೆಲ್ಲಾ ಸೇರಿ ಇದು ತಮ್ಮ ಭೂಮಿ ಎಂದು ಕಷ್ಟಪಟ್ಟು ಎಕರೆಗೆ ಎರಡು ಪಲ್ಲ ಜಾಸ್ತಿ ಬೆಳೆದರೆ ಇಂದಿನ ಆಹಾರ ಪರಿಸ್ಥಿತಿ ನೀಗಿ ಹೋಗುತ್ತದೆ. ಗೇಣಿಗಾರರೂ ಗುತ್ತಿಗೆಮಾಡುವವರೂ ಹುಮ್ಮಸ್ಸಿನಿಂದ ಕೆಲಸಮಾಡಿ ಎಕರೆಗೆ ಎರಡೆರಡು ಪಲ್ಲ ಬೆಳೆದರೆ ಸಾಕು ನಮ್ಮ ಈಗಿನ ಆಹಾರದ ಕಷ್ಟ ಹೋಯಿತು! ಸುಮ್ಮನೆ ತತ್ವಕ್ಕಾಗಿ ಹೇಳುತ್ತೇನೆಂದು ಭಾವಿಸಬಾರದು. ಈಗ ಕಾರ್ಯತಃ ಆಗಬೇಕಾದ್ದಿದು. ರಷ್ಯಾದಲ್ಲಿ ಈ ಸಮಸ್ಯೆ ಪರಿಹಾರವಾದುದು ಈ spirit ನಿಂದ ಕೆಲಸ ಮಾಡಿದ್ದರಿಂದ. ಚೈನಾದೇಶದಲ್ಲಿಯೂ ಇದೇ ತತ್ವವನ್ನು ಅನುಸರಿಸುತ್ತಿದ್ದಾರೆ. ನಾವೇನೋ ಇಂದು ಇಲ್ಲಿ ಒಳ್ಳೆಯ ಸ್ಥಾನದಲ್ಲಿದ್ದೇವೆ. ನಮಗೆ ಬಡರೈತರ ಕಷ್ಟ ಅಷ್ಟಾಗಿ ಗೊತ್ತಿಲ್ಲ. ಜೋಯಿಸ್‌ರವರಂಥವರಿಗೆ ಬಹುಶಃ ಗೊತ್ತಿರಬಹುದು. ಹಳ್ಳಿಯಲ್ಲಿ ಹುಟ್ಟಿದವನಾಗಿ ನನಗೂ ಸ್ವಲ್ಪ ಆ ಕಷ್ಟಗಳು ಮನವರಿಕೆಯಾಗಿದೆ ಅಷ್ಟೆ. 'ಉಳುವವನಿಗೆ ಹೊಲ' ಎನ್ನುವ ಕೂಗು ಈಗ ಪ್ರಪಂಚದಲ್ಲಿ ಎದ್ದಿದೆ ನ್ಯಾಯವಾದ ಕೂಗು ಅದು! ಅದಕ್ಕೆ ಮನ್ನಣೆ ಕೊಡದೆ ಹೋದರೆ, ಯಾವುದೇ ಸರ್ಕಾರವಿರಲಿ ಅದಕ್ಕೆಷ್ಟೇ ಬೆಂಬಲವಿರಲಿ,—ನೆಹರೂ ಸರ್ಕಾರವೇ ಅದಾಗಿರಬಹುದು—ಅದು ಬಹುಕಾಲ ಬಾಳುವುದಿಲ್ಲ. ಯಾವತ್ತಿನವರೆಗೆ "ಉಳುವವನಿಗೇ ಹೊಲ ಅಲ್ಲ" ಎಂದು ಸರ್ಕಾರ ಹೇಳುತ್ತಿದೆಯೋ ಅಂದಿನವರೆಗೂ ಆ ಸರ್ಕಾರಕ್ಕೆ ಭದ್ರತೆಯಿಲ್ಲ. ನಮ್ಮ ಕಾಂಗ್ರೆಸ್ ಸರ್ಕಾರಕ್ಕೆ ಅಷ್ಟೊಂದು ಮಾಡುವುದಕ್ಕೆ ಧೈರ್ಯವಿಲ್ಲದೆ ಇದ್ದರೂ, ಏನೋ ಗೇಣಿಮಾಡುವವನಿಗೆ, ವಾರಮಾಡುವವನಿಗೆ ನಾಲ್ಕಾರು ವರ್ಷಗಳು ಭರವಸೆ ಕೊಡುವುದಾದರೂ ಒಳ್ಳೆಯದು.

ಶ್ರೀ ಎಸ್. ರಂಗರಾಮಯ್ಯನವರು.—ತಮ್ಮ ಅಭಿಪ್ರಾಯ ಬಾಡಿಗೆದಾರರಿಗೆ ಮನೆ ಕೊಟ್ಟರೆ ಅದನ್ನವರಿಗೇ ಕೊಟ್ಟುಬಿಡಬೇಕೆಂತಲೇ?

ಶ್ರೀ ಎಂ. ವಿ. ಕೃಷ್ಣಪ್ಪನವರು.—ಸುಮ್ಮನೆ ಈ ರೀತಿ ಮೈನರ್ ಮಕ್ಕಳ, ಅಥವ ವಿಧವೆಯರ ಉದಾಹರಣೆಗಳನ್ನು ಕೊಟ್ಟು ಜನರ ಮನಸ್ಸನ್ನು ತಿರುಗಿಸುವುದೇನೂ ದೊಡ್ಡದಲ್ಲ; ಆರೀತಿ ಮಾಡಬಾರದು; ಮೈನರ್ ಮಕ್ಕಳದನ್ನು ತಿಂದು ಹಾಕಕೂಡದು; ಅವರು ಮೆಜಾರಿಟಿಗೆ ಬಂದ ಮೇಲೆ ಅವರ ಭೂಮಿ ಕೊಡಬೇಕಾಗುತ್ತದೆಂದು ವಾದಿಸಬಹುದು ಆದರೆ ವಾಸ್ತವವಾಗಿ ನೋಡುವುದಾದರೆ, ಹಾಗೆ ಎಷ್ಟು ಜನರಿಗೆ ತೊಂದರೆಯಾದೀತು! ಅದೂ ಇನ್ನು 10—12 ವರ್ಷವಾದ ಮೇಲೆ ಪ್ರಾಪ್ತವಯಸ್ಕರಾಗುವವರಿಗೆ ಆಗಬಹುದು. ಅಂಥವಕ್ಕೆ ಬೇಕಾದ ರಕ್ಷಣೆಗಳನ್ನೂ ಇದರಲ್ಲಿ ಸರ್ಕಾರದವರು ಕೊಟ್ಟಿದ್ದಾರೆ. ಇದನ್ನೆಲ್ಲಾ ಪರಿಶೀಲಿಸಿ ಇದನ್ನು ತಂದಿದ್ದಾರೆ. ಶ್ರೀಮಾನ್ ರಂಗರಾಮಯ್ಯನವರಲ್ಲಿ ನನ್ನ ಪ್ರಾರ್ಥನೆ ಇಷ್ಟೆ; ಈ ಮಸೂದೆಯನ್ನು ಸರ್ಕಾರದವರು ನಮ್ಮಂಥವರ ಚಳುವಳಿಯಿಂದ ಅಥವ ಒತ್ತಾಯದಿಂದ ತರುತ್ತಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಅವರು ಯಾವಾಗಲಾದರೂ ಚಳುವಳಿ ಹೂಡಿದ್ದರೆ?

ಶ್ರೀ ಎಂ. ವಿ. ಕೃಷ್ಣಪ್ಪನವರು.—ಹೂಡಿದ್ದೇನೆ, ನಾವೆಲ್ಲರೂ ಕಾಂಗ್ರೆಸ್ ಚಳುವಳಿ ಹೂಡಿದ್ದೆವು.

Sri H. M. CHANNABASAPPA.—Then, if the cap fits you may wear it.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಕಷ್ಟಪಟ್ಟು ಉಳುವವನಿಗೆ ಭೂಮಿ ಕೊಡಬೇಕೆಂದು ಕಾಂಗ್ರೆಸ್ ಮ್ಯಾನಿಫೆಸ್ಟೋನಲ್ಲಿದೆ. ಆದುದರಿಂದ ಶ್ರೀಮಾನ್ ಜೋಯಿಸರು ಕೂಡ ಚಳುವಳಿ ಹೂಡಿದ್ದರು. ಕಾಂಗ್ರೆಸ್ ಮ್ಯಾನಿಫೆಸ್ಟೋ ಪ್ರಕಾರ ಉಳುವವನಿಗೆ ಹೊಲ, ಕಷ್ಟಪಡುವವನಿಗೆ ಜಮೀನು,—ಹಾಗಿಲ್ಲದಿದ್ದರೆ ಖಂಡಿತವಾಗಿ ನಾನು ಕಾಂಗ್ರೆಸ್ಸಿಗೆ ರಾಜೀನಾಮೆ ಕೊಡುತ್ತಿದ್ದೆ; ಇಲ್ಲದಿದ್ದರೆ ಹಳ್ಳಿಯಲ್ಲಿ ಹೋಗಿ ಕುಳಿತುಕೊಳ್ಳುತ್ತಿದ್ದೆ. ನಾನೊಬ್ಬನೇ ಅಲ್ಲ, ಶ್ರೀಮಾನ್ ಕಡಿದಾಳ್ ಮಂಜಪ್ಪ

ನವರೂ, ಕಾಂಗ್ರೆಸ್‌ಗೆ ಸೇರಿದ ಎಲ್ಲರೂ ಈ ಚಳುವಳಿ ಹೂಡಿದ್ದರು. ನಾವು ಪ್ರಪಂಚದಲ್ಲಿ ಬರುತ್ತಿರುವ ಕ್ರಾಂತಿಯನ್ನು ಈಗಲೇ ತಡೆಗಟ್ಟಬೇಕು.

ಹಳ್ಳಿಗಳ ಕಡೆ ಸುತ್ತಲೂ ಬೆಂಕಿ ಬಿದ್ದಾಗ ನೀರನ್ನು ತೆಗೆದುಕೊಂಡು ತನ್ನ ಮನೆಯ ಮೇಲೆ ಹಾಕಿಕೊಳ್ಳುತ್ತಿರುತ್ತಾನೆ, ಬುದ್ಧಿವಂತನಾದವನು ತನ್ನ ಮನೆಗೆ ಬೆಂಕಿ ಹತ್ತದೇ ಇರಲೆಂದು ಹೀಗೆ ಮಾಡುತ್ತಾನೆ. ಹೀಗೆ ಪ್ರಪಂಚದಲ್ಲಿ ಸುತ್ತಲೂ ಬೆಂಕಿ ಬೀಳುತ್ತಾ ಇರುವಾಗ ನಮ್ಮ ದೇಶಕ್ಕೆ ಆ ಬೆಂಕಿ ಹರಡದಂತೆ ನಾವು ತಡೆಗಟ್ಟಬೇಕು. ವ್ಯವಸಾಯವೇ ಪ್ರಾಮುಖ್ಯವಾದ ನಮ್ಮ ದೇಶದಲ್ಲಿ redistribution of lands ಆಗುವವರೆಗೆ caste distinctions ಹೋಗುವವರೆಗೆ ಈ ದೇಶ ಮುಂದೆ ಬರುವ ಹಾಗಿಲ್ಲ, ವ್ಯವಸಾಯ ಹಾಳಾಗಿ ಹೋಗುತ್ತದೆ. Redistribution of lands ಆಗಬೇಕೆಂದರೆ, ಶ್ರೀಮಂತರಿಂದ ಭೂಮಿಯನ್ನು ಕಿತ್ತು ಬಡವರಿಗೆ ಹಂಚಬೇಕೆಂದಲ್ಲ; ಅಂತೂ ಭೂಮಿಯನ್ನು ನ್ಯಾಯವಾಗಿ ಹಂಚದೇಯಿದ್ದರೆ ನಮ್ಮ ದೇಶ ಮುಂದೆ ಬರುವುದಿಲ್ಲ. ಈ ಮಸೂದೆಯನ್ನು ನಮ್ಮ ಚಳುವಳಿಯಿಂದ ಸರ್ಕಾರದವರು ತರಲಿಲ್ಲ. ಪ್ರಪಂಚದ ಪರಿಸ್ಥಿತಿಯನ್ನು ನೋಡಿ ತಂದಿದ್ದಾರೆ, ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಸಂಪಂಗಿರಾಮಯ್ಯನವರು (ಕೋಲಾರ ಜಿಲ್ಲೆ).—ಸ್ವಾಮಿ ಅಧ್ಯಕ್ಷರೆ, ಈಗ ಸಭೆಯ ಮುಂದಿರತಕ್ಕ ಮಸೂದಾ ಕಾನೂನು ಬಹಳ ಪ್ರಾಮುಖ್ಯವಾದುದು. ಇದು ನಮ್ಮ ದೇಶಕ್ಕೆ ಹೊಸದಾದ ಕಾನೂನಾಗಿದೆ. ಇದುವರೆಗೆ ಸಮಗ್ರವಾದ ಟೆನೆನ್ಸಿ ಕಾನೂನು ನಮ್ಮ ದೇಶದಲ್ಲಿ ಜಾರಿಯಲ್ಲಿರಲಿಲ್ಲ. ಅಂದ ಮಾತ್ರಕ್ಕೇ ಇದರ ಆವಶ್ಯಕತೆಯಿಲ್ಲವೆಂದು ಹೇಳುವ ಹಾಗಿಲ್ಲ. ಭೂಸ್ವಾಮ್ಯ ರೈತರ ಸಂಬಂಧ ವಿಷಯದಲ್ಲಿ ನಾನಾ ಪ್ರದೇಶಗಳಲ್ಲಿ ನಾನಾ ರೀತಿಯ ಅಭಿಪ್ರಾಯಗಳಿವೆ. ನಾನಾ ಪರಿಸ್ಥಿತಿಗಳಿವೆ. ಶ್ರೀಮಾನ್ ರಂಗರಾಮಯ್ಯನವರು ಇರತಕ್ಕ ಪ್ರದೇಶದಲ್ಲಿ, ನೀರಾವರಿ ಸರಿಯಾಗಿರುವ ಪ್ರದೇಶದಲ್ಲಿ ಜಮೀನ್ದಾರರು ಚೆನ್ನಾಗಿದ್ದಾರೆ; ಮತ್ತೆ ಇತರ ಕೆಲವು ಕಡೆ ಖುಷ್ಕಿ ಜಮೀನುಗಳನ್ನು ಸಾಗುವಳಿ ಮಾಡುವ ಕಡೆಗಳಲ್ಲಿ ರೈತರ ಕೈಮೇಲಾಗಿರುತ್ತದೆ, ಜಮೀನ್ದಾರರ ಸ್ಥಿತಿ ಕೀಳಾಗಿರುತ್ತದೆ. ಈ ಕಾಲದಲ್ಲಿ ಯಾವ ಒಬ್ಬ ಮನುಷ್ಯನ ಕೈ ಮೇಲಾಗಿರುತ್ತದೆಯೋ ಅವನಿಂದ ಕೈಕೆಳಗಿರುವವನಿಗೆ ತೊಂದರೆಯಾಗಬಾರದೆಂಬ ಅಭಿಪ್ರಾಯ ದೇಶದಲ್ಲಿ ಹರಡುತ್ತಿದೆ. ಅನೇಕ ವರ್ಷಗಳ ಹಿಂದೆ ಜನರು ಸತ್ಯಸಂಧರಾಗಿದ್ದರು, ಒಬ್ಬರಿಗೊಬ್ಬರು ತೊಂದರೆ ಕೊಡುತ್ತಿರಲಿಲ್ಲ. ಈಚೆಗೆ exploitation ತತ್ವ ಎಲ್ಲೆಲ್ಲಿಯೂ ಹರಡಿ ಕೈ ಮೇಲಾಗಿರುವವರು ತಮಗಿಂತ ಕೆಳಗಿರುವವರನ್ನು ಹಿಂಸೆ ಮಾಡಿ ಅವರಿಂದ ಲಾಭ ಪಡೆಯುವ ಪದ್ಧತಿ ರೂಢಿಗೆ ಬಂದಿದೆ. ಆದುದರಿಂದ ಇಂತಹ ಕಾನೂನು ಅವಶ್ಯಕವಾಗಿದೆ. ಈ ಮಸೂದಾ ಕಾನೂನನ್ನು ವಿರೋಧಿಸಿದ ಮಹನೀಯರಿಂದ ಬಂದ ವಾದಗಳು ಎರಡು ಬಗೆ. ಒಂದನೆಯದಾಗಿ, ಇಂತಹ ಕಾನೂನಿಗೆ ಅವಶ್ಯಕತೆ ಇರಲಿಲ್ಲ, ರೈತ ಜಮೀನ್ದಾರರ ವಿಚಾರದಲ್ಲಿ ಕಷ್ಟಪರಿಸ್ಥಿತಿಯೇನೂ ಉಂಟಾಗಿರಲಿಲ್ಲ, ವಿವಾದಗಳುಂಟಾಗಿರಲಿಲ್ಲ, ರೈತ ಜಮೀನ್ದಾರ ಎಂಬ ಸಮಸ್ಯೆ ಇಲ್ಲದೇ ಇರುವಾಗ ನಮ್ಮ ದೇಶದಲ್ಲಿ ಇಂತಹ ಕಾನೂನಿನ ಅವಶ್ಯಕತೆಯುಲ್ಲವೆಂದು ಹೇಳಿದರು. ಇನ್ನೊಂದು ವಾದ, ರೈತರ ಪರವಾಗಿ ಮಾತನಾಡುವವರಿಂದ ಬಂದದ್ದು ಈ ಕಾನೂನು ತೀರಾ ಸಪ್ಪೆ, ಇದರಿಂದ ರೈತರಿಗೆ ಕಿರುಕುಳ ಜಾಸ್ತಿಯಾಗುತ್ತದೆ ಎಂಬುದು. ಇನ್ನೊಬ್ಬರು, ಇದರಲ್ಲಿ ರೈತನಿಗೆ ಹೆಚ್ಚಿನ ಅನುಕೂಲಗಳನ್ನು ಒದಗಿಸಿದ್ದೀರಿ, ಮನುಷ್ಯನಿಗೆ ಜಮೀನಿರುವುದೇ ತಪ್ಪೆ? ಜಮೀನಿರುವವನನ್ನು ದಂಡಿಸುವುದಕ್ಕೆ ಇದನ್ನು ಮಾಡಿದ್ದೀರಿ, ಇದು ಬೇಡ ಎಂಬ ವಾದ ಒಂದು ಕಡೆ ಇದೆ. ಯಾರು ರೈತರ ಪರವಾಗಿ ವಾದಮಾಡಿದ್ದಾರೋ ಅವರೇ ಜಮೀನ್ದಾರರ ಪರ ವಾದ ಮಾಡಿದವರಿಗೆ ಉತ್ತರ ಕೊಟ್ಟಿದ್ದಾರೆ.

ಈ ಕಾನೂನಿನಿಂದ ರೈತರಿಗಾಗಲೀ ಜಮೀನ್ದಾರರಿಗಾಗಲಿ ತೃಪ್ತಿಯಾಗಿಲ್ಲವೆಂದು ಹೇಳಿದರು. ಈ ಸಂದರ್ಭದಲ್ಲಿ ನನಗೊಂದು ಮಾತು ಜ್ಞಾಪಕಕ್ಕೆ ಬರುತ್ತದೆ. The best compromise is that in which neither party is fully satisfied ಎಂದು ಹೇಳುತ್ತಾನೆ. ಬಹಳ ಚೆನ್ನಾಗಿದೆ ಎಂದು ಹೇಳಬೇಕಾದರೆ ಹೋರಾಡತಕ್ಕ ಉಭಯ ಕಕ್ಷಿಗಾರರಿಗೂ ತಾನು ಗೆದ್ದೆ ನಾನು ಗೆದ್ದೆ ಎನ್ನುವ ಮನೋಭಾವ ಬಾರದಿರುವಂತಹ ರಾಜಿ ಒಪ್ಪಂದವೇ ಸರಿಯೆಂದು ಹೇಳುತ್ತಾರೆ. ಇದರಲ್ಲಿ ಬಹಳ ನಿಜಾಂಶವಿದೆ. ಇನ್ನು ಶ್ರೀಮಾನ್ ರಂಗರಾಮಯ್ಯನವರು ಇದರಿಂದ fundamental rights ಗೆ ಧಕ್ಕೆ ಬರುತ್ತದೆಂದು ಹೇಳಿದರು. ಶ್ರೀ ರಂಗರಾಮಯ್ಯನವರು ಮೇಧಾವಿಗಳು, ನ್ಯಾಯಶಾಸ್ತ್ರವನ್ನರಿತವರು; ಇಂಥವರು ಇದರಿಂದ fundamental rightsಗೆ ಧಕ್ಕೆ ಬರುತ್ತದೆ ಎಂದು ಹೇಳಿರುವುದನ್ನು ಕೇಳಿ ನನಗೆ ಆಶ್ಚರ್ಯವಾಗುತ್ತದೆ. ಅವರು ಕೋರ್ಟಿನಲ್ಲಿ ಈ ರೀತಿ ವಾದ ಮಾಡುವುದಿಲ್ಲವೆಂದು ನಂಬಿದ್ದೇನೆ. ಒಂದು ವೇಳೆ ಹೀಗೆ ಮಾಡಿದರೂ ಅವರು ಕೇಸನ್ನು ಗೆಲ್ಲುವುದಿಲ್ಲ. Fundamental rights ಎಂಬುದು ರಾಜ್ಯಾಂಗದಲ್ಲಿ ಈ ರೀತಿ ಇದೆ. 31. Right to property: No person shall be deprived of the property save by the authority of law" ಎಂದಿದೆ. ಈಗ ನಾವು ಮಾಡುತ್ತಿರುವುದೂ ಇಷ್ಟೆ. ಒಂದು ವೇಳೆ ರೈತರ ಹಕ್ಕು ಹೋಗುತ್ತದೆ ಅಥವಾ ಜಮೀನ್ದಾರರ ಹಕ್ಕು ಹೋಗುತ್ತದೆ ಎಂದು ಹೇಳಿದರೆ ಅದನ್ನು ಕಾನೂನು ಪ್ರಕಾರ ಮಾಡಬಹುದೇ ಹೊರತು ಬೇರೆ ರೀತಿಯಲ್ಲಿ ಮಾಡಬಾರದೆಂದು ರಾಜ್ಯಾಂಗದಲ್ಲಿ ನಮೂದಾಗಿದೆ. ಯಾವ ಹಕ್ಕಿದ್ದರೂ ಅದನ್ನು ಕಳೆಯುವುದಕ್ಕೆ ಆಗುವುದೇ ಇಲ್ಲ ಎಂದು ಹೇಳುವುದಾದರೆ ಈ ರೀತಿ ಮಾಡಲು ಯಾವ ಕಾನೂನಿನಿಂದಲೂ ರಾಜ್ಯಾಂಗದಿಂದಲೂ ಸಾಧ್ಯವೇ ಇಲ್ಲ. ಈಗ ರೈತರ ಹಕ್ಕನ್ನು ಕಳೆಯುತ್ತಿದ್ದೇವೆಂದರೆ ಅದನ್ನು ಕಾನೂನಿನ ಪ್ರಕಾರ ಮಾಡುತ್ತಿದ್ದೇವೆ. ಜಮೀನ್ದಾರರ ವಿಶೇಷ ಹಕ್ಕನ್ನು ಕಳೆಯುತ್ತಿದ್ದಾರೆಂದರೆ, ಇದಕ್ಕೆ ಕಾನೂನಿನಲ್ಲಿ ಅಧಿಕಾರವಿದೆ, ಅದರ ಪ್ರಕಾರ ಮಾಡುತ್ತಿದ್ದಾರೆಂದು ಉತ್ತರ ಕೊಡಬಹುದು. ಈಗ ವಾಸ್ತವವಾಗಿ ಯಾರ ಹಕ್ಕನ್ನೂ ಕಳೆಯುತ್ತಿಲ್ಲ. ಭೂಮಿಯನ್ನು ಸಂಪಾದನೆ ಮಾಡಿಟ್ಟುಕೊಂಡಿರತಕ್ಕ ಹಕ್ಕು ಜಮೀನ್ದಾರರಿಗೆಷ್ಟಿದೆಯೋ ಭೂಮಿಯನ್ನು ಸಾಗುವಳಿ ಮಾಡಿ ಸರಿಪಡಿಸುವವನ ಹಕ್ಕು ಇದರಲ್ಲಿ ಸೇರಿಕೊಂಡಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಇವನಿಗೆ ಜಾಸ್ತಿ ಹಕ್ಕಿದೆ ಎಂಬುದನ್ನು ನಾವು ಹೇಳುವುದು.

ಶ್ರೀ ಕೆ. ಸಂಪಂಗಿರಾಮಯ್ಯನವರು.—ನೀವು ಹಾಕಿಕೊಂಡಿರುವ ಕನ್ನಡಕವನ್ನು ತೆಗೆದು ನೋಡಿದರೆ ಇದರ ರೂಪ ಸರಿಯಾಗಿ ಕಾಣುತ್ತದೆ. ನೀಲಿ ಕನ್ನಡಕ ಹಾಕಿಕೊಂಡು ನೋಡಿದರೆ ನೀಲಿಯಾಗಿಯೇ ಕಾಣುತ್ತದೆ. ನೈಜವಾದ ಬಣ್ಣ ಕಾಣುವುದಿಲ್ಲ. ಆದಕಾರಣ ಆ ಕನ್ನಡಕವನ್ನು ತೆಗೆದುನೋಡಿ ಎಂದು ನಾನು ಹೇಳುವುದು, ಅಷ್ಟೆ.

(ಶ್ರೀ ಕೆ. ಸಂಪಂಗಿರಾಮಯ್ಯನವರು)

ಇನ್ನೊಂದು ವಿಷಯವನ್ನು ಶ್ರೀ ರಂಗರಾಮಯ್ಯನವರು ಹೇಳಿದರು. ಈ ಮಸೂದೆಯ 42ನೆಯ ಕ್ಲಾಜು ಬಹಳ ಅನ್ಯಾಯವಾಗಿದೆ, ಎಲ್ಲಿ ನೋಡಿದರೂ ಜಮೀನ್ದಾರನಿಗೇ ಶಿಕ್ಷೆ ಇದೆ ರೈತರಿಗೆ ಏನು ಶಿಕ್ಷೆಯೂ ಇಲ್ಲವೆಂದು ಹೇಳಿದರು. ಆ ಸೆಕ್ಷನ್ ನೋಡಿದರೆ ಯಾವ ರೀತಿ ಶಿಕ್ಷೆ ಕೊಡಬಹುದೆಂಬುದು ಅದರಲ್ಲಿ ನಮೂದಾಗಿದೆ.

Section 5 (2): Termination of tenancy by a landlord before the expiry of the period of five years—maximum fine which may be imposed is Rs. 250 ಎಂದಿದೆ.

ಇದೆಲ್ಲಾ ಬಹಳ ಕಷ್ಟ. ಒಂದು ವೇಳೆ ಜಮೀನ್ದಾರನಾದವನು ಸಾಗುವಳಿದಾರನಾದವನನ್ನು 5 ವರ್ಷ ವಾಯಿದೆಯೊಳಗೇ ಬಿಡಿಸಿ ಓಡಿಸಿದರೆ ಆಗ ಜಮೀನ್ದಾರನು ಶಿಕ್ಷೆಗೆ ಗುರಿಯಾಗಬೇಕೆಂದು ಹೇಳಿರುತ್ತೆ. ಹಾಗಲ್ಲದೆ ಒಂದು ವೇಳೆ ಸಾಗುವಳಿದಾರನೇ ಆ 5 ವರ್ಷ ವಾಯಿದೆಯೊಳಗೆ ತಾನೆ ಜಮೀನನ್ನು ಬಿಟ್ಟು ಬಿಟ್ಟು ಓಡಿಹೋದರೆ ಆಗೇನು ಮಾಡುವುದು? ಬರಿ ಜಮೀನನ್ನು ಬಿಟ್ಟು ಓಡಿಹೋಗುವುದಲ್ಲದೆ, ಗುತ್ತಿಗೆಯನ್ನೂ ಕೊಡದೆ ಹೋದಾಗ ಏನು ಮಾಡಬೇಕು! ಒಂದು ವೇಳೆ ಸಾಗುವಳಿದಾರನು ತಾನು ಅಲ್ಲೇ ವ್ಯವಸಾಯ ಮಾಡಿಕೊಂಡಿದ್ದು ಗುತ್ತಿಗೆ ಕೊಡದೆ ತಪ್ಪಿತಸ್ಥನಾದಾಗ ಮಾತ್ರ ಆತನಿಗೆ ಶಿಕ್ಷೆ ವಿಧಿಸಲು ಅವಕಾಶವಿರಬಹುದು. ಅದೂ ಅಲ್ಲದೆ ಜಮೀನ್ದಾರನಾದವನು ಸಾಗುವಳಿದಾರನಿಂದ ತನಗೆ ಎಷ್ಟು ದವಸ ಗುತ್ತಿಗೆ ರೂಪದಲ್ಲಿ ಬರಬೇಕೋ ಅಷ್ಟನ್ನು ಮಾತ್ರ ತೆಗೆದುಕೊಳ್ಳದೆ ಜಾಸ್ತಿಯಾಗಿ ತೆಗೆದುಕೊಂಡರೆ ಆತನಿಗೆ ಶಿಕ್ಷೆ ವಿಧಿಸಲು ಕಾನೂನಿನಲ್ಲಿ ಅವಕಾಶವಿದೆ. ಆದರೆ ಹೀಗೆಲ್ಲಾ ಆಗುವುದಾದರೆ ಯಾರು ಲಂಚ ಕೊಟ್ಟ, ಯಾರು ಲಂಚ ತೆಗೆದುಕೊಂಡ ಎನ್ನುವುದನ್ನು ಕಂಡು ಹಿಡಿದು ಇಬ್ಬರಿಗೂ ಕೊಡುವಂತೆ ಈ ಸಂದರ್ಭದಲ್ಲಿ ಮಾಡುವುದು ಬಹಳ ಕಷ್ಟ. ಇಂಥಾ ವಿಚಾರಗಳಿಗೆಲ್ಲಾ ಶಿಕ್ಷೆ ವಿಧಿಸುವುದೆಂದರೆ ಕೇವಲ ನಗುಪಾಟಲು. ಇದು ಕಾನೂನಿಗೆ ವಿರೋಧವಾಗಿರುವುದಲ್ಲದೆ common-sense ಗೂ ತೀರಾ ವಿರೋಧವಾಗಿದೆ. ಹೀಗೆ ಇವರು ಇಲ್ಲಿ ಶಿಕ್ಷೆಗೆ ಗುರಿಪಡಿಸಿರತಕ್ಕ ಯಾವ ಅಂಶವನ್ನೇ ತೆಗೆದುಕೊಂಡು ನೋಡಿದರೂ ಇವುಗಳು ಒಂದಲ್ಲ ಒಂದು ರೀತಿಯಲ್ಲಿ ಬಹಳ ಕಷ್ಟಕ್ಕೆ ಕಾರಣವಾಗುತ್ತೆಯೇ ವಿನಾ ಪ್ರಯೋಜನವಿಲ್ಲ. Failure to give written receipt for the amount of rent received—ಇದೂ ಯಥಾಪ್ರಕಾರ ಅಷ್ಟೆ. ಹೀಗೆಯೇ Taking position of land contrary to section 20—ಇದು ಯಾವುದನ್ನೂ ನೋಡಿದರೂ ಕೂಡ, ಈ ಪ್ರತಿಯೊಂದು ಕಾಲಂನಲ್ಲಿ ಹೇಳಿರುವಂಥ ವಿಷಯಗಳಲ್ಲಿ ರೈತರನ್ನೂ ಶಿಕ್ಷೆಗೆ ಗುರಿಪಡಿಸುವುದಕ್ಕೆ ಅವಕಾಶವಿಲ್ಲ. ಆದರೆ ಈಗಾಗಲೇ ಕೆಲವು ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಆದರೆ ಅವರವರ ವಾದಕ್ಕೆಲ್ಲಾ ಉತ್ತರ ಅವರ ವಾದದಲ್ಲೇ ಅಡಕವಾಗಿದೆ. ಒಬ್ಬ ಮಾನ್ಯ ಸದಸ್ಯರು ಯಾರಾದರೂ ಒಬ್ಬ ರೈತ ಹತ್ತಾರು ವರ್ಷಕ್ಕೆ ಮೇಲ್ಪಟ್ಟು ಜಮೀನನ್ನು ಸಾಗುವಳಿ ಮಾಡಿದ್ದು, ಅಂಥ ಕಾಲದಲ್ಲಿ ಆತ ಆ ಜಮೀನನ್ನು ಬಹಳ ಕಷ್ಟಪಟ್ಟು ವ್ಯವಸಾಯ ಮಾಡಿ, ಅದನ್ನು ಬಹಳ ಅಭಿವೃದ್ಧಿಗೆ ತಂದು ತೋಟ ವಗೈರೆ ಇತ್ಯಾದಿಗಳನ್ನು ಕಟ್ಟಿದ್ದು, ಅಂಥಾ ಜಮೀನನ್ನು ಅವನು ತಾನು ಅದನ್ನು ಬಿಟ್ಟು ಹೋಗಬೇಕಲ್ಲಾ ಎಂಬ ಸಂಕಟದಿಂದ ಅದನ್ನು ಹಾಳು ಮಾಡಿದರೆ ಆ ಬಗ್ಗೆ ಆ ತಪ್ಪಿಗಾಗಿ ಅವನಿಗೆ ಶಿಕ್ಷೆ ವಿಧಿಸುವುದು ಸಾಧ್ಯವಿಲ್ಲ, ಆತನಿಂದ ಡ್ಯಾಮೇಜ್ ವಸೂಲು ಮಾಡುವಂತೆ ಮಾಡಲು ಮಾತ್ರ ಸಾಧ್ಯ ಎಂದು ಹೇಳಿದರು. ಆದರೆ ಹಾಗೆ ಡ್ಯಾಮೇಜನ್ನಾದರೂ ವಸೂಲು ಮಾಡಬೇಕೆಂದರೆ ಅದೂ ಕೂಡ ಸಾಧ್ಯವಾಗುವುದಿಲ್ಲ, ಕಾರಣ ಆತನು 'ನಿರಾಧಾರ ಪರಂಜೋತಿ' ಎಂದು ಹೇಳಿರುತ್ತಾರೆ. ಆದರೆ ಅವರು ಹಾಗೆ ಹೇಳಿರುವುದು ಸರಿಯಲ್ಲವೆಂದು ನನಗೆ ಕಂಡು ಬರುತ್ತದೆ. ಒಬ್ಬ ರೈತನಾದವನು ಹತ್ತಾರು ವರ್ಷ ಒಬ್ಬ ಜಮೀನ್ದಾರನ ಕೈಕೆಳಗೆ ಕೆಲಸಮಾಡಿ ತಾನು 'ನಿರಾಧಾರ ಪರಂಜ್ಯೋತಿ'ಯಾಗಿ ಓಡಿ ಹೋಗತಕ್ಕಂಥ ಇಸಂ ಎಷ್ಟು ಮಾತ್ರಕ್ಕೂ ಅಂಥಾ ತೋಟವನ್ನು ಬೆಳಸಲಿಕ್ಕೆ ಆಗುವುದಿಲ್ಲ ಅಥವ ಬೆಳೆಸಿದ್ದವನೇ ಆಗಿದ್ದಲ್ಲಿ ಅಂಥಾ ಮನುಷ್ಯನಿಗೆ ಇದು ಖಂಡಿತ ಅನ್ವಯವಾಗುವುದೂ ಇಲ್ಲ. ನಿರಾಧಾರನಾಗಿ ಓಡತಕ್ಕ ಮನುಷ್ಯನು ಜೈಲಿಗೆ ಹೋಗುವುದಕ್ಕಾದರೂ ಸಿದ್ಧನಾಗೇ ಇರುತ್ತಾನೆ. ಕಾರಣವೇನೆಂದರೆ ಅಲ್ಲಿ ಆತನಿಗೆ ಸರಿಯಾಗಿ ಊಟಕ್ಕಾದರೂ ಅನುಕೂಲವಾಗುತ್ತೆ ಎಂದು. ಹೀಗೆ ಶ್ರೀಮಾನ್ ರಂಗರಾಯರು ಅಂಥಾ ನಿರಾಧಾರ ಪರಂಜೋತಿಯಾದ ಮನುಷ್ಯನಿಂದ ಡ್ಯಾಮೇಜು ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳಿ ಅವರು ಸಾಧಿಸಿದ ಪಾಯಿಂಟ್, ಇನ್ನೂ ಹೆಚ್ಚಿನ ವಿನಾಶಕಾರಿಯಾಗಿರುತ್ತದೆ. ಈಗ ಒಬ್ಬ ರೈತ ಜಮೀನನ್ನು ಚೆನ್ನಾಗಿ ಮಾಡಿಕೊಂಡು ಹೋಗುತ್ತಿದ್ದರೆ, ಆತನಿಗೇ ಇನ್ನೂ ಹೆಚ್ಚಿನ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟು ಆತನಿಗೆ 5 ವರ್ಷಗಳಿಗಿಂತಲೂ ಇನ್ನೂ ಹೆಚ್ಚಿಗೆ ಅವಧಿ ಸಾಗುವಳಿ ಮಾಡಲು ಜಮೀನನ್ನು ಕೊಡತಕ್ಕದ್ದರಲ್ಲಿ ಬಾಧಕವೇನಿರುತ್ತೆಂದು ನಾನು ಕೇಳುತ್ತೇನೆ? ಸಾಧಾರಣವಾಗಿ ಒಬ್ಬ ರೈತನಿಗೆ ಸಾಗುವಳಿ ಮಾಡುವುದಕ್ಕೆ ಒಂದು ಜಮೀನನ್ನು ಕೊಟ್ಟರೆ ಆತನಿಂದ 5 ವರ್ಷಗಳಿಗೆ ಮುಂಚಿತವಾಗಿ ಆ ಜಮೀನನ್ನು ಬಿಡಿಸಿಕೊಳ್ಳುವುದಕ್ಕೆ ಅವಕಾಶವಿಲ್ಲ. ಹಾಗೆ ಈ ಕಾನೂನಿನಲ್ಲಿ ಹೇಳಿದೆ. 5 ವರ್ಷ ಸಾಗುವಳಿ ಮಾಡಿದರೆ ಆ 5 ವರ್ಷದಲ್ಲೂ ಆದ ಬೆಳೆಯಲ್ಲಿ ಜಮೀನ್ದಾರನಿಗೆ ಬರಬೇಕಾದ ಪಾಲನ್ನು ಕೊಟ್ಟೇ ಕೊಡುತ್ತಾನೆ. ಅದರಲ್ಲಿ ಏನುತೊಂದರೆ ಇದೆ? Transfer of Property Act ನ 117ನೆಯ ಸೆಕ್ಷನ್ನಿನಲ್ಲಿ ಈ ಟೆನೆನ್ಸಿ ವಿಷಯಗಳನ್ನೆಲ್ಲಾ ಚೆನ್ನಾಗಿ ವಿವರಣೆಮಾಡಿದ್ದಾರೆ. ಒಬ್ಬ ಗೇಣೀದಾರನು ಗೇಣೀ ಕರಾರಿನ ಮೇರೆಗೆ ಒಂದು ಭೂಮಿಯನ್ನು ಸಾಗುವಳಿ ಮಾಡುತ್ತಿದ್ದರೆ ಮತ್ತು ಅಂಥಾ ಜಮೀನನ್ನು ಆತನು ಜನವರಿ ತಿಂಗಳಲ್ಲಿ ತನ್ನ ಸುಪರ್ದಿಗೆ ತೆಗೆದುಕೊಂಡು ತಾನು ಸಾಗುವಳಿ ಮಾಡುತ್ತಿದ್ದ ತನ್ನ ವಾಯಿದೆ ಎಂದರೆ 5 ವರ್ಷಗಳು ಪೂರೈಸಿದನಂತರವೂ ಸಹ ಆ ಗೇಣೀದಾರನು ಆ ಜಮೀನ್ದಾರನಿಗೆ ಟೆನೆಂಟ್ ಆಗಿದ್ದೇ ಇರುತ್ತಾನೆ. ಅವಧಿ ಮುಗಿದಿದ್ದಾಗ್ಯೂ ಕೂಡ ಜಮೀನಿನಲ್ಲಿ ವ್ಯವಸಾಯ ಮಾಡಿದ್ದು ಆ ಬೆಳೆ ಇನ್ನು ಪೂರೈಸದಿದ್ದಾಗ ಆತನು ಜನವರಿ ತಿಂಗಳನಂತರವೂ ಸಾಗುವಳಿದಾರನಾಗಿರುವುದಕ್ಕೆ ಅವಕಾಶವಿದೆ. ಹಾಗೆ ಬರಿ ಒಂದು 5 ವರ್ಷಗಳ ವಾಯಿದೆ ಪೂರೈಸಿದ ಮಾತ್ರಕ್ಕೇ ಅಂಥಾ ಮನುಷ್ಯನ ಟೆನೆನ್ಸಿ hold-over ಆಗುವುದಿಲ್ಲ. ಅಥವಾ ಗೇಣೀದಾರನು ತಾನು ಕೊಡಬೇಕಾದ ಗೇಣಿಯನ್ನು ಡಿಸೆಂಬರ್ ತಿಂಗಳಿನಲ್ಲಿಯೇ ಪಾವತಿ ಮಾಡಿಬಿಟ್ಟಿದ್ದರೂ ಸಹ ಆಗಲೂ ಆ ಜಮೀನು hold-over ಆಗುವುದಿಲ್ಲ. ಕೇವಲ ಒಂದು ವರ್ಷಕ್ಕೆ ಮಾತ್ರ ಜಮೀನು ಸಾಗುವಳಿಗೆ ಕೊಟ್ಟು, ಆತ ಸಾಗುವಳಿ ಮಾಡಿ ಮುಗಿಸುವುದಕ್ಕೆ ಮುಂಚೆಯೇ ಜಮೀನ್ದಾರ

ನಾದವನನು ಆತನಿಗೆ ಜಮೀನನ್ನು ವರ್ಷದ ವಾಯಿದೆ ನಂತರ ಬಿಟ್ಟುಹೋಗಬೇಕೆಂದು ತಿಳಿಸಿದರೆ ಆತನು ಜಮೀನು ಬೇಸಾಯವನ್ನು ಎಷ್ಟರಮಟ್ಟಿಗೆ ಮಾಡಬಹುದು? ಆದಕಾರಣ 5 ವರ್ಷಕಾಲ ಬೇರೆಯಾರಿಗೂ ಕೊಡುವುದಿಲ್ಲವೆಂಬ ಒಂದು ಭರವಸೆಯಿದ್ದುದಾದರೆ ಆಗ ಆತನು ಸ್ವಲ್ಪ ಮುತವರ್ಜಿವಹಿಸಿ ಬೇಸಾಯವಮಾಡಲು ಅವಕಾಶವಾಗುತ್ತೆ. ಆದರೆ ಈ ಬಗ್ಗೆ ಕಾನೂನು ಪ್ರಕಾರ ಬರೆವಣಿಗೆ ಮಾಡಿಸಬೇಕೆಂದು ಹೇಳಿದೆ. ಆದರೆ ಎಷ್ಟೋ ಜನಕ್ಕೆ ಬರವಣಿಗೆಯೇ ಬರುವುದಿಲ್ಲ. ಆದರೆ ಈಗ ಇದರಿಂದ ಏನಾಗುತ್ತದೆಂದರೆ— ಒಂದು ವೇಳೆ ಕಾನೂನಿನ ಉದ್ದಿಶ್ಯ ಸಾಧುವಾಗಿದ್ದರೂ, ರೈತನಾದವನಿಗೆ ನೀನು ಸಾಗುವಳಿ ಮಾಡತಕ್ಕ ಜಮೀನಿನ ಬಗ್ಗೆ ಒಂದು ಕರಾರು ಬರೆದು ಕೊಡಬೇಕು, ಹಾಗೆ ಬರೆದು ಕೊಟ್ಟ 5 ವರ್ಷಗಳ ತರುವಾಯ ನೀನು ಜಮೀನನ್ನು ಬಿಟ್ಟು ಹೋಗಬೇಕು, ಎಂಬುದಾಗಿ ತಿಳಿಸಿದರೆ ಆಗ ಆತನು ಅಲ್ಲಿಯತನಕಲಾದರೂ ನನಗೆ ಒಂದು ಅವಕಾಶವಿರುತ್ತಲ್ಲ ಎಂಬ ಉದ್ದೇಶದಿಂದ ಉತ್ಸಾಹದಿಂದ ಕೆಲಸ ಮಾಡಲು ಅವಕಾಶವಿದೆ. ಆದ್ದರಿಂದ ಇದನ್ನು ಹೀಗೆ ಕ್ಲುಪ್ತ ಮಾಡಿರತಕ್ಕದ್ದು ಸರಿಯಾಗಿದೆ. ಆದರೆ ಕೆಲವರು ಇದು ಸರಿಯಾಗಿಲ್ಲ, ಇದರಿಂದ ತೊಂದರೆಗಳಾಗುತ್ತೆ, Tenant holding ಎಂಬ ಈ ಕಾನೂನೇ ಅನಾವಶ್ಯಕ ಎಂಬುದಾಗಿ ತಿಳಿಸಿ ವಾದಮಾಡಿದ್ದಾರೆ. ಆದರೆ ಆ ವಾದಗಳಲ್ಲಿ ಏನೂ ಹುರುಳಿಲ್ಲ. ಇದು ಈಗೇನೂ ಹೊಸದಾಗಿ ಬಂದಿರತಕ್ಕದ್ದಲ್ಲ. ಬಹಳ ಹಿಂದಿನಿಂದಲೂ ಅಂದರೆ 1887ನೇ ಇಸವಿಯಿಂದಲೂ ನಡೆದುಕೊಂಡು ಬರುತ್ತಿದೆ. ಹೀಗೆ ಬಹಳ ಹಿಂದಿನಿಂದಲೂ ಜಾರಿಯಲ್ಲಿ ಬಂದಿರುವಂಥ ಪದ್ಧತಿ ಈಗ ಅನೇಕ ಮಾನ್ಯ ಮಾಲೀಕರು ತಮ್ಮ ಮನೆಗಳನ್ನು ಒಂದು ವರ್ಷದ ಅವಧಿಗೆಂದು ಹೇಳಿ ಮನೆಗಳನ್ನು ಬಾಡಿಗ್ಗೆ ಕೊಟ್ಟಿರುತ್ತಾರೆ. ಹಾಗೆ ಅವರು ಬಾಡಿಗೆ ಕೊಟ್ಟ ಒಂದು ವರ್ಷವಾದ ಮೇಲೂ, ಅವರು ಮನೆ ಬಿಟ್ಟು ಹೊರಡಿ ಎಂದು ಯಾರೂ ಹೇಳುವುದಿಲ್ಲ. ಹಾಗೆ ಹತ್ತಾರು ವರ್ಷ ಅದೇ ಮನೆಯಲ್ಲಿದ್ದೇ ಇರುತ್ತಾರೆ. ಬಾಡಿಗೆಯನ್ನು ಕೊಡುತ್ತಿದ್ದಾರೆ. ಅನೇಕ ಸಂದರ್ಭಗಳಲ್ಲಿ ಬಾಡಿಗೆ ಕರಾರುಗಳೇ ಇರುವುದಿಲ್ಲ. ಹಾಗಿದ್ದರೂ ಅವರನ್ನು ಮನೆ ಬಿಟ್ಟು ಹೊರಡಿ ಎಂದು ಹೇಳುವುದಕ್ಕಾಗುವುದಿಲ್ಲ. ಕಾರಣ ಅವರವರು ಒಂದು ಹೊಂದಾವಣಿಕೆಯಿಂದ ನಲೀಸಾಗಿ ಬಾಡಿಗೆ ಕೊಟ್ಟುಕೊಂಡು ಹೋಗುತ್ತಿರುವುದೇ ಆಗಿದೆ. ಅದೇ ರೀತಿ ಇಲ್ಲಿಯೂ ಸಹ ಜಮೀನ್ದಾರರೂ ಮತ್ತು ಸಾಗುವಳಿದಾರರೂ ಕೆಲಸಮಾಡಿಕೊಂಡು ಹೋಗುತ್ತಿದ್ದಾರೆ. ಆದರೆ ಇದೆಲ್ಲಾ ಬಾಯಿ ಮಾತಿನ ನಂಬಿಕೆ ವ್ಯವಹಾರ. ಇದು ಕೋರ್ಟಿಗೆ ಹೋಗುವುದಾದರೆ ಆಗ ಕಾನೂನು ಪೂರ್ವಕವಾಗಿ ಗೇಣಿ ಚೀಟಿ ಇದ್ದರೇ ಸಾಧ್ಯ. ಇಲ್ಲದಿದ್ದರೆ ಇಲ್ಲ.

ಒಂದು ವರ್ಷಕ್ಕೆ ಮೇಲ್ಪಟ್ಟು 3 ವರ್ಷಗಳ ಒಳಗಿರತಕ್ಕ ಕಾಗದ ಪತ್ರಗಳ ವ್ಯವಹಾರವೆಲ್ಲಾ ರಿಜಿಸ್ಟ್ರಾಗಿರಬೇಕೆಂಬ ಕಾನೂನಿದೆ. ಆದರೆ Transfer of Property ಆಕ್ಟ್ ಪ್ರಕಾರ ಇದು ಬೇಕಾಗಿಲ್ಲವೆಂದು ಕೆಲವರು ತಿಳಿಸಿದರು. ಆದರೆ ಆಗ ಇಂಥಾ ಕಾಗದ ಪತ್ರಗಳೆಲ್ಲಾ ಅಂದರೆ, unstamped or un-registered ಕಾಗದ ಪತ್ರಗಳು ಬರುವುದಿಲ್ಲ. ಇವುಗಳೆಲ್ಲ invalid ಆಗಬೇಕಾಗುತ್ತೆ.

ಮಾನ್ಯ ಶ್ರೀ ಶ್ರೀಕಂಠೇಶ್ವರೈರವರು ಹೇಳಿದರು: ಗ್ರಾಮಾಂತರ ಪ್ರದೇಶಗಳಲ್ಲಿ ಗೇಣೀದಾರರು ಯಾವುದೊಂದೂ ಕಾಗದ ಪತ್ರಗಳು ಇಲ್ಲದಯೇ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ. ಅವರಲ್ಲಿ ಯಾವ ವಿಧವಾದ ದಾಖಲೆಗಳೂ ಇಲ್ಲ ಎಂದು. ಆ ಗೇಣೀದಾರರ ತಂದೆ ತಾತಂದಿರ ಕಾಲದಿಂದಲೂ ಯಾವ ವಿಧವಾದ ರಶೀತಿ ಕಾಗದ ಪತ್ರಗಳೂ ಇಲ್ಲದೆ ಅವರು ವ್ಯವಸಾಯ ಮಾಡಿಕೊಂಡು ಬಂದಿದ್ದಾರೆಂದೂ ತಿಳಿಸಿದರು. ಇರಬಹುದು. ಈಗ ಅಂಥಾ ಮನುಷ್ಯರಿಗೆ ನೀವು ಹೊಸದಾಗಿ ಒಂದು ಕರಾರು ಮಾಡಿಕೊಡಬೇಕೆಂದು ಕೇಳಿದರೆ ಅವರಿಗೆ ಅನುಮಾನ ಬಂದು ಇದ್ದ ಮಧುರ ಬಾಂಧವ್ಯ ಕೆಡಲು ಇದರಿಂದ ಅವಕಾಶವಾಗುತ್ತೆ ಎಂತಲೂ ಹೇಳಿದರು. ಆದಾಗ್ಯೂ ಏನೇ ಆಗಲಿ ಕಾರಣಾಂತರಗಳ ಬಗ್ಗೆ ನಾಳೆ ಸಾಗುವಳಿದಾರ ಕೋರ್ಟಿಗೆ ಹೋಗಬೇಕಾಗಿ ಬಂದಾಗ ಆತನಿಗೆ ಏನೂ ಮಾರ್ಗವಿಲ್ಲದೆ ತೊಂದರೆಗೆ ಗುರಿಯಾಗಬೇಕಾಗುತ್ತೆ. ಆದಕಾರಣ ಆತನಿಗೆ ಒಂದು ರಕ್ಷಣೆ ಇದ್ದೇ ಇರಬೇಕು. ಅಥವಾ ಈ ವರ್ಷ ಜಮೀನನ್ನು ಕೊಟ್ಟು ತಿಳುವಳಿಕೆ ಇಲ್ಲದಂಥ ರೈತರನ್ನು ಒಂದೇ ವರ್ಷಕ್ಕೆ ಬಿಡುಗಡೆ ಮಾಡಿದರೂ ಮಾಡಬಹುದು. ಅಥವಾ ಬಹಳ ವರ್ಷಗಳಿಂದಲೂ ಸಾಗುವಳಿ ಮಾಡಿಕೊಂಡು ಬಂದಿದ್ದ ರೈತನಿಗೆ ನಂಬಿಸಿ 5 ವರ್ಷದ ಒಂದು ಗೇಣಿಕರಾರು ಬರೆಸಿಕೊಂಡರೂ ಬರೆಸಿಕೊಳ್ಳಬಹುದು. ಇಂಥಾ ತೊಂದರೆಗಳೆಲ್ಲಾ ಇರುವುದರಿಂದ ಕರಾರುಗಳ ಅವಶ್ಯಕತೆ ಅಗತ್ಯವಾಗಿದೆ. ಅಷ್ಟೇ ಅಲ್ಲದೆ ಈ ಕಾನೂನಿನಲ್ಲಿ "deemed to be a tenant" ಎಂಬ ಪದಗಳ ಅವಶ್ಯಕತೆ ಸಹ ಇದೆ. ಅವುಗಳಿರುವುದರಿಂದ ಯಾವ ತೊಂದರೆಯೂ ಇಲ್ಲ.

ಹೀಗೆ ನಾನಾ ದೃಷ್ಟಿಯಿಂದ ನೋಡಿದಾಗ್ಯೂ ಕೂಡ ಈ ಮಸೂದೆ ಜಾರಿಗೆ ಬಾರದಿರುವುದಕ್ಕೆ ಸಾಕಾದಷ್ಟು ಕಾರಣಗಳು ಕಂಡುಬರುತ್ತಿಲ್ಲ. ಇದನ್ನು ವಿರೋಧಿಸಿದವರು ಹೇಳಿರುವ ಅಂಶಗಳು ಕೂಡ ಕೇವಲ ಸಣ್ಣ ಅಂಶಗಳು. ಕೆಲವು ವರ್ಷಗಳ ಕಾಲ ಇದು ಜಾರಿಗೆ ಬಂದರೆ ಆಗ ಕಂಡ ಬರುವ ಲೋಪ ದೋಷಗಳನ್ನು ಬೇಕಾದ ಹಾಗೆ ಸರಿಪಡಿಸಬಹುದು. ಈಗ ಈ ಕಾನೂನು ಸಾಮಾನ್ಯವಾಗಿ ಶಾಶ್ವತವಾಗಿರುತ್ತದೆಯೇ, ಆಚಂದ್ರಾರ್ಕವಾಗಿರುತ್ತದೆಯೇ ಎಂದು ಹೇಳುವಹಾಗಿಲ್ಲ. ಪ್ರಜಾ ಸರ್ಕಾರ ಸ್ಥಾಪನೆಯಾಗಿರುವಾಗ ಬೇಕಾದ ಹಾಗೆ ಜನರ ಅಭಿಪ್ರಾಯಕ್ಕನುಸಾರವಾಗಿ ಈ ಕಾನೂನನ್ನು ಬದಲಾಯಿಸುವ ಹಕ್ಕಿರುತ್ತದೆ; ಬದಲಾವಣೆ ಮಾಡುತ್ತಾರೆ. ಈ ಕಾನೂನು ಮಾರ್ಪಾಡಾಗಬೇಕೆಂಬ ಆಸೆ, ಅವಶ್ಯಕತೆ ಕಂಡುಬಂದಾಗ ಮಾಡಬಹುದು. ಈ ದಿವಸ ಕಾನೂನು ಮಾಡಿರುವಾಗ ಅದು ಇರಬೇಕೆಂದು ಕೆಲವರೂ ಇರಬಾರದು ಎಂದು ಕೆಲವರೂ ಹೇಳುತ್ತಿದ್ದಾರೆ. ಆದರೆ ಈ ಕಾನೂನು ಹೊಸದು. ಇದುವರೆಗೆ ದೇಶದ ನಾನಾ ಭಾಗಗಳಲ್ಲಿ ನಾನಾ ತರಹ ಇತ್ತು. ಈಗ ಇದನ್ನು ಪ್ರಯೋಗಮಾಡಿ ಕೆಲವು ದಿವಸ ನೋಡೋಣ. ಜನರು ಇದನ್ನು ಸರಿಪಡಿಸಬೇಕೆಂದು ಹೇಳಿದರೆ ಸರಿಪಡಿಸಬಹುದು. ಆದ್ದರಿಂದ ಹೀಗಾಗಬಹುದು, ಹಾಗಾಗಬಹುದು ಎಂದು ನೆಪ ಹೇಳಿ ಅನುಕೂಲತೆಯನ್ನು ತಪ್ಪಿಸಬಾರದು ಮತ್ತು ಕಾನೂನನ್ನು ತೆಗೆದುಹಾಕಬಾರದು. ಇದು ಬಹಳ ಚೆನ್ನಾಗಿ ತಯಾರಾಗಿದೆ. ಯಾರಿಗೂ ಹೆಚ್ಚು ಅನ್ಯಾಯವಾಗಬಾರದೆಂದು ಈ ಮಸೂದೆ ತಂದಿದೆ; ಮತ್ತು ಇದರಿಂದ ರೈತರು ಮತ್ತು ಜಮೀನ್ದಾರರಿಗಿರುವ ಸಂಬಂಧವನ್ನು ಹೆಚ್ಚು ಮಾಡಬೇಕೆಂದಿದೆ. ಇದು ಸರ್ಕಾರದವರು ಮುಂಜಾಗರೂಕತೆಯಿಂದ ಮಾಡಿರುವ ಕಾನೂನು. ಏಕೆಂದರೆ ಈ ದಿನ ಯಾವ ಸಮಸ್ಯೆಯಿಲ್ಲದಿದ್ದರೂ ಇದ್ದಕ್ಕಿದ್ದ ಹಾಗೆ ಕ್ರಾಂತಿಯಾಗಬಹುದು. ಈಗಿರುವ ಬಾಂಧವ್ಯ ಕೆಡಬಾರದು, ರೈತ ಮತ್ತು ಜಮೀನ್ದಾರ ಅನ್ಯೋನ್ಯರಾಗಿರಬೇಕು, ಜಮೀನ್ದಾರನಿಗೆ ಬರಬೇಕಾದ ಗುತ್ತಿಗೆ ಸರಿಯಾಗಿ ದೊರೆಯಬೇಕು, ರೈತನೂ 5 ಅಥವಾ 10 ವರ್ಷಗಳವರೆಗೆ ಜಮೀನ

(ಶ್ರೀ ಕೆ. ಸಂಪಂಗಿರಾಮಯ್ಯನವರು).

ನ್ನಿಟ್ಟುಕೊಂಡು ಸರಿಯಾಗಿ ವ್ಯವಸಾಯ ಮಾಡುವುದಕ್ಕೆ ಅವಕಾಶವಿರಬೇಕು. ಸುಗಮವಾಗಿ ವ್ಯವಸಾಯ ನಡೆಯಬೇಕು ಎಂಬ ಉದ್ದೇಶವಿದೆ. ಈ ಕಾನೂನನ್ನೇಕೆ ಹೀಗೆ ಮಾಡಬೇಕಾಗಿತ್ತು ಎಂದರೆ ಈಗಿನ ಕಾಲಸ್ಥಿತಿ ಹಾಗಿದೆ. ಮೊದಲಿನ ಹಾಗೆ ಧರ್ಮದ ಆಧಾರದ ಮೇಲೆ ನೀತಿಯ ಆಧಾರದ ಮೇಲೆ ಸಮಾಜವು ಯಾವ ಕಾನೂನಿನ ಸಹಾಯವೂ ಇಲ್ಲದೆ ನಡೆಯುವ ಹಾಗಿದ್ದರೆ ಇಂಥ ಕಾನೂನು ಅನಾವಶ್ಯಕ. ಬರಬರುತ್ತಾ ಕಾಲಸ್ಥಿತಿ ಕೆಡುತ್ತಿದೆ. ಪ್ರತಿಯೊಂದಕ್ಕೂ ಕಾನೂನನ್ನು ತರಬೇಕಾಗಿದೆ. ಆದ್ದರಿಂದ ಇಂಥ ಕಾನೂನು ಆವಶ್ಯಕ. ಇದು ಮುಂಜಾಗ್ರತೆ ಕಾರ್ಯವಾಗಿದೆ. ಆದ್ದರಿಂದ ರೈತ ಜಮೀನ್ದಾರರ ಬಾಂಧವ್ಯ ಸುಸೂತ್ರವಾಗಿ ಮತ್ತು ಸುಗಮವಾಗಿ ನಡೆಯುವುದಕ್ಕೆ ಅವಕಾಶ ಮಾಡಿರುವ ಈ ಮಸೂದಾ ಕಾನೂನು ಜಾರಿಗೆ ಬಂದು ಪರೀಕ್ಷಾರ್ಥವಾಗಿ ಕೆಲವು ಕಾಲ ನಡೆದ ಮೇಲೆ ಅಭಿಪ್ರಾಯವನ್ನು ಕೊಡಬೇಕು. ಆದ್ದರಿಂದ ಈಗ ಸರ್ವಾನುಮತದಿಂದ ಎಲ್ಲರೂ ಇದಕ್ಕೆ ಅಂಗೀಕಾರ ಕೊಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

Janab SYED ABDUR RAHMAN (Chikmagalur *cum* Shimoga—Muslim).—Agrarian Reforms which are contemplated in the provisions of this Tenancy Bill which is for the consideration of this House are really the pressing needs of the present times. I consider this measure as a very important one in the history of Mysore. I am sure that this measure, if accepted by this House, will be considered as a great step forward in the direction of improving the condition of the tenant in the Mysore State. We know full well that the prosperity of the tenant means the prosperity of agriculture and the State. We in India know full well that India is mainly an agricultural country. The more we try to improve the conditions of agriculture and the conditions in which our tenants are placed the better it is for the State and whatever we do in this direction will tend to promote the prosperity of the tenants and the agriculturists. Such a measure has to be welcomed wholeheartedly. I am one among those who have welcomed this measure. When I went through the report of the Select Committee which is placed before this House for consideration I came across the minute of dissent which has been recorded by our Hon'ble friend Sri Kadidal Manjappa. He has of course welcomed this measure. He has suggested that some separate legislation should have been introduced with regard to the Malnad parts af the Mysore State. Having said that much and having been assured probably by the Hon'ble Minister and by some of his colleagues he has satisfied himself with that. I wish he had continued his efforts further in that direction to see if the suggestions could have been accepted by the Select Committee in this direction. That would have been something more assuring. I congratulate him for that. But I think he is already satisfied with a mere suggestion. Coming to the minute of dissent, as recorded by my Hon'ble friend Sri H. M. Channabasappa, he has definitely said :

> "The aims and objects of the principles of the Tenancy Bill are in main to secure benefits of fixity of tenure and prevent rackrenting. A contented tenancy can never be achieved by radical methods."

In one breath my friend welcomes and says that the aims and objects of the Bill are there and he is satisfied with the aims and objects of the Bill. But in another breath he says that radical methods will not be all right to bring about such a situation. I want to ask him in the first instance whether this Bill ever contemplated any radical measure at all. I for one feel that this legislation has come not a little too soon. There is nothing radical about the provisions of the Bill but the difficulty is he is himself a great radical. This Government has been thinking of such a piece of legislation for a long time and it redounds to the credit of the Hon'ble Minister that he had thought fit to place such a piece of legislation before this House for consideration. There are only 2 or 3 important matters regarding which we are bringing about this legislation. The Hon'ble Member Sri Sreekanteswar has suggested that vesting powers in the Amildars is not desirable. It would not be, according to him in the fitness of things to leave the matter of fixing the rent with the Amildar. I say that it is a laborious process, a process which is really not practicable. The Amildar who is on the spot and who could go and see with his own eyes what could be done in the matter and what is fair and what is not fair

would probably do things much better. And there is a superior authority over and above the Amildar also and in case he has erred that could be rectified and as suggested by Sri Sreekanteswar the Amildar is not, after all, the final authority for fixing a fair rent. It is not entirely in his discretion. His decision is subject to alteration by higher authorities in the State. That need not be an amendment at this stage. If he had thought of it he could have brought such an amendment earlier. But he has not done so. As regards the tenant making an application in writing to the landlord with regard to rent and other things, it looks rather strange, because we are dealing with people who are illiterate. The tenants are practically all illiterate. There may be a few who may know how to read and write. In such cases there may not be any difficulty at all. But in 99 per cent of the cases, they are illiterate and they will have to get things done through somebody else. In the present state of illiteracy, this seems to me a difficult matter. Some other method must be found. It is enough if he makes a representation personally. It may happen this way. The tenant may like to do it in one way and the landlord may do it in another way. That is the one thing which we must protect by law.

There are certain other matters also. No provision has been made to check the tendency of a raiyat who is not prepared to work. My friend Sri S. Rangaramiah said several things in that connection. Supposing some tenants, after feeling that they are secure for five years, refuse to work or carry on, what is the alternative for the landlord?

Some HON'BLE MEMBERS.—Drive them out.

Janab SYED ABDUR RAHMAN.—How are they going to be driven out? They will have done all the mischief. There is absolutely no provision to check such a tendency on the part of the tenants. I do admit that this measure mainly helps the tenants, that this is meant for his prosperity, that this is meant for his security. Most welcome; but since we are enacting a law some provision should be made to check the vagaries of the tenants. It may not be so in all the hundred cases but in some cases it may be so. So, the suggestion of my friend Sri S. Rangaramiah cannot be brushed aside as nothing. There is some meaning in that also. I have no more remarks to make.

On the whole the provisions of this Bill are generally acceptable and it is a great step forward taken and I welcome it.

ಶ್ರೀ ಎಂ. ಎಲ್. ನಂಜರಾಜ ಅರಸ್‌ರವರು (ಮೈಸೂರು ಜಿಲ್ಲೆ).—ಸ್ವಾಮಿ, ಅಧ್ಯಕ್ಷರೇ, ನಮ್ಮ ಯುವಕ ಸ್ನೇಹಿತರು ಬಹಳ ಜೋರಾಗಿ ಮಾತನಾಡಿದರು. ನೆಹರು ಸರ್ಕಾರ ಇರಲಿ ಯಾವ ಸರ್ಕಾರವೇ ಇರಲಿ ಈ ರೀತಿ ಸಹಾಯ ಮಾಡಬೇಕಾದ್ದು ಸಹಜ. ಮಾನ್ಯ ಸ್ನೇಹಿತರನ್ನು ಬಹಳ ದಿನದಿಂದ ನಾನು ನೋಡಿದ್ದೇನೆ. ನಾನು ಹೇಳುವುದಾದರೆ ಇವತ್ತು ನಾವು ಇಲ್ಲಿ ಸದಸ್ಯರಾಗಿದ್ದುಕೊಂಡು ಒಂದು ದಿವಸ ಇಲ್ಲಿ ಕುಳಿತಿರುವುದಕ್ಕೆ 15 ರೂಪಾಯಿ ತೆಗೆದುಕೊಳ್ಳುತ್ತಾ ಇದ್ದೇವೆ. ಮೈಸೂರು ದೇಶದಲ್ಲಿ ಇವತ್ತು ಮನುಷ್ಯನ ಅಂತಸ್ತು ಎಷ್ಟಿದೆ? ಒಬ್ಬ ಮನುಷ್ಯನಿಗೆ ಒಂದು ದಿನಕ್ಕೆ ಎಷ್ಟು ಉತ್ಪತ್ತಿ ಇದೆ ಎಂಬ ಲೆಕ್ಕಾಚಾರ ಹಾಕಿನೋಡಿದರೆ ಇವತ್ತು ನಾವು ಇಲ್ಲಿ ಕುಳಿತಿರತಕ್ಕ ಸದಸ್ಯರು ಯಾರೂ ಕೂಡ ರೈತರನ್ನು ಪ್ರತಿನಿಧಿಸುವುದಕ್ಕೆ ಲಾಯಕ್ಕಾಗಿಲ್ಲ ಎಂದು ಹೇಳಿದರೆ ಅದು ಸತ್ಯ ಎಂದು ನಾನು ಒಪ್ಪಿಕೊಳ್ಳುತ್ತೇನೆ.

Sri M. V. KRISHNAPPA.—On a point of explanation. I never said that and I never meant that. ಗೇಣಿದಾರರ ಪರವಾಗಿ ಬಂದಿರುವವರು ಇದ್ದಿದ್ದರೆ ಅವರು ಏನು ಮಾತನಾಡುತ್ತಿದ್ದರು ಎಂಬುದೇ ಹೊರತು ಮತ್ತೆ ಬೇರೆ ಅಲ್ಲ.

ಶ್ರೀ ಎಂ. ಎಲ್. ನಂಜರಾಜ ಅರಸ್‌ರವರು.—ಅವರು ಸಾಮಾನ್ಯವಾಗಿ ಉಳುವವರದೇ ಹೊಲ ಆಗಿರಬೇಕು ಎಂದು ಹೇಳಿದರು. ಅದೆಲ್ಲಾ ಒಪ್ಪಿಕೊಳ್ಳೋಣ. ಆದರೆ ಪ್ರತ್ಯಕ್ಷವಾಗಿ ಇತಿಹಾಸ ನೋಡಿದರೆ ಒಂದೇ ಸಾರಿ ಎಲ್ಲರೂ ಒಂದು ಮಟ್ಟಕ್ಕೆ ಬರುವುದಕ್ಕಾಗುವುದಿಲ್ಲ. ಸಾಮಾನ್ಯವಾಗಿ ನಮ್ಮಲ್ಲಿ ಒಬ್ಬ ಮನುಷ್ಯನಿಗೆ ಮೈತುಂಬ ಎಷ್ಟು ಬಟ್ಟೆ ಬೇಕೋ ಅಷ್ಟು ಬಟ್ಟೆ ಇಲ್ಲದೇ ಇರುವವರು ಇದ್ದಾರೆ ಮತ್ತು ಹೊಟ್ಟೆಗೆ ಒಂದು ಹೊತ್ತು ಅನ್ನ ಇಲ್ಲದೇ ಇರುವವರೂ ಇದ್ದಾರೆ. ಇದೆಲ್ಲಾ ಒಂದೇ ಸಾರಿ ಸರಿಹೋಗಬೇಕೆಂದರೆ ಆಗುವುದಿಲ್ಲ. ನಮ್ಮ ಕೈನಲ್ಲಿರುವ ಐದು ಬೆರಳೂ ಒಂದೇ ರೀತಿ ಇಲ್ಲ ಎಂದ ಮೇಲೆ ಅನೇಕ ತೊಡಕುಗಳು ಬರುತ್ತವೆ. ಇಂಗ್ಲೆಂಡ್ ದೇಶದಲ್ಲಿ ಇವತ್ತು ಶೇಕಡ 22 ರಷ್ಟು ಜಮೀನ್‌ದಾರರು ಇದ್ದಾರೆ. ಪ್ರಪಂಚದಲ್ಲಿ ಯಾವ ಕಡೆ ನೋಡಿದರೂ ಕೂಡ ಮೈಸೂರು ದೇಶವನ್ನು ಪ್ರಪಂಚದ ಇತರ ಭಾಗಗಳಿಗೆ ಹೋಲಿಸಿದರೆ ಭೂ ಕ್ರಮದಲ್ಲಿ (land system) ಯಾವ ದೇಶಕ್ಕೂ ಹಿಂದೆ ಬಿದ್ದಿಲ್ಲ. ಇದು ಭೂಗುಣ ಹವಾಗುಣ ಇದಕ್ಕೆಲ್ಲಾ ಹೊಂದಿಕೊಂಡಿದೆ ಎಂಬುದು ಕಾಣುತ್ತಾ ಇದೆ. ಹೀಗೆ ಅಂದಮಾತ್ರಕ್ಕೆ ನಾವು down-trodden ಆಗಿ ಬಿದ್ದಿರುವವರನ್ನು ಉತ್ತಮ ಸ್ಥಿತಿಗೆ

(ಶ್ರೀ ಎಂ. ಎಲ್. ನಂಜರಾಜ ಅರಸ್‌ರವರು)

ತರಕೂಡದು ಎಂದಲ್ಲ. ಸಾಮಾನ್ಯವಾಗಿ ಯಾವ ಸದಸ್ಯರಿಗೂ ಆ ಅಭಿಪ್ರಾಯ ಇಲ್ಲ. ಏಕೆಂದರೆ ಮೊದಲು ಅವರು ಹೇಳಿದ ಹಾಗೆ ನಾವೆಲ್ಲರೂ ಗಾಂಧೀ ತತ್ವವನ್ನು ಪರಿಪಾಲಿಸತಕ್ಕವರು. ಗಾಂಧೀಜಿಯವರು ಏನು ದೇಶದಲ್ಲಿ ಸಾರಿಕೊಂಡು ಬಂದರೋ, ಯಾವ ಒಂದು ಕ್ರಾಂತಿ ಎಂಬುದನ್ನು ಹೇಳುತ್ತಾ ಇದ್ದರೋ ಆ ಕ್ರಾಂತಿ ಮೂಲಕ ನಾವು ದೇಶವನ್ನು ಇವತ್ತು ಒಂದು ಉತ್ತಮಸ್ಥಿತಿಗೆ ತಂದಿದ್ದೇವೆಯೆ ಎಂದರೆ ಇಲ್ಲ. ಭರತ ಖಂಡದ ಇತರ ಭಾಗಗಳಲ್ಲಿ ಏನೇ ಇರಲಿ ಮೈಸೂರು ದೇಶದಲ್ಲಿ ಎಲ್ಲಾ ಕಡೆಯೂ ಒಂದೇ ವಾತಾವರಣ ಇಲ್ಲ. ಕೆಲವು ಮಾನ್ಯ ಮಿತ್ರರು ಈ ಟೆನೆನ್ಸಿ ಬಿಲ್ ಬೇಕೇ ಆಗಿರಲಿಲ್ಲ ಎಂದು ಹೇಳಿದರು. ಒಂದು ತರಹದಲ್ಲಿ ನೋಡಿದರೆ ಈ ಟೆನೆನ್ಸಿ ಬಿಲ್ ಬೇಕಾಗಿರಲಿಲ್ಲ. ಸಾಮಾನ್ಯವಾಗಿ ದೇಶದಲ್ಲಿ ಇವತ್ತು ಈ ಬಿಲ್ಲಿನ ಅವಶ್ಯಕತೆ ಇದೆಯೋ ಎಂದರೆ ಈಗ ನಮ್ಮ ಮುಂದೆ ಇಟ್ಟಿರುವ ಈ ಇನಾಂ ಅಬಾಲಿಷನ್ ಬಿಲ್ಲನ್ನು ಜಾರಿ ಮಾಡಿ ದೇಶದಲ್ಲಿ ನಾಲ್ಕಾರು ವರ್ಷ ಇದು ಯಾವ ರೀತಿ ಕೆಲಸ ಮಾಡುತ್ತದೆ ಎಂಬುದನ್ನು ನೋಡಿದ್ದರೆ ಆ ಮೇಲೆ ಇದರ ಅವಶ್ಯಕತೆ ಇದೆಯೇ ಎಂಬುದನ್ನು ಹೇಳಬಹುದಾಗಿತ್ತು. ನಮ್ಮ ದೇಶದಲ್ಲಿ ನಾನಾ ಮೂರೆಗಳಿವೆ. ಒಂಭತ್ತು ಡಿಸ್ಟ್ರಿಕ್ಟುಗಳಲ್ಲಿ ಒಂದೊಂದು ಕಡೆ-ಒಂದೊಂದು ವಾತಾವರಣ ಇದೆ. ಕೋಲಾರದವರಿಗೆ ಅಲ್ಲಿ ಜೋಡಿ, ಇನಾಂಗಳು ಜಾಸ್ತಿಯಾಗಿದ್ದು ಬೇರೆ ಕಡೆಯೂ ಹಾಗೆಯೇ ಇರಬಹುದೆಂದು ಕಾಣಬಹುದು. ಮಲೆನಾಡಿನಲ್ಲಿ ಕಾಗೋಡು ಸಮಸ್ಯೆ ಇತ್ಯಾದಿಯಾಗಿದ್ದು ಬೇರೆ ಕಡೆಯೂ ಅದೇ ರೀತಿ ಇರಬಹುದೆಂದು ಕಾಣಬಹುದು. ಒಂದೊಂದು ಕಡೆಯವರು ಒಂದೊಂದು ದೃಷ್ಟಿಯಿಂದ ಹೇಳುತ್ತಾ ಇದ್ದಾರೆ. ಅದಕ್ಕೆ ನಾವು ಸ್ವಲ್ಪ ಸಮದೃಷ್ಟಿಯಿಂದ ನೋಡಿದರೆ ನಮ್ಮ ದೇಶದಲ್ಲಿ ಮಾನ್ಯ ಸದಸ್ಯರೊಬ್ಬರು ಮೊನ್ನೆ ತಾನೆ ಅಂಕಿ ಅಂಶದ ಮೂಲಕ ಹೇಳಿದರು—ಶೇಕಡ 91 ರಷ್ಟು ಸ್ವಂತ ವ್ಯವಸಾಯಗಾರರು (owner cultivators) ಇದ್ದಾರೆ. ಟೆನೆಂಟ್ಸ್ ಶೇಕಡ 7ರಷ್ಟು ಇದ್ದಾರೆ. 90 ಲಕ್ಷ ಜನಸಂಖ್ಯೆಯಲ್ಲಿ ವ್ಯವಸಾಯ ಮಾಡತಕ್ಕ 13 ಲಕ್ಷ ಜನಗಳಲ್ಲಿ ಶೇಕಡ 7 ರಷ್ಟು ಟೆನೆಂಟ್ಸ್ ಇದ್ದಾರೆ ಎಂದರೆ ಎಷ್ಟಾಯಿತು? ವಾರ ಗುತ್ತಿಗೆ ಮಾಡತಕ್ಕವರು ಇಡೀ ದೇಶದಲ್ಲಿ 75 ಸಾವಿರ ಜನ ಇದ್ದಾರೆ. ಆ 75 ಸಾವಿರ ಜನದ ಹಕ್ಕುಭಾಧ್ಯತೆಗಳನ್ನು ಕಾಪಾಡತಕ್ಕದ್ದು ನಿಜವಾಗಿಯೂ ಸರ್ಕಾರದವರ ಕರ್ತವ್ಯ. ಅದನ್ನು ಮಾಡಬೇಕು. ಈಗ ಏನಾಗಿದೆ ಎಂದರೆ ಇನಾಂಗಳಿಗೆ ಸಂಬಂಧಪಟ್ಟಂತೆ 2,100 ಹಳ್ಳಿಗಳು ಇವೆ. ಆ 2,100 ಹಳ್ಳಿಗಳನ್ನು ತೆಗೆದು ಹಾಕಿದರೆ ನಮ್ಮ ದೇಶದಲ್ಲಿ ನಿಜವಾಗಿಯೂ ಈ ಟೆನೆನ್ಸಿ ಬಿಲ್ಲಿನ ಅವಶ್ಯಕತೆಯಿದೆಯೇ ಎಂಬುದನ್ನು ಯೋಚನೆ ಮಾಡಬೇಕು. ಸಮತಾವಾದಿಗಳು ಯಾವುದೋ ಒಂದು ದೃಷ್ಟಿಯಲ್ಲಿ ಹೇಳಿದರು, ಟೀಕೆ ಮಾಡುವುದಕ್ಕೆ ಹೋದರು. ಸಾಮಾನ್ಯವಾಗಿ ಹೊಲಗಳಲ್ಲಿ ಇವತ್ತು ಹೆಚ್ಚು ಬೆಳೆ ಬರುತ್ತಾ ಇಲ್ಲ, ಪಟ್ಟಣಗಳಲ್ಲಿ ಕೈಗಾರಿಕಾ ಕಾರ್ಖಾನೆಗಳಿರುವ ಕಡೆ ಕೆಲಸ ಮಾಡತಕ್ಕ ಕೂಲಿಗಾರನಿಗಿಂತ ಹಳ್ಳಿಯ ಸಾಹುಕಾರ ಕಡಿಮೆಯಾಗಿದ್ದಾನೆ. ಅಲ್ಲಿ ಇಲ್ಲಿ ಕೇಳಿದ ಮಾತು ನಾನು ಹೇಳುತ್ತಾ ಇಲ್ಲ. ಇದು ನನ್ನ ಸ್ವಂತ ಅನುಭವದ ಮಾತು. ಇವತ್ತು ಹಳ್ಳಿಯ ಸಾಹುಕಾರ ಪಟ್ಟಣಗಳ ಕೈಗಾರಿಕಾ ಕೂಲಿಗಾರನಿಗಿಂತ ಕಡಿಮೆಯಾಗಿದ್ದಾನೆ ಎಂದು ಹೇಳಬಹುದು.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಇರುವುದು ಒಂದೇ ದೃಷ್ಟಿ. ಸರಿಯಾಗಿ ಅರ್ಥಮಾಡಿಕೊಂಡು ಹೇಳಬೇಕು.

ಶ್ರೀ ಎಂ. ಎಲ್. ನಂಜರಾಜ ಅರಸಿನವರು.—ಅರ್ಥ ಮಾಡಿಕೊಂಡೇ ಹೇಳುತ್ತಾ ಇದ್ದೇನೆ. ನಮ್ಮ ದೇಶದ ಸ್ಥಿತಿ ಏನಾಗಿದೆ ಎಂಬುದನ್ನು ಮರೆತು, ರಷ್ಯಾ ದೇಶದಲ್ಲಿ ಹಾಗಿದೆ, ಹೀಗಿದೆ ಎಂದರೆ ಏನು ಪ್ರಯೋಜನ? ರಷ್ಯಾದೇಶ ನಾನೇನೂ ನೋಡಿಲ್ಲ. ಪತ್ರಿಕೆಗಳನ್ನು ಓದಿ ತಿಳಿದುಕೊಂಡಿರುವುದೆಷ್ಟೋ ಅಷ್ಟೆ. ಹೊರಗಿನವರು ಬಂದು ಮೈಸೂರು ದೇಶವನ್ನು ಮಾದರಿ ದೇಶ ಎಂದು ಹೇಳಿದ್ದಾರೆ. ಏಕೆ ಎಂದು ಕೇಳಿದರೆ, ಕೆಲವರು ಹೇಳುತ್ತಾ ಇದ್ದರು. ಬರೀ ಟಾರು ರಸ್ತೆ, ಬೀದಿ ದೀಪ ದೊಡ್ಡ ದೊಡ್ಡ ಕಟ್ಟಡಗಳು ಇವುಗಳನ್ನು ನೋಡಿಕೊಂಡು ಮಾದರೀ ದೇಶ ಅನ್ನುತ್ತಾರೆ ಎಂದು. ಈಗ ನೋಡಿದರೆ ಅದಕ್ಕಲ್ಲ ಎಂದು ಕಾಣುತ್ತದೆ. ಈ ಟೆನೆನ್ಸಿ ಬಿಲ್ ಬಂದದ್ದರಿಂದ ಆ ವಿಚಾರಗಳನ್ನೆಲ್ಲ ಮನನ ಮಾಡಿದ್ದರಿಂದ ಹಾಗಲ್ಲ, ಅತ್ಯುತ್ತಮವಾದ land system ನಿಂದ ಎಂದು ಗೊತ್ತಾಗಿದೆ. ಯೂರೋಪ್ ದೇಶದಲ್ಲಿ ಜಕೋಸ್ಲೋವೇಕಿಯಾ, ರುಮೇನಿಯಾ, ಯುಗೋಸ್ಲೋವಿಯಾ, ಪೋಲೆಂಡ್ ಇಂಥಾ ಕಡೆಗಳಲ್ಲಿ ಕ್ರಾಂತಿಗಳಾಗಿ land system ಬದಲಾವಣೆ ಆದಾಗ್ಯೂ ನಮ್ಮ ದೇಶದಲ್ಲಿರತಕ್ಕ land system ಅಲ್ಲಿಲ್ಲ. ರಷ್ಯಾ ದೇಶದ ಗೋಜಿಗೆ ನಾನು ಹೋಗುವುದಿಲ್ಲ. ಆದ್ದರಿಂದ ಈ ಟೆನೆನ್ಸಿಬಿಲ್ ಬೇಕಾಗಿಲ್ಲವೆಂದಲ್ಲ. ಮೊದಲು ಇದನ್ನು ಜಾರಿ ಮಾಡಿದ್ದರೆ ನಾಲ್ಕಾರು ವರ್ಷ ಆದನಂತರ ಇದರ ಅವಶ್ಯಕತೆ ಇದೆಯೆ ಇಲ್ಲವೆ ಎಂಬುದು ನಮಗೆ ಗೊತ್ತಾಗುತ್ತಿತ್ತು. ಮಾನ್ಯ ಸ್ನೇಹಿತರಾದ ಶ್ರೀಮಾನ್ ರಂಗಸ್ವಾಮಯ್ಯನವರು ಚಳುವಳಿಗಾರರನ್ನು ಒಲಿಸಿಕೊಳ್ಳುವುದಕ್ಕೆ ನೀವು ಇದನ್ನು ಮಾಡಿದ್ದೀರಿ ಎಂದು ಹೇಳಿದರು. ಬೇಕಾದಷ್ಟು ಕಾನೂನುಗಳನ್ನು ಕಾನೂನಿನ ಕಡತಕ್ಕೆ ಏರಿಸುತ್ತೇವೆ. ಎಷ್ಟು ಕಾನೂನುಗಳಿವೆ ಎಂಬುದು ದೇಶದಲ್ಲಿ ಎಷ್ಟು ಜನಕ್ಕೆ ಗೊತ್ತಿದೆ? ಆದ್ದರಿಂದ ಬರೀ ಕಾನೂನು ಮಾಡಿ ಇಷ್ಟೊಂದು ಪ್ರಗತಿಗೆ ಬಂದಿದ್ದೇವೆ ಎಂಬುದರಿಂದ ಪ್ರಯೋಜನವಿಲ್ಲ. ಕಾರ್ಯತಃ ಪ್ರಗತಿ ಸಾಧಿಸಿದ್ದೇವೆಯೆ ಎಂಬುದು ಮುಖ್ಯ.

ಆ ದೃಷ್ಟಿಯಿರಬೇಕೇ ಹೊರತು, ನಾವು ಸುಮ್ಮನೆ ಕಾನೂನು ಮಾಡಿಬಿಟ್ಟರೆ ಪ್ರಯೋಜನವಿಲ್ಲ. ಅವರಿಗೆ ಇದನ್ನು ತಿಳಿದುಕೊಳ್ಳುವುದಕ್ಕೆ ಸಾಕಾದಷ್ಟು ಜ್ಞಾನ ಬಂದರೆ ಸಾಕು. ಆಗ ಯಾವ ಕಾನೂನೂ ಬೇಕಾಗಿಲ್ಲ. ತಮ್ಮ ಕಾಲಮೇಲೆ ತಾವೇ ನಿಂತುಕೊಂಡು ಇತರರೊಡನೆ ಸರಿಸಮನಾಗಿ ವರ್ತಿಸುವುದಕ್ಕೆ ಶಕ್ತಿ ತಾನೇ ತಾನಾಗಿ ಬರುತ್ತದೆ. ಅಂದ ಮಾತ್ರಕ್ಕೇ ನಾನು ಈ ಕಾನೂನು ಬೇಡವೆಂದು ಹೇಳುವುದಿಲ್ಲ. ಇಂದು ಹೈದರಾಬಾದಿನ ಪರಿಸ್ಥಿತಿ ನೋಡಿ. ಅಲ್ಲಿ ಈ ಟೆನನ್ಸಿ ಬಿಲ್ಲನ್ನು ತಂದಿದ್ದಾರೆ. ಅದರಿಂದೇನಾಗಿದೆ! ಹಿಂದೆ ಇದ್ದುದಕ್ಕಿಂತ ಈಗ ಟೆನೆಂಟುಗಳಿಗೆ ಕಿರುಕುಳ ಜಾಸ್ತಿಯಾಗಿದೆ ಅಷ್ಟೆ. ಮನುಷ್ಯನಾದವನಿಗೆ ಯಾವತ್ತೂ ಆದಷ್ಟು grab ಮಾಡಬೇಕೆಂಬ ಆಸೆ ಇದ್ದೇ ಇದೆ. ಬೇಡವೆನ್ನುವವರು ಬಹಳ ಕಡಿಮೆ. ಹೊಗಳಿಕೆಗಾಗಿ ನಮ್ಮನ್ನು ನಾವು ವಂಚಿಸಿಕೊಂಡು ಬೇಕಾದರೆ ಹೇಳಬಹುದು. ಸುಮ್ಮನೆ ಆ Slogan ಈ Slogan ಕೂಗಿಕೊಂಡು ಹೋಗುತ್ತಿದ್ದರೆ ದೇಶ ಮುಂದಕ್ಕೆ ಬರುವುದಿಲ್ಲ. ಹಿಂದಿನಿಂದಲೂ ಅದನ್ನು ಮಾಡಬೇಕು,

ಇದನ್ನು ಮಾಡಬೇಕು ಎಂದು ಹೇಳುತ್ತಲೇ ಇದ್ದೆವು. ಆದರೂ ನಾವು ಮುಂದುವರಿದಿಲ್ಲ. ನಾವೇನೋ ತಪ್ಪು ಮಾಡಿರಬೇಕು ಅದರ ಪ್ರತಿಫಲವನ್ನೀಗ ಅನುಭವಿಸುತ್ತಿದ್ದೇವೆ. ಆದ್ದರಿಂದ ನಾವೇನಿದ್ದರೂ ನಿಧಾನವಾಗಿ ಹೋಗಬೇಕು. ಕಾಲಕ್ರಮದಲ್ಲಿ ಎಲ್ಲವೂ ಸರಿಹೋಗುತ್ತದೆ. ಇತರ ದೇಶಗಳನ್ನು ತಂದು ಮೈಸೂರು ದೇಶಕ್ಕೆ ಹೋಲಿಸಿ ಇದು ಬಹಳ ಹೀನಸ್ಥಿತಿಯಲ್ಲಿದೆಯೆಂದು ಹೇಳುವುದು ಸರಿಯಲ್ಲ. ಏಕೆಂದರೆ ಒಂದು ಕಡೆ—ನಿನ್ನೆ ತಾನೇ ಮೈಸೂರು ದೇಶ ಇಂಥಾ ದೇಶ, ಅಂಥಾ ದೇಶ—ಎಂದು ಹೊಗಳಿದ್ದೇವೆ. ಇನ್ನೊಂದು ಕಡೆ, ಈಗ ಇಲ್ಲಿ ಕಿರುಕುಳ ಹೇಳುವ ಹಾಗಿಲ್ಲ, ಇಲ್ಲಿನ ಪದ್ಧತಿಗಳನ್ನೆಲ್ಲಾ ತೊಡೆದು ಹಾಕಬೇಕು ಎಂದು ಹೇಳುತ್ತಿದ್ದೇವೆ. ಈ ರೀತಿ ಯಾವುದರಲ್ಲೂ consistency ಇಲ್ಲ. ನಿನ್ನೆ ಹೇಳಿದ್ದನ್ನೇ ಇಂದು ಮರೆತು ಬಿಡುತ್ತೇವೆ. ಒಂದು ಕಾನೂನು ಮಾಡುವಾಗ ಹಿಂದಿನ ಕಾನೂನಿನ ಮೇಲೆ ಏನು ಹೇಳಿದ್ದೇವೆಂಬುನ್ನೇ ನಿಜವಾಗಿಯೂ ಮರೆತು ಬಿಡುತ್ತೇವೆ.

ಒಬ್ಬ ಸದಸ್ಯರು.—ಆದ್ದರಿಂದ ಕಾನೂನು ಬೇಡ ವೆ ತಲೇ ?

ಶ್ರೀ ಎಂ. ಎಲ್. ನಂಜರಾಜ ಅರಸಿನವರು.—ಬೇಡವೆನ್ನುವುದಿಲ್ಲ. ನೀವು ಯಾವುದೋ ಒಂದು ದೃಷ್ಟಿಯಿಂದ ಈ ಬಿಲ್ಲನ್ನು ತರಬೇಕೆಂದು ಹೇಳುತ್ತಿದ್ದೀರಿ. ಆದರೆ ನಿಜವಾಗಿಯೂ ಶ್ರೀಮಾನ್ ಮಂಜಪ್ಪನವರು ಏನು ಅನುಕೂಲವಾಗುತ್ತದೆಂದು ಭಾವಿಸಿದ್ದಾರೋ ಅದು ಖಂಡಿತ ಬರುವುದಿಲ್ಲ. ಇಂದು ಸರ್ವೇ ಸಾಮಾನ್ಯವಾಗಿ ಒಂದು ಎಕರೆಗೆ 60 ಸೇರು—90 ಸೇರು ಗೇಣಿಯನ್ನು ಕೊಡುತ್ತಿದ್ದಾರೆ. ಅಂಥಾದ್ದರಲ್ಲಿ ಇದರಲ್ಲಿ ಅರ್ಧಕ್ಕಿಂತ ಜಾಸ್ತಿ ತೆಗೆದುಕೊಳ್ಳಕೂಡದೆಂದು ಹೇಳಿದರೆ, ಜಮೀನ್ದಾರರು ಇನ್ನು ಮೇಲೆ ಅರ್ಧ ಭಾಗದವರೆಗೂ ತೆಗೆದುಕೊಳ್ಳುವುದಕ್ಕೆ ಅವಕಾಶ ಕಲ್ಪಿಸಿದ ಹಾಗಾಯಿತು ಅಷ್ಟೆ.

ಅಲ್ಲದೆ ಈ ಬಿಲ್ಲನ್ನು ನಮ್ಮ ಮೈಸೂರು ದೇಶಕ್ಕೆ ಸಧ್ಯದಲ್ಲೇನೂ ತರಬೇಕಾಗಿರಲಿಲ್ಲ. ಇನಾಂ ಬಿಲ್ಲನ್ನು ತಂದು ಬಿಟ್ಟ ಮೇಲೆ ಇದರ ಅವಶ್ಯಕತೆಯೇ ನನಗೆ ತೋರುವುದಿಲ್ಲ. ಹಿಂದೆ Money Lenders Act ತರುವಾಗಲೂ ನಾವು ಅದನ್ನು ತಂದೇ ತರಬೇಕೆಂದು ಬೇಕಾದಷ್ಟು ಚಳುವಳಿ ಮಾಡಿದೆವು. ಆದರೂ ಅದರಿಂದೇನಾಗಿದೆ? ಮೊದಲಿದ್ದ ಪರಿಸ್ಥಿತಿಯೇನೂ ಉತ್ತಮವಾಗಿಲ್ಲ. ಎಷ್ಟೋ ಜನರಿಗೆ ಅರ್ಥಮಾಡಿಕೊಳ್ಳುವುದಕ್ಕೇ ಆಗಿಲ್ಲ. ಅರ್ಥ ಮಾಡಿಕೊಳ್ಳಬೇಕೆಂದರೆ ಮಹಾ ಮಹಾ ಪಂಡಿತರುಗಳನ್ನಿಟ್ಟುಕೊಳ್ಳಬೇಕು. ನಮ್ಮ ಮಾನ್ಯ ಮಿತ್ರರಾದ ಶ್ರೀಮಾನ್ ಕೃಷ್ಣಪ್ಪನವರು ಹೇಳುತ್ತಿದ್ದರು. ರೈಲು ಯಾರದು, ನಡೆಸುವವನದು; ಮೋಟಾರು ಯಾರದು; ನಡೆಸುವವನದು ಎಂದು ಇದೆಲ್ಲಾ ಸಾಧ್ಯವೇ !

ಶ್ರೀ ಟಿ. ಸಿ. ಹೊನ್ನಪ್ಪನವರು.—ಅವರು ಈ ಮಸೂದೆಯನ್ನು ಅನುಮೋದಿಸುತ್ತಾರೋ ಅಥವಾ ವಿರೋಧಿಸುತ್ತಾರೋ ? ಏಕೆಂದರೆ ಅವರು ಇದನ್ನು ವಿರೋಧಿಸುವವರಿಗೂ ಉತ್ತರ ಹೇಳುತ್ತಿದ್ದಾರೆ, ಅನುಮೋದಿಸಿದವರಿಗೂ ಉತ್ತರ ಹೇಳುತ್ತಿದ್ದಾರೆ !

ಒಬ್ಬ ಸದಸ್ಯರು.—ಕಾಂಗ್ರೆಸ್ ಪಾರ್ಟಿ ಬಿಟ್ಟು ಬೇರೆ ಪಾರ್ಟಿಗೆ ಹೋಗಬೇಕೆಂದು ಹೇಳುತ್ತಿದ್ದಾರೆ.

ಶ್ರೀ ಎಂ. ಎಲ್. ನಂಜರಾಜೇ ಅರಸಿನವರು.—ಬೇರೆ ಪಾರ್ಟಿಗೆ ಹೋದರೆ ಕೊನೆಗೆ ಅಲ್ಲಿನ ಪರಿಸ್ಥಿತಿಯನ್ನು ನೋಡಿ ಕಾಂಗ್ರೆಸ್ ಪಾರ್ಟಿಯೇ ಲೇಸೆಂದು ಮತ್ತೆ ಹಿಂದಕ್ಕೆ ಬರಬೇಕಾಗುತ್ತದೆ ಅಷ್ಟೆ. ಏಕೆಂದರೆ ಈಗ ಅವರು ಹೇಳುತ್ತಿರುವುದು ಎತ್ತು ಹಾರುವುದಕ್ಕೆ ಮೊದಲು ಗೋಣಿ ಹಾರಿತು ಎನ್ನುವ ಹಾಗೆ. ಆದ್ದರಿಂದ ನಾವು ನಿಧಾನವಾಗಿ ಅವರಿಗೆ ಹೆಚ್ಚಿಗೆ ತಿಳುವಳಿಕೆಯನ್ನುಂಟುಮಾಡಿ ಕ್ರಮೇಣ ಇವುಗಳನ್ನು ತಂದರೆ ಅನುಕೂಲವಾದೀತು. ಈ ಸಂದರ್ಭದಲ್ಲಿ ಲ್ಯಾಂಡ್ ರೆವಿನ್ಯೂ ಕಮಿಟಿಯವರು ಹೇಳಿರುವ ವಾಕ್ಯಗಳು ಬಹಳ ಗಮನಾರ್ಹವಾಗಿವೆ. ಅಲ್ಲಿ ಹೀಗೆ ಹೇಳಿದೆ :

"In these circumstances, most of us felt inclined to think that legislation might actually make the relationship between landlords and tenants worse than it is now, as it would be impossible to provide by law for all the small points which are covered by local usage or mutual understanding in the several areas. We were also inclined to consider that tenancy legislation may be injurious to the tenant also, as it would inevitably result in a crop of litigation. But the members from the Malnad were able to persuade most of us to the view that while the provisions of the Bombay Tenancy Act of 1948 are too drastic for application to Mysore, a simple Tenancy Act is necessary."

ಈ ಸಭೆಯಲ್ಲಿರುವ ಮಾನ್ಯ ಸದಸ್ಯರನೇಕರು ಅದರಲ್ಲಿದ್ದು ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಇನಾಂ ಬಿಲ್ಲನ್ನು ಮೊದಲು ತಂದಿದ್ದರೆ ಇದರ ಅವಶ್ಯಕತೆಯೇ ಅಷ್ಟಾಗಿ ಇರುತ್ತಿರಲಿಲ್ಲ. ಈಗಲೂ ನಾವು Money Lenders Bill, Live stock Improvement Bill, Cultivation of Fallow Lands Bill ಇತ್ಯಾದಿ ಎಷ್ಟೋ ಬಿಲ್ಲುಗಳನ್ನು ತಂದಿದ್ದರೂ, ಇಂದಿಗೂ ಹಳ್ಳಿಗಳ ಕಡೆ ಹೋಗಿ ನೋಡಿದರೆ ಅಲ್ಲಿ ಯಾರಿಗೂ ಯಾವುದು ಬಂದಿದೆ, ಯಾವುದಿಲ್ಲ ಎಂಬುದೇನೋ ಗೊತ್ತಿಲ್ಲ. ಪುಸ್ತಕಗಳನ್ನು ತೆಗೆದು ನೋಡುವವರೇ ಇಲ್ಲ. ಹೀಗಿರುವಲ್ಲಿ ಸುಮ್ಮನೆ ನಾವಿಲ್ಲಿ ಈ ಮಸೂದೆಗಳನ್ನೆಲ್ಲಾ ಜಾರಿ ಮಾಡಿ ಶಾಸನ ಕಡತಕ್ಕೆ ಸೇರಿಸುವುದರಿಂದೇನು ಪ್ರಯೋಜನ? ಈಗ Land Revenue Reforms ಕಮಿಟಿಯವರು ನಮ್ಮ ದೇಶಕ್ಕೆ Simple Tenancy Act ಇದ್ದರೆ ಸಾಕು ಎಂದು ಹೇಳಿದ್ದಾರೆ. ಆದ್ದರಿಂದ ಸದ್ಯಕ್ಕೇನೂ ಅಷ್ಟಾಗಿ ಅವಶ್ಯಕವಾಗಿಲ್ಲ. ಈಗೇನು ನಮ್ಮಲ್ಲಿ ಪದೇ ಪದೇ ಈ ಸಭೆ ಸೇರುತ್ತಿರುತ್ತದೆ. ಬೇಕಾದರೆ ಇನ್ನೊಂದು ಸಲ ಇಂಥಾ ಕಾನೂನು ತರಬಹುದಾಗಿತ್ತು. ಆದರೂ ಸದ್ಯಕ್ಕೆ ಈ ಬಿಲ್ಲನ್ನು ಅನುಮೋದಿಸುತ್ತೇವೆ.

ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ—ಬಿನ್ನ ಪಂಗಡ).—ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಈ ಟೆನನ್ಸಿ ಬಿಲ್ಲನ್ನು ನಮ್ಮಲ್ಲಿ ಪ್ರಜಾಪ್ರಭುತ್ವ ಸರ್ಕಾರ ಅಧಿಕಾರಕ್ಕೆ ಬಂದಾಗಲೇ ತರಬೇಕಾಗಿತ್ತು. ಈಗಲಾದರೂ ತಂದಿದ್ದಕ್ಕಾಗಿ ಹೆಚ್ಚಿನ ವಂದನೆಗಳನ್ನು ಅವರಿಗೆ ಅರ್ಪಿಸಬೇಕಾಗಿದೆ. ಇಷ್ಟು ದಿವಸಗಳವರೆಗೂ ತಾವು ಮಾಡಿರುವುದನ್ನು ನೋಡುವುದಾದರೆ, ತಾವು ಸಾಮಾನ್ಯವಾಗಿ ಪೌರಪ್ರದೇಶಗಳಲ್ಲಿರುವವರಿಗೆ ಅವರ ಅನುಕೂಲತೆಗಳಿಗಾಗಿ ಹೆಚ್ಚಿಗೆ ಕಾನೂನುಗಳನ್ನು ಮಾಡಿದ್ದೀರೇ ಹೊರತು ಗ್ರಾಮಾಂತರಗಳಲ್ಲಿರುವ ಬಡ ವ್ಯವಸಾಯ ಕೂಲಿಗಾರರಿಗಾಗಿ ಏನೂ ಮಾಡಿಲ್ಲ. ಇವತ್ತಿನ ದಿವಸ ಗೇಣಿದಾರರ ಸಮಸ್ಯೆಯೆನ್ನುವುದು ಬಡವರನ್ನು ಕೊಳ್ಳೆ ಮಾಡತಕ್ಕ ಒಂದು ಪದ್ಧತಿಯಾಗಿದೆ. ಗೇಣಿದಾರನು ಯಾವನಾದರೂ ಜಮೀನ್‌ದಾರನ ಹತ್ತಿರ ಹೋಗಿ ಅವನನ್ನು ಆಶ್ರಯ ಮಾಡಿಕೊಂಡು

(ಶ್ರೀ ಟಿ. ಹನುಮಯ್ಯನವರು)

ಜೀವನ ಹೊರೆಯಬೇಕಾಗಿದೆ. ಅಂಥಾದ್ದರಲ್ಲಿ ಶ್ರೀಮಾನ್ ರಂಗರಾಮಯ್ಯನವರು, ಚೆನ್ನಬಸಪ್ಪನವರು ಮತ್ತು ಶ್ರೀ ನಂಜರಾಜ ಅರಸಿನವರು ನಮ್ಮ ದೇಶದಲ್ಲಿ ಈಗಿನ ಕಾಲದಲ್ಲಿ ಟೆನೆನ್ಸಿ ಬಿಲ್ಲಿನ ಅವಶ್ಯಕತೆಯೇ ಇರಲಿಲ್ಲ, ಏಕೆ ತಂದರೋ ಎಂದು ಹೇಳಿದರು. ಅವರು ದಯವಿಟ್ಟು ಗ್ರಾಮಾಂತರಗಳ ಕಡೆ ಹೋಗಿ ನೋಡಲಿ, ಗ್ರಾಮಗಳಲ್ಲಿ ವ್ಯವಸಾಯ ಕೂಲಿಗಳಿಗೆ ಎಷ್ಟು ಕಷ್ಟಗಳಿವೆಯೆಂದು ಸ್ವಲ್ಪ ಅರಿತುಕೊಳ್ಳಲಿ. ಮಲೆನಾಡಿನಲ್ಲಿ ಮಾತ್ರ ಸ್ವಲ್ಪ ಕಷ್ಟವಿರಬಹುದು, ಮೈದಾನಗಳಲ್ಲಿ ಏನೂ ಇಲ್ಲವೆಂದು ಹೇಳಿದರು. ಮೈದಾನ ಪ್ರದೇಶಗಳಲ್ಲಿ ಜಮಾನ್ದಾರರು ರೈತರುಗಳಿಂದ ಅವರು ಬೆಳೆದದ್ದರಲ್ಲಿ ¾ ಭಾಗವನ್ನೆಲ್ಲಾ ಕಿತ್ತುಕೊಳ್ಳುತ್ತಿರುವುದನ್ನು ಅವರು ನೋಡಿದ್ದಾರೆಯೇ?

ಒಬ್ಬ ಸದಸ್ಯರು.—ಎಲ್ಲಿ ಹಾಗಿದೆ?

ಶ್ರೀ ಟಿ. ಹನುಮಯ್ಯನವರು.—ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ಬಂದು ನೋಡಿ, ಗೊತ್ತಾಗುತ್ತದೆ. ಸುಮ್ಮನೆ ಲಾಯರಿಗಿರಿ ಮಾಡಿಕೊಂಡು ಇಲ್ಲಿ ಮಾತನಾಡುವಂತೆ ಅಲ್ಲ.

ಆದುದರಿಂದ ಮುಖ್ಯವಾಗಿ ಗೇಣೀದಾರರಿಗೆ ತೊಂದರೆ. ಎರಡನೆಯದಾಗಿ, ಜಮೀನ್ದಾರರು ಮೊದಲೇ ಗೇಣೀದಾರರನ್ನು ತಮ್ಮ ಜಮೀನನ್ನು ಸಾಗುಮಾಡುವುದಕ್ಕೆ ಸಿಕ್ಕಿಸಿಕೊಂಡು ನೂರು ಅಥವ ನೂರೈವತ್ತು ರೂಪಾಯಿ ಸಾಲ ಅವರಿಗೆ ಕೊಟ್ಟು, ಕೊಂಚ ದಿವಸವನ್ನು ಕೊಟ್ಟು ಕೊನೆಗೆ ಹತ್ತು ಇಪ್ಪತ್ತು ವರ್ಷವಾದರೂ ಆ ಸಾಲವನ್ನು ತೀರಿಸಲು ಸಾಧ್ಯವಾಗದಂತೆ ಮಾಡಿಬಿಡುತ್ತಾರೆ. ಏಕೆಂದರೆ ರೈತ ತನ್ನ ಮಕ್ಕಳ ಅಥವ ಅಣ್ಣತಮ್ಮಂದಿರ ಮದುವೆಗೋ ಏತಕ್ಕೋ ಆ ಸಾಲಮಾಡಿದ ಹಣವನ್ನು ಖರ್ಚುಮಾಡಿಬಿಡುತ್ತಾನೆ. ಇದರಿಂದ ಹತ್ತು ವರ್ಷವಾದರೂ ಕೂಡ ಜಮೀನ್ದಾರ ಎಷ್ಟು ಬೆಳೆಯನ್ನು ಕೇಳುತ್ತಾನೋ ಅಷ್ಟನ್ನೂ ಕೊಟ್ಟು ಕೊಂಡು ತನಗೆ ಹಣ ಬಂದಾಗ ಅದನ್ನು ವಾಪಸು ಕೊಟ್ಟರೂ ಜಮೀನ್ದಾರ 100 ರೂಪಾಯಿ ಕೊಟ್ಟಿದ್ದರೆ ನೂರೈವತ್ತು ರೂಪಾಯಿ ಕೊಡಬೇಕೆಂದು ಹೇಳಿದರೂ ಅದನ್ನು ಕೊಡಬೇಕಾಗುತ್ತದೆ. ರೈತರಿಗೆ ಲೆಕ್ಕ ಗೊತ್ತಿರುವುದಿಲ್ಲ. ವಿದ್ಯಾವಂತರಾಗಿರುವುದಿಲ್ಲ. ಅದರಿಂದ 150 ಕೊಡಬೇಕೆಂದರೂ ಅವರು ಮಾತನಾಡುವ ಹಾಗಿಲ್ಲ. ಇದನ್ನೆಲ್ಲಾ ನೋಡಿ ಸರ್ಕಾರದವರು ಧೈರ್ಯದಿಂದ ಈ ಕಾನೂನನ್ನು ತಂದಿರುವುದರಿಂದ ಗ್ರಾಮಾಂತರ ಪ್ರದೇಶದ ರೈತರಿಗೆ ಮತ್ತು ವ್ಯವಸಾಯದ ಕೂಲಿಗಾರರಿಗೆ ಸಹಾಯವಾಗುತ್ತದೆಂದು ಈ ಕಾನೂನು ತಂದಿದ್ದಾರೆಂದು ಹೇಳಬೇಕಾಗಿದೆ. ಗೇಣಿದಾರರು ಮೈಸೂರು ದೇಶದಲ್ಲಿ ಕೇವಲ ಸೇಕಡ 7ರಷ್ಟಿದ್ದಾರೆ, ಇಷ್ಟು ಜನರಿಗಾಗಿ ಈ ಕಾನೂನನ್ನು ಏಕೆ ಮಾಡಬೇಕೆಂದು ಶ್ರೀ ಚನ್ನಬಸಪ್ಪನವರು ಕೇಳಿದರು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ನಾನು ಹಾಗೆ ಹೇಳಲಿಲ್ಲ, ದೇಶದಲ್ಲಿರತಕ್ಕ ಪರಿಸ್ಥಿತಿಯನ್ನು ಎಲ್ಲರಿಗೂ ತಿಳಿಸಿದೆ, ಅಷ್ಟೆ.

ಶ್ರೀ ಟಿ. ಹನುಮಯ್ಯನವರು.—ಗೇಣಿದಾರರು ಸೇಕಡ 7ರಷ್ಟಿದ್ದು ಇನ್ನುಳಿದ 93ರಷ್ಟು ಜಮೀನ್ದಾರರಿರುವಾಗ ಅವರೇಕೆ ಭಯಪಡಬೇಕು? ಆದುದರಿಂದ ಮುಖ್ಯವಾಗಿ ಈ ಕಾನೂನಿನಿಂದ ದೊಡ್ಡವರಾಗಿರುವವರಿಗೆ ತೊಂದರೆಯೆಂದು ಹೇಳುವಹಾಗಿಲ್ಲ. ಇನ್ನೊಂದು ಕಾನೂನಿನ ವಿಷಯ ಬಹಳ ದಿನಗಳಿಂದ ನಾನು ಯೋಚನೆಮಾಡುತ್ತಿದ್ದೇನೆ. ದೊಡ್ಡ ದೊಡ್ಡ ಜಮೀನ್ದಾರರು ಐನೂರು, ಸಾವಿರ ಎಕರೆ ಜಮಾನಿಟ್ಟುಕೊಂಡು ತಾವೇ ರೈತರಿಗೆ ಸಾಗುವಳಿಗೆ ಕೊಡುವುದು; ಈಗ ಸರ್ಕಾರದವರು ಒಂದು ಕಾನೂನು ಮಾಡಿದ್ದಾರೆ. ಗೋಮಾಳಕ್ಕಾಗಿ ಒಂದು ಹಳ್ಳಿಯಲ್ಲಿ ನೂರು ರಾಸುಗಳಿದ್ದರೆ 30 ಎಕರೆ ಮೀಸಲಾಗಿಡಬೇಕೆಂದು ಮಾಡಿದ್ದಾರೆ. ಈ ಹೊತ್ತು ಸಂಸ್ಥಾನದಲ್ಲಿ ಬಡವರೂ ಜಮೀನೇ ಇಲ್ಲದ ಜನಗಳೂ ಎಷ್ಟೋ ಜನರಿದ್ದಾರೆ. ಒಬ್ಬ ಮನುಷ್ಯನಿಗೆ ಇಪ್ಪತ್ತು ಮೂವತ್ತು ಎಕರೆಗಿಂತ ಹೆಚ್ಚು ಜಮೀನಿರಬಾರದೆಂದೂ ಇದಕ್ಕಿಂತ ಹೆಚ್ಚಾಗಿರುವುದನ್ನು ಬಡವರಿಗೆ ಕೊಡಬೇಕೆಂದೂ ಸರ್ಕಾರದವರು ಏಕೆ ಕಾನೂನುಮಾಡಬಾರದು? ವ್ಯವಸಾಯ ಕೂಲಿಗಾರರು ಬಂದು ಏನೋ ನಾವು ಜೀವನಮಾಡಿಕೊಳ್ಳುತ್ತೇವೆಂದರೆ, ಇದಕ್ಕೆ ಅವಕಾಶ ಮಾಡಿದರೆ ಇದೂ ಬೇಡವೆಂದು ಹೇಳಿ ಜಮೀನು ಬೇಸಾಯಮಾಡುವವನಿಗೆ ತೊಂದರೆಯಾಗುವ ಕಾನೂನನ್ನೇಮಾಡಿದರೆ ಅಂತಹ ಬಡಜನರ ಗತಿ ಏನು? ಹೀಗಿರುವಾಗ ಎಲ್ಲರೂ ಈ ಕಾನೂನಿಗೆ ಬೆಂಬಲ ಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಈ ಕಾನೂನು ಮಾಡುವುದರಿಂದ ಕೋರ್ಟು ವ್ಯವಹಾರಗಳು ಹೆಚ್ಚಿ ಕೋರ್ಟುಗಳಿಗೆ ಹೆಚ್ಚು ಮೊಖದ್ದಮೆಗಳು ಹೋಗುತ್ತವೆಂದು ಒಬ್ಬರು ಹೇಳಿದರು. ಈ ಹೊತ್ತು ಬೆಳೆದದ್ದರಲ್ಲಿ ಎರಡು ಭಾಗ ಮೂರು ಭಾಗ ಕೊಟ್ಟರೂ ಕೂಡ ಏನಾದರೂ ಭಿನ್ನಾಭಿಪ್ರಾಯ ಬಂದರೆ ಗ್ರಾಮಾಂತರಗಳಲ್ಲೇ ಇತ್ಯರ್ಥವಾಗುತ್ತಿದೆಯೇ ಹೊರತು ಅವರು ಕೋರ್ಟುಗಳಿಗೆ ಬರುವುದಿಲ್ಲ. ವ್ಯವಸಾಯಮಾಡುವ ರೈತರಲ್ಲಿ ಹಣವಿರುವುದಿಲ್ಲ ಕೋರ್ಟುಗಳಿಗೆ ಹೋಗುವುದಕ್ಕೆ. ಆದ್ದರಿಂದ ಖಂಡಿತ ಅವರು ಕೋರ್ಟುಗಳಿಗೆ ಬರುವುದಿಲ್ಲ. ಆದುದರಿಂದ ಈ ಮಸೂದೆಯಿಂದ ಜಮೀನ್ದಾರರಿಗಾಗಲೀ ಗೇಣಿದಾರರಿಗಾಗಲೀ ತೊಂದರೆಯಿಲ್ಲ. ಒಟ್ಟಿನಲ್ಲಿ ರೈತರಿಗೆ ಅನ್ನವನ್ನು ಕೊಡುವಹಾಗೆ ಜಮೀನ್ದಾರರು ಸಹಾನುಭೂತಿಯುಂದಿದ್ದರೆ ಸಾಕೆಂದು ನನ್ನ ಭಾವನೆ.

ಇನ್ನೊಂದು ವಿಷಯ. 12ನೆಯ ಕ್ಲಾಜಿನಲ್ಲಿ ಜಮೀನನ್ನು ಬಿಟ್ಟು ಹೋಗಲು ಒಂದು ಅವಕಾಶವಿರಬೇಕೆಂದು ಮಾಡಿದರೆ ಬಹಳ ಕಷ್ಟವಾಗುತ್ತದೆ. ಜಮೀನ್ದಾರನಲ್ಲಿ ರೈತ 5 ವರ್ಷ ಜಮೀನು ಮಾಡುತ್ತಾನೆ. ಐದು ವರ್ಷವಾದಮೇಲೆ ಕೂಡಲೇ ಬಿಟ್ಟು ಹೋಗೆಂದು ರೈತನಿಗೆ ಜಮೀನ್ದಾರ ಹೇಳಬಹುದು. ಆಗ ಪುನಃ ಅಮಲ್ದಾರರ ಹತ್ತಿರ ಹೋಗಿ extend ಮಾಡಿಕೊಳ್ಳುತ್ತಾನೆ. ಆದರೆ ನಿಜವಾಗಿ ಜಮೀನ್ದಾರನನ್ನು ನಂಬಿ ಜಮೀನನ್ನು ಉತ್ತು ಬಿತ್ತಿ, ಗೊಬ್ಬರ ಹಾಕಿ ಇನ್ನೈದು ವರ್ಷ ಜಮೀನ್ದಾರ ತನಗೇ ಕೊಡಬಹುದೆಂದು ಚೆನ್ನಾಗಿ ಬೇಸಾಯಮಾಡಿ ಐದು ವರ್ಷವಾದ ಕೂಡಲೇ ಇನ್ನೊಬ್ಬ ರೈತ ತಾನುಮಾಡುತ್ತೇನೆಂದು ಬಂದರೆ ಆಗ ಇರುವ ರೈತನನ್ನು ಬಿಟ್ಟು ಹೋಗಬೇಕೆಂದು ಹೇಳಿದರೆ ಅವನ ಗತಿ ಏನು? ಯಾರು ಕೆಲವು ವರ್ಷ ಒಂದು ಕಸಬನ್ನು ಅವಲಂಬಿಸಿಕೊಂಡಿರುತ್ತಾರೋ ಅವರು ಅದನ್ನು ಬಿಟ್ಟು ಹೋಗಬೇಕಾದರೆ ಬಹಳ ಕಷ್ಟ. ಅವನು ಬಿಟ್ಟು ಹೋಗಿ ಬೇರೇನುಮಾಡಬೇಕು ಐದು ವರ್ಷವಾದಮೇಲೆ? ರಸ್ತೆಯಲ್ಲಿ ಮಣ್ಣು ಹೊರಬೇಕಾಗುತ್ತದೆ. ಆದ್ದರಿಂದ ನಿಜವಾಗಿ ನಿಮ್ಮನ್ನು ನಂಬಿಕೊಂಡಿರುವ ರೈತರಿಗೆ ತೊಂದರೆ ಕೊಡುವುದು ನ್ಯಾಯವಲ್ಲ. ಆಮೇಲೆ ರೈತರು 12 ವರ್ಷ ಒಂದು ಜಮೀನನ್ನು ಮಾಡಿದರೆ ಅರ್ಧ ಭಾಗದಷ್ಟು ಜಮೀನನ್ನು ಬಿಟ್ಟುಕೊಡಬೇಕೆಂದು ಇದರಲ್ಲಿ ಮಾಡಿದ್ದಾರೆ. ಇದು ಬಹಳ ಒಳ್ಳೆಯದೆಂದು ನನ್ನ ಭಾವನೆ. ಹೀಗೆಲ್ಲಾ ಇರುವುದರಿಂದ ಈ ಟೆನೆನ್ಸಿ ಬಿಲ್ಲಿನಿಂದ ಯಾವ ತೊಂದರೆಯೂ ಕಷ್ಟವೂ ಯಾರಿಗೂ ಇಲ್ಲವೆಂದು ಹೇಳಬಹುದು.

ಅನೇಕ ಗ್ರಾಮಗಳಲ್ಲಿ, ಅದರಲ್ಲಿಯೂ ಶ್ರೀರಂಗಪಟ್ಟಣ ತಾಲ್ಲೂಕಿನಂತಹ ಕಡೆ ಜಮೀನ್ದಾರರು ರೈತರೊಡನೆ ಏನು ಒಪ್ಪಂದಮಾಡಿಕೊಂಡಿರುತ್ತಾರೋ ಅದರಮೇಲೆ ಜಮೀನ್ದಾರರಿಗೆ ಐನೂರು, ಸಾವಿರ ರೂಪಾಯಿ ಕೊಡಬೇಕಾಗುತ್ತದೆ. ಬರಿಯ ಕಾಣನ್ನು ಕೊಟ್ಟರೆ ಸಾಲದು. ಇಷ್ಟೆಲ್ಲಾ ತೊಂದರೆ ರೈತರಿಗಿವೆ. ಆದುದರಿಂದ ಟೆನೆನ್ಸಿ ಬಿಲ್ಲು ಸ್ವಾಗತಾರ್ಹವಾಗಿದೆ. ಇಂತಹ ಮಸೂದೆಯನ್ನು ಸರ್ಕಾರದವರು ತಂದಿರುವುದರಿಂದ ನಾನು ಇದಕ್ಕೆ ಪೂರ್ಣ ಬೆಂಬಲಕೊಡುತ್ತೇನೆ.

Sri A. BHEEMAPPA NAIK (Chitaldrug District—General).—I want to refer to one or two points, Sir.

Mr. Speaker, I welcome this Bill for more reasons than one. The main object of this Bill is to give security of tenure to the cultivator of the land. At present what is happening is, the cultivator has no security of tenure; hence he cannot improve the land under any circumstance because he does not know when he will be deprived of the right to cultivation of that land. Therefore, Government have introduced certain measures in this Bill by which, if the person has cultivated a land for over 12 years continuously, he shall not in the usual course be deprived of the right of cultivation of that land. This is one important measure which is incorporated here.

A second measure included in this Bill is that if a person continuously for a period of two three years has cultivated a land, after this Bill comes into force, he cannot be easily disturbed for a period of at least five years. Later on, supposing the landlord wants the land back, by giving a written notice, he can get back his land. If the tenant is allowed to hold the land for a period of five years, he will improve the land, he will manure the land, he will keep the land clean because if not this year, at least next year he is sure to get something and he lives in that reasonable hope. On account of uncertain rainfall, he may not get his expected crop this year. But if the period of tenancy is spread over five years, he is sure to feel that within this period he may get all the yield and return he expects and to which he is entitled. And so he will keep the land clean and it is therefore advantageous to both the tenant and the landlord. It is from that point of view I say that it a very good measure.

Another thing Sir, is this. Until now the landlord was not sure of getting his return annually. Now the landlord is sure because if he does not get his lease amount or the *koru* whichever he has to get, under this Bill he need not have recourse to civil court which will involve him in endless litigation. A better remedy and a better relief is available which is beneficial to both the parties. So there is that point also.

The most important point is the interest of the country and the future of the world events. Every man wants to secure his own rights. People have begun to think that this system of capitalism should go. Gandhiji's principle that every man should have some right over the land, is also a thing to be considered and that point has been taken into consideration here and the real tiller of the soil is given some benefit under this Bill. So it is a measure which really gives benefits both to the landlord as well as to the tenant.

Some say: are we to be deprived of our rights, have we not secured that land by the sweat of our brow and all that? What I say to them is: "yes, you have done it, but the others will be responsible for bringing that land into proper condition and getting yield out of it, though staying in your house you get something out of it. You have therefore to pay for it; but they are paying for it by their bullocks or buffaloes, by their wives and children and by their toil." So you must consider that also. You cannot drive them at your will, having allowed them to cultivate for you. After all, they are the persons who till for you, who earn for you and who get some yield from out of the land though you are not capable of doing it. When once you cajole them and give them land, why don't you keep them for a longer tenure? After all, you are not deprived of the right over the land. The Government here are only just making some sort of arrangement for better cultivation. Hitherto there was no law.

(SRI A. BHEEMAPPA NAIK.)

They are just now trying to have some law; it is not just to disturb or create worse effects than what it is to-day. By a measure of this kind they just want to bring about a good feeling between the landlord and the tenant. Of course there are some apprehensions in the minds of some of our friends that this measure, instead of bringing any good results, might bring worse results. Any new law that is framed, might have the same effect and it would be better, instead of there being no tenancy law in the country, there was something. On that account, do you mean to say, shall we say, that there should be no law at all? No law, no civilisation? Therefore, every day new measures ought to come and we have to welcome them. If the measures are such as would infringe on the fundamental rights of every human being, that is a different matter. But here it is just to see that the tenant does give the return on the land and you should also give some rights to him. If you do not allow him a tenancy for sufficiently long period, where is the security for him? That security is provided here. That is all the thing here. We should not go to the last extent and say that no landlord shall have any right over the land nor should we go to the extent of saying that no tenant shall have any right; at least security of tenure for a certain period there should be. Therefore, the measure has been brought forward now. Though it may not reach the stage at which Russia is going on in socialism, it will reach a stage where it will be helpful to grow more and it will be helpful to both the parties. Under these circumstances, we should welcome this Bill.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು (ಕೋಲಾರ ಜಿಲ್ಲೆ) —ಸನ್ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ಮಂಡಿಸಿರತಕ್ಕ ಈ ಗೇಣೀ ಮಸೂದೆಯನ್ನು ನಾನು ಅನುಮೋದಿಸಬೇಕೆ ಅಥವಾ ವಿರೋಧಿಸಬೇಕೆ ಎಂಬುದರ ಬಗ್ಗೆ ನನಗೇ ಪೂರಾ ತಿಕ್ಕಾಟಕ್ಕೆ ಬಂದಿದೆ. ಆದಾಗ್ಯೂ, ನಾನು ನಿರಾಳ ಮನಸ್ಸಿನಿಂದ ಮಾತನಾಡುತ್ತೇನೆ. ಇದರಿಂದ ಮುಖ್ಯವಾಗಿ ಯಾರಿಗೂ ಅಷ್ಟು ಪ್ರಯೋಜನವಾಗುವಂತೆ ಕಾಣುವುದಿಲ್ಲ. ಸಂಸ್ಥಾನಾಮಳೆ ಇರತಕ್ಕ ರೈತರಿಗೆ ನಾನಾರೀತಿಯ ತೊಂದರೆ ಮತ್ತು ಕಿರುಕುಳಗಳು ಇದ್ದೇ ಇರುತ್ತವೆ. ಆದರೆ ನಿಜವಾಗಿಯೂ ಆ ತೊಂದರೆಗಳನ್ನೆಲ್ಲಾ ಈ ಕಾನೂನು ನಿವಾರಣೆಮಾಡಬಲ್ಲದೇ ಎಂಬುದನ್ನು ಆಲೋಚಿಸಿ ನೋಡಿದರೆ ಅಂಥ ಆಶೋತ್ತರಗಳೇನೂ ಕಂಡುಬರುತ್ತಿಲ್ಲ. ಅನೇಕ ರಾಜಕೀಯ ಪಾರ್ಟಿ, ಪಕ್ಷಗಳು ಅದರಲ್ಲೂ ಈ ನಮ್ಮ ಕಾಂಗ್ರೆಸ್ ಪಾರ್ಟಿಯು ಆಡಳಿತಕ್ಕೆ ಬಂದಮೇಲೆ ಈ ರೈತನಿಗಾಗಿಯೇ ಒಂದು Charter of Tenancy Rights ಹೊಸದಾಗಿ ಜಾರಿಗೆ ತರುತ್ತೇವೆಂದು ಹೇಳಿಕೊಳ್ಳುತ್ತಿದ್ದೆವು. ಆದರೆ ಇಂದು ಬೊಂಬಾಯಿ ಇತ್ಯಾದಿ ಪ್ರಾಂತ್ಯಗಳಲ್ಲಿ ರೈತನಿಗೂ ಮತ್ತು ಜಮೀನ್ದಾರನಿಗೂ ಸಂಬಂಧಪಟ್ಟ ಒಂದು ಕಾನೂನನ್ನು ಜಾರಿಗೆತಂದಿದ್ದಾರೆ. ಅದನ್ನೂ ನಮ್ಮ ಮುಂದಿರತಕ್ಕ ಈ ಗೇಣಿ ಕಾನೂನನ್ನೂ ಹೋಲಿಸಿ ನೋಡಿದರೆ, ನಮ್ಮ ಸಂಸ್ಥಾನದಲ್ಲಿ ಜಾರಿಗೆ ತರಬೇಕೆಂದು ರಚಿಸಿರುವ ಕಾನೂನು ಬಗ್ಗೆ ನಾವು ಪೂರ ವ್ಯಸನಪಡಬೇಕಾಗಿದೆ. ಆದರೆ ಈ ಮಸೂದೆಯನ್ನು ಸರ್ಕಾರದವರು ತಂದು ಸಭೆಯಮುಂದೆ ಮಂಡಿಸಿ, ಇದನ್ನು ಪಾಸ್ ಮಾಡಿದಾಗ್ಯೂ, ಅಷ್ಟು ಅನುಕೂಲಗಳಾಗುತ್ತವೆಂದು ಹೇಳುವುದಕ್ಕಾಗುವುದಿಲ್ಲ. ಇದನ್ನು ಆಗಿಂದಾಗ್ಯೆ ಪದೇಪದೇ ಬದಲಾಯಿಸುತ್ತ ಇನ್ನೂ ನಾವು ಬಹಳ ಕಷ್ಟಪಡಬೇಕಾಗಿದೆ. ಆದರೆ ನಮ್ಮ ಅದೃಷ್ಟವಶಾತ್ ಸಂಸ್ಥಾನದ ಯಾವ ಯಾವ ಕಡೆ ಇದು ಇರಬೇಕು, ಇದನ್ನು ಯಾವ ಯಾವ ದಾರಿಯಲ್ಲಿ ಎಷ್ಟೆಷ್ಟರ ಮಟ್ಟಿಗೆ ಅನ್ವಯಿಸಬೇಕು ಎಂಬುದನ್ನೆಲ್ಲಾ ಚೆನ್ನಾಗಿ ಗಮನಿಸಿ ಜಾರಿಗೆ ಕೊಟ್ಟರೆ ಆಗ ಇದು ಸರಿಹೋಗಬಹುದೆಂದು ಕಾಣುತ್ತದೆ. ಈ ಮಸೂದೆಯನ್ನು ಸ್ವಾಗತ ಮಾಡುತ್ತಾ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಮಲೆನಾಡಿನವರ ಪರವಾಗಿ ಒಂದು ಡಿಸೆಂಟಿಂಗ್ ನೋಟನ್ನು ಕೊಟ್ಟಿದ್ದಾರೆ ಅವರು ಬೊಂಬಾಯಿ ಪ್ರಾಂತ್ಯದಲ್ಲಿ ಬೇಸಾಯಗಾರರ ಬಗ್ಗೆ ಎಷ್ಟು ಕ್ರಾಂತಿಕಾರಕ ಬದಲಾವಣೆಗಳಾಗಿರುತ್ತವೋ ಅಷ್ಟೇ ಕ್ರಾಂತಿಕಾರಕ ಬದಲಾವಣೆಗಳು ಇಲ್ಲಿಯೂ ಆಗಲೇಬೇಕೆಂದು ಹೇಳಿದ್ದಾರೆ. ಆದರೆ ಇದರ ಬಗ್ಗೆ ಮಲೆನಾಡಿನ ಪ್ರಾಂತ್ಯದ ಪ್ರತಿಯೊಬ್ಬ ಪ್ರತಿನಿಧಿಗಳ ಅಭಿಪ್ರಾಯವೇನಿರುತ್ತೆಂಬುದನ್ನು ಇದರಲ್ಲಿ ಸೂಚಿಸಿಲ್ಲ. ಅವರ ಪ್ರತಿಯೊಂದು ಅಂಶಗಳನ್ನೂ ಇದರಲ್ಲಿ ಅಡಕ ಮಾಡಿಲ್ಲ. ಎಲ್ಲೋ ಒಂದೆರಡು ವಿಚಾರಗಳನ್ನು ಮಾತ್ರ ಸೇರಿಸಿದ್ದಾರೆ. ಆ ಅಂಶಗಳನ್ನೆಲ್ಲಾ ಈ ನೋಟಿನಲ್ಲೇ ಅಡಕಮಾಡಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ಬಹಳ ಕಾಲದವರೆಗೂ ಈ ಟೆನೆಂಟ್‌ಗಳಿಗೆ ಒಂದು ಸೆಕ್ಯೂರಿಟಿಯನ್ನು ಕೊಟ್ಟರೆ ಮಾತ್ರ ಅವರು ಕಷ್ಟಪಟ್ಟು ಜಮೀನಿಗೆ ಗೊಬ್ಬರ ಇತ್ಯಾದಿಗಳನ್ನು ಚೆನ್ನಾಗಿ ಹಾಕಿ, ಮುತುವರ್ಜಿಯಿಂದ ಬೇಸಾಯ ಮಾಡಿದರೆ, ಆಗಲೇ ಸಾಗುವಳಿದಾರನಿಗೂ ಮತ್ತು ಜಮೀನ್ದಾರನಾದವನಿಗೂ ಹೆಚ್ಚು ಬೆಳೆ ಬರುವುದಕ್ಕೆ ಒಂದು ಅವಕಾಶವಾಗಿ ಈಗಿನ ಆಹಾರ ಉತ್ಕಟ ಪರಿಸ್ಥಿತಿಯು ನಿವಾರಣೆಯಾಗಲು ಮಾರ್ಗವಾಗುತ್ತದೆ. ಹೀಗೆ ಮಾಡಿದರೆ ಉಭಯತ್ರರಿಗೂ ಒಳ್ಳೆಯ ಫಾಯಿದೆ ಆಗುತ್ತೆ. ಈ ಕಾರಣಧಿಂದ 5 ವರ್ಷಗಳ ಅವಧಿಗಿಂತಲೂ ಈ ಟೆನೆನ್ಸಿ ಅವಧಿಯನ್ನು 10 ವರ್ಷಗಳಿಗೆ ಹೆಚ್ಚಿಸಿದ್ದರೆ ಜಮೀನು ಆಬಾದಿಗೆ ಬರುವುದಕ್ಕೂ ಮತ್ತು ಹೆಚ್ಚು ಬೆಳೆ ಬೆಳೆಯುವುದಕ್ಕೂ ಅನುಕೂಲವಾಗುತ್ತಿತ್ತು. ಈ ಕಾನೂನು ಮಾಡುವುದಕ್ಕೆ ಪೂರ್ವಭಾವಿಯಾಗಿ ಅನೇಕಕಡೆ ಸಂಸ್ಥಾನದಲ್ಲಿ, ಅನೇಕ ಜೋಡೀ ಗ್ರಾಮಗಳಲ್ಲಿ ರೈತನು ಮತ್ತು ಸಾಗುವಳೀದಾರನೂ ಒಂದೇ ಸಮನಾಗಿ 10—20 ವರ್ಷಗಳ ತನಕ ಹೊಂದಾವಣಿಕೆಯಿಂದ, ಖಾಯಂ ಟೆನೆಂಟ್

ಗಳಾಗಿ ಅಥವಾ ಕ್ಯಾಸಿ ಖಾಯಂ ಟೆನೆಂಟ್ಸ್‌ಗಳಾಗಿ ಒಬ್ಬೊರಿಗೊಬ್ಬರು ಉದಾರ ಮನಸ್ಸಿನಿಂದ ನಡೆದುಕೊಂಡು ಬಂದಿರುತ್ತಾರೆ. ಅಂಥ ಸನ್ನಿವೇಶಗಳಿದ್ದಾಗ ತಾವು ಈಗ ವಿಧಾಯಕಮಾಡಿರತಕ್ಕ ಈ 5 ವರ್ಷಗಳ ಅವಧಿಯಿಂದ ಏನೂ ಪ್ರಯೋಜನವಾಗುವುದಿಲ್ಲ. ಇದರಿಂದ ಈ ರೈತರಿಗಾಗಿ ಆಗುವ ಪ್ರಯೋಜನವೇನು ಎಂಬ ಅಂಶವನ್ನು ತಾವು ಆಲೋಚನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಗೇಣಿ ಪ್ರಮಾಣವನ್ನು ನಿರ್ಧರಮಾಡುವುದರ ಬಗ್ಗೆ ಜಮೀನಿನ ಉತ್ಪತ್ತಿಯಲ್ಲಿ ಅರ್ಧಕ್ಕೆ ಹೆಚ್ಚಾಗಿರಕೂಡದೆಂದು ಹೇಳಿದ್ದಾರೆ. ಕೆಲವು ಕಡೆ ಈ ಕಾನೂನಿನಲ್ಲಿ ರೈತರಿಗೆ ಒಂದು ಕಡೆ ಕೊಟ್ಟಿರತಕ್ಕ ಅನುಕೂಲಗಳನ್ನು ಇನ್ನೊಂದು ಕಡೆ ಕಿತ್ತುಕೊಂಡಿದ್ದಾರೆ. ಹೀಗೆ ಒಂದು ಕೈಲಿ ಕೊಟ್ಟು ಇನ್ನೊಂದು ಕೈಲಿ ಕಿತ್ತುಕೊಂಡ ಹಾಗೆ ಕಾನೂನು ಮಾಡಿದ್ದೀರಿ. ಸಂಸ್ಥಾನದ ಒಂದೊಂದು ಭಾಗದಲ್ಲಿ ಒಂದು ವಿಧವಾದ ಗೇಣಿ ಪ್ರಮಾಣ ಜಾರೀಲಿದೆ. ಬೈಲು ಸೀಮೆಯಲ್ಲಂತೂ ಅರ್ಧಕ್ಕೆ ಜಾಸ್ತಿ ಇರತಕ್ಕ ನಿದರ್ಶನಗಳು ಎಲ್ಲಿಯೂ ಇಲ್ಲ. ಜಮೀನುಗಳೂ ಸಹ ಒಂದೇ ಸಮನಾದ ಉತ್ಪತ್ತಿ ಕೊಡಲಾರವು. ಆ ಕಾರಣದಿಂದ ಕಲವು ಕಡೆ ರೈತರು ಬೆಳೆದ ಬೆಳೆಯಲ್ಲಿ ಮೂರರಲ್ಲೊಂದು ಪಾಲನ್ನೂ ಮತ್ತೆ ಕೆಲವು ಕಡೆ ನಾಲ್ಕರಲ್ಲೊಂದು ಪಾಲನ್ನೂ ಎಲ್ಲೋ ಕೆಲವು ಕಡೆ ಅರ್ಧ ಪಾಲನ್ನೂ ಗೇಣಿರೂಪದಲ್ಲಿ ಕೊಡುತ್ತಿದ್ದಾರೆ. ಅಂತಮೇಲೆ ಈ ಸಂಬಂಧವಾಗಿ ಅರ್ಧಕ್ಕೆ ಜಾಸ್ತಿಯಂತೂ ಕೊಡಬಾರದೆಂದು ವಿಧಾಯಕಮಾಡಿರುತ್ತಾರೆ, ಇಂಥಾ ವಿಧಾಯಕದಿಂದೇನು ಪ್ರಯೋಜನವಾಯಿತು ! ರೈತನು ಹೆಚ್ಚು ಕಷ್ಟಪಟ್ಟರೆ ಹೆಚ್ಚು ಬೆಳೆಯಾಗುತ್ತೆ, ಇಲ್ಲದಿದ್ದರೆ ಇಲ್ಲ. ಆದರೆ ಶ್ರೀಮಾನ್ ಮಂಜಪ್ಪನವರು ಮೂರನೆ ಒಂದು ಭಾಗ ಗೇಣಿಕೊಡಬೇಕೆಂದು ಹೇಳಿದ್ದಾರೆ. ಇದನ್ನು ಒಪ್ಪಿಕೊಳ್ಳಬಹುದು. ಏತಕ್ಕೆಂದರೆ ಬೊಂಬಾಯಿನಲ್ಲಿ ನಾಲ್ಕನೆ-ಒಂದು ಭಾಗ ಕೊಡುತ್ತಿದ್ದಾರೆ. ಹೀಗೆ ಇದರಲ್ಲಿ-ಒಂದು ಕ್ಲುಪ್ತಮಾಡಿ, ಗೇಣಿ ಅವಧಿಯನ್ನು 10 ವರ್ಷಕ್ಕೆ ಹೆಚ್ಚಿಸಿದರೆ ಅನುಕೂಲವಾಗುತ್ತೆಂದು ಹೇಳುತ್ತೇನೆ. ಹೀಗೆಮಾಡದೆ 5 ವರ್ಷಗಳು ಅಥವಾ ಅದಕ್ಕೆ ಮುಂಚೆ ಜಮೀನನ್ನು ಕಿತ್ತುಕೊಳ್ಳುವಂತೆಮಾಡಿದರೆ ಜಮೀನು ಆಬಾದಿಗೆ ಬರಲಾರದು. ಹೆಚ್ಚು ಬೆಳೆ ಬೆಳೆಯುವುದಕ್ಕೂ ಕೂಡ ಸಾಧ್ಯವಾಗಲಾರದು. ಸಾಮಾನ್ಯವಾಗಿ ಬರವಣಿಗೆಯಲ್ಲಿ ಒಪ್ಪಂದಮಾಡಿಕೊಂಡು ಕೆಲಸಮಾಡಬೇಕು ಎಂದು ಹೇಳುವುದು ರೈತರಿಗೆ ಬಹಳ ಕಷ್ಟದ ಕೆಲಸ. ಇದುವರೆಗೆ ಕಟ್ಟಡ ಕಟ್ಟಿದ್ದರೆ ಅಥವಾ ಅಭಿವೃದ್ಧಿಮಾಡಿದ್ದರೆ ಅಂಥಾದ್ದೂ ಬೇಕಾಗಿಲ್ಲ, ಇನ್ನು ಮುಂದೆ ಮಾಡುವ ಅಭಿವೃದ್ಧಿ ಅನುಮತಿಪಡೆದು ಮಾಡಬೇಕು ಎಂದು ಹೇಳಿರುವುದು ಬೇಕಾಗಿರಲಿಲ್ಲ. ಏಕೆಂದರೆ ಸಾಮಾನ್ಯವಾಗಿ ' ಅಭಿವೃದ್ಧಿಮಾಡಿದ್ದರೆ ಅದಕ್ಕೆ ಅದರ ಹಕನ್ನೂ ಕೊಡಲೇಬೇಕಾಗುತ್ತದೆ. ಕಾನೂನು ಪ್ರಕಾರ ಹಕ್ಕಿರುವಾಗ ಅನುಮತಿ ಪಡೆದು ಮಾಡಬೇಕು, ಪಡೆಯದಿದ್ದರೆ ಪ್ರತಿಫಲಕೊಡಬೇಕಾಗಿಲ್ಲ ಎಂದು ಹೇಳಿರುವುದನ್ನು ನೋಡಿದರೆ ರೈತರ ಹಿತದೃಷ್ಟಿಯಿಂದ ಯಾವ ಪ್ರಯೋಜನವೂ ಇಲ್ಲ, ರೈತರ ಹಿತದೃಷ್ಟಿಯಿಂದ ಮಸೂದೆ ಮಾಡಿಲ್ಲ ಎಂದು ಹೇಳಬಹುದು. ಏನೇ ಆಗಲಿ ಈಗ ಮಾಡಿರುವ ಈ ಕಾನೂನು ಜಾಸ್ತಿ ದಿನಗಳಿರದೆ ಜಾಗ್ರತೆಹೋಗಿ ಇದಕ್ಕಿಂತ ಕ್ರಾಂತಿಕಾರಕವಾದ ಬದಲಾವಣೆಯಾಗುತ್ತದೆಂದು ಭರವಸೆಯಿಟ್ಟು ಈ ಮಸೂದೆಯನ್ನು ಸ್ವಾಗತಿಸುತ್ತೇನೆ.

* ಮಾನ್ಯ ಶ್ರೀ ಎಚ್. ಸಿದ್ದಯ್ಯನವರು (ರೆವಿನ್ಯೂ ಮತ್ತು ಎಕ್ಸೈಜು ಸಚಿವರು)—ಸ್ವಾಮಿ, ಈಗ ಸರ್ಕಾರದವರು ಇಷ್ಟುಕಾಲ ಈ ಮಸೂದಾ ಕಾನೂನನ್ನು ಈ ಸಭೆಯ ಮುಂದೆ ಮಂಡಿಸದೆ ಇರತಕ್ಕಂಥಾದ್ದೂ ಅಕ್ಷಮ್ಯವಾದದ್ದು ಎಂಬ ಅರ್ಥದಲ್ಲಿ ಮೊನ್ನೆ ಶ್ರೀ ಶ್ರೀಕಂಠೇಶ್ವರ್‌ರವರು ಕೆಲವು ವಿಚಾರ ತಿಳಿಸಿದರು. ಆದರೆ ಅವರು ಇಷ್ಟು ತಿಳಿಯಬೇಕು. 1948ನೆಯ ಇಸವಿ ಆಗಸ್ಟ್ ತಿಂಗಳಿನಲ್ಲಿ ಭೂಕಂದಾಯ ಸುಧಾರಣಾ ಸಮಿತಿ ನೇಮಕವಾದುದು ಎಂಬುದನ್ನು ಅವರು ಜ್ಞಾಪಕಮಾಡಿಕೊಳ್ಳಬೇಕು. ಅಂದಿನಿಂದ ಆ ಸಮಿತಿಯವರು ಹಲವಾರು ಅಂಶಗಳನ್ನು ಈ ಜಮೀನು ಕಂದಾಯ ಪದ್ಧತಿಯ ವಿಚಾರದಲ್ಲಿ ಪರಿಶೀಲಿಸಿ, ಭೂ ಸುಧಾರಣೆ ಯಾವ ರೀತಿ ಮಾಡಿದರೆ ಸರಿಹೋಗುತ್ತದೆ, ನಮ್ಮ ದೇಶದಲ್ಲಿರುವ ವಿದ್ಯಮಾನವೇನು ಎಂಬುದನ್ನೆಲ್ಲಾ ವಿಚಾರಮಾಡಿ ಚರ್ಚಿಸಿ ಒಂದು ತೀರ್ಮಾನಕ್ಕೆ ಬಂದರು. ಅವರು ವರದಿ ಒಪ್ಪಿಸಿದ್ದರೆ ಅದು ಸಾಕಾಗಿತ್ತು. ಆದರೆ ಸರ್ಕಾರದವರೇ ಅವರಿಂದ ವರದಿ ತರಿಸಿಕೊಂಡು ಅದು ಬಂದ ತಕ್ಷಣ ಈ ಕಾನೂನನ್ನು ರಚಿಸಿ ಈಗ ಮಾನ್ಯ ಸದಸ್ಯರಮುಂದೆ ಮಂಡಿಸಿದ್ದಾರೆ ಎಂಬುದನ್ನು ಅವರು ಪ್ರಾರಂಭದಲ್ಲೇ ತಿಳಿಯಬೇಕು. ಆದ್ದರಿಂದ ಪ್ರಾರಂಭದಿಂದಲೂ ಈ ಕಾನೂನು ವಿಚಾರದಲ್ಲಿ ಸರ್ಕಾರದವರು ವಿಶೇಷ ಬಗೆಯ ಕುತೂಹಲವುಳ್ಳವರಾಗಿದ್ದರು ಎಂಬುದು ಸಭಿಕರಿಗೆ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

ಅನಂತರ ಶ್ರೀ ಶ್ರೀಕಂಠೇಶ್ವರ್‌ರವರು ಒಂದು ಮಾತನ್ನಾಡಿದರು. ನನಗೆ ಅದು ಈಗಲೂ ಅರ್ಥವಾಗಿಲ್ಲ. ಒಟ್ಟಿನಲ್ಲಿ ಈ ಮಸೂದಾ ಕಾನೂನು ಒಳ್ಳೆಯ ಅಭಿಪ್ರಾಯದಿಂದ ಕೂಡಿದೆ, ಸದುದ್ದೇಶದಿಂದ ಕೂಡಿದೆ, ಆದರೆ ಹಾನಿ ಅಪಾರ ಎಂದು ಹೇಳಿದರು. ಯಾವ್ಯಾವ ಕ್ಲಾಜುಗಳಿಂದ ಹಾನಿ ಅಪಾರ ಎಂಬುದನ್ನು ಸ್ಪಷ್ಟವಾಗಿ ತಿಳಿಸಿ ಎಂದು ನಾನು ಅವರನ್ನು ಕೇಳಿದಾಗ ಒಂದೆರಡು ಕ್ಲಾಜುಗಳನ್ನು ಮಾತ್ರ ಅವರು ಹೇಳಿದರು. ಅದರಲ್ಲೂ ಮುಖ್ಯವಾಗಿ 5, 6 ನೆಯ ಕ್ಲಾಜುಗಳನ್ನು ತಿಳಿಸಿದ್ದಾರೆ. 5ನೆಯ ಕ್ಲಾಜಿನಲ್ಲಿರುವುದನ್ನು ಅವರು ಸ್ಪಷ್ಟವಾಗಿ ಓದಿ ಅರ್ಥ ಯಾವ ರೀತಿಯಿರಬೇಕೋ ಆ ರೀತಿ ಮಾಡಿಕೊಳ್ಳದೆ ತಿಳಿಸಿದ್ದಾರೆಂದು ನನ್ನ ಮನಸ್ಸಿಗೆ ಅನಿಸುತ್ತದೆ. ಇನ್ನು ಕೆಲವರು 5 ವರ್ಷ ಟೆನೆನ್ಸಿ ಇರುವುದು ಸಾಲದು, ಬೊಂಬಾಯಿ ಮತ್ತು ಇತರ ಪ್ರಾಂತಗಳಲ್ಲಿ ಹತ್ತು ವರ್ಷ ಇದೆ, ಆ ರೀತಿ ಅವಧಿ ಹೆಚ್ಚಿಸುವುದು ಸೂಕ್ತ, ಗೇಣೀದಾರರ ಹಿತದೃಷ್ಟಿಯಿಂದ ಅವಶ್ಯಕ ಇತ್ಯಾದಿ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಕ್ಲಾಜು 5ರಲ್ಲಿ ಮೊದಲನೆಯ ವಾಕ್ಯದಲ್ಲಿ not less than 5 years ಎಂದು ಹೇಳಿದೆ. It may be exceeding 5 years time and go up to 10 years ಎಂದು ಅರ್ಥಮಾಡಿಕೊಳ್ಳುವುದಕ್ಕೆ ಅದರಲ್ಲಿ ಅವಕಾಶವಿದೆ ಎನ್ನುವಾಗ ಅಷ್ಟೊಂದು ಸಂಕುಚಿತಭಾವನೆಯಿಂದ ಈ ಕ್ಲಾಜನ್ನು ತಯಾರಿಸಿದ್ದಾರೆ ಎಂಬುದಕ್ಕೆ ಆಧಾರವಿಲ್ಲ ಮತ್ತು ಇದೇ ಕ್ಲಾಜಿನ ಮೇಲೆ ಅವರು ಅಭಿಪ್ರಾಯ ವ್ಯಕ್ತಪಡಿಸುತ್ತಾ 'with the consent of the landlord' ಎಂದು ಹೇಳಿರುವುದರಿಂದ ಗೊತ್ತುಮಾಡಿಕೊಂಡಿರುವ ಅವಧಿಯ ಮಧ್ಯದಲ್ಲಿ ಬಿಟ್ಟುಹೋಗಬೇಕೆಂದು ಟೆನೆಂಟ್ ಇಷ್ಟಪಟ್ಟರೆ ತೊಂದರೆ ಎಂದು ಒಂದು ರೀತಿ ಅರ್ಥಮಾಡಿ ಸಭೆಯ ಮುಂದೆ ಹೇಳಿದ್ದಾರೆ. ಆದರೆ ಅದು ಸರಿಯಲ್ಲ ಎಂಬುದು ನನ್ನ ಅಭಿಪ್ರಾಯ. ಟೆನೆಂಟ್ ಹಿತದೃಷ್ಟಿಯಿಂದ ಇದನ್ನು ರಚಿಸಿದೆಯೇ ಹೊರತು

(ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.)

ಜಮೀನ್ದಾರನ ಹಿತದೃಷ್ಟಿಯಿಂದ ಅಲ್ಲ ಎಂದು ನಾನು ಸ್ಪಷ್ಟಪಡಿಸಬೇಕಾಗಿದೆ. ಐದು ವರ್ಷಗಳೊಳಗಾದರೆ ಜಮೀನ್ದಾರನ ಅನುಮತಿಪಡೆಯಬೇಕು. "Whatever may be the period of lease, it is not less than 5 years. If it is to expire it must be with the consent of the landlord. In other words a modified agreement between the tenant and the landlord is obvious. ಆದ್ದರಿಂದ ಕನ್‌ಫ್ಯೂಸ್‌ಮಾಡಿಕೊಂಡು ಅರ್ಥಮಾಡಿಕೊಳ್ಳುವುದಕ್ಕೆ ಅವಕಾಶವಿಲ್ಲ. ಇದೂ ಕೂಡ ಟೆನೆಂಟ್ ಹಿತದೃಷ್ಟಿಯಿಂದ ಮಾಡಿದೆ ಎಂದು ಸ್ಪಷ್ಟವಾಗಿ ಅರ್ಥವಾಗುತ್ತದೆ ಎಂಬುದನ್ನು ನಾನು ಅವರಿಗೆ ತಿಳಿಸಬೇಕಾಗಿದೆ. The rent payable shall not exceed half the crop ಎಂದು ಹೇಳುವುದು ಹೆಚ್ಚಾಯಿತೆಂದು ಹೇಳಿದರು ¼ ಭಾಗ, 1/3 ಭಾಗ ಈ ರೀತಿ ಕೆಲವು ಕಡೆ ಇರುವುದರಿಂದ ಈ ನಿಯಮವನ್ನು ಮಾಡಿದೆ, ಈ ರೀತಿಯಾಗಿ ಕಾನೂನನ್ನು ರಚಿಸುವುದು ಅವಶ್ಯಕ, ಗೇಣೀದಾರರ ಹಿತದೃಷ್ಟಿಯಿಂದ ಅತ್ಯಾವಶ್ಯಕವಾಗಿ ಮಾಡಬೇಕಾದ್ದು ಎಂಬ ಅಭಿಪ್ರಾಯವಿತ್ತು. Not exceeding one-half ಎಂದರೆ it may be 1/3 or ¼ or something less than one-half. It does not mean exactly half. Besides, sub-clause 2 says, the Amildar may fix a lower rate. ಹಾಗಿರುವುದರಿಂದ 1/3 ಅಥವಾ ¼ ಭಾಗ ಎಂದು ಬೇಕಾದರೆ ಮಾಡಲು ಅವಕಾಶವಿದೆ. ಆದ್ದರಿಂದ ಈ ವಿಚಾರದಲ್ಲಿ ಅಷ್ಟು ಗಾಬರಿಪಡುವುದಕ್ಕೆ ಅವಕಾಶವಿಲ್ಲ ಎಂದು ಹೇಳಿದರೆ ಸಾಕಾಗಿದೆ.

ಶ್ರೀ ಬಿ. ಹುಚ್ಚೇಗೌಡರು.—ಅಮಲ್ದಾರರು ಕಡಮೆ ಮಾಡುವುದಕ್ಕೆ ಆಧಾರವೇನು?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—"The Governmet may by notification" ಎಂದು ಹೇಳಿದೆ. ಆ ಮೇಲೆ ಕ್ಲಾಜು 7 ಟೆನೆಂಟ್ಸ್ ಹಿತದೃಷ್ಟಿಯಿಂದ ಮಾಡಿಲ್ಲ ಎಂದು ಅಭಿಪ್ರಾಯಪಡುವುದು ಸಾಧುವಲ್ಲ, ಅದಕ್ಕೆ ಆಧಾರವಿಲ್ಲ. To safeguard the interests of the tenants, for instance to prevent arbitrary eviction of the tenant ಈ ಕ್ಲಾಜು ಅವಶ್ಯಕವಾಗಿದೆ. ಈ ರೀತಿಯಾಗಿ ಇನ್ನೂ ಅನೇಕ ಕ್ಲಾಜುಗಳಲ್ಲಿ ಟೆನೆಂಟ್ಸ್‌ಗೆ ಅನುಕೂಲವಾಗುವಂತೆ ಇಲ್ಲಿ ಕೆಲವು ಪರಿಹಾರಗಳನ್ನು ಒದಗಿಸಿದೆ.

ಆಮೇಲೆ ಜಮೀನ್ದಾರರಿಗಿರುವ ಕೆಲವು ಸ್ವಾಭಾವಿಕವಾದ ಹಕ್ಕುಗಳನ್ನು ತೆಗೆದುಹಾಕಿದೆ. ಹೀಗಿರುವಾಗ ಒಂದೇ ದೃಷ್ಟಿಯಿಂದ ಹಿಡುವಳಿದಾರರ ಪರವಾಗಿ ಇದನ್ನು ರಚಿಸಿದ್ದಾರೆಂದು ಹೇಳುವುದಕ್ಕೆ ಆಧಾರವಿಲ್ಲ ಎಂದು ಒಂದೇ ಮಾತಿನಲ್ಲಿ ಹೇಳಿದರೆ ಸಾಕಾಗಿದೆ.

ಗೇಣೀದಾರರಿಗೂ ಮತ್ತು ಹಿಡುವಳಿದಾರರಿಗೂ ಇರುವ ಸೌಹಾರ್ದಕ್ಕೆ ಭಂಗಬರುತ್ತದೆಂದು ಹೇಳಿದರು. ಆದರೆ ಅವರಿಗೆ ಮಧುರ ಬಾಂಧವ್ಯವನ್ನುಂಟುಮಾಡುವುದಕ್ಕಾಗಿ ಇಡೀ ದೇಶದ ರೈತರ ಹಿತದೃಷ್ಟಿಯಿಂದ ಈ ಕಾನೂನು ರಚಿತವಾಗಿರುವುದರಿಂದ ಹಾಗೆ ಹೇಳುವುದಕ್ಕೆ ಆಧಾರವಿಲ್ಲ. ಆ ರೀತಿ ಮಧುರ ಬಾಂಧವ್ಯವನ್ನುಂಟುಮಾಡಲು ಈ ರೀತಿ ಅನೇಕ ಕ್ಲಾಜುಗಳನ್ನು ಅಲ್ಲಲ್ಲಿ ಸೇರಿಸಿದೆ ಎಂಬುದು ತಮಗೆ ಈಗಾಗಲೇ ಮನವರಿಕೆಯಾಗಿರುವುದರಿಂದ ಮತ್ತು ವೇಳೆಯಾಗಿರುವುದರಿಂದ ಹೆಚ್ಚಾಗಿ ನಾನು ಪ್ರತಿಯೊಂದನ್ನೂ ಇಲ್ಲಿ ತಿಳಿಸುವುದರಿಂದ ಉಪಯೋಗವಾಗುವುದಿಲ್ಲ. ಕಾರಣ ಶ್ರೀ ಶ್ರೀಕಂಠೇಶ್ವರ್‌ರವರು ತೋರಿಸಿರುವ ಮೂರು ನಾಲ್ಕು ಕ್ಲಾಜುಗಳಿಗೆ ಸಂಬಂಧಪಟ್ಟ ಹಾಗೆ ತಿದ್ದುಪಡಿ ಕಳುಹಿಸಿದ್ದಾರೆ. ಅದು ಬಂದ ಸಂದರ್ಭದಲ್ಲಿ ಅದಕ್ಕೆ ಉತ್ತರ ರೂಪವಾಗಿ ಅವರಿಗೆ ತೃಪ್ತಿಯಾಗುವ ರೀತಿಯಲ್ಲಿ ನಾವು ಸಮಾಧಾನ ಕೊಡಬಲ್ಲೆ ಎಂದು ತಾತ್ಕಾಲಿಕವಾಗಿ ಹೇಳಿದರೆ ಸಾಕಾಗಿದೆ.

ಶ್ರೀ ಹುಚ್ಚೇಗೌಡರು ಬಹಳ ಸೊಗಸಾಗಿ ಓದಿದ್ದಾರೆ. ಒಟ್ಟಿನಲ್ಲಿ ಇದು ತೃಪ್ತಿಕರವಾಗಿದೆ, ಸಮಾಧಾನಕರವಾಗಿದೆ ಎಂದು ಅವರು ಹೇಳುತ್ತಾರೆ. ಆದರೆ ರೈತರಿಗೆ ಅಷ್ಟೊಂದು ಹಿತಕರವಾಗಿಲ್ಲ, ಸಾಧಕವಾಗಿಲ್ಲ ಎಂದು ಹೇಳುವಾಗ ಆಧಾರ ಯಾವ ಕ್ಲಾಜಿನ ಪ್ರಕಾರ ಎಂದರೆ ಡ್ವೆಲಿಂಗ್ ಹೌಸಸ್ ಎಂದು ಹೇಳಿ ನಿಲ್ಲಿಸಿದರು.

ಇದಕ್ಕೆ ಒಂದು ತಿದ್ದುಪಡಿಯಿರುವುದರಿಂದ ಅದು ಬಂದಂಥಾ ಸಂದರ್ಭದಲ್ಲಿ ಇದಕ್ಕೆ ವಿವರಣೆ ಕೊಟ್ಟರೆ ಅವರಿಗೆ ಸಮಾಧಾನವಾಗುತ್ತದೆಯೆಂದು ಅನ್ನಿಸುತ್ತದೆ.

ಇನ್ನು ಇದರಲ್ಲಿ ಮುಖ್ಯವಾದ ಕ್ಲಾಜುಗಳು ಎಂದರೆ (5), (6), (12), (13) ರಿಂದ (20), (22), (26) ಮತ್ತು (42). ಶ್ರೀ ಶ್ರೀಕಂಠೇಶ್ವರ್‌ರವರು (42)ನೇ ಕ್ಲಾಸನ್ನು ಬಲವಾಗಿ ಹಿಡಿದುಕೊಂಡು ಹಿಡುವಳಿದಾರರಿಗೆ ಅನುಕೂಲ ಪಡಿಸತಕ್ಕ ರೀತಿಯಲ್ಲಿ ಕಾನೂನು ರಚನೆಮಾಡಿದ್ದೀರಿ ಎಂಬುದಾಗಿ ತಿಳಿಸಿದರು. ಅದು ನಿರಾಧಾರವಾದದ್ದು. ಕಾರಣ ಇಷ್ಟು ಮಾತ್ರ ಹೇಳಬಲ್ಲೆ. ಏಕೆಂದರೆ ಅವರು ಹೇಳುತ್ತಾ, ಇರತಕ್ಕ Offences compoundable ಎಂದು ಹೇಳಿ ಕ್ಲಾಸ್ (2)ರಲ್ಲಿ ಮಾಡಿದ್ದಾರೆ. ಪೀನಲ್ ಕೋಡ ನೋಡಿ, ಇನ್ನು ಕೆಲವು ಆಕ್ಟ್‌ಗಳನ್ನು ನೋಡಿ, ಇದಕ್ಕಿಂತಲೂ ದೊಡ್ಡ ದೊಡ್ಡ ಅಪರಾಧಗಳನ್ನು compoundable ಆಗಿ ಕಾನೂನುಗಳಲ್ಲಿ ರಚನೆ ಮಾಡಿರುವುದು ಜಾರಿಯಲ್ಲಿದೆ. ಹಾಗಿರುವಾಗ ಅಂಥ ಮಹತ್ತರವಾದ ದೊಡ್ಡ ಅಪರಾಧಗಳು ಯಾವುದೂ ಕಂಡುಬರುವುದಿಲ್ಲ. ಪ್ರತಿಯೊಬ್ಬ ಮಾನ್ಯ ಸದಸ್ಯರೂ ತಿಳಿಸಿದ ಹಾಗೆ ಹಿಡುವಳಿದಾರರಿಗೆ ಹೆಚ್ಚಿನ ಶಿಕ್ಷೆ ವಿಧಿಸಿದೆಯೇ ಹೊರತು ಗೇಣಿದಾರರರಿಗೆ ಅಲ್ಲ ಎನ್ನುವಾಗ ಯಾರ ಹಿತರಕ್ಷಣೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಕಾನೂನು ರಚನೆ ಮಾಡಿದೆ ಎಂಬುದನ್ನು ತಾವು ಅರ್ಥಮಾಡಿಕೊಂಡಿಲ್ಲ ಎಂದು ಹೇಳಬೇಕಾಗಿದೆ.

ಸೆಕ್ಷನ್ (26)ರಲ್ಲಿ written receipt, written notice ಮೇಲೆ ಕೊಡತಕ್ಕದ್ದು ಯಾವ ನ್ಯಾಯ ಎಂದು ಕೇಳಿದರು. ಕೇಸು ಹಾಕಿ, ಪರಿಶೀಲನೆ ನಡೆಸಿ ಶಿಕ್ಷೆ ವಿಧಿಸುವಾಗ—ಬಹಳ ಸೂಕ್ಷ್ಮವಾದ ವಿಚಾರ ನಿರಪರಾಧಿಯಾದ ಮನುಷ್ಯನಿಗೆ ಶಿಕ್ಷೆ ವಿಧಿಸುವುದು ಅದು ಒಂದು ತಕ್ಸೀರು ಆ ಕಾರಣದಿಂದ ಒಬ್ಬ ಜಮೀನ್ದಾರ ಒಬ್ಬ ಟೆನೆಂಟಿಗೆ ರಶೀದಿ ಕೊಟ್ಟಮೇಲೆ, ಅವನು ಅದನ್ನು ಹರಿದು ಹಾಕಿ ರಶೀದಿ ಕೊಟ್ಟಿಲ್ಲ ಎಂದು ಕೋರ್ಟಿನಲ್ಲಿ ಕೇಸು ಹಾಕಿದರೆ ರುಜುವಾತು ಮಾಡುವುದು ಹೇಗೆ? ಅದಕ್ಕೆ written notice ಕೊಡಬೇಕು, written receipt ತೆಗೆದುಕೊಳ್ಳಬೇಕು ಎಂದು ಇದೆಯೇ ಹೊರತು ಮತ್ತೇನೂ ಅಲ್ಲ.

ಇನ್ನು ಕೆಲವು ಕ್ಲಾಸ್‌ಗಳ ವಿಚಾರದಲ್ಲಿ ಶ್ರೀ ಚನ್ನಬಸಪ್ಪನವರು ಬಹಳ ಸೊಗಸಾಗಿ ಭಾಷಣ ಮಾಡಿದರು ಸುಮಾರು ಮೂರು ಘಂಟೆಗಳ ಕಾಲ ತಮ್ಮ ದೀರ್ಘವಾದ ಭಾಷಣದಲ್ಲಿ, ವಾಗ್‌ಝರಿಯಿಂದ, ಸಾಹಿತ್ಯ

ಲಹರಿಯಿಂದ ಕೂಡಿದ ಭಾಷಣದಲ್ಲಿ ವ್ಯವಸಾಯಾಭಿವೃದ್ಧಿಗೆ ಸಂಬಂಧಪಟ್ಟಂಥ ಹಲವಾರು ವಿಚಾರಗಳನ್ನು ಕುರಿತು ಬಹಳ ಸ್ವಾರಸ್ಯವಾಗಿ ಭಾಷಣ ಮಾಡಿದರು. ಈಗ ನಾನು ಇಷ್ಟು ಮಾತ್ರ ಹೇಳಿದರೆ ಸಾಕು ಎಂದು ಅನ್ನಿಸುತ್ತದೆ. ಕಾರಣ ಅವರು ಅನೇಕ ಭೂ ಸುಧಾರಣೆ ಇತ್ಯಾದಿ ಸಂಬಂಧದಲ್ಲಿ ಬಹಳ ರಸಪುಷ್ಟಿಯುಳ್ಳ ಅಭಿಪ್ರಾಯಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಆದರೆ ಈ ಮಸೂದೆಗೆ ಸಂಬಂಧಪಟ್ಟಂತೆ ಅವರು ಅವರ ಡಿಸೆಂಟಿಂಗ್ ನೋಟ್‌ನಲ್ಲಿ ಏನು ಹೇಳಿದ್ದಾರೋ ಅಷ್ಟನ್ನು ಮಾತ್ರ ತಿಳಿಸಿದ್ದಾರೆ ಎಂದರೆ ಈಗ ಸಾಕು. ಒಟ್ಟಿನಲ್ಲಿ ದೇಶದಲ್ಲಿರತಕ್ಕ ಪ್ರಕೃತ ಪರಿಸ್ಥಿತಿಯನ್ನು ವಿದ್ಯಮಾನವನ್ನು ಕೂಲಂಕಷವಾಗಿ ಪರಿಶೀಲಿಸಿ ನೋಡಿದ ಪಕ್ಷದಲ್ಲಿ ತಾತ್ಕಾಲಿಕವಾಗಿ ಈ ಕಾನೂನು ಸರಿಯಾಗಿದೆಯಾದ್ದರಿಂದ ಇದು ಈ ಸಭೆಯ ಮಾನ್ಯ ಸದಸ್ಯರೆಲ್ಲರೂ ಒಪ್ಪತಕ್ಕ ವಿಚಾರವಾಗಿದೆ. ಇಷ್ಟು ಮಾತ್ರ ಈಗ ಹೇಳಿ ಒಂದೊಂದು ಸೆಕ್ಷನ್ನನ್ನೂ ಪ್ರತ್ಯೇಕವಾಗಿ ತೆಗೆದುಕೊಂಡಾಗ ಅವಕ್ಕೆ ಸಮಾಧಾನವನ್ನು ಕೊಡಲು ಅವಕಾಶವಿದೆ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. SPEAKER.—The question is:

"That the Mysore Tenancy Bill, 1951, as reported by the Select Committee, be taken into consideration"

The motion was adopted.

Mr. SPEAKER.—The Bill will be taken up clause by clause tomorrow.

The House will now adjourn till One O'clock tomorrow.

The Assembly adjourned at Five Minutes past Six of the Clock to meet again at One of the Clock on Tuesday, 6th November 1951.

WD 1046—GPB—500—23-4-52

LEGISLATIVE ASSEMBLY.

TWELFTH DAY.

Tuesday, 6th November 1951.

The Legislative Assembly met in the Assembly Hall, Old Public Offices, Bangalore, at Ten Minutes past One of the Clock, on Tuesday, 6th November 1951.

Mr. Speaker (The Hon'ble Sri V. Venkatappa).—in the Chair.

QUESTIONS AND ANSWERS

Mr. SPEAKER (The Hon'ble Sri V. Venkatappa).—Questions.

Grant of Lands in Nanjangud Taluk to expropriated owners below Nugu Reservoir.

Q.—269. Sri S. RANGARAMIAH (Mysore District—General).—

Will the Government be pleased to state :—

(*a*) the total number of acres of lands, which will be submerged by the construction of Nugu Reservoir and its channels in Nanjangud Taluk;

(*b*) whether the Government reserved any lands in Nanjangud Taluk to be given to those whose lands will be submerged under the above reservoir; if so, the acreage of lands so reserved and the names of the villages;

(*c*) whether they are aware that a number of darkhast applications for disposal of lands in the Taluk of Nanjangud, Kasaba Hobli and Hura Hobli was refused on the above grounds; if so, when such an order was passed and by whom ?

A.—The Hon'ble Sri H. SIDDAIYA (Minister for Revenue and Excise).—

(*a*) 3,881 acres.

(*b*) Yes; 1,753 acres and 37 guntas.

Sl. No.	*Names of villages*	*Extent.* A.	G.
1	Jalahalli	6	25
2	Ariyuru	29	9
3	Hadya	13	20
4	Jadiguddadakavalu ...	10	0
5	Kadajetti	87	31
6	Ugavi	156	11
7	Jadahalli	1	18
8	Melagahalli	222	4
9	Yelehalli	9	17
10	Mangalur	22	0
11	Hullahalli	95	14
12	Chamanamuddanahalli ...	43	13
13	Heggadahalli	298	22
14	Byalaru	136	39
15	Karalapura	51	10
16	Handurahalli	21	30
17	Deveerammanahally ...	26	27
18	Chamalapura ...	8	13
19	Hosakote	92	0
20	Kalale	179	14
21	Yachagundlu	22	11
22	Uppanahalli	34	29
23	Nanjangud	2	31
24	Gonathakola	1	19
25	Sinduvalli	180	33
	Total ...	1,753	37

(*c*) Yes; in pursuance of the resolutions of Nugu Reservoir Committee dated 25th November 1946 and 13th December 1949.

ಶ್ರೀ ಎಸ್. ರಂಗರಾಮಯ್ಯನವರು.—ನುಗು ಜಲಾಶಯದಿಂದ 3,881 ಎಕರೆ ಜಮೀನು ಮುಳುಗಡೆಯಾಗುತ್ತದೆಂದು ತಿಳಿಸಿದ್ದೆ, ಆದರೆ ಮೀಸಲಾಗಿಟ್ಟಿರುವುದು 1,753 ಎಕರೆ ಮತ್ತು 37 ಗುಂಟೆ. ಮಿಕ್ಕವರಿಗೆ ಕೊಡಬೇಕಾದ ಜಮೀನಿಗೆ ಏನು ಏರ್ಪಾಡು ಮಾಡಿದ್ದೀರಿ? ಬೇರೆಕಡೆ ಜಮೀನುಕೊಡಲು ಏರ್ಪಾಡು ಮಾಡಿದ್ದೀರಾ?

*ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಏರ್ಪಾಡು ಮಾಡಲಾಗುತ್ತದೆ.

ಶ್ರೀ ಎಸ್. ರಂಗರಾಮಯ್ಯನವರು.—ಜಮೀನು ಕೊಡಲು ನಿರಾಕರಿಸುವುದಕ್ಕೆ ಕಾರಣ ನುಗು ಜಲಾಶಯಕ್ಕೆ ಸಂಬಂಧಪಟ್ಟ ಸಮಿತಿಯವರು ಮಾಡಿದ ತೀರ್ಮಾನವೆಂದು ತಿಳಿಸಿದ್ದೀರಿ; ಆ ಸಮಿತಿಯ ಸದಸ್ಯರಾರು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಟೀಸ್.

ಶ್ರೀ ಎಸ್. ರಂಗರಾಮಯ್ಯನವರು.—ಆ ಸಮಿತಿಯನ್ನು ಯಾವಾಗ ನೇಮಕ ಮಾಡಿದ್ದು?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಟೀಸ್.

ಶ್ರೀ ಎಸ್. ರಂಗರಾಮಯ್ಯನವರು.—ಆ ಸಮಿತಿಯ ಸದಸ್ಯರೆಲ್ಲರೂ ಅಧಿಕಾರಿಗಳೋ ಅಥವಾ ಖಾಸಗಿ ಜನರೊ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಟೀಸ್.

ಶ್ರೀ ಎಸ್. ರಂಗರಾಮಯ್ಯನವರು.—ದರಖಾಸ್ತಿನ ಮೇಲೆ ಜಮೀನು ಕೊಡಬೇಕೆಂದು ಎಷ್ಟು ಅರ್ಜಿಗಳು ಬಂದಿದ್ದವು?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬಹಳ ಅರ್ಜಿಗಳು ಬಂದಿವೆ.

ಶ್ರೀ ಎಸ್. ರಂಗರಾಮಯ್ಯನವರು.—ಒಬ್ಬರಿಗೂ ಕೊಡಲಿಲ್ಲವೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲವರಿಗೆ ಕೊಟ್ಟಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಎಷ್ಟು ಕಡೆ ಕೊಟ್ಟಿದೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಟೀಸ್.

ಶ್ರೀ ಎಸ್. ರಂಗರಾಮಯ್ಯನವರು.—ಈ ಜಮೀನು ಬಂಜರೋ ಅಥವಾ ಈಚಲುವನವೋ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನಾನಾ ರೀತಿಯ ಜಮೀನಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಕೆಲವರಿಗೆ ಕೊಟ್ಟು ಮತ್ತೆ ಕೆಲವರಿಗೆ ಕೊಡದಿರಲು ಕಾರಣವೇನು?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅವರ ಜಮೀನು ಮುಳುಗಡೆಯಾಗಿದೆಯೆಂದು ಕಂಡುಬಂದ ಸಂದರ್ಭದಲ್ಲಿ ಅಂತಹ ಕೆಲವರಿಗೆ ಕೊಟ್ಟಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಈ ಜಲಾಶಯದ ಕೆಳಗೆ ಜಮೀನಿದ್ದವರಿಗೆ ಕೊಟ್ಟಿದೆಯೋ ಅಥವ ಬೇರೆಯವರಿಗೊ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಂತಿಂಥವರಿಗೆ ಎಂದು ಹೇಳಬೇಕಾದರೆ ಅದನ್ನು ನೋಡಿ ಹೇಳಬೇಕು.

ಶ್ರೀ ಎಸ್. ರಂಗರಾಮಯ್ಯನವರು.—ಜಮೀನು ಮುಳುಗಡೆಯಾಗದಿರುವ ಕೆಲವರಿಗೆ ಕೊಡುತ್ತಿದ್ದಾರೆ, ನಮಗೆ ಕೊಡುವುದಿಲ್ಲವೆಂದು ಹೇಳಿ ದೂರು ಬಂದಿದೆಯೆ ಸರ್ಕಾರಕ್ಕೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ತಮಗೆ ಜಮೀನು ಬೇಕೆಂದು ದರಖಾಸ್ತು ಅರ್ಜಿ ಕಳುಹಿಸುವಾಗ ಅದರಲ್ಲಿ ಇದನ್ನು ಸೇರಿಸಿರುತ್ತಾರೆ.

ಶ್ರೀ ಎಸ್. ರಂಗರಾಮಯ್ಯನವರು.—ಇದನ್ನು ವಿಚಾರಮಾಡಿ ಡೆಪ್ಯುಟಿ ಕಮಿಷನರು ಮತ್ತು ಸ್ಥಳೀಯ ಅಧಿಕಾರಿಗಳು ವರದಿಯನ್ನು ಕಳುಹಿಸಿದ್ದಾರೆಯೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಈಚೆಗೆ ಕೆಲವು ಅರ್ಜಿಗಳು ಬಂದಿದ್ದವು, ಅವನ್ನು ಡೆಪ್ಯುಟಿ ಕಮಿಷನರಿಗೆ ವರದಿಯ ಬಗ್ಗೆ ಕಳುಹಿಸಲಾಗಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಈಗಲಾದರೂ ಮುಳುಗಡೆಯಾಗಿರುವ ಜಮೀನಿನ ಜಮೀನ್ದಾರರಿಗೆ ಜಮೀನು ಕೊಡಬೇಕೆಂಬ ಅಭಿಪ್ರಾಯವಿಲ್ಲವೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಮುಳುಗಡೆಯಾಗಿರುವ ಜಮೀನಿನವರಿಗೆ ಇಷ್ಟು, ಜಮೀನಿಲ್ಲದವರಿಗೆ ಇಷ್ಟು ಕೊಡಬೇಕೆಂದಿದೆ. ಜಮೀನು ಬಹಳ ಬೆಲೆ ಬಾಳುವುದಾಗಿದ್ದರೆ ಅಂತಹ ಜಮೀನನ್ನು ಹರಾಜು ಮಾಡುವುದು ಇವೆಲ್ಲಾ ರೂಢಿಯಲ್ಲವೆ.

ಶ್ರೀ ಎಸ್. ರಂಗರಾಮಯ್ಯನವರು.—ಮುಳಗಡೆಯಾಗಿರುವ ಗ್ರಾಮಗಳ ಅನೇಕ ಜನರಿಗೆ ಬೇರೆ ಜಮೀನುಗಳಿಲ್ಲವೆಂಬುದು ತಮಗೆ ಗೊತ್ತಿದೆಯೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅನೇಕರಿಗೆ ಜಮೀನಿದೆ, ಕೆಲವರಿಗಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಇದನ್ನು ಪರಿಶೀಲನೆ ಮಾಡುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಪರಿಶೀಲನೆ ಮಾಡುತ್ತೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಈಗ ಕೊಟ್ಟಿರುವ ಜಮೀನು ಬಂಜರು ಜಮೀನೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಖಚಿತವಾಗಿ ಈಗಲೇ ಹೇಳಲಾರೆ.

ಶ್ರೀ ಎಸ್. ರಂಗರಾಮಯ್ಯನವರು.—ಇದೆಲ್ಲವೂ ನುಗು ಜಲಾಶಯದ ಅಚ್ಚುಕಟ್ಟಿಗೆ ಬರಬೇಕಾದರೆ ಎಷ್ಟು ಕಾಲವಾಗುತ್ತದೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಈಗತಾನೇ ಕೆಲಸ ಪ್ರಾರಂಭವಾಗಿದೆ; ಇನ್ನೂ ಒಂದೆರಡು ವರ್ಷವಾಗಬಹುದು.

ಶ್ರೀ ಎಸ್. ರಂಗರಾಮಯ್ಯನವರು.—ಅಲ್ಲಿಯ ವರೆಗೆ ಹೆಚ್ಚು ಬೆಳೆ ಬೆಳೆಯುವ ಯೋಜನೆಯ ಮೇರೆಗೆ ಈ ಜಮೀನುಗಳನ್ನು ವ್ಯವಸಾಯಕ್ಕೆ ಕೊಡುವುದಕ್ಕಾಗುತ್ತದೆಯೆ ?

*ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇನ್ನೊಂದೆರಡು ವರ್ಷದೊಳಗೆ ಆಗುವುದರಿಂದ ಹೀಗೆ ಮಾಡುವುದು ಸೂಕ್ತವೆಂಬುದನ್ನು ಯೋಚನೆ ಮಾಡಬೇಕು.

ಶ್ರೀ ಎಸ್. ರಂಗರಾಮಯ್ಯನವರು.—ಜಾಲಹಳ್ಳಿಯಲ್ಲಿ 6 ಎಕರೆ 25 ಗುಂಟೆ ಜಮೀನು ಮೀಸಲಾಗಿಡಲಾಗಿದೆ ಎಂದು ತಿಳಿಸಲಾಗಿದೆ. ಯಾರಾದರೂ ಇದನ್ನು ಸಾಲಿಯಾನ ವ್ಯವಸಾಯ ಮಾಡಿಕೊಂಡು ಹೋಗುತ್ತೇವೆಂದು ಕೇಳಿದರೆ ಏಕೆ ಕೊಡಬಾರದು?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೊಡುವುದು ಸುಲಭ, ಆದರೆ ಬಿಡಿಸುವುದು ಕಷ್ಟ.

ಶ್ರೀ ಎಸ್. ರಂಗರಾಮಯ್ಯನವರು.—ಬಿಡಿಸುವುದು ಸರ್ಕಾರಕ್ಕೆ ಕಷ್ಟವೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬಿಡಿಸುವುದು ಸಾಧ್ಯವಿಲ್ಲವೆಂದಲ್ಲ; ಅದು ಸ್ವಲ್ಪಕಾಲ ತೆಗೆದುಕೊಳ್ಳುತ್ತದೆ; ಅದಕ್ಕಿಂತಲೂ ಕೊಡದಿರುವುದೇ ಮೇಲೆಂದು ಕಾಣುತ್ತದೆ.

ಶ್ರೀ ಎಸ್. ರಂಗರಾಮಯ್ಯನವರು.—ಅಲ್ಲಿನ ಜನರಿಂದ ನಮಗೆ ಜಮೀನಿಲ್ಲ ಜಮೀನು ಕೊಡಬೇಕೆಂದು ಕೇಳಿ ಎಷ್ಟು ಅರ್ಜಿಗಳು ಬಂದಿವೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬಹಳ ಅರ್ಜಿಗಳು ಬಂದಿವೆ.

ಶ್ರೀ ಎಸ್. ರಂಗರಾಮಯ್ಯನವರು.—ನುಗು ಜಲಾಶಯದಿಂದ ಜಮೀನು ಕಳೆದುಕೊಂಡಿರುವವರಿಗೆಂದು ಹೇಳಿದ ಮೇಲೆ, ಅದನ್ನು ಬೇರೆಯವರು ಕೇಳುವುದಕ್ಕೆ ಅವಕಾಶವಿಲ್ಲವೆಂಬುದು ಗೊತ್ತಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.— ಅದೇ ಉದ್ದೇಶದಿಂದಲೇ ಹೀಗೆ ಮಾಡಿರುವುದು.

ಶ್ರೀ ಎಸ್. ರಂಗರಾಮಯ್ಯನವರು.—ಹಾಗಾದರೆ ಬೇರೆಯವರಿಗೆ ಕೊಡಲು ಜಮೀನುಳಿಯುತ್ತದೆಯೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅವರಿಗೆ ಕೊಟ್ಟರೂ ಹೆಚ್ಚಿಗೆ ಜಮೀನು ಉಳಿಯುತ್ತದೆ.

ಶ್ರೀ ಎಸ್. ರಂಗರಾಮಯ್ಯನವರು.—ಅವರಿಗೆಲ್ಲಾ ಕೊಟ್ಟಮೇಲೆ ತಾನೆ ಉಳಿಯುವುದು?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹೌದು.

ಶ್ರೀ ಎಸ್. ರಂಗರಾಮಯ್ಯನವರು.—ಹಾಗೆ ಉಳಿದುದನ್ನು ಏನು ಮಾಡುತ್ತೀರಿ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನಾನಾ ರೀತಿಯಲ್ಲಿ ಕೊಡುತ್ತೇವೆಂದು ಆಗಲೇ ತಿಳಿಸಿದ್ದೇನೆ.

ಶ್ರೀ ಎಸ್. ರಂಗರಾಮಯ್ಯನವರು.—ಈಗಲಾದರೂ ಹೆಚ್ಚು ಆಹಾರ ಬೆಳೆಯುವ ಯೋಜನೆಯ ಪ್ರಕಾರ ತಾತ್ಕಾಲಿಕವಾಗಿ ವ್ಯವಸಾಯಕ್ಕೆ ಕೊಡುವ ವಿಷಯ ಪರಿಶೀಲನೆ ಮಾಡುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು. – ಒಂದೆರಡು ವರ್ಷಕ್ಕೆ ಕೊಡುವುದು ಸಾಧ್ಯವೆಂಬುದನ್ನು ಯೋಚನೆ ಮಾಡುತ್ತೇವೆ.

ಶ್ರೀ ಎಸ್. ರಂಗರಾಮಯ್ಯನವರು.— ಇದರಲ್ಲಿ ಆಕಾರ ಕಂಡ ಬಂಜರೂ ಆಕಾರ ಕಾಣದಿರುವ ಬಂಜರೂ ಇವೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—Forest lands, waste lands ಎಲ್ಲವೂ ಇವೆ.

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—ನುಗು ಜಲಾಶಯದಿಂದ ನೀರಿನಲ್ಲಿ ಮುಳುಗಡೆಯಾಗುವ ಜಮೀನು 3,881 ಎಕರೆ. ಆದರೆ ಮುಳುಗಡೆಯಾಗತಕ್ಕಂಥ ಜಮೀನುಗಳ ಮಾಲೀಕರಿಗೆ ಕೊಡಲು ಮೀಸಲಾಗಿಟ್ಟಿರುವ ಜಮೀನು, 1,753 ಎಕರೆ ಮತ್ತು 37 ಗುಂಟೆ ಎಂದು ತಿಳಿಸಿದೆ. ಅಷ್ಟು ಹೆಚ್ಚು ಜಮೀನು ಹೋಗುವಾಗ ಇಷ್ಟು ಕಡಿಮೆ ಜಮೀನು ಕೊಡಬೇಕೆಂದು ಮಾಡಿರುವುದು ಸಾಕಾಗುತ್ತದೆಯೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನಂಜನಗೂಡು ತಾಲ್ಲೂಕಿನಲ್ಲಿರುವುದು ಮಾತ್ರ ಇಲ್ಲಿ ನಮೂದಾಗಿದೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಈ 3,881 ಎಕರೆಯಲ್ಲಿ ಎಷ್ಟು ವ್ಯವಸಾಯ ಮಾಡಲರ್ಹವಾದದ್ದು?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.— ಅಷ್ಟು ಜಮೀನು ಮುಳುಗಡೆಯಾಗುವುದು. ಅದರಲ್ಲಿ ವ್ಯವಸಾಯಾರ್ಹವಾದದ್ದೆಷ್ಟೆಂಬುದನ್ನು ಈಗ ಹೇಳುವುದಕ್ಕಾಗುವುದಿಲ್ಲ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಈ ಜಲಾಶಯದಿಂದ ಎಷ್ಟು ಸಾವಿರ ಎಕರೆ ಸಾಗುವಳಿಗೆ ಬರಬಹುದು?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಪ್ಪತ್ತು ಸಾವಿರ ಎಕರೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಇದರಲ್ಲಿ ನಂಜನಗೂಡು ತಾಲ್ಲೂಕಿಗೆ ಸೇರಿದ್ದೆಷ್ಟು?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಟೀಸ್.

ಶ್ರೀ ಡಿ. ಎಂ. ಸಿದ್ದಯ್ಯನವರು.—ಮೀಸಲಾಗಿಟ್ಟಿರುವ ಜಮೀನಿನಲ್ಲಿ ಕೆಲವು ಗ್ರಾಮಗಳಿಗೆ ಒಂದೆರಡು ಎಕರೆ, ಇನ್ನು ಕೆಲವಕ್ಕೆ ನೂರಾರು ಎಕರೆ, ಹೀಗೆ ಹಾಕಿದೆ ; ಇದು ಯಾವ ಆಧಾರದ ಮೇಲೆ ಹಾಕಿದ್ದು?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.— ಸರ್ವೆ ಮಾಡಿದ್ದಾರೆ. ಮುಳುಗಡೆಯಾಗುವುದೂ ಇಂತಿಂಥ ಗ್ರಾಮದಲ್ಲಿ ಇಷ್ಟಿಷ್ಟು ಎಂದು ಲೆಕ್ಕಹಾಕಿ ತಿಳಿಸಿದ್ದಾರೆ.

ಶ್ರೀ ಎಲ್. ಎಚ್. ತಿಮ್ಮಬೋಯಿಯವರು (ಚಿಕ್ಕಮಗಳೂರು ಜಿಲ್ಲೆ—ನಿಮ್ನ ಪಂಗಡ).—ನುಗು ಜಲಾಶಯದಿಂದ ಜಮೀನು ಹೋದವರಿಗಲ್ಲದೆ ಇನ್ನಾರಿಗೂ ಜಮೀನು ಕೊಡಬಾರದೆಂದು ಹೇಳಿದರು ; ನಿಮ್ನವರ್ಗದವರಿಗೆ ಜಮೀನು ಕೊಟ್ಟರೆ ಧಕ್ಕೆ ಬರುತ್ತದೆಯೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದೇನೂ ಇಲ್ಲ.

ಶ್ರೀ ಎಲ್. ಎಚ್. ತಿಮ್ಮಬೋಯಿಯವರು.—ಹಾಗಾದರೆ ಕೊಡಬಹುದಲ್ಲವೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೊಡುವ ಕಾಲ ಬಂದಾಗ ಅವನ್ನು ಪರಿಶೀಲಿಸುತ್ತೇವೆ.

ಶ್ರೀ ಎಲ್. ಎಚ್. ತಿಮ್ಮಬೋಯಿಯವರು.—ನಿಮ್ನ ಪಂಗಡದವರಿಂದ ಜಮೀನು ಬೇಕೆಂದು ದರಖಾಸ್ತುಗಳು ಬಂದಿಲ್ಲವೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೂರಾರು ಬಂದಿವೆಯೆಂದು ಹೇಳಿದ್ದೇನೆ.

ಶ್ರೀ ಎಲ್. ಎಚ್. ತಿಮ್ಮಬೋಯಿಯವರು.—ಕಾರ್ಯತಃ ಮಾಡುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.–ನೋಡೋಣ. At the time of disposal ತಾನೆ ?

Sri L. H. THIMMA BOI.—It is not definite and it is also not clear, Mr. Speaker.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಒಂದೆರಡು ವರ್ಷದಲ್ಲಿ ಕೊಡುತ್ತೇವೆ.

Sri H. M. CHANNABASAPPA (Mysore District—General).—Can the Government tell me the total extent of land reserved in order to meet the demands of the expropriated raiyats?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇದು ನಂಜನಗೂಡು ತಾಲ್ಲೂಕಿನ ವಿಚಾರ ಕೇಳಿದ್ದಕ್ಕಾಗಿ ತಯಾರಿಸಿರುವಂಥ ಅಂಕಿ ಅಂಶಗಳಾಗಿವೆ. ತಮ್ಮ ಪ್ರಶ್ನೆಗೆ ಸರಿಯಾದ ಉತ್ತರ ಬೇಕಾಗಿದ್ದಲ್ಲಿ ಅದನ್ನು ನೋಡಿ ಹೇಳಬೇಕಾಗುತ್ತೆ.

Sri H. M. CHANNABASAPPA.—Shall I take it that adequate extent of land has been reserved in this area ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—It may be presumed so. ಇಷ್ಟಾದರೆ ಸಾಕಾಗುತ್ತದೆಂದು ಆಲೋಚನೆ ಮಾಡಲಾಗಿದೆ.

Sri H. M. CHANNABASAPPA.— An order in the matter of reserving these lands has been passed in the year 1949. What is it that prevented the Government from disposing of these lands to the expropriated raiyats ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅವರಿಗೆ ಇನ್ನೂ ಕೊಟ್ಟಿಲ್ಲ. ಅವರ claim ಗಳು ಏನು ? ಎಷ್ಟಾಗುತ್ತದೆ ? ಅವರ ಜಮೀನುಗಳು ನಿಜವಾಗಿಯೂ ಹಾಗೆ ನೀರು ಮುಳುಗಡೆಯಾಗುತ್ತವೆಯೇ ಎಂಬುದನ್ನೆಲ್ಲಾ ನೋಡಿಕೊಂಡು ಮಾಡಬೇಕಾಗಿದೆ.

Sri H. M. CHANNABASAPPA.—Have not the Government got a list of expropriated raiyats and the area that is going to be submerged ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲವು ಜಮೀನುಗಳು ನೀರು ಮುಳುಗಡೆಯಾಗುತ್ತವೆಂದು ಇಂಜಿನಿಯರ್‌ರವರು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಹಾಗೆ ಅವು ನಿಜವಾಗಿಯೂ ನೀರು ನಿಂತಮೇಲೆ ಮುಳುಗಡೆಯಾಗುತ್ತವೆಯೇ ಎಂಬುದನ್ನು ನೋಡಿಕೊಂಡು ಮಾಡಬೇಕಾಗುತ್ತೆ.

Sri H. M. CHANNABASAPPA.—Am I to presume then that these people who have lost lands......

The Hon'ble Sri H. SIDDAIYA.—The presumption is not correct. They have not yet lost their lands. They are still in enjoyment and possession of the lands.

Sri H. M. CHANNABASAPPA.—Are the Government aware that these ryots were dispossessed of their lands long ago ? I want to know whether the lands in the area that is going to be submerged have been taken away from the ryots who held the lands.

The Hon'ble Sri H. SIDDAIYA.—Not all the lands.

Sri H. M. CHANNABASAPPA.—Have the Government not received petitions to the effect that the lands have been taken possesion of by the Government but the ryots concerned have not so far received any relief ?

The Hon'ble Sri H. SIDDAIYA.—I say not all the lands are taken away.

Sri H. M. CHANNABASAPPA.—Shall I take it then that at least some lands have been taken away ?

The Hon'ble Sri H. SIDDAIYA.—The lands which are not yet submerged are not taken away.

Sri H. M. CHANNABASAPPA.—At least in the case of those whose lands have been taken away, have the Government taken action to give them lands in exchange ?

The Hon'ble Sri H. SIDDAIYA.—That is the very idea why a large number of acres of land are reserved.

Sri H. M. CHANNABASAPPA.—I would like to know why the Government have been delaying the grant of lands to those whose lands have already been taken away ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಲ್ಲಿರತಕ್ಕ ಪ್ರಶ್ನೆಯೇ ಒಂದು. ತಾವು ಕೇಳುತ್ತಿರುವ ಪ್ರಶ್ನೆಯೇ ಒಂದು. ಹಾಗೆ ಊಹಾಪೋಹದ ಮೇಲೆ ಕೇಳತಕ್ಕ ಪ್ರಶ್ನೆಗೆ ಉತ್ತರವಿಲ್ಲವೆಂದು ಹೇಳಬೇಕಾಗುತ್ತೆ.

Sri H. M. CHANNABASAPPA.—Will the Government take necessary action to expedite all cases which are pending decision in the matter ?

The Hon'ble Sri H. SIDDAIYA.—Quite so, they will expedite.

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ ನಿಮ್ನ ಪಂಗಡ).—ಇಲ್ಲಿ ತಾವು ತಿಳಿಸಿರುವ 3,881 ಎಕರೆ ಜಮೀನುಗಳ ಪೈಕಿ, ಹಿಡುವಳಿ ಜಮೀನೆಷ್ಟು ? ಮತ್ತು ಸರ್ಕಾರಿ ಜಮೀನೆಷ್ಟು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆ ನೀರು ಮುಳುಗಡೆ ವಿಸ್ತೀರ್ಣದಲ್ಲಿ 653 ಎಕರೆ ತರಿ ಜಮೀನು 1,038 ಎಕರೆ ಖುಷ್ಕಿ ಜಮೀನು, 2 ಎಕರೆ ತೋಟದ ಭೂಮಿ, 2,188 ಎಕರೆ ಕಾಡು ಮತ್ತು ಖರಾಬು ಜಮೀನು ಇರುತ್ತೆ.

ಶ್ರೀ ಎಂ. ಮಾದಯ್ಯನವರು.—ಹಿಡುವಳಿ ಜಮೀನಿನ ವಿಸ್ತೀರ್ಣವೇ ಅಲಾಯಿದ ಎಷ್ಟಾಗುತ್ತದೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದನ್ನೆಲ್ಲಾ ಕರಾರುವಾಕ್ಕಾಗಿ ಹೇಳಬೇಕಾಗಿದ್ದರೆ ನೋಟೀಸ್ ಬೇಕು.

ಶ್ರೀ ಎಂ. ಮಾದಯ್ಯನವರು.—ಮುಳುಗಡೆಯಾಗತಕ್ಕ ಜಮೀನ್ದಾರರಿಗೆ ಜಮೀನು ಕೊಟ್ಟ ಬಳಿಕವೂ ಸರ್ಕಾರಕ್ಕೆ ಇನ್ನೂ ವಿಶೇಷ ಜಮೀನು ಉಳಿಯುತ್ತದೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬಂದಿದೆ. ಇನ್ನೂ ಜಮೀನು ಉಳಿಯುತ್ತೆ.

ಶ್ರೀ ಎಂ. ಮಾದಯ್ಯನವರು.—ಹಾಗೆ ಉಳಿಯತಕ್ಕ ಜಮೀನುಗಳನ್ನು ಸಾಗುವಳಿಗೆ ಕೊಡಬೇಕೆಂದು ಬೇರೆ ಯಾರಿಂದಲಾದರೂ ಮನವಿಗಳು ಬಂದಿವೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೂರಾರು ಅರ್ಜಿಗಳು ಬಂದಿವೆ.

ಶ್ರೀ ಎಂ. ಮಾದಯ್ಯನವರು.—ಆ ಜಮೀನುಗಳನ್ನು ಅವರಿಗೆ ಕೊಡುವ ಏರ್ಪಾಡುಗಳನ್ನು ಮಾಡಲಾಗುತ್ತದೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದನ್ನೆಲ್ಲಾ ಈಗಲೇ ಹೇಳುವುದಕ್ಕಾಗುವುದಿಲ್ಲ. ಆ ಜಮೀನುಗಳನ್ನು ಮೊದಲು ಬಡವರಾಗಿರತಕ್ಕವರಿಗೂ, ಜಮೀನಿಲ್ಲದೆ ಇರತಕ್ಕವರಿಗೂ specially ಡಿಪ್ರೆಸ್ಡ್ ಕ್ಲಾಸಿನವರಿಗೂ ಕೊಟ್ಟನಂತರ ಬಾಕಿಯವರ ಪ್ರಶ್ನೆ.

Yelandur Forest income and Improvements to Sri Biligiri Rangaswamy Temple.

Q.—270. **Sri S. RANGARAMIAH** (Mysore District—General).—

Will the Government be pleased to state :—

(*a*) when the management of the Yelandur Jahgir was taken over by the Government; and on what condition ;

(*b*) the total income of the Yelandur Forest realised annually by the Government during the period of their management;

(*c*) how much of this forest income is spent by the Government and how much is in reserve;

(*d*) whether they are aware that the whole of this forest income belongs to the Sri Biligiri Rangaswamy Temple; if so, how the Government proposes to spend the forest income for the improvement of the temple and the forest?

A.—The Hon'ble Sri H. SIDDAIYA (Minister for Revenue and Excise).—

(*a*) In March 1930, the Jahgir was taken over under Government management. For conditions, *vide* Government Order Nos., dated 4th March 1930 and 8th February 1936 (laid on the Table *).

(*b*) and (*c*) Statements appended below.

(*d*) The entire net income of the Biligiri Rangan Forest is not payable to Sri Biligiri Rangaswami Temple. A sum not exceeding the maximum of Rs. 5,500 is payable to the Temple from Forest Revenues. Out of the total sum of Rs. 77,000 payable to the temple for 14 years from 1937-38, only a sum of Rs. 25,648 has been credited to the temple funds so far and the balance of Rs. 51,358 will have to be adjusted out of the surplus forest revenue at the end of the year 1950-51.

The several improvements that may be found necessary will be effected, meeting the expenditure out of the funds available at the credit of the temple.

Statement showing the details of revenue realised in Biligiri Rangan Temple Forest Range, Mysore Division from the year 1938-39 to 1949-50.

Year		*Amount* Rs. a. p.
1938—39	...	12,117 4 0
1939—40	...	9,449 3 0
1940—41	...	13,357 4 6
1941—42	...	11,424 4 9
1942—43	...	8,507 14 6
1943—44	...	9.597 14 6
1944—45	...	16,072 3 0
1945—46	...	10,630 0 0
1946—47	...	23,810 6 0
1947—48	...	12,501 2 0
1948—49	...	37,211 8 6
1949—50	...	27,155 3 6
1950—51	...	63,204 2 7
	Total ...	3,55,088 6 10

Statement showing the expenditure incurred by Government in improving the Forest and the amount transferred to Biligiri Rangan Temple Funds during the period of the Government Management.

Year		Expenditure			Direction and value of license books	Total	Amount transferred to temple funds
		Establishment charges	Capital Works	Other Works			
		Rs.	Rs.	Rs.	Rs.	Rs.	Rs.
1938—39	..	1,158 14 0	...	729 12 0	430 4 0	2,318 14 0	
1939—40	...	1,662 4 0	...	2,642 5 8	935 1 0	5,239 10 9	
1940—41	...	1,611 10 0	...	5,065 9 0	1,336 12 0	8,013 15 0	
1941—42	...	1,856 10 0	...	3,905 14 6	1,142 7 0	6,904 15 6	25,648 0 0*
1942—43	...	2,023 12 0	...	1,847 12 9	850 13 0	4,722 5 9	
1943—44	...	2,309 3 0	...	5,153 3 6	959 12 0	8,422 2 6	
1944—45	...	3,067 13 0	1,099 3 0	4,166 3 0	975 13 0	9,309 0 0	
1945—46	...	2,856 9 0	946 6 (	3.243 6 0	2,381 0 3	9,427 5 3	...
1946—47	...	3,697 0 0	216 13 0	5,429 7 0		9,343 4 0	...
1947—48	...	2,721 10 6	350 14 0	3,374 5 0		6,446 13 0	...
1948—49	...	3,676 5 1	4,410 7 0	7,650 2 3	9.102 13 9	15,736 14 3	...
1949—50	...	2,404 10 3	...	3,853 11 0		6,258 5 3	...
1950—51	...	3,519 0 0	...	12,890 7 1		25,512 4 10	...
Total	...	32,565 4 3	7,023 11 0	59,962 2 9	18,114 12 0	1.17,655 14 1	25,648 0 0

* Copies of the G. O.'s are placed in the Library. *Vide* No. 22.

* *Note*—The surplus funds to be transferred to the Temple Funds from the year 1945—46 is not yet transferred, Rs. 30,336. which is being transferred. The direction charges for 1950-51, Rs. 2,619-15-0 are to be transferred to Forest Funds. This is also being transferred. After the above transactions there remains a sum of Rs. 69,648—3—6 at the end of 1950-51.

ಶ್ರೀ ಎಸ್. ರಂಗರಾಮಯ್ಯನವರು.—ಯಳಂದೂರು ಜಹಗೀರುದಾರರ ಕಾಡನ್ನು ಸರ್ಕಾರದವರು ಯಾವ ಷರತ್ತುಗಳ ಮೇಲೆ ತೆಗೆದುಕೊಂಡಿದ್ದೀರಿ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು. ಜಹಗೀರುದಾರರೂ ಮತ್ತು ಸರ್ಕಾರದವರೂ ಸೇರಿ ಮಾಡಿಕೊಂಡಿರತಕ್ಕ ಷರತ್ತುಗಳ ಮೇಲೆ ಅದನ್ನು ನಡೆಸತಕ್ಕ ವ್ಯವಹಾರು ತೆಗೆದುಕೊಂಡಿರಲಾಗಿದೆ. ಅವುಗಳನ್ನೆಲ್ಲಾ ಪ್ರತ್ಯೇಕವಾಗಿ ಒಂದು ಕಡತ ತಿಳಿಸಲಾಗಿದೆ. ಆ ರೀತಿ ಕರಾರಾಗಿದೆ. ಆ ಕರಾರಿನಲ್ಲಿ ಷರತ್ತುಗಳನ್ನೆಲ್ಲಾ ಅಡಕಮಾಡಿದ್ದಾರೆ.

ಶ್ರೀ ಎಸ್. ರಂಗರಾಮಯ್ಯನವರು.—ಜಹಗೀರನ್ನು ಅವರಿಗೆ ಬಿಟ್ಟುಕೊಟ್ಟು ಅದರ ಮೇಲಿನ ವ್ಯವಹಾರನ್ನು ಮಾತ್ರ ಅಂದರೆ ಈ ಜಂಗಲ್ ಇತ್ಯಾದಿಗಳ ವ್ಯವಹಾರವನ್ನು ತಾವು ನೋಡಿಕೊಳ್ಳಬೇಕೆಂದು ಅದರಲ್ಲಿ ನಮೂದಿಸಲಾಗಿದೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹೌದು. ಇದನ್ನು ಅವರ ಇಷ್ಟದ ಪ್ರಕಾರವೇ ಮಾಡಲಾಗಿರುತ್ತೆ.

ಶ್ರೀ ಎಸ್. ರಂಗರಾಮಯ್ಯನವರು.—ತಾವು ಈ ಸಂಬಂಧವಾಗಿ ಅಲ್ಲಿಗೇ ಒಂದು ಪ್ರತ್ಯೇಕ ರೇಂಜ್ ಆಫೀಸನ್ನು ತೆರದಿದ್ದೀರಾ ಅಥವಾ ಬೇರೆ ಯಾವುದಾದರೂ ರೇಂಜ್ ಆಫೀಸಿನ ಮೂಲಕ ಇದರ ಕೆಲಸ ನೊಡಿಕೊಳ್ಳಲಾಗುತ್ತಿದೆಯೆ ?

The Hon'ble Sri H. SIDDAIYA.—I cannot remember now all those things.

ಶ್ರೀ ಎಸ್. ರಂಗರಾಮಯ್ಯನವರು.—ತಾವು ದಯೆಯಿಟ್ಟು 4 ನೆಯ ಪುಟ, ಪ್ರಶ್ನೋತ್ತರದಲ್ಲಿ ಅಪೆಂಡಿಕ್ಸ್ ನೋಡೋಣವಾಗಲಿ, ಇದರಲ್ಲಿ ಜಂಗಲ್ ಉತ್ಪತ್ತಿ ಎಷ್ಟೆಷ್ಟೆಂಬುದನ್ನು ತಿಳಿಸೋಣವಾಗಿದೆ. 1947–48 ರಲ್ಲಿ ರೂ. 12,501–2–0 ಗಳನ್ನೂ, 1948–49 ರಲ್ಲಿ ರೂ. 37,211–8–6 ಗಳನ್ನು, 1949–50 ರಲ್ಲಿ ರೂ. 27,15?–3–6 ಗಳನ್ನು ತೋರಿಸಿದ್ದು 1950–51ಕ್ಕೆ 63,204–2–7 ತೋರಿಸಲಾಗಿದೆ. ಹೀಗೆ ಒಂದೊಂದು ವರ್ಷದಲ್ಲೂ ಒಂದೊಂದು ರೀತಿಯಾಗಿ, ಇಷ್ಟು ವ್ಯತ್ಯಾಸ ಬರುವಂತೆ ತೋರಿಸಲು ಕಾರಣ ವೇನು ಸ್ವಾಮಿ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—It depends upon the income.

ಶ್ರೀ ಎಸ್. ರಂಗರಾಮಯ್ಯನವರು.—ನಾನು ಕೇಳುತ್ತಿರುವುದೂ ಅದೇ ಉತ್ಪತ್ತಿಯ ವಿಚಾರ. ಒಂದು ವರ್ಷ 12 ಸಾವಿರ ಇದ್ದದ್ದು, ಮತ್ತೊಂದು ವರ್ಷ 37 ಸಾವಿರಕ್ಕೆ ಏರಿದ್ದು ಪುನಃ ಅದು 27 ಸಾವಿರಕ್ಕೆ ಇಳಿದಿದೆ; ಪುನಃ 63 ಸಾವಿರಕ್ಕೆ ಏರಿದೆ. ಇಷ್ಟೇಕೆ ವ್ಯತ್ಯಾಸವಾಯಿತು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.- 1947–48 ರದು ಕೇವಲ 9 ತಿಂಗಳ ಲೆಕ್ಕ ಮಾತ್ರ.

ಶ್ರೀ ಎಸ್. ರಂಗರಾಮಯ್ಯನವರು.—ಈ 50–51 ರಲ್ಲಿ 63 ಸಾವಿರ ಚಿಲ್ಲರೆಗೆ ಉತ್ಪತ್ತಿ ಏರಿದೆ. ಹೀಗೆ ಆಗಲು ಯಾವ ಬಾಬಿನಿಂದ ಜಾಸ್ತಿ ಉತ್ಪತ್ತಿ ಬಂದಿತೆಂಬುದನ್ನು ತಿಳಿಸುವಿರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—You must give credit to the Government. ಈಗಿರತಕ್ಕ ಮಂತ್ರಿಮಂಡಲ ಅಧಿಕಾರಕ್ಕೆ ಬಂದಮೇಲೆ ಪ್ರತಿವರ್ಷವೂ ಉತ್ಪತ್ತಿ ಹೆಚ್ಚುತ್ತಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಯಾವ ಬಾಬಿನಿಂದ ಹೀಗೆ ಉತ್ಪತ್ತಿ ಜಾಸ್ತಿಯಾಗಿ ಈ 63 ಸಾವಿರ ಚಿಲ್ಲರೆ ಬಂದಿರುತ್ತೆಂದು ನಾನು ಕೇಳುತ್ತಿದ್ದೇನೆ.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನಾಟಾ ಕಳವು ಕಮ್ಮಿ ಆದುದರಿಂದಲೂ ಮತ್ತು ಇತ್ತೀಚೆಗೆ ನಾಟಾ ಧಾರಣೆಯನ್ನು ಏರಿಸಿದ್ದರಿಂದಲೂ, ಹೀಗೆ ಹೆಚ್ಚು ಉತ್ಪತ್ತಿ ಬರಲು ಅವಕಾಶವಾಯಿತು.

ಶ್ರೀ ಎಸ್. ರಂಗರಾಮಯ್ಯನವರು.—ಈ ಲೆಕ್ಕಗಳನ್ನೆಲ್ಲಾ ತಾವು ಪ್ರತಿವರ್ಷವೂ ತನಿಖೆಗೆ ಒಳಪಡಿಸುತ್ತಿದ್ದೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು. - ಒಳಪಡಿಸುತ್ತಿದ್ದೇವೆ.

ಶ್ರೀ ಎಸ್. ರಂಗರಾಮಯ್ಯನವರು —ಈ ಸಾಲಿನಲ್ಲಿ ಎಷ್ಟು ನಾಟಾ ಬಂದಿದೆಯೆಂಬುದನ್ನು ಹೇಳಲಾಗುತ್ತದೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆ ವಿವರಗಳನ್ನೆಲ್ಲಾ ತಿಳಿಸಬೇಕಾದರೆ ನೋಟೀಸ್ ಬೇಕು.

ಶ್ರೀ ಎಸ್. ರಂಗರಾಮಯ್ಯನವರು.—ಅಳಲೇಕಾಯಿ ಇತ್ಯಾದಿಗಳ ಲೆಕ್ಕವನ್ನಾದರೂ ಹೇಳಬಲ್ಲಿರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದೇ ಉತ್ತರ.

ಶ್ರೀ ಎಸ್. ರಂಗರಾಮಯ್ಯನವರು.—ಈ ಖರ್ಚು ಪಟ್ಟಿಯನ್ನು ತಾವು ನೋಡೋಣವಾಗಲಿ. ಇಲ್ಲಿ 1950–51 ನೆಯ ಸಾಲಿಗೆ 12,890 ರೂಪಾಯಿಗಳ ಖರ್ಚನ್ನು ತೋರಿಸಲಾಗಿದೆ. ತಾವು ಈ ಜಂಗಲ್ಲನ್ನೇನಾದರೂ ಅಭಿವೃದ್ಧಿಪಡಿಸುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಪ್ಲಾಂಟೇಷನ್ ನಡೆಸಲಾಗುತ್ತಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಹೊಸದಾಗಿ ಎಷ್ಟು ಪ್ಲಾಂಟೇಷನ್ ಮಾಡಿಸಿದ್ದೀರಿ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಟೀಸ್.

ಶ್ರೀ ಎಸ್. ರಂಗರಾಮಯ್ಯನವರು. —ಅಂದಾಜು ಎಷ್ಟು ಗಿಡಗಳಾಗಬಹುದು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಟೀಸ್.

ಶ್ರೀ ಎಸ್. ರಂಗರಾಮಯ್ಯನವರು.—Capital works ಗೆ 4,410 ರೂ.ಗಳು 1948–49 ರಲ್ಲಿ ಖರ್ಚಾಗಿದೆ. ಆದರೆ ಅದರ ಹಿಂದಿನ ಮೂರು ವರ್ಷಗಳಲ್ಲಿ ತೀರಾ ಕಮ್ಮಿ ಆಗಿದೆ. ಇಷ್ಟು ಹೆಚ್ಚಾಗಲು ಕಾರಣವೇನು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಒಟ್ಟಿನಲ್ಲಿ ಮೊಬಲಗು ಜಾಸ್ತಿ ಖರ್ಚಾಗಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು. —Capital works ಅಲ್ಲದೆ Other works ಎಂತ ಬೇರೆ ಹೇಳಿದೆ. Other works ಎಂದರೆ ಯಾವುವು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇತರೇ ಖರ್ಚು ಬಾಬುಗಳನ್ನೆಲ್ಲಾ other works ಎಂದು ಹೇಳಿ ತಿಳಿಸಿದೆ.

ಶ್ರೀ ಎಸ್. ರಂಗರಾಮಯ್ಯನವರು.—(d) ಪ್ರಶ್ನೆಗೆ ಉತ್ತರವಾಗಿ ದೇವಸ್ಥಾನಕ್ಕೆ ಪ್ರತಿಸಾಲಿನಲ್ಲೂ 5,500 ರೂಪಾಯಿಗಳನ್ನು ಕೊಡಬೇಕೆಂದು ಹೇಳಿದೆ. ಹದಿನಾಲ್ಕು ವರ್ಷಗಳಿಗೆ ಕೊಡಬೇಕಾಗಿದ್ದ 77 ಸಾವಿರ ರೂಪಾಯಿಗಳ ಪೈಕಿ 25,648 ರೂಪಾಯಿಗಳು ಮಾತ್ರ ಜಮಾ ಮಾಡಿ ಬಾಕಿ 51,358 ರೂಪಾಯಿಗಳನ್ನು ಉಳಿಸಿದೆ. ಹೀಗೆ ಪ್ರತಿವರ್ಷವೂ ಆದಾಯ ಬರತ್ತಿದ್ದರೂ ಏಕೆ ಅದನ್ನು ಜಮಾಮಾಡಿಲ್ಲ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಈ ವರ್ಷ ಕೊಡುತ್ತೇವೆ ; ಬಾಕಿ ಉಳಿಯುವುದಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—5,500 ರೂಪಾಯಿಗಳು ದೇವಸ್ಥಾನದ ಪ್ರತಿನಿತ್ಯದ ಖರ್ಚು ಮತ್ತು ಸಂಬಳಯಾನಾ ಖರ್ಚು ಇವುಗಳಿಗಾಗಿ ವಿನಿಯೋಗವಾಗುತ್ತದಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದೂ ಇದರಲ್ಲಿ ಸೇರಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಈಗ ಬಾಕಿ 51,358 ರೂಪಾಯಿಗಳನ್ನು ಎಲ್ಲಿಟ್ಟಿದ್ದೀರಿ ? ಸೇವಿಂಗ್ಸ್ ಬ್ಯಾಂಕಿನಲ್ಲೋ ಅಥವಾ ಡಿಪಾಜಿಟ್ಟಿನಲ್ಲೋ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸರ್ಕಾರಿ ಟ್ರೆಜರಿಯಲ್ಲಿ.

ಶ್ರೀ ಎಸ್. ರಂಗರಾಮಯ್ಯನವರು.—ದೇವರಿಗೆ ಹೆಚ್ಚಾಗಿ ಬರಬೇಕೆಂದು ತಾವು ಮನಸ್ಸು ಮಾಡಲಿಲ್ಲವೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಯೋಚನೆ ಮಾಡುತ್ತೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಹಾಗಾದರೆ ಅಲ್ಲಿ ಪೂಜೆ ಪುನಸ್ಕಾರಗಳು ಸರಿಯಾಗಿ ನಡೆಯುತ್ತಿವೆಯೋ ಅಥವಾ ಕುಂಠಿತವಾಗಿಯೋ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಶಾಸ್ತ್ರೋಕ್ತವಾಗಿ, ವಿಧಿವತ್ತಾಗಿ ನಡೆಯುತ್ತಿವೆ.

ಶ್ರೀ ಎಸ್. ರಂಗರಾಮಯ್ಯನವರು.—ಅಲ್ಲಿಗೆ ತಸ್ತೀಕು ಏನಿದೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದಕ್ಕೆ ನೋಟೀಸ್ ಬೇಕು.

ಶ್ರೀ ಎಸ್. ರಂಗರಾಮಯ್ಯನವರು.—ಬಿಳಿಗಿರಿ ರಂಗನಬೆಟ್ಟಕ್ಕೆ ರಸ್ತೆ ಮಾಡಲು 40 ಸಾವಿರ ರೂಪಾಯಿಗಳ ಅಂದಾಜು ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬಂದಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಅದಕ್ಕೆ ಸರ್ಕಾರದವರು ಕೊಡುವುದೆಷ್ಟು? ಡಿಸ್ಟ್ರಿಕ್ಟ್ ಬೋರ್ಡ್‌ನಿಂದ ಎಷ್ಟು ಬರುತ್ತದೆ? ಈ ಫಂಡಿನಿಂದ ಎಷ್ಟು ಖರ್ಚು ಮಾಡುವುದಕ್ಕೆ ಏರ್ಪಾಡಾಗಿದೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಜಿಲ್ಲಾ ಬೋರ್ಡು ಪ್ರೆಸಿಡೆಂಟರು ಸ್ವಲ್ಪ ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎಸ್. ರಂಗರಾಮಯ್ಯನವರು.—ಬಾಕಿಯಾದ್ದನ್ನು ಸರ್ಕಾರದಿಂದ ಕೊಡುತ್ತೀರೋ ಅಥವ ಫಂಡಿನಿಂದ ಕೊಡುತ್ತೀರೋ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಈ ಫಂಡಿನಿಂದ ಹಣ ಒದಗಿಸುವುದಕ್ಕೆ ಆರ್ಡರಾಗಿದೆಯೆಂದು ಕಾಣುತ್ತದೆ. ನೋಡದೆ ಹೇಳಬಾರದು.

ಶ್ರೀ ಎಸ್. ರಂಗರಾಮಯ್ಯನವರು.—ಈ ರಸ್ತೆ ಮಂಜೂರಾಗಿ ಎಷ್ಟು ದಿವಸವಾಯಿತು?

The Hon'ble Sri H. SIDDAIYA.—Very recently.

ಶ್ರೀ ಎಸ್. ರಂಗರಾಮಯ್ಯನವರು.—ಜಾಗ್ರತೆಯಾಗಿ ಈ ಕೆಲಸ ಮಾಡುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಮಾಡಲಾಗುತ್ತದೆ.

ಮಾನ್ಯ ಶ್ರೀ ಎಸ್. ರಂಗರಾಮಯ್ಯನವರು.—ಈ ಫಂಡಿನಲ್ಲಿ ಬಾಕಿಯಿರುವ 1,358 ರೂಪಾಯಿಗಳನ್ನು ಎಷ್ಟು ದಿವಸದಲ್ಲಿ ಜಮಾ ಮಾಡುತ್ತೀರಿ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಈ ವರ್ಷದ ಆಖೈರಿನೊಳಗಾಗಿ ಎಲ್ಲಾ ಜಮಾ ಮಾಡುತ್ತೇವೆ.

Sri H. M. CHANNABASAPPA (Mysore District—General).—In the items of expediture chargeable to the forest revenue I do not find anywhere the local cess chargeable to Forest Revenue and credited to District Board funds. Why is it so ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅವರು ಕೇಳಿರುವುದು ಫಾರೆಸ್ಟ್ ವರಮಾನ ; ಅದಕ್ಕೆ ಉತ್ತರ ಹೇಳಿದೆ ?

Sri H. M. CHANNABASAPPA.—I am drawing your attention to the details of expenditure chargeable to forest revenue. Local cess on forest revenue, which is to be credited to the District Board is an item chargeable to Forest Revenue. Why has it not been included in the figures mentioned ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದನ್ನು ಈ ಪ್ರಶ್ನೆಯಲ್ಲಿ ಕೇಳದಿರುವಾಗ ಹೇಗೆ ನಾನು ಉತ್ತರ ಹೇಳುವುದು.

Sri H. M. CHANNABASAPPA.—Has that amount been collected by the Government ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಡಿ ಹೇಳಬೇಕು.

Sri H. M. CHANNABASAPPA.—Are the Government aware that local cess on forest revenue within the jurisdiction of the District Boards is an item chargeable to forest revenue ?

Mr. SPEAKER.—How does it arise ?

Sri H. M. CHANNABASAPPA.—I would like to submit that I have got a list of items of expenditure chargeable to forest revenue and surplus amounts transferred.

Mr. SPEAKER.—The amount has been collected and credited to the District Board already.

Sri H. M. CHANNABASAPPA.—No. They want all amenities but they do not pay the cess and the Government do not take action to collect the cess. Will the Government, in the circumstances, examine and see that the amount legitimately due to the District Board and chargeable to forest revenue will be made good ?

The Hon'ble Sri H. SIDDAIYA.—Yes. If it is due, it will be paid.

———

Appointment of Amildars from approved Amildari List on communal representation.

Q.—274. Sri K. H. MUDIYAPPA (Chikmagalur District—General):—

Will the Government be pleased to state :—

(*a*) the number of persons still to be appointed, from out of the approved Amildari list ;

(*b*) when these remaining persons will be appointed to the Amildars' posts ;

(*c*) (i) whether they have constituted a Committee to reconsider this Amildari list ;

(ii) if so, when ;

(*d*) when the report of that Committee was submitted ; and when appointments will be made according to that report ;

(*e*) whether provision is made for communal representation in the list submitted by that Committee ;

(*f*) whether that list can be placed before the House ?

A.—The Hon'ble Sri H. SIDDAIYA (Minister for Revenue and Excise).—

(*a*) Ten.

(*b*) As and when vacancies arise.

(*c*) (i) Yes.

(ii) In October 1949.

(*d*) On 3rd January 1950. Cannot be stated now.

(*e*) Yes.

(*f*) No. It is confidential.

ಶ್ರೀ ಕೆ. ಎಚ್. ಮುದಿಯಪ್ಪನವರು.—ಅಮಲ್ದಾರಿಗೆ ನೇಮಿಸಲ್ಪಡಬೇಕಾದವರು ಇನ್ನೂ ಹತ್ತು ಮಂದಿ ಇದ್ದಾರೆಂದು ಹೇಳಿದೆ. ಆ ಪಟ್ಟಿಯನ್ನು ಯಾವಾಗ ಅನುಮೋದಿಸಲಾಯಿತು?

*ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನಾಲ್ಕು ವರ್ಷಗಳಿಗೆ ಮುಂಚೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಅದರಲ್ಲಿ ಸೇರಿರುವ ಜನರ ಸಂಖ್ಯೆಯೆಷ್ಟು?

The Hon'ble Sri H. SIDDAIYA.—About 40.

ಶ್ರೀ ಕೆ. ಎಚ್. ಮುದಿಯಪ್ಪನವರು.—ಅದರಲ್ಲಿ ಕೋಮುವಾರು ಪ್ರಾತಿನಿಧ್ಯವಿದೆಯೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದರಲ್ಲಿ ಅನೇಕ ಕೋಮಿನವರಿದ್ದಾರೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಆ ಹತ್ತು ಮಂದಿಗಳಿಗೆ ಕೆಲಸ ಒದಗಿಸುವುದಕ್ಕೆ ಎಷ್ಟು ದಿವಸವಾಗಬಹುದು? ಈಗ ಪಟ್ಟಿ ಮಾಡಿ ನಾಲ್ಕು ವರ್ಷ ಆಯಿತು. ಇನ್ನೆಷ್ಟು ಕಾಲದಲ್ಲಿ ಅವರಿಗೆ ಹುದ್ದೆ ಸಿಕ್ಕಬಹುದು?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲಸ ಖಾಲಿ ಬಿದ್ದಾಗ ಒದಗಿಸುತ್ತೇವೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಅನುಮೋದಿಸಲ್ಪಟ್ಟಿರುವ ಪಟ್ಟಿಯ ಪ್ರಕಾರ ಅಮಲ್ದಾರಿಗೆ ನೇಮಕ ಮಾಡುತ್ತೀರೋ ಅಥವಾ ಬೇರೆ ಇಲಾಖೆಯವರಿಂದ ಬರುವ ಶಿಫಾರ್ಸಿನ ಮೇರೆಗೆ ನೇಮಿಸುತ್ತೀರೋ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಪಟ್ಟಿಯ ಪ್ರಕಾರ ನೇಮಕ ಮಾಡುತ್ತೇವೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಈಗ ಹೊಸದಾಗಿ ಒಂದು ಸಮಿತಿ ಮಾಡಿದೆಯೆಂದು ಹೇಳಿದೆ. ಆ ಸಮಿತಿಯಲ್ಲಿರುವವರು ಯಾರು ಎಂದು ಹೇಳುವುದಕ್ಕೆ ಸಾಧ್ಯವೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಐದು ಮಂದಿ ಆಫೀಸರುಗಳಿದ್ದಾರೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಯಾರ್ಯಾರು, ಯಾವ ಇಲಾಖೆಗೆ ಸಂಬಂಧಪಟ್ಟವರು ಎಂದು ಹೇಳುವುದಕ್ಕೆ ಸಾಧ್ಯವೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲವರು ಗೊತ್ತು, ಇನ್ನು ಕೆಲವರು ಯಾರೆಂಬುದು ಜ್ಞಾಪಕವಿಲ್ಲ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಈಗ ಇನ್ನೊಂದು ಪಟ್ಟಿ ಬಂದಿದೆ. ಅದನ್ನು ಅನುಮೋದಿಸಿದ ಮೇಲೆ ನೀವೇ ನೇಮಕ ಮಾಡುತ್ತೀರಾ ಅಥವಾ ಸರ್ಕಾರದವರು ಹೊಸದಾಗಿ ರಚಿಸಿರುವ ಪಬ್ಲಿಕ್ ಸರ್ವಿಸ್ ಕಮಿಷನ್‌ಗೆ ಆ ಪಟ್ಟಿಯನ್ನು ಕಳುಹಿಸುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—It is under consideration ಎಂದು ಮೊನ್ನೆಯೇ ಹೇಳಿದೆ. ಈಗಲೂ ಅದೇ ಉತ್ತರ ಪುನಃ ಹೇಳಬೇಕೆ?

ಶ್ರೀ ಕೆ. ಎಚ್. ಮುದಿಯಪ್ಪನವರು.—ದಯವಿಟ್ಟು ತಪಶೀಲನ್ನು ಹೇಳುವಿರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆ ಪಟ್ಟಿಯನ್ನು ಅಲ್ಲಿಗೆ ಕಳುಹಿಸಬೇಕೆ ಅಥವಾ ಸರ್ಕಾರದವರು ಮಾಡಬಹುದೆ, 5 ಮಂದಿ ಆಫೀಸರುಗಳು ಸರ್ವಾನುಮತದಿಂದ ಒಪ್ಪಿ ಕಳುಹಿಸಿರುವುದನ್ನು ಅನುಮೋದಿಸಬಹುದೆ ಎಂಬುದು ಆಲೋಚನೆಯಲ್ಲಿದೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಈಗ ಪಟ್ಟಿಯಲ್ಲಿರುವವರ ಸಂಖ್ಯೆಯೆಷ್ಟು?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಡಿ ಹೇಳಬೇಕು.

ಶ್ರೀ ಕೆ. ಎಚ್. ಮುದಿಯಪ್ಪನವರು.—ಎಲ್ಲಾ ಜಾತಿಗಳಿಗೂ ಪ್ರಾತಿನಿಧ್ಯವಿದೆಯೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅನೇಕ ಕೋಮಿನವರಿದ್ದಾರೆ.

Sri A. BHEEMAPPA NAIK (Chitaldrug District—General).—Will the number of candidates that have been recommended already be reduced in any way ?

The Hon'ble Sri H. SIDDAIYA.—It is not yet considered and disposed of. So I am unable to say what would be the principle, etc.

Sri A. BHEEMAPPA NAIK.—Have the committee made some special recommendations in the case of some candidates ? Have not the committee

recommended the names of about 60 candidates ?

The Hon'ble Sri H. SIDDAIYA.—The Hon'ble Member seems to know more than myself.

Sri A. BHEEMAPPA NAIK.—What we have heard, we are saying. If it is not true, the Government may say 'no'.

The Hon'ble Sri H. SIDDAIYA.—That is a matter of confidential nature.

Sri A. BHEEMAPPA NAIK.—On account of age question some will become ineligible due to the delay caused by this Ministry in enlisting these names. Is it not so ?

The Hon'ble Sri H. SIDDAIYA.—Even the old list is not exhausted. You can make it out from the answer.

Sri A. BHEEMAPPA NAIK.—Will not age be taken into consideration in enlising the names ?

The Hon'ble Sri H. SIDDAIYA.—Yes, it counts.

Sri A. BHEEMAPPA NAIK.—Since the delay is due to the Ministry not preparing the list in time, all those on account of over age, may suffer. Is it not ?

The Hon'ble Sri H. SIDDAIYA.—There is no delay on the part of the Ministry. The old list itself is not yet exhausted and therefore a fresh list, whether it is prepared or not, does not much matter. Any how I can give the assurance that in respect of those who are already in the list, the age bar will be considered.

Sri A. BHEEMAPPA NAIK.—I am thinking of the new list that is under preparation. In that list will the age be taken into consideration on the date of enlisting their names ?

The Hon'ble Sri H. SIDDAIYA.—I said that we will sympathetically consider their cases.

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ—ನಿಮ್ನ ಪಂಗಡ).—1950ನೆಯ ಇಸವಿ ಜನವರಿ ಮೂರನೆಯ ತಾರೀಖಿನಲ್ಲಿ ಪಟ್ಟಿ ಬಂದಿದೆಯೆಂದು ಹೇಳುತ್ತೀರಿ. ಇದುವರೆಗೆ ಏಕೆ ಅನುಮೋದಿಸಲಿಲ್ಲ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇನ್ನೂ ಮೊದಲನೆಯ ಪಟ್ಟಿಯಲ್ಲೇ ಬೇಕಾದಷ್ಟು ಜನ ಇರುವುದರಿಂದ ಅವಸರವಿಲ್ಲದೆ ನಿಧಾನವಾಗಿದೆ.

ಶ್ರೀ ಎಂ. ಮಾದಯ್ಯನವರು.—ಎಷ್ಟು ವಯಸ್ಸಿನವರೆಗೆ ಈ ಪಟ್ಟಿಗೆ ಸೇರಲು ಅವಕಾಶವಿರುತ್ತದೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸಾಮಾನ್ಯವಾಗಿ 40 ವರ್ಷದವರೆಗೂ ಅವಕಾಶವಿರುತ್ತದೆ.

ಶ್ರೀ ಎಂ. ಮಾದಯ್ಯನವರು.—ಸಮಿತಿಯವರು ಹೆಸರುಗಳನ್ನು ಸೇರಿಸಿ ಕಳುಹಿಸಿದ್ದಾರಲ್ಲಾ ಆ ಪಟ್ಟಿಯಲ್ಲಿ ಅವರ ಹೆಸರು ನಮೂದಾಗಿರಬೇಕೇ ಅಥವಾ ಸರ್ಕಾರದವರು ಅಪ್ರೂವ್ ಮಾಡಿರುವ ಪಟ್ಟಿಯಲ್ಲಿ ನಮೂದಾಗಿರಬೇಕೇ ?

The Hon'ble Sri H. SIDDAIYA.—It is a difficult question to answer. If they are already in the list, I said their cases will be considered.

ಶ್ರೀ ಎಂ. ಮಾದಯ್ಯನವರು.—ತಾವು ಅಪ್ರೂವ್ ಮಾಡಿರುವುದರಲ್ಲಿ 40 ವರ್ಷ ವಯಸ್ಸಿಗೆ ಮೇಲ್ಪಟ್ಟ ಹಿಂದುಳಿದ ಜನಾಂಗದವರು ಇದ್ದರೆ ಬಿಟ್ಟು ಬಿಡುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಉತ್ತರ ಕೊಟ್ಟಿದ್ದೇನೆ. ಆ ಪಟ್ಟಿಯಲ್ಲಿ ಹೆಸರಿದ್ದು, ನಲವತ್ತು ವರ್ಷ ವಯಸ್ಸಿದ್ದರೆ ಪರವಾಗಿಲ್ಲ.

ಶ್ರೀ ಎಂ. ಮಾದಯ್ಯನವರು.—(e) ಪ್ರಶ್ನೆಯಲ್ಲಿ whether provision is made for communal representation in the list submitted by the Committee ಎಂದು ಕೇಳಿರುವುದಕ್ಕೆ "yes" ಎಂದು ಹೇಳಿರುತ್ತೀರಿ. ಯಾವ ಆಧಾರದ ಮೇಲೆ ಕೋಮುವಾರು ಪ್ರಾತಿನಿಧ್ಯ ಕೊಡುವ ನೀತಿ ಇದೆ ?

The Hon'ble Sri H. SIDDAIYA.—There are so many considerations.

Sri M. MADIAH.—May I know how many and what they are ?

The Hon'ble Sri H. SIDDAIYA.—Backwardness, population, their education and many other factors.

ಶ್ರೀ ಎಂ. ಮಾದಯ್ಯನವರು.—ವಿದ್ಯಾರ್ಹತೆಯಲ್ಲಿ ಎಲ್ಲರ ಜೊತೆಗೂ ಸರಿಸಮಾನವಾಗಿದ್ದರೆ ಹಿಂದೆ ಆಯಾಯ ಕೋಮುಗಳ ಪ್ರಾತಿನಿಧ್ಯ ಅಮಲ್ದಾರಿ ಕೇಡರ್‌ನಲ್ಲಿ ಎಷ್ಟಿದೆ ಎಂಬುದನ್ನು ನೋಡಿ ಮುಂದೆ ಅವರಿಗೆ ವೇಟೇಜ್ ಕೊಡುವ ಹಾಗೆ, ಸಾಕಷ್ಟು ಪ್ರಾತಿನಿಧ್ಯ ಬರುವ ರೀತಿಯಲ್ಲಿ ಅದು ಇದೆಯೇ ? ಮತ್ತು what are the other factors ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕಾನ್ಸ್ಟಿಟ್ಯೂಷನ್ ಆಕ್ಟ್‌ನಲ್ಲಿ ಅದಕ್ಕೆಲ್ಲಾ ಅವಕಾಶವಿದೆ; ಅದನ್ನು ಗಮನಿಸಿದೆ.

ಶ್ರೀ ಎಂ. ಮಾದಯ್ಯನವರು.—ಸಾಕಷ್ಟು ಪ್ರಾತಿನಿಧ್ಯ ಬರುವುದಕ್ಕೆ ಇದ್ದೇ ಇರಬೇಕಾದ ಸಂಖ್ಯೆಯನ್ನು ತೆಗೆದುಕೊಂಡು ನಿಶ್ಚಯಿಸುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—Exhaustive ಆಗಿ ಹೇಳುವುದು ಸರಿಯಲ್ಲವೆಂದು ಹೇಳುತ್ತೇನೆ.

ಅಧ್ಯಕ್ಷರು.—ಸಮಾಚಾರ ಏನಾದರೂ ಕೇಳಿ. ಪ್ರಶ್ನೋತ್ತರಗಳ ಕಾಲದಲ್ಲಿ ಚರ್ಚೆಮಾಡುವುದು ಸೂಕ್ತವಲ್ಲ.

ಶ್ರೀ ಎಂ. ಮಾದಯ್ಯನವರು.—ಭಾರತದ ರಾಜ್ಯಾಂಗದಲ್ಲಿ ಸೇಫ್‌ಗಾರ್ಡ್ಸ್‌ಗೆ ಪ್ರಾವಿಷನ್ ಇರುವಾಗ ಅದನ್ನು ಜಾರಿಗೆ ಕೊಡಬೇಕಾದ್ದು ಸರ್ಕಾರದ ಕರ್ತವ್ಯವಲ್ಲವೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಜಾರಿಗೆ ಕೊಡುವುದಿಲ್ಲ ಎಂದು ಹೇಳಿಲ್ಲ.

ಶ್ರೀ ಎಂ. ಮಾದಯ್ಯನವರು.—ಹಾಗಾದರೆ ಆದಷ್ಟು ಬೇಗ ಏಕೆ ಜಾರಿಗೆ ಕೊಡಬಾರದು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲಸಗಳು ಖಾಲಿಬೀಳಬೇಕು ಎಂದು ಹೇಳಿದೆ.

ಶ್ರೀ ಎಂ. ಮಾದಯ್ಯನವರು.—ಜನವರಿ 1950ರಿಂದ ಖಾಲಿ ಬೀಳಲಿಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆದರೂ ಇನ್ನೂ ಏಳು ಜನ ಇದ್ದಾರೆ.

ಶ್ರೀ ಎಂ. ಮಾದಯ್ಯನವರು.—ಸಾಕಷ್ಟು ಪ್ರಾತಿನಿಧ್ಯವಿಲ್ಲದಿದ್ದರೆ. ಫೈನಲ್ ಲಿಸ್ಟಿನಲ್ಲಿರುವವರಿಗೆ ಕೊಡುವುದಕ್ಕೆ ಮುನ್ನ ಅಂಥ ಕೋಮಿನವರಲ್ಲಿ ತಕ್ಕ ವಿದ್ಯಾರ್ಹತೆ ಇರುವವರು ಇದ್ದರೆ ಅವರನ್ನು ನೇರವಾಗಿ ಏಕೆ ನೇಮಕಮಾಡಬಾರದು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ತಮ್ಮ ಈ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳಲಾಗುತ್ತದೆ.

Sri Kadidal MANJAPPA (Shimoga District–General).—Is Malnad taken into account in preparing the list ?

The Hon'ble Sri H. SIDDAIYA.—It is a difficult question to answer.

ಶ್ರೀ ಬಿ. ಎಂ. ಶಾಮಣ್ಣಗೌಡರು (ಬೆಂಗಳೂರು ರಿಟ್ರಾನ್ಸೀಡೆಡ್ ಪ್ರದೇಶ).—ಆ ಸಮಿತಿಯವರು ಮಾಡಿದ ಶಿಫಾರಸಿನಮೇಲೆ ಕೊಟ್ಟಿದ್ದೀರಾ ಅಥವಾ ಅರ್ಹತೆಯಮೇಲೆ ಕೊಟ್ಟಿದ್ದೀರಾ ?

The Hon'ble Sri H. SIDDAIYA.—Educational qualfication, population, backwardness, among others.

ಶ್ರೀ ಬಿ. ಎಂ. ಶಾಮಣ್ಣಗೌಡರು.—ಅರ್ಹತೆಗೆ ಮೊದಲು ಪ್ರಾಮುಖ್ಯತೆ ಕೊಡುತ್ತೀರಾ ?

ಮಾನ್ಯ ಶ್ರೀ ಎಚ್ ಸಿದ್ದಯ್ಯನವರು.—ಅದಕ್ಕೆ ಬೇಕಾದಷ್ಟು ಪ್ರಾಮುಖ್ಯತೆ ಕೊಟ್ಟಿದೆ.

ಶ್ರೀ ಎಂ. ಗೋವಿಂದರೆಡ್ಡಿಯವರು (ಚಿತ್ರದುರ್ಗ ಜಿಲ್ಲೆ).—ಫಸ್ಟ್ ಲಿಸ್ಟ್ ಫೈನಲ್ಸ್ ಆದದ್ದು ಯಾವಾಗ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬಹಳ ದಿನದ ಹಿಂದೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಫಸ್ಟ್ ಲಿಸ್ಟ್ ಪೂರ್ತಿ ಆಗಿ ಸೆಕೆಂಡ್ ಲಿಸ್ಟ್ ಪ್ರಾರಂಭವಾದದ್ದು ಯಾವಾಗ ಎಂಬುದನ್ನು ಹೇಳುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸೆಕೆಂಡ್ ಲಿಸ್ಟ್ ಪ್ರಾರಂಭವಾಗಿಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಈ ಲಿಸ್ಟಿನಲ್ಲಿ ಬದಲಾವಣೆಮಾಡುವವರು ಅಥವಾ ಹೆಚ್ಚುಕಮ್ಮಿ ಮಾಡುವವರು ಯಾರು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕ್ಯಾಬಿನೆಟ್.

ಶ್ರೀ ಎಂ. ಗೋವಿಂದರೆಡ್ಡಿಯವರು.—ಫಸ್ಟ್ ಲಿಸ್ಟಿನಲ್ಲಿ ಅನೇಕಸಾರಿ ಹೆಚ್ಚುಕಮ್ಮಿ, ಬದಲಾವಣೆ ಆಗಿದೆ ಎಂಬ ವದಂತಿ ಇದೆ. ಅದು ನಿಜವೆ ?

The Hon'ble Sri H. C. DASAPPA.—I do not think so.

ಶ್ರೀ ಎಂ. ಗೋವಿಂದರೆಡ್ಡಿಯವರು.—ಈ ಲಿಸ್ಟಿನಲ್ಲಿ ಷೆಡ್ಯೂಲ್ಡ್ ಕ್ಲಾಸ್ ಕ್ಯಾಂಡಿಡೇಟ್ಸ್ ಇದ್ದಾರೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇದ್ದಾರೆ.

ಶ್ರೀ ಎಂ ಗೋವಿಂದರೆಡ್ಡಿಯವರು.—ಎಷ್ಟು ಜನ ಇದ್ದಾರೆ ಎಂಬುದನ್ನು ಹೇಳುವುದಕ್ಕಾಗುತ್ತದೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಜ್ಞಾಪಕ ಇಲ್ಲ. ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ನೇಮಕ ಮಾಡುವಾಗ ಆರ್ಡರ್ ಆಫ್ ಮೆರಿಟ್‌ನಂತೆ ಮಾಡುತ್ತೀರಾ ಅಥವಾ ಸರ್ಕಾರದವರು ಮಾಡಿರುವ ಲಿಸ್ಟ್ ಪ್ರಕಾರಮಾಡುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—According to their pay and service, among other things ಮಾಡುತ್ತಾರೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಅದರಲ್ಲಿ ಬ್ಯಾಕ್‌ವರ್ಡ್ ಕಮ್ಯುನಿಟಿ ಮತ್ತು ಡಿಪ್ರೆಸ್ಡ್‌ಕ್ಲಾಸ್ ಕಮ್ಯುನಿಟಿಯವರಿಗೆ ಅವಕಾಶ ಕೊಡಬೇಕಾದುದು ಅಗತ್ಯವಾದುದರಿಂದ ಅದನ್ನು ಸರ್ಕಾರದವರು ಮನಸ್ಸಿನಲ್ಲಿಟ್ಟುಕೊಳ್ಳುತ್ತಾರೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಟ್ಟುಕೊಳ್ಳುತ್ತಾರೆ.

Janab SYED ABDUR RAHMAN (Chikmagalur *cum* Shimoga--Muslim).—Does the Hon'ble Minister feel delicate to answer about Malnad represen. tation ?

(No answer)

Janab SYED ABDUR RAHMAN.—Will the Malnad be given proper representation at least ?

The Hon'ble Sri H. SIDDAIYA.—If there are qualified people, people who are really deserving, their cases cannot be ignored.

Janab SYED ABDUR RAHMAN.—Do they not comparatively deserve better representation than others ?

(No answer)

Sri D. H. CHANDRASEKHARAIYA (Chitaldrug District—General).—May I know how many vacancies generally occur every year in Amildari service ?

The Hon'ble Sri H. SIDDAIYA.—Within these four years about 40 to 43 vacancies have occurred.

Sri D. H. CHANDRASEKHARAIYA.—Shall I take it that about 10 to 12 vacancies occur every year ?

The Hon'ble Sri H. SIDDAIYA.—We may say so.

Sri D. H. CHANDRASEKHARAIYA.—If it is so, will the existing list be exhausted in about one year ?

The Hon'ble Sri H. SIDDAIYA.—Likely.

Sri D. H. CHANDRASEKHARAIYA.—So will you take in persons from the second list which is now being prepared for approval about one year hence ?

The Hon'ble Sri H. SIDDAIYA.—We need not wait for such a long time. We will dispose of it very early and the list finalised.

Sri D. H. CHANDRASEKHARAIYA.—May I know whether the list which is going to be finalised will be implemented a year hence or even earlier as the Hon'ble Minister was pleased to say ?

The Hon'ble Sri H. SIDDAIYA.—Earlier.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ) —ಇದು ಡಿಸ್ಟ್ರಿಕ್ಟ್‌ವಾರು ಹಂಚಿಕೆ ಆಗುವುದಕ್ಕೆ ಏರ್ಪಾಡುಮಾಡಿದ್ದೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಲ್ಲ.

ಶ್ರೀ ಎಸ್ ರಂಗರಾಮಯ್ಯನವರು.—ಈಗಿನ ಕಾಲದಲ್ಲಿ ಕೆಲಸ ಕೊಡುವಾಗ ಅವರ ತಂದೆಯವರು ಅವರಕಾಲದಲ್ಲಿ ದೊಡ್ಡದೊಡ್ಡ ಕೆಲಸಮಾಡಿದ್ದರು ಅಂತ ಕೊಡುವುದನ್ನು ಇಟ್ಟುಕೊಂಡಿದ್ದೀರಾ ? ಇಲ್ಲವೇ ಗ್ರಾಮಾಂತರದಿಂದ ಬಂದವರು ಎಂಬುದನ್ನು ಆಲೋಚನೆಮಾಡುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅವೆಲ್ಲವನ್ನೂ ಪರಿಶೀಲನೆಮಾಡುತ್ತೇವೆ.

Sri H. C. LINGA REDDY (Kolar District—General).—Is it true that every year you prepare lists of those people fit for Amildari service ?

The Hon'ble Sri H. SIDDAIYA.—Not every year ; as and when necessity arises.

Sri H. C. LINGA REDDY.—Is it true that till the list is exhausted you will not prepare another list ?

The Hon'ble Sri H. SIDDAIYA.—I said that the second list will be prepared earlier before the first list is exhausted.

Sri H. C. LINGA REDDY.—So shall I take it that until the first list is exhausted you will not prepare another list ?

The Hon'ble Sri H. SIDDAIYA.—I said that before the first list is exhausted the second list will be prepared.

Sri H. C. LINGA REDDY.—Will you go according to the list prepared ?

The Hon'ble Sri H. SIDDAIYA.—That will be considered by the Government.

Sri H. C. LINGA REDDY.—Shall I take it that all persons whose names are mentioned in the list cannot be appointed ?

The Hon'ble Sri H. SIDDAIYA.—I cannot say.

Sri G. VEERAPPA (Chitaldrug District—General).—Is it not a fact that the Public Service Commissioner was a member of that Committee ?

The Hon'ble Sri H. SIDDAIYA.—The Public Service Commissioner, the Revenue Commissioner, the Education Secretary, the Revenue Secretary, and the Deputy Commissioner, Mysore District were members of that Committee.

Sri G. VEERAPPA.—In view of that is it necessary to send the list to the Public Service commission now ?

The Hon'ble Sri H. SIDDAIYA.—Whether the list should be sent to the Public Service Commission or not will have to be considered.

Sri G. VEERAPPA.—Is is not desirable, to avoid delay, for Government to proceed with making the appointments instead of sending the list to the Public Service Commission ?

The Hon'ble Sri H. SIDDAIYA.—There would be no delay even if this list is sent to the Public Service Commission. But, whether it is desirable at this distance of time to send it to the Public Service Commission is the matter under consideration.

ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ).—ಅಮಲ್ದಾರಿ ಲಿಸ್ಟಿನಲ್ಲಿರುವವರು ಅಮಲ್ದಾರಿ ಹುದ್ದೆಗೆ ಬಡ್ತಿ ಹೊಂದುವುದಕ್ಕೆ ಮೊದಲು ಸಚಿವರ ಹತ್ತಿರ ಪರ್ಸನಲ್ ಅಸಿಸ್ಟೆಂಟ್ ಆಗಿ ಕೆಲಸಮಾಡಿಕೊಂಡಿರುವುದು ಉತ್ತಮವಲ್ಲವೇ.

(ಉತ್ತರವಿಲ್ಲ.)

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—ಈ ಅಮಲ್ದಾರಿ ಲಿಸ್ಟಿನ ಪ್ರಕಾರ ತಾವು ಕೆಲಸ ಕೊಡುವುದರಲ್ಲಿ ಮೈದಾನ ಪ್ರದೇಶಗಳವರಿಗಿಂತ ಮಲೆನಾಡಿನ ಪ್ರದೇಶದವರಿಗೆ ಹೆಚ್ಚಿಗೆ ಅವಕಾಶ ಕೊಡುತ್ತಿದೆಯೆಂದು ಹೇಳುತ್ತಿದ್ದಾರೆ, ಇದು ಸರಿಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—It is a very difficult question to answer. 'ಇಲ್ಲ' ಎಂದು ಆಗಲೇ ಹೇಳಿದೆ. ಆದರೂ ಅವರ ಕ್ಲೈಮ್ಸಿನನ್ನೇನೂ ಕೈಬಿಡುವುದಿಲ್ಲವೆಂದು ಹೇಳಬಲ್ಲೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು (ಬೆಂಗಳೂರು ಜಿಲ್ಲೆ).—ಈ ಪಟ್ಟಿಯಲ್ಲಿನ ಪ್ರಕಾರ ನೇಮಕಮಾಡುವುದರಲ್ಲಿ ಸೀರಿಯಲ್ ಆರ್ಡರ್ ಪ್ರಕಾರ ತಾನೆ ತಾವು ಕೊಡುವುದು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹೌದು.

ಶ್ರೀ ಡಿ. ಎಂ. ಸಿದ್ದಯ್ಯನವರು.—ತಾವು ಈಗ ಹೇಳಿದಂತೆ ವಿದ್ಯಾರ್ಹತೆ, ಯೋಗ್ಯತೆ, ಅನುಭವ ಇರುವವರಿಗೆ ಕೊಡುವುದರಲ್ಲಿ, ಆ ರೀತಿ ಅರ್ಹತೆಗಳು ಮೈದಾನದ ಡಿಸ್ಟ್ರಿಕ್ಟಿನಲ್ಲಿರುವವರಿಗೂ ಇದ್ದರೆ ಕೊಡುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಮೈದಾನ ಡಿಸ್ಟ್ರಿಕ್ಟ್‌ಗಳಲ್ಲಿಯೂ ಎಷ್ಟೋ ಜನರಿಗೆ ಕೊಟ್ಟಿದೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಮೈಸೂರು ಡಿಸ್ಟ್ರಿಕ್ಟಿನಲ್ಲಿ ಬಹಳ ಕಡಮೆ ಜನರಿಗೆ ಕೊಟ್ಟಿದೆಯೆಂಬುದು ತಮಗೆ ಗೊತ್ತಿದೆಯೇ;

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ಅಭಿಪ್ರಾಯ.

Boys' and Girls' Primary Schools in rural parts in Mysore District.

Q.—282. Sri T. C. HONNAPPA (Mysore District—General).—

Will the Government be pleased to state :—

(*a*) (i) the number of boys' and girls' primary schools in the rural parts of Mysore District;

(ii) the number of male and female teachers in these schools?

(*b*) (i) the number of villages in Mysore District where there are still no schools, their names;

(ii) whether steps have been taken to grant schools to such villages;

(iii) If so, within what period they would be granted, what steps have been taken in this behalf;

(*c*) (i) Whether it is possible for the Government to open primary schools by providing the necessary buildings themselves in the case of villages that are not able to provide the same;

(ii) the policy of Government in the matter?

A.—The Hon'ble Sri R. CHENNIGARAMIAH (Minister for Local Self-Government).—

(*a*) (i) 1,162 Boys' Primary Schools and 35 Girls' Primary Schools;

(ii) 1,593 male teachers and 35 female teachers.

(*b*) (i) 667; the information is being collected.

(ii) Yes, gradually every year.

(iii) It is not possible to say when exactly all of them will be given schools as it depends upon the funds available every year for the opening of new Primary Schools.

(*c*) (i) This will be done as far as possible.

(ii) Schools are given to deserving places where there are building facilities readily available.

ಶ್ರೀ ಟಿ. ಸಿ. ಹೊನ್ನಪ್ಪನವರು.—(b) ಪ್ರಶ್ನೆಗೆ ಉತ್ತರದಲ್ಲಿ ಅಂಕಿಯನ್ನು ಮಾತ್ರ ಹೇಳಿದ್ದೀರಿ. ಗ್ರಾಮಗಳ ಹೆಸರನ್ನು ಕೇಳಿರುವುದಕ್ಕೆ 'ವಿವರಗಳನ್ನು ಶೇಖರಿಸಲಾಗುತ್ತಿದೆಯೆಂದು' ಹೇಳಿದ್ದೀರಿ. ಸಾಧಾರಣವಾಗಿ ವಿದ್ಯಾ ಇಲಾಖೆಯವರು ಯಾವ್ಯಾವ ಗ್ರಾಮಗಳಿಗೆ ಸ್ಕೂಲುಗಳನ್ನು ಕೊಟ್ಟಿದೆ, ಇನ್ನೂ ಉಳಿದಿರತಕ್ಕವುಗಳೆಷ್ಟು ಎಂದು ಗ್ರಾಮಗಳ ಹೆಸರು, ಮ್ಯಾಪ್ ತಯಾರಿಸಿಟ್ಟುಕೊಂಡು ಅದರಮೇಲೆ ಯಾವ್ಯಾವ ರೀತಿ ಕೊಡಬೇಕೆಂದು ಪ್ರೈಯಾರಿಟಿ ಲಿಸ್ಟ್ ಮಾಡಿಕೊಂಡು ಕೊಡುವುದು ನ್ಯಾಯವಲ್ಲವೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಮ್ಯಾಪ್ ಇಟ್ಟುಕೊಂಡಿದೆ. ಆದರೆ ಎಲ್ಲಾ ಹಳ್ಳಿಗಳಿಗೂ ಕೊಡುವುದಕ್ಕಾಗುವುದಿಲ್ಲ. ಆಯಾ ಸ್ಥಳದಲ್ಲಿರುವ ಹುಡುಗರ ಸಂಖ್ಯೆ, ಅಲ್ಲಿನ ಅವಶ್ಯಕತೆ, ಇರತಕ್ಕ ಅನುಕೂಲ ಎಲ್ಲಾ ನೋಡಿಕೊಂಡು ಕೊಡಬೇಕಾಗುತ್ತದೆ. ತಾವು ಕೇಳಿರುವ ಪ್ರಶ್ನೆ ಎಷ್ಟು ಗ್ರಾಮಗಳಲ್ಲಿ ಸ್ಕೂಲಿಲ್ಲವೆಂದು ಹೆಸರುಗಳನ್ನು ತಿಳಿಸಲು, ಪಟ್ಟಿ ಸಿದ್ಧವಾಗಿ ಸಿಕ್ಕದಿರುವುದರಿಂದ ಕೊಟ್ಟಿಲ್ಲ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಊರುಗಳ ಹೆಸರನ್ನು ಗೊತ್ತುಮಾಡುವುದಕ್ಕಾಗುವುದಿಲ್ಲವೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಗೊತ್ತಾಗುತ್ತದೆ. ಸದ್ಯದಲ್ಲಿ ಆ ಸಮಾಚಾರ ಸಿಕ್ಕುವುದಿಲ್ಲ ಅಷ್ಟೆ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಮೊದಲೇ ಡಿಪಾರ್ಟ್‌ಮೆಂಟ್‌ನವರು ಇಂತಿಂಥಾ ಊರಿನಲ್ಲಿ ಸ್ಕೂಲಿದೆ, ಇಂಥಾ ಊರಿನಲ್ಲಿ ಇಲ್ಲ ಎಂದು ಪಟ್ಟಿ ಇಟ್ಟಿಲ್ಲವೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಒಟ್ಟು ಸ್ಕೂಲುಗಳ ಸಂಖ್ಯೆಯನ್ನು ಹೇಳಿದ್ದಾರೆ. ಎಲ್ಲಾ ಹೆಸರುಗಳೂ ಬೇಕಾದರೆ ಶೇಖರಿಸಿ ಹೇಳಬೇಕು.

ಶ್ರೀ ಟಿ. ಸಿ. ಹೊನ್ನಪ್ಪನವರು.—ಮೈಸೂರು ಡಿಸ್ಟ್ರಿಕ್ಟಿನಲ್ಲಿ ಎಷ್ಟು ತಾಲ್ಲೂಕಿನಲ್ಲಿ ಬಲಾತ್ಕಾರದ ವಿದ್ಯಾಭ್ಯಾಸಕ್ರಮ ಜಾರಿಯಲ್ಲಿದೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಪ್ರೈಮರಿ ವಿದ್ಯಾಭ್ಯಾಸದಲ್ಲಿ ಬಲಾತ್ಕಾರ ವಿದ್ಯಾಭ್ಯಾಸ ಪದ್ಧತಿಯು ಎಷ್ಟು ತಾಲ್ಲೂಕುಗಳಲ್ಲಿ ಜಾರಿಯಲ್ಲಿದೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ನೋಟೀಸ್ ಬೇಕು.

ಶ್ರೀ ಟಿ. ಸಿ. ಹೊನ್ನಪ್ಪನವರು.—ಮೈಸೂರು ತಾಲ್ಲೂಕಿನಲ್ಲಿ ಬಲಾತ್ಕಾರ ವಿದ್ಯಾಭ್ಯಾಸ ಜಾರಿಯಲ್ಲಿದೆಯೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಇರಬೇಕು.

ಶ್ರೀ ಟಿ. ಸಿ. ಹೊನ್ನಪ್ಪನವರು.—ಇದ್ದ ಪಕ್ಷದಲ್ಲಿ ಆ ತಾಲ್ಲೂಕಿನ ಕೆಲವು ಗ್ರಾಮಗಳಿಗೆ ಸ್ಕೂಲನ್ನು ಕೊಡುವುದರ ಅವಶ್ಯಕತೆಯಿಲ್ಲವೆಂದು ಹೇಳಿದರೆ, ನಿಮ್ಮ ಕಾನೂನಿನ ಫಲ ಏನಾಗುತ್ತದೆ?

ಅಧ್ಯಕ್ಷರು.—ಪ್ರಶ್ನೋತ್ತರ ಕಾಲದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಬಲಾತ್ಕಾರ ವಿದ್ಯಾಭ್ಯಾಸ ಪದ್ಧತಿಯನ್ನು ಜಾರಿ ಮಾಡುವುದರ ನೀತಿ ಯೇನು ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಬಲಾತ್ಕಾರವಾಗಿ ವಿದ್ಯಾಭ್ಯಾಸ ಜಾರಿಗೆ ತರಬೇಕೆಂಬುದೇ ನೀತಿ ?

ಶ್ರೀ ಟಿ. ಸಿ. ಹೊನ್ನಪ್ಪನವರು.—ಅಂದಮೇಲೆ ಆ ತಾಲ್ಲೂಕಿನ ಎಲ್ಲಾ ಗ್ರಾಮಗಳಲ್ಲೂ ಬಲಾತ್ಕಾರ ವಿದ್ಯಾಭ್ಯಾಸಕ್ಕೆ ಏರ್ಪಾಡು ಮಾಡಬೇಕಲ್ಲವೇ? ಈಗ ನೀವು ಕೆಲವು ಗ್ರಾಮಗಳಿಗೆ ಸ್ಕೂಲು ಕೊಡಬೇಕಾಗಿದ್ದಿಲ್ಲವೆಂದು ಹೇಳಿದ್ದೀರಿ. ಅಂದರೆ, ಆ ಗ್ರಾಮಗಳಲ್ಲಿ ಬಲಾತ್ಕಾರ ವಿದ್ಯಾಭ್ಯಾಸ ತರುವುದು ಬೇಡವೆಂತಲೇ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಕೊಡಬೇಡವೆಂದು ನಾನು ಹೇಳಿಲ್ಲ. ನಾನು ಹೇಳಿದ್ದು, ಈಗಿರತಕ್ಕ ಪ್ರೋಗ್ರಾಂ ಪ್ರಕಾರ 300 ಜನಸಂಖ್ಯೆಯಿರುವ ಕಡೆ, ಅಥವಾ ಸ್ಕೂಲು ಕಟ್ಟಡ ಕೊಟ್ಟು ಸ್ಕೂಲು ಕೊಡಿ ಎಂದು ಕೇಳಿರುವ ಕಡೆಗಳನ್ನು ನೋಡಿಕೊಂಡು ಪ್ರೈಯಾರಿಟಿ ಮೇಲೆ ಸ್ಕೂಲನ್ನು ಕೊಡಬೇಕೆಂದಿದೆ ಎಂದು. ಹಾಗಿಲ್ಲದೆ ಎಲ್ಲಾ ಕಡೆಯೂ ಕೊಡುವುದಕ್ಕೆ ಸಾಧ್ಯವೇ ? ಈ ಅನುಕೂಲಗಳನ್ನೆಲ್ಲಾ ನೋಡಿಕೊಂಡು ಕೊಡಬೇಕು.

ಶ್ರೀ ಟಿ. ಸಿ. ಹೊನ್ನಪ್ಪನವರು.—ನೀವು ಬಲಾತ್ಕಾರ ವಿದ್ಯಾಭ್ಯಾಸ ಪದ್ಧತಿಯನ್ನು ಕೆಲವು ತಾಲ್ಲೂಕುಗಳಲ್ಲಿ ಜಾರಿಗೆ ಕೊಟ್ಟಿರುವಾಗ ಅಲ್ಲಿನ ಕೆಲವು ಗ್ರಾಮಗಳಿಗೆ ಸ್ಕೂಲು ಕೊಡದೆಹೋದರೆ ನಿಮ್ಮ ಬಲಾತ್ಕಾರ ವಿದ್ಯಾಭ್ಯಾಸ ಪದ್ಧತಿ ಯಾವ ರೀತಿ ಕಾರ್ಯರೂಪಕ್ಕೆ ಬರುತ್ತದೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಬಲಾತ್ಕಾರ ವಿದ್ಯಾಭ್ಯಾಸ ಜಾರಿಗೆ ಬಂದಿರುವ ಕಡೆ ಬಹುಮಟ್ಟಿಗೆ ಕಡ್ಡಾಯವಾಗಿ ಸ್ಕೂಲುಗಳನ್ನು ಕೊಡುತ್ತೇವೆ. ಎಲ್ಲೆಲ್ಲಿ ಸ್ಕೂಲುಗಳಿವೆಯೋ ಅಲ್ಲೆಲ್ಲಾ ಬಲಾತ್ಕಾರವಾಗಿ ಎಲ್ಲರಿಗೂ ವಿದ್ಯಾಭ್ಯಾಸ ಮಾಡಿಸಬೇಕೆಂಬುದೇ ಈ ಪದ್ಧತಿ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಸ್ಕೂಲುಗಳಿಲ್ಲದಿರುವ ಕಡೆ ಬಲಾತ್ಕಾರದ ವಿದ್ಯಾಭ್ಯಾಸ ಬೇಡವೇ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಸ್ಕೂಲುಗಳಿಲ್ಲದಿರುವ ಕಡೆ ಹೇಗೆ ಸಾಧ್ಯ ?

ಶ್ರೀ ಟಿ. ಸಿ. ಹೊನ್ನಪ್ಪನವರು.—ಆದ್ದರಿಂದ ಮೊದಲು ಎಲ್ಲಾ ಕಡೆಯಲ್ಲೂ ಸ್ಕೂಲುಗಳನ್ನು ಸ್ಥಾಪಿಸಬೇಕೆಂಬುದು ಸರ್ಕಾರದವರಿಗೆ ಗೊತ್ತಿದೆಯೇ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹಾಗೆ ಸ್ಕೂಲುಗಳನ್ನು ಕೊಡಬೇಕು ಎಂಬುದನ್ನು ಒಪ್ಪುತ್ತೇನೆ. ಸ್ಕೂಲುಗಳಿಲ್ಲದೆ ಹುಡುಗರನ್ನು ಓದಬೇಕೆಂದು ಬಲಾತ್ಕಾರಮಾಡುವುದಕ್ಕಾಗುವುದಿಲ್ಲ.

ಶ್ರೀ ಟಿ. ಸಿ ಹೊನ್ನಪ್ಪನವರು.—ಪ್ರೈಮರಿಸ್ಕೂಲು ಕಟ್ಟಡಗಳಿಗಾಗಿ ಮೈಸೂರು ಡಿಸ್ಟ್ರಿಕ್ಟಿಗೆ ಎಷ್ಟು ಹಣ ಕೊಟ್ಟಿದೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ನೋಟೀಸ್ ಬೇಕು.

ಶ್ರೀ ಟಿ. ಸಿ. ಹೊನ್ನಪ್ಪನವರು.—ಪ್ರೈಮರಿ ಸ್ಕೂಲು ಕಟ್ಟಡಗಳಿಗಾಗಿ ಸರ್ಕಾರದವರು ಎಷ್ಟು ಸಹಾಯ ಮಾಡುತ್ತಾರೆ ಎಂದು ಕೇಳಿರುವುದಕ್ಕೆ ಹಣ ಒದಗಿದ ಹಾಗೆಲ್ಲಾ ಮಾಡುತ್ತೇವೆ ಎಂದು ಹೇಳಿದ್ದಾರೆ. ಆದರಂತೆ 1951-52ನೆಯ ಸಾಲಿನಲ್ಲಿ ಎಷ್ಟು ಹಣ ಒದಗಿಸಿದ್ದೀರಿ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಈ ವರ್ಷ ಸುಮಾರು 31 ಪ್ರೈಮರಿ ಸ್ಕೂಲುಗಳನ್ನು ಕೊಡಬೇಕೆಂದು ಮಾಡಿದೆ. ಸ್ಕೂಲು ಕಟ್ಟಡಗಳಿಗಾಗಿ ಎಷ್ಟು ಒದಗಿಸಿದೆಯೆಂಬುದನ್ನು ಹೇಳುವುದಕ್ಕೆ ನೋಟೀಸ್ ಬೇಕು.

ಶ್ರೀ ಟಿ. ಸಿ. ಹೊನ್ನಪ್ಪನವರು.—ಈ ರೀತಿ ವರ್ಷಕ್ಕೆ 31 ಸ್ಕೂಲುಗಳನ್ನು ಕೊಡುತ್ತಿದ್ದರೆ ಎಷ್ಟು ವರ್ಷದಲ್ಲಿ ಮೈಸೂರು ಡಿಸ್ಟ್ರಿಕ್ಟಿನ ಎಲ್ಲಾ ಗ್ರಾಮಗಳಿಗೂ ಕೊಡುವುದಕ್ಕಾಗುತ್ತದೆ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ನಾನು ಮೊದಲೇ ಹೇಳಿದಹಾಗೆ ಮೈಸೂರು ಡಿಸ್ಟ್ರಿಕ್ಟಿಗೆ ವರ್ಷ ವರ್ಷೇ ಪ್ರೋಗ್ರಾಮಿನಲ್ಲಿ ಹೆಚ್ಚಿನ ಭಾಗವನ್ನು ಕೊಡಲಾಗುತ್ತಿದೆ. ಎಲ್ಲಾ ಡಿಸ್ಟ್ರಿಕ್ಟುಗಳಿಗಿಂತಲೂ ಸ್ವಲ್ಪ ಹೆಚ್ಚಿಗೆ ಆ ಡಿಸ್ಟ್ರಿಕ್ಟಿಗೆ ಕೊಡುತ್ತೇವೆ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—667 ಗ್ರಾಮಗಳಲ್ಲಿ ಸ್ಕೂಲುಗಳಿಲ್ಲವೆಂದು ಹೇಳಿದ್ದೀರಿ. ಇಲ್ಲಿಗೆಲ್ಲಾ ಸ್ಕೂಲುಗಳನ್ನು ಕಟ್ಟಿಸಿ ಕೊಡಬೇಕಾದರೆ ಎಷ್ಟು ಹಣ ಖರ್ಚಾಗುತ್ತದೆಂದು ಅಂದಾಜುಮಾಡಿದ್ದೀರಿ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯನವರು.—ಎಸ್ಟಿಮೇಟ್ ಮಾಡಿಸಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಈಗ ಮೈಸೂರು ಡಿಸ್ಟ್ರಿಕ್ಟಿನಲ್ಲಿ ವಿದ್ಯಾವಂತರ ಸಂಖ್ಯೆ ಬಹಳ ಕಮ್ಮಿಯಾಗಿದೆಯೆಂಬುದು ಗೊತ್ತಿದೆಯೇ ಇಲ್ಲವೇ ?

ಮಾನ್ಯ ಶ್ರೀ ಆರ್ ಚೆನ್ನಿಗರಾಮಯ್ಯನವರು.—ಅವತ್ತೇ ಕೇಳಿದ್ದೀರಿ. ನಾನು ಉತ್ತರ ಹೇಳಿದ್ದೇನೆ.

ಶ್ರೀ ಎಸ್. ರಂಗರಾಮಯ್ಯನವರು.—ಆದ್ದರಿಂದ ಎಲ್ಲಾ ಡಿಸ್ಟ್ರಿಕ್ಟಿಗಿಂತಲೂ ಈ ಡಿಸ್ಟ್ರಿಕ್ಟಿಗೆ ಹೆಚ್ಚಿಗೆ ಸ್ಕೂಲುಗಳನ್ನು ಕೊಡುವುದಕ್ಕೆ ಏರ್ಪಾಡುಮಾಡುತ್ತೀರಾ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಈ ವರ್ಷವೂ ಸ್ವಲ್ಪ ಹೆಚ್ಚಿಗೆ ಕೊಟ್ಟಿದೆಯೆಂದು ಹೇಳಿದ್ದೇನೆ.

ಶ್ರೀ ಎಸ್. ರಂಗರಾಮಯ್ಯನವರು. ಇನ್ನೂ ಹೆಚ್ಚಿಗೆ ಸ್ಕೂಲುಗಳನ್ನು ಕೊಡುವುದಕ್ಕೆ ಪ್ರಯತ್ನಮಾಡುತ್ತೀರಾ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಪ್ರಯತ್ನಮಾಡಲಾಗುತ್ತಿದೆ.

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು (ಚಿತ್ರದುರ್ಗಜಿಲ್ಲೆ).—ಪ್ರೈಮರಿ ಸ್ಕೂಲು ಕಟ್ಟಡಗಳನ್ನೆಲ್ಲಾ ಡಿಸ್ಟ್ರಿಕ್ಟ್ ಬೋರ್ಡ್ ಏಜೆನ್ಸಿಯ ಮುಖಾಂತರ ಕಟ್ಟಿಸುವ ಏರ್ಪಾಡು ಈಗಲೂ ಜಾರಿಯಲ್ಲಿದೆಯೇ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಇದೆ.

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು.—ಅದರಂತೆ ಈ ವರ್ಷ ಎಷ್ಟು ಸ್ಕೂಲುಗಳನ್ನು ಕಟ್ಟಿಸುವುದಕ್ಕೆ ಡೈರೆಕ್ಟ್ ಕೊಟ್ಟಿದ್ದೀರಿ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಮಿಡ್ಲ್ ಸ್ಕೂಲುಗಳ ವಿಚಾರ ಬೇಕಾದರೆ ಹೇಳುತ್ತೇನೆ. ಪ್ರೈಮರಿ ಸ್ಕೂಲುಗಳ ವಿಷಯ ಹೇಳಬೇಕಾದರೆ ನೋಟೀಸು ಬೇಕು.

Sri H. M. CHANNABASAPPA (Mysore District—General).—Are the Government aware that this year they have allotted a grant of Rs. 70,000 to supplement the donations in respect

(SRI H. M. CHANNABASAPP)

of construction of primary school buildings by the Mysore District Board ?

The Hon'ble Sri R. CHENNIGARAMIAH.—Yes.

Sri H. M. CHANNABASAPPA.—In answer to (c) (ii) it is said that schools are given to deserving places where there are building facilities readily available. Have the Government issued instructions to local officers to maintain a list of such deserving places in order of priority ?

The Hon'ble Sri R. CHENNIGARAMIAH.—That is the idea. Whereever school buildings are available, the schools will be given in the order of priority.

Sri H. M. CHANNABASAPPA.—My question is, are the local officers maintaining a list showing the deserving places in the District ?

The Hon'ble Sri R. CHENNIGARAMIAH.—Deserving places—I do not think they are maintaining a list like that.

Sri H. M. CHANNABASAPPA.—How are the officers distributing these schools when schools are granted ?

The Hon'ble Sri R. CHENNIGARAMIAH.—The demand is greater than the number of schools available. There is sufficient demand and as and when money is available, they will be granted.

Sri H. M. CHANNABASAPPA.—Shall I take it that there is no programme fixed from year to year ?

The Hon'ble Sri R. CHENNIGARAMIAH.—Programme is fixed in this sense that they have got a programme for the entire State for a number of new middle and primary schools. They would be distributed among the different district boards.

Sri H M. CHANNABASAPPA.—Would the Government at least now give directions to maintain a list of the places which deserve the grant of schools ?

The Hon'ble Sri R. CHENNIGARAMIAH.—We will try.

Sri H M. CHANNABASAPPA.—Are the Government aware that in some of the places in Mysore District the buildings and other things required are ready but still schools are not given ?

The Hon'ble Sri R. CHENNIGARAMIAH.—I will find out.

Sri H. M. CHANNABASAPPA.—Will Government note that in Ugenahalli, Mayanagowdanahalli and Mylambara in Hunsur Taluk where buildings are readv, schools are not given ?

The Hon'ble Sri V. CHENNIGARAMIAH. It may not be possible to give schools to all the villages where they have got buildings readily available ; but as and when schools are available, they will be given.

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ).—(ಸಿ) ಭಾಗದ ಉತ್ತರದಲ್ಲಿ Sc ools are given to deserving places where there are building facilities readily available ಎಂದು ತಿಳಿಸಿದೆ. ಕಟ್ಟಡಗಳನ್ನು ಕೊಟ್ಟರೆ ಮಾತ್ರ ಸ್ಕೂಲುಗಳನ್ನು ಕೊಡುವುದು ಎನ್ನುವ ನೀತಿ ಪಟ್ಟಣಗಳಿಗೂ ಅನ್ವಯಿಸುತ್ತದೆಯೋ ಹಳ್ಳಿಗಳಿಗೆ ಮಾತ್ರವೋ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಎಲ್ಲಾ ಕಡೆಗೂ ಅನ್ವಯಿಸುತ್ತದೆ, ಎಲ್ಲಾದರೂ ಕಟ್ಟಡಗಳಿದ್ದರೆ ಸುಲಭವಾಗಿ ಕೊಡಬಹುದು.

Buildings for Middle Schools in rural parts of Mysore District.

Q.—283. Sri T. C. HONNAPPA (Mysore District—General).—

Will the Government be pleased to state :—

(*a*) the number of Middle Schools in the rural parts of the Mysore District; the places where they are located;

(*h*) the number of villages in this district that are still in need of Middle Schools and their names ;

(*c*) the nature of financial help given by them till now for construction of Middle School buildings and the further scheme they have taken up ?

A.—The Hon'ble Sri R. CHENNIGARAMIAH (Minister for Local Self-Government).—

(*a*) 40 pucca Middle Schools. 47 New Type Middle Schools. Statement appended below.

(*b*) The information is not readily available.

(c) A sum of Rs. 5,000 is allotted for the construction of a building for the Middle School at Nerle, Nanjangud Taluk, during this year (1951-52) out of the lumpsum provision of Rs. 50,000 made for additional requirements. The President, District Board, Mysore, has undertaken to construct Middle School buildings at Hardanahalli, Kestur Koppa, Mavathur, Hebbalu, Ankanahalli in Krishnarajanagar Taluk and Turuganur in T.-Narasipur Taluk, Harve in Chamarajanagar Taluk and Devanoor in Nanjangud Taluk and they are under progress.

The construction of more buildings for Middle Schools in the District will be taken up as and when necessary funds become available.

List of Pucca Middle Schools in Rural Parts in Mysore District.

Nanjangud Taluk.

Government Kannada Boys' Middle Schools.—
1 Thagadur.
2 Nagarle.
3 Nera e.
4 Devanur.
5 Thayur.

Chamarajanagar Taluk.

Government Kannada Boys' Middle Schools.—
6 Kuderu.
7 Harave.
8 Alur.
9 Chandakavadi.

Gundlupet Taluk.

Government Kannada Boys' Middle Schools.—
10 Kabbahalli.
11 Terakanambi.

T.-Narasipur Taluk.

Government Kannada Boys' Middle Schools.—
12 Thalkad.
13 Sosale.
14 Bannur.
15 Mugur.
16 Attahalli.

Urdu Boys' Middle School.—
17 Gargeswari.

Krishnarajanagar Taluk.

Government Kannada Boys' Middle Schools.—
18 Saligrama.
19 Mirle.
20 Hosur.
21 Hanasoge.
22 H mpapura.
23 Thippur.
24 Mavathur.
25 Channamgere.
26 Kestur.
27 Haradanahalli.

Kannada Girls' Middle School.—
28 Saligrama.

Aided Kannada Boys' Middle School.—
29 Chunchanakatte.

Hunsur Taluk.

Government Kannada Boys' Middle Schools.—
30 Chilkunda.
31 Gowdagere.
32 Bilikere.

Periyapatna Taluk.

Government Kannada Boys' Middle Schools.—
33 Bettadapura.
34 Ravandur.
35 Kitur
36 Kanagala.

Heggaddevankote Taluk.

Government Kannada Boys' Middle Schools.—
37 Saragur.
38 Hommaragalli.
39 Malali.

Yelandur Taluk.

Government Kannada Boys' Middle School.—
40 Mamballi.

Nanjangud Taluk—

1	Hul'ahatti	... Kannada Boys.
2	Kalale	... Do
3	Hoskote	... Do
4	Jakavadi	... Do
5	Hadinaru.	... Do
6	Hemmaragala	... Do
7	Dasanur	... Do
8	Suthur	... Do
9	Thorahalli	... Do

Hunsur Taluk—

10	Mallur	... Kannada Boys.
11	Harve	... Do
12	Hanagodu	... Do

Mysore Taluk—

13	Devalapura	... Do
14	Yelwal	... Do
15	Chamundi Hills	... Do
16	Belabadi	... Do
17	Kuppegala	... Do

Chamarajanagar Taluk—

18	Santhemaranahalli	... Kannada Boys.
19	Ummathur	... Do
20	Ramasamudra	... Do
21	Haradanahalli	... Do
22	Kuderu	... Do
23	Mangala	... Do
24	Ramasamudra	... Kannada Girls
25	Venkatayyanachatra	... Kannada Boys

Gundlupet Taluk—

26	Hangala	... Kannada Boys.
27	Bachanahalli	... Do
28	Kodasoge	... Do

Heggaddevankote Taluk—

29	Hebbalaguppe	... Kannada Boys.
30	Anatharasanthe	... Do
31	Chakkur	... Do

Krishnarajanagar Taluk—

32	Bherya	... Kannada Boys.
33	Ankanahalli	... Do
34	Hebbal	... Do
35	Hadiga	... Do

(THE HON'BLE SRI R. CHENNIGARAMIAH),)

T. Narasipur Taluk—

36	Kodagahalli	... Kannada Boys
37	Yachehalli	... Do
38	Bannur	... Urdu Girls.
39	Gargeswari	... Do
40	Bannur	... Urdu Boys.
41	Turuganur	... Kannada Boys.
42	Malangi	... Do
43	Rangasamudra	... Do
44	Kothagala	... Do

Periyapatna Taluk—

45	Honnapura	... Kannada Boys.
46	Kampalapura	... Do

Yelandur Taluk—

47	Yeragamballi	... Kannada Boys.

ಶ್ರೀ ಟಿ. ಸಿ. ಹೊನ್ನಪ್ಪನವರು.—ಮೈಸೂರು ತಾಲ್ಲೂಕಿಗೆ ಇದುವರೆಗೂ ಒಂದು ಮಿಡ್ಲ್ ಸ್ಕೂಲನ್ನು ಕೊಟ್ಟಿಲ್ಲ. ಕಾರಣವೇನು ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಮೈಸೂರು ಪಕ್ಕದಲ್ಲಿಯೇ ಇದೆ, ಅದುದರಿಂದ ಅವಶ್ಯಕತೆ ಇಲ್ಲವೆಂದು ಕೊಟ್ಟಿಲ್ಲ.

ಶ್ರೀ ಟಿ ಸಿ. ಹೊನ್ನಪ್ಪನವರು.—ಮೈಸೂರು ಪಕ್ಕದಲ್ಲಿದೆ. ಆ ತಾಲ್ಲೂಕಿನ ಮಕ್ಕಳು ವಿದ್ಯೆ ಕಲಿಯಬಾರದೆಂದು ಕೊಟ್ಟಿಲ್ಲವೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ನಾನು ಹಾಗೆ ಹೇಳಲಿಲ್ಲ. ಮೈಸೂರು ತಾಲ್ಲೂಕಿನ ಜನರು ಅಲ್ಲಿಗೆ ಮಿಡ್ಲ್ ಸ್ಕೂಲಿನ ಅವಶ್ಯಕತೆ ಇದೆ ಎಂದು ಕೇಳಿದ್ದರೆ ಪರಿಶೀಲನೆ ಮಾಡುತ್ತಿದ್ದೆವು; ಇದುವರೆಗೆ ಅವರು ಕೇಳಲಿಲ್ಲವೆಂದು ಕಾಣುತ್ತದೆ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಎಷ್ಟು ಮೈಲಿಯ ದೂರದಲ್ಲಿ ಸ್ಕೂಲಿದ್ದರೆ ವಿದ್ಯಾರ್ಥಿಗಳು ಬಂದು ವಿದ್ಯಾಭ್ಯಾಸ ಮಾಡಬಹುದು ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಸಾಮಾನ್ಯವಾಗಿ ಐದುಮೈಲಿಗಿಂತ ಹೆಚ್ಚು ದೂರದಲ್ಲಿದ್ದರೆ ಅಲ್ಲಿಗೆ ಸ್ಕೂಲು ಕೊಡಲು ಯೋಚನೆ ಮಾಡಬಹುದು.

ಶ್ರೀ ಟಿ. ಸಿ. ಹೊನ್ನಪ್ಪನವರು.—ಮೈಸೂರು ತಾಲ್ಲೂಕು ಎಷ್ಟು ಆವರಣಕ್ಕೊಳಪಟ್ಟಿದೆ ಎಂಬುದು ಗೊತ್ತಿದೆಯೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಮ್ಯಾಪ್ ನೋಡಬೇಕು.

ಶ್ರೀ ಟಿ. ಸಿ. ಹೊನ್ನಪ್ಪನವರು.—18 ಮೈಲಿ ಆವರಣವಿದೆ, 10-12 ಮೈಲಿ ದೂರವಿರುವ ಗ್ರಾಮಗಳಲ್ಲಿಯೂ ಮಿಡ್ಲ್ ಸ್ಕೂಲಿಲ್ಲವೆಂದು ಅರ್ಜಿ ಬಂದಿದ್ದರೂ ಮೈಸೂರು ತಾಲ್ಲೂಕಿನಲ್ಲಿ ಒಂದು ಮಿಡ್ಲ್ ಸ್ಕೂಲೂ ಇಲ್ಲದೇಯಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಉದ್ದ 18 ಮೈಲಿ ಇರಬಹುದು. ಅದರ ಪಕ್ಕದಲ್ಲಿ ಬೇರೆ ತಾಲ್ಲೂಕಿನಲ್ಲಿ ಮಿಡ್ಲ್ ಸ್ಕೂಲಿರಬಹುದು. ಆದರೆ ತಾವು ಹೇಳುವ ರೀತಿಯಲ್ಲಿ ಬಹಳ ದೂರದಲ್ಲಿದೆಯೆಂದು ಹೇಳಿದರೆ, ಯೋಚನೆಮಾಡಬಹುದು

ಶ್ರೀ ಟಿ. ಸಿ. ಹೊನ್ನಪ್ಪನವರು.—ಉದ್ಬೂರು, ಕಡಕೊಳ, ಚಿಟ್ಟಹಳ್ಳಿ, ಇಲವಾಲ, ವರುಣ ಇಂತಹ ಹೋಬಳಿ ಹೆಡ್‌ಕ್ವಾರ್ಟರುಗಳಲ್ಲಿಯೂ ಮಿಡ್ಲ್ ಸ್ಕೂಲುಗಳಿಲ್ಲದಿರುವುದು ನ್ಯಾಯವೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅದನ್ನು ಪರಿಶೀಲನೆಮಾಡುತ್ತೇವೆ.

ಶ್ರೀ ಟಿ.ಸಿ. ಹೊನ್ನಪ್ಪನವರು.—ಮೈಸೂರು ಜಿಲ್ಲೆಗೆ 50,000 ರೂಪಾಯಿ ಒದಗಿಸಿದೆಯೆಂದೂ ಆ ಕಟ್ಟಡಗಳನ್ನು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರೇ ಕಟ್ಟಿಸುತ್ತಾರೆಂದೂ ತಿಳಿಸಿದೆ. ಈ ಸಲಹೆ ಯಾರಿಂದ ಬಂದಿರುವುದು ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಈ ಹಣ ಬಡ್ಜೆಟ್ಟಿನಲ್ಲಿ ಒದಗಿಸಿರುವುದು.

ಶ್ರೀ ಟಿ. ಸಿ. ಹೊನ್ನಪ್ಪನವರು.—ಇದು ಸಂಸ್ಥಾನಾ ಮಳೆಗೆ ಒದಗಿಸಿರುವುದೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹೌದು.

ಶ್ರೀ ಟಿ. ಸಿ. ಹೊನ್ನಪ್ಪನವರು.—ಹಾಗಾದರೆ ಮೈಸೂರು ಜಿಲ್ಲೆಗೆಷ್ಟು ಒದಗಿಸಿದೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ನೇರಳೆಗೆ ಐದು ಸಾವಿರ ರೂಪಾಯಿ ಒದಗಿಸಿದೆ ಎಂದು ಹೇಳಿದೆ. ಇದಲ್ಲದೆ ಡಿಸ್ಟ್ರಿಕ್ಟ್ ಬೋರ್ಡಿನವರು ತೆಗೆದುಕೊಂಡಿರುವ ಗ್ರ್ಯಾಂಟು ಬೇರೆ ಇದೆ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಅದೆಷ್ಟು?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಸುಮಾರು 78,000 ರೂಪಾಯಿನವರೆಗಿದೆ. ಕೃಷ್ಣರಾಜನಗರ ತಾಲ್ಲೂಕಿನ ಹರದನಹಳ್ಳಿಗೆ 12,000 ರೂಪಾಯಿ, ಇದರಲ್ಲಿ ಡೊನೇಷನ್ 3,000 ಸರ್ಕಾರದ ಭಾಗ 9000 ರೂಪಾಯಿ. ಕೆಸ್ತೂರು ಕೊಪ್ಪಲಿಗೆ 12,500 ರೂಪಾಯಿ, ಇದರಲ್ಲಿ 3,000 ರೂಪಾಯಿ ಡೊನೇಷನ್ 9,500 ರೂಪಾಯಿ ಸರ್ಕಾರದ ಭಾಗ, ಮಾವತ್ತೂರು ರೂ. 12,000 ಇದರಲ್ಲಿ ರೂ. 2,000 ಡೊನೇಷನ್ ರೂ. 10,000 ಸರ್ಕಾರದ ಭಾಗ, ಹೆಬ್ಯಾಳು ರೂ. 12,000 ಅಂದಾಜು, ಇದರಲ್ಲಿ 3000 ಡೊನೇಷನ್ 9,000 ಸರ್ಕಾರಿ ಗ್ರ್ಯಾಂಟು. ಹೀಗೆಯೇ ಅಂಕನಹಳ್ಳಿಗೂ ಕೊಟ್ಟಿದೆ. ಒಟ್ಟಿನಲ್ಲಿ ಅಂದಾಜು ಒಂದು ಲಕ್ಷ ರೂಪಾಯಿ, ಇದರಲ್ಲಿ ಡೊನೇಷನ್ ರೂ. 21,587 ಸರ್ಕಾರಿ ಗ್ರ್ಯಾಂಟು 78,413 ರೂ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಮಿಡ್ಲ್ ಸ್ಕೂಲುಗಳನ್ನು ಮುಂಜೂರುಮಾಡುವವರಾರು ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಸರ್ಕಾರದವರು.

ಶ್ರೀ ಟಿ. ಸಿ. ಹೊನ್ನಪ್ಪನವರು.—ಅಲಾಟ್ ಮಾಡುವುದು ಕೂಡ ಸರ್ಕಾರವೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ವಿದ್ಯಾ ಇಲಾಖೆಯ ಡೈರೆಕ್ಟರವರು ಆಯಾ ಸ್ಥಳೀಯ ಅಧಿಕಾರಿಗಳ ಶಿಫಾರಸಿನ ಮೇಲೆ ಸರ್ಕಾರಕ್ಕೆ ಕಳುಹಿಸುತ್ತಾರೆ, ಸರ್ಕಾರದವರು ಒಪ್ಪುತ್ತಾರೆ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಕೃಷ್ಣರಾಜನಗರ ತಾಲ್ಲೂಕಿನಲ್ಲಿ ಈಗಾಗಲೇ 12 ಮಿಡ್ಲ್ ಸ್ಕೂಲುಗಳಿವೆ, ಈಗ ಪುನಃ ಅಲ್ಲಿಗೆ 6 ಮಿಡ್ಲ್ ಸ್ಕೂಲುಗಳನ್ನು ಕೊಡುತ್ತಿದ್ದೀರಿ, ಮೈಸೂರು ತಾಲ್ಲೂಕಿನಲ್ಲಿ ಒಂದು ಕೂಡ ಇಲ್ಲ. ಹೀಗಿದ್ದರೂ ಈಗಾಗಲೇ 12 ಇರುವುದಕ್ಕೆ ಕೊಟ್ಟಿರುವುದು ಸರಿಯೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಮೈಸೂರು ತಾಲ್ಲೂಕಿನ ವಿಷಯ ಪರಿಶೀಲನೆ ಮಾಡುತ್ತೇವೆ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಮೈಸೂರು ತಾಲ್ಲೂಕಿನವರು ಸಂಸ್ಥಾನದ ಪ್ರಜೆಗಳಲ್ಲವೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅಲ್ಲವೆಂದು ನಾನು ಹೇಳಲಿಲ್ಲ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಹಾಗಿದ್ದರೆ 12 ಇರುವ ಕಡೆಗೆ ಇನ್ನೂ 6 ಕೊಡುವುದು ಸರಿಯೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ನಾನಾ ಕಾರಣಗಳಿರುತ್ತವೆ. ಕೆಲವು ತಾಲ್ಲೂಕುಗಳಲ್ಲಿ ಸ್ಕೂಲುಗಳನ್ನು ಕೊಟ್ಟಿರತಕ್ಕ ಗ್ರಾಮಗಳ ಜನರು ಮುಂದೆ ಬಂದು ಡೊನೇಷನ್ ಕೊಟ್ಟಿರಬಹುದು, ಜನ ಸಂಖ್ಯೆ ಹೆಚ್ಚಾಗಿರಬಹುದು, ಹೀಗೆ ಎಲ್ಲ ಕಾರಣಗಳೂ ಸೇರಿವೆ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಹಾಗಾದರೆ, ಜನ ಸಂಖ್ಯೆ ಹೆಚ್ಚಾಗಿಲ್ಲದಿದ್ದರೆ ಒಂದು ಸ್ಕೂಲನ್ನು ಕೊಡದೆ, 12 ಸ್ಕೂಲುಗಳಿದ್ದರೂ ಅಲ್ಲಿಗೆ ಇನ್ನೂ 6 ಸ್ಕೂಲುಗಳನ್ನು ಕೊಡುವುದು ಸರಿಯೆಂದು ಒಪ್ಪುತ್ತೀರಾ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಬೇರೆ ತಾಲ್ಲೂಕುಗಳಿಗೆ ಕೊಟ್ಟಿರತಕ್ಕ ವಿಚಾರವನ್ನು ತಾವು ಯೋಚನೆಮಾಡಬೇಕಾಗಿಲ್ಲ, ತಾವು ಮೈಸೂರು ತಾಲ್ಲೂಕಿಗೆ ಕೊಡಬೇಕೆಂದು ಕೇಳಿದ್ದೀರಿ, ಅದನ್ನು ಪರಿಶೀಲನೆಮಾಡುತ್ತೇವೆ.

ಶ್ರೀ ಟಿ. ಸಿ. ಹೊನ್ನಪ್ಪನವರು.—ನನ್ನ ಡಿಸ್ಟ್ರಿಕ್ಟಿನ ವಿಚಾರ ಕೇಳುತ್ತೇನೆ. ವಿದ್ಯಾಭ್ಯಾಸದ ವಿಚಾರದಲ್ಲಿ ಅಲ್ಲಿಗೆ ಅನ್ಯಾಯಮಾಡುತ್ತಿದ್ದಾರೆ. ಇದು ಸರಿಯಲ್ಲ. ಮಿಡ್ಲ್ ಸ್ಕೂಲುಗಳನ್ನು ಕೊಡಲು ಒಂದು ಸಮಿತಿ ಏರ್ಪಾಡುಮಾಡುತ್ತೀರಾ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅನ್ಯಾಯಮಾಡಿರುವುದು ರುಜುವಾತಾದರೆ ಪರಿಹಾರ ಮಾಡಲು ಯೋಚನೆಮಾಡುತ್ತೇವೆ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಈಗ ಆಗಿರುವುದು ಅನ್ಯಾಯವಲ್ಲವೆಂತಲೇ ನಿಮ್ಮ ಅಭಿಪ್ರಾಯ? ಯಳಂದೂರು ತಾಲ್ಲೂಕಿನಲ್ಲಿ ಒಂದೇ ಒಂದು ಮಿಡ್ಲ್ ಸ್ಕೂಲಿದೆ. ಮೈಸೂರು ತಾಲ್ಲೂಕಿನಲ್ಲಿ ನ್ಯೂ ಟೈಪ್ ಮಿಡ್ಲ್ ಸ್ಕೂಲು ಕೂಡ ಹೆಚ್ಚಿಲ್ಲ. ಅವರೂ ಹೀಗೆ ವಿದ್ಯಾ ಇಲಾಖೆಯವರು ಕಳುಹಿಸಿರುವ ಶಿಫಾರಸು ಸರಿಯೆ ಅಲ್ಲವೆ ಎಂಬುದನ್ನು ನೀವೇ ನೋಡಿ. ಎಲ್ಲಾ ತಾಲ್ಲೂಕುಗಳನ್ನು ಸಮಾನ ದೃಷ್ಟಿಯಿಂದ ನೋಡಬೇಕು. ಒಂದು ಸಮಿತಿಯನ್ನು ಮಾಡಿ ಅದರ ಶಿಫಾರಸಿನ ಪ್ರಕಾರ ಮಿಡ್ಲ್ ಸ್ಕೂಲುಗಳನ್ನು ಹಂಚುತ್ತೀರಾ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಸಮಿತಿ ಬೇಕಾಗಿಲ್ಲ. ತಾವು ಹೇಳಿರುವುದರಿಂದಲೇ ತಿಳಿದುಕೊಂಡಿದ್ದೇನೆ, ಕೂಡಲೇ ಪರಿಶೀಲನೆಮಾಡಿ ಏನು ಕಾರ್ಯಕ್ರಮತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಚಾಮರಾಜನಗರ ತಾಲ್ಲೂಕಿನ ಜನಸಂಖ್ಯೆ 1 ಲಕ್ಷ 50 ಸಾವಿರವೆಂದು ಗೊತ್ತಿದೆಯೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಸೆನ್ಸಸ್ ವರದಿಯನ್ನು ನೋಡಬೇಕು.

ಶ್ರೀ ಎಸ್. ರಂಗರಾಮಯ್ಯನವರು.—ಈ ತಾಲ್ಲೂಕಿನ ಜನಸಂಖ್ಯೆ ಕೃಷ್ಣರಾಜನಗರ ತಾಲ್ಲೂಕಿನ ಜನಸಂಖ್ಯೆಗಿಂತ ಒಂದೂವರೆಯಷ್ಟು ಹೆಚ್ಚಾಗಿದೆ ಎಂಬುದು ಗೊತ್ತಿದೆಯೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಗೊತ್ತಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಚಾಮರಾಜನಗರ ತಾಲ್ಲೂಕಿಗೆ ನಾಲ್ಕು ಮಿಡ್ಲ್ ಸ್ಕೂಲುಗಳನ್ನು ಮಾತ್ರ ಕೊಟ್ಟು ಕೃಷ್ಣರಾಜನಗರ ತಾಲ್ಲೂಕಿಗೆ 12 ಕೊಟ್ಟಿರುವುದಕ್ಕೆ ಕಾರಣವೇನು?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಕಾರಣವಿಲ್ಲದೆ ಕೊಟ್ಟಿಲ್ಲ. ಜನಸಂಖ್ಯೆ, ವಿದ್ಯಾರ್ಥಿಗಳ ಸಂಖ್ಯೆ ಇತರ ವಿಷಯಗಳು ಎಲ್ಲವನ್ನೂ ನೋಡಿ ಕೊಟ್ಟಿದೆ.

ಶ್ರೀ ಎಸ್. ರಂಗರಾಮಯ್ಯನವರು:—ಈಗ ಮಿಡ್ಲ್ ಸ್ಕೂಲುಗಳನ್ನು ಕೊಟ್ಟಿರುವ ಕಡೆ ಆ ಕಟ್ಟಡಗಳಿಗೆಲ್ಲಕ್ಕೂ ಸರ್ಕಾರದ ಹಣವನ್ನು ಕೊಟ್ಟಿದೆಯೋ ಅಥವಾ ಜನರು ಕೊಟ್ಟಿದ್ದಾರೊ?

ಅಧ್ಯಕ್ಷರು.—ಅದೆಲ್ಲವನ್ನೂ ಈಗತಾನೆ ಹೇಳಿದ್ದಾರೆ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಸರ್ಕಾರದವರೂ ಕೊಟ್ಟಿದ್ದಾರೆ, ಜನರೂ ಡೊನೇಷನ್ ಕೊಟ್ಟಿದ್ದಾರೆ, ಎಷ್ಟೆಷ್ಟು ಎಂಬುದನ್ನು ಹೇಳಿದ್ದೇನೆ.

ಶ್ರೀ ಎಸ್. ರಂಗರಾಮಯ್ಯನವರು:—ಡೊನೇಷನ್ ಕೊಡದೇಯಿರುವ ಕಡೆ ಸ್ಕೂಲನ್ನು ಕೊಟ್ಟಿಲ್ಲವೇ!

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಕೊಟ್ಟಿರುವ ಕಡೆಯೂ ಕೊಟ್ಟಿದೆ, ಕೊಟ್ಟಿಲ್ಲದೇಯಿರುವ ಕಡೆಯೂ ಕೊಟ್ಟಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಮೈಸೂರು ತಾಲ್ಲೂಕಿಗೆ ನ್ಯೂ ಟೈಪ್ ಮಿಡ್ಲ್ ಸ್ಕೂಲು ಯಾವಾಗ ಕೊಟ್ಟಿದ್ದಾರೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ನೋಟೀಸ್.

ಶ್ರೀ ಎಸ್. ರಂಗರಾಮಯ್ಯನವರು.—ಮೈಸೂರು ತಾಲ್ಲೂಕಿನಲ್ಲಿ ಮೂರು ಸಾವಿರ ಪ್ರಜಾಸಂಖ್ಯೆಗಿಂತ ಹೆಚ್ಚಾಗಿರುವ ಗ್ರಾಮಗಳಿವೆ ಎಂಬುದು ಗೊತ್ತಿದೆಯೇ?

Mr. SPEAKER.—That has been answered.

ಶ್ರೀ ಎಸ್. ರಂಗರಾಮಯ್ಯನವರು.—ಈ ಪರಿಶಿಷ್ಟವನ್ನು ನೋಡಿದರೆ ಆಯಾ ತಾಲ್ಲೂಕಿನ ಪ್ರಜಾಸಂಖ್ಯೆಗನುಗುಣವಾಗಿಯೂ ಕೊಟ್ಟಿಲ್ಲ, ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿಯೂ ಕೊಟ್ಟಿಲ್ಲವೆಂಬುದು ವೇದ್ಯವಾಗುತ್ತದೆಯೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ತಾಲ್ಲೂಕುವಾರು ಪ್ರಜಾಸಂಖ್ಯೆಯ ಮೇಲೆ ಮಾತ್ರ ಸ್ಕೂಲುಗಳನ್ನು ಕೊಡುವುದಿಲ್ಲ. ಅವಶ್ಯಕತೆ ನೋಡಿ ಕೊಡುತ್ತಾರೆ, ಯಾವುದಾದರೂ ಸ್ಥಳದಲ್ಲಿ ಅವಶ್ಯಕವಾಗಿ ಕೊಡಬೇಕಾದರೆ ಪರಿಶೀಲನೆಮಾಡುತ್ತೇವೆಂದು ಹೇಳಿದ್ದೇನೆ.

ಶ್ರೀ ಎಸ್. ರಂಗರಾಮಯ್ಯನವರು.—ವಿದ್ಯಾ ಇಲಾಖೆಯ ಡಿಸ್ಟ್ರಿಕ್ಟ್ ಎಜುಕೇಷನಲ್ ಆಫೀಸರು ಇನ್ನೆಷ್ಟು ಮಿಡ್ಲ್ ಸ್ಕೂಲುಗಳನ್ನು ಕೊಡಬೇಕೆಂದು ವರದಿಮಾಡಿದ್ದಾರೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ನೋಟೀಸ್.

ಶ್ರೀ ಎಂ. ಸಿ. ಶಿವಾನಂದ ಶರ್ಮರವರು (ಬೆಂಗಳೂರು ಜಿಲ್ಲೆ).—ಸ್ವಾಮಿ, ಸರ್ಕಾರದವರು ಮೊಟ್ಟಮೊದಲನೆಯದಾಗಿ ಒಂದು ಊರಿಗೆ ಪಾಠಶಾಲೆಯನ್ನು ಕೊಡಬೇಕಾದರೆ, ಆ ಊರಿನ ಪ್ರಜಾಸಂಖ್ಯೆ ಎಷ್ಟಿರುತ್ತೆಂಬುದನ್ನು ನೋಡಿಕೊಡತಕ್ಕುದ್ದು ಸೂಕ್ತವಲ್ಲವೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹೌದು.

ಶ್ರೀ ಎಂ. ಸಿ. ಶಿವಾನಂದ ಶರ್ಮರವರು:—ಈಗ ತಾವು ಆ ರೀತಿ ನೋಡಿಕೊಂಡೇ ಕೊಡುತ್ತಿದ್ದೀರೋ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.— ಹೌದು.

ಶ್ರೀ ಎಂ. ಸಿ. ಶಿವಾನಂದ ಶರ್ಮರವರು.— ಎಷ್ಟೋ ಕಡೆಗಳಲ್ಲಿ ಒಂದು ಊರಿಗೆ 4–5 ಮೈಲಿಗಳ ದೂರದಲ್ಲಿ ಒಂದು ಪಾಠಶಾಲೆಯೂ ಇಲ್ಲದಿದ್ದಾಗ್ಯೂ ಅಲ್ಲಿಗೆ ಕೊಡದೆ ಕೇವಲ ಹತ್ತಿರ ಹತ್ತಿರದಲ್ಲೇ ಸ್ಕೂಲುಗಳಿರುವಂಥಾ ಪ್ರದೇಶಗಳಿಗೇ ತಾವು ಸ್ಕೂಲುಗಳನ್ನು ಕೊಡುತ್ತಿರುವ ಅಂಶ ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.— ಎಲ್ಲೆಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗಿರುತ್ತದೆಯೋ ಅದನ್ನು ನೋಡಿಕೊಂಡು, ಅದರ ಪ್ರಕಾರ ಕೊಡಲಾಗುತ್ತಿದೆ.

ಶ್ರೀ ಎಂ. ಸಿ. ಶಿವಾನಂದ ಶರ್ಮರವರು.— ಹೆಚ್ಚಾಗಿ ಪ್ರಜಾಸಂಖ್ಯೆಯಿದ್ದು, ಹೆಚ್ಚು ಸಂಖ್ಯೆ ವಿದ್ಯಾರ್ಥಿಗಳಿಗೆ ಗ್ರಾಮಕ್ಕೆ ಪಾಠಶಾಲೆಯನ್ನು ಕೊಡದೆ ಕಮ್ಮಿ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿಂತಕ್ಕ ಗ್ರಾಮಕ್ಕೇ ಪಾಠಶಾಲೆಯನ್ನು ಕೊಟ್ಟಿರತಕ್ಕ ನಿದರ್ಶನಗಳನ್ನು ತಮ್ಮ ಗಮನಕ್ಕೆ ತಂದರೆ ಅದನ್ನು ಸರಿಪಡಿಸುತ್ತೀರಾ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.— ಆಗಲಿ, ಸರಿಮಾಡಲಾಗುತ್ತದೆ.

Representation to Taluk High Schools in District Committees for Backward Class Scholarships.

Q.—287. Sri S. C. SOORYANARAYANA CHETTY (Hassan District—General).—

Will the Government be pleased to state :—

(*a*) the officer who appoints the committees for Backward Class Scholarships in respect of the High Schools in the districts ;

(*b*) on whose recommendation that officer appoints the members of the District Committees ;

(*c*) whether it has not come to their notice that a majority of members are appointed only from among those who are in district headquarters ;

(*d*) whether, as a result of this, the students are not handicapped on account of the High Schools in the taluks being not sufficiently represented ;

(*e*) whether they will make arrangements to give proper representation to all the High Schools in the committee?

A.—The Hon'ble Sri R. CHENNIGARAMIAH (Minister for Local Self-Government).—

(*a*) The Director of Public Instruction.

(*b*) The Head Masters of Government High Schools at District Headquarters who function as the Secretaries of the District *Ad hoc* Scholarships Committees.

(*c*) No. Most of the taluks are given due representation on the committees and members of District Headquarter places are not in a majority.

(*d*) No.

(*e*) This is not possible.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರವರು.— ಸ್ವಾಮಿ ನನ್ನ (ಬಿ) ಪ್ರಶ್ನೆಗೆ ಉತ್ತರವಾಗಿ, ಸರ್ಕಾರಿ ಹೈಸ್ಕೂಲು ಹೆಡ್ಮಾಸ್ಟರುಗಳ ಸಲಹೆಮೇರೆಗೆ ಸಮಿತಿಗಳನ್ನು ನೇಮಕಮಾಡುತ್ತಾರೆಂದು ಉತ್ತರ ಕೊಡಲಾಗಿದೆ. ಅದಕ್ಕೆ ಬದಲಾಗಿ ಊರಿನ ಮುಖ್ಯಸ್ಥರ ಸಲಹೆ ಪಡೆದುಕೊಂಡು ಮಾಡುವುದಕ್ಕಾಗುವುದಿಲ್ಲವೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.— ಹೆಡ್ಮಾಸ್ಟರ ಸಲಹೆಮೇಲೆ ಮಾಡಿದರೂ ಒಂದೇ; ಗ್ರಾಮದ ಮುಖ್ಯಸ್ಥರ ಸಲಹೆ ಮೇಲೆ ಮಾಡಿದರೂ ಒಂದೇ.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರವರು.— ಜಿಲ್ಲೆಯಲ್ಲಿರತಕ್ಕ ಸಾರ್ವಜನಿಕರ ಮುಖಂಡರಿಗೆ ಹೆಚ್ಚಿನ ವಿಚಾರ ಗೊತ್ತಿರುತ್ತೋ ಅಥವಾ ಜಿಲ್ಲಾ ಇನ್ಸ್ಪೆಕ್ಟರವರಿಗೂ ಮತ್ತು ಹೈಸ್ಕೂಲ ಹೆಡ್ಮಾಸ್ಟರವರಿಗೂ ಹೆಚ್ಚಿನ ವಿಚಾರಗಳು ಗೊತ್ತಿರುತ್ತೋ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.— ಅದು difference in degree ಮಾತ್ರ. ಯಾರೇ ಮಾಡಲಿ ಅದರಿಂದ ತೊಂದರೆಗಳೇನೂ ಇಲ್ಲ.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರವರು.— ಹಾಗೆ ಜಿಲ್ಲಾ ಮುಖಂಡರುಗಳ ಅಭಿಪ್ರಾಯ ಪಡೆದು ಈಗಿರುವ ರೀತಿಯನ್ನು ಅಂದರೆ ಜಿಲ್ಲಾ ಸ್ಕೂಲ್ ಇನ್ಸ್ಪೆಕ್ಟರ ಅನುಮತಿ ಮೇಲೆ ಮಾಡುತ್ತಿರುವುದನ್ನು ತಪ್ಪಿಸುವುದು ಒಳ್ಳೆಯದಲ್ಲವೇ?

The Hon'ble Sri R CHENNIGARAMIAH.—It is a matter of opinion.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರವರು.— ಹಾಗಾದರೆ ತಮ್ಮ opinion ಏನು?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.— ಈಗಿರತಕ್ಕದ್ದೇ ಸರಿಯಾಗಿದೆ ಎಂಬುದು.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರವರು.— ಇದರಲ್ಲಿ ಏನಾದರೂ ಲೋಪದೋಷಗಳ ಕಂಡುಬಂದರೆ ಆಗ ಅವುಗಳನ್ನು ತಾವು ಪರಿಶೀಲನೆ ಮಾಡುತ್ತೀರಾ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.— ಮಾಡಲಾಗುತ್ತೆ.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರವರು.— ಈ ಸಮಿತಿ ನೇಮಕದ ಬಗ್ಗೆ ಜಿಲ್ಲಾಧಿಕಾರಿಗಳ ಸಲಹೆ ಪಡೆಯತಕ್ಕದ್ದು ಉತ್ತಮವಾಗಿಲ್ಲವೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.— ತಾವೇನು ಡಿ. ಇ. ಓ. ವಿಚಾರ ಹೇಳುತ್ತಿದ್ದೀರೋ

ಅಥವಾ ಡಿ. ಸಿ. ವಿಚಾರ ಕೇಳುತ್ತಿದ್ದೀರೋ, ಒಂದೂ ಸರಿಯಾಗಿ ಗೊತ್ತಾಗುತ್ತಿಲ್ಲ.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರವರು. ಈ ಇಬ್ಬರ ಸಲಹೆಯನ್ನೂ ತೆಗೆದುಕೊಂಡು ಏಕೆ ಮಾಡಬಾರದು ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.— ಅದು ವಿದ್ಯಾ ಇಲಾಖೆಯ ಡೈರೆಕ್ಟರವರಿಗೆ ಸೇರಿರತಕ್ಕ ವಿಚಾರ. ಸರ್ಕಾರಕ್ಕೆ ಏನೂ ಸಂಬಂಧವಿಲ್ಲ.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರವರು.— ಈ ಸಮಿತಿಗಳನ್ನು ಎಷ್ಟು ವರ್ಷಕ್ಕೊಂದಸಾರಿ ಬದಲಾಯಿಸುವುದು ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.— ಎರಡು ವರ್ಷಕ್ಕೊಂದುಸಾರಿ.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರವರು.— ಸ್ಥಳೀಯ ಮುಖಂಡರುಗಳನ್ನೂ, ಜಿಲ್ಲಾ ಬೋರ್ಡು ಮತ್ತು ಶಾಸನವಿಧಾಯಕ ಸಭೆಯ ಸದಸ್ಯರುಗಳು, ಅಧ್ಯಕ್ಷರುಗಳನ್ನು ಈ ಸಮಿತಿಯಿಂದ ವಜಾಮಾಡಬೇಕೆಂದು ತಾವು ತಿಳುವಳಿಕೆ ಕೊಟ್ಟಿದ್ದೀರಾ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.— ಇಲ್ಲ.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರವರು.— ಇದುವರೆಗೂ ಇದ್ದವರನ್ನು ತೆಗೆದುಹಾಕಿರತಕ್ಕದ್ದು ತಮ್ಮ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.— ಆ ಸಮಿತಿ re-constitute ಆಗುವಾಗ್ಯೆ ಕೆಲವು ಸದಸ್ಯರ ಹೆಸರು ಬಿಟ್ಟುಹೋಗಿರಬಹುದು. ಅದರ ಬಗ್ಗೆ ಸರ್ಕಾರದವರ ನಿಗಾ ಏನೂ ಇರುವುದಿಲ್ಲ.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರವರು.— ಇದನ್ನು ಸರಿಯಾದ ವೇಳೆಗೆ ಸರ್ಕಾರದ ನಿಗಾಕ್ಕೆ ಯಾರು ತರಬೇಕಾಗಿದೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.— ಆ ಅಧಿಕಾರಗಳನ್ನೆಲ್ಲಾ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ರವರಿಗೆ ಕೊಡಲಾಗಿದೆ. ಅವರೇ ಈ ಸಮಿತಿಗಳನ್ನು re-constitute ಮಾಡುವುದು. ಅಂಥಾ ವಿಚಾರಗಳೇನಾದರೂ ಇದ್ದರೆ ಅವರು ತಿಳಿಸುತ್ತಾರೆ.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರವರು.— ಈಗ ಕೊಡುತ್ತಿರುವ ಹಿಂದುಳಿದ ಸ್ಕಾಲರ್‌ಷಿಪ್‌ಗಳನ್ನು ಇನ್ನೂ ಹೆಚ್ಚಿಸಲು ಅದರಿಂದ ಹೆಚ್ಚು ಅನುಕೂಲವಾಗುವುದಿಲ್ಲವೇ ?

Mr. SPEAKER.—That does not arise.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರವರು.— ಇಂಥಾ ಸದಸ್ಯರುಗಳ ವಿಚಾರದಲ್ಲಿ ಅಂದರೆ ಅವರ ಅರ್ಹತೆ ಇತ್ಯಾದಿಗಳ ವಿಚಾರದಲ್ಲಿ ತಾವೇನಾದರೂ ಡೈರೆಕ್ಷನ್ ಕೊಡುತ್ತೀರಾ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.— ಆ ಬಗ್ಗೆ ಏನಾದರೂ ತಕರಾರುಗಳು ಉಂಟಾಗಿದ್ದರೆ ಅದನ್ನು ವಿಚಾರಮಾಡುತ್ತೇವೆ.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರವರು.— ಅಂಥಾ ನಿದರ್ಶನಗಳಿದ್ದು ಅವು ತಮ್ಮ ಗಮನಕ್ಕೆ ಬಂದಾಗ ಅವುಗಳನ್ನು ತಾವು ಸರಿಪಡಿಸುತ್ತೀರಾ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.— ಆಗಲಿ ನೋಡೋಣ.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರವರು. ಶ್ರೀ ಬಿ. ಎಚ್. ಬೋರಣ್ಣಗೌಡರನ್ನು ಆ ಸಮಿತಿಯಿಂದ ವಜಾಮಾಡಲಾಗಿದ್ದು ಪುನಃ ಅವರನ್ನೇ ಸಮಿತಿಗೆ ಸೇರಿಸಿಕೊಳ್ಳಬೇಕೆಂದು ತಾವು ಅವರಿಗೇನಾದರೂ ಡೈರೆಕ್ಟಿವ್ ಕಳುಹಿಸಿದ್ದೀರಾ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.— ಇಲ್ಲ. ಸರ್ಕಾರದವರು ಸೇರಿಸಬೇಕೆಂದೇನು ತಿಳಿಸಿಲ್ಲ. ಡೈರೆಕ್ಟರವರು ಪುನಃ ಪರಿಶೀಲನೆ ಮಾಡತಕ್ಕ ಕಾಲದಲ್ಲಿ ಸೇರಿಸಿದ್ದರೂ ಸೇರಿಸಿರಬಹುದು ಅಷ್ಟೆ.

Mr. SPEAKER.—Question hour is over.

SHORT NOTICE QUESTION AND ANSWER.

Mock Elections in Bangalore.

Q.—25. **Janab SYED ABDUR RAHMAN** (Chikmagalur *cum* Shimoga Muslim).—

Will the Government be pleased to state:—

(*a*) what the response is to the mock trial elections held on the 28th October 1951 in Bangalore;

(*b*) the percentage of voters that participated in these elections;

(*c*) the arrangements that had been made to inform the pub ic about this mock trial elections?

A.—**The Hon'ble Sri K. T. BHASHYAM** (Minister for Law and Labour).—

(*a*) The response was not as enthusiastic as expected.

(*b*) 2·7.

(*c*) News of the holding of mock elections was published in newspapers. Propaganda was also done through the propaganda vans of the Corporation and through the Sanitary Inspectors and Shanbogs.

Janab SYED ABDUR RAHMAN.—With reference to answer to (*a*) that the response was not as enthusiastic as expected, may I know what could be the reasons for lack of enthusiasm?

The Hon'ble Sri K. T. BHASHYAM.—There may be many reasons. That it is only a mock election may be one of the reasons. Another reason may be that people were not interested that day in coming to the polling booths. There may be so many reasons.

Janab SYED ABDUR RAHMAN.—Then may I take it that as 'Coming events cast their shadows before,' that would be the fate of the real elections to come later?

The Hon'ble Sri K. T. BHASHYAM.—It would be wrong to treat it as 'Coming events cast their shadows before'. When the real elections take place, the Hon'ble Member will find them to be very lively indeed.

Janab SYED ABDUR RAHMAN.—If that were the response in a city like Bangalore, in spite of the propaganda by the Government, would not the condition be still worse in villages?

The Hon'ble Sri K. T. BHASHYAM.—That only shows that propaganda carried on by Government does not go so far as propaganda carried on by candidates goes.

Janab SYED ABDUR RAHMAN.—Have people understood the significance of adult franchise?

The Hon'ble Sri K. T. BHASHYAM.—They might have understood.

Janab SYED ABDUR RAHMAN.—Have the Government done anything in this connection with a view to make the people understand the significance of voting on adult franchise?

The Hon'ble Sri K. T. BHASHYAM.—When the Corporation election took place, did not the Hon'ble Member find a large number of people participating in the election?

Janab SYED ABDUR RAHMAN.—I am thinking of election in villages.

The Hon'ble Sri K. T. BHASHYAM.—Even in villages they do come. For instance, in one or two places there were certainly a larger percentage of people taking part in the elections than in Bangalore.

Janab SYED ABDUR RAHMAN.—Will the Government take all steps to see that they understand the signficance of this election?

The Hon'ble Sri K. T. BHASHYAM.—We will take all steps.

ಶ್ರೀ ಎಂ. ಗೋವಿಂದರೆಡ್ಡಿಯವರು (ಚಿತ್ರದುರ್ಗ ಜಿಲ್ಲೆ).—ಚುನಾವಣೆಕಾಲದಲ್ಲಿ ಮತದಾರರಿಗೆ ತಿಂಡಿ ಕೊಡಿಸಬಾರದೆಂದಿದೆಯೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಕಾನೂನುರೀತ್ಯ ಅದೂ ಸಹ ತಕ್ಸೀರಾಗುತ್ತದೆ.

Sri H. K. VEERANNA GOWDH (Mandya District—General).—That does not mean that people in the village parts have to vote for this man or that man for a cup of coffee. It is an insinuation.

Motion for Election to the Board of Industries.

Mr. SPEAKER (The Hon'ble Sri V. Venkatappa).—Motion for election to the Board of Industries.

The Hon'ble Sri H. C. DASAPPA (Minister for Finance and Industries).—Sir, I move:

"That this Assembly do proceel to the election of three Members to the Board of Industries under section 4 of the Mysore State Aid to Industries Act, 1951, in the manner set out in rule 11 of the Mysore State Aid to Industries Rules, 1951."

Mr. SPEAKER.—The question is:

"That this Assembly do proceed to the election of three Members to the Board of Industries under section 4 of the Mysore State Aid to Industries Act, 1951, in the manner set out in rule 11 of the Mysore State Aid to Industries Rules, 1951."

The motion was adopted.

Mr. SPEAKER.—The Chair desires to inform the House that for the purpose of election of three members to the Board of Industries, the office of the Secretary will be open to receive notice of candidature up to 3 p.m. on Wednesday, the 7th November 1951, and that the election, if necessary, will take place on Thursday, the 8th November 1951 in the Secretary's room between the hours of 3 p.m. to 5 p m.

The election will be conducted as laid down in the said Rule according to the principle of proportional representation by means of the single transferable vote.

LEGISLATIVE BUSINESS

The Mysore Tenancy Bill, 1951.

Mr. SPEAKER (The Hon'ble Sri V. Venkatappa).—Clause 2.

Sri H. M. CHANNABASAPPA (Mysore District—General).—I do not propose to move my amendment.

Mr. SPEAKER.—The question is :

"That Clause 2 stand part of the Bill."

The motion was adopted.

Clause 2 was added to the Bill.

Mr. SPEAKER.—Clause 3. The question is :

"That Clause 3 stand part of the Bill."

The motion was adopted.

Clause 3 was added to the Bill.

Mr. SPEAKER.—Clause 4.

Sri H. M. CHANNABASAPPA:—I do not propose to move my amendment.

Mr. SPEAKER.—The question is :

"That Clause 4 stand part of the Bill."

The motion was adopted.

Clause 4 was added to the Bill.

Mr. SPEAKER.—Clause 5.

***Sri H. M. CHANNABASAPPA** (Mysore District-General).—Sir, I move the amendment to clause 5. My amendment is as follows :—

"That in sub clause (1) of clause 5 add the following :—

"All tenancies in force from at least two years prior to the date of commencement of this Act shall be deemed to be tenancies for a further period of five years from the date of commencement of this Act."

ಈ ತಿದ್ದುಪಡಿಯ ಉದ್ದೇಶವಿಷ್ಟು: ಸಾಗುವಳಿ ಮಾಡತಕ್ಕಂಥವರಿಗೆ 5 ವರ್ಷಗಳ ಕಾಲಕ್ಕೆ ಕಡಮೆಯಿಲ್ಲದಂತೆ ಸಾಗುವಳಿ ಮಾಡತಕ್ಕಂಥ ಹಕ್ಕನ್ನು ಈ 5ನೆಯ ಕ್ಲಾಜಿನಲ್ಲಿ ಕೊಟ್ಟಿದೆ. "No tenancy of land shall be for a period of less than five years." ಎಂದು 5ನೆಯ ಕ್ಲಾಜಿನ ಒಂದನೆಯ ಸಬ್ ಕ್ಲಾಜಿನಲ್ಲಿ ಹೇಳಿದೆ, ಇನ್ನು ಮುಂದೆ ಈ ಕಾನೂನು ಪ್ರಕಾರ ಈ ಶಾಸನ ಜಾರಿಗೆ ಬಂದಮೇಲೆ ಎಲ್ಲಾ ಸಾಗುವಳಿ ವ್ಯವಹಾರಗಳೂ ಕೂಡ 5 ವರ್ಷಗಳ ಕಾಲಕ್ಕೆ ಮೀರಿದ್ದಾಗಿರಬೇಕೇ ಹೊರತು ಅದಕ್ಕೆ ಕಮ್ಮಿ ಇರಕೂಡದು. ಹಾಗಿರುವಾಗ, ಹಾಲಿ ಸಾಗುವಳಿ ಮಾಡಿಕೊಂಡು ಅನೇಕ ಜನರು ಬರುತ್ತಿದ್ದಾರೆ, ಅವರೆಲ್ಲರೂ ಕೂಡ ಮುಂದೆ ಸಾಗುವಳಿದಾರರಾಗಿರಬೇಕೆ ಅಥವಾ ಇರಬೇಕಾದರೆ ಹೇಗಿರಬೇಕು ಎಂಬುದನ್ನು ನಾವು ನಿರ್ಧರಿಸಬೇಕಾದುದು ಅವಶ್ಯಕ, ಅಥವಾ ಅಂಥವರ ವಿಷಯದಲ್ಲಿ ಇಲ್ಲಿ ಏನೂ ಮಾಡಿಲ್ಲ. ಹನ್ನೆರಡು ವರ್ಷಕ್ಕೆ ಮೇಲ್ಪಟ್ಟು ಇದುವರೆಗೆ ಸಾಗುವಳಿ ಮಾಡಿಕೊಂಡು ಬಂದಿರುವವರಿಗೆ 16ನೆಯ ಕಲಂನಲ್ಲಿ ಅವಕಾಶ ಕೊಟ್ಟಿದೆ. ಹನ್ನೆರಡು ವರ್ಷಕ್ಕೆ ಕಮ್ಮಿ ಕಾಲ ಸಾಗುವಳಿ ಮಾಡಿಕೊಂಡು ಬಂದಿರುವವರ ವಿಷಯದಲ್ಲಿ ಏನೂ ಹೇಳಿಲ್ಲ. ಮತ್ತು ಈ ದಿವಸ ಶಾಸನ ಜಾರಿಗೆ ಬಂದರೆ, ಈ ಹಿಂದೆ ಮೂರು ನಾಲ್ಕು ವರ್ಷಗಳಿಂದ ಸಾಗುವಳಿ ಮಾಡಿರುವವರಿಗೆ ಸಾಗುವಳಿ ಹಕ್ಕನ್ನು ಒದಗಿಸದೇಹೋದರೆ ಅವರಿಗೆ ತೊಂದರೆಯಾಗುತ್ತದೆ. ಆ ಉದ್ದೇಶದಿಂದ ಈ ತಿದ್ದುಪಡಿಯನ್ನು ತರಬೇಕೆಂದು ಯೋಚನೆಮಾಡಿದೆ. ಎಷ್ಟು ವರ್ಷಗಳ ಕಾಲ ಸಾಗುವಳಿ ಮಾಡಿದ್ದರೂ ಅವರಿಗೆ ಮುಂದೆಯೂ ಕೂಡ ಈ ಶಾಸನದ ಪ್ರಕಾರ ಸಾಗುವಳಿ ಮಾಡುವ ಹಕ್ಕು ಕೊಡಬೇಕು ಎಂಬ ವಿಚಾರವನ್ನು ಪರಿಶೀಲಿಸಬೇಕಾದ್ದು ಸ್ವಲ್ಪ ಅವಶ್ಯಕ; ಒಂದು ವರ್ಷದ ಹಿಂದೆ ಯಾರಾದರೂ ಒಬ್ಬರು ತಮ್ಮ ಜಮೀನನ್ನು ಸಾಗುವಳಿಗೆ ಕೊಟ್ಟಿದ್ದರೆ ಈ ಶಾಸನದ ಪ್ರಕಾರ ಇನ್ನೂ 5 ವರ್ಷ ಅವನೇ ಮಾಡಿಕೊಂಡು ಹೋಗಬಹುದು; ಒಪ್ಪಂದ ಮಾಡಿಕೊಂಡಿದ್ದರೂ, ಇಲ್ಲದಿದ್ದರೂ ಅವನಿಗೇ ಕೊಡಬೇಕು ಎಂದಿದೆ. ಇದರಿಂದ ತೊಂದರೆಯಾಗುತ್ತದೆ. ಹೋದವರ್ಷ ಈ ಶಾಸನ ಬರುತ್ತದೆಂಬ ನಿರೀಕ್ಷೆ ಜನರಿಗಿರಲಿಲ್ಲ. ಹೋದ ವರ್ಷ ಯಾರಾದರೂ ಸಾಗುವಳಿ ಮಾಡುತ್ತಿದ್ದರೆ ಈ ಕಾನೂನು ಬಂದಕೂಡಲೆ ಅವರಿಗೆ ಒಪ್ಪಂದದ ಪ್ರಕಾರ 5 ವರ್ಷ ಕೊಡಬೇಕು ಎಂದು ಹೇಳಿದರೆ ತೊಂದರೆ. ಇನ್ನೊಂದು ದೃಷ್ಟಿಯಿಂದ ಜಮೀನನ್ನೇ ನಂಬಿಕೊಂಡು ವ್ಯವಸಾಯಮಾಡಿಕೊಂಡು ಬಂದಿರುವವರಿಗೆ ಈ ಶಾಸನ ಬಂದಕೂಡಲೆ ಜಮೀನ್ದಾರರು ಸಾಗುವಳಿ ನಿಲ್ಲಿಸಿದರೆ ಅವರಿಗೆ ತೊಂದರೆಯಾಗುತ್ತದೆ, ಈ ಎಲ್ಲಾ ದೃಷ್ಟಿಯಿಂದ ಯೋಚನೆಮಾಡಿ ಉಭಯತ್ರರಿಗೂ ತೊಂದರೆಯಾಗದಹಾಗೆ ಒಂದು ತಿದ್ದುಪಡಿಯನ್ನು ಸೂಚಿಸಿದ್ದೇನೆ. ಆ ತಿದ್ದುಪಡಿಯ ಅಭಿಪ್ರಾಯವಾದರೂ ಇಷ್ಟೆ. ಈ ಶಾಸನ ಯಾವ ದಿವಸ ಜಾರಿಗೆ ಬರುತ್ತದೆಯೋ ಆ ದಿವಸದಿಂದ ಹಿಂದೆ ಎರಡು ವರ್ಷಗಳ ಪರ್ಯಂತ ಒಂದೇ ಸಮನಾಗಿ ಯಾರು ಸಾಗುವಳಿ ಮಾಡಿಕೊಂಡು ಬಂದಿದ್ದಾರೆಯೋ ಮತ್ತು ಈ ಶಾಸನ ಜಾರಿಗೆ ಬರುವ ದಿವಸ ಸಾಗುವಳಿ ಮಾಡಲು ಯಾರು ಹಕ್ಕು ಪಡೆದಿರುವರೋ ಅಂಥವರನ್ನು ಜಮೀನ್ದಾರ ಒಪ್ಪಲೇಬೇಕು. ಈ ಶಾಸನ ಜಾರಿಗೆ ಬಂದಲಾಗಾಯ್ತು 5 ವರ್ಷಗಳ ಪರ್ಯಂತ ಸಾಗುವಳಿ ಹಕ್ಕನ್ನು ಒದಗಿಸಬೇಕು ಎಂಬುದೇ ನನ್ನ ಉದ್ದೇಶ. ಈ ತಿದ್ದುಪಡಿ ಉದ್ದೇಶ ಒಳ್ಳೆಯದು. ಇದು ಉದಾತ್ತ ಧ್ಯೇಯದಿಂದ ಕೂಡಿರುವುದರಿಂದ ಮತ್ತು ಜಮೀನ್ದಾರ ಮತ್ತು ಸಾಗುವಳಿದಾರ ಉಭಯತ್ರರಿಗೂ ಯಾವ ವಿಧವಾದ ತೊಂದರೆ ಬಾಧಕ ಬಾರದೆ ಉಭಯತ್ರರ ಹಿತ ಕಾಪಾಡುವ ಉದ್ದೇಶದಿಂದ ಈ ತಿದ್ದುಪಡಿಯನ್ನು ತಂದಿರುವುದರಿಂದ ಮಾನ್ಯ ಸದಸ್ಯರು ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕೆಂದು ನಾನು ಪ್ರಾರ್ಥನೆಮಾಡಿಕೊಳ್ಳುತ್ತೇನೆ.

Mr. SPEAKER.—Amendment moved :—

"That in sub-clause (1) of clause 5 add the following :—

"All tenancies in force from at least two years prior to the date of commencement of this Act shall be deemed to be tenancies for a further period of five years from the date of commencement of this Act."

The Hon'ble Sri H. SIDDAIYA.—The amendment proposed by the Hon'ble Member is very reasonable and equitable. I accept the amendment.

Mr. SPEAKER.—The question is :

"That in sub-clause (1) of clause 5 add the following" :—

"All tenancies in force from at least two years prior to the date of commencement of this Act shall be deemed to be tenancies for a further period of five years from the date of commencement of this Act."

The motion was adopted.

Sri H. M CHANNABASAPPA.—I do not propose to move my other amendment.

Mr. SPEAKER.—The question is :

"That Clause 5, as amended, stand part of the Bill."

The motion was adopted.

Clause 5, as amended, was added to the Bill.

Mr. SPEAKER.—Clause 6.

Sri K. R. SREEKANTESWAR (Bangalore City—General).—Sir, my amendment reads as follows :—

"That in sub-clause (1) for the words 'one half' the words 'one-fourth' shall be substituted."

ಈ ವಿಷಯದಲ್ಲಿ ಆಗಲೇ ನಾನು ಹೆಚ್ಚಾಗಿ ಹೇಳಿದ್ದೇನೆ. ಈಗ ಬರುತ್ತಿರುವ ಬೆಳೆಯೊಳಗೆ ಅರ್ಧಭಾಗ ಕೊಡಲು ಅವಕಾಶವಿದೆ. ಸರ್ಕಾರಕ್ಕೆ ಮಾತ್ರ ಅರ್ಧಭಾಗದೊಳಗೆ ನಿಗದಿ ಮಾಡಲು ಅಧಿಕಾರವಿದೆ. ಗೇಣಿದಾರರು ಇದುವರೆಗೆ ಹೆಚ್ಚಾಗಿ ಕೊಡುತ್ತಿದ್ದಾರೆ. ಕೆಲವು ಕಡೆ ಅರ್ಧಭಾಗ, ಮತ್ತೆ ಕೆಲವು ಕಡೆ ಇನ್ನೂ ಹೆಚ್ಚು ಹೀಗೆಲ್ಲಾ ಕೊಡುತ್ತಿದ್ದಾರೆ. ಆದ್ದರಿಂದ ಅರ್ಧಭಾಗದವರೆಗೆ ಕೊಡಬಹುದೆಂದು ಪರಮಾವಧಿಯನ್ನು ನಿಗದಿ ಮಾಡಿದರೆ ಜಮೀನ್ದಾರರು ಅದನ್ನೇ ಕೇಳುವುದಕ್ಕೆ ಪ್ರಾರಂಭಮಾಡುತ್ತಾರೆ. ಮಿನಿಮಂ ನಿಗದಿ ಮಾಡಿದರೆ ಅದಕ್ಕೆ ಅವಕಾಶವಿರುವುದಿಲ್ಲ. ಆದ್ದರಿಂದ ಕಾಲುಭಾಗ ಎಂದು ಮಾಡಿದರೆ ಈ ಶಾಸನದಿಂದ ಗೇಣಿದಾರರಿಗೆ ಅನುಕೂಲವಾಗುತ್ತದೆ, ಇದನ್ನು ಸಭಾಸದಸ್ಯರೆಲ್ಲ ಒಪ್ಪಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

Mr. SPEAKER.—Amendment moved :

"That in sub-clause (1), for the words 'one half', the words 'one fourth' shall be substituted."

*ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿ ಉದ್ದೇಶವೇನೋ ಬಹಳ ಒಳ್ಳೆಯದು. ಸಾಗುವಳಿ ಮಾಡತಕ್ಕಂಥ ಮನುಷ್ಯ ಬಹಳ ಕಷ್ಟಪಟ್ಟು ದುಡಿದು ಬೆಳೆಯುವನು ಆದ್ದರಿಂದ ಆತನಿಗೆ ಸ್ವಲ್ಪ ಹೆಚ್ಚು ಲಾಭದಾಯಕವಾಗಿರುವಂತೆ ಶಾಸನ ಮಾಡಬೇಕಾದ್ದು ಅತ್ಯಾವಶ್ಯಕ. ಆ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಎಷ್ಟರಮಟ್ಟಿಗೆ ಅನುಕೂಲ ಮಾಡಿಕೊಡಬೇಕೆಂಬ ವಿಚಾರ ಎಲ್ಲ ಪರಿಸ್ಥಿತಿ ಅನುಸರಿಸಿ ಉಭಯತ್ರರಿಗೂ ತೊಂದರೆಯಾಗದ ಹಾಗೆ ಕಾನೂನು ಮಾಡಬೇಕಾದ್ದು ನಮ್ಮ ಕರ್ತವ್ಯ. ಅದರಲ್ಲೂ ನಾವು ಒಂದು ಶಾಸನ ಮಾಡುವಾಗ ಎಲ್ಲರ ಹಿತವನ್ನೂ ಗಮನಕ್ಕೆ ತೆಗೆದುಕೊಳ್ಳಬೇಕು. ಸಾಗುವಳಿ ಮಾಡುವವರಿಗೆ ಹಿತಕಾರಿಯಾಗಿರಬೇಕೆಂಬ ಉದ್ದೇಶದಿಂದಲೇ ಇದನ್ನು ತಂದಿರುವಾಗ ಸಾಗುವಳಿ ಮಾಡತಕ್ಕ ಜಮೀನಿನ ಒಡೆಯರ ಹಿತವನ್ನೂ ಕೂಡ ನಾವು ಸ್ವಲ್ಪಮಟ್ಟಿಗೆ ದೃಷ್ಟಿಯಲ್ಲಿಟ್ಟುಕೊಳ್ಳಬೇಕೆಂಬ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲದೆ ಶ್ರೀ ಶ್ರೀಕಂಠೇಶ್ವರ್ ರವರು ಒಪ್ಪಿಕೊಳ್ಳುತ್ತಾರೆಂದು ನಂಬಿದ್ದೇನೆ. ಬೊಂಬಾಯಿ ಸಾಗುವಳಿ ಕಾನೂನಿನಲ್ಲಿ ತರಿ ಜಮೀನಿಗೆ 1/3 ಭಾಗ ಇದೆ, ಖುಷ್ಕಿಗೆ 1/4 ಭಾಗ ಇದೆ ಮತ್ತು ಹೈದರಾಬಾದು ಯು. ಪಿ. ಬೀಹಾರ್, ಪಂಜಾಬು, ಬಂಗಾಳ ಮುಂತಾದ ಕಡೆಗಳಲ್ಲಿ ಟೆನೆನ್ಸಿ ಕಾನೂನು ಬೇರೆ ಬೇರೆ ತರಹ ಇದೆ. ಇದನ್ನು ನಿರ್ಧಾರವಮಾಡುವಾಗ ಇತರ ದೇಶಗಳಲ್ಲಿ, ಇತರ ಪ್ರಾಂತಗಳಲ್ಲಿ ಈ ರೀತಿ ಇದೆ, ಆದ್ದರಿಂದ ಅದನ್ನು ಅನುಸರಿಸಬೇಕು ಎಂದು ಹೇಳುವ ವಾದ ಒಪ್ಪತಕ್ಕದಲ್ಲ. ಒಂದು ವೇಳೆ ಅಲ್ಲಿ ಸಾಗುವಳಿದಾರರಿಗೆ ಸ್ವಲ್ಪ ಕಷ್ಟನಷ್ಟ ಆಗಿದ್ದರೂ ಕೂಡ ನಾವು ಇಲ್ಲಿ ವ್ಯವಸಾಯ ಮಾಡುವ ಸಾಗುವಳಿದಾರರ ಹಿತವನ್ನು ಹೆಚ್ಚಾಗಿ ಕಾಪಾಡುವುದರಲ್ಲಿ ಅಭ್ಯಂತರವಿಲ್ಲ. ಇದರಿಂದ ಇಲ್ಲಿ ಜಮೀನ್ದಾರರಿಗೆ ತನ್ನ ಆಸ್ತಿಯಲ್ಲಿ ಸ್ವಲ್ಪ ಆಸೆಯಿದೆ, ಅದನ್ನು ನೋಡಿ ಈ ರೀತಿ ಮಾಡಬೇಕೆಂದು ಹೇಳುವುದು ಸರಿಯಲ್ಲ. ಒಟ್ಟಿನಲ್ಲಿ ನಮ್ಮ ದೇಶದ ಪರಿಸ್ಥಿತಿ, ಇಲ್ಲಿ ಸಾಗುವಳಿದಾರರ ಮತ್ತು ಜಮೀನ್ದಾರರ ಪರಿಸ್ಥಿತಿ, ಭೂಮಿಯ ಉತ್ಪತ್ತಿ, ಭೂಮಿ ಸಾಗುವಳಿಗಾಗಿ ಮಾಡುವ ಖರ್ಚು, ನಮ್ಮಲ್ಲಿರುವ ಭೂಸ್ವಾಮ್ಯ ಪದ್ಧತಿ ಇವುಗಳೆಲ್ಲವನ್ನೂ ಗಮನಕ್ಕೆ ತೆಗೆದುಕೊಂಡು ಈ ಶಾಸನದಲ್ಲಿ ವ್ಯವಸ್ಥೆ ಮಾಡಬೇಕೇ ವಿನಾ ಇತರ ಪ್ರಾಂತಗಳಲ್ಲಿರುವುದನ್ನು ಮಕ್ಕಿಕಾಮಕ್ಕಿ ಅನುಸರಿಸಬೇಕೆಂದು ಹೇಳುವುದು ಸರಿಯಲ್ಲ ಎಂದು ಅವರೇ ಒಪ್ಪಿಕೊಳ್ಳುತ್ತಾರೆ.

ಶ್ರೀಮಾನ್ ಶ್ರೀಕಂಠೇಶ್ವರ್ ರವರು ಕಾಲುಭಾಗ ಮಾಡಿ ಎಂದು ಹೇಳಿದ್ದಾರೆ. ಕಾಲುಭಾಗ ಮಾಡಬೇಕಾಗಿದ್ದರೆ, ಮೊದಲನೆಯ ದಿನವೇ ನನ್ನ ಭಾಷಣದಲ್ಲಿ ಹೇಳಿದ್ದೆ, ದೊಡ್ಡ ದೊಡ್ಡ ಜಮೀನ್ದಾರರು ಮಾತ್ರವೇ ನಮ್ಮ ದೇಶದಲ್ಲಿದ್ದಾರೆ ಎಂಬ ತಿಳಿವಳಿಕೆ ಇದ್ದರೆ ಅದು ಸರಿಯಲ್ಲ; ಬಡವರಾಗಿದ್ದು ಜಮೀನ್ದಾರರು ಸದರಿ ಜಮೀನನ್ನು ಸಾಗುವಳಿ ಕೊಟ್ಟು ಜೀವನ ಮಾಡತಕ್ಕವರೂ ಲಕ್ಷೋಪಲಕ್ಷ ಜನರಿದ್ದಾರೆ. ಮತ್ತು ಕೇವಲ ಜಮೀನನ್ನೇ ನಂಬಿಕೊಂಡು ಅದರಿಂದ ಬರತಕ್ಕ ಉತ್ಪತ್ತಿಯಿಂದ ಜೀವನ ಮಾಡತಕ್ಕ ಜನರೂ ಲಕ್ಷಾಂತರ ಜನರಿದ್ದಾರೆ. ಈ ರೀತಿ ಕಾಲುಭಾಗ ಮಾಡಿದ ಪಕ್ಷದಲ್ಲಿ ಅವರ ಸ್ಥಿತಿಗತಿ ಏನಾಗಬೇಕು ಎಂಬುದನ್ನು ದೃಷ್ಟಿಯಲ್ಲಿಟ್ಟುಕೊಳ್ಳಬೇಕು. ಬಹುಶಃ ಅವರು ಇನ್ನೊಂದು ತಿದ್ದುಪಡಿ ತಂದು ಹೆಚ್ಚು ಹೆಚ್ಚು ಜಮೀನು ಇಟ್ಟುಕೊಂಡು ಸಾಗುವಳಿದಾರರ ಮುಖೇನ ಸಾಗು ಮಾಡಿಸಿಕೊಂಡು ಹೆಚ್ಚು ಉತ್ಪತ್ತಿ ಪಡೆಯತಕ್ಕವರು ಸ್ವಲ್ಪ ಹೆಚ್ಚು ಕೊಡಿ ಎಂದರೆ ಅದು ಸಾಧುವಾದಂಥ ಮಾತು. ಅನೇಕ ಕಾರಣಗಳಿಗಾಗಿ ಇತರರಿಗೆ ಸಾಗುವಳಿಗೆ ಕೊಟ್ಟು ಅದನ್ನೇ ನಂಬಿಕೊಂಡು ಜೀವನ ಮಾಡುವವರು ಬಹಳ ಜನ ಇರುವುದರಿಂದ ಅವರ ಹಿತದೃಷ್ಟಿಯನ್ನಿಟ್ಟುಕೊಂಡು ಇದನ್ನು ನಿರ್ಧಾರ ಮಾಡಿದ್ದೇವೆ. ಇನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆ ಮಾಡಿ ಈ ವಿಷಯವನ್ನು ಶಾಸನದಲ್ಲಿ ಅಡಕಮಾಡುವಾಗ ಅರ್ಧಕ್ಕಿಂತ ಹೆಚ್ಚು ಇರಕೂಡದು ಎಂಬುದಾಗಿ ಮಾಡಿದರು. ಅಂಥಾ ಕ್ಷಣಕ್ಕೆ ಕಾಲುಭಾಗ ಮಾಡುವುದಕ್ಕೂ ಪೂರ್ಣ ಅವಕಾಶವಿದೆ. ಕಾನೂನಿನ ಬಲದಿಂದ ಅದನ್ನು ಒತ್ತಾಯಪಡಿಸಬೇಕೆಂಬುದು ಸರಿಯಲ್ಲ; ಏಕೆಂದರೆ, ಅನೇಕ ಕಡೆ ಕಾಲುಭಾಗಕ್ಕಿಂತಲೂ ಕೂಡ ಕಮ್ಮಿ ಇದೆ. ಎಂದು ಹೇಳಿದರೆ ಶ್ರೀಮಾನ್ ಶ್ರೀಕಂಠೇಶ್ವರರವರು ಒಪ್ಪಿಕೊಳ್ಳುತ್ತಾರೆ ಎಂದು ನಂಬಿದ್ದೇನೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಯಾವ ಊರಿನಲ್ಲಿ ಆ ರೀತಿ ಇದೆ?

Sri H. M. CHANNABASAPPA.—If you want I will quote Sri Kadidal Manjappa's area. ಮಲೆನಾಡಿನಲ್ಲಿ ಯಾರಾದರೂ ಸರಿ ರೈತರನ್ನು ಬಿಟ್ಟರೆ ಬೇರೆ ಗತಿ ಇಲ್ಲ ಎಂಬ ಪರಿಸ್ಥಿತಿ ಇದೆ. ಅಲ್ಲಿ ಕಾಲುಭಾಗ ಅಷ್ಟೇಕೆ ಬರೀ ಕಂದಾಯ ಕಟ್ಟಿಕೊಂಡು ಸಾಗುವಳಿ ಮಾಡಿಕೊಂಡು ಹೋಗು ಎಂದು ಹೇಳಬೇಕಾಗಿರುವ ಪರಿಸ್ಥಿತಿ ಇದೆ. ಅದಕ್ಕೆ ನಾನೇ ಒಂದು ಉದಾಹರಣೆ. ಎಲ್ಲಿ ಉಳುವುದಕ್ಕೆ ರೈತರು ಇಲ್ಲವೋ, ಎಲ್ಲಿ ಜನವಸತಿ ಕಡಿಮೆಯಾಗಿದೆಯೋ ಅಲ್ಲಿ Man being a social animal wants company. ಅವರನ್ನು ನಮ್ಮ ಪಕ್ಕದಲ್ಲಿಟ್ಟುಕೊಂಡಿರೋಣ ಎಂಬ ಧ್ಯೇಯದಿಂದ ಅನೇಕ ಜನರನ್ನು ಕರೆದುಕೊಂಡು ಹೋಗಿ ಭೂಮಿ ಕೊಟ್ಟು, ಬರೀ ಕಂದಾಯ ಕೊಟ್ಟು ಭೂಮಿ ಉತ್ತುಕೊಂಡು ಹೋಗಿ ಎಂದು ಹೇಳತಕ್ಕ ಪರಿಸ್ಥಿತಿ ಇವತ್ತೂ ಇದೆ. ತಾವು ಕೇಳಿದ್ದಕ್ಕೆ ಎಲ್ಲಿ ಕಾಲುಭಾಗಕ್ಕಿಂತ ಕಮ್ಮಿ ಗುತ್ತಿಗೆ ಇದೆ ಎಂಬುದನ್ನು ಹೇಳಿದ್ದಾಯಿತು. ಅರ್ಧಕ್ಕಿಂತ ಹೆಚ್ಚಾಗಿ ತೆಗೆದುಕೊಳ್ಳತಕ್ಕ ಪರಿಸ್ಥಿತಿಗಳೂ ಇವೆ, ಇಲ್ಲವೆಂದು ಹೇಳುವದಕ್ಕಾಗುವುದಿಲ್ಲ. ಅದೆಲ್ಲವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಸಣ್ಣ ಜಮೀನ್ದಾರ, ದೊಡ್ಡ ಜಮೀನ್ದಾರ, ದೊಡ್ಡ ಸಾಗುವಳಿದಾರ, ಸಣ್ಣ ಸಾಗುವಳಿದಾರ, ಬಡವರು, ಬಗ್ಗರು, ಮೈನರ್ ಮಕ್ಕಳು ವಿಧವೆಯರು ಎಲ್ಲರ ದೃಷ್ಟಿಯಿಂದಲೂ ಶಾಸನ ಮಾಡಬೇಕು. ಅರ್ಧಕ್ಕಿಂತ ಹೆಚ್ಚು ತೆಗೆದುಕೊಳ್ಳಕೂಡದು ಎಂದು ನಿರ್ಧರ ಮಾಡುವಾಗ ಸರ್ಕಾರದವರು ಏನು ದೃಷ್ಟಿಯಲ್ಲಿಟ್ಟುಕೊಂಡಿದ್ದಾರೆ ಎಂಬುದನ್ನು ತಾವು ಸ್ವಲ್ಪ ನೋಡಬೇಕು. ಎಲ್ಲಾ ಪ್ರಾಂತ್ಯಗಳಲ್ಲೂ ಅರ್ಧ ಭಾಗ ಪರಮಾವಧಿ ಮೊಕರೂರು ಮಾಡಿದ್ದರೂ ಸಾಗುವಳಿದಾರರಿಗೆ ತೊಂದರೆ ಆದೀತು ಎಂದು ಕಂಡುಬಂದರೆ ಮೂರನೇ ಒಂದು ಭಾಗ ಮೊಕರೂರು ಮಾಡಬಹುದು. ಕಾಲುಭಾಗ ಮೊಕರೂರು ಮಾಡಬಹುದು. ಇನ್ನೂ ಮುಂದೆ ಹೋಗಿ ನ್ಯಾಯವೆಂದು ಕಂಡುಬಂದರೆ ಕಾಲುಭಾಗಕ್ಕಿಂತಲೂ ಕಮ್ಮಿ ಗುತ್ತಿಗೆ ವಿಧಾಯಕ ಮಾಡತಕ್ಕ ಅಧಿಕಾರವನ್ನು ಸರ್ಕಾರದವರಿಗೆ ಈ ಕಾನೂನಿನಲ್ಲಿ ಕೊಟ್ಟಿದೆ. ಮುಂದಿನ ಪ್ರಾವಿಜನ್ ನೋಡಿ. ಅದನ್ನು ನೋಡದಿದ್ದರೆ ಈ ತಿದ್ದುಪಡಿ ಬರುತ್ತಾ ಇರಲಿಲ್ಲ. ಅಂಥಾ ಅಧಿಕಾರ ಇರುವಾಗ ಶ್ರೀಮಾನ್ ಶ್ರೀಕಂಠೇಶ್ವರ್‌ರವರು, ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಸರ್ಕಾರದವರಲ್ಲಿ ಹೋಗಿ ಇಂತಿಂಥಾ ಪ್ರದೇಶಗಳಲ್ಲಿ ಬಹಳ ಕಷ್ಟ ಇದೆ. ಆದ್ದರಿಂದ ಆ ಭಾಗಗಳಲ್ಲಿ ಕಾಲುಭಾಗಕ್ಕಿಂತ ಕಮ್ಮಿ ನಿರ್ಧರ ಮಾಡಬೇಕು ಎಂಬುದಾಗಿ ಸಲಹೆ ಕೊಟ್ಟರೆ ಖಂಡಿತವಾಗಿಯೂ ಜವಾಬ್ದಾರಿಯಿಂದ ಹೇಳತಕ್ಕ ತಮ್ಮಂಥವರ ಮಾತನ್ನು ಸರ್ಕಾರದವರು ನಿರಾಕರಿಸುತ್ತಾರೆ ಎಂದು ಹೇಳುವ ಪರಿಸ್ಥಿತಿಯಲ್ಲಿ ನಾನು ಇಲ್ಲ. ಅಂದ ಮೇಲೆ ಕಾಲುಭಾಗ ಎಂದು ಹೇಳಿ ಶಾಸನದಲ್ಲಿ ನಿರ್ಧರ ಮಾಡಿ ಸಾಗುವಳಿದಾರನಿಗೆ ಒದಗತಕ್ಕ ಉಪಯೋಗವನ್ನು ತಪ್ಪಿಸಬಾರದು. ಈ ಕಾರಣಗಳಿಗಾಗಿ ನಾನು ಈ ತಿದ್ದುಪಡಿಯನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಸಾಗುವಳಿದಾರರ ಹಿತದಿಂದಲೇ ಒಪ್ಪುವುದಕ್ಕೆ ಸಾಧ್ಯವಿಲ್ಲವಾದ ರಿಂದ ಇದುವರೆಗೂ ಹೇಳಿರತಕ್ಕ ಅಂಶಗಳನ್ನು ಗಮನಿಸಿ ಶ್ರೀಮಾನ್ ಶ್ರೀಕಂಠೇಶ್ವರ್‌ರವರು ತಮ್ಮ ತಿದ್ದುಪಡಿಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಬೆಳೆ ಆಗುವುದರಲ್ಲೂ ಕೂಡ ವ್ಯತ್ಯಾಸವಾಗುತ್ತದೆ. ಅನೇಕ ಸಂದರ್ಭಗಳಲ್ಲಿ ಹಲವಾರು ಅಂಶಗಳನ್ನು ಗಮನಿಸಬೇಕಾಗುತ್ತದೆ. ಜನವಸತಿ, ಜಲವಸತಿ, ಸಂಚಾರ ಸೌಕರ್ಯ ಭೂಗುಣ, ಹವಾಗುಣ ಮತ್ತು ಮಾರ್ಕೆಟ್ ಸೌಕರ್ಯಗಳು ಸಾಗುವಳಿ ಖರ್ಚು ಇತ್ಯಾದಿ ಇತ್ಯಾದಿ ಅಂಶಗಳನ್ನು ಗಮನಕ್ಕೆ ತೆಗೆದುಕೊಂಡು ಆಯಾಯ ಪ್ರದೇಶದ ರತಕ್ಕ ವಿದ್ಯಮಾನಗಳೆಲ್ಲವನ್ನು ಪರಿಶೀಲಿಸಿ ನಿರ್ಧರ ಮಾಡಬೇಕಾಗುತ್ತದೆ. ಆ ಕಾರಣದಿಂದ "not exceeding one half" ಎಂದು ಹೇಳಿದೆಯೇ ಹೊರತು ಮತ್ತೆ ಬೇರೆ ಅಲ್ಲ. ನಿನ್ನೆ ಸಾಯಂಕಾಲ ಅರಿಕೆ ಮಾಡಿಕೊಂಡ ಹಾಗೆ "not exceeding half" ಎಂದರೆ ಅರ್ಧ ಎಂದು ಅರ್ಥ ಮಾಡಬೇಕಾಗಿಲ್ಲ. ಅದು 'one-fourth ಬೇಕಾದರೂ ಆಗಬಹುದು ಆ ಅರ್ಥವೂ ಆಗುತ್ತದೆ. ಇಷ್ಟೇ ಅಲ್ಲ, ಇದೇ 6ನೆಯ ಸೆಕ್ಷನ್ ಸಬ್ ಸೆಕ್ಷನ್ (2) ರಲ್ಲಿ "The Government may, by notification in the *Mysore Gazette* fix a lower rate ..." ಎಂದು ಇರುವಾಗ ಇಷ್ಟೊಂದು ಗಾಬರಿ ಆಗಬೇಕಾಗಿಲ್ಲ. ಈ ಕಾರಣದಿಂದ ಈಗಿರತಕ್ಕ ಕ್ಲಾಸ್‌ನಲ್ಲಿ ಇನ್ಯಾವ ತಿದ್ದುಪಡಿಗೂ ಅವಶ್ಯಕತೆಯಿಲ್ಲ. ಆದ್ದರಿಂದ ಈ ತಿದ್ದುಪಡಿಯನ್ನು ನಾನು ವಿರೋಧಿಸಬೇಕಾಗಿದೆ.

***Sri K. R. SREEKANTESWAR.**—I press the amendment.

Mr. SPEAKER.—The question is:

"That in sub-clause (2), for the words 'one half', the word 'one-fourth' shall be substituted.'

The motion was negatived.

***Sri H. M. CHANNABASAPPA** (Mysore District-General).—Sir I move:

"That for the words "the crop of" the words 'all the crops raised on' shall be substituted."

ನನ್ನ ತಿದ್ದುಪಡಿ ಉದ್ದೇಶ ಇಷ್ಟೇ. ಇದರಲ್ಲಿ "shall not exceed 'one-half of the crop'" ಅಂತ ಇದೆ. ಇದಕ್ಕೆ ಬದಲಾಗಿ ನಾನು ಸೂಚಿಸಿರುವ ತಿದ್ದುಪಡಿಯಲ್ಲಿ "all the crops raised on'" ಎಂಬುದನ್ನು ಸೇರಿಸಿಕೊಳ್ಳಬೇಕೆಂದು ಹೇಳಿದ್ದೇನೆ. ಈ ತಿದ್ದುಪಡಿಯನ್ನು ಸೂಚನೆ ಮಾಡತಕ್ಕ ಉದ್ದೇಶವಾದರೂ ಇಷ್ಟೇ. ಒಂದು ಹೊಲದರಲ್ಲಾಗಲೀ ಅಥವಾ ಒಂದು ಗದ್ದೆಯಲ್ಲಾಗಲೀ ಒಂದು ವರ್ಷದಲ್ಲಿ ಎರಡು, ಮೂರು ಬೆಳೆಗಳನ್ನು ಬೆಳೆಯತಕ್ಕ ಪದ್ಧತಿ ನಮ್ಮ ದೇಶದಲ್ಲಿ ಇದೆಯೆಂಬುದು ಸರ್ವರಿಗೂ ಗೊತ್ತಿದೆ. ಇದರಲ್ಲಿ "one-half of the crop raised" ಅಂತ ಇದೆ. ನಾಳೆ ಕೋರ್ಟಿಗೆ ಹೋದ ಪಕ್ಷದಲ್ಲಿ 'crop' ಎಂದರೆ ಒಂದೇ ಒಂದು ಬೆಳೆ ಆಗುತ್ತದೆಯೋ ಅಥವಾ ವರ್ಷದಲ್ಲಿ ಎಷ್ಟು ಬೆಳೆ ಬೆಳೆಯುತ್ತಾನೋ ಅದೆಲ್ಲವನ್ನು ದೃಷ್ಟಿಯಲ್ಲಿಟ್ಟುಕೊಂಡು ಅದರಲ್ಲಿ ಅರ್ಧದಷ್ಟು ಕೊಡಬೇಕೋ ಎಂಬುದಾಗಿ ವಾದ ವಿವಾದಗಳನ್ನು ಹೂಡುವುದಕ್ಕೆ ಅವಕಾಶವಾದ ಶಾಸನ ಮಾಡುವಾಗ ಉದ್ದೇಶವಿದ್ದದ್ದು ಇಷ್ಟೆ: ಒಟ್ಟು ಅರ್ಧಕ್ಕಿಂತ ಗುತ್ತಿಗೆ ಮೊಬಲಗು ಮೀರಿ ಇರಬಾರದು ಎಂಬುದನ್ನು ಮೊಕರೂರು ಮಾಡುವಾಗ ಸಾಗುವಳಿದಾರ ವರ್ಷದಲ್ಲಿ ಏನು ಬೆಳೆಯುತ್ತಾನೆ, ಜಮೀನ್‌ದಾರ ಆಯಾಯಾ ಜಮೀನಿನಲ್ಲಿ ಯಾವ ಬೆಳೆ ತೆಗೆದುಕೊಳ್ಳುತ್ತಾನೆ ಎಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಬೇಕಾಗುತ್ತೆ.

(SRI H. M. CHANNABASAPPA.)

ಆದ್ದರಿಂದ ಇಂಥ ತೊಂದರೆಗಳನ್ನೆಲ್ಲಾ ತಪ್ಪಿಸುವುದಕ್ಕಾಗಿ ಮತ್ತು ವಾದ ವಿವಾದಗಳಿಗೆ ಅವಕಾಶವಿಲ್ಲದಂತೆ ಮಾಡುವ ಉದ್ದೇಶದಿಂದ ಇದನ್ನು ತಂದಿದೆ. 'crop' ಎನ್ನುವುದರ ಅರ್ಥ ಆ ವರ್ಷ ಆ ಭೂಮಿಯಲ್ಲಿ ಎಷ್ಟು ಬೆಳೆ ಬೆಳೆಯುತ್ತಿದೆಯೋ ಅದೆಲ್ಲವನ್ನೂ ಸೇರಿಸುವುದಕ್ಕೆ ಅವಕಾಶವಿರುವಂತೆ ಈ ತಿದ್ದುಪಡಿಯನ್ನು ಸೂಚಿಸಿದೆ. ಇಲ್ಲಿ 'crop' ಎಂದಿರುವುದಕ್ಕೆ ಬದಲಾಗಿ 'crop or crops' ಎಂದಿದ್ದರೂ ಸರಿ ಹೋಗುತ್ತದೆ: ಆದ್ದರಿಂದ ಮಾನ್ಯ ಸಚಿವರು ನನ್ನ ಈ ತಿದ್ದುಪಡಿಗೇ ಒಪ್ಪಿಗೆ ಕೊಡಬಹುದು. ಅಥವಾ ಅವರು ಹೇಳಿದಂತೆ 'crop' ಎನ್ನುವುದಕ್ಕೆ "crop or crops" ಎಂದು ಸಣ್ಣ ತಿದ್ದುಪಡಿಯನ್ನು ಒಪ್ಪಿಕೊಂಡು ಆ ರೀತಿಯಾದರೂ ಮಾಡಬಹುದು. ಒಟ್ಟಿನಲ್ಲಿ ಈ ತಿದ್ದುಪಡಿಯಲ್ಲಿರತಕ್ಕ ಅಂಶವನ್ನು ಸರ್ಕಾರದವರು ದಯವಿಟ್ಟು ಒಪ್ಪಿಕೊಂಡು ಬೆಂಬಲ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—Amendment moved:

"That for the word "the crop of" the words 'all the crops raised on" shall be subsitituted."

The Hon'ble Sri H. SIDDAIYA.—If the amendment runs like 'the crop or crops raised on', I have no objection provided the Hon'ble Member has no obj ction to my suggestion.

Sri H. M. CHANNABASAPPA.—Thanks, I have no objection to the suggestion.

Mr. SPEAKER.—The question is:

"That for the words "the crop of" the words 'the crop or crops raised on" shall be substituted."

The motion was adopted.

***Sri H. M. CHANNABASAPPA** (Mysore Dist ict-General).—I am not moving the amendment to this clause in list No. III. I move the amendment in list No. VII. I move:

"That t e following proviso shall be added to sub-clause (1) of Clause 6:

Provided however that where tenant does not cultivate the land the rent payable shall be the reasonab e rent to be fixed by the Amildar."

ಈಗ ಈ ಮಸೂದೆಯಲ್ಲಿ ಅರ್ಧಕ್ಕಿಂತ ಹೆಚ್ಚಿಗೆ ಬೆಳೆಯನ್ನು ಗುತ್ತಿಗೆಯಾಗಿ ತೆಗೆದುಕೊಳ್ಳಬಾರದೆಂದು ಗೊತ್ತುಮಾಡಿದ್ದೀರಿ. ಜಮೀನನ್ನು ಸಾಗುಮಾಡುತ್ತಾನೆ, ಬೆಳೆಯಾಗುತ್ತದೆ ಎಂಬ ನಿರೀಕ್ಷಣೆಯ ಮೇಲೆ ಅದರ ಪ್ರಕಾರ ಅಗ್ರಿಮೆಂಟ್ ಆಗಿರುತ್ತದೆ. ಹೀಗಿರುವಲ್ಲಿ ಒಂದು ವೇಳೆ ಸಾಗುವಳಿದಾರನು ಕಾರಣಾಂತರದಿಂದ ಸಾಗುವಳಿ ಮಾಡದೆ ಪಾಳು ಬಿಟ್ಟರೆ ಗುತ್ತಿಗೆಯನ್ನು ಯಾರು ಕೊಡಬೇಕು, ಎಷ್ಟು ಕೊಡಬೇಕು ಎಂಬ ಪರಿಸ್ಥಿತಿ ಬರುತ್ತದೆ. ಮನುಷ್ಯನ ಶಕ್ತಿಗೆ ಮೀರಿದ ಕಾರಣಗಳಿಂದರೇನಾದರೂ ಬೆಳೆಯಾಗದೆ ಹೋಗಿದ್ದರೆ ರಿಮಿಷನ್ ಕೊಡುವುದಕ್ಕೇನೋ ಈ ಮಸೂದೆಯಲ್ಲಿ ಅಮಲ್ದಾರರಿಗೆ ಅಧಿಕಾರ ಕೊಟ್ಟಿದೆ. ಆದರೆ ಉದ್ದೇಶಪೂರ್ವಕವಾಗಿ ಜಮೀನ್ದಾರನಿಗೆ ತೊಂದರೆ ಮಾಡಬೇಕೆಂದೇ ಆಗಲಿ ಅಥವಾ ಇನ್ನಾವುದಾದರೂ ವೈಷಮ್ಯದ ಮೇಲೆ ಸಾಗುವಳಿ ಮಾಡದೆ ಬಿಟ್ಟು ಬಿಟ್ಟರೆ, ಇಲ್ಲವೇ ತನಗೆ ಹಣ ಕಾಸಿನ ಶಕ್ತಿಯಿಲ್ಲ, ಎತ್ತುಕರುಗಳಿಲ್ಲ ಎಂದು ಹೇಳಿ ವ್ಯವಸಾಯ ಮಾಡದೆ ಹೋದರೆ, ಆಗ್ಗೆ ಗುತ್ತಿಗೆ ತೆಗೆದುಕೊಳ್ಳುವವನಿಗೆ ಬಹಳ ಕಷ್ಟ ಪರಿಸ್ಥಿತಿ ಬರುತ್ತದೆ. ಅಮಲ್ದಾರರ ಹತ್ತಿರ ಹೋಗಿ ಆತ ಏನು ಹೇಳುತ್ತಾನೆ, 'ಬೆಳೆ ಮಾಡಿಲ್ಲ. ಆದ್ದರಿಂದ ಅರ್ಧಕ್ಕಿಂತ ಕಡಿಮೆಯಾಗಿ ಕೊಡಬಹುದೆಂದು ರೂಲ್ಸ್‌ನಲ್ಲಿ ಹೇಳಿದೆ' ಎಂದು ಈ ರೀತಿ ಬೆಳೆ ಮಾಡದೆ ಬಿಟ್ಟು ಬಿಟ್ಟರೆ ಅನೇಕ ಜನರಿಗೆ ತೊಂದರೆಯಾಗುತ್ತದೆ. ಆದ್ದರಿಂದ ನನ್ನ ತಿದ್ದುಪಡಿಯೇನೆಂದರೆ, ಈ ರೀತಿ ಅವನೇನಾದರೂ ಬೆಳೆ ಮಾಡದೆ ಹೋದರೆ ಅಮಲ್ದಾರರು ಅಕ್ಕಪಕ್ಕದಲ್ಲಿ ಏನು ಬೆಳೆಯಾಗಿದೆಯೆಂಬುದನ್ನು ನೋಡಿಕೊಂಡು ನ್ಯಾಯವಾದ ಗುತ್ತಿಗೆಯೇನೆಂಬುದನ್ನು ನಿರ್ಧಾರ ಮಾಡುತ್ತಾರೋ ಅದನ್ನು ಕೊಟ್ಟೇ ಕೊಡಬೇಕೆಂದು ಮಾಡದೆ ಇದ್ದರೆ ಅನೇಕ ಜನರಿಗೆ ತೊಂದರೆಯಾಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ನನ್ನ ಈ ತಿದ್ದುಪಡಿಗೆ ಒಪ್ಪಿಗೆಯಿತ್ತು ಪುರಸ್ಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—Amendment moved:

"That the following proviso shall be added to sub-clause (1) of clause 6:

Provided however that where tenant does not cultivate the land the rent payable shall be the reasonable rent to be fixed by the Amildar."

ಶ್ರೀ ಕೆ. ಆರ್. ಶ್ರೀಕಂಠೇಶ್ವರ'ರವರು (ಬೆಂಗಳೂರು ಸಿಟಿ).—ಸ್ವಾಮಿ, ಈ ತಿದ್ದುಪಡಿಯನ್ನು ನಾನು ಬಹಳ ತೀವ್ರವಾಗಿ ವಿರೋಧಿಸುತ್ತಾ, ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಈ ತಿದ್ದುಪಡಿ ತಂದಿರುವ ಮಾನ್ಯ ಸದಸ್ಯರು ಬಹುಶಃ ಇದನ್ನು ಹಿಡುವಳಿದಾರರಿಗಾಗಿಯೇ ತಂದಿದ್ದಾರೋ ಅಥವಾ ಗೇಣಿದಾರರಿಗಾಗಿಯೇ ತಂದಿದ್ದಾರೋ ಗೊತ್ತಿಲ್ಲ. ನಿಜವಾಗಿಯೂ ಗೇಣಿದಾರನ ಹತ್ತಿರ ಏನೂ ಧಾನ್ಯವಿಲ್ಲದಿರುವ ಪಕ್ಷಕ್ಕೆ ಹಿಡುವಳಿದಾರ ನೀವು ಹೇಳುವಂತೆ ಅಮಲ್ದಾರರ ಹತ್ತಿರ ಹೋಗಿ ಗುತ್ತಿಗೆ ಕೊಡಿಸಿ ಎಂದು ಹೇಳಿದರೆ ಅವನೆಲ್ಲಿಂದ ತಂದು ಕೊಡಬೇಕು!

ಅಧ್ಯಕ್ಷರು.—ಜಮೀನನ್ನು ಸಾಗುವಳಿ ಮಾಡದೆ ಬಿಟ್ಟರೆ!!

ಶ್ರೀ ಕೆ. ಆರ್. ಶ್ರೀಕಂಠೇಶ್ವರ'ರವರು.—ಒಂದು ವೇಳೆ ಸಾಗುವಳಿ ಮಾಡುವುದಕ್ಕೇನಾದರೂ ಅನಾನುಕೂಲವಾಯಿತು, ಆಗ ಹೇಗೆ ಕೊಡುತ್ತಾನೆ!

ಅಧ್ಯಕ್ಷರು.—ಅನಾನುಕೂಲವಾದಾಗಿನ ವಿಚಾರವಲ್ಲ. ಬೇಕೆಂದು ಮಾಡದೆಬಿಟ್ಟರೆ?

ಶ್ರೀ ಕೆ. ಆರ್. ಶ್ರೀಕಂಠೇಶ್ವರ'ರವರು.—ಅನಾನುಕೂಲದಿಂದ ಅವನು ಸಾಗುವಳಿ ಮಾಡದೆ ಬಿಡಬೇಕಾಗಿ ಬಂದಾಗ ಅದಕ್ಕೂ ಈ ರೀತಿಯಾಗಿ ಮಾಡಬೇಕೆಂದರೆ ಹೇಗೆ? ಬೆಳೆಮಾಡಿದ್ದರೆ ಅವನು ಅಮಲ್ದಾರರು ಗೊತ್ತುಮಾಡುವಂತೆ ಕೊಡಬಹುದು. ಏನೂ ಬೆಳೆಯದಿರುವಾಗ ಅವನನ್ನು ಇಷ್ಟು ದವಸ ಕೊಡಬೇಕೆಂದು ಹೇಳಿಬಿಟ್ಟರೆ ಯಾವ ರೀತಿ ಕೊಡುವುದಕ್ಕಾಗುತ್ತದೆ?

ಅಧ್ಯಕ್ಷರು.—ಮತ್ತೆ, ಹಿಡುವಳಿದಾರನ ಗತಿ ಯೇನಾಗಬೇಕು!

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).—ಇದರಿಂದ ಸಾಗುವಳಿದಾರನಿಗೆ ಸ್ವಲ್ಪ ಮಟ್ಟಿಗೆ ತೊಂದರೆಯಾಗುತ್ತದೆಂಬುದು ನಿಜ. ಹಾಗೊಂದು ವೇಳೆ ನ್ಯಾಯವಾದ ಯಾವುದಾದರೂ ಕಾರಣಗಳಿಂದ ಪೈರು ಮಾಡಲಿಕ್ಕಾಗದೆ ಹೋದರೆ ಆತನೇ ಹಿಡುವಳಿದಾರನ

ಹತ್ತಿರ ಹೋಗಿ ಏನಾದರೂ ಸಮಜಾಯಿಷಿ ಹೇಳಿಕೊಂಡು ಏರ್ಪಾಡು ಮಾಡಿಕೊಳ್ಳಬಹುದು. ಹಾಗಿಲ್ಲದೆ ಉದ್ದೇಶಪೂರ್ವಕವಾಗಿ ಶಕ್ತಿಯಿಲ್ಲದೆ ಇದ್ದರೂ ಹತ್ತಾರು ಎಕರೆ ತೆಗೆದುಕೊಂಡು ಅವುಗಳಲ್ಲಿ ಎರಡು ಎಕರೆಗಳನ್ನು ಮಾಡದಿರುವುದೂ ಉಂಟು. ಎರಡನೆಯದಾಗಿ ಗ್ರಾಮಾಂತರಗಳಲ್ಲಿ ಪಾರ್ಟಿವೈಷಮ್ಯಗಳಿದ್ದು ಸಾಗುವಳಿ ಮಾಡದೆ ಇದ್ದರೆ ಆಗ ಜಮೀನುಕೊಟ್ಟವನಿಗೆ ಅನ್ಯಾಯವಾಗಿ ನಷ್ಟವಾಗುತ್ತದೆ! ಶ್ರೀಮಾನ್ ಶ್ರೀಕಂಠೇಶ್ವರ್'ರವರು ಹೇಳಿದಂತೆ ಗುತ್ತಿಗೆದಾರರಿಗೆ ಸಹಾಯಮಾಡಬೇಕೆಂದೇ ಇದನ್ನು ಮಾಡಿರುವುದಿಲ್ಲ. ಉದ್ದೇಶಪೂರ್ವಕವಾಗಿ ಜಮೀನ್ದಾರನಿಗೆ ನಷ್ಟಮಾಡಬೇಕೆಂದು ಹೇಳಿ ಸುಮ್ಮನೆ ಕುಳಿತುಕೊಂಡು ಏನು ಬೆಳೆಯಲಿಲ್ಲವೆಂದು ಹೇಳುವುದು ಬಹಳ ಅನ್ಯಾಯ. ಆ ದೃಷ್ಟಿಯಿಂದ ಈ ತಿದ್ದುಪಡಿ ಅವಶ್ಯಕ.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಶ್ರೀಮಾನ್ ಚೆನ್ನಬಸಪ್ಪನವರು ತಂದಿರುವ ತಿದ್ದುಪಡಿಯ ಅರ್ಥವೇನೋ ಸರಿಯಾಗಿದ್ದರೂ ಅದರ wording ಸ್ವಲ್ಪ ಸರಿಯಾಗಿಲ್ಲ. ಇದರಲ್ಲಿ ಒಂದೆರಡು ಪದಗಳನ್ನು ಬದಲಾಯಿಸಿದರೆ ಒಪ್ಪಿಕೊಳ್ಳಬಹುದು. ಮೊದಲನೆಯದಾಗಿ 'However' ಎನ್ನುವುದನ್ನು ಬಿಟ್ಟುಬಿಟ್ಟು, tenant ಎನ್ನುವುದಕ್ಕೆ ಹಿಂದೆ 'the' ಎಂದು ಸೇರಿಸಿಕೊಂಡರೆ, ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದರಲ್ಲಿ ಭಾಧಕವಿಲ್ಲ. ಆಗ್ಗೆ ಈ ತಿದ್ದುಪಡಿ ಈ ರೀತಿ ಇರುತ್ತದೆ.

"Provided that where the tenant does not cultivate the land the rent payable shall be the reasonable rent to be fixed by the Amildar

Sri H. M. CHANNABASAPPA.—It is a verbal amendment. I have no objection to it.

Mr. SPEAKER—The question is :

"That the following proviso shall be added to sub-clause (1) of clause 6:

Provided that where the tenant does not cultivate the land the rent payable shall be the reasonable rent to be fixed by the Amildar ".

The motion was adopted.

Mr. SPEAKER.—The question is :

"That Clause 6, as amended, stand part of the Bill."

The motion was adopted.

Clause 6, as amended, was added to the Bill.

Mr. SPEAKER.—Clause 7.

Sri H. M. CHANNABASAPPA.—I do not propose to move the amendment which I have given notice of.

Mr. SPEAKER.—Then, Clauses 7 and 8. The question is :

"That Clauses 7 and 8 stand part of the Bill."

The motion was adopted.

Clauses 7 and 8 were added to the Bill.

Mr. SPEAKER.—Clause 9.

Sri K. R. SREEKANTESWAR.—I do not propose to move my amendment.

Mr. SPEAKER.—The question is :

"That Clause 9 stand part of the Bill."

The motion was adopted.

Clause 9 was added to the Bill.

Mr SPEAKER.—Clause 10.

***Sri H. M. CHANNABASAPPA.**—I do not propose to move my amendment in list No. III. But I propose to move the amendment in list No. VII. It runs like this.

"In clause 10 delete the following:

and shall also be liable to such penalty as may be prescribed by rules made under this Act'."

ಈ ಕ್ಲಾಜಿನಲ್ಲಿ ಜಮೀನ್ದಾರನೇನಾದರೂ ಸಾಗುವಳಿದಾರನಿಂದ ಅಗ್ರೀಮೆಂಟಿನಲ್ಲಿ ನಿಗದಿಯಾದ ಮೊತ್ತಕ್ಕಿಂತಲೂ ಹೆಚ್ಚಾಗಿಯಾಗಲೀ, ಅಥವಾ ಈ ಕಾನೂನಿಗೆ ವಿರೋಧ ಬರುವ ರೀತಿಯಾಗಲಿ ಏನಾದರೂ ಹೆಚ್ಚಿಗೆ ಗುತ್ತಿಗೆಯನ್ನು ವಸೂಲು ಮಾಡಿಕೊಂಡಿದ್ದ ಪಕ್ಷಕ್ಕೆ ಸಾಗುವಳಿದಾರನಿಗೆ ಅದಕ್ಕಾಗಿ ರಿಯಾಯಿತಿ ಕೊಡಿಸಿಕೊಡುವ ವಿಷಯವನ್ನು ಹೇಳಿದೆ. ಆದರೆ 10ನೆಯ ಕ್ಲಾಜಿನಲ್ಲಿ ಏನು ಹೇಳಿದ್ದಾರೆಂದರೆ,

"If any landlord recovers rent from the tenant in contravention of the provisions of Sections 6, 7 or 9, he shall forthwith refund the excess amount recovered to the tenant and shall be liable to pay such compensation to the tenant as may be determined by the Amildar in this behaf and shall also be liable to such penalty as may be prescribed by rule made under this Act"

ಎಂದು ಹೇಳಿದ್ದಾರೆ. ಎಂದರೆ ಹೆಚ್ಚು ಗುತ್ತಿಗೆಯನ್ನು ತೆಗೆದುಕೊಂಡ ಜಮೀನುದಾರನಿಂದ ಅವನು ಎಷ್ಟು ಹೆಚ್ಚಿಗೆ ತೆಗೆದುಕೊಂಡಿದ್ದಾನೋ ಅಷ್ಟು ಗುತ್ತಿಗೆಯನ್ನು ಅಮಲ್ದಾರರು ವಾಪಸು ಸಾಗುವಳಿದಾರನಿಗೆ ಕೊಡಿಸುವುದಲ್ಲದೆ, ಇವನಿಗೇನಾದರೂ ಅದರಿಂದ ತೊಂದರೆಯಾಗಿದ್ದರೆ ಅದಕ್ಕೆ ತಕ್ಕ ಪರಿಹಾರವನ್ನು ಕೊಡಿಸತಕ್ಕ ಅಧಿಕಾರವನ್ನು ಅಮಲ್ದಾರರಿಗೆ ಕೊಟ್ಟಿದೆ. ಇಷ್ಟು ಅಲ್ಲದೆ ಮೂರನೆಯದಾಗಿ ಜಮೀನ್ದಾರನಿಗೆ ಒಂದು ಪೆನಾಲ್ಟಿ ಕೂಡ ಹಾಕುವುದಕ್ಕೆ ಇದರಲ್ಲಿ ಸೂಚನೆ ಇದೆ. ತಪ್ಪುಮಾಡಿದ ಒಬ್ಬ ಮನುಷ್ಯನಿಗೆ ಯಾವುದಾದರೂ ಒಂದು ಶಿಕ್ಷೆಯನ್ನು ಕೊಡುವುದು ನ್ಯಾಯ. ಇದಕ್ಕಿಂತ ಹೆಚ್ಚಾಗಿ ಕೊಡುವುದು ಅನಾವಶ್ಯಕ. ಮುಖ್ಯವಾಗಿ ಸಾಗುವಳಿದಾರನಿಂದ ಹೆಚ್ಚು ಗುತ್ತಿಗೆಯನ್ನು ತೆಗೆದುಕೊಂಡಿದ್ದರೆ ಅದನ್ನು ವಾಪಸು ಕೊಡಿಸುವುದು ಧರ್ಮ. ಇದರ ಜೊತೆಗೆ ಅವನಿಗುಂಟಾಗಿರುವ ಎಲ್ಲ ತೊಂದರೆಗೂ ತಕ್ಕ ಪರಿಹಾರ ಕೊಡಿಸುವುದೂ ನ್ಯಾಯ. ಹಾಗೆ ಪರಿಹಾರ ಕೊಟ್ಟ ಮೇಲೂ ಇನ್ನೂ ಒಂದು "ಪೆನಾಲ್ಟಿ" ಹಾಕುವುದು ಧರ್ಮವಲ್ಲ ಸಾಧುವಲ್ಲ ಎಂಬ ಅಭಿಪ್ರಾಯದಿಂದ ಈ ತಿದ್ದುಪಡಿಯನ್ನು ನಾನು ಸೂಚಿಸಿದ್ದೇನೆ. ಇದು ನ್ಯಾಯವಾಗಿರುವುದರಿಂದ ಎಲ್ಲ ಮಾನ್ಯ ಸದಸ್ಯರೂ ಸರ್ಕಾರದವರೂ ಒಪ್ಪುತ್ತಾರೆಂದು ನಂಬಿದ್ದೇನೆ.

Mr. SPEAKER.—Amendment moved:

"In Clause 10 delete the following: 'and shall also be liable to such penalty as may be prescribed by rules made under this Act'."

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಈ ತಿದ್ದುಪಡಿಯನ್ನು ಶ್ರೀಮಾನ್ ಶ್ರೀಕಂಠೇಶ್ವರ್ ಅವರು ಕೂಡ ಒಪ್ಪುತ್ತಾರೆಂದು ನಂಬಿದ್ದೇನೆ. ಇದರಲ್ಲಿರುವುದು ಜಮೀನ್ದಾರರು ಹೆಚ್ಚು ಗುತ್ತಿಗೆ ತೆಗೆದುಕೊಂಡರೆ ಅದರ ಪರಿಹಾರವನ್ನು ಅವರಿಂದ ಕೊಡಿಸಬೇಕೆಂದಿದೆ. ಬಹುಶಃ ಅಮಲ್ದಾರರು ತಮ್ಮ ವಿವೇಚನೆಯನ್ನು ಉಪಯೋಗಿಸಿ ಜಮೀನ್ದಾರ ಏನು ತೆಗೆದುಕೊಂಡಿರುತ್ತಾನೋ ಅದನ್ನು ವಾಪಸು ಕೊಡು ಎಂದು ಹೇಳಬಹುದು. ಹೀಗೆ ಹೆಚ್ಚು ತೆಗೆದುಕೊಂಡದ್ದನ್ನು ವಾಪಸು ಕೊಡಿಸಿದ್ದಾಯಿತು, ಇದರ ಜೊತೆಗೆ ಪರಿಹಾರ ಕೊಡಿಸುವುದೂ ಸರಿ. ಇಷ್ಟು ಆಗಿ ಇದರ ಜೊತೆಗೆ ಜುಲ್ಮಾನೆಯನ್ನು ಕೊಡಬೇಕೆಂದರೆ, ಇನ್ನು ಹಿಡುವಳಿದಾರನ ಕಷ್ಟವನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ವ್ಯವಹಾರಕ್ಕೆ ಹಣ?

ಶ್ರೀ ಎಸ್. ರಂಗರಾಮಯ್ಯನವರು.—ವ್ಯವಹಾರಕ್ಕೆ ಹಣ ಎಂದು ಹೇಳುತ್ತಾರೆ. ಜಮೀನ್ದಾರನಿಗೆ ಮೂರು ಶಿಕ್ಷೆ ಮಾಡಿದರೂ ಅವರ ಸೇಡು ತೀರದೆಇದ್ದರೆ ಏನು ಮಾಡುವುದು? ಜಮೀನ್ದಾರ ಹೀಗಾದರೆ ಗೇಣಿದಾರನ ಹತ್ತಿರ ನೀಸುವುದಕ್ಕಾಗುತ್ತದೆಯೆ? 6, 7 ಮತ್ತು 9ನೆಯ ಕ್ಲಾಜುಗಳಲ್ಲಿರುವಂತಹ ವಿಧಿಗೆ ವಿರೋಧವಾಗಿ ನಡೆದರೆ ಇಂತಿಂಥಾ ಶಿಕ್ಷೆ ಎಂದಿದೆ. 6ನೆಯ ಕ್ಲಾಜಿನಲ್ಲಿ ಅರ್ಧಭಾಗದಷ್ಟು ಫಸಲು ಎಂದು ನಿಗದಿಯಾಗಿದೆ. ಇನ್ನೂ 7ನೆಯ ಕ್ಲಾಜಿನಲ್ಲಿ ಏನು ಹೇಳಿದೆಯೆಂದರೆ, 6ನೆಯ ಕ್ಲಾಜಿನಲ್ಲಿ ವಿಧಿಸಿರತಕ್ಕ ಪರಮಾವಧಿ ಗುತ್ತಿಗೆಯನ್ನು ಕೊಡುವುದಲ್ಲದೆ

"7. The rent payable by a tenant shall, subject to the maximum rate fixed under section 4, be the rent agreed upon between such tenant and the landlord or in the absence of any such agreement the rent payable according to the usage of the locality or if there is no such agreement or usage the reasonable rent."

ಇಷ್ಟು ಅಲ್ಲದೆ ಜೊತೆಗೆ ಪೆನಾಲ್ಟಿ ಕೊಡುವುದೆಂದರೆ ಯಾವ ಧರ್ಮ? ಬರವಣಿಗೆಯ ಮೂಲಕ ಒಪ್ಪಂದವಾದರೆ ಒಂದು ರೀತಿ, ಬೇರೆ ರೀತಿಯ ಒಪ್ಪಂದವಿದ್ದು ಜಮೀನ್ದಾರ ಹೆಚ್ಚು ತೆಗೆದುಕೊಂಡಿದ್ದಾನೆಂದು ಹೇಳಿದರೆ ಆಗ ಅವನು ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ. ಇದು ಬಹಳ ಅನ್ಯಾಯ. ಒಂದು ತಪ್ಪಿಗೆ ಒಂದು ಶಿಕ್ಷೆ ಸರಿ, ಮೂರು ಶಿಕ್ಷೆ ವಿಧಿಸುವುದು ನ್ಯಾಯಕ್ಕೂ ಧರ್ಮಕ್ಕೂ ವಿರುದ್ಧ. ಶ್ರೀಮಾನ್ ಚನ್ನಬಸಪ್ಪನವರು ತಂದಿರತಕ್ಕ ತಿದ್ದುಪಡಿ ಸಾಧುವಾಗಿದೆ, ಇದನ್ನು ಸಭೆಯವರೂ ಒಪ್ಪುತ್ತಾರೆ, ಮಾನ್ಯಮಂತ್ರಿಗಳೂ ಉದಾರವಾಗಿ ಒಪ್ಪುತ್ತಾರೆ ಎಂದು ನಂಬಿದ್ದೇನೆ. ಅವರಿಗೆ ಹಿಡುವಳಿದಾರರ ಮೇಲೂ ಸಹಾನುಭೂತಿ ಇದೆ.

The Hon'ble Sri H. SIDDAIYA.—Sir, it is but fair that when the landlord recovers excess amount, he should return the portion so recovered. And at the same time it is also provided that some compensation also should be awarded. The compensation may include so many items. And to inflict in addition to compensation, this penalty, some Hon'ble Members feel will be very harsh, and so I accept this amendment moved by the Hon'ble Member Sri H. M. Channabasappa.

Mr. SPEAKER.—The question is:

" In clause 10 delete the following: 'and shall also be liable to such penalty as may be prescribed by rules made under this Act'."

The motion was adopted.

Mr. SPEAKER.—The question is:

"That Clause 10, as amended, stand part of the Bill."

The motion was adopted.

Clause 10, as amended, was added to the Bill.

Mr. SPEAKER.—Clause 11. The question is:

"That Clause 11 stand part of the Bill."

The motion was adopted.

Clause 11 was added to the Bill.

Mr. SPEAKER.—Clause 12.

***Sri H. M. CHANNABASAPPA.**—Sir, I do not propose to move the amendment in List No. 3, but I propose to move the amendment in List No. 7 and and it is this:

"That in clause 12, sub-clause (5) (ii) add the word 'Government' in between the words "by" and "or".

The sub-clause as it stands reads thus:

"12. (5) (ii): enhance the rent, if on an application made to him by a landlord, the Amildar or the Assistant Commissioner, or the Deputy Commissioner, as the case may be, is satisfied that on account of any improvement made in the land by or at the expense of the landlord, the produce of the land is increased."

Reasonable rent ಎಂದರೆ ನ್ಯಾಯವಾದ ಗುತ್ತಿಗೆ. ಸಾಗುವಳಿದಾರ ಅಥವಾ ಜಮೀನ್ದಾರ ಅಮಲ್ದಾರರು ಅಥವ ಡೆಪ್ಯುಟಿ ಕಮೀಷನರಿಗೆ ಅರ್ಜಿಕೊಟ್ಟಾಗ ಅವರು ಅನೇಕ ವಿಷಯಗಳನ್ನು ಗಮನಕ್ಕೆ ತೆಗೆದುಕೊಂಡು ನ್ಯಾಯವಾದ ಗುತ್ತಿಗೆಯನ್ನು ನಿಷ್ಕರ್ಷೆಮಾಡುವುದು ಎಂದು 12ನೆಯ ಕ್ಲಾಜಿನಲ್ಲಿ ಹೇಳಿದೆ. ತಕರಾರುಗಳು ಬಂದಾಗ ನ್ಯಾಯವಾದ ಗುತ್ತಿಗೆಯನ್ನು ಮೊಕರೂರು ಮಾಡಿ ಎಂದು ಅರ್ಜಿಯನ್ನು ಅಮಲ್ದಾರರಲ್ಲಿ ತೆಗೆದುಕೊಂಡುಹೋಗುವುದು ಹೀಗೆ ಮೊಕರೂರುಮಾಡಿದ ಆಜ್ಞೆ ಇನ್ನುಳಿದ ಸಾಗುವಳಿ ಕಾಲಕ್ಕೆ ಅನ್ವಯಿಸುವುದು ಎಂದು ಮೇಲೆ ಹೇಳಿದೆ. ಈ ಕಾಲದಲ್ಲಿ ತಮ್ಮ ಆಜ್ಞೆಯನ್ನು ಹೆಚ್ಚು ಮಾಡುವುದಕ್ಕೂ ಕಡಿಮೆ ಮಾಡುವುದಕ್ಕೂ ಅವಕಾಶವನ್ನು ಕಲ್ಪನೆ ಮಾಡದೆ, ಸಾಗುವಳಿ

ದಾರರ ಹಿತದೃಷ್ಟಿಯಿಂದ ಕೆಲವು ಸಂದರ್ಭಗಳಲ್ಲಿ ಕಡಿಮೆ ಮಾಡುವ ಅಧಿಕಾರವನ್ನು ಕೊಟ್ಟಿದೆ.

ಅದೇ ಕಾರಣಕ್ಕಾಗಿ ಜಮೀನ್ದಾರರಿಗೂ ಕೆಲವು ಕಾರಣಗಳನ್ನು ಸೂಚನೆ ಮಾಡಿದ್ದಾರೆ. ಜಮೀನ್ದಾರ ನಾದವನಿಗೆ ಹೆಚ್ಚು ಉತ್ಪತ್ತಿ ಬರುವಂತೆ ಯಾವ ಸಂದರ್ಭಗಳಲ್ಲಿ ಅಧಿಕಾರ ಕೊಡಲಾಗಿದೆಯೆಂಬುದನ್ನು ಓದಿದ್ದರಲ್ಲಿ, ಏನು ಅರ್ಥವಾಗುತ್ತೆಂದರೆ ಯಾವ ಯಾವ ಸಂದರ್ಭಗಳಲ್ಲಿ ಜಮೀನ್ದಾರನು ಹೆಚ್ಚಾಗಿ ವೆಚ್ಚಮಾಡಿ ಜಮೀನನ್ನು ಉತ್ತಮಸ್ಥಿತಿಗೆ ತಂದಿರುತ್ತಾನೋ ಅಂದರೆ the improvements made in the land by the land-lord ಹೆಚ್ಚು ಹಣವನ್ನು ಖರ್ಚು ಮಾಡಿ ಯಾವುದಾದರೂ ಕಾಮಗಾರಿಗಳನ್ನು ಮಾಡಿಸಿದ್ದರೆ, ಅಥವಾ ಜಮೀನಿನ ಬಗ್ಗೆ ಹೆಚ್ಚು ಖರ್ಚು ಮಾಡಿ ಅದರಲ್ಲಿ ಗೊಬ್ಬರ ಇತ್ಯಾದಿಗಳನ್ನು ಚೆನ್ನಾಗಿ ಹಾಕಿಸಿ ಅದರಲ್ಲಿ ಹೆಚ್ಚು ಬೆಳೆ ಬರುವಂತೆ ಆಬಾದು ಮಾಡಿಸಿದ್ದರೆ ಅಂಥಾ ಸಂದರ್ಭಗಳಲ್ಲಿ ಜಮೀನ್ದಾರನಾದಂಥವನು ಅಮಲ್ದಾರರಿಗೆ ಅಥವಾ ಅಸಿಸ್ಟೆಂಟ್ ಕಮಿಷನರವರಿಗೆ ಇಲ್ಲವೇ ಜಿಲ್ಲಾಧಿಕಾರಿಗಳಿಗೆ ಅರ್ಜಿ ಹಾಕಿ, ತನಗೆ ಸಲ್ಲುವ ಸಾಲಿನ ಬಗ್ಗೆ ಹೆಚ್ಚಿಸಿಕೊಳ್ಳಲು ಅವಕಾಶವಿದೆ. ಇಷ್ಟೇ ಅಲ್ಲದೆ ಹೀಗೆ ಹೆಚ್ಚುವರಮಾನ ಪಡೆಯಲು ಜಮೀನ್ದಾರನಿಗೆ ಇನ್ನೂ ಒಂದು ಅವಕಾಶವಿದೆ ಅದು ಯಾವುದೆಂದರೆ—ಭೂಮಿಯ ಉತ್ಪನ್ನವನ್ನು ಹೆಚ್ಚು ಮಾಡತಕ್ಕ ಮಾರ್ಗಗಳ ಪೈಕಿ, ಸರ್ಕಾರದವರು ಕೆರೆ, ಕಾಲುವೆ ಇತ್ಯಾದಿಗಳನ್ನು ಏರ್ಪಾಡು ಮಾಡುವುದರಿಂದಲೂ ಭೂಮಿ ಉತ್ಪನ್ನ ಹೆಚ್ಚಾಗುತ್ತದೆ, ಅಂಥಾ ಸಂದರ್ಭದಲ್ಲಿ ಸರ್ಕಾರದವರು ಕೈಗೊಳ್ಳುವ ಕಾಮಗಾರಿಗಳ ಬಗ್ಗೆ ಜಮೀನ್ದಾರನಾಗಿರತಕ್ಕವನ ಮೇಲೆ ನೀರು ಸರದಿ, ಕಾಂಟ್ರಿಬ್ಯೂಷನ್ ಇತ್ಯಾದಿಗಳನ್ನು ಹಾಕಿ ಆತನಿಂದ ಹಣವನ್ನು ವಸೂಲುಮಾಡುತ್ತಾರೆ. ಜನರಿಂದ ವಸೂಲಾಗದೆ ಸರ್ಕಾರ ಯಾವ ಕೆಲಸವನ್ನೂ ಮಾಡಲಿಕ್ಕೆ ಸಾಧ್ಯವಿಲ್ಲ. ಹೀಗೆ ಜಮೀನ್ದಾರನಾಗಿರತಕ್ಕವನು ಪ್ರತ್ಯೇಕವಾಗಿ ಖರ್ಚು ಮಾಡದೆ ಪರೋಕ್ಷವಾಗಿ ಖರ್ಚು ಮಾಡಿ ಭೂಮಿಯ ಉತ್ಪನ್ನವನ್ನು ಹೆಚ್ಚು ಮಾಡಿದಂಥ ಸಂದರ್ಭಗಳಲ್ಲಿ ಸಹ ಆತನು ಹೆಚ್ಚಿನ ಉತ್ಪನ್ನದಲ್ಲಿ ಕೊಂಚ ಭಾಗ ಆತನಿಗೆ ಬರಬೇಕೆಂದು ಕೇಳುವುದು ನ್ಯಾಯವಾದದ್ದೇ ಆಗಿದೆ. ಅಂಥಾ ಸಂದರ್ಭಗಳಿಗೆ ಅನುಗುಣವಾಗಿರತಕ್ಕಂಥ ಒಂದು ತಿದ್ದುಪಡಿಯನ್ನು ನಾನೀಗ ತಂದಿದ್ದೇನೆ. ಆದ ಮೂಲ ಮಸೂದೆಯಲ್ಲಿ ಇಂಥಾ ಸಂದರ್ಭಗಳಲ್ಲಿ ತೊಂದರೆ ಬಂದರೆ ಯಾವ ರೀತಿ ಮಾಡಬೇಕೆಂಬುದಕ್ಕೆ ಏನನ್ನೂ ತಿಳಿಸಿಲ್ಲ. ಯಾವುದಾದರೂ ಕಾಮಗಾರಿಯನ್ನು ಸರ್ಕಾರದವರು ಕೈಗೊಂಡರೆ ಆ ಬಗ್ಗೆ ಅವರಿಗೆ ಬರತಕ್ಕ ಖರ್ಚುವೆಚ್ಚಗಳನ್ನೆಲ್ಲಾ ಜಮೀನ್ದಾರರಮೇಲೆ ಹಾಕುತ್ತಾರೆ. ಆ ಕಾರಣದಿಂದ ಅಂಥಾ ಕಾಮಗಾರಿಗಳು ಕೂಡ ಈ ಜಮೀನ್ದಾರರ ವೆಚ್ಚದಿಂದಲೇ ಆದಂತಾಯಿತು. ಆದ್ದರಿಂದ ಹಾಗೆ ಅನುಕೂಲಗಳು ಹೆಚ್ಚಾಗಿ ಭೂಮಿಯಿಂದ ಉತ್ಪನ್ನ ಹೆಚ್ಚಿಸಿದಾಗ್ಯೂ, ಅಂಥಾ ಹೆಚ್ಚಿನ ಉತ್ಪತ್ತಿಯಲ್ಲಿ ಕೊಂಚ ಭಾಗ ಜಮೀನ್ದಾರನಿಗೆ ಕೊಡುವುದರಲ್ಲಿ ಯಾವ ಅನ್ಯಾಯವೂ ಇಲ್ಲ. ಈ ತಿದ್ದುಪಡಿಯನ್ನು ನಮ್ಮ ಸೋಷಿಯಲಿಸ್ಟ್ ಪಾರ್ಟಿ ಮಿತ್ರರಾದ ಶ್ರೀಮಾನ್ ಶ್ರೀಕಂಠೇಶ್ವರ್‌ರವರೂ ಸಹೃತ್ಪೂರ್ವಕವಾಗಿ ಅನುಮೋದಿಸುತ್ತಾರೆಂದು ನಾನು ನಂಬಿದ್ದೇನೆ. ಒಟ್ಟಿನಲ್ಲಿ ನಾನು ಹೇಳತಕ್ಕದ್ದಿಷ್ಟೇ—ಇದು ಬಹಳ ಅಲ್ಪ ವಿಚಾರವಾದಾಗ್ಯೂ—ಬಹಳ ಮಹತ್ವ ಪರಿಣಾಮದ್ದಾಗಿದೆ. ಇದರಿಂದ ಮುಂದೆ ಯಾವ ತಕರಾರುಗಳೂ ಇಲ್ಲದೆ ಕಾನೂನು ಸುಗಮವಾಗಿ ಜಾರಿಗೆ ಬರಲು ಅಡ್ಡಿ ಆತಂಕಗಳಿರುವುದಿಲ್ಲ. ಆದ್ದರಿಂದ ಸರ್ಕಾರದವರೂ ಮತ್ತು ಪ್ರತಿಯೊಬ್ಬ ಮಾನ್ಯ ಸದಸ್ಯರೂ ಇದನ್ನು ಒಪ್ಪಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

Mr. SPEAKER.-Amendment moved:

"That in clause 12, sub-clause 5(ii), add the word 'Government' in between the words 'by' and 'or'."

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಇದರಲ್ಲಿ ನನಗೆ ಒಂದು clarification ಬೇಕಾಗಿದೆ. 'ಸರ್ಕಾರ' ಎಂತ ಸೇರಿಸುವುದರಲ್ಲಿ ಏನೂ ಅಭ್ಯಂತರವಿಲ್ಲ. ಆದರೆ ಅಲ್ಲಿ ಹಾಗೆ ಆ ಪದವನ್ನು ಸೇರಿಸುವುದರಿಂದ ಸರಿಯಾಗಿ ಅರ್ಥಬರುವುದಿಲ್ಲ. ಅವರು ಹೇಳಿರುವುದು,

"enhance the amount, if on an application made to him by a landlord the Amildar or the Assistant Commissioner or the Deputy Commissioner as the case may be is satisfied that on account of any improvement made in the land"

ಎಂದು ಹೇಳುವಾಗ ಅವರು 'by' ಮತ್ತು 'or' ಎಂಬ ಪದಗಳ ಮಧ್ಯೆ by the Government or at the expense of the landlord ಎಂದು ಸೇರಿಸಿಬಿಟ್ಟರೆ ಆಗ ಏನಾಗುತ್ತದೆಂದರೆ—ಸರ್ಕಾರ ಭೂಮಿಯನ್ನು ಆಬಾದುಮಾಡಿದಂತಾಯಿತೇ ವಿನಾ ಜಮೀನ್ದಾರ ಆಬಾದುಮಾಡಿದಂತೆ ಅರ್ಥವಾಗುವುದಿಲ್ಲ.

ಅಧ್ಯಕ್ಷರು.—ಅರ್ಥ ಏತಕ್ಕಾಗುವುದಿಲ್ಲ? Improvements made by the Government or at the expense of the landlord ಎಂದರೆ ಅದೇ ಅರ್ಥ.

ಶ್ರೀ ಎಸ್. ರಂಗರಾಮಯ್ಯನವರು.—By the landlord or at the expense of the land lord ಎಂಬುದನ್ನು ಕೊನೆಯಲ್ಲಿ ಸೇರಿಸಿಬಿಟ್ಟರೆ ಸರಿಹೋಗುತ್ತದೆಂದು ನಾನು ಆಲೋಚಿಸಿದ್ದೇನೆ, ಇದರ ಬಗ್ಗೆ ನನಗೆ ಇರತಕ್ಕ ಅನುಮಾನವಾದರೂ ಇಷ್ಟೇ: 'made in the land by or at the expense of the landlord ಎಂತ ಈಗ ಇದೆ, ಇನ್ನು ಅವರು ತಿಳಿಸಿರುವ ಹಾಗೆ by the Government or at the expense of the land lord ಎಂದು ಹೇಳಿದರೆ ಅಷ್ಟು specific ಆಗಿರುವುದಿಲ್ಲ. ಹಿಡುವಳಿದಾರನೇ ಖರ್ಚಿಟ್ಟು ಆ ಕೆಲಸ ಮಾಡಿದ್ದಾನೆಂದು ಹೇಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು. ಹಿಡುವಳಿದಾರನೇ ಖುದ್ದಾಗಿ ಖರ್ಚಿಟ್ಟು ಮಾಡಿಸಿದ್ದರೂ ಮಾಡಿಸಿರಬಹುದು. ಅಥವಾ ಸರ್ಕಾರದವರು ಹಿಡುವಳಿದಾರನಿಂದ ಹಣ ವಸೂಲು ಮಾಡಿಕೊಂಡು ಆ ಕೆಲಸ ಮಾಡಿಸಿದ್ದರೂ ಮಾಡಿಸಿರಬಹುದು. ಎರಡೂ ಒಂದೇ ಆಯಿತಲ್ಲವೇ?

ಶ್ರೀ ಎಸ್. ರಂಗರಾಮಯ್ಯನವರು.—ಆ ಅರ್ಥ ಬಂದರೆ ಪರವಾಗಿಲ್ಲ.

***Sri. H. M. CHANNABASAPPA.**—I will make the point clear. As it is, "it is improvements made in the land by or at the expense of the landlord." The land lord may directly do the improvement himself or cause the improvement to be done at his expense. So the two things are provided, whether he directly does it or gets it done by somebody else at

(SRI H. M. CHANNABASAPPA.)

his expense, both are the same. Now, I have added the word 'Government' either by Government or at the expense of the landlord. So 'by the landlord' is gone. Only the words 'at the expense of the landlord' remain. When we say at the expense of the landlord it is left to him to get it done by some other agency. That will not in anyway affect our position. We are only concerned with the improvement made and the enhanced gutta that has to be determined when an improvement is made by the landlord, whether he gets it done by himself or by some other agency.

ಅಧ್ಯಕ್ಷರು.—ಅರ್ಥವಾಗುತ್ತೆ. ಆದರೂ ಅವರಿಗೆ ಅನುಮಾನ.

ಶ್ರೀ ಎಸ್. ರಂಗರಾಮಯ್ಯನವರು.—ಆ ಕೆಲಸವನ್ನು ಯಾರೋ ಮಾಡಿಸಿದರೂ, ಆದರಿಂದ ಅವನಿಗೆ ಹೆಚ್ಚಿನ ಗುತ್ತಿಗೆ ಸಿಕ್ಕುತ್ತದೆಂದು ಹೇಳುವುದಕ್ಕೆ ಆಗುವುದಿಲ್ಲ. ಆ ಅನುಮಾನಕ್ಕೆ ಇಲ್ಲ ಕಾರಣವಿದೆ.

Sri H. M. CHANNABASAPPA.—No, no. It is too much to make an interpretation like that.

Sri S. RANGARAMIAH.—Let it be as plain as possible.

Sri H. M. CHANNABASAPPA.—At the expense of the landlord means that it does not prevent him from doing it, it does not prevent him from getting the improvement done by somebody else.

Sri S. RANGARAMIAH.—It is to be made clear. That is why the insertion of the word 'Government' between 'by' and 'or' will not make the position clear. If the word 'Government' comes last, then it becomes quite clear.

ಹಿಡುವಳಿದಾರ ಖರ್ಚುಮಾಡಿದ್ದರೆ ಹೆಚ್ಚಿಗೆ ಗುತ್ತಿಗೆ ಕೇಳುವುದಕ್ಕೆ ಅವಕಾಶವಿದೆ. ಹಾಗೆ ಆತನು ಖರ್ಚು ಮಾಡಿರತಕ್ಕದ್ದನ್ನು ನಿರ್ದಿಷ್ಟವಾಗಿ ತಿಳಿಸದೇ ಇದ್ದಾಗ ಹೇಗೆ ಹೆಚ್ಚಿಗೆ ಗುತ್ತಿಗೆಯನ್ನು ಕೇಳುವುದು ? ಆದ್ದರಿಂದ 'Government' ಎಂಬ ಪದವನ್ನು ಕಡೆಯಲ್ಲಿ ಹಾಕಿದರೆ ಅರ್ಥ ಸರಿಬರುತ್ತದೆಂದು ನನ್ನ ಭಾವನೆ. ಹಾಗೆ ಮಾಡುವುದರಲ್ಲಿ ಏನೂ ಅಭ್ಯಂತರವಿಲ್ಲ.

Mr SPEAKER.—After the word 'landlord' "or by Government" ಎಂದು ಸೇರಿಸಿದರೂ ಒಂದೇ ಆಗುತ್ತೆ. ಆಗಬಹುದು, ಇದಕ್ಕೆ ತಿದ್ದುಪಡಿ ಸೂಚಕರ ಅಭಿಪ್ರಾಯವೇನು ?

Sri H. M. CHANNABASAPPA.—I accept the amendment, and I am thankful for the improvement. So it will run like this.

"........improvement made in the land by or at the expense of the landlord or by Government, the produce of the land is increased."

The Hon'ble Sri H. SIDDAIYA.—I think we may accept it. just prior to the word 'Government', he may add the word 'the'.

Sri H. M. CHANNABASAPPA.—I accept the suggestion.

Mr. SPEAKER.—The question is.

"That in clause 12, sub-clause 5 (ii), add the words "or by the Government" in between the words "landlord" and " the produce."

The motion was adopted.

Sri. K. R. SREEKANTESWAR.—Sir, I move my amendment which reads as follows.—

"In sub-clause (I), for the words 'to the Amildar' the words 'to a Tribunal consisting of a landlord, a tenant and the Government representative' shall be substituted"

ಸ್ವಾಮಿ, ಈ ಮಸೂದೆಯಲ್ಲಿ ಕ್ಲಾಜು 12 ಬಹಳ ಪ್ರಾಮುಖ್ಯವಾದುದು ಎಂದು ಹೇಳಬೇಕಾಗಿದೆ. ಏಕೆಂದರೆ ಗೇಣಿ ವಿಷಯಲ್ಲಿ ಯಾವ ರೀತಿ ನಿರ್ಧಾರ ಮಾಡಬೇಕು, ಎಂಬುದನ್ನು ಇಲ್ಲಿ ಹೇಳಿದೆ. ಹಾಗೆ ನಿರ್ಧಾರ ಮಾಡಿದ ಮೇಲೆ ಹೆಚ್ಚು ಅಥವಾ ಕಡಿಮೆ ಮಾಡುವುದಕ್ಕೆ ಅಧಿಕಾರವಿದೆ.

ಇಲ್ಲಿ ಸಾಧಾರಣವಾಗಿ ಗೇಣಿ ಗೊತ್ತುಮಾಡುವಾಗ ಗಮನಿಸಬೇಕಾದ ಕೆಲವು ಅಂಶಗಳನ್ನು ಹೇಳಿದೆ. ಸುತ್ತಮುತ್ತಲೂ ಇರುವ ಜಮೀನಿನಲ್ಲಿ ಬರಬಹುದಾದ ಫಸಲು ಬೆಲೆ ಏನಿದೆ, ಮಳೆ ಬೆಳೆ ಯಾವ ರೀತಿ ಇದೆ ಎಂದು ಪರಿಶೀಲಿಸಿ ನ್ಯಾಯವಾದ ಗೇಣಿ ಕೊಡಬೇಕು. ಒಂದು ವೇಳೆ ಏನಾದರೂ ವಿವಾದ ಹುಟ್ಟಿದರೆ, ಮುಂದೆ ಅಪೀಲಿಗೆ ಹೋಗಿ, ಅದನ್ನು ಜಾಸ್ತಿಮಾಡುವುದಕ್ಕೆ ಅಥವಾ ಕಡಿಮೆ ಮಾಡುವುದಕ್ಕೆ ಕೆಲವು ನಿಬಂಧನೆಗಳಿವೆ ಈಗ ಮುಖ್ಯವಾಗಿರುವುದೇನೆಂದರೆ, ಸಾಧಾರಣವಾಗಿ ಗೇಣಿ ಗೊತ್ತುಮಾಡುವ ಅಧಿಕಾರ ಯಾರಿಗಿದೆಯೆಂದು ನೋಡಬೇಕಾಗಿದೆ. ಇಲ್ಲಿರುವ ಹಾಗೆ ಅಮಲ್ದಾರರೆಂಬ ಒಬ್ಬ ಅಧಿಕಾರಿಗೆ ಮಾತ್ರ ಅಧಿಕಾರ ಕೊಟ್ಟಿದೆ, ಇಂಥ ಶಾಸನದಲ್ಲಿ ಒಬ್ಬ ಅಮಲ್ದಾರರಿಗೆ ನ್ಯಾಯವಾದ ಗೇಣಿ ಗೊತ್ತುಮಾಡುವ ಅಧಿಕಾರ ಕೊಟ್ಟ ಭಾಗದಲ್ಲಿ ಅನೇಕ ವೇಳೆ ಸರಿಯಾದ ನ್ಯಾಯ ದೊರಕುತ್ತದೆಯೆ ಎಂದು ಯೋಚನೆಮಾಡಬೇಕು. ನನಗೆ ಗೊತ್ತಿರುವ ಹಾಗೆ ಅನೇಕ ಕಡೆ ಅಮಲ್ದಾರರು ಶ್ಯಾನುಭೋಗರ ರೆಕಾರ್ಡು ಪತ್ರದಿಂದ ಮತ್ತು ಪಟೇಲರು ಹೇಳುವ ವಿಷಯಗಳಿಂದ ಮತ್ತು ಸಂಚಾರಮಾಡುವಾಗ ಜಮೀನಿನಲ್ಲಿ ಮಳೆ ಬೆಳೆ ಹೇಗಿದೆಯೆಂದು ವಿಚಾರಮಾಡುವುದರಿಂದ ಬೇಕಾದ ವಿಷಯಗಳನ್ನು ತಿಳಿದುಕೊಳ್ಳುತ್ತಾರೆಯೇ ವಿನಾ ಅವರಿಗೆ ಸ್ಥಳದ ವಿದ್ಯಮಾನ ಚೆನ್ನಾಗಿ ಗೊತ್ತಾಗುವುದಿಲ್ಲ. ಅದೂ ಅಲ್ಲದೆ ಅನೇಕ ಅಮಲ್ದಾರರು ವರ್ಷದೊಳಗಾಗಿ ಬದಲಾವಣೆಯಾಗುವುದರಿಂದ ಅವರಿಗೆ ಸ್ಥಳದ ವಿಷಯ ಗೊತ್ತಾಗುವುದಕ್ಕೆ ಅವಕಾಶವಿರುವುದಿಲ್ಲ. ಆದ್ದರಿಂದ ಈ ಗೇಣಿ ಮಸೂದೆಯಲ್ಲಿ ಹೇಳಿರುವಂತೆ ಒಂದನೆಯ

ಕ್ಲಾಜಿನ ಮೂರನೆಯ ಸಬ್-ಕ್ಲಾಜಿನಲ್ಲಿ ಈ ಮಸೂದೆ ಸಂಸ್ಥಾನದ ಎಲ್ಲಾ ಕಡೆಯೂ ಅನ್ವಯಿಸುವಂತೆ ಗೆಜೆಟ್ ನೋಟಿಫಿಕೇಷನ್ ಹೊರಡಿಸಿ ತಿಳಿಸುತ್ತೇವೆಂದು ಹೇಳಿದ್ದಾರೆ. ಯಾವಾಗ ಗೇಣಿ ಮಸೂದೆಯನ್ನು ತಾಲ್ಲೂಕು ಭಾಗಕ್ಕೆ ಅಥವಾ ಜಿಲ್ಲೆಯ ಭಾಗಕ್ಕೆ ಅನ್ವಯಿಸುವ ಹಾಗೆ ಮಾಡುತ್ತಾರೋ ಅಲ್ಲಿ ರೈತರ ಮುಖಂಡರ ಪೈಕಿ ಒಬ್ಬರನ್ನೂ ಗೇಣಿ ಕೊಡುವ ಮುಖಂಡರ ಪರವಾಗಿ ಒಬ್ಬರನ್ನೂ ತಮ್ಮ ಪರವಾಗಿ ಒಬ್ಬ ಅಧಿಕಾರಿ ಅಥವಾ ಖಾಸಗಿ ಸದಸ್ಯರ ಪೈಕಿ ಒಬ್ಬರನ್ನೂ ಹಾಕಿ ಒಂದು ಟ್ರಿಬ್ಯೂನಲ್ ಮಾಡಿ ಈ ಗೇಣಿ ಮಸೂದೆಯಲ್ಲಿ ಬರುವ ವಾದ ವಿವಾದಗಳನ್ನು ಇತ್ಯರ್ಥಮಾಡಬೇಕೆಂಬುದು ನನ್ನ ಅರಿಕೆ. ಆ ಮಾದರಿ ಟ್ರಿಬ್ಯೂನಲ್ ಮಾಡಿದರೆ ಅವರು ಯಾವ ವಿಷಯಗಳನ್ನು ಆಯಾ ಸ್ಥಳಕ್ಕೆ ಸಂಬಂಧಪಟ್ಟ ಹಾಗೆ ತಿಳಿದುಕೊಂಡಿರುವುದಿಲ್ಲವೋ ಅವುಗಳನ್ನು ಅಲ್ಲಿಗೇ ಹೋಗಿ ವಿಷಯಗಳನ್ನು ತಿಳಿದುಕೊಂಡು ಪರ್ಯಾಲೋಚಿಸಿ ಗೇಣಿ ಜಾಸ್ತಿ ಅಥವಾ ಕಡಿಮೆ ಮಾಡಬಹುದು, ಶ್ರೀ ಚನ್ನಬಸಪ್ಪನವರು ಹೇಳಿದ ಹಾಗೆ ಉತ್ಪತ್ತಿ ಹೆಚ್ಚಾದರೆ ಗೇಣಿ ಜಾಸ್ತಿ ಕೊಡುವುದಕ್ಕೆ ಅವಕಾಶ ಮಾಡಿದೆ. ಅದಕ್ಕೆ ತಕ್ಕ ಹಾಗೆ ಮಾಡಬಹುದು. ಆದ್ದರಿಂದ ಅಮಲ್ದಾರರಿಗೆ ಬದಲಾಗಿ ಮೂರು ಪ್ರತಿನಿಧಿಗಳನ್ನು ನೇಮಕಮಾಡೋಣ. ಹಾಗೆ ನೇಮಕಮಾಡುವ ಟ್ರಿಬ್ಯೂನಲ್‌ನಿಂದ ಗೇಣಿದಾರರಿಗೆ ಅಥವಾ ಹಿಡುವಳಿದಾರರಿಗೆ ಅನ್ಯಾಯವಾದರೆ ಅದರ ಮೇಲೆ ಅಸಿಸ್ಟೆಂಟ್ ಕಮಿಷನರು ಜಿಲ್ಲಾಧಿಕಾರಿಗಳು ಮತ್ತು ಸರ್ಕಾರ ಮುಂತಾದ ಕಡೆ ಅಪೀಲು ಹೋಗಬಹುದು. ತಕ್ಷಣ ಈ ಮಸೂದೆಯನ್ನು ಸಂಸ್ಥಾನಾ ಮಳೆ ಜಾರಿಗೆ ತಂದರೆ ಟ್ರಿಬ್ಯೂನಲ್ ಪ್ರತಿಯೊಂದು ತಾಲ್ಲೂಕಿನಲ್ಲೂ ಮಾಡುವುದು ಅಸಾಧ್ಯ, ಆದ್ದರಿಂದ ಒಪ್ಪುವುದಕ್ಕಾಗುವುದಿಲ್ಲ ಎಂದು ನೀವು ಹೇಳಬಹುದು. ಅದರೆ............

The Hon'ble Sri H. SIDDAIYA.—Who should be the Government nominee?

Sri K. R. SREEKANTESWAR.—It may be anybody whom you may appoint to represent Government. It may be either an Amildar or an Assistant Commissioner or a member of Assembly, or any person whom you like to be represented. Three persons can form a tribunal and decide the issue.

ನಾವು ನೋಡಿದಹಾಗೆ ಅಷ್ಟೊಂದು ಹೆಚ್ಚಾಗಿ ವ್ಯಾಜ್ಯಗಳು ಬರಲಾರವು ಮತ್ತು ಹಾಗೆ ಬಂದರೂ ಕೂಡ ಇಂಥ ಟ್ರಿಬ್ಯೂನಲ್ ಇದ್ದರೆ ವಾದ ವಿವಾದಗಳು ಬಂದಾಗ ಜಾಗ್ರತೆ ನ್ಯಾಯ ಖಂಡಿತ ದೊರಕುತ್ತದೆ. ಮತ್ತು ಜಾಗ್ರತೆ ಪರಿಹಾರವೂ ಆಗುತ್ತದೆ. ಅದ್ದರಿಂದ ಅಮಲ್ದಾರರಿಗೆ ಬದಲಾಗಿ ಟ್ರಿಬ್ಯೂನಲ್‌ಮಾಡಿ ಎಂದು ಹೇಳಿರುವುದನ್ನು ಒಪ್ಪುತ್ತೀರೆಂಬ ಭರವಸೆಯಿದೆ. ಹಾಗೆ ಒಪ್ಪಿದರೆ ತೊಂದರೆಯಿಲ್ಲ. ಪದದ ಮಟ್ಟಿಗೆ ಟ್ರಿಬ್ಯೂನಲ್ ಎಂಬ ಪದ ಬೇಕಾದರೆ ತೆಗೆದು ಬೇರೆ ಯಾವ ಪದವನ್ನು ಬೇಕಾದರೂ ಹಾಕಿ. ಒಟ್ಟಿನಲ್ಲಿ ಅಮಲ್ದಾರರಿಗೆ ವ್ಯವಸಾಯ ಮಾಡುವುದು ಯಾವ ರೀತಿ, ಅದಕ್ಕೆ ಏನು ಸಾಧನಬೇಕು, ಕೆರೆಯಲ್ಲಿ ನೀರಿದೆಯೆ, ಇಲ್ಲವೆ, ತೊಂದರೆಯೇನು ಜಮೀನಿನ ಬೆರೆಯೇನು, ಬೆಳೆ ಹೇಗಿದೆ ಎಂಬ ವಿಷಯಗಳು ಚೆನ್ನಾಗಿ ಗೊತ್ತಿರುವುದಿಲ್ಲ. ಶ್ಯಾನುಭೋಗರ ಲೆಕ್ಕ ಪತ್ರದ ಆಧಾರದಮೇಲೆ ಅವರು ನಿರ್ಧರಿಸಬೇಕಾಗುತ್ತದೆ. ಅದಕ್ಕಾಗಿ ಈ ತಿದ್ದುಪಡಿಯನ್ನು ತಂದಿದೆಯೇ ಹೊರತು ಮತ್ಯಾವ ಉದ್ದೇಶವೂ ಇಲ್ಲ. ಇದರಿಂದ ಹಿಡುವಳಿದಾರ ಅಥವಾ ಗೇಣಿದಾರ ಈ ಇಬ್ಬರಲ್ಲಿ ಯಾರಿಗೂ ತೊಂದರೆಯಿಲ್ಲ. ಇದನ್ನು ಜಾರಿಗೆ ಕೊಟ್ಟು ತೊಂದರೆಯಾದರೆ ತೆಗೆದುಹಾಕಿ ಮತ್ತೊಂದು ಸಲ ಅಮಲ್ದಾರರನ್ನೇ ನೇಮಿಸಬಹುದು. ಆದ್ದರಿಂದ ಅಮಲ್ದಾರರಿಗೆ ಬದಲಾಗಿ ಟ್ರಿಬ್ಯೂನಲ್ ಮಾಡಿದರೆ ಜನರಿಗೂ ನಂಬಿಕೆ ಬರುತ್ತದೆ, ಈ ಶಾಸನಕ್ಕೂ ಮಾನ್ಯತೆ ದೊರೆಯುತ್ತದೆ ಎಂದು ಮಾನ್ಯ ಸಚಿವರಿಗೂ, ಸದಸ್ಯರಿಗೂ ಹೇಳಿ ನನ್ನ ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕೆಂದು ಬೇಡಿಕೊಳ್ಳುತ್ತೇನೆ.

Mr. SPEAKER.—Amendment moved:

"In sub-clause (1) for the words 'to the Amildar' the words 'to a Tribunal consisting of a landlord, a tenant and the Government representative shall be substituted."

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).—ಶ್ರೀ ಶ್ರೀಕಂಠೇಶ್ವರ್‌ರವರು ತಂದಿರುವ ತಿದ್ದುಪಡಿಯನ್ನು ವಿರೋಧಿಸಬೇಕಾಗಿದೆ. ಏಕೆಂದರೆ ಅವರು ಹೇಳಿರುವ ಕಾರಣ ಅಷ್ಟು ಸಮರ್ಪಕವಾಗಿಲ್ಲ. ತಾಲ್ಲೂಕಿನ ಪರಿಸ್ಥಿತಿ, ಅದರಲ್ಲೂ ರೆವೆನ್ಯೂ ಬಾಡಿಗೆ ಸಂಬಂಧಪಟ್ಟ ಜಮೀನಿನ ಬೆಳೆ, ಪಹಣಿ ಇತ್ಯಾದಿ ವಿಷಯಗಳು ಅಮಲ್ದಾರರಿಗೆ ತಿಳಿದಿರಬೇಕಾದ್ದು ಅಗತ್ಯ. ಅಮಲ್ದಾರರನ್ನು ಮಾನ್ಯ ಮಿತ್ರರು ಹೇಳಿದಂತೆ ವರ್ಷದೊಳಗೆ ಬದಲಾಯಿಸುವುದು ಬಹಳ ಕಡಮೆ. ಸಾಮಾನ್ಯವಾಗಿ ಒಂದುಕಡೆ ಮೂರು ವರ್ಷಗಳವರೆಗೂ ಇರುತ್ತಾರೆ. ಅಮಲ್ದಾರರು ವರ್ಗವಾಗಿ ಬಂದಮೇಲೆ ಸಾಮಾನ್ಯವಾಗಿ ಒಂದು ತಿಂಗಳಲ್ಲೇ ತಾಲ್ಲೂಕು ವಿದ್ಯಮಾನವನ್ನು ತಿಳಿದುಕೊಳ್ಳುತ್ತಾರೆ. ಹೀಗಿರುವಾಗ ಅವರಿಗೆ ಸಂಬಂಧಪಟ್ಟ ಕೆಲಸವನ್ನು ತೆಗೆದುಕೊಂಡು ಹೋಗಿ ಮೂರು ನಾಲ್ಕು ಜನರ ಪಂಚಾಯಿತಿ ಅಥವ ಟ್ರಿಬ್ಯೂನಲ್‌ಗೆ ವಹಿಸಬೇಕೆಂದು ಹೇಳುವುದು ಸರಿಯಲ್ಲ. ಈ ಕಾಲದಲ್ಲಿ ಪಂಚಾಯಿತಿ ಮಾಡಿದರೂ ಅದರಲ್ಲಿರುವವರು ನಿರ್ದಾಕ್ಷಿಣ್ಯವಾಗಿ ವರ್ತಿಸುತ್ತಾರೆಂದು ಹೇಳುವುದಕ್ಕಾಗುವುದಿಲ್ಲ ಅಮಲ್ದಾರರೂ ತಪ್ಪು ಮಾಡಬಹುದು. ಪಂಚಾಯಿತಿ ಸದಸ್ಯರು ದಾಕ್ಷಿಣ್ಯಕ್ಕೆ ಒಳಗಾಗುವುದಕ್ಕೆ ಅವಕಾಶವಿದೆ. ಆದ್ದರಿಂದ ಅನಾವಶ್ಯಕವಾಗಿ ಇಲ್ಲದೇ ಇರುವ ಪಂಚಾಯಿತಿ ಮಾಡಿ ಅವರಲ್ಲಿ ಒಂದು ಜಿಜ್ಞಾಸೆಗೆ ಅವಕಾಶಕೊಡುವುದಕ್ಕೆ ಬದಲಾಗಿ ಈಗ ಮಸೂದೆಯಲ್ಲಿರುವಹಾಗೆ ಅಮಲ್ದಾರರಿಗೇ ಈ ಕೆಲಸ ವಹಿಸುವುದು ಸೂಕ್ತವಾಗಿದೆ. ಒಂದುವೇಳೆ ಅಮಲ್ದಾರರ ತೀರ್ಪು ಹೆಚ್ಚುಕಡಮೆಯಾದರೆ ಅಪೀಲು ಮಾಡುವುದಕ್ಕೆ ಅವಕಾಶವಿದೆ. ಆದ್ದರಿಂದ ತಾಲ್ಲೂಕಿನ ಅಧಿಕಾರಿಗಳಾದ ಅಮಲ್ದಾರರಿಗೆ ಪಹಣಿ ತನಿಖೆ ಮಾಡಬೇಕಾದ ಕೆಲಸವಿರುವುದರಿಂದ ಮತ್ತು ಅವರಿಗೆ ಸ್ಥಳದ ವಿದ್ಯಮಾನ ಗೊತ್ತಿರುವುದರಿಂದ ಅವರಿಗೆ ಈ ಅಧಿಕಾರವಿರುವುದು ನ್ಯಾಯವೇ ಹೊರತು ಇಂಥ ಸಣ್ಣ ವಿಚಾರಗಳಿಗೆ ಪಂಚಾಯಿತಿ ಮಾಡಿ ಪಂಚಾಯಿತಿಗೆ ಅವಕಾಶ ಕೊಡುವುದು ಸೂಕ್ತವಲ್ಲ.

ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ಈಗ ಸಭೆಯ ಮುಂದಿರತಕ್ಕಂಥ ಈ ತಿದ್ದುಪಡಿಯನ್ನು ವಿರೋಧಿಸುತ್ತ ನಾನು ಒಂದೆರಡು ವಿಷಯಗಳನ್ನು ಹೇಳಬೇಕೆಂದು ಬಯಸುತ್ತೇನೆ. ಈಗ ಈ ಗೇಣಿದಾರರ ಅಥವ ವ್ಯವಸಾಯಗಾರರ ಮತ್ತು ಜಮೀನ್ದಾರರ ಮಧ್ಯೆ ಇರತಕ್ಕ ವ್ಯವಹಾರಗಳನ್ನು ಫೈಸಲು ಮಾಡುವುದಕ್ಕೆ ಅಮಲ್ದಾರರಿಗೇ ತಾಲ್ಲೂಕಿನ ಅಧಿಕಾರವಿರಬೇಕು ಎಂದು ಹೇಳಿ

(ಶ್ರೀ ಟಿ. ಮಾದಯ್ಯಗೌಡರು)

ನಮ್ಮ ಮುಂದಿರುವ ಮಸೂದೆಯಲ್ಲಿ ಸೂಚಿಸಲ್ಪಟ್ಟಿದೆ. ಅದಕ್ಕೆ ಒಂದು ಬಲವತ್ತರವಾದ ಕಾರಣ, ನಾನು ಯೋಚನೆ ಮಾಡಿರುವುದು, ಸ್ಥಳದ ಅಥವಾ ತಾಲ್ಲೂಕಿನ ಮುಖ್ಯಾಧಿಕಾರಿ ಅಮಲ್ದಾರರು; ಅಮಲ್ದಾರರು ಸಾಧಾರಣವಾಗಿ ದೊಡ್ಡ ಆಫೀಸರಾಗಿ ತಾಲ್ಲೂಕಿನ ಸ್ಥಿತಿಗತಿಗಳನ್ನು ತಿಳಿದವರಾಗಿ ಆ ತಾಲ್ಲೂಕಿನ ಎಲ್ಲಾ ಜನರ ಕೃಪೆಗೆ ಪಾತ್ರರಾಗಿರುತ್ತಾರೆ; ಅವರಿಗೆ ಈ ಅಧಿಕಾರ ಇದ್ದರೆ ಜಾಗ್ರತೆಯಾಗಿ ತಮ್ಮ ಸಂಚಾರ ಕಾಲದಲ್ಲಿ ಆಗಲಿ ಅಥವಾ ಅದಕ್ಕೆ ಸಂಬಂಧಪಟ್ಟ ಪಾರ್ಟಿಗಳನ್ನು ತಾಲ್ಲೂಕು ಆಫೀಸಿಗೆ ಬರಮಾಡಿಕೊಂಡಾಗಲಿ ವ್ಯವಹಾರಗಳನ್ನು ಜಾಗ್ರತೆ ಇತ್ಯರ್ಥ ಮಾಡುತ್ತಾರೆ ಎಂದು ಅಲ್ಲದೆ ಸಾಧಾರಣವಾಗಿ ಅವರು ಒಬ್ಬ ದೊಡ್ಡ ಅಧಿಕಾರಿಗಳಾಗಿ ಜಮೀನಿಗೆ ಸಂಬಂಧಪಟ್ಟ ಎಲ್ಲಾ ವಿಚಾರಗಳನ್ನೂ ತಿಳಿದವರಾಗಿರಬೇಕಾದುದರಿಂದ ಅವರು ಫೈಸಲು ಮಾಡಿದರೆ ಸರ್ವೇಸಾಧಾರಣವಾಗಿ ಸರಿಯಾಗಿರುತ್ತದೆಂಬ ಒಂದು ಅಭಿಪ್ರಾಯದಿಂದ ಅವರಿಗೆ ಈ ಅಧಿಕಾರ ವಹಿಸಿರುವುದು ಈ ಸಮಯದಲ್ಲಿ ಅಮಲ್ದಾರರ ಹೆಮ್ಮೆಯನ್ನು ಹೆಚ್ಚಿಸಿದೆ, ಅಮಲ್ದಾರರಿಗೆ ವಿಷಯಗಳು ಸಂಪೂರ್ಣವಾಗಿ ಗೊತ್ತಿರುವುದಿಲ್ಲ, ಅದರಿಂದ ನ್ಯಾಯ ದೊರೆಯುವುದಿಲ್ಲ, ಒಂದು ವೇಳೆ ಪಾರ್ಟಿಗಳಿಗೆ ಇದರಿಂದ ಅನಾನುಕೂಲವಾಗಬಹುದು, ನಿಧಾನವಾಗಬಹುದು, ಅಮಲ್ದಾರರಿಗೆ ಹೆಚ್ಚಿನ ಕೆಲಸವಿರಬಹುದು, ಇತ್ಯಾದಿ ಕಾರಣಗಳಿಂದ ಅಮಲ್ದಾರರು ಇರಬಾರದು, ಅದಕ್ಕೆ ಬದಲಾಗಿ ಒಂದು ಸಮಿತಿ ಮೂಲಕ ಈ ವ್ಯವಹಾರವನ್ನು ಫೈಸಲು ಮಾಡಬೇಕು ಎಂದು ತಿದ್ದುಪಡಿಯನ್ನು ನಮ್ಮ ಮುಂದಿಟ್ಟಿದ್ದಾರೆ.

ನನಗಾದರೂ ಅನ್ನಿಸುತ್ತದೆ ಈ ತಿದ್ದುಪಡಿಯಲ್ಲಿ ಸೂಚಿಸಿರುವಂತೆ ಗೇಣಿದಾರರ ಪ್ರತಿನಿಧಿಗಳಾಗಿರುವವರು ಒಬ್ಬರು ಎಂದರೆ ಅವರು ಒಬ್ಬ ಗೇಣಿದಾರರು, ಜಮೀನ್ದಾರರ ಪ್ರತಿನಿಧಿಗಳಾಗಿರುವವರು ಒಬ್ಬರು ಎಂದರೆ ಅವರು ಒಬ್ಬ ಜಮೀನ್ದಾರರು ಮತ್ತು ಮೂರನೆಯವರು ಯಾರೋ ಒಬ್ಬ ಸರ್ಕಾರಿ ಅಧಿಕಾರಿಗಳು. ಈ ಮೂರು ಜನಗಳೂ ಸೇರಿ ತೀರ್ಮಾನ ಮಾಡಬೇಕೆಂದರೆ ಕಾಲಾವಕಾಶವೇನೂ ಕಡಿಮೆಯಾಗುವುದಿಲ್ಲ. ಮತ್ತೊಂದು ಅನಾನುಕೂಲವೆಂದರೆ ಇಲ್ಲದ ಹೊಸಹೊಸ ವ್ಯವಹಾರಗಳು ಹುಟ್ಟಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ತಾಲ್ಲೂಕಿನಲ್ಲಿರತಕ್ಕ ಗೇಣಿದಾರರ ಪರ ಪ್ರತಿನಿಧಿಗಳು ಗೇಣಿದಾರರ ಪರವನ್ನು ವಹಿಸಿಕೊಂಡು ವ್ಯವಹಾರ ನಡೆಸತಕ್ಕದ್ದು ಮತ್ತು ಜಮೀನ್ದಾರರಪರ ಪ್ರತಿನಿಧಿಗಳು ಜಮೀನ್ದಾರರ ಪರವನ್ನು ವಹಿಸಿ ಮಾತನಾಡತಕ್ಕದ್ದು. ಹೀಗೆ ಅವರವರಲ್ಲಿ ಇದು ಸರಿಯೆಂದು ಒಬ್ಬರು ಇದು ಸರಿಯಲ್ಲವೆಂದು ಮತ್ತೊಬ್ಬರು ಹೀಗಾಗಿ ಅವರವರಿಗೆ ಭಿನ್ನಾಭಿಪ್ರಾಯ ಬಂದ ಸಂದರ್ಭದಲ್ಲಿ ಮೂರನೆ ಸರ್ಕಾರಿ ಅಧಿಕಾರಿ ಅವರಷ್ಟಕ್ಕೆ ಯಾರ ಪರ ವಹಿಸಿಕೊಳ್ಳುತ್ತಾರೋ ಅವರ ಕಡೆ ತೀರ್ಮಾನ ಆಗುತ್ತದೆ. ಸರ್ಕಾರಿ ಅಧಿಕಾರಿಗಳು ಯಾರು ಇರಬೇಕೆಂದು ಪ್ರಶ್ನೆ ಮಾಡಿದಾಗ ಯಾರು ಬೇಕಾದರೂ ಇರಬಹುದು ಎಂದು ಹೇಳಿದರು. ತಾಲ್ಲೂಕಿನಲ್ಲಿ ಅಮಲ್ದಾರರಲ್ಲದೆ ಇನ್ನಾವ ಅಧಿಕಾರಿಗಳೂ ಇರುವುದಿಲ್ಲ ಅಮಲ್ದಾರರನ್ನು ನೇಮಕ ಮಾಡಬೇಕು. ಇಂಥಾ ಸಮಿತಿಯಲ್ಲಿರತಕ್ಕ ಗೇಣಿದಾರರ ಪರ ಪ್ರತಿನಿಧಿಗಳು ಜಮೀನ್ದಾರರ ಪರ ಪ್ರತಿನಿಧಿಗಳ ಇವರಲ್ಲಿ ಯಾರಿಗೆ ಮನ್ನಣೆ ದೊರೆಯುತ್ತದೆ ಎಂದರೆ ಅಮಲ್ದಾರರು ಯಾರ ಪರ ಇರುತ್ತಾರೋ ಅವರಿಗೆ ಮನ್ನಣೆ ದೊರೆಯುತ್ತದೆ. ಈ ರೀತಿ ಸಮಿತಿಯನ್ನು ಮಾಡಿ ಪರಸ್ಪರ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿ, ಒಂದು ದಿನ ತೀರ್ಮಾನವಾಗದಿದ್ದಲ್ಲಿ ಇನ್ನೊಂದು ದಿನ, ಅವತ್ತು ಆಗದಿದ್ದಲ್ಲಿ ಮತ್ತೊಂದು ದಿನ ಸೇರಿ ತೀರ್ಮಾನ ಮಾಡಬೇಕೆಂದರೆ, ಅಮಲ್ದಾರರ ಕೆಲಸಕ್ಕೆ ನಷ್ಟ, ಅಲ್ಲದೆ ಅಲ್ಲಲ್ಲೇ ಹೆಚ್ಚಿನ ವೈಷಮ್ಯ ಪ್ರಬಲಿಸುವುದಕ್ಕೆ ಅವಕಾಶವಾಗುತ್ತದೆ. ಅಷ್ಟೇ ಹೊರತು ಅವರಿಂದ ಇನ್ನೇನೂ ಅನುಕೂಲ ನನಗೆ ತೋರುವುದಿಲ್ಲ. ಸಾಧಾರಣವಾಗಿ ಈಗಿನ ಕಾಲದ ಅಮಲ್ದಾರರುಗಳೆಲ್ಲ ಹೆಚ್ಚು ರೆವಿನ್ಯೂ ಬಾಬಿನಲ್ಲಿ ಪಾರಂಗತರಾಗಿರಬೇಕೆಂದು ಅಪೇಕ್ಷಿಸುತ್ತೇವೆ. ಅನೇಕರು ರೆವಿನ್ಯೂ ಬಾಬಿನಲ್ಲಿ ವಿಚಾರಗಳನ್ನು ತಿಳಿದುಕೊಂಡಿದ್ದಾರೆ. ಇಂಥಾ ಒಂದು ವ್ಯವಹಾರ ಬಂದರೆ ಕೂಡಲೇ ಹಳ್ಳಿಗೆ ಹೋಗಿ ಜಮೀನಿಗೆ ಸಂಬಂಧಪಟ್ಟ ವಿಚಾರಗಳನ್ನು ಕ್ರೋಢೀಕರಿಸಿಕೊಳ್ಳುತ್ತಾರೆ. ಹಾಗಿಲ್ಲವೆ ಬೇರೊಬ್ಬ ಖಾಸಗಿಯವಂದರೆ ಅವರಿಗೆ ಈ ಅನುಕೂಲವಿರುವುದಿಲ್ಲ. ಒಂದು ವೇಳೆ ಪರೀಕ್ಷೆಮಾಡಿದರೂ ಕೂಡ ‘ಎತ್ತು ಏರಿಗೆ ಎಳೆದರೆ ಕೋಣ ನೀರಿಗೆ ಎಳೆಯಿತು’ ಎನ್ನುವಂತೆ ಪಂಚಾಯಿತಿಗೆ ಹಾಕುವುದು, ಅವರು ಅಮಲ್ದಾರರ ಮೇಲೆ ಪ್ರಭಾವವನ್ನು ಬೀರುವುದಕ್ಕೆ ಪ್ರಯತ್ನ ಮಾಡುವುದು ಹೀಗೆಲ್ಲಾ ಆಗಿ ಅನಾನುಕೂಲಕ್ಕೆ ತೊಂದರೆಗೆ, ಈಡುಮಾಡುತ್ತೇವೆಯೇ ಹೊರತು ಈ ಸಮಿತಿಯಿಂದ ಅಥವಾ ಪಂಚಾಯಿತಿಯಿಂದ ಏನೂ ಅಷ್ಟು ಪ್ರಯೋಜನವಾಗುವುದಿಲ್ಲ ಎಂದು ಹೇಳಲು ಅಪೇಕ್ಷಿಸುತ್ತೇನೆ. ಅಮಲ್ದಾರರು ವಿಚಾರದಲ್ಲಿ ಒಂದು ಬೋನಾಫೈಡ್ ಇಟ್ಟುಕೊಳ್ಳಬಹುದೇ ವಿನಃ ಗೇಣಿದಾರರ ಪ್ರತಿನಿಧಿಗಳಾಗಲೀ, ಜಮೀನ್ದಾರರ ಪ್ರತಿನಿಧಿಗಳಾಗಲೀ ಇದ್ದಕ್ಷಣಕ್ಕೆ ಅನ್ಯಾಯ ನಡೆಯುವುದಿಲ್ಲ, ಅವರೊಬ್ಬರೇ ಆದರೆ ಅನ್ಯಾಯ ನಡೆಯುತ್ತದೆ ಎಂದು ಹೇಳುವುದಕ್ಕೆ ಏನೇನೂ ಆಧಾರವಿಲ್ಲ. ಅಮಲ್ದಾರರು ಸರ್ವೇ ಸಾಧಾರಣವಾಗಿ ತಾಲ್ಲೂಕಿನಲ್ಲಿ ದೊಡ್ಡ ಅಧಿಕಾರಿಗಳು ಮತ್ತೆ ಆಡಳಿತವನ್ನು ವಿಚಕ್ಷಣೆಯಿಂದ ನೋಡಿಕೊಳ್ಳತಕ್ಕವರು. ಹೀಗಿರುವಾಗ ಖಾಸಗಿಯವರು ಅವರ ಮೇಲೆ ತಮ್ಮ ಪ್ರಭಾವವನ್ನು ಬೀರುವುದಕ್ಕೆ ಹೊಸದಾಗಿ ಇಲ್ಲದ ಅವಕಾಶ ಕಲ್ಪನೆ ಮಾಡಿ ಸರಿಯಾಗಿ ನ್ಯಾಯ ದೊರೆಯಬಹುದಾದುದನ್ನು ತಪ್ಪಿಸುವುದಕ್ಕೆ ಅವಕಾಶವಾಗುತ್ತದೆಯೇ ಹೊರತು ಮತ್ತಾವ ರೀತಿಯಲ್ಲೂ ಪ್ರಯೋಜನವಾಗುವುದಿಲ್ಲ. ಅಮಲ್ದಾರರು ಮಾಡಿದ ತೀರ್ಮಾನದ ಮೇಲೆ ಜಿಲ್ಲಾಧಿಕಾರಿಗಳಿಗೆ ಅಪೀಲುಹೋಗಬಹುದು, ಅಲ್ಲೂ ಪರಿಹಾರ ದೊರಕದಿದ್ದರೆ ಅಸಿಸ್ಟೆಂಟ್ ಕಮಿಷನರ್‌ಗೆ ಅಪೀಲು ಹೋಗಬಹುದು ಎಂಬುದಾಗಿ ಸೆಲೆಕ್ಟ್ ಸಮಿತಿಯವರು ಮಾಡಿದ್ದಾರೆ. ಆದ್ದರಿಂದ ಅಕಸ್ಮಾತ್ತಾಗಿ ಅಮಲ್ದಾರರಿಂದ ಅನ್ಯಾಯವಾಗಿ ಅದರಿಂದ ಅನಾನುಕೂಲವಾಗಬಹುದು ಎಂದು ಶ್ರೀಮಾನ್ ಶ್ರೀಕಂಠೇಶ್ವರ್‌ರವರು ಏನು ಊಹೆಮಾಡುತ್ತಾರೋ ಅದಕ್ಕೆ ಪರಿಹಾರ ಕೂಡಲೇ ಪಡೆಯಲು ಆಧಾರ ಕಲ್ಪಿಸಿರುವುದರಿಂದ ಆ ವಿಧವಾದ ಭೀತಿಪಡುವುದಕ್ಕೆ ಅವಕಾಶವಿಲ್ಲ. ಅವರ ಅಭಿಪ್ರಾಯ ರೈತನಿಗಾಗಲೀ ಮತ್ತಾರಿಗೇ ಆಗಲೀ ಇದರಿಂದ ತಕ್ಷಣ ಸುಲಭವಾಗಿ ಪರಿಹಾರದೊರೆಯಬೇಕು ಹೆಚ್ಚಿನ ಖರ್ಚು ಇಲ್ಲದೆ ಪರಿಹಾರದೊರೆಯಬೇಕು: ಹಾಗೆ ಒಂದು ವೇಳೆ ಅಪೇಕ್ಷಿಸುವುದಾದರೆ ಅಮಲ್ದಾರರನ್ನೇ ಬಿಟ್ಟು ಬಿಟ್ಟು ಪಂಚಾಯಿತಿಮಾಡಿ ಎಂದು ಹೇಳಿದರು. ಒಬ್ಬ ಮಾನ್ಯ ಮಿತ್ರರು ಹೇಳಿದ ಹಾಗೆ ಅದು ದೊಡ್ಡ ಪಂಚಾಯಿತಿ ಆಗುತ್ತದೆಯೇ ಹೊರತು ಒಂದು ನ್ಯಾಯ ದೊರೆಯುವುದಕ್ಕೆ ಅವಕಾಶವಿಲ್ಲದೇ ಹೋಗುತ್ತದೆ. ಹೀಗೆ ಹೇಳಬೇಕಾದರೆ ಅನೇಕ ಕಾರಣಗಳನ್ನು ಹೇಳಬಹುದು. ಈ ಒಂದು ಪಂಚಾಯಿತಿಯಿಂದ ಅನೇಕ

ತೊಂದರೆಗಳೇ ವಿನಾ ಅನುಕೂಲವಿಲ್ಲ. ಆದ್ದರಿಂದ ಈ ವಿಚಾರವನ್ನು ಲಂಬಿಸಿ ಹೇಳುವುದಕ್ಕೆ ಹೋಗದೇ ಅಮಲ್ದಾರರು ಇರತಕ್ಕುದ್ದು ಸಾಕು, ಇದನ್ನು ಸೆಲೆಕ್ಟ್ ಸಮಿತಿಯವರು ಕೂಲಂಕಷವಾಗಿ ಆಲೋಚನೆಮಾಡಿದ್ದಾರೆ ಎಂದು ಹೇಳುತ್ತೇನೆ. ಅಮಲ್ದಾರರಿಗೆ ಇರತಕ್ಕ ಅಧಿಕಾರವನ್ನು ತೆಗೆದುಬಿಟ್ಟು ಟ್ರಿಬ್ಯೂನಲ್ಲ್ ಮಾಡಿ, ಅದರಿಂದ ಒಂದು ಮಾನ್ಯತೆ ಬರುತ್ತದೆ ಎಂದು ಹೇಳಿದರು. ಅಮಲ್ದಾರರು ತೀರ್ಮಾನಮಾಡಿದರೆ ಮಾನ್ಯತೆ ಕೆಟ್ಟುಹೋಗುವುದಾದರೂ ಏನೋ ಗೊತ್ತಿಲ್ಲ. ಪಂಚಾಯಿತಿಮಾಡಿದ ಕ್ಷಣ ಮಾನ್ಯತೆ ಬರುತ್ತದೆ ಎಂದು ಹೇಳುವುದು ನನಗೆ ಅರ್ಥವಾಗುವುದಿಲ್ಲ. ಇದಕ್ಕೆ ಬದಲು ಅವರು ಇನ್ನೊಂದು ಹೇಳಬಹುದಾಗಿತ್ತು. ಗೇಣಿದಾರರ ಪ್ರತಿನಿಧಿಗಳು ಮತ್ತು ಜಮೀನ್ದಾರರ ಪ್ರತಿನಿಧಿಗಳು ಎನ್ನುವುದಕ್ಕೆ ಬದಲಾಗಿ ಆಯಾ ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನು ನೇಮಕಮಾಡಿದ್ದರೆ ಚೆನ್ನಾಗಿತ್ತು. ಆ ಸೂಚನೆಮಾಡಲಿಲ್ಲ. ಈ ವಿಧವಾದ ಒಂದು ತಿದ್ದುಪಡಿಯನ್ನು ಒಪ್ಪಿಕೊಂಡಾಕ್ಷಣಕ್ಕೇ ಯಾವುದೊ ಒಂದು ಕಳೆ, ವೈಶಿಷ್ಟ್ಯ ಅಥವಾ ಮಾನ್ಯತೆ ಈಗ ಇಲ್ಲದೇ ಇರುವುದು ಬರುತ್ತದೆ ಎಂದು ಅವರು ಭಾವಿಸಿರುವುದು ಸರಿಯಲ್ಲ ಎಂಬುದಾಗಿ ಅಭಿಪ್ರಾಯಪಟ್ಟು ಅವರ ಈ ತಿದ್ದುಪಡಿಯನ್ನು ತೀವ್ರವಾಗಿ ವಿರೋಧಿಸುತ್ತೇನೆ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ). ಮಾನ್ಯ ಸದಸ್ಯರು ತಂದಿರತಕ್ಕ ಈ ತಿದ್ದುಪಡಿಯನ್ನು ನಾನೂ ಕೂಡ ವಿರೋಧಿಸುತ್ತೇನೆ. ಕಾರಣವೇನೆಂದರೆ, ಉಗುರಿನಲ್ಲಿ ಹೋಗುವುದಕ್ಕೆ ಕೊಡಲಿ ಹಾಕಿದ ಹಾಗೆ ನಮ್ಮ ಸ್ನೇಹಿತರು ಇದನ್ನು ತಂದಿದ್ದಾರೆ. ಅವರು ಹೇಳಿರುವ ವಾದ ಸರಣಿ ಎಂದರೆ ಅಮಲ್ದಾರರಿಗೆ ಏನು ಗೊತ್ತಾಗುತ್ತದೆ; ಮಳೆ ಬೆಳೆ ಆಯಿತೇ ಇಲ್ಲವೇ, ಫಸಲು ಜಾಸ್ತಿ ಬಂದಿದೆಯೇ ಕಮ್ಮಿ ಬಂದಿದೆಯೇ ಎಂಬುದೆಲ್ಲಾ ಚೆನ್ನಾಗಿ ತಿಳಿದಿರತಕ್ಕ ಹಿಡುವಳಿದಾರರ ಪೈಕಿ ಒಬ್ಬರು ಇರಲಿ, ಗೇಣಿದಾರರ ಪೈಕಿ ಒಬ್ಬರು ಇರಲಿ ಎಂದು ಹೇಳಿದರು. ಈ ಸೆಕ್ಷನ್‌ನಲ್ಲಿ ಎಂಥಾ ಸಂದರ್ಭದಲ್ಲಿ ಗುತ್ತಿಗೆ ಅಥವಾ ವಾರ ಗೊತ್ತು ಮಾಡುವುದು ಎಂಬುದನ್ನು ನಿರ್ದಿಷ್ಟವಾಗಿ ಹೇಳಿದ್ದಾರೆ. ಜಮೀನ್ದಾರರ ತಾನೇ ಸ್ವಂತವಾಗಿ ಅಥವಾ ದುಡ್ಡು ಕೊಟ್ಟುಮಾಡಿಸಿದರೆ ಅಂಥ ಸಂದರ್ಭದಲ್ಲಿ ಫಸಲು ಜಾಸ್ತಿ ಆದರೆ ಗುತ್ತಿಗೆ ಜಾಸ್ತಿಕೊಡಬೇಕು ಎಂದು ಹೇಳುತ್ತಾನೆ. ಮೇಲಿನ 2ನೇ ಸೆಕ್ಷನ್‌ನಲ್ಲಿ ಗುತ್ತಿಗೆದಾರನಿಗೆ ಕಮ್ಮಿಮಾಡುವುದು ಯಾವ್ಯಾವ ಸಂದರ್ಭದಲ್ಲಿ ಎಂಬುದನ್ನು ಹೇಳಿದೆ. ಮಳೆ ಆಗದೆ ಫಸಲು ನಷ್ಟ ಆಯಿತು ಕ್ಷಾಮಕಾಲ ಬಂದರೆ ಅಥವಾ ಅವನೇ ತನ್ನ ಕೈಯಿಂದ ಖರ್ಚು ಮಾಡಿದ್ದರೆ ಕಮ್ಮಿಮಾಡುವುದಕ್ಕೆ ಸರ್ಕಾರದವರು ಒಂದು ಸೌಕರ್ಯ ಒದಗಿಸಿಕೊಟ್ಟು ಅದನ್ನು ಪರಿಶೀಲನೆಮಾಡುತ್ತೇವೆ ಎಂದು ಹೇಳಿರುತ್ತಾರೆ. ಸರ್ವಸಮ್ಮತವಾಗಿರಬೇಕು, ಅವರಿಗೂ ಅನ್ಯಾಯವಾಗಬಾರದು, ಇವರಿಗೂ ಅನ್ಯಾಯವಾಗಬಾರದು ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಆದ್ದರಿಂದ ಇಂಥಾ ಪಂಚಾಯಿತಿಗಳನ್ನು ಮಾಡಿದರೆ ಆಗಲೇ ಹೇಳಿದ್ದಾರೆ. ಪಂಚಾಯಿತಿ ಪಂಚಾಯಿತಿಯೇ ಆಗುತ್ತದೆ. ಅವರು ಹೇಳಿರುವುದು The remedy is worse than the disease. ಈ ರೀತಿ ಪಂಚಾಯಿತಿಗಳನ್ನು ಮಾಡಬೇಕಾದರೆ ಒಂದೊಂದು ಹೋಬಳಿಗೆ, ಒಂದೊಂದು ಗ್ರಾಮಕ್ಕೆ ಒಂದೊಂದು ಸಮಿತಿಮಾಡಬೇಕಾಗುತ್ತದೆ. ಪ್ರತಿಯೊಂದಕ್ಕೂ ಗೆಜೆಟ್ ನೋಟಿಫಿಕೇಷನ್ ಹೊರಡಬೇಕು ಎಂದರೆ ಎಷ್ಟು ಕಷ್ಟಕ್ಕೆ ಬರುತ್ತದೆ. ಎರಡನೆಯದೇನೆಂದರೆ ಇದರಿಂದ ಒಂದೊಂದು ಊರಿಗೂ ಒಂದೊಂದು ಕಮಿಟಿ ಮಾಡುವುದಕ್ಕಾಗುತ್ತದೆಯೇ? ಒಂದು ವೇಳೆ ಹಾಗೆ ಟ್ರಿಬ್ಯುನಲ್ ಮಾಡಿದರೂ ಅದೂ ನಿಷ್ಪಕ್ಷಪಾತವಾಗಿರುತ್ತದೆಂದು ಹೇಗೆ ಹೇಳುವುದು! ಇನಗೀ ಸದಸ್ಯರು ಮೆಜಾರಿಟಿ ತೀರ್ಮಾನಕೊಟ್ಟರೆ ಅಮಲ್ದಾರರು ಮಾಡುವುದೇನು! ಆದೇ ಹೋಬಳಿಯವರು ಬೇಡ ಇನ್ನೊಂದು ಹೋಬಳಿಯವರನ್ನು ಮಾಡೋಣ ಎಂದೇನೋ ಹೇಳಬಹುದು. ಅಂತೂ ಅವರಲ್ಲಿ ಎಷ್ಟೋ ತೊಂದರೆಯಿದೆ. ಅವರು ತಾನೆ ಮಾಡುವ ಕೆಲಸವೇನು? ಒಬ್ಬ ಜಮೀನ್ದಾರ ಸರ್ಕಾರದಿಂದ ಸಾಲತೆಗೆದುಕೊಂಡು ಬಾವಿಯೋ ಏನಾದರೂ ಮಾಡಿಸಿಕೊಟ್ಟು ಇಷ್ಟೆಲ್ಲಾ ಅನುಕೂಲಮಾಡಿಸಿಕೊಟ್ಟಿದ್ದೇನೆ, ನ್ಯಾಯವಾಗಿ ಅವನು (ರೈತ) ಹೆಚ್ಚಿಗೆ ಬೆಳೆಯಬಹುದು, ಅದರಂತೆ ಕೊಂಚ ಹೆಚ್ಚಿಗೆ ಗುತ್ತಿಗೆ ಕೊಡಿಸಿಕೊ ಎಂದು ಹೇಳಿದರೆ ಅದನ್ನು ತೀರ್ಮಾನ ಮಾಡುವುದು ಏನು ಕಷ್ಟ! ಅಮಲ್ದಾರರೇ ಬಂದು ಇದನ್ನೆಲ್ಲಾ ನೋಡಬಹುದು. ಅಕ್ಕಪಕ್ಕದಲ್ಲಿ ಯಾರನ್ನಾದರೂ ವಿಚಾರಿಸುತ್ತಾರೆ. ಅದರಂತೆ ಗುತ್ತಿಗೆ ಗೊತ್ತುಮಾಡುತ್ತಾರೆ. ಹೀಗೆಯೇ ಯಾವುದಾದರೂ ಭಾರಿ ಬಂಜರು ಜಮೀನಿರುವ ಕಡೆ ಸರ್ಕಾರದವರು ಒಂದು ನೀರಿನ ಕಾಲುವೆ ತೆಗೆಸಿಕೊಟ್ಟು ನೀರಾವರಿ ಏರ್ಪಾಡುಮಾಡಿಕೊಟ್ಟರೆ ಕಂಟ್ರಿಬ್ಯೂಷನ್ ಕೇಳಬಹುದು. ಜಮೀನಿನ ಬೆಲೆಯೂ ಜಾಸ್ತಿಯಾಗುತ್ತದೆ. ಅಂಥ ಸಂದರ್ಭದಲ್ಲಿ ಹೆಚ್ಚಿಗೆ ಗುತ್ತಿಗೆ ಕೇಳಬಹುದು. ಇದನ್ನು ತೀರ್ಮಾನಮಾಡುವುದಕ್ಕೆ ಅಮಲ್ದಾರರಿಗೆ ಕಷ್ಟವೇ? ಇದಕ್ಕೆಲ್ಲಾ ಪಂಚಾಯಿತಿಯವರು ಬಂದು ಹೇಳಬೇಕಾದ್ದೇನಿದೆ. ಈ ತಿದ್ದುಪಡಿ impracticable ಸುಗಮವಾಗಿ ನಡೆಯುವುದಿಲ್ಲ. ಇಂಥ ಸಂದರ್ಭಗಳು ಬರುವುದೂ ಅಪರೂಪ.

ಇವೆಲ್ಲಾ ನೋಡಿದರೆ ಅಮಲ್ದಾರರಿಗೆ ಕೊಡುವುದೇ ಒಳ್ಳೆಯದು. ಅವರೇ ನಿಷ್ಪಕ್ಷಪಾತವಾಗಿ ಹೇಳಬಹುದು. ಒಂದು ವೇಳೆ ಅನ್ಯಾಯವಾಗುತ್ತದೆಂದು ಹೇಳುವ ಪಕ್ಷಕ್ಕೆ 36–37ನೆಯ ಸೆಕ್ಷನ್‌ಗಳಿವೆ. 36ನೆಯ ಸೆಕ್ಷನ್ ಪ್ರಕಾರ ಅಸಿಸ್ಟೆಂಟ್ ಕಮಿಷನರುಗಳು ಮತ್ತು ಡೆಪ್ಯುಟಿ ಕಮಿಷನರ್‌ರವರಿಗೆ ಅಪೀಲ್ ಹೋಗಬಹುದು. 37ನೆಯ ಸೆಕ್ಷನ್ ಪ್ರಕಾರ ಸರ್ಕಾರಕ್ಕೆ ರಿವಿಷನ್ ಹೋಗಬಹುದು. ಆದ್ದರಿಂದ ಮಾನ್ಯ ಸದಸ್ಯರ ತಿದ್ದುಪಡಿಯನ್ನು ಒಪ್ಪುವುದಕ್ಕಾಗುವುದಿಲ್ಲವೆಂದು ಹೇಳುತ್ತೇನೆ.

Sri H. M. CHANNABASAPPA.—I would like to add a word or two to what the previous speakers have said.

Mr. SPEAKER.—Shall we continue the debate after lunch?

(Honourable Members—Yes).

Mr. SPEAKER.—The House will now adjourn for half an hour for lunch.

The House adjourned for Lunch at Thirty-three Minutes past Three of the Clock and reassembled at Twelve Minutes past Four of the Clock, Mr. Speaker (the Hon'ble Sri V. Venkatappa in the Chair.

---

*ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಶ್ರೀ ಶ್ರೀಕಂಠೇಶ್ವರ್‌ರವರು ಸೂಚಿಸಿರ ತಕ್ಕ ತಿದ್ದುಪಡಿಯ ಮೂಲ ಉದ್ದೇಶ ಬಹಳ ಒಳ್ಳೆಯದು. ಅವರ ತಿದ್ದುಪಡಿಯ ಉದ್ದೇಶ ಇಷ್ಟೆಂದು ತಿಳಿದುಕೊಂಡಿದ್ದೇನೆ. ನ್ಯಾಯವಾದ ಗುತ್ತಿಗೆಯ ಮೊತ್ತವನ್ನು ಗೊತ್ತುಮಾಡುವ ವಿಚಾರದಲ್ಲಿ ಆದಷ್ಟು ಬೇಗ ನ್ಯಾಯ ಜನರಿಗೆ ದೊರಕಬೇಕು, ಇದಕ್ಕೆ ಒಂದು ಟ್ರಿಬ್ಯುನಲ್ ಏರ್ಪಾಡುಮಾಡಬೇಕು ಅಮಲ್ದಾರರಿರುವುದರಿಂದ ತೊಂದರೆ ಎಂದು ಅದರಲ್ಲಿರುವ ವಿಷಯ. ಟ್ರಿಬ್ಯುನಲ್ ಏರ್ಪಾಡುಮಾಡತಕ್ಕ ವಿಚಾರವನ್ನು Agrarian Reforms ಸಮಿತಿಯಲ್ಲೇ ಸಲಹೆ ಮಾಡಿದ್ದಾರೆ. ಅದನ್ನು ಮಕ್ಕೀಕಾಮಕ್ಕಿ ಈ ತಿದ್ದುಪಡಿಯಲ್ಲಿ ಸೂಚನೆಮಾಡಿದ್ದಾರೆಂದು ನನ್ನ ನಂಬಿಕೆ. ಈ ತಿದ್ದುಪಡಿಯ ಉದ್ದೇಶ ತಪ್ಪಲ್ಲ. ಆದರೆ ಅವರು ಯಾವ ಉದ್ದೇಶದಿಂದ ಇದನ್ನು ಸೂಚನೆಮಾಡಿದ್ದಾರೋ ಆ ಉದ್ದೇಶಕ್ಕೇ ಇದರಿಂದ ಭಂಗ ಬರುತ್ತದೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಏಕೆ ?

ಶ್ರೀ ಎಚ್. ಎಂ. ಚನ್ನಬಸಪ್ಪನವರು.— ಹೇಳುತ್ತೇನೆ. ಈ ಟ್ರಿಬ್ಯುನಲ್‌ನಲ್ಲಿ ಅಧಿಕಾರಿ ಒಬ್ಬರು, ಸಾಗುವಳಿದಾರನ ಪರ ಒಬ್ಬರು, ಜಮೀನ್ದಾರನ ಪರ ಒಬ್ಬರು ಇರಬೇಕು ಎಂದು ಸೂಚಿಸಿದ್ದಾರೆ. ಹಳ್ಳಿಗಳ ಪರಿಸ್ಥಿತಿಯನ್ನು ಅವರು ಸರಿಯಾಗಿ ತಿಳಿದಿದ್ದರೆ ಹಾಗೆ ಸಲಹೆಮಾಡುತ್ತಿರಲಿಲ್ಲ. ಸಾಗುವಳಿದಾರನ ಪರ ಮಾತನಾಡಲು ಸಾಗುವಳಿದಾರನೇ ಇದ್ದರೇನೋ ಒಳ್ಳೆಯದೆ ಆದರೆ ಅಂಥವರು ಸಿಕ್ಕುವುದು ಕಷ್ಟ. ಜಮೀನ್ದಾರರ ಪರ ಇರಬಹುದು. ಅಧಿಕಾರಿ ಯಾರು ಇರಬೇಕೆಂಬುದನ್ನು ನಿರ್ಧರಿಸುವುದು ಕಷ್ಟ. ಷೇಕ್‌ದಾರರಿರಬೇಕೆ ಅಥವ ಅಮಲ್ದಾರರಿರಬೇಕೆ ! ಒಂದುವೇಳೆ ಷೇಕ್‌ದಾರರಿದ್ದರೆ, ಅಂಥವರಿಂದ ಎಷ್ಟುಮಟ್ಟಿಗೆ ನ್ಯಾಯ ದೊರೆಯುತ್ತದೆಂಬುದನ್ನು ಅವರೇ ಹೇಳಬೇಕು. ಒಟ್ಟಿನಲ್ಲಿ ಟ್ರಿಬ್ಯುನಲ್ ಮೂಲಕ ದೊರಕುವ ನ್ಯಾಯ ಆದಷ್ಟು ಬೇಗ ದೊರಕುವಂತಿರಬೇಕು ಮತ್ತು ಉತ್ತಮ ದರ್ಜೆಯದಾಗಿರಬೇಕು. ಇದು ಅಮಲ್ದಾರರೇ ಇದ್ದರೆ ದೊರಕುತ್ತದೆಯೇ ಇಲ್ಲವೆ ಎಂಬುದನ್ನು ಯೋಚಿಸಿ ನೋಡಬೇಕು.

ಮೂರನೆಯದಾಗಿ. ಒಬ್ಬನೇ ಮನುಷ್ಯನಿದ್ದರೆ ಅವನಿಂದ ವಿಶೇಷವಾಗಿ ವಿಮರ್ಶೆ ಆಗುವುದರಲ್ಲಿ ನಂಬಿಕೆ ಹೆಚ್ಚು. ಏಕೆಂದರೆ ಹಳ್ಳಿಯಲ್ಲಿ ಸಾಮಾನ್ಯವಾಗಿ ಅನೇಕ ಪಾರ್ಟಿ ವೈಷಮ್ಯಗಳಿರುತ್ತವೆ. ಹೀಗಿರುವಾಗ ಸಾಗುವಳಿದಾರ ಮತ್ತು ಜಮೀನ್ದಾರ ಟ್ರಿಬ್ಯುನಲ್‌ನಲ್ಲಿರ ವುದರಿಂದ ತೊಂದರೆಯಾಗಬಹುದು. ಅಲ್ಲದೆ ಟ್ರಿಬ್ಯುನಲ್ ಮಾಡಬೇಕಾದ ಕರ್ತವ್ಯಗಳು ನಾನಾ ರೀತಿ ಇರುತ್ತವೆ. ಅವರು ವಿಚಾರಣೆ ಕೂಡ ಮಾಡಬೇಕಾಗುತ್ತದೆ ಸಾಕ್ಷಿಗಳನ್ನು ಕರೆಯಿಸಬೇಕು. ಸಾಕ್ಷಿಗಳು ಬರಬೇಕು. ಮೀಟಿಂಗ್ ಇಟ್ಟರೆ ಆ ಕಾಲಕ್ಕೆ ಯಾರೊಬ್ಬರೂ ಬಾರದೇ ಇದ್ದರೂ ಆ ಹೊತ್ತು ಮೀಟಿಂಗ್ ಆಗುವುದಿಲ್ಲ. ಅಲ್ಲದೆ ಟ್ರಿಬ್ಯುನಲ್‌ಗೆ ಕೆಲವು ಜ್ಯುಡಿಷಿಯಲ್ ಅಧಿಕಾರಿಗಳಿರಬೇಕಾಗುತ್ತದೆ, ಇದಕ್ಕೆ ಬೇರೆ ಹೊಸದೊಂದು ಕಾನೂನು ಮಾಡಬೇಕಾಗುತ್ತದೆ. ಇಷ್ಟೇ ಅಲ್ಲದೆ ಇದೆಲ್ಲವನ್ನೂ ತಿಳಿದು ತಮ್ಮ ಅಧಿಕಾರವ್ಯಾಪ್ತಿಯೇನು, ತಮ್ಮ ಅಧಿಕಾರಕ್ಷೇತ್ರವೇನು ಎಂಬುದನ್ನೆಲ್ಲಾ ತಿಳಿದು ವಿಷಯ ವಿಮರ್ಶೆ ಮಾಡಿ ನ್ಯಾಯ ದೊರಕಿಸಿಕೊಡುವ ಶಕ್ತಿಯುಳ್ಳ ಜನ ಗ್ರಾಮಾಂತರಗಳಲ್ಲಿ ಸಿಕ್ಕುತ್ತಾರೆಯೆ ಎಂಬುದನ್ನು ಯೋಚನೆಮಾಡಬೇಕು. ನನ್ನ ಅನುಭವ ಹೇಳುವುದಾದರೆ, ಗ್ರಾಮಗಳಲ್ಲಿ ಇಂತಹ ಜನರು ಸಿಕ್ಕುವುದು ಕಷ್ಟ. Justice delayed is justice denied ಎಂದು ಇಂಗ್ಲೀಷಿನಲ್ಲಿ ಹೇಳುವುದುಂಟು. ಹಿಂದೆ ಯಾವುದಾದರೊಂದು ವಿಷಯದ ತೀರ್ಮಾನವನ್ನು ತಡಮಾಡಬೇಕಾದರೆ ಒಂದು ಟ್ರಿಬ್ಯುನಲ್ ಮಾಡಿಬಿಡುತ್ತಿದ್ದರು. ಹತ್ತು ಜನಕ್ಕೆ ಸೇರಿದ್ದು ಸಾಯುವುದಿಲ್ಲವೆಂದು ಒಂದು ಗಾದೆ ಇದೆ. ಹೀಗೆ ಈ ಟ್ರಿಬ್ಯುನಲ್‌ನಲ್ಲಿ ಮೂರು ಜನ ವಿಮರ್ಶೆಮಾಡುತ್ತಾ ಕುಳಿತರೆ, ಸಾಕ್ಷಿಗಳನ್ನು ಕರೆದುಕೊಂಡು ಬರಬೇಕು. ಇದೆಲ್ಲ ಕಷ್ಟಗಳೂ ಇವೆ. ಆದಕಾರಣ ನಾನು ಈ ಸಲಹೆಯನ್ನಲ್ಲಗಳೆಯುವುದಿಲ್ಲ; ಆದರೆ ಇದನ್ನು ಕಾಲಪರಿಸ್ಥಿತಿಗೆ ಅಳವಡಿಸುವುದಕ್ಕಾಗುವುದಿಲ್ಲ, ಈ ಕ್ರಮ ಸರಿಯಾಗಿಲ್ಲ. ಉದ್ದೇಶ ಸರಿಯಲ್ಲವೆಂದು ಹೇಳುವುದಿಲ್ಲ. ಕೊನೆಗೆ ಆ ಟ್ರಿಬ್ಯುನಲ್‌ನಲ್ಲಿಯೂ ಅಧಿಕಾರಿಯ ತೀರ್ಮಾನ ಕಡೆಯದಾಗಿರುವುದಿಲ್ಲ. ಏಕೆಂದರೆ ಅಲ್ಲಿ ಜಮೀನ್ದಾರನ ಪರ ಬರುವವನು ಜಮೀನ್ದಾರರಕಡೆ ಹೇಳಬಹುದು, ಸಾಗುವಳಿದಾರನಪರ ಬರುವವನು ಅವನ ಪರ ಹೇಳಬಹುದು. ಹೀಗೆ ನಾನಾ ತೊಡಕುಗಳಿವೆ.

ಅಮಲ್ದಾರರು ತೀರ್ಮಾನ ಮಾಡತಕ್ಕದ್ದೇ ಸರಿ, ಅದೇ ಉತ್ತಮ ದರ್ಜೆಯ ತೀರ್ಮಾನ, ಅವರು ಮಾಡತಕ್ಕ ನ್ಯಾಯ ವಿಮರ್ಶೆಯೇ ಬಹಳ ಶ್ರೇಷ್ಠ ತರಗತಿಗೆ ಸೇರಿದ್ದು ಎಂದೇ ನಾನು ಹೇಳುತ್ತಿಲ್ಲ. ಆದರೆ ನಾನು ತಿಳಿಸಬೇಕೆಂದಿರುವುದು ಇಷ್ಟೆ. ತಾವು ಹೇಳತಕ್ಕವರು ತೀರ್ಮಾನ ಕೊಡತಕ್ಕದ್ದು ಎಷ್ಟು ನ್ಯಾಯಸಮ್ಮತವಾಗಿ, ಒಂದು ಉತ್ತಮದರ್ಜೆಯ ತೀರ್ಮಾನವಾಗಿರುತ್ತದೋ, ಈ ಅಮಲ್ದಾರರು ಕೊಡತಕ್ಕ ತೀರ್ಮಾನವೂ ಅಷ್ಟೇ ಉತ್ತಮದರ್ಜೆಯದಾಗಿರುತ್ತೆ. ಇಷ್ಟೇ ಅಲ್ಲದೆ ಮತ್ತೊಂದು ಅನುಕೂಲವೇನಿದೆಯೆಂದರೆ—ಇವರ ತೀರ್ಮಾನ ಬಹಳ ಶೀಘ್ರವಾಗಿ ಆಗುತ್ತದೆ. ಈ ಎರಡು ಅಂಶಗಳನ್ನು ಕೂಡ ಹಾಕಿ ಹೇಳುವುದಾದರೆ ನನ್ನ ಅಭಿಪ್ರಾಯದಲ್ಲಿ ಉಭಯತ್ರರಿಗೂ ಅಮಲ್ದಾರರು ಕೊಡತಕ್ಕ ತೀರ್ಪು ಸ್ವಲ್ಪ ಉತ್ತಮ ದರ್ಜೆಯದಾಗಿರುತ್ತದೆ ಮತ್ತು ಶೀಘ್ರದಲ್ಲಿ ದೊರೆಯುತ್ತಕ್ಕದ್ದಾಗಿರುತ್ತದೆ. ಆದರೆ ಸಂದರ್ಭಾನುಸಾರ ಒಂದು ವೇಳೆ ಜಮೀನ್ದಾರನ ಹಿತವನ್ನೇ ಹಿಡಿದು ತೀರ್ಪು ಕೊಡಬಹುದು, ಇಲ್ಲವೇ ಸಾಗುವಳಿದಾರನ ಹಿತವನ್ನೇ ಹಿಡಿದು ಒಂದು ವೇಳೆ ತೀರ್ಪನ್ನು ಕೊಡಬಹುದು. ಆದರೆ ಅಂಥಾ ಸಂದರ್ಭಗಳಲ್ಲಿ ಆ ರೀತಿ ಪಾರ್ಟಿ ಪಕ್ಷ ಹಿಡಿದು ಕೊಡತಕ್ಕ ತೀರ್ಪಿನಮೇಲೆ ಅಸಿಸ್ಟೆಂಟ್ ಕಮೀಷನರವರಿಗೂ ನಂತರ ಜಿಲ್ಲಾಧ್ಯಕ್ಷರಿಗೂ ಆ ಬಗ್ಗೆ ಅಪೀಲ್ ಹೋಗುವುದಕ್ಕೆ ಅವಕಾಶವಿದ್ದೇ ಇದೆ. ಆಗ ನಾವು ನ್ಯಾಯಸಮ್ಮತವಾದ ತೀರ್ಮಾನ ಪಡೆದುಕೊಳ್ಳಬಹುದು. ಆದ್ದರಿಂದ ಈಗ ಇರತಕ್ಕದ್ದರಲ್ಲಿ ಏನೂ ಅಂಥಾ ನ್ಯೂನತೆಗಳಿಲ್ಲ. ಆದಕಾರಣ ಮಾನ್ಯ ಸದಸ್ಯರು ತಮ್ಮ ತಿದ್ದುಪಡಿಯನ್ನು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಬೇಕೆಂದು ತಿಳಿಸುತ್ತೇನೆ. ಆದರೆ ತಮ್ಮ ತಿದ್ದುಪಡಿಯಲ್ಲಿ ಅಷ್ಟು ಮಹತ್ವವಿಲ್ಲವೆಂದು ನಾನು ಹೇಳುವುದಿಲ್ಲ. ಆದಾಗ್ಯೂ ಇದರಿಂದ ಅಷ್ಟು ಒಳ್ಳೆಯದಾಗುವುದಿಲ್ಲ. ಆದ್ದರಿಂದ ತಾವು ದಯವಿಟ್ಟು ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

*The Hon'ble Sri H. SIDDAIYA.—I am sorry I will have to oppose this amendment moved so ably on this occasion by Sri Sreekanteswar. When he was taking part in the course of

the general discussion, he had advanced one point which was somewhat convincing. He said the other day that in case the Amildar is appointed solely for this purpose, the work entrusted on him would become heavy and he might not find time to attend to it. There is some force in this argument but to-day he gives up that view and takes up a different attitude altogether and he accedes to the postion that even an Amildar may be appointed as the Government representative in the tribunal consisting of two non-officials, one a representative of the landlord and another the tenant and the Government representative may be an Amildar. The argument that he advanced the other day is quite inconsistent with the one now advanced by him. That he will have to admit.

The other point which he was telling us is that the Amildar would act upon the information furnished by the village officers. Not merely on the information, but as was pointed out by some of the Hon'ble Members of this House, the Amildar being on the spot, it is likely that he may make a spot inspection of the locality if need be and he knows the local conditions also and as such, is the better person to dispose of this matter. And if there is a tribunal consisting of three members, as it was so vividly and clearly pointed out by some members, there will be inordinate delay and it becomes very expensive and leads to complications among other matters. Therefore I cannot accept this amendment. The clause as it stands is really very reasonable and convincing. Therefore, I oppose this amendment.

Sri K. R. SREEKANTESWAR.—May I just say a few words? I am only sorry that I am not at all convinced. I thought the Hon'ble Revenue Minister would agree with me regarding this aspect. Because, wherever any disputes arise, a tribunal is appointed to decide them. My Hon'ble friend Sri Channabasappa has also referred to the Agrarian Reforms Committee. I am very sorry that this particular argument is not accepted. I cannot agree with the views.

Mr. SPEAKER.—Does the Hon'ble Member press his amendment?

Sri K. R. SREEKANTESWAR.—Yes.

Mr. SPEAKER.—The question is:

"In sub-clause (1), for the words "to the Amildar', the words 'to a Tribunal consisting of a landlord, a tenant and the Government representative' shall be substituted."

The motion was negatived.

Mr. SPEAKER.—The question is:

"That Clause 12, as amended, stand part of the Bill."

The motion was adopted.

Clause 12, as amended, was added to the Bill.

Mr. SPEAKER.—Clauses 13 and 14. The question is:

"That Clauses 13 and 14 stand part of the Bill.

The motion was adopted.

Clauses 13 and 14 were added to the Bill.

Mr. SPEAKER.—Clause 15.

Sri H. M. CHANNABASAPPA.—I do not propose to move the amendment tabled by me to clause 15.

Mr. SPEAKER.—The question is:

"That Clause 15 stand part of the Bill."

The motion was adopted.

Clause 15 was added to the Bill.

Mr. SPEAKER.—Clause 16.

Sri H. M. CHANNABASAPPA.—I do not propose to move the amendments to clause 16 in list No. III. But I propose to move the amendment in list No. VII, which runs as follows:

"That for the word 'January', substitute the word 'April'."

Section 16 runs as follows:

"(1) Notwithstanding anything to the contrary contained in this Act, or any other law for the time being in force or any agreement, usage, decree or order of a court the tenancy of any land held by a tenant continuously for a period exceeding twelve years prior to the 1st day of January 1951 shall not be terminated, except on any one or more of the grounds........"

(SRI H. M. CHANNABASAPPA).

ಎಂದರೆ 1951ನೆಯ ಜನವರಿ ಒಂದನೆಯ ತಾರೀಖಿನಿಂದ ಹಿಂದಕ್ಕೆ 12 ವರ್ಷಗಳು ಯಾರು ಒಂದು ಜಮೀನನ್ನು ಸಾಗುವಳಿಮಾಡಿಕೊಂಡು ಬಂದಿರುತ್ತಾರೋ ಅಂಥವರಿಗೇ ಇದು ಅನ್ವಯಿಸತಕ್ಕದ್ದಾಗಿದೆ. ಆದರೆ ಹೀಗೊಂದು ಕಾಲಪರಿಮಿತಿಯನ್ನು ಗೊತ್ತುಮಾಡಬೇಕಾಗಿದ್ದರೆ ಸಾಧಾರಣವಾಗಿ ವ್ಯವಸಾಯಕಾಲಯಾವಾಗ ಮುಗಿಯುತ್ತೆ, ಪುನಃ ಹೊಸದಾಗಿ ವ್ಯವಸಾಯ ಮಾಡತಕ್ಕ ಕಾಲಯಾವಾಗ ಪ್ರಾರಂಭವಾಗತ್ತೆ ಎಂಬುದನ್ನು ನಾವು ಸ್ವಲ್ಪ ಆಲೋಚನೆಮಾಡಿನೋಡಬೇಕಾಗುತ್ತೆ. ಒಂದಾವರ್ತಿ ಇಟ್ಟು ಬೆಳೆಗಳು ಕೊಯ್ಲಿಗೆ ಬಂದು ವ್ಯವಸಾಯ ಆ ವರ್ಷಕ್ಕೆ ಪೂರೈಸತಕ್ಕದ್ದು ಸಾಧಾರಣವಾಗಿ ಯುಗಾದಿ ಹಬ್ಬಕ್ಕೆ ಸರಿಯಾಗಿ ಆಗುತ್ತೆ. ಅಂದರೆ ಏಪ್ರಿಲ್ ತಿಂಗಳಲ್ಲಿಗೇ ಯುಗಾದಿ ಬರುತ್ತೆ; ಆಗ್ಯೆ ವ್ಯವಸಾಯಕ್ಕೆ ಸಂಬಂಧಪಟ್ಟ ಕೆಲಸಕಾರ್ಯಗಳೂ ಸಹ ಪೂರೈಸಿರುತ್ತವೆ; ಆದ್ದರಿಂದ ವ್ಯವಸಾಯಕ್ಕೆ ಸಂಬಂಧಪಟ್ಟ ಕೆಲಸಗಳೆಲ್ಲಾ ಮುಗಿಯುವುದು ಮತ್ತು ಹೊಸದಾಗಿ ಪ್ರಾರಂಭವಾಗತಕ್ಕದ್ದು ಸಾಧಾರಣವಾಗಿ ಯುಗಾದಿಯಿಂದ, ಇನ್ನೊಂದು ಯುಗಾದಿ ತನಕ. ಈ ಅಂಶವನ್ನು ನಾವು ದೃಷ್ಟಿಯಲ್ಲಿಟ್ಟುಕೊಂಡು ಇದನ್ನು ತೀರ್ಮಾನಮಾಡಿದರೆ ಬಹಳ ಒಳ್ಳೆಯದಾಗಿರುತ್ತೆ. ಇದರಿಂದ ಯಾರಿಗೂ ತೊಂದರೆ ಇರುವುದಿಲ್ಲ, ಅನಾವಶ್ಯಕವಾದ ವ್ಯವಹಾರಗಳಿಗೆ ಎಡೆಯಿಲ್ಲದಂತೆ ಆಗುತ್ತೆ. ಸಾಧಾರಣವಾಗಿ ಜನವರಿ ತಿಂಗಳಲ್ಲೂ ಸಹ ಭತ್ತದ ಕೊಯಿಲು ಇನ್ನೂ ಮುಗಿದಿರುವುದಿಲ್ಲ. ಅಂಥಾ ಕಾಲದಲ್ಲಿ ಅತನು ಜಮೀನನ್ನು ಬಿಟ್ಟುಕೊಡಬೇಕೆಂದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ನಾವು ಇಲ್ಲಿ 1951 ಜನವರಿ ನೇ ತಾರೀಖು ಎಂಬುದನ್ನು 1951 ಏಪ್ರಿಲ್ ಒಂದನೇ ತಾರೀಖಿನಿಂದ ಎಂದು ಬದಲಾಯಿಸತಕ್ಕ ಬಗ್ಯೆ ನಾನು ಈ ತಿದ್ದುಪಡಿ ತಂದಿದ್ದೇನೆ. ಇದರಲ್ಲಿ ಅಷ್ಟು ವಾದ ವಿವಾದಗಳಿಗೇನೂ ಆಸ್ಪದವಿಲ್ಲ. ಆದಕಾರಣ ಸರ್ಕಾರದವರು ಇದನ್ನು ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ.

Mr. SPEAKER.—Amendment moved:

"That for the word 'January' substitute the word 'April'."

The Hon'ble Sri H. SIDDAIYA.—I accept this amendment.

***Sri H. M. CHANNABASAPPA.**—There is another amendment to clause 16. I do not propose to move the second amendment in list No. III. And I also do not propose to move the amendment to clause 16 in list No. VII. I propose to move the other amendment in the latest amendment notice and which runs as follows;—

"That for sub-clause (2), the following sub-clause shall be substituted :—

"(2) The tenancy shall be terminated in respect only of such area not being less than one half of the area of cultivable land held by the tenant under such land-lord as may be determined by such authority and in such manner as may be prescribed, after a period of not less than one year from the date of notice expiring with the end of the year."

ಇದರ ಉದ್ದೇಶವಾದರೂ ಇಷ್ಟು : ಕ್ಲಾಜು 16 ರಲ್ಲಿ ಏನಿದೆಯೆಂದು ಹೇಳಿದರೆ, 1951 ನೆಯ ಇಸವಿ ಏಪ್ರಿಲ್ ಒಂದನೆಯ ತಾರೀಖಿಗೆ ಹಿಂದೆ 12 ವರ್ಷಗಳವರೆಗೆ ಅಥವಾ ಅದಕ್ಕೆ ಮೇಲ್ಪಟ್ಟು ಸಾಗುವಳಿಮಾಡಿಕೊಂಡಿರುವ ಸಾಗುವಳಿದಾರರು ಯಾರಿದ್ದಾರೋ ಅವರ ಸಾಗುವಳಿ ಮಾಡುವ ಹಕ್ಕನ್ನು ಯಾವ ಜಮೀನ್ದಾರರೇ ಆಗಲಿ ತೆಗೆದು ಕೊಳ್ಳುವುದಕ್ಕಾಗುವುದಿಲ್ಲವೆಂದು. ಕೆಲವು ನಿಬಂಧನೆಗಳಿಗೆ ಒಳಪಟ್ಟು ಮಾತ್ರ ಆ ಹಕ್ಕನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯ. ಅದೇನೆಂದರೆ ಈಗಿರುವ ರೀತಿಯಲ್ಲಿ ಬರವಣಿಗೆಯಲ್ಲಿ ಸಾಗುವಳಿದಾರನಿಗೆ ಒಂದು ನೋಟೀಸನ್ನು ಕೊಟ್ಟರೆ ಅದು ಕೊಟ್ಟ ಒಂದು ವರ್ಷದ ಮೇಲೆ ಸಾಗುಮಾಡ ಬಾರದು, ಜಮೀನು ಎಷ್ಟಿದೆಯೋ ಅದರಲ್ಲಿ ಅರ್ಧಮಾತ್ರ ಸ್ವಂತ ಸಾಗುಮಾಡಲು ಬೇಕಾದರೆ ತೆಗೆದು ಕೊಳ್ಳಬಹುದು ಎಂದು ಸೂಚಿಸಿದೆ. ಈ ಅರ್ಧ ಜಮೀನನ್ನು ಬಿಡುವುದಕ್ಕೆ ಕೆಲವು ವೇಳೆ ಕಷ್ಟಬರುತ್ತದೆ. ಅದೇನೆಂದರೆ ದೊಡ್ಡ ದೊಡ್ಡ ಜಮೀನ್ದಾರರುವ ಭಾಗಗಳಲ್ಲಿ 12 ವರ್ಷಗಳಿಗೆ ಮೇಲ್ಪಟ್ಟು ಸಾಗು ಮಾಡಿರುವ ಸನ್ನಿವೇಶದಲ್ಲಿ ಜಮೀನನ್ನು ಸ್ವಂತ ಸಾಗುವಳಿ ಮಾಡಿಕೊಳ್ಳಬೇಕು ಎಂದು ಜಮೀನ್ದಾರ ತೆಗೆದು ಕೊಳ್ಳುವುದಾದರೆ ಆಗ್ಗೆ ಅರ್ಧ ಜಮೀನನ್ನು ತೆಗೆದು ಕೊಂಡರೆ ಉಭಯತ್ರರಿಗೂ ಅನುಕೂಲವಾಗುವ ಹಾಗಿರುತ್ತದೆ. ಇದರಿಂದ ಜಮೀನ್ದಾರರಿಗೇ ತೊಂದರೆಯಾಗುತ್ತದೆಂಬುದು ಸರಿಯಲ್ಲ. ನಾನು ಆಗಿಂದಾಗ್ಯೆ ಹೇಳಿರುವ ರೀತಿಯಲ್ಲಿ ದೇಶದಲ್ಲಿ ದೊಡ್ಡ ದೊಡ್ಡ ಜಮೀನ್ದಾರರು ಸಾಗುವಳಿ ಮಾಡಿಸಬೇಕೆಂದು ಜಮೀನನ್ನು ತೆಗೆದುಕೊಳ್ಳುತ್ತಿದ್ದಾರೆಂಬುದು ಸರಿಯಲ್ಲ. ಅನೇಕ ಜನರು ಸಣ್ಣಪುಟ್ಟ ಹಿಡುವಳಿದಾರರು ಕಾರಣಾಂತರದಿಂದ ತಮ್ಮ ಜಮೀನುಗಳನ್ನು ಗುತ್ತಿಗೆಗೆ ಅಥವಾ ವಾರಕ್ಕೆ ಕೊಟ್ಟಿರುತ್ತಾರೆ. ಅವರು ಕಾರಣಾಂತರಗಳಿಂದ ಸ್ವಂತ ಸಾಗುವಳಿ ಮಾಡಬೇಕೆಂದು ಜಮೀನು ಬಿಡಿಸಲು ಪ್ರಯತ್ನಪಟ್ಟರೆ ಆಗ್ಗೆ ಅರ್ಧ ಬಿಡಿಸಿಕೊಳ್ಳಬೇಕು, ಇನ್ನರ್ಧ ಬಿಡಿಸಿಕೊಳ್ಳುವುದಕ್ಕಾಗುವುದಿಲ್ಲ ಎಂದು ವಿಧಾಯಕ ಮಾಡಿದರೆ ಅದರಿಂದ ಬಹಳ ಮಟ್ಟಿಗೆ ಸಾಮಾನ್ಯ ಜನರಿಗೆ ತೊಂದರೆಯಾಗುತ್ತದೆ. ಅದನ್ನು ಸಭೆಯ ಗಮನಕ್ಕೆ ತರುತ್ತೇನೆ. ಉದಾಹರಣೆಗೆ ಮೈನರ್ ಮಕ್ಕಳು ಎಷ್ಟೋ ಇರುತ್ತಾರೆ. ಅವರು ಮೆಜಾರಿಟಿಗೆ ಬರುವವರೆಗೆ ಜಮೀನನ್ನು ಗುತ್ತಿಗೆಗೆ ಕೊಟ್ಟು ಜೀವನ ಮಾಡಿಕೊಂಡು ಬರುತ್ತಿರುತ್ತಾರೆ. ಮೆಜಾರಿಟಿಗೆ ಬರುವ ವೇಳೆಗೆ 12 ವರ್ಷ ಆಗಿರುತ್ತದೆ. ಆಗ ಸ್ವಂತ ಸಾಗುವಳಿ ಮಾಡಬೇಕೆಂದು ಆಸೆ ಪಟ್ಟರೆ ಸಣ್ಣ ಪುಟ್ಟ ಹಿಡುವಳಿಯಲ್ಲಿ ಒಂದೆರಡು ಎಕರೆ ಇರುತ್ತದೆ ಆ ಒಂದೆರಡು ಎಕರೆಯಲ್ಲಿ ಅರ್ಧ ಬಿಟ್ಟು ಅರ್ಧ ತೆಗೆದು ಕೊಳ್ಳಬೇಕೆಂದು ಹೇಳಿದರೆ ಅರ್ಧ ಎಕರೆ ತೆಗೆದು ಕೊಂಡು ವ್ಯವಸಾಯ ಮಾಡಬೇಕಾಗುತ್ತದೆ. ಇಂಥ ಪರಿಸ್ಥಿತಿಗಳನ್ನು ಮುಂಗಂಡೂ ಕೂಡ ಈ ರೀತಿಯ ಕಾನೂನು ಮಾಡಿದರೆ ಅಂಥವರನೇಕರಿಗೆ ತೊಂದರೆಯಾಗುತ್ತದೆ ಇದರ ಜೊತೆಗೆ ವಿಧವೆಯರಿಗೂ ತೊಂದರೆ. ದೊಡ್ಡ ದೊಡ್ಡ ಜಮೀನ್ದಾರರ ವಿಷಯ ನಾನು ಹೇಳುತ್ತಿಲ್ಲ. ಇನ್ನೊಂದು ಕಡೆ ಒಬ್ಬ ಸಾಗುವಳಿದಾರ ಹತ್ತಾರು ಕಡೆ ಹೆಚ್ಚು ಜಮೀನು ಸಾಗುಮಾಡಿ ಉತ್ತಮಸ್ಥಿತಿಗೆ ತಂದಿರುವಾಗ ತನ್ನ ಜಮೀನಿನಲ್ಲಿ ಸ್ವಂತ ಸಾಗುವಳಿ ಮಾಡುವ ಕಾರಣದ ಮೇಲೆ ಜಮೀನನ್ನು ವಾಪಸು ತೆಗೆದುಕೊಂಡರೆ ಉತ್ತಮಸ್ಥಿತಿಗೆ ತಂದ ರೈತನಿಗೆ ಎಷ್ಟು ಅನಾನುಕೂಲ, ಎಷ್ಟು ನಷ್ಟ ಎಂಬುದನ್ನು ನೋಡಬೇಕು. ಅತ ಎಷ್ಟೋ ಕಷ್ಟಪಟ್ಟಿರುವುದರಿಂದ ತೊಂದರೆಯಾಗುತ್ತದೆ. ಆ ದೃಷ್ಟಿಯಿಂದ ಈ

ತರಹ ಇರುವುದನ್ನು ಸ್ವಲ್ಪ ಯೋಚನೆ ಮಾಡಿ ಸಮಾಧಾನಕರವಾದ ರೀತಿಯಲ್ಲಿ ಶಾಸನ ಮಾಡಬೇಕೆಂದು ಪರ್ಯಾಲೋಚಿಸಿ ನಮ್ಮ ಮುಂದಿರುವ ಶಾಸನಕ್ಕೆ ಈ ತಿದ್ದುಪಡಿ ತಂದಿದೆ. ಇದರಲ್ಲಿ ಒಂದು ನಿಗದಿಯಾದ ಸಂಖ್ಯೆಯಷ್ಟು ಎಕರೆಯಿದ್ದರೆ ಅರ್ಧ ಬಿಟ್ಟುಕೊಡಬಹುದು, ಜಮೀನ್ದಾರನು ಅಷ್ಟನ್ನೂ ತೆಗೆದುಕೊಳ್ಳಬಹುದು ಎಂದು ನಿರ್ಧರಿಸುವುದು ಉತ್ತಮ. ಎರಡು ಮೂರು ಸಣ್ಣ ಹಿಡುವಳಿದಾರರಿರುವುದನ್ನು ಬಿಟ್ಟು ಕೊನೆಯ ಪಕ್ಷ 5 ಅಥವಾ 10 ಎಕರೆ ಅಥವಾ ಅದಕ್ಕೆ ಮೇಲ್ಪಟ್ಟು ಸಾಗುವಳಿ ಜಮೀನಿದ್ದರೆ ಅದರಲ್ಲಿ ಅರ್ಧ ಬಿಡಬಹುದೆಂದು ವಿಧಾಯಕವಾಡಬಹುದು. ಈ ದಿವಸ ಅದನ್ನು ನಿರ್ಧರಿಸುವುದು ಕಷ್ಟ. ತೋಟ ಅರ್ಧ ಎಕರೆಯಿಂದ ಎರಡು ಎಕರೆಯವರೆಗಿರುವುದು ಹೆಚ್ಚು 5 ಎಕರೆಯಿರುವುದು ಕಡಮೆ. ತರಿ 10–20 ಎಕರೆ ಇರುವುದು ಸರ್ವೇ ಸಾಧಾರಣ, ಖುಷ್ಕಿ 100 ರಿಂದ 200 ಎಕರೆ ವರೆಗೆ ಇರಬಹುದು. ಆದ್ದರಿಂದ ಈ ಶಾಸನದಲ್ಲಿ ಇವೆಲ್ಲಕ್ಕೂ ಅನ್ವಯವಾಗುವ ಹಾಗೆ ನಿರ್ಧರಿಸುವುದಕ್ಕೆ ಈ ಶಾಸನದಲ್ಲಿ ಕಷ್ಟವಾಗುತ್ತದೆ. ಅದಕ್ಕಾಗಿಯೇ ಈ ತಿದ್ದುಪಡಿಯನ್ನು ಸೂಚಿಸಿರುವುದು. ಅಂಥ ಸನ್ನಿವೇಶ ಬಂದಾಗ ಭೂಮಿಯ ರಕ್ಷಣೆ, ಜಮೀನ್ದಾರನ ಸ್ಥಿತಿ, ಸಾಗುವಳಿದಾರನ ಸ್ಥಿತಿ ಇವೆಲ್ಲವನ್ನೂ ಗಣನೆಗೆ ತೆಗೆದುಕೊಂಡು ನಿರ್ಧರಿಸುವುದು ಬಹಳ ನ್ಯಾಯಸಮ್ಮತವಾದುದು. ಅದನ್ನನುಸರಿಸಿ ಅರ್ಧ ಜಮೀನು ಬಿಟ್ಟುಕೊಡಬೇಕೆ ಅಥವಾ ಅರ್ಧಕ್ಕೆ ಮೇಲ್ಪಟ್ಟು ಸಾಗುವಳಿಗೆ ಬಿಡಬೇಕೇ ಎಂಬ ವಿಚಾರದಲ್ಲಿ ಈ ತಿದ್ದುಪಡಿ ತಂದಿದೆ. ಇದರಲ್ಲಿ ಎರಡು ಅಂಶಗಳಿವೆ: "The tenancy shall be terminated in respect only of one half of the area of cultivable land held by the tenant under the said landlord after a period of not less than one year from the date of notice expiring with the end of the year" ಎಂದು 16 ನೆಯ ಕ್ಲಾಜಿನ 2 (i) ಸಬ್ ಕ್ಲಾಜಿನಲ್ಲಿ ಹೇಳಿದೆ. ಒಬ್ಬ ಸಾಗುವಳಿದಾರ ಎಷ್ಟು ಜಮೀನನ್ನು 12 ವರ್ಷಗಳಿಗೆ ಮೇಲ್ಪಟ್ಟು ಇಟ್ಟುಕೊಂಡಿರುತ್ತಾನೋ ಅದರಲ್ಲಿ ಅರ್ಧಕ್ಕಿಂತ ಕಡಮೆಯಿಲ್ಲದಷ್ಟು ಬಿಟ್ಟುಕೊಡಬೇಕೆಂದು ಹೇಳುವುದು. ಎರಡನೆಯದು ಇದನ್ನು ನಿರ್ಧಾರ ಮಾಡುವವರು ಎಂಬುದು, ಈ ಕಾನೂನಿನಲ್ಲಿ ಯಾವ ರೀತಿ ನಿರ್ಧಾರ ಮಾಡಬೇಕು, ಯಾರು ಮಾಡಬೇಕು ಎಂಬುದನ್ನು ಒಂದು ಸಂದರ್ಭದಲ್ಲಿ ಹೇಳಿದೆ. ನೋಟೀಸ್ ಕೊಟ್ಟು ಒಂದು ವರ್ಷದಲ್ಲಿ ಜಮೀನನ್ನು ನಿರ್ಧರ ಮಾಡಿ ಬಿಡುವುದು ಎಂದು ಹೇಳಿದೆ ಇದರಿಂದ ಪಾಲು ಮಾಡುವುದಕ್ಕೆ ಅನೇಕ ತೊಂದರೆ ಇದೆ. ಕಡಮೆ ಜಮೀನಿರುವಾಗ ಒಂದೇ ಕುಟುಂಬದವರು ಪಾಲು ಮಾಡಿಕೊಂಡರೆ ಬಹಳ ಕಡಮೆ ಪ್ರದೇಶ ಬರಬಹುದು. ಆದ್ದರಿಂದ ಸರ್ಕಾರದವರು ಯಾವ ರೀತಿ ಮಾಡಬೇಕು, ಅಧಿಕಾರ ಈ ವಿಚಾರದಲ್ಲಿ ಯಾರಿಗೆ ಕೊಡಬೇಕು ಎಂಬುದನ್ನು ಯೋಚನೆ ಮಾಡಿ ಸ್ಥಳ ಸನ್ನಿವೇಶ, ವಿಸ್ತೀರ್ಣ ಮುಂತಾದ ತಪಶೀಲನ್ನು ತಿಳಿದು ನಿರ್ಧರಿಸುವುದು ಅತ್ಯಂತ ಆವಶ್ಯಕ. ಆದ್ದರಿಂದ ನಾನು ಸೂಚಿಸಿರುವ ಈ ತಿದ್ದುಪಡಿಯನ್ನು ಸರ್ಕಾರದವರು ಒಪ್ಪಿಕೊಂಡು ಇದಕ್ಕೆ ಬೆಂಬಲ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಒಂದು ವಿಷಯ ತಿಳಿದುಕೊಳ್ಳಬೇಕಾಗಿದೆ. ಗೇಣೀದಾರರ ಹತ್ತಿರ 5 ಎಕರೆ, ಜಮೀನ್ದಾರರಲ್ಲಿ 300 ಎಕರೆ ಇದ್ದಾಗ ಗೇಣೀದಾರರಿಂದ 300 ಎಕರೆ ಜಮೀನಿನ ಜೊತೆಗೆ 5 ಎಕರೆಯಲ್ಲಿ ಅರ್ಧವನ್ನೂ ತೆಗೆದುಕೊಳ್ಳುವುದಕ್ಕೆ ಪ್ರಯತ್ನಪಟ್ಟರೆ ಹೇಗೆ ಮಾಡಬೇಕು?

ಶ್ರೀ ಎಚ್. ಎಂ. ಚನ್ನಬಸಪ್ಪನವರು—ಅದಕ್ಕೇ ತಿದ್ದುಪಡಿ ಸೂಚಿಸಿರುವುದು. ಸರ್ಕಾರದವರು ಕಾನೂನು ಮಾಡುವ ಕಾಲದಲ್ಲಿ ಯಾವ ಅಧಿಕಾರಿಗೆ ವಹಿಸಬೇಕು, ಯಾವ ಸನ್ನಿವೇಶ ಹೇಗಿದೆ, ಹೇಗೆ ಮಾಡಬೇಕು ಎಂಬುದನ್ನೆಲ್ಲಾ ಗಣನೆಗೆ ತೆಗೆದುಕೊಂಡು ವಿಧಿಗಳಲ್ಲಿ ವಿಧಾಯಕ ಮಾಡಬೇಕೆಂದು ಸೂಚನೆ ಇದೆಯೇ ವಿನಾ ಹಾಗೇ ಮಾಡಬೇಕೆಂದು ಹೇಳಿಲ್ಲ.

ಶ್ರೀ ಕಡಿದಾಳ್ ಮಂಜಪ್ಪನವರು.—5 ಎಕರೆಯಲ್ಲಿ ಎರಡು ಎಕರೆ ತೆಗೆದುಕೊಳ್ಳುವುದು ಯಾವ ನ್ಯಾಯ?

ಶ್ರೀ ಎಚ್. ಎಂ. ಚನ್ನಬಸಪ್ಪನವರು—ಇರಬಹುದು, ಅದನ್ನು ಒಪ್ಪೋಣ.

ಶ್ರೀ ಕಡಿದಾಳ್ ಮಂಜಪ್ಪನವರು.—If the landlord applies to the Amildar, at any rate he must be given half the land, ಜಮೀನ್ದಾರ ಜಮೀನುಬೇಕೆಂದು ಹೇಳಿದಾಗ ಅರ್ಧ ಭಾಗ ಅಮಲ್ದಾರರು ಬಿಡಿಸಿ ಕೊಡಲೇಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಹೌದು, 500 ಎಕರೆ ಇರುವ ಜಮೀನ್ದಾರ ಎರಡು ಎಕರೆಯಿರುವ ಸಾಗುವಳಿದಾರನಿಂದ ಅರ್ಧ ಪಡೆಯಬೇಕೆಂದು ಹೇಳಬಹುದು. ಅಂಥ ಸನ್ನಿವೇಶ ಬರಬಹುದು ಎಂದು ತಾವು ಹೇಳುತ್ತೀರಿ.

ಇಂಥಾ ಕೇಸುಗಳು ದೇಶದಲ್ಲಿ ಎಷ್ಟು ಬರುತ್ತವೆ? ಬರತಕ್ಕದ್ದು ಸ್ವಾಭಾವಿಕವೇ? ಅದನ್ನು ಮಾನ್ಯ ಸದಸ್ಯರು ಎಲ್ಲಿ ಕಾಣುತ್ತೀವೆ ಎಂದರೆ ಸಮುದ್ರದಲ್ಲಿ ಉಪ್ಪು ಹುಡುಕಿದ ಹಾಗೆ! 500 ಎಕರೆ ಜಮೀನು ಇರತಕ್ಕ ಮನುಷ್ಯ ತನ್ನ ಜಮೀನಿನ ಪಕ್ಕದಲ್ಲಿ ಒಂದೆರಡು ಎಕರೆ ಇರತಕ್ಕ ಸಾಗುವಳಿದಾರ ಇದ್ದರೆ, ಅದರಲ್ಲಿ ಅರ್ಧ ಎಕರೆ ಕೊಡು ಎನ್ನುವುದು ಸ್ವಭಾವಕ್ಕೆ ವಿರುದ್ಧವಾದದ್ದು. ಸರ್ವೇಸಾಧಾರಣವಾಗಿರತಕ್ಕ ಪರಿಸ್ಥಿತಿಗಳನ್ನು ನೋಡಿಕೊಂಡು ಅವುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಶಾಸನಮಾಡುತ್ತೇವೆಯೇ ಹೊರತು ಊಹಾಪೋಹ ಮಾಡಿಕೊಂಡು extreme cases ತೆಗೆದುಕೊಂಡು ಶಾಸನಮಾಡುವುದಿಲ್ಲ. ಒಟ್ಟಿನಲ್ಲಿ ಅರ್ಧ ಜಮೀನು ಬಿಟ್ಟುಕೊಡುವುದನ್ನು ಒಪ್ಪಿಕೊಳ್ಳುತ್ತೇನೆ, ಅಭ್ಯಂತರವಿಲ್ಲ. ಆದರೆ ಆಗಲೇ ಕಾನೂನು ಬಂದು ಇದುವರೆಗೂ ತಿದ್ದುಪಡಿಯನ್ನು ಕಳುಹಿಸದೆ ಅರ್ಧ ಜಮೀನು ಬಿಟ್ಟುಕೊಡಬೇಕೆಂಬುದನ್ನು ಒಪ್ಪಿಕೊಂಡಿದ್ದಾರೆ. ಈಗ 'not being less than half' ಎಂಬುದಾಗಿ ಹೇಳಿರುವುದರಲ್ಲಿ ಅರ್ಧಕ್ಕಿಂತ ಕಮ್ಮಿ ಮಾಡದಂತೆ ಎಂಬುದಾಗಿ ಅರ್ಥ ಬರುತ್ತದೆ. ಸಲೆಕ್ಟ್ ಸಮಿತಿಯವರ ಉದ್ದೇಶ ಅರ್ಧ ಕೊಟ್ಟೇತೀರಬೇಕು ಎಂದು ಇದೆ, ಒಪ್ಪಿಕೊಳ್ಳೋಣ. ಅದಕ್ಕಿಂತ ಕಮ್ಮಿ ಆಗಕೂಡದು. ಮಾನ್ಯ ಸದಸ್ಯರು ಅರ್ಧ ಕೊಡಬೇಕೆಂಬುದಕ್ಕೆ ಒಪ್ಪಿಕೊಂಡಿದ್ದಾರೆ; ಅವರು ಸಲೆಕ್ಟ್ ಸಮಿತಿಯಲ್ಲೂ ಇದ್ದರು. ಅದನ್ನು ಒಪ್ಪಿಕೊಂಡಮೇಲೆ ಅರ್ಧಕ್ಕಿಂತ ಕಮ್ಮಿ ಮಾಡಬೇಕೆಂದರೆ, ಸಮಯ, ಸಂದರ್ಭ, ಸನ್ನಿವೇಶ ನೋಡಿಕೊಂಡು ಸರ್ಕಾರದವರು ಮುಂದೆ ಹೋಗಬಹುದು.

ಶ್ರೀ ಕಡಿದಾಳ್ ಮಂಜಪ್ಪನವರು.—ಎರಡು ಎಕರೆ ಒಟ್ಟಿನಲ್ಲಿದ್ದರೆ ಜಮೀನ್‌ದಾರ ಅರ್ಜಿ ಹಾಕಿದ ಪಕ್ಷದಲ್ಲಿ ಅದನ್ನು ಪೂರ ಬಿಡಿಸಿಕೊಡಬಹುದು ಎಂದು ನನ್ನ ಅಭಿಪ್ರಾಯ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಅದಕ್ಕೆ ತೀವ್ರವಾದ ಪ್ರತಿಭಟನೆಯೂ ಇದೆ. ಜಮೀನುದಾರ ತಾನೇ ಸ್ವಂತ ಜಮೀನು ಸಾಗುವಳಿ ಮಾಡಬೇಕಾದ ಪ್ರಮೇಯ ಬಂದರೆ ಆ ಜಮೀನಿನಲ್ಲಿ ಅರ್ಧಭಾಗ ಬಿಟ್ಟುಕೊಡಬೇಕೆಂಬುದು ನ್ಯಾಯವೇ ಅನ್ಯಾಯವೇ ಎಂಬ ಬಗ್ಗೆ ವಾದ ವಿವಾದ ಮಾಡಬೇಕೆಂದರೆ ಒಂದು ಘಂಟೆ ವಾದ ಮಾಡಬಲ್ಲೆ. ಆದರೆ ಅದು ಅನಾವಶ್ಯಕ. ಒಟ್ಟಿನಲ್ಲಿ ದೇಶದ ಪರಿಸ್ಥಿತಿ, ಜನರ ಹಿತ ಇದೆಲ್ಲವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಕೆಲಸಮಾಡಬೇಕಾಗಿದೆಯೇ ಹೊರತು ಮತ್ತೆ ಬೇರೆಯಲ್ಲ. ಸ್ವಂತ ಸಾಗುವಳಿ ಮಾಡುವುದಕ್ಕೆ ಜಮೀನು ಪಡೆಯಬೇಕೆಂದು ಇಚ್ಛಿಸಿದ್ದರೆ ಅದು ನ್ಯಾಯವಾಗಿದೆ. ಒಂದು ಉದಾಹರಣೆ ಹೇಳುತ್ತೇನೆ. ಒಬ್ಬ ಹುಡುಗನ ತಂದೆ ಸತ್ತುಹೋಗುತ್ತಾನೆ. ಅವನಿದ್ದಾಗ ಎಷ್ಟು ಜಮೀನು ಮಾಡುತ್ತಿದ್ದರೋ ಅಷ್ಟು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅಂಥ ಸಂದರ್ಭದಲ್ಲಿ 3-4 ಎಕರೆ ಸ್ವಂತ ಸಾಗುವಳಿಗೆ ಇಟ್ಟುಕೊಂಡು ಜೀವನ ಮಾಡುತ್ತಾನೆ. ಆತನು ವಯಸ್ಸಿಗೆ ಬಂದಮೇಲೆ ನನ್ನ ಜಮೀನು ನನಗೆ ಬಿಟ್ಟುಕೊಡಿ ಎಂದರೆ, ಬಿಟ್ಟುಕೊಡುವುದಿಲ್ಲ ಎರಡು ಎಕರೆ ಮಾತ್ರ ನಿನ್ನದು ಎಂದರೆ ಏನು ನ್ಯಾಯ ಎಂದು ಕೇಳುತ್ತಾನೆ. ಎರಡನೆಯದು ಇದರಲ್ಲಿ ಮೂಲಭೂತ ಹಕ್ಕು ಅಡಕವಾಗಿದೆ ಎಂಬುದನ್ನು ಪರ್ಯಾಲೋಚಿಸಬೇಕಾಗುತ್ತದೆ. ಆದ್ದರಿಂದ ಹೀಗೇ ನಾವು ವಿಷಯಗಳನ್ನು ಚರ್ಚೆಮಾಡುತ್ತಾ ಹೋದರೆ for and against ಬೇಕಾದಷ್ಟು ಇದೆ. ನಾವು ವಾದವಿವಾದಗಳಿಗೆ ಹೋಗುವುದು ಬೇಡ. ಒಟ್ಟಿನಲ್ಲಿ ಸಾಗುವಳಿದಾರನಿಗೆ ಒಂದು ಹಕ್ಕು ಇರಬೇಕು. ಅವನಿಗೆ ತೊಂದರೆ ಆಗಬಾರದು ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಸಲಹೆ ಮಾಡಿದ್ದೇನೆ. ಸಾಗುವಳಿದಾರರಿಗೆ ತೊಂದರೆ ಮಾಡಬೇಕೆಂಬ ಅಭಿಪ್ರಾಯದಿಂದ ಈ ತಿದ್ದುಪಡಿಯನ್ನು ತಂದಿದ್ದೇನೆ ಎಂದು ಭಾವಿಸುವುದು ಸರಿಯಲ್ಲವೆಂದು ಹೇಳಿ ಈ ತಿದ್ದುಪಡಿಯನ್ನು ಅನುಮೋದಿಸಬೇಕೆಂದು ಪ್ರಾರ್ಥನೆಮಾಡುತ್ತೇನೆ.

Mr. SPEAKER.—Amendment moved:

"That for sub-clause (2) the following sub-clause be substituted:—

'2. The tenancy shall be terminated in respect only of such area not being less than one half of the area of cultivable land held by the tenant under such landlord as my be determined by such authority and in such manner as may be prescribed after a period of not less than one year from the date of notice expiring with the end of the year'."

ಶ್ರೀ ಕೆ. ಸಂಪಂಗಿರಾಮಯ್ಯನವರು (ಕೋಲಾರ ಜಿಲ್ಲೆ).—ಈ ತಿದ್ದುಪಡಿಯ ವಿಚಾರದಲ್ಲಿ ಒಂದು ದೊಡ್ಡ ಅನುಮಾನ ಕಾಣುತ್ತಾ ಇದೆ. ಒಬ್ಬನು ನಾಲ್ಕು ಎಕರೆ ಇಟ್ಟುಕೊಂಡಿದ್ದು ಅದನ್ನು ಗುತ್ತಿಗೆಗೆ ಅಥವಾ ವಾರಕ್ಕೆ ಕೊಟ್ಟಿದ್ದು ಸ್ವಲ್ಪ ಭಾಗ ವಾಪಸ್ಸು ಕೇಳುವಾಗ ಒಂದು ಎಕರೆ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಅವಕಾಶವಿರುವುದಿಲ್ಲ. ಈ ತಿದ್ದುಪಡಿ ಒಪ್ಪಿಕೊಂಡಲ್ಲಿ ಎರಡು ಎಕರೆ ಕಡ್ಡಾಯವಾಗಿ ತೆಗೆದುಕೊಳ್ಳಲೇಬೇಕು ಎಂಬುದು ವ್ಯಕ್ತಪಡುತ್ತದೆ. ಒಂದು ಎಕರೆ ಇಟ್ಟುಕೊಂಡು ಸಾಗುವಳಿ ಮಾಡುವುದಕ್ಕೆ ಮಾತ್ರ ಶಕ್ತಿ ಇರುತ್ತದೆ. ಅಂಥವನಿಗೆ ಎರಡು ಎಕರೆ ತೆಗೆದುಕೊಂಡರೆ ತೆಗೆದುಕೋ ಇಲ್ಲದಿದ್ದರೆ ಇಲ್ಲ ಎಂಬುದಾಗಿ ಹೇಳುವುದಾದರೆ ಬಲಾತ್ಕಾರ ಮಾಡಿದಹಾಗಾಗುತ್ತದೆ. ಅದರಿಂದ ಸ್ವಲ್ಪ ಕಷ್ಟವಾಗುತ್ತದೆ. ಇದಕ್ಕೆ ಪರಿಹಾರವೇನು ಎಂದು ಕೇಳುತ್ತೇನೆ.

*ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ).—ಅದೂ ಅಲ್ಲದೆ 16ನೇ ಸೆಕ್ಷನ್‌ನಲ್ಲಿ ಹೇಳಿರುವ ಪ್ರಕಾರ 12 ವರ್ಷಕ್ಕೆ ಮೇಲ್ಪಟ್ಟು ಜಮೀನು ಸಾಗುವಳಿ ಮಾಡುತ್ತಿದ್ದು ಒಂದುವೇಳೆ 13ನೇ ವರ್ಷದಿಂದ ಜಮೀನ್‌ದಾರ ತನಗೇ ಪೂರ್ತಿ ಜಮೀನು ಬಿಟ್ಟುಕೊಡಬೇಕೆಂದರೆ ಆ ರೈತನ ಸ್ಥಿತಿಗತಿ ಏನಾಗುತ್ತದೆಂಬುದನ್ನು ಯೋಚನೆಮಾಡಬೇಕಾಗುತ್ತದೆ. 12 ವರ್ಷ ಆ ಜಮೀನನ್ನೇ ನಂಬಿ, ಬದುಕಿ, ಬಾಳಿ, ಆ ನಂತರ ಅದನ್ನು ಬಿಟ್ಟುಹೋಗು ಎಂದರೆ ರೈತನ ದೃಷ್ಟಿಯಿಂದ ಬಹಳ ತೊಂದರೆಯಾಗುತ್ತದೆ. ಶ್ರೀ ಚೆನ್ನಬಸಪ್ಪನವರು ಹೇಳಿದ ಪರಿಸ್ಥಿತಿ ಎಲ್ಲಾ ಕಡೆಯೂ ಇದೆ. ಒಂದುವೇಳೆ ಜಮೀನಿನ ಮಾಲಿಕ ಮೈನರ್ ಆಗಿದ್ದು, ಮೈನಾರಿಟಿ ಕಳೆದನಂತರ ಜಮೀನು ತೆಗೆದುಕೊಳ್ಳುವುದಕ್ಕೆ ಅಡ್ಡಿ ಇಲ್ಲ. ಆದರೆ ಎಲ್ಲಾ ಸಂದರ್ಭದಲ್ಲೂ ಈ ತಿದ್ದುಪಡಿಯನ್ನು ಅನ್ವಯಿಸುವುದಾದರೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಈ ತಿದ್ದುಪಡಿ "Not more than" ಎಂಬುದಾಗಿ ಇದ್ದರೆ ಒಪ್ಪಿಕೊಳ್ಳುವುದಕ್ಕೆ ಸಾಧ್ಯವೆಂದು ಹೇಳುತ್ತೇನೆ.

The Hon'ble Sri H. SIDDAIYA.—I may accept this amendment provided the mover will change these words and substitute for "under such landlord" the words "under the said landlord" to make it very clear.

Sri H. M. CHANNABASAPPA.—I accept the change proposed.

Mr. SPEAKER.—The question is:

"That for sub-clause (2) the following sub-clause be substituted:

'2. The tenancy shall be terminated in respect only of such area not being less than one half of the area of cultivable land held by the tenant under the said landlord as may be determined by such authority and in such manner as may be prescribed after a period of not less than one year from the date of notice expiring with the end of the year'."

The motion was adopted.

Mr. SPEAKER.—The question is:

"That clause 16, as amended, stand part of the Bill."

The motion was adopted.

Clause 16, as amended, was added to the Bill.

Mr. SPEAKER.—Clause 17.

*Sri T. MADIAH GOWDA (Bangalore District—General).—Sir, I move:

"That for the words 'Under the last preceding section' the words "under sub-section (2) of section 15' shall be substituted."

Sir, clause 17 deals with tenancy deemed to be renewed for five years if the tenant is allowed to hold over. That is the subject matter. The question of holding over is mentioned only in sub-clause (2) of clause 15. Clause 16 was added by the Select Committee and it is a new clause altogether. Before the Bill was referred to the Select Committee, this clause was not existing. That is why in clause 17 it was put as "under the last preceding section". Since clause 16 is added it ought to have been put as "under sub-section (2) of section 15". It is a clerical mistake and it is by oversight that it was not corrected at the time of the meeting of the Select Committee. This amendment is absolutely necessary. Since it is more or less a clerical mistake, I am certain that nobody will have any objection whatsoever for the small amendment.

Mr. SPEAKER.—Amendment moved :

"That for the words 'under the last preceeding section' the words 'under sub-section (2) of section 15.' shall be substituted'."

The Hon'ble Sri H. SIDDAIYA.—This is a *bona fide* mistake and I accept the amendment.

Mr. SPEAKER.—The question is :

"That for the words 'under the last preceding section' the words 'under sub-section (2) of section 15' shall be substituted."

The motion was adopted.

Sri H. M. CHANNABASAPPA.—I do not move any of my amendments to Clause 17.

Mr. SPEAKER.—The question is :

"That Clause 17 as amended, stand part of the Bill".

The motion was adopted.

Clause 17, as amended, was added to the Bill.

Mr. SPEAKER.—Clauses 18 to 21, both inclusive. The question is :

"That Clauses 18 to 21, both inclusive, stand part of the Bill".

The motion was adopted.

Clauses 18 to 21, both inclusive, were added to the Bill.

Mr. SPEAKER.—Clause 22. The Hon'ble Member Sri Channabasappa has an amendment to delete the clause 22. But he cannot move such an amendment. If at all, he can oppose the clause itself.

Sri H. M. CHANNABASAPPA.—I do not propose to move the amendment.

Mr. SPEAKER.—The question is :

"That Clause 22 stand part of the Bill."

The motion was adopted.

Clause 22 was added to the Bill.

Mr. SPEAKER.—Clauses 23 and 24. The question is :

"That Clauses 23 and 24 stand part of the Bill.

The motion was adopted.

Clauses 23 and 24 were added Bill.

Mr. SPEAKER.—Clause 25.

Sri H. M. CHANNABASAPPA.—I do not propose to move my amendment to Clause 25.

Mr. SPEAKER.—The question is :

"That Clause 25 stand part of the Bill".

The motion was adopted.

Clause 25 was added to the Bill.

Mr. SPEAKER.—Clause 26.

Sri H. M. CHANNABASAPPA.—I do not propose to move my amendment to Clause 26.

Mr. SPEAKER.—The question is :

"That Clause 26 stand part of the Bill".

The motion was adopted.

Clause 26 was added to the Bill.

Mr. SPEAKER.—Clause 27.

Sri H. M. CHANNABASAPPA.—I do not propose to move my amendment to clause 27.

Mr. SPEAKER.—The question is :

"That Clause 27 stand part of the Bill".

The motion was adopted.

Clause 27 was added to the Bill.

Mr. SPEAKER.—Clause 28. The question is :

"That Clause 28 stand part of the Bill".

The motion was adopted.

Clause 28 was added to the Bill.

Mr. SPEAKER.—Clause 29.

Sri H. M. CHANNABASAPPA.—I move :

"That in sub-clause (1) of clause 29 add the words "or landlord" after the word "tenant".

Clause 29 runs as follows :

"A tenant entitled to possession of any land or dwelling house under any of the provisions of this Act, may apply in writing for such possession, to the Amildar. The application shall be made in such form as may be prescribed."

ಇದರ ಪ್ರಕಾರ ಯಾರಾದರೂ ಸಾಗುವಳಿದಾರ ಜಮೀನನ್ನು ಅಥವಾ ಮನೆಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬೇಕಾದರೆ ಅಮಲ್ದಾರರಿಗೆ ಅರ್ಜಿ ಹಾಕಿಕೊಳ್ಳಬೇಕೆಂದು ವಿಧಾಯಕವಾಗಿದೆ. ಆದರೆ ಅದೇ ರೀತಿ ಜಮೀನ್ದಾರನಾಗಿರತಕ್ಕವನು ತನ್ನ ಮನೆಯನ್ನು ಅಥವಾ ಜಮೀನನ್ನು ಬಿಡಿಸಿಕೊಳ್ಳಬೇಕಾದರೆ ಯಾವ ಕ್ರಮ ಕೈಕೊಳ್ಳಬೇಕೆಂಬುದನ್ನು ಇಲ್ಲಿ ಕಾನೂನಿನಲ್ಲಿ ತಿಳಿಸಿಲ್ಲ. ಆದ್ದರಿಂದ ಈಗ ಸಾಗುವಳಿದಾರರಿಗೆ ಯಾವ ವ್ಯವಸ್ಥೆ ಮಾಡಿಕೊಟ್ಟಿದೆಯೋ ಅದೇ ವ್ಯವಸ್ಥೆಯನ್ನು ಜಮೀನ್ದಾರನಿಗೂ ಅನ್ವಯಿಸಬೇಕೆಂದು ಹೇಳಿ ಇಲ್ಲಿ ಸೆಕ್ಷನ್ನಿನಲ್ಲಿ 'tenant' ಎನ್ನುವುದರ ಜೊತೆಗೆ 'or landlord' ಎಂಬುದನ್ನು ಸೇರಿಸಿದರೆ ಸರಿಹೋಗುತ್ತದೆ. ಆಗ್ಗೆ ಉಭಯತ್ರರಿಗೂ ಒಂದೇ ಸಮನಾದ ಅವಕಾಶ ಕೊಟ್ಟಹಾಗಾಗುತ್ತದೆ. ಮಾನ್ಯ ಸಚಿವರು ಇದನ್ನು ಒಪ್ಪಿಕೊಳ್ಳಬೇಕೆಂದು ಹೇಳಿ, ಸಭಾಸದಸ್ಯರು ಇದನ್ನು ಸಹಾನುಭೂತಿಯಿಂದ ಸ್ವೀಕರಿಸಬೇಕೆಂದು ಪ್ರಾರ್ಥಿಸುತ್ತೇನೆ.

Mr. SPEAKER.—Amendment moved:

"That in sub-clause (1) of Clause 29 add the words "or landlord" after the word "tenant".

The Hon'ble Sri H. SIDDAIYA.—I accept the amendment.

Mr. SPEAKER.—The question is :

"That in sub-clause (1) of Clause 29 add the words "or landlord" after the word "tenant".

The motion was adopted.

Mr. SPEAKER.—The question is:

"That Clause 29, as amended, stand part of the Bill".

The motion was adopted.

Clause 29, as amended, was added to the Bill.

Mr. SPEAKER.—Clauses 30 and 31. The question is :

"That Clauses 30 and 31 stand part of the Bill".

The motion was adopted.

Clauses 30 and 31 were added to the Bill.

Mr. SPEAKER.—Clause 32.

Sri H. M. CHANNABASAPPA.—I do not propose to move my amendment to Clause 32.

Mr. SPEAKER.—The question is :

"That Clauee 32 stand part of the Bill".

The motion was adopted.

Clause 32 was added to the Bill.

Mr. SPEAKER.—Clauses 33 to 40, both inclusive.

Sri T. MADIAH GOWDA (Bangalore District—General).—In Clause 33 there must be a full-stop at the end. A colon and dash are put ; this may be corrected.

Mr. SPEAKER.—The question is :

"That clauses 33 to 40, both inclusive, stand part of the Bill"

The motion was adopted.

Clauses 33 to 40, both inclusive, were added to the Bill.

Mr. SPEAKER.—Clause 41.

***Sri H. M. CHANNABASAPPA.**—My amendment is like this :

"The following proviso shall be added at the end of the clause :—

"Provided however that the Amildar' Assistant Commissioner or the Deputy Commissioner as the case might be shall pass such orders as they deem fit on all applications or appeals filed before them under the provisions of this Act within one month from the date of such application or appeal."

ಇದನ್ನು ನಾನು ಸೂಚಿಸಿದ್ದರ ಉದ್ದೇಶ ಇಷ್ಟು: ಸ್ವಲ್ಪಮಟ್ಟಿಗೆ ಇಲ್ಲಿ ಕೊಟ್ಟಿರುವ ಕಾಲಾವಧಿಯನ್ನು ಜಾಸ್ತಿ ಮಾಡಬೇಕು ಎಂದು. ಮಾನ್ಯ ಮಂತ್ರಿಗಳು ನಿಬಂಧನೆಗಳನ್ನು ರಚಿಸುವುದರಲ್ಲಿಯೇ ಇದಕ್ಕೆ ಅವಕಾಶ ಮಾಡುವುದಕ್ಕೆ ಸಾಧ್ಯವಿರುವುದರಿಂದ, I do not propose to move that amendment.

Mr. SPEAKER.—The question is :

"That Clause 41 stand part of the Bill".

The motion was adopted.

Clause 41 was added to the Bill.

Mr. SPEAKER.—Clause 42.

The Hon'ble Sri H. SIDDAIYA.—With your permission Sir, I would like a little correction to be made. There is a mistake. In sub-clause (i) under item 1, instead of 27 (2), it should be 26 (2). While re-numbering, this is lost sight of, it may be so substituted.

Mr. SPEAKER.—Such corrections will be attended to.

The question is :

"That Clause 42 stand part of the Bill".

The motion was adopted.

Clause 42 was added to the Bill.

Mr. SPEAKER.—Clause 43.

*Sri H. M. CHANNABASAPPA.—I propose to move this amendment to Clause 43 Sir. This is only a consequential amendment and therefore there should be no difficulty in either the Government accepting it and this House supporting it. Clause 43 reads as follows :

"43. Government may make rules for carrying out the purposes of this Act."

This clause enables the Government to frame rules. Since we have just adopted an amendment to Clause 16, we have also to provide for making rules to determine to what extent and in what manner the land is to be given to the landlord in case the landlord wants it for cultivating it personally. Therefore, my amendment is as follows and I move it :—

"That in sub-clause (2) of Clause 43 the items (e), (f), (g) and (h) be re-lettered as (f), (g), (h) and (i) and before (f) as so relettered the following item be added as item (e) :—

'the authority and the manner of determining the area in respect of which tenancy may be terminated under item (b) of sub-section 2 of Section 16.' ".

Since this is a consequential amendment and since the Government have got to take power to terminate the tenancy under 16 (b), I feel there is no difficulty in Government accepting this amendment. I therefore request that this amendment may be accepted.

Mr. SPEAKER.—Amendment moved:

"That in sub-clause (2) of Clause 43 the items (e), (f), (g) and (h) be re-lettered as (f), (g), (h) and (i) and before (f) as so relettered the following item be added as item (e):—

'the authority and the manner of determining the area in respect of which tenancy may be terminated under item (b) of sub-section (2) of Section 16.' "

Sri K. SAMPANGI RAMIAH.—I want an explanation from the Hon'ble Mover Sir. Item (h) says :

"any other matter which is or may be prescribed under this Act."

This item gives power to the Government to frame rules in all matters for the purpose of giving effect to this Act. As such I do not see any reason why this amendment should be brought in to include another item.

Sri H. M. CHANNABASAPPA.—This is my explanation Sir. When we have definitely said in Clause 16 that the tenancy shall be terminated in respect of a land held by the tenant under a landlord as may be determined by such authority and in such manner as may be prescribed, there is no harm in making a definite provision under Clause 43 for carrying out that purpose.

The Hon'ble Sri H. SIDDAIYA.—I accept the amendment, Sir.

Mr. SPEAKER.—The question is :

"That in sub-Clause (2) of Clause 43 the items (e), (f), (g) and (h) be re-lettered as (f), (g), (h) and (i) and before (f) as so relettered the following item be added as item (e) :—

'the authority and the manner of determining the area in respect of which tenancy may be terminated under item (b) of sub-section (2) of Section 16.' ".

The motion was adopted.

Mr. SPEAKER.—The question is :

"That Clause 43, as amended, stand part of the Bill."

The motion was adopted.

Clause 43, as amended, was added to the Bill.

Mr. SPEAKER.—Clauses 44, 45, 46 and 47. The question is:

"That Clauses 44, 45, 46 and 47 stand part of the Bill."

The motion was adopted.

Clauses 44, 45, 46 and 47 were added to the Bill.

Mr. SPEAKER.—Clause 48.

***Sri Kadidal MANJAPPA** (Shimoga District—General).—My amendment is to the following effect:—

"That in item (a) between the words 'to lands' and 'held', the words 'belonging to and' shall be inserted."

This clause provides for certain exemptions from the operation of the Act. It says:—

"Nothing in the foregoing provisions of this Act shall apply—

(a) to lands held on lease from the Government or the Central Government, a local authority or a co-operative society registered or deemed to be registered under the Mysore Co-operative Societies Act, 1948; ...."

I was telling yesterday, Sir, that in malnad at least one-fourth of the land belongs to muzrai institutions—temples and mutts. Some of these mutts and temples are under the management of muzrai officers and muzrai officers are leasing out lands on behalf of these institutions. Though the lands do not belong to the Government still they are deemed to be held on lease from the Government. I have no objection if leases pertaining to lands belonging to Government are exempted from the operation of this Act. But I have every objection if lands belonging to muzrai or other institutions and which are leased, are exempted. Therefore I have suggested this amendment: after the words 'lands' the words 'belonging to' may be added. As amended the clause will read like this:

"Nothing in the foregoing provisions of this Act shall apply—

(a) to lands belonging to and held on lease from the Government or the Central Government, a local authority or a co-operative society registered or deemed to be registered under the Mysore Co-operative Societies Act, 1948;"

So, if the lands belong to Government, this Act will not apply. But if the lands are leased by Government officers on behalf of other institutions, then this Act will apply. That is the effect of my amendment.

Mr. SPEAKER.—Amendment moved:

"That in Clause 48 in item (a) between the words 'to lands' and 'held' the words 'belonging to and' shall be inserted."

The Hon'ble Sri H. SIDDAIYA.—I have no objection. I accept the amendment, Sir.

Mr. SPEAKER.—The question is:

"That in clause 48 in item (a) between the words 'to lands' and 'held' the words 'belonging to and' shall be inserted."

The motion was adopted.

Mr. SPEAKER.—The question is:

"That Clause 48, as amended, stand part of the Bill."

The motion was adopted.

Clause 48, as amended, was added to the Bill.

Mr. SPEAKER.—Clause 1. The question is:

"That Clause 1 stand part of the Bill."

The motion was adopted.

Clause 1 was added to the Bill.

Mr. SPEAKER.—Title and Preamble. The question is:

"That the Title and the Preamble stand part of the Bill."

The motion was adopted.

The Title and the Preamble were added to the Bill.

Motion to pass.

The Hon'ble Sri H. SIDDAIYA.—Sir, I move:

"That the Mysore Tenancy Bill, 1951, as amended, be passed."

While moving this motion to pass, I thank the Members of this House and particularly the Members of the Select

Committee for their very kind support. Sir, I move that the Bill, as amended, be passed.

Mr. SPEAKER.—The question is :

"That the Mysore Tenancy Bill, 1951, as amended, be passed."

The motion was adopted.

The Mysore Town Municipalities (Amendment) Bill, 1951.

Motion to consider.

The Hon'ble Sri R. CHENNIGARAMIAH (Minister for Local Self-Government).—Sir, I move :

"That the Mysore Town Municipalities (Amendment) Bill, 1951, be taken into consideration."

ಈ ತಿದ್ದುಪಡಿಯ ಸಂಬಂಧದಲ್ಲಿ ಕೆಲವು ಅಂಶಗಳನ್ನು ಮಾನ್ಯ ಸದಸ್ಯರು ಗಮನದಲ್ಲಿಟ್ಟುಕೊಳ್ಳಬೇಕು, ಇದರಲ್ಲಿ ಚರ್ಚಾಸ್ಪದವಾದ ವಿಷಯವೇನೂ ಇಲ್ಲ. ಈಗಿರತಕ್ಕ ಕಾನೂನಿನಲ್ಲಿ ಮುನಿಸಿಪಲ್ ಕೌನ್ಸಿಲ್‌ಗಳಲ್ಲಿ ಸ್ಥಾನಗಳು ಖಾಲಿ ಬಿದ್ದರೆ ಮೂರು ತಿಂಗಳೊಳಗೆ ಭರ್ತಿಮಾಡಬೇಕೆಂದಿದೆ. ಮೊದಲಿದ್ದ ಕಾನೂನಿನ ಪ್ರಕಾರ ಮೂರು ತಿಂಗಳೊಳಗೆ ಭರ್ತಿಮಾಡಬೇಕಾಗಿರಲಿಲ್ಲ. ಹೊಸ ಮಹಾ ಚುನಾವಣೆಗಳು ಮೂರು ತಿಂಗಳಿಗೆ ಮೊದಲೇ ಆಗುತ್ತದೆಂದಿದ್ದುದರಿಂದ ಖಾಲಿ ಬಿದ್ದಿದ್ದ ಕೆಲವು ಸ್ಥಾನಗಳನ್ನು ಈ ಮಧ್ಯೆ ಭರ್ತಿಮಾಡಬೇಕಾಗಿಲ್ಲವೆಂಬ ಅಭಿಪ್ರಾಯ ಇತ್ತು. ಆದರೆ ಇತ್ತೀಚೆಗೆ ಮಹಾ ಚುನಾವಣೆಗಳನ್ನು ಅಷ್ಟು ಬೇಗ ನಡೆಸುವುದಕ್ಕೆ ಸಾಧ್ಯವಿಲ್ಲವೆಂದೂ ಖಾಲಿ ಬಿದ್ದ ತಾರೀಖಿನಿಂದ ಆರು ತಿಂಗಳವರೆಗಾಗಬಹುದೆಂದೂ ತಿಳಿಯಬಂದದ್ದರಿಂದ ಈ ಸ್ಥಾನಗಳನ್ನು ಭರ್ತಿಮಾಡಬೇಕಾಗಿಲ್ಲವೆನ್ನುವುದನ್ನು ಮತ್ತೆ ತಿದ್ದುಪಡಿಮಾಡಿ ಮೂರು ತಿಂಗಳೊಳಗೇ ಮಾಡಬೇಕೆಂದು ಮಾಡಿದ್ದೇವೆ. ಈಗಿರುವ ಕಾನೂನಿನ ಪ್ರಕಾರ ಖಾಲಿಬಿದ್ದಿರುವ ಸ್ಥಾನಗಳನ್ನು ಭರ್ತಿ ಮಾಡಬೇಕಾದರೆ ವಯಸ್ಕರ ಮತದಾನ ಪದ್ಧತಿಯ ಮೇರೆಗೆ ಮಾಡಬೇಕು. ಹಿಂದಿನ ಕಾನೂನಿನ ಪ್ರಕಾರ constitute ಆಗಿರುವ ಸಿಟಿ ಮುನಿಸಿಪಾಲಿಟಿ ಮತ್ತು ಟೌನ್ ಮುನಿಸಿಪಾಲಿಟಿಗಳ ಚುನಾವಣೆ ನಿಬಂಧನೆಗಳು ಬೇರೆಯಾಗಿವೆ. ನಾಮಿನೇಷನ್ ಮಾಡುವ ಸ್ಥಾನ ಖಾಲಿಬಿದ್ದರೆ ಸರ್ಕಾರದವರೇ ನಾಮಿನೇಟ್ ಮಾಡಬೇಕು, ಚುನಾವಣೆಯಾಗಬೇಕಾದ ಸ್ಥಾನಖಾಲಿ ಬಿದ್ದರೆ ಚುನಾವಣೆ ಮಾಡಿಯೇ ಭರ್ತಿಮಾಡಬೇಕು. ಚುನಾವಣೆಯಿಂದ ಭರ್ತಿಮಾಡಬೇಕಾದ ಸ್ಥಾನ ಖಾಲಿ ಇದ್ದರೆ ವಯಸ್ಕರ ಮತದಾನ ಪದ್ಧತಿಯ ಪ್ರಕಾರ ಚುನಾವಣೆಮಾಡಬೇಕು. ಆದುದರಿಂದ ಈಗ ಹಿಂದಿನ ಕಾನೂನಿನ ಪ್ರಕಾರ ಖಾಲಿ ಬಿದ್ದಿರುವ ಸ್ಥಾನಗಳನ್ನು ಭರ್ತಿಮಾಡಬಹುದೆಂದು ಹೊಸದಾಗಿ ಒಂದು ತಿದ್ದುಪಡಿಮಾಡಿ ಇದನ್ನು ಸಭೆಯ ಮುಂದಿಟ್ಟಿದೆ.

ಇನ್ನು 4ನೆಯ ಕ್ಲಾಜನ್ನು ತೆಗೆದು 5ನೆಯ ಕ್ಲಾಜನ್ನು 4ನೆಯ ಕ್ಲಾಜಾಗಿ ಮಾಡುವುದು ಬರಿಯ consequential change. ಈ ತಿದ್ದುಪಡಿಗೆ ಸಭೆ ಒಪ್ಪಿಗೆ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

Mr. SPEAKER.—Motion moved.

"That the Mysore Town Municipalties (Amendment), 1951 Bill, be taken into consideration"

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಸ್ವಾಮಿ, ಈಗ ತಾವು ಮಂಡಿಸಿರುವುದು ಹಂಗಾಮಿಯ ಕಾನೂನೇ ಅಥವಾ ಖಾಯಂ ಕಾನೂನೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಜನರಲ್ ಎಲೆಕ್ಷನ್ ಬರುವ ವರೆಗೆ ಮಾತ್ರ ಇರುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ಈಗ ತಾವು ಹೇಳಿರತಕ್ಕ ಚುನಾವಣೆಗಳೇನು ಹಿಂದಿನ ಪ್ರಕಾರ ನಡೆಯಬೇಕೋ ಅಥವಾ ವಯಸ್ಕರ ಮತದಾನ ಪದ್ಧತಿ ಮೇರೆ ನಡೆಯಬೇಕೋ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹಿಂದೆ ಜಾರಿಯಲ್ಲಿದ್ದ ಕಾನೂನು ರೀತ್ಯಾ ಟೌನ್ ಮುನಿಸಿಪಾಲಿಟಿಗಳೂ, ಮೇಜರ್ ಮುನಿಸಿಪಾಲಿಟಿಗಳೂ ಮತ್ತು ಮೈನರ್ ಮುನಿಸಿಪಾಲಿಟಿಗಳೂ ಎಂದು ಇದ್ದುವು. ಈಗೆಲ್ಲಾ ಇವುಗಳು ಒಂದೇ ಆಗಿರುತ್ತವೆ ಅಂದರೆ ಎಲ್ಲವೂ ಟೌನ್ ಮುನಿಸಿಪಾಲಿಟಿಗಳೇ ಆಗಿರುತ್ತವೆ. ಇವುಗಳಿಗೆಲ್ಲಾ ಚುನಾವಣೆಯನ್ನು ವಯಸ್ಕರ ಮತದಾನ ಪದ್ಧತಿ ರೀತಿಯ ಮಾಡಬೇಕಾಗಿರುತ್ತೆ. ಈಗ ಇರತಕ್ಕ ಮುನಿಸಿಪಾಲಿಟಿಗಳಲ್ಲಿ ಕಾರಣಾಂತರಗಳಿಂದ ಯಾರಾದರೂ ರಾಜೀನಾಮೆ ಕೊಡತಕ್ಕ ಇತ್ಯಾದಿ ಕಾರಣಗಳಿಂದ ಅಂಥಾ ಸಂಸ್ಥೆಯಲ್ಲಿ ಸ್ಥಾನಗಳು ಖಾಲಿಬಿದ್ದರೆ ಅಂಥಾ ಖಾಲಿಬಿದ್ದ ಸ್ಥಾನಗಳಿಗೆ, ಹಿಂದಿನ ಆಕ್ಟು ಪ್ರಕಾರ 3 ತಿಂಗಳೊಳಗಾಗಿ ಅವುಗಳನ್ನು ಭರ್ತಿಮಾಡಬೇಕೆಂದು ಹೇಳಲಾಗಿತ್ತು. ಈಗ ಹಾಗೆ ಹೇಳಿರತಕ್ಕದ್ದಕ್ಕೆ ಸರ್ಕಾರದವರು ಒಂದು ತಿದ್ದುಪಡಿಯನ್ನು ಮಾಡಬೇಕೆಂದಿದ್ದಾರೆ. ಆದಕ್ಕಾಗಿ ಈ ತಿದ್ದುಪಡಿಯನ್ನು ತರಲಾಗಿದೆ. ಹಿಂದೆ 3 ತಿಂಗಳಲ್ಲಿ ಭರ್ತಿಮಾಡಬೇಕೆಂದು ಹೇಳಿದುದಕ್ಕೆ ಕಾರಣ, ಆಗ ಜನರಲ್ ಎಲೆಕ್ಷನ್ ಡಿಸೆಂಬರ್ ತಿಂಗಳಿನಲ್ಲಿ ನಡೆಯಬಹುದೆಂಬ ಅಂದಾಜಿತ್ತು. ಅದರಂತೆ ತಿದ್ದುಪಡಿಮಾಡಲಾಗಿತ್ತು. ಆದರೆ ಜನರಲ್ ಎಲೆಕ್ಷನ್ ಡಿಸೆಂಬರ್ ತಿಂಗಳಿಂದ ಮುಂದಕ್ಕೆ ಹಾಕಲ್ಪಟ್ಟ ಕಾರಣ, ಆ ವಾಯಿದೆ ಪೂರೈಸಿ ಬಹಳ ದಿನಗಳಾಗುತ್ತವೆಯಾದಕಾರಣ ಖಾಲಿ ಬಿದ್ದಿರತಕ್ಕ ಸ್ಥಾನಗಳಿಗೆ ಹೊಸದಾಗಿ ಸದಸ್ಯರನ್ನು ಭರ್ತಿಮಾಡಲು ಈಗ ಅವಕಾಶಕೊಡಲಾಗಿದೆ. ಇವುಗಳನ್ನು ಭರ್ತಿಮಾಡಬೇಕಾದರೆ ಹಿಂದೆ ಇದ್ದ ಆಕ್ಟು ಪ್ರಕಾರ ಮೈನರ್ ಮುನಿಸಿಪಾಲಿಟಿಯಲ್ಲಿ ಏನಾದರೂ ಸ್ಥಾನ ಖಾಲಿ ಬಿದ್ದರೆ, ಅಥವಾ ಟೌನ್ ಮುನಿಸಿಪಾಲಿಟಿಯಲ್ಲಿ ಸ್ಥಾನ ಖಾಲಿಬಿದ್ದಿದ್ದರೆ ಅದನ್ನು property qualification ಪ್ರಕಾರ ಮಾಡಬಹುದಾಗಿತ್ತು. ಆದರೆ ಈಗ ಅವೆಲ್ಲವೂ ಟೌನ್ ಮುನಿಸಿಪಾಲಿಟಿಗಳೇ ಆಗಿವೆ. ನಾಮಕರಣ ಸದಸ್ಯರ ಸ್ಥಾನ ಖಾಲಿಬಿದ್ದರೆ, ಅಂಥಾ ಸ್ಥಾನಕ್ಕೆ ಸರ್ಕಾರದವರು ಪುನಃ ನಾಮಿನೇಷನ್ ಮೂಲಕ ಭರ್ತಿಮಾಡಬಹುದು. ಹಾಗೆಯೇ ಹಿಂದೆ ಕಾನ್ಸ್ಟಿಟ್ಯೂಟ್ ಆಗಿದ್ದಂಥಾ ಮೈನರ್ ಮುನಿಸಿಪಾಲಿಟಿಯಲ್ಲೇನಾದರೂ ನಾಮಕರಣ ಮಾಡಲ್ಪಟ್ಟ ಸದಸ್ಯರ ಸ್ಥಾನಗಳಷ್ಟೆ ಯಾವುದಾದರೂ ಖಾಲಿ ಬಿದ್ದಿದ್ದರೆ ಅದಕ್ಕೆ ಪುನಃ ನಾಮಿನೇಷನ್ ಮೂಲಕವೇ ಸರ್ಕಾರದವರು ಭರ್ತಿಮಾ

(ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು)

ಡಬಹುದು. ಆದರೆ ಅಂಥಾ ಮೈನರ್ ಮುನಿಸಿಪಾಲಿಟಿಗಳಲ್ಲಿ ಬೇರೆ ಸ್ಥಾನ ಖಾಲಿ ಬಿದ್ದಿದ್ದರೆ ಅದಕ್ಕೆ ಭರ್ತಿ ಮಾಡಲು ಈಗ ವಯಸ್ಕರ ಮತದಾನದ ಪದ್ಧತಿ ಪ್ರಕಾರ ಭರ್ತಿ ಮಾಡಬೇಕಾಗಿದೆ.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ತಾವು ಆ Old Act ನ್ನೇ ಈಗ extend ಮಾಡಿದ್ದೀರಾ ?

ಮಾನ್ಯ ಶ್ರೀ ಆರ್ ಚೆನ್ನಿಗರಾಮಯ್ಯನವರು.—Old Act extend ಆಗಿಲ್ಲ.

In respect of this particular matter *viz.*, in the filling up of these vacant places, the provisions of the old Act will be made use of.

Mr. SPEAKER.—The question is :

"That the Mysore Town Municipalities (Amendment) Bill, 1951, be taken into consideration."

The motion was adopted.

Mr. SPEAKER.—Clause 2.

The Hon'ble Sri R. CHENNIGARAMIAH.—Sir, I move :

"After clause (*c*) the following clause shall be inserted as clause (*d*) and the existing clause (*d*) shall be re-lettered as clause "*e*".

"(*d*) casual vacancies in the seats of Councillors or of members of committees or in the offices of Presidents or Vice-Presidents of Municipal Councils functioning under clause (*c*), shall, until the Municipal Councils are duly constituted under the provisions of this Act, be filled and all matters in connection with the filling of such vacancies shall be regulated in accordance with the provisions governing the filling of such vacancies and regulating such matters as were in force immediately before the date of coming into force of this Act."

ಇದೆಲ್ಲವನ್ನೂ ಸಹ ನಾನಾಗಲೇ ವಿವರಿಸಿರುತ್ತೇನೆ. ಇದರಲ್ಲಿ ಖಾಲಿ ಬಿದ್ದತಕ್ಕ ಸ್ಥಾನಗಳನ್ನು ಹೇಗೆ ಭರ್ತಿಮಾಡಬೇಕೆಂಬುದನ್ನು ತಿಳಿಸಿರುತ್ತೆ. ಇದನ್ನು ಮಾನ್ಯ ಸದಸ್ಯರೆಲ್ಲರೂ ದಯೆಯಿಟ್ಟು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—The question is :—

"After clause (*c*) the following clause shall be inserted as clause (*d*) and the existing clause (*d*) shall be re-lettered as clause "*e*".

"(*d*) casual vacancies in the seats of Councillors or of members of committees or in the offices of Presidents or Vice-Presidents of Municipal Councils functioning under clause (c), shall, until the Municipal Councils are duly constituted under the provisions of this Act, be filled and all matters in connection with the filling of such vacancies shall be regulated in accordance with the provisions governing the filling of such vacancies and regulating such matters as were in force immediately before the date of coming into force of this Act."

The motion was adopted.

Mr. SPEAKER.—The question is :

"That Clause 2, as amended, stand part of the Bill."

The motion was adopted.

Clause 2, as amended, was added to the Bill.

Mr. SPEAKER.—Clause 3. The question is :

"That Clause 3 stand part of the Bill."

The motion was adopted.

Clause 3 was added to the Bill.

Mr. SPEAKER.—Clause 4. There is an amendment in respect of Clause 4, tabled by the Hon'ble Minister. It is to delete Clause 4. He cannot move such an amendment. He can oppose the clause itself when it is put. The question is :—

"That Clause 4 stand part of the Bill."

The motion was negatived.

Clause 4 was omitted from the Bill.

Mr. SPEAKER.—Clause 5. The question is :

"That Clause 5 stand part of the Bill."

The motion was adopted.

Clause 5 was added to the Bill.

Mr. SPEAKER.—Clause 1. The question is :

"That Clause 1 stand part of the Bill."

The motion was adopted.

Clause 1 was added to the Bill.

Mr. SPEAKER.—Title and Preamble. The question is :

"That the Title and the Preamble stand part of the Bill."

The motion was adopted.

The Title and the Preamble were added to the Bill.

Motion to pass.

The Hon'ble Sri R. CHENNIGARAMIAH.—Sir, I move :

"That the Mysore Town Municipalities (Amendment) Bill, 1951, as amended, be passed.'

Mr. SPEAKER.—The question is :

"That the Mysore Town Municipalities (Amendment) Bill, 1951, as amended, be passed."

The motion was adopted.

Re-arrangement of Business on 7th and 8th.

Mr. SPEAKER (The Hon'ble Sri V. Venkatappa).—To-morrow we will continue Legislative Business. The Mysore Race Courses Licensing Bill, 1951, the Payment of Wages (Mysore Amendment) Bill, 1951 and the Mysore Appropriation No. IV Bill, 1951, will be taken up to-morrow. The Report of the Privileges Committee and the motion relating to Sri K. R. Sreekanteswar will also be taken up to-morrow.

For the day after to-morrow, we will have discussion on the Planning Commission Report. Copies of the motion in this matter have been distributed among the Hon'ble Members already.

Sri B. HUTCHE GOWDA (Tumkur District—General).—What about the Inam Villages (Abolition of Inam Tenure) Bill ?

Mr. SPEAKER.—That may be taken up after the Bills I have just indicated are disposed of .

The House will now rise for the day and meet to-morrow at One of the Clock.

The Assemly adjourned at Twenty Minutes past Five of the Clock to meet again at One of the Clock on Wednesday the 7th November 1951.

WD 1046—GPB—500—26-4-52

V-31 N 51
N 52-5
(B) 4710

LEGISLATIVE ASSEMBLY.

THIRTEENTH DAY

Wednesday, 7th November 1951.

The Legislative Assembly met in the Assembly Hall, Old Public Offices, Bangalore, at Seven Minutes past One of the Clock.

Mr. Speaker (The Hon'ble Sri V. Venkatappa) in the Chair.

QUESTIONS AND ANSWERS.

Mr. SPEAKER. (The Hon'ble Sri V. Venkatappa).—Questions.

Names of Applicants to whom Takavi and Land Improvement Loans have been sanctioned in Kolar District.

Q.—90. Sri G. NARAYANA GOWDA (Kolar District—General).—

Will the Government be pleased to state :—

(*a*) the names of applicants for Takavi and Land Improvement loans during 1950-51 and 1951-52 in Kolar District (particulars to be furnished talukwar);

(*b*) the names of applicants whose cases have been recommended and sanctioned ?

A.—The Hon'ble Sri H. SIDDAIYA (Minister for Revenue and Excise).—

(*a*) and (*b*) *Vide* statement laid on the Table of the House.*

ಶ್ರೀ ಜಿ. ನಾರಾಯಣಗೌಡರು.—ತಮ್ಮ ಸ್ಟೇಟ್‌ಮೆಂಟಿನಲ್ಲಿರುವ 1951-52ನೆಯ ಸಾಲಿನಲ್ಲಿ ಬಂದಿರುವ ಅರ್ಜಿಗಳು, ಗುಡಿಬಂಡೆ ತಾಲ್ಲೂಕಿಗೆ ಸಂಬಂಧಪಟ್ಟವು, ಇನ್ನೂ ಮಂಜೂರುಮಾಡಲ್ಪಡದೇಯಿರುವುದಕ್ಕೆ ಕಾರಣವೇನು ?

*The Hon'ble Sri H. SIDDAIYA.—They have asked for a list of applicants in each taluk of the Kolar District, with the details of the names of the applicants and the names of those to whom grants are made. It is such a voluminous document that the information is only placed on the Table of the House and the Hon'ble Member may see it.

ಶ್ರೀ ಜಿ. ನಾರಾಯಣಗೌಡರು.—ಅದನ್ನು ನೋಡಿ ನಾನು ಕೇಳುತ್ತಿರುವುದು ?

*ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಡಿದ್ದರೆ ಸರಿ.

ಅಧ್ಯಕ್ಷರು.—ಗುಡಿಬಂಡೆ ತಾಲ್ಲೂಕಿನಲ್ಲಿ ಯಾರಿಗಾದರೂ ಕೊಟ್ಟಿದ್ದೀರಾ ಎಂದು ಅವರು ಕೇಳುವುದು.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಬ್ಬರಿಗೆ ತಕಾವಿ ಸಾಲ ಕೊಟ್ಟಿದೆ. 1950-51ರಲ್ಲಿ ಹನುಮಂತು ಮತ್ತು ವೆಂಕಟೇಶಯ್ಯ ಎಂಬುವರಿಗೆ ಕೊಟ್ಟಿದೆ.

ಶ್ರೀ ಜಿ. ನಾರಾಯಣಗೌಡರು.—1951-52ರಲ್ಲಿ ಯಾರಿಗೂ ಕೊಟ್ಟಿಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಬ್ಬರಿಗೆ ಕೊಟ್ಟಿದೆ.

ಶ್ರೀ ಜಿ. ನಾರಾಯಣಗೌಡರು.—ಇಷ್ಟು ಹೆಚ್ಚು ಅರ್ಜಿಗಳು ಬಂದಿದ್ದರೂ ಕಡಮೆ ಮಂಜೂರು ಮಾಡಿರುವುದಕ್ಕೆ ಕಾರಣವೇನು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅರ್ಜಿಗಳು ಬಂದಿರುವುದು ಡಿಸರ್ವಿಂಗ್ ಆಗಿರಬೇಕು. ಅವು ದೇಶದ ಜನಸಂಖ್ಯೆ ಮತ್ತು ಇನ್ನೂ ಅನೇಕ ವಿಷಯಗಳನ್ನು ನೋಡಿ ಕೊಡುತ್ತಾರೆ ; for example, area, population and so many other factors including the amount of allotment made to each taluk etc.

ಶ್ರೀ ಜಿ. ನಾರಾಯಣಗೌಡರು.—ತಕಾವಿ ಮತ್ತು ಜಮೀನು ಅಬಾದು ಸಾಲಗಳನ್ನು ಡಿಸ್ಟ್ರಿಕ್ಟ್‌ವಾರು ಹಂಚಿಕೆ ಮಾಡುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹೌದು, ಹಂಚಿಕೆಮಾಡುತ್ತಾರೆ.

ಶ್ರೀ ಜಿ. ನಾರಾಯಣಗೌಡರು.—1950-51ಕ್ಕೆ ಕೋಲಾರ ಡಿಸ್ಟ್ರಿಕ್ಟ್‌ಗೆ ಎಷ್ಟು ಕೊಟ್ಟಿದ್ದೀರಿ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಟೀಸ್.

ಶ್ರೀ ಜಿ. ನಾರಾಯಣಗೌಡರು.—ತಕಾವಿ ಮತ್ತು ಜಮೀನು ಅಬಾದು ಸಾಲಗಳಿಗೆ ಹಾಕುವ ಅರ್ಜಿಗಳು ಹೆಚ್ಚಾಗಿ ವಿಲೇ ಆಗದಿರುವುದಕ್ಕೆ ಅವುಗಳನ್ನು ವಿಲೆಮಾಡುವ ಅಧಿಕಾರಿಗಳ ಸ್ವಂತ ಜವಾಬ್ದಾರಿ ಇರುವುದು ಕಾರಣವಲ್ಲವೇ ?

---

* Copy placed in the Assembly Library No. 23.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸ್ವಲ್ಪ ಮಟ್ಟಿಗೆ ಅದು ಕಾರಣ ಎಂದು ಒಪ್ಪಿಕೊಳ್ಳಬಹುದು.

ಶ್ರೀ ಜಿ. ನಾರಾಯಣಗೌಡರು.—ಸ್ವಂತ ಜವಾಬ್ದಾರಿ ಇರುವುದನ್ನು (personal liability) ಸಡಿಲ ಮಾಡುವುದಕ್ಕೆ ಆಜ್ಞೆ ಮಾಡುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲವು ದಿನದಿಂದ ಅದು ಪರ್ಯಾಲೋಚನೆಯಲ್ಲಿದೆ. ಅದನ್ನು ತೆಗೆದುಹಾಕುವುದರಿಂದ ಸ್ವಲ್ಪ ಕಷ್ಟಗಳು ಉದ್ಭವಿಸುತ್ತವೆ. ಅಂತೂ ಸರ್ಕಾರದವರು ಸಹಾನುಭೂತಿಯಿಂದ ಆಲೋಚನೆಮಾಡುತ್ತಾ ಇದ್ದಾರೆ. ಸದ್ಯದಲ್ಲೇ ಆರ್ಡರು ಜಾರಿ ಆಗಬಹುದು.

ಶ್ರೀ ಎ. ಸುಬ್ಬರಾಯಶೆಟ್ಟರು (ಕೋಲಾರ ಜಿಲ್ಲೆ).—ಈ ಸಾಲಗಳಿಗೆ ಬಂದ ಅರ್ಜಿಗಳು ಎಷ್ಟು ದಿನದಲ್ಲಿ ವಿಲೆ ಆಗಬೇಕೆಂದು ಇದೆ ?

The Hon'ble Sri H. SIDDAIYA.—As early as possible.

ಶ್ರೀ ಎ. ಸುಬ್ಬರಾಯಶೆಟ್ಟರು.—ಕಾಲದ ಮಿತಿಯಿಲ್ಲದೆ ವರ್ಷಗಟ್ಟಲೆ ವಿಲೇ ಆಗದೆ ಇರುವುದು ಇಲ್ಲವೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಎರಡು, ಮೂರು ತಿಂಗಳಿನಲ್ಲೇ ವಿಲೇಆಗಿರುವುದು ಇದೆ. 6 ತಿಂಗಳಿಗೆ ಮೇಲ್ಪಟ್ಟು ಆಗಿರುವುದೂ ಇದೆ.

ಶ್ರೀ ಎ. ಸುಬ್ಬರಾಯಶೆಟ್ಟರು.—ಈ ಅರ್ಜಿಗಳನ್ನು ಆದಷ್ಟು ಜಾಗ್ರತೆ ವಿಲೆಮಾಡುವುದರಿಂದ ರೈತರಿಗೆ ಅನುಕೂಲವಾಗುವುದಿಲ್ಲವೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲವು ಕ್ಲೈಮ್ಸ್ ನೋಡಿ ವಿಲೇಮಾಡಬೇಕಾಗುತ್ತದೆ. ಅದಕ್ಕೋಸ್ಕರ ಕೆಲವು ಕೇಸುಗಳಲ್ಲಿ ಸ್ವಾಭಾವಿಕವಾಗಿ ಕಾಲ ಬೇಕಾಗುತ್ತದೆ.

ಶ್ರೀ ಎ. ಸುಬ್ಬರಾಯಶೆಟ್ಟರು.—ತಾಲ್ಲೂಕು ಅಮಲ್ದಾರರೇ ಇದನ್ನು ವಿಲೇಮಾಡುವುದರಿಂದ ಅವರಿಗೆ ಸಾಧಾರಣವಾಗಿ ಎಲ್ಲಾ ಗೊತ್ತಿರುತ್ತದೆ. ಏಕೆ ಜಾಗ್ರತೆ ವಿಲೇಮಾಡಬಾರದು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬಹುಮಟ್ಟಿಗೆ ಕೆಲವುಕಾಲ ಒಬ್ಬ ಅಮಲ್ದಾರರು ಒಂದೇ ತಾಲ್ಲೂಕಿನಲ್ಲಿದ್ದರೆ ಹೆಚ್ಚು ವಿಷಯ ಗೊತ್ತಿರುತ್ತದೆ. ಇಲ್ಲದಿದ್ದರೆ ?

Villages included in Gudibanda Taluk

Q.—130. **Sri A. SUBBARAYA SETTY** (Kolar District—General).—

Will the Government be pleased to state :—

(*a*) when the Gudibanda Sub-Taluk was converted into a *Pucca* taluk ;

(*b*) which are the villages ordered to be included in it ;

(*c*) whether they have been included ;

(*d*) if not, the reasons therefor ;

(*e*) when this inclusion would be given effect to ?

A.—**The Hon'ble Sri H. SIDDAIYA** (Minister for Revenue and Excise).—

(*a*) 1st July 1947.

(*b*) and (*c*) The following villages are ordered to be included in it recently :—

Nagaragere Hobli (Goribidnur Taluk).

1. Bandaralahalli
2. Kamataralahalli
3. Makkammanahalli (Becharak).
4. Kothur
5. Kodihalli (K.G.)
6. Chikkamallenahalli
7. Chowlasettihalli
8. Naralahalli (J)
9. Mudlahalli (K.G.)
10. Chimukalahalli
11. Krishnarajapura (J.)
12. Payanahalli
13. Nagaragere
14. Pillaguttahalli (Becharak)
15. Matyavalahalli

Mandikal Hobli, Chikballapur Taluk.

1. Rampatna
2. Kambalahalli
3. Nagasanahalli
4. Madenahalli (Becharak)
5. Udigiri Nallappanahalli
6. Renumakalahalli
7. Bommaganahalli
8. Chokkanahalli
9. Yenumala Channana Dinne (B).
10. Kommalamri
11. Ropparalahalli (Becharak)
12. Siddaganahalli (Jodi)
13. Karakamakalahalli
14. Chikkanareppanahalli

(Orders are under issue).

(*d*) Does not arise.

(*e*) From 1st January 1952.

ಶ್ರೀ ಎ. ಸುಬ್ಬರಾಯಶೆಟ್ಟರು.—(a) ಪ್ರಶ್ನೆಗೆ ಉತ್ತರವಾಗಿ 1947ರಲ್ಲಿ ಮಾರ್ಪಡಿಸಲಾಯಿತು ಎಂದು ಹೇಳಿದ್ದೀರಿ ಆಗ ಎಷ್ಟು ಗ್ರಾಮಗಳನ್ನು ಇದಕ್ಕೆ ಸೇರಿಸಬೇಕೆಂದು ಆರ್ಡರ್ ಆಗಿತ್ತು ?

* ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—78 ಗ್ರಾಮಗಳು.

ಶ್ರೀ ಎ. ಸುಬ್ಬರಾಯಶೆಟ್ಟರು.—ಅವು ಎಷ್ಟು ಹೋಬಳಿಗಳಿಗೆ ಸಂಬಂಧಪಟ್ಟ ಗ್ರಾಮಗಳು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಎರಡು ಹೋಬಳಿಗೆ ಸಂಬಂಧಪಟ್ಟವು.

ಶ್ರೀ ಎ. ಸುಬ್ಬರಾಯಶೆಟ್ಟರು.—29 ಗ್ರಾಮಗಳನ್ನು ಮಾತ್ರ ಸೇರಿಸಿದ್ದೀರಿ. ಅದಕ್ಕೆ ಕಾರಣವೇನು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅಷ್ಟು ಗ್ರಾಮಗಳು ಸಾಕು ಎಂಬುದಾಗಿ ಸಬ್‌ಡಿವಿಜನ್ ಆಫೀಸರು, ಡೆಪ್ಯುಟಿಕಮಿಷನರು, ರೆವಿನ್ಯೂ ಆಫೀಸರು ಅಭಿಪ್ರಾಯಪಟ್ಟಿದ್ದಾರೆ. ಮುಖ್ಯವಾದ ಕಾರಣ ಈ 29 ಗ್ರಾಮಗಳು ಗುಡ್ಡಕ್ಕೆ ಈಚೆಗೆ ಇವೆ. ಬಾಕಿ ಗ್ರಾಮಗಳು ಗುಡ್ಡಪ್ರದೇಶದ ಆಚೆಗೆ ಇರುವುದರಿಂದ ಅವುಗಳನ್ನು ತೆಗೆದುಕೊಂಡರೆ ತೊಂದರೆಯಾಗುತ್ತದೆ.

ಶ್ರೀ ಎ. ಸುಬ್ಬರಾಯಶೆಟ್ಟರು.—ಈ 78 ಗ್ರಾಮಗಳನ್ನು ಸೇರಿಸುವ ಬಗ್ಗೆ ನೋಟಿಫೈ ಆಗಿದ್ದು ತಕರಾರುಗಳು ಬಂದಿದ್ದುವೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಟಿಫೈ ಆಗಿತ್ತು ; ಫೆಬ್ರುವರಿ 1947ನೇ ಇಸವಿಯಲ್ಲಿ ಆರ್ಡರ್ ಮಾಡಿದ್ದರು. ಆನಂತರ ಆಯಾಯ ಗ್ರಾಮಸ್ಥರು ತಕರಾರು ಮಾಡಿದ್ದಾರೆ.

ಶ್ರೀ ಎ. ಸುಬ್ಬರಾಯಶೆಟ್ಟರು.—ಹಾಗಾದರೆ ಈ 29 ಗ್ರಾಮಗಳಲ್ಲದೆ ಬೇರೆ ಗ್ರಾಮಗಳನ್ನು ಸೇರಿಸುವ ಆಲೋಚನೆ ಇದೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಮೊನ್ನೆ ತಾನೆ ಆರ್ಡರ್ ಆಗಿದೆ. ಸದ್ಯಕ್ಕೆ 29 ಗ್ರಾಮಗಳನ್ನು ಸೇರಿಸಿದರೆ ಸಾಕು ಎಂಬುದಾಗಿ ಅಭಿಪ್ರಾಯ ಪಟ್ಟಿದ್ದಾರೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು (ಕೋಲಾರ ಜಿಲ್ಲೆ).—ಇದಕ್ಕೆ ಸೇರಿಸಲಾಗುವ ಹಳ್ಳಿಗಳವರ ಅಭಿಪ್ರಾಯ ಪಡೆದಿದ್ದೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅವರ ಅಭಿಪ್ರಾಯ ಪಡೆದಿದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಕೆಲವು ಗ್ರಾಮಗಳವರು ಚಿಕ್ಕಬಳ್ಳಾಪುರ ತಾಲ್ಲೂಕಿಗೆ ಸೇರಿಸಬೇಕೆಂದು ಅಭಿಪ್ರಾಯಪಟ್ಟಿದ್ದರೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲವರು ಆ ರೀತಿ ಅಭಿಪ್ರಾಯಪಟ್ಟಿದ್ದರು.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಸರ್ಕಾರದವರು ಅದನ್ನು ಗಮನಕ್ಕೆ ತೆಗೆದುಕೊಳ್ಳಲಿಲ್ಲವೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಪರ್ಯಾಲೋಚನೆ ಮಾಡಿದನಂತರವೇ ಆ ರೀತಿ ಆರ್ಡರ್ ಆಗಿದೆ.

Feeder Channel to and water supply from Vishnusamudra Tank.

Q.—60. Sri K. H. MUDIYAPPA (Chikmagalur District—General).—

Will the Government be pleased to state :—

(*a*) the capacity of water storage in Vishnusamudra Tank of Keresante, Kadur Taluk ;

(*b*) (i) the number of acres of land to which water is supplied from this tank at present ;

(ii) the number of channels through which it is supplied ; which they are ;

(iii) the present condition of these channels ;

(*c*) whether a request has been made for the construction of a feeder channel to this tank from Devanur Tank ;

(*d*) the amount that may have to be spent for the construction of a feeder channel from Devanur Tank to Vishnusamudra Tank ?

A.—The Hon'ble Sri T. MARIAPPA (Home Minister).—

(*a*) 3,275 units.

(*b*) (i) 530 acres.

(ii) One channel, *viz.*, Left Bank Channel.

(iii) The Left Bank channel is in good condition. The Right Bank channel is not in service.

(*c*) Yes.

(*d*) Rs. 1,00,000 approximately.

ಶ್ರೀ ಕೆ. ಎಚ್. ಮುದಿಯಪ್ಪನವರು.—ಒಂದು ಯೂನಿಟ್ ನೀರನ್ನು ಎಷ್ಟು ಎಕರೆ ಸಾಗುವಳಿಗೆ ಕೊಡಬಹುದು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒಂದು ಯೂನಿಟ್‌ಗೆ ಒಂದು ಎಕರೆಯಂತೆ ಲೆಕ್ಕ ಇದೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಹಾಗಾದರೆ 530 ಎಕರೆಗಳಿಗೆ ಮಾತ್ರ ಕೊಟ್ಟಿರುವುದಕ್ಕೆ ಕಾರಣವೇನು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು:—ಆ ಕೆರೆಗೆ ಅಷ್ಟು ನೀರು ತುಂಬುವಷ್ಟು capacity ಇದೆ ; ಆದರೆ ನೀರಿಲ್ಲ. ಅದಕ್ಕೆ ಇರುವಷ್ಟನ್ನು ಮಾತ್ರ ಒದಗಿಸಿದೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಕಾಲುವೆಗಳು ದುರಸ್ತಿನಲ್ಲಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒಂದು ದುರಸ್ತಿನಲ್ಲಿದೆ. ಇನ್ನೊಂದು ದುರಸ್ತಿನಲ್ಲಿಲ್ಲ. ಅದು 1910ನೇ ಇಸವಿಯಿಂದಲೇ ದುರಸ್ತಿನಲ್ಲಿಲ್ಲ.

ಶ್ರೀ ಕೆ. ಎಚ್. ಮುದಿಯಪ್ಪನವರು.—530 ಎಕರೆ ಇರುವುದು ಒಂದು ಕಾಲುವೆ ಕೆಳಗೆ ಎಂಬುದನ್ನು ಒಪ್ಪಿಕೊಳ್ಳುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಡದಡದ ನಾಲೆಯಿಂದ ಸರಬರಾಯಿ ಆಗುತ್ತಿದೆ ಎಂದು ಉತ್ತರದಲ್ಲೇ ಹೇಳಿದೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಬಲದಡದ ನಾಲೆಯು ಉಪಯೋಗದಲ್ಲಿಲ್ಲ ಎಂದು ಹೇಳಿದ್ದೀರಿ. ಕಾರಣವೇನು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕಾರಣ ಅದರಲ್ಲಿ ನೀರಿಲ್ಲ. ಅದು ಎತ್ತರದ ಮಟ್ಟದಲ್ಲಿದೆ. ಕೆರೆಯಲ್ಲಿ ಪೂರ್ತಿ ನೀರು ತುಂಬಬೇಕು. ಆಗ ಎತ್ತರದ ಮಟ್ಟದಿಂದ ನೀರನ್ನು ಹಾಯಿಸುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಹಾಗಾದರೆ ಕೆರೆಯಲ್ಲಿ ಎಷ್ಟು ಯೂನಿಟ್ ನೀರಿದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—530 ಎಕರೆಗೆ ಆಗುವಷ್ಟು ಇದೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—530 ಎಕರೆಗೆ ಆಗುತ್ತದೆ ಎಂದು ಹೇಳುತ್ತೀರೇ ವಿನಾ ಕೆರೆಯಲ್ಲಿ ಎಷ್ಟು ನೀರಿದೆ ಎಂಬುದನ್ನು ಅಜಮಾಯಿಷಿ ಮಾಡಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪರಿಶೀಲಿಸಿ ನೋಡಿ, ಕೊನೆಗೆ ಬರತಕ್ಕ ನೀರು 530 ಎಕರೆಗೆ ಮಾತ್ರ ಸಾಕಾಗುತ್ತದೆ ಎಂದು ಪ್ರವೀಣರು ಅಭಿಪ್ರಾಯಪಟ್ಟಿರುತ್ತಾರೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಆ ಕೆರೆಯಲ್ಲಿ ಹಾಲಿ ಎಷ್ಟು ಯೂನಿಟ್ ನೀರು ಇದೆ ಎಂಬುದನ್ನು ಹೇಳುವುದಕ್ಕೆ ಸಾಧ್ಯವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಕೆ. ಎಚ್. ಮುದಿಯಪ್ಪನವರು.—3,275 ಯೂನಿಟ್ ನೀರು ಹಿಡಿಯತಕ್ಕ ಕೆರೆ ಕಟ್ಟಿಸುವುದಕ್ಕೆ ಎಷ್ಟು ಹಣ ಖರ್ಚಾಗುತ್ತದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಅನೇಕ ಕಾರಣಗಳ ಮೇಲೆ ಅವಲಂಬಿಸಿರುತ್ತದೆ. ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಹೆಚ್ಚು ಆಹಾರ ಬೆಳೆ ಬೆಳೆಯುವ ಸಂಬಂಧದಲ್ಲಿ ಸರ್ಕಾರದವರು ಲಕ್ಷಾಂತರ ರೂಪಾಯಿಗಳ ಕೆಲಸ ಮಾಡುತ್ತಿರುವಾಗ, ದೊಡ್ಡ ಕೆರೆಗಳನ್ನು ಅದಷ್ಟು ಜಾಗ್ರತೆ ದುರಸ್ತು ಮಾಡಬೇಕೆಂಬ ನಿಯಾಮಕ ಇದೆಯಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಾವು ಕಳುಹಿಸಿರುವ ಪ್ರಶ್ನೆಗೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಈಗ ದೇವನೂರು ಕೆರೆಯಿಂದ ಫೀಡರ್ ಚಾನಲ್ ಹಾಕಿದರೆ ನೀರು ಬರುತ್ತದೆ ಎಂದು ಒಪ್ಪಿಕೊಳ್ಳುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒಂದು ಲಕ್ಷ ರೂಪಾಯಿ ಖರ್ಚುಮಾಡಿದರೆ ಬರುತ್ತದೆ. ಅದು ಬಂದರೆ ಇನ್ನೊಂದು ಕೆರೆಗೆ ಕಷ್ಟವಾಗುತ್ತದೆ ?

ಶ್ರೀ ಕೆ. ಎಚ್. ಮುದಿಯಪ್ಪನವರು.—ಯಾವ ಕೆರೆಗೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ವಾಣಿವಿಲಾಸ ಸಾಗರಕ್ಕೆ ಬಹಳ ತೊಂದರೆಯಾಗುತ್ತದೆ. 10 ಸಾವಿರ ಎಕರೆಗೆ ಅಲ್ಲಿನ ನೀರು ಸಾಕಾಗದೇ ಇರುವುದರಿಂದ ಅಲ್ಲಿಗೆ ನೀರು ಕಡಿಮೆ ಮಾಡುವುದಕ್ಕಾಗುವುದಿಲ್ಲವೆಂದು ಪ್ರವೀಣರ ಅಭಿಪ್ರಾಯ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಬಲದ ದಡದ ನಾಲೆಯ ಕೆಳಗೆ ಇರತಕ್ಕ ರೈತರಿಗೆ ರೆಮಿಷನ್ ಕೊಟ್ಟಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್. ಅವರು ಬತ್ತದ ಬೆಳೆ ಬೆಳೆದರೆ ನಿಜವಾಗಿಯೂ ರೆಮಿಷನ್‌ಗೆ ಅರ್ಹರು.

ಶ್ರೀ ಕೆ. ಎಚ್. ಮುದಿಯಪ್ಪನವರು.—ರೆಮಿಷನ್ ಕೊಡದೆ ಕಂದಾಯ ವಸೂಲು ಮಾಡುತ್ತಾ ಇರುವುದು ಗೊತ್ತೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ನಮ್ಮ ಗಮನಕ್ಕೆ ಬಂದಿಲ್ಲ. ನೀರು ಕೊಡುವವರು ಪಬ್ಲಿಕ್ ವರ್ಕ್ಸ್ ಇಲಾಖೆಯವರು, ಕಂದಾಯ ವಸೂಲು ಮಾಡುವವರು ರೆವಿನ್ಯೂ ಇಲಾಖೆಯವರು.

ಶ್ರೀ ಕೆ. ಎಚ್. ಮುದಿಯಪ್ಪನವರು.—ಇದನ್ನು ವಿಚಾರಣೆ ಮಾಡುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೂಡಲೆ ವಿಚಾರ ಮಾಡಿ ತಾವು ಹೇಳಿದಂತೆ ಕಂದಾಯ ವಸೂಲು ಮಾಡಿದ್ದರೆ ರೆಮಿಷನ್ ಕೊಡಿಸಲಾಗುತ್ತದೆ ಎಂಬ ಭರವಸೆ ಇಟ್ಟುಕೊಳ್ಳಬಹುದು.

ಶ್ರೀ ಕೆ. ಎಚ್. ಮುದಿಯಪ್ಪನವರು.—ಒಂದು ಲಕ್ಷ ರೂಪಾಯಿ ಖರ್ಚು ಮಾಡಿ ಫೀಡರ್ ಚಾನಲ್ ತಂದ ಪಕ್ಷದಲ್ಲಿ ಎತ್ತರದ ಮಟ್ಟದಲ್ಲಿರುವ ಬಲದ ದಡದ ನಾಲೆಗೂ ನೀರು ಬರುತ್ತದೆ. ಎಂದ ಮೇಲೆ ತಾವು ಯಾವಾಗಲಾದರೂ ಪ್ರವಾಸ ಬಂದಾಗ ಆ ಸ್ಥಳವನ್ನು ಅಜಮಾಯಿಷಿ ಮಾಡಿಸುವುದಕ್ಕೆ ಪ್ರಯತ್ನಪಡುತ್ತೀರಾ ?

The Hon'ble Sri T. MARIAPPA—It is a regular representation and I will consider that · I have no objection to inspect it when I visit that area.

Repairs to major and minor tanks in Hole-Narsipur Taluk.

Q.—290. Sri S. C. SOORYANARAYANA CHETTY (Hassan District—General).—

Will the Government be pleased to state :—

(*a*) the number of major and minor tanks in Hole-Narsipur Taluk (Hobliwar information to be furnished) ;

(*b*) out of this, the tanks that are repaired during the past three years ;

(*c*) the tanks that are not repaired ;

(*d*) the number of tanks that are arranged to be repaired during the present year ; which they are ?

A.—The Hon'ble Sri T. MARIAPPA (Home Minister).—

(*a*) *Name of Hobli*	*Major Tanks*	*Minor Tanks*
Kasaba Hobli	5	99
Hallimysore	7	139
Halekote ...	4	81
	16	319
(*b*)	2	37
(*c*)	14	282
(*d*)	...	28

DETAILS FOR (*d*).

Hallimysore Hobli.

1. Lakkur minor tank
2. Eregowdanakatte of Jakkanahalli.

3. Tejur Doddakere
4. Mundanahalli tank
5. Helagatta tank
6. Bidiganahalli tank
7. Keragodi tank
8. Chickchagalli tank
9. Odahalli tank
10. Konganakere of Sravanur tank.
11. Feeder channel of Kengankere.
12. Hallimysore Doddakere
13. Odanahalli tank
14. Dalavoy tank
15. Chamanahalli tank pipe sluice.
16. Turfing to Chamanakatte
17. Hullikere of Kabbur
18. Ankanahalli tank
19. Channanakatte of Settarakoppal.

Halekote Hobli.

1. Sluice of Amanidodakere
2. Closing leaks in Amanikere
3. Amanichikkere
4. Kuncha ane

Kasaba Hobli.

1. Yelachagalli tank
2. Chigalli tank
3. Kowchalakatte of Muddanippe.
4. Amani Henekere tank
5. Konganakere of Shravanur tank.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರು.—ಸ್ವಾಮಿ, ಈ 319 ಕೆರೆಗಳ ಪೈಕಿ ಕೇವಲ 37 ಕೆರೆಗಳು ಮಾತ್ರ ಮೂರು ವರ್ಷದಲ್ಲಿ ದುರಸ್ತಾಗಿವೆ. ಇನ್ನೂ 282 ಮೈನರ್ ಕೆರೆಗಳು, 14 ಮೇಜರ್ ಕೆರೆಗಳು ದುರಸ್ತಾಗದೆ ಇರುವುದನ್ನು ಯಾವಾಗ ದುರಸ್ತು ಮಾಡಿಸುತ್ತೀರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು —ಎಲ್ಲಾ ಕೆರೆಗಳೂ ನಾದುರಸ್ತಾಗಿವೆ ಎಂದು ಹೇಳಬೇಡಿ. ದುರಸ್ತಾಗಬೇಕಾಗಿರುವ ಕೆರೆಗಳು ಅಷ್ಟಿವೆ. ಅವು ಉಪಯೋಗದಲ್ಲಿವೆ. ರೈತನು ಮುಚ್ಚಳಿಕೆ ಬರೆದುಕೊಡಬೇಕು. ಅದು ಕಾಲ ತೆಗೆದುಕೊಳ್ಳುತ್ತದೆ.

ಶ್ರೀ ಎಸ್. ಸಿ. ಸೂರ್ಯನಾರಾಯಣ ಶೆಟ್ಟರು.—(d) ಪ್ರಶ್ನೆಗೆ ಉತ್ತರವಾಗಿ ಚಾಲ್ತಿ ಸಾಲಿನಲ್ಲಿ 28 ಕೆರೆಗಳು ಮಾತ್ರ ದುರಸ್ತಿಗೆ ಏರ್ಪಾಟಾಗಿದೆ ಎಂದು ಹೇಳಿದ್ದೀರಿ. ಅದು ಕೇವಲ ಕಮ್ಮಿ ಅಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ಒಂದು ತಾಲ್ಲೂಕಿನಲ್ಲಿ 28 ಕೆರೆಗಳು ಈ ವರ್ಷ ದುರಸ್ತಿಗೆ ಬರುತ್ತವೆ. ಇದೇ ರೀತಿ ತಾವು 80 ತಾಲ್ಲೂಕಿಗೂ ಲೆಕ್ಕ ಹಾಕಿದರೆ ಬಹಳ ಜಾಸ್ತಿ ಆಗುತ್ತವೆ.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರು.—ಈ ಕಾಮಗಾರಿಗಾಗಿ ಬೇಕಾಗುವಷ್ಟು ಹಣ ಇದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆರೆ, ಕಟ್ಟೆಗಳಿಗೆ ಬೇಕಾದಷ್ಟು ಹಣ ಇದೆ.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರು.—ಹಣ ಇದ್ದೂ ಕೆಲಸ ಏಕೆ ನಿಧಾನವಾಗುತ್ತಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆರೆ ಕೆಲಸವೇ ನಿಧಾನ. Working season ಇರುವುದು 5 ತಿಂಗಳು. ಮಳೆಗಾಲದಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಮತ್ತು ಸಾಮಾನುಗಳು ಸಿಕ್ಕಬೇಕು. ಆಕಸ್ಮಾತ್ತಾಗಿ ಬೇಸಿಗೆಯಲ್ಲಿ ಕೆರೆಯಲ್ಲಿ ನೀರಿದ್ದರೆ ಕೆಲಸ ಮಾಡುವುದಕ್ಕಾಗುವುದಿಲ್ಲ. ಈ ರೀತಿ ಸ್ವಾಭಾವಿಕವಾದ ತೊಂದರೆಗಳಿವೆ. ಆದಷ್ಟು ಜಾಗ್ರತೆ ಮಾಡಬೇಕೆಂದಿದೆ. ನಿಮ್ಮ ತಾಲ್ಲೂಕಿನಲ್ಲೂ ಜಾಗ್ರತೆ ಕೆಲಸ ನಡೆಸಲಾಗುತ್ತದೆ ಎಂಬ ಭರವಸೆ ಕೊಡುತ್ತೇನೆ.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರು.—ಈ ತಾಲ್ಲೂಕಿನಲ್ಲಿ ಕಂಟ್ರಾಕ್ಟರುಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರಲ್ಲವೆ? ಆದ್ದರಿಂದ ತಾವು ಕಂಟ್ರಾಕ್ಟರುಗಳೇ ಇಲ್ಲವೆಂದು ಹೇಳುವ ಹಾಗಿಲ್ಲ ಅಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕಂಟ್ರಾಕ್ಟರುಗಳೇನೋ ಹೆಚ್ಚಾಗಿದ್ದಾರೆ. ಆದರೆ ಅವರು ಕೇಳುವ ದರದಂತೆ ಕೊಡುವುದೇ ಕಷ್ಟ.

ಶ್ರೀ ಎಸ್. ಸಿ. ಸೂರ್ಯನಾರಾಯಣ ಶೆಟ್ಟರು.—ಆದಷ್ಟು ಜಾಗ್ರತೆ ಮಾಡಿಸಿಕೊಡುತ್ತೀರಾ?

The Hon'ble Sri T. MARIAPPA.—In fact, I have already issued instructions with regard to the repairs of 30 to 40 minor tanks. They would be taken up.

Mr. SPEAKER.—There are no more questions for the day.

Sri. L. SIDDAPPA.—The resources of the Government are exhausted! (laughter).

QUESTIONS FOR ANSWERS ON THE DAY.

(*Not taken up*)

Putting up Public Buildings in Davangere.

Q.—86. **Sri H. SIDDAVEERAPPA** (Chitaldrug District—General).—

Will the Government be pleased to state :—

(*a*) the total monthly amount of rent paid by them for all public buildings located in Davangere ;

(*b*) whether they propose to put up suitable public buildings at an early date ?

A.—The Hon'ble Sri T. MARIAPPA (Home Minister).—

(*a*) Rs. 2,335 per month.

(*b*) On financial grounds it is difficult to undertake any building construction.

Subsidy for Irrigation Wells.

Q.—169. Sri C. R. BASAPPA (Tumkur District—General).—

Will the Government be pleased to state:—

(*a*) the conditions attached to the grant of subsidy for irrigation wells;

(*b*) the number of applications for grant of subsidy that have come from Inam villages and how many applicants have been granted subsidy;

(*c*) the number of acres of land cultivated from the irrigated wells for which subsidy has been granted;

(*d*) whether they have come to know of instances where no food crops are grown under the area irrigated by these subsidised wells;

(*e*) if so, how many such instances there are and what action has been taken by them?

A.—The Hon'ble Sri H. SIDDAIYA (Minister for Revenue and Excise).—

(*a*) *Vide* the following orders of Government:—

1. No. R. 6349-62—R.M. 37-45-152, dated 12th March 1946.
2. No. R. 4733-46—R.M. 20-47-2, dated 9th October 1947.
3. No. R. 4130-44—R.M. 61-48-2, dated 15th November 1948.
4. No. R. 9572-85—R.M. 85-49-4, dated 25th March 1951.

(*b*) to (*e*) Information is being collected.

CONDOLENCE RESOLUTION.

Mr. SPEAKER (The Hon'ble Sri V. Venkatappa).—Condolence Resolution.

Demise of Sri K. J. Kania, Chief Justice of Supreme Court of India.

*The Hon'ble Sri H. C. DASAPPA (Leader of the House).

Mr. Speaker, Sir, it is my painful task to place before the House the following resolution:

"This Assembly records its profound sorrow at the demise of Sri H. J. Kania, Chief Justice of the Supreme Court of India and conveys its heartfelt condolences to the members of his family".

Sir, it was early this morning we heard the shocking news of the sad and sudden demise of Hon'ble Sri H. J. Kania due to heart attack. It was said that he was ailing for just a few days before the calamity overtook him and he succumed to it last night.

He was born in November 1890 and after a very distinguished college career and even a more brilliant career at the Bar, he was elevated to the Bench of the Bombay High Court in 1933 and served there for 13 years with a record which is acknowledged on all hands to be very extraordinary and great. He acted also as the Chief Justice of the Bombay High Court in 1944 and 1945. Then in 1946 he was taken to the Federal Court as one of the Judges and when India became independent, under the Constitution of India on the 26th of January 1950 he became the Chief Justice of the Supreme Court.

Sir, from all accounts he maintained the highest traditions of the judiciary which is important at all times and which is even more so now when democratic administration is functioning in the land. His work was characterised not only by ability and industry but also by independence and impartiality which is the bull work of the Constitution of a nation on the freedom of a nation. Few Judges have shed lustre of their office in an equal measure as Sri Kania. To us, Sir, of Mysore, he was by no means a stranger. I think he paid more than one visit both as a person who had to see a bit of Mysore and also as the Chief Justice of the Supreme Court. I have had, Sir, the privilege of association with him when he was here, and I

must say that he expressed his highest admiration of the judiciary in the State and gave very handsome compliments to the way in which that department was functioning in this State. That is not only a compliment emanated from his mouth but we know from the number of cases that have gone up from here to the Supreme Court, what an amount of independence and impartiality he brought to bear upon the decisions in the cases that came up before him. It is such a great servant of India that we have lost to-day and whose loss we are mourning. He was not only great as a judge but great as a man. He was full of humour and he was a brilliant conversationalist. Well, Sir, it is our duty to mourn his loss and convey our feelings of condolence to Mrs. Kania and the other members of the bereaved family. I have nothing more to say except to request on behalf of the House that this resolution may be conveyed to Mrs. Kania. May his soul rest in peace!

Mr. SPEAKER.—Condolence Resolution moved:

"This Assembly records its profound sorrow at the demise of Sri H. J. Kania, Chief Justice of the Supreme Court of India and conveys its heartfelt condolences to the members of his family".

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).— ಸ್ವಾಮಿ, ಈ ಸಭೆಯ ನಾಯಕರು ಸಭೆಯ ಮುಂದೆ ಮಂಡಿಸಿರತಕ್ಕ ನಿರ್ಣಯದಲ್ಲಿ ಅಡಕವಾಗಿರತಕ್ಕ ಪ್ರತಿಯೊಂದು ಅಂಶವನ್ನೂ ನಾನು ಅನುಮೋದಿಸುತ್ತೇನೆ; ಅಲ್ಲದೆ, ಈ ನಿರ್ಣಯವನ್ನು ಸಮರ್ಥಿಸಿ ಸಭಾ ನಾಯಕರು ಅವರ ಭಾಷಣದಲ್ಲಿ ಹೇಳಿದ ಎಲ್ಲಾ ವಿಷಯಗಳನ್ನೂ ನಾನು ಒಪ್ಪುತ್ತೇನೆ. ಜಸ್ಟಿಸ್ ಶ್ರೀ ಕನಿಯಾರವರು ಭಾರತದ ಸುಪ್ರೀಂ ಕೋರ್ಟಿನ ಮೊದಲನೆಯ ಚೀಫ್ ಜಸ್ಟಿಸರು. ಅವರ ಪರಿಚಯ ನಮಗೆ ಸ್ವಂತವಾಗಿ ಇಲ್ಲದೆ ಇದ್ದರೂ, ಅವರು ನ್ಯಾಯ ತೀರ್ಮಾನ ಮಾಡುವುದರಲ್ಲಿ ಮತ್ತು ನ್ಯಾಯಾಂಗದ ಆಡಳಿತದಲ್ಲಿ ಅವರೆಷ್ಟು ಸಮರ್ಥರೆಂಬುದನ್ನು ನಾವು ಚೆನ್ನಾಗಿ ತಿಳಿದುಕೊಂಡಿದ್ದೇವೆ. ಅಂಥ ಸಮರ್ಥರಾದ ಒಬ್ಬ ಜಡ್ಜರು ಅದರಲ್ಲೂ ನಮ್ಮ ಸುಪ್ರೀಂ ಕೋರ್ಟಿನ ಚೀಫ್ ಜಸ್ಟಿಸರು ಮರಣ ಹೊಂದಿದ್ದು ನಮಗೆ ಬಹಳ ದುಃಖವನ್ನುಂಟುಮಾಡಿದೆ. ಅವರು ಖಾಯಿಲೆಯಿಂದ ನರಳುತ್ತಿದ್ದುದೂ ಗೊತ್ತಿರಲಿಲ್ಲ. ಇಂದು ಪತ್ರಿಕೆಗಳಲ್ಲಿ ಅವರ ನಿಧನ ವಾರ್ತೆಯನ್ನು ಕೇಳಿದ ಕೂಡಲೆ ನಮಗೆ ಸಿಡಿಲು ಬಡಿದಂತಾಯಿತು!

ಈಗಿನ ಸಂದರ್ಭದಲ್ಲಿ ನಾನಿನ್ನೇನೂ ಹೆಚ್ಚಿಗೆ ಹೇಳಲು ಇಷ್ಟಪಡುವುದಿಲ್ಲ. ಸಭೆಯ ಪರವಾಗಿ ಈ ನಿರ್ಣಯವನ್ನು ಸದಸ್ಯರೆಲ್ಲರೂ ಒಪ್ಪುತ್ತಾರೆಂದು ಹೇಳಿ ಜಸ್ಟಿಸ್ ಶ್ರೀ ಕನಿಯಾರವರ ಕುಟುಂಬಕ್ಕೂ ಅವರ ಪತ್ನಿಯವರಿಗೂ ನಮ್ಮ ಅನುತಾಪವನ್ನು ಸೂಚಿಸಲಿಚ್ಛಿಸುತ್ತೇನೆ.

Mr. SPEAKER.—I wish to associate myself with the feelings of sorrow expressed by the Hon'ble the Leader of the House and the other Members who have spoken on the motion. The Hon'ble Sri Kania after an extensive practice for about 18 years at the Bombay High Court, was appointed Judge and later Chief Justice of that High Court. He became a Judge of the Federal Court in 1946 and succeeded Sir Patrick Spens as Chief Justice in 1947. When the Constitution of India was inaugurated, he became the first Chief Justice of the Supreme Court of India. His rich experience at the Bar and on the Bench has left its mark on the decisions of the Federal Court and the Supreme Court of India, particularly on those decisions which required an elucidation or interpretation of the provisions of the Constitution. Several provisions of the Constitution are likely to come up before the Courts for interpretation and consideration and his experience and learning would have been of inestimable help to us. It is a great pity that he should have passed away so suddenly and at such a time.

Mr. SPEAKER.—The question is:

"This Assembly records its profound sorrow at the demise of Sri K. H. Kania, Chief Justice of the Supreme Court of India and conveys its heartfelt condolences to the members of his family."

The motion was adopted, all Members standing in silence for two minutes.

Request to furnish Answers to all the remaining Questions.

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).— ನಾವು ಕಳುಹಿಸಿದ್ದ ಅನೇಕ ಪ್ರಶ್ನೆಗಳಿಗೆ ಇನ್ನೂ ಉತ್ತರಗಳು ಬಾರದೆ ಬಿಟ್ಟುಹೋಗುತ್ತವೆ. ನೆನ್ನೆಯ ದಿವಸಕ್ಕಿಂತ ಈ ಹೊತ್ತು ಕಡಿಮೆ ಪ್ರಶ್ನೆಗಳಿಗೆ ಉತ್ತರಗಳು ಬಂದಿವೆ.

ಅಧ್ಯಕ್ಷರು (ಮಾನ್ಯ ಶ್ರೀ ವಿ. ವೆಂಕಟಪ್ಪನವರು).— ಇನ್ನು 31 ಪ್ರಶ್ನೆಗಳು ಉಳಿದಿವೆ. ದಿನಕ್ಕೆ ಹತ್ತು ಪ್ರಶ್ನೆಗಳಂತೆ ಉತ್ತರ ಒದಗಿಸಿದರೂ ಮುಗಿಯುತ್ತವೆ.

The Hon'ble Sri H. C. DASAPPA. (Leader of the House)—Sir, I shall strive my utmost to see that all the answers are furnished. It is quite likely that some of them may require collection of a lot of material. But in any case I will make my honest best to see that answers are furnished to all those questions remaining over.

LEGISLATIVE BUSINESS.

The Mysore Race Courses Licensing Bill, 1951.

Mr. SPEAKER (The Hon'ble Sri V. Venkatappa)—The Mysore Race Courses Licensing Bill, 1951, as reported by the Select Committee.

Motion to consider.

The Hon'ble Sri T. MARIAPPA.—Sir, I move;

"That the Mysore Race-Courses Licensing Bill, 1951, as reported by the Select Committee, be taken into consideration."

Sir, the Select Committee has made very minor changes keeping intact the scheme of the Bill. The main purpose of the Bill, as I said last time, is to license Race Courses and those people who are connected with racing. With these few words, I request that the Hon'ble House may kindly take the Report of the Select Committee into consideration.

Mr. SPEAKER.—Motion moved:

"That the Mysore Race-Courses Licensing Bill, 1951, as reported by the Select Committee, be taken into consideration."

*ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ಸ್ವಾಮಿ, ಈ ತೆರನಾದ ಒಂದು ಮಸೂದೆ ಈ ಸಭೆಯ ಮುಂದೆ ಬಂದು ಕಾನೂನಾಗುತ್ತಿರುವುದು ಇದೇ ಮೊದಲನೆಯ ಸಲ. ನಮ್ಮ ದೇಶದಲ್ಲಿ ಕುದುರೆ ಜೂಜಿಗೆ ಸಂಬಂಧಪಟ್ಟ ಕಾನೂನು ಬೇರೆ ಇರಲಿಲ್ಲ. ಇದ್ದರೂ ಕೂಡ ತೆರಿಗೆಗಳನ್ನು ವಿಧಿಸುವುದು ಮತ್ತು ಪೋಲೀಸ್ ಆಕ್ಟ್ ಪ್ರಕಾರ ಯಾವ ವಿಧದಲ್ಲಿ ಹತೋಟಿಗೊಳಪಡಿಸಬೇಕೋ ಅದನ್ನು ಮಾಡಲು ಮಾತ್ರ ಇತ್ತು. ಸ್ಥೂಲವಾಗಿ ಎಲ್ಲ ಅಂಶಗಳನ್ನೂ ಒಳಗೊಂಡ ಒಂದು ಮಸೂದೆ ಈ ವಿಚಾರದಲ್ಲಿ ಅಗತ್ಯವೆಂದು ಭಾವಿಸಿ ಸರ್ಕಾರದವರು ಇದನ್ನು ತಂದಿರುವುದು ನ್ಯಾಯವೂ ಸರ್ವಸಮ್ಮತವೂ ಆಗಿದೆ. ಈ ವಿಧವಾದ ಕಾನೂನು ಇತರ ಕೆಲವು ಸಂಸ್ಥಾನಗಳಲ್ಲಿ ಜಾರಿಗೆ ಬಂದಿದೆ. ಈ ಕಾನೂನಿನಿಂದ ಎಲ್ಲಿ ಕುದುರೆ ಜೂಜು ನಡೆಸುತ್ತಾರೋ ಆ ಪ್ರದೇಶಕ್ಕೆ ಮತ್ತು ಕುದುರೆ ಜೂಜಿನಲ್ಲಿ ಭಾಗವಹಿಸುವುದಕ್ಕೆ ಒಂದು ನಿಬಂಧನೆಯನ್ನು ವಿಧಿಸಿ, ಹತೋಟಿಯಲ್ಲಿಟ್ಟು ಅಲ್ಲಿ ಯಾವ ವಿಧವಾದ ಅನಾನುಕೂಲಗಳೂ ಅಚಾತುರ್ಯಗಳೂ ನಡೆಯದೇ ಇರುವ ಹಾಗೆ ಮಾಡುವುದಕ್ಕೆ ಬಹುಮಟ್ಟಿಗೆ ಈ ಮಸೂದೆ ಸಹಾಯಕವಾಗಿದೆ ಎಂದು ಹೇಳಬಹುದು. ಇಷ್ಟೇ ಅಲ್ಲದೆ ಇದರಿಂದ ದೇಶಕ್ಕೆ ಒಂದು ರೀತಿಯಲ್ಲಿ ವರಮಾನ ಕೂಡ ಬರುವುದಾಗಿದೆ. ಈ ಮಸೂದೆಯ ಪ್ರಕಾರ ಯಾರಾದರೂ ಕುದುರೆ ಜೂಜಿನ ಮೈದಾನವನ್ನು ಹೊಂದಿರುವವರು ಅಥವ ಮೈದಾನವನ್ನು ಗುತ್ತಿಗೆ ಅಥವ ಬಾಡಿಗೆಗೆ ಇಟ್ಟುಕೊಂಡು ಜೂಜು ನಡೆಸುವವರು ಸರ್ಕಾರದ ಅಪ್ಪಣೆಯನ್ನು ಪಡೆಯದೆ ನಡೆಸುವ ಹಾಗಿಲ್ಲ. ಹಾಗೆಯೇ ಇದರಲ್ಲಿ ಮತ್ತೊಂದಂಶ ಅಡಕವಾಗಿದೆ. ಅದೇನೆಂದರೆ ಜೂಜಿನ ಸಮಯದಲ್ಲಿ 'ಬುಕ್ಕೀಸ್' ಎಂದು ಹೇಳುತ್ತಾರೆ, ಇದಕ್ಕೆ ನನಗೆ ಕನ್ನಡ ಪದ ಗೊತ್ತಿಲ್ಲ, ಅವರು ಯಾರೆಂಬುದು ಗೊತ್ತಿಲ್ಲ, ಇವರು ವಿಚಿತ್ರವಾಗಿ ಚಮತ್ಕಾರವಾದ ರೀತಿಯಲ್ಲಿ ತಮ್ಮ ಕಾರ್ಯಭಾರ ನಡೆಸುತ್ತಾರೆ. ನಿಮಿಷದಲ್ಲಿ ಸಾವಿರಾರು, ಲಕ್ಷಾಂತರ ರೂಪಾಯಿಗಳ ಹಣದ ವ್ಯವಹಾರ ಇವರಲ್ಲಿ ನಡೆದು ಹೋಗುತ್ತದೆ. ಆದುದರಿಂದ ಇವರನ್ನೆಲ್ಲ ಒಂದು ಹತೋಟಿಗೊಳಪಡಿಸುವುದು ಅಗತ್ಯವೆಂದು ಭಾವಿಸಿರುವುದು ಈ ಮಸೂದೆಯಿಂದ ವ್ಯಕ್ತಪಡುತ್ತದೆ. ಇವರೂ ಕೂಡ 'ಪರ್ಮಿಟ್' ಅಂದರೆ, ಅಪ್ಪಣೆ ಇಲ್ಲದೆ ಈ ವಿಧವಾದ ವ್ಯವಹಾರವನ್ನು ನಡೆಸಬಾರದೆಂದು ಈ ಕಾನೂನಿನಲ್ಲಿ ಸ್ಪಷ್ಟಪಡಿಸಿದ್ದಾರೆ. ಅಲ್ಲದೆ ಯಾವ ಸಂದರ್ಭಗಳಲ್ಲಿ ಲೈಸೆನ್ಸ್‌ಗಳು ಮತ್ತು ಪರ್ಮಿಟ್‌ಗಳನ್ನು ಕೊಡಬಹುದು ಮತ್ತು ಜೂಜಿನ ಪ್ರದೇಶ ಯಾವ ಸ್ಥಿತಿಗತಿಗಳಲ್ಲಿರಬೇಕು ಇವುಗಳೆಲ್ಲವನ್ನು ವಿಮರ್ಶೆ ಮಾಡಿ ಗಮನಕ್ಕೆ ತೆಗೆದುಕೊಂಡು ಸರ್ಕಾರದವರು ಲೈಸೆನ್ಸ್ ಕೊಡುವುದು. ಒಂದು ವೇಳೆ ಲೈಸೆನ್ಸ್ ಕೊಟ್ಟ ಮೇಲೆ ಷರತ್ತುಗಳಿಗನುಸಾರವಾಗಿ ಕುದುರೆ ಜೂಜಿನ ವ್ಯವಹಾರ ನಡೆಯದಿದ್ದರೆ ಆಗ ಲೈಸೆನ್ಸ್ ವಾಪಸು ತೆಗೆದುಕೊಳ್ಳುವುದಕ್ಕೂ ಈ ಮಸೂದೆಯಲ್ಲಿ ಅವಕಾಶ ಮಾಡಿದ್ದಾರೆ. ಹೀಗೆ ಉತ್ತಮ ರೀತಿಯಲ್ಲಿ ಮಾಡಿರುವ ಮತ್ತು ಪ್ರಯೋಜನಕಾರಿಯಾದ ಒಂದು ಮಸೂದೆಯನ್ನು ಸರ್ಕಾರದವರು ಮಂಡಿಸಿದ್ದಾರೆ. ಇದನ್ನು ಸೆಲೆಕ್ಟ್ ಕಮಿಟಿಯವರು ಕೂಲಂಕಷವಾಗಿ ವಿಮರ್ಶೆ ಮಾಡಿ, ಈಗತಾನೇ ಹೇಳಿದಂತೆ, ಸ್ವಲ್ಪವಾದರೂ ಬಹಳ ಉಪಯುಕ್ತವಾದ ಬದಲಾವಣೆಗಳನ್ನು ಸೂಚನೆ ಮಾಡಿದ್ದಾರೆ. ಈ ಮಸೂದೆಯು ಮತ್ತು ಸೆಲೆಕ್ಟ್ ಕಮಿಟಿಯವರು ಮಾಡಿರುವ ವರದಿಯೂ ಬಹಳ ಉತ್ತಮವಾಗಿವೆ. ಇದನ್ನು ಸಭೆಯವರು ಅನುಮೋದಿಸಬಹುದೆಂದು ಹೇಳಿ ನಾನು ಈ ಮಸೂದೆಯನ್ನೂ ಸೆಲೆಕ್ಟ್ ಕಮಿಟಿಯವರ ವರದಿಯನ್ನೂ ಸ್ವಾಗತಿಸುತ್ತೇನೆ.

Mr. SPEAKER.—The question is:

"That the Mysore Race Courses Licensing Bill, 1951, as reported by the Select Committee be taken into consideration."

The motion was adopted.

---

* Asterisk indicates that the speech concerned has not been returned approved by the Member concerned.

Mr. SPEAKER.—Clauses 2 to 14, both inclusive. The question is :

"That Clauses 2 to 14, both inclusive, stand part of the Bill."

The motion was adopted.

Clauses 2 to 14, both inclusive, were added to the Bill.

Mr. SPEAKER.—The question is :

"That the Schedule stand part of the Bill."

The motion was adopted.

The Schedule was added to the Bill.

Mr. SPEAKER.—Clause 1. The question is :

"The Clause 1 stand part of the Bill."

The motion was adopted.

Clause 1 was added to the Bill.

Mr. SPEAKER.—Title and Preamble. The question is :

"That the Title and the Preamble stand part of the Bill."

The motion was adopted.

The Title and the Preamble were added to the Bill.

Motion to pass.

The Hon'ble Sri T. MARIAPPA.—Sir, I move :

"That the Mysore Race Courses Licensing Bill, 1951, as reported by the Select Committee, be passed."

Mr. SPEAKER.—The question is :

"That the Mysore Race Courses Licensing Bill, 1951, as reported by the Select Committee, be passed."

The motion was adopted.

Special Motion

Mr. SPEAKER (The Hon'ble Sri V. Venkatappa).—The Special motion *re* : Penalty prescribed under Article 193 of the Constitution in respect of a member.

Penalty prescribed under Article 193 of the Constitution in respect of a member.

The Hon'ble Sri H. C. DASAPPA (Leader of the House).—Sir, I move the following motion.

"Whereas the Hon'ble Speaker has declared that Sri K. R. Sreekantsswar, a Member of this Assembly, is liable to the penalty provided in article 193 for sitting as a Member of this House on the 8th October 1951 before he complied with the requirements of article 188 and that the imposition of the penalty is a matter for the House to determine,

And whereas the Hon'ble Speaker has recommended that in the circumstences of the case the matter may be dropped,

And in view of the explanatory statement made by the Hon'ble Member,

This House resolves that the penalty prescribed by article 193 be not imposed on Sri K. R. Sreekanteswar for sitting as a Member of the House on 8th October 1951 before complying with the requirements of article 188."

Sir, I do not think it requires any arguments on my part to commend this motion for the acceptance of the House. We are of course going on with this democracy in its rather infant stages and it may be very difficult for every member to know the full import and significance of some of his actions and only the House must be satisfied with the explanation offered by the Hon'ble Member and I would ask the House to view this matter generously and accept the motion. But in any case, the law has to take its course and there is a necessity for this House to have a resolution like this formally moved and adopted by the House. I therefore commend the same for the acceptance of the House.

Mr. SPEAKER.—Motion moved:—

"Whereas the Hon'ble Speaker has declared that Sri K. R. Sreekanteswar, a Member of this Assembly, is liable to the penalty provided in article 193 for sitting as a Member of this House on the 8th October 1951 before he complied with the requirements of article 188 and that the imposition of the penalty is a matter for the House to determine,

And whereas to the Hon'ble Speaker has recommended that in the circumstances of the case the matter may be dropped,

And in view of the explanatory statement made by the Hon'ble Member,

This House resolves that the penalty prescribed by article 193 be not imposed on Sr K. R. Sreekanteswar for sitting as a Member of the House on 8th October 1951 before complying with the requirements of article 188."

Sri A. BHEEMAPPA NAIK (Chitaldrug District—General.)—I support this motion with out any speech.

Mr. SPEAKER.—The question is :—

"Whereas the Hon'ble Speaker has declared that Sri K. R. Sreekanteswar, a Member of this Assembly, is liable to the penalty provided in article 193 for sitting as a member of this House on the 8th October 1951 before he complied with the requirements of article 188 and that the imposition of the penalty is a matter for the House to determine,

(SRI A. BHEEMAPPA NAIK.)

And whereas the Hon'ble Speaker has recommended that in the circumstances of the case the matter may be dropped,

And in view of the explanatory statement made by the Hon'ble Member,

This House resolves that penalty prescribed by article 193 be not imposed on Sri K. R. Sreekanteswar for sitting as a Member of the House on 8th October 1951 before complying with the requirements of article 188."

The motion was adopted.

Sri K. R. SREEKANTESWAR (Bangalore City—General).—I must respectfully thank you Sir and through you, Hon'ble Members of the House and the Hon'ble the Leader of the House.

The Payment of Wages (Mysore Amendment) Bill, 1951.

Motion to consider.

The Hon'ble Sri K. T. BHASHYAM (Minister for Law and Labour).—Sir, I move:

"That the Payment of Wages (Mysore Amendment) Bill, 1951, be taken into consideration."

The point that arises in this Bill is that till now we had the Payment of Wages Act of Mysore in operation. We had certain clauses for the benefit of the employees in that Act which are not to be found in the Indian Payment of Wages Act which has now been extended to Mysore. By reason of the extension of the Indian Act, the Mysore Act ceases to be in operation and therefore the employees lose the benefit of the several clauses which were in our Act and which are not to be found in the Indian Act. Since labour legislation is a concurrent subject we are free to amend the Indian Payment of Wages Act as it applies to us in such manner as may be suitable provided we get the permission of the Central Government. Now we have taken their permission and we are tabling this amendment.

The main points which accrue to the benefit of the employees by reason of this amendment are that where a person has taken his provident fund and has gone out of employment and is again re-employed, he loses the benefit of the provident fund, if we do not pass this amendment. If we pass this amendment, we can take back the provident fund given to him and treat it as having been started from the very beginning and he gets an extra advantage.

So also are certain other small deductions which are permissible, deductions specially authorised for the purpose of the benefit of the employed person. For instance, when an employee says that he is a member of a labour association and he wants that the subscription to the labour association may be paid from out of the wages–it is an advantage to the employee to see that it is done by the management itself—such deductions may be permissible. These benefits we want to provide for the employees.

Another thing is this. Where increments are withheld, till now no notice was necessary to be served on the employee. We say that a notice should be given to an employee by the employer before an increment can be withheld and the employee must be heard. So also where an employee is called upon to do some job for which the same wages are not payable, we say that the same wages that he was drawing must be paid irrespective of the fact whether the job which he is called upon now to do is or is not fetching the same wages for anybody else. Supposing an employee is now drawing about Rs. 60 a month. Now he is called upon to do some other job for which only Rs. 40 is being paid to somebody else. It is not open to the employer to say: "You are now called upon to do a duty which fetches Rs. 50". The employer has to give Rs. 60 because it will be treated as a deduction and such deductions are not permissible.

So these are amendments which accrue to the benefit of the employee and we want the employee to have those benefits. Therefore these amendments are proposed. I submit these are not controversial and the Hon'ble Members will give their assent to the Bill.

Mr. SPEAKER.—The question is :

"That the Payment of Wages (Mysore Amendment) Bill, 1951, be taken into consideration."

The motion was adopted.

Mr. SPEAKER.—Clauses 2 and 3. The question is :

"That Clauses 2 and 3 stand part of the Bill."

The motion was adopted.

Clauses 2 and 3 were added to the Bill.

Mr. SPEAKER.—Clause 1. The question is :

"That Clause 1 stand part of the Bill."

The motion was adopted.

Clause 1 was added to the Bill.

Mr. SPEAKER.—Title and Preamble. The question is :

"That the Title and the Preamble stand part of the Bill."

The motion was adopted.

The Title and the Preamble were added to the Bill.

Motion to pass.

The Hon'ble Sri K. T. BHASHYAM.—Sir, I move :

"That the Payment of Wages (Mysore Amendment) Bill, 1951, be passed."

Mr. SPEAKER.—The question is :

"That the Payment of Wages (Mysore Amendment) Bill, 1951, be passed."

The motion was adopted.

Report of the Committee of Privileges *re*: Article in 'Prabhata' dated 28th March 1951.

Motion to consider.

Sri K. PUTTASWAMY (Mysore District—General).—Sir, I move :

"That the Report of the Committee of Privileges in regard to the article in the newspaper *Prabhata*, dated 28th March 1951, be taken into consideration."

ಕಳೆದ ಏಪ್ರಿಲ್ 5ನೆಯ ತಾರೀಖಿನ ದಿನ ಮಾನ್ಯ ಅಧ್ಯಕ್ಷರವರು ಮೈಸೂರಿನಲ್ಲಿ ಹೊರಡುತ್ತಿರುವ ಪ್ರಭಾತ ಪತ್ರಿಕೆಯಲ್ಲಿ ಪ್ರಕಟಪಡಿಸಿದ ಮಾರ್ಚಿ ೨೮ನೆಯ ತಾರೀಖಿನ ಒಂದು ಲೇಖನ ಈ ಸಭೆಯ ಹಕ್ಕುಬಾಧ್ಯತೆಗಳಿಗೆ ಧಕ್ಕೆ ಬಂದಿದೆ ಎಂಬ ವಿಚಾರವನ್ನು ಪರ್ಯಾಲೋಚನೆಗಾಗಿ ಈ ಸಭೆಯ ಗಮನಕ್ಕೆ ತಂದುದು ಈ ಸಭೆಗೆ ಜ್ಞಾಪಕವಿರಬಹುದು. ಆ ಪತ್ರಿಕೆಯಲ್ಲಿ "ಮಂತ್ರಿಗಳ ತಾಳಕ್ಕೆ ತಕ್ಕಂತೆ ಮೇಳ ಕಟ್ಟುವ ಶಾಸನಸಭಾ ಸದಸ್ಯರುಗಳು" ಎಂಬ ಶಿರೋನಾಮೆಯಲ್ಲಿ ಕೆಲವು ಟೀಕೆಗಳನ್ನು ಮಾಡಿದ್ದರು. ಆ ಲೇಖನವನ್ನು ಹಕ್ಕುಬಾಧ್ಯತೆಗಳಿಗೆ ಸಂಬಂಧಪಟ್ಟ ಸಮಿತಿಯು ಪರಿಶೀಲಿಸಿ ಈ ಸಭೆಯ ಹಕ್ಕುಬಾಧ್ಯತೆಗಳಿಗೆ ಧಕ್ಕೆಯನ್ನುಂಟುಮಾಡಿದೆಯೆಂದು ಅಭಿಪ್ರಾಯಪಟ್ಟರು. ಅದರಿಂದ ಆ ಪತ್ರಿಕೆಯ ಸಂಪಾದಕರ ಸಮಜಾಯಿಷಿ ಕೇಳಬೇಕೆಂದು ತೀರ್ಮಾನಮಾಡಿದ್ದರ ಮೇಲೆ ಆ ಪತ್ರಿಕೆಯ ಸಂಪಾದಕರು ಒಂದು ಪತ್ರವನ್ನು ಬರೆದು ತಾವು ಈ ಸಭೆಯ ಮರ್ಯಾದೆಯನ್ನು ಕಾಪಾಡುವುದಕ್ಕೆ ಯಾವಾಗಲೂ ಸಿದ್ಧವಾಗಿದ್ದಾರೆಂದೂ ಮತ್ತು ಈ ಸಭೆಗೆ ಈ ಲೇಖನದಲ್ಲಿ ಯಾವ ಮನಸ್ಸಿಗೆ ನೋವನ್ನುಂಟುಮಾಡುವ ಉದ್ದೇಶದಿಂದ ಯಾವ ಪದಗಳನ್ನೂ ಉಪಯೋಗಿಸಿಲ್ಲವೆಂದೂ, ಉಪಯೋಗಿಸಿರುವುದಕ್ಕೆ ತಮ್ಮ ವಿಷಾದವನ್ನು ವ್ಯಕ್ತಪಡಿಸಿ ಮೈಸೂರು ಶಾಸನಸಭೆಗೆ ಅವಮಾನವುಂಟಾಗುವಂಥ ಪ್ರಸಂಗ ಉಂಟುಮಾಡುವುದು ತಮ್ಮ ಉದ್ದೇಶವಾಗಿರಲಿಲ್ಲವೆಂದೂ ತಿಳಿಸಿದ್ದಾರೆ. ಈ ವಿಚಾರದಲ್ಲಿ ಬಂದ ಈ ಸಮಜಾಯಿಷಿಯನ್ನು ಹಕ್ಕುಬಾಧ್ಯತೆಗಳ ಸಮಿತಿಯವರು ಒಪ್ಪಿಕೊಂಡು ಆ ಪತ್ರಿಕೆಯ ಮೇಲೆ ಯಾವ ಕ್ರಮವನ್ನೂ ಜರುಗಿಸಬಾರದೆಂದು ಶಿಫಾರ್ಸು ಮಾಡಿದ್ದಾರೆ. ಆ ಶಿಫಾರ್ಸು ಸಭೆಯ ಮುಂದಿದೆ. ಅದನ್ನು ಒಪ್ಪಿಕೊಳ್ಳಬೇಕೆಂದು ನಾನು ಸೂಚಿಸುತ್ತೇನೆ.

Mr. SPEAKER.—The question is :

"That the Report of the Committee of Privileges in regard to the article in the newspaper *Prabhata*, dated 28th March 1951, be taken into consideration."

The motion was adopted.

Motion to adopt.

Sri K. PUTTASWAMY.—Sir, I move :

"That the recommendations of the Committee be adopted."

Mr. SPEAKER.—The question is :

"That the recommendations of the Committee be adopted.

The motion was adopted.

ಅಧ್ಯಕ್ಷರು (ಮಾನ್ಯ ಶ್ರೀ ವಿ. ವೆಂಕಟಪ್ಪನವರು).—ಅಪ್ರೋಪ್ರಿಯೇಷನ್ ಬಿಲ್ಲಿಗೆ ಇನ್ನೂ ಮಹಾರಾಜರ ಶಿಫಾರಸ್ ದೊರೆತಿಲ್ಲವಾದ್ದರಿಂದ ಅದನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಈ ದಿವಸ ಕಾರ್ಯಕ್ರಮಪಟ್ಟಿಯಲ್ಲಿ ಸೇರಿಸಿರುವ ವಿಷಯಗಳು ಇನ್ಯಾವುದೂ ಉಳಿದಿರುವುದಿಲ್ಲ. ಆದರೆ ಮಾನ್ಯ ಸಭಾನಾಯಕರು ಇನಾಂ ಬಿಲ್ಲನ್ನು ಸಾಮಾನ್ಯ ಚರ್ಚೆಗೆ ತೆಗೆದುಕೊಳ್ಳಬಹುದೆಂದು ಹೇಳಿದ್ದಾರೆ. ಸಭೆ ಅದಕ್ಕೆ ಒಪ್ಪುವುದಾದರೆ ಅದನ್ನು ತೆಗೆದುಕೊಳ್ಳಬಹುದು.

(ಕೆಲವರು ಒಪ್ಪಿಗೆಯನ್ನು ಸೂಚಿಸಿದರು.)

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು (ಬೆಂಗಳೂರು ಜಿಲ್ಲೆ).—ಒಂದು ವಿಷಯ ತಿಳಿಸಬೇಕಾಗಿದೆ. ಆ ಮಸೂದೆಗೆ ಸಂಬಂಧಪಟ್ಟ ಕಾಗದಪತ್ರಗಳನ್ನು ನಾವು ಈಗ ತಂದಿರುವುದಿಲ್ಲ. ಕಾರ್ಯಕ್ರಮಪಟ್ಟಿಯಲ್ಲಿ ಅದು ಈ ದಿವಸ ಇಲ್ಲದಿರುವುದರಿಂದ ನಾಳೆ ಅಥವಾ ನಾಡಿದ್ದು ಅದು ಸಭೆಯ ಮುಂದೆ ಬರಬಹುದೆಂದಿದ್ದೆವು. ಆದ್ದರಿಂದ ಅದನ್ನು ಈಗಲೇ ಚರ್ಚೆಗೆ ತೆಗೆದುಕೊಳ್ಳುವುದರ ಬದಲು, ಮಾನ್ಯ ಸಚಿವರು ಸಭೆಯಲ್ಲಿ ಮಂಡಿಸಿ ಅದರ ವಿಚಾರದಲ್ಲಿ ಕೆಲವು ವಿಷಯಗಳನ್ನು ಹೇಳಬಹುದು.

The Mysore Inam Villages (Abolition of Inam Tenure) Bill, 1951.

Motion to consider.

*The Hon'ble Sri H. SIDDAIYA (Minister for Revenue and Excise).—Sir, I move:

"That the Mysore Inam Villages (Abolition of Inam Tenure) Bill, 1951, as reported by the Select Committee, be taken into consideration."

Sir, when the Bill before reference to the Select Committee was taken into consideration, I explained the main objections of the Bill at that time. The objects of this Bill are two-fold. In the first place the object of abolition of the inam tenure in Inam Villages in the State of Mysore is that the long-standing tenants of these Inamdars can be registered as occupants. Secondly, in all fairness, fair and reasonable compensation is proposed to be given to all the inamdars who are entitled to it because they have lost the property and are put to considerable expenditure. The compensation has been calculated to come to about Rs. 1,75 lakhs. After the Bill was taken into consideration and explanation was given, the Hon'ble Members of this House discussed this at length and after discussion, the Bill was referred to the Select Committee consisting of a good number of members of this House to be considered by them in detail. The Select Committee members have met not once or twice, but as many as eight times. They have considered the Bill clause by clause in all seriousness, sympathy, forethought and sagacity. They have discharged their duty very satisfactorily. I wish to make that statement on the floor of the House. My thanks are due to them. And in this connection I must mention and acknowledge the services rendered to the Committee by the Secretary of the Legislature. When the Bill was taken to the Select Committee for consideration the Inamdars' Association of Mysore sent up a memorandum and copies of resolution passed by their Association. They were also considered by the Committee. Not satisfied with these, the Association further made representation that their representatives may be heard by the Select Committee. Ordinarily such a course is not adopted. But, with all that, the members of the Select Committee were kind enough, were considerate, and permitted the representatives, five in all, to appear before them and make their representations on behalf of the Inamdars. Similarly, on behalf of the Sringeri Mutt two representatives, Sri A. R. Nageswara Iyer and Sri A.V. Ramanathan also appeared before the Committee and urged the exclusion of the Sringeri Jahgir from the purview of this Bill. All the pros and cons, the merits and demerits and all other aspects of the problem were considered. After considering all these, they have prepared this report and I am placing such a report now for the consideration of this House.

Certain changes are of course effected as a result of the discussion in the Select Committee. It seems to me that from several representations made throughout Mysore and several parts of India, one aspect relating to this report is somewhat controversial. That is regarding the abolition of Sringeri Jahgir. Nothing harmful or injurious is done so far as the Sringeri Mutt is concerned. Of course their representatives, Sri Nageswara Iyer and Sri Ramanathan who appeared before the Committee took their whole time and tried their best to convince the members that it would be very desirable to exclude the Sringeri Jahgir from the purview of this Bill. Their arguments mostly, as they advanced, were based on sentiment. Sentiment has its own value. But I submit that it should be within certain limits. The members of the Committee at any rate felt that sentiment and reason must both be considered and

taken together and they came to the conclusion, as embodied in this report, that all the existing rights and privileges enjoyed by the Sringeri Jahgir shall continue.

They have also come to the conclusion that all their properties which are in their *khas* possession including temple buildings, mutt buildings, and others within the Jahgir or outside it shall continue to be the property of the Guru of the Sringeri Mutt. Some gentlemen who are outside the State and who perhaps are not in possession of the report are sending representations. Some of the representations I fail to understand. I think I am correct in submitting that their claims have also been considered in fairness and the report is very reasonable, equitable and convincing. I therefore appeal to the House to accept this report.

Sri W. H. HANUMANTHAPPA (Bangalore District — General).—The Hon'ble Minister has not said anything about the salient features of the report.

The Hon'ble Sri H. SIDDAIYA.—When several amendments are moved one after another, I will be in a position to explain them and I hope I will be able to convince the movers of such amendments.

Mr. SPEAKER.—Motion moved :

"That the Mysore Inam Villages (Abolition of Inam Tenure) Bill, 1951, as reported by the Select Committee, be taken into consideration."

Janab SYED ABDUR RAHMAN (Chikmagalur *cum* Shimoga—Muslim).-One point may be made clear. The Hon'ble Minister said something about the Sringeri Jahagir, mutt, temples, etc., and I wish to know whether other religious institutions and lands belonging to them are also excluded.

Sri G. A. ACHARYA (Bangalore District—General).—How is it relevant ?

Janab SYED ABDUR RAHMAN.—It is relevant.

The Hon'ble Sri H. SIDDAIYA.—They are not included.

(No member stood up to speak.)

SOME HON'BLE MEMBERS.—What about the Opposition ?

Sri K. R. SREEKANTESWAR (Bangalore City—General).—I have already submitted that we are not prepared to speak today.

Sri A. BHEEMAPPA NAIK (Chitaldrug District — General).—This is consideration motion. The clauses will come up later for consideration. Therefore every one welcomes the Bill.

Sri K. R. SREEKANTESWAR.—My submission is that we are not prepared and it was not also in the business set down for the day.

Sri B. HUTCHE GOWDA (Tumkur District—General).—There was no previous notice.

*ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ) —ಮಾನ್ಯ ರೆವಿನ್ಯೂ ಸಚಿವರು, ಜಹಗೀರುಗಳು ಮತ್ತು ಇನಾಂ ಗ್ರಾಮಗಳನ್ನು ರದ್ದುಮಾಡತಕ್ಕ ಬಗ್ಗೆ ರಚಿತವಾಗಿರುವ ಶಾಸನದ ಮೇಲೆ ಸೆಲೆಕ್ಟ್ ಸಮಿತಿಯವರು ಕೊಟ್ಟಿರುವ ವರದಿಯನ್ನು ಈ ದಿವಸ ನಮ್ಮ ಮುಂದೆ ಇಟ್ಟಿದ್ದಾರೆ. ಈಗ ನಾವು ಬಹು ಕಾಲದಿಂದ ಒತ್ತಾಯಪಡಿಸಿದಂಥಾ ಬಹಳ ಮುಖ್ಯವಾದ ಒಂದು ಭೂಸುಧಾರಣೆಯನ್ನು ಮಾಡುವ ಶಾಸನವನ್ನು ರಚನೆಮಾಡಲಿಕ್ಕೆ ಹೊರಟಿದ್ದೇವೆ. ದೇಶದ ಬಹುಭಾಗದ ಜನರು ತಮ್ಮ ಜೀವನಕ್ಕಾಗಿ ಭೂಮಿಯನ್ನು ಅವಲಂಬಿಸಿಕೊಂಡಿರುವುದು ನಮಗೆಲ್ಲರಿಗೂ ಗೊತ್ತಿರುವ ವಿಷಯ. ಭೂಮಿಯ ಮೇಲಿನ ಸ್ವಾಮ್ಯ ಬಹಳ ಕಾಲದಿಂದ ಒಂದು ವಿಧದಲ್ಲಿ ನಮ್ಮ ದೇಶದಲ್ಲಿ ನಡೆದುಕೊಂಡು ಬಂದಿದೆ. ಇದು ಸಾವಿರಾರು ವರ್ಷಗಳ ಹಿಂದೆ ಯಾವ ಸ್ಥಿತಿಯಲ್ಲಿತ್ತೋ ಅದೇ ಸ್ಥಿತಿಯಲ್ಲಿ ಇವತ್ತು ಇಲ್ಲ. ಆಗಿಂದಾಗ್ಯೆ ಪರಿಸ್ಥಿತಿಗನುಸಾರವಾಗಿ ಮತ್ತು ಆಗಿಂದಾಗ್ಯೆ ಜನರ ಮತ್ತು ಸರ್ಕಾರದ ರೀತಿ ನೀತಿಗನುಸಾರವಾಗಿ ಬದಲಾವಣೆಗಳನ್ನು ಹೊಂದುತ್ತಾ ಬಂದಿದೆ. ಪೂರ್ವದಲ್ಲಿ ಭೂಮಿಯನ್ನು ಅವಲಂಬಿಸಿರತಕ್ಕ ಕಸಬು ಬಹು ಮುಖ್ಯವಾಗಿತ್ತು. ಇತ್ತೀಚೆಗೆ ಬರಬರುತ್ತಾ ಇದಕ್ಕಿಂತಲೂ ಸುಲಭವಾದ ರೀತಿಯ ಸಂಪಾದನಾಮಾರ್ಗ ಜನರಿಗೆ ದೊರೆತ ಮೇಲೆ ಭೂಮಿಯ ಮೇಲಿನ ವ್ಯಾಮೋಹ ದಿನಕ್ರಮೇಣ ಕಡಿಮೆಯಾಗುತ್ತಾ ಬಂದಿದೆ. ಈಗ 100ಕ್ಕೆ 75 ಜನ ಭೂಮಿಯನ್ನು ಅವಲಂಬಿಸಿರುವುದಕ್ಕೆ ಮುಖ್ಯ ಕಾರಣವೇನೆಂದರೆ ಅವರಿಗೆ ಬೇರೆ ವಿಧವಾದ ಸಂಪಾದನಾಮಾರ್ಗಗಳು ಸಿಕ್ಕದೆ ಇರುವುದರಿಂದ ಅಥವಾ ಶಕ್ತಿಸಾಲದೇ ಇರುವುದರಿಂದ. ದೇಶದ ಆರ್ಥಿಕ ಸ್ಥಿತಿ ಪುನರ್ವ್ಯವಸ್ಥೆಯಾಗಬೇಕಾದರೆ, ಭೂಮಿಯನ್ನವಲಂಬಿಸಿರತಕ್ಕ ಬಹುಭಾಗದ ಜನರ ಪರಿಸ್ಥಿತಿ ಉತ್ತಮವಾಗಬೇಕಾದರೆ, ಇವತ್ತಿನ ಪರಿಸ್ಥಿತಿಗನುಗುಣವಾಗಿ ಭೂಸುಧಾರಣೆಗಳಾಗಬೇಕಾದ್ದು ಅತ್ಯವಶ್ಯಕವೆಂದು ಸರ್ಕಾರದವರಿಗೆ ಕಂಡುಬಂದಮೇಲೆ ಅವರು ಭೂಸುಧಾರಣಾ ಸಮಿತಿಯನ್ನು 1948ನೇ ಇಸವಿಯಲ್ಲಿ ರಚನೆಮಾಡಿದರು. ಆ ಸಮಿತಿಯವರಿಗೆ ಹಾಕಿಕೊಟ್ಟ terms of referenceಗಳ ಎಂದರೆ ಅವರು ವಿಮರ್ಶೆ ಮಾಡಬೇಕಾದಂಥ ವಿಚಾರಗಳ ಪೈಕಿ, ನಮ್ಮ ದೇಶದಲ್ಲಿರತಕ್ಕ ಭೂಸ್ವಾಮ್ಯದ ರೀತಿಯನ್ನು ಸಮಗ್ರವಾಗಿ ಪರಿಶೀಲನೆಮಾಡಿ ನಮ್ಮಲ್ಲಿರತಕ್ಕ ಖಾಯಂಗುತ್ತಾ, ಸರ್ವಮಾನ್ಯ ಮತ್ತು ಇತರ ಇನಾಂ ಗ್ರಾಮಗಳನ್ನು ಉಳಿಸಿಕೊಳ್ಳಬೇಕೇ ಅಥವಾ

(ಶ್ರೀ ಎಚ್. ಎಂ. ಚನ್ನಬಸಪ್ಪನವರು.)

ರದ್ದುಮಾಡಬೇಕೇ, ಉಳಿಸಿಕೊಂಡಲ್ಲಿ ಯಾವ್ಯಾವ ನಿಯಮಗಳಿಗನುಸಾರವಾಗಿ ಉಳಿಸಿಕೊಳ್ಳಬೇಕು, ರದ್ದುಮಾಡಬೇಕಾದರೆ ಯಾವ ರೀತಿ ರದ್ದುಮಾಡಬೇಕು ಇತ್ಯಾದಿ ವಿಷಯಗಳನ್ನು ಪರಿಶೀಲನೆಮಾಡಿ ವರದಿಮಾಡಬೇಕೆಂದು ಆ ಸಮಿತಿಯವರಿಗೆ ಸಲಹೆ ಕೊಟ್ಟರು. ಆ ಸಮಿತಿಯಲ್ಲಿ ಭೂಸ್ವಾಮ್ಯದ ವಿಚಾರದಲ್ಲಿ ಅನುಭವವಿರತಕ್ಕ ಈ ಸಭೆಯ ಮಾನ್ಯ ಸದಸ್ಯರನೇಕರು ಇದ್ದರು. ಈ ಸಭೆಯ ಅಧ್ಯಕ್ಷರಾದ ತಾವೂ ಕೂಡ ಆ ಸಮಿತಿಯ ಸದಸ್ಯರಾಗಿದ್ದಿರಿ. ಆ ಸಮಿತಿ ಮೊಟ್ಟಮೊದಲು ಒಂದು ತಾತ್ಕಾಲಿಕ ವರದಿಯನ್ನು ಸರ್ಕಾರದವರಿಗೆ ಕಳುಹಿಸಿಕೊಟ್ಟಿತು. ಅದರಲ್ಲಿ ಮುಖ್ಯವಾಗಿ ಸರ್ಕಾರದವರು ತಮ್ಮ ಅಧಿಕಾರವನ್ನು ಬೇರೆಯವರಿಗೆ ವಹಿಸಿಕೊಟ್ಟಿದ್ದ ಇನಾಂ ಗ್ರಾಮಗಳು ಮತ್ತು ಜಹಗೀರಿಗಳ ವಿಷಯವನ್ನು ಪರಿಶೀಲನೆಗೆ ತೆಗೆದುಕೊಂಡು ತಮ್ಮ ಅಭಿಪ್ರಾಯವನ್ನು ಸರ್ಕಾರದವರಿಗೆ ತಿಳಿಸಿತು.

ಅದರಲ್ಲಿ ಏನೇನು ಸಲಹೆಮಾಡಿದೆ ಎಂಬ ಎಲ್ಲಾ ವಿಷಯಗಳನ್ನು ಪರಿಶೀಲನೆಮಾಡುವುದು ಇಲ್ಲಿ ಅನಗತ್ಯ. ಮೂಲತತ್ವ ಏನಿರಬೇಕೆಂಬುದನ್ನು ನಾವು ಈಗ ಗಣನೆಗೆ ತೆಗೆದುಕೊಳ್ಳಬೇಕು. ಭೂಮಿಯ ಮಾಲೀಕ, ಭೂಮಿಯ ವಿಷಯದಲ್ಲಿ ಮುಖ್ಯವಾಗಿ ಸಂಪರ್ಕ ಇಟ್ಟುಕೊಂಡಿರುವ ಸರ್ಕಾರ ಮತ್ತು ಭೂಮಿಯನ್ನು ಸಾಗುವಳಿಮಾಡತಕ್ಕವರು, ಈ ಮೂರು ಜನರ ಪರಸ್ಪರ ಸಂಬಂಧ ಹೇಗಿರಬೇಕು ಎಂಬುದನ್ನು ತತ್ವದೃಷ್ಟಿಯಿಂದ ಸ್ವಲ್ಪ ಪರಿಶೀಲನೆ ಮಾಡಬೇಕಾದ್ದು ಈಗ ಅಗತ್ಯ. ನಮ್ಮ ದೇಶದಲ್ಲಿ ಭೂಸ್ವಾಮ್ಯ ಇದುವರೆಗೂ ಪೂರ್ವದಿಂದ ಹೇಗೆ ನಡೆದುಕೊಂಡು ಬಂದಿದೆಯೆಂದರೆ ಸರ್ಕಾರದವರು ಅವರಿಗೆ ಭೂಮಿಯ ಮೇಲಿರತಕ್ಕ ಸಂಪೂರ್ಣವಾದ ಹಕ್ಕನ್ನು ಕೆಲವು ನಿಯಮಾವಳಿಗಳಿಗೆ ಒಳಪಡಿಸಿ ಜನರಿಗೆ ವ್ಯವಸಾಯಮಾಡಲು ಕೊಡತಕ್ಕ ಒಂದು ಪದ್ಧತಿ ಅನೂಚಾನವಾಗಿ ನಡೆದುಕೊಂಡು ಬಂದಿದೆ. ಹೀಗೆ ನಡೆದುಕೊಂಡು ಬರುತ್ತಾ ಇದ್ದ ಕಾಲದಲ್ಲಿ ಆಗಿಂದಾಗ್ಯೆ ಆಳ್ವಿಕೆ ನಡೆಸುತ್ತಾ ಇದ್ದವರು ಅವರವರ ಅನುಕೂಲಕ್ಕೆ ತಕ್ಕಂತೆ, ಅವತ್ತಿನ ಪರಿಸ್ಥಿತಿಗೆ ತಕ್ಕಂತೆ ಕೆಲವು ದೊಡ್ಡ ದೊಡ್ಡ ಜಮೀನುಗಳನ್ನು ಅಥವಾ ಗ್ರಾಮಗಳನ್ನು ಕೆಲವು ಕಾರಣಗಳಿಗಾಗಿ ಕೆಲವು ನಿಯಮಗಳಿಗೊಳಪಡಿಸಿ ಆ ಗ್ರಾಮಗಳ ಮೇಲಿನ ಸಂಪೂರ್ಣವಾದ ಹಕ್ಕನ್ನು ಜನಗಳಿಗೆ ಕೊಟ್ಟರು.

ಇವುಗಳೇ ಇವತ್ತಿನ ದಿವಸ ನಮ್ಮ ದೇಶದಲ್ಲಿರತಕ್ಕ ಇನಾಂ ಗ್ರಾಮಗಳು, ಇನಾಂ ಜಮೀನುಗಳು ಮತ್ತು ಜಹಗೀರುಗಳು. ಅವು ಒಂದೇ ತರಹ ಇಲ್ಲ. ಮತ್ತು ಇನಾಂದಾರರುಗಳಿಗೂ ಜಹಗೀರುದಾರರುಗಳಿಗೂ ಇರತಕ್ಕ ಅಧಿಕಾರವ್ಯಾಪ್ತಿಯೂ ಒಂದೇ ಸಮನಾಗಿಲ್ಲ.

ಈಗ ನಮ್ಮಲ್ಲಿರುವ ಇನಾಂತಿಗಳನ್ನು ನೋಡುವುದಾದರೆ, ಇಲ್ಲಿ ಸರ್ವಿಸ್ ಇನಾಂ, ಕೊಡಗಿ ಇನಾಂ, ಸಾರ್ವಜನಿಕ ಹಿತದೃಷ್ಟಿಯಿಂದ ಕೆಲಸಮಾಡುವ ಸಂಸ್ಥೆಗಳಿಗೆ ಸಂಬಂಧಪಟ್ಟ ಇನಾಂ, ಮತಸಂಬಂಧ ಸಂಸ್ಥೆಗಳಿಗೆ ಸಂಬಂಧಪಟ್ಟ ಇನಾಂ, personal inam [ಅಂದರೆ ಖಾಯಂಗುತ್ತಾ, ಸರ್ವಮಾನ್ಯ ಮುಂತಾದುವು]—ಇತ್ಯಾದಿ ನಾನಾ ಹೆಸರುಗಳನ್ನೊಳಗೊಂಡ ಇನಾಂತಿಗಳಿವೆ. ಮೇಲಾಗಿ ಜಹಗೀರುಗಳಿವೆ. ಒಟ್ಟು ಸುಮಾರು ಎರಡು ಸಾವಿರಕ್ಕೂ ಮೇಲ್ಪಟ್ಟಿವೆಯೆಂದು ಗೊತ್ತಾಗಿದೆ. ಈ ಇನಾಂ ಗ್ರಾಮಗಳನ್ನು ಹಿಂದೆ ರಾಜ್ಯವಾಳುತ್ತಿದ್ದವರು ಇನಾಂದಾರರಿಗೆ ಕೊಟ್ಟ ಕಾಲದಲ್ಲಿ ಕೆಲಕೆಲವು ನಿಯಮಗಳಿಗೊಳಪಟ್ಟು ಕೊಟ್ಟಿದ್ದಾರೆಂದು ಗೊತ್ತಾಗುತ್ತದೆ. ಕೆಲವರಿಗೆ ಗ್ರಾಮಗಳ ಮೇಲ್ವಿಚಾರಣೆ ನೋಡಿಕೊಂಡು ಕಂದಾಯವನ್ನು ವಸೂಲುಮಾಡುವ ಹಕ್ಕನ್ನು ಮಾತ್ರ ಕೊಟ್ಟರು. ಇನ್ನು ಕೆಲವರಿಗೆ ಕಂದಾಯ ವಸೂಲುಮಾಡುವುದರ ಜೊತೆಗೆ ತಾನೂ ಸಾಗುವಳಿಮಾಡುವುದಕ್ಕೆ ಜಮೀನನ್ನು ಮಾಡಿಕೊಳ್ಳಬಹುದೆಂದು ಹೇಳಿದ್ದಾರೆ. ಇನ್ನು ಕೆಲವರಿಗೆ ಕೆಲವು ರೆವಿನ್ಯೂ ಬಾಬು, ಎಕ್ಸೈಸ್ ಮತ್ತು ಫಾರೆಸ್ಟ್‌ಗಳ ವರಮಾನಗಳ ಮೇಲಿನ ಹಕ್ಕನ್ನು ಕೊಟ್ಟಿದ್ದಾರೆ;—ಹೀಗೆ ನಾನಾ ತೆರನಾಗಿ ಕೆಲವರಿಗೆ ಹಕ್ಕುಗಳನ್ನು ಕೊಟ್ಟಿದ್ದಾರೆ, ಕೆಲವರಿಗೆ ಇಲ್ಲ. ಕೆಲವು ಕಡೆ ಇನಾಂದಾರರಿಗೆ ಜ್ಯುಡಿಷಿಯಲ್ ಅಧಿಕಾರಗಳು, ಅಮಲ್ದಾರರ ಅಧಿಕಾರಗಳು, ಸಬ್‌ಡಿ. ಜಡ್ಜ್ ಅಧಿಕಾರಿಗಳ ಅಧಿಕಾರಗಳು ಮತ್ತು ಡೆಪ್ಯುಟಿ ಕಮೀಷನರ ಅಧಿಕಾರಗಳು—ಇವುಗಳನ್ನು ಕೊಟ್ಟಿರತಕ್ಕ ನಿದರ್ಶನಗಳೂ ಉಂಟು. ಇವೆಲ್ಲವೂ ಬಹಳಕಾಲದ ಹಿಂದೆ ಕೊಟ್ಟಂಥವುಗಳು. ಯಾವಾಗ ಸರ್ಕಾರ ತನಗಿರತಕ್ಕ ಅಧಿಕಾರಗಳನ್ನು ಇನಾಂದಾರರುಗಳಿಗೆ ಕೊಟ್ಟುಬಿಟ್ಟರೋ ಆಗ್ಗೆ ಇನಾಂದಾರರುಗಳ ಮೇಲೆ ಸರ್ಕಾರದವರ ನೇರವಾದ ಹತೋಟಿ ಮತ್ತು ಮೇಲ್ವಿಚಾರಣೆ ಕಮ್ಮಿಯಾಗುತ್ತಾ ಬಂತು. ಇದರ ಪರಿಣಾಮವಾಗಿ ಇನಾಂ ಗ್ರಾಮಗಳ ಪರಿಸ್ಥಿತಿ ದಿನೇ ದಿನೇ ಹೀನಸ್ಥಿತಿಗೆ ಬರುತ್ತಾ ಬಂತು. ಅದರಲ್ಲೂ ಮನುಷ್ಯನಿಗೆ ಸ್ವಾಭಾವಿಕವಾದ ಆಶಾಕಾಂಕ್ಷೆಗಳೇನಿವೆಯೋ ಅವುಗಳಿಗನುಸಾರವಾಗಿ ಕೆಲವು ಜನರು ಇನಾಂ ಗ್ರಾಮಗಳ ಮೇಲೆ ಹೆಚ್ಚಾಗಿ ಆಸಕ್ತಿ ವಹಿಸದೆ ಇದ್ದುದ್ದನ್ನು ಸರ್ಕಾರದವರ ಗಮನಕ್ಕೆ ತರುತ್ತಾ ಬಂದರು. ನಾನು ಸುಮಾರು 20 ವರ್ಷಗಳ ಹಿಂದೆ ಪ್ರಜಾಪ್ರತಿನಿಧಿ ಸಭೆಯಲ್ಲಿದ್ದಾಗಿನಿಂದಲೂ ಒಂದಲ್ಲೊಂದು ವಿಧದಲ್ಲಿ "ಇನಾಂ ಗ್ರಾಮಗಳು ಹೀನ ಸ್ಥಿತಿಗೆ ಬರುತ್ತಿವೆ, ಸರ್ಕಾರದವರು ಅವುಗಳ ವಿಷಯದಲ್ಲಿ ಎಷ್ಟು ಆಸಕ್ತಿ ಇಡಬೇಕಾಗಿತ್ತೋ ಅಷ್ಟು ಇಡುತ್ತಿಲ್ಲ ಮತ್ತು ಇನಾಂ ಗ್ರಾಮಗಳ ಜನರ ಪುರೋಭಿವೃದ್ಧಿಯ ಕಡೆ ತಕ್ಕಷ್ಟು ಪ್ರಮಾಣದಲ್ಲಿ ಇನಾಂದಾರರುಗಳು ಅಭಿರುಚಿಯಲ್ಲಿಟ್ಟುಕೊಂಡಿಲ್ಲ, ಇನಾಂ ಗ್ರಾಮಗಳ ಪರಿಸ್ಥಿತಿ ಸರ್ಕಾರಿ ಗ್ರಾಮಗಳ ಪರಿಸ್ಥಿತಿಗಿಂತಲೂ ಬಹು ಮಟ್ಟಿಗೆ ಕಡಿಮೆಯಾಗುತ್ತಿದೆ. ಆದ್ದರಿಂದ ಅದರ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳಬೇಕೆಂದು" ನಾನಾ ರೂಪದಲ್ಲಿ ನಿರ್ಣಯಗಳು ಬರುತ್ತಲೇ ಇದ್ದವು. ಆದರೆ ಆಗಿನ ಸರ್ಕಾರದವರು ಭೂಸುಧಾರಣೆಯ ವಿಷಯದಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ಮಾಡುವುದಕ್ಕೆ ಅಷ್ಟಾಗಿ ಇಷ್ಟಪಡಲಿಲ್ಲ. ಮಾತ್ರ ಈ ಗ್ರಾಮಗಳ ಪರಿಸ್ಥಿತಿ ಉತ್ತಮಗೊಳ್ಳಬೇಕಾದರೆ ಏನು ಮಾಡಬೇಕೆಂದು ಸಲಹೆ ಮಾಡಲಿಕ್ಕೆ ಆಗಾಗ್ಗೆ ಕೆಲವು ಕಮಿಟಿಗಳನ್ನು ಮಾಡಿದರು. ನನಗೆ ತಿಳಿದ ಮಟ್ಟಿಗೆ 1932ನೆಯ ಇಸವಿಯಲ್ಲಿ ಈ ಸಭೆಯ ಸದಸ್ಯರಾದ ಮಾನ್ಯ ಡಿ. ಎಚ್. ಚಂದ್ರಶೇಖರಯ್ಯನವರು ತಂದ ನಿರ್ಣಯಕ್ಕನುಸಾರವಾಗಿ ಒಂದು ಕಮಿಟಿ ರಚನೆಯಾಗಿತ್ತು. ಶ್ರೀಮಾನ್ ಕೆ. ಎಸ್. ಚಂದ್ರಶೇಖರಯ್ಯನವರು ಆ ಕಮಿಟಿಯ ಅಧ್ಯಕ್ಷರಾಗಿದ್ದರು. ಈ ಸಭೆಯ ನಾಯಕರಾದ ಶ್ರೀಮಾನ್ ಕೆ. ಚೆಂಗಲರಾಯರೆಡ್ಡಿಯವರೂ ಆ ಸಮಿತಿಯಲ್ಲಿದ್ದರು. ಆದರೂ, ಆ ಕಮಿಟಿಯ ಕೆಲಸ ಇನಾಂ ಗ್ರಾಮಗಳನ್ನು ರದ್ದು ಮಾಡುವುದಿಲ್ಲ. ಅವುಗಳ ಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಏನೇನು ಮಾಡಬೇಕೆಂಬುದನ್ನು ಸಲಹೆ ಮಾಡುವುದಕ್ಕೆ ಎಂದು. ಸರ್ಕಾರಿ ಮತ್ತು ಖಾಸಗಿ ಜನರನ್ನೊಳಗೊಂಡ ಈ mixed ಸಮಿತಿಯವರು ವಿಷಯಗಳನ್ನೆಲ್ಲಾ ತೀವ್ರವಾಗಿ ಪರಿಶೀಲಿಸಿ ಆ ಗ್ರಾಮಗಳ ಪರಿಸ್ಥಿತಿ ತೀರ ಹದಗೆಟ್ಟು ಹೋಗದ ಹಾಗೆ, ಸ್ವಲ್ಪ

ಮಟ್ಟಿಗೆ ಉತ್ತಮ ಪಡಿಸುವುದಕ್ಕೆ ಅನುಕೂಲವಾದ ರೀತಿಯಲ್ಲಿ ಅನೇಕ ಸಲಹೆಗಳನ್ನು ಕೊಟ್ಟರು. ಆದರೂ ಅವುಗಳಲ್ಲೇನೂ ಅಷ್ಟೊಂದು ಕ್ರಾಂತಿ ಕಾರಕವಾದ ಬದಲಾವಣೆಗಳೇನೂ ಸೂಚಿತವಾಗಿರಲಿಲ್ಲ. ಹಾಗೆ ಸಲಹೆ ಮಾಡಿದ್ದರಲ್ಲೂ ಸರ್ಕಾರದವರು ಕೆಲವನ್ನು ಮಾತ್ರ ಅಂಗೀಕಾರ ಮಾಡಿದರು.

ಒಟ್ಟಿನಲ್ಲಿ ಹೇಳುವುದಾದರೆ, ಭೂಸುಧಾರಣೆಯ ವಿಷಯದಲ್ಲಿ ಹಿಂದಿದ್ದ ಸರ್ಕಾರ ಅಷ್ಟೊಂದು ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ. ತತ್ಪರಿಣಾಮವಾಗಿ ಜನರ ಪರಿಸ್ಥಿತಿ ಉತ್ತಮಗೊಳ್ಳಲಿಲ್ಲವೆಂದು ಹೇಳಿದರೆ ತಪ್ಪಾಗಲಾರದು.

ಇದರ ಮೇಲೆ, ಕಾಂಗ್ರೆಸ್ ಸಂಸ್ಥೆ ಹುಟ್ಟಿದಾರಭ್ಯ ಭೂಸುಧಾರಣೆಯ ವಿಷಯದಲ್ಲಿ ತೀವ್ರಾಸಕ್ತಿ ಹೊಂದಿದ್ದನ್ನು ಈ ಸಭೆಯ ಗಮನಕ್ಕೆ ತರಬೇಕಾದ್ದು ಅನಾವಶ್ಯಕ. ಅನೇಕ ವರ್ಷಗಳಿಂದಲೂ ಈ ಸಂಸ್ಥೆಯು, ಭೂಸುಧಾರಣೆಯಾದ ಹೊರತು ಗ್ರಾಮಾಂತರಗಳಲ್ಲಿರತಕ್ಕ ಜನರ ಆರ್ಥಿಕ ವ್ಯವಸ್ಥೆ ಸರಿಯಾಗುವುದಿಲ್ಲವೆಂದು ಹೇಳುತ್ತಿದ್ದರು. ಕಾಂಗ್ರೆಸಿನವರೇ Agrarian Reforms ಕಮಿಟಿಯೆಂಬುದನ್ನು ಏರ್ಪಾಡು ಮಾಡಿ ಆ ಕಮಿಟಿಯವರು ಇಡೀ ಭರತ ಖಂಡದಲ್ಲಿ ಭೂಮಿಯನ್ನವಲಂಬಿಸಿರತಕ್ಕ ಜನರ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳಬೇಕಾದರೆ ಏನೇನು ಮಾಡಬೇಕೆಂಬ ವಿಚಾರವನ್ನು ಪರಿಶೀಲನೆ ಮಾಡಬೇಕೆಂದು ಗೊತ್ತು ಮಾಡಿದರು. ಆ ಕಮಿಟಿಯಲ್ಲಿ ಮಣಿಲಾಲ್ ಗಾಂಧಿಯವರೇ ಮುಂತಾಗಿ ಅನೇಕ ಪರಿಣತರಾದ ಮಹನೀಯರಿದ್ದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅಲ್ಲಿ ಕೆಲವರು ಬಹಳ ಉಗ್ರವಾದ ಕಾರ್ಯ ಕ್ರಮಗಳನ್ನು ಕೈಕೊಳ್ಳಬೇಕೆಂದು ಸಲಹೆ ಮಾಡಿದರು. ಇನ್ನು ಕೆಲವರು ಸ್ವಲ್ಪ ಸ್ವಲ್ಪವಾಗಿ ನಿಧಾನವಾಗಿ ಹೋಗಬೇಕೆಂದು ಹೇಳಿದ್ದಾರೆ. ಇವೆಲ್ಲವನ್ನು ಈ ದಿವಸ ನಾವು ಗಮನಕ್ಕೆ ತಂದುಕೊಂಡು ಭೂಸುಧಾರಣೆ ಮಾಡುವುದು ಅತ್ಯಾವಶ್ಯಕ.

ಈ ಅಗ್ರೇರಿಯನ್ ರಿಫಾರಂ ಕಮಿಟಿಯವರು ಮಾಡಿರುವ ಶಿಫಾರಸುಗಳಲ್ಲಿರುವ ಮೂಲ ತತ್ವವನ್ನು ನೋಡುವುದಾದರೆ, ಭೂಮಿಗೂ ಸರ್ಕಾರಕ್ಕೂ ಮಧ್ಯವರ್ತಿ ಜನರು-intermediaries-between the tiller of the soil and the State-ಇವರುಗಳನ್ನು ಆದಷ್ಟು ಕಡಿಮೆ ಮಾಡಬೇಕು ಎಂಬುದು. ಈ ಮೂಲ ತತ್ವವನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವಿಂದು ಭೂಸುಧಾರಣೆ ಮಾಡಬೇಕು. ಹಾಗೆ ಮಾಡುವ ಕಾಲದಲ್ಲಿ ಇದೇ ಸುಧಾರಣೆಗಳ ಸಂಬಂಧದಲ್ಲಿ ಅನ್ಯ ದೇಶಗಳಲ್ಲಿ ಏನೇನು ಮಾಡುತ್ತಿದ್ದಾರೆ, ಅಲ್ಲಿ ಉಂಟಾಗಿರುವ ಪರಿಣಾಮಗಳೇನು, ಒಟ್ಟಿನಲ್ಲಿ ಸತ್ಪರಿಣಾಮಗಳಾಗಿವೆಯೇ ಅಥವಾ ದುಷ್ಪರಿಣಾಮಗಳಾಗಿವೆಯೇ-ಎಂಬುದನ್ನೂ ದೃಷ್ಟಿಯಲ್ಲಿಟ್ಟುಕೊಳ್ಳಬೇಕು.

ಮಧ್ಯವರ್ತಿ ಜನರನ್ನು ತೆಗೆದು ಹಾಕಬೇಕೆಂದು ಹೇಳುವಾಗ, ನಾನಾ ತೆರದ ಮಧ್ಯವರ್ತಿ ಜನರು ಗಮನೆಗೆ ಬರುತ್ತಾರೆ. ಅದರ ಪೈಕಿ ಇನಾಂದಾರರುಗಳೂ, ಜಹಗೀರುದಾರರುಗಳು ಒಬ್ಬರು; ನಿನ್ನೆ ಮೊನ್ನೆ ಚರ್ಚೆ ಮಾಡುವಾಗ ನಾವು ಹೇಳುತ್ತಿದ್ದ ಭಾರಿ ಭಾರಿ ಜಮೀನ್ದಾರರುಗಳೂ ಅಂಥ ಮಧ್ಯವರ್ತಿ ಜನಗಳಲ್ಲಿ ಸೇರಿದ್ದಾರೆ. ಆದರೆ ಈಗ ನಮ್ಮ ದೇಶದಲ್ಲಿ ಯಾವ ತೆರದ ಮಧ್ಯವರ್ತಿ ಜನರನ್ನು ತೆಗೆದು ಹಾಕಬೇಕೆಂದು ನಾವು ಯೋಚನೆ ಮಾಡಬೇಕು. ಬಂಗಾಳ, ಒರಿಸ್ಸ, ಮುಂತಾದ ಉತ್ತರ ಪ್ರದೇಶಗಳಲ್ಲಿರತಕ್ಕ ಭಾರಿ ಭಾರಿ ಜಮೀನ್ದಾರರುಗಳ ಪರಿಸ್ಥಿತಿಯೇ ಬೇರೆ. ಇಲ್ಲಿ ನಮ್ಮ ದೇಶದಲ್ಲಿರತಕ್ಕ ಜಮೀನ್ದಾರರುಗಳ ಪರಿಸ್ಥಿತಿಯೇ ಬೇರೆ. ಸಾಮಾನ್ಯವಾಗಿ ಇಲ್ಲಿ ಭಾರಿ ವಿಸ್ತೀರ್ಣವಿರತಕ್ಕ ಜಮೀನ್ದಾರಿಯೆಂದರೆ ಈ ಇನಾಂತಿಗಳು ಮತ್ತು ಜಹಗೀರಿಗಳು ಎಂದು ಹೇಳಬಹುದು. 'ರೈತವಾರಿ' (Raiyatwari) ಪದ್ಧತಿ ಜಾರಿಯಲ್ಲಿರುವ ಕಡೆ ಜಮೀನಿನ ಮೇಲೆ ಜಮೀನ್ದಾರ ಹಕ್ಕನ್ನು ಪಡೆದಿರುತ್ತಾನೆ, ಆತನೇ ಸ್ವಂತವಾಗಿ ಬೇಕಾದರೂ ಮಾಡಬಹುದು ಅಥವಾ ರೈತರಿಗೆ ಗುತ್ತಿಗೆಗೋ ವಾರಕ್ಕೋ ಕೊಟ್ಟು ಮಾಡಿಸಬಹುದು ಅಷ್ಟೆ. ಆದರೆ ಜಮೀನ್ದಾರಿ ಪದ್ಧತಿಯಲ್ಲಿ ವಿಶಾಲವಾದ ಜಮೀನನ್ನು ಸರ್ಕಾರದಿಂದ ಪಡೆದು ಮಧ್ಯವರ್ತಿಗಳು ಕಂದಾಯವನ್ನು ವಸೂಲು ಮಾಡಿ ಸರ್ಕಾರಕ್ಕೆ ಕೊಡುವುದರಲ್ಲಿ ಮಗ್ನರಾಗಿರುತ್ತಾರೆಯೇ ವಿನಾ ಆಯಾ ಗ್ರಾಮಗಳಲ್ಲಿನ ರೈತರ ಪರಿಸ್ಥಿತಿಯನ್ನು ಉತ್ತಮಪಡಿಸಬೇಕೆಂಬ ಆಕಾಂಕ್ಷೆ ಅವನಿಗೆ ಏಷ್ಟು ಮಾತ್ರವೂ ಇರುವುದಿಲ್ಲ. ಅಲ್ಲಿ ಜಮೀನ್ದಾರಿ ಪದ್ಧತಿ ಯಾವ ರೀತಿ ಉತ್ಪನ್ನವಾಯಿತು, ಇಲ್ಲಿ ಇನಾಂ ಮತ್ತು ಜಹಗೀರಿ ಪದ್ಧತಿ ಹೇಗೆ ಉತ್ಪನ್ನವಾಯಿತು ಎಂಬ ಬಗ್ಗೆ ಸ್ವಲ್ಪ ಪರಿಶೀಲನೆ ಮಾಡುವುದಾದರೆ ನಮಗೂ ಅವರಿಗೂ ಇರುವ ವ್ಯತ್ಯಾಸ ಬಹುಶಃ ಗೊತ್ತಾಗುತ್ತದೆ. ಪೂರ್ವದಲ್ಲಿ ಬ್ರಿಟಿಷರು ನಮ್ಮ ದೇಶವನ್ನು ಆಳುವುದಕ್ಕೆ ಪ್ರಾರಂಭ ಮಾಡಿದ ಕಾಲದಲ್ಲಿ ಜಮೀನಿನಿಂದ ಬರತಕ್ಕ ಉತ್ಪನ್ನವನ್ನು ವಸೂಲು ಮಾಡತಕ್ಕ ಕಾರ್ಯಕ್ರಮ ಬಹಳ ಕಠಿಣವಾದ ಪ್ರಯುಕ್ತ ಮೊದಲು ಜಮೀನ್ದಾರರೆಂದು ಕೆಲವರನ್ನು ಮಾಡಿ ಜನರಿಂದ ಬರತಕ್ಕ ಕಂದಾಯವನ್ನು ವಸೂಲು ಮಾಡುವುದಕ್ಕೆ ಅವರನ್ನು ಏಜೆಂಟರುಗಳನ್ನಾಗಿ ನೇಮಕಮಾಡಿದರು. ಈ ಏಜೆಂಟರುಗಳಿಗೆ ಸಾವಿರಾರು ಎಕರೆ ವಿಸ್ತೀರ್ಣದ ಜಮೀನುಗಳನ್ನು ಕೊಟ್ಟರು. ಕಾಲ ಕ್ರಮದಲ್ಲಿ ಇವರು ಭೂಸ್ವಾಮ್ಯವನ್ನು ಪಡೆದ ಜಮೀನ್ದಾರರಾಗಿ ಬಿಟ್ಟರು. ಅವರೇ ಈದಿವಸ ಜಮೀನ್ದಾರರು. ಅವರು ಕಂದಾಯವನ್ನು ವಸೂಲು ಮಾಡಿ ಸರ್ಕಾರಕ್ಕೆ ಸ್ವಲ್ಪ ಭಾಗವನ್ನು ಕೊಟ್ಟು ಉಳಿದುದನ್ನು ತಾವು ಇಟ್ಟುಕೊಳ್ಳುವುದಕ್ಕೆ ಪ್ರಾರಂಭ ಮಾಡಿ ಈಗ ಅವರಿಗೆ ಸಂಪೂರ್ಣ ಸ್ವಾಮ್ಯ ಬಂದು ಅವರನ್ನು ಬಿಡಿಸುವುದೇ ಕಷ್ಟವಾಗಿದೆ. ಅವರಿಗೆ ಭೂಮಿಯ ಮೇಲಿದ್ದ ಪ್ರೇಮವಾದರೂ ಇಷ್ಟೆ. ಎಲ್ಲಿಯವರೆಗೆ ರೈತರು ಸಲೀಸಾಗಿ ಕಂದಾಯವನ್ನು ಕೊಡುತ್ತಾರೋ ಅಲ್ಲಿಯವರೆಗೆ ರೈತರೊಡನೆ ಸಂಬಂಧವಿಟ್ಟುಕೊಂಡರು. ರೈತರಿಗೆ ಸರಿಯಾದ ವಾತಾವರಣವನ್ನು ಕಲ್ಪಿಸಲು ಅವರು ಅಷ್ಟು ಮಗ್ನರಾಗಿರಲಿಲ್ಲವೆಂಬುದು ವಾಸ್ತವಾಂಶಗಳಿಂದ ವ್ಯಕ್ತವಾಗುತ್ತದೆ. ಈ ಸಂದರ್ಭದಲ್ಲಿ ನಾನು ಒಂದು ಮಾತು ಹೇಳುವುದಾದರೆ, ಒಟ್ಟು ಭರತಖಂಡದಲ್ಲಿ ಬಂಗಾಳ, ಬೀಹಾರ್ ಒರಿಸ್ಸಾ, ಯುನೈಟೆಡ್ ಪ್ರಾವಿನ್ಸಸ್, ಸೆಂಟ್ರಲ್ ಪ್ರಾವಿನ್ಸಸ್, ಮದ್ರಾಸು ಇಷ್ಟರಲ್ಲಿ ಜಮೀನ್ದಾರಿ ವ್ಯವಸ್ಥೆಗೊಳಪಟ್ಟ ಜಮೀನಿನ ವಿಸ್ತೀರ್ಣವೆಷ್ಟೆಂದರೆ, ಭರತ ಖಂಡದಲ್ಲಿ ನೂರಕ್ಕೆ 64 ಭಾಗದಷ್ಟಿದೆ, ರೈತವಾರಿಯಲ್ಲಿ ಕೇವಲ ಶೇಕಡ 36 ರಷ್ಟು ಮಾತ್ರ ಇದೆ. ರೈತವಾರಿ ಪದ್ಧತಿ ಎಂದರೆ ಕೇವಲ ಸರ್ಕಾರಕ್ಕೆ ರೈತರು ನೇರವಾಗಿ ಕಂದಾಯ ಕೊಡುವ ಪದ್ಧತಿ ಅಥವ ವ್ಯವಸ್ಥೆ. ಸರ್ಕಾರಕ್ಕೂ ರೈತನಿಗೂ ಮಧ್ಯವರ್ತಿಯಾಗಿರುವವರಿಗೆ ಸೇರಿರುವ ಜಮೀನು ಮೇಲ್ಕಂಡ ಪ್ರಾಂತಗಳಲ್ಲಿ ಸೇಕಡ 64 ರಷ್ಟಿದೆ ಎಂಬುದು ಅಂಕಿ ಅಂಶಗಳಿಂದ ಗೊತ್ತಾಗುತ್ತದೆ. ಸಭೆಯ ಗಮನಕ್ಕೆ ಕೆಲವು ಅಂಕಿ ಅಂಶಗಳನ್ನು ತಂದರೆ ಬಹುಶಃ ಈ ವಿಚಾರವನ್ನು ಸರಿಯಾದ ರೀತಿಯಲ್ಲಿ ಪರಿಶೀಲಿಸಲು ಸಹಾಯವಾಗುತ್ತದೆಂದು ಕಾಣುತ್ತದೆ. ಬಂಗಾಳದಲ್ಲಿ 46 ಸಾವಿರ ಮಿಲಿಯನ್ ಎಕರೆಯಲ್ಲಿ

(ಶ್ರೀ ಎಚ್. ಎಂ. ಚನ್ನಬಸಪ್ಪನವರು)

42 ಸಾವಿರ ಮಿಲಿಯನ್ ಎಕರೆ ಜಮೀನ್ದಾರರಿಗೆ ಸೇರಿದೆ. ಬೀಹಾರಿನಲ್ಲಿ 49·26 ಸಾವಿರ ಮಿಲಿಯನ್ ಎಕರೆಗಳಲ್ಲಿ 49 ಸಾವಿರ ಮಿಲಿಯನ್ ಎಕರೆಗಳು ಜಮೀನ್ದಾರಿ ವ್ಯವಸ್ಥೆಗೆ ಸೇರಿದೆ. ಒರಿಸ್ಸಾದಲ್ಲಿ 21·61 ಸಾವಿರ ಮಿಲಿಯನ್ ಎಕರೆಗಳಲ್ಲಿ 14·61 ಸಾವಿರ ಮಿಲಿಯನ್ ಎಕರೆಯಷ್ಟು ಜಮೀನ್ದಾರಿಗೆ ಒಳಪಟ್ಟಿದೆ. ಅಸ್ಸಾಂನಲ್ಲಿ 35·49 ಸಾವಿರ ಮಿಲಿಯನ್ ಎಕರೆಗಳಲ್ಲಿ 5·62 ಸಾವಿರ ಮಿಲಿಯನ್ ಎಕರೆ ಜಮೀನ್ದಾರಿಗೆ ಸೇರಿದೆ; ಯು. ಪಿ. ನಲ್ಲಿ ಸುಮಾರು 33·07 ಮಿಲಿಯನ್ ಎಕರೆಗಳೂ ಕೂಡ ಜಮೀನ್ದಾರಿಗೆ ಸೇರಿದೆ, ಸೆಂಟ್ರಲ್ ಪ್ರಾವಿನ್ಸ್‌ನಲ್ಲಿಯೂ ಹೆಚ್ಚು ಕಡಿಮೆ ಇಷ್ಟೇ ಇದೆ. ಮದ್ರಾಸಿನಲ್ಲಿ 40·49 ಸಾವಿರ ಮಿಲಿಯನ್ ಎಕರೆಯಲ್ಲಿ ಕೇವಲ 12·84 ಸಾವಿರ ಮಿಲಿಯನ್ ಎಕರೆ ಜಮೀನ್ದಾರಿಗೆ ಸೇರಿದೆ. ಬೊಂಬಾಯಿನಲ್ಲಿ ಜಮೀನ್ದಾರಿ ಅಷ್ಟಾಗಿಲ್ಲ. ಅನೇಕ ಸಣ್ಣ ಪುಟ್ಟ ಹೆಸರುಗಳನ್ನೊಳಗೊಂಡ ವ್ಯವಸ್ಥೆಗಳು ಅನೇಕವಾಗಿವೆ. ಅವುಗಳನ್ನೆಲ್ಲಾ ಈ ಸಂದರ್ಭದಲ್ಲಿ ವಿವರಣೆ ಮಾಡುತ್ತಾ ಹೋದರೆ ಬಹಳ ಕಾಲವಾಗುತ್ತದೆ. ಒಟ್ಟಿನಲ್ಲಿ ಬೊಂಬಾಯಿ ಪ್ರಾಂತದಲ್ಲಿ ರೈತವಾರಿ ಪದ್ಧತಿ ಮುಕ್ಕಾಲು ಮೂರು ವೀಸೆ ಪಾಲು ಇದೆ ಎಂದು ಹೇಳಿದರೆ ಸಾಕು, ಮೈಸೂರು ಮತ್ತಿತರ ದೇಶೀಯ ಸಂಸ್ಥಾನಗಳನ್ನು ಬಿಟ್ಟರೆ ಬ್ರಿಟಿಷ್ ಇಂಡಿಯಾದಲ್ಲಿ ನೂರಕ್ಕೆ 64 ರಷ್ಟು ಜಮೀನ್ದಾರಿಗೆ ಸೇರಿದ್ದು ಮಿಕ್ಕದ್ದು ಮಾತ್ರ ರೈತವಾರಿಗೆ ಸೇರಿದ್ದು. ಅಂದರೆ ಬ್ರಿಟಿಷ್ ಭಾರತದಲ್ಲಿ ರೈತರಿಗಿಂತ ಜಮೀನ್ದಾರರಿಗೆ ಸೇರಿದ ಭೂಮಿಯೇ ಹೆಚ್ಚಾಗಿತ್ತು. ಇದು ಹೋಗಬೇಕೆಂದು ಅಗ್ರೇರಿಯನ್ ಸುಧಾರಣಾ ಸಮಿತಿಯವರು ಶಿಫಾರಸು ಮಾಡಿದ್ದಾರೆ. ಅದಕ್ಕನುಸಾರವಾಗಿ ಮೈಸೂರು ದೇಶದಲ್ಲಿ ಇನಾಂ ಪದ್ಧತಿಯನ್ನು ರದ್ದುಮಾಡಬೇಕೆಂದು ಈ ಸಂಬಂಧವಾಗಿ ರಚಿಸಿದ ಸಮಿತಿಯವರು ಒಮ್ಮತದಿಂದ ಒಪ್ಪಿ ಸರ್ಕಾರಕ್ಕೆ ಸಲಹೆ ಮಾಡಿದರು. ಅದರ ಪರಿಣಾಮವಾಗೇ ಈ ಹೊತ್ತು ಇನಾಂ ರದ್ದು ಮಾಡುವ ಶಾಸನವಾಗಿ ಅದನ್ನು ಪರಿಶೀಲನೆ ಮಾಡುವುದಕ್ಕೆ ನಾವು ಹೊರಟಿದ್ದೇವೆ. ಇನಾಂ ರದ್ದುಮಾಡುವ ಕಾಲದಲ್ಲಿ ಮೂರು ನಾಲ್ಕು ವಿಷಯಗಳನ್ನು ನಾವು ದೃಷ್ಟಿಯಲ್ಲಿಡಬೇಕು. ಭೂಮಿಯ ವಿಚಾರದಲ್ಲಿ ಯಾವುದೇ ಸುಧಾರಣೆಯನ್ನು ಮಾಡಿದರೂ ಮೆಲ್ಲಗೆ ಸ್ವಲ್ಪ ಸ್ವಲ್ಪವಾಗಿ ಮಾಡಬೇಕೇ ಹೊರತು ಕ್ರಾಂತಿಕಾರಕವಾದ ಅಥವ ಉಗ್ರವಾದ ಸುಧಾರಣೆ ಮಾಡುವುದಾದರೆ ಅದರಿಂದ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚಾಗುತ್ತದೆಂದು ಒತ್ತಿ ಹೇಳಿ ಆಗಾಗ ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ. ಇದಕ್ಕೆ ಒಂದು ಕಾರಣವೇನೆಂದರೆ, ಇತರ ಕೆಲವು ದೇಶಗಳಲ್ಲಿ ಕ್ರಾಂತಿಕಾರಕ ಬದಲಾವಣೆ ಮಾಡುವುದಕ್ಕೆ ಹೊರಟು ಅವರು ಪಡೆದಿರುವ ಪರಿಣಾಮಗಳೇನಾಗಿವೆ ಎಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡರೆ ನಾವು ಜಾಣ್ಮೆಯಿಂದ ಕೆಲಸ ಮಾಡಲು ಅನುಕೂಲವಾಗುತ್ತದೆ. ಟೆನೆಸ್ಸಿ ಮಸೂದೆಯ ವಿಚಾರದಲ್ಲಿ ಹೇಳುವ ಕಾಲದಲ್ಲಿ ಯಾವ ಯಾವ ಪರಿಣಾಮಗಳಾಗಿವೆ ಎಂಬುದನ್ನು ಹೇಳಿದ್ದೇನೆ. ಆದುದರಿಂದ ಈಗ ಅದನ್ನೆಲ್ಲಾ ವಿಸ್ತಾರವಾಗಿ ಪ್ರಸ್ತಾಪಮಾಡುವುದು ಅನಾವಶ್ಯಕವೆಂದು ನನ್ನ ಭಾವನೆ.

ಈಗ ಇನಾಂ ಗ್ರಾಮಗಳಲ್ಲಿ ಇನಾಂದಾರರಿಗಿರುವ ಹಕ್ಕನ್ನು ಮಾತ್ರ ತೆಗೆದುಕೊಳ್ಳುವುದಕ್ಕೆ ನಾವು ಕಾನೂನುಮಾಡುತ್ತಿರುವುದು ಹಿಂದೆ ಸರ್ಕಾರದವರು ಇನಾಂದಾರರಿಗೆ ಅವರು ಸರ್ಕಾರಕ್ಕೆ ಸಲ್ಲಿಸಿದ ಯಾವುದೋ ಉನ್ನತವಾದ ಸೇವೆಗಾಗಿ ಕೆಲವು ಗ್ರಾಮಗಳನ್ನು ಆಗಿನ ಕಾಲದ ಸರ್ಕಾರಗಳೋ ರಾಜರುಗಳೋ ಕೊಟ್ಟರು. ಈ ದಿವಸ ಅವರ ಒಂದು ಹಕ್ಕನ್ನು ತೆಗೆದುಕೊಳ್ಳುವಾಗ ಅವರಿಗೆ ಯಾವ ರೀತಿಯಲ್ಲಿಯೂ ಅನಾವಶ್ಯಕವಾಗಿ ತೊಂದರೆಯಾಗಬಾರದೆಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು ಶಾಸನವನ್ನು ರಚನೆಮಾಡಬೇಕು. ಅಂದ ಮಾತ್ರಕ್ಕೆ ಸರ್ವ ವಿಧದಲ್ಲಿಯೂ ಅವರಿಗೆ ಎಷ್ಟು ಅನುಕೂಲ ಅಥವಾ ಪರಿಹಾರ ಸಲ್ಲಿಸಬಹುದೋ ಅಥವ ಅವರು ಎಷ್ಟು ನಿರೀಕ್ಷಿಸುತ್ತಾರೋ ಅಷ್ಟನ್ನೂ ಸಲ್ಲಿಸಬೇಕೆಂದು ನನ್ನ ಅರ್ಥವಲ್ಲ. ಈಗ ಇನಾಂ ಗ್ರಾಮಗಳನ್ನು ಉತ್ತಮಪಡಿಸಬೇಕಾದರೆ ಇನಾಂ ಗ್ರಾಮಗಳನ್ನೇ ಏಕೆ ತೆಗೆದುಕೊಳ್ಳಬೇಕು, ಅಲ್ಲಿ ಆಗಬೇಕಾಗಿರುವ ಸುಧಾರಣೆಗಳನ್ನು ಮಾಡಬೇಕಾದರೆ ಆ ಗ್ರಾಮಗಳ ಆಡಳಿತವನ್ನು ಸರ್ಕಾರದವರು ತೆಗೆದುಕೊಂಡು ಏಕೆ ಮಾಡಬಾರದು ಎಂದು ಕೇಳುವವರೂ ಇದ್ದಾರೆ. ಈ ಶಾಸನ ಅನಾವಶ್ಯಕ; ಸರ್ಕಾರದವರು ವಿಶೇಷ ಶಾಸನ ಮಾಡಿ ತಾವು ಅಧಿಕಾರ ತೆಗೆದುಕೊಂಡು ಇನಾಂ ಗ್ರಾಮಗಳನ್ನು ಅಭಿವೃದ್ಧಿ ಮಾಡುವುದು ನ್ಯಾಯ ಎಂದು ವಾದ ಹೂಡುವವರೂ ಇದ್ದಾರೆ. ಇದರಿಂದ ಸರಿಯಾದ ಪ್ರತಿಫಲ ಬರುವುದಿಲ್ಲವೆಂಬ ವಿಚಾರ ಹಿಂದಿನಿಂದ ಇದುವರೆಗೆ ನಡೆಸಿಕೊಂಡು ಬಂದಿರುವ ಅಂಕಿ ಅಂಶಗಳಿಂದ ಗೊತ್ತಾಗುತ್ತದೆ. ಇದು ಹೊಸ ವಿಷಯವೇನೂ ಅಲ್ಲ. ಅನೇಕ ಸಂದರ್ಭಗಳಲ್ಲಿ ಹಿಂದಿನ ಸರ್ಕಾರ ಇದನ್ನು ಪರಿಶೀಲನೆ ಮಾಡಿ ಕೆಲವು ಗ್ರಾಮಗಳನ್ನು ಸ್ವಾಧೀನಕ್ಕೆ ತೆಗೆದುಕೊಂಡು ಅವುಗಳ ಆಡಳಿತವನ್ನು ನೋಡಿ ಸರ್ಕಾರದವರು ನೇರವಾಗಿ ಅಭಿವೃದ್ಧಿ ಕಾರ್ಯಗಳನ್ನು ಅಲ್ಲಿ ಮಾಡಲು ಸಾಧ್ಯವಿಲ್ಲವೆಂಬ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಉದಾಹರಣೆಗೆ ಯಳಂದೂರು ಜಹಗೀರಿ ಸರ್ಕಾರದ ಆಡಳಿತದಲ್ಲಿದೆ. ಇನ್ನೂ ಅನೇಕ ಗ್ರಾಮಗಳೂ ಇವೆ. ಅಲ್ಲಿ ಅಗತ್ಯವಾಗಿ ಅಭಿವೃದ್ಧಿ ಕಾರ್ಯಗಳನ್ನು ಸರ್ಕಾರದವರು ನೇರವಾಗಿ ಕೈಗೊಳ್ಳಬೇಕಾದರೆ ಶಾಸನ ಸಂಬಂಧವಾದ ಅಡ್ಡಿ ಆತಂಕಗಳು ಬರುತ್ತವೆ. ಪ್ರತಿಯೊಂದಕ್ಕೂ ಇನಾಂದಾರರ ಅಭಿಪ್ರಾಯವನ್ನೂ ತೆಗೆದುಕೊಳ್ಳುತ್ತಾ ಹೋದರೆ ಯಾವ ಕಾರ್ಯಗಳನ್ನು ಮಾಡಲೂ ಸಾಧ್ಯವಿಲ್ಲ. ಯಳಂದೂರಿನಲ್ಲಿ ಎಷ್ಟೋ ದೊಡ್ಡ ದೊಡ್ಡ ಕೆರೆಗಳೂ ನೀರಾವರಿ ಅನುಕೂಲವೂ ಇದ್ದರೂ ಕೂಡ ಹತ್ತು ರೂಪಾಯಿನ ಕೆಲಸ ಮಾಡಬೇಕೆಂದು ಸರ್ಕಾರದವರು ಅಭಿಪ್ರಾಯಪಟ್ಟರೂ ಕೂಡ ಇನಾಂದಾರರನ್ನು ಕೇಳದೆ ಅವರ ಅನುಮತಿ ಪಡೆದುಕೊಳ್ಳದೆ ಮಾಡಲು ಸಾಧ್ಯವಿಲ್ಲ. 1935ನೆಯ ಇಸವಿಯಿಂದ ಅದರ ಆಡಳಿತ ಸರ್ಕಾರದಲ್ಲಿದ್ದರೂ ಕೂಡ ಅಲ್ಲಿ ವಿಶೇಷ ಅನುಕೂಲಗಳನ್ನು ಒದಗಿಸಲು ಸಾಧ್ಯವಾಗದೇ ಹೋಗಿದೆಯೆಂದು ಹೇಳಿದರೆ ಸಾಕು.

ಹೀಗಿರುವಾಗ ಇನಾಂ ಗ್ರಾಮಗಳ ಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಖಂಡಿತ ಸಾಧ್ಯವಿಲ್ಲ ಅನ್ನುವ ರೀತಿಯಲ್ಲಿ ಅರ್ಥ ಬರುವಂತೆ ಹೇಳಬೇಕಾಗಿ ಬಂತು. ಸರ್ಕಾರದವರೇ ನೇರವಾಗಿ ಇನಾಂ ಗ್ರಾಮಗಳ ಆಡಳಿತವನ್ನೆಲ್ಲಾ ವಹಿಸಿಕೊಂಡು, ಆ ಬಗ್ಗೆ ಯಾವ ಯಾವ ಬದಲಾವಣೆಗಳನ್ನು ಯಾವ ಯಾವ ರೀತಿಯಲ್ಲಿ ಮಾಡಬೇಕೆಂಬ ಅಧಿಕಾರವನ್ನೂ ಸಹ ಅವರೆ ಎಲ್ಲಾ ಇಟ್ಟುಕೊಂಡು ಇನಾಂದಾರರಿಗೆ ಹೆಸರಿಗೆ ಮಾತ್ರ ಇನಾಂದಾರರು ಎಂಬ ಒಂದು ಅವಕಾಶವಿರುವಂತೆ ಮಾಡಿದರೆ ಸಾಕೆಂದು ವಾದ ಮಾಡತಕ್ಕವರೂ ಇದ್ದಾರೆ. ಆದರೆ ಈ ರೀತಿಯ ವಾದ ಸ್ವಲ್ಪಮಟ್ಟಿಗೆ ನಮಗೆ ಅಂಟಿದರೂ ಅಂಟಿಸಬಹುದು. ಆದರೆ ಹಿಂದೆ ರಾಜ್ಯಭಾರ ನಡೆಯು

ತ್ತಿದ್ದ ಕಾಲದಲ್ಲಿ ನಾವುಗಳೆಲ್ಲರೂ ಮಾಡುತ್ತಿದ್ದ ಭಾಷಣಗಳ ಧಾಟಿ ಯಾವ ರೀತಿಯಲ್ಲಿತ್ತು? ಆಗ ನಾವು ವಾದಿಸುತ್ತಿದ್ದುದೇನು? ನಮ್ಮ ಪ್ರಜಾ ಸರ್ಕಾರ ಬಂದ ಕೂಡಲೇ ಈ ಜೋಡಿ ಮತ್ತು ಜಹಗೀರುಗಳು ಮತ್ತು ಇನಾಂತಿಗಳನ್ನೆಲ್ಲಾ ರದ್ದುಪಡಿಸಿ ರೈತನಿಗೆ ಅನುಕೂಲಪಡಿಸುತ್ತೇವೆಂದು ಹೇಳುತ್ತಿದ್ದು ಈಗ ಆ ರೀತಿ ಪ್ರಜಾ ಸರ್ಕಾರ ಬಂದ ಮೇಲೆ ನಾವು ಹಿಂದೆ ಹೇಳುತ್ತಿದ್ದ ಪ್ರತಿಷ್ಠೆಗೆ ಏತಕ್ಕೆ ಹಿಂದೆಗೆಯಬೇಕು; ದೇಶಾದ್ಯಂತವೂ ಇರತಕ್ಕ ರೈತರುಗಳ ಅಂದರೆ ಸಾಗುವಳಿದಾರ, ಖದೀಂ ರೈತ, ಕಾಯಂಖದೀಂ ರೈತ, ಇತ್ಯಾದಿ, ರೈತರುಗಳದ್ವಾರ—ಅವರುಗಳೆಲ್ಲರ ಅನುಕೂಲಕ್ಕಾಗಿ ಈಗ ಪ್ರಜಾ ಸರ್ಕಾರ ಅಧಿಕಾರಕ್ಕೆ ಬಂದಿರುವುದರಿಂದ ಆ ಇನಾಂತಿಗಳನ್ನೆಲ್ಲಾ ರದ್ದವಣೆ ಮಾಡಿ ಅವರೆಲ್ಲರಿಗೂ ಅನುಕೂಲಮಾಡಿ ಕೊಡಿ, ಆ ಬಗ್ಗೆ ನಾವುಗಳಾರೂ ಅಡ್ಡಿಬರುವುದಿಲ್ಲ. ಈಗ ನಮ್ಮ ಪ್ರತಿಷ್ಠೆ ಸಹ ಉಳಿವಂತಾಗುತ್ತದೆ ಎಂಬುದಾಗಿ ವಾದ ಮಾಡತಕ್ಕವರೂ ಇದ್ದಾರೆ. ಆದರೆ ಇಷ್ಟೆಲ್ಲಾ ತಿಳಿಸುವಾಗ ನಾವು ಮುಖ್ಯವಾಗಿ ಏನು ಒಂದು ಅಂಶವನ್ನು ಎಲ್ಲರೂ ಗಣನೆಗೆ ತೆಗೆದುಕೊಳ್ಳಬೇಕಾಗಿರುತ್ತೆಂದರೆ. ಹೀಗೆ ಮಾಡುವುದರಲ್ಲಿ ಏನೇನು ತೊಂದರೆಗಳಿವೆ. ಯಾರು ಯಾರ ಹಕ್ಕು ಏನಾಗುತ್ತದೆ, ಇದರಿಂದ ಸುಖವೇ ಅಥವಾ ಕಷ್ಟವೇ ಎಂಬುದನ್ನು ಮುಖ್ಯವಾಗಿ ಪರಿಶೀಲನೆಮಾಡಿ ನೋಡಬೇಕಾಗುತ್ತದೆ. ಹೀಗೆ ಈ ಭೂಸುಧಾರಣೆಯ ವಿಚಾರವಲ್ಲಿ ಇಡಿ ಭಾರತ ದೇಶಾದ್ಯಂತವೂ ಅಂದರೆ ಆ ಸೇತುವೆ ಹಿಮಾಚಲದಿಂದ ಹಿಡಿದು ಕನ್ಯಾಕುಮಾರಿ ಪರಿಯಂತವೂ ಒಂದೇ ವಿಧವಾದ ರೀತಿಯಲ್ಲಿರತಕ್ಕ ಸುಧಾರಣೆಗಳನ್ನು ಇಡೀ ಭರತ ಖಂಡಕ್ಕೆಲ್ಲಾ ಅನ್ವಯಿಸತಕ್ಕ ರೀತ್ಯಾ ಈ ರೈತರ ಮತ್ತು ಭೂ ಸ್ವಾಮ್ಯ ಇಟ್ಟುಕೊಂಡಿರತಕ್ಕವರ ಬಗ್ಗೆ ಜಾರಿಗೆ ತರಬೇಕೆಂಬ ಉದ್ದೇಶವಿರುತ್ತೆ. ಆದರೆ ಅಂಥಾ ಒಂದು ಉದ್ದೇಶವು ಉತ್ತಮವಾದುದಾಗಿರಲಿ ಅಥವಾ ಅಲ್ಲದಿರಲೀ, ಅದನ್ನು ನಾವು ವಿರೋಧಿಸಲು ನಮಗೆ ಅಧಿಕಾರವಿರಲಿ, ಇಲ್ಲದಿರಲಿ, ಅದು ಬೇರೆ ಪ್ರಶ್ನೆ. ಅಂತೂ ಈ ರೀತಿಯ ಉದ್ದೇಶ ಒಂದನ್ನು ಎಲ್ಲಾ ಕಡೆಗೂ ಅನ್ವಯಿಸಿ ಒಂದು ಕಾನೂನು ಮಾಡಬೇಕೆಂದು ಹೇಳತಕ್ಕದ್ದು ಧರ್ಮವಾದುದ್ದೇ, ನ್ಯಾಯವಾದುದ್ದೇ, ಇದು ಸಾಧ್ಯವಾದುದ್ದೇ ಎಂಬ ಅಂಶಗಳನ್ನೆಲ್ಲಾ ನಾವು ಪರಿಶೀಲನೆಮಾಡಿ ನೋಡುವುದಾದರೆ.—

ಶ್ರೀ ಜಿ. ಎ. ಆಚಾರ್ಯರವರು (ಬೆಂಗಳೂರು ಜಿಲ್ಲೆ).—ಕೆಲ ಕೆಲವು ವಿನಾಯಿತಿಗಳು ಇರಬೇಕಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಅಂಥಾ ವಿನಾಯಿತಿಗಳು ಇರುವುದರಿಂದಲೇ ದೇಶಕ್ಕೆ ಹಿತವಾಗುತ್ತದೆಂದ ಎಲ್ಲರೂ ಒಪ್ಪಿಕೊಳ್ಳುವುದಾಗಿದ್ದರೆ, ನಾನೊಬ್ಬ ಅವನ್ನು ಬೇಡ ಎಂದು ಹೇಳತಕ್ಕವನಲ್ಲ. ಆದರೆ ಅಂಥ ಒಂದು ರಿಯಾಯಿತಿಯನ್ನು ಅಥವಾ ವಿನಾಯಿತಿಯನ್ನು ಯಾರಿಗಾದರೂ ಈಗ ನಾವು ಕೊಟ್ಟುಬಿಡುವುದಾದರೆ ಮುಂದಕ್ಕೆ ಅದರ reaction ಏನಾಗುತ್ತದೆಂಬುದನ್ನು ನಾವು ಗಮನಿಸತಕ್ಕದ್ದು ಅತ್ಯವಶ್ಯಕವಾದದ್ದು. ಏತಕ್ಕೆಂದರೆ ಉದಾಹರಣೆಗೆ ಈಗ ಯಳಂದೂರು ಜಹಗೀರನ್ನು ಪೂರ್ಣಯ್ಯನವರು ನಮ್ಮ ದೇಶಕ್ಕೆ ಸಲ್ಲಿಸಿದಂಥ ಒಂದು ಅಮೋಘವಾದ ಸೇವೆಗೋಸ್ಕರವಾಗಿ ಅದನ್ನು ಅವರಿಗೆ ಜಹಗೀರಾಗಿ ಕೊಡಲಾಗಿದೆ. ಅಂಥಾ ಜಹಗೀರನ್ನು ಬಹಳ ವರ್ಷಗಳಿಂದಲೂ ಅವರ ವಂಶೀಯರು ಅನುಭವಿಸಿಕೊಂಡು ಬರುತ್ತಿದ್ದಾರೆ. ಹಾಗೆ ಅದನ್ನು ಅನುಭವಿಸಿಕೊಂಡು ಬರುತ್ತಿರುವ ಅವರ ವಂಶೀಯರು ಈಗ ಅದನ್ನು ಕಾರಣಾಂತರಗಳಿಂದ ಸರ್ಕಾರದವರೇ ತೆಗೆದುಕೊಳ್ಳಲಿ ಎಂದು ಅವರಾಗಿ ಅವರೇ ಕೇಳುತ್ತಿದ್ದರೆ, ಸರ್ಕಾರದವರು ಅಂಥಾ ಸಂದರ್ಭಗಳಲ್ಲಿ ಅದನ್ನು ಏತಕ್ಕೆ ತೆಗೆದುಕೊಳ್ಳಬಾರದೆಂದು ಕೆಲವರು ಕೇಳಬಹುದು! ಅದೇ ರೀತಿ ಶೃಂಗೇರಿ ಜಹಗೀರೂ ಸಹ ಆ ತರದಲ್ಲಿದ್ದಂಥ ಪೂಜ್ಯ ಪಾದಂಗಳವರು ಸಾವಿರಾರು ವರ್ಷಗಳಿಂದ ಇಡೀ ಸಮಾಜಕ್ಕೇ ಒಂದು ಉತ್ತಮವಾದ ಸೇವೆಯನ್ನು ಸಲ್ಲಿಸಿಕೊಂಡು ಸುಮಾರು ಇಲ್ಲಿಗೆ 1,00 ವರ್ಷಗಳಿಂದ ಸಮಾಜಸೇವೆ ಮಾಡಿಕೊಂಡು ಬಂದಿದ್ದಾರೆ. ಇಂಥಾ ಒಂದು ಅಮೋಘವಾದ ಸೇವೆ ಸಲ್ಲಿಸಿಕೊಂಡು ಬಂದುದ್ದಕ್ಕಾಗಿ ಈ ಜಹಗೀರನ್ನು ಆ ಪೂಜ್ಯ ಪಾದಂಗಳವರಿಗೆ ಹಾಕಿಕೊಟ್ಟಿದ್ದಾರೆ. ಹೀಗೆ ಸಾವಿರಾರು ವರ್ಷಗಳ ಹಿಂದೆ ಅವರಿಗೆ ರಾಜ ಮಹಾರಾಜರುಗಳಿಂದ ಕೊಟ್ಟಿರುವಂಥ ಒಂದು ಹಕ್ಕನ್ನು ತಾವೇಕೆ ಈಗ ಅಧಿಕಾರಕ್ಕೆ ಬಂದ ಕೂಡಲೇ ಕಿತ್ತುಕೊಂಡು, ಅದರಿಂದ ಉಂಟಾಗತಕ್ಕ ಪರಿಣಾಮಕ್ಕೆ ತಾವೇಕೆ ಭಾಗಿಗಳಾಗಬೇಕು, ಏನೂ ಬೇಡ ಎಂದು ವಾದ ಹೂಡತಕ್ಕವರೂ ಇದ್ದಾರೆ.

ಆದರೆ ಈ ವಿಷಯಗಳಲ್ಲಿ ತಾವು ಯಾವ ರೀತಿ ವರ್ತಿಸಬೇಕೆಂದಿದ್ದೀರೋ ಅದು ಸರಿಯೋ ಅಥವಾ ತಪ್ಪೋ ಎಂಬ ವಿಚಾರಕ್ಕೆ ಈಗ ನಾನು ಪ್ರವೇಶಿಸುವುದಿಲ್ಲ. ಆದರೆ ತಾವು ಮಾಡತಕ್ಕದ್ದೇ ಸರಿ, ಇದಕ್ಕೆ ಯಾವ ಪ್ರತಿಬಂಧಕವೂ ಇಲ್ಲ. ಇದಕ್ಕೆ ಯಾರೂ ಅಡ್ಡಿ ಬರುವುದಿಲ್ಲವೆಂಬುದಾದ್ದರೆ, ಆ ರೀತಿ ಜನರು ಅಡ್ಡಿ ಬಾರದ ರೀತಿಯಲ್ಲಿ ಅವರ ಮನಸ್ಸುಗಳೆಲ್ಲವನ್ನೂ ತಮ್ಮ ಕಡೆಗೆ ಒಲಿಸಿಕೊಂಡು, ಆ ರೀತಿ ಮಾಡತಕ್ಕ ಭಾರ ತಮ್ಮದಾಗಿದೆ. ಆದರೆ ಹಾಗಿಲ್ಲವೆ ಯಾರಾದರೂ ತಮ್ಮ ಪ್ರತಿಷ್ಠೆಗೆ ಮತ್ತು ಮಾನ್ಯತೆಗೆ ಧಕ್ಕೆ ಬರುತ್ತೆಂದು ಹೇಳುವುದಾದರೆ, ಆ ಮಾನ್ಯತೆ ಕೇವಲ ದುಡ್ಡು ಕಾಸುಗಳಿಗೆ ಬರುವುದಿಲ್ಲವೆಂಬುದನ್ನು ನಾನು ಒತ್ತಿ ತಿಳಿಸಬೇಕಾಗಿದೆ. ಮಾನ್ಯತೆಯೆಂಬುದು ಕೇವಲ ದುಡ್ಡು ಕಾಸಿಗೆ ಮಾತ್ರ ದೊರೆಯುತ್ತದೆಯೆಂಬ ವಾದವನ್ನು ನಾನು ಒಪ್ಪತಕ್ಕವನಲ್ಲ. ಅಥವಾ ಯಾವ ಜಮೀನ್ದಾರನೇ ಆಗಲಿ ಇದರಿಂದ ಆತನಿಗಿದ್ದ ಮಾನ್ಯತೆ, ಒಂದು ದೊಡ್ಡಸ್ತಿಕೆ ಹೋಗುತ್ತದೆಂದು ಹೇಳಿದರೆ ಅದಕ್ಕೆ ನಾನು ಒಪ್ಪತಕ್ಕವನಲ್ಲ. ನಮ್ಮ ದೊಡ್ಡಸ್ತಿಕೆ, ನಮ್ಮ ಘನತೆ, ನಮ್ಮ ಗಾಂಭೀರ್ಯ ಇತ್ಯಾದಿಗಳೆಲ್ಲಾ ಈ ದುಡ್ಡು ದುಗ್ಗಾಣಿಯಿಂದಲೇ, ಆಸ್ತಿಯಿಂದಲೇ ನಡೆದುಕೊಂಡು ಬರುತ್ತಿತ್ತೆಂದು ಯಾರಾದರೂ ಹೇಳತಕ್ಕವರಿದ್ದಾರೆಂದು ನಾನು ನಂಬಲ್ಲ

ಶ್ರೀ ಕೆ. ಆರ್. ಶ್ರೀಕಂಠೇಶ್ವರನ್‌ರವರು.—ಆ ಕಾಲ ಹೊರಟು ಹೋಯಿತು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಆಸ್ತಿ ಇಟ್ಟುಕೊಂಡಿದ್ದರೆ, ಮನೆಮಾರುಗಳನ್ನಿಟ್ಟುಕೊಂಡಿದ್ದರೆ ಅಥವಾ ದುಡ್ಡು ದುಗ್ಗಾಣಿ ಇಟ್ಟುಕೊಂಡಿದ್ದರೆ ಆ ಮನುಷ್ಯನಿಗೆ ಮಾನ್ಯತೆಯಿದೆ ಎಂಬುದನ್ನು ನಾನಂತೂ ಖಂಡಿತ ಒಪ್ಪಲಾರೆ. ಆದರೆ ಅದು ಒಂದು ವೇಳೆ ಇರುವುದಾದರೂ ತೀರಾ ಸ್ವಲ್ಪ ಜನಗಳಲ್ಲಿ ಮಾತ್ರ, ಹಾಗೆ ಒಂದು ಭಾವನೆ ಮೂಡಿರಲು ಅವಕಾಶವಿದ್ದರೂ ಇರಬಹುದು. ಆದರೆ ನಾವು ಸುಮ್ಮನೆ ಏಕಾಏಕೀ ಜಮೀನುಗಳನ್ನು ಇನಾಂದಾರರುಗಳಿಂದ ಕಿತ್ತುಕೊಳ್ಳಬೇಕೆಂತಲೂ ಇಷ್ಟವಿಲ್ಲ. ಆದರೆ ಇನಾಂದಾರ ಸ್ಥಿತಿಗತಿಗಳೇನು ಮತ್ತು ಸಾಗುವಳಿದಾರರ ಸ್ಥಿತಿಗತಿಗಳೇನು ಮತ್ತು ಅವರ ಆರ್ಥಿಕಾವಸ್ಥೆ ಎಷ್ಟು ಅವ್ಯವಸ್ಥೆಯಲ್ಲಿದೆ

(ಶ್ರೀ ಎಚ್. ಎಂ. ಚನ್ನಬಸಪ್ಪನವರು)

ಎಂಬುದನ್ನೆಲ್ಲಾ ನಮ್ಮ ಮುಂದೆ ಇಟ್ಟುಕೊಂಡು, ಇವುಗಳಿಗೆ ಯಾವ ರೀತಿಯಲ್ಲಿ ಶಾಸನ ಮಾಡಿದರೆ ಧಕ್ಕೆ ಬರುವುದಿಲ್ಲ ಎಂಬುದನ್ನು ನೋಡಿಕೊಂಡು ಅದಕ್ಕೆಲ್ಲಾ ಅನುಗುಣವಾಗಿರುವಂತೆ ಈಗ ಶಾಸನ ರಚಿಸಿ ಇಲ್ಲಿ ಇಟ್ಟಿದ್ದಾರೆ. ಈಗ ಈ ಶಾಸನವನ್ನು ತಂದಿರತಕ್ಕ ಉದ್ದೇಶವಾದರೂ ಹಿಂದಿನಿಂದ ಅನೂಚಾನವಾಗಿ ಆ ಇನಾಂದಾರರು ಮತ್ತು ಸಾಗುವಳಿದಾರರಿಗೆ ಅಥವಾ ಜೋಡಿದಾರ ಆತನ ರೈತ ಇವರುಗಳಿಗೆಲ್ಲಾ ಏನೊಂದು ಮಧುರ ಬಾಂಧವ್ಯವನ್ನಿಟ್ಟುಕೊಂಡು ಈ ಭೂಮಿ ವ್ಯವಹಾರಗಳನ್ನು ನಡೆಸಿಕೊಂಡು ಬಂದಿರುತ್ತಾರೋ ಅಂಥಾ ಒಂದು ಬಾಂಧವ್ಯಕ್ಕೆ ಕುಂದ ಕವನ್ನುಂಟುಮಾಡದೆ ಅವರೀರ್ವರೂ ಒಳ್ಳೆಯ ಸ್ಥಿತಿಯಲ್ಲಿ ಯಾವ ಒಂದು ತಿಕ್ಕಾಟಕ್ಕೂ ಅಸ್ಪದವಿಲ್ಲದ ರೀತಿಯಲ್ಲಿ ಅವರಿಬ್ಬರ ವ್ಯವಹಾರಗಳೂ ಸುಗಮವಾಗಿ ನಡೆದುಕೊಂಡು ಹೋಗಲಿ ಎಂಬ ಒಂದು ಸದುದ್ದೇಶದಿಂದ ಇದನ್ನು ತಂದಿದ್ದಾರೆಯೇ ಶಿವಾಯಿ ಮತ್ತೆ ಬೇರೆ ಏನೂ ಇಲ್ಲ.

ಆದರೆ ಈ ಇನಾಂತಿಗಳನ್ನು ಯಾವ ಒಂದು ಘನ ಉದ್ದೇಶಕ್ಕಾಗಿ, ಒಂದು ದೊಡ್ಡ ಭಾವನೆಯಿಂದ, ಪೂಜ್ಯ ಪಾದಂಗಳಿಗೆ ಗುರುಗಳಿಗೆ ಕೊಟ್ಟಿದ್ದಾರೋ ಆ ಉದ್ದೇಶಕ್ಕೆ ಭಂಗ ತರಬಾರದೆಂದು ನನ್ನ ಅಭಿಪ್ರಾಯ. ಹಾಗೆ ಆ ಉದ್ದೇಶ ಸಫಲವಾಗತಕ್ಕ ಮಾರ್ಗವನ್ನು ನಮ್ಮ ದೃಷ್ಟಿಯಲ್ಲಿಟ್ಟುಕೊಂಡು, ಅವಕ್ಕೆ ಯಾವ ರೀತಿಯಲ್ಲೂ ಭಂಗಬಾರದಂತೆ ನೋಡಿಕೊಂಡು, ಇದನ್ನು ಜಾರಿಗೆ ತಂದರೆ ಇದರಿಂದ ಇನಾಂದಾರರಿಗೂ ಭಂಗ ಬರುವುದಿಲ್ಲ. ಸಾಗುವಳಿದಾರರಿಗೂ ಭಂಗ ಬರುವುದಿಲ್ಲ ಆಗ ಈ ಇನಾಂ ಗ್ರಾಮಗಳ ಸ್ಥಿತಿ ಬಹಳ ಉತ್ತಮವಾಗೊಂಡು ಸರ್ವರೂ ಸುಖವಾಗಿರಲು ಒಂದು ಅವಕಾಶ ಉಂಟಾಗುತ್ತದೆ. ಆದರೆ ಹೀಗೆ ಈ ಶಾಸನ ಬಂದ ಮಾತ್ರಕ್ಕೆ ಅವರ ಪ್ರತಿಷ್ಠೆ ಘನತೆ, ಗೌರವಗಳು ಹೋಗುತ್ತವೆಂದು ಭಾವಿಸತಕ್ಕದ್ದು ಸಧ್ಯಕ್ಕಂತೂ ನನಗೆ ಅರ್ಥವಾಗದು ಮತ್ತು ಅದನ್ನು ನಾನು ಅರಿಯದದವನಾಗಿದ್ದೇನೆ. ಒಂದು ವೇಳೆ ಇದರಿಂದ ನಿಜವಾಗಿಯೂ ಅವರ ಪ್ರತಿಷ್ಠೆಗೆ ಕುಂದುಕ ಬರುತ್ತದೆಂಬುದನ್ನು ಅವರು ತೋರಿಸಿಕೊಟ್ಟ ಪಕ್ಷದಲ್ಲಿ ಅದನ್ನು ನಾನು ಒಪ್ಪಿಕೊಳ್ಳುವುದಿಲ್ಲವೆಂದ ಹೇಳತಕ್ಕವನಲ್ಲ.

ಒಟ್ಟಿನಲ್ಲಿ ಈ ಭೂಸ್ವಾಮತ್ವ ಇರತಕ್ಕವರಿಗೂ ಮತ್ತು ಸರ್ಕಾರದವರಿಗೂ ಮಧ್ಯೆ ಇರತಕ್ಕ ವರ್ಗದವರ ಹಿತರಕ್ಷಣೆ ಮಾಡಬೇಕೆಂಬ ವಿಚಾರದಲ್ಲಿ, ಅವರು ರಾಜಮಹಾರಾಜರೇ ಆಗಿರಲಿ, ಯಾರೇ ಆಗಿರಲಿ, ಅದನ್ನು ಕೂಡದು ಎಂದು ಈ ತತ್ವವನ್ನು ವಿರೋಧಿಸಲು ಸಾಧ್ಯವಿಲ್ಲವೆಂಬ ಅಂಶವನ್ನು ತಾವೆಲ್ಲರೂ ಒಪ್ಪಿಕೊಳ್ಳುತ್ತೀರಿ. ಆದರೆ ಅಂಥಾ ವಿರೋಧವೆಂದು ಕಂಡು ಬರತಕ್ಕ ಅಂಶಗಳಿವೆಂದು ತೋರಿದರೆ ಆಗ ಅದನ್ನು ಯಾರೂ ಒಪ್ಪುವುದಿಲ್ಲ. ಹಾಗೆ ತಿಳಿಸತಕ್ಕದ್ದು ಸಕಾರಣವಾಗಿದ್ದರೆ ನಾನು ಒಪ್ಪುವುದಿಲ್ಲ. ಮಾನ್ಯ ಸದಸ್ಯರೂ ಒಪ್ಪುವುದಿಲ್ಲ. ಆದರೆ ಅಂಥಾ ಒಂದು ಮೂಲ ಪ್ರಶ್ನೆ ಇತ್ಯರ್ಥವಾದ ಮೇಲೆ, ಇನ್ನು ಇದನ್ನು ಯಾವ ರೀತಿ ಜಾರಿಗೆ ತರಬೇಕೆಂಬುದು ಎರಡನೇ ಮುಖ್ಯ ಪ್ರಶ್ನೆ.

ಹೀಗೆ ಇನಾಂದಾರರ ಮತ್ತು ಜೋಡಿ ಜಹಗೀರುದಾರರ ಜಮೀನುಗಳನ್ನು ತೆಗೆದುಕೊಳ್ಳುವಾಗ ಅವರಿಗೆ ಏನು ಪರಿಹಾರ ಕೊಡಬೇಕೋ ಮತ್ತು ಅವರ ಸ್ವಂತ ವ್ಯವಸಾಯಕ್ಕೆ ಎಷ್ಟು ಭೂಮಿಯನ್ನು ಬಿಟ್ಟುಕೊಡಬೇಕೋ ಅವುಗಳನ್ನೂ ಮತ್ತು ಸಾಗುವಳಿದಾರನ ಸ್ಥಿತಿಗತಿಗಳೇನು, ಆತನ ಜೀವನದ ಮಟ್ಟವೇನು, ಎಂಬೀ ವಿಚಾರಗಳನ್ನೆಲ್ಲಾ ನಾವು ಪರಿಶೀಲನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಇದರ ಜೊತೆಗೆ ಇನಾಂ ಗ್ರಾಮಗಳಲ್ಲಿರತಕ್ಕ ಭೂಮಿ, ಎಂತಹುದು, ಅಲ್ಲಿರತಕ್ಕ ಸಾಗುವಳಿದಾರರ ಮತ್ತು ಇನಾಂದಾರರ ಪೂರ್ವದ ಸಂಬಂಧ ಹೇಗಿರುತ್ತೆ, ಮುಂದಕ್ಕೆ ಅದನ್ನು ಎಷ್ಟರಮಟ್ಟಿಗೆ ಮಾರ್ಪಾಡು ಮಾಡಬೇಕು, ಅಂಥಾ ಮಾರ್ಪಾಡು ಮಾಡತಕ್ಕ ಅವಕಾಶ ಎಲ್ಲಿಲ್ಲದೆ, ಇದರಲ್ಲಿ ಯಾರ ಯಾರ ಹಕ್ಕುಬಾಧ್ಯತೆಗಳು ಎಷ್ಟೆಷ್ಟು ದಿವಸಗಳಿಂದ ಇರುತ್ತೆ— ಎಂಬ ಅಂಶಗಳನ್ನೆಲ್ಲಾ ಈ ಸಂದರ್ಭದಲ್ಲಿ ನಾವು ಪರಿಗಣಿಸಬೇಕಾಗಿರುತ್ತದೆ.

ಈ ಶಾಸನವನ್ನು ನಾವು ವಿಮರ್ಶೆಮಾಡುವಾಗ ಮೂರು ಅಂಶಗಳನ್ನು ಮಾನ್ಯ ಸದಸ್ಯರು ಗಮನದಲ್ಲಿಟ್ಟುಕೊಳ್ಳಬೇಕು. ಅದೇನೆಂದರೆ ಹಿಂದೆ ಯಾರ್ಯಾರಿಗೆ ಈ ಇನಾಂ ಮತ್ತು ಜಹಗೀರಿ ಕೊಟ್ಟಿದ್ದರೋ ಅವರು ಈ ದಿವಸ ಜೀವಂತರಾಗಿಲ್ಲ ? ಇದು ವಂಶಪಾರಂಪರ್ಯವಾಗಿ ಬಂದು ಅವರ ವಂಶದವರ ವಶದಲ್ಲಿ ಈ ದಿವಸ ಕೆಲವಿರಬಹುದು, ಅನೇಕ ಇನಾಂ ಗ್ರಾಮಗಳು ಯಾವ ವಂಶಕ್ಕೆ ಕೊಟ್ಟರೋ ಅದನ್ನು ಬಿಟ್ಟು ಅನೇಕ ಕೈ ಬದಲಾವಣೆಯಾಗಿ ಈ ದಿವಸವಿರುವ ಇನಾಂದಾರರು ಹಿಂದೆ ಸೇವೆ ಸಲ್ಲಿಸಿದವರಲ್ಲ ಎಂಬುದನ್ನೂ ಮನಸ್ಸಿನಲ್ಲಿಟ್ಟುಕೊಳ್ಳಬೇಕು.

Sri A. BHEEMAPPA NAIK (Chitaldrug District-General).—Some have been sold away.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ನೂರಾರು ವರ್ಷಗಳ ಹಿಂದೆ ಮಹಾರಾಜರು ಮುಂತಾದವರು ಕೆಲವರಿಗೆ ಕೊಟ್ಟಿರುವುದು ವಂಶಪಾರಂಪರ್ಯವಾಗಿ ಬಂದಿದೆಯೇ ಎಂಬುದನ್ನು ನಾವು ವಾದಮಾಡುವಾಗ ಜ್ಞಾಪಕದಲ್ಲಿಡಬೇಕು. ಇನಾಂದಾರರಿಗೆ ಪರಿಹಾರ ಕೊಡಬೇಕಾದ್ದು ಅನಾವಶ್ಯಕವೆಂದು ವಾದಮಾಡುವವರು ಅನೇಕರು ಇದ್ದರೂ ಇರಬಹುದು. ಈ ಸಭೆಯಲ್ಲಿ ಅಂಥವರಿದ್ದಾರೆಂದು ನಾನು ತಿಳಿದುಕೊಂಡಿಲ್ಲ. ಏಕೆಂದರೆ ರಾಜ್ಯಾಂಗದ ಪ್ರಕಾರ ಯಾರಿಗಾದರೂ ಒಂದು ಜಮೀನಿನ ಸ್ವಾಮ್ಯ ಅಥವಾ ಹಕ್ಕುಬಾಧ್ಯತೆಯಿದ್ದರೆ ಅಥವಾ ಕಾರಣಾಂತರಗಳಿಂದ ಪುರಾತನ ಕಾಲದಿಂದ ಬಂದಿರುವ ಜಮೀನು ಯಾರ ವಶದಲ್ಲಾದರೂ ಇದ್ದರೆ ಅವನ್ನು ಕಾರಣಾಂತರಗಳಿಂದ ತೆಗೆದುಕೊಳ್ಳಬೇಕಾದರೆ ಅವರಿಗೆ ನ್ಯಾಯ ರೀತ್ಯ ಪರಿಹಾರ ಕೊಟ್ಟು ತೆಗೆದುಕೊಳ್ಳಬೇಕು ಎಂಬುದು ವಿದಿತವಾಗಿರುವುದರಿಂದ ಅದಕ್ಕೆ ವಿರೋಧವಾಗಿ ಮಾತನಾಡಬೇಕು, ಹೇಳಬೇಕು ಎಂದಿದ್ದರೂ ಕೂಡ ಅದಕ್ಕೆ ಸಾಧ್ಯವಿಲ್ಲವೆಂಬುದನ್ನು ಗಮನಿಸಿ ಆ ವಾದವನ್ನು ಕೈ ಬಿಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಎ. ಭೀಮಪ್ಪನಾಯಕರು.—ಕೆಲವರು ಬೋನ ಫೈಡಿ ಪರ್ಚೇಸಸ್ ಮಾಡಿದ್ದಾರೆ. ಹಾಗೆ ಹಣಕೊಟ್ಟು ಕೊಂಡಿರುವವರಿಗೆ ಪರಿಹಾರ ಬೇಡವೆ ಎಂಬುದನ್ನು ಹೇಳಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಇದನ್ನು ಹೇಳಿದ್ದೇಕೆಂದರೆ ಇನಾಂದಾರರು ಇನಾಂ ಗ್ರಾಮಗಳಿಂದ ಯಥೇಚ್ಛವಾಗಿ ಸಹಾಯ ಹೊಂದಿದ್ದಾರೆ, ಈಗ ಅವರಿಗೆ ಏನೂ ಕೊಡಬೇಕಾಗಿಲ್ಲ ಎಂದು ವಾದಮಾಡುವಹಾಗಿಲ್ಲ. ಆದರೆ ಒಂದನ್ನು ದೃಷ್ಟಿಯಲ್ಲಿಡಬೇಕು. ಇನಾಂದಾರರಿಲ್ಲ, ಅವರ ವಂಶದವರಿಲ್ಲ, ಯಾರೋ ಬೇರೆಯವರು ಇನಾಂ ಹಕ್ಕನ್ನು ಖರೀದಿಗೆ ಕೊಂಡುಕೊಂಡು ಈ ದಿವಸ ಅನುಭವಿಸುತ್ತಿರುವವರು ಹೆಚ್ಚಾಗಿದ್ದರೆ ಅವರಿಗೆ ಈ ಇನಾಂ ಗ್ರಾಮಗಳಿಂದ ಏನು ಉತ್ಪತ್ತಿ ಬರುತ್ತಿತ್ತು, ಮುಂದೆ ಎಷ್ಟು ಉತ್ಪತ್ತಿ ಹೆಚ್ಚಿಸಬಹುದು

ಎಂಬುದನ್ನೆಲ್ಲಾ ದೃಷ್ಟಿಯಲ್ಲಿಟ್ಟುಕೊಂಡು ಇನಾಂ ಗ್ರಾಮಗಳಿಗೆ ಖರೀದಿಯನ್ನು ನಿಷ್ಕರ್ಷೆಮಾಡಬೇಕು. ಏಕೆಂದರೆ ಈಗ ಅವರು ಹೇಗೆ ಇನಾಂದಾರರಿಂದ ಹಣ ಕೊಟ್ಟುಕೊಂಡಿದ್ದಾರೋ ಅದೇ ರೀತಿ ಸರ್ಕಾರದವರು ಇನಾಂ ಗ್ರಾಮ ತೆಗೆದುಕೊಳ್ಳಬೇಕಾಗುತ್ತದೆ. ಹೀಗೆ ಇನಾಂ ಗ್ರಾಮ ರದ್ದುಮಾಡುತ್ತಾರೆಂದು, ಸರ್ಕಾರದವರು ಈ ಕಾನೂನನ್ನು ಮುಂದೆ ತರುತ್ತಾರೆಂದು ತಿಳಿದಿದ್ದರೆ ಕೊಳ್ಳುವವರು ಇದರ ಗೋಜಿಗೇ ಹೋಗುತ್ತಿರಲಿಲ್ಲ. ಆದ್ದರಿಂದ ನಾವು ಇನಾಂದಾರರಿಂದ ಹಕ್ಕನ್ನು ತೆಗೆದುಕೊಳ್ಳುವಾಗ ಅವರು ವಾಸ್ತವವಾಗಿ ಎಷ್ಟು ಬೆಲೆ ಕೊಟ್ಟುಕೊಂಡಿದ್ದಾರೆಂಬುದನ್ನು ದೃಷ್ಟಿಯಲ್ಲಿಟ್ಟು ಪರಿಹಾರವನ್ನು ನಿಷ್ಕರ್ಷೆ ಮಾಡಬೇಕು.

Sri A. BHEEMAPPA NAIK—What did they purchase ? Did they purchase the entire right or the right that Inamdars possessed ?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ನನಗೆ ಅದು ಬಹಳ ಆಶ್ಚರ್ಯವನ್ನುಂಟುಮಾಡುತ್ತದೆ. ಅವರು ದೊಡ್ಡ ವಕೀಲರು. ನನಗಿಂತಲೂ ನ್ಯಾಯಶಾಸ್ತ್ರದಲ್ಲಿ ವಿಶೇಷ ಪಾಂಡಿತ್ಯ ಹೊಂದಿರುವವರು, ಸಾಮಾನ್ಯವಾಗಿ ಇನಾಂದಾರರಿಂದ ಬೇರೆಯವರು ಖರೀದಿಗೆ ತೆಗೆದುಕೊಳ್ಳುವಾಗ ಜಮೀನಿನ ಹಕ್ಕನ್ನು ಸಾಧಾರಣವಾದ ರೀತಿಯಲ್ಲಿ ಪಡೆಯಬಹುದೇ ಹೊರತು ಇನಾಂದಾರರಿಗಿಲ್ಲದಿರುವ ಮೂಲ ಹಕ್ಕನ್ನು ಖರೀದಿಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂಬುದು ಅವರಿಗೆ ಮನವರಿಕೆಯಾಗಿದೆಯೆಂದು ತಿಳಿದಿದ್ದೆ. ಆದರೆ ಈಗ ಅವರಿಗೆ ಅದು ಮನವರಿಕೆಯಾಗಿಲ್ಲವೆಂದು ತಿಳಿದು ನಾನು ಪಶ್ಚಾತ್ತಾಪ ಪಡಬೇಕಾಗಿದೆ.

ಇನ್ನೊಂದು ಅಂಶವನ್ನು ದೃಷ್ಟಿಯಲ್ಲಿ ಇಡಬೇಕು. ಇನಾಂದಾರರು ಕೆಲವರು ಇನಾಂ ಗ್ರಾಮಗಳಲ್ಲಿರುವ ಕೆರೆಗಳು, ನೀರಾವರಿ ಕಾಮಗಾರಿಗಳು ಮುಂತಾದುವನ್ನು ಬಹಳಮಟ್ಟಿಗೆ ಉತ್ತಮಪಡಿಸಿದ್ದಾರೆ. ಹಾಗೇ ಬಿಟ್ಟು ಕನಿಷ್ಠ ಪರಿಸ್ಥಿತಿಗೆ ಬರುವಹಾಗೆ ಮಾಡಿರುವವರೂ ಇದ್ದಾರೆ. ಇದನ್ನು ಸ್ವಲ್ಪ ಮಟ್ಟಿಗೆ ದೃಷ್ಟಿಯಲ್ಲಿಡದಿದ್ದರೆ ಕಷ್ಟವಾಗುತ್ತದೆ. ಕೆಲವರಿಗೆ ಹೆಚ್ಚು ಆಸೆ ಆಕಾಂಕ್ಷೆಗಳಿರುತ್ತವೆ. ಆಗ ಉತ್ತಮಪಡಿಸಿರುವ ಜನರಿಗೆ ಕೊಡುವ ರೀತಿಯಲ್ಲಿ, ನ್ಯಾಯವಾಗಿ ತಮ್ಮ ಸ್ವಂತ ಖರ್ಚಿನಿಂದ ಇನಾಂ ಗ್ರಾಮವನ್ನು ಅಭಿವೃದ್ಧಿಸ್ಥಿತಿಗೆ ತಂದಿರುವವರಿಗೆ ಕೊಡುವ ರೀತಿಯಲ್ಲಿ ಇತರರಿಗೆ ಪರಿಹಾರ ಕೊಡುವುದು ಉಚಿತವೆ ಎಂಬುದನ್ನು ಗಮನಿಸಬೇಕಾದ್ದು ಆವಶ್ಯಕ ಎಂದು ಈ ಸಂದರ್ಭದಲ್ಲಿ ಸೂಚಿಸುತ್ತೇನೆ.

ಪರಿಹಾರ ಕೊಡಬೇಕೆಂದು ಹೇಳಿದಮೇಲೆ ಖಾಸ್ ಜಮೀನಿನ ಪ್ರಶ್ನೆ ಬರುತ್ತದೆ. ಇನಾಂ ಸಮಿತಿಯವರು ಶಿಫಾರಸು ಮಾಡಿರುವುದು ಆಯಾ ಇನಾಂ ಗ್ರಾಮಗಳಲ್ಲಿ ಸಾಗುವಳಿಗಾಗಿ ಶಾಶ್ವತವಾಗಿ ಕೊಟ್ಟಿರುವ ಖದೀಂ ಸಾಗುವಳಿದಾರರು, ಪರ್ಮನೆಂಟ್ ಸಾಗುವಳಿದಾರರು ಮತ್ತು ಟೆನೆಂಟ್ಸ್ ಅಟ್, ವಿಲ್, ಸ್ವಂತವಾಗಿ ಸಾಗು ಮಾಡುವವರು ಇವರುಗಳ ಜಮೀನನ್ನು ಬಿಟ್ಟು ಸಾರ್ವತ್ರಿಕವಾಗಿ ಗ್ರಾಮಗಳಿಗೆ ಸಂಬಂಧಪಟ್ಟಿರುವ ನಾಮಿನಲ್ ಜಮೀನು ಅಂದರೆ ಗೋಮಾಳ, ಕೆರೆಗಳಿಗೆ ಸೇರಿರುವ ಪ್ರದೇಶ ಬಿಟ್ಟು ಉಳಿದಿರುವ ಜಮೀನನ್ನು ಖಾಸ್ ಜಮೀನು ಅಂದರೆ ಇನಾಂದಾರನ ಜಮೀನು ಎಂದು ಆ ಹಕ್ಕು ಅನೇಕ ದಿವಸಗಳಿಂದ ಬಂದಿದೆ. ಅದೇ ರೀತಿ ಈ ದಿವಸ ಲ್ಯಾಂಡ್ ರೆವೆನ್ಯೂ ಕೋಡಿನಲ್ಲಿ ಖಾಸ್ ಜಮೀನಿಗೆ ಒಂದು ಅರ್ಥ ವಿವರಣೆಕೊಟ್ಟಿರುವುದೂ ಕೂಡ ನಾನು ಹೇಳಿರುವ ಜಮೀನುಗಳಿಗೆ ಖಾಸ್ ಜಮೀನು ಎಂದು ಅರ್ಥಬರುವ ರೀತಿಯಿದೆ. ಈಗ ನಾವು ಇಡೀ ಗ್ರಾಮವನ್ನು ಸರ್ಕಾರಕ್ಕೆ ತೆಗೆದುಕೊಳ್ಳುವಾಗ ಇನಾಂದಾರನಿಗೆ ಈ ಖಾಸ್ ಜಮೀನು ಎಂಬುದರ ಮೇಲೆ ಎಷ್ಟು ಹಕ್ಕಿರಬೇಕು ಎಂದು ವಿಮರ್ಶೆಮಾಡುವಾಗ ಈ ವಿಚಾರದಲ್ಲಿ ಭೂ ಕಂದಾಯ ಸುಧಾರಣ ಸಮಿತಿಯವರು ಯಾವ ರೀತಿ ಆಸಕ್ತಿಯಿಟ್ಟು ಅನೇಕ ದಿವಸಗಳು ಚರ್ಚೆಮಾಡಿದ್ದಾರೆ ಎಂಬುದನ್ನು ನೋಡಬೇಕು. ಖದೀಂ ಟೆನೆಂಟ್ ಮತ್ತು ಪರ್ಮನೆಂಟ್ ಟೆನೆಂಟ್ ವಶದಲ್ಲಿದ್ದ ಜಮೀನಿನ ಮೇಲೆ ಅವರಿಗಿದ್ದ ಸಂಪೂರ್ಣ ಹಕ್ಕನ್ನು ತೆಗೆದುಕೊಂಡಮೇಲೆ ಕೂಡ ಕೊಡಬೇಕು ಎಂದೂ ಹೇಳಿದರೂ ಭಿನ್ನಾಭಿಪ್ರಾಯವಿರಲಿಲ್ಲ. ಎಲ್ಲಿ ಹೋದರೂ ಖಾಸ್ ಜಮೀನನ್ನು ಸಾಗುಮಾಡತಕ್ಕ ಜನರಿಗೆ ಯಾವ ರೀತಿ ಹಕ್ಕು ಬಾಧ್ಯತೆ ಕೊಡಬೇಕು ಎಂಬ ವಿಚಾರದಲ್ಲಿ ಸ್ವಲ್ಪ ವಾದ ವಿವಾದ ವಿಶೇಷವಾಗಿರುತ್ತದೆ. ಆ ವಿಚಾರದಲ್ಲಿ ಈಗಲೂ ಕೂಡ ವಾದವಿವಾದ ಮಾಡುವುದಕ್ಕೆ ವಿಶೇಷ ಅವಕಾಶವಿದೆ ಎಂಬುದನ್ನು ಈ ಸಂದರ್ಭದಲ್ಲಿ ಸೂಚಿಸುತ್ತೇನೆ. ಈ ಕಾನೂನಿನಲ್ಲಿ ಖಾಸ್ ಜಮೀನೆಂದರೆ ಯಾವ ಜಮೀನು ಆರು ವರ್ಷಗಳಿಂದಲೂ ಒಂದೇ ಸಮನಾಗಿ ಸಾಗುವಳಿದಾರನಿಂದ ಸ್ವಂತವಾಗಿ, ಆಳಿಡಲ್ಪಟ್ಟು ಅಥವಾ ಖುದ್ದಾಗಿ ಸಾಗುವಳಿಮಾಡಲ್ಪಡುತ್ತಿದೆಯೋ ಆ ಜಮೀನು ಎಂದೂ, ಅದನ್ನು ಮಾತ್ರ ಅವನಿಗೇ ಬಿಡಬೇಕೆಂದೂ ಈ ಶಾಸನದಲ್ಲಿ ಹೇಳಿದೆ. ಮತ್ತು ಇನಾಂದಾರರು ಮತ್ತು ಜಹಗೀರುದಾರರು ಗುತ್ತಿಗೆಗೆ ಅಥವ ವಾರಕ್ಕೆ ಕೊಟ್ಟು ಸಾಗುವಳಿ ಮಾಡಿಸುವ ಜಮೀನು ಪೈಕಿ ಆರು ವರ್ಷ ಒಂದೇ ಸಮ ಯಾವ ಸಾಗುವಳಿದಾರನಿಂದ ಸಾಗವಳಿ ಮಾಡಲ್ಪಡುತ್ತಿದೆಯೋ ಆ ಜಮೀನು ಆ ಸಾಗುವಳಿದಾರನಿಗೆ ಹೋಗಬೇಕು ಆ ಜಮೀನಿನ ಮೇಲಿನ ಹಕ್ಕೂ ಅವನಿಗೇ ಕೊಡಬೇಕು ಎಂದು ಶಾಸನದಲ್ಲಿ ವಿಧಿತವಾಗಿದೆ. ಈ ವಿಚಾರವನ್ನು ವಿಮರ್ಶೆಮಾಡುವಾಗ ಸ್ವಲ್ಪ ನ್ಯಾಯ ಧರ್ಮ ಮುಂತಾದ್ದನ್ನು ಸ್ವಲ್ಪಮಟ್ಟಿಗೆ ದೃಷ್ಟಿಯಲ್ಲಿಟ್ಟು ವಿಮರ್ಶೆ ಮಾಡಬೇಕಾದ್ದು ಆವಶ್ಯ. ಸಾಮಾನ್ಯವಾಗಿ ಇನಾಂದಾರರೆಲ್ಲರೂ ಬಹಳ ಅನುಕೂಲಸ್ಥರು, ಭಾರಿ ಜಮೀನ್‌ದಾರರು ಎಂಬುದನ್ನು ದೃಷ್ಟಿಯಲ್ಲಿಟ್ಟು ಶಾಸನ ವಿಮರ್ಶೆ ಮಾಡಿದರೆ ಬಹಳ ಅನ್ಯಾಯವಾಗುತ್ತದೆ ಎಂಬ ವಿಚಾರವನ್ನು ನಾನು ಸರ್ಕಾರದವರಿಗೂ ಮತ್ತು ಸದಸ್ಯರಿಗೂ ಒತ್ತಿ ಹೇಳುತ್ತೇನೆ.

ಈ ಸಂದರ್ಭದಲ್ಲಿ ನಾನು ಇನಾಂದಾರ ಎಂದು ಯಾರಾದರೂ ತಿಳಿದುಕೊಂಡಿದ್ದರೆ ಅದು ಸರಿಯಲ್ಲ ಎಂಬುದನ್ನು ನಾನು ಇಲ್ಲಿ ಮನದಟ್ಟಾಗುವಂತೆ ತಿಳಿಸಲಿಚ್ಛಿಸುತ್ತೇನೆ. ಏಕೆಂದರೆ ನಾವು ಈ ಶಾಸನಮಾಡುವಾಗ ಸರ್ವರ ಹಿತವನ್ನೂ ದೃಷ್ಟಿಯಲ್ಲಿಟ್ಟುಕೊಳ್ಳಬೇಕು. ಅನೇಕಜನ ವಿಧವೆಯರು, ಬಾಲಕರು, ತಂದೆತಾಯಿಗಳಿಲ್ಲದವರು ಇನಾಂದಾರರಾಗಿರತಕ್ಕದ್ದನ್ನು ಗಮನಿಸಬೇಕು. ಇದರ ಜೊತೆಗೆ ಇನಾಂದಾರರುಗಳಲ್ಲಿ ಬಡವರಾಗಿರುವವರು, ಇನಾಂ ಗ್ರಾಮಗಳ ಉತ್ಪತ್ತಿಯನ್ನೇ ಮೂಲ ಆಧಾರವಾಗಿಟ್ಟುಕೊಂಡಿರುವವರು ಅನೇಕ ಮಂದಿ ಇದ್ದಾರೆ. ಅವರಲ್ಲಿ ಇನಾಂ ಗ್ರಾಮವನ್ನು ಸಂಪೂರ್ಣವಾಗಿ ರೈತರಿಗೆ ಬಿಟ್ಟು ಬೇರೆ ಕಸುಬನ್ನು ಹೊಂದಿಸಿಕೊಂಡಿರತಕ್ಕ ಜನರೂ ಇದ್ದಾರೆ. ಇನಾಂ ಗ್ರಾಮಗಳಲ್ಲೇ ವಾಸಮಾಡಿಕೊಂಡು ಅಲ್ಲಿನ ಜನರ ಹಿತವನ್ನು ನೋಡಿಕೊಂಡಿರತಕ್ಕ ಜಮೀನ್‌ದಾರರೂ ಇದ್ದಾರೆ. ಅಲ್ಲದೆ ಅನೇಕ ವರ್ಷಗಳಿಂದ ಆ ಗ್ರಾಮಗಳಲ್ಲಿಲ್ಲದೆ ಅಲ್ಲಿನ ರೈತರ ಹಿತವನ್ನು ಗಮನಿಸದೆ ಆ ಗ್ರಾಮದ ವಿಚಾರದಲ್ಲಿ ಅಭಿರುಚಿಯಿಲ್ಲದ ಜಮೀನ್‌ದಾರರೂ

(ಶ್ರೀ ಎಚ್. ಎಂ. ಚನ್ನಬಸಪ್ಪನವರು)

ಇದ್ದಾರೆ. ರೈತರ ವಿಷಯದಲ್ಲಿ ಕನಿಕರ ಇಟ್ಟುಕೊಂಡು ಗ್ರಾಮಗಳನ್ನು ಉತ್ತಮಸ್ಥಿತಿಯಲ್ಲಿಟ್ಟುಕೊಂಡಿರುವವರೂ ಕೆಲವು ಜನ ಇದ್ದಾರೆ. ರೈತರನ್ನು ಪೋಷಣೆ ಮಾಡತಕ್ಕವರೂ, ಶೋಷಣೆಮಾಡತಕ್ಕವರೂ, ಇಬ್ಬರೂ ಇದ್ದಾರೆ. ಹೀಗೆ ನಾನಾ ರೀತಿಯಲ್ಲಿರುವುದರಿಂದ ಯಾರೊಬ್ಬರನ್ನೂ ದೃಷ್ಟಿಯಲ್ಲಿಟ್ಟುಕೊಂಡು ಶಾಸನ ಮಾಡಬಾರದು ಎಂಬುದನ್ನು ಮಾನ್ಯ ಸದಸ್ಯರ ಅವಗಾಹನೆಗೆ ತರುತ್ತಿದ್ದೇನೆಯೇ ವಿನಾ ಬೇರೆಯಲ್ಲ. We are all here to see that not only justice is given but also the people are made to feel that justice is given to them. ಈ ಕಾನೂನಿನ ರೀತ್ಯಾ ಖಾಸ್ ಜಮೀನು ಎಂಬದನ್ನು ಅರ್ಥ ವಿವರಣೆಮಾಡುವುದಾದರೆ ಇದರಿಂದ ಅನೇಕರಿಗೆ ತೊಂದರೆಯಾಗುತ್ತದೆಯೆಂಬ ವಿಚಾರವನ್ನು ಈ ಸಂದರ್ಭದಲ್ಲಿ ಸ್ವಲ್ಪ ಎತ್ತಿ ತೋರಿಸಬೇಕು. ಹಾಗೆಂದರೆ ಸಾಮಾನ್ಯವಾಗಿ ಇನಾಂ ಮತ್ತು ಸರ್ವಮಾನ್ಯ ಗ್ರಾಮಗಳಲ್ಲಿ ಖಾಸ್ ಜಮೀನು ಇಟ್ಟುಕೊಂಡಿದ್ದಾರೆ. ದೊಡ್ಡದೊಡ್ಡ ಜಮೀನುಗಳನ್ನು ಮಾರಿಕೊಂಡು ಅಲ್ಪ ಸ್ವಲ್ಪ ಜಮೀನನ್ನು ಸ್ವಂತ ಸಾಗುವಳಿಗೆ ಎಂದು ಇಟ್ಟುಕೊಂಡಿದ್ದರೂ ಅದನ್ನು ವಾರ ಅಥವಾ ಗುತ್ತಿಗೆಗೆ ಕೊಟ್ಟು ಅದರಿಂದ ಬರತಕ್ಕ ಉತ್ಪನ್ನದಿಂದ ಜೀವನ ಮಾಡತಕ್ಕ ಅನೇಕ ಜಮೀನ್ದಾರರಿದ್ದಾರೆ. ಈಗ ಈ ಶಾಸನವು ಯಾರ್ಯಾರು ವಾರ, ಗುತ್ತಿಗೆಗೆ, ಸಾಗುವಳಿಗೆ ಕೊಟ್ಟಿದ್ದಾರೋ ಅವರ ಜಮೀನನ್ನೆಲ್ಲಾ ಸರ್ಕಾರದವರೇ ತೆಗೆದುಕೊಂಡುಬಿಡಬೇಕು, ಅವರಿಗೆ ಅದರಲ್ಲಿ ಯಾವ ಹಕ್ಕೂ ಇಲ್ಲ ಎಂದರೆ ಅಂಥವರ ಗತಿ ಏನು? 5 ಅಥವಾ 10 ಎಕರೆಗೆ ವಿನಾಯಿತಿ ಕೊಡಬಹುದು ಎಂಬುದಾಗಿ ಒಂದು ಕಲಂನಲ್ಲಿ ಹೇಳಿದೆ. ಅದರಿಂದ ಅವರಿಗೆ ಸಾಕಷ್ಟು ಪ್ರಮಾಣದಲ್ಲಿ ಪರಿಹಾರ ದೊರಕುವುದಿಲ್ಲ ಎಂಬುದನ್ನು ಈ ಸಂದರ್ಭದಲ್ಲಿ ಸೂಚನೆಮಾಡಲಿಚ್ಛಿಸುತ್ತೇನೆ. ಸರ್ವೇಸಾಧಾರಣವಾಗಿ ಎಲ್ಲಿ ರೈತರ ಸಂಖ್ಯೆ ಕಮ್ಮಿಯಿರುತ್ತದೆಯೋ ಎಂದರೆ ಮಲೆನಾಡಿನ ಪ್ರಾಂತ್ಯದಲ್ಲಿ ಇನಾಂದಾರರ ಮತ್ತು ಖಾಸಗೀ ಜನರ ಜಮೀನು ಹಾಗೆಯೇ ಪಾಳುಬಿದ್ದಿರುತ್ತದೆ. ಆದ್ದರಿಂದ ಮಲೆನಾಡು ಪ್ರಾಂತ್ಯದ ಇನಾಂದಾರರುಗಳಿಗೆ ಇದರಿಂದ ಅಷ್ಟು ತೊಂದರೆಯಾಗುವುದಿಲ್ಲ. ಜನಭರಿತವಾಗಿರತಕ್ಕ ಜಾಗಗಳಲ್ಲಿ, ಜಮೀನಿನಿಂದ ಬರತಕ್ಕ ಉತ್ಪತ್ತಿ ಹೆಚ್ಚಾಗಿರತಕ್ಕ ಜಾಗಗಳಲ್ಲಿ ಇನಾಂದಾರರುಗಳಿಗೆ ತುಂಬಾ ಅನಾನುಕೂಲವಾಗುತ್ತದೆ. ಇದರ ಜೊತೆಗೆ ಒಂದು ಉದಾಹರಣೆ ಕೊಡುತ್ತೇನೆ. ನಾಲ್ಕಾರು ಎಕರೆ ತರೀ ಜಮೀನು ಗುತ್ತಿಗೆಗೆ ಕೊಟ್ಟಿರತಕ್ಕ ಜಮೀನ್ದಾರರ ಆ ಜಮೀನಿಗೆ ನೀರಾವರಿ ಅನುಕೂಲ ಒದಗಿಸುವುದಕ್ಕಾಗಿ ಬೇಕಾದಷ್ಟು ಹಣ ಖರ್ಚು ಮಾಡಿರುತ್ತಾನೆ. ಅಂಥ ಜಮೀನನ್ನು ಕಾರಣಾಂತರದಿಂದ ಇವತ್ತು ವಾರ, ಅಥವಾ ಗುತ್ತಿಗೆ ಕೊಟ್ಟಿರುವ ಪರಿಸ್ಥಿತಿ ಇದೆ. ಅಂದ ಮಾತ್ರಕ್ಕೆ ಅವರು ಸ್ವಂತ ಸಾಗುವಳಿ ಮಾಡುತ್ತಿಲ್ಲ, ವಾರ, ಗುತ್ತಿಗೆಗೆ ಕೊಟ್ಟು ಸಾಗುವಳಿಮಾಡಿಸುತ್ತಾ ಇದ್ದಾರೆ ಎಂಬ ಏಕಮಾತ್ರ ಕಾರಣದಿಂದ ಅವರ ಹಕ್ಕನ್ನು ಆ ಜಮೀನಿನಿಂದ ತೆಗೆದುಬಿಡುವುದಾದರೆ ಅದು ನ್ಯಾಯಶಾಸ್ತ್ರಕ್ಕೆ ವಿರೋಧವಾಗುತ್ತದೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಏಕೆ?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಏಕೆಂದರೆ ಸಾಮಾನ್ಯವಾಗಿ ಈ ಇನಾಂ ಹಕ್ಕನ್ನು ತೆಗೆದುಕೊಂಡುಬಿಡುತ್ತೇವೆ ಎಂಬ ವಿಷಯವನ್ನು ದೇಶಕ್ಕೆ ನಾವು ಹೇಳಿಲ್ಲ. ಮೊದಲೇ ಅರಿಕೆಮಾಡಿಕೊಂಡು ಭಾರಿ ದೊಡ್ಡ ದೊಡ್ಡ ಇನಾಂದಾರರುಗಳನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಳ್ಳಕೂಡದು. ಅನೇಕ ಬಡಜನರಿಂದ ಅವರ ಇನಾಂ ತೆಗೆದುಕೊಂಡು ಅವರಿಗೆ ಕೊಡಬೇಕಾದ ಪರಿಹಾರ ಕೊಟ್ಟರೂ ಕೂಡ ಸಾಲ ಸೋಲ ತೀರಿಸಿಕೊಳ್ಳುವ ಶಕ್ತಿ ಇಲ್ಲದವರು ಅನೇಕ ಜನರಿದ್ದಾರೆ. ಇನ್ನೊಂದು ವಿಷಯ. ಇನಾಂದಾರರ ಒಂದು ಅಸೋಸಿಯೇಷನ್ ಇದೆ. ಅವರು ಸಮಿತಿಯ ಮುಂದೆ ಬಂದು ಇರತಕ್ಕ ಪರಿಸ್ಥಿತಿಯನ್ನು ಹೇಳಿದ್ದಾರೆ. ಅನೇಕ ಜನ ಇನಾಂದಾರರ ವಿಷಯದಲ್ಲಿ ಪಶ್ಚಾತ್ತಾಪ ಪಡಬೇಕಾಯಿತು. ಕೆಲವು ಕಡೆ ಇನಾಂದಾರರು ರೈತರನ್ನು ಶೋಷಿಸುತ್ತಾರೆ, ಇನ್ನು ಕೆಲವುಕಡೆ ರೈತರು ಇನಾಂದಾರರನ್ನು ಶೋಷಿಸುತ್ತಾರೆ. ಇದಕ್ಕೆ ದೃಷ್ಟಾಂತರ ಕೊಡಬಲ್ಲೆ. ಆದರೆ ಈ ಸಂದರ್ಭದಲ್ಲಿ ಅವುಗಳೆಲ್ಲದರ ವಿಮರ್ಶೆ ಅನಾವಶ್ಯಕ. ಒಂದು ಉದಾಹರಣೆ ಮಾತ್ರ ಹೇಳುತ್ತೇನೆ. ಗಂಧನಹಳ್ಳಿ ಎಂಬ ಒಂದು ಹಳ್ಳಿ ಇದೆ. ಅಲ್ಲಿ ಒಂದು ಸ್ಕೂಲು ಮತ್ತು ಆಸ್ಪತ್ರೆಯನ್ನು ಸರ್ಕಾರಿ ವೆಚ್ಚದಲ್ಲಿ ಸಾರ್ವಜನಿಕರ ಸಹಾಯದಿಂದ ಕಟ್ಟಬೇಕೆಂದು ಹೋದರೆ ಜಮೀನು ಕೊಡುವುದಕ್ಕೇ ತಂಟೆ ಮಾಡಿದ ಇನಾಂದಾರರು ಇದ್ದಾರೆ. ಕಟ್ಟಡ ಆದ ಮೇಲೆ ಆ ಜಮೀನು ನನ್ನದು ಅದನ್ನು ಕಿತ್ತುಹಾಕಬೇಕು ಎಂದು ಸರ್ಕಾರದ ಮೇಲೆ ದಾವಾ ಮಾಡಿರತಕ್ಕ ಇನಾಂದಾರರು ಇದ್ದಾರೆ. ದಾವಾ ಅಷ್ಟೇ ಅಲ್ಲ ಆ ಜಮೀನಿನಲ್ಲಿ ಇಷ್ಟು ಬೆಳೆ ಬೆಳೆಯುತ್ತಾ ಇದ್ದೆ ಅದನ್ನು ತಪ್ಪಿಸಿದುದಕ್ಕಾಗಿ ಪರಿಹಾರ ಕೊಡಿಸಿಕೊಡಬೇಕೆಂದು ದಾವಾ ನನ್ನಮೇಲೆ ನಡೆಯುತ್ತಾ ಇದೆ. ಇಂಥಾ ಇನಾಂದಾರರು ಇರುತ್ತಾರೆ. ಇದನ್ನು ಏಕೆ ಹೇಳಿದೆ ಎಂದರೆ ಇನಾಂದಾರರು ಕೆಟ್ಟವರು, ಒಳ್ಳೆಯವರು ಇಬ್ಬರೂ ಇದ್ದಾರೆ. ಆದ್ದರಿಂದ ಒಬ್ಬರ ದೃಷ್ಟಿಯಿಟ್ಟುಕೊಂಡು ಶಾಸನ ಮಾಡುವುದು ಬೇಡ. ಹಕ್ಕು ತೆಗೆದುಕೊಳ್ಳುವಾಗ ನ್ಯಾಯವಾದ, ಧರ್ಮವಾದ ಯಾವ್ಯಾವ ಹಕ್ಕುಬಾಧ್ಯತೆಗಳಿರಬೇಕೋ ಅವನ್ನು ಒದಗಿಸಬೇಕು ಎಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು ಸರ್ವಸಮ್ಮತವಾದ ದೇಶದಲ್ಲಿ ಒಂದು ವಿಧವಾದ ಉತ್ಕಟ ಪರಿಸ್ಥಿತಿ ಬಾರದ ರೀತಿಯಲ್ಲಿ ಪರಸ್ಪರ ಬಾಂಧವ್ಯವು ದಿನಕ್ರಮೇಣ ಉತ್ತಮವಾಗುವ ರೀತಿಯಲ್ಲಿ ಶಾಸನ ಮಾಡಬೇಕೆಂಬುದನ್ನು ಮಾತ್ರ ನಿವೇದಿಸುತ್ತೇನೆ.

ಪ್ಲಾಂಟೇಷನ್ ಬೆಳೆ, ಅಡಿಕೆ ತೋಟ, ತೆಂಗಿನ ತೋಟ, ಕ್ವಾಸೂನ ಪ್ಲಾಂಟೇಷನ್ ಇವೆಲ್ಲವನ್ನೂ ದೃಷ್ಟಿಯಲ್ಲಿಟ್ಟುಕೊಳ್ಳಬೇಕು. ನಾಲ್ಕಾರು ವರ್ಷ ಗಿಡಗಳನ್ನು ಹಾಕಿ ಬೆಳೆಸಿ, ಬೇಕಾದಷ್ಟು ಹಣ ಖರ್ಚು ಮಾಡಿ ತೋಟ ಮಾಡಿರತಕ್ಕ ನಿದರ್ಶನ ಇದೆ. ಇದೆಲ್ಲವನ್ನು ಅವರೇ ನೇರವಾಗಿ ಮಾಡದೇ ಇದ್ದರೂ ದುಡ್ಡು ಕೊಟ್ಟು ರೈತರಿಂದ ಸಾಗುವಳಿ ಕರಾರುಮೇಲೆ ಮಾಡಿಕೊಂಡು ಹೋಗುವಾಗ ಆ ತೋಟಗಳನ್ನು ರೈತರಿಗೇ ಕೊಟ್ಟುಬಿಡಬೇಕೆಂದು ನಿರ್ಧರಮಾಡುವುದು ನ್ಯಾಯವೇ ಎಂಬುದನ್ನು ತಾವು ಯೋಚನೆಮಾಡಬೇಕು. ಅದು ನ್ಯಾಯ ಎಂದು ಕಂಡುಬಂದಪಕ್ಷದಲ್ಲಿ ಆಗ್ಯೆ ನಾನು ಹೇಳುವುದು ಏನೂ ಇಲ್ಲ, ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಒಂದು ಪ್ರಶ್ನೆಯನ್ನು ನಾವು ಹಾಕಿಕೊಳ್ಳಬೇಕು.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ನಿಮ್ಮ ಅಭಿಪ್ರಾಯ ಏನು ಎಂಬುದನ್ನು ಹೇಳಿ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ನಾನು ಹೇಳಬೇಕೆಂದಿರುವುದನ್ನು ಹೇಳಿದಮೇಲೆ ನನ್ನ ಅಭಿಪ್ರಾಯವೇನು ಎಂಬುದನ್ನು ತಾವೇ deduce ಮಾಡಿಕೊಳ್ಳಬಹುದು. People must have confidence;

the legislators are here to do things dispassionately and see that justice is done to them ಅವರಿಗೆ ಒಂದು ರಕ್ಷಣೆ ಕೊಡಬೇಕು. ಏಕೆಂದರೆ ಅವರು ಅವುಗಳನ್ನು ವಾರ ಅಥವಾ ಗುತ್ತಿಗೆಗೆ ಕೊಟ್ಟು ಸಾಗುವಳಿ ಮಾಡಿಕೊಂಡು ಬರುತ್ತಾ ಇದ್ದಾರೆ. ಆ ಜಮೀನಿನ ಮೇಲಿನ ಹಕ್ಕನ್ನು ಆ ಇನಾಂದಾರರಿಗೆ ಕೊಡಬೇಕಾದಂಥಾದ್ದು ಮತ್ತು ಸಾಗುವಳಿದಾರರನ್ನು ರಿಜಿಸ್ಟರ್ಡ್ ಆಕ್ಯುಪೆಂಟ್ಸ್ ಎಂಬುದಾಗಿ ಮಾಡತಕ್ಕದ್ದು ನ್ಯಾಯ ಮತ್ತು ಧರ್ಮ. ಹಾಗೆ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುವ ವಾದದಲ್ಲಿ ತಿರುಳಿಲ್ಲ. ನೂರಾರು ಎಕರೆ ಜಮೀನಿದ್ದು ಅಷ್ಟನ್ನು ವಾರ, ಗುತ್ತಿಗೆ ಸಾಗುವಳಿಮಾಡಿಸುತ್ತಾ ಇದ್ದು, ರೈತರಿಗೆ ಕೊಡಲಿಕ್ಕೆ ಬೇರೆ ಜಮೀನಿಲ್ಲ ಎಂಬ ಪರಿಸ್ಥಿತಿ ಇದ್ದರೆ ಒಂದು ಪರಮಾವಧಿಯನ್ನು ಎಂದರೆ 50—60 ಅಥವಾ 100 ಎಕರೆ ಗೊತ್ತುಮಾಡಿ ಅದಕ್ಕಿಂತ ಹೆಚ್ಚಾಗಿದ್ದರೆ ಅದನ್ನು ತೆಗೆದುಕೊಳ್ಳುವವರಿಗೆ ಕೊಡಬಹುದು ಎಂದು ಕಾನೂನು ಮಾಡುವುದಾದರೆ ಅದರಲ್ಲಿ ಸ್ವಲ್ಪ ತಿರುಳಿದೆ. ಅದು ಬಿಟ್ಟು ಇರತಕ್ಕ ಜಮೀನನ್ನೆಲ್ಲಾ ತೆಗೆದುಕೊಳ್ಳುತ್ತೇವೆ ಎಂದರೆ ಅದು ಸರಿಯಲ್ಲ.

ಆಮೇಲೆ, ಖಾಸ್ ಜಮೀನುಗಳೆಂಬುವೆಲ್ಲಾ, ಅಂದರೆ ನೇರವಾಗಿ ಇನಾಂದಾರರುಗಳೇ ಉತ್ತು, ಬಿತ್ತಿ ವ್ಯವಸಾಯ ಮಾಡುತ್ತಿದ್ದುದು ಅವರಿಗೇ ಸೇರಬೇಕೆಂದು ಹೇಳಿದ್ದಾರೆ. ಇದರ ಪ್ರಕಾರ ಎಷ್ಟು ಜನ ಇನಾಂದಾರರುಗಳಿಗೆ ಜಮೀನು ಸಿಕ್ಕುತ್ತದೋ ಗೊತ್ತಿಲ್ಲ. ಏಕೆಂದರೆ ಸರ್ವೇಸಾಧಾರಣವಾಗಿ ಇನಾಂದಾರರುಗಳಲ್ಲಿ ಸ್ವಂತವಾಗಿ ಜಮೀನು ಮಾಡುವವರು ನೂರಕ್ಕೆ ಒಬ್ಬರೋ ಇಬ್ಬರೋ ಇರಬಹುದು ಅಷ್ಟೆ. ಮಿಕ್ಕವರೆಲ್ಲರೂ ವಾರಕ್ಕೋ ಗುತ್ತಿಗೆಗೋ ಕೊಟ್ಟು ಮಾಡಿಸುತ್ತಿರುತ್ತಾರೆ. ಸಧ್ಯಕ್ಕೆ ಆ ವಿಚಾರವಾಗಿ ಹೆಚ್ಚಿಗೆ ಹೋಗುವುದಿಲ್ಲ. ಆ ಸೆಕ್ಷನ್ ಚರ್ಚೆಗೆ ಬಂದಾಗ ಅದನ್ನು ವಿಮರ್ಶೆಮಾಡಿ ಮಾತನಾಡುತ್ತೇನೆ.

Sri B. M. SHAMANNA GOWDA (Retroceded Area-General).—Is there no time limit? How long will he take Sir?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—I have no objection to close my speech. I am not very anxious to take undue advantage of the time of the House.

ಆಮೇಲೆ, ಈ ಸಂದರ್ಭದಲ್ಲಿ ಕೋಲಾರ ಮತ್ತು ಬೆಂಗಳೂರು, ಈ ಎರಡು ಡಿಸ್ಟ್ರಿಕ್ಟುಗಳ ವಿಷಯದಲ್ಲಿರುವ ಒಂದು ವಿಶೇಷ ಪರಿಸ್ಥಿತಿಯನ್ನು ಈ ಸಭೆಯ ಗಮನಕ್ಕೆ ತರುತ್ತೇನೆ. ಈ ಎರಡು ಡಿಸ್ಟ್ರಿಕ್ಟ್‌ಗಳಲ್ಲಿ ಇನಾಂ ಗ್ರಾಮಗಳ ಸಂಖ್ಯೆ ವಿಪರೀತವಾಗಿದೆ. ಮತ್ತು ಜನಸಂಖ್ಯೆಯೂ ಇಲ್ಲಿ ವಿಪರೀತವಾಗಿದೆ. ಈ ಎರಡರ ಪರಿಣಾಮವಾಗಿ ಇನಾಂದಾರರುಗಳಿಗೂ ರೈತರಿಗೂ ವಿಶೇಷ ರೀತಿಯ ಘರ್ಷಣೆಗಳು ನಡೆಯುತ್ತಿವೆ. ಇದರಲ್ಲಿ ನನಗೆ ಬಂದಿರುವ ವರ್ತಮಾನಗಳ ರೀತ್ಯಾ (ಅದು ಎಷ್ಟರಮಟ್ಟಿಗೆ ನಿಜವೋ ಸುಳ್ಳೋ ಎಂಬುದನ್ನು ಮಾನ್ಯ ಸದಸ್ಯರು ತಿಳಿದವರು ಹೇಳಬಹುದು) ಒಟ್ಟಿನಮೇಲೆ ಇನಾಂದಾರರು ರೈತರುಗಳನ್ನು ಶೋಷಣೆಮಾಡುತ್ತಿದ್ದಾರೆಂದು ಹೇಳುತ್ತಿರುವಂತೆಯೇ, ಅಲ್ಲಿ ರೈತರುಗಳು ಇನಾಂದಾರರುಗಳನ್ನು ಶೋಷಣೆ ಮಾಡುವ ಪರಿಸ್ಥಿತಿಯೂ ಇದೆಯೆಂಬುದು ನನ್ನ ಗಮನಕ್ಕೆ ಬಂದಿದೆ

Sri H. C. LINGA REDDY—That is false.

Sri. A. BHEEMAPPA NAIK—Even that is possible.

ಶ್ರೀ ಎಚ್. ಎಂ. ಚನ್ನಬಸಪ್ಪನವರು—ಅಂತೂ ಅಲ್ಲೊಂದು ಇಲ್ಲೊಂದು, ಕೆಲಮಟ್ಟಿಗೆ ಬಲಾಬಲಗಳನ್ನು ನೋಡೋಣ, ಕಂದಾಯ ಕೊಡಬೇಡಿ ಎಂದು ರೈತರು ಹೇಳುವ ಪರಿಸ್ಥಿತಿಯೂ ಇದೆ. ನಮ್ಮ ಕಡೆ ಇನಾಂ ಗ್ರಾಮಗಳೇ ಕಮ್ಮಿಯಿರುವುದರಿಂದ ಅಂಥ ಪರಿಸ್ಥಿತಿಗೆ ಕಾರಣವಿಲ್ಲ. ಆದರೆ ಜನಭರಿತವಾದ ಈ ಪ್ರದೇಶಗಳಲ್ಲಿ ಈ ಪರಿಸ್ಥಿತಿಯೂ ಇದೆಯೆಂದು ತಿಳಿದು ಬಂದಿದೆ. ರೈತರ ಸ್ಥಿತಿ ಬಹಳ ಉತ್ಕಟವಾಗಿದೆ, ಇನಾಂದಾರರುಗಳು ರೈತರುಗಳನ್ನೆಲ್ಲಾ ಶೋಷಣೆ ಮಾಡಿಬಿಟ್ಟಿದ್ದಾರೆ. ಅವರಿಗೆ ಯಾವ ಪರಿಹಾರ ದ್ರವ್ಯವನ್ನೂ ಕೊಡದೆ ಆ ಇನಾಂತಿಗಳನ್ನೆಲ್ಲಾ ಕಿತ್ತುಕೊಳ್ಳಬೇಕೆಂದು extreme view ಇಟ್ಟುಕೊಂಡಿರುವವರೂ ಇದ್ದಾರೆ. ಅವರು ಹೇಳುವುದನ್ನು ಕೇಳುವುದಕ್ಕೆ ನಾನೂ ಕುತೂಹಲನಾಗಿದ್ದೇನೆ. ಇಲ್ಲಿ ಪರಿಹಾರ ಕೊಟ್ಟಿರುವುದು ಹೆಚ್ಚಾಗಿದೆ, ಕಮ್ಮಿಮಾಡಬೇಕು ಎಂದೂ ಕೆಲವರು ವಾದ ಹೂಡಿದ್ದಾರೆ. ಅದನ್ನು ಕೇಳಬೇಕೆಂದಿದ್ದೇವೆ. ಆದ್ದರಿಂದ ಆ ವಿಚಾರ ಹೆಚ್ಚಿಗೆ ಹೇಳಲು ನಾನು ಇಷ್ಟಪಡುವುದಿಲ್ಲ.

ಸೆಲೆಕ್ಟ್ ಕಮಿಟಿಯವರು ಜಹಗೀರಿಗಳ ವಿಷಯದಲ್ಲಿ ಸ್ವಲ್ಪಮಟ್ಟಿಗೆ, ಅದರಲ್ಲೂ ಶೃಂಗೇರಿ ಜಹಗೀರಿಯ ವಿಷಯದಲ್ಲಿ ಬಹುಮಟ್ಟಿಗೆ ವಿನಾಯಿತಿ ಕೊಡಬೇಕೆಂದು ಹೇಳಿದ್ದಾರೆ. 5ನೆಯ ಅಧ್ಯಾಯವನ್ನು ಇದಕ್ಕಾಗಿಯೇ ಹೊಸದಾಗಿ ತೆಗೆದಿದೆಯೆಂದು ಹೇಳಿದ್ದಾರೆ. ಮೂಲ ಶಾಸನದಲ್ಲಿ ಜಹಗೀರುಗಳು ಇನಾಂತಿಗಳು— ಎಲ್ಲಕ್ಕೂ ಒಂದೇ ರೀತಿ ಇರಬೇಕೆಂದು ಹೇಳಿದ್ದೆವು. ಅಂಥಾದ್ದರಲ್ಲಿ ಈ ರೀತಿ ಬದಲಾವಣೆ ಮಾಡಿರುವುದಕ್ಕೆ ಏನು ಪ್ರಬಲ ಕಾರಣಗಳಿದ್ದುವೋ ನನಗೆ ಗೊತ್ತಾಗಲಿಲ್ಲ. ಶೃಂಗೇರಿ ಮಠಕ್ಕೆ ಸೇರಿದ 20 ಗ್ರಾಮಗಳ ವಿಷಯದಲ್ಲಿ ವಿನಾಯಿತಿ ಕೊಡಬೇಕು, ಬಾಕಿ ಜಹಗೀರಿಗಳ ವಿಷಯದಲ್ಲಿ ಇತರೇ ಇನಾಂ ಗ್ರಾಮಗಳ ವಿಷಯದಲ್ಲಿರುವಂತೆಯೇ ಅನ್ವಯಿಸಬೇಕೆಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ಶೃಂಗೇರಿ ಜಹಗೀರಿ ಕಮಿಟಿಯೆಂಬುದೂ ಏರ್ಪಾಡಾಗಿತ್ತು. ಅವರು ಈ ವಿನಾಯಿತಿಗಳನ್ನು ಕೊಡಬೇಕೆಂದು ವರದಿಮಾಡಿದರು. ಆದರೆ ಆ ಕಮಿಟಿಯ ಸದಸ್ಯರನ್ನು ನಾನು ಭೇಟಿಮಾಡಿ ಈ ವಿಚಾರವನ್ನು ಸಂಭಾಷಣೆ ಮಾಡಿದ್ದರಲ್ಲಿ, ಅವರು ಆಗ ಹೇಳಿದಂಥ ಅಂಕಿ ಅಂಶಗಳೇನೂ ತೃಪ್ತಿಕರವಾಗಿ ಕಂಡುಬರಲಿಲ್ಲ. ಶೃಂಗೇರಿಮಠಕ್ಕಿರಬೇಕಾದ ಗೌರವದ ವಿಚಾರದಲ್ಲಿ ಭಿನ್ನಾಭಿಪ್ರಾಯಪಡುವುದಕ್ಕೆ ಕಾರಣವಿಲ್ಲ. ನಾನು ಹಿಂದೆಯೇ ಹೇಳಿದಂತೆ ಉದಾತ್ತವಾದ ಸುಧಾರಣೆಗಳನ್ನು ಮಾಡಿ ಕೆಲಸಮಾಡಿಕೊಂಡು ಹೋಗೋಣ. ಏಕೆಂದರೆ, ನಾವು ಭೂ ಸುಧಾರಣೆ ಮಾಡುವ ಉದ್ದೇಶವೇನು ? ಒಬ್ಬರು ವಿನಾಯಿತಿ ಕೇಳಿದರೆಂದು ಅವರಿಗೆ ಕೊಟ್ಟರೆ ಇನ್ನೊಬ್ಬರೂ ಹಾಗೆಯೇ ಕೇಳುತ್ತಾರೆ. ಅವರಿಗೂ ಕೊಡಬೇಕಾಗಿ ಬರುತ್ತದೆ. ಶೃಂಗೇರಿ ಜಹಗೀರಿಯೆಂಬ ಹೆಸರನ್ನು ಮಾತ್ರ ಉಳಿಸಿಕೊಡಿ ಎಂದು ಕೇಳಿದ್ದಾರೆ. ಹೀಗೆ ಹೆಸರು ಮಾತ್ರದಿಂದ ಶೃಂಗೇರಿಗೆ ಪ್ರತಿಷ್ಠೆಯಿದೆಯೆಂದು ಹೇಳುವುದು ಒಪ್ಪತಕ್ಕದ್ದಲ್ಲ. ಅವರು ಸೋಷಿಯಲ್, ಎಕನಾಮಿಕಲ್, Spiritual ಮತ್ತು Ecclesiastical ಕ್ಷೇತ್ರಗಳಲ್ಲೆಲ್ಲಾ ಸೇವೆ ಮಾಡಿದ್ದಾರೆ, ಮುಂದೆ ಮಾಡತಕ್ಕವರಾಗಿದ್ದಾರೆಂದು ಹೇಳಿ ಅವರುಗಳಿಗೆ ವಿನಾಯಿತಿ ಕೊಡಬೇಕೆಂದು ಹೇಳಿ

(ಶ್ರೀ ಎಚ್. ಎಂ. ಚನ್ನಬಸಪ್ಪನವರು)

ಅವರುಗಳಿಗೆ ವಿನಾಯಿತಿ ಕೊಡಬೇಕೆಂದು ಹೇಳಿದರೆ ಇತರೇ ಜಹಗೀರಿಗಳವರೂ ನಮಗೂ ಅದೇ ರೀತಿ ಕೊಡಿ, ಇತರೇ ಗ್ರಾಮಗಳ ರೀತಿಯಲ್ಲೇ ನಮ್ಮ ಗ್ರಾಮಗಳನ್ನು ನೋಡಿಕೊಳ್ಳಿ, ಆದರೆ ಹೆಸರು ಮಾತ್ರ ಉಳಿಸಿಕೊಡಿ ಎಂದು ಕೇಳಬಹುದು.

ಶ್ರೀ ಬಿ. ಎಂ. ಶಾಮಣ್ಣಗೌಡರು.—ಮಿಕ್ಕವರೆಲ್ಲಾ original holders ಅಲ್ಲವೆಂದು ಹೇಳಿದ್ದಾರೆ. ಆದ್ದರಿಂದ ಅವರಿಗೆ ಕೊಡಬೇಕಾಗಿಲ್ಲ!

ಶ್ರೀ ಎಚ್. ಎಂ. ಚನ್ನಬಸಪ್ಪನವರು.—"Original" ಆಗಿರುವವರೇ ಬಂದು ಕೇಳಿದರೆ ಏನು ಮಾಡುವುದು?

ಶ್ರೀ ಬಿ. ಎಂ. ಶಾಮಣ್ಣಗೌಡರು.—ಅಂಥವರಿಗೆ ಕೊಡಿ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ದಿವಾನ್ ಪೂರ್ಣಯ್ಯನವರು ದೇಶಕ್ಕೆ ಅನಂತವಾದ ಸೇವೆಯನ್ನು ಸಲ್ಲಿಸಿದ್ದಾರೆ ಎಂದ ಮಾತ್ರಕ್ಕೇ ತಾಲ್ಲೂಕು—ತಾಲ್ಲೂಕೇ ಅವರಿಗೆ ಬಿಟ್ಟುಬಿಡುವುದಕ್ಕಾಗುತ್ತದೆಯೇ!! ಅವರು ನಮಗೆ ವಂಶಪಾರಂಪರ್ಯವಾಗಿ ಆ ಜಹಗೀರು ಬಂದಿದೆ; ನಮ್ಮ ಜಹಗೀರಿನ ಜನಗಳಿಗೇನೂ ತೊಂದರೆ ಮಾಡಬೇಕೆಂಬ ಅಭಿಪ್ರಾಯ ನಮಗಿಲ್ಲ. ಬೇರೆ ಗ್ರಾಮಗಳಲ್ಲಿ ಮಾಡುವ ಸುಧಾರಣೆಗಳನ್ನೆಲ್ಲಾ ಇಲ್ಲಿಯೂ ಮಾಡಬಹುದು; ಆದರೆ ಜಹಗೀರಿ ಎಂಬ ಹೆಸರನ್ನು, ನಮ್ಮ ತಂದೆ, ತಾತಂದಿರಿಂದ ಬಂದ ಹೆಸರನ್ನು ಮಾತ್ರ ಉಳಿಸಿಕೊಡಿ ಎಂದು ಕೇಳಬಹುದು.

Sri G. A. ACHARYA—(Bangalore District—General).—Sringeri is a Cultural centre, why do you compare it with individuals? It is spreading a certain philosophy.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಅದು Cultural institution, ecclesiastical institution ಎಂದು ಹೇಳಬಹುದು. ಹಾಗೆಯೇ ಎಷ್ಟೋ ವಿದ್ಯಾ ಸಂಸ್ಥೆಗಳಿಲ್ಲವೇ? ಎಷ್ಟೋ ವಿದ್ಯಾ ಸಂಸ್ಥೆಗಳು ಜಾತಿಮತ ಕೋಮುಗಳ ಭೇದವಿಲ್ಲದೆ ಸಮಾಜದ ಸೇವೆ ಮಾಡುವಂಥವುಗಳಿವೆ. ಅಂಥಾ ಸಂಸ್ಥೆಗಳಿಗಿರತಕ್ಕ ಇನಾಂತಿ ಹಕ್ಕನ್ನು ಕಿತ್ತುಕೊಳ್ಳುವುದು ಧರ್ಮವೇ ಎಂದು ಕೇಳಬಹುದು. ಅದೂ ಒಂದು ಮಠವಲ್ಲವೇ? ಹಾಗೆ ಅನೇಕ ಮಠಗಳಿವೆ. ಅವೂ ಉದಾತ್ತ ಸೇವೆಯನ್ನು ಮಾಡುತ್ತಿವೆ. ಒಬ್ಬರಿಗೆ ವಿನಾಯಿತಿಕೊಟ್ಟು ಇನ್ನೊಬ್ಬರಿಗೆ ಕೊಡದೆ ಹೋದರೆ ಪಕ್ಷಪಾತ ಮಾಡಿದಂತಾಗುತ್ತದೆ. ಶೃಂಗೇರಿ ಜಹಗೀರಿಗೆ ಕೊಟ್ಟರಲ್ಲಾ ನಾವು ಒಂದಲ್ಲೊಂದು ವಿಧದಲ್ಲಿ ಸರ್ವೇ ಜನರಿಗೂ ಅನುಕೂಲವಾದ ಕೆಲಸಮಾಡುತ್ತಿದ್ದೇವೆ. ದೇಶದಲ್ಲಿ spiritual elevation ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ವಿನಾಯಿತಿ ಕೊಡಿ ಎಂದು ಹೇಳಿದರೆ ಅವರಿಗೆ ಉತ್ತರ ಹೇಳುವುದು ಹೇಗೆ?

ಅಲ್ಲದೆ, ಇನ್ನೊಂದು ದೃಷ್ಟಿಯಿಂದಲೂ ಇದನ್ನು ನೋಡಬೇಕು. ಇದರಿಂದ ನಮ್ಮ ಮೂಲ ಉದ್ದೇಶಕ್ಕೇ ಭಂಗಬರುತ್ತದೆ. ಇಲ್ಲಿನ 24 ಗ್ರಾಮಗಳಲ್ಲಿ ನಿಮಗೆ ಬೇಕಾದ ಸುಧಾರಣೆಗಳನ್ನು ಮಾಡಬಹುದು. ಆದರೆ ಅಲ್ಲಿನ ಖನಿಜ, ಅರಣ್ಯ, ಇತ್ಯಾದಿ, ಇತ್ಯಾದಿ ವಿಷಯಗಳಲ್ಲಿ ಮಾತ್ರ ವಿನಾಯಿತಿ ಕೊಡಬೇಕೆಂದರೆ, ಅವಕ್ಕೇ ಬೇರೆ ಶಾಸನ ಮಾಡಬೇಕೆಂದರೆ......

Sri B. HUTCHE GOWDA.—'Mines' is Central subject!

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಇರಬಹುದು ಆದರೆ ಈಗ ನಾವು ಸರ್ಕಾರ, ರೈತ—ಈ ರೀತಿಯ ವಿಷಯವಾಗಿ ಚರ್ಚೆಮಾಡುತ್ತಿದ್ದೇವೆಯೇ ಹೊರತು 'ಕೇಂದ್ರಕ್ಕೆ ಸೇರಿದ ವಿಷಯವೇ ನಮ್ಮ ಸರ್ಕಾರಕ್ಕೆ ಸೇರಿದ್ದೇ' ಎಂದು ಹೇಳುತ್ತಿಲ್ಲ. ನನ್ನ ವಾದವೇನೆಂದರೆ, ಶೃಂಗೇರಿಗೇ ಬೇರೆ ಶಾಸನ ಮಾಡಿ, ಬೇರೆ ಇನಾಂ ಗ್ರಾಮಗಳಿಗೇ ಬೇರೆ ಕಾನೂನು ಮಾಡುವುದು ಸಾಧ್ಯವಲ್ಲ. ಹೀಗೆ ಪ್ರತಿಯೊಂದಕ್ಕೂ ಮಾಡುತ್ತಾ ಹೋದರೆ ಎಲ್ಲಿಯವರೆಗೆ ಹೋಗುವುದು. Where is the end? We have got to draw a line somewhere. We cannot go on legislating piece-meal, one legislation for one area and another legislation for some other area.

ಅದು ಸಾಧುವಾದುದೂ ಅಲ್ಲ; ಸರಿಹೋಗುವುದೂ ಇಲ್ಲ.

ಈ ವಿಚಾರದಲ್ಲಿ ತೀವ್ರವಾದ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸುವ ಮಹನೀಯರನೇಕರಿರಬಹುದು ಅವರ ವಾದವೇನೆಂಬುದನ್ನು ಇನ್ನೂ ಸಂಪೂರ್ಣವಾಗಿ ನಾನು ತಿಳಿದುಕೊಂಡಿಲ್ಲ. ಆ ವಿಚಾರದಲ್ಲಿ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಬೇರೆ ಸಂದರ್ಭವನ್ನು ಉಪಯೋಗಿಸಿಕೊಳ್ಳುತ್ತೇನೆ. ಸಮಿತಿಯವರು ಈ ವಿಚಾರವನ್ನು ಪರಿಶೀಲಿಸುವ ಕಾಲದಲ್ಲಿ ಕೆಲವರು ಒಂದಂಶವನ್ನು ವ್ಯಕ್ತಪಡಿಸಿದರು. ಅದು ಗಮನಾರ್ಹವಾಗಿದೆ. ಶೃಂಗೇರಿ ಜಹಗೀರಿಗೆ ಹಕ್ಕಬುಕ್ಕರ ಕಾಲದಲ್ಲಿ ಈ ಅಧಿಕಾರ ಬಂತು. ಇದನ್ನು ವಾಪಸ್ಸು ತೆಗೆದುಕೊಳ್ಳಲು ಮೈಸೂರು ಸರ್ಕಾರಕ್ಕೆ ಏನು ಅಧಿಕಾರವಿದೆ ಎಂದು ಪ್ರಶ್ನೆ ಹಾಕಿದರು. ಇದು ನನಗೆ ಆಶ್ಚರ್ಯವನ್ನುಂಟುಮಾಡಿತು. ಅಂದಮೇಲೆ ಈ ಮೂಲಕ ಅಧಿಕಾರ ಈ ಸರ್ಕಾರಕ್ಕಿದೆಯೆ ಎಂಬುದು ಸ್ವಲ್ಪ ನಾವು ಯೋಚನೆ ಮಾಡಬೇಕಾದ ವಿಚಾರ. ಈ ಪ್ರಶ್ನೆ ಸಭೆಯಲ್ಲಿ ಮುಂದೆ ಬರಬಹುದೆಂದು ಊಹೆ ಮಾಡಿಕೊಂಡು ಅದಕ್ಕೆ ಅವರು ಉತ್ತರ ಹೇಳಬೇಕೆಂದು ನನ್ನ ಆಸೆ. ಹಿಂದೆ ಈ ಜಹಗೀರಿಯನ್ನು ಕೊಟ್ಟ ಕಾಲದಲ್ಲಿ ದೇಶದ ಸ್ವಾಮ್ಯ, ಅಧಿಕಾರ ವಿಜಯನಗರಕ್ಕಿತ್ತು. ಅದರಿಂದ ಹಕ್ಕಬುಕ್ಕರು ಕೊಟ್ಟರು. ಆ ಹಕ್ಕು ಅವರಿಗೇ ಹೋಯಿತು. ಈ ದಿವಸ ದೇಶದ ಆಡಳಿತ ವಿಚಾರದಲ್ಲಿ ಶಾಸನವನ್ನು ಮಾಡುವ ಅಧಿಕಾರವನ್ನು ಜನರಿಗೆ ಕೊಟ್ಟಿರುವಾಗ ಸರ್ವಸ್ವಾಮ್ಯ ಅಥವ Sovereignty ಎನ್ನುವುದು ಜನರಲ್ಲಿದೆಯೇ ಹೊರತು ಹಕ್ಕಬುಕ್ಕರಲ್ಲಿಲ್ಲ ವಿಜಯನಗರದ ರಾಜರಲ್ಲಿಲ್ಲ. ಹಿಂದೆ ಯಾರ್ಯಾರಿಗೆ ಹೀಗೆ ಕೊಟ್ಟಿದ್ದರೋ ಅದನ್ನು ಹಾಗೆಯೇ ಉಳಿಸಿಕೊಂಡು ಹೋಗಬೇಕೆಂದು ಜನರು ಹೇಳಿದರೆ ಹಾಗೆಯೇ ಯಾವಾಗಲೂ ನಿಲ್ಲುತ್ತದೆ. ಈ ಅಧಿಕಾರವನ್ನು ಸ್ವಲ್ಪ ಕಡಿಮೆಮಾಡಬೇಕೆಂದು ದೇಶದ ಜನರು ಅಭಿಪ್ರಾಯಪಟ್ಟಲ್ಲಿ ಹಾಗೆಯೇ ಆಗುತ್ತದೆ.

ಶ್ರೀ ಜಿ. ಎ. ಆಚಾರ್ಯರು.—ಎಲ್ಲರೂ ಹೋದರೂ ಕೂಡ, ಹಕ್ಕಬುಕ್ಕರೂ ರಾಜರೂ ಹೋದರೂ ಕೂಡ ಶೃಂಗೇರಿ ಮಠ ಎನ್ನುವುದಿದೆ. ಇನ್ನೂ ಅವನ್ನು ಯಾರೂ inherit ಮಾಡಿಲ್ಲ.

ಶ್ರೀ ಎಚ್.ಎಂ. ಚನ್ನಬಸಪ್ಪನವರು.—ಹಿಂದೆ ಯಾವ ಮಠಕ್ಕೆ ಕೊಟ್ಟಿದ್ದರೋ ಆ ಮಠ ಈಗಲೂ ಇದೆ ಎಂದು ನಾನೂ ಹೇಳುವುದು. ಅದು ಇದ್ದಾಗ್ಯೂ ಅವರಿಗಿರುವ

ಅಧಿಕಾರವನ್ನು ತೆಗೆದುಕೊಳ್ಳುವ ಅಥವ ಕುಂಠಿತ ಮಾಡುವ ಸರ್ವಸ್ವಾಮ್ಯ ಪ್ರಜೆಗಳಲ್ಲಿ ಅಡಕವಾಗಿದೆ. ಈಹೊತ್ತು ಪ್ರಜೆಗಳು ಯಾವ ವ್ಯವಸ್ಥೆಯನ್ನು ಯಾವ ರೀತಿ ಬದಲಾವಣೆಮಾಡಬೇಕೆಂದು ಅಭಿಪ್ರಾಯಪಟ್ಟರೂ ಅದು ಜಾರಿಯಲ್ಲಿ ಬರತಕ್ಕದ್ದು ಎಂದು ರಾಜ್ಯಾಂಗದಲ್ಲೇ ಏರ್ಪಾಡುಮಾಡಿದ್ದೇವೆ. ಹೀಗಿರುವಾಗ ಆ ಕಾಲದಲ್ಲಿ ಕೊಟ್ಟ ಪ್ರಶಸ್ತಿಯನ್ನು ಜಹಗೀರಿಯನ್ನು ಉಳಿಸಿಕೊಂಡು ಬರುವುದು ಉತ್ತಮ, ದೇಶದ ಮೇಲ್ಮೆಗೆ ಒಳ್ಳೆಯದು ಎಂದು ತಾವೆಲ್ಲರೂ ಅಭಿಪ್ರಾಯಪಡುವುದಾದರೆ ಅದನ್ನು ಹಾಗೆಯೇ ಉಳಿಸೋಣ. ಹಾಗಲ್ಲದೆ ಇದು ಬೇಡ, ದೇಶದ ಇತರ ಪ್ರಜೆಗಳಿಗೂ ಸಾರ್ವಜನಿಕರಿಗೂ ಅನ್ವಯಿಸುವ ಕಾನೂನೇ ಇದಕ್ಕೂ ಅನ್ವಯಿಸಬೇಕು, ಇದಕ್ಕೆ ವಿನಾಯಿತಿಕೊಡುವುದು ಉಚಿತವಲ್ಲ ಎನ್ನುವ ಅಭಿಪ್ರಾಯಕ್ಕೆ ಬರುವುದಾದರೆ ಹಾಗೆಯೇ ಆಗಬಹುದು. ವಿನಾಯಿತಿಕೊಡುವ ಅಭಿಪ್ರಾಯಕ್ಕೆ ಮನ್ನಣೆ ದೊರಕಬೇಕಾದರೆ ಇದರಿಂದ ಸರ್ವರಿಗೂ ಅನುಕೂಲದೊರಕಬೇಕು, ಇದು ಅಂತಹ ಒಂದು National Institution ಆಗಿರಬೇಕು. ಇದು ಹೌದೇ ಅಲ್ಲವೇ ಎಂದು ವಿಮರ್ಶೆಮಾಡಿ ತೀರ್ಮಾನ ತೆಗೆದುಕೊಳ್ಳಬೇಕೆಂದರೆ ವಾದವಾಡುವುದಕ್ಕೆ ಸಿದ್ಧನಾಗಿದ್ದೇನೆ. ದೇಶದಲ್ಲಿ ನ್ಯಾಯ, ಸತ್ಯಪರಿಪಾಲನೆಮಾಡಿಕೊಂಡು ಸರ್ವರಿಗೂ ಒಂದು ರೀತಿಯಾದ ನ್ಯಾಯವನ್ನುಕೊಡಲು ಸಿದ್ಧವಾಗಿದೆಯೆ, ಜಾತಿ, ಪಕ್ಷ ಎಂಬ ಭೇದಭಾವನೆಯೆಲ್ಲವನ್ನೂ ಬಿಟ್ಟು ಎಲ್ಲರೂ ಒಂದೇ ಎಂದು ಭಾವಿಸಿ ನ್ಯಾಯ ಮತ್ತು ಧರ್ಮಪರಿಪಾಲನೆ ಮಾಡುವ ಸ್ಥಿತಿಯಲ್ಲಿದೆಯೆ ಎಂಬುದನ್ನು ನೋಡಬೇಕು. ಶೃಂಗೇರಿಮಠದ ವಿಚಾರದಲ್ಲಿ ಗೌರವವಿದ್ದಾಗ್ಯೂ National Institution ಎನ್ನುವ ಪದಕ್ಕೆ ಇದು ಎಷ್ಟುಮಟ್ಟಿಗೆ ಹೊಂದುತ್ತದೆ ಎಂಬುದನ್ನು ನ್ಯಾಯವಾಗಿ ವಿಮರ್ಶೆಮಾಡೋಣ. ಯಾವ ಪಕ್ಷಪಾತ ಅಭಿಪ್ರಾಯವನ್ನು ಇಟ್ಟುಕೊಂಡು ವಿಮರ್ಶೆಮಾಡಬೇಕಾಗಿಲ್ಲ, ಏಕೆಂದರೆ, ಈ ಹೊತ್ತು ಲಕ್ಷಾಂತರ ರೂಪಾಯಿಗಳನ್ನು ದೇಶದ ಬೊಕ್ಕಸದಿಂದ ಕೊಡಬೇಕಾದರೆ ಬಹಳ ಎಚ್ಚರಿಕೆಯಿಂದ ಪರಿಪಾಲಿಸಬೇಕು. ಅವರ ಭೂಮಿಯನ್ನು ಹೀಗೆಯೇ ಬಿಟ್ಟರೆ ದೇಶದ ಹಣ ಉಳಿಯಬಹುದು. ನಾಲ್ಕೈದು ಲಕ್ಷ ರೂಪಾಯಿ ಕೊಡಬೇಕಾದರೆ ಅದು ಎಲ್ಲಿಂದ ಬರಬೇಕು ಸರ್ಕಾರಕ್ಕೆ? ಎಂದು ಹೇಳಿ ಇದನ್ನು ಹಾಗೆಯೇ ಉಳಿಸಿದರೆ ಸರ್ಕಾರಕ್ಕೆ ಹಣ ಉಳಿಯುತ್ತದೆ ಎಂದು ಹೇಳಬಹುದು. ಆದರೂ ಕೂಡ ಹಣಕಾಸಿನ ವಿಚಾರದಲ್ಲಿ ಅನುಕೂಲವಾಗುತ್ತದೆಂಬುದರ ಮೇಲೆ ಸರ್ಕಾರದವರು ಈ ಒಂದು ಕಾರಣದಿಂದ ಇದನ್ನು ಜಹಗೀರಿಯಾಗಿಯೇ ಉಳಿಸಿಕೊಂಡು ಬರುವುದೂ ನ್ಯಾಯವಲ್ಲ. ರಾಷ್ಟ್ರಕ್ಕೆ ಸಂಬಂಧಪಟ್ಟ ರಾಷ್ಟ್ರೀಯ ಸಂಸ್ಥೆಯಾಗಿ ಸರ್ವ ಕೋಮುಗಳಿಗೂ ಸರ್ವಜನರಿಗೂ ಸಂಬಂಧಪಟ್ಟ ಸಂಸ್ಥೆಯಾದರೆ ಆಗ ಇದನ್ನುಳಿಸಲು ಯೋಚನೆಮಾಡಬೇಕು. ಆದರೂ ಕೂಡ ಮಾಡಲೇ ಬೇಕೆಂದಿಲ್ಲ. ರಾಷ್ಟ್ರೀಯವಾದ ಸಂಸ್ಥೆಯಾದರೂ ಕೂಡ ಸರ್ಕಾರದವರೇ ಅದನ್ನು ತೆಗೆದುಕೊಳ್ಳಬೇಕೆಂದು ಜನರು ಅಭಿಪ್ರಾಯಪಟ್ಟರೆ ಅದೂ ಉಳಿಯುವ ಹಾಗಿಲ್ಲ. ರಾಷ್ಟ್ರೀಯ ಸಂಸ್ಥೆಯಾಗಿದ್ದರೂ, ಜಹಗೀರಿ ಸ್ವಾಮ್ಯವನ್ನು ಉಳಿಸಿಕೊಂಡು ಬರಬೇಕೆಂದೇನೂ ಇಲ್ಲ. ರಾಷ್ಟ್ರೀಯ ಸಂಸ್ಥೆಗಳನ್ನು ಬದಲಾವಣೆಮಾಡುವುದಕ್ಕೆ ಜನರಿಗೆ ಅಧಿಕಾರವಿದೆ. ಶೃಂಗೇರಿಯ ಸಂಬಂಧವಾಗಿ ಎಂಟು ಹತ್ತು ಜನರಿಂದ ಕೂಡಿದ ಒಂದು ಸಮಿತಿಯನ್ನು ಮಾಡಿದ್ದಾರೆ, ಅವರು ಎಷ್ಟೋ ಉತ್ತರ ಹೇಳಿದರು, ಅದರಲ್ಲಿ ಒಂದು ನನ್ನ ಮನಸ್ಸಿಗೆ ಹಿಡಿದದ್ದು ಅವರು ತಮ್ಮ ಅಭಿಪ್ರಾಯವನ್ನು ಒಂದು ಸ್ಟೇಟ್‌ಮೆಂಟ್ ಮುಖೇನ ಕೊಟ್ಟರು. ಅಲ್ಲದೆ ಆ ಸಮಿತಿಯವರನ್ನು ಸಂದರ್ಶನ ಮಾಡುವ ಸುಯೋಗ ನನಗೂ ಇತ್ತು. ಅವರು ಹೇಳಿದ್ದರಲ್ಲಿ ಒಂದು ವಿಷಯ ನನ್ನ ಮನಸ್ಸಿಗಂಟಿತು. ಅದೇನೆಂದರೆ, ಶೃಂಗೇರಿ ಜಹಗೀರಿ ಬಹಳ ಕಾಲದಿಂದ ಬಂದದ್ದು. ಮೈಸೂರೊಂದರಿಂದಲ್ಲದೆ ಅನೇಕ ಕಡೆಗಳಿಂದ ಭಕ್ತರು ಅಲ್ಲಿಗೆ ಬರುತ್ತಾರೆಂದು ಹೇಳಿದರು. ಆ ಜಹಗೀರಿ ಎನ್ನುವುದು ಒಂದು ಸಂಸ್ಥೆ. ಅದನ್ನು ತಪ್ಪಿಸದೆ ಹಾಗೆಯೇ ಉಳಿಸುವುದರಲ್ಲಿ ನನಗೂ ಒಂದು ಹೆಮ್ಮೆ, ನನ್ನ ಅಭ್ಯಂತರವೇನೂ ಇಲ್ಲ. ಜಮೀನನ್ನೆಲ್ಲಾ ಸರ್ಕಾರವೇ ತೆಗೆದುಕೊಂಡು ಸುಮ್ಮನೆ ಜಹಗೀರಿ ಎಂದು ಹೆಸರನ್ನು ಕೊಡುವುದಕ್ಕೆ ಸಿದ್ಧ. ಆದರೆ ಜಹಗೀರಿ ಎಂದು ಹೇಳುವುದರಲ್ಲಿ ಮಾತ್ರ ಅದರ ಶ್ರೇಷ್ಠತೆ ಇದೆಯೆ ಪ್ರತಿಷ್ಠೆ ಇದೆಯೆ ಎಂಬುದನ್ನು ಯೋಚನೆಮಾಡಬೇಕು. Let us be frank in this discussion. Let us not mince matters. Let us not reserve certain ideas in our minds; let us speak out. Let us be frank about these things. I am not making any remark about anybody's feelings. ಬೇಕಾದರೆ ನಿರ್ದಾಕ್ಷಿಣ್ಯವಾಗಿ ಯಳಂದೂರು, ಶೃಂಗೇರಿ ಇವನ್ನು ಬಿಟ್ಟುಬಿಡಿ. ಒಂದು ಸಂಸ್ಥೆಗೆ ಒಳ್ಳೆಯ ಹೆಸರು ಬರಬೇಕಾದರೆ, ದೇಶದ ಜನರಿಗೆ ಅದರಲ್ಲಿ ಪ್ರೀತಿ ಬರಬೇಕಾದರೆ, ಅವರು ಹೆಮ್ಮೆಪಡಬೇಕಾದರೆ, ಅದು ಮಾಡತಕ್ಕ ಸೇವೆಯಿಂದ, ಅದರಿಂದ ಜನಕ್ಕೆ ಉಂಟಾಗತಕ್ಕ ಪ್ರಯೋಜನದಿಂದ. ಜನ ಗಮನಕೊಡಬೇಕಾದುದು ಕೇವಲ ಆಸ್ತಿಪಾಸ್ತಿ, ಹೆಸರು ಮುಂತಾದ್ದಕ್ಕಲ್ಲ. ನಮ್ಮ ಕಡೆ ಅನೇಕ ಗುರುಗಳಿದ್ದಾರೆ. ಅವರು ಸರ್ಕಾರಕ್ಕೆ ಶಿಫಾರಸು ಮಾಡಿ ನಮಗೆ ಎರಡು ಬಾವುಟ ಕೊಡಿಸಿ, ಇಂಥಾದ್ದು ಕೊಡಿಸಿ, ಅಂಥಾದ್ದು ಕೊಡಿಸಿ ಎಂದು ನನ್ನಲ್ಲಿ ಹಿಂದೆ ಬರುತ್ತಿದ್ದರು. ಅವರು ಈಗ ಬರುವುದಿಲ್ಲ. ಅವರನ್ನು ನಾನು ಪ್ರಶ್ನೆಮಾಡುತ್ತಿದ್ದೆ, ಗುರುತ್ವ ಮತ್ತು ಶ್ರೇಷ್ಠತೆ ನಿಮಗೆ ಕೊಡತಕ್ಕ ರಾಜಮರ್ಯಾದೆಗಳಲ್ಲಿದೆಯೇ ಹೇಗೆ ಎಂದು ಕೇಳುತ್ತಿದ್ದೆ. ಅವರಿಗೆ ಉತ್ತರಕೊಡುವುದಕ್ಕೆ ಕಷ್ಟವಾಯಿತು. ಜಗದ್ಗುರು ಎಂದು ಹೆಸರಿದ್ದ ಮಾತ್ರಕ್ಕೇ ಜಗದ್ಗುರುಗಳಾಗ ತ್ತಾರೆಯೆ? ಇಂಥವರು ಎಷ್ಟೋ ಜನರಿದ್ದಾರೆ. ಜಗತ್ತಿನಲ್ಲಿ ಅವರನ್ನು ಗುರುವೆಂದು ಕಾಣುವವರು ಕೇವಲ ಕೊಂಚ ಜನರು ಮಾತ್ರ. ಯಾರು ಅವರನ್ನು ಕಾಣುವುದಕ್ಕೆ ಅಭಾವನೆಯಿಂದ ಹೋಗುತ್ತಾರೋ ಅವರಿಗೆ ಮಾತ್ರ. ಇಡೀ ಜಗತ್ತಿಗೆಲ್ಲಾ ಸೇವೆಮಾಡುವ ಯಾವುದಾದರೂ ಸಾಧಕವಿದ್ದು ಪ್ರಪಂಚದ ಜನರೆಲ್ಲರೂ ಸೇರಿ ಅವರಲ್ಲಿ ಗುರುತ್ವವಿದೆಯೆಂದು ಹೇಳಿದರೆ ಅಂಥವರಿಗೆ ಜಗದ್ಗುರುವೆಂದು ಹೇಳಬಹುದೇ ಹೊರತು ನಾನು ಜಗದ್ಗುರು ಎಂದು ಹೇಳಿಕೊಂಡಮಾತ್ರಕ್ಕೇ ಅವನು ಜಗದ್ಗುರುವಾಗುವುದಿಲ್ಲ. ಮಹಾತ್ಮ ಗಾಂಧಿಯವರನ್ನು ಬೇಕಾದರೆ ಜಗದ್ಗುರು ಎಂದು ಹೇಳಬಹುದು. ಆದರೂ ಅವರಿದ್ದಾಗ ಕೂಡ ಅವರು ಇಡೀ ಜಗತ್ತಿಗೇ ಮಹಾತ್ಮರಾಗಿದ್ದರೆಂದು ಹೇಳುವುದಕ್ಕೆ ಆಗುವುದಿಲ್ಲ. ಆದುದರಿಂದ ಯಾರೊಬ್ಬರಿಗೆ ಮಾತ್ರ ಅಂಥ ಗುರುಗಳ ವಿಚಾರದಲ್ಲಿ ಮಾನ್ಯತೆಯಿದೆಯೋ, ಪೂಜ್ಯತೆಯಿದೆಯೋ, ಅಂಥಾ ಜನಗಳಿಗೆ ಮಾತ್ರ ಅವರು ಗುರುಗಳಾಗುತ್ತಾರೆಂದು ಹೇಳಬಹುದು. ಹೀಗೆ ಎಲ್ಲರ ವಿಷಯಗಳನ್ನು ತೆಗೆದುಕೊಂಡುನೋಡುವುದಾದರೆ ಯಾರೂ ಹಾಗೆ ಇಡೀ ಜಗತ್ತಿಗೇ ಅಥವಾ ಪ್ರಪಂಚಕ್ಕೆಲ್ಲಾ ಇರುವ ಗುರುಗ

(ಶ್ರೀ ಎಚ್. ಎಂ. ಚನ್ನಬಸಪ್ಪನವರು)

ಳಾಗಿರುತ್ತಾರೆಂದು ಹೇಳುವುದಕ್ಕೆ ಖಂಡಿತ ಸಾಧ್ಯವಿಲ್ಲ. ಈ ವ್ಯಾಮೋಹವನ್ನು ಸ್ವಲ್ಪಮಟ್ಟಿಗೆ ಬಿಟ್ಟು ಬಿಟ್ಟು, ಅಥವಾ ಅದನ್ನು ಈಗಿನ ಕಾಲ ಬದಲಾವಣೆಗೆ ಸರಿಯಾಗಿ ಬದಲಾಯಿಸಿಕೊಂಡು, ಈಗ ನಡೆಯುತ್ತಿರುವ ನವೀನ ರೀತಿಯ ಜನಜೀವನಕ್ಕೆ ಸರಿಹೊಂದುವಂತೆ ತಕ್ಕ ಬದಲಾವಣೆಗಳನ್ನು ನಾವು ಮಾಡಿಕೊಳ್ಳಲೇ ಬೇಕಾಗುತ್ತದೆ. ಇದು ಮನುಷ್ಯನಿಗೆ ಎಷ್ಟೇ ಅಹಿತವಾಗಿ ಕಂಡುಬರುತ್ತಿದ್ದಾಗ್ಯೂ ಅದನ್ನು ಮಾಡಲೇ ಬೇಕಾಗುತ್ತದೆ.

ಸ್ವರಾಜ್ಯ ಬರುವುದಕ್ಕಿಂತ ಮುಂಚೆ, ರಾಜಮಹಾರಾಜರುಗಳ ಆಡಳಿತದಲ್ಲಿ ಜನಗಳು ಸುಖವನ್ನನುಭವಿಸುತ್ತ "ರಾಜಾ ಪ್ರತ್ಯಕ್ಷ ದೈವತ" ಎಂದರೆ ರಾಜನೇ ದೇವರೆಂಬ ಭಾವನೆ ಜನರಲ್ಲಿ ಮೂಡಿದ್ದು ಮತ್ತು ಅವರ ಆಡಳಿತವೇ ದೇಶದಲ್ಲಿ ಇರಬೇಕೆಂದು ಒಪ್ಪಿಕೊಂಡಿದ್ದಂಥವರು ಈಗ ಇಲ್ಲ. ಜನತೆಯು ಮತ್ತು ದೇಶದ ಹಿತದೃಷ್ಟಿಯಿಂದ ಹಾಗೆ ದೇವರಾಗಿದ್ದವರು ಹೋದರೂ ಹೋಗಲಿ, ಪರವಾಯಿಲ್ಲ, ರಾಜಪ್ರಭುತ್ವ ಹೋಗಿ ಪ್ರಜಾಪ್ರಭುತ್ವ ಬರಲೇಬೇಕೆಂದು ಹೊಡದಾಡಿ, ಅದನ್ನೂ ಸ್ಥಾಪಿಸಿರತಕ್ಕಂಥ ಈ ಕಾಲದಲ್ಲಿ ಜನರ ಮನಸ್ಸು ಹೇಗಿರುತ್ತೆಂಬುದನ್ನು ಎಲ್ಲರೂ ಮನಗಂಡಿದ್ದಾರೆ.

ಹೀಗೆ ಇದರ ಬದಲಾವಣೆ ಅತವಶ್ಯಕ ಮತ್ತು ಅತ್ಯಗತ್ಯವೆಂದು ಕಂಡುಬಂದಿರುವಾಗ್ಯೆ, ಅದು ಒಂದು ಪಕ್ಷಕ್ಕೆ ಅಹಿತವೆಂದೇ ಕಂಡುಬರುತ್ತಿದ್ದಾಗ್ಯೂ, ಅದು ನಮ್ಮ ಮನಸ್ಸಿಗೆ ಹಿಡಿಸಲಿ ಅಥವಾ ಹಿಡಿಸದಿರಲಿ ಅದನ್ನಂತೂ ನಾವು ಮಾಡಲೇಬೇಕಾಗಿರುತ್ತೆಂಬ ವಿಷಯಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಇದನ್ನು ವಿಮರ್ಶೆ ಮಾಡಬೇಕೇ ವಿನಾ ಏನೋ ಶೃಂಗೇರಿ ದೊಡ್ಡದು, ಅದಕ್ಕಾಗಿ ಒಂದು ವಿನಾಯಿತಿಕೊಟ್ಟುಬಿಡೋಣವೆಂದು ಹೇಳಿಬಿಟ್ಟರೆ ಅದು ಸರಿಯಾದ್ದಲ್ಲ. ಹಾಗೆ ಮಾಡುವುದರಿಂದ ಮುಂದಕ್ಕೆ ಇದರಿಂದ ಇನ್ನೂ ಹೆಚ್ಚಿನ ಅನೇಕ ಜಟಿಲ ಸಮಸ್ಯೆಗಳು ಉದ್ಭವವಾಗುತ್ತವೆ. ಆದರೆ ಅವುಗಳೇನು, ಮತ್ತು ಯಾವುವು ಎಂಬ ಅಂಶಗಳನ್ನು ನಾನೀಗಲೇ ಹೇಳುವುದಕ್ಕಾಗುವುದಿಲ್ಲ. ಅದರೆ ದಯವಿಟ್ಟು ಯಾರೂ "ಏನೋ ಈ ಚನ್ನಬಸಪ್ಪ ಬಹಳ ಸಂಕುಚಿತ ಭಾವನೆಯಿಂದ ಮಾತನಾಡುತ್ತಿದ್ದಾನೆ" ಎಂದು ಶಂಕೆಪಡಬಾರದು. ನಾನು ಬಹಳ ಉದಾರ ಭಾವನೆಯಿಂದಲೇ ಮಾತನಾಡುತ್ತಿದ್ದಾಗ್ಯೂ ನಾನು ಇದು ದಿನ ಇದ್ದಂತೆ ತಿಳಿಸುತ್ತಿರುವುದು ಅಷ್ಟು ಕಠೋರವಾಗಿ ತೋರಬಹುದು. ಯಾವ ದಾಕ್ಷಿಣ್ಯಕ್ಕೂ ಒಳಗಾಗದೆ ಮಾತನಾಡಬೇಕಾದ್ದು ನ್ಯಾಯ. ಅದರಂತೆ ಮಾತನಾಡಿದ್ದೇನೆ. ದಯವಿಟ್ಟು ಯಾರೂ ಶಂಕೆಪಡಬಾರದೆಂದು ಕೇಳಿಕೊಳ್ಳುತ್ತೇನೆ. ಹೀಗೆ ಒಂದು ವಿಷಯದಲ್ಲಿ ತೋರಿಸುತ್ತಿರುವ ಉದಾರಭಾವನೆಯನ್ನೇ ಗ್ರಾಮಾಂತರವಾಸಿಗಳಾದ ರೈತರ ಜೀವನೋಪಾಯ ಮತ್ತು ಅವರ ಆರ್ಥಿಕಸ್ಥಿತಿ ಇವುಗಳೆಲ್ಲಾ ಇತರರ ಮಟ್ಟಕ್ಕೆ ಏರುವಂತಾಗಲು ಮತ್ತು ಅವರ ಜೀವಮಾನಗಳು ಬಾಳ್ಮೆ ಇತ್ಯಾದಿಗಳು ಒಂದು ಉತ್ತಮಮಟ್ಟಕ್ಕೆ ಬರಬೇಕಾಗಿದ್ದರೆ ಈ ಭೂಸ್ವಾಮ್ಯತ್ವದ ವಿಚಾರದಲ್ಲಿ ಸರ್ವರಿಗೂ ಒಂದೇ ಸಮನಾದ ಸಮಾನಾವಕಾಶಗಳು, ಅನುಕೂಲಗಳೂ ಒಂದೇ ರೀತಿಯಲ್ಲಿ ಇರಬೇಕು, ಮುಂದಕ್ಕೆ ಸರ್ಕಾರದವರು ಅಗಿಂದಾಗ್ಯೆ ಈ ಶಾಸನಗಳು ಸರಿಯಾಗಿ ನಡೆಯುತ್ತಿವೆಯೋ ಇಲ್ಲವೇ ಎಂಬ ವಿಷಯದಲ್ಲಿ, ಯಾರಿಗೂ ಎಡರು ತೊಡರುಗಳು ಬಾರದಂತೆ ಮಾಡಬೇಕಾದ್ದು ನ್ಯಾಯವಾಗಿಯೆ ಇದೆ. ಆದುದರಿಂದ ಸರ್ಕಾರ ಮತ್ತು ರೈತ ಈ ಎರಡು ಪಾರ್ಟಿಗಳ ಮಧ್ಯೆ ಇರತಕ್ಕವರು, ಅವರು ಯಾರೇ ಆಗಿರಲಿ, ಒಂದು ವೇಳೆ ರಾಜ, ಮಹಾರಾಜ, ಚಕ್ರವರ್ತಿಗಳೇ ಆಗಿರಲಿ, ಅವರೆಲ್ಲರನ್ನೂ ತೆಗೆದುಹಾಕಲೇ ಬೇಕಾಗುತ್ತದೆ. ನಮ್ಮಲ್ಲಿ ಇದು ಸರಿಯಲ್ಲಾ ಎಂದು ಹೇಳತಕ್ಕ ಅವಕಾಶ, ಯಾರಿಗೂ ಇದ್ದಂತೆ ನಾನು ಭಾವಿಸುವುದಿಲ್ಲ. ಆದ್ದರಿಂದ ತಾವೆಲ್ಲರೂ ಒಂದು ಉದಾರಭಾವನೆಯಿಂದ ವರ್ತಿಸಿ, ಒಂದು ಸೂಕ್ತರೀತಿಯಲ್ಲಿ ಇದಕ್ಕೆ ಒಂದು ಶಾಸನಮಾಡಬೇಕೆಂದೂ, ಈ ಬಗ್ಗೆ ಸ್ವಲ್ಪವೂ ವಿರೋಧಾಭಿಪ್ರಾಯವಿಲ್ಲದಂತೆ ಮಾನ್ಯ ಸದಸ್ಯರೆಲ್ಲರೂ ಈ ಮಸೂದೆಗೆ ತಮ್ಮ ಒಪ್ಪಿಗೆಯನ್ನು ನೀಡಬೇಕೆಂದೂ ನಾನು ಅತ್ಯಂತ ವಿನಯದಿಂದ ಪ್ರಾರ್ಥಿಸಿಕೊಳ್ಳುತ್ತೇನೆ. ಉದಾರವಾಗಿ ಕೆಲಸಮಾಡತಕ್ಕ ಕೆಲಸಗಳ ಬಗ್ಯೆಕೆಲವು ಅಡಚಣೆಗಳು ಬಂದೇ ಬರುತ್ತವೆ. ಹಾಗೆ ಅಡಚಣೆಗಳು ಬರತಕ್ಕದ್ದರಲ್ಲಿ ಯಾವುವು ಮೇಲು, ಯಾವುದು ಕೀಳು, ಯಾವುದರಲ್ಲಿ ಹೆಚ್ಚಿನ ಅನಕೂಲ ಉಂಟಾಗುತ್ತೆ, ಯಾವುದರಲ್ಲಿ ಆಗುವುದಿಲ್ಲ ಎಂಬುವುದನ್ನು ನೋಡಿಕೊಂಡು ಮಾಡಬೇಕಾದ್ದು ಸೂಕ್ತವಾದುದೆಂದು ಹೇಳುತ್ತೇನೆ. ಆದರೆ ಒಂದು ಸಂಸ್ಥೆಯವರಿಂದ ಅವರ ಆಡಳಿತಕ್ಕೊಳಪಟ್ಟ ಸ್ವತ್ತನ್ನು ತೆಗೆದುಕೊಳ್ಳುವಾಗ ಅದಕ್ಕೆ ಪ್ರತಿ ಪರಿಹಾರವನ್ನು ಕೊಟ್ಟು ತೆಗೆದುಕೊಳ್ಳಬೇಕೆಂಬ ತತ್ವವನ್ನು ನಾನು ಅಗತ್ಯವಾಗಿ ಒಪ್ಪಿಕೊಳ್ಳುತ್ತೇನೆ. ಹಾಗೆ ಕೊಡತಕ್ಕ ಪರಿಹಾರವನ್ನು ಬೇಕಾಗಿದ್ದರೆ ಉದಾರಮನಸ್ಸಿನಿಂದ ಕೊಡಿ, ಜಾಸ್ತಿಯಾಯಿತೆಂಬ ಮಟ್ಟದಲ್ಲಿ ಕೊಟ್ಟರೂ ನನ್ನ ಅಭ್ಯಂತರ ಅವರ ಬಗ್ಯೆ ಏನೂ ಇರುವುದಿಲ್ಲ. ಈ ವಿಷಯದಲ್ಲಿ ವಿರೋಧಾಭಿಪ್ರಾಯವನ್ನು ವ್ಯಕ್ತಪಡಿಸುವಂಥ ಸದಸ್ಯರೂ ಸಹ ಇಲ್ಲ ಇಲ್ಲವೆಂದು ನಾನು ನಂಬಿದ್ದೇನೆ. ಇಂಥಾ ವೇಳೆಯಲ್ಲಿ ಆಯಾಯ ಸಂಸ್ಥೆಗಳಲ್ಲಿರತಕ್ಕವರು ತಮ್ಮ ಹಿತವನ್ನು ಕಳೆದುಕೊಳ್ಳುತ್ತೇವೆಂದು ಅವರಾಗಲಿ ಯಾರೂ ಶಂಕೆಪಡಬೇಕಾಗಿಲ್ಲ. ಅವರಿಗೆ ತಕ್ಕ ಪ್ರತಿಫಲ ದೊರೆಯುವುದಲ್ಲದೆ ಇನ್ನೂ ಹೆಚ್ಚು ಆದಾಯ ಬಂದಂತಾಗುತ್ತದೆ. ಆದರೆ ಹೀಗೆ ಮಾಡುವುದರಿಂದ ಅವರ ಮನಸ್ಸನ್ನು ನೋಯಿಸಿದಂತಾಗಲಿಲ್ಲವೇ ಎಂದು ಕೇಳಬಹುದು. ಹೌದು, ಒಂದು ದೇಶವೆಲ್ಲರತಕ್ಕ ಅನೇಕ ಜನರ ಹಿತವನ್ನು ಕಾಪಾಡತಕ್ಕ ಬಗ್ಯೆ ಒಂದು ಭಾಗದ ಜನರಿಗೆ ಒಂದು ಉದಾತ್ತ ಧ್ಯೇಯದಿಂದ, ಅವರ ಮನಸ್ಸನ್ನು ನೋಯಿಸಿದಾಗ್ಯೂ ಅದರಲ್ಲಿ ಏನೂ ವಿಶೇಷವಿಲ್ಲ. ಆದರೂ ಹೀಗೆ ಒಬ್ಬರ ಮನಸ್ಸನ್ನು ನೋಯಿಸಿ ಇನ್ನೊಬ್ಬರಿಗೆ ಅನುಕೂಲಮಾಡಬೇಕಾದಂಥ ಅವಕಾಶಗಳೇನೂ ಒದಗಿಲ್ಲ. ಆದರೆ ಎಲ್ಲರೂ ಒಂದು ಉದಾರ ಭಾವನೆಯಿಂದ ವರ್ತಿಸುವುದು ದೇಶದ ಹಿತದೃಷ್ಟಿಯಿಂದ ಒಳ್ಳೆಯದಾಗುತ್ತದೆಂದು ಈ ಸಂದರ್ಭದಲ್ಲಿ ನಾನು ತಿಳಿಸಲಪೇಕ್ಷಿಸುತ್ತೇನೆ

ಇನ್ನು ಈ ಜಹಗೀರುಗಳ ವಿಷಯದಲ್ಲಂತೂ ಯಾರೂ ಇದನ್ನು ವಿರೋಧ ಮಾಡುವುದಕ್ಕೆ ಏನೂ ಬೇರೆ ಮಾರ್ಗಗಳೇ ಇಲ್ಲದಿದ್ದಾಗ್ಯೂ ಇದನ್ನು ಪರ್ಯಾಲೋಚನೆ ಮಾಡಲು, ಇಲ್ಲದ ಉದಾಸೀನತೆಯಿಂದ ಚರ್ಚೆಗೆ ಅವಕಾಶವಾಗುವಂತೆ, ದಾರಿ ಮಾಡಕೊಂಡರೆ ಅನೇಕ ಅಭಿಪ್ರಾಯಗಳ ಬಗ್ಗೆ ಒಬ್ಬರಿಗೊಬ್ಬರಿಗೆ ಘರ್ಷಣೆಗಳುಂಟಾಗಿ ಅದರಿಂದ ಯಾರಿಗಾದರೂ ಮನನೋಯಿಸುವಂಥ ಟೀಕೆ ಟಿಪ್ಪಣಿಗಳಿಗೆ ಅವಕಾಶ ಕೊಡದ ರೀತಿಯಲ್ಲಿ ಇದನ್ನು ಪರಿಗಣಿಸಬೇಕೆಂದು ನಾನು ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಉದಾತ್ತ ಧ್ಯೇಯಗಳಿಂದ ಚರ್ಚೆ ಮಾಡತಕ್ಕದ್ದೇನೋ ನ್ಯಾಯ. ಆದರೆ ಬರೀ ಚರ್ಚೆಗೆಂದು ಚರ್ಚೆ ಹೂಡ

ತಕ್ಕದ್ದು ಸರಿಯಾದ್ದಲ್ಲ. ಈ ಸಂಬಂಧವಾಗಿ ಶ್ರೀಯುತರಾಗಳಾದ ಡಿ. ಎಚ್. ಚಂದ್ರಶೇಖರಯ್ಯನವರು, ಎ. ಜಿ. ರಾಮಚಂದ್ರರಾಯರು ಮತ್ತು ಶ್ರೀಮಾನ್ ಟಿ. ರಾಮಾಚಾರ್ ಅವರೂ ಒಂದು ಡಿಸೆಂಟಿಂಗ್ ನೋಟನ್ನು ಪ್ರತ್ಯೇಕ ಪ್ರತ್ಯೇಕವಾಗಿ ಕೊಟ್ಟಿದ್ದಾರೆ. ಆ ಡಿಸೆಂಟಿಂಗ್ ನೋಟಿನಲ್ಲಿರತಕ್ಕದ್ದು ಏನೆಂದರೆ ಆ 23 ವಿನಾಯಿತಿಗಳು ಏನಿಕ್ಕೋ ಅದನ್ನು ಆ 24 ಗ್ರಾಮಗಳಿಗೂ ಕೊಡಬೇಕು ಎಂದು. ಆದರೆ ಇಂಥಾ ಒಂದು ಡಿಸೆಂಟಿಂಗ್ ನೋಟನ್ನು ಅವರು ಹೇಗೆ ಕೊಟ್ಟರೋ ನನಗಂತೂ ಅದು ಅರ್ಥವಾಗತ್ತಿಲ್ಲ. ಅದರಲ್ಲೂ ಶ್ರೀಮಾನ್ ಡಿ. ಎಚ್. ಚಂದ್ರಶೇಖರಯ್ಯನವರು, ನಾನು ಇನ್ನೂ ಚಿಕ ಹುಡುಗನಾಗಿದ್ದಾಗಲೇ ಅವರು ಶಾಸನ ಸಭಾ ಸದಸ್ಯರಾಗಿ, ಆಗಿನಿಂದಲೂ ಈ ಬಗ್ಗೆ ಇವರು ಹೊಡೆದಾಟ ಮಾಡುತ್ತಿದ್ದುದು, ಬಹಳ ಉದ್ವೇಗ ಪೂರಿತವಾದ ಭಾಷಣಗಳನ್ನು ಮಾಡುತ್ತಿದ್ದುದು ಯಾವ ರೀತಿಯಲ್ಲಿದ್ದವೆಂಬುದನ್ನು ನಾನು ಕೇಳಿದ್ದೇನೆ; ಇಂದು ನಾವು ಏನನ್ನು ಹೇಳುತ್ತಿದ್ದೇವೆಯೋ ಅದನ್ನು ಇವರು ಹೇಳುವುದಕ್ಕೆ ಪ್ರಾರಂಭಿಸಿದ್ದು ಸುಮಾರು 30 ವರ್ಷಗಳಿಗೆ ಹಿಂದೆಯೇ ಪ್ರಾರಂಭ ಮಾಡಿದ್ದರು. 1918, 1919, 1920, 1921 ಎಂದರೆ ಇಲ್ಲಿಗೆ ಎಷ್ಟೋ ವರ್ಷಗಳಾಯಿತು ? ಆಗ್ಯೆ ಇವರು ಈ ಭೂಸುಧಾರಣೆ ಮಾಡಬೇಕು, ಇದನ್ನು ಬದಲಾವಣೆ ಮಾಡಬೇಕು, ಸಮಾನಾವಕಾಶ ಎಲ್ಲರಿಗೂ ದೊರಕಬೇಕು, ಇಂಥಾ ಒಂದು ಸಾಧಾರಣೆ ಬಾರದ ವಿನಾ ರೈತನ ಸ್ಥಿತಿಗತಿಗಳು ಉತ್ತಮಗೊಳ್ಳಲು ಅವಕಾಶವಿಲ್ಲವೆಂದು ವಾದಮಾಡುತ್ತಿದ್ದಂಥ ಮಹನೀಯರು, ಇಂದು ಪ್ರಜಾಪ್ರಭುತ್ವವೇರ್ಪಟ್ಟು, ಈ ಪ್ರಜಾಪ್ರಭುತ್ವ ತತ್ವಗಳಿಗನುಗುಣವಾಗಿ ಎಲ್ಲರಿಗೂ ಸಮಾನಾವಕಾಶಗಳು ದೊರಕಬೇಕೆಂದೂ ಆ ಬಗ್ಗೆ ಒಂದು ಶಾಸನ ರಚಿಸತಕ್ಕದ್ದು ಅಗತ್ಯವೆಂದೂ ಹೇಳುತ್ತಿದ್ದವರು ಈಗ ಇದನ್ನು ತಂದಿರುವ ಕಾಲದಲ್ಲಿ ಈ ಬಗ್ಗೆ ಒಂದು ವಿನಾಯಿತಿ ಕೊಡಬೇಕೆಂದು ಅವರು ಈ ರೀತಿ ಡಿಸೆಂಟಿಂಗ್ ನೋಟನ್ನು ಕೊಟ್ಟಿರುವುದರ ಅರ್ಥವೇ ನನಗೆ ಆಗುತ್ತಿಲ್ಲ. ಇದೇನು ವಿಚಿತ್ರ! ನಾನು ಅವರೊಂದಿಗೆ ಬಹಳವಾಗಿ ಚರ್ಚೆ ಮಾಡಿದ್ದೇನೆ. ಅವರು ಕೊಟ್ಟಿರತಕ್ಕ ಡಿಸೆಂಟಿಂಗ್ ನೋಟನ್ನೂ ಓದಿ ನೋಡಿಕೊಂಡಿದ್ದೇನೆ. ಅದು ಸಾಧುವೆಂದು ಕಂಡುಬರುವುದಿಲ್ಲ. ಅವರು ತಿಳಿಸಿರತಕ್ಕ ಕಾರಣಗಳೇನು ? ಇದು ಬಹಳ ದಿವಸದ ಸಂಸ್ಥೆ; ಇದು 1,300 ವರ್ಷಗಳಿಂದ ನಡೆದು ಬಂದಿದೆ; ಎಂದು ಹೇಳಿದ್ದಾರೆ. ಇರಬಹುದು. ಅದು ಬಹಳ ಹಳೇ ಸಂಸ್ಥೆಯೇ ಇರಬಹುದು; 3,000 ವರ್ಷಗಳಿಂದಲೂ ಇರಬಹುದು.

ಶ್ರೀ ಜಿ. ಎ. ಆಚಾರ್ಯರು.—ಅಂಥಾದ್ದು ಮತ್ತೆ ಯಾವುದಾದರೂ ಇದ್ದರೆ ತಿಳಿಸಿ ?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಬೇಕಾದಷ್ಟು ಉದಾಹರಣೆಗಳಿವೆ. ಭಾರತೀಯರು ಈ ಭೂಮಿಯ ಮೇಲೆ ಎಂದು ಜನಿಸಿದರೋ ಅಂದಿನಿಂದಲೂ ಈ ಭಾರತದ ನಿವಾಸಿಗಳೇ ಆಗಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ನೀವು ಹಿಂದಿನ ಜನ್ಮದಲ್ಲಿ ಅಮೇರಿಕನ್ನರಾಗಿದ್ದರೋ ?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಹಿಂದಿನ ಜನ್ಮದ ವಿಚಾರದ ಬಗ್ಗೆ ನಾನೇನಾಗಿದ್ದೆನೋ ಅದನ್ನು ಈ ಜನ್ಮದಲ್ಲಿ ಹೇಳುವುದಕ್ಕೆ ಸಾಧ್ಯವಿಲ್ಲ, ಇರಲಿ. Sir I will continue my speech after the lunch hour.

Mr. SPEAKER.—The House will now rise for lunch and meet again after half an hour.

The Assembly adjourned for Lunch at Thirty Minutes past Three of the Clock and re-assembled at Ten Minutes past Four of the Clock, Mr. Speaker (The Hon'ble Sri V. Venkatappa) in the Chair.

Recommendation by Rajpramukh for introduction and consideration of the Mysore Appropriation No. 4, Bill, 1951.

Mr. SPEAKER (The Hon'ble Sri V. Venkatappa) — His Highness the Rajpramukh has recommended the introduction and consideration of the Mysore Appropriation No. 4, Bill, 1951. It reads as follows :

ORDER.

In pursuance of clauses (1) and (3) of Article 207 of the Constitution of India, I, Jaya Chamaraja Wadiyar, Maharaja of Mysore, do here by recommend the introduction of the Mysore Appropriation No. 4, Bill, 1951, in the Legislative Assembly, and the consideration of the Bill by the said Assembly.

JAYA CHAMARAJA WADIYAR.
Maharaja of Mysore.

Adjournment of the Debate over the Mysore Inam Villages (Abolition of Inam Tenure) Bill, 1951.

The Hon'ble Sri H. C. DASAPPA (Minister for Finance and Industries).—Sir, under Rule 88 of the Rules of Procedure and Conduct of Business in the Legislative Assembly, I move :

"That the debate on the motion that the Mysore Inam Villages (Abolition of Inam Tenure) Bill, 1951, be taken into consideration, be adjourned".

to enable the House to dispose of the Appropriation No. 4, Bill, 1951.

Mr. SPEAKER.— The question is :

"That the debate on the motion that the Mysore Inam Villages (Abolition of Inam Tenure) Bill, 1951, be taken into consideration, be adjourned."

The motion was adopted.

The Mysore Appropriation No. 4 Bill, 1951.

Introduction.

The Hon'ble Sri H. C. DASAPPA (Minister for Finance and Industries).—Sir, I introduce the Mysore Appropriation No. 4 Bill, 1951, the same having been published in the Gazette Extraordinary dated the 6th November 1951 under Rule 48 of the Rules of Procedure and Conduct of Business in the Mysore Legislative Assembly. Copies of the Bills have already been distributed to Hon'ble Members.

Motion to consider.

The Hon'ble Sri H. C. DASAPPA.—I move :

"That the Mysore Appropriation No. 4 Bill, 1951, be taken into consideration."

Sir, in placing this motion for consideration before the House, I do not think I should take very much more time because the circumstances under which the various voted demands were included in the Appropriation Bill have already been explained in the various notes placed before the House. It is also explained that most of these demands are made with a view to utilise the Government of India grants and also the various balances of funds that we have got. I would like to refer to just a few of them.

On page 3 of the Supplementary Estimates, you will find that 50 per cent is covered by the Central grant; so also on page 9 you will find 50 per cent is covered by the Central grant; on page 11 you will find that 13·51 lakhs are met from Sugarcane Cess Fund; on page 12 you will find that the amount is proposed to be met from the Famine Insurance Fund Reserve. You will see how all this is not met so much from taxation and general revenues but met either from the Government of India grants or from the funds that we have got at our disposal. On page 16 you will find that the amount of working expenses is covered by increased sales; on page 17 you will find that the amount of working expenses is covered by increased revenue; on page 19 you will find that the major portion of irrigation expenditure is covered by the Central grant; on page 21 you will find that the advance that we are giving is covered by the stock of foodgrains; and what additional grant is demanded on page 22 does not affect the revenue position at all. As regards the supplementary demand the State's portion will be met either from the cash balance or from the Sinking Fund.

Sri W. H. HANUMANTHAPPA (Bangalore District—General).—The Hon'ble Minister will do well to give it as an abstract as it seems that no member has brought a copy of the Supplementary Estimates.

The Hon'ble Sri H. C. DASAPPA.—Each one of the demands was gone through and we are only referring to what is printed in the Appropriation Bill.

Mr. SPEAKER.—The question is:

"That the Mysore Appropriation No. 4 Bill, 1951, be taken into consideration."

The motion was adopted.

Mr. SPEAKER.—Clauses 2 and 3. The question is :

"That Clauses 2 and 3 stand part of the Bill."

The motion was adopted.

Clauses 2 and 3 were added to the Bill.

Mr. SPEAKER.—Schedule. The question is :

"That the Schedule stand part of the Bill."

The motion was adopted.

The Schedule was added to the Bill.

Mr. SPEAKER.—Clause 1. The question is :

"That Clause 1 stand part of the Bill."

The motion was adopted.

Clause 1 was added to the Bill.

Mr. SPEAKER.—Title and Preamble. The question is :

"That the Title and the Preamble stand part of the Bill."

The motion was adopted.

The Title and the Preamble were added to the Bill.

Motion to pass.

The Hon'ble Sri H. C. DASAPPA.—I move:

"That the Mysore Appropriation No. 4 Bill, 1951, be passed."

Mr. SPEAKER.—The question is:

"That the Mysore Appropriation No. 4 Bill, 1951, be passed."

The motion was adopted.

The Mysore Inam Villages (Abolition of Inam Tenure) Bill, 1951.

Motion to consider—(contd).

Mr. SPEAKER.—Discussion on the motion to consider the Mysore Inam Villages (Abolition of Inam Tenure) Bill, 1951, which had not concluded, will be resumed. Sri H. M. Channabasappa will continue his speech.

The Hon'ble Sri H. C. DASAPPA.—Is he continuing his speech, Sir?

Sri H. M. CHANNABASAPPA (Mysore District—General).—Yes, for a short time. I will not take much time.

ಶೃಂಗೇರಿ ಜಹಗೀರಿಗೆ ವಿಶೇಷ ರೀತಿಯ ವಿನಾಯಿತಿ ಕೊಡುವ ದೃಷ್ಟಿಯಲ್ಲಿ ಪರಿಶೀಲನೆ ಮಾಡಬೇಕೆಂದು ಸೆಲೆಕ್ಟ್ ಕಮಿಟಿಯವರು ಶಿಫಾರಸು ಮಾಡಿರತಕ್ಕಂಥಾದ್ದನ್ನು ಸ್ವಲ್ಪ ಮಟ್ಟಿಗೆ ವಿಮರ್ಶೆ ಮಾಡುವುದು ಅವಶ್ಯಕ. ಅವರೇನು ಹೇಳಿದ್ದಾರೆಂದರೆ,

"We have considered the case of the Sringeri Jahagir in great detail As observed earlier in this report, we have also heard the learned representatives who appeared before us on behalf of the Sringeri Mutt. We have come to the conclusion that in view of the long unbroken tradition of this Mutt we should effect minimum changes in the administration of the Jahagir of this Mutt without at the same time departing from the principles underlying this Bill in regard to inferior holders."

ಇಲ್ಲಿ ಕೊನೆಯಲ್ಲಿ 'without at the same time departing from the principles underlying this Bill" ಎಂದು ಹೇಳಿರುವುದು ಸ್ವಲ್ಪ ಗಮನಾರ್ಹವಾಗಿದೆ. ಈಗ ಇವರು ಮಾಡಿರುವುದು ಮೂಲ ತತ್ವದಿಂದ ಎಷ್ಟರ ಮಟ್ಟಿಗೆ 'depart' ಆಗುತ್ತದೆ, ಆಗುವುದಿಲ್ಲ ಎಂಬುದನ್ನು ಸ್ವಲ್ಪ ಮಟ್ಟಿಗೆ ವಿಮರ್ಶೆ ಮಾಡಬೇಕು. ಈ ಮಸೂದೆ ಮೂಲೋದ್ದೇಶವಲ್ಲಿ ಇನಾಂತಿ ಮತ್ತು ಜಹಗೀರಿಗಳನ್ನು ವಜಾ ಮಾಡಬೇಕೆಂಬುದನ್ನು ಸೂಚಿಸುತ್ತಾ ಏನು ಹೇಳಿದೆಯೆಂದರೆ,

"Abolition of Inams and Jahagirs in the State is being urged in the legislature from a long time......" ಎಂದು ಹೇಳುತ್ತಾ ಕೊನೆಯಲ್ಲಿ "the recommendations contained in the report of the Land Reform Committee on this question has been considered and it is found desirable to abolish the tenure of Inam Villages." ಎಂದು ಹೇಳಿದ್ದಾರೆ: ಅಂದರೆ ಇನಾಂ tenure ಎಂಬ ಪದ್ಧತಿಯೇ ದೇಶದಲ್ಲಿ ರಬಾರದು ಎಂಬುದು ಮೂಲೋದ್ದೇಶ. ಈ ಉದ್ದೇಶವನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು ಇಂದು ಶಾಸನ ಮಾಡಬೇಕು. ಆದರೆ ಸೆಲೆಕ್ಟ್ ಕಮಿಟಿಯವರು ಸಲಹೆ ಮಾಡಿರುವುದೇನೆಂದರೆ.—

"......effecting minimum changes in the administration of the Jahagir of this Mutt without at the same time departing from the principles..........."

ಇದು ಹೇಗೆ ಸಾಧ್ಯ? Inam tenure ಎಂಬುದೇ ಇರಬಾರದೆಂದು ಮೂಲೋದ್ದೇಶವಿರುವಾಗ, ಆ ಮೂಲೋದ್ದೇಶವನ್ನೇ ಸಾಧನೆ ಮಾಡುವಾಗ, ಜಹಗೀರಿ ಇರುವಂತೆ ಆದಷ್ಟು ಮಟ್ಟಿಗೆ ಕಡಿಮೆ ಬದಲಾವಣೆ ಮಾಡಬೇಕೆಂದು ಹೇಳಿದರೆ, ಯಾವ ಆಧಾರದ ಮೇಲೆ ಹಾಗೆ ಹೇಳಿದ್ದಾರೆ; ಅದಕ್ಕೆ ಯಾವ legal support ಇದೆ? ನ್ಯಾಯಬದ್ಧವಾಗಿದೆಯೇ? ಮೂಲೋದ್ದೇಶಗಳಲ್ಲಿ ಹೇಳಿರುವ ತತ್ವಗಳಿಗೇ ವಿರೋಧವಾಗಿದೆ!!

ಎರಡನೆಯದೇನೆಂದರೆ, ಇಲ್ಲಿ ಹೇಳಿದೆ.

"We also feel that the tenants of Sringeri Mutt as in the case of tenants of other inamdars holding inam villages should be registered as occupants of lands held by them... In regard however to other rights and privileges enjoyed by the Sringeri Mutt for over a number of centuries we feel that an exception is called for and that all these rights and privileges should be continued to the Mutt"

ಎಂದು. "An exception is called for" ಎಂದು ಹೇಳಿಬಿಟ್ಟಿದ್ದಾರೆ. ಇದಕ್ಕೆ ಅವರು ಕೊಟ್ಟಿರುವ ಕಾರಣಗಳಾದರೂ ಏನು? "Long continued tradition of the mutt" ಎಂದರೆ ಬಹು ಕಾಲದಿಂದ ನಡೆದುಕೊಂಡು ಬಂದಿರತಕ್ಕ ಸಂಪ್ರದಾಯವೇನಿದೆ, ಆ ಸಂಪ್ರದಾಯಕ್ಕೆ ಧಕ್ಕೆ ಬರುತ್ತದೆ, ಎಂಬುದು. ಆದ್ದರಿಂದ ಮೂಲತತ್ವಕ್ಕೆ ವಿರೋಧವಾಗದ ರೀತಿಯಲ್ಲಿ ಅಲ್ಪ ಬದಲಾವಣೆಗಳನ್ನು ಮಾಡಿ ಈ ಮಠಕ್ಕಿರತಕ್ಕ ಹಕ್ಕುಬಾಧ್ಯತೆಗಳನ್ನು ಉಳಿಸಿಕೊಂಡು ಹೋಗಬೇಕು ಎಂದು ಅವರ ವಾದ. ನನಗೆ ತೋರುವಂತೆ ಇವೆಲ್ಲವನ್ನೂ ಉಳಿಸಿಕೊಂಡು ವ್ಯವಹಾರ ಮಾಡುವುದು ಕಷ್ಟವೇ ಸರಿ. ನಮ್ಮ ಉದ್ದೇಶ ಇನಾಂ ಟೆನ್ಯೂರನ್ನು ವಜಾ ಮಾಡುವುದಲ್ಲ, ರೈತರಿಗಿರತಕ್ಕ ಹಕ್ಕುಬಾಧ್ಯತೆಗಳನ್ನು ಹೆಚ್ಚು ಮಾಡಬೇಕು. ಗ್ರಾಮಗಳನ್ನು ಅಭಿವೃದ್ಧಿಗೆ ತರಬೇಕು ಎಂದಿದ್ದರೆ ಅವರು ಸೂಚನೆ ಮಾಡಿರುವುದು ನಮ್ಮ ತತ್ವಕ್ಕನುಗುಣವಾಗಿರುತ್ತಿತ್ತು. ಆದರೆ ಉದ್ದೇಶ ಅವಲ್ಲ. ಜಹಗೀರಿಯನ್ನು ವಜಾ ಮಾಡಬೇಕೆಂಬುದು ನಮ್ಮ ಉದ್ದೇಶ. ಆದ್ದರಿಂದ ಅವರು ಹೇಳಿರುವುದೂ ನಮ್ಮ ಮಸೂದೆಯ ಉದ್ದೇಶಕ್ಕೂ ಒಂದಕ್ಕೊಂದಕ್ಕೆ ವಿರೋಧವಾಗುತ್ತದೆ. ಆದ್ದರಿಂದ ಸೆಲೆಕ್ಟ್ ಕಮಿಟಿಯವರು ಶಿಫಾರಸು ಮಾಡಿರುವುದು ಎಷ್ಟರಮಟ್ಟಿಗೆ ಶಾಸನಬದ್ಧವಾಗಿದೆ, ಅದರಲ್ಲಿ propriety ಇದೆಯೇ ಎಂಬುದನ್ನು ಹೇಳಬೇಕು. ಅನೇಕ ದಿವಸಗಳಿಂದ ಬಂದಂಥಾದ್ದನ್ನು ಅಲ್ಲಗಳೆಯಕೂಡದು ಎಂಬುದೊಂದೇ ಅವರ ವಾದ.

ಅಮೇಲೆ ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು ಕೊಟ್ಟಿರುವ dissenting note ವಿಷಯ. ಅದನ್ನ

(SRI H. M. CHANNABASAPPA)
ನೋಡುವುದರಲ್ಲಿ ಸ್ವಲ್ಪವೂ ಹುರುಳೇ ಕಾಣುವುದಿಲ್ಲ. ಸೆಲೆಕ್ಟ್ ಕಮಿಟಿಯವರು ಹೇಳುವುದನ್ನೇ ಇನ್ನೂ ಸ್ವಲ್ಪ ಮಟ್ಟಿಗೆ 'appreciate' ಮಾಡಿದ್ದಾರೆಯೇ ಹೊರತು ಇನ್ನೇನೂ ಹೆಚ್ಚಿಗೆ ಅದರಲ್ಲಿ ಕಂಡುಬರುವುದಿಲ್ಲ. ಅವರು ಹೇಳಿರುವುದೇನೆಂದರೆ.—"Thus if the object of the Bill is to ameliorate the conditions of the raiyats, that has already been achieved in the Jahagir" and therfore its privilege have g t to be continued ಎಂದು. ಇದನ್ನು ನೋಡಿದರೆ ಅವರು ಇದನ್ನು ಬರೆಯುವಾಗ ಈ ಮಸೂದೆಯ ಉದ್ದೇಶವೇನೆಂಬುದನ್ನೇ ಓದಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಏಕೆಂದರೆ ಈ ಮಸೂದೆಯ ಉದ್ದೇಶವೇ ಬೇರೆ.

The object of the Bill is different. The object of the Bill is to abolish Inam tenure, not to ameliorate the conditions of the raiyats.

Mr. SPEAKER.—What is the object of abolition of Inams ?

Sri H. M. CHANNABASAPPA.—In addition to ameliorating the conditions of the people, we want to bring about a uniform land revenue system in the whole State. We do not want any intermediaries between the Government and the tiller. The object of the abolition of the Inams is to explicitly abolish the intermediaries in the State. That is the main object. These are all subsidiary objects. While abolishing tenures of inams so many things take place and this is one thing. Threfore we should not think ot the object in that narrow sense.

ಆಮೇಲೆ ಅವರು ಮುಂದೆ ಹೇಳಿದ್ದಾರೆ.

"The very fact that the select committee has thought it to introduce a new chapter to deal with the Jahagir is clear proof of its intention to preserve its financial position unimpaired."

ಇದನ್ನೇ ಒಂದು ಕಾರಣವಾಗಿಟ್ಟು ಅವರು

"we may go a li tle further and provide for the reten tion of the Jahagir as it is, subject to the Government taking statutory power to exercise necessary control and authority over the lands in the occupation of the raiyats."

ಒಟ್ಟಿನಲ್ಲಿ ಈಗ ನಾವು ಯಾವ ಉದ್ದೇಶದಿಂದ ಶಾಸನ ಮಾಡಬೇಕೆಂದು ಹೊರಟಿದ್ದೇವೋ, ಅದಕ್ಕೆ, ಇವರು ಹೇಳುವುದು ತೀರ ವಿರೋಧವಾಗಿದೆ. ಅದ್ದರಿಂದ ಆ ಅಭಿಪ್ರಾಯವನ್ನು ಪುರಸ್ಕರಿಸುವುದಕ್ಕೆ ಕಾರಣವಿಲ್ಲ.

ನಮ್ಮ ಎ. ಜಿ. ರಾಮಚಂದ್ರರಾಯರು ತಮ್ಮ dissenting noteನಲ್ಲಿ ಹೇಳುವುದೇನೆಂದರೆ:

"Secular Inams were generally grant d for past services while religi us In ms were granted not only for past services but for present and furher services also" ಎಂದು ಹೇಳಿ ಮುಂದಿನ ಪ್ಯಾರಾದಲ್ಲಿ,

"There is already discernible on the horizon, a definite swing from ultra-materialistic view to the spiritual springs of new life, and during this transition, greater watchfulness is neces-s ry on our part."

ಅವರ ಅಭಿಪ್ರಾಯ ಇಷ್ಟೆಂದು ತೋರುತ್ತೆ. ಜನ ಬಹಳ ಮಟ್ಟಿಗೆ ಪಾರಮಾರ್ಥಿಕವನ್ನು ಮರೆತು materialistic ಆಗುತ್ತಿದ್ದಾರೆ; ಅದ್ದರಿಂದ ಪಾರಮಾರ್ಥಿಕ ಜೀವನದಲ್ಲಿ ಪ್ರೇಮವನ್ನು ಜನರಲ್ಲಿ ಅಂಕುರಿಸುವುದಕ್ಕೆ ಮತ್ತು ಬೆಳೆಸಿಕೊಂಡು ಹೋಗುವುದಕ್ಕೆ ಇಂಥ ಮಠಗಳ ಸಂಸ್ಥೆಗಳನ್ನು ಬೆಳೆಸುವುದು ಅವಶ್ಯಕ. ಈ ಕಾರಣದಿಂದ ಶೃಂಗೇರಿ ಮಠದ ಅಧಿಕಾರಗಳನ್ನು ಉಳಿಸಿಕೊಂಡು ಬರಬೇಕು ಎಂದು.

ಅಧ್ಯಕ್ಷರು.—ಅವರು ಹೇಳುವುದಲ್ಲ: ಪ್ರಪಂಚದಲ್ಲೇ ಆ ರೀತಿಯಾದ ಬದಲಾವಣೆ ಕಾಣುತ್ತಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಇರಬಹುದು. ಪಾರಮಾರ್ಥಿಕ ಮಾರ್ಗವನ್ನು ಬಿಟ್ಟು ಜನ ಹೋಗುವುದನ್ನು ನಿಲ್ಲಿಸಬೇಕು. ಆದರೆ ನನ್ನ ಪ್ರಶ್ನೆ ಇಷ್ಟು. ಅದಕ್ಕೆ ಇದು ಸಿದ್ಧೌಷಧವೇ ಎಂದು. ಈ ಜಹಗೀರಿಯನ್ನುಳಿಸುವುದರಿಂದ ಇದು ಸಾಧನೆಯಾಗುತ್ತದೆಯೇ? ಅದಕ್ಕೆ ಬೇರೆ ಮಾರ್ಗಗಳಿವೆ.

ಒಬ್ಬ ಸದಸ್ಯರು.—ಯಾವ ಮಾರ್ಗಗಳು ?

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ನಾವೇನೂ ಇಲ್ಲಿ ಮಠವನ್ನು ರದ್ದು ಮಾಡಬೇಕೆಂದು ಹೇಳಿಲ್ಲ! ಮಠಗಳಿರಬೇಕು; ಅವುಗಳನ್ನು ಬೆಳೆಸಬೇಕು; ಪುರಸ್ಕಾರ ಕೊಡಬೇಕು, ಅವುಗಳಿಂದಾಗತಕ್ಕ ಪ್ರಯೋಜನಗಳನ್ನು ಜನರಿಗೆ ತಿಳಿಸಬೇಕು.

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು.—ಅದನ್ನೆಲ್ಲಾ ಹೇಗೆ ಮಾಡುತ್ತೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ದುಡ್ಡು ಕೊಟ್ಟರೆ ಅವರೇ ಮಾಡುತ್ತಾರೆ.

Sri D.H. CHANDRASEKHARAIYA.—That is a very narrow and conservative view.

Sri H. M. CHANNABASAPPA.—Excuse me. How are you, by retaining the name 'Jahagir' going to develop the institution? It is from the income that you get out of the Jahagir that you are maintaining this institution and carrying on all these things pertaining to this institution.

ಆದುದರಿಂದ ಶ್ರೀಗಳಾದ ಚಂದ್ರಶೇಖರಯ್ಯನವರೂ, ಎ. ಜಿ. ರಾಮಚಂದ್ರರಾಯರೂ ಯಾವ ಎರಡು ಕಾರಣಗಳನ್ನು ಸಮಿತಿಯ ವರದಿಯ ಕೊನೆಯಲ್ಲಿ ಸೂಚಿಸಿದ್ದಾರೋ ಅವು ಸಾಧುವಲ್ಲ, ಅಂಗೀಕಾರಕ್ಕೆ ಯೋಗ್ಯವಲ್ಲ ಎಂದು ಅತ್ಯಂತ ವಿನಯದಿಂದ ಈ ಸಮಿತಿಯಲ್ಲಿ ಭಿನ್ನಾಭಿಪ್ರಾಯ ಸೂಚಿಸಿರುವ ಈ ಮಾನ್ಯ ಸದಸ್ಯರಿಗೆ ಅರಿಕೆ ಮಾಡಿಕೊಳ್ಳುತ್ತೇನೆ.

Sri M. N. JOIS.—The Select Committee report you are opposing with the dissenting note also ?

Sri H. M. CHANNABASAPPA.—The Hon'ble Member comes all of a sudden and picks up one word or sentence from my speech and draws the inference from that. I am afraid I am unable to answer that. We should also know how things are shaping elsewhere.

ಶ್ರೀ ಜಿ. ಎ. ಆಚಾರ್ಯರು.—ನಿಮ್ಮ ವೇದಾಂತದಂತೆ ಇದನ್ನು ಉಳಿಸಬಾರದೆಂದೆ?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಪ್ರಪಂಚದ ಇತರ ಭಾಗಗಳಲ್ಲಿ ಏನಾಗಿದೆಯೆಂಬುದನ್ನು ನೋಡಬೇಕು. 1949ನೆಯ ಇಸವಿಯಲ್ಲಿ ಹೈದರಾಬಾದಿನಲ್ಲಿ ಏನಾಯಿತೆಂಬುದನ್ನು ನೋಡಬೇಕು. ನೈಜಾಮರಿಗೆ 1,961 ಗ್ರಾಮಗಳು ಇನಾಂ ಆಗಿ ಸೇರಿದ್ದವು.

ಶ್ರೀ ಜಿ. ಎ. ಆಚಾರ್ಯರು.—ಹೈದರಾಬಾದು ನೈಜಾಮರಿಗೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—The Nizam's, is an institution. That is not personal. It is an institution.

Sri G. A. ACHARYA.—They have got it by force but not this mutt.

Sri H. M. CHANNABASAPPA.—We do not know. Well Sir, at this stage I must say we do not know under what circumstances they acquired these inam villages.

Sri M. N. JOIS.—Let not the Hon'ble Member talk about matters he does not know.

Sri H. M. CHANNABASAPPA.—Please do not interject.

Sri M. N. JOIS.—It is for me to interject.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—Thank you very much. ಅವರು ಇನಾಂ ಅಥವಾ ಜಹಗೀರಿಯನ್ನು ಯಾವ ರೀತಿ ಕೊಟ್ಟರು ಅಥವಾ ಯಾವ ಕಾರಣಕ್ಕಾಗಿ ಕೊಟ್ಟರು ಎಂಬುದನ್ನು ನಾನು ನೋಡಿಲ್ಲವಾದ್ದರಿಂದ ಹೇಳುವ ಸ್ಥಿತಿಯಲ್ಲಿಲ್ಲ. ತಾವು ನೋಡಿದ್ದರೆ ಹೇಳಬಹುದು.

ಶ್ರೀ ಎಂ. ಎನ್. ಜೋಯಿಸರು.—ಹೇಳುತ್ತೇನೆ.

ಶ್ರೀ ಎಚ್, ಎಂ. ಚನ್ನಬಸಪ್ಪನವರು.—ಆಗ ಬಹುದು. ಅದು ಒಪ್ಪುವಂತಿದ್ದರೆ ತಾವು ಹೇಳುವುದಕ್ಕೆ ನಾನು ಮಾನ್ಯತೆ ಕೊಡುತ್ತೇನೆ.

ಮೈಸೂರು ಸಂಸ್ಥಾನದಲ್ಲಿ ಮೂರನೆಯ ಒಂದು ಭಾಗಕ್ಕಿಂತ ಹೆಚ್ಚಾಗಿ ಖಾಸಗಿ ಜನರಿಗೆ ಸೇರಿದ ಜಮೀನು. ಸುಮಾರು ಸೇಕಡ 4 ರಷ್ಟು ಇನಾಂದಾರಿಗೆ ಸೇರಿದ್ದು. ಈಗ ಜನಾಭಿಪ್ರಾಯಕ್ಕೆ ಮನ್ನಣೆ ಕೊಟ್ಟು ಇಷ್ಟನ್ನೂ ರೈತವಾರಿ ಮಾಡಬೇಕೆಂದು ತೀರ್ಮಾನ ಮಾಡಿದರು. ಇರುವ ಒಟ್ಟು 6 535 ಜಹಗೀರಿ ಹಳ್ಳಿಗಳಲ್ಲಿ 5,398 ಹಳ್ಳಿಗಳು ಸರ್ವೆ ಆಗಿ ಸೆಟ್ಲ್‌ಮೆಂಟ್ ಆಗಿ ಉತ್ತಮ ದರ್ಜೆಯಲ್ಲಿ ವ್ಯವಹಾರ ನಡೆಸುತ್ತಿವೆ. ಉಳಿದಿರುವ ಎಲ್ಲವನ್ನೂ ಜಹಗೀರಿ ರದ್ದುಮಾಡಿ ಸರ್ಕಾರಕ್ಕೆ ಸೇರಿಸಿಕೊಂಡು ಎಲ್ಲ ಜಮೀನುಗಳ ವಿಷಯದಲ್ಲಿಯೂ ಒಂದೇ ನೀತಿಯನ್ನನುಸರಿಸಬೇಕೆಂದು ಮಾಡಿದರು. ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ನೋಡಿದರೂ, ಸುತ್ತಲೂ ಇರುವ ಮದರಾಸ, ಬೀಹಾರ ಬಂಗಾಳ, ಎಲ್ಲೆಲ್ಲಿಯೂ ಈ ಜಹಗೀರಿ ಮತ್ತು ಜಮೀನ್‌ದಾರಿ ಎಲ್ಲವೂ ಹೋದ ಹೊರತು ಗ್ರಾಮಾಂತರಗಳಲ್ಲಿ ಭೂವ್ಯವಸ್ಥೆಯಲ್ಲಿ ಪರಿಣಾಮಕಾರಿಯಾದ ಸುಧಾರಣೆ ಮಾಡುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ದೇಶದ ಪ್ರತಿನಿಧಿಗಳು ಮನಗೊಂಡು ಈ ಬಗ್ಗೆ ಕ್ರಾಂತಿಕಾರಕ ಬದಲಾವಣೆಗಳನ್ನು ಮಾಡುವುದು ಅಷ್ಟು ಸಾಧುವಲ್ಲದಿದ್ದರೂ ಅವಶ್ಯಕವಾಗಿ ಈ ಮಧ್ಯವರ್ತಿ ಜನರನ್ನು ತೆಗೆಯಬೇಕೆಂಬ ಉದ್ದೇಶದಿಂದ ಕೆಲಸಮಾಡುತ್ತಿರುವಾಗ ನಾವೂ ಕೂಡ ಅದನ್ನಂಗೀಕರಿಸಿ ಈ ಶಾಸನ ಮಾಡತಕ್ಕ ಕಾಲದಲ್ಲಿ ಈ ಒಂದು ಜಹಗೀರಿಯನ್ನು ಸಕಾರಣಗಳನ್ನು ನಮಗೆ ತೋರಿಸದೆ ಏನೋ ಒಂದು sentiment ಅಥವಾ ಇದಕ್ಕೆ ಮನೋಪ್ರೀತಿ ಎಂದು ಹೇಳಬಹುದ—ಇದರ ಮೇಲೆ ಉಳಿಸಬೇಕೆಂದು ಹೇಳುತ್ತಾರೆ. Man is a bundle of sentiments ....

Sri M. N. JOIS.—You are expressing your sentiments.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—Sentiment ಎನ್ನುವುದಕ್ಕೂ ಅಭಿಪ್ರಾಯ ಎನ್ನುವುದಕ್ಕೂ ವ್ಯತ್ಯಾಸವಿದೆ. Sentimentಗೆ ಕಾರಣವನ್ನು ಕೊಡಬೇಕಾಗಿಲ್ಲ. ಅಭಿಪ್ರಾಯಕ್ಕೆ ಕಾರಣ ಕೊಡಬೇಕು. ಇಷ್ಟೇ ವ್ಯತ್ಯಾಸ ತಿಳಿದುಕೊಳ್ಳಿ. Sentiment ಮುಂದಿಟ್ಟುಕೊಂಡು, ಕೇವಲ ಸಂಪ್ರದಾಯವನ್ನು ಮುಂದಿಟ್ಟುಕೊಂಡು ಈ ವಿನಾಯಿತಿ ಕೊಡುವುದನ್ನು ಒಪ್ಪುವುದಾದರೆ, ದೇಶದ ಪ್ರಜೆಗಳಲ್ಲಿ ಪ್ರತಿಯೊಬ್ಬನಿಗೂ ಒಂದೊಂದು sentiment ಇದೆ. ಇದನ್ನು ನೋಡಿದರೆ ಈ ಒಂದು ಜಹಗೀರಿಯನ್ನಿಟ್ಟುಕೊಂಡು ಇದಕ್ಕೆ ವಿಶೇಷವಾದ ವಿನಾಯಿತಿಯನ್ನು ಕೊಡುವುದಕ್ಕೆ ನನಗಂತೂ ಅಷ್ಟು ಸರಿಯಾದ ಕಾರಣ ಕಂಡುಬಂದಿಲ್ಲ. ಸರಿಯಾದ ಕಾರಣವನ್ನು ತೋರಿಸಿದರೆ ಇಟ್ಟುಕೊಳ್ಳೋಣ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ಅವರು.—ಕಮ್ಯುನಿಸಂ ಬಂದರೆ ಇದಕ್ಕೆ ಅನುಕೂಲವಾಗುತ್ತದೆ!

Sri H. M. CHANNABASAPPA.—If the people of Mysore, if the people of India vote for communism, I do not see any reason why we should not have communism here.

Sri K. R. SREEKANTESWAR.—Socialism, not communism.

Sri H. M. CHANNABASAPPA.—If socialism is voted for, you can have it. These are days of people's sovereignty.

Sri M. N. JOIS.—What is it that you a e voting for?

Sri H. M. CHANNABASAPPA.—If you are unable to understand it, I cannot help it.

Now we will come to the Bill proper. Let us go to the merits of the Bill.

2ನೆಯ ಕ್ಲಾಜಿನ (15)ನೆಯ ಸಬ್ ಕ್ಲಾಜಿನಲ್ಲಿ Quasi-permanent tenant ಎಂದರೆ ಯಾರು ಎಂಬುದನ್ನು ವಿವರಣೆ ಮಾಡಿದ್ದಾರೆ. ಇದರ

(SRI H. M. CHANNABASAPPA)

ಅರ್ಥವೇನೆಂದರೆ, ಯಾವನಾದರೂ ಒಂದು ಇನಾಂ ಗ್ರಾಮದಲ್ಲಿ ಆರು ವರ್ಷ ಗುತ್ತಿಗೆ ಅಥವಾ ವಾರಕ್ಕೆ ಜಮೀನನ್ನು ಮಾಡಿಕೊಂಡಿದ್ದು ಅವನು ಆಳುಗಳನ್ನಿಟ್ಟು ವ್ಯವಸಾಯ ಮಾಡುತ್ತಿದ್ದರೆ ಅವನು quasi-permanent tenant ಎಂದು ಈ ಮಸೂದೆಯಲ್ಲಿ ವಿವರಣೆ ಮಾಡಿದ್ದಾರೆ. Occupancy rights ರಿಜಿಸ್ಟರು ಮಾಡುವುದರಲ್ಲಿ ಈ quasi-permanent tenant ಎನ್ನುವುದು ಬರುತ್ತದೆ. ಯಾವ ಯಾವ ಮನುಷ್ಯ ಇನಾಂದಾರನಿಂದ ಗುತ್ತಿಗೆ ಅಥವ ವಾರಕ್ಕೆ ಆರು ವರ್ಷ ಅವಿಚ್ಛಿನ್ನವಾಗಿ ಮಾಡಿಕೊಂಡು ಬಂದಿದ್ದಾನೋ ಅವನಿಗೆ ಈ ಹೊಸ ಹೆಸರನ್ನಿಟ್ಟುಕೊಂಡಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಇದು ಅನಾವಶ್ಯಕ. ಏಕೆಂದರೆ, ಆರುವರ್ಷ ವಾರ ಅಥವಾ ಗುತ್ತಿಗೆಗೆ ಮಾಡಿಕೊಂಡಿದ್ದ ಮನುಷ್ಯನಿಗೆ ಜಮೀನಿನ ಹಕ್ಕು ಕೊಟ್ಟ ಪಕ್ಷದಲ್ಲಿ ಅನೇಕ ಸಣ್ಣಪುಟ್ಟ ಇನಾಂದಾರರಿಗೆ ಭೂಮಿಯೇ ಇಲ್ಲದಂತಾಗುತ್ತದೆ. ಇನಾಂದಾರರಿಗೆ ಹಣ ಕೊಡುವ ಏರ್ಪಾಡು ಮಾಡಿದ್ದಾರೆ. ಹತ್ತು ವರ್ಷಗಳ ಸರಾಸರಿ ಉತ್ಪತ್ತಿಯ ಹತ್ತರಷ್ಟನ್ನು ಇವನು ಕೊಡುವುದೆಂದು ಮಾಡಿದೆ. ಇವನು ಹಣವನ್ನು ಕೇಟ್ಟರೂ ಕೊಡಬಹುದು. ಆದರೆ ಜಮೀನ್ದಾರ ಆ ಜಮೀನನ್ನು ಇಟ್ಟುಕೊಳ್ಳಬೇಕೆಂದು ಅಪೇಕ್ಷೆಪಟ್ಟರೆ ಯಾವ ಕಾರಣದಿಂದ ಕೊಡಬಾರದೆಂಬುದನ್ನು ಹೇಳಬೇಕು. ತಾನೇ ಸ್ವಂತ ವ್ಯವಸಾಯ ಮಾಡುತ್ತಿರುವಾಗ ಅನೇಕ ಬದಲಾವಣೆಗಳನ್ನು ಮಾಡಿರುತ್ತಾನೆ. ಈ ಸಂಬಂಧವಾಗಿ ನಾನು ಒಂದು ತಿದ್ದುಪಡಿ ಕಳುಹಿಸಿದ್ದೇನೆ, ಅದು ಚರ್ಚೆಗೆ ಬಂದಾಗ ಈ ವಿಷಯದಲ್ಲಿ ವಿಸ್ತಾರವಾಗಿ ಮಾತನಾಡುತ್ತೇನೆ.

ಇನ್ನು ಬಾಕಿಸಾಲಗಳನ್ನು ವಸೂಲು ಮಾಡತಕ್ಕ ವಿಷಯದಲ್ಲಿ ಒಂದು ವಿಚಿತ್ರವಾದ ಅಂಶವಿದೆ. ತಾವು ಯಾವ ಹೊತ್ತು ಇನಾಂ ಗ್ರಾಮಗಳನ್ನು ತೆಗೆದುಕೊಳ್ಳುತ್ತೀರೋ ಆಗ ಸರ್ಕಾರದವರು ಒಂದು ನೋಟಿಫಿಕೇಷನ್ನನ್ನು ಹೊರಡಿಸಿ, ಆ ತಾರೀಖಿನಿಂದ ಮುಂದಕ್ಕೆ ಸಾಗುವಳಿದಾರನಿಂದ ಇನಾಂದಾರನಿಗೆ ಹಿಂದಿನ ಬಾಕಿಗಳಿಗಾಗಿ ಏನಾದರೂ ಹಣ ಬರಬೇಕಾಗಿದ್ದರೆ ಅಂಥಾದ್ದನ್ನು ವಸೂಲು ಮಾಡಿಕೊಳ್ಳುವುದಕ್ಕೆ ಸರ್ಕಾರದವರಿಗೆ ಅಧಿಕಾರವಿದೆಯೆಂದು ಹೇಳಲಾಗಿದೆ. ಅದೇರೀತಿ ಜೋಡಿ, ಕಂದಾಯ ಇತ್ಯಾದಿ ಬಾಕಿಗಳನ್ನು ಸಹ ಸರ್ಕಾರದವರೇ ವಸೂಲು ಮಾಡಿಕೊಳ್ಳಬಹುದೆಂತಲೂ ಇದೆ. ಆದರೆ ಇದು ಅಷ್ಟು ಸಮಂಜಸವಾಗಿದ್ದಂತೆ ಕಾಣುತ್ತಿಲ್ಲ. ಎಂದು ಭೂಸ್ವಾಮ್ಯತ್ವವನ್ನು ಇನಾಂದಾರನಿಂದ ಸರ್ಕಾರದವರು ಪಡೆದುಕೊಳ್ಳುತ್ತಾರೋ, ಅಂದು ಅಂಥಾ ಭೂಮಿಯ ಬಗ್ಯೆ ಬರಬೇಕಾಗಿ ನಿಂತಿದ್ದ ಬಾಕಿಗಳೆಲ್ಲವೂ ನ್ಯಾಯವಾಗಿ ಯಾರಿಗೆ ಸಲ್ಲಬೇಕು ಎಂದರೆ ಅದು ಇನಾಂದಾರನಿಗೆ ಸೇರಬೇಕೆಂಬುದು ಸರಿಯಾದ್ದೆಂದು ಎಲ್ಲರಿಗೂ ಕಂಡುಬರುತ್ತದೆ. ಹೀಗೆ ಇನಾಂದಾರನಿಗೆ ಸಲ್ಲಬೇಕಾದ್ದನ್ನೂ ಇನಾಂದಾರನಿಗೆ ಕೊಟ್ಟು ಬಾಕಿ ಉಳಿಯತಕ್ಕದ್ದನ್ನು ಸರ್ಕಾರದವರು ತೆಗೆದುಕೊಳ್ಳುವಂತೆ ಸ್ವಲ್ಪ ಬದಲಾವಣೆಗಳನ್ನು ಇದರಲ್ಲಿ ಮಾಡಬೇಕಾಗಿದೆ. ಇದು ಅವಶ್ಯಕವೆಂದು ನಾನು ಒತ್ತಿ ಹೇಳುತ್ತೇನೆ. ಆದರೆ ಇದಕ್ಕೆ ಸಂಬಂಧಪಟ್ಟ ತಿದ್ದುಪಡಿಗಳು ಬಂದಾಗ ನಾನು ಈ ಬಗ್ಯೆ ಹೆಚ್ಚು ಪ್ರಸ್ತಾಪ ಮಾಡಬೇಕಾಗಿರುವುದರಿಂದ ಈಗೇನೂ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ.

ಇನ್ನು, ಭೂಸುಧಾರಣೆಗೆ ಸಂಬಂಧಪಟ್ಟ ಶಾಸನವನ್ನು ಸರ್ಕಾರದವರು ಬಹಳ ತೀವ್ರಾಸಕ್ತಿಯಿಂದ ತಂದಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ಅನಂತ ಧನ್ಯವಾದಗಳು. ಈ ಭೂಸುಧಾರಣೆ ಆದಷ್ಟು ಬೇಗ ಜಾರಿಗೆ ಬಾರದಿದ್ದಲ್ಲಿ ದೇಶದಲ್ಲಿರತಕ್ಕ ಬಡ ರೈತನ ಆರ್ಥಿಕಸ್ಥಿತಿ ಒಂದು ಸುವ್ಯವಸ್ಥೆಗೆ ಬರುತ್ತೆಂಬ ಆಶಾಭಾವನೆಗಳೊಂದೂ ನನಗೆ ಕಂಡು ಬರುತ್ತಿಲ್ಲ.

ಆದರೆ ಈ ಸಂದರ್ಭದಲ್ಲಿ ಒಂದು ವಿಚಾರವನ್ನು ನಾನು ಬಹಳ ವಿಷಾದದಿಂದ ತಿಳಿಸಬೇಕಾಗಿದೆ. ನಮ್ಮ ದೇಶದಲ್ಲಿ ಈಗ ಈ ಭೂಸುಧಾರಣೆಯ ಬಗ್ಯೆ ತಂದಿರತಕ್ಕ ಶಾಸನದ ಸಮಾನ ಮತ್ತೊಂದಿಲ್ಲವೆಂದು ನಾವೆಲ್ಲರೂ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ. ಇದರಲ್ಲಿ ಕಂಡುಬರತಕ್ಕ ಅಲ್ಪಸ್ವಲ್ಪ ವ್ಯತ್ಯಾಸಗಳನ್ನು ತಿದ್ದುಪಡಿ ಮಾಡಿದರೆ ಸಾಕು, ಇದು ಬಹಳ ಉತ್ತಮದರ್ಜೆಯ ಶಾಸನವಾಗಿರುತ್ತೆಂದು ಹೇಳುತ್ತಿರುವಾಗ ಮತ್ತು ಇಂಥಾ ಒಂದು ಮಸೂದೆ ಶಾಸನವಾಗಿ ದೇಶದ ಮುಂದೆ ಬರಲು ಈ ಶಾಸನಸಭಾ ಮಾನ್ಯ ಸದಸ್ಯರುಗಳ ಅಭಿಪ್ರಾಯ ಮತ್ತು ಒಪ್ಪಿಗೆ ಬಗ್ಯೆ ತಂದಿರುವಾಗ, ಇದನ್ನು ಒಂದು ಸಂಘದವರು "Black Bill" ಎಂತ ಕರೆದಿದ್ದಾರೆ. ಇದು ಬಹಳ ವಿಷಾದಕರವಾದ ವಿಷಯ.

ಶ್ರೀ ಜಿ. ಎ. ಆಚಾರ್ಯರು.—ಹಾಗೆಂದು ಯಾರು ಕರೆದಿದ್ದಾರೆ?

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಕೋಲಾರ ಜಿಲ್ಲೆಯಲ್ಲಿರತಕ್ಕ ಒಂದು ರೈತ ಸಂಘದವರು. This is the view of the Kolar District Raiyats' Saugha on the Bill.

"This is a black Bill brought in tof fatten the inamdar." ಇದು ನನಗೆ ಅರ್ಥವಾಗುವುದಿಲ್ಲ. It is deplorable that the scheme or the Bill is designed to extend and foste, fuller exploitation with new name etc." ಎಂದು ಹೇಳಿದ್ದಾರೆ. ಅಂತೂ ಒಟ್ಟಿನಲ್ಲಿ ಹೇಳಿರುವುದು ಇದಕ್ಕೆ ಒಂದು ಬೇರೆ ಹೆಸರನ್ನಿಟ್ಟು ರೈತರನ್ನು exploit ಮಾಡುವುದಕ್ಕಾಗಿ ತಂದಿರುವಂಥ ಮಸೂದೆ ಎಂದು ಹೇಳಿದ್ದಾರೆ. ಆದರೆ ಇದು ಈ ದಿವಸ ಬಂದಿದ್ದಲ್ಲ. ಅನೂಚಾನವಾಗಿ, ಸಹಸ್ರಾರು ವರ್ಷಗಳಿಂದಲೂ ಬಂದಿರತಕ್ಕದ್ದಾಗಿದೆ. ಇಂಥಾದ್ದನ್ನು ತಡೆಗಟ್ಟಲು ಈ ರೀತಿ ಒಂದು ಶಾಸನವನ್ನು ತಂದರೆ ಆಗಲಾದರೂ ಸಾಧ್ಯವಾದೀತು, ಗ್ರಾಮದ ಜನರಿಗೆ, ಬಡ ರೈತರಿಗೆ ಒಂದು ಪರಿಹಾರ ಸಿಕ್ಕೀತೆಂಬ ಒಂದು ಸದುದ್ದೇಶದಿಂದ ಮಾಡಿರತಕ್ಕ ಮಸೂದೆಯ ಬಗ್ಯೆ ಜವಾಬ್ದಾರಿಯುತವಾಗಿರತಕ್ಕಂಥ ಇಂಥಾ ಸಂಘಗಳು ಈ ರೀತಿಯಾಗಿ ಬರೆದಿರತಕ್ಕದ್ದು ತೀರಾ ವ್ಯಸನಕರವಾದ ವಿಷಯ. ಸರ್ಕಾರದವರನ್ನು ಎಷ್ಟೋ ವರ್ಷಗಳಿಂದ ಇಂಥಾ ಒಂದು ಮಸೂದೆಯನ್ನು ತಾವು ತನ್ನಿ, ಇದು ಬಹಳ ಅಗತ್ಯವಾದ ಮತ್ತೂ ಅತ್ಯಾವಶ್ಯಕವಾದ ವಿಷಯ, ಎಂಬುದಾಗಿ ಅನೇಕ ವರ್ಷಗಳಿಂದಲೂ ದೇಶದ ಪ್ರತಿನಿಧಿಗಳು ಸರ್ಕಾರದವರನ್ನು ಒತ್ತಾಯಪಡಿಸುತ್ತಿದ್ದಾಗ್ಯೂ ಇಂಥಾ ಮಸೂದೆಯನ್ನು ತರತಕ್ಕ ಧೈರ್ಯ ಅವರಿಗೆ ಹಿಂದೆ ಬಂದಿರಲಿಲ್ಲ. ಆದರೆ ಹಿಂದಿದ್ದ ಸರ್ಕಾರ ಹಾಗೆ ಧೈರ್ಯವಿಲ್ಲದೆ ಕೈಬಿಟ್ಟಿದ್ದಂಥಾದ್ದನ್ನು, ಈಗಿನ ಪ್ರಜಾ ಸರ್ಕಾರ ಅಧಿಕಾರವನ್ನು ನಮ್ಮ ಕೈಗೆ ತೆಗೆದುಕೊಂಡಕೂಡಲೇ ಧೈರ್ಯಮಾಡಿ, ಈ ಭೂಸುಧಾರಣೆಯ ಬಗ್ಯೆ ತಕ್ಕ ಮಸೂದೆಯೊಂದನ್ನು ರಚಿಸದಿದ್ದರೆ ಗತ್ಯಂತರವಿಲ್ಲವೆಂದು ಹೇಳಿ ಈಗ ಇದನ್ನು ತಂದಿರಲಾಗಿದೆ. ಇದರ ಬಗ್ಯೆ ಈಗಾಗಲೇ ನಾನು ಬೇಕಾದಷ್ಟು ಚರ್ಚೆ ಮಾಡಿದ್ದೇನೆ. ಅನೇಕ ವಿಷಯಗಳ ಬಗ್ಯೆ ಬಹಳ

ಕಠಿಣವಾಗಿ ಮಾತನಾಡಿದ್ದೇನೆ. ಆದರೆ ನನ್ನ ಭಾಷಣ ಅಷ್ಟು ಕಠಿಣವಾಗಿದ್ದರೂ ನನ್ನ ಹೃದಯವೇನೂ ಅಂಥ ಕಠಿಣ ಸ್ವಭಾವದ್ದಲ್ಲ. ಮಾನ್ಯ ಸದಸ್ಯರು ಈ ಅಂಶಗಳನ್ನು ತಮ್ಮ ಗಮನದಲ್ಲಿಟ್ಟುಕೊಳ್ಳಬೇಕು. ನನ್ನ ಸ್ವಭಾವವೆಂಥಾದ್ದೆಂಬುದನ್ನು ಮಾನ್ಯ ಸದಸ್ಯರನೇಕರು ಮನಗಂಡಿದ್ದಾರೆ. ಹೀಗೆ ನ್ಯಾಯವಾಗಿ ಮಾಡಿರತಕ್ಕ ಒಂದು ಶಾಸನದ ಪರವಾಗಿ, ಜನರ ಮನಸ್ಸನ್ನೂ ಮತ್ತು ಸರ್ಕಾರದವರ ಮನಸ್ಸನ್ನೂ ನೋಯಿಸುವ ರೀತಿಯಲ್ಲಿ ಹೇಳಿರತಕ್ಕದ್ದು ಆ ಸಂಘದವರಿಗೆ ಸರಿಯಾದ್ದಲ್ಲ. ಸುಮ್ಮನೆ ಇನಾಂದಾರರುಗಳಿಂದ ಜಮೀನನ್ನು ಕಿತ್ತುಕೊಂಡು ರೈತರಿಗೆ ಕೊಟ್ಟುಬಿಡುತ್ತೇವೆಂದು ಎಲ್ಲಿಯೂ ಹೇಳಿಲ್ಲ. ಆ ರೀತಿಯಾಗಿ ಅವರು ಒಂದು ಸೂಚನೆ ಕೊಟ್ಟಿರತಕ್ಕ ಬಗ್ಗೆ ಅವರಿಗೆ ನಾನು ಒಂದು ನೇರವಾದ ಪ್ರಶ್ನೆಯನ್ನು ಹಾಕಲಿಚ್ಛಿಸುತ್ತೇನೆ: I wish to put a straight question to those who have called this a Black Bill,—is it calculated to fatten the inamdar? ಆದರೆ ಇನಾಂದಾರರು ಎಷ್ಟು ಜನರಿದ್ದಾರೆ, ಎಷ್ಟು ಜನ ಬಡವರಿದ್ದಾರೆ ಎಂಬುದನ್ನರಿತು, ದೇಶದ ಹಿತದೃಷ್ಟಿಯಿಂದ ಬಡಜನರಿಗೆ ತಕ್ಕ ಪರಿಹಾರವು ದೊರೆಯುವಂತೆ ಬಹಳ ಶ್ರಮವಹಿಸಿ ಇಂಥಾ ಒಂದು ಮಾದರಿ ಶಾಸನ ತಂದಿದ್ದಕ್ಕಾಗಿ ಇದರಬಗ್ಗೆ ಎರಡು ಒಳ್ಳೆಯ ಮಾತುಗಳನ್ನಾಡಬೇಕೆಂಬ ಮನೋಭಾವವನ್ನು ಬದಿಗಿಟ್ಟು ಇದನ್ನು ಜವಾಬ್ದಾರಿಯುತವಾದಂಥ ಸಂಘದವರು ತಮ್ಮ ಜವಾಬ್ದಾರಿಯೇನೆಂಬುದನ್ನೇ ಸರಿಯಾಗಿ ಅರಿತುಕೊಳ್ಳದೆ Black Bill ಎಂದು ಹೇಳಿರುವುದು ಸರಿಯಾದ್ದಲ್ಲ. ಈ ಬಗ್ಗೆ ಅಂಥಾ ನ್ಯೂನತೆಗಳೇನಾದರೂ ಇದ್ದಲ್ಲಿ ಅವುಗಳನ್ನು ಸರಿಪಡಿಸಲು ಶಾಸನ ಸಭೆಯ ಸದಸ್ಯರುಗಳಿದ್ದಾರೆ. ಅವರ ಮೂಲಕ ತಿದ್ದುಪಡಿಗಳನ್ನು ತಂದು ಅವುಗಳನ್ನು ಸರಿಪಡಿಸಿಕೊಳ್ಳಬಹುದಿತ್ತು. ಅದನ್ನು ಬದಲಾವಣೆ ಮಾಡತಕ್ಕ ಅವಕಾಶ ದೇಶದ ಮುಖಂಡರುಗಳಿಗೆ ಇದ್ದೇ ಇದೆ.

The abolition of inam system would result in the restoration of land to the tiller and it is necessary with that end in view that a person who was the actual cultivator of land on the 1st July 1948 ought to get occupancy rights in respect of that land free of cost and irrespective of the duration of the tenure unless any other tenant who holds a superior claim has been dispossessed within six years from the date.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಅದರಲ್ಲಿ ತಪ್ಪೇನಿದೆ?

ಶ್ರೀ ಎಚ್.ಎಂ. ಚನ್ನಬಸಪ್ಪನವರು.—ನಾಳೆ ದಿವಸ ಸರ್ಕಾರದವರು ನಿಮ್ಮ ಮನೆ, ಅಂಗಡಿ, ಜಮೀನು ಇತ್ಯಾದಿಗಳೆಲ್ಲವನ್ನೂ ತೆಗೆದುಕೊಂಡು ನಿಮ್ಮನ್ನು ಹೊರಗಡೆ ಹಾಕಿದಾಗ ತಾವೇನು ಹೇಳುತ್ತೀರೆಂಬುದು ಈಗ ಗೊತ್ತಾಗುವುದಿಲ್ಲ ಆಗ ತಾವೇನೂ ಈ ಬಗ್ಗೆ ಪರಿಹಾರ ಕೇಳುವುದಿಲ್ಲವೋ? ನಿಮ್ಮ ಜೋಡಿ ಜಮೀನುಗಳನ್ನೆಲ್ಲಾ ಮೂರು ಕಾಸೂ ಕೊಡದೆ ತೆಗೆದುಕೊಂಡು ಬಿಟ್ಟರೆ ನೀವು ಸುಮ್ಮನೆ ಇರುತ್ತೀರೋ? ಯಾರೂ ಹಾಗೆ ಇರಲು ಸಾಧ್ಯವಿಲ್ಲ. ಇದರಿಂದ ಇಲ್ಲದ ಅನರ್ಥಗಳು ಉಂಟಾಗುತ್ತವೆ. ಇದಕ್ಕಾಗಿಯೇ ಈ ಹಿಂದೆಯೇ constitute ಆಗಿರತಕ್ಕ ಭಾರತ ರಾಜ್ಯಾಂಗ ಶಾಸನದಲ್ಲಿ ಹೀಗೆ ಯಾರಿಂದಲಾದರೂ ಒಂದು ಸ್ವತ್ತನ್ನು ಸರ್ಕಾರದವರು ತೆಗೆದುಕೊಂಡರೆ ಆ ಬಗ್ಗೆ ತಕ್ಕ ಪರಿಹಾರ ನೀಡದೆ ಅದನ್ನು ತೆಗೆದುಕೊಳ್ಳಲು ಯಾರಿಗೂ ಅಧಿಕಾರವಿಲ್ಲವೆಂಬುದಾಗಿ ತಿಳಿಸಿಬಿಟ್ಟಿದೆ. ಹಾಗೆ ತಿಳಿಸಿದ್ದಾಗ್ಯೂ ಸಹ ಇಂಥಾ ಒಂದು ಸಂಘದವರು ಆ ಕಾನ್‌ಸ್ಟಿಟ್ಯೂಷನ್ನಿಗೆ ವಿರೋಧವಾಗಿರತಕ್ಕ ರೀತಿಯಲ್ಲಿ ಒಂದು ನಿರ್ಣಯ ಮಾಡುವುದು ಎಷ್ಟು ಚೆನ್ನಾಗಿದೆ! ಎಷ್ಟು ಜವಾಬ್ದಾರಿಯುತವಾಗಿದೆ! ಆದರೆ ಈ ಸಂಘದ ಒಳ ಅಂತರ್ಯವೇನೆಂಬುದೇ ತಿಳಿಯದಾಗಿದೆ. ಏನೋ ನೆನ್ನೆ ಮೊನ್ನೆಯಿಂದ ಕೆಲವರು 4-6 ಎಕರೆ ಜಮೀನುಗಳನ್ನು ವಾರಕ್ಕೆ ಕೊಟ್ಟಿದ್ದು, ಆತನು ಅಂಥ ಜಮೀನಿನಲ್ಲಿ ತೋಟ ವಗೈರೆಗಳನ್ನು ಕಟ್ಟಿದ್ದರೆ, ಅಂಥಾ ಜಮೀನುಗಳನ್ನು ಆತನಿಂದ ಬಿಡಿಸಿಕೊಳ್ಳಲು ಒಂದು ದಬಾದುಬಿ ಮಾಡಿ, ದೇಶದಲ್ಲಿ ಎಲ್ಲಾ ಕಡೆಯೂ ಅನಾಯಕತ್ವವೇ ಬರಲಿ, ಹೀಗೆ ಒಂದು ಅನಾಯಕತ್ವದಿಂದ ಭೂಮಿಯನ್ನು ಕಿತ್ತುಕೊಳ್ಳಬೇಕೆಂಬ ಉದ್ದೇಶದಿಂದ ಮಾಡಿರತಕ್ಕ ಶಾಸನದಂತೆ ಭಾವಿಸಿ ತಿಳಿಸಿದ್ದಾರೆ. ಇದರಲ್ಲಿ ಅವರು ಹೇಳಿರುವುದು the fittest will survive ಎಂಬಂತೆ ತೋರುತ್ತದೆ.

This is rather very unfair and most irresponsible. So I should appeal to such friends as have got such ideas to revise their opinion. The sooner they do, the better it is. Otherwise, they will go to the dogs. And it is also the duty of the Government to see from time to time that such irresponsible expressions against the spirit of the Constitution are not given encouragement. With these words, I commend this Bill for the acceptance of the House. I wholeheartedly welcome the Bill and I should congratulate the Government for having made bold to bring forward this Bill and so early and I am sure they are determined to pass this Bill in this session alone so that the benefit of this Bill may go to the tiller of the soil immediately thereafter.

Sri D. H. CHANDRASEKHARAIYA (Chitaldrug District—General).—Mr. Speaker, Sir, I am thankful to the Hon'ble Member Sri Channabasappa for having given me some credit for my continued interest in the question of improving the Inam and Jodi villages in the State. In fact I claim to have studied the conditions of the tenants in Inam and Jodi villages in some detail on several occasions. These tenants are generally considered as tenants at will and are evicted from their holdings at any time the Inamdar

(SRI D. H. CHANDRASEKHARAIYA)
pleases. They are usually subject to rack rents and enjoy no amenities of any kind. Their position may be compared to that of the serfs that existed under the feudal system of the Middle Ages in the European countries. Such conditions cannot be tolerated in any progressive and enlightened country. Therefore I have always urged that early action should be taken to improve the conditions of the Inam and Jodi villages, if not, abolish them altogether. In this connection I would like to refer to the Resolution that I moved on the floor of the then Legislative Council in the year 1932, requesting the Government to appoint a Committee to consider the question of improving the living conditions of these tenants in Inam and Jodi villages and make suitable suggestions in the matter. Having accepted the resolution the then Government appointed a committee of which I and the Hon'ble the Chief Minister Sri K. Chengalaraya Reddy were members among others. We toured three districts of the State, namely, Mysore, Bangalore and Kolar Districts, carefully studied the conditions of the Inam tenants and submitted a report. I am sorry to say that nothing substantial came out of that report. I am however glad that the present Government have taken the bold step to introduce this piece of legislation for abolishing the Inam tenures in the State. The dream which I am having during the past 25 years has now become a reality. I am deeply grateful to the Government for having brought in this legislation. It is my earnest hope that if this legislation is passed and implemented, it will prove a panacea for all the evils from which the tenants are suffering at the present day in most of the Inam and Jodi villages in the State. Under this legislation the tenants will become occupants of the lands with full rights to sell, mortgage or gift them whenever they want. Then there will be much scope for improving the social and economic conditions of the poor tenants. I am therefore very happy that a legislation of this kind has been introduced by the Government.

Though I am in favour of abolishing private Inams and private Jahagir in the State, yet I am of opinion that different considerations should be applied to one Jahagir, namely the Sringeri Jahagir. The reasons for this have been stated in my note appended to the report of the Select Committee of which I was a member. The very first reason that we should consider is that the Sringeri Mutt and the Jahagir owned by it should be treated more as public institutions than as institutions belonging to a particular Guru in the State. The Mutt is of course much older in point of time but the Jahagir seems to have been gifted to the Mutt by a Ruler of the Vijayanagar Empire in recognition of the most valuable services rendered by the then Guru of the Mutt, *viz.*, Sri Vidyaranya Swamigalu in 1346 in founding and blessing that Empire. That Jahagir has been preserved and kept intact these 600 years by the successive Rulers who have ruled in our country, whether they were Hindu Kings, or Muslim Rulers or even British Administrators. The rights of the Mutt have always been taken into consideration in deciding important questions affecting its position or income. I should like to quote one or two sentences from the Government Order of 1907 when Government conferred the rights to minerals on the Mutt:

> "The case of Sringeri Jahagir, however, presents special features which entitles it to special consideration at the hands of the Government. It differs from the other Jahgirs in the State in its great antiquity and the purposes for which the grant was made....................."

And then when the *halat* on supari was abolished, the then Government was pleased to order in 1908 that in view of the abolition of the *halat* the Mutt should be entitled to a grant from the Government to the extent of Rs. 15,000. Thus, whenever questions affecting the status and the income of the Mutt came up for consideration, the previous Governments have always shown great regard and respect to the Mutt as a great public institution.

I may even go to the length of saying that the Mutt is in one sense a great national institution. What is

a national institution? An institution which helps to build up the country on national lines and preserves the best traditions and culture of the people is really a national institution. In this connection I would like to quote from Pandit Nehru's book "Discovery of India". On page 152 of that book the following observations are made:

"..................It would seem that Shankara wanted to add to this sense of national unity and common consciousness. He functioned on the intellectual, philosophical and religious plane and tried to bring about a great unity of thougt all over the country. He functioned also on the popular plane in may ways, destroying many a dogma and opening the door of his philosophic sanctuary to everyone who was capable of entering it. But locating his four great monasteries in the North, South, East and West of India he evidently wanted to encourage the conception of a culturally United India...... ...."

From what I have quoted, it ought to be clear to any one that the Sringeri Mutt with the Jahgir attached to it has through its great Acharya rendered great national service in the past and has a strong claim to be considered as a national institution deserving to be kept intact and continued.

The second reason which I have in view is that as we all know this Mutt was founded by the great Shankaracharya more than 1,200 years ago. He was the greatest philosopher and saint of the time. He did much to revive the Hindu religion, philosophy and culture which were then waning to a very large extent. His successors too have been men of great learning and culture. They have been continuously preserving and protecting the very best tradition in Hindu religion, philosophy and culture in all their ancient glory. All this has caught the mind of the people like me who desire to preserve the status and the dignity of the Sringeri Mutt unaffected in any way. As a matter of fact many people all over India have been expressing in one voice the desirability of continuing the Sringeri Jahagir as before. Can we not respect their sentiments?

The third and the last reason which I have explained in my note is that the very object with which the abolition of Inam tenures is undertaken has already been fulfilled in the case of Sringeri Jahagir. The abolition of Inams, Jodies and Jahagirs is essentially a means to improve the conditions of the people living there. Abolition is only incidental. But as far as the Sringeri Jahagir is concerned, the living conditions of the people there are quite similar to what they are in the Government villages. The revenue lands in the Sringeri Jahagir have all been surveyed and settled and registered in the names of the raiyats The raiyats enjoy full occupancy rights, that is to say, they can sell, mortgage and gift away their lands without any trouble.' Under these circumstances the question of abolishing the Sringeri Jahgir does not appear to be one of necessity or urgency as in other cases. Thus from whatever point of view the question is examined the preservation of the Sringeri Jahgir is necessary and would go a long way to ensure the dignity, the integrity and the usefulness of such an institution as the Sringeri Mutt.

It may be asked whether other Mutts will not put forward similar claims for retention of their Inams and Jodies. My own reply is that other Mutts stand on an entirely different footing and have no right to claim similar treatment. So far I have not come to know of any agitation going on anywhere about the retention of Inams and Jahagirs belonging to other Mutts. The only other Jahagir is Yelandur, but it is a private property. Nobody need feel sorry if it is to be abolished. With regard to the abolition of the other Inam and Jodi villages in the State, none is more happy than myself.

It is said that the continuance of the Sringeri Jahgir would prejudice the rights and privileges of the raiyats therein. As I have already stated the raiyats there are already exercising complete rights over their lands without any trouble from the Inamdar. In fact the Inamdar has divested himself of the management of the Jahagir

(SRI D. H. CHANDRASEKHARAIYA.)

during the past 15 years. The Government are managing the Sringeri Jahagir and if any further powers are necessary to be taken by the Government in order to enable them to safeguard and protect the rights of the tenants they are quite at liberty to do so. I always hold the view that the raiyats should not suffer on any account. The Government may take necessary power in this behalf even under this legislation.

In the light of the views I hold on this subject, I have suggested some amendments to the Bill which urge that the Sringeri Jahagir and the villages belonging to the Sringeri Mutt may be exempted from the operation of the Bill, while at the same time conceding to the Government to take power to frame rules for proper management of the Jahagir and other villages and also for safeguarding the rights and privileges of the tenants therein. There are 23 villages within the Sringeri Jahagir and 24 villages outside. If it is at least possible to preserve the integrity of the Jahagir with its 23 villages, it may go a long way to maintain the dignity, the prestige and the usefulness of the Mutt.

I have said in my note that religion seems to be somehow losing its hold on the people at the present time. This is not a very happy circumstance at any rate for India. I strongly hold the view that the institutions to which people look forward for religious inspiration and guidance must be preserved intact. We should not do anything which will undermine their authority or their influence on the people of the country. While fully accepting the legislation as it is before the House, I suggest that the Sringeri Jahagir may be exempted from its operation for the benefit of the country and its people.

It is said that the exemption is urged merely on sentimental grounds. But it isnot mere sentiment that is prompting some of us to support exemption for Sringeri Jahagir. Strong reasons and logic form the basis for our demand. I may say that even sentiment has its own value in life which we cannot afford to disregard in a lighthearted way. Even the opinion expressed in opposition to our demand has also some sort of sentiment behind it. To say that no sentiment should have any value in life is itself of no value.

Sri W. H. HANUMANTHAPPA (Bangalore District-General).—What about the superior and inferior holders ?

Sri D.H. CHANDRASEKHARAIYA.—The question of superior or inferior holders may be dealt with according to the rules framed by the Government for that purpose. But personally I would like to have that relationship continued as it involves no troubles of any kind to the tenants.

With these words I commend this legislation to the acceptance of the House while at the same time suggesting that Sringeri Jahagir may be exempted from its operation.

Sri G. VEERAPPA (Chitaldrug District—General).—I have to congratulate the Government for having brought forward this healthy measure, a measure which was pending for a long time. And our thanks are especially due to the members of the Select Committee who have gone into the Bill in great detail and suggested modifications to the original Bill. The question of revision of land revenue was pending and the matter was being agitated for a long time. I have to congratulate the present Government for having appointed a Committee to go into the question. A very good report has been submitted by the Committee which requires the consideration of this Hon'ble House.

When the Abolition of Inam Tenure Bill was introduced a suggestion was made to refer it to a Select Committee. Accordingly the Bill was referred to the Select Committee. While considering this Bill, certain important points will have to be remembered. From the legal point of view, a serious state of affairs has arisen between the landlords and the tenants on the question of eviction. The khadim tenant pleads that he was paying a fixed rent to the

land-lord from so many years and was in possession of the land for several years. Several cases have arisen, the tenant thinking perhaps that he was the owner of the land because he was in possession of it from the time of his great grand father, and the land-lord filing suits against the tenant saying that he had no right. Such kinds of litigations arise and it is a very unsatisfactory state of affair existing in these villages. There is no survey, there is no record to show that a particular land measured so much. This being the state of affairs, the tenant never took any interest in the cultivation of the land. He could not effect any improvement to the land. Thereby the interest of the country has suffered, especially when the food situation in the country is acute.

So, this important measure has to be introduced to avoid all these things and establish the fundamental right of the persons who were in possession of the land and who were cultivators of the land for a long time. Otherwise, if they are disturbed by the land-lord their rights will be affected. So, this bill is consistent with the fundamental right of the man to own the land the possession of which he has been enjoying for such a long time. The only point that has received the attention of this House, perhaps, is the question of Sringeri Jahgir.

My Hon'ble friend Sri D.H. Chandrasekharaiah put forth an argument that so far as Sringeri Jahgir is concerned, it required special concessions in view of the sacred nature of the Mutt. Quite true. We are prepared to show certain concessions to the Sringeri Jahgir on account of the religious sentiment we have and on account of the historical importance of the Mutt, because the Mutt has been existing for a very long time and it has got its own importance. But the report of the Select Committee gives certain concessions to this Mutt in all material benefits, as for instance with regard to the question of income and the rent that comes from the estate. They get all the material benefits that they were entitled to. But the only question is, the tenant there will become the registered occupant. That is all.........

Sri M. N. JOIS.—They are so now.

Sri G. VEERAPPA.—They have no ownership of the land. The Mutt is getting the rent and taking all the benefits. Instead of that, hereafter, they will have to pay the rent to the Government.

Sri D. H. CHANDRASEKHARAIYA.—The Government are managing the Jahgir for the past 15 years.

Sri G. VEERAPPA.—Quite true. But the Government have not become the owners of the land. The Government have not been vested with the absolute ownership over the land. The only question is, hereafter, instead of the Mutt continuing to be the owners of the land, the Government will become the absolute owners of the land. With that difference, I think the Mutt will not be a loser in any way and the members of the Select Committee have taken all this into consideration.

Sri M. N. JOIS.—What is the difference between the ownership of the land by the Government taking all the lands and the ownership of the Mutt? The Mutt cannot deal with the land in any manner now; it cannot sell the land, it cannot exercise its ownership.

Sri D. H. CHANDRASEKHARAIYA.—Even to-day the raiyats are just like registered tenants and they enjoy all the rights and privileges as registered occupants. There is absolutely no difference.

Sri G. VEERAPPA.—With this difference, my friend Sri Jois will know that the Mutt cannot sell the land but they are the owners. Legally speaking, they cannot deal with the properties, but they are the owners.

Sri M. N. JOIS.—What is the difference between the tenant of a Government village and the tenant of the Sringeri Jahgir now? What is the difference?

The Hon'ble Sri H. C. DASAPPA.—The Hon'ble Member Sri Jois may make a speech later!

Sri G. VEERAPPA.—With regard to the rights of the tenant, I find there will not be much difference. But my approach to the question is, it does not affect the rights of Sringeri Mutt in any way. With regard to the material benefit, even now they have got the same thing. Perhaps, it is to their advantage.

Sri H. M. CHANNABASAPPA.—If the Hon'ble Member yields, I want to explain one matter. The difference between the raiyat in a Government village and the raiyat in a Jahgir village is, in the Jahgir village there is an intermediary between the tenant and the Government whereas in the Government village there is no intermediary.

Sri G. VEERAPPA.—As has been stated by my Hon'ble friend Sri H. M. Channabasappa, this age-old intermediary will be removed. The intermediary who collects the rent will be eliminated. So also in the case of the Sringeri Mutt, it does not lose anything. I am therefore surprised to see why my friends say that this legislation is going to affect the rights and privileges of Sringeri Mutt. In my opinion, the Select Committee members have taken all pains to see that all concessions and privileges are preserved to Sringeri Mutt.

(Interruption by Sri D. H. Chandrasekharaiya) It becomes a question of sentiment. When an important measure like this is being introduced, the question of sentiment may not play an important role, though, of course, we as Hindus respect all sentimental feelings. But, it is seen from the point of view advanced by Sri D.H. Chandrasekharaiya, that sentiment is playing a greater part in the retention of Sringeri Mutt Jahgir.

If my friends who are the exponents of these things, namely that certain rights and privileges must be preserved, let them bring in amendments; we may consider them on their merits and say whether these amendments may or may not be accepted. If my Hon'ble friends like Sri Jois and others convince us that the amendments are necessary, it is open for us to consider that position.

As regards giving compensation to the Inamdars, the Committee, of course, have made a good recommendation that they must be paid adequate compensation; they do not say, take away the lands without giving them any compensation. In my opinion, some of them may not deserve any compensation because they have enjoyed it from a number of years and they have realised whatever benefits they should have realised. Now, many of the Inamdars, to escape from the legal complication and due to the difficulties in collecting rent, want the abolition of inams. Many of the Inamdars have come to me and said that they cannot collect rents from the tenants and it has become a very hard task. It is the feeling of many Inamdars that after paying some compensation to them, the inams may be abolished. So, even to relieve them of all these things, this measure is very helpful. So, I only congratulate the members of the Select Committee for having considered all the objections and viewpoints that were raised by this House when the Bill was first introduced and for having brought in all these things in this measure. The measure as a whole, with modifications, if any, may be accepted.

*ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—ಸ್ವಾಮಿ, ಈ ಇನಾಂ ರದ್ದಿಯಾತಿ ಮಸೂದೆಯನ್ನು ಸೆಲೆಕ್ಟ್ ಕಮಿಟಿಯವರು ಯಾವ ರೀತಿ ತಂದಿದ್ದಾರೋ ಆ ರೀತಿಯಲ್ಲಿ ಅನುಮೋದಿಸುವುದಕ್ಕೆ ನಾನು ನಿಂತಿದ್ದೇನೆ. ಈ ಸಂದರ್ಭದಲ್ಲಿ ಇನಾಂಗಳ ವಿಷಯವಾಗಿ ಎರಡು ಮಾತುಗಳನ್ನು ಹೇಳುವುದು ಅವಶ್ಯಕವೆಂದು ಕಾಣುತ್ತದೆ. ಹಿಂದೆ ಈ ಇನಾಂಗಳನ್ನು ಕೊಟ್ಟಿರುವುದು ರೈತನಿಗಲ್ಲ, ಅಥವ ಅರಣ್ಯಪ್ರದೇಶವಾಗಿದ್ದುದನ್ನು ಇನಾಂ ಆಗಿ ಕೊಟ್ಟಿಲ್ಲ. ವ್ಯವಸಾಯ ಮಾಡುತ್ತಿದ್ದ, ಜನಭರಿತವಾದ ಊರುಗಳಲ್ಲಿ ಒಂದೊಂದು ಹಳ್ಳಿಯನ್ನು ಯಾರಿಗೋ ಒಬ್ಬರಿಗೆ ಜಮೀನು ವ್ಯವಸಾಯ ಮಾಡದೇ ಇರುವವರಿಗೆ ಕೊಟ್ಟರು. ಈಗ ನಾವು ಯಾವ ಇನಾಂ ಹಳ್ಳಿಯನ್ನು ನೋಡಿದರೂ ಕೂಡ ಅದರಲ್ಲಿರುವ ಜಮೀನನ್ನಿಟ್ಟುಕೊಂಡು ಅದನ್ನು ಸಾಗುವಳಿಮಾಡಿಕೊಂಡು ಸುಖವಾಗಿ ಬಾಳಲಿ ಎಂದು ಇನಾಮಾಗಿ ಕೊಟ್ಟಿಲ್ಲ. ಸಾಗುವಳಿದಾರನಿಂದ ಬಂದ ಕಂದಾಯವನ್ನು ಪಡೆದುಕೊಂಡು ಸುಖವಾಗಿ ಬಾಳಲೆಂದು ಕೊಟ್ಟಿರುತ್ತಾರೆ. ಯಾವ ಇನಾಂ ಗ್ರಾಮ ನೋಡಿದರೂ ನೂರಕ್ಕೆ ತೊಂಭತ್ತು ಭಾಗ ಸಾಗುವಳಿ ಮಾಡುವುದಕ್ಕೆ ಅವನಿಗೆ ಅಧಿಕಾರವಿಲ್ಲ. ಕೆಲವು ಸರ್ವೀಸ್ ಇನಾಂಗಳಿವೆ. ತಳವಾರಿಗೆ, ತೋಟಿಗೆ, ಪಟೇಲರಿಗೆ, ದೇವಸ್ಥಾನದ ಪೂಜಾರಿಗೆ ಇಂಥವರಿಗೆ ಕೊಟ್ಟಿರುವ ಇನಾಂ ಜಮೀನು ವಿನಾ ಇನ್ನುಳಿದ ಇನಾಂಗಳು ಸಾಧಾರಣವಾಗಿ ಒಂದು ಚಿಟಿಕೆ ನಶ್ಯ ಕೊಟ್ಟದ್ದರಿಂದ ಹಿಡಿದು ದೇಶಕ್ಕೆ

ದೊಡ್ಡಸೇವೆ ಮಾಡುವವರೆಗಿನ ಕಾರಣಕ್ಕೆಕೊಟ್ಟಿರುವುದೆಂದು ನಾನು ಕೇಳಿದ್ದೇನೆ. ಇದನ್ನು ನಾವು ಯಾವಾಗಲೂ ನೆನಪಿನಲ್ಲಿಟ್ಟುಕೊಂಡಿರಬೇಕು, ಮರೆಯಬಾರದು. ಏಕೆ ಯಾವಾಗ ಕೊಟ್ಟರು ಎಂಬುದನ್ನು ಮರೆಯದೆ, ಈ ಹಕ್ಕನ್ನು ಯಾವ ರೀತಿ ಅವರು ಬೆಳಸಿಕೊಂಡು ಬಂದಿದ್ದಾರೆ ಎಂಬುದನ್ನು ಸನ್ನದುಗಳನ್ನು ನೋಡಿದರೆ ಗೊತ್ತಾಗುತ್ತದೆ. ಇನಾಂ ಯಾವುದಕ್ಕಾಗಿ ಕೊಟ್ಟರೋ ಆ ಕಾರ್ಯವನ್ನು ಸಾರೋದ್ಧಾರವಾಗಿ ನಡೆಸಿಕೊಂಡು ಅಗ್ನಿಹೋತ್ರಮಾಡಿಕೊಂಡು, ದೇಶದ ಹಿತಕ್ಕಾಗಿ ಕ್ಷೇಮಕ್ಕಾಗಿ ಅದು ಆರದಂತೆ ರಕ್ಷಿಸಿಕೊಂಡು ಬರಲಿ ಎಂದು ಇನಾಂ ಕೊಟ್ಟಿದ್ದರು. ಆದರೆ ಈ ದಿವಸ ಅದೆಲ್ಲಾ ಹೋಗಿದೆ. ಅಗ್ನಿಹೋತ್ರಮಾಡುವುದು ಹಾಗಿರಲಿ, ಅಗ್ನಿಗೆ ಹೇಗೆ ಆಹ್ವಾನಕೊಡುವುದು ಎನ್ನುವುದೂ ಬಾರದೇಯಿರುವವರ ಕೈಯಲ್ಲಿ ಆ ಜಮೀನುಗಳಿವೆ. ಯಾವ ಜನರು ತಮ್ಮ ಕರ್ತವ್ಯವನ್ನು ಮರೆತು, ದೇಶ ಸೇವೆಯನ್ನು ಮರೆತು ಎಲ್ಲವನ್ನೂ ಬೇರೆಯವರಿಗೆ ಧಾರೆ ಎರೆದು, ಸ್ವಾರ್ಥಕ್ಕಾಗಿ ಮಾರಿಕೊಂಡಿದ್ದಾರೋ, ಇದು ನನ್ನ ಹಕ್ಕು, ಇದು ನನ್ನ ಜಮೀನು, ಇದರಲ್ಲಿರುವ ಸರ್ವಸ್ವವೂ ನನ್ನದು ಎಂದು ಹೇಳಿ ಕ್ರಯಪತ್ರಗಳನ್ನು ಬರೆದುಕೊಟ್ಟಿದ್ದಾರೋ ಅಂಥವರಿಗೆ ಸಹಾಯಮಾಡಬೇಕೆ! ಇಂತಹ ಅನೇಕ ವ್ಯವಹಾರಗಳು ನಡೆದಿರುವುದು ನಿಜವಾದ ವಿಷಯ. ಇದನ್ನು ಗಮನಿಸಬೇಕು.

ಇದರಲ್ಲಿ ಇನ್ನೊಂದು ವಿಷಯವನ್ನು ನಾವು ನೋಡಬೇಕು. State within a State, small box within a box ಎನ್ನುವ ಹಾಗೆ ಒಂದು ದೇಶದಲ್ಲಿ ದೊರೆಯೊಬ್ಬನಿದ್ದರೆ ಅದೇ ದೇಶದಲ್ಲಿ ಕೆಲಸಾವಿರ ಜನರಿಗೂ ಒಬ್ಬ ದೊರೆಯಂತಿದ್ದಾರೆ ಈ ಇನಾಂದಾರರು. ಹೇಗೆಂದರೆ, ಮೈಸೂರು ದೇಶದಲ್ಲಿ ಒಂದು ಸರ್ಕಾರಿ ಆಜ್ಞೆ ಇದೆ. ಅದರ ಪ್ರಕಾರ ಒಂದು ವ್ಯವಸಾಯದ ಜಮೀನನ್ನು ವ್ಯವಸಾಯಕ್ಕಲ್ಲದೆ ಇತರ ಉಪಯೋಗಕ್ಕೆ ಮಾಡಿಕೊಳ್ಳುವುದಾದರೆ ಆಗ conversion fine ಎಂದು ಕೊಟ್ಟು ಮ್ಯುನಿಸಿಪಾಲಿಟಿ ಅಥವ ಇತರ ಸಂಸ್ಥೆಗಳಿಂದ ಅನುಮತಿ ಪಡೆಯಬಹುದು. ಸರ್ಕಾರಿ ಜಮೀನಾಗಿದ್ದರೂ ಹೀಗೆಯೆ. ಆದರೆ ಈ conversion fine ಇಲ್ಲದೆ ಕಲವು ಉಪಯುಕ್ತ ಕಾರ್ಯಗಳಿಗೆ ಸರ್ಕಾರದವರು ಜಮೀನು ಕೊಡಲು ಸಿದ್ಧವಾಗಿದ್ದಾರೆ. ಹೀಗೆಯೇ ಇನಾಂ ಗ್ರಾಮಗಳಲ್ಲಿ ಇನಾಂದಾರರನ್ನು ಯಾರಾದರೂ ಹೀಗೆ ಕೇಳಿದರೆ, "ಈ ಇನಾಂಗೆ ನಾನೇ ರಾಜ, conversion fine ನನಗೇ ಬರಬೇಕು" ಎಂದು ಹೇಳಿ ವಸೂಲುಮಾಡುತ್ತಾನೆ. ಚಕ್ರವರ್ತಿಯ ಕೈಕೆಳಗೆ ರಾಜರಿದ್ದಂತೆ ತಾವೂ ರಾಜರೆಂದು ಹೇಳುತ್ತಾರೆ. ಎಷ್ಟೋ ಚಕ್ರವರ್ತಿಗಳೂ ಹೋದರು, ರಾಜರೂ ಹೋದರು,.........

Sri K. PUTTASWAMY.—We are all agreed about abolition of Inams.

Sri A. BHEEMAPPA NAIK.—No, No, you are not agreed about the abolition of one kind of inam and I am answer-ring that point now. ಇನಾಂ ಎನ್ನುವುದು ಎಲ್ಲ ಅರ್ಥದಲ್ಲಿಯೂ ಹೋಗಬೇಕು. ಉದಾಹರಣೆಗೆ, ಶೃಂಗೇರಿ ಜಹಗೀರಿಯಲ್ಲಿ ಒಂದು ಹಳ್ಳಿಯನ್ನು ದೊಡ್ಡದು ಮಾಡಬೇಕೆಂದು, ಆ ಹಳ್ಳಿಯವರು ವ್ಯವಸಾಯಕ್ಕಲ್ಲದೆ ಇತರ ಉಪಯೋಗಕ್ಕೆ, ಅಂದರೆ ಮನೆ ಮಠ ಕಟ್ಟಿಕೊಳ್ಳುವುದಕ್ಕೆ ನಮಗೆ ಜಮೀನು ಬೇಕೆಂದು ಕೇಳುತ್ತಾರೆ. ಅವರು ಕೊಡದಿದ್ದರೆ ಕೊಡಿ ಎಂದು ಹೇಳುವುದಕ್ಕೆ ಸರ್ಕಾರಕ್ಕೆ ಅಧಿಕಾರವಿರುವುದಿಲ್ಲ. ಶೃಂಗೇರಿ ಜಹಗೀರಿಯ ಪಾರುಪತ್ತೇಗಾರರು ಎಕರೆಗೆ ಎರಡು ಸಾವಿರ conversion fine ಕೊಡಿ ಎಂದು ಕೇಳಿದರೆ ಆಗ ಏನು ಹೇಳಬೇಕು?

Sri D. H. CHANDRASEKHARAIYA.—I must submit that the Hon'ble Member is giving an entirely incorrect view.

Sri A. BHEEMAPPA NAIK.—You can give the correct version, I will take it.

Sri D. H. CHANDRASEKHARAIYA.—The correct view is : the tenants in the Sringeri Jahgir have got their lands registered in their names. They are the *khatedars*. They have occupancy rights. They can sell the lands and gift them away, and if any uncultivable lands are available, anybody can apply by *darkhast* under the Land Revenue Code and get them.

Sri A. BHEEMAPPA NAIK.—What about the conversion fine? You did not answer that. Can the Government waive conversion fine there?

Mr. SPEAKER.—Conversion fine in respect of Government lands goes to Government. But in respect of the other lands, it will be given to the Mutt. Where is the difference? Instead of to the Government, the money goes to the Mutt.

Sri A. BHEEMAPPA NAIK.—That is what I am saying. In respect of a Government land, the Government can waive the conversion fine. It has been waived in many cases. We can trust the Government to do it.

Sri M. N. JOIS.—So, it is a case of distrust of the Mutt?

Sri A. BHEEMAPPA NAIK.—Definitely. It is distrust of the Mutt. It is distrust of everybody in the same way. Whereas the Government are the representatives of the people, the Mutt is not the representative of the tenants. It has no Ministers......

Sri M. N. JOIS.—So you are the Minister for the abolition of the Sringeri Jahgir!

Sri A. BHEEMAPPA NAIK.—Conversion in the case of Mutt lands must go to the Mutt. Therefore, if to-morrow Government are approached for waiving the conversion fine for a good cause, can the Government directly waive it? It is only the Mutt which can waive it

(SRI A. BHEEMAPPA NAIK.)

if it pleases. But my Hon'ble friend was saying that there is no difference between the Government village and Inam village so far as tenancy rights were concerned.

Sri D. H. CHANDRASEKHARAIYA.—If there are any grievances on the part of the tenants, I have said that Government may take powers, even under the present legislation, to deal with such matters, independent of the Mutt. I have said that.

Sri A. BHEEMAPPA NAIK.—If all those powers are taken, I am prepared to concede all the income and much more to the Mutt.

Mr. SPEAKER.—What is that "much more"?

ಶ್ರೀ ಎ. ಭೀಮಪ್ಪನಾಯಕರು.—ಒಂದು ಯಾವುದಾದರೂ ಧರ್ಮಸಂಸ್ಥೆಯಾಗಿದ್ದು ಧರ್ಮವನ್ನು ಉದ್ಧಾರ ಮಾಡುವಂಥ ಸಂಸ್ಥೆಯಾಗಿದ್ದರೆ ಅದಕ್ಕೆ ಈಗಿರತಕ್ಕದ್ದರ ಜೊತೆಗೆ ಇನ್ನೂ ಬೇಕಾದರೆ ಸೇರಿಸೋಣ. ಅಂತಹ ಧರ್ಮಕಾರ್ಯಕ್ಕಾಗಿ ಇನಾಂ ಜೊತೆಗೆ ಇನ್ನಷ್ಟು ಕೊಡುತ್ತೇವೆಂದು ಹೇಳಿ ಕೊಡೋಣ. ಆದರೆ ಇದೇ ಕಾರಣದಿಂದ ನೀವು ಯಾವಾಗಲೂ ಇನಾಂದಾರರಾಗಿಯೇ ಇದ್ದು ರೈತರ ಮೇಲೆ ಅಧಿಕಾರವನ್ನಿಟ್ಟುಕೊಳ್ಳಿ ಎಂದು ಹೇಳಬಹುದೆ? ಒಂದು ಮನೆಕಟ್ಟಿಕೊಳ್ಳುವುದಕ್ಕೆ ರೈತ ಬಾಕಿ ಕಡೆ ಸರ್ಕಾರವನ್ನು ಕೇಳಿ ವಿನಾಯಿತಿ ಪಡೆಯಬಹುದು, ಆದರೆ ಇನಾಂ ಗ್ರಾಮದಲ್ಲಿ ಇನಾಂದಾರನನ್ನು ಕೇಳಬೇಕು. ಇದೇ ವ್ಯತ್ಯಾಸ ಸರ್ಕಾರಿ ಹಳ್ಳಿಗಳಿಗೂ ಇನಾಂ ಹಳ್ಳಿಗಳಿಗೂ ಎಂದು ಹೇಳಿದೆ, ಅಷ್ಟೆ. ಶ್ರೀ ಚಂದ್ರಶೇಖರಯ್ಯನವರು ಅವಕ್ಕೂ ಇವಕ್ಕೂ ಇರುವ ವ್ಯತ್ಯಾಸವನ್ನು ತಿಳಿದುಕೊಳ್ಳಲಿ......

Sri D. H. CHANDRASEKHARAIYA.—The Hon'ble Member has mentioned something about conversion fine and all that. I said that if there is any point to be dealt with by the Government, I shall have no objection for the Government taking power in respect of such matters. If there is a grievance, power may be taken to remedy the grievance.

Sri A. BHEEMAPPA NAIK.—Therefore you admit that there is difference.

Sri D.H. CHANDRASEKHARAIYA.—If there is that grievance that you mention, then there is no objection to the Government taking power to remedy the grievance But, I never admitted that there is the grievance that you have referred to.

ಶ್ರೀ ಎ. ಭೀಮಪ್ಪನಾಯಕರು.—ಬೇರೆ ವ್ಯತ್ಯಾಸ ವೇನಿದೆ ಎಂದು ಕೇಳಿದಿರಿ, ಈ ವ್ಯತ್ಯಾಸವಿದೆ ಎಂದು ನಾನು ಹೇಳಿದೆ.

ಏನೂ grievance ಇಲ್ಲ ಎಂದು ನೀವು ಹೇಳುವ ಹಾಗಿಲ್ಲ ಅಥವ ತಾವು admit ಮಾಡಿದರೆ ಈ grievance ಹೋಗುತ್ತದೆಂತಲೂ ಅಲ್ಲ. ನಾನು ಹೇಳುವುದು ಸರ್ಕಾರಿ ಹಳ್ಳಿಯಲ್ಲಿರುವ ರೈತನಿಗೂ ಅಲ್ಲಿರುವ ರೈತನಿಗೂ ವ್ಯತ್ಯಾಸವಿದೆ. ಮೈಸೂರು ಸರ್ಕಾರದಲ್ಲಿ ಒಂದು ಆಜ್ಞೆ ಇದೆ, ಅದರಲ್ಲಿ ಏನಿದೆಯೆಂದರೆ...

ಜಮೀನ್ದಾರನಿಗೆ ಅಥವಾ ಇನಾಂದಾರನಿಗೆ ವಿಶೇಷ ಸಂದರ್ಭಗಳಲ್ಲಿ ಆತನು ಜಮೀನಿನ ಅಭಿವೃದ್ಧಿಯ ಬಗ್ಗೆ ಹೆಚ್ಚಿಗೆ ಖರ್ಚುಮಾಡಿದ್ದು, ಅಂಥಾ ಖರ್ಚಿನಿಂದ ಆ ಜಮೀನಿನ ಉತ್ಪತ್ತಿ ಜಾಸ್ತಿಯಾಗುವಂಥಾದ್ದಾಗಿದ್ದರೆ ಆ ಹೆಚ್ಚಿನ ಉತ್ಪತ್ತಿಯೆಲ್ಲಾ ಇನಾಂದಾರನಿಗೇ ಹೋಗಬೇಕೆಂದು ಇದರಲ್ಲಿ ತಿಳಿಸಿದ್ದಾರೆ. ಇದೇ ಸಂದರ್ಭದಲ್ಲಿ ಮತ್ತೊಂದು ಅಂಶವನ್ನು ನಾವು ಆಲೋಚನೆ ಮಾಡತಕ್ಕದ್ದಿದೆ. ಅನೇಕ ಇನಾಂ ಗ್ರಾಮಗಳಲ್ಲಿ ಜಮೀನನ್ನು convert ಮಾಡಿಕೊಳ್ಳತಕ್ಕ ಸಂದರ್ಭಗಳು ಸರ್ಕಾರದವರಿಗೆ ಇದ್ದೇ ಇವೆ. ಆ ರೀತಿಯಾಗಿ ಕೆಲ ಕೆಲವು ಜಮೀನುಗಳನ್ನು ಇನಾಂ ಗ್ರಾಮದಲ್ಲಿ ಅಕ್ವೈರ್ ಮಾಡಿಕೊಂಡು ಅಲ್ಲಿ ರೈಲ್ವೆ ರಸ್ತೆ ಇತ್ಯಾದಿಗಳನ್ನು ಮಾಡಿಸಲು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಆ ರೀತಿ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟ ಮೇಲೆ ಅಂಥಾ ಸಂದರ್ಭಗಳಲ್ಲಿ ಹಿಂದೆ ಅಲ್ಲಿರತಕ್ಕ ಜಮೀನುಗಳಿಗೆ ನೂರು ರೂಪಾಯಿಗಳ ಬೆಲೆ ಸಹ ಸಿಕ್ಕದಿದ್ದಂಥವುಗಳಿಗೆ ಈ ಹೊಸದಾಗಿ ಕಲ್ಪಿಸಿರತಕ್ಕ ಅನುಕೂಲಗಳ ದೆಸೆಯಿಂದ ಸಾವಿರಾರು ರೂಪಾಯಿ ಬೆಲೆಯಾಗತಕ್ಕ ಅನುಕೂಲ ಒದಗಿರಬಹುದು. ಆ ರೀತಿಯ improvements ಆಗಿದ್ದರೆ ಈ ದಿವಸ ಅಂಥಾ ಹೆಚ್ಚಿನ ಆದಾಯ ಸಹ ಇನಾಂದಾರನಿಗೇ ಹೋಗಬೇಕಾಗುತ್ತದೆಂಬ ಅಂಶವನ್ನೂ ನಾವು ಮರೆಯಬಾರದು. ದೇಶದ ನಾನಾ ಜನರಿಂದ ವಸೂಲಾದ ಹಣದಿಂದ ಮಾಡಿರತಕ್ಕ ಖರ್ಚುಗಳು ದೇಶದಲ್ಲಿರತಕ್ಕ ಒಂದು ಭಾಗದ ಜನರಿಗೇ ದೊರೆಯುವಂತಾಗಬಾರದು. ಈ ಸಂಬಂಧದಲ್ಲಿ ಇನಾಂದಾರನಿಗೆ ಏನೂ ಕೊಡಬಾರದೆಂದು ನಾನು ಹೇಳುವುದಿಲ್ಲ. ಆದರೆ ಇನಾಂದಾರನು ಸಾಗುವಳಿದಾರನಿಂದ ಕಂದಾಯ ವಸೂಲು ಮಾಡಿಕೊಂಡು ಆ ಬಗ್ಗೆ ಆತನು ಸರ್ಕಾರಕ್ಕೆ ಏನೊಂದು ಕ್ವಿಟ್‌ರೆಂಟನ್ನು ಪಾವತಿಮಾಡಬೇಕೋ ಅದನ್ನು ಮಾಡಿಬಿಟ್ಟು ಉಳಿದ ಮೊಬಲಗನ್ನು ಇತರೇ ಯಾವ ವಿಧವಾದ ಖರ್ಚುವೆಚ್ಚಗಳಿಗೂ ಅಂದರೆ ಅಂಥಾ ಇನಾಂ ಗ್ರಾಮಗಳಲ್ಲಿ ಭೂಮಿಯ ಸಾಗುವಳಿ ಮಾಡತಕ್ಕ ರೈತನ ಹಿತದೃಷ್ಟಿಯಿಂದ, ಅಥವ ಭೂಮಿಯ ಉತ್ಪತ್ತಿ ಹೆಚ್ಚುಮಾಡತಕ್ಕ ಅನುಕೂಲತೆಗಳನ್ನು ಏನನ್ನೂ ಮಾಡದೆ ಇರತಕ್ಕ ನಿದರ್ಶನಗಳೇ ಹೆಚ್ಚಾಗಿವೆ. ಹೀಗೆ ಬಡಪಾಯಿಗಳಿಂದ ವಸೂಲುಮಾಡಿದ ಹಣವನ್ನು ಇಟ್ಟುಕೊಂಡು ಪ್ರತಿಯೊಬ್ಬ ಇನಾಂದಾರನೂ ಸುಖಸಂತೋಷಗಳಲ್ಲಿ ಆ ಗ್ರಾಮಕ್ಕೆ ಆತನೇ ಪಾಳೇಗಾರ ರಾಜರಲ್ಲೊಬ್ಬ ರಾಜನಿದ್ದ ಹಾಗೆ ಇದ್ದರು. ಇವರಿಗೆ ಆ ಬಡಪಾಯಿಗಳು ಏನಾದರೂ ಅನುಕೂಲಗಳನ್ನು ನಮಗೂ ಸ್ವಲ್ಪ ಕಲ್ಪಿಸಿ ಕೊಡಿ ಎಂದು ಕೇಳಿದರೆ, ನಮಗೆ ಅಂಥಾ ಅನುಕೂಲಗಳನ್ನು ಕಲ್ಪಿಸಿಕೊಡತಕ್ಕ ಅಧಿಕಾರವಿಲ್ಲ ಅಂಥಾ ಯಾವುದಾದರೂ ಅನುಕೂಲಗಳು ಬೇಕಾಗಿದ್ದರೆ ಸರ್ಕಾರದವರನ್ನು ಕೇಳಿ ನೀವು ಮಾಡಿಸಿಕೊಳ್ಳಿ, ಎಂದು ಹೇಳುತ್ತಿದ್ದರು. ಹೀಗೆಲ್ಲಾ ಆಗಿ ಯಾವ ಇನಾಂ ಗ್ರಾಮಗಳನ್ನೇ ತೆಗೆದುಕೊಂಡರೂ ಅಲ್ಲಿ ಸರಿಯಾದ ಒಂದು ರಸ್ತೆಯಿಲ್ಲ, ಪಾಠಶಾಲೆಗಳಿಲ್ಲ ಚರಂಡಿ ವ್ಯವಸ್ಥೆಗಳಿಲ್ಲ, ಆಸ್ಪತ್ರೆಗಳಿಲ್ಲ, ಬಾವಿ, ಕೆರೆ ಇತ್ಯಾದಿಗಳೊಂದೂ ಇರುವುದಿಲ್ಲ. ಗ್ರಾಮದ ಮೇಲ್ವಿಚಾರಣೆ ನೋಡಿಕೊ

ಳ್ಳುವುದಕ್ಕೆ ಅನೇಕ ಗ್ರಾಮಗಳಲ್ಲಿ ಪಟೇಲರಿಲ್ಲ, ಶ್ಯಾನುಭೋಗರುಗಳಿಲ್ಲ ಗ್ರಾಮದಲ್ಲಿ ಏನಾದರೂ ತಂಟೆ ತಕರಾರುಗಳುಂಟಾದಾಗ ಅವುಗಳನ್ನು ಸರ್ಕಾರದವರಿಗೆ ತಿಳಿಸಲು ಒಂದು ಸರಿಯಾದ ಮಾರ್ಗ ಕೂಡ ಇರುವುದಿಲ್ಲ.

ಅಧ್ಯಕ್ಷರು.—ಅದೆಲ್ಲವನ್ನೂ ಆಲೋಚನೆಮಾಡಿದ್ದರಿಂದಲೇ ಈಗ ಈ ಬಿಲ್ಲನ್ನು ತಂದಿರುವುದು.

ಶ್ರೀ ಎ. ಭೀಮಪ್ಪನಾಯಕರು.—ಇದನ್ನು ಹೀಗೆ ಸ್ವಲ್ಪ ಬದಲಾವಣೆಮಾಡಬೇಕೆಂದು ಹೇಳಿದರೆ ಸಾಲದು. ಇದನ್ನು ಸಂಪೂರ್ಣವಾಗಿ ಬದಲಾಯಿಸಬೇಕು. ಮೈಸೂರು ದೇಶದಲ್ಲಿರತಕ್ಕ ಎಲ್ಲಾ ರೈತರುಗಳು, ಎಂದರೆ ಆ ರೈತನೆಂಬತಕ್ಕವನು ಎಲ್ಲೇ ಇರಲಿ, ಶೃಂಗೇರಿಯಲ್ಲೇ ಇರಲಿ, ಎಲ್ಲೇ ಇರಲಿ, ಒಂದೇ ರೀತಿ ಇರಬೇಕು. ಶೃಂಗೇರಿಗೆ ಒಂದು ಹೆಚ್ಚಿನ ಸ್ಥಾನವಿರುತ್ತೆ, ಅದಕ್ಕೆ ಒಂದು ಸೆಂಟಿಮೆಂಟಿದೆ ಎಂದು ಹೇಳುವುದು ಈಗ ಬೇಕಾಗಿಲ್ಲ, ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು ಒಂದು ಸೆಂಟಿಮೆಂಟಿದೆ, ಅದಕ್ಕಾಗಿಒಂದು ವಿನಾಯಿತಿ ಕೊಡಬೇಕೆಂದು ಹೇಳಿದ್ದಾರೆ. ಆ ರೀತಿ ಒಂದು ವಿನಾಯಿತಿ ಕೊಡಬೇಕೆಂಬ ಒಂದು ಸೆಂಟಿಮೆಂಟ್ ಕೆಲವರಿಗೆ ಇದ್ದರೆ, ಅದೇ ಸೆಂಟಿಮೆಂಟ್ ರೈತರ ವಿಚಾರದಲ್ಲೂ ಇಟ್ಟುಕೊಂಡು ಸರ್ಕಾರಿ ಗ್ರಾಮಗಳಲ್ಲಿರತಕ್ಕ ರೈತರ ಅನುಕೂಲತೆಗಳ ಮಟ್ಟಕ್ಕೆ ಅಲ್ಲಿಯ ಇನಾಂ ಗ್ರಾಮಗಳ ರೈತರ ಅನುಕೂಲತೆಗಳನ್ನೂ ಹೆಚ್ಚಿಸುವ ವಿಷಯದಲ್ಲೂ ಆ consideration ತೋರಿಸಬೇಕೆಂದು ಕೇಳಿದರೆ ತಾವು ಏಕೆ ಅದೇ ಸೆಂಟಿಮೆಂಟಿನಿಂದ ಇದನ್ನು ತಾವು consider ಮಾಡುವುದಿಲ್ಲ? ಅಂಥಾ ಒಂದು ಸೆಂಟಿಮೆಂಟ್ ಕೇವಲ ಒಂದು ವರ್ಗದ ವಿಚಾರದಲ್ಲೇ ಏತಕ್ಕಿರಬೇಕು? ಹಿಂದೆ ಏನೋ ಕೆಲಕೆಲವು ಕಾರಣಾಂತರಗಳಿಂದ ಹಿಂದಿನ ರಾಜಮಹಾರಾಜರುಗಳು ಅವರಿಗೆ ಈ ಇನಾಂಗಳನ್ನು ಕೊಟ್ಟುಬಿಟ್ಟರು. ಆದರೆ ಈಗಿನ ಸನ್ನಿವೇಶದಲ್ಲಿ ನೋಡುವುದಾದರೆ ಅಂಥಾ ಮಠಗಳಲ್ಲಿ ಆ ಯಾವ ಒಂದು ಸೆಂಟಿಮೆಂಟ್ ಅವರಿಗೆ ಇರಬೇಕೋ ಅದು ಇಲ್ಲದಂಥ ಗುರುಗಳೂ ಅಲ್ಲಿ ಈಗ ಸೇರಿದ್ದಾರೆ. ಹೀಗೆ ಏನೊಂದು ಸೆಂಟಿಮೆಂಟ್ ಇರಬೇಕೋ, ಅಂಥಾ ಒಂದು ಸರಿಯಾದ ಸೆಂಟಿಮೆಂಟೇ ಇಲ್ಲದ ಗುರುಗಳಿರುವಾಗ,.........

ಅಧ್ಯಕ್ಷರು.—'ಇಲ್ಲ' ಎಂದು ಹೇಗೆ ಹೇಳುವುದಕ್ಕಾಗುತ್ತದೆ?

Sri M. N. JOIS.—ಸ್ವಾಮಿ, ನಾನೊಂದು ಕ್ರಿಯಾಲೋಪವನ್ನು ಎತ್ತಬೇಕಾಗಿದೆ. 'ಸೆಂಟಿಮೆಂಟಿಲ್ಲದ' ಗುರುಗಳಿದ್ದಾರೆ ಎಂದು ಅವರು ಹೇಳುತ್ತಿದ್ದಾರೆ. ಆದರೆ ಈಗ ನಮ್ಮ ಮುಂದೆ ಬಂದಿರತಕ್ಕ ವಿಚಾರ ಜಹಗೀರು ಜೋಡಿಗಳಿಗೆ ಸಂಬಂಧಪಟ್ಟಿದ್ದು. ಈಗ ಮಾತನಾಡುತ್ತಿರುವ ಮಾನ್ಯ ಸದಸ್ಯರು ಮಾಡುತ್ತಿರುವ ವಾದ it is very much out of place. I beg to bring this to the notice of the Hon'ble Speaker.

ಶ್ರೀ ಎ. ಭೀಮಪ್ಪನಾಯಕರು.—ಹೋಗಲಿ, ಆ ಬಗ್ಗೆ I stand corrected. ಆದರೆ ಇಂಥಾ ಒಂದು ಸೆಂಟಿಮೆಂಟನ್ನು ಹೊರಪಡಿಸತಕ್ಕ ಜನರು ಎರಡು ಕಡೆಗಳಲ್ಲೂ ಇದ್ದಾರೆ. ಜೋಡಿ, ಜಹಗೀರುಗಳ ಬಗ್ಗೆ ಏನೊಂದು ಸೆಂಟಿಮೆಂಟನ್ನು ಕೆಲವರು ಹೊರಗೆಡುವುತ್ತಿದ್ದರೋ, ಅದೇ ರೀತಿಯಾಗಿ ಗ್ರಾಮಗಳಲ್ಲಿರತಕ್ಕ ರೈತರ ಪರವಾಗಿಯೂ ಸಹ ಅವರ ಜೀವನದ ಮಟ್ಟ ಸರಿಯಾಗಿಲ್ಲ. ಅವರಿಗೆ ಒಂದು ಸುಖಮಯವಾದ ಜೀವನ ನಡೆಸಲು ಅವರಿಗೆ ಸಾಮರ್ಥ್ಯವಿಲ್ಲ. ಸರ್ಕಾರಿ ಗ್ರಾಮಗಳಲ್ಲಿರತಕ್ಕ ರೈತನ ಸ್ಥಿತಿಗತಿಗಳಿಗನುಗುಣವಾಗಿ ಇವರ ಸ್ಥಿತಿಗತಿಗಳೂ ಇರಬೇಕಾದ್ದು ನ್ಯಾಯವಾಗಿದೆ ಎಂದು ಹೇಳುವಂಥ ಸೆಂಟಿಮೆಂಟಿರತಕ್ಕ ಜನರೂ ಇದ್ದಾರೆ. ಆದರೆ ಹೀಗೆ ಈ ಉಭಯ ಪಾರ್ಟಿಗಳ ಬಗ್ಗೆ ಸೆಂಟಿಮೆಂಟನ್ನು ಹೊರಗೆಡುವುವಂಥಾ ಜನರು ಜೋಡಿ, ಇನಾಂಗಳ ಬಗ್ಗೆ ಎಷ್ಟು ಜನರಿದ್ದಾರೆ, ರೈತರ ಕಷ್ಟ ನಿಷ್ಠೂರಗಳ ಪರವಾಗಿ ಸೆಂಟಿಮೆಂಟ್ ಹೊರಗೆಡವತಕ್ಕ ಜನರು ಎಷ್ಟಿದ್ದಾರೆ ಬುದನ್ನು ನೋಡೋಣ. ಈ ಎರಡೂ ಪಕ್ಷಗಳನ್ನು ತುಲನಮಾಡಿ ಯಾರ್ಯಾರಿಗೆ ಎಷ್ಟೆಷ್ಟು ಸೌಕರ್ಯಗಳನ್ನು ನೀಡಬೇಕೋ ಅಷ್ಟನ್ನು ನೀಡಲೇಬೇಕು. ಆದರೆ ಶ್ರೀ ಚಂದ್ರಶೇಖರಯ್ಯನವರು ಹೇಳಿರತಕ್ಕದ್ದಕ್ಕಿಂತ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳಬೇಕೆಂದರೆ ಇಂದು ಯಾವ ಒಂದು ಸಂಸ್ಥೆಯು ಹಿಂದೂಧರ್ಮದ ಪರಿಪಾಲನೆಗೋಸ್ಕರವಾಗಿ ಒಂದು ವಿದ್ಯಾಪೀಠವನ್ನು ಧರ್ಮ ಆಚರಣೆಯನ್ನು ತರತಕ್ಕ ಬಗ್ಗೆ ಇಟ್ಟುಕೊಂಡಿದ್ದ ಪಕ್ಷದಲ್ಲಿ ಅಂಥಾ ಪೀಠಕ್ಕೆ ಆಗ ನಾವು ಈಗ ಕೊಡುತ್ತಿರುವ ಪರಿಹಾರಕ್ಕೆ ದ್ವಿಗುಣವಾಗಿ ಅಥವಾ ಇನ್ನೂ ತ್ರಿಗುಣವಾಗಿ ಕೊಡಬಹುದೆಂದು ಈ ಸಭೆಯಲ್ಲೇ ತೀರ್ಮಾನ ಮಾಡಲು ನಾನು ಮುಂದೆ ಬರತಕ್ಕವನಾಗಿದ್ದೆ. ಆದರೆ ಅಂಥಾದ್ದು ಯಾವುದೂ ಇಲ್ಲ. ಆದರೆ ಇಷ್ಟು ದೂರ ಹೋಗಬೇಕಾಗಿಲ್ಲ.

Sri M. N. JOIS.—Question!

ಶ್ರೀ ಎ. ಭೀಮಪ್ಪನಾಯಕರು.—ಸೆಲೆಕ್ಟ್ ಸಮಿತಿಯವರು ಏನೊಂದು ಅನುಕೂಲವನ್ನು ಈ ಬಗ್ಗೆ ಕಲ್ಪಿಸಿಕೊಟ್ಟಿರುತ್ತಾರೋ ಅದನ್ನು ಕೆಲವರು ಸರಿಯಾಗಿ ಅರ್ಥಮಾಡಿಕೊಂಡಿಲ್ಲ. ಅವರು ಅವರಿಗೆ ಒಂದು ನಿರ್ದಿಷ್ಟವಾದ ಆದಾಯ ಬರುವಹಾಗೆ ಅನುಕೂಲಮಾಡಿಕೊಟ್ಟಿದ್ದಾರೆ. ಅವರು ಮಾಡಿಕೊಟ್ಟಿರತಕ್ಕ ಅನುಕೂಲದಿಂದ ಅವರಿಗೆ ಬರತಕ್ಕ ನಿಧಿಯನ್ನು ಅವರು ಒಂದು ರಿಸರ್ವ್ ಬ್ಯಾಂಕಿನಲ್ಲಿಟ್ಟು ಬಡ್ಡಿ ಪಡೆದುಕೊಂಡು ಅದರಿಂದ ಹೆಚ್ಚಿನ ಅನುಕೂಲ ಹೊಂದಲು ಅವಕಾಶವಿದೆ. ಅವರಿಗೆ ಬರತಕ್ಕ ಲಕ್ಷಾಂತರ ರೂಪಾಯಿಗಳ ಪರಿಹಾರ ದ್ರವ್ಯದಿಂದ ಸೇಕಡ 2ರಷ್ಟು ಬಡ್ಡಿಗಿಟ್ಟರೂ ಅದರಿಂದ ಸಾವಿರಾರು ರೂಪಾಯಿಗಳ ವರಮಾನ ಈಗಿಗಿಂತ ಹೆಚ್ಚಾಗಿ ದೊರೆಯುತ್ತದೆ. ಅಂಥಾ ಒಂದು ಅನುಕೂಲವಾಗಲಿ ಎಂದು ಸೆಲೆಕ್ಟ್ ಸಮಿತಿಯವರು ಇದನ್ನು ಮಾಡಿದ್ದಾರೆ.

ಇದರಿಂದ ಮತ್ತೊಂದು ಅನುಕೂಲವೇನೆಂದರೆ—ಈ ದಿವಸ ಇನಾಂದಾರರು ತಮಗೆ ಬರತಕ್ಕ ಹಣವನ್ನು ಯಾವುದಾದರೂ ಒಂದು ಬ್ಯಾಂಕಿನಲ್ಲಿಟ್ಟು ಅದರಿಂದ ಬಡ್ಡಿ ಪ್ರಯೋಜನ ಪಡೆಯುತ್ತಿದ್ದಾಗ ಅಂಥಾ ಅಲ್ಲೋಲಕಲ್ಲೋಲಗಳೇನಾದರೂ ಆಗಿ ಸರ್ಕಾರವೇ ಬದಲಾಗಿ ಮತ್ತೊಂದು ಸರ್ಕಾರ ಬಂದರೂ ಅವರ ಈ ಬ್ಯಾಂಕಿನಲ್ಲಿರತಕ್ಕ ಹಣಕ್ಕೆ ಏನೂ ಧಕ್ಕೆ ಇಲ್ಲ, ಆದರೆ ಅಂಥ ಒಂದು ಅನುಕೂಲ ಈ ಜೋಡಿ, ಇನಾಂಗಳನ್ನು ಇಟ್ಟುಕೊಂಡಿದ್ದರೆ ಇರಲಾರದು. ಮುಂದೆ ಕಾಲಾನುಕ್ರಮದಲ್ಲಿ ಅವು ಹೋಗಿಬಿಟ್ಟು ಅವುಗಳಿಂದ ಬರುವಂಥ ಅನುಕೂಲ ಸಹ ಇವರಿಗೆ ಆಗ ದೊರೆಯಲಾರದು. ಅಂಥ ಅನುಕೂಲಗಳನ್ನು ಇನಾಂದಾರರಿಗೆ ಇಂದು ಸೆಲೆಕ್ಟ್ ಸಮಿತಿಯವರು ಮಾಡಿಕೊಟ್ಟಿದ್ದಾರೆ.

ಹೀಗೆ ಇರತಕ್ಕ ಅನುಕೂಲವನ್ನು ಇಂದು ಇನಾಂದಾರರು ಕಳೆದುಕೊಂಡುಬಿಟ್ಟರೆ ನಾಳೆ ಬೇರೊಂದು ಸರ್ಕಾರ ಬಂದು ಈ ಭೂಮಿ ಕಾಣಿಗಳನ್ನೆಲ್ಲಾ ಕಿತ್ತುಕೊಂಡರೆ ಆಗ ಯಾರೇನುಮಾಡುತ್ತಾರೆ? ಈ ದಿವಸ ಕೈಗೆ ಬಂದದ್ದನ್ನು ಏತಕ್ಕೆ ಬಿಡುತ್ತೀರಿ ಎಂದು ಕೇಳುತ್ತಿದ್ದೇನೆಯೇ ಹೊರತು, ನನಗೆ ಆ ಪೀಠಗಳಲ್ಲಿ ಭಕ್ತಿ

(ಶ್ರೀ ಎ. ಭೀಮಪ್ಪನಾಯಕರು.)

ಇಲ್ಲವೆಂದಲ್ಲ; ನನಗೂ ಭಕ್ತಿ ಇದೆ; ಅಂಥ ವಿಶ್ವಾಸ ಇರುವುದರಿಂದಲೇ ನಾನು ಇದನ್ನು ತಮಗೆ ತಿಳಿಸುತ್ತಿರುವುದು. ಬರಿ ವಾದಿಸಿದ ಮಾತ್ರಕ್ಕೇ ಆ ಮಠಗಳಿಗೆ ಒಂದು ಉಪಕಾರ ಮಾಡಿದಂತಾಗಲಿಲ್ಲ. ಆದ್ದರಿಂದ ಇದರ ಪರವಾಗಿ ಮಾತನಾಡತಕ್ಕವರೆಲ್ಲ ಇದನ್ನು ಆ ಇನಾಂದಾರರ ಹಕ್ಕುಭಾಧ್ಯತೆಗಳಿಗೆ ವಿರೋಧವಾಗಿ ವರ್ತಿಸುತ್ತಾರೆಂದು ಯಾರೂ ಭಾವಿಸಬಾರದು.

Sri M. N. JOIS.—Question.

ಶ್ರೀ ಎ. ಭೀಮಪ್ಪನಾಯಕರು.—ಹಿಂದೆ ದೇಶದ ಹಿತಕ್ಕಾಗಿ, ಹಿಂದೂಧರ್ಮದ ಪ್ರಚಾರಕ್ಕಾಗಿ ಏನೊಂದು ಘನೋದ್ದೇಶವಿಟ್ಟುಕೊಂಡು ಈ ಸಂಸ್ಥೆಯನ್ನು ಸ್ಥಾಪನೆ ಮಾಡಿದರೋ ಈ ದಿವಸ ಆ ಉದ್ದೇಶ ಸಫಲವಾಗುತ್ತಿಲ್ಲ ಎಂದು ನನಗನಿಸುತ್ತದೆ. ನಮ್ಮ ಮಿತ್ರರು ಕೆಲವರು ಒಂದು ಸೆಂಟಿಮೆಂಟ್ ಇಟ್ಟುಕೊಂಡು ಜಹಗೀರಿ ಎಂಬ ಹೆಸರು ಇರಬೇಕು ಎಂದು ಹೇಳುವವರು ಅವ ರಕ್ಕೆ ದ್ರೋಹಮಾಡಿದಂತಾಗುತ್ತದೆ. ಸೆಲೆಕ್ಟ್ ಸಮಿತಿಯಲ್ಲಿ ಪರ್ಯಾಲೋಚನೆ ಮಾಡಿ 16ಆಣೆ ಭಾಗವನ್ನೂ ಈ ಮಠಕ್ಕೇ ಬಿಟ್ಟಿದ್ದಾರೆ. ಅದನ್ನು ನಾವು ಸ್ವಾಗತಮಾಡೋಣ ಎಂದು ಮಾನ್ಯ ಮಿತ್ರರು ಹೇಳಿದರು. ಆದ್ದರಿಂದ ಈ ವಿಷಯದಲ್ಲಿ ಹೆಚ್ಚಾಗಿ ಮಾತನಾಡಲು ಇಷ್ಟವಿಲ್ಲ.

ಇನ್ನು ಬಾಕಿ ಇನಾಂತಿ ವಿಚಾರ. ಸಂಸ್ಥೆಯವರಿಗೆ ಸೇರಿದ ಮತ್ತು ಇತರ ಇನಾಮುಗಳು ಸಂಪೂರ್ಣವಾಗಿ ಹೋಗಬೇಕು ಎಂಬುದು ಈ ಬಿಲ್ಲಿನ ಉದ್ದೇಶ. ಆದರೆ ನಾವು ಅದಕ್ಕೆ ಪರಿಹಾರ ದ್ರವ್ಯ ಕೊಡ ವವರೆಗೆ ಸಂಪೂರ್ಣವಾಗಿ ಹೋಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ಇದಕ್ಕೆ ತಕ್ಕಷ್ಟು ರೂಪಾಯಿಗಳನ್ನು ಸರ್ಕಾರ ಒದಗಿಸಿದೆಯೋ ಇಲ್ಲವೋ ತಿಳಿಯದು. ಈ ಬಿಲ್ಲು ಜಾರಿಗೆ ಬಂದ ಮೇಲೆ ಹಣ ಕೊಡುವುದಕ್ಕೆ ಶಕ್ತಿಯಿಲ್ಲದಿದ್ದರೆ ಸರ್ಕಾರ ಈ ಸಮಸ್ಯೆಯನ್ನು ಹೇಗೆ ಮಾಡುತ್ತದೆ ಎಂಬುದು ಅನೇಕರಿಗೆ ಅರ್ಥವಾಗಿಲ್ಲ. ಹಾಗಿರುವಾಗ ಬರೀ ಒಂದು ಬಿಲ್ಲನ್ನು ಮಾಡಿ ಜಾರಿಗೆ ಕೊಟ್ಟಾಗ ನಮ್ಮ ಹಣ ಕೊಡಿ, ಇನಾಂತಿ ತೆಗೆದುಕೊಳ್ಳಿ ಎಂದು ಹೇಳಿದಾಗ ಏನು ಕೊಡುತ್ತೀರಿ? ಕೊಡುವುದಕ್ಕೆ ಅನುಕೂಲತೆಯನ್ನು ಕಲ್ಪಿಸಿದ್ದೀರಾ? ಎಲ್ಲಿಂದ ಹಣ ತಂದೀರಿ ಎಂದು ಪ್ರಶ್ನೆ ಮಾಡಬೇಕೆಂದಿದ್ದೆ. ಅದಕ್ಕೆ ಮಾನ್ಯ ರೆವಿನ್ಯೂ ಸಚಿವರು ಜವಾಬು ಹೇಳುತ್ತಾರೆಂದು ನಂಬಿದ್ದೇನೆ. ಈಗ ನಾನು ಅವರು ಹೇಳಿದ್ದನ್ನು ಕೇಳಿ ಅವರಿಗೆ ಕೈಲಾದ ಬೆಂಬಲ ಕೊಡಬೇಕೆಂದಿದ್ದೇನೆ. ಈಗ ಮದ್ರಾಸಿನಲ್ಲಿ ಕಂತುಗಳ ಪ್ರಕಾರ ಕೊಟ್ಟು ತೀರಿಸಬೇಕೆಂದು ಮಾಡಿದ್ದಾರೆ ಇಲ್ಲಿ ಹಾಗೆ ಮಾಡಿದೆಯೇ ಅಥವಾ ಬೇರೆ ಏನಾದರೂ ಏರ್ಪಾಡಿದೆಯೆ? ಹಾಗೆ ಮಾಡುವುದಕ್ಕಾಗದಿದ್ದರೆ ರಿಸರ್ವ್ ಬ್ಯಾಂಕಿನಿಂದ ತಂದು ತೀರಿಸಿ.

ಶ್ರೀ ಜಿ. ಎ. ಆಚಾರ್ಯರವರು.—ಕೊಡುವವರು ಯಾರು?

ಶ್ರೀ ಎ. ಭೀಮಪ್ಪನಾಯಕರು.—ಘನ ಸರ್ಕಾರದವರಿಗೆ ವ್ಯಕ್ತಿತ್ವವಿದ್ದರೆ ಯಾರು ಬೇಕಾದರೂ ಕೊಡುತ್ತಾರೆ. ಈ ದಿವಸ ಜಮೀನನ್ನು ತೆಗೆದುಕೊಳ್ಳುವಾಗ ಸಂಪೂರ್ಣವಾಗಿ ಯಾರಿಗೆ ಹಕ್ಕನ್ನು ಕೊಡುತ್ತೇವೋ ಅವರಿಂದ ಒಂದಲ್ಲ ಒಂದು ವಿಧದಲ್ಲಿ ಸಹಾಯ ಪಡೆಯುತ್ತೇವೆ. ಇದು ನನ್ನ ಸಲಹೆ ಇದಕ್ಕಿಂತ ಒಳ್ಳೆಯ ಸಲಹೆಯಿದ್ದರೆ ಸ್ವಾಗತ ಮಾಡುತ್ತೇನೆ.

ಇನ್ನೊಂದು ವಿಷಯ, ಇನಾಂ ಗ್ರಾಮಗಳನ್ನು ನಮ್ಮ ವಶಕ್ಕೆ ತೆಗೆದುಕೊಳ್ಳುವಾಗ ಬಹಳ ಜವಾಬ್ದಾರಿಯನ್ನು ವಹಿಸುತ್ತಿದ್ದೇವೆ. ಅಲ್ಲಿ ರಸ್ತೆಯಿಲ್ಲ, ಪಟೇಲ ಶ್ಯಾನುಭೋಗರಿಲ್ಲ, ಕೆರೆಕಟ್ಟೆಯಿಲ್ಲ.

ಅಧ್ಯಕ್ಷರು.—ಅಲ್ಲಿ ಪಟೇಲ ಶ್ಯಾನುಭೋಗರಿಲ್ಲ ಎಂದು ಯಾರು ಹೇಳಿದರು.

ಶ್ರೀ ಎ. ಭೀಮಪ್ಪನಾಯಕರು.—ಅಲ್ಲಿ ಅವರೇ ಇಟ್ಟುಕೊಂಡಿದ್ದಾರೆ.

I could tell you Sir that they are having their own Patels and Shanbogues. These Patels and Shanbogues are paid by them.

Mr. SPEAKER.—Yes. But they send the accounts to the Government.

Sri M. N. JOIS.—What he means is that they are not appointed by the Deputy Commissioners or the Government like those in Government villages. They are appointed by the Jaghirdars and Inamdars.

ಶ್ರೀ ಎ. ಭೀಮಪ್ಪನಾಯಕರು.—ಕೆಲವು ಹಳ್ಳಿಗಳಲ್ಲಿ ಇನಾಂದಾರನೇ ಪಟೇಲ ಶ್ಯಾನುಭೋಗ, ಇನಾಂದಾರನೇ ತಳವಾರ, ತೋಟಿ ಎಲ್ಲಾ ಆಗಿದ್ದಾನೆ, ಅದಿರಲಿ ಬಾವಿ, ರಸ್ತೆ ಮುಂತಾದುವುಗಳನ್ನು ಇನಾಂ ಗ್ರಾಮದಲ್ಲಿ ತಕ್ಷಣ ಮಾಡಿಕೊಡಬೇಕು. ಅದಕ್ಕೆ ಪ್ರಾವಿಷನ್ ಮಾಡಬೇಕಾದ್ದು ಅವಶ್ಯಕ.

Sri G. A. ACHARYA.—Are you warning the Government?

ಶ್ರೀ ಎ. ಭೀಮಪ್ಪನಾಯಕರು.—Definitely. We must now alone tell them the implications ಇದು ಸದನ್ಯರಾಗಿ ನಾವು ಮಾಡಬೇಕಾದ ಕರ್ತವ್ಯ ಇನಾಂ ಗ್ರಾಮ ನಮ್ಮ ವಶಕ್ಕೆ ತೆಗೆದುಕೊಂಡರೆ ಏನು ಮಾಡಬೇಕು, ಜವಾಬ್ದಾರಿ ಎಷ್ಟು, ಹಣ ಕೊಡುವುದು ಹೇಗೆ, ತೆಗೆದುಕೊಂಡ ಮೇಲೆ ಹಂಚುವುದು ಹೇಗೆ ಎಂಬುದನ್ನೆಲ್ಲಾ ಯೋಚನೆಮಾಡಬೇಕು. ಪರಿಹಾರ ಕೊಡುವಾಗ ಅನೇಕ ವಿಷಯಗಳನ್ನು ಯೋಚನೆ ಮಾಡಬೇಕೆಂದು ಶ್ರೀ ಚನ್ನಬಸಪ್ಪನವರು ಹೇಳಿರುವುದನ್ನು ಸ್ವಾಗತ ಮಾಡುತ್ತೇನೆ. ಎಲ್ಲಿ ಯಾವ ನೀತಿಯನ್ನನುಸರಿಸಬೇಕು, ಎಲ್ಲಾ ಕಡೆಯೂ ಒಂದೇ ರೀತಿ ಮಾಡಿದರೆ ಅನುಕೂಲವೆ ಅಥವಾ ಅಲ್ಲವೆ, ಇನಾಂ ಗ್ರಾಮ ಯಾರಾದರೂ ಕೊಂಡಿದ್ದರೆ ಯಾವ ಬೆಲೆಗೆ ಕೊಂಡ, ಖರ್ಚೇನು ಮಾಡಿದ್ದಾನೆ, ಅನುಕೂಲತೆಯೇನಿದೆ ಎಂಬ ಎಲ್ಲಾ ವಿಚಾರಗಳನ್ನು ನೋಡಬೇಕು. ಕೆಲವು ವೃತ್ತಿದಾರರೆಂಬುವರು ಬೇರೆ ಇದ್ದಾರೆ ಅವರಿಗೆಷ್ಟು ಉಳಿದಿದೆಯೆಂಬುದನ್ನು ನೋಡುವುದಾದರೆ ಹತ್ತು ಗುಂಟೆ ಇರುವವರೂ ಇದ್ದಾರೆ. ಅಣ್ಣತಮ್ಮಂದಿರು ಕೆಲವರು ಒಂದು ಎಕರೆಯಲ್ಲಿ ನಾಲ್ಕು ಭಾಗ ಮಾಡಿಕೊಂಡಿದ್ದಾರೆ. ಅವುಗಳನ್ನು ಇನಾಂ ಎಂದು ಕರೆಯುತ್ತಾರೆ. ಅದು ಕೇವಲ ಹೆಸರನ್ನುಳಿಸಿಕೊಂಡಿರುವುದೆ ವಿನಾ ಮತ್ತೇನೂ ಇಲ್ಲ ಅನುಕೂಲತೆಯಲ್ಲದೆ ಅದರಿಂದ ಭಾಧಕ, ದಬ್ಬಾಳಿಕೆಯಿದೆ ಎಂದು ಇರುವವರು ಅನೇಕರು ರಾಜೀನಾಮೆ ಕೊಡಲು ಸಿದ್ಧವಾಗಿದ್ದಾರೆ. ಅಂಥ ಸಣ್ಣ ಇನಾಮುಗಳಿಗೆ ಸಾಧ್ಯವಾದ ಮಟ್ಟಿಗೆ ಹಕ್ಕನ್ನುಳಿಸಿಕೊಡುವುದು ಒಳ್ಳೆಯದು ಅನಿಸುತ್ತದೆ. 8 ರಿಂದ 15 ಎಕರೆಯವರೆಗೆ ಇರುವವರು ಇದ್ದಾರೆ. ಆದ್ದರಿಂದ 15 ಎಕರೆಯೊಳಗೆ ಇಟ್ಟುಕೊಂಡಿರುವವರ

ಜಮೀನನ್ನು ಅವರಿಗೆ ಬಿಡುವುದು ಒಳ್ಳೆಯದೆಂದು ತೋರುತ್ತದೆ.

Sri M. N. JOIS.—So the name of the inam should remain?

ಶ್ರೀ ಎ. ಭೀಮಪ್ಪನಾಯಕರು.—No. ಜಮೀನಿನ ವಿಚಾರ ಮಾತ್ರ ಹೇಳಿರುವುದು. ಖಾಸ್ ಜಮೀನಿರುವುದಕ್ಕೆ ನಾನು ಹೇಳಿದ್ದು ಅನ್ವಯವಾಗುತ್ತದೆ. ಇನಾಂತಿ ಎಂಬ ಶಬ್ದ ಈ ಸಭೆಗೇ ಮಾಗಿದುಹೋಯಿತು, ಏಕೆಂದರೆ ಹಿಂದೆ ಬಡವರಿಗೆ ಇನಾಂ ಕೊಡುವವರಿದ್ದರು. ಈಗ ಕೊಡುವವರೂ ಇಲ್ಲ, ಬೇಡುವವರೂ ಇಲ್ಲ, ಎಲ್ಲಾ ದುಡಿಯುತ್ತಾರೆ, ಸಂಪಾದಿಸಿ ತಿನ್ನುತ್ತಾರೆ. ಶೃಂಗೇರಿ ಮಠದ ಜಹಗೀರಿನಲ್ಲಿ ರೈತರಿಗೂ ಮತ್ತು ಜಹಗೀರುದಾರರಿಗೂ ಮಧುರಬಾಂಧವ್ಯವಿದ್ದರೆ ಅದನ್ನು ಕೆಡಿಸಬೇಕಾದ್ದಿಲ್ಲ. ಇನ್‌ಫೀರಿಯರ್ ಹೋಲ್ಡರ್ ಮತ್ತು ಸುಪೀರಿಯರ್ ಹೋಲ್ಡರ್ ಎಂದು ಹೇಳುವುದು ಎಲ್ಲಾ ಕಡೆಯೂ ಇರುತ್ತದೆ. ಆ ಮಠಕ್ಕೆ ಯಾವ ಉದ್ದೇಶದಿಂದ ಜಹಗೀರಿಕೊಟ್ಟರೋ ಆ ಉದ್ದೇಶ ಈ ದಿವಸ ನೆರವೇರುತ್ತಿಲ್ಲ. ಹೆಸರು ಮಾತ್ರ ಇದೆ. ಕೆಲವು ಮಹಾರಾಜರುಗಳು ಟೈಟಲ್ ಹಾಕಿಕೊಳ್ಳುತ್ತಿದ್ದ ಹಾಗಿದೆ. ಹಿಂದೆ ನಮ್ಮ ಮಹಾರಾಜರು ಹಿಸ್ ಹೈನೆಸ್ ಎಂದು ಹೇಳಿಸಿಕೊಳ್ಳುತ್ತಿದ್ದು ಈಗ ರಾಜಪ್ರಮುಖರೆಂದು ಕರೆಸಿಕೊಳ್ಳುತ್ತಿದ್ದಾರೆ. ಹೀಗೆ ಶೃಂಗೇರಿಗೂ ಸಹ ಒಂದು ಹೆಸರು ಇರುತ್ತದೆ. ಅಲ್ಲಿಂದ ಬರುವ ಆದಾಯವನ್ನು ಪಡೆಯುತ್ತಿದ್ದಾರೆ. ಅದಕ್ಕಿರುವ ಜಹಗೀರು ಎಂಬ ಹೆಸರನ್ನು ಕಿತ್ತುಕೊಳ್ಳಲಿಲ್ಲ. ಮಠ ಎಂಬ ಹೆಸರಿನಿಂದ ಕರೆಸಿಕೊಳ್ಳುವುದಕ್ಕೆ ಅಭ್ಯಂತರವಿಲ್ಲ. ನಾವು ಜಹಗೀರಿ ಎಂಬ ಶಬ್ದದಲ್ಲಿರುವ ಇಂಪ್ಲಿಕೇಷನ್ ತೆಗೆದು ಅಲ್ಲಿರುವ ರೈತರಿಗೆ ಸರ್ಕಾರಿ ಗ್ರಾಮಗಳಲ್ಲಿರುವ ರೈತರಿಗಿರುವಂತೆ ಸರಿಸಮಾನವಾದ ಹಕ್ಕು ಬರಬೇಕು. ಅದಕ್ಕೆ ತಕ್ಕಂತೆ ಯಾವ ರೀತಿ ಮಾಡಿದರೂ ಪರವಾಗಿಲ್ಲ. ಈ ದಿವಸ ಅವರು ಸುಪೀರಿಯರ್ ಹೋಲ್ಡರ್ಸ್ ಎಂದು ಬಿಟ್ಟಿದ್ದೇವೆ. ಜಹಗೀರುದಾರರೆಂದೂ, ಮಠ ಎಂದೂ ಅವರು ಹೇಳಿಕೊಳ್ಳಲಿ.

ಹೆಸರಿನಲ್ಲಿ ಏನಿದೆ? ಗುಲಾಬಿ ಹೂವನ್ನು ಇನ್ನೊಂದು ಹೆಸರಿನಲ್ಲಿ ಕರೆದರೆ ಅದಕ್ಕೆ ಇರತಕ್ಕ ವಾಸನೆ ಹೋಗುತ್ತದೆಯೇ? ಅದಲ್ಲ. ಒಟ್ಟಿನಲ್ಲಿ ಆ ಜಹಗೀರಿ ಎಂಬ ಪದದಲ್ಲಿ ಯಾವ ಒಂದು ಸುಪೀರಿಯರ್‌ಷಿಪ್ ಇದೆ, ಯಾವ ಒಂದು ದೊರೆತನ ಇದೆ, ಆ ದೊರೆತನ ಹೋಗಬೇಕು ಎಂಬುದು ಒಂದೇ. ಈ ಎಲ್ಲಾ ದೃಷ್ಟಿಯಿಂದ ಈ ಮಸೂದೆ ಬಹಳ ಒಳ್ಳೆಯದು. ಇದರಿಂದ ಇನಾಂದಾರರಿಗೂ ಸಹ ಬಹಳ ಅನುಕೂಲ ಇದೆ. ಎಷ್ಟೋ ಜನ ಇನಾಂದಾರರಿಗೆ ಅನೇಕರು 10 ವರ್ಷ ಆದರೂ ಮೂರು ಕಾಸೂ ಗುತ್ತಿಗೆ ಹಣ ಕೊಡದೆ, ಕೇಳಿದರೆ ಹೋಗಯ್ಯ ನಿನಗೇನು ಕೊಡುವುದು ಎಂದು ಹೇಳಿರುವುದನ್ನು ಎಷ್ಟು ತೋರಿಸಲಿ? ಅಂಥ ಸನ್ನಿವೇಶ ಬೇಕಾದಷ್ಟು ಇವೆ. ಅವರಿಗೆ ಏನೂ ಬರದೆ ದಾವ ಹಾಕಿ ಡಿಕ್ರಿ ತೆಗೆದುಕೊಂಡು ವಾಪಸು ಹಿಂತಿರುಗಿರುವವರೂ ಇದ್ದಾರೆ. ಕೆಲವು ಇನಾಂದಾರರು ಇವತ್ತು ಆದಷ್ಟು ಜಾಗ್ರತೆ ಮಾರಾಟ ಮಾಡಿ ಬಂದಷ್ಟು ಹಣ ತೆಗೆದುಕೊಂಡು ಬೇರೆ ವ್ಯಾಪಾರ ಮಾಡೋಣ, ಪರಿಹಾರ ಕೊಟ್ಟರೆ ಸಾಕು ಎಂದು ಇದ್ದಾರೆ. ಇನಾಂದಾರರ ಅಸೋಸಿಯೇಷನ್‌ನವರು ಬಂದು ಬಹಳ ಸಂತೋಷ, ಇವುಗಳನ್ನು ತೆಗೆದುಕೊಂಡುಬಿಟ್ಟರೆ ಅಷ್ಯೂರ್ಡ್ ಇನ್‌ಕಂ ಕೊಟ್ಟ ಹಾಗಾಗುತ್ತದೆ, ಹಾಗಿಲ್ಲದೆ ಸುಮ್ಮನೆ ಮೀನಮೇಷ ಮಾಡಬೇಡಿ ಎಂದು ಹೇಳಿದ್ದಾರೆ. ಆ ದೃಷ್ಟಿಯಿಂದ ಈ ದಿವಸ ತೆಗೆದುಕೊಂಡಿರತಕ್ಕ ಈ ಬಿಲ್ಲನ್ನು ಈ ಸಭೆಯಲ್ಲಿ ಎಷ್ಟೇ ತೊಂದರೆ ಆಗಲಿ ಪೂರ್ತಿ ಮಾಡಬೇಕು. ಒಂದು ವೇಳೆ ತೊಂದರೆ ಇದ್ದರೆ ಯಾವುದಾದರೂ ಕ್ಲಾಸ್ ಬದಲಾವಣೆ ಮಾಡಬಹುದು. ಸರ್ವಜನರ ಹಿತದೃಷ್ಟಿಯಿಂದ ಅದು ಇನಾಂದಾರರಿಗೇ ಅನುಕೂಲವಾಗಲಿ ರೈತರಿಗೇ ಅನುಕೂಲವಾಗಲೀ ಬದಲಾವಣೆ ಮಾಡಬೇಕಾಗಿದ್ದರೆ ಮಾಡೋಣ.

ಶೃಂಗೇರಿ ವಿಚಾರದಲ್ಲಿ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಅದು ಒಂದು ದೊಡ್ಡ ಸಂಸ್ಥೆ. ದೊಡ್ಡವರಿಗೆ ಈ ಜಗತ್ತಿನಲ್ಲಿ 4 ಮೂಲ ಸ್ಥಾನ. ಭಾರತದಲ್ಲಿರುವ ಮೂಲಸ್ಥಾನ ಎನ್ನುವುದು ಶಂಕರಾಚಾರ್ಯರ ಪೀಠ.

ಶ್ರೀ ಕೆ ಪುಟ್ಟಸ್ವಾಮಿಯವರು.—ಹೆಚ್ಚಾಗಿ ಹೇಳುವುದಿಲ್ಲ ಎಂದು ಹೇಳಿದಿರಿ.

ಶ್ರೀ ಎ. ಭೀಮಪ್ಪನಾಯಕರು.—ಆಶ್ಚರ್ಯರಾಗಿ ಮಾತನಾಡುತ್ತಾ ಇದ್ದೇನೆ.

ಅಧ್ಯಕ್ಷರು.—ಅನಾವಶ್ಯಕ.

ಶ್ರೀ ಎ. ಭೀಮಪ್ಪನಾಯಕರು.—ಸತ್ಯ ಹೇಳಿದರೂ ನಿಜವಾಗಿ ಹೇಳು, ಕಹಿಯಾಗಿ ಹೇಳಬೇಡ ಎಂದು ಹೇಳುತ್ತಾರೆ. ಆದ್ದರಿಂದ ಒಟ್ಟಿನಲ್ಲಿ ಈ ಮಸೂದೆಯನ್ನು ಸುಸ್ವಾಗತಿಸುತ್ತೇನೆ.

The Hon'ble Sri H. SIDDAIYA.—With your permission, Sir, I would like to reply to-morrow.

The Hon'ble Sri H. C. DASAPPA.—The question is, we are keen on getting through the Bill to the end and say that we satisfy ourselves with making speeches and having only a general discussion reserving the consideration of the clauses for some future distant date. I think there have been very illuminating speeches and we can stop with the discussion today. Other Hon'ble Members who have not spoken will have ample opportunity to speak on the various amendments and I would only appeal to them. The Hon'ble Minister will reply to-morrow.

Sri G. A. ACHARYA.—Let there be full scope for all to give expression to their views.

The Hon'ble Sri H. C. DASAPPA.—If the Hon'ble Speaker chooses, let there be a time-limit for each speaker to-morrow.

The Hon'ble Sri H. SIDDAIYA.—The discussion on the whole must not exceed one hour.

The Hon'ble Sri H. C. DASAPPA.—Yes, one hour; I think that will be the arrangement.

Mr. SPEAKER.—Does the Hon'ble Minister say one hour?

The Hon'ble Sri H. C. DASAPPA.—That is my suggestion. If the Hon'ble Members want more time......

ಶ್ರೀ ಎಂ. ಮಾದಯ್ಯನವರು.—ಇದು ಬಹಳ ಮುಖ್ಯವಾದ ವಿಚಾರ. ಇನ್ನೂ ಅನೇಕ ಮಾನ್ಯ ಸದಸ್ಯರು ಮಾತನಾಡಬೇಕೆಂದಿದ್ದಾರೆ......

The Hon'ble Sri H. C. DASAPPA.—There are amendments.

ಶ್ರೀ ಎಂ. ಮಾದಯ್ಯನವರು.—ತಿದ್ದುಪಡಿ ಬಂದರೂ ಅದಕ್ಕೆ ಸಂಬಂಧಪಟ್ಟಂತೆ ಮಾತ್ರ ಮಾತನಾಡಬೇಕಾಗುತ್ತದೆ. ಆದ್ದರಿಂದ ಸಾಧ್ಯವಾದಮಟ್ಟಿಗೂ ಎಲ್ಲರಿಗೂ ಅವಕಾಶ ಕೊಡಬೇಕು.

(Several Hon'ble Members wanted opportunity to speak.)

The Hon'ble Sri H. C. DASAPPA.—It looks as though several Members want to speak. We can proceed with the Bill till the lunch hour to-morrow; that is the utmost.

Sri M. N. JOIS.—If the time is limited up to lunch interval, where is the time for all of us to speak on this Bill? The business for the day has been changed......

The Hon'ble Sri H. C. DASAPPA.—Changed to the advantage of the House.

Sri M. N. JOIS.—To the advantage of the Government and of certain members who spoke today. This is a very important measure and as Members of this House have said, the matter was lying over for the past so many years and has come up now for consideration. Therefore we have to consider it in all aspects. Whatever time we spend on the general discussion will be saved at the time of taking up amendments. I therefore submit that ample opportunity should be given for general discussion and as far as amendments are concerned if time is limited for every speaker there will be no harm.

Mr. SPEAKER.—If the arguments are repeated I will have to cut short the speeches.

Sri M. N. JOIS.—The Chair is always at liberty to do so. We will obey the Chair. The question of limiting time till lunch for general discussion, or cutting short the time for a speaker is not quite desirable, I should say.

ಶ್ರೀ ಎಂ. ಎಲ್. ನಂಜರಾಜ ಅರಸಿನವರು (ಮೈಸೂರು ಜಿಲ್ಲೆ).—ಸ್ವಾಮಿ, ಇದು ಒಳ್ಳೆಯದೋ ಕೆಟ್ಟದ್ದೋ ಅಂತೂ ಈ ಒಂದು ಪದ್ಧತಿ ನಮ್ಮ ದೇಶದಲ್ಲಿ ಬಹಳ ವರ್ಷಗಳಿಂದ ಬಂದಿದೆ. ಆದ್ದರಿಂದ ಕೆಲವರು ಮಾತನಾಡಿದಷ್ಟಕ್ಕೇ ಆಗಿಹೋಯಿತು ಎಂದಲ್ಲ. ಇಲ್ಲಿರತಕ್ಕ ಸದಸ್ಯರು ಸಾಮಾನ್ಯವಾಗಿ ಸಂಸ್ಥಾನದ ಎಲ್ಲಾ ಕಡೆಯಿಂದಲೂ ಬಂದಿದ್ದಾರೆ. ಅಲ್ಲಿನ ಜನರ ಪ್ರತಿನಿಧಿಗಳಾಗಿದ್ದಾರೆ. ಆದ್ದರಿಂದ ಎಲ್ಲಾ ಪಕ್ಷಗಳಲ್ಲೂ ಇರತಕ್ಕ ಅಭಿಪ್ರಾಯವನ್ನು ಈ ಸಭೆಯ ಮುಂದೆ ಇಟ್ಟು ಹೇಳಬೇಕಾಗಿದೆ. ಹೀಗೆ ಜನಾಭಿಪ್ರಾಯವನ್ನು ತಿಳಿಸುವುದಕ್ಕೆ ಅವಕಾಶವಿರಬೇಕು. ಈ ಸಭೆಯಲ್ಲಿ 75 ಜನ ಪ್ರತಿನಿಧಿಗಳು ಇದ್ದಾರೆ. ಅವರ ಅಭಿಪ್ರಾಯವನ್ನು ತಿದ್ದುಪಡಿ ಬಂದಾಗ ತಿಳಿಸಬಹುದು ಎಂದು ಹೇಳಿದರು. ತಿದ್ದುಪಡಿ ಬಂದಾಗ ಏನು ಹೇಳುತ್ತೀರಿ? ತಿದ್ದುಪಡಿಗೆ ಸಂಬಂಧಪಟ್ಟ ಹಾಗೆ ಮಾತನಾಡಬೇಕೆ ಹೊರತು, ಬಾಕಿ ವಿಷಯಗಳನ್ನು ಮಾತನಾಡಕೂಡದು ಎಂದರೆ ಮಾನ್ಯ ಸದಸ್ಯರು ಆ ರೀತಿ ನಡೆದುಕೊಳ್ಳಬೇಕು. ಈಗಾಗಲೇ ಕೆಲವು ಸದಸ್ಯರು ಸೆಂಟಿಮೆಂಟು ಇತ್ಯಾದಿಯಾಗಿ ಅನೇಕ ವಿಚಾರಗಳಲ್ಲಿ ಮಾತನಾಡಿರುವುದರಿಂದ ಅದಕ್ಕೆ ಸರಿಯಾದ ಉತ್ತರ ಕೊಡಬೇಕಾಗುತ್ತದೆ. ಆದ್ದರಿಂದ ಇದರ ಸಂಪೂರ್ಣ ಚರ್ಚೆಗೆ ಅವಕಾಶ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ANNOUNCEMENT OF THE RESULT OF ELECTION TO THE BOARD OF INDUSTRIES.

Mr. SPEAKER (The Hon'ble Sri V. Venkatappa).—As the number of candidates that stood for election to the Board of Industries is equal to the number to be elected, I declare the following candidates as elected to the Board of Industries:

1. Sri M. Govinda Reddy.
2. Sri G. A. Acharya.
3. Sri L. Siddappa.

The House will now adjourn and meet to-morrow at One of the Clock.

The Assembly adjourned at Six of the Clock to meet again at One of the Clock on Thursday, 8th November 1951.

WD 1046—GPB—500—30-4-52.

LEGISLATIVE ASSEMBLY.

FOURTEENTH DAY.

Thursday, 8th November 1951.

The Legislative Assembly met in the Assembly Hall, Old Public Offices, Bangalore, at Nine Minutes past One of the Clock.

Mr. Speaker (The Hon'ble Sri V. Venkatappa) in the Chair.

QUESTIONS AND ANSWERS.

Mr. SPEAKER (The Hon'ble Sri V. Venkatappa).—Questions.

Irrigation Works proposed to be taken up during current year in Kankanhalli Taluk.

Q.—51 Sri S. KARIAPPA (Bangalore District—General).—

Will the Government be pleased to state :—

(*a*) the names of irrigation works proposed to be taken up during the current year in Kankanhally Taluk ;

(*b*) the estimated cost of each of these works ?

A.—The Hon'ble Sri T. MARIAPPA (Home Minister).—

(*a*) and (*b*)

Irrigation works proposed to be taken up during the current year with their estimated cost in Kankanbally Taluk.

Sl. No.	Name of work	Estimated cost	Remarks
		Rs.	
1	Construction of an anicut across Suvarnamukhi river ...	1,65,000	Tenders called for.
2	Constructing a pick-up across Bundehalla, Thotahally ...	9,100	Work in progress.
3	Constructing a pick-up across halla near Chikanahally Jaladabhavi.	3,960	Do
4	Constructing a pick-up across halla near Keralasandra ...	4,000	Do
5	Constructing a pick-up across small halla near Shivananally	1,400	Sanctioned.
6	Constructing a pick-up across Hosadurga Kapiniahnakere ...	8,500	Not yet sanctioned
7	Restoring Sulekere tank, Uyyamballi Hobli, Kankanhalli Taluk.	7,600	Not yet sanctioned
8	Restoring Gabbadi Gangannakere	5,000	Not yet sanctioned
9	Restoring breached Atur tank	10,000	Not yet sanctioned
10	Restoring Bannimakudalu Oogarakere	9,500	Not yet sanctioned
11	Restoring Rayasandra Kote Hosahalli tank.	17,400	Not yet sanctioned
12	Restoring Achalu Rayanakere	3,000	Not yet sanctioned
13	Restoring Thippaiahnakere	15,190	Not yet sanctioned
14	Extending Channels of Kanbal, Hosakote	2,600	Under progress.
15	Extending right bank Channel of Alahalli tank	3,600	Do
16	Improvement to Maralavadi tank and channels	10,000	Do
17	Repairing Keralasandra Urumundinakere	3,100	Do
18	Repairing leaky sluice of Geralapura tank	1,400	Do
19	Constructing a sluice for Kamegowdanakere of Bolamallap-pandoddi.	900	Do
20	Improvements of Harobele Padrikere	950	Do
21	Urgent repairs to the leaky Kalkere tank, Doctor Doddi ...	1,100	Do
22	Urgent repairs to the leaky Maduvadi Hirekere	3,386	Do
23	Constructing a sluice to Hanakadubur village tank ...	660	Do
24	Construction of a sluice of Maruppa's tank at Duntur village	1,205	Do
25	Urgent repairs to Gattal Rampur tank	800	Do
26	Do to leaky sluice of Hanudarahally tank, Budigere.	2,400	Do

(THE HON'BLE SRI T. MARIAPPA)

Sl. No.	Name of work	Estimated cost	Remarks
		Rs.	
27	Opening a hikkal from a pick-up at Budikuppe village for the use of S. No. 362 of Degul Mutt.	820	Under progress.
28	Constructing an irrigation sluice pipe for Hutchaiahnakere minor tank, Harohally.	930	Do
29	Repairs to Doddakabballi Urumundinakere, Kodihally ...	2,820	Do
30	Repairing the leaky sluice of Kodihally Urumundinakere ...	950	Do
31	Repairs to Doddakabballi Naranappakere	1,600	Do
32	Constructing a sluice to Chikkalahally tank	468	Do
33	Repairs to Thotahally tank	890	Work in progress.
34	Excavating draft channel for the waste weir of Subedaranakere minor tank, Cadajakkasandra village.	4,000	Sanctioned.
35	Repairing the sluice I waste weir of Kuruballi tank, Harohalli.	1,350	Do
36	Repairs to leaky sluice and bund of Aralasandra Doddakere ...	2,700	Do
37	Repairing the leaky sluice of Shivanahaliy Reddykere ...	850	Do
38	Repairing the leaky and choked-up sluice of Shivanahalli Gavikere.	900	Do
39	Constructing a sluice for Siddakote Kenchanahally village, Satanur.	950	Do
40	Repairs to sluice at Arsanakakere of Alahally, Uyyamballi Hobli.	1,600	Do
41	Constructing a masonry waste weir and repairing the sluice of Gollahally Kadegowdanakere minor tank.	1,900	Do
42	Constructing an irrigation sluice for Gottal Hunse Thapasikere minor tank.	1,080	Do
43	Repairing the sluice and constructing masonry waste weir of Vodkekere minor tank, Harohalli.	2,170	Do

ಶ್ರೀ ಎಸ್. ಕರಿಯಪ್ಪನವರು.—ಚಾಲ್ತಿಸಾಲಿನಲ್ಲಿ ತೆಗೆದುಕೊಳ್ಳಬಹುದಾದ ಕೆಲಸಗಳಲ್ಲಿ ಇನ್ನೂ ಮಂಜೂರಾಗದೇಯಿರುವ ಕೆಲಸಗಳನ್ನು ಸೇರಿಸಲಾಗಿದೆ. ಇವು ಇಷ್ಟರಲ್ಲೇ ಮಂಜೂರಾಗುತ್ತವೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು. ಅವುಗಳಲ್ಲಿ ಕೆಲವನ್ನು ಆಯಾ ಎಗ್ಸಿಕ್ಯೂಟಿವ್ ಇಂಜಿನಿಯರೇ ಮಂಜೂರು ಮಾಡುತ್ತಾರೆ, ಕೆಲವನ್ನು ಸೂಪರಿಂಟೆಂಡಿಂಗ್ ಇಂಜಿಯನಿರು ಮಂಜೂರು ಮಾಡುತ್ತಾರೆ, ಕೆಲವನ್ನು ಚೀಫ್ ಇಂಜಿನಿಯರು ಮಂಜೂರುಮಾಡುತ್ತಾರೆ, ಮತ್ತೆ ಕೆಲವನ್ನು ಸರ್ಕಾರದವರು ಮಂಜೂರು ಮಾಡುತ್ತಾರೆ. ಅವರಿಗೆಲ್ಲ ಬೇರೆ ಬೇರೆ ಅಧಿಕಾರವಿದೆ. ಇಷ್ಟರವರೆಗೆ ಮಂಜೂರು ಮಾಡಬಹುದೆಂದು 5,000 ರೂಪಾಯಿನೊಳಗಿರುವ ಕೆಲಸಗಳನ್ನು ಎಗ್ಸಿಕ್ಯೂಟಿವ್ ಇಂಜಿನಿಯರೇ ಮಂಜೂರು ಮಾಡುತ್ತಾರೆ. ಇಂಥವುಗಳೆಲ್ಲವೂ ಅಷ್ಟರಲ್ಲೇ ಆಗಬಹುದೆಂದು ಇದರಲ್ಲಿ ಕೊಟ್ಟಿದೆ.

ಶ್ರೀ ಎಸ್. ಕರಿಯಪ್ಪನವರು.—ಇದರಲ್ಲಿ ನಮೂದಾಗಿರುವ ಕೆಲಸಗಳೆಲ್ಲವೂ ನಡೆಯುವಂತೆ ತಕ್ಕ ವ್ಯವಸ್ಥೆ ಮಾಡಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮಾಡಿದ್ದೇವೆ, ಈಗಾಗಲೇ ಅನೇಕ ಮಂಜೂರಾಗಿರುವ ಕೆಲಸಗಳು ಪ್ರಾರಂಭವಾಗಿ ನಡೆಯುತ್ತಿವೆ. ಟೆಂಡರ್ ಕರೆದು, ಟೆಂಡರ್ ಬಂದು ಕೆಲಸ ಪ್ರಾರಂಭವಾಗಿದೆಯೆಂದು ಎಗ್ಸಿಕ್ಯೂಟಿವ್ ಎಂಜಿನಿಯರು ವರದಿಮಾಡಿದ್ದಾರೆ.

ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ಈ ಕೆಲಸಗಳನ್ನೆಲ್ಲಾ ಮಾಡಲು ಸಿಬ್ಬಂದಿಯನ್ನು ಏರ್ಪಾಡು ಮಾಡಲಾಗಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮಾಡಿದೆ. ಕಾರ್ಕಾನಹಳ್ಳಿಯಲ್ಲಿ ಒಂದು ಸ್ಪೆಷಲ್ ಸಬ್‌ಡಿವಿಜನ್ ಮಾಡಿದ್ದೇವೆ. ಗ್ರ್ಯಾಜುಯೇಟ್ ಸರ್ವೇಯರುಗಳು, ಸಬ್‌ಓವರ್‌ಸಿಯರುಗಳು ಮುಂತಾದವರನ್ನೆಲ್ಲಾ ನೇಮಕ ಮಾಡಿದೆ. ಒಂದು ಲಕ್ಷ ರೂಪಾಯಿಗೆ ಮೇಲ್ಪಟ್ಟ ಕೆಲಸಕ್ಕೆ ವಿಶೇಷ ಸಿಬ್ಬಂದಿಯನ್ನು ಕೊಡುತ್ತೇವೆ.

ಶ್ರೀ ಟಿ. ಮಾದಯ್ಯಗೌಡರು.—ಈ ಕೆಲಸಗಳೆಲ್ಲವೂ ಎಷ್ಟು ದಿವಸಗಳಲ್ಲಿ ಆಗಬಹುದು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಆಯಾ ಸಂದರ್ಭಗಳನ್ನನುಸರಿಸಿರುತ್ತದೆ. 800 ಅಥವ 900 ರೂಪಾಯಿಗಳ ಕೆಲಸಗಳು ಕೆಲವು ದಿನಗಳಲ್ಲೇ ಮುಗಿಯುತ್ತವೆ, ಸಾವಿರಾರು ರೂಪಾಯಿನ ಕೆಲಸಗಳಾದರೆ ಕೆಲವು ತಿಂಗಳಾಗುತ್ತವೆ, ಕೆಲವು ಸಂದರ್ಭಗಳಲ್ಲಿ ಕಂಟ್ರಾಕ್ಟರುಗಳು ತಕರಾರು ಹಾಕಿಕೊಂಡರೆ ನಿಧಾನವಾಗಬಹುದು, ಹೀಗೆಲ್ಲಾ ಇರುತ್ತದೆ. ಸಾಧ್ಯವಾದಷ್ಟು ಮುಕ್ಕಾಲು ಪಾಲು ಈ ವರ್ಷವೇ ಮಾಡಬೇಕೆಂದು ಮಾಡಿದ್ದೇವೆ.

ಶ್ರೀ ಟಿ. ಮಾದಯ್ಯಗೌಡರು.—ಕೆಲವು 800-900 ರೂಪಾಯಿನ ಕೆಲಸಗಳು under progress ಎಂದಿದೆ, ಇವು ಎಷ್ಟು ದಿವಸಗಳಿಂದ ನಡೆಯುತ್ತಿವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಗಾಗಲೇ ನಾನು ಹೇಳಿದಂತೆ ಕೆಲವು ಹಿಂದೆಯೇ ಮಂಜೂರಾಗಿ ಈಗಾಗಲೇ ಪ್ರಾರಂಭವಾಗಿವೆ, ಕೆಲವು ಇನ್ನು ಹತ್ತು ಹದಿನೈದು ದಿವಸಗಳಲ್ಲಿ ಪೂರೈಸುತ್ತವೆ.

ಶ್ರೀ ಟಿ. ಮಾದಯ್ಯಗೌಡರು.—ಇನ್ನು ಕೆಲವು ಕೆಲಸಗಳು ಮಂಜೂರಾಗದೆ ಪ್ರಾರಂಭವಾಗಿಲ್ಲ. ಅವೂ ಪ್ರಾರಂಭವಾಗಬಹುದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬೇಗ ಅವೂ ಮಂಜೂರಾಗುತ್ತವೆ.

ಶ್ರೀ ಟಿ. ಮಾದಯ್ಯಗೌಡರು.—ಇವುಗಳಿಗೆಲ್ಲಾ ಹಣ ಇದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಖಂಡಿತವಾಗಿಯೂ ಇದೆ, ಹಣವಿಲ್ಲದೆ ಮಂಜೂರು ಮಾಡುವುದಿಲ್ಲ.

Tanks in Sidlaghatta and Bagepalli Taluks and their restoration.

Q.—129. **Sri A. SUBBARAYA SETTY** (Kolar District—General).—

Will the Government be pleased to state.—

(a) the number of major and minor tanks in Sidlaghatta and Bagepalli Taluks;

(b) the number of tanks that have been taken up for restoration in each of the taluks from the last five years, yearwar;

(c) the number that have been completed?

A.—**The Hon'ble Sri T. MARIAPPA** (Home Minister).—

(a) to (c) Information is being collected.

ಶ್ರೀ ಎ. ಸುಬ್ಬರಾಯಶೆಟ್ಟರು.—ಎಲ್ಲಕ್ಕೂ ಒಂದೇ ಉತ್ತರ ಹೇಳಿದೆ, ಎರಡಕ್ಕೂ ಒಂದೇ ಉತ್ತರವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒಂದೇ ಉತ್ತರ.

ಶ್ರೀ ಎ. ಸುಬ್ಬರಾಯಶೆಟ್ಟರು.—ಮೈನರ್ ಮತ್ತು ಮೇಜರ್ ಕೆರೆಗಳ ರಿಜಿಸ್ಟರಿಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದೆ, ಆದರೆ ರಿಜಿಸ್ಟರು up-to-date ಆಗಿಲ್ಲ. ಅದನ್ನು ಮಾಡಬೇಕೆಂದು ಹೇಳಿದ್ದೇವೆ.

ಶ್ರೀ ಎ. ಸುಬ್ಬರಾಯಶೆಟ್ಟರು.—ರಿಜಿಸ್ಟರೇ ಇಲ್ಲದೇ ಹೋದರೆ ಯಾವ ಯಾವ ಕೆರೆಗಳು ರಿಪೇರಿಯಾಗಬೇಕೆಂಬುದನ್ನು ತಿಳಿದುಕೊಂಡು ರಿಪೇರಿಗೆ ತೆಗೆದುಕೊಳ್ಳುವುದು ಅದು ಹೇಗೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆರೆ ರಿಜಿಸ್ಟರಿದೆ, up-to-date ಆಗಿಲ್ಲ. ಒಂದು ಕೆರೆ ಅದರಲ್ಲಿರಬಹುದು, ಅದು ಒಡೆದು ಹೋಗಿರಬಹುದು ಅಥವ ಹಿಂದೆ ಒಡೆದು ಹೋಗಿದ್ದ ಕೆರೆ ಈಚೆಗೆ ರಿಪೇರಿಯಾಗಿರಬಹುದು.

ಶ್ರೀ ಎ. ಸುಬ್ಬರಾಯಶೆಟ್ಟರು.—ಕೆರೆಗಳ ಪಟ್ಟಿ ಇಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪಟ್ಟಿಯಿದ್ದ ಮಾತ್ರಕ್ಕೇ ಆಗುವುದಿಲ್ಲ, ಅದು up-to-date ಆಗಿರಬೇಕು. ಅದನ್ನು ಸರಿಯಾಗಿ check up ಮಾಡಬೇಕೆಂದು ತಿಳಿಸಿದ್ದೇವೆ. ಆಯಾ ಸಬ್‌ಡಿವಿಷನ್‌ಗಳವರು ಮಾಡುತ್ತಿದ್ದಾರೆ. ಇದಲ್ಲದೆ ಬೇರೆ ಒಂದು ಪ್ರೋಗ್ರಾಂ ಹಾಕಿಕೊಂಡು ಅನೇಕ ಕೆರೆಗಳ ಕೆಲಸಗಳನ್ನು ಮಾಡಿಸುತ್ತಿದ್ದೇವೆ. ಎಷ್ಟೋ ಒಬ್ಬರಾಯನ ಕಾಲದಲ್ಲಿ ಒಡೆದು ಹೋಗಿದ್ದ ಸಣ್ಣಪುಟ್ಟ ಕೆರೆಗಳನ್ನೂ ಕಟ್ಟೆಗಳನ್ನೂ ಕೂಡ ಜೀರ್ಣೋದ್ಧಾರ ಮಾಡಿಸಿದ್ದೇವೆ.

ಶ್ರೀ ಎ. ಸುಬ್ಬರಾಯಶೆಟ್ಟರು.—ಆ ಪಟ್ಟಿಯನ್ನು ಕೊಡುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೊಡುತ್ತೇವೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು (ಕೋಲಾರ ಜಿಲ್ಲೆ).—ಟ್ಯಾಂಕ್ ರಿಜಿಸ್ಟರೇ ಇಲ್ಲದೆ ಯಾವ ಆಧಾರದ ಮೇಲೆ ಕೆಲಸಮಾಡುವುದು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಮ್ಮಲ್ಲಿ ಹಳೆಯ ಟ್ಯಾಂಕ್ ರಿಜಿಸ್ಟರಿದೆ, ಅದನ್ನು ನೋಡಿ ಪರಿಶೀಲನೆ ಮಾಡಿ ಸ್ಥಳೀಯ ಅಧಿಕಾರಿಗಳ ವರದಿಗಳ ಮೇಲೆ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆ. ರಿಜಿಸ್ಟರು up-to-date ಆಗಿಲ್ಲ, ಅಷ್ಟೆ. ಅದನ್ನು ಮಾಡಬೇಕಾದರೆ, we must have special staff to survey and enter all the details of each tank, whether it is silted, whether it has breached, whether the waste weir is all right and so on.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಕೆರೆಗಳ ಜೀರ್ಣೋದ್ಧಾರದ ಸಂಬಂಧವಾಗಿ ವರ್ಷ ವರ್ಷಕ್ಕೆ ಎಷ್ಟೆಷ್ಟನ್ನು ದುರಸ್ತುಮಾಡಬೇಕೆಂದು ಒಂದು ಪ್ಲ್ಯಾನ್ ಇದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು. ಇದೆ. ಹೆಚ್ಚು ಆಹಾರ ಬೆಳೆ ಬೆಳೆಯುವ ಯೋಜನೆ ಜಾರಿಗೆ ಬಂದಮೇಲೆ ಒಂದು programme of works ಎಂದು ಮಾಡಿ, ಅದನ್ನು ನಾವು ಒಪ್ಪಿದ್ದೇವೆಂದು ನಾನು ಹಿಂದೆ ಕೇಳಿದ ಒಂದು ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—Statistics ಇದೆಯೇ? Do you not have statistics if you have got plans?

The Hon'ble Sri T. MARIAPPA.—We have got statistics. Please see the question. It needs collection of correct information regarding the last five years yearwar. Therefore, it has been sent to the Sub-Division and the Assistant Engineer himself must go about and find out the information.

Sri H. C. LINGA REDDY.—How long will it take to gather the statistics and give us information?

The Hon'ble Sri T. MARIAPPA.—In fact, I have issued reminders also and I hope to get the information very shortly.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—Information is being collected ಎಂದಿದೆ, ಯಾರಿಂದ collect ಆಗುತ್ತಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಂಬಂಧಪಟ್ಟ ಇಲಾಖೆಯಿಂದ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಆಯಾ ತಾಲ್ಲೂಕಿನಲ್ಲಿರುವ ಇಲಾಖೆಯ ಅಧಿಕಾರಿಗಳಿಗೆ ಆ ತಾಲ್ಲೂಕಿನಲ್ಲಿ ಎಷ್ಟು ಕೆರೆಗಳಿವೆ ಎಂಬುದು ಗೊತ್ತಿಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಾವು ಈ ಒಂದೇ ಪ್ರಶ್ನೆಯನ್ನು ನೋಡಬೇಡಿ. ಅವರು ಕೇಳಿರುವ ಇನ್ನೊಂದು ಪ್ರಶ್ನೆಯನ್ನೂ ನೋಡಿ. ಈ ವಿವರಗಳು ಬೇಕಾದರೆ ಅದರಲ್ಲಿ the number of tanks that have been taken up for restoration in each of the taluks for the last five years, yearwar ಎಂದು ಹೇಳಿದ್ದಾರೆ.

Sri H. M. CHANNABASAPPA.—I agree with the Hon'ble Minister that it takes time to get the details. But I want to know whether the Hon'ble Minister can give a definite reply regarding the major and minor tanks in only Sidlaghatta and Bagepalli Taluks?

The Hon'ble Sri T. MARIAPPA.—Sir, I do not want to furnish incomplete answer.

Sri H. M. CHANNABASAPPA.—Have you got at least information on your file?

The Hon'ble Sri T. MARIAPPA.—I have got a little information. But it is not good to furnish incomplete information.

Sri H. M. CHANNABASAPPA.—I would like to know the number of tanks, if the information is available with the Hon'ble Minister.

The Hon'ble Sri T. MARIAPPA.—If the Hon'ble Speaker permits me to give that incomplete information, I have no objection to give it. But it does not serve any purpose.

Sri H. M. CHANNABASAPPA.—I want to know whether the Hon'ble Minister has got the number of tanks in his file. If he can give it, he can say 'yes'. Otherwise, if he says 'no', even then I shall be satisfied.

The Hon'ble Sri T. MARIAPPA.—I have not got that information with me.

Lands given for cultivation under Grow More Food Scheme in Kolar District.

Q.—97. **Sri G. NARAYANA GOWDA** (Kolar District—General).—

Will the Government be pleased to state:—

the number of acres of wet and dry lands given for cultivation under ordinary darkhast rules and Grow More Food Scheme in Kolar District for the last 5 years (particulars to be given talukwise)?

A.—**The Hon'ble Sri H. SIDDAIYA** (Minister for Revenue and Excise).—

Serial Number	Name of Taluk	Ordinary darkhast		Grow More Food Scheme	
		Wet	Dry	Wet	Dry
		A. G.	A. G.	A. G.	A. G.
1	Kolar	202 33	3,793 08	10 05	1,665 30
2	Bangarpet	62 12	2,235 30	135 38	3,148 02
3	Malur	...	3,567 14	20 00	3,409 17
4	Mulbagal	132 00	3,580 38	32 01	6,598 19
5	Srinivaspur	667 07	6,283 22	68 34	2,299 10
6	Chintamani	263 29	5,446 28	64 05	4,606 03
7	Sidlaghatta	977 29	2,176 28	302 36	1,862 37
8	Chikballapur	375 20	3,319 03	75 30	607 14
9	Goribidnur	16 33	4,015 08	7 10	785 02
10	Bagepally	260 13	7,546 14	69 13	3,068 21
11	Gudibanda	620 00	1,366 20	97 38	545 24

ಶ್ರೀ ಜಿ. ನಾರಾಯಣಗೌಡರು.—ಹೆಚ್ಚು ಆಹಾರ ಬೆಳೆ ಬೆಳೆಯುವ ಯೋಜನೆಯ ಮೇರೆಗೆ ಒಬ್ಬನಿಗೆ ಜಮೀನು ಕೊಟ್ಟರೆ ಐದು ವರ್ಷವಾದ ಮೇಲೆ ಅವನಿಗೇ ಅದನ್ನು ಖಾಯಂಮಾಡುತ್ತೀರಾ?

*ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸಾಮಾನ್ಯವಾಗಿ ಹಾಗೆ ಮಾಡುತ್ತೇವೆ.

ಶ್ರೀ ಜಿ. ನಾರಾಯಣಗೌಡರು.—ಯಾವ ಸಂದರ್ಭಗಳಲ್ಲಿ ಹಾಗೆ ಖಾಯಂ ಮಾಡುವುದಿಲ್ಲ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಗೋಮಾಳಕ್ಕೆ ಆ ಗ್ರಾಮದಲ್ಲಿ ಸಾಕಾದಷ್ಟು ಜಮೀನಿಲ್ಲದೆ ಗ್ರಾಮಸ್ಥರು ಹಾಗೆ ಖಾಯಂಮಾಡಲು ಅಭ್ಯಂತರ ಸೂಚಿಸಿದರೆ ಮಾಡುವುದಿಲ್ಲ.

ಶ್ರೀ ಜಿ. ನಾರಾಯಣಗೌಡರು.—ಗೋಮಾಳ ಸಾಕಾದಷ್ಟಿಲ್ಲದಿದ್ದಕಡೆ ಏಕೆ ಜಮೀನು ಕೊಡಬೇಕಾಗಿತ್ತು?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸ್ಥಳೀಯ ಅಧಿಕಾರಿಗಳು ಹಂಗಾಮಿಯಾಗಿ ಕೊಟ್ಟಿರುತ್ತಾರೆ.

ಶ್ರೀ ಜಿ. ನಾರಾಯಣಗೌಡರು.—ಹೆಚ್ಚು ಆಹಾರ ಬೆಳೆಯುವ ಯೋಜನೆಯ ಪ್ರಕಾರ ಸಾಗುವಳಿಗೆ ಕೊಟ್ಟ ಜಮೀನುಗಳನ್ನು ರೈತರು ಹೆಚ್ಚಿನ ಲಾಗೋಡಿಟ್ಟು ವ್ಯವಸಾಯಮಾಡುವುದು ಗೊತ್ತಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅನೇಕರು ಮಾಡುತ್ತಾರೆ.

ಶ್ರೀ ಜಿ. ನಾರಾಯಣಗೌಡರು.—ಹೀಗೆ ಮಾಡಿದರೂ ಐದು ವರ್ಷವಾದಮೇಲೆ ಅವರಿಗೆ ಆ ಜಮೀನನ್ನೂ ಕೊಡದೇಹೋದರೆ ಅವರಿಗೆ ತೊಂದರೆಯಾಗುವುದಿಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದಕ್ಕೇ ಸಾಮಾನ್ಯವಾಗಿ ಅವರಿಗೇ ಕೊಡುತ್ತಾರೆಂದು ಹೇಳಿದ್ದೇನೆ.

ಶ್ರೀ ಜಿ. ನಾರಾಯಣಗೌಡರು.—ಇಂತಹ ಸಂದರ್ಭಗಳನ್ನು ನೋಡಿ ಅವರಿಗೇ ಖಾಯಂಮಾಡುವ ಹಾಗೆ ಅಪ್ಪಣೆ ಮಾಡುತ್ತೀರಾ ?

The Hon'ble Sri H. SIDDAIYA.—I repeat the answer.

ಶ್ರೀ ಬಿ. ಎಚ್. ಬೋರಣ್ಣಗೌಡರು (ಹಾಸನ ಜಿಲ್ಲೆ).—ಐದು ವರ್ಷವಾದಮೇಲೆ ಬೇರೆಯವರಿಗೆ ಆ ಜಮೀನನ್ನು ಕೊಟ್ಟಿರುವ ನಿದರ್ಶನಗಳು ತಮ್ಮ ಗಮನಕ್ಕೆ ಬಂದಿವೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲವು ಬಂದಿವೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಅಂಥ ಸಂದರ್ಭಗಳಲ್ಲಿ ಏನುಮಾಡುತ್ತೀರಿ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ತಮ್ಮ ಪ್ರಶ್ನೆ ನನಗೆ ಸ್ಪಷ್ಟವಾಗಲಿಲ್ಲ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಐದು ವರ್ಷವಾದಮೇಲೆ ಬೇರೆಯವರಿಗೆ ಆ ಜಮೀನನ್ನು ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲವು ಬಂದಿವೆಯೆಂದು ಹೇಳಿದ್ದೇನೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಇಂತಹ ಸಂದರ್ಭಗಳಲ್ಲಿ ಮೊದಲು ಕೊಟ್ಟಿದ್ದವನಿಗೆ ಕೊಡಿಸುತ್ತೀರೋ ಅಥವಾ ಎರಡನೆಯಸಾರಿ ಕೊಟ್ಟಿರುವವನಿಗೆ ಕೊಡುತ್ತೀರೊ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಎರಡನೆಯವನಿಗೆ ಕೊಟ್ಟಿರುತ್ತಾರೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಎಂತಹ ಕಾರಣಕ್ಕಾಗಿ ಹಾಗೆ ಕೊಟ್ಟಿರುವುದು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನಿಬಂಧನೆಗಳನ್ನು ಉಲ್ಲಂಘನೆಮಾಡಿದರೆ ತಪ್ಪಿಸಬೇಕೆಂದಿದೆ, ಅದರ ಪ್ರಕಾರಮಾಡಿದ್ದಾರೆ.

ಶ್ರೀ ಕೆ. ಎಚ್. ಮುದಿಯಪ್ಪನವರು (ಚಿಕ್ಕಮಗಳೂರು ಜಿಲ್ಲೆ).—5 ವರ್ಷಗಳ ಅವಧಿಯವರೆಗೆ ಸಾಗುವಳಿಗೆ ಕೊಡಲಾಗಿದ್ದ ಜಮೀನುಗಳನ್ನೂ, ಅವುಗಳಲ್ಲಿದ್ದ ಗಿಡ-ಗೆಂಟೆ ಇತ್ಯಾದಿಗಳನ್ನೆಲ್ಲಾ ಕತ್ತರಿಸಿಹಾಕಿ, ಹೆಚ್ಚಿಗೆ ಹಣ ಖರ್ಚುಮಾಡಿ ಆಬಾದಿಗೆ ತಂದಿದ್ದಂಥ ಭೂಮಿಗಳನ್ನೂ ಸಹ ಕಿತ್ತುಕೊಂಡಿರುವ ನಿದರ್ಶನಗಳು ತಮ್ಮ ಗಮನಕ್ಕೆ ಬಂದಿವೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬಹಳ ಅಪರೂಪ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಅಂಥ ನಿದರ್ಶನಗಳಿವೆ. ಅವುಗಳನ್ನು ತಿಳಿಸಿದರೆ ತಾವು ಸರಿಪಡಿಸುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸರಿಪಡಿಸಲಾಗುತ್ತೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಕಡೂರು ತಾಲ್ಲೂಕಿನಲ್ಲಿ ಸಕ್ಕರೆಪಟ್ಟಣ ಗ್ರಾಮದಲ್ಲಿ ಹಾಗೆ ಮಾಡಿದ್ದಾರೆ. ಅದನ್ನು ಸರಿಪಡಿಸುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅನಂತರ ತಿಳಿಸಿದರೆ, ವಿಚಾರಮಾಡಿಸುತ್ತೇನೆ.

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—ಈ ಹೆಚ್ಚು ಆಹಾರ ಬೆಳೆಯಬೇಕೆಂದು ಭೂಮಿಗಳನ್ನು ಕೊಡುವುದು ಯಾವ ಷರತ್ತುಗಳಮೇಲೆ ?

ಅಧ್ಯಕ್ಷರು.—ಅದನ್ನು ಆಗಲೇ ಎಷ್ಟೋಸಾರಿ ತಿಳಿಸಿದ್ದಾರೆ.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆ ಬಗ್ಗೆ 3—4 ಷರತ್ತುಗಳು ಇವೆ. ಮೊದಲನೆಯದು ಮಹಜರ್ ಆಗಬೇಕಾದುದು. ಹಾಗೆ ಕೊಡಲಾಗತಕ್ಕ ಭೂಮಿಯನ್ನು 5 ವರ್ಷಕಾಲ ಪರಿಯಂತವೂ ವ್ಯವಸಾಯಮಾಡದೆ ಹಾಗೆ ಬೀಳುಬಿಟ್ಟುಕೊಂಡು ಬರಕೂಡದು. ಹಾಗೆ ಮಾಡಿದ ಸಂದರ್ಭಗಳಲ್ಲಿ ಅದನ್ನು ಅತನಿಗೆ ಖಾಯಂಮಾಡಲಾಗುವುದಿಲ್ಲ. ಮೊದಲನೆಯ ವರ್ಷದಲ್ಲಿ ಅತ ಜಮೀನನ್ನು ಆಬಾದಿಗೆ ತರದಿದ್ದರೆ ಅದನ್ನು ವಜಾಮಾಡುವುದಕ್ಕೆ ಅವಕಾಶವಿದೆ. ಮೊದಲನೆಯ 1—2ನೆಯ ವರ್ಷಗಳಲ್ಲಿ ಆ ಜಮೀನಿಗೆ ಏನೂ ಕಂದಾಯವಿರುವುದಿಲ್ಲ. 3—4ನೆಯ ವರ್ಷಗಳಲ್ಲಿ ಅರ್ಧ ಕಂದಾಯ ಕೊಡಬೇಕೆಂದೂ ಮತ್ತು 5ನೆಯ ವರ್ಷದ ತರುವಾಯ ಪೂರ್ತಿ ಕಂದಾಯ ಕೊಡಬೇಕೆಂದೂ ಷರತ್ತುಗಳಿವೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಹಾಗೆ ಕೊಡಲಾದ ಜಮೀನುಗಳಲ್ಲಿ ಈಗ ಎಷ್ಟು ಆಹಾರಧಾನ್ಯಗಳನ್ನು ಬೆಳೆದಿದ್ದಾರೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಟೀಸ್.

ಶ್ರೀ ಡಿ. ಎಂ. ಸಿದ್ದಯ್ಯನವರು.—ಈ ಜಮೀನುಗಳನ್ನು ಉಳುವುದಕ್ಕೆ ಎತ್ತುಗಳಿಲ್ಲದೆ, ವ್ಯವಸಾಯವೆಂಬ ಕಸುಬೇ ಗೊತ್ತಿಲ್ಲದಂಥ ಅನೇಕರಿಗೆ ಕೊಡಲಾಗಿದೆಯೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲವು ಇವೆ. ಆದರೆ ಬಹಳ ಅಪರೂಪ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಹೀಗೆ ವ್ಯವಸಾಯಗಾರರಲ್ಲದವರಿಗೆ ಜಮೀನುಗಳನ್ನು ಕೊಟ್ಟಿರುವುದರಿಂದ ಹೆಚ್ಚು ಆಹಾರ ಬೆಳೆಸಬೇಕೆಂಬ ಯೋಜನೆಗೆ ಅವಕಾಶವಾಗಿರುವುದಿಲ್ಲವೆಂಬುದನ್ನು ತಾವು ಒಪ್ಪುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ವ್ಯವಸಾಯಗಾರರಾದವರಿಗೇ ಹೆಚ್ಚಾಗಿ ಕೊಡಲಾಗಿದೆ.

Grant of date grove lands to applicants from Depressed Class in the five districts brought under Prohibition.

Q.—233. Sri T. HANUMIAH (Chitaldrug District—Depressed Class).—

Will the Government be pleased to state :—

(*a*) whether there is any Government Order to the effect that while

(SRI T. HANUMIAH.)

disposing of the date grove in the five districts brought under prohibition, preference should be shown to the Depressed Classes; if so, the number and date of the Government Order;

(b) the number of applications of the Depressed Classes filed in the five districts (district war and talukwar); the total number of grants to Depressed Classes and other caste Hindus and by public auction;

(c) the extent (acreage) of date grove lands granted to each of the individual applicants from the Depressed Class;

(d) whether it will not be advisable and practicable to refer such applications to the Depressed Class members represented on each of the Taluk and District Development Committees for scrutiny before they are finally disposed of?

A.— **The Hon'ble Sri H. SIDDAIYA** (Minister for Revenue and Excise).—

(a) Yes;

Kolar District.—
G.O. No. R. 9575-9—L.R. 258-50-9, dated 13th December 1950.

Tumkur District.—
G.O. No. R. 10945-9—L.R. 255-50-13, dated 16th January 1951.

Chitaldrug District.—
G.O. No. R. 10445-9—L.R. 258-50-11, dated 15th January 1951.

Shimoga District.—
G.O. No. R. 158-60—L.R. 258-50-17, dated 5th April 1951.

(b) and (c) Information is being collected.

(d) While disposing of lands in the date reserves, the requirements of the Depressed Class Community are kept in view and preference is being shown to them. Reference of such applications to the Committees as suggested may result in unnecessary delay and hence may not be advisable.

ಶ್ರೀ ಟಿ. ಹನುಮಯ್ಯನವರು.—ನನ್ನ (ಬಿ) ಮತ್ತು (ಸಿ) ಪ್ರಶ್ನೆಗಳಿಗೆ ಉತ್ತರವಾಗಿ information is being collected ಎಂದು ಹೇಳಿದ್ದೀರಿ. ಇದಕ್ಕೆ ಎಷ್ಟು ಕಾಲ ಬೇಕಾಗುತ್ತದೆ ?

*ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ತಾವು 5 ಜಿಲ್ಲೆಗಳ ವಿಚಾರವನ್ನು ಮತ್ತು ಅದಕ್ಕೆ ಸಂಬಂಧಪಟ್ಟ ತಪಶೀಲು ವಿವರಗಳನ್ನೆಲ್ಲಾ ಒದಗಿಸಬೇಕೆಂದು ಕೇಳಿದ್ದುದರಿಂದ, ಆ ವಿಚಾರಗಳನ್ನೆಲ್ಲಾ ಸಂಬಂಧಪಟ್ಟ ಜಿಲ್ಲೆಗಳಿಂದ ತರಿಸಿಕೊಳ್ಳಲು ಸ್ವಲ್ಪ ಸಾವಕಾಶವಾಗುತ್ತದೆ. ಅದಕ್ಕೇ ಕಾಲಾವಕಾಶ ಬೇಕೆಂದು ಹೇಳಿರುವುದು. ಆ ಉತ್ತರದಲ್ಲಿ ಈ ಅರ್ಥವೇ ಬರುತ್ತದೆ.

ಶ್ರೀ ಟಿ. ಹನುಮಯ್ಯನವರು.—ಸಾಧಾರಣವಾಗಿ ಡೇಟ್ ಗ್ರೋವುಗಳನ್ನೆಲ್ಲಾ ಬಹಿರಂಗ ಹರಾಜಿನಲ್ಲೇ ವಿಲೇವಾರಿಮಾಡಬೇಕೆಂದು ಮಾಡುತ್ತಿರುವ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಎರಡೂ ಪದ್ಧತಿ ಇವೆ. ಹರಾಜು ಮೂಲಕವೂ ಕೊಡಲಾಗುತ್ತಿದೆ. ದರಖಾಸ್ತುಗಳಮೇಲೂ ಕೊಡಲಾಗುತ್ತಿದೆ. ಡಿಪ್ರೆಸ್ಡ್ ಕ್ಲಾಸಿನವರಿಗೆ ಸ್ಪೆಷಲ್ ರೂಲ್ಸುಗಳಮೇರೆಗೂ ಕೊಡಬೇಕೆಂದು ತಿಳಿಸಲಾಗಿದೆ. ಎಲ್ಲ ವಿಧಗಳಲ್ಲೂ ವಿಲೇವಾರಿಯಾಗುತ್ತಿದೆ.

ಶ್ರೀ ಟಿ. ಹನುಮಯ್ಯನವರು.—ಹಾಗೆ ಡಿಪ್ರೆಸ್ಡ್ ಕ್ಲಾಸಿನವರಿಗೆ ಕೊಡತಕ್ಕದ್ದು ಎಷ್ಟು ಪರ್ಸೆಂಟ್ ಇರಬೇಕೆಂದು ನಿಗದಿಮಾಡಿದ್ದೀರಿ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಲ್ಲಿಯ ತನಕ ಅಂಥ ಯಾವ ಒಂದು ಪರ್ಸೆಂಟೇಜನ್ನೂ ನಿಗದಿ ಮಾಡಿಲ್ಲ. ಮುಂದಕ್ಕೆ ಮಾಡಬೇಕೆಂಬ ಆಲೋಚನೆ ಸರ್ಕಾರದವರ ಮುಂದಿದೆ.

Sri G. VEERAPPA.—(Chitaldrug District-General).—Have the Government reserved any extent of lands under date groves ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹೌದು ಮಾಡಿದೆ.

Sri G. VEERAPPA.—May I know the extent of land that has been so reserved?

The Hon'ble Sri H. SIDDAIYA.—I want notice.

Sri G. VEERAPPA.—On what basis the Government decide that a particular land must be reserved for date grove?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—Tappable Trees ಹೆಚ್ಚಿಗೆ ಇಲ್ಲದಿದ್ದರೆ ಸಾಮಾನ್ಯವಾಗಿ ರಿಸರ್ವ್ ಮಾಡುವುದಿಲ್ಲ.

Sri G. VEERAPPA.—May I know whether the people applying to the Government for lands are prepared to cultivate these lands that have been reserved by Government as date groves ?

The Hon'ble Sri H. SIDDAIYA.—True.

Sri G. VEERAPPA.—Have the Government ordered releasing some more lands reserved as date groves, for cultivation ?

The Hon'ble Sri H. SIDDAIYA.—They are actively considering it.

Sri D. H. CHANDRASEKHARAIYA (Chitaldrug District—General).—What is the purpose of reserving date groves in areas which have gone dry?

The Hon'ble Sri H. SIDDAIYA.—There are so many other purposes; for instance, manufacture of neera, gur and also for cottage industries such as basket making, mat making, etc.

Sri D. H. CHANDRASEKHARAIYA.—Will it not be more useful to give the lands for cultivation, instead of reserving them for the purposes which are just now mentioned by the Hon'ble Minister?

The Hon'ble Sri H. SIDDAIYA.—It is a matter of opinion, and in spite of it, both the things are done.

Sri D. H. CHANDRASEKHARAIYA.—Is it not a fact that really valuable lands are reserved and less valuable lands are now thrown open for cultivation?

The Hon'ble Sri H. SIDDAIYA.—That is so in several cases.

Sri D. H. CHANDRASEKHARAIYA.—Valuable lands being more suitable for cultivation, can not the Government think of reserving other lands which may not perhaps be used for cultivation?

The Hon'ble Sri H. SIDDAIYA.—Valuable lands will fetch some money if they are disposed of by auction. Government also are in need of money. It is but right that that policy is adopted and groves are reserved where, as I have already stated, trees are wanted for tapping, among other things.

Sri D. H. CHANDRASEKHARAIYA.—But why are date groves reserved where tapping is not necessary on account of the area having gone dry?

The Hon'ble Sri H. SIDDAIYA.—Generally to supply toddy for people in the wet area.

Sri D. H. CHANDRASEKHARAIYA.—Is it not a wrong policy to tap toddy groves in areas which have already gone dry, for the purpose of supplying toddy to other districts which have not yet gone dry?

The Hon'ble Sri H. SIDDAIYA.—There is nothing wrong in supplying toddy to other districts so long as they are wet.

Sri A. BHEEMAPPA NAIK (Chitaldrug District—General).—Is there any truth in the information that the Government are thinking of making those districts wet again and so they are reserving these date groves?

The Hon'ble Sri H. SIDDAIYA.—It is too early for me to say anything about it.

Sri A. BHEEMAPPA NAIK.—Is it too early for the Hon'ble Minister to take a decision? Has not the area been made dry?

The Hon'ble Sri H. SIDDAIYA.—True.

Sri A. BHEEMAPPA NAIK.—Is there any question of again making it wet?

The Hon'ble Sri H. SIDDAIYA.—I said 'No'.

Sri A. BHEEMAPPA NAIK.—Will these lands that are released from date groves be given to landless and economically backward people?

The Hon'ble Sri H. SIDDAIYA.—Preference is shown to such people.

Sri A. BHEEMAPPA NAIK.—Why are the Government thinking of granting lands to even people who possess lands?

The Hon'ble Sri H. SIDDAIYA.—When the lands are disposed of by public auction, even landed people, rich people, can bid. They are not prevented from offering bids.

Sri A. BHEEMAPPA NAIK.—I am not referring to the cases of lands sold by public auction. When lands are auctioned, anybody can bid and buy the lands. That I know. But in the case of lands which are given for upset price, why should not the Government think of the landless and economically backward people only? That is my question.

The Hon'ble Sri H. SIDDAIYA.—Ordinarily, poor and landless people are preferred.

Sri A. BHEEMAPPA NAIK.—Also the economically backward people?

The Hon'ble Sri H. SIDDAIYA.—Yes, their cases also are sympathetically considered.

ಶ್ರೀ ಎಂ. ಗೋವಿಂದ ರೆಡ್ಡಿಯವರು (ಚಿತ್ರದುರ್ಗ ಜಿಲ್ಲೆ).—ಈಚಲು ಮರಗಳಿಲ್ಲದಂಥ ಜಮೀನು ಸಾಗುವಳಿಗೆ ಕೊಡದಿರುವಂಥಾದ್ದು ಇನ್ನೂ ಇದೆಯೆಂಬುದು ಸರ್ಕಾರದವರಿಗೆ ಗೊತ್ತಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.— ಗೊತ್ತಿದೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಹಾಗೆ ವ್ಯವಸಾಯ ನಡೆಯದೆ, ಬೀಳುಬಿದ್ದಿರುವ ಭೂಮಿಯನ್ನು ಸಾಗುವಳಿಗೆ ಕೊಟ್ಟು ತದನಂತರ ಇನ್ನೂ ಭೂಮಿ ಸಾಗುವಳಿಮಾಡತಕ್ಕವರಿಗೆ ಜಮೀನು ದೊರೆಯದಿದ್ದಾಗತಾನೆ ಈ ಈಚಲು ಮನಗಿರತಕ್ಕ ಜಮೀನನ್ನು ಕೊಡಬೇಕಾದ್ದು ನ್ಯಾಯ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹೌದು. ಇದು ಆಲೋಚನೆಮಾಡತಕ್ಕ ವಿಷಯ.

Grant of a portion of land in Survey No. 18 of Huralihalli, Nelamangala Taluk for cultivation.

Q.—259. **Sri S. RANGA RAO** (Chitaldrug District—General).—

Will the Government be pleased to state :—

(*a*) whether a portion of land in Survey Number 18 of Huralihalli, Nelamangala Taluk (part of Kenchanahalli tank bed) has been granted recently for cultivation ;

(*b*) the opinion of the Executive Engineer, Bangalore Division, regarding the grant of the said tank bed for cultivation ;

(*c*) the opinion of the Deputy Commissioner, Bangalore District, regarding the said grant ;

(*d*) the opinion of the Revenue Commissioner in this behalf ;

(*e*) for how long the subject was pending before the Government ?

A.—**The Hon'ble Sri H. SIDDAIYA** (Minister for Revenue and Excise).—

(*a*) Yes ; only temporarily for a period of three years.

(*b*), (*c*) and (*d*) As they relate to opinions, they cannot be disclosed in public interests.

(*e*) From 17th June 1950 to 8th August 1951.

ಶ್ರೀ ಎಸ್. ರಂಗರಾಯರು.—ಸ್ವಾಮಿ, ಸಾಮಾನ್ಯವಾಗಿ ಕೆರೆ ಅಂಗಳವನ್ನು ಸರ್ಕಾರದವರು ಸಾಗುವಳಿಗೆ ಕೊಡುವುದಿಲ್ಲ, ಅಲ್ಲವೆ ?

*ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸಾಮಾನ್ಯವಾಗಿ ಕೊಡುವುದಿಲ್ಲ.

ಶ್ರೀ ಎಸ್. ರಂಗರಾಯರು.—ಈ ಸಂದರ್ಭದಲ್ಲಿ ಅಲ್ಲಿನ ಗ್ರಾಮಸ್ಥರು ನಮಗೆ ಬಹಳ ತೊಂದರೆಯಾಗುತ್ತದೆ, ಕೆರೆ ಅಂಗಳ ಸಾಗಿಗೆ ಕೊಡಕೂಡದು ಎಂದು ತಕರಾರು ಹಾಕಿಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನಾಲ್ಕಾರು ಜನರು ಹಾಕಿದ್ದಾರೆ.

ಶ್ರೀ ಎಸ್. ರಂಗರಾಯರು.—ಈ ಕೆರೆ ಅಂಗಳವನ್ನು ಸಾಗುವಳಿಗೆ ಕೊಟ್ಟಿರುವುದರಿಂದ ಅನೇಕ ರೈತರಿಗೆ ನೀರು ಸಾಲದೆ ಸಾಗುವಳಿಗೆ ತೊಂದರೆಯಾಗಿಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆಗಿಲ್ಲವೆಂದು ತಿಳಿದುಬಂದಿದೆ.

ಶ್ರೀ ಎಸ್. ರಂಗರಾಯರು.—ತೊಂದರೆಯಾಗಿದೆಯೆಂದು ತಿಳಿದುಬಂದರೆ ತಮ್ಮ ಅಭಿಪ್ರಾಯವನ್ನು ಬದಲಾಯಿಸುವುದಕ್ಕೆ ತಯಾರಾಗಿದ್ದೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹಾಗೆ ತಿಳಿದರೆ ವಜಾ ಮಾಡುವುದಕ್ಕೆ ಅಧಿಕಾರವಿದೆ.

ಶ್ರೀ ಎಸ್. ರಂಗರಾಯರು.—ಎಗ್ಸಿಕ್ಯುಟಿವ್ ಇಂಜನಿಯರು, ಜಿಲ್ಲಾಧಿಕಾರಿಗಳು ಮತ್ತು ರೆವೆನ್ಯೂ ಕಮೀಷನರು ಇದನ್ನು ಕೊಡಕೂಡದೆಂದು ಅಭಿಪ್ರಾಯಪಟ್ಟಿಲ್ಲವೆ ?

The Hon'ble Sri H. SIDDAIYA.—It is a matter of confidential nature.

ಶ್ರೀ ಎಸ್. ರಂಗರಾಯರು.—ಕೆರೆ ಅಂಗಳವನ್ನು ಸಾಗವಳಿಗೆ ಕೊಡುವುದರಲ್ಲಿ ಸರ್ಕಾರದ ನೀತಿಯೇನು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅಚ್ಚುಕಟ್ಟಿಗೆ ತೊಂದರೆಯಾಗದೆ ನೀರು ಹೆಚ್ಚಾಗಿ ನಿಲ್ಲದಿದ್ದರೆ ಅಂಥ ಸಂದರ್ಭದಲ್ಲಿ year to year, not exceeding 3 years ಕೊಡಬಹುದು.

ಶ್ರೀ ಎಸ್. ರಂಗರಾಯರು.—ಅಚ್ಚುಕಟ್ಟುದಾರರಿಗೆ ತೊಂದರೆಯಾಗಿದೆಯೆಂದು ವರದಿ ಬಂದರೆ ಕೊಡುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆ ಸಮಯದಲ್ಲಿ ಕೊಡುವುದಿಲ್ಲ.

ಶ್ರೀ ಎಸ್. ರಂಗರಾಯರು.—ಈ ಸಂದರ್ಭದಲ್ಲಿ ಆ ರೀತಿಯಾಗಿ ಕೊಟ್ಟಿದೆಯೆಂದು ಹೇಳಿದರೆ ಒಪ್ಪುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಎಸ್. ರಂಗರಾಯರು.—ಕೆರೆ ಅಂಗಳ ಸಾಗುವಳಿಗೆ ಕೊಟ್ಟಿರುವುದರಿಂದ ಕೆರೆಯ ಜೀರ್ಣೋದ್ಧಾರಕ್ಕೆ ತೊಂದರೆಯಲ್ಲವೆ ?

ಮಾನ್ಯ ಶ್ರೀ ಹೆಚ್. ಸಿದ್ದಯ್ಯನವರು.—It all depends upon the nature of the soil. ಹೂಳಿದೆಯೆ ಎಂಬುದನ್ನು ನೋಡಿ ಕೊಡಬೇಕು.

ಶ್ರೀ ಎಸ್. ರಂಗರಾಯರು.—ಸಾಧಾರಣವಾಗಿ ಮೈಸೂರು ಸಂಸ್ಥಾನದಲ್ಲೆಲ್ಲಾ ಕೆರೆಗಳನ್ನು ಜೀರ್ಣೋ

ದ್ದಾರ ಮಾಡಬೇಕೆಂದಿರುವಾಗ ಹೊಳನ್ನು ತೆಗೆಯು ಬೇಕೆಂಬುದು ಗೊತ್ತಿಲ್ಲವೆ?

ಮಾನ್ಯ ಶ್ರೀ ಹೆಚ್. ಸಿದ್ದಯ್ಯನವರು.—ತೆಗೆಸುತ್ತೇವೆ. ಆ ಕೆಲಸ ನಡೆಯುತ್ತಿದೆ.

ಶ್ರೀ ಎಸ್. ರಂಗರಾಯರು.—ಈ ಕೆರೆ ಅಂಗಳಕ್ಕೂ ಅದೇ ರೀತಿ ಮಾಡುವುದರಿಂದ ಅನುಕೂಲವೆಂದು ಗೊತ್ತಿರುವುದರಿಂದ ಆ ನೀತಿಯನ್ನನುಸರಿಸುವುದು ಒಳ್ಳೆಯದಲ್ಲವೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ವಿದ್ಯಮಾನಕ್ಕೆ ವಿರೋಧವಾಗಿದ್ದರೆ ಸರಿಪಡಿಸುತ್ತಾರೆ.

ಶ್ರೀ ಎಸ್. ರಂಗರಾಯರು.—ಈ ವಿಚಾರದಲ್ಲಿ ತಮಗೆ ಅರ್ಜಿ ಬಂದಿಲ್ಲವೆ?

ಮಾನ್ಯ ಶ್ರೀ ಹೆಚ್. ಸಿದ್ದಯ್ಯನವರು.—ಬಂದಿದೆಯೆಂದು ಆಗಲೇ ಹೇಳಿದೆ.

ಶ್ರೀ ಎಸ್. ರಂಗರಾಯರು.—ವಿಚಾರ ಮಾಡಿ ಇದನ್ನು ತೀರ್ಮಾನ ಮಾಡುತ್ತೀರಾ?

ಮಾನ್ಯ ಶ್ರೀ ಹೆಚ್. ಸಿದ್ದಯ್ಯನವರು.—ವಿಚಾರ ಮಾಡಲಾಗುತ್ತದೆ.

ಲೋಕಸೇವಾನಿರತ ಎಂ. ಹನುಮಂತಯ್ಯನವರು (ಬೆಂಗಳೂರು ಜಿಲ್ಲೆ—ನಿಮ್ನ ಪಂಗಡ).—ಯಾವ ಮನುಷ್ಯ ತಕರಾರು ಹಾಕಿರುವನೋ ಅವನೇ ಜಮಾನು ಕೊಡಬೇಕೆಂದು ಹೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

The Hon'ble Sri H. SIDDAIYA.—In this particular case perhaps he knows things.

ಶ್ರೀ ಎಂ. ಹನುಮಂತಯ್ಯನವರು.—ಯಾವ ಮನುಷ್ಯ ತಕರಾರು ಹಾಕಿರುವನೋ ಅವನೇ ಕೊಡಬಹುದೆಂದು ಒಪ್ಪಿದರೆ ಏನು ಮಾಡುತ್ತೀರಿ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅಗ್ಗೆ ವಾಸ್ತವಾಂಶ ತಿಳಿದು ಇತ್ಯರ್ಥ ಮಾಡಬೇಕು. ಯಾರೋ ಒಬ್ಬ ಹೇಳಿದರೆ ಕೊಡುವುದು ಬಿಡುವುದು ಸಾಧ್ಯವಿಲ್ಲ.

ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ಜಿಲ್ಲೆ—ನಿಮ್ನ ಪಂಗಡ).—ಈಗ ಕೊಟ್ಟಿರುವ ಜಮಾನು ನಿಮ್ನ ವರ್ಗದವರಿಗೆ ಸೇರಿದೆಯೋ ಅಥವಾ ಬೇರೆಯವರಿಗೆ ಹೋಗಿದೆಯೋ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಒಬ್ಬರು ಮಹಮ್ಮದೀಯರಿಗೆ ಕೊಟ್ಟಿದೆ; ಗಂಗಪ್ಪ ಎಂಬುವರೊಬ್ಬರಿಗೆ ಕೊಟ್ಟಿದೆ. ಇವರ ಕೋಮು ಗೊತ್ತಿಲ್ಲ. Subject to correction ಇಷ್ಟು ಹೇಳಿದೆ. ಸರಿಯಾಗಿ ಹೇಳುವುದಕ್ಕೆ I want notice.

Amildars eligible for Assistant Commissioners' Cadre during 1943 and 1947.

Q.—262. **Sri L. H. THIMMA BOI** (Chikmagalur District—Depressed Class).—Will the Government be pleased to state :—

(*a*) the number of Amildars in the State that were eligible for higher cadre during the year 1943 and 1947 when Probationary Assistant Commissioners were taken to service ;

(*b*) the number of Depressed Class Amildars (Communitywar) ?

A.—**The Hon'ble Sri H. SIDDAIYA** (Minister for Revenue and Excise).—

(*a*) 13 in 1943 ;
14 in 1947 ;

(*b*) Four : one Adidravida, three Adikarnatakas.

ಶ್ರೀ ಎಲ್. ಹೆಚ್. ತಿಮ್ಮಾಬೋಯಿಯವರು.—13 ಜನ ಅಮಲ್ದಾರರು 1943 ರಲ್ಲಿ ಅರ್ಹತೆ ಪಡೆದವರಿದ್ದರೆಂದು ಹೇಳಿದೆ. ಆ ವರ್ಷ ಅಸಿಸ್ಟೆಂಟ್ ಕಮಿಷನರ್ ಹುದ್ದೆಗೆ ಎಷ್ಟು ಮಂದಿ ತೆಗೆದುಕೊಂಡಿರಿ?

*ಮಾನ್ಯ ಶ್ರೀ ಹೆಚ್. ಸಿದ್ದಯ್ಯನವರು.—9 ಜನರನ್ನು ತೆಗೆದುಕೊಂಡಿದೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—1943 ಮತ್ತು 1947 ಈ ಎರಡು ವರ್ಷಗಳಲ್ಲಿ ಅಸಿಸ್ಟೆಂಟ್ ಕಮಿಷನರನ್ನು ತೆಗೆದುಕೊಂಡಾಗ ಈ 13 ಜನರಿಗೆ ಬಡ್ತಿ ಕೊಡಲಾಯಿತೆ?

ಮಾನ್ಯ ಶ್ರೀ ಹೆಚ್. ಸಿದ್ದಯ್ಯನವರು.—ಕೆಲವರಿಗೆ ಕೊಟ್ಟಿದೆ.

ಶ್ರೀ ಎಲ್. ಹೆಚ್. ತಿಮ್ಮಾಬೋಯಿಯವರು.—1947 ರಲ್ಲಿ 14 ಜನ ಎಂದು ಹೇಳಿದೆ. ಅಮಲ್ದಾರಿ ಲಿಸ್ಟಿನಲ್ಲಿ ಅರ್ಹತೆ ಪಡೆದಿದ್ದ ಆ 14 ಮಂದಿಯಲ್ಲಿ ಹಿಂದೆ ಬಡ್ತಿ ಸಿಕ್ಕದೆ ಉಳಿದಿದ್ದವರೂ ಸೇರಿದ್ದಾರೆಯೆ?

ಮಾನ್ಯ ಶ್ರೀ ಹೆಚ್. ಸಿದ್ದಯ್ಯನವರು.—ಅವರುಗಳೆಲ್ಲಾ ಪ್ರಮೋಷನ್ ಸಿಕ್ಕಿ ಅಸಿಸ್ಟೆಂಟ್ ಕಮಿಷನರಾಗಿದ್ದಾರೆ.

ಶ್ರೀ ಎಲ್. ಹೆಚ್. ತಿಮ್ಮಾಬೋಯಿಯವರು.—ಇಲಾಖೆಯಲ್ಲಿರುವವರಿಗೆ ಬಡ್ತಿ ಕೊಡದೆ ಪ್ರೊಬೇಷನರುಗಳನ್ನು ತೆಗೆದುಕೊಳ್ಳಲು ಕಾರಣವೇನು?

ಮಾನ್ಯ ಶ್ರೀ ಹೆಚ್. ಸಿದ್ದಯ್ಯನವರು.—ನಾನಾ ಕಾರಣಗಳಿಂದ ತೆಗೆದುಕೊಳ್ಳುತ್ತೇವೆ.

ಶ್ರೀ ಎಲ್. ಹೆಚ್. ತಿಮ್ಮಾಬೋಯಿಯವರು.—ಒಂದೆರಡು ಕಾರಣಗಳನ್ನು ಹೇಳುವುದಕ್ಕೆ ಅವಕಾಶವಿದೆಯೆ?

The Hon'ble Sri H. SIDDAIYA.—Inadequacy of representation of that particular community, extraordinary ability of the individuals and many other things.

ಶ್ರೀ ಎಲ್. ಹೆಚ್. ತಿಮ್ಮಾಬೋಯಿಯವರು.—1943 ಮತ್ತು 1947 ರಲ್ಲಿ ಎರಡು ಸಲ ಪ್ರೊಬೇಷನರುಗಳನ್ನು ತೆಗೆದುಕೊಂಡಿದೆ. ತಮ್ಮ ಸರ್ಕಾರ ಬಂದ ಮೇಲೆ ಈ 5 ವರ್ಷಗಳಲ್ಲಿ ಎಷ್ಟು ಸಲ ತೆಗೆದುಕೊಂಡಿದ್ದೀರಿ?

ಮಾನ್ಯ ಶ್ರೀ ಹೆಚ್. ಸಿದ್ದಯ್ಯನವರು.—ನಾವು ತೆಗೆದುಕೊಂಡಿಲ್ಲ ಎಂದು ಹೇಳಬಹುದು, ಚೆನ್ನಾಗಿ ಜ್ಞಾಪಕವಿಲ್ಲ.

ಶ್ರೀ ಎಲ್. ಹೆಚ್. ತಿಮ್ಮಾಭೋಯಿಯವರು.—ಈ ವಿಚಾರದಲ್ಲಿ ಸರ್ಕಾರದ ನೀತಿಯೇನು ? ಎಷ್ಟು ವರ್ಷಕ್ಕೊಂದು ಸಲ ತೆಗೆದುಕೊಳ್ಳಬೇಕೆಂದಿದೆ ?

ಮಾನ್ಯ ಶ್ರೀ ಹೆಚ್. ಸಿದ್ದಯ್ಯನವರು.—ಆ ವಿಚಾರದಲ್ಲಿ ನೀತಿ ಏನೂ ಇಲ್ಲ.

ಶ್ರೀ ಎಲ್. ಹೆಚ. ತಿಮ್ಮಾಬೋಯಿಯವರು.—ಹಿಂದೆ ತೆಗೆದುಕೊಂಡಿರುವುದನ್ನು ನೋಡಿದರೆ 4 ವರ್ಷಕ್ಕೆ ಒಂದು ಸಲ ಎಂದು ಅರ್ಥವಾಗುತ್ತದೆ. ನೀವೇನು ಮಾಡಿದ್ದೀರಿ ?

ಮಾನ್ಯ ಶ್ರೀ ಹೆಚ್. ಸಿದ್ದಯ್ಯನವರು.—ಅಲ್ಲಿಂದೀಚೆಗೆ ನಾವೇನೂ ತೆಗೆದುಕೊಂಡಿಲ್ಲವೆಂದು ಕಾಣುತ್ತದೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಪ್ರೊಬೇಷನರುಗಳನ್ನು ತೆಗೆದುಕೊಂಡರೆ ಅವರಿಗಿರುವುದು ಎರಡು ವರ್ಷ ಅವಧಿ ತಾನೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸಾಮಾನ್ಯವಾಗಿ ಎರಡು ವರ್ಷ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಎರಡು ವರ್ಷವಾಗದೆ ಡೈರೆಕ್ಟ್ ಛಾರ್ಜು ಕೊಟ್ಟಿರುವುದುಂಟೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಉಂಟು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಹೀಗೆ ಮಾಡಿರುವುದರಿಂದ ಕೆಲವು ಅಮಲ್ದಾರರಿಗೆ ತೊಂದರೆಯಾಗಿಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಈಗ ಆ 27 ಜನರಿಗೂ ಪ್ರಮೋಷನ್ ಆಗಿದೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಪ್ರೊಬೇಷನರುಗಳನ್ನು ತೆಗೆದುಕೊಂಡು ಪ್ರೊಬೇಷನರಿ ಪೀರಿಯಡ್ ಆಗದೆ ಮುಂಚೆಯೇ ಬೇರೆ ಹುದ್ದೆಗಳನ್ನು ಅವರಿಗೆ ಕೊಡುವುದರಿಂದ ಬಡ್ತಿ ಆಗಬೇಕಾಗಿದ್ದವರಿಗೆ ತೊಂದರೆಯಾಗುವುದಿಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ತಮಗೇ ಅರ್ಥವಾಗುತ್ತದೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಅದನ್ನು ಸರಿಪಡಿಸುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ಅನಿವಾರ್ಯ. ಪ್ರೊಬೇಷನರುಗಳಿಗೆ ಹುದ್ದೆ ಕೊಟ್ಟಾಗ ಪ್ರಮೋಷನ್ ಕೊಡುವುದು ಸ್ವಲ್ಪ ನಿಧಾನವಾಗುತ್ತದೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಸಾಧಾರಣವಾಗಿ ಹೀಗೆ ಮಾಡುವುದರಿಂದ ಬಡ್ತಿಗಾಗಿ ಕಾಯುತ್ತಿರುವ ಅಧಿಕಾರಿಗಳಿಗೆ ಅನ್ಯಾಯವಾಗುವುದರಿಂದ ಸರ್ಕಾರದವರು ಪ್ರೊಬೇಷನರುಗಳಿಗೆ ಎರಡು ವರ್ಷಕ್ಕೆ ಮುಂಚೆ ಬೇರೆ ಹುದ್ದೆ ಕೊಡುವುದು ಬಿಟ್ಟು ಬಡ್ತಿಗಾಗಿ ಕಾದಿರುವವರಿಗೆ ಕೊಡುವುದು ಧರ್ಮವಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಪ್ರೊಬೇಷನರುಗಳನ್ನು ನಾಲ್ಕು ವರ್ಷಗಳಾದರೂ ತೆಗೆದುಕೊಂಡಿಲ್ಲವೆಂದು ಆಕ್ಷೇಪಿಸಿ ಮತ್ತೆ ತೆಗೆದುಕೊಳ್ಳುವುದರಿಂದ ತೊಂದರೆಯೆಂದು ಹೇಳುತ್ತೀರಾ ?

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಪ್ರೊಬೇಷನರಿ ಪೀರಿಯಡ್ ಮುಗಿಯುವುದಕ್ಕೆ ಮುಂಚೆ ಇಂಡಿಪೆಂಡೆಂಟ್ ಛಾರ್ಜು ಕೊಟ್ಟಿರುವುದು ನ್ಯಾಯವೆ ಎಂದು ಕೇಳಿರುವುದು. ಹಾಗೆ ಕೊಟ್ಟುದರಿಂದ ಬಡ್ತಿ ಹೊಂದುವವರ ಪ್ರೋಗ್ರೆಸ್ಸಿಗೆ ಅನ್ಯಾಯವಾಗಿರುವುದರಿಂದ ಅವರಿಗೆ ಬಡ್ತಿ ಕೊಡುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಪ್ರೊಬೇಷನರುಗಳಿಲ್ಲದಿದ್ದರೆ ಅಮಲ್ದಾರರುಗಳಿಗೆ ಬೇಗ ಪ್ರಮೋಷನ್ ಸಿಕ್ಕಬಹುದು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಮುಂದೆ ತೆಗೆದುಕೊಳ್ಳುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ಸರ್ಕಾರದ ಆಲೋಚನೆಯಲ್ಲಿದೆ.

Sri G. VEERAPPA (Chitaldrug District—General).—While taking up Probationers, have Government any policy to see that the rights of officers already in service are not affected ?

The Hon'ble Sri H. SIDDAIYA.—As far as possible their interest also will be safeguarded ?

Sri G. VEERAPPA.—Is there any proportion kept up on the basis of which Probationers are recruited ?

The Hon'ble Sri H. SIDDAIYA.—Anyhow the present Government have not recruited a single probationer.

Sri G. VEERAPPA.—Has it come to the notice of the Government that while taking Probationers, the rights of so many officials who are eligible to become Assistant Commissioners are ignored ?

The Hon'ble Sri H. SIDDAIYA.—Their interests will be affected to a considerable extent in case that happens.

Restoration and Silt-clearing of tanks in Malnad.

Q.—48. **Sri B. N. BORANNA GOWDA** (Hassan District—General).—

Will the Government be pleased to state :—

(*a*) the number of tanks silted up in districts and taluks which are treated as Malnad ;

(*b*) since how long the people of those places are petitioning Government for the restoration and silt-clearing of these tanks;

(*c*) the number of tanks restored ;

(*d*) the number not restored ?

A.—**The Hon'ble Sri T. MARIAPPA** (Home Minister).—

(*a*) Not readily ascertainable. Almost all tanks are getting gradually silted up more or less, as it is a natural phenomenon.

(*b*) Ever since the inception of the Public Works Department.

(*c*)

No.	Name of the Division	Names of Taluks which are treated as Malnad.	Total No. of tanks restored
1	Mysore ...	Hunsur ...	41
		Periapatna ...	137
		Heggaddevan-kote.	36
		Total ...	214
2	Chikmagalur ...	Chikmagalur ...	222
		Mudigere ...	46
		Kadur ...	47
		Tarikere ...	73
		Koppa and Narasimha-rajapura.	98
		Total ...	486
3	Shimoga ...	Shimoga ...	141
		Bhadravati ...	42
		Channagiri ...	74
		Honnali ...	45
		Thirthahalli ...	236
		Total ...	538
4	Sagar ...	Sagar ...	113
		Sorab ...	140
		Hosanagar ...	53
		Shikaripur ...	134
		Total ...	440
5	Upper Cauvery Division, Krishnaraja-nagar	Arkalgud ...	106
		Total ...	106

ABSTRACT.

Mysore	214
Chikmagalur	486
Shimoga	538
Sagar	440
Upper Cauvery, Krishnarajanagar.	106
Total ...	1,784

(*d*) Information is being collected.

ಶ್ರೀ ಬಿ. ಎಣ್. ಬೋರಣ್ಣಗೌಡರು.—ಮೈಸೂರು, ಚಿಕ್ಕಮಗಳೂರು, ಶಿವಮೊಗ್ಗ ಈ ಮೂರು ಕಡೆ ಕೆರೆಗಳಲ್ಲಿ ಹೂಳು ತೆಗೆದಿದೆಯೆಂದು ಹೇಳಿದೆ. ಇನ್ನು ಉಳಿದಿರುವ ಜಿಲ್ಲೆಗಳಲ್ಲಿ ತೆಗೆದಿಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಬೇಕು.

ಶ್ರೀ ಬಿ. ಎಣ್. ಬೋರಣ್ಣಗೌಡರು.—ಹಾಸನ ಜಿಲ್ಲೆ ಮಲೆನಾಡು. ಅಲ್ಲಿ ಬೇಕಾದಷ್ಟು ಕೆರೆಗಳು ಹೂತು ಹೋಗಿರುವುದರಿಂದ ಹೂಳು ತೆಗೆಸಬೇಕೆಂದು ಅರ್ಜಿ ಬಂದಿಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬುಲ್‌ಡೋಜರು ಕೊಡಬೇಕೆಂದು ಬಂದಿದೆ.

ಶ್ರೀ ಬಿ. ಎಣ್. ಬೋರಣ್ಣಗೌಡರು.—ಆ ವಿಚಾರ ವೇನಾಯಿತು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನು ಫುಡ್ ಪ್ರೊಡಕ್ಷಣ್ ಕಮಿಷನರಿಗೆ ಕಳುಹಿಸಿ ಬೇರೆ ಜಿಲ್ಲೆಗಳಲ್ಲಿರುವುದನ್ನು ತರಿಸಬೇಕೆಂದು ಹೇಳಿದೆ.

ಶ್ರೀ ಬಿ. ಎಣ್. ಬೋರಣ್ಣಗೌಡರು.—ಮಲೆನಾಡಿನ ಕೆರೆಗಳನ್ನು ಜೀರ್ಣೋದ್ಧಾರ ಮಾಡುವುದಕ್ಕೆ ಹೆಚ್ಚು ಗಮನ ಕೊಡುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೊಡುತ್ತೇವೆ.

ಶ್ರೀ ಬಿ. ಎಣ್. ಬೋರಣ್ಣಗೌಡರು—ಈ ಸಾರಿಯಾದರೂ ಅಲ್ಲಿಗೆ ಎಕ್ಸ್‌ಕವೇಟರ್ ಕೊಡುವುದಕ್ಕೆ ಅವಕಾಶ ಮಾಡುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮಲೆನಾಡಿನಲ್ಲಿ ಸ್ವಲ್ಪ ಕಷ್ಟವಿದೆ. ಬುಲ್‌ಡೋಜರುಗಳು ಸಾಕಷ್ಟಿಲ್ಲ. ಇರುವ ಒಂದು ಬುಲ್‌ಡೋಜರು ಚೆನ್ನಾಗಿ ಕೆಲಸ ಮಾಡುತ್ತಿಲ್ಲ. ಮಲೆನಾಡಿನಲ್ಲಿ ಹೂಳು ತೆಗೆಯುವುದಕ್ಕೆ ಒಂದು ಕಷ್ಟ ಬೇರೆ ಇದೆ. ಅಲ್ಲಿ ಸಾಮಾನ್ಯವಾಗಿ ನೀರು, ಬದಿ ಇರುತ್ತದೆ. ಮಾರ್ಷಿ ಆಗಿರುವಾಗ ಹೂಳು ತೆಗೆಯಲು ಸಾಧ್ಯವಿಲ್ಲ. ಅದು ಚೆನ್ನಾಗಿ ಒಣಗಬೇಕು. ಹಾಗೆ ಒಣಗುವವರೆಗೆ ಕೆಲಸ ನಿಧಾನವಾಗುತ್ತದೆ ಎಂದು ಇಂಜನಿಯರು ಹೇಳಿದ್ದಾರೆ.

ಶ್ರೀ ಬಿ. ಎಣ್. ಬೋರಣ್ಣಗೌಡರು.—ಬುಲ್‌ಡೋಜರಿನಿಂದ ಆಗದಿದ್ದರೆ ಕೂಲಿಯಿಟ್ಟು ತೆಗೆಯಲು ಅನುಕೂಲವಾಗುವಂತೆ ಈಗ ಕೆಲವು ಕಡೆ ನಿಗದಿ ಮಾಡಿರುವ 8 ಆಣೆ ಕೂಲಿಯನ್ನು ಹೆಚ್ಚಿಸುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೂಲಿಗಳಿಂದ ತೆಗೆಸುವುದಕ್ಕೆ ಇಣ್‌ಸ್ಟ್ರಕ್ಷಣ್ ಕೊಟ್ಟಿದೆ. ಹ್ಯೂಮನ್ ಏಜೆನ್ಸಿಯಿಂದ ಮಾಡುವುದಕ್ಕೆ ಸಾಧ್ಯವಾದರೆ 8 ಆಣೆಯಿಂದ 12 ಆಣೆಯುವರೆಗೂ ಕೊಡುವುದಕ್ಕೆ ಅವಕಾಶ ಮಾಡಬೇಕೆಂದು ಇಣ್‌ಸ್ಟ್ರಕ್ಷಣ್ ಕೊಟ್ಟಿದೆ.

ಶ್ರೀ ಬಿ. ಎಣ್. ಬೋರಣ್ಣಗೌಡರು.—8 ಆಣೆಗಿಂತ ಹೆಚ್ಚು ಕೊಡುವುದಕ್ಕಾಗುವುದಿಲ್ಲವೆಂದು ಇಲಾಖೆಯವರು ಹೇಳುತ್ತಾ ಇರತಕ್ಕದ್ದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಂದಿದೆ. ಏಕೆಂದರೆ ಸಾಲಾಬಾದು ಕಾಂಗಾರಿ ಮಾಡಬೇಕಾದರೆ ರೈತ ತಾನು ಮಾಡಬೇಕಾದ ಭಾಗಕ್ಕೆ ಹಣ ಕೊಡಬೇಕು. ಆದ್ದರಿಂದ ಸರ್ಕಾರದವರು 8 ಆಣೆ ಕೊಟ್ಟರೆ ಒಟ್ಟು ಒಂದು ರೂಪಾಯಿ ಆಗುತ್ತದೆ. ಅಷ್ಟು ಕೊಟ್ಟರೆ ಸಾಕು ಎಂದು ಎಂಜಿನಿಯರಿಂಗ್ ಇಲಾಖೆಯವರು ಹೇಳಿದರು. ಅದರಂತೆ 8 ಆಣೆ ಕೊಟ್ಟಿದೆ. ಅದು ಸಾಲದು ಜಾಸ್ತಿ ಕೊಡಬೇಕು ಎಂಬುದಾಗಿ ಅರಿಕೆಗಳು ಬಂದರೆ ಜಾಸ್ತಿ ಮಾಡುವುದಕ್ಕೆ ಪರ್ಯಾಲೋಚಿಸಲಾಗುತ್ತದೆ.

Original Irrigation Works and restoration of tanks in Channagiri Taluk.

Q.—150. Sri L. SIDDAPPA (Shimoga District—General).—

Will the Government be pleased to state :—

(a) the names of irrigation works original or restoration of tanks in Channagiri Taluk since 1945 till the end of March 1951 ;

(b) the amount spent on each one of them annually ;

(c) whether it is a fact that works connected with Mavinahole project, construction of a tank in Koratikere Village and construction of feeder channels and restoration of tanks in Garaga and Hebbalagere have not been commenced at all though they were sanctioned long back ;

(d) the stage at which the work connected with the construction of Urehalla Project in Kasaba Hobli of Channagiri Taluk is and since how many years the matter is pending ?

A.—The Hon'ble Sri T. MARIAPPA (Home Minister).—

(a) to (d) Information is being collected.

Sri L. SIDDAPPA.—After the information is collected it may be furnished.

The Hon'ble Sri T. MARIAPPA.—Certainly, I will furnish.

Inter-Village Communication Road from Imangala to Horakeredevarapura and on to Chitrahalli.

Q.—257. Sri S. RANGA RAO (Chitaldrug District—General).—

Will the Government be pleased to state :—

(a) whether there is a proposal for the formation of an I. V. C. Road from Imangala to Horakeredevarapura and on to Chitrahalli in Chitaldrug District;

(b) the amount of estimate and whether it has been sanctioned ; if not, why ;

(c) for how long the said proposal is pending ?

A.—The Hon'ble Sri T. MARIAPPA (Home Minister).—

(a) to (c) Information is being collected.

Sri S. RANGA RAO.—In view of the answer given to the Member who spoke previously I will wait for the information.

SHORT NOTICE QUESTION AND ANSWER.

Sri D. H. Chandrasekharaiya's seat in the Assembly consequent on his appointment as Chairman of certain committees.

Q.—16. Sri K. SAMPANGI RAMAIAH (Kolar District—General).—

Will the Government be pleased to state :—

(a) whether it is a fact that Sri D. H. Chandrasekharaiya, a member of this House, has been appointed—

(i) Chairman of the Beggar Relief Committee;

(ii) Chairman of the Committee for Indigenous Medicine ;

(b) if so, the emoluments, allowances, or other perquisites attached to each of these offices ;

(c) whether these offices are not the offices of profit within the meaning of the Constitution ;

(d) owing to the said appointment, does not the Hon'ble Member's seat become vacant in the Legislature ;

(e) whether they have taken legal opinion in the matter ;

(f) the steps they have taken to bring this matter to the attention of the Hon'ble Speaker ?

A.—The Hon'ble Sri K. T. BHASHYAM (Minister for Law and Labour).—

(a) Yes.

(b) Rs. 500 Honorarium per month *plus* Rs. 150 conveyance allowance per month.

(c) This is a matter of opinion.

(d) No. *Vide* Section 2 and item 2 of Schedule to Mysore Legislature (Prevention of Disqualification) Act, 1951.

(*e*) Yes.

(*f*) In view of answer to (*d*) no such necessity arose.

ಶ್ರೀ ಕೆ. ಸಂಪಂಗಿರಾಮಯ್ಯನವರು.—(ಬಿ) ಪ್ರಶ್ನೆಗೆ ಉತ್ತರವಾಗಿ 500 ರೂಪಾಯಿ ಆನರೇರಿಯಂ 150 ರೂಪಾಯಿ ವಾಹನಭತ್ಯೆ (Conveyance allowance) ಎಂದು ಹೇಳಿದ್ದೀರಿ. ಒಂದೊಂದು ಹುದ್ದೆಗೆ ಅಷ್ಟೇ ಅಥವಾ ಎರಡೂ ಅದರಲ್ಲಿ ಸೇರಿದೆಯೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಎಲ್ಲಾ ಸೇರಿ 500 ರೂಪಾಯಿ ಆನರೇರಿಯಂ, 150 ರೂಪಾಯಿ ಕನ್ವೇಯನ್ಸ್ ಅಲೋಯನ್ಸು.

ಶ್ರೀ ಕೆ. ಸಂಪಂಗಿರಾಮಯ್ಯನವರು.—(ಸಿ) ಪ್ರಶ್ನೆಗೆ ಉತ್ತರವಾಗಿ 'This is a matter of opinion" ಎಂದು ಹೇಳಿದ್ದೀರಿ. ಸರ್ಕಾರದ ಅಭಿಪ್ರಾಯ ಏನು?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—It is an office of profit. That is why we passed the Mysore Legislature Prevention of Disqualification, Act.

ಶ್ರೀ ಕೆ. ಸಂಪಂಗಿರಾಮಯ್ಯನವರು.—Mysore Legislature Prevention of Disqualification Act apply ಆಗುತ್ತದೆ ಎಂದು ಹೇಳುತ್ತೀರಿ. ಇಲ್ಲಿ ನಾವು ಪಾಸ್‌ಮಾಡಿರತಕ್ಕ ಆಕ್ಟಿಗೆ ಇದು ವಿರೋಧವಾಗುವುದಿಲ್ಲವೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಆಗುವುದಿಲ್ಲ.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಈ ಎರಡು ಕಮಿಟಿಗಳ ಚೇರ್ಮನ್‌ರ ಕೆಲಸಗಳು ಏನೇನು?

The Hon'ble Sri K. T. BHASHYAM.—Conduct the work of the committees, preside over the committee meetings, carry out the policies recommended by the committee and implement the resolutions of the committee and so on.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಅವರು ಎಲ್ಲೆಲ್ಲಿ ಓಡಾಡಬೇಕಾಗುತ್ತದೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—Beggar Relief Committee ವಿಷಯದಲ್ಲಿ ಕಾರ್ಪೋರೇಷನಿಯಿಂದ ಆಫೀಸಿಗೆ ಓಡಾಡಬೇಕಾಗಬಹುದು. ಊರಿನ ಒಳಗೂ ಒಂದೊಂದು ಸಲ ಹೋಗಬೇಕಾಗುತ್ತದೆ. Indigenous medicine ವಿಷಯದಲ್ಲಿ ಎಲ್ಲೆಲ್ಲಿಗೆ ಹೋಗಬೇಕಾಗುತ್ತದೆಂಬುದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಗಿಡ, ಮೂಲಿಕೆಗಳಿಗೆ ಸಂಬಂಧಪಟ್ಟಂತೆ, ಎಲ್ಲಿಗಾದರೂ ಹೋಗಬೇಕಾಗಬಹುದೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಆ ರೀತಿ ಎಲ್ಲಾದರೂ ಸಂಚಾರ ಮಾಡಬೇಕಾಗಿ ಬಂದರೆ ಮಾಡಬಹುದು.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಮೊದಲು ಈ ಹುದ್ದೆಗಳನ್ನು ಯಾವ ಮಂತ್ರಿಗಳು ಇಟ್ಟುಕೊಂಡಿದ್ದರು.

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—1947ನೇ ಅಕ್ಟೋಬರ್‌ನಿಂದ 1950ನೇ ಜನವರಿ ವರೆಗೂ ಅವರೇ ನೋಡುತ್ತಾ ಇದ್ದರು. ಅಲ್ಲಿಂದೀಚೆಗೆ ನಾನು ನೋಡುತ್ತಾ ಇದ್ದೆ.

ಶ್ರೀ ಕೆ. ಸಂಪಂಗಿರಾಮಯ್ಯನವರು.—1947 ರಿಂದ ಇಲ್ಲಿಯುವರೆಗೂ ನಡೆಯುತ್ತಾ ಇದ್ದ ಕೆಲಸಕ್ಕೆ ಹೆಚ್ಚು ಖರ್ಚಾಗುತ್ತಾ ಇತ್ತೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಆ ಸಮಿತಿಗಳ ಚೇರ್ಮನ್ ಆಗಿದ್ದಕ್ಕೆ ಹೆಚ್ಚಿಗೆ ರೆಮ್ಯುನರೇಷನ್ ಏನೂ ಕೊಡುತ್ತಾ ಇರಲಿಲ್ಲ.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಹಾಗಾದರೆ ಈಗ ರೆಮ್ಯುನರೇಷನ್ ಕೊಡಲು ಕಾರಣವೇನು?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಆಗ ಮಂತ್ರಿಗಳಾಗಿದ್ದು ಆ ಕೆಲಸ ಮಾಡುತ್ತಾ ಇದ್ದರು. ರೆಮ್ಯುನರೇಷನ್ ಇರಲಿಲ್ಲ. ಈಗ ಮಂತ್ರಿಗಳಾಗಿಲ್ಲದೇ ಇರುವ ಕಾರಣ ರೆಮ್ಯುನರೇಷನ್ ಕೊಡಬೇಕು.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಮಂತ್ರಿಗಳಲ್ಲೇ ಒಬ್ಬರು ಆ ಕೆಲಸ ಮಾಡುತ್ತಿದ್ದು ಈಗ ಇವರನ್ನು ನೇಮಕಮಾಡಬೇಕಾದ ಅಗತ್ಯ ಏನಿತ್ತು?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಈ ಮಂತ್ರಿಗಳಿಗೆ ಕೆಲಸ ಬಹಳ ಜಾಸ್ತಿ ಆಯಿತು ಎಂದು ನೇಮಕ ಮಾಡಿದರು. ಮೊದಲಿನಿಂದಲೂ ಕೆಲಸ ಜಾಸ್ತಿ ಎಂದು ಹೇಳುತ್ತಾ ಇದ್ದೆವು. ನೇಮಕಮಾಡುವುದು ಸ್ವಲ್ಪ ತಡವಾಗಿತ್ತು.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಮೊದಲು ಎಂದರೆ ಯಾವ ತಾರೀಖಿನಿಂದ ಯಾವ ವರ್ಷದಿಂದ ಜಾಸ್ತಿ ಆಯಿತು?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—1947ನೇ ಇಸವಿಯಲ್ಲಿ ಅವರು ಆ ಕೆಲಸ ಕೈಗೊಂಡಾಗಲೇ ಹೆಚ್ಚು ಎಂದು ಹೇಳುತ್ತಾ ಇದ್ದರು. ಆದರೂ ಹಾಗೇ ನಡೆಸುತ್ತಾ ಬಂದರು. ಏಕದಂ ಮಧ್ಯೆ ಅವರ ಹುದ್ದೆ cease ಆಯಿತು. ನಾನು ಕೊಂಚ ಕಾಲ ನಡೆಸಿದೆ. ಕೆಲಸ ಹೆಚ್ಚು ಅಷ್ಟು ಸಮರ್ಪಕವಾಗಿ ನಡೆಸುವುದಕ್ಕಾಗುವುದಿಲ್ಲವೆಂದು ಅವರನ್ನು ನೇಮಕ ಮಾಡಿತೆ.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಆ ಸಮಿತಿಗಳ ಚೇರ್ಮನ್ ಆಗಬೇಕಾದವರಿಗೆ ಇರಬೇಕಾದ ಕ್ವಾಲಿಫಿಕೇಷನ್ ಏನು?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅನುಭವ, ಕರುಣೆ, ಬಡವರ ಬಾಂಧವ್ಯ, ವಿಶ್ವಾಸ, ಭೂತದಯಾ ಪಶ್ಚಾತ್ತಾಪ ಮುಂತಾದುವುಗಳು ಇರಬೇಕು.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಈ ಗುಣಗಳು ತಮ್ಮಲ್ಲಿ ಇಲ್ಲವೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ನನ್ನಲ್ಲಿ ಸ್ವಲ್ಪ ಇತ್ತು. ಅವರಲ್ಲಿ ಪೂರ್ಣವಾಗಿದೆ.

(ಸಭೆಯಲ್ಲಿ ನಗು.)

ಶ್ರೀ ಜಿ. ಎ. ಆಚಾರ್ಯರು (ಬೆಂಗಳೂರು ಜಿಲ್ಲೆ).—ತಮಗೆ ಆ ಕೆಲಸ ಎಲ್ಲಾ ಮಾಡುವಷ್ಟು ಕಾಲಾವಕಾಶವಿತ್ತೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇರಲಿಲ್ಲ ಎಂದು ಆಗಲೇ ಹೇಳಿದೆ.

QUESTIONS FOR ANSWERS ON THE DAY.

(Not taken up).

Tanks in service and in need of repairs.

Q.—81. Sri H. SIDDAVEERAPPA (Chitaldrug District—General).—

Will the Government be pleased to state:—

(*a*) the number of tanks in the State that are actually under service and the acreage of *atchkat*;

(*b*) the number of tanks in the State that are in need of repairs;

(*c*) the number of tanks that are in service in Chitaldrug District?

A.—The Hon'ble Sri T. MARIAPPA (Home Minister).—

(*a*) to (*c*) Information is being collected.

State Fund Road from Sravanabelagola to Krishnarajpet.

Q.—286. Sri D. GOVINDA DAS (Hassan District—Depressed Class).—

Will the Government be pleased to state:—

(*a*) whether any representation had been received by the previous Representative Assembly requesting for the formation of a State Fund Road from Sravanabelagola to Krishnarajpet *via* Kothagatta and Dammaningala;

(*b*) the length of the road and the cost of the estimate?

A.—The Hon'ble Sri T. MARIAPPA (Home Minister).—

(*a*) and (*b*) Information is being collected.

Tanks restored since January 1948 till now.

Q.—296. Sri B. CHANNA BYRE GOWDA (Bangalore District–General).—

Will the Government be pleased to state:—

(*a*) the number of major and minor tanks restored since January 1948 till now in the State (districtwar figures to be given);

(*b*) of these, the number completed in each district;

(*c*) with regard to those completed, when the estimates were prepared and the dates on which those estimates were sanctioned by Government and work commenced?

A.—The Hon'ble Sri T. MARIAPPA (Home Minister).

(*a*) to (*c*) Information is being collected.

MESSAGE OF HIS HIGHNESS THE RAJPRAMUKH.

***Re*.—Reconsideration of the Mysore Temple Entry Authorisation (Amendment) Bill, 1951.**

Mr. SPEAKER (The Hon'ble Sri V. Venkatappa).—I have received a message from His Highness which is as follows:—

"The Hon'ble Speaker, Mysore Legislative Assembly.

The Mysore Temple Entry Authorisation (Amendment) Bill, 1951, was passed by the Mysore Legislative Assembly on the 24th January 1951 and was presented to His Highness the Rajpramukh under Article 200 of the Constitution of India. His Highness the Rajpramukh reserved the Bill for the consideration of the President under Article 200 of the said Constitution.

2. The President has been pleased to direct His Highness the Rajpramukh in pursuance of the proviso to Article 201 of the said Constitution of India to return the Bill to the Mysore Legislative Assembly with a Message requesting that the Assembly may reconsider the Bill having regard to the provisions of Articles 17 and 35(a) (ii) of the Constitution.

3 Accordingly in pursuance of the provisions of the proviso to Article 201 read with the provisions of the first proviso to Article 200 of the Constitution of India, I, Jaya Chamaraja Wadiyar, Rajpramukh of Mysore, recommend to the Mysore Legislative Assembly that they do reconsider the Mysore Temple Entry Authorisation (Amendment) Bill, 1951, having regard to the provisions of Articles 17 and 35(a) (ii) of the Constitution, and I appoint the Hon'ble Sri H. Siddaiya, Minister for Revenue and Excise, to be the Member in charge of the Bill."

JAYA CHAMARAJA WADIYAR,
Maharaja of Mysore.

ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).— ನಾನು ಒಂದು ವಿಶೇಷ ನಿರ್ಣಯವನ್ನು ಕಳುಹಿಸಿದ್ದೆ. ಅದರ ವಿಚಾರ ಏನಾಯಿತು ?

ಅಧ್ಯಕ್ಷರು.—ವಿಚಾರಿಸುತ್ತೇನೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು (ಬೆಂಗಳೂರು ಜಿಲ್ಲೆ).—ಬೆಂಗಳೂರು ನಗರದಲ್ಲಿ ವೀಳೆದೆಲೆಗೆ ಸೇಲ್ಸ್ ಟ್ಯಾಕ್ಸ್ ಹಾಕುತ್ತಿರುವ ವಿಚಾರದಲ್ಲಿ ಒಂದು ಅಲ್ಪ ಕಾಲಾವಧಿ ಪ್ರಶ್ನೆ ಕಳುಹಿಸಿದ್ದೆ. ಅದಕ್ಕೆ ಉತ್ತರ ಕೊಡಲಿಲ್ಲ.

Mr. SPEAKER.—How can it be a short notice question? It is not of an urgent nature. It has been disallowed.

Sri K. R. SREEKANTESWAR.—When it is agitating the minds of many it is urgent.

Mr. SPEAKER.—There may be agitation on any subject at any time; how could that become a short notice question?

LEGISLATIVE BUSINESS

The Mysore Inam Villages (Abolition of Inam Tenure) Bill, 1951.

Motion to consider (contd.)

Mr. SPEAKER (The Hon'ble Sri V. Venkatappa).—Further discussion on the motion to consider the Mysors Inam Villages (Abolition of Inam Tenure) Bill, 1951, as reported by the Select Committee will be resumed.

***Janab MAHMOOD SHARIFF** (Mysore *cum* Mandya *cum* Hassan—Muslim).—Mr. Speaker, Sir, the draft Bill proposing the abolition of inams and jahagirs, I am sure everybody will agree with me, is a very important legislative measure. It really constitutes a landmark in the history of our land and if this beneficent measure is placed on the statute book, it is not only going to further enhance the reputation of the Mysore State but will also secure the blessings of thousands of poor peasants living in the inam villages in the State. This goes to indicate that Mysore is trying to steal a march over other States in the matter of agrarian reforms. The proceedings in the previous legislatures of Mysore indicate that all people, whatever shades of opinion they belonged to, had thought that it was time for something substantial to be done in order to improve the lot of our peasants. Several questionnaires were issued, Committees were appointed in order to make a survey of the agrarian conditions prevailing in the State and to propose measures for the betterment and improvement of the lots of our peasants. Although there was difference of opinion regarding as to how, in what manner and at what stages these reforms should be implemented, there were no two opinions with regard to the matter that the lot or the condition of the peasants, which was not at all enviable, should have to be improved.

So far as the system obtaining in the State is concerned, it is old, it is outmoded and it does not deserve to continue as such. The impact of Western ideas, particularly ideas coming to us from Russia, gave incentive to our legislators and so this problem came to the fore with the result that every part of India took this matter seriously. So far as Mysore is concerned, as it formed a very important and progressive unit of the Indian Republic, it did not want to lag behind and now they have placed before us a Bill.

So far as Inams are concerned, I am sorry to say that conditions there are not satisfactory. It was expected that the Inamdars would have sympathy, vision and human touch in their relationship with their tenants and would improve their conditions. It was further expected that the Inamdars, who were the trustees charged with the solemn task of promoting the interest and the well-being of the peasants of their villages, would bring about the desired conditions. But, unfortunately, these ideas did not materialize with the result that the conditions prevailing in the inam villages are really deteriorating and the inam villages thus present a doleful picture. It was my privilege, when supervising the activities of the Medical Department as a Minister, to go into several of these inam villages and I have seen the conditions. They are doleful. What the Hon'ble Member Sri H. M. Channabasappa said

* Asterisks indicate that the speeches concerned have not been returned approved by the Hon'ble Member.

(JANAB MAHMOOD SHARIFF).

the other day, that the conditions of the people living in the inam villages are such which will excite sympathy from everybody is a fact. I went, as a matter of fact, to Gandanahalli. I have no time now to place before the House the picture of the doleful conditions prevailing in that village and so I will confine myself to saying that conditions there are very disgraceful. In order to eliminate such conditions, this Bill is placed before us. And everybody having some sympathy will, I think, not hesitate to extend his support to the principles which underlie this Bill.

This Bill wants to place the peasant on a higher pedestal; it wants to confer upon him a higher status; it wants to see that the characteristic relationship between the land-lord and the tenant is bettered. I do not think that there are any two opinions regarding the fact that so far as the persons living in these inams are concerned, their conditions will have to be improved. Therefore Sir, so far as the principles underlying are concerned, I am foremost in extending my support to the Bill.

There are two or three questions connected with this. What should happen to the religious and the private inams? That question has been seriously engaging the attention of many of our legislators It is argued that there must be uniformity in the application of the bill, that the provisions of this Bill must apply to all inams irrespective of the fact whether it is a private inam or a religious inam; that these are days in which we have to free ourselves from religious orthodoxies. It is said very vehemently, that Nawabs and Maharaja's who in the past wielded very great powers have now to face reverses. The Swamiji, the Guru who is in charge of the Sringeri Mutt who, as a matter of fact, is a religious person placed in that highest position, is after all a Sanyasi. Why should he have this temporal significance? Why should he be burdened with mundane affairs? Why should such a great religious person who has merely spiritual outlook before him, who has been called upon to discharge the religious duties of the Mutt, who is to provide spiritual nutriment, be burdened with these mundane matters? Why should property vest in him? Such are some of the objections raised. It is better for us, Sir, to pause awhile and analyse this problem not emotionally but coolly. I think it is Broom's Magazine which says, "Human things never prosper when divine things are neglected". The other day I read Broom's Magazine and again and again it is reiterated that human things never prosper when divine things are neglected. Too much materialism, as a matter of fact, has entered our brains. Nowadays on account of the impact most probably of Western science and learning, we are rather more and more prone to draw opinions and regard religion as a thing which should not be given particular attention. But I would request my colleagues that in this matter in general and also in the matter how best we have to dispose of the Sringeri Mutt question in particular, they must consider them cooly without giving room for any emotion. Let us consider all aspects of the question and come to some decision which would be fair. I was just now saying that we are people who are prone to think of matters very materialistically with the result that the old sanctity, the sacrosanctity which the priests, the religious people attracted once, unfortunately is given now a go-by. That Sir, is a very deplorable condition resulting in discontent, uneasiness and unrest which is not only characteristic of India in particular but also outside in general.

In the very first place, to call the Guru of Sringeri Mutt or any other religious institution placed in his capacity, as Inamdar or jagirdar is a misnomer. I would go to the length of saying that he should never have been called by that appellation. He cannot be a jagirdar. He cannot be called as an inamdar. Jagirs and inams granted to such religious institutions carry with them a certain amount of temporal significance. That has got a mundane connotation about that. Jagirs and inams were granted to persons who have done some very good service either to the State or to the king as the case may

be. And they are granted so that himself so long as he lives and after him his progeny may prosper well not being subjected to poverty. In this case, we are dealing with the Guru belonging to the Sringeri Mutt. He has not got any selfish ends. He has no burdens of family. He has not got any children or any kinsmen for whose benefit these inam lands should be possessed. He is so to speak the representative of a very good idea. He is so to speak Messenger of God. And so far as the property is concerned, it is property which enures to the benefit of the whole world; the yield from property is utilised not for his own sake but for the sake of people who go to worship in the temple day in and day out in order to receive spiritual guidance from this Guru. Therefore, from the very beginning, I have been feeling that calling this Guru with the terminology of inamdar or jagirdar, with due deference to the framers of this Bill, is not proper and I wish they had revised their idea and deleted this word. He is not the jagirdar, he is not the inamdar at all. So what I submit is that it is a misnomer to call him by that name. As I said Sir, he represents one idea. His services in the mutt are reserved in order to promote the spiritual benefit of the persons who go to that place.

And then so far as the history of this mutt is concerned, it is not necessary for me to dilate upon it because every one of you know how Sri Shankaracharya, that great reformer went and travelled all over India. He wanted to establish four mutts in different places to secure unity in the spiritual outlook of the people. This mutt that we are now discussing is the biggest. Even supposing you are going to divest the Guru of all the lands, I want to ask one question: what about the Papacy and the papal throne? I mean the Vatican? As a matter of fact, there are millions of catholics spreading themselves all over the world and all of them will rise......

Sri B. HUTCHE GOWDA.—So you want another sovereign State within a State?

Janab MAHMOOD SHARIFF.—I am coming to that. What about Papacy? If anybody were to suggest that the vatican is to be divested of the lands which have been granted to him, I think all the Catholic Christian friends will certainly rise in revolt against and they will be justified in rising in revolt. This is there for centuries and persons who have got some religious reverence look to this mutt for guidance and so far as the authority and prestige are concerned, if they are to be maintained and sustained, they want that certain estates must be given to him to manage his affairs. So that let us not view these things from a narrow standpoint. The Christians, persons living in Europe who I think are certainly as wise as we are, who are people with scientific approach, who have a scientific outlook, inspite of that, if they require that the Pope should be left with his estates, it is all the greater reason why we should allow these estates to continue with the Guru. Therefore, it seems to me Sir, that it would be not very wise for us to bring about a change so far Sringeri Mutt is concerned. The one thing which I do not like is divesting him of his property. It is proposed that the lands belonging to the Guru or to the Mutt be divested and vested in the Government. The significance of that somehow, I cannot imagine. His importance is recognised; it has been acknowledged in various dynasties that ruled the kingdom of Mysore. What happened during the time of Tippu Sultan? Though he was a Muslim, he has given grants and he has granted inams to the mutt. Inams have been augmented in his time. They wanted to implore the blessings of the Guru and they wanted that the Guru should pray God for the prosperity of the State. So that, so many kingdoms have come and gone, but so far as the mutt is concerned, it stands as the standard-bearer, so to speak, of the spiritual eminence.

Sri A. BHEEMAPPA NAIK.—Do you say the same in respect of all the other inam lands?

Janab MAHMOOD SHARIFF.—Yes. The burden of my s ng is that. Therefore, I say that so far as the provisions

(JANAB MAHMOOD SHARIFF)

covering the mutt are concerned, somehow I feel that they are not very palatable to me at least. Recently, we have heard that so far as preserving Mahatma Gandhi's burial place is concerned, namely Rajghat, a Bill has been passed and I know it for certain that people are going to endow thousands and thousands of acres of land and estates so that the name of that great saint is perpetuated.

Sri A. BHEEMAPPA NAIK.—What about the cultivators of these lands?

Janab MAHMOOD SHARIFF.—I am coming to that. What about the Ajmer Durga? About two or three years ago it was found that certain measures were called for in order to ensure its proper management. It is the burial place of '*Kistig*'. Thousands of rupees worth estates are there and a Bill was passed in that behalf to see that the estates are properly managed. The Durga has not been divested of the property.

One question was asked, what about these tenants who are in charge of these lands? Should they not be provided, should they not be ameliorated, should not the condition of these people be bettered? As a matter of fact, I think the survey settlement itself was effected in the year 1899, and these people are all very happy. Why should you interfere now? A person connected with the Government is placed in charge of these estates. It is he who administers these estates. So, I do not know why there should be mortal hurry so far as this jagir is concerned. So also other Jahgirs why should they be divested and vested in Government? I do not see eye to eye with those gentlemen who plead for the cause of these raiyats, who are of the opinion that they must be placed on a higher pedestal. Perfectly all right. But what I say is, for God's sake, do not try to see that the inams given to these important religious institutions are divested. So far as the general principles of the Bill are concerned, they deserve very great support from every part of the House. But so far as this particular measure is concerned relating to Sringeri Mutt, let us not include this mutt along with the provisions of the Bill.

Janab SYED ABDUR RAHMAN.—Do you include in it all religious institutions?

Janab MAHMOOD SHARIFF.—Far be it from my mind that it is to be confined only to Sringeri Mutt. I am pleading on behalf of all religious institutions. I want that all religious institutions should be exempted from the purview of the provisions of this Bill.

These institutions represent great ideas. These are some of the views which with your permission I wanted to place before this House, and I am sure all my friends here will take a sympathetic and a broad view and employ vision and see that this institution along with other institutions of religious nature are exempted from the operation of the provisions of this Bill.

Sri V. M. MASCARENHAS (Retroceded Area—General)—Ordinarily I should not have spoken on this Inam Bill, but a few comments of my friend Janab Mahmood Shariff have made me to rise to speak. His conception of Papacy unfortunately is wrong. He stated that the Pope has estates. I would like to correct that impression. The Pope has no estate—a very big difference from an estate. Being the religious head of 400 million Catholics, the Italian Government, Mussiloni's Government, made a 'concordat' with the Pope and said: "We shall divest you of all mundane authority over any State" and hence allotted certain portion of land in Rome where the Vatican has been existing for centuries and made him the supreme head and king of that little area. The analogy between the Sringeri mutt and the Papacy unfortunately, in my opinion, is not very sound. Secondly, there is no income accruing from that little area which the Vatican enjoys. The Vatican has been kept as a sacred place for two reasons—one, because it is the residence of the Pope, the head of the Catholic Church; secondly, it contains the Museum, Library and very many other treasures of Art and other very important precious relics of the Catholic Church. To

safeguard these, the Italian Government thought it best to divest that area of all other authority and hence made the Vatican as a State. That is the first point.

The second point is this. I do not agree with my friend Janab Mahmood Shariff when he says that the Sringeri Mutt should not come under Government control and that it should enjoy all the privileges that it is now enjoying. Normally perhaps we would have agreed, but considering that the benefits of the Sringeri Mutt go only to a particular group of people, that they are not universal, this cannot be conceded. What was good say hundred years ago, today in the 20th century, does not perhaps hold water. Social conditions in the country have changed. Our outlook on life itself has taken a new turn. It is these that must come into prominence when we view problems of this kind. He said that people had given up religious feelings. I do not think so. Religious feelings are there, but when large properties are vested in or given away to particular institutions, such institutions, I think, need a re-orientation in an age like this. So the members of the Select Committee who have made these recommendations have, I think, taken all this into consideration and I personally feel that I should wholeheartedly support what they have said.

* ಶ್ರೀ ಎಂ. ಎಸ್. ಜೋಯಿಸ್‌ರವರು (ಮೈಸೂರು ಜಿಲ್ಲೆ).—ಸ್ವಾಮಿ, ಈ ಜೋಡಿ ಮತ್ತು ಜಹಗೀರು, ಇನಾಂತಿಗಳನ್ನೆಲ್ಲಾ ರದ್ದುಮಾಡಬೇಕೆಂಬತಕ್ಕ ಮಸೂದೆ ಈಗ ನಮ್ಮ ಮುಂದೆ ಬರತಕ್ಕದ್ದು ಒಂದು ಬಹಳ ಸಂತೋಷದ ಸೂಚನೆಯಾಗಿದೆ. ಈ ಮಸೂದೆ ಬಹಳ ಕಾಲದ ಹಿಂದೆಯೇ ದೇಶದಲ್ಲಿ ಜಾರಿಗೆಬರಬೇಕಾಗಿತ್ತು. ಅದು ಹೋಗಲಿ, ಈಗಲಾದರೂ ಇದು ಬಂದಿತಲ್ಲಾ ಎಂದು ಸಂತೋಷಪಡತಕ್ಕವರಲ್ಲಿ ನಾನೂ ಒಬ್ಬನಾಗಿದ್ದೇನೆ. ಈ ಮಸೂದೆ ಬರುವುದಕ್ಕೆ ಮುಖ್ಯ ಕಾರಣಗಳೇನೆಂದರೆ ದೇಶದಲ್ಲಿರತಕ್ಕ ಜೋಡಿ, ಜಹಗೀರಿ ಮತ್ತು ಇನಾಂದಾರರುಗಳ ಆಡಳಿತಕ್ಕೊಳಪಟ್ಟ ಗ್ರಾಮಗಳಲ್ಲಿರುವ ಜನರು ಮತ್ತೂ ಸಂಸ್ಥಾನಾಮಳೆ ಇತರೇ ಸರ್ಕಾರಿ ಗ್ರಾಮಗಳಲ್ಲಿರತಕ್ಕ ಜನರ ಒಂದು ತಾರತಮ್ಯವೇನಿದೆ, ಈ ತಾರತಮ್ಯವನ್ನು ಹೋಗಲಾಡಿಸಿ ದೇಶಾದ್ಯಂತವೂ ಇರತಕ್ಕ ರೈತರುಗಳಿಗೆಲ್ಲಾ ಒಂದೇ ಸಮನಾದ ಅನುಕೂಲಗಳಿರಬೇಕೆಂಬ ಉದ್ದೇಶದಿಂದಲೇ ಇದನ್ನು ತರಲಾಗಿದೆ. ಹೀಗೆ ದೇಶದಲ್ಲಿ ಒಂದು ಕಡೆ ರೈತರಿಗೆ ಆಗುತ್ತಿರುವ ಕಷ್ಟಗಳನ್ನು ನೋಡಿಕೊಂಡು ದೇಶದಲ್ಲಿರತಕ್ಕ ಜನರು ಸುಮ್ಮನೆ ಕಣ್ಣು ಮುಚ್ಚಿಕೊಂಡು ಕುಳಿತಿರಲು ಸಾಧ್ಯವಿಲ್ಲ. ಆದುದರಿಂದಲೇ ಈಗ ಈ ಮಸೂದೆ ನಮ್ಮ ಮುಂದೆ ಬಂದಿದೆ. ಆ ಕಷ್ಟಗಳನ್ನೆಲ್ಲಾ ನಿವಾರಣೆ ಮಾಡತಕ್ಕದ್ದು ಅವಶ್ಯಕ. ಹಾಗೆ ಅವರಿಗೆ ಅನೇಕ ರೀತಿಯಲ್ಲಿ ತೊಂದರೆಗಳಿರುವುದೂ ನಿಜ. ಈ ದೃಷ್ಟಿಯಿಂದ ಈ ಮಸೂದೆ ಬಂದಿದೆ. ಈ ಮಸೂದೆಯಲ್ಲಿ ಅನುಕೂಲ ಪಡೆಯುತಕ್ಕ ಅವಕಾಶಗಳು ಅನೇಕವಿವೆ. ಜೋಡಿ ಇನಾಂ ಗ್ರಾಮಗಳಲ್ಲಿರತಕ್ಕ ರೈತರನ್ನು ಒಂದು ಉತ್ತಮಸ್ಥಿತಿಗೆ ತರಲು ಮಾರ್ಗ ಮಾಡಿದೆ. ಹಿಂದೆ ಇಂಥಾ ಮಾರ್ಗಗಳ್ಯಾವವನ್ನೂ ಆ ಜೋಡಿ, ಇನಾಂ ಮತ್ತು ಜಹಗೀರುದಾರರು ಮಾಡಿರುವುದಿಲ್ಲ. ಆದರೆ ಹೀಗೆ ಒದಗಿಸಲಾಗಿರುವ ಅನುಕೂಲತೆಗಳ ಬಗ್ಗೆ ಪ್ರತಿಯೊಂದು ಅಂಶಗಳನ್ನೂ ಗಣನೆಗೆ ತೆಗೆದುಕೊಂಡು ಮಾತನಾಡುವುದಕ್ಕೆ ಮುಂದೆ ಇನ್ನೂ ಕಾಲಾವಕಾಶವಿದೆ. ಪ್ರತಿಯೊಂದು ಸೆಕ್ಷನ್ನನ್ನೂ ಚರ್ಚೆಗೆ ತೆಗೆದುಕೊಂಡಾಗ ಅನುಕೂಲ ಅಥವಾ ಪ್ರತಿಕೂಲಗಳ ಬಗ್ಗೆ ಎಲ್ಲೆಲ್ಲಿ ಹೆಚ್ಚಾಗಿದೆ, ಎಲ್ಲೆಲ್ಲಿ ಕಡಮೆಯಾಗಿದೆಯೆಂಬುದನ್ನು, ಅಥವಾ ಹಾಗೆ ಕಡಮೆ ಇದ್ದ ಕಡೆ ಅದನ್ನು ಸೂಕ್ತ ರೀತಿಯಲ್ಲಿ ಕ್ರಮಪಡಿಸತಕ್ಕ ಬಗ್ಗೆ ನಾನು ಮುಂದೆ ಅವಕಾಶ ದೊರೆತಾಗ ತಿಳಿಸುತ್ತೇನೆ.

ನನಗಾದರೂ, ಜನಾಬ್ ಮಹಮ್ಮದ್ ಷರಿಫ್‌ರವರು ತಿಳಿಸಿದ ಹಾಗೆ, ಒಂದೊಂದು ವಿಷಯದಲ್ಲಿ ಸಾಮಾನ್ಯ ಚರ್ಚೆಮಾಡಬಹುದೇ ಹೊರತು, ಎಲ್ಲಾ ವಿಷಯಗಳ ಮೇಲೂ ಚರ್ಚೆಗೆ ಆರಂಭಿಸುವುದು ಸರಿಯಿಲ್ಲವೆಂದು ಅನಿಸುತ್ತದೆ. ಆದರೆ ಈ ಜೋಡಿ, ಜಹಗೀರುಗಳನ್ನು ರದ್ದುಪಡಿಸಬೇಕೆಂದು ಹೇಳುವಾಗ ಅವುಗಳನ್ನು ತತ್ಪೂರ್ವದಲ್ಲಿ ಯಾವ ಉದ್ದೇಶದಿಂದ ಕೊಡಲಾಗಿತ್ತು ಎಂಬುದನ್ನೆಲ್ಲಾ ಆಮೂಲಾಗ್ರವಾಗಿ ನೋಡಬೇಕಾದ್ದು ಒಂದು ಮುಖ್ಯ ವಿಚಾರ. ಅವುಗಳ ಮೂಲ ವೃತ್ತಾಂತವನ್ನೆಲ್ಲಾ ಗ್ರಹಿಸಿದನಂತರ ಅವುಗಳು ಆ ಉದ್ದೇಶಗಳನ್ನು ಎಷ್ಟರಮಟ್ಟಿಗೆ ಕಾರ್ಯ ರೂಪದಲ್ಲಿ ನಡೆಸುತ್ತಿವೆ, ಯಾವುವು ನಡೆಸುತ್ತಿಲ್ಲ ಎಂಬುದನ್ನು ಪರಿಶೀಲನೆ ಮಾಡಿಕೊಂಡು, ಅನಂತರ ಅವುಗಳ ಬದಲಾವಣೆಗೆ ಪ್ರಯತ್ನಿಸತಕ್ಕದ್ದು ಸಾಧುವಾಗಿದೆ. ಈ ಮುಖ್ಯಾಂಶಗಳ ಹೊರತು ಸುಮ್ಮನೆ ಆ ಗ್ರಾಮಗಳಲ್ಲಿರತಕ್ಕ ಜನರಿಗೆ ಏನೂ ಕಿರುಕುಳವಿಲ್ಲವೆಂದು ಹೇಳತಕ್ಕವರ ಪೈಕಿ ನಾನೊಬ್ಬನಲ್ಲ. ಅನೇಕರಿಗೆ ಕೊಟ್ಟಿರತಕ್ಕ ಇನಾಂಗಳು ನಾನಾ ಕಾರಣಗಳಿಂದ ಕೊಡಲ್ಪಟ್ಟಿವೆ. ಮೊದಲನೆಯದಾಗಿ, ಯುದ್ಧದಲ್ಲಿ ಪರಾಕ್ರಮವನ್ನು ತೋರಿಸಿದ್ದಂಥವರಿಗೆ ಕೆಲವು ಇನಾಂತಿಗಳನ್ನು ಕೊಟ್ಟಿದ್ದಾರೆ. ಅದೇ ರೀತಿಯಾಗಿ ದೇಶದ ಸೇವೆಯನ್ನು ಮಾಡಿರತಕ್ಕ ಜನಗಳಿಗೂ ಇನಾಂತಿಗಳನ್ನು ಕೊಟ್ಟಿದ್ದಾರೆ. ಯಾವುದಾದರೂ ಒಂದು ವಿದ್ಯೆಯಲ್ಲಿ ಬಹಳ ಪ್ರವೀಣರಾಗಿದ್ದಂಥವರಿಗೂ ಇನಾಂತಿಗಳು ಕೊಡಲ್ಪಟ್ಟಿವೆ. ಇಷ್ಟೇ ಅಲ್ಲದೆ ಈ ಇನಾಂತಿಗಳನ್ನು ಬಹಳ ಸೇವೆ ಸಲ್ಲಿಸಿಕೊಂಡು ವಂಶಪಾರಂಪರ್ಯವಾಗಿ ಆ ಸೇವೆಯನ್ನು ತಪ್ಪದೆ ನಡೆಸಿಕೊಂಡು ಬರಬೇಕೆಂಬ ಕಾರಣದ ಮೇಲೂ ಇನಾಂತಿಗಳನ್ನು ಕೊಟ್ಟಿದ್ದಾರೆ. ಹೀಗೆ ನಾನಾ ಕಾರಣಗಳಿಂದ, ಮತ್ತು ನಾನಾ ಉದ್ದೇಶಗಳಿಗಾಗಿ ಈ ಇನಾಂತಿಗಳು ಯಾರು ಯಾರಿಗೆ ಕೊಡಲ್ಪಟ್ಟಿವಯೋ ಅಂಥಾ ಅನೇಕ ಸನ್ನಿವೇಶಗಳಲ್ಲಿ ನೋಡಿದರೆ ಅವುಗಳು ಎಷ್ಟರಮಟ್ಟಿಗೆ ತಮ್ಮ ಕೆಲಸ ಕಾರ್ಯಗಳನ್ನು ತಾವು ನಡೆಸಿಕೊಂಡು ಬರಬೇಕೋ, ಅಷ್ಟರಮಟ್ಟಿಗೆ ನಡೆಸಿಕೊಂಡು ಬರುತ್ತಿಲ್ಲವೆಂಬುದು ಕಂಡುಬರುತ್ತದೆ. ಅಂತೂ ಅನೇಕ ಸಂದರ್ಭಗಳಲ್ಲಿ ಅನೇಕ ಇನಾಂತಿಗಳನ್ನು ಯಾವ ಒಂದು ಉದ್ದೇಶಕ್ಕಾಗಿ ಕೊಡಲಾಗಿತ್ತೋ ಆ ಉದ್ದೇಶ ಈಗ ನೆರವೇರುತ್ತಿಲ್ಲ.

(ಶ್ರೀ ಎಂ. ಎಚ್. ಜೋಯಿಸ್‌ರವರು.)

ವೆಂಬುದು ಕಂಡು ಬಂದಿರುತ್ತೆ. ಈ ಕಾರಣದಿಂದಲೂ ನಾವು ಈ ಇನಾಂತಿಗಳು ಒಂದು ಸರಿಯಾದ ವ್ಯವಸ್ಥೆಯಿಂದಿರುವಂತೆ ಸರಿಪಡಿಸತಕ್ಕದ್ದು ನಮ್ಮಗಳ ಕರ್ತವ್ಯವಾಗಿದೆ. ಆ ಕರ್ತವ್ಯ ಸಹ ಈ ಬಿಲ್ಲಿನಿಂದ ಆಗುತ್ತದೆಂದು ನಾನು ಭಾವಿಸಿದ್ದೇನೆ.

ಆದರೆ ಜಹಗೀರಿಯನ್ನು ಕೊಟ್ಟಿರುವಾಗ ಅಥವಾ ಇನಾಂತಿಯನ್ನು ಕೊಟ್ಟಿರುವಾಗ ಯಾವ ಸಂದರ್ಭದಲ್ಲಿ ಕೊಟ್ಟಂಥ ಇನಾಂತಿ ಈ ಶೃಂಗೇರಿ ಎಂಬುದನ್ನು ನಾವು ಯೋಚನೆ ಮಾಡಬೇಕು. ನಾನು ಮೊದಲೇ ಹೇಳಿದ ಹಾಗೆ ಯಾವುದೋ ಹುದ್ದೆಯಲ್ಲಿ ಶ್ರದ್ಧೆಯನ್ನು ತೋರಿಸಿದ್ದರಿಂದ ಅಥವಾ ಇನ್ಯಾವ ಸಂದರ್ಭದಲ್ಲೋ ಸೇವೆ ಮಾಡಿದ್ದರಿಂದ ಇನಾಂ ಕೊಟ್ಟಿರುವುಧು ಒಂದು ಗುಂಪು. ಅದನ್ನು ಬಿಟ್ಟರೆ ತಮ್ಮಿಷ್ಟಕ್ಕೆ ತಾವೇ ದೈವ ಭಕ್ತರಾಗಿ ತಪಸ್ಸನ್ನಾಚರಿಕೊಂಡು ಇದ್ದವರಿಗೆ ಇನಾಂತಿಯನ್ನಾಗಲಿ, ಜಹಗೀರಿಯನ್ನಾಗಲಿ ಕೊಟ್ಟರೆ ಅದರ ಜವಾಬ್ದಾರಿ, ಅದರ ಆಡಳಿತ ವಹಿಸಿಕೊಂಡಿರುವವರು, ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿ ತಮ್ಮ ಕೆಲಸ ಕಾರ್ಯಗಳನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಿ ದೇಶದಲ್ಲಿ ಒಂದು ಸಂಸ್ಕೃತಿಯನ್ನು ಬೆಳೆಸಿಕೊಂಡು ಬರಬೇಕು. ಆ ಸಂಸ್ಕೃತಿಯಿಂದ ದೇಶಕ್ಕೆ ಕಲ್ಯಾಣವಾಗುತ್ತದೆ ಎಂಬ ನಂಬಿಕೆಯಿದ್ದು ಬೇಕಾದಷ್ಟು ರಾಜಮಹಾರಾಜರುಗಳು ಈ ವಿಧವಾದ ಇನಾಂತಿಗಳನ್ನು ಕೊಟ್ಟಿದ್ದಾರೆ. ಶೃಂಗೇರಿ ಜಹಗೀರು ಈ ದಿವಸ ಜಹಗೀರಿಯೆಂದು ಮೈಸೂರು ಸಂಸ್ಥಾನದಲ್ಲಿ ಇರುವುದು 1899ನೆಯ ಇಸವಿಯಿಂದೀಚೆಗೆ. ಅದಕ್ಕೆ ಮೊದಲು ಆ ಜಹಗೀರಿಗೆ ಯಾವುದಾದರೂ ಒಂದು ಗ್ರಾಮ ಅಥವಾ ಯಳಂದೂರಿಗೆ ಕೊಟ್ಟ ಹಾಗೆ ಒಂದು ತಾಲ್ಲೂಕು ಕೊಟ್ಟಂತೆ ಈ ಚರಿತ್ರೆಯಲ್ಲಿ ಕಂಡುಬರುವುದಿಲ್ಲ. ಆಗಿಂದಾಗ್ಗೆ ಯಾರ್ಯಾರು ಆ ಮಠದಲ್ಲಿ ಅಥವಾ ಅದು ಮಾಡುವ ಕೆಲಸ ಕಾರ್ಯಗಳಲ್ಲಿ ಆಸಕ್ತಿಯಿಟ್ಟು ಯಾರ್ಯಾರು ಆ ಕೆಲಸ ಕಾರ್ಯಗಳಿಂದ ದೇಶದಲ್ಲಿ ಕಲ್ಯಾಣವಾಗುತ್ತದೆ ಎಂದು ಭಾವನೆ ಮಾಡಿಕೊಂಡಿದ್ದರೋ ಆ ಜನರು ಹೇಳಿರುವ ರೀತಿ ಅದು ಅವರ ಭಾವನೆಗೆ ತಕ್ಕಂತೆ ಕೆಲಸ ಮಾಡಿಕೊಂಡು ಬಂದಿದೆ. ಆದ್ದರಿಂದ ಅದನ್ನು ಒಂದು ಜಹಗೀರಿಯೆಂದು ಮಾಡಿ ಈ ದಿವಸ ಶೃಂಗೇರಿ ಜಹಗೀರಿಗೆ ಒಂದು ಪ್ರಾಶಸ್ತ್ಯ ಕೊಟ್ಟಿದ್ದಾರೆ. ಶೃಂಗೇರಿ ಜಹಗೀರುದಾರರು ಎಂದು ಹೇಳುವಾಗ ಯಾವುದಾದರೂ ಒಂದು ವ್ಯಕ್ತಿಗೆ ಈ ಜಹಗೀರನ್ನು ಕೊಟ್ಟಿದ್ದಾರೆಯೇ ಎಂದು ನೋಡಿದರೆ ಆರೀತಿ ಯಾವ ವ್ಯಕ್ತಿಗೂ ಕೊಟ್ಟಿರುವುದಿಲ್ಲ. ಇದು ಸಂಸ್ಥೆಗೆ ಕೊಟ್ಟಿರುವುದು. ಇದರ ಅಧಿಕಾರ ಯಾರು ನಡೆಸುತ್ತಾರೆಂದರೆ ಆ ಸಂಸ್ಥೆಗೆ ಸಂಬಂಧಪಟ್ಟವರು ನಡೆಸುತ್ತಾರೆಯೇ ಹೊರತು ಬೇರೆಯವರು ಯಾರೂ ಅಲ್ಲ. ಈ ಸಂಸ್ಥೆಯವರು ಈ ಒಂದು ಅಧಿಕಾರವನ್ನು ಯಾವ ರೀತಿ ಚಲಾಯಿಸುತ್ತಿದ್ದರು, ಈಗ ಯಾವ ರೀತಿ ಚಲಾಯಿಸುತ್ತಿದ್ದಾರೆ ಎಂಬ ಗೋಜಿಗೆ ಈಗ ಹೋಗಬೇಕಾಗಿಲ್ಲ. ಈ ದಿವಸ ಈ ಸಂಸ್ಥೆಯವರ ಜವಾಬ್ದಾರಿಯನ್ನು ಸರ್ಕಾರ ಹೊತ್ತಿದೆ. ಸರ್ಕಾರದವರು ಪ್ರವೇಶಿಸಿ ಇಲ್ಲಿ ಏನು ಮಾಡಬಹುದೋ ಆ ಎಲ್ಲಾ ಕೆಲಸ ಕಾರ್ಯಗಳನ್ನೂ ಇತರ ತಾಲ್ಲೂಕುಗಳಲ್ಲಿ ಇತರ ಸಂಸ್ಥೆಗಳಲ್ಲಿ ಮಾಡುತ್ತಿರುವ ಹಾಗೆ ನಡೆಸಿಕೊಂಡು ಬರುತ್ತಿದ್ದಾರೆ. ಮತ್ತು ಇಲ್ಲಿರುವ ರೈತರ ಪರಿಸ್ಥಿತಿ ಇತರ ಜಹಗೀರಿಗಳಲ್ಲಾಗಲಿ ಅಥವಾ ಇನಾಂತಿಗಳಲ್ಲಾಗಲಿ ಇಲ್ಲ ಎಂದು ಧಾರಾಳವಾಗಿ ಹೇಳಬಹುದು. ಏಕೆಂದರೆ ಇಲ್ಲಿರುವ ರೈತರೆಲ್ಲರೂ ಕೂಡ ಇತರ ಸರ್ಕಾರಿ ಗ್ರಾಮಗಳಲ್ಲಿರುವ ಅಥವಾ ಸರ್ಕಾರಿ ಜಮೀನಿನಲ್ಲಿರುವ ಎಲ್ಲಾ ಹಕ್ಕುಬಾಧ್ಯತೆಗಳನ್ನೂ ಕೂಡ ಪಡೆಯುತ್ತಿದ್ದಾರೆ. ಸರ್ಕಾರದವರೇ ಅದರ ಆಡಳಿತವನ್ನು ನಿರ್ವಹಿಸುತ್ತಿದ್ದಾರೆ ಮತ್ತು ಅಲ್ಲಿರುವ ಹಕ್ಕುಬಾಧ್ಯತೆಗಳೂ ಕೂಡ ಸರ್ಕಾರಿ ಗ್ರಾಮಗಳಲ್ಲಿರುವ ಹಾಗೇ ಇವೆ. 1899ನೆಯ ಇಸವಿಯಲ್ಲಿ ಯಾವಾಗ ರೆವೆನ್ಯೂ ಸೆಟ್ಲ್‌ಮೆಂಟ್ ಆಯಿತೋ ಆಗಿನಿಂದ ಸುಮಾರು 50 ವರ್ಷಗಳ ಕಾಲ ಈ ಹಕ್ಕುಬಾಧ್ಯತೆಗಳು ಅವರಿಗೆ ಯಥೇಚ್ಛವಾಗಿ ಬಂದಿವೆ. ಹಾಗೆ ಬಂದಿರುವಾಗ ಇನ್ನೇನಾದರೂ ಅಲ್ಪಸ್ವಲ್ಪ ಕಿರುಕುಳ ಯಾವುದೋ ಕಾರಣದಿಂದ ಇದ್ದರೆ ಆ ಕಿರುಕುಳ ಕೂಡ ಆ ರೈತರು ಮತ್ತು ಶೃಂಗೇರಿ ನಿವಾಸಿಗಳು ಅನುಭವಿಸಬೇಕೆಂಬುದು ನನ್ನ ಮನಸ್ಸಿನಲ್ಲಿಲ್ಲ. ಈ ದಿವಸ ಈ ಇನಾಂತಿಯನ್ನು ಒಂದು ಬಿಲ್ಲಿನಲ್ಲಿ ತಂದು ಯಾವುದೋ ಒಂದು 5ನೆಯ ಛಾಪ್ಟರಿನಲ್ಲಿ ಶೃಂಗೇರಿಗೆ ಅನ್ವಯಿಸುವುದು ಇಂಥಾದ್ದು, ಇಂಥಾದ್ದಕ್ಕೆ ವಿನಾಯಿತಿ ಕೊಟ್ಟಿದೆ ಎಂದು ಹೇಳಿದ್ದಾರೆ. 11ನೆಯ ಶತಮಾನದಲ್ಲಿ ಸ್ಥಾಪಿಸಿದ ಶೃಂಗೇರಿ ಪೀಠ ಇದು. 600 ವರ್ಷಗಳಿಂದೀಚೆಗೆ ವಿಜಯನಗರದ ಹಕ್ಕಬುಕ್ಕರಿಂದ ಸ್ವಲ್ಪಮಟ್ಟಿಗೆ ಇದಕ್ಕೆ ಹೊಸ ಇನಾಂತಿ ದೊರೆಯಿತು. ಇದು ದೊಡ್ಡ ಶಾರದಾ ಪೀಠವಾಗಿ ಅಲ್ಲಿದ್ದ ಸನ್ಯಾಸಿ ಅಥವಾ ಗುರು ದೇಶದ ಕಲ್ಯಾಣವನ್ನು ದೃಷ್ಟಿಯಲ್ಲಿಟ್ಟುಕೊಂಡು—ಈ ದಿವಸ ನೀವು ಒಪ್ಪಬಹುದು ಅಥವಾ ಬಿಡಬಹುದು—ಅದು ಒಳ್ಳೆಯದೆಂದು ತಿಳಿದು ಒಂದೇಸಮ ಸಾಧಿಸಿಕೊಂಡು ಬಂದಿದ್ದಾರೆ. ಅಷ್ಟು ದಿವಸದಿಂದ ಬಂದಿರುವುದಕ್ಕೆ ಈ ದಿವಸ ಒಂದು ಸ್ಥಾನವಿದೆ, ಒಂದು ಮಾನವಿದೆ, ಒಂದು ಮರ್ಯಾದೆಯಿದೆ, ಒಂದು ವೈಶಿಷ್ಟ್ಯವಿದೆ. ಇದನ್ನು ಹೇಳುವಾಗ ಅದರಲ್ಲೂ ವೈಶಿಷ್ಟ್ಯ ಎಂಬ ಶಬ್ದ ಹೇಳುವಾಗ ಶ್ರೀ ಚನ್ನಬಸಪ್ಪನವರು ರಾಜ್ಯಾಂಗ ರಚನಾ ಸಭೆಯಲ್ಲಿ ಮೈಸೂರು ವೈಶಿಷ್ಟ್ಯ, ಮಹಾರಾಜರ ವೈಶಿಷ್ಟ್ಯ, ಅರಮನೆ ವೈಶಿಷ್ಟ್ಯ ಎಂದು ಬಹಳವಾಗಿ ಹೇಳುತ್ತಿದ್ದುದು ನನಗೆ ಜ್ಞಾಪಕಕ್ಕೆ ಬರುತ್ತದೆ. ಮೈಸೂರಿನ ಜನರ ಘನತೆ ಗೌರವಗಳನ್ನು ಅಭಿಮಾನದಿಂದ ಎತ್ತಿ ಹಿಡಿದಿದ್ದ ಶ್ರೀ ಚೆನ್ನಬಸಪ್ಪನವರ ಭಾಷಣವು ಈ ದಿವಸ ಕೂಡ ಮನಸ್ಸಿನಲ್ಲಿ ನಾಟಿದೆ. ಅಂಥವರು ನಿನ್ನೆ ಇಡೀ ಹನ್ನೊಂದನೆಯ ಶತಮಾನದಿಂದ ಒಂದೇಸಮನಾಗಿ ಒಂದು ಘನತೆಯನ್ನೂ, ಒಂದು ಗೌರವವನ್ನೂ ಕಾಪಾಡಿ ಇಡೀ ದೇಶದ ಹಿತ ಸಾಧಿಸಿರುವುದನ್ನು ಇದೇನೂ ಮೈಸೂರು ಸಂಸ್ಥಾನದಲ್ಲಿ ಯಾವುದೇ ನಾಲ್ಕು ಜನರ ಸಂಸ್ಥೆಯಲ್ಲ, ಯಾವುದೋ ನಾಲ್ಕು ಜಾತಿಗೆ ಸೇರಿರುವುದಲ್ಲ ಎಂದು ಹೇಳಿರುವುದನ್ನು ಒಪ್ಪುವುದಿಲ್ಲ. ಏಕೆಂದರೆ ಇದು ನಮ್ಮ ಮೈಸೂರು ಸಂಸ್ಥಾನದಲ್ಲಿರುವುದು ನಮ್ಮ ಅದೃಷ್ಟ ಎಂಬ ಭಾವನೆಯಿದೆ. ಅನೇಕರು ಸಾರಿರುವ ಹಾಗೆ ಅದರ ತತ್ವ, ಅಲ್ಲಿ ಮಾಡಿರುವ ಕೆಲಸಕಾರ್ಯ ಇಡೀ ಇಂಡಿಯಾ ದೇಶಕ್ಕೇ ಅಲ್ಲ, ಇಡೀ ಪ್ರಪಂಚಕ್ಕೂ ಕೂಡ ವ್ಯಾಪಕವಾಗುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—On a point of explanation, Sir. ನಾನು ಯಾವತ್ತೂ ಕೂಡ ಯಾವುದೋ ಒಬ್ಬ ಮನುಷ್ಯನ ಮೂಲಭೂತ ಹಕ್ಕುಬಾಧ್ಯತೆಯ ವೈಶಿಷ್ಟ್ಯಗಳನ್ನು ಪ್ರತಿಪಾದನೆ ಮಾಡಿಲ್ಲ.

ಶ್ರೀ ಎಂ. ಎಚ್. ಜೋಯಿಸ್‌ರವರು.—ಮಹಾರಾಜರು ಮತ್ತು ಇತರ ಮಹನೀಯರು ಇದರ ವಿಚಾರವಾಗಿ ಏನೊಂದು ಗೌರವವನ್ನಿಟ್ಟುಕೊಂಡಿದ್ದಾರೆ ಎಂಬುದನ್ನೂ, ಇದರ ಘನತೆ, ವೈಶಿಷ್ಟ್ಯ ಮುಂತಾದ

ವಿಚಾರವನ್ನೂ ಹೇಳಿರುವುದರಿಂದ ಈಗಲೂ ಮಾನ್ಯ ಮಿತ್ರರು ಯೋಚನೆಮಾಡಬಹುದು. ಅದನ್ನು ಅಷ್ಟಕ್ಕೆ ಬಿಡುತ್ತೇನೆ.

ಮತ್ತೊಂದು ದೃಷ್ಟಿಯಿಂದ ನೋಡಿದರೂ ಘನತೆ, ಗೌರವ ಉಳಿಸಿಕೊಂಡು ಬರಬೇಕಾದ್ದು ಬಹಳಮಟ್ಟಿಗೆ ಅವಶ್ಯಕವೆಂದು ಹೇಳುತ್ತೇನೆ. ನೂರಾರು ವರ್ಷಗಳಿಂದ ಬೇಕಾದಷ್ಟು ರಾಜಮಹಾರಾಜರುಗಳು ಆಳಿ ಹೋದರು. ಹೊರದೇಶದ ಬಾಂಧವರೂ ಕೂಡ ಆಳಿದರು. ಹಿಂದುಗಳಲ್ಲದೇ ಇರುವವರೂ ಕೂಡ ಇಂಡಿಯಾ ದೇಶದಲ್ಲಿ ಇಲ್ಲಿಯವರೆಗೆ ಸಾಮ್ರಾಜ್ಯಕಟ್ಟಿ ಆಳಿದರು. ಇಷ್ಟಾದರೂ ಕೂಡ ಈ ದಿವಸ ಶೃಂಗೇರಿಯಲ್ಲಿರುವ ಜಹಗೀರಿಯನ್ನು, ಶೃಂಗೇರಿಯಲ್ಲಿರುವ ಇನಾಂತಿಯನ್ನು ಉಳಿಸಿಕೊಂಡು ಬಂದಿದ್ದಾರೆ. ಇದರ ವೈಶಿಷ್ಟ್ಯವನ್ನು ಯಾರಾದರೂ ಕೂಡ ಡೈವೆಸ್ಟ್ ಮಾಡಲು ಯತ್ನಿಸುವುದಕ್ಕೆ ಹಕ್ಕಿಲ್ಲ ಎಂಬುದನ್ನು ಮರೆಯಬಾರದು. ಶೃಂಗೇರಿಯಲ್ಲಿರುವ ಅಥವಾ ಅಲ್ಲಿನ ಸ್ವಾಮಿಗಳಲ್ಲಿ ಯಾವುದೇ ಒಂದು ಸೈನ್ಯವಾಗಲಿ ಅಥವ ಆಟಂ ಬಾಂಬಾಗಲಿ ಈ ಹನ್ನೊಂದು ಶತಮಾನಗಳಿಂದ ಇರಲಿಲ್ಲ. ಬೇಕಾದಷ್ಟು ಪೂಜೆಪುನಸ್ಕಾರಗಳು ಚೆನ್ನಾಗಿ ನಡೆದಿದೆ. ರಾಜ್ಯಭಾರಗಳು ಬೇರೆಯಾದರೂ ಯಾರೂ ಇದಕ್ಕೆ ತೊಂದರೆ ಮಾಡಲು ಇಷ್ಟಪಡಲಿಲ್ಲ ಮತ್ತು ಇದರ ಹಕ್ಕನ್ನು ಕಿತ್ತುಕೊಳ್ಳಲಿಲ್ಲ. ದೇಶದಲ್ಲಿ ಇಲ್ಲಿರುವವರು ಮಾತೆತ್ತಿದರೆ ಮಹಾತ್ಮ ಗಾಂಧಿ ಎಂದು ಹೇಳುವ ರೀತಿಯಲ್ಲಿದ್ದರೂ ತಪಶ್ಶಕ್ತಿಯಿಂದ ಕೂಡಿದ ಈ ಮಠದ ಹಕ್ಕನ್ನು ಮುಟ್ಟುವುದಕ್ಕೆ ಯಾರೊಬ್ಬರೂ ಇಷ್ಟಪಡಲಿಲ್ಲ. It is the spirit of non-violence that pervaded Sringeri that has been able to see that Sringeri is continuing in its old traditions still.

ಆದ್ದರಿಂದ ಈ ದೃಷ್ಟಿಯಿಂದ ನೋಡಿದರೆ ಇದರಲ್ಲಿ ಏನೋ ಒಂದು ಮಹತ್ವ ಇರಬೇಕು. ಎರಡನೆಯದು, 5ನೇ ಚಾಪ್ಟರ್‌ನಲ್ಲಿ ಇನಾಂತಿ ಹೊರಟುಹೋಗಬೇಕೆಂದು ಹೇಳುವಾಗ ಶೃಂಗೇರಿಗೆ ಮಾತ್ರ ಇನ್ನು ಕೆಲವು ರಿಯಾಯಿತಿಗಳಿರಬೇಕೆಂದು ಹೇಳಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಸೆಲೆಕ್ಟ್ ಸಮಿತಿಯವರ ವರದಿಯನ್ನು ನೋಡಿ.

ಶ್ರೀ ಎಂ. ಎಚ್. ಜೋಯಿಸರು.—ಸೆಲೆಕ್ಟ್ ಸಮಿತಿಯವರು ಮಾಡಿರುವ ವಿಚಾರದಲ್ಲೇ ನಾನು ಮಾತನಾಡುತ್ತಾ ಇದ್ದೇನೆ ಎಂದು ತಿಳಿದುಕೊಂಡಿದ್ದೇನೆ. ಇಲ್ಲಿ ರಿಯಾಯಿತಿ ಇದೆ. ಅದಕ್ಕೆ ತಾವು ಕಳುಹಿಸಿರತಕ್ಕ ತಿದ್ದುಪಡಿಯನ್ನು ಸಹ ನೋಡಿದ್ದೇನೆ. ಅದು ಬಿದ್ದುಹೋಗುತ್ತದೆ ಎಂಬ ನಂಬಿಕೆಯೂ ನನಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಇದ್ದರೆ ಒಳ್ಳೆಯದು. ಸಕಾರಣ ಕೊಟ್ಟು ನಮ್ಮ ಮನಸ್ಸನ್ನು ಒಲಿಸಿಕೊಳ್ಳಬಹುದು.

ಶ್ರೀ ಎಂ. ಎಚ್. ಜೋಯಿಸರು.—ಆದ್ದರಿಂದ ಈ ವಿಷಯದಲ್ಲಿ ಅವರಿಗೆ ಕೆಲವು ವಿನಾಯಿತಿಗಳನ್ನು ಕೊಟ್ಟಿದ್ದಾರೆ. ಸ್ವಾಮಿ, ಗುರುಗಳಿಗೆ ಯಾವ ವಿಧವಾದಂಥಾ ಪ್ರಾಪಂಚಿಕ ವ್ಯವಹಾರವೂ ಬೇಕಾಗಿಲ್ಲ ಎಂಬುದು ನಿಜ. ಆದರೆ ನಮ್ಮಂಥವರು, ಅವರ ಅಂತಸ್ತಿನಲ್ಲಿರುವುದಕ್ಕೆ ಯೋಗ್ಯತೆಯಿಲ್ಲದಿರತಕ್ಕವರು, ಅವರ ಭಕ್ತಾದಿಗಳು ಎಂದು ಹೇಳಿಕೊಳ್ಳುತ್ತೇವೆ. ಅಂಥಾ ಜನಗಳು ಯಾವಾಗಲೂ ಕೂಡ ಯಾವ ರೀತಿ ಇದ್ದರೆ, ಹೇಗೆ ಹೇಗೆ ಇದ್ದರೆ ತಮ್ಮ ಮನಸ್ಸಿನ ಮೇಲೆ ಒಂದು ಪರಿಣಾಮವಾಗುತ್ತದೆಂದು ಹೇಳುತ್ತಾರೋ ಅದೇ ರೀತಿ ಮಾಡಿ ಅವರ ವಿಷಯದಲ್ಲಿ ಆ ಒಂದು ಭಾವನೆ, ಭಕ್ತಿ ಇರುವಂತೆ ಮಾಡಬೇಕಾದಂಥಾದ್ದು ಸಹಜವಾದ ಮಾರ್ಗ. ಉದಾಹರಣೆಗೆ, ಮೈಸೂರಿನಲ್ಲಿ ರಾಜಪ್ರಮುಖರು ಇದ್ದಾರೆ; ಅವರು ಸಾಮಾನ್ಯವಾದ ಒಂದು ಮನೆಯಲ್ಲಿ ಇರಕೂಡದು; ರಾಜಪ್ರಮುಖರು ಇರುವಾಗ ಅವರು ಅರಮನೆಯಲ್ಲೇ ಇರಬೇಕೆಂಬ ಭಾವನೆ ನಮಗೆ ಮೂಡುತ್ತದೆ; ಅದು ಅವರಿಗೆ ಗೌರವವಾದದ್ದು ಎಂದು ತಿಳಿದುಕೊಳ್ಳುತ್ತೇವೆ; ನೋಡಿದವರಿಗೂ ಚೆನ್ನಾಗಿರುತ್ತದೆ ಎಂದು ತಿಳಿದುಕೊಳ್ಳುತ್ತೇವೆ; ರಾಜಪ್ರಮುಖರು ಅರಮನೆಯಲ್ಲಿ ವಾಸಮಾಡುವುದರಿಂದ ನಮಗೆ ಅವರಲ್ಲಿರತಕ್ಕ ಪ್ರೇಮ, ವಿಶ್ವಾಸ ಬೆಳೆಯುತ್ತದೆಂದು ಅನ್ನಿಸುತ್ತದೆ. ಅಷ್ಟೇಕೆ ಸ್ವಾಮಿ, ನಮ್ಮ ಮಂತ್ರಿಗಳು ನೆನ್ನೆ ಮೊನ್ನೆ ಇದ್ದಂಥ ಮನೆಗಳಿಗೂ ಇವತ್ತು ಇರತಕ್ಕ ಮನೆಗಳಿಗೂ ಎಷ್ಟೋ ವ್ಯತ್ಯಾಸವಿದೆ. ಅವರು ಮಂತ್ರಿಗಳಾಗಿರುವುದರಿಂದ ಅಂಥಾ ಮನೆಗಳಲ್ಲಿ ಇರಬೇಕು, ಹಾಗಿದ್ದರೆ ಅವರಿಗೂ ಘನತೆ, ರಾಜ್ಯಕ್ಕೂ ಘನತೆ ಎಂಬುದಾಗಿ ಭಾವನೆಮಾಡಿ ಬೇಕಾದಂಥ ಅನುಕೂಲತೆಗಳನ್ನು ಕೊಡುತ್ತೇವೆ. ಆದ್ದರಿಂದ ಇದು ವ್ಯವಹಾರದಲ್ಲಿ ಬೇಕಾಗತಕ್ಕ ಕೆಲವು ವಿಷಯಗಳು. ಇವುಗಳಿಲ್ಲದಿದ್ದರೆ ಸಾಮಾನ್ಯ ಜನರ ಮನಸ್ಸಿನ ಮೇಲೆ ಪರಿಣಾಮವಾಗುವುದಿಲ್ಲ. ಆ ದೃಷ್ಟಿಯಿಂದ ವೈಶಿಷ್ಟ್ಯವಿರಬೇಕು. ಆ ವೈಶಿಷ್ಟ್ಯಬೇಕಾಗಿಲ್ಲವೆಂದು ಹೇಳಿದರೆ ಅದು ಸರಿಯಾಗಿರುವುದಿಲ್ಲ. ಜಹಗಿರಿ ಇದ್ದರೆ State within the State ಆಗುತ್ತದೆ ಮತ್ತು ಸಾವರಿನ್‌ಪವರ್ ಬರುತ್ತದೆ ಎಂಬ ಒಂದು ವಾದ ಇದೆ. ಅದಕ್ಕೆ ನಾನು ಹೇಳುವುದು ಇಷ್ಟೆ: Sovereignty ಎಂಬುದು indivisable. ಅದು ಯಾವುದನ್ನು ಸ್ಟೇಟ್ ಎಂಬುದಾಗಿ ಒಪ್ಪಿಕೊಳ್ಳುತ್ತೇವೆಯೋ ಅದಕ್ಕೆ ಇರುವುದೇ ಹೊರತು, ಬೇರೆಯವರಿಗೆ ಇರತಕ್ಕುದಲ್ಲ. ಆದ್ದರಿಂದ Sovereignty ಇರುವುದು ಎಲ್ಲಿ ಎಂದರೆ ನಾವು ಇನ್ನೊಬ್ಬರಿಗೆ ನಮ್ಮಲ್ಲಿರುವುದನ್ನು ದತ್ತವಾಗಿ ಕೊಡುತ್ತೇವೆ ಎಂದಾಗಲೂ ಕೂಡ ಅದು ಕೊಡತಕ್ಕವನಲ್ಲದೆ ಎಂದು ಹೇಳಿ ವ್ಯಕ್ತವಾಗುತ್ತದೆ. ಅದರ ವಿಷಯದಲ್ಲಿ ಹೆಚ್ಚಾಗಿ ಹೇಳಬೇಕಾಗಿಲ್ಲ. State within the State ಆಗುವುದಿಲ್ಲವೆಂದು ಧಾರಾಳವಾಗಿ ಹೇಳಬಹುದು.

ಇದೇ ರೀತಿ ಇನ್ನು ಎಷ್ಟೋ ಇವೆ ಎಂದು ಹೇಳಿದರು. ಯಾವ ಮತದವರೇ ಆಗಲೀ, ಟಿಪ್ಪುಸುಲ್ತಾನನ ಕಾಲದಲ್ಲಾಗಲೀ, ಇಂಗ್ಲೀಷರ ಕಾಲದಲ್ಲಾಗಲೀ, ನಮ್ಮ ಮಹಾರಾಜರ ವಂಶಸ್ಥರ ಕಾಲದಲ್ಲಾಗಲೀ ಇದಕ್ಕೆ ಬೇಕಾದಷ್ಟು ಗೌರವವನ್ನು ಸಲ್ಲಿಸಿದ್ದಾರೆ. ಆ ಗೌರವಗಳನ್ನು ಸಲ್ಲಿಸಿ ಶಾಶ್ವತವಾಗಿ ನಡೆದುಕೊಂಡುಹೋಗಬೇಕೆಂದು ಹೇಳಿದ್ದಾರೆ. ಆದರೆ ಅದು ಶಾಶ್ವತವಾಗಿ ನಡೆದುಕೊಂಡು ಹೋಗಬೇಕಾಗಿದ್ದರೆ ತಕ್ಕ ಅನುಕೂಲಗಳಿಲ್ಲದೇ ನಡೆಯುವುದು ಕಷ್ಟ. ನನ್ನಂಥ ದಡ್ಡರು, ಭಕ್ತಾದಿಗಳು ಇರಬಾರದು. ಏಕೆಂದರೆ ನಾವು ಆ ಗುರುಗಳ ಅಂತಸ್ತಿಗೆ ಬರುವುದಿಲ್ಲ. ಶ್ರೀಮಾನ್ ಚೆನ್ನಬಸಪ್ಪನವರು ಹೇಳಿದ spiritual level ಒಂದೇ ಅಲ್ಲದೆ ಕೆಲವು ಆಡಂಬರದ ವ್ಯವಹಾರಗಳೂ ಇರಬೇಕು ಎಂಬ ದೃಷ್ಟಿಯಿಂದ ಅದನ್ನು ಉಳಿಸಿಕೊಂಡು ಬರಬೇಕು ಎಂದು ಉಳಿಸಿಕೊಂಡು ಬಂದಿದ್ದಾರೆ. ಅಲ್ಲಿರತಕ್ಕ ರೈತರಿಗೆ ಕಿರುಕುಳ ಕೊಡಬೇಕೆಂಬ ಅಭಿಪ್ರಾಯ ನನಗಂತೂ ಇಲ್ಲ. ಇದನ್ನು ಯಾವುದೋ ಒಂದು ಚಾಪ್ಟರ್‌ನಲ್ಲಿ ಸೇರಿಸುವುದಕ್ಕಿಂತ, ರಾಜಘಾಟಿಗೆ ಒಂದು ಬಿಲ್ಲು, ವಿಶ್ವಭಾರತಿಗೆ ಒಂದು ಬಿಲ್ಲು ಯಾವ ರೀತಿ ತಂದಿದ್ದರೋ ಆ ರೀತಿ ಇದಕ್ಕೂ ಒಂದು ಬಿಲ್ಲು ತರುವುದು ಇದರ ಘನತೆಗೆ ಸರಿಯಾಗಿರುತ್ತದೆ. ಅಲ್ಲಿರತಕ್ಕ ರೈತರಿಗೆ ಯಾವ ವಿಧದಲ್ಲೂ ಕಿರುಕುಳ ಇಲ್ಲದಿರುವ ರೀತಿ

(ಶ್ರೀ ಎಂ. ಎಕ್. ಜೋಯಿಸ್‌ರವರು.)

ಯಲ್ಲೂ ಮತ್ತು ಅದರ ಘನತೆ, ಗೌರವ, ವೈಶಿಷ್ಟ್ಯ ಉಳಿಯುವ ಹಾಗೂ ಇದಕ್ಕಾಗಿಯೇ ಬೇರೆ ಒಂದು ಬಿಲ್ಲನ್ನು ತಂದು ಆ ಬಿಲ್ಲಿನ ಮುಖಾಂತರ ರೈತರ ಕಿರುಕುಳ ಪರಿಹಾರ ಮಾಡಿ, ಅದರ ಘನತೆ, ಗೌರವಗಳನ್ನು ಉಳಿಸಬೇಕೆಂದು ಸೂಚಿಸುತ್ತೇನೆ. ಇದನ್ನು ಹೇಳುವಾಗ ಇನ್ನೊಂದು ವಿಷಯ ಜ್ಞಾಪಕಕ್ಕೆ ಬರುತ್ತದೆ. ನಾವು ವಿಶೇಷ ರೀತಿಯ, ಮಠಕ್ಕೆ ಸಂಬಂಧಪಟ್ಟ ಒಂದು ಶಾಸನವನ್ನು ತರುವಾಗ ಬಹಳ ಎಚ್ಚರಿಕೆಯಿಂದ ಇರಬೇಕು. ಮಠ ಎನ್ನುವುದು ನಮ್ಮ ಹಿಂದೂಸ್ಥಾನದಲ್ಲಿ ಬಹಳ ಪ್ರಾಮುಖ್ಯವಾದ ವಿಷಯ. ಆ ಪ್ರಾಮುಖ್ಯವಾದ ವಿಷಯವನ್ನು ನಾವು ಬಹಳ ಎಚ್ಚರಿಕೆಯಿಂದ ವಿಚಾರಮಾಡಬೇಕಾಗಿದೆ. ಶ್ರೀಮಾನ್ ವ್ಯಾಸ್ಕರೆನ್ ಹ್ಯಾಸ್‌ರವರು ಹೇಳಿದ ಹಾಗೆ ಈ ಮಠದ ವಿಚಾರದಲ್ಲಿ ಕಾಲಕ್ಕನುಸಾರವಾಗಿ ಹೋಗಬೇಕಾಗುತ್ತದೆ ಎಂಬುದನ್ನು ಮರೆಯಬಾರದು. ಮಠದ ವಿಚಾರದಲ್ಲಿ ಹೇಳುವಾಗ It is a matter of conscience. ಓಟು ಇವೆ, ಆದ್ದರಿಂದ ಮಾಡುತ್ತೇವೆ ಎಂಬ ಮನೋಭಾವವನ್ನು ದಯವಿಟ್ಟು ಎಲ್ಲರೂ ಮರೆಯಬೇಕು. ಓಟು ಇರಲಿ, ಇಲ್ಲದೇ ಇರಲಿ, ಶಕ್ತಿ ಇರಲಿ, ಇಲ್ಲದೇ ಇರಲಿ social legislation ವಿಚಾರದಲ್ಲಿ ಬಹಳ ಎಚ್ಚರಿಕೆಯಿಂದಿರಬೇಕು. ಆದ್ದರಿಂದ ಇದಕ್ಕಾಗಿ ಬೇರೆ ಒಂದು ಬಿಲ್ಲನ್ನು ತೆಗೆದುಕೊಂಡು ಬನ್ನಿ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಇದು ಮಠಕ್ಕೆ ಎಲ್ಲಿ ಸಂಬಂಧಪಟ್ಟಿದೆ ಎಂಬುದನ್ನು ಹೇಳಬೇಕು.

ಶ್ರೀ ಎಂ. ಎಕ್. ಜೋಯಿಸರು.—ಮಠಕ್ಕೂ ಇದಕ್ಕೂ ಸಂಬಂಧ ಇರತಕ್ಕದ್ದು ಇಷ್ಟೆ. ಯಾವುದಾದರೂ ಒಂದು ಮಠಕ್ಕೆ ಸೇರಿದ ಮಠವಾಗಲೀ, ಮಸೀದಿ ಆಗಲೀ ಅದರ ಘನತೆ, ಗೌರವ, ಪ್ರತಿಷ್ಠೆಗಳಿಗೆ ಕುಂದಕ ಬಂದು, ಜನಗಳಿಗೆ ಅವುಗಳ ವಿಷಯದಲ್ಲಿ ಘನತೆ ಗೌರವ ಕಡಿಮೆ ಆಯಿತು ಎಂಬ ಭಾವನೆ ಮೂಡುವುದಾದರೆ ಆ ರೀತಿ ಮಾಡತಕ್ಕದ್ದು ಸಾಧುವಲ್ಲ, ರಾಜನೀತಿ ಅಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಒಂದು ವಿಷಯವನ್ನು ಮಾನ್ಯ ಸದಸ್ಯರು ತಿಳಿಸಬೇಕು. ಇದೇ ರೀತಿ ಇನ್ನಾವುದಾದರೂ ಕೋಮಿನವರ ಮಠಗಳಿಗೆ ಸಂಬಂಧಪಟ್ಟ ಇನಾಂ ಗ್ರಾಮಗಳಿದ್ದರೆ, ಅವರ ಮನಸ್ಸು ನೋವಾಗುವುದಾದರೆ ಅವುಗಳನ್ನು ಹಾಗೆಯೇ ಬಿಡಬೇಕು ಎಂದು ತಮ್ಮ ಅಭಿಪ್ರಾಯವೇ ?

ಶ್ರೀ ಎಂ. ಎಕ್. ಜೋಯಿಸರು.—ಯಾವುದಾದರೂ ಇನಾಂ ಗ್ರಾಮಗಳಲ್ಲಿ ಶೃಂಗೇರಿಯಲ್ಲಿರುವಂಥಾ ಪರಿಸ್ಥಿತಿಯೇ ಇರುವುದು ನಮ್ಮ ಮುಂದೆ ಬಂದರೆ ಅದರ ಮೇಲೆ ನಾನು ಮಾತನಾಡುವುದಕ್ಕೆ ತಯಾರಾಗಿದ್ದೇನೆ. 'ರೇ' ರಾಜ್ಯದಲ್ಲಿದ್ದುಕೊಂಡು ಜವಾಬು ಹೇಳಿ ಎಂದರೆ ಅದಕ್ಕೆ ನಾನು ತಯಾರಾಗಿಲ್ಲ. ಇವತ್ತು ಇರುವುದು ಶೃಂಗೇರಿ ಮಠಕ್ಕೆ ಸಂಬಂಧಪಟ್ಟ ಬಿಲ್ಲು, ಶೃಂಗೇರಿ ಮಠದ ಭಕ್ತಾದಿಗಳು ಬೇಕಾದಷ್ಟು ಜನ ಇಡೀ ಹಿಂದೂಸ್ಥಾನದಲ್ಲಿ ಇದ್ದಾರೆ.

ಶೃಂಗೇರಿ ಮೈಸೂರು ಸಂಸ್ಥಾನದಲ್ಲಿ ಅಡಕವಾಗಿ ದ್ವಾಕ್ಷಣಕ್ಕೆ, ಮೈಸೂರಿನವರಿಗೆ ಮಾತ್ರ ಸಂಬಂಧಪಟ್ಟದ್ದು ಎಂಬುದಾಗಿ ಇಟ್ಟುಕೊಳ್ಳತಕ್ಕದ್ದಲ್ಲ.

ಈ ದೃಷ್ಟಿಯಿಂದ ಅದೊಂದು National ಸಂಸ್ಥೆ ಮತ್ತು ಹನ್ನೊಂದು ಶತಮಾನಗಳಿಂದ ಒಂದೇ ಸಮನಾಗಿ cultural centre ಆಗಿದ್ದುಕೊಂಡು ಒಂದೇ ವಿಧವಾಗಿ ಕೆಲಸಕಾರ್ಯಗಳನ್ನು ಮಾಡಿಕೊಂಡು ಬರುತ್ತಿದೆ : ಆದ್ದರಿಂದ ಆ ಮಠದ ಕೆಲಸಕಾರ್ಯಗಳಿಗೆ ಯಾವ ರೀತಿಯಾದ ತೊಂದರೆಯೂ ಬರಬಾರದು. ಏನಿದ್ದರೂ ಅಲ್ಲಿರುವ ರೈತರುಗಳಿಗೆ ತೊಂದರೆಗಳಾಗದಂತೆ ಶಾಸನಮಾಡುವುದು ರಾಜನೀತಿಯೆಂದು ಹೇಳುತ್ತೇನೆ. ಅಂಥ ಶಾಸನವನ್ನು ತನ್ನಿ ಎಂದು ವಿನಯಪೂರ್ವಕವಾಗಿ ಪ್ರಾರ್ಥನೆಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ. ಎಕ್. ಬೋರಣ್ಣಗೌಡರು (ಹಾಸನ ಜಿಲ್ಲೆ).—ಸ್ವಾಮಿ, ಈಗಾಗಲೇ ಮಾನ್ಯ ಸದಸ್ಯರುಗಳನೇಕರು ಈ ವಿಚಾರದಲ್ಲಿ ದೀರ್ಘವಾಗಿ ಭಾಷಣ ಮಾಡಿದ್ದಾರೆ. ಅದರಲ್ಲೂ ಬಿಸಿಬಿಸಿಯಾದ ಭಾಷಣಗಳನ್ನೇ ಮಾಡಿದ್ದಾರೆ. ನನ್ನ ಮಿತ್ರರಾದ ಶ್ರೀಮಾನ್ ಜೋಯಿಸ್‌ರವರು ಭಾಷಣಮಾಡುವಾಗ ಸ್ಫೂರ್ತಿ ಬಂದಂತೆ ಭಾಷಣಮಾಡಿದರು. ಆದರೆ ಈ ಇನಾಂ ಮಸೂದೆ ಬರುವುದಕ್ಕೆ ಕಾರಣಗಳನ್ನು ಸ್ವಲ್ಪ ನೋಡುವುದಾದರೆ, ಬಹಳ ದಿವಸಗಳ ಹಿಂದೆಯೇ ಇದು ನಮ್ಮ ಸಂಸ್ಥಾನದಲ್ಲಿ ಬರಬೇಕಾಗಿತ್ತು ಎಂದು ಹೇಳಬೇಕು. ಹಾಗೆ ಬರುವುದಕ್ಕೆ ಮಧ್ಯೆ ಅನೇಕ ಅಡಚಣೆಗಳು ಬಂದುವು. ಈಗಲಾದರೂ ಇದನ್ನು ತಂದಿದ್ದಕ್ಕಾಗಿ ನಮ್ಮ ಸರ್ಕಾರದವರಿಗೂ ಮತ್ತು ಇದನ್ನು ಮಂಡಿಸಿರತಕ್ಕ ಮಾನ್ಯ ಮಂತ್ರಿಗಳಿಗೂ ವಂದನೆಗಳನ್ನರ್ಪಿಸಬೇಕಾಗಿದೆ.

ಈ ಮಸೂದೆ ಬರುವುದಕ್ಕೆ ಮುಖ್ಯವಾಗಿ ಎರಡೇ ಎರಡು ಕಾರಣ. ಇನಾಂ ಗ್ರಾಮಗಳಲ್ಲಿನ ರೈತರ ಪರಿಸ್ಥಿತಿ ತೀರ ಹದಗೆಟ್ಟಿತ್ತು; ಅದರ ಮೇಲೆ ಇನಾಂದಾರರುಗಳಿಗೂ ಅಲ್ಲಿನ ರೈತರಿಗೂ ಬಹುಮಟ್ಟಿನ ಬಿಕ್ಕಟ್ಟು ಬಂದಿತ್ತು. ಜೋಡಿದಾರರುಗಳು ರೈತರುಗಳಿಗೆ ಅನೇಕ ತೆರದ ತೊಂದರೆಗಳನ್ನು ಕೊಡುವುದಕ್ಕೆ ಷುರು ಮಾಡಿದ್ದರು.......

ಅಧ್ಯಕ್ಷರು.—ಈ ಬಿಲ್ ಬರುವುದಕ್ಕೆ ಕಾರಣಗಳನ್ನೆಲ್ಲಾ ಆಗಲೇ ಹೇಳಿದೆಯಲ್ಲಾ.

ಶ್ರೀ ಬಿ. ಎಕ್. ಬೋರಣ್ಣಗೌಡರು.—All right Sir, I will leave that point.

ಈ ಬಿಲ್ಲಿನಿಂದ ದೇಶಕ್ಕೆ ಬಹಳ ಅನುಕೂಲವಾಗುತ್ತದೆಂಬುದರಲ್ಲಿ ಸಂದೇಹವಿಲ್ಲ. ಜೋಡಿದಾರರಿಗೂ ಅನುಕೂಲವಾಗುತ್ತದೆ. ಅವರ ಕೈಗೂ ಸ್ವಲ್ಪ ದುಡ್ಡು ಬರುತ್ತದೆ. ಮೇಲಾಗಿ ರೈತರುಗಳಿಗೆ ಜಮೀನಿನ ಮೇಲೆ ಹಕ್ಕು ಬರುತ್ತದೆ. ಆದ್ದರಿಂದ ಇದು ಎಲ್ಲರಿಂದಲೂ ಸ್ವಾಗತಾರ್ಹವಾಗಿದೆಯೆನ್ನಬಹುದು.

ನಿನ್ನೆ ದಿವಸ ನನ್ನ ಮಾನ್ಯ ಮಿತ್ರರಾದ ಭೀಮಪ್ಪ ನಾಯಕರು ಮಾತನಾಡುತ್ತಾ ಜೋಡಿದಾರರುಗಳಿಗೆ ಪರಿಹಾರಕೊಡತಕ್ಕ ವಿಚಾರದಲ್ಲಿ ನಾವು ಬಹಳ ತೀವ್ರವಾಗಿ ಆಲೋಚನೆ ಮಾಡಬೇಕು, ಸರ್ಕಾರದವರಿಗೆ ಅಷ್ಟು ಹಣವನ್ನು ಕೊಡುವುದಕ್ಕೆ ಸಾಧ್ಯವಾಗಬಾರದು; ಎಂಬ ಭಾವನೆಯನ್ನು ಸಭೆಯ ಮುಂದಿಟ್ಟರು, ಅದರ ಬಗ್ಗೆ ಒಂದು ಮಾತು ಮಾತ್ರ ಹೇಳುತ್ತೇನೆ. ಜಮೀನನ್ನು ಇನಾಂದಾರರಿಂದ ಕಿತ್ತು ಸಾಗುವಳಿದಾರರಿಗೆ ಕೊಡುವಾಗ, ಕೆಲವು ಭಾಗವನ್ನು ಅವರೇ (ಇನಾಂದಾರರೇ) ಬೇಸಾಯ ಮಾಡಲಿಕ್ಕೆ ಬಿಟ್ಟು ಬಿಟ್ಟು ಮಿಕ್ಕ ಭಾಗಕ್ಕೆ ಅಕ್ಕಪಕ್ಕದ ಜಮೀನುಗಳಿಗಿರುವ ಬೆಲೆಗೆ ಹೊಂದಿಕೊಂಡು ಸದ್ಯಕ್ಕೆ ಪರಿಹಾರವನ್ನು ಕೊಡುತ್ತೇವೆಯೇ ಹೊರತು, ಆ ಜೋಡಿಯಲ್ಲಿರುವ ಅರಣ್ಯ, ಎಕ್ಸೈಸು ಮುಂತಾದುವುಗಳಿಗೆಲ್ಲಾ ಈಗ ಯಾವ ಬ್ಯಾಂಕಿನಿಂದಾಗಲಿ, ಅಥವಾ ಬೇರೆ ಯಾರಿಂದಾದಾಗಲೀ ಸಾಲ ತೆಗೆದುಕೊಂಡು ಕೊಡಬೇಕಾಗಿಲ್ಲವೆಂದು ಹೇಳಬಯಸುತ್ತೇನೆ.

ಆ ಮೇಲೆ, ಶೃಂಗೇರಿ ಖಾಸ್ ಜಮೀನುಗಳ ವಿಷಯದಲ್ಲಿ ಬಹು ಮಟ್ಟಿನ ಚರ್ಚೆ ನಡೆದಿದೆ. ಇದನ್ನು ವಿರೋಧಿಸಿದ ಮಹನೀಯರು ಶೃಂಗೇರಿಯ ಆಡಳಿತ

ದಲ್ಲಿರುವ ಹಳ್ಳಿಗಳ ರೈತರಿಗೆ ಯಾವತೊಂದರೆಗಳೂ ಇಲ್ಲ, ಇತರ ಸರ್ಕಾರಿ ಗ್ರಾಮುಗಳಲ್ಲಿನ ರೈತರಿಗೆ ಏನು ಅನುಕೂಲ ಅವಕಾಶಗಳಿವೆಯೋ ಅವೆಲ್ಲವೂ ಇಲ್ಲಿನ ರೈತರಿಗೂ ಇದೆಯೆಂದು ವಾದಿಸಿದರು. ಆದರೆ ಹಾಗೆ ಹೇಳುವರು ನಿಜವಾಗಿ ಅಲ್ಲಿ ಹೋಗಿ ವಾಸ್ತವ ಸ್ಥಿತಿಯನ್ನು ನೋಡುವುದಾದರೆ, ಆ ಪರಿಸ್ಥಿತಿಯೇ ಬೇರೆಯೆಂಬುದು ಗೋಚರಕ್ಕೆ ಬರುತ್ತದೆ. ಇಲ್ಲಿ ಭಾಷಣ ಮಾಡುವುದು ಸುಲಭ. ನಾನು ಪಕ್ಕದಲ್ಲಿಯೇ ವಾಸಮಾಡುವ ಒಬ್ಬ ರೈತ. ಅವರು ಹೇಳುವಂತೆ, ಸರ್ವೇ ಸಾಧಾರಣವಾಗಿ ಶೃಂಗೇರಿಯ ರೈತರಿಗೂ ಜಮೀನು ಸಾಗುವಳಿ ಮಾಡುವುದು ವಿಲೇ ಮಾಡುವುದು ಎಲ್ಲಕ್ಕೂ ಅವಕಾಶವಿದೆ. ಆದರೆ ವಿದ್ಯಾಭ್ಯಾಸಕ್ಕಾಗಿ ಸಹಾಯ ಮಾಡುವುದಾಗಲೀ, ಅವರಿಗೊಂದು ಸ್ಕೂಲು ಕಟ್ಟಿಸುವುದಾಗಲೀ ಅಥವಾ ಇತರ ಸರ್ಕಾರಿ ಗ್ರಾಮುಗಳಂತೆ ಸರ್ಕಾರದಿಂದ ಒಂದು ಬಾವಿ ತೋಡಿಸುವುದಕ್ಕಾಗಲೀ—ಯಾವ ಅನುಕೂಲಗಳನ್ನಾಗಲೀ ಆ ಗ್ರಾಮುಗಳವರು ಸರ್ಕಾರದವರನ್ನು ಕೇಳುವುದಕ್ಕಾಗುವುದಿಲ್ಲ. ಅಷ್ಟೇಕೆ, ಸಾಧಾರಣವಾಗಿ ಸರ್ಕಾರಿ ಜಮೀನುಗಳಲ್ಲಿ ಒಂದು ಸಾರಿ ಮಳೆ ಹೋದರೂ ಸರ್ಕಾರದವರು ರಿಮಿಷನ್ ಕೊಡುತ್ತಾರೆ. ಆದರೆ ಇಲ್ಲಿ, ಪಕ್ಕದ ಸರ್ಕಾರಿ ಗ್ರಾಮದಲ್ಲಿ, ರಿಮಿಷನ್ ಕೊಟ್ಟಿದ್ದರೂ ಕೂಡ, ಮಠದವರನ್ನು ರೈತರು ರಿಮಿಷನ್ ಕೊಡಿ ಎಂದು ಕೇಳಿದರೆ, ಸರ್ಕಾರದವರಿಗೇನೋ ಬೇಕಾದಷ್ಟು ಹಣವಿದೆ, ಅವರು ರಿಮಿಷನ್ ಕೊಡಬಹುದು, ನಮಗೆ ಬರತಕ್ಕ ಆದಾಯವೇ ಕಮ್ಮಿ ಅದನ್ನು ಇನ್ನೂ ಕಮ್ಮಿ ಮಾಡಿದರೆ ಮಠದ ಕೆಲಸ ಕಾರ್ಯಗಳು ನಡೆದುಕೊಂಡು ಹೋಗುವುದು ಕಷ್ಟ, ಆದ್ದರಿಂದ ಈ ವರ್ಷ ಕೊಡುವುದಕ್ಕಾಗುವುದಿಲ್ಲ, ಈ ವರ್ಷ ಕೊಡುವ ಕಂದಾಯವನ್ನು ಮುಂದಿನ ವರ್ಷ ಕೊಡಿ ಎಂದು ಹೇಳುತ್ತಾರೆ. ಅನೇಕ ವರ್ಷಗಳಿಂದ ಹೀಗೆಯೇ ನಡೆಯುತ್ತಿದೆ. ರೈತರು ಅಲ್ಲಿನ ಜಮೀನುಗಳಲ್ಲಿ ಅಥವಾ ಕಾಡುಗಳಲ್ಲಿರತಕ್ಕ ಮರ ಮುಟ್ಟುಗಳನ್ನು ಸ್ವಂತ ಉಪಯೋಗಕ್ಕೆ ಕಡಿದುಕೊಳ್ಳಬೇಕೆಂದರೂ ಪರವಾನಗಿಯನ್ನು ಮಠದಿಂದ ತೆಗೆದುಕೊಳ್ಳಬೇಕು. ಅಮರಾಯಿಗೆ ಸಂಬಂಧಪಟ್ಟಂತೆ ಅಳಲೇಕಾಯಿ, ಸೀಗೆಕಾಯಿ ಮುಂತಾದ ಯಾವುದನ್ನು ಶೇಖರಿಸುವುದಕ್ಕೂ ಸರ್ಕಾರಿ ಹಳ್ಳಿಗಳಲ್ಲಿರುವಂತೆ ಅಲ್ಲಿ ಅನುಕೂಲಗಳೇನಿವೆ? ಮಿಕ್ಕ ಸರ್ಕಾರಿ ಗ್ರಾಮುಗಳಲ್ಲಿರುವ ಸೌಲಭ್ಯಗಳೂ ಅಲ್ಲಿವೆಯೆಂದು ಶ್ರೀಮಾನ್ ಜೋಯಿಸ್‌ರವರು ಹೇಳಿದರೆ, ಅವರು ನಿಜವಾಗಿಯೂ ಅಲ್ಲಿನ ಪರಿಸ್ಥಿತಿಯನ್ನು ನೋಡಿಲ್ಲವೆಂದು ನಾನು ವಿನಯ ಪೂರ್ವಕವಾಗಿ ಹೇಳುತ್ತೇನೆ.

ಅದೇನೇ ಆಗಲಿ, ಶೃಂಗೇರಿ ಜಹಗೀರಿಯೆಂಬ ಸಂಸ್ಥೆ ಸಾವಿರಾರು ವರ್ಷಗಳಿಂದಲೂ ನಡೆದುಕೊಂಡು ಬಂದಿರುವ ಒಂದು ಸಂಸ್ಥೆ. ಅನೇಕ ಜನ ಭಕ್ತರನ್ನೂ ಅನುಯಾಯಿಗಳನ್ನೂ ಅದು ಹೊಂದಿದೆ. ಅಂಥಾದ್ದಕ್ಕೆ ನಾವು ಯಾವ ತೆರದಲ್ಲೂ ಅಡಚಣೆ ತಂದು ಅಲ್ಲಿನ ಪೂಜೆ ಪುನಸ್ಕಾರಗಳಿಗೆ ಅಡ್ಡಿತರಬೇಕೆಂಬುದು ನಮ್ಮ ಭಾವನೆಯಲ್ಲ. ಇದಕ್ಕಾಗಿ ಮುಖ್ಯವಾಗಿ ಮಠಕ್ಕೆ ಬೇಕಾಗಿರುವುದು ದುಡ್ಡು; ಜಹಗೀರಿಯಲ್ಲ. ಆದ್ದರಿಂದ, ಈಗ ಜಹಗೀರಿಂದ ಎಷ್ಟು ಹಣ ಬರುತ್ತಿದೆಯೋ ಆ ಮೊಬಲಗನ್ನು ಸರ್ಕಾರದವರು ಈ ಹಳ್ಳಿಗಳನ್ನು ಸರ್ಕಾರಿ ಹಳ್ಳಿಗಳಾಗಿಯೇ ತೆಗೆದುಕೊಂಡು, ಅವುಗಳ ಮೇಲ್ವಿಚಾರಣೆ ವಹಿಸಿಕೊಂಡು, ಬರತಕ್ಕ ಕಂದಾಯವನ್ನು ಆ ಜಹಗೀರ್‌ದಾರರಿಗೆ ಕೊಟ್ಟರೆ ಸರಿ ಹೋಗುವುದಿಲ್ಲವೇ? ಹಾಗಿಲ್ಲದೆ ಅವರೇ ಅಧಿಕಾರಗಳನ್ನಿಟ್ಟುಕೊಂಡು, ಅಲ್ಲಿ ಏನೊಂದು ಜಗಳ ಬಂದರೂ ಅಲ್ಲಿರತಕ್ಕ ಪೋಲೀಸ್ ವಗೈರೆಯವರೇ, ಅಲ್ಲಿನ ಏಜೆಂಟರೇ ತೀರ್ಮಾನಮಾಡಬೇಕೆನ್ನುವುದೇಕೆ? ಈಗ ಸಾಮಾನ್ಯವಾಗಿ ಒಳ್ಳೆಯ ಆದಾಯ ಬರತಕ್ಕ ಹಳ್ಳಿಗಳನ್ನೇ ಶೃಂಗೇರಿ ಜಹಗೀರಿಗೆ ಸರ್ವಮಾನ್ಯವಾಗಿ ಕೊಟ್ಟಿದ್ದಾರೆ. ಶ್ರೀಮಾನ್ ಜೋಯಿಸ್‌ರವರು, ಈ ಜಮೀನುಗಳೆಲ್ಲಾ ಹನ್ನೊಂದನೆಯ ಶತಮಾನದಷ್ಟು ಹಿಂದಿನಿಂದ ಬಂದಿರುವಂಥವು, ಅವರು ಮಾಡುವ ಒಳ್ಳೆಯ ಕೆಲಸ ಕಾರ್ಯಗಳಿಗಾಗಿ ಆಗಿನ ರಾಜ ಮಹಾರಾಜರುಗಳು ಕೊಟ್ಟಿದ್ದಾರೆ, ಅಂಥವುಗಳನ್ನು ಕಿತ್ತುಕೊಳ್ಳುವುದು ಸರಿಯಲ್ಲ, ಎಂದು ಹೇಳಿದರು. ಆ ಉದ್ದೇಶವೇನೋ ಒಳ್ಳೆಯದೆಂದು ನಾನು ಒಪ್ಪುತ್ತೇನೆ. ಅವರಿಗೆ ಸಂಪಾದನೆ ಚೆನ್ನಾಗಿರಲಿ, ಅಲ್ಲಿನ ಕೆಲಸ ಕಾರ್ಯಗಳು ಸರಿಯಾಗಿ ನಡೆಯಲಿ ಎಂದು ನಾನೂ ಹೇಳುತ್ತೇನೆ. ಅದಕ್ಕೆ ಯಾವ ಭಂಗವನ್ನೂ ತರುವುದಕ್ಕೆ ನಾವು ಆಶಿಸುತ್ತಿಲ್ಲ. ಏನಿದ್ದರೂ ಅಲ್ಲಿನ ಹಳ್ಳಿಗಳಲ್ಲಿರುವ ರೈತರುಗಳಿಗೆ ಹೆಚ್ಚಿಗೆ ಹಕ್ಕನ್ನು ಗಳಿಸಿಕೊಡಬೇಕೆಂದು ನಾವು ಹೇಳುತ್ತಿದ್ದೇವೆಯೇ ಹೊರತು, ಆ ಜಹಗೀರಿಯ ಜಮೀನುಗಳನ್ನೆಲ್ಲಾ ಕಿತ್ತುಕೊಂಡು ಬಿಡಬೇಕು, ಅವರಿಗೆ ಯಾವ ಪರಿಹಾರವನ್ನೂ ಕೊಡಬೇಕಾಗಿಲ್ಲವೆಂದು ಹೇಳುತ್ತಿಲ್ಲ. ಬೇರೆ ಎಲ್ಲಾ ಕಡೆಯಲ್ಲೂ ಯಾವ ರೀತಿ ಜೋಡಿದಾರರುಗಳಿಗೂ ಇನಾಂದಾರರುಗಳಿಗೂ ತಿಕ್ಕಾಟ ಶುರು ಆಯಿತೋ ಹಾಗೆ ಅಲ್ಲಿಯೂ ಶುರುವಾಯಿತು. ಹೀಗಿರುವಾಗ, ಪಕ್ಕದ ಜೋಡಿಯಲ್ಲಿನ ರೈತರಿಗೆ ಹೆಚ್ಚಿನ ಹಕ್ಕು ಬಂದು ಈ ಸರ್ವಮಾನ್ಯದ ಹಳ್ಳಿಯ ರೈತರಿಗೆ ಆ ಹಕ್ಕು ಬರದೆ ಹೋದರೆ, ಅವರು ಬಹಳ ಕಿರುಕುಳಪಡುತ್ತಾರೆ, ಅವರ ಅಭಿವೃದ್ಧಿಗೆ ಕಂಟಕ ಬರುತ್ತದೆ ಎಂಬುದನ್ನು ಎಲ್ಲರೂ ಒಪ್ಪಬೇಕು. ಆದ್ದರಿಂದ ಈ ಅಭಿಪ್ರಾಯಗಳನ್ನೆಲ್ಲಾ ಪರಿಶೀಲನೆಗೆ ತೆಗೆದುಕೊಂಡು ಆ ಮಠ ಸಾರೋದ್ಧಾರವಾಗಿ ನಡೆದುಕೊಂಡು ಬರುವಂತೆ, ಹಿಂದೆ ರಾಜ ಮಹಾರಾಜರುಗಳು ಹನ್ನೊಂದು ಶತಮಾನಗಳ ಹಿಂದೆ ಅದಕ್ಕೇನು ಜೋಡಿಯನ್ನು ಹಾಕಿ ಕೊಟ್ಟರೋ, ಅದರ ಉದ್ದೇಶವೇನಿತ್ತೋ—ಆ ಉದ್ದೇಶವನ್ನು ಸಾಧಿಸುವುದರಲ್ಲಿ ನಮಗೆ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಆದರೆ, ಹಾಗೆ ಜೋಡಿ, ಅಥವಾ ಜಹಗೀರೆಂದ ಮಾತ್ರಕ್ಕೇ ಎಲ್ಲ ಅಧಿಕಾರಗಳೂ ಅವರಿಗೇ ಇರಬೇಕೋ? ಅಧಿಕಾರಗಳನ್ನೂ ಉಳಿಸಿಕೊಳ್ಳಬೇಕೆಂದು ಹೇಳುವ ಮಾನ್ಯ ಶಿಷ್ಯರಿಗೇ ಅದು ಒಳ್ಳೆಯದಲ್ಲ. ಆದರಲ್ಲೂ, ಸ್ವಾಮಿಗಳ ವಿಚಾರ ನಾನು ಹೆಚ್ಚಾಗಿ ಹೇಳಲು ಇಷ್ಟಪಡುವುದಿಲ್ಲ. ಒಂದು ಮಾತು ಹೇಳುವುದಾದರೆ, ಸ್ವಾಮಿಗಳವರಿಗೆ ಈ ವಿಚಾರದಲ್ಲಿ ಯಾವ ಭಾವನೆಯೂ ಇಲ್ಲ. ಅಲ್ಲಿರತಕ್ಕ ಶಿಷ್ಯರುಗಳು ಮುಖ್ಯವಾಗಿ ಈ ಜೋಡಿ ಇರಬೇಕೆಂದು ಹೇಳುತ್ತಾರೆ. ಶಿಷ್ಯರುಗಳಲ್ಲಿ ನಾನೂ ಒಬ್ಬ. ಆದರೆ ನಾನು ಹೇಳುತ್ತೇನೆ, ಅಕ್ಕಪಕ್ಕದಲ್ಲಿ ಸರ್ಕಾರಿ ಹಳ್ಳಿಗಳಲ್ಲಿ ರೈತರುಗಳಿಗೆ ಯಾವ ಹಕ್ಕಿದೆಯೋ ಆ ಹಕ್ಕುಗಳು ಇವರುಗಳಿಗೂ ಇರಲಿ, ಜೊತೆಗೆ ಮಠವು ಸುಗಮವಾಗಿ ಸಾರೋದ್ಧಾರವಾಗಿ ನಡೆದುಕೊಂಡು ಹೋಗುವಂತೆ ಯಾವ ತೆರದ ಹಕ್ಕನ್ನು ಬೇಕಾದರೂ ಕೊಡೋಣ. ಅವರ ಶೃಂಗೇರಿ ಜಹಗೀರು ಆದಾಯ 3 ಲಕ್ಷ ರೂಪಾಯಿಗಳೆಂದು ಗೊತ್ತಾಗಿದೆ. ಈ ಮೂರು ಲಕ್ಷ ರೂಪಾಯಿಗಳು ಸರಿಯಾಗಿ ಖರ್ಚಾಗುತ್ತಿವೆಯೋ ಅಥವಾ ಅಪವ್ಯಯವಾಗುತ್ತಿದೆಯೋ ಎಂಬ ಪ್ರಶ್ನೆಗೆ ನಾನು ಹೋಗುವುದಿಲ್ಲ. ಅವರು ಇಷ್ಟು ಹಣ ಬೇಕು, ಅದು ಅನಿವಾರ್ಯವಾಗಿ ಬೇಕೇ ಬೇಕೆಂದು ಹೇಳುವುದಾದರೆ ಸರ್ಕಾರದ ಬೊಕ್ಕಸದಿಂದಲೇ ಬೇಕಾದರೆ ಕೊಡೋಣ; ಒಳ್ಳೆಯ ಸಂಸ್ಥೆಯಾಗಿ ಅದು ಬೆಳೆಯಲಿ. ಅದನ್ನು ಬಿಟ್ಟು ಅಲ್ಲಿರತಕ್ಕ ferry, ಅರಣ್ಯ, ಖನಿಜ ಎಲ್ಲವನ್ನೂ ಅವರಿಗೇ ಕೊಡಬೇಕೆಂದು ಹೇಳುವುದು ಸರಿಯಲ್ಲ.

(ಶ್ರೀ ಬಿ. ಎಚ್. ಬೋರಣ್ಣಗೌಡರು)

ಅಸಂಬದ್ಧ ವಿಚಾರವಲ್ಲವೆಂದು ಭಾವಿಸುವುದಾದರೆ, ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಸ್ವಾಮಿಗಳು ಪಕ್ಕದಲ್ಲೇ ಇರುವ ನದಿಗೆ ಹೋಗಬೇಕು ಅಥವಾ ಅರಣ್ಯದಲ್ಲಿ ಸಂಚಾರ ಹೋಗಬೇಕು ಎಂದರೆ ಅವರನ್ನು ಯಾರಾದರೂ ಹೋಗ ಕೂಡದೆಂದು ಹೇಳಿದರೇನು ಗತಿ, ಆದ್ದರಿಂದ ಈ ಜಹಗೀರಿಯ ಮೇಲಿನ ಎಲ್ಲಾ ಅಧಿಕಾರಗಳೂ ಅವರಿಗಿರಬೇಕೆನ್ನುವುದು ಸರಿಯಲ್ಲ. ಹೀಗೆ ಹೇಳಲು ಯಾರಿಗೆ ಶಕ್ತಿ ಬರುತ್ತದೆ? ಈ ರೀತಿ ಮನುಷ್ಯರಾದವರು ಹೇಳುವುದಿಲ್ಲ. ಅಥವಾ ಹುಚ್ಚರು ಹೇಳಬೇಕು. ಅಲ್ಲಿ ಹೋಗಬೇಡಿರೆಂದು ಹುಚ್ಚರಂತೆ ಹೇಳುತ್ತಾರೆಂಬ ಶಂಕೆ ಏಕೆ? ತಿರುಗಾಡುವುದಕ್ಕೆ ಯಾರು ಅಡ್ಡಿ ಮಾಡುತ್ತಾರೆ? ಎಲ್ಲರಿಗೂ ಸ್ವಾಮಿಗಳಲ್ಲಿ ಮರ್ಯಾದೆ ಇದೆ. ಯಾರೂ ಹಾಗೆ ಹೇಳಲಾರರು. ಒಂದು ವೇಳೆ ಬೇರೆ ಸಂದರ್ಭಗಳಲ್ಲಿ ಅವರು ಅಂತಹ ಕಡೆ ಹೋಗುವುದರಿಂದ ಜನರಿಗೆ ಬೇರೆ ವಿಧವಾದ ಅಭಿಪ್ರಾಯವುಂಟಾಗಬಹುದು ಎಂದು ತೋರುವ ಸಂದರ್ಭಗಳಲ್ಲಿ ಪ್ರತಿಬಂಧಕ ಹಾಕಬಹುದೇ ಹೊರತು ಈ ರೀತಿ ಕ್ಷುಲ್ಲಕ ಕಾರಣಗಳನ್ನಿಟ್ಟುಕೊಂಡು ಸುಮ್ಮನೆ ಇಲ್ಲದ ಯೋಚನೆಗಳನ್ನು ಮಾಡಿಕೊಂಡು ಈ ರೀತಿ ವಿರೋಧಿಸಿದರೆ ಅಲ್ಲಿರತಕ್ಕ ರೈತರಿಗೆ ತೊಂದರೆಯಾಗುತ್ತದೆ. ಇತರ ಸರ್ಕಾರಿ ಹಳ್ಳಿಗಳಲ್ಲಿರುವ ರೈತರು ಎಷ್ಟು ಅನುಕೂಲಗಳನ್ನು ಅನುಭವಿಸುತ್ತಿದ್ದಾರೋ ಅದೇ ಅನುಕೂಲಗಳನ್ನು ಶೃಂಗೇರಿ ಮತ್ತು ಯಳಂದೂರು ಮತ್ತು ಇತರ ಕಡೆಗಳಲ್ಲಿರುವ ರೈತರೂ ಅನುಭವಿಸಬೇಕೆಂದು ನನ್ನ ಅಭಿಪ್ರಾಯ. ಇನ್ನು ಬೇರೆ ಬೇರೆ ಒಳ್ಳೆಯ ಉದ್ದೇಶಗಳಿಗಾಗಿ ಈ ಸಂಸ್ಥೆಗಳಿವೆ ಎಂದು ಹೇಳಿದರು. ಅಂಥ ಒಳ್ಳೆಯ ಉದ್ದೇಶಗಳಿದ್ದರೆ ಸಹಾಯ ಮಾಡೋಣ. ಹಿಂದೆ ಒಳ್ಳೆಯ ಕೆಲಸವೆಂದು ಕಂಡು ಬಂದು ಈ ಕೆಲಸವನ್ನು ಮಾಡಿದರು. ಅಂತಹ ಒಳ್ಳೆಯ ಉದ್ದೇಶ ಕಂಡು ಬಂದರೆ ನಾವೂ ಸಹಾಯ ಮಾಡೋಣ. ಅದಕ್ಕೋ ಬೇರೆ ಕಾನೂನು ತಂದು ಮಾಡೋಣ.

ಇನ್ನು ಈಗ ತಂದಿರತಕ್ಕ ಇನಾಮ್ ರದ್ದು ಮಾಡುವ ಮಸೂದೆ ಒಳ್ಳೆಯದಲ್ಲ. ಮುಂದೆ ಶೃಂಗೇರಿ ಜಹಗೀರಿಗೇ ಬೇರೊಂದು ಮಸೂದೆ ಆಗಬೇಕೆಂದು ಕೆಲವರು ವಾದ ಮಾಡಿದರು. ಇದಕ್ಕೆ ಅವಕಾಶವೇ ಇಲ್ಲ. ಈ ಸಭೆ ಇನ್ನು ಮೂರು ತಿಂಗಳಿರುತ್ತದೆ. ಆ ಮೇಲೆ ಬೇರೆಯವರು ಬರುತ್ತಾರೆ. ಬೇಕಾದರೆ ಅವರು ಬೇರೆ ಕಾನೂನು ಮಾಡಬಹುದು, ಅಥವಾ ನಾವು ಈಗ ಮಾಡಿದುದನ್ನು ಬದಲಾವಣೆ ಮಾಡಬಹುದು. ಮುಂದೆ ಬೇರೆ ಮಾಡೋಣ ಎಂದು ಏಕೆ ಹೇಳಬೇಕು? ನಮಗೆ ಅವಕಾಶವಿರುವಾಗ ಒಳ್ಳೆಯ ಕೆಲಸವನ್ನು ಮಾಡೋಣ. ಇದನ್ನು ಈಗಲೇ ಪೂರ್ಣವಾಗಿ ಮಾಡಿ ಇದರಿಂದ ದೇಶದ ಮೇಲೆ ಏನು ಪರಿಣಾಮವಾಗುತ್ತದೆಯೋ ಅದನ್ನು ನಾವು ತೆಗೆದುಕೊಳ್ಳಲು ಸಿದ್ಧವಾಗಿದ್ದೇವೆ. ಇದರಿಂದ ರೈತರಿಗೆ ಒಳ್ಳೆಯದಾದರೆ ಅದರ ಒಳ್ಳೆಯ ಪರಿಣಾಮವನ್ನು ನಾವು ತೆಗೆದುಕೊಳ್ಳುತ್ತೇವೆ, ಅಥವಾ ಕೆಟ್ಟದ್ದಾದರೆ ಅದನ್ನೂ ತೆಗೆದುಕೊಳ್ಳುತ್ತೇವೆ. ಆದರೆ ಶ್ರೀಮಾನ್ ಹುಚ್ಚೇಗೌಡರು ಹೇಳಿದ ಹಾಗೆ ನಾನು ಹೇಳುವುದಿಲ್ಲ, ಅದರ ವಿಷಯವನ್ನು ನಾವೇನೂ ಯೋಚನೆ ಮಾಡಬೇಕಾಗಿಲ್ಲ. ಒಟ್ಟಿನಲ್ಲಿ ಬೇರೆ ಕಾನೂನು ತರಬೇಕಾಗಿಲ್ಲ, ಇದನ್ನು ಈಗಲೇ ಪೂರ್ಣ ಮಾಡಬೇಕೆಂದು ಹೇಳಿ ಮುಗಿಸುತ್ತೇನೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್ ಅವರು (ಬೆಂಗಳೂರು ನಗರ).—ಸ್ವಾಮಿ, ಈಗಾಗಲೇ ನಮ್ಮ ಮೈಸೂರು ದೇಶದ ಮೇಲೆ ಅಖಿಲ ಭಾರತದ ದೃಷ್ಟಿ ಬಿದ್ದಿರುವುದನ್ನು ಅನೇಕ ವಿಷಯಗಳಲ್ಲಿ ನಾವು ನೋಡುತ್ತಿದ್ದೇವೆ. ಅಲ್ಲದೆ ನಮ್ಮ ಮುಂದಿರುವ ಈ ಇನಾಂಗಳನ್ನು ರದ್ದು ಮಾಡುವ ಮಸೂದೆಯಲ್ಲಿ ಒಂದು ಮಹತ್ವವಾದ ಅಖಿಲ ಭಾರತಕ್ಕೆ ಸಂಬಂಧಪಟ್ಟ ವಿಷಯವೂ ಸೇರಿರುವುದರಿಂದ, ಅಖಿಲ ಭಾರತದ ಅನೇಕ ವ್ಯಕ್ತಿಗಳೂ ಸಂಸ್ಥೆಗಳೂ ಇದಕ್ಕೆ ಹೆಚ್ಚು ಗಮನಕೊಟ್ಟು ನಿರೀಕ್ಷಿಸುತ್ತಾ ನಿಂತಿದ್ದಾರೆ. ಇಂತಹ ಒಂದು ಸಮಯದಲ್ಲಿ ನಾವು ಈ ಮಸೂದೆಯನ್ನು ಚರ್ಚೆ ಮಾಡುತ್ತಿದ್ದೇವೆ. ಇದನ್ನು ಚರ್ಚೆಮಾಡುವುದಕ್ಕೆ ಮೊದಲು ನಾನು ಎರಡು ಮಾತುಗಳನ್ನು ಹೇಳಬೇಕಾಗಿದೆ ; ಆಮೇಲೆ ಹೇಳಲು ಮರೆತು ಹೋಗಬಹುದು. ಇದರಲ್ಲಿ ಒಂದು ವಿಷಯವನ್ನು ಸ್ವಲ್ಪ ದೀರ್ಘವಾಗಿ ಹೇಳಬೇಕಾಗಿದೆ. ಅದೇನೆಂದರೆ, ಶ್ರೀ ಮ್ಯಾಸ್ಕರೆನ್ಹಾಸ್‌ರವರು ಶೃಂಗೇರಿಯ ವಿಷಯದಲ್ಲಿ ಹೇಳುತ್ತಾ ಇದು ಒಂದು ಸಣ್ಣ communityಗೆ ಸೇರಿದುದು, ಒಂದು ಸಣ್ಣ ಜನಾಂಗಕ್ಕೆ ಸೇರಿದುದು ಎಂದು ಹೇಳಿದರು. ಇದನ್ನು ನಾನು ತೀವ್ರವಾಗಿ ಪ್ರತಿಭಟಿಸಬೇಕಾಗಿದೆ ....

Sri V. M. MASCARENHAS.—It is not right, Sir. He has made a mistake. He must quote me correctly even when he wants to quote me. Will he give me the English equivalent of the expression "ಸಣ್ಣ community"?

Sri K. R. SREEKANTESWAR.—If I am wrong, I stand corrected. 'One section of the people'. ಸಣ್ಣ ಜನಾಂಗ, ಜನರಲ್ಲಿ ಒಂದು ಭಾಗದ ಜನರಿಗೆ ಸಂಬಂಧಪಟ್ಟದ್ದು ಎಂದು ಹೇಳಿದರು. ಅದಕ್ಕೆ I am quoting from the book 'Discovery of India' written by Pandit Jawaharlal Nehru............

"On the foundation of the early Vedanta, Shankara (or Shankaracharya) built a system which is called the Advaita Vedanta or non-dualist Vedanta. It is this philosophy which represents the dominant philosophic outlook of Hinduism today."

"He held that any persons belonging to any caste could attain the highest knowledge."

Further,

"There is also a continual insistence on self-sacrifice and detachment."

"And yet Shankara was a man of amazing energy and vast activity. He was no escapist, retiring into his shell or into a corner of the forest seeking his own individual perfection and oblivious of what happened to others. Born in Malabar in the far south of India, he travelled incessantly all over India, meeting innumerable people, arguing, debating, reasoning, convincing, and filling them with a part of his own passion and tremendous vitality. * * He strove hard to synthesize the diverse currents that were troubling the mind of India of his day to build a unity of outlook out of that diversity."

"* * * All this was so then and Shankara was doubtless fully aware of it. It would seem that Shankara wanted to add to this sense of national unity and common consciousness."

Apart from this Sir, so far as the report of the Select Committee that is before us is concerned, I have to

remark, and remark pathetically, that this Bill is full of inconsistencies, and full of half-baked ideas. They are not bold in bringing forward this Bill. If it is their idea that abolition of inams must take place, it must be done straightaway. This is a measure which aims at improving the position of the cultivator and the tiller of the soil, and such a measure should have come before this House not now, but four years ago, if they wanted to do it. There was disturbance and interruption. I am going to prove it.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್ ಅವರು.—ಹಾಗಲ್ಲ, ಭೂಸ್ವಾಮ್ಯದ ವಿಷಯದಲ್ಲಿ ಸುಧಾರಣೆಯನ್ನು ತರಬೇಕಾಗಿದ್ದಲ್ಲಿ ಯಾವ ರಾಜಕೀಯ ಪಕ್ಷವಾಗಲಿ ಅಧಿಕಾರಕ್ಕೆ ಬಂದ ತಕ್ಷಣವೇ ತರಬೇಕಾಗಿತ್ತು.

Mr. SPEAKER.—It is not so easy as the Hon'ble Member imagines.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್ ಅವರು.—ಇದೇನೂ ಹೊಸ ವಿಷಯವಲ್ಲ. ಅನೇಕ ವರ್ಷಗಳಿಂದಲೂ ಇನಾಂ ರದ್ದಾಗಬೇಕೆಂಬುದು ಬೇಕಾದಷ್ಟು ಚರ್ಚೆ ಮಾಡುತ್ತಲೇ ಇದ್ದೇವೆ. ಇನಾಮ್‌ಗಳು ಮೈಸೂರು ದೇಶದಲ್ಲಿ ಕಡಿಮೆ ಇರಬಹುದು. ಬೀಹಾರ್, ಒರಿಸ್ಸಾ, ಬಂಗಾಳಾ ದೇಶಗಳಲ್ಲಿ ಬೇಕಾದಷ್ಟಿದ್ದು ಈ ವಿಷಯ ತೀವ್ರವಾಗಿ ಚರ್ಚೆ ನಡೆಸುತ್ತಿದ್ದರು, ಪಾರ್ಲಿಮೆಂಟಿನಲ್ಲಿ.

Sri S. RANGA RAO.—You cease to be a socialist so far as Sringeri Jagir is concerned?

Sri K. R. SREEKANTESWAR.—No, listen to me till the end. Why are you so impatient?

ಆದುದರಿಂದ ಇಂತಹ ಸುಧಾರಣೆಯನ್ನು ಅಧಿಕಾರಕ್ಕೆ ಬಂದ ತಕ್ಷಣ ಮಾಡಬೇಕಾಗಿತ್ತು. ಮೂರು ವರ್ಷದ ಮೇಲೆ ಸಮಿತಿಯನ್ನು ಮಾಡಿದರು. ಈ ಮಸೂದೆ ಬರುವುದಕ್ಕೆ ಮೊದಲು ಆ ಸಮಿತಿಯನ್ನು ಮಾಡಿದರು.

ಈ ಸಮಿತಿ 3–4 ವರ್ಷಗಳಿಗೆ ಹಿಂದೆ ಈ ಬಿಲ್ಲು ಬರುವುದಕ್ಕೆ ಮುಂಚಿತವಾಗಿ..................

(ಸಭೆಯಲ್ಲೆಲ್ಲಾ ಗದ್ದಲ)

ಅಧ್ಯಕ್ಷರು.—ನೀವು ಏನು ಹೇಳುತ್ತೀರೆಂಬುದೇ ಅರ್ಥವಾಗುತ್ತಿಲ್ಲ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್ ಅವರು.—ಒಂದೆರಡು ತಿಂಗಳು ಹೆಚ್ಚಾಗಿದ್ದರೇನು ಅಥವಾ ಕಡಮೆಯಾದರೆ ತಾನೆ ಏನು?

The Hon'ble Sri H. SIDDAIYA.—With the permission of the Chair, I would like to point out this. He is misquoting and he is misleading the House. ಆ ಸಮಿತಿಯನ್ನು ಮಾಡಿ 3–4 ವರ್ಷಗಳಾಯಿತೆಂದು ಒಂದುಸಾರಿ ಹೇಳುತ್ತಾರೆ. ಮತ್ತೊಂದು ಸಾರಿ 2–3 ತಿಂಗಳಾಗಿರುತ್ತೆಂದು ತಿಳಿಸುತ್ತಿದ್ದಾರೆ. ಆ ಸಮಿತಿಯನ್ನು ರಚಿಸಿದ್ದು 1948ನೇ ಇಸ್ವಿ ಆಗಸ್ಟ್ 13ರಲ್ಲಿ. ಈ ವಿಚಾರಗಳನ್ನೆಲ್ಲಾ ಟೆನೆನ್ಸಿ ಮಸೂದೆಯನ್ನು ಮಂಡಿಸಿದಾಗಲೇ ತಿಳಿಸಿದ್ದೇನೆ. ಈ ವಿಚಾರ ಸರ್ಕಾರಿಗೂ ಗೊತ್ತಿದೆ. ಈಗ ಮಾತನಾಡುತ್ತಿರುವ ಮಾನ್ಯ ಸದಸ್ಯರೂ ಕೂಡ ಆ ವಿಚಾರಗಳನ್ನೆಲ್ಲಾ ಒಂದು ಹಾಳೆಯ ಮೇಲೆ ಬರೆದು ಗುರ್ತು ಹಾಕಿಕೊಂಡಿದ್ದಾರೆ. ಆದರೂ ಕೂಡ ಅವರು ಹೀಗೆ misquote ಮಾಡತಕ್ಕದ್ದು ಸರಿಯಾದ್ದಲ್ಲವೆಂಬುದನ್ನು ನಾನು ಅವರಿಗೆ ತಿಳಿಸಬೇಕಾಗಿದೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್ ಅವರು.—ಇರಬಹುದು. ಆ ಸಮಿತಿಯನ್ನು ತಾವು 1948ರಲ್ಲೇ ರಚಿಸಿರಬಹುದು. ಆದಾಗ್ಯೂ ಈ ವರದಿ ಅವರಿಂದ ನಿಮ್ಮ ಕೈಗೆ ಬಂದು, ಇದು ಅಚ್ಚಾಗಿರುವುದು 1950ರಲ್ಲಿ. ಅಲ್ಲಿಗೆ ಇದು ಏನು ಸೂಚಿಸುತ್ತಿದೆಯೆಂದರೆ.

ಅಧ್ಯಕ್ಷರು.—ತಮ್ಮ ಅಭಿಪ್ರಾಯ ಏನೆಂಬುದೇ ಗೊತ್ತಾಗುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಅವರು ಮಾತನಾಡುತ್ತಿರುವುದು ಬಹಳ ಅಸಮಂಜಸವಾಗಿದೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್ ಅವರು.—I am not inconsistent like the Hon'ble friends on this side. Because there are so many matters in this Bill, I have to remark like that.

ಶ್ರೀ ಕೆ. ಸಂಪಂಗಿರಾಮಯ್ಯನವರು (ಕೋಲಾರ ಜಿಲ್ಲೆ).—ಅಂಥಾ ವಿಚಾರಗಳು ಯಾವವು? ತಿಳಿಸಿ. ಸುಮ್ಮನೆ ಹಾಗೆ ವಾದಿಸಬಾರದು.

Sri G. A. ACHARYA.—Let him discuss the delay. But let him restrict himself to the Select Committee Report.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್ ಅವರು.—ಸರ್ಕಾರದವರು ಹೀಗೆ ಏನಾದರೂ ತೊಡಕು ಬಂದಾಗ ಆ ಬಗ್ಗೆ ಒಂದು ಸಮಿತಿ ನೇಮಿಸುತ್ತೇವೆಂದು ಹೇಳಿ ಆ ಬಗ್ಗೆ ಕಾರ್ಯಕ್ರಮ ಕೈಗೊಳ್ಳುವುದರಲ್ಲಿ ಒಂದು ವರ್ಷವಲ್ಲ, 2 ವರ್ಷ, 3 ವರ್ಷಗಳ ಕಾಲ ನಿಧಾನಮಾಡಿರತಕ್ಕಂಥ ಅವಕಾಶಗಳೂ ಸಂದರ್ಭಗಳೂ ಅನೇಕವಿರತ್ತವೆ. ಆ ರೀತಿಯ ಪದ್ಧತಿಯನ್ನು ಸರ್ಕಾರದವರು ಅನುಸರಿಸತಕ್ಕದ್ದು ನಮಗೆ ಕಂಡುಬಂದಿದೆ. ಇಂಥಾ ಒಂದು ಮಸೂದೆಯನ್ನು ಇವರು 4 ವರ್ಷಗಳಿಗೆ ಹಿಂದೆಯೇ ತರಬೇಕಾಗಿತ್ತೆಂದೂ, ಹಾಗೆ ತರದೆ ನಿಧಾನ ಮಾಡಿದ್ದಾರೆಂದು ನಾನು ತಿಳಿಸಬೇಕಾಗಿದೆ.

ಅಧ್ಯಕ್ಷರು.—ನಾಲ್ಕು ವರ್ಷಕ್ಕೆ ಹಿಂದೆ ಈ ಸರ್ಕಾರವೇ ಇರಲಿಲ್ಲವಲ್ಲ!

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—1948ಕ್ಕೆ ಹಿಂದೆಯೇ ಈ ಚಳವಳಿಯನ್ನು ಇವರು ಹೂಡಿದ್ದರು. ಆ ರೀತಿ ಇವರು ಇದನ್ನು ಅಧಿಕಾರಕ್ಕೆ ಬಂದ ತಕ್ಷಣವೇ ಮಾಡಬೇಕಾಗಿತ್ತು.

ಅಧ್ಯಕ್ಷರು.—ತಾವು ತಿಳಿಸತಕ್ಕ ವಿಷಯಗಳು ಸ್ವಲ್ಪ consistent ಆಗಿರಲಿ. ಇಲ್ಲದಿದ್ದರೆ ಅವುಗಳಿಗೆ value ಕಡಿಮೆಯಾಗುತ್ತದೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್ ಅವರು.—ಈ ರಿಪೋರ್ಟಿನಲ್ಲಿ ಹೇಳಿರತಕ್ಕದ್ದೇ ಒಂದು. ಆದರೆ ಈ ಬಿಲ್ಲಿನಲ್ಲಿ ಅಡಕವಾಗಿರತಕ್ಕದ್ದೇ ಒಂದು. ಹೀಗೆ ಒಂದಕ್ಕೊಂದು ವಿರೋಧಾಭಿಪ್ರಾಯ ತೋರುವ ರೀತಿಯಲ್ಲಿ ಅನೇಕ ಸೆಕ್ಷನ್‌ಗಳು ಇದರಲ್ಲಿರುತ್ತವೆ. Ten times

(ಶ್ರೀ ಕೆ. ಆರ್. ಶ್ರೀಕಂಠೇಶ್ವರ್ ಅವರು.)

the assessment ಎಂದು ಕೆಲವುಕಡೆ ಇದೆ. Ten times the produce ಎಂದು ಕೆಲವುಕಡೆ ಹೇಳಿದೆ.

The Hon'ble Sri H. SIDDAIYA.—Which clause?

Sri K. R. SREEKANTESWAR.—I will read it. I am going through the Report of the Select Committee. ಇದರಲ್ಲಿ ನನಗೆ ಏನು ಅರ್ಥವಾಯಿತೆಂದರೆ, ಸಲೆಕ್ಟ್ ಸಮಿತಿಯವರು ಸರಿಯಾಗಿ ಚರ್ಚೆ ನಡೆಸದೆ, ಒಟ್ಟಿಗೆ ಎಲ್ಲರೂ ಒಂದು ಒಗ್ಗಟ್ಟಾಗಿ ಸೇರದೆ, ಕೇವಲ 12 ದಿವಸಗಳು ಮಾತ್ರ ಕುಳಿತು ಚರ್ಚೆ ಮಾಡಿದ್ದಾರೆ. ಇಂಥ ಒಂದು ಪ್ರಾಮುಖ್ಯವಾದ ವಿಷಯವನ್ನು ಸರಿಯಾಗಿ ಸೇರಿ ಚರ್ಚೆಮಾಡದೆ ಇರುವುದರಿಂದಲೇ ಅವರು ಹೀಗೆ ಒಂದು ಡಿಸೆಂಟಿಂಗ್ ನೋಟನ್ನು ಕೊಟ್ಟಿದ್ದಾರೆಂಬ ಅರ್ಥವಾಯಿತು. ಅವರ ಡಿಸೆಂಟಿಂಗ್ ನೋಟಿನಲ್ಲಿ ಹೀಗೆ ಹೇಳಿದ್ದಾರೆ.

This is from the minute of dissent of Sri A. G. Ramachandra Rao:

> "There is already discernible on the horizon a definite swing from ultra-materialistic view to the spiritual springs of new life, and during this transition, greater watchfulness is necessary on our part.
>
> "Indeed, the issue of confining the present legislation to secular Inams was discussed, at one time, by the Committee rather inconclusively, and I appeal to the Chairman and other members of the Committee as well as the Governmet to further consider the matter and come to an early and proper decision.

Sri A. BHEEMAPPA NAIK.—The trend of his argument is that because dissenting notes have been given, they must not have sat at all. I want to know whether that is a fact.

Sri K. R. SREEKANTESWAR.—He must know his limitations. The language is clear. Why is it stated here:

> "......I appeal to the Chairman and other members of the Committee as well as the Government......"

Why all that? Why should he write like that?

ನಾನು ಹೇಳುವುದಾದರೆ ಇಂಥಾ ಮಸೂದೆ ಇರುವುದಕ್ಕಿಂತ ಇಲ್ಲದಿರುವುದೇ ಲೇಸಾಗಿದೆ. ಇಲ್ಲದಿರುವುದೇ ಬಹಳ ಒಳ್ಳೆಯದಾಗಿರುತ್ತೆ. ಇದೆಲ್ಲಾ ಒಂದು ಅದ್ದಗೋಡೆ ಮೇಲೆ ದೀಪ ಇಟ್ಟಂತಿದೆ. ಇದರಿಂದ ಉತ್ತಮವಾಗುವುದಕ್ಕಿಂತ ಎಲ್ಲಾ ಹಾನಿಯಾಗುತ್ತೆ.

Sri H. K. VEERANNA GOWDA.—You have never read the report at all. What is it that you are talking about?

Sri K. R. SREEKANTESWAR.—I have studied the whole Bill. I have sent in amendments to several clauses of the Bill.

(Interruption.)

I will come to all those points.

Sri A. BHEEMAPPA NAIK.—Why do you proceed further without pointing out?

ಅಧ್ಯಕ್ಷರು:—ಅವರು ಆ ರೀತಿ ಮಾಡಬೇಕೆಂದು ಹೇಳಿಲ್ಲ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್ ಅವರು.—ನಾನು ಹೇಳತಕ್ಕ ವಿಷಯಗಳನ್ನು ತಾವು ಸರಿಯಾಗಿ ಅರ್ಥ ಮಾಡಿಕೊಳ್ಳದಿದ್ದರೆ ನಾನೇನು ಮಾಡುವುದು? ಶೃಂಗೇರಿ ಮಠದ ವಿಷಯದಲ್ಲಿ ತಾವೇನು ಹೇಳಿದ್ದೀರೋ ಅದರ ಬಗ್ಗೆ ನನ್ನದೇನೂ ಅಡ್ಡಿ ಇಲ್ಲ. ಮುಂದೆ ನಾನು ಇದರ ವಿಚಾರ ಮಾತನಾಡುತ್ತೇನೆ. ಆದರೆ ತಾವು ಆರನೆಯ ಪುಟದಲ್ಲಿ ಸೂಚಿಸಿರತಕ್ಕ ರಿಯಾಯಿತಿಗಳನ್ನು ನೋಡೋಣ. ಅದರಲ್ಲಿ ಅಡಕವಾಗಿರತಕ್ಕ ಅನೇಕ ವಿಚಾರಗಳು ನಮ್ಮ ಲ್ಯಾಂಡ್ ರೆವಿನ್ಯೂ ಸಿಸ್ಟಂಗೆ ಬಹಳ ವಿರೋಧವಾಗಿವೆ. ಒಂದುಕಡೆ 10 times the yield ಎಂದೂ ಮತ್ತೊಂದುಕಡೆ 10 times the land revenue ಎಂದು ತಿಳಿಸಿದ್ದಾರೆ. ಹೀಗೆ ತಿಳಿಸಿರುವುದರಲ್ಲಿ ರೈತರಿಗಾಗಲೀ ಅಥವಾ ಜೋಡಿದಾರರಿಗಾಗಲೀ ಅಥವಾ ಜಹಗೀರುದಾರರಿಗಾಗಲೀ ಯಾರಿಗೂ ಪ್ರಯೋಜನವಿಲ್ಲ.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ತಾವು ಯಾವ ಕ್ಲಾಜಿನ ಬಗ್ಗೆ ಹೇಗೆ ಹೇಳುತ್ತಿದ್ದೀರಿ ?

ಶ್ರೀ ಕೆ. ಆರ್. ಶ್ರೀಕಂಠೇಶ್ವರ್ ಅವರು.—I am referring to the report of the Select Committee. ಈ ಡಿಸೆಂಟಿಗ್ ನೋಟನ್ನು ಅವರು ಕೊಟ್ಟಿರತಕ್ಕ ವಿಚಾರದಲ್ಲಿ ನಾನು ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ಆರೀತಿ ನೋಟನ್ನು ಅವರು ಹೇಗೆ ಬರೆದರೋ ಅದು ನನಗಂತೂ ಗೊತ್ತಾಗದು.

Clause 18:

> "......assessment on all lands including lands in the *khas* possession of the inamdar."
>
> "The basic annual sum of an inam village shall be the aggregate of the sums specified below, less the deduction specified in section 19......"

I do not want to go clause by clause.

ಅಧ್ಯಕ್ಷರು:—ತಾವು ಖಾಸ್ ಜಮೀನು ಇರಕೂಡದೆಂದು ಹೇಳುತ್ತೀರೇನು ?

Sri M. GOVINDA REDDY.—ಸಂದರ್ಭಗಳನ್ನು ನೋಡದೆ ಸುಮ್ಮನೆ ವಾದದಿಂದೇನು ಪ್ರಯೋಜನ ? ಖಾಸ್ ಲ್ಯಾಂಡ್ಸ್ ವಿಷಯ ತಾವು ಸರಿಯಾಗಿ ಹೇಳುತ್ತಿಲ್ಲ.

Sri K. R. SREEKANTESWAR.—My point is this. Assessmentನ 10-15 ರಷ್ಟು ಕೊಟ್ಟು ಅದನ್ನು ತೆಗೆದುಕೊಳ್ಳಬೇಕೆಂದು ಹೇಳಿರುವುದು ಸರಿಯಲ್ಲ.

Page 32:

> "Compensation in respect of cultivable lands which vest in the Government, equal to

fifteen times the annual land revenue assessment payable in respect of such lands.

It is Clause 20.

"An amount equal to ten times the average net annual income derived by the inamdar from such lands during the period of six years prior to the first day of July, 1918, in respect of which a quasi-permanent tenant is registered as an occupant."

Sir H. K. VEERANNA GOWDA.—What about *khas* lands?

Sri K. R. SREEKANTESWAR.—It further says:—

"Compensation in respect of cultivable lands which vest in the Government, equal to fifteen times the annual land revenue assessment payable in respect of such lands."

Sri A. BHEEMAPPA NAIK.—What has that to do with *khas* land?

Sri K. R. SREEKANTESWAR.— ಹೀಗೆ ಇನಾಂ landsನ್ನು ಆದರ ಕಂದಾಯದ 10-15ರಷ್ಟು ಕೊಟ್ಟು ತೆಗೆದುಕೊಳ್ಳಬೇಕೆಂದು ಹೇಳುವುದು, is not fair.

ಶ್ರೀ ಎಚ್. ಕೆ. ವೀರಣ್ಣಗೌಡರು.—ಅದು fair ಆಗಿರುವಂತೆ ಮಾಡಬೇಕಾದರೆ ಹೇಗೆ ಮಾಡಬೇಕು?

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಜೋಡೀದಾರರು ಬೇಕಾದಷ್ಟು ಹಣ ಮಾಡಿಕೊಂಡಿದ್ದಾರೆಂದು ಕೆಲವರು ಹೇಳಿದರು. ಅನೇಕ ಜೋಡೀದಾರರು ಈ ದಿವಸ ಬೆಂಗಳೂರು ಮುಂತಾದ ಕಡೆ ಇದ್ದು ಹಳ್ಳಿಗಳಲ್ಲಿರುವ ರೈತರ ಜೀವ ಹಿಂಡಿದ್ದಾರೆಂದೂ ಹೇಳಿದರು. ಆದರೆ ಎಷ್ಟೋ ಮಂದಿ ಜೋಡೀದಾರರಿಗೆ ಹತ್ತಾರು ವರ್ಷಗಳಿಂದ ರೈತರಿಂದ ಹಣ ತೆಗೆದುಕೊಳ್ಳುವುದಕ್ಕೆ ಆಗದೆ, ರೈತರ ಸ್ಥಿತಿ ಚಿಂತಾಜನಕವಾಗಿದೆ. ಇಂಥ ಮಸೂದೆ ತರಬೇಕಾದ್ದು ಎಲ್ಲರಿಗೂ ಅನುಕೂಲವಾಗುವಂತೆ ಮಾಡುವುದಕ್ಕಾಗಿ. ಅದು ಬಿಟ್ಟು ಕೆಲವರಿಗೆ ಮಾತ್ರ ಅನುಕೂಲತೆಯನ್ನೊದಗಿಸುವುದು ಸರಿಯಲ್ಲ. ಇದರಲ್ಲಿ ಕೆಲವು ತೊಂದರೆಗಳಿವೆ. ಇದಕ್ಕೆ ತಿದ್ದುಪಡಿಯಿದೆ. ಅದು ಬಂದಾಗ ಹೇಳುತ್ತೇನೆ.

ಇದುವರೆಗೆ ನಡೆದಿರುವ ಚರ್ಚೆಯಲ್ಲಿ ಪ್ರಾಮುಖ್ಯವಾಗಿ ಕಾಣುವುದು ಶೃಂಗೇರಿ ವಿಷಯ. ಈ ವಿಚಾರದಲ್ಲಿ ಅಸಾಧ್ಯ ಚರ್ಚೆ ನಡೆದಿದೆ. ಶೃಂಗೇರಿ ಜಹಗೀರೇ ಬೇಕಾಗಿಲ್ಲ ಎಂದು ಸರ್ಕಾರದವರು ಹೇಳುವುದಾದರೆ ಅದನ್ನು ಪೂರ್ತಿಯಾಗಿ ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದರೆ ಇಂಥ ಮಸೂದೆ ಅವಶ್ಯಕವಿಲ್ಲ.

Mr. SPEAKER.—It does not arise.

Sri K. R. SREEKANTESWAR.—No. It arises like this. There is no meaning in our including a portion and leaving the rest. The previous Government had given certain rights to the Mutt. As a member of the Socialist Party I have to make this statement that we believe in cultural institutions and it is the duty of the Socialist Government when it comes, to preserve this Institution. I for one believe that not only facilities must be given to the Mutt, but also it is our duty to see that it is properly kept up. If today the Sringeri Mutt has not done its duties properly and come up to our expectations, we should not keep quiet. In Shankarpuram there is a vast area and they have a plot of land all round it. They have also deposited Rs. 4 lakhs. Certain lay-out is also formed. They are agitating for construction. But they have not been granted licence.

The Hon'ble Sri H. C. DASAPPA.—By whom?

Sri K. R. SREEKANTESWAR.—By the Government.

The Hon'ble Sri H. C. DASAPPA.—The Government have nothing to do with it. It is the concern of the Corporation.

Sri K. R. SREEKANTESWAR.—I once again bring to the notice of the Hon'ble Minister for Revenue that they have deposited Rs. 4 lakhs already and the land is lying waste. If you want to see that these Mutts do really good work, it is the duty of the Government to give them all facilities. It is immaterial as to where they are located.

The Hon'ble Sri H. SIDDAIYA.—I think the Hon'ble Member must read the Corporation Act.

Sri K. R. SREEKANTESWAR.—I have read it already. It is not necessary to read it again. My point is this. On page 6 they say:

"We have after careful consideration come to the conclusion that the principles underlying this Bill would be served if the relationship of superior and inferior holders is terminated in regard to all the tenants who hold lands in the Sringeri Mutt."

Here I fully agree with the Chairman and members of the Committee. It is the duty of everyone including the Socialist party to see that inferior holders are always protected. We do not want any type of middleman and superior holder between the Government and the inferior holders. There is no difference at all regarding that. If we had only acted according to your own version, you would not have the Sringeri today. What I ask

(SRI K. R. SREEKANTESWAR.)

is, why do you want to show any concession? Take away that concession. You say that "after careful consideration you came to the conclusion." Here, I submit, the fundamental principle is very nicely enunciated. There is no dispute about it. On the whole I agree. There is no difficulty at all. It is further stated on the same page 6, further down, like this:

"We also feel that the tenants of Sringeri Mutt as in the case of tenants of other inamdars holding inam villages should be registered as occupants of lands held by them. This would ensure that so far as tenants are concerned the Sringeri Mutt whou'd not be treated differently from other inamdars. In regard however to other rights and privileges enjoyed by the Sringeri Mutt for over a number of centuries we feel that an exception is called for and that all these rights and privileges should be continued to the Mutt."

They say "excepting inferior and superior holders", for example, minerals, etc., and all the other things enjoyed by the Mutt would be retained. Then they go on to say:

"We accordingly recommend that in clause 53 (original clause 39), the words 'Sringeri Jahagir or" occurring in sub-clause (i) may be deleted. And that after Chapter IV a new Chapter numbered as Chapter V may be inserted as follows, and the existing Chapter V and the clauses therein suitably re-numbered."

Just in the previous page they say,

"We have come to the conclusion that in view of the long unbroken tradition of this Mutt, we should effect minimum changes in the administration of the Jahagir of this Mutt."

But in the very next page, that is page 6, they say:

"Government may by Notification declare that all the Inam villages vesting in the Guru of the Sringeri Mutt for the time being have passed to and become vested in the State."

They take away the entire property. Then again section 36 reads also similarly:

"36(1) the Government may by notification declare that all the inam villages vesting in the Guru of the Sringeri Mutt for the time being have passed to and become vested in the State.'

"(2) The notification under sub-section (i) shall be published in the *Mysore Gazette*, in English and Kannada and such publication shall be conclusive proof of the due publication thereof."

I shall now take up Section 41. They say:

"41 (1) The inamdar shall be registered as occupant of all cultivable uncultivated lands whether assessed or not situated within the Sringeri Jahagir; and all cultivable uncultivated lands whether assessed or not situated in any inam village outside the Sringeri Jahagir shall vest absolutely in the State free from all encumbrances."

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು :—36ನೆಯ ಕ್ಲಾಸನ್ನು ಓದಿದಿರಿ. ಆದರೆ ನಿಮ್ಮ ಅಭಿಪ್ರಾಯ ಗೊತ್ತಾಗಲಿಲ್ಲ

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು :— ಶೃಂಗೇರಿ ಮಠಕ್ಕೆ ಕೊಟ್ಟಿರುವ 28 ಗ್ರಾಮಗಳನ್ನು ನಿಮ್ಮ ವಶಕ್ಕೆ ತೆಗೆದುಕೊಳ್ಳಬೇಕೆಂದು ಹೇಳಿದರೆ ಅದು ಪೂರ್ತಿಯಾಗಿ ಹೊರಟು ಹೋಯಿತು. ಆದ್ದರಿಂದ ಶೃಂಗೇರಿ ಜಹಗೀರನ್ನೇ ನಿಮ್ಮ ವಶಕ್ಕೆ ಏಕೆ ತೆಗೆದು ಕೊಳ್ಳಬಾರದು ?

Why do you want to leave the Sringeri Jahagir of 44 square miles? Why do you want to leave that portion? Take away that also. The remaining villages are enjoyed by the Mutt from the days of Tippoo Sultan, Mummadi Krishnaraja Wadiyar, and the present Highness. You want to take away these villages. You as well take away the Jahagir also. Why do you leave it alone? I cannot understand this at all. If you want to take it, take it away completely. Why do you want to do this in this partial manner? That is my complaint.

SRI M. GOVINDA REDDY.—Is it your opinion that all these villages round about must also go?

SRI K. R. SREEKANTESWAR.—You will know my opinion at the end. In sub-clause (2) of section 41, it is stated.—

"The inamdar shall be registered as the occupant of all waste lands situated within the Sringeri Jahagir; and all waste lands situated in any Inam Village outside the Sringeri Jahagir shall vest absolutely in the State free from all encumbrances."

My point is this. The whole Sringeri Jahagir is about nearly 44 square miles It consists of 27,000 acres of land . . . . out of which 5,000 acres of land is cultivated and hardly about 200 acres is not cultivated. The remaining acres are cultivated. From time immemorial lot of concession has been shown to Sringeri Mutt because it is a national institution and a centre of Adwaita philosophy and I go to the

extent of saying that the Adwaita principle enunciated there is a subject matter of international importance and not confined to Mysore or India alone. Out of 27,000 acres of land in Sringeri Taluk only 5,000 acres are under cultivation. In one sense you say that Sringeri is exempted and in another sense you say that all cultivable uncultivated lands should be taken away. Straightaway say that " we are going to abolish Sringeri Jahagir." Why do you want a piece-meal legislation to be passed by us? What is going to happen is, as the Hon'ble Speaker has pleased to refer to a Bill which was been sent back for reconsideration under Article 201, this may also be sent back. You are doing an injustice for which I cannot be a party. Let us make a separate set up of rules for Sringeri. From 1897 there is a separate set of laws for Sringeri and in those Acts Sringeri is considered to be Government. Take a bold step instead of having these half baked ideas. In sub-clause (5) of clause 41 it is stated:

> " A ll rights in or relating to fisheries or ferries granted to, conferred upon or enjoyed by the inamdar within the Sringeri Jahagir are here by continued....... "

In one sense you say those rights are there and in another sense you say they are taken away; similarly with regard to forest and mineral wealth. Mineral wealth is a subject matter for the Centre. When we bring in such legislative measures we must be bold. Let us be subjected to the criticism of the entire India. If not, do not bring in such measures. I reserve my several other remarks when we take up amendments.

Lastly, what I want to submit is this. The title of the Bill is " The Mysore Inam Villages (Abolition of Inam Tenure) Bill. Suppose I have 200 or 400 acres of Inam land in a Government village; will this Bill apply to my lands also? The members of the Select Committee have not considered this aspect.

Mr. SPEAKER.—Does the Hon'ble Member think that they have not considered it?

Sri K. R. SREEKANTESWAR.—They have not. There is no reference to that here. I have consulted many lawyers and I am informed likewise.

Sri D. H. CHANDRASEKHARAIYA.—Please refer to item (6).

Sri K. R. SREEKANTESWAR.—That does not apply. I am referring to a Government village where I am an inamdar and Government are collecting the land revenue. What are the measures that you are taking as regards to such lands? No mention is made of that here. That is why I said that my friends here are talking a lot of inconsistencies. About Sringeri which they have tackled so wisely, nicely and tactfully, I want to know whether reference has been made to it in this report?

The Hon'ble Sri H. SIDDAIYA
Obviously he has not read it.

Sri K. R. SREEKANTESWAR.—I thank you very much, Sir. I have sent in so many amendments and when they come up I shall speak again.

The Hon'ble Sri H. SIDDAIYA.—With regard to what Sri Srinkantewar said I am giving this information. Out of 24,000 acres of land, it is not 5,000 but 15,000 acres are under cultivation.

Sri K. R. SREEKANTESWAR—Out of that how many acres are cultivable uncultivated lands?

The Hon'ble Sri H. SIDDAIYA.—I shall give you.

ಶ್ರೀ ಎಚ್. ಕೆ. ವೀರಣ್ಣಗೌಡರು, (ಮಂಡ್ಯಜಿಲ್ಲೆ)—ಈ ಮಸೂದೆ ಮುಖ್ಯವಾಗಿ ಮೂರು ಅಂಶಗಳಲ್ಲಿ ಚರ್ಚಾಸ್ಪದವಾಗಿದೆ. ನಾನು ಈ ಮಸೂದೆ ಬರುವುದಕ್ಕೆ ಕಾರಣ, ಅದರ ಅಗತ್ಯ, ಪೂರ್ವೋತ್ತರ ಇವುಗಳನ್ನು ವಿವರಿಸುವ ಗೋಜಿಗೆ ಹೋಗುವುದಿಲ್ಲ. ನಿನ್ನೆ ಮಾತನಾಡಿದ ಮಾನ್ಯ ಚೆನ್ನಬಸಪ್ಪನವರು ಅವುಗಳನ್ನು ವಿವರಿಸಿದ್ದಾರೆ. ಸಕಾರಣವಿಲ್ಲದೆ ಇಂಥಾ ಅಗತ್ಯವಾದ ಮಸೂದೆ ಬರುತ್ತಾ ಇರಲಿಲ್ಲವೆಂದು ಅಷ್ಟು ಮಾತ್ರ ಹೇಳಬಹುದು. ಮೊದಲೇ ನಾನು ಹೇಳಿದ ಹಾಗೆ ಮುಖ್ಯವಾಗಿ ಮೂರು ಅಂಶಗಳು ಚರ್ಚಾಸ್ಪದವಾಗಿವೆಯೆಂಬುದು ಈಗ ಬಂದಿರತಕ್ಕ ತಿದ್ದುಪಡಿ ಮತ್ತು ಈಗ ನಡೆದಿರತಕ್ಕ ಚರ್ಚೆಯಿಂದ ವ್ಯಕ್ತವಾಗುತ್ತದೆ. ಸಾಮಾನ್ಯವಾಗಿ ಇನಾಂತಿಗಳನ್ನು ರದ್ದು ಮಾಡಿರತಕ್ಕ ಈ ಮಸೂದೆಯಲ್ಲಿ ಕೆಲವು ವಿಷಯಗಳ ಬಗ್ಗೆ ಸ್ವಲ್ಪ ಭಿನ್ನಾಭಿಪ್ರಾಯಕ್ಕೆ ಅವಕಾಶವಿದ್ದರೂ ಇನಾಂದಾರರು ಮತ್ತು ಆ ಗ್ರಾಮಗಳಲ್ಲಿರತಕ್ಕ ಜನರು ಎಲ್ಲರೂ ಇದನ್ನು ಸ್ವಾಗತಿಸುತ್ತಾರೆ ಎಂದು ಹೇಳಬಹುದು. ಇನಾಂದಾರರು ತಮಗೆ ಕೊಡುವ ಪರಿಹಾರದ ವಿಚಾರದಲ್ಲಿ ಮತ್ತು ಖಾಸ್ ಜಮೀನಿನ ವಿಚಾರದಲ್ಲಿ ಕೆಲವು ಕಾರಣಗಳಿಗಾಗಿ ಭಿನ್ನಾಭಿಪ್ರಾಯ

(ಶ್ರೀ ಎಚ್. ಕೆ. ವೀರಣ್ಣಗೌಡರು.)

ಪಟ್ಟಿದ್ದರೂ ಸಾಮಾನ್ಯವಾಗಿ ಈ ತತ್ವವನ್ನು ಇನಾಂದಾರರು, ಇನಾಂದಾರರ ಸಂಘದವರು, ಜನಗಳು, ಸರ್ಕಾರದವರು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಈಗ ಭಿನ್ನಾಭಿಪ್ರಾಯಕ್ಕೆ ಎಡೆ ಕೊಟ್ಟಿರುವ ಮೂರು ಅಂಶಗಳಲ್ಲಿ ಬಹಳ ಮುಖ್ಯವಾಗಿರತಕ್ಕದ್ದು ಶೃಂಗೇರಿ ಜಹಗೀರಿಗೆ ಸಂಬಂಧಪಟ್ಟ ವಿಷಯ. ಒಂದು ಕಾನೂನನ್ನು ಮೈಸೂರು ಸಂಸ್ಥಾನದಲ್ಲಿ ಜಾರಿಗೆ ತರಬೇಕೆಂಬ ಉದ್ದೇಶ ನಾನು ತಿಳಿದುಕೊಂಡಿರುವ ಮಟ್ಟಿಗೆ ಇಂದೂ ಒಂದೇ ಒಂದು. ಅದು ಭೂಸ್ವಾಮ್ಯ ಮೈಸೂರು ಸಂಸ್ಥಾನದಲ್ಲೆಲ್ಲಾ ಏಕ ಪ್ರಕಾರವಾಗಿರಬೇಕೆಂಬುದು. ಅಂದರೆ ಬೇರೆ ಬೇರೆ ತಾಲ್ಲೂಕಿನ ಗ್ರಾಮಗಳ ಭೂಸ್ವಾಮ್ಯ ಬೇರೆ ಬೇರೆ ವಿಧವಾಗಿರಬಾರದು ಎಂಬ ಉದ್ದೇಶವನ್ನು ಸಾಧಿಸುವುದಕ್ಕೋಸ್ಕರ ಈ ಮಸೂದೆಯನ್ನು ಸರ್ಕಾರದವರು ತಂದಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ಡಾಕ್ಟರ್ ಶ್ರೀಕಂಠೇಶ್ವರ್‌ರವರು ಅವರ ವಾದದ ಧಾಟಿಯಲ್ಲಿ ಏನೇನು ಹೇಳಿದ್ದಾರೋ ಅದೆಲ್ಲಾ ತಪ್ಪು.........

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ನಾವು ಹೇಳುವುದು ಎಲ್ಲಾ ತಪ್ಪು. ನೀವು ಹೇಳುವುದು ಎಲ್ಲಾ ಸರಿ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಅಸಂಬದ್ಧ ಪ್ರಲಾಪ ಅಷ್ಟೆ. ಮೂರು ವರ್ಷದ ಹಿಂದೆ ಇದಕ್ಕಾಗಿ ಒಂದು ಸಮಿತಿ ನೇಮಕವಾಯಿತು. ಅದರಲ್ಲಿ ನಾನೂ ಇದ್ದೆ. ಸಮಿತಿಯವರು ವರದಿ ಕೊಡುವುದಕ್ಕೆ ಎಷ್ಟೋ ಕಾಲ ಹಿಡಿಯಿತು. ಅನೇಕ ವಿಷಯಗಳನ್ನು ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬಂದು ವರದಿಯನ್ನು ಸರ್ಕಾರಕ್ಕೆ ಕಳುಹಿಸಿದರು. ಅದರ ಮೇಲೆ ಸರ್ಕಾರದವರು ಈ ರೀತಿಯ ಒಂದು ಮಸೂದೆಯನ್ನು ತಂದಿದ್ದಾರೆ. ಸರ್ಕಾರದ ಆಡಳಿತ, ನಡವಳಿಕೆ, ಕ್ರಮ ಒಂದೂ ಗೊತ್ತಿಲ್ಲದೆ ಡಾ|| ಶ್ರೀಕಂಠೇಶ್ವರ್‌ರವರು ಇನ್ನೂ ಹೊಸದಾಗಿ ಇಂಥಾ ಚರ್ಚೆಗಳಲ್ಲಿ ಪ್ರವೇಶ ಮಾಡಿ ಏನೇನೋ ಹೇಳಿರುತ್ತಾರೆ. ಅವುಗಳನ್ನೆಲ್ಲಾ serious ಆಗಿ ತೆಗೆದುಕೊಂಡು ಒಂದೊಂದಕ್ಕೂ ನಾನು ಉತ್ತರ ಕೊಡಬೇಕೆಂದಿಲ್ಲ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ತಾವು ಉತ್ತರ ಕೊಡಬೇಕಾಗಿಯೂ ಇಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡರು.—ನಾನು ಶ್ರೀಮಾನ್ ಗುಂಡಪ್ಪಗೌಡರ ಸಮಿತಿಯಲ್ಲೂ ಇದ್ದೆ ಮತ್ತು ಸೆಲೆಕ್ಟ್ ಸಮಿತಿಯಲ್ಲೂ ಇದ್ದೆ. ಇದಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನೂ ಆಮೂಲಾಗ್ರವಾಗಿ ಚರ್ಚೆ ಮಾಡುವುದರಲ್ಲಿ ಭಾಗ ವಹಿಸಿದ್ದೆ. ಆದ್ದರಿಂದ ಇದರ ಮುಖ್ಯ ಉದ್ದೇಶ ಏನು ಎಂಬುದನ್ನು ತಿಳಿದುಕೊಂಡಿದ್ದೇನೆ. ಭೂಸ್ವಾಮ್ಯ ಮೈಸೂರು ಸಂಸ್ಥಾನದಲ್ಲಿ ಒಂದೇ ತರವಾಗಿ ಇರಬೇಕು ಎಂಬುದು ಈ ಮಸೂದೆಯ ಮುಖ್ಯೋದ್ದೇಶ. ನಮ್ಮ ಸ್ನೇಹಿತರಾದ ಶ್ರೀಮಾನ್ ಜೋಯಿಸರು ಈ ಮಸೂದೆ ಶೃಂಗೇರಿ ಜಹಗೀರಿಗೆ ಅನ್ವಯಿಸದಂತೆ ಮಾಡಿದರು. State within the State ಆಗುವುದಿಲ್ಲವೆಂದು ಎಂದು ಅಭಿಪ್ರಾಯಪಟ್ಟರು. ಇದುವರೆಗೂ ಏನಾಗಿತ್ತು? ಇನಾಂಗಳು, ಜಹಗೀರಿಗಳು ಇವೆಲ್ಲಾ State within the State ಆಗಿದ್ದವು. ಸರ್ಕಾರಿ ಗ್ರಾಮಗಳಲ್ಲಿರುವಂತೆ ಇನಾಂ ಜಹಗೀರಿಗಳ ರೈತರು ಕಂದಾಯವನ್ನು ನೇರವಾಗಿ ಸರ್ಕಾರಕ್ಕೆ ಕಟ್ಟತಕ್ಕದ್ದು. ಮತ್ತು ಆ ಜಮೀನಿನಲ್ಲಿರತಕ್ಕ ರೈತರ ಹಕ್ಕು ಬಾಧ್ಯತೆಗಳನ್ನು ರಕ್ಷಿಸುವುದು ಇವು ಮುಖ್ಯವಾಗಿ ಈ ಮಸೂದೆಯ ಆಶಯ.

ಈ ಇನಾಂ ಗ್ರಾಮಗಳಲ್ಲಿ ಜಹಗೀರುಗಳಲ್ಲಿ ಪರಿಸ್ಥಿತಿ ಏನಿತ್ತು?—ಇನಾಂದಾರರುಗಳು ಸಾಗುವಳಿದಾರರಿಗೆ ತೊಂದರೆ ಕೊಟ್ಟಿರುವುದು ಬೇರೆ ವಿಚಾರ. ಮುಖ್ಯವಾಗಿ ಇನಾಂದಾರರುಗಳು ರೈತರಿಂದ ಕಂದಾಯ ತೆಗೆದುಕೊಳ್ಳುತ್ತಿದ್ದು ಅದರಲ್ಲಿ ಬಹು ಸ್ವಲ್ಪ ಭಾಗವನ್ನು ಮಾತ್ರ ಸರ್ಕಾರಕ್ಕೆ ಕೊಡುತ್ತಿದ್ದರು. ಎಷ್ಟೋ ಜನ ಇನಾಂದಾರರುಗಳಿಗೆ ರೈತರಿಂದ ಕಂದಾಯವೇ ಸಲ್ಲುತ್ತಿರಲಿಲ್ಲವೆಂಬುದು ಬೇರೆ ಪ್ರಶ್ನೆ. ಅಂತೂ ಇನಾಂದಾರರು ಸರ್ಕಾರಕ್ಕೂ ರೈತರಿಗೂ ಮಧ್ಯವರ್ತಿ ಜನಗಳಾಗಿದ್ದು ಆ ಹಳ್ಳಿಗಳ ಮೇಲ್ವಿಚಾರಣೆ ಅವರ ಕೈಯಲ್ಲಿತ್ತು: ಇದರಿಂದ ಆ ಗ್ರಾಮಗಳವರ ಹಿತದೃಷ್ಟಿಯಿಂದ, ಅವರ ಅಭಿವೃದ್ಧಿಗಾಗಿ ಸರ್ಕಾರದವರು ಯಾವುದಾದರೂ ಕಾರ್ಯ ನಡೆಸಬೇಕೆಂದು ಇಷ್ಟಪಟ್ಟರೂ ಇನಾಂದಾರರುಗಳನ್ನು ನೀವೆಷ್ಟು ಭಾಗ ಕೊಡುತ್ತೀರಿ, ನಾವೆಷ್ಟು ಭಾಗ ಕೊಡಬೇಕೆಂದು ಕೇಳಬೇಕಾಗಿತ್ತು. ಅಂಥ ಕೆಲಸಗಳನ್ನು ಕೈಗೊಳ್ಳಲು ಇನಾಂದಾರರು ಒಪ್ಪದೆ ಇದ್ದು ಕೊನೆಗೆ ಏನನ್ನೂ ಮಾಡುವುದಕ್ಕೆ ಆಗುತ್ತಿರಲಿಲ್ಲ. ಹೀಗಾಗಿ ಎಷ್ಟೋ ಗ್ರಾಮಗಳ ಸ್ಥಿತಿ ಬಹಳ ಅಧೋಗತಿಗೆ ಬಂದಿತ್ತು.

Mr. SPEAKER.—The House will now adjourn for lunch for half-an-hour.

The Assembly adjourned for lunch at Thirty-one Minutes past Three of the Clock and reassembled at Thirteen Minutes past Four of the Clock, Mr. Speaker (The Hon'ble Sri V. Venkatappa) in the Chair.

ಶ್ರೀ ಎಚ್. ಕೆ. ವೀರಣ್ಣಗೌಡರು.—ಸ್ವಾಮಿ, ಭೂಸ್ವಾಮ್ಯ ಮೈಸೂರು ಸಂಸ್ಥಾನದಲ್ಲ ಒಂದೇ ರೀತಿಯಾಗಿರಬೇಕು. ಇದರಲ್ಲಿ ವ್ಯತ್ಯಾಸವಿದ್ದುದರಿಂದ ಏನು ತೊಂದರೆಯಿತ್ತೆಂಬುದನ್ನು ಈಗ ತಾನೆ ಹೇಳಿದ್ದೇನೆ. ಇನಾಮ್ ಅಥವಾ ಜಹಗೀರಿ ಗ್ರಾಮಗಳಲ್ಲಿ ಭೂಸ್ವಾಮ್ಯ ಸರ್ಕಾರಕ್ಕಿಲ್ಲದೆ ಬೇರೆಯವರಿಗೆ ಸೇರಿದ್ದುದರಿಂದ ಆ ಬೇರೆಯವರು ಸರ್ಕಾರಕ್ಕೂ ರೈತರಿಗೂ ಮಧ್ಯವರ್ತಿಗಳಾಗಿದ್ದುದರಿಂದ ಜನೋಪಯುಕ್ತವಾದ ಕಾರ್ಯಗಳನ್ನು ಅಲ್ಲಿ ಮಾಡಬೇಕಾದರೆ ಅಡಚಣೆಯಿತ್ತೆಂಬುದನ್ನು ತಿಳಿಸಿದ್ದೇನೆ. ಈ ಅಡಚಣೆಯನ್ನು ತೆಗೆಯುವುದು ಈ ಮಸೂದೆಯ ಒಂದು ಉದ್ದೇಶ. ಅಲ್ಲದೆ ಒಂದೇ ರಾಜ್ಯದಲ್ಲಿ ಒಂದೇ ಆಡಳಿತಕ್ಕೊಳಪಟ್ಟ ಪ್ರಜೆಗಳಲ್ಲಿ ಕೆಲವು ಗ್ರಾಮಗಳಲ್ಲಿರುವ ಜನರಿಗೆ ಒಂದು ವಿಧವಾದ ಹಕ್ಕು ಬಾಧ್ಯತೆಗಳಿರುವುದು, ಇನ್ನು ಕೆಲವು ಗ್ರಾಮಗಳಲ್ಲಿರುವವರಿಗೆ ಬೇರೆ ರೀತಿಯ ಹಕ್ಕು ಬಾಧ್ಯತೆಗಳಿರುವುದು ಅಥವಾ ಯಾವ ಹಕ್ಕು ಬಾಧ್ಯತೆಗಳೂ ಇಲ್ಲದೇ ಇರುವುದು, ಈ ವ್ಯತ್ಯಾಸವನ್ನು ತೆಗೆಯಬೇಕೆಂಬುದು ಇನ್ನೊಂದು ಉದ್ದೇಶ. ಈ ಉದ್ದೇಶಗಳಿಂದ ಈ ಇನಾಂ ರದ್ದು ಮಾಡುವ ಮಸೂದೆ ರಚಿತವಾಗಿದೆ. ಈ ಮೂಲೋದ್ದೇಶಕ್ಕೆ ಭಂಗ ಬರದೇ ಇರುವ ರೀತಿಯಲ್ಲಿ ನಾವು ಈ ಕಾನೂನನ್ನು ರಚಿಸುವುದು ಅಗತ್ಯ. ಈ ಮೂಲೋದ್ದೇಶವನ್ನೂ ತತ್ವವನ್ನೂ ಈ ಸಭೆಯವರು ಸಾಮಾನ್ಯವಾಗಿ ಒಪ್ಪಿದ್ದಾರೆಂದು ಭಾವಿ

ಸಿದ್ದೇನೆ. ಈಗ ಬಂದಿರುವ ಜಿಜ್ಞಾಸೆಗಳಲ್ಲಿ ಬಹಳ ದೊಡ್ಡದಾಗಿರುವುದು ಶೃಂಗೇರಿ ಜಹಗೀರಿಯ ವಿಚಾರ. ಆ ಜಹಗೀರಿ ಸಂಬಂಧ ಈ ಮೂಲ ತತ್ವವನ್ನು ಎಷ್ಟು ಮಟ್ಟಿಗೆ ಸಾಧಿಸಬಹುದು ಅಥವಾ ಸಾಧಿಸದೆ ವಿನಾಯಿತಿಯನ್ನು ತೋರಿಸಬಹುದು ಎನ್ನುವ ಪ್ರಶ್ನೆ ಈಗ ನಮ್ಮ ಮುಂದಿದೆ. ಈ ಪ್ರಶ್ನೆಯನ್ನು ಬಿಡಿಸುವ ಸಂದರ್ಭದಲ್ಲಿ ಇದುವರೆಗೆ ಮಾತನಾಡಿದ ಸದಸ್ಯರು ಭಿನ್ನಾಭಿಪ್ರಾಯದಿಂದ ಕೂಡಿದ ಸೂಚನೆಗಳನ್ನು ಕೊಟ್ಟಿದ್ದಾರೆ. ಅವರು ಮುಂದಿಟ್ಟ ಕೆಲವು ವಾದಗಳನ್ನು ನಾವು ನಿಷ್ಪಕ್ಷಪಾತವಾಗಿ ಮನಸ್ಸಿನ ಉದ್ವೇಗಕ್ಕೆ ಅವಕಾಶ ಕೊಡದೆ ಯೋಚನೆ ಮಾಡಿರುವುದಾದರೆ, ಕೆಲವು ಸ್ನೇಹಿತರು ಮಾಡಿದ ವಾದಕ್ಕಾಗಲಿ ಹೋಲಿಸಿದ ಉಪಮಾನಗಳಿಗಾಗಲಿ ಅವಶ್ಯಕತೆಯೇ ಇರಲಿಲ್ಲವೆಂದು ಕಾಣುತ್ತದೆ. ಏಕೆಂದರೆ, ಈ ದಿನ ಯಾವುದಾದರೂ ರೀತಿಯಲ್ಲಿ ಹಟವನ್ನು ಸಾಧಿಸಬೇಕು. ಅಥವಾ ಯಾರನ್ನಾದರೂ ಅಲ್ಲಗಳೆಯಬೇಕು ಎಂಬ ದೃಷ್ಟಿಯನ್ನಿಟ್ಟುಕೊಳ್ಳದೆ ಒಂದು ಘನವಾದ ತತ್ವವನ್ನು ಆಚರಣೆಗೆ ತರಬೇಕಾದರೆ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂಬುದನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಂಡು ಕೆಲಸ ಮಾಡುವುದಾದರೆ, ಇದುವರೆಗೆ ಮುಂದಿಟ್ಟ ವಾದಗಳು ಸಕಾರಣವಾದವುಗಳಲ್ಲ. ಶೃಂಗೇರಿಯ ಮಠ ಅನಾದಿ ಕಾಲದಿಂದಲೂ ಬಂದದ್ದು, ಶೃಂಗೇರಿಯ ಗುರುಗಳು ಪೂಜ್ಯರು. ಈ ಜಹಗೀರಿಯ ವಿಚಾರದಲ್ಲಿ ಸರ್ಕಾರ ಕೈಹಾಕುವುದಾದರೆ ಆ ಮಠದ ಗೌರವಕ್ಕೂ ಆ ಸ್ವಾಮಿಗಳ ಮಹತ್ವಕ್ಕೂ ಕುಂದು ಮಾಡಿದ ಹಾಗಾಗುತ್ತದೆ ಎಂದು ಕೆಲವರು ಅಭಿಪ್ರಾಯಪಟ್ಟರು. ಇನ್ನು ಕೆಲವು ಸ್ನೇಹಿತರು ಈ ಬಗೆಯ ವಾದವನ್ನೇ ಮುಂದುವರಿಸುತ್ತಾ ಅದ್ವೈತ ಭರತಖಂಡಕ್ಕೇ ಸಂಬಂಧಪಟ್ಟದ್ದು, ಪ್ರಪಂಚದ ಅನೇಕ ಭಾಗಗಳಲ್ಲಿ ಆ ವೇದಾಂತವನ್ನು ಒಪ್ಪಿಕೊಂಡಿದ್ದಾರೆ ಎಂದು ಹೇಳಿದರು. ಆದರೆ ಅದ್ವೈತ ವೇದಾಂತಕ್ಕೂ ಗ್ರಾಮಗಳ ಭೂಸ್ವಾಮ್ಯವನ್ನು ಇತ್ಯರ್ಥಮಾಡುವುದಕ್ಕೂ ಸಂಬಂಧವೇ ಇಲ್ಲವೆಂದು ನನಗೆನ್ನಿಸುತ್ತದೆ. ಇನ್ನು ಕೆಲವು ಸದಸ್ಯರು ಇನ್ನೂ ಮುಂದೆ ಹೋಗಿ, ಗುರುಗಳೇ ಬೇಡವೆನ್ನಿ, ಮಠವನ್ನೇ ವಜಾ ಮಾಡಿ ಎಂದು ಹೇಳಿದರು. ಇದು ಉದ್ವೇಗವೇ ಹೊರತು ನಮ್ಮ ಮುಂದಿರುವ ಮಸೂದೆಗೆ ಸಂಬಂಧಪಟ್ಟ ಮಾತಲ್ಲ. ಈ ಮಸೂದೆ ಮಠಕ್ಕೂ ಸ್ವಾಮಿಗಳಿಗೂ ಸಂಬಂಧಪಟ್ಟಿಲ್ಲವೆಂದು ನನ್ನ ಭಾವನೆ. ಶ್ರೀಮಾರ್ಕ ಜೋಯಿಸರು ನೂರಾರು ವರ್ಷಗಳಿಂದ ಬೇರೆ ಬೇರೆ ರಾಜರು ಆಳಿದರು. ಹೀಗೆ ಆಳಿದ ಯಾರೇ ಆಗಲಿ, ಅವರು ಹಿಂದುಗಳಾಗಲಿ, ಮುಸ್ಲಿಮರಾಗಲಿ, ಈ ಜಹಗೀರಿಗೆ ಇನ್ನೂ ಹೆಚ್ಚಾಗಿ ಜಮೀನುಗಳನ್ನು ಸೇರಿಸಿಕೊಂಡು ಹೋದರೇ ಹೊರತು ಯಾರೂ ಕಿತ್ತುಕೊಳ್ಳಲಿಲ್ಲ, ಹೀಗಿರುವಾಗ ಈಗ ಇಂತಹ ಜಹಗೀರಿಯನ್ನು ಏಕೆ ತೆಗೆಯಬೇಕೆಂದು ಕೇಳಿದರು. ಇನಾಂದಾರರನ್ನೂ ಜೋಡಿದಾರರನ್ನೂ ಇದುವರೆಗೆ ಯಾವ ಸರ್ಕಾರವೂ ತೆಗೆಯಲು ಪ್ರಯತ್ನಿಸಲಿಲ್ಲ. ಈ ಸರ್ಕಾರ ಅಂಥ ಪ್ರಯತ್ನ ನಡೆಸಿದೆ. ಆದರೂ ಇನಾಂದಾರರು ಮತ್ತು ಜೋಡಿದಾರರನ್ನು ಮುಂದೆಯೂ ಇಟ್ಟುಕೊಳ್ಳಬೇಕೆಂದು ಯಾರೂ ಹೇಳಲಿಲ್ಲ. ಈಗ ಕಾಲಧರ್ಮಾನುಸಾರವಾಗಿ ಈ ಸರ್ಕಾರ ಭೂಸ್ವಾಮ್ಯ ಸರ್ಕಾರಕ್ಕಲ್ಲದೆ ಬೇರೆಯವರಿಗಿರುವುದನ್ನು ಕೊನೆಗಾಣಿಸಬೇಕೆಂದು ಮಾಡಿದ್ದಾರೆ. ಇದು ಕೇವಲ ಶೃಂಗೇರಿ ಜಹಗೀರಿಗಳಿಗೆ ಸಂಬಂಧಪಟ್ಟ ಕಾನೂನಾಗಿದ್ದ ಭಾಗದಲ್ಲಿ ಅದೇಕೆ ಈ ರೀತಿ ಮಾಡುತ್ತೀರೆಂದು ಕೇಳಬಹುದಾಗಿತ್ತು. ಈ ಮಸೂದೆ ಎಲ್ಲ ಜಹಗೀರಿಗಳಿಗೂ ಅನ್ವಯಿಸುವಾಗ ಯಾವುದಾದರೂ ಒಂದನ್ನು ಮಾತ್ರ ಏಕೆ ಕಿತ್ತುಕೊಳ್ಳುತ್ತೀರಿ ಎಂಬ ಪ್ರಶ್ನೆ ಬರುವುದಿಲ್ಲ. ಅಲ್ಲದೆ ಶೃಂಗೇರಿ ಜಹಗೀರಿ ವಿಚಾರದಲ್ಲಂತೂ ಯಾವುದನ್ನೂ ಕಿತ್ತುಕೊಳ್ಳುವ ಪ್ರಶ್ನೆಯೇ ಬರುವುದಿಲ್ಲ. ಶೃಂಗೇರಿ ಮಠಕ್ಕೆ ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ರಾಜರು ಅನೇಕ ಗ್ರಾಮಗಳನ್ನೂ ಇನಾಂ ಮತ್ತು ಜಹಗೀರಿಗಳನ್ನೂ ಕೊಟ್ಟಿದ್ದಾರೆ. ಇದೆಲ್ಲವೂ ಸೇರಿ ಅದು ಜಹಗೀರಿ ಎನಿಸಿಕೊಂಡಿದೆ. ಈ ಇನಾಂಗಳನ್ನು ಕೊಡುವಾಗ ಹಾಗೆ ಕೊಟ್ಟವರ ಉದ್ದೇಶವೇನಾಗಿತ್ತೆಂಬುದನ್ನು ನೋಡೋಣ. ಇದನ್ನು ಯಾವ ಉದ್ದೇಶಕ್ಕಾಗಿ ಕೊಟ್ಟಿದ್ದಾರೆಂದರೆ ಆ ಮಠದ ಸ್ವಾಮಿಗಳು ತಪೋನಿಧಿಗಳಾಗಿ ಲೋಕ ಕಲ್ಯಾಣಕ್ಕಾಗಿ ಪೂಜೆ ಪುರಸ್ಕಾರಗಳನ್ನು ಸಾರೋದ್ಧಾರವಾಗಿ ನಡೆಸಿಕೊಂಡು ಬರಲಿ, ಇದಕ್ಕೆ ತಕ್ಕ ಅನುಕೂಲ ಸೌಕರ್ಯಕ್ಕಾಗಿ ಒಂದು ಆದಾಯವಿರಲಿ ಎನ್ನುವ ಉದ್ದೇಶದಿಂದ ಕೊಟ್ಟಿದ್ದಾರೆಯೇ ವಿನಾ State within a State ಅಂದರೆ ಸಂಸ್ಥಾನದಲ್ಲೊಂದು ಸಂಸ್ಥಾನವಿರಲಿ ಎಂದು ಕೊಡಲಿಲ್ಲ. ಈ ಕಾನೂನಿನಿಂದ ಹಿಂದೆ ಈ ಜಹಗೀರಿಯನ್ನು ಕೊಟ್ಟವರ ಉದ್ದೇಶಕ್ಕೆ ಭಂಗಬರುತ್ತದೆಯೇ ಎಂಬುದನ್ನು ನೋಡಬೇಕು. ಅಲ್ಲದೆ ಈಗ ಇನಾಂ ರದ್ದು ಮಾಡುವ ಕಾನೂನಿನಲ್ಲಿ ಶೃಂಗೇರಿ ವಿಚಾರದಲ್ಲಿಯೂ ಬೇರೆ ಮಠಗಳು ಮತ್ತು ದೇವಸ್ಥಾನಗಳ ವಿಚಾರದಲ್ಲಿಯೂ ತೋರಿಸಿರುವ ರಿಯಾಯಿತಿಗಳೇನೆಂಬುದನ್ನು ನೋಡೋಣ. ಸಾಮಾನ್ಯ ಇನಾಂದಾರರಿಗೆ ಜಹಗೀರುದಾರರಿಗೆ ಪರಿಹಾರ ಕೊಟ್ಟು ಪೂರ್ತಿಯಾಗಿ ಭೂಸ್ವಾಮ್ಯವನ್ನು ಅವರಿಂದ ತಪ್ಪಿಸಬೇಕೆಂದು ಈ ಮಸೂದೆಯಲ್ಲಿ ಹೇಳಿದೆ. ಆದರೆ ಶೃಂಗೇರಿ ಜಹಗೀರಿ ಬಗ್ಗೆ ಆ ರೀತಿ ಹೇಳಿಲ್ಲ. ಹಿಂದಿನ ಐದು ವರ್ಷಗಳಲ್ಲಿ ಮಠದ ಕಾರ್ಯಕಲಾಪಗಳು ಸ್ವಾಮಿಗಳ ಪೂಜೆ ಪುರಸ್ಕಾರಗಳು ಸಾರೋದ್ಧಾರವಾಗಿ ನಡೆಯಬೇಕಾದರೆ ಏನು ಖರ್ಚಾಗುತ್ತಿತ್ತೋ ಅಷ್ಟು ಹಣವನ್ನು ಪ್ರತಿವರ್ಷವೂ ಒಂದೇ ಸಮನಾಗಿ ಕೊಡಬೇಕೆಂದು ಈ ಮಸೂದೆಯಲ್ಲಿ ಹೇಳಿದೆ.

ಇದರಿಂದ ಈ ಮಠದ ಕೆಲಸ ಕಾರ್ಯಗಳು ಸುಲಲಿತವಾಗಿ ನಡೆದುಕೊಂಡು ಹೋಗಲು ಯಾವ ರೀತಿಯಲ್ಲೂ ಅಡಚಣೆಗಳುಂಟಾಗದ ರೀತಿಯಲ್ಲಿ ಈ ಶೃಂಗೇರಿ ಜಹಗೀರಿನ ಬಗ್ಗೆ ಒಂದು ವಿಶೇಷವಾದ ಅನುಕೂಲವನ್ನು ಕಲ್ಪಿಸಿಕೊಟ್ಟಿದ್ದಾರೆ. ಹಿಂದೆ ರಾಜ ಮಹಾರಾಜರುಗಳಾದರೂ ಇನಾಂತಿ ಅಥವಾ ಜಹಗೀರು ಇವುಗಳನ್ನು ಯಾವ ಒಂದು ಉದ್ದೇಶಕ್ಕಾಗಿ ಇಂಥಾ ಮಠಗಳಿಗೆ ಹಾಕಿ ಕೊಟ್ಟಿದ್ದಾರೋ ಅಂಥ ಉದ್ದೇಶಕ್ಕೆ ಈಗ ಈ ಶಾಸನದಿಂದೇನೂ ಅಡ್ಡಿಯಾಗುವುದಿಲ್ಲ. ಮಠದ ಕೆಲಸ ಕಾರ್ಯಗಳು ನಿರಾತಂಕವಾಗಿ ನಡೆದುಕೊಂಡು ಹೋಗುವಂತೆ ನೋಡಿಕೊಳ್ಳತಕ್ಕದ್ದು ಮುಖ್ಯವಾದದ್ದೇ ಶಿವಾಯಿ ಇನಾಂತಿ ಇರತಕ್ಕದ್ದು ಅಥವಾ ಅದು ಬದಲಾಗತಕ್ಕದ್ದು ಮುಖ್ಯವಲ್ಲ. ಮಠದ ಕೆಲಸ ಕಾರ್ಯಗಳೆಲ್ಲವೂ ತೃಪ್ತಿಕರವಾಗಿ ನಡೆದುಕೊಂಡು ಬರಲು ಅದಕ್ಕೆ ಸಾಕಷ್ಟು ಅವಕಾಶ ಮಾಡಲಾಗಿದೆ. ಹೀಗೆ ಅದು ನೆರವೇರಿಸಬೇಕಾಗಿರತಕ್ಕ ಕೆಲಸ ಕಾರ್ಯಗಳ ಬಗ್ಗೆ ಸಾಕಷ್ಟು ಅನುಕೂಲತೆಗಳನ್ನು ಕಲ್ಪಿಸಿಕೊಟ್ಟ ಬಳಿಕ ಆ ಇನಾಂತಿಗಳನ್ನು ಸರ್ಕಾರದವರು ತಮ್ಮ ಆಡಳಿತಕ್ಕೆ ತೆಗೆದುಕೊಂಡರೆ, ಅದರಿಂದ ಆ ಮಠಗಳಿಗೆ ಏನೂ ಕುಂದಕ ಬರುವುದಿಲ್ಲ. ಅಥವಾ ಅದರ ಘನತೆ ಗೌರವಗಳಾಗಲಿ, ಅಥವಾ ಅದರ ಒಂದು ಮೇಲ್ಮಟ್ಟದಲ್ಲಿರತಕ್ಕ ಮಾನ್ಯತೆಗಾಗಲಿ ಇದರಿಂದ ಕುಂದುಕ ಬರುತ್ತೆಂದರೆ, ಅದು ಹೇಗೆ ಬರುತ್ತದೆ ಎಂದು ನಾನು ಪ್ರಶ್ನೆ

(ಶ್ರೀ ಎಚ್. ಕೆ. ವೀರಣ್ಣಗೌಡರು.)

ಮಾಡುತ್ತೇನೆ. ಈ ಸಂದರ್ಭದಲ್ಲಿ ಘನತೆ, ಗೌರವ ಅಥವಾ ಒಂದು ದೊಡ್ಡಸ್ತಿಕೆಯ ಪ್ರಶ್ನೆಯಾದರೂ ಹೇಗೆ ಉಂಟಾಗಲು ಅವಕಾಶವಿದೆಯೆಂದು ಪ್ರಶ್ನಿಸಲಿಚ್ಛಿಸುತ್ತೇನೆ. ಹಾಗೆ ಯಾರು ಕೆಲವರು ತಮ್ಮ ಮನಸ್ಸಿನಲ್ಲಿ ಏನೊಂದು ಶಂಕೆಯನ್ನಿಟ್ಟುಕೊಂಡಿದ್ದಾರೋ ಅಂಥವರಿಗೆಲ್ಲಾ ನಾನು ಹೇಳತಕ್ಕದ್ದಿಷ್ಟೆ. ಇಂದು ನಾವು ಯಾವ ಮಠಕ್ಕೆ ಈ ಅನುಕೂಲಗಳನ್ನೂ ಮಾನ್ಯತೆಗಳನ್ನೂ ಕಲ್ಪಿಸಿಕೊಟ್ಟಿದ್ದೇವೆಯೋ ಆ ಮಠ ಯಾವ ಸಂದೇಶವನ್ನು ದೇಶಕ್ಕೆ ಬೋಧಿಸುತ್ತಿದೆ ? ಅದಕ್ಕೆ ಶ್ರೇಷ್ಠತೆ ಎಂಥದು ಏನು ಎಂಬ ಪ್ರಶ್ನೆಗಳಿಗೆ ಹೋಗುತ್ತಿಲ್ಲ. ಅದರ ಶ್ರೇಷ್ಠತೆ, ಅದರ ಪವಿತ್ರಕರ್ತವ್ಯ ಇತ್ಯಾದಿಗಳ್ಯಾವುದನ್ನೂ ಕೆದಕದಿದ್ದಾಗ್ಯೂ ಅದರ ಗೌರವಕ್ಕೆ ಮತ್ತು ಘನತೆಗೆ ಕುಂದುಕ, ಅಥವಾ ಕಳಂಕ ಬರುತ್ತದೆಯೆಂದು ಹೇಳತಕ್ಕ ವಾದವನ್ನು ನಾನು ಖಂಡಿತ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಆದರೆ ಈ ಶೃಂಗೇರಿ ಇನಾಂತಿಯ ಆಡಳಿತವೆಲ್ಲಾ ಸರ್ಕಾರದವರಿಗೆ ಇದೆ, ಆ ಮಠದವರು ಈ ಆಡಳಿತವನ್ನು 1899ನೇ ಇಸವಿಯಲ್ಲೇ ಸರ್ಕಾರಕ್ಕೊಪ್ಪಿಸಿಬಿಟ್ಟರು. ಆಗಿನಿಂದಲೂ ಈ ಇನಾಂತಿಯಲ್ಲಿರತಕ್ಕ ರೈತರುಗಳೆಲ್ಲಾ ಆ ಜಮೀನುಗಳ ಖಾತೆದಾರರಾಗಿ ಸರ್ಕಾರಿ ಗ್ರಾಮಗಳಲ್ಲಿ ರೈತರು ಹೇಗೆ ತಮ್ಮ ತಮ್ಮ ಆಸ್ತಿಪಾಸ್ತಿಗಳನ್ನಿಟ್ಟುಕೊಂಡಿದ್ದಾರೋ ಅದೇ ರೀತಿಯಲ್ಲಿ ಇಲ್ಲೂ ನಡೆದುಕೊಂಡು ಬರುತ್ತಿದ್ದಾರೆ, ಆದ್ದರಿಂದ ಈಗ ಅಲ್ಲಿಗೆ ಈ ಬದಲಾವಣೆಗಳೆಲ್ಲಾ ಏತಕ್ಕೆ ಬೇಕು, ಎಂಬುದಾಗಿ ಕೆಲವರು ಒಂದು ವಾದವನ್ನೆತ್ತಿದ್ದಾರೆ. ಹೌದು, ಅದೂ ನಿಜ. ಆ ಜಮೀನುಗಳೆಲ್ಲವೂ ಸರ್ಕಾರದವರ ಆಡಳಿತದಲ್ಲೇ ಇವೆ. ಆದರೆ ಆ ಜಮೀನುಗಳೆಲ್ಲಾ ಸರ್ಕಾರದವರ ವಶ ಇರುವುದರಿಂದ ಮಾತ್ರವೇ ಅವುಗಳ ಭೂಸ್ವಾಮ್ಯ ಸರ್ಕಾರಕ್ಕಿದ್ದ ಹಾಗಾಗುವುದಿಲ್ಲ. ಅಂದ ಮೇಲೆ ಒಂದು ಸ್ಟೇಟಿನಲ್ಲಿ ಇನ್ನೊಂದು ಸ್ಟೇಟ್ ಇದ್ದ ಹಾಗಾಯಿತು. ಅಲ್ಲಿರತಕ್ಕ ಭೂಮಿಯ ಸ್ವಾಮ್ಯವೆಲ್ಲಾ ಆ ಮಠಕ್ಕೇ ಸೇರಿರುತ್ತೆ. ಮಠದ ಒಬ್ಬ ಏಜಂಟರಿದ್ದ ಹಾಗೆ, ಅಲ್ಲಿ ಬರತಕ್ಕ ಉತ್ಪತ್ತಿಯನ್ನೆಲ್ಲಾ ವಸೂಲು ಮಾಡಿ ಮಠಕ್ಕೆ ಕೊಡಬೇಕಾದ್ದನ್ನು ಕೊಟ್ಟು ಆಡಳಿತ ಮತ್ತು ವಸೂಲಿ ವೆಚ್ಚಕ್ಕಾಗಿ ತಮಗೆ ಬರಬೇಕಾದ್ದನ್ನು ತಾವು ತೆಗೆದುಕೊಳ್ಳುವುದು ಮಾತ್ರ ಸರ್ಕಾರದ ಕೆಲಸವಾಗಿದೆ. ಆದರೆ ಸರ್ಕಾರಿ ಗ್ರಾಮಗಳಲ್ಲಿದ್ದಂತೆ ಈ ಇನಾಂ ಗ್ರಾಮಗಳಲ್ಲಿರತಕ್ಕ ರೈತರೂ ಕೂಡ ಸುಖದಿಂದಿದ್ದಾರೆಂದು ಹೇಳಿರುವುದು ಅಷ್ಟು ನಿಜವಲ್ಲ. ಈ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಬಿ. ಎಕ್. ಬೋರಣ್ಣಗೌಡರು ಅನೇಕ ಉದಾಹರಣೆಗಳನ್ನು ಕೊಟ್ಟಿದ್ದಾರೆ. ಆದರೆ ನಾನು ಅಷ್ಟೆಲ್ಲವನ್ನೂ ಹೇಳದೆ ಒಂದೇ ಒಂದು ನಿದರ್ಶನ ಮಾತ್ರ ತಮ್ಮ ತಮ್ಮ ಮುಂದಿಡಲು ಇಚ್ಛೆಪಡುತ್ತೇನೆ. ಕೆಲವು ವರ್ಷಗಳ ಹಿಂದೆ ಮಲೆನಾಡು ಪ್ರಾಂತ್ಯದಲ್ಲಿ ಅಡಿಕೆ ತೋಟದ ವ್ಯವಸಾಯಗಾರರಿಗೆ ಒಂದು ದೊಡ್ಡ ತೊಂದರೆ ಬಂದು ಅವರ ಬೆಳೆಯೆಲ್ಲಾ ನಷ್ಟವಾಗಿ ಹೋದ ಸಂದರ್ಭದಲ್ಲಿ ಅವರು ಆ ಅಂಶವನ್ನು ಸರ್ಕಾರದವರ ಗಮನಕ್ಕೆ ತಂದಾಗ, ಸರ್ಕಾರದವರು ಆ ರೈತರುಗಳಿಗೆಲ್ಲಾ ಅವರು ಕೊಡುತ್ತಿದ್ದ ಕಂದಾಯದಲ್ಲಿ ಶೇಕಡ 25ರಷ್ಟನ್ನು ಮಾಫಿ ಮಾಡಿಬಿಟ್ಟರು. ಹೀಗೆ ಸಂಸ್ಥಾನದ ನಾನಾ ಭಾಗಗಳಲ್ಲಿರತಕ್ಕ ರೈತರಿಗೆ ಆಗಿಂದಾಗ್ಗೆ ಸರ್ಕಾರದವರು ಕೆಲವು ವಿಶೇಷ ಸಂದರ್ಭಗಳಲ್ಲಿ ಇಂಥಾ ರಿಯಾಯಿತಿಗಳನ್ನು ಪ್ರತಿವರ್ಷವೂ ಕೊಡುತ್ತಲೇ ಇದ್ದಾರೆ. ಶೃಂಗೇರಿ ತಾಲ್ಲೂಕಿನಲ್ಲಿದ್ದ ರೈತರುಗಳೂ ಸಹ, ಸರ್ಕಾರದವರು ಎಲ್ಲ ಬಾಗಾಯಿತು ವ್ಯವಸಾಯಗಾರರಿಗೂ ರಿಯಾಯಿತಿ ಕೊಟ್ಟಿರುವಂತೆ ತಮಗೂ ಒಂದು ರಿಯಾಯಿತಿ ಕೊಡಬೇಕೆಂದೂ ತಮಗೆಲ್ಲಾ ಹೀಗೆ ಕಷ್ಟ ಬಂದಿದೆ ಎಂದೂ ಕೇಳಿಕೊಂಡಿದ್ದಕ್ಕೆ ಶ್ರೀಮಠದವರು ಅಂಥಾ ಯಾವ ರಿಯಾಯಿತಿಗಳನ್ನೂ ಕೊಡಲಾಗುವುದಿಲ್ಲವೆಂದು ಹೇಳಿಬಿಟ್ಟರು. ಇಷ್ಟಕ್ಕೆಲ್ಲಾ ಕಾರಣವೇನೆಂದರೆ ಆ ಭೂಸ್ವಾಮ್ಯ ಆ ಮಠದವರ ಕೈಲಿದ್ದುದೇ ಆಗಿರುತ್ತೆ. ಹೀಗೆ ಇದು ಸ್ಟೇಟಿನೊಳಗೊಂದು ಸ್ಟೇಟ್ ಇದ್ದ ಹಾಗೆ ಇರುವುದರಿಂದ, ಅಲ್ಲಿ ಏನೊಂದೂ ಪ್ರಜೋಪಕಾರಕವಾದ ಕೆಲಸಗಳನ್ನು ಮಾಡಿಸಬೇಕಾಗಿದ್ದರೂ ಮಠದವರನ್ನು ಬರಮಾಡಿಕೊಂಡು ಪ್ರತಿಯೊಂದು ವಿಚಾರದಲ್ಲೂ ಅವರ ಒಪ್ಪಿಗೆ ಪಡೆದುಕೊಂಡು ಕಾರ್ಯಮಾಡಬೇಕಾಗಿದೆ. ಈ ಒಂದು ದೊಡ್ಡ ತೊಂದರೆಯಿರುವುದರಿಂದ ಅಲ್ಲಿ ಕೆರೆಯಾಗಲೀ, ಬಾವಿ, ಆಸ್ಪತ್ರೆ, ರಸ್ತೆ ಮುಂತಾದುವುಗಳನ್ನು ಮಾಡಿಸುವುದಕ್ಕಾಗಲಿ, ಕಂದಾಯ ಕವಳಿಗೆ ಇತ್ಯಾದಿಗಳ ಬಗ್ಗೆ ಅವರು ಯಾವ ರಿಯಾಯಿತಿಯನ್ನು ತೋರಿಸುವುದಕ್ಕಾಗಲಿ ಅವಕಾಶವಾಗಿಲ್ಲ. ಹೀಗೆ ಸರ್ಕಾರಿ ಗ್ರಾಮಗಳಲ್ಲಿರತಕ್ಕ ರೈತರಿಗೂ ಮತ್ತು ಇನಾಂ ಗ್ರಾಮಗಳಲ್ಲಿರತಕ್ಕ ರೈತರಿಗೂ ಬಹಳ ವ್ಯತ್ಯಾಸಗಳು ಕಂಡುಬರುತ್ತವೆ. ಒಂದೇ ದೇಶದಲ್ಲಿರತಕ್ಕ ರೈತರುಗಳಿಗೆ ಆದರಲ್ಲೂ ಅಕ್ಕಪಕ್ಕದ ಗ್ರಾಮಗಳಲ್ಲಿ ವಾಸಮಾಡುತ್ತಿರುವ ರೈತರುಗಳಿಗೆ ಎರಡು ವಿಧವಾದ ವ್ಯತ್ಯಾಸಗಳು ಇರಬಾರದೆಂಬ ಒಂದು ಘನೋದ್ದೇಶದಿಂದಲೇ, ಅವುಗಳನ್ನು ತಪ್ಪಿಸಿ, ಎಲ್ಲರನ್ನೂ ಒಂದೇ ಸಮಾನ ದೃಷ್ಟಿಯಲ್ಲಿ ನೋಡಬೇಕೆಂಬ ಕರ್ತವ್ಯ ದೃಷ್ಟಿಯಿಂದ ಈಗ ಈ ಮಸೂದೆ ನಮ್ಮ ಮುಂದೆ ಬಂದಿರತಕ್ಕದ್ದಾಗಿದೆ. ಶೃಂಗೇರಿ ಜಹಗೀರಿಗಿರುವ ಈ ಭೂಸ್ವಾಮ್ಯದಿಂದ ಸಂಸ್ಥಾನದೊಳಗೊಂದು ಸಂಸ್ಥಾನವಾಗುವುದಿಲ್ಲವೆಂದು ಶ್ರೀಮಾನ್ ಜೋಯಿಸರು ತಿಳಿಸಿದರು. ಸಾವಿರಿನ್ಟಿ ಇಂಡಿವಿಸಿಬಲ್ (Indvisible) ಆಗಿರುತ್ತೆ ಎಂದು ಅವರು ಹೇಳಿದರು. ಆದರೆ ಭೂಸ್ವಾಮ್ಯ ಸರ್ಕಾರಕ್ಕಲ್ಲದೆ ಬೇರೆಯವರಿಗೂ ಇದ್ದರೆ ಅದು State within a State ಆಗುತ್ತದೆ. ಈ ಅದು ಸರಿಯಲ್ಲ. ಈ ಸಾವಿರಿನಿಟಿ ಎಂಬುದು ಇಡೀ ದೇಶದಲ್ಲಿರತಕ್ಕ ಪ್ರತಿಯೊಬ್ಬ ಪ್ರಜೆಗೂ ಸೇರಿರತಕ್ಕದ್ದಾಗಿದೆ. ಆದ್ದರಿಂದ ಈ ಭೂಸ್ವಾಮ್ಯ ಸಾವಿರಿನ್ಟಿಗೆ ಸಂಬಂಧಿಸಿದ್ದು. ಅದು ಎಲ್ಲರೂ ಅನುಭವಿಸತಕ್ಕದ್ದಾಗಿರುತ್ತೆಂಬ ದೃಷ್ಟಿಯಲ್ಲಿ ಮಠಕ್ಕೆ ಇರತಕ್ಕ ಭೂಸ್ವಾಮ್ಯವನ್ನು ತಪ್ಪಿಸಿ ಅದನ್ನು ಜನಗಳಿಗೆ ಹಂಚಬೇಕೆಂದು ಈ ಮಸೂದೆಯಲ್ಲಿದೆ. ಇದರಲ್ಲಿ ಏನೂ ತೊಂದರೆ ಇಲ್ಲ. ಹೀಗೆ ಮಾಡಿದರೇನೇ ಸಾವಿರಿನ್ಟಿ ಇಂಡಿವಿಸಿಬಲ್ ಆಗುವುದು. ಈ ದಿವಸ 'ಸ್ಟೇಟ್' ಎಂದರೆ ಜನತೆ. ಹೀಗೆ ಒಂದು ಸ್ಟೇಟಿನಲ್ಲಿ ಒಂದು ಪ್ರದೇಶದ ಜನತೆಗೆ ಸಾವಿರಿನಿಟಿಯಿದ್ದು, ಮತ್ತೊಂದು ಪ್ರದೇಶದವರಿಗೂ ಆ ಸಾವಿರಿನ್ಟಿ ಇದೆಯೇ ಇಲ್ಲವೇ ಎಂಬುದನ್ನು ನಾವು ನೋಡಬೇಕಾದ್ದು ಮುಖ್ಯ. ಈಗಾಗಲೇ ನಾನು ತಿಳಿಸಿರುವ ಹಾಗೆ ಶ್ರೀಮಠದ ಗುರುಗಳಿಗೆ ಅವರ ತಪೋಬಲ ಶಕ್ತಿಯಿಂದ ಪೂಜ್ಯತೆ ಬಂದಿದೆಯೇ ಹೊರತು ಅವರು ಜಹಗೀರಿ ಗ್ರಾಮಗಳ ಭೂಸ್ವಾಮ್ಯ ಪಡೆದಿರುವುದರಿಂದಲ್ಲ. ಜಹಗೀರಿಗೆ 27 ಗ್ರಾಮಗಳ ಭೂಸ್ವಾಮ್ಯವನ್ನು ಉಳಿಸಿಕೊಟ್ಟರೆ ಅವರ ತಪೋಶಕ್ತಿ ಹೆಚ್ಚಿದಂತಾಗುವುದಿಲ್ಲ. ಇದು ತಾವೆಲ್ಲರೂ ಆಲೋಚನೆ ಮಾಡಬೇಕಾದ ವಿಷಯ.

ಈ ಸಂದರ್ಭದಲ್ಲಿ ಕೆಲವರು ಇನ್ನೂ ಒಂದು ವಿಚಿತ್ರವಾದ ವಾದ ಮಾಡಿದ್ದಾರೆ. ಇದು ಮತಸಂಬಂಧವಾದ

ವಿಚಾರ. ಇದರಲ್ಲಿ ಕೈಹಾಕಿದರೆ ದೇಶಾದ್ಯಂತವೂ ಅಲ್ಲೋಲಕಲ್ಲೋಲವಾಗಿ ಬಿಡುತ್ತದೆ, ಇಂಥಾ ಮತ ಸಂಬಂಧವಾದ ವಿಚಾರಗಳಲ್ಲಿ ಸರ್ಕಾರ ಕೈಹಾಕಬಾರದು, ಹಾಗೆ ಕೈಹಾಕಿದರೆ ಅಫ್‌ಘಾನಿಸ್ಥಾನದ ದೊರೆಯಾಗಿದ್ದ ಅಮಾನುಲ್ಲರಿಗೆ ಆದ ಗತಿ ಆದೀತು ಎಂದು ವಾದವೆತ್ತಿದ್ದಾರೆ. ಭೂಸ್ವಾಮ್ಯ ವಿಚಾರದಲ್ಲಿ ಸರ್ಕಾರದವರು ಕೈಹಾಕಿದ ಮಾತ್ರದಿಂದ ಇದು ಮತ ಸಂಬಂಧ ವಿಚಾರವಾಯಿತೇ ? ಈ ಬಗೆಯ ಉಪಮಾನಗಳನ್ನು ಹೇಳಿ ವಾದಿಸಿರುವುದು ಸರಿಯಾದ್ದಲ್ಲ. ಕೇವಲ ಇದು ಒಂದು ಲೌಕಿಕ ವಿಚಾರ. ಇದರಲ್ಲಿ ಹೇಳತಕ್ಕದ್ದೆಲ್ಲಾ ಇಷ್ಟೇ. ಭೂಸ್ವಾಮ್ಯ ಯಾವಾಗಲೂ stateಗೇ ಸೇರತಕ್ಕದ್ದು. ಸ್ಟೇಟ್ ಎಂದರೆ ಜನತೆ. ಆದ್ದರಿಂದ ಈ ಭೂಸ್ವಾಮ್ಯ ಜನಗಳಿಗೆ ಸೇರಬೇಕು, ಎಂದು ಹೇಳತಕ್ಕ ವಾದದಲ್ಲಿ ಸ್ವಾಮಿಗಳ ಘನತೆ, ಅವರ ಗೌರವಕ್ಕೆ ಇದರಿಂದ ಕಳಂಕಬರುತ್ತದೆಂದು ಯಾರೂ ಭಾವಿಸಬಾರದು. ಹೀಗೆ ಈ ವಿಚಾರ ಯಾವ ಅನುಮಾನಕ್ಕೂ ಆಸ್ಪದವಿಲ್ಲದಿದ್ದಾಗ್ಯೂ ಆ ಮಠದ ಘನತೆ ಗೌರವಗಳನ್ನು ದೃಷ್ಟಿಯಲ್ಲಿಟ್ಟುಕೊಂಡಿದ್ದುದರಿಂದಲೇ ಇಂಥಾ ಯಾವ ಒಂದು ವಾದಕ್ಕೂ ಆಸ್ಪದವಿಲ್ಲದಿರಲೆಂದು ಸಲೆಕ್ಟ್ ಸಮಿತಿಯವರು ಇದರ ಬಗ್ಗೆ ಬಹಳ ಉದಾರದಿಂದ ವರ್ತಿಸಿ, ಕೆಲವು ರಿಯಾಯಿತಿಯನ್ನೂ ಕೊಟ್ಟಿದ್ದಾರೆ. ಶೃಂಗೇರಿ ತಾಲ್ಲೂಕಿನಲ್ಲಿರತಕ್ಕ ಜಮೀನುಗಳ ಪೈಕಿ ರೈತರ ಹಿಡುವಳಿಯಲ್ಲಿರತಕ್ಕದ್ದನ್ನು ಬಿಟ್ಟು ಉಳಿದ ಜಮೀನು ಮಠದ ಖಾಸ್ ಜಮೀನೆಂದು ಹೇಳಿದೆ. ಶ್ರೀಮಠಕ್ಕೆ ಸೇರಿದ ಮನೆಗಳು ಇತ್ಯಾದಿಗಳು ಏನೇನಿರುತ್ತದೆಯೋ ಅವೆಲ್ಲವನ್ನೂ ಮಠಕ್ಕೇ ಬಿಟ್ಟುಕೊಡಬೇಕೆಂದು ಹೇಳಿದೆ. ಅಂಥ ಜಮೀನುಗಳಲ್ಲಿರುವ ಖನಿಜ ಸಂಪತ್ತು, ಅರಣ್ಯ ಸಂಪತ್ತು, ಇದೆಲ್ಲಾ ಮಠಕ್ಕೇ ಸೇರಬೇಕೆಂದು ಹೇಳಿದೆ. ಇದರ ಜೊತೆಗೆ ಇಲ್ಲಿಯ ತನಕ ಇದ್ದಂತೆ ಆ ಮಠದ ಗುರುಗಳು ಪ್ರಯಾಣ ಕಾಲದಲ್ಲಿ ಅಲ್ಲಲ್ಲೇ ದಾಟಬೇಕಾದ ದೋಣಿ ಇತ್ಯಾದಿಗಳಲ್ಲಿ ಉಚಿತವಾಗಿ ಪ್ರಯಾಣಮಾಡತಕ್ಕ ಹಕ್ಕನ್ನೂ ಅವರಿಗೇ ಉಳಿಸಿಕೊಟ್ಟಿದೆ. ಹೀಗೆ ಶ್ರೀಮಠಕ್ಕೆ ಅನೇಕ ರಿಯಾಯಿತಿಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ನಾನಾ ರೀತಿಯಲ್ಲಿ ಶ್ರೀಮಠಕ್ಕೆ ಅನುಕೂಲಗಳನ್ನು ಕಲ್ಪಿಸಿರತಕ್ಕ ಬಗ್ಗೆ ಕೆಲವು ಮಾನ್ಯ ಸದಸ್ಯರು ಹಾಗೆ ಮಾಡುವುದು ಸರಿಯಾದ್ದಲ್ಲ, ಕಿತ್ತುಕೊಳ್ಳುವುದಾಗಿದ್ದರೆ ಪೂರ್ತಿ ಕಿತ್ತುಕೊಂಡೇ ಬಿಡಿ, ಇಲ್ಲವೆ ಬಿಟ್ಟುಬಿಡುವುದಾದರೆ ಪೂರ್ತಿ ಬಿಟ್ಟುಬಿಡಿ, ಎಂಬ ವಾದ ಮಾಡಿದ್ದಾರೆ. ಆದರೆ ನಾವು ಅಷ್ಟು ಉಗ್ರ ಗಾಮಿಗಳಾಗಿ ಹೋಗದೆ ಈ ಅನುಕೂಲಗಳನ್ನೆಲ್ಲಾ ಕಿತ್ತುಹಾಕಿ ಮಠದ ಕೀರ್ತಿಗೆ, ಗುರುಗಳ ಗೌರವಕ್ಕೆ ಯಾವ ರೀತಿಯಲ್ಲೂ ಕಳಂಕಬಾರದ ರೀತಿಯಲ್ಲಿ ನಾವು ಅವರಿಗೆ ಗೌರವ ಕೊಟ್ಟಿದ್ದೇವೆ. ಶೃಂಗೇರಿ ಜಹಗೀರಿಯ ಭೂಸ್ವಾಮ್ಯ ಆ ಮಠಕ್ಕಿರಬಾರದೆಂದು ಹೇಳಿದ ಮಾತ್ರಕ್ಕೆ ಅಂಥವರು ನಾಸ್ತಿಕರೆಂದೂ ಹಾಗೆ ಹೇಳದಿರುವವರು ಮಾತ್ರ ಮತಾಭಿಮಾನಿಗಳೆಂದೂ ಹೇಳುವುದು ಸರಿಯಲ್ಲ. ಹಿಂದುಗಳು ಹಿಂದೂಮತದ ಮೇಲೆ ಎಷ್ಟು ಅಭಿಮಾನವುಳ್ಳವರಾಗಿದ್ದರೋ ಅಷ್ಟೇ ಅಭಿಮಾನ ಇತರೇ ಮತಗಳವರಿಗೆ ಎಂದರೆ ಅವರು ಮುಸಲ್ಮಾನರಾಗಲೀ, ಕ್ರೈಸ್ತರಾಗಲೀ ಎಲ್ಲರಿಗೂ ಮತಾಭಿಮಾನವೆಂಬುದು ಇದ್ದೇ ಇರುತ್ತೆ. ಹಾಗೆ ನಾಸ್ತಿಕರಾದಂಥ ಮನುಷ್ಯರು ಈ ಸಭೆಯಲ್ಲಿ ಯಾರೂ ಇರಲಾರರು. ನಾನೇನೂ ಯಾರೂ ಇಲ್ಲವೆಂದು ತಿಳಿಯುತ್ತೇನೆ. ಅಂತೂ ಸೆಲೆಕ್ಟ್ ಸಮಿತಿಯವರು ಶ್ರೀಮಠದ ಬಗ್ಗೆ ಬಹಳ ಉದಾರವಾಗಿ ವರ್ತಿಸಿ, ಅನೇಕ ರಿಯಾಯಿತಿಗಳನ್ನು ತೋರಿಸಿದ್ದಾರೆ. ಅದಕ್ಕಾಗಿ ಮಸೂದೆಯಲ್ಲಿ ಅನೇಕ ಬದಲಾವಣೆಗಳನ್ನು ಮಾಡಿದ್ದಾರೆ. ಅವುಗಳೆಲ್ಲ ಉಚಿತವಾದವುಗಳೆಂದು ನಾನು ಭಾವಿಸುತ್ತೇನೆ. ಹೀಗೆ ನಾವು ಸ್ವಲ್ಪ ಹೆಚ್ಚಿನ ರಿಯಾಯಿತಿಗಳನ್ನು ಈ ಮಠಕ್ಕೆ ತೋರಿಸಿರುವುದು ಕೆಲವು ಉಗ್ರಗಾಮಿಗಳಿಗೆ ಹಿಡಿಸದಿರಬಹುದು. ಆದಾಗ್ಯೂ ನಾವು ಎರಡಕ್ಕೂ ಮಧ್ಯಮದಲ್ಲಿ ನಡೆದುಕೊಂಡು ಹೋಗಬೇಕಾದದ್ದು ಈಗಿನ ಕಾಲಕ್ಕೆ ಸರಿ ಹೋಗುತ್ತದೆ. ಇಷ್ಟೆಲ್ಲಾ ಅನುಕೂಲಗಳನ್ನೂ ಕಲ್ಪಿಸಿಕೊಟ್ಟಿದ್ದಾಗ್ಯೂ ಸಲೆಕ್ಟ್ ಸಮಿತಿಯವರ ಮನ ನೋಯಿಸುವಂಥ ರೀತಿಯಲ್ಲಿ, ಈ ಸಭೆಯ ಅನೇಕ ಮಾನ್ಯ ಸದಸ್ಯರುಗಳ ಮತ್ತು ಸರ್ಕಾರದವರ ಮನನೋಯುವಂಥಾ ರೀತಿಯಲ್ಲಿ, ಕೆಲವರು ಹಠಭಾವನೆಯಿಂದ ವಾದಿಸುವುದು ಸರಿಯಾದ್ದಲ್ಲ. ಕಾಲಸ್ಥಿತಿ ಅನುಸರಿಸಿ ಪ್ರತಿಯೊಬ್ಬರೂ ನಡೆಯುವುದು ಯುಕ್ತವಾದದ್ದು. ಈ ದಿವಸದ ಪರಿಸ್ಥಿತಿ ಏನಾಗಿದೆ ಎಂಬುದನ್ನು ಸರ್ವರೂ ತಮ್ಮ ದೃಷ್ಟಿಯಲ್ಲಿಟ್ಟುಕೊಂಡು ಇದನ್ನು ಪರಿಶೀಲಿಸಬೇಕಾದ್ದು ಅಗತ್ಯವೆಂದು ನನಗೆ ತೋರುತ್ತದೆ. ಈ ಶಾಸನದಿಂದ ಒಟ್ಟಿನಲ್ಲಿ ಹೇಳುವುದಾದರೆ ಯಾರ ಘನತೆ, ಗೌರವಗಳಿಗೂ ಯಾವ ರೀತಿಯಲ್ಲೂ ಕುಂದುಕಬರುವುದಿಲ್ಲ. ಆದಾಗ್ಯೂ ವಾದಕ್ಕೆ ವಾದ ಹೂಡಬೇಕೆಂಬ ಉದ್ದೇಶ ಸಾಧನೆಯಲ್ಲಿ ಕೆಲವರು ಈ ಮಠ ಒಂದು 'ನ್ಯಾಷನಲ್ ಇನ್‌ಸ್ಟಿಟ್ಯೂಟ್' ಎಂಬುದಾಗಿ ಒಂದು ಪದವನ್ನು ಉಪಯೋಗಿಸಿ ವಾದ ಮಾಡಿದ್ದಾರೆ. ಅವರು ಆ ಪದವನ್ನು ಹೇಗೆ ಉಪಯೋಗಿಸಿದರೋ ನನಗಂತೂ ಅದು ಅರ್ಥವಾಗದು. ಇದು ಕೇವಲ ಅಸಂಬದ್ಧವಾದ ವಾದ. ಇದಕ್ಕಾಗಿ ಅನೇಕ ಅನಗತ್ಯವಾದ ಉದಾಹರಣೆಗಳನ್ನು ಬೇರೆ ಹೇಳಿದ್ದಾರೆ. ಆ ರೀತಿಯಲ್ಲೆಲ್ಲಾ ಮಾತನಾಡುತ್ತ ಜನರ ಮನಸ್ಸನ್ನು ಕಲಕುವುದು ಸರಿಯಾದ ಮಾರ್ಗವಲ್ಲ ಮತ್ತು ಅದು ಉಚಿತವೂ ಅಲ್ಲ. ಅದರಿಂದ ಕಾರ್ಯಸಾಧನೆಯಂತೂ ಎಂದಿಗೂ ಆಗುವುದಿಲ್ಲ. ಆ ಸ್ನೇಹಿತರು ತಿಳಿಸಿರುವ ಹಾಗೆ ಅದು ಒಂದು ನ್ಯಾಷನಲ್ ಇನ್‌ಸ್ಟಿಟ್ಯೂಟಲ್ಲ. ಆ ಇನ್‌ಸ್ಟಿಟ್ಯೂಟ್ ಎಲ್ಲಾ ಜಾತಿಯವರಿಗೂ, ಎಲ್ಲಾ ಮತೀಯರಿಗೂ ಸೇರಿದ್ದಲ್ಲ. ಅದರಿಂದ ಏನೇನು ಪ್ರಯೋಜನಗಳು ಇರುತ್ತವೆಯೋ ಅವುಗಳು ಇಂದು ಎಲ್ಲ ಮತೀಯರಿಗೂ ದೊರೆಯುತ್ತಿಲ್ಲ. ಇಡೀ ಜನತೆಯ ಕೇವಲ ಎಲ್ಲೋ ಒಂದು ಭಾಗದವರಿಗೆ ಮಾತ್ರ ಅದರ ಪ್ರಯೋಜನ ದೊರೆಯುತ್ತಿದೆ.

ಈಹೊತ್ತು ನಿಷ್ಪಕ್ಷಪಾತವಾಗಿ ಸ್ವಾಮಿಗಳಿಗೆ ಅಥವಾ ಮಠಗಳಿಗೆ ಅಗೌರವ ಸೂಚಿಸಬೇಕೆಂಬ ಭಾವನೆಯನ್ನು ಮನಸ್ಸಿನಲ್ಲಿಟ್ಟುಕೊಳ್ಳದೆ ಅವರಿಗೆ ಎಲ್ಲಾ ಗೌರವವನ್ನೂ ಕೊಡಬೇಕೆಂಬ ದೃಷ್ಟಿಯಿಂದ ನೋಡಿದರೆ—ಶೃಂಗೇರಿ ಮಠ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಗಿದೆಯೆ ಎಂದು ಟೆಕ್ನಿಕಲ್ಲಾಗಿ ಯೋಚನೆ ಮಾಡಿದರೆ—ಅಲ್ಲ ಎಂದು ಹೇಳಬಹುದು. ಮೈಸೂರು ಸಂಸ್ಥಾನದಲ್ಲಿ ಅಲ್ಲದೆ ಇಡೀ ಇಂಡಿಯಾದೇಶದಲ್ಲೂ ಇದಕ್ಕೆ ಬಹಳ ಮಂದಿ ಶಿಷ್ಯರಿರಬಹುದು. ಅನೇಕರು ಅಲ್ಲಿನ ಸಂಸ್ಕೃತಿಯ ಫಲವನ್ನು ಅನುಸರಿಸುತ್ತಿರಬಹುದು. ಆದ ಮಾತ್ರಕ್ಕೆ ಎಲ್ಲರೂ ಈ ಮಠಕ್ಕೆ ಸೇರಿಲ್ಲ. ಮೈಸೂರು ಸಂಸ್ಥಾನದಲ್ಲಿ ಹಿಂದುಗಳೆಲ್ಲರೂ ಅದ್ವೈತವನ್ನು ಒಪ್ಪಿಲ್ಲ. ಶೃಂಗೇರಿ ಮಠ ಹೆಚ್ಚು ಗೌರವಯುತವಾದ ಇನ್‌ಸ್ಟಿಟ್ಯೂಟ್ ಆಗಿರಬಹುದು. ಆದ ಮಾತ್ರಕ್ಕೆ ಅದನ್ನು ಪೂರ್ತಿಯಾಗಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಎಂದು ಸಾಧಿಸುವುದಕ್ಕಾಗಿ ವಾದ ವಿವಾದ ಬೆಳೆಸಿಕೊಂಡು

(ಶ್ರೀ ಎಚ್. ಕೆ. ವೀರಣ್ಣಗೌಡರು)

ಹೋಗುವುದಕ್ಕೆ ಸಾಧ್ಯವಿಲ್ಲ. ಅದರಿಂದ ಕಾರ್ಯ ಸಾಧನೆಯಾಗುವುದಿಲ್ಲ.

ಶ್ರೀ ಎಂ. ಎಸ್. ಜೋಯಿಸರವರು.—ನ್ಯಾಷನಲ್ ಇನ್‌ಸ್ಟಿಟ್ಯೂಟ್ ಅಂದರೇನು ?

ಶ್ರೀ ಎಚ್. ಕೆ. ವೀರಣ್ಣಗೌಡರು.—ಅಂಥ ಸಂಸ್ಥೆಯಲ್ಲ ಜಾತಿ, ಮತ, ಕೋಮು, ಮೊದಲಾದ ಯಾವ ಭಿನ್ನ ಭಾವನೆಯೂ ಇಲ್ಲದೆ ಎಲ್ಲರಿಗೂ ಸರ್ವ ಸಮ್ಮತವಾದ ಹಕ್ಕು ದೊರೆಯಬೇಕು. ಈ ದಿವಸ ಶೃಂಗೇರಿ ಮಠಕ್ಕೆ ಹೋಗಿ ಆರಾಧನೆ ಮಾಡುವುದಕ್ಕೆ ಅವಕಾಶ ಎಲ್ಲರಿಗೂ ಇದೆ, ಹರಿಜನರಿಗೂ ಅವಕಾಶವಿದೆ ಎಂದು ನಮ್ಮ ಸ್ನೇಹಿತರು ಹೇಳಿದರೆ ಅದು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಶ್ರೀ ಜೋಯಿಸರು ಹೇಳಿದಂಥ ವಾದಗಳಿಂದ ಕಾರ್ಯ ಸಾಧನೆಯಾಗುವುದಿಲ್ಲ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಹರಿಜನರಿಗೆ ಅಲ್ಲಿ ಅವಕಾಶವಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡರು.—ಇಲ್ಲ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ನ್ಯಾಷನಲ್ ಇನ್‌ಸ್ಟಿಟ್ಯೂಟ್ ಯಾವುದು, ಎಲ್ಲಿದೆ ಎಂಬುದನ್ನು ಹೇಳಬಲ್ಲಿರಾ ?

ಶ್ರೀ ಎಚ್. ಕೆ. ವೀರಣ್ಣಗೌಡರು.—ಅದು ಬೇರೆ ಮಾತು.

ಶ್ರೀ ಎ. ಭೀಮಪ್ಪನಾಯಕರು.—ಶೃಂಗೇರಿ ಮಠದಲ್ಲಿ ಎಲ್ಲಾ ಜನರಿಗೂ ಒಂದೇ ತರದ ಅವಕಾಶವಿಲ್ಲ. ಸಿದ್ಧಗಂಗೆ ಸ್ವಾಮಿಗಳು ಮುರುಘರಾಜೇಂದ್ರ ಸ್ವಾಮಿಗಳು ಮುಂತಾದವರು ಎಲ್ಲಾ ಪಂಗಡದವರಿಗೂ ಎಷ್ಟೋ ಸಹಾಯ ಮಾಡುತ್ತಿದ್ದಾರೆ.

ಶ್ರೀ ಎಚ್. ಕೆ. ವೀರಣ್ಣಗೌಡರು.—ನಾನು ಇದನ್ನು ಹೇಳುವುದು ಇಂಥವಾದದಿಂದ ಕಾರ್ಯಸಾಧನೆಯಾಗುವುದಿಲ್ಲ ಎಂದು ತೋರಿಸುವ ಉದ್ದೇಶದಿಂದ ಮಾತ್ರ. ಇದನ್ನು ಸ್ಪಷ್ಟಪಡಿಸಿದ್ದೇನೆ. ಆದ್ದರಿಂದ ಸೆಲೆಕ್ಟ್ ಸಮಿತಿಯವರು ಏನು ಶಿಫಾರಸು ಮಾಡಿದ್ದಾರೋ ಅದು ಅಂಗೀಕಾರ ಯೋಗ್ಯವಾಗಿದೆ. ಒಂದು ವೇಳೆ ಮಾನ್ಯ ಸಭೆಯವರು ಶೃಂಗೇರಿ ಮಠಕ್ಕೆ ಯಾರಿಗೂ ಇಲ್ಲದಿರುವ ಕೆಲವು ರಿಯಾಯಿತಿಗಳನ್ನು ಕೊಡುವುದು ಸೂಕ್ತವಲ್ಲ ಎಂದು ಅಭಿಪ್ರಾಯಪಡುವುದಾದರೆ ಸೆಲೆಕ್ಟ್ ಸಮಿತಿಯು ತಲೆಬಾಗುವುದರಲ್ಲಿ ಸಂದೇಹವಿಲ್ಲ. ಅಂತೂ ಸೆಲೆಕ್ಟ್ ಸಮಿತಿಯು ಎಲ್ಲಾ ಅಂಶಗಳನ್ನೂ ಯೋಚನೆಮಾಡಿ ಈ ರಿಯಾಯಿತಿ ಅಗತ್ಯ ಎಂದು ಹೇಳಿರುವುದು ಮಾನ್ಯ ಸದಸ್ಯರು ಅಂಗೀಕಾರ ಮಾಡಿದರೆ ಸಂತೋಷ ಎಂದು ಮಾತ್ರ ಹೇಳಬಲ್ಲೆ.

ಎರಡನೆಯದಾಗಿ ಈ ಮಸೂದೆಯಲ್ಲಿ ವಾದ ವಿವಾದಕ್ಕೆ ಅವಕಾಶಕೊಟ್ಟಿರುವುದು ಖಾಸ್ ಜಮೀನು ವಿಚಾರ. ಅಂದರೆ ಇನಾಂದಾರರಿಗೆ ಎಷ್ಟು ಜಮೀನಿರಬೇಕು, ಯಾವ ಜಮೀನಿರಬೇಕು ಎಂಬುದು. ಕಾನೂನು ಪ್ರಕಾರ ಯಾರ್ಯಾರು ಖಾಯಮಾಗಿ ಗುತ್ತಿಗೆದಾರರಾಗಿದ್ದರೋ ಅವರಿಗೆ ಸರ್ವೆ ಸೆಟ್ಲ್‌ಮೆಂಟ್ ಆಗಿರುವ ಪ್ರಕಾರ ಹಕ್ಕು ಕೊಟ್ಟಿದೆ. ಈ ಕಾನೂನು ಪ್ರಕಾರ ಯಾವ ಜಮೀನು ಇನಾಂದಾರನ ಸ್ವಂತ ಜಮೀನು ಎಂದು ನೋಡಬೇಕಾಗಿದೆ. ಸ್ವಂತವಾಗಿಯೋ ಆಳನ್ನಿಟ್ಟುಕೊಂಡೋ ವ್ಯವಸಾಯ ಮಾಡಿಕೊಂಡು ಹೋಗುತ್ತಿದ್ದವರಿಗೆ ಅಷ್ಟು ಜಮೀನನ್ನು ಅಂಥಾ ಇನಾಂದಾರರ ಹೆಸರಿನಲ್ಲಿ ಪೂರ್ತಿಯಾಗಿ ರಿಜಿಸ್ಟರು ಮಾಡಲು ಸಾಧ್ಯವಿದೆ. ರೈತರೂ ಮಾಡದೆ, ಇನಾಂದಾರರೂ ಮಾಡದೆ ಇರುವ ಉಳಿದ ಪ್ರದೇಶವನ್ನು ಸರ್ಕಾರಕ್ಕೆ ಸೇರಿಸಬೇಕೆಂದಿದೆ. ಈ ವಿಚಾರದಲ್ಲಿ ನಮ್ಮ ಮಿತ್ರರು ಕೆಲವರು ಒಂದು ಪ್ರಶ್ನೆ ಮಾಡಬಹುದು. ಸರ್ಕಾರಿ ಗ್ರಾಮಗಳಲ್ಲಿ ಹೆಚ್ಚು ಜನ ಜಮೀನಿಟ್ಟುಕೊಂಡಿರುವವರು ತಾವೇ ಸಾಗುಮಾಡುತ್ತಿಲ್ಲ, ಆಳುಮುಖಾಂತರವೂ ಮಾಡುತ್ತಿಲ್ಲ. ಗುತ್ತಿಗೆ ಅಥವಾ ವಾರಕ್ಕೆ ಕೊಟ್ಟಿದ್ದಾರೆ. ಅಂಥ ಜಮೀನುಗಳು ಸಾಗುವಳಿ ಮಾಡುವವರಿಗೆ ಸೇರುವುದಿಲ್ಲ. ಆದರೆ ಇನಾಂ ಗ್ರಾಮಗಳಲ್ಲಿ ಮಾತ್ರ ಗುತ್ತಿಗೆ ವಾರಗಳ ಮೂಲಕ ಸಾಗುತ್ತಿರುವ ಜಮೀನುಗಳು, ಸಾಗುವಳಿ ಮಾಡುತ್ತಿರುವವರಿಗೆ ಸೇರಬೇಕು, ಇನಾಂದಾರರಿಗೆ ಸೇರಬೇಕಾಗಿಲ್ಲವೆಂದು ಹೇಳುವುದು ಯಾವ ನ್ಯಾಯ ಎಂಬುದೇ ಆ ಪ್ರಶ್ನೆ. ಇನಾಂದಾರರ ಪೈಕಿ ಹೆಂಗಸರೂ ಮಕ್ಕಳೂ ಇದ್ದಾರೆ. ಅಂಥವರಿಗೆ ಸ್ವತಃ ವ್ಯವಸಾಯ ಮಾಡುವುದಕ್ಕೆ ಸಾಧ್ಯವಿಲ್ಲದಿರಬಹುದು. ಆದ್ದರಿಂದ ಯಾವ ರೈತರು ಜಮೀನನ್ನು ಖದೀಂ ಟೆನೆಂಟ್ ಆಗಿ, ಪರ್ಮನೆಂಟ್ ಟೆನೆಂಟ್ ಆಗಿ ಸಾಗುಮಾಡುತ್ತಿದ್ದರೋ ಅದು ವಿನಾ ಉಳಿದ ಜಮೀನು ಅಂದರೆ ಗುತ್ತಿಗೆ ಅಥವ ವಾರಕ್ಕೆಕೊಟ್ಟು ಕೊಂಡಿರುವ ಜಮೀನುಗಳೆಲ್ಲ ಇನಾಂದಾರರಿಗೇ ಸೇರಬೇಕು. ಅವನ್ನು ಪೂರ್ತಿಯಾಗಿ ಅವರಿಗೇ ಖಾತೆ ಮಾಡಿಸಿಕೊಡಬೇಕು ಎಂದು ವಾದಿಸುವವರಿದ್ದಾರೆ. ಇದನ್ನು ಸ್ವಲ್ಪ ಯೋಚನೆ ಮಾಡಬೇಕು. ಪರ್ಮನೆಂಟ್ ಟೆನೆಂಟ್ಸ್ ಯಾರು ಎಂಬುದು ಗೊತ್ತಾಗಿದೆ. ಸರ್ವೆಸೆಟ್ಲ್‌ಮೆಂಟ್ ಆಗಿರುವ ಕಡೆ ಖದೀಂ ಟೆನೆಂಟ್ಸ್ ಯಾರೆಂಬುದು ನಿರ್ಧಾರವಾಗಿದೆ. ಉಳಿದಿರುವವರು ಟೆನೆಂಟ್ಸ್ ಅಟ್‌ವಿಲ್ ಆಗುತ್ತಾರೆ. ಅಂದರೆ ಜೋಡಿದಾರರು ಅಥವಾ ಇನಾಂದಾರರಲ್ಲಿ ವರ್ಷಕ್ಕೋ ಮೂರು ವರ್ಷಕ್ಕೋ ವಾರ ಅಥವ ಗುತ್ತಿಗೆಗೆ ತೆಗೆದುಕೊಂಡು ಸಾಗುಮಾಡುತ್ತಿರುವ ರೈತರು. ಇವರ ಸ್ಥಿತಿ ಗತಿ ಏನೆಂಬುದನ್ನು ಯೋಚನೆ ಮಾಡಬೇಕು. ಇದು ಮುಖ್ಯ. ಅಂಥ ಜಮೀನನ್ನು ಇನಾಂದಾರರ ಖಾಸ್ ಜಮೀನೆಂದು ಕೆಲವರು ಹೇಳಿದರೂ ಹತ್ತಾರು ವರ್ಷಗಳಿಂದಲೂ ಟೆನೆಂಟ್ಸ್ ಅಟ್‌ವಿಲ್ ಆಗಿ ಸಾಗುಮಾಡುತ್ತಿರುವ ರೈತರಿಗೆ ಜಮೀನಿಲ್ಲವೆಂದು ಹೇಳಿ ಅಂಥ ಜಮೀನೆಲ್ಲ ಇನಾಂದಾರರ ಖಾಸ್ ಜಮೀನೆಂದು ಹೇಳಲಾಗದು. ಅಂಥ ಸಾಗುವಳಿದಾರರಿಗೆ ಅವರು ಮಾಡುತ್ತಿದ್ದ ಜಮೀನಿನಲ್ಲಿ ಹಕ್ಕಿಲ್ಲ ಎಂದು ಹೇಳಿದರೆ ಈ ಕಾನೂನು ಉದ್ದೇಶವೇ ನೆರವೇರುವುದಿಲ್ಲ. ಕೆಲವು ವರ್ಷಗಳಿಂದಲೂ ಗುತ್ತಿಗೆದಾರರಾಗಿದ್ದರೂ ಖದೀಂ ಅಥವ ಪರ್ಮನೆಂಟ್ ಟೆನೆಂಟ್ಸ್‌ಗೆ ಇರುವ ಯಾವ ಹಕ್ಕೂ ಇಲ್ಲದೆ ಅತಂತ್ರರಾಗಿರುವ ರೈತರಿಗೆ ಕೆಲವು ಹಕ್ಕುಬಾಧ್ಯತೆ ದೊರಕಿಸಿಕೊಡಬೇಕು ಎಂದು ಈ ಮಸೂದೆ ತಂದಿದೆಯೇ ಹೊರತು ಅನ್ಯಥಾ ಅಲ್ಲ. ಹಾಗಿಲ್ಲದಿದ್ದರೆ ಈ ಮಸೂದೆ ಅಗತ್ಯವಿಲ್ಲ ಎಂಬುದು ಸ್ವಯಂಸ್ಪಷ್ಟವಾಗಿದೆ. ಆದ್ದರಿಂದ ಇನಾಂದಾರರಿಗೆ ತಾವು ಸಾಗುವಳಿ ಮಾಡುತ್ತಿದ್ದ ಜಮೀನನ್ನು ಮಾತ್ರ ಕೊಡುವುದು ಧರ್ಮ. ಗ್ರಾಮಕ್ಕೆಲ್ಲಾ ಅನ್ವಯಿಸುವ ತೋಪು, ಹುಲ್ಲುಗಾವಲು ಕೆರೆ, ಅಂಗಳ ಇತ್ಯಾದಿ ಸರ್ಕಾರಕ್ಕೇ ಸೇರುವುದು ನ್ಯಾಯವಾಗಿದೆ. ಕೆಲವು ಇನಾಂದಾರರರಿಗೆ ಸ್ವಲ್ಪವೂ ಖಾಸ್ ಜಮೀನು ಇಲ್ಲದಿದ್ದರೆ, ಕೆಲವು ಇನಾಂದಾರರು ಸ್ವಲ್ಪ ಜಮೀನನ್ನೂ ಸಾಗುಮಾಡದಿದ್ದರೆ, ಅಂಥವರ ಗತಿಯೇನಾಗಬೇಕು ಎಂಬ ಪ್ರಶ್ನೆ ಬರುತ್ತದೆ. ಅದಕ್ಕೆ ಸೆಲೆಕ್ಟ್ ಸಮಿತಿಯವರು ಅಂಥಾ ಇನಾಂದಾರರಿಗೆ ಕೊನೆಯ ಪಕ್ಷ ಒಂದು ಸಂಸಾರಕ್ಕಾಗುವಷ್ಟು ಜಮೀನು ಅಂದರೆ 5 ಎಕರೆ ತರಿ, ಹತ್ತು ಎಕರೆ ಖುಷ್ಕಿ ಇದ್ದೇ ಇರಬೇಕು, ಅಷ್ಟನ್ನು ಅವರ ಹೆಸರಿಗೆ ಖಾತೆಮಾಡಬೇಕು

ಎಂದು ಹೇಳಿದ್ದಾರೆ. ಆದ್ದರಿಂದ ಇನಾಂದಾರರ ವಿಚಾರದಲ್ಲಿ ಅನ್ಯಾಯಮಾಡಬೇಕೆಂಬ ಭಾವನೆ ಯಾರಿಗೂ ಇಲ್ಲ.

ಇನ್ನು ವಾದ ವಿವಾದಕ್ಕೆಡೆಕೊಟ್ಟಿರುವ ಮೂರನೆಯ ಪ್ರಶ್ನೆ. ಇನಾಂದಾರರಿಗೆ ಕೊಡುವ ಪರಿಹಾರದ ವಿಚಾರದಲ್ಲಿ ಸ್ವಲ್ಪ ಚರ್ಚೆಗೆ ಅವಕಾಶವಿದೆ. ಈಗ ನಿರ್ಧರಮಾಡಿರುವ ಪರಿಹಾರ ಮೊಬಲಗು ಸಾಲುವುದಿಲ್ಲವೆಂದು ಕೆಲವರು ಹೇಳುತ್ತಾರೆ. ಹೆಚ್ಚು ಆದಾಯವಿರುವ ಕೆಲವರಿಗೆ 15ರಷ್ಟು, ಕಡಮೆಯಿರುವವರಿಗೆ 20ರಷ್ಟು ಹೀಗೆ ಪರಿಹಾರ ಕೊಡಬೇಕೆಂದು ಗೊತ್ತು ಮಾಡಿದೆ.

ಈ ವಿಚಾರದಲ್ಲಿ ಲ್ಯಾಂಡ್ ರೆವೆನ್ಯೂ ಸಮಿತಿಯಲ್ಲಿ ಬಹಳ ಚರ್ಚೆಯಾಗಿದೆ. ಬೇರೆ ಬೇರೆ ಸಂಸ್ಥಾನಗಳಲ್ಲಿ ಇಂಥ ಕಾನೂನು ಜಾರಿಗೆ ಬಂದಿರುವಾಗ ಎಷ್ಟೆಷ್ಟು ಪರಿಹಾರ ಕೊಟ್ಟಿದ್ದಾರೆ. ಎಂಬ ಅಂಕಿ ಅಂಶಗಳನ್ನು ಸಂಗ್ರಹಿಸಿ ಈ ದೇಶದ ಪರಿಸ್ಥಿತಿಯನ್ನು ಯೋಚನೆ ಮಾಡಿ ಯಾರ್ಯಾರಿಗೆ ಎಷ್ಟೆಷ್ಟು ಪರಿಹಾರ ಕೊಡಬೇಕೆಂದು ಸಲಹೆಮಾಡಿದ್ದಾರೆಯೋ ಅದು ಸರ್ವಸಮ್ಮತವಾಗಿದೆಯೆಂಬುದೇ ನನ್ನ ಅಭಿಪ್ರಾಯ. ಈಗ ಸೂಚಿತವಾಗಿರುವ ಪರಿಹಾರದ ಮೊಬಲಗಿನಿಂದ ಸರ್ಕಾರಕ್ಕೂ ಭಾರವಾಗುವುದಿಲ್ಲ, ಇನಾಂದಾರರಿಗೂ ತೊಂದರೆ ಯಾಗುವುದಿಲ್ಲ. ಈ ದಿವಸ ಚರ್ಚೆಗೆ ಅವಕಾಶವಾಗಿರುವ ಈ ಮೂರು ಪ್ರಶ್ನೆಗಳೂ ಈ ಮಸೂದೆಯನ್ನು ರಚಿಸಿದವರ ಗಮನದಲ್ಲಾಗಲಿ ಅಥವ ಸೆಲೆಕ್ಟ್ ಸಮಿತಿಯವರ ಗಮನದಲ್ಲಾಗಲಿ ಇಲ್ಲದೆ ಇರಲಿಲ್ಲ. ಭೂ ಸುಧಾರಣಾ ಸಮಿತಿಯಲ್ಲಿ ಮೂಲಭೂತವಾದ ಸಮಸ್ತ ಹಕ್ಕುಗಳನ್ನೂ, ಎಲ್ಲಾ ಅಂಶಗಳನ್ನೂ ಸದಸ್ಯರು ಕೂಲಂಕಷವಾಗಿ ಯೋಚನೆಮಾಡಿ ಶಿಫಾರ್ಸುಮಾಡಿದ್ದಾರೆ. ಅದರ ಆಧಾರದ ಮೇಲೆಯೇ ಈ ಮಸೂದೆ ಬಂದಿದೆ. ಅದರ ಮೇಲೆ ಸೆಲೆಕ್ಟ್ ಸಮಿತಿಯವರು ಸ್ವಲ್ಪ ತಿದ್ದುಪಡಿಮಾಡಿ ಎಲ್ಲಿ ಈ ಕಾನೂನಿನಿಂದ ಅನ್ಯಾಯ ತೊಂದರೆ ಎದ್ದು ಕಾಣುತ್ತೋ ಅಲ್ಲಿ ಅದನ್ನು ಸ್ವಲ್ಪ ಮಟ್ಟಿಗೆ ಕಡಮೆಮಾಡಿ ವರದಿಯನ್ನು ಸಭೆಯವರಿಗೆ ಒಪ್ಪಿಸಿದ್ದಾರೆ. ಈ ಅಂಶವನ್ನು ಮನಸ್ಸಿನಲ್ಲಿಟ್ಟುಕೊಂಡು ಯಾವ ಉದ್ರೇಕಕ್ಕೂ ಅವಕಾಶಕೊಡದೆ ಅನವಶ್ಯಕವಾದ ಕಾರಣಗಳಿಂದ ವಾದಿಸುವುದಕ್ಕೆ ಪ್ರಯತ್ನಮಾಡದೆ, ಪರಸ್ಪರ ಆರೋಪಣೆಮಾಡದೆ ತತ್ವ ದೃಷ್ಟಿಯಿಂದ ಈ ಮಸೂದೆಗೆ ಒಪ್ಪಿಗೆ ಕೊಡಬೇಕಾಗಿದೆ. ಇವರಲ್ಲಿ ಅಡಗಿರುವ ಮೂಲಭೂತ ತತ್ವದ ವಿಚಾರದಲ್ಲಿ ಒಂದುಮಾತು. ಒಂದು ಸಂಸ್ಥಾನದಲ್ಲಿ ಇನ್ನೊಂದು ಸಂಸ್ಥಾನ ಒಂದು ದೊಡ್ಡಪೆಟ್ಟಿಗೆಯಲ್ಲಿ ಇನ್ನೊಂದು ಸಣ್ಣಪೆಟ್ಟಿಗೆ ಇರಬಾರದು, ಒಂದೇ ಪೆಟ್ಟಿಗೆ ಇರಬೇಕು, ಒಂದೇ ಬೀಗದ ಕೈ ಇರಬೇಕು, ಭೂಸ್ವಾಮ್ಯ ಸರ್ಕಾರ ಅಥವಾ ಸಂಸ್ಥಾನಕ್ಕೆ ಸೇರಿರಬೇಕು, ಇನಾಂದಾರಿಗೂ ಕೂಡದು ಎಂಬುದೇ ಇದರಲ್ಲಿರುವ ಮೂಲಭೂತತತ್ವ. ಈ ತತ್ವಕ್ಕೆ ಲೋಪಬಾರದ ರೀತಿಯಲ್ಲಿ ಮಾನ್ಯ ಸಭಿಕರು ಆಲೋಚನೆಮಾಡಿ ಯಾವ ಒಗೆಯ ರಿಯಾಯಿತಿ ಸೂಚಿಸಿದರೂ ಅದಕ್ಕೆ ಅಭ್ಯಂತರವಿಲ್ಲ. ಹಾಗೆ ಅನುಕೂಲಪಡಿಸಿಕೊಡುವುದಕ್ಕೆ ಅಡ್ಡಿಯಿಲ್ಲ ಎಂದು ಹೇಳುತ್ತೇನೆ.

*Janab SYED ABDUR RAHMAN (Chikmagalur *cum* Shimoga—Muslim).—Sir, this is a very important piece of legislation which has been placed before this House for consideration. As is evident, the step that has been contemplated by the Select Committee has been engaging the attention of all the legislators in Mysore State for over two decades and it is as a result of a resolution which was passed on the floor of the House years ago that a Committee was constituted for the purpose of drafting a measure such as this and it is as a result of that agitation the Select Committee has given its opinion with regard to the Bill that was presented before the House by the Government. In the first instance, let me offer my heartfelt felicitations and congratulations to the Government for having placed such a piece of legislation before this House, and to the Hon'ble Minister in particular.

When we passed a resolution of this nature in the last Legislative Assembly we had in our mind the abolition of all the inam villages in Mysore State and when we did so, we did not speak with any amount of reservation whatever. But I feel that when we expressed those views, I had a doubt in my mind whether we had not excluded religious institutions which have been the subject matter of discussion before this House to-day.

Undoubtedly, this is a measure which is in keeping with the needs of the times. The country has witnessed lots of such changes in India. The first step that was taken in this direction by the Government of India was to do away with all the zamindari systems and to give them compensation. Several such measures have been adopted by the Government of India ever since the dawn of independence. We have seen how some of the zamindars in Patna and Bihar protested against such a measure, and having got a judgment from the Supreme Court that this was a matter of fundamental rights, the matter came up before the Parliament of India. The Parliament of India amended the measure and afterwards it was held that it was quite in accordance with the provisions of the Constitution. It is but certainly right that this piece of legislation has been brought before the House. But I have some doubts I would like to have

(JANAB SYED ABDUR RAHMAN)

some clarification in respect of them. With regard to Sringeri Mutt, certain concessions have been given and I feel that it is but right that some concessions should have been given. If we concede the principle of giving up religious inams, then Sringeri will come within the purview of such a decision and if concession is granted to Sringeri Mutt, then certainly we will have to consider whether other religious institutions in the State are not also entitled to similar concessions. Clause 21 contemplates that all religious, charitable and educational institutions come within the purview of this Bill. If so, may I know how many such charitable, educational and religious institutions are there apart from Sringeri Mutt? That is also a point regarding which I would like to have some clarification.

There are several other service inams: for example mosque, temple or church for that matter. If any such institution has got certain acres of land granted for purposes of administration and carrying on the service connected thereto, I want to know whether Government contemplate taking action with regard to such inams also, whether clause 21 covers such service inams too. I think that clause 21 in this Bill does not contemplate doing away with such service inams. These inams comprise of a very small area of the land in the State and I feel certain that they do not come within the purview of this Bill.

Apart from this, I would like to know also that when you vest these rights in the Government, how is the collection of assessment to be administered? Will these inams be administered by Government or will you leave them to the inamdars themselves to carry on the administration? For example, take a mosque; about 30 or 40 acres are given for the purpose of its administration. I take for instance the Darga in Ajmir. In Ajmir nearly two years ago the Government of India considered the question of taking over some of the administrative aspects of the particular Darga. The question came up whether the revenues of that particular Darga should be administered by a committee appointed for the purpose or whether the Government should have a voice in it. After a protest was registered by the Members of the Committee relating to the Darga, the Government of India came to the conclusion that this was a sphere in which they should not interfere and they thought fit to have a committee appointed for carrying on the administration of the particular Darga. Administration of the funds collected is being carried on by the committee constituted for the very purpose without any interference on the part of Government.

Where it is a charitable institution, a religious institution, whether some such thing for the administration of the religious institutions would be adopted or will these religious institutions be completely left free, is a thing on which we would like to be enlightened. The legislation is certainly to be welcomed. We ourselves are the sponsors of this Bill, we ourselves advocated that some such legislation should come, and it is in response to that this legislation has come for the consideration of this Hon'ble House. I give my whole-hearted support to this Bill.

ಶ್ರೀ ಎ. ಜಿ. ಬಂದೀಗೌಡರು (ಮಂಡ್ಯ ಜಿಲ್ಲೆ).—ಸ್ವಾಮಿ, ಈ ವಿಚಾರದಲ್ಲಿ ಈಗಾಗಲೇ ಮಾನ್ಯ ಸದಸ್ಯರುಗಳು ಎಷ್ಟು ಜನ ಮಾತನಾಡಬೇಕೋ ಅದಕ್ಕಿಂತ ಹೆಚ್ಚಾಗಿಯೇ ಮಾತನಾಡಿದ್ದಾರೆಂದು ನಾನು ಭಾವಿಸುತ್ತೇನೆ. ಆದಾಗ್ಯೂ ಇದು ಬಹಳ ಮುಖ್ಯವಾದ ಮಸೂದೆಯೆಂದು ಭಾವಿಸಿ ಪ್ರತಿಯೊಬ್ಬರೂ ತಮ್ಮ ತಮ್ಮ ಅಭಿಪ್ರಾಯವನ್ನು ಖಚಿತವಾಗಿ ಸೂಚಿಸುವುದು ನ್ಯಾಯವೆಂಬ ಭಾವನೆಯಿಂದ ನನ್ನ ಅಭಿಪ್ರಾಯವನ್ನು ಸೂಚಿಸಲು ನಿಂತಿದ್ದೇನೆ.

ನಮ್ಮ ಇಂಡಿಯಾ ದೇಶವನ್ನು ನೋಡುವುದಾದರೆ, ಈಗ 4-6 ವರ್ಷಗಳಿಂದ ಹಿಮಾಚಲದಿಂದ ಕನ್ಯಾಕುಮಾರಿಯವರೆಗೂ ಒಂದು ದೊಡ್ಡ ಕ್ರಾಂತಿಯೆದ್ದಿದೆಯೆಂದು ಹೇಳಬೇಕಾಗಿದೆ. ಅದಕ್ಕನುಸಾರವಾಗಿಯೇ ನಾವು ನಮ್ಮ ಮೈಸೂರು ದೇಶದಲ್ಲಿ ಜಮೀನಿಗೆ ಸಂಬಂಧಪಟ್ಟಂತೆ ಕೆಲವು ಸುಧಾರಣೆಗಳನ್ನು ಮಾಡಬೇಕು. ಹಾಗೆ ಮಾಡತಕ್ಕದ್ದು ಅತ್ಯಗತ್ಯವೆಂದು ಹೇಳಿ ನಮ್ಮ ಸರ್ಕಾರದವರು ಕೆಲವು ವಿಷಯಗಳನ್ನು ಕ್ರೋಡೀಕರಿಸಿ, ಒಂದು ಕಮಿಟಿಯನ್ನು ಮಾಡಿ ಆ ಕಮಿಟಿಗೆ ಅವುಗಳನ್ನು ಪರಿಶೀಲನೆ ಬಗ್ಗೆ ಕಳುಹಿಸಿಕೊಟ್ಟರು. ಹಾಗೆ ಕಳುಹಿಸಿದ ವಿಷಯಗಳ ಪೈಕಿ ಇನಾಂ ಪದ್ಧತಿ ಇರಬೇಕೇ ಇಲ್ಲವೇ ಎಂಬುದನ್ನೂ ಸೇರಿಸಿ, ಅದರ ಬಗ್ಗೆ ಕಮಿಟಿಯವರು ಸಲಹೆಗಳನ್ನು ಕೊಡಬಹುದೆಂದು ಸೂಚಿಸಿದ್ದರು. ಹಾಗೆ ಇನಾಂ ಪದ್ಧತಿಯನ್ನು ತೆಗೆದುಹಾಕಬೇಕೆಂದು ಹೇಳುವಾಗ ಶೃಂಗೇರಿ ಮತ್ತು ಯಳಂದೂರು ಜಹಗೀರಿಗಳಿಗೂ ಅನ್ವಯಿಸುವ ಹಾಗೆ ಅವರು ಕಮಿಟಿಗೆ ಕಳು

ಹಿಸಿಕೊಟ್ಟಿದ್ದಾರೆಂಬುದನ್ನು ಮಾನ್ಯ ಸದಸ್ಯರು ಗಮನಿಸಬೇಕು. ನಾನೂ ಒಬ್ಬ ಆ ಸಮಿತಿಯ ಸದಸ್ಯನಾಗಿ ಚರ್ಚೆಮಾಡಿರುವುದರಿಂದ ಈ ವಿಷಯಗಳನ್ನೆಲ್ಲಾ ವಿಶದವಾಗಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆಗ ಚರ್ಚೆಗೆ ಬಂದಂಥ 7 ವಿಷಯಗಳ ಪೈಕಿ, ಈ ಇನಾಂ ರದ್ದಿಯಾತಿಯ ವಿಚಾರದಲ್ಲಿ ವಿಪುಲವಾದ ಚರ್ಚೆ ನಡೆದು ತಮ್ಮ ಆಖೈರ್ ಅಭಿಪ್ರಾಯವನ್ನು ಕಳುಹಿಸಿಕೊಟ್ಟಿದ್ದಾರೆ. ಆ ಕಮಿಟಿಯವರು ಈ ವಿಚಾರದಲ್ಲಿ ಸ್ವಲ್ಪ ಹೆಚ್ಚುಕಡಿಮೆ ಏಕಾಭಿಪ್ರಾಯವನ್ನು ಸೂಚಿಸಿದ್ದಾರೆಂದು ನನಗೆ ಜ್ಞಾಪಕ. ಕೆಲವು ವಿಷಯಗಳಲ್ಲಿ, ಅಂದರೆ ಇನಾಂದಾರರಿಗೆ ಪರಿಹಾರಕೊಡುವ ವಿಷಯದಲ್ಲಿ ಸ್ವಲ್ಪ ಮಟ್ಟಿನ ಭಿನ್ನಾಭಿಪ್ರಾಯವಿತ್ತು. ಆದರೆ, ಇನಾಂ ಪದ್ಧತಿ ಇರಬೇಕೇ ಅಥವಾ ಸಂಪೂರ್ಣವಾಗಿ ಹೋಗಬೇಕೇ ಎಂಬ ವಿಚಾರದಲ್ಲಿ ಕಮಿಟಿಯವರು ತಮ್ಮ ವರದಿಯಲ್ಲಿ ಒಮ್ಮತಾಭಿಪ್ರಾಯ ಕೊಟ್ಟಿರುತ್ತಾರೆ.

ಇದು ಒಂದು ಘಟ್ಟ. ಇದಾದನಂತರ ಈ ಸಭೆಯು ಸೆಲೆಕ್ಟ್ ಕಮಿಟಿಮಾಡಿ ಅದಕ್ಕೆ ಈ ಅಭಿಪ್ರಾಯವನ್ನು ಪರಿಶೀಲನೆಯ ಬಗ್ಗೆ ಕಳುಹಿಸಿಕೊಟ್ಟಿತು. ಆಗಲೂ ಕೂಡ ಹೀಗೆ ಸೆಲೆಕ್ಟ್ ಕಮಿಟಿಯವರು ಪರಿಶೀಲನೆಮಾಡುವಾಗ ಶೃಂಗೇರಿ ಮತ್ತು ಯಳಂದೂರು ಜಹಗೀರಿಗಳನ್ನು ಗಮನಕ್ಕೆ ತೆಗೆದುಕೊಂಡು ಅದಕ್ಕೆ ಸಂಬಂಧಪಟ್ಟ ಹಾಗೂ ತಮ್ಮ ಸಲಹೆಗಳನ್ನು ಹೇಳಿದ್ದಾರೆ. ಸಭೆಯ ಸೂಚನೆಗೆ ಅನುಸಾರವಾಗಿ ಈಗ ಸೆಲೆಕ್ಟ್ ಸಮಿತಿಯವರು ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಈಗ ಆ ವರದಿ ನಮ್ಮ ಮುಂದೆ ಪರ್ಯಾಲೋಚನೆಗಿದೆ.

ಈಗ ಇದರ ಪರವಾಗಿ ಮಾತನಾಡುತ್ತಾ, ಇದನ್ನನುಮೋದಿಸುತ್ತಾ, ಇದನ್ನು ವಿರೋಧಿಸಿದ ಮಾನ್ಯ ಸ್ನೇಹಿತರುಗಳಿಗೆ ಜವಾಬಾಗಿ ಕೆಲವು ಮಾತುಗಳನ್ನು ಹೇಳಬೇಕೆಂದು ನಿಂತಿದ್ದೇನೆ.

ಸ್ವಾಮಿ, ಈಗ ನಾನು ಈ ಸಭೆಯಲ್ಲಿ ಆಗಿರತಕ್ಕ ಚರ್ಚೆಯನ್ನು ನೋಡಿದ್ದರಲ್ಲಿ ಒಂದು ಅಭಿಪ್ರಾಯ ಎದ್ದುಕಾಣುತ್ತದೆ. ಏನೆಂದರೆ, ಇನಾಂ ಪದ್ಧತಿ ಇರಕೂಡದು, ಅದು ಹೋಗಬೇಕು ಎಂಬುದು ಈ ಸಭೆಯವರ ಖಚಿತ ಅಭಿಪ್ರಾಯವಾಗಿದೆ. ಆದ್ದರಿಂದ ಇನ್ನು ಆ ವಿಷಯಕ್ಕೆ ನಾನು ಹೋಗುವುದಿಲ್ಲ. ನಮ್ಮ ಇಂಡಿಯಾದೇಶದಲ್ಲಿ ಜಮೀನ್ದಾರಿ ಪದ್ಧತಿ ಹೋಗಬೇಕೆಂದು ಎಲ್ಲಾ ಕಡೆಯಲ್ಲೂ agitation ಬಂದಂತೆಯೇ ಮೈಸೂರು ದೇಶದಲ್ಲಿಯೂ ಬಂದಿದೆ. ನಮ್ಮ ಮಿತ್ರರೂ ಅದನ್ನು ಅನುಮೋದಿಸುತ್ತಾರೆ. ಆದ್ದರಿಂದ ಅದರ ಮೇಲೆ ಹೆಚ್ಚಿಗೆ ಕಾಲ ತೆಗೆದುಕೊಳ್ಳುವುದಿಲ್ಲ. ನಾವೂ ಈ ಸಂಬಂಧದಲ್ಲಿ ಎಲ್ಲಾ ವಿಷಯಗಳನ್ನೂ ಗಮನಕ್ಕೆ ತೆಗೆದುಕೊಂಡಿದ್ದೇವೆ. ಈಗ ನಮ್ಮ ಮಾನ್ಯ ಮಿತ್ರರು ನೋಡಿರುವಹಾಗೆ ಕಾಶ್ಮೀರದಲ್ಲಿ ಅಲ್ಲಿನ ನಾಯಕರು (Leader) ಮಾಡಿರತಕ್ಕ ಭಾಷಣದಲ್ಲಿ ಏನು/ಹೇಳಿದ್ದಾರೆಂಬುದನ್ನು ನಾವು ಗಮನಿಸಬೇಕು. ಅಲ್ಲಿ ಅವರು ಜಮೀನ್ದಾರಿ ಪದ್ಧತಿಯನ್ನು ಆಗಲೇ ತೆಗೆದುಹಾಕಿದ್ದಾರೆ. ಈಗ ಆ ಜಮೀನ್ದಾರರುಗಳಿಗೆ ಪರಿಹಾರ ಕೊಡಬೇಕೇ ಬೇಡವೇ ಎಂಬ ಪ್ರಶ್ನೆಯನ್ನು ತೆಗೆದುಕೊಂಡಿದ್ದಾರೆ. ಅದರ ಬಗ್ಗೆ ಅವರು ತಮ್ಮ ಅಭಿಪ್ರಾಯವೇನೆಂಬದನ್ನು ವ್ಯಕ್ತಪಡಿಸುವವರಾಗಿದ್ದಾರೆ. ಯಾವುದೋ ಒಂದು ಕಾಲದಲ್ಲಿ ಯಾರುಯಾರಿಗೋ ಒಂದು ಜಮೀನು ಕೊಟ್ಟಿದ್ದಕ್ಕಾಗಿ, ಅವರು ಮಾಡಿದ ತಪ್ಪಿಗಾಗಿ ನಾವಿಂದು ಪರಿಹಾರವನ್ನು ಕೊಡುವುದು ಸರಿಯೇ, ಅದೂ ಸರ್ಕಾರದ ಬೊಕ್ಕಸದಿಂದ ಕೊಡುವುದು ನ್ಯಾಯವೇ, ಅದರಲ್ಲೂ ಅವರು ಸಾವಿರಾರು ವರ್ಷಗಳಿಂದ ಸುಖಹೊಂದಿದ್ದಾರೆ, ಲಾಭಪಡೆದಿದ್ದಾರೆ, ಅಂಥಾದ್ದರಲ್ಲಿ ಸರ್ಕಾರದವರು ತಮ್ಮ ಬೊಕ್ಕಸದಿಂದ ಕೊಡುವುದು ಸರಿಯೇ ಎಂದು ವಾದ ಹೂಡಿದ್ದಾರೆ.

ಹೊರಗಡೆ ಇಷ್ಟೆಲ್ಲಾ ಇದ್ದರೂ ನಮ್ಮ ಗುಂಡಪ್ಪಗೌಡರ ಕಮಿಟಿಯಲ್ಲಾಗಲೀ ಅಥವಾ ಸೆಲೆಕ್ಟ್ ಕಮಿಟಿಯಲ್ಲಾಗಲೀ ಆ ರೀತಿ ಹೋಗಿಲ್ಲ. ನಾವು ಉದಾರವಾಗಿ ಇನಾಂದಾರರುಗಳು ಬಹಳ ಕಾಲದಿಂದ ಬಂದ ತಮ್ಮ ಹಕ್ಕುಬಾಧ್ಯತೆಗಳನ್ನು ಕಳೆದುಕೊಳ್ಳುವ ಕಾಲದಲ್ಲಿ ಪರಿಹಾರವನ್ನು ಕೊಡದೆ ಅವನ್ನು ಕಿತ್ತುಕೊಳ್ಳುವುದು ಸರಿಯಾದ ಮಾರ್ಗವಲ್ಲವೆಂದು ಹೇಳಿ ಬಹಳ ಉದಾರವಾಗಿ ವರ್ತಿಸಿದ್ದೇವೆಂದು ಹೇಳಬಹುದು. ಅದೇ ರೀತಿ ನಾವು ಶಿಫಾರಸು ಕೂಡ ಮಾಡಿದ್ದೇವೆ. ಆದ್ದರಿಂದ ಇತರ ದೇಶದ ಕೆಲವು ಉಗ್ರಗಾಮಿಗಳ ಮಾರ್ಗವನ್ನನುಸರಿಸದೆ ನ್ಯಾಯರೀತಿಯಲ್ಲಿ ನಮ್ಮ fundamental rights ಏನಿದೆ,—ಯಾವುದಾದರೂ ಒಂದು ಬಹಳ ದಿವಸಗಳಿಂದ ಅನುಭವಿಸಿಕೊಂಡು ಬಂದಿರುವ ಹಕ್ಕನ್ನು ತೆಗೆದುಕೊಳ್ಳಬೇಕಾದರೆ ಪರಿಹಾರವನ್ನು ಕೊಡಬೇಕೆಂದು ಹೇಳಿದ್ದಾರೆಯೋ ಅದಕ್ಕನುಸಾರವಾಗಿ ಈಗ ಪರಿಹಾರವನ್ನು ಸೂಚಿಸಿದ್ದೇವೆ. ಅಷ್ಟೇ ಅಲ್ಲದೆ ಇನಾಂದಾರರುಗಳಿಗೆ 'ಖಾಸ್' ಜಮೀನುಗಳಿದ್ದರೆ ಅವನ್ನೂ ಯೋಚನೆಮಾಡಿ, ಅಂಥ ಜಮೀನುಗಳನ್ನು ಕೊಡುವುದು ನ್ಯಾಯವೆಂದು ಹೇಳಿದ್ದೇವೆ.

ಆದ್ದರಿಂದ ಇನಾಂ ಪದ್ಧತಿ ಹೋಗಬೇಕೆಂದು ತಂದಿರತಕ್ಕ ಬಿಲ್ಲಿನಿಂದ ಈ ದಿವಸ ನಮ್ಮ ದೇಶದಲ್ಲಿ ಯಾರೂ ಭಯಪಡಬೇಕಾಗಿಲ್ಲ. ನನ್ನ ವಿಷಯವನ್ನೇ ಹೇಳುವುದಾದರೆ, ನಾನು ಒಂದು ವಿಧದಲ್ಲಿ ಒಬ್ಬ ದೊಡ್ಡ ಇನಾಂದಾರನ ಕೈಕೆಳಗಿನ ರೈತನೂ ಆಗಿದ್ದೇನೆ. ಇನ್ನೊಂದು ವಿಧದಲ್ಲಿ ಒಂದು ಇನಾಂತಿಯನ್ನು ಹೊಂದಿರುವ ಸಣ್ಣ ಇನಾಂದಾರರ ಮನೆಗೆ ಸೇರಿದವನೂ ಆಗಿದ್ದೇನೆ. ಆದ್ದರಿಂದ ಇಬ್ಬರನ್ನೂ ದೃಷ್ಟಿಯಲ್ಲಿಟ್ಟುಕೊಂಡು ಹೇಳುವುದಾದರೆ, ಇನಾಂ ಪದ್ಧತಿ ಹೋಗಬೇಕಾದ್ದು ನ್ಯಾಯವೆಂಬುದು ನನ್ನ ಖಚಿತಾಭಿಪ್ರಾಯ. ಸಮಿತಿಯ ಮುಂದೆಯೂ ನಾನು ಇದೇ ಅಭಿಪ್ರಾಯವನ್ನು ಹೇಳಿದ್ದೇನೆ. ಇಲ್ಲಿಯೂ ಅದನ್ನೇ ಹೇಳುವವನಾಗಿದ್ದೇನೆ. ಅಲ್ಲದೆ ಇನಾಂದಾರರುಗಳಿಗೆ ತಕ್ಕ ಪ್ರತಿಫಲವನ್ನು ಕೂಡ ಕೊಡುತ್ತಿದ್ದೇವೆ. ಯಾರಿಗೂ ಹೆಚ್ಚಿನ ತೊಂದರೆಯಿಲ್ಲ. ಅದಕ್ಕೆ ಬದಲು ಈ ಪದ್ಧತಿ ಇಟ್ಟುಕೊಂಡರೆ ಏನು ತೊಂದರೆಯಾಗುತ್ತದೆಂದು ಹೇಳುವುದಕ್ಕೆ ಹೊರಟರೆ ಎಷ್ಟೋ ಹೇಳಬಹುದು. ಎಲ್ಲರಿಗೂ ಅದು ಗೊತ್ತೇ ಇದೆ. ಆದ್ದರಿಂದ ಆ ವಿಷಯಕ್ಕೆ ಹೋಗದೆ, ಇನಾಂ ಪದ್ಧತಿ ಹೋಗಬೇಕೆಂಬುದು ನನ್ನ ಖಚಿತ ಅಭಿಪ್ರಾಯವೆಂದು ಹೇಳಬಯಸುತ್ತೇನೆ. ಅದಕ್ಕೆ ಕೊಡತಕ್ಕ ಪರಿಹಾರವೂ ಸರಿಯಾಗಿದೆಯೆಂದು ಹೇಳುತ್ತೇನೆ.

ಇದಾದ ಮೇಲೆ, ಒಂದು ಹೊಸ ವಿಷಯ ಈಗ ಚರ್ಚೆಗೆ ಬಂದಿದೆ; ಶೃಂಗೇರಿಗೆ ಸಂಬಂಧಪಟ್ಟ ವಿಷಯ. ಇದರ ಮೇಲೆ ಈಗ ವಿಪುಲವಾದ ಚರ್ಚೆ ನಡೆದು ಅನೇಕ ಭಿನ್ನಾಭಿಪ್ರಾಯಗಳು ಸೂಚಿತವಾಗಿವೆ. ಇದರ ಬಗ್ಗೆ ನನ್ನ ಅಭಿಪ್ರಾಯವನ್ನೂ ಸೂಚಿಸಬಯಸುತ್ತೇನೆ.

ನಾನು ಮಠಕ್ಕೆ ವ್ಯತಿರಿಕ್ತವಾಗಿಲ್ಲ. ಮಠದ ಮೇಲೆ ನನಗೆ ಬಹಳ ಅಭಿಮಾನ. ನಾನು ಅದನ್ನು ನೋಡಿಲ್ಲ, ಅದರ ವಿಷಯ ಕೇಳಿದ್ದೇನೆ; ಆದರೂ ನನಗೆ ಅಭಿಮಾನವಿದೆ. ಕೆಲವರು, ಅದ್ವೈತ ವೇದಾಂತವನ್ನು ಪ್ರಚಾರಮಾಡುತ್ತಿರುವ ಈ ಮಠ ಇಂಡಿಯಾದೇಶಕ್ಕೆಲ್ಲಾ ಸೇರುತ್ತದೆ, ಇದು ನ್ಯಾಷನಲ್ ಮಠ ಎಂದು ವಾದಿಸಿದ್ದಾರೆ. ಇನ್ನು ಕೆಲವರು ನ್ಯಾಷನಲ್ ಎಂಬ ಪದ ಇದಕ್ಕನ್ವಯಿ

(ಶ್ರೀ ಎ. ಜಿ. ಬಂದೀಗೌಡರು)

ಸುವುದಿಲ್ಲ, ಅನ್ವಯಿಸುವುದು ಬಹಳ ಕಷ್ಟ ಎಂದು ವಾದಮಾಡಿದ್ದಾರೆ. ಏನೇ ಇರಲಿ, ಈ ಮಠ ಅದ್ವೈತ ತತ್ವವನ್ನು ಪ್ರಪಂಚಕ್ಕೇ ಬೀರುತ್ತಿದೆ ಎಂದರೆ ಸಂತೋಷ, ಇನ್ನೂ ಹೆಚ್ಚು ಬೀರಲಿ! ಇದು ಪ್ರಪಂಚಕ್ಕೆಲ್ಲ ಪ್ರಶಸ್ತವಾದ ಮತ್ತು ದೊಡ್ಡ ಮಠವಾಗಲೆಂದು ನಾನು ಆಶಿಸುತ್ತೇನೆ. ಇದು ನ್ಯಾಷನಲ್ ಹೌದೋ ಅಲ್ಲವೋ ಎಂಬುದನ್ನು ನಾನು ಚರ್ಚಿಸುವುದಕ್ಕೆ ಹೋಗುವುದಿಲ್ಲ. ಇದು ನ್ಯಾಷನಲ್ ಆಗಿಲ್ಲದಿದ್ದರೆ ಆಗಲೆಂದು ನನ್ನ ಆಸೆ. ನ್ಯಾಷನಲ್ ಜೊತೆಗೆ ಇಂಟರ್ ನ್ಯಾಷನಲ್ ಆಗಲೆಂದು ಆಶಿಸಿ ಈ ಮಠದ ಮೇಲೆ ನನಗಿರುವ ಭಕ್ತಿಯನ್ನು ತೋರಿಸಿ ಈ ಭಕ್ತಿಗೆ ಕುಂದು ಬಾರದಂತೆ ಕೆಲವು ಸಲಹೆಗಳನ್ನು ಕೊಡುತ್ತೇನೆ.

ಇನ್ನು ಕೆಲವರು ಶೃಂಗೇರಿ ಮಠವನ್ನು ವ್ಯಾಟಿಕಾನ್ ಸಿಟಿಗೆ ಹೋಲಿಸಿದರು. ನಾನು ಮೊನ್ನೆ ಪರದೇಶಗಳಿಗೆ ಹೋಗಿದ್ದಾಗ ಈ ವ್ಯಾಟಿಕಾನ್ ಸಿಟಿಯನ್ನು ನೋಡಿದ್ದೇನೆ. ಜನಾಬ್ ಮಹಮದ್ ಷರೀಫ್‌ರವರು ಹೇಳಿದ ಅಭಿಪ್ರಾಯದಲ್ಲಿ ಇದಕ್ಕೂ ಇನಾಮ್ ಇದೆಯೆ ಇಲ್ಲವೆ ಎಂಬ ವಿಷಯವನ್ನು ತೆಗೆದುಕೊಂಡು ನಾನು ಚರ್ಚೆ ಮಾಡುವುದಿಲ್ಲ. ಒಟ್ಟಿನಲ್ಲಿ ವ್ಯಾಟಿಕಾನ್ ಸಿಟಿಯನ್ನು ಶೃಂಗೇರಿ ಮಠಕ್ಕೆ ಹೋಲಿಸುವುದು ಸರಿಯಿಲ್ಲವೆಂದು ಮಾತ್ರ ಹೇಳುತ್ತೇನೆ. ಕ್ರಿಶ್ಚಿಯನ್ ಸ್ನೇಹಿತರು ವ್ಯಾಟಿಕಾನ್‌ಸಿಟಿಗೆ ಎಷ್ಟು ಪ್ರಾಶಸ್ತ್ಯ ಕೊಟ್ಟಿದ್ದಾರೋ ಅಷ್ಟೇ ಅಥವಾ ಅದಕ್ಕಿಂತ ಹೆಚ್ಚು ಪ್ರಾಶಸ್ತ್ಯವನ್ನೇ ನಾವು ಶೃಂಗೇರಿ ಮಠಕ್ಕೆ ಕೊಡೋಣ. ಆದರೆ ವ್ಯಾಟಿಕಾನ್ ಸಿಟಿಗಿರುವ ಇನಾಮ್‌ಗೂ ಶೃಂಗೇರಿ ಮಠಕ್ಕಿರುವ ಇನಾಮ್‌ಗೂ ಹೋಲಿಸಿ, ಅದಕ್ಕಿರುವಷ್ಟೆ ಇನಾಮ್ ಇದಕ್ಕೂ ಕೊಟ್ಟರೆ ಇದಕ್ಕೆ ಹೆಚ್ಚು ಪ್ರಾಶಸ್ತ್ಯ ಬರುತ್ತದೆ ಎಂದು ಹೋಲಿಸುವುದು ಬೇಡ. ಪ್ರಾಶಸ್ತ್ಯ ಮತ್ತು ಗೌರವದ ವಿಚಾರದಲ್ಲಿ ವ್ಯಾಟಿಕಾನ್ ಸಿಟಿಗಿರುವ ಗೌರವ ನಮ್ಮ ಶೃಂಗೇರಿ ಮಠಕ್ಕೂ ಇರಲಿ ಎಂದು ಹೇಳೋಣ. ಆದರೆ ಇದೂ ಒಂದು ವ್ಯಾಟಿಕಾನ್‌ಸಿಟಿ ಎಂದು ಇನಾಂ ಸಂಬಂಧದಲ್ಲಿ ಹೇಳುವುದಕ್ಕಾಗುವುದಿಲ್ಲ.

ನಾವು ಈ ವಿಷಯವನ್ನು ಎರಡು ಭಾಗವನ್ನಾಗಿ ಮಾಡಿಕೊಳ್ಳಬೇಕು. ಮಠಕ್ಕಿರುವ ಗೌರವ ಮತ್ತು ಇದಕ್ಕಿರುವ ಹಟ್ಟುವಳಿ ಮತ್ತು ಸ್ವಾಮ್ಯಗಳಿಗಿರುವ ಗೌರವ. ಈ ಮಠಕ್ಕೆ ಅದ್ವೈತ ತತ್ವವನ್ನು ಬೀರುವುದಕ್ಕಿರುವ ಅನುಕೂಲಕ್ಕೆ ಈ ಮಸೂದೆಯಿಂದ ಚ್ಯುತಿ ಬರುತ್ತದೆಯೆ ಅಥವಾ ಕಡಿಮೆಯಾಗುತ್ತದೆಯೆ ಎಂಬುದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ಇದು ಆಧ್ಯಾತ್ಮ ವಿಚಾರಕ್ಕೆ ಸಂಬಂಧಪಟ್ಟದ್ದು, ನಮಗೆ ಬೇಕಾದದ್ದು. ನಾವು ಇದರ ಗೌರವವನ್ನು ಕಾಪಾಡಬೇಕು. ಈ ಮಠ ಬೀರತಕ್ಕ ಆಧ್ಯಾತ್ಮತತ್ವವನ್ನು ಗಮನಿಸಿ ಇದಕ್ಕೆ ಗೌರವ ಕೊಡುವುದು ನ್ಯಾಯ. ಆದರೆ ಈ ಮಸೂದಾಕಾನೂನಿನಿಂದ ಇದಕ್ಕೆ ಚ್ಯುತಿ ಬರುತ್ತದೆಯೇ, ಮಠದ ಗೌರವಕ್ಕೆ ಚ್ಯುತಿ ಬರುತ್ತಿದೆಯೆ ಎಂದರೆ, ಬರುವುದಿಲ್ಲವೆಂದು ನನ್ನ ಅಭಿಪ್ರಾಯ. ಇದರಲ್ಲಿ ನಾನು ಹೇಳಿದಂತೆ ಎರಡು ಭಾಗಗಳಿವೆ. ಈ ಮಠಕ್ಕೆ ಸೇರಿದ 47 ಗ್ರಾಮಗಳಿವೆ, ಖಾಸಗೀ ಜಮೀನುಗಳೂ ಇವೆ, ಅನೇಕ ಇತರ ಆಸ್ತಿಗಳೂ ಇವೆ. ಅಲ್ಲದೆ ಮಠಕ್ಕೆ ಬೇಕಾದ ದೊಡ್ಡ ಕಾಡಿದೆ ಮತ್ತು ಇತರ ಕೆಲವು ಹಕ್ಕುಗಳಿವೆ. ಈಗ ನಾವು ಈ ಮಠಕ್ಕೆ ಸೇರಿದ 47 ಇನಾಮ್ ಗ್ರಾಮಗಳನ್ನು ಒಂದು ಭಾಗವಾಗಿಯೂ ಇತರ ಆಸ್ತಿಗಳನ್ನು ಇನ್ನೊಂದು ಭಾಗವಾಗಿಯೂ ಮಾಡಿಕೊಳ್ಳಬೇಕು. ಹೀಗೆ ಎರಡು ಭಾಗ ಮಾಡಿಕೊಂಡರೆ ಆಗ ಈ ಮಠಕ್ಕೆ ಈ ಮಸೂದೆ ಸರಿ ಹೋಗುತ್ತದೆ.

ಮೊದಲನೆಯದಾಗಿ ನಮ್ಮ ಮಾನ್ಯಮಿತ್ರರು ಒಂದು ವಿಷಯ ಹೇಳಿದ್ದಾರೆ. ಮೈಸೂರು ದೇಶದಲ್ಲಿ ಜಮೀನಿನ ಮೇಲೆ ಸ್ವಾಮ್ಯ ಸರ್ಕಾರವೊಂದಕ್ಕೆ ಮಾತ್ರ ಇರಬೇಕೆಂದು. ಒಂದು ಕಡೆ ಸಂಸ್ಥಾನ ಇನ್ನೊಂದು ಕಡೆ ರೈತರು, ಇಬ್ಬರೇ ಇರಬೇಕು; ಇವರ ಮಧ್ಯೆಯಾರೂ ಬರಬಾರದೆಂಬುದು ಇದರ ತತ್ವ. ಈ ತತ್ವವನ್ನು ಆಧಾರವಾಗಿಟ್ಟುಕೊಂಡು ಈ ಇನಾಮ್ ರದ್ದುಗೊಳಿಸುವ ಮಸೂದೆ ಸಭೆಯ ಮುಂದೆ ಬಂದಿರುವುದು. ಹೀಗೆ ಹೇಳಿದ ಮೇಲೆ ಈ ತತ್ವವನ್ನು ಶೃಂಗೇರಿ ಮಠಕ್ಕೆ ಅನ್ವಯಿಸುವಾಗ ಈ 47 ಗ್ರಾಮಗಳಿಗೆ ಮಾತ್ರ ಅನ್ವಯಿಸುತ್ತದೆ, ಅಲ್ಲಿಯ ರೈತರುಗಳೇ ಆ ಜಮೀನುಗಳನ್ನನುಭವಿಸುತ್ತಿದ್ದಾರೆ, ಈಗಾಗಲೇ ಅಲ್ಲಿ ಸರ್ವೆ ಸೆಟ್ಲ್‌ಮೆಂಟ್ ಆಗಿದೆ, ಆ ರೈತರಿಗೇನೂ ತೊಂದರೆಯಿಲ್ಲ ಎಂದು ಕೆಲವರು ಹೇಳಿದರು, ಸರ್ವೆ ಸೆಟ್ಲ್‌ಮೆಂಟ್ ಮಾಡಿದ್ದರೆ, ರೈತರಿಗೆ ಸೌಕರ್ಯಗಳನ್ನು ಕೊಟ್ಟಿದ್ದರೆ ಒಂದು ಇನಾಮ್‌ನಲ್ಲಿ ಅಡಕವಾಗಿರುವ superior holder and inferior holder ಎಂಬುದು ಹೋಗುವುದಿಲ್ಲ. ಇದು ಹೋಗಬೇಕೆಂದು ನಮ್ಮ ಆಸೆ. ಈ ಮಸೂದೆಯ 39ನೆಯ ಕ್ಲಾಜಿನಲ್ಲಿ ಹೇಳಿರುವಂತೆ ಸುಪೀರಿಯರ್ ಮತ್ತು ಇನ್‌ಫೀರಿಯರ್ ಹೋಲ್ಡರುಗಳೆನ್ನುವುದು ಈ 47 ಗ್ರಾಮಗಳಿಗೆ ಮಾತ್ರ ಅನ್ವಯಿಸಿ ಈ ವ್ಯತ್ಯಾಸ ಹೋಗುತ್ತದೆ. ಆಗ ಅಲ್ಲಿನ ರೈತರ ಸ್ಥಿತಿ ಏನಾಗುತ್ತದೆ? ಸರ್ಕಾರಿ ಗ್ರಾಮದಲ್ಲಿರುವ ರೈತರು ಯಾವ ರೀತಿ ಹಕ್ಕುಗಳನ್ನನುಭವಿಸುತ್ತಾರೋ ಅವರಿಗೆ ಸಮಾನವಾದ ಹಕ್ಕಿನಿಂದ ರೈತರೂ ಜಮೀನನ್ನು ಅನುಭವಿಸುತ್ತಾರೆ. ಆದುದರಿಂದ ನಾವು ರೈತರ ಪ್ರತಿನಿಧಿಗಳಾಗಿ ಇನಾಮ್‌ದಾರರ ಕೈಕೆಳಗಿರುವ ರೈತರಿಗೆಲ್ಲ ಅನುಕೂಲಮಾಡುತ್ತೇವೆ ಅನ್ನುವುದಾದರೆ ಈ ತತ್ವವನ್ನು ಅನುಸರಿಸಿ ಈ ಸುಪೀರಿಯರ್ (superior) ಮತ್ತು ಇನ್‌ಫೀರಿಯರ್ ಹೋಲ್ಡರುಗಳೆನ್ನುವ ತತ್ವವನ್ನು ತೆಗೆದು ಹಾಕಬೇಕು. ಹೀಗೆ ಮಾಡಿದರೆ, ಜಹಗೀರಿ ಎನ್ನುವುದು ಈ 47 ಗ್ರಾಮಗಳಲ್ಲಿಯೂ ಹೋಗುತ್ತದೆ. ಇನ್ನು ಶೃಂಗೇರಿ ಮಠಕ್ಕೆ ಸೇರಿದ ಖಾಸ್ ಜಮೀನು, ಸುಮಾರು 22 ಸಾವಿರ ಎಕರೆ ಅರಣ್ಯ ಮತ್ತು ಇತರ ಹಕ್ಕುಗಳು ಇವೆಲ್ಲವೂ ಶೃಂಗೇರಿ ಮಠಕ್ಕೇ ಸೇರಿರುತ್ತವೆ. ಇದಕ್ಕೆ ಬೇಕಾದ ರಿಯಾಯಿತಿಗಳನ್ನು ಮುಂದೆ 41 ಮತ್ತು ಮುಂದಿನ ಸೆಕ್ಷನ್‌ಗಳಲ್ಲಿ ಈ ಮಸೂದೆಯಲ್ಲಿ ಕೊಟ್ಟಿರುತ್ತೆ. ಇದನ್ನು ಬೇಕಾದರೆ ಶೃಂಗೇರಿ ಜಹಗೀರಿ ಎಂದು ಕರೆಯಲಿ, ಇದಕ್ಕಿರುವ ಗೌರವವನ್ನಿಟ್ಟುಕೊಳ್ಳಲಿ. ಆದರೆ ಆ 47 ಗ್ರಾಮಗಳಿಗೆ ಸಂಬಂಧಪಟ್ಟ ರೈತರಲ್ಲಿ ಸುಪೀರಿಯರ್ ಹೋಲ್ಡರ್, ಇನ್‌ಫೀರಿಯರ್ ಹೋಲ್ಡರ್ ಎಂಬುದು ಹೋಗಬೇಕು, ಜಹಗೀರಿ ಎನ್ನುವುದು ಈ 97 ಗ್ರಾಮಗಳಿಗೆ ಅನ್ವಯಿಸಬಾರದು ಎಂಬುದು ನಮ್ಮ ಖಚಿತವಾದ ಅಭಿಪ್ರಾಯ. ಇನ್ನು ಕೆಲವು ಮಾನ್ಯ ಮಿತ್ರರು ಹೇಳಿದರು: ಸೋಷಿಯಲಿಸ್ಟ್ ತತ್ವವನ್ನನುಸರಿಸಿ, ಖಚಿತವಾಗಿ ಮಾಡಬೇಕು ಎಂದು ಹೇಳಿದರು, ಗಟ್ಟಿಯಾಗಿ ಮಾತನಾಡಿದರು, ಬಿಲ್ಲಿನ ತತ್ವ ಇರಬೇಕು ಎಂದು ಹೇಳಿದರು. ಅವರೇ ಇನ್ನೊಂದು ಕಡೆ ಈ ಮಸೂದೆ ಸರಿಯಲ್ಲವೆಂದು ಹೇಳಿ ಈ ಮಠದ ವಿರೋಧವಾಗಿ ಮಾತನಾಡಿದರು. ಇದರಿಂದ ನನಗೇಕೋ ಅವರನ್ನು ಕಂಡರೆ ಅನುಮಾನವಾಗುತ್ತದೆ. ಒಂದು ಸಾರಿ ನಾವು ರೈತರ ಕಡೆ, ಗೇಣಿದಾರರ ಕಡೆ, ಬಿಲ್ಲನ್ನು ತಂದರೆ

ಹಾಗೆ ತರಬೇಕು ಎಂದು ಹೇಳಿ, ಇನ್ನೊಂದು ಸಾರಿ ಬಿಲ್ಲು ಬೇಡ ಎಂದು ಹೇಳುತ್ತಾರೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್ ಅವರು.—ಸೋಷಿಯಲಿಸ್ಟ್ ಪಕ್ಷಕ್ಕೆ ಸೇರಿದವರಿಗೆ ಗುರುತ್ವದಲ್ಲಿ ಗೌರವವಿದೆ, ಇಲ್ಲದೇ ಇಲ್ಲ.

ಶ್ರೀ ಎ. ಜಿ. ಬಂದೀಗೌಡರು.—ಈಗ ನಾನು ಕೊಟ್ಟಿರುವ ಸಲಹೆಯಿಂದ ಎಲ್ಲಕ್ಕೂ ಅನುಕೂಲವಾಗುತ್ತದೆ. ಇನಾಮ್‌ರದ್ದಾಗುವುದು ಈ 47 ಗ್ರಾಮಗಳಿಗೆ ಅನ್ವಯಿಸುವಂತೆ ಮಾಡಿ ಅಲ್ಲಿನ ರೈತರಿಗೆ ಪರಿಹಾರಕೊಟ್ಟು ಉಳಿದ ಹಕ್ಕನ್ನು ಮಠಕ್ಕೆ ಕೊಡುವುದರಲ್ಲಿ ಸರಿಯಾದ ಮಧ್ಯಸ್ತಿಕೆ ಮಾಡಿದ ಹಾಗಾಗುತ್ತದೆ. ಮಠದ ಗೌರವ ಕೀರ್ತಿಯನ್ನೂ ಕಾಪಾಡಿದ ಹಾಗಾಗುತ್ತದೆ. ಮುಖ್ಯವಾಗಿ ಮಠಕ್ಕೆ ಸರಿಯಾದ ಉತ್ಪತ್ತಿ ಬರಬೇಕು ಈಗ ಸುಮಾರು ಮೂರು ಲಕ್ಷ ರೂಪಾಯಿ ನಷ್ಟು ಉತ್ಪತ್ತಿ ಮಠಕ್ಕೆ ಬರುತ್ತಿದೆ. ಈ ಮಸೂದೆಯಿಂದ ಈ ಉತ್ಪತ್ತಿಯಲ್ಲಿ ಒಂದು ಕಾಸೂ ಕಡಿಮೆಯಾಗುವುದಿಲ್ಲ. ಈ 47 ಗ್ರಾಮಗಳ ಉತ್ಪತ್ತಿಯನ್ನು ಸರ್ಕಾರದವರು ತೆಗೆದುಕೊಂಡು ಮಠಕ್ಕೆ ಕೊಡುತ್ತಾರೆ. ಈಗ ಮಠಕ್ಕೆ ರೈತರು ಕೊಡುವ ಕಂದಾಯವನ್ನು ಮುಂದೆ ಅವರು ಸರ್ಕಾರಕ್ಕೆ ಕೊಡುತ್ತಾರೆ. ಮಿಕ್ಕ ಇನಾಮ್ ಸಂಸ್ಥೆಗಳಿಗೆ ಕೊಡುವಂತೆ 15 ವರ್ಷದ ಸರಾಸರಿ ವರಮಾನದ ಲೆಕ್ಕದ ಮೇಲೆ ಒಟ್ಟಾಗಿ ಒಂದೇ ಸಾರಿ ಕೊಡುವುದಕ್ಕೆ ಬದಲು ಸಾರೋದ್ಧಾರವಾಗಿ ಪ್ರತಿ ವರ್ಷವೂ ಈ ಮಠಕ್ಕೆ ಕೊಡಬೇಕೆಂದು ಈ ಮಸೂದೆಯಲ್ಲಿ ಏರ್ಪಾಡು ಮಾಡಿದ್ದೇವೆ. ಆದುದರಿಂದ ಅದಕ್ಕೆ ತೊಂದರೆಯೇನೂ ಇಲ್ಲ.

ಈ ಮಠಕ್ಕೆ ಸೇರಿದ ಅರಣ್ಯ 22 ಸಾವಿರ ಎಕರೆಯಷ್ಟಿದೆ. ಇದರ ವಿಷಯ ಸೆಲೆಕ್ಟ್ ಸಮಿತಿಯಲ್ಲಿ ಚರ್ಚೆ ಬಂದಾಗ ಅರಣ್ಯದಲ್ಲಿರುವ ಗಂಧದ ಮರಗಳೆಲ್ಲ ಸರ್ಕಾರಿ ಆಸ್ತಿ ಎಂದು ಕಾನೂನಿದ್ದರೂ ಇಲ್ಲಿ 22 ಸಾವಿರ ಎಕರೆಗಳಲ್ಲಿರುವ ಗಂಧದ ಮರಗಳನ್ನು ಮಠಕ್ಕೇ ಕೊಟ್ಟುಬಿಡುವುದೇ ಎಂಬ ವಾದವೂ ಬಂತು. ಇದು ಜಗದ್ಗುರುಗಳ ಮಠ; ಈ ರೀತಿಯ ಅನೇಕ ರಿಯಾಯಿತಿಗಳನ್ನು ಇದಕ್ಕೆ ಉದಾರವಾಗಿ ಬಿಟ್ಟುಕೊಡೋಣವೆಂದು ಹೇಳಿ ಅವರು ಆ ರೀತಿ ಮಾಡಿದ್ದಾರೆ.

Sri H. M. CHANNABASAPPA.—If the Hon'ble Member yields, I would like to bring to his notice that only one member submitted a dissenting note on the land revenue reforms, *i.e.*, Sri Venkataranga Iyengar. He says :

> "...Both the Jahgirs are under Government management. The Sringeri Jahgir is a religious Inam and so long as the income realized from the Jahgir is assured for the Mutt to carry on its religious and charitable activities, there is nothing to be said."

ಶ್ರೀ ಎ. ಜಿ. ಬಂದೀಗೌಡರು.—ಎಲ್ಲರೂ ಏನು ಒಂದು ಅಭಿಪ್ರಾಯ ಪಡುತ್ತಿದ್ದಾರೆಂದರೆ ಈ ಇನಾಂತಿಗಳೆಲ್ಲಾ ಹೊರಟುಹೋಗಬೇಕು ಎಂಬುದಾಗಿ. ಎಲ್ಲೋ ಒಬ್ಬಿಬ್ಬರು ಮಾತ್ರ ಹೀಗೆಲ್ಲಾ ಮಾಡಬಾರದು ಎಂದು ಹೇಳಬಹುದು.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು (ಹಣಕಾಸಿನ ಸಚಿವರು).—ಬಹುಶಃ ಅವರೂ ಆ ಮಠಕ್ಕೆ ಸೇರಿದವರಿರಬಹುದು.

ಶ್ರೀ ಎ. ಜಿ. ಬಂದೀಗೌಡರು.—ಈಗ ನಾನಿನ್ನು ಒಂದು ವಿಚಾರ ಮಾತ್ರ ತಿಳಿಸಿದರೆ ಸಾಕೆಂದು ಭಾವಿಸುತ್ತೇನೆ. ಇತ್ತೀಚೆಗೆ ಪಾರ್ಲಿಮೆಂಟಿನವರು ಎರಡು ಹೊಸ ಆಕ್ಟುಗಳನ್ನು ಪಾಸ್‌ಮಾಡಿದ್ದಾರೆ. ಆ ಎರಡು ಆಕ್ಟುಗಳಲ್ಲಿ ಒಂದು ವಿಶ್ವಭಾರತೀ ಆಕ್ಟ್, ಮತ್ತೊಂದು ರಾಜಘಾಟ್ ಆಕ್ಟು. ಈ ವಿಶ್ವಭಾರತೀ ಆಕ್ಟಿನಲ್ಲಿ ಇನಾಂತಿಗಳಿಗೆ ಸಂಬಂಧಪಟ್ಟ ವಿಚಾರಗಳೇನೂ ಇರುವುದಿಲ್ಲ. ರಾಜಘಾಟ್ ಆಕ್ಟಿನಲ್ಲ ಸ್ಯಾಂಕ್ಟಿಟಿಗೋಸ್ಕರವಾಗಿ ಕೆಲವು ರಿಯಾಯಿತಿಗಳನ್ನು ಕೊಡಬಹುದೆಂದು ತಿಳಿಸಲಾಗಿದೆ. ಆದರೆ 5-6 ಎಕರೆಗಳಷ್ಟು ಪ್ರದೇಶವನ್ನು ಎಲ್ಲಾ ಜನಾಂಗಗಳ ಉಪಯೋಗಕ್ಕೂ ಅವಕಾಶವಿರುವ ರೀತಿಯಲ್ಲಿ, ಆ ಒಂದು ಸ್ಥಳದಲ್ಲಿರುವ ಪವಿತ್ರತೆಯನ್ನು ಕಾಪಾಡಿಕೊಂಡು ಬರುವ ಉದ್ದಿಶ್ಯದಿಂದ ಆರೀತಿ ಒಂದು ರಿಯಾಯಿತಿಯನ್ನು ಕಲ್ಪಿಸಲಾಗಿದೆ. ಆದರೆ ಈಗ ಹಾಲಿ ನಮ್ಮ ಮುಂದಿರುವ ಪ್ರಶ್ನೆಯಲ್ಲಿ ಶೃಂಗೇರಿ ಆಗಲೇ ಒಂದು ಪವಿತ್ರವಾದ ಸ್ಥಳವಾಗಿರುವುದರಿಂದ ಈ ಆಕ್ಟಿನ ರೀತ್ಯಾ ಅದಕ್ಕೆ ಈ ಅನುಕೂಲಗಳನ್ನೆಲ್ಲಾ ಕೊಡಲೇಬೇಕೆಂದು ಹೇಳುವ ಹಾಗಿಲ್ಲ. ಕಾರಣ ಈ ಆಕ್ಟು ಇದಕ್ಕೆ ಅನ್ವಯಿಸುವುದಿಲ್ಲ. ಇನ್ನು ಆ ವಿಶ್ವಭಾರತೀ ಆಕ್ಟಿನಲ್ಲಿ ಇಂಥಾದ್ದ್ಯಾವುದಕ್ಕೂ ಅವಕಾಶವೇ ಇಲ್ಲ. ಹೀಗೆಲ್ಲಾ ಇದ್ದರೂ ಯಾರಿಗೂ ಯಾವ ರೀತಿಯಲ್ಲೂ ಮನನೋಯದಂತೆ ಅವರ ಘನತೆ ಗೌರವಗಳನ್ನು ಉಳಿಸಿಕೊಂಡು ಹೋಗುವ ರೀತಿಯಲ್ಲೇ ಕೆಲಸಮಾಡಿದ್ದಾರೆ. ಆದರೆ ಕಾಲಸ್ಥಿತಿ ದಿನ ದಿನಕ್ಕೂ ಬದಲಾವಣೆಯಾಗುತ್ತಿದೆ. ಹೀಗೆ ಬದಲಾವಣೆಗಳು ಆಗುತ್ತಿರುವ ಕಾಲದಲ್ಲಿ ಇಂದು ನಾವು ತೋರಿಸತಕ್ಕ ಅನುಕೂಲಗಳು ಅಥವಾ ಆಯಾಯ ರಿಯಾಯಿತಿಗಳು ಸದಾ ಇದ್ದೇ ಇರುತ್ತವೆಂದೂ ಹೇಳುವುದಕ್ಕಾಗುವುದಿಲ್ಲ. ಯಾವಾಗ ಏನೇನು ಬದಲಾವಣೆಗಳಾಗುತ್ತವೋ ಅದನ್ನು ಯಾರು ಕಂಡಿದ್ದಾರೆ? ಅಂತೂ ಕಾಲ ದೇಶಾನುಗುಣವಾಗಿ ಹೊಂದಿಕೊಂಡು ಹೋಗತಕ್ಕದ್ದು ಬಹಳ ಅನುಕೂಲವಾಗಿರುತ್ತೆ. ಹಿಂದೆ ಈ ಮಠಗಳ ಬಗ್ಗೆ ಕಾನೂನಿನ ರೀತ್ಯಾ ಏನೇನು ಘನತೆ ಗೌರವಗಳಿದ್ದವೋ ಇಂದು ಆ ಘನತೆಗೌರವಗಳೆಲ್ಲಾ ಆ ಮಠಕ್ಕೆ ಇದ್ದೇಇರುತ್ತವೆ. ಈ ಬಿಲ್ಲಿನಿಂದ ಅವುಗಳಿಗೆ ಯಾವ ಅಡ್ಡಿಯೂ ಇರುವುದಿಲ್ಲ.

ಶ್ರೀಮಾನ್ ಬೋರಣ್ಣಗೌಡರು ರೈತರ ಪರವಾಗಿ ಮಾತನಾಡುತ್ತಾ ಆ 47 ಗ್ರಾಮಗಳನ್ನು ಅವರಿಗೆ ಬಿಟ್ಟುಕೊಡೋಣ ಎಂದು ಹೇಳಿದರು. ಅದು ಸರಿಯಾಗಿದೆ. ಆ 47 ಗ್ರಾಮದ ರೈತರುಗಳಾದರೂ ಮಾಡಿರತಕ್ಕ ಅನ್ಯಾಯವೇನು ಎಂಬ ಒಂದು ಪ್ರಶ್ನೆಯನ್ನು ನಾನು ಸಭೆಗೆ ಹಾಕಬೇಕಾಗಿದೆ. ನಾವು 2,000ಕ್ಕೆ ಮೇಲ್ಪಟ್ಟ ಗ್ರಾಮಗಳಲ್ಲಿರತಕ್ಕ ರೈತರಿಗೆಲ್ಲಾ ಒಂದು ಅನುಕೂಲವನ್ನು ಕಲ್ಪಿಸಿಕೊಡುತ್ತಿರುವಾಗ, ಮತ್ತು ಅವರಿಗೆ ವಿಶೇಷ ಹಕ್ಕುಬಾಧ್ಯತೆಗಳುಂಟಾಗುವಂಥ ಸದವಕಾಶಗಳನ್ನು ಕಲ್ಪಿಸಿಕೊಡುತ್ತಿರುವಾಗ, ಈ 47 ಗ್ರಾಮಗಳ ರೈತರು 'ನಮಗೇಕೆ ತಾವು ಈ ಅನುಕೂಲಗಳನ್ನು ಕಲ್ಪಿಸಿಕೊಡಲಿಲ್ಲ' ಎಂಬುದಾಗಿ ಕೇಳಿದರೆ ನಮ್ಮ ಜವಾಬೇನು? ಅಂಥಾ ಪ್ರಶ್ನೆಗಳಿಗೆ ಅವಕಾಶ ಕೊಡಬಾರದು. ಎಲ್ಲರಿಗೂ ಒಂದೇಸಮನಾದ ಅನುಕೂಲ ಕಲ್ಪಿಸಬೇಕು. ಅವಕಾಶಗಳನ್ನು ಕಲ್ಪಿಸಿಕೊಟ್ಟ ಮಾತ್ರಕ್ಕೇ ಆ ಮಠದ ಒಂದು ಸ್ಪಿರಿಚ್ಯುಯಲ್ ಇಂಪ್ಲೂಯನ್ಸ್ ಅಥವ ಅದರ ಘನತೆಗೌರವಗಳಿಗೆ ಯಾವ ಕಳಂಕವೂ ಬರುವುದಿಲ್ಲ. ಆದ್ದರಿಂದ ಸರ್ವರೂ ಈ ಬಿಲ್ಲನ್ನು ಅನುಮೋದಿಸಬೇಕೆಂದು ತಿಳಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

(ಶ್ರೀ ಎ. ಜಿ. ಬಂದೀಗೌಡರು)

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಇನಾಂ ಸೆಟಲ್‌ಮೆಂಟ್‌ಗಳನ್ನು ಮಾಡಿ ಇಲ್ಲಿಗೆ ಈಗಾಗಲೇ ಸುಮಾರು ಅರ್ಧ ಶತಮಾನವಾಯಿತು. ಈಗ ಅವುಗಳನ್ನೆಲ್ಲಾ ತೆಗೆದು ಹಾಕಬೇಕೆಂದು ಈ ಮಸೂದೆಯನ್ನು ತಂದಿರತಕ್ಕದ್ದು ಸ್ವಾಗತಾರ್ಹವಾದದ್ದು.

(ಸಭೆಯಲ್ಲಿ ಗದ್ದಲ)

ಆದರೆ ಅಂಥಾ ವಿರೋಧಭಾವನೆಗಳು ಎಲ್ಲರ ಮನಸ್ಸಿನಿಂದಲೂ ಹೋಗಬೇಕೆಂದು ನಾನು ಎಲ್ಲ ಮಾನ್ಯ ಸದಸ್ಯರನ್ನೂ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಯಾವ ಭಾವನೆ ?

ಶ್ರೀ ಎಸ್. ರಂಗರಾಮಯ್ಯನವರು.—ಒಬ್ಬರು ಎದ್ದು ನಿಂತರೆ ಅವರು ಇದೇ ಕಾರಣಕ್ಕೆ ನಿಂತಿದ್ದಾರೆ, ಅವರು ಇದನ್ನೇ ಚರ್ಚೆಮಾಡಬಹುದು ಎಂಬ ಇತ್ಯಾದಿ ಊಹೆಗಳನ್ನು ಮಾಡತಕ್ಕ ಭಾವನೆ.

ಸ್ವಾಮಿ, ಈ ಭೂಸುಧಾರಣೆ ನಮ್ಮ ಸಂಸ್ಥಾನದಲ್ಲಿ ಆಗಬೇಕೆಂದು ನಾವೆಲ್ಲರೂ ಎಷ್ಟೋ ವರ್ಷಗಳಿಂದ ಈ ಸರ್ಕಾರವನ್ನೇ ಅಲ್ಲ ಹಿಂದಿದ್ದ ಸರ್ಕಾರದವರನ್ನೂ ಸಹ ಒತ್ತಾಯಪಡಿಸುತ್ತಾ ಬಂದಿದ್ದೇವೆ. ಆದರೆ ಈ ಇನಾಂ ಗ್ರಾಮಗಳಲ್ಲಿರತಕ್ಕ ರೈತರ ತೊಂದರೆಗಳು ಅಷ್ಟಿಷ್ಟಲ್ಲ. ಈಗ ಅಂಥಾ ತೊಂದರೆಗಳನ್ನೆಲ್ಲಾ ತಪ್ಪಿಸತಕ್ಕ ಸಲುವಾಗಿ ಈ ಶಾಸನವನ್ನು ತಂದಿದ್ದಾರೆ. ಅಂತೂ ಈಗ ಈ ವಿಚಾರ ಒಂದು ದೊಡ್ಡ ಘಟ್ಟಕ್ಕೆ ಬಂದಹಾಗಾಯಿತು. ಆದರೆ ಈ ಘಟ್ಟ ಬಹಳ ಮಹತ್ವವುಳ್ಳದ್ದಾಗಿದೆ. ಇದರಿಂದ ರೈತರುಗಳು ಜಮೀನ್ದಾರರಾಗುತ್ತಾರೆಂಬುದರಲ್ಲಿ, ಅಂಥ ಅನುಕೂಲಗಳು ಇದರಲ್ಲಿ ಅಡಕವಾಗಿರುತ್ತವೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಸಲೆಕ್ಟ್ ಸಮಿತಿಯವರು ಈ ಖಾಸ್ ಲ್ಯಾಂಡುಗಳ ವಿಚಾರದಲ್ಲಿ ಏನು ತಿಳಿಸಿದ್ದಾರೋ ಅದಕ್ಕೆ ವಿರೋಧವಾಗಿ ಅನೇಕ ಸದಸ್ಯರು ಮಾತನಾಡಿದ್ದಾರೆ. ಶ್ರೀಮಾನ್ ವೀರಣ್ಣಗೌಡರು ಕೊಟ್ಟಿರತಕ್ಕ ಅರ್ಥವಿವರಣೆಯನ್ನು ನಾನು ಅನುಮೋದಿಸುತ್ತೇನೆ. ಏಕೆಂದರೆ ಯಾರು ಸ್ವಂತ ವ್ಯವಸಾಯ ಮಾಡುತ್ತಾರೋ ಅಥವ ಅವರು ತಮ್ಮ ವ್ಯವಸಾಯದ ಬದುಕನ್ನು ಆಳುಕಾಳುಗಳ ಮೂಲಕ ನಡೆಸುತ್ತಿದ್ದಾರೋ ಅಂಥಾ ಜಮೀನುಗಳನ್ನೆಲ್ಲಾ ಅವರಿಗೇ ಬಿಟ್ಟುಬಿಡುವುದು ನ್ಯಾಯವಾಗಿದ್ದರೂ ಜಮೀನುಗಳನ್ನು ಸ್ವಂತ ವ್ಯವಸಾಯ ಮಾಡದೇ ಇದ್ದರೆ ಅಂಥ ಸಂದರ್ಭಗಳಲ್ಲಿ ಅವರಿಗೆ ಜಮೀನು ಬಿಟ್ಟುಕೊಡುವಾಗ 5 ಎಕರೆ ತರಿ, 10 ಎಕರೆ ಖುಷ್ಕಿ ಜಮೀನು ; 5 ಎಕರೆಗಳಲ್ಲೇ ತೋಟದ ಜಮೀನೂ ಸೇರಿಕೊಂಡು, ಇಷ್ಟನ್ನು ಮಾತ್ರ ಬಿಟ್ಟುಕೊಡಬಹುದೆಂದು ಹೇಳಿರುತ್ತದೆ. ಹೀಗೆ ಇನಾಂದಾರರುಗಳಿಗೆ ಅವರವರ ಖಾಸ್ ಲ್ಯಾಂಡ್‌ಗಳನ್ನೆಲ್ಲಾ ಅವರಿಗೇ ಬಿಟ್ಟುಕೊಡದೇ ಇರತಕ್ಕದ್ದು ಎಷ್ಟು ಅನ್ಯಾಯವಾದದ್ದು ! ಎಂಬುದಾಗಿ ಅರ್ಥವಿವರಣೆ ಕೊಟ್ಟಿದ್ದಾರೆ. ಆದರೆ ಅದಕ್ಕೆ ನಾನು ಕೊಡತಕ್ಕ ಅರ್ಥವಿವರಣೆ ಈ ದಿವಸ ಏನೆಂದರೆ—ಈಗ ಹಾಲಿ ಇರತಕ್ಕ ಜೋಡಿ ಗ್ರಾಮಗಳ ಸ್ಥಿತಿಗೂ ಸರ್ಕಾರಿ ಗ್ರಾಮಗಳ ಸ್ಥಿತಿಗೂ, ಅಂದರೆ ಜಮೀನುಗಳು ಇರತಕ್ಕ ವಿಚಾರದಲ್ಲಿ, ಯಾವ ವ್ಯತ್ಯಾಸವನ್ನೂ ಮಾಡಿಲ್ಲ. ಎರಡು ಕಡೆಯಲ್ಲೂ ಬೇಕಾದಷ್ಟು ತರಿ, ಖುಷ್ಕಿ, ಬಾಗಾಯತು ಜಮೀನುಗಳಿರುತ್ತವೆ. ಈಗ ಆರೀತಿ ಜೋಡಿ ಜಹಗೀರು ಮತ್ತು ಇನಾಂದಾರರುಗಳಿಗೆ ಕೊಡಲಾಗಿರತಕ್ಕ ಭೂಮಿಗಳ ಪೈಕಿ ಕೆಲವುಕಡೆ ಅವರೆಲ್ಲರೂ ಕೇವಲ ಈ ಭೂಮಿಯನ್ನೇ ನಂಬಿಕೊಂಡು ಜೀವನ ಮಾಡತಕ್ಕಂಥ ಇನಾಂದಾರರೂ ಇದ್ದಾರೆ. ಈಗ ಅಂಥಾ ಇನಾಂದಾರರುಗಳೇ ಹಾಲಿ ಜೀವಂತರಾಗಿಲ್ಲವಿದ್ದರೂ ಅವರ ವಂಶದವರು ಅದರ ಆಧಾರದಿಂದ ಜೀವನ ನಡೆಸಿಕೊಂಡು ಬರುತ್ತಿದ್ದಾರೆ. ಅಂಥವರು ಜೀವನೋಪಾಯಕ್ಕೆ ಇಟ್ಟುಕೊಂಡಿರತಕ್ಕ ಆ ಜಮೀನುಗಳನ್ನೆಲ್ಲಾ ಈಗ ನಾವು ಕಿತ್ತುಕೊಂಡರೆ ಇದೂ ಕೂಡ ಬಹಳ ಅನ್ಯಾಯವಾಗುತ್ತದೆಂದು ನಾನು ಹೇಳುತ್ತೇನೆ. ಇನ್ನು ಅನೇಕ ಇನಾಂ ಗ್ರಾಮಗಳಲ್ಲಿ ಈಗಾಗಲೇ ಸರ್ವೆ ಸೆಟಲ್‌ಮೆಂಟ್ ಆಗಿ ರೈತರು ಖಾಯಂ ಆಗಿ ಕಂದಾಯ ಕೊಟ್ಟುಕೊಂಡು ಜಮೀನನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ. ಹಿಂದೆ ನಾವು ಟೆನೆನ್ಸಿ ಆಕ್ಟಿನ ಸಂಬಂಧದಲ್ಲಿ ಖಾಯಂ ಗೇಣೀದಾರರ ವಿಚಾರದಲ್ಲಿ ಸಹ ಆತನಿಗೆ ಅನೇಕ ಭರವಸೆಗಳನ್ನು ಕೊಟ್ಟಿದ್ದಾರೆ. ಆದರೆ ಈ ಇನಾಂದಾರರ ವಿಚಾರದಲ್ಲಿ ಅಷ್ಟನ್ನೂ ತೋರಿಸದಿದ್ದರೆ ಇದು ಯಾವ ನ್ಯಾಯ ?

ಈಗ ಒಂದೇಸಮನೆ, ಅಕಸ್ಮಾತ್ತು, ಈರೀತಿ ಕಾನೂನು ಮಾಡಿದರೆ ಅವರಿಗೆ ಎಷ್ಟು ತೊಂದರೆಯಾಗುತ್ತದೆಂಬುದನ್ನು ಮಾನ್ಯ ಸದಸ್ಯರು ಗಮನಕ್ಕೆ ತಂದುಕೊಳ್ಳಬೇಕಾಗಿದೆ. ಈ ವಿಷಯ ಮೊನ್ನೆ ಟೆನೆನ್ಸಿ ಬಿಲ್ಲು ಬಂದಾಗ ಚರ್ಚೆಯಾಗಿದೆ. ಸರ್ಕಾರಿ ಗ್ರಾಮದಲ್ಲಿ ಒಬ್ಬ ನೂರು ಎಕರೆ ಇಟ್ಟುಕೊಂಡಿರಬಹುದು. ಅದನ್ನು ಹಿಡುವಳಿದಾರ ತಾನು ವ್ಯವಸಾಯ ಮಾಡದೆ ಗುತ್ತಿಗೆದಾರನಿಗೆ ಅಥವಾ ವಾರಕ್ಕೆ ಕೊಟ್ಟಿರಬಹುದು. ಈ ದಿವಸ ಆತನು ತನ್ನ ಮಕ್ಕಳು ಬೇರೆಕೆಲಸ ಮಾಡುವುದಿಲ್ಲ, ಅವರಿಗೆ ಬೇಜಾರಾಗಿದೆ, ಹಳ್ಳಿಯಲ್ಲೇ ಇರುತ್ತಾರೆ, ಅವರಿಗೆ ಬೇಕು, ಅರ್ಧ ಬಿಡಿಸಿಕೊಡಿ ಎಂದು ಕೇಳಿದರೆ ಆರೀತಿ ಕೊಡುವುದಕ್ಕೆ ಅಧಿಕಾರ ಕೊಟ್ಟಿದ್ದೇವೆ. ಈ ದಿವಸ ಇದೇರೀತಿ ಇನಾಂ ಗ್ರಾಮದಲ್ಲಿ ಸಾಗುವಳಿ ಮಾಡುವವನಿಗೆ ಸರ್ಕಾರಿ ಗ್ರಾಮದಲ್ಲಿರುವ ರೈತರಿಗಿರುವ ಹಕ್ಕುಬಾಧ್ಯತೆಯನ್ನು ತಪ್ಪಿಸುವುದು ನ್ಯಾಯವಲ್ಲ. ಆದ್ದರಿಂದ ನಾನು ಈ ಸಭೆಯ ಗಮನಕ್ಕೆ ತರುವುದೇನೆಂದರೆ ಈ ವಿಚಾರದಲ್ಲಿ ತಿದ್ದುಪಡಿ ಕೂಡ ಬಂದಿದೆ. ಇನಾಂದಾರರು ಸ್ವಂತ ಜಮೀನನ್ನು ವಾರ ಅಥವ ಗುತ್ತಿಗೆ ಯಾವುದನ್ನೇ ಮಾಡುತ್ತಿದ್ದರೂ ಅವರಿಗೇ ಬಿಡಬೇಕು. ಅದೇನೂ ಇಲ್ಲದಿದ್ದರೆ ಅಂಥವರಿಗೆ 50 ಅಥವಾ 70 ಎಕರೆ ನಿರ್ದಿಷ್ಟಮಾಡಿ ಕೊಡಬಹುದು. ಒಂದುವೇಳೆ ಈಸಭೆ ಅದು ಬಹಳ ಜಾಸ್ತಿ ಎಂದು ಹೇಳಿದರೆ ಕನಿಷ್ಠಪ್ರಮಾಣ ಮತ್ತು ಪರಮಾವಧಿ ಪ್ರಮಾಣ ಗೊತ್ತುಮಾಡಿ ಹಕ್ಕನ್ನು ಅವರಿಗೆ ಕೊಡಬೇಕೆಂದು ಹೇಳುವುದು ಸಾಧುವಾಗಿದೆ. ಇಲ್ಲದಿದ್ದರೆ ಇದನ್ನೇ ನಂಬಿಕೊಂಡಿರುವ ಬಹಳಜನ ಇನಾಂದಾರರಿಗೆ ಎಲ್ಲಾ ಬಿಟ್ಟು ಏನೋ ಒಂದು ಪರಿಹಾರ ತೆಗೆದುಕೊಳ್ಳಬೇಕೆಂದ ಹೇಳಿದರೆ ತುಂಬಾ ಅನ್ಯಾಯ ಮಾಡಿದಂತಾಗುತ್ತದೆ. ಇದು ನ್ಯಾಯವಲ್ಲ. ಆದ್ದರಿಂದ ಇದಕ್ಕೆ ಸಭೆಯವರು ಗಮನಕೊಡಬೇಕು.

ಎರಡನೆಯದು 8ನೆಯ ಸೆಕ್ಷನ್‌ನಲ್ಲಿ ಇನಾಂದಾರರು 1948ನೆಯ ಇಸವಿಗೆ ಹಿಂದೆ ಸ್ವಂತ ಖರ್ಚಿನಿಂದ ಆಳುಗಳನ್ನಿಟ್ಟು ಮರಗಳನ್ನು ಹಾಕಿಸಿದ್ದರೆ ಅದೆಲ್ಲವೂ ಅವನಿಗೆ ಸಲ್ಲುತ್ತದೆಂದು ಹೇಳಿದೆ. 1948ನೆಯ ಇಸವಿಯಿಂದೀಚೆಗೆ ಅವರಿಗೆ ಸಲ್ಲುವುದಿಲ್ಲ ಎಂದಿದೆ. ಸ್ವಾಮಿ, ವನಮಹೋತ್ಸವ ಪ್ರಾರಂಭವಾಗಿರುವುದು 1948 ರಿಂದೀಚೆಗೆ. ಕೆಲವರು ಇದರ ಪ್ರಕಾರ ಬಹಳ ಉತ್ಸಾಹದಿಂದ, ಶ್ರದ್ಧೆಯಿಂದ ಕೆಲಸಮಾಡಿ ಗಿಡಗಳನ್ನು ಹಾಕಿದ್ದಾರೆ. ಅಂಥವರಿಗೆ, 1948 ರಿಂದ ಈರೀತಿ ಮರ

ಹಾಕಿರುವವರಿಗೆ ಪರಿಹಾರ ಕೊಡದಿರುವುದು ಯಾವ ನ್ಯಾಯವೋ ಗೊತ್ತಿಲ್ಲ. ಈ ಕಾನೂನು ಸೇರಿದ್ದ ತಕ್ಷಣ ಅವರು 3 ದಿವಸ ನೀರು ಹಾಕದಿದ್ದರೆ ಆ ಗಿಡಗಳು ಸತ್ತುಹೋಗುತ್ತವೆ. ಇದರಿಂದ ಸರ್ಕಾರದವರು ಮಾಡಿರುವ ವನಮಹೋತ್ಸವಕ್ಕೆ ಸಹಾಯವಾಗುವುದಿಲ್ಲ. ಗಿಡಗಳು ಹಾಕಿರುವುದು ಬೆಳೆದ ಹಾಗಾಗುವುದಿಲ್ಲ. ಆದ್ದರಿಂದ ಈರೀತಿ ನಿರ್ದಿಷ್ಟವಾಗಿ ಹೇಳಿ ನಿರಾಶೆ ಮಾಡಿರುವುದು ಸರಿಯಲ್ಲ.

ಆಮೇಲೆ ಇನಾಂದಾರರಿಗೆ ಪರಿಹಾರ ಕೊಡತಕ್ಕ ಕಾಲದಲ್ಲಿ ಕೆಲವು ಗಂಧದಮರ ವಗೈರೆ ಬಿಡಬೇಕು, ಲೆಕ್ಕಕ್ಕೆ ತೆಗೆದುಕೊಳ್ಳಕೂಡದು ಎಂದಿದೆ. ಒಂದುಕಡೆ ಫಾರೆಸ್ಟ್ ವಿಚಾರ ಹೇಳಿದೆ: 8ನೆಯ ಸೆಕ್ಷನ್‌ನಲ್ಲಿ ಫಾರೆಸ್ಟ್ ಇದ್ದರೆ ಕೊಡುವುದು ಎಂದು ಹೇಳಿ ಇನ್ನೊಂದುಕಡೆ ಕ್ಯಾಷ್ಯುರಿನ, ಸೌದೆಮರ, ಸಾಗುವಾನಿ ಇಂಥವುಗಳನ್ನೂ ಮತ್ತು ಸಣ್ಣಸಣ್ಣ ಮರಗಳನ್ನು ಬೆಳೆಸಿದ್ದರೆ ಅವನ್ನು ಕೂಡ ಬೇಸಿಕ್ ಇನ್‌ಕಂ ಎಂದು ತೆಗೆದುಕೊಳ್ಳಕೂಡದೆ ದು ಹೇಳಿದೆ. ಇದೇಕೋ ಅರ್ಥವಾಗುವುದಿಲ್ಲ. ಹಾಗಾದರೆ ಫಾರೆಸ್ಟ್ ಎಂದರೆ ಏನು ? ಕ್ಯಾಷ್ಯುರಿನ, ಸೌದೆಮರ, ಟಿಂಬರ್‌ಗೆ ಲಾಯಕ್ಕಾದ್ದು ಬಿಟ್ಟು ಇನ್ನೆಂಥ ಗಿಡಗಳಿದ್ದರೆ ಫಾರೆಸ್ಟ್ ಎನ್ನುತ್ತಾರೆ? ಕುರುಚಲುಗಿಡ ಇರುವುದು ಫಾರೆಸ್ಟೆ? ಇದನ್ನು ಸ್ಪಷ್ಟಪಡಿಸಬೇಕು. ಇದನ್ನೆಲ್ಲಾ ಬೇಸಿಕ್ ಇನ್‌ಕಂ ಆಗಿ ತೆಗೆದುಕೊಳ್ಳುವುದು ನ್ಯಾಯವಾಗಿದೆ.

ಆಮೇಲೆ ಪರಿಹಾರ ಕೊಡುವುದರಲ್ಲಿ ಒಂದು ಸಾವಿರಕ್ಕೆ 25ರಷ್ಟು, ಒಂದರಿಂದ ಮೂರು ಸಾವಿರದವರೆಗೆ 20ರಷ್ಟು, ಮೂರು ಸಾವಿರಕ್ಕೆ ಮೇಲ್ಪಟ್ಟಿದ್ದರೆ 15ರಷ್ಟು ಕೊಡಬೇಕು, 60 ಸಾವಿರಕ್ಕೆ ಮೇಲ್ಪಟ್ಟು ಕೊಡಕೂಡದು ಎಂದಿದೆ. ಇದರಲ್ಲಿ ನನ್ನ ಅಭಿಪ್ರಾಯ ಅನೇಕ ಮಾನ್ಯ ಸದಸ್ಯರು ಹೇಳಿರುವಹಾಗೆ ಅನೇಕ ಇನಾಮುಗಳು ಮೂಲಪುರುಷನ ಕೈಬಿಟ್ಟು ಬೇರೆಯವರ ಹಸ್ತಗತವಾಗಿವೆ. ಸಣ್ಣಪುಟ್ಟ ಇನಾಂದಾರಿಗೇನೋ ತಕ್ಕ ಪರಿಹಾರ ಕೊಡುವುವನ್ನು ಒಪ್ಪೋಣ. ಅದರೆ ಒಂದು ಸಂದರ್ಭದಲ್ಲಿ ಕೆಲವರಿಗೆ ಬಹಳ ಸಹಾಯವಾಗುತ್ತದೆ, ಕೆಲವರಿಗೆ ಜಾಸ್ತಿಯೂ, ಕೆಲವರಿಗೆ ಕಡಮೆಯೂ ಆಗುತ್ತದೆ. ಇದಕ್ಕೆ ಒಂದು ತಿದ್ದುಪಡಿಯನ್ನು ಕಳುಹಿಸಿದೆ. ಅದರಲ್ಲಿ ಹೇಳುವುದು 1940ನೆಯ ಇಸವಿಗೆ ಮುಂಚೆ ಯಾರ್ಯಾರು ಇನಾಂ ಗ್ರಾಮವನ್ನು ಮಾರಿದ್ದಾರೆ, ಅದನ್ನು ಎಷ್ಟಕ್ಕೆ ಕೊಂಡುಕೊಂಡಿದ್ದಾರೆ ಎಂಬುದನ್ನು ಆಧಾರವಾಗಿಟ್ಟುಕೊಳ್ಳುವುದು ಬಹಳ ಸೂಕ್ತವಾದುದು. ಒಂದು ಇನಾಂ ಗ್ರಾಮದಲ್ಲಿ ನಡೆದಿರುವ ಪ್ರಸಂಗ ನನ್ನ ಗಮನಕ್ಕೆ ಬಂದಿದೆ. 600 ರೂಪಾಯಿಗಳಿಗೆ ಇನಾಂ ಗ್ರಾಮವನ್ನು ಕೊಂಡು ಅದು ಕಂದಾಯದ ಹರಾಜಿಗೆ ಬಂದಾಗ ಕ್ರಯಕ್ಕೆ ಪಡೆದವನು 250 ರೂಪಾಯಿ ಕಂದಾಯ ಕಟ್ಟಬೇಕಾಗಿತ್ತು. ಅಲ್ಲಿ ವೃತ್ತಿದಾರರು 350 ರೂಪಾಯಿ ಆತನಿಗೆ ಕೊಟ್ಟು ನಮ್ಮದು ಕೊಟ್ಟಿದೆ ನಿಮ್ಮ ಕಂದಾಯ ಸೇರಿಸಿ ಎಂದು ಹೇಳಿದರೂ, ಅವನು ಹರಾಜುಮಾಡಿಸಿ ಆ ಗ್ರಾಮವನ್ನು ತೆಗೆದುಕೊಂಡಿದ್ದಾನೆ. ಆ ಗ್ರಾಮದಲ್ಲಿ ಒಂದು ಸಾವಿರ ರೂಪಾಯಿಗಳ ಜೋಡಿ ಉತ್ಪತ್ತಿಯಿದೆ. ನಾವು ಲೆಕ್ಕಮಾಡಿದರೆ 25ರಷ್ಟು ಅಂದರೆ 25 ಸಾವಿರವಾಗುತ್ತದೆ. ಆರು ವರ್ಷಗಳಲ್ಲಿ ಗೊಬ್ಬಳಿ ಮರದ ಬೆಳೆಯಿಂದಲೇ ಮೂರು ಸಾವಿರ ಬಂದಿದೆ. ಗೊಬ್ಬಳಿ ಮರದಿಂದಲೇ ಅವನಿಗೆ ಬೇಕಾದಷ್ಟು ಆದಾಯ ಬಂದಿರುವಾಗ ಅಂಥವನಿಗೆ 25 ಸಾವಿರ ಕೊಡುವುದೆಂದರೆ ಸರ್ಕಾರದ ಬೊಕ್ಕಸದಿಂದ ಕೊಡುವುದಕ್ಕೆ ಸಾಧ್ಯವಿಲ್ಲ. ಇಂಥ ಸಂದರ್ಭಗಳೆಷ್ಟೋ ಇವೆ. ಮಾನ್ಯ ಮಂತ್ರಿಗಳು ಇದನ್ನು ಗಮನಕ್ಕೆ ತಂದುಕೊಂಡು 1940ನೆಯ ಇಸವಿಗೆ ಹಿಂದೆ ಯಾವುದು ಖರೀದಿಯಾಗಿದೆಯೆಂಬುದನ್ನು ವಿಚಾರಮಾಡಬೇಕು. ಇನಾಂದಾರರು ಒಗ್ಗಟ್ಟಾಗಿಲ್ಲವೆಂಬುದು ಲೋಕವಿದಿತವಾಗಿದೆ. ಎಂಟು ಹತ್ತು ಜನ ಹಕ್ಕುದಾರರಿದ್ದರೆ ಒಂದು ಕಷ್ಟ. ಅವರ ವೈಷಮ್ಯ ಹೇಳುವುದಕ್ಕೆ ಅಸಾಧ್ಯ. ಈ ಕಾಲದಲ್ಲಿ ತಮ್ಮ ಕಷ್ಟದಿಂದ ಕೆಲವರು ಕಡಮೆಬೆಲೆಗೆ ಯಾರಿಗೋ ಮಾರಿದ್ದಾರೆ, ಇದನ್ನು ನೋಡಿ ಪರಿಹಾರ ಕೊಡುವುದು ಒಳ್ಳೆಯದು. ಅದನ್ನು ಪರೀಕ್ಷಿಸಿ ನೋಡಬಹುದು. ಮತ್ತು ಪರಿಹಾರ ಕೊಡುವುದನ್ನು ಕೂಡ ಒಂದು ಸಮಿತಿಗೆ ವಹಿಸುವುದು ಬಹಳ ಸಾಧುವಾಗಿದೆ. ಈಗ ಆ ಅಧಿಕಾರ ಜಿಲ್ಲಾಧಿಕಾರಿಗಳಿಗೆ ಕೊಟ್ಟಿದೆ. ಅವರ ಮೇಲೆ ಅಪೀಲಿದೆ. ಇನಾಂದಾರರಿಗೆ ಪರಿಹಾರ ಕೊಡುವುದು ಮತ್ತು ಟೆನ್ಯೂರನ್ನು ಖದೀಂ ಟೆನೆಂಟಿಗೆ, ಖಾಯಂದಾರನಿಗೆ ಅಥವಾ ಕ್ವಾಸಿ ಪರ್ಮನೆಂಟ್ ಟೆನೆಂಟಿಗೆ ನಿರ್ದಿಷ್ಟಮಾಡುವುದಕ್ಕೆ ವ್ಯಾಜ್ಯ ಬಂದರೆ ಪರಿಹಾರ ಮಾಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಅಧಿಕಾರವಿದೆ. ಅದರಮೇಲೆ ಅಪೆಲೇಟ್ ಅಥಾರಿಟಿಯಿದೆ. ಇಷ್ಟೆಲ್ಲಾ ಮಾಡಿರುವಾಗ ಈ ವಿಚಾರದಲ್ಲಿ ಲಿಟಿಗೇಷನ್ ಖಂಡಿತ ಬರುತ್ತದೆ. ಆದ್ದರಿಂದ ಪರಿಹಾರ ಕೊಡುವ ತೀರ್ಮಾನವನ್ನೂ ಕೂಡ ಒಂದು ಸಮಿತಿಗೆ ನಿರ್ದಿಷ್ಟಮಾಡಿ ಎಂದು ಹೇಳಬೇಕು. ಬರೀ ಒಂದು ಸಾವಿರದಮೇಲೆ ಇದ್ದರೆ 30ರಷ್ಟು ಎಂದು ಹೇಳುವುದರ ಬದಲು ಕೆಲವು ಇಂಥ ಅಂಶಗಳನ್ನು ನೋಡಿಕೊಂಡಿರುವುದನ್ನು ನೋಡಿ 1940ನೆಯ ಇಸವಿಯಲ್ಲಿ ಕೊಂಡರೆ 12 ಸಾವಿರ ಈಗ 5 ಸಾವಿರ ಕೊಡುವುದು ನ್ಯಾಯವಲ್ಲ. ಇದನ್ನು ವಿಮರ್ಶೆಮಾಡಿ ನೋಡಿ ತಿಳಿದುಕೊಂಡು ಮುಂದಿನ ಕ್ರಮ ಜರುಗಿಸಬೇಕೆಂದು ಅರಿಕೆಮಾಡುತ್ತೇನೆ.

ಆಮೇಲೆ 49-50ನೇ ಸೆಕ್ಷನ್‌ನಲ್ಲಿ ಏನಿದೆ, ಇದು ಬಹಳ ತೊಂದರೆಗೆ ಈಡಾಗುತ್ತದೆ. ಸೆಕ್ಷನ್ (4) ಸಬ್ ಕ್ಲಾಸ್ (ಡಿ) ನಲ್ಲಿ ಯಾವ್ಯಾವ ಗ್ರಾಮಗಳು ಇನಾಂದಾರರಿಂದ ಸರ್ಕಾರಕ್ಕೆ ಬರುತ್ತವೆಯೋ ಆ ಆ ಗ್ರಾಮಗಳಲ್ಲಿ ಹಿಂದಿನ ಬಾಕಿ ಇದ್ದರೆ ಅವನ್ನು ವಸೂಲುಮಾಡಿಕೊಡಬಹುದು ಎಂದು ಇದೆ. 49ನೇ ಸೆಕ್ಷನ್‌ನಲ್ಲಿ ಏನು ಹೇಳಿದೆ ಎಂದರೆ, ಸರ್ಕಾರದ ಸ್ವಾಧೀನಕ್ಕೆ ಬಂದಮೇಲೆ ಅದಕ್ಕಿಂತ ಹಿಂದಿನ ಮೂರು ವರ್ಷದ ಬಾಕಿ ಕೊಟ್ಟುಬಿಟ್ಟರೆ ಸಾಕು, ಬಾಕಿಯದೆಲ್ಲಾ ಮಾಫೀಮಾಡಿ ಎಂದು ಹೇಳಿದೆ. ನಾನು ಸಭೆಯ ಮುಂದೆ ವಿಜ್ಞಾಪಿಸುವುದೇನೆಂದರೆ, ಆ ರೀತಿ ಏಕೆ ಮಾಫೀ ಕೊಡಬೇಕೋ ಅರ್ಥವಾಗುವುದಿಲ್ಲ. ನಾಳೆ ಆ ಗ್ರಾಮದ ಇನಾಂದಾರರುಗಳಿಗೆ ಸರ್ಕಾರದಿಂದ ಪರಿಹಾರ ಕೊಡಬೇಕಾಗಿರುವುದರಿಂದ ಹಿಂದಿನ ಬಾಕಿ ವಸೂಲುಮಾಡಿ. ಇನಾಂದಾರರಿಗೆ ಮೂರು ವರ್ಷದ ಬಾಕಿ ಕೊಡಿಸಿ. ಬಾಕಿಯದನ್ನು ಸರ್ಕಾರದವರೇ ಇಟ್ಟುಕೊಳ್ಳಬಹುದು. ಒಂದುವೇಳೆ ಉದಾರವಾಗಿ ಕೊಡಬೇಕೆಂದಿದ್ದರೆ ಮೂರು ವರ್ಷ ಅಲ್ಲ, 6 ವರ್ಷ ಇನಾಂದಾರರಿಗೆ ಕೊಡಿ. ಅದಕ್ಕೂ ಅವಕಾಶವಿಲ್ಲವೆ ಈ ರೀತಿ ಮುಫತ್ತಾಗಿ ಕೊಡುವುದು ನ್ಯಾಯವಲ್ಲ. ಇದನ್ನು ಕೂಡ ಮಾನ್ಯ ಮಂತ್ರಿಗಳು ಗಮನಿಸುತ್ತಾರೆ ಅಥವಾ ಸಭೆಯವರು ಗಮನದಲ್ಲಿಟ್ಟುಕೊಂಡು ಪರ್ಯಾಲೋಚಿಸುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ.

ಕೊನೆಯದಾಗಿ ಶೃಂಗೇರಿ ಮಠದ ವಿಚಾರ. ಇದರ ವಿಚಾರದಲ್ಲಿ ಬಹಳವಾಗಿ ಚರ್ಚೆಯಾಗಿದೆ. ಈ ಸಭೆಯ ಮಾನ್ಯ ಸದಸ್ಯರೆಲ್ಲಾ ಈ ಮಠದ ವಿಚಾರದಲ್ಲಿ, ಮಠದ ಗೌರವ, ಪ್ರತಿಷ್ಠೆಗಳನ್ನು ಕಮ್ಮಿಮಾಡಬೇಕೆಂ

(ಶ್ರೀ ಎಸ್. ರಂಗರಾಮಯ್ಯನವರು)

ದಾಗಲೀ, ಕುಂದಕವನ್ನುಂಟುಮಾಡಬೇಕೆಂದಾಗಲೀ ಯಾವ ಉದ್ದೇಶ ಅಥವಾ ಪ್ರಯತ್ನವೂ ಇಲ್ಲವೆಂದು ಹೇಳಿರುವುದ ನೋಡಿದರೆ ಬಹಳ ಸಂತೋಷವಾಗುತ್ತದೆ. ಯಾವ ಭಿನ್ನಾಭಿಪ್ರಾಯವೂ ಇಲ್ಲ ಎಂಬುದಾಗಿ ಆ ಅಭಿಪ್ರಾಯವನ್ನು ಸೂಚಿಸಿದ ಮಹಾಶಯರಿಗೆಲ್ಲರಿಗೂ ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇನೆ. ಇದು ಒಬ್ಬರಿಗೆ ಮಾತ್ರವಲ್ಲ, ಸರ್ವರಿಗೂ ಸೇರಿದ್ದು ಎಂದು ನಾನು ಹೇಳುತ್ತೇನೆ. ಈಗ ಬಂದಿರುವುದೇನೆಂದರೆ ಸೆಕ್ಷನ್ (4)ರಲ್ಲಿ ಹೇಳಿರುವ ಪ್ರಕಾರ ಯಾವ ಇನಾಂದಾರರ ಗ್ರಾಮವೇ ಆಗಲೀ ಸರ್ಕಾರಕ್ಕೆ ಬಂದ ಕೂಡಲೇ ಬರಿಯ ಪರಿಹಾರಕ್ಕೆಮಾತ್ರ ಹಕ್ಕುದಾರರಾಗುತ್ತಾರೆ. 21ನೇ ಸೆಕ್ಷನ್‌ನಲ್ಲಿ ಮಠಕ್ಕೆ ಸಂಬಂಧವಾದ ಮತ್ತು ಧರ್ಮಸಂಸ್ಥೆಗಳಿಗೆ ಸಂಬಂಧಪಟ್ಟ ಇನಾಂ ಗ್ರಾಮಗಳಿದ್ದರೆ ಅದಕ್ಕೆ ಎಷ್ಟು ಕೊಡಬೇಕೋ ಅದನ್ನೆಲ್ಲಾ ಪೂರ್ತಿಯಾಗಿ ಕೊಡುತ್ತೇವೆ ಎಂದು ಹೇಳಿದೆ: ಇಷ್ಟೇ ಸ್ವಾಮಿ. ಧಾರ್ಮಿಕ ಸಂಸ್ಥೆ ಎಂದು ಕರೆಯಲ್ಪಡುವ ಒಂದು ದೊಡ್ಡ ಸಂಸ್ಥೆಗೆ ಪ್ರೋತ್ಸಾಹ ಕೊಡದಿದ್ದಮೇಲೆ ಏನು ಪ್ರಯೋಜನ? ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತ ಎಂಬುದಾಗಿ ಇದೆ. ಆದರಲ್ಲಿ ಯಾವ್ಯಾವ ಕಾಲದಲ್ಲಿ ಯಾವ್ಯಾವುದು ಪ್ರವರ್ಧಮಾನಕ್ಕೆ ಬಂದವೋ ಅವಕ್ಕೆ ಬೆಂಬಲ ಕೊಟ್ಟಿದ್ದಾರೆ. ಈಗ ಬೆಂಬಲ ಕೊಟ್ಟರೆ ಎಷ್ಟೋ ಕೊಡದಿದ್ದರೂ ಅಷ್ಟೆ. ಆದರೆ ಅದಕ್ಕಿರತಕ್ಕ ಘನತೆ, ಗಾಂಭೀರ್ಯ ಇವು ಆಯಾಯ ತತ್ವಗಳ ಶಕ್ತಿಯಮೇಲೆ ಇವೆ. ಇಲ್ಲಿ ಅದ್ವೈತವನ್ನು ಶ್ರೇಷ್ಠವಾದದ್ದು ಎಂದು ಪ್ರತಿಪಾದನೆಮಾಡಬೇಕಾಗಿಲ್ಲ ಅಥವಾ ಇನ್ನಾವುದನ್ನೂ ಅಲ್ಲಗಳೆಯಬೇಕಾಗಿಲ್ಲ. ಮುಖ್ಯವಾಗಿ ಹೇಳುವುದಾದರೆ ಈ ಮಠ ಬಹಳ ಪುರಾತನವಾದದ್ದು. ಇದು ಸ್ಥಾಪನೆಯಾದ್ದು 1200ವರ್ಷಗಳ ಹಿಂದೆ. ಆ ಕಾಲದಲ್ಲಿ ಆ ಸ್ವಾಮಿಗಳು ಶೃಂಗೇರಿಯಂಥ ಸ್ಥಳದಲ್ಲಿ—ಗುಡ್ಡಗಾಡು ಪ್ರದೇಶ ಇದ್ದು, ಇಂಥಾ ಆಧುನಿಕ ಕಾಲದಲ್ಲೇ ಹೋಗುವುದಕ್ಕೆ ಕಷ್ಟವಾಗಿರುವಾಗ ಹೋಗಿ ನೆಲಸಬೇಕೆಂದರೆ, ಜನಸಂಪರ್ಕವಿಲ್ಲದ ಅಂಥ ನಿರ್ಜನ ಪ್ರದೇಶದಲ್ಲಿ ತಪಸ್ಸನ್ನು ಮಾಡುತ್ತಾ ಕಾಲಕಳೆಯಬೇಕೆಂದು ಹೋದರೇ ವಿನಾ ಜಹಗೀರಿ ಸಂಪಾದಿಸಬೇಕು, ತಮ್ಮ ಕೀರ್ತಿ ಪ್ರತಿಷ್ಠೆ ಹೆಚ್ಚಿಸಿಕೊಳ್ಳಬೇಕು ಎಂದು ಹೋಗಲಿಲ್ಲ. ಕೆಲವು ಮಾನ್ಯ ಸದಸ್ಯರು ಜಹಗೀರಿ ಕೊಟ್ಟಿರುವುದರಿಂದ ಮಹಾಸ್ವಾಮಿಗಳವರ ಗೌರವ ಪ್ರತಿಷ್ಠೆ ಹೆಚ್ಚುತ್ತದೆ ಎಂದು ಹೇಳಿದರು. ಅದನ್ನು ತೆಗೆಯುವುದರಿಂದೇನೂ ಅದಕ್ಕೆ ಕುಂದಕವಾಗುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಅವರಿಗೆ ಇರುವುದು ದಂಡ, ಕಮಂಡಲ, ಕಾವೀವಸ್ತ್ರ. ಅವರಿಗೆ ಪ್ರಪಂಚದ ಸಂಪರ್ಕ ಹಿಂದೆಯೂ ಇಲ್ಲ, ಈಗಲೂ ಇಲ್ಲ, ಮುಂದೆಯೂ ಇಲ್ಲ. ಅವರು ಪ್ರಾಪಂಚಿಕವ್ಯವಹಾರ ಇಟ್ಟುಕೊಂಡರೂ ಕೂಡ ಅದಕ್ಕೆ ಭಕ್ತಾದಿಗಳು ಅವಕಾಶ ಕೊಡಕೂಡದು ಎಂದು ನನ್ನ ಅಭಿಪ್ರಾಯ. ಈಗ ಬಂದಿರುವ ಪ್ರಶ್ನೆ ಅದಲ್ಲ. ಅವರ ಭಕ್ತಾದಿಗಳು ಲಕ್ಷೋಪಲಕ್ಷ ಜನ ಇವೇ ಹಿಂದೂಸ್ಥಾನದಲ್ಲಿ ಹಿಮಾಚಲ ಪರ್ವತದಿಂದ ಹಿಡಿದು ಕನ್ಯಾಕುಮಾರಿಯವರೆಗೂ ಇದ್ದಾರೆ. ಶಂಕರಾಚಾರ್ಯರು ಇಂಥಾ ಒಂದು ಮತಸ್ಥಾಪನೆ ಮಾಡಿದ್ದರಿಂದ ಅವರಿಗೆ ಅದ್ವೈತ ಸ್ಥಾಪನಾಚಾರ್ಯ ಎಂಬ ಬಿರುದನ್ನು ಜನರೇ ನಿವೇದನೆಮಾಡಿಕೊಂಡರು. ಅವರೇನೂ ಕೇಳಲಿಲ್ಲ. ಆದರೆ ಈಗಿನ ಕಾಲದ ಸನ್ನಿವೇಶ ಹೇಗಿದೆಯೆಂಬುದನ್ನು ನೋಡೋಣ. ಈಗ ಜಿಜ್ಞಾಸೆ ಹುಟ್ಟಿರುವುದು ಭಕ್ತಾದಿಗಳ ಮನೋಭಿಪ್ರಾಯದಲ್ಲಿ. ಏನಿಲ್ಲ ಸ್ವಾಮಿ, ಇವತ್ತು ಒಬ್ಬರು ದೊಡ್ಡ ಹುದ್ದೆಯಲ್ಲಿರುತ್ತಾರೆ, ರಿಟೈರ್ ಆಗಿಹೋದರೆ ನಾಳೆ ಯಾರೂ ಕೇಳುವುದಿಲ್ಲ ಎಂದು ಹೇಳುತ್ತಾರೆ. ಇನ್ನೊಬ್ಬರು ಇವತ್ತು ಮಂತ್ರಿಗಳಾಗಿರುತ್ತಾರೆ. ನಾಳೆ ಮಂತ್ರಿ ಪದವಿ ಬಿಟ್ಟರೆ 'ಏನಪ್ಪಾ ಹಳೇ ಮಂತ್ರಿಗಳು' ಎಂದು ಜನ ಉದಾಸೀನರಾಗುತ್ತಾರೆ. ಇದು ಮನುಷ್ಯ ಸ್ವಭಾವ.

ಶ್ರೀ ಜಿ. ಎ. ಆಚಾರ್ಯರು.—ಮಂತ್ರಿಗಳಿಗೂ ಸನ್ಯಾಸಿಗಳಿಗೂ ಹೋಲಿಸುವುದು ಸರಿಯಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಅವರ ಭಾವನೆ ಏನೇ ಇರಲಿ, ಇದು ಮನುಷ್ಯ ಸ್ವಭಾವ. ಸಾಮಾನ್ಯ ಮನುಷ್ಯನ ಮನೋಭಾವ ಹೇಗಿರುತ್ತದೆ ಎಂದರೆ "ಏನಪ್ಪಾ ಇಂಥಾ ಹಳೆಯ ಮಠದ ಜಹಗಿರಿ ತೆಗೆದುಕೊಂಡುಬಿಟ್ಟರು, ಅದನ್ನು ಹಾಗೇ ಉಳಿಸುವುದಕ್ಕೆ ಆಗುತ್ತಿರಲಿಲ್ಲವೆ" ಎಂಬುದಾಗಿ ಅನ್ನುತ್ತಾರೆ. ಈಗ ನಮ್ಮ ಮುಂದೆ ಇರುವ ವಾದಸರಣಿ ಒಪ್ಪುತ್ತೇನೆ. ಭೂಸುಧಾರಣೆ ಒಂದೇ ರೀತಿಯಾಗಿರಬೇಕೇ ವಿನಾಃ ಒಂದೊಂದು ಕಡೆ ಒಂದೊಂದು ರೀತಿಯಾಗಿದ್ದರೆ ತೊಂದರೆಯಾಗುತ್ತದೆ. ಅಲ್ಲದೆ ಕೆಲವು ಮಾನ್ಯಮಿತ್ರರು ಹೇಳಿದಂತೆ ಇತರ ಧಾರ್ಮಿಕ ಸಂಸ್ಥೆಗಳಿಗೆ ಮತ್ತು ಮಠ ಸಂಬಂಧವಾದ ಸಂಸ್ಥೆಗಳಿಗೆ ಸಂಬಂಧಪಟ್ಟ ದೃಷ್ಟಿಯಿಂದ ವಿನಾಯಿತಿ ಕೇಳಿದರೆ ಏನು ಮಾಡೋಣ ಎಂಬುದು ಬರುತ್ತದೆ. ಸೆಲೆಕ್ಟ್ ಸಮಿತಿಯವರು ಬಹಳ ವಿಶಾಲಮನೋಭಾವದಿಂದ ಬಾಕಿ ಇನಾಂದಾರರಿಗೆ ಕೊಡದೇ ಇರುವ ಅನೇಕ ಹಕ್ಕುಗಳನ್ನು ಶೃಂಗೇರಿಗೆ ಉಳಿಸಿಕೊಟ್ಟಿದ್ದಾರೆ. ಅದಕ್ಕಾಗಿ ನಾನು ಅವರನ್ನು ವಂದಿಸುತ್ತೇನೆ. ಅರಣ್ಯ ಬಿಟ್ಟುಕೊಟ್ಟಿದ್ದಾರೆ. ಖನಿಜ ಸಂಪತ್ತು ಬಿಟ್ಟುಕೊಟ್ಟಿದ್ದಾರೆ ಮತ್ತು ಇನ್ನು ಅನೇಕ ವಿಚಾರಗಳನ್ನು ಬಿಟ್ಟುಕೊಟ್ಟಿದ್ದಾರೆ.

ಈಗ ಅಲ್ಲಿ ಏನಾಗಿದೆ? ಅಷ್ಟು ಸ್ವತ್ತನ್ನೂ ಮಠಕ್ಕೆ ಉಳಿಸಿಕೊಟ್ಟಿದ್ದಾರೆ. ಒಂದು ಪಕ್ಷದವರು ಹೇಳುವುದೇನೆಂದರೆ, ಅಲ್ಲಿ ಕಂದಾಯ ಮುಂತಾದುವುಗಳನ್ನು ವಸೂಲುಮಾಡುವುದು ಮಠದವರಿಗೇ ಇರಲಿ, ಅವರೇ ಹಿಂದಿದ್ದಂತೆ ಅಮಲ್ದಾರರೊಬ್ಬರನ್ನಿಟ್ಟುಕೊಂಡು ವಸೂಲುಮಾಡಿಸಿಕೊಂಡು ಉಪಯೋಗಿಸಿಕೊಳ್ಳಲಿ ಎಂಬುದು ಒಂದು ವಾದ. ಆದರೆ ಸರ್ಕಾರದವರು ಹೇಳುವುದು, ಆ ರೀತಿ ಬೇಡ, ನಾವೇ ಅಲ್ಲಿನ ವಸೂಲಿ ಜವಾಬ್ದಾರಿಯನ್ನೆಲ್ಲಾ ವಹಿಸಿಕೊಂಡು ಮಠದವರ ಖರ್ಚಿಗೆ ಎಷ್ಟು ಬೇಕೋ ಅಷ್ಟನ್ನು ಕೊಡೋಣ. ಎಂದು. ಅಂದರೆ, Superior Holder ಎನ್ನುವುದೊಂದನ್ನು ಬಿಟ್ಟುಕೊಟ್ಟರೆ ಬಾಕಿ ಎಲ್ಲವನ್ನೂ ಕೊಡುತ್ತೇವೆಂದು ಮಾನ್ಯ ಸದಸ್ಯರು ಒಪ್ಪಿಕೊಂಡಿದ್ದಾರೆ. ಇದರ ಮೇಲೆ ಈಗ ಚರ್ಚೆ ಬೇಕಾದಷ್ಟು ಆಗಿದೆ. ನಾನು ಹೇಳುವುದಾದರೂ ಇಷ್ಟೆ. ಸರ್ಕಾರದವರು ದೊಡ್ಡಮನಸ್ಸು ಮಾಡಿ ಮಠದ ಜಹಗೀರಿಯಿದೆಯೆಂದು ನಾಮಕಾವಾಸ್ತೆಗಾದರೂ ಮಾಡಿದರೂ ಸಾಕು; ಖಾಸ್ ಸ್ವತ್ತುಗಳನ್ನೂ ಅವರೇ ಬೇಕಾದರೂ ಮ್ಯಾನೇಜುಮಾಡಿಕೊಳ್ಳಲಿ, ಇಲ್ಲದಿದ್ದರೆ ಸರ್ಕಾರದವರಾದರೂ ಮಾಡಿಕೊಳ್ಳಲಿ; ಇಷ್ಟು ಮಾತ್ರ ಮಾಡುವುದು ಒಂದು ರೀತಿಯಲ್ಲಿ ಉಭಯತ್ರರಿಗೂ ಸಮನ್ವಯವಾಗಿರುತ್ತದೆಂದು ತೋರುತ್ತೆ. ಸರ್ಕಾರದವರು ಯಾವ ರೀತಿಯ ಮಾಡುತ್ತಾರೋ ನೋಡಬೇಕು.

ಒಬ್ಬ ಸದಸ್ಯರು.—ಹೇಗೆ ಮಾಡುತ್ತಾರೋ ನೋಡಬೇಕೆಂಬುದರಲ್ಲಿ ಅರ್ಥವಿಲ್ಲ. ಏನುಮಾಡಬೇಕೆಂಬುದನ್ನು ಹೇಳಿ.

ಶ್ರೀ ಎಸ್. ರಂಗರಾಮಯ್ಯನವರು.—ಅಲ್ಲಿನ ಖಾಸ್ ಜಮೀನುಗಳ ಮ್ಯಾನೇಜ್‌ಮೆಂಟನ್ನು ಮಾತ್ರ ಮಠಕ್ಕೆ ಕೊಡಿ, ಬಾಕಿ ಕಂದಾಯ ವಸೂಲಿ ಮುಂತಾದುವುಗಳನ್ನು ಸರ್ಕಾರದವರೇ ವಹಿಸಿಕೊಳ್ಳಲಿ ; ಈಗ 10-6 ವರ್ಷಗಳಿಂದಲೂ ಸರ್ಕಾರದವರೇ ವಹಿಸಿಕೊಂಡಿದ್ದಾರೆ. ಲ್ಯಾಂಡ್ ರೆವಿನ್ಯೂ ನಿಯಮ ನಿಬಂಧನೆಗಳೆಲ್ಲಾ ಅಲ್ಲಿಯೂ ಜಾರಿ ಮಾಡಿದ್ದೀರಿ. ಈಗಿನ ಕಾನೂನಿರುವುದು ರೈತನ ರಕ್ಷಣೆಗೆ; ಅವನಿಗೊಂದು ಹಕ್ಕನ್ನು ಕಲ್ಪಿಸಿಕೊಡುವುದಕ್ಕೆ ಮಾತ್ರ. ಅಷ್ಟನ್ನು ಬೇಕಾದರೆ ನಾನು ಹೇಳಿದಂತೆ.

Janab MOHAMED HANIEF (Bangalore—Muslim).—Is it your view with regard to inam villages other than of Sringeri ?

Sri H. M. CHANNABASAPPA.—Shall I take it that you are agreeable for removing the superior holdership ?

Mr. SPEAKER.—Yes, he is agreeable.

Sri S. RANGARAMIAH.—I put forward two views. I do not want to commit myself.

Sri H. M. CHANNABASAPPA.—We would like to know your definite opinion.

Sri S. RANGARAMIAH.—I will give my definite opinion at the proper time. (laughter)

ನಾನು ಆ ದೃಷ್ಟಿಯಿಂದ ಇದಕ್ಕೇ ಒಂದು ಬೇರೆ ಆಕ್ಟನ್ನು ಮಾಡಬೇಕೆಂದು ಹೇಳುತ್ತೇನೆ. ಹಾಗಿಲ್ಲದೆ ಈ ಇನಾಂ ಬಿಲ್ ಜೊತೆಗೇ ಸೇರಿಸಿ ಕಾನೂನು ಮಾಡುವುದರಿಂದ ಸ್ವಲ್ಪಮಟ್ಟಿಗೆ ಅದಕ್ಕೆ ಹಿಂದಿನಿಂದ ಬಂದಿದ್ದ ಗೌರವಕ್ಕೆ ಚ್ಯುತಿ ಬಂದಂತಾಗುತ್ತದೆ. ಆದ್ದರಿಂದ ಬೇರೆಯಾಗಿ ಒಂದು ಆಕ್ಟನ್ನು ಮಾಡಿ ಅಲ್ಲಿನ ರೈತರ ಹಕ್ಕನ್ನೂ ಕಾಪಾಡಿಕೊಂಡು, ಮಠದ ಮ್ಯಾನೇಜ್‌ಮೆಂಟಿಗೂ ಸುಗಮವಾದ ಏರ್ಪಾಡು ಮಾಡುವುದರಲ್ಲಿ ಏನೂ ತೊಂದರೆಯಿಲ್ಲವೆಂದು ನಾನು ಹೇಳುತ್ತೇನೆಯೇ ವಿನಾ, ಶ್ರೀ ಮಠದವರು ಏನೋ ದರ್ಬಾರ್ ಮಾಡುವುದಕ್ಕಾಗಲೀ Sovereign Rights ಕೊಡಬೇಕೆಂದಾಗಲೀ ನಾನು ಕೇಳುತ್ತಿಲ್ಲ. ಮಾನ್ಯ ಸದಸ್ಯರು ಸ್ವಲ್ಪ ಉದಾರವಾಗಿ ಯೋಚನೆಮಾಡಿ ನನ್ನ ಈ ಸಲಹೆಯನ್ನು ಒಮ್ಮತದಿಂದ ಒಪ್ಪಬೇಕೆಂದು ಕೇಳಿಕೊಳ್ಳುತ್ತೇನೆ.

(**Sri M. GOVINDA REDDY** rose).

Mr. SPEAKER.—I hope the Hon'ble Member's speech will be short and sweet.

Sri M. GOVINDA REDDY (Chitaldrug District-General).—Always short.

The Hon'ble Sri H. C. DASAPPA.—No, Sir, he is the tallest man here. (Laughter).

Sri M. GOVINDA REDDY.—But my speech will be short.

ಮಾನ್ಯ ಅಧ್ಯಕ್ಷರೇ, ಸೆಲೆಕ್ಟ್ ಕಮಿಟಿ ಪರಿಶೀಲನೆಗೆ ಕಳುಹಿಸಿದ್ದ ಈ ಇನಾಂಗ್ರಾಮಗಳನ್ನು ರದ್ದು ಮಾಡುವ ಮಸೂದೆಯಲ್ಲಿರುವ ಮೂಲೋದ್ದೇಶವೇನೆಂದರೆ ಸರ್ಕಾರಕ್ಕೂ ಭೂಮಿಯನ್ನು ಉಳತಕ್ಕ ರೈತನಿಗೂ ಮಧ್ಯವರ್ತಿಯಾಗಿ ಭೂಸ್ವಾಮ್ಯವಿರುವವರು ಯಾರೂ ಇರಕೂಡದು ಎಂಬುದು. ಈ ಉದ್ದೇಶ ಇಂಡಿಯಾದೇಶದಲ್ಲಿ ನಾನಾ ಪ್ರಾಂತ್ಯಗಳಲ್ಲಿ ಈಗ ನಡೆಯುತ್ತಿರುವ ಕೆಲಸಕಾರ್ಯ ಮತ್ತು ಕಾನೂನಿಗನುಸಾರವಾಗಿದೆ. ಅಂದರೆ, ಇಂಡಿಯಾದೇಶದವರ ನೀತಿಯನ್ನು ನಮ್ಮ ಮೈಸೂರಿನವರ ನೀತಿ ಅನುಸರಿಸಿದೆ. ಜೊತೆಗೆ, ಇದೇ ಸಂದರ್ಭದಲ್ಲಿ ಪ್ಲಾನಿಂಗ್ ಕಮಿಟಿಯವರು ಮಾಡಿರತಕ್ಕ ಶಿಫಾರಸ್ಸುಗಳ ಪ್ರಕಾರವೂ ನಾವು ಮಾಡುತ್ತಿದ್ದೇವೆ. ಅವರು ಲ್ಯಾಂಡ್ ರೆವಿನ್ಯೂ ರಿಫಾರಮ್ಸ್ ಕಮಿಟಿ ರಿಪೋರ್ಟಿನ 82ನೆಯ ಪುಟದಲ್ಲಿ ಹೇಳಿರುವ ರೀತ್ಯಾ, 'ಭಾರತದೇಶದಲ್ಲಿರುವ ಸಂಪತ್ತೆಲ್ಲಾ ಇಡೀ ಜನಾಂಗಕ್ಕೆ ಸೇರಬೇಕು ; ಭೂಮಿಯನ್ನು ಉಳತಕ್ಕವನಿಗೂ ಜನಾಂಗಕ್ಕೂ ನಡುವೆ Intermediary ಯಾಗಿ ಜಮೀನ್ದಾರನಾಗಲೀ ಇನಾಂದಾರನಾಗಲೀ ಹಕ್ಕುದಾರನಾಗಲೀ ಇರಕೂಡದೆಂಬುದು ಅವರಧ್ಯೇಯ. ಆ ಧ್ಯೇಯಕ್ಕನುಸಾರವಾಗಿ ನಮ್ಮ ಸರ್ಕಾರದವರೂ ಕೂಡ ಈ ಬಿಲ್ಲನ್ನು ತಂದಿದ್ದಾರೆ. ಈ ಮಸೂದೆಯಿಂದ ಇನಾಂ ಗ್ರಾಮಗಳನ್ನು ರದ್ದುಮಾಡಬೇಕೆಂದು ಮಾಡಿದೆ.

ಈ ಮೂಲಕ ಮಸೂದೆ ಈ ಸಭೆಯ ಮುಂದೆ ಬಂದು ಚರ್ಚೆಯಾದಾಗ ಆ ಉದ್ದೇಶವನ್ನು ಯಾರೂ ಪ್ರಶ್ನೆ ಮಾಡಲಿಲ್ಲ. ಈ ಸಭೆಯವರು ಆ ಉದ್ದೇಶವನ್ನು ಅಂಗೀಕಾರಮಾಡಿ ಅದರ ವಿವರಗಳನ್ನೆಲ್ಲಾ ಪರಿಶೀಲನೆಮಾಡಿ ಸೆಲೆಕ್ಟ್ ಸಮಿತಿಗೆ ಕಳುಹಿಸಿದರು. ಆದರೆ ಈ ದಿವಸ ಚರ್ಚೆಯಾಗುತ್ತಿರುವುದನ್ನು ನೋಡಿದರೆ ಆ ಉದ್ದೇಶಕ್ಕೇ ಚ್ಯುತಿ ಬರುವ ವಾದ ಎದ್ದುನಿಂತಿದೆ. ಅದೇ ಇನಾಂ ಗ್ರಾಮಗಳನ್ನು ರದ್ದುಮಾಡಬೇಕೆಂಬ ಉದ್ದೇಶ. ಆ ಉದ್ದೇಶಕ್ಕೆ ಶೃಂಗೇರಿಯ ಮಟ್ಟಿಗೆ ವಿನಾಯಿತಿ ಮಾಡಬೇಕೆಂದು ಹೇಳುತ್ತಿದ್ದಾರೆ. ಇದು ಮೂಲೋದ್ದೇಶಕ್ಕೇ ಭಂಗ ತರುವಂಥಾದ್ದು. ಯಾವುದಾದರೂ ಕಾನೂನಿಗೆ ವಿನಾಯಿತಿ ಕೊಡುವುದಾದರೆ, ಅದು ಕಾನೂನಿನ ಮೂಲ ಉದ್ದೇಶಕ್ಕೆ ವಿರೋಧ ಬರುವಂಥಾದ್ದಾಗಿರಕೂಡದು. ಈಗ ನಮ್ಮ ಮುಂದೆ ಬಂದಿರುವುದು ಒಂದು ಜಹಗೀರಿ ವಿಷಯ ; ಸುಮಾರು 47,5 0 ಎಕರೆ ಜಮೀನುಳ್ಳದು, 47 ಗ್ರಾಮಗಳ ರೈತರ ಜಮೀನಿಗೆ, ಹಕ್ಕುಬಾಧ್ಯತೆಗಳಿಗೆ ಸಂಬಂಧಪಟ್ಟದು. ಅದಕ್ಕೆ ವಿನಾಯಿತಿಕೊಡುವುದು ಕ್ರಮವಾಗಿ ಕಾಣುವುದಿಲ್ಲ. ಇದು ಮೂಲೋದ್ದೇಶವನ್ನೇ ಕುಂಠಿತಗೊಳಿಸಿದಂತಾಗುತ್ತದೆ. ಈ ವಾದವನ್ನೆತ್ತಿದ ನನ್ನ ಮಿತ್ರರು ಇದನ್ನು ಯಾವ ರೀತಿ ಸಮರ್ಥನೆಮಾಡುತ್ತಾರೋ ಗೊತ್ತಿಲ್ಲ. ಇನ್ನು, ಈ ವಾದ ಯಾವಾಗ ಬರಬೇಕಾಗಿತ್ತು? ಈ ಸಭೆ ಹಿಂದೆ ಇದನ್ನು ಚರ್ಚೆಗೆ ತೆಗೆದುಕೊಂಡಾಗ, ಸೆಲೆಕ್ಟ್ ಕಮಿಟಿಗೆ ಕಳುಹಿಸುವ ಅಂಶವನ್ನು ಪರಿಶೀಲನೆಮಾಡುವಾಗ, ಇದರ ಮೂಲೋದ್ದೇಶಗಳನ್ನು ಅಂಗೀಕಾರಮಾಡುವ ಸಮಯದಲ್ಲಿ, ಇದನ್ನೆಲ್ಲಾ ಹೇಳಬಹುದಾಗಿತ್ತು. ಆಗ ಸಭೆಯವರು ಒಪ್ಪಿದ್ದರೆ ಅದಕ್ಕೆ ತಕ್ಕಂತೆ ಸೂಕ್ತ ಬದಲಾವಣೆಗಳನ್ನು ಮಾಡಬಹುದಾಗಿತ್ತು. ಆಗ ಮೂಲೋದ್ದೇಶವನ್ನು ಒಪ್ಪಿದ ಮೇಲೆ, ಇಂದು ಅದರಲ್ಲಿ ಅರ್ಧ ಭಾಗ ಬೇಡ ಎಂದು ಹೇಳುವುದು ಪಾರ್ಲಿಮೆಂಟರಿ ನಡೆವಳಿಕೆಗೂ ಕ್ರಮವಾಗಿಲ್ಲವೆಂದು ಸೂಚಿಸುತ್ತೇನೆ.

(SRI M. GOVINDA REDDY)

ಅಲ್ಲದೆ, ಈಗ, ವಾದವನ್ನೆತ್ತಿದ್ದ ಸೆಲೆಕ್ಟ್ ಕಮಿಟಿಯಲ್ಲಿ ನಾನೂ ಇದ್ದೆ. ಸೆಲೆಕ್ಟ್ ಕಮಿಟಿಯ ಮುಂದೆ ಹಿಂದೆ ಹೈಕೋರ್ಟಿನ ಜಡ್ಜರಾಗಿದ್ದ ಜಸ್ಟಿಸ್ ನಾಗೇಶ್ವರಯ್ಯರವರೂ, ಮಾಜಿ ಕೌನ್ಸಿಲರಾಗಿದ್ದ ಶ್ರೀ ಎ. ವಿ. ರಾಮನಾಥನ್‌ರವರೂ ವಾದ ಮಾಡಿದ್ದನ್ನು ಕೇಳಿದೆ. ದೊಡ್ಡ ಗ್ರಂಥಗಳನ್ನೂ ಚಾರಿತ್ರಿಕ, ಐತಿಹಾಸಿಕ ದಾಖಲೆಗಳನ್ನೂ ತಂದು ಶೃಂಗೇರಿಯೂ ಬಹು ಪ್ರಾಚೀನವಾದುದು, ಪುರಾತನ ಕಾಲದಿಂದ, ಆರ್ಷೇಯವಾಗಿ ಬಂದ ಸಂಸ್ಕೃತಿಯ ಕೇಂದ್ರ, ಅದನ್ನು ರದ್ದುಮಾಡಬಾರದೆಂದು ಹೇಳಿದರು. ಅವರ ವಾದವೆಲ್ಲಾ ಆದ ಮೇಲೆ ನಾವು ಅವರನ್ನು ನೇರವಾಗಿ ಇಷ್ಟು ಮಾತ್ರ ಕೇಳಿದೆವು. 'ಸ್ವಾಮಿ ಇಷ್ಟೆಲ್ಲ ಹೇಳುವುದು ಅನಾವಶ್ಯಕವಾಗಿತ್ತು. ಆ ಪ್ರಶ್ನೆ ಬರಬೇಕಾದ್ದೇ ಇರಲಿಲ್ಲ. ಮುಖ್ಯವಾಗಿ ಈಗಿರುವ ಪ್ರಶ್ನೆ, ಸರ್ಕಾರಕ್ಕೂ ಭೂಮಿ ಉಳುವವನಿಗೂ ಮಧ್ಯೆ ಮಠವಿದೆ. ಮಠಕ್ಕಿರತಕ್ಕ ಆ ಹಕ್ಕನ್ನು ರದ್ದು ಮಾಡಿಕೊಳ್ಳುವುದಕ್ಕೆ ಒಪ್ಪುತ್ತೀರಾ ಎಂದು ಕೇಳಿದ್ದಕ್ಕೆ, ನಮಗೆ ಆ ಅಧಿಕಾರವಿಲ್ಲವೆಂದು ಹೇಳಿದರು. ಅವರಿಗಿಂತಲೂ ದಕ್ಷತೆಯಿಂದ ಈ ಪ್ರಶ್ನೆಯನ್ನು ಸೆಲೆಕ್ಟ್ ಕಮಿಟಿಯವರ ಮುಂದೆ ಕೆಲವು ಆ ಸಮಿತಿ ಸದಸ್ಯರೇ ಇಟ್ಟರು. ಆ ಸದಸ್ಯರ ಪ್ರಾಮಾಣಿಕತೆಯನ್ನೂ ಅವರ ಶ್ರದ್ಧಾಸಕ್ತಿಗಳನ್ನೂ ನಾನು ಒಪ್ಪುತ್ತೇನೆ. ಆದರೂ ಅವರ ವಾದದಲ್ಲಿ ಎಷ್ಟು ನ್ಯಾಯವಿತ್ತೋ ಅಷ್ಟು ದೂರ ನಾವು ಹೋಗಲು ಒಪ್ಪಿದೆವು. "ಇತರ ಇನಾಂದಾರರುಗಳಿಗೆ ಅನ್ವಯಿಸುತ್ತಿರುವ ಈ ಮಸೂದೆಯ ಪ್ರಕಾರ ಇರುವ ಷರತ್ತುಗಳನ್ನೇ ಈ ಮಠಕ್ಕೂ ಅನ್ವಯಿಸಕೂಡದು" ಎಂದು ಅವರು ಹೇಳಿದರು.

ಮಿತ್ರರನೇಕರು ಮುಂದಿಟ್ಟ ವಾದವನ್ನೇ ನಾವು ತೆಗೆದುಕೊಂಡರೂ ಕೂಡ ಈ ಮಠಕ್ಕೆ ಪ್ರಾಶಸ್ತ್ಯವಿದೆಯೆಂಬುದನ್ನು ಒಪ್ಪುತ್ತೇನೆ. ಇದನ್ನು ಪ್ರಾಚೀನತೆಯ ದೃಷ್ಟಿಯಿಂದ ನೋಡಿದರೂ, ಚಾರಿತ್ರಿಕ ದೃಷ್ಟಿಯಿಂದ ನೋಡಿದರೂ ಇದಕ್ಕೆ ಪ್ರಾಶಸ್ತ್ಯವೂ ಇದೆ, ಪ್ರಾಚೀನತೆಯೂ ಇದೆ. ಅದ್ವೈತ ವೇದಾಂತವನ್ನೊಪ್ಪುವವರಿಗೆ ಇದು ಬಹಳ ಪವಿತ್ರವಾದ ಸ್ಥಳ. ಆದುದರಿಂದ ಈ ಮಠವನ್ನೂ ಗುರುಗಳನ್ನೂ ಗೌರವದಿಂದ ತಲೆಯ ಮೇಲೆ ಹೊತ್ತು ಮಾನ್ಯತೆಯಿಂದ ನಡೆದುಕೊಂಡರೆ, ಇದನ್ನು ಮಾನ್ಯತೆಮಾಡುವುದು ಸಹಜ. ಆದರೆ ಇದೊಂದು ನ್ಯಾಷನಲ್ ಇನ್‌ಸ್ಟಿಟ್ಯೂಷನ್. ಅಥವಾ ರಾಷ್ಟ್ರೀಯ ಸಂಸ್ಥೆ ಮತ್ತು ಸಾಮಾಜಿಕ ಸಂಸ್ಥೆ ಎಂದು ಹೇಳಿದರೆ ಇದಕ್ಕೆ ಭಿನ್ನಾಭಿಪ್ರಾಯ ಬರುತ್ತದೆ. ಕೆಲವು ಮಿತ್ರರು ಇಲ್ಲ ತಂದಿರುವ ವಾದದಲ್ಲಿ ಜನತೆಯ ಮೇಲೆ ದುಷ್ಪರಿಣಾಮವಾಗುವ ರೀತಿಯಲ್ಲಿ, ಈ ಮಸೂದೆಯ ಧರ್ಮವನ್ನೂ ಮತವನ್ನೂ ಬದಲಾಯಿಸುವ ರೀತಿಯಲ್ಲಿ ಉಗ್ರಗಾಮಿಯಾಗಿ ಈ ರೀತಿಯಲ್ಲಿರುವುದೆಂದೂ, ಇದನ್ನು ಜಾರಿಗೆ ತಂದರೆ ಅಪಮಾನುಲ್ಲಾಗೆ ಆದ ಗತಿಯಾಗುತ್ತದೆಂದೂ ಉದ್ರೇಕಗೊಳಿಸುವ ರೀತಿಯಲ್ಲಿ ಮಾತನಾಡಿದರು. ಇದನ್ನು ಕೇಳಿದ ಪ್ರಜೆಗಳಿಗೆ, ದೇಶದ ಜನರಿಗೆ ಏನು ಅಭಿಪ್ರಾಯ ಬರುತ್ತದೆಂದರೆ, ಸರ್ಕಾರದವರು ಈ ಮಠದ ಬಾಗಿಲು ಹಾಕಿ ಬೀಗ ಹಾಕುತ್ತಾರೆಯೋ ಏನೋ ಎಂಬ ಅಭಿಪ್ರಾಯ ಬರುತ್ತದೆ. ಈ ವಿಷಯವನ್ನು ನಾನು ಹೆಚ್ಚಾಗಿ ಪ್ರಸ್ತಾಪ ಮಾಡಬೇಕಾಗಿಲ್ಲ. ಈ ಮಠದಲ್ಲಿ ಧಾರ್ಮಿಕ ಮಹತ್ವವಿದೆಯೆಂಬುದನ್ನು ಒಪ್ಪಿಕೊಳ್ಳೋಣ. ಈ ಮಠಕ್ಕೆ ಎಲ್ಲಿಯವರೆಗೆ ಪ್ರಾಶಸ್ತ್ಯ ಕೊಡಬೇಕೋ ಅಲ್ಲಿಯವರೆಗೆ ಕೊಡೋಣ. ಆದರೆ ಇದು ಸಾಮಾಜಿಕ ಸಂಸ್ಥೆ, ಆದುದರಿಂದ ಇದಕ್ಕೆ ಎಲ್ಲ ಹಕ್ಕುಗಳನ್ನೂ ಬಿಟ್ಟುಕೊಡಬೇಕು ಎಂದರೆ, ಇದರಲ್ಲಿ ಭಿನ್ನಾಭಿಪ್ರಾಯವಿದೆ ಎಂದು ಖಚಿತವಾಗಿ ಹೇಳುತ್ತೇನೆ. ಯಾವ ಮತಕ್ಕೇ ಸೇರಿದ್ದಾಗಿ ಆಗಲಿ ಸಾಮಾಜಿಕ ಸಂಸ್ಥೆ ಎಂದರೆ ಸಾರ್ವಜನಿಕ ಸೇವೆ, ಸಮಾಜ ಸೇವೆ ಮಾಡುವುದು, ಇತರ ವಿಧವಾದ ಸಮಾಜ ಸೇವೆ ಮಾಡಿ ಜನರ ಬಡತನವನ್ನು ಹೋಗಲಾಡಿಸುವುದಕ್ಕೆ ಸಹಾಯಮಾಡುವುದು, ಜನರ ಆರೋಗ್ಯವನ್ನು ಉತ್ತಮಗೊಳಿಸುವ ಏರ್ಪಾಡುಮಾಡುವುದು. ಈ ವಿಧವಾದ ಕಾರ್ಯಗಳೇನಾದರೂ ಕೈಕೊಂಡಿದ್ದಾದರೆ ಆಗ ಸಂಸ್ಥೆ ಸಾಮಾಜಿಕ ಸಂಸ್ಥೆಯಾಗುತ್ತದೆ. ಈ ರೀತಿಯ ಸಾರ್ವಜನಿಕ ಸೇವೆಯನ್ನು ಈ ಮಠ ಕೈಕೊಂಡಿದ್ದರೆ, ಇದು ನಿಜವಾಗಿಯೂ ಭರತಖಂಡಕ್ಕೇ ಒಂದು ದೊಡ್ಡ ಸಾಮಾಜಿಕ ಸಂಸ್ಥೆ ಎಂದು ಹೇಳಬಹುದು. ಇದು ಹಾಗಿಲ್ಲ. ಇದು ಧಾರ್ಮಿಕ ಸಂಸ್ಥೆ ಎಂದು ಒಪ್ಪುವುದಕ್ಕೇನೂ ಅಡ್ಡಿ ಇಲ್ಲ. ಆದರೆ ಈ ಮಸೂದೆ ಇದರ ಈ ಸ್ಥಾನಮಾನಕ್ಕೆ, ಗೌರವಕ್ಕೆ ಧಕ್ಕೆ ತರುತ್ತದೆ ಎಂದು ಇಲ್ಲಿಟ್ಟಿರುವ ವಾದವನ್ನು ನಾವು ಒಪ್ಪತಕ್ಕದ್ದಲ್ಲ. ಈ ವಾದದ ಸರಣಿಯನ್ನನುಸರಿಸಿದರೆ, ಜನತೆಯನ್ನು ತಪ್ಪು ದಾರಿಗೆ ಎಳೆದಹಾಗಾಗುತ್ತದೆ, ಸರ್ಕಾರದ ವಿಚಾರದಲ್ಲಿ ಅಪಪ್ರಚಾರಮಾಡಿದಹಾಗಾಗುತ್ತದೆ. ಹೀಗಾಗಬಾರದೆಂಬುದು ಎಲ್ಲರೂ ತಿಳಿದುಕೊಳ್ಳಬೇಕಾದ ವಿಚಾರ. ಅಲ್ಲದೆ ಇಂತಹ ವಾದವನ್ನು ನಾವು ಹಿಡಿದರೆ, ಈ ಹಾದಿಯನ್ನೇ ಹಿಡಿದರೆ ಈ ಮಠಕ್ಕೇ ನಾವು ಅನ್ಯಾಯಮಾಡಿದ ಹಾಗಾಗುತ್ತದೆ, ಈ ವಾದ ಮಾಡುವವರಿಂದಲೇ ಈ ಅನ್ಯಾಯವಾಗುತ್ತದೆ. ಈ ಮಸೂದೆಯಲ್ಲಿ ಆಕ್ಷೇಪಿಸಿರುವುದಾದರೂ ಏನು? ಮಠದವರ ಪೂಜೆ ಮತ್ತು ಮತ ಸಂಬಂಧವಾದ ವಿಚಾರಗಳಿಗೆ ಈ ಮಸೂದೆ ಅನ್ವಯಿಸುವುದಿಲ್ಲ. ಅದರ ವಿಚಾರವೇ ಇದರಲ್ಲಿ ನಮೂದಾಗಿಲ್ಲ. ಇದು ಯಾವ ವಿಧದಲ್ಲಿ ಅನ್ವಯಿಸುತ್ತದೆಂದರೆ, ಆ ಮಠಕ್ಕೆ ಇನಾಂ ಆಗಿ ಬಂದಿರತಕ್ಕ ಗ್ರಾಮಗಳಲ್ಲಿ ಇನಾಂ ಅಧಿಕಾರ ಹೋಗಬೇಕೆಂಬುದಕ್ಕೆ ಮಾತ್ರ ಅನ್ವಯಿಸುತ್ತದೆ. ಮತಕ್ಕೆ ಸಂಬಂಧಿಸದೇಯಿರುವ ವಿಚಾರದಲ್ಲಿ ಸರ್ಕಾರಕ್ಕೆ ಸಂಬಂಧವಿರುತ್ತದೆ. ಇದರಲ್ಲಿ ಸರ್ಕಾರಕ್ಕೂ ಮಠಕ್ಕೂ ಸಂಬಂಧವಿಲ್ಲದೆ ಸರ್ಕಾರಕ್ಕೂ ರೈತರಿಗೂ ಸಂಬಂಧವಿರುವಂತೆ ಮಾಡಿದೆ. ಇನ್ನಾವ ವಿಚಾರದಲ್ಲಿಯೂ, ಧಾರ್ಮಿಕ ವಿಚಾರದಲ್ಲಿಯೂ ಮಠದ ಅಧಿಕಾರವನ್ನು ಕಿಂಚಿತ್ತಾದರೂ ಮುಟ್ಟಿಲ್ಲ. ಮಠಕ್ಕೆ ಏನು ವರಮಾನ ಈಗ ಬರುತ್ತಿದೆಯೋ ಅದೆಲ್ಲವೂ ಮುಂದೆಯೂ ಬರುತ್ತದೆ. ಯಾವ ವಿಧದಲ್ಲಿಯೂ ಯಾರೂ ಇದರಲ್ಲಿ ಒಂದು ಕಾಸನ್ನೂ ತೆಗೆಯುವುದಕ್ಕೆ ಪ್ರಯತ್ನಪಟ್ಟಿಲ್ಲ. ಮಠದ ಕೆಲಸಕಾರ್ಯಗಳಿಗೆ ಸ್ವಲ್ಪವೂ ಚ್ಯುತಿಯಿಲ್ಲದೆ ಮಠದ ರೈತರೆಲ್ಲರೂ ಸರ್ಕಾರದ ರೈತರಾಗುತ್ತಾರೆ ಎಂದ ಮಾತ್ರಕ್ಕೇ ಮಠಕ್ಕೆ ಧಕ್ಕೆ ಬರುತ್ತದೆಂದರೆ, ಈ ವಾದವನ್ನು ಯಾರೂ ಒಪ್ಪುವಹಾಗಿಲ್ಲ. ಈ ವಾದವನ್ನು ಖಚಿತವಾಗಿ ವಿರೋಧಿಸುವುದು ನಮ್ಮ ಕರ್ತವ್ಯ. ಈ ದಿವಸ ಈ ಮಠಕ್ಕೆ ಸೇರಿದ ರೈತರಿಗೆ ಸರ್ಕಾರಿ ಗ್ರಾಮಗಳಲ್ಲಿರುವ ರೈತರಿಗೆ ಏನು ಹಕ್ಕುಬಾಧ್ಯತೆಗಳಿವೆಯೋ ಅದನ್ನೆಲ್ಲಾ ಕೊಡಿ, ಆದರೆ ಜಹಗೀರಿಯನ್ನು ಮಾತ್ರ ರದ್ದುಮಾಡಬಾರದು ಎಂಬ ವಾದ ಬಂದಿದೆ. ಒಂದು sentiment ಇದೆ, ಅದಕ್ಕೆ ಧಕ್ಕೆ ಬರಬಾರದೆಂದು ಹೇಳುತ್ತಾರೆ. ಇದಕ್ಕೆ ಮಾನ್ಯತೆ ಕೊಟ್ಟು ಈ ರೀತಿ ಜಹಗೀರಿರದ್ದುಮಾಡಬೇಕೆಂಬುದು ಕೆಲವು ಮಾನ್ಯ ಸದಸ್ಯರ ಭಾಷಣಗಳಿಂದ ವ್ಯಕ್ತವಾಗಿದೆ. ಇದರ ಅರ್ಥವೇನೆಂಬುದನ್ನು ಪರಿಶೀಲನೆ ಮಾಡಬೇಕು. ಮಠದ ರೈತರಿಗೆ ಸರ್ಕಾರದ ರೈತರಿಗಿರುವ ಹಕ್ಕು ಬಾಧ್ಯತೆಗಳಿರಬೇಕು. ಆದರೆ ಮಠಕ್ಕೆ ಮಾತ್ರ ಜಮೀನಿನ ಮೇಲಿನ ಯಜಮಾನ್ಯ ಅಥವಾ ಅಧಿ

ಕಾರವಿರಬೇಕೆಂದ ಹಾಗಾಯಿತು. ಹೀಗೆ ಮಾಡುವುದಾದರೆ ರೈತರ ಮೇಲೆ ಮಠಕ್ಕಿರುವ ಅಧಿಕಾರವನ್ನು ತಪ್ಪಿಸಿ ರೈತರಿಗೆ ಅನುಕೂಲಮಾಡಿದ ಹಾಗಾಗುವುದಿಲ್ಲ. ಈ ಮಸೂದೆಯ ಮೂಲೋದ್ದೇಶ–ರೈತರು ಸರ್ಕಾರಕ್ಕೆ ನೇರವಾಗಿ ಸಂಬಂಧಿಸಿರಬೇಕು ಎಂಬ ಉದ್ದೇಶ–ನೆರವೇರುವುದಿಲ್ಲ. ಈ ದಿವಸ ಆ ರೈತರಿಗೆ ಎಷ್ಟೋ ಸೌಲಭ್ಯಗಳನ್ನು ಕೊಟ್ಟರೂ ಕೂಡ ಅವರು ಮಠದ ರೈತರಾಗುತ್ತಾರೆಯೇ ಹೊರತು ಸರ್ಕಾರದ ರೈತರಾಗುವುದಿಲ್ಲ. ಈಗ ಶೃಂಗೇರಿ ಮಠವನ್ನು ಸರ್ಕಾರದವರು ಮ್ಯಾನೇಜ್ ಮಾಡುತ್ತಿದ್ದರೂ ಕೂಡ ಇವರು ಮಠದ ಏಜೆಂಟರಾಗಿ ಮಾಡುತ್ತಿದ್ದಾರೆ. ರೈತರ ಮೇಲೆ ಯಾಜಮಾನ್ಯ ಮಠಕ್ಕಿದೆಯೇ ಹೊರತು ಸರ್ಕಾರಕ್ಕಿಲ್ಲ. ಮಠದವರು ಈ ಹಕ್ಕನ್ನು ಮಾತ್ರ ಸರ್ಕಾರಕ್ಕೆಬಿಟ್ಟುಕೊಡಬೇಕೆಂದು ಈಗ ಕೇಳುತ್ತಿದ್ದೇವೆ. ಇಷ್ಟುಮಾತ್ರಕ್ಕೆ ಮಠದ ಘನತೆ ಗೌರವಕ್ಕೆ ಧಕ್ಕೆ ಬರುತ್ತದೆ ಎಂಬ ವಾದವನ್ನು ಒಪ್ಪುವುದಕ್ಕಾಗುವುದಿಲ್ಲ.

ನಾನು ಈಗಾಗಲೇ ಹೇಳಿರುವ ಹಾಗೆ 22 ಸಾವಿರ ಎಕರೆಯಷ್ಟು ಅರಣ್ಯವನ್ನು ಮಠಕ್ಕೇ ಬಿಟ್ಟಿದೆ. ಇಷ್ಟೇ ಅಲ್ಲದೆ ಶೃಂಗೇರಿ ಜಹಗೀರು ಗ್ರಾಮಗಳಲ್ಲಿ ಇತರ ಯಾವ ಹಕ್ಕುಗಳಿದ್ದವೋ, ferry rights ವಗೈರೆ ಅದರ ವರಮಾನ, ಅದರಿಂದ ಬರುವ ರುಸುಮುಗಳನ್ನು ತೆಗೆದುಕೊಳ್ಳುವ ಅಧಿಕಾರ, ಇವೆಲ್ಲವನ್ನೂ ಶೃಂಗೇರಿ ಮಠಕ್ಕೇ ಬಿಟ್ಟಿದ್ದೇವೆ. ಮಠದ ಉಪಯೋಗಕ್ಕಿರುವ ಸ್ವಂತ ಜಮೀನನ್ನು ಬಿಟ್ಟುಕೊಟ್ಟಿದೆ. ಇಷ್ಟುಮಾಡಿದರೂ ಕೂಡ ರೈತರ ಮೇಲಿರುವ ಯಾಜಮಾನ್ಯದ ಹಕ್ಕು ಕೂಡ ನಮಗೇ ಇರಬೇಕೆಂದು ಹೇಳಿದರೆ ಇದನ್ನು ಖಂಡಿತ ಒಪ್ಪಬಾರದು. ಈ ಧಾರ್ಮಿಕ ಸಂಸ್ಥೆ ಆರ್ಥಿಕ ಕ್ಷೇತ್ರಕ್ಕಿಳಿದು ಜನರಮೇಲೆ ಪ್ರಭಾವ, ಅಧಿಕಾರ ಇಟ್ಟುಕೊಂಡಿರಬೇಕೆಂದು ಹೇಳಿದ ಹಾಗಾಗುತ್ತದೆ. ನನಗೂ ಮಠದ ವಿಷಯದಲ್ಲಿ ಗೌರವವಿದೆ. ಆದರೆ ಯಾವಾಗ ಮಠ ಧಾರ್ಮಿಕರಂಗವನ್ನು ಬಿಟ್ಟು ಜನರ ಮೇಲೆ ಹತೋಟಿಯಿಟ್ಟುಕೊಂಡಿರಬೇಕೆಂದು ಹೇಳುತ್ತದೋ ಆಗ ಮಠದ ಕೀರ್ತಿಗೌರವ ಕೆಳಕ್ಕಿಳಿದಹಾಗಾಗುತ್ತದೆ, ಅದಕ್ಕಿರುವ ಪ್ರಾಶಸ್ತ್ಯ ಕಡಿಮೆಯಾಗುತ್ತದೆ. ಆದಕಾರಣ ಅಂತಹ ವಾದವನ್ನು ಬಿಟ್ಟುಬಿಡಬೇಕು. ನನಗೆ ಈ ದಿವಸ ಅಲ್ಲಿನ ರೈತರಿಂದ ನೂರಾರು ಕಾಗದಗಳು ಬರುತ್ತಿವೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ರೈತ ಸಂಘದ ಅಧ್ಯಕ್ಷರಿಂದ ಬಂದಿದೆಯೆ ?

ಶ್ರೀ ಎಂ. ಗೋವಿಂದ ರೆಡ್ಡಿಯವರು.—ಅದು ಬೇರೆ ವಿಷಯ, ಆ ಮೇಲೆ ಹೇಳುತ್ತೇನೆ.

ಸ್ವಾಮಿಗಳು ರೈತರಿಗೆ ಕಿರುಕುಳ ಕೊಡುತ್ತಾರೆಂದು ನಾನು ಹೇಳುವುದಿಲ್ಲ. ಕೆಲವು ಅನಾನುಕೂಲಗಳು ಅವರಿಗಿವೆ. ಅದನ್ನು ಶ್ರೀ ವೀರಣ್ಣಗೌಡರು ಹೇಳಿದ್ದಾರೆ. ಮತ್ತೆ ಹೇಳಬೇಕಾಗಿಲ್ಲ. ಇದನ್ನು ಬಿಟ್ಟು ಮಠಕ್ಕೆ ಇನ್ನೂ ಹೆಚ್ಚು ಅನುಕೂಲಮಾಡಿಕೊಡಬೇಕೆಂದು ಹೇಳುತ್ತಿದ್ದೇವೆ. ಮಠದ ರೈತರನ್ನು ಕೈಕೆಳಗಿಟ್ಟುಕೊಳ್ಳುವುದು ಮಠದ ಹಿತದೃಷ್ಟಿಯಿಂದಲೇ ಒಳ್ಳೆಯದಲ್ಲ. ನ್ಯಾಷನಲ್ ಸಂಸ್ಥೆಗಳು ಕೆಲವಿವೆ; ಗಾಂಧಿ ಸಮಾಧಿ, ವಿಶ್ವಭಾರತಿ, ವ್ಯಾಟಿಕಾನ್‌ಸಿಟಿ ಇವೆ, ಅವುಗಳಂತೆ ಇದರಂತೆ ಏಕೆಮಾಡಬಾರದೆಂದು ಕೆಲವರು ಕೇಳಿದರು. ಈ ಮಠವನ್ನು ಹೇಗೆ ಸದುಪಯೋಗವಾಗುವಂತೆ ಮಾಡಬೇಕು, ಇದರ ಕೆಲಸ ಕಾರ್ಯಗಳನ್ನು ಹೇಗೆ ವಿಸ್ತರಿಸಬೇಕು, ಎಂಬ ಪ್ರಶ್ನೆ ಬಂದಾಗ ವಿಮರ್ಶೆಮಾಡಿ ಇದಕ್ಕೆ ಒಂದು ಫಂಡನ್ನುಮಾಡಿ ಅದಕ್ಕೆ ಟ್ರಸ್ಟಿಗೊತ್ತುಮಾಡಿ ನಡೆಸುವಂತೆ ಆಗಬೇಕೆಂದರೆ ಒಪ್ಪಬಹುದು. ವಿಶ್ವಭಾರತಿಯಾಗಲಿ ಗಾಂಧಿ ಸಮಾಧಿಯಾಗಲಿ ಇನ್ನೊಬ್ಬರ ಹಕ್ಕಿನ ಮೇಲೆ ಸ್ವಾಮ್ಯವನ್ನಿಟ್ಟುಕೊಂಡಿಲ್ಲ. ಕೆಲವು ಸದಸ್ಯರು ಇದನ್ನು ಮರೆತಿದ್ದಾರೆ. ಇನ್ನೊಬ್ಬರ ಮೇಲೆ ಯಾಜಮಾನ್ಯನಡೆಸುವ ಹಕ್ಕು ಆ ಸಂಸ್ಥೆಗಳಿಗಿಲ್ಲ. ಆ ಸಂಸ್ಥೆಗಳನ್ನು ಸುವ್ಯವಸ್ಥೆಯಿಂದ ನಡೆಸಿಕೊಂಡು ಅಲ್ಲಿನ ಕೆಲಸ ಕಾರ್ಯಗಳು ದಕ್ಷತೆಯಿಂದ ನಡೆಯುವ ಹಾಗೆ ಧನಸಹಾಯಮಾಡುವುದಕ್ಕೆ ಏನು ಬೇಕೋ ಅದನ್ನು ಮಾಡಿ ಅದನ್ನು ಸುವ್ಯವಸ್ಥೆಯಿಂದ ನಡೆಸಿಕೊಂಡು ಹೋಗಲು ಸಹಾಯವಾಗುವಂತೆ ಅಲ್ಲಿ ಒಂದು ಕಾನೂನು ಮಾಡುತ್ತಿದ್ದಾರೆ. ಈ ದಿವಸ ಹಾಗೆಯೇ ಶೃಂಗೇರಿಯ ಕೆಲಸ ಕಾರ್ಯಗಳು ಸಾಂಗವಾಗಿ ನಡೆಯಲಿ, ಅದರ ಸತ್ಪರಿಣಾಮ ಇಡೀ ಭರತಖಂಡದಲ್ಲಿಯೂ ಹೊರಗೂ ಹರಡಿ ಜನತೆಗೆಲ್ಲಾ ಮುಟ್ಟಲಿ. ಇದಕ್ಕಾಗಿ ಒಂದು ಕಾನೂನನ್ನುಮಾಡಿ ಎಂದು ಹೇಳಿದರೆ ಅದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಈ ವಿಷಯದಲ್ಲಿ ಸಹಕಾರನೀಡಬೇಕಾದುದು ಎಲ್ಲರ ಕರ್ತವ್ಯ. ಆದರೆ ರೈತರ ಮೇಲಿರುವ ಹಕ್ಕನ್ನು ಯಾಜಮಾನ್ಯವನ್ನು ಉಳಿಸಿ, ಇದನ್ನು ಮ್ಯಾನೇಜ್ ಮಾಡುವುದಕ್ಕೇ ಬೇರೆ ಕಾನೂನುಮಾಡಿ ಎಂದರೆ ಅದನ್ನು ಒಪ್ಪುವುದಿಲ್ಲ. ರೈತರನ್ನು ಹಿಡಿತದಲ್ಲಿಡುವುದು ಧಾರ್ಮಿಕ ಸಂಸ್ಥೆಯ ಕೆಲಸವಲ್ಲ. ಅದು ಸಲ್ಲತಕ್ಕದ್ದಲ್ಲ. ಇದು ಧರ್ಮಕ್ಕೂ—ನ್ಯಾಯಕ್ಕೂ ವಿರುದ್ಧವಾದುದು. ಆದುದರಿಂದ ಈ ವಾದವನ್ನು ಬಿಟ್ಟುಬಿಡಬೇಕು. ಈ ಸೆಲೆಕ್ಟ್ ಕಮಿಟಿಯವರ ವರದಿ ಮಠದ ಸ್ಥಾನಮಾನಗಳ ಬಗ್ಗೆ ಚ್ಯುತಿ ಬರುವಂತೆ ಏನೂ ಮಾಡಿಲ್ಲವೆಂದು ಹೇಳಿ, ಈ ಮಸೂದೆಗೆ ಈ ಮಾನ್ಯ ಸಭೆ ಅಂಗೀಕಾರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—To-morrow we will take up the Planning Commission Report. Further discussion on the Inam Villages (Inam Tenure Abolition) Bill will be resumed afterwards.

The Hon'ble Sri H. C. DASAPPA.—To-morrow we shall ascertain the opinion of the House whether we should continue this session for another three or four days which may be required for the purpose of piloting this Inam Tenure Abolition Bill or whether we should adjourn it and meet in the first week of December. I am ascertaining the views of members to-morrow. So please think over it. There are some friends who say: "We have stayed far too long. We have not come prepared for it." There are others who say: "We will be in the thick of election campaign" and so on. There are yet others who say: "We would like to have a brief respite even during the election campaign." So the matter is to be thought over. In the meantime we

(THE HON'BLE SRI H. C. DASAPPA)

shall consider ourselves what best we should do.

Mr. SPEAKER.—The House will now stand adjourned to meet to-morrow at One of the Clock.

The Assembly adjourned at Five Minutes past Six of the Clock to meet again at One of the Clock on Friday the 9th November 1951.

WD 1046—GPB—500—2-5-52

LEGISLATIVE ASSEMBLY.

FIFTEENTH DAY.

Friday, 9th November 1951.

The Legislative Assembly met in the Assembly Hall, Old Public Offices, Bangalore, at Five Minutes past One of the Clock.

Mr. Speaker (The Hon'ble Sri V. Venkatappa) in the Chair.

QUESTIONS AND ANSWERS.

Mr. SPEAKER (The Hon'ble Sri V. Venkatappa).—The questions relating to the Hon'ble Chief Minister regarding Food will be answered by the Hon'ble Sri T. Mariappa, Home Minister.

Particulars of purchase and sale prices of paddy and incidental charges.

Q.—242. Sri H. M. CHANNABASAPPA (Mysore District—General).—

Will the Government be pleased to state :—

(*a*) the quantity of fine, medium and coarse paddy locally purchased by Government during 1948-49, 1949-50 and 1950-51 and the rates at which they are purchased ;

(*b*) the average yield of rice fixed per palla for each of these varieties ;

(*c*) the average cost involved in transport, hulling, etc., for one palla of paddy and bagging the resultant rice including the incidental charges such as handling, etc. ;

(*d*) the average cost price per palla of each variety of rice at the mill-point including handling, hulling, and other incidental charges ;

(*e*) the selling prices of fine, medium and coarse varieties of rice in the State ;

(*f*) the average cost of transport per palla of rice to the destination point and the margin of profit Government are making per palla of rice (details for working out the margin of profit may be given) ;

(*g*) the total local rice sold during 1948-49, 1949-50 and 1950-51 ?

A.—The Hon'ble Sri T. MARIAPPA (Home Minister).—

(*a*) to (*g*) Information is being collected.

Sri H. M. CHANNABASAPPA.—May I know from whom the information is being collected ?

The Hon'ble Sri T. MARIAPPA.—From the local officers.

Sri H. M. CHANNABASAPPA.—Are not the accounts for 1948-49, 1949-50 and 1950-51 over ?

The Hon'ble Sri T. MARIAPPA.—Accounts will be over. But the question put is about the quantities of fine, medium and coarse paddy locally purchased by Government during 1948-49, 1949-50 and 1950-51 and the rates at which they were purchased. From several places we have to call for information. We have not got the consolidated accounts.

Sri H. M. CHANNABASAPPA.—I would like to know from the Hon'ble Minister if a statement of the quantities of the several types of paddy purchased by the Government of Mysore during these three years is not maintained by the Director of Food Supplies ?

The Hon'ble Sri T. MARIAPPA.—These details are not available even with the Director.

Sri H. M. CHANNABASAPPA.—Then when will the Government be in a position to furnish this information ?

The Hon'ble Sri T. MARIAPPA.—It takes time. It requires practically additional staff to compile the information required. I cannot therefore say

(THE HON'BLE SRI T. MARIAPPA)

when exactly we will be able to furnish the information. But, anyhow, we will try to give it as soon as possible.

Sri H. M. CHANNABASAPPA.—I would like to know if the Government could tell me whether this business of purchasing paddy and selling rice is a profitable or a losing concern ?

The Hon'ble Sri T. MARIAPPA.—As the Hon'ble Member is aware, this is not a profitable concern at all.

Sri H. M. CHANNABASAPPA.—Are the Government aware that I made a statement during the debate on the Public Accounts Committee report that the Government have been making profit to the tune of about Rs. 68 lakhs in this year ?

The Hon'ble Sri T. MARIAPPA.—Because I was present, I heard the statement of the Hon'ble Member.

Sri H. M. CHANNABASAPPA.—In the answer it is stated that information about the selling prices of fine, medium and coarse varieties of rice in the State is being collected. Are the Government aware that these prices are prescribed in the Government Order itself ?

The Hon'ble Sri T. MARIAPPA.—It was considered not worthwhile giving isolated answer; and moreover we have abolished the distinction between fine, medium and coarse varieties. There are only two varieties now instead of three as before and therefore from the dates on which the distinction was abolished, information is being collected.

Sri H. M. CHANNABASAPPA.—I would like to know if this information cannot be obtained from the local officer ?

The Hon'ble Sri T. MARIAPPA.—That particular officer can furnish the information required, but it could not be got for all the three items because only two varieties are now being sold.

Sri H. M. CHANNABASAPPA.—Can the Government give the information about the selling prices prescribed by them in respect of at least these two varieties of rice by obtaining it from the Amildar or the Shekdar ?

The Hon'ble Sri T. MARIAPPA.—That I can get and give the Hon'ble Member.

Sri H. M. CHANNABASAPPA.—My question is that, according to accepted conventions, all answers which the Ministers could reasonably give, they must give us. I am not compelling. But this information was available with the Hon'ble Minister himself. If I can only commend his memory, the Hon'ble Minister could say this from his memory itself.

The Hon'ble Sri T. MARIAPPA.—Sir, I do not want to risk. But I am pretty certain that one variety is being sold at 2 seers per rupee because for the last one year we have changed the selling prices. Moreover this question is vague. It may refer to the current prices, or the prices of these two varieties ever since the third variety was abolished. Therefore it has got to be looked up and the information has got to be compiled. That will take time. I can collect the information from the Director of Food Supplies and give it, if he wants.

Sri H. M. CHANNABASAPPA.—My question is why the Government have not furnished this information ?

The Hon'ble Sri T. MARIAPPA.—I have already answered that the main answers are to be collected. Therefore giving isolated answers perhaps would not serve the purpose.

Sri H. M. CHANNABASAPPA.—I agree to that, if information is being called for with regard to (*a*). But with regard to (*b*), Government have issued an order determining the *iluvari* for each type of paddy. Is it not ?

The Hon'ble Sri T. MARIAPPA.—We have not determined the average for the entire State. It varies from zone to zone, from district to district and from variety to variety.

Sri H. M. CHANNABASAPPA.—I would like to know whether Government have not prescribed the *iluvari* for the various types of paddy and for various places ?

The Hon'ble Sri T. MARIAPPA.—It is true that we have fixed *iluvaries* for certain types of paddy for certain places.

Sri H. M. CHANNABASAPPA.—Is the information regarding the average to be furnished by the Amildar or the Shekdar ?

The Hon'ble Sri T. MARIAPPA.—It has to be got from various mills in the State. We have written to the Deputy Commissioners in the matter.

Sri H. M. CHANNABASAPPA.—Have not the Government prescribed the hulling charges and handling charges per palla of paddy and also other incidental charges by a Government Order?

The Hon'ble Sri T. MARIAPPA.—Sir, I want that questions for eliciting information only be put. But, the Hon'ble Member is cross-examining me.

Sri H. M. CHANNABASAPPA.—In reply to a supplementary question, the Hon'ble Minister was pleased to say that the inform t on was not available. I want to elicit from the Government whether these prices, etc., are not prescribed in the Government Order.

The Hon'ble Sri T. MARIAPPA—Yes, there are various Government Orders prescribing these.

Sri H. M. CHANNABASAPPA.—When the hulling charges and the transport charges per mile and the handling charges have been fixed by a Government Order, has the information about the average to be got from the Shekdar or the Amildar?

The Hon'ble Sri T. MARIAPPA.—That is not a proper supplementary question, Sir.

Sri H. M. CHANNABASAPPA.—It is for the Hon'ble Speaker to say so.

Mr. SPEAKER.—What is the question?

Sri H. M. CHANNABASAPPA.—My question is, when the handling charges, hulling charges and other incidental charges per palla of paddy are fixed by Government, has the information regarding the average to be obtained from the local officers, Amildar or the Shekdar or has it to be furnished from the Central Office?

Mr. SPEAKER.—The Hon'ble Minister has already said that he wanted to give the information in full and not piecemeal.

Sri H. M. CHANNABASAPPA.—My opinion is that except the first item about the quantity of fine, medium and coarse paddy, information for which has to be called from various places, answers for all others could have been obtained here alone, either in the Secretariat or from the Director of Food Supplies. So the argument that information could not be given for want of time for getting the same from local officers does not hold water.

Sri M. GOVINDA REDDY (Chitaldrug District—General).—Could not the information about the quantity of paddy procured during these years be given?

The Hon'ble Sri T. MARIAPPA.—I could have given the total quantity because it has been given on a number of occasions for different questions. Here details regarding fine, medium and coarse paddy have been asked. In fact for the last one year or so, if my memory is correct, we have abolished the distinction between coarse and medium. There are only two varieties now details regarding which have to be obtained.

Sri M. GOVINDA REDDY.—Are accounts not being classified according to fine, medium and coarse paddy?

The Hon'ble Sri T. MARIAPPA.—We have only two varieties of paddy now.

Sri M. GOVINDA REDDY.—For 1948-49 and 1949-50 were not accounts classified as per the varieties of paddy?

The Hon'ble Sri T. MARIAPPA.—I think in 1948-49 we had three varieties of paddy. Subsequently that distinction was abolished.

Sri M. GOVINDA REDDY.—Are accounts for 1948-49 and 1949-50 audited?

The Hon'ble Sri T. MARIAPPA.—I think so.

Sri M. GOVINDA REDDY.—When they are audited, does not the Hon'ble Minister think that they would have been classified, rates would have been settled and checked according to the classified manner?

The Hon'ble Sri T. MARIAPPA.—It is a question of knowing exactly what quantities of fine, medium and coarse paddy were locally procured. Therefore these figures have to be compiled from various places.

Sri M. GOVINDA REDDY.—When the accounts are audited naturally they would have been compiled for the purpose of audit and so these figures must be ready with the Government.

The Hon'ble Sri T. MARIAPPA.—These figures aro not ready with the Government. Otherwise we would not have lost anything in giving these figures.

Sri M. GOVINDA REDDY.—Am I to understand that the audit in respect of these years is not done?

The Hon'ble Sri T. MARIAPPA.—I think that audit, at any rate for 1948-49, has been done.

Sri M. GOVINDA REDDY.—For 1949-50?

The Hon'ble Sri T. MARIAPPA.—Even for 1949-50.

Sri M. GOVINDA REDDY.—I want to know what the difficulty for the Government was to give these figures if the audit has heen completed.

The Hon'ble Sri T. MARIAPPA.—I will enquire what exactly was the difficulty in not furnishing the details.

Sri M. GOVINDA REDDY.—Are the Government calling for returns from various districts in respect of the quantities procured?

The Hon'ble Sri T. MARIAPPA.—We do not usually call for returns. In fact whenever questions are put, we get the answers from the Director of Food Supplies immediately.

Sri M. GOVINDA REDDY.—Are not procurement returns submitted to Government from districts?

The Hon'ble Sri T. MARIAPPA.— The Director of Food Supplies submits the returns.

Sri M. GOVINDA REDDY.—Are Government receiving these returns year by year or month by month?

The Hon'ble Sri T. MARIAPPA.—Whenever we need these figures we get them.

Sri M. GOVINDA REDDY.—Am I to understand that there is no regular method of the Director of Food Supplies sending returns to the Government?

The Hon'ble Sri T. MARIAPPA.—There is a method. But the question is about collecting statistics under three heads.

Sri M. GOVINDA REDDY.—Is the difficulty due to the Director of Food Supplies not submitting the returns in the classified manner?

The Hon'ble Sri T. MARIAPPA.—This is a huge affair. In 1948-49, 1949-50 and 1950-51 the figures for the three varieties of paddy will be of the order of 16 to 17 lakhs.

Sri M. GOVINDA REDDY.—When the Government receive these returns, do not these returns give information regarding the quantity purchased, whether it is fine or medium, the price paid for it, etc?

The Hon'ble Sri T. MARIAPPA.—No. We simply receive a return showing the procurement in each district and the total quantity of paddy and nothing about even the varieties of paddy.

Sri M. GOVINDA REDDY.—Would it not be better that the Director of Food Supplies sends the returns in the classified manner to Government so that it may save trouble for the Government again to reclassify for statistical purposes and for knowing the position?

The Hon'ble Sri T. MARIAPPA.—I will have that question examined.

Sri G. A. ACHARYA (Bangalore District—General).—Is the quantity procured mentioned in the returns in pallas or in any other measurement?

The Hon'ble Sri T. MARIAPPA.—Only in pallas. Not even the varieties are mentioned.

Sri G. A. ACHARYA.—Do the Government think that it is the right method of getting the returns?

The Hon'ble Sri T. MARIAPPA.—It is only to know the progress of procurement that these returns are sent. The Director of Food Supplies and the respective district officers maintain the figures for different varieties of paddy.

ಶ್ರೀ ಎಂ. ಎಲ್. ನಂಜರಾಜಅರಸ್‌ರವರು (ಮೈಸೂರು ಜಿಲ್ಲೆ).—ಹಲ್ಲಿಂಗ್, ಹ್ಯಾಂಡ್ಲಿಂಗ್ ಮತ್ತು ಟ್ರ್ಯಾನ್ಸ್‌ಪೋರ್ಟ್ ಇವುಗಳನ್ನೆಲ್ಲಾ ಇಟ್ಟು ಕೊಂಡಿದ್ದರೆ ಲಾಭದಾಯಕವಾಗಿ ಇರುತ್ತಿರಲಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಲಾಭದ ಪ್ರಶ್ನೆ ಇಲ್ಲ. ಹಂಚಿಕೆ ಮಾಡುವ ಜವಾಬ್ದಾರಿ ಸರ್ಕಾರದವರಿಟ್ಟುಕೊಂಡಿದ್ದಾರೆ. ಆದ್ದರಿಂದ ಹಲ್ಲಿಂಗ್,

ಹ್ಯಾಂಡ್ಲಿಂಗ್ ಮತ್ತು ಟ್ರಾನ್ಸ್‌ಪೋರ್ಟ್ ಚಾರ್ಜಸ್ ನಿಗದಿ ಮಾಡಿಕೊಡುತ್ತಾರೆ.

ಶ್ರೀ ಎಂ. ಎಲ್. ನಂಜರಾಜಅರಸ್‌ರವರು.—ಈಗ ಆಡಿಟ್ ಆಗಿದೆ ಎಂದು ಹೇಳಿರುತ್ತೀರಿ. ಲಾಭ ಬರುವುದಿಲ್ಲವೆಂದು ಹೇಳಿದಿರಿ. ಹಾಗಾದರೆ ಇದಕ್ಕಾಗಿ ಏನಾದರೂ ಪ್ರತ್ಯೇಕವಾಗಿ ಲೆಕ್ಕ ಇಟ್ಟುಕೊಂಡರೆ ಲಾಭ ಬರುವುದು, ಬರದೇ ಇರುವುದು ಗೊತ್ತಾಗುತ್ತದೆ ಅಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಿಂದೆ ಒಂದು ಪ್ರಶ್ನೆಗೆ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಒಂದೊಂದು ಪ್ರದೇಶಕ್ಕೂ ಬೇರೆ ಬೇರೆ ಲೆಕ್ಕ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಎಲ್ಲಾ ಒಟ್ಟಿಗೆ ಇಟ್ಟುಕೊಂಡಿರುತ್ತಾರೆ.

ಶ್ರೀ ಜಿ. ಎ. ಆಚಾರ್ಯರು (ಬೆಂಗಳೂರು ಜಿಲ್ಲೆ).—ಆ ರೀತಿ ಇಟ್ಟುಕೊಂಡರೆ ಯಾವ ಬಾಬಿನಲ್ಲಿ ಎಷ್ಟು ನಷ್ಟ ಆಯಿತು ಎಂಬುವನ್ನು ಹೇಳುವುದಕ್ಕಾಗುತ್ತದೆಯಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಲ್ಲಾ ಬತ್ತ ಒಟ್ಟಿಗೆ ಸಾಗಿಸುವುದರಿಂದ ಚಿಕ್ಕಮಗಳೂರಿನಲ್ಲಿ ಎಷ್ಟು ಲಾಭ ಬಂತು, ಶಿವಮೊಗ್ಗದಲ್ಲಿ ಎಷ್ಟು ನಷ್ಟವಾಯಿತು ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಎಲ್ಲಾ ಕಾಮನ್ ಹೌಸ್‌ನಲ್ಲಿ ಇಟ್ಟುಕೊಂಡಿದ್ದೇವೆ.

ಶ್ರೀ ಜಿ. ಎ. ಆಚಾರ್ಯರು.—ಯಾವುದಾದರೂ ಬಾಬಿನಲ್ಲಿ ಏನಾದರೂ ಲೀಕೇಜ್ ಇದೆಯೇ ಎಂಬುದನ್ನು ಕಂಡು ಹಿಡಿಯುವುದಕ್ಕೆ ಈ ತರದ ಅಕೌಂಟ್ ಇಟ್ಟರೆ ಒಳ್ಳೆಯದು ಎಂದು ಅರ್ಥ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನು ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು (ಚಿಕ್ಕಮಗಳೂರು ಜಿಲ್ಲೆ).—ಬತ್ತವನ್ನು ತೆಗೆದುಕೊಂಡು ಬತ್ತವನ್ನೇ ಇಷ್ಯೂ ಮಾಡುವ ಪದ್ಧತಿ ಯಾವುದಾದರೂ ಡಿಪೋಗಳಲ್ಲಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೋದ ವರ್ಷ ಕೆಲವು ಕಡೆ ಮಿಲ್ ಮಾಡಿ ಅಕ್ಕಿ ಬರುವುದು ಸಾವಕಾಶವಾದ್ದರಿಂದ, ಹಳ್ಳಿಗಳ ಕಡೆ ಕೆಲವರು ಬತ್ತವನ್ನೇ ತೆಗೆದುಕೊಳ್ಳುತ್ತೇವೆಂದು ಹೇಳಿದ್ದರಿಂದ ಬತ್ತ ಕೊಟ್ಟೆವು.

ಶ್ರೀ ಎಲ್ ಎಚ್. ತಿಮ್ಮಾಬೋಯಿಯವರು.—ಈಗ ನೀವು ಪ್ಲಾಂಟರುಗಳಿಗೆ ಬತ್ತವನ್ನೇ ಕೊಡುತ್ತಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೇಳಿದವರಿಗೆ ಕೊಡುತ್ತೇವೆ. ಇಲ್ಲದೆ ಇದ್ದರೆ ಇಲ್ಲ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಒಟ್ಟಿನಲ್ಲಿ ತಾವು ಮಾರುವ ಬೆಲೆಗೂ ಕೊಂಡು ಕೊಳ್ಳುವ ಬೆಲೆಗೂ 6 ರೂಪಾಯಿ ವ್ಯತ್ಯಾಸವಿರುವುದು ಗೊತ್ತಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಬೇಕು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ನೇರವಾಗಿ ರೈತರೇ ಬತ್ತವನ್ನು ಅವರಿಗೆ ಮಾರಿ ದುಡ್ಡು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಗಿರುವ ಕಾನೂನು ಪ್ರಕಾರ ಸರ್ಕಾರದವರಿಗೇ ಮನಾಪಲಿ ಪ್ರೊಕ್ಯೂರ್‌ಮೆಂಟ್ ಅಧಿಕಾರವಿದೆ. ಯಾರೇ ಅಗಲಿ ತಾವೇ ಮಾರುವ ಹಾಗಿಲ್ಲ. ಸರ್ಕಾರದವರು ಪ್ರೊಕ್ಯೂರ್ ಮೆಂಟ್ ಮಾಡಿಕೊಂಡು ಅವರ ಮೂಲಕ ಇನ್ನೊಬ್ಬರಿಗೆ ಮಾರಾಟವಾಗಬೇಕು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಅಂತೂ ಒಂದು ಪಲ್ಲಕ್ಕೆ 6 ರೂಪಾಯಿ ಲಾಭ ತೆಗೆದುಕೊಳ್ಳುತ್ತಿದೆಯಲ್ಲವೇ?

The Hon'ble Sri T. MARIAPPA.—I don't admit that thing.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಈ ಲೆಕ್ಕಗಳನ್ನು ಆಡಿಟ್ ಮಾಡುವುದಕ್ಕೆ ರೆಗ್ಯುಲರ್ ಆಗಿ ಆಡಿಟ್ ಇಲಾಖೆಯವರನ್ನು ಯಾರನ್ನಾದರೂ ಕಳುಹಿಸಿ ಆಡಿಟ್ ಮಾಡಿಸುತ್ತೀರಾ? ಅಥವಾ ನಿಮ್ಮ ಆಫೀಸಿನ ಅಕೌಂಟೆಂಟರೇ ಆಡಿಟ್ ಮಾಡುತ್ತಿದ್ದಾರೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದಕ್ಕಾಗಿ ರೆಗ್ಯುಲರ್ ಆಡಿಟ್ ಸೆಕ್ಷನ್ನೇ ಇದೆ.

ಶ್ರೀ ಎಸ್. ರಂಗರಾಮಯ್ಯನವರು.—ಅಕೌಂಟೆಂಟರೇ ಆಡಿಟ್ ಮಾಡುತ್ತಾರೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಡಿಟ್ ಮತ್ತು ಅಕೌಂಟಿಂಗ್ ಆಫೀಸರನ್ನು ನೇಮಕ ಮಾಡಿ ಒಂದು ಫಸ್ಟ್ ಕ್ಲಾಸ್ ಆಡಿಟ್ ಸೆಕ್ಷನ್ನನ್ನೇ ತೆರೆದಿದ್ದೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಹಾಗಾದರೆ ಅಲ್ಲಿಗೆ ಆಡಿಟ್ ಡಿಪಾರ್ಟ್‌ಮೆಂಟಿನವರನ್ನು ಕಳುಹಿಸಿ ಕೊಟ್ಟು ಆಡಿಟ್ ಮಾಡಿಸುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು.

ಶ್ರೀ ಎಸ್. ರಂಗರಾಮಯ್ಯನವರು.—ಅವರು ಆಡಿಟ್ ಮಾಡಿದ ವರದಿ ಕಳುಹಿಸಿದ್ದಾರೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕಳುಹಿಸಿದ್ದಾರೆ. ಆಡಿಟ್ ಮತ್ತು ಅಕೌಂಟ್ಸ್ ಕಮಿಟಿಯ ಮುಂದೆ ಅದು ಚರ್ಚೆಗೆ ಬಂದು ಎಷ್ಟೋ ಆಕ್ಷೇಪಣೆಗಳನ್ನು ಅವರು ಸೂಚಿಸಿದ್ದಾರೆ.

ಶ್ರೀ ಎಸ್. ರಂಗರಾಮಯ್ಯನವರು.—ಅವರು ಆಕ್ಷೇಪಣೆಗಳನ್ನು ಸೂಚಿಸಿರುವುದರಲ್ಲಿ ಏನು ಹೇಳಿದ್ದಾರೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಷ್ಟೋ ಸೂಚನೆಗಳನ್ನು ಅವರು ಮಾಡಿದ್ದಾರೆ. ಒಟ್ಟಿನಲ್ಲಿ ಹೋದ ವರ್ಷಕ್ಕಿಂತ ಈ ವರ್ಷ ಉತ್ತಮಗೊಂಡಿದೆಯೆಂದು ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಕಾಂಪ್ಲಿಮೆಂಟ್ ಕೂಡ ಮಾಡಿದ್ದಾರೆ.

Particulars of Scale and Composition of Rations and issues to several Classes of Ration Card-Holders.

Q.—302. Sri B. HUTCHE GOWDA (Tumkur District—General).—

Will the Government be pleased to state :—

(*a*) the details regarding the quantities of foodgrains given per head for the several classes (A, B, C, D) of Ration Card Holders according to the Rationing of Foodgrains Order ;

(*b*) (i) the number of cards in each class, (ii) the number of people they serve, (iii) the quantity of grains to be supplied on this basis, (iv) the quantity supplied in 1950-51, (v) the quantity

(SRI B. HUTCHE GOWDA.)

found possible to supply in the year 1951-52?

A.—**The Hon'ble Sri T. MARIAPPA** (Home Minister).—

(*a*) The latest scale and composition of rations in the State are as detailed below :—

(Ozs. per head per day).

Class of Consumers.	Rice.	Wheat.	Millets.	Total
'A' Class ...	6·0	6·0	...	12·0
'B' Class ..	3·0	2·0	7 0	12·0

(*b*) (i) A Class	...	314,516
B Class	...	445,961
C Class (landless in rural areas).		19,388
D Class (Partial Producers).		16,745

(ii) Total number for whom rations are issued is 46,47,002 adults and 11,00,685 children or 52,47,344 in terms of adults.

		Pallas.
(iii) Rice	...	1,798,560
Wheat	...	1,338,120
Millets	...	1,671,360
Total	...	4,808,040
(iv) Rice	...	1,193,540
Wheat	...	550,310
Millets	...	736,010
Total	...	2,479,860

(v) Issues made on cards in the period April 1951 to end of September 1951 are as follows :—

		Pallas.
Rice	...	577,120
Wheat	...	299,690
Millets	...	391,440
Total	...	1,268,250

ಶ್ರೀ ಬಿ. ಹುಚ್ಚೇಗೌಡರು.—ಈಗಿನ ರೇಷನ್ ಸ್ಕೇಲ್ ಎಷ್ಟೆಂದು ತಿಳಿಸಿದ್ದೀರಿ! ಹಿಂದೆ 1946–47 ರಲ್ಲಿ ಎಷ್ಟು ಕೊಡುತ್ತಿತ್ತು!

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಬಿ. ಹುಚ್ಚೇಗೌಡರು.—(ಸಿ) ಮತ್ತು (ಡಿ) ಕ್ಲಾಸಿನವರಿಗೆ ಯಾವ ಸ್ಕೇಲ್ ಪ್ರಕಾರ ರೇಷನ್ ಕೊಡುತ್ತೀರಿ!

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಾಧ್ಯವಾದಷ್ಟು ಮಟ್ಟಿಗೆ ಇದೇ ಪ್ರಮಾಣದಲ್ಲಿ ಕೊಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡರು.—ಇಲ್ಲಿ (ಎ) ತರಗತಿ, (ಬಿ) ತರಗತಿ ಎಂದು ಬೇರೆ ಬೇರೆ ಇದೆ. ಅಂಥಾದ್ದರಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಅದೇ ಪ್ರಮಾಣವೆಂದರೆ ಎಷ್ಟು?

The Hon'ble Sri H. C. DASAPPA.—According to the plan, the Development Expenditure is all that comes into the plan. What is development to-day, I may tell the Hon'ble Member, will not be development tomorrow. It will get into what is known as routine expenditure. You do not call Mysore University as Development Expenditure. What was once development has now become non-development. Non-Development is of two character: one is revenue development and the other is ordinary development which has ceased to have that character to-day. So, it is called total non-development expenditure *i.e.*, 26 plus 32·60. The latter is arrived at by lifting the real development expenditure from 47 crores into the plan and therefore you have got to do that.

Sri G. A. ACHARYA.—Is this 3·90, which is supposed to be the balance available? Based on the presumption that in the coming five years there will be a balanced budget?

The Hon'ble Sri H. C. DASAPPA.—No. We are going to be a deficit budget obviously. It is going to be a deficit budget because our expenditure is 26 plus 47 *i.e.*, 73 crores and our revenue is only 62 crores. So, there is going to be a deficit of 10·40 crores during these years.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು (ಬೆಂಗಳೂರು ನಗರ).—ಈಗ ನೀವು 10 ಕೋಟಿ ರೂಪಾಯಿಗಳನ್ನು ಉಳಿತಾಯವೆಂದು ಹೇಳಿದಿರಿ. ಇದು ಹೇಗೆಂಬುದು ಅರ್ಥವಾಗಲಿಲ್ಲ. ರೆವಿನ್ಯೂ ಬಾಬತ್ತು 62 ಕೋಟಿ ಚಿಲ್ಲರೆ ಬರುತ್ತೆ. (2) ಮತ್ತು (3)ನೆಯ ಐಟಂಪ್ರಕಾರ ಒಟ್ಟು ಅಭಿವೃದ್ಧಿ ಕಾರ್ಯಗಳಿಗೆ ಅಗುವ ಖರ್ಚು 73 ಕೋಟಿ. ಆದ್ದರಿಂದ 73 ಕೋಟಿಯಲ್ಲಿ 62·5 ಕೋಟಿ ಕಳೆದರೆ ಉಳಿಯುವ $10\frac{1}{2}$ ಕೋಟಿ ಖೋತಾವನ್ನು ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿಗೆ ಖರ್ಚು ಮಾಡಿದ್ದೆಂದು ಅರ್ಥವೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಹೌದು.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಇಲ್ಲಿಗೆ non-development ಖರ್ಚಾದ 26 ಕೋಟಿಗಳ ಜೊತೆಗೆ ಈ 10·5 ಕೋಟಿ ಸೇರಿ, ಒಟ್ಟು 36·5 ಕೋಟಿ ಖರ್ಚಾದಮೇಲೆ 10·5 ಕೋಟಿಗಳು ಉಳಿತಾಯ ಹೇಗಾಗುತ್ತದೆಂದು ತೋರಿಸುತ್ತೀರಾ?

The Hon'ble Sri H. C. DASAPPA.—No; 14·70 comprises the deficit of 10·50. So, 14·70 plus 10·50 plus 3·90 which is taken from what is available from the revenue because we lift this to the plan itself.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಅಲ್ಲಿಗೆ 47 ಕೋಟಿಯಲ್ಲಿ 14 ಕೋಟಿಯನ್ನು ಕಳೆದರೆ ಬಾಕಿ 33 ಕೋಟಿಗೆ ಪ್ಲಾನ್ ಮಾಡಬೇಕಾಗಿ ಬಂತು.

The Hon'ble Sri H. C. DASAPPA.—The new plan is 36·6 plus the deficit of 10·5. The deficit of 10·5 plus our plan 36·6 comes to 47·10. Now, for that we have got to find money. How are you going to find the money? Loans of 9 crores from the open market; Incoming from Deposits—5 crores, Economies in expenditure 40 lakhs, Additional Taxation 8·80 crores

(THE HON'BLE SRI H. C. DASAPPA)
and withdrawal from Reserves and Funds 1·50 crores: the total would be 24·7 crores. Then you have got the central assistance of 8 crores. You add this 8 crores and then you add this expenditure of existing schemes 14·40. All these make 47·10 exactly to the point.

Sri K. R. SREEKANTESWAR.—Mathematics is all right.

The Hon'ble Sri H. C. DASAPPA.—You are asking me what is 2 and 2 put together. I am telling you it is four. I would like to hear your speeches and then try to answer the questions raised therein. You now ask "Are you going to raise 9 crores loan?" You have a perfect right to ask. We say that the Planning Commission has asked us to raise this by way of loan. I take it that between the Centre and ourselves and the Reserve Bank, we will be enabled to raise this 9 crores. By chance if we fall short, the idea is that the Centre must make up whatever we may become short of, by way of loans. As regards the deposits, they are based on actual figures which we have been showing for the last so many years. As regards Economies in Expenditure, I depend on the Hon'ble Members of this House to enable the Government, whichever it may be, to expedite and actually effect savings.

Sri L. SIDDAPPA.—In this respect, our previous experience is otherwise.

Sri M. GOVINDA REDDY.—What is the income from the plan? Do Government expect any substantial return from the plan?

The Hon'ble Sri H. C. DASAPPA.—Additional Taxation *i.e.*, 8·80 Crores. You will get some idea of what these taxes may be like.

"The programme for mobilizing internal resources contemplate increased income from land, estate duties, wider coverage and better administration of sales-tax........."

Sri M. GOVINDA REDDY.—What is the increased income expected?

The Hon'ble Sri H. C. DASAPPA.—That is not a thing which I am prepared to answer to-day. The Hon'ble Member must wait, if I am here till the budget time.

Sri M. GOVINDA REDDY.—Let me at least know whether there would be substantial return from land revenue?

The Hon'ble Sri H. C. DASAPPA.—I cannot indicate what character it is going to take until the date of actual presentation of the budget.

Sri M. GOVINDA REDDY.—Regarding sales-tax, do Government expect a change in the system or change in the rates of sales-tax?

Sri H. K. VEERANNA GOWDA (Mandya District-General).—Sir, I may submit that discussion may follow after the Hon'ble Finance Minister finishes his speech explaining the position.

Sri A. BHEEMAPPA NAIK.—Have you taken into account the subsidy that you are going to make to the Local Boards? You have given some target figure as realisation from land revenue. Have you taken into account 25 per cent of the subsidy you are going to pay to the Local Boards in connection with these things?

Sri L. SIDDAPPA.—That is after all a paltry sum of Rs. 30 lakhs.

The Hon'ble Sri H. C. DASAPPA.—I would suggest a procedure, Sir. It is better if the Hon'ble Members make their remarks in the course of their speeches which are to follow. But since the Hon'ble Member Sri Bheemappa Naik has asked a question I may as well answer it.

We have set apart a portion of the land revenue. It means to that extent a reduction in our budget provision under these heads like rural development and so on. There is no difficulty for us. Now the entire land revenue gets into one common pool and from out of that we allot monies for rural development and so on. To-day, we give you an assurance that these local bodies, village panchayets and district boards, will have so much of the income, so that it really is not going to be much of additional burden to the State.

So, Sir, these are in the main the features of the plan. All that I can say is this: as observed by the Planning Commission, one of the most important things is that we must pull together. It is a common adventure on the part of the Government and the people. And

these long years of, I may say, loss of freedom and our struggle for freedom during these years, have created a kind of an attitude and a mentality which is not quite suited for the purpose of reconstructing the country. We must outgrow that kind of attitude. The sword, whether it is the sword of satyagraha or whatever else, must now be converted into plough-shares and we must think in terms of constructive co-operation and then re-build our country. I am noticing, and it is a sad feature of the times, that we still suffer from a kind of an attitude of being merely critical, destructively so. The hypercritics suffer from a sense of cynicism on the one hand and a sense of frustration on the other. I am not addressing merely the Hon'ble Members of this House. I am addressing the people of Mysore in this respect, whose choice representatives you are and inheriting a serious responsibility and I appeal to you and through you to the people at large, that once and for all we must give up that kind of attitude. Whichever Government is there in the saddle, we must strive and shape things together, so that the posterity may have something good to say and some credit to give us for having laid the foundations of a progressive welfare state. If we fail in that task, if we spend our energies merely in the task of hair-splitting arguments or fault-finding, if we do not out-grow our being mere politicians and if we do not become true statesmen and patriots, I am afraid, the future is rather disappointing. If on the other hand we choose the other course, as asked by Pandit Nehru, that of working hard and working patriotically, there is a great and glorious future for the State. And I commend Sir, this plan, modest as it may be, for the acceptance of the House. Deal with it charitably and gently. It may be that it can be improved upon and I tell you no Government can simply say that this is a picture which cannot be deviated from. Times may well change. It may be that there will be famine or some other thing which may cause diversion of fund. We may have to change some plans. The Planning Commission is well aware of it. Let us not think that in these plans there is something *sacro sanct* from which we should not deviate or that the provisions are not enough to meet the demands of the country. Sir, I think it is a workable blue-print. It is a lovely blue-print if you can have it. If we can at least achieve this, we will have done a great deal for the country. I thank you again.

Mr. SPEAKER : Motion moved :—

"That this Assembly do take into consideration the five-year Plan for Mysore embodied in the All-India draft five-year Plan".

ಶ್ರೀ ಎರ್. ಸಿದ್ಧಪ್ಪನವರು (ಶಿವಮೊಗ್ಗ ಜಿಲ್ಲೆ).—ಅಧ್ಯಕ್ಷರೆ, ಸ್ವಾಮಿ, ಮೈಸೂರು ಸಂಸ್ಥಾನಕ್ಕೆಸಂಬಂಧಪಟ್ಟಂತಹ ಈ ಪಂಚವಾರ್ಷಿಕ ಯೋಜನೆಯ ಒಂದು ನೋಟ್ ಸರ್ಕಾರದವರು ನಮಗೆ ಕೊಟ್ಟಿದ್ದಾರೆ. ಇದನ್ನು ನಾನು ನೋಡಿದ್ದೇನೆ. ಅಲ್ಲದೆ ಈ ದಿವಸ ಈ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುವಾಗ ಮಾನ್ಯ ಹಣಕಾಸಿನ ಸಚಿವರು ಮಾಡಿದ ಭಾಷಣವನ್ನೂ ಸಹ ಬಹಳ ಕುತೂಹಲದಿಂದ ಕೇಳಿದ್ದೇನೆ. ನಮ್ಮ ಸರ್ಕಾರದವರು ತಯಾರಿಸಿ, ಕೇಂದ್ರ ಸರ್ಕಾರದವರು ಅನುಮೋದಿಸಿರುವಂಥಾ ಮತ್ತು ಪ್ಲಾನಿಂಗ್ ಕಮಿಷನ್ನಿನ ಮುಂದಿಟ್ಟ ನಾನಾ ಯೋಜನೆಗಳನ್ನೂ ಮತ್ತು ಆ ಪ್ಲಾನಿಂಗ್ ಕಮಿಷನ್ ಒಪ್ಪಿ ಮೈಸೂರು ಸರ್ಕಾರಕ್ಕೆ ವಾಪಸು ಕಳುಹಿಸಿಕೊಟ್ಟಿರುವ ಯೋಜನೆಗಳನ್ನೂ ಸಹ ಕೂಲಂಕಷವಾಗಿ ನೋಡಿದ್ದೇನೆ. ಇದನ್ನೆಲ್ಲಾ ನೋಡಿದಮೇಲೆ, ಈ ಐದು ವರ್ಷದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಕೇಂದ್ರ ಸರ್ಕಾರದವರು ಹಣವನ್ನು ಯಾವ ರೀತಿ ಒದಗಿಸುತ್ತಾರೆಂಬುದನ್ನು ಅವರು ಈ ಯೋಜನೆಗಳಲ್ಲಿ ಕೊಟ್ಟಿರುವ ಕೆಲವು ಅಂಶಗಳಿಂದ ವ್ಯಕ್ತಪಡಿಸಿದ್ದಾರೆ. ಇವುಗಳನ್ನು ನೋಡಿದನಂತರ, ಸರ್ಕಾರದವರು ತಯಾರಿಸಿರುವ ಈ ಯೋಜನೆಗಳನ್ನು ಕಾರ್ಯಾಚರಣೆಗೆ ತರುವುದಕ್ಕೆ ಸಾಧ್ಯವಾಗದೆ ಈ ಯೋಜನೆಗಳೆಲ್ಲವೂ ಬಹುಶಃ ಗಾಳಿಗೋಪುರಗಳಾಗುತ್ತವೆಯೋ ಏನೋ ಎನಿಸುತ್ತದೆ. ದಯವಿಟ್ಟು ನಾನು ಹೀಗೆ ಹೇಳಿದುದರಿಂದ ತಪ್ಪರ್ಥ ಮಾಡಿಕೊಳ್ಳಬಾರದು. ಮೈಸೂರು ಸಂಸ್ಥಾನದ ಅಭಿವೃದ್ಧಿಯಾಗಿ ಮೈಸೂರು ಸಂಸ್ಥಾನದಲ್ಲಿರತಕ್ಕ ಜನತೆಯ ಜೀವನದ ಮಟ್ಟ ಉತ್ತಮಪಡುವ ಬಗ್ಗೆ ಈ ಯೋಜನೆಗಳಿಂದ ಸಹಾಯವಾಗುವುದಿಲ್ಲವೆಂದಲ್ಲ. ಅಥವ ಈ ಯೋಜನೆಗಳು ಬೇಡ ಎಂದೂ ಅಲ್ಲ. ಇವು ಬಹಳ ಆವಶ್ಯಕ. ಒಂದು ದೃಷ್ಟಿಯಿಂದ ಈ ಯೋಜನೆಗಳೂ ಬಹಳ ಕಡಿಮೆಯೆಂದೇ ಹೇಳಬಹುದು. ನಾನು ಹೇಳುವುದರಲ್ಲಿ ಏನು ಅರ್ಥವಿದೆ ಎಂಬುದನ್ನು ಎರಡು ಮಾತುಗಳಲ್ಲಿ ಹೇಳುತ್ತೇನೆ.

ಸ್ವಾಮಿ, 1946-47ನೆಯ ಸಾಲಿನಲ್ಲಿ ಆಗಿನ ಮಂತ್ರಿಮಂಡಲ ಕೆಲವು ಯೋಜನೆಗಳನ್ನು, ಎಂದರೆ, ಯುದ್ಧಾನಂತರ ಅಭಿವೃದ್ಧಿ ಯೋಜನೆಗಳು ಎಂಬ ಹೆಸರನ್ನು ಕೊಟ್ಟು ಕೆಲವು ಯೋಜನೆಗಳನ್ನು ತಯಾರುಮಾಡಿ, ಅವುಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಒಂದು ಕಾರ್ಯಕ್ರಮವನ್ನು ಹಾಕಿಕೊಂಡರು. ಆಗ ಎದುರು ಪಕ್ಷವಾಗಿ ಕೆಲಸಮಾಡುತ್ತಿದ್ದ ಒಂದು ಪಕ್ಷದವರು ಈಗ

(ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು)

ಸರ್ಕಾರದ ಆಡಳಿತದ ಜವಾಬ್ದಾರಿ ವಹಿಸಿಕೊಂಡಿದ್ದಾರೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು. -ಇದ್ದಿದ್ದೇ ಒಂದು ಪಾರ್ಟಿ.

ಶ್ರೀ ಎಲ್. ಸಿದ್ದಪ್ಪನವರು.—ಇರಲಿ, ಆಗ ಎದುರು ಪಕ್ಷದಲ್ಲಿದ್ದವರೇ ಈಗ ಆಡಳಿತದ ಜವಾಬ್ದಾರಿಯನ್ನು ವಹಿಸಿಕೊಂಡಿರುವವರು. ಆಗ ಸರ್ಕಾರ ತಯಾರಿಸಿದ್ದ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಹೇರಳವಾಗಿ ಹಣವನ್ನಿಟ್ಟುಕೊಂಡಿದ್ದರು. ಅಲ್ಲದೆ ಕೆಲವರು ತಜ್ಞರಿಂದ ಕೂಡಿದ ಒಂದು ಸಮಿತಿಯನ್ನು ನೇಮಕ ಮಾಡಿ ಆ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಯಾವ ರೀತಿ ಹಣವನ್ನೊದಗಿಸುವುದು, ಸರ್ಕಾರದಲ್ಲಿರತಕ್ಕ resources ಏನು, ಅವುಗಳನ್ನೆಲ್ಲಾ ಕಾರ್ಯಗತ ಮಾಡಲು ಇನ್ನೂ ಯಾವ ಯಾವ ರೀತಿಯಲ್ಲಿ ಹಣವನ್ನೊದಗಿಸಿಕೊಳ್ಳಬೇಕು ಎಂಬ ಬಗ್ಗೆ ಆ ಸಮಿತಿಯವರ ಸಲಹೆಯನ್ನು ಪಡೆದರು. ಅದೇ Finance and Co-ordination Committee. ನಾನು ಹೇಳಿದ ಹಾಗೆ ಯುದ್ಧಾನಂತರದ ಯೋಜನೆಗಳನ್ನು ಕಾರ್ಯಕ್ರಮದಲ್ಲಿ ತರುವುದಕ್ಕೇ ಎಷ್ಟೋ ದಿವಸಗಳಾಯಿತು. ಆದರೆ ಹಿಂದೆ ಇಷ್ಟೊಂದು ಹಣದ ಅಭಾವ ಇರಲಿಲ್ಲ. ಯಥೇಷ್ಟವಾಗಿ ರೆವಿನ್ಯೂ ಸರ್ಪ್ಲಸ್ಸಿನಲ್ಲಿ ಬೇಕಾದಷ್ಟು ಹಣವಿತ್ತು. ಆದಾಗ್ಯೂ ಆ ಕೆಲಸಗಳು ಮುಂದುವರೆಯಲು ಬಹಳ ನಿಧಾನವಾಯಿತು. ಆದರೆ ಇತ್ತೀಚೆಗೆ ಆ ಹಣದ ಜೊತೆಗೆ ಇನ್ನೂ ಸ್ವಲ್ಪ ಹಣವನ್ನು ಯಾವ ಯಾವ ರೂಪಗಳಿಂದ ಒದಗಿಸಿಕೊಳ್ಳಬೇಕೋ, ಆ ಬಗ್ಗೆ ಫೈನಾನ್ಷಿಯಲ್ ಕೋಆರ್ಡಿನೇಷನ್ ಸಮಿತಿಯವರ ಸಲಹೆ ತೆಗೆದುಕೊಂಡು ಸರ್ಕಾರದವರು, ಆ ಬಗ್ಗೆ ಕೆಲವು ಬಾಬುಗಳಿಗೆ ಈಗ ತಾನೆ ಮಂಜೂರಾತಿಕೊಟ್ಟಿದ್ದಾರೆ. ಈಗಾಗಲೇ ಮಾನ್ಯ ಹಣಕಾಸಿನ ಸಚಿವರು ಹೇಳಿದ ಹಾಗೆ ಕೆಲ ಕೆಲವನ್ನು ಕಾರ್ಯ ರೂಪದಲ್ಲಿ ತಂದಿರತಕ್ಕದ್ದೆಲ್ಲಾ ನಮ್ಮ ಮುಂದಿರುತ್ತೆ. ಹಾಗೆ ಅವರು ಕಾರ್ಯರೂಪಕ್ಕೆ ತಂದಿರುವ ಮುಖ್ಯ ಯೋಜನೆಗಳು ಯಾವುವೆಂದರೆ—ಕೆಲವು ನೀರಾವರಿ ಯೋಜನೆಗೆ ಸಂಬಂಧಪಟ್ಟಿವೆ, ಕೆಲವು ವ್ಯವಸಾಯಾಭಿವೃದ್ಧಿಗೆ ಸಂಬಂಧ ಪಟ್ಟಿರುತ್ತವೆ. ಮತ್ತೆ ಕೆಲವು ವೆಟರಿನೆರಿ ಮತ್ತು ಅನಿಮಲ್ ಹಸ್ಬೆಂಡ್ರಿಗೆ ಸಂಬಂಧಪಟ್ಟಿರುತ್ತವೆ, ಕೈಗಾರಿಕಾ ಯೋಜನೆಗೂ ಕೆಲವು ಸಂಬಂಧಪಟ್ಟಿರುತ್ತವೆ. ಈಗ ನಾವೆಲ್ಲರೂ ನೋಡಿರುವಂತೆ ಈ ಪಾಂಚವಾರ್ಷಿಕ ಯೋಜನೆಗೆ ಸುಮಾರು 36 ಚಿಲ್ಲರೆ ಕೋಟಿ ರೂಪಾಯಿಗಳು ಬೇಕಾಗಿರುತ್ತೆಂದು ಅವರು ತಿಳಿಸಿದ್ದಾರೆ. ಆದರೆ ಈಗ ಹಾಲಿ ನಮ್ಮಲ್ಲಿರತಕ್ಕ ದುಡ್ಡೆಷ್ಟು ಎಂಬುದನ್ನು ನೋಡಿಕೊಂಡು ಅವರು ಈಗತಾನೆ ಏನು ಹೇಳಿದರೋ ಅದಕ್ಕೆ ತಾಳೆ ಹಾಕಿ ನೋಡಿದರೆ............

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಹತ್ತೂವರೆ ಕೋಟಿ ರೂಪಾಯಿಗಳಷ್ಟು ಡಿಫಿಸಿಟ್ ಇದೆ.

ಶ್ರೀ ಎಲ್. ಸಿದ್ದಪ್ಪನವರು.—Yes, there is 10·5 crores deficit. ಆದರೆ ಇದರಲ್ಲಿ ಎಲ್ಲೋ ಒಂದು ಕಡೆ ಒಂದೂವರೆ ಕೋಟಿ ಡಿಫಿಸಿಟ್ ಇರುತ್ತೆಂದು ತಿಳಿಸಿದ್ದ ಹಾಗೆ ನೋಡಿದ್ದು ಜ್ಞಾಪಕವಿತ್ತು. ಹಾಗೆ ರಿಸರ್ವಿನಲ್ಲಿದ್ದ ಎಲ್ಲಾ ಮೊಬಲಗನ್ನೂ ಮತ್ತು ಆದರ ಜೊತೆಗೆ ಇನ್ನೂ ಅನೇಕ ಫಂಡುಗಳ ರೂಪದಲ್ಲಿದ್ದ ಮೊಬಲಗುಗಳನ್ನೆಲ್ಲಾ ಈ 5 ವರ್ಷಗಳಲ್ಲಿ ಬೆಳೆಸಿಬಿಟ್ಟಿದ್ದಾರೆ. ಹಾಗೆ ಇದ್ದ ದುಡ್ಡೆಲ್ಲಾ ವೆಚ್ಚವಾಗಿ ಹೋಗಿರುವಾಗ ಈಗ ಮತ್ತೆ ಇವರು ಈ 36 ಕೋಟಿ, ಚಿಲ್ಲರೆ ರೂಪಾಯಿಗಳನ್ನು ಎಲ್ಲಿಂದ, ಹೇಗೆ ಒದಗಿಸಿಕೊಳ್ಳುತ್ತಾರೋ ನನಗೆ ಅದು ಗೊತ್ತಾಗದು. ಅವರು ತಿಳಿಸಿರುವ ಪ್ರಕಾರ ಅವರಿಗೆ ಮುಂದಿನ ವರ್ಷ 3 ಕೋಟಿ 90 ಲಕ್ಷ ಚಿಲ್ಲರೆ ದೊರೆಯಬಹುದೆಂಬ ಒಂದು ನಿರೀಕ್ಷೆ ಮಾಡಿದ್ದರೆ ಬಹುಶಃ ಇದು ಅವರಿಗೆ ಮುಂದಿನ ಸಾಲಿನಲ್ಲಿ ರೆವಿನ್ಯೂ ಸರ್‌ಪ್ಲಸ್ ಬಾಬಿನಿಂದ ಬರುತ್ತೆಂದು ಅವರು ಭಾವಿಸಿರುವಂತೆ ತೋರುತ್ತದೆ, ಆದರೆ ನಾವು ಕಳೆದ 5 ವರ್ಷಗಳ ಈ ಬಾಬಿನಿಂದ ಬಂದಿರುವ ಉತ್ಪತ್ತಿಯನ್ನು ನೋಡಿದರೆ ಅದು ಸರಾಸರಿ 78 ಲಕ್ಷಕ್ಕೆ ಜಾಸ್ತಿ ಉಳಿದಿರುವುದಿಲ್ಲ. ಹೀಗೆ ಅದು 78 ಲಕ್ಷಕ್ಕೆ ಮಾತ್ರ work out ಆಗಿರುತ್ತೆ. ಈಗ ನಾವು ಹಿಂದಿನ ಕೆಲವು ವರ್ಷಗಳ ಬಡ್ಜೆಟ್ ಎಸ್ಟಿಮೇಟುಗಳನ್ನೂ ಮತ್ತು ಅಕೌಂಟ್ಸ್‌ಗಳನ್ನೂ ತೆಗೆದುಕೊಂಡು ನೋಡಿದರೆ ಈ ರೆವಿನ್ಯೂ ಸರ್‌ಪ್ಲಸ್ ಮುಂದಕ್ಕೆ ಹೆಚ್ಚಾಗಿರತಕ್ಕ ಪರಿಸ್ಥಿತಿ ಇದೆಯೆಂದು ಹೇಳುವುದಕ್ಕಾಗುವುದಿಲ್ಲ. 1946-47ರಲ್ಲಿ ಉಳಿದಿರತಕ್ಕದ್ದು 160 ಲಕ್ಷದ 91 ಸಾವಿರ, ಅಲ್ಲಿಂದ ಮುಂದಕ್ಕೆಲ್ಲಾ ಕ್ರಮಕ್ರಮವಾಗಿ ಕಮ್ಮಿಯಾಗುತ್ತಲೇ ಬಂದಿದೆ. ಆದರ ಮುಂದಿನ ಸಾಲಿಗೆ 40 ಲಕ್ಷ, 48—49ಕ್ಕೆ 37 ಲಕ್ಷವನ್ನು ಮೊದಲು ಬಡ್ಜೆಟ್ಟಿನಲ್ಲಿ ತೋರಿಸಿದ್ದು ಅನಂತರ ಅದನ್ನು ರಿವೈಸ್ ಮಾಡಿದ ಮೇಲೆ ಅದಕ್ಕೆ ಇನ್ನೂ ಹೆಚ್ಚಿಗೆ ಹಾಕುತ್ತೇವೆಂದು ತಿಳಿಸಿ ಆಗ ಇದ್ದುದು 15 ಲಕ್ಷ ಮಾತ್ರ. ಇನ್ನು 49-50ರಲ್ಲಿ ಕೇವಲ 5 ಲಕ್ಷ ಮಾತ್ರ ಉಳಿದಿದೆ. ಹೀಗೆಲ್ಲಾ ಇರುವಾಗ ಈ ಮುಂದೆಯೂ ಕೂಡ ಈ ಬಾಬಿನಿಂದ ಹೆಚ್ಚು ಹಣ ಉಳಿತಾಯವಾಗುತ್ತೆಂದು ಭಾವಿಸಲು ಯಾವ ರಹದಾರಿಯೂ ಇಲ್ಲ. ವಾಸ್ತವಾಂಶಗಳು ಈ ರೀತಿಯಿರುವಾಗ ಈ ಬಾಬಿನಿಂದ ಅಷ್ಟೊಂದು ಹಣ ಉಳಿಯುವಷ್ಟು ವರಮಾನ ಎಂದರೆ ಸುಮಾರು 62 ಕೋಟಿ 52 ಲಕ್ಷ ವರಮಾನ ಬರುವಂಥ ಸನ್ನಿವೇಶಗಳೇ ಇರುವುದಿಲ್ಲವೆಂಬ ಅಂಶವು ನಮ್ಮ ಹಿಂದಿನ ಅನುಭವಗಳಿಂದ ತಿಳಿದು ಬರುತ್ತದೆ. ಹಾಗೆ ಯಾವಾಗ ಒಂದು ವರಮಾನ ಬರುವುದಿಲ್ಲವೆಂಬ ನಿರೀಕ್ಷಣೆ ಇರುವಾಗ ನಾವು ಇಂಥಾ ಬಾಬುಗಳಿಗೆ ಹಣವನ್ನು ಎಲ್ಲಿಂದ ಒದಗಿಸಲು ಸಾಧ್ಯವಿದೆ? ಹಿಂದೆ ಏನಾದರೂ ಹಣವನ್ನು ಉಳಿಸಿದ್ದಾರೆಯೇ ಎಂದರೆ ಅದೂ ಇಲ್ಲ, ಮುಂದೆ ಹಣ ಉಳಿಯತಕ್ಕ ಸನ್ನಿವೇಶಗಳೂ ಇಲ್ಲವೇ ಎಂದರೆ ಅದು ಕೂಡ ಇಲ್ಲ. ಆದರೆ ಹಾಗೆ ಹಣ ಉಳಿತಾಯವಾಗುವುದರ ಬದಲು ಅದಕ್ಕೆ ಎರಡರಷ್ಟು ಹೆಚ್ಚಿನ ಖರ್ಚು ಬಾಬುಗಳು ಈಗ ಹೆಚ್ಚಿವೆ. ಈಗ ಮೂರು ಕೋಟಿ 90 ಲಕ್ಷ ರೂಪಾಯಿಗಳು ಮೊದಲು ಆಗುತ್ತಿದ್ದ ಖರ್ಚಿನ ಮೇಲೆ ಹೆಚ್ಚಿಗೆ ಖರ್ಚಾಗುತ್ತದೆ. ಅಂದಮೇಲೆ ತಾವು ನಂಬಿಕೊಂಡಿರುವ ಪ್ರಕಾರ ಯಾವ ನಮಗೆ ಯಾವ ಹಣವೂ ಆ ಬಾಬಿನಿಂದ ಬರಲಾರದೆಂದು ನಾನು ತಿಳಿಸಬೇಕಾಗಿದೆ. ಇನ್ನೂ ಅನೇಕ ವಿಚಾರಗಳಿವೆ ಆದರೆ ಅವುಗಳನ್ನೆಲ್ಲಾ ನಾನೀಗ ಹೇಳಲು ಕಾಲಾವಕಾಶವಿಲ್ಲ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನಾನು ಆಗಲೇ ತಿಳಿಸಿರುವ ಹಾಗೆ ನಮಗೆ 73 ಕೋಟಿ ರೂಪಾಯಿ ಖರ್ಚಿರುತ್ತೆ. ಇದರಲ್ಲಿ 14·4ನ್ನು 47 ಕೋಟಿ, total Expenditure under the Development heads ನಿಂದ ನಾವು lift ಮಾಡಬೇಕಾಗಿರುತ್ತೆ. ತಾವೀಗ ಏನು ಖರ್ಚು ಬಾಬುಗಳನ್ನು ತಿಳಿಸಿದಿರೋ, ಆ ವೆಚ್ಚಗಳೆಲ್ಲಾ ಡೆವಲಪ್‌ಮೆಂಟ್ ಹೆಡ್ಡಿಗೆ ಸೇರಬೇಕು. So it comes outside the revenue plan.

ಶ್ರೀ ಎಂ. ಗೋವಿಂದರೆಡ್ಡಿಯವರು (ಚಿತ್ರದುರ್ಗ ಜಿಲ್ಲೆ).—ಈಗ ತಾವು revenue reserve ನಿಂದ

lift ಮಾಡಬೇಕೆಂದು ತಿಳಿಸಿದ 14·4 crores, ರೆವೆನ್ಯೂ expenditureನ್ನು meet ಮಾಡಿದ ನಂತರ ಅಲ್ಲಿ ಉಳಿದಿರತಕ್ಕದ್ದೇನು? ಅಥವಾ ಇದೇ ಬೇರೆಯೋ? Is that the meaning? I did not follow.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—That will be the deficit in case we keep 73 crores in tact—(that is 47 plus 26). ಈ 14·4 deficit ಅಂತ ಆಗಲೇ ಹೇಳಿದ್ದೇನೆ. ಆದರೆ ನಾವು ಈಗ ಏನು ಮಾಡಿದ್ದೇವೆಂದರೆ 47 ರಿಂದ 14·4ನ್ನು ಈ ಡೆವಲಪ್‌ಮೆಂಟಿಗೆ divert ಮಾಡಿದ್ದೇವೆ. What you should take is 32·60 as expenditure on revenue development.

ಶ್ರೀ ಎಲ್. ಸಿದ್ದಪ್ಪನವರು.—ತಾವು ಹಾಕಿಕೊಂಡಿರತಕ್ಕ ಯೋಜನೆಗಳೇನೋ ಬಹಳ ದೊಡ್ಡವೇ ಆಗಿವೆ. ಆದರೆ ತಮಗಿರತಕ್ಕ ಖರ್ಚೆಷ್ಟು, ತಮಗೆ ಬರತಕ್ಕ ವರಮಾನವೆಷ್ಟೆಂಬುದನ್ನು ನೋಡಿಕೊಂಡು, ತಮಗೆ ಬರತಕ್ಕ ವರಮಾನ ಕಮ್ಮಿಯಿದ್ದಾಗ್ಯೂ, ನೀವು ಹೆಚ್ಚಾಗಿ ಹೀಗೆ ವರಮಾನ ಬರುತ್ತೆಂದು ಹಾಕಿದ್ದೀರಲ್ಲ, ಇಷ್ಟೊಂದು ವರಮಾನ ತಮಗೆ ಎಲ್ಲಿಂದ ಬರುತ್ತೆ?

The Hon'ble Sri H. C. DASAPPA.—It is a question of accounting. If you take the normal productions as we are now making for all these developments, then it is a deficit one to the tune of Rs. 10 crores as I have said, during five years.

Sri L. SIDDAPPA.—How do you make it up?

The Hon'ble Sri H. C. DASAPPA.—In the manner I have indicated already.

Sri D. H. CHANDRASEKHARAIYA.—Where does the 14·04 crores come into the plan?

The Hon'ble Sri H. C. DASAPPA.—14·4 ಇದೆಯಲ್ಲಾ, ಇದನ್ನು ಡೆವೆಲಪ್‌ಮೆಂಟ್ ಬಾಬಿನಿಂದ divert ಮಾಡಿಬಿಟ್ಟಮೇಲೆ ಉಳಿಯುವುದು ಈ 3·90 ಕೋಟಿರೂಪಾಯಿ ಇದಾದ ಮೇಲೆ the remaining 10·5 plus 36·6 according to the plan is what we have got to find the money from. That I have already read out here, how we are going to find that money.

Sri H. M. CHANNABASAPPA.—If I may interrupt for a minute, I would like to say this. The total plan costs 47·01 crores. Non-development Expenditure that is required for five years is 58·60 crores. So for these six years, the total of Rs. 105·6 is required to implement the plan plus the non-development expenditure. 62·50 crores is the income that we expect with n these five years. 27·73 crores is what we expect from the other resources and 8 crores is what we expect from the Centre as assistance. That makes 95·2 crores. Net result is 10·5 crores. That makes up 105·7 crores.

ಶ್ರೀ ಎಲ್. ಸಿದ್ದಪ್ಪನವರು.—ಸ್ವಾಮಿ, ಈಗ ನಾವು ಹೆಚ್ಚು ಕಡಮೆ 36 ಕೋಟಿ ರೂಪಾಯಿಗಳಿಗೆ ಬದಲಾಗಿ 40 ಕೋಟಿ ಹಣ ಒದಗಿಸಿಕೊಳ್ಳಬೇಕಾದ ಸಂದರ್ಭ ಬಂದಿದೆ. ಹಿಂದೆ 1946-47ರಲ್ಲಿ 36ಕೋಟಿ ಇತ್ತು. ಆಗ ಹೆಚ್ಚು ಖರ್ಚು ಮಾಡಬೇಕೆಂದು ಯೋಚನೆ ಮಾಡಿದ್ದರೆ ಪಂಚವಾರ್ಷಿಕ ಯೋಜನೆಯಂತೆ ಕಾರ್ಯಕ್ರಮ ಇಟ್ಟುಕೊಂಡು ಆಚರಣೆಗೆ ಕೊಡುವಾಗ ಪೂರ್ತಿಯಾಗಿ ಮೊಬಲಗನ್ನು ಒದಗಿಸಿಕೊಳ್ಳುವ ಅವಕಾಶವಿರುತ್ತಿತ್ತು. ಈಗ ಹಾಗೆ ಮಾಡುವುದಕ್ಕೆ ಅವಕಾಶವಿಲ್ಲದೇಹೋದ್ದರಿಂದ ನಮಗೆ ಗತ್ಯಂತರವೇ ಇಲ್ಲ. ಇದೆಲ್ಲಾ ನೋಡಿ ನನಗೆ ಒಂದು ಸಂಗತಿ ನೆನಪಿಗೆ ಬರುತ್ತದೆ. ನಮ್ಮ ಶಿವಮೊಗ್ಗ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ 1918-19ರಲ್ಲಿ O. S. No. 1 ಒಂದು ಕೇಸಿತ್ತು. ಆ ಕೇಸು 1935 ನೆಯ ಇಸವಿಯವರೆಗೂ ನಡೆಯಿತು. ಅದರಲ್ಲಿ ಎರಡು ಪಾರ್ಟಿಗಳೂ ಹಣವಂತರು. ಆ ಕೇಸನ್ನು ಹಾಕುವಾಗ ರಿಸೋರ್ಸಸ್ ಡ್ರಾಫ್ಟ್ ಮಾಡಿ ಬಹಳ ಮೊಬಲಗನ್ನು ಕೋರ್ಟಿನಲ್ಲಿ ಡಿಪಾಜಿಟ್ ಇಟ್ಟರು. ಕೇಸು ಬಹಳ ದಿವಸ ನಡೆದ ಮೇಲೆ ಲೆಕ್ಕ ನೋಡುವ ಕಮಿಷನರಿಗೆ ಮತ್ತು ನೇಮಕ ಮಾಡಿದ್ದ ಆಡಿಟರಿಗೆ ಹಣವೆಲ್ಲಾ ಖರ್ಚಾಯಿತು. ಆ ಮೇಲೆ ಲೆಕ್ಕ ನೋಡುವಾಗ ಕೊಯಮತ್ತೂರು ಫರ್ಮಿಗೆ ಇಷ್ಟು, ದಾವಣಗೆರೆ ಫರ್ಮಿಗೆ ಇಷ್ಟು, ಹುಬ್ಬಳ್ಳಿ ಫರ್ಮಿಗೆ ಇಷ್ಟು ಹೀಗೆ ಕ್ರೆಡಿಟ್ ಮಾಡಬೇಕೆಂದು ಗೊತ್ತಾಯಿತು. ಒಂದು ಸಲ ಆ ಪಾರ್ಟಿಗಳ ಜೊತೆಯಲ್ಲಿ ನಾನು ಪ್ರಯಾಣ ಮಾಡುವಾಗ ನಾನು ಪ್ರಶ್ನೆ ಮಾಡುವುದಕ್ಕೆ ಬದಲಾಗಿ ಅವರೇ ಪ್ರಶ್ನೆ ಮಾಡಿದರು. ಇದೇನು ವಾದಿಯಿಂದ ಪ್ರತಿವಾದಿಗೆ 2 ಸಾವಿರ ರೂಪಾಯಿ ಕ್ರೆಡಿಟ್, ಒಂದು ಅಂಗಡಿಯಿಂದ ಇನ್ನೊಂದು ಅಂಗಡಿಗೆ ಎರಡು ಸಾವಿರ ಡೆಬಿಟ್ ಎಂದು ಹೀಗೆ ಹೇಳುತ್ತಾರೆ, ಹಣ ಎಲ್ಲಿದೆ ಎಂದು ಕೇಳಿದರು.

Sri G. A. ACHARYA.—Do you mean to say that it is all manipulation?

ಶ್ರೀ ಎಲ್. ಸಿದ್ದಪ್ಪನವರು.—ಮ್ಯಾನಿಪುಲೇಷನ್, ಏನೂ ಇಲ್ಲ. ಕಾಗದದಲ್ಲಿ ಸರಿಯಾಗಿದೆ. ಆ ಹಣ ಆಡಿಟರುಗಳಿಗೆ ಖರ್ಚಾಯಿತು. ಈಗ ಅಷ್ಟು ಹಣ ಯಾರು ಕೊಡಬೇಕು? ಆಡಿಟರು ವರದಿ ತಯಾರು ಮಾಡುತ್ತಾರೆ. ಹಣ ಎಲ್ಲಿದೆ, ಯಾರು ಕೊಡಬೇಕು ಎಂದು ಕೇಳಬಹುದು. ನಾವು ಮಾನ್ಯ ಹಣಕಾಸಿನ ಸಚಿವರನ್ನು ಕೇಳಬೇಕು. ಈ ಯೋಜನೆಗೆ 5 ಕೋಟಿ, 8 ಕೋಟಿ ಬೇಕೆಂದು ಹೇಳಿರುವುದು ಒದಗುತ್ತದೆಯೇ ಎಂದು ನಾವು ಯೋಚನೆ ಮಾಡಬೇಕು.

ಶ್ರೀ ಜಿ. ಎ. ಆಚಾರ್ಯರು.—ನಂಬಿಕೆಯಿಲ್ಲದಿದ್ದರೆ ಏನು ಮಾಡುವುದು?

ಶ್ರೀ ಎಲ್. ಸಿದ್ದಪ್ಪನವರು.—ನಂಬಿಕೆ ಬರುವುದಕ್ಕೆ ಅವಕಾಶವಿರಬೇಕು. 9 ಕೋಟಿ ಸಾಲ ತರುವುದಕ್ಕೆ ಅವಕಾಶವಿದೆಯೆ 9 ಕೋಟಿಯಲ್ಲ. 9 ಲಕ್ಷ ಸಾಲ ತರುವುದೆಲ್ಲಿ?

Hon'ble Sri H. C. DASAPPA.—I do not know whether a responsible member like Sri L. Siddappa should be making such an utterly irresponsible statement! I have nothing to say to such irresponsible statements. I do not think the Opposition is going to serve any purpose

(THE HON'BLE SRI H. C. DASAPPA) by making such absolutely irresponsible statements.

Sri L. SIDDAPPA.—Luckily for the Hon'ble Minister for Finance he will not be here to see the state of affairs.

The Hon'ble Sri H. C. DASAPPA.—What does the Hon'ble Member mean by that?

ಶ್ರೀ ಎಲ್. ಸಿದ್ದಪ್ಪನವರು.—ಹಣ ಸಿಕ್ಕುವುದಿಲ್ಲವೆಂದು ತಿಳಿದಿರುವಾಗ ಇಂಥಾದ್ದನ್ನು ಬಿಟ್ಟು ಬಿಡಬೇಕು. ನಮ್ಮಲ್ಲಿದ್ದ ಹಣ ಖರ್ಚಾಗಿದೆ. ಈಗ ಹಣ ಎಲ್ಲಿದೆ?

ಶ್ರೀ ಎಂ. ವಿ. ಕೃಷ್ಣಪ್ಪನವರು.—ತಾವು ಹಾಕಿದ್ದ ಯೋಜನೆಗಳನ್ನು ಪೂರ್ತಿ ಮಾಡಲು ಖರ್ಚುಮಾಡಿದೆ.

ಶ್ರೀ ಎಲ್. ಸಿದ್ದಪ್ಪನವರು.—ಯಾವುದಕ್ಕೆ ಹಣ ಖರ್ಚುಮಾಡಬೇಕಾಗಿತ್ತು, ಯಾವುದಕ್ಕೆ ಮಾಡಿದೆ, ಯಾವ ಹಣ ಖರ್ಚುಮಾಡಿದೆ ಎಂಬುದನ್ನು ನೋಡಬೇಕು. ಖಾಸಗಿ ವ್ಯಕ್ತಿಗಳನ್ನು ಸರ್ಕಾರ ಲೆಕ್ಕಕ್ಕೆ ತೆಗೆದುಕೊಳ್ಳುವುದುಂಟೇ? ನಿಧಿಯಿದ್ದರೂ ಅದನ್ನು ಖಾಯಮಾಗಿ ಆಸ್ತಿ ರೂಪವಾಗಿಡುವುದಕ್ಕಾಗಿ ಇದ್ದುದನ್ನು ಖರ್ಚುಮಾಡಿರುವುದು ಸರಿಯಲ್ಲ.

ಶ್ರೀ ಜಿ. ಎ. ಆಚಾರ್ಯರು.—ವಿದ್ಯುಚ್ಛಕ್ತಿಗಾಗಿ ಖರ್ಚುಮಾಡಿಲ್ಲವೇ?

ಶ್ರೀ ಎಲ್. ಸಿದ್ದಪ್ಪನವರು.—ಇರಬಹುದು, ಸಂಬಳದ ಬಾಕಿಗಾಗಿ ಕೊಟ್ಟಿರಬಹುದು, ಸಬ್ಸಿಡಿ ಕೊಟ್ಟಿರಬಹುದು; ಆದರೆ ಯಾವುದನ್ನು ಯಾವುದಕ್ಕೆ ಹೇಗೆ ಖರ್ಚು ಮಾಡಬೇಕಾಗಿತ್ತೋ ಹಾಗೆ ಮಾಡಿರುವುದಿಲ್ಲ.

The Hon'ble Sri H. C. DASAPPA.—ಹತ್ತು ಸಲ ಅದಕ್ಕೆ ಜವಾಬು ಹೇಳಿದೆ. ಫೇಕಪಿಹಾಷರ್ ಮಾಡಿದ ಮಹಾವ್ಯಕ್ತಿಗಳು ಅವರೇ. ಭದ್ರಾವತಿ ಹೈಡ್ರೋ ಎಲೆಕ್ಟ್ರಿಕ್ ವರ್ಕ್ಸ್‌ಗೆ ಯೋಜನೆ ಮಾಡಿದವರು ಆ ಮಹನೀಯರೇ. What is the use of fouling one's own nest like that? I have no objection to reply to him at the end. But I appeal to my friend, it does not profit him or the country to go on making these reckless statements.

Sri L. SIDDAPPA.—If he feels irritated, I do not propose to go further.

The Hon'ble Sri H. C. DASAPPA.—I ask the Hon'ble Member this much. Was he not the person who constituted the Pay Commission and left us the legacy?

Sri L. SIDDAPPA.—It is we who have been telling you from the very beginning to effect retrenchment. We have been asking you not to go on increasing establishment in various departments and all that. But you have not moved your little finger to effect any retrenchment. You have done nothing to effect any kind of savings.

The Hon'ble Sri H. C. DASAPPA.—Do not say that the monies have gone somewhere else. Monies have gone to meeting the commitments which were incurred by you.

Sri L. SIDDAPPA.—ಹಣ ಯಾವ ತರದಲ್ಲಿ ವಿನಿಯೋಗವಾಗಿದೆಯೆಂದು ಹೇಳುವುದಕ್ಕೆ ಈಗ ಕಾಲಾವಕಾಶವಿಲ್ಲ.

The Hon'ble Sri H. C. DASAPPA.—I would welcome the Hon'ble Member to tell us the ways in which the monies have gone. We will give him full time.

Sri L. SIDDAPPA.—Monies have gone for purchasing Cars, Aeroplanes, for making foreign tours etc.

Sri H. M. CHANNABASAPPA.—The Hon'ble Member is making very irresponsible statements. We would like him to fully support his statements. We will hear him fully so that the country may judge him and his statements on merits.

The Hon'ble Sri H. C. DASAPPA.—We are not depleting the Treasury to the tune of Rs. 2,000 per month, if we have a car for the service of the State.

Sri K. R. SREEKANTESWAR.—It is stated that the total expenditure per month for the Ministers' salary etc., comes to Rs. 3,000 now. Is it not?

ಶ್ರೀ ಎಲ್. ಸಿದ್ದಪ್ಪನವರು.—36 ಕೋಟಿ ಒದಗಿಸಿದ್ದರೂ 9 ಕೋಟಿ ಸಾಲರೂಪವಾಗಿ ತೆಗೆದುಕೊಳ್ಳಬೇಕೆಂದಿದೆ. ಈ ಯೋಜನೆ ಸಾಧ್ಯವೆ, ಅಲ್ಲವೆ ಎಂದು ನೋಡಬೇಕು. ಪ್ರತಿಯೊಂದಕ್ಕೂ ಹಣದ ವ್ಯವಸ್ಥೆ ಮಾಡಿ ಯೋಜನೆ ತಯಾರುಮಾಡಬೇಕಾಗಿತ್ತು. ಆ ರೀತಿ ಮಾಡದೆ ಸಾಲ ತರುತ್ತೇವೆಂದು ಹೇಳುವುದು ಸರಿಯಲ್ಲ. ಆ ಮೇಲೆ ಹಣ ಹೇಗೆ ಒದಗಿಸುತ್ತಾರೆಂಬುದನ್ನು ಹೇಳಿದ್ದಾರೆ. ಡಿಪಾಜಿಟ್ ವಗೈರೆ 5 ಕೋಟಿ ಬರುತ್ತದೆ, ಮಿತವ್ಯಯದಿಂದ 40 ಲಕ್ಷ ರೂಪಾಯಿ ಬರುತ್ತದೆ ಎಂದು ಹೇಳುತ್ತಾರೆ. ಇದು ಹೆಚ್ಚಲ್ಲ; ಇನ್ನೂ ಬಹಳ ಹೆಚ್ಚಾಗಿ ಉಳಿಸಬೇಕು. ಹೆಚ್ಚಾಗಿ ತೆರಿಗೆ ಹಾಕುವುದರಿಂದ 5 ವರ್ಷಗಳಲ್ಲಿ 8 ಕೋಟಿ 80 ಲಕ್ಷ ರೂಪಾಯಿ ಬರುತ್ತದೆಂದು ಹೇಳುತ್ತಾರೆ, 9ನೆಯ ಪ್ಯಾರಾದಲ್ಲಿ ಯಾವ್ಯಾವ ಬಾಬಿನಿಂದ ಹೆಚ್ಚು ತೆರಿಗೆ ಹಾಕಿ ಹಣ ಒದಗಿಸಬೇಕೆಂದಿದ್ದಾರೆ ಎಂದು ಸೂಚಿಸಿರುವುದನ್ನು ನೋಡಿದರೆ ಬಹಳ ಶೋಚನೀಯ ಸ್ಥಿತಿ ಕಂಡುಬರುತ್ತದೆ.

In para 9 it is stated :—

"It may be stated in this connection that the magnitude of the Plan has been fixed with reference to the amount currently available for development expenditure on Revenue account, additional resources which this Government might be able to secure during the period of the Plan and Central assistance. The programme of development drawn up takes note of the relative importance of various projects in the light of the State's economic needs and the extent to which the State could take positive steps to develop further resources in the planning period. The programme for mobilizing

internal resources contemplates increased income from land, estate duties, wider coverage and better administration of Sales-tax, economies in revenue expenditure and certain minor taxes on entertainment, Motor Vehicles, etc.''

ತಾವು ಜಮೀನು ಕಂದಾಯದ ಮೂಲಕ ಹೆಚ್ಚು ತೆರಿಗೆ ಬರುತ್ತದೆ ಎಂದು ನಿರೀಕ್ಷಿಸುತ್ತೀರಿ. ಅದು ಸಾಧ್ಯವೇ ಇಲ್ಲವೇ ಎಂಬುದನ್ನು ಯೋಚನೆಮಾಡಬೇಕು. ಯಾವ ರೀತಿ ಜಮೀನು ಕಂದಾಯದಿಂದ ಹೆಚ್ಚು ನಿರೀಕ್ಷಿಸುತ್ತೀರಿ ಎಂದರೆ, ಮಾನ್ಯ ಹಣಕಾಸಿನ ಸಚಿವರು ಅವರ ಭಾಷಣದಲ್ಲಿ ಈಗ ಹೇಳುವುದಕ್ಕೆ ತಯಾರಾಗಿಲ್ಲ ಎಂದು ಹೇಳುತ್ತಾರೆ ಅದಕ್ಕೆ ಏನು ಕಾರಣವೋ ತಿಳಿಯದು.

The Hon'ble Sri H. C. DASAPPA.—That is an ordinary principle of bad getting and I am not going to disclose that now.''

ಶ್ರೀ ಎಲ್. ಸಿದ್ದಪ್ಪನವರು.—'Increased income and better administration of sales-tax' ಎಂದು ಹೇಳುತ್ತೀರಿ. Sales-tax administer ಮಾಡಿ ಎಷ್ಟು ಆದಾಯ ಬರುತ್ತದೆ ಎಂದು ನಿರೀಕ್ಷಿಸುತ್ತೀರೋ ಅಷ್ಟೂ ಕೂಡ ಬರುವುದಿಲ್ಲ ಎಂದು ಹೇಳುವುದಕ್ಕೆ ಕಾರಣವಿದೆ. ತಮಗೇ ತಿಳಿದಹಾಗೆ ಒಂದು ಕಾನ್ಸ್ಟಿಟ್ಯೂಷನಲ್ ಪ್ರಾವಿಷನ್ ಇದೆ. ಅದು inter state commerceಗೆ ಪ್ರತಿಬಂಧಕ ಬರುವುದಾದರೆ, ಯಾವ್ಯಾವ ಬಾಬುಗಳ ಮೇಲೆ ತೆರಿಗೆ ಹಾಕಬಹುದಾಗಿತ್ತೋ, ಹಿಂದೆ ಹಾಕಿದ್ದಾರೋ ಅಂಥಾ ಬಾಬುಗಳಮೇಲೆ ಈಗ ತೆರಿಗೆ ಹಾಕುವುದಕ್ಕೆ ಅವಕಾಶವಿಲ್ಲ. ಸೇಲ್ಸ್ ಟ್ಯಾಕ್ಸ್ ಹಿಂದೆ ಎಷ್ಟು ಬರುತ್ತಾ ಇತ್ತೋ, ಅದು ಬಹಳ ಕಡಿಮೆ. ಅನಂತರ ಕಾನ್ಸ್ಟಿಟ್ಯೂಷನಲ ಪ್ರಾವಿಷನ್ ಇನ್ನೂ ಒಂದು ಇದೆ. ಅದೇನೆಂದರೆ, ಪ್ರಜೆಗಳಿಗೆ ಪ್ರತಿದಿನದ ಉಪಯೋಗಕ್ಕೆ ಬೇಕಾಗುವ ಆಹಾರ, ಬಟ್ಟೆ ಇಂಥಾ ಕೆಲವು ಬಾಬುಗಳ ಮೇಲೂ ಕೂಡ ಸೇಲ್ಸ್ ಟ್ಯಾಕ್ಸ್ ವಿನಾಯಿತಿ ಮಾಡಬೇಕಾಗುವ ಸಂದರ್ಭ ಬರಬಹುದು. ಇದುವರೆಗೆ ಅಂಥಾ ಬಾಬುಗಳ ಮೇಲೆ ಬರುತ್ತಾ ಇದ್ದ ಮೊಬಲಗೂ ಸಹ ದೊರೆಯುವುದಿಲ್ಲ. ಆದ್ದರಿಂದ ಸೇಲ್ಸ್ ಟ್ಯಾಕ್ಸಿನಿಂದ ಹೆಚ್ಚಿಗೆ ಮೊಬಲಗು ಬರುತ್ತದೆ ಎಂದು ನಿರೀಕ್ಷಿಸುವುದಕ್ಕೆ ನ್ಯಾಯವಾದ ಕಾರಣ ಯಾವುದೂ ಇಲ್ಲ. ನಾನು ಮೊದಲು ಹೇಳಿದ ಹಾಗೆ ಭೂಕಂದಾಯದ ವಿಷಯದಲ್ಲಿ ಇದುವರೆಗೂ ಸಂಸ್ಥಾನದಲ್ಲಿ ಇದ್ದ ಚಳುವಳಿ ಎಂದರೆ ಭೂಕಂದಾಯ ಜಾಸ್ತಿ, ಇದನ್ನು ಕಡಿಮೆಮಾಡಬೇಕು ಎಂಬುದು. ಆ ಚಳುವಳಿ ಹುಟ್ಟಿಸಿದವರು ಇದೇ ಮಹನೀಯರೇ. ಆ ರೀತಿ ಒಂದು ಚಳುವಳಿ ಹುಟ್ಟಿಸಿ ಎಷ್ಟುಮಟ್ಟಿಗೆ ಜನಗಳಿಗೆ ಪರಿಹಾರ ಕೊಡಬೇಕೆಂಬ ಬಗ್ಗೆ ಪರಿಶೀಲನೆಮಾಡಲು ಸರ್ಕಾರದವರು ಒಂದು ಸಮಿತಿ ನೇಮಕಮಾಡಿದ್ದರು. ಅವರ ಶಿಫಾರಸ್ಸು ಕೂಡ ಸರ್ಕಾರದ ಮುಂದೆ ಇದೆ. ಅವರೂ ಕೂಡ ಜಮೀನು ಕಂದಾಯದಿಂದ ಇನ್ನೂ ಯಾವುದೂ ಹೆಚ್ಚು ವರಮಾನ ಬರುವುದಕ್ಕೆ ಅವಕಾಶವಿಲ್ಲ ಎಂದು ಅವರ ವರದಿಯಲ್ಲಿ ಹೇಳಿದ್ದಾರೆ. ಎಸ್ಟೇಟ್ ಡ್ಯೂಟೀಸ್‌ನಿಂದ ಹೆಚ್ಚು ಹಣ ಬರುತ್ತದೆ ಎಂದು ನಿರೀಕ್ಷಿಸುವುದಕ್ಕೂ ಕಾರಣವಿಲ್ಲ. ಬೊಂಬಾಯಿ, ಕಲ್ಕತ್ತಾ ಅಥವಾ ಉತ್ತರ ಪ್ರದೇಶಗಳಲ್ಲಿರುವಂತೆ ನಮ್ಮ ದೇಶದಲ್ಲಿ ಮಲ್ಟಿ ಮಿಲಿನಿಯರುಗಳು ಇಲ್ಲ. ಪರಿಸ್ಥಿತಿ ಹೀಗಿರುವಾಗ ಹೆಚ್ಚಿನ ತೆರಿಗೆ ಹಾಕುವುದರಿಂದ ಹೆಚ್ಚು ಹಣ ಬರುತ್ತದೆ ಎಂದು ನಿರೀಕ್ಷಿಸುವುದಕ್ಕೆ ಅವಕಾಶವಿಲ್ಲ. ಸ್ವಾಮಿ, ಪರಿಸ್ಥಿತಿ ಹೀಗಿದೆ. ಮಾನ್ಯ ಸಚಿವರು ಅವರ ಭಾಷಣದಲ್ಲಿ ಈ ಯೋಜನೆಗಳೆಲ್ಲಾ 1950-51ರಲ್ಲಿ ಜಾರಿಗೆ ಬಂದು 56-57ರಲ್ಲಿ ಎಂದರೆ 5 ವರ್ಷಗಳಲ್ಲಿ ಪೂರ್ತಿಯಾಗಬೇಕು ಎಂದು ಹೇಳಿದರು. ಈಗಾಗಲೇ ಮೊದಲನೇ ವರ್ಷದ ಯೋಜನೆಗಳನ್ನು ಕಾರ್ಯರೂಪಕ್ಕೆ ತರತಕ್ಕ ಮೊದಲನೆವರ್ಷದ ಕೊನೆಯ ಹಂತದಲ್ಲಿದ್ದೇವೆ. ಈ ಯೋಜನೆ ಪ್ರಕಾರ ಮೊದಲನೆವರ್ಷದಲ್ಲಿ ಸರ್ಕಾರದವರು ಎಷ್ಟೋ ಹಣ ಒದಗಿಸಬೇಕಾಗಿತ್ತು. ನಿಜವಾಗಿಯೂ ಸರ್ಕಾರದವರು ಈ ವಿಚಾರದಲ್ಲಿ ಎಷ್ಟು ಆಸಕ್ತಿಯನ್ನು ಅವರ ಭಾಷಣ ಮತ್ತು ಲಿಟ್ರೇಚರ್ ಮತ್ತೊಂದು, ಮಗದೊಂದು ಕೊಡುವುದರ ಮೂಲಕ ವ್ಯಕ್ತಪಡಿಸುತ್ತಾರೆಯೋ ಅಷ್ಟೇ ಆಸಕ್ತಿಯನ್ನು ವ್ಯಕ್ತಪಡಿಸಿ ಅದನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಸಾಧ್ಯವಾಗಿದೆಯೇ, ಇಲ್ಲವೇ ಎಂಬುದನ್ನು ನೋಡುವುದಾದರೆ, ಇದು ಮೊದಲನೆಯ ವರ್ಷ. ಮೊದಲನೆಯ ವರ್ಷದಲ್ಲಿ ಎಷ್ಟು ಮೊಬಲಗನ್ನು ಒದಗಿಸಬೇಕಾಗಿತ್ತೋ ಅಷ್ಟು ಮೊಬಲಗನ್ನು ಬಡ್ಜೆಟ್‌ನಲ್ಲಿ ಒದಗಿಸಿದ್ದಾರೆಯೇ ಎಂಬುದನ್ನು ನೋಡೋಣ. ಇದರಲ್ಲಿ ಎಲ್ಲಾ ಐಟಂಗಳನ್ನೂ ಸಭೆಯ ಅವಗಾಹನೆಗೆ ನಾನು ತರಲಿಚ್ಛಿಸುವುದಿಲ್ಲ. ನೀರಾವರಿ ಯೋಜನೆಗಳಷ್ಟನ್ನು ಮಾತ್ರ ತೆಗೆದುಕೊಳ್ಳೋಣ. ನೀರಾವರಿ ಯೋಜನೆಯಲ್ಲಿ ಮೂರು ಭಾಗ ಮಾಡಿದ್ದಾರೆ. ಕೆಲವು ಮೇಜರ ಇರಿಗೇಷನ್ ವರ್ಕ್ಸ್, ಇವೆ. ಇದರಲ್ಲಿ ಲಕ್ಕವಳ್ಳಿ ನೀರಾವರಿ ಯೋಜನೆ, ತುಂಗಾ ನೀರಾವರಿ ಯೋಜನೆ ಮತ್ತು ನುಗು ನೀರಾವರಿ ಯೋಜನೆ ಈ ಮೂರು ಯೋಜನೆಗಳೂ ಬರುತ್ತವೆ. ಇನ್ನು ಮೀಡಿಯಂ ಸೈಜ್ ನೀರಾವರಿ ಯೋಜನೆಗಳೂ ಇವೆ. ಈ ಬಾಬಿನ ಕೆಳಗೆ ಚಿತ್ರದುರ್ಗ ಡಿಸ್ಟ್ರಿಕ್ಟಿನ ಮೂರು ನಾಲ್ಕು ಯೋಜನೆಗಳು. ತುಪ್ಪದಹಳ್ಳಿ ಕೆರೆ ಕೆಲಸ, ಗಡಿಮಾಕುಂಟೆ ಕೆರೆಕೆಲಸ, ಸಂಗೇನಹಳ್ಳಿ ಕೆರೆ ಕೆಲಸ. ಮೈಸೂರು ಡಿಸ್ಟ್ರಿಕ್ಟ್‌ನಲ್ಲಿ ಒಂದು, ಮಂಡ್ಯ ಡಿಸ್ಟ್ರಿಕ್ಟ್‌ನಲ್ಲಿ ಒಂದು. ಈ ರೀತಿ ಅದರಲ್ಲಿ ಬರುತ್ತವೆ. ಇನ್ನು ಚಿಕ್ಕ ಕೆರೆಗಳ ಜೀರ್ಣೋದ್ಧಾರ. ಅದು ಒಂದು ಮೇಜರ್ ಐಟಂ ಆಫ್ ವರ್ಕ್ ಎಂದು ತೆಗೆದುಕೊಳ್ಳಬಹುದು, ದಯವಿಟ್ಟು ನೋಡಬೇಕು ಪೇಜ 20ರಲ್ಲಿ 1951-52ನೇ ಸಾಲಿಗೆ ನಾನು ಹೇಳಿದ ಮೇಜರ್ ಐಟಂ ಆಫ್ ವರ್ಕ್ಸ್, ಮೂರು ಐಟಂಗಳಿಗೆ ಒದಗಿಸಬೇಕಾಗಿದ್ದ ಹಣ ಒಟ್ಟು 107 ಲಕ್ಷ ಚಿಲ್ಲರೆರೂಪಾಯಿಗಳು. 1951-52ನೇ ಸಾಲಿನ ಬಡ್ಜೆಟ್‌ನ್ನು ನೋಡದರೆ ಆ ಬಗ್ಗೆ ಒದಗಿಸಿರುವುದು 59 ಲಕ್ಷ ರೂಪಾಯಿ ಮಾತ್ರ. ಅವರು ಹೇಳಬಹುದು 1951-52ನೇ ಸಾಲಿಗೆ ಬಡ್ಜೆಟ್‌ನ್ನು ತಯಾರುಮಾಡಿದ ಕಾಲದಲ್ಲಿ ಈ ಪಂಚವಾರ್ಷಿಕ ಯೋಜನೆ ತಯಾರಾಗಿರಲಿಲ್ಲ ಅಥವಾ ತಯಾರಾಗಿದ್ದರೂ ಸರ್ಕಾರದ ಒಪ್ಪಿಗೆ ದೊರೆತಿರಲಿಲ್ಲ. ನಮ್ಮ ಸರ್ಕಾರ ಒಪ್ಪಿದ್ದರೂ ಕೇಂದ್ರ ಸರ್ಕಾರದ ಪ್ಲಾನಿಂಗ್ ಕಮೀಷನ್‌ನವರು ಅಂಗೀಕಾರ ಮಾಡಿರಲಿಲ್ಲ, ಆದ್ದರಿಂದ 51-52ನೇ ಸಾಲಿನ ಬಡ್ಜೆಟ್‌ನ್ನು ಈ ಸಭೆಯ ಮುಂದಿಟ್ಟಾಗ ಅದನ್ನು ತೋರಿಸುವುದಕ್ಕೆ ಅವಕಾಶವಿರಲಿಲ್ಲ ಎಂದು ಹೇಳಬಹುದು..............................

ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಇಲ್ಲ. ಆದ್ದರಿಂದ ತಾವು ಅದನ್ನೆಲ್ಲಾ ಹೇಳುವುದರಿಂದ ಏನು ಪ್ರಯೋಜನ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅವರು ಇಲ್ಲದಿದ್ದರೆ ಏನು? ಇತರ ಮಂತ್ರಿಗಳು ಇಲ್ಲವೇ?

ಶ್ರೀ ಎಲ್. ಸಿದ್ದಪ್ಪನವರು.—ಹಾಗಲ್ಲ. ನೀರು ಶಂಖದಿಂದ ಬಂದರೇ ತೀರ್ಥವಾಗುತ್ತದೆಯೇ ಹೊರತು ಇಲ್ಲದಿದ್ದರೆ ಆಗುವುದಿಲ್ಲ.

Sri H. M. CHANNABASAPPA.—Every point raised will be dealt with. There are persons here to note down and reply amply and promptly. Mr. Speaker: The Hon'ble Finance Minister has already said that a note would be given to him and that he would answer.

ಶ್ರೀ ಎಲ್. ಸಿದ್ದಪ್ಪನವರು.—I presume that a note will be given to him and he would peruse it and reply. ಏನೇ ಆಗಲೀ ನಮ್ಮ ತೃಪ್ತಿಗೆ ನಾವು ಹೇಳಬೇಕಾಗುತ್ತದೆ. ಏಕೆಂದರೆ, ನಾವು ಏನು ಹೇಳಿದರೂ ಅದೆಲ್ಲಾ ಗೋರ್‌ಕಲ್ಲಮೇಲೆ ನೀರು ಸುರಿದಹಾಗೆ ಆಗುತ್ತದೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಿಮ್ಮ ಕಾಲದಲ್ಲೂ ಅಷ್ಟೆ. ನಾವು ಹೇಳಿದ್ದೆಲ್ಲಾ ಗೋರ್‌ಕಲ್ಲಮೇಲೆ ಮಳೆ ಸುರಿದಂತೆ ಆಗುತ್ತಾ ಇತ್ತು.

ಶ್ರೀ ಎಲ್. ಸಿದ್ದಪ್ಪನವರು.—ಮೊನ್ನೆತಾನೆ ಎಂಟು ದಿನಗಳ ಕೆಳಗೆ ಸರ್ಕಾರದವರು ಈ ಸಭೆಯ ಮುಂದೆ ಕೆಲವು ಸಪ್ಲಿಮೆಂಟರಿ ಮತ್ತು ಅಡಿಷನಲ್ ಡಿಮ್ಯಾಂಡುಗಳನ್ನು ಇಟ್ಟರು. ಈ ಮೂರು ಕೆಲಸಗಳಿಗಾಗಿ 51–52ರಲ್ಲಿ 107 ಲಕ್ಷ ರೂಪಾಯಿಗಳನ್ನು ಒದಗಿಸಬೇಕೆಂದು ಈ ಯೋಜನೆಯ ತಃಖ್ತೆಯಲ್ಲಿ ಕೊಟ್ಟಿರುವಾಗ ಬಡ್ಜೆಟ್‌ನಲ್ಲಿ 59 ಲಕ್ಷ ರೂಪಾಯಿಗಳನ್ನು ಮಾತ್ರ ಒದಗಿಸಿದ್ದಿರಿ. ಯಾವಾಗ ಈ ಯೋಜನೆಗಳಿಗೆಲ್ಲಾ ಕೇಂದ್ರ ಸರ್ಕಾರ ನಿಯಮಿಸಿದ್ದ ಪ್ಲಾನಿಂಗ್ ಕಮೀಷನಿನ ಒಪ್ಪಿಗೆ ದೊರಕಿತೋ ಆಗಲಾದರೂ ಸಪ್ಲಿಮೆಂಟರಿ ಗ್ರ್ಯಾಂಟ್ ಸಭೆಯ ಮುಂದಿಟ್ಟು ಈ ಯೋಜನೆಗಳಿಗೆಲ್ಲಾ ಒಪ್ಪಿಗೆ ದೊರೆತಿದೆ, ಆದ್ದರಿಂದ ಇನ್ನೂ ಬೇಕಾಗತಕ್ಕ ಸುಮಾರು 43 ಲಕ್ಷ ರೂಪಾಯಿಗಳನ್ನು ಈ ಬಾಬುಗಳಿಗೆ ಕೊಡಿ ಎಂದು ಕೇಳಬಹುದಾಗಿತ್ತು.

ಮೈನರ್ ಕೆರೆಗಳ ಜೀರ್ಣೋದ್ಧಾರಕ್ಕಾಗಿ 51–52ನೆಯ ಸಾಲಿಗೆ ಅವರು ಕೊಟ್ಟಿರುವ ಯೋಜನೆಯ ಪ್ರಕಾರ 32 ಲಕ್ಷ ರೂಪಾಯಿಗಳನ್ನು ಒದಗಿಸಬೇಕಾಗಿತ್ತು. ಅದಕ್ಕೆ ಬದಲಾಗಿ 51-52ನೆಯ ಬಡ್ಜೆಟ್ ಪ್ರಕಾರ ಕೇವಲ 12 ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮೈನರ್ ಕೆರೆಗಳ ಜೀರ್ಣೋದ್ಧಾರದ ವಿಷಯಕ್ಕೆ ಯೋಜನೆಯಲ್ಲಿ ಹೇಳಿರುವುದಕ್ಕಿಂತಲೂ ಜಾಸ್ತಿಯಾಗಿಯೇ ಕೊಟ್ಟಿದ್ದೇವೆ. ಏನಿದ್ದರೂ ಮೈನರ್ ಕೆರೆಗಳ construction ಬಗ್ಗೆ ಯೋಜನೆಯಪ್ರಕಾರ 10 ಲಕ್ಷ ಹೇಳಿದೆ; ಅದರಂತೆ ಕೊಟ್ಟಿದೆ;

ಶ್ರೀ ಎಲ್. ಸಿದ್ದಪ್ಪನವರು.—ನಾನು Construction of tanks ವಿಚಾರ ಹೇಳುತ್ತಿಲ್ಲ; Restorationನ ವಿಚಾರವನ್ನೇ ಹೇಳುತ್ತಿದ್ದೇನೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಾವು ಬಡ್ಜೆಟ್ಟನ್ನು ನೋಡುವುದಾದರೆ, Construction and Restoration of minor tanks ಎಂದು 10 ಲಕ್ಷ ಕೊಟ್ಟಿರುವುದರ ಜೊತೆಗೆ ರೆಸ್ಟೋರೆಷನ್ನಿಗೆಂದು 5 ಲಕ್ಷ ಬೇರೆ ಕೊಟ್ಟಿದೆ. ಅಂದರೆ ಒಟ್ಟು 15 ಲಕ್ಷ ಒದಗಿಸಿದೆ.

ಶ್ರೀ ಎಲ್. ಸಿದ್ದಪ್ಪನವರು.—ತಾವು ದಯವಿಟ್ಟು ಬಡ್ಜೆಟ್ಟಿನ 17ನೆಯ ಪುಟ ನೋಡಬೇಕು.

Sri H. M. CHANNABASAPPA.—This is in addition to what has already been normally provided for restoration etc., is it?

The Hon'ble Sri T. MARIAPPA.—No. In fact, the provision during 51–52 is the actual provision which should be spent on this work.

Sri L. SIDDAPPA.—Actual provision is not that. For these 5 medium projects, Sir, in this plan for 51–52 ನೀವು ನ್ಯಾಯವಾಗಿ 13·80 ಲಕ್ಷ ರೂಪಾಯಿಗಳನ್ನು ಒದಗಿಸಬೇಕಾಗಿತ್ತು. ಹೇಗೆಂದರೆ.

ತುಪ್ಪದ ಹಳ್ಳಿಗೆ	..	3 ಲಕ್ಷ
ಗಡಿಮಾಕುಂಟೆ	...	1·75 ಲಕ್ಷ
ನುಗು ಅಣೆ	...	2·75 ಲಕ್ಷ
ಸಂಗೇನಹಳ್ಳಿ	..	2·7 ಲಕ್ಷ
ಹೆಬ್ಬಳ್ಳಿ	..	3·7 ಲಕ್ಷ
ಒಟ್ಟು	...	13·80 ಲಕ್ಷ

ಇದಕ್ಕೆ ಬದಲಾಗಿ ಇಲ್ಲಿ ಒದಗಿಸಿರುವುದು 8·5 ಲಕ್ಷ ರೂಪಾಯಿಗಳು ಮಾತ್ರ. ಅಲ್ಲಿಗೂ 5 ಲಕ್ಷ ರೂಪಾಯಿಗಳು ಖೋತಾ ಬಿತ್ತು. ಮೈನರ್ ಕೆರೆಗಳ ಜೀರ್ಣೋದ್ಧಾರಕ್ಕಾಗಿ 27 ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿತ್ತು. ಅದಕ್ಕೂ 5 ಲಕ್ಷ ಕಡಿಮೆ ಕೊಟ್ಟಿದೆ. ಆ ಮೇಲೆ ಮೇಜರ್ ನೀರಾವರಿ ಕಾಮಗಾರಿಗಳಾದ ಲಕ್ಕುವಳ್ಳಿ, ತುಂಗ ಮತ್ತು ನುಗು—ಇವುಗಳಿಗೆ.....................

The Hon'ble Sri T. MARIAPPA.—Construction and restoration of tanks 10 lakhs, restoration of tanks on desilting 5 lakhs, total 15 lakhs.

Sri L. SIDDAPPA.—According to the programme, restoration of 300 tanks per year, the provision for 51-52 must be 37 lakhs but you have provided only 15 lakhs, even according to your own statement, you have yet to provide 22 lakhs more for the restoration of these minor tanks. As regards the other kind of irrigation works, that is, medium irrigation works like Sungenahalli work, Tuppadahalla and Gadimaranahalli, these are classed as medium tank works. ಅದಕ್ಕೆ ಅವರ ಯೋಜನೆಯ ಪ್ರಕಾರ ಎಷ್ಟು ಮೊಬಲಗು ಒದಗಿಸಬೇಕೆಂಬುದನ್ನು 16ನೆಯ ಪುಟದಲ್ಲಿ ನೋಡಿ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಾವು 21ನೆಯ ಪುಟ ನೋಡಿದರೆ ಎಲ್ಲಾ ವಿವರಗಳೂ ಗೊತ್ತಾಗುತ್ತವೆ. Construction of a new tank across Chikkahagari River near Tuppadahalli in Chitaldrug District ಗಾಗಿ 51—52ಕ್ಕೆ 3 ಲಕ್ಷ ಕೊಟ್ಟಿದೆ. ಇದು ಎರಡು ವರ್ಷಗಳಲ್ಲಿ ಮುಗಿದು ಹೋಗುತ್ತದೆ. ಹಾಗೆಯೇ ಗಡಿಮಾಕುಂಟೆಗೆ 2·5 ಲಕ್ಷ ಕೊಟ್ಟಿದೆ. ಇದೂ 2 ವರ್ಷದಲ್ಲಿ ಮುಗಿಯುತ್ತದೆ. ಸಂಗೇನಹಳ್ಳಿಗೂ 3 ಲಕ್ಷ

ಕೊಟ್ಟಿದೆ. ಇದೊಂದು ಮಾತ್ರ 5 ವರ್ಷದ ವರೆಗೂ ಹೋಗುತ್ತದೆ. ಬಾಕಿ ಎಲ್ಲವೂ 2 ವರ್ಷಕ್ಕೆ ಮುಗಿಯುತ್ತವೆ.

ಶ್ರೀ ಎಲ್. ಸಿದ್ದಪ್ಪನವರು.—ಒಟ್ಟು 74 ಲಕ್ಷ ರೂಪಾಯಿಗಳನ್ನು ಒದಗಿಸಬೇಕಾದ್ದರಲ್ಲಿ ಅಷ್ಟನ್ನೂ ಕೊಟ್ಟಿಲ್ಲ. ಬಡ್ಜೆಟ್ ತಯಾರಿಸಬೇಕಾದರೆ ಇಷ್ಟು ಕೊಡಬೇಕಾಗುತ್ತದೆಂದು ಗೊತ್ತಾಗಲಿಲ್ಲವೆಂದು ಹೇಳಬಹುದು. ಹಾಗಿದ್ದರೂ ಈಚೆಗೆ ಗೊತ್ತಾದ ಮೇಲಾದರೂ ಅದಕ್ಕೆ ಏರ್ಪಾಡು ಮಾಡಬಹುದಾಗಿತ್ತು. ಅದನ್ನು ಮಾಡಿಲ್ಲ. ಏಕೆಂದರೆ ಮೊನ್ನೆ ತಾನೆ ಸಭೆಯ ಮುಂದೆ ಸಪ್ಲಿಮೆಂಟರಿ ಮತ್ತು ಅಡಿಷನಲ್ ಡಿಮ್ಯಾಂಡ್‌ಗಳನ್ನು ತಂದಾಗಲೂ ಆ ವಿಚಾರವಾಗಿ ಏನೂ ಹೇಳಲಿಲ್ಲ. ಅದೇ ರೀತಿಯಾಗಿ 52ನೆಯ ಸಾಲಿನಲ್ಲಿ ವ್ಯವಸಾಯ, ವೆಟರಿನರಿ ಮತ್ತು ಎನಿಮಲ್ ಹಸ್ಬೆಂಡ್ರಿ ಯೋಜನೆಗಳು, ಕೈಗಾರಿಕಾ ಯೋಜನೆಗಳು, ಸೋಷಿಯಲ್ ಸರ್ವಿಸ್‌ಗಳಾದ ವಿದ್ಯಾಭ್ಯಾಸ, ವೈದ್ಯಕೀಯ ಸಹಾಯ ಮುಂತಾದುವುಗಳ ಬಗ್ಗೆ ಹಾಕಿಕೊಂಡಿರತಕ್ಕ ಯೋಜನೆಗಳಿಗೆ ಕೊಡಬೇಕಾದ ಮೊಬಲಗನ್ನು ಕ್ರಮೇಣ ಹೆಚ್ಚಿಸಿಕೊಂಡು ಹೋಗಿ 56-57ನೆಯ ಸಾಲಿನ ವೇಳೆಗೆ ಎಲ್ಲಾ ಕೆಲಸಗಳನ್ನೂ ಪೂರ್ತಿ ಮಾಡಬೇಕೆಂದಿದೆ. ಹೀಗಿರುವಲ್ಲಿ ಈಗ ಮೊದಲನೆಯ ವರ್ಷಕ್ಕೇ ತಾಪತ್ರಯ ಬಂದಿದೆ. ಕೈಯಲ್ಲಿ ದುಡ್ಡಿಲ್ಲವೆಂದು ಹೇಳುತ್ತಿದ್ದೀರಿ. ಜೊತೆಗೆ ಎಲ್ಲಿ ಕಾಮಗಾರಿಗಳಿಗೆ ತಕ್ಕಷ್ಟು ಸಿಬ್ಬಂದಿ ಇಟ್ಟುಕೊಂಡಿದ್ದಾರೋ ಅಲ್ಲಿ, ಕಾಮಗಾರಿಯೇ ಸರಿಯಾಗಿ ನಡೆಯದೆ ಇದ್ದು, ಕೆಲಸಗಾರರಿಗಿಂತ ಸಿಬ್ಬಂದಿಯವರೇ ಹೆಚ್ಚಾಗಿರುವಂತೆ ಕಾಣುತ್ತೆ. ಕಾರಣ ಅಲ್ಲಿಗೆ ಒದಗಿಸಿರತಕ್ಕ ಮೊಬಲಗು ಸಾಕಾದಷ್ಟಿಲ್ಲ. ಕೊಟ್ಟಿದ್ದ ಮೊಬಲಗು ಡಿಸೆಂಬರ್ ಆಖೈರಿಗೇ ಖರ್ಚಾಗುವಂತ್ತಿದ್ದು ಮುಂದಕ್ಕೆ ಹೆಚ್ಚಿಗೆ ಹಣಕೊಡುವುದಕ್ಕಾಗುವುದಿಲ್ಲ, ಬಡ್ಜೆಟ್ಟಿನಲ್ಲಿ ಒದಗಿಸಿರುವುದರಲ್ಲಿ ಅರ್ಧವನ್ನು Surrender ಮಾಡಿ ಎಂದು ಹೇಳುವ ಸಂದರ್ಭಗಳಿವೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—That is not correct.

ಶ್ರೀ ಎಲ್. ಸಿದ್ದಪ್ಪನವರು.—ಮೊನ್ನೆ ತಾನೆ ಶಿವಮೊಗ್ಗ ಜಿಲ್ಲೆಯಲ್ಲಿ ಲಕ್ಕವಳ್ಳಿ ಪ್ರಾಜೆಕ್ಟನ್ನು ಸಚಿವರು ನೋಡಿಕೊಂಡು ಬರುವುದಕ್ಕೆ ಹೋದಾಗ ಹೇಳಿದ್ದೀರಿ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಲಕ್ಕವಳ್ಳಿ ಪ್ರಾಜೆಕ್ಟು ? ಅದರ ವಿಷಯಬೇರೆ.

ಶ್ರೀ ಎಲ್. ಸಿದ್ದಪ್ಪನವರು.—ಅಂತೂ ನಿಮ್ಮ ಯೋಜನೆಯ ಪ್ರಕಾರ ಕೊಟ್ಟಿಲ್ಲ. ಮೊದಲೇನೋ ಬಡ್ಜೆಟ್ಟಿನಲ್ಲಿ ತೋರಿಸಿದ್ದರೂ ಹಿಂದಿನಿಂದ instructions ಕಳುಹಿಸಿಕೊಟ್ಟು, ಅಷ್ಟು ದುಡ್ಡನ್ನೂ ಕೊಡುವುದಕ್ಕಾಗುವುದಿಲ್ಲ. ಈಗ ಕೊಟ್ಟಿರುವಷ್ಟರಲ್ಲೇ ಸದ್ಯಕ್ಕೆ ಮಾಡಿ, ಬಾಕಿಯದನ್ನು surrender ಮಾಡಬೇಕೆಂದು ನೀವೇ ಹೇಳಿದ್ದೀರಿ. ಪಬ್ಲಿಕ್ ಅಕೌಂಟ್ಸ್ ಕಮಿಟಿಯ ವರದಿಯನ್ನು ಚರ್ಚೆಗೆ ತೆಗೆದುಕೊಂಡಾಗಲೂ ನಾನಿದನ್ನು ತೋರಿಸಿಕೊಟ್ಟಿದ್ದೇನೆ. ಮೊದಲು ಷುರುವಿನಲ್ಲಿ ದೊಡ್ಡದಾಗಿ 40—45 ಕೆಲಸಗಳನ್ನು ತೆಗೆದುಕೊಳ್ಳುತ್ತೇವೆಂದು. ಈ ಸಭೆಯ ಮುಂದೆ ಹೇಳಿಬಿಡುತ್ತೀರಿ. ಕೊನೆಗೆ ನೋಡಿದರೆ 20—25 ಕೆಲಸಗಳನ್ನೂ ಕೈಗೆ ತೆಗೆದುಕೊಂಡಿರುವುದಿಲ್ಲ. ಉದಾಹರಣೆಗೆ, ಮಾವಿನಹಳ್ಳಿ ಕಾಮಗಾರಿಗೆ 4 ಲಕ್ಷ ರೂಪಾಯಿ ಎಸ್ಟಿಮೇಟ್ ಮಾಡಿತ್ತು. ಅದಕ್ಕೆ 48—49ರಲ್ಲಿ 25 ಸಾವಿರ ರೂಪಾಯಿಗಳನ್ನು ಮಾತ್ರ ಒದಗಿಸಿದ್ದೀರಿ. ಅಷ್ಟಾದರೂ ಹಿಂದಿನಿಂದ ಈ ಕೆಲಸ ತೆಗೆದುಕೊಳ್ಳಬೇಡಿ ಎಂದು ಹೇಳಿ ಕಳಿಸಿದ್ದೀರಿ. ಬಹುಶಃ 49-50ರಲ್ಲಾದರೂ ಇದನ್ನು ಮಾಡಿಯಾರು ಎಂದು ಭಾವಿಸಿದ್ದರೆ, ಪುನಃ ಬಡ್ಜೆಟ್ ಅಂದಾಜು ಪಟ್ಟಿಯಲ್ಲಿ 25,000 ಎಂದು ಈ ಬಗ್ಗೆ ತೋರಿಸಿದಿರಿ. ಆ ವರ್ಷವೂ ಕೆಲಸ ಷುರು ಆಗಿಲ್ಲ. ಬಡ್ಜೆಟ್ಟಿನಲ್ಲಿ ಬಂದ ಕೆಲಸಗಳೆಲ್ಲಾ ಷುರು ಮಾಡಲೇಬೇಕೆಂದು ಹೇಳಿಲ್ಲ ಎಂದು ಹೇಳಬಹುದು. ಹಾಗೆ ನಿಮ್ಮ ಭಾವನೆಯಿದ್ದರೆ, ಜನರನ್ನೇಕೆ ಈ ರೀತಿ ತಪ್ಪು ತಿಳಿವಳಿಕೆ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿದ್ದೀರಿ ? ಹಿಂದೆಲ್ಲಾ 25,000 ಇದಕ್ಕೆ ಕೊಟ್ಟಿದ್ದೂ ಈ ಸಾರಿ 50.000 ಕೊಟ್ಟಿದೆಯೆಂದು ಬಡ್ಜೆಟ್ಟಿನಲ್ಲಿ ತೋರಿಸಿದಿರಿ. ಆದರೂ ಕೆಲಸ ಮಾತ್ರ ನೆರವೇರಿಸಿಲ್ಲವೆಂಬುದು ಸ್ಪಷ್ಟವಾಗಿದೆ. ಈಗ ಹಿಂದಿನ 4—6 ವರ್ಷದ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ವರದಿಯನ್ನು ನೋಡಿದ್ದರಲ್ಲಿ ಮಾನ್ಯ ಸಚಿವರೇ ಹೇಳಿದ್ದಾರೆ, 1956—57ನೆಯ ಸಾಲಿನಲ್ಲಿ ತೆಗೆದುಕೊಳ್ಳುವ ಕೆಲಸಗಳಲ್ಲಿ ಇದಕ್ಕೆ ಮೊದಲನೆಯ ಸ್ಥಾನವನ್ನು ಕೊಟ್ಟಿದೆ ಎಂದು. ಆದರೆ ಇಲ್ಲಿ ನಮಗೆ ಕೊಟ್ಟಿರುವ ಪ್ಲಾನ್ ನೋಡಿದರೂ ಕೂಡ 1956-57ಕ್ಕೇನಾದರೂ ತೆಗೆದುಕೊಳ್ಳುತ್ತಾರೆಂದು ಭರವಸೆಯಿದೆಯೇ ?

ಇದೆಲ್ಲಾ ಇರುವಾಗ ಏಕೆ ಈ ನೀತಿಯನ್ನನುಸರಿಸಿದ್ದಾರೋ ಗೊತ್ತಿಲ್ಲ. ಜನರಿಗೆ ಹೀಗೆ ಎಷ್ಟೋ ಸಾರಿ ಹೇಳಿದ್ದೀರಿ. ಹೀಗೆ ಹೇಳುವುದಕ್ಕೆ ಹಿಂದೆಗೆಯುವುದಿಲ್ಲ. ಈಗಲೂ ಹಾಗೆಯೇ ಹೇಳಿ. ಸರ್ಕಾರದಲ್ಲಿ ಹಣವಿಲ್ಲ. ಹಣಸಿಕ್ಕಿದಾಗ ಮಾಡುತ್ತೇವೆಂದು ಹೇಳಿ. ಇದನ್ನು ಬಿಟ್ಟು ಮಂಜೂರು ಮಾಡಿದ್ದೇವೆ. ಬಡ್ಜೆಟ್ಟಿನಲ್ಲಿ ಒದಗಿಸಿದ್ದೇವೆ ಎಂದು ಹೇಳುತ್ತೀರಿ. ಹೀಗೆಯೇ ನಾನು ಹೇಳಿದಂತೆ ದೊಡ್ಡ ದೊಡ್ಡ ಕಾಮಗಾರಿಗಳಿಗೆ ಎಷ್ಟು ಒದಗಿಸಬೇಕೋ ಅದರಲ್ಲಿ ಅರ್ಧದಷ್ಟು ಹಣವನ್ನೊದಗಿಸುವುದು, ಆ ಮೇಲೆ ರಹಸ್ಯವಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆಕೊಟ್ಟು ಅಷ್ಟು ಖರ್ಚುಮಾಡುವುದಕ್ಕಾಗುವುದಿಲ್ಲ, ಅದರಲ್ಲಿ ಅರ್ಧ ಹಿಂದಕ್ಕೆ ಕೊಡಬೇಕೆಂದು ತಿಳಿಸುತ್ತೀರಿ. ಹೀಗೆ ಮಾಡುವುದರಿಂದ ಜನರಲ್ಲಿ ನಿಮ್ಮಲ್ಲಿರುವ ಅಲ್ಪಸ್ವಲ್ಪ ನಂಬಿಕೆಯನ್ನೂ ಕಳೆದುಕೊಳ್ಳುತ್ತೀರಿ. ಇದರಲ್ಲಿ ಸರ್ಕಾರಕ್ಕೂ ತೊಂದರೆಯಿದೆ. ಇಷ್ಟು ಕೆಲಸಕ್ಕೆ ಇಷ್ಟು ಸಿಬ್ಬಂದಿ ಎಂದು ನೇಮಕಮಾಡುತ್ತೀರಿ. ಯಾವಾಗ ಕೆಲಸಕ್ಕೆಂದು ನೇಮಕಮಾಡಿಕೊಳ್ಳುತ್ತೀರೋ ಆಗ ಆ ಸಿಬ್ಬಂದಿಯನ್ನು ಆ ಕೆಲಸ ನಡೆಯದಿದ್ದರೂ ವಜಾ ಮಾಡುವ ಹಾಗಿಲ್ಲ. ಅಲ್ಪಸ್ವಲ್ಪ ಕೂಲಿಯವರನ್ನು ಬೇಕಾದರೆ ತೆಗೆದುಹಾಕಬಹುದು, ಅಷ್ಟೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—1947ನೆಯ ಇಸವಿಯಲ್ಲಿದ್ದ ಸಿಬ್ಬಂದಿಗಿಂತಲೂ ಈಗ ಕಡಿಮೆ ಸಿಬ್ಬಂದಿ ಇದೆ ಎಂಬುದು ಅಂಕಿ ಅಂಶಗಳಿಂದ ಗೊತ್ತಾಗುತ್ತದೆ, ನೋಡಿ.

ಶ್ರೀ ಎಲ್. ಸಿದ್ದಪ್ಪನವರು.—ನೀವು ಲೆಕ್ಕ ಹೇಳಬಹುದು. ಕೆಲಸಗಳು ಹೇಗೆ ನಡೆಯುತ್ತವೆ ? ಲಕ್ಕವಳ್ಳಿ ತುಂಗ ಇವುಗಳಲ್ಲಿ ಎಷ್ಟು ಖರ್ಚುಮಾಡುತ್ತಿದ್ದೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಲಕ್ಕವಳ್ಳಿಯಲ್ಲಿ ನೀವು ಮಂತ್ರಿಗಳಾಗಿದ್ದಾಗ ಇದ್ದ ಸಿಬ್ಬಂದಿಗಿಂತ ಈಗ ಕಡಿಮೆ ಮಾಡಿದ್ದೇವೆ.

ಶ್ರೀ ಎಲ್. ಸಿದ್ದಪ್ಪನವರು.—ಇದೆಲ್ಲಾ ಬೇಕಾಗಿಲ್ಲ ನೀವು 20 ಲಕ್ಷ ರೂಪಾಯಿನ ಕೆಲಸ ಎಂದು ಅದಕ್ಕೆ ತಕ್ಕ ಸಿಬ್ಬಂದಿಯನ್ನು ನೇಮಿಸಿ, ಅದರ ಅರ್ಧ ಕೆಲಸವೂ ನಡೆಯದಿದ್ದರೆ ಅರ್ಧ ಸಿಬ್ಬಂದಿಯನ್ನು ವಜಾ ಮಾಡುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬರೀ ಲಕ್ಕವಳ್ಳಿ ಒಂದನ್ನೇ ಏಕೆ ತೆಗೆದುಕೊಳ್ಳುತ್ತೀರಿ? ಭದ್ರಾ ಲೆಫ್ಟ್ ಬ್ಯಾಂಕ್ ನಾಲೆ, ಸೂಳೆ ಕೆರೆ ಇವಕ್ಕೆ ಮೂರೂವರೆ ಲಕ್ಷ ರೂಪಾಯಿ ಬಡ್ಜೆಟ್‌ನಲ್ಲಿ ಒದಗಿಸಿರುವುದು, ಈಗಾಗಲೇ ಒಂದೂವರೆ ಲಕ್ಷ ಖರ್ಚಾಗಿದೆ. ಸೀಗೆ ಹಳ್ಳ ನಾಲೆ ಕೆಲಸವೂ ಲಕ್ಕವಳ್ಳಿ ಸರ್ಕಲ್ಲಿಗೇ ಸೇರಿದೆ. ಹೀಗೆ ಬೇರೆ ಬೇರೆ ಕೆಲಸಗಳೂ ಇರುತ್ತವೆ. ಸಾಕಾದಷ್ಟು ಕೆಲಸ ಇದೆ.

ಶ್ರೀ ಎಲ್. ಸಿದ್ದಪ್ಪನವರು.—ಸುಮ್ಮನೆ ಹೇಳಿದರೆ ಒಪ್ಪುವುದಕ್ಕಾಗುವುದಿಲ್ಲ, ಅಂಕಿ ಅಂಶಗಳನ್ನು ನೋಡಬೇಕು. ಮೊನ್ನೆ ಮಾನ್ಯ ಹಣಕಾಸಿನ ಸಚಿವರು ಅಲ್ಲಿಗೆ ಹೋಗಿದ್ದಾಗ ಅವರು ನಮಗೆ ಈ ವರ್ಷ ಹೆಚ್ಚು ಕೆಲಸ ಮಾಡಲು ಗ್ರಾಂಟು ಕೊಡಿ ಎಂದು ಮನವಿ ಮಾಡಿಕೊಳ್ಳಲಿಲ್ಲವೆ ?

The Hon'ble Sri T. MARIAPPA.—Sir, the whole system has been regularised. Labour is ready, the staff is ready. We have also provided money. It is not sufficient. But we are expecting Central assistance and we must wait and see what the result would be.

Sri L. SIDDAPPA.—We are already in the month of November, Sir.

The Hon'ble Sri T. MARIAPPA.—The working season has not yet begun Sir. This is rainy season. During rainy season Sri. Siddappa knows also that no work can be taken up. It is only after December that any work could be taken up at Lakkavalli.

ಶ್ರೀ ಎಲ್. ಸಿದ್ದಪ್ಪನವರು.—ಪ್ರತಿ ವರ್ಷವೂ ಅಷ್ಟೇ. ಬಡ್ಜೆಟ್ ಸೀಸನ್ನಲ್ಲಿ ಹಣಕಾಸನ್ನು ಒದಗಿಸುವುದು working season ನಲ್ಲಿ ಮಾಡುವ ಕೆಲಸಗಳಿಗೆ ತಾನೆ? ಈ ಯೋಜನೆಯಲ್ಲಿ ಎಷ್ಟೋ ಹಣವನ್ನು ಒದಗಿಸಿದ್ದೀರಿ. ಪ್ರೋಗ್ರಾಂ ಹಾಕಿಕೊಂಡಿದ್ದೀರಿ, ಅದರಂತೆ ಮಾಡಬೇಕು. ಹಾಗಿಲ್ಲದೆ working season ಮತ್ತೊಂದು ಎಂದು ವಾದ ಮಾಡಿದರೆ ಪ್ರಯೋಜನವಿಲ್ಲ. ಅಥವಾ ಕೇಂದ್ರ ಸರ್ಕಾರದಿಂದ ಹಣ ದೊರೆತ ಮೇಲೆ ಹಣವನ್ನೊದಗಿಸುತ್ತೇವೆ, ಕೆಲಸ ಮುಂದುವರಿಸುತ್ತೇವೆ ಎಂದು ಒಂದು ಕಾರಣ ಹೇಳುತ್ತೀರಿ.

The Hon'ble Sri T. MARIAPPA.—Sir, he so much harps upon Lakkavalli. Why should he not pay a visit to Thunga? Thunga is going on beautifully. If only he had visited Thunga, I am sure he would appreciate the work of Government.

Sri L. SIDDAPPA.—I have also visited Thunga. I have also heard about the state of affairs there. It is not only myself, I had gone in the company of *Rajamantrapravina* Gundappa Gowda on October 5. He was also an eye-witness to what is happening there.

A VOICE.—Your old friend ?

Sri L. SIDDAPPA.—Yes, he is my old friend. You have discarded him. It is perhaps convenient for you to discard him as your friend. But he continues to be my friend.

ತುಂಗ ಯೋಜನೆಗೆ ಎಷ್ಟು ಮೊತ್ತವನ್ನು ಒದಗಿಸಬೇಕಾಗಿತ್ತೆಂದು ನೋಡಿದರೆ ಗೊತ್ತಾಗುತ್ತದೆ. ಸಕ್ರೆ ಬೈಲಿಗೆ 20ಲಕ್ಷ ರೂಪಾಯಿ ಒದಗಿಸಬೇಕಾಗಿತ್ತು. ಈ ವರ್ಷ ಅದಕ್ಕೆ ಎಷ್ಟು ಒದಗಿಸಿದ್ದೀರೆಂದು ನೋಡಿದರೆ ತಮಗೆ ಗೊತ್ತಾಗುತ್ತದೆ. ಈ ಮೂರು ದೊಡ್ಡ ಕೆಲಸಗಳಿಗೆ 1 ಕೋಟಿ 70 ಲಕ್ಷ ಒದಗಿಸಬೇಕಾಗಿತ್ತು. ಆದರೆ 50 ಲಕ್ಷ ಮಾತ್ರ ಒದಗಿಸಿದ್ದೀರಿ. ನೀವು ಕೇಂದ್ರದಿಂದ ಹಣ ನಿರೀಕ್ಷಣೆ ಮಾಡುತ್ತೇವೆಂದು ಹೇಳಿದರೆ, ಅದರ ಸ್ಥಿತಿ ಗತಿಗಳು ಏನಾಗುತ್ತವೆ ಎಂಬುದು ಗೊತ್ತಿರುವ ವಿಷಯ. ನಾಲ್ಕು ವರ್ಷಗಳಿಂದ ಹೇಳುತ್ತಿದ್ದರು, financial Integration ಮಾಡಿ ಕೊಂಡರೆ ನಮಗೆ ಬೇಕಾದಷ್ಟು ಹಣ ಬರುತ್ತದೆ ಎಂದು.

ಶ್ರೀ ಜಿ ಎ ಆಚಾರ್ಯರು.- ನಾವು ಇಲ್ಲಿ ಕೇಂದ್ರ ಸರ್ಕಾರದ ವಿಷಯ ಚರ್ಚೆ ಮಾಡಬಹುದೇ?

ಶ್ರೀ ಎಲ್. ಸಿದ್ದಪ್ಪನವರು. ಮಾಡಬಹುದು, so far as it affects us. ಈ ಬಗ್ಗೆ ಯ ನಮಗೆ ಸಂಬಂಧಪಡುವಂತಿರುವ ವಿಷಯದಲ್ಲಿ ಕೇಂದ್ರದ ಸ್ಥಿತಿಗತಿಗಳನ್ನು ನಾವು ಚರ್ಚೆ ಮಾಡಬಹುದು, ಎಂದು ಅಧ್ಯಕ್ಷರೇ ರೂಲಿಂಗ್ ಕೊಟ್ಟಿದ್ದಾರೆ. ಕೇಂದ್ರದಿಂದ ಬರುವ ಸಾಲ, ಗ್ರಾಂಟು ಎಲ್ಲವನ್ನು ಹಣಕಾಸಿನ ಸಚಿವರ ಭಾಷಣದಲ್ಲಿ ಒಂದು ಕಡೆ ತಿಳಿಸಿದ್ದಾರೆ. Amounts received from the Centre by way of loans during the year 1950–51, 50,000 lakhs for Power supply to Irrigation pumping sets ಎಂದು ಹೇಳಿದ್ದಾರೆ. ಆದರಲ್ಲೇ the loan of 150 lakhs for this year by the Centre is sanctioned for financing expenditure on Irrigation and hydro-electric works on hand etc, etc; the rate of interest and the period of loan are yet matters to be finalised ಎಂದು ಹೇಳಿದ್ದಾರೆ. ಮೊನ್ನೆ ಕೂಡ ಈ ಸಂಬಂಧದಲ್ಲಿ ಒಂದು ಪ್ರಶ್ನೆ ಇತ್ತು. ಅದಕ್ಕೆ ಉತ್ತರ ಕೊಡುತ್ತಾ ಫೈನಾನ್ಸ್ ಸಚಿವರು ಹೇಳಿದರು. ಅದು ವಿದ್ಯುಚ್ಛಕ್ತಿ ಇಲಾಖೆಗೆ ಸಂಬಂಧಪಟ್ಟದ್ದು. 50 ಲಕ್ಷ ರೂಪಾಯಿ ಖರ್ಚಿನಿಂದ ಇರಿಗೇಷನ್ ಪಂಪುಗಳನ್ನು ಗ್ರಾಮಾಂತರಗಳಲ್ಲಿ ಹಾಕಿರುವ ಬಗ್ಗೆ 50 ಲಕ್ಷರೂಪಾಯಿ ಸಾಲ ಕೊಡುತ್ತಾರೆ. ಕೇಂದ್ರದವರಿಂದ ಆ ಹಣ ಬಂತೇ ಎಂದು ಕೇಳಿದಾಗ, ವಾಗ್ದಾನ ಮಾಡಿದ್ದರು, ಹಣ ಮಾತ್ರ ಬರಲಿಲ್ಲ ಎಂದು ಹೇಳಿದರು. ಪುನಃ ಹಣಕಾಸಿನ ಸಚಿವರ ಬಡ್ಜೆಟ್ ಭಾಷಣದ 10ನೆಯ ಪುಟದಲ್ಲಿರುವುದನ್ನು ತಮ್ಮ ಅವಗಾಹನೆಗೆ ತರಬೇಕೆಂದಿಚ್ಛಿಸುತ್ತೇನೆ. ಅದರಲ್ಲಿ ಭದ್ರ, ಸಕ್ರೆ ಬೈಲು, ನುಗು ಮತ್ತು ಇನ್ನು ಕೆಲವಿವೆ. ಇವು ಕ್ಯಾಪಿಟಲ್ ವರ್ಕ್ಸ್; ಇನ್ನು ಕೆಲವು ಕೈಗಾರಿಕೆಗಳಿಗೂ ವಿದ್ಯುಚ್ಛಕ್ತಿಯ ಅಭಿವೃದ್ಧಿಗೂ ಸಂಬಂಧಪಟ್ಟ ಕೆಲಸಗಳು. ಇವಕ್ಕೆ 7 ಲಕ್ಷದ 63ಸಾವಿರ ರೂಪಾಯಿನ ಯೋಜನೆ ಹಾಕಿಕೊಂಡಿದ್ದರು. ಈ ಪಂಚವಾರ್ಷಿಕ ಯೋಜನೆಯಲ್ಲಿ ಏನಿವೆಯೋ ಇವುಗಳನ್ನು ಕಾರ್ಯರೂಪಕ್ಕೆ ತರಲು ಎಷ್ಟು ಮೊಬಲಗು ಖರ್ಚು ಮಾಡಬೇಕೋ ಅದು ಅದರಲ್ಲಿ ಸೇರಿಲ್ಲ. 1951—52 ನೆಯ ಸಾಲಿನ ಬಡ್ಜೆಟ್ಟಿನಲ್ಲಿ ಆಗ ಎಷ್ಟು ಖರ್ಚು ಮಾಡ

ಬೇಕೆಂದು ಮಾಡಿದ್ದರೋ ಅಷ್ಟನ್ನು, ಎಂದರೆ 7ಕೋಟಿ 63 ಲಕ್ಷರೂಪಾಯಿ ಒದಗಿಸಿದ್ದರು. ಈ ರೀತಿಯಾಗಿ ಅವರು ಹೇಳಿದ್ದಾರೆ :

"It was announced at the last Session that the Government of India had agreed to give us a loan of Rs. 150 lakhs for 1950-51 and another sum of Rs. 150 lakhs for 1951-52. The loan of Rs 150 lakhs for this year by the Centre is sanctioned for financing expenditure on irrigation and hydro—electric works on hand. The exact allocation of the amount will be determined by the Government of India in consultation with the Planning Commission. The rate of interest and the period of loan are yet matters to be finalised. (Pp. 136-137).

I said last time that the capital works undertaken were such as could not be held up in incomplete stages. They were mostly commitments which could not be avoided on any account, nor is it desirable to do so.

The total expenditure programmed for 1951-52 on Electricity, Irrigation Water Works and Industries is about 763 lakhs and this is intended for completion of the existing works and for taking up allied works which are quite essential to the main projects. The capital programme is proposed to be financed from loans as under:—

(1) one and a half crores promised by the Government of India
(2) one crore promised for power supply to Irrigation pumps
(3) one crore to be taken back as a loan in respect of securities to be surrendered
(4) three and a half crores to be obtained as additional loan from the Centre or Banks or in the Market
(5) balance will be met by reducing investment of funds not owing to outsiders.

In case the additional loan is not forthcoming, the Capital programme has to be curtailed and this will be to the detriment of not only State's interests but of India's when there is so much need for increasing production. But, I do not want to envisage difficulties in getting or raising a loan which has got to be done having regard to our commitments." (P. 138)

Sir, I also do not want to envisage what it will be.

ಆದರೆ ಈಗ 1951ರಲ್ಲಿ ನಮ್ಮ ಸ್ಥಿತಿ ಏನಾಗಿದೆ! ಹಿಂದೆ 194 ನೆಯ ಮಾರ್ಚಿ ತಿಂಗಳಲ್ಲಿ ತಾವು ಮಾಡಿದ ಭಾಷಣದ ಕಾಲಕ್ಕೆ ಆಗ ನಮ್ಮ ಸ್ಥಿತಿ ಏನಾಗಿತ್ತೆಂದರೆ ಆರ್ಥಿಕ ವಿಲೀನೀಕರಣ ಮಾಡಿಕೊಳ್ಳತಕ್ಕ ಸಂದರ್ಭದಲ್ಲಿ ಈ ಸಭೆಯ ಮುಂದೆ, ಅಂದರೆ ಆಗಿನ ಪ್ರಜಾಪ್ರತಿನಿಧಿ ಸಭೆಯ ಮುಂದೆ, ಒಂದು ವರದಿಯನ್ನಿಟ್ಟ ವೇಳೆಯಲ್ಲಿ ನೀವು ಎಷ್ಟರಮಟ್ಟಿಗೆ ಭಾಷಣವನ್ನು ಮಾಡಿ, ಏನೇನು ಆಶೋತ್ತರಗಳನ್ನು ಹೇಳಿದ್ದಿರಿ, ಅದರಿಂದ ನಮಗೆ ಬೇಕಾದಹಾಗೆ ಗ್ರ್ಯಾಂಟ್ ದೊರೆಯುತ್ತೆ, ಸಬ್ ಸಿಡಿ ಕೊಡುತ್ತಾರೆ, ಸಾಲ ಕೊಡುತ್ತಾರೆ ಎಂಬ ಇತ್ಯಾದಿ ಅನೇಕ ಭರವಸೆಗಳನ್ನು ನೀಡಿದ್ದಿರಿ. ಆದರೆ ಆ ದಿವಸ ಅವುಗಳು ನಮಗೆ ಅಷ್ಟು ಆಶಾದಾಯಕವಾಗಿ ಕಂಡು ಬಂತೇ ಹೊರತು ಕಾರ್ಯಕ್ರಮದಲ್ಲಿ ಒಂದೂ ಆಗಲಿಲ್ಲ. ನಾವು ಅವರಿಗೆ ನಮ್ಮಲದ್ದುದನ್ನು ಯಾವ ರೀತಿ ಎಷ್ಟರಮಟ್ಟಿಗೆ ಕೊಟ್ಟಿವೋ, ಅಷ್ಟರ ಮಟ್ಟಿಗೆ ಅವರಿಂದ ನಮಗೆ ಯಾವುದೂ ಬರುತ್ತಿಲ್ಲ. ಇಷ್ಟಾಗಿದ್ದರೂ ಕೂಡ ನಾವು ಅವರಿಗೆ ಬಿಟ್ಟುಕೊಟ್ಟಿರುವುದಕ್ಕಿಂತ ಅವರಿಂದ ನಮಗೆ ಜಾಸ್ತಿ ಬರುತ್ತೆಂಬುದನ್ನು ಹೇಳುವುದನ್ನು ನಾನು ಒಪ್ಪುವುದಿಲ್ಲ ಮತ್ತು ತಾವು ಆ ರೀತಿ ಹೇಳುವುದು ಸರಿಯಲ್ಲ. ತಾವು ತಿಳಿಸಿರತಕ್ಕದ್ದು ಇರತಕ್ಕ ಸ್ಥಿತಿಗಳಿಗೆ ಪೂರಾ ವಿರೋಧವಾಗಿದೆ. ಇದನ್ನೆಲ್ಲಾ ನಾನು ಇವರಿಗೆ ತಿಳಿಸಬೇಕಾಗಿಲ್ಲ. ಈ ವಿಷಯಗಳೆಲ್ಲಾ ಅವರಿಗೂ ಚೆನ್ನಾಗಿ ಗೊತ್ತಿದೆ. ತಿಳಿದುಕೊಂಡಿದ್ದಾರೆ. ಏತಕ್ಕೆಂದರೆ ಈ ನಾಲ್ಕು ವರ್ಷಗಳಿಂದಲೂ ಅವರು ಅದರಲ್ಲೇ ಮುಳುಗಿರುತ್ತಾರೆ. ಅವರು ಈ ವಿಷಯಗಳನ್ನು ನಮಗೆ ತಿಳಿಸಲು ಸಂಕೋಚಪಡುತ್ತಿದ್ದಾರೆ. ಹೀಗೆ ಈ ವಿಚಾರಗಳನ್ನೆಲ್ಲಾ ಸ್ವಲ್ಪ ನಿಧಾನವಾಗಿ ಆಲೋಚನೆ ಮಾಡಿನೋಡಿದರೆ ಈಗ ತಾವು ನಮ್ಮ ಮುಂದೆ ತಂದಿರತಕ್ಕ ಈ ಪಾಂಚವಾರ್ಷಿಕ ಯೋಜನೆಯಿಂದ ಇಂದು ನಾವಿರತಕ್ಕ ಸ್ಥಿತಿಗತಿಗಳಲ್ಲಿ ಮೈಸೂರಿನ ಅಭಿವೃದ್ಧಿಯಾಗಲೀ ಅಥವ ದೇಶದ ಜನರ ಮಟ್ಟವಾಗಲಿ ಉತ್ತಮ ಗೊಳ್ಳುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಹೀಗೆ ಹೇಳುವುದಕ್ಕೆ ಮುಖ್ಯವಾಗಿರತಕ್ಕ ಕಾರಣ ಒಂದೇ—ನಮ್ಮಲ್ಲಿ ದುಡ್ಡಿಲ್ಲ. ಆದ್ದರಿಂದ ಸರ್ಕಾರದವರು ಈ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗುವುದಿಲ್ಲ. ಇಂಡಿಯಾ ಪ್ಲಾನಿಂಗ್ ಕಮಿಷನ್ನಿನವರು ಅಲ್ಲಿ ಒಂದು ಯೋಜನೆಯನ್ನು ಮಾಡಿಕೊಂಡರು. ಅದರಂತೆ ನೀವೂ ಇಲ್ಲಿ ನಡೆಸಬೇಕೆಂದು ತಮಗೆ ಅವರು ಒಂದು ಡೈರೆಕ್ಟಿವ್ ಕಳುಹಿಸಿದ್ದಾರೆ. ಅದರ ಪ್ರಕಾರ ನೀವೀಗ ಇದನ್ನು ಇಲ್ಲಿ ಮಂಡಿಸಿದ್ದೀರಿ. ಆದರೆ ಇಲ್ಲಿನ ಸ್ಥಿತಿ ಗತಿಯನ್ನೂ ವಾಸ್ತವಿಕ ಪರಿಸ್ಥಿತಿಯನ್ನು ಪರಿಶೀಲಿಸಿನೋಡಿ ಹೇಳುವುದಾದರೆ, ಸುಮ್ಮನೆ ಇದನ್ನು ವಿರೋಧಿಸಬೇಕೆಂಬ ಅಭಿಪ್ರಾಯವಲ್ಲ. ನಿಜವಾಗಿಯೂ ನಮಗೆ ಇದರಿಂದ ಯಾವ ಪ್ರಯೋಜನವೂ ಆಗುವುದಿಲ್ಲವೆಂದು ನಾನು ಘಂಟಾಘೋಷವಾಗಿ ಹೇಳಬಲ್ಲೆ.

ಇನ್ನೂ ಕೆಲವು ಯೋಜನೆಗಳಿವೆ. ಅವುಗಳನ್ನೂ ಸಹ ಹೀಗೆ ಪರಿಶೀಲಿಸಿ ಕೆಲವು ವಿಷಯಗಳನ್ನು ನಾನು ವ್ಯಕ್ತಪಡಿಸಬೇಕಾಗಿದೆ. ಅವುಗಳು ಯಾವುವೆಂದರೆ—ನೀರಾವರಿ ಯೋಜನೆಗೆ ಸಂಬಂಧಪಟ್ಟ ಯೋಜನೆಗಳ. ಮುಖ್ಯವಾಗಿ ನಮ್ಮ ಭಾರತದಲ್ಲಿನ ಆಹಾರ ಪರಿಸ್ಥಿತಿ, ಅದರಲ್ಲೂ ತತ್ರಾಪಿ ದಕ್ಷಿಣ ಇಂಡಿಯಾದ ಪರಿಸ್ಥಿತಿ ಇನ್ನೂ ಉಗ್ರರೂಪವಾಗಿದೆ. ಈ ಕೊರತೆ ನಮಗೆ ವಿಪರೀತವಾಗಿ ಹೆಚ್ಚಿ ಇದನ್ನು ಸರಿತೂಗಿಸಲು ದೊಡ್ಡ ದೊಡ್ಡ ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳತಕ್ಕದ್ದು ಅಗತ್ಯ. ಆದರೆ ಆರೀತಿ ಮಾಡಿ ಈ ಆಹಾರ ಕೊರತೆಯನ್ನು ನಿವಾರಣೆ ಮಾಡದೆ ಈಗ ಇವರು ಯಾವುದೋ ಒಂದು short-term plan ಎಂದರೆ ಕೆರೆ ಕಾಲುವೆ ನಾಲಾ ಇತ್ಯಾದಿಗಳ ದುರಸ್ತಿಯಿಂದ ಇದು ಸರಿಹೋಗುತ್ತದೆಂದು ಅವುಗಳ ಬಗ್ಗೆ ವಿಶೇಷ ದುಡ್ಡನ್ನು ಖರ್ಚು ಮಾಡಿಬಿಟ್ಟಿದ್ದಾರೆ. ಈ ಸಂಬಂಧವಾಗಿ ನಮ್ಮ ಅಕ್ಕ ಪಕ್ಕದ ದೇಶಗಳವರಾದ ಮದ್ರಾಸಿನಲ್ಲಿ ಅವರು ಯಾವ ರೀತಿ ಇದನ್ನು progress ಮಾಡುತ್ತಿದ್ದಾರೆ ಎಂಬುದನ್ನು ಸ್ವಲ್ಪ ಹೋಲಿಕೆ ಹಾಕಿನೋಡೋಣ. ಇಲ್ಲಿ ಇವರು ಹೇಳುತ್ತಿರುವ ಪ್ರಕಾರ ಅವರು ಅಲ್ಲೇನೂ short-term ಯೋಜನೆಗಳನ್ನು ಕೈ ಬಿಟ್ಟಿಲ್ಲ. ಆದಾಗ್ಯೂ ಅವರು ಅನೇಕ ದೊಡ್ಡ ದೊಡ್ಡ ನೀರಾವರಿ ಕಾಮಗಾರಿಗಳನ್ನು ಮಾಡಿಸಿರುವುದಲ್ಲದೆ ಈ short-term ಯೋಜನೆಗಳ ಬಗ್ಗೆಯೂ ಬಹಳ ಕೆಲಸಗಳನ್ನು ಮಾಡಿಸಿದ್ದಾರೆ. ಹೀಗೆ ನಮ್ಮ ಅಕ್ಕ ಪಕ್ಕದ ದೇಶಗಳವರು ಮಾಡಿರತಕ್ಕದ್ದನ್ನು ಮತ್ತು ತಾವು ಮಾಡಿರ

(ಶ್ರೀ ಎಲ್. ಸಿದ್ದಪ್ಪನವರು)

ತಕ್ಕದನ್ನೂ ಹೋಲಿಕೆ ಹಾಕಿ ನೋಡಿದರೆ ಇಲ್ಲಿನ ಕೆಲಸ ಕಾರ್ಯಗಳು ನಡೆದಿರತಕ್ಕದ್ದು ಬಹಳ ಕಮ್ಮಿ ಪ್ರಮಾಣ ದಲ್ಲಿರುತ್ತೆಂದು ಕಂಡು ಬರುತ್ತಿದೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು..—1947 ರಲ್ಲಿ level of expenditure ಯಾವ ಮಟ್ಟದಲ್ಲಿರುತ್ತೆ ಯೆಂಬುದನ್ನು ತಾವು ಸ್ವಲ್ಪ ನೋಡಬೇಕು. By 1947 things had considerably changed.

ಶ್ರಿ ಎಲ್. ಸಿದ್ದಪ್ಪನವರು.—ಇರಬಹುದು. ಆಗ 4 ಆಣೆ ಕೊಟ್ಟರೆ ಒಂದು ಆಳು ಬರುತ್ತಿದ್ದ. ಈಗ 1—4—0 ರೂಪಾಯಿ ಕೊಟ್ಟರೆ ಒಬ್ಬ ಆಳು ಬರುತ್ತಾನೆ. ನೀವು ಈ ಕೆಲಸಗಳನ್ನು ಅಳತೆ ಮಾಡಲಿಕ್ಕೆ ಖರ್ಚುಮಾಡಿರುವ ಮೊಬಲಗನ್ನು ತೆಗೆದುಕೊಳ್ಳಬಾರದು. ಈ ಆಳತೆಕೋಲು ಸರಿಯಾದ್ದಲ್ಲ. 0—6—0 ಆಣೆಗೂ ಒಬ್ಬ ಕೂಲಿ ಮಾಡಬಹುದು. 46–47ರಲ್ಲಿ ಅಮೇರಿಕಾ ಇತ್ಯಾದಿಗಳ ಕಡೆಯಿಂದ ದಿವಂಗತ ರೂಸ್‌ವೆಲ್ಟ್ ಮುಂತಾದವರು ಇಲ್ಲಿಗೆ ಬಂದಿದ್ದಾಗ...

Sr H. M. CHANNABASAPPA.—Does the Hon'ble Member think that the work rates in 1947—48 were the same as they are today?

Sri L. SIDDAPPA.—I beg to differ from you.

Sri H.M. CHANNABASAPPA.—Shall I take it that you think that big projects serve as an immediate remedy to solve the food shortage because you are arguing in that direction ?

Sri L. SIDDAPPA.—Big projects also have got to be taken into consideration. The population is increasing; as the Hon'ble Minister has stated in his speech in the Assembly while presenting the Budget, as the Rajpramukh has stated in his Address to the Assembly, we have got to take into consideration the fact that population is increasing and we have got to make sufficient provision for the increasing population also. We will take all those things into consideration. It is not merely by having recourse to short-term projects that our problems will be solved. On the other hand, our problems will increase if we merely confine our attention to short-term projects and neglect these major irrigation works like Lakkavalli, Tunga and Nugu projects. I may submit for the consideration of this House that Lakkavalli project was conceived as long back as 1935-36 and the two Hon'ble Members who served on the Committee appointed to go into this project, along with some official members are in this House. One of them is Sri D. H. Chandrasekharaiya. and another gentleman is a member on the Treasury Bench, *i.e.*, Sri H. Siddaiya. They have given a report. It is much better they turn over the pages of that report to see how urgently the work is necessary and which part of the State the Lakkavalli work serves It is intended to irrigate 1,20,000 acres in Davangere and Harihar.

The Hon'ble Sri T. MARIAPPA. — Total 1,80,0 0 acres.

Sri L. SIDDAPPA.–Total 180,000 acres out of which 120,000 acres are intended to be irrigated in Harihar and Davangere Taluks, the most arid parts of the State, 60,000 acres in Tarikere, Shimoga, Bhadravati, and Channagiri put together.

ಈ ರೀತಿ ಇಂಥಾ ಸಾಧ್ಯವಿಲ್ಲದಿರುವ ಕೆಲಸಗಳಲ್ಲಿ ಕೈಹಾಕಿ ಅಗತ್ಯವಾಗಿ ನಡೆಸಬೇಕಾಗಿರುವ ಕಾರ್ಯಕ್ರಮಗಳನ್ನೆಲ್ಲಾ ಮುಂದಕ್ಕೆ ಹಾಕುತ್ತಿರುವುದು ತಮ್ಮ ತಾತ್ಸಾರ ಮನೋಭಾವವನ್ನು ವ್ಯಕ್ತಪಡಿಸುತ್ತದೆ. ಸರ್ಕಾರದವರಿಗೆ ಇದು ಖಂಡಿತ ಸರಿಯಾದ್ದಲ್ಲ. ಇದನ್ನು ಬಹಳ ವ್ಯಥೆಯಿಂದ ಹೇಳಬೇಕಾಗಿರುತ್ತೆ. ಈ ಸರ್ಕಾರ ಆಡಳಿತವನ್ನು ವಹಿಸಿಕೊಂಡಾಗ ಎಷ್ಟರಮಟ್ಟಿಗೆ ಇವರು ಕೆಲಸಕಾರ್ಯಗಳನ್ನು ಮಾಡುತ್ತೇವೆಂದು ಭರವಸೆ ಕೊಟ್ಟಿದ್ದರೋ ಅಷ್ಟರ ಮಟ್ಟಿಗೆ ಯಾವುದನ್ನೂ ಮಾಡಿರುವುದಿಲ್ಲ.

1949–50ರಲ್ಲಿ ಆರ್ಥಿಕವಿಲಿನೀಕರಣದ ವಿಚಾರವನ್ನು ಈ ಸಭೆಯ ಮುಂದಿಟ್ಟಾಗ ಇವರು ಹೇಳಿದರು, ಇದರಿಂದ ನಮಗೆ ಇಷ್ಟೊಂದು ಪ್ರಯೋಜನ, ಅನುಕೂಲಗಳು ಲಭಿಸುತ್ತವೆ. ನಮಗೆ ಅವರಿಂದ ಗ್ರ್ಯಾಂಟ್ ದೊರೆಯುತ್ತೆ, ಸಬ್‌ಸಿಡಿ ಸಿಕ್ಕುತ್ತೆ, ಸಾಲ ಕೊಡುತ್ತಾರೆ, ದೊಡ್ಡ ದೊಡ್ಡ ಪ್ರಾಜೆಕ್ಟುಗಳು ಅಂದರೆ ಲಕ್ಕವಳ್ಳಿ ಇತ್ಯಾದಿ ದೊಡ್ಡ ಕೆರೆಗಳ ಕಾಮಗಾರಿಯನ್ನು ಅವರೇ ಕೈಗೊಳ್ಳುತ್ತಾರೆ ಎಂದು............

The. Hon'ble Sri T. MARIAPPA.— It is still under consideration.

ಶ್ರೀ ಎಲ್. ಸಿದ್ದಪ್ಪನವರು.—ಎಷ್ಟೋ ವೇಳೆ ಈಗಾಗಲೇ ಭಾರತ ಸರ್ಕಾರದ ಪ್ರಧಾನ ಮಂತ್ರಿಗಳು ಇಲ್ಲಿಗೆ ಬಂದು ಹೋಗಿದ್ದಾರೆ. ಆಗ ಏತಕ್ಕೆ ನೀವು ಅವರನ್ನು ಅಲ್ಲಿಗೆ ಕರೆದುಕೊಂಡು ಹೋಗಿ ತೋರಿಸಬಾರದಾಗಿತ್ತು? ಅವರಿಗೆ ಆಗ ಈ ವಿಚಾರವನ್ನು ನೀವೇಕೆ ತಿಳಿಸಬಾರದಾಗಿತ್ತು? ಹಾಗಾದರೂ ಮಾಡಿದ್ದರೆ ಅದರಿಂದ ಎಷ್ಟೋ ಜನರಿಗೆ ಅನುಕೂಲವಾಗುತ್ತಿತ್ತು. ಆದನ್ನು ನೆರವೇರಿಸಿದ್ದರೆ ಅದರಿಂದ ಎಷ್ಟು ಜನರಿಗೆ ಈಗ ಉಪಕಾರವಾಗುತ್ತಿತ್ತು!

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅವರನ್ನು ಕರೆದುಕೊಂಡು ಹೋಗುವುದಕ್ಕೆ ಎಷ್ಟೋ ಪ್ರಯತ್ನಪಟ್ಟಿದ್ದೇವೆ. ಆದರೆ ರಾಜಕೀಯದಲ್ಲಿ ನುರಿತಂಥಾ ತಾವೇ ಈ ರೀತಿ ಒಂದು ಆರೋಪಣೆಗಳ ಸ್ಟೇಟ್‌ಮೆಂಟ್ ಮಾಡಿದರೆ ಏನು ಹೇಳುವುದು ?

ಶ್ರೀ ಎಲ್. ಸಿದ್ದಪ್ಪನವರು.—ತಲೆಯಿಂದ ಅಂಗುಷ್ಠದವರೆಗೆ ಈ ತರಹ ಸ್ಟೇಟ್‌ಮೆಂಟ್ ಮಾಡುವುದು ನನಗೆ ಅರ್ಥವಾಗಿಲ್ಲ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಮಾಡಬಹುದಾಗಿತ್ತು ಎಂದು ಏಕೆ ಹೇಳುವುದು ? ಮಾಡಿದ್ದೇವೆ. We invited him to Jog and Bhadravathi. But he said that he was sorry he could not find time then. It is a very cheap way of putting it. ಏನೋ ನಾವಿದ್ದರೆ ಮಾಡಿಬಿಡುತ್ತಿದ್ದೆವು ಎಂದು ಹೇಳುವುದು ಸರಿಯಲ್ಲ.

ಶ್ರೀ ಎಲ್. ಸಿದ್ದಪ್ಪನವರು.—ಈಗ ಯಾವ ಪರಿಸ್ಥಿತಿ ಬಂದಿದೆಯೋ ಅದು ಬರುವುದಕ್ಕೆ ನಾವು ಅವಕಾಶ ಮಾಡುತ್ತಿರಲಿಲ್ಲ. 1949ರಲ್ಲಿ ತಾವೇ ಹೇಳಿದ್ದೀರಿ ?

The Hon'ble Sri H. C. DASAPPA.—Why do you go beside the point? You refer to the Hon'ble Prime Minister not being invited. It is not right.

Sri L. SIDDAPPA.—To what effect ?

The Hon'ble Sri H. C. DASAPPA.—To what effect ? Well, he is not here at your beck and call.

ಶ್ರೀ ಎಲ್. ಸಿದ್ದಪ್ಪನವರು.—ವಾಸ್ತವವಾಗಿ ನಡೆದಿರುವ ಅಂಶಗಳನ್ನು ತಿಳಿಸುತ್ತಿದ್ದೇನೆಯೇ ಹೊರತು ಮತ್ತೇನೂ ಅಲ್ಲ.

The Hon'ble Sri H. C. DASAPPA.—Let reasonable statements be made.

Sri L. SIDDAPPA.—Statements which are not palatable to you are beside the point always for you.

The Hon'ble Sri H. C. DASAPPA.—Surely they are not palatable to me. They are tasty only for you and your friends.

Sri L. SIDDAPPA.—We know with what attitude you have taken up some of these projects. The proof of pudding is in the eating of it. ನಾವು ನೋಡುತ್ತಿರುವ ಹಾಗೆ ಎಷ್ಟೋ ಐಟಂಗಳನ್ನು, ಎಷ್ಟೋ ಪ್ರಾಜೆಕ್ಟುಗಳನ್ನು ತಾತ್ಸಾರ ಭಾವದಿಂದ ನೋಡುತ್ತಿದ್ದೀರಿ.

ಶ್ರೀ ಟಿ. ಮರಿಯಪ್ಪನವರು.—ಶಿವಮೊಗ್ಗ ಜಿಲ್ಲೆಯಲ್ಲೇ ಕಳೆದ ಮೂರು ವರ್ಷಗಳಿಂದ ಎಷ್ಟು ಐಟಂ ತೆಗೆದುಕೊಂಡಿದೆ ಎಂಬುದನ್ನು ನೋಡಲಿ. ಎಷ್ಟೋ ಐಟಂ ನಾವು ಪೂರ್ಣ ಮಾಡಿದ್ದೇವೆ. ಎಷ್ಟೋ ಐಟಂಗಳನ್ನು re-shape ಮಾಡಬೇಕಾಗಿ ಬಂತು. The number of items and the speed with which we have completed ಮುಂತಾದುವನ್ನೆಲ್ಲಾ ಗಮನಿಸಿ ಅವರು ಹೇಳಬೇಕು.

Sri L. SIDDAPPA.—If you only compare according to Districts, and furnish me with a statement of the works undertaken and amounts sunk on those works, I will show to you how you have neglected the northern parts of the State like Shimoga, Chitaldrug, etc., which are in great need of development. The southern part of the State is very well developed.

Sri H. M. CHANNABASAPPA.—At least you admit that there has been some improvement. Is it so?

These are sufficiently hard conditions to fulfil. But let us go forward with the hope that we shall be able to satisfy all of them and succeed in our efforts to take our country on the road to some definite social and economic progress at the end of the period.

The Hon'ble Sri H. C. DASAPPA.—Do you doubt the success of these?

Sri D. H. CHANDRASEKHARAIYA.—The Hon'ble Minister was pleased to observe whether I would doubt the success of the Plan. But let it be clearly noted that the success depends on the fulfilment of these conditions which I have mentioned just now. Let me hope that these conditions of success will always be kept in view in implementing the Plan.

The Hon'ble Sri H. C. DASAPPA. My question is, have you got any doubts in fulfilling these conditions?

Sri D. H. CHANDRASEKHARAIYA.—Personally I have none but much depends on what we do hereafter.

The Hon'ble Sri H. C. DASAPPA.—That is it.

ಶ್ರೀ ಜಿ. ಎ. ಆಚಾರ್ಯರವರು (ಬೆಂಗಳೂರು ಜಿಲ್ಲೆ).—ಸ್ವಾಮಿ, ಭಾರತ ವರ್ಷದ ಸರ್ಕಾರದವರು ನಮ್ಮ ಮುಂದೆ ಹೇಗೆ ಒಂದು ಯೋಜನೆಯನ್ನು ತಯಾರಿಸಿಟ್ಟಿದ್ದಾರೋ ಹಾಗೆಯೇ ನಮ್ಮ ಮೈಸೂರು ಸರ್ಕಾರದವರೂ ಮೈಸೂರು ಭಾರತದ ಒಂದು (ಅಂಗವಾಗಿರುವುದರಿಂದ) ಇದುವರೆಗೆ ಮಾಡತಕ್ಕ ವಿಷಯಗಳನ್ನೊಳಗೊಂಡ ಮತ್ತು ಹಿಂದೆ ಮಾಡಿರುವುದೆಲ್ಲವನ್ನೂ ಚರ್ಚಿಸಿ ಸಂಸ್ಥಾನದ ಆರ್ಥಿಕಾಭಿವೃದ್ಧಿಗಾಗಿ ಮತ್ತು ದಾರಿದ್ರ್ಯವನ್ನು ಹೋಗಲಾಡಿಸುವುದಕ್ಕಾಗಿ ಮಾಡಬಹುದಾದ ಏರ್ಪಾಡನ್ನು ಒಂದು ಪಟ್ಟಿಯ ಮೂಲಕವಾಗಿ ಈಗ ನಮ್ಮ ಮುಂದಿಟ್ಟಿದ್ದಾರೆ.

ನನ್ನ ಮಿತ್ರರೊಬ್ಬರು ಇದರ ವಿಚಾರ ಮಾತನಾಡುತ್ತಾ ಇದು ಕಾರ್ಯಗತಮಾಡಲಸಾಧ್ಯವಾದದ್ದು ಎಂಬ ಒಂದು ವಾದವನ್ನು ಹೇಳಿರುತ್ತಾರೆ. ಸರ್ಕಾರದವರು ಈ ಯೋಜನೆಯನ್ನು ಯಾರಿಗಾಗಿ, ಏತಕ್ಕಾಗಿ ಮಾಡಿದ್ದಾರೆಂಬುದನ್ನು ನಾವು ಮೊದಲು ತಿಳಿದುಕೊಳ್ಳಬೇಕು. ಮೈಸೂರು ಸಂಸ್ಥಾನದಲ್ಲಿ ಸರ್ವಸಾಮಾನ್ಯರೆಲ್ಲರಿಗೂ ಹೊಟ್ಟೆಗೆ ಹಿಟ್ಟು ಸಿಕ್ಕಬೇಕಾದರೆ, ಕೆಲಸವಿಲ್ಲದವರಿಗೆಲ್ಲ ಕೆಲಸ ಸಿಕ್ಕಬೇಕಾದರೆ, ಜನರಿಗೆ ಪ್ರತಿನಿತ್ಯವೂ ಬೇಕಾಗಿರುವ ಸಾಮಾನುಗಳು ಕಡಿಮೆ ಖರೀದಿಗೆ ಸಿಕ್ಕಬೇಕಾದರೆ ಇಂತಹ ಯಾವುದಾದರೊಂದು ಯೋಜನೆ ಇರಲೇ ಬೇಕು. ಯೋಜನೆಯಿಲ್ಲದೆ ಯಾವ ಸಂಸ್ಥಾನವೇ ಆಗಲಿ, ಯಾವ ದೊಡ್ಡ ದೇಶವೇ ಆಗಲಿ ಮುಂದೆ ಬರಲಾರದೆಂದು ನನ್ನ ಮತ. ಯಾವುದೇ ಕೆಲಸ ಮಾಡಬೇಕಾದರೂ ನಾವು ಅದನ್ನು ಹೇಗೆ ಮಾಡುವುದು ಅದಕ್ಕೆ ಏನೇನು ಅವಶ್ಯಕ ಎಂಬುದನ್ನು ಪರಿಶೀಲಿಸಿ ಮುಂದೆ ಬರಬಹುದಾದ ಅಂಶಗಳನ್ನೆಲ್ಲಾ ಜೋಡಿಸಿ, ಯಾರ ಸಹಾಯದಿಂದ ಮಾಡಬಹುದು ಎಂಬುದನ್ನು ಅರಿತು ಒಂದು ತತ್ವದ ಮೇಲೆ ಯೋಚಿಸುವುದಲ್ಲದೆ ಯಾವ ಒಂದು ಯೋಜನೆಯನ್ನು ನಮ್ಮ ಮನಸ್ಸಿನಲ್ಲಿ ಕಲ್ಪನೆ ಮಾಡಿಕೊಂಡಿದ್ದೇವೆಯೋ ಅದಕ್ಕೆ ಬೇಕಾದ ಸಾಮಗ್ರಿ ನಮ್ಮಲ್ಲಿದೆಯೆ ಎಂಬುದನ್ನು ಯೋಚಿಸುವುದು ಅವಶ್ಯಕ. ರಾಜಕೀಯ ವಿಷಯದಲ್ಲಿ ಮಾತನಾಡುವ ಹಾಗೆ ಆರ್ಥಿಕ ವಿಷಯದಲ್ಲಿ ಮಾತನಾಡುವುದಕ್ಕೆ ಹೊರಟರೆ ಅದು ವಿಹಿತವಲ್ಲ. ನಮ್ಮ ಸರ್ಕಾರದವರು ಅವರಲ್ಲಿರುವ ಹಣ, man power and natural resources ಎಲ್ಲವನ್ನೂ ಕೂಡಿಸಿ ನಮ್ಮ ಮುಂದಿಟ್ಟಿರುವುದಲ್ಲದೆ ಅವರ ಮನಸ್ಸಿನಲ್ಲಿರುವ ಒಂದು ಚಿತ್ರವನ್ನೂ ನಮ್ಮ ಮುಂದಿಟ್ಟಿದ್ದಾರೆ. ಇದು ಕಾರ್ಯಗತವಾಗುವುದು ಸಾಧ್ಯವೋ ಎಂಬ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಈಗಾಗಲೇ ಕೆಲವರು ಸಭೆಯ ಮುಂದಿಟ್ಟಿದ್ದಾರೆ. ನಾನು ನನ್ನ ಅಭಿಪ್ರಾಯವನ್ನು ಹೇಳುವುದಾದರೆ, ಯಾವ ಕೆಲಸವನ್ನೇ ಆಗಲಿ ಮಾಡುವುದಕ್ಕೆ ಹೊರಟರೆ ಅದು ಅಸಾಧ್ಯವೆಂದು ಹೇಳುವುದು ಒಳ್ಳೆಯದಲ್ಲ. ಯಾವ ಕೆಲಸವನ್ನು ನಾವು ಮಾಡಿದರೂ ಹಟದಿಂದ ಮಾಡಬೇಕು, ಆಗಲೇ ನಮಗೆ ಅದರಲ್ಲಿ ಹೆಚ್ಚು ಆಸಕ್ತಿ ಹುಟ್ಟುತ್ತದೆ. ಹಣಕಾಸಿನ ವಿಚಾರದಲ್ಲಿ ಮಾತ್ರ ನಾವು ಜಾಗರೂಕತೆಯನ್ನಿಟ್ಟುಕೊಂಡು ಮಾತನಾಡಬೇಕೇ ಹೊರತು ಹದ್ದು ಮೀರಿ ಮಾತನಾಡುವುದರಲ್ಲಿ ನಮಗೂ ಮಾನ ಬರುವುದಿಲ್ಲ, ಸಂಸ್ಥೆಗೂ ಬರುವುದಿಲ್ಲವೆಂದು ಹೇಳಿ ಇದನ್ನು ಇಲ್ಲಿಗೇ ಬಿಟ್ಟುಬಿಡುತ್ತೇನೆ.

ಈಗ ನಮ್ಮ ಸರ್ಕಾರದವರು ಮುಂದೆ ಐದು ವರ್ಷಗಳಲ್ಲಿ ನಮಗೆ ಬರಬಹುದಾದ ಹಣ, ಆಗಬೇಕಾದ ಕಾರ್ಯಗಳು, ನಮ್ಮಲ್ಲಿ ಈ ಯೋಜನೆಗಳಿಗೆ ಏನು ಹಣ ಇರಬಹುದು ಎಂಬ ಬಗ್ಗೆ ಅಂಕಿ ಅಂಶಗಳನ್ನೆಲ್ಲಾ ಶೇಖರಿಸಿ ಒಂದು ಪಟ್ಟಿಯನ್ನು ತಯಾರಿಸಿ ನಮ್ಮ ಕೈಯಲ್ಲಿ

(ಶ್ರೀ ಜಿ. ಎ. ಆಚಾರ್ಯರು)

ಟ್ಟಿದ್ದಾರೆ. ಈಗ ನಿಜವಾಗಿಯೂ ಈ ನಾನಾ ಯೋಜನೆಗಳಿಗೆ ಬೇಕಾದ ಹಣ ನಮ್ಮಲ್ಲಿಲ್ಲ, ಆದರೂ ಯಾವುದೊಂದು ಯೋಜನೆಯನ್ನಾದರೂ ಕೂಡ ನಮ್ಮ ಬೊಕ್ಕಸದಲ್ಲಿರುವ ಹಣದಿಂದರೇ ಮಾಡುತ್ತೇವೆ, ಇಲ್ಲದಿದ್ದರೆ ಮಾಡುವುದೇ ಇಲ್ಲ ಎಂದು ಯಾವ ಒಂದು ವ್ಯಕ್ತಿ, ಗುಂಪು ಅಥವಾ ಸಂಸ್ಥೆ ಹೇಳಿದರೆ ಅವರಿಗೆ ಅಷ್ಟೊಂದು ಪರಿಜ್ಞಾನವಿಲ್ಲವೆಂದು ಹೇಳಬಹುದು. ಈ ಪದವನ್ನು ಉಪಯೋಗಿಸಬಹುದೋ ಇಲ್ಲವೋ ನನಗೆ ಗೊತ್ತಿಲ್ಲ. ಇದು ಹಾಗಿರಲಿ, ನಮ್ಮ ಸಂಸ್ಥಾನ ಹಿಂದೆ ಪ್ರಬಲವಾಗಿದ್ದುದಕ್ಕೆ ಕಾರಣವೇನು ? ಮೈಸೂರು ಸಂಸ್ಥಾನದಲ್ಲಿರುವ ಉತ್ಪತ್ತಿಯನ್ನು ನೋಡಿ ಬೇರೆಯವರು ಮರ್ಯಾದೆ ಕೊಟ್ಟಿದ್ದಾರೆಯೆ ! ಅಥವ ನಮ್ಮ ಸರ್ಕಾರಿ ಬೊಕ್ಕಸದಲ್ಲಿರುವ ಹಣವನ್ನು ನೋಡಿ ಮರ್ಯಾದೆಕೊಟ್ಟಿದ್ದಾರೆಯೆ? ಅಥವ ನಮ್ಮ ಸಾಮಾನುಗಳಿಗೆ ಇರತಕ್ಕ ಗಿರಾಕಿಯನ್ನು ನೋಡಿ ಕೊಟ್ಟಿದ್ದಾರೆಯೇ ? ಎಂಬುದನ್ನು ನಾವು ಯೋಚನೆಮಾಡಬೇಕು. ನಾನುಮೊದಲೇ ಹೇಳಿದಹಾಗೆ, ಹಣ ಕಾಸಿನ ವಿಚಾರವನ್ನು ಮಾತನಾಡುವಾಗ ಒಂದು ರಾಜಕೀಯ ತತ್ವ ಅಥವ ತಮ್ಮ ಪ್ರಾಬಲ್ಯವನ್ನು ಮನಸ್ಸಿನಲ್ಲಿಟ್ಟುಕೊಂಡು ಅವಕಾಶ ಸಿಕ್ಕಿದಾಗ ಇನ್ನೊಂದು ಪಾರ್ಟಿಯವರನ್ನು ಗುಂಡಿನಲ್ಲಿ ಹೊಡೆದುಬಿಡುವ ಹಾಗೆ ಭಾಷಣಗಳನ್ನು ಮಾಡುವುದು ಒಳ್ಳೆಯದಲ್ಲ.

ಸ್ವಾಮಿ, ನಮ್ಮ ಈ ಯೋಚನೆಗಳಿಗೆ ಬೇಕಾಗುವ ಕೋಟ್ಯಾಂತರ ರೂಪಾಯಿಗಳು ನಮ್ಮಲ್ಲಿದೆಯೇ ಎಂದರೆ ಇಲ್ಲ. ಆದಕಾರಣ ಹೊರಗಿನಿಂದಲೂ ಪಡೆಯಬೇಕು. ನಮಗೆ ಸಾಲ ಕೊಡುವವರು ಸಾಲ ಕೊಡುವಾಗ ಹಿಂದೆ ನಾವು ಮಾಡಿರುವ ಕೆಲಸಗಳನ್ನೂ ನಾವು ಈಗ ಏನು ಮಾಡುತ್ತೇವೆಂಬುದನ್ನೂ ನೋಡಿ ಕೊಡುತ್ತಾರೆ. ನಮ್ಮ ಆಸ್ತಿಪಾಸ್ತಿಗಳನ್ನು ನೋಡುತ್ತಾರೆ, ನಮ್ಮ ಕೆಲಸ ಕಾರ್ಯಗಳಿಂದ ಜನರಿಗೆ ಏನು ಪ್ರಯೋಜನವಾಗುತ್ತದೆಂಬುದನ್ನೂ ನೋಡುತ್ತಾರೆ, ಈ ಕೆಲಸಗಳಿಂದ ಏನೂ ಪ್ರತಿಫಲ ಬರುತ್ತದೆಂಬುದನ್ನೂ ನೋಡುತ್ತಾರೆ.

ನಾನು ಹೇಳುವುದಿಷ್ಟೆ. ನಾವು ಜನೋಪಯುಕ್ತವಾದ ಯೋಜನೆಗಳನ್ನು ತೆಗೆದುಕೊಂಡಿದ್ದೇವೆ, ಇವು ಕಾರ್ಯರೂಪಕ್ಕೆ ಬರಬೇಕೆಂಬುದು ನಮ್ಮ ಇಚ್ಛೆ. ಈ ಕಾರ್ಯಗಳು ಆಗಲೇಬೇಕೆಂದು ಮೈಸೂರು ಸಂಸ್ಥಾನದ ಜನರೆಲ್ಲರೂ ಘಂಟಾಘೋಷವಾಗಿ ಹೇಳಿ ಮುಂದೆ ಬರುತ್ತಾರೆ. ಹೀಗೆ ಯಾವಾಗ ಜನರಿಂದ ಬೆಂಬಲ ಬರುತ್ತದೆಯೋ ಸಾಲವೂ ಬರುತ್ತದೆ, ಪ್ರತಿಫಲವೂ ಬರುತ್ತದೆ. ಜನರಲ್ಲಿ ಆಸಕ್ತಿ ಹುಟ್ಟಿದರೆ ನಾವು ಈಗ ಯಾವ ಕಾರ್ಯ ಮಾಡಬೇಕೆಂದು ಹೇಳುತ್ತೇವೆಯೋ ಅದು ಖಂಡಿತವಾಗಿ ಕಾರ್ಯರೂಪಕ್ಕೆ ಬರುತ್ತದೆ. ಅಂಕಿ ಅಂಶಗಳನ್ನು ಹೇಳುವಾಗ ನಾನು ಕೂಡ ಸರ್ಕಾರದವರು ಬಹಳ ಎಚ್ಚರಿಕೆಯಿಂದಿರಬೇಕೆಂದು ಬಹಳ ವಿನಯದಿಂದ ಹೇಳಬೇಕಾಗುತ್ತದೆ. ಶ್ರೀ ಚಂದ್ರಶೇಖರಯ್ಯನವರು ಹೇಳಿದ ಹಾಗೆ ಈ ಯೋಜನೆಗಳನ್ನು ತಯಾರುಮಾಡುವಾಗ ಎಷ್ಟು ತೀವ್ರವಾದ ಆಸಕ್ತಿ ಇದೆಯೋ ಅಷ್ಟೇ ತೀವ್ರವಾದ ಆಸಕ್ತಿ ಅವುಗಳನ್ನು ಕಾರ್ಯಗತಮಾಡುವುದರಲ್ಲಿಯೂ ಇಲ್ಲದಿದ್ದರೆ ಬಹುಶಃ ಈ ಯೋಜನೆಗಳು ಕಾರ್ಯರೂಪಕ್ಕೆ ಬರುವುದಿಲ್ಲ. ಈ ಅಭಿಪ್ರಾಯವನ್ನು ನಾನೂ ಸೂಚಿಸುತ್ತೇನೆ.

ಕೆಲವು ಮಾನ್ಯ ಸದಸ್ಯರು ಕೇಂದ್ರ ಸರ್ಕಾರದ ಸಹಾಯ ನಮಗೆ ಬರುತ್ತದೆಯೋ ಇಲ್ಲವೋ ಎಂಬ ಊಹೆಯ ಮೇಲೆ ಅಥವ ಅನುಮಾನದ ಮೇಲೆ ಕಥೆ ಕಟ್ಟಿದರು. ಆರ್ಥಿಕ ವಿಚಾರವನ್ನು ತೆಗೆದುಕೊಳ್ಳುವಾಗ ಹಿಂದಿನ ಅಂಕಿ ಅಂಶಗಳನ್ನು ನೋಡಿ, ಹೀಗೆ ಮಾಡಿದರೆ ಹೇಗಾಗಬಹುದೆಂದು ಯೋಚಿಸಿ, ಈಗ ಸರ್ಕಾರದಲ್ಲಿರುವ ಅಂಕಿ ಅಂಶಗಳನ್ನೂ ನೋಡಿಕೊಂಡು ಯೋಜನೆಗಳನ್ನು ಮಾಡುವುದು ಸ್ವಾಭಾವಿಕ. ಬೇರೆಯವರೂ ಹೀಗೆಯೇ ಮಾಡುತ್ತಾರೆ. ನಮ್ಮ ಸರ್ಕಾರದವರು ಈ ಯೋಜನೆಯನ್ನು ತಯಾರು ಮಾಡುವುದರಲ್ಲಿ ಹಿಂದಾದ ಅಂಶಗಳೆಲ್ಲವನ್ನೂ ಗಮನಕ್ಕೆ ತೆಗೆದುಕೊಂಡು ಮಾಡಿದ್ದಾರೆ.

ಆದುದರಿಂದ ಈಗ ನಾವು ಮಾಡತಕ್ಕ ಕೆಲಸಗಳನ್ನು ಮುಂದಕ್ಕೆ ನಡೆಸತಕ್ಕವರು ಎಂದರೆ ಅವುಗಳ ಮುಂದೋಟಕ್ಕೆ ಹೆಚ್ಚಿನ ಆಸಕ್ತಿ ವಹಿಸುವಂಥ ಜನರೂ ನಮಲ್ಲಿದ್ದಾರೆಂದು ನಾನು ಹೇಳುತ್ತೇನೆ. ನಮ್ಮೆಲ್ಲರ ದಾರಿದ್ರ್ಯ ಹೋಗಲು ಮತ್ತೂ ನಮ್ಮೆಲ್ಲರ ಬಡತನ ನೀಗಲು, ಈಗ ಸರ್ಕಾರದವರು ನಮ್ಮ ಮುಂದಿಟ್ಟಿರುವ ಯೋಜನೆಗಳು ಅವುಗಳು ಏನೇ ಇರಲಿ, ಅವು ನಮ್ಮೆಲ್ಲರ ಬಡತನವನ್ನು ನೀಗಿ, ನಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸತಕ್ಕವುಗಳಾಗಿರುತ್ತವೆಂದು ಹೇಳುವುದರಲ್ಲಿ ಯಾವ ಸಂದೇಹ ಅಥವಾ ಸಂಶಯಗಳೂ ಇರುವುದಿಲ್ಲ. ಆದರೆ ನಮ್ಮಲ್ಲಿ ಈಗ ದುಡ್ಡಿನ ಕೊರತೆ ಕೊಂಚಮಟ್ಟಿಗೆ ಇರಬಹುದು. ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿಗೆ ಸಾಕಾಗುವಷ್ಟು ಹಣ ಇಲ್ಲದಿರಬಹುದು. ಇದರ ಜೊತೆಗೆ ಈಗಾಗಲೇ ಮಾನ್ಯ ಆರ್ಥಿಕ ಸಚಿವರು ಸೂಚಿಸಿರುವಂತೆ ವಿದ್ಯುಚ್ಛಕ್ತಿಯನ್ನು ಹೆಚ್ಚಿಸುವುದಕ್ಕಿಂತ, ಅದನ್ನು ಹಬ್ಬಿಸುವುದಕ್ಕೆ ಜಾಸ್ತಿ ದುಡ್ಡು ನಮಗೆ ಈಗ ಬೇಕಾಗುತ್ತದೆ. ಈ ಬಗ್ಗೆ ನಮಗೆ ಸುಮಾರು 10-12ಕೋಟಿ ರೂಪಾಯಿಗಳು ಬೇಕಾಗಬಹುದು. ಮೈಸೂರು ಸಂಸ್ಥಾನದಲ್ಲಿರತಕ್ಕ natural resources ಬಗ್ಗೆ ತಾವು ಸಾಲವನ್ನಾದರೂ ಮಾಡಿ, ತನ್ಮೂಲಕ ತಾವು ವಿದ್ಯುಚ್ಛಕ್ತಿಯನ್ನು ಹೆಚ್ಚು ಮಾಡಿ, ಅದನ್ನು ಎಲ್ಲಾ ಕಡೆಗೂ ಹಬ್ಬುವಂತೆ ಮಾಡದಿದ್ದರೆ ನಮಗೆ ಗತ್ಯಂತರವಿಲ್ಲ. ಹೀಗೆ ತಾವು ಇದನ್ನು ಹೆಚ್ಚು ಮಾಡಿದ್ದೇ ಆದರೆ, ಆಗ ಇದರಿಂದಲಾದರೂ ನಮ್ಮ ದೇಶದ ಕಡು ಬಡತನ, ನಮ್ಮ ಜನರ ದುರವಸ್ಥೆ ಮತ್ತು ನಮ್ಮಲ್ಲಿರುವ ಸೋಮಾರಿ ಜನರಿಗೆ, ಆಗಲಾದರೂ ಇದರ ಬಿಸಿ ತಾಗಿ ಜನರು ಏನಾದರೂ ಒಂದು ಕೆಲಸ ಮಾಡೋಣ, ಒಂದು ಉದ್ಯೋಗ ಕೈಗೊಳ್ಳೋಣ ಎಂಬ ಹುರುಪು ಹುಟ್ಟುವಂತೆ ಅವರೆಲ್ಲರನ್ನು ಆಕರ್ಷಣೆ ಮಾಡುವ ರೀತಿಯಲ್ಲಿ ಈ ಪವರನ್ನು ತಾವು ಅವರಿಗೆ ಬಹಳ ಸುಲಭ ದರದಲ್ಲಿ ಒದಗಿಸಿದುದೇ ಆದರೆ ಜನರು ಆಸಕ್ತಿಯಿಂದ ಕೆಲಸ ಮಾಡುವಂತಾಗಿ, ನಮ್ಮ ದಾರಿದ್ರ್ಯ ದೂರವಾಗಲು ಇದರಿಂದ ಖಂಡಿತ ಸಹಾಯವಾಗುತ್ತದೆಯೆಂದು ನಂಬತಕ್ಕವರಲ್ಲಿ ನಾನೂ ಒಬ್ಬನಾಗಿದ್ದೇನೆ.

[Mr. Deputy-SPEAKER (Sri L. H. Thimma Boi, in the Chair.]

ಹೀಗೆ ಈ ವಿದ್ಯುಚ್ಛಕ್ತಿ ಹೆಚ್ಚಾಗಿ ಹಬ್ಬಿದರೆ ನೀರಾವರಿ ಕಾಮಗಾರಿಗಳು ಕಮ್ಮಿ ಇದ್ದಾಗ್ಯೂ ಇದರಿಂದ ಹೆಚ್ಚಿನ ಪ್ರಯೋಜನ ಹೊಂದಲು ಸಾಧ್ಯವಿದೆ. ಆದಕಾರಣ ಕೆಲವರಿಗೆ ಇದರ ಬಗ್ಗೆ ಆಸಕ್ತಿ ಇರಲಿ, ಇಲ್ಲದಿರಲಿ, ಸರ್ಕಾರದವರಂತೂ ಈ ಯೋಜನೆಗಳನ್ನು ಮೊದಲು ಕೈಗೊಂಡು ಕಾರ್ಯರೂಪಕ್ಕೆ ತಂದರೆ ನಮ್ಮ ಸಂಸ್ಥಾನದಲ್ಲಿರತಕ್ಕ ಬಡತನವೆಲ್ಲಾ ಹೋಗುತ್ತದೆಯೆಂದು ಹೇಳತಕ್ಕವರ ಪೈಕಿ ನಾನೂ ಒಬ್ಬ. ಸ್ವಿಟ್ಜರ್‌ಲೆಂಡ್ ಮತ್ತು ಹಾಲೆಂಡ್ ಈ ದೇಶಗಳಲ್ಲಿ ಅವರು ನೀರೊಂದಿದ್ದರೆ ಏನು ಬೇಕಾದರೂ ಬೆಳೆಯಬಹುದು, ಎಂದು

ಹೇಳುತ್ತಾರೆ. ದೊಡ್ಡ ದೊಡ್ಡ ನೀರಾವರಿ ಯೋಜನೆಗಳು ಇಲ್ಲದಿದ್ದರೂ ಬೆಳೆಯನ್ನು ಬೆಳೆಯಲು ಸಾಧ್ಯವಿದೆಯೆಂದು ಅವರು ಹೇಳುತ್ತಾರೆ. ನೂರಾರು ಅಡಿಗಳು ಆಳವನ್ನು ಶೋಧಿಸಿ ಜಲವನ್ನು ಕಂಡುಹಿಡಿಯಬಹುದು. ಸಾವಿರಾರು ಅಡಿಗಳಾದರೂ ಪರವಾಗಿಲ್ಲ, ಆದರೆ ಅಷ್ಟು ಆಳದಿಂದ ಆ ನೀರನ್ನು ಎತ್ತಬೇಕಾದರೆ ಈ ವಿದ್ಯುಚ್ಛಕ್ತಿಯ ಸಹಾಯವಿಲ್ಲದಿದ್ದರೆ ಅದು ಸಾಧ್ಯವೇ ಇಲ್ಲ" ಹೀಗೆ ಅವರು ಹೇಳುತ್ತಿರುವುದು ಸತ್ಯವಾದ ವಿಷಯ. ಆದರೆ ಈ ಬಗ್ಗೆ ನಾನು ಅಷ್ಟು ಹೆಚ್ಚಾಗಿಹೇಳಬೇಕಾದ ಅಗತ್ಯವೇನೂ ಇಲ್ಲ. ಇಷ್ಟು ಮಾತ್ರ ತಿಳಿಸಲಿಚ್ಛಿಸುತ್ತೇನೆ,—ಇಂಥಾ ದೊಡ್ಡ ದೊಡ್ಡ ನೀರಾವರಿ ಕಾಮಗಾರಿಗಳಿಗೆ ಕೇಂದ್ರ ಸರ್ಕಾರದವರು ಸಹಾಯ ನೀಡುವುದಿಲ್ಲವೆಂದು ಹೇಳಲಾರರು. ಆ ಅಂಜಿಕೆಯು ನನಗಿಲ್ಲ; ತಾವು ಈ ರೀತಿ ದೊಡ್ಡ ದೊಡ್ಡ ಯೋಜನೆಗಳನ್ನು ಕೈಗೊಳ್ಳುತ್ತೇವೆಂದು ಜನರಿಗೆ ತಿಳಿಸಿದರೆ; ಅವರೇ ಬೇಕಾದ ಹಾಗೆ ಸಾಲ ನೀಡಲು ಮುಂದೆ ಬರಬಹುದು. ಆದರೆ ನಮ್ಮ ಜನರು ಇಂಥಾ ಯೋಜನೆಗೆ ಸಹಾಯಮಾಡಲು ಮುಂದೆ ಬರುವುದಿಲ್ಲವೆಂಬ ಆ ಒಂದು ಅಂಜಿಕೆ ಖಂಡಿತ ನನಗೆ ಇರುವುದಿಲ್ಲ. ಹೀಗೆ ಸರ್ಕಾರದವರು ಜನರಿಗೆ ನೀರಾವರಿ ಸೌಕರ್ಯಗಳನ್ನು ಕಲ್ಪಿಸಿಕೊಡುತ್ತೇವೆ, ವಿದ್ಯುಚ್ಛಕ್ತಿಯನ್ನು ತಯಾರಿಸುತ್ತೇವೆ, ಎಂದು ಹೇಳಿದ ಮೇಲೂ ನಮ್ಮ ಜನರಿಂದ ಸಾಲ ಒಂದು ವೇಳೆ ಸಿಕ್ಕದೆ ಹೋದರೆ (ನಾನಾದರೂ ಹಾಗೆ ಸಾಲ ಸಿಕ್ಕುವುದಿಲ್ಲವೆಂದು ಹೇಳತಕ್ಕವನಲ್ಲ) ಏನು ಮಾಡಬೇಕು ಎಂಬ ಅನುಮಾನಕ್ಕೆ ಕಾರಣವೇ ಇಲ್ಲ. ಏತಕ್ಕೆಂದರೆ ಈ ಒಂದು ರೀತಿಯಲ್ಲಿ ಯಾವಾಗ ತಾವು ಸಂಸ್ಥಾನದ ಜನಗಳಿಗೆ ಉತ್ಪತ್ತಿಯಾಗುವಂಥ ಸಹಾಯಗಳನ್ನೂ ಮತ್ತು ಸೌಲಭ್ಯಗಳನ್ನೂ ಜಾಸ್ತಿ ಕಲ್ಪಿಸಬೇಕೆಂದಿದ್ದೇವೆ, ನಮಗೆ ಮಹಾ ಜನರಿಂದ ಹಣವು ಸಾಲದ ರೂಪವಾಗಿ ಬಂದರೆ ಸಾಧ್ಯ ಎಂದು ತಾವು ಕೇಳಿದರೆ, ಆಗ ಇಂಥ ಬಾಬುಗಳಿಗೆ ದುಡ್ಡನ್ನು ಕೊಡುವುದಿಲ್ಲ ಎಂದು ಹೇಳತಕ್ಕ ದೇಶದ್ರೋಹಿಗಳು ನಮ್ಮಲ್ಲಿ ಯಾರೂ ಇರುವುದಿಲ್ಲ. ಸೇಕಡ 3 ಅಥವಾ 4ರಷ್ಟು ಬಡ್ಡಿ ಕೊಡುತ್ತೇವೆಂದರೆ ಹಣವನ್ನು ಸಾಲವಾಗಿ ನೀಡತಕ್ಕಂಥ ಅನೇಕರು ನಮ್ಮಲ್ಲಿಯೂ ಇದ್ದಾರೆ. ಆದರೆ ಹಾಗೆ ಇಂಥಾ ದೇಶಾಭಿವೃದ್ಧಿಕಾರ್ಯಗಳಿಗೆ ತಮ್ಮಲ್ಲಿ ಹಣ ಇದ್ದಾಗ್ಯೂ ಅದನ್ನುಕೊಡದೆ ಬಚ್ಚಿಟ್ಟುಕೊಳ್ಳುತ್ತ ಹಣವಿಲ್ಲವೆಂದು ಯಾರಾದರೂ ಹೇಳಿದರೆ ದೇಶಕ್ಕೆ ಅವರಿಗಿಂತಲೂ ದ್ರೋಹಿಗಳು ಮತ್ತೊಬ್ಬರಿಲ್ಲ. ವಾಸ್ತವಾಂಶಗಳೇ ಒಂದು ವಿಧವಾಗಿದ್ದರೂ ಇಲ್ಲದ ಅನುಮಾನಗಳನ್ನು ಮನಸ್ಸಿನಲ್ಲಿ ಕಟ್ಟಿಕೊಂಡು ಜನರ ಮನಸ್ಸನ್ನು ಚಂಚಲಗೊಳಿಸತಕ್ಕ ರೀತಿಯಲ್ಲಿ ಮಾತನಾಡತಕ್ಕದ್ದು ಸರಿಯಾದ್ದಲ್ಲವೆಂದು ನಾನು ತಿಳಿಸಲಿಚ್ಛಿಸುತ್ತೇನೆ. ಹೀಗೆ ಕೆಲವರು ಜನಗಳಿಗೆ ಮಾಡತಕ್ಕ ತಪ್ಪು ಉಪದೇಶಗಳ ಬಗ್ಗೆ ಸರಿಯಾದ ತಿಳುವಳಿಕೆಯನ್ನು ದೇಶದ ಜನರಿಗೆ ತಿಳಿಸತಕ್ಕ ಒಂದು ಮಾರ್ಗವನ್ನು ಸರ್ಕಾರದವರು ಕೈಗೊಳ್ಳದೆ ಬಿಟ್ಟಿರತಕ್ಕದ್ದು ಅವರ ತಪ್ಪೆಂದು ಹೇಳುತ್ತೇನೆ. ನೀವು ಮಾಡಬೇಕೆಂದಿರತಕ್ಕ ಯೋಜನೆಗಳೇನೇನು, ಅವುಗಳಿಂದ ದೇಶಕ್ಕೆ ಉತ್ತರೋತ್ತರವಾಗಿ ಏನೇನು ಪ್ರಯೋಜನಗಳಾಗುತ್ತವೆ ಎಂಬ ವಿಚಾರಗಳನ್ನೆಲ್ಲಾ ದಿನವಹಿ ಅಚ್ಚಾಗುತ್ತಿರುವ ಕನ್ನಡ ಮತ್ತು ಇಂಗ್ಲೀಷ್ ದೈನಂದಿನ ಪತ್ರಿಕೆಗಳಲ್ಲೆಲ್ಲಾ ಪ್ರಚಾರ ಮಾಡಬೇಕು. ಈ ನಿಮ್ಮ ಪಂಚವಾರ್ಷಿಕ ಯೋಜನೆಯ ಕಾರ್ಯಕ್ರಮಗಳನ್ನು ದಿನವಹಿ ರೇಡಿಯೋ ಮೂಲಕ ಭಾಷಣ ಮಾಡಿ, ಇದನ್ನೆಲ್ಲಾ ದೇಶದ ಜನತೆಗೆ ಮನದಟ್ಟಾಗುವಂತೆ ಮಾಡುವ ಕಾರ್ಯಕ್ರಮಗಳನ್ನು ಸರ್ಕಾರ ನಡೆಸಬೇಕು. ಈಗಲೂ ಈ ವಿಚಾರಗಳು ಆಗಾಗ್ಗೆ ರೇಡಿಯೋವಿನಲ್ಲಿ ಹೊರಬೀಳುತ್ತಿರುತ್ತವೆ. ಆದರೆ ಇನ್ನೂ ಇದನ್ನು ಹೆಚ್ಚಿನ ಪ್ರಮಾಣದಲ್ಲಿ ನಡೆಸಬೇಕು. ಹಾಗೆ ಈಗಾಗಲೇ ರೇಡಿಯೋ ಮುಖಾಂತರ ಪ್ರಸಾರ ಮಾಡಿರತಕ್ಕ ಅನೇಕ ಯೋಜನೆಗಳು ಈ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿರುತ್ತವೆ. ನಮಗೆ ಎಷ್ಟು ಸಾಧ್ಯವೋ ಅಷ್ಟನ್ನೇ ಮಾಡೋಣ, ಅಷ್ಟು ಮಾಡಿದರೆ ಕಮ್ಮಿಯಾಯಿತು, ಎಂಬ ಒಂದು ಅಂಜಿಕೆಗೆ ತಾವು ಹೆದರಬೇಕಾಗಿಲ್ಲ. ಮೊದಲು ಅಷ್ಟನ್ನು ಧೈರ್ಯದಿಂದ ಸಾಧಿಸತಕ್ಕದ್ದು ಒಂದು ದೊಡ್ಡ ವಿಷಯವೇ ಹೌದು. ನಮ್ಮಲ್ಲಿ ಅನೇಕ ಜನ ಬುದ್ಧಿವಂತರಿದ್ದಾರೆ, ಎಷ್ಟೋ ಮಹತ್ಕಾರ್ಯಗಳನ್ನೂ ಮಾಡಿದ್ದಾರೆ. ಹಿಂದಿನ 50 ವರ್ಷಗಳಲ್ಲಿ ನಾವು ಸಾಧಿಸಿರತಕ್ಕ ಕೆಲಸಗಳ ಒಂದು ಪಟ್ಟಿಯನ್ನು ತೆಗೆದುಕೊಂಡು ನೋಡಿದರೆ ಅದರಿಂದ ನಮ್ಮಲ್ಲಿ ಬುದ್ಧಿವಂತರಾದ ಜನಗಳಿದ್ದಾರೆಯೋ, ಇಲ್ಲವೇ ಎಂಬುದು ಗೊತ್ತಾಗುತ್ತದೆ. ಹಿಂದೆ ಅಂಥಾ ಅಷ್ಟಷ್ಟು ದೊಡ್ಡ ದೊಡ್ಡ ಕೆಲಸಗಳನ್ನು ಸಾಧಿಸಿರತಕ್ಕ ನಮಗೆ ಇಂದು ಈ ಕೆಲಸಗಳನ್ನು ಸಾಧಿಸಲು ಸಾಧ್ಯವಿದೆಯೋ ಅಥವಾ ಇಲ್ಲವೇ ಎಂದು ಯೋಚನೆ ಮಾಡತಕ್ಕ ಜನರೂ ಇದ್ದಾರೆ. ಹೀಗೆ ಒಂದು ಆಲೋಚನೆಮಾಡತಕ್ಕ ಜನರು ಸರ್ಕಾರಕ್ಕೆ ಬೆಂಬಲ ನೀಡಲು ಎಂದೂ ಹಿಂಜರಿಯಲಾರರು. ಆದಪ್ರಯುಕ್ತ ನಾನು ಹೇಳತಕ್ಕದ್ದಿಷ್ಟೆ—ನಮ್ಮ ಸರ್ಕಾರಕ್ಕೆ ಏನೇ ದುಡ್ಡಿರಲಿ, ಇಲ್ಲದಿರಲಿ, ನಾನು ಈಗಾಗಲೇ ತಿಳಿಸಿರುವಂಥ ಮೂರು ಮುಖ್ಯ ಬಾಬುಗಳನ್ನು ಅಂದರೆ ನೀರಾವರಿ ಯೋಜನೆ, ವಿದ್ಯುಚ್ಛಕ್ತಿಯನ್ನು ತಯಾರಿಸುವುದು ಮತ್ತೂ ಅದನ್ನು ದೇಶದ ನಾನಾ ಭಾಗಗಳಲ್ಲೂ ಹಬ್ಬಿಸುವುದು, ಈ ಮೂರನ್ನು ತಾವು ಎಷ್ಟು ಬೇಗ ಕೈಗೊಂಡು, ಇವುಗಳನ್ನು ಕಾರ್ಯರೂಪಕ್ಕೆ ತರುತ್ತೀರೋ ಅಷ್ಟಷ್ಟು ಬೇಗ, ದೇಶದಲ್ಲಿ ಜನರ "ಹೊಟ್ಟೆಗೆ ಸಾಲದು ಸಾಲದು" ಎಂಬ ಕೂಗು ಕಮ್ಮಿಯಾಗುತ್ತ ಹೆಚ್ಚು ಬೆಳೆ ಬೆಳೆಯಲು ಸಹಾಯಕವಾಗಿ, ಜನರ ಹೊಟ್ಟೆ ತುಂಬ ಅನ್ನ ಸಿಕ್ಕುವುದರ ಜೊತೆಗೆ ಕೆಲಸವಿಲ್ಲದೆ ಅಲೆದಾಡತಕ್ಕ ಜನರಿಗೆ ಕೆಲಸಗಳು ದೊರೆತು, ದೇಶದ ಮುಂದಿನ ಜನಾಂಗಕ್ಕೆ ತುಂಬಾ ಅನುಕೂಲವಾಗುತ್ತದೆ. ಹಾಗಿಲ್ಲವಾದರೆ ಇಂದಿನ ಕಷ್ಟ ಕಾರ್ಪಣ್ಯಗಳು ಇಂದಿಗೇ ಮುಗಿಯದೆ ಮುಂದಿನ ಜನಾಂಗಕ್ಕೆಲ್ಲಾ ತುಂಬಾ ಕಂಟಕಪ್ರಾಯವಾಗಿ ನಿಲ್ಲುತ್ತವೆಂಬುದನ್ನು ಯಾರೂ ಮರೆಯಬಾರದು.

ಹಿಂದೆ ಸಹ ಇದೇ ರೀತಿಯಾಗಿ, ಶಿವನಸಮುದ್ರದ ವಿದ್ಯುಚ್ಛಕ್ತಿಯ ಯೋಜನೆಯನ್ನು ಕೈಗೊಂಡು, ಆ ಪವರನ್ನು ಬೆಂಗಳೂರಿಗೆ ಸಾಗಿಸಬೇಕೆಂದು ಅಂದಾಜುಮಾಡಿದಾಗ, ಅನೇಕರು, ಓಹೋ ಇದೊಂದು ಗಾಳಿಗೋಪುರ, ಇವರು ವಿದ್ಯುಚ್ಛಕ್ತಿಯನ್ನು ತಯಾರಿಸುತ್ತಾರಂತೆ, ಅದನ್ನು ಅಲ್ಲಿಂದ ಬೆಂಗಳೂರಿಗೆ ಓಡಿಸುತ್ತಾರಂತೆ, ಅದು ಹೇಗೆ ಸಾಧ್ಯ ಎಂದು ವಾದಿಸಿದ್ದರು, ಆದರೆ ಅಂಥಾ ಗಾಳಿಗೋಪುರ ಕಟ್ಟಲು ಸಾಧ್ಯವೆಂದು ಊಹೆ ಮಾಡುವುದಕ್ಕೂ ಒಂದು ವಿಶೇಷ ಬುದ್ಧಿ ಇರಬೇಕು, ಅದಕ್ಕೆ ವಿಜ್ಞಾನದ ಬೆಳಕುಬೇಕು. ಆದರೆ ಈ ಸಂಬಂಧವಾಗಿ ಬೇಕಾದಷ್ಟು ಅಂಕಿ ಅಂಶಗಳಿವೆ. ನನಗೆ ಅಂಕೀ ಅಂಶಗಳೆಂದರೆ ಬಹಳ ಆಸೆ ಮತ್ತು ಅವುಗಳಲ್ಲಿ ಒಂದು ಹೆಚ್ಚಿನ ಆಸಕ್ತಿ ನನಗಿದೆ. ಈ ಸಂದರ್ಭದಲ್ಲಿ ನಾನು ಹೇಳಬೇಕೆಂದಿರುವುದು ಇಷ್ಟೆ—"ನಿಮ್ಮ ಖಜಾನೆಯಲ್ಲಿ ದುಡ್ಡೆಲ್ಲಿದೆ? ಇಂಥಾ ಯೋಜನೆಗಳಿಂದ ಜನರಿಗೆ ಹೆಚ್ಚಿನ ತೊಂದರೆಗಳೇ ವಿನಾ, ಇದರಿಂದೇನೂ ದೇಶಕ್ಕೆ ಉಪಕಾರವಾಗುವುದಿಲ್ಲ." ಎಂದು ಮನಸ್ಸಿನಲ್ಲಿ ಒಂದು ಊಹೆಯನ್ನು ಕಟ್ಟಿಕೊಂಡು ಇದೆಲ್ಲ ಒಂದು ಗಾಳಿಗೋ

(MR. DEPUTY SPEAKER).

ಪುರವೆಂದು ಜನರ ಮನಸ್ಸಿನಲ್ಲಿ ಒಂದು ಅಂಜಿಕೆ ಹುಟ್ಟುವ ರೀತಿಯಲ್ಲಿ ಭಾಷಣಮಾಡತಕ್ಕದ್ದು ನಮ್ಮ ದೇಶದ ಮತ್ತು ಜನಾಂಗದ ಮುಂದಿನ ಏಳಿಗೆಗೆ ಮತ್ತು ಪುರೋಭಿವೃದ್ಧಿಗೆ ತುಂಬಾ ಆತಂಕ ಆಗಬಹುದು. ಆದುದರಿಂದ ನಾನು ನಮ್ಮ ಮಾನ್ಯ ಮಂತ್ರಿಗಳಿಗೆಲ್ಲಾ ಹೇಳುವುದೇನೆಂದರೆ ನಮ್ಮ ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿಗೆ ಜನಗಳಿಂದ ತಾವು ನಿರೀಕ್ಷಿಸುವ ಮಟ್ಟಕ್ಕೆ ಬೆಂಬಲ ದೊರೆತು ತಮ್ಮಲ್ಲಿರತಕ್ಕ ನಿಧಿಯ ಜೊತೆಗೆ ತಕ್ಕಷ್ಟು ಹಣ ಜನರಿಂದ ಸಾಲದ ರೂಪದಲ್ಲಿ ಎತ್ತಲು ಸಾಧ್ಯವಿದೆ. ಇದನ್ನು ತಾವು ಖಂಡಿತ ಮುಂದುವರಿಸಿ. ಇಲ್ಲದಿದ್ದರೆ ನಮ್ಮ ನಾಡಿನ ರೈತರು ನಿಜವಾಗಿಯೂ ಮುಂದುವರಿಯಲು ಸಾಧ್ಯವಿಲ್ಲ.

ಇನ್ನು ಎರಡನೆಯ ಯೋಜನೆಯ ಬಗ್ಗೆ ಕೂಡ ಸರ್ಕಾರದವರು ಅಂಜಬೇಕಾದ ಅಗತ್ಯವು ಇಲ್ಲ ಮತ್ತು ಕಾರಣಗಳೂ ಇಲ್ಲ. ಹಾಗೆ ಕೇಂದ್ರ ಸರ್ಕಾರದವರು ಅನೇಕ ದೊಡ್ಡ ದೊಡ್ಡ ಕೈಗಾರಿಕಾ ಕಾರ್ಖಾನೆಗಳಿಗೆ ದ್ರವ್ಯ ಸಹಾಯವನ್ನು Financial Corporation ಗಳಿಂದ ಮಾಡಿಸದಿದ್ದಲ್ಲಿ ಅವು ಇಂದು ಇಷ್ಟೊಂದು ಅಭಿವೃದ್ಧಿ ಸ್ಥಿತಿಗೆ ಬರಲು ಅವಕಾಶವೇ ಇರಲಿಲ್ಲ. ಆದ್ದರಿಂದ ಕೇಂದ್ರ ಸರ್ಕಾರದವರು ಈ ವಿದ್ಯುಚ್ಛಕ್ತಿಕಾರ್ಖಾನೆಗಳ ಬಗ್ಗೆ ದ್ರವ್ಯ ಸಹಾಯವನ್ನು ತಮಗೆ ಖಂಡಿತ ನೀಡುತ್ತಾರೆಂಬುದರಲ್ಲಿ ಯಾವ ಸಂದೇಹವೂ ನನಗಿರುವುದಿಲ್ಲ. ಆದರೆ ಇನ್ನು ಅನೇಕ ಯೋಜನೆಗಳು ಅಂದರೆ ಈ ಕೊಲಂಬೋ ಪ್ಲಾನ್ ಇತ್ಯಾದಿ ನಾನಾ ಯೋಜನೆಗಳಿವೆ. ಆದರೆ ಅವುಗಳ ಬಗ್ಗೆ ನಾನೀಗ ಪ್ರಸ್ತಾಪ ಮಾಡಲು ಇಷ್ಟಪಡುವುದಿಲ್ಲ.

ಆದರೆ ಸರ್ಕಾರದವರು ಇಂದು ಕೈಗೊಳ್ಳಬೇಕೆಂದು ಆಶಿಸಿರುವ ಯೋಜನೆಗಳಿಂದ ದೇಶಕ್ಕೂ ಜನರಿಗೂ ಯಾವ ಪ್ರಯೋಜನವೂ ಆಗಲಾರದೆಂದು ಶ್ರೀ ಸಿದ್ದಪ್ಪನವರೊಬ್ಬರಿಗೆ ಅಪನಂಬಿಕೆ ಇದ್ದಾಗ್ಯೂ ದೇಶದ ಜನರಿಗೆ ಇವುಗಳ ಬಗ್ಗೆ ತುಂಬಾ ನಂಬಿಕೆಯಿದೆ. ನಾನಾ ದರೋ ಇವೆಲ್ಲಾ ಒಂದು ಗಾಳಿಗೋಪುರ ಎಂದು ಹೇಳಿ ಜನರಿಗೆ ಒಂದು ಅಂಜಿಕೆ ಹುಟ್ಟಿಸತಕ್ಕವನಲ್ಲ. ಆದರೆ ಹಾಗೆ ಭಾಷಣಮಾಡತಕ್ಕವರ ವಿಚಾರದಲ್ಲಿ ನಾವು ಎಚ್ಚೆತ್ತುಕೊಂಡು ಕೆಲಸಮಾಡಬೇಕಾಗಿರುತ್ತದೆಯೆಂದು ಹೇಳಬಹುದಾಗಿದೆ. ಇಂದು ನಾವು ಆರಂಭಿಸುವ ಯೋಜನೆಗಳು ಈಗೇನೋ ಕೆಲವರಿಗೆ ಅಷ್ಟು ತಾತ್ಸಾರವಾಗಿ ಕಾಣಬಹುದು. ಆದರೆ ಇವುಗಳೇ ಮುಂದೆ ದೊಡ್ಡ ಫಲದಾಯಕ ಯೋಜನೆಗಳಾಗಿ ನಿಲ್ಲತಕ್ಕವುಗಳು. ಆದಪ್ರಯುಕ್ತ ತಾವು ಇವುಗಳ ವಿಚಾರವಾಗಿ ಚಿಕ್ಕ ಚಿಕ್ಕ ಪುಸ್ತಕಗಳನ್ನು ಕನ್ನಡದಲ್ಲಿ ಮತ್ತು ಇಂಗ್ಲೀಷಿನಲ್ಲಿ ಅಚ್ಚು ಹಾಕಿಸಿ ನಾಡಿನ ಎಲ್ಲಾ ಜನರಿಗೂ ಇವುಗಳ ವಿಷಯ ಗೊತ್ತಾಗುವಂತೆ ಮಾಡಬೇಕು. ಆಗ ತಮಗೆ ತಾನೇ ತಾನಾಗಿ ತಮಗೆ ದುಡ್ಡಿನ ಸಹಾಯ ಬೇಕಾಗಿದ್ದರೂ ಕೂಡ ದೇಶದ ಜನರಿಂದಲೇ ಆಗುತ್ತದೆಯೆಂದು ಹೇಳಿ ನಾನು ಮತ್ತೊಂದು ಸಲ ಒಳ್ಳೆಯ ಯೋಜನೆಗಳನ್ನು ತಯಾರಿಸಿದಂಥ ಸಮಿತಿಯವರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*Janab **SYED ABDUR RAHMAN** (Chikmagalur *cum* Shimoga–Muslim).—Sir, there is a well-known expression that a nation which sees no visions is a nation which has no imagination and a nation that does nothing to make its vision a reality is a nation dead. This five-year plan which we have before this House for consideration deserves our careful consideration. It is very necessary that for the prosperity and well-being of the people of this country there must be some such plan. But any plan worth its name and to ultimately triumph requires the enthusiastic support of the people at large. Any plan which is made for the good of the country must first of all inspire the people that are to be benefited by it. I am glad that the Government of India have thought of this beautiful plan for 5 years so that the economic and other conditions of our people may be improved, and thus pave the way to their happiness and prosperity. But so far as this plan is applicable to our State of Mysore I wish to point out to this Hon'ble House that Mysore has already got a plan of its own for the prosperity of the people of Mysore. What we have been doing today is only walking in the footsteps of our predecessors who have done so much good for the State of Mysore by improving industries, commerce and agriculture. All honour to those who have already laid down the foundations for the prosperity and the development of the Mysore State. That plan is already there. Even before this five year plan came into existence, those who are in the Cabinet have already been inspired by the idea of these schemes which are already being executed today. What I mean to say is this is not the first time in the history of Mysore that we are thinking of a plan. The plan is there and Mysore's prosperity has already been well planned. A reference was made by the Hon'ble the Finance Minister that so many postwar schemes which were thought of had already been executed and, some are held up for want of sufficient finance. The point is that for any plan to be made workable finance is the most important thing. The Hon'ble Finance Minister in his statement before this House, has pointed out the sources from which these expenses of 36 crores will be met. I would like to know whether in the few years to come these 36 crores of rupees will be found.

Some 8 crores of rupees are to come from the Government of India and the rest 26 crores have to be found from our State itself by way of loans, by way of increased assessment, by way of this and that. Because, if finances are not forthcoming, no plan will succeed in any country. Any plan if it is to be acceptable, if it is to be made workable, if it is really workable, the people must be inspired and should know whether for all the monies that they have so far spent they have reaped corresponding benefits. They must be satisfied with the fruits of their labours. There must be some encouragement after seeing the results of the money they had spent previously. There will be then more and more encouragement and enthusiasm. My Hon'ble friend Sri D. H. Chandrasekharaiya referred to the progress made by the Western countries. What is the atmosphere in the Western countries? For example Russia. They had planned for a five-year or a ten year. But for the support of the people, but for the fact that the nation was at the back of the plan, nothing could have been achieved. Russia knows no divisions at the back of it. There are no parties amongst it. The entire nation is at the back of it. That particular country has the fullest support for any scheme that is put forward and that is counted to be in the best interests of the people. It is taken up on a national basis and in a national spirit. That is why Russia has been successful. It is because of the fact that whatever comes, comes in the name of the State and nothing comes by the name of the parties or groups, all their plans are backed up by the nation as a whole. It is the national support that is the secret of success there. What is it in India? Nobody will challenge this plan. It is with the best of intentions that the plan is put forward. Nobody can challenge the good object with which the scheme is planned. It is ultimately going to benefit the country, as we all know. Rupees 1,760 crores of rupees are required by the Government of India to implement the whole plan. Mysore requires 36 crores. How is this money to be found? Due to practical statesmanship and the new set-up of the present day Government—the people's Government-they have got the fullest support of the people to the scheme. That is one thing on which the whole plan is based. People must get inspired. It is four years since the plan is placed before the people of this country for their consideration. What has been done so far? I am not prepared to go into these details. I am concerned with the well-being of Mysore and what has got to be done here. The three year plan is there. It has succeeded in certain directions and that goes to the credit of the Government. What is it that we essentially want? How can people be inspired to make this plan a success? What is required is food and clothing first. Then only people can be able to think of the rest of the things. It is only then they will get some strength and life to go on with the plan. Any number of plans will not take any shape and will not serve the purpose if the people are not enthusiastic about them, especially coming as it does now at the fag end of the year and on the eve of the general elections. But when the question of finance comes up for consideration then the entire plan will be unsettled.

It is stated in para 9 as follows:—

> "The programme for mobilizing internal resources contemplates increased income from land, estate duties, wider coverage and better administration of Sales-tax, economies in revenue expenditure and certain minor taxes on Entertainment, Motor Vehicles, etc."

There are the resources that are contemplated. May I take it that mobilising internal resources means increased assessment, increased taxes, increased burdens on the people of Mysore when they are already overburned with some of these taxes? There is a loan of 9 crores which has got to be paid from the revenue of the State ultimately. How will this inspire the people? So far as that aspect is concerned it does not inspire me particularly with hope. But it may be that your vision and farsightedness must have certainly encouraged you with these figures. I

(JANAB SYED ABDUR RAHAMAN)—

ask whether it would not be possible for us to get greater financial benefit from the Government of India instead of thinking of increased assessment in the State. That is one point for the consideration of the Hon'ble Minister for Finance. Integration of finances has made our position a little shaky and to depend upon our people in Mysore once again for these financial resources is certainly not encouraging and it damps our enthusiasm. With the limited resources, with the limited fields of income, has not a plan for the ordered progress of Mysore been laid? Has not Mysore been a model State in spite of the fact that it had only six or eight crores and then it went on increasing to eleven or twelve crores? Therefore my suggestion is that instead of depending too much upon our people for the success of your plan take as much as you can from the Centre because who have co-operated with the Centre to the maximum extent. Instead of getting only eight crores get eighteen crores of rupees or make it half and half at least.

The Hon'ble Sri H. C. DASAPPA.—I have said that for Bhadravati group of industries they are likely to give us another four crores and odd.

Janab SYED ABDUR RAHMAN.—So we can go on getting more and more like that. Let the Government of India meet at least half the expenditure. What is the position of other States and what is our position? Our position comparatively is much worse. Other States are getting more. Getting eight crores is not an achievement. Make it twenty crores. That will inspire the people with a certain amount of courage and enthusiasm Depending too much upon the people when they are passing through economic stringency will result in the plan failing in spite of your best efforts. In India, apart from one big party which is dominating and which has taken the hold of the people, there are so many other parties which are not helpful. In other countries for namesake there are two or three parties and they are interested in the national well being of the people. Here one party is opposed to the other. It wants that the best things that the Government put forward should fail. One party vies with the other. You should have the backing of the people if the plan has to succeed and you should have the fullest support of the entire people. Therefore, for that, the Government of India must find the financial resources. Out of 1,760 crores, 300 crores comes from outside.

The Hon'ble Sri H. C. DASAPPA.—Not out of that but in addition.

Janab SYED ABDUR RAHMAN.—So, 1,760 crores is not from outside help but met purely from the internal resources of the country. What is coming from outside is only 300 crores. Why should you depend upon outside help when you are depending upon 1,760 crores to be found from internal resources?

The Hon'ble Sri H. C. DASAPPA.—I think this is the time when I should intervene because they are harping on the fact that what we are now promised *viz.*, eight crores plus another four crores for Bhadravati group is not enough and that we should ask for more. Here is a communication from the Finance Minister, Government of India, to the Finance Minister, Government of Bombay dealing with an identical subject, as to what extent the State Governments have got to depend upon their resources and to what extent the Central Government come to their assistance. I think if I read this it will be helpful for the rest of the members who participate in the debate. This is dated 28th August 1951.

You would have by now seen the Planning Commission's letter No. PC(C) 26—51, dated the 5th August 1951, wherein it has been explained that the plan represents a two-fold programme—a programme of expenditure on development and a programme for raising the necessary resources. The Planning Commission have also stated that to the extent that resources definitely exist or can be found, the programme of development can be undertaken and that, subject to the resources assessed as being available, the various development schemes provided for in the State plans should be proceeded with keeping in mind the proposals made in the draft five-year plan. This seems to be the only practicable procedure for the implementation of the plan. You will doubtless appreciate that it is not possible for the Central Finance Ministry to make any commitments for a period of five years. The situation changes frequently and any Central assistance can only be decided upon from time

to time at the beginning of each year in the light of the facts then prevailing.

You have stated your difficulties regarding the full implementation of the plan in the current year. As you have yourself pointed out, the recommendations of the Planning Commission have laid down targets to be achieved with resources to be secured by the State Governments supplemented by some assistance from the Centre. If, therefore, the Bombay Government is unable to realise some part of the resources planned to be secured by them from the market, it does not seem correct to argue that the Central Government should make good the deficiency. I need not explain to you that, if money is short, it affects the Government of India as well. If the Bombay Government is unable to secure a loan of Rs. 5 crores from the market in the current year, the reason is to be sought in the market conditions and the necessity of spreading the money available to all the needy States equitably and the blame should not be thrown on the Central Government.

And therefore I think the Hon'ble Member would not be very correct in assuming that the Central Government will be able to render very much, much more than what is promised. In any case each State Government has to play its part fully in exploring all the resources in the State.

Janab SYED ABDUR RAHMAN.—I do not say that Mysore has not played its part. It has played its part very well. Therefore, it is all the more reasonable that it should ask for even more. That is my point. They have stated that in two or three years self-sufficiency would be reached in the production of foodgrains. If they had attained self-sufficiency by 1951, probably they would not have found the trouble in financing more money. They could have invested that money on these schemes. The Government of India also are not free from the financial difficulties. When they are spending a huge amount on defence, etc., it becomes very difficult for them to provide money for these plans also. But, money has to be found for the success of these schemes. Mysore has played its part very well and certainly must look forward to the Centre to get something more than what it has already got. That is all I wanted to say.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು (ಬೆಂಗಳೂರು ನಗರ).—ಅಧ್ಯಕ್ಷರೇ, ಈಗ ನಮ್ಮ ಮುಂದೆ ಸರ್ಕಾರದವರು ಈ ಪಂಚವಾರ್ಷಿಕ ಯೋಜನೆಯನ್ನು ಮಂಡಿಸಿರುವುದಕ್ಕಾಗಿ, ಮತ್ತು ಅದನ್ನು ಮಂಡಿಸುವಾಗ ಮಾನ್ಯ ಆರ್ಥಿಕ ಸಚಿವರು ಶ್ರಮವಹಿಸಿ ಕೊಟ್ಟ ವಿವರಣೆಗಳಿಗಾಗಿ ನಮ್ಮ ವಂದನೆಗಳನ್ನು ಸೂಚಿಸಬೇಕಾಗಿದೆ. ಅಂತೆಯೇ, ಈ ಯೋಜನೆಯನ್ನು ತಯಾರು ಮಾಡಿದ ನಮ್ಮ ಎಕನಾಮಿಕ್ ಪ್ಲಾನಿಂಗ್ ಕಮಿಷನರಾದ ಶ್ರೀ ಜೆ. ಬಿ. ಮಲ್ಲಾರಾಧ್ಯರವರಿಗೂ ನಮ್ಮ ವಂದನೆಗಳನ್ನು ಸಲ್ಲಿಸುವುದು ನಮ್ಮ ಕರ್ತವ್ಯ.

ನಮಗೆ ಗೊತ್ತಿರುವ ಹಾಗೆ ನಮ್ಮ ಮಾನ್ಯ ಮಂತ್ರಿಗಳಿಗೂ, ಮತ್ತಿತರ ಸದಸ್ಯರುಗಳಿಗೂ, ಈ ವಿಷಯದಲ್ಲಿ ಮಾತನಾಡಿದವರಿಗೂ ಕೂಡ ತಿಳಿದಿರುವಂತೆ ಹೀಗೆ ಯೋಜನೆಗಳನ್ನು ತಯಾರುಮಾಡಿ ಸಭೆಯ ಮುಂದಿಡುವುದು ಬಹಳ ಕಾಲದಿಂದಲೂ ನಡೆದುಕೊಂಡು ಬಂದಿದೆ. ಅವು ಯೋಜನೆಗಳನ್ನು ತಯಾರುಮಾಡುವುದರಲ್ಲಿ ನಿಪುಣರೆಂದು ಹೇಳಬಹುದು. ಜವಾಬ್ದಾರಿ ಸರ್ಕಾರ ಬರುವುದಕ್ಕೆ ಮುಂಚೆಯೂ ಬಂದಮೇಲೆಯೂ ಹೀಗೆ ಅನೇಕ ಯೋಜನೆಗಳನ್ನು ಮಾಡಿರುವುದು ಜನತೆಗೆ ಗೊತ್ತಿದೆ. ಅದೇ ರೀತಿ ಈಗಲೂ ಒಂದು ಮಾಡಿದ್ದಾರೆ.

ಈಗ ಇದರಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಷಯಗಳು ಈ ಕೆಲವು. ಮೊಟ್ಟಮೊದಲನೆಯದಾಗಿ, ಈ ಯೋಜನೆಯ ವಿಷಯವಾಗಿ ಮಾತನಾಡುತ್ತಾ, ಅವರು ಮುಂದಿನ ಐದು ವರ್ಷಗಳಲ್ಲಿ ನಮ್ಮ ಸಂಸ್ಥಾನದ ಆಯವ್ಯಯದ ಅಂದಾಜುಪಟ್ಟಿ ಯಾವರೀತಿ ಇರಬಹುದೆಂಬುದನ್ನು ಹೇಳಿದ್ದಾರೆ. 62 ಕೋಟಿ ರೂಪಾಯಿಗಳ ಹುಟ್ಟುವಳಿಯಿರುವುದೆಂದೂ 73 ಕೋಟಿಗಳಷ್ಟು ಖರ್ಚಿರುವುದೆಂದೂ ಅವರು ಹೇಳಿದ್ದಾರೆ. ಅಲ್ಲಿಗೆ 11 ಕೋಟಿ ರೂಪಾಯಿಗಳನ್ನು ಈ ಮುಂದಿನ 5 ವರ್ಷಗಳಲ್ಲಿ ಸರಿದೂಗಿಸುವ ಭಾರವನ್ನು ಹೊರಲೇಬೇಕಾಯಿತು. ಈ 11 ಕೋಟಿ ರೂಪಾಯಿಗಳನ್ನು ಸರಿತೂಗಿಸುವುದಲ್ಲದೆ 3 ಕೋಟಿ ರೂಪಾಯಿಗಳು ಉಳಿಯುತ್ತವೆಂದೂ ಮತ್ತೊಂದು ಕಡೆ ಹೇಳಿದ್ದಾರೆ. ಅಂದರೆ, ಯಾವ ಸರ್ಕಾರ ಬೇಕಾದರೂ ಬರಲಿ, ಅವರು ಈ 11 ಕೋಟಿ ರೂಪಾಯಿಗಳ ನಷ್ಟವನ್ನು ಸರಿಪಡಿಸಬೇಕಾದ್ದು ಅವರ ಪ್ರಥಮ ಕರ್ತವ್ಯ. ಅದನ್ನು ಯಾರೂ ತಪ್ಪಿಸುವ ಹಾಗಿಲ್ಲ. ಇದಲ್ಲದೆ ಅವರು ಮುಂದೆ ಹೇಳಿರುವುದೇನೆಂದರೆ 36 ಕೋಟಿ ರೂಪಾಯಿಗಳ ಒಂದು ಯೋಜನೆಗೆ ಹಣ ಒದಗಿಸಬೇಕು ಎಂದು. ಈ ಹಣವನ್ನು ಯಾವ ರೀತಿ ತೆಗೆದುಕೊಳ್ಳುವ ಯೋಜನೆ ಮಾಡಿದ್ದಾರೆಂದರೆ, 9 ಕೋಟಿ ರೂಪಾಯಿಗಳನ್ನು ಸಾರ್ವಜನಿಕರಿಂದ ಸಾಲ ತೆಗೆದುಕೊಳ್ಳುವುದು ಒಂದು. ಈ ಸಾಲ ತೆಗೆದುಕೊಳ್ಳುವುದರಲ್ಲಿ ಏನು ಕಷ್ಟವಿದೆ, ಏನು ಲೋಪ ದೋಷಗಳಿವೆಯೆಂಬುದನ್ನು ಶ್ರೀ ಸಿದ್ದಪ್ಪನವರು ನಿನ್ನೆ ದಿನ ಬಹಳ ಚೆನ್ನಾಗಿ ಹೇಳಿದ್ದಾರೆ. ಹಿಂದೆ ಸಾರ್ವಜನಿಕರ ಮುಂದೆ ಸಾಲ ಇಟ್ಟಾಗ ಸರ್ಕಾರದವರಿಗೆ 5 ಕೋಟಿಯಲ್ಲ, 10 ಕೋಟಿ ರೂಪಾಯಿಗಳಾದರೂ ಸಿಕ್ಕುತ್ತಿತ್ತು. ಈಗ $3\frac{1}{2}$ ಯಲ್ಲ 4% ಬಡ್ಡಿ ಕೊಟ್ಟರೂ ಹಣ ಸಿಕ್ಕುತ್ತಿಲ್ಲ. ದೇಶದಲ್ಲಿ ಜನರ ಜೀವನವೇ ಕಷ್ಟಸ್ಥಿತಿಗೆ ಬಂದು, ಜನರು ಜೀವನ ನಡೆಸುವುದೇ ದುರ್ಭರವಾಗಿದೆ. ಆದ್ದರಿಂದ ಸಾರ್ವಜನಿಕರಿಂದ ಮುಂದಿನ ಐದುವರ್ಷಗಳಲ್ಲಿ 9 ಕೋಟಿ ರೂಪಾಯಿಗಳ ಸಾಲ ಪಡೆಯಬಹುದೆಂದು ಯಾವ ಅಂಕಿಗಳ ಆಧಾರದಮೇಲೆ ನಿರ್ಧರಿಸಿದ್ದೀರಿ? ಹಾಗೆ ಬರೀ ನಿರೀಕ್ಷಣೆಯಾಗಿದ್ದರೆ, 9 ಕೋಟಿಯೇಕೆ, 20 ಕೋಟಿಯೆಂದೇಕೆ ಹೇಳಲಿಲ್ಲ? 20 ಕೋಟಿಗಳನ್ನೆತ್ತಿ 60 ಕೋಟಿಯ ಯೋಜನೆ ಮಾಡಬಹುದಾಗಿತ್ತಲ್ಲವೇ? ಅಲ್ಲದೆ ಶ್ರೀ ಸಿದ್ದಪ್ಪನವರು ಹೇಳಿದಂತೆ ಈಗಲೇ 51–52ನೆಯ ಸಾಲಿನಲ್ಲಿ ಈ 5 ವರ್ಷದ ಯೋಜನೆಗಾಗಿ ಸಾಲವನ್ನು ಪಡೆಯುವುದಕ್ಕೇಕೆ ಪ್ರಯತ್ನ ಮಾಡಲಿಲ್ಲ? ಮದ್ರಾಸಿನವರು, ಬೊಂಬಾಯಿನವರು, ಉತ್ತರ ಪ್ರದೇಶದವರು ಆಗಲೇ ಸಾಲವೆತ್ತಿ ಕೋಟ್ಯಂತರ ರೂಪಾಯಿಗಳನ್ನು ಮಾಡಿಕೊಳ್ಳಲಿಲ್ಲವೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು —ಪ್ರಯತ್ನ ಮಾಡಲಿಲ್ಲವೆಂದು ಹೇಗೆ ಹೇಳುತ್ತೀರಿ ?

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ರಿಸರ್ವ್ ಬ್ಯಾಂಕಿನವರು ತಮಗೆ ಅನುಮತಿ ಕೊಟ್ಟಿಲ್ಲ, ನೀವು ಪ್ರಯತ್ನಮಾಡಿಲ್ಲ. ಅವರೇಕೆ ಕೊಟ್ಟಿಲ್ಲ ಎಂದರೆ ನಿಮ್ಮ ಆರ್ಥಿಕ ಪರಿಸ್ಥಿತಿ ಸರಿಯಾಗಿಲ್ಲವೆಂದು ತಿಳಿದು ಅನುಮತಿ ಕೊಡುವುದಿಲ್ಲವೆಂದು ಹೇಳಿರಬಹುದು.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಶುದ್ಧ ಸುಳ್ಳು. ವಿಷಯಗಳನ್ನು ತಿಳಿದುಕೊಳ್ಳದೆ ಸದಸ್ಯರು ಹೀಗೆ ಬೇಜವ್ದಾರಿಯಾಗಿ ಹೇಳಿದರೆ ಹೇಗೆ ?

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ನಮ್ಮ ಆರ್ಥಿಕ ಪರಿಸ್ಥಿತಿ ನೋಡಿಕೊಂಡು ಕೊಟ್ಟಿಲ್ಲ! ಮತ್ತೇಕೆ ಹಾಗೆ ಹೇಳುತ್ತಾರೆ ?

The Hon'ble Sri H. C. DASAPPA.—Why do you not ascertain facts and speak ? It has grown into disease nowadays to speak about matters without ascertaining facts. You must ask questions and ascertain the facts and then speak about them.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಆಗಬಹುದು. ನೀವೇನು ಪ್ರಯತ್ನಮಾಡಿದ್ದೀರಿ ? ಪ್ರಯತ್ನ ಮಾಡಿದ್ದು ಸಫಲವಾಯಿತೇ ಇಲ್ಲವೇ ? ಮದ್ರಾಸಿನವರು ಬೊಂಬಾಯಿನವರು ಸಾರ್ವಜನಿಕರಿಂದ ಅಷ್ಟೊಂದು ಸಾಲ ತೆಗೆದುಕೊಂಡರೂ ನೀವೇಕೆ ತೆಗೆದುಕೊಳ್ಳಲಿಲ್ಲ ? ಎರಡು ಕೋಟಿ ರೂಪಾಯಿಗಳನ್ನಾದರೂ ಪಡೆಯಬೇಕಾಗಿತ್ತು ! ಅದೇ ಏ ಮಾಡಿಲ್ಲ. ಇದರಿಂದೇನು ಅರ್ಥವಾಗುತ್ತದೆಂದರೆ, ನೀವು ಈಗ ಹೇಳುವುದೆಲ್ಲಾ ವಾಸ್ತವವಾಗಿದೆಯೇ, ಸತ್ಯಾಂಶದಿಂದ ಕೂಡಿದೆಯೇ ಎಂಬ ಅನುಮಾನ ಉಂಟಾಗುತ್ತದೆ.

The Hon'ble Sri H. C. DASAPPA.—We have moved the matter and they say, 'next year your turn will come.' They cannot float loans in all the Sta'es in India. It would be folly to do it. It is because two States got, it does not mean that all the States could do it. It can be got only in certain markets like Bombay and Calcutta and so on.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಅಂತೂ ನನಗೆ ತೋಚಿದ್ದನ್ನು ಹೇಳುತ್ತಿದ್ದೇನೆ. ಏಕೆಂದರೆ ಇತರ ಪ್ರಾಂತಗಳವರು ಸಾಲಗಳನ್ನು ಪಡೆದು ತಮ್ಮ ಪಂಚವಾರ್ಷಿಕ ಯೋಜನೆಗಳನ್ನು ಕಾರ್ಯಗತ ಮಾಡಲು ಪ್ರಯತ್ನಮಾಡುತ್ತಿರುವಾಗ ನಮ್ಮ ಸರ್ಕಾರದವರು ಆರಾಮಾಗಿ ನಿದ್ದೆಮಾಡುತ್ತಿದ್ದಾರೆಂಬ ಭಾವನೆ ಜನರಲ್ಲಿ ಮೂಡಿದೆಯೇ ವಿನಾ ನಮ್ಮಲ್ಲಿಲ್ಲ.

ಎರಡನೆಯದಾಗಿ additional taxation ಎಂದು ಇಲ್ಲಿ ಹೇಳಿದ್ದಾರೆ. 8 ಕೋಟಿ—9 ಕೋಟಿಗಳವರೆಗೂ ಹೆಚ್ಚಿಗೆ ತೆರಿಗೆ ಹಾಕುವುದರಿಂದ ವಸೂಲಾಗುತ್ತದೆಂದು ಹೇಳಿದ್ದಾರೆ. ಹೀಗೆ 9 ಕೋಟಿ ರೂಪಾಯಿಗಳಷ್ಟು ತೆರಿಗೆ ಹೊರಿಸುವ ನೀತಿಯನ್ನು ಪ್ರತಿಯೊಬ್ಬರೂ ತೀವ್ರವಾಗಿ ಪ್ರತಿಭಟಿಸಬೇಕಾಗಿದೆ. ತೆರಿಗೆ ಹಾಕುವುದರಲ್ಲಿ ಒಂದು ನೀತಿಯಿರಬೇಕು. ಈಗಾಗಲೇ ಕಳೆದ 4 ವರ್ಷದಿಂದ ಪ್ರಜಾಸರ್ಕಾರ ಬಂದಮೇಲೆ ಯಾವಯಾವ ತೆರಿಗೆ ಜನರ ಮೇಲೆ ಹಾಕಿದ್ದೀರಿ ಎಂಬುದನ್ನು ಯೋಚನೆಮಾಡಿಕೊಂಡು, ಬಾಕಿ ಯಾವ ತೆರಿಗೆಗಳನ್ನು ಹಾಕಬಹುದೆಂಬುದನ್ನು ಒಂದು ನಿಘಂಟುಮಾಡಿಕೊಂಡು, ಈ 9 ಕೋಟಿ ತೆರಿಗೆಗಳಿಂದ ಬರುತ್ತದೆಂದು ಹೇಳಿದ್ದರೆ, ಅಥವಾ ಅಂಥ ಪಟ್ಟಿಯನ್ನು ತಮ್ಮ ಮನಸ್ಸಿಗೆ ತಂದುಕೊಂಡು ಈ ಲೆಜಿಸ್ಲೆಟಿವ್ ಅಸೆಂಬ್ಲಿ ಮುಂದಾದರೂ ಇಡಬಹುದಾಗಿತ್ತಲ್ಲವೇ ? ಹಾಗೆ ಇದ್ದುದೇ ಆದರೆ ಇದುವರೆಗೂ ಏಕೆ ಇಡಲಿಲ್ಲ ?

ಒಬ್ಬ ಸದಸ್ಯರು.—ಕಾಲಕ್ರಮದಲ್ಲಿ ಬರುತ್ತದೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಕಾಲಕ್ರಮದಲ್ಲಿ ಬರುವುದಲ್ಲ. ನಮ್ಮನ್ನು ನಂಬಿ ನಮ್ಮನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಹೇಗೆ ಈ 9 ಕೋಟಿ ಬರುತ್ತದೆಂದು ಹೇಳುವುದರಲ್ಲೇನೂ ಭಾದಕವಿರಲಿಲ್ಲ. ಕಂದಾಯವೇನಾದರೂ ಜಾಸ್ತಿಮಾಡಬೇಕೆಂದಿದ್ದೀರಾ; ಇಲ್ಲವೇ ಸೇಲ್ಸ್‌ಟ್ಯಾಕ್ಸ್ ಜಾಸ್ತಿಮಾಡುತ್ತೀರಾ; ಇಲ್ಲವೇ, ಹೊಸದಾಗಿ ಏನಾದರೂ ರಿಫಾರಮ್ಸ್ ತರುತ್ತೀರಾ; ಇಲ್ಲ death duty, Property tax ಇಂಥಾದ್ದೇನಾದರೂ ಇದೆಯೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇಲ್ಲೇ ನೋಡಿ ; ತಮಗೇ ಗೊತ್ತಾಗುತ್ತದೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ನೋಡಿದ್ದೇನೆ. ಯಾವುದೂ ಅಲ್ಲಿ ನಿರ್ದಿಷ್ಟವಾಗಿ ಹೇಳಿಲ್ಲ. ಇದರಲ್ಲಿ ಯಾವುದೂ ಸರಿಯಾಗಿಲ್ಲ. ಒಂದು ವೇಳೆ ಸರ್ಕಾರದವರ ತೆರಿಗೆ ಹಾಕುವ ನೀತಿ ಜನರಿಗೂ ಈ ಸಭೆಯ ಸದಸ್ಯರಿಗೂ ತಿಳಿಯಬಾರದೆಂದೇನಾದರೂ ಇದೆಯೇ ? ಹಾಗಿಲ್ಲದೆ ಭೂಕಂದಾಯ ನೀತಿಯು ಬಹಳ ಹಿಂದೆ ಮಾಡಿದುದು, ಅನೇಕ ಕಡೆ ಕಂದಾಯದ ದರ ಬಹಳ ಕಡಿಮೆ ಇದೆ, ಇದರಿಂದ ಇದನ್ನು ಬದಲಾವಣೆ ಮಾಡುತ್ತೇವೆ, ನಾಲ್ಕಾಣೆಯಿಂದ ಎಂಟಾಣೆಗೆ ಜಾಸ್ತಿ ಮಾಡುತ್ತೇವೆ ಎನ್ನುವುದಾದರೆ, ಅದನ್ನೂ ತಿಳಿಸಿ ನಮ್ಮ ಅಭಿಪ್ರಾಯವನ್ನು ಕೇಳಬಹುದಾಗಿತ್ತು.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕಂದಾಯವನ್ನು ಹೆಚ್ಚುಮಾಡಬೇಕಾಗಿತ್ತೆಂದು ನಿಮ್ಮ ಅಭಿಪ್ರಾಯವೆ ?

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಅದು ಬೇರೆ ವಿಷಯ.

ಒಂದು ವಿಷಯ ಹೇಳುತ್ತೇನೆ. ಅವರ ಕಿವಿಗಳಿಗೆ ಇಂಪಾದ ವಿಷಯಗಳನ್ನು ಹೇಳಿದರೆ ಅದನ್ನು ಕೇಳುವಾಗ ನಮ್ಮ ಮಂತ್ರಿಗಳ ಮುಖಗಳು ಅರಳುತ್ತವೆ, ಅದೇ ಅವರಿಗೆ ಬೇಡದೇ ಇರುವ ವಿಷಯ ಹೇಳಿದರೆ ಅವರಿಗೆ ಕೋಪ. ನಮ್ಮ ಕೋಲಾರ ಡಿಸ್ಟ್ರಿಕ್ಟಿನ ವಿಷಯದಲ್ಲಿ ಶ್ರೀ ಚೆಂಗಲರಾಯರೆಡ್ಡಿಯವರು ಹಿಂದೆ ಅನೇಕ ಸಾರಿ ಭೂಕಂದಾಯವನ್ನು ಕಡಿಮೆಮಾಡಿ ಎಂದು ಹೊಡೆದಾಡುತ್ತಿದ್ದರು. ಆದರೆ ಸಂಸ್ಥಾನದಲ್ಲಿ ಅನೇಕ ವರ್ಷಗಳ ಹಿಂದೆ ಭೂಕಂದಾಯ 1 ಕೋಟಿ 25 ಲಕ್ಷ ರೂಪಾಯಿ ಬರುತ್ತಿದ್ದು ಈಗಲೂ ಅದೇ ರೀತಿ ಇದೆ. ನೀರಾವರಿಗೆ ಎಷ್ಟೋ ಖರ್ಚುಮಾಡಿದ್ದರೂ ಕೂಡ ಭೂಕಂದಾಯ ಜಾಸ್ತಿಯಾಗದೇ ಇರಲು ಕಾರಣ ವೇನೆಂದು ಯೋಚನೆಮಾಡಿದ್ದಾರೆಯೆ ? Estate duties, Graded tax, property tax, tax on commercial crop ಇಂತಹ ಯಾವುದಾದರೂ ತೆರಿಗೆಗಳನ್ನು ಹಾಕಿ ಸಂಸ್ಥಾನದ ವರಮಾನ ಹೆಚ್ಚಿಸುವ ವಿಷಯವನ್ನು ನಮ್ಮ ಮುಂದಿಟ್ಟಿದ್ದಾರೆಯೆ ? ಬೇರೆ ನಾನಾ ವಿಧವಾದ ತೆರಿಗೆಗಳನ್ನು ಹಾಕಿದ್ದಾರೆ. ಆದರೆ ಅವುಗಳಿಂದ ನಮ್ಮ ಜನರಿಗೆ ಮತ್ತೂ ಹೆಚ್ಚು ತೊಂದರೆಯಾಗಿದೆಯೇ ಹೊರತು ಅನುಕೂಲವಾಗಿಲ್ಲ. ಜನರಿಗೆ

ಸರ್ಕಾರ ಒಂದು ಶೂಲವಾಗಿದೆ. ಮುನಿಸಿಪಾಲಟಿ ಒಂದು ಶೂಲವಾಗಿದೆ. ಜನರಿಗೆ ಹಳ್ಳಿಗಳ ಕಡೆ ಒಂದು ಕಷ್ಟ, ಪಟ್ಟಣಗಳಲ್ಲಿ ಇನ್ನೂ ಹೆಚ್ಚಾದ ಕಷ್ಟ. ಈಚೆಗೆ ಸೇಲ್ಸ್ ಟ್ಯಾಕ್ಸ್ ಹಾಕಿದ್ದಾರೆ. ಬಡವನ ಕೊಳ್ಳತಕ್ಕ ವಿೀಳೆಯದೆಲೆ, ತೆಂಗಿನಕಾಯಿನ ಮೇಲೂ ತೆರಿಗೆ! ಸ್ವಾಮಿ ಹಳ್ಳಿಗಳ ಕಡೆ ರೈತರಲ್ಲಿ ಹೋದರೆ, ನಮ್ಮ ಮಂತ್ರಿಗಳನ್ನು ದೇವಸ್ಥಾನದಲ್ಲಿ ನಿಲ್ಲಿಸಿ ಆ ಮೇಲೆ ದೇವರಿಗೆ ತೆಂಗಿನಕಾಯಿ ಒಡೆಯಬೇಕೆಂದು ಹೇಳುತ್ತಿದ್ದಾರೆ. ತೆಂಗಿನಕಾಯಿಗೂ ಸೇಲ್ಸ್ ಟ್ಯಾಕ್ಸ್ ತೆಗೆದುಕೊಳ್ಳುತ್ತಾರೆಂದು ಹೇಳುತ್ತಿದ್ದಾರೆ. ಹೀಗಿರುವಾಗ ಇನ್ನು ಐದು ವರ್ಷಗಳಲ್ಲಿ ಇನ್ನೂ 4 ಕೋಟಿ ರೂಪಾಯಿ ತೆರಿಗೆಯಿಂದ ಪಡೆಯುತ್ತೇವೆಂದು ಹೇಳಿ ನಮ್ಮ ಮುಂದೆ ಇಂತಹ ಯೋಜನೆಯನ್ನು ತಂದಿದ್ದಾರೆ. ಇದಕ್ಕೆ ನಮ್ಮ ಸಹಾಯಬೇಕು; ಸಮ್ಮತಿ ಬೇಕು; ರಚನಾತ್ಮಕ ಟೀಕೆ ಬೇಕು ಎಂದು ಹೇಳುತ್ತಾರೆ ನಾವು ಹೇಗೆ ಮಾಡುವುದು?

ಶ್ರೀ ಎಂ. ವಿ. ಕೃಷ್ಣಪ್ಪನವರು.—ಸೋಷಿಯಲಿಸ್ಟರು ಅಧಿಕಾರಕ್ಕೆ ಬಂದರೆ ತಲೆಗಂದಾಯ ಹಾಕುತ್ತಾರೆ?

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.– ಮುಂದೆ ಕಾದು ನೋಡಿ ಗೊತ್ತಾಗುತ್ತದೆ.

ಈ ಯೋಜನೆಗಳಿಗೆ ಇಂಡಿಯಾ ಸರ್ಕಾರದವರು 8 ಕೋಟಿ ರೂಪಾಯಿ ಸಹಾಯ ಕೊಡುತ್ತಾರೆಂದು ಹೇಳಿದರು. ಭದ್ರಾವತಿ ಒಂದಕ್ಕೇ ನಾಲ್ಕು ಕೋಟಿ ಚಿಲ್ಲರೆ ರೂಪಾಯಿ ಬೇಕಾಗುತ್ತದೆ. ಇದಲ್ಲದೆ ಇನ್ನು ಕೆಲವು ದೊಡ್ಡ ದೊಡ್ಡ ಪ್ರಾಜೆಕ್ಟುಗಳಿಗೂ ಅಲ್ಲಿಂದಲೇ ಧನಸಹಾಯಪಡೆಯಬೇಕೆಂದು ತಿಳಿಸಿದ್ದಾರೆ. ಅಂದರೆ, ಇಂಡಿಯಾ ಸರ್ಕಾರದವರು ಕೋಟ್ಯಾಂತರ ರೂಪಾಯಿ ನಮಗೆ ಕೊಡಬೇಕಾಗುತ್ತದೆ. ಇಷ್ಟನ್ನು ಅವರು ಎಲ್ಲಿಂದ ತಂದು ಕೊಡುತ್ತಾರೆ? ಮಾನ್ಯ ಮಂತ್ರಿಗಳು ಕಾಗದದಲ್ಲಿ ಬರೆದಿರುವುದನ್ನೇನೋ ಓದಿದರು. ಆದರೆ ಕೇಂದ್ರ ಸರ್ಕಾರದವರಿಗೆ ಹೊರ ದೇಶಗಳಿಂದ ಹಣ ಬಂದರೆ ಕೊಡುತ್ತಾರೆ. ಅವರಿಗೆ ಇಂಗ್ಲೆಂಡು ಅಮೆರಿಕಾ ದೇಶಗಳಿಂದ ಬರಬಹುದಾದ ಹಣ ಬಾರದಿದ್ದರೆ ಅವರು ಹೇಗೆ ಕೊಡುವುದು? 8 ಕೋಟಿ ರೂಪಾಯಿ ಕೊಡುತ್ತಾರೆಂದು ಯಾವ ಆಧಾರದ ಮೇಲೆ ಹೇಳಿದರು?

The Hon'ble Sri H. C. DASAPPA.—This is a Planning Commission on which the Hon'ble Finance Minister of the Government of India presides.

ಶ್ರೀ ಎಂ. ಎಲ್. ನಂಜರಾಜ ಅರಸಿನವರು.—ಅವರು ಅಧಿಕಾರಕ್ಕೆ ಬಂದರೆ ಎಲ್ಲಿಂದ ಹಣ ತರುತ್ತಾರೆ?

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.— ಅದು ನಮಗ ಗೊತ್ತಿದೆ, ನಿಮ್ಮಿಂದ ಕಲಿಯಬೇಕಾಗಿಲ್ಲ. 36 ಕೋಟಿ ರೂಪಾಯಿಗಳ ಯೋಜನೆಯನ್ನು ತಯಾರುಮಾಡಿ ಇದಕ್ಕೆ ಬೇಕಾದ ಹಣಕ್ಕೆ ಸಾಲ ಪಡೆಯುತ್ತೇವೆ, ಸುಂಕ ಹಾಕುತ್ತೇವೆ, ಎಂದು ಹೇಳುತ್ತಾರೆ. ಈಗ ನಮ್ಮ ಮುಂದೆ ತಯಾರಿಸಲ್ಪಟ್ಟಿರುವ ಯೋಜನೆಗಳನ್ನು, ನಾವೆಲ್ಲರೂ ಒಪ್ಪಿದರೆ ಮುಂದೆ ಯಾವ ಸರ್ಕಾರ ಬಂದರೂ ಅದು ಇದರ ಜೊತೆಗೆ ಬೇಕಾಗುವ ಹತ್ತು ಕೋಟಿ ರೂಪಾಯಿಗಳನ್ನು ಸೇರಿಸಿ ಈ ಸರ್ಕಾರ ಪ್ರಾರಂಭಮಾಡಿರುವ ಕೆಲಸ ಕಾರ್ಯಗಳನ್ನು ಪೂರ್ಣಮಾಡಬೇಕೆಂದು ಹೇಳಿದರು. ಇದು ನ್ಯಾಯ, ಈ ವಿಷಯವನ್ನು ಒಪ್ಪಬೇಕು. ಇದರಿಂದ ನನಗೇನು ತೋರುತ್ತದೆಂದರೆ, ಈ ಯೋಜನೆಗಳನ್ನು ಕಾರ್ಯಗತಮಾಡಬೇಕಾದರೆ ದಕ್ಷರಾದ ಮಂತ್ರಿಗಳು ಬಂದರೆ ಇದು ಸಾಧ್ಯವಾಗುತ್ತದೆ. ಆದರೆ ಇಷ್ಟು ದೂರದೃಷ್ಟಿಯುಳ್ಳ, ವಿಶಾಲವಾದ ಯೋಜನೆಗಳನ್ನು ಕಾರ್ಯಗತ ಮಾಡುತ್ತೇವೆಂದು ನಂಬಿಕೊಂಡು ಯಾವ ಸರ್ಕಾರವು ಮುಂದೆ ಬರುವುದಕ್ಕಾಗುವುದಿಲ್ಲ.

ಶ್ರೀ ಎಂ. ಎಲ್. ನಂಜರಾಜ ಅರಸಿನವರು.—ನೀವು ಬಂದರೆ ಆಗುತ್ತದೆ.

ಶ್ರೀ ಎಲ್. ಸಿದ್ದಪ್ಪನವರು.—ಅದಕ್ಕೇ ಅವರು (ಹಣಕಾಸಿನ ಸಚಿವರು) ಪಾರ್ಲಿಮೆಂಟಿಗೆ ಹೊರಟು ಹೋಗೋಣವೆಂದು ಮಾಡಿರುವುದು.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ಅವರು.—ಆದುದರಿಂದ ಇದು ಕಾರ್ಯಗತವಾಗಲು ಇನ್ನೈದು ವರ್ಷ ಸಾರ್ವತ್ರಿಕ ಚುನಾವಣೆಯೇ ಬೇಡವೆಂದು ಹೇಳಿ, ಈ ಸರ್ಕಾರವೇ ಇರುವಂತೆ ಮಾಡಿಕೊಂಡು ಇವರೇ ಕಾರ್ಯಗತಮಾಡುವಂತೆ ಏರ್ಪಾಡು ಮಾಡಿದರೆ ಒಳ್ಳೆಯದೆಂದು ಕಾಣುತ್ತದೆ! ಶ್ರೀ ನಾಗ ಸಿದ್ದಪ್ಪನವರು ಹೇಳಿದಹಾಗೆ ಇದೊಂದು ಗಾಳಿಗೋಪುರ ಅಥವ ಮರಳುಮನೆಯಲ್ಲಿ ವಾಸಮಾಡಬೇಕೆಂದು ಪ್ರಯತ್ನಪಟ್ಟಿರುವ ಹಾಗಿದೆ. ಈ ಪ್ರಯತ್ನಬೇಡ, ಇದು ಸಾಧ್ಯವಲ್ಲದ್ದು.

ಸುಂಕದ ಸುರಿಮಳೆಯಿಂದ ಜನರಿಂದ ಹಣಪಡೆಯುತ್ತೇವೆಂದು ಹೇಳುತ್ತಾರೆ. ಸಾಲ ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ. ಸಾಲ ತೆಗೆದುಕೊಂಡರೆ ಅದಕ್ಕೆ ಸುಮಾರು ಒಂದು ಕೋಟಿ ರೂಪಾಯಿ ಬಡ್ಡಿ ಕೊಡಬೇಕು. ಇದಕ್ಕೆ ಎಲ್ಲಿ provision ಮಾಡಿದ್ದಾರೆ? ಹೀಗೆ ಮಾಡಿದರೆ ನೋಡಿದವರು ಏನು ಹೇಳುತ್ತಾರೆಂಬ ಯೋಚನೆ ಬೇಡವೆ? ಇದರಿಂದ ಕೊಡಬೇಕಾದ ಬಡ್ಡಿಗೆ ನಿಜವಾಗಿ ಏನು ಏರ್ಪಾಡುಮಾಡಿದ್ದಾರೆ? ಮುಂದಿನ ಐದು ವರ್ಷಗಳಲ್ಲಿ ಇಷ್ಟು ಹಣವನ್ನು ಎಲ್ಲಿ ತರುತ್ತಾರೆ?

ಸೋಷಿಯಲ್ ಸರ್ವಿಸ್‌ಗೆ ಸಂಬಂಧಪಟ್ಟ ಕಾರ್ಯಗಳನ್ನು ಮಾಡುತ್ತೇವೆ, ದೇಶದ ಹಿತದೃಷ್ಟಿಯಿಂದ ಎಂದು ಹೇಳಿದರು. ಸಾರ್ವಜನಿಕ ಹಣದಿಂದ ಇದನ್ನು ಮಾಡುತ್ತಾರೆಯೆ? ಎಷ್ಟೋ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತೇವೆಂದು ಹೇಳಿದರು. ಇವೆಲ್ಲವನ್ನೂ ಸಾಲವನ್ನೆತ್ತಿ, ಹೊಸ ಸುಂಕಗಳನ್ನು ಹಾಕಿ ಇದರಿಂದ ಬರುವ ಹಣದಿಂದ ಮಾಡುವುದಕ್ಕಾಗುತ್ತದೆಯೆ? ಯಾವ ಸರ್ಕಾರವೇ ಆಗಲಿ ಸಾಮಾನ್ಯವಾಗಿ ರೆವಿನ್ಯೂ ಬಾಬಿನಲ್ಲಿ ಬರುವ ಹಣವನ್ನು ಸಾಮಾನ್ಯವಾಗಿ ಮಾಡಲೇಬೇಕಾದ ಕೆಲಸಗಳಿಗೆ ಉಪಯೋಗಿಸಿ ಉಳಿದ ಹಣದಲ್ಲಿ ಇದಕ್ಕೆಲ್ಲಾ ಖರ್ಚುಮಾಡಬೇಕು. ಇದನ್ನು ಬಿಟ್ಟು ಸಾಲವನ್ನು ತೆಗೆದುಕೊಂಡು ಅದಕ್ಕೆ ಕೊಡಬೇಕಾದ ಬಡ್ಡಿಯನ್ನೂ ಗಮನಿಸದೆ ಅದನ್ನು ಇಲ್ಲಿ ಒದಗಿಸದೆ ಆ ಹಣದಿಂದ ಇದೆಲ್ಲವನ್ನೂ ಮಾಡುತ್ತೇವೆಂದರೆ ಅದನ್ನು ನಂಬಬಹುದೇ?

Mr. DEPUTY-SPEAKER.—Instead of criticising, the Hon'ble Member may give some constructive suggestions.

ಶ್ರೀ ಎಂ. ವಿ. ಕೃಷ್ಣಪ್ಪನವರು.—ನಮ್ಮ ಸ್ನೇಹಿತರು ಇದು ಬಡ್ಜೆಟ್ ಎಂದು ತಿಳಿದುಕೊಂಡು ಮಾತನಾಡುತ್ತಿದ್ದಾರೆ, ಇದು ಬಡ್ಜೆಟ್ ಅಲ್ಲ. ಐದು ವರ್ಷದ ಯೋಜನೆ.

Sri K. R. SREEKANTESWAR.—I can only argue. I cannot put intelligence into you. I have made it very clear that this is only a Budget, not a plan.

ಇದೊಂದು ಯೋಜನೆಯೆಂದು ಹೇಳುತ್ತಾರೆ. ಇದು practical ಆಗಿದೆಯೇ ಇಲ್ಲವೇ ಎಂಬುದನ್ನು ನೋಡಬೇಕು. ಮುಂದಿನ ಸರ್ಕಾರ ಇದನ್ನು ಕಾರ್ಯಗತ

(SRI K. R. SREEKANTESWAR.)

ಮಾಡಬೇಕೆಂದು ಹೇಳಿದರು. ಇದು ಎಷ್ಟುಮಟ್ಟಿಗೆ ಸಾಧ್ಯವೆಂಬುದನ್ನು ಪರಿಶೀಲಿಸಬೇಕು. ಸರ್ ಎಂ. ವಿಶ್ವೇಶ್ವರಯ್ಯನವರು ಇಪ್ಪತ್ತು ಮೂವತ್ತು ವರ್ಷಗಳ ಹಿಂದೆ ಎಕನಾಮಿಕ ಕಾನ್ಫರೆನ್ಸ್ ಪ್ರಾರಂಭಮಾಡಿದರು. ಅದನ್ನು ಸರಿಯಾಗಿ ಕಾನೂನುಮಾಡಿ ನಡಸಬೇಕೆಂದು ಹೇಳುತ್ತಿದ್ದೇನೆ. ನಮ್ಮ ಮಾನ್ಯಮಂತ್ರಿಗಳು ಬಂದ ಮೇಲೆ ಈ ಎಕನಾಮಿಕ್ ಕಾನ್ಫರೆನ್ಸ್ ವಿಷಯದಲ್ಲಿ ಸರಿಯಾದ ಕಾನೂನು ಮಾಡಿಲ್ಲ. ಕಾನ್ಫರೆನ್ಸೇನೋ ಆಗುತ್ತಿದೆ. ಅದರಿಂದ ಆಗಬಹುದಾದ ಕೆಲಸ ಆಗುತ್ತಿಲ್ಲ. ಅದೇ ನಮ್ಮ ಮಂತ್ರಿಗಳಿಗೆ ಮನಸ್ಸು ಬಂದರೆ ಅಂತಹ ಕೆಲಸಗಳನ್ನು ತಕ್ಷಣಮಾಡುತ್ತಾರೆ. ಅವರು ಎಲ್ಲಾದರೂ ಪ್ರವಾಸ ಹೋದಾಗ ಅಲ್ಲಿಗೆ ಒಂದು ಆಸ್ಪತ್ರೆಬೇಕೆಂದು ಕೇಳಿ ಇವರಿಗೆ ಮಾನಸ್ಸು ಬಂದರೆ ಅದನ್ನು ತಕ್ಷಣ ಕೊಡುತ್ತಾರೆ......

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆಸ್ಪತ್ರೆಗಳನ್ನು ಕೊಡುವುದು ತಪ್ಪೆ?

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಹಾಗಲ್ಲ ಅವರ ಮನಸಿಗೆ ಬಂದ ಕೆಲಸ ಬೇಗ ಮಾಡುತ್ತಾರೆಂಬುದಕ್ಕೆ ಉದಾಹರಣೆ ಹೇಳಿದೆ, ಅಷ್ಟೆ.

Mr. DEPUTY-SPEAKER.—Give some constructive suggestion.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಇಂತಹ ಯೋಜನೆಗಳನ್ನು ಮಾಡಬೇಕಾದರೆ ದಕ್ಷರಾದ ಅಧಿಕಾರಿಗಳು ಬೇಕು, ಅದಕೆ ತಕ್ಕಂತಹ ಖಾಸಗಿ ಜನರನ್ನೂ ಸೇರಿಸಿ ಒಂದು ಬೋರ್ಡ್ ಎಂದು ಮಾಡಿ ಆ ಬೋರ್ಡಿನವರು ತಿಂಗಳು ತಿಂಗಳಿಗೆ ವರದಿಗಳನ್ನು ಕಳುಹಿಸುವಂತೆ ಏರ್ಪಾಡುಮಾಡಬೇಕು. ಅವರು ಎಷ್ಟೆಷ್ಟು ಹಣಖರ್ಚು ಮಾಡುತ್ತಾರೆ, ಏನೇನು ಕೆಲಸಮಾಡುತ್ತಾರೆಂದು ತಿಳಿಸಬೇಕು. ಆಸ್ಪತ್ರೆ ಕೇಳಿದರೆ ಅದನ್ನು ಕೊಟ್ಟರೆ ತಪ್ಪೆ ಎಂದು ಸಚಿವರು ಕೇಳಿದರು. ಕೊಡಿ, ಬೇಡವೆಂದು ಹೇಳುವುದಿಲ್ಲ. ಇಷ್ಟು ಹಣ ಖರ್ಚುಮಾಡಲು ಇಷ್ಟು ದೊಡ್ಡ ಯೋಜನೆಯನ್ನು ತಂದಿರುವಾಗ ಇದನ್ನು ಎಕನಾಮಿಕ್ ಕಾನ್ಫರೆನ್ಸ್ ಮುಂದೆ ಅಥವ ಒಂದು ಸ್ಪೆಷಲ್ ಬೋರ್ಡಿನ ಮುಂದೆ ಇಟ್ಟು ಚರ್ಚೆಮಾಡಿದರೆ? ಸಾಬೂನು ಕಾರ್ಖಾನೆಯ ಸಂಬಂಧವಾಗಿ 18 ಲಕ್ಷ ರೂಪಾಯಿ ಖರ್ಚಿನಿಂದ ಆ ಕಾರ್ಖಾನೆಯನ್ನು ಉತ್ತಮಪಡಿಸುವುದಕ್ಕೆ ಒಂದು ಯೋಜನೆಯನ್ನು ತಯಾರು ಮಾಡಿಕೊಟ್ಟಿದ್ದಾರೆ. ಅದನ್ನು ಏಕೆ ಕಾರ್ಯಗತಮಾಡಲಿಲ್ಲ? ರಾಜಕೀಯದಲ್ಲಿ ತಾವೆಲ್ಲ ಪಂಡಿತರು, ನಿಜ. ಒಪ್ಪುತ್ತೇನೆ. ನಮ್ಮ ಸಮಾನ ಯಾರೂ ಇಲ್ಲ ಎಂಬ ಭಾವನೆಯಿಂದ ನಮ್ಮ ಮಾತನ್ನು ಕೇಳಲಿಲ್ಲ.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನಾವು ಇವರಲ್ಲಿ ಹೀಗೆ ಯಾವಾಗಲಾದರೂ ಹೇಳಿದ್ದೇವೆಯೆ?

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಹೇಳಬೇಕಾಗಿಲ್ಲ, ನಿಮ್ಮ ಆಡಳಿತವನ್ನು ನೋಡಿ ಹೀಗೆ ತಿಳಿದುಕೊಳ್ಳಬೇಕಾಗುತ್ತದೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ತಾವು ಬಹಳ modesty ತೋರಿಸುತ್ತಿದ್ದೀರಿ, ತಮ್ಮ ಮೇಲ್ ಪಂಕ್ತಿಯನ್ನೇ ಇತರರೂ ಅನುಮೋದಿಸಿದರೆ ಒಳ್ಳೆಯದು.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಇದನ್ನು ತಾವು ತಕ್ಷಣ ಬಂದೋಬಸ್ತು ಮಾಡಬೇಕು. ಆದರೆ ತಾವು ಈ ಬಗ್ಗೆ ಹಾಗೆ.........

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು. ತಾವು ಒಬ್ಬರು ಮಾತ್ರ ಬಹಳ Mo esty ತೋರಿಸುತ್ತಿದ್ದೀರಿ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಈ ದಿವಸ ನಿಮ್ಮ ಇಷ್ಟು ಆತುರ ಆತುರದಿಂದ ನಿರ್ವಹಿಸಬೇಕೆಂದು ಹೊರಟಿರತಕ್ಕ ನಾನಾ ಯೋಜನೆಗಳ ಒಗ್ಗೆ ಈ ದಿವಸ ಒಪ್ಪಿಕೊಂಡಾಗ್ಯೂ ಸಹ ಮುಂದೆ ಬರತಕ್ಕ ಸರ್ಕಾರ ಈ ಜವಾಬ್ದಾರಿಗಳನ್ನೆಲ್ಲಾ ಹೊತ್ತಾಗೂ ಅದರ ಮೇಲೆ ಮತ್ತೆ ಬೇರೆ 11 ಕೋಟಿ ರೂಪಾಯಿಗಳ ಸಾಲ ಬೇರೆ ಹೇರುತ್ತೀರಿ ಅನ್ನುವಾಗ ಆ ಸರ್ಕಾರ ಇದನ್ನೆಲ್ಲಾ ಮುಂದುವರಿಸುತ್ತದೆಂದು ನಂಬುವುದಕ್ಕಾಗುವುದಿಲ್ಲ. ನಿಮ್ಮಲ್ಲ ತಕ 3 ಕೋಟಿ ರೂಪಾಯಿಗಳಲ್ಲಿ ಇಷ್ಟೆಲ್ಲಾ ಕೆಲಸ ಕಾರ್ಯಗಳನ್ನು ಮಾಡುತ್ತೇವೆಂದು ಹೇಳಿರತಕ್ಕದು ಕೇವಲ ಗಾಳೀ ಗೋಪುರ ಒಂದೇ ಅಲ್ಲ, ಇದೊಂದು ಮರಳಿನ ಮನೆ ಎಂದು ಹೇಳಬಹುದು.

ದೇಶದಲ್ಲಿ ಮೊದಲು ಯಾವುದರ ಅವಶ್ಯಕತೆ ಹೆಚ್ಚಾಗಿದೆ, ಯಾವುದು ಅತ್ಯಗತ್ಯವಾದ ವಿಷಯವೆಂದು ನೋಡುವುದಾದರೆ ಇಂದು ನಾವು ಮೊದಲ ಗಮನ ಕೊಡಬೇಕಾದ ವಿಷಯ ನಮ್ಮ ಆಹಾರದ ಸಮಸ್ಯೆ ಎಂದು ನಾನು ಹೇಳುತ್ತೇನೆ. ಈ ಆಹಾರದ ಬಗ್ಗೆ ತಮ್ಮ ನೀತಿ ಏನು, ಇದರ ಬಗ್ಗೆ ತಾವು ಕೈಗೊಂಡಿರತಕ್ಕ ಕಾರ್ಯಕ್ರಮಗಳೇನು ಎಂಬುದನ್ನು ನೋಡುವುದಾದ ಕೊಪ್ಪಾ ತಾಲ್ಲೂಕಿನಲ್ಲಿ 25 ಸಾವಿರ ಬತ್ತ ಬರುವಂಥ ನೀರಾವರಿ ಜಮೀನನ್ನು ಯಾರೋ ಒಬ್ಬ ಕಾಫಿಪ್ಲಾಂಟರಿಗೆ ಕೊಟ್ಟುಬಿಟ್ಟಿರಿ. ಈಗ ಅತನಿಂದ ಬತ್ತವೂ ಇಲ್ಲ ಮತ್ತು ಅತನ ಕಾಫಿ ತೋಟದಲ್ಲಿ ಕೆಲಸ ಮಾಡತಕ್ಕ ಜನರಿಗಲ್ಲಾ ನೀವು ಆಹಾರ ಒದಗಿಸಬೇಕಾದ ಪ್ರಸಂಗ ಬಂತು. ಆದರೆ ಹಾಗೆ ಯಾರು ಹೆಚ್ಚು ಜನರನ್ನು ಕೂಲಿಗಾಗಿ ಇಟ್ಟುಕೊಂಡಿರುತ್ತಾರೋ ಅವರಿಗೆ ಕೂಲಿ ಬಗ್ಗೆ ದುಡ್ಡು ಕೊಡುವುದರ ಬದಲಾಗಿ ಧಾನ್ಯ ಕೊಡತಕ್ಕದ್ದು ಆ ಯಜಮಾನನ ಕರ್ತವ್ಯ. ಈಗ ತಾವು... ......

ಮಾನ್ಯ ಶ್ರೀ ಎಚ್ ಸಿದ್ದಯ್ಯನವರು.—ಇದು ಒಂದು ಹೊಸ ವಿಷಯವೋ?

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಎಂಥಾ ವಿಚಾರಗಳನ್ನು ಬೇಕಾದರೂ ಹೇಳುತ್ತೇನೆ. ಆದರೆ ಹಿಂದೆ ನೀವು...... ...

Mr. DEPUTY-SPEAKER.—The Hon'ble Member has got only ten minutes. He may give concrete suggestions.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—Yes. ನಿಮ್ಮ ಆಹಾರ ನೀತಿಯ ಬಗ್ಗೆ ನಾನು ಏನು ಹೇಳುತ್ತಿದ್ದೇನೆಂದರೆ—ನಮ್ಮ ಸಂಸ್ಥಾನದಲ್ಲಿ ರೈತರು ಮತ್ತೂ ಜನಗಳು ಯಾರ್ಯಾರು ನೂರಾರು ರೂಪಾಯಿಗಳ ತೆರಿಗೆ ಕೊಡುತ್ತಿದ್ದಾರೋ ಅಂಥವರು ಬೇಕಾದಷ್ಟು ಇರಿದ್ದಾರೆ, ಅಂತಹವರಿಗೆ ಜಮೀನನ್ನು ಕೊಟ್ಟು ಅದನ್ನು ಆಬಾದಿಗೆ ತಂದು ಹೆಚ್ಚು ಬೆಳೆ ಬೆಳೆಯುವಂತೆ ಮಾಡಬೇಕು. ಹೀಗೆ ದೊಡ್ಡ ದೊಡ್ಡ ಆದಾಯ ತೆರಿಗೆ ಕೊಡತಕ್ಕಂಥವರಿಗೆ ಜಮೀನು ಕೊಟ್ಟರೆ ಆಗ ಅವರು ಅದರಲ್ಲಿ ತಕ್ಷಣ ಆರಂಭ ನಡೆಸಿ ದವಸ ಧಾನ್ಯ ಬೆಳೆಯಲು ಸಾಧ್ಯವಾಗುತ್ತೆ. ಇನ್ನು ಉಳಿದ ಜಮೀನುಗಳನ್ನು ತಾವು ಬಾಕಿ ವ್ಯವಸಾಯ ಮಾಡತಕ್ಕ ಜನರಿಗೆ ಕೊಡಬಹುದು. ಆದರೆ ಹೀಗೆ ಮಾಡದೆ ಭೂಮಿ ವ್ಯವಸಾಯ ಮಾಡಲು ತಿಳಿಯದವರಿಗೆ ಕೊಡುವುದರಿಂದ ನಿಮ್ಮ ಆಹಾರದ ಕೊರತೆ ನೀಗಲು

ಎಂದಿಗೂ ಸಾಧ್ಯವಾಗುವುದಿಲ್ಲ. ಇದರ ಜೊತೆಗೆ ನೀವು ದುರಸ್ತು ಮಾಡಬೇಕಾದ ಕೆರೆಗಳು ನಮ್ಮ ಸಂಸ್ಥಾನದಲ್ಲಿ ಇನ್ನೂ 25 ಸಾವಿರಕ್ಕೆ ಮೇಲಿರುತ್ತವೆ. ಆಹಾರದ ವಿಷಯದಲ್ಲಿ ಸಿಟಿ ಮತ್ತು ಟೌನ್ ಜನಗಳ ಪೈಕಿ ಯಾರು ಯಾರು ಪ್ರೊಫೆಷನಲ್ ತೆರಿಗೆಯನ್ನು ತೆರುತ್ತಿದ್ದಾರೋ ಅವರೆಲ್ಲರಿಗೂ ಬಲಾತ್ಕಾರದಿಂದ ಜಮೀನು ವ್ಯವಸಾಯ ಮಾಡುವಂತೆ ಮಾಡಬೇಕು. ಅವರು ಹಾಗೆ ಬೆಳಸಿದ್ದರಲ್ಲಿ ಅವರಿಗೆ ಆಗುವಷ್ಟನ್ನು ಅವರು ಇಟ್ಟುಕೊಂಡು ಉಳಿದಿದ್ದನ್ನು ಸರ್ಕಾರಕ್ಕೆ ಕೊಡುವಂತೆ ಮಾಡತಕ್ಕದ್ದು ನಿಮ್ಮ ಮೊದಲನೆಯ ಕರ್ತವ್ಯ. ಹೀಗೆಲ್ಲಾ ಭೂಮಿಯನ್ನು ಕೊಡಲು ವಿಲೇವಾರಿ ಮಾಡಿಬಿಟ್ಟನಂತರ ಉಳಿದಿದ್ದನ್ನು ಇತರರಿಗೆ ಬೇರೆ ಬೇರೆ ದವಸ ಧಾನ್ಯಗಳನ್ನು ಬೆಳೆಯಲು ಕೊಡತಕ್ಕದ್ದು ಒಂದು ಒಳ್ಳೆಯ ನೀತಿ ಯಾಗಿರುತ್ತೆ.

ನಮ್ಮ ಮಾನ್ಯ ಆರ್ಥಿಕ ಸಚಿವರ ಮಾವಂದಿರಾದ ದಿವಂಗತ ಶ್ರೀ ಕೆ. ಎಚ್. ರಾಮಯ್ಯನವರು ಬರೆದಿದ್ದ ಒಂದು ಲೇಖನದಲ್ಲಿ ನಮ್ಮ ಸಂಸ್ಥಾನದ ಉತ್ಪತ್ತಿಯಲ್ಲಿ ಭಂಗಾರವನ್ನು ಹೊರಗಡೆಯವರಿಗೆ ಕೊಟ್ಟು ನಾವು ಕಬ್ಬಿಣವನ್ನು ಪಡೆದುಕೊಂಡಿದ್ದೇವೆ ಎಂದು ಒಂದು ವಿಚಾರ ಹೇಳಿದ್ದಾರೆ. ಆದರೆ ನಮ್ಮಲ್ಲಿ ವಿದ್ಯುಚ್ಛಕ್ತಿ ಹೇರಳವಾಗಿದೆ. ಪುಟ 6ರಲ್ಲಿ ನಮೂದಿಸಿದ್ದೀರಿ.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅವರ ಮಾವಂದಿರು ಆ ಒಂದು ವಾಕ್ಯವನ್ನು ಮಾತ್ರ ಹೇಳಿದ್ದಾರೋ ಅಥವಾ ಮುಂದಕ್ಕೆ ಇನ್ನೂ ಏನನ್ನಾದರೂ ಹೇಳಿದ್ದಾರೋ ?

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಈ ಪುಸ್ತಕದ 6ನೇ ಪುಟದಲ್ಲಿ ವಿದ್ಯುಚ್ಛಕ್ತಿಯ ವಿಚಾರವನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಸಚಿವರು ಇದರ ಬಗ್ಗೆ ಒಳ್ಳೆಯ ವಿಷಯಗಳನ್ನೊತ್ತಿ ಸಿದ್ದಾರೆ. ವಿದ್ಯುತ್ ಇಲಾಖೆಯನ್ನು ಶ್ಲಾಘನೆ ಮಾಡಿದ್ದಾರೆ. Execute ಮಾಡಬೇಕಾದ ಅನೇಕ ಯೋಜನೆಗಳನ್ನು ಮಾಡಿದ್ದೀರಿ. ಆದರೆ ಇವುಗಳಿಂದ ನಮಗೆ ಸಾಕಷ್ಟು ಪ್ರತಿಫಲ ಬರಬೇಕಾಗಿದ್ದರೆ ಮಾತ್ರ, ಅವುಗಳಿಂದ ನಮಗೆ ಜಾಗ್ರತೆ ಉತ್ಪತ್ತಿ ಬರಬೇಕಾಗಿದ್ದರೆ ನಮಗೆ ಕೇಂದ್ರ ಸರ್ಕಾರದವರು ಧನಸಹಾಯ ನೀಡಲೇಬೇಕು. ಅವರು ಕೊಡುತ್ತಾರೆ, ನಮ್ಮ ದೇಶ ಅದರಿಂದ ಉದ್ಧಾರವಾಗುತ್ತದೆಂದು ತಾವು ಹೇಳುತ್ತಿದ್ದೀರಿ. ಆದರೆ ಅದಕ್ಕಿಂತ ಮುಂಚಿತವಾಗಿ ನೀವು ಮಾಡಬೇಕಾದದ್ದು ನಮ್ಮ ದೇಶದಲ್ಲಿ ಬ್ಲಾಕ್ ಮಾರ್ಕೆಟ್ಟಿನಲ್ಲಿ ಕಬ್ಬಿಣ ಮಾರಾಟವಾಗುತ್ತಿರುವುದನ್ನು ತಪ್ಪಿಸಿ ವ್ಯವಸಾಯಗಾರರಿಗೆ ಉತ್ಪತ್ತಿ ಹೆಚ್ಚಿಸಲು ಸಹಾಯವಾಗತಕ್ಕಂಥ ನೀತಿಯನ್ನು ಮೊದಲು ತಾವು ಉತ್ತೇಜನಪಡಿಸಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಈ 2-3ನೆಯ ಐಟಂನಲ್ಲಿ ತಾವು ಕೆಲವು ಅಭಿವೃದ್ಧಿಯ ಕೆಲಸಗಳನ್ನು ಮಾಡಲು ಕೈಗೊಂಡು ಅವುಗಳನ್ನು ನಡೆಸುತ್ತಿದ್ದೀರಿ. ಅವುಗಳು ಪಶುವೈದ್ಯದ ಬಾಬಿಗೆ ಸಂಬಂಧಪಟ್ಟವುಗಳು. ಈ ಬಾಬಿನಿಂದ ನಮ್ಮ ದೇಶದ ಅಭಿವೃದ್ಧಿ ಬೇಗ ಉತ್ತಮಗೊಳ್ಳಬಹುದು ದೇಶಾಭಿವೃದ್ಧಿಗೆ ಇದು ಬಹಳ ಮುಖ್ಯವಾದದ್ದು.

ಆದರೆ ಇನ್ನು ಸಹಕಾರದ ವಿಚಾರದಲ್ಲಿ ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರು ಬಹಳ ಚೆನ್ನಾಗಿ ಹೇಳಿದ್ದಾರೆ. ಅವರು ಸಹಕಾರ ಬಾಬಿಗೆ ಒದಗಿಸಿರುವ ಒಂದು ಲಕ್ಷ ಚಿಲ್ಲರೆ ಮೊಬಲಗು ಬಹಳ ಕಮ್ಮಿಯಾಯಿತೆಂದು ತಿಳಿಸಿದರು. ಆದರೆ ಎಂದು ಕಾಂಗ್ರೆಸ್ಸು ಅಧಿಕಾರವನ್ನು ವಹಿಸಿಕೊಂಡಿತೋ ಅಂದಿನಿಂದಲೂ ಯಾವ ಪುಸ್ತಕಗಳಲ್ಲಿ ನೋಡಿದರೂ ಬರಿ ಈ ಸಹಕಾರದ ಮಾತೇ ಆಗಿರುತ್ತೆ. ಈ ಬಾಬಿಗೆ ದೊಡ್ಡ ದೊಡ್ಡ ಅಧಿಕಾರಿಗಳನ್ನು ನೇಮಿಸಿದ್ದಾರೆ. ಇದರ ಬಗ್ಗೆ ಬೇಕಾದಷ್ಟು ಹಣವನ್ನು ಖರ್ಚು ಮಾಡಿದ್ದಾರೆ. ಆದರೆ ನಮ್ಮ ದೇಶದ ಜನರಿಗೆ ಕೋ-ಆಪರೇಷನ್ ಎಂದರೇನು ಎಂಬುದೇ ತಿಳಿಯದು. ಅದನ್ನು ತಿಳಿದು ನಡೆಯುತಕ್ಕಂಥ ಜನರೇ ಇಲ್ಲ. ಏತಕ್ಕೆಂದರೆ ಜನರು ಅಷ್ಟು ವಿದ್ಯಾವಂತರಾಗಿಲ್ಲ. ಅದ್ದರಿಂದ ಜನರನ್ನು ವಿದ್ಯಾವಂತರನ್ನಾಗಿ ಮಾಡಲು ತಾವು ಎಷ್ಟು ದುಡ್ಡನ್ನು ಖರ್ಚು ಮಾಡಿದರೂ ಚಿಂತೆಯಿಲ್ಲ. ಹಾಗೆ ಮಾಡಿದರೆ ಪುನಃ ಆ ದುಡ್ಡು ನಮಗೆ ಹಿಂದಕ್ಕೆ ಬಂದೇ ಬರುತ್ತದೆ. ಇದರ ಬಗ್ಗೆ ತಮ್ಮ ಸಹಕಾರ ಸಾಲದು.

ಮಾನ್ಯ ಶ್ರೀ ಎಚ್ ಸಿ ದಾಸಪ್ಪನವರು.—ಈ ಬಗ್ಗೆ ಸರ್ಕಾರ ಕೊಡುವುದಕ್ಕೆ ಸಹಕಾರ ಅನ್ನಿಸಿಕೊಳ್ಳುವುದಿಲ್ಲ, ಸಹಾಯ ಅನ್ನಿಸಿಕೊಳ್ಳುತ್ತದೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ನನಗೆ ಕೊಂಚಕಾಲ ಮಾತನಾಡಲು ಅವಕಾಶ ಕೊಡಿ. ಎಲ್ಲಾ ವಿಷಯಗಳನ್ನು ತಿಳಿಸುತ್ತೇನೆ. ಈ ಸಹಕಾರ ಸಂಘಗಳು ಬೆಳೆದು ಅಭಿವೃದ್ಧಿಗೆ ಬರಬೇಕಾದರೆ ಜನರೂ ವಿದ್ಯಾವಂತರಾಗಬೇಕು. ಆದದರಿಂದ ಜನರಿಗೆ ಹೆಚ್ಚು ವಿದ್ಯಾಭ್ಯಾಸದ ಅಗತ್ಯವಿದೆ. ಆದರೆ ತಾವೀಗ ಸಭೆಯ ಮುಂದೆ ಇಟ್ಟಿರತಕ್ಕ ಯೋಜನೆಗಳಲ್ಲಿ ಕೆಲವೇನೋ ಉತ್ತಮವಾದವುಗಳಾಗಿವೆ. ಆದರೆ ಇನ್ನುಳಿದವುಗಳೆಲ್ಲಾ ಒಂದು ದೊಡ್ಡ ಕಥೆಯನ್ನು ಬರೆದ ಹಾಗೆ ಬರೆದಿದ್ದಾರೆ. ಬಹಳ ಚಾಕಚಕ್ಯತೆಯಿಂದ ಬರೆದಿದ್ದಾರೆ. ಇವೆಲ್ಲಾ ಒಂದು ದೊಡ್ಡ ಕಥೆಯ ಮಾದರಿಯಲ್ಲಿವೆ. ಇವುಗಳ ಬಗ್ಗೆ ಮುಂದಿನ ಸರ್ಕಾರ ಎಷ್ಟರ ಮಟ್ಟಿನ ಜವಾಬ್ದಾರಿ ವಹಿಸುತ್ತದೆಂಬುದನ್ನು ನಾವು ಹೇಳುವುದಕ್ಕಾಗುವುದಿಲ್ಲ. ಅಥವಾ ಅದ ಜವಾಬ್ದಾರಿ ವಹಿಸಿಯೇ ತೀರುತ್ತದೆಂದು ಹೇಳಲು ನಾವು ತಯಾರಾಗಿಲ್ಲ. ಆದುದರಿಂದ ನಾವು ಇದನ್ನು ಹೆಚ್ಚು ಹೇಳಬೇಕಾದ ಅವಶ್ಯಕತೆಯಿಲ್ಲ. ಇವುಗಳನ್ನೆಲ್ಲಾ ತಾವು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

Mr. DEPUTY-SPEAKER.—The House will now adjourn and meet at 1 P.M. on Monday.

The Assembly adjourned at One of the Clock to meet again at One of the Clock on Monday the 12th November 1951.

WD 1046—GPB—500—7-5-52.

LEGISLATIVE ASSEMBLY.

SEVENTEENTH DAY.

Monday, 12th November 1951.

The Legislative Assembly met in the Assembly Hall, Old Public Offices, Bangalore, at Seven Minutes past One of the Clock.

Mr. Speaker (The Hon'ble Sri V. Venkatappa) in the Chair.

QUESTIONS AND ANSWERS.

MR. SPEAKER (The Hon'ble Sri V. Venkatappa).—Questions in the Eleventh set relating to the Hon'ble Chief Minister will be taken up now.

Entertainment of Congress Leaders for the A.I.C.C. Session.

Q.—176. SRI K. R. SREEKANTESWAR (Bangalore City—General).—

Will the Government be pleased to state :—

(*a*) the expenses incurred by them for entertaining the Congress leaders who had come here for the A.I.C.C. Session ;

(*b*) the quantity of foodgrains allotted for the A.I.C.C. Session ;

(*c*) the basis on which the same was allotted ;

(*d*) whether it is not a fact that more than five or six times the number of delegates were fed daily during the Session ;

(*e*) whether they impressed upon the A.I.C.C. authorities the necessity for strict economy in regard to food ;

(*f*) if so, whether they are satisfied with the response from them ?

A.—THE HON'BLE SRI K. CHENGALARAYA REDDY (Chief Minister).—

(*a*) Rs. 21,304-12-9.

(*b*) (1) 50 bags of rice of 90 seers each.

(2) 26 bags of wheat of 85 seers each.

(3) 10 bags of sugar of 224 lbs. per bag.

(4) 3 bags of fine sojee of 196 lbs. per bag each.

(*c*) The above quantities for which coupons were issued in advance were in respect of 2,500 persons expected to come to Bangalore and stay for 5-6 days from 12th to 16th or 17th July 1951, subject to the following conditions :—

(1) pre-payment for purchase,

(2) limitation of use to the overall 12 ozs. per head per day,

(3) maintenance of accounts of persons actually catered to and quantities used from day to day, and

(4) surrender of the surplus quantity, if any, at the end of the Session.

(*d*) No such thing has come to notice.

(*e*) Yes.

(*f*) Yes ; as is clear from the fact that against the quantities permitted to be purchased on coupons as in answer to question (*b*) above, the quantities actually purchased were much less as noted below :

(1) 30 bags of rice,

(2) 20 bags of wheat,

(3) 10 bags of sugar,

(4) 3 bags of fine sojee,

and even out of this, the following quantities were returned to the Department of Food Supplies at the close of the Session as not used :

(1) 763 1/7 seers of rice.

(2) 871¾ seers of wheat.

(3) 315 lbs of sojee.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಅಧಿವೇಶನಕ್ಕಾಗಿ ಬೆಂಗಳೂರಿಗೆ ಬಂದಿದ್ದ ಕಾಂಗ್ರೆಸ್ ಮುಖಂಡರುಗಳ ಸತ್ಕಾರಕ್ಕಾಗಿ ಸರ್ಕಾರದವರು ವಿಧಿಸಿದ್ದ ವೆಚ್ಚ ರೂ. 21,304—12—9 ಎಂದು ಹೇಳಿದೆ. ಇದನ್ನು ಯಾವ ಬಡ್ಜೆಟ್ ಬಾಬಿನಿಂದ ಖರ್ಚುಮಾಡುತ್ತೀರಿ ?

*The Hon'ble Sri K. CHENGALARAYA REDDY.—Under 'General Administration—Entertainment of Guests.'

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಈ ಖರ್ಚಿಗೆ ಶಾಸನಸಭೆಯ ಅಂಗೀಕಾರ ಪಡೆಯಬೇಕಾದದ್ದು ಸರ್ಕಾರದ ಕರ್ತವ್ಯವಲ್ಲವೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ರಿಅಪ್ರೊಪ್ರಿಯೇಷನ್ ಆದರೆ ಶಾಸನಸಭೆಯ ಮುಂದೆ ಬರಬೇಕಾಗಿಲ್ಲ. ಅಡಿಷನಲ್ ಗ್ರ್ಯಾಂಟ್ ಆದರೆ ಬರಬೇಕು.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಎ. ಐ. ಸಿ. ಸಿ ಅಧಿವೇಶನಕ್ಕಾಗಿ ಮುಖಂಡರು ಎರಡು ಲಕ್ಷ ಚಿಲ್ಲರೆ ಹಣ ವಸೂಲುಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

The Hon'ble Sri K. CHENGALARAYA REDDY.—That does not arise out of this.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಈ ರೂ 21,304—12—9 ಸತ್ಕಾರ ಕೂಟಕ್ಕೆ ಮಾತ್ರ ಖರ್ಚುಮಾಡಲಾಗಿದೆಯೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಸತ್ಕಾರಕೂಟಕ್ಕೆ ಮಾತ್ರ ಅಲ್ಲ. ಮುಖ್ಯವಾಗಿ ಕೇಂದ್ರ ಸರ್ಕಾರದ ಮಂತ್ರಿಗಳು ಬಂದರೆ ಅವರನ್ನು ಸಂಸ್ಥಾನದವರು ಸತ್ಕರಿಸುವುದು ವಾಡಿಕೆಯಾಗಿದೆ. ಆ ಪ್ರಕಾರ ಅವರನ್ನು ಅತಿಥಿಗಳೆಂದು ಭಾವಿಸಿದ್ದೇವೆಯೇ ಹೊರತು ಕಾಂಗ್ರೆಸ್ ಅಧಿವೇಶನಕ್ಕೆ ಸಂಬಂಧಪಟ್ಟವರೆಂದು ಭಾವಿಸಿಲ್ಲ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಅವರು ಬಂದಿದ್ದುದು ಎ. ಐ. ಸಿ. ಸಿ. ಅಧಿವೇಶನಕ್ಕಲ್ಲವೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅವರು ಮುಖ್ಯವಾಗಿ ಆ ಅಧಿವೇಶನಕ್ಕಾಗಿ ಬಂದಿದ್ದರೂ, ಅದರ ಜೊತೆಗೆ ಸರ್ಕಾರಿ ಕೆಲಸದ ನಿಮಿತ್ತ ಬಂದುದೂ ಮಾನ್ಯ ಸಭೆಯ ಅವಗಾಹನೆಗೆ ಬಂದಿರುತ್ತದೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಎ. ಐ. ಸಿ. ಸಿ. ಅಧಿವೇಶನಕ್ಕಾಗಿ ಒಂದು ಎರಡು ದಿವಸ ಇದ್ದು ಹೋದುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಈ ಸಂಬಂಧವಾಗಿ ಬಂದಿದ್ದರು.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಹಾಗೆ ಆ ಸಂಬಂಧವಾಗಿ ಬಂದಿದ್ದ ಭಾಗದಲ್ಲಿ ಸರ್ಕಾರದವರು ಏಕೆ ಖರ್ಚುಮಾಡಬೇಕಾಗಿತ್ತು?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಆಗಲೇ ಹೇಳಿದೆ. ಕೇಂದ್ರ ಸರ್ಕಾರದ ಮಂತ್ರಿಗಳು ಬಂದರೆ ಅವರನ್ನು ಸರ್ಕಾರದ ಅತಿಥಿಗಳಾಗಿ ಭಾವಿಸುವುದು ವಾಡಿಕೆ. ಅದರ ಪ್ರಕಾರ ಮಾಡಲಾಗಿದೆ. ಆದರೆ ರಾಜಕೀಯ ಸಮ್ಮೇಳನದ ಸಂಬಂಧವಾಗಿ ಬಂದಾಗ ಅವರನ್ನು ಯಾವರೀತಿ ಪರಿಗಣಿಸಬೇಕು ಎಂಬುದು ಮುಂದೆ ಯೋಚನೆಮಾಡಬೇಕಾದ ವಿಷಯ. ಎಲ್ಲಾ ವಿಚಾರಗಳನ್ನೂ ನೋಡಿದರೆ ಕೆಲವರು ಒಪ್ಪಬಹುದು, ಮತ್ತೆ ಕೆಲವರು ಒಪ್ಪದಿರಬಹುದು, ಇದನ್ನೆಲ್ಲಾ ಕಾಲಕ್ರಮೇಣ ಇತ್ಯರ್ಥಮಾಡಬೇಕಾಗಿದೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—(d) ಪ್ರಶ್ನೆಯಲ್ಲಿ 'ಅಧಿವೇಶನದ ಕಾಲದಲ್ಲಿ ಡೆಲಿಗೇಟುಗಳ ಸಂಖ್ಯೆಯು ಐದಾರರಷ್ಟಕ್ಕಿಂತಲೂ ಹೆಚ್ಚುಮಂದಿ ಜನರಿಗೆ ಊಟವನ್ನು ಒದಗಿಸುತ್ತಿದ್ದುದು ನಿಜವಲ್ಲವೆ' ಎಂದು ಕೇಳಿರುವುದಕ್ಕೆ 'ಅಂಥ ಯಾವ ಪ್ರಸಂಗವಾಗಲಿ ಸರ್ಕಾರದವರ ಗಮನಕ್ಕೆ ಬಂದಿಲ್ಲ' ಎಂದು ಉತ್ತರ ಹೇಳಿದೆ. ಆದರೆ ಬಂದವರು ಎಷ್ಟು ಜನ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನೋಟೀಸ್. ಸರ್ಕಾರಕ್ಕೆ ಗೊತ್ತಿಲ್ಲ. ಎ. ಐ. ಸಿ. ಸಿ ಅಧಿವೇಶನದ ಸಮಿತಿಯವರು ಬಂದವರಿಗೆ ಏರ್ಪಾಡು ಮಾಡಬೇಕೆಂದು ಕೇಳಿದಾಗ್ಗೆ ಎಷ್ಟು ಅವಶ್ಯಕವಾಗುತ್ತದೆಂದು ಸಲಹೆ ಪಡೆದು ಅದರ ಪ್ರಕಾರ ರೇಷನ್ ಕೊಟ್ಟಿದ್ದೆವು. ಅದರಲ್ಲೂ ಉಪಯೋಗಿಸಿದಮೇಲೆ ಉಳಿದುದನ್ನು ವಾಪಸುಮಾಡಿರುವುದು ಪ್ರಶ್ನೆಗೆ ಒದಗಿಸಿರುವ ಉತ್ತರದಿಂದಲೇ ವೇದ್ಯವಾಗುತ್ತದೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಅವರು ಎಷ್ಟು ಸಂಖ್ಯೆ ಕೊಟ್ಟಿದ್ದರು ಎಂಬುದನ್ನು ತಿಳಿಸುತ್ತೀರಾ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಉತ್ತರದಲ್ಲಿ ಕೊಟ್ಟಿದೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—2,500 ಜನ ಅಂತ ಹೇಳಿದ್ದೀರಿ. ಆದರೆ 234 ಜನ ಮಾತ್ರ ಬಂದಿದ್ದರು ಎಂಬುದನ್ನು ವಿಚಾರಿಸಿದ್ದೀರಾ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅಷ್ಟು ಜನ ಡೆಲಿಗೇಟ್ಸ್ ಇರಬಹುದು. ಸಂಸ್ಥಾನದ ಇತರ ಕಡೆಗಳಿಂದ ಬರತಕ್ಕ ಕಾಂಗ್ರೆಸ್ ಕೆಲಸಗಾರರ ಸಂಖ್ಯೆಯೂ ಆ 2,500ರಲ್ಲಿ ಅಡಕವಾಗಿದೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಎಷ್ಟು ಖರ್ಚಾಯಿತು ಎಂಬುದನ್ನು ತಿಳಿದುಕೊಳ್ಳುವುದಕ್ಕೆ ತಮ್ಮ ಕಡೆ ಅಧಿಕಾರಿಗಳನ್ನಿಟ್ಟು ಮೇಲ್ವಿಚಾರಣೆ ನಡೆಸಿದಿರಾ?

ಇನ್ನೊಂದು ದೊಡ್ಡ ಕೊರತೆಯೇನೆಂದರೆ, ನಮ್ಮ ಜನಗಳಲ್ಲಿರುವ ಆರ್ಥಿಕ ಅಸಮಾನತೆ ಕೆಲವರು ಮಹದೈಶ್ವರ್ಯದಲ್ಲಿ ತೇಲಾಡುತ್ತಿರುವುದೂ, ಇನ್ನು ಕೆಲವರು ಕೇವಲ ನಿಕೃಷ್ಟ ಸ್ಥಿತಿಯಲ್ಲಿರುವುದೂ ಕಂಡ ಬರುತ್ತಿದೆ. ಹೀಗಿರುವಾಗ ರಾಷ್ಟ್ರದಲ್ಲಿ ಯಾವ ಯೋಜನೆಯ ಮೂಲಕ ಈ ಅಸಮಾನತೆಯನ್ನು ಹೋಗಲಾಡಿಸಬೇಕು; ಯಾವ ರೀತಿ ನಮ್ಮ ಸಮಾಜನಿರ್ಮಾಣ ಕಾರ್ಯಕ್ಕೆ, ಸಮಾಜದಲ್ಲಿನ ಹಣಕಾಸಿನ ಸವ್ಯವಸ್ಥೆಗೆ ಅವಕಾಶಮಾಡಬೇಕು ಇದೊಂದು ಕಠಿಣವಾದ ಸಮಸ್ಯೆಯಾಗಿದೆ. ಅದ್ದರಿಂದ ಈಗೇನು ಯೋಜನೆ ಮಾಡುತ್ತಿದೆಯೋ ಅದರ ಮೂಲಕ ಆದಷ್ಟು ಬೇಗನೆ ಸಮಾಜದಲ್ಲಿನ ಅಸಮಾನತೆಯ ಪರಿಣಾಮದಿಂದ ಒಬ್ಬರಿಗೊಬ್ಬರಿಗಿರುವ ಅಂತರ ಹೆಚ್ಚು ವಿಶಾಲವಾಗಿರುವುದನ್ನು ಕಡಿಮೆಮಾಡುವುದಕ್ಕೆ ನಮ್ಮ ಜನ ತಕ್ಕ ಕಾರ್ಯಸಾಧನೆಯನ್ನು ಮಾಡಬೇಕಾದ್ದು ಅಗತ್ಯ. ಈಗ ನಮ್ಮ ಮುಂದಿರುವ ಯೋಜನೆ ಎಷ್ಟೇ ಒಳ್ಳೆಯದಾಗಿರಲಿ, ಎಷ್ಟೇ ಪ್ರಯೋಜನಕಾರಿಯಾಗಿರಲಿ ಎಲ್ಲಿಯವರೆಗೆ ನಮ್ಮ ಜನ ಈ ಯೋಜನೆಯನ್ನು ನಾವು ಕಾರ್ಯಗತ ಮಾಡಬೇಕು, ನಾವು ಬಾಳಬೇಕು, ನಾವು ಮುಂದೆ ಸುಖವಾಗಿರಬೇಕು, ನಮ್ಮ ರಾಷ್ಟ್ರದೊಡನೆ ಸಹಕರಿಸಬೇಕು ಎಂಬ ದೃಢ ಮನೋವೃತ್ತಿಯುಳ್ಳವರಾಗಿರುವುದಿಲ್ಲವೋ, ಎಲ್ಲಿಯವರೆಗೆ ಅವರ ದೃಷ್ಟಿಕೋಣ ಬದಲಾಗುವುದಿಲ್ಲವೋ ಅಲ್ಲಿಯ ವರೆಗೆ ನಮಗೆ ಗತ್ಯಂತರವಿಲ್ಲ; ಎಷ್ಟು ಹಣ ಖರ್ಚುಮಾಡಿದರೂ ಅದು ನಿಷ್ಫಲವೆಂದೇ ನನ್ನ ಭಾವನೆ. ಮಹಾತ್ಮ ಗಾಂಧಿಯವರು ಏನು ಹೇಳಿದರೆಂಬುದು ಎಲ್ಲರಿಗೂ ಗೊತ್ತಿದೆ. ಎಲ್ಲಿಯವರೆಗೆ ಜನ ತಮ್ಮವರನ್ನು ಮಾತ್ರ ನೋಡಿಕೊಂಡು, ಎಲ್ಲರ ಸುಖದಲ್ಲಿ ತನ್ನ ಸುಖವೂ ಅಡಗಿದೆ, ಎಲ್ಲರೂ ಸುಖವಾಗಿ ಬಾಳಿದರೆ ತನಗೂ ಸುಖ ಬರುತ್ತದೆಂಬ ಮನೋಭಾವವನ್ನು ತಾಳುವುದಿಲ್ಲವೋ ಅಲ್ಲಿಯವರೆಗೆ ಪ್ರಗತಿ ಸಾಧನೆಯಾಗುವುದಿಲ್ಲ. ಪ್ರಗತಿಯು ಅಂತರಾತ್ಮದಿಂದ ಬೆಳೆದು ಬರಬೇಕು, ಹೊರಗಡೆಯಿಂದ ತಂದು ಹಾಕಿದ ಪ್ರಗತಿಯು ನೈಜವಾದ ಪ್ರಗತಿಯಲ್ಲವೆಂದು ನನ್ನ ಅಭಿಪ್ರಾಯ. ಆದ್ದರಿಂದ ಜನರ ಮನೋವೃತ್ತಿಯನ್ನು ಬದಲಾವಣೆ ಮಾಡಿ, ಅವರ ದೃಷ್ಟಿಕೋಣವನ್ನು ಮಾರ್ಪಡಿಸಿ, ಎಲ್ಲರ ಸುಖಶಾಂತಿಯಲ್ಲಿ ತನ್ನ ಸುಖಶಾಂತಿ ಅಡಗಿದೆಯೆಂಬ ಅಭಿಪ್ರಾಯವನ್ನು ಅವರಲ್ಲಿ ಬೆಳೆಸುವವರೆಗೆ ಯಾವ ಯೋಜನೆಯಿಂದಲೂ ಪ್ರಯೋಜನವಾಗಲಾರದೆಂದು ಭಾವಿಸುವವರಲ್ಲಿ ನಾನೊಬ್ಬ. ಇದನ್ನೇ ನಮ್ಮ ಪ್ಲಾನಿಂಗ್ ಕಮಿಷನರವರೂ ಹೇಳಿದ್ದಾರೆ. ಪ್ರತಿಯೊಬ್ಬ ಪೌರನೂ ಇದು ನನ್ನ ಯೋಜನೆ, ನನ್ನ ಪ್ರಗತಿಗಾಗಿ ತಯಾರಾದ್ದು, ನನ್ನ ಸಹಕಾರ ಇದಕ್ಕಿರಬೇಕು, ನನ್ನ ಕೈಕೂಡ ಇದರಲ್ಲಿ ಸೇರಿರಬೇಕು, ಒಂದು ದೊಡ್ಡ ಕಟ್ಟಡ ಕಟ್ಟುವುದರಲ್ಲಿ ಒಂದು ಸಣ್ಣ ಇಟ್ಟಿಗೆಯೂ ಕೂಡ ಪ್ರಯೋಜನಕ್ಕೆ ಬರುವಂತೆ, ಪ್ರತಿಯೊಬ್ಬನೂ ಆತನು ಎಷ್ಟೇ ಅಲ್ಪನಾದರೂ ತನ್ನ ಶಕ್ತಿ ಸಾಮರ್ಥ್ಯಕ್ಕನುಸಾರವಾಗಿ ಇದಕ್ಕೆ ಸಹಾಯ ಮಾಡದೇ ಹೋದರೆ ಈ ಯೋಜನೆ ಫಲಕಾರಿಯಾಗುವುದಿಲ್ಲವೆಂದು ಈ ಯೋಜನೆಯ ಕರ್ತರು ಅಭಿಪ್ರಾಯಪಟ್ಟಿದ್ದಾರೆ. ಇದಕ್ಕಾಗಿ ಎಲ್ಲಕಡೆಯಿಂದ ಸಹಕಾರ, ಒತ್ತಾಸೆ, ಇದರ ಫಲದಲ್ಲಿ

ನಂಬಿಕೆ ಬರಬೇಕೆಂದು ಹೇಳಿದ್ದಾರೆ. ಹಾಗೆಮಾಡಿದ ರೇನೇ ನಮ್ಮ ಗುರಿಸಾಧನೆಯಾದೀತು. ಇದಕ್ಕಾಗಿ ದೇಶದ ಸರ್ಕಾರವೊಂದೇ ಮಾತ್ರವಲ್ಲ, ಎಲ್ಲಾ ಖಾಸಗೀ ಸಂಸ್ಥೆಗಳೂ, ಡಿಸ್ಟ್ರಿಕ್ಟ್ ಬೋರ್ಡುಗಳು, ಮುನಿಸಿಪಾಲಿಟಿ, ಗ್ರಾಮ ಪಂಚಾಯಿತಿಯೇ ಅಲ್ಲದೆ ಇತರ ಅನೇಕವಾದ functional associationಗಳೂ ಒಂದೇ ಸಮನೆ ನಿರ್ವಿವಾದವಾಗಿ ಒಪ್ಪಿಕೊಳ್ಳುವುದು ಒಂದು ರೀತಿಯಲ್ಲಿ ದಿದ್ದರೆ ಇನ್ನೊಂದು ರೀತಿಯಲ್ಲಿ ಸಾಧನೆಮಾಡಿಯೇ ಮಾಡುತ್ತೇವೆಂದು ಹೊರಡದಿದ್ದರೇ ಈ ಯೋಜನೆ ಪ್ರಯೋಜನಕಾರಿಯಾಗುವುದಿಲ್ಲವೆಂದು ತಮ್ಮ ಖಚಿತವಾದ ಅಭಿಪ್ರಾಯವನ್ನು ತಿಳಿಸಿದ್ದಾರೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದಕ್ಕೇನು ಮಾಡಬೇಕು ?

ಶ್ರೀ ಟಿ. ಮಾದಯ್ಯಗೌಡರು.—ಅವರಲ್ಲೂ ಈಗ ನಮ್ಮ ಮುಂದೆ ಅನೇಕ ಸಮಸ್ಯೆಗಳು ಉದ್ಭವಿಸಿವೆ, ಮುಖ್ಯವಾಗಿ ಈ ಹತ್ತೋಟಿ ಅಜ್ಜಿಗಳು ನಮ್ಮ ಬೆನ್ನೇರಿರುವ ಭೂತವೆಂದು ನನಗೆ ತೋರುತ್ತೆ. ಶನಿ ಒಮ್ಮೆ ಆವರಿಸಿಕೊಂಡರೆ ಅಷ್ಟು ಸುಲಭವಾಗಿ ಹೇಗೆ ಹೋಗುವುದಿಲ್ಲವೋ ಹಾಗೆ ಈ ಸಭೆಯಲ್ಲಿ ಎಷ್ಟೋ ಪ್ರಲಾಪ ನಡೆದರೂ ಹತೋಟಿ ಅಜ್ಜಿಗಳು ಸುಲಭವಾಗಿ ಹೋಗಿಬಿಡುತ್ತವೆಂದು ಭಾವಿಸುವವನು ನಾನಲ್ಲ. ಒಂದಲ್ಲೊಂದು ವಿಧದಲ್ಲಿ ಅವು ನಮ್ಮನ್ನು ಅಂಟಿಕೊಂಡೇ ಇರುತ್ತವೆ.

ಹೀಗೆ ಒಂದೆಡೆ ಈ ಹತೋಟಿ ಅಜ್ಜಿಗಳು ಮತ್ತೊಂದೆಡೆ ವಿಶೇಷವಾಗಿ ಬೆಳೆಯುತ್ತಿರುವ ಜನಸಂಖ್ಯೆ, ಜೊತೆಗೆ ದೇಶದ ಜನರಲ್ಲಿ ಸಾಕಾದಷ್ಟು ತಿಳಿವಳಿಕೆಯಿಲ್ಲದಿರುವುದು ಹೀಗೆ ಅನೇಕ ಕಾರಣಗಳಿಂದ ಯಾವ ರೂಪದಲ್ಲಿ ಈ ಯೋಜನೆಯನ್ನು ತರಬೇಕೋ ಹಾಗೆ ತರುವುದಕ್ಕೆ ಅಡಚಣೆಗಳಿವೆ. ಆದ್ದರಿಂದ ಅವುಗಳನ್ನು ಸರಿಪಡಿಸುವುದಕ್ಕೆ ಮುಖ್ಯವಾಗಿ ಪ್ರಯತ್ನಮಾಡಬೇಕು. ಎಲ್ಲಕ್ಕಿಂತಲೂ ಹೆಚ್ಚಾಗಿ ಈ ಯೋಜನೆಯ ವಿಷಯದಲ್ಲಿ ಜನರಲ್ಲಿ ಉತ್ಸಾಹವನ್ನುಂಟುಮಾಡುವುದು ಬಹಳ ಅಗತ್ಯ. ಹಾಗೆ ಜನರಲ್ಲಿ ಉತ್ಸಾಹವನ್ನುಂಟುಮಾಡುವುದಕ್ಕೆ ಎಲ್ಲಾ ರಾಜಕೀಯ ಪಾರ್ಟಿಗಳೂ ಎಲ್ಲಿಯವರೆಗೂ ಪ್ರಯತ್ನಮಾಡುವುದಿಲ್ಲವೋ ಅಲ್ಲಿಯವರೆಗೆ ಏನೂ ಫಲ ದೊರಕಲಾರದು. ಆದ್ದರಿಂದ ಇಂಥ ಯೋಜನೆಗಳು ಬಂದಾಗ ಹೆಚ್ಚಾಗಿ ಪ್ರಚಾರಕಾರ್ಯವನ್ನು ಕೈಕೊಂಡು ನಾನಾ ರಾಜಕೀಯ ಪಂಗಡಗಳ ವಿಶ್ವಾಸವನ್ನು ಗಳಿಸಿ, ಅವರ ಸಹಾಯದಿಂದಲೂ ಜನರ ಮನಸ್ಸನ್ನು ಒಲಿಸಿಕೊಂಡು ಈ ಯೋಜನೆ ಆಗಬೇಕು, ಇದಕ್ಕೆಲ್ಲ ಜನ ಸಹಕಾರ ಕೊಡಬೇಕು. ಎಲ್ಲರೂ ಅಭಿವೃದ್ಧಿಗೆ ಬರಬೇಕೆಂದು ಮಾಡದರೆ ನಾವು ಅಭಿವೃದ್ಧಿಗೆ ಬರುತ್ತೇವೇ ವಿನಾ ಸುಮ್ಮನೆ ಯೋಜನೆಯನ್ನು ಮಾಡಿ ಹೊರಿಸಿದರೆ ಏನೂ ಆಗುವುದಿಲ್ಲ. ನೀವೀಗ ಮಾಡುತ್ತಿರುವುದು ಸುಮ್ಮನೆ ಜನರ ಮೇಲೆ ಯೋಜನೆಗಳನ್ನು ಹೊರಿಸುತ್ತಿದ್ದೀರಿ. ನಮ್ಮ ದೇಶದಲ್ಲಿ ಅನೇಕ ಗ್ರಾಮಾಭಿವೃದ್ಧಿ ಕಾರ್ಯಗಳನ್ನು ಬಹಳ ಶ್ರದ್ಧೆಯಿಂದ ಕೈಕೊಂಡರೂ ಜನರೇ ಮುಂದೆ ಬಂದು ಉತ್ಸಾಹದಿಂದ ಯಾವುದನ್ನು ಮಾಡಿಕೊಡಿ, ಅದಕ್ಕೆ ಸಹಕಾರ ಕೊಡುತ್ತೇವೆಂದು ಹೇಳುವುದಿಲ್ಲವೋ ಅದಕ್ಕೇನು ಮಾಡಿದರೂ ಪ್ರಯೋಜನ ಲಭಿಸಲಾರದು. ನಮ್ಮ ದೇಶದಲ್ಲಿ ಕೆಲಸಗಳು ಯಾವ ಸ್ಥಿತಿಯಲ್ಲಿ ನಡೆಯುತ್ತಿವೆಯೆಂಬುದನ್ನೂ ಯೋಚನೆ ಮಾಡಬೇಕು. ಮೊದಮೊದಲು ಸರ್ಕಾರದವರು ಗ್ರಾಮಗಳಲ್ಲಿ ಸ್ಕೂಲುಗಳನ್ನು ಕೊಡುತ್ತಿದ್ದರೂ ರೈತರೇ ತಮ್ಮ ಮಕ್ಕಳನ್ನು ಕಳುಹಿಸಿಕೊಡುತ್ತಿರಲಿಲ್ಲ. ಯಾವ ಗ್ರಾಮದಲ್ಲಿ ಸ್ಕೂಲು ಬೇಕೆಂದು ಹೇಳಿ ಬಲಾತ್ಕರಿಸಿ ಸ್ಕೂಲುಗಳನ್ನು ಪಡೆದರೋ ಅವೇ ಈಗ್ಗೂ ಸರಿಯಾಗಿ ನಡೆಯುತ್ತಿರುವಂಥವು. 'ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು ಸಿಕ್ಕಿದ ಹಾಗೆ' ಎಂಬ ಗಾದೆಯಂತೆ ನಾವೇ ಬಲಾತ್ಕಾರವಾಗಿ ಏನು ಮಾಡುವುದಕ್ಕೆ ಹೋದರೂ ಅದು ಪ್ರಯೋಜನಕಾರಿಯಾಗಲಾರದು.

ಅದಕ್ಕಾಗಿ ಪ್ರಥಮವಾಗಿ ನನ್ನ ಸೂಚನೆ ಇಷ್ಟೇ. ಈ ಬಗ್ಗೆ ಒಂದು ಯೋಜನೆಯನ್ನು ತಯಾರುಮಾಡಬೇಕಾದದ್ದೂ ನಿಮ್ಮ ಪ್ರಥಮ ಕರ್ತವ್ಯವೆಂದು ತಿಳಿಯಬೇಕು. ಜನಗಳಲ್ಲಿ ಮೊಟ್ಟಮೊದಲು ಈ ಯೋಜನೆಯ ಬಗ್ಗೆ ಉತ್ಸಾಹವನ್ನು ಕುರಿದುಂಬಿಸುವ ಕಾರ್ಯವನ್ನು ಅತ್ಯವಾಗಿ ಮಾಡಬೇಕು. ಅದಿಲ್ಲದೇ ಹೋದರೆ ನಾವು ಖರ್ಚುಮಾಡತಕ್ಕ ಹಣ ಏನೂ ಫಲಕಾರಿಯಾಗುವುದಿಲ್ಲ. ನಮ್ಮ ಗುರಿಯೂ ಎಷ್ಟು ಮಾತ್ರವೂ ಸಾಧನೆಯಾಗಲಾರದೆಂದು ನನಗನ್ನಿಸುತ್ತದೆ.

ಅಲ್ಲದೆ ಈ ಯೋಜನೆಗಳನ್ನು ದೇಶದ ಮುಂದಿಡತಕ್ಕ ಕಾಲದಲ್ಲಿ ಇವುಗಳನ್ನು ಸರಿಯಾಗಿ ನಡೆಸುವ ವ್ಯಕ್ತಿಗಳನ್ನೂ ನಾವು ತಯಾರುಮಾಡಿಕೊಳ್ಳಬೇಕು. Trained personnel ಇಲ್ಲದಿದ್ದರೆ ಈ ಯೋಜನೆಗಳ ಪ್ರಯೋಜನಕ್ಕೆ ಬರುವುದಿಲ್ಲ. ನಮ್ಮ ಮೈಸೂರು ದೇಶದಲ್ಲಿ ಬಹುಮಟ್ಟಿಗೆ ಅನೇಕ ವರ್ಷಗಳಿಂದ ನಾನಾ ರೀತಿಯ ಯೋಜನೆಗಳಿರುವುದರಿಂದ ತಕ್ಕ ಕೆಲಸಗಾರರು ಸಿಕ್ಕುವುದಿಲ್ಲವೆಂದು ನಾನು ಹೇಳುವುದಿಲ್ಲ. ತಾವು ಕಂಡ ಹಾಗೆ ಗ್ರಾಮಾಭಿವೃದ್ಧಿ ಕೆಲಸಗಳಿಗೆ ತಕ್ಕ ಶಿಕ್ಷಣ ಕೊಡಲು ಗ್ರಾಮಾಭಿವೃದ್ಧಿ ಕೇಂದ್ರಗಳನ್ನು ದೊಡ್ಡಬಳ್ಳಾಪುರ, ಕ್ಲೋಸ್‌ಪೇಟೆ ಮುಂತಾದ ಕೆಲವು ಸ್ಥಳಗಳಲ್ಲಿ ಏರ್ಪಾಡು ಮಾಡಿದ್ದಾರೆ. ಗ್ರಾಮಾಭಿವೃದ್ಧಿ ಕಾರ್ಯದಲ್ಲಿ ಚೆನ್ನಾಗಿ ಕೆಲಸಮಾಡತಕ್ಕ ವ್ಯಕ್ತಿಗಳನ್ನು ತರಬೇತು ಮಾಡುವುದಕ್ಕಾಗಿ ಈ ಕೇಂದ್ರಗಳನ್ನು ಸ್ಥಾಪನೆ ಮಾಡಿದ್ದಾರೆ. ಅಲ್ಲಿ ಗ್ರಾಮಾಭಿವೃದ್ಧಿ ಕೆಲಸಗಳನ್ನು ನಡೆಸುವುದಕ್ಕೆ ಬೇಕಾದ ಶಿಕ್ಷಣವನ್ನು ಅನೇಕ ಅಧಿಕಾರಿಗಳೂ ಖಾಸಗೀ ಜನರೂ ಹೊಂದಿದ್ದಾರೆ. ಆದರೂ ಇನ್ನೂ ಹೆಚ್ಚು ಜನರು ಬೇಕು. ನಮ್ಮ ದೇಶಕ್ಕೇ ೨೧ಕೋಟಿ ರೂಪಾಯಿನ ಒಂದು ಯೋಜನೆ ಇದೆ. ಇದನ್ನು ಸಾಧಿಸುವುದಕ್ಕೆ ಗ್ರಾಮಾಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳುವುದಕ್ಕೆ, ವಿದ್ಯಾಭ್ಯಾಸದಲ್ಲಿ ಪ್ರಗತಿಸಾಧಿಸುವುದಕ್ಕೆ, ನೀರಾವರಿ ಕೆಲಸಗಳನ್ನು ಕೈಕೊಂಡು ಸಾಧಿಸುವುದಕ್ಕೆ ಹೆಚ್ಚಿನ ಸಿಬ್ಬಂದಿ ಮತ್ತು ಸರಿಯಾದ ಜನ ಬೇಕು. ಈ ಉದ್ದೇಶದಿಂದಲೇ ನಾನು ತಿದ್ದುಪಡಿಯನ್ನು ಕಳುಹಿಸಿರುವುದು. ನನ್ನ ತಿದ್ದುಪಡಿಯಲ್ಲಿ ಸೂಚಿಸಿರುವಂತೆ ಒಂದು ವೇಳೆ ಸಾಕಷ್ಟು ಜನರಿದ್ದರೂ ಕೂಡ ಆ ಜನರಲ್ಲಿ ನೀತಿ ಇಲ್ಲದೇ ಹೋದರೆ ಪ್ರಯೋಜನವಾಗುವುದಿಲ್ಲ, ಅನೇಕ ದಕ್ಷರಿದ್ದರೂ ಅವರು ದಕ್ಷತೆಯಿಂದ ಕೆಲಸ ಮಾಡುವವರಾದರೂ ಅವರಲ್ಲಿ ನೀತಿ ಸರಿಯಾಗಿಲ್ಲದೆ, ತಕ್ಷಣವೇ ತಾವು ಐಶ್ವರ್ಯವಂತರಾಗಬೇಕೆಂಬ ಅಪೇಕ್ಷೆಯಿಂದ ಹಣಕಾಸಿಗೆ ಕೈಯೊಡ್ಡಿ, ಅನೀತಿಯಿಂದ ಕೆಲಸ ಮಾಡಿದರೆ, ಪ್ರಗತಿ ಆಗಲಾರದು. ಅವರಲ್ಲಿ ಒಂದು ಕಡೆ ದಕ್ಷತೆ, ಇನ್ನೊಂದು ಕಡೆ ಪ್ರಾಮಾಣಿಕತೆ ಎರಡೂ ಇರಬೇಕು. ದಕ್ಷತೆ, ಪ್ರಾಮಾಣಿಕತೆಯ ಜೊತೆಗೆ ದೇಶಪ್ರೇಮವೂ ಇರಬೇಕು. ದೇಶದಲ್ಲಿ ಪ್ರೇಮವಿಲ್ಲದಿರುವ ಮನುಷ್ಯನ ಕೈಯಲ್ಲಿ ಕೆಲಸವನ್ನು ಕೊಟ್ಟರೆ 30ನೆಯ ತಾರೀಖು ಎಷ್ಟು ಬೇಗ ಬಂದೀತು ಎಂದು ಯೋಚಿಸುತ್ತಿರುತ್ತಾನೆ. ಒಳ್ಳೆಯ ಕೆಲಸಗಾರರನ್ನು ಹೊಂದಿಸಿಕೊಳ್ಳುವ ಕೆಲಸವನ್ನೂ ಕೂಡ ಈ ಯೋಜನೆಯಲ್ಲಿ ಸೇರಿಸಿ ಈ ಯೋಜನೆಯನ್ನು ತಯಾರಿಸಬೇಕಾಗಿತ್ತು ಎನಿಸುತ್ತದೆ. ಭರತಖಂಡದ ಇತರ ಭಾಗಗಳಲ್ಲಿ ಒಳ್ಳೆಯ ಶಿಕ್ಷಣಪಡೆದಿರುವ ಕೆಲಸಗಾರರ ಕೊರತೆ

(ಶ್ರೀ ಟಿ. ಮಾದಯ್ಯಗೌಡರು)

ಇದ್ದರೂ ಮೈಸೂರಿನಲ್ಲಿ ಅಷ್ಟು ಕಠಿಣವಾಗಿಲ್ಲ ಈ ಸಮಸ್ಯೆ. ಅದರೂ ಸಾಲದು. ಅಲ್ಲದೆ ಅವರಿಗೆ ಅಗತ್ಯವಾದ ಪ್ರಾಮಾಣಿಕತೆಯೂ ದೇಶಪ್ರೇಮವೂ ಇರಬೇಕು.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನನ್ನ ಭಾಷಣದಲ್ಲೇ ಹೇಳಿದ್ದೇನೆ. ಇನ್ನೆಲ್ಲ ಸಂಸ್ಥಾನಗಳಿಗಿಂತಲೂ ಮೈಸೂರು ಸಂಸ್ಥಾನದಲ್ಲಿ Trained personnel ತಕ್ಕಮಟ್ಟಿಗೆ ಅನುಕೂಲವಾಗಿದೆಯೇ ಹೊರತು ಅಷ್ಟು ಕೊರತೆ ಇಲ್ಲವೆಂದು ಹೇಳಿದ್ದೇನೆ.

ಶ್ರೀ ಟಿ. ಮಾದಯ್ಯಗೌಡರು.—ನಾನೂ ಅದನ್ನೇ ಹೇಳಿರುವುದು.

The Hon'ble Sri H. C. DASAPPA.—In fact that is one of the special advantages of the State over other States.

ಶ್ರೀ ಟಿ. ಮಾದಯ್ಯಗೌಡರು.—ನಾವು ಈಗ್ಗೆ ಐದು ವರ್ಷಗಳ ಹಿಂದೆ ಏನು ಯೋಜನೆಯನ್ನು ತಯಾರುಮಾಡಿ ಬಹುಮಟ್ಟಿಗೆ ಕೆಲಸವನ್ನು ಸಾಧಿಸಿದ್ದೇವೋ ನಾವು ಮುಂದೆ ಹಾಕಿಕೊಂಡಿರುವ ಯೋಜನೆಯ ವಿಷಯದಲ್ಲಿಯೂ ಅದೇ ರೀತಿ ಇರಬೇಕು. ಈಗ ಕಳೆದ ಐದು ವರ್ಷಗಳಿಂದ ಯಾವ ಯಾವ ಬಾಬಿನಲ್ಲಿ ಏನು ಕೆಲಸಗಳನ್ನು ಮಾಡಿದ್ದೇವೆಯೋ ಅವು ಯಾವ ಮಟ್ಟಕ್ಕೆ ಬಂದಿವೆ, ಇನ್ನು ಐದು ವರ್ಷದಲ್ಲಿ ಯಾವ ರೀತಿ ಮುಂದುವರಿಸುತ್ತೇವೆ ಎಂಬುದನ್ನು ಮೈಸೂರು ಸಂಸ್ಥಾನಕ್ಕೆ ಮಾಡಿರತಕ್ಕ ಈ ಐದು ವರ್ಷದ ಯೋಜನೆಯಲ್ಲಿ ಸೂಚಿಸಿದ್ದರೆ ಚೆನ್ನಾಗಿತ್ತು ಎಂದು ನನ್ನ ಅಭಿಪ್ರಾಯ.

ಇನ್ನೊಂದು ವಿಷಯವೇನೆಂದರೆ, ಇದರಲ್ಲಿ ತಕ್ಕಷ್ಟು ವಿವರಣೆ ಇಲ್ಲ. ಕೆಲವು ಬಾಬುಗಳಲ್ಲಿ ಐದು ವರ್ಷದಲ್ಲಿ ಹಣ ಇಷ್ಟಿಷ್ಟು ಖರ್ಚುಮಾಡುತ್ತೇವೆ ಎಂದು ನಮೂದಾಗಿದೆ. ಇಷ್ಟು ಹಣ ಖರ್ಚುಮಾಡಿದರೆ ಎರಡು ವರ್ಷದಲ್ಲಿ ಏನು ಪ್ರಗತಿಯಾಗುತ್ತದೆ, ಐದು ವರ್ಷದಲ್ಲಿ ಏನು ಪ್ರಗತಿಯಾಗುತ್ತದೆ ಎಂಬುದಕ್ಕೆ ತಕ್ಕಷ್ಟು ವಿವರಣೆ ಇಲ್ಲವೆಂದು ನಾನು ಅಭಿಪ್ರಾಯಪಡುತ್ತೇನೆ. ಇದನ್ನು ಕೊಟ್ಟಿದ್ದರೆ ಚೆನ್ನಾಗಿತ್ತು. ಆಗ ಜನತೆ ಈ ಒಂದು ಯೋಜನೆಯನ್ನು ತಮ್ಮ ಮುಂದಿಟ್ಟುಕೊಂಡು ಇದು ಹೇಗಿದೆ, ಇದು ಸಾರ್ಥಕವಾಗುತ್ತದೆಯೆ ಎಂದು ಅಳತೆ ಮಾಡುವುದಕ್ಕೆ ಅವಕಾಶ ಸಿಕ್ಕುತ್ತಿತ್ತು. ಈ ಯೋಜನೆ ಬಹಳ ಸಂಕ್ಷೇಪವಾಗಿದೆ.

ಶ್ರೀ ಜಿ. ಎ. ಆಚಾರ್ಯರು.—ಅಳತೆ ಹೇಗೆ ಮಾಡುವುದು ? ಒಂದೆರಡು ವರ್ಷಗಳಲ್ಲಿ ಆಗುವುದನ್ನು ಅಳತೆ ಮಾಡಬೇಕೆಂದು ಹೇಳುತ್ತಾರೆ, ಹೇಗೆ ಅಳತೆಮಾಡುವುದು !

ಶ್ರೀ ಟಿ. ಮಾದಯ್ಯಗೌಡರು.—ಗಜ ಕಡ್ಡಿಯನ್ನು ತೆಗೆದುಕೊಂಡು ಅಳತೆಮಾಡುವುದಲ್ಲ. ಒಂದು ವರ್ಷದಲ್ಲಿ ಎಷ್ಟು ಕೆಲಸ ನಡೆದಿದೆ, ಎರಡು ವರ್ಷದಲ್ಲಿ ಎಷ್ಟು ನಡೆದಿದೆ ಎಂಬುದನ್ನು ತಿಳಿದುಕೊಳ್ಳುವುದು.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಕಂಟ್ರೋಲ್ statistics ಎಂದು 1ನೆಯ ಸ್ಟೇಟ್‌ಮೆಂಟಿನಲ್ಲಿ ಕೊಟ್ಟಿದೆ. ಮೊದಲನೆಯ ವರ್ಷ, ಎರಡನೆಯ ವರ್ಷ, ಮೂರನೆಯ ವರ್ಷ, ಹೀಗೆ ಐದು ವರ್ಷಗಳಲ್ಲಿ ಎಷ್ಟೆಷ್ಟೆಂಬುದನ್ನು ಎಲ್ಲ ಕೊಟ್ಟಿದೆ. ಉದಾಹರಣೆಗೆ ರಸ್ತೆಗಳ ಕಾಮಗಾರಿಗಳನ್ನು ತೆಗೆದುಕೊಂಡರೆ, ಒಂದೊಂದು ವರ್ಷದಲ್ಲಿಯೂ ಎಷ್ಟೆಷ್ಟು ಮೈಲಿಗಳಾಗುತ್ತವೆ, ಐದು ವರ್ಷಗಳಲ್ಲಿ ಎಷ್ಟು ಎಂಬುದು ನಮೂದಾಗಿದೆ. ಇನ್ನಾವುದೇ ಬಾಬನ್ನು ತೆಗೆದುಕೊಳ್ಳಿ, multipurpose co-operative societies, cottage industries ಮುಂತಾದ ಎಲ್ಲದರಲ್ಲಿಯೂ ಮೊದಲನೆಯ ವರ್ಷ, ಎರಡನೆಯ ವರ್ಷ, ಮೂರನೆಯ ವರ್ಷ, ನಾಲ್ಕನೆಯ ವರ್ಷ ಮತ್ತು ಐದನೆಯ ವರ್ಷ ಎಷ್ಟೆಷ್ಟು ಆಗುತ್ತದೆಂಬ ವಿವರಗಳನ್ನು ಕೊಡಲಾಗಿದೆ.

ಶ್ರೀ ಟಿ. ಮಾದಯ್ಯಗೌಡರು.—ವಿದ್ಯಾಭ್ಯಾಸದಲ್ಲಿ ಎಷ್ಟು ಜನ ಮಕ್ಕಳು ಈಗ ಸ್ಕೂಲುಗಳಿಗೆ ಹೋಗುತ್ತಿದ್ದಾರೆ, ಎಷ್ಟು ಜನರು ಹೋಗುತ್ತಾರೆ, ಐದು ವರ್ಷಗಳ ಕೊನೆಯಲ್ಲಿ ಎಷ್ಟು ಜನ ಹೊಸದಾಗಿ ಸೇರಿರುತ್ತಾರೆ ಎಂಬ ವಿವರಗಳಿರಬೇಕಾಗಿತ್ತು.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ವರ್ಷ ವರ್ಷವೂ ಎಷ್ಟೆಷ್ಟು ಜಾಸ್ತಿಯಾಗುತ್ತಾರೆಂಬುದನ್ನು ತಿಳಿಯಬೇಕಾದರೆ ಇದರಲ್ಲಿ ಕೊಟ್ಟಿರುವ ಸ್ಟೇಟ್‌ಮೆಂಟುಗಳನ್ನು ನೋಡಿ. ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ ನಮ್ಮ ಯೋಜನೆಯ ಪ್ರಕಾರ ಗಂಡು ಮಕ್ಕಳೆಷ್ಟು, ಹೆಣ್ಣು ಮಕ್ಕಳೆಷ್ಟು ಹೆಚ್ಚು ವಿದ್ಯೆ ಕಲಿಯಲು ಬರುತ್ತಾರೆ ಮುಂತಾದ ಎಲ್ಲ ಅಂಕಿ ಅಂಶಗಳಿವೆ.

ಶ್ರೀ ಟಿ. ಮಾದಯ್ಯಗೌಡರು.—ಈಗಿರುವುದೆಷ್ಟು, ಮುಂದೆ ಆಗುವುದೆಷ್ಟು, ಯಾವ ಶೇಕಡಾವಾರು ಹೆಚ್ಚುತ್ತದೆ ಎಂಬುದು ಸಾಮಾನ್ಯ ಜನರಿಗೂ ಅರ್ಥವಾಗುವ ರೀತಿಯಲ್ಲಿ ಈ ಯೋಜನೆಯಿಂದ ಎಷ್ಟುಮಟ್ಟಿನ ಪ್ರಗತಿಯಾಗುತ್ತದೆ ಎಂಬುದನ್ನು ತಿಳಿದುಕೊಳ್ಳುವ ರೀತಿಯಲ್ಲಿರಬೇಕಾಗಿತ್ತು.

ಇನ್ನು ಈ ಕಾರ್ಯವನ್ನು ಸಾಧನೆಮಾಡಿಕೊಳ್ಳಲು ಒದಗಿಸಿರುವ ಹಣ ಬಹಳ ಕಡಿಮೆಯೆಂದು ನನ್ನ ಅಭಿಪ್ರಾಯ. ಇನ್ನೂ ಅಗತ್ಯವಾದ ಅನೇಕ ಬಾಬುಗಳಿಗೆ ಹಣವನ್ನೊದಗಿಸಿಲ್ಲ. ಮತ್ತೆ ಕೆಲವಕ್ಕೆ ಕೊಟ್ಟಿರುವುದು ಬಹಳ ಕಡಿಮೆ.

ಶ್ರೀ ಜಿ. ಎ. ಆಚಾರ್ಯರು.—ಊಹೆಯಿಂದ ಕೊಟ್ಟಿರುವುದು, ಅಂದಾಜು—ಇನ್ನೂ ಹಣಕೊಟ್ಟಿಲ್ಲ.

ಶ್ರೀ ಟಿ. ಮಾದಯ್ಯಗೌಡರು.—ಕೊಟ್ಟಿದ್ದಾರೆಂದೇ ನನ್ನ ಅಭಿಪ್ರಾಯ, ಮಾನ್ಯ ಸದಸ್ಯರೆಲ್ಲರೂ ಪ್ರಯತ್ನಪಟ್ಟರೆ, ಸಮರ್ಥನೆ ಮಾಡಿದರೆ ಸಿಕ್ಕೇ ಸಿಕ್ಕುತ್ತದೆ. ಇದಕ್ಕೆ ಬೇಕಾದ ಹಣ ಕಾಸು ಉತ್ಪತ್ತಿಯಾಗುತ್ತದೆಂಬ ನಂಬಿಕೆ ಕೆಲವರಿಗಿಲ್ಲ. ಈ ಅಭಿಪ್ರಾಯ ನನಗಿಲ್ಲ. ಈ ಅಪನಂಬಿಕೆ ನನಗಿಲ್ಲ. ಇದರಿಂದ ಜನರ ಪ್ರಗತಿಹೆಚ್ಚುತ್ತದೆ. ಜನರಲ್ಲಿ ಇದರಿಂದ ತಿಳಿವಳಿಕೆ ಹೆಚ್ಚುತ್ತದೆ, ಆರ್ಥಿಕಮಟ್ಟ ಜಾಸ್ತಿಯಾಗುತ್ತದೆ, ದೇಶಪ್ರಗತಿಯಾಗುತ್ತದೆಂದು ಕಂಡು ಒಂದರೆ ಸಾಲವನ್ನೆತ್ತುವುದರಲ್ಲಿ ಮತ್ತು ಹೊಸ ತೆರಿಗೆ ಹಾಕುವುದರಲ್ಲಿ ಹಣ ಸಂಪಾದನೆ ಮಾಡಬಹುದೆಂದು ಹೇಳಿರುವುದರಲ್ಲಿ ಕೆಲವರು ಅನುಮಾನಪಡುತ್ತಿದ್ದಾರೆ; ಆದರೆ ನನಗೆ ಅನುಮಾನಬರುವುದಿಲ್ಲ. ನಾವು ಒಂದು ಉತ್ಸಾಹದಿಂದ ನಂಬಿಕೆಯಿಂದ ಕೆಲಸಮಾಡಬೇಕು. ಮನುಷ್ಯನಿಗೆ ತನ್ನ ಬಲದಲ್ಲಿ ತನಗೇ ನಂಬಿಕೆಯಿಲ್ಲದಿದ್ದರೆ ಏನೂ ಬರುವುದಿಲ್ಲ. 'ಸಂಶಯಾತ್ಮಾ ವಿನಶ್ಯತಿ' ಎಂದು ಹೇಳಿರುವ ಹಾಗೆ ನಾವು ಎಲ್ಲದರಲ್ಲಿಯೂ ಸಂಶಯಪಟ್ಟರೆ ಯಾವುದೂ ಆಗುವುದಿಲ್ಲ. ನಾವು ಮಾಡುವ ಕೆಲಸದಲ್ಲಿ ನಾವು ನಂಬಿಕೆಯನ್ನಿಟ್ಟುಕೊಂಡು ಮಾಡಿದರೆ, ನಾವು ಏನು ನಿರೀಕ್ಷಿಸಿದ್ದೇವೋ ಇದರಲ್ಲಿ ಅದಕ್ಕಿಂತ ಜಾಸ್ತಿ ಸಿಕ್ಕಬಹುದು, ಖರ್ಚಾಗಬಹುದು, ಹೆಚ್ಚಿನ ಪ್ರಗತಿಯಾಗಬಹುದೆಂದು ನಾನು ನಂಬಿದ್ದೇನೆ. ಆ ಮಾನ್ಯ ಸದಸ್ಯರು ಊಹೆ ಎಂದು ಹೇಳಿದರೂ ಇದರಲ್ಲಿ ನನಗೆ ನಂಬಿಕೆ ಇದೆ.

ಆದರೆ ನನಗಾದರೂ ಎನಿಸುತ್ತದೆ—ಏನೆಂದರೆ: ಇನ್ನೂ ಕೆಲವು ಬಾಬುಗಳಿಗೆ ಹೆಚ್ಚುಹೆಚ್ಚಾಗಿ ಹಣವನ್ನು ಒದಗಿಸಿ ಅವುಗಳು ಬೇಗ ಪ್ರಗತಿಗೆ ಬರಲು ಒಂದು ಅವಕಾಶವನ್ನು ಕಲ್ಪಿಸಬೇಕೆಂದಿದ್ದರೆ, ಈಗೇನು ಅವರು ಒದಗಿಸಿದ್ದಾರೋ ಆ ಹಣ ಸಾಲದೆಂದು ನಾನು ಹೇಳು

ತ್ತೇನೆ. ಕೇಂದ್ರ ಸರ್ಕಾರದವರನ್ನು ನಾನು ಒಂದು ವಿಚಾರದಲ್ಲಿ ಸ್ವಲ್ಪ ಆಕ್ಷೇಪಣೆಮಾಡಬೇಕಾಗಿದೆ. ಅದು ಯಾವುದೆಂದರೆ, ಇಂಥಾ ಒಂದು ಮುಂದುವರಿದ ದೇಶದಲ್ಲಿ ಈ ರೀತಿಯ ಭಾರಿ ಭಾರಿ ಯೋಜನೆಗಳನ್ನು ಕೈಗೊಳ್ಳಬೇಕೆಂದು ಉದ್ದೇಶಪಡತಕ್ಕಸಂದರ್ಭದಲ್ಲಿ ನಾವೇ 28 ಕೋಟಿ ರೂಪಾಯಿಗಳಷ್ಟು ಹಣವನ್ನು ಒದಗಿಸುತ್ತೇವೆಂದು ಮುಂದೆ ಬಂದಿರುವಾಗ ಅವರು ಕೇವಲ 8 ಕೋಟಿ ರೂಪಾಯಿಗಳನ್ನುಒದಗಿಸಿಕೊಡುತ್ತೇವೆಂದು ಹೇಳಿರುವುದು ತೀರಾ ಅನ್ಯಾಯ. ಅಲ್ಲದೆ ನಮಗೇನು ಅವರು ಆ 8 ಕೋಟಿ ರೂಪಾಯಿಗಳ ಮೊಬಲಗನ್ನು ಸಾಲದರೂಪವಾಗಿ ಕೊಡುತ್ತಾರೆಯೇ ಅಥವಾ ಗ್ರಾಂಟ್ ರೂಪವಾಗಿ ಕೊಡುತ್ತಾರೆಯೇ ಎಂಬುದನ್ನು ವಿವರವಾಗಿ ತಿಳಿಸಿರುವುದಿಲ್ಲ. ಇಂಥ ಪ್ರಗತಿಪರವಾದ ದೇಶಕ್ಕೆ ಎಲ್ಲಾ ವಿಧದಲ್ಲಿಯೂ ಇದನ್ನು ಒಂದು ಮಾದರೀ ರಾಜ್ಯವನ್ನಾಗಿ ಮಾಡಿ, ಇತರರು ಇದನ್ನು ಅನುಸರಿಸಿ ನಡೆಯುವಂತೆ ಮಾಡಬೇಕಾಗಿದ್ದರೆ ಅವರು ನಮಗೆ ಇನ್ನೂ ಈ ಖರ್ಚು ವೆಚ್ಚಗಳ ನೇಕಡ 50ರಷ್ಟನ್ನಾದರೂ ಒದಗಿಸಬೇಕಾಗಿತ್ತೆಂದು ನನಗೆ ಎನಿಸುತ್ತದೆ. ಆದಕಾರಣ ನಮ್ಮ ಸರ್ಕಾರದವರು ಕೇಂದ್ರದವರಿಂದ ಹೆಚ್ಚು ಹಣ ಬರುವಂತೆ ಮಾಡಲು ಏನೇನು ಏರ್ಪಾಡುಗಳನ್ನು ಕೈಗೊಳ್ಳಬೇಕೋ ಅವುಗಳನ್ನೆಲ್ಲಾ ಮಾಡಬೇಕೆಂದು ಸೂಚಿಬಿಚ್ಚಿಸುತ್ತೇನೆ. ನಮಗೆ ಈ 5 ವರ್ಷದ ಅವಧಿಯಲ್ಲಿ ಇನ್ನು 1952ನೆ ಮಾರ್ಚಿ ಬಹಳ ಸಮೀಪಿಸುತ್ತ ಬಂತು. ಇನ್ನು ಬಹಳ ಕಾರ್ಯಗಳು ಮುಂದುವರಿಯಬೇಕಾಗಿರುತ್ತವೆ. ಆದರೆ ಎಂದು ಈ ಯೋಜನೆಗಳ ಬಗ್ಗೆ ಇವುಗಳನ್ನು ಪ್ರಾರಂಭಿಸಬೇಕೆಂದು ಹಣವನ್ನು ಒದಗಿಸಲಾಯಿತೋ ಅಂದೇ ಇವು ಪ್ರಾರಂಭವಾದಂತಾಯಿತು. ಆದರೆ ಇವುಗಳನ್ನು ಹೇಗೆ ಪ್ರಾರಂಭಿಸಬೇಕು, ಯಾವ ರೀತಿಯಲ್ಲಿ ಪ್ರಾರಂಭಮಾಡಬೇಕು ಮತ್ತು ಯಾವಾಗ ಪ್ರಾರಂಭಮಾಡಬೇಕು ಅವುಗಳೊಂದೂ ಇನ್ನೂ ತೀರ್ಮಾನಕ್ಕೇ ಬಂದಿಲ್ಲ. ಅದರ ಜೊತೆಗೆ ಈ ಯೋಜನೆಗಳೆಲ್ಲಾ ಅಂಗೀಕಾರವಾಗಿ ಇವುಗಳಿಗೆ ಮುದ್ರೆ ಬೇರೆ ಬೀಳಬೇಕು. ಆದರೆ ಹಾಗೆ ಅಂಗೀಕಾರದ ಮುದ್ರೆ ಬೀಳುವುದಕ್ಕೆ ಇನ್ನೂ ಎಷ್ಟು ದಿವಸಗಳು ಹಿಡಿಯುತ್ತವೋ ಅದೊಂದೂ ಗೊತ್ತೇ ಇಲ್ಲ. ಇನ್ನು ನಮಗಿರತಕ್ಕ ಈ 4 ತಿಂಗಳ ವಾಯಿದೆಯಲ್ಲಿ ನಾವು ಏನುಮಾಡಲು ಸಾಧ್ಯವಾದೀತು ? ಹೀಗೆಲ್ಲಾ ಆಗಿ ನಾವು ಈ ಮೊದಲನೆಯ ವರ್ಷದ ಯೋಜನೆಯನ್ನು ಸಾಧಿಸಿದೆವೆಂದು ಹೇಳುವುದಕ್ಕಾಗುವುದಿಲ್ಲ. ಈ ಎಲ್ಲಾ ಕಾರಣಗಳಿಂದ ತಾವು ಈ ಯೋಜನೆಯನ್ನು 1952ನೆಯ ಏಪ್ರಿಲ್ ತಿಂಗಳಿಂದಲೇ ಪ್ರಾರಂಭಮಾಡುತ್ತೇವೆಂದು ಹೇಳತಕ್ಕದ್ದು ಉಚಿತವಾಗಿ ಕಾಣುತ್ತದೆ. ಇಲ್ಲವಾದರೆ ಹೀಗೆ ಒಂದು ಯೋಜನೆಗೆ ಕೈಹಾಕಿ ಕಾರ್ಯವನ್ನು ಕೈಗೊಳ್ಳದೇ ಹೋದರೆ, ಜನರಲ್ಲಿ ಯಾವ ಒಂದು ಉತ್ಸಾಹವೂ ಇಲ್ಲದೆ ಅವರು ನಮ್ಮಲ್ಲಿಡಬೇಕಾದ ನಂಬಿಕೆ ಹೋಗಿ, ಮುಂದೆ ನಮ್ಮ ಕೆಲಸ ಕಾರ್ಯಗಳಿಗೆ ತುಂಬಾ ಧಕ್ಕೆಯುಂಟಾಗುತ್ತದೆ. ಆದಕಾರಣ ಇಂಥ ಒಂದು ಅನುಮಾನ ಜನರಲ್ಲಿ ಉಂಟಾಗುವುದಕ್ಕೆ ಅವಕಾಶವನ್ನೇ ತಾವು ಕೊಡಬಾರದೆಂದು ಹೇಳುತ್ತೇನೆ. ಈ ವರ್ಷವೇ ಪ್ರಾರಂಭಿಸಬೇಕೆಂಬುದೇನು ? ನಾವು ಮುಂದಿನ ವರ್ಷವೇ ಪ್ರಾರಂಭಿಸಿ ಅವುಗಳನ್ನು ಕೈಕೊಳ್ಳಬಹುದು. ಆಗ ಈ ಯೋಜನೆ ಒಂದು ವರ್ಷ ಮುಂದಕ್ಕೆ ಹೋದೀತು ಅಷ್ಟೆ; ಅದರಂತೆ ನಾವು ಮಾಡೋಣ. ಸುಮ್ಮನೆ ಕಾರ್ಯವನ್ನು ಪ್ರಾರಂಭಿಸದೆ ಯೋಜನೆಯನ್ನು ಕೈಗೊಳ್ಳುವುದರಲ್ಲಿ ಅರ್ಥವಿಲ್ಲ. ಕಾಲವನ್ನು ವ್ಯರ್ಥವಾಗಿ ಕಳೆದ ಹಾಗಾಗುತ್ತದೆ ಮತ್ತು ಜನರೆಲ್ಲಾ ನಿರುತ್ಸಾಹಿಗಳಾಗಿ ಒಂದು ಅನುಮಾನಕ್ಕೆ ಕಾರಣವಾಗುತ್ತೆ. ಇದಕ್ಕೆಲ್ಲಾ ಅವಕಾಶವಿರದಂತೆ ಮಾಡಲು ನಾನು ಹೇಳಿದಂತೆ ತಾವು ಇದನ್ನು ಮುಂದಿನ ಸಾಲಿಗೆ ಕೈಗೊಂಡರೆ ಒಳ್ಳೆಯದಾಗುತ್ತದೆ.

ಈ ಪ್ಲಾನಿಂಗ್ ಕಮಿಷನ್ನಿನವರು ಮಾಡಿರತಕ್ಕ ಈ ಯೋಜನೆಗಳಲ್ಲಿ ಕೆಲವು ಬಹಳ ಉಪಯುಕ್ತವಾದವುಗಳಿವೆ. ಅವುಗಳ ಬಗ್ಗೆ ನಾವು ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಅವರು ಸೂಚಿಸಿದ್ದಾರೆ. ಅವರು ಈ ಬಗ್ಗೆ ಹಣದ ಸಹಾಯಕ್ಕೆ ಕೆಲವು ಹೊಸ ಹೊಸ ತೆರಿಗೆಗಳನ್ನು ಕೈಗೊಳ್ಳಬೇಕೆಂತಲೂ ಸೂಚಿಸಿದ್ದಾರೆ. ಆದರೆ ಅವರ ಸಲಹೆಗಳಿಗನುಸಾರವಾಗಿ ಕೆಲ ಕೆಲವು ಹೊಸ ಕಾನೂನುಗಳ ಅಗತ್ಯ ಇರುತ್ತದೆಂದು ನಾನು ಭಾವಿಸಿದ್ದೇನೆ.

ಈ ಕೋ-ಆಪರೇಟಿವ್ ಫಾರ್ಮಿಂಗ್ ವಿಚಾರದಲ್ಲಿ ನಮಗೊಂದು ಸರಿಯಾದ ಕಾನೂನು ಇಲ್ಲದಿದ್ದಲ್ಲಿ ಒಂದು ಗ್ರಾಮದಲ್ಲಿ ಅಧಿಕ ಸಂಖ್ಯಾತರು ಈ ಕೋ-ಆಪರೇಟಿವ್ ಫಾರ್ಮಿಂಗ್ ರೀತ್ಯಾ ಭೂಮಿ ವ್ಯವಸಾಯ ನಡೆಸಬೇಕೆಂದು ಇಷ್ಟಪಟ್ಟಾಗ ಅಲ್ಲಿರತಕ್ಕ ಕನಿಷ್ಠಪರಿಮಿತಿ ಜನರು ಅದಕ್ಕೆ ನಾವು ಒಪ್ಪುವುದಿಲ್ಲವೆಂದು ಹೇಳಿದಾಗ್ಗೆ, ನಾವು ಆಗ ಏನೂ ಮಾಡುವುದಕ್ಕಾಗುವುದಿಲ್ಲ. ಆ ರೀತಿ ಆಗತಕ್ಕ ಒಂದು ಯೋಜನೆಯನ್ನು ಇದರಲ್ಲಿ ಸೂಚಿಸಿದ್ದಾರೆ.

ಹಾಗೇಯೇ, ಇದರಲ್ಲಿ ಮತ್ತೊಂದು ವಿಚಾರ ಹೇಳಿದ್ದಾರೆ. ಈಗ ಛಿದ್ರ ಛಿದ್ರವಾಗಿ ಹೋಗಿರತಕ್ಕ ಹಿಡುವಳಿಗಳನ್ನೆಲ್ಲಾ ಒಂದುಗೂಡಿಸಲು ಒಂದು ಸಲಹೆ ಮಾಡಿದ್ದಾರೆ. ಆದರೆ ಇದನ್ನು ಕಾರ್ಯಗತಮಾಡಲು ಅವರೇನು ಸೂಚನೆಗಳನ್ನು ಕೊಟ್ಟಿದ್ದಾರೋ ಅವುಗಳನ್ನು ಸಂಸ್ಥಾನಾದ್ಯಂತ ಜಾರಿಗೆ ತಂದು, ಅವುಗಳನ್ನು ಜನರು ಅನುಸರಿಸುವಂತೆ ಮಾಡತಕ್ಕ ಒಂದು ಕಾರ್ಯಕ್ರಮವನ್ನು ಸರ್ಕಾರದವರು ಕೈಗೊಳ್ಳಬೇಕಾಗಿದೆ. ಆದರೆ ಅಂಥ ಒಂದು ಯೋಜನೆಯನ್ನು ದೇಶದ ಮುಂದೆ ಇಡುವುದಕ್ಕೆ ಮುಂಚಿತವಾಗಿಯೇ ಅದರ ಸಾಧ್ಯಾಸಾಧ್ಯತೆಗಳನ್ನು ಚರ್ಚೆಗೆ ತೆಗೆದುಕೊಂಡು, ಪರಿಶೀಲನೆ ಮಾಡಿ, ಕೆಲಸ ನಡೆಸತಕ್ಕದ್ದು ಬಹಳ ಒಳ್ಳೆಯದೆಂದು ನಾನು ಹೇಳುತ್ತೇನೆ.

ನಮ್ಮ ಮುಂದೆ ಈಗ ಪ್ಲಾನಿಂಗ್ ಸಮಿತಿಯವರು ತಯಾರಿಸಿ ಇಟ್ಟಿರತಕ್ಕ ಯೋಜನೆಗಳ ಪೈಕಿ ಬಹಳ ಪ್ರಾಮುಖ್ಯವಾದದ್ದು ಯಾವುದೆಂದರೆ—ಜನರಹೊಟ್ಟೆಗೆ ಆಗುವಷ್ಟು ಆಹಾರ, ಮೈಗೆ ಮುಚ್ಚಿಕೊಳ್ಳುವಷ್ಟು ಬಟ್ಟೆ ಮತ್ತು ವಾಸ ಮಾಡಲಿಕ್ಕೆ ಅನುಕೂಲವಾದ ಒಂದು ಗೂಡು, ಈ ಮೂರು ಬಹಳ ಪ್ರಾಮುಖ್ಯವಾದವುಗಳೆಂದು ಇವುಗಳನ್ನು ಅವರು ತಮ್ಮ ಗಮನದಲ್ಲಿಟ್ಟುಕೊಂಡು ಇವುಗಳನ್ನು ಸಾಧಿಸಲೇಬೇಕೆಂದು ತಿಳಿಸಿದ್ದಾರೆ. ಇದು ನ್ಯಾಯವಾಗಿಯೇ ಇದೆ. ಜನರಿಗೆ ಹೊಟ್ಟೆ ತುಂಬುವಷ್ಟು ಆಹಾರ, ಮೈಮುಚ್ಚಿಕೊಳ್ಳುವಷ್ಟು ಬಟ್ಟೆ ಇಲ್ಲದೆ, ವಾಸಿಸಲು ಪಾಶ್ಚಿಮಾತ್ಯ ರಾಷ್ಟ್ರಗಳ ನಾಯಿಗಳಿಗೂ ಸಹ ಯೋಗ್ಯವಾಗಿಲ್ಲದಂಥಾ ವಾಸದ ಮನೆಗಳಲ್ಲಿ ವಾಸಿಸತಕ್ಕವರು ದೇಶಾಭಿವೃದ್ಧಿಗೆ ಏನು ತಾನೆ ಮಾಡಲು ಸಾಧ್ಯವಾದೀತು ? ಏನೂ ಆಗಲಾರದು. ಆದುದರಿಂದ ದೇಶಾಭಿವೃದ್ಧಿಯ ಕಡೆಗೆ ಜನರ ಮನಸನ್ನು ಸೆಳೆಯಬೇಕಾದ್ದರೆ ಮೊದಲು ಅವರಿಗೆ ಸರಿಯಾದ ಒಂದು ವಾಸದ ಮನೆ, ಮೈತುಂಬ ಬಟ್ಟೆ ಮತ್ತು ಹೊಟ್ಟೆಗೆ ಸಾಕಾಗುವಷ್ಟು ಆಹಾರ ಬೆಳೆಯಲು ತಕ್ಕಷ್ಟು ಭೂಮಿ, ಇವುಗಳನ್ನು ಮೊದಲು ಜನರಿಗೆ ಒದಗಿಸತಕ್ಕದ್ದು ಅತ್ಯಗತ್ಯವೆಂದು ಈ ಪ್ಲಾನಿಂಗ್ ಸಮಿತಿಯವರು, ವ್ಯವಸಾಯಗಾರರ ಅಭಿವೃದ್ಧಿ,

(ಶ್ರೀ ಟಿ. ಮಾದಯ್ಯಗೌಡರು)

ಹೆಚ್ಚು ಆಹಾರ ಬೆಳೆಯುತ್ತಕ್ಕ ಸೌಲಭ್ಯಗಳು ಮತ್ತು ಹೆಚ್ಚಾಗಿ ರೈತರು ವಾಸ ಮಾಡುವಂಥ ಗ್ರಾಮಗಳ ಅಭಿವೃದ್ಧಿ ಮೊದಲಾಗಬೇಕೆಂದು ಈ ಮೂರು ಮುಖ್ಯ ಬಾಬುಗಳಿಗೆ ಪ್ರಥಮಪ್ರಾಶಸ್ತ್ಯವನ್ನು ನೀಡಿದ್ದಾರೆಂದು ಇದರಿಂದ ಅರ್ಥವಾಗುತ್ತದೆ. ಅವರು ತಿಳಿಸಿರುವ 3 ಬಾಬುಗಳೂ ಎಂದರೆ, ವ್ಯವಸಾಯ, ಆಹಾರ ಉತ್ಪನ್ನ ಮತ್ತು ಗ್ರಾಮಾಭಿವೃದ್ಧಿಕಾರ್ಯ ಬಹಳ ಪ್ರಾಮುಖ್ಯ ವಿಚಾರಗಳು. ಅವುಗಳ ಬಗ್ಗೆ ಒಂದು ಸಲಹೆಯನ್ನು ಸಹ ಮಾಡಿದ್ದಾರೆ. ಈ ಮೂರು ಮುಖ್ಯ ಬಾಬುಗಳನ್ನು ಆಯಾಯ ಸರ್ಕಾರದ ಮಾನ್ಯ ಮುಖ್ಯ ಮಂತ್ರಿಗಳೇ ಜವಾಬ್ದಾರಿಗೆ ತೆಗೆದುಕೊಂಡು ಇವುಗಳ ಅಭಿವೃದ್ಧಿಗೆ ಹೆಚ್ಚು ಗಮನ ನೀಡಬೇಕೆಂದು. ಈ ಬಗ್ಗೆ ಅವರು ಒಂದು ಸಮಿತಿಯನ್ನು ನೇಮಕಮಾಡಿ, ಆ ಸಮಿತಿಗೆ ಅವರೇ ಅಧ್ಯಕ್ಷರಾಗಿದ್ದುಕೊಂಡು ಕೆಲಸಗಳು ನಡೆಸಲ್ಪಟ್ಟರೆ ಅನುಕೂಲವಾಗುತ್ತೆಂದು ತಿಳಿಸಿದ್ದಾರೆ. ಆ ಪ್ಲಾನಿಂಗ್ ಸಮಿತಿಯವರೂ ಈ ರೀತಿಯ ಒಂದು ಅಭಿಪ್ರಾಯವನ್ನು 91ನೆಯ ಪುಟದಲ್ಲಿ ಸೂಚಿಸಿದ್ದಾರೆ

"The Rural Development Board consisting of heads of the various Development Departments and non official representatives with the Chief Minister of the State as Chairman........"

ಎಂದು ಹೇಳುತ್ತಾರೆ. ಮಾನ್ಯ ಮುಖ್ಯ ಮಂತ್ರಿಗಳು ಈ ಸಮಿತಿಯ ಅಧ್ಯಕ್ಷರಾಗಿ ಅಭಿವೃದ್ಧಿಗೆ ಸಂಬಂಧಪಟ್ಟ ಎಲ್ಲಾ ಇಲಾಖೆ ಮುಖ್ಯಾಧಿಕಾರಿಗಳೂ ಸದಸ್ಯರಾಗಿ ಈ ಸಮಿತಿಯಲ್ಲಿದ್ದು ದೇಶದ ಪ್ರಗತಿಯಲ್ಲಿ ಅತ್ಯಂತ ಆಸಕ್ತಿಯುಳ್ಳ ಖಾಸಗೀ ಮಹನೀಯರೂ ಇದರಲ್ಲಿ ಸದಸ್ಯರಾಗಿರುವುದರಿಂದ ಇಡೀ ರಾಜ್ಯ ದೇಶದ ಸಮಸ್ತವಾದ ಅಭಿವೃದ್ಧಿಗೂ ಸಾಧಕವಾಗುವಂಥ ಏರ್ಪಾಡು ಮಾಡುತ್ತಾರೆ. ಅಲ್ಲದೆ ನಾನಾ ಇಲಾಖಾ ಅಧಿಕಾರಿಗಳ ಸಹಕಾರದಿಂದ ಕೆಲಸ ಮಾಡಿದರೆ ಈ ಪ್ರಾಮುಖ್ಯವಾದ ವಿಷಯಗಳಿಗೆ ತಕ್ಕ ಗಮನಕೊಟ್ಟು ಆಹಾರ ಉತ್ಪತ್ತಿ, ಗ್ರಾಮಾಭಿವೃದ್ಧಿ ಮುಂತಾದವು ಸುಸೂತ್ರವಾಗಿ ನಡೆಯುತ್ತವೆಯೇ ವಿನಾ ಇಲ್ಲದಿದ್ದರೆ ಅಷ್ಟು ಸುಸೂತ್ರವಾಗಿ ನಡೆಯುತ್ತವೆ ಎಂದು ನಾನು ಭಾವಿಸುವುದಿಲ್ಲ. ಈ ವಿಚಾರಕ್ಕೆ ನಮ್ಮ ಸರ್ಕಾರ ಬಹಳ ಮುಖ್ಯವಾಗಿ ಗಮನಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಿ ಒತ್ತಿ ಹೇಳಲು ಬಯಸುತ್ತೇನೆ. ಇದರಲ್ಲಿ ಮಾನ್ಯ ಮುಖ್ಯ ಮಂತ್ರಿಗಳೇ ಇರಬೇಕೆಂದು ಹೇಳುವಾಗ ಮತ್ತ್ಯಾವ ಮಾನ್ಯ ಮಂತ್ರಿಗಳ ವಿಚಾರಕ್ಕೆ ಹೋಗಬೇಕಾಗಿಲ್ಲ. ಮಾನ್ಯ ಮುಖ್ಯ ಮಂತ್ರಿಗಳೇ ಚೇರ್ಮನ್ನರಾಗಿರುವ ಒಂದು ಸಮಿತಿಯಲ್ಲಿ ಅವರ ಇಲಾಖೆಯ ಅಧಿಕಾರಿಗಳೂ ಇದ್ದು ಸಹಕಾರವಿರುವುದರಿಂದ ಸೈಕಲಾಜಿಕಲ್ ಎಫೆಕ್ಟು ಬಹಳ ಉತ್ತಮ ರೀತಿಯಲ್ಲಾಗುತ್ತವೆ. ಅದು ಅನಿವಾರ್ಯ. ಇದೇ ರೀತಿ ಕೋ ಆರ್ಡಿನೇಷನ್ ಕಮಿಷನ್ನವರೂ ಅಭಿಪ್ರಾಯಪಟ್ಟಿದ್ದಾರೆ. ಆ ಅಭಿಪ್ರಾಯ ಸೂಕ್ತವೆಂದು ಕಂಡುಬರುತ್ತದೆ. ಕಲವು ಬಾಬುಗಳು ಏನು ಕೊಟ್ಟಿದ್ದಾರೆಯೋ ಈ ಯೋಜನೆಯಲ್ಲಿ ಅವನ್ನು ವಿಮರ್ಶೆ ಮಾಡಿದರೆ ಹೊನ್ನೆಮರಡು ಮತ್ತು ಮೇಕೆದಾಟು ಪ್ರಾಜೆಕ್ಟುಗಳಿಗೆ ಯಾವ ವಿಧವಾದ ವ್ಯವಸ್ಥೆಯನ್ನೂ ಈ ಯೋಜನೆಯಲ್ಲಿ ಮಾಡದಿರುವುದು ಬಹಳ ವಿಷಾದಕರ. ಈ ಹೊನ್ನೆಮರಡು ಯೋಜನೆಯಿಂದ 3 ಲಕ್ಷ 6 ಸಾವಿರ ಕಿಲೋವಾಟುಗಳ ವಿದ್ಯುಚ್ಛಕ್ತಿ ಮತ್ತು ಮೇಕೆದಾಟು ಪ್ರಾಜೆಕ್ಟಿನಿಂದ 24 ಸಾವಿರ ಕಿಲೋವಾಟುಗಳ ವಿದ್ಯುಚ್ಛಕ್ತಿ ಉತ್ಪತ್ತಿಯಾಗುತ್ತದೆ. ಇದಕ್ಕಾಗುವ ಖರ್ಚು ಅಷ್ಟೇನೂ ಹೆಚ್ಚಿಲ್ಲ. ಒಂದು ಹೆಚ್ಚಿನ ಆದಾಯ ಬರುವ ಈ ಪ್ರಾಜೆಕ್ಟುಗಳನ್ನು......

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇದಕ್ಕೆ ಎಷ್ಟು ಖರ್ಚಾಗುತ್ತದೆ?

ಶ್ರೀ ಟಿ. ಮಾದಯ್ಯಗೌಡರು.—ಅದು ನನಗೆ ಸರಿಯಾಗಿ ಗೊತ್ತಿಲ್ಲ. ನನಗೆ ಗೊತ್ತಿರುವ ಹಾಗೆ ಇದರಿಂದ ಒಂದು ಹೆಚ್ಚಿನ ಪರ್ಸೆಂಟೇಜ್ ಬರುತ್ತವೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—22 ಕೋಟಿ.

ಶ್ರೀ ಟಿ. ಮಾದಯ್ಯಗೌಡರು.—ಅದು ನನಗೆ ಗೊತ್ತಿಲ್ಲ. ಈ ಪ್ರಾಜೆಕ್ಟುಗಳನ್ನು ಸೇರಿಸಿದ್ದರೆ ಚೆನ್ನಾಗಿತ್ತು. ವಿದ್ಯುಚ್ಛಕ್ತಿಯ ಆವಶ್ಯಕತೆ ಹೆಚ್ಚಿ ಜನರು ಮುಂದುವರಿಯುವ ಅವಕಾಶವಿರುವ ಈ ಕಾಲದಲ್ಲಿ ವಿದ್ಯುಚ್ಛಕ್ತಿ ಉತ್ಪನ್ನವಾಗುವ ಯೋಜನೆಯನ್ನು ಕೈಬಿಟ್ಟಿರುವುದಾದರೂ ನ್ಯಾಯವಲ್ಲ. ಕಮಿಷನ್ನವರ ಮುಂದೆ ಈ ಕೇಸು ಏನಿದೆಯೋ ಅದನ್ನು ಇನ್ನೂ ಬಲವತ್ತರವಾಗಿಟ್ಟು ಸಾಧ್ಯವಾದರೆ 5 ವರ್ಷದೊಳಗೇ ಈ ಪ್ಲಾನಿನಲ್ಲೇ ತೆಗೆದುಕೊಳ್ಳುವ ಹಾಗೆ ಯೋಜನೆ ಮಾಡಬೇಕು.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇದರ ವಿಚಾರ ವಿದ್ಯುಚ್ಛಕ್ತಿ ಇಲಾಖೆ ಮಂತ್ರಿಗಳು ಮತ್ತು ಗೃಹ ಸಚಿವರು ಹೋದಾಗ ಮತ್ತು ಮುಖ್ಯಮಂತ್ರಿಗಳು ಹೋದಾಗ ಕೂಡ ಹೇಳಿದ್ದಾರೆ. ಸಪ್ಲಿಮೆಂಟರಿ ಯೋಜನೆಯಲ್ಲಿ ಮಾಡುತ್ತೇವೆಂದು ಭರವಸೆಕೊಟ್ಟಿದ್ದಾರೆ. ಆದ್ದರಿಂದ ಈಗಲೇ ಮಾಡಬೇಕಾಗಿತ್ತು ಎಂದು ಹೇಳುವುದು ಸರಿಯಲ್ಲ.

ಶ್ರೀ ಟಿ. ಮಾದಯ್ಯಗೌಡರು.—300 ಕೋಟಿ ರೂಪಾಯಿಗಳ ಸಪ್ಲಿಮೆಂಟರಿ ಯೋಜನೆಯಲ್ಲಿ ಸೇರಿಸುವುದಕ್ಕೆ ಅವಕಾಶ ಕಡಿಮೆ. ಹೊರಗಿನವರು ಹಣ ಕೊಟ್ಟರೆ ಆ ಹಣವಲ್ಲ ಇಂಡಿಯಾ ಸರ್ಕಾರದ ಎಷ್ಟು ಯೋಜನೆಗಳಿವೆಯೋ ಅವನ್ನು ನೋಡಿ ಅವುಗಳಿಗೆ ಹಣ ಕೊಟ್ಟು ಮಿಗುವುದಾದರೆ ಈ ಮೇಕೆದಾಟು, ಹೊನ್ನೆಮರಡು ಪ್ರಾಜೆಕ್ಟುಗಳನ್ನು ತೆಗೆದುಕೊಳ್ಳುತ್ತಾರೆಂದು ಊಹಿಸಬಹುದು. ಆದರೆ ಇವು ಸಪ್ಲಿಮೆಂಟರಿ ಪ್ಲಾನ್‌ನಲ್ಲಿ ಸೇರದೆ ಈ ಪಂಚವಾರ್ಷಿಕ ಯೋಜನೆಯಲ್ಲೇ ಸೇರಬೇಕಾಗಿತ್ತು ಎಂಬುದು ನನ್ನ ಅಭಿಪ್ರಾಯ. ಒಂದು ವೇಳೆ ಹೊನ್ನೆಮರಡು ಮತ್ತು ಮೇಕೆದಾಟು ಪ್ರಾಜೆಕ್ಟುಗಳನ್ನು ಸ್ವಲ್ಪ ನಿಧಾನವಾಗಿ......

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದನ್ನು ಸೇರಿಸುವುದಕ್ಕೆ ಪ್ರಯತ್ನಪಡುತ್ತೇವೆ. ಈಗಲೂ ಇವತ್ತಿಗೂ ಪ್ರಯತ್ನಬಿಟ್ಟಿಲ್ಲ.

ಶ್ರೀ ಟಿ. ಮಾದಯ್ಯಗೌಡರು.—ಲಕ್ಕವಳ್ಳಿ ಪ್ರಾಜೆಕ್ಟು ಮತ್ತು ಭದ್ರಾ ಪ್ರಾಜೆಕ್ಟನ್ನು ಮುಂದೆ ಹಾಕಿರುವುದನ್ನು ನ್ಯಾಯವೆಂದು ಯಾರೂ ಒಪ್ಪಲಾರರು. ಏಕೆಂದರೆ ಈ ಲಕ್ಕವಳ್ಳಿ ಪ್ರಾಜೆಕ್ಟು ಪ್ರಾರಂಭವಾಗಿ ಬಹಳ ದಿವಸಗಳಾದವು. ಇದುವರೆಗೆ ಸುಮಾರು 70 ಲಕ್ಷ ರೂಪಾಯಿಗಳಷ್ಟೋ ಏನೋ ಖರ್ಚು ಮಾಡಿದೆ. ಹಾಗೆ ಮಾಡಿ ಅದಕೆ ಬೇಕಾದ ಸಿಬ್ಬಂದಿ ಒದಗಿಸಿಕೊಂಡು ಅದರಿಂದ ನಮ್ಮ ದೇಶವಲ್ಲ ಹೆಚ್ಚು ಆಹಾರ ಬೆಳೆಯುವ ರೀತಿಯಲ್ಲಿ ಸ್ವಾವಲಂಬನೆಗೆ ಬರುವುದಕ್ಕೆ ಅವಕಾಶವಾಗುತ್ತದೆ ಎಂದು ಆಶೋತ್ತರವಿಟ್ಟುಕೊಂಡಿರುವ ಕಾಲದಲ್ಲಿ ಈ ಯೋಜನೆಯನ್ನು ತಂದು ಕೇವಲ ಈ ಐದು ವರ್ಷಗಳಲ್ಲಿ ನಷ್ಟ ಮಾತ್ರಕ್ಕೆ ಸ್ವಲ್ಪ ಹಣ ಖರ್ಚುಮಾಡುತ್ತಿದ್ದೇವೆ. ಸುಮಾರು 18 ಲಕ್ಷ ರೂಪಾಯಿಗಳನ್ನು ಖರ್ಚುಮಾಡುತ್ತೇವೆ, ಆ ಮೇಲೆ 17 ಕೋಟಿಯ ಯೋಜನೆ ತೆಗೆದುಕೊಳ್ಳಲಾಗುತ್ತದೆ ಎಂದು ನಮ್ಮ ಮುಂದಿರುವ ಯೋಜನೆ

ಯಲ್ಲಿ ಹೇಳಿವೆ. ಇದು ನಿರಾಶೆಯನ್ನುಂಟುಮಾಡಿದೆ. ಎಷ್ಟೇ ಕಷ್ಟವಾದರೂ ಈ ಭದ್ರಾ ಪ್ರಾಜೆಕ್ಟನ್ನು ಕೈಗೊಂಡಿದ್ದರೆ ಇನ್ನು ನಾಲ್ಕೈದು ವರ್ಷಗಳಲ್ಲಿ ಸುಮಾರು ಒಂದು ಲಕ್ಷ 80 ಸಾವಿರ ಎಕರೆ ನೀರಾವರಿ ಆಗುತ್ತಿತ್ತು.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಮೊದಲೇ ಹೇಳಿದಹಾಗೆ ತೊಂದರೆಯೇನೆಂಬುದನ್ನು ನೆನಪಿನಲ್ಲಿಡಬಲ್ಲೆ. 20 ಕೋಟಿ ರೂಪಾಯಿಗಳ ಹಣ ಸಿಕ್ಕುವುದು. ಹೇಗೆ? ಖರ್ಚುಮಾಡುವುದು ಹೇಗೆ? ಈ ಪ್ಲಾನ್ ಹೇಗೆ ಮಾಡಿದೆ, ಯಾವ ಆಧಾರದ ಮೇಲೆ ಮುಂದುವರಿಸಿದೆ. ಎಂದು ಹೇಳಿದೆ. ನಮ್ಮ ಸಂಸ್ಥಾನಕ್ಕೆ ಈ 5 ವರ್ಷದಲ್ಲಿ ಎಷ್ಟು ಸಾಧಿಸಬಹುದು, ಎಷ್ಟು ಹಣ ಸಂಸ್ಥಾನದಲ್ಲಿ ಒದಗಬಹುದು, ಹೊರಗಿನಿಂದ ಎಷ್ಟು ಸಹಾಯ ದೊರೆಯಬಹುದು ಎಂಬ ಆಧಾರದ ಮೇಲೆ ಮಾಡಿದೆ. ಇದನ್ನು ಬಿಟ್ಟು 22 ಕೋಟಿ ಯೋಜನೆ ತೆಗೆದುಕೊಳ್ಳಬೇಕು. 5 ವರ್ಷದಲ್ಲೇ ಅದನ್ನು ಮುಗಿಸಬೇಕು ಎಂದು ಹೇಳಿದರೆ ಸಾಧ್ಯವಾಗುವುದಿಲ್ಲ. ಲಕವಳ್ಳಿ ಪ್ರಾಜೆಕ್ಟು 15 ವರ್ಷದ ಪ್ರೋಗ್ರಾಂನಲ್ಲಿ ಸೇರಬೇಕೆಂದು ಯೋಚಿಸಿ ಮಾಡಿದೆ.

ಶ್ರೀ ಟಿ. ಮಾದಯ್ಯಗೌಡರು.—ಅದನ್ನು ಸರ್ವೆ ಮಾಡಿ ಪ್ಲಾನ್ ಮಾಡಿದಾಗ, ಪ್ಲಾನಿಂಗ್ ಕಮಿಷನ್ ಯೋಜನೆಯಲ್ಲಿದ್ದಾಗ, ಎಷ್ಟು ವರ್ಷದಲ್ಲಿ ಸಾಧಿಸಬೇಕೆಂದು ತಾವು ಯೋಚನೆ ಮಾಡಿದ್ದೀರಿ ? ಆಗ 20 ವರ್ಷದಲ್ಲಿ ಕೆರೆ ಕಟ್ಟುತ್ತೇವೆಂದು ಯೋಚನೆಮಾಡಿರಲಿಲ್ಲ, ಅವಷ್ಟು ಜಾಗ್ರತೆ ಸಾಲ ಸೋಲವಮಾಡಿ ಕ್ಯಾಪಿಟಲ್ ವರ್ಕ್ಸ್ ಸಾಧಿಸಬೇಕೆಂದು ಯೋಚನೆ ಮಾಡಲಿಲ್ಲವೆ? ಈಗೇಕೆ ಅದನ್ನು ನಿಲ್ಲಿಸಿ ಸುಮ್ಮನೆ 5 ವರ್ಷ ಅಲ್ಪಸ್ವಲ್ಪ ಹೀಗೆ ವರ್ಷಕ್ಕೆ 3—40 ಲಕ್ಷ ಖರ್ಚು ಮಾಡುತ್ತಾ ಆ ಮೇಲೆ ಮುಂದೆ 10—15 ವರ್ಷಕ್ಕೆ ಸಾಧಿಸಬೇಕೆಂದು ಹೇಳುವದು ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—176 ಲಕ್ಷ ರೂಪಾಯಿಗಳು.

ಶ್ರೀ ಟಿ. ಮಾದಯ್ಯಗೌಡರು.—ಸಾಧ್ಯವಾದಮಟ್ಟಿಗೆ ಈ ಐದು ವರ್ಷದೊಳಗೇ ಈ ಒಂದು ಯೋಜನೆ ಸಾಧಿಸುವುದಾದರೆ ನಮ್ಮ ದೇಶದ ಬಡತನ, ಆಹಾರದ ಅಭಾವ, ಹಾಹಾಕಾರ ತೊಲಗುವುದಕ್ಕೆ ಅವಕಾಶವಾಗುತ್ತದೆ. ಅದ್ದರಿಂದ ಏನಾದರೂ ಮಾಡಿ ಹೋರಾಡಿ ತಾವು ಇದನ್ನು ಸೇರಿಸಬೇಕು. ಕೊನೆಯಪಕ್ಷ 5 ವರ್ಷದಲ್ಲಿ ಅರ್ಧ ಕೆಲಸವಾದರೂ ಪೂರ್ತಿಯಾಗುವ ಹಾಗೆ ಮಾಡುವುದಕ್ಕೆ ಪ್ರಯತ್ನ ಪಡಬೇಕೆಂದು ಸಲಹೆ ಮಾಡುತ್ತೇನೆ. ಇರಿಗೇಷನ್ ಅಂಡ್ ಪವರ್ ಡೆವಲಪ್‌ಮೆಂಟ್ ವೇಸ್ ಅಂಡ್ ಮೀನ್ಸ್ ಫಂಡ್ ಎಂದು ಮಾಡಬೇಕು. ಹಾಗೆ ಮಾಡತಕ್ಕದ್ದು ಸೂಕ್ತ ಎಂದು ಯೋಜನೆ ಇಲ್ಲವೆ. ಅದು ನಾನ್ ಲ್ಯಾಪ್ಸಬಲ್ ಆಗಿರಬೇಕು. ಇದನ್ನು ಏರ್ಪಾಡು ಮಾಡುವುದರಿಂದ ಇರುವ ಒಂದು ವಿಧವಾದ ಕಷ್ಟ ತಪ್ಪುವುದಿಲ್ಲ ಎಂದು ತಿಳಿದು ಸಣ್ಣ ಪುಟ್ಟ ಯೋಜನೆಗಳನ್ನಾದರೂ ತರಬಹುದಾಗಿತ್ತು. 123ನೆಯ ಪುಟದಲ್ಲಿ ಕೊಟ್ಟಿರುವ ಈ ವಿಷಯದಲ್ಲಿ ಹೀಗೆ ಮಾಡಿಕೊಳ್ಳಬೇಕೆಂದು ಸೂಚಿಸಿ ಇದನ್ನು ಇಲ್ಲಿಗೆ ಬಿಡುತ್ತೇನೆ.

ಅರಣ್ಯಾಭಿವೃದ್ಧಿ ವಿಚಾರ ಬಹಳ ಪ್ರಾಮುಖ್ಯವಾದ ವಿಚಾರವೆಂದು ಗಣನೆಗೆ ತೆಗೆದುಕೊಂಡು ತೀವ್ರವಾದ ಯೋಜನೆ ಮಾಡಿದ್ದಾರೆ. ಹಾಗೆಯೇ ನಮ್ಮ ಸರ್ಕಾರದವರೂ ಸಹ ಗಣನೆಗೆ ತೆಗೆದುಕೊಳ್ಳುವುದು ನ್ಯಾಯವಾಗಿದೆ. ಎಲ್ಲಿಯವರೆಗೆ ನಾವು ಈ ಅರಣ್ಯವನ್ನು ಸಂಭದ್ರವಾಗಿ ಕಾಪಾಡಿಕೊಂಡು ಅದನ್ನು ಅಭಿವೃದ್ಧಿ ಪಡಿಸಿಕೊಂಡು ಹೋಗುತ್ತೇವೆಯೋ ಅಲ್ಲಿಯವರೆಗೆ ಎಲ್ಲಾ ವಿಧವಾದ ಸಂಪತ್ತು, ಅನುಕೂಲಗಳು ದೊರೆಯುತ್ತವೆ ಎಲ್ಲಿಯವರೆಗೆ ತಾತ್ಸಾರವಾಗಿ ಕಾಣುತ್ತೇವೆಯೋ ಅಲ್ಲಿಯವರೆಗೆ ಕಷ್ಟ ತಪ್ಪುವುದಿಲ್ಲ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ನಾನೂ ಅದೇ ಅಭಿಪ್ರಾಯ ಪಡುತ್ತೇನೆ. ಸಾಧಾರಣವಾಗಿ ಶೇಕಡ 25 ರಷ್ಟು ಭಾಗ ಅರಣ್ಯವಾಗಿದ್ದರೆ ಅಂಥ ದೇಶ ಸಂಪದಭಿವೃದ್ಧ ದೇಶವಾಗುತ್ತದೆಯೆಂದು ಹೇಳಿ ಅನೇಕ ದೇಶಗಳಲ್ಲಿ ಆ ಒಂದು ಪ್ರಮಾಣದಲ್ಲಿ ಅರಣ್ಯ ವಿಷಾದ ಸೂಚಿಸಿದ್ದಾರೆ. ನಮ್ಮ ದೇಶದಲ್ಲಾದರೂಕೂಡ ಪ್ರಮಾಣದಲ್ಲಿ ಅರಣ್ಯ ಇರಬೇಕೇ ಆ ಪ್ರಮಾಣದಲ್ಲಿ ಇಲ್ಲ ಬಹಳ ಮಟ್ಟಿಗೆ ಕಡಿಮೆಯಾಗುತ್ತಾ ಇದೆ. ವರ್ಷಂಪ್ರತಿ ಅರಣ್ಯದ ವಿಸ್ತೀರ್ಣ ಕಡಿಮೆಯಾಗುತ್ತಿದೆ. ವಿಸ್ತೀರ್ಣ ಒಂದೇ ಅಲ್ಲ; ಅರಣ್ಯಸಂಪತ್ತು ಕೂಡ ಕಡಿಮೆಯಾಗುತ್ತಾ ಇದೆ—ಎಂಬುದಾಗಿ ಶಂಕೆ ಪಡತಕ್ಕವರ ಪೈಕಿ ನಾನುಒಬ್ಬ. ನಾವು ಅನೇಕ ಸಂದರ್ಭಗಳಲ್ಲಿ ಹೇಳಿದ್ದೇವೆ: ಅರಣ್ಯದಲ್ಲಿ ಯಾವ ಗಿಡಮರಗಳನ್ನು ಬೆಳಸಬೇಕೋ ಅದನ್ನು ಒಂದು ಖಚಿತವಾದ ಯೋಜನೆಯ ಪ್ರಕಾರ ಮಾಡಬೇಕು. ಎಲ್ಲಿಯವರೆಗೆ ಈ ಅರಣ್ಯಸಂಪತ್ತನ್ನು ಅಭಿವೃದ್ಧಿಮಾಡಿಕೊಳ್ಳುವುದಕ್ಕೆ ಖಚಿತವಾದ ಮತ್ತು ಪರಿಪಕ್ವವಾದ ಒಂದು ಯೋಜನೆ ಇರುವುದಿಲ್ಲವೋ ಅಲ್ಲಿಯವರೆಗೆ ಖರ್ಚುಮಾಡುವ ಹಣವೆಲ್ಲಾ ನಷ್ಟವಾಗಿ ಹೊರಟುಹೋಗುತ್ತದೆ ಯೆಂದು ಶಂಕೆ ಪಡುತ್ತೇನೆ. ನಾನಾದರೂ ಕೇಳುತ್ತೇನೆ—ಶ್ರೀ ಮಾನ್ಯ ದಾಸಪ್ಪನವರೂ ಕೂಡ ಅರಣ್ಯಖಾತೆಯಲ್ಲಿ ಮಂತ್ರಿಗಳಾಗಿದ್ದರು—ಯಾವ್ಯಾವ ವರ್ಷ ಎಷ್ಟೆಷ್ಟು ಎಕರೆ ಅರಣ್ಯದಲ್ಲಿ ಗಿಡ ಮರಗಳನ್ನು ಬೆಳೆಸಿದ್ದೀರಿ; ಅವು ಈ ದಿನ ಎಷ್ಟೆಷ್ಟುಮಟ್ಟಿಗೆ ಅಭಿವೃದ್ಧಿಯಾಗುತ್ತಾ ಇದೆ; ಅಲ್ಲದೆ ಇದಕ್ಕೆ ಒಂದು ವಿಸ್ತೀರ್ಣವನ್ನು ಗೊತ್ತುಮಾಡಿ ಇದು ಇಂಥಾ ವರ್ಷ ನೆಟ್ಟಗಿಡ ಎಂಬುದಾಗಿ ಬೋರ್ಡ್ ಹಾಕಿ ಬೆಳೆಸುತ್ತಾ ಇದ್ದಾರೆಯೇ? ಇಲ್ಲದೇ ಹೋದರೆ ವರ್ಷಂಪ್ರತಿ ಯಾವ ಸ್ಥಳದಲ್ಲಿ ಹಾಕುತ್ತೀರೋ ಅದನ್ನು ಪ್ರತಿವರ್ಷವೂ ಈ ವರ್ಷ ಹಾಕಿದ್ದೆವೆಂದು ತೋರಿಸುತ್ತೀರೋ ಗೊತ್ತಿಲ್ಲ. ಅವನ್ನು ತಿಳಿದುಕೊಳ್ಳಬೇಕೆಂದು ಆಶಿಸುತ್ತೇನೆ. ಈ ರೀತಿ ಒಂದು ಪ್ಲಾನ್ ಇಟ್ಟುಕೊಂಡು ಮ್ಯಾಪ್ ತಯಾರುಮಾಡಿ, 1911ನೇ ಇಸವಿಯಲ್ಲಿ ಹಾಕಿದ ಗಿಡ, 1913ನೇ ಇಸವಿಯಲ್ಲಿ ಹಾಕಿದ ಗಿಡ, ಇಷ್ಟಿಷ್ಟುಮಟ್ಟಿಗೆ ಬೆಳೆದಿದೆ ಎಂಬುದನ್ನು ತೋರಿಸುವುದಕ್ಕೆ ಏರ್ಪಾಡುಮಾಡಿದ್ದೀರಾ ?

ಮಾನ್ಯ ಶ್ರೀ ಹೆಚ್. ಸಿ. ದಾಸಪ್ಪನವರು.—ಪ್ರತಿಯೊಂದಕ್ಕೂ ಅರಣ್ಯ ಇಲಾಖೆಯಲ್ಲಿ ಲೆಕ್ಕಾ ಇದೆ; working plan ಪ್ರಕಾರ ಮಾಡುತ್ತಾರೆ. ಯಾವ ಸಮಾಚಾರ ಬೇಕಾದರೂ ಕೊಡುವುದಕ್ಕೆ ಸಿದ್ಧವಾಗಿದ್ದೇನೆ. ಅದಕ್ಕೆ ಏನೂ ತೊಂದರೆಇಲ್ಲ, ಮಾನ್ಯ ಸದಸ್ಯರು ಶಂಕೆ ಪಡಲು, ಅನುಮಾನಪಡಲು ಎಡೆಇಲ್ಲ.

ಶ್ರೀ ಟಿ. ಮಾದಯ್ಯ ಗೌಡರು.—ಹಾಗಿರುವುದನ್ನು ತಿಳಿದುಕೊಳ್ಳಬೇಕೆಂದು ಆಶಿಸುತ್ತೇನೆ ಅದಕ್ಕೋಸ್ಕರ ಸುಮಾರು 30—40 ವರ್ಷದಲ್ಲಿ ಏನಾಗಿದೆಯೆಂಬುದನ್ನು ತಿಳಿಸುವ ಬಗ್ಗೆ ಒಂದು ಹಸ್ತಪತ್ರಿಕೆಯನ್ನು ನಮಗೆ ಒದಗಿಸಿದರೆ ಬಹಳ ಕೃತಜ್ಞರಾಗಿರುತ್ತೇವೆ.

ಮಾನ್ಯ ಹೆಚ್. ಸಿ. ದಾಸಪ್ಪನವರು.—1946ರಿಂದ 51ರ ವರೆಗೆ ಇದ್ದ ನಮ್ಮ 5 ವರ್ಷದ ಪಂಚವಾರ್ಷಿಕ ಯೋಜನೆ ಪ್ರಕಾರ 2813 ಎಕರೆ ಅಫಾರೆಸ್ಟೇಷನ್ ಆಗಿದೆ, 2843 ಮಣ ಲ್ಯಾಕ್ ಕಲ್ಟಿವೇಷನ್ ಆಗಿದೆ 40 ಎಕರೆ ಸಿಂಕೋನ ಕಲ್ಟಿವೇಷನ್ ಆಗಿದೆ. 55—56 ಟಾರ್ಗೆಟ್ಟು 3,000 ಎಕರೆ ಅಫಾರೆಸ್ಟೇಷನ್ 2,000 ಮಣ ಲ್ಯಾಕ್ ಕಲ್ಟಿವೇಷನ್, ಸಿಂಕೋನ 25 ಎಕರೆ,

ಶ್ರೀ ಟಿ. ಮಾದಯ್ಯಗೌಡರು.—ಎಲ್ಲಾ ಇದೆ; ಆದರೆ ಅದನ್ನು ವರದಿ ಅಥವಾ ಹಸ್ತಪತ್ರಿಕೆ ಮೂಲಕ ತಿಳಿಯ ಪಡಿಸಿದರೆ ಒಳ್ಳೆಯದು.

ಮಾನ್ಯ ಹೆಚ್. ಸಿ. ದಾಸಪ್ಪನವರು.—ಹಸ್ತಪತ್ರಿಕೆಗಿಂತ ತಾವೇ ಖುದ್ದಾಗಿ ಬಂದು ನೋಡುವುದು ಒಳ್ಳೆಯದು.

ಶ್ರೀ ಟಿ. ಮಾದಯ್ಯ ಗೌಡರು.—ಅರಣ್ಯದ ವಿಚಾರದಲ್ಲಿ ಈ ಪಂಚವಾರ್ಷಿಕ ಯೋಜನೆಯಲ್ಲಿ ಒಂದು ಸೂಚನೆ ಕೊಟ್ಟಿದ್ದಾರೆ. ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕೆಂಬ ಅಭಿಪ್ರಾಯವಿದ್ದಹಾಗಿದೆ. ಅದನ್ನು ಕೂಡ ನಮ್ಮ ಸರ್ಕಾರದವರು ಗಮನಿಸುತ್ತಾರೆಂದು ತಿಳಿದು ಕೊಂಡಿದ್ದೇನೆ.

"There should be a ban on any further encroachment on the forest area" ಮತ್ತು "The area under forests should be increased by planned afforestation"

ಇದನ್ನು ಗಮನಿಸಬೇಕೆಂದು ಹೇಳಿ ಅಲ್ಲಿಗೆ ಬಿಟ್ಟು ಬಿಡುತ್ತೇನೆ.

ಮತ್ತೊಂದು ವಿಚಾರ. ಭಗವಂತನ ದಯೆಯಿಂದ ನಮ್ಮ ದೇಶದಲ್ಲಿ ಖನಿಜಸಂಪತ್ತು ಹೇರಳವಾಗಿದೆ. ಅದಕ್ಕೆ ನಾವು ಭಗವಂತನಿಗೆ ಧನ್ಯವಾದವನ್ನು ಅರ್ಪಿಸುವುದಲ್ಲದೆ ಅದನು ರೂಢಿಸಿ ಕೊಳ್ಳುವುದಕ್ಕೆ ಶಕ್ತಿ ಸಾಮರ್ಥ್ಯವನ್ನು ಕರುಣಿಸಬೇಂದು ಭಗವಂತನನ್ನು ಪ್ರಾರ್ಥಿಸೋಣ. ಈಗಾಗಲೇ ಕಬ್ಬಿಣ ಇತ್ಯಾದಿಯಾದ ಮಿನರಲ್ ವೆಲ್ತ್‌ನ್ನು ರೂಢಿಸಿ ಉಪಯೋಗಿಸಿಕೊಂಡಿದ್ದೇವೆ. ಇನ್ನೂ ಅನೇಕವಾಗಿ ಇರತಕ್ಕವುಗಳನ್ನು ಸರ್ವೆ ಮಾಡಿ ಯಾವ್ಯಾವ ರೀತಿ ಬೆಳವಣಿಗೆ ಹೊಂದಬೇಕೋ ಎಂಬುದನ್ನು ಯೋಚನೆ ಮಾಡಬೇಕು. ಈಗ ಹಾಕಿರುವ ಪಂಚವಾರ್ಷಿಕ ಯೋಜನೆಯಲ್ಲಿ ಅವರು ಒದಗಿಸಿರುವ ಹಣ ಯಾವ ಪ್ರಯೋಜನಕ್ಕೂ ಬಾರದೇ ಇರತಕ್ಕದ್ದು ಎಂದು ಜಾಗ್ರತೆ ಯಾವ ಒಂದು ಖನಿಜ ಸಂಪತ್ತನ್ನು ಅಭಿವೃದ್ಧಿಮಾಡಿಕೊಂಡು, ದೇಶದ ಸಂಪತ್ತನ್ನು ಅಭಿವೃದ್ಧಿಪಡಿಸಿ ಕೊಳ್ಳಬಹುದೋ ಅದಕ್ಕೆ ಹೆಚ್ಚು ನಿಗಾಕೊಡದೇ ಇರುವುದು ಈ ಯೋಜನೆಯಲ್ಲಿ ಸರಿಯಲ್ಲ ಎಂದು ನಾನು ಅಭಿಪ್ರಾಯಪಡುತ್ತೇನೆ.

ರೈಲ್ವೆವಿಚಾರ ಹೇಳಬೇಕೆಂದು ನಾನು ಅಂದುಕೊಂಡಿದ್ದೆ. ಇಂಡಿಯಾದೇಶದಲ್ಲಿ ಯಾವ ಭಾಗದಲ್ಲೂ ಹೊಸದಾಗಿ ರೈಲ್ವೆಹಾಕಬೇಕೆಂದು ಇಲ್ಲದೇ ಇರುವಾಗ ಮೈಸೂರುದೇಶದಲ್ಲಿ ಆಗುತ್ತದೆಯೋ ಎಂದು ಹೇಳಬಹುದು. ನನಗಾದರೂ ಎನ್ನಿಸುತ್ತದೆ ಚಾಮರಾಜನಗರದಿಂದ ಮೆಟ್ಟುಪಾಳ್ಯಂಗೆ ಸೇರಿಸತಕ್ಕ ರೈಲ್ವೆ ನಮ್ಮ ದೇಶಕ್ಕೆ ಅತ್ಯಂತ ಪ್ರಧಾನವಾದದ್ದು ಎಂಬುದನ್ನು ಬಹಳ ವರ್ಷದಿಂದ ಸಾಧಿಸಿಕೊಂಡು ಬಂದಿದ್ದೇವೆ. ಬಹುಶಃ ಈ ಯೋಜನೆಗಳು ನಮ್ಮ ಮುಂದೆ ಇಲ್ಲದೆ ಇದ್ದ ಪಕ್ಷದಲ್ಲಿ ಈ ಸಭೆಯ ಮಾನ್ಯ ಸದಸ್ಯರೆಲ್ಲರೂ ಸರ್ಕಾರದವರನ್ನು ಒತ್ತಾಯಪಡಿಸಿ ಈ ಒಂದು ರೈಲ್ವೆಯನ್ನಾದರೂ ಹಾಕಿ ಕೊಳ್ಳುವುದಕ್ಕೆ ಏರ್ಪಾಡುಮಾಡಿಕೊಳ್ಳುತ್ತಾ ಇದ್ದೆವು, ನಿಲ್ಲಿಸುತ್ತಾ ಇರಲಿಲ್ಲ. ಅದನ್ನು ನಿಲ್ಲಿಸುವುದಕ್ಕೆ ಯಾರೂ ಒಪ್ಪುತ್ತಾ ಇರಲಿಲ್ಲ. ಈಗ ಪ್ಲಾನಿಂಗ್ ಕಮಿಷನರ ಯೋಜನೆ ಪ್ರಕಾರ ಹೊಸದಾಗಿ ರೈಲ್ವೆ ಹಾಕತಕ್ಕದನ್ನು 5—6 ವರ್ಷದ ನಂತರ ಯೋಚನೆ ಮಾಡೋಣ ಎಂದು ಹೇಳಿರುವುದು ನನಗಾದರೂ ಮನಸ್ಸಿಗೆ ತುಂಬ ವ್ಯಥೆಯನ್ನುಂಟು ಮಾಡುತ್ತದೆ.

ಮತ್ತೊಂದು ವಿಚಾರವೇನೆಂದರೆ: ನಮ್ಮದೇಶದಲ್ಲಿ ರಸ್ತೆಗಳ ಸ್ಥಿತಿ. ಇನ್ನು ನಾವು ಸರಿಯಾದರೀತಿಯಲ್ಲಿಟ್ಟುಕೊಳ್ಳುವುದನ್ನು ಕಲಿತುಕೊಂಡಿಲ್ಲ. ಅನೇಕರೀತಿಯಲ್ಲಿ ಪ್ರಗತಿ ಹೊಂದಿದ್ದರೂ ಕೂಡ ಈ ರಸ್ತೆಗಳ ಸ್ಥಿತಿ ಅದರಲ್ಲೂ ಹಳ್ಳಿಗಾಡಿನವರು ಉಪಯೋಗಿಸತಕ್ಕ ರಸ್ತೆಗಳ ಸ್ಥಿತಿ, ಬಹಳ ಹೀನಸ್ಥಿತಿಯಲ್ಲಿದೆ. ಯಾವ ಒಂದು ಗ್ರಾಮಕ್ಕೂ ಕೂಡ ಒಂದು ದೊಡ್ಡರಸ್ತೆ 5 ಮೈಲಿಗಳಿಗಿಂತಲೂ ಜಾಸ್ತಿ ದೂರದಲ್ಲಿರಕೂಡದು ಎಂದು ಈ ಪ್ಲಾನಿಂಗ್ ಕಮಿಷನರ ಯೋಜನೆಯಲ್ಲಿ ಹೇಳಿದ್ದಾರೆ. ನಮ್ಮದೇಶದಲ್ಲಿ ಚೆನ್ನಪಟ್ಟಣ ತೆಗೆದುಕೊಳ್ಳೋಣ ಇಲ್ಲಿ ಕೆಲವುಗ್ರಾಮಗಳು ಈ ದೊಡ್ಡರಸ್ತೆಗೆ 10 ಮೈಲಿ ದೂರದಲ್ಲಿದೆ ಇಂಥಾ ಅನೇಕ ಗ್ರಾಮಗಳಿವೆ, ಶೇಕಡ 50ಕ್ಕಿಂತ ಹೆಚ್ಚು ಗ್ರಾಮಗಳಿಗೆ ಈ ರಸ್ತೆ ಸೌಕರ್ಯ ಇಲ್ಲ. ಇರತಕ್ಕ ರಸ್ತೆಗಳು ಯಾವ ಸ್ಥಿತಿಯಲ್ಲಿವೆ ಎಂಬುದನ್ನು ಹೇಳಬೇಕಾದರೆ, ಅದು ಬರೀ ಚೆನ್ನಪಟ್ಟಣದಲ್ಲಿ ಮಾತ್ರವೆ ಅಲ್ಲ, ಬಹಳ ನಾಚಿಕೆಯಿಂದ ಹೇಳಬೇಕಾದ ದಂಥ ದುಸ್ಥಿತಿಯಲ್ಲಿವೆ. ಇರತಕ್ಕ ರಸ್ತೆ ಯೋಗ್ಯವಾಗಿಲ್ಲ. ಮತ್ತೆ ಸರ್ವಸಾಧಾರಣವಾಗಿ ಎಲ್ಲಾ ಗ್ರಾಮಗಳಿಗೂ ಕನಿಷ್ಟಪಕ್ಷ 5 ಮೈಲಿ ಫಾಸಲೆಯಲ್ಲಿ ದೊಡ್ಡ ರಸ್ತೆ ಇರಬೇಕೆಂದು ಈ ಯೋಜನೆಯಲ್ಲಿ ಹೇಳಿದ್ದಾರೆ. ಇದಕ್ಕೆ ಅವಕಾಶ ಮಾಡಲು ಒಂದು ತಕ್ಕ ಯೋಜನೆಯನ್ನು ನಮ್ಮ 5 ವರ್ಷದ ಯೋಜನೆಯಲ್ಲಿ ಮಾಡಿಲ್ಲವೆಂದು ನನಗೆ ತೋರುತ್ತದೆ.

ಈ ವಿಷಯದಲ್ಲಿ ಸ್ವಲ್ಪ ಹೆಚ್ಚಿಗೆ ಗಮನಕೊಡಬೇಕಾದದ್ದು ಅಗತ್ಯ. ಈಗೇನೋ ರೋಡ್-ರೀ-ಕ್ಲಾಸಿಫಿಕೇಷನ್ ಎಂದು ಮಾಡುತ್ತಿದ್ದಾರೆ. ಗ್ರಾಮದಿಂದ ಗ್ರಾಮಕ್ಕೆ ಹೋಗತಕ್ಕ ರಸ್ತೆಗಳನ್ನು ವರ್ಷಂಪ್ರತಿ ರಿಪೇರಿಗೆ ಅವಕಾಶಮಾಡಿಕೊಡುತ್ತೇವೆಂದು ಹೇಳಿದ್ದಾರೆ. ಆದರೆ, ಕೆಲವು ಕಡೆ ಬಹಳ ಹೀನಸ್ಥಿತಿಯಲ್ಲಿರತಕ್ಕ ಡಿಸ್ಟ್ರಿಕ್ಟ್‌ಬೋರ್ಡ್ ರಸ್ತೆಗಳನ್ನು 2ನೆಯ ಕ್ಲಾಸ್, ಮೂರನೆಯ ಕ್ಲಾಸ್ ರಸ್ತೆಗಳಾಗಿ ಮಾಡುವುದಕ್ಕೆ ಅವಕಾಶ ಕೊಡುತ್ತಾರೋ ಗೊತ್ತಿಲ್ಲ; ಇನ್ನೂ ಅನೇಕ ರಸ್ತೆಗಳನ್ನು ತರಗತಿವಾರಾಗಿ ವಾರ್ಪಡಿಸುವುದಕ್ಕೆ ಅವಕಾಶವಾಗಿಲ್ಲ. ಇವೆಲ್ಲವನ್ನೂ ಯೋಚನೆಮಾಡಿ ಹೆಚ್ಚಿನ ಶ್ರದ್ಧೆ ವಹಿಸಿ ಕೆಲಸ ನಡೆಸುವುದು ಅವಶ್ಯಕವೆಂದು ನಾನು ಹೇಳುತ್ತೇನೆ.

ಹಾಗೆಯೇ, ರೋಡ್ ಟ್ರಾನ್ಸ್‌ಪೋರ್ಟ್ ವಿಚಾರದಲ್ಲಿ ಈಗ ಬೊಂಬಾಯಿ ಸರ್ಕಾರದವರು ಸ್ಟೇಟ್ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ ಎಂದು ಏರ್ಪಡಿಸಿ ಬಹಳ ಸುವ್ಯವಸ್ಥಿತವಾಗಿ ನಡೆಸಿಕೊಂಡು ಬರುತ್ತಿದ್ದಾರೆಂದು ಪ್ಲಾನಿಂಗ್ ಕಮಿಷನರ್‌ರವರೇ ಹೇಳಿದ್ದಾರೆ. ಹಾಗೆಯೇ ನಾವೂ ಒಂದು ಕಾರ್ಪೊರೇಷನ್ನನ್ನು ಏರ್ಪಾಡುಮಾಡುವುದಾದರೆ ಈಗೇನು ನಮ್ಮ ಟ್ರಾನ್ಸ್‌ಪೋರ್ಟ್ ವ್ಯವಸ್ಥೆಯಲ್ಲಿ ನ್ಯೂನಾತಿರಿಕ್ತಗಳಿದ್ದು ಜನಗಳ ಮನಸ್ಸನ್ನು ವ್ಯಾಕುಲತೆಗೀಡುಮಾಡಿವೆಯೋ ಅದು ನಿವಾರಣೆಯಾಗಬಹುದು. ಆದ್ದರಿಂದ ಆದಷ್ಟು ಜಾಗ್ರತೆ ಈ ಬಗ್ಗೆ ಒಂದು ಯೋಜನೆಯನ್ನು ನಮ್ಮ ಸರ್ಕಾರದವರು ತೀವ್ರವಾಗಿ ಆಲೋಚನೆಮಾಡಬೇಕೆಂದು ಹೇಳುತ್ತೇನೆ.

ಊಟ ಬಟ್ಟೆಗಳ ಜೊತೆಗೆ ಮನೆಗಳ ಯೋಜನೆಯನ್ನೂ ಈ ಪ್ಲಾನಿನಲ್ಲಿ ಯೋಚನೆಮಾಡಿದ್ದಾರೆ ದು ಕಾಣುತ್ತದೆ. ಆದರೆ ಗ್ರಾಮಾಂತರಗಳಲ್ಲಿ ಮನೆಗಳನ್ನು ಕಟ್ಟುವಬಗ್ಗೆ ಸಹಾಯಮಾಡತಕ್ಕ ವಿಷಯದಲ್ಲಿ ಈ ಯೋಜನೆಯಲ್ಲಿ ಏನೂ ಹೇಳದಿರುವುದು ಬಹಳ ವ್ಯಸನವನ್ನುಂಟುಮಾಡುವ ವಿಚಾರವಾಗಿದೆ. ಪಟ್ಟಣಗಳಲ್ಲೂ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿನ ಕೆಲಸಗಾರರಿಗೂ ಮನೆಗಳನ್ನು ಕಟ್ಟಿಸುವುದಕ್ಕೆ ಯೋಜನೆಗಳನ್ನು ಹಾಕಿಕೊಂಡು ಅದಕ್ಕಾಗಿ ಹಣವನ್ನೊದಗಿಸಿದ್ದಾರೆ. ಹಾಗೆಯೇ ನಿಮ್ನ ತರಗತಿಯವರ ಮನೆಗಳಿಗೂ ಹಣ ಒದಗಿಸಿದ್ದಾರೆ.

ಇದಕ್ಕಾಗಿ ಸರ್ಕಾರದವರನ್ನು ವಂದಿಸಲೇಬೇಕು. ಆದರೆ ಗ್ರಾಮಾಂತರಗಳಲ್ಲಿರುವ ಲಕ್ಷಾಂತರ ಬಡವರಿಗೆ ಸರಿಯಾದ ಮನೆಗಳಿಲ್ಲದ ಸ್ಥಿತಿಯನ್ನು ಇನ್ನು ಮುಂದೆಯೂ ಇದೇ ರೀತಿ ಇರುವ ಹಾಗೆ ನಾವು ಮಾಡಿಕೊಂಡು ಹೋಗುತ್ತಿರುವುದು ಸರಿಯಲ್ಲ, ಸಾಧುವೂ ಅಲ್ಲ. ನಾನು ಈ ಯೋಜನೆ ಬಂದಾಗ ಮಾತ್ರವಲ್ಲ, ಸುಮಾರು 10–15 ವರ್ಷಗಳ ಹಿಂದಿನಿಂದಲೂ ಈ ವಿಷಯವನ್ನು ಯೋಚಿಸಿ ಬಡವರಿಗೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೇನಾದರೂ ಒಂದು ವ್ಯವಸ್ಥೆ ಮಾಡಬೇಕೆಂದು ಸರ್ಕಾರದವರಿಗೆ ಒತ್ತಾಯಮಾಡುತ್ತಲೇ ಬಂದಿದ್ದೇನೆ. ಈ ಬಗ್ಗೆ ಒಂದು ಖೋತಾ ನಿರ್ಣಯವನ್ನೂ ಶಾಸನಸಭೆಯ ಮುಂದೆ ತಂದು ಅದು ಪಾಸಾಗಿದೆ. ಆ ಸಂದರ್ಭದಲ್ಲಿ ಒಂದು ಕಮಿಟಿಯನ್ನು ಏರ್ಪಾಡುಮಾಡಿ ಆದಷ್ಟು ಜಾಗ್ರತೆ ಗ್ರಾಮಾಂತರಗಳಲ್ಲಿ ಮನೆಗಳನ್ನು ಬಡಬಗ್ಗರು ಕಟ್ಟಿಕೊಳ್ಳುವ ಬಗ್ಗೆ ಸಹಾಯಮಾಡುವಂತೆ ಮಾಡುತ್ತೇವೆಂದು ಹೇಳಿದ್ದರು. ಆದರೆ ಇನ್ನೂ ಏನೂ ಮಾಡಿಲ್ಲ. ಇನ್ನೇನೂ ಹೆಚ್ಚಿಗೆ ಮಾಡದೆ ಇದ್ದರೂ, ಹಳ್ಳಿಗಾಡುಗಳಲ್ಲಿ ಬಡಬಗ್ಗರಿಗೆ ಮನೆ ಕಟ್ಟುವ ಸಾಮಾನುಗಳನ್ನು ಮುಫತ್ತಾಗಿ ಕೊಡದೆಯಿದ್ದರೂ ಸುಲಭವಾಗಿಯಾದರೂ ದೊರಕುವಂತೆ ಯೋಜನೆಯನ್ನೇನಾದರೂ ಮಾಡಿ ಸಹಾಯಮಾಡಬಹುದಾಗಿತ್ತು. ಅದೂ ಇಲ್ಲದೆ, ಈ ಯೋಜನೆಯಲ್ಲಿಯೂ ಕೂಡ ಏನೂ ಮಾಡದಿರುವುದು ವಿಷಾದಕರ. ಈಗಲಾದರೂ ಈ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡು ಬಡಬಗ್ಗರಿಗೆ ಸುಲಭವಾಗಿ ಹತ್ತಿರದಲ್ಲಿ ಈ ಸಾಮಾನುಗಳನ್ನು ಒದಗಿಸುವುದಕ್ಕೆ ಏರ್ಪಾಡುಮಾಡಬೇಕೆಂದು ಹೇಳುತ್ತೇನೆ. ನ್ಯಾಯವಾಗಿ ಈ ಮನೆಗಳನ್ನು ಕಟ್ಟಿಸುವ ಏರ್ಪಾಡಿನ ವಿಚಾರದಲ್ಲಿ ಹೆಚ್ಚಿನ priority ಇರಬೇಕಾಗಿತ್ತು. ಅಂಥಾದ್ದ್ಯಾವುದನ್ನೂ ಇಲ್ಲಿ ಕಾಣದಿರುವುದು ಬಹು ನಿರುತ್ಸಾಹವನ್ನುಂಟುಮಾಡುತ್ತದೆ.

ಇನ್ನು ಜನಾಭಿವೃದ್ಧಿ ಕಾರ್ಯಗಳ ವಿಚಾರದಲ್ಲಿ ಒಂದು ಮಾತು ಹೇಳುತ್ತೇನೆ.

The Hon'ble Sri H. C. DASAPPA.—I hope it is the last subject you are touching on.

ಶ್ರೀ ಟಿ. ಮಾದಯ್ಯಗೌಡರು.—ಆಗಲಿ. I will finish soon.

ಜನಾರೋಗ್ಯ ವಿಚಾರದಲ್ಲಿ ಸಾಧ್ಯವಾದಮಟ್ಟಿಗೂ ರೋಗಗಳು ಬಾರದಂತೆ ಮಾಡುವುದು ಪ್ರಾಮುಖ್ಯವೇ ವಿನಾ ರೋಗ ಬಂದಮೇಲೆ ಲಕ್ಷಾಂತರ ರೂಪಾಯಿಗಳನ್ನು ವ್ಯಯಮಾಡಿ ವಾಸಿಮಾಡುತ್ತೇವೆಂಬುದು ಸರಿಯಾದ ತತ್ತ್ವವಲ್ಲವೆಂಬುದನ್ನು ಎಲ್ಲರೂ ಒಪ್ಪುತ್ತಾರೆಂದು ತಿಳಿದಿದ್ದೇನೆ. ಎಲ್ಲಾ ಕಡೆಯಲ್ಲೂ ಅನುಸರಿಸುತ್ತಿರುವ ನೀತಿ ಅದು. ಈ ಪಂಚವಾರ್ಷಿಕ ಯೋಜನೆಯಲ್ಲಿಯೂ ಅದಿವೆ. ಆದರೆ, ನಾವಾದರೋ ಮೈಸೂರು ದೇಶದಲ್ಲಿ ಜನಾರೋಗ್ಯ ಇಲಾಖೆಗೆ ಒದಗಿಸುತ್ತಿರುವುದಕ್ಕಿಂತ ಹೆಚ್ಚಾಗಿ ಆಸ್ಪತ್ರೆಗಳನ್ನು ಒದಗಿಸುವುದಕ್ಕೆ, ಪರದೇಶದ ಔಷಧೋಪಚಾರಗಳಿಗೆ, ಹಣವನ್ನು ಹೆಚ್ಚಾಗಿ ಖರ್ಚುಮಾಡುತ್ತಿರುವುದು ಕಾಣಬರುತ್ತಿದೆ. ನನ್ನ ಅಭಿಪ್ರಾಯದಲ್ಲಿ ವೈದ್ಯ ಇಲಾಖೆ, ಜನಾರೋಗ್ಯ ಇಲಾಖೆ ಎಂದು ಎರಡು ಇಲಾಖೆಗಳಿರುವುದೇ ಅನಾವಶ್ಯಕ. ಇಂಥಾ ಬಡದೇಶದಲ್ಲಿ ಹೀಗೆ ಎರಡು ಇಲಾಖೆಗಳನ್ನು ಏರ್ಪಡಿಸಿ ವೃಥಾ ಹೆಚ್ಚಿಗೆ ಹಣ ಖರ್ಚುಮಾಡುವುದು ಅನವಶ್ಯಕ. ಆಸ್ಪತ್ರೆಗಳಲ್ಲಿ ಕೆಲಸಮಾಡುವ ಡಾಕ್ಟರುಗಳೂ ಮೆಡಿಕಲ್ ಕಾಲೇಜಿನಲ್ಲಿ ಓದಿದವರು; ಜನಾರೋಗ್ಯ ಇಲಾಖೆಯಲ್ಲಿರುವ ಹೆಲ್ತ್ ಆಫೀಸರೂ ಇದೇ ಮೆಡಿಕಲ್ ಪರೀಕ್ಷೆಗಳನ್ನು ಮಾಡಿರುವವರು. ಆದ್ದರಿಂದ ಗ್ರಾಮಾಂತರಗಳ ಕಡೆಯಾದರೂ ವೈದ್ಯಕೀಯ ಚಿಕಿತ್ಸೆಗೂ, ರೋಗನಿವಾರಣಾ ಭಾಗಕ್ಕೂ ಬೇರೆ ಬೇರೆ ವೈದ್ಯರನ್ನಿಡುವ ಬದಲು, ಎರಡು ಕೆಲಸಗಳನ್ನೂ ಒಟ್ಟುಗೂಡಿಸಿ ನಡೆಸುವುದಾದರೆ ಎಷ್ಟೋ ಹಣ ಉಳಿಯುತ್ತದೆ. ಅಲ್ಲದೆ, ಹೆಚ್ಚಾಗಿಯೂ ವೈದ್ಯಕೀಯ ಏರ್ಪಾಡುಗಳನ್ನು ಮಾಡಲೂಬಹುದು.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಬೇರೆ ಬೇರೆ ಡೈರೆಕ್ಟರಿರಬೇಕೆಂದು ಶ್ರೀಮತಿ ರತ್ನಮ್ಮ ಐಸಾಕ್‌ರವರು ಹೇಳುತ್ತಿದ್ದಾರೆ !!

ಶ್ರೀ ಟಿ. ಮಾದಯ್ಯಗೌಡರು.—ಅವರು ಬೇಕಾದರೆ ಹೇಳಬಹುದು. ಆದರೆ ಎಲ್ಲಾ ದೃಷ್ಟಿಯಿಂದಲೂ ಒಬ್ಬರೇ ಆರೋಗ್ಯ ಮಂತ್ರಿಗಳಿದ್ದು ಅವರ ಕೈಕೆಳಗೆ ಎರಡು ಇಲಾಖೆಗಳೂ ಒಟ್ಟುಗೂಡಿ ಕೆಲಸ ಮಾಡುವ ಏರ್ಪಾಡಿರುವುದು ಒಳ್ಳೆಯದು. ಆದಷ್ಟು ಜಾಗ್ರತೆ ಈ ಏರ್ಪಾಡು ಮಾಡುವುದಾದರೆ ಈಗಿರತಕ್ಕ ಆಸ್ಪತ್ರೆಗಳನ್ನೂ ಆರೋಗ್ಯ ಕೇಂದ್ರಗಳನ್ನೂ ಒಟ್ಟುಗೂಡಿಸಬಹುದು. ಇದರಿಂದ ಬಹುಮಟ್ಟಿಗೆ ಎಲ್ಲಾ ಸ್ಥಳಗಳಿಗೂ ಹೆಚ್ಚಿನ ವೈದ್ಯ ಸೌಕರ್ಯವನ್ನೂ ಆರೋಗ್ಯ ರಕ್ಷಣಾ ಸೌಕರ್ಯವನ್ನೂ ಮಾಡಿಕೊಡುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಒಂದೇ ಇಲಾಖೆಯಿದ್ದರೆ ಸಾಕೇ ?

ಶ್ರೀ ಟಿ. ಮಾದಯ್ಯಗೌಡರು.—ಹೌದು; ಒಂದೇ ಸಾಕು. ಖಾಯಿಲೆ ಬಾರದಂತೆ ಮಾಡುವುದೇ ಮುಖ್ಯ. ಒಂದುವೇಳೆ ಅಕಸ್ಮಾತ್ತಾಗಿ ಖಾಯಿಲೆ ಬಂದರೆ ಹೆಲ್ತ್ ಆಫೀಸರೇ ಔಷಧಿ ಕೊಡಬಹುದು. ಆದ್ದರಿಂದ ಎರಡು ಇಲಾಖೆಗಳಿರುವುದು ಅನಾವಶ್ಯಕ.

ವಿದ್ಯಾಭ್ಯಾಸದ ವಿಚಾರದಲ್ಲಿ, ಮೂಲ ಶಿಕ್ಷಣಕ್ಕಾಗಿ ಮತ್ತು ಸಮಾಜ ಶಿಕ್ಷಣಕ್ಕಾಗಿ ನೀವೀಗ ಒದಗಿಸಿರುವ ಹಣ ಏನೂ ಸಾಲದು. ನಿಮ್ಮ ಯೋಜನೆ ಫಲಕಾರಿಯಾಗಬೇಕಾದರೆ, ನೀವು ಅತ್ಯಂತ ಪ್ರಾಮುಖ್ಯವಾಗಿ ಮಾಡಬೇಕೆಂದಿದ್ದರೆ, ಜನರ ತಿಳಿವಳಿಕೆ ಮಟ್ಟವನ್ನು ಜಾಸ್ತಿ ಮಾಡಬೇಕು. ಗ್ರಾಮಾಂತರಗಳ ಕಡೆ ಶೇಕಡ 8–10 ರಷ್ಟು ಜನ ವಿದ್ಯಾವಂತರಾಗಿರತಕ್ಕ ದೇಶದಲ್ಲಿ ವ್ಯವಸಾಯಾಭಿವೃದ್ಧಿ ಮಾಡುತ್ತೇವೆ, ಹೆಚ್ಚಿನ ಆಹಾರೋತ್ಪತ್ತಿ ಮಾಡುತ್ತೇವೆ, ಸಹಕಾರ ತತ್ತ್ವಗಳ ಮೂಲಕ ದೇಶವನ್ನು ಒಟ್ಟುಗೂಡಿಸುತ್ತೇವೆ, ಇತ್ಯಾದಿ, ಇತ್ಯಾದಿ ಸಾವಿರ ಪ್ರಯತ್ನಗಳನ್ನು ಮಾಡಿದರೂ ಕೂಡ ಆ ಹಣದ ಖರ್ಚು, ಶ್ರಮ ಎಲ್ಲಾ ವ್ಯರ್ಥವೇ ಸರಿ. ಎಲ್ಲಿಯವರಿಗೆ ಜನರಿಗೆ ತಿಳಿವಳಿಕೆ ಬರುವುದಿಲ್ಲವೋ ಎಲ್ಲಿಯವರೆಗೆ ವಿದ್ಯಾಪ್ರಚಾರ, ಜ್ಞಾನಪ್ರಸಾರ ಆಗುವುದಿಲ್ಲವೋ ಅಲ್ಲಿಯವರೆಗೂ ನಮ್ಮ ಹಣ ಫಲಕಾರಿಯಾಗುವುದಿಲ್ಲ. ಅದರಲ್ಲೂ ಎಲ್ಲಕ್ಕಿಂತಲೂ ಹೆಚ್ಚಾಗಿ ಪ್ರಾಮುಖ್ಯತೆ ಕೊಡಬೇಕಾದದ್ದು ಸಮಾಜ ಶಿಕ್ಷಣದ ವಿಷಯ.

ಈ ಸಮಾಜ ಶಿಕ್ಷಣವನ್ನು ಕೊಡದೆ, ಮೊಟ್ಟಮೊದಲು ತಿಳಿವಳಿಕೆಯನ್ನು ಕೊಡದೆ, ಏನು ಮಾಡಿದರೂ ಕೂಡ ಪ್ರಯೋಜನವಿಲ್ಲ. ಆದುದರಿಂದಲೇ ಇದನ್ನು life and death problem ಎಂದು ಹೇಳುತ್ತಾರೆ. ಜನರಲ್ಲಿ ಫಲಕಾರಿಯಾಗಿ ಈ ಪ್ರಜಾಸತ್ತಾತ್ಮಕ ಸರ್ಕಾರವನ್ನು ಉಳಿಸಬೇಕಾದರೆ, ಆರ್ಥಿಕ ಮಟ್ಟವನ್ನು ಹೆಚ್ಚಿಸಬೇಕಾದರೆ, ಸಮಾಜವನ್ನು ಕಟ್ಟಬೇಕಾದರೆ, ಮೂಲ ತಿಳಿವಳಿಕೆ. ಇದನ್ನು ಹೆಚ್ಚಿಸುವುದಕ್ಕೆ ಎಷ್ಟು ಪ್ರಯತ್ನಮಾಡಿದರೂ ಪ್ರಯೋಜನಕಾರಿಯಾಗುತ್ತದೆ. ಇದಕ್ಕೆ ಖರ್ಚುಮಾಡುವ ಪ್ರತಿಯೊಂದು ಕಾಸೂ ಸದ್ವಿನಿಯೋಗವಾಗುತ್ತದೆ ಇಲ್ಲದಿದ್ದರೆ ನಿಷ್ಪ್ರಯೋಜನವಾಗುತ್ತದೆ. ಆದುದರಿಂದ

(ಶ್ರೀ ಟಿ. ಮಾದಯ್ಯಗೌಡರು)

ಈ ವಿಚಾರದಲ್ಲಿ ಹೆಚ್ಚು ಗಮನ ಕೊಡಬೇಕು, ಈಗ ಕೊಟ್ಟಿರುವ ಗಮನ ಸಾಲದೆಂದು ನನ್ನ ಅಭಿಪ್ರಾಯ.

ಒಟ್ಟಿನಲ್ಲಿ ಈ ಯೋಜನೆ ಚೆನ್ನಾಗಿವೆ, ಪ್ರಯೋಜನಕಾರಿಯಾಗುತ್ತದೆ. ಇದನ್ನು ಹೆಚ್ಚು ಹೆಚ್ಚು ಜನರಲ್ಲಿ ಪ್ರಚಾರಮಾಡಿ, ಜನರಲ್ಲಿ ಉತ್ಸಾಹವನ್ನುಂಟುಮಾಡಿ, ಹುರಿದುಂಬಿಸಿ ಇದನ್ನು ಸಾಧಿಸಬೇಕು. ಸಾಧ್ಯ ಐದು ವರ್ಷಗಳಲ್ಲಿ ಒಂದು ಉನ್ನತಮಟ್ಟದಲ್ಲಿ ನಮ್ಮ ದೇಶ ಪ್ರಗತಿಯಾಗುವುದಕ್ಕೆ ಈ ಯೋಜನೆ ಸಹಕಾರಿಯಾಗಲಿ, ದೇಶ ಸುಖ ಸಂತೋಷದಿಂದ ನಲಿಯುವಂತಾಗಲೆಂದು ಹೇಳಿ ಮುಗಿಸುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಸ್ವಾಮಿ, ಈ ಪಂಚವಾರ್ಷಿಕ ಯೋಜನೆಯನ್ನು ತಯಾರುಮಾಡಿ ನಮ್ಮ ಅಭಿಪ್ರಾಯಕ್ಕಾಗಿ ಇಟ್ಟಿದ್ದಾರೆ. ಇದರ ಮುಖ್ಯ ಉದ್ದೇಶ, ಭಾರತ ರಾಜ್ಯಾಂಗದ ನಾಲ್ಕನೆಯ ಅಧ್ಯಾಯದಲ್ಲಿ ನಾವು ಏನೇನು ಸಾಧಿಸಬೇಕೆಂದು ಅಡಕಮಾಡಿದ್ದೇವೆಯೋ ಅವುಗಳನ್ನು ಸಾಧಿಸುವುದು. ಇಂತಹ ಘನವಾದ ಉದ್ದೇಶದಿಂದ ಕನ್ಯಾಕುಮಾರಿಯಿಂದ ಹಿಮಾಲಯದವರೆಗೆ ಅನ್ವಯಿಸುವ ಒಂದು ಯೋಜನೆಯನ್ನು ಮಾಡಿಟ್ಟಿರುವುದು ಭರತಖಂಡದ ಚರಿತ್ರೆಯಲ್ಲಿ ಇದೇ ಮೊಟ್ಟಮೊದಲು. ಈ ಯೋಜನೆಯಲ್ಲಿ ಅಡಕವಾಗಿರುವಂತಹ ಎಲ್ಲಾ ವಿಷಯಗಳನ್ನು ವಿಮರ್ಶೆಮಾಡುವುದು ಸಾಧ್ಯವಿಲ್ಲ ಮತ್ತು ಇದಕ್ಕೆ ಕಾಲವೂ ಇಲ್ಲ. ಪ್ರಕೃತದಲ್ಲಿ ಮುಖ್ಯವಾದ ಒಂದೆರಡು ವಿಷಯಗಳಲ್ಲಿ ನಾವು ನಮ್ಮ ಅಭಿಪ್ರಾಯವನ್ನು ತಿಳಿಸಿ ವಿಮರ್ಶೆಗೊಳಪಡಿಸುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ.

ಸಾಮಾನ್ಯವಾಗಿ ಈ ಯೋಜನೆಗಳು ಹೊಸವು, ಈ ಹೊತ್ತು ಬಂದವೆಂದು ಯೋಚನೆಮಾಡಿದರೆ ಅದು ಸರಿಯಲ್ಲ. ಅನೇಕ ವರ್ಷಗಳಿಂದ ಯೋಜನೆಗಳನ್ನು ಮಾಡಿಕೊಂಡ ಅವಕ್ಕನುಸಾರವಾಗಿ ಕಾರ್ಯಗಳನ್ನು ಸಾಧಿಸಿಕೊಂಡು ಬರುತ್ತಿದ್ದಾರೆ. ಅನೇಕ ವರ್ಷಗಳಿಂದ ಪ್ರಪಂಚದ ಎಲ್ಲ ಸರ್ಕಾರಗಳೂ ಹೀಗೆಯೇ ಮಾಡಿರುವುದು. ಹಾಗೆಯೇ ನಮ್ಮ ಸರ್ಕಾರದವರೂ ಯೋಜನೆಗಳ ಮೇಲೆ ಕೆಲಸಗಳನ್ನು ನಡೆಸಿಕೊಂಡು ಬಂದಿದ್ದಾರೆ. ಇದು ಎಷ್ಟುಮಟ್ಟಿಗೆ ಫಲಕಾರಿಯಾಗಿ ನಡೆದಿದೆ ಎಂಬುದಕ್ಕೆ ನಾನು ಹೋಗುವುದಿಲ್ಲ. ಆದರೆ ಒಂದು ವಿಷಯ: ಹಿಂದೆ ಮಾಡಿದ ಯೋಜನೆಗಳಿಗೂ ಈಗ ಮಾಡಿರುವುದಕ್ಕೂ ಒಂದು ಮೂಲ ವ್ಯತ್ಯಾಸವಿದೆ. ಹಿಂದೆ ಮಾಡಿದ್ದ ಯೋಜನೆಗಳು ಯಾರಿಂದ ಮಾಡಿದ್ದವು, ಯಾರಿಂದ ಅಭಿಮತ ಪಡೆದಮೇಲೆ ಮಾಡುತ್ತಿದ್ದರು ಎಂಬುದಕ್ಕೂ ಈಗಿನ ರೀತಿಗೂ ಸ್ವಲ್ಪ ವ್ಯತ್ಯಾಸವಿದೆ. ಹಿಂದೆ ಆಡಳಿತಗಾರರು ಅವರಿಗೆ ಅವರ ದೃಷ್ಟಿಯಲ್ಲಿ ಯಾವುದು ಒಳ್ಳೆಯ ಯೋಜನೆಗಳೆಂದು ಅಭಿಪ್ರಾಯಪಟ್ಟರೋ ಅವುಗಳನ್ನು ತಯಾರಿಸಿ ದೇಶದಮೇಲೆ ಹೊರಿಸುತ್ತಿದ್ದರು. ಆದರೆ ಈಗ ನಾವು ಮಾಡಿರುವ ಯೋಜನೆ ಮುಖ್ಯವಾಗಿ ದೇಶದ ವಾಸ್ತವಾಂಶಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಪ್ರಜಾಭಿಪ್ರಾಯ ಯಾವ ರೀತಿ ಇದೆ ಎಂಬುದನ್ನು ನೋಡಿಕೊಂಡು ಇದಕ್ಕನುಗುಣವಾಗಿ ತಯಾರಿಸಿ ಇಟ್ಟಿದ್ದಾರೆ. ಆದುದರಿಂದ ಹಿಂದಿನ ಯೋಜನೆಗಳಿಗಿಂತಲೂ ಈಗಿನ ಮತ್ತು ಮುಂದಿನ ಯೋಜನೆಗಳು ಯಶಸ್ವಿಯಾಗಿಯೂ ಫಲಕಾರಿಯಾಗಿಯೂ ಆಗುತ್ತವೆ ಎಂಬುದನ್ನು ಹೇಳುವುದಕ್ಕೆ ಇಷ್ಟೆಲ್ಲ ಹೇಳಿದೆ. ಯೋಜನೆಗಳ ಆವಶ್ಯಕತೆಯ ವಿಚಾರ ಹೇಳುವುದಾದರೆ, ಮುಖ್ಯವಾಗಿ ಒಂದು ದೇಶದ ಹಿತವನ್ನೂ, ಪ್ರಗತಿಯನ್ನೂ ಅಲ್ಪ ಕಾಲಾವಧಿಯಲ್ಲಿ ಅಲ್ಪ ಖರ್ಚಿನಲ್ಲಿ ಹೆಚ್ಚಾಗಿ ಸಾಧಿಸುವುದಕ್ಕೆ ಯೋಜನೆಗಳು ತಯಾರಾಗಬೇಕು. ಈಗ ನಮ್ಮ ಮುಂದಿರುವ 6·6 ಕೋಟಿ ರೂಪಾಯಿನ ಯೋಜನೆಯ ಪ್ರಕಾರ, ಇದು ಮೈಸೂರು ಸಂಸ್ಥಾನದಲ್ಲಿ ಐದು ವರ್ಷಗಳಲ್ಲಿ ನಿಗದಿಯಾದ ಪ್ರಮಾಣದಲ್ಲಿ ಪ್ರಗತಿ ಸಾಧಿಸುವುದಕ್ಕೆ ಸಂಬಂಧಪಟ್ಟದ್ದು. ಈ ಯೋಜನೆ ಸರ್ವತೋಮುಖವಾದ ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧಕವಾಗುತ್ತದೆಂದು ಹೇಳಿದ್ದಾರೆ. ಈಗ ಇದನ್ನು ಪರಿಶೀಲನೆ ಮಾಡತಕ್ಕ ಕಾಲದಲ್ಲಿ ಟೀಕೆ ಟಿಪ್ಪಣಿಗಳನ್ನು ಮಾಡುವುದು ರಚನಾತ್ಮಕವಾಗಿರಬೇಕೇ ಹೊರತು ಇದನ್ನು ಅಲ್ಲಗಳೆಯುವ ಉದ್ದೇಶದಿಂದ ಮಾಡುವುದರಿಂದ ಪ್ರಯೋಜನವಿಲ್ಲ ಮತ್ತು ವ್ಯರ್ಥ. ನಿನ್ನೆಯ ದಿವಸದಿಂದ ಈ ಯೋಜನೆಯ ಮೇಲೆ ಚರ್ಚೆಯಾಗುತ್ತಿರುವ ಧಾಟಿಯನ್ನು ಕುತೂಹಲದಿಂದ ನೋಡಿದೆ. ಕೇವಲ ಬಡ್ಜೆಟ್ ಭಾಷಣದಂತೆ ಚರ್ಚೆಗಳು ನಡೆದವೇ ವಿನಾ ಈಗಿರತಕ್ಕ ರೀತಿಗಿಂತ ಈ ಯೋಜನೆಯನ್ನು ಉತ್ತಮಪಡಿಸುವುದಕ್ಕೆ ಸಾಧ್ಯವೆ ಎಂಬ ವಿಷಯದಲ್ಲಿ ರಚನಾತ್ಮಕ ಸಲಹೆಯನ್ನು ಯಾರೂ ಕೊಡಲಿಲ್ಲ. ಇಷ್ಟೇ ಅಲ್ಲದೆ ವಿರೋಧಪಕ್ಷದ ಸದಸ್ಯರಾದ ಶ್ರೀಮಾನ್ ಸಿದ್ದಪ್ಪನವರೂ, ಸೋಷಯಲಿಸ್ಟ್ ಪಕ್ಷದ ಸದಸ್ಯರಾದ ಶ್ರೀ ಶ್ರೀಕಂಠೇಶ್ವರ್‌ರವರೂ ಈ ಯೋಜನೆಯಲ್ಲಿ ಮುಖ್ಯವಾದ ಲೋಪದೋಷಗಳೇನಿವೆ, ಯಾವ ರೀತಿ ಅವುಗಳನ್ನು ಸರಿಪಡಿಸುವುದು ಎಂಬ ವಿಷಯದಲ್ಲಿ ಸ್ವಲ್ಪಮಟ್ಟಿಗೆ ಸಹಕಾರಿಯಾದ ರಚನಾತ್ಮಕ ಸಲಹೆಯನ್ನು ಕೊಡುತ್ತಾರೆಯೋ ಎಂದು ನೋಡಿದೆ, ಆದರೆ ಕೊಡಲಿಲ್ಲ. ಶ್ರೀಮಾನ್ ಶ್ರೀಕಂಠೇಶ್ವರ್‌ರವರ ಮಾತು ಹಾಗಿರಲಿ, ಶ್ರೀಮಾನ್ ಸಿದ್ದಪ್ಪನವರು ಹತ್ತಾರು ವರ್ಷ ರಾಜಕೀಯ ಕ್ಷೇತ್ರದಲ್ಲಿ ಅನುಭವವಿರುವವರು, ಹಿಂದೆ ಆಡಳಿತದಲ್ಲಿ ನಿಂತಿರುವವರು ಇಂತಹ ಯೋಜನೆಯ ವಿಷಯದಲ್ಲಿ ಆಡಿದ ಮಾತುಗಳನ್ನು ಎತ್ತಿ ಆಡದೇ ಹೋದರೆ ಕರ್ತವ್ಯಲೋಪವಾದೀತು. ಅವರ ಪಕ್ಷದ ರಾಜಕೀಯ ತಜ್ಞರು ಹೇಳಿದ ರೀತಿಯನ್ನು, ಅವರು ಈ ಯೋಜನೆಗಳನ್ನು ವಿಮರ್ಶೆಮಾಡಿದ ರೀತಿಯನ್ನು ನೋಡಿದರೆ ಅವರಿಗೆ ಅನುಭವ ಸಾಲದೆಂದು ಹೇಳಿದರೆ ತಪ್ಪಾಗಲಾರದು. ಬಹುಶಃ ಮುಂದೆ ಬರತಕ್ಕ ಚುನಾವಣೆಗಳು ಅವರ ಮನಸ್ಸಿನಲ್ಲಿ ಕೆಲಸಮಾಡುತ್ತಿರಬಹುದೆಂದು ಕಾಣುತ್ತದೆ. ಆದಕಾರಣ ತಾನು ಈ ಯೋಜನೆಯನ್ನು ವಿಮರ್ಶೆಮಾಡುತ್ತಿದ್ದೇನೆ ಎಂಬುದನ್ನು ಮರೆತು, ಇದು ಶಾಸನಸಭೆ ಎಂಬುದನ್ನೂ ಮರೆತು, ಇದು ಚುನಾವಣಾ ಕ್ಷೇತ್ರ ಎಂದು ತಿಳಿದು ಚುನಾವಣಾ ಭಾಷಣವನ್ನು ಮಾಡಿದರು.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅವರು ಈಗ ಸಭೆಯಲ್ಲಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಆದರೂ ಅವರು ಮಾಡಿದ ಭಾಷಣದ ವಿಷಯದಲ್ಲಿ ಸರಿಯಾಗಿ ಉತ್ತರ ಹೇಳದೇಹೋದರೆ ದೇಶದ ವಿಷಯದಲ್ಲಿ ಅನ್ಯಾಯಮಾಡಿದ ಹಾಗಾಗುತ್ತದೆಂದು ಅವರ ಭಾಷಣಕ್ಕೆ ಎರಡು ಉತ್ತರಗಳನ್ನು ಮಾತ್ರ ಈ ಸಭೆಯ ಮೂಲಕ ದೇಶಕ್ಕೆ ತಿಳಿಸಬೇಕೆಂದಿಚ್ಛಿಸುತ್ತೇನೆ.

ಅವರು ಮೊಟ್ಟಮೊದಲು ಈ ಯೋಜನೆ ಒಂದು ಗಾಳಿಗೋಪುರವೆಂದು ಹೇಳಿದರು. ಅಲ್ಲದೆ ಇದನ್ನು ಕಾರ್ಯಗತಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರು. ಅಂದರೆ, It is airy and impracticable. ಮೂರನೆಯದಾಗಿ ಸರ್ಕಾರಕ್ಕೆ 9 ಕೋಟಿ ಅಲ್ಲ, 9 ಲಕ್ಷ ರೂಪಾಯಿ ಕೂಡ ಸಾಲ ಹುಟ್ಟುವುದಿಲ್ಲ ಎಂದು ಹೇಳಿದರು. ಎಲ್ಲಕ್ಕಿಂತ ಹೆಚ್ಚಾಗಿ, monies have gone somewhere ಎಂದು ಹೇಳಿದರು. ಮತ್ತು ಸರ್ಕಾರ

insincere. ಅವರಲ್ಲಿ ದೇಶದ ಪ್ರಗತಿಸಾಧನೆ ಮಾಡಬೇಕೆಂಬ ಆಶೆ ಆಕಾಂಕ್ಷೆಗಳು ಸತ್ಯಾಂಶಕ್ಕೆ ದೂರವಾಗಿರುತ್ತದೆಂಬ ರೀತಿಯಲ್ಲಿ ಹೇಳಿದರು. ಇದನ್ನೆಲ್ಲಾ ಬೇರೆ ಯಾರಾದರೂ ಹೇಳಿದ್ದರೆ ಗಮನಕ್ಕೆ ತೆಗೆದುಕೊಳ್ಳುತ್ತಿರಲಿಲ್ಲ. ಆದರೆ ಶ್ರೀಮಾನ್ ಸಿದ್ದಪ್ಪನವರಂತಹ ಮಾನ್ಯ ರಾಜಕಾರಣಿಗಳು ಈ ಸಭೆಯ ಮುಂದೆ ಹೀಗೆ ಹೇಳಿದ ಮೇಲೆ ಇದರ ಮೇಲೆ ಸವಾಲು ಹಾಕಿ ಇದು ಸರಿಯಲ್ಲ, ತಪ್ಪು ಎಂಬ ಭಾವನೆ ದೇಶದಲ್ಲಿ ಮೂಡುವಂತೆ ಮಾಡದಿದ್ದರೆ, ಇದನ್ನು ಒಪ್ಪಿಕೊಂಡಹಾಗಾಗುತ್ತದೆ. ಆದುದರಿಂದ ಅವರಿಗೆ ಉತ್ತರವನ್ನು ಮೂರು ಮಾತಿನಲ್ಲಿ ಹೇಳುತ್ತೇನೆ. ದೇಶದಲ್ಲಿದ್ದ ಎಷ್ಟೋ ಕೋಟಿ ರೂಪಾಯಿಗಳು ಪೋಲಾಗಿಹೋಯಿತು. ಮುಂದೆಯೂ ಈ 36 ಕೋಟಿಯೂ ಹಾಗೆಯೇ ಆಗುತ್ತದೆ ಎಂದು ಹೇಳಿದರು. ಅದಕ್ಕೆ ಮೊದಲು ಉತ್ತರ ಹೇಳುತ್ತೇನೆ: ಶ್ರೀಮಾನ್ ಸಿದ್ದಪ್ಪನವರು ಮಂತ್ರಿಗಳಾಗಿದ್ದು ಕೈಬಿಟ್ಟ ಕಾಲದಿಂದೀಚೆಗೆ ಕೇವಲ ನಾಲ್ಕು ವರ್ಷಗಳಲ್ಲಿ, 1946–47 ರಿಂದೀಚೆಗೆ 1949-50ರ ವರೆಗೆ ನಾವು ಸಾಧಿಸಿರುವ ಪ್ರಗತಿಯನ್ನು ನಾಲ್ಕು ಮಾತುಗಳಲ್ಲಿ ಅಂಕಿಅಂಶಗಳೊಡನೆ ಹೇಳದೆ ಹೋದರೆ ಅವರು ಹೇಳಿದುದಕ್ಕೆ ಜವಾಬಿಲ್ಲದೇ ಹೋಗುತ್ತದೆ. ವಿದ್ಯಾಭ್ಯಾಸದ ಪ್ರಗತಿಯನ್ನು ನೋಡಿದರೆ, ಈ ನಾಲ್ಕು ವರ್ಷಗಳಲ್ಲಿ, 1916-47ರಲ್ಲಿ 10,449 ವಿದ್ಯಾಸಂಸ್ಥೆಗಳಿದ್ದುದು ಈಹೊತ್ತು 15,378 ಸಂಸ್ಥೆಗಳಾಗಿವೆ. ಅಂದರೆ 4,929 ಸಂಸ್ಥೆಗಳು ಹೆಚ್ಚಾಗಿವೆ. ವಿದ್ಯಾರ್ಥಿಗಳ ಸಂಖ್ಯೆ 6,28,000 ಇದ್ದುದು ಈಗ 9,97,000 ಆಗಿದೆ; ಎಂದರೆ 3,69 000 ಹೆಚ್ಚಿದ್ದಾರೆ. ಇಲ್ಲಿಗೆ 3 ವರ್ಷಗಳ ಕೆಳಗಿದ್ದ ಪ್ರಾಥಮಿಕಶಾಲೆಗಳ ಸಂಖ್ಯೆ 8,558. ಈ ದಿವಸವಿರುವ ಪ್ರಾಥಮಿಕ ಶಾಲೆಗಳ ಸಂಖ್ಯೆಯಾದರೋ 10,114. ಆಗಿದ್ದ ಮಾಧ್ಯಮಿಕ ಶಾಲೆಗಳು 988. ಈಗ ಇವುಗಳ ಸಂಖ್ಯೆ 1,241ಕ್ಕೆ ಏರಿರುತ್ತೆ. ಆಗ್ಯೆ ಕೇವಲ 112 ಹೈಸ್ಕೂಲುಗಳಿದ್ದವು. ಈಗ 206 ಹೈಸ್ಕೂಲುಗಳನ್ನು ತೆರೆಯಲಾಗಿದೆ. ಹೀಗೆ ವಿದ್ಯಾಭ್ಯಾಸದ ಅಭಿವೃದ್ಧಿಗಾಗಿ ಹೆಚ್ಚು ಹಣವನ್ನು ಖರ್ಚುಮಾಡಿ, ವಿದ್ಯಾಭ್ಯಾಸದ ಸೌಲಭ್ಯಗಳನ್ನು ನೂರಕ್ಕೆ ನೂರರಷ್ಟನ್ನೇ ಹೆಚ್ಚು ಮಾಡಿದ್ದಾರೆ. ಈ ಅಂಕಿ ಅಂಶಗಳನ್ನು ಈ ಸರ್ಕಾರ ಅಧಿಕಾರವನ್ನು ಕೈಗೊಳ್ಳುವಾಗ ಇದ್ದುದಕ್ಕೂ, ಇಂದು ಅವುಗಳು ಯಾವ ಸಂಖ್ಯಾ ಪ್ರಮಾಣದಲ್ಲಿ ಹೆಚ್ಚಾಗಿರುತ್ತವೆಂಬುದಕ್ಕೂ ಹೋಲಿಕೆಹಾಕಿನೋಡಿದರೆ ಕೆಲವು ಒಂದಕ್ಕೆ ಒಂದೂವರೆಯಷ್ಟೂ, ಮತ್ತೆ ಕೆಲವು ಒಂದಕ್ಕೆ ಒಂದೂ ಮುಕ್ಕಾಲರಷ್ಟೂ ಹೆಚ್ಚಾಗಿರುತ್ತವೆ. ಆಗ್ಗೆ ಕೂಡಿಟ್ಟದ್ದ ಹಣವನ್ನೆಲ್ಲಾ ಇವರು ಏನು ಮಾಡಿದರು ಎಂಬುದಕ್ಕೆ ಸರಿಯಾದ ಉತ್ತರ ಕೊಡಲು ನಾನೀಗ ಈ ವಿಷಯಗಳನ್ನೆಲ್ಲಾ ಹೇಳಬೇಕಾಗಿ ಬಂತು. ಇಷ್ಟೆಲ್ಲವನ್ನೂ ಮಾಡಬೇಕಾಗಿದ್ದರೆ ಹಣವಿಲ್ಲದೆ ಮಾಡಲು ಯಾರಿಗಾದರೂ ಸಾಧ್ಯವಿದೆಯೇ? ಇಷ್ಟೆಲ್ಲಾ ಮಾಡಬೇಕಾಗಿದ್ದರೆ ಇವರಿಗೆ ಹಣ ಎಲ್ಲಿಂದ ಬರಬೇಕಾಗಿತ್ತು? ಈ ಅಂಶಗಳನ್ನೆಲ್ಲಾ ಮಾನ್ಯ ಸದಸ್ಯರು ಸ್ವಲ್ಪ ಸಾವಧಾನದಿಂದ ಅವಲೋಕನಮಾಡಿದರೆ ಹಣವೇನಾಯಿತೆಂಬುದು ಅವರಿಗೇ ವೇದ್ಯವಾಗುತ್ತದೆ.

ಇನ್ನು ಸಾರ್ವಜನಿಕರ ಆರೋಗ್ಯದ ಬಗ್ಗೆ ಆಗ ಕೇವಲ 89 ಆರೋಗ್ಯ ಕೇಂದ್ರಗಳಿದ್ದವು. ಅವುಗಳನ್ನು ಈಗ 120ಕ್ಕೆ ಹೆಚ್ಚಿಸಲಾಗಿದೆ. ಈ ಕೆಲಸಗಳೆಲ್ಲಾ ದುಡ್ಡಿಲ್ಲದೆ ಹಾಗೆಯೇ ಆಗತಕ್ಕವುಗಳೇನು? 1947ಕ್ಕೆ ಹಿಂದೆ 139 ವೆಟರಿನರಿ ಆಸ್ಪತ್ರೆಗಳಿದ್ದವು. ಈಗ 193 ವೆಟರಿನರಿ ಆಸ್ಪತ್ರೆಗಳನ್ನು ತೆರೆಯಲಾಗಿದೆ. ಹೀಗೆ ಇದು ಒಂದಕ್ಕೆ ಒಂದೂವರೆಯಷ್ಟು ಹೆಚ್ಚಾಗಿದೆ.

ಇನ್ನು ವಿದ್ಯುಚ್ಛಕ್ತಿಯ ಹೆಚ್ಚುವರಿ ಮತ್ತು ಅದರ ಹರಡುವಿಕೆಯ ಬಗ್ಗೆ ಕೈಗೊಂಡಿರತಕ್ಕ ಕೆಲಸಕಾರ್ಯಗಳು ಬಹಳ ಚರಿತ್ರಾರ್ಹವಾದುವುಗಳಾಗಿವೆಯೆಂದರೆ ಇದು ತಪ್ಪಾಗಲಾರದು.

ಶ್ರೀ ಎ. ಸುಬ್ಬರಾಯಶೆಟ್ಟರು.—ತಾವು ಈ ಯೋಜನೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ತಿಳಿಸದೆ ಏನೇನೋ ಹೇಳುತ್ತಿದ್ದೀರಲ್ಲಾ!

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ನಾನು ಹೇಳುತ್ತಿರುವುದು ಏನೇನೋ ವಿಚಾರಗಳಲ್ಲ. ಕೇವಲ ಈ ಯೋಜನೆಗಳಿಗೆ ಸಂಬಂಧಪಟ್ಟರತಕ್ಕದ್ದೇ ಆಗಿವೆ. ಆದರೆ ಕೆಲವು ಮಾನ್ಯ ಸದಸ್ಯರು ದೇಶದ ಜನರಲ್ಲಿ ಈ ಯೋಜನೆಗಳ ಬಗ್ಗೆ ಒಂದು ತಪ್ಪು ಅಭಿಪ್ರಾಯ ಹುಟ್ಟುವಂತೆ ತಿಳಿಸತಕ್ಕ ಬಗೆ, ಅಂಥಾ ಒಂದು ತಪ್ಪು ಭಾವನೆಗೆ ಜನರಲ್ಲಿ ಅವಕಾಶವಿರಬಾರದು ಅದನ್ನು ಸರಿಪಡಿಸಿ ಹೇಳತಕ್ಕದ್ದು ದೇಶಾಭಿವೃದ್ಧಿಯ ದೃಷ್ಟಿಯಲ್ಲಿ ಅಗತ್ಯವೆಂದೂ, ಹಾಗೆ ಮಾಡತಕ್ಕದ್ದು ನಮ್ಮ ಕರ್ತವ್ಯವೆಂದೂ ನಾನು ಭಾವಿಸಿ ನಾನು ಈ ಅಂಶಗಳನ್ನೆಲ್ಲಾ ತಿಳಿಸಬೇಕಾಗಿ ಬಂತು.

ಹಿಂದೆ ಕೇವಲ 229 ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸಲಾಗಿತ್ತು. ಈಗ 469 ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸಲಾಗಿದೆ. ಈ ವಿದ್ಯುಚ್ಛಕ್ತಿ ಉತ್ಪತ್ತಿಗಾಗಿ 1946-47ರಲ್ಲಿ ಕೇವಲ 11 ಕೋಟಿ 6 ಲಕ್ಷ ಚಿಲ್ಲರೆ ಮೊಬಲಗನ್ನು ಉಪಯೋಗಿಸಲಾಗಿತ್ತು. ಇಂದಾದರೋ ಈಗಿನ ಸರ್ಕಾರ ಆ ಬಾಬಿಗೆ 16 ಕೋಟಿ 87 ಸಾವಿರ ರೂಪಾಯಿಗಳ ಬಂಡವಾಳವನ್ನು ಹಾಕಿತ್ತೆ. ಅಷ್ಟು ಹಣವೆಲ್ಲಾ ಎಲ್ಲಿ ಹೋಯಿತು ಎಂದು ಪ್ರಶ್ನೆ ಮಾಡಿದ ಮಾನ್ಯ ಸದಸ್ಯರುಗಳಿಗೆ ಉತ್ತರ ಹೇಳಲು ನಾನು ಇಷ್ಟೆಲ್ಲಾ ತಿಳಿಸಬೇಕಾಗಿ ಬಂತು.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಸಾರ್ವಜನಿಕರು ಒಪ್ಪತಕ್ಕ ಭಾಷಣವೋ ಇದು?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಮರಳಿನ ಮನೆ ಕಟ್ಟಿದಂತೆ ಈ ಯೋಜನಗಳೆಲ್ಲಾ ಇವೆಯೆಂದು ಹೇಳತಕ್ಕವರಿಗೆ ಏನನ್ನೂ ನಾನು ತಿಳಿಸಲು ಸಾಧ್ಯವಿಲ್ಲ. ಕಾರಣ ಅವರು ದಾರಿ ಬಿಟ್ಟು ತಪ್ಪುದಾರಿ ಹಿಡಿದಿದ್ದಾರೆ. ಅವರು ಹೀಗೆ ಒಂದು ಅಡ್ಡದಾರಿ ಹಿಡಿದಿದ್ದಾರೆಂದು ಒಂದು ಅಂಶ ವಿನಾ ಅವರಿಗೆ ಮತ್ತೇನನ್ನೂ ಹೇಳಬೇಕಾದ ಅಗತ್ಯವಿಲ್ಲ, ಕಾರಣ ಅವರು ನಿನ್ನೆಯ ದಿವಸ ಹೇಳಿದ ಮಾತುಗಳೆಲ್ಲಾ ಗಾಳಿಗೋಪುರದ ಮಾತುಗಳೆ ವಿನಾ ಮತ್ತೊಂದಿಲ್ಲ. ಆದರೆ ನಾನು ಈ ದಿವಸ ಹೇಳತಕ್ಕ ಮಾತುಗಳು ಆ ಗಾಳಿಗೋಪುರದ ಮಾತುಗಳಲ್ಲ. ಜನರ ಮನಸ್ಸಿನಲ್ಲಿ ತಪ್ಪುಭಾವನೆಗಳನ್ನು ಕಟ್ಟಿಸುವಂಥ ಮಾರ್ಗಗಳನ್ನು ತಪ್ಪಿಸಿ ಅವರು ನ್ಯಾಯವಾದ ಭಾವನೆಯಿಂದ ವಿಚಾರ ಗ್ರಹಿಸುವಂತೆ ಮಾಡತಕ್ಕ ಸಾಧನಮಾರ್ಗದ ಮಾತುಗಳು. ಅವರ ಪ್ರಶ್ನೆಗಳಿಗೆ ಉತ್ತರ ಕೊಡಲು ಯೋಗ್ಯವಾದಂಥಾ ವಿಷಯ ಒಂದೂ ಇಲ್ಲ.

ಸ್ವಾಮಿ, ನಮ್ಮ ಶ್ರೀಕಂಠೇಶ್ವರ್‌ರವರು ಅವರದೇ ಒಂದು ಪ್ರಗತಿದಾಯಕ ಮಾರ್ಗವನ್ನು ಹೇಳಿದ್ದಾರೆ. ಅವರು ತಿಳಿಸಿರುವುದೆಲ್ಲಾ ಕೇವಲ ಅಂಗೈಯಲ್ಲಿ ಕೈಲಾಸ ತೋರಿಸುವಂಥ ಭಾಷಣ ಎಂದು ಒಂದು ಪಂಜಿ ಸೇರಿಸಿಬಿಟ್ಟರೆ ಸರಿಹೋಗುತ್ತದೆ. ಅವರು ಮಾಡಿರತಕ್ಕ ಟೀಕೆಯಲ್ಲಿ ಏನೂ ಸ್ವಾರಸ್ಯವಿಲ್ಲ. ಕಾಲು ಘಂಟೆ ನೀರು ಗುಳಗುಳನೆ ಉಕ್ಕಿ ಗುಮ್ಮನಾಗುವಂತೆ ಬುಗುಬುಗು ಮಾತನಾಡಿ ಸಭೆಯನ್ನು ಬಿಟ್ಟು ಹೊರಟುಹೋದರು.

Sri M. GOVINDA REDDY.—I suppose it was not gas!

Sri H. M. CHANNABASAPPA.—The whole thing has become gaseous and so the substance has disappeared.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ನಾವು ನಮ್ಮ ಮುಂದಿರುವ ಯೋಜನೆಗಳನ್ನು ವಿಮರ್ಶೆಮಾಡುವಾಗ ರಚನಾತ್ಮಕ ರೀತಿಯಲ್ಲಿ ಅವುಗಳ ವಿಮರ್ಶೆಮಾಡತಕ್ಕದ್ದು ಬಹಳ ಮುಖ್ಯವಾದದ್ದು ಮತ್ತು ಅದು ನಮ್ಮಗಳ ಮೇಲೆ ಬಿದ್ದಿರುವಂಥ ಒಂದು ಘನತರವಾದ ಜವಾಬ್ದಾರಿ. ಇಡೀ ದೇಶದ 80 ಲಕ್ಷ ಪ್ರಜೆಗಳ ಅಭಿವೃದ್ಧಿಯು ಇಂದು ನಮ್ಮ ಕೈಯ್ಯಲ್ಲಿದೆ. ನಾವು ಸುಮ್ಮನೆ ಒಂದು ಭಾಷಣಮಾಡಿ, ನಮ್ಮ ಭಾಷಣದ ಪ್ರಭಾವದಿಂದಲೇ ಜನರನ್ನು ತೃಪ್ತಿಗೊಳಿಸುತ್ತೇವೆಂಬ ಕಾಲ ಈಗ ಹೋಯಿತು. ಇಂದು ಜನರು ಬುದ್ಧಿವಂತರಾಗಿದ್ದಾರೆ. ಯಾರಯಾರ ಮಾತು ಗಾಳಿಗೋಪುರ ಯಾರಯಾರ ಮಾತುಗಳಲ್ಲಿ ಕಾರ್ಯ ಸಾಧಿಸ ವಚನಗಳಿವೆ, ಯಾರು ಕೆಲಸಗಾರರು, ಯಾರು ಬರೀ ಮಾತುಗಾರರು ಎಂಬುದನ್ನು ಜನ ಇಂದು ಗ್ರಹಿಸಬಲ್ಲರು. ಜನರು ಈ ಸ್ಥಿತಿಯಲ್ಲಿದ್ದಾರೆ. ಇವರು ಈಗತಾನೆ ಹೊಸದಾಗಿ ಯಾವುದೋ ಒಂದು ಕ್ಷೇತ್ರದಿಂದ ರಾಜಕೀಯಕ್ಕೆ ಇಳಿದಿದ್ದಾರೆ. ಇವರು ಹೇಳಿರತಕ್ಕ ಮಾತುಗಳು ಪ್ರಗತಿದಾಯಕವಾದವುಗಳಲ್ಲ. ಆದಕಾರಣ ಅವುಗಳಿಗೆ ಉತ್ತರ ಕೊಡತಕ್ಕ ಅಗತ್ಯವಾಗಲೀ, ಅವಕಾಶವಾಗಲೀ ಇರುವುದಿಲ್ಲವೆಂದು ಹೇಳುತ್ತೇನೆ.

Sri K. R. SREEKANTESWAR.—You can never answer my points. I will challenge.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—I know what points you raised. What are those points? ಏನೇ ಇವುಗಳೆಲ್ಲಾ ದೇಶದಲ್ಲಿ ಒಂದು ಗಾಳಿಗೋಪುರದಂತೆ ಇವೆ, ಇವು ಫಲದಾಯಕವಾಗಿಲ್ಲ, ಎಂದು ಇಷ್ಟೆ ನಮ್ಮ ಮಾತುಗಳ ಸಾರಾಂಶ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಅವು ಆಧಾರ ರಹಿತವಾದವುಗಳೇನು!

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಹೌದು, ಅವು ಆಧಾರರಹಿತವಾದ ಅಭಿಪ್ರಾಯಗಳು. ಉತ್ತರ ಕೊಡಲು ಯೋಗ್ಯವಾದಂಥ ಅಂಶಗಳೇನೂ ಅವರ ಭಾಷಣದಲ್ಲಿದ್ದಂತೆ ಕಾಣುತ್ತಿಲ್ಲ. ಇವುಗಳಿಗೆಲ್ಲಾ ಹೇಗೆ, ಈ 9 ಕೋಟಿ ಹಣಕ್ಕೆ ಬಡ್ಡಿ ಒದಗಿಸುವುದು! ಎಂದು ಯಾವಾಗ ಅವರು ಮಾತನಾಡಿದರೋ ಆಗಲೇ ಗೊತ್ತಾಯಿತು ಇವರು ಈ ಪ್ಲಾನಿಂಗ್ ಸಮಿತಿಯ ಯೋಜನೆಗಳ ಬಗ್ಗೆ ಎಷ್ಟರಮಟ್ಟಿಗೆ ಅರ್ಥಮಾಡಿಕೊಂಡಿರುತ್ತಾರೆ ಎಂಬುದು. ಇವರು ವಿವರಣೆಮಾಡಿರತಕ್ಕ ಸ್ಥಿತಿಯನ್ನು ನೋಡಿದರೆ ಇದರಲ್ಲಿ ಆದಾಯವೇನು, ಇಷ್ಟು ಖರ್ಚುಮಾಡಿದರೆ, ಎಷ್ಟು ವರಮಾನ ಬೇಕು, ಇತ್ಯಾದಿ ವರಮಾನ ಮತ್ತು ಖರ್ಚುಗಳನ್ನು ತಿಳಿಸಲು ಇದೇನು ಆದಾಯ ವೆಚ್ಚಗಳ ತಖ್ತೆಯೇನು? ಇದು ಆ ರೀತಿಯ ಬಡ್ಜೆಟ್ ತಖ್ತೆಯೇನೂ ಅಲ್ಲ. ನಾವು ನಮ್ಮ ಮುಂದಿರುವ ಯೋಜನೆಗಳನ್ನು ರಚನಾತ್ಮಕ ದೃಷ್ಟಿಯಿಂದ ಮಾಡಿದ್ದಾರೆಯೋ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸಬೇಕಾದ್ದು ಇದರಲ್ಲಿ ಮುಖ್ಯವಾದ ವಿಷಯ. ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ತಪ್ಪಾಗಿ ತಿಳಿದುಕೊಂಡರೆ, ಅಂಥ ತಪ್ಪು ತಿಳುವಳಿಕೆಗೆ ನಾನು ಕಾರಣನಲ್ಲ.

ಅಧ್ಯಕ್ಷರೇ, ನಾನು ತಿಳಿಸಬೇಕೆಂದಿದ್ದ ವಿಷಯಗಳು ಇನ್ನೂ ಬಹಳವಾಗಿದ್ದವು. ಆದರೆ ಕಾಲಾವಕಾಶವಿಲ್ಲ. ಆದರೆ ಅವುಗಳನ್ನೆಲ್ಲಾ ಈ ಸಂದರ್ಭದಲ್ಲಿ ತಿಳಿಸುವುದೂ ಕೂಡ ಅನಾವಶ್ಯಕವೇ ಸರಿ. ಆದರೆ ಈಗ ದೇಶದಲ್ಲಿ ಅನೇಕ ಜನ ಬಡವರಿದ್ದಾರೆ. ಅವರೆಲ್ಲರ ಜೀವನ ಉತ್ತಮಗೊಂಡು, ಅವರು ಸುಗಮವಾಗಿ ತಮ್ಮ ಜೀವನೋಪಾಯಗಳನ್ನು ಜರುಗಿಸಿಕೊಂಡು ಹೋಗಲು ಅವಕಾಶವಿರಬೇಕೆಂದು ಕಾನ್‌ಸ್ಟಿಟ್ಯೂಷನ್ನಿನಲ್ಲಿ ಕೆಲವು ಆರ್ಟಿಕಲ್‌ಗಳನ್ನು ಸೇರಿಸಿದ್ದಾರೆ. ಆದರೆ ಅವುಗಳನ್ನು ಜಾರಿಗೆ ತರತಕ್ಕ ಮಾರ್ಗ ಯಾವುದು ಎಂಬುದನ್ನು ನಾವೀಗ ಆಲೋಚಿಸಬೇಕಾಗಿದೆ.

ನಮ್ಮ ಪ್ಲಾನಿಂಗ್ ಸಮಿತಿಯವರು ತಯಾರಿಸಿರತಕ್ಕ ಯೋಜನೆಗಳ ಪೈಕಿ ಕೆಲವು ಬಹಳ ಉತ್ತಮವಾದ ಯೋಜನೆಗಳು ಇದರಲ್ಲಿ ಅಡಕವಾಗಿರುತ್ತವೆಂದು ಒಂದು ಮಾತಿನಲ್ಲಿ ತಿಳಿಸಿಬಿಟ್ಟರೆ ಈಗ್ಗೆ ಸಾಕು. ಆದರೆ ಯಾವ ಕ್ಷೇತ್ರದಲ್ಲಿ ಜನರು ಹೇರಳವಾಗಿದ್ದು ಅವರ ಜೀವನದ ಮಟ್ಟ ಬಹಳ ವ್ಯತ್ಯಾಸಗಳಿಂದ ಕೂಡಿರುತ್ತದೆಯೋ, ಅಂಥವರು ಪ್ರಗತಿಹೊಂದಿದರೆ ಆಗ ದೇಶವು ಸರ್ವತೋಮುಖವಾಗಿ ಅಭಿವೃದ್ಧಿಗೊಂಡಿತೆನ್ನಬಹುದು. ಹಾಗೆ ದೇಶವು ಸರ್ವತೋಮುಖವಾದ ಅಭಿವೃದ್ಧಿಹೊಂದಬೇಕಾಗಿದ್ದರೆ ಭೂಸ್ವಾಮ್ಯ ಮತ್ತು ಅದರ ವ್ಯವಸಾಯ ಮತ್ತು ವ್ಯವಸಾಯಗಾರನ ಆರ್ಥಿಕಸ್ಥಿತಿ ಇವು ಮೂರು ಮುಖ್ಯವಾಗಿ ಒಂದು ಹೊಂದಾವಣಿಕೆಯಲ್ಲಿ ಹೋಗುವಂತಾಗಬೇಕು. ಆದುದರಿಂದ ನಾನು ಈಗ ಭೂಮಿಯನ್ನು ಅವಲಂಬಿಸಿರುವ ಜನರು ಮತ್ತು ಅವರ ಕ್ಷೇತ್ರಗಳ ವಿಷಯವನ್ನು ಮಾತ್ರ ವಿಮರ್ಶೆಮಾಡಿ ಬಾಕಿ ವಿಚಾರಗಳನ್ನೆಲ್ಲಾ ಕೈಬಿಟ್ಟುಬಿಡುತ್ತೇನೆ.

ಕಾನ್‌ಸ್ಟಿಟ್ಯೂಷನ್ನಿನಲ್ಲಿ ಮುಖ್ಯವಾದ ಮೂರು ಅಂಶಗಳು ಅಡಕವಾಗಿವೆ. ಅವುಗಳು ಯಾವುವೆಂದರೆ—

Article 39 of the Constitution:

(1) that the citizens, men and women eqnally, have the right to an adequate means of livelihood.

ಇದು ಬಹಳ ಮುಖ್ಯವಾದದ್ದು. ಪ್ರತಿಯೊಬ್ಬರಿಗೂ ಸುಗಮವಾಗಿ ಜೀವನ ಜರುಗುವಂಥ ಒಂದು ಕಸುಬನ್ನು ಏರ್ಪಾಡುಮಾಡಿಕೊಡತಕ್ಕ ಉದ್ದೇಶದಿಂದ ಈ ಪ್ಲಾನಿಂಗ್ ಸಮಿತಿಯವರು ಕೆಲವು ಉಪಯುಕ್ತ ಯೋಜನೆಗಳನ್ನು ಇದರಲ್ಲಿ ಅಡಕಮಾಡಿದ್ದಾರೆ.

(2) That the ownership and control of the material resources of the community are so distributed as best to subserve the common good;

ಇನ್ನು ಉತ್ಪತ್ತಿ ಬರತಕ್ಕಂಥ ಉತ್ಪನ್ನ ಮಾರ್ಗಗಳು ದೇಶದಲ್ಲಿ ಏನೇನಿರುತ್ತವೆಯೋ ಅವುಗಳ ಮೇಲ್ವಿಚಾರಣೆ ಮತ್ತು ಸ್ವಾಮ್ಯ ಇವುಗಳ ಬಗ್ಗೆ ಎಲ್ಲರಿಗೂ ಸಮಾನಾವಕಾಶವಿರುವಂತೆ ಮತ್ತು ಪ್ರಗತಿಸಾಧಕವಾಗುವಂತೆ ಅವುಗಳನ್ನು ಸರ್ವರಿಗೂ ಪಿತೇವಾರಿಯಾಗುವ ಹಾಗೆ ನೋಡಿಕೊಳ್ಳತಕ್ಕದ್ದು ಎರಡನೆಯದು.

ಇನ್ನು ಮೂರನೆಯದಾಗಿ—

That the operation of the economic system does not result in the concentration of wealth and means of production to the common detriment.

ಹೀಗೆ ಈ ಮೂರು ಅಂಶಗಳೂ ಬಹಳ ಮುಖ್ಯವಾದವುಗಳು. Operation of the economic system

ಎಂದು ಆರ್ಥಿಕ ನೀತಿ ಯಾವ ರೀತಿಯಲ್ಲಿರಬೇಕೆಂದರೆ ಒಂದೇ ಕಡೆ ಸಂಪತ್ತು ಐಕ್ಯವಾಗದಂತೆ, ಅದು ಸರ್ವರಿಗೂ ಆವಶ್ಯಕವಾದಷ್ಟು ಮಟ್ಟದಲ್ಲಿ ದೊರೆಯುವಂತೆ ಏರ್ಪಾಡುಗಳನ್ನು ಮಾಡಬೇಕು. ಹೀಗೆ ಈ ಮೂರು ಮುಖ್ಯ ವಿಷಯಗಳಿವೆ. ಈ ಮುಖ್ಯವಾದ ಮೂರು ವಿಷಯಗಳನ್ನು ಸಾಧನೆಮಾಡುವುದಕ್ಕೆ ಈ ಯೋಜನೆಗಳಲ್ಲಿ ಎಷ್ಟರವಟ್ಟಿಗೆ ಅವಕಾಶವನ್ನು ಕಲ್ಪಿಸುವಂಥಾ ಮಾರ್ಗಗಳನ್ನು ಇವು ಅವಲಂಬಿಸಿರುತ್ತವೆ ಮತ್ತು ಆ ಮೂರು ಮುಖ್ಯ ವಿಷಯಗಳಿಗೆ ಇವು ಸಹಾಯಕವಾಗುವಂತೆ ಇವೆಯೇ ಎಂಬುದನ್ನು ವಿಮರ್ಶೆಮಾಡಿದರೆ ಅಷ್ಟು ಸಾಕು.

Mr. SPEAKER.—The House will now rise for lunch.

The Assembly adjourned for lunch at Thirty Minutes past Three of the Clock and re-assembled at Twelve Minutes past Four of the Clock, Mr. Speaker (The Hon'ble Sri V. Venkatappa) in the Chair.

*ಶ್ರೀ ಎಚ್. ಎಂ ಚೆನ್ನಬಸಪ್ಪನವರು.—ಮೈಸೂರು ಸರ್ಕಾರದವರು ಕೊಟ್ಟ ಪಂಚವಾರ್ಷಿಕ ಯೋಜನೆಯಲ್ಲಿ 36ಕೋಟಿ 60ಲಕ್ಷ ರೂಪಾಯಿಗಳ ಅಂದಾಜು ನಮ್ಮ ಮುಂದೆ ಇದೆ. ಇದರ ಪೈಕಿ ಖರ್ಚು ವೆಚ್ಚ ಯಾವ್ಯಾವುದಕ್ಕೆ ಎಷ್ಟೆಷ್ಟು ಒದಗಿಸಿದ್ದಾರೆ ಎಂದರೆ ವ್ಯವಸಾಯ ಮತ್ತು ಗ್ರಾಮಾಭಿವೃದ್ಧಿಗೆ 595 ಲಕ್ಷ 38 ಸಾವಿರ ರೂಪಾಯಿಗಳು, ಮೇಜರ್ ಇರಿಗೇಷನ್ ಮತ್ತು ಪವರ್ ಪ್ರಾಜೆಕ್ಟ್‌ಗೆ 1,984ಲಕ್ಷ ರೂಪಾಯಿಗಳು ಕೈಗಾರಿಕಾಭಿವೃದ್ಧಿಗೆ 170ಲಕ್ಷ, ರಸ್ತೆಗಳಿಗೆ 320 ಲಕ್ಷ ಮತ್ತು ಸೋಷಿಯಲ್ ಸರ್ವಿಸ್‌ಗೆ 590ಲಕ್ಷ ರೂಪಾಯಿಗಳು: ಒಟ್ಟಿನಲ್ಲಿ ವಿಭಾಗಮಾಡಿ ನೋಡಿದರೆ ವ್ಯವಸಾಯಕ್ಕೆ ಪ್ರತಿ ನೂರು ರೂಪಾಯಿಗೆ 16ರಷ್ಟು ಆಗುತ್ತದೆ. 20ರಷ್ಟು ಇರಿಗೇಷನ್ ಪ್ರಾಜೆಕ್ಟ್‌ಗೆ ಆಗುತ್ತದೆ. 34ರಷ್ಟು ಪವರ್ ಪ್ರಾಜೆಕ್ಟ್‌ಗೆ ಆಗುತ್ತದೆ. ಕೈಗಾರಿಕೆಗಳಿಗೆ ಶೇಕಡ 50ರಷ್ಟು ಆಗುತ್ತದೆ. ರಸ್ತೆಗಳ ಅಭಿವೃದ್ಧಿಗೆ ಶೇಕಡ 9ರಷ್ಟು, ಸೋಷಿಯಲ್ ಸರ್ವಿಸ್, ವಿದ್ಯಾಭ್ಯಾಸ ಮೆಡಿಕಲ್, ಪಬ್ಲಿಕ್‌ಹೆಲ್ತ್ ಇವುಗಳಿಗೆ ಶೇಕಡ 16ರಷ್ಟು ಆಗುತ್ತದೆ.

ಈಗ ಮುಖ್ಯವಾಗಿ ನಮಗೆ ವ್ಯವಸಾಯಾಭಿವೃದ್ಧಿಯಾಗಿ ತನ್ಮೂಲಕ ಆಹಾರದ ಉತ್ಪತ್ತಿ ಹೆಚ್ಚಾಗಿ ಜನಸಾಮಾನ್ಯರ ಜೀವನ ಉತ್ತಮವಾಗಬೇಕೆಂಬುದನ್ನೇ ಪ್ರಾಧಾನ್ಯವಾಗಿ ಇಟ್ಟುಕೊಂಡಿದ್ದಾರೆ ಎಂಬುದು ಈ ಅಂಕಿ ಅಂಶಗಳಿಂದ ವ್ಯಕ್ತವಾಗುತ್ತದೆ. ಅಲ್ಲದೆ, 36½ ಕೋಟಿ ರೂಪಾಯಿಗಳಲ್ಲಿ ಶೇಕಡ 34ರಷ್ಟು ವ್ಯವಸಾಯ ಮತ್ತು ಗ್ರಾಮಾಭಿವೃದ್ಧಿಗೆ ಮುಡುಪಾಗಿಟ್ಟು ಅದರ ವಿಷಯದಲ್ಲಿ ಅವರು ಎಷ್ಟು ಆಸಕ್ತಿಯನ್ನು ತೋರಿಸಿದ್ದಾರೆ ಎಂಬುದೂ ಸಹ ಗೊತ್ತಾಗುತ್ತದೆ. ಇನ್ನೂ ಬಾಕಿ ಖರ್ಚು ಬಾಬುಗಳಿಗೆ ಅವುಗಳ ಅವಶ್ಯಕತೆ ನೋಡಿಕೊಂಡು ಕೊಟ್ಟಿದ್ದಾರೆ. ಒಟ್ಟಿನಲ್ಲಿ order of priority ಅತಿಮುಖ್ಯವಾದದ್ದು, ಅದಕ್ಕಿಂತ ಸ್ವಲ್ಪ ಕಮ್ಮಿ ಅದಕ್ಕಿಂತ ಸ್ವಲ್ಪ ಕಮ್ಮಿ ಎಂಬ ಒಂದು ಆರ್ಡರ್ ಇಟ್ಟಿರುವುದು ವ್ಯಕ್ತವಾಗಿದೆ. ಅದರಲ್ಲಿ ಹಣ ಯಾವ್ಯಾವ ಪುದರಿಂದ ಎಷ್ಟೆಷ್ಟು ಬರುತದೆ ಬರುವುದಕ್ಕೆ ಸಾಧ್ಯವೇ ಎಂಬ ವಿಚಾರದಲ್ಲಿ ವಾದಪ್ರತಿವಾದವಾಯಿತು. ಒಟ್ಟಿನಲ್ಲಿ ನಾವು ಯೋಚನೆ ಮಾಡುವಾಗ ಮುಖ್ಯವಾಗಿ ಗಮನದಲ್ಲಿಟ್ಟುಕೊಳ್ಳಬೇಕಾದ್ದು ಒಂದು ನಿರ್ದಿಷ್ಟವಾದ ಕಾಲದಲ್ಲಿ ಒಂದು ನಿರ್ದಿಷ್ಟವಾದ ಪ್ರಗತಿಯನ್ನು ಸಾಧನೆ ಮಾಡಬೇಕೆಂಬುದು ಮೊದಲನೆಯ ನಿರ್ಧಾರ. ಅದನ್ನು ಸಾಧನೆಮಾಡಬೇಕಾದರೆ ಅದಕ್ಕೆ ಹಣ ಸ್ವಲ್ಪ ಹೆಚ್ಚು ಕಮ್ಮಿ ಎಷ್ಟಾಗುತ್ತದೆ ಎಂಬುದನ್ನು ನಿರ್ಧರಮಾಡುವುದು ಎರಡನೆ ಮಟ್ಟ. ಮೂರನೆಯದು ಆ ಹಣವನ್ನು ಹೇಗೆ ಒದಗಿಸಬೇಕೆಂಬುದು. ಹಣವನ್ನು ಒದಗಿಸಿದ ಮೇಲೆ ಅದಕ್ಕೆ ನಿರ್ದಿಷ್ಟ ಕಾಲದಲ್ಲಿ ಒದಗಿಸತಕ್ಕ ಮೆಷಿನರಿ ಯಾವುದು ಎಂಬುದನ್ನು ನಿರ್ಧಾರ ಮಾಡುವುದು, ಅದನ್ನು ನಿರ್ಧಾರ ಮಾಡಿದ ಮೇಲೆ ನಿರ್ದಿಷ್ಟ ಕಾಲದಲ್ಲಿ ನಿರ್ದಿಷ್ಟ ಹಣ ವೆಚ್ಚವಾಗಿ ಅದರಿಂದ ಜನಗಳಿಗೆ ಸಹಾಯ ಒದಗುತ್ತಿದೆಯೇ ಎಂಬುದನ್ನು ಮೇಲ್ವಿಚಾರಣೆ ಮಾಡುವುದು. ಈ ರೀತಿ ಪ್ರಗತಿ ಸಾಧನೆಮಾಡತಕ್ಕದ್ದು ಬಹಳ ಮುಖ್ಯವಾದದ್ದು. ಈ ಹಣ ಎಲ್ಲಿಂದ ಬರುತ್ತದೆ ಎಂಬ ಬಗ್ಗೆ ವಾದ ವಿವಾದ ವಾದುದು ಸರಿಯಷ್ಟೆ. ಕೆಲವರು ಹಣವೇ ಇಲ್ಲ, ಆದ್ದರಿಂದ ಈ ಯೋಜನೆ ಅನಗತ್ಯ ಎಂಬ ಅರ್ಥ ಬರುವ ರೀತಿಯಲ್ಲಿ ಹೇಳಿದರು. ಅಂಥ ಒಂದು ವಾದವನ್ನು ಹೇಳಿದವರು ಶ್ರೀಮಾನ್ ಶಿದ್ದಪ್ಪನವರು. ಅದಕ್ಕೆ ಮೊದಲೇ ಹೇಳಿಬಿಟ್ಟೆ: ಅವರ ವಾದ ಅವರಿಗೆ ತಕ್ಕುದಾಗಿರಲಿಲ್ಲ ಎಂದು ಒಂದುಕಡೆ ಯೋಜನೆಗಳಾಗಬೇಕೆಂದು ಹೇಳುತ್ತಾರೆ; ಮತ್ತೊಂದು ಕಡೆ ಪ್ರಗತಿಸಾಧನೆಯಾಗಬೇಕೆಂದು ಹೇಳುತ್ತಾರೆ; ಇನ್ನೊಂದು ಕಡೆ ಹಣ ಇಲ್ಲ ನಿಲ್ಲಿಸಿ ಎಂದು ಹೇಳುತ್ತಾರೆ; ಇದರಲ್ಲಿ ಅರ್ಥವಿಲ್ಲ. ಅನೇಕ ಯೋಜನೆಗಳನ್ನು ಅವರು ಅಧಿಕಾರವಲ್ಲದ್ದಾಗಲೇ ದುಡ್ಡು ಇರಲಿ, ಇಲ್ಲದೇ ಇರಲಿ ಪ್ರಾರಂಭಮಾಡಿ ಯಶಸ್ವಿಯಾದರು. ಈಗ ಹಣ ಒದಗಿಸುವುದರಲ್ಲಿ ಬುದ್ಧಿವಂತಿಕೆ ಇದೆ. ಕೆಲಸಕಾರ್ಯಗಳನ್ನು ನಿಲ್ಲಿಸುವುದರಲ್ಲಿ ಅಲ್ಲ. ಪ್ರಗತಿಸಾಧನೆ ಮಾಡಿಯೇ ತೀರಬೇಕೆಂದು ನಿರ್ಧರ ಮಾಡಿರುವಾಗ ಅದಕ್ಕೆ ಹಣ ಒದಗಿಸತಕ್ಕ ನಿರ್ಧಾರವನ್ನು ತೆಗೆದುಕೊಂಡು ಯಾವ ಮಾರ್ಗದಲ್ಲಿ ಹೇಗೆ ಒದಗಿಸಬೇಕೆಂಬುದನ್ನು ಯೋಚನೆ ಮಾಡಿ ಒದಗಿಸುವುದೂ ಕೂಡ ಒಂದು ಬುದ್ಧಿವಂತಿಕೆ. ಈಗ ಹಾಕಿಕೊಂಡಿರುವ ಯೋಜನೆಯ ಪ್ರಕಾರ 36 ಕೋಟಿ 60 ಲಕ್ಷ ರೂಪಾಯಿ ಬೇಕು. ಮತ್ತು ಸಾಧಾರಣವಾದಂಥ ಸರ್ಕಾರಿ ವೆಚ್ಚಗಳಿಗೆ 58 ಕೋಟಿ 60 ಲಕ್ಷ ರೂಪಾಯಿಗಳು ಬೇಕು. ಇದನ್ನು ಯಾವ ರೀತಿ ಒದಗಿಸಬೇಕಾಗುತ್ತದೆ ಎಂದರೆ ಇತರ ಬಾಬುಗಳಲ್ಲಿ 24·70ಲಕ್ಷ, ಕೇಂದ್ರದಿಂದ 8·00 ಲಕ್ಷ ಮತ್ತು ನಮ್ಮ ಸಾಧಾರಣ ರೆವಿನ್ಯೂ ಬಾಬುಗಳಿಂದ 62·50 ಲಕ್ಷ. ಈ ರೀತಿ ಒಟ್ಟು 95·20ಲಕ್ಷ ರೂಪಾಯಿ ಆಗುತ್ತದೆ. ಹೀಗೆ ವಿಂಗಡಣೆ ಮಾಡಿದ್ದಾರೆ. ಇದರಲ್ಲಿ ಸ್ವಲ್ಪ ಭಿನ್ನಾಭಿಪ್ರಾಯಕ್ಕೆ ಬಂದ ವಿಷಯಗಳಲ್ಲಿ 8 ಕೋಟಿ ರೂಪಾಯಿಗಳು ಕೇಂದ್ರದಿಂದ ಬರತಕ್ಕದ್ದು ಸಾಲದು ಎಂಬುದು ಒಂದು ವಾದ. 9 ಕೋಟಿ ರೂಪಾಯಿ ಸಾಲವನ್ನು ನಾವು ಎತ್ತುವುದಕ್ಕೆ ಸಾಧ್ಯವೇ ಹಣ ಸಿಕ್ಕುತ್ತದೆಯೇ ಎಂಬುದು ಎರಡನೆಯದು. ಮೂರನೆಯದು ತೆರಿಗೆ ಬಾಬುಗಳಿಂದ ಹೆಚ್ಚು ವರಮಾನ ಬರಮಾಡಿಕೊಳ್ಳುವುದು ಸರಿಯಾದ ನೀತಿಯೇ ಎಂಬುದು. ಇದಕ್ಕೆ ಉತ್ತರವಾಗಿ ಒಂದೆರಡು ಮಾತು ಹೇಳುವುದು ನನ್ನ ಕರ್ತವ್ಯ ಎಂದು ತಿಳಿದು ಏಳಿದೇನೆ. ಟ್ಯಾಕ್ಸೇಷನ್ ಮಾಡುವುದು ಮಾಡತಕ್ಕ ರೀತಿ ಮಾಡದಿರುವುದಕ್ಕೆ ಹೇಗೆ ಮಾಡುತ್ತೀರಿ ಇತ್ಯಾದಿ ಇತ್ಯಾದಿ ವಾದ ಮಾಡಿದರು. ಒಟ್ಟಿನಲ್ಲಿ ಯಾವ ರೀತಿ ಟ್ಯಾಕ್ಸೇಷನ್ ಮಾಡಬೇಕೆಂಬುದನ್ನು ಈಗಾಗಲೇ ರಾಜ್ಯಾಂಗದಲ್ಲಿ ನಿರ್ಧಾರಮಾಡಿಕೊಂಡಿದ್ದೇವೆ. ಅಗಾಧವಾಗಿ ಸಂಪಾದನೆ ಮಾಡತಕ್ಕ ಮಹನೀಯರು ಯಾರ್ಯಾರು ಇದ್ದಾರೋ ಅವರುಗಳಮೇಲೆ ಹೆಚ್ಚಿನ ಪ್ರಮಾಣದಲ್ಲಿ ತೆರಿಗೆ ಹಾಕಿ ಆ ಹಣ ಬಡವರಿಗೆ ಹೋಗುವ ರೀತಿಯಲ್ಲಿ

(ಶ್ರೀ ಎಚ್. ಎಂ. ಚನ್ನಬಸಪ್ಪನವರು)

ಆರ್ಥಿಕ ನೀತಿಯನ್ನು ಅನುಸರಿಸಬೇಕೆಂಬುದು ಒಂದು ತತ್ವ. ಆ ರೀತಿ ಮಾಡಲು ಯಾವ್ಯಾವ ರೀತಿ ಕೆಲಸ ಮಾಡಬೇಕೆಂಬುದು ಸರ್ಕಾರದವರಿಗೆ ಬಿಟ್ಟಿದ್ದು. ಸರ್ಕಾರದವರು ಆ ನೀತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಈ 8 ಕೋಟಿ 60 ಲಕ್ಷ ರೂಪಾಯಿಗಳನ್ನು ಒದಗಿಸುವುದಕ್ಕೆ ಒಂದು ಯೋಜನೆಯನ್ನು ಬಡ್ಜೆಟ್ ಕಾಲದಲ್ಲಿ ಹಾಕುವುದು ಅವರ ಕರ್ತವ್ಯ. ಅಗ್ಗೆ ಅವರು ತಮ್ಮ ನೀತಿಗೆ ವಿರೋಧವಾಗಿ ಟ್ಯಾಕ್ಸೇಷನ್ ಪಾಲಿಸಿಯನ್ನು ಅನುಸರಿಸಿದ ಪಕ್ಷದಲ್ಲಿ ನಿಮಿಷಾರ್ಧವೂ ಕೂಡ ಅವರು ಇರುವುದಕ್ಕೆ ಸಾಧ್ಯವಿಲ್ಲ. ಹಾಕಿಕೊಟ್ಟ ನೀತಿ ನಿಯಮಗಳಿಗೆ ಅನುಸಾರವಾಗಿ ತೆರಿಗೆ ಹಾಕಲಿಕ್ಕೆ ಮಾತ್ರ ಸಾಧ್ಯವಿದೆ. ಅವೆಲ್ಲವನ್ನೂ ಪ್ಲಾನ್ ಮಾಡತಕ್ಕ ಕಾಲದಲ್ಲಿ ವಿವರವಾಗಿ ವಿಮರ್ಶೆ ಮಾಡುವುದು ಅನುಚಿತ. ಒಟ್ಟಿನಲ್ಲಿ ಅಷ್ಟು ಹಣ ಒದಗಿಸಿಯೇ ತೀರಬೇಕು. ಬಡವರಿಗೆ ನೋವಾಗದ ರೀತಿಯಲ್ಲಿ ಒದಗಿಸಬೇಕು ಎಂಬ ತತ್ವವನ್ನು ಒಪ್ಪಿಕೊಳ್ಳೋಣ. ಒಂದು ಘಂಟೆಯೊಳಗೆ ಲಕ್ಷಗಟ್ಟಲೆ ರೂಪಾಯಿ ಸಂಪಾದನೆ ಮಾಡತಕ್ಕ ಜನ ಎಷ್ಟೋ ಇದ್ದಾರೆ. ಅವರಲ್ಲಿ ಹಣ ಅಧಿಕವಾಗಿದೆ. ಅವೆಲ್ಲವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಅಂಥವರ ಹಣ ಸರ್ಕಾರದವರ ಬೊಕ್ಕಸಕ್ಕೆ ಬಿದ್ದು ತನ್ಮೂಲಕ ಬಡವರಿಗೆ ಅನುಕೂಲವಾಗುವ ರೀತಿಯಲ್ಲಿ ಆರ್ಥಿಕ ವ್ಯವಸ್ಥೆಯನ್ನು ಮಾಡುವುದಕ್ಕೆ ಸೂಕ್ತ ಕಾರ್ಯಕ್ರಮ ಹಾಕಿಕೊಳ್ಳುವ ಅಧಿಕಾರ ಸರ್ಕಾರದವರಿಗಿದೆ ಎಂಬುದನ್ನು ಅವರಿಗೆ ತಿಳಿಸಬಯಸುತ್ತೇನೆ.

ಇನ್ನು 9 ಕೋಟಿ ರೂಪಾಯಿಗಳ ಸಾಲವೆತ್ತುವ ವಿಚಾರ. ಹಣ ಸಾಲದಿಂದವಾಗಲಿ ಕೂಡ್ಸ ಪ್ರಗತಿಯನ್ನು ಸಾಧನೆ ಮಾಡಬೇಕೆಂಬ ಅಭಿಪ್ರಾಯ ಮನಸ್ಸಿನಲ್ಲಿರುವಾಗ ಸಾಲದೆ ಇಂತಹ ಹಣವನ್ನು ಸಾಲದ ರೂಪದಲ್ಲಿ ಎತ್ತುವುದು ಎಲ್ಲಾ ಸರ್ಕಾರಗಳಲ್ಲೂ, ಎಲ್ಲ ದೇಶಗಳಲ್ಲೂ ಇರತಕ್ಕ ನೀತಿಯೇ ಆಗಿದೆ. ಈ ಸಾಲಕ್ಕೆ ಬಡ್ಡಿ ಒದಗಿಸಿಯೇ ಇಲ್ಲವಲ್ಲಾ ಎಂದು ಹೇಳಿದರೆ ನಾನೇನು ಹೇಳಲಿ! ಸಾಲವನ್ನು ತೆಗೆದುಕೊಳ್ಳುವ ಬಗ್ಗೆ ಬಜೆಟ್ receipts ಟೇಬಿನಲ್ಲಿ ಸಾಲದ ಮೊತ್ತವನ್ನೂ ಖರ್ಚು ಬಾಬಿನಲ್ಲಿ ಬಡ್ಡಿಯನ್ನೂ ನಮೂದಿಸುವುದು ನ್ಯಾಯವೇ ವಿನಾ ಈ ಪ್ಲಾನಿನಲ್ಲಿ ಹೇಳಲಿಲ್ಲವೆಂದು ಆಕ್ಷೇಪಿಸುವುದು ಪರಮಾಶ್ಚರ್ಯವಾಗಿದೆ! ಇದು ಎಷ್ಟರ ಮಟ್ಟಿಗೆ ಅವರು ಬಜೆಟ್ ಮುಂತಾದುವುಗಳನ್ನು ವಿಮರ್ಶೆ ಮಾಡಿ ತಿಳಿದುಕೊಂಡಿದ್ದಾರೆಂಬುದನ್ನು ವ್ಯಕ್ತಪಡಿಸುತ್ತದೆ.

ಒಟ್ಟಿನಲ್ಲಿ ಪ್ರಜೆಗಳ ಮುಂದೆ ಈ ಸಾಲವನ್ನು ಎತ್ತಬೇಕಾಗಿ ಬಂದಾಗ ಹಣವನ್ನೊದಗಿಸುವುದರಲ್ಲಿ ಯಾರೂ ಹಿಂಜರಿಯುವುದಿಲ್ಲವೆಂದು ನಾನು ನಂಬಿದ್ದೇನೆ. ಮುಖ್ಯವಾಗಿ ಅವರಿಗೆ ಸರ್ಕಾರದವರು ತಮಗೆ ಬೇಕಾದ ಅನುಕೂಲಗಳನ್ನು ಶೀಘ್ರವಾಗಿ ಒದಗಿಸಿಕೊಡುವವರಾಗಿದ್ದಾರೆಂಬ ನಂಬಿಕೆ ಒಂದು ಮಾತ್ರ ಉಂಟಾಗಬೇಕು. ಆ ನಂಬಿಕೆಯಿಲ್ಲದೆ ಇದ್ದರೆ ಹಣ ಹುಟ್ಟುವುದಿಲ್ಲವೆಂದು ಹೇಳಬಹುದು. ಈಗ ಆ ರೀತಿಯ ಎದುರಿಕೆಯಿಲ್ಲವೆಂದು ನಾನು ಹೇಳಬಲ್ಲೆ. ಒಂದು ವೇಳೆ ಸಾಲವೆತ್ತುವುದಕ್ಕೆ ಹೊರಟ ಹಣ ಸಾಲಾವಷ್ಟು ಬಾರದೆಹೋದರೆ ಏನು ಮಾಡಬೇಕೆಂಬುದಕ್ಕೆ ಒಂದು ಮಾತು ಹೇಳುತ್ತೇನೆ. ಈಗ ಎಷ್ಟೋ ಜನರು ಹೆಚ್ಚು ಹೆಚ್ಚು ಲಾಭ ಪಡೆಯಬೇಕೆಂಬ ಆಸೆಯಿಂದ ನಾನಾ ಉದ್ಯಮಗಳಲ್ಲಿ ಹಣವನ್ನು ಹಾಕುತ್ತಿದ್ದಾರೆ. ಅವರು ಈ ಸಾಲಗಳಿಗೆ ಸಹಾಯ ಮಾಡಬಹುದು. ಆದರೆ ಅಂಥವರ ಮೇಲೆ ಸರ್ಕಾರಕ್ಕೆ ಹತೋಟಿಯಿದ್ದೇ ಇದೆಯೆಂಬುದನ್ನು ಅವರು ಮರೆಯಬಾರದು. ಅಂಥವರ ಹಣ ಹಾಗೆ ಹೆಚ್ಚಿನ ಉತ್ಪತ್ತಿಯ ಮಾರ್ಗಗಳಲ್ಲಿ invest ಆಗಿರುವುದನ್ನು ತೆಗೆದು ಸರ್ಕಾರದವರು ಜನಗಳ ಪ್ರಯೋಜನಕ್ಕಾಗಿ ಏರ್ಪಟ್ಟಿರುವ ಈ ಯೋಜನೆಯನ್ನು ಸಾಧನ ಮಾಡುವುದಕ್ಕೆ ಆ ಹಣವನ್ನು ಒದಗಿಸಬೇಕೆಂದು ಒತ್ತಾಯಪೂರ್ವಕವಾಗಿ ತೆಗೆದುಕೊಳ್ಳುವುದಕ್ಕೆ ಸರ್ಕಾರದವರಿಗೆ ಯಾವ ವಿಧವಾದ ಪ್ರತಿಬಂಧಕವೂ ಇಲ್ಲವೆಂದು ನನಗನ್ನಿಸುತ್ತದೆ. ಹೇಗೆ, ರೈತರಲ್ಲಿ ತಮಗೆ ಬೇಕಾದ್ದಕ್ಕಿಂತ ಹೆಚ್ಚಾಗಿರುವ ದವಸ ಧಾನ್ಯಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ನಿರ್ದಿಷ್ಟವಾದ ಬೆಲೆಗೆ ಕಾನೂನು ಬಲದಿಂದ ತೆಗೆದುಕೊಂಡು ಆಹಾರ ಬೆಳೆಯದಿರುವವರಿಗೆ ಹಂಚುತ್ತಿದ್ದಾರೋ ಹಾಗೆಯೇ ಹಣವು ಯಥೇಷ್ಟವಾಗಿ ಕೆಲವು ಜನಗಳಲ್ಲಿ ಕೊಳೆಯುತ್ತಾ ಇರುವುದನ್ನು ಕಾನೂನು ಬಲದಿಂದ ತೆಗೆದುಕೊಂಡು ಇಂಥ ಪ್ರಯೋಜನಕಾರಿಯಾದ ಕೆಲಸಕಾರ್ಯಗಳಲ್ಲಿ ಉಪಯೋಗಿಸುವ ವ್ಯವಸ್ಥೆ ಮಾಡುವ ಅಧಿಕಾರ ಸರ್ಕಾರಕ್ಕಿದೆಯೆಂಬುದನ್ನು ಈ ಸಂದರ್ಭದಲ್ಲಿ ಆ ಪ್ರಶ್ನೆಯೆತ್ತಿದ ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ. ಆದ್ದರಿಂದ ಆ ರೀತಿ ಹಣವನ್ನೊದಗಿಸಿಕೊಳ್ಳುವ ಪ್ರಶ್ನೆ ಈಗ ಎತ್ತುವುದು ಅನಾವಶ್ಯಕ.

ಇಷ್ಟನ್ನು ಹಣಕಾಸನ್ನೊದಗಿಸತಕ್ಕ ವಿಚಾರ ಮತ್ತು ಹಣಕಾಸಿನ ವಿಲೇವಾರಿ ವಿಚಾರ. ಇನ್ನು ಖರ್ಚು ಮಾಡತಕ್ಕದ್ದರಲ್ಲಿ ಮೊಟ್ಟಮೊದಲನೆಯದಾಗಿ ವ್ಯವಸಾಯ, ನೀರಾವರಿ ಮತ್ತು ಆಹಾರ ಈ ಮೂರು ವಿಷಯಗಳನ್ನು ಬಿಟ್ಟು ಇನ್ನು ಬೇರೆ ವಿಷಯಗಳನ್ನು ನಾನು ಪ್ರಸ್ತಾಪಮಾಡಬೇಕೆಂದಿಲ್ಲ. ಏಕೆಂದರೆ ಇವತ್ತಿನ ದಿವಸ ಮುಖ್ಯವಾಗಿರತಕ್ಕ ಮತ್ತು ದೇಶದಲ್ಲಿ ಶೇಕಡ 75ಭಾಗ ಜನರಿಗೆ ಅನ್ವಯಿಸುವ ಪ್ರಶ್ನೆಯೆಂದರೆ ಅದು ಭೂ ವ್ಯವಸಾಯ, ಭೂ ಸ್ವಾಮ್ಯ ಮತ್ತು ಭೂಮಿಯ ಉತ್ಪನ್ನ; ಇವುಗಳಿಗೆ ಸಂಬಂಧಪಟ್ಟ ಕೆಲವು ವಿಷಯಗಳನ್ನು ವಿಮರ್ಶೆಮಾಡಿ ನನ್ನ ಅಭಿಪ್ರಾಯವನ್ನು ಸೂಚಿಸಬೇಕೆಂದಿದ್ದೇನೆ. ಈ ಪ್ಲಾನಿನಲ್ಲಿ ಒಂದು ವಿಷಯ ಹೇಳಿದ್ದಾರೆ, ಭೂಮಿಯನ್ನು re-organise ಮಾಡಬೇಕು ಎಂದು. ಭೂಸ್ವಾಮ್ಯವನ್ನು re-organise ಮಾಡಬೇಕೆಂಬುದೂ ಒಂದು. ಭೂ-ಪುನರ್ವಿಮರ್ಶೆ ಮಾಡಿದ ಮೇಲೆ ಭೂಮಿಯಿಂದ ಎಷ್ಟು ಉತ್ಪನ್ನ ತೆಗೆಯಬಹುದೋ ಅಷ್ಟು ತೆಗೆದರೆ ಜೀವನಕ್ಕೆ ಭೂಮಿಯನ್ನೇ ಅವಲಂಬಿಸಿಕೊಂಡಿರತಕ್ಕ ಜನರಿಗೆ ಇದರಿಂದ ಬರುವ ಉತ್ಪನ್ನ ಲಾಭದಾಯಕವಾಗಬಹುದು ಎಂದು.

ಈ ರೀತಿಯಾಗಿರತಕ್ಕ ಈ ಪ್ಲಾನಿನ ವಿಷಯ ಸರಿಯಾಗಿದೆ, ಒಪ್ಪತಕ್ಕದ್ದೇ; ಆದರೆ ಇದನ್ನು ಸಾಧನೆ ಮಾಡುವ ಮಾರ್ಗ, ಅವರು ತೋರಿಸಿರುವುದರಲ್ಲಿ ಭಿನ್ನಾಭಿಪ್ರಾಯಕ್ಕೆ ಅವಕಾಶವಿದೆ. ಮೂಲೋದ್ದೇಶ ಸಾಧನೆ ಮಾಡುವುದರಲ್ಲಿ 5 ವರ್ಷ ಕಳೆದ ಮೇಲೆ ಉದ್ದೇಶ ಸಾಧನೆಯಾಗುವುದರ ಬದಲು ಅದು ಸಾಧನೆಯಾಗದಿರುವ ಪರಿಸ್ಥಿತಿಯಲ್ಲಿ ಮುಕ್ತಾಯವಾದೀತೋ ಎಂದು ನಾನು ಹೇಳುತ್ತಿದ್ದೇನೇ ವಿನಾ ಬೇರೆಯಲ್ಲ. ಆದ್ದರಿಂದ ಸರ್ಕಾರದವರು ಈ ಮಾತನ್ನು ಸ್ವಲ್ಪ ಹೆಚ್ಚಿನ ಆಸಕ್ತಿಯಿಂದ ಕೇಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಈಗ ಯಾವ ಯಾವ ದೇಶದಲ್ಲಿ ಯಾವ ಯಾವ ವ್ಯವಸ್ಥೆಗಳನ್ನು ಮಾಡಿ ಎಷ್ಟರ ಮಟ್ಟಿನ ಪ್ರಯೋಜನ ಹೊಂದಿದ್ದಾರೆಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು ನಮ್ಮ ದೇಶದ ಪರಿಸ್ಥಿತಿಗನುಗುಣವಾಗಿ ಉತ್ಪನ್ನ ಪದ್ಧತಿ, ಭೂ ಸ್ವಾಮ್ಯ ಪದ್ಧತಿಯನ್ನು ಬದಲಾಯಿಸುವುದು ಉಚಿತ. ಈ ಯೋಜನೆಯಲ್ಲಿ ನಾನಾ ಪದ್ಧತಿಗಳಿವೆ. ಮುಖ್ಯವಾದವು, State enterprise, Co-operative enterprise and individual

enterprise ಎಂಬುದಾಗಿ ಮಾತ್ರ. State enterprise ನಲ್ಲೂ ಎರಡು ವಿಧಗಳಿವೆ. ಒಂದನೆಯದು ಸರ್ಕಾರದವರೇ ಭೂ ಸ್ವಾಮ್ಯವನ್ನು ಪಡೆದು ಭೂ-ಉತ್ಪನ್ನ ಕೈಗಾರಿಕೆಯನ್ನು ಸರ್ಕಾರದವರೇ ನಡೆಸುವುದು. ಇಲ್ಲವೇ, ಇಡೀ ದೇಶದ ಭೂ-ಸ್ವಾಮ್ಯವೆಲ್ಲವನ್ನೂ ಸರ್ಕಾರದವರೇ ತೆಗೆದುಕೊಂಡು ಸಹಕಾರ ವ್ಯವಸಾಯ ಪದ್ಧತಿಯನ್ನು ಜಾರಿಗೆ ತರುವುದು. ಇದು Nationalisation of land ಅನ್ನುವ ಪದ್ಧತಿ. ಇನ್ನು co-operative basis ಮೇಲೆ ವ್ಯವಸಾಯ ಮಾಡುವುದು. ಇದರಲ್ಲಿ Village Co-operative farming ಎಂಬುದನ್ನು ಸಲಹೆ ಮಾಡಿದ್ದಾರೆ. ಆ ಪದ್ಧತಿಯನ್ನೇ ತಮ್ಮ Political goal ಎಂದು ಭಾವಿಸಿದ್ದಾರೆ. ಇನ್ನೊಂದು ಪದ್ಧತಿ, ಖಾಸಗಿ ಉದ್ಯಮವನ್ನು ವ್ಯವಸ್ಥೆ ಮಾಡಿ ಅದರಿಂದ ಉತ್ಪತ್ತಿ ಜಾಸ್ತಿ ಮಾಡುವುದು. ಈ ಮೂರರಲ್ಲಿ ನಾವು ಪ್ಲಾನು ಮಾಡುವಾಗ ಮುಖ್ಯವಾಗಿ ಗಮನಿಸಬೇಕಾದ್ದು ನಮ್ಮ ದೇಶದ ಪರಿಸ್ಥಿತಿ. ಏಕೆಂದರೆ ಪ್ಲಾನ್ ಎಂದ ಕೂಡಲೆ ರಷ್ಯನ್ ಪ್ಲಾನ್ ಎಂಬುದು ನಮ್ಮ ಮುಂದೆ ಬಂದುಬಿಡುತ್ತದೆ. ಏಕೆಂದರೆ 1927ರಲ್ಲಿ ಪ್ರಾರಂಭ ಮಾಡಿ ಸುಮಾರು 10—15 ವರ್ಷಗಳಲ್ಲಿ ಕ್ರಾಂತಿಕಾರಕ ಸುಧಾರಣೆಗಳನ್ನು ಅವರು ಮಾಡಿ ಪ್ರಗತಿಗೆ ಬಂದಿದ್ದಾರೆಂದು ಪತ್ರಿಕೆಗಳ ಮೂಲಕ ಮತ್ತು ಜನರ ಮೂಲಕ ತಿಳಿದುಕೊಂಡಿದ್ದೇವೆ. ಆದ್ದರಿಂದ ಆ ಪದ್ಧತಿಯನ್ನೇ ಅನುಸರಿಸೋಣವೇ ಎಂದು ಸಾಮಾನ್ಯವಾಗಿ ಯೋಚನೆ ಮಾಡುತ್ತೇವೆ. ಅಂಥ ಪರಿಸ್ಥಿತಿಯಲ್ಲೇ ನಾವೀಗಇದ್ದೇವೆ, ಬಹಳ ಮುಖ್ಯವಾದ ಒಂದು ತೀರ್ಮಾನವನ್ನು ತೆಗೆದುಕೊಂಡು ಅದನ್ನು ಜಾರಿಗೆ ಕೊಡುವ ಸ್ಥಿತಿಯಲ್ಲಿದ್ದೇವೆ. ಒಂದೇ ಮಾತಿನಲ್ಲಿ ಹೇಳುವುದಾದರೆ, ಈಸಂದರ್ಭದಲ್ಲಿ ಭಾರತ ಪ್ರೊಫೆಸರ್ ಹೆಗ್'ರವರು ಸಹಕಾರ ಪದ್ಧತಿಯ ವಿಚಾರದಲ್ಲಿ ನುಡಿದಿರುವ ವಾಕ್ಯಗಳನ್ನು ತಿಳಿಸಿದರೆ ಸಾಕು."

"Complete socialisation or collectivisation cannot be brought about without a great deal of hardship to important section of the population. Collectivisation has its own very well-known dangers. Some of us have rejected it as it landed us in very highways."
"From—Road to Serfdom."

ಅದೇ ರೀತಿ ಬೊಂಬಾಯಿ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಪ್ರವೀಣರೂ ಹೇಳಿದ್ದಾರೆ. ಅಲ್ಲೂಕೂಡ ಕ್ರಾಂತಿಕಾರಕ ಬದಲಾವಣೆಗಳನ್ನು ಮಾಡುವುದರಲ್ಲಿ ಅನುಕೂಲವಾಗಿಲ್ಲವೆಂಬ ಅಂಶ ಆಧಾರಯುತವಾಗಿ ಕಂಡು ಬಂದಿದೆಯೆಂಬುದನ್ನು ತಿಳಿಸಿದ್ದಾರೆ. ಆದ್ದರಿಂದ ಆ ಪದ್ಧತಿ ನಮಗೆ ಅನಾವಶ್ಯಕ. ಬಹು ಜನರ ಅಭಿಪ್ರಾಯ ಈ ರೀತಿಯ collectivisation ನೀತಿ ನಮ್ಮ ದೇಶಕ್ಕೆ ಅಷ್ಟು ಅನುಕೂಲವಾಗಿಲ್ಲವೆಂಬ ಭಾವನೆಯುಳ್ಳವರಾಗಿರುವುದರಿಂದ ನಾವದನ್ನೀಗ ಗಮನಿಸುವ ಪ್ರಮೇಯವಿಲ್ಲ.

ಇನ್ನು ಉಳಿದಿರುವುದು ಖಾಸಗಿ ಉದ್ಯಮಗಳನ್ನು ಬೆಳಸಿಕೊಂಡು ಹೋಗತಕ್ಕುದು ಅಥವಾ ಸಹಕಾರ ತತ್ವದ ಮೇಲೆ ವ್ಯವಸಾಯವನ್ನು ಬೆಳಸಿಕೊಂಡು ಹೋಗತಕ್ಕುದು. ಸಹಕಾರ ತತ್ವದ ಮೇಲೆ ಮಾಡುವುದರಲ್ಲಿ 'Better farming, collective farming co-operative farming' ಇತ್ಯಾದಿ ಅನೇಕ ತರಹದ farming ಪದ್ಧತಿಗಳಿವೆ............"

ನನ್ನ ಸ್ವಂತ ಅನುಭವದಿಂದ ಹೇಳುವುದಾದರೆ ಮತ್ತು ಅನೇಕರ ಅನುಭವಕ್ಕೆ ಬಂದಿರುವಂತೆ, ಇದು ಎಲ್ಲರಿಗೂ ತಿಳಿಯುವುದಿಲ್ಲ; ಯಾರು ಈ ಕೆಲಸದಲ್ಲೇ ತಮ್ಮ ಜೀವನವನ್ನೆಲ್ಲಾ ಕಳೆದಿದ್ದಾರೋ ಅವರಿಗೆ ಮಾತ್ರ ಗೊತ್ತಾಗುತ್ತದೆ. ಇಂಥವರಿಗೆ ಇದರ ಅರಿವಾಗುತ್ತೆಂದು ಹೇಳಿದರೆ ಸಾಕು. Village co-operative farming is our ultimate goal ಎಂದು ಇದರಲ್ಲಿ ಹೇಳಿದ್ದಾರೆ. ಇದರ ಅರ್ಥ—ಹಲವರು ಸೇರಿಕೊಂಡು ಅವರವರ ಭೂಮಿಯನ್ನು ಒಟ್ಟಾಗಿ ಹಾಕಿಕೊಂಡು ಸಹಕಾರ ತತ್ವದ ಮೇಲೆ ವ್ಯವಸಾಯ ಮಾಡುವ ಪದ್ಧತಿಯನ್ನು ಜಾರಿಗೆ ತರುವುದು. ಇದು ಕೊನೆಯ ಗುರಿಯೆಂದು ಹೇಳಿದ್ದಾರೆ. ಐದು ವರ್ಷಗಳ ಅವಧಿಯಲ್ಲಿ ಈ ಗುರಿಯನ್ನು ಮುಟ್ಟಬೇಕೆಂದು ಮಾಡಿದ್ದಾರೆ. ಸಾಮಾನ್ಯವಾಗಿ ಭೂಮಿಯ ಮೇಲ್ವಿಚಾರಣೆಯನ್ನು ಭೂ ಒಡೆಯನಾಗಿರುವವನು ನಡೆಯದಿದ್ದರೆ ಇದರ ವ್ಯವಸ್ಥೆ ಖಂಡಿತವಾಗಿ ಸಮರ್ಪಕವಾಗಿರುವುದಿಲ್ಲವೆಂಬುದನ್ನು ಬಹಳ ಜವಾಬ್ದಾರಿಯಿಂದ ಈ ಸಭೆಯಲ್ಲಿ ಹೇಳಬೇಕಾಗಿದೆ. ಇದಕ್ಕೆ ಮುಖ್ಯಕಾರಣವೇನಾಗಿದೆಯೆಂದರೆ, ಭೂ ವ್ಯವಸಾಯ ಲಾಭದಾಯಕವಾಗಿಲ್ಲ. ಲಾಭದಾಯಕ ಉದ್ಯಮವಾಗಿದ್ದರೆ ಆಗ ನನ್ನಲ್ಲಿರುವುದು, ನಿಮ್ಮಲ್ಲಿರುವುದು, ನೂರಾರು ಜನರಲ್ಲಿರುವುದು, ಎಲ್ಲರಲ್ಲಿರುವ ಸಾಧನ ಸಂಪತ್ತನ್ನೂ ಒಟ್ಟುಗೂಡಿಸಿ ಸಂಬಳದಾರರನ್ನು ಮೇಲ್ವಿಚಾರಣೆಗೆ ನೇಮಕಮಾಡಿ ಉತ್ಪತ್ತಿಯಲ್ಲಿ ಖರ್ಚು ಕಳೆದು ಉಳಿಯುವ ಲಾಭವನ್ನು ನಮ್ಮ ನಮ್ಮ ಬಂಡವಾಳಕ್ಕನುಸಾರವಾಗಿ ಹಂಚುವ ವ್ಯವಸ್ಥೆಯನ್ನು ಮಾಡಿದರೆ ಆಗ ಅದು ಖಂಡಿತವಾಗಿಯೂ ಸ್ವಲ್ಪ ಹೆಚ್ಚು ಕಡಮೆ ನಡೆಯುವುದಕ್ಕೆ ಅವಕಾಶವಿದೆ. ಆದರೆ ಭೂ ವ್ಯವಸಾಯ ಲಾಭಧಾಯಕವಾದ ಉದ್ಯಮವೇ ಎಂದು ಕೇಳಿದರೆ ಖಂಡಿತವಾಗಿ ಅಲ್ಲವೆಂದು ಧೈರ್ಯವಾಗಿ ಹೇಳಬಹುದು. ಇದನ್ನು ಯಾರೂ ವಿರೋಧಿಸುವಹಾಗಿಲ್ಲ. ಭೂಮಿಯಿಂದ ಬರುವ ಉತ್ಪತ್ತಿಯನ್ನು ನೋಡಿದರೆ, ಅದು ಅದಕ್ಕೆ ಖರ್ಚು ಮಾಡುವುದಕ್ಕಿಂತ ಕಡಿಮೆಯದ್ದು ಬಹು ಮಟ್ಟಿಗೆ ಪ್ರತಿವರ್ಷವೂ ರೈತರು ಇದರಿಂದ ನಷ್ಟ ಪಡುತ್ತಿದ್ದಾರೆಂಬುದು ಜನ ಜನಿತವಾದ ವಿಷಯ. ಹೀಗಿರುವಾಗ ನಮ್ಮ ನಿಮ್ಮ ಸಾಧನ ಸಂಪತ್ತನ್ನು ಒಟ್ಟುಗೂಡಿಸಿ, ನೂರು ನೂರೈವತ್ತು ರೂಪಾಯಿಗಳನ್ನು ತಿಂಗಳು ತಿಂಗಳಿಗೆ ಸಂಬಳಕೊಟ್ಟು ಮೇಲ್ವಿಚಾರಣೆಗೆ ಒಬ್ಬರನ್ನಿಟ್ಟರೆ ಲಾಭ ಎಷ್ಟು ಬರುತ್ತದೆ? ಸೇ.ಡ 25ರಷ್ಟು ಅಥವಾ 50 ರಷ್ಟು ಜೋತಾ ಬರುತ್ತದೆಯೇ ಹೊರತು ಲಾಭ ಬರುವುದಿಲ್ಲ. ಈಗ ಹಾಲಿ ಇರತಕ್ಕ ವ್ಯವಸ್ಥೆಯೇ ರೈತನಿಗೆ ಅನುಕೂಲವೆಂದು ಕಾಣಬಹುದು. ಏಕೆಂದರೆ, ಈ ಹೊತ್ತಿನ ಬೆಲೆಯಲ್ಲಿ ಅವನಿಗೆ ಸ್ವಲ್ಪ ಹೆಚ್ಚಿನ ಉತ್ಪತ್ತಿ ಇದೆಯೆಂದು ಕಾಣಬಹುದು. ಅವನೂ ಅವನ ಹೆಂಡತಿ, ಮಕ್ಕಳೂ 365 ದಿನವೂ ಕೆಲಸ ಮಾಡಿದ ಕೂಲಿ, ಕೆಲಸದ ಮೇಲ್ವಿಚಾರಣೆ ನೋಡಿದ್ದರ ಕೂಲಿ, ಕೂಲಿ ಸಂಬಳ ಕೊಟ್ಟದ್ದು, ಎತ್ತು ಮತ್ತಿತರ ಸಾಧನ ಸಲಕರಣೆ, ಇದರ ಮೇಲೆ ಡಿಪ್ರಿಸಿಯೇಷನ್ ಇವೆಲ್ಲವನ್ನು ಲೆಕ್ಕ ಹಾಕಿ ನೋಡಿದರೆ, ಇದರ ಒಟ್ಟು ಖರ್ಚು 100 ರೂಪಾಯಿ ಆದರೆ, ಅವನಿಗೆ ಬೆಳೆಯಿಂದ ಬರುವ ಉತ್ಪತ್ತಿ 50 ರೂಪಾಯಿ ಆಗಿರುತ್ತದೆ.

The Hon'ble Sri H. C. DASAPPA.—Production target, land reclamation, increasing the area of cultivation, irrigation, produce, seeds, manures, ಇವೆಲ್ಲಾ ಇದೆ. ಇದನ್ನೆಲ್ಲಾ ಬಿಟ್ಟು ಯಾವುದೋ ಒಂದು aspect, technical aspect ತೆಗೆದುಕೊಂಡು

(THE HON'BLE SRI H. C. DASAPPA)

question of the cost of cultivation, whether it pays or not ಎಂಬ ವಿಷಯ ಮಾತನಾಡಿದರೆ ಹೇಗೆ ? I am afraid, they may be very relevant when that subject is discussed. But they do not come under planning. The subject of course would be interesting. But this is a question of planning and I am afraid my Hon'ble friend is just going off the point.

Sri H. M. CHANNABASAPPA.—I am sorry. I am only drawing your attention to the details of the plan. The plan incorporates a definite programme and to implement that programme you are spending this money. Your programme is defective; that is what I am trying to say. So when we are spending several crores of rupees on a plan of this kind, we must form it soundly and see what is our goal.

The Hon'ble Sri H. C. DASAPPA.—What is it that you object to in the plan?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಯಾವುದು ನಮ್ಮ ಗುರಿ ಎಂದು ಇಟ್ಟುಕೊಂಡಿದ್ದೀರೋ ಅದು ಇದಲ್ಲ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಯಾವುದಲ್ಲ?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—The ultimate goal is village co-operative farming ಎಂದಿದೆ.

The Hon'ble Sri H. C. DASAPPA.—Please refer me to the page of the Mysore plan.

Sri H. M. CHANNABASAPPA.—Your Mysore plan only provides figures and deals with money. It does not give details of the plan. If I am to rely upon your plan only, I should say it is only a consolidation of figures and nothing more.

The Hon'ble Sri H. C. DASAPPA.—On pages 4 and 5 we have given a broad indication as to how we are going to spend that money: please read paras 10 and 11. ಇದರಲ್ಲಿ ಏನಾದರೂ ಇದ್ದರೆ ಹೇಳಿ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಇದನ್ನೆಲ್ಲಾ ಮೊದಲೇ ತಾವು ಓದಿದ್ದೀರೆಂದು ತಿಳಿದುಕೊಂಡಿದ್ದೇನೆ. ಇದರಲ್ಲಿ—

'It is the purpose of this note to present a picture of the Mysore State plan again t the background of the National plan' ಎಂದಿದೆ.

Mr. SPEAKER.—It is printed in para 11.

'The plan for the development of agriculture and food production in Mysore follows generally the national plan.'

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಆದುದರಿಂದ ನ್ಯಾಷನಲ್ ಪ್ಲ್ಯಾನ್ ಏನಿದೆಯೋ ಅದನ್ನು ನಾವು ಬಿಟ್ಟು ಹೋಗುವ ಹಾಗಿಲ್ಲ.

The Hon'ble Sri H. C. DASAPPA.—I have not been able to follow the Member so far as Mysore plan is concerned.

Sri H. M. CHANNABASAPPA.—I have not yet come to the Mysore plan. I am going to tell you about it. ಹಣದ ವಿಷಯಕ್ಕೆ ಈಗ ನಾನು ಹೋಗುವುದಿಲ್ಲ. ನೀವು ಖರ್ಚುಮಾಡುವ ವಿಧಾನದ ವಿಷಯ......

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಯಾವ ಯಾವ ವಿಧಾನದಲ್ಲಿ ಖರ್ಚುಮಾಡಬೇಕೆ ದು ಹೇಳು ತ್ತೀರಿ? What is that National plan? Let us know what that plan is that you are saying.

Sri H. M. CHANNABASAPPA.—I am criticising the method of approach. Our goal is maximum production, our goal is maximum profit to the agriculturist, our goal is equitable distribution of the land, etc., etc. That is the goal and in order to reach that goal you have worked out a plan. And that plan is, 'we ultimately tend to bring into operation the village co-operative farming.' 89ನೆಯ ಪುಟ ನೋಡಿ. Village Production Councils. ಎಲ್ಲ ಪುಟಗಳನ್ನು ತೋರಿಸುವುದಕ್ಕೆ ಈಗ ಕಾಲಾವಕಾಶವಿಲ್ಲ. The time of the House is so precious. ಇದರಲ್ಲಿ.

"(i) frame programmes of production to be achieved at each harvest by the village;

(ii) frame budgets of requirements for supplies and finance needed for fulfilling the programme;

(iii) assess results attained at each harvest;

(iv) act as the channel through which all Government assistance is provided to the village;"

and so forth. It is wrong.

The Hon'ble Sri H. C. DASAPPA.—Under Village Production Councils, what is wrong I want to know? ಇದು ಬೇಡವೆಂದು ಹೇಳುತ್ತೀರಾ?

Sri H. M. CHANNABASAPPA.—While planning, you must bear in mind that the rural area contains men of lesser civilisation. Do not plan for people who are living in cities. I want you to appreciate the conditions and the level of understanding of the village people and plan for them and not for us who are sitting here, who are arguing out things and who can form co-operative societies. We are in a position to say 'this is not proper, scrap it and do something else'. You must remember that we are planning for people, 75 per cent of whom are at a lower level of civilisation and understanding. And therefore our plan should be of a pyramidical structure. We should not impose a plan which does not take note of these limitations. We must take stock of how things are actually.

The Hon'ble Sri H. C. DASAPPA.—What is it stated after all?

Sri H. M. CHANNABASAPPA.—It is stated:

"Where a village falls within the jurisdiction of a Panchayet, the Village Production Council may be a sub-committee of the Panchayat to which some of the office-bearers ...."

ಇದರಲ್ಲಿ ಏನು ನ್ಯೂನತೆ ಇದೆಯೆಂಬುದನ್ನು ಹೇಳುತ್ತೇನೆ. ವ್ಯವಸಾಯಗಾರರಿಗೆ ಹಣವನ್ನು ಒದಗಿಸಲು ವಿಲೇಜ್ ಸಮಿತಿಗಳನ್ನು ನೇಮಕಮಾಡಬೇಕೆಂದು ಹೇಳಲಾಗಿದೆ. ಇದರಲ್ಲಿ ಒಂದು ಕ್ಲಾಜು ಇದೆ, ಅದನ್ನು ತಾವು ಸರಿಯಾಗಿ ನೋಡಿಲ್ಲವೆಂದು ಕಾಣುತ್ತದೆ.

ರೂರಲ್ ಕ್ರೆಡಿಟ್ ವ್ಯವಸಾಯಗಾರರ ನಾಡಿ ಎಂದು ಹೇಳಿದರೂ ತಪ್ಪಾಗಲಾರದು. ಈಗ ತಾವು ಹೇಳಿರುವಂತೆ ಮಾಡುವುದಾದರೆ, ತಾವು ಈಗಾಗಲೇ ಮಾಡಿರುವ ಡೆವಲಪ್‌ಮೆಂಟ್ ಸಮಿತಿಗಳ ಹಾಗೆ ಇದೂ ಆಗುತ್ತದೆ.

I am not speaking like my friend who lets out a lot without facts and figures. I am pointing out the system which is framed for the development of agriculture and production of food-grains.

The Honble Sri H. C. DASAPPA.—ನಾನು ಆ ಕ್ಲಾಜನ್ನು ನೋಡಿದ್ದೇನೆ. Please read para 2? on page 106. ಘಟ್ಟಿಯಾಗಿ ಎಲ್ಲರಿಗೂ ಕೇಳಿಸುವಂತೆ ಓದಿ.

Sri H. M. CHANNABASAPPA.—It reads as follows:—

"In the last analysis, it is the peasant, the man behind the plough, on whom hopes of increasing production have to be based. The changes in organisation which have been proposed by us are designed to assist and strengthen him, not to supplant him. The Plan will succeed in the measure in which Government's machinery is able to reach the individual peasant in the home and on the farm, to extend a helping hand to him and to evoke from him co-operation and enthusiasm in building his own and the nation's prosperity."

It is very good, splendid. In fact, that is the end and aim of our agriculture.

The Hon'ble Sri H. C. DASAPPA.—So you agree?

Sri H. M. CHANNABASAPPA.—But the process through which you want to achieve the objective is what I am objecting to and not the objective itself. And I would say with a certain amount of confidence that your system is going to fail and all the money you sink is going to be wasted to a great extent. I want that all the money proposed to be spent is well spent and the objective for which you are spending must be realised in the minimum time and with the maximum benefit.

The Hon'ble Sri H. C. DASAPPA.—Agreed.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ರೂರಲ್ ಕೋ-ಆಪರೇಟೀವ್ ಫಾರ್ಮಿಂಗ್ ಮಾಡಬೇಕೆಂದು ತಾವುಮಾಡಿದ್ದೀರಿ. ಆದರೆ ಇದು ಸರಿಯಾಗಿಲ್ಲ. ಈ ಬಗ್ಗೆ ತಮಗೆ ನಾನು ನೇರವಾಗಿ ಒಂದೇ ಒಂದು ಪ್ರಶ್ನೆ ಹಾಕುತ್ತೇನೆ—ಇಡೀ ಪ್ರಪಂಚದಲ್ಲೇ ಇಂಥಾದ್ದು ಎಲ್ಲಿಯಾದರೂ ಇದೆಯೇ? ಇದ್ದರೆ ಅದು ಹೇಗೆ ಕೆಲಸ ಮಾಡುತ್ತಿದೆ, ಎಷ್ಟು ಪ್ರಯೋಜನ ಅಥವಾ ಸಹಾಯವನ್ನು ಅದು ಜಗತ್ತಿಗೆ ಉಂಟುಮಾಡಿದೆ ಎಂಬುದನ್ನು ತಿಳಿಸಿರಿ. ಅದನ್ನಾದರೂ ತಾವು ಹೇಳಿ. ನನಗೆ ತಿಳಿಯದೆ ತಪ್ಪು ಹೇಳಿದ್ದರೆ ಅದನ್ನಾದರೂ ತಿದ್ದಿಕೊಳ್ಳಲು ಸಿದ್ಧನಾಗಿದ್ದೇನೆ. If it is on the basis of Hunsur Co-operative Farming which my friend stated yesterday or the day before, I am afraid you are wasting our money. Let me not go into detail.

ಆದರೆ ಈ ಸಂಬಂಧವಾಗಿ ಒಂದು ವಿಷಯ ತಿಳಿಸಬೇಕಾಗಿದೆ. ಅದೇನೆಂದರೆ ಅಮೇರಿಕಾದೇಶದಲ್ಲಿ ಈ ಫಾರ್ಮಿಂಗ್ ಸಿಸ್ಟಂ ವ್ಯವಸಾಯ ಬಹಳ ಚೆನ್ನಾಗಿ ನಡೆಯುತ್ತಿದೆ.

What is the result to-day? The whole of India consisting of 37 million people, gets lakhs and lakhs of tons of food-grains from America. What is the secret of that?

Sri K. R. SREEKANTESWAR.—What is the extent of individual holding in America?

Sri H. M. CHANNABASAPPA.—In Ameri a the to:al acreage forms 1,200 lakhs and the number of farms is 60 lakhs and each farm on an average is about 20 acres.

(**VOICE**:—In Russia?)

Ten times that of India. In America, out of these 1,200 lakhs of acres, *i.e.*, 1·2 millions of acres, only about ·403 millions of acres are actually under cultivation. The other is farm area. Out of ·403 millions of acres, America produces 50 per cent of the world's corn production and 50 per cent of the world's cotton production, 20 per cent of wheat produ tion. What is the number of people em loyed? Only one and odd crores of people. Please imagine the amount of production that is being done.

The Hon'ble Sri H. C. DASAPPA.—What do you deduce? Shall we mechanize?

Sri H. M. CHANNABASAPPA.— I come to that point. In America, to-day nearly 32½ lakhs of tractors are at work on the farm and nearly 5½ lakhs are combines. Each combine is capable of harvesting and threshing 60-100 acres. What is the result? America is producing foodg ains in such magnitude as to be in a position to di-tribute foodgrains to the world.

ತಮ್ಮ ಈ ಉದ್ದೇಶದ ಬಗ್ಗೆ ನನ್ನ ವಿರೋಧಾಭಿಪ್ರಾಯವೇನೆಂದರೆ—ಅಮೇರಿಕಾ ದೇಶದಲ್ಲಿರುವಂಥ ಪದ್ಧತಿ ಇತರ ಯಾವ ದೇಶದಲ್ಲೂ ಇಲ್ಲ. ಅಲ್ಲಿರತಕ್ಕಂಥ ಪರಿಸ್ಥಿತಿ ಇಡೀ ಭರತಖಂಡದಲ್ಲೇ ಎಲ್ಲಿಯೂ ಇಲ್ಲ. ಇಲ್ಲಿ 100ಕ್ಕೆ 75ರಷ್ಟು ಜನರು ಭೂಮಿಯನ್ನೇ ಅವಲಂಬಿಸಿಕೊಂಡಿರುತ್ತಾರೆ. ಅಮೇರಿಕಾ ದೇಶದಲ್ಲಿ ಹೀಗೆ ಭೂಮಿಯನ್ನೇ ಅವಲಂಬಿಸಿಕೊಂಡಿರತಕ್ಕವರ ಸಂಖ್ಯೆ ಕಮ್ಮಿ. ಆದುದರಿಂದ ಅವರ ಪರಿಸ್ಥಿತಿಯನ್ನು ನಮ್ಮ ಇಲ್ಲಿನ ಪರಿಸ್ಥಿತಿಗೆ ಹೋಲಿಸಿಕೊಂಡರೆ ಅದು ಸರಿಹೋಗುವುದಿಲ್ಲ. ಆದುದರಿಂದ ಇಂಥಾ ಯೋಜನೆಗಳನ್ನು ಹಾಕಿಕೊಂಡರೆ ಏನೂ ಪ್ರಯೋಜನವಾಗುವುದಿಲ್ಲ. ಆದಾಗ್ಯೂ ಈಗ ನಮ್ಮಲ್ಲಿರತಕ್ಕ ಈ ಸಣ್ಣ ಸಣ್ಣ ಹೋಲ್ಡಿಂಗ್‌ಗಳೆಲ್ಲಾ ಹೋಗಿ ಅವು ಒಂದು ಕನ್ಸಾಲಿಡೇಟೆಡ ಹೋಲ್ಡಿಂಗ್ ಆಗಬೇಕು. ಇವುಗಳೆಲ್ಲಾ ಒಂದು ಉನ್ನತ ರೀತಿಯಲ್ಲಿ ಮ್ಯಾಕನೈಜ್ ಆಗಬೇಕೆಂದೇ ನಾನೂ ಹೇಳುತ್ತಿರುವುದು. ಆದರೆ ಈ ಎರಡನ್ನೂ ಹೊಂದಿಸಿಕೊಂಡು ಹೋಗುವಂತೆ ಬುದ್ಧಿವಂತಿಕೆಯಿಂದ ಒಂದು ಕನಿಷ್ಠ ಪರಿಮಿತಿಯ ಜಮೀನ್ದಾರನಿಗೆ ಎಷ್ಟಿರಬಹುದೋ ಅದನ್ನೇ ತಾವು ಮೊದಲು ಮಾಡಿ. ಅದು ಸರಿಯಾಗಿದ್ದರೆ ಅನಂತರ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ.

(Interruption by Sri M. L. Nanjaraj Urs)

That is a matter of detail. We are laying down a policy. I will draw the attention of the Hon'ble Minister to Article 48 of the Constitution.

'The State shall endeavour to organise agricultural aud animal husbandry on modern and scientific lines.'

ಹೀಗೆ ನಾವು ಮ್ಯಾಕನೈಜ್ ಮಾಡೋಣ. ಇದರಿಂದ ದೇಶಕ್ಕೆ ಪ್ರಯೋಜನವಿದೆ. ಸಣ್ಣ ಪುಟ್ಟ ಹಿಡುವಳಿಗಳೆಲ್ಲಾ ಹೋಗಿ ಅವುಗಳೆಲ್ಲಾ ಒಂದು ಸುವ್ಯವಸ್ಥಿತಿಗೆ ಬರುವಂತೆ ಮಾಡುವುದು ಬಹಳ ಉತ್ತಮವಾದದ್ದು. ಆದರೆ ಇದನ್ನು ಮಾಡಬೇಕಾಗಿದ್ದರೆ ಮೊದಲು ದೊಡ್ಡ ದೊಡ್ಡ ಜಮೀನ್ದಾರರುಗಳಿಗೆ ಜಮೀನನ್ನು ಕಮ್ಮಿ ಮಾಡಬೇಕು. ಯಾವಾಗ ಅವರಿಗೆ ಜಮೀನನ್ನು ಕಮ್ಮಿ ಮಾಡಿ ಪುನಃ ಉಳಿದವರಿಗೆ ಒದಗಿಸಲು ಜಮೀನು ಯಾವಾಗ ಇರುವುದಿಲ್ಲವೋ ಅಥವಾ ಸಾಲದೆ ಬರುತ್ತದೆಯೋ ಆಗ ಇದು ಸರಿಯಲ್ಲವೆಂಬುದು ಗೊತ್ತೇ ಆಗುತ್ತದೆ. ಈ ಆಹಾರೋತ್ಪನ್ನದ ವಿಚಾರದಲ್ಲಿ ನಮಗೆ ಎಷ್ಟು ಅಗತ್ಯವಾಗಿರುತ್ತೋ ಅಷ್ಟನ್ನೂ ನಾವು ಅಮೇರಿಕಾ ದೇಶದಿಂದ ತರಿಸಿಕೊಳ್ಳುತ್ತಿದ್ದೇವೆ ಈಗ. ಇಷ್ಟೊಂದು ಆಹಾರ ಸಾಮಗ್ರಿಗಳನ್ನು ಆ ದೇಶ ಒದಗಿಸುತ್ತಿದೆಯಲ್ಲಾ, ಅದರ ಗುಟ್ಟೇನು ಎಂಬುದನ್ನು ತಾವುಗಳು ಯಾರಾದರೂ ಪತ್ತೆ ಮಾಡಿದ್ದೀರಾ; ಹೀಗೆ ಮಾಡಿದರೆ ಯಾವ ಪ್ರದೇಶದಲ್ಲಿ ಇದು ಸಾಧ್ಯವಾಗುತ್ತೆ, ಸಾಧ್ಯವಾದರೂ ಎಷ್ಟರಮಟ್ಟಿಗೆ ಅದರಿಂದ ನಮಗೆ ಸಹಾಯವಾಗುತ್ತೆ ಎಂಬ ವಿಚಾರಗಳನ್ನು ತಮ್ಮ ಗಮನದಲ್ಲಿಟ್ಟುಕೊಂಡು ಇದನ್ನು ಮಾಡಬೇಕೆಂದು ತಿಳಿಸಲು ನಾನು ಇಷ್ಟನ್ನೂ ತಮಗೆ ತಿಳಿಸಬೇಕಾಗಿ ಬಂತು. ಇನ್ನು ಕ್ರೆಡಿಟ್ ಸಿಸ್ಟಂ ವಿಚಾರ.

ಈಗ ಭೂಮಿಯನ್ನು ಯಾವ ರೀತಿ ವ್ಯವಸ್ಥೆ ಮಾಡಬೇಕೆಂಬುದನ್ನು ಹೇಳುತ್ತೇನೆ. ವಿಲೇಜ್ ಕೋ-ಆಪರೇಟಿವ್ ಫಾರ್ಮಿಂಗ್ ಎಂದು ಮಾಡಿರುವುದನ್ನು ಸ್ವಲ್ಪ ರಿವೈಸ್ ಮಾಡಬೇಕು ಎಂದು ತಿಳಿಸಿ ಅದನ್ನು ಹೇಗೆ ಮಾಡಬೇಕು, ಯಾರನ್ನಿಟ್ಟುಕೊಂಡು ಮಾಡಬೇಕೆಂಬುದನ್ನೂ ಹೇಳುತ್ತೇನೆ. ಕೇವಲ ವಿಷಯಗಳನ್ನು ಅಕೆಡಮಿಕ್ ಇಂಟರೆಸ್ಟ್‌ಗಾಗಿ ಚರ್ಚೆ ಮಾಡಿ ಬೇರೇ ಜನರ ಸಲಹೆಯನ್ನು ತೆಗೆದುಕೊಳ್ಳಬೇಕೆಂದರೆ ಖಂಡಿತ ತಮಗೆ ಸೂಕ್ತ ಸಲಹೆ ದೊರೆಯುವುದಿಲ್ಲ. ಅದನ್ನು ತೆಗೆದುಕೊಳ್ಳುವುದರಿಂದ ಅಕೆಡಮಿಕ್ ಇಂಟರೆಸ್ಟ್ ಆಗುತ್ತದೆಯೇ ಹೊರತು ವಾಸ್ತವವಾದ ಪ್ರಯೋಜನವಾಗುವುದಿಲ್ಲ. ಭೂ ವ್ಯವಸಾಯ, ಭೂಮಿ ಉತ್ಪತ್ತಿ ಮೊದಲಾದ ವಿಷಯಗಳಲ್ಲಿ ಚೆನ್ನಾಗಿ ನುರಿತು ಸ್ವಾನುಭವವನ್ನು ಹೊಂದಿರುವ ಜನರು ಅನೇಕರಿದ್ದಾರೆ. ಅವರ ಸಲಹೆಯನ್ನು ತೆಗೆದುಕೊಂಡು ಯಾವ ರೀತಿ ಭೂವ್ಯವಸ್ಥೆ ಮಾಡಬೇಕು, ಕಲೆಕ್ಟಿವೈಸೇಷನ್ ಸಾಧ್ಯವಿದ್ದಿದ್ದರೆ ಕೋ-ಆಪರೇಟಿವ್ ಫಾರ್ಮಿಂಗಿನಲ್ಲಿ ಹುರುಳಿಲ್ಲವೆಂದು ಗಮನಿಸಿ ಯಾವ್ಯಾವ ಬಾಬಗೆ ಯಾವ್ಯಾವ ಪ್ರಮಾಣಗಳಲ್ಲಿ ಹೇಗೆ ಬಡ್ಜೆಟ್ಟಿನಲ್ಲಿ ಒದಗಿಸಬೇಕು ಬಡವರಿಗೆ ಅನುಕೂಲವಾಗುವ ಹಾಗೂ ಭಾಗ್ಯವಂತರು ಹೆಚ್ಚಾಗುವುದಕ್ಕೆ ಅವಕಾಶವಿಲ್ಲದ ಹಾಗೂ ಯಾವ ನೀತಿಯನ್ನನುಸರಿಸಬೇಕು ಎಂಬುದನ್ನು ಯೋಚನೆ ಮಾಡಬೇಕು.

ಎರಡನೆಯದು ಉತ್ಪನ್ನ ಮಾರ್ಗ. ಇರಿಗೇಷನ್ ಹೆಚ್ಚಿಸಬೇಕೆಂದು ಯೋಜನೆ ಮಾಡುವುದು ಒಂದು ಮಾರ್ಗ. ಆದರೆ ಅದಕ್ಕೆ ನಾನೀಗ ಹೋಗುವು

ದಿಲ್ಲ. ನನಗೆ ಈ ವಿಷಯದಲ್ಲಿ ಎಷ್ಟು ಆಸಕ್ತಿಯಿದೆಯೋ ಶ್ರೀ ಎಲ್. ಸಿದ್ದಪ್ಪನವರಿಗೂ ಅಷ್ಟೇ ಆಸಕ್ತಿಯಿದೆ. ಅದರಿಂದ ಜಾಗ್ರತೆ ಜನರಿಗೆ ಅನುಕೂಲವಾಗಬೇಕು, ಹಾಗೆ ಮಾಡಬೇಕಾದ್ದು ಅಗತ್ಯ. ಹಣವನ್ನು ಆ ಬಾಬಿಗೆ ಒದಗಿಸಬೇಕೆಂದು ನಿರ್ಧಾರಮಾಡಿರುವುದರಿಂದ, ನಮ್ಮಲ್ಲನೇಕರಿಗೆ ಅದರಲ್ಲಿ ಉತ್ಸಾಹವಿದೆಯೆಂದು ನಂಬಿಕೆಯಿರುವುದರಿಂದ ಆ ವಿಷಯಕ್ಕೆ ಹೋಗುವುದಿಲ್ಲ. ಇನ್ನು ಉತ್ಪನ್ನ ಹೆಚ್ಚುಮಾಡುವ ಮಾರ್ಗ ಯಾವುದೆಂದರೆ, ಈ ದಿವಸ ರೈತರು ಬೆಳೆಯುವುದಕ್ಕೆ ತೊಂದರೆ ಯೇನೆಂದು ಸರಿಯಾಗಿ ತಿಳಿದುಕೊಂಡಿಲ್ಲವೆಂದು ವಿಷಾದದಿಂದ ಹೇಳಬೇಕು. ಅವರಿಗೆ ಅನುಭವವಿಲ್ಲ; ಶುದ್ಧ ಮೂಢರು, ಕನ್ಸರ್ವೇಟೀವ್ ಅಭಿಪ್ರಾಯವುಳ್ಳವರು, ಹೊಸ ವಿಧಾನಗಳನ್ನು ತಿಳಿದುಕೊಳ್ಳುವುದಕ್ಕೆ ಇಚ್ಛೆಯಿಲ್ಲ, ಎಂದು ಅನೇಕರು ಹೇಳುತ್ತಿದ್ದಾರೆ. ಅವರಿಗೆ ಒಂದುಮಾತು ಹೇಳಬೇಕು.

ಶ್ರೀ ಜಿ. ಎ. ಆಚಾರ್ಯರವರು.—ಸರ್ಕಾರ ಹಾಗೆ ತಿಳಿದುಕೊಂಡಿದೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಕೆಲವರು ಹಾಗೆ ಹೇಳುತ್ತಾರೆ.

John Russel says as follows :—

"It is generally argued that an Indian cultivator is very conservative and is against useful innovation. He is cautious but not obstinate.

To quote Sir John Russel again:

"There was never any difficulty in getting the Indian farmer to take up any real improvement, but no one in the world was so proof against being bluffed into the impractical and uneconomic. The villager, educated or otherwise was a shrewed judge of his needs and many laboratory results were possibly uneconomic."

ಸರ್ ಜಾನ್ ರಸಲ್ ಎಂಬುವರು ಅರ್ಥಶಾಸ್ತ್ರಜ್ಞರು. ಇಂಡಿಯಾ ದೇಶದ ವ್ಯವಸಾಯಗಾರ ಬಹಳ ಬುದ್ಧಿವಂತ, uneconomic ಮತ್ತು impractical theory ಪ್ರಕಾರ ಆತನು ವ್ಯವಸಾಯಮಾಡುವುದಕ್ಕೆ ಸಿದ್ಧನಾಗಿಲ್ಲ—ಎಂದು ಹೇಳಿದ್ದಾರೆ. He is not prepared to gamble. He is not prepared to bluff. The whole world cannot bluff him. You must approach him in a manner in which you could assist him, to get more, not by theory, but by practical demonstration. ಗ್ರಾಮಾಂತರಗಳಲ್ಲಿ ಜನ ಬೆಳೆಯಬೇಕೆಂಬ ಆಸಕ್ತಿಯುಳ್ಳವರಾಗಿದ್ದರೂ ಅವರಿಗೆ ಕೈಯಲ್ಲಿ ಹಣವಿಲ್ಲವೆಂಬುದು ಎಲ್ಲರೂ ಒಪ್ಪತಕ್ಕ ಮಾತು. ಹಣ ಒದಗಿಸುವುದಕ್ಕೆ ಈ ಯೋಜನೆಗಳಲ್ಲಿ ಏನು ವ್ಯವಸ್ಥೆಮಾಡಿದ್ದೀರಿ ಎಂದು ಎಲ್ಲಾ ಹುಡುಕಿದರೂ ಎಲ್ಲೂ ಏನೂ ಸಿಕ್ಕಲಿಲ್ಲ. I am really surprised that with a book of this size consisting so much about Agriculture, effective production, etc., you have not given a concrete proposal to see that the man who wants capital for working out agriculture can get the money as and when he wants. ಅಮೇರಿಕಾದಲ್ಲಿ ಬ್ಯಾಂಕ್ ಜೋನ್ಸ್ ಆಕ್ಟ್ ಮಾಡಿದ್ದಾರೆ. ಭೂಮಿಯಲ್ಲಿ ಏನು ಬೆಳೆಯಾಗುತ್ತದೆಯೋ ಅದನ್ನು ನೋಡಿ 40 ವರ್ಷದ ವರೆಗೆ ಸೇಕಡ ಮೂರರಂತೆ ಬಡ್ಡಿಹಾಕಿ ಹಣಕೊಡಲು ವ್ಯವಸ್ಥೆಮಾಡಿದ್ದಾರೆ. ಬಡ್ಡಿದರ ಸರಿಯಾಗಿ ಗೊತ್ತಿಲ್ಲ. ಇಲ್ಲಿ ಹಾಗೆ ಏನೂ ಸಿಕ್ಕದಿದ್ದರೆ ಏನುಮಾಡಬೇಕು ? ಚೈನಾದಲ್ಲಿ ವ್ಯವಸಾಯಾಭಿವೃದ್ಧಿಗೆ ಫಾರ್ಮಿಂಗ್ ಮತ್ತು ಹಸ್ಬೆಂಡಿಂಗ್‌ಗಾಗಿ ಒಂದು ಕಮರ್ಷಿಯಲ್ ಬ್ಯಾಂಕಿಂಗ್ ವ್ಯವಸ್ಥೆಮಾಡಿದ್ದಾರೆ. ಮೊನ್ನೆ ಟೆನೆನ್ಸಿ ಬಿಲ್ಲಿನ ಮೇಲೆ ಮಾತನಾಡುವಾಗ ಈ ಕೆಲವು ವಿಚಾರಗಳನ್ನು ಹೇಳಿದ್ದೇನೆ.

In New Zealand a Bank has been created by an Act of Parliament. ಆ ಬ್ಯಾಂಕಿನವರು ವ್ಯವಸಾಯಗಾರರಿಗೆ ವ್ಯವಸಾಯಮಾಡುವ ಭೂಮಿಯೆಷ್ಟಿದೆ, ಅದರ ಬೆಳೆಯೆಷ್ಟು ಎಂದು ನೋಡಿ 37 ವರ್ಷದ ಅವಧಿಯಲ್ಲಿ ಶೇಕಡ ಆರರಂತೆ ಬಡ್ಡಿಯ ಮೇಲೆ ಹಣಕೊಡುವ ವ್ಯವಸ್ಥೆಮಾಡಿದ್ದಾರೆ, ಇತರರಿಗೆ ಶೇಕಡ 7½ಯಂತೆ ಹಣಕೊಟ್ಟು ಬೆಳೆಯುವ ವ್ಯವಸಾಯಗಾರರಿಗೆ ಶೇಕಡ 6ರಂತೆ ಕೊಡುತ್ತಾರೆ. ಹೀಗೆ ಮಾಡಿ ಬೇರೆಯವರಿಂದ ಬರುವ ಲಾಭದಿಂದ ಸರಿ ತೂಗುತ್ತಾರೆ. ನ್ಯೂಜಿಲೆಂಡ್, ಅಮೆರಿಕ, ಟರ್ಕಿ ಮುಂತಾದ ಕಡೆಗಳಲ್ಲಿ ಹೀಗೆ ಒಂದು ವ್ಯವಸ್ಥೆಮಾಡಿದ್ದಾರೆ. ಇಲ್ಲಿ ಅವ್ಯವಸ್ಥೆ ! ಇಲ್ಲಿ ಏನು ಏರ್ಪಾಡುಮಾಡಿದ್ದಾರೆ ಎಂದರೆ ಹಳೇ ಕಥೆ ಇದ್ದೇ ಇದೆ. ನಿಮಗೆ ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ ಇದೆ, ತಕಾವಿ ಸಾಲ ಇದೆ ಇತ್ಯಾದಿ ಇತ್ಯಾದಿ ಎಂದು ಹೇಳುತ್ತಾರೆ. This is one serious drawback in the Plan. I want you to appreciate the seriousness with which I am making this remark and asking for a system of rural credit to be incorporated in your plan. Otherwise your plan is going to be a waste.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇದರ ವಿಚಾರ ಕೆಲವು ಪ್ರಶ್ನೆಗಳಿಗೆ ಉತ್ತರ ಕೊಟ್ಟಾಗ ತಿಳಿಸಿದೆ. ರಿಸರ್ವ್ ಬ್ಯಾಂಕಿನವರು ಇಲ್ಲಿಗೆ ಬಂದಿದ್ದರು. ನಮ್ಮ ದೇಶದಲ್ಲೂ ಕೂಡ ಒಂದು ವ್ಯವಸ್ಥೆಮಾಡಿದ್ದಾರೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಅದನ್ನು ನಾನು ಬಲ್ಲೆ.

The Hon'ble Sri H. C. DASAPPA.—They are at it, and there is likely to be some arrangement made for it.

Sri H.M. CHANNABASAPPA.—I know that they have come to some arrangement here. ಕೋ ಆಪರೇಟಿವ್ ಸೊಸೈಟಿ, ವಿಲೇಜ್ ಕೌನ್ಸಿಲ್, ಡಿಸ್ಟ್ರಿಕ್ಟ್ ಕೌನ್ಸಿಲ್ ಏರ್ಪಡಿಸಿ ಸಾರ್ವಜನಿಕರ ಮುಖಂಡರನ್ನಿಟ್ಟು ಅಲ್ಲಿ ಹಣ ಕೊಡಿಸುತ್ತೇವೆಂದು ಹೇಳಿರುತ್ತಾರೆ. But this is not a system of credit that the rural man wants to-day. He wants a live system and not a scrap system or an uneconomic unworkable system, but a system that would stand the test of time and that which would be useful for years. Why have you not set up such a system for rural credit ?

The Hon'ble Sri H. C. DASAPPA.—That is just the thing which the Reserve Bank also is at.

Sri H. M. CHANNABASAPPA.—It is only just to show to you the earnestness and the seriousness with which I am making these remarks. ನಿಮ್ಮ ಪ್ಲಾನ್ ನಲ್ಲಿರುವ ಅಂಶಗಳ ಆಧಾರದ ಮೇಲೆ ನಾನು ಮಾತನಾಡುತ್ತಿದ್ದೇನೆ. ಅದನ್ನು ಬಿಟ್ಟು ಇತರರು ಬೇರೆ ಹೇಳುತ್ತಿದ್ದರೆ ಅದಕ್ಕೆ ನಾನು ಜವಾಬ್ದಾರನಲ್ಲ. ನಿಮ್ಮ ಪ್ಲಾನಿನಲ್ಲಿರುವುದನ್ನು ಹೇಳುವಾಗ ಅದು ಸರಿಯಿಲ್ಲವೆಂದು ಬೇಕಾದರೆ ಹೇಳಬಹುದು, ಒಪ್ಪುತ್ತೇನೆ. ಭೂಮಿಯ ಉತ್ಪನ್ನ ಹೆಚ್ಚಿಸುವುದಕ್ಕೆ ಬ್ಯಾಂಕನ್ನು ಏರ್ಪಡಿಸಿ ಮೂಲ ವ್ಯವಸ್ಥೆ ಮಾಡಬೇಕು. ಇನ್ನೇನು ಮಾಡಿದರೂ ಕೂಡ ಪ್ರಯೋಜನವಾಗುವುದಿಲ್ಲ. ಬೆಳೆಯಲು ಬೇಕಾದ ಸಾಧನ ಸಂಪತ್ತನ್ನೊದಗಿಸಿ, ಉಳುವ ಭೂಮಿಯಿಂದ ಅಧಿಕ ಪ್ರಮಾಣದ ಉತ್ಪನ್ನ, ಅಧಿಕ ಪ್ರಮಾಣದ ಪ್ರಯೋಜನ ಪಡೆಯುವುದಕ್ಕೆ ವ್ಯವಸ್ಥೆ ಮಾಡಬೇಕಾದರೆ ರೂರಲ್ ಕ್ರೆಡಿಟ್ ಸಿಸ್ಟಂ ಯಾವರೀತಿ ಮಾಡಬೇಕೆಂದರೆ ಮೈಸೂರು ಬ್ಯಾಂಕು ಮುಂತಾದ ಬ್ಯಾಂಕುಗಳಿರುವಂತೆ ಕಮರ್ಷಿಯಲ್ ಬ್ಯಾಂಕನ್ನು ಮಾಡಿ ರೂರಲ್ ಕ್ರೆಡಿಟ್ ಸಿಸ್ಟಂ ಸರಿಯಾದ ರೀತಿಯಲ್ಲಿ ನಡೆಯಲನುಕೂಲವಾಗುವಂತೆ ಏರ್ಪಾಡುಮಾಡಬೇಕು. ಅದನ್ನು ಮಾಡುವುದಕ್ಕೆ ತಕ್ಕ ಶಕ್ತಿ, ಸಾಮರ್ಥ್ಯ ಒದಗಿಸಿಕೊಳ್ಳಬೇಕು. ಅಧಿಕಾರ ತೆಗೆದುಕೊಳ್ಳಬೇಕು. ಅನೇಕ ದೇಶಗಳಲ್ಲಿ ಅದಕ್ಕೆ ಸರ್ಕಾರದವರು ಕಾನೂನು ಮಾಡಿದ್ದಾರೆ. Perhaps you are not in possession of facts. I shall give you facts. ಭೂಮಿಯನ್ನು ವ್ಯವಸ್ಥೆಮಾಡತಕ್ಕದ್ದು ಒಂದು ಭೂಮಿಯಲ್ಲಿ ಉತ್ಪನ್ನ ಮಾಡತಕ್ಕದ್ದು ಒಂದು. ಭರತ ಖಂಡದ ಡಿಫಿಸಿಟ್ ಎಷ್ಟೆಂದರೆ 70 ಲಕ್ಷ ಟನ್. ಈ ನಿಮ್ಮ ಯೋಜನೆಯಲ್ಲಿ 69 ಲಕ್ಷದ 40 ಸಾವಿರ ಟನ್ ಎಂಬುದಾಗಿ ಇದೆ. ಇದರಲ್ಲಿ 72 ಲಕ್ಷದ 2 ಸಾವಿರ ಟನ್ ಉತ್ಪತ್ತಿ ಮಾಡುವುದಕ್ಕೆ ವ್ಯವಸ್ಥೆಮಾಡಿಕೊಂಡಿದ್ದಾರೆ. ಮೈಸೂರು ದೇಶದಲ್ಲಿ ಡಿಫಿಸಿಟ್ ಇರುವುದು 1.4 ಲಕ್ಷಟನ್.

The Hon'ble Sri H. C. DASAPPA—On the present scale of rationing, it is 1.4 lakh tons.

Sri H. M. CHANNABASAPPA.—My contention is that you are incorrect in statistics. 68ನೇ ಪುಟ ನೋಡಿ. 13·67 ಔನ್ಸ್ ಪ್ರಕಾರ 69·04 ಲಕ್ಷ ಟನ್ ಬೇಕು. ಅದೇ ರೇಷನನ್ನು 16 ಔನ್ಸ್‌ಗೆ ಏರಿಸಿದರೆ 159 ಲಕ್ಷ ಬೇಕಾಗುತ್ತದೆ ಎಂದು ಹೇಳುತ್ತಾರೆ. ಅದು ಹೇಗಾಗುತ್ತದೆ? ಸ್ವಲ್ಪ ಲೆಕ್ಕ ಹಾಕಿ. ಕೇವಲ 2¼ ಔನ್ಸ್ ಹೆಚ್ಚುಮಾಡಿದರೆ— On the basis of 13.67 oz. per adult per day the amount of foodgrains required is 69 04 lakhs tons and if you increase it by ·33 oz it will increase to 81 lakhs. 13·67 ಔನ್ಸ್ ಇದ್ದರೆ, 69·04 ಆಗುತ್ತದೆ. 16 ಔನ್ಸ್ ಆದರೆ 158·04 ಆಗುತ್ತದೆ. ಅದು ಯಾವ ಲೆಕ್ಕದ ಮೇಲೆ? 2 ಔನ್ಸ್ ಚಿಲ್ಲರೆ ಹೆಚ್ಚಿಗೆ ಮಾಡಿದರೆ 158 ಲಕ್ಷ ಟನ್ ಆಗುತ್ತದೆ ಎಂದರೆ ಯಾವ ಆಧಾರ, ಯಾವ ಲೆಕ್ಕ ಎಂಬುದನ್ನು ವಿವರವಾಗಿ ಹೇಳಿ. ನಮ್ಮ requirement ಅದು ಏನಾದರೂ ಇರಲಿ, ಒಟ್ಟಿನಲ್ಲಿ ಈಗ 2 ವರ್ಷದಲ್ಲಿ 9½ ಕೋಟಿ ರೂಪಾಯಿಗಳ ಯೋಜನೆ ಹಾಕಿದಿರಿ. ಅದರಲ್ಲಿ ಎಷ್ಟು ಕೋಟಿ ರೂಪಾಯಿ ಖರ್ಚಾಗಿದೆ, ಉತ್ಪನ್ನ ಎಷ್ಟಾಗಿದೆ ಎಂದು ಹೇಳುತ್ತೀರಿ ಎಂದರೆ 68 ಸಾವಿರ ಟನ್ ಉತ್ಪನ್ನ ಮಾಡಿಕೊಟ್ಟಿದ್ದೇವೆ ಎಂದು ಹೇಳುತ್ತೀರಿ. 9¼ ಕೋಟಿ ರೂಪಾಯಿನ ಮೂರು ವರ್ಷದ ಯೋಜನೆಯನ್ನು 1949ರಲ್ಲಿ ಶುರುಮಾಡಿದಿರಿ. ಅದರಲ್ಲಿ ತಾವು ಈಗಾಗಲೇ ಇಂಡಿಯಾ ಸರ್ಕಾರದಿಂದ 1,95,68,000 ರೂಪಾಯಿಗಳನ್ನು ಸಹಾಯ ದ್ರವ್ಯವಾಗಿ ಪಡೆದಿದ್ದೀರಿ. ಗ್ರಾಂಟ್ ರೂಪದಲ್ಲಿ ಮತ್ತು ಸಾಲದ ರೂಪದಲ್ಲಿ ಅಲ್ಲಿಗೆ ಸ್ವಲ್ಪ ಹೆಚ್ಚು ಕಮ್ಮಿ 2 ಕೋಟಿ ರೂಪಾಯಿ ಆಯಿತು. ಈ 2 ಕೋಟಿ ರೂಪಾಯಿಯನ್ನು 2 ವರ್ಷದವರೆಗೆ ಖರ್ಚುಮಾಡಿದಿರಿ. ಈ 2 ಕೋಟಿ ರೂಪಾಯಿಗಳಿಂದ ಉತ್ಪತ್ತಿ ಎಷ್ಟು ಬಂತು, ಅಂದರೆ ಅಂಕಿ ಅಂಶಗಳ ಮೇಲೆ ಹೇಳುವುದಾದರೆ 69·828 ಟನ್ ಆಯಿತು. ಉತ್ಪತ್ತಿ ಲೆಕ್ಕಹಾಕತಕ್ಕ yardstick ಅಳತೆಕೋಲು ಯಾವುದು ಎಂದರೆ ಒಂದು ಟನ್ ಸೀಮೆಗೊಬ್ಬರ ಹಾಕಿದರೆ ಇಷ್ಟು ಪಲ್ಲ ಉತ್ಪತ್ತಿ ಬಂತು ಎಂದು ಆಧಾರ.

Sri G. A. ACHARYA.—Is that assumption or presumption?

Sri H. M. CHANNABASAPPA.—No, no. I am going to quote the authority for that. Page 78 of the Planning Commission Report:

> "As proof of the fulfilment of the programme, increase in production was measured largely on the basis of 'units of work', that is to say, if a well was sunk or repaired, an acre of new land reclaimed or a ton of fertiliser employed, it was reckoned that certain defined additions to production took place. Statistical sample checks were undertaken to establish whether or not the 'yardsticks' which were adopted were correct. By and large, it was felt that the relationships assumed between the various types of effort in the results of each were valid." etc.

I am not bluffing. I am proving.

ನಾನು ಅರ್ಥ ಮಾಡಿಕೊಂಡಿರುವುದು ತಪ್ಪಾಗಿದ್ದರೆ ಒಪ್ಪಿಕೊಳ್ಳುತ್ತೇನೆ. 13 ಔನ್ಸ್‌ಗೆ 69 ಲಕ್ಷ ಟನ್ ಆದರೆ 2 ಔನ್ಸ್ ಹೆಚ್ಚು ಮಾಡಿದರೆ ಎಷ್ಟಾಗುತ್ತದೆ?

The Hon'ble Sri H. C. DASAPPA.—Please find out what is wrong in para 5 in page 78.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಡಿಫಿಸಿಟ್ ಲೆಕ್ಕ ಹಾಕಿ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಎಷ್ಟಾಗುತ್ತದೆ?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—13·67 ಔನ್ಸ್ ಪ್ರಕಾರ ಹಂಚಿದರೆ ಡಿಫಿಸಿಟ್ 69 ಲಕ್ಷ ಚಿಲ್ಲರೆ ಟನ್ ಆಗುತ್ತದೆ. 1¼ ಔನ್ಸ್ ಪ್ರಕಾರ ಹಂಚಿದರೆ 81 ಲಕ್ಷ ಟನ್ ಆಗುತ್ತದೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—15 ಔನ್ಸ್ ಪ್ರಕಾರ ಹಂಚಿದರೆ 120 ಲಕ್ಷ ಟನ್ ಆಗುತ್ತದೆ. 16 ಔನ್ಸ್ ಪ್ರಕಾರ ಹಂಚಿದರೆ 158 ಲಕ್ಷ ಟನ್ ಆಗುತ್ತದೆ. ತಪ್ಪೇನು?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಅದು ಮ್ಯಾಥಮ್ಯಾಟಿಕ್ಸ್, ಆಮೇಲೆ ನಿಧಾನವಾಗಿ ತೋರಿಸಿ ಕೊಡಿ. ಒಪ್ಪಿಕೊಳ್ಳುತ್ತೇನೆ. ನಿಮ್ಮ (yardstick) ಅಳತೆಕೋಲು, ಇಷ್ಟು ಟನ್ ಗೊಬ್ಬರ ಹಾಕಿದರೆ ಇಷ್ಟು ಉತ್ಪತ್ತಿ ಆಗುವುದು ಎನ್ನುವುದು ಸರಿಯಿಲ್ಲ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದರ ಮೇಲೆ ಆಧಾರ ತೆಗೆದುಕೊಂಡು ಮುಂದೆ ಏನು ಹೇಳಿದ್ದಾರೆಂಬುದನ್ನು ದಯಮಾಡಿ ಓದಿ ನೋಡಿ! ಅಷ್ಟು ಲಘುವಾಗಿ ಟೀಕೆ ಮಾಡುವುದಕ್ಕೆ ನಿಮ್ಮನ್ನು ಬಿಡುವುದಿಲ್ಲ.

"Statistical, sample checks were undertaken to establish whether or not the 'yardsticks' which were adopted were correct. By and large, it was felt that the relationships assumed between the various types of effort in the results of each were valid."

ಎಂದು ಹೇಳಿದೆ. ಅಂದರೆ ಮೊದಲು ಇಷ್ಟು ಕೆಲಸಕ್ಕೆ ಇಷ್ಟು ಉತ್ಪನ್ನವಿರಬೇಕೆಂದು ಒಂದು ಗಜ ಕಡ್ಡಿ ಅಳತೆಯಿಟ್ಟುಕೊಂಡು, ಬಾವಿಗಳನ್ನು ತೋಡಿಸಿಕೊಟ್ಟಿರುವುದರಿಂದ ಇಷ್ಟು ಉತ್ಪನ್ನವಾಗಿರಬೇಕು, ಗೊಬ್ಬರ ಸರಬರಾಯಿ ಮಾಡಿದ್ದರಿಂದ ಇಷ್ಟು ಹೆಚ್ಚಿಗೆ ಆಗಿರಬೇಕು—ಎಂದು ಒಂದು ರೀತಿಯಲ್ಲಿ ಲೆಕ್ಕ ಹಾಕಿದರು. ಅದಾದ ಮೇಲೆ ಅಲ್ಲಿ ಇಲ್ಲಿ sample checks ಮಾಡಿ ನೋಡಿದ್ದರಲ್ಲಿ ಮೊದಲಿನ ಲೆಕ್ಕಗಳಿಗೆ ತಾಳೆ ಬಂತು. ಅದರಂತೆ ಹೇಳಿರುವುದರಲ್ಲಿ ತಪ್ಪೇನು?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಆ ರೀತಿ check-up ಮಾಡುವ ವಿಧಾನಗಳಲ್ಲಿ ನಾನೂ ಸ್ವಲ್ಪ ಅನುಭವ ಪಡೆದಿರತಕ್ಕ ಮನುಷ್ಯನಾದ್ದರಿಂದ ಈ ರೀತಿಯಾಗಿ ಹೇಳಿರುವುದು ಸರಿಯಲ್ಲವೆಂದು ಹೇಳುತ್ತಿದ್ದೇನೆ ಅಷ್ಟೆ. ಏಕೆಂದರೆ, 1943ನೆಯ ಇಸವಿಯಲ್ಲಿ ನಮ್ಮ ಡಿಫಿಸಿಟ್ 60 ಸಾವಿರ ಟನ್ ಇತ್ತು. ಈಗ 60,000 ಟನ್ನಿಗಿಂತ ಮೀರಿ 69,000 ಟನ್ ಬಂದ ಮೇಲೆಯೂ ಡಿಫಿಸಿಟ್ ಎಂದು ಹೇಗೆ ಹೇಳುತ್ತೀರಿ?

Sri M. V. KRISHNAPPA.—They are growing more commercial crops.

Sri H. M. CHANNABASAPPA.—I am speaking of the actual production that you have secured today. 69,828 tons of foodgrains have been achieved in the current year 1951-52 as a result of your Grow More Food Campaign as against a food deficit of 60,000 tons of foodgrains.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಮೈಸೂರು ಸಂಸ್ಥಾನದ ಡಿಫಿಸಿಟ್ ಎಷ್ಟು?

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ನಿಮ್ಮ ಲೆಕ್ಕದ ಪ್ರಕಾರ ಒಂದು ಕಡೆ 60,000 ಟನ್ ಇನ್ನೊಂದು ಕಡೆ 69,000 ಟನ್ ಎಂದು ಹೇಳಿದ್ದೀರಿ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಈಗ ನಡೆಯುತ್ತಿರುವುದೆಲ್ಲಾ Grow More Food effort ಎಂದು ಮಾಡಿಕೊಂಡಿರುವುದರಿಂದ ಹಾಗೆ ಬರುತ್ತದೆ ಅಷ್ಟೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ತಾವು ಇಲ್ಲಿ opening page ನಲ್ಲಿ Result of the Food Production Drive ಎಂದು ಕೊಟ್ಟಿರುವುದನ್ನು ನೋಡಿ. 1943ರಲ್ಲಿ 60,000 ಟನ್ ಡಿಫಿಸಿಟ್ ಎಂದು ಹೇಳಿದ್ದೀರಿ. ಈಚೆಗೆ 47 ಕ್ಕೆ ಬಂದಾಗ 1.4 ಲಕ್ಷ ಟನ್ ಎಂದು ಹೇಳಿದ್ದೀರಿ. 1951 ರಲ್ಲಿ 2.41 ಲಕ್ಷ ಟನ್ ಎಂದು ಹೇಳಿದ್ದೀರಿ. ಹಿಂದೆ 70 ಲಕ್ಷ ಪ್ರಜಾ ಸಂಖ್ಯೆಯಿದ್ದದು 80 ಲಕ್ಷ ಪಾದ್ದರಿಂದ ಹೀಗೆ ಹೆಚ್ಚಾಗಿ ಅದರಿಂದ ಇಷ್ಟು ಹೆಚ್ಚು ಖೋತಾ ಎಂದು ತಿಳಿಸಿದ್ದೀರಿ. ಆದರೀಗ ವಾಸ್ತವವಾಗಿ 90 ಲಕ್ಷ ಪ್ರಜೆಯಾದ್ದರಿಂದ ನ್ಯಾಯವಾಗಿ 3.41 ಲಕ್ಷ ಖೋತ ಬಂದಿದೆಯೆಂದು ತಿಳಿಸಬೇಕಾಗಿತ್ತಲ್ಲವೇ?

The Hon'ble Sri H. C. DASAPPA.—He is addressing a wrong Minister. (laughter)

Sri H. M. CHANNABASAPPA.—Whatever that be, nobody can dispute that.

That is the deficit. Please look at the question yourself. Granting that 93 thousand children are born, they are not eating your corns or foodgrains; they are living on milk.

ಇದನ್ನೇಕೆ ಹೇಳುತ್ತಿದ್ದೇನೆಂದರೆ ಈ ರೀತಿಯಲ್ಲಿ ಅಂಕಿ ಅಂಶಗಳನ್ನು ಒದಗಿಸಿಕೊಂಡು ಅದರ ಮೇಲೆ ಡಿಫಿಸಿಟ್ ಬಡ್ಜೆಟ್ಟನ್ನು ತಯಾರುಮಾಡಿಕೊಂಡು ಹೋಗುವುದು ಸರಿಯಲ್ಲ. ಹಾಗೆ ಮಾಡಬೇಕೆಂದರೆ, ಸರಿಯಾದಂಥ ಅಂಕಿ ಅಂಶಗಳನ್ನು ಪತ್ತೆ ಮಾಡುವುದಕ್ಕೆ ಪ್ರಯತ್ನ ಮಾಡಿ ಅಂಕಿ ಅಂಶಗಳನ್ನು ನಿಜವಾಗಿ ಒದಗಿಸಿಕೊಂಡು ಯೋಜನೆಗಳನ್ನು ಬೇಕಾದರೆ ತಯಾರಿಸಿ.

I hope you know that one ugly fact will spoil a beautiful thesis, a beautiful scheme. So, you depend on facts. Do not depend upon what you presume things to be.

ನೀವು ಈಗ ಏನು ನೀತಿಯಿಟ್ಟುಕೊಂಡಿದ್ದೀರೋ ಅದರ ತತ್ವವೇನೋ ಒಳ್ಳೆಯದೇ. ರೈತರಿಗೆ ಹೆಚ್ಚಿಗೆ subsidise ಮಾಡೋಣ; ಗೊಬ್ಬರ, ಬೀಜ ಎಲ್ಲವನ್ನೂ ಹೆಚ್ಚು ಹೆಚ್ಚಿಗೆ ಕೊಡೋಣ. ಹಾಗೆ ಹೇಳುವುದೆಲ್ಲಾ ಸರಿಯೇ. ಅಷ್ಟೆಲ್ಲಾ ಮಾಡಿದರೂ ಕಂಟ್ರೋಲನ್ನು ಯಾವಾಗ ತೆಗೆಯುವುದು ಎನ್ನುವ ಸೂಚನೆಯೇ ಬೇಡವೇ? ಈ ಪ್ಲಾನಿನಲ್ಲಿ ಎಲ್ಲಿ ಹುಡುಕಿನೋಡಿದರೂ ಅದರ ಕುರುಹೇ ಕಾಣುವುದಿಲ್ಲ. ತಮ್ಮ ಪ್ಲಾನಿನಲ್ಲಿ 36ನೆಯ ಪುಟದಲ್ಲಿ ಡಿ ಕಂಟ್ರೋಲ್ ವಿಚಾರದಲ್ಲಿ ಹೀಗೆ ಹೇಳುತ್ತೀರಿ.

What is it that you have planned for removing controls? I know you have said in page 31:

"A substantial reduction in black market prices and the availability of ample supplies at controlled price are essential pre-requisites to any consideration of decontrol."

ದೇಶದ ಆರ್ಥಿಕ ರಚನೆಯನ್ನು ಬದಲಾವಣೆ ಮಾಡಬೇಕೆಂದು ಹೊರಟಿರುವಾಗ ಈ ರೀತಿ ಹೇಳಿದ್ದೀರಿ! ಕಂಟ್ರೋಲು ಮಾರ್ಕೆಟ್ಟಿನಲ್ಲಿ ಯಥೇಚ್ಛವಾಗಿ ದವಸ ಧಾನ್ಯಗಳು ಸಿಕ್ಕುವವರೆಗೂ ಇರಬೇಕೆಂದು ಹೇಳಿದ್ದಾರೆ.

Well, I question, is this the way? Controls would continue till blackmarket reduces to such an extent that food would be available at lower rates in black market! I thought that by 55-56 the proposed target of 75 lakhs of tons of food grains would be reached and we would be in a position to remove the control. But are you in a

(SRI H. M. CHANNABASAPPA)

position to do that? No. Then, why is this plan formed? Where do you want to lead us?

The Hon'ble Sri H. C. DASAPPA.—They have stated 'pre-requisites'; they have not stated the time.

Sri H. M. CHANNABASAPPA.—You have targeted for the production of 70·02 lakhs of tons and you have provided ample money, you have provided ample machinery for that. If you feel doubtful in realising this target, I have no objection. But, what is this plan unless you mean to implement it to the maximum benefit? Why is this plan made?

Sri G. A. ACHARYA.—Is silence consent Sir?

The Hon'ble Sri H. C. DASAPPA.—We do not want to answer every sentence.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಆದ್ದರಿಂದ ನಾನು ತಮಗೆ ಅರಿಕೆ ಕೊಡುವುದೇನೆಂದರೆ ತಾವು ಮಾಡುವ ಪ್ಲಾನು realistic ಆಗಿ ಇರಬೇಕು. ಪ್ಲಾನನ್ನು ಯಶಸ್ವಿಯಾಗಿ ಸಾಧನೆ ಮಾಡುತ್ತೇವೆ, ಏನೇನು ಪ್ರಗತಿಯನ್ನು ಗಳಿಸಬೇಕೆಂದು ನಿರ್ಧಾರಮಾಡಿಕೊಂಡಿದ್ದೀರೋ ಅದರ ಸಾಧನೆಯಲ್ಲಿ ನಿಮಗೆ ನಂಬಿಕೆ ಇಲ್ಲದ ಪಕ್ಷಕ್ಕೆ ನಾವು ನಂಬಿಕೆ ಕೊಡುವುದಕ್ಕೆ ಸಾಧ್ಯವಿಲ್ಲ. ನೀವು ಹಾಗೆ ನಂಬಿಕೆ ವ್ಯಕ್ತಪಡಿಸುವ ಪಕ್ಷಕ್ಕೆ ನಿಮ್ಮ ಲೆಕ್ಕದ ಪ್ರಕಾರ ಇಂಡಿಯಾ ಸರ್ಕಾರದ ಪ್ರಕಾರ 1956–57ಕ್ಕೇ ನಮ್ಮ ದೇಶದಲ್ಲಿ ಕಂಟ್ರೋಲ್ ತೆಗೆಯುತ್ತೇವೆಂದೇಕೆ ಹೇಳಲಿಲ್ಲ. ನಿಮ್ಮ ಲೆಕ್ಕದ ಪ್ರಕಾರ ಹೆಚ್ಚಿನ ನೀರಾವರಿ ಕಾಮಗಾರಿಗಳಿಂದ 70.000 ಟನ್‌ಗಳೂ ಇದರ ಜೊತೆಗೆ 70·000 ಟನ್‌ಗಳು ಹೆಚ್ಚಿಗೆ 2,33,000 ಎಕರೆಗಳಿಂದ ಬರುತ್ತದೆಂದೂ ತಿಳಿಸಿದ್ದೀರಿ ವ್ಯವಸಾಯವನ್ನು ಉತ್ತಮಪಡಿಸುವುದರಿಂದಲೇ ಒಂದು ಲಕ್ಷ ಬರುತ್ತದೆಂದು ಹೇಳಿದ್ದೀರಿ. ಅಲ್ಲಿಗೆ ಒಟ್ಟು 70,000+70,000+1,00,000 = 2,14·000 ಟನ್ ಧಾನ್ಯ ಬರುತ್ತದೆಂದು ನಿರೀಕ್ಷಿಸಿದ್ದೀರಿ. ಇಷ್ಟು ಬರುತ್ತದೆಂದಮೇಲೆ ಕಂಟ್ರೋಲ್‌ಗಳನ್ನು ತೆಗೆಯುತ್ತೇವೆಂದೇಕೆ ಹೇಳಕೂಡದಾಗಿತ್ತು!

As against the deficit of 1.4 lakhs of tons how are you justified to keep this control for one moment longer? Have you stated here that in 1955–56 you propose to de-control?

ಈಗ ನೀವು ಯೋಜನೆ ಮಾಡಬೇಕಾದರೆ ಇದೆಲ್ಲನ್ನೂ ದೃಷ್ಟಿಯಲ್ಲಿಟ್ಟುಕೊಂಡು ಮಾಡಬೇಕು. ಕಂಟ್ರೋಲ್ ಯಾವ ಕಾಲಕ್ಕೂ ತೆಗೆಯುವುದಿಲ್ಲ ಅಥವ ಇಂಥಾ ದಿವಸ ತೆಗೆಯುತ್ತೇವೆಂಬುದನ್ನು ಹೇಳುವುದಕ್ಕಾಗುವುದಿಲ್ಲ ಎಂದು ಹೇಳಿದರೆ ಈ ಯೋಜನೆ ಏಕೆ? ನೀವು ಕಂಟ್ರೋಲ್ ಇಟ್ಟಿರುವುದರಿಂದ ಇಡೀ ದೇಶದಲ್ಲಿ ನೀತಿಯ ಪತನವಾಗುತ್ತಿದೆ. ಈಗ 56 ಕೋಟಿ ರೂಪಾಯಿ ಖರ್ಚು ಮಾಡಿದರೂ ಕೂಡ ಕಂಟ್ರೋಲ್ ತೆಗೆಯುವುದಕ್ಕಾಗುವುದಿಲ್ಲವೆಂದು ಹೇಳಿದರೆ, ಈ ಯೋಜನೆಯಿಂದ ಪ್ರಯೋಜನವಿಲ್ಲ, ಇವಕ್ಕೆ ಬೆಂಬಲಕೊಡುವುದಕ್ಕಾಗುವುದಿಲ್ಲವೆಂದು ಹೇಳಬೇಕಾಗುತ್ತದೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಕಂಟ್ರೋಲ್ ವಿಷಯದಲ್ಲಿ ಅವರು ಕೂಡ ಹಾಗೆ ಹೇಳಿಲ್ಲ, ಈ ಯೋಜನೆಯಲ್ಲಿಯೂ ಹೇಳಿಲ್ಲ. ಇದು draft plan.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—I am sorry, I now understand. Please incorporate this point ಆಹಾರ ಇಷ್ಟು ಬರುತ್ತಿದೆ, ಇಷ್ಟು ಹೋಗುತ್ತಿದೆ ಎಂಬ ಬಗ್ಗೆ ನಿಮ್ಮ ಅಂಕಿ ಅಂಶಗಳನ್ನು ಆಧಾರವಾಗಿಟ್ಟುಕೊಂಡೇ ತೋರಿಸಿದ್ದೇನೆ. ನಿಮ್ಮ ಅಂಕಿ ಅಂಶಗಳ ಮೇಲೆಯೇ ಕಂಟ್ರೋಲ್ ತೆಗೆಯುವುದು ಸಾಧ್ಯ. ಹೀಗೆ ಮಾಡದೇ ಇದ್ದ ಪಕ್ಷದಲ್ಲಿ ನಿಮಗೆ ಜನರ ಬೆಂಬಲ ದೊರೆಯುವುದಿಲ್ಲ. ಈ ಕಂಟ್ರೋಲ್‌ಗಳಿಂದ ಜನ ಬೆಂದು ಬೆಂಡಾಗಿದ್ದಾರೆ. ಇದನ್ನು ತೆಗೆಯುತ್ತೇವೆಂದು ಭರವಸೆ ಕೊಡಿ. ಅವರಿಗೆ ಹೇಳಿ: We are going to get the pre-requisites for decontrolling and therefore in 1955, we are going to decontrol. Otherwise how will you expect co-operation from the public and how will co-operation be forthcoming?

The Hon'ble Sri H. C. DASAPPA.—It may come about earlier.

Sri H. M. CHANNABASAPPA.—It may be possible tomorrow. It may be possible two years later.

ಒಬ್ಬ ಸದಸ್ಯರು.—ಅಷ್ಟು ಖಚಿತವಾಗಿ ಹೇಗೆ ಹೇಳುವುದು?

Sri H. M. CHANNABASAPPA.—I am not certain, as certain as the Sun rises in the East, that all the objectives of the plan will be realised. It is after all a plan and so, if not in 1955–56, we may realise our objectives two years later. We have got the ideas, we have got the money before us. I am not going to say irresponsibly that whatever you have incorporated is going to be done within that time. But we shall have the determination to do it. Unless you have the determination, how can we have trust in you?

Sri G. A. ACHARYA.—Even granting that a para is devoted to decontrol, do you expect that the people will understand that there is going to be something on which they can depen ?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಜನರಿಗೆ ನಿಮ್ಮ ಯೋಜನೆಯಲ್ಲಿ ಅಭಿರುಚಿಯುಂಟಾಗಬೇಕಾದರೆ ಭವಿಷ್ಯದಲ್ಲಿ ನಂಬಿಕೆಬರಬೇಕಾದರೆ, ಕಂಟ್ರೋಲ್ ಎಂಬ ಯಜ್ಞದಿಂದ ಹೊರಗೆ ಹೋಗುತ್ತೇವೆ, ಇನ್ನು ಐದು ವರ್ಷದಲ್ಲಿ 1955-66ರಲ್ಲಾದರೂ ಇದು ಸಾಧ್ಯವಾಗುತ್ತದೆ ಎಂಬ ನಂಬಿಕೆ ಜನರಲ್ಲಿ ಬಂದರೆ ನಿಮಗೆ ಬೆಂಬಲ ಬರುತ್ತದೆ.

Now I come to the chapter on incentive of prices. I am not going to take more time of the House.

ಶ್ರೀ ಡಿ. ಎಂ. ಸಿದ್ದಯ್ಯನವರು.—ಕಂಟ್ರೋಲ್ ಐದು ವರ್ಷಗಳ ವರೆಗೂ ನಡೆದುಕೊಂಡು ಹೋಗಬೇಕೆಂಬುದು ಮಾನ್ಯ ಸದಸ್ಯರ ಅಭಿಪ್ರಾಯವೆ?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಐದು ವರ್ಷಕ್ಕೆ ಮೊದಲೇ ಹೋದರೆ ಮತ್ತೂ ಅನುಕೂಲ. ಇಷ್ಟು ಕೋಟಿ ರೂಪಾಯಿ ಖರ್ಚುಮಾಡಿ, ಕನಿಷ್ಠಪಕ್ಷ ಐದು ವರ್ಷದ ಮೇಲೆ ಹೋಗುತ್ತದೆಂದು ಹೇಳಲು ಸಾಧ್ಯವಿಲ್ಲವೆ? After having spent 36·6 crores of rupees on the plan if you are unable to hope for decontrol situation, how can you enthuse the people in the country?

ಶ್ರೀ ಟಿ. ಸಿ ಹೊನ್ನಪ್ಪನವರು.—ಮಾನ್ಯ ಸದಸ್ಯರು ಐದು ವರ್ಷದಲ್ಲಾದರೂ ಕಂಟ್ರೋಲ್ ತೆಗೆಯುತ್ತೇವೆಂಬ ಆಸೆ ತೋರಿಸಿದ್ದರೆ, ಬೆಂಬಲ ಕೊಡುತ್ತಾರೆ ಜನ ಎಂದು ಹೇಳಿದರು. ಏನು, ಓಟು ಕೊಡುತ್ತಾರೆಂದು ಅವರ ಅಭಿಪ್ರಾಯವೆ?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—If you are unable to understand what I say I cannot help it. After all, I am speaking in Kannada, Thili Kannada and achcha Kannada!

ನನ್ನ ವಾದವನ್ನು follow ಮಾಡಬೇಕಾಗಿತ್ತು. ಆಗ ತಿಳಿಯುತ್ತಿತ್ತು. ತಿಳಿಗನ್ನಡ, ಅಚ್ಚಗನ್ನಡದಲ್ಲೇ ಹೇಳುತ್ತಿದ್ದೇನೆ.

ಇನ್ನು incentive of prices ವಿಚಾರ ಒಂದು ಪಲ್ಲ ಬತ್ತಕ್ಕೆ 20 ರೂಪಾಯಿ, ಒಂದು ಪಲ್ಲ ರಾಗಿಗೂ 20 ರೂಪಾಯಿ ಕೊಡುತ್ತಿದ್ದೀರಿ. ಇದಕ್ಕೆ ಯಾವ ನೀತಿಯ ಬೆಂಬಲವಿದೆ? ರೈತವರ್ಗದವರ ದೌರ್ಬಲ್ಯ ಅಥವ ಅಸಾಮರ್ಥ್ಯವನ್ನು ಶೋಷಣೆ ಮಾಡುತ್ತಿಲ್ಲವೆ? ಇಪ್ಪತ್ತು ರೂಪಾಯಿ ಯಾವ ದೇಶದಲ್ಲಿದೆಯೆಂದು ಮಾನ್ಯ ಸಿದ್ದಯ್ಯನವರು ಹೇಳುತ್ತಿದ್ದರು, ಅವರು ಈಗ ಸಭೆಯಲ್ಲಿಲ್ಲ, ಇದ್ದಿದ್ದರೆ ಚೆನ್ನಾಗಿತ್ತು. ಮೂವತ್ತು ದಿವಸ ಕಷ್ಟಪಟ್ಟು ನಮಗೆ ಸಾವಿರಾರು ರೂಪಾಯಿ ಸಂಬಳ ಬೇಡ ಎಂದು ಹೇಳುತ್ತಾರೆ. ಒಂದು ಪಲ್ಲ ಬತ್ತ ಅಥವಾ ರಾಗಿ ಬೆಳೆಯಬೇಕಾದರೆ ಏನು ಖರ್ಚಾಗುತ್ತದೆ ಎಂಬುದನ್ನು ಯಾವಾಗಲಾದರೂ ಲೆಕ್ಕ ಹಾಕಿದ್ದಾರೆಯೆ! ನೀವೂ ಹಾಕಿಲ್ಲ, ಇಂಡಿಯಾ ಸರ್ಕಾರದವರೂ ಹಾಕಿಲ್ಲ. "In the absence of data, we are unable to fix" ಎಂದು...............

The Hon'ble Sri H. C. DASAPPA.—It is bound to vary from place to place.

Sri. H. M. CHANNABASAPPA.—Even salaries are bound to vary from place to place, from office to office. But you must not forget that according to the Constitution, the people have a right to demand of you a living wage for the work that they do. Are you agreed upon that? If a man works all the 360 days, himself, his wife and two children, if he does not get at least 1 rupee for himself, 8 annas for his wife and 4 annas for his children, how on earth are you justified in saying that we are going to provide incentive?

Sri M. N. JOIS.—No discrimination between man and woman according to the Constitution. Sir. Why one rupee for a man and 8 annas for his wife? (laughter).

The Hon'ble Sri H. C. DASAPPA.—He is violating the fundamental rights of the Constitution.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಈಗ ಇದರ ಪ್ರಕಾರ ಪ್ರತಿಯೊಬ್ಬ ಮನುಷ್ಯನಿಗೂ ಪ್ರತಿಯೊಂದು ಸಂಸಾರಕ್ಕೂ ಜೀವನಕ್ಕೆ ಒಂದು ವೃತ್ತಿಯನ್ನೊದಗಿಸುವುದು, living wage ಒದಗಿಸುವುದು ದೇಶದ ಆದ್ಯ ಕರ್ತವ್ಯ. ಒಂದು ಸಂಸಾರಕ್ಕೆ ನಾಲ್ಕು ಎಕರೆ ಖುಷ್ಕಿ ಒಂದು ಎಕರೆ ತರಿ ಯಂತೆ ಇರುವವರು ಅಪರೂಪ. ಒಂದೆಕರೆ ತರಿ ನಾಲ್ಕೆಕರೆ ಖುಷ್ಕಿ ಇರುವ ಒಬ್ಬ ಮನುಷ್ಯ 365 ದಿನವೂ ಹೊಲದಲ್ಲಿ ಕೆಲಸ ಮಾಡಿದರೆ ಅದರಿಂದ 480 ರೂಪಾಯಿ ಉತ್ಪತ್ತಿಯಾಗುತ್ತದೆ. ಒಂದೆಕರೆ ತರಿಗೆ ಸುಮಾರು 12 ಪಲ್ಲ ಬತ್ತ ಬೆಳೆಯುತ್ತದೆಂದು ಇಟ್ಟುಕೊಳ್ಳೋಣ. We will be generous. I have no objection. We will stretch a point in their favour. ಇನ್ನು ನಾಲ್ಕೆಕರೆ ಖುಷ್ಕಿಯಲ್ಲಿ ಅಷ್ಟು ಸಮರ್ಪಕವಾಗಿ ಮಳೆಬೆಳೆಯಾದರೆ 12 ಪಲ್ಲ ಒಟ್ಟು 24 ಪಲ್ಲ ಆಯಿತು. ಇದಕ್ಕೆ 480 ರೂಪಾಯಿ ಆಯಿತು ಈ 480 ರೂಪಾಯಿಯಲ್ಲಿ ಇವನು ಕಷ್ಟಪಟ್ಟದ್ದಕ್ಕೆ ಬೇಡ. ಎತ್ತುಗಳ ಮೇಲೆ ಹಣ ಹಾಕಿರುತ್ತಾನೆ. ಮಿಕ್ಕ ಸಲಕರಣೆ ಮೇಲೆ ಹಣ ಹಾಕಿರುತ್ತಾನೆ. ಎಲ್ಲಕ್ಕೂ 30 ರೂಪಾಯಿ ಎಂದಿಟ್ಟುಕೊಂಡರೂ ಇನ್ನುಳಿಯುವುದು 450 ರೂಪಾಯಿ ಇಷ್ಟಕ್ಕಾಗಿ ಕೆಲಸ ಮಾಡುವವರು a family consisting of a husband, wife and two children—a boy and a girl: total four ಇದಕ್ಕಾಗಿ ಮನೆಯ ಜನರೆಲ್ಲ ದುಡಿಯಬೇಕು. ಇದಕ್ಕೆ ಬದಲು ಆ ಮನೆಯ ಜನರೆಲ್ಲಾ ಮೈಸೂರು ಬೆಂಗಳೂರಿಗೆ ಮಿಲ್ಲುಗಳಲ್ಲಿ ಕೂಲಿಗೆ ಹೋದರೆ, ದಿನ ಒಂದಕ್ಕೆ ಗಂಡಸಿಗೆ ಒಂದೂವರೆರೂಪಾಯಿ, ಹೆಂಗಸಿಗೆ ಒಂದು ರೂಪಾಯಿ, ಮಕ್ಕಳಿಗೆ ಎಂಟಾಣೆಯಂತೆ ಅವರು ಸಂಪಾದಿಸಬಹುದು. ಈ ಲೆಕ್ಕದ ಮೇಲೆ ತಿಂಗಳಿಗೆಷ್ಟಾಗುತ್ತದೆ ವರ್ಷಕ್ಕೆಷ್ಟಾಗುತ್ತದೆ ಎಂಬುದನ್ನು ಲೆಕ್ಕಹಾಕಿ, ಹಳ್ಳಿಯಲ್ಲಿ ಕೂಲಿಗೆ ಹೋದರೂ ಕೂಡ ಗಂಡಸಿಗೆ ಒಂದು ರೂಪಾಯಿ, ಹೆಂಗಸಿಗೆ 12 ಆಣೆ ಎರಡುಮಕ್ಕಳಿಂದ ಎಂಟಾಣೆ ಬರುತ್ತದೆ. ಇದರಿಂದ ತಿಂಗಳಿಗೆ 82½ ರೂಪಾಯಿ ಉತ್ಪತ್ತಿಯಾಗುತ್ತದೆ.

ಹೀಗೆ ಬರಿ ಕೂಲಿಕೆಲಸ ಒಂದನ್ನೇ ಮಾಡಿದರೂ ವರ್ಷ ಒಂದಕ್ಕೆ ಆ ಸಂಸಾರಕ್ಕೆ ಸುಮಾರು ಒಂದು ಸಾವಿರ ರೂಪಾಯಿಗಳವರೆಗೆ ಸಂಪಾದನೆ ಇರುತ್ತೆ. ಇದಕ್ಕೆ ಬದಲಾಗಿ ವ್ಯವಸಾಯ ಮಾಡಿದರೆ ವ್ಯವಸಾಯ ಬೇಸಾಯಿ ಏನೂ [illegible] ನಿನ್ನಮನೆ ಮಕ್ಕಳೂ ಸಾಯು ಎಂದು ಹೇಳುತ್ತಾರಲ್ಲಾ. ಹಾಗಾಗಿ ಅವರು ಕೇವಲ 450 ರೂಪಾಯಿಗಳಿಗೆ ಅವರೆಲ್ಲರ ಶರೀರವನ್ನು ತೇಯಬೇಕಾಗಿರುತ್ತೆ. ಹೀಗೆ ಕೂಲಿಕೆಲಸದಿಂದ ಸಾವಿರ ರೂಪಾಯಿಗಳ ಸಂಪಾದನೆ ಆಗತಕ್ಕದ್ದು ಆ ವ್ಯವಸಾಯದಲ್ಲಿ ಸಂಪಾದನೆಯಾಗುವುದಿಲ್ಲವೆಂದು ಹೇಳುವಾಗ

(ಶ್ರೀ ಎಚ್. ಎಂ. ಚನ್ನಬಸಪ್ಪ)

ಈ ವ್ಯವಸಾಯವೆನ್ನುವುದು ಇನ್ನು ಹೇಗೆ ಅಭಿವೃದ್ಧಿಗೆ ಬರಲು ಸಾಧ್ಯ?

I am seriously putting it, This is responsible for all the evils in the country, You have been discriminating against the Raiyat. It is not fair on the part of the Government which cals itself a Wel-fare Government.

Sri G. A. ACHARYA.—Nobody has defined "wages". Who has defined 'wages'?

Sri H. M. CHANNABASAPPA.—I am not speaking about wages. I am speaking about incentive of price. You are not following me.

ತಾವು ಅಂಕಿ ಅಂಶಗಳ ಆಧಾರದ ಮೇಲೆ ಇಲ್ಲವೇ ಒಂದು ಕನಿಷ್ಠ ಪರಿಮಿತಿಯ ನಷ್ಟೆಯನ್ನು ಈ ಧವಸ ಧಾನ್ಯಗಳಿಗೆ ಎಂದರೆ ಭೂಮಿಯಿಂದ ಉತ್ಪನ್ನವಾಗತಕ್ಕ ವುಗಳಿಗೆ ಒಂದು ಬೆಲೆಯನ್ನು ನಿರ್ಧಾರಮಾಡದೆ ಬಾಕಿ ವಿಚಾರದಲ್ಲಿ, ಕುಳಿತದ್ದಕ್ಕೂ ನಿಂತದಕ್ಕೂ ಎಲ್ಲದಕ್ಕೂ ಲೆಕ್ಕಸೇರಿಸಿ ಅವುಗಳ ಬೆಲೆಯನ್ನು ನಿರಬುಮಾಡುತ್ತೀರಿ. ಹೀಗೆ ಬೆಲೆಯನ್ನು ನಿರ್ಧರಿಸಿ ಕೊಡುವುದರ ಜೊತೆಯಲ್ಲೇ ಸೇಕಡ 25ರಷ್ಟು ನಷ್ಟೆಯೆಂದು ಅಲ್ಲೇ ನಮೂದು ಸಹ ಮಾಡಿಬಿಡುತ್ತೀರಿ. ಆದರೆ ಅದೇ ರೀತಿ ಈ ವ್ಯವಸಾಯಗಾರನ ವಿಚಾರದಲ್ಲಿ ತಾವೇಕೆ ಒಂದು ಪರಿಮಿತಿಯನ್ನು ಗೊತ್ತುಮಾಡಬಾರದು? ತಮಗೇನು ವ್ಯವಸಾಯದ ಕಸುಬು ಗೊತ್ತಿಲ್ಲವೇ ಅಥವಾ ಗೊತ್ತಿದ್ದರೂ ಮಾಡಬಾರದೆಂದೋ?

ಅಧ್ಯಕ್ಷರು.—ಅವರು 365 ದಿವಸವೂ ಅದೇ ಕೆಲಸ ಮಾಡುತ್ತಾರೆಯೇ? ಅವರಿಗೆಲ್ಲಾ ವಿಚಾರಗಳು ಗೊತ್ತೇ ಇದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—I agree I have got accounts. ಅವರಿಗೆ ವರ್ಷದಲ್ಲಿ ಮೂರು ತಿಂಗಳು ಯಾವ ಕೆಲಸವೂ ಇಲ್ಲದೆ ವಿರಾಮವಿರುತ್ತೆಂದೇ ತಿಳಿಯೋಣ. ಆಗ ಆ ಮೂರು ತಿಂಗಳೂ ಕೂಲಿಗೆ ಹೋದರೆ ಎಷ್ಟಾಗುತ್ತೆ ಎಂಬುದನ್ನೂ ಲೆಕ್ಕ ಹಾಕಿ ನೋಡೋಣ. 30 ರೂಪಾಯಿ ಮತ್ತು 20 ರೂಪಾಯಿ ಒಟ್ಟು ಒಂದು ತಿಂಗಳಿಗೆ 50 ರೂಪಾಯಿ ಸಂಪಾದಿಸಿದರೆ 3 ತಿಂಗಳಿಗೆ 150ರೂಪಾಯಿ ಆಯಿತು. ಒಂದು ಸಾವಿರ ರೂಪಾಯಿಗಳ ಸಂಪಾದನೆಯಲ್ಲಿ ಈ 150ಹೋದರೆ ಇನ್ನುಳಿಯುವುದು 850 ರೂಪಾಯಿಗಳು. ಹಾಗೆ ಕೂಲಿಮಾಡದೆ ವ್ಯವಸಾಯವನ್ನು ಮಾಡಿಕೊಂಡಿದ್ದು ಆ 3 ತಿಂಗಳುಕೂಲಿ ಮಾಡಿದ್ದರೆ ಆಗ ಆತನಿಗೆ ಬರುತ್ತಿದ್ದ ವರಮಾನ ವೆಷ್ಟೆಂದರೆ 450+150—600ರೂಪಾಯಿಗಳು ಮಾತ್ರ ಆಯಿತು. ನಿಮ್ಮಲ್ಲೇ ಸದಾ ಕಾಲ ಕೂಲಿ ಮಾಡಿದರೆ 1,000 ರೂಪಾಯಿ ಸಂಪಾದನೆ ದೊರೆಯುತ್ತೆ.

ಶ್ರೀ ಜಿ. ಎ. ಆಚಾರ್ಯ ಅವರು.—ಅವರು ಹೋಗೇ ಕುಡಿಯುವುದೊ?

ಶ್ರೀ ಎಚ್. ಎಂ ಚನ್ನಬಸಪ್ಪನವರು.—Let me not go into the details. ನೀವು ಇದನ್ನೆಲ್ಲಾ ತಿಳಿದುಕೊಂಡರೆ ಸಾಕು. ಈ ವಿಚಾರಗಳೆಲ್ಲಾ ಸರ್ಕಾರದವರಿಗೂ ಗೊತ್ತಿವೆ; ಅವರಿಗೆ ಗೊತ್ತಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ಅಲ್ಲಿಗೆ ಕೈಹಾಕಿದರೆ ಚೇಳು ಕಚ್ಚಿಬಿಡುತ್ತೆ. 25-30ರೂಪಾಯಿ ಕೊಡಬೇಕಾಗುತ್ತೆ. ಏನೇ ಆಗಲಿ, ಹಾಗೆ ಧಾರಣೆಗಳಲ್ಲೂ ವಿಪರೀತ ಏರುಪೇರುಗಳು ಇರಬಾರದು. ಹಾಗೆ ಧಾರಣೆವಾಸಿಗಳು ವಿಪರೀತ ಹೆಚ್ಚಾಗಲು ಅವಕಾಶ ಕೂಡ ಇರಬಾರದೆಂದು ಹೇಳುತ್ತೇನೆ. ಇದನ್ನು ತಾವು ಒಂದು Comprehensive ಆಗಿ ಮಾಡಬೇಕು. ಯಾರಿಗೂ ಇದರಿಂದ ತೊಂದರೆಯಾಗಬಾರದು. ಆದರೆ ಇಂದು ಆತನ ದುಡಿಮೆಗೆ ತಕ್ಕ ಪ್ರತಿಫಲ ಬರುವಹಾಗೆ ತಾವು ಮಾಡಿಲ್ಲ. ಧಾರಣೆಗಳನ್ನು ತಾವು ನಿಷ್ಕರ್ಷೆಮಾಡುವಾಗ ಕೇವಲ ಒಬ್ಬ ಕೂಲಿಮಾಡತಕ್ಕವನ ಅಂತರಕ್ಕಿಂತಲೂ ಇವನ ಸ್ಥಿತಿ ಕಮ್ಮಿ ಮಾಡಿದರೆ ಇದು ಯಾವ ನ್ಯಾಯ? ರೈತನ ಕಷ್ಟವೇನು? ಆತನಿಗೆ ದನ ಎಷ್ಟು ಕರುಗಳಿಗೇನು ಖರ್ಚಾಗುತ್ತೆ ಎಂಬುದನ್ನೆಲ್ಲಾ ನೋಡಿ ಆತನ ಕಷ್ಟಕ್ಕೆ ಸರಿಯಾಗಿ ಫಲ ದೊರೆಯುವಂತೆ ತಾವು ಮಾಡಬೇಕು. ಹೀಗೆ ಮಾಡದೆ ಹೋದರೆ ಬಡವನಾಗಿರತಕ್ಕವನು ಇನ್ನೂ ಬಡವನಾಗುತ್ತಾನೆ. ಅಲ್ಲಿಗೆ ನಿಮ್ಮ ತತ್ವ ಏನಾಯಿತು? ಆಗಲಾದರೂ ತಾವು ಇದು ಸರಿಯಾದ್ದಲ್ಲವೆಂಬುದನ್ನು ಒಪ್ಪಿಕೊಳ್ಳೋಣವಾಗುತ್ತದೆಯೆ?

You say to-morrow " We are going to see that we will have a margin of profit over and above the expenditure." What is the margin of profit? I do not mind if it is one per cent, two per cent or ten per cent. I will be satisfied even if he gets just the expenses. To-day he is unable to speak.

The Hon'ble Sri H. C. DASAPPA.—Unable to speak?

Sri H. M. CHANNABASAPPA.—That is your strength; that is his weakness.

The Hon'ble Sri H. C. DASAPPA.—In spite of representatives like Sri Channabasappa? Be honest for once.

Sri H. M. CHANNABASAPPA.—I have always been honest.

The Hon'ble Sri H. C. DASAPPA.—When there are representatives of the type like Sri Channabasappa, why should the raiyats be afraid?

Sri H. M. CHANNABASAPPA.—I should appeal to you that an adequate price, a reasonable price, a price which includes a margin of profit over and above the expenses may be provided for to the raiyat and unless you do that, you w ll not get the targ t. I may tell you that this is going to work havo in the country and nobo y will grow food-grains to-day, including myself. I will not grow Why should I? Under what obligation to t e society I should grow unless the so iety is going to treat me on a par with others? Un er what obligation should I grow o dgra ns for you and make it my hobby?

ಶ್ರೀ ಎ. ಸುಬ್ಬರಾಯಶೆಟ್ಟರು (ಕೋಲಾರ ಜಿಲ್ಲೆ).—ಹಾಗಾದರೆ ತಾವಿನ್ನು ಬೇಸಾಯ ಮಾಡುವುದಿಲ್ಲವೋ?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಬೇಸಾಯಗಾರನಿಗೆ ಒಂದು ಸಲ ಭೂಮಿಯನ್ನು ಕಟ್ಟಿಕೊಂಡರೆ, ತಾಳಿ ಕಟ್ಟಿದ ಹೆಂಡತಿಯನ್ನು ಕಟ್ಟಿಕೊಂಡಹಾಗೆ ಅದರ ವಿಚಾರ. ಜನರು ತಮ್ಮ ಸ್ವಪ್ರಯೋಜನ ಎಲ್ಲಿ ಹೆಚ್ಚಾಗಿ ನಡೆಯುತ್ತದೆಂದು ತಿಳಿದಿದ್ದಾರೋ ಆ ಕಸುಬಿಗೆ ಹೋಗುತ್ತಾರೆಯೇ ಶಿವಾಯಿ, ಈ ವ್ಯವಸಾಯಕ್ಕೆ ಅವರು ಕೈಹಾಕಿದರೂ ಇನ್ನು ಏನೂ ವಿಧಿಯಿಲ್ಲಪ್ಪ ಮಾಡುವುದೇನು ಎನ್ನತಕ್ಕವರೇ; ಇದು ನಮ್ಮ ಅಪ್ಪ ಹಾಕಿದ, ತಾತ ಹಾಕಿದ ದಾರಿ ಇದರಲ್ಲೇ ಹೋಗಬೇಕು ಎಂದು ಈ ಕೃಷಿಯಲ್ಲಿ ನಿಂತಿರುತ್ತಾರೆ ಹೊರತು ಇದರಿಂದ ಆದಾಯ ಬರುತ್ತದೆಯೆಂದು ಯಾರೂ ತಿಳಿದುಕೊಂಡಿಲ್ಲ. ಹೀಗೆ ಮಾಡತಕ್ಕದ್ದು that is subsistance farming, not for profit. ಏನೋ ನಾನೂ ಸಹ 1932ರಲ್ಲಿ ಹೋಗಿ ಇದಕ್ಕೆ ಸಿಕ್ಕಿಹಾಕಿಕೊಂಡೆ. ಇದಕ್ಕಾಗಿ ನನ್ನ ಇಡೀ ಜನ್ಮವನ್ನೇ ತೇದೆನು ರಕ್ತವನ್ನೆಲ್ಲಾ ಬಸಿದೆನು. ಈಗ ಇದನ್ನು ನೀವು ಬಿಟ್ಟು ಹೋಗಬೇಕೆಂದರೆ ಅದು ಹೇಗೆ ತಾನೆ ಸಾಧ್ಯ? ಹೀಗಿದೆ ಇದರ ವಿಚಾರ. ವ್ಯವಸಾಯಗಾರನು ತನ್ನ ಉದ್ಯಮವನ್ನು ಬಿಡಬಾರದೆಂಬ ಆಸೆಯಿಂದೇನೂ ಅದನ್ನು ಆತ ಕಟ್ಟಿಕೊಂಡಿಲ್ಲ. ಯಾವುದಾದರೂ ಬೇರೆ ಕಸುಬು ಸಿಕ್ಕಿದರೆ ಬಿಟ್ಟು ಹೋಗೇ ಹೋಗುತ್ತಾನೆ. ಹೀಗೆ ಯಾವುದೋ ಒಂದು ಕಸುಬಾಗಿರಲಿ ಅದರಿಂದ ತಾನೂ, ತನ್ನ ಹೆಂಡತಿ ಮತ್ತು ಎರಡು ಮಕ್ಕಳಾದರೂ ಸುಖವಾಗಿ ಜೀವನೋಪಾಯ ನಡೆಯುವಂತಿರಬೇಕು. ಇದು ಬಹಳ ಮುಖ್ಯವಾದ ವಿಷಯ.

The Hon'ble Sri H. C. DASAPPA.—Wait and see.

Sri H. M. CHANNABASAPPA.—I would appeal to you to see that he gets an adequate return for all the work that he does throughout the day. With these remarks, I request the Government and also the Hon'ble Members to take note of every matter which I have touched upon and see that those matters find in adequate value, that they find a place in the plan and only then your plan will become a real plan which gets the support of the entire nation. Otherwise, your plan is going to be a useless plan. You will not have the co-operation of the people and when the co-operation of the people is lost, any amount of money spent on it is going to be wasted.

Sri M. GOVINDA REDDY (Chitaldrug District—General).—Sir, I propose to confine myself to the principles of planning at this stage, for in my opinion what is now required by this House in examining this report is to consider whether the framework is proper or not and whether this framework is to be amended and if so, in what respects. I therefore look at the question of planning from two standpoints. One is planning to build and the other is planning to solve. The report on the first Five-Year Plan, which is placed before us, of which the Mysore Plan is an integral part, fulfils in a large measure the second aspect. It is in my opinion a plan to solve. What has been done there is to assess the national needs in relation to circumstances that are prevailing in the existing system of economy and then to direct national effort to achieve these needs and to fulfil these requirements. In the field of industry, taking the existing industries into consideration, what are the complements which the present industries have to be furnished with and how much do they require; and have we to plan for any new industries and if so what are they? And then with regard to cottage industries and small scale industries, what should be the additional impetus to be given to these small scale industries? That is the broad direction in which the planning in the industrial field has to be examined in the report. In the field of agricultural planning, the most urgent national need is to grow enough and produce enough to meet the national requirements; and in order to grow enough, in order to step up production, how are we to control agricultural economy? In the field of Education what has been thought of in the present plan is to take up the present educational system to its logical conclusion and to plan for more schools, more buildings and then to accommodate the basic educational plan. So I wish to observe that what has been done in the five-year plan is to examine the present conditions of economy in the various fields and then to direct them to the desired ends. This in my opinion falls short of what I mentioned as the first aspect and that is the planning to build. Of course the present plan involves building construction, major and minor irrigation projects, and Industrial Workshops and so on. I do not mean to say in this connection that this is not a plan to build, but when I say that it should be

(SRI M. GOVINDA REDDY)

I do not propose to take much time. Generally on such occasions, the mover is handicapped and at a disadvantage because an authorised version of the statement or a written statement of the Minister is not before us. Such important statements are always in writing and given beforehand. Now we have to depend on our memory for what the Hon'ble Chief Minister has stated, and make our remarks. So when I say something, let the Chief Minister be a bit considerate and take into consideration the fact that an authorised version of the statement is not before us. Anyhow it is a suggestion for future guidance that such important statements must always be in writing as is done in other Parliaments and copies must be made available to all the members of the House; it will help the discussion a good deal.

I have not brought in this resolution just to cause embarrassment or annoyance to the Minister. I feel it my duty to stand by the country and to express my views, as I have always been expressing not only now but for the last two or three years ever since this ministry came into existence I am second to none in upholding the prestige, dignity and integrity of the State. In fact, if members of this House could remember, I have been finding fault even against the members themselves. I have been finding fault from the beginning that the Ministers have been surrendering the rights of the State and bringing down the prestige of the State. I was the first to protest when the Constituent Assembly was dissolved and the power of framing the Constitution was taken over by the Centre. I was the first to protest when a directive was issued terminating the services of Sri Puttaraj Urs and the Chief Minister was the first to uphold that directive and raised a point of order that it should not be discussed in the House. I was the first to protest for the parting of our finances. So let me not be accused that I have at any time been inconsistent and let it not be said that for the first time I have been taking the present action. So, when the Minister on the 3rd October took such a bold action even against our own conviction regarding the merits of the case, the party to which I belong hoping that in the interests of the State the Ministers would achieve something which would redound to their credit, gave support to them, and members of my party thought that they also would be taken into confidence and everything would be made clear to them. I regret very much that on the first day I was absent I was disabled from being present. The Chief Minister made a statement and then Sri Bheemappa Naik moved his resolution. When I read the report that appeared in the newspapers, when I read about the attitude that the Ministers said that they would take, it rather gladdened my heart. I said " Let us subordinate our own views; let us for the sake of the country support the Chief Minister when he is going on an important mission." I have not got an authorised version of the statement made by the Chief Minister that day and if you compare that statement to what he has made to-day, well I cannot understand why there is such a sudden change in the attitude of the Chief Minister. When the directive of the President was received, the Chief Minister was so annoyed that he at once ran to the members of his party and told them that he is prepared to go to any extent to uphold the prestige of the State and he stated that this directive was so humiliating that they could not stand this any longer and the members of his party............

The Hon'ble Sri H. C. DASAPPA.—What do you know about the Party ?

Janab J. MOHAMED IMAM.—These are open secrets. You cannot challenge them.

The Hon'ble Sri H. C. DASAPPA.—I think there is a great deal of impropriety in referring to things which have gone on inside the party. I have no objection if he wants to refer to that; but my fear is he will be on very thin ground if he is to refer to what has transpired.........

Janab J. MOHAMED IMAM.—Anyhow, let me refer to some of the statements the Chief Minister has made. He stated :

ಈ ಡೈರೆಕ್ಟೀವ್ ಪ್ರತಿಯೊಬ್ಬರಿಗೂ ಪೂರಾ ಮಾನ ನೋವನ್ನುಂಟುಮಾಡಿದೆ. ಇದು ನಮ್ಮ ದೇಶದ ಮತ್ತು ಈ ಸಭೆಯ ಸದಸ್ಯರ ಘನತೆಗೌರವಗಳನ್ನು ತಗ್ಗಿಸತಕ್ಕದ್ದಾಗಿದೆ. ಆದುದರಿಂದ ನಮ್ಮ ದೇಶದ ಘನತೆ ಗೌರವಗಳನ್ನು ಎತ್ತಿಹಿಡಿಯಲು ಮತ್ತು ಅವುಗಳನ್ನು ಕಾಪಾಡಲು ನಾನು ಏನುಬೇಕಾದರೂ ಮಾಡಲು ಸಿದ್ಧನಿದ್ದೇನೆ. ಕಡೆಗೆ ಈ ಮಂತ್ರಿಪದವಿಗೆ ನಾನು ರಾಜೀನಾಮೆ ಕೊಡುವುದಕ್ಕೂ ಸಿದ್ಧನಿದ್ದೇನೆ......

The Hon'ble Sri K. CHENGALARAYA REDDY.—I did not say so.

The Hon'ble Sri T. MARIAPPA.—I rise to a point of order. He shall not read from any newspaper. This is an elementary principle of Parliament.

Janab J. MOHAMED IMAM.—ಆ ದಿವಸ ಇವರು ಕೊಟ್ಟಿರತಕ್ಕ expressions ಗಳನ್ನು ನೋಡಿದರೆ ಬಹಳ ಭಯವಾಗುತ್ತಿತ್ತು. ಇದೇ ರೀತಿಯಾಗಿ the same day my beloved friend Sri Bheemappa Naik.........

Mr. SPEAKER.—Who belongs to your place......

Janab J. MOHAMED IMAM.—He belongs to my taluk and I have great affection and regard for him. He brought in a special resolution......

Sri B. HUTCHE GOWDA (Tumkur District—General).—He said, "I am not prepared to accept a directive from anybody except God."

Mr. SPEAKER.—He has explained what he meant by that.

Janab J. MOHAMED IMAM.—And he moved that resolution in such a thundering way that I in my own way felt a little proud of him because he belongs to my own place.

I know that he was a Bheema. Taking all these things into consideration, members of my party also supported it. They said that if you do not succeed, you must resign. It was on that condition the members of my party including Sri L. Siddappa said that they would support you. It is a matter concerning the prestige of the whole State and the future of the State. So they said that you must resign if you do not succeed.

Mr. SPEAKER.—Was that the directive that was given by the House?

ಜನಾಬ್ ಮಹಮ್ಮದ್ ಇಮಾಂರವರು.—ಸಂಸ್ಥಾನದ ಗೌರವವನ್ನುಳಿಸುವುದಕ್ಕೆ ಅವಶ್ಯಕವಾದ ಎಲ್ಲಾ ಕೆಲಸವನ್ನೂ ಮಾಡಬೇಕು ಎಂದು ಸೂಚಿಸಲಾಗಿತ್ತು.

Mr. SPEAKER.—The resolution that was passed by the House called upon the Mysore State Ministry to take all necessary steps to vindicate the honour and prestige of the State.

Janab J. MOHAMED IMAM.—Yes, yes; that was exactly what was meant. If you fail in your mission to vindicate the honour of the State, if you fail to uphold the prestige of the State, it was understood that you should resign. If you take the cumulative effect of the speeches that were delivered on the floor of the House then, this was the meaning. ಅವರು ಮಾತನಾಡಿದ್ದು, ಹೇಳಿದ್ದು, ಎಲ್ಲವನ್ನೂ ಗಮನಕ್ಕೆ ತೆಗೆದುಕೊಂಡರೆ ಖಂಡಿತ, ನಾನೊಬ್ಬನೇ ಅಲ್ಲ, ಸಂಸ್ಥಾನದಲ್ಲಿರುವ ಪ್ರತಿಯೊಬ್ಬ ಪ್ರಜೆಯೂ ಕೂಡ, ಮಾನ್ಯ ಮಂತ್ರಿಗಳು ನಡೆಸುತ್ತಿರುವ ಪ್ರಯತ್ನದಲ್ಲಿ ಜಯವಾಗದಿದ್ದರೆ ಖಂಡಿತ ರಾಜೀನಾಮೆ ಕೊಡುತ್ತಾರೆ ಎಂದು ಹೇಳುತ್ತಿದ್ದರು.

Mr. SPEAKER.—What does the resolution say? Have not the Government acted in accordance with the directions issued by the House? We are concerned with the directive issued by the House?

Janab J. MOHAMED IMAM.—I do not know what they said.

Mr. SPEAKER.—The point is whether the Government have or have not acted in accordance with the directive given to them by this House.

Janab J. MOHAMED IMAM.—The directive was to maintain and uphold the dignity and prestige of the House.

Mr. SPEAKER.—We are now concerned with whether that has been done or not.

Janab J. MOHAMED IMAM.—Yes. That is the question. It is an important issue. And most of us today are surprised to see that the Ministers are still sitting in their seats. Our Chief Minister went with a very powerful weapon, namely the resolution of this House. He said that he would do his best. He went like a lion but returned like a domesticated pigeon bringing a message of peace. He went to bring peace and harmony. He wants now to put that for consideration of the House and pacify us, not for our sins, but for

(JANAB J. MOHAMED IMAM).

their commissions and omissions. What has happened? I must first tell you one thing. We never thought that this would be a party issue. We thought that it was a State issue. Hence all the members of this House gave their unstinted support. But the Chief Minister, after his return, I am sorry, and I regret very much to state, is still treating this matter as a purely party issue, because he has not taken all those other members into his confidence. For example the Socialist Members, the independent Members, and others are not taken into confidence.

Sri A. BHEEMAPPA NAIK (Chitaldrug District—General).—Are all of them your party Members?

Janab J. MOHAMED IMAM.—Undoubtedly.

Sri A. BHEEMAPPA NAIK.—We were thinking that you are a Member of the Janatha Party!

Janab J. MOHAMED IMAM.—It is nearly three days since the Chief Minister returned. And he has taken three days to make the House acquainted with this important fact. The entire public are thinking about this. But he has taken three days to take us into his confidence. After all he has made only a formal statement. It is a well known fact that when he came back, he came with a letter from Pandit Nehru whom he regards with all respect. One member asked whether he would place that letter before the House. I feel that letter ought to have been before this House for the information of all the members. We would have been very glad to know what it contained and what advice he has given. But on the other hand, when a member questioned about this, the Hon'ble Chief Minister evaded this, though according to confirmed and authorised reports that letter was read in their own party meeting. That means to say that he does not believe us here. On account of this reason we have been seriously thinking as to why we should not withdraw the support. We feel he has suspicion and mistrust in us and nothing else. Another thing I wish to say. The Chief Minister or his party members have misled us. They have misled this House. They have let down this House. Whoever wanted them to bring this issue before this House? Nobody prevented them from doing their administrative duty. They were first asked by the Centre whether they were willing to transfer the case outside the State. And again they were asked whether they are willing to import a Judge from outside the State. To both these they refused. ನೀವು ಇದನ್ನು ನಿರಾಕರಿಸಿದಿರಿ and it is stated in the directive also.

ಮೈಸೂರು ಸರ್ಕಾರದವರು ಈ ಎರಡು ಸಲಹೆಗಳನ್ನೂ ನಿರಾಕರಿಸಿದ್ದರಿಂದ ಪ್ರೆಸಿಡೆಂಟರು ಈ ಡೈರೆಕ್ಟಿವ್ ಕೊಡಬೇಕಾದ ಪ್ರಮೇಯವು ಬಂದಿತು.

So nobody would have found fault with the Government if they had complied with any one of those two requests. Both of them were in the nature of requests. It was open to them to have agreed to transfer the case outside the State; it was equally open to them to import a Judge from outside. But they refused to comply with both these alternatives and invited a directive from the President. Now the Chief Minister comes and says "let us agree to import a Judge." Well, as an Administrator, as the head of the State administration, he should have anticipated it; and if he had complied with this before the directive came, we would not have found fault with him. They committed first the mistake in refusing to agree to the request and when the directive came they are now at bay and hard-pressed. The Chief Minister now says that they will agree to import a Judge from outside. Why all this fuss? On the other hand look at the reflection this situation has brought about on the State. Everybody says that this House was wrong in having discussed the question through a motion. Why did they discuss it? We thought we would be getting public approbation and public support. On the other hand, to my great mortification, this has become an all-India issue, not merely a State issue and I must say that this House has become very small

in the eyes of others. It has become very small. The Hon'ble Minister for Law said that there was no public agitation. It was a strange and silly argument. Did he invite public agitation and contempt of court? Now, there is public agitation.

Sri A. BHEMAPPA NAIK.—Is the word 'silly' parliamentary? Is it not silly to use such words?

(*Laughter.*)

Sri K. PUTTASWAMY (Mysore District—General).—I rise to a point of order. The word used by the Hon'ble Member Sri A. Bheemappa Naik in connection with the point he raised is unparliamentary.

Mr. SPEAKER.—I agree with the Hon'ble Member and I hope that the Hon'ble Members will not indulge in such words.

Sri A. BHEEMAPPA NAIK.—I just wanted to show that his argument was silly.

Janab J. MOHAMED IMAM.—By rushing this question I must say that the prestige of this House has been lowered. There were appeals made on that day to postpone discussion at least by a day or two to consider the matter deeply because it affected the integrity of this House and it was concerned with an important matter. But my friends were in such a great hurry that they did not allow even one minute for consideration over this matter because the Hon'ble Chief Minister wanted to go to Delhi that day. So, everything was rushed through in haste and the result was that most of us, though we might have agreed openly, in our heart of hearts realised that we did commit a mistake in discussing the question before the House. We have all realised that the Hon'ble Chief Minister did commit a mistake in bringing that question before this House.

The Hon'ble Sri H. C. DASAPPA.— "We have all"—who are 'We'?

Janab J. MOHAMED IMAM.—Your rushing into this House has not helped you materially in any way, has not helped the State in any way, has not helped any person of the State in any way. Let us see what the Hon'ble Chief Minister has stated. In the first place we have to depend on his oral statement. As evidence of what took place between himself and the President or the Prime Minister we are not in possession of any written document. He comes and states before us that within two or three weeks the State of Mysore will get exemption. It may be true or may not be true. My own feeling is otherwise. We would have got exemption but for this bungling. Because we have bungled, because we have done like this, because we have created a sort of adverse opinion both in the press and on the platform in India, I believe—and I hope I will be wrong—that the granting of exemption to the State has been delayed and there is good ground for the President to delay it as long as he likes. Secondly what amuses me most is this. When this matter was taken up I thought that all the Part B States would align themselves along with us and agitate. But to my surprise and to their misfortune not a single Part B State has raised any protest or has thought fit to support us.

The Hon'ble Chief Minister states that the directive will be withdrawn by the President. Of course under Article 371 the President can issue a directive. But I am wondering if there is a provision under which he can take back a directive. It is a matter to be considered. But, in my own opinion, after a directive has been issued by the President, he cannot take it back.

Mr. SPEAKER.—The Hon'ble Member is issuing a direction to the President!

Janab J. MOHAMED IMAM.—Not at all. I am stating facts. Perhaps it has to be done by the Parliament.

Sri H. M. CHANNABASAPPA (Mysore District—General).—He will issue another directive recalling the original directive.

(*Laughter.*)

The Hon'ble Sri H. C. DASAPPA.— Under the General Clauses Act he can withdraw the directive.

Janab J. MOHAMED IMAM.—The Hon'ble Chief Minister puts a suggestion before the House and asks us to accept it to import a judge from outside. In my opinion this may create greater complications than transferring the case outside the State. If a judge is imported here, he has not made clear under whose jurisdiction he will be; whether he will be under the jurisdiction of the Mysore High Court or the Madras or the Bombay High Court? All these questions will again crop up and again there will be agitation and discussion. In my opinion it is better to settle these questions once for all.

I do not want to take more time because there are other members to speak and I am also feeling tired. I have expressed my feeling and I hold the Ministers responsible for all this bungling. They aimed to enhance the prestige of the State; but, on the other hand they have brought down the prestige of the State. They have made the State a central figure and their agitation in the whole press. For all the harm they have done—I do not hold them responsible for this single act—from the beginning, from the time when the Constituent Assembly was dissolved and then became the Legislative Assembly, I hold them responsible and as some of the members pointed out in the beginning I must only ask them in the name of the country to divest themselves of the ministerial power. I have a right in the name of the country to ask them that they should resign because they have not done their duty and leave the Administration to better hands.

With these words, I commend the resolution for the acceptance of this House.

Mr. SPEAKER.—Resolution moved:

"This House is of opinion that the statement made by the Hon'ble Chief Minister to-day is not satisfactory and the action taken by the Government is not in accordance with the directive issued by the House."

*ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು (ಬೆಂಗಳೂರು ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಜನಾಬ್ ಇಮಾಂರವರು ಈ ನಿರ್ಣಯವನ್ನು ಮಂಡಿಸುತ್ತಾ ಕೆಲವು ವಿಷಯಗಳನ್ನು ಆಗಲೇ ವಿಸ್ತಾರವಾಗಿ ಹೇಳಿದ್ದಾರೆ. ಕಳೆದ ನಾಲ್ಕು ವರ್ಷಗಳಿಂದ ನಮ್ಮ ಪ್ರಜಾಸರ್ಕಾರ ಮಾಡಿರುವ ಅನೇಕ ಲೋಪದೋಷಗಳನ್ನು ವಿಸ್ತರಿಸಿ, ಇನ್ನು ಎಲ್ಲ ಮಂತ್ರಿಗಳೂ ತಮ್ಮ ಜಾಗವನ್ನು ಖಾಲಿಮಾಡಬೇಕೆಂದು ಒತ್ತಾಯಪೂರ್ವಕವಾಗಿ ತಿಳಿಸಿದ್ದಾರೆ. ಈದಿನ ಬೆಳಗ್ಗೆ ನಮ್ಮ ಮಾನ್ಯ ಮಂತ್ರಿಗಳು ಡೆಲ್ಲಿಯಿಂದ ಬಂದಮೇಲೆ ಅವರಿಂದ ಯಾವ ರೀತಿಯಾದ ಉತ್ತರವನ್ನು ಪಡೆಯಬೇಕೆಂದು ನಾವು ಆಶಿಸುತ್ತಿದ್ದೆವೋ ಅಂಥ ಉತ್ತರವನ್ನು ಪಡೆಯದೆ ನಮಗುಂಟಾಗಿರುವ ಅತೃಪ್ತಿಯನ್ನೂ, ಅಸಮಾಧಾನವನ್ನೂ ವ್ಯಕ್ತಪಡಿಸುವುದಕ್ಕಾಗಿ ಈ ನಿರ್ಣಯವನ್ನು ಸಮರ್ಥಿಸಲು ನಿಂತಿದ್ದೇನೆ.

ನನ್ನ ದುರಾದೃಷ್ಟವೋ ಅದೃಷ್ಟವೋ, ಯಾವುದೋ ಒಂದು ರೀತಿಯಲ್ಲಿ ಕಳೆದ ಶನಿವಾರ ರಾಷ್ಟ್ರಾಧ್ಯಕ್ಷರ ಸೂಚನೆಯ ಮೇಲೆ ಒಂದು ನಿರ್ಣಯವನ್ನು ತಂದಾಗ ಅದರ ಪದಗಳ ಜೋಡಣೆ ಯಾವ ರೀತಿಯಿತ್ತೋ ಅದನ್ನು ನೋಡಿದರೆ ನಮ್ಮ ಮಾನ್ಯ ನ್ಯಾಯಾಂಗ ಸಚಿವರು, ಮುಖ್ಯ ಮಂತ್ರಿಗಳು ಮಾಡಿದ ಭಾಷಣಗಳಿಂದ ಏನೋ ಆಗಿರಬಹುದೆಂದು ಯೋಚನೆಮಾಡಿ ಅದಕ್ಕೆ ಯಾವ ರೀತಿಯ ಕುಮ್ಮಕ್ಕು ಕೊಟ್ಟೆವೆಂದರೆ, ಬಹುಶಃ ನಾವು ರಾಷ್ಟ್ರಾಧ್ಯಕ್ಷರ ಆಜ್ಞೆಯನ್ನು ಮಂತ್ರಿಗಳು ಸಂಪೂರ್ಣವಾಗಿ ವಿರೋಧಿಸುವುದಿಲ್ಲವೆಂದೂ, ಅವರು ಅವಿಧೇಯತೆಯಿಂದ ನಡೆದುಕೊಳ್ಳುವುದಿಲ್ಲವೆಂದೂ ತಿಳಿದು ತಮ್ಮ ಗೌರವವನ್ನು ತಾವು ಕಾಪಾಡಿಕೊಂಡು ಬರುವುದಕ್ಕೆ ಡೆಲ್ಲಿಗೆ ಹೋಗಿ 371ನೆಯ ಕಲಮಿನ ವಿಷಯವನ್ನು ಒತ್ತಾಯ ಪೂರ್ವಕವಾಗಿ ಕೇಂದ್ರ ಸರ್ಕಾರದವರಿಗೆ ತಿಳಿಸಿ ಅದನ್ನು ವಾಪಸು ಪಡೆಯಲೆಂಬ ಭರವಸೆಯಿಂದ ನಾವು ಆ ನಿರ್ಣಯಕ್ಕೆ ಸಮ್ಮತಿಯನ್ನು ಕೊಟ್ಟೆವು.

ಅದಾದ ಮೇಲೆ ಊಹಾಪೋಹಗಳು ಬೇಕಾದಷ್ಟು ನಡೆದಿವೆ, ಮಾನ್ಯಮುಖ್ಯಮಂತ್ರಿಗಳು ವಾಪಸುಬಂದರು. ಬಹುಶಃ ಡೆಲ್ಲಿಯಿಂದ ಬಂದ ಸೂಚನೆಗಳನ್ನು ಹಿಂದೆ ಒಂದು ನಿರ್ಣಯವನ್ನು ಮಾಡಿ ನಿರಾಕರಿಸಿದ್ದರಿಂದ ಆ ಸೂಚನೆಗಳನ್ನು ಒಪ್ಪುವುದಿಲ್ಲವೆಂದು ತಿಳಿದು 375 ನೆಯ ವಿಧಿಗೆ ನಾವು ತಲೆತಗ್ಗಿಸಬೇಕಾದ ಪ್ರಸಂಗ ಬಂದಿದೆಯೆಂದು ತಿಳಿದುಕೊಂಡೆವು. ಆದರೆ ಆ ದಿನ ಏನು ಹೇಳಿದ್ದರೆಂದರೆ ಪ್ರಜಾಪ್ರಭುತ್ವದಲ್ಲಿ ಪ್ರಧಾನ ಸಚಿವರು ವಿನಾ ಮಿಕ್ಕಸಚಿವರು ಅಥವಾ ಇತರ ಸಂಸ್ಥಾನಗಳವರು ಮಾತನಾಡಬೇಕಾದರೆ ಈ ರೀತಿ ಒಂದು ನಿರ್ಣಯರೂಪದಲ್ಲಿ ಸಭೆಯ ಮುಂದೆ ತಂದು ಮಾತನಾಡಬೇಕಾಗುತ್ತದೆ. ಅದರಂತೆ ಚರ್ಚೆಮಾಡಲಾಯಿತು ಎಂದು. ಅಂತೂ ಯಾವ ಕ್ರಿಮಿನಲ್ ಕೇಸಿನ ವಿಷಯವನ್ನು ನಾವು ಚರ್ಚೆಮಾಡುತ್ತಿದ್ದೆವೋ ಆ ಕೇಸಿನ ವಿಷಯದಲ್ಲಿ ಅದನ್ನು ಇತ್ಯರ್ಥಪಡಿಸುವುದಕ್ಕೆ ಹೊರಗಿನ ಪ್ರಾಂತ್ಯದಿಂದ ಒಬ್ಬ ಸೆಷನ್ಸ್ ಜಡ್ಜರನ್ನು ಕರೆಯಿಸಿ ಅವರ ಮೂಲಕ ಕೇಸನ್ನು ನಡೆಯಿಸುವುದಕ್ಕೆ ಒಪ್ಪಿಕೊಂಡರೆ ಬಾಸವಾಗುತ್ತದೆ. ಇಂಡಿಯಾ ಸರ್ಕಾರದವರಿಂದ ನಮಗೆ ಬಂದಿರುವ ಕಾಗದದಲ್ಲಿ ಅವರು ವಿಶದಪಡಿಸಿರುವ ರೀತ್ಯಾ ನಮಗೇನು ತೋಚುತ್ತಿದ್ದಿತೆಂದರೆ ಹಿಂದೆ ಅವರು ನಮ್ಮ ಮೈಸೂರು ಸರ್ಕಾರಕ್ಕೆ ಎರಡು ವಿಧವಾದ ಸೂಚನೆಗಳನ್ನು ಕೊಟ್ಟಿದ್ದರು—ಮೊದಲನೆಯದು ಕ್ರಿಮಿನಲ್ ಪ್ರೊಸೀಜರ್ ಕೋಡಿನ 527 ನೆಯ ಸೆಕ್ಷನ್ ಪ್ರಕಾರ ನೆರೆಹೊರೆಯ ಪ್ರಾಂತ್ಯಗಳೊಡನೆ ವ್ಯವಹರಿಸಿ ಅವರ ಸಮ್ಮತಿಯಿಂದ ವರ್ಗಾಯಿಸುವುದೆಂತಲೂ, ಅದು ತಪ್ಪಿದಲ್ಲಿ ಎರಡನೆಯದು ನೆರೆ ಹೊರೆಯಪ್ರಾಂತ್ಯದ ನ್ಯಾಯಾಧೀಶರೊಬ್ಬರನ್ನು ಕರೆಯಿಸಿಕೊಳ್ಳಿ ಎಂದು. ತಮ್ಮ ಸೂಚನೆಗೆ ಇದುವರೆಗೂ ಜವಾಬು ಬಾರದಿರುವುದರಿಂದ, ಅವರ ಸೂಚನೆಗಳನ್ನು ಒಪ್ಪದಿರುವುದರಿಂದ ನಾವು ಈ ದಿನ ಈ ಆಜ್ಞೆ

ಯನ್ನು ಹೊರಡಿಸಿದ್ದೇವೆ. ಎಂದು ರಾಷ್ಟ್ರಾಧ್ಯಕ್ಷರು ಹೇಳಿದ್ದಾರೆ. ಅದು ಈ ರೀತಿಯಾಗಿದೆ.

ಅಧ್ಯಕ್ಷರು.—ಅದು ಎಲ್ಲರಿಗೂ ಗೊತ್ತಿದೆ ಓದಬೇಕಾಗಿಲ್ಲ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು,—ಆದ್ದರಿಂದ ನಾವೇನು ತಿಳಿದುಕೊಂಡಿದ್ದೆವು ಎಂದರೆ.

ಅಧ್ಯಕ್ಷರು.—ಇದನ್ನು ಓದಿಯಾದಮೇಲೆಯೂ ಹಾಗೇ ತಿಳಿದು ಕೊಂಡಿದ್ದೀರಾ?

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಓದಿಯಾದ ಮೇಲೆ ಸರ್ಕಾರದವರು ಕೊಟ್ಟ ವಿವರಣೆಯಿಂದ ಈ ಎರಡು ಸೂಚನೆಗಳಿಗೂ ಸರ್ಕಾರದವರ ಒಪ್ಪುವುದಿಲ್ಲ ಅಂದರೆ ಹೊರಗಡೆಯಿಂದ ಸೆಷನ್ ಜಡ್ಜರನ್ನು ತರುವುದಕ್ಕಾಗಲೀ ಕೇಸನ್ನು ಬೇರೆ ಪ್ರಾಂತ್ಯಕ್ಕೆ ಕಳುಹಿಸುವುದಾಗಲೀ ಆಗುವುದಿಲ್ಲ, ಆ ವಿಷಯದಲ್ಲಿ ಅವರ ಖಡಾ ಖಂಡಿತವಾಗಿದ್ದಾರೆಂದು ಗೊತ್ತಾಗುತ್ತದೆ, ಇನ್ನು ರಾಷ್ಟ್ರಾಧ್ಯಕ್ಷರು ಕೊಟ್ಟ ಸೂಚನೆಗೆ ತಲೆಬಾಗಿಸಿ ನಡೆದುಕೊಳ್ಳುವ ಮಾರ್ಗ ಒಂದೇ ಇತ್ತು. ಆದರೆ ನಾವು ಕೊಟ್ಟ ಸೂಚನೆ ಏನಾಗಿತ್ತೆಂದರೆ, ತಾವು ತಮ್ಮ ಆತ್ಮಗೌರವವನ್ನು ಉಳಿಸಿಕೊಳ್ಳುವುದಕ್ಕೆ ಅಥವಾ ಮೈಸೂರು ದೇಶದ ಪ್ರಜೆಗಳಿಗಾಗಿ ಡೆಲ್ಲಿಗೆ ಹೋಗಿ ಹೊಡೆದಾಡಿ ಈ 371ನೆಯ ವಿಧಿಯ ಪ್ರಕಾರ ಬಂದಿರುವ ಸೂಚನೆಯನ್ನು ವಾಪಸು ಪಡೆಯುವಂತೆ ಮಾಡಬೇಕು ಎಂದು.

ಅಧ್ಯಕ್ಷರು.—ಹಾಗೆಂದಿದೆಯೇ, ಅಲ್ಲಿ ?

ಶ್ರೀ ಕೆ. ಅರ್ ಶ್ರೀಕಂಠೇಶ್ವರ್ ರವರು.—I "shall read it if you want. It states......"...to take all necessary steps to vindicate the honour and prestige of Mysore" ಅಂದರೇನು ಡೆಲ್ಲಿಗೆಹೋಗಿ ಮೈಸೂರು ಮಂತ್ರಿಮಂಡಳದ ಮತ್ತು ಮೈಸೂರಿನ ಗೌರವವನ್ನು ಕಾಪಾಡಿಕೊಂಡು ಬರಬೇಕೆಂದು ಹೇಳಿದ್ದೇವೆ. ಆದರೆ ಈಗಿನ ತಕ್ಕ ಪ್ರಶ್ನೆಯೇನೆಂದರೆ ರಾಜ್ಯಾಂಗದ 371ನೆಯ ವಿಧಿಯ ಪ್ರಕಾರ ರಾಷ್ಟ್ರಾಧ್ಯಕ್ಷರು ಮೈಸೂರಿಗೆ ಇತ್ತಿರತಕ್ಕ ಆಜ್ಞೆ ಸರಿಯೇ ಅಥವಾ ಅಲ್ಲವೇ ಎಂಬ ವಿಷಯವೇನೂ ಅಲ್ಲ 'ಬಿ' ಸ್ಟೇಟ್‌ಗಳಿಗೆ ಈ ಆಜ್ಞೆ ಕೊಟ್ಟಿದ್ದು ಸರಿಯೇ ಎಂದು ಈಗ ತಿಳಿಸಿದ್ದಾರೆ. ಅಂದು ಈ 371ನೆಯ ವಿಧಿಯು ನಮ್ಮ ಸಂಸ್ಥಾನಕ್ಕೆ ಹಾಕುವುದು ನ್ಯಾಯವಲ್ಲ ನಾವು pioneer state ಆಗಿದ್ದೇವೆ. ಅಂಥಾದ್ದರಲ್ಲಿ ಈ ಆಜ್ಞೆಯನ್ನು ಅವರು ನಮ್ಮ ವಿಷಯದಲ್ಲಿ ಮಾಡಿದ್ದು ಆಟಂ ಬಾಂಬು ಬಿದ್ದಂತಾಗಿದೆಯೆಂದು ದೊಡ್ಡದಾಗಿ ಭಾಷಣ ಮಾಡಿದರು. 371ನೆಯ ವಿಧಿಯ ಪ್ರಕಾರ ಕೊಟ್ಟಿರುವುದನ್ನು ವಾಪಸ್ಸು ತೆಗೆದುಕೊಳ್ಳುವುದು ಕಷ್ಟವಾಗುತ್ತದೆ. ನೀವು ಡೆಲ್ಲಿಗೆ ಹೋದರೂ ಬೆನ್ನನ್ನು ತಟ್ಟಿ ನಿಮ್ಮನ್ನು ಕಳುಹಿಸಬಹುದು. ಇದರಿಂದ ಮೈಸೂರಿನ ಘನತೆ ಗೌರವ ಕಡಿಮೆ ಯಾಗುತ್ತದೆಂದು ಅದೇ ನಾವು ಹೇಳಿದ್ದೆವು. ನಮ್ಮ ಘನತೆ ಗೌರವಗಳನ್ನು ಯಾವರೀತಿ ಕಾಪಾಡಿಕೊಳ್ಳಬೇಕೆಂಬ ಪ್ರಶ್ನೆ ಈಗ ನಮ್ಮ ಮುಂದೆ ಬಂದಿದೆ. ಈಗಲೂ ನೀವು ಮಾಡಬೇಕಾದ್ದೇನೆಂದರೆ, ಎಲ್ಲರೂ ಒಟ್ಟಿಗೆ ಸೇರಿ ರಾಜೀನಾಮೆ ಕೊಟ್ಟರೆ ಒಳ್ಳೆಯದೆಂದು ಕಾಣುತ್ತದೆ. ಅವತ್ತು ನಾವು ಆ ಕ್ರಿಮಿನಲ್ ಕೇಸಿನ ವಿಚಾರವನ್ನೇ ಚರ್ಚೆಮಾಡಲಿಲ್ಲ, ಭಾಷಣವಾದ ಮೇಲೆ ಕ್ರಿಮಿನಲ್ ಕೇಸನ್ನು ಪ್ರಸ್ತಾಪ ಮಾಡಿದರು. ಆಗ ಏನು ಹೇಳಿದರು ಎಂದರೆ, 'ಕೇಸು' ನಡೆಯುವಾಗ ಅಕ್ಕ ಪಕ್ಕದ ಪ್ರಾಂತ್ಯಕ್ಕೆ ವರ್ಗಾಯಿಸಬೇಕೆಂದಾಗಲೀ, ಬೇರೆ ನ್ಯಾಯಾಧೀಶರನ್ನು ಕರೆಯಿಸಬೇಕೆಂದಾಗಲೀ ಯಾವ ಚಳುವಳಿಯೂ ನಡೆಯಲಿಲ್ಲವೆಂದು ಹೇಳಿದರು. ಆದರೆ ಪ್ರತಿಯೊಬ್ಬ ಪ್ರಜೆಯೂ ಗಮನಿಸಬೇಕಾದ್ದೇನೆಂದರೆ, ಯಾವ ದಿನ ಈ ಕೇಸು ನಡೆಯುವುದಕ್ಕೆ ಪ್ರಾರಂಭವಾಯಿತೋ, ಅವತ್ತಿನಿಂದ ಇಡೀ ಬೆಂಗಳೂರು ಜನತೆಯಲ್ಲಿ, ಮೈಸೂರು ದೇಶದ ಜನತೆಯಲ್ಲಿ ಯಾರೂ ಇದರ ಮೇಲೆ ಮಾತನಾಡುವುದಕ್ಕೆ ಒಂದು ಅವಕಾಶ ವಿರಲಿಲ್ಲ. ಆದ್ದರಿಂದ ಜನತೆ ಯಾವ ವಿಧವಾದ ಚಳುವಳಿ ಹೂಡಬೇಕಾಗಿತ್ತೋ ಗೊತ್ತಿಲ್ಲ, ಹೋಗಲಿ ತಾವೆ ಯಾವುದೇ ಒಬ್ಬ ಪ್ರಜೆಗೆ ನ್ಯಾಯ ದೊರಕದೆ ಇದ್ದ ಭಾಗದಲ್ಲಿ.........................

ಅಧ್ಯಕ್ಷರು ಅದಕ್ಕೂ ಇದಕ್ಕೂ ಏನು ಸಂಬಂಧ ?

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ತಾವು ನನಗೆ ಕೊಂಚ ಅವಕಾಶ ಕೊಡಬೇಕು. ಅವರು ಚಳವಳಿ ವಿಚಾರ ಹೇಳಿದರು. ಅಂಥ ಚಳವಳಿಯೇನೂ ಬೇಕಾಗಿರಲಿಲ್ಲ. ಚಳವಳಿ ಏನೇ ಆಗಲಿ ಬಿಡಲಿ, ಕೇಸಿನಲ್ಲಿ ಅಪರಾಧಿಯಾದವನಿಗೆ ಸರ್ಕಾರದವರ ಮೇಲೆ; ನ್ಯಾಯಾಧೀಶರ ಮೇಲೆ ಅನುಮಾನ ಬಂದರೆ ಆಗ ಅಪರಾಧಿಗೆ ಬೇರೆ ಸರ್ಕಾರಕ್ಕೆ ಕೇಸನ್ನು ವರ್ಗಾಮಾಡಿ ಎಂದು ಕೇಳಿಕೊಳ್ಳುವುದಕ್ಕೆ ಹಕ್ಕಿದೆ. ಎಷ್ಟೇ ಕೆಟ್ಟವನಾದ ಅಪರಾಧಿಗೂ ಈ ಹಕ್ಕಿದೆ.

ರಾಷ್ಟ್ರಾಧ್ಯಕ್ಷರು ಏನು ಸಲಹೆ ಹೇಳಿದರೋ, ಏನು alternative ಕೊಟ್ಟಿದ್ದರೋ, ಅದು ಅನವಶ್ಯಕ, ಬೇಕಾಗಿರಲಿಲ್ಲವೆಂದು ಅವತ್ತು ಹೇಳಿದರು. ಅದರಲ್ಲೂ 'ಲಾ' ಮಂತ್ರಿಗಳು ನಾನು ದೇವರೊಬ್ಬರಿಂದ ಬಿಟ್ಟು ಬೇರೆ ಯಾವ 'ಡೈರೆಕ್ಟಿವ್' ಕೇಳುವುದಿಲ್ಲ ಎಂದು ಹೇಳಿದರು. ನನ್ನ ಮಟ್ಟಿಗೆ ಹೇಳುವುದಾದರೆ ಮೈಸೂರು ಸರ್ಕಾರದವರೇ ಆಗಲಿ ಯಾರೇ ಆಗಲಿ ರಾಷ್ಟ್ರಾಧ್ಯಕ್ಷರ ಸೂಚನೆಗೆ ಅವಿಧೇಯತೆಯಿಂದ ನಡೆಯಬೇಕೆಂದು ಹೇಳಲಿಲ್ಲ. ಆ ವಿಷಯವನ್ನು ಈ ದಿವಸ ಮಾನ್ಯ ಮುಖ್ಯಮಂತ್ರಿಗಳೇ ಹೇಳಿದ್ದಾರೆ ನಮ್ಮ ಘನತೆ ಗೌರವವನ್ನು ಕಾಪಾಡಿಕೊಳ್ಳಬೇಕು, ಎಂದು ನಮ್ಮಿಂದ 371ನೇ ವಿಧಿ ಬಂತೆಂದು ಹೇಳಿದರು. ಹಿಂದೆ ರಾಷ್ಟ್ರಾಧ್ಯಕ್ಷರು ಮಂತ್ರಿಗಳಿಗೆ ಹೇಳಿದ್ದು ಯಾವುದು ಅಪ್ರಿಯವಾಗಿತ್ತೋ ಅದೇ ಈ ದಿವಸ ಪ್ರಿಯವಾಗಿದೆ. ಬೇರೊಂದು ಪ್ರಾಂತ್ಯದಿಂದ ನ್ಯಾಯಾಧೀಶರನ್ನು ಕರೆಸುವುದರಿಂದ ಅನಾವಶ್ಯಕವಾಗಿ ನಾನಾ ತೊಂದರೆಗಳಿಗೆ ಅವಕಾಶವಾಗುತ್ತದೆ. ಒಬ್ಬ ಜಡ್ಜರು ಬೇರೊಂದು ಪ್ರಾಂತ್ಯದಿಂದ ಇಲ್ಲಿಗೆ ಬಂದರೂ ಅವರು ಯಾವ ಸರ್ಕಾರಕ್ಕೆ ಅಧೀನರಾಗಿರುತ್ತಾರೆ ?

ಅಧ್ಯಕ್ಷರು.—ಅದನ್ನೆಲ್ಲಾ ಇಲ್ಲಿ ಹೇಳುವುದು ಅನಾವಶ್ಯಕ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಆದ್ದರಿಂದ ಈಗ ನಾವು ನಮ್ಮ ರಾಷ್ಟ್ರಾಧ್ಯಕ್ಷರ ಆಜ್ಞೆಗೆ ತಲೆಬಾಗಬೇಕೇ ಅಥವಾ ನಮ್ಮ ಮಂತ್ರಿಗಳು ಕೊಡುವ ಸೂಚನೆಯ ನಿಘಂಟಿಗೇ ನಾವು ಒಪ್ಪಿಕೊಂಡು ಸುಮ್ಮನೆ ಕುಳಿತುಕೊಳ್ಳಬೇಕೇ ಎಂದು ಕೇಳುತ್ತೇನೆ. ನಮ್ಮ ಮಟ್ಟಿಗೇ ಹೇಳುವುದಾದರೆ, ಈ 371ನೆಯ ವಿಧಿಯಿರುವುದು ಬಹಳ ಶ್ರೇಷ್ಠ. ನಾನು ಸಮಾಜವಾದಿಯಾಗಿದ್ದರೂ, ಎಲ್ಲಾ ಭಾಗಗಳಿಗೂ ಪೂರ್ಣ ಸ್ವಾತಂತ್ರ್ಯವಿರಬೇಕೆಂದಿದ್ದರೂ, ಹಳ್ಳಿ ಹಳ್ಳಿಯಲ್ಲೂ ಪಂಚಾಯಿತಿ ರಾಜ್ಯಭಾರವನ್ನೇರ್ಪಡಿಸಬೇಕೆಂದಿದ್ದರೂ, ಈ ರೀತಿ ಪುನರ್ವಿಮಾರ್ಶೆ ಮಾಡುವ ಅಧಿಕಾರ ಮೇಲಿರುವುದು ಸೂಕ್ತ. ಈಗಲೂ ರಾಜ್ಯಾಂಗದಲ್ಲಿ ಈ 371ನೆಯ ವಿಧಿಯನ್ನೇಕೆ ಸೇರಿಸಿ ಪುನರ್ವಿಮಾರ್ಶೆಯ ಅಧಿಕಾರ ಇಟ್ಟುಕೊಂಡಿದ್ದಾರೆಂಬುದನ್ನು ಹೇಳುತ್ತೇನೆ. ಎಷ್ಟೋ ಪ್ರಾಂತ್ಯಗಳವರು ಪೂರ್ಣ 'ಆಟಾನಮಿ' ಇರಬೇಕೆಂದು ಹೇಳಿದರು; ಆದರೆ, ಅಂಥ ವಿಚಿತ್ರವಾದ ಪರಿಸ್ಥಿತಿಯೇನಾದರೂ ಬಂದು ಇಂಡಿಯಾ ದೇಶದಲ್ಲಿ

(ಶ್ರೀ ಕೆ. ಆರ್. ಶ್ರೀಕಂಠೇಶ್ವರ್ ಅವರು.)

ಯಾವನಾದರೊಬ್ಬ ಪ್ರಜೆಗೆ ಅನ್ಯಾಯವಾಗುವಂಥ ಸಂದರ್ಭ ಬಂದರೆ ಯಾವ ರೀತಿ ಆತನನ್ನು ಕಾಪಾಡಬೇಕು ಎಂಬುದನ್ನು ಯೋಚನೆಮಾಡಿ ಈ 371ನೆಯ ವಿಧಿ ಇದ್ದೇಇರಬೇಕೆಂದು ಮಾಡಿದ್ದಾರೆ. ನಮ್ಮಲ್ಲಿ ಮಾತ್ರವಲ್ಲ, part A, ಪ್ರಾಂತ್ಯವಾಗಿರಲಿ B ಪ್ರಾಂತವಾಗಿರಲಿ ಅಥವಾ C ಯಾಗಿರಲೀ, ಎಲ್ಲಾ ಕಡೆಯಲ್ಲೂ ಇಂಥ ಒಂದು ಪರಿಸ್ಥಿತಿಯನ್ನು ಪರಿಹರಿಸುವುದಕ್ಕೆ ಈ ಸೆಕ್ಷನ್ನು ಇರುವುದೇ ಒಳ್ಳೆಯದೆಂದು ತೋರುತ್ತದೆ.

ಆದ್ದರಿಂದ, ಈಗ ನಮ್ಮ ಮುಂದಿರುವ ಪ್ರಶ್ನೆಗೆ ನಮ್ಮ ಸರ್ಕಾರದವರಿಗೇನು ಹೇಳಬಹುದೆಂದರೆ, ಅವರು ಇನ್ನಾವ ಯೋಚನೆಗಳಿಗೂ ಅವಕಾಶ ಕೊಡದೆ ರಾಷ್ಟ್ರಾಧ್ಯಕ್ಷರ ಆಜ್ಞೆಗೆ ತಲೆ ಬಗ್ಗಿಸಬೇಕು. ಅದಿಲ್ಲದೆ ನಮ್ಮ ಮಾನ ಹೆಚ್ಚು, ಗೌರವ ಹೆಚ್ಚು ಎಂದು ಹೊರಟು ಇಡೀ ದೇಶದ ಆಗು ಹೋಗುಗಳನ್ನು ಗಮನಿಸದೆ ರಾಷ್ಟ್ರಾಧ್ಯಕ್ಷರ ಆಜ್ಞೆಯನ್ನು ನೋಡದೆ ಇದ್ದರೆ, ಅವರು ತಮ್ಮ ರಾಜಿನಾಮೆಯನ್ನು ಕೊಟ್ಟೇ ರಾಷ್ಟ್ರಾಧ್ಯಕ್ಷರು ಏನು ಹೇಳಿದ್ದಾರೋ ಅದರಂತೆ ನಡೆಸುವುದು ಸೂಕ್ತ. ಬೇರೆ ಪ್ರಾಂತ್ಯಕ್ಕೆ ಈ 'ಕೇಸು' ವರ್ಗಾಯಿಸಲ್ಪಡಲಿ.

ಸ್ವಾಮಿ, ನಾನು ಏಕೆ ಹೇಳುತ್ತೇನೆಂದರೆ ನಮ್ಮ ಜ್ಯುಡಿಷಿಯರಿ ವಿಚಾರದಲ್ಲಿ ಅನೇಕ ಅಪವಾದಗಳನ್ನು ಹೇಳುತ್ತಿದ್ದಾರೆ. ನನಗೆ ನಮ್ಮ ಮಾನ್ಯ ಮಂತ್ರಿಗಳಲ್ಲಿ ಗೌರವವಿದೆ. ಆದರೆ ಜನಕ್ಕೆ ಈಗಿರತಕ್ಕ ಸರ್ಕಾರದಲ್ಲಿ ಸಂದೇಹ, ಅವಿಶ್ವಾಸ ಮತ್ತು ಅಪನಂಬಿಕೆ ಇದೆ. ಆದುದರಿಂದ ರಾಷ್ಟ್ರಾಧ್ಯಕ್ಷರ ಆಜ್ಞೆಗೆ ತಲೆಬಾಗಬೇಕೇ ಹೊರತು ಬೇರೆ ವಿಧವಾದ ಯೋಚನೆಯನ್ನು ಮಾಡಬಾರದು. ಇಷ್ಟು ಹೇಳಿ ನಮ್ಮ ಸ್ನೇಹಿತರಾದ ಜನಾಬ್ ಇಮಾಂರವರು ತಂದಿರತಕ್ಕ ಈ ನಿರ್ಣಯವನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಸ್ವಾಮಿ, ಪರಿಸ್ಥಿತಿ ಆಗ್ಗೂ ಈಗ್ಗೂ ಬಿಗಡಾಯಿಸಿದೆಯೋ ಇಲ್ಲವೆ ಎಂಬುದನ್ನು ನಾವು ನೋಡಬೇಕು. ನಮ್ಮ ದೇಶದ ಅಂತಸ್ತು, ಗೌರವ ಪ್ರತಿಷ್ಠೆಗಳು ಜಾಸ್ತಿಯಾಗಬೇಕೆಂದ ಅ ದಿನ ಹೇಳುತ್ತಿದ್ದೆವು. ಈಗ ಹಾಗಾಗಿದೆಯೆ; ಆ ಹೊತ್ತು ಯಾವ ಧೋರಣೆಯಿಂದ ಮಾತನಾಡಿದೆವು ಎಂಬುದನ್ನು ಗಮನಿಸಿದರೆ ಮುಖ್ಯವಾಗಿ ಈ ಒಂದು ಮೊಕದ್ದಮೆಯ ನ್ಯಾಯಾನ್ಯಾಯಗಳ ವಿಷಯದಲ್ಲಿ ನಾವು ಮಾತನಾಡಲಿಲ್ಲ. ಒಂದು ಮುಖ್ಯವಾದ ತತ್ವದ ವಿಷಯದಲ್ಲಿ ಮಾತ್ರ ಮಾತನಾಡಿದೆವು. ಭಾರತ ರಾಜ್ಯಾಂಗದ 371ನೆಯ ಆರ್ಟಿಕಲನ್ನು ಪ್ರಥಮತಃ ನಮ್ಮ ಸಂಸ್ಥಾನಕ್ಕೆ ಅನ್ವಯಿಸಿದುದು ಸರಿಯೆ ಎಂಬುದು ಆ ದಿನದ ಪ್ರಶ್ನೆ. ನಮ್ಮ ದೇಶದ ಮೇಲೆ ನಮ್ಮ ದೇಶದ ಜನರ ಮೇಲೆ ಮೊದಲೇ ಇದನ್ನು ಹಾಕಿದರಲ್ಲ ಎಂಬ ಉದ್ವೇಗದಿಂದ ಕೂಡಿತ್ತು ನಮ್ಮ ಆ ದಿನದ ಮಾತುಗಳು. ನಮ್ಮ ದೇಶಕ್ಕೂ ನಮ್ಮ ಈ ಸಭೆಗೂ ಇರುವ ಗೌರವಕ್ಕೆ ಚ್ಯುತಿ ಬರಬಾರದೆಂಬ ಭಾವನೆಯಿಂದ ಕೂಡಿದ್ದ ಆ ದಿನದ ಚರ್ಚೆ. ಈಗ ಏನಾಗಿದೆ ? ಮುಖ್ಯವಾಗಿ ನಮ್ಮ ಸರ್ಕಾರದವರು ಮಾಡಬಾರದ ತಪ್ಪು ಮಾಡಿದರು. ಇಂಡಿಯಾ ಸರ್ಕಾರದವರು ಇವರಿಗೆ ಒಂದು ಸೂಚನೆಯನ್ನು ಕೊಟ್ಟು ಈ ಮೊಕದ್ದಮೆಯನ್ನು ಬೇರೆ ಸಂಸ್ಥಾನಕ್ಕೆ ವರ್ಗಮಾಡಿ ಅಥವಾ ಬೇರೆ ಕಡೆಯಿಂದ ಒಬ್ಬ ನ್ಯಾಯಾಧೀಶರನ್ನು ಕರೆಯಿಸಿ ಇದನ್ನು ಅವರಿಗೆ ಒಪ್ಪಿಸಿ ಎಂದು ತಿಳಿಸಿದ್ದರು. ಅದಕ್ಕೆ ಉತ್ತರವನ್ನೇ ಕೊಡಲಿಲ್ಲ. ಇದೊಂದು ತಪ್ಪು ಮಾಡಿದರು. ಇವರು ತಾವು ಮಾಡಿದ ತಪ್ಪಿನ ಪರಿಣಾಮವನ್ನು ತಾವೇ ಅನುಭವಿಸಲಿಲ್ಲ. ಕೋತಿ ತಾನೂ ಕೆಡುವುದಲ್ಲದೆ ವನವನ್ನೂ ಕೆಡಿಸಿತು ಎಂಬ ಗಾದೆಯಂತೆ ಮಾಡಿದರು.

ಅಧ್ಯಕ್ಷರು.—ಇದನ್ನು ತಾವು ಆ ದಿವಸವೇ ಹೇಳಬಹುದಾಗಿತ್ತಲ್ಲ ;

ಶ್ರೀ ಬಿ. ಹುಚ್ಚೇಗೌಡರು.—ತಾವು ಮಾಡಿದುದೇ ಸರಿ ಎಂದು ತಮ್ಮ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳಲು ಸಭೆಯ ಬೆಂಬಲವನ್ನೂ ತೆಗೆದುಕೊಂಡರು. ಆ ದಿನ ನಾವೂ ಕೂಡ ಮೋಸ ಹೋದೆವು. ಯಾವ ಉದ್ದೇಶದಿಂದ ಆ ನಿರ್ಣಯವನ್ನು ತಂದಿದ್ದರೆಂಬುದನ್ನು ತಿಳಿಯಲಿಲ್ಲ. ಮೊದಲಿನಿಂದಲೂ ಇವರ ವಿಚಾರದಲ್ಲಿ ನಮಗೆ ಅನುಮಾನವೇನೋ ಇತ್ತು. (ನಗು) ಆದರೆ, ಈ ಒಂದು ಸಲ ನಾವು ಮೋಸ ಹೋದೆವು. ಈ ಸಭೆಯ ಗೌರವ, ದೇಶದ ಗೌರವ ಪ್ರತಿಷ್ಠೆ ಎಂದು ಏನು ಹೇಳಿದ್ದರೋ ಅವನ್ನು ಅವರ ಗೌರವ, ಪಾರ್ಟಿಯ ಗೌರವವೆಂದು ತಿಳಿದುಕೊಳ್ಳಬಾರದು. ಅವರ ಮತ್ತು ಅವರ ಪಾರ್ಟಿಯ ಗೌರವವನ್ನು ಉಳಿಸಿಕೊಳ್ಳುವುದಕ್ಕಾಗಿ ದೇಶದ ಗೌರವ ಸಭೆಯ ಗೌರವ ಎಂದು ಹೇಳಿ, ಹೀಗೆಲ್ಲಾ ಪ್ರತಿಷ್ಠೆ ಮಾಡಿ ಈ ಪರಿಸ್ಥಿತಿಯನ್ನು ತಂದಿದ್ದಾರೆ. ನಾವು ಬೇರೆ ರೀತಿ ಅಭಿಪ್ರಾಯದಿಂದ ಬೆಂಬಲ ಕೊಟ್ಟೆವು.

ಅಧ್ಯಕ್ಷರು.—ಇಂತಿಂತಹ ಸೂಚನೆಗಳನ್ನು ಈ ಸರ್ಕಾರಕ್ಕೆ ಕೊಟ್ಟಿದ್ದರೆಂಬುದನ್ನೆಲ್ಲಾ ಆ ಹೊತ್ತು ಹೇಳಿದರಲ್ಲವೇ ?

ಶ್ರೀ ಬಿ. ಹುಚ್ಚೇಗೌಡರು.—ಅವರ ಪಾರ್ಟಿಯ ವಿಷಯವನ್ನು ದೇಶದ ಮೇಲೆ ಹಾಕಿ ಅವರ ನಿರ್ಣಯಕ್ಕೆ ಆ ದಿನ ಸಭೆಯ ಒಪ್ಪಿಗೆಯನ್ನು ಪಡೆದರು.

ಅಧ್ಯಕ್ಷರು.—ಈ ಹೊತ್ತು ತಾವು ಏನು ಹೇಳುತ್ತಿದ್ದೀರೋ ಅದರಂತೆ ಆ ಆಜ್ಞೆಯನ್ನೂ ಪಾಲನಬೇಕೆಂದು ಆ ಹೊತ್ತೇ ಹೇಳಬಹುದಾಗಿತ್ತಲ್ಲವೆ ?

ಶ್ರೀ ಬಿ. ಹುಚ್ಚೇಗೌಡರು.—ನಮಗೇನು ಗೊತ್ತು ಹೀಗಾಗುತ್ತದೆಂದು !

ಅಧ್ಯಕ್ಷರು.—ಅದನ್ನೆಲ್ಲಾ ಓದಿ ಹೇಳಿದರು.

ಶ್ರೀ ಬಿ. ಹುಚ್ಚೇಗೌಡರು.—ನಾವು ಮೋಸ ಹೋದೆವು.

ಶ್ರೀ ಎಂ. ಎಚ್. ಜೋಯಿಸರು.—ಆ ಹೊತ್ತಿನಂತೆ ಈ ಹೊತ್ತು ಮೋಸ ಹೋಗದೆ ಸರಿಯಾಗಿ ಯೋಚನೆ ಮಾಡಿ ಹೇಳಿ.

ಶ್ರೀ ಬಿ. ಹುಚ್ಚೇಗೌಡರು.—ಆ ಹೊತ್ತಿನ ದಿನ ಇಂಡಿಯಾ ಸರ್ಕಾರದಿಂದ ಬಂದ ಕಾಗದವನ್ನು ಸಭೆಯಲ್ಲಿ ಓದಿದರು. ಈಗಲೂ ಅಲ್ಲಿಂದ ಒಂದು ಕಾಗದ ಬಂದಿದೆ ಎಂದು ಪತ್ರಿಕೆಗಳಲ್ಲಿಯೂ ಪ್ರಕಟವಾಗಿದ್ದುದನ್ನು ನೋಡಿದ್ದೇವೆ. ಅದನ್ನು ಪಾರ್ಟಿಯ ಮುಂದೆ ಓದಿದ್ದಾರೆ. ನಮ್ಮ ಮುಖ್ಯ ಮಂತ್ರಿಗಳು ದೆಹಲಿಯಿಂದ ಬಂದ ಮೇಲೆ ಮೂರು ದಿವಸ ಯೋಚನೆಮಾಡುವುದಕ್ಕೆ ತೆಗೆದುಕೊಂಡು ಆ ಮೇಲೆ ಈ ವಿಷಯವನ್ನು ತಿಳಿಸಿದರು, ಏಕೆ ? ಈ ಮೂರು ದಿನಗಳಲ್ಲಿ ಎಷ್ಟೋ ಗಲಿಬಿಲಿಯಾಗಿದೆ, ಅವರು ಏನು ಮಾಡಿಕೊಂಡು ಬಂದಿದ್ದಾರೆಂಬುದು ದೇಶಕ್ಕೆಲ್ಲಾ ಗೊತ್ತಾಗಿದೆ. ಹೀಗಿದ್ದರೂ ಏನು ಕಾರಣದಿಂದ ಅವರು ಆ ಕಾಗದದಲ್ಲಿರುವ ವಿಚಾರವನ್ನು ಸಭೆಯ ಮುಂದೆ ಓದಿ ಹೇಳಲಿಲ್ಲ? confidential ಎಂದು ಏಕೆ ಹೇಳುತ್ತಾರೆ? ಇದರಿಂದ, ಈಚೆಗೆ ನೀವು ಆಡುವ ಆಟವನ್ನು ನೋಡಿ 371ನೆಯ ಆರ್ಟಿಕಲ್ ನಿಮ್ಮ ಮೇಲಿನಿಂದ ತೆಗೆಯಲೇಬಾರದೆಂಬ ನಿರ್ಧಾರಕ್ಕೆ ಬಂದಿದ್ದಾರೆಂದು ಆ ಕಾಗದದಲ್ಲಿ ತಿಳಿಸಿದ್ದಾರೆಂದು ಅರ್ಥವಾಗುತ್ತದೆ.

Sri. M. V. KRISHNAPPA.—Question.

ಶ್ರೀ ಬಿ. ಹುಚ್ಚೇಗೌಡರು.—ಇಲ್ಲಿಯ ವಿಧ್ಯಮಾನಗಳನ್ನು, ನೋಡಿ ಈ ಸರ್ಕಾರದ ಆಟ, ಈ ಪಾರ್ಟಿಯ ಆಟ ಇವನ್ನೆಲ್ಲಾ ನೋಡಿ ಅವರು ಹೀಗೆ ಮಾಡಿದ್ದಾರೆ. ಇದನ್ನು ತೆಗೆಯಬಾರದೆಂದು ಮಾಡಿದ್ದಾರೆ.

ಈ 371 ನೆಯ ಆರ್ಟಿಕಲ್ ವಜಾಮಾಡಿಸುತ್ತೇವೆಂದು ಹೇಳಿ ಡೆಲ್ಲಿಗೆ ಎಷ್ಟೋ ಸಲ ಯಾತ್ರೆಯಾಗಿದೆ. ಹಿಂದೆ ರಾಜ್ಯಾಂಗ ಸಭೆಯಲ್ಲಿ, ಆಗ ಇದು 306 B ಆರ್ಟಿಕಲ್ ಆಗಿತ್ತು ಕರಡು ರಾಜ್ಯಾಂಗದಲ್ಲಿ, ಇದರ ವಿಚಾರದಲ್ಲಿ ನಾವು ಪ್ರತಿಭಟಿಸಿದ್ದೆವು. ಆಗ ಇದು ಮೈಸೂರಿಗೆ ಅನ್ವಯಿಸುವುದಿಲ್ಲದೆಂಬ ಭರವಸೆಯನ್ನು ಒಳಗೇ ತೆಗೆದುಕೊಂಡು ಬಂದಿದ್ದೇವೆಂದು ಹೇಳಿದ್ದರು.

ಅಧ್ಯಕ್ಷರು.—ಅದೆಲ್ಲಾ ಚರ್ಚೆಯಾಗಿದೆ.

ಶ್ರೀ ಬಿ. ಹುಚ್ಚೇಗೌಡರು—ಆಗ ಒಳಗೇ ಭರವಸೆ ತೆಗೆದುಕೊಂಡು ಬಂದಿರುವುದಾಗಿ ಹೇಳಿದ್ದರು. ಆ ಮೇಲೆ ಆ ಸಭೆಯನ್ನು 9 ತಿಂಗಳು ಮುಚ್ಚಿದ್ದರು. ನಡೆಯಬಾರದ್ದೆಲ್ಲಾ ನಡೆದು ಹೋಯಿತು. ಅಷ್ಟಕ್ಕೇ ನಿಲ್ಲಲಿಲ್ಲ. ಅಲ್ಲಿಂದೀಚೆಗೆ ನಮ್ಮ ದೇಶದ ಆಡಳಿತದ ವಿಚಾರದಲ್ಲಿ ಅವರ ಹೇಳಿದುದಕ್ಕೆ ದಿನದಿನಕ್ಕೂ ಒಂದೊಂದಕ್ಕೆ ನಮ್ಮ ಸರ್ಕಾರದವರು ರುಜು ಹಾಕಿಕೊಂಡು ಬರುತ್ತಿದ್ದಾರೆ. ಇದು ಎಲ್ಲಿಗೆ ಪರ್ಯವಸಾನವಾಗುತ್ತದೆ; ಎಲ್ಲಿಯವರೆಗೆ ದೇಶವನ್ನು ಮಾರುವುದಕ್ಕೆ ಈ ಸರ್ಕಾರ ಇರುತ್ತದೆಯೋ ಅಲ್ಲಿಯವರೆಗೆ ನಮಗೆ ಈ 371ನೆಯ ಆರ್ಟಿಕಲ್ ತಪ್ಪುವುದಿಲ್ಲ, ಇಷ್ಟು ಮಾತ್ರ ಹೇಳಬಹುದು

ಆ ದಿನ ನಮ್ಮ ಮುಖ್ಯ ಮಂತ್ರಿಯವರು 'It will be most treacherous and cowardly if I act against my convictions' ಎಂದು ಹೇಳಿದರು. ಅದನ್ನು ಈ ಹೊತ್ತಿನ ವಿದ್ಯಮಾನಕ್ಕೆ ಅನ್ವಯಿಸುತ್ತಾರೆಯೆ ? ಆ ಹೊತ್ತಿನ convictionನ್ನು ಬೇರೆ ಈ ಹೊತ್ತಿನ convictionನ ಬೇರೆಯೇ ಎಂಬುದನ್ನು ನಮ್ಮ ಸ್ನೇಹಿತರ ತೀರ್ಮಾನಕ್ಕೆ ಬಿಡುತ್ತೇನೆ. ಇದರಿಂದ ನಿಜವಾಗಿ ಗೌರವಹೆಚ್ಚಿತೆಂಬುದನ್ನು ಅವರೇ ಆತ್ಮಸಾಕ್ಷಿಯಾಗಿ ಯೋಚಿಸಿ ಹೇಳಲಿ.

ಮಾನ್ಯ ಸಚಿವರಾದ ಶ್ರೀ ಭಾಷ್ಯಂರವರು I am not prepared to take any directive from anybody except God ಎಂದು ಹೇಳಿದರು ಇನ್ನೊಬ್ಬರು ಮಂತ್ರಿಗಳು ಹೊರಗೆ ಹೇಳುತ್ತಿದ್ದರು. (ನಗು !) the most reactionary Government the autocratic Government ಆಗಿದ್ದ ಬ್ರಿಟಿಷ್ ಸರ್ಕಾರ ಕೂಡ ಇಂತಹ ಆಜ್ಞೆಯನ್ನು ಕೊಡುವುದಕ್ಕೆ ಧೈರ್ಯಮಾಡಲಿಲ್ಲ, ಯಾವ ಕೇಸನ್ನೂ ಹೀಗೆ ವರ್ಗ ಮಾಡಬೇಕೆಂದು ಆಜ್ಞೆಮಾಡಲಿಲ್ಲ. ಈ ಸರ್ಕಾರಮಾಡಿದೆ; ಅದೂ ನಮ್ಮ ಸರ್ಕಾರಕ್ಕೆ ಹೀಗೆ ಮಾಡಬಹುದೆ ಎಂದು ಹೇಳುತ್ತಿದ್ದರು.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಈಗಲೂ ಅದೇ ಅಭಿಪ್ರಾಯ.

ಶ್ರೀ ಬಿ. ಹುಚ್ಚೇಗೌಡರು.—ನಮ್ಮ ಭೀಮಪ್ಪನಾಯಕರ ಕೂಗೆಲ್ಲಿ ಹೋಯಿತು ? ಅವರ ಆ ದಿನ ಏನು ಹೇಳಿದರು ? ಈ ಸಭೆಯ ಗೌರವ, ಘನತೆ ಪ್ರತಿಷ್ಟೆ ಕೀರ್ತಿಗಳನ್ನು ಉಳಿಸಿಕೊಳ್ಳಬೇಕೆಂದು ಹಟಾಟೋಪದಿಂದ ಗುಡುಗಿದರು.

(ಶ್ರೀ ಭೀಮಪ್ಪನಾಯಕರು ಸಭೆಯೊಳಕ್ಕೆ ಬಂದರು.)

ಮಾನ್ಯ ಶ್ರೀ ಟಿ ಮರಿಯಪ್ಪನವರು.—ನೆನೆದವರ ಮನದಲ್ಲೇ ಇದ್ದಾರೆ ಎನ್ನುವಂತೆ ನೀವು ನೆನೆಸಿಕೊಂಡ ತಕ್ಷಣವೇ ಶ್ರೀ ಭೀಮಪ್ಪನಾಯಕರು ಬಂದರು. (ನಗು)

ಶ್ರೀ ಬಿ. ಹುಚ್ಚೇಗೌಡರು.—ಅವರೇನು ಸರ್ವವ್ಯಾಪಿ: ನಿರ್ಣಯ ಆಗ ಮಂಡಿಸುವುದಕ್ಕೂ ಸಿದ್ಧ. ಈಗ ವಾಪಸು ತೆಗೆದುಕೊಳ್ಳುವುದಕ್ಕೂ ಸಿದ್ಧ, ಅವರು (ನಗು.)

ಶ್ರೀ ಎ. ಭೀಮಪ್ಪನಾಯಕರು.—ನಿರ್ಣಯವನ್ನು ವಾಪಸು ತೆಗೆದುಕೊಳ್ಳಲಿಲ್ಲ. ಅದರ ಪರಿಣಾಮ ನಿಮ್ಮ ಮೇಲಾಗಿದೆ ಎಂಬುದು ಗೊತ್ತಾಗಿದೆ.

ಶ್ರೀ ಬಿ. ಹುಚ್ಚೇಗೌಡರು.—ಆ ಮೇಲೆ ಒಂದು ವಿಚಾರ ಹೇಳಿದರು. ಅದು ಏನಾದರೂ ಇರಲಿ. ಈಗ ನಾನು ಸ್ಪಷ್ಟವಾಗಿ ಇಷ್ಟು ಮಾತ್ರ ಹೇಳಬಲ್ಲೆ; ಅವರು ನಮ್ಮ ಮೇಲೆ 371ನೆಯ ಆರ್ಟಿಕಲ್‌ನ್ನು ಜಾರಿ ಮಾಡಿದ್ದಾರೆಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಅವರಿಗೂ ಅನುಮಾನವಿಲ್ಲ. ಹೀಗೆ ಕೇಂದ್ರ ಸರ್ಕಾರದವರು ಮಾಡಿರಲು ಕಾರಣವೇನೆಂದರೆ ಈ ಸರ್ಕಾರ ನಾಲಾಯ್ಕ್ ಅನ್ನುವುದರ ಮೇಲೆ ಆರ್ಟಿಕಲ್ಲನ್ನು ನಮ್ಮ ಮೇಲೆ ಹೊರಿಸಿದ್ದಾರೆ. ಈ ಅಂಶವನ್ನು ನಾನು ಸ್ಪಷ್ಟಪಡಿಸಲು ತಯಾರಿದ್ದೇನೆ. ನಮಗೇನೂ ಈ 371 ನೆಯ ಆರ್ಟಿಕಲ್ಲಿನ ಪ್ರಯೋಗದಿಂದ ಅವಮಾನವಾಗಿಲ್ಲವೆಂದು ಹೇಳಿಕೊಳ್ಳಬಹುದು. ಆದರೆ ಮೈಸೂರು ಸಂಸ್ಥಾನ ಮಾದರಿ ಸಂಸ್ಥಾನ, ಮುಂದುವರಿದ ಸಂಸ್ಥಾನ, ಶಾಸನ ವಗೈರೆಗಳನ್ನು ಮಾಡುವುದರಲ್ಲಿ ಮತ್ತೂ ದಕ್ಷತೆಯುಳ್ಳ ನ್ಯಾಯಾಸ್ಥಾನಗಳನ್ನು ಹೊಂದಿರುವುದರಲ್ಲಿ ಇದು ಮುಂದುವರಿದ ಸಂಸ್ಥಾನ. ಇಲ್ಲಿರತಕ್ಕ ನ್ಯಾಯಾಲಯಗಳು ಅನೇಕ ಕಾಲದಿಂದಲೂ ಬಹಳ ದಕ್ಷತೆಯಿಂದ, ಯಾವ ಒಂದು ಆಕ್ಷೇಪಣೆಗಳಿಗೂ ಅವಕಾಶಕೊಡದಂತೆ ಉತ್ತಮ ದರ್ಜೆಯ ತೀರ್ಮಾನ ಕೊಡತಕ್ಕ ವಿಚಾರದಲ್ಲಿ ಹೆಸರುವಾಸಿ ಪಡೆದಂಥವುಗಳಾಗಿದ್ದವು. ಹೀಗಿರುವಾಗ ಇಂಥ ಒಳ್ಳೆಯ ಘನತೆ, ಗಾಂಭೀರ್ಯ, ಗೌರವಗಳಿಂದ ಇದ್ದ ಸಂಸ್ಥಾನಕ್ಕೆ ಇಂಥಾ ಅವಸ್ಥೆ ಪ್ರಾಪ್ತವಾಯಿತಲ್ಲಾ ! ಹೀಗೆ ಒಂದು ಕಷ್ಟ ಪ್ರಾಪ್ತವಾಗಿರತಕ್ಕ ಕಾಲದಲ್ಲಿ ನಮ್ಮ ದುರುಪಾರ್ಟಿಯವರನ್ನು ಧೈರ್ಯಗೆಡಿಸಿ, ನಿರುತ್ಸಾಹಿಗಳಾಗುವಂತೆ ಮಾಡಬಾರದಲ್ಲ ಎಂಬ ಒಂದು ಉದಾರ ಮನಸ್ಸಿನಿಂದ ನಮ್ಮ ಪಾರ್ಟಿಯವರೂ ಸಹ ಆ ಡೈರೆಕ್ಟೀವನ್ನು ತೀವ್ರವಾಗಿ ಪ್ರತಿಭಟಿಸಿ, ನಿಮಗೆ ಆ ದಿವಸ ನಮ್ಮೆಲ್ಲರ ಬೆಂಬಲ ನೀಡಿದೆವು. ಆ ದಿವಸ ನೀವು ಅಧ್ಯಕ್ಷ ನೆಹ್ರೂರವರನ್ನೂ ಮತ್ತು ಕೇಂದ್ರ ಸರ್ಕಾರವನ್ನೂ ಬಹಳವಾಗಿ ಟೀಕೆ ಮಾಡಿ ಮಾತನಾಡಿದ್ದೀರಿ. ಈ ದಿವಸ ಅವರಾಗಲಿ ಮತ್ತು ಕೇಂದ್ರ ಸರ್ಕಾರವಾಗಲೀ ಈ ನಮ್ಮ ಸರ್ಕಾರಕ್ಕೆ ಅಗೌರವವನ್ನುಂಟುಮಾಡಬೇಕೆಂಬ ಇರಾದೆಯುಳ್ಳವರಾಗಿಲ್ಲವೆಂದು ಹೇಳಲು ಪ್ರಾರಂಭಿಸಿರತಕ್ಕದ್ದನ್ನು ನೋಡಿದರೆ, ಆ ದಿವಸ ಹೇಳಿದ್ದಕ್ಕೂ ಈ ದಿವಸ ಹೇಳುತ್ತಿರುವುದಕ್ಕೂ ಎಲ್ಲಾ ತಿರುವುಮುರುವಾಗಿರುತ್ತೆ. ಆ ದಿವಸ ನಾವುಗಳೆಲ್ಲರೂ ನೀವು ಈ ಸಭೆಯ ಮತ್ತು ದೇಶದ ಗೌರವಗಳನ್ನು ಕಾಪಾಡುತ್ತೀರಿ. ಅವುಗಳನ್ನು ಎತ್ತಿಹಿಡಿಯಲು ಶ್ರಮಪಡುತ್ತೀರೆಂದು ನಿಮ್ಮನ್ನು ನಂಬಿ ನಾವು ಅಷ್ಟು ತೀವ್ರವಾಗಿ ಈ ಆಜ್ಞೆಯನ್ನು ಪ್ರತಿಭಟಿಸಿದೆವು. ಆದರೆ ಇಂದು ಆದದ್ದಾದರೂ ಏನು ! ದೇಶದಲ್ಲಿ ಎಂದೂ ಆಗದೆ ಇದ್ದಂಥ ಪ್ರಸಂಗ ನಡೆಯಬೇಕಾಗಿ ಬಂತು. ಅಂದಮೇಲೆ ನಮಗೆ ಗೌರವ ಇನ್ನೆಲ್ಲಿದೆ? ಆ ದಿವಸ ಪ್ರೇಕ್ಷಕರೆದುರಿನಲ್ಲಿ ಆ ರೀತಿ ಈ ಆಜ್ಞೆಯನ್ನು ಅವಹೇಳನಮಾಡಿ ಮಾತನಾಡಿದ್ದ ನಾವುಗಳು, ಇಂದು ಈ ಸಭೆಯಲ್ಲಿ ಕುಳಿತು ಕಾರ್ಯದಲ್ಲಿ ಭಾಗಿಗಳಾಗಿ ಕೆಲಸ ಮಾಡಲು ಸಾಧ್ಯವಿದೆಯೆಂದು ಯಾರು ಹೇಳಬೇಕು ? ಈ ದಿವಸ ಇವರು

(ಶ್ರೀ ಬಿ. ಹುಚ್ಚೇಗೌಡರು.)

ನೆಹ್ರೂರವರಿಂದ ಇವರಿಗೆ ಬಂದಿದ್ದ ಪತ್ರಗಳೆಲ್ಲವನ್ನೂ ಈ ಸಭೆಯಲ್ಲಿ ಓದಿದ್ದರೆ ನಾವು ಆ ಸಂಬಂಧದಲ್ಲಿ ಎಷ್ಟರಮಟ್ಟಿಗೆ ಮಾತನಾಡಬಹುದೆಂಬುದನ್ನಾದರೂ ನಿರ್ಧರಿಸಿ, ಅಷ್ಟನ್ನು ಮಾತ್ರ ಹೇಳಬಹುದಾಗಿತ್ತು. ಹಾಗೆ 2—3 ವಾರಗಟ್ಟಲೆ ವ್ಯವಹಾರಮಾಡಲು, ಈ 371ನೆ ವಿಧಿಯ ಬಗ್ಯೆ ತಾವೇಕೆ ಕಾಲಹರಣ ಮಾಡಬೇಕಾಗಿತ್ತು? ಇನ್ನು 2—3 ವಾರಗಳಲ್ಲಿಯೇ ಈ ವಿಧಿಯ ಬಗ್ಯೆ ನಮಗೆ ವಿನಾಯಿತಿ ದೊರೆಯುತ್ತೆಂದು ಯಾವ ಆಧಾರದಮೇಲೆ ಹೇಳಿದಿರಿ?

ಶ್ರೀ ಜಿ. ಎ. ಆಚಾರ್ಯರು.—ಇನ್ನು 2—3 ತಿಂಗಳೊಳಗಾಗಿ ಆದರೂ ಈ 371ನೆಯ ವಿಧಿಯನ್ನು ಮೈಸೂರಿಗೆ ಪ್ರಯೋಗಿಸಲು ಸಾಧ್ಯವಿಲ್ಲದಂತೆ ವಿನಾಯಿತಿ ಹೊಂದಿದರೆ ಆಗ ತಾವು ಈ ಸಭೆಯ ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಡುತ್ತೀರಾ?

ಶ್ರೀ ಬಿ. ಹುಚ್ಚೇಗೌಡರು.—ಅವರು ಆ ದಿವಸ ನಮ್ಮ ಸಭೆಯ ಮುಂದೆ ಹೇಳಿರತಕ್ಕದ್ದೇನು? ಅವರು ಹೇಳಿದಂತೆ ಮಾಡದೆ, ಈಗ ಅವರು ಹೇಳುತ್ತಿರುವುದೇನೆಂದರೆ—"ನೆಲಕ್ಕೆ ಬಿದ್ದರೂ, ಮೂಗು ಮಣ್ಣಾಗಲಿಲ್ಲ" ಎಂದು. ಇವರು ಬಿದ್ದು ಬಿಟ್ಟು ಕೈಕಾಲುಗಳನ್ನೆಲ್ಲಾ ಮುರಿದುಕೊಂಡಿದ್ದಾರೆ. ಈ ಸಭೆಯ ಮತ್ತು ದೇಶದ ಗೌರವ ಘನತೆಗಳ್ಯಾವುದನ್ನೂ ಇವರು ಉಳಿಸಿಲ್ಲ. ಈಗಲಾದರೂ ತಾವು, ದೇಶದಗೌರವ, ನಮ್ಮ ದೇಶದ ರಾಜಕೀಯದ ಮಟ್ಟ, ನಮ್ಮ ಪ್ರಜಾಪ್ರಭುತ್ವದ ಮೇಲೆ ಇವುಗಳಿಗೆ ಒಂದು ಕೀರ್ತಿಯನ್ನು ತರಬೇಕೆಂದಿದ್ದರೆ, ಮತ್ತು ಈಗ ನಮ್ಮ ಮೇಲೆ ಬಂದಿರತಕ್ಕ ಒಂದು ಕಳಂಕವನ್ನು ನೀಗಬೇಕಾಗಿದ್ದರೆ, ಈಗಲೂ ತಾವೆಲ್ಲರೂ ಈ ಸಭೆಯಲ್ಲಾದ ತೀರ್ಮಾನಕ್ಕೆತಲೆಬಾಗಿ ನೀವೇ ಸ್ಥಾನಗಳನ್ನು ಬಿಟ್ಟು ಕೆಳಗಿಳಿಯಿರಿ. ಅಂಥಾ ಅಭಿಮಾನ ತಮ್ಮಲ್ಲಿದ್ದರೆ ನೀವು ಪ್ರಯತ್ನಪಟ್ಟ ಕೆಲಸದಲ್ಲಿ ನೀವು ವಿಫಲರಾದ ಮೇಲೆ ನೀವು ಈ ಸ್ಥಾನಗಳಲ್ಲಿರುವುದು ಸರಿಯಲ್ಲ. ಈ ತಮ್ಮ ಮುಖಗಳನ್ನಿಟ್ಟುಕೊಂಡು ಇಂಥಾ ಪರಿಸ್ಥಿತಿಯಲ್ಲಿ ದೇಶದ ಮುಂದೆ ಹೋಗಿ ಜನರನ್ನು ಮತ್ತೆ ತಮಗೇ ನಿಮ್ಮ ಬೆಂಬಲ ನೀಡಬೇಕೆಂದು ಕೇಳುವಂಥ ಯೋಗ್ಯತೆ ನಿಮಗಿಲ್ಲವೆಂದು ಹೇಳುತ್ತೇನೆ. ಯಾವ ಬೇರೆ ಯೋಚನೆಗಳನ್ನೂ ಮಾಡದೆ, ತಾವು ಈ ಕೂಡಲೆ ರಾಜೀನಾಮೆ ಕೊಡುವುದು ಬಹಳ ಉತ್ತಮವಾದುದೆಂದು ನಾನು ಹೇಳುತ್ತೇನೆ. ಹೀಗಾದರೂ ಮಾಡಿದರೆ, ದೇಶದ ಮುಂದೆ ಪುನಃ ತಾವು ಮುಖ ಇಡಲು ಒಂದು ಅವಕಾಶ ಉಂಟಾಗುತ್ತೆ. ಇನ್ನಾದರೂ ತಮಗೆಲ್ಲ ಇರತಕ್ಕ ಅವಧಿ 2—3 ತಿಂಗಳು ಮಾತ್ರ. ಇಷ್ಟು ಅಲ್ಪಕಾಲಕ್ಕೆ ತಾವೇಕೆ ಹೆದರುತ್ತೀರಿ? ಹಾಗೆಮಾಡಿ, ಈಗಿನ ರಾಜಕೀಯದಲ್ಲಿ ಜನರಿಂದ ತಮಗೆ ಅಷ್ಟಿಷ್ಟಾದರೂ ಅಲ್ಪಸ್ವಲ್ಪ ಗೌರವ ಬರುತ್ತೆ. ಈ ಸಭೆಗೂ ಗೌರವವನ್ನು ತಂದಂತಾಗುತ್ತದೆ. ಹೀಗೆ ಮಾಡಿದರೆ ನಿಮ್ಮ ಆತ್ಮಸಾಕ್ಷಿಗಾದರೂ ಇದು ಸಮ್ಮತಿಸೀತು. ಹೀಗೆ ಯಾವುದನ್ನೂ ಮಾಡದೆ ತಾವು ಇಲ್ಲಿ ಉಳಿತಿರುವುದನ್ನು ನಾವು ಖಂಡಿತ ಒಪ್ಪುವುದಕ್ಕಾಗುವುದಿಲ್ಲ. ನಮ್ಮ ನಾಡಿಗೆ, ನಮ್ಮ ಸಭೆಗೆ ಈ ನಮ್ಮ ದೇಶದ ನಗೆ ಮರ್ಯಾದೆ ಕೊಡಲು, ಮತ್ತು ಗೌರವವನ್ನು ಉಳಿಸಲು ತಮಗಿರತಕ್ಕ ಒಂದೇ ಒಂದು ಮಾರ್ಗ, ತಮ್ಮ ಕೆಲಸದ ಬಗ್ಯೆ ರಾಜೀನಾಮೆ ಕೊಡುವುದು ಬಹಳ ಸೂಕ್ತವಾದುದೆಂದು ಆಖೈರಾಗಿ ತಿಳಿಸಿಬಿಟ್ಟು ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎ. ಭೀಮಪ್ಪನಾಯಕರು.—ಆ ದಿನವೇ ಮಾನ್ಯ ಹುಚ್ಚೇಗೌಡರು, ತಾವೆಲ್ಲರೂ ರಾಜೀನಾಮೆ ಕೊಡಬೇಕೆಂದು ಏತಕ್ಕೆ ಒಂದು ನಿರ್ಣಯವನ್ನು ಸಭೆಯ ಮುಂದೆ ತರಬಾರದಾಗಿತ್ತು?

*Janab MOHAMED HANIEF (Bangalore—Muslim).—Mr. Speaker, the question before the House is this. Have the Government, after giving us the assurances at the time when the resolution was passed unanimously by the House, risen up to the expectations that they raised in our minds? Before the statement was made on the floor of the House, I presume the Government was in possession of the relevant facts and on those facts they came to a definite conclusion after due deli beration and discussion. The conclusion which they came to was that the directive was not acceptable. I am not going to give the reasons. Having come to that conclusion that the directive was not acceptable, the Government felt that they should also be supported by an unanimous resolution of this House in their negotiation with the Central Government. It was with that object I believe that a resolution was moved; speeches were made; observations were made. The Central Government came in very much for discussion and the directive given to the Government was to vindicate the honour of this House, vindicate the honour of Mysore.' How to vindicate was the question? And in the vindication of the honour of this House and of this State what steps did the Government as a matter of fact take? That is the point at issue. That is the point for consideration of the House. Are the steps taken by the Government in this behalf sufficient to vindicate the honour of the House and the honour of the State? This point is again at issue. What are the steps taken? The steps taken were these. With a resolution of this House to back the decision the Government had come to beforehand, representation had to be placed before the Central Government in order to induce the Central Government o revise its views and withdraw the directive. Negotiations were indeed difficult. I cannot minimise the diffi culty. I cannot say also that the Chief Minis'er has not made sufficient endeavour to persuade the Central Government to revise its

decision. He did what he could. But the Central Government were not amenable to all that he had placed before them and the result of that negotiation is placed before this House by the Chief Minister this morning in the form of a statement. He says that it is a compromise, compromise between the two alternatives, namely, transfer of the case outside the State or importing a District Judge from outside to try the case here. I do not propose to get into details over this question at all. The implication of article 371 is quite clear. Even at that time the suggestion of the Central Government to import a District Judge from outside to try the case was before them. Nothing new has been disclosed in the statement now made by the Chief Minister here, which could have induced him to alter the decision which the State Government had taken before he proceeded to Delhi. Is it a question of expediency? Is it a question of giving in? Is it a question of simply accepting a decision of Central Government meekly? It is surrendering meekly that has resulted in this, which is now called a compromise. With all respects I must say that there is no compromise. I must with frankness say that it is a directive. It is a directive with a certain amount of clearness about it. They say, 'Well, we give you a chance, get a District Judge from outside to try the case. You were not amenable to that course of action at one time. Now we ask you either to transfer the case or take a District Judge from outside." 'You immediately go before them and say,—'Do not ask us to transfer the case outside the State. But we accept to get a District Judge from outside the State to try the case here.' Well, is that a compromise? These two alternative proposals were before you, even before you came to this House to get its unanimous support to the decision you had taken already. So, why do you now place that fact as a compromise? In all humility I must say that I am not in a position to call it a compromise. It is a directive given. When this is the state of affairs, can it be said that the Government have vindicated the honour of this House or the honour of this State? The question resolves itself into one fact, namely whether the honour of this House was involved or not. This question has been agitating the minds of persons even outside the House. The honour of the House was involved in the directive sent by the Central Government for acceptance and to be acted upon by the State Government. When the matter was placed before this House, it felt that the directive was not befitting the honour of this House or the honour of the State To that position we stick to-day. As a matter of fact we felt, legally or illegally, rightly or wrongly, that the directive meant a slur upon our judiciary, a slur on the honour of the State, a slur on the citizens and also a slur on the Legislature. But I am now glad to hear that the Central Government state that in the directive issued by them no dishonour was meant and no slur was intended to be cast on the State Judiciary. Our past is such that no observation adverse either to the honour of the Judiciary or the administration could have been meant. Ours is a model State. It is called 'Ram Rajya'. That fact was known to all. That fact is known to us. We are conscious of that fact and we are all proud of that fact. It was when we studied the language in which the directive was couched, we felt aggrieved, we felt depressed and we felt dishonoured. It was against that raised our voice. We knew at that time that so long as Article 371 was there in the Constitution the Central Government was within its power to issue the directive. We knew at that time that Sections 526 and 527 were there. The accused could have taken advantage of these sections and could have asserted their rights. We knew the facts. We knew the Criminal Procedure Code and the constitution. At the same time we knew we were protesting, according to the statement made by the Chief Minister, that while our State was such, our administration was such that it should not be brought within the purview of Section 371. All our endeavours ever since we were brought under Article 371 of the constitution, was to remove Mysore

(JANAB MOHAMED HANIEF).

State from the purview of Article 371. All honour to the Ministry for having done that. All honour for them for all the endeavour they have made throughout. But our sorrow is that when the time came to test their sincerity, their determination in their attempt to remove Article 371 of the Constitution, they failed grievously, they failed hopelessly to the great disadvantage of their reputation, the reputation of the Government and the reputation of the Legislature and of the State. May I now expect as a directive that was given to them that they would vacate office and leave the Government to be administered under Section 356? That would be the logical conclusion and ultimate step inevitable in the circumstances obtaining at the present moment. The speeches that were made on the occasion when we passed the resolution were from men of tact and political wisdom and not from men of mere talk. As a result of our past association, we revolted against the decision. They should never have sent out such a directive to our Government. Our Government was good; Our Government was honourable; Our Government was experienced and intelligent; they knew what they were about. The Law Minister said that he knew what he was about and the Chief minister also said that he knew what he was about when they took a decision in all fairness having regard to the facts and circumstances of this case. The Law Minister said that rightly or wrongly they had taken the decision, that simply because there was that Article 371 the directive was sent out, and that the reasoning set out in the order did not come up to their expectations. He said that it was considered derogatory to their honour and therefore they protested. Having done all that, the honour is there whatever the protestations or otherwise coming from whatever quarter. May I ask you in all earnestness once again to rise up to our expectations? Have all the glory that is in store for you. The only alternative before you is to resign at once and now. (Opposition cheers).

*Janab K. MAHMOOD SHARIFF (Mysore *cum* Mandya *cum* Hassan—Muslim).—Mr. Speaker, Sir the debate raised the other day on the floor of this House regarding the directive given by the President of the Indian Republic, I need hardly say, has been agitating the minds of every thinking citizen of Mysore. It has raised a raging controversy in which some leading constitutionalists and lawyers have taken part. Some of these gentlemen have upheld the stand taken by the Government of Mysore, but there are others who think that constitutionally the case for the Government of Mysore is not sustainable. It is unfortunate that there were certain circumstances which did not make us think over this important question in a calm and cool atmosphere so that we could have averted a first class constitutional issue. In spite of the fact that I implored on that day that we may be given some time so that we might go into all aspects of the question and come to some decision. The consensus of opinion of the House was that the resolution must be taken into consideration at once and discussed threadbare on the very day. In any case, since that resolution is passed, we cannot retrace our steps now. How to wriggle out of the difficulty and how to escape from the intriguing situation? This morning the Hon'ble Chief Minister told us that he negotiated with the Prime Minister, with the Minister in charge of the States Ministry but in spite of that, in spite of our protestations, particularly that portion of the protestation in which we pointed out to them that article 371 was not going to have any application so far as Mysore State was concerned, he was pleased to tell us that so far as the Centre is concerned it persists in the attitude adopted by them, and that they say that in the larger interests of justice it is very necessary that the directive has to be obeyed. In the circumstances it seems to me that the only course left open is to adhere to what was so seriously, sincerely and enthusiastically claimed by the Ministry and it is the only honourable course left open to them

It is no doubt true that Pandit Nehru than whom there is no greater friend of Mysore and who claims all our affection, love and respect and whose sincerity of purpose is beyond doubt, must have written a letter to the Chief Minister asking him not to precipitate matters and not to follow a procedure or step which might result in distressing circumstances. It is also true that he has stated that "If you are going to abide by the directive given to you we are going to reconsider as to whether we should not withdraw Article 371 so far as Mysore is concerned." The directive is there and so far as Pandit Nehru is concerned we do not want to place him in an embarrassing situation particularly when we are in the teeth of elections, when the country is going to the polls very soon; but in spite of that we will have to face the logic of facts. When a principle is involved, when a matter resolves into a matter of conscience, no expediency, no adventitious circumstances shou d come in the way of the application of that principle. Compromises and adjustment are very necessary and it is I think the law of life. But so far as principle is concerned I am the very last man to compromise myself. Now the question is what is it that we have to do in the present circumstances? In a democratic set-up there is room for honest difference of opinion. In a democratic set-up it is possible that people may not see eye to eye with the opinion held by some other persons. Thinking alike and feeling alike is the ideal of totalitarianism, not of democracy. In this matter we have differed, differed very seriously with the Centre and it was necessary for the Centre to have taken into consideration all aspects of the case and come to our rescue. It is not my purpose just now to traverse on trodden ground. I do not want to argue out the case because that has been argued threadbare not only on the floor of this House but outside. As I said at the outset important constitutional lawyers have deliberated upon this question, have given pros and cons of the question. Therefore it is futile for me to take the time of the House by once again traversing on the trodden ground. But I cannot refrain from pointing out that unfortunately so far as the prestige of the House is concerned, it has been given a go-by. As I said the other day the legislators who come here represent the 80 lakhs of people of Mysore State and we are the standard bearers of the prestige of Mysore; we are the persons to uphold the honour of Mysore. And we have been called as 'wild men going in for cheap innings'; so many allegations have been levelled, doubting our sincerity. In the circumstances what is the course left open for us? The Ministry finds itself in the horns of a dilemma. On the one side there is the directive given by the President and they will have to obey it. Of what they said namely "we are not going to revise our view regarding the application of article 371 unless you send for a judge from outside", what is the position of that judge? Supposing during the course of arguments some interlocutory matters or some emergent or indirect matters arise and the party wants the settlement of a particular petition; to whom should the party make that application? Is it to our High Court? If that is so, the same objection is going to be raised: "Look here, the Chief Justice is a person around whom all these proceedings emanate from the main case." Therefore, what should the party do under the circumstances? Is he going to appeal to the High Court of Madras or to the High Court of Bombay? We are in vacuum so to speak. Unless these matters are not settled, it seems to me so far as the directive is concerned, it is a thing which is, I am afraid of, not of any substance. I know my Hon'ble friends; I had the privilege to work with them for about three years. Every one of them is honest they are men of integrity, persons not going to do anything derogatory to Mysore. Therefore, the only method in which they can keep up the prestige of Mysore is to......

Janab J. MOHAMED IMAM.—Resign (laughter).

Janab MAHMOOD SHARIFF.—Well, I have to say what my friend Janab Imam said. (Loud laughter). It is only by that they are going to raise themselves in their own eyes and in the eyes of the people of Mysore. These are the words I wanted to say. We have thought about the question very seriously and with pain I have to say that this is the only course left open to them.

* ಶ್ರೀ ಎಚ್. ಎಂ. ಚೆನ್ನಬಸಪ್ಪನವರು (ಮೈಸೂರು ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಭಾರತ ರಾಜ್ಯಾಂಗ ತಯಾರಾಗುತ್ತಿರತಕ್ಕ ಕಾಲದಲ್ಲಿ 375ನೆಯ ಸೆಕ್ಷನ್ನನ್ನು incorporate ಮಾಡಬೇಕೆಂಬ ವಿಷಯ ಬಂದಾಗ ತೀವ್ರವಾಗಿ ಪ್ರತಿಭಟನೆ ತೋರಿಸಿದವರಲ್ಲಿ ನಾನೂ ಒಬ್ಬ. ಅಂದಿನಿಂದಲೂ ಈ 371ನೆಯ ಸೆಕ್ಷನ್ ನಮಗೆ ಮನಸ್ಸಿನಲ್ಲಿ ನೋವನ್ನುಂಟುಮಾಡಿದೆ, ಅದನ್ನು ತೆಗೆಯುವುದಕ್ಕೆ ಸರ್ವಪ್ರಯತ್ನವನ್ನೂ ಮಾಡಬೇಕೆಂದು ಹೇಳಿ ಈ ಸಭೆಯಲ್ಲಿ ಅನೇಕವೇಳೆ ನನ್ನ ಸಹೋದ್ಯೋಗಿಗಳೂ ನಾನೂ ಒತ್ತಾಯ ಮಾಡುತ್ತಲೇ ಬಂದಿದ್ದೇವೆ. ಅದು ಮುಂದೆ ಒಂದು ದಿವಸವಲ್ಲ ಮತ್ತೊಂದು ದಿನ ಸ್ವಲ್ಪಮಟ್ಟಿಗೆ ನಮ್ಮ ಘನತೆ ಗೌರವಗಳಿಗೆ ಕುಂದಕವಾಗುವ ರೀತಿಯಲ್ಲಿ ಪ್ರಯೋಗವಾಗಬಹುದೆಂದು ಆಗಿಂದಾಗ್ಗೆ ನಾವು ಸೂಚನೆ ಮಾಡಿಕೊಂಡು ಬಂದಿರುವುದು ಈ ಸಭೆಗೆ ಗೊತ್ತಿಲ್ಲದ ವಿಷಯವಲ್ಲ. ಈ ಒಂದು ಕೇಸು ಮೈಸೂರು ಸಂಸ್ಥಾನದಲ್ಲಿ ಹುಟ್ಟಿ ಅದರಿಂದ 371ನೆಯ ಸೆಕ್ಷನ್ನು ನಮ್ಮ ಮೇಲೆ ಪ್ರಯೋಗವಮಾಡಬೇಕಾದ ಪ್ರಸಂಗಬಂತು. ದೇಶದಲ್ಲಿ ಒಬ್ಬ ಅಪಾದಿತನಿಗೆ ನ್ಯಾಯವನ್ನು ದೊರಕಿಸಿಕೊಡಬೇಕಾದಂಥಾದ್ದು ಸರ್ಕಾರದ ಕರ್ತವ್ಯ; ಮತ್ತು, ಈ ಜವಾಬ್ದಾರಿ ಹೊತ್ತಂಥ ಶಾಸನ ಸಭೆಗಳ ಕರ್ತವ್ಯ. ಅಷ್ಟೇ ಅಲ್ಲ. ನ್ಯಾಯದೊರಕುತ್ತದೆಂಬ ನಂಬಿಕೆಯನ್ನು ಸಹ ಅಪಾದಿತನಲ್ಲಿ ಮೂಡುವಂತೆ ಮಾಡುವುದೂ ನಮ್ಮ ಕರ್ತವ್ಯ. ಈ ವಿಷಯದಲ್ಲಿ ನಮ್ಮ ಸರ್ಕಾರದವರಿಗೂ ಮತ್ತು ಕೇಂದ್ರ ಸರ್ಕಾರದವರಿಗೂ ಅಭಿಪ್ರಾಯ ವ್ಯತ್ಯಾಸ ಬಂದು ಈ 371ನೆಯ ಸೆಕ್ಷನ್ನಿನ ಪ್ರಯೋಗವಾಗಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಅಪಾದಿತರು ಈ ಸಂಸ್ಥಾನದಲ್ಲಿಯೇ ತಮ್ಮ ಕೇಸು ವಿಚಾರಣೆಯಾಗುವುದರಿಂದ ತಮಗೆ ನ್ಯಾಯದೊರಕುತ್ತದೆಯೋ ಇಲ್ಲವೋ ಎಂಬ ಅನುಮಾನವನ್ನು ವ್ಯಕ್ತಪಡಿಸಿದ ಪ್ರಯುಕ್ತ ಎರಡು ಸಲಹೆಗಳನ್ನು ಕೇಂದ್ರಸರ್ಕಾರದವರು ಪರಿಶೀಲನೆಗಾಗಿ ಈ ಸರ್ಕಾರಕ್ಕೆ ಕಳುಹಿಸಿಕೊಟ್ಟರು. ಒಂದನೆಯದು ಕೆಲಸವನ್ನು ಬೇರೆ ಕಡೆಗೆ ವರ್ಗಾಯಿಸುವುದು. ಎರಡನೆಯದು ಬೇರೆ ಕಡೆಯಿಂದ ಒಬ್ಬ ಜಡ್ಜರನ್ನು ತಂದು ಅವರ ಮೂಲಕ ವಿಚಾರಣೆ ಮಾಡಿಸುವುದು. ಇವೆರಡರಲ್ಲಿ ಯಾವುದನ್ನು ಮಾಡಿದರೂ ಕೂಡ ಸರ್ಕಾರದವರು ಹೊತ್ತಿರುವ ಜವಾಬ್ದಾರಿಯನ್ನು ಧರ್ಮಮನೋಭಾವನೆಯಿಂದ ನ್ಯಾಯ ಮನೋಭಾವನೆಯಿಂದ ಮಾಡಿದಂತಾಗುತ್ತದೆಂದು ಕೇಂದ್ರ ಸರ್ಕಾರದವರ ಅಭಿಪ್ರಾಯ. ಈ ವಿಷಯ ಪರಿಶೀಲನೆಗೆ ಬಂದಾಗ ನಮ್ಮಲ್ಲಿ ಅಂಥ ಪರಿಸ್ಥಿತಿಯಿಲ್ಲ, ಅಂಥ ಪರಿಸ್ಥಿತಿ ಕಂಡುಬಂದಾಗ ಅದನ್ನು ಪರಿಶೀಲನೆ ಮಾಡೋಣ ಎಂಬ ಅಭಿಪ್ರಾಯವನ್ನು ನಮ್ಮ ಸರ್ಕಾರದವರು ಹೊಂದಿದ್ದರು ಎಂದು ಅವರು ಹೇಳಿದ ಅಂಶಗಳಿಂದ ಹೊರಬಿತ್ತು. ಸಾಮಾನ್ಯವಾಗಿ ಜನಾಬ್ ಮಹಮುದ್ ಷರೀಫ್‌ರವರು ಹೇಳಿದಂತೆ ಪ್ರಜಾಪ್ರಭುತ್ವದಲ್ಲಿ ಅಭಿಪ್ರಾಯ ವ್ಯತ್ಯಾಸಗಳು ಬರತಕ್ಕಂಥಾದ್ದು ಸ್ವಾಭಾವಿಕ. ಅಭಿಪ್ರಾಯ ವ್ಯತ್ಯಾಸಗಳು ಬಾರದೆ ವಿಷಯ ವಿಮರ್ಶೆಯಾಗಲು ಸಾಧ್ಯವೇ ಇಲ್ಲ. ಅಭಿಪ್ರಾಯ ವ್ಯತ್ಯಾಸಗಳು ಬಂದಾಗ ಯಾವರೀತಿ ಅದನ್ನು ವಿಮರ್ಶೆಮಾಡಿ ಪರಿಹರಿಸಿಕೊಳ್ಳಬೇಕೆಂಬುದು ಮುಖ್ಯವಿಷಯ. ಈ ಪ್ರಶ್ನೆಬಂದಾಗ ನಮ್ಮ ಮೈಸೂರು ಸರ್ಕಾರದವರು ಇವೆರಡನ್ನೂ ಪ್ರಯೋಗಮಾಡುವುದು ಈಗಿನ ವಾತಾವರಣದಲ್ಲಿ ಅನಾವಶ್ಯಕವೆಂದು ಅಭಿಪ್ರಾಯಪಟ್ಟದ್ದರ ಮೇಲೆ ಕೇಂದ್ರಸರ್ಕಾರದವರು ಭಿನ್ನಾಭಿಪ್ರಾಯಪಟ್ಟರು. ಅದರ ಮೇಲೆ ವರ್ಗಮಾಡಲೇಬೇಕೆಂದು ತೀರ್ಮಾನಮಾಡಿ 37 ನೆಯ ಸೆಕ್ಷನ್ನಿನ ಪ್ರಕಾರ ಡೈರೆಕ್ಟಿವ್ ಕೊಟ್ಟರು. ಹೀಗೆ ಡೈರೆಕ್ಟಿವ್ ಕೊಟ್ಟಿದ್ದರಮೇಲೆ ಸ್ವಾಭಾವಿಕವಾಗಿ ಸರ್ಕಾರದವರ ಮನಸ್ಸು ಮತ್ತು ಮಾನ್ಯ ಸದಸ್ಯರ ಮನಸ್ಸು ನೋಯಿತು. ಪ್ರಜಾಪ್ರಭುತ್ವವನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವ ನಮ್ಮ ಸರ್ಕಾರದವರ ಮೇಲೆ 371ನೆಯ ಸೆಕ್ಷನ್ನಿನ ಪ್ರಕಾರ ಆಜ್ಞೆ ಆಗಬೇಕಾದ ಪ್ರಸಂಗ ಬಂತಲ್ಲಾ ಎಂದು. ಆಗ್ಗೆ ವಿಷಯವನ್ನು ವಿಮರ್ಶೆ ಮಾಡಿ ಒಂದು ತೀರ್ಮಾನ ತೆಗೆದುಕೊಂಡೆವು. ಆ ತೀರ್ಮಾನ ಏನೆಂಬುದನ್ನು ವಿಮರ್ಶೆಮಾಡುವುದು ಮುಖ್ಯ.

ಈ ಠರಾವನ್ನು ಮಂಡಿಸಿದವರನ್ನೂ ಅನುಮೋದಿಸಿದವರನ್ನೂ ನಾನು ಚೆನ್ನಾಗಿ ಕೇಳಿದೆ. ಕೇಂದ್ರ ಸರ್ಕಾರದವರು ಇಂದು ಕೈಗೊಂಡಿರುವ ಕಾರ್ಯಕ್ರಮದಿಂದ ಮೈಸೂರು ಸರ್ಕಾರದವರ ಘನತೆ ಗೌರವಕ್ಕೆ ಕುಂದಕವಾಗುವುದಿಲ್ಲವೇ ಎಂಬುದನ್ನು ನೋಡಬೇಕು. "Vindicate the honour and prestige of Mysore State" ಎಂದು ಹೇಳಿ, ಆ ಘನತೆ, ಗೌರವಳಿಗೆ ಧಕ್ಕೆ ಬಾರದ ರೀತಿಯಲ್ಲಿ ಕೆಲಸ ಮಾಡಬೇಕೆಂದು ನಾವು ನಿರ್ಣಯ ಮಾಡಿದೆವು. ಅಷ್ಟೇ ಹೊರತು ಸರ್ಕಾರದವರು ಹೀಗೆಯೇ ಮಾಡಬೇಕು, ಹಾಗೆಯೇ ಮಾಡಬೇಕು ಎಂದು ನಿರ್ದಿಷ್ಟವಾಗಿ ಸೂಚನೆಗಳೇನನ್ನೂ ಕೊಡಲಿಲ್ಲ. ಆದ್ದರಿಂದ ಈಗ ಯಾವುದನ್ನು ಮಾಡಬೇಕಾಗಿತ್ತೆಂದು ಅವರು ಆರೋಪಣೆ ಮಾಡುತ್ತಾರೋ ಎಂದು ನಾನು ಕಾದು ನೋಡಿದೆ. ಈ ಚರ್ಚೆಗಳು ನಡೆದಾಗ ಬಹಳ ಆವೇಶಪೂರಿತವಾದ ಭಾಷಣಗಳು ನಡೆದುವೇ ಹೊರತು ನಿಜವಾದ ವಿಚಾರಪೂರಿತವಾದ ಭಾಷಣಗಳಾವುವೂ ನಡೆಯಲಿಲ್ಲ. ಸಾಮಾನ್ಯವಾಗಿ 371ನೆಯ ಸೆಕ್ಷನ್ನು ರಾಜ್ಯಾಂಗದಲ್ಲಿ ಅಡಕವಾದ ದಿವಸದಿಂದಲೂ ಈ ವಿಷಯದಲ್ಲಿ ತೀವ್ರವಾಗಿ ಪಶ್ಚಾತ್ತಾಪಪಟ್ಟು ಆಗಾಗ್ಗೆ ಸರ್ಕಾರದವರನ್ನು ತೀವ್ರವಾಗಿ ಒತ್ತಾಯಮಾಡುತ್ತಿದ್ದವನು ನಾನು. ಎಷ್ಟೋ ವೇಳೆ ಇದೇ ಸಭೆಯಲ್ಲಿ ಬಹಳ ಕ್ರಮವಾಗಿ ಮತ್ತು ತೀವ್ರವಾಗಿ ಟೀಕೆ ಮಾಡಿದ್ದೇನೆ. ಆದ್ದರಿಂದ ಈ ತೀರ್ಮಾನಮಾಡಿದ ಮೇಲೆ ಏನೇನು ವ್ಯವಹಾರಗಳು ನಡೆದಿವೆಯೆಂದು ಪರಿಶೀಲನೆಮಾಡಿ, ಇದರಿಂದ ನಮ್ಮ ಘನತೆ ಗೌರವ ಹೆಚ್ಚಾಗಿದೆಯೇ ಅಥವಾ ಕಮ್ಮಿಯಾಗಿದೆಯೇ ಎಂಬುದನ್ನು ಪರಿಶೀಲನೆಮಾಡಿದರೆ ಸಾಕು. ಮೊದಲು ಯಾವ ಪರಿಸ್ಥಿತಿಯಿತ್ತು ಮೈಸೂರು ಸಂಸ್ಥಾನದಲ್ಲಿ! ಮೈಸೂರು ಸಂಸ್ಥಾನದಲ್ಲಿ ನ್ಯಾಯದೊರಕಿಸತಕ್ಕಂತಹ ಒಂದು ವಾತಾವರಣವನ್ನು ಮತ್ತು ನ್ಯಾಯದೊರಕುತ್ತದೆಯೋ ಇಲ್ಲವೇ ಎಂಬ ಅನುಮಾನ ಬಾರದ ರೀತಿಯಲ್ಲಿ ಮಾಡಬೇಕಾಗಿತ್ತೆಂದು ನಾನೂ ತಿಳಿದುಕೊಂಡಿದ್ದೆ. ಈಗ ಇಡೀ ಭಾರತದಾದ್ಯಂತ ಅನೇಕ ಪಂಡಿತರೂ

ನ್ಯಾಯ ನಿಪುಣರು ಹೊರಗೆಡಹಿರತಕ್ಕ ಅಭಿಪ್ರಾಯಗಳನ್ನು ನೋಡಿದ್ದರಲ್ಲೂ, ಅವರು ಮುಖ್ಯವಾಗಿ ಹೇಳಿರುವುದು ನ್ಯಾಯದೊರಕುತ್ತದೆಂಬ ನಂಬಿಕೆಯನ್ನು ಸರ್ಕಾರದವರು ಉಂಟುಮಾಡಬೇಕಾಗಿತ್ತು ಎಂದು ಹೇಳಿದ್ದಾರೆಯೇ ಹೊರತು ಮತ್ತೇನೂ ಇಲ್ಲ. ಅಭಿಪ್ರಾಯ ವ್ಯತ್ಯಾಸ ಭಾರತ ಸರ್ಕಾರದವರಿಗೂ ನಮ್ಮ ಸರ್ಕಾರದವರಿಗೂ ಏನಿತ್ತು, ಆ ವ್ಯತ್ಯಾಸ ಈಗ ಯಾವ ರೀತಿ ಪರಿವರ್ತನೆಯಾಗಿದೆಯೆಂದರೆ, ಮೈಸೂರಿನ ಹೊರಗಿನಿಂದ ಜಡ್ಜಿಯರೊಬ್ಬರನ್ನು ಕರೆಸಿಕೊಂಡು ವಿಚಾರಣೆ ಮಾಡುವುದರ ಮೂಲಕ ಆಪಾದಿತನಿಗೆ ನ್ಯಾಯ ದೊರಕುತ್ತದೆಂಬ ನಂಬಿಕೆ ಉಂಟುಮಾಡಬೇಕು ಎಂದು. ಇದು ಮೈಸೂರು ಸಂಸ್ಥಾನದ ಘನತೆ ಗೌರವವನ್ನು ಮೇಲಕ್ಕೆ ಎತ್ತಿತೇ ಅಥವಾ ಕಡಿಮೆಮಾಡಿತೇ ಎಂಬ ವಿಷಯವನ್ನು ನಾನು ಪ್ರಶ್ನೆಮಾಡುತ್ತೇನೆ.

ದೇಶಾದ್ಯಂತ ಪತ್ರಿಕಾಕರ್ತರುಗಳು ಮತ್ತು ನ್ಯಾಯಶಾಸ್ತ್ರ ತಜ್ಞರು ಎಲ್ಲರೂ ಕೂಡ ಈ ಅಂಶವನ್ನು ಎತ್ತಿ ತೋರಿಸಿದರೇ ವಿನಾ ಮತ್ತೇನೂ ಇಲ್ಲ. ಈ ಹೊತ್ತು ಮೈಸೂರು ಸಂಸ್ಥಾನದವರು ಈ ವಾತಾವರಣವನ್ನುಂಟುಮಾಡಿರುವುದರಿಂದ ಮೈಸೂರಿನ ಘನತೆ ಗೌರವ ಹೆಚ್ಚಿದೆಯೆಂಬುದು ನನ್ನ ಸ್ವಂತ ಅಭಿಪ್ರಾಯ. ನಾಳೆಯೇ ಪತ್ರಿಕಾಕರ್ತರೂ ನ್ಯಾಯಶಾಸ್ತ್ರಜ್ಞರೂ

'They have done the correct thing, the right thing. They have created an atmosphere wherein the accused will feel that he will have justice and not only he feels, but he will feel confident also.' ಎಂದು ಹೇಳುತ್ತಾರೆ.

Janab MAHOMED HANIEF.—Were you not aware of that at that time?

Sri H. M. CHANNABASAPPA.—It is an honest difference of opinion and in a democracy there is always room for honest difference of opinion. I put a straight question to my Hon'ble friends. What would you have done? How would you have helped the situation if you were in the position of the Government?

Janab MAHOMED HANIEF.—I would have transferred the case.

Sri H. M. CHANNABASAPPA.—I am not standing here to hold a brief to the Government. I want to see the whole chapter from the eyes of the public. ತಮಗೂ ನಮಗೂ ಒಂದೊಂದು ಉದ್ದೇಶವಿದೆ. ಸರ್ಕಾರ ಏನೇಮಾಡಲಿ ಅದನ್ನು ವಿರೋಧಿಸಬೇಕೆಂಬುದು ನಿಮ್ಮ ಉದ್ದೇಶ, ತಾವು ಮಾಡಿದುದನ್ನು ಪ್ರತಿಪಾದನೆ ಮಾಡಬೇಕೆಂಬುದು ಸರ್ಕಾರದ ಉದ್ದೇಶ. ನಾವು ಪ್ರಜೆಗಳ ಪರವಾಗಿ ನಿಂತು ವಿಮರ್ಶೆಮಾಡುವ ಕಾಲದಲ್ಲಿ ನ್ಯಾಯ ಮತ್ತು ಧರ್ಮವನ್ನು ದೃಷ್ಟಿಯಲ್ಲಿಟ್ಟುಕೊಂಡು, ದೇಶದ 90 ಲಕ್ಷ ಪ್ರಜೆಗಳು ಯಾವರೀತಿ ನೋಡುತ್ತಾರೆಂಬ ದೃಷ್ಟಿಯಿಂದ ವಿಮರ್ಶೆ ಮಾಡಬೇಕೇ ಹೊರತು stretch a point in our favour or in that man's favour ಎಂದು ಮಾಡುವುದು ಬೇಡ. ಸುಮ್ಮನೆ ಲಾಯರುಗಳು ವಾದವಿವಾದಗಳನ್ನು ಮಾಡಿ ಹೇಗೋಮಾಡಿ ವಿರೋಧಿಯನ್ನು ಗೆದ್ದೆ ಎನ್ನುವ ಮನೋಭಾವ ಬೇಡ.

My friend referred to compromise. It is an honourable compromise—not a dishonourable compromise. ಈಗಿರತಕ್ಕ ಪರಿಸ್ಥಿತಿಯನ್ನು ವಿಮರ್ಶಿಸಿ, ಸರ್ಕಾರದವರು ತಪ್ಪು ಮಾಡಿದ್ದರೆ ಇವರು ತಪ್ಪು ಮಾಡಿದರು, ಇದು ತಪ್ಪು, ಮಾಡಬಾರದಾಗಿತ್ತು ಎಂದು ಹೇಳುವುದರಲ್ಲಿ ನಾನು ಎಳ್ಳಷ್ಟೂ ಹಿಂತೆಗೆಯುವವನಲ್ಲ. ಸರ್ಕಾರದವರು ಏನು ಮಾಡಬಹುದಾಗಿತ್ತು, ಏನು ಮಾಡಿದ್ದಾರೆ ಎಂಬುದನ್ನು ನಿಸ್ಪಕ್ಷಪಾತವಾದ ಮನೋಭಾವದಿಂದ ವಿಚಾರ ಮಾಡಿನೋಡೋಣ. ರಾಜೀನಾಮೆ ಕೊಡಬೇಕಾಗಿತ್ತೆಂದು ಕೆಲವು ಸ್ನೇಹಿತರು ಹೇಳಿದರು, ನಾನೂ ಹಾಗೆಯೇ ಹೇಳುತ್ತಿದ್ದೆನು. ಯಾವಾಗ ಸರ್ಕಾರ ಮಾಡಬೇಕಾದ ರೀತಿಯಲ್ಲಿ ತಮ್ಮ ಕೆಲಸ ಮಾಡಲಿಲ್ಲವೋ ಆಗ ರಾಜೀನಾಮೆ ಕೊಡಿ ಎಂದು ನೀವು ಹೇಳುವುದೇಕೆ, ನಾನೇ ಹೇಳುತ್ತೇನೆ. ಇರತಕ್ಕ ಪರಿಸ್ಥಿತಿಯಲ್ಲಿ ತಮ್ಮ ಕರ್ತವ್ಯವನ್ನು ಎಷ್ಟುಮಟ್ಟಿಗೆ ಮಾಡಿದ್ದಾರೆಂಬುದನ್ನು ನೋಡೋಣ. ಮೈಸೂರಿನ ಘನತೆ ಗೌರವಗಳನ್ನು ಎತ್ತಿಹಿಡಿಯುವ ರೀತಿಯಲ್ಲಿ ಮಾಡಿ ಎಂದು ನೀವೂ ನಾವೂ ಹೇಳಿದ್ದೆವು. ಈಗ ಏನು ಮಾಡಿದ್ದಾರೆ, ಏನು ಮಾಡಬಹುದಾಗಿತ್ತು ನೋಡೋಣ. ಘನತೆ ಗೌರವಗಳನ್ನು ಎರಡು ರೀತಿಯಲ್ಲಿ ಎತ್ತಿ ಹಿಡಿಯಬಹುದು. ರಾಷ್ಟ್ರಾಧ್ಯಕ್ಷರ ಆಜ್ಞೆಯನ್ನು ಪ್ರತಿಭಟನೆ ಮಾಡಿದ್ದಿದ್ದರೆ ಸಂಸ್ಥಾನದ ಘನತೆ ಗೌರವ ಹೆಚ್ಚುತ್ತಿತ್ತೋ ಅಥವ ಕಡಿಮೆಯಾಗುತ್ತಿತ್ತೊ ಎಂಬುದನ್ನು ನಿಸ್ಪಕ್ಷಪಾತವಾಗಿ ಪರಿಶೀಲನೆ ಮಾಡೋಣ. ಅವರ ಆಜ್ಞೆಯನ್ನು ಪ್ರತಿಭಟಿಸಿ ರಾಜೀನಾಮೆ ಕೊಟ್ಟಿದ್ದಿದ್ದರೆ, ರಾಜ್ಯಾಂಗದಲ್ಲಿರುವ Emergency Provisions 355 ಮತ್ತು 356ನೆಯ ಆರ್ಟಿಕಲ್‌ಗಳು ಜಾರಿಗೆ ಬರುವ ರೀತಿಯಲ್ಲಿ ವರ್ತಿಸಿದ್ದಿದ್ದರೆ, ಆಗ 371ನೆಯ ಆರ್ಟಿಕಲ್‌ಗಿಂತ ಹೆಚ್ಚಾದ ಈ ಎರಡು ಆರ್ಟಿಕಲ್‌ಗಳ ಪ್ರಯೋಗ ದೇಶದಮೇಲೆ ಆಗುವುದಕ್ಕೆ ಎಡೆಗೊಟ್ಟ ಹಾಗಾಗುತ್ತಿತ್ತು. ಆಗ ಪ್ರಜಾಪ್ರಭುತ್ವವಿರುವ ಈ ದೇಶದಲ್ಲಿ bureaucratic set-up ಬರುತ್ತಿತ್ತು. ಅದರಿಂದ ನಮ್ಮ ದೇಶದ ಘನತೆ ಗೌರವ ಹೆಚ್ಚುತ್ತಿತ್ತು ಎಂದು ಅಭಿಪ್ರಾಯಪಡುವುದಾದರೆ ಆರೀತಿಯೇ ಮಾಡಬಹುದಾಗಿತ್ತು. ಆದರೆ ನನ್ನ ಅಭಿಪ್ರಾಯದಲ್ಲಿ ಪ್ರಜಾಪ್ರಭುತ್ವವಿಲ್ಲದೇಯಿರುವ ಕಡೆ ಪ್ರಜಾಪ್ರಭುತ್ವ ಬರುವುದಕ್ಕೆ ಅವಕಾಶ ಮಾಡಿದರೆ ಅದು ಒಂದು ಹೆಜ್ಜೆ ಮುಂದುವರಿದಂತಾಗುತ್ತದೆಯೇ ವಿನಾ emergency provisions ಜಾರಿಗೆ ಬರುವ ರೀತಿ ಮಾಡುವುದು retrograde step ಆಗುತ್ತದೆ. ಆದಕಾರಣ ಅವರು ಮಾತನಾಡುವುದರಲ್ಲಿ ಹುರುಳಿಲ್ಲ, ಗಾಳಿ ಇಷ್ಟಿದೆ ಎಂಬುದನ್ನು ನಾವು ನೋಡಬೇಕಾಗಿದೆ. ನೆನ್ನೆ ಮೊನ್ನೆಯಿಂದ ವಾದವಿವಾದಗಳು ನಡೆದುಕೊಂಡು ಬಂದಿವೆ. ಇದನ್ನು ನೋಡಿದರೆ, ವಾಸ್ತವವಾಗಿ ವಿರೋಧಪಕ್ಷದವರಾಗಿ ಅವರು ಹೇಗೆ ಇರಬೇಕೆಂದರೆ ಅಂಕಿಅಂಶಗಳ ಆಧಾರದ ಮೇಲೆ ವಾದವಿವಾದಗಳನ್ನು ಮಾಡಬೇಕೇ ಹೊರತು, ಗೋಪುರ ಕಟ್ಟಬೇಕೇ ಹೊರತು ಬರಿಯ ಗಾಳಿಗೋಪುರ ಕಟ್ಟಬಾರದು.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಎದೆಮುಟ್ಟಿ ನೋಡಿಕೊಂಡು ಹೇಳಿ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ನನ್ನ ಎದೆ ಮುಟ್ಟುವುದಕ್ಕೆ ನನಗೆ ಶಕ್ತಿಯಿದೆ. ಎದೆ ಗಟ್ಟಿಯಾಗಿದೆ ಎಂಬುದನ್ನು ನಾನು ಹೇಳುವುದಿಲ್ಲ ತಾವೇ ಹೇಳಬೇಕು. ಇದು ಬೇರೆ ವಿಷಯ, ಇದು ಹಾಗಿರಲಿ.

ಮೈಸೂರಿನ ಜನತೆ ಗಾಂಭೀರ್ಯ ಹೆಚ್ಚಬೇಕಾದರೆ, ಈ ಮೊಖದ್ದಮೆಯ ವಿಚಾರದಲ್ಲಿ ಏನು ಮಾಡಬೇಕು? By creating a situation which will ensure confidence in the mind of the accused, by creating confidence in the mind of the accused that he will get justice. Not only that, show to the world that such an atmosphere is created, and make him also know that such an atmosphere is created. That is the first thing.

ಇದನ್ನು ನಾವು ಮಾಡಿದ್ದೇವೆ. ಇಡೀ ಭಾರತದ, ಇಡೀ ಪ್ರಪಂಚದ ದೃಷ್ಟಿಯಲ್ಲಿ, ಮೈಸೂರು ಸಂಸ್ಥಾನದಲ್ಲಿ ಇಂತಹ ಒಂದು ಪರಿಸ್ಥಿತಿ ಇದೆ ಎಂಬ ಅಭಿಪ್ರಾಯವನ್ನುಂಟುಮಾಡಿರುವುದರಿಂದ ಮೈಸೂರಿನ ಜನತೆ ಹೆಚ್ಚಿದೆ ಎಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ.

Janab MAHOMED HANIEF.—It is a new fact that you have discovered now!

Sri H. M. CHANNABASAPPA.—Facts cannot be new or old. A fact is a fact and truth is truth. I may tell my honourable friends that they will do well to go slow and not allow themselves to be baffled.

Jnnab MAHOMED HANIEF.—Your conclusion is wrong.

Janab SYED ABDUR RAHMAN.—He is not in his usual moods!

Sri H. M. CHANNABASAPPA.—If you are unable to see things in their usual form, I can only say you have changed your glasses. That is all. I am analysing the situation as it obtains.

ಇನ್ನು ರಾಜ್ಯಾಂಗದ 371ನೆಯ ವಿಧಿಯ ವಿಚಾರ. ಇದು ಮೈಸೂರಿನ ಜನತೆ ಗೌರವಕ್ಕೆ ಕಳಂಕಪ್ರಾಯವಾಗಿದೆ ಎಂದು ಅನೇಕವೇಳೆ ಎಷ್ಟೋ ಪತ್ರಿಕೆಗಳಲ್ಲೂ ಬಂದಿದೆ. ಸರ್ಕಾರ ಈ ವಿಚಾರದಲ್ಲಿ ಸಾಕಾದಷ್ಟು ಮುತುವರ್ಜಿ ವಹಿಸಲಿಲ್ಲವೆಂದು ಯಾವಾಗಲೂ ಹೇಳುತ್ತಿದ್ದೇನೆ, ಈ ಹೊತ್ತುಕೂಡ ಹೇಳುತ್ತೇನೆ. ಇಂತಹ ವಿಷಯದಲ್ಲಿ ವಿರೋಧಪಕ್ಷದವರೂ ಇತರರೂ ಬನ್ನಿ, ನನ್ನ ಜೊತೆಗೆ ಸೇರಿಕೊಳ್ಳಿ.

ಮಾನ್ಯ ಶ್ರೀ ಎಚ್. ಸಿ ದಾಸಪ್ಪನವರು.—371 ನೆಯ ವಿಧಿ ಇರಬೇಕೆಂದು ಸೋಷಿಯಲಿಸ್ಟ್ ಸದಸ್ಯರು ಹೇಳಿದರು!

Sri H. M. CHANNABASAPPA.—If my Hon'ble friend feels like that, when he comes to power that article 371 will remain. He will be ruled by article 371 when he gets into power.

Sri K. R. SREEKANTESWAR.—We will surely be in power.

Sri H. M. CHANNABASAPPA.—You go round during election saying that you are for retaining article 371 and I shall be too glad to see such a situation as that.

ಇನ್ನು 371ನೆಯ ಆರ್ಟಿಕಲ್ ಹೋಗಬೇಕೆಂಬ ವಿಷಯದಲ್ಲಿ ಈ ಸಭೆಯಲ್ಲಿ, ಅವರೊಬ್ಬರನ್ನು ಬಿಟ್ಟು, ಸರ್ವಾನುಮತವಿದೆ ಎಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಈಗ ಆ ವಿಧಿಯನ್ನು ತೆಗೆಯತಕ್ಕ ವಾತಾವರಣ ಇದೆಯೆ ಅಥವ ಇನ್ನೂ ಹಲವುಕಾಲ ರಾಜ್ಯಾಂಗದಲ್ಲಿ ಅದು ಇರುವ ವಾತಾವರಣವಿದೆಯೆ ಎಂಬುದನ್ನು ನೋಡಿ.

ನಾನು ಈಗಲಾದರೂ ಹೇಳತಕ್ಕದ್ದು ಇಷ್ಟೆ: ಇನ್ನು 2-3 ವಾರದೊಳಗಾಗಿಯೇ ಈ 371ನೆಯ ವಿಧಿಯನ್ನು ಮೈಸೂರಿಗೆ ಉಪಯೋಗಿಸಲು ಅವಕಾಶವಿಲ್ಲದಂತೆ ಮಾಡಲಾಗುತ್ತೆ, ಇದು ಹೊರಟುಹೋಗುತ್ತೆ ಎಂಬುದಾಗಿ ಈಗತಾನೆ ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಿದ್ದಾರೆ. ಇನ್ನು 2-3 ವಾರಗಳನ್ನು ಕಾದುನೋಡಲು ನಾವೇಕೆ ಸುಮ್ಮನಿರಬಾರದು? ಹಾಗೆ ಇದು ಸುಳ್ಳಾಗಿ ಕಂಡುಬಂದರೆ ಆಗ ನೀವು ರಾಜೀನಾಮೆ ಕೊಡಿ ಎಂದು ಕೇಳತಕ್ಕ ಹಕ್ಕು ನಮಗೆ ಬರುತ್ತದೆ.

When the Hon'ble Chief Minister of a State makes a statement on the floor of the House that within two or three weeks this will go away, it is the duty of the Hon'ble Chief Minister to see that his word is kept up. if you find later that he has not kept up his word, it is up to you to stand. up and say "Look here. You have lost our confidence." (A Voice: do not make an adverse statement) That is a different thing. We will come to brass tacks. I do not mind joining you if the Government fails to do its duty and goes back upon the word of honour given on the floor of the House. I do not think anybody in his senses would say that he (Chief Minister) should remain in office, in that event.

ಇನ್ನು 2-3 ವಾರದೊಳಗಾಗಿಯೇ ಈ 371ನೆಯ ಸೆಕ್ಷನ್ ಬಗ್ಗೆ ನಮಗೆ ವಿನಾಯಿತಿ ದೊರಕುವ ಪರಿಸ್ಥಿತಿ ಏರ್ಪಾಡಾಗುವಂಥ ಅವಕಾಶ ಉಂಟಾಗಿದೆಯೆಂದು ಸಭಾನಾಯಕರು ತಿಳಿಸಿದ್ದಾರೆ. ಅದಕ್ಕೆ ಜನಾಬ್ ಇಮಾಂರವರು ಹೇಳಿದರು, ಇದು ಎಷ್ಟರಮಟ್ಟಿಗೆ ನೆರವೇರುತ್ತದೆಯೋ ನನಗಂತೂ ನಂಬಿಕೆ ಇಲ್ಲ ಇವರ ಮಾತುಗಳಲ್ಲಿ ಎಂದು. ಹಾಗೆ ನಂಬಿಕೆ ಇಲ್ಲದವರಿಗೆ ನಂಬಿಕೆ ಹುಟ್ಟಿಸುವುದಾದರೂ ಹೇಗೆ? ಹಾಗೆ ನಂಬಿಕೆಯಿಲ್ಲದವರು ಸುಮ್ಮನೆ 2-3 ವಾರಗಳತನಕ ಕಾಯ್ದು, ಇವರೇನು ಆಡಿದ ಮಾತುಗಳಿಗನುಸಾರವಾಗಿ ಕಾರ್ಯಕ್ರಮಗಳನ್ನು ಕೈಗೊಂಡು, ಅದನ್ನು ನೆರವೇರಿಸಿರುತ್ತಾರೆಯೋ ಅಥವಾ ಇಲ್ಲವೇ ಎಂಬುದನ್ನು ನೋಡದೆ ಆಡಿರತಕ್ಕ ಮಾತುಗಳಿಗೆ ಯಾವ ಬೆಲೆಯೂ ಇಲ್ಲ. ಅದರಲ್ಲಿ ಯಾವ ಹುರುಳೂ ಇಲ್ಲ. ಹಾಗೆ 2-3 ವಾರಗಳು ಕಾದಿದ್ದು ಇವರು ಆ ಕಾರ್ಯಸಾಧನೆಯಲ್ಲಿ ವಿಫಲರಾಗಿದ್ದರೆ ಆಗ ಇವರು ಏನು ಹೇಳಿದ್ದರೂ ಅದಕ್ಕೆ ಕೊಂಚ ಬೆಲೆಯಿರುತ್ತಿತ್ತು. ಹಾಗೆ ಒಂದು ಅನುಮಾನದ ಸ್ಥಿತಿ

ಯಲ್ಲಿರುವಾಗ ಇವರು ಮೈಸೂರಿನ ಘನತೆ ಗೌರವಗಳನ್ನು ಕಾಪಾಡಲಿಲ್ಲವೆಂದು ಹೇಳಿರತಕ್ಕ ಮಾತುಗಳಲ್ಲಿ ಹುರುಳೆಲ್ಲಿದೆ? ಈಗ 371ನೆಯ ಸೆಕ್ಷನ್ನನ್ನು ಈ ಶಾಸನಕಡಿತದಿಂದ ಕಿತ್ತೊಗೆಯುವ ವಾತಾವರಣ ಏರ್ಪಟ್ಟಿರುವುದರಿಂದ ಮೈಸೂರಿನ ಘನತೆ ಗೌರವಗಳು ಇದರಿಂದ ಹೆಚ್ಚಿದಂತಾಯಿತೇ ಅಥವಾ ಕಮ್ಮಿಯಾದಂತಾಯಿತೇ ಎಂದು ನಾನು ಅವರನ್ನು ಪ್ರಶ್ನೆ ಮಾಡಬೇಕಾಗಿದೆ.

The first point is, Mysore has created an atmosphere wherein the accused not only gets justice but also feels contented that he is going to get justice. That is one point which is stressed in raising the status of Mysore. The second point is, within the course of two or three weeks Mysore will be exempted from the operation of article 371 of the Indian Constitution. I question my Hon'ble friends whether these two things are going to raise the prestige and honour of Mysore or bring down the prestige and honour of Mysore. (Some Members: Hear, hear) Let the common man say, let all people who have criticised to-day say that this is a step forward or retrograde. These two things have been secured. Take it for granted. Now the next question is.—

ಇನ್ನು ಮುಂದಿನ ಪ್ರಶ್ನೆ ಏನಪ್ಪಾ ಎಂದರೆ ನಾನು ಹೇಳಬೇಕಾದುದಿಷ್ಟೆ, to vindicate the honour and prestige of the State ಗೆ ಇವರು ಸಾಕಷ್ಟು ಪ್ರಯತ್ನಪಡದೆ ಅಥವಾ ಪಟ್ಟು ಅದರಲ್ಲಿ ವಿಫಲರಾದರೆ ಆಗ ಇವರು ತಮ್ಮ ಅಭಿಪ್ರಾಯದ ಪ್ರಕಾರ ತಮ್ಮ ಪದವಿಗೆ ರಾಜೀನಾಮೆ ಕೊಟ್ಟು ಹೋಗತಕ್ಕದೆಂದು ಅವರು ತಿಳಿಸಿರುತ್ತಾರೆ. ಈ ಪ್ರಜಾಸತ್ತಾತ್ಮಕ ಆಡಳಿತದ ಕಾಲದಲ್ಲಿ ರಾಜೀನಾಮೆ ಕೊಡತಕ್ಕದ್ದು ಮತ್ತು ಅಧಿಕಾರಕ್ಕೆ ಬರತಕ್ಕದ್ದು ಕೇವಲ ದಿನಚರಿ ವ್ಯವಹಾರ. ಈ ರಾಜಕೀಯದಲ್ಲಿ ಎಷ್ಟೋ ಸಮಸ್ಯೆಗಳು ಬರುತ್ತವೆ. ಆಗ ಎಷ್ಟೋ ಭಿನ್ನಾಭಿಪ್ರಾಯಗಳೂ ಇರುತ್ತವೆ. ಅಂಥಾ ಭಿನ್ನಾಭಿಪ್ರಾಯಗಳ ಪರಿಣಾಮವಾಗಿ ಅಧಿಕಾರ ಬದಲಾವಣೆಯಾಗತಕ್ಕದ್ದು ಸ್ವಾಭಾವಿಕ. ಆದರೆ ಇತ್ತೀಚೆಗೆ ಏಕೋ ಈ ಅಧಿಕಾರ ವ್ಯಾಮೋಹ ಹೆಚ್ಚು ಹೆಚ್ಚಾದಂತೆಲ್ಲಾ ಬರಿ ತರ್ಕಶವಾದ ಬಿಕ್ಕಟ್ಟುಗಳು ಉಂಟಾಗುತ್ತವೆ. ಅಂತೂ ಏನೇ ಇರಲಿ ಈ ಪರಿಸ್ಥಿತಿ ಇನ್ನು ಹತ್ತಾರು ವರ್ಷಗಳಲ್ಲಿಯೇ ಬದಲಾಗುವಂಥ ಪರಿಸ್ಥಿತಿ ಬರದೆ ಇರಲಾರದು

ಒಬ್ಬ ಮಾನ್ಯ ಸದಸ್ಯರು.—ಹಾಗಾದರೆ ತಮಗೆ ಈ ಅಧಿಕಾರಗಳ ಮೇಲೆ ಏನೂ ಆಸೆಯಿಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಯಾರು ಯಾರು ಈ ಮನುಷ್ಯ ಜನ್ಮದಲ್ಲಿ ಹುಟ್ಟಿ ಅವರು ಎಲ್ಲಿಯ ತನಕ ಜೀವಂತರಾಗಿರುತ್ತಾರೋ ಅಲ್ಲಿ ವರೆಗೂ ಈ ಧನ, ಧಾನ್ಯ, ಸಂಪತ್ತುಗಳು ತನಗೆ ಬೇಕಿಲ್ಲವೆಂದು ಹೇಳತಕ್ಕಂಥ ವ್ಯಕ್ತಿಗಳು ಯಾರೂ ಇರುವುದಿಲ್ಲವೆಂಬ ಈ ಸಾಮಾನ್ಯ ವಿಷಯವನ್ನೂ ತಾವು ಇಲ್ಲಿಯ ತನಕವೂ ತಿಳಿದುಕೊಂಡಿಲ್ಲದಿರುವುದಕ್ಕೆ ನಾನೇನು ಹೇಳಲಿ! ಆದರೆ ಈ 371 ನೆಯ ಸೆಕ್ಷನ್ ಪ್ರಪಂಚಕ್ಕೆ ಇರಕೂಡದೆಂದು ನಾವೆಲ್ಲರೂ ಏಕಾಭಿಪ್ರಾಯಪಡುತ್ತಿರುವಾಗ, ಇಲ್ಲ ಇದು ಇರಲೇಬೇಕೆಂದು ಶ್ರೀ ಕೆ. ಆರ್. ಶ್ರೀಕಂಠೇಶ್ವರನ್‌ರವರು ತಿಳಿಸಿದ್ದಾರೆ. ಬಹುಶಃ ಅವರ ಸೋಷಿಯಲಿಸ್ಟ್ ಪಾರ್ಟಿ ಸರ್ಕಾರ ಬಂದಾಗ ಅದರ ಆವಶ್ಯಕತೆಯಿದ್ದರೂ ಇರಬಹುದು. ಅಂತೂ ನಾನೀಗ ಕೇಳತಕ್ಕ ಪ್ರಶ್ನೆಯೊಂದೇ. ಇಂಥಾ ಕಷ್ಟಪರಿಸ್ಥಿತಿಯಲ್ಲಿ ಮೈಸೂರು ಸರ್ಕಾರ, ಅದು ಯಾವ ಸರ್ಕಾರವೇ ಆಗಿರಲಿ ಈ ರೀತಿ ಕಾರ್ಯಕ್ರಮಗಳನ್ನು ಕೈಗೊಂಡು ಈ 371 ನೆಯ ಸೆಕ್ಷನ್ ಬಗ್ಗೆ ನಮಗೆ ವಿನಾಯಿತಿ ಸಿಕ್ಕುವಂತೆ ಮಾಡಿರತಕ್ಕದ್ದು ನಮ್ಮ ದೇಶದ ಘನತೆ ಗೌರವಗಳನ್ನು ಎತ್ತಿ ಹಿಡಿಯುವಂಥ ಕೆಲಸ ಮಾಡಿದ್ದಾರೆಯೇ ಅಥವಾ ಅದನ್ನು ತಗ್ಗಿಸುವಂಥ ಕೆಲಸ ಮಾಡಿದ್ದಾರೆಯೇ ಎಂಬುದು. ಈ ಅಂಶವನ್ನು ತಮ್ಮ ಮನಸ್ಸಿನಲ್ಲಿ ಚೆನ್ನಾಗಿ ನಾಟುವಂತೆ ಮತ್ತು ಮುದ್ರಿತವಾಗುವಂತೆ ಮಾಡಲು ನಾನು ಈ ಅಂಶಗಳನ್ನೆಲ್ಲಾ ತಮಗೆ ತಿಳಿಸಿರುವುದು. ಈಗಿರತಕ್ಕ ಸರ್ಕಾರ ಮಾಡಿರುವುದೇ ಸರಿಯಾದ್ದು ಮತ್ತು ನ್ಯಾಯವಾದ್ದು ಎಂಬುದನ್ನು ತೋರಿಸಿಕೊಟ್ಟಿದ್ದೇನೆ. ಇದು ನಮ್ಮ ಘನತೆ ಗೌರವಗಳನ್ನು ಕಾಪಾಡುವಂಥ ಕಾರ್ಯಕ್ರಮವೆಂದು ತಾವೆಲ್ಲರೂ ಒಪ್ಪಿಕೊಳ್ಳುತ್ತೀರಿ. ಇದರಲ್ಲಿರತಕ್ಕ ಮುಖ್ಯವಾಸ್ತವಾಂಶವಿಷ್ಟು. ವಾದ ವಿವಾದಗಳಿಗೂ ಮತ್ತು ಒಬ್ಬರ ಅಭಿಪ್ರಾಯಕ್ಕೂ, ಮತ್ತೊಬ್ಬರ ಅಭಿಪ್ರಾಯಕ್ಕೂ ಭಿನ್ನತೆ ಉಂಟಾಗಲು ಅವಕಾಶವಿದ್ದೇ ಇದೆ. ಅದಕ್ಕೋಸ್ಕರವಾಗಿ ಒಂದು ವಾದ ಮಾಡಲೇಬೇಕೆಂಬ ಇರಾದೆಯುಳ್ಳವರಿಗೆ ಅವಕಾಶವಿದ್ದೇ ಇರುತ್ತೆ. ಆದರೆ ಸರ್ಕಾರದವರು ಈ ಕಷ್ಟದಿಂದ ಪಾರಾಗಲು ಏನೇನು ಮಾಡಬಹುದಾಗಿತ್ತೋ ಅದೆಲ್ಲವನ್ನು ಮಾಡಿದ್ದಾರೆ. ಆದರೆ ಇಲ್ಲಿಯವರೆಗೂ ಭಾಷಣ ಮಾಡಿದ ಕೆಲವು ಮಾನ್ಯ ಸದಸ್ಯರು ಅವರ ಇಡೀ ಭಾಷಣ ಕಾಲದಲ್ಲಿ ಬರಿ ವಾದವೊಂದು ನಡೆಯಿತೇ ವಿನಃ ಇವರು ಹೀಗೇ ಮಾಡಬೇಕಾಗಿತ್ತೆಂದು ಜನಾಬ್ ಇಮಾಂರವರಾಗಲೀ ಮತ್ತಾರಾಗಲೀ ತಿಳಿಸಿಲ್ಲ. ಡಿಟೋ ಶ್ರೀಮಾನ್ ಹುಚ್ಚೇಗೌಡರಾದರೂ ಕೂಡ ಸುಮ್ಮನೆ "ಹಾಗೆ ಮಾಡಬೇಕಾಗಿತ್ತು ಹೀಗೆ ಮಾಡಬೇಕಾಗಿತ್ತು, ರಾಜೀನಾಮೆ ಕೊಡಬೇಕಾಗಿತ್ತು" ಎಂದು ಮಾತನಾಡಿದರೆ ಶಿವಾಯಿ, ಮತ್ತೇನೂ ರಚನಾತ್ಮಕ ಸಲಹೆಗಳನ್ನು ತಿಳಿಸಿರುವುದಿಲ್ಲ. ಜನಾಬ್ ಇಮಾಂರವರೂ ಕೂಡ ಅರ್ಧ ಮುಕ್ಕಾಲು ಗಂಟೆಗಳ ಕಾಲ ಭಾಷಣ ಮಾಡಿದರು. ಅವರ ಭಾಷಣವನ್ನೆಲ್ಲಾ ನಾನು ಬಹಳ ಕುತೂಹಲದಿಂದ ಕೇಳುತ್ತಿದ್ದೆನು. ಆದರೆ ಅವರ ಭಾಷಣದಲ್ಲಿ ಈ ಮೈಸೂರಿನ ಘನತೆ ಗೌರವಗಳು ಹೆಚ್ಚಾಗಲು ಏನೇನು ಕಾರ್ಯಗಳನ್ನು ಮಾಡಬೇಕಾಗಿತ್ತೆಂಬುದರ ಬಗ್ಗೆ ಅವರು ಏನನ್ನೂ ತಿಳಿಸದೆ ಕೊನೆಯಲ್ಲಿ "ನೀವು ರಾಜೀನಾಮೆ ಕೊಟ್ಟು ಬಿಡಿ" ಎಂಬ ಒಂದು ಪದವನ್ನು ಮಾತ್ರ ಆಗಾಗ್ಗೆ ಉಪಯೋಗಿಸಿ ಅಷ್ಟು ಹೊತ್ತು ಮಾತನಾಡಿದ್ದಾರೆ.

ಶ್ರೀ ಬಿ. ಚನ್ನಬೈರೇಗೌಡರು. ಪ್ರತಿಪಕ್ಷದವರು ಅಂಥಾ ಸಲಹೆಗಳನ್ನೇನೂ ಕೊಡಬೇಕಾದ್ದಿಲ್ಲವೆಂಬ ಅಂಶ ತಮಗೆ ಗೊತ್ತಿಲ್ಲವೇನು?

ಶ್ರೀ ಎಚ್. ಎಂ ಚನ್ನಬಸಪ್ಪನವರು.—That is a new theory. My goodness, I am only sorry for the bankruptcy of ideas. ಎದುರು ಪಕ್ಷದ ಮಾನ್ಯ ಸದಸ್ಯರುಗಳು ಹಾಗೆ ಹೇಳುವುದಾದರೆ ನಾನು ಅದಕ್ಕೆ ಬದಲಾಗಿ ಅವರು ಕೊಡುವಂಥ

(ಶ್ರೀ ಎಚ್. ಎಂ. ಚನ್ನಬಸಪ್ಪನವರು.)

ಸಲಹೆಗಳೆಲ್ಲಾ ಬರೀ ಗಾಳೀ ಗೋಪುರಕ್ಕೆ ಸಂಬಂಧಪಟ್ಟವುಗಳೆಂದೂ ಮತ್ತು ಈ ಪ್ರಜಾ ಸರ್ಕಾರದ ತಳಹದಿಯಾದ ಪ್ರಜಾಸತ್ತಾತ್ಮಕ ತತ್ವದ ದೃಷ್ಟಿಯಲ್ಲಿ ಮೇಲು ದರ್ಜೆ ಯಾವುದು, ಕೆಳದರ್ಜೆ ಯಾವುದೆಂಬ ಅಂಶ ಅವರಿಗೆ ಗೊತ್ತೇ ಇಲ್ಲವೆಂದೂ ತಿಳಿಸಬೇಕಾಗಿದೆ.

ಇಷ್ಟೆಲ್ಲಾ ಆಗಿರುವಾಗ, ಪರಿಸ್ಥಿತಿ ಬಿಗಡಾಯಿಸಿಕೊಂಡು ಹೋಗಿರುವಾಗ, ನಮಗಿರತಕ್ಕ ಸಾಧನ ಮಾರ್ಗಗಳಲ್ಲಿ ಭಾರತ ರಾಜ್ಯಾಂಗಕ್ಕೂ ಮತ್ತು ನಮ್ಮ ಸರ್ಕಾರಕ್ಕೂ ಒದಗಿದ್ದಂಥ ಒಂದು ಬಿಕ್ಕಟ್ಟನ್ನು ಯಾವ ಒಂದು ತೊಂದರೆಯೂ ಯಾರಿಗೂ ಒದಗದ ರೀತಿಯಲ್ಲಿ ಮತ್ತು ಅಪರಾಧಿಯ ಬಗ್ಗೆ ಏನೊಂದು ಸೌಲಭ್ಯವನ್ನು ಒದಗಿಸಬೇಕಾಗಿತ್ತೋ ಅದನ್ನು ದೊರೆಯುವ ರೀತಿಯಲ್ಲಿ ಏರ್ಪಾಡುಗಳನ್ನು ಮಾಡಿರತಕ್ಕದ್ದು ಸರ್ವರೂ ಒಪ್ಪತಕ್ಕದ್ದಾಗಿದೆ. ಆದರೆ ಸರ್ಕಾರದವರು ಮಾಡತಕ್ಕ ಕರ್ತವ್ಯಗಳೆಲ್ಲಾ ಇಲ್ಲಿಗೇ ಮುಗಿಯಿತೆಂದು ಹೇಳುವ ಹಾಗಿಲ್ಲ. "ರಾತ್ರಿ ಕಂಡ ಬಾವಿಗೆ ಹಗಲು ಬಿದ್ದರು" ಎಂದು ಹೇಳುವಂತೆ ಈಗ ಆಗಿರುತ್ತೆ. ಇಲ್ಲಿಗೆ ನಾವು ಎಷ್ಟೋ ವೇಳೆ ಬಾವಿಗೆ ಬಿದ್ದ ಹಾಗಾಗಿದೆ. ಆದುದರಿಂದ ಇನ್ನು ಮುಂದಕ್ಕಾದರೂ ನಮ್ಮ ಸರ್ಕಾರದವರು ಸಾಕಷ್ಟು ಎಚ್ಚೆತ್ತುಕೊಂಡು ಮುಂದಕ್ಕೆ ಈ ರೀತಿ ಬಾವಿಗೆ ಬೀಳದಂತೆ ಪ್ರಯತ್ನಗಳನ್ನು ಮಾಡತಕ್ಕದ್ದು ಮುಖ್ಯ ವಿಚಾರ. ಈ ಮುಖ್ಯ ವಿಷಯವೊಂದನ್ನು ತಾವು ಲಕ್ಷ್ಯದಲ್ಲಿಟ್ಟುಕೊಂಡು ಪ್ರತಿಯೊಂದು ಕೆಲಸಗಳನ್ನೂ ಬೇಗ ನಡೆಸಬೇಕೆಂದು ಸಲಹೆ ಮಾಡಿ, ಈಗ ಸಭೆಯ ಮುಂದಿರತಕ್ಕ ನಿರ್ಣಯವನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಟಿ. ಸುಬ್ರಹ್ಮಣ್ಯರವರು (ತುಮಕೂರು ಜಿಲ್ಲೆ).—ಅಧ್ಯಕ್ಷರೇ, ಈ ಸಭೆಯಲ್ಲಿ ನಮ್ಮ ಎದುರು ಪಕ್ಷದ ಕೆಲವು ಸ್ನೇಹಿತರು ಮತ್ತು ಇನ್ನೂ ನಾಲ್ಕೈದು ಜನ ಸ್ನೇಹಿತರು ಮಂತ್ರಿಮಂಡಲ ರಾಜೀನಾಮೆ ಕೊಡಬೇಕು ಎಂದು ಒತ್ತಾಯ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಮಂತ್ರಿಮಂಡಲ ರಾಜೀನಾಮೆ ಕೊಡಬೇಕಾಗಿ ಬಂದಿದೆಯೆ ಅಥವಾ ಏನಂಥ ಪರಿಸ್ಥಿತಿಯೊದಗಿದೆ, ಯಾವ ವಿಧವಾಗಿ ಒತ್ತಾಯ ಮಾಡಿದರೂ ಅನುಕೂಲ ಅವರ ಕಡೆಗೆ ಇದೆಯೆ ಅನ್ನುವುದನ್ನು ಮಾತ್ರ ನಾನು ವಿಮರ್ಶೆ ಮಾಡಿ ಅಲ್ಲಿಗೆ ಬಿಡಬೇಕೆಂದಿದ್ದೇನೆ.

Janab J. MOHAMED IMAM.—What about self-respect?

Sri T. SUBRAHMANYA.—I will examine that also. Well, he wanted to say about self-respect involved. I want to say that no self-respect is involved in this affair. The whole question that agitated the minds of the Ministry and of the Hon'ble Members of this House was not with regard to the transfer of the case or affording facilities to the accused for a fair and an impartial trial. They were agitated because of the use of Article 371 ordering the transfer of the case. The only point which agitated the minds of the Hon'ble Ministers and of the Hon'ble Members of the Assembly sitting on the opposite side, was about the use of Article 371 of the Constitution. They said "the use of Article 371 is derogatory to our interests. We do not tolerate it. Therefore we have to do something to safeguard our own rights and privileges". That was the only point, if you analyse the whole case. Nobody, much less any of the Ministers were anxious to deny a fair and impartial trial to any of the accused, much less to Sri Raju. Everyone in the State can be assured that we are always prepared to afford facilities to the accused to feel that he is having a fair and impartial trial. If that is our complaint, then the only question was difference of opinion. The opinion on the part of the Government was that the Judiciary in the State was upright and there was no question of any kind of influence, even by the Chief Justice or by the Executive. They were such Hon'ble men that there was no necessity to transfer the case. They felt that the accused will have a fair and impartial trial within the State itself. But the Government of India disagreed with them. It is only on that point that they disagreed.

The Hon'ble Sri K. CHENGALARAYA REDDY.—They did not disagree......

Sri T. SUBRAHMANYA.—Well, I shall correct myself. They did not disagree on the point of the accused having fair and impartial trial. The disagreement was about the apprehensions in the mind of the accused. In the mind of the Government of India though there was the apprehension that the accused may not have a fair and impartial trial, the Mysore Government felt that that apprehension had no basis. There was no agitation. The difference of opinion arises only on that subject and the Government of India advised them to transfer the case outside the State or to import another Judge from outside. What has happened now? Let us see if the step taken by the Ministry is derogatory to the interest or to the prestige of Mysore State or whether we have gained our prestige and enhanced our

prestige. Sri H. M. Channabasappa has explained all the aspects of the case. The only point which I want the whole House to consider is—whether the promise of the removal of the operation of Article 371 so far as Mysore is concerned, is a definite gain or not. I want the Hon'ble Members to consider this. The Chief Minister might not have thought it prudent to tell you. But I am prepared to tell you what happened. The Prime Minister met me not by appointment, but by accident. He told me that within 2½ to 3 weeks—because it was not told in confidence and there were several other persons there—the Mysore State will be given exemption from the operation of Article 371. What more do you want the Ministry to do? I do not understand.

Sri K. R. SREEKANTESWAR.—How to believe what you say?

Sri T. SUBRAHMANYA.—Well, if you cannot believe me, you cannot believe anybody else. I am not in the habit of uttering falsehood just to make a remark. Probably you are in that habit. I do not know. I can tell you that when I stand on my legs on the floor of this House and make a responsible statement, you must take it as a fact. You cannot make an accusation saying 'how to believe what you say?'. I am standing in flesh and blood and I heard the words from the mouth of the Hon'ble Chief Minister who told me that Mysore State would be getting exemption from the operation of Article 371. When I stand before you and utter these words on the floor of this Hon'able House as a responsible member thereof, you have the cheek to remark, "how can we believe it?". So, Sir, this is the position. The Ministry has achieved their objective. There was nothing more to be done. On the advice of the Prime Minister and the Ministry of State, they say "All right. We are also anxious to remove the suspicions from the minds of the accused, that he is going to have a fair trial in the Mysore State. No prestige of ours is involved in this case. We want to see that every citizen of India and also every citizen of Mysore State must have an impartial justice and it must seem to him that he is going to have an impartial trial and we agree to import a Judge from outside." Do not these things enhance the prestige of Mysore? I ask Janab Imam. He must analyse things and come to conclusion and not simply demand the resignation of the Ministry. Is he anxious to get in there? He will not get in there. (A Voice: "He may be anxious.") He may be anxious, but that will not happen. What happens is this. You want the country to go into the hands of the Administrator? You will bring disgrace to the State by your attitude,—not only to the State, but to this Hon'ble House and to the whole country of ours. I wish you do not make such remarks at least in future. I submit that the Ministry has enhanced our prestige and the prestige of the State. I could stand boldly before the whole world and say that we have taken the right step and come to right conclusions and have achieved something which otherwise they would not have achieved. Therefore this talk of demanding resignation of the Ministry is a tall talk. I hope that the opposition members will stop making such remarks.

*Janab SYED ABDUR RAHMAN (Chikmagalur *cum* Shimoga Muslim).—Sir, I rise to take part in this debate with a certain amount of sorrow. I consider that the moment is of very grave importance to the State. The issue before the House for its consideration is whether the step taken has been able to enhance the prestige or whether it has not been able to enhance the prestige of the State. I say, Sir, that we feel that the prestige of Mysore has not been enhanced; but on the other hand the prestige of the Government of India has been greatly enhanced.

Sri H. M. CHANNABASAPPA.—It is your own Government.

Janab SYED ABDUR RAHMAN.—The fact is that Mysore State is after all a dependency, classed as Part B State and calling itself as an integral part of the Union, or call it by whatever name you like. Your position is that

(JANAB SYED ABDUR RAHMAN)

you have absolutely no voice in certain very important matters. We knew that the existence of Article 371 in the constitution was certainly a great draw back for the removal of which, I do admit our leaders and Ministers have done their very best. But before it could be removed it is very unfortunate that we are faced with certain unhappy situation. The other day Sri V. P. Menon, immediately he read the discussions on the floor of this House, remarked that so long as Mysore depends for its help upon the Government of India...........

Mr. SPEAKER.—Afterwards he said that he did not make any such remarks.

Janab SYED ABDUR RAHMAN.—If he has corrected himself, I have nothing to say. But so long as article 371 is there, Mysore is under a great handicap. The sooner it is withdrawn the better. The efforts that were made by the Hon'ble Leader of the House so far as the withdrawal of that particular article 371 is concerned were really praiseworthy and it is for that very object this House, when it was seized of the special resolution which was placed for its consideration, wholeheartedly gave the fullest support, unstinted support, so that with that strength in hand he would go to Delhi and meet the Prime Minister and other Members of the Cabinet of the Government of India and see if he could find a way out of the difficulty. He has come back with the solution of the difficulty with which this House was confronted. He has made a statement before the House this morning to the effect that the Government of India would certainly be pleased to withdraw the directive which they had recently sent, namely, that the case should be transferred to a State nearby such as Madras or Bombay. Now the Government of India have given an assurance that in case we comply with the provisions of the letter which had been sent previously they would withdraw the directive. The unfortunate position is we told our people the other day that our prestige was more involved, that our honour was at stake. Now the question is, have we really got over the situation? Have we emerged triumphant from the ordeal with which we were faced? It is certainly a matter of doubt for me to say that we have emerged from the ordeal successfully. One thing has happened for which great credit is due to the Hon'ble Leader of the House and other Ministers. They have undoubtedly joined hands in enhancing the prestige of the Government of India. Mysore being the integral part of India, as long as article 371 exists, has to comply with the provisions of that particular article, especially when forced in that direction. When previously the Government of India wrote to the Government of Mysore to choose between the two alternatives they had suggested, if that had been accepted; it would have been a very great decision or at least if this House had been taken into confidence earlier at that stage, certainly that would have been to the credit of the Government. But this thing came before the House at a very late stage when the Government were in possession of a directive from the Government of India. And we were perplexed, the Government were perplexed, as to what should be done and the matter was brought before this House admittedly in a little haste. With a view to strengthen the hands of the Hon'ble Leader of the House we all joined with him without one dissident voice—an enviable position—and directed him to go to Delhi as a real representative of the people of Mysore and represent to the Prime Minister what we feel about this matter. I think even the Prime Minister has to a very great extent accommodated the Leader of the House by stepping down and saying "if you comply with the request in our previous letter we are certainly going to revise the directive contained in the letter sent recently." These are some of the facts which we have to take into consideration and I have no doubt in my mind that so far as these things are concerned our Leader has done his best and the position to-day is, the case has to be tried by a judge coming from outside the State of Mysore As Janab

Mahmood Shariff has raised certain important points regarding this matter, those points also require consideration at the hands of this House. I feel that as per the statement made by the Hon'ble Leader of the House this morning, the prestige of the Government and the State of Mysore has certainly been affected to a certain extent. Its prestige has definitely not been enhanced. On the other hand we have made a contribution in enhancing the prestige of the Government of India. That is undoubtedly a welcome step. If according to the assurance given by the Hon'ble Leader of the House that within two to three weeks article 371 is going to be removed out of the constitution that would be a great satisfaction, that would be a great success, that would certainly redound to the credit of the Hon'ble Chief Minister and of the Ministry as a whole. It would undoubtedly be an achievement. In fact when we considered the resolution that was placed before this House the other day, we were not worried so much about the case. All that we were worried about was with regard to the use of article 371 especially when our leaders were striving hard to see that it was out of the Constitution so far as it concerned the State of Mysore. We were thinking in that strain. This directive fell upon us like an avalanche. It was a great surprise. It was against the particular article being made applicable to the State of Mysore that we all protested and we were subject to all sorts of public criticism. Even our constitutional right to discuss this matter or to go into the merits of this matter was raised in several newspapers. It is there that we felt a little hurt. Especially when this House was seized of an opportunity, it had a right to discuss those things and there was a constitutional remedy attached to it. We were discussing in terms of constitutional remedy—in case the directive is not going to be withdrawn, what is going to happen to Mysore?

With regard to the remark that was made by Sri T. Subramanya, I quite agree with that part of the statement that if that directive is not obeyed what would happen? What consequences would follow on account of not carrying out the directive sent by the Government of India? That would not be a happy state of affairs. Really it would not be to the credit of Mysore. The Chief Minister went to Delhi with a mandate. with a directive from the Legislature and as he has expressed, Pandit Nehru suggested some change, ga e some turn and he has gone a long way to accommodate the people of Mysore. I personally feel that Pandit Jawaharlal Nehru has considered this matter very sympathetically and has said, "let us, by way of compromise, get back to the previous letter namely, importing a judge from outside and we will withdraw the directive." I feel there is certain amount of prestige, certain amount of honour attached because it is a question of prestige to the Government of India on one side and to the Government of Mysore on the other. These two things are there. So, a *via media* had to be found. Supposing, the Government of India had not done even this. What would have been the consequences? If that had not happened, I am sure that all the Ministers would have resigned. Because there is change on both sides, some formula acceptable has been found. How the public would take it, how the public would treat it, it is not for me to judge. But I feel that there are germs of settlement in this formula.

*ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—ಅಧ್ಯಕ್ಷರೇ, ನಮ್ಮ ಮಾನ್ಯ ಮಿತ್ರರನೇಕರು ಭಾಷಣ ಮಾಡುವಾಗ ನನ್ನ ಹೆಸರನ್ನು ಆಗಾಗ್ಗೆ ಸಭೆಯ ಮುಂದೆ ತಂದಿದ್ದಾರೆ. ಅದಕ್ಕಿಂತಲೂ ಹೆಚ್ಚಾಗಿ ನಾನು ಇದಕ್ಕೆ ಸಂಬಂಧಪಟ್ಟಂಥ ಒಂದು ಠರಾವನ್ನು ತಂದವನಾಗಿರುವುದರಿಂದ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಆ ದೃಷ್ಟಿಯಿಂದ ನಾನೀಗ ಮಾತನಾಡಲು ನಿಂತಿದ್ದೇನೆ.

ನಮ್ಮ ಮಿತ್ರರುಗಳು ನನ್ನ ಠರಾವಿನಲ್ಲೇನಿದೆಯೆಂಬುದನ್ನು ಬಿಟ್ಟು ಅವರ ಮನಸ್ಸಿನಲ್ಲೇನಿದೆಯೆಂಬುದನ್ನು ಹೇಳುವುದಕ್ಕೆ ಮೊದಲು ಮಾಡಿದರೇ ವಿನಾ, ಆ ಠರಾವಿನಲ್ಲೇನಿತ್ತೋ ಅದನ್ನು ನಿಧಾನವಾಗಿ ಯಾರೂ ಓದದೆ, ನೋಡದೆ ಮಾತನಾಡಿದ್ದು ಬಹಳ ವಿಷಾದಕರ. ನನ್ನ ಮಿತ್ರರಾದ ಶ್ರೀಮಾನ್ ಹುಚ್ಚೇಗೌಡರ ಮಾತು ಒಂದು ಮಾತೆ! ಒಂದು ಜವಾಬ್ದಾರಿ ಸಂಸ್ಥೆಯ ಅಧ್ಯಕ್ಷರಾಗಿದ್ದಾರೆ, ಅದರಿಂದಲಾದರೂ ಜವಾಬ್ದಾರಿಯುತವಾಗಿ ಮಾತನಾಡುತ್ತಾರೆಂದು ತಿಳಿದುಕೊಂಡಿದ್ದೆ. ಆದರೆ ಅವರ ಇಂದಿನ ಮಾತು ನಿ ವಾಗಿಯೂ ವಿಷಾದಕರ! ಅವರು ಎಷ್ಟರಮಟ್ಟಿಗೆ ಒಂದು ಸಂಸ್ಥೆಯಿಂದ ಇನ್ನೊಂದು ಸಂಸ್ಥೆಗೆ ದಿವಸ

(ಶ್ರೀ ಎ. ಭೀಮಪ್ಪನಾಯಕರು):

ದಿವಸಕ್ಕೂ ಹಾರುತ್ತಾರೋ ಹಾಗೆಯೇ ಅವರ ಅಭಿಪ್ರಾಯವೂ ಕೂಡ ನಿಮಿಷ ನಿಮಿಷಕ್ಕೂ ಬದಲಾಯಿಸುತ್ತದೆ!!

Sri M. N. JOIS.—Crossing the floor is the usual procedure in Parliament, Sir. (Loud laughter.)

ಶ್ರೀ ಎ. ಭೀಮಪ್ಪನಾಯಕರು.—ಅವರು ಹಿಂದೆ ನಿರ್ಣಯ ಬಂದಾಗ ಮುಖ್ಯ ಮಂತ್ರಿಗಳು ಸಭೆಯ ಮುಂದೆ ಇಂಡಿಯಾ ಸರ್ಕಾರದವರ ಆಜ್ಞೆಯಿತ್ತಿರುವುದನ್ನು ಕೇಳಿದರು. ಆಗ ಅವರೂ ಒಂದು ಸಂಸ್ಥೆಯ ಮುಖಂಡರಾಗಿದ್ದವರಾಗಿ ಬೇರೊಂದು ನಿರ್ಣಯ ಸಭೆಯ ಮುಂದಿಟ್ಟು ಹೀಗೇ ನೀವು ಮಾಡಬೇಕು. ಹಾಗೆ ಮಾಡದೆ ಇದ್ದರೆ ರಾಜಿನಾಮೆ ಕೊಟ್ಟು ಮನೆಗೆ ಬರಬೇಕೆಂದೇಕೆ ಹೇಳಲಿಲ್ಲವೋ, ಆ ಜವಾಬ್ದಾರಿ ಆ ದಿವಸ ಏಕೆ ಅವರು ಮರೆತರೋ ಗೊತ್ತಾಗಲಿಲ್ಲ! ಆ ದಿವಸ ನಾವು ತಂದ ನಿರ್ಣಯಕ್ಕೇ ಸಂಪೂರ್ಣ ಬೆಂಬಲ ಕೊಟ್ಟು, ಮೈಸೂರಿನ ಗೌರವವನ್ನುಳಿಸುವುದಕ್ಕೆ ಎಲ್ಲಾ ಕಾರ್ಯಕ್ರಮಗಳನ್ನೂ ಕೈಕೊಳ್ಳಬೇಕೆಂದು ನಾವು ಅವರನ್ನು ಕಳುಹಿಸಿಕೊಟ್ಟು ಈಗ ....

ಶ್ರೀ ಬಿ. ಹುಚ್ಚೇಗೌಡರು.—ಬಹುಶಃ ಅವರು ನನ್ನ ಭಾಷಣ ಕೇಳಲಿಲ್ಲವೆಂದು ತೋರುತ್ತೆ. ನಾನು ಸಂಪೂರ್ಣ ಬೆಂಬಲ ಕೊಟ್ಟೆನಂತೆ.

ಶ್ರೀ ಎ. ಭೀಮಪ್ಪನಾಯಕರು.—ಅವರೇನು, ಭಾಷಣ ಏನು ಬೇಕಾದರೂ ಮಾಡುತ್ತಾರೆ! ಮುಖ್ಯವಾಗಿ ನನ್ನ ಠರಾವಿಗೆ ಅವರು ಕೊಟ್ಟ ಬೆಂಬಲ, ಮತ್ತು ಆ ಠರಾವಿನಲ್ಲಿರುವ ಅಂಶಗಳನ್ನು ತೆಗೆದುಕೊಳ್ಳಬೇಕೇ ವಿನಾ, ಈ ಸಭೆಯಲ್ಲಿರತಕ್ಕ 74 ಜನರೂ 74 ವಿಧವಾಗಿ ಭಾಷಣ ಮಾಡಬಹುದು. ಆದರೆ ವಿಷಯ ಒಂದೇ. ಮೈಸೂರು ಸರ್ಕಾರದವರು ಮೈಸೂರಿನ ಗೌರವ ಉಳಿಸುವುದಕ್ಕೆ ಎಲ್ಲಾ ಕಾರ್ಯಕ್ರಮಗಳನ್ನೂ ತೆಗೆದುಕೊಳ್ಳಬೇಕಾದ್ದು ಎಂಬುದು ಒಂದೇ. ಎರಡನೆಯದು, ಭಾರತ ಸರ್ಕಾರದವರು ನಮ್ಮ ಮೇಲೆ ಹೇರಿರುವ 371 ನೆಯ ಸೆಕ್ಷನನ್ನು ಉಪಯೋಗಿಸಲು ಅವರಿಗೆ ಅಧಿಕಾರವಿರಲಿಲ್ಲವೆಂದು ಯಾರೂ ಹೇಳಲಿಲ್ಲ. Whether it was constitutionally proper, whether there was constitutional propriety, was all that was questioned. ದೊಡ್ಡ ದೊಡ್ಡ ಪಂಡಿತರು, ಅಲ್ಲಾಡಿ ಕೃಷ್ಣಸ್ವಾಮಿಯವರೂ ಅದರಲ್ಲಿ constitutional propriety ಇದೆ, ಆ ಹಕ್ಕಿದೆ ಎಂಬುದನ್ನು ಒಪ್ಪಿಕೊಂಡಿದ್ದಾರೆ. ಭಾರತ ಸರ್ಕಾರದವರೂ ಅದನ್ನು ಒಪ್ಪಿಕೊಳ್ಳದೆ ಇದ್ದರೆ ಅವರದನ್ನು ವಾಪಸು ತೆಗೆದುಕೊಳ್ಳುವ ನಿರ್ಧಾರಕ್ಕೆ ಬರುತ್ತಲೇ ಇರಲಿಲ್ಲ. ಭಾರತ ಸರ್ಕಾರದವರೂ ಅಧ್ಯಕ್ಷರ ಮೂಲಕ ಹೊರಡಿಸಿರುವ ಡೈರೆಕ್ಟಿವನ್ನು, ಕಟ್ಟಾಜ್ಞೆಯನ್ನು ಈ ದಿವಸ ವಾಪಸು ತೆಗೆದುಕೊಳ್ಳುತ್ತೇವೆಂದು ಹೇಳಿದಾಗ, ನಾವು ತಪ್ಪು ಮಾಡಿದ್ದೇವೆ ದು ಬೇರೆ ಹೇಳಬೇಕಾಗಿಲ್ಲ, ಅದರಲ್ಲಿ ಆ ಅರ್ಥ ಅಡಗಿದೆ. ನೀವು constitutional propriety ಎಂದು ಏನು ಹೇಳುತ್ತೀರೋ ಅದರಂತೆ ನಿಮಗೆ ನೋವಾಗಿದ್ದರೆ ವಾಪಸು ತೆಗೆದುಕೊಳ್ಳುತ್ತೇವೆ, ಆದರೆ ನಾವೂ ಒಂದು ಸಲಹೆ ಕೊಟ್ಟಿದ್ದೇವು. ಆ ಸಲಹೆಯಂತೆ ನೀವು ನಡೆದರೆ ಒಳ್ಳೆಯದು ಎಂದು ಹೇಳಿದ್ದಾರೆ. ಈಗ ಹಾಗೆ ನಡೆದರೆ ಎರಡು ಸರ್ಕಾರದವರ ಗೌರವಗಳೂ ಹೆಚ್ಚಿತೆಂದು ನನ್ನ ಅಭಿಪ್ರಾಯ. ಭಾರತ ಸರ್ಕಾರ ತಾವು ಕೊಟ್ಟ ಕಟ್ಟಾಜ್ಞೆಯನ್ನು ವಾಪಸು ತೆಗೆದುಕೊಳ್ಳುವುದರಿಂದ ಅದರ ಗೌರವ ಹೆಚ್ಚಿತು. ಮೈಸೂರು ಸರ್ಕಾರದವರು ನ್ಯಾಯವನ್ನು ಒದಗಿಸಿ ಕೊಡುವ ದೃಷ್ಟಿಯಿಂದ ಈ ರೀತಿ ಮಾಡಲೊಪ್ಪಿದ್ದರಿಂದ ಅವರ ಗೌರವವೂ ಹೆಚ್ಚಿತು. ಅವರು ಹಿಂದೆ ಯಾವುದೋ ಭಾವನೆಯಿಂದ ಕೈಯಲ್ಲಿ ಚಾವಟಿ ಹಿಡಿದುಕೊಂಡು ಹೊರಟದ್ದನ್ನು ಖಂಡಿಸಿ, ಅವರು ಹಾಗೆ ಮಾಡಕೂಡದೆಂದು ಹೇಳಿದ್ದು ತಪ್ಪಲ್ಲ. ಆ ದಿವಸ ನಾವು ತೆಗೆದುಕೊಂಡ ನಿಲುವು ಚೆನ್ನಾಗಿತ್ತು ಎಂದು ಅಂದು ನಾನು ಹೇಳಿದ್ದೇನೆ, ಇಂದಿಗೂ ಹೇಳುತ್ತೇನೆ. ಇಂದಿನ ದಿವಸ ಬೇರೆಕಡೆಯಿಂದ ಒಬ್ಬ ಜಡ್ಜರನ್ನು ನ್ಯಾಯ ದೊರಕಿಸುವುದಕ್ಕಾಗಿ ತನ್ನಿ ಎಂದು ಅವರು ಹೇಳಿದ್ದನ್ನು ನಾವು ಕೇಳಿದ ಮಾತ್ರದಿಂದ ನಮ್ಮ ಗೌರವ ಕೆಳಗಿಳಿಯಿತೆಂದು ಯಾರೋ ಕೆಲವರು ಹೇಳಬಹುದೇ ವಿನಾ ಎಲ್ಲರೂ ಅಲ್ಲ. ಶ್ರೀಮಾನ್ ಚೆನ್ನಬಸಪ್ಪನವರೂ ಇದರಿಂದ ಗೌರವ ಇಳಿಯುವುದಿಲ್ಲವೆಂದು ಹೇಳಿದ್ದಾರೆ. 371 ನೆಯ ಸೆಕ್ಷನನ್ನು ವಾಪಸು ತೆಗೆದುಕೊಂಡಿದ್ದರಿಂದ ಅವರ ಗೌರವವೂ ಹೆಚ್ಚಿತು. ನಾವೂ ಅವರ ಬುದ್ಧಿವಾದ ತೆಗೆದುಕೊಂಡು ಒಂದು 'ಹೆಜ್ಜೆ ಹಿಂದಿಟ್ಟು ನಿಮ್ಮ ಬುದ್ಧಿವಾದದಂತೆ ನಡೆಯುವುದಕ್ಕೆ ಸಿದ್ಧರಾಗಿದ್ದೇವೆಂದು ಹೇಳಿದ ಮಾತ್ರದಿಂದಲೇ ನಮ್ಮ ಗೌರವ ಇಳಿಯಿತೆಂದು ಹೇಳುವವರು ನಿಜವಾಗಿಯೂ ದೇಶದ ಹಿತದೃಷ್ಟಿಯಿಂದ ಹೇಳುತ್ತಿಲ್ಲ; ತನ್ನ ಉದ್ದೇಶ ಸಾಧನೆಯ ದೃಷ್ಟಿಯಿಂದ ಹೇಳುತ್ತಿದ್ದಾರೆ, ಅಷ್ಟೆ. ಒಳ್ಳೆಯದು, ಅವರೀಗ ಏನು ಹೇಳುತ್ತಾರೆ? ರಾಜಿನಾಮೆ ಕೊಡಿಯೆಂದು ತಾನೆ? ಆದರೆ ರಾಜಿನಾಮೆ ಕೊಟ್ಟದ್ದರಿಂದ ಪರಿಣಾಮವೇನಾಗುತ್ತದೆಂಬುದನ್ನು ಶ್ರೀ ಟಿ. ಸುಬ್ರಹ್ಮಣ್ಯರವರು ಬಹು ಚೆನ್ನಾಗಿ ವಿವರಿಸಿದ್ದಾರೆ. ನಾವು ರಾಜೀನಾಮೆ ಕೊಟ್ಟರೂ ಆ ಸ್ಥಾನಕ್ಕೆ ಅವರು ಬರುತ್ತಾರೆಂದು ತಿಳಿಯುತ್ತಾರೆಯೇ? ದೇಶದಲ್ಲಿ 'ಅನಾರ್ಕಿ' ಏರ್ಪಡುತ್ತದೆ, ಅಷ್ಟೆ! ಇವತ್ತಿನವರೆಗೂ ಇದ್ದ ಜವಾಬ್ದಾರಿ ಸರ್ಕಾರ ನಿಂತು ಹೋಗಿ ಈ ನ್ಯಾಯವಿಧಾಯಕ ಸಭೆಯೂ ನಿಂತುಹೋಗಿ ಬೇರೊಬ್ಬ ಅಡ್ಮಿನಿಸ್ಟ್ರೇಟರ್ ಬಂದು ನಮಗೂ ನಿಮಗೂ ಜಾಗವಿಲ್ಲದಂತೆ ಮಾಡಿಕೊಳ್ಳುತ್ತೀರಿ! ಇನ್ನೆಲ್ಲಾ ಚುನಾವಣೆಗಳಿಗೆ ಸ್ವಲ್ಪ ದಿವಸವಿದೆ. ಬಹುಮತದಿಂದ ಚುನಾಯಿತರಾಗಿ ಬನ್ನಿ, ಈ ಸ್ಥಾನವನ್ನು ಗಳಿಸಿ; ನಮ್ಮನ್ನು ಆ ಸ್ಥಾನಕ್ಕೆ ಕೂಡಿಸಿ; ಆಗ ನಾವು ಇಂಥ ವಿಷಯಗಳಲ್ಲಿ ನಿಮಗಿಂತ ಹೆಚ್ಚಿಗೆ ಜವಾಬ್ದಾರಿಯಿಂದ ವರ್ತಿಸುತ್ತೇವೆಯೇ ಇಲ್ಲವೇ ನೋಡಿ. ನಿಮ್ಮಗಳ ಹಾಗೆ ಒಂದು ದಿವಸ ಒಂದು ನಿಲುವನ್ನು ತೆಗೆದುಕೊಂಡು ಮಾರನೆಯ ದಿವಸ ಮತ್ತೊಂದು ನಿಲುವನ್ನು ತೆಗೆದುಕೊಳ್ಳುವುದಿಲ್ಲ. ನಮ್ಮ ಮಿತ್ರರಾದ ಶ್ರೀಕಂಠೇಶ್ವರರೇ ಸಭೆಯಲ್ಲಿ ಒಂದು ಮಾತು ಹೇಳುತ್ತಾರೆ, ಪತ್ರಿಕೆಗಳಲ್ಲಿ ಏನೋ ತಪ್ಪಾಗಿ ಹೇಳಿಬಿಟ್ಟೆ ಎಂದು ಬೇರೊಂದು ಹೇಳುತ್ತಾರೆ! ಮತ್ತೆ; ಅವರ ಮುಖಂಡರ ಬಳಿ ಹೋಗಿ ಏನು ಹೇಳುತ್ತಾರೋ ಕಾಣೆ! ಆ ಮುಖಂಡರ ಜೊತೆಗೆ ತಾಳ ಕುಟ್ಟುವುದಕ್ಕೆ ಏನೋ ಬೇರೆ ಹೇಳುತ್ತಾರೆ, ಆ ಮೇಲೆ ಅಲ್ಲಿ ಹೇಳಿದ್ದನ್ನು ಇಲ್ಲಿ ಬದಲಾಯಿಸುತ್ತಾರೆ!!

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಅದಿರಲಿ, ನಿಮ್ಮ ಆಟಂ ಬಾಂಬು ಏನಾಯಿತು?

ಶ್ರೀ ಎ. ಭೀಮಪ್ಪನಾಯಕರು.—ಆಟಂ ಬಾಂಬು ಹಾರಿದೆ. 371 ನೆಯ ಸೆಕ್ಷನ್ನನ್ನು ನಿಮ್ಮ ಕೈಯಲ್ಲಿ ಕೊಟ್ಟು ನಿಮ್ಮ ತಲೆಯ ಮೇಲೆ ಹಾರಿಸಿದೆ. ಸೋಷಿಯಲಿಸ್ಟರು ಬಾರದಂತೆ ಮಾಡಿದೆ. ತಾವೇ ಹೇಳಿ

ದ್ದೀರಿ, 371ನೆಯ ಸರ್ಕಲ್ ಇರಬೇಕು, ಚಾವಟಿ ತೆಗೆದು ಕೊಂಡು ಹೊಡೆಯುವವನು ಇರಬೇಕು ಎಂದು !

ಶ್ರೀ ಕೆ. ಆರ್. ಶ್ರೀಕಂಠೇಶ್ವರರವರು.—ನಿಮ್ಮಲ್ಲಿ ನಂಬಿಕೆ ಇಲ್ಲ. ಆದ್ದರಿಂದಲೇ ಹೊಡೆಯುವವರೊಬ್ಬರು ಇರಬೇಕೆಂದು ಹೇಳಿದ್ದು.

ಶ್ರೀ ಎ. ಭೀಮಪ್ಪನಾಯಕರು.—ಅದೇನೇ ಇರಲಿ, ಅದನ್ನು ಇನ್ನು ಹೆಚ್ಚಿಗೆ ಪ್ರಸ್ತಾಪಿಸುವುದಿಲ್ಲ.

ನಮ್ಮ ಮಿತ್ರರು, ಠರಾವನ್ನು ಮಂಡಿಸುವುದಕ್ಕೂ ಸಿದ್ಧರಾಗಿದ್ದಾರೆ, ವಾಪಸು ತೆಗೆದುಕೊಳ್ಳುವುದಕ್ಕೂ ಸಿದ್ಧವಾಗಿದ್ದಾರೆ ಎಂದು ಹೇಳಿದರು. ಠರಾವನ್ನು ಯಾವ ಉದ್ದೇಶದಿಂದ ಮುಂದಿಟ್ಟರೋ ಆ ಉದ್ದೇಶ ವನ್ನು ನೆರವೇರಿಸಿದ್ದಾರೆ, ಅಲ್ಲದೆ ಒಂದು ಹೆಜ್ಜೆ ಮುಂದಕ್ಕೂ ಹೋಗಿದ್ದಾರೆ. ಹೀಗಿರುವಾಗ ಠರಾ ವನ್ನು ವಾಪಸು ತೆಗೆದುಕೊಳ್ಳುವುದರಲ್ಲೇನೂ ಗೌರವ ಹಾನಿಯಾಗುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಒಂದು ಹೆಜ್ಜೆ ಮುಂದಕ್ಕೆ ಹೋಗದಿದ್ದರೂ ಪರವಾಗಿಲ್ಲ !

ಶ್ರೀ ಎ. ಭೀಮಪ್ಪನಾಯಕರು.—ನಾಳೆ ದಿವಸ ಬೆಳ ಗಾದಾಗ ಪತ್ರಿಕೆಗಳನ್ನು ಓದಿನೋಡಿ; ನೀವೇ ತಿಳಿದು ಕೊಳ್ಳುತ್ತೀರಿ.

ಎರಡನೆಯದಾಗಿ, ರಾಜ್ಯಾಂಗದ 371ನೆಯ ವಿಧಿ ಯಿಂದ ಮೈಸೂರಿಗೆ ವಿನಾಯಿತಿಯನ್ನು ದೊರಕಿಸಿ ಕೊಳ್ಳುವ ಮನೋರೋದ್ದೇಶ ಆ ದಿವಸ ಈ ಸಭೆಗಿದ್ದುದು. ಇದಕ್ಕಾಗಿ ಪ್ರಾರಂಭದಿಂದಲೂ ಪ್ರಯತ್ನ ಮಾಡುತ್ತಿ ದ್ದೇವೆ. ಎ.ಐ.ಸಿ.ಸಿ. ಸಭೆಯಲ್ಲಿ ಕೂಡ ಚುನಾವಣಾ ಘೋಷಣೆಯ ಜೊತೆಗೆ ಮೈಸೂರಿಗೆ ಈ ವಿನಾಯಿತಿ ಯನ್ನು ಕೊಡುವುದು ಅಗತ್ಯವೆಂದು ಹೇಳಿದರು. ಹೀಗಿರುವಾಗ ಇದನ್ನು ನಮ್ಮ ಸಂಸ್ಥಾನದ ಮೇಲೆ ಪ್ರಯೋಗಿಸಿದ ಸಂದರ್ಭದಲ್ಲಿ ಯಾರಿಗಾದರೂ ಕಳವಳ ಉಂಟಾಗುತ್ತದೆ. ಇದರಿಂದ ನಮ್ಮ ಸಂಸ್ಥಾನದ ಗೌರವಕ್ಕೆ ಧಕ್ಕೆ ಬಂದಿದೆಯೆಂದು ಭಾವಿಸುವುದು ಸ್ವಾಭಾವಿಕ. ಆದರೆ, ಭಾರತದ ಏಕಮಾತ್ರ ಮುಖಂ ಡರಾದ ಪಂಡಿತ ನೆಹರೂರವರು ಮೈಸೂರಿಗೆ 371ನೆಯ ವಿಧಿ ಅನ್ವಯವಾಗದಂತೆ ತೆಗೆದುಹಾಕುತ್ತೇವೆ ಎಂದು ಹೇಳಿದಾಗ ಅವರ ಮನಸ್ಸಿನ ಮೇಲೆ ಈ ಸಭೆಯ ಚರ್ಚೆಯಿಂದ ಏನು ಪರಿಣಾಮವಾಗಿದೆ ಎಂಬುದನ್ನು ನೋಡಿ.

ಶ್ರೀ ಬಿ. ಹುಚ್ಚೇಗೌಡರು.—"ಬೀಸೋ ದೊಣ್ಣೆ ಏಟು ತಪ್ಪಿಸಿ ಕೊಂಡರೆ ......" ಎನ್ನುವ ಹಾಗೆ !

ಶ್ರೀ ಎ. ಭೀಮಪ್ಪನಾಯಕರು.—ದೊಣ್ಣೆಗೆ ತಲೆ ಕೊಟ್ಟು ರಕ್ತವನ್ನು ಹರಿಸಿ ಕೊಂಡವರು ನಾವು, ಮನೆ ಯೊಳಗೆ ಕುಳಿತು, ಸಂದಿಯಿಂದ ಏನಾಗುತ್ತಿದೆ ಎಂದು ನೋಡಿದವರು ನೀವು. ಭಾರತದ ಅತ್ಯುಚ್ಚವ್ಯಕ್ತಿಗೆ, ತ್ಯಾಗಮೂರ್ತಿಗೆ "ಬೀಸುವ ದೊಣ್ಣೆ ಏಟು ತಪ್ಪಿಸಿ ಕೊಳ್ಳುವವರು" ಎಂದು ಹೇಳಿರುವುದು ನಾಚಿಕೆಗೇಡಿನ ಮಾತು. ಭಾರತದ ಅತ್ಯುಚ್ಚವ್ಯಕ್ತಿಗೆ ಈ ಮಾತು ಹೇಳುವುದು ಸಲ್ಲದು. ಈ ಚರ್ಚೆಗೆ ಈಗ ಹೋಗುವುದು ಬೇಡ.

ಮೈಸೂರಿನ ಮುಖ್ಯ ಮಂತ್ರಿಗಳಿಗೆ ನಾವು ಏನು ಸಂದೇಶವನ್ನು ಕೊಟ್ಟು ಕಳುಹಿದ್ದೆವೊ ಅದರಂತೆ ಅವರು ನಡೆದಿಲ್ಲ, ಕರ್ತವ್ಯಭ್ರಷ್ಟರಾಗಿದ್ದಾರೆ, ಅವರು ಏನು ಕರ್ತವ್ಯವನ್ನು ಮಾಡಬೇಕಾಗಿತ್ತೋ ಅದನ್ನು ಮಾಡಿಲ್ಲ ಎಂದು ಹೇಳತಕ್ಕ ಒಬ್ಬ ಸದಸ್ಯರೂ ಈ ಸಭೆ ಯಲ್ಲಿಲ್ಲ. ಯಾರೂ ಹಾಗೆ ಹೇಳಿಲ್ಲ. ಹೀಗೆ ಹೇಳದೇ ಇರುವಾಗ ಅವರು ಕರ್ತವ್ಯವೇನಿತ್ತೋ ಅದನ್ನು ಮಾಡಿ ದ್ದಾರೆ. ಅವರಿಗೆ ಹೇಳಿದ್ದುದು Take all necessary steps to vindicate the honour. ಈ ಕರ್ತವ್ಯ ವನ್ನು ಅವರು ಮಾಡಿಲ್ಲವೆಂದು ಯಾರೂ ಹೇಳಿಲ್ಲ. ಇಷ್ಟೇ ಅಲ್ಲ, ಅವರು ತಮ್ಮ ಕರ್ತವ್ಯವನ್ನು ಮೈಸೂರಿನ ಗೌರ ವಕ್ಕೂ, ಕೀರ್ತಿಗೂ, ಯೋಗ್ಯತೆಗೂ ತಕ್ಕಂತೆ ಮಾತು ಕೊಂಡು ವಾಪಸು ಬಂದಿದ್ದಾರೆ. ಶ್ರೀ ಇಮಾಂರವರು 'ನಿಮ್ಮ ಜೇಬಿನಲ್ಲಿರುವ ಕಾಗದವನ್ನು ನಿಮ್ಮ ಪೆಟ್ಟಿಗೆಯ ಲ್ಲಿರುವ ಕಾಗದ ಪತ್ರವನ್ನು ಓದಿ' ಎಂದು ಹೇಳಿದರು. ಏಕೆ ಓದಬೇಕು ? ಮುಖ್ಯ ಮಂತ್ರಿಗಳು ಅವರ ಅಭಿ ಪ್ರಾಯವನ್ನು ಕೊಟ್ಟಿದ್ದಾರೆ, ಭರವಸೆಯನ್ನು ಕೊಟ್ಟಿ ದ್ದಾರೆ. ನೀವು ಏನು ಸಂದೇಶವನ್ನು ಕೊಟ್ಟಿದ್ದಿರೋ ಆ ಸಂದೇಶದಂತೆ ಏನೇನು ಕಾರ್ಯಕ್ರಮ ತೆಗೆದು ಕೊಳ್ಳಬೇಕಾಗಿತ್ತೋ ಅದನ್ನು ತೆಗೆದುಕೊಂಡಿದ್ದೇ ನೆಂದು ಹೇಳಿ ಭರವಸೆಯನ್ನು ಕೊಟ್ಟಿದ್ದಾರೆ. ಅದನ್ನು ಸಭೆಯ ಮುಂದೆ ಹೇಳಿದ್ದಾರೆ. 371ನೆಯ ವಿಧಿಯ ರಿಮಿತಿಯಿಂದ ವಿನಾಯಿತಿ ಹೊಂದಿದ್ದೇವೆ ಎಂದು ಅವರು ಹೇಳುವಾಗ ಅಲ್ಲಿಂದ ಬಂದಿರುವ ಪತ್ರವನ್ನು ನಾವು ನೋಡಬೇಕು, ನೀವು ಅದನ್ನು ತೋರಿಸಿ ಎಂದು ಕೇಳುವುದು ಅಗತ್ಯವಲ್ಲ ಎಂದು ಅವರು ಹೇಳಿದ ಮೇಲೂ ಒತ್ತಾಯ ಮಾಡಿ ಪುನಃ ಅದನ್ನು ತೋರಿಸಿ ಎಂದು ಕೇಳುವುದು ಅಷ್ಟು ಸೂಕ್ತವಲ್ಲವೆಂದು ನಮ್ಮ ಮಿತ್ರರಾದ ಜನಾಬ್ ಇಮಾಂರವರಿಗೆ ವಿನಯದಿಂದ ಹೇಳುತ್ತೇನೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರರವರು.—ಬೈದು ಬರೆದಿದ್ದಾರೆ, ಅದಕ್ಕೇ ತೋರಿಸುವುದಿಲ್ಲ.

ಶ್ರೀ ಎ. ಭೀಮಪ್ಪನಾಯಕರು.—ಹೀಗೆ ನಿಮಗೆ ಕನಸು ಬಿತ್ತೆಂದು ಕಾಣುತ್ತದೆ ! ಇಷ್ಟು ಮಟ್ಟಿಗೆ ಕೃತಿ ಚಾರ್ಯವನ್ನು ಮಾಡುತ್ತೀರೆಂದು ನನಗೆ ತಿಳಿದಿರಲಿಲ್ಲ. ಬೇರೆಯವರಿಗೆ ಬರೆದಿರುವುದನ್ನು ಓದಿ ತಿಳಿದುಕೊಳ್ಳು ವುದು ಕೃತಿಚೌರ್ಯವಲ್ಲದೆ ಇನ್ನೇನು ? ಇದು ಹೋಗಲಿ, ಬೇಡ.

ನಾನು ಹೇಳುವುದಿಷ್ಟೆ. ಈ ಸಭೆಯ ಗೌರವ ಮುಖ್ಯ ವಾದುದು ನಿಜ. ಕೆಲವು ಮಾನ್ಯರು ಮಾತನಾಡು ವಾಗ ವಿಷಯಕ್ಕೆ ತಲೆಯ ಮೇಲೆ ಹೊಡೆದಂತೆ ಏನೋನೋ ಹೇಳುತ್ತಾರೆ; ಮುಖ್ಯ ಮಂತ್ರಿಗಳು ಏನು ಮಾಡಿದರು, ಅಲ್ಲಿಂದ ಏನು ಸಂದೇಶ ಬಂತು ಎನ್ನುವುದನ್ನು ಹೇಳು ವಾಗ ಅನುಮಾನ ಪಡುತ್ತಾರೆ, ಏಕೆ ನಂಬಬೇಕು ಎಂದು ಹೇಳುತ್ತಾರೆ. ಇದು ಅಷ್ಟು ಸೂಕ್ತವಲ್ಲ. ಈ ಹೊತ್ತು ನಂಬಿದೆವು, ನಾಳೆ ವಿನಾಯಿತಿ ಬಂದರೆ ಏನು ಹೇಳುತ್ತೀರಿ ಎಂದು ಕೆಲವರು ಪ್ರಶ್ನೆ ಹಾಕಿದರು. ಏನು ಹೇಳಿದರೂ ನೀವು ನಂಬದೇ ಹೋದರೆ ನಾವು ನಿಮ್ಮ ಅಪಾದನೆಗೆ ಏಕೆ ಬೆಲೆ ಕೊಡಬೇಕು ಎಂದು ಕೇಳುತ್ತೇನೆ.

ಶ್ರೀ ಬಿ. ಹುಚ್ಚೇಗೌಡರು.—ನಾಲ್ಕು ವರ್ಷಗಳಿಂದ ನೋಡಿದ್ದೇವೆ..............

ಶ್ರೀ ಎ. ಭೀಮಪ್ಪನಾಯಕರು.—ನಾವು ನಿಮ್ಮನ್ನು ಅನೇಕ ವರ್ಷಗಳಿಂದ ನೋಡಿದ್ದೇವೆ. ಮಂತ್ರಿಮಂಡಲ ದಲ್ಲಿ ಕುಳಿತವರನ್ನೂ ನೋಡಿದ್ದೇವೆ, ಮುಂದೆ ಮಂತ್ರಿ ಮಂಡಲಕ್ಕೆ ಬರುವುದಕ್ಕಾಗಿ ಪ್ರಯತ್ನ ಮಾಡುತ್ತಿರು ವವರನ್ನೂ ನೋಡಿದ್ದೇವೆ. ನಮಗೂ ತಮಗೂ ನಾಳೆ ಬೀಳುವ ಯುದ್ಧದಲ್ಲಿ ನಿಮ್ಮ ಶಕ್ತಿಯನ್ನು ತೋರಿಸಿ, ಅದು ಬೇರೆ ಮಾತು.

ಇನ್ನು ಕೆಲವು ಪತ್ರಿಕೆಗಳಲ್ಲಿ ಬಂದಿರುವ ವರದಿಯ ವಿಚಾರ ಎರಡು ಮಾತು ಹೇಳುತ್ತೇನೆ. ಇವರು ತಮ್ಮ ಟೀಕೆಯ ಮಟ್ಟವನ್ನು ಮೀರಿ ಮಾಡಿದ್ದಾರೆ.

Janab J. MOHAMED IMAM.—I rise to a point of order. General remarks here about any paper is irrelevant.

Sri K. R. SREEKANTESWAR.—General remark like that is not proper, Sir. he must make particular reference to the paper which he has in mind.

Sri A. BHEEMAPPA NAIK.—My friends made references to wild men with free innings. We say that these mild men with their three daggers have hurt us very much. Any way it is their privilege. I do not question that. Whether that is a privilege or not the House will in due course take note of it.

ಈಗ ಅದು ನಮಗೆ ಬೇಡ. ಈ ಸಭೆಗೆ ಮಾತ್ರ ಸಂಬಂಧಪಟ್ಟಂತೆ ಮಾತನಾಡಬೇಕೆಂದರೆ ನಾನು ಹೇಳುವುದಿಷ್ಟು. ಮೈಸೂರು ಸರ್ಕಾರ ತನ್ನ ಕರ್ತವ್ಯ ಮಾಡಿದೆ, ತನ್ನ ಘನತೆಯನ್ನು ಹೆಚ್ಚಿಸಿದೆ. ಭಾರತ ಸರ್ಕಾರ ತನ್ನ ಕೃತಿಯಿಂದ ತನ್ನ ಗೌರವವನ್ನೂ ಮೈಸೂರಿನ ಗೌರವವನ್ನೂ ಎತ್ತಿ ಹಿಡಿದಿದೆ ಎಂದು ಹೇಳುತ್ತೇನೆ. ಕೆಲವರು ಈ ಸಭೆಯಲ್ಲಿ ನಾವು ಇಂತಹ ಠರಾವನ್ನು ತರುವುದಕ್ಕೆ ಹಕ್ಕೇ ಇಲ್ಲ, ರಾಷ್ಟ್ರಾಧ್ಯಕ್ಷರ ಆಜ್ಞೆಯನ್ನು ಇಲ್ಲಿ ನಾವು ಪ್ರಶ್ನೆ ಮಾಡುವ ಹಾಗೆಯೇ ಇಲ್ಲ ಎಂದು ಹೇಳಿದರು. ಭಾರತ ಸರ್ಕಾರ ಮಾಡದೇ ಇರುವ ಪ್ರಶ್ನೆಯನ್ನು ಇವರು ಮಾಡಿದರು! ಇದು ಹೋಗಲಿ, ಒಟ್ಟಿನಲ್ಲಿ ಎಲ್ಲರೂ ಮೈಸೂರಿನ ಹಿತದೃಷ್ಟಿಯಿಂದ ಮಾಡಿದರು. ಭಾರತ ಸರ್ಕಾರದವರೂ ಮೈಸೂರು ಸರ್ಕಾರದವರೂ ಮೈಸೂರಿನ ಘನತೆ ಗೌರವವನ್ನು ಹೆಚ್ಚಿಸಿದ್ದಾರೆ. ಮೈಸೂರಿನ ಮುಖ್ಯ ಮಂತ್ರಿಗಳು ಮೈಸೂರಿನ ಪರವಾಗಿ ಎಲ್ಲ ಕಾರ್ಯವನ್ನು ಮಾಡಿದ್ದಾರೆ, ಮೈಸೂರಿನ ಗೌರವವನ್ನು ಹೆಚ್ಚಿಸಿದ್ದಾರೆ. ಇದಕ್ಕಾಗಿ ಅವರಿಗೆ ನಾವು ಚಿರಋಣಿಗಳಾಗಿದ್ದೇವೆ. ಆದ್ದರಿಂದ ಈಗ ಜನಾಬ್ ಇಮಾಂರವರು ತಂದಿರತಕ್ಕ ಈ ನಿರ್ಣಯ ಸರಿಯಲ್ಲ. ಇದನ್ನು ವಾಪಸು ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ. ನಾವು ಹೇಳುವುದಕ್ಕಿಂತ ಇದು ಸರಿಯಲ್ಲವೆಂದು ಅವರ ಮನಸ್ಸಿಗೇ ತೋರಿರಬೇಕು. ದಯೆಯಿಟ್ಟು ಇದನ್ನು ವಾಪಸು ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

Srimathi RATHNAMMA ISAAC (Kolar District—General).—In humbly requesting Hon'ble Member Janab Mohamed Imam to take back his resolution, I wish to say a few words. Although I felt strongly with the Hon'ble Members that in this affair of a directive from the President of the Indian Republic, Mysore had not been given due consideration as to how it would affect the prestige of the State, yet, now I feel, we have now sufficiently ventilated our disappointment and we have learnt from the Hon'ble Members that within two or three weeks Mysore will be given exemption from the operation of article 371. We have also learnt that there has been no reflection cast on the integrity of our judiciary at any time, but only because the person concerned thinks that from another Judge outside Mysore he will get an unbiassed decision and the accused is always given every consideration to be satisfied over the treatment of his case. May I plead with all earnestness I could command, that in the larger interest and the good name of our country, we bear this burden of our feelings once and act according to the letter sent by our beloved Prime Minister?

Janab J. MOHAMED IMAM.—Where is the letter?

Srimathi RATHNAMMA ISAAC.—The letter was referred to by the Chief Minister. We believe every word of his. I am confident the world will recognise the true value of our willingness to submit and their estimation of Mysore will rise as not only a model but a great State of India and we will be following the sacrificial spirit of the Father of the Nation, Mahatma Gandhi, to the prestige and glory of our Mother India.

This is my humble suggestion. To-morrow is our beloved Prime Minister's Birthday, and I am sure a good message from the House will make him happy. Let us send our greetings wishing him many happy returns of the day.

Mr. SPEAKER.—If the Hon'ble mover of the resolution wishes to reply, he may do so now.

***Janab J. MOHAMED IMAM.**—I have heard with interest the various arguments which have been advanced on the floor of this House, both for and against. I do not attribute motives to either party. Perhaps each person has expressed his conviction and I do not want to get underneath the linen and hold a dissection. I take it for granted that every argument is *bona fide*. Anyhow, I thank all those gentlemen who have taken part in the debate and who have contributed to the debate and I feel that every portion of the debate that has been advanced to-day will go to help to enhance the prestige of the

State. I do not want to take much time, because there is very little controversy. One section feels that the ministry has not done its duty properly and it has let down the State and on account of their action the State has suffered and that is why it is better in their own interest and in the interests of the country that they should resign. Another section feels that the ministry has done its best and they have vindicated the honour. Of course, it is all difference of opinion. So far as we are concerned, I want to submit this. One argument was advanced that the Mysore Government always wanted to see that the accused concerned in this case should have a fair and impartial trial. I do not question that; but what I feel is this, that in pursuance of their conviction, I wish they had adopted and taken necessary steps. As soon as a letter came from the Centre that they should transfer the case to a court outside the State or that they should get a judge from outside, if they had implemented it, then I would have been satisfied that they have acted according to their conviction. Their conviction might have been sincere but their action shows otherwise and it is their refusal to implement this direction of the Centre that made many doubt if the Government is really sincere in their desire to see that the accused should have a fair and impartial trial.

The second position is this. As I said already, all this fuss, all this unpleasantness would have been averted and we would never have seen this day if the Ministers had foreseen and had implemented this directive. They held themselves responsible and they failed in their duty in not giving effect to the direction given by the Centre.

Thirdly, my chief complaint about them is this, this was partly an administrative matter, and not a legislative one. It was a matter which would have been settled by the Government of Mysore and the Centre on a ministerial level. So what I find fault with them is that they should have entangled the members of this Assembly and made them a sort of scapegoat; that I feel very much.

Sri M. N. JOIS (Mysore District—General).—I question that. We have thought about it, we have agreed to it, we have passed a resolution. All the members with open eyes and with due deliberations have done that act and there is nothing like making them a scapegoat.

Sri M. GOVINDA REDDY (Chitaldrug District-General).—I wish the Hon'ble Member will withdraw the term 'scapegoat'.

Sri M. N. JOIS.—We are not prepared to be treated like 'scapegoat' and the word 'scapegoat' is not the correct word to be used.

The Hon'ble Sri H. C. DASAPPA.—I would appeal to Hon'ble Member Janab Imam for whom I have very great respect, to kindly withdraw the word. It is a terrific reflection on the members, their integrity and character and their intelligence and their public spirit to be characterised as 'scapegoats'.

Janab J. MOHAMED IMAM.—With due deference I am going to withdraw the word. I am sorry I used that expression. But this much I say that we were misled. That is my own conviction.

The Hon'ble Sri H. C. DASAPPA.—The Hon'ble Member may be misled but not the whole House.

Janab J. MOHAMED IMAM.—You can interpret in whatever manner you like.

Fourthly, Sri Subrahmanya for whom I have great regard, used rather strong language. He accused us by saying that we are bringing disgrace to the ministry or to the House, if I remember correctly. (*Voice*: to the State) If I remember correctly, if I understand correctly, he said that by such argument and by such manoeuvres they were bringing disgrace to the State. I stand corrected if I have not understood him well. Far from it. Our idea is to enhance the prestige of the State. I do not want to say that the Chief Minister has brought disgrace to us. But to be brief and short I will say that our action today has not at all brought any disgrace. Whatever we have said today may be unpalatable and unpleasant. What we have said may be a bitter pill

(JANAB J. MOHAMED IMAM).

and may cure the disease. The Chief Minister was pleased to say and Sri T. Subrahmanya vouchsafed, that the Prime Minister promised to see that Mysore is exempted very soon from the operation of article 371 of the Constitution.

The Hon'ble Sri K. CHENGALARAYA REDDY.—I said that I felt confident and I was convinced that such a thing would happen.

Janab J. MOHAMED IMAM.—That makes a lot of difference. Whatever it may be, I cannot disbelieve the Chief Minister or Sri T. Subrahmanya. The Chief Minister carried on talks with the Prime Minister for three or four days. I think he has brought some documentary proof—a letter from the Prime Minister.

Sri T. SUBRAHMANYA.—I would like to tell my Hon'ble friend and also the other Hon'ble Members of the House that there was no bargaining. Each case was dealt with on its own merits. It is not a business transaction. They must be writing immediately to follow up the talk.

Janab J. MOHAMED IMAM.—Why I insist is this. As soon as the Chief Minister alighted from the plane, I think he gave the Press to believe that he has brought a letter from the Prime Minister. According to a report that letter was read out to most of the party members of this House and it has been supported by my Hon'ble friend Srimathi Ratnamma Isaac, who has just now said that he pleaded in the name of the letter to be conciliatory. But what I felt was that it is a unanimous resolution of the members of the House and the Chief Minister ought to have taken into his confidence all the members of the House. It is not a party issue. It is a State issue.

Sri M. N. JOIS.—ನಿಮ್ಮಲ್ಲಿ ನಂಬಿಕೆಯುದು ಪ್ರಾ ಹೇಗೆ ಎಂದು ಕೇಳುವವರಿಗೆ ಕಾನ್ಫಿಡೆನ್ಷಿಯಲ್ಲಾಗಿ ಬಂದಿರುವುದನ್ನು ಹೇಗೆ ತೋರಿಸುವುದು ?

